CONTENTS

TO THE

MYSORE LEGISLATIVE ASSEMBLY DEBATES

Volume XIII—(Nos. 1 to 10)

(23rd March to 10th April 1973)

4896.
V-31 N.73
N 74-13-1-10
(13) 4896

Friday, the 23rd March 1973

		Pages
1	(i) Starred Questions and Answers ...	1—19
	(ii) Questions for Answers on the day—(but not taken up) ...	19—21
2	Calling Attention to a Matters of Urgent Public Importance :	
	(i) *re* : wayside incidents of robbery on Gulbarga Shahabad Road ...	21—23
	(ii) *re* : hardships of employees of Bagalkot Municipality who were compelled to retire ...	23—25
3	Tenth Report of the Committee on Private Members' Bills and Resolutions—Adopted ...	25
4	Alleged Harassment by the Police ...	26
5	(i) Mysore Appropriation Bill, 1973—Introduced ...	26
	(ii) Mysore Appropriation (Vote on Account) Bill, 1973—Introduced ...	26
6	Mysore Appropriation Bill, 1973—Passed ...	26—58
7	Mysore Appropriation (Vote on Account) Bill, 1973—Passed ...	58—59
8	Absence of Minister for Municipal Administration ...	59—63
9	Annexures :—	
	(i) Mysore Appropriation Bill, 1973 ...	64—67
	(ii) Mysore Appropriation (Vote on Account) Bill, 1973 ..	68—73

Saturday, the 24th March 1973

		PAGES
1	(i) Starred Questions and Answers ...	75—92
	(ii) Short Notice Question/s ...	92—93
	(iii) Questions for Answers on the day—(but not taken up) ...	93—96
2	Calling attention to matters of Urgent Public Importance :	
	(i) *re* : acute scarcity of drinking water in villages of Shiggaon, Savanur and Hangal Taluks ...	96—98
	(ii) *re* : fall in prices of Arecanut ...	98—102
3	(i) Police excesses over Public Demanding Continuance of "Bangarada Manushya" ...	102—108
	(ii) Besta Community Affairs at Kanakapura ...	108
4	Question of Privilege against the Minister for Municipal Administration ...	108—110
5	Business of the House ...	110
6	Mysore re-enacting (No. 2) Bill, 1973—Passed ...	111—117

Monday, the 26th March 1973

1	Starred Questions and Answers ...	119—141
2	Calling Attention to a Matter of Urgent Public Importance : *re* : Disturbances and lathi charge in Mudigere ...	141—145
3	Arrest and Release of Sri Kadasiddappa ...	145
4	First Report of the Committee on Petitions ...	145
5	Disturbances at Bangalore on 23-3-1973—Statement by the Miuister for Public Works and Electricity ...	145—160
6	Budget Estimates for 1973-74 Demands for Grants : Demands No. 23—(34) Co-operation—Debate not Concluded ...	160—182
7	Business of the House—Announced ...	183

Tuesday, the 27th March 1973

		PAGES
1	Notice of Adjournment motion *re*: elections in Haliyal—Consent withheld ...	185—193
2	Issue of passes to visitors' Gallery ...	194—195
3	Budget Estimates for 1973-74—Demands for Grants—Demand No. 23—(34) Co-operation—Voted ...	195—237

Wednesday, the 28th March 1973

1	(i) Starred Questions and Answers ...	239—257
	(ii) Questions for Answers on the day—(but not taken up) ...	257
	(iii) Short Notice Questions and Answers —(but not taken up) ...	258—259
2	Calling Attention to a Matter of Urgent Public Importance :	
	(i) *re*: death of a Harijan boy at Somavarpet village in Chamarajanagar Taluk ...	259—262
	(ii) *re*: non-application of some of the Government Orders to the employees of MSEB ...	262—263
3	(i) Threatening Annonymous letters to Sriyuths Konandur Lingappa and Vatal Nagaraj ...	264
	(ii) Taking up Some Notices by Members ...	264—265
	(iii) Cancellation of Examination Centre at Nonavinakere	265—266
4	Mysore Sales Tax (Amendment) Bill, 1973—Passed ...	266—300

Thursday, the 29th March 1973

1	(i) Starred Questions and Answers ...	301—320
	(ii) Short Notice Question and Answer ...	320—322
	(iii) Questions for Answers on the day—(but not taken up) ...	322—325

PAGES

2 Statement by the Minister for Public Works and Electricity: *re*: death of a Harijan boy at Somavarpet village in Chamarajanagar Taluk ... 325—326

3 Calling Attention to a Matter of Urgent Public Importance:

(i) *re*: levy of exorbitant T.T. Fines in Hosanagar Taluk ... 326—328

(ii) *re*: attack on a fisherman of Haridyathanahalli village, Kanakapura Taluk, by a group of people... 328 - 331

4 (i) Datura seeds in wheat distributed in Gulbarga District ... 331

(ii) Disturbances at Mangalore and Kodiyalbail due to Mangalore bundh ... 331—332

(iii) Beating of Harijan Woman at Sorabh ... 332—333

(iv) Issue of Passes to the Public Gallery ... 333

(v) Difficulty in getting Ration Cards ... 333—334

(vi) Mis-appropriation in supply of wood for Construction of Houses to the Poor ... 334

(vii) Closure of the General Hostel at Hassan ... 334

(viii) Incidents in South Kanara ... 334

(ix) Re-opening the Examination Centre at Nonavinakere 334—335

(x) Representation of the Throw-silk weavers ... 335—336

5 Moving the Motion for Demand for Grants by Ministers 336—374

Friday, the 30th March 1973

1 (i) Starred Questions and Answers ... 375—392

(ii) Short Notice Question and Answer ... 392—394

(iii) Questions for Answers on the day—(but not taken up) ... 394—398

2 Calling Attention to matters of Urgent Public Importance:

(i) *re*: manhandling of some persons of Hanumanthapura and Bandarahalli villages by Police Sub-Inspector ... 398—399

(ii) *re*: Power cut to the MSK Mills Co., Ltd., Gulbarga 400—401

PAGES

3 Papers laid on the Table :—
(i) Orders and Notifications issued under Mysore Stamp Act 1957, Mysore Motor Vehicles Taxation Act, 1957 and Cotton Transport Act (Central) 1923 ... 401—402

4 First Report of the Committee on Public Accounts on Appropriation and Finance Accounts 1968-69 and Audit Report 1970 ... 402

5 Alleged inconveniences caused to people while collecting lease charges etc. in Thirthahalli ... 402—403

6 Statement by the Chief Minister
re : Price Trends and Price Policy ... 403—417

7 Allowing Discussion on the Reports of the PAC and PSC ... 417

8 Allowing Personal Explanation to Sri D. Poosalingam 417—419

9 Budget Estimates for 1973-74—Demands for Grants—Demand No. 39 A Grant in Aid Contributions to Local Bodies and Housing—Debate not Concluded ... 419—441

10 Arrest and Release of Sri Vatal Nagaraj—Announced 441

Saturday, the 31st March 1973

1 (i) Starred Questions and Answers ... 443—461
(ii) Short Notice Question and Answer ... 461—462
(iii) Questions for Answers on the day—(but not taken up) ... 463—464

2 Calling Attention to Matters of Urgent Public Importance :
(i) *re* : deaths due to gastro enteritis in Gulbarga District ... 464—466
(ii) *re* : Recruitment to the posts of Assistant Engineers and to the reservation in respect of Scheduled Castes/Scheduled Tribes People ... 466—469

3 (i) Notice *re* : Lottery Organisation called Kamadhenu Enterprises ... 470

PAGES

(ii) Retrencthing the local candidates ... 471
(iii) Acts of the authorities of the Karnataka University 471
(iv) Accounts of the Mysore Dasara Exhibition ... 471—472

4 Budget Estimates for 1973-74—Demands for Grants—Demand No. 39A—Contribution to Local Bodies and Housing—Voted ... 472—490

5 Non-Official Resolutions :

(i) *re* : Acquiring private lands near slums in Bangalore and alloting the same to the slum dwellers—withdrawn ... 490—491
(ii) *re* : Introduction of sale of toddy on license basis instead of bidding by public auction—withdrawn 491—495
(iii) *re* : Appointing a High Power Committee to go into causes of fall in standard of students—Debate not Concluded ... 495—497

Monday the 9th April 1973

1 Obituary reference to the Demise of Sri K. B. Patil, M.L.A. ... 500

2 (i) Starred Questions and Answers ... 500--514
(ii) Questions for Answers on the day (but not taken up) ... 514—519

3 Calling attention to a matter of urgent Public Importance
re : shifting of the rig machine from Indi to Bijapur City ... 519—522

4 Notice of Adjournment Motion :
re : inadequacy of the relief operations in Gulbarga and Bidar Districts ... 522—538

4 Dharna by Members ... 538—543

5 Statement of the Chief Minister—
re : Two Ministers of the Government to inspect the relief operations in Gulbarga and Bidar ... 543—548

PAGES

Tuesday, the 10th April 1973

1 (i) Starred Questions and Answers ... 549—570

(ii) Short Notice Questions and Answers ... 570—571

(iii) Questions for Answers on the day (but not taken up) ... 571—574

2 Calling Attention to matters of urgent Public Importance :

(i) *re* : Dattura seeds in the milo ... 575—576

(ii) *re* : acute scarcity of foodgrains in Shorapur Taluk... 576—578

3 Papers laid on the Table :— 578

4 First list of unstarred Questions and Answers ... 578—592

5 First Report of the Committee on Estimates (Ports)—Presented ... 593

6 Statement of the Minister for Public Works and Electricity *re:* Tipranth Tank ... 593—596

7 Budget Estimates for 1973-74—Demands for Grants—Demand No. 18—Medical, Public Health and Family Planning—Debate not Coacluded ... 596—633

8 Statement by the Minister for Public Works and Electricity *re* : programme of the delegation to visit Gulbarga and Bidar Districts ... 633—634

9 Statement by the Minister for Municipal Administration *re* : allotment of sites in Bangalore by the CITB 634—638

10 Business of the House ... 638—639

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, the 23rd March 1973/ Chaitra 2, 1895 S.E.

The House met in the Assembly Chamber, Vidhana Soudha, at One of the Clock.

MR. DEPUTY SPEAKER [SRI B. P. KADAM] in the Chair.

STARRED QUESTIONS

(to which oral Answers were given)

Lands belonging to Kumaraswamy Temple

453 Sri KAGADU THIMMAPPA (Sagar).—

Will the Minister for Revenue be pleased to state :—

(*a*) the extent of land belonging to Kumaraswamy Temple Trust which was established by Ex-Ruler of Sandur ;

(*b*) the persons who are cultivating the said lands ;

(*c*) the authority who appoints the Supervisor of the Trust ;

(*d*) the amount paid by Government to this trust every year?

Sri N. HUTCHAMASTHY GOWDA (Minister for Revenue).—

(*a*) 1,307 acres and 62 cents.

(*b*) Of this, 175 acres and 62 cents of land is under cultivation. The remaining 1,132 acres 22 cents of land is forest area. All these lands are under the possession of Ex-Maharaja.

(*c*) Ex-Maharaja Sri Y. H. Ghorpade is the hereditary trustee of this temple.

(*d*) The lands belonging to Sri Kumaraswamy and other temples measuring 8,596 acres 97 cents have been acquired by the Government previously and in lieu of it, Rs. 36,000 per annum is being paid towards the expenses of the temples.

ಶ್ರೀ ಕಾಗೋಡು ತಿಮ್ಮಪ್ಪ.—ಸೊಂಡೂರಿನ ಕುಮಾರಸ್ವಾಮಿ ಟೆಂಪಲ್ ಟ್ರಸ್ಟಿಗೆ ಸೇರಿದ ಜಮೀನು ವಿಸ್ತೀರ್ಣ ಎಷ್ಟು ಎಂದು ಕೇಳಿದ್ದಕ್ಕೆ 1307 ಎಕರೆ 62 ಸೆಂಟುಗಳು ಮತ್ತು ಆ ಜಮೀನು ಗಳು ಮಾಜಿ ಮಹಾರಾಜರಾದ ಶ್ರೀ. ಎಚ್. ಘೋರ್ಪಡೆಯವರ ಸ್ವಾಧೀನದಲ್ಲಿರುತ್ತವೆ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆಯ (ಈ) ಗೆ ಉತ್ತರವಾಗಿ ದೇವಸ್ಥಾನಕ್ಕೆ ಸಂಬಂಧಪಟ್ಟ 8596 ಎಕರೆ 97 ಸೆಂಟುಗಳು ಜಮೀನನ್ನು ಸರಕಾರ ಹಿಂದೆ ವಹಿಸಿಕೊಂಡಿದ್ದು, ಅದರ ಬದಲಾಗಿ ಸದರಿ ದೇವಸ್ಥಾನಕ್ಕೆ 6 ಸಾವಿರ ರೂಪಾಯಿಗಳನ್ನು ಖರ್ಚಿಗೆ ಕೊಡಲಾಗಿದೆ ಎಂದು ಹೇಳಿದ್ದೀರಿ. ಹಾಗಿದ್ದರೆ, ಟೆಂಪಲ್ ಟ್ರಸ್ಟಿಗೆ 8569 ಎಕರೆಗಳು ಸೇರಿದೆಯೋ ಇಲ್ಲವೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕುಮಾರಸ್ವಾಮಿ ಟೆಂಪಲ್ ಜೊತೆಗೆ ಇನ್ನೂ ಕೆಲವು ದೇವಸ್ಥಾನಗಳು ಇವೆ. ಆ ದೇವಸ್ಥಾನದ ಜಮೀನು ಎಲ್ಲಾ ಸೇರಿ 8569 ಎಕರೆ 97 ಸೆಂಟು ಭೂಮಿ ಇದೆ. 1948 ನೇ ಇಸವಿಯಲ್ಲಿ ಸೊಂಡೂರು ಟೆಂಪಲ್ ಪ್ರೊಕ್ಲಮೇಷನ್ ಆದಾಗ ಮರ್ಜರ್ ಅಗ್ರಿಮೆಂಟ್ ಆದಾಗ ಸರ್ಕಾರದ ಸ್ವಾಧೀನಕ್ಕೆ ಇದನ್ನು ಬಿಟ್ಟು, ಆಗಿಂದ ಇದಕ್ಕೆ 36 ಸಾವಿರ ರೂಪಾಯಿ ತಸ್ತೀಕು ಅಲೋಯನ್ಸ್ ಕೊಡುತ್ತಿದ್ದೇವೆ. ಕುಮಾರಸ್ವಾಮಿ ದೇವಸ್ಥಾನವನ್ನು ಬಿಟ್ಟು ಉಳಿದ ದೇವಸ್ಥಾನಕ್ಕೆ ಇರತಕ್ಕ ಜಮೀನುಗಳು ಡೆಪ್ಯೂಟಿ ಕಮೀಷನರ್ ಅವರ ಮ್ಯಾನೇಜ್ ಮೆಂಟಿನಲ್ಲಿ ರೈತರ ಸ್ವಾಧೀನದಲ್ಲಿ ಇವೆ. ಕುಮಾರ ಸ್ವಾಮಿ ಟೆಂಪಲ್‌ಗೆ ಸೇರಿರತಕ್ಕ ಜಮೀನು ಮಾತ್ರ ಹಿಂದೆ ಇದ್ದ ಮಹರಾಜರ ಆಡಳಿತದಲ್ಲಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕುಮಾರಸ್ವಾಮಿ ದೇವಸ್ಥಾನದ ವಶದಲ್ಲಿರತಕ್ಕ ಜಮೀನು 1307 ಎಕರೆ ಮತ್ತು 8596 ಎಕರೆ ಇದೆ, ಇದು ಸರ್ಕಾರಿ ಜಮೀನೇ ಅಥವಾ ಇನಾಮು ಜಮೀನೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—8596 ಎಕರೆಯೊಳಗೆ 1307 ಎಕರೆ 62 ಸೆಂಟ್ ಜಮೀನು ಬಿಟ್ಟು ಉಳಿದ ಜಮೀನು ಡೆಪ್ಯೂಟಿ ಕಮೀಷನರ್ ಅವರ ಮ್ಯಾನೇಜ್‌ಮೆಂಟಿನಲ್ಲಿದೆ. ಈಗ ರೈತರು ಅದರಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಉಳಿದ ಜಮೀನು 1307 ಎಕರೆಯಲ್ಲಿ 175 ಎಕರೆ 40 ಗುಂಟೆ ಜಮೀನು ವ್ಯವಸಾಯಕ್ಕೆ ಲಾಯಕ್ ಆಗಿರುವ ಜಮೀನು. 1032 ಎಕರೆ 22 ಸೆಂಟ್ ಕಾಡು. ಈ ಎರಡು ಕೂಡ ಹಿಂದೆ ಇದ್ದ ಮಹಾರಾಜರ ಆಡಳಿತದಲ್ಲಿದೆ.

ಶ್ರೀ ಕಾಗೋಡು ತಿಮ್ಮಪ್ಪ.—1307 ಎಕರೆ ಮತ್ತು 8 ಸಾವಿರ ಎಕರೆ ಏನು ಇದೆ ಇದು ಇನಾಂ ಜಮೀನೇ ಅಥವಾ ಸರ್ಕಾರಿ ಜಮೀನೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದೇವಸ್ಥಾನಕ್ಕೆ ಸೇರಿದಂಥ ಇನಾಂ ಜಮೀನು.

ಶ್ರೀ ವಿ ಎನ್. ಪಾಟೀಲ್.—ಇದು ಇನಾಂ ಜಮೀನು ಆದಮೇಲೆ ಡೆಪ್ಯೂಟಿ ಕಮೀಷನರ್ ಅವರ ವಶದಲ್ಲಿದೆಯೆಂದು ಹೇಳುತ್ತೀರಿ, ರೈತರ ಸ್ವಾಧೀನದಲ್ಲಿ ಎಷ್ಟು ಎಕರೆ ಇದೆ, ಮಹಾರಾಜರ ಸ್ವಾಧೀನದಲ್ಲಿ ಎಷ್ಟು ಜಮೀನು ಇದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ – ಮಾನ್ಯ ಸದಸ್ಯರಿಗೆ ನಾನು ಹೇಳಿದ್ದು ಗೊತ್ತಾಗಲಿಲ್ಲವೊ, ಏನೋ ? 8597 ಎಕರೆ 7 ಸೆಂಟ್‌ನಲ್ಲಿ 1307 ಎಕರೆ 62 ಸೆಂಟ್ ಜಮೀನನ್ನು ಬಿಟ್ಟರೇ ಉಳಿದದ್ದು, ಡೆಪ್ಯೂಟಿ ಕಮೀಷನರ್ ಅವರ ಮ್ಯಾನೇಜ್‌ಮೆಂಟ್‌ನಲ್ಲದೆ, ಇದನ್ನು ರೈತರು ಸಾಗುವಳಿ ಮಾಡುತ್ತಿದ್ದಾರೆ. 1307 ಎಕರೆ 62 ಗುಂಟೆ 1032 ಎಕರೆ ಕಾಡು, 175 ಎಕರೆ, 40 ಸೆಂಟ್ ಮಾತ್ರ ವ್ಯವಸಾಯಕ್ಕೆ ಯೋಗ್ಯವಾಗಿರುವುದು. ಒಟ್ಟಿನಲ್ಲಿ 1307 ಎಕರೆ 62 ಸೆಂಟ್ ಜಮೀನು ಹಿಂದೆ ಇದ್ದ ಮಹಾರಾಜರ ಆಡಳಿತದಲ್ಲಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ 1307 ಎಕರೆ ಅವರ ಸ್ವಾಧೀನದಲ್ಲಿದೆಯೆಂದು ಹೇಳುತ್ತೀರಿ, ಆ ಜಮೀನು ಅವರ ಖಾಸಗಿ ಆಸ್ತಿಯೆಂದು ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಜೊತೆಗೆ ಇದರಲ್ಲಿ ಖನಿಜ ಸಂಪತ್ತು, ಶ್ರೀಗಂಧವನ್ನು ಮಹಾರಾಜರು ತೆಗೆದುಕೊಳ್ಳತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶ್ರೀಗಂಧದ ವಿಷಯದಲ್ಲಿ ಕೋರ್ಟಿನಲ್ಲಿ ವ್ಯಾಜ್ಯ ಇದೆ.

† Indicates the tha remarks or speeches hava not baen revis d by the member concerned.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಇದನ್ನು ಇನಾಂ ಜಮೀನು ಎಂದು ಒಪ್ಪಿಕೊಂಡಿದ್ದೀರ, ಎಲ್ಲಾ ಇನಾಂ ಜಮೀನನ್ನು ರದ್ದುಮಾಡಿರತಕ್ಕವರು ಸೊಂಡೂರಿನ ಇನಾಂ ಜಮೀನನ್ನು ರದ್ದು ಮಾಡುವುದಕ್ಕೆ ಏತಕ್ಕೆ ತೀರ್ಮಾನ ಮಾಡಲಿಲ್ಲ ? ಇನಾಂ ರದ್ದು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕಾಗಿ ಪ್ರತ್ಯೇಕವಾಗಿ ಮಸೂದಾ ಕಾನೂನು ತಯಾರಾಗುತ್ತಾ ಇದೆ. ಸಾಧ್ಯವಿದ್ದರೆ, ಈ ಅಧಿವೇಶನದಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ.—ಕೆಲವು ಜಮೀನು ರೈತರ ವಶದಲ್ಲಿದೆ ಎಂದು ತಿಳಿಸಿದ್ದೀರಿ ಅದರ ಖಾತೆ ಯಾರ ಹೆಸರಿನಲ್ಲಿ ಇದೆ ? ಆರ್. ಆರ್. ಅವರ ಹೆಸರಿನಲ್ಲಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ. ನಾನು ಹೇಳಿದ್ದು 1307 ಎಕರೆ ಅಲ್ಲದೆ ಉಳಿದಿರತಕ್ಕ ಜಮೀನು ರೈತರ ಸ್ವಾಧೀನದಲ್ಲಿ ಇದೆ. ಅಕ್ಯುಪೆನ್ಸಿ ಪ್ರೈಸ್ ಕೊಟ್ಟಿದ್ದಾರೆ. ಖಾತೆ ಆಗಿದೆಯೋ ಇಲ್ಲವೋ ಎನ್ನುವ ವಿವರ ನನ್ನ ಹತ್ತಿರ ಇಲ್ಲ. ಏನಾಗಿದೆ ತಿಳಿದು ಸಭೆಗೆ ಹೇಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ರೈತರ ಸಾಗುವಳಿಯಲ್ಲಿ ಇದೆ. ರೈತರ ಸ್ವಾಧೀನದಲ್ಲಿ ಇದೆ ಎಂದು ಹೇಳಿದಿರಿ ಇದರ ಬಗ್ಗೆ ರೈತನ ಸ್ವಾಧೀನದಲ್ಲಿ ಇದ್ದ ಜಮೀನು ಲ್ಯಾಂಡ್ ರಿಕಾರ್ಡ್ ಆಫ್ ರೈಟ್ಸ್ ಮತ್ತು ಪಹಣಿ ಇದರಲ್ಲೆಲ್ಲಾ ರೈತರ ಹೆಸರಿನಲ್ಲಿ ಎಂಟ್ರಿ ಆಗುತ್ತಿದೆಯೇ ? ಇದರ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಒಬ್ಬ ಅಧಿಕಾರಿಗೆ ಗೊತ್ತುಮಾಡಿ ಈ ವಿಷಯದ ಬಗ್ಗೆ ಪೂರ್ಣ ಪರಿಶೀಲನೆ ಮಾಡಿ ವಿಷಯ ತಿಳಿದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾಜಿ ಮಹಾರಾಜರ ಸ್ವಾಧೀನದಲ್ಲಿ 175 ಎಕರೆ ಇದೆ ಎಂದು ಹೇಳುತ್ತೀರಿ. ಮಾಜಿ ಮಹಾರಾಜರ ಕುಟುಂಬದಲ್ಲಿ ನಮ್ಮ ಅರ್ಥಸಚಿವರು ಸೇರುತ್ತಾರೆಯೇ ? ಸ್ವಾಧೀನದಲ್ಲಿ ಎಂದರೆ ಕುಟುಂಬದವರ ಸ್ವಾಧೀನದಲ್ಲಿದೆಯೇ ? ಅಥವಾ ಅವರ ಒಬ್ಬರ ಸ್ವಾಧೀನ ದಲ್ಲಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾಜಿ ಮಹಾರಾಜರ ಆಡಳಿತದಲ್ಲಿ ಇದೆ ಎಂದು ಹೇಳಿದೆ ಎಂದರೆ ಅವರು ಕುಮಾರಸ್ವಾಮಿ ದೇವಸ್ಥಾನದ ಸೋಲ್ ಟ್ರಸ್ಟಿ ಆಗಿದ್ದಾರೆ, ಆದುದರಿಂದ ಅವರ ಅಧೀನದಲ್ಲಿ ಇದೆ. ಅರ್ಥ ಸಚಿವರು ಆ ಕುಟುಂಬದಲ್ಲಿ ಇದ್ದಾರೋ, ಪ್ರತ್ಯೇಕವಾಗಿ ಇದ್ದಾರೋ ಆ ವ್ಯವಹಾರ ನನಗೆ ಗೊತ್ತಿಲ್ಲ.

Sri SUBASH ASTURE.—When other inam lands are abolished under one law why the Sandur lands are treated as separate and are to be abolished under a separate law ?

ಶ್ರೀ ಎನ್. ಹುಚ್ಚಮಾಸ್ತಿಗೌಡ.-ಸಂಡೂರಿನಲ್ಲಿ ಇರತಕ್ಕ 11 ಗ್ರಾಮಗಳು, ಉಳಿದ ಬಳ್ಳಾರಿ ಜಿಲ್ಲೆಯಲ್ಲಿ 64 ಗ್ರಾಮಗಳು, ಕೊಳ್ಳೆಗಾಲದ ಸತ್ತೇಗಾಲ ಒಂದು ಗ್ರಾಮ ಮತ್ತು ಧಾರವಾಡ ಡಿಸ್ಟ್ರಿಕ್ಟ್ ಕುಂದಗೋಡು ಮೂರು ಗ್ರಾಮ ಮತ್ತು ಉಳಿದ ಗ್ರಾಮಗಳು ಉಳಿದು ಹೋಗಿವೆ. ಇವಕ್ಕೆ ಪ್ರತ್ಯೇಕವಾಗಿ ಕಾನೂನು ಅನ್ವಯಿಸುವ ಹಾಗೆ ಯೋಚನೆ ಮಾಡಿ ಮಸೂದಾ ಕಾನೂನು ತಯಾರು ಮಾಡುತ್ತಿದ್ದೇವೆ.

Demands for grant of land from Shivapur Education Committe, etc., Sandur

456. Sri KAGODU THIMMAPPA (Sagar).—

Will the Minister for Revenue be pleased to state :—

(a) whether demands have been received for grant of land from Shivapur Education Committee and Nandhihalli Valley Education Campus Institution, Sandur ;

(SRI KAGODU THIMMAPPA)

(*b*) whether these Institutions have already own any lands ;

(*c*) if so, from when the said lan 's have been granted to them?

SRI N. HUTCHAMASTHY GOWDA (Minister for Revenue) —

(*a*) Yes, Demands have been received from Shivapur Education Committee and Sandur Education Society.

(*b*) Each of the Societies are in possession of 60 acres of land.

(*c*) From Sri Pratap Singh Purushotham of Bombay who had purchased rights of leasing lands of Sandur Tabacco Company.

ಶ್ರೀ ಕಾಗೋಡು ತಿಮ್ಮಪ್ಪ.—ಶಿವಪುರ ಶಿಕ್ಷಣ ಸಮಿತಿಗೆ ಮತ್ತು ನಂದಿಹಳ್ಳಿ ವ್ಯಾಲಿ ಎಜುಕೇಷನ್ ಕ್ಯಾಂಪಸ್ ಸಂಸ್ಥೆಗೆ ಜಮೀನು ಮಂಜೂರು ಮಾಡುವಂತೆ ಮನವಿ ಬಂದಿದೆ. ತಲಾ 60 ಎಕರೆ ಜಮೀನು ಮಾತ್ರ ಸದರಿ ಸಂಸ್ಥೆಗಳ ಅನುಭವದಲ್ಲಿದೆ ಎಂದು ಉತ್ತರ ಕೊಟ್ಟಿದ್ದೀರಾ ಹಿಂದೆ ಟುಬ್ಯಾಕೋ ಕಂಪನಿ ಜಮೀನು ಲೀಸ್ ಪೀರಿಯೆಡ್ ಯಾವಾಗ ಮುಕ್ತಾಯ ಆಗಿತ್ತು ಆ ಕಾಲದಲ್ಲಿ ಶಿಕ್ಷಣ ಸಮಿತಿಗೆ ಕೊಟ್ಟಿರತಕ್ಕ ಲೀಸ್ ಮುಕ್ತಾಯ ಆಗುವುದಿಲ್ಲವೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—1945ನೇ ಇಸವಿಯಲ್ಲಿ ಎಂದರೆ 25 ವರ್ಷದ ಗುತ್ತಿಗೆ ಮೇಲೆ ತಂಬಾಕು ಕಂಪನಿಗೆ 823 ಎಕರೆ 29 ಗುಂಟೆ ಜಮೀನು ಕೊಟ್ಟಿತ್ತು, ಇದು ಪ್ರಾರಂಭವಾದ ಕೂಡಲೇ ಕಂಪನಿ ವಿಸರ್ಜನೆ ಆಯಿತು. ಅದಾದಮೇಲೆ ಹೈಕೋರ್ಟಿಗೆ ಕೇಸ್ ಹೋಗಿದೆ. ಶ್ರೀಮಾನ್ ಪ್ರತಾಪ್ ಸಿಂಗ್ ಪುರುಷೋತ್ತಮ್ ಅವರನ್ನು ಅಫಿಷಿಯಲ್ ರಿಸೀವರ್ ಆಗಿ ನೇಮಕ ಮಾಡಿತು. ಅವರ ಹೆಸರಿನಲ್ಲಿ ಭೂಮಿ ನಿಂತಿದೆ. ಆದರ ಮೇಲೆ ಶಿವಪುರ ಶಿಕ್ಷಣ ಸಮಿತಿ ಮತ್ತು ಸಂಡೂರು ಎಜುಕೇಷನ್ ಸೊಸೈಟಿಯವರು ತಲಾ 60 ಎಕರೆ ಪ್ರಕಾರ ಅವರಿಂದ ಗುತ್ತಿಗೆ ಪಡೆದರು. ಗುತ್ತಿಗೆ ವಾಯಿದೆ 30—6—1970ಕ್ಕೆ ಮುಗಿದು ಹೋಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮೊದಲು ಗುತ್ತಿಗೆ 25 ವರ್ಷಗಳು ಕೊಟ್ಟಿತ್ತು. ಲೀಸ್ ಪೀರಿಯೆಡ್ ಎಷ್ಟರವರೆಗೆ ಇರುತ್ತದೆ ಆ ಲೀಸ್ ಪೀರಿಯೆಡ್ ಒಳಗಡೆ ಕೊಡುವುದಕ್ಕೆ ಸಾಧ್ಯವೇ ? ಯಾವಾಗ ಟುಬ್ಯಾಕೋ ಕಂಪನಿಗೆ ಕೊಟ್ಟ ಲೀಸ್ ಪೀರಿಯೆಡ್ ಮುಕ್ತಾಯ ಆಯಿತೋ ಆಗ ಅವರಿಗೆ ಕೊಟ್ಟಿರತಕ್ಕ ಲೀಸ್ ಮುಕ್ತಾಯ ಆಗಬೇಕು. ಅದು ಯಾವಾಗ ಮುಕ್ತಾಯ ಆಗಿರುವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.–1945ರಿಂದ 25ವರ್ಷಗಳು ಎಂದರೆ 1970ನೇ ಇಸವಿ ಆಗುತ್ತದೆ. 70ನೇ ಇಸವಿಯಲ್ಲಿ ಎಂದರೆ 30—6—1970ರ ವರೆಗೆ ಇಬ್ಬರಿಗೆ ಕೊಟ್ಟಿರತಕ್ಕ ಗುತ್ತಿಗೆ ವಾಯಿದೆ ಮುಗಿದು ಹೋಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.–ಹಾಗಿದ್ದರೆ ಮುಕ್ತಾಯವಾದ ಮೇಲೆ ಜಮೀನು ಸರ್ಕಾರದವರ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆಯೋ ಇಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರೇ ಮಾಡುತ್ತಿದ್ದಾರೆ.

ಶ್ರೀ ಕಾಗೋಡುತಿಮ್ಮಪ್ಪ.—ಹೋದಸಾರಿ ಇದೇ ಅಧಿವೇಶನದಲ್ಲಿ ಪ್ರಶ್ನೆ ಬಂದಾಗ ಜಮೀನು ಶಿಕ್ಷಣ ಸಮಿತಿ ಸ್ವಾಧೀನದಲ್ಲಿ ಇಲ್ಲ ಟುಬ್ಯಾಕೋ ಕಂಪನಿಗೆ ಸೇರಿರತಕ್ಕ ಎಲ್ಲಾ ಜಮೀನು ಸರ್ಕಾರದ ಸ್ವಾಧೀನದಲ್ಲಿ ಇದೆ ಎಂದು ಹೇಳಿದ್ದೀರಿ. ತಲಾ 60 ಎಕರೆ ಶಿಕ್ಷಣ ಸಮಿತಿ ಸ್ವಾಧೀನದಲ್ಲಿ ಬಿಡುವುದಕ್ಕೆ ಏನು ಕಾರಣ ಬಂತು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರದ ಸ್ವಾಧೀನದಲ್ಲಿ ಇದ್ದಹಾಗೆ ಲೆಕ್ಕ. ಆದರೆ ಅವರಿಗೆ ವ್ಯವಸಾಯ ಮಾಡಿಕೊಂಡು ಹೋಗುವುದಕ್ಕೆ ಅವಕಾಶ ಕೊಟ್ಟಿದ್ದೇವೆ.

ಶ್ರೀ ಸಿ. ಬೈರೇಗೌಡ.—ಗುತ್ತಿಗೆ ಮುಗಿದಮೇಲೂ ಸಹ ಅವರ ವಶದಲ್ಲಿ ಜಮೀನು ಇದೆ ಎಂದು ತಿಳಿಸಿದ್ದೀರಿ. ಯಾವ ಕಾನೂನಿನ ಮೇಲೆ ಜಮೀನು ಅವರ ವಶದಲ್ಲಿದೆ ? ಕಾನೂನು ಇಲ್ಲದೆ ಇರುವುದರಿಂದ ಅದು ಟ್ರೆಸ್‌ಪಾಸ್ ಆಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಲೆಕ್ಕದ ಪ್ರಕಾರ ಸರ್ಕಾರದ ವಶದಲ್ಲಿದೆ. ಅವರನ್ನು ವ್ಯವಸಾಯ ಮಾಡಿಕೊಂಡು ಹೋಗುವುದಕ್ಕೆ ಬಿಟ್ಟಿದ್ದೇವೆ. ಈಗ ಭೂಸುಧಾರಣೆ ಕಾನೂನು ವರದಿ ಬಂದಮೇಲೆ ಸರ್ಕಾರ ಯಾವರೀತಿ ಜಮೀನಿನ ಬಗ್ಗೆ ಕಾನೂನು ಪ್ರಕಾರ ತೀರ್ಮಾನ ಮಾಡಬೇಕೋ ಅದರಂತೆ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಟುಬ್ಯಾಕೋ ಕಂಪನಿಗೆ ಸೇರಿದ ಜಮೀನನ್ನು ಶಿಕ್ಷಣ ಸಮಿತಿ ತರಾ 60 ಎಕರೆ ಜಮೀನನ್ನು ಸ್ಥಳದಲ್ಲಿ ಇರುವ ಭೂಹೀನರಿಗೆ ಹಂಚುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಹೇಳಿದೆ. ಒಬ್ಬ ಅಧಿಕಾರಿಗೆ ನೇಮಕಮಾಡಿ ಅಲ್ಲಿ ಇರತಕ್ಕ ಪರಿಸ್ಥಿತಿಯ ಪೂರ್ಣವಾದ ಮಾಹಿತಿಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಅದು ಅಲ್ಲದೆ ಶಾಸನಸಭೆ ಅಧಿವೇಶನ ಕಳೆದಮೇಲೆ ನಾನು ಮತ್ತು ರೆವಿನ್ಯೂ ಕಾರ್ಯದರ್ಶಿಯವರು ಇಬ್ಬರೂ ಅಲ್ಲಿ ಹೋಗಿ ಅಲ್ಲಿ ಇರತಕ್ಕ ಇನಾಮ್ ಗ್ರಾಮಗಳು ಮತ್ತು ಕಾಡು ಇದ್ದರೆ ಅವುಗಳನ್ನು ನೋಡಿ ದೇವಸ್ಥಾನಕ್ಕೆ ಸಂಬಂಧಪಟ್ಟ ಪೂರ್ಣ ಚಿತ್ರವೇನು ಎಂದು ತಿಳಿದು ಮುಂದಿನ ಕ್ರಮ ಯಾವರೀತಿ ತೆಗೆದುಕೊಳ್ಳಬೇಕು ಎನ್ನುವುದನ್ನು ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Oil Refinery At Mangalore

667. Sri DODDATHIMMAIAH (Gulur).—

Will the Minister for Industries be pleased to state.—

(a) whether the proposal for the establishment of an Oil Refinery at Mangalore has been sent to the Central Government ;

(b) if so, the reaction of the Central Government in the matter ?

Sri S. M. KRISHNA (Minister for Industries).—

(a) Yes.

(b) The decision of the Government of India is awaited.

Sri DODDATHIMMAIAH.—If the proposal is accepted by the Government of India, may I know, from where the Government proposes to get crude oil ?

Sri S. M. KRISHNA.—We will be the happiest if Government of India were to decide to set up an Oil Refinery in Mangalore. With regard to where they get the crude oil it is for the Government of India to decide.

Sri DODDATHIMMAIAH.-May I know whether the State Goelogical Department or the Geological Survey of India have found out any oil deposits in any part of our State ?

Sri S. M. KRISHNA.—Not to my knowledge.

Sri DODDATHIMMAIAH.-May I know whether the recent air-borne mineral survey conducted by the Government of India indicate any oil deposits in our State ?

Sri S. M. KRISHNA.—This much I know that the air-borne mineral survey uuit which was till now located in Delhi is going to be transferred to Bangalore and the Government of India have asked the Government af Mysore to find out a suitable building, so that the air borne mineral survey unit could be located permanently in Bangalore. I have been taking steps to sound other Government and Central Government units to provide some building for this.

Sri V. N. PATIL.—Will the the Hon'ble Minister enlighten us whether the air-borne mineral survey that is being couducted is an indigenous survey by Indian genious and experts or by the so called western experts ?

Sri S. M. KRISHNA.—It will be hundred per cent Indian nationalistic opinion.

ಶ್ರೀ ಕಾಗೋಡು ತಿಮ್ಮಪ್ಪ.—ಈಗಾಗಲೇ ಮಂಗಳೂರಿನಲ್ಲಿ ಗೊಬ್ಬರದ ಕಾರ್ಖಾನೆ ಪ್ರಾರಂಭವಾಗಿರುವುದರಿಂದ ಮತ್ತು ತೈಲ ಶುದ್ಧೀಕರಣ ಕಾರ್ಖಾನೆಯಿಂದ ಗೊಬ್ಬರದ ಕಾರ್ಖಾನೆಗೆ ಬೇಕಾದ ಕಚ್ಚಾಪದಾರ್ಥ ಸಿಕ್ಕುವುದರಿಂದ ಮಂಗಳೂರಿನಲ್ಲೇ ತೈಲ ಶುದ್ಧೀಕರಣ ಕಾರ್ಖಾನೆ ಸ್ಥಾಪಿಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಮಾಡುವಿರಾ ?

ಶ್ರೀ ಎಸ್. ಎಂ. ಕೃಷ್ಣ.—ಇದರ ಬಗ್ಗೆ ರಾಜ್ಯ ಸರಕಾರ ಸಾಕಷ್ಟು ಪ್ರಯತ್ನ ಮಾಡುತ್ತಿದೆ. ಮಂಗಳೂರಿನಲ್ಲಿ ತೈಲ ಶುದ್ಧೀಕರಣ ಕಾರ್ಖಾನೆ ಸ್ಥಾಪಿಸಲು ಎಲ್ಲಾ ವಿಧವಾದ ಸೌಲಭ್ಯವಿರುವುದರಿಂದ ಅಲ್ಲೇ ಸ್ಥಾಪಿಸಬೇಕೆಂದು ಕೇಂದ್ರ ಸರಕಾರದಲ್ಲಿ ಒತ್ತಾಯಮಾಡುತ್ತಿದ್ದೇವೆ.

Sri DODDATHIMMAIAH.—Keeping in view the proposal of Oil Refinery at Mangalore, has the Government taken any steps for stopping of the big tankers at Mangalore Airport ?

Sri S. M. KRISHNA.—Very recently when I was in Delhi I have had detailed discussions with the Union Minister for Communications and Shipping Sri Raj Bahadur and I have impressed on him the fact that at the Mangalore port the wharf will have to be deepened to 45 ft. depth so that 100,000 tonne tankers could stop there and the same was necessary.

ಶ್ರೀ ಕೆ. ಆರ್ ಶ್ರೀನಿವಾಸಲು ನಾಯ್ಡು.—ಮದ್ರಾಸು ಮತ್ತು ಕೇರಳಗಳಲ್ಲಿ ಎಣ್ಣೆಶುದ್ಧೀಕರಣ ಕಾರ್ಖಾನೆ ಇರುವುದರಿಂದ ಮತ್ತು ಇದಕ್ಕೆ ಬೇಕಾದ ಅನುಕೂಲತೆ ಮತ್ತು ಆವಶ್ಯಕತೆ ನಮ್ಮ ರಾಜ್ಯದಲ್ಲಿರುವದರಿಂದ ಇಲ್ಲಿ ಸ್ಥಾಪಿಸುವಂತೆ ಸಲಹೆ ಕೊಡುವಿರಾ ?

ಶ್ರೀ ಎಸ್. ಎಂ. ಕೃಷ್ಣ.—ವೆಸ್ಟ್‌ಕೋಸ್ಟ್‌ನಲ್ಲಿ ಒಂದು ಆಯಿಲ್ ರಿಫೈನರಿ ಹಾಕಬೇಕೆಂದು ಕೇಂದ್ರ ಸರಕಾರ ಪ್ರಯತ್ನಮಾಡುತ್ತಿದೆ. ಮಂಗಳೂರಿನಲ್ಲಿ ಅದಕ್ಕೆ ಅನುಕೂಲವಿದೆ, ರಾಜ್ಯ ಸರಕಾರ ಅದಕ್ಕೆ ಬೇಕಾದ ಭೂಮಿ, ವಿದ್ಯುಚ್ಛಕ್ತಿ, ನೀರು ಮತ್ತಿತರ ಅನುಕೂಲಗಳನ್ನು ಕೊಡುವುದಾಗಿ ಕೇಂದ್ರ ಸರಕಾರಕ್ಕೆ ಭರವಸೆ ಕೊಟ್ಟಿದೆ.

Sri DODDATHIMMAIAH.—May I know whether our Geological Department is equipped well to find out the oil deposits in the State and whether any steps have been taken by the Geological Department in this direction ?

Sri S. M. KRISHNA.—If the Geological Department of Mysore does not have the needed expertise, I am sure we can requisition the Government of India, which has enough expertise.

Killing of Elephants in Nagarhole Game Sanctuary

683. Sri G. K. SUBBIAH (Virajpet).—

Will the Minister for Agriculture and Forests be pleased to state.—

(*a*) the number of officers who are incharge of Game Sanctuary in Nagarhole area and their ranks ;

(*b*) the number of elephants shot dead in Nagarhole Game Sanctuary since 1-1 1967 upto 20-2-1973;

(*c*) of them, the number of males and females ;

(*d*) the reasons for killing only males in good number ?

Sri K. H. PATIL (Minister for Agriculture and Forests).—

(*a*) One-Range Forest Officer.
Two-Game Supervisors, and
Nine-Game-Guards.

(*b*) Four.

(*c*) Three ma es and one female.

(*d*) The reasons cannot be definitely pointed out. Since the male elephants have tusks, it will be a fair presumption to state that they are killed for the sake of trade in Ivory.

ಶ್ರೀ ಜಿ. ಕೆ. ಸುಬ್ಬಯ್ಯ.—ಮೂರು ಗಂಡು ಆನೆಗಳನ್ನು ಕೊಂದಿರುವುದಾಗಿ ಉತ್ತರವಿದೆ. ಅವುಗಳ ದಂತ ಸರಕಾರಕ್ಕೆ ಸಿಕ್ಕಿದೆಯೋ ?

† ಶ್ರೀ ಕೆ. ಎಚ್. ಪಾಟೀಲ್.—ಸಿಕ್ಕಿರಬೇಕು.

ಶ್ರೀ ಜಿ. ಕೆ. ಸುಬ್ಬಯ್ಯ.—ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೆ ನೋಟೀಸ್ ಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಸಿಕ್ಕಿದೆಯೋ ಅಥವ ಇಲ್ಲವೇ ಎಂಬುದನ್ನು ಹೇಳಬೇಕು.

ಶ್ರೀ ಕೆ. ಎಚ್. ಪಾಟೀಲ್.—ಸಿಕ್ಕಿರಬಹುದು ಎಂದು ಹೇಳಿದೆ. ಈ ವಿಷಯ ಕೇಳಿರಲಿಲ್ಲ. ಕೇಳದೆ ತಕ್ಷಣ ಹೇಗೆ ಹೇಳಲು ಸಾಧ್ಯ ? It has been suspected that on account of certain diseases or for some other reason they must have dead. Therefore I presumed because I do not know the correct fact.

Sri KAGODU THIMMAPPA.—I am sure the Department is aware of it.

Sri K. H. PATIL.—But I have knowledge about the details.

Mr. DEPUTY SPEAKER.—I am not happy on this reply. Government reply should be emphatic, candid and clear. There is no scope for presumption and guessing work.

Sri J. L. KABADI.—The question may be held over, Sir.

ಶ್ರೀ ಕೆ. ಎಚ್. ಪಾಟೀಲ್.—ಏಕೆ ? ಮೊದಲೇ ಕೇಳಿದ್ದರೆ ದಂತ ಸಿಕ್ಕಿರುವ ವಿಚಾರ ಹೇಳಬಹುದಾಗಿತ್ತು. ಬೇರೆ ಪ್ರಶ್ನೆ ಹಾಕಿದರೆ ಅದಕ್ಕೆ ಉತ್ತರ ಕೊಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಆನೆಗಳು ಸತ್ತಿವೆ, ಅವು ಅಸ್ತಿಯಿದ್ದ ಹಾಗೆ, ಅದರ ಬಗ್ಗೆ ದಾಖಲೆ ಇರಲೇಬೇಕು.

Mr. DEPUTY SPEAKER.—The reply ought to have been candid and clear.

Sri K. H. PATIL.—Sir, it is not on account of the departmental shooting these animals are dead. Therefore, I will have to say that I have no knowledge whether we have recovered the materials or not.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಕಾರಣದಿಂದ ಕೊಂದರು ಎಂದು ಕೇಳಿರುವಾಗ ಅದನ್ನು ನಿರ್ದಿಷ್ಟವಾಗಿ ಹೇಳಲೇಬೇಕು. ಇಲ್ಲಿ ಪ್ರಿಸಂಪ್ಷನ್ ಪ್ರಶ್ನೆ ಬರುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಕಾರಣ ತಿಳಿಯದು, ಕೊಂದಿರುವ ವಿಚಾರ ವರದಿಯಾಗಿದೆ. ಅದನ್ನು ನೋಡಿ ಪ್ರಿಸ್ಯೂಮ್ ಮಾಡಿ ಉತ್ತರ ಕೊಡಲಾಗಿದೆ.

ಶ್ರೀ ಸಿ. ಬೈರೇಗೌಡ.—ಮಂತ್ರಿಗಳ ಉತ್ತರ ಸರಿಯಾಗಿಲ್ಲ. ಆದುದರಿಂದ ಈ ಪ್ರಶ್ನೆಯನ್ನು ಮುಂದುವರೆಸಬೇಕು.

ಶ್ರೀ ಕೆ. ಎಚ್. ಪಾಟೀಲ್.—ಪ್ರಶ್ನೆಯಲ್ಲಿ ಕೇಳಿರುವಷ್ಟಕ್ಕೆ ಉತ್ತರ ಕೊಡಲಾಗಿದೆ. ಹೆಚ್ಚು ವಿವರ ಬೇಕಾದರೆ ಬೇರೆ ಪ್ರಶ್ನೆ ಹಾಕಬೇಕು, ಈ ಪ್ರಶ್ನೆಗೆ ಪೂರಕ ಉತ್ತರ ಕೊಟ್ಟಿದ್ದೇನೆ.

1-30 P.M.

Mr. DEPUTY SPEAKER.—Form the questions and answers, an impression is created that the elephants have been shot by the officers of the Department. But from the reply of the Hon. Minister we will be led to believe that they have not been killed by the officers of the Department. Then the Minister is perfectly justified in pleading for notice. If somebody has shot the elephants, the Minister cannot be emphatic and he cannot give all the facts.

ಶ್ರೀ ಕಾಗೋಡು ತಿಮ್ಮಪ್ಪ.—ಈ ಆನೆಗಳನ್ನು ಕೊಂದ ಲೆಕ್ಕವನ್ನು ಇದರಲ್ಲಿ ಕೊಟ್ಟಿದ್ದೀರಿ. ಆ ರೀತಿ ಈ ಆನೆಗಳನ್ನು ಕೊಂದ ಮೇಲೆ ಅವು ತಮಗೆ ಸಿಕ್ಕಿವೆಯೋ ? ಹಾಗೆ ಸಿಕ್ಕಿದ್ದರೆ ಅದರ ವಿತರಣೆ ಯಾವರೀತಿ ಮಾಡಿರಬೇಕು ಎನ್ನುವುದು ಗೊತ್ತಿರಬೇಕಲ್ಲವೇ ?

Sri K. H. PATIL.—If a separate question is put, I shall be able to answer it.

Sri V. N. PATIL.—Does the Hon. Minister justify the shooting of the male elephant for the sake of benefit and tusks ; if it is not what steps the Government proposes to take to prevent the shooting of elephants ? Will you justify the shooting or justify stopping it ?

Sri K. H. PATIL.—I have never justified killing and I will never justify it.

Sri V. N. PATIL.—Does the Hon. Minister assure us that he is going to stop shooting ?

Sri K. H. PATIL.—The Government is very keen to stop such shooting. We are taking all precautionary measures to protect the wild life. That is why this House has also helped the Government in passing a legislation. I am sorry this shooting has taken place long long back.

Transfer of Work of Planting Avenue Trees to Public Works Department

693. Sri P. M. BANGI.—(Jamakhandi).—

Will the Minister for Agriculture and Forests be pleased to state :—

(a) the date, month and year on which the work of planting, rearing, growing, numbering and protecting the avenue trees along side the State and National Highways and Major Districts roads in the State was taken away from the Public Works Department and entrusted to Forest Department ;

(b) the extra staff appointed by the Forest Department for discharging the work referred to in Clause (a) ;

(c) the reasons for transferring this work from Public Works Department to the Forest Department ;

(d) whether the work of creating nursery of trees and planting and rearing of trees cannot be done by Public Works Department under the guidance of Agriculture and Forest Department ;

(e) whether there is any proposal before Government to re-transfer the work from Forest Department to Public Works Department?

Sri K. H. PATIL (Minister for Agriculture and Forests).—

(a) 3rd May 1971.

(b) Please see statement appended. The staff, in addition to the work covered under question (a) is entrusted with afforesting catchment areas, foreshore areas of major tanks and canal banks.

(c) and (d) It was felt preferable to entrust it to Forest Department which has specialised in this type of Job.

(e) No.

STATEMENT

Sl. No.	Name of the Post		No. of Posts
1	Conservator of Forests	...	One
2	Divisional Forest Officers	...	Two
3	Range Forest Officers	...	Eight
4	Foresters	...	Sixteen
5	Forest Gurds	...	Thirty two
6	Superintendents Grade II	...	Two
7	First Division Clerks	...	Two
8	Second Division Clerks	...	Two
9	Typists	...	Two
10	Peons	...	Four
11	Jeep Drivers	...	Two

ಶ್ರೀ ಪಿ. ಎಂ. ಬಂಗಿ.—ಸ್ವಾಮಿ, ಈ ಕಾರ್ಯವನ್ನು ತಾರೀಖು 3-5-1971 ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ಅರಣ್ಯ ಇಲಾಖೆಯವರಿಗೆ ವಹಿಸಲಾಗಿದೆ ಎಂದು ತಿಳಿಸಿದ್ದೀರಿ. ಶ್ರೀ ಧರ್ಮವೀರರು ಗೌರ್ನರ್ ಆಗಿದ್ದ ಅವಧಿಯಲ್ಲಿ ಇದನ್ನು ಅವರಿಗೆ ವಹಿಸಿರುವುದರಿಂದ ಇದಕ್ಕೆ ಕಾರಣಗಳೇನು ಎಂಬುದನ್ನು ಅವರು ಕೊಟ್ಟಿರಬೇಕಲ್ಲವೇ ? ಅದನ್ನು ಈ ಹೌಸ್ ಮುಂದೆ ಇಡುತ್ತೀರಾ ಹೇಗೆ ?

† ಶ್ರೀ ಕೆ. ಎಚ್. ಪಾಟೀಲ್.—ಇದು ಪಬ್ಲಿಕ್ ಡಾಕ್ಯುಮೆಂಟ್. ಇದು ಹೌಸ್ ಮುಂದೆ ಇಡಬೇಕೆಂದೇನೂ ಇಲ್ಲ, ಯಾರು ಬೇಕಾದರೂ ನೋಡಬಹುದು.

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ, ಪಿ. ಡಬ್ಲ್ಯು. ಡಿ. ಇಲಾಖೆಗೆ ಈ ಕಾರ್ಯವನ್ನು ಮತ್ತೆ ವಹಿಸಿಕೊಟ್ಟರೆ ಅವರು ಸಾಲು ಮರಗಳನ್ನು ಚೆನ್ನಾಗಿ ನಡೆಸುತ್ತಾರೆ ಎಂದು ನನ್ನ ಭಾವನೆ. ಮತ್ತು ಈ ಕಾರ್ಯವನ್ನು ಪಿ. ಡಬ್ಲ್ಯು. ಡಿ. ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸುವುದಕ್ಕೆ ಕಾರಣಗಳೇನು ಎಂದು ಕೇಳಿದ್ದಕ್ಕೆ ಇಂತಹ ಕಾರ್ಯಗಳಲ್ಲಿ ಪರಿಣತೆ ಪಡೆದಿರುವ ಅರಣ್ಯ ಇಲಾಖೆಗೆ ಇದನ್ನು ವಹಿಸುವುದು ಸೂಕ್ತವೆಂದು ಕಂಡುಬಂದಿದ್ದಿತು ಎಂದು ಹೇಳಿದ್ದೀರಿ. ಈ ಬಗ್ಗೆ ಹೇಳುವುದಾದರೆ ಇವರು ಇದನ್ನು ನೆಡುವ ಸಲುವಾಗಿ ಒಂದು ಅಡಿ ಗುಂಡಿಯನ್ನು ಏನೋ ತೆಗೆದಿದ್ದಾರೆ. ಆದರೆ ಅವರು ಸಾಲು ಮರಗಳನ್ನು ಬೆಳೆಸುವ ಬದಲು ಮುಳ್ಳಿನ ಮರವನ್ನು ಬೆಳೆಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಪಿ ಡಬ್ಲ್ಯು. ಡಿ. ಯವರು ಈ ಇಲಾಖೆಯಲ್ಲಿ ಎಫಿಷಿಯೆಂಟ್ ಇದ್ದಾರೆ ಎಂದು ತಿಳಿದು ಕೊಟ್ಟಿದ್ದಾರೆ. ಪುನಃ ಅವರು ಬೇಡಿದರೆ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಈಗ ಸಾಲು ಮರಗಳು ನಶಿಸಿ ಹೋಗುತ್ತಾ ಇವೆ. ಮತ್ತು ಈ ಇಲಾಖೆಯವರು ಸರಿಯಾಗಿ ನಿರ್ವಹಿಸುತ್ತಾ ಇಲ್ಲ. ಆದುದರಿಂದ ರಸ್ತೆಗಳ ಬದಿಗಳಲ್ಲಿರತಕ್ಕಂಥ ಮರಗಳನ್ನು ರಸ್ತೆ ಬದಿಗಳಲ್ಲಿರುವ ಹಿಡುವಳಿದಾರರಿಗೇನೇ ಕೊಟ್ಟರೆ, ಇದರಲ್ಲಿ ಬರುವ ಉತ್ಪತ್ತಿಯನ್ನು ಅವರೇ ತೆಗೆದುಕೊಳ್ಳಿ ಅಂತ ಮಾಡಿ ಇದರ ಉಸ್ತುವಾರಿಯನ್ನು ಅವರಿಗೆ ವಹಿಸಿದರೆ ಆವಾಗ ಈ ಮರಗಳನ್ನು ಅವರು ಚೆನ್ನಾಗಿ ಸಂರಕ್ಷಣೆ ಮಾಡಬಹುದು. ಆರೀತಿ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

Financial Aid to Fire Victims in Bijapur District

750. Sri J. L. KABADI (Ballolli).—

Will the Minister for Revenue please refer to replies given to my starred question No. 496 (695) of 46th list (I Session 1972) on 17th August 1972 and state :—

(*a*) whether Government would place a copy of the F. I. R. on the Table of the House as promised ;

(*b*) whether it is not a fact that there is contradiction in the F. I. R. of the Police and the report furnished by the Tahsildar of Basavan Bagewadi, Bijapur District ;

(*c*) if so, whether they have looked into this matter ;

(*d*) the reasons for not granting financial aid to Sri Maddeppa Thejappa Bidri and Sri Siddappa Rayappa Kudgi, when the same has been granted to Sri Veerabhadrappa Dundappa Kaladgi who is financially sound ?

SRI N. HUTCHAMASHTHY GOWDA (Minister for Revenue).—

(*a*) There is no F. I. R. as no case was registered.

(*b*) Does not arise in view of Reply to clause (*a*).

(*c*) Does not arise.

(*d*) The Financial position of Sri Maddeppa Tejappa Bidri and Siddappa Rayappa Kudgi, does not warrant the sanction of cash relief.

ಶ್ರೀ ಜೆ. ಎಲ್. ಕಬಾಡಿ.—ಅಧ್ಯಕ್ಷರೇ, 17-8-1972 ರಂದು ಕೊಟ್ಟ ಪ್ರಶ್ನೆಗೆ ಕಂದಾಯ ಮಂತ್ರಿಗಳಿಂದ ಸರಿಯಾದ ಉತ್ತರ ಬರಲಿಲ್ಲ. ಆದರೆ ಅವರಿಗೆ 12 ಸಾವಿರ ರೂಪಾಯಿ ಏನು ಮಂಜೂರು ಮಾಡಿದ್ದೀರಿ, ಮೊದಲನೇ ಸಲ 800 ರೂಪಾಯಿ, ಎರಡನೇ ಸಲ 500 ರೂಪಾಯಿ ಮೂರನೆ ಸಲ 300 ರೂಪಾಯಿ ಮತ್ತು ಇತರೆ ಕಟ್ಟಿಗೆ ಸಾಮಾನುಗಳನ್ನು ಕೊಟ್ಟಿದೆ. ಮತ್ತು 10 ಸಾವಿರ ರೂಪಾಯಿಯನ್ನು ಸರ್ಕಾರ ಕೊಟ್ಟಿದೆ ಎಂದು ತಾವು ಹೋದ ಸಲ ಉತ್ತರದಲ್ಲಿ ಹೇಳಿದಿರಿ. ಇದನ್ನು ಯಾವ ಆಧಾರದ ಮೇಲೆ ಅವರಿಗೆ 12 ಸಾವಿರ ರೂಪಾಯಿಯನ್ನು ಪೂರ್ತಿಯಾಗಿ ಮಂಜೂರು ಮಾಡಲಾಯಿತು ಎನ್ನುವುದನ್ನು ತಿಳಿಸುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲು ಅವರಿಗೆ 800 ರೂಪಾಯಿ ಸಾಲ ಕೊಟ್ಟಿದೆ, ಗಲಭೆ, ದೊಂಬೆಗಳು ಆದಾಗ ಡೆಪ್ಯುಟಿ ಕಮೀಷನರು ಕೊಡತಕ್ಕಂಥಾ ಗ್ರ್ಯಾಂಟ್ ಅದು. ಆಮೇಲೆ ಅನು ಸರ್ಕಾರದ ಮಟ್ಟಕ್ಕೆ ಬಂದಾಗ 1200 ರೂಪಾಯಿ ಕೊಟ್ಟಿದ್ದಾರೆ. ಇದಲ್ಲದೆ ಚೀಫ್ ಮಿನಿಸ್ಟರ್ ರಿಲೀಫ್ ಫಂಡ ಅಂತ ಇದೆ. ಅದು ಡಿಸ್ಕ್ರಿಷನರಿ ಗ್ರ್ಯಾಂಟ್. ಆ ಲೆವಲ್‌ನಲ್ಲಿ ಉಳಿದ ದುಡ್ಡನ್ನು ಕೊಟ್ಟಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ.—ಶ್ರೀ ವೀರಭದ್ರಪ್ಪ ದುಂಡಪ್ಪ ಕಲಾದಿಗಿಯವರಿಗೆ ಸಹಾಯ ಧನವನ್ನು ಚೀಫ್ ಮಿನಿಸ್ಟರ್ ಫಂಡ್‌ನಿಂದ ತೆಗೆದು ಕೊಡುವುದಕ್ಕೆ ಕಾರಣ ಏನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರಕ್ಕೆ ವರದಿ ಬಂದಿರುವ ಪ್ರಕಾರ ಈ ಗಲಭೆಗೆ ರಾಜಕೀಯ ಕಾರಣ ಇದೆ ಎಂದು ಗೊತ್ತಾಗಿದೆ. ಉದ್ದೇಶಪೂರ್ವಕವಾಗಿ ಅವರ ಮನೆಗೆ ಬೆಂಕಿ ಹಚ್ಚಿದ್ದಾರೆ. ಆದುದರಿಂದ ಅವರ ಫಂಡ್‌ನಿಂದ ಸಹಾಯ ಧನವನ್ನು ಕೊಡಲಾಗಿದೆ.

ಶ್ರೀ ಕೆ. ಡಿ ಪಾಟೀಲ್.—ಸ್ವಾಮಿ, ಈ ಮನೆಗಳು ಸುಟ್ಟ ಬಗ್ಗೆ ಪೋಲೀಸಿನವರು ಪಂಚನಾಮ ಬರೆಯುತ್ತಾರೆ. ಅದನ್ನು ಈ ಸಭೆಯ ಮುಂದೆ ಇಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪೋಲೀಸಿನವರು ಪಂಚನಾಮ ಬರೆದಿರುವುದನ್ನು ಸಭೆಯ ಮುಂದೆ ಇಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಾವು ರಾಜಕೀಯ ಕಾರಣದಿಂದ ಈ ಮನೆಗೆ ಬೆಂಕಿ ಇಟ್ಟಿದ್ದಾರೆ ಎಂದು ಹೇಳಿದಿರಿ. ಈ ಬೆಂಕಿಯಿಂದ ಉಂಟಾಗಿರತಕ್ಕಂಥ ನಷ್ಟ ಏನು ? ಪೋಲೀಸ್ ಅಧಿಕಾರಿಗಳ ಪಂಚನಾಮದಲ್ಲಿ ಇದರಲ್ಲಿ ಆಗಿರತಕ್ಕಂಥ ನಷ್ಟ ಎಷ್ಟು ಆಗಿದೆ ಎಂದು ತಿಳಿಸಿದ್ದಾರೆ ? ತಾಸೀಲ್ದಾರರು ಈ ಬಗ್ಗೆ ಎಷ್ಟು ನಷ್ಟವಾಗಿದೆ ಎಂದು ವರದಿ ಕೊಟ್ಟಿದ್ದಾರೆ ? ಅದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮ್ಮ ರೆವಿನ್ಯೂ ಅಧಿಕಾರಿಗಳು ಕೊಟ್ಟಿರುವ ವರದಿ ಪ್ರಕಾರ ಈ ಮನೆಗೆ ಬೆಂಕಿಯಿಂದ ನಷ್ಟವಾಗಿರತಕ್ಕಂಥಾದ್ದು 10 ಸಾವಿರ ರೂಪಾಯಿ ಮತ್ತು ಉಳಿದ ಸಾಮಾನುಗಳು ಹೋಗಿರುವುದು 20 ಸಾವಿರ ರೂಪಾಯಿ ಎಂದು ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಪೋಲೀಸಿನವರು ಕೊಟ್ಟಿರತಕ್ಕಂಥ ರಿಪೋರ್ಟ್‌ನಲ್ಲಿ ಏನು ಇದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದರ ವಿವರಗಳನ್ನು ಇಟ್ಟುಕೊಂಡಿಲ್ಲ.

ಶ್ರೀ ಟಿ. ವಿ. ಕೃಷ್ಣಪ್ಪ.—ಸ್ಥಳದಲ್ಲಿ ಮಹಜರೆ ಮಾಡಿದಾಗ ಕೇವಲ 800 ರೂಪಾಯಿ ಅಷ್ಟು ನಷ್ಟವಾಗಿದೆ ಎಂದು ತಿಳಿದಿದ್ದೇನೆ. ಇದಕ್ಕೆ ತಮ್ಮ ಉತ್ತರ ಏನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ಥಳದಲ್ಲಿ ಮಹಜರ್ ಮಾಡಿದಾಗ 800 ರೂಪಾಯಿ ಅಷ್ಟು ನಷ್ಟವಾಗಿದೆ ಎಂದು ವರದಿ ಬಂದಿಲ್ಲ. ಸ್ಥಳದಲ್ಲೇ ಡೆಪ್ಯುಟಿ ಕಮೀಷನರು ಅವರಿಗೆ 800 ರೂಪಾಯಿ ಕೊಟ್ಟಿದ್ದಾರೆ ಎನ್ನುವ ವರದಿ ಇದೆ.

ಶ್ರೀ ಎಚ್. ಡಿ. ದೇವೇ ಗೌಡ.—ಪೋಲೀಸ್ ಅಧಿಕಾರಿಗಳು ಏನು ರಿಪೋರ್ಟನ್ನೂ ಇಟ್ಟುಕೊಂಡಿಲ್ಲ ಎಂದು ಮಾನ್ಯ ಸಚಿವರು ಹೇಳಿದರು. ಯಾವ ಆಧಾರದ ಮೇಲೆ ರಾಜಕೀಯ ಉದ್ದೇಶದಿಂದ ಬೆಂಕಿ ಆಕಸ್ಮಿಕವಾಗಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಸ್ಥಳದಲ್ಲಿ ನಷ್ಟಹೊಂದಿರತಕ್ಕವರು ನನಗೆ ರಾಜಕೀಯದಲ್ಲಿ ಆಗದೆ ಇರುವವರು ತೊಂದರೆ ಕೊಟ್ಟಿದ್ದಾರೆ ಎನ್ನುವುದನ್ನು ಅವರು ಹೇಳಿರತಕ್ಕ ವಿಷಯದ ಮೇಲೆ ತಿಳಿಸಿದ್ದೇನೆ ಅಷ್ಟೆ.

Sri H. D. DEVE GOWDA.—Last time this question was held over by the Hon. Speaker. The Government has not come out with true colours.

Mr. DEPUTY SPEAKER.—It gives a different meaning,

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಳೆದ ಸಾರಿ ಎಫ್. ಐ. ಆರ್. ಬಂದಿದ್ದಿಲ್ಲ ಎನ್ನುವ ವಿಷಯದ ಮೇಲೆ ನಿಂತಿತ್ತು.

ಶ್ರೀ ಎಚ್. ಡಿ. ದೇವೇಗೌಡ.—ಬೆಂಕಿ ಆಕಸ್ಮಿಕಕ್ಕೆ ಎಷ್ಟು ಹಣವನ್ನು ಕೊಡಬೇಕು ಎನ್ನುವುದಕ್ಕೆ ನಿಯಮಾವಳಿಗಳಿವೆ. ಯಾವನೋ ಅರ್ಜಿ ಕೊಟ್ಟಿದ್ದಾನೆ, ಅದರ ಮೇಲೆ ಕೊಟ್ಟಿದ್ದೇವೆಂದರೆ is it not the responsibility of the Government to enquire into it by the Police Department ? The fire accident has taken political motivation.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ರೀತಿ ಕೊಟ್ಟಿರುವುದು ಇದು ಮೊದಲನೇ ಸಲವಲ್ಲ. ಗುಲ್ಬರ್ಗದಲ್ಲಿ ಹೀಗೆಯೇ ಬೆಂಕಿ ಅನಾಹುತವಾದಾಗ 2500 ರೂಪಾಯಿವರೆಗೂ ಕೊಟ್ಟಿದ್ದಾರೆ ಬಂಟವಾಳದಲ್ಲಿ, ಚಿಕ್ಕಮಗಳೂರಿನಲ್ಲಿ ಇದೇ ರೀತಿ ಕೊಟ್ಟಿರುವ ಉದಾಹರಣೆಗಳಿವೆ. ಅದೇ ಪ್ರಕಾರವಾಗಿ ಈಗಲೂ ಕೊಟ್ಟಿದೆ.

ಶ್ರೀ ಜೆ. ಎಲ್. ಕಬಾಡಿ.—ಹೋದ ಸಲ ಈ ಪ್ರಶ್ನೆಗೆ ಉತ್ತರ ಕೊಡುವಾಗ ಗಲಭೆಯಾಯಿತು ಎನ್ನುವ ಮಾತು ಹೇಳಲಿಲ್ಲ, ರಾಜಕಾರಣದಿಂದ ಆಗಿದೆ ಎನ್ನುವ ಮಾತು ಹೇಳಲಿಲ್ಲ. ಆದರೆ ಈ ಹೊತ್ತು ಮಾತ್ರ ರಾಜಕೀಯ ದುರುದ್ದೇಶದಿಂದ ಗಲಭೆಯಾಗಿ, ಆಕಸ್ಮಿಕವಾಗಿ ಬೆಂಕಿ ಹಚ್ಚಿದರು, ಅದಕ್ಕೋಸ್ಕರ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನಲ್ಲಿ ಎಷ್ಟು ಮನೆಗಳು ಸುಟ್ಟಿವೆ. ಅವರಿಗೆ ಎಷ್ಟೆಷ್ಟು ಪರಿಹಾರ ಕೊಟ್ಟಿದೆ ಎಂದು ಕೇಳಿದಾಗ ಸಾಕಷ್ಟು ಆಸ್ತಿ ಉಳ್ಳವರು ಇರುವುದರಿಂದ ಗಮನಕ್ಕೆ ತೆಗೆದುಕೊಂಡಿಲ್ಲ; ಕೊಟ್ಟಿಲ್ಲ ಎಂದುಹೇಳಿದರು. ಆದರೆ ಇದರಲ್ಲಿ ಯಾವ ಮನುಷ್ಯನ ಮನೆ ಮತ್ತು ಅಂಗಡಿಗೆ ಬೆಂಕಿಯಿಂದ ಅನಾಹುತವಾಗಿದೆ ಎಂದು ಹೇಳುತ್ತಾರೆ ಅತ ಫೈನಾನ್ಷಿಯಲಿ ಸೌಂಡ್ ಇದ್ದರೂ ಸಹಿತ 12 ಸಾವಿರ ರೂಪಾಯಿ ಕೊಡುವ ಉದ್ದೇಶವೇನು ? ರಾಜಕೀಯ ಕಾರಣವನ್ನು ಏನು ತಂದೊಡ್ಡುತ್ತಿದ್ದೀರಿ ಅದು ಸತ್ಯಕ್ಕೆ ದೂರವಾದುದು. ಆದ್ದರಿಂದ ಅದರ ಬಗ್ಗೆ ತನಿಖೆ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಇಲ್ಲಿ ಹೇಳುತ್ತಿರುವ ರೀತಿಯಿಂದರೇ ಇದರಲ್ಲಿ ಸ್ವಲ್ಪ ಮಟ್ಟಿಗೆ ರಾಜಕೀಯವಿದೆ ಎನ್ನುವುದನ್ನು ಊಹೆ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಅದರ ಮೇಲೆಯೇ ಹೇಳಬಹುದು. ಸರ್ಕಾರಕ್ಕೆ ಬಂದಿರುವ ಮಾಹಿತಿ ಪ್ರಕಾರ ಕೂಡ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಇತರ ಕಡೆಗಳಲ್ಲಿ ಕೊಟ್ಟಿರುವುದರಿಂದ ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಂದರ್ಭದಲ್ಲಿಯೂ ಸಹಾಯ ಕೊಟ್ಟಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಯಾವುದೇ ಗಲಭೆಯಾಗಲೀ ಮನೆ ಬೆಂದು ಹೋಗಲಿ ಆ ಸಂಬಂಧದಲ್ಲಿ ಪೋಲೀಸರು ಮಹಜರು ಮಾಡಿ ಒಂದು ವರದಿಯನ್ನು ಕೊಡುತ್ತಾರೆ. ಇಲ್ಲದೆ ಹೋದರೆ ಯಾವ ಆಧಾರದ ಮೇಲೆ ಇಷ್ಟು ಲುಕ್ಸಾನಾಗಿದೆ ಎನ್ನುವ ತೀರ್ಮಾನಕ್ಕೆ ಸರ್ಕಾರದವರು ಬಂದಿದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬೆಂಕಿ ಬಿದ್ದ ವಿಷಯವನ್ನು ರವೆನ್ಯೂ ಅಧಿಕಾರಿಗಳು ತಿಳಿದುಕೊಂಡು ಬಂದು ಯಾವ ಯಾವ ಸಂದರ್ಭದಲ್ಲಿ ಕೊಡಬೇಕು ಎಂದು ಸಿಫಾರಸು ಮಾಡತಕ್ಕ ಪದ್ಧತಿ ಇದೆ. ಕೆಲವು ವಿಶೇಷ ಸಂದರ್ಭಗಳಲ್ಲಿ, ಗಲಭೆಯಾಗಿರತಕ್ಕ ಕಡೆಗಳಲ್ಲಿ ಅವರ ವರದಿ ಮೇಲೆ ಹೆಚ್ಚು ಹಣ ಕೊಟ್ಟಿರತಕ್ಕದ್ದು ಕಾನೂನು ಪ್ರಕಾರ ಕೊಟ್ಟಿದ್ದೇವೆ, ಅದಕ್ಕೆ ವಿಶೇಷವಾದ ಅವಕಾಶ ವೇನು ಎನ್ನುವುದನ್ನು ನೋಡಿ ಕೊಟ್ಟಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಗುಲ್ಬರ್ಗದಲ್ಲಿ ಕೊಟ್ಟಿದ್ದೇವೆ, ಚಿಕ್ಕಮಗಳೂರಿನಲ್ಲಿ ಕೊಟ್ಟಿದ್ದೇವೆ, ಬೇರೆ ಬೇರೆ ಕಡೆಗಳಲ್ಲಿ ಕೊಟ್ಟಿದ್ದೇವೆಂದು ಹೇಳಿದರು. ಗುಲ್ಬರ್ಗ, ಚಿಕ್ಕಮಗಳೂರು ಮುಂತಾದ ಕಡೆ ಮತೀಯ ಘರ್ಷಣೆಗಳಾದುವು. ಅದಕ್ಕಾಗಿ ವಿಶೇಷ ಪರಿಹಾರವನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಮತೀಯ ಸಂಬಂಧವಾದ ಗಲಭೆಗಳಾಗಿಲ್ಲ. ಯಾರೂ ಅಕಸ್ಮಿಕಕ್ಕೆ ಒಳಗಾಗಿದ್ದಾರೆ ಅವರು ಒಂದು ಅರ್ಜಿಯನ್ನು ಕೊಟ್ಟು ರಾಜಕಾರಣದಿಂದ ಹೀಗೆ ಆಗಿದೆ ಎಂದು ತಿಳಿಸಿದರು, ಅದಕ್ಕೆ ಕೊಟ್ಟಿದ್ದೇವೆಂದು ಹೇಳಿದರು. ರಾಜಕಾರಣದಿಂದ ಆಯಿತೇ ಇಲ್ಲವೇ ಎನ್ನುವುದನ್ನು ಮಾನ್ಯ ಸಚಿವರು ಮತ್ತು ಮಾನ್ಯ ಸದಸ್ಯರಾದ ಕಟಾಡಿಯವರು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರದಿಂದ ಒಬ್ಬ ಸಿ.ಐ.ಡಿ. ಅವರನ್ನು ಕಳುಹಿಸಿ ಯಾರಾದರೂ ರಾಜಕಾರಣಿಗಳ ಹಿನ್ನಲೆಯಿಂದ ಈ ಘಟನೆ ನಡೆದಿದೆಯೆ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಪರಿಶೀಲನೆ ಮಾಡಿ ನಮ್ಮ ಅಧಿಕಾರಿಗಳಿಂದ ಬಂದಿರತಕ್ಕ ವರದಿಯ ಆಧಾರದ ಮೇಲೆಯೇ ಕೊಟ್ಟಿರುವುದು. ಅದಕ್ಕಿಂತ ಹೆಚ್ಚು ಪರಿಶೀಲನೆ ಮಾಡಬೇಕಾದ ಅಗತ್ಯ ಕಾಣಿಸುವುದಿಲ್ಲ.

ಶ್ರೀ ಟಿ. ವಿ. ಕೃಷ್ಣಪ್ಪ.—ಕಳೆದ ಸಾರಿ ಈ ಸದನದಲ್ಲಿ ಬೆಂಕಿ ಅಕಸ್ಮಿಕಕ್ಕೆ ಒಳಗಾದಂಥ ಮನೆಗಳಿಗೆ ಆಗತಕ್ಕ ನಷ್ಟಕ್ಕೂ ಪರಿಹಾರಕ್ಕೂ ಯಾವ ಸಂಬಂಧವೂ ಇಲ್ಲ, ತಾತ್ಕಾಲಿಕವಾಗಿ, ಅವರನ್ನು ಸಂತೈಸುವುದಕ್ಕೆ ಏನು ಪರಿಹಾರ ಕೊಡಬೇಕೋ ಅಷ್ಟನ್ನು ಮಾತ್ರ ಕೊಡುತ್ತೇವೆಂದು ಹೇಳಿದರು. ಈಗ 20 ಸಾವಿರ ರೂಪಾಯಿ ನಷ್ಟವಾಗಿದ್ದರೆ ಅರ್ಧಕ್ಕಿಂತ ಹೆಚ್ಚಾಗಿ ಹಣ ಕೊಡುವುದರ ಅವಶ್ಯಕತೆ ಏನಿತ್ತು ? ಪಕ್ಷಪಾತ ದೃಷ್ಟಿಯಿಂದ ಹೀಗೆ ಮಾಡಿದ್ದಾರೆ ಎಂದು ಆರೋಪ ಮಾಡಬಹುದೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನಷ್ಟವಾಗುವುದಕ್ಕೆ ಅನುಗುಣವಾಗಿ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಈಗಲೂ ಹೇಳುತ್ತೇನೆ. ನಮಗೆ ಬಂದಿರುವ ವರದಿ ಪ್ರಕಾರ 30 ಸಾವಿರ ರೂಪಾಯಿ. ಅದಕ್ಕೆ ಸರ್ಕಾರದಿಂದ ಕೊಟ್ಟಿರತಕ್ಕದ್ದು 2 ಸಾವಿರ ರೂಪಾಯಿ ಮತ್ತು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಅವರ ಡಿಸ್ಕ್ರಿಷನ್ ಮೇಲೆ ಕೊಡತಕ್ಕ ಹಣದಲ್ಲಿ ಹತ್ತು ಸಾವಿರ ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇ ಗೌಡ.—ಸರ್ಕಾರಕ್ಕೆ ರೆವೆನ್ಯೂ ಅಧಿಕಾರಿಗಳು ಎಷ್ಟು ನಷ್ಟವಾಗಿದೆ ಎನ್ನುವುದನ್ನು ತಿಳಿಸಿದರು. ಅವರ ರಿಪೋರ್ಟ್ ಏನು ಎನ್ನುವುದನ್ನು ದಯಮಾಡಿ ಸಭೆಗೆ ತಿಳಿಸಬೇಕು. ಏಕೆಂದರೆ ರೆವೆನ್ಯೂ ಅಧಿಕಾರಿಗಳ ರಿಪೋರ್ಟನ್ನು ಗಣನೆಗೆ ತೆಗೆದುಕೊಳ್ಳದೆ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಿ 10 ಸಹಸ್ರ ರೂಪಾಯಿ ಕೊಟ್ಟಿರತಕ್ಕದ್ದು ನನ್ನ ಗಮನಕ್ಕೆ ಬಂದಿದೆ. 10 ಸಾವಿರ ರೂಪಾಯಿ ಮುಖ್ಯಮಂತ್ರಿಗಳ ಫಂಡಿನಿಂದ ಕೊಡಬೇಕು ಎಂದು ಯಾವ ಅಧಿಕಾರಿ ರಿಪೋರ್ಟ್ ಮಾಡಿದ್ದಾರೆ ? ಅದನ್ನು ಸಭೆಯ ಮುಂದೆ ಇಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಧಿಕಾರಿಗಳು ಚೀಫ್ ಮಿನಿಸ್ಟರ ಫಂಡಿನಿಂದ ಕೊಡಬೇಕೆಂದು ಹೇಳಬೇಕಾದ ಅಗತ್ಯವಿಲ್ಲ. ಅದು ಚೀಫ್ ಮಿನಿಸ್ಟರ ಡಿಸ್ಕ್ರಿಷನ್‌ನಲ್ಲಿ ಕೊಟ್ಟಿರತಕ್ಕದ್ದು. ನಷ್ಟವಾಗಿರುವುದರ ಬಗ್ಗೆ ರಿಪೋರ್ಟ್ ಕಳುಹಿಸಿದ್ದಾರೆ.

ಶ್ರೀ ಎನ್. ಬಸವಯ್ಯ.—ಬೆಂಕಿ ಅಕಸ್ಮಿಕಕ್ಕೆ ಒಳಗಾಗಿ ಮನೆ ಸುಟ್ಟು ಹೋದ ವ್ಯಕ್ತಿ ಒಂದು ತಿಂಗಳ ಹಿಂದೆ ಅಂಗಡಿ ಬಗ್ಗೆ ಇನ್‌ಷ್ಯೂರೆನ್ಸ್ ಮಾಡಿ, ಬೆಂಕಿ ಬಿದ್ದ ನಂತರ ಇನ್‌ಷೂರೆನ್ಸ್ ಹಣವನ್ನು ಪಡೆದಿದ್ದಾನೆ. ಇದರಿಂದ ಉದ್ದೇಶಪೂರ್ವಕವಾಗಿ ಇಡಲಾಗಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನನಗೆ ಆ ವಿಷಯ ಗೊತ್ತಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇನ್‌ಷೂರೆನ್ಸ್ ಮಾಡಿದ್ದು, ಬೆಂಕಿ ಬಿದ್ದ ಮೇಲೆ ಕಂಪನಿಯವರು ತನಿಖೆ ಮಾಡಿ ಲುಕ್ಸಾನಾಯಿತು ಎಂದು ಹಣವನ್ನು ಪಾವತಿ ಮಾಡಿದ್ದಾರೆನ್ನುವುದು ಸರ್ಕಾರದ ಗಮನಕ್ಕೆ ಬಂದರೆ ನೀವು ಕೊಟ್ಟಿರುವ ಹಣವನ್ನು ವಾಪಸು ಪಡೆಯುತ್ತೀರಾ ?

Mr. DEPUTY SPEAKER.—It is a hypothetical question.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಜೆ. ಎಲ್. ಕಟಾಡಿ — ಬೆಂಕಿ ಆಕಸ್ಮಿಕವಾಗಿದೆ ಎಂದು ಸರ್ಕಾರದವರು ಒಟ್ಟು 12 ಸಾವಿರ ರೂಪಾಯಿ ಮಂಜೂರು ಮಾಡಿದ್ದಾರೆ. ಇನ್‌ಷೂರೆನ್ಸ್ ಮಾಡಿದ ಒಂದು ತಿಂಗಳಲ್ಲಿ ಬೆಂಕಿಯನ್ನು ಹೊತ್ತಿಸಿ ಹಣವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಮಂತ್ರಿಗಳು ಕೊಟ್ಟ ಉತ್ತರದಲ್ಲಿ ಮೊಕದ್ದಮೆ ದಾಖಲು ಮಾಡಿಕೊಂಡಿಲ್ಲ, ಅಪರಾಧಕ್ಕೆ ಸಂಬಂಧಪಟ್ಟ ಎಫ್. ಐ. ಆರ್. ಇಲ್ಲ ಎಂದು ಹೇಳಿದರು. It is a contrary answer to the qnestion asked by me. That is why I want to raise half-an-hour discussion on this issue. Kindly permit me Sir.

Mr. DEPUTY SPEAKER.—I will call the next question.

Contract with M.I.S.L. for Supply of Special Alloy Steel

779. Sri B. BYRAPPAJI (Turuvekere).—

Will the Minister for Industries be pleased to state :—

(a) when the contract agreement was executed by M/s. Bharat Forge of Poona with M. I. S. Ltd., in respect of purchase of special alloy steel ;

(b) the terms and conditions of the agreement ;

(c) the reason for not including price escalation clause as "subject to revision" in the agreement ;

(d) whether it is a fact that the rates supplied to M/s. Bharat Forge is very low ;

(e) if so, what was the actual selling rate fixed by the Management during that period ;

(f) the total loss due to this agreement ?

Sri S. M. KRISHNA (Minister for Industries).—

(a) The contract was entered into on 14th August 1968.

(b) *Vide* copy of letter dated 14th August 1968 placed on the Table of the House.*

(c) A cause to cover statutory increases during the period of Supply has been included in the agreement concluded with the Bharat Forge Co. Ltd.

(d) No.

(e) and (f) *Vide* statement placed on the Table of the House.*

ಶ್ರೀ ಬಿ. ಬೈರಪ್ಪಾಜಿ.—ಭಾರತ್ ಫೋರ್ಜ್ ಕಂಪನಿಯವರಿಗೆ ಕಡಿಮೆ ರೇಟಿನಲ್ಲಿ ಸ್ಟೀಲನ್ನು ಮಾರಲು ಕೊಟ್ಟುದರಿಂದ ಸುಮಾರು 37,000 ರೂಪಾಯಿ ನಷ್ಟ ನಷ್ಟವಾಗಿದೆ. ಇದರ ಅಗ್ರಿಮೆಂಟಿನ ಒಂದು ಕ್ಲಾಸಿನಿಂದ ಹೀಗಾಗಿದೆ ಎಂದು ಹೇಳಿದ್ದಾರೆ. ಈಗ ಇದನ್ನು ಬದಲಾಯಿಸಿ ಅವರಿಂದ ನಷ್ಟವಾಗಿರುವ ಹಣವನ್ನು ಏಕೆ ವಸೂಲ ಮಾಡಲಿಲ್ಲ ?

---

* Copy Laid on the Table of the House *Vide* Lib No. 22 dated 23-3-1973.

† ಶ್ರೀ ಎಸ್. ಎಂ. ಕೃಷ್ಣ.—ಇದರ ಒಪ್ಪಂದದಲ್ಲಿ ಇರುವ ಹಾಗೆ ಒಪ್ಪಂದದ ಕ್ಲಾಜುಗಳನ್ನು ಬದಲಾಯಿಸಲು ಅವಕಾಶವಿದೆ. ಆದರೆ ಇದರಲ್ಲಿ 1965 ರಿಂದೀಚೆಗೆ ಯಾವ ರೀತಿಯಾದ ಒಪ್ಪಂದಗಳು ಇದುವರೆಗೆ ಆಗಿವೆ ಅವೆಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆಮಾಡಲು ಈಗ ಶ್ರೀ ಆರ್. ಸಿ. ದತ್‌ರವರ ಒಂದು ಆಯೋಗವನ್ನು ನೇಮಕ ಮಾಡಲಾಗಿದೆ. ಅವರು ಬರುವ ಏಪ್ರಿಲ್ ತಿಂಗಳೊಳಗೆ ವರದಿ ನಲ್ಲಿಸುವವರಾಗಿದ್ದಾರೆ. ಇದರ ಬಗ್ಗೆ ಅವರೇ ಇವೆಲ್ಲಾ ವಿಚಾರಗಳನ್ನೂ ಪ್ರೋಬ್ ಮಾಡುತ್ತಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಇದರಲ್ಲಿ ನಷ್ಟವಾಗಲು ಮುಖ್ಯ ಕಾರಣ ಒಂದೊಂದು ವರ್ಷದಲ್ಲಿ ಒಂದೊಂದು ರೀತಿಯಾದ ರೇಟಿನಲ್ಲಿ ಇವರಿಗೆ ಕೊಡಲಾಗಿದೆ, ಇವರಿಗೆ ಒಂದು ವರ್ಷ 1045 ಎಂದು ಕೊಟ್ಟಿದ್ದರೆ, ಇತರರಿಗೆ 1100 ರಂತೆ ರೇಟಿದೆ. ಇನ್ನೊಂದು ವರ್ಷದಲ್ಲಿ ಇವರಿಗೆ 1375 ಕೊಟ್ಟಿದ್ದರೆ ಬೇರೆಯವರಿಗೆ 1525 ಎಂದು ಕೊಟ್ಟಿದ್ದಾರೆ, ಇನ್ನೊಂದು ಕಡೆಯಲ್ಲಿ ಇವರಿಗೆ 14, 8 ರೇಟು ಇದ್ದರೆ ಬೇರೆಯವರಿಗೆ 1850 ರ ವರೆಗೆ ಕೊಟ್ಟಿದ್ದಾರೆ. ಹೀಗೆ ಒಂದು ವರ್ಷದಲ್ಲಿ ರೇಟುಗಳಲ್ಲಿ ಇಷ್ಟು ವ್ಯತ್ಯಾಸಗಳು ಬಂದಿರುವುದರಿಂದ ನಷ್ಟವಾಗಿದೆ. ಇದನ್ನು ಸರಿಯಾಗಿ ತನಿಖೆ ಮಾಡಿ ಇದರ ಬಾಬತು ನಷ್ಟವನ್ನು ಇವರಿಂದ ಏಕೆ ವಸೂಲು ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ.—ಆಗ ಸ್ವಲ್ಪಮಟ್ಟಿಗೆ ಕಡಿಮೆದರದಲ್ಲಿ ಕೊಟ್ಟಿರುವುದು ನಿಜ. ಇದಕ್ಕೆ ಬೇರೆ ಬೇರೆ ಕಾರಣಗಳೂ ಇವೆ. ಇದಕ್ಕೆ ಮುಖ್ಯವಾದ ಒಂದು ಕಾರಣ ಎಂದರೆ ಆಗ ಸ್ಟೀಲು ಮಾರಾಟದಲ್ಲಿ ಬಹಳ ಪೈಪೋಟಿ ಇತ್ತು, ವೆಲ್ತ್ ಸ್ಟೀಲ್‌ನ ನಮ್ಮಲ್ಲಿನ ಬಿಲೆಟ್ಟುಗಳು ಜಾಸ್ತಿ ಮಾರಾಟ ಮಾಡಬೇಕೆಂದು, ದೊಡ್ಡ ಕಂಪನಿಗಳ ಮೂಲಕ ಮಾರಬೇಕು ಎಂದು ಈ ಭಾರತ್ ಫೋರ್ಜ್ ಕಂಪನಿಗೆ ಸ್ವಲ್ಪ ಕಡಿಮೆದರದಲ್ಲಿ ಮಾರಲಾಗಿದೆ. ಆದರೆ ಇದರಲ್ಲಿ ಸಾಕಷ್ಟು ಅವ್ಯವಹಾರಗಳಾಗಿವೆ ಎಂದು ತಿಳಿದು ಬಂದುದರಿಂದ ಇವೆಲ್ಲವನ್ನೂ ಪೂರ್ಣವಾಗಿ ತನಿಖೆ ಮಾಡಲು ಶ್ರೀ ಆರ್. ಸಿ. ದತ್‌ರವರನ್ನು ನೇಮಿಸಲಾಗಿದೆ. ಇವರ ವರದಿ ಬಂದ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬಹುದೋ ಅದನ್ನು ಆ ಮೇಲೆ ನೋಡಬಹುದು.

Sri ABDUL KHUDDUS ANWAR:—It is clear form your statement that the rate at which blooms are supplied to Bharath Forge Co. Ltd., is Rs. 1000 and bars and billets are supplied at Rs. 1100 (less 5% discount), whereas the rates at which they are supplied to others are at the rates of 1400 to 1800. But in your reply to (*d*) whether rates supplied to Bharat Forge is very low, you have said 'No'. Which is correct ?

Sri S. M. KRISHNA.—The rates differ; for *e. g.*, billets and bars. As I have just now replied, it is a fact that we have sustained loss.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಆರ್. ಸಿ. ದತ್ ರವರನ್ನು ಇಲ್ಲಿ ನೇಮಕ ಮಾಡಿದೆ ಎಂದರು, ಇವರಿಂದ ಯಾವಾಗ ವರದಿ ಬರುತ್ತೆ ? ಇಲ್ಲವೇ ಈಗಾಗಲೇ ಬಂದಿದೆಯೋ ? ಹಾಗೆ ಬಂದರೆ ಆ ವರದಿಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತಾರೆಯೋ ?

Sri S. M. KRISHNA.—Sir, I am expecting the report some time in April.

ಶ್ರೀ ಸಿ. ಬೈರೇಗೌಡ.—ಇದು ಪಬ್ಲಿಕ್ ಸೆಕ್ಟರ್ ಕಂಪನಿಯೋ ಇಲ್ಲವೇ ಪ್ರೈವೇಟ್ ಸೆಕ್ಟರ್ ಕಂಪನಿಯೋ ?

ಶ್ರೀ ಎಸ್. ಎಂ. ಕೃಷ್ಣ.—ಇದು ಪ್ರೈವೇಟ್ ಸೆಕ್ಟರ್ ಕಂಪನಿ,

Spun Pipe Plant of M.I.S.L.

781. SRI B. BYRAPPAJI (Turuvekere).—

Will the Minister for Industries be pleased to state :—

(a) when the Spun Pipe Plant at the Mysore Iron and Steel Ltd., was purchased ;

(b) when the connected reboring Machine was received ;

(c) when it was installed and production started ;

(d) the reason for sending back the foreign engineers earlies before they could prove the working condition of the Plant as per agreement ;

(e) the loss estimated by this affair ?

SRI S. M. KRISHNA (Minister for Industries).—

(a) The Spun Pipe Plant was purchased in the year 1956.

(b) In March 1962.

(c) Trial operations in the Cast Iron Spun Pipe Plant were started in November, 1957.

(d) The Foreign Engineers were relived by the end of 1958 although production performance could not be achieved since the required quality of raw materials could not be provided and also the local personnel to operate the Plant could not be trained.

(e) The year wise loss sustained by the Unit is given below :—

Year	(Rs. in Lakhs)
1958–59	Loss of Rs. 6·89 lakhs was capitalised
1959–60	Loss of Rs. 3.88 lakhs
1960–61	Profit Rs. 1.70 lakhs
1961–62	Profit Rs. 2.68 lakhs
1962–63	Profit Rs. 1.14 lakhs
1963–64	Profit Rs. 3.90 lakhs
1964–65	Profit Rs. 7,94 lakhs
1965–66	Profit Rs. 0.57 lakhs
1966–67	Loss Rs. 2.02 lakhs
1967–68	Loss Rs. 2.91 lakhs

ಶ್ರೀ ಬಿ. ಬೈರಪ್ಪಾಜಿ.—ಇದರಲ್ಲಿ ತರಿಸಿರುವ ಯಂತ್ರ ಉಪಯೋಗವಾಗದೆ ಹಾಗೇ ಇರುವದೆಂದು ಸರಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ನೇಮಕವಾದ ಪರದೇಶದ ಇಂಜನೀಯರುಗಳು ಬಂದು ಆಗಲೇ ವಾಪಸು ಕೂಡ ಹೋಗಿದ್ದಾರೆ, ಹೀಗಿರುವಾಗ ಇದರಲ್ಲಿ ನಷ್ಟವಾಗುತ್ತಿರುವುದರಿಂದ, ಇಂತಹ ನಷ್ಟಕ್ಕೆ ಯಾವ ಅಧಿಕಾರಿಗಳು ಕಾರಣರು ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಲು ಸರಕಾರ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಈ ಪ್ಲಾಂಟಿನಲ್ಲಿ 1957–58 ಹಾಗೂ 1959–60 ರಲ್ಲಿ ನಷ್ಟ ಇರಲಿಲ್ಲ, ಆದರೆ ಈ ಪ್ಲಾಂಟನ್ನು ಮುಂದುವರಿಸುವುದಕ್ಕೆ ಸಾಕಷ್ಟು ರಾ ಮೆಟೀರಿಯಲ್ಸ್‌ಗಳನ್ನು ಒದಗಿಸಿಕೊಡುತ್ತಿದ್ದೇವೆ. ಇದನ್ನು ಹಾಗೆ ಮುಂದುವರಿಸಿದರು, ಇದರಲ್ಲಿ ಮಾಡುವ ಟಿಟಾನ್

ರಬ್ಬರು ಜಾಯಿಂಟುಗಳಿಗೆ ಬಹಳ ಡಿಮ್ಯಾಂಡು ಇದೆ, ಆದರೆ ಇದರ ಪೇಟೆಂಟು ರೈಟು ಕೇಂದ್ರ ಸರಕಾರದ ಅಧೀನದಲ್ಲಿರುವ ಇಂಡಿಯನ್ ಐರನ್ ಕಂಪನಿಗೆ ಸೇರಿದೆ. ಈ ಪೇಟೆಂಟು ರೈಟನ್ನು ನಮ್ಮ ರಾಜ್ಯ ಸರಕಾರಕ್ಕೇ ವರ್ಗ ಮಾಡಿ ಕೊಡಬೇಕೆಂದು ಕೇಂದ್ರದವರೊಡನೆ ಪತ್ರವ್ಯವಹಾರ ಮಾಡುತ್ತಿದ್ದೇವೆ, ಇನ್ನೊಂದೆರಡು ತಿಂಗಳಲ್ಲಿ ನಮಗೆ ಇದರ ಪೇಟೆಂಟು ರೈಟು ಬರುತ್ತದೆ. ಆಗ ಇದರ ಮೂಲಕ ಹೆಚ್ಚು ಉತ್ಪಾದನೆ ಮಾಡಲು ಸಹಾಯವಾಗುತ್ತದೆ. ಸದಸ್ಯರಲ್ಲಿ ಇದನ್ನೂ ಪರಿಶೀಲನೆ ಮಾಡಲು ಶ್ರೀ ಆರ್. ಸಿ. ದತ್‌ರವರ ಆಯೋಗಕ್ಕೂ ತಿಳಿಸಲಾಗಿದೆ. ಅವರೂ ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ.

2-00 P. M.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ ಇದರಲ್ಲಿ 10 ಲಕ್ಷ ರೂಪಾಯಿಗಳ ನಷ್ಟ 2 ವರ್ಷಗಳಲ್ಲಿ ಆಗಿದೆ. ಇದು 1958ನೇ ಇಸವಿಯಿಂದ 1966ನೇ ಇಸವಿಯವರೆಗೆ ಲಾಭವನ್ನು ಸಂಪಾದಿಸಿ ಇದ್ದಕ್ಕಿದ್ದ ಹಾಗೆಯೇ ಇದರಲ್ಲಿ ನಷ್ಟವಾಗಲು ಕಾರಣವೇನು ?

ಶ್ರೀ ಎಸ್. ಎಂ. ಕೃಷ್ಣ.—ರಾಮೆಟೀರಿಯಲ್ಸ್ ಕೊರತೆ ಇದ್ದುದರಿಂದ ಅಲ್ಲಿ ನಷ್ಟವಾಗುವುದಕ್ಕೆ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಬಚ್ಚಿಸುತ್ತೇನೆ. ವಿದೇಶಿ ಇಂಜಿನಿಯರನ್ನು ವಾಪಸ್ಸು ಕಳುಹಿಸಿರುವುದರ ಉದ್ದೇಶ ನಮ್ಮಲ್ಲಿರತಕ್ಕ ಇಂಜಿನಿಯರುಗಳೇ ಈ ಪ್ಲಾಂಟನ್ನು ನಡೆಸತಕ್ಕ ಎಲ್ಲಾ ವಿಧವಾದ ಪರಿಣತೆ ಇದ್ದುದರಿಂದ ವಿದೇಶಿ ಇಂಜಿನಿಯರುಗಳು ಬೇಕಾಗಿಲ್ಲ ಎಂದು ಅವರನ್ನು ವಾಪಸು ಕಳಹಿಸಲಾಯಿತು.

Sri ABDUL KHUDDUS ANWAR.—In the light of the present orders, will the Government try to reappoint thousands of people who are idling away their time and energy having no job ?

Sri S. M. KRISHNA.—We have already restarted the Spun Pipe Plant. As soon as we get patent rights to manufacture Tital Rubber Joints, I am sure we are going to employ as many as the Plant would need.

ಶ್ರೀ ಬಿ. ಬೈರಪ್ಪಾಜಿ.—ಈ ಸ್ಪನ್ ಪ್ಲಾಂಟ್ ಅನ್ನು 1956ನೇ ಇಸವಿಯಲ್ಲಿ ತರಿಸಿ ಅದಕ್ಕೆ ಬೇಕಾದಂತಹ ರಿಬೋರಿಂಗ್ ಮಿಷಿನ್ ಅನ್ನು 1962ನೇ ಇಸವಿಯಲ್ಲಿ ತರಿಸಿದ್ದಾರೆ. ಅದಕ್ಕೆ ಸಂಬಂಧಪಟ್ಟ ಮೆಷಿನ್ ಒಂದು ರೆಡಿಯಾಗಿವೆ. ಇಂಥಾ ಸಂದರ್ಭದಲ್ಲಿ ತರಿಸಬೇಕಾದ ಮೆಷನ್‌ಅನ್ನು ಯಾವ ಕಾರಣದಿಂದ ತರಿಸದೇ ತಡಮಾಡಿದರೂ ? ಈ ದೊಡ್ಡ ಮೆಷಿನ್ ಪ್ಲಾಂಟನ್ನು ನಡೆಸುವುದಕ್ಕೆ ಸಾಧ್ಯವಿಲ್ಲದೆ ಅದನ್ನು ನಿಲ್ಲಿಸಿದ್ದು ನಿಜವಲ್ಲವೇ ? ಮತ್ತು ಇದರಿಂದ ಅಲ್ಲಿ ಲುಕ್ಸಾನು ಆಗಿರುವುದು ನಿಜವಲ್ಲವೇ ? ಆದಕಾರಣ ಅಲ್ಲಿದ್ದ ಅಧಿಕಾರಿಯನ್ನು ಯಾವ ರೀತಿ ಅದಕ್ಕೆ ಗುರಿ ಮಾಡಬೇಕೆಂದು ಯೋಚನೆ ಮಾಡಿದ್ದೀರಿ ?

Sri S. M. KRISHNA.—The hon. member may give separate notice

Mr. DEPUTY SPEAKER.—The hon. member is absent put Question No. 638. I put it.

Exhibition of Boards on Hotels and Restaurants

638. Sri MAHENDRA KUMAR (Hulsoor).—

Will the Minister for Municipal Administration be pleased to state :—

(a) whether it has come to the notice of Government that in many hotels name boards are exhibited as 'Brahmin's Hotel', 'Lingayat's Khanavali' etc. ;

(SRI MAHENDRA KUMAR)

(*b*) if so, the steps taken by Government to discourage this unhealthy practice in their profession ?

Sri B. BASAVALINGAPPA (Minister for Municipal Administration).—

(*a*) Yes.

(*b*) It is being examined to stop exhibition of caste boards.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ ಬ್ರಾಹ್ಮಣರ ಹೋಟೇಲ್, ಲಿಂಗಾಯಿತರ ಹೋಟೇಲ್ ಮತ್ತು ಒಕ್ಕಲಿಗರ ಹೋಟೇಲ್ ಅಂತ ಏನು ಬೋರ್ಡುಗಳು ಇವೆ ಅವುಗಳನ್ನು ತೆಗೆದು ಅವುಗಳ ಜಾಗದಲ್ಲಿ ಬಸವಲಿಂಗಪ್ಪನವರ ಹೋಟೇಲ್ ಎಂದು ಬರೆಯುವುದಕ್ಕೆ ಅವಕಾಶ ಇದೆಯೇ ?

Mr. DEPUTY SPEAKER.—No. reply is necessary.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ನಾವು ನಮ್ಮ ರಾಜ್ಯಾಂಗದ ಪ್ರಕಾರ ಜ್ಯಾತ್ಯಾತೀತ ರಾಷ್ಟ್ರ ಮತ್ತು ಜ್ಯಾತ್ಯಾತೀತ ರಾಷ್ಟ್ರ ಸಮಾಜವನ್ನು ನಾವು ಒಪ್ಪಿಕೊಂಡಿದ್ದೇವೆ. ಆದ್ದರಿಂದ ಸರ್ಕಾರದವರು ಕೂಡಲೇ ಸಾರ್ವಜನಿಕ ಅಂಗಡಿಗಳಾಗಲಿ ಸಾರ್ವಜನಿಕ ಹೋಟೇಲು ಗಳಾಗಲೀ ಖಾಸಗೀ ಅವರಾಗಲೀ ಸರ್ಕಾರದವರೇ ಆಗಲಿ ಜಾತಿಯನ್ನು ಸೂಚಿಸತಕ್ಕ ಬೋರ್ಡು ಗಳನ್ನು ಹಾಕುವುದನ್ನು ಕೂಡಲೇ ರದ್ದು ಮಾಡುವುದಕ್ಕೆ ಸರ್ಕಾರದವರು ಒಂದು ಹುಕುಂ ಹೊರಡಿಸುತ್ತೀರಾ ?

Sri B. BASAVALINGAPPA.—Article 15 says :

(1) The State shall not discriminate against any citizen on grounds of only religion, race, sex, place of birth or any of them.

(2) No citizen shall on grounds of only religion, race, caste, sex, place of birth or any of them, be subject to any disability, restriction, or condition with regard to—

(a) access to shops, public restaurants, hotels and places of public entertainment ; or

(b) the use of wells, tanks, bathing ghats and places of public resort maintained wholy or partly out of State Funds or dedicated to the us of the general public.

Mr. DEPUTY SPEAKER.—It is given in the printed reply that it is being examined to stop exhibition of caste boards.

Sri B. BASAVALINGAPPA.—Art 17 reads : "Untouchability is abolished and its practice in any form is forbidden. The enforcement of any disability arising out of "Untouchability" shall be an offence punishable in accordance with law."

ರಾಜ್ಯಾಂಗದ 17ನೇ ಕಲಂನಲ್ಲಿ ಅನ್‌ಟಚ್‌ಬಿಲಿಟಿ ಬಗ್ಗೆ ಹೇಳಿದ್ದಾರೆ. ಕಲಂ 15 ಮತ್ತು 17 ಈ ಎರಡು ಕಲಂಗಳನ್ನು ಬಿಟ್ಟರೆ ಬೇರೆ ಯಾವುದೂ ಇಲ್ಲ. ಯಾವುದೇ ಹೋಟೇಲುಗಳಾಗಲಿ, ರೆಸ್ಟೋರೆಂಟ್ ಆಗಲೀ ಪಬ್ಲಿಕ್ ಷಾಪ ಆಗಲೀ ಅವುಗಳ ಒಳಗಡೆ ಹೋಗುವುದಕ್ಕೆ ಯಾವಜಾತಿ ಯವರೇ ಆಗಲಿ ಒಳಗಡೆ ಹೋಗುವುದಕ್ಕೆ ನಿರ್ಬಂಧವಿಲ್ಲ. ಹೋಟೇಲಿನ ಒಳಗಡೆ ಹೋಗುವುದಕ್ಕೆ ಸರ್ವೇ ಸಾಧಾರಣವಾಗಿ ಉಪಯೋಗಿಸುವುದಕ್ಕೆ ನಿರ್ಬಂಧವಿಲ್ಲ. ಆದರೆ ಬ್ರಾಹ್ಮಣರ ಹೋಟೇಲು ಮತ್ತು ಲಿಂಗಾಯಿತರ ಹೋಟೇಲು ಎನ್ನುವಂಥಾ ಬೋರ್ಡನ್ನು ಹಾಕಿರುವುದು ಸಾಧುವೇ ಎನ್ನುವ ಪ್ರಶ್ನೆಯ ಬಗ್ಗೆ ಹೇಳುವುದಾದರೆ ರಾಜ್ಯಾಂಗ 15ನೇ ಕಲಂ ಮತ್ತು 17ನೇ ಕಲಂ ಬಿಟ್ಟರೆ ಆ ಜಾತಿಯ ಬೋರ್ಡನ್ನು ತೆಗೆದುಹಾಕುವುದಕ್ಕೆ ರಾಜ್ಯಾಂಗದಲ್ಲಿ ಇಲ್ಲ. ಇಂಥಾ ಒಂದು ಜಾತಿಯ

ಒಂದು ಸಂದರ್ಭದಲ್ಲಿ ನಾವೆಲ್ಲರೂ ಕೂಡ ಈ ಒಂದು ಜಾತಿಯ ಆಧಾರದ ಮೇಲೆ ಬೋರ್ಡನ್ನು ಇಡಬೇಕೇ ಬೇಡವೇ ಎನ್ನುವ ಪ್ರಶ್ನೆ ಬರುತ್ತದೆ. ಮುನಿಸಿಪಾಲಿಟಿಯವರ ಅಕ್ಕಿನಲ್ಲಿ ಲೈಸೆನ್ಸ್ ಕೊಡುವಾಗ ಆ ಒಂದು ನಿರ್ಬಂಧ ಹಾಕಬೇಕೇ ಬೇಡವೆ ಎಂಬುದನ್ನು ಸರ್ಕಾರ ಪರಿಶೀಲಿಸುತ್ತದೆ. ರಾಜ್ಯಾಂಗದ ಕಲಂ 324 (ಬಿ) (1) ರ ಪ್ರಕಾರ ಆ ಒಂದು ನಿರ್ಬಂಧವನ್ನು ಹಾಕಿ ಹೋಟೇಲು ಗಳಿಗೆ ಲೈಸೆನ್ಸ್ ಕೊಡುವ ವಿಚಾರದಲ್ಲಿ ಎಲ್ಲಾ ಮುನಿಸಿಪಾಲಿಟಿಗಳಿಗೂ ಸರ್ಕಾರ ನಿರ್ದೇಶ ಕೊಡುವುದನ್ನು ಪರಿಶೀಲಿಸುತ್ತಿದೆ. ಆ ಬಗ್ಗೆ ಅತಿ ಜಾಗ್ರತೆಯಾಗಿ ತೀರ್ಮಾನ ತೆಗೆದು ಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ಈ ಜಾತೀಯ ಬೋರ್ಡುಗಳನ್ನು ತೆಗೆದು ಹಾಕುವ ಸಂಬಂಧದಲ್ಲಿ ಈ ಸಭೆಯಲ್ಲಿ ಒಂದು ನಿರ್ಣಯ ತಂದು ಚರ್ಚೆ ಮಾಡಿ ನಾನು ನಮ್ಮ ಜನಾಂಗದವರಿಂದ ಬೈಯ್ಸಿಕೊಂಡಿದ್ದೇನೆ. ನನ್ನ ನಿರ್ಣಯಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಜಾತೀಯ ಬೋರ್ಡುಗಳನ್ನು ತೆಗದು ಹಾಕುವ ಬಗ್ಗೆ ಕೂಡಲೇ ಒಂದು ಕಾನೂನು ತರು ತ್ತೇನೆಎಂದು ಹೇಳಿದರು. ಇದುವರೆಗೂ ಅದನ್ನು ತರಲಿಲ್ಲ. ನಾನು ಇಲ್ಲಿ ಆ ಒಂದು ನಿರ್ಣಯವನ್ನು ಇಲ್ಲಿ ತಂದು ಚರ್ಚೆ ಮಾಡಿದ ಮೇಲೆ ನಮ್ಮವರು ನನ್ನನ್ನು ನಿಮಗೆ ಊಟ ಹಾಕುವುದಿಲ್ಲ. ನಮ್ಮ ಮನೆಯ ಒಳಗಡೆ ಬರಬೇಡಿ ಎಂದು ಹೇಳುತ್ತಿದ್ದಾರೆ. ಬೇಗ ಈ ಕಾನೂನನ್ನು ಮಾಡಿ.

Mr. DEPUTY SPEAKER.—The hon. member had brought a resolution and that was deliberated upon. The Government has given a reply. It is a policy matter

Sri D. DEVARAJ URS (Chief Minister).—Sir, the Minister has replied rightly and has also pointed out the constitutional provisions governing the rights of every citizen irrespective of caste or creed. He has also pointed out that so far as preventing people from putting name-boards pointing out certain caste or in the name or certain causes is being examined. He has specifically pointed out that in the Municipal Act there is on provision to prevent peopel from putting sign boards indicating a particulur caste or religion. But while giving licences this matter has to be examined whether we could put a condition. I think that should satisfy everybody. I can understand the anxiety of the hon. Members Perhaps the House is against putting such sign-boards including hon. Member Sri Puttaswamiah.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಬಸವಲಿಂಗಪ್ಪನವರ ಹೊಟೇಲು ಅಂದರೆ ನನ್ನ ಅಭ್ಯಂತರವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಹೋಟೇಲುಗಳನ್ನೆಲ್ಲಾ ರಾಷ್ಟ್ರೀಕರಣ ಮಾಡಿದರೆ ತೊಂದರೆಯೇ ಇರುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ರಾಮಕೃಷ್ಣ ಲಂಚ್ ಹೋಂ ಎಂದು ಇಡುವುದಕ್ಕೆ ತಮ್ಮ ಅಭ್ಯಂತರವಿಲ್ಲ ಎಂದು ಕಾಣುತ್ತದೆ.

Mr. DEPUTY SPEKER.—Now the Question Hour is over.

QUESTIONS FOR ANSWERS ON THE DAY

(but not taken up)

Rig Bore Machines in The State

3. Sri C. N. PATLI (Lingsugur).—

Wiil the Minister for Community Development and Social Welfare be pleased to state.—

(*a*) the number of Rig Bore Machines in the State.

(SRI C. N. PATIL)

(i) Owned by the State :
(ii) By private firms and individuals ;

(b) the number of rigs in working condition and those on sick list ;

(c) the average (feet) drilling capacity per month of each bore machine, which are in working condition ;

(d) the number of bore wells drilled after acquisition of those bore machines by the State ;

(e) the number of bore wells drilled under P.H.E. ;

(f) the number of proposed bore wells in Raichur District and when they will be taken up ?

SRI M. MALLIKARJUNA SWAMY (Minister for Community Development and Social Welfare.—

(a) (i) 7.
(ii) 42.

(b) 38 are in working condition and 11 are out of order.

(c) High Speed Rigs — 1,400 feet per month per Rig.
Low Speed Rigs — 120 feet per month per Rig.

(d) 1,798 Bore Wells.

(e) 1,798 Bore Wells.

(f) 300 Bore Wells proposed 35 sunk already. The remaining wells will be taken up soon.

Bus Service From Tumkur to Hosakere

226. SRI T. TAREGOWDA (Kallambella.)—

Will the Minister for Labour be pleased to state,—

(a) whether the Regional Transport Officer, Tumkur has granted bus permit to the Mysore State Road Transport Corporation to ply bus from Tumkur to Hosakere via Sira, Tavarekere, Bukkapatna and Hogalwadi in Gubbi Taluk in the month of December, 1972 ;

(b) if so, whether the Mysore State Road Transport Corporation is plying the bus service on the route referred to in clause (a)

(c) if not, the reasons for the same ?

SRI AZEEZ SAIT (Minister for Labour),—

(a) Yes.

(b) Yes.

(c) Does not arise in view of reply to clause (a) above.

Jobs For Mysoreans at B.E.M.L., K.G.F.

661. Sri K. M. DORAISWAMY NAIDU (Bethamangala).—

Will the Minister for Labour be plesaed to state.—

(a) whether the Government is a ware that suffcient jobs are not povided to Mysoreans in Bharata Earth Movers Ltd., K.G.F. ;

(b) if so, the steps taken by them to take up the matter with the concerned authorities to provide more jobs for Mysoreans in B.E.M.L. at K.G.F. ?

Sri AZEEZ SAIT (Minister for Labour).—

(a) No.

(b) Does not arise. However, Government have issued appeals in the past to all employers including Central Public Sector undertakings to show preference to local persons while recruitments to the lower categories of posts.

Calling Attention to Matters of urgent Public Importance

(i) *re* : way side incidents of robberies on Gulbarga Shahabad Road

Mr. DEPUTY SPEAKER.—We will go to the next item. Calling attention by hon. Member Sri Kalmankar and others.

Sri D. B. KALMANKAR (Aland).—I call the attention of the Hon. Chief Minister to the wayside incidents of robberies on Gulbarga Shahabad road.

Sri D. DEVARAJ URS (Chief Minister).—I State as followed.—

Sir, it is reported that between 8-2-1973 and 16-2-1973 there were no cases of dacoity and robbery by using deadly weapons such as pistols and revolvers, involving car or bus passengers.

It is further reported that on 7-2-1973 at about 9-15 P. M. some 7 to 8 unknown culprits stopped car No. MYP 1208 belonging to Sri M.P. Shroff, Manager, Heavy Engineering Works A. C. C. Shahabad near Gopal Spun Factory on Gulbarga-Sedam road by blocking the road by means of stones, when he was going to Shahabad with his wife and her friend. When he tried to stop the car, the culprits who were armed with lathis and weapon like pistol came to him and pelted stones and also assaulted him. The inmates of the car were forced to come out. The culprits threatened them to hand over all the valuables and they snatched away gold ornaments, wrist watches, clothes, etc., all valued at Rs. 6,345. The culprits having seen some vehicle coming

(SRI D. DEVARAJ URS)

from Sedam side threatened the inmates of the car not to create noise but when they came to know that the vehicle approaching them was a Police van they immediately ran away with the property in different directions. A case of dacoity in this behalf has been registered and is under investigation.

Regular night patrolling on all the highways in Gulbarga District has been enforced and the Anti-Dacoity Party has been deputed exclusively to collect information leading to the detection of this case as also to prevent recurrence of such incidents.

SRI D. B. KALMANKAR.—In addition to these incidents it is also reported that two more incidents on the same road took place; once a Jeep was stopped and another time some people with pistols stopped the bus and they also ran away with the booty. Whether these incidents have come to the notice of the Government ?

SRI D. DEVARAJ URS.—Sir, the only incident that took place was on 7-2-1973. Subsequently no other incident has taken place. At the same time, there is continuous petrolling of that road since that incident took place.

SRI D. B. KALMANKAR.—Has it come to the notice of the Government that often buses, lorries and other vehicles are being stopped at different places by unruly elements ?

SRI D. DEVARAJ URS.—I am not in a position to say about that now. I am saying about this particular highway incident,

ಶ್ರೀ ಎಸ್. ಬಂಗಾರಪ್ಪ.—ಪೋಲೀಸ್ ವ್ಯಾನ್‌ನ್ನು ನೋಡಿ, ಆದು ಪೋಲೀಸ್ ವ್ಯಾನ್ ಎಂದು ಗೊತ್ತಾದ ತಕ್ಷಣ ಅವರು ಓಡಿ ಹೋದರು ಎಂದು ಹೇಳಿದಿರಿ. ಈ ಕಲ್ಪ್ರಿಟ್ಸ್ ಏನಿದ್ದಾರೆ ಇವರ ಮೇಲೆ ಕೇಸ್‌ಬುಕ್ ಮಾಡಿದ್ದಾರೆಯೇ ಮತ್ತು ಅವರನ್ನು ಚೇಸ್ ಮಾಡಿ ಹಿಡಿದಿದ್ದಾರೆಯೇ ?

SRI D. DEVARAJ URS.—The police inspector and his staff came on the spot in the police van of Gulbarga B Division and they chased the culprits, but they ran away. Immediately after the incident came to the notice for the PSI and the necessary police force rushed to the spot. The S. P. also visited the spot and guided the investigation officer. Subject to the identity of any of thy accused the investigation of the above case is entrusted to the Special Investigating Agency, Gulbarga and all efforts are being made to detect the cases.

SRI V. N. PATIL.—I think it might have already come to the notice of the Government that at several places in Gulbarga District between Sholapur-Shahbad road that too near Hadagalli such instances are occurring. There should be two reasons for this...

I think the hon. Chief Minister will be able to answer this,

MR. DEPUTY SPEAKER.—Even if the Hon. Chief Minister intends to reply, it will be very difficult for me to permit him.

Sri V. N. PATIL.—How did you read what is contained in my mind and in the mind of the Hon. Chief Minister ?

Mr. DEPUTY SPEAKER.—He has already mentioned the wayside on Gulbarga-Shahbad Road, How can you expect him to answer about the incidents taking place elsewhere ?

Sri V. N. PATIL.—Once or twice in those parts, people stop the buses and jeeps. The Deputy Commissioner of Gulbarga heard the grievance of the people on the spot and the people calmly dispersed when he assured of some regular work. In the name of stopping buses, some anti-social elements are likely to utilise the opportunity to rob the people. I would like to know what preventive steps Government would take for recurrence of such incidents.

Sri D. DEVARAJ URS.—How do I know that a bus will be stopped out of necessity or out of mischief. Those who have got enough to eat, they may not be in a position to say that it is enough for them. A man who wants to rob others, may be a man who is having enough to eat he resorts to robbing. People who have got enough money are indulging in bank robbery. Those who indulge in Bank robbery can it be contended that they are without food ? We shall not worry about it. There are people who do not want to work but rob other and eat.

(*ii*) *re* : hardships of the employees of Bagalkot Municipality who compelled to retire

Sri M. M. SAJJAN (Muddebihal).—I call the attention of the Minister for Municipal Administration to the hardship caused to employees of Bagalkot Municipality who are compelled to retire.

Sri B. BASAVALINGAPPA (Minister for Municipal Administration).—I state as follows.—

The Mysore Municipalities (Conditions of Service of Municipal Officers and Servants) Rules, 1972 have come into effect from 22-5-1972. These rules have been framed under the provisions of the Mysore Municipalities Act, 1964. The old rules framed by the Municipalities under the Bombay Municipal Boroughs Act or Bombay District Municipalities Act were in force in the respective Municipalities till 22-5-1972, as per Section 355 of the Mysore Municipalities Act 1964.

As per the provisions of Rules 48 of the 72 rules, the employees have to retire an attaining the age of 55 years. It is likely that those who have attained the age of 55 years and are due to retire from service might feel aggrieved by these new rules and may therefore be seeking continuance of the old rules.

ಶ್ರೀ ಎಂ. ಎಂ. ಸಜ್ಜನ್.—ರಾಜ್ಯದ ಯಾವುದೇ ಕಾನೂನಿನ ಅನುಗುಣವಾಗಿ ನೌಕರರಿಗೆ ಇರುವ ಹಕ್ಕನ್ನು ಹೊಸದಾಗಿ ಮಾಡುವ ಕಾಯಿದೆಯಿಂದ ನಷ್ಟಪಡಿಸಲಿಕ್ಕೆ ಬರಬಾರದು. ಹಿಂದೆ ಬಾಗಲಕೋಟೆ ಸ್ಥಳೀಯ ಸಂಸ್ಥೆ ಮುಂಬೈ ಕರ್ನಾಟಕದಲ್ಲಿದ್ದಾಗ ಮುಂಬೈ ಮುನಿಸಿಪಾಲಿಟಿ ಕಾಯಿದೆ ಪ್ರಕಾರ ಸಂಬಂಧಪಟ್ಟಿದಾಗಿತ್ತು. ಅಲ್ಲಿನ ಮುನಿಸಿಪಲ್ ನೌಕರರಿಗೆ ಮುಂಬೈ ಮುನಿಸಿ ಕಾನೂನಿನ ಪ್ರಕಾರ ಸರ್ವಿಸ್ ರೂಲ್ಸ್ ಅನ್ವಯವಾಗುತ್ತಿತ್ತು. ಆ ಕಾನೂನಿನ ವ್ಯಾಪ್ತಿಯಲ್ಲಿ

(ಶ್ರೀ ಎಂ. ಎಂ ಸಜ್ಜನ್)

ಅವರನ್ನು ಅಲ್ಲಿ ನೇಮಕಮಾಡಿದ್ದು. ಆ ಒಂದು ನಿಬಂಧನೆಗಳಿಗನುಸಾರವಾಗಿ ಬೊಂಬಾಯಿ ಮುನಿಸಿಪಲ್ ಕಾಯಿದೆಯೊಳಗೆ ಅವರು ಒಳಪಡುವುದರಿಂದ ಅವರಿಗೆ 58ನೇ ವಯಸ್ಸಿನವರೆಗೂ ಸರ್ವಿಸ್ ಮಾಡುವುದಕ್ಕೆ ಅನುಮತಿ ಇತ್ತು. 55 ವರ್ಷಗಳು ಆದಮೇಲೂ ಅವರಿಗೆ ಸರ್ವಿಸ್ ಮಾಡಲು ಅವಕಾಶವಿತ್ತು. ಈಗ ಹೊಸ ಮುನಿಸಿಪಾಲಿಟಿ ಆಕ್ಟ್ ಪ್ರಕಾರ ಅವರಿಗೂ 55ನೇ ವರ್ಷದವರೆಗೆ ಒಂದು ಮಿತಿಯನ್ನು ಹಾಕಿರುವುದರಿಂದ, ಅವರಿಗೆ ಮೂರು ವರ್ಷಗಳು ಕಡಿಮೆಯಾಗಿರುವುದರಿಂದ, ಮುಂಬೈ ಕಾಯಿದೆಯೊಳಗೆ 58 ವರ್ಷದವರೆಗೆ ಸರ್ವಿಸ್ ಮಾಡುವ ಹಕ್ಕನ್ನು ಕಸಿದುಕೊಳ್ಳುವುದರಿಂದ, ಈ ರಾಜ್ಯದ ಘಟನೆಯ ವಿಧಾನವನ್ನು ಈಗ ಅನುಸರಣೆಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಈ ವಿಚಾರವನ್ನು ಇನ್ನೂ ದೀರ್ಘವಾಗಿ ಯೋಚನೆಮಾಡಿ ಬಾಗಲಕೋಟೆ ಮುನಿಸಿಪಾಲಿಟಿಯಲ್ಲಿ ದುಡಿಯುವ ನೌಕರರಿಗೆ 58ನೇ ವಯಸ್ಸಿನವರೆಗೆ ಮುಂದೆ ದುಡಿಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಉತ್ತರದಲ್ಲಿ ನಾನು ಮೊದಲೇ ಸ್ಪಷ್ಟವಾಗಿ ಹೇಳಿದ್ದೇನೆ. 1964ನೇ ಇಸವಿ ಮುನಿಸಿಪಾಲಿಟಿ ಆಕ್ಟ್ ಮೇರೆಗೆ ಸಮಗ್ರವಾಗಿ ಈಗ ಹೊಸದಾಗಿ ಸರ್ವಿಸ್ ರೂಲ್ಸನ್ನು ಮಾಡಿದ್ದೇವೆ. ಅದರ ಪ್ರಕಾರ ಯಾರಿಗೂ 55 ವರ್ಷಗಳ ಮಿತಿಮೀರಿ ಸರ್ವಿಸ್‌ನಲ್ಲಿ ಮುಂದುವರಿಯಲು ಅವಕಾಶ ಕೊಡುವುದಿಲ್ಲ. ಹಿಂದಿನದು ಈಗ ಜಾರಿಯಲ್ಲಿಲ್ಲ. ಈಗ ಅದನ್ನು ಯೂನಿಫಾರಂ ಮಾಡಿದ್ದೇವೆ. ಆದ್ದರಿಂದ ಹಿಂದಿನ ರೂಲ್ಸ್ ಪ್ರಕಾರ ಅವರಿಗೆ ಆ ಸೌಕರ್ಯವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಬೊಂಬಾಯಿ ಸರ್ವಿಸ್ ರೂಲ್ಸ್ ಕಂಡೀಷನ್ ಪ್ರಕಾರ ಈ ಕಾಯಿದೆ ಕೆಳಗೆ ಏನು ನಿಯಮ ಮಾಡಿದ್ದಾರೆಯೋ ಆ ನಿಯಮಕ್ಕೊಳಗೊಂಡು 58 ವರ್ಷಗಳವರೆಗೆ ಅವರು ಸರ್ವಿಸ್‌ನಲ್ಲಿರಬೇಕು. ಕಾಮನ್ ರೂಲ್ ಸ್ಟೇಟಿಗೆ ಅಪ್ಲೈಮಾಡುವಾಗ 55ನೇ ವರ್ಷವಾದ ಮೇಲೆ ಅವರು ನೇಮಕವಾದನಂತರ ಈ ರೂಲ್ಸನ್ನು ಅಪ್ಲೈಮಾಡಿ ಅವರ ಹಕ್ಕುಬಾಧ್ಯತೆಗಳನ್ನು ತಮ್ಮ ಮುಂದಿಟ್ಟರೆ, ಆಗ ಅದರ ಬಗ್ಗೆ ಪರಿಶೀಲನೆ ಮಾಡಿ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಂ. ಸಜ್ಜನ್.—ಬೊಂಬಾಯಿ ಮುನಿಸಿಪಾಲಿಟಿ ಕಾಯಿದೆಯೊಳಗೆ ಇರತಕ್ಕ ನೌಕರದಾರನು ಮೈಸೂರು ಮುನಿಸಿಪಾಲಿಟಿ ಕಾಯಿದೆಯೊಳಗೆ ಅನ್ವಯವಾಗದೇ ಇರುವಂಥ ಅಂಶದ ಇರುವುದರಿಂದ ಅವನ್ನು ಈಗ ರದ್ದುಮಾಡಿರುವುದರಿಂದ ಅದರ ಬಗ್ಗೆ ವಿಶಿಷ್ಟವಾದ ಹಾಗೂ ಸ್ಪಷ್ಟವಾದ ಕಾನೂನು ನಿಬಂಧನೆಯನ್ನು ಹೊಸದಾಗಿ ಅಕ್ಟ್‌ಮಾಡಿದ್ದರೂ ಅದಕ್ಕೆ ಅದು ಒಳಗೊಂಡಿದೆ. ಆದ್ದರಿಂದ ಇದರ ಬಗ್ಗೆ ಈಗ ಒಂದು ತಿದ್ದುಪಡಿಯನ್ನು ಮಾಡುವುದಕ್ಕೆ ಸಾಧ್ಯವಿದೆ. ಹಾಗೆ ರದ್ದುಮಾಡಿದಂಥ ಪ್ರಾವಿಷನ್ ಯಾವುದೆಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಈ ವಿಚಾರವಲ್ಲ ಒಂದು ದೊಡ್ಡ ಪುಸ್ತಕವನ್ನೇ ಮಾಡಿದ್ದಾರೆ. ಅದರಲ್ಲಿ ಇದಕ್ಕೆ ಸಂಬಧಪಟ್ಟಹಾಗೆ ರೂಲ್ಸ್ ಬೇಕಾದಷ್ಟಿವೆ. ಪುಸ್ತಕ ಬೇಕಾದರೆ ಕೊಡುತ್ತೇನೆ. ಅವರು ಓದಿಕೊಳ್ಳಲಿ.

ಶ್ರೀ ಪಿ. ಎಂ. ಬಂಗಿ.—ಮುಂಬೈ ಮುನಿಸಿಪಲ್ ಅಕ್ಟ್ ಪ್ರಕಾರ ಪ್ರತಿಯೊಂದು ಮುನಿಸಿಪಾಲಿಟಿಗೆ ತಮ್ಮ ತಮ್ಮ ನೌಕರರ ಬಗ್ಗೆ ನಿಯಮಗಳನ್ನು ಮಾಡಿಕೊಳ್ಳುವ ಅಧಿಕಾರವಿದ್ದರೂ ಆ ಪ್ರಕಾರ ಬಾಗಲಕೋಟೆ ಮುನಿಸಿಪಾಲಿಟಿಯವರು ಮಾಡಿದ ರೂಲ್ಸ್ ಪ್ರಕಾರ ರಿಟೈರ್‌ಮೆಂಟ್ ಏಜ್ ಯಾವುದಿತ್ತೋ, ಅದನ್ನು ಮೊಟಕು ಮಾಡುವ ಬಗ್ಗೆ ಇವರ ಒಂದು ಹೊಸ ನಿಯಮಗಳು ಏನಿವೆಯೋ ಅವು ಹೊಸ ನೌಕರರ ನಿವೃತ್ತಿಯ ಬಗ್ಗೆಯ ಅನ್ವಯಿಸುತ್ತದೆ. ಆ ಪ್ರಕಾರ ಕ್ಲಾರಿಫಿಕೇಷನ್ ಇದೆಯೋ ಏನೋ ಗೊತ್ತಿಲ್ಲ. ಹಾಗೆ ಇಲ್ಲದಿದ್ದರೆ ಮುಂಬೈ ಹಳೆಯ ನಿಯಮದ ಪ್ರಕಾರ 58 ವಯಸ್ಸಿನವರೆಗೆ ರಿಟೈರ್ ಮಾಡುವುದಕ್ಕೆ ತಮ್ಮ ಅಡ್‌ಮಿನಿಸ್ಟ್ರೇಟರ್ ಅವರಿಗೆ ಹುಕುಂ ವಿಧಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ರೂಲ್ಸ್ ಪ್ರಕಾರ 55 ವರ್ಷಗಳು ಎಂಬುದಾಗಿ ಪ್ರತಿಯೊಬ್ಬ ನೌಕರನಿಗೂ ಇದೆ. ಅದೇ ಪ್ರಕಾರ ಎಲ್ಲರಿಗೂ ಅನ್ವಯಿಸುವ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡು ಜಾರಿಗೆ ಕೊಡುತ್ತಿದ್ದೇವೆ. ಆದ್ದರಿಂದ ಜಾಸ್ತಿ ಕೊಡುವ ಪ್ರಶ್ನೆ ಈಗ ಬರುವುದಿಲ್ಲ, ಜಾಸ್ತಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಪಿ. ಎಂ. ಬಂಗಿ.—ಹಾಗಿದ್ದ ಪಕ್ಷದಲ್ಲಿ ಇದು ಎಲ್ಲಾ ನೌಕರರಿಗೂ ಅನ್ವಯಿಸುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಸಮಗ್ರವಾಗಿ ಎಲ್ಲಾ ನೌಕರರಿಗೂ ಇದು ಅನ್ವಯಿಸುತ್ತದೆ. ಹಿಂದೆ ಬೊಂಬಾಯಿ ಕರ್ಣಾಟಕ ಏರಿಯಾದೊಳಗೆ ಯಾವಾಗ ಬೊಂಬಾಯಿ ಮುನಿಸಿಪಲ್ ಕೆಲಸಗಳು ಪ್ರಾರಂಭವಾಯಿತೋ ಅಗಿನಿಂದಲೂ ಆ ಕೆಲಸಗಳನ್ನು ಮಾಡುವವರಿಗೆಲ್ಲರಿಗೂ ಆ ಅಕ್ಟ್ ರಿಪೀಲ್ ಆಗಿದೆ. 1964ನೇ ಇಸವಿಯ ಮುನಿಸಿಪಾಲಿಟಿ ಆಕ್ಟ್‌ನೊಳಗೆ ಅಡ್ಮಿನಿಸ್ಟ್ರೇಟಿವ್ ರೂಲ್ಸ್ ಮಾಡಿದ್ದಾರೆ. ಅದರ ಪ್ರಕಾರ 55 ವರ್ಷಗಳೆಂದು ಇದೆ. ಅದ್ದರಿಂದ ಅದಕ್ಕಿಂತ ಜಾಸ್ತಿಯಾಗಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಈ ಒಂದು ಪ್ರಾವಿಷನ್ ಬೇರೆ ಒಂದು ಮುನಿಸಿಪಾಲಿಟಿಯಲ್ಲಿ ಕಾರ್ಯರೂಪಕ್ಕೆ ತರುತ್ತಾ ಇರುವಾಗ, ಇತರ ಕಡೆಗಳಲ್ಲಿಯೂ ಆ ರೀತಿಯಾಗಿ ಜಾರಿಗೆ ತರುವುದಕ್ಕೆ ಆಗುವುದಿಲ್ಲವೆನ್ನುವುದಕ್ಕೆ ಕಾರಣವೇನು ? ಕಾನೂನು ಪ್ರಕಾರ ಅಲ್ಲಿರತಕ್ಕ ಮುನಿಸಿಪಲ್ ಕೆಲಸಗಾರರಿಗೆ ರೆಂಟ್-ಫ್ರೀ-ಹೌಸ್ ಕೊಡಬೇಕೆಂದಿದೆ, ಅಲ್ಲಿರತಕ್ಕ ಆಡಳಿತಗಾರರು ಯಾವುದೇ ಒಂದು ಸೌಲಭ್ಯವನ್ನು ಕೂಡ ಅಲ್ಲಿನ ಕೆಲಸಗಾರರಿಗೆ ಕೊಡುತ್ತಾ ಇಲ್ಲ ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅವರಿಗೆ ಅಲ್ಲಿನ ಕಾನೂನು ರೀತ್ಯ ಏನೇನು ಸೌಲಭ್ಯಗಳನ್ನು ಕೊಡಬೇಕೋ ಅವನ್ನೆಲ್ಲಾ ದೊರಕಿಸಿಕೊಡುವುದಕ್ಕೆ ಪ್ರಯತ್ನಪಡುತ್ತೀರಾ ? ಇದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಿ ಇವತ್ತು ಅಲ್ಲಿ 58 ವರ್ಷಗಳವರೆಗೆ ಅವಕಾಶವಿದ್ದರೂ 55 ಕ್ಕೆ ರಿಟೈರ್‌ಮಾಡುವುದರಿಂದ ಮುಂದೆ ಇವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಯಾರಿಗೆ 55 ವರ್ಷ ವಯಸ್ಸಾಗಿದೆ ಅಂಥವರನ್ನು ನೌಕರಿಯಲ್ಲಿ ಮುಂದುವರಿಸುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಇದು ಕೇವಲ ಆ ಬಾಗಲ್ಕೋಟೆ ಒಂದು ಪ್ರದೇಶಕ್ಕೆ ಅನ್ವಯಿಸಿಲ್ಲ. ಇಡೀ ಮುಂಬೈ ಕರ್ಣಾಟಕ ಪ್ರದೇಶಕ್ಕೆ ಅನ್ವಯವಾಗುತ್ತದೆ. ಆದರೆ ಅವರನ್ನು 55ಕ್ಕೆ ನಿವೃತ್ತಿ ಮಾಡುವುದಾಗಿದ್ದರೂ ಇತ್ತೀಚೆಗೆ ಅವರಿಗೆ ಏನೇನು ಸೌಲಭ್ಯಗಳನ್ನು ಕಲ್ಪಿಸಿದೆ ಅನ್ನುವುದರ ಬಗ್ಗೆ ಇನ್ನು ಒಂದೆರಡು ದಿವಸಗಳಲ್ಲೇ ಮಾನ್ಯ ಸದಸ್ಯರುಗಳಿಗೆಲ್ಲಾ ಇದರ ಸಂಪೂರ್ಣ ಮಾಹಿತಿಯನ್ನು ಒಳಗೊಂಡ ಒಂದು ಪುಸ್ತಕವನ್ನೇ ಹಂಚಲಾಗುವುದು.

2-30 P.M.

ಶ್ರೀ ಕೆ. ಶ್ರೀರಾಮುಲು.—ಇನ್ನೂ ಮೊನ್ನೆ ತಾನೆ ಸುಪ್ರೀಂಕೋರ್ಟಿನ ಶ್ರೀ ನ್ಯಾಯಾಧೀಶರು, ತಮಗೆಲ್ಲರಿಗೂ ಗೊತ್ತಿರುವ ಪ್ರಕಾರ, ನೌಕರಿಯಲ್ಲಿರತಕ್ಕ ವ್ಯಕ್ತಿಯು ಆರೋಗ್ಯ ಚೆನ್ನಾಗಿದ್ದರೆ ಅಂಥವರಿಗೆ 60 ವರ್ಷದವರೆಗೂ ಕೆಲಸದಲ್ಲಿರುವುದಕ್ಕೆ ಅವಕಾಶ ಕೊಡಬಹುದೆಂದು ತಿಳಿಸಿಲ್ಲವೇ ? 60 ರವರೆಗೆ ಅವಕಾಶ ಕೊಟ್ಟರೆ ತೊಂದರೆಯೇನು ?

ಶ್ರೀ ಬಿ. ಬಸವಲಿಂಗಪ್ಪ.—ಅದು ಮಾನ್ಯ ಸದಸ್ಯರ ಒಂದು ಸಲಹೆ ಎನ್ನಬಹುದು.

Tenth Report of the Committee on Private Members' Bills and Resolutions

Presentation

MR. DEPUTY SPEAKER.—I present the Tenth Report of the Committee on Private Members' Bills and Resolutions.

SRI D. B. KALMANKAR (Afzalpur).—I move :

"That this Assembly agrees with the Tenth Report of the Committee on Private Members' Bills and Resolutions"

MR. DEPUTY SPEAKER.—The question is :

"That this Assembly agrees with the Tenth Report of the Committee on Private Members' Bills and Resolutions"

The Motion was adopted

Alleged Harassment by the Police

ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ಫಾರೆಸ್ಟ್ ಕೋಟಾದಲ್ಲಿ ದೊರೆತ ಮರಗಳ ವಿನಿಯೋಗದ ಬಗ್ಗೆ ಅದು ದುರ್ವಿನಿಯೋಗವಾಗುತ್ತಿದೆ ಎಂದು ಪೋಲೀಸಿನವರು ಜನರಿಗೆ ಕೊಡುತ್ತಿರುವ ಕಿರುಕುಳದ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸನ್ನು ಮೂರು ದಿನಗಳ ಒಳಗೆ ಕೊಟ್ಟಿದ್ದೆ. ಆದರೆ ನನಗೇನೂ ಉತ್ತರ ಬರಲಿಲ್ಲ. Innocent people are being arrested by the police. Therefore, immediate action by the Government is necessary.

ಉಪಾಧ್ಯಕ್ಷರು.—ಅದನ್ನು ನೋಡಿಸಲಾಗುತ್ತದೆ.

Mysore Appropriation Bill, 1973 and Mysore Appropriation (Vote on Account Bill) 1973

Introduction

SRI N. HUTCHAMASTHY GOWDA (Minister for Revenue).—Madam, I beg to introduce the following Bills :

(1) The Mysore Appropriation Bill, 1973.

(2) The Mysore Appropriation (Vote on Account) Bill, 1973.

MADAM SPEAKER.—The Bills are introduced*

Mysore Appropriation Bill, 1973

Motion to Consider

SRI N. HUTCHAMASTHY GOWDA (Minister for Revenue).—Madam, I beg to move.—

"That the Mysore Appropriation Bill, 1973 be taken into consideration."

MADAM SPEAKER.—Motion moved :—

"That the Mysore Appropriation Bill, 1973 be taken into consideration."

† ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಸಭಾಧ್ಯಕ್ಷರೇ ; ಈಗ ಸಭೆಯ ಮುಂದೆ ಮಂಡಿಸಲಾದ ಮೈಸೂರು ಅಪ್ರೊಪ್ರಿಯೇಷನ್ ಬಿಲ್ಲು ಏನಿದೆ ಇದರಲ್ಲಿ ವಿವಿಧ ಬಾಬಗಳೂ ಸೇರಿ ಒಟ್ಟು 129 ಕೋಟಿ 70 ಲಕ್ಷ 80 ಸಾವಿರ ರೂಪಾಯಿ ಹಣ ನಾನಾಬಾಬುಗಳಿಗೆ ಬೇಕಾಗಿದೆ, ಇದಕ್ಕೆ ಸಭೆಯ ಅನುಮೋದನೆ ಬೇಕೆಂದು ಕೇಳಿದ್ದಾರೆ.

ನಾನು ಮೊಟ್ಟಮೊದಲನೆಯದಾಗಿ ಇಲ್ಲಿ ಅಪ್ರೊಪ್ರಿಯೇಷನ್—ಬಿಲ್ ನಂಬರ್ 2ರಲ್ಲಿ ಇರತಕ್ಕ ಡಿಮ್ಯಾಂಡ್ ನಂಬರ್—2 ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಲ್ಯಾಂಡ್ ರೆವಿನ್ಯೂ ಬಾಬಿಗೆ 130 ಲಕ್ಷ ರೂಪಾಯಿಗಳು ಬೇಕೆಂದು ಕೇಳಿದ್ದಾರೆ. ಆದರೆ ಸರ್ಕಾರದವರು ಈ ರೆವಿನ್ಯೂ ಬಾಬಿನಲ್ಲಿ ಜನರಿಗೆ ಎಂಥಾ ನಿರಾಶಾದಾಯಕವಾದ ಕೆಲಸ

---

* The Bill is reproduced as annexure to this volume.

ಗಳನ್ನು ಮಾಡಿದಾರೆಂಬುದನ್ನು ನಾನೀಗ ಸಭೆಯ ಗಮನಕ್ಕೆ ತರಬೇಕಾಗಿದೆ. ನಾವು ಕಳೆದ ಅಧಿವೇಶನದಲ್ಲೇ ಹೇಳಿದ್ದೆವು. ರೈತರ ಮೇಲೆ ಸರ್ಕಾರದವರು ಅನಧಿಕೃತ ಸಾಗುವಳಿ ಮಾಡಿರತಕ್ಕ ಬಗ್ಗೆ ಅವರಿಗೆ ವಿಧಿಸತಕ್ಕ ತಕರಾರು ತಃಖ್ತೆ ಅಥವಾ ಟಿ. ಟಿ. ವಿಚಾರದಲ್ಲಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿದ್ದಾರೆ. ಅಷ್ಟೇ ಅಲ್ಲ, ಅವರು ಅನೇಕ ಪಕ್ಷಪಾತಗಳನ್ನೂ ಕೂಡ ಮಾಡಿದ್ದಾರೆ. ಈ ಟಿ. ಟಿ. ಫೈನನ್ನು ವಸೂಲ್ಮಾಡತಕ್ಕ ವಿಷಯದಲ್ಲಿ ಅನೇಕ ಸಂದರ್ಭಗಳಲ್ಲಿ ಆ ಜಮೀನಿಗೇನು ಒಂದು ಅಪ್‌ಸೆಟ್ ಬೆಲೆ ಆಗುತ್ತದೋ ಅಷ್ಟೇ ಹಣವನ್ನು ಈ ಟಿ. ಟಿ. ರೂಪದಲ್ಲಿ ರೈತರಿಂದ ಕಿರುಕುಳ ಕೊಟ್ಟು ವಸೂಲ್ಮಾಡಿಕೊಂಡಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಸಚಿವರ ತನಿಖೆ ಇನ್ನೂ ನಡೆಯಬೇಕಾಗಿದೆ. ಅದರತ್ತ ನಾನು ಅವರ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಇದೇ ಡಿಮ್ಯಾಂಡಿನಲ್ಲಿ ಸರ್ಕಾರದವರು ಈ ಗ್ರಾಮಾಧಿಕಾರಿಗಳಿಗೆ ಕೊಡತಕ್ಕ ಬಗ್ಗೆ ಹಣವನ್ನು ಕೇಳಿದ್ದಾರೆ. ಇದೂ ಕೂಡ ಬಹಳಷ್ಟು ಹಣ ಆಗುತ್ತದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಅವರ ಸರ್ವಿಸನ್ನು ಯಾವಾಗ ಟರ್ಮಿನೇಟ್ ಮಾಡಬೇಕಾಗಿತ್ತು ಎಂಬುದನ್ನು ತಿಳಿಯದೆ ಅಕ್ರಮವಾಗಿ ಅವರನ್ನು ತೆಗೆದುಹಾಕಿದ್ದರಿಂದ ಸರ್ಕಾರ ಅನಾವಶ್ಯಕವಾಗಿ ಈ ದಿವಸ ಇಷ್ಟು ಹಣವನ್ನು ತರಬೇಕಾಗಿದೆ. ಅವರನ್ನು ಸಕಾಲಕ್ಕೆ ನಿವೃತ್ತಿ ಮಾಡದೆ ಅವರನ್ನು ಹೈಕೋರ್ಟಿನವರೆಗೂ ಹೋಗುವುದಕ್ಕೆ ಇವರೇಕೆ ಅವಕಾಶ ಕೊಡಬೇಕಾಗಿತ್ತು? ಇದೆಲ್ಲಾ ಹಣವನ್ನು ದುರ್ವಿನಿಯೋಗ ಮಾಡತಕ್ಕ ಡಾಣ್ಮೆ. ಆದರೆ ಇಷ್ಟು ಹಣವನ್ನು ಸರ್ಕಾರ ವಿನಾಕಾರಣದಿಂದ ತೆರಬೇಕಾಗಿ ಬಂದುದಕ್ಕೆ ಯಾರು ಕಾರಣರೆಂಬುವನ್ನು ಕಂಡುಹಿಡಿದು ಅವರ ಬಗ್ಗೆ ಸರ್ಕಾರ ಉಗ್ರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನೂ ರೆವಿನ್ಯೂ ಆಡ್ಮಿನಿಸ್ಟ್ರೇಷನ್ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ: ಅನೇಕ ಸಂದರ್ಭಗಳಲ್ಲಿ ಶ್ಯಾನುಭೋಗರುಗಳಿಗೆ ಸಲ್ಲಬೇಕಾದ ಪರಿಹಾರದ ಹಣದ ಬಗ್ಗೆ ತಹಶೀಲ್ದಾರರು ಅಕ್ರಮ ನಡವಳಿಕೆಗಳನ್ನು ನಡೆದಿದ್ದಾರೆ, ಕಾನೂನಿಗೆ ಮೀರಿ ವರ್ತಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಹುರ್ಳೀಕೆರೆ ಎಂಬ ಗ್ರಾಮದ ಶ್ಯಾನುಭೋಗರಿಗೆ ಒಂದು ಸಾವಿರ ರೂಪಾಯಿ ಕಾಂಪನ್‌ಸೇಷನ್ ಸಿಕ್ಕಬೇಕಾಗಿದ್ದ ಕಡೆ ಅವರಿಗೆ ಆರು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಂಥಾ ಒಂದು ನಿದರ್ಶನ ಈ ದಿವಸ ನಮ್ಮ ಕಣ್ಮುಂದೆ ಇದೆ. ಇದಕ್ಕಾಗಿ ನಾನು ಈ ದಿವಸ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಏನೆಂದರೆ ಇಲ್ಲಿಯವರೆಗೂ ಯಾವ ಯಾವ ತಾಲ್ಲೂಕಿನಲ್ಲಿ ಶ್ಯಾನುಭೋಗರುಗಳಿಗೆ ಈ ಪರಿಹಾರ ಧನವನ್ನು ಕೊಟ್ಟಿದ್ದಾರೆ ಅದೆಲ್ಲವನ್ನೂ ಸಮಗ್ರವಾಗಿ ಪರಿಶೀಲನೆ ಮಾಡಿದರೆ ಇದರಲ್ಲಿ ನಡೆದಿರತಕ್ಕ ಅಲ್ಲೋಲ ಕಲ್ಲೋಲಗಳು ಬೆಳಕಿಗೆ ಬರಬಹುದೆಂದು ಹೇಳುತ್ತೇನೆ. ಅನೇಕ ತಾಲ್ಲೂಕುಗಳಲ್ಲಿ ಈ ಕಾಂಪನ್‌ಸೇಷನ್ ಹಣವನ್ನು ಬಟವಾಡೆ ಮಾಡತಕ್ಕ ವಿಚಾರದಲ್ಲಿ ತಾಲ್ಲೂಕ್ ತಾಶೀಲ್ದಾರ್‌ರಿಗೂ ಮತ್ತು ಶಿರಸ್ತೇದಾರರಿಗೂ ಹೊಡೆದಾಟಗಳು ನಡೆದಿವೆ. ಈ ಪರಿಹಾರ ಧನವನ್ನು ನಾನು ಕೊಡಬೇಕೆಂದು ತಾಶೀಲ್ದಾರರು ಹೇಳಿದರೆ, ಶಿರಸ್ತೇದಾರು ನಾನು ಕೊಡಬೇಕೆಂದು ಅವರ ಮೇಲೆ ಬಿದ್ದು ಹೇಳುತ್ತಿದ್ದಾರೆ. ಇವರಲ್ಲಿ ಈ ಪೈಪೋಟಿ ಏಕೆ ಎದ್ದಿದೆ ಎಂದರೆ ಆ ಪಿ.ಡಬ್ಲ್ಯು.ಡಿ. ನಲ್ಲಿ ಕಂಟ್ರಾಕ್ಟರಿಗೆ ಹಣವನ್ನು ಪಾವತಿ ಮಾಡತಕ್ಕ ಸಮಯದಲ್ಲಿ ಅವರಿಂದ ಎರಡು ಪರ್ಸೆಂಟ್ ಕಮಿಷನ್ ಮೂರು ಪರ್ಸೆಂಟ್ ಕಮಿಷನ್ ಪಡೆಯುತ್ತಾರಲ್ಲಾ ಹಾಗೇ ಇಲ್ಲಿಯೂ ಈ ದಿವಸ ಇವರು ಶ್ಯಾನುಭೋಗರುಗಳಿಗೆ ಬರತಕ್ಕ ಹಣಕ್ಕಿಂತ ಹೆಚ್ಚು ಹಣವನ್ನು ಕ್ಲೈಂ ಮಾಡಿ ಅವರಿಂದ ಹಿಸ್ಸೆ ಪಡೆಯುತ್ತಿದ್ದಾರೆ. ಈ ಕಾರಣದಿಂದ ಇವರಲ್ಲಿ ಈ ಯುದ್ಧ ನಡೆಯುತ್ತಿದೆ. ಅಂದರೆ ಸರ್ಕಾರದವರು ಇಲ್ಲಿಯವರೆಗೂ ಈ ತಾಲ್ಲೂಕ್ ಕಛೇರಿಗಳಲ್ಲಿ ನಡೆಯತಕ್ಕ ಆಡಳಿತವನ್ನು ಒಂದು ವ್ಯವಸ್ಥಿತ ಮಟ್ಟಕ್ಕೆ ತರುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳದೆ ವಿಧಿಯಿಲ್ಲ.

ಡಿಮ್ಯಾಂಡ್ ನಂಬರು 10ರಲ್ಲಿ ಮೈಸೂರು ಭವನದ ಸಿಬ್ಬಂದಿಗೆಂದು ಹಣ ಒದಗಿಸಿದ್ದಾರೆ. ಮೈಸೂರು ಭವನದ ಅಧಿಕಾರಿಯ ದಿಟ್ಟತನದ ಬಗ್ಗೆ ಅವ್ಯವಹಾರದ ಬಗ್ಗೆ ದಸರಾ ವ್ಯವಹಾರದ ಬಗ್ಗೆ ಸರಕಾರದವರಿಗೆ ಒಂದು ಪ್ರಿಂಟಾದ ಪತ್ರವನ್ನು ಎಲ್ಲಾ ಮಂತ್ರಿಗಳಿಗೂ ಮತ್ತು ಸದಸ್ಯರಿಗೂ ಕಳಿಸಿದ್ದಾರೆ. ಅಲ್ಲಿನ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಜವಾಬ್ದಾರಿಯುತರಾದ ಜನರು ಮೈಸೂರಿನವರು ಒಂದು ಗುರುತರವಾದ ಅಪಾದನೆ ಮಾಡಿರುವಾಗ ಅದರಲ್ಲಿ ನಿಜಾಂಶವಿರಬೇಕು, ಸತ್ಯಾಂಶವಿರಬೇಕು ಎಂದು ತನಿಖೆ ಮಾಡಿ ಸಾರ್ವಜನಿಕರಿಗೆ ಇರುವ ವಿಚಾರ ತಿಳಿಸಬೇಕಾಗಿತ್ತು. ಇದುವರೆಗೆ ಸರಕಾರ ಅದನ್ನು ಮಾಡಿಲ್ಲ. ನಾನು ಇದರ ಬಗ್ಗೆ ಪ್ರಶ್ನೆ ಕಳಿಸಿದ್ದೆ, ಉತ್ತರ ಬಂದಿಲ್ಲ. ದೆಹಲಿಯಲ್ಲಿರುವ ಮೈಸೂರು ಭವನದ ಲೋಪದೋಷಗಳ ಬಗ್ಗೆ ಅಂತರ

(ಶ್ರೀ ಎಚ್. ಎಸ್. ಸಿದ್ದಪ್ಪ)

ರಾಷ್ಟ್ರೀಯ ಸಂಸ್ಥೆ ಕೂಡ ತಿಳಿಸಿದೆ. ಇದರಿಂದ ತಲೆ ತಗ್ಗಿಸಬೇಕಾಗಿದೆ. ಈ ವಿಚಾರದಲ್ಲಿ ಈಗ ಲಾದರೂ ತನಿಖೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಸಾಮಾನ್ಯ ಆಡಳಿತದಲ್ಲಿ ಅನೇಕ ವ್ಯವಹಾರಗಳನ್ನು ಪ್ರಶ್ನಿಸುವ ಸಂದರ್ಭ ಇದೆ. ಸರಕಾರ ಧಾರವಾಡ ಯೂನಿವರ್ಸಿಟಿಗೆ ಹಣ ಕೇಳಿದೆ. ಈ ಯೂನಿವರ್ಸಿಟಿಯಲ್ಲಿ ಅನೇಕ ಅಕ್ರಮಗಳು ನಡೆ ಯುತ್ತಿರುವುದು ವಿದ್ಯಾ ಸಚಿವರ ಗಮನಕ್ಕೆ ಬಂದಿದೆ. ಈ ವಿಶ್ವವಿದ್ಯಾಲಯದ ಬಗ್ಗೆ ದೂರು ಬಂದಿದೆ. ಅಲ್ಲಿ ಅರ್ಹರಾದ ಅಧ್ಯಾಪಕರಿಗೆ ಸಾಕಷ್ಟು ಮಾನ್ಯತೆ ಸಿಕ್ಕುತ್ತಿಲ್ಲ ಎಂದು ಪತ್ರಿಕೆಯಲ್ಲಿದೆ. ಈ ಬಗ್ಗೆ ವಿದ್ಯಾ ಸಚಿವರು ತೀವ್ರ ಗಮನಕೊಡಬೇಕು. ಅಲ್ಲಿ ಅನೇಕ ಪರೀಕ್ಷೆಗಳಲ್ಲಿ ಅರ್ಹರಲ್ಲದವರಿಗೆ ನಂಬರು ಕೊಟ್ಟು ಪಾಸುಮಾಡಿಸುವ ಪದ್ಧತಿಯಿದೆಯೆಂದು ಅಪಾದನೆಯಿದೆ. ಇದು ನಿಜವೇ, ಅಲ್ಲವೇ ಎಂಬುದನ್ನು ಸಾರ್ವಜನಿಕರ ಗಮನಕ್ಕೆ ತರಲು ಸರಕಾರಕ್ಕೆ ಜವಾಬ್ದಾರಿಯಿದೆ.

ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧಿಕಾರಿಗಳಿಗೆ ತರಬೇತು ಕೊಡಲು ಹಣ ಕೇಳಲಾಗಿದೆ. ಇಂದು ತಾಲ್ಲೂಕು ಮಂಡಲಿ ಪರಿಸ್ಥಿತಿ ಚಿಂತಾಜನಕವಾಗಿದೆ. ಈ ಮಂಡಲಿ ಪ್ರಾರಂಭವಾದಂದಿ ನಿಂದ ಅವ್ಯವಹಾರವೇನು ಅಲ್ಲಿ ನಡೆಯುತ್ತಿದೆ ಎಂದು ತನಿಖೆ ಮಾಡುವವರೇ ಇಲ್ಲವಾಗಿದೆ. ಜಿಲ್ಲಾ ಅಧಿಕಾರಿ ಅಥವ ಅವರ ಡೆವಲಪ್‌ಮೆಂಟ್ ಅಸಿಸ್ಟೆಂಟ್ ತನಿಖೆ ಮಾಡುವ ವ್ಯವಸ್ಥೆಯಿದೆ. ಆದರೆ ಅವರು ಪ್ರವಾಸಿ ಮಂದಿರದಲ್ಲಿ ಕುಳಿತು ತನಿಖೆ ಮಾಡುವರು. ಅವರು ಎರಡು ಪುಸ್ತಕಗಳನ್ನು ನೋಡಿ ಇನ್‌ಸ್ಪೆಕ್ಷನ್ ಆಯಿತೆಂದು ಹೇಳುವರು. ಅಲ್ಲಿನ ಲೆಕ್ಕಪತ್ರಗಳ ತನಿಖೆಯನ್ನು ಆಡಿಟ್ ಇಲಾಖೆ ಮಾಡುವುದು. ಆಡಿಟ್ ವರದಿಯಂತೆ ಲೋಪದೋಷಗಳನ್ನು ತಿದ್ದಿಕೊಂಡಿರುವರೇ, ಎಷ್ಟು ದುರುಪಯೋಗವಾಗಿದೆ ಎಂಬುದನ್ನು ಯಾರೂ ಪರಿಶೀಲನೆ ಮಾಡುತ್ತಿಲ್ಲ. ಎ.ಸಿ., ಡಿ.ಸಿ. ಮುಂತಾದವರು ಅವರ ಟೂರ್ ಪ್ರೋಗ್ರಾಂ ನನಗೆ ಕಳಿಸುವರು, ಅದರಲ್ಲಿ ವಿಸಿಟ್ ಟು ಧಾರವಾರ ಎಂದಿರುವುದು, ಬಂದು ಏನಾದರೂ ಕೇಳಿಕೊಂಡು ಹೊರಟುಹೋಗುವರು. ಇದು ಸರಿಯಲ್ಲ. ಅವರು ಸ್ಥಾನಿಕ ಸಂಸ್ಥೆ ಇನ್‌ಸ್ಪೆಕ್ಷನ್ ಮಾಡುವವರೇ? ಅಭಿವೃದ್ಧಿ ಮಂಡಲಿ ಸಭೆ ಕರೆದು ಅಲ್ಲಿ ಸದಸ್ಯರೇನು ಸಲಹೆ ಕೊಡುವರು, ಯಾವ ರೀತಿ ಆ ಸಭೆ ಕೆಲಸಮಾಡುತ್ತಿದೆ, ಕುಂದು ಕೊರತೆ ಗಳೇನಿವೆ ಎಂಬುದನ್ನು ತಿಳಿಯುವುದಕ್ಕೆ ಪ್ರಯತ್ನಮಾಡಬೇಕು. ಅದನ್ನು ಬಿಟ್ಟು ಅಧಿಕಾರಿಗಳು ಬೇಕಾದ ಕಡೆ ಸುತ್ತಿಬಂದು ವರದಿ ಮಾಡುವರು. ಅಭಿವೃದ್ಧಿ ಮಂಡಲಿ ಸಭೆಯಲ್ಲಿ ಇನ್‌ಸ್ಪೆಕ್ಷನ್ ನೋಟ್ಸನ್ನು ಗಮನಕ್ಕೆ ತರುತ್ತಿಲ್ಲ. ಹಾಗೆ ತರಬೇಕೆಂಬ ಆದೇಶವಿದೆ. ಅದನ್ನು ಅಭಿವೃದ್ಧಿ ಮಂಡಲಿ ಸದಸ್ಯರು ತಿಳಿದು ಚರ್ಚೆಮಾಡಿ ಸಲಹೆ ಕೊಡುವಂತಿರಬೇಕು. ಇಂದಿನವರೆಗೂ ಅರಸೀಕೆರೆ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಆಡಿಟ್ ವರದಿ ಕೊಟ್ಟಿಲ್ಲ. ಪ್ರತಿವರ್ಷ ಅದನ್ನು ಸಭೆ ಮುಂದಿಡಬೇಕು. ಇದು ಅನೂಚಾನವಾಗಿ ನಡೆಯಬೇಕು. ಕಾನೂನಿನಲ್ಲಿ ಇದಕ್ಕೆ ಅವಕಾಶವಿದ್ದರೂ ಗಮನ ಕೊಡುತ್ತಿಲ್ಲ. ಕಾರಣ ಗೊತ್ತಿಲ್ಲ. ಒಮ್ಮೆ ನಮ್ಮ ಬ್ಲಾಕ್ ಡೆವಲಪ್ ಮೆಂಟ್ ಅಧಿಕಾರಿ ಒಂದು ಸ್ಟೇಟ್‌ಮೆಂಟ್ ಕೊಟ್ಟರು. ತಾಲ್ಲೂಕು ಅಭಿವೃದ್ಧಿ ಮಂಡಲಿ ಆಸ್ಪತ್ರೆ ಔಷಧಿ, ಅವಿಲ್ಲದಿದ್ದರೆ ಹಣ ಕೊಡುವರು. ಡಾಕ್ಟರುಗಳಿಗೆ ಹಣ ಕೊಟ್ಟರೂ ಆಸ್ಪತ್ರೆಗಳಲ್ಲಿ ಔಷಧಿ ಗಳಿಲ್ಲ. ಟಿ.ಡಿ.ಓ.ಗೆ ಔಷಧಿ ಇವೆಯೋ ಇಲ್ಲವೋ ಗೊತ್ತಿಲ್ಲ. ಅದರ ಪ್ರಜ್ಞೆ ಅವರಿಗೆ ಇಲ್ಲ. ಸರಕಾರ ವ್ಯವಸ್ಥೆಮಾಡಬೇಕು. ತಾಂತ್ರಿಕ ವಿಷಯ ಬರುವ ಕಡೆ ಅಭಿವೃದ್ಧಿ ಮಂಡಲಿ ಕೆಲಸವಿರುವ ಕಡೆ ತನಿಖೆ ಸರಿಯಾಗಿ ಮಾಡಬೇಕು. ಸ್ಥಾನಿಕ ಸಂಸ್ಥೆ ಸರಿಯಾಗಿ ಕೆಲಸಮಾಡಬೇಕಾದರೆ ಪದೇ ಪದೇ ತನಿಖೆಮಾಡಬೇಕು.

ತಾಲ್ಲೂಕು ಅಭಿವೃದ್ಧಿ ಮಂಡಲಿಯ ವ್ಯವಹಾರದ ಬಗ್ಗೆ ಮಂಡಲಿಯ ಅಧ್ಯಕ್ಷರು, ಟಿ.ಡಿ.ಓ. ಕೂಡ ಒಬ್ಬೊಬ್ಬರು ಒಂದೊಂದು ಸ್ಟೇಟ್‌ಮೆಂಟನ್ನು ಕೊಟ್ಟು ಸುಮಾರು 40 ಸಾವಿರ ರೂಪಾಯಿ ಗಳಷ್ಟು ಒಂದೇ ಒಂದು ಅರಸೀಕೆರೆ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ದುರುಪಯೋಗವಾಗಿದೆ ಎಂದು ಪತ್ರಿಕೆಯ ಮುಖಾಂತರ ತಿಳಿಸಿದ್ದಾರೆ. ಸರ್ಕಾರ ಇಂಥ ಸಂದರ್ಭಗಳಲ್ಲಿ ಏನು ಮಾಡು ತ್ತದೆ ? ಬ್ಲಾಕ್ ಡೆವೆಲಪ್‌ಮೆಂಟ್ ಅಧಿಕಾರಿಗಳ ಮೇಲೆ ತಾವು ಗುರಿಯನ್ನು ಇಡದಿದ್ದರೆ, ಅನೇಕ ದುರುಪಯೋಗದ ಪ್ರಸಂಗಗಳು ಸ್ಥಾನೀಕ ಸಂಸ್ಥೆಗಳಲ್ಲಿ ಬರುತ್ತವೆ. ಕಾರಣ ಏನೆಂದರೆ, ಅಲ್ಲಿರತಕ್ಕ ಅಧಿಕಾರಿಗಳಿಗೆ ಚೈತನ್ಯಪೂರ್ಣವಾದ ತಿಳುವಳಿಕೆಯಿಲ್ಲ. ಅವರಿಗೆ ಸಾಕಷ್ಟು ತರಪೇತು ಇಲ್ಲ. ತರಬೇತು ಇಲ್ಲದೆ ಇರತಕ್ಕ ಅಧಿಕಾರಿಗಳನ್ನು ಸ್ಥಾನೀಕ ಸಂಸ್ಥೆಗಳಿಗೆ ಹಾಕಿ ಸ್ಥಾನೀಕ ಸಂಸ್ಥೆ ಗಳು ಹಾಳಾಗಿ ಹೋಗುತ್ತಿವೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕ ನೀವು, ತಕ್ಷಣ ತರಪೇತು ಪಡೆದಂಥ ಅಧಿಕಾರಿಗಳನ್ನು ಅಲ್ಲಿಗೆ ಹಾಕಬೇಕು. ಸಬ್ ಡಿವಿಷನಲ್ ಆಫೀಸರ್ ಅವರು ಉತ್ತಮವಾದ ಕೆಲಸಗಳನ್ನು ನಿರ್ವಹಿಸತಕ್ಕ ವ್ಯವಸ್ಥೆಯನ್ನು ಮಾಡಲೇ ಬೇಕು ಎಂದು ಕಡ್ಡಾಯ

ವಾಗಿ ಹೇಳುತ್ತೇನೆ. ಐಟಂ ನಂಬರ್ 16ರಲ್ಲಿ, ಸಬ್ ಡಿವಿಷನಲ್ ಆಫೀಸರ್ ಬಗ್ಗೆ ಬಹುದಿವಸಗಳಿಂದ ಅನೇಕರು ಹೇಳುತ್ತಾ ಬಂದಿದ್ದಾರೆ. ಈ ಸಬ್ ಡಿವಿಷನಲ್ ಆಫೀಸರ್ ಸ್ಥಳ ಅನಾವಶ್ಯಕ, ಅವರು ಒಂದು ಪೋಸ್ಟ್ ಆಫೀಸ್ ಮಾಡತಕ್ಕ ಕೆಲಸವನ್ನು ಮಾಡುತ್ತಿದ್ದಾರೆ, ಆದ್ದರಿಂದ ಇದು ಅನಾವಶ್ಯಕ, ಈ ರೀತಿ ಅವುಗಳನ್ನು ಮುಂದುವರಿಸುವುದು ಸರಿಯಲ್ಲ, ಸಬ್ ಡಿವಿಷನ್ ಆಫೀಸನ್ನು ತೆಗೆದರೆ ರೈತರಿಗೆ ಸಮರ್ಪಕವಾಗಿ, ಸುಲಭವಾಗಿ ವ್ಯವಹಾರಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ಒಬ್ಬ ತಹಸೀಲ್ದಾರ್ ಸ್ಟ್ಯಾಚೂಟರಿ ಪ್ರಾವಿಷನ್ಸ್ ಮೇಲೆ ಏನಾದರೂ ಕೇಸುಗಳನ್ನು ತೀರ್ಮಾನ ಮಾಡಿದರೆ ಅದರಲ್ಲಿ ಏನೂ ಕಾಂಪ್ಲಿಕೇಟೆಡ್ ಪ್ರಾವಿಷನ್ಸ್ ಇಲ್ಲ. ಕೇಸುಗಳನ್ನು ಪೂರ್ಣವಾಗಿ ಜಿಲ್ಲಾಧಿಕಾರಿಗಳಿಗೆ ಹಾಕತಕ್ಕಂಥ ವ್ಯವಸ್ಥೆ ಇಲ್ಲ. ಅವನಿಂದ ಅಸಿಸ್ಟೆಂಟ್ ಕಮಿಷನರ್‌ಗೆ ಹೋಗಬೇಕು, ಈ ಅಸಿಸ್ಟೆಂಟ್ ಕಮೀಷನರ್‌ಗೆ ಒಂದಲ್ಲ ವ್ಯವಹಾರ, ಎಲ್ಲವೂ ಜವಾಬ್ದಾರಿ ರಹಿತವಾದ ವ್ಯವಹಾರ, ಬರೀ ಇನ್‌ಪೆಕ್ಷನ್ಸ್ ವಿಸಿಟ್ಸ್, ತಹಸೀಲ್ದಾರರು ಮಾಡಿದ್ದು ತನಿಖೆ, ರೆವಿನ್ಯೂ ಇನ್ಸ್‌ಪೆಕ್ಟರ್ ಮಾಡಿದ್ದು ತನಿಖೆ, ಈ ತನಿಖೆಗಳನ್ನು ಮಾಡಿದ ಮೇಲೆ ತಹಸೀಲ್ದಾರರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳತಕ್ಕ ಅಧಿಕಾರ ಅಸಿಸ್ಟೆಂಟ್ ಕಮಿಷನರ್‌ಗೆ ಇಲ್ಲ.

ಇನ್ನು ಬರಗಾಲದ ಕ್ಷಾಮುಕ್ಕೋಸ್ಕರವಾಗಿ ಡಿಮ್ಯಾಂಡ್ ನಂಬರ್ 10ರಲ್ಲಿ ಐಟಂ ನಂಬರ್ 4 ರಲ್ಲಿ, ಬರಗಾಲ ಹೆಚ್ಚಾಗಿದ್ದರಿಂದ ನಾವು ಪ್ರಯಾಣವನ್ನು ಪದೇ ಪದೆ ಮಾಡಬೇಕಾದ ಸಂದರ್ಭ ಬಂತು. ಆದ್ದರಿಂದ ಹೆಚ್ಚು ಹಣ ನಮಗೆ ಬೇಕು ಎಂದು ಕೇಳಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದ ವ್ಯವಹಾರದ ಔಚಿತ್ಯವನ್ನು ನಾನು ಪ್ರಶ್ನಿಸದೆ ಹೋದರೆ ನಾನು ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಕೇಂದ್ರ ಸರ್ಕಾರವನ್ನು ಹಣ ಕೇಳುವಾಗ, ಇಂತಿಷ್ಟು ಹಣ ಬೇಕು ಎಂದು ನಿರ್ದಿಷ್ಟವಾಗಿ ಕೇಳಲಿಲ್ಲ. ಮೊದಲನೆಯ ಸಾರಿ ಇಂತಿಷ್ಟು ಬೇಕು ಎಂದು ಕೇಳಿದರು, ಎರಡನೆಯ ಸಾರಿ ಸ್ವಲ್ಪ ಜಾಸ್ತಿ ಮಾಡಬೇಕು ಎಂದು ಕೇಳಿದರು. ಶೆಟ್ಟರ ಅಂಗಡಿಯಲ್ಲಿ ಅವನು ಸಾಮಾನಿನ ಬೆಲೆಯನ್ನು ಐದು ರೂಪಾಯಿ ಹೇಳಿದರೆ ತೆಗೆದು ಕೊಳ್ಳುವವರು ಎರಡು ರೂಪಾಯಿ ಕೇಳುವುದು, ಎರಡೂವರೆ ರೂಪಾಯಿ ಕೇಳುವುದು ಈ ರೀತಿ ಬರಗಾಲದಲ್ಲಿ ಜನ ಸಿಕ್ಕಿರುವಾಗ, ಜನರ ಪ್ರಾಣವನ್ನು ಉಳಿಸುವ ಸಂದರ್ಭದಲ್ಲಿ ಈ ಸರ್ಕಾರ ಚೌಕಾಸಿ ವ್ಯಾಪಾರ ಮಾಡಿ, ಈ ಸರ್ಕಾರ ಚೌಕಾಸಿ ಸರ್ಕಾರವಾಗಿದೆ; ಎಂದು ನಾನು ಹೇಳಬಯಸುತ್ತೇನೆ. ಬರಗಾಲಪೀಡಿತ ಪ್ರದೇಶದಲ್ಲಿ ಮಾನ್ಯ ಸದಸ್ಯರಾದ ಆಮರ್ಗಂ ಅವರು ಪ್ರವಾಸ ಮಾಡಿ, ಸಮಗ್ರವಾದ ವರದಿಯನ್ನು ಅವರು ಈ ಸಭೆಯ ಮುಂದೆ ಇಟ್ಟರು. ಅವರ ಪಕ್ಷಕ್ಕೆ ಸೇರಿದ ಪಾರ್ಲಿಮೆಂಟ್ ಸದಸ್ಯರಾದ ಶ್ರೀಮಾನ್ ಕೆ. ಹನುಮಂತಯ್ಯನವರು ಬರಗಾಲ ಪ್ರದೇಶಗಳಿಗೆ ಪ್ರವಾಸಕ್ಕೆ ಹೋದಾಗ ಅವರಿಗೆ ಒದಗಿಸಿರತಕ್ಕ ಸೌಲಭ್ಯ ಯಾವ ನೀತಿಯ ಆಧಾರದ ಮೇಲೆ ಅವರಿಗೆ ಅಷ್ಟು ಸೌಲಭ್ಯವನ್ನು ಒದಗಿಸಿದ್ದಾರೆ ಎಂದು ಕೇಳುತ್ತೇನೆ ? ವಿರೋಧ ಪಕ್ಷದ ಅನೇಕ ಸದಸ್ಯರು ಮತ್ತು ನಾಯಕರು ಬರಗಾಲ ಪ್ರದೇಶಗಳಿಗೆ ಹೋದಾಗ ಅವರ ಹಿಂದೆ ಸಿ. ಐ. ಡಿ. ಗಳನ್ನು ಹಾಕಿದರು. ನಿಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆಯೇ ? ಮಾನ್ಯ ಹನುಮಂತಯ್ಯನವರು ಹೋದಾಗ ಅವರಿಗೆ ಗವರ್ನರ್‌ಗೆ ಕೊಡತಕ್ಕ ಸೌಲಭ್ಯವನ್ನು ಒದಗಿಸಿಕೊಟ್ಟಿರಿ ಪಕ್ಷಾತೀತವಾದ ಆಡಳಿತವನ್ನು ನಡೆಸುತ್ತೀರಿ, ಎಂದು ಸಾಕ್ಷಾತ್ಕಾರವಾದ ಉದಾಹರಣೆಯನ್ನು ಹೇಳುತ್ತೇನೆ. ಈ ನೀತಿಯನ್ನು ನೀವು ಎಲ್ಲಿಯವರೆಗೆ ಬದಲಾಯಿಸುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ಆಡಳಿತದಲ್ಲಿ ಪಕ್ಷಪಾತ ಮನೋಭಾವ ಹೋಗುವುದಿಲ್ಲ. ಈ ದೇಶದ ಹಣ ರೈತನ ಹಣ, ಇದನ್ನು ಪ್ರಜ್ಞಾವಂತರಾಗಿ ಬಳಸಬೇಕು. ಸಾರ್ವಜನಿಕರು ಮೆಚ್ಚತಕ್ಕ ವ್ಯವಹಾರವನ್ನು ನಡೆಸಬೇಕು. ತಮ್ಮ ಇಚ್ಛೆಗನುಸಾರವಾಗಿ ಹಣವನ್ನು ಬಳಸುವುದು ಸರಿಯಲ್ಲ. ನಾವು ಈ ವಿಚಾರವನ್ನು ಚೆನ್ನಾಗಿ ಮನಗಾಣಬೇಕು ಎಂದು ಒತ್ತಾಯವಾಗಿ ಹೇಳುತ್ತೇನೆ. ನೀವು ಮಾಡುವ ಅವ್ಯವಹಾರಕ್ಕೆ ನೀವೂ ಕೂಡ ತಲೆತಗ್ಗಿಸಬೇಕು ಎಂದು ಅಗ್ರಹಪೂರ್ವಕವಾಗಿ ಹೇಳುತ್ತೇನೆ. ಶ್ರೀಮಾನ್ ಹನುಮಂತಯ್ಯನವರಿಗೆ ಗವರ್ನರ್‌ಗೆ ಕೊಡತಕ್ಕ ಸೌಲಭ್ಯವನ್ನು ಕೊಟ್ಟು ಬರಗಾಲ ಪ್ರದೇಶಗಳಿಗೆ ಕಳುಹಿಸಿದಿರಿ, ಇದು ಸರಿಯೇ ಎಂದು ನಿಮ್ಮ ಆತ್ಮದಲ್ಲಿ ಕೇಳಿಕೊಳ್ಳಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಈಗ ಇಲ್ಲಿ ಸಹಕಾರ ಸಚಿವರು ಇದ್ದಾರೆ, ಸಹಕಾರಿ ಡಿಮ್ಯಾಂಡ್ ಬಗ್ಗೆ ನಾಲ್ಕಾರು ಮಾತುಗಳನ್ನು ಹೇಳಬಯಸುತ್ತೇನೆ. ಸಹಕಾರ ಇಲಾಖೆಯಲ್ಲಿ ಏನಾಗಿದೆ ಎಂದರೆ, ನಮ್ಮ ಹಳ್ಳಿಕಡೆಗಳಲ್ಲಿ ಮಾಸುರೆ ಲೆಕ್ಕದ ವ್ಯವಹಾರ ಎಂದು ಹೇಳುತ್ತಾರೆ, ಹಾಗೆ ಈ ಇಲಾಖೆಯ ವ್ಯವಹಾರ ಆಗಿದೆ. ಅಧಿಕಾರಿಗಳಿಗೆ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ ಇಲ್ಲ. ಚಪ್ರಾಸಿ ಕೆಲಸ ಮಾಡುತ್ತಾ ಇದ್ದವನು ಇವೊತ್ತು ಜಾಯಿಂಟ್ ರಿಜಿಸ್ಟ್ರಾರ್ ಆಗಿರುತ್ತಾನೆ. ಪ್ರೊಬೇಷನರ್ಸ್ ಆಫೀಸರ್ಸ್ ಅಪಾಯಿಂಟ್ ಮಾಡಿದ್ದಾರೆ ಅವರಿಗೆ ಅವರ ಸ್ಥಾನ ಎಲ್ಲಿದೆ ಎಂದು ಗೊತ್ತಿಲ್ಲ. ಸಹಕಾರ ಇಲಾಖೆಯಲ್ಲಿ

(ಶ್ರೀ ಎಚ್. ಎಸ್. ಸಿದ್ದಪ್ಪ)

ಇರತಕ್ಕ ಅಧಿಕಾರಿಗಳಿಗೆ ಜಂಜಾಟ ಇದೆ. ಅರ್ಹತೆ ಇಲ್ಲದವನಿಗ ಸರಿಪಡಿಸತಕ್ಕ ಒಂದು ಕಾರ್ಯ ವನ್ನು ಈ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಮಾನ್ಯ ಆಳ್ವರವರು ಬಹಳ ಗಹನವಾಗಿ ಸ್ಟಡಿ ಮಾಡಬೇಕು. ಇಲಾಖೆಯಲ್ಲಿ ಏನಾಗಿದೆ ಎನ್ನುವುದನ್ನು ಚೆನ್ನಾಗಿ ಅರಿತುಕೊಂಡು ಇಲಾಖೆ ಅಧಿ ಕಾರಿಗಳು ಹೇಳಿದ್ದನ್ನೇ ಗಮನದಲ್ಲಿ ಇಟ್ಟುಕೊಳ್ಳದೆ ಸಹಕಾರ ತಜ್ಞರಿಂದ ತಿಳಿದುಕೊಂಡು ಇಲಾಖೆ ಯನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಇಲಾಖೆ ಡಿಮಾಂಡ್ ಇದೆ ಅದರ ಬಗ್ಗೆ ಒಂದೆರಡು ವಿಚಾರ ಹೇಳಬಯಸು ತ್ತೇನೆ. ಈ ಪೋಲೀಸ್ ಇಲಾಖೆ ವ್ಯವಹಾರವನ್ನು ನಾನು ಒಪ್ಪುತ್ತೇನೆ. ಯಾವುದೇ ಸರ್ಕಾರ ಆದರೂ ಕೂಡ ಪೋಲೀಸ್ ಸಿಬ್ಬಂದಿ ಇಲ್ಲದೆ ಆಡಳಿತ ನಡೆಸುವುದಕ್ಕೆ ಸಾಧ್ಯವಿಲ್ಲ. ಈ ಪೋಲೀಸ್ ಇಲಾಖೆಯಲ್ಲಿ ಈಗ ಕೆಲವು ಹೊಸದಾಗಿ ಪ್ರೊಬೇಷನರ್ ಆಗಿ ಅಧಿಕಾರಿಗಳನ್ನು ನೇಮಿಸಿದ್ದಾರೆ. ಅಧಿಕಾರಿಗಳಿಗೆ ಉಚಿತವಾಗಿ ತರಪೇತಿ ಕೊಡಬೇಕು. ನೀವು ಕೊಡದೆ ಯುವಕ ಅಧಿಕಾರಿಗಳನ್ನು ನೇಮಿಸುವ ಸಂದರ್ಭದಲ್ಲಿ ಅವರಿಗೆ ಸರಿಯಾದ ಮಾರ್ಗದರ್ಶನವನ್ನು ಕೊಡುವುದು ಅಗತ್ಯವಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ಉದಾಹರಣೆ ಹೇಳಬಯಸುತ್ತೇನೆ. ನಮ್ಮ ತಾಲ್ಲೂಕು ಬಗ್ಗೆ ಹೇಳುವುದಾದರೆ ನಮ್ಮ ಪಕ್ಕದ ತಾಲ್ಲೂಕಿನಲ್ಲಿ ಒಬ್ಬ ಉತ್ಸಾಹಿ ಪೋಲೀಸ್ ಅಧಿಕಾರಿ ಇದ್ದಾರೆ. (ಡಿ. ವೈ. ಎಸ್. ಪಿ.) ಅವರ ದೃಷ್ಟಿಯಲ್ಲಿ ಮನುಷ್ಯರನ್ನು ಮೃಗವಾಗಿ ಕಾಣುವುದು ಮೃಗವನ್ನು ಮನುಷ್ಯರನ್ನಾಗಿ ಕಾಣುವುದು ಈ ಹವ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ಒಂದು ವಿಷಯ ಪ್ರಸ್ತಾಪ ಮಾಡುತ್ತೇನೆ.

3-00 P. M.

ಉಪಾಧ್ಯಕ್ಷರು.—ಇದು ಸಾಮಾನ್ಯ ಚರ್ಚೆ ಆಗುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಪಾಪ ಅವರ ಬಗ್ಗೆ ಏನು ಹೇಳುತ್ತಿದ್ದೇನೆ ಎಂದರೆ ಸರಿಯಾದ ತರಪೇತಿಯನ್ನು ಅವರಿಗೆ ಕೊಡಲಿ. ಅಂಥ ಮಾರ್ಗದರ್ಶನ ಮಾಡಿಲ್ಲ ಎಂದು ಹೇಳುತ್ತೇನೆ. ಮತ್ತು ಹುಡುಗತನ ಎಂದು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ. ಮೊನ್ನೆ ಬೆಂಗಳೂರಿಗೆ ಕಾರಿನಲ್ಲಿ ಬರುತ್ತಾ ಇರಬೇಕಾದರೆ ಅದೇ ಪೋಲೀಸ್ ಡಿವೈಎಸ್‌ಪಿ ಜೀಪಿನಲ್ಲಿ ಬರುತ್ತಾ ಇದ್ದರು ಅವರ ಜೀಪನ್ನು ಓವರ್‌ಟೇಕ್ ಮಾಡಿದ್ದಕ್ಕೆ ಮತ್ತೆ ಅವರು ಜೀಪಿನಲ್ಲಿ ಬಂದು ಕಾರಿನ ಡ್ರೈವರ್ ಹತ್ತಿರ ಡ್ರೈವಿಂಗ್ ಲೈಸನ್ಸ್ ಕಿತ್ತುಕೊಂಡು ಹೋದರು. ಅಧ್ಯಕ್ಷರೇ ಈ ಸಪ್ಲಿಮೆಂಟರಿ ಫಿಗರ್ಸ್ ಏನು ಇದೆ ಅದರಲ್ಲಿ ನಮ್ಮ ಒಂದು ಭಾಷಣದ ವ್ಯವಸ್ಥೆಯನ್ನು ಅನ್ವಯಿಸುತ್ತಾ ಇದ್ದಾರೆ ಇದಕ್ಕೆ ತರೆ ಬಾಗಬೇಕಾಗಿದೆ ಆದರೂ ಕೂಡ ಒಂದೆರಡು ಮಾತನ್ನು ಸರ್ಕಾರಕ್ಕೆ ಸರ್ವೆಸಾಮಾನ್ಯವಾಗಿ ಹೇಳಬೇಕಾಗಿದೆ. ಆ ವಿಷಯವನ್ನು ಹೇಳಬಯಸುತ್ತೇನೆ. ನಿಮ್ಮ ದೃಷ್ಟಿಯಲ್ಲಿ ಇವೊತ್ತಿನದಿನ ಕೇವಲ ನಿಮ್ಮ ಪಕ್ಷದ ಜನರನ್ನು ಉದ್ಧಾರ ಮಾಡತಕ್ಕ ಕೆಲಸಗಳಿಗೆ ಕೈ ಹಾಕಬೇಡಿ ಸಾರ್ವತ್ರಿಕವಾಗಿ ಎಲ್ಲಾ ಜನರೂ ಕೂಡ ನಮ್ಮವರು ಎನ್ನುವ ಭಾವನೆ ಮಾಡಿಕೊಳ್ಳಿ. ಏತಕ್ಕೆಂದರೆ ನೀವು ಸಮಗ್ರವಾಗಿ ಮತ ಪಡೆದು 165 ಜನ ಕೂತಿರುವಾಗ ಅವರು ಕೊಟ್ಟಿಲ್ಲ ಎನ್ನುವ ಭೇದಭಾವ ಮಾಡುವುದು ಮರೆತುಬಿಡಿ. ನಿಮ್ಮ ಅಂತರ್ಯದಲ್ಲಿ ಭಗವಂತನನ್ನು ಇಟ್ಟುಕೊಳ್ಳಿ. ಇಂದಿರಾಗಾಂಧಿಯವರ ಫೋಟೋ ಇಟ್ಟುಕೊಳ್ಳ ಬೇಡಿ. ಯಾವ ಭಗವಂತನನ್ನು ಆಧ್ಯಾತ್ಮಿಕವಾಗಿ ಇಟ್ಟುಕೊಂಡು ನಿಮ್ಮ ಅವ್ಯವಹಾರಗಳನ್ನು ಬಿಟ್ಟು ಸುವ್ಯವಹಾರಗಳಲ್ಲಿ ಕೈಹಾಕಿ ಒಳ್ಳೆಯ ಹೆಸರು ತೆಗೆದುಕೊಳ್ಳಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ನನ್ನ ಎರಡು ಮಾತುಗಳನ್ನು ಮುಗಿಸುತ್ತಾ ಅಧ್ಯಕ್ಷರನ್ನು ವಂದಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ ಈ ಸಭೆಯ ಮುಂದೆ ಇರತಕ್ಕ ಮೈಸೂರು ಅಪ್ರೋಪ್ರಿಯೇಷನ್ ಬಿಲ್ 1973 ಅದರ ಒಂದು ಒಪ್ಪಿಗೆ ಬಗ್ಗೆ ಸಂಪೂರ್ಣ ಅನುಮತಿ ಯನ್ನು ಕೊಡುತ್ತಾ ಸರ್ಕಾರದ ಮುಂದೆ ಕೆಲವಾರು ವಿಚಾರಗಳನ್ನು ಇಡಬೇಕು ಎನ್ನತಕ್ಕ ಇಚ್ಛೆ ಯಿಂದ ಮಾತನಾಡುತ್ತಿದ್ದೇನೆ. ಈ ಒಂದು ಅಪ್ರೋಪ್ರಿಯೇಷನ್ ಬಿಲ್ ಸಂದರ್ಭದಲ್ಲಿ ಸರ್ಕಾರ ಬಹುಮುಖ್ಯವಾಗಿ ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟ ಆಗುಹೋಗುಗಳಿಗೂ ಸೇರಿದ ಬಜೆಟ್ಟಿನಲ್ಲಿ ನಮೂದಾಗಿರುವ ಖರ್ಚುಗಳಿಗೆ ಸಂಬಂಧ ಇರುವ ರೀತಿಯಲ್ಲಿ ಲೆಕ್ಕವನ್ನು ನಮ್ಮ ಮುಂದೆ ಇಟ್ಟಿ ದ್ದಾರೆ. ಇದರಲ್ಲಿ ಈ ವರ್ಷದ ಅಕ್ಟೋಬರು ವರೆಗೂ ನಾವು ಏನು ಹಣವನ್ನು ಸರ್ಕಾರಕ್ಕೆ ಕೊಟ್ಟಿದ್ದೇವೆ ಆ ದುಡ್ಡು ಸಾಲದೆ ಬಂದ ಪ್ರಯುಕ್ತ ಈ ಮತ್ತೆ ಇಷ್ಟು ದುಡ್ಡು ಬೇಕಾಗುತ್ತದೆ ಎಂದು ಈ ಸಂಸ್ಥಾ

ನದ ಸಂಪೂರ್ಣ ಆಗುಹೋಗುಗಳಿಗೆ ಮತ್ತು ಅರ್ಥದಲ್ಲಿ ಈ ಲೆಕ್ಕವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಸಂದರ್ಭದಲ್ಲಿ ಅನೇಕ ಇಲಾಖೆಗಳು ಯಾವ ರೂಪದಲ್ಲಿ ಕೆಲಸಮಾಡಿ ಸಾರ್ವಜನಿಕರ ಸೇವೆಯನ್ನು ಎಷ್ಟರಮಟ್ಟಿಗೆ ಸಾಧಿಸಲಿಕ್ಕೆ ಇವೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರತಕ್ಕದ್ದು ಸೂಕ್ತ? ಅದರಲ್ಲಿ ನಮ್ಮ ಇಲಾಖೆಗಳಲ್ಲಿ ರೆವಿನ್ಯೂ ಇಲಾಖೆ ಎನ್ನತಕ್ಕದ್ದು ಇಟ್ ಈಸ್ ಎ ಡಿಪಾರ್ಟ್‌ಮೆಂಟ್ ಆಫ್ ಡಿಪಾರ್ಟ್‌ಮೆಂಟ್ಸ್ ಎಂದು ಹೇಳುತ್ತಾರೆ. ರೆವಿನ್ಯೂ ಇಲಾಖೆ ಬಹಳ ಹಿಂದಿನ ಇಲಾಖೆ ಎಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ. ಇದು ಎಲ್ಲಾ ಇಲಾಖೆಗೂ ಕೂಡ ತಾಯಿಬೇರು ಇದ್ದಹಾಗೆ ಪೂರ್ವಕಾಲದಲ್ಲಿ ಸರ್ಕಾರವನ್ನು ನಡೆಸುವುದಕ್ಕೆ ಎಷ್ಟು ಕಂದಾಯ ಬೇಕಿತ್ತೋ, ಎಷ್ಟು ಹಣಬೇಕಿತ್ತೋ ಆಗಿನಕಾಲದ ಕಂದಾಯದ ಪದ್ಧತಿ ಇಲ್ಲದೆ ಇದ್ದಾಗ ಲ್ಯಾಂಡ್‌ರೆವಿನ್ಯೂ ಬಹುಭಾಗವನ್ನು ವಸೂಲು ಮಾಡುತ್ತಿದ್ದರು ಆಗ ಆಡಳಿತ ನಡೆಸತಕ್ಕ ಪದ್ಧತಿಯನ್ನು ಬ್ರಿಟೀಷರು ಇಟ್ಟುಕೊಂಡಿದ್ದರು. ಆಗ್ಗೆ ವರಮಾನಕ್ಕಿರತಕ್ಕಂಥ ಇಲಾಖೆ ರೆವಿನ್ಯೂ ಇಲಾಖೆ, ಪೋಲೀಸ್ ಇಲಾಖೆ, ಮತ್ತು ವಾರ್ತಾ ಇಲಾಖೆ ಈ ಮೂರು ಇಲಾಖೆಗಳಿಂದ ಸರ್ಕಾರವನ್ನು ನಡೆಸಿಕೊಂಡು ಬರುತ್ತಾ ಇದ್ದರು. ಈಗ ಹೊಸ ಹೊಸ ರೂಪಿತವಾದ ವರ್ಗಗಳು ಬಂದು Police State is being transformed into Social Welfare State ಎಂದು ಹೇಳುತ್ತಾರೆ. ಅಂಥಾ ಕಾಲ ಬಂದಿರುವಾಗ ಭೂ ಕಂದಾಯ ಬೇಕೇ ಬೇಡವೇ ಎನ್ನುವುದನ್ನು ಅರ್ಥ ಮಾಡಿಕೊಂಡು ಅನೇಕ ಸಂಸ್ಥಾನಗಳಲ್ಲಿ ಹೆಚ್ಚಿಗೆ ಬೆಲೆ ಕೊಡದೆ ಬೇರೆ ಬೇರೆ ರೂಪವಾಗಿ ಕಂದಾಯ ಹಾಕುತ್ತಾ ಇದ್ದಾರೆ. ಈ ಭೂಕಂದಾಯವನ್ನು ಒಂದು ರೂಪದಲ್ಲಿ ನಿಲ್ಲಿಸಬೇಕಾಗುತ್ತದೆ. ಸರ್ಕಾರವೂ ಕೂಡ ಪ್ರಯತ್ನಪಟ್ಟು ಒಂದು ರೂಪದಲ್ಲಿ ಈಗ ಬಂದಿದೆ. ಈ ರೀತಿ ಭೂಕಂದಾಯವನ್ನು ತೆಗೆದುಹಾಕತಕ್ಕಂಥ ಕಾಲ ಬರಲಿ ಎಂದು ನಂಬಿಕೆ ಉಳ್ಳವರಲ್ಲಿ ನಾನೂ ಒಬ್ಬ.

ಇನ್ನು ಸರ್ವೆ ಇಲಾಖೆ ಬಗ್ಗೆ ತೆಗೆದುಕೊಂಡರೆ ಮೊದಲು ಈ ಇಲಾಖೆ ಲ್ಯಾಂಡ್ ರೆವಿನ್ಯೂ ಮತ್ತು ರಿಕಾರ್ಡ್ಸ್ ಇವುಗಳಿಗೆ ಸೇರಿದಂಥ ಇಲಾಖಾ ರೂಪದಲ್ಲಿ ಇತ್ತು. ಲ್ಯಾಂಡ್ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಂತೆ ಇದು ಸಿಸ್ಟರ್ ಡಿಪಾರ್ಟ್‌ಮೆಂಟ್ ಅಂದರೆ ಸರ್ವೆ ಡಿಪಾರ್ಟ್‌ಮೆಂಟ್. ಅದರಲ್ಲಿರುವ ಸರ್ವೇಯರ್‌ಗಳನ್ನು ತುಕೋಳ್ ಕಮೀಷನ್ ವರದಿ ಪ್ರಕಾರ ನಾನ್ ಟೆಕ್ನಿಕಲ್ ಎಂದು ಪರಿಗಣಿಸುತ್ತಾರೆ. ಇದು ನಿಜವಾಗಿಯೂ ಶೋಚನೀಯವಾದ ಸಂಗತಿ. ಸರ್ವೆ ಇಲಾಖೆಯಲ್ಲಿ ಸರ್ವೆ ಮಾಡಲು ಯಾವ ಸಾಧನ ಸಾಮಗ್ರಿಗಳನ್ನು ಉಪಯೋಗಿಸುತ್ತಾರೆ ಅಂಥಾ ಸರ್ವೇಯರ್ಸ್ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲೂ ಇದ್ದಾರೆ. ಆ ಇಲಾಖೆ ಮಟ್ಟಿಗೆ ಅವರನ್ನು ಟೆಕ್ನಿಕಲ್ ಎಂದು ಕರೆದಿದ್ದಾರೆ. ಬಹುಶಃ ಈ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿರತಕ್ಕ ಸರ್ವೇಯರ್ಸ್ ಪ್ಲಾನ್ ಎಸ್ಟಿಮೇಟ್ ಮಾಡುವಂಥಾದ್ದಕ್ಕೆ ಟೆಕ್ನಿಕಲ್ ಎಂದು ಕರೆದಿದ್ದರಿಂದ ಅವರು ಮಾಡುವ ಸರ್ವೆ ವರ್ಕ್‌ಗೂ ಕೂಡ ಟೆಕ್ನಿಕಲ್ ಎಂದು ಹೇಳುತ್ತಾರೆ. ಮಳೆ ಬಿಟ್ಟರೂ ಮರದ ಹನಿ ಬಿಡದು ಎಂಬಂತೆ ಆಗಿದೆ. ಆದುದರಿಂದ ನಾನು ಹೇಳುವುದು ಏನೆಂದರೆ ಸರ್ವೇಯರ್ಸ್ ಇಲಾಖೆಯಲ್ಲಿರುವ ಸರ್ವೇಯರ್ಸ್‌ನ್ನೂ ಕೂಡ ಟೆಕ್ನಿಕಲ್ ಗ್ರೂಪ್ಸ್‌ಗೆ ಕನ್ಸಿಡರ್ ಮಾಡಬೇಕು ಎಂದು. ಅವರು ಒರ್ಜಿನಲ್ ಡಿಪಾರ್ಟ್‌ಮೆಂಟ್ ಸರ್ವೇಯರ್ಸ್ ಆದುದರಿಂದ ಅವರ ಬಗ್ಗೆ ಪರಿಶೀಲನೆ ಮಾಡಿ ತತ್ಸಂಬಂಧವಾಗಿ ಪಿ. ಡಬ್ಲ್ಯು. ಡಿ. ಇಲಾಖೆಯ ಸರ್ವೇಯರ್ಸ್‌ಗೆ ಏನು ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಿರೋ ಅದನ್ನು ಈಕ್ವಲೈಸ್ ಮಾಡಿ ಅವರ ತೊಂದರೆಗಳನ್ನು ತಪ್ಪಿಸಬೇಕು. ಇಲ್ಲದೇ ಹೋದರೆ ಅವರು ನಿರುತ್ಸಾಹ, ತೊಂದರೆಗಳಿಗೆ ಈಡಾಗುತ್ತಾರೆ. ಆದುದರಿಂದ ಇದನ್ನು ಆದಷ್ಟು ಬೇಗ ರದ್ದು ಮಾಡಬೇಕು ಎನ್ನುವ ಸಲಹೆಯನ್ನು ಕೊಡುತ್ತೇನೆ.

ಇನ್ನು ಎಕ್ಸೈಜ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್ ಆಗಿನ ಕಾಲದಲ್ಲಿ ಬಹು ಮುಖ್ಯವಾದ ಭಾಗ ಎಂದು ಪರಿಗಣಿಸಿದ್ದಾರೆ. ನಮ್ಮಲ್ಲಿ ಪ್ರೊಹಿಬಿಷನ್‌ಗೆ ಸಂಬಂಧಪಟ್ಟ ತೆರಿಗೆಯನ್ನು ಪ್ರೊಹಿಬಿಷನ್ ರದ್ದಾದರೂ ಕೂಡ ಕಂದಾಯ ಬೇಕು ಎನ್ನತಕ್ಕ ರೂಪದಲ್ಲಿ ವಸೂಲ್ಮಾಡುತ್ತಿದ್ದಾರೆ. ಯಾವುದಾದರೂ ರೂಪದಲ್ಲಿ ಹಣ ಬಂದರೆ ಸಾಕು, ಸರ್ಕಾರದ ಯಂತ್ರ ನಡೆದುಕೊಂಡು ಹೋದರೆ ಸಾಕು ಎನ್ನುವ ಕಡೆಗೆ ಗಮನ ಕೊಟ್ಟಿದ್ದಾರೆಯೇ ವಿನಾ ನೈತಿಕವಾಗಿ, ಸಾಮೂಹಿಕವಾಗಿ ಜನಗಳು ಎಷ್ಟರ ಮಟ್ಟಿಗೆ ಹಾಳಾಗುತ್ತಿದ್ದಾರೆ ಎನ್ನುವ ಕಡೆಗೆ ಸರ್ಕಾರ ಗಮನ ಕೊಟ್ಟಿಲ್ಲ. ಪ್ರೊಹಿಬಿಷನ್ ಮತ್ತೆ ಬಂದು ಎಕ್ಸೈಜ್ ಮತ್ತು ಕಂದಾಯದಿಂದ ಬರತಕ್ಕ ಹಣದ ಮೋಹ ಸರ್ಕಾರಕ್ಕೆ ಇಲ್ಲದಂತಾಗಲಿ ಎಂದು ಹಾರೈಸುತ್ತೇನೆ. ಈಗ 36 ಕೋಟಿ ರೂಪಾಯಿಗಳು ಎಕ್ಸೈಜ್ ರೆವಿನ್ಯೂನಿಂದ ಬರುತ್ತದೆ ಎಂದು ಏನು ಒಂದು ಅಂದಾಜು ಮಾಡಿದ್ದಾರೋ ಅದರಲ್ಲಿ 20 ಕೋಟಿ ರೂಪಾಯಿಗಳನ್ನು ಜನರಲ್ ಫಂಡ್‌ಗೆ ಅನುಮತಿ ಕೊಡುವಾಗ ನೈತಿಕವಾಗಿ ಜನಗಳ ಶಕ್ತಿಯನ್ನು ಹೆಚ್ಚಿಸುವ ಸಲುವಾಗಿ ಪ್ರಾಪಗಾಂಡ ಮಾಡಿ, ಒಂದು ಯಂತ್ರವನ್ನು ನಿರ್ಮಾಣ ಮಾಡಿ, ಸರ್ಕಾರದವರು ವಿಫಲರಾಗಿದ್ದಾರೆ. ಆದುದರಿಂದ ಆ ಕಡೆಗೆ ಹೆಚ್ಚು ಗಮನ ಕೊಡಬೇಕು ಎಂದು ಸೂಚನೆ

(ಶ್ರೀ ಕೆ. ಪ್ರಭಾಕರ್)

ಕೊಡುತ್ತೇನೆ. ಇತ್ತೀಚೆಗೆ ಸ್ವತಂತ್ರ ಮನೋಭಾವ ಬಂದು ಸ್ವತಂತ್ರ ಫಲ ಉಣ್ಣುವ ಕಾಲದಲ್ಲಿ ಪೋಲೀಸ್ ಸ್ಟೇಟ್ ಹಾಕಬೇಕು ಎನ್ನುವ ಕೂಗು ಒಂದು ಕಡೆ ಇದೆ. ಅವರ ಚಿತ್ರ ಪೋಲೀಸ್ ಇಲಾಖೆಯಲ್ಲಿ ಒಂದು ನ್ಯಾಯರಕ್ಷಣೆ ಮಾಡುವುದರಲ್ಲಿ ಇನ್ನೂ ಹೆಚ್ಚಿನ ಕರ್ತವ್ಯ ಮಾಡುತ್ತಾರೆ ಎನ್ನುವುದನ್ನು ಅಲ್ಲಗಳೆಯುವ ಹಾಗಿಲ್ಲ. ನಮ್ಮ ದೇಶದಲ್ಲಿ ಪೋಲೀಸರ ದಬ್ಬಾಳಿಕೆಯ ಮನೋಭಾವ ಮತ್ತು ಪ್ರಜಾಕೋಟಿಗೆ ನೆಮ್ಮದಿಯನ್ನು ಸೂರೆ ಮಾಡತಕ್ಕದ್ದು ಪೋಲೀಸ್ ಸ್ಟೇಷನ್‌ನಲ್ಲಿ ಆಗತಕ್ಕಂಥ ಮರ್ಡರ್ಸ್‌ನಿಂದ ಅವು ಒಂದು ವಿಚಿತ್ರ ರೀತಿಯಲ್ಲಿ ಬೆಳೆದು ಬರುತ್ತಾ ಇದೆ.

ಶ್ರೀ ವಾಟಾಳ್ ನಾಗರಾಜ್.—ಮುಖ್ಯಮಂತ್ರಿಗಳು ಪೋಲೀಸ್ ಸ್ಟೇಷನ್‌ನಲ್ಲಿ ಇರುವವರು ಎಲ್ಲಾ ಸತ್ಯವಂತರು ಇದ್ದಾರೆ, ಮರ್ಡರ್ಸ್ ನಡೆಯುವುದಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ.

ಶ್ರೀ ಕೆ. ಪ್ರಭಾಕರ್.—ನಾವೂ ಕೇಳುತ್ತಾ ಇದ್ದೇವೆ. ಪೋಲೀಸರ ಗುರಿ ಏನು ಇರಬೇಕೋ ಆ ಬಗ್ಗೆ ಸಾರ್ವಜನಿಕರಲ್ಲಿ ನಂಬಿಕೆ ಕಳೆದು ಹೋಗುತ್ತಾ ಇದೆ. ಆದುದರಿಂದ ಈ ಬಗ್ಗೆ ಹೆಚ್ಚಿನ ಶ್ರದ್ಧೆ ವಹಿಸಿ ಚಾಕಚಕ್ಯತೆಯಿಂದ ಕೆಲಸ ಮಾಡಬೇಕು ಎನ್ನುವ ಸಲಹೆಯನ್ನು ಕೊಡುತ್ತಿದ್ದೇನೆ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಹೆಚ್ಚಿನ ಬದಲಾವಣೆಗಳು ಆಗಬೇಕು ಎಂದು ಹೇಳುತ್ತೇನೆ. ಎಲ್ಲಾ ಇಲಾಖೆಗಳಲ್ಲೂ ಕೂಡ ಆಗದೇ ಇರತಕ್ಕಂಥ ಹೆಚ್ಚಿನ ಸೇವೆ ಮಾಡುತ್ತಿದ್ದಾರೆ. ವಿದ್ಯಾಭ್ಯಾಸದ ಇಲಾಖೆಯವರು ಎಂತಹ ಪ್ರಜೆಗಳನ್ನೂ ಮಾನಸಿಕ ಬದಲಾವಣೆ ಮಾಡಿ ಸೃಷ್ಟಿ ಮಾಡುತ್ತಾರೆ. If God is the Architect of man Educationists are the Architects of human mind. ಇದನ್ನು ಯಾವ ಅರ್ಥದಿಂದ ಹೇಳುತ್ತಿದ್ದೇನೆ ಎಂದರೆ ವಿದ್ಯಾಭ್ಯಾಸದ ಇಲಾಖೆಯಲ್ಲಿ ನರ್ಸರಿ ಸ್ಕೂಲ್ಸ್ ಎನ್ನತಕ್ಕಂಥದ್ದು ಒಂದು ಪ್ಯಾಟ್ರನ್ ಮಾಡಿ ಅವಕ್ಕೆ ಹೆಚ್ಚಿನ ಗಮನ ಕೊಡಬೇಕು. ಅವಕ್ಕಾಗಿ ಒಬ್ಬ ಜಾಯಿಂಟ್ ಡೈರೆಕ್ಟರ್ ಹುದ್ದೆಯನ್ನು ನಿರ್ಮಾಣ ಮಾಡಿ ಅದರ ಬಗ್ಗೆ ಒಂದು ಹೆಚ್ಚಿನ ಗಮನ ವಹಿಸಿ ಇದನ್ನು ತಳಹದಿಯಾಗಿ ಇಟ್ಟು ಕೊಳ್ಳಬೇಕು ಎನ್ನುವುದನ್ನು ನಾನು ಸಲಹೆ ಮಾಡುತ್ತೇನೆ.

ಇನ್ನು ಕೋಆಪರೇಟೀವ್ ಸೊಸೈಟಿ ವಿಷಯದಲ್ಲಿ ಹೇಳುವುದಾದರೆ certain number of Co-operatives will be brought under the operation of the audit. ಕೆಲವು ಕೋ ಆಪರೇಟೀವ್ ಸೊಸೈಟಿಗಳು ಒಂದು ಸಲವೂ ಆಡಿಟ್ ಆಗಿಲ್ಲ. ಅದು ಒಂದು ಸಲ ಬಿಟ್ಟು ಹೋದರೆ ಪ್ರತಿವರ್ಷವೂ ಬಿಟ್ಟು ಹೋಗುತ್ತದೆ. 15 ವರ್ಷವಾದರೂ ಕೂಡ ಆಡಿಟ್‌ಗೆ ಸಿಕ್ಕದೇ ಇರತಕ್ಕಂಥಾ ಸೊಸೈಟಿಗಳು ಇವೆ. ಮತ್ತು ಆಡಿಟ್‌ನಲ್ಲಿ ಗೊತ್ತಿದ್ದಂತಹ ಹಣವನ್ನು ವಸೂಲ್ಮಾಡುವುದಕ್ಕೂ ಕೂಡ ಅದರ ವಾಯಿದೆ 2 ವರ್ಷ ಮೀರಿಬಿಟ್ಟಿದ್ದರೆ ಅವರಿಂದ ವಸೂಲ್ಮಾಡತಕ್ಕಂಥ ಹಕ್ಕು ಸರ್ಕಾರಕ್ಕೆ ಇಲ್ಲ, ಈ ರೀತಿ ಕೋ ಆಪರೇಟಿವ್ ಸೊಸೈಟಿ ಆಕ್ಟ್ ಪ್ರಕಾರ ಇದೆ. ಈ ದೌರ್ಬಲ್ಯವನ್ನು ನೀಗುವುದಕ್ಕಾಗಿ ಎಲ್ಲಾ ಸೊಸೈಟಿಗಳೂ ಕೂಡ ಒಂದು ವರ್ಷದಲ್ಲಿ ಆಡಿಟ್ ಬರುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಅದು ಬಿಟ್ಟು ಲೀಲಾಜಾಲವಾಗಿ ಜನಗಳ ದುಡ್ಡನ್ನು ಕಮಾಯಿಸತಕ್ಕ ಇಲಾಖೆಗಳು ಆಗಿವೆ ಎನ್ನುವ ರೂಪದಲ್ಲಿ ಇವುಗಳ ಚಿತ್ರ ಬರುವ ಹಾಗೆ ಬಂದಿವೆ, ಹೀಗಾದರೆ ಇದರ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ನಲ್ಲಿ ಕೋ ಆಪರೇಟೀವ್ ಸಂಸ್ಥೆಗಳ ಸೇವೆ ಏನಾಗುತ್ತದೆ ? ಆದುದರಿಂದ ಇವುಗಳನ್ನು ಒಂದು ವ್ಯವಸ್ಥಿತವಾದ ರೂಪದಲ್ಲಿ ಇಡುವಂತೆ ಸರ್ಕಾರದವರು ಗಮನ ಕೊಟ್ಟು ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಟಿ ನರಸೀಪುರ ತಾಲ್ಲೂಕ್ ಕೋ ಆಪರೇಟಿವ್ ಸೊಸೈಟಿ ಒಂದರಲ್ಲಿ 2 ಲಕ್ಷ ರೂಪಾಯಿಯನ್ನು ತಿಂದು ಅದರ ಜವಾಬ್ದಾರಿಯನ್ನು ಒಬ್ಬ ಗುಮಾಸ್ತ ಈರೀತಿ ಮಾಡಿದ ಎಂದು ಉತ್ತರ ಕೊಟ್ಟಿದ್ದಾರೆ. ಆದುದರಿಂದ ಈ ಬಗ್ಗೆ ಸರ್ಕಾರ ಗಮನ ಕೊಡಬೇಕು ಎಂದು ಹೇಳುತ್ತೇನೆ,

ಇನ್ನು ಕೋ ಅಪರೇಟಿವ್ ಇಲಾಖೆಯಲ್ಲಿ ಸಿರಿಕಲ್‌ಚರಲ್ ಇಲಾಖೆ ಏನು ಇದೆ ಅದೂ ಕೂಡ ಒಂದು ಇಂಡಸ್ಟ್ರಿ. ಅದು ಹೋಮ್ ಇಂಡಸ್ಟ್ರಿ ಆಗಿತ್ತು. ಸಿರಿಕಲ್‌ಚರ್ ಎಂದರೆ ಭಾರತದಲ್ಲಿ ಹೆಸರಾದಂಥದ್ದು ನಮ್ಮ ಮೈಸೂರಿನಲ್ಲಿರತಕ್ಕ ಸಿರಿಕಲ್‌ಚರ್, ಇದರ ಬೆಳವಣಿಗೆಗೆ ಎಷ್ಟರಮಟ್ಟಿಗೆ ಬೆಂಬಲ ಕೊಡಬೇಕು ಎಂದು ಹೇಳಿದರೆ ಈಗ ಕೊಟ್ಟಿರತಕ್ಕ ಬೆಂಬಲ ಇನ್ನೂ ಸಾಲದು, ನನ್ನ ಮನಸ್ಸಿನಲ್ಲಿ ಏನು ಇದೆ, ಏನು ಮಾಡಬೇಕು ಎಂದು ಹೇಳುತ್ತೇನೆ. ರೇಷ್ಮೆ ಬೆಳೆ ಮಾಡತಕ್ಕಂಥವರಿಗೆ ಸಾಲದ ಹೊರೆ ಹೇರುವ ಬದಲು ಬೇಕಾದರೆ ಅವರಿಗೆ ಚಂದ್ರಿಕೆ ಮತ್ತು ಮೇವು ಕೊಟ್ಟು ಇದನ್ನು ಅವಲಂಬಿಸಿರತಕ್ಕಂಥ ಬಡವರಿಗೆ ಅನುಕೂಲ ಮಾಡುವ ರೀತಿಯಲ್ಲಿ ಮಾಡಬೇಕು ಎಂದು ನಾನು ಹೇಳುತ್ತೇನೆ.

ಪಬ್ಲಿಕ್ ವರ್ಕ್ಸ್ ಇಲಾಖೆಯ ವಿಚಾರವನ್ನು ಹೇಳುವಾಗ ಒಂದು ವಿಚಾರ ನಾನು ಹೇಳಬೇಕಾಗಿದೆ. ನಾವು ಸೋಷಿಯಲಿಸಂ ಬಗ್ಗೆ ಬಹಳವಾಗಿ ಮಾನಾಡುತ್ತೇವೆ. ಸೋಷಿಯಲಿಸಂ ಎಂದರೆ ಕಾಂಪಿಟಿಷನ್ ಇರಬಾರದು. ಸಾಹುಕಾರರಾಗಿರುವವರು ಹೆಚ್ಚು ಸಾಹುಕಾರರಾಗುವುದು, ಬಡವರಾಗಿರುವವರು ಹೆಚ್ಚು ಬಡವರಾಗುವುದು, ಇದನ್ನು ತಪ್ಪಿಸಬೇಕೆನ್ನುವುದು ಅದರ ಸಂಕೇತ. ಇಂಡಿವಿಜುಯಲ್ ಕಂಟ್ರಾಕ್ಟ್ ಪದ್ಧತಿಯನ್ನು ಸರ್ಕಾರದವರು ತೆಗೆದು ಅಮಾನಿ ಕೆಲಸ ಎಂದರೆ ಇಲಾಖೆಯಿಂದಲೇ ಕೆಲಸ ಮಾಡಿಸುವುದು. ಹೆವಿ ಪ್ರಾಜೆಕ್ಟ್‌ಗಳಲ್ಲಿ ಎಲ್ಲ ಕಂಟ್ರಾಕ್ಟ್‌ಗಳನ್ನು ಕೂಡ ಚಿಕ್ಕ ಚಿಕ್ಕ ಸಂಸ್ಥೆ ಮತ್ತು ಚಿಕ್ಕ ಚಿಕ್ಕ ಕಂಟ್ರಾಕ್ಟರುಗಳಿಗೆ ಕಾಂಪಿಟಿಷನ್ ಹೆಚ್ಚಿಲ್ಲದ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ಮಾಡಿ ಕೊಡಬೇಕು. ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಕೊಡತಕ್ಕ ಲಾರಿ, ಸಿಮೆಂಟ್, ಕಬ್ಬಿಣ, ಇವುಗಳನ್ನು ಬಡಬಗ್ಗರಿಗೆ, ಚಿಕ್ಕ ಚಿಕ್ಕ ಕಂಟ್ರಾಕ್ಟರುಗಳಿಗೆ ಕೂಡ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು.

ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ರಿಜಿಸ್ಟ್ರೇಷನ್ ಆಫ್ ಕಂಟ್ರಾಕ್ಟರ್ಸ್ ಎಂದು ಇದೆ. ಆ ಪದ್ಧತಿಯನ್ನು ತಂದಾಗ ಚಿಕ್ಕ ಚಿಕ್ಕ ಜನಗಳಿಗೆ ಹೆಚ್ಚು ಅನುಕೂಲವಾಗಲಿ ಕ್ಲಾಸ್ 4 ಕಂಟ್ರಾಕ್ಟರುಗಳಿಗೆ ಹೆಚ್ಚು ಅನುಕೂಲವಾಗಲಿ ಎನ್ನುವ ಉದ್ದೇಶವಿತ್ತು. ಮಾನ್ಯ ಚನ್ನಬಸಪ್ಪನವರು ಮಂತ್ರಿಗಳಾದ ಮೇಲೆ ಇಂಟರ್‌ಫಿಯರೆನ್ಸ್ ಹೊರಗಡೆಯಿಂದ ಕಡಮೆಯಾದರೆ ಅವರು ಏನು ಬೇಕಾದರೂ ಮಾಡುವಂಥ ವ್ಯಕ್ತಿ. ಸೋಷಿಯಲಿಸ್ಟಿಕ್ ಸ್ಟೇಟ್ ಕಡೆಗೆ ಬರುತ್ತಿರುವಾಗ ಚಿಕ್ಕ ಚಿಕ್ಕ ಕಂಟ್ರಾಕ್ಟರುಗಳಿಗೆ ಬೆಂಬಲ ಕೊಡತಕ್ಕದ್ದು ಮುಖ್ಯ. ಆದರೆ ಸಚಿವರನ್ನು ಕೇಳಿದರೆ ರೂಲ್ಸ್‌ನಲ್ಲಿ ಇದಕ್ಕೆ ಅವಕಾಶವಿಲ್ಲ ಎಂದು ಉತ್ತರ ಕೊಡುತ್ತಾರೆ. ರೂಲ್ಸ್‌ನಲ್ಲಿರುವುದು ಪುಸ್ತಕದ ಬದನೆಕಾಯಿ. ಅದರಿಂದ ಪಲ್ಯ ಮಾಡುವುದಕ್ಕಾಗುವುದಿಲ್ಲ. ಪುಸ್ತಕದಲ್ಲಿರುವುದನ್ನು ಕಾರ್ಯರೂಪಕ್ಕೆ ತಂದು ಬಡವರಿಗೆ ನಾಲ್ಕು ಕಾಸು ಸಿಕ್ಕುವಂತೆ ಮಾಡಬೇಕು. ಅಂದ ಮಾತ್ರಕ್ಕೆ ಅವರಿಗೆ ಸುಮ್ಮನೆ ಕೊಡಬೇಕಾಗಿಲ್ಲ, ಬೆವರು ಸುರಿಸಿ, ಕಂಟ್ರಾಕ್ಟ್‌ನಲ್ಲಿ ಕೆಲಸ ಮಾಡಲಿ ಬಡವರಿಗೆ ಉಪಕಾರವಾಯಿತು ಎನ್ನುವ ನಂಬಿಕೆ ಜನರಲ್ಲಿ ಬರಬೇಕಾದರೆ ಸೇಕಡ 90 ರಷ್ಟು ಕಂಟ್ರಾಕ್ಟನ್ನು ಚಿಕ್ಕ ಚಿಕ್ಕ ಕಂಟ್ರಾಕ್ಟರುಗಳಿಗೆ ಕೊಡಬೇಕು. ಪಬ್ಲಿಕ್ ವರ್ಕ್ಸ್‌ನಲ್ಲಿರುವ ಕಂಟ್ರಾಕ್ಟ್ ವ್ಯವಸ್ಥೆ ಏನಿದೆ ಅದರಿಂದ ಹೆಚ್ಚು ಹೆಚ್ಚು ಚಿಕ್ಕ ಚಿಕ್ಕ ಕಂಟ್ರಾಕ್ಟರುಗಳಿಗೆ ಅನುಕೂಲವಾಗುವಂಥ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಪಬ್ಲಿಕ್ ವರ್ಕ್ಸ್ ಮಂತ್ರಿಗಳು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಹಣಕಾಸಿನ ಸಚಿವರು ವಯಸ್ಸಿನಲ್ಲಿ ಚಿಕ್ಕವರು ಎಂದು ಕಂಡರೂ ಕೂಡ ಹೆಚ್ಚಿನ ಅನುಭವದಿಂದ ಬಜೆಟ್ಟನ್ನು ಬಹಳ ಚೆನ್ನಾಗಿ ತಯಾರು ಮಾಡಿ ನಮ್ಮ ಕೈಗೆ ಕೊಟ್ಟಿದ್ದಾರೆ. ಅದಕ್ಕೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ. ಬಡವರಿಗೆ ಮನೆ ಕಟ್ಟುವುದಕ್ಕೆ ಬೇಕಾಗುವ ದುಡ್ಡನ್ನು ಬಂಗ್ಲಾದೇಶದ ನಿರಾಶ್ರಿತರ ತೆರಿಗೆಯನ್ನು ಮುಂದುವರಿಸುವ ರೂಪದಲ್ಲಿ ಪಡೆಯುತ್ತೇವೆಂದು ಹೇಳಿದ್ದಾರೆ. ಸೆಂಟಿಮೆಂಟ್ ಕಡೆಗೆ ಗಮನ ಕೊಟ್ಟು ಅದಕ್ಕೆ ಲಿಂಕ್ ಕೊಟ್ಟಿದ್ದಾರೆ. ಹಾಗೆ ಮಾಡದೆ ಬಡವರ ಮನೆಗಳನ್ನು ಕಟ್ಟುವುದಕ್ಕೆ ಒಂದು ಪಕ್ಕಾ ಯೋಜನೆಯನ್ನು ಮಾಡಿ, ಅದಕ್ಕೆ ಸಾಕಷ್ಟು ಹಣವನ್ನು ಬಜೆಟಿನಲ್ಲಿ ಇಟ್ಟು ಇನ್ನು ಮುಂದೆ ನಮ್ಮ ದೇಶದಲ್ಲಿ ಮನೆಗಳ ಸಮಸ್ಯೆ ಇಲ್ಲ ಎನ್ನುವ ರೀತಿಯಲ್ಲಿ ಸಂಪೂರ್ಣವಾದ ಯೋಜನೆಯನ್ನು ಮಾಡಿ ಇಟ್ಟರೆ ಈ ಹೊತ್ತಲ್ಲ, ಇನ್ನು ನಾಲ್ಕು ವರ್ಷದ ನಂತರ ಅಥವಾ 40 ವರ್ಷದ ನಂತರವಾದರೂ ಅದರಿಂದ ಬಡಜನರಿಗೆ ಉಪಕಾರವಾಗುವಂತೆ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ) —ಸನ್ಮಾನ್ಯ ಸಭಾಪತಿಗಳೇ, ಹೆಚ್ಚುವರಿ ಬೇಡಿಕೆಗಳ ಬಗ್ಗೆ ನಿನ್ನೆ ಸಭೆಯಲ್ಲಿ ಚರ್ಚೆ ಮಾಡಲಿಕ್ಕೆ ಕಾಲಾವಕಾಶವಿದ್ದಿಲ್ಲ. ಆ ಕಾರಣದಿಂದ ಅಪ್ರೋಪ್ರಿಯೇಷನ್ ಬಿಲ್ ಮೇಲೆ ನಮ್ಮ ಚರ್ಚೆಯ ಪರಿಮಿತಿ ಸೀಮಿತವಿದ್ದರೂ ಕೂಡ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾದ ಪರಿಸ್ಥಿತಿ ಇರುವುದರಿಂದ ನಿಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಸರ್ಕಾರದ ಕೆಲಸಕ್ಕೆ ಅಡ್ಡಿಯಾಗಬಾರದು ಎಂದು ನಿನ್ನೆ ಹೆಚ್ಚುವರಿ ಬೇಡಿಕೆಗಳ ಬಗ್ಗೆ ಚರ್ಚೆಯನ್ನು ಮುಕ್ತಾಯಗೊಳಿಸಿ ಈ ಹೊತ್ತು ಅಪ್ರೋಪ್ರಿಯೇಷನ್ ಬಿಲ್ ಮೇಲೆ ನಾವು ಹಣವನ್ನು ಸರ್ಕಾರಕ್ಕೆ ಕೊಡತಕ್ಕ ಕಾಲದಲ್ಲಿ ಎಷ್ಟು ಎಚ್ಚರಿಕೆಯನ್ನು ವಹಿಸಬೇಕೋ ಆ ದೃಷ್ಟಿಯಿಂದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸುತ್ತೇನೆ.

[CHAIRMAN (Smt. SUMATI B. MADIMAN) in the Chair]

ಆರ್ಥಿಕ ಸಚಿವರು ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಅರಿತು ಕೆಲಸ ಮಾಡತಕ್ಕದ್ದರಲ್ಲಿ ಬಹಳ ವಿವೇಚನೆಯಿಂದ ಕೆಲಸ ಮಾಡುತ್ತಾರೆನ್ನುವ ಆಶಯವನ್ನು ಇಟ್ಟುಕೊಂಡಿದ್ದೆ. ಆದರೆ ಈ

(ಶ್ರೀ ಎಚ್. ಡಿ. ದೇವೇಗೌಡ)

ಹೊತ್ತು ಏನು ಈ ಸಭೆಯ ಮುಂದೆ ಹೆಚ್ಚುವರಿ ಬೇಡಿಕೆಗಳನ್ನು ಇಡತಕ್ಕ ಕಾಲದಲ್ಲಿ ಕೆಲವು ವೆಚ್ಚಗಳನ್ನು ತುಂಬಿಸಲಿಕ್ಕೆ ಸಭೆಯ ಅಭಿಪ್ರಾಯವನ್ನು ಕೇಳಲಿಕ್ಕೆ ಬಂದಿದ್ದಾರೆ, ಈ ಒಂದು ಪರಿಸ್ಥಿತಿಯಲ್ಲಿ ನಾನು ಹೇಳುವುದಾದರೆ ಪ್ರಾಯಶಃ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಅರಿತು ಕೆಲಸ ಮಾಡುವ ಒಂದು ಶಕ್ತಿಯನ್ನು ಕಳೆದುಕೊಂಡಿದ್ದಾರೆ ಎಂದು ನಾನು ಹೇಳಬೇಕಾಗುತ್ತದೆ ಆದರೂ ಕೂಡ ಹಣಕಾಸಿನ ಸಚಿವರ ಸ್ಥಾನದಲ್ಲಿ ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ, ರಾಜ್ಯದ ಹಿತರಕ್ಷಣೆಯ ದೃಷ್ಟಿಯಿಂದ ಕೆಲಸ ಮಾಡತಕ್ಕ ಪ್ರವೃತ್ತಿಯನ್ನು ಬೆಳೆಸಿ ಕೊಳ್ಳುತ್ತಾರೆನ್ನುವ ಆಶಯವನ್ನು ನಾವು ಇಟ್ಟುಕೊಂಡಿದ್ದೆವು. ಅದನ್ನು ಈ ಹೊತ್ತು ಕಳೆದುಕೊಂಡಿದ್ದಾರೆ ಎಂದು ಹೇಳಲಿಕ್ಕೆ ಬಹುಶಃ ನಾನು ಅವರನ್ನು ಟೀಕೆ ಮಾಡಬೇಕೆಂಬ ದೃಷ್ಟಿಯಿಂದ ಹೇಳುತ್ತಿಲ್ಲ. ಅವರು ಈ ದಿಸೆಯಲ್ಲಿ ವಿಫಲಗೊಂಡಿದ್ದಾರೆ, ರಾಜಕೀಯ ಒತ್ತಡಕ್ಕೆ ಮಣಿದು ಸಾರ್ವಜನಿಕ ಹಣವನ್ನು ವೆಚ್ಚ ಮಾಡತಕ್ಕ ಕಾಲದಲ್ಲಿ ಹೆಚ್ಚುವರಿ ಬೇಡಿಕೆಗಳ ಮುಖಾಂತರ ಪುನಃ ನಮ್ಮ ಅಭಿಪ್ರಾಯವನ್ನು ಪಡೆಯಲಿಕ್ಕೆ ಈ ಸದನಕ್ಕೆ ಬಂದಿದ್ದಾರೆ. ಅವರು ಹೊರಟಿರತಕ್ಕ ಮಾರ್ಗ ಯೋಗ್ಯವಾದುದಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ.

3-30 P. M.

ಅನಿಮಲ್ ಹಸ್‌ಬೆಂಡ್ರಿ ಇಲಾಖೆಗಾಗಿ ಮೈಸೂರಿನಲ್ಲಿ ಮಹಾರಾಜರಿಗೆ ಸೇರಿದ್ದ ಒಂದು ಡೈರಿ ಫಾರಂನ್ನು ಸುಮಾರು ಹದಿನಾಲ್ಕು ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳಲು ಇದ್ದಂತಹ ಪ್ರಮುಖವಾದ ಆವಶ್ಯಕತೆ ಏನಿತ್ತು ? ಈ ಒಂದು ಫಾರಂ ಪಡೆಯಲಿಕ್ಕೆ ಏಕೆ ಪ್ರಯತ್ನ ಮಾಡುತ್ತಿದ್ದೀರಿ ಎನ್ನುವ ಬಗ್ಗೆ ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ. ತಾವು ಇದಕ್ಕೆ ಸಮ್ಮತಿಯನ್ನು ಸೂಚಿಸುವ ಕಾಲದಲ್ಲಿ ಏಕೆ ಇದರ ಬಗ್ಗೆ ಸ್ಪಷ್ಟವಾಗಿ ಹೇಳಲಿಲ್ಲ ? ಯಾವುದಾದರೂ ಖಾಸಗಿ ಆಸ್ತಿ ಇದ್ದರೆ ಅದು ಲ್ಯಾಂಡ್ ರಿಫಾರಂ ಕಾನೂನಿಗನುಗುಣವಾಗಿ 1961 ರಲ್ಲಿ ಯಾವ ರೀತಿ ಇತ್ತೋ ಅದರ ಪ್ರಕಾರ ಸೀಲಿಂಗು ಇತ್ಯಾದಿಗಳನ್ನು ನಿಗದಿ ಮಾಡಬೇಕಾಗುತ್ತೆ ಎನ್ನುವ ಒಂದು ಪರಿಮಿತಿಯನ್ನು ನಮ್ಮ ಲ್ಯಾಂಡ್ ರಿಫಾರಂಸ್ ಕಾನೂನಲ್ಲಿ ಇದೆ. ಅದು ಈಗ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಇದೆ, ಇದರಲ್ಲಿ ಕೂಡ ಕಾಯಿದೆಯ ಒಪ್ಪಂದಕ್ಕನುಗುಣವಾಗಿ ಜಾರಿಗೆ ಕೊಡಬೇಕೆಂದು ಇದರಲ್ಲಿ ಕೆಲವು ನಿಯಮಗಳನ್ನು ಅಳವಡಿಸಬೇಕೆಂದೂ ಇದೆ. ಇಂತಹ ಒಂದು ಪರಿಸ್ಥಿತಿ ಇರುವಾಗ 14ಲಕ್ಷ ರೂಪಾಯಿ ಕೊಟ್ಟು ಈ ಡೈರಿ ಫಾರಂನ್ನು ತೆಗೆದುಕೊಳ್ಳಬೇಕಾದರೆ ಇದರ ಹಿನ್ನೆಲೆ ಏನಿತ್ತು ಎನ್ನುವುದನ್ನು ಇಲ್ಲಿ ಕೇಳಬೇಕಾಗಿದೆ. ಮತ್ತು ಇದರ ಬಗ್ಗೆ ಪ್ರಶ್ನೆ ಮಾಡಬೇಕಾಗಿದೆ. ಯಾರ ದಾಕ್ಷಿಣ್ಯಕ್ಕೋ ಒಳಗಾಗಿ ನಿಮ್ಮ ಪಕ್ಷದ ಸ್ವಜನ ಪಕ್ಷಪಾತಕ್ಕಾಗಿ ಈ ರೀತಿ ಸರಕಾರದ ಹಣವನ್ನು ಕೊಡುವಾಗ ಮುಗ್ಗರಿಸಿದ್ದೀರಿ. ಮಾಜೀ ಮಹಾರಾಜರಿಗೆ ಏನಾದರೂ ತೊಂದರೆ ಇತ್ತು. ಇವರು ಕನ್ನಡ ನಾಡಿಗೆ ಬಹಳ ಒಳ್ಳೆಯ ಕೆಲಸ ಮಾಡಿದ್ದಾರು ಎಂದು ಇವರಿಗೇನಾದರೂ ಸಹಾಯ ಮಾಡಬೇಕೆಂದು ತಾವು ಕೊಟ್ಟಿದ್ದರೆ ಅದಕ್ಕೆ ಬೇರೆ ಮಾರ್ಗ ಇತ್ತು. ಆದರೆ ಇಲ್ಲಿ ನೀವು ಸಾರ್ವಜನಿಕರ ಹಣ ಎಂದರೆ ಪಬ್ಲಿಕ್ ಟ್ರಸ್ಟೀ ಆಗಿ ಕೆಲಸ ಮಾಡತಕ್ಕ ಕಾಲದಲ್ಲ ಯಾವ ಹಿನ್ನೆಲೆಯಲ್ಲಿ ಈ ರೀತಿ ಕೈ ಹಾಕಿದಿರಿ ಎಂದು ಪ್ರಶ್ನೆ ಮಾಡಬೇಕಾಗಿದೆ. ಇವತ್ತು ಮಹಾರಾಜರಿಗೆ ಇಂತಹ ಕಷ್ಟಗಳಿವೆ, ಅದನ್ನು ಸುಧಾರಣೆ ಮಾಡಬೇಕೆಂದು ಇಲ್ಲಿಗೆ ಬಂದರೆ ಅದಕ್ಕೆ ಬೇಕಾದರೆ ಈ ಸಭೆಯಲ್ಲಿ ಆಗ ಅವರ ಕಷ್ಟ ನಿವಾರಣೆಯನ್ನು ಸಭೆಯ ಮುಂದೆ ಇಟ್ಟು ಯಾವ ರೀತಿ ಮಾಡಬೇಕು ಮತ್ತು ಎಷ್ಟು ಹಣ ಕೊಡಬೇಕು ಎನ್ನುವುದನ್ನು ಕೊಟ್ಟು ಆಗ ನಿವಾರಣೆ ಮಾಡಬಹುದು, ಹಾಗೆ ಬೇಕಾದರೆ ಬನ್ನಿ.

ಶ್ರೀ ಸಿ. ಬೈರೇಗೌಡ.— ದಾನ ಕೊಡಬೇಕೇನು ?

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ಸಭೆ ಒಪ್ಪಲಿ, ಅದಕ್ಕೆ ನನ್ನ ಅಡ್ಡಿ ಇಲ್ಲ. ಆಗ ನಾವು ಒಪ್ಪಬಹುದು. ಸಭೆಯವರು ಅದಕ್ಕೆ ಅಂಗೀಕಾರ ಬೇಕಾದರೆ ಕೊಡಲಿ. ಆದರೆ ಇಲ್ಲಿ ಇಂತಹ ಒಂದು ವ್ಯವಹಾರಕ್ಕೆ, ಸ್ವಜನ ಪಕ್ಷಪಾತಕ್ಕಾಗಿ ಮಾಡಲು ಏಕೆ ಕೈ ಹಾಕಿದ್ದೀರಿ ಎಂದು ಕೇಳಬೇಕಾಗಿದೆ. ಮೊದಲು ಇದೇ ಫಾರಂನ್ನು ಆರು ಲಕ್ಷ ರೂಪಾಯಿಗಳಿಗೆ ಬೇರೆಯವರಿಗೆ ಮಾರಾಟ ಮಾಡಲಿಕ್ಕೆ ತಯಾರಿದ್ದ ಪರಿಸ್ಥಿತಿಯಲ್ಲಿ ನೀವು ಏತಕ್ಕಾಗಿ ಈಗ 14 ಲಕ್ಷ ರೂಪಾಯಿ ಕೊಟ್ಟು ಇದನ್ನು ಹಾಲ ಡೈರಿ ಮಾಡಬೇಕೆಂದು ಹೇಳಿದ್ದೀರಿ ? ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮೈಸೂರಿನಲ್ಲಿ ಹೇಳಿರುವ ಭಾಷಣದಲ್ಲೂ ಹಾಲು ಡೈರಿ ಮಾಡಬೇಕೆಂದು ಹೇಳಿದ್ದಾರೆ,

ಇದರ ಪ್ರೆಸ್ ಕಟ್ಟಿಂಗು ಕೂಡ ನನ್ನಲ್ಲಿದೆ. ಅದರಲ್ಲಿ ಮೈಸೂರು ಮಹಾರಾಜರಿಗೆ ಬಹಳ ಕಷ್ಟಗಳಿವೆ ಎಂದು ಮುಂತಾಗಿ ಹಲವು ವಿಚಾರಗಳನ್ನು ಹೇಳಿದ್ದಾರೆ. ಹೀಗಿರುವಾಗ ಮೈಸೂರಿನಲ್ಲಿ ಇಂತಹ ಒಂದು ಫಾರಂನ್ನು ರೂ. 14 ಲಕ್ಷಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿ ಇಲ್ಲಿ ಬೇಡಿಕೆ ಕೇಳಿದ್ದಾರೆ. ಇದಲ್ಲದೆ ಬನ್ನಿ ಮಂಟಪದ ಹತ್ತಿರ ಎರಡು ಎಕರೆಗಳಷ್ಟು ಭೂಮಿಯನ್ನು ಆರು ಲಕ್ಷಕ್ಕೆ ತೆಗೆದುಕೊಂಡಿದ್ದಾರೆ ಮತ್ತು ಅಜೀಜ್ ಸೇಟರ ಸಹಾಯದಿಂದ ಮೈಸೂರಿನಲ್ಲಿರುವ ಮಹಾರಾಜರಿಗೆ ಸೇರಿದ ಗನ್ ಹೌಸನ್ನು ಮೂರು ಲಕ್ಷಕ್ಕೆ ತೆಗೆದುಕೊಳ್ಳಬೇಕೆಂದೂ ಮಾಡುತ್ತಿದ್ದಾರೆ, ಹೀಗೆ ಸುಮಾರು ಮುವ್ವತ್ತು ಲಕ್ಷರೂಪಾಯಿಗಳವರೆಗೆ ಮೈಸೂರು ಮಹಾರಾಜಾವರಿಗೆ ಕೊಟ್ಟು ಅವರ ಕಷ್ಟಗಳನ್ನು ನಿವಾರಣೆ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಸುಮಾರು ಎರಡು ಎಕರೆಯಷ್ಟು ಜಾಗಕ್ಕೆ 11-12 ಲಕ್ಷ ರೂಪಾಯಿನವರೆಗೆ ಕೊಟ್ಟಿದ್ದಾರೆ, ಹೀಗೆ ಸಾರ್ವಜನಿಕರ ಹಣವನ್ನು ಖರ್ಚು ಮಾಡುವುದಕ್ಕೆ ಯಾವುದಾದರೂ ಇತಿ ಮಿತಿ ಇರಬೇಡವೇ ? ಅದನ್ನು ಅರಿತುಕೊಂಡು ಇಲ್ಲಿ ಕೆಲಸಗಳನ್ನು ಮಾಡಲಿಲ್ಲ ಎಂದು ಹೇಳಬೇಕಾಗಿದೆ. ನಿನ್ನೆ ಇದರ ಬಗ್ಗೆ ಮೇಲ್ಮನೆಯಲ್ಲಿ ಪ್ರಸ್ತಾಪ ಬಂದಾಗ 14 ಲಕ್ಷ ರೂಪಾಯಿನ ವ್ಯವಹಾರದ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಸಲಹೆ ಮಾಡಿದ್ದರು ಎಂದು ಕೇಳುತ್ತೇನೆ. ನಾನು ಅಷ್ಟು ದೂರ ಹೋಗುವುದಿಲ್ಲ. ಈ ರೀತಿ 14 ಲಕ್ಷ ರೂಪಾಯಿ ಕೊಡಬೇಕೆಂದು ಮಾಡಲು ಯಾವ ಆಧಾರದ ಮೇಲೆ ಕೊಡಬೇಕೆಂದು ತೀರ್ಮಾನಕ್ಕೆ ಬಂದಿದ್ದೀರಿ ? ಇದರ ಬಗ್ಗೆ ವಿಚಾರಣೆಯಾಗಬೇಕಾಗಿದೆ. ಸಾರ್ವಜನಿಕರ ಹಣ ಕೊಡತಕ್ಕ ಕಾಲದಲ್ಲಿ ಸ್ವಜನ ಪಕ್ಷಪಾತಕ್ಕೆ ಏಕೆ ಈಡಾಗಿ ಇದಕ್ಕೆ ಅವಕಾಶ ಕೊಟ್ಟಿರಿ ? ಇದರಲ್ಲಿ ಯಾವ ರೀತಿಯ ಅವ್ಯವಹಾರಗಳಾಗಿವೆ ಎಂದರೆ ಇದರಲ್ಲಿ ಶ್ರೀ ಅಜೀಜ್ ಸೇಟರವರು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆ ಎಂದು ಕೇಳಿದ್ದೇವೆ. ಮೈಸೂರಿನ ಡಿವಿಜನಲ್ ಕಮಿಷನರ್‌ರವರು, ಇನ್ನೊಬ್ಬರು ಮತ್ತು ಶ್ರೀಮಾನ್ ಅಜೀಜ್ ಸೇಟರವರು ಈ ವ್ಯವಹಾರದಲ್ಲಿ ಹಂಚಿಕೊಂಡು ಇದರಲ್ಲಿ ಅವರ ಹಿತಾಸಕ್ತಿಗಳನ್ನು ಕಾಪಾಡಲು ಹೆಚ್ಚು ಪ್ರಭಾವ ಬೀರಿದ್ದಾರೆ, ಮತ್ತು ಬೆಂಗಳೂರಲ್ಲಿ ಕೂಡ ಶ್ರೀ ಬಸವಲಿಂಗಪ್ಪನವರು ಭಾಗಶಃ ಇದರಲ್ಲಿ ಕೆಲಸ ಮಾಡಿದ್ದಾರೆ.

ಶ್ರೀ ಅಜೀಜ್ ಸೇಟ್.—ಯಾರು ಹೊಡೆದರು ಎಂದು ಹೇಳದೆ ಈ ರೀತಿ ಹೇಳಿದರೆ..........

ಶ್ರೀ ಎಚ್. ಡಿ. ದೇವೇಗೌಡ.—ಶ್ರೀ ಅಜೀಜ್ ಸೇಟರನ್ನು ಹೊಡೆಸುವ ಕಾಲ ಈ ದೇಶದ ಜನತೆಯ ಮುಂದೆ ಬರುತ್ತದೆ, ಅವರು ಎಷ್ಟೆಷ್ಟು ತಮ್ಮ ವ್ಯವಹಾರಗಳಲ್ಲಿ ಏನೇನು ಮಾಡಿದ್ದಾರೆ ಎನ್ನುವುದರ ಬಗ್ಗೆ ಎಲ್ಲ ವಿವರಗಳನ್ನೂ ಕೊಡಲು ತಯಾರಿದ್ದೇನೆ, ಆದರೆ ನಾನು ಆ ರೀತಿ ಹೇಳಲು ಹೋಗುತ್ತಿಲ್ಲ. ಸರಕಾರದ ಹಣ ಖರ್ಚು ಮಾಡುವಾಗ ಒಂದು ರೀತಿಯ ಇತಿ ಮಿತಿ ಇರಬೇಕು. ಅದನ್ನು ಅಳವಡಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಈ ಸಭೆಯಲ್ಲಿ ಟೀಕೆಗೊಳಗಾದ ವ್ಯವಹಾರಗಳು ಏನಿವೆ ಅವುಗಳನ್ನೆಲ್ಲಾ ನೋಡಿದರೆ ಅದರಿಂದ ತಿಳಿದುಕೊಳ್ಳಬಹುದು, ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆಗಳ ಮೇಲೆ ಎಂದರೆ ಚಾಸಿಸ್‌ಗಳನ್ನು ಖರೀದಿ ಮಾಡಿರುವುದರ ಬಗ್ಗೆ ಹಾಗೂ ಇನ್ನಿತರ ಅಂಶಗಳ ಎಲ್ಲ ಅಂಕಿ ಅಂಶಗಳ ಎಲ್ಲ ವಿವರಗಳನ್ನೂ ನಾನು ಇಟ್ಟುಕೊಂಡಿದ್ದೇನೆ. ಇದರಲ್ಲಿ ಎಷ್ಟು ಲಕ್ಷ ರೂಪಾಯಿ ಮಾಡಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

Sri AZEEZ SAIT.—Madam, the Leader of the Opposition is making wild allegation. He must frame a charge sheet, prove them and pass it on to you. Because he has the privilege to talk anything, he is abusing that privilege. I cannot tolerate it. Merely because he is the Leader of the Opposition, he cannot insult, insinuate or defame me. Let him say this outside the House and then he will face the consequences.

ಶ್ರೀ ಎಚ್. ಡಿ. ದೇವೇಗೌಡ.—ನಾನು ಆ ರೀತಿ ಯಾವುದನ್ನೂ ಇಲ್ಲಿ ಹೇಳಲಿಲ್ಲ, ಮತ್ತು ಅವರ ಕ್ಯಾರೆಕ್ಟರ್ ಬಗ್ಗೆ ಕೂಡ ಹೇಳಲಿಲ್ಲ. ಹೀಗಿರುವಾಗ ಅವರು ನನ್ನ ಕ್ಯಾರೆಕ್ಟರು ಬಗ್ಗೆ ಹೇಳಿದ ಪದವನ್ನು ಅವರು ವಾಪಸು ತೆಗೆದುಕೊಳ್ಳಲೇ ಬೇಕು, ಹಾಗಿಲ್ಲದಿದ್ದರೆ ನಾನು ಇನ್ನು ಮುಂದೆ ಹೆಚ್ಚು ಮಾತನಾಡಲು ಅಪೇಕ್ಷಿಸುವುದಿಲ್ಲ.

Sri AZEEZ SAIT.—The question of big or small does not arise. If I lose money I lose something; but if I lose my character, I lose everying. I have not lost my character like him.

Sri C. BYRE GOWDA.—The Hon. Minister Sri Azeez Sait said that he has not lost his character like him. He should withdraw those words.

Sri H. D. DEVE GOWDA.—If he does not withdraw those words, I cannot allow the House to proceed.

Sri AZEEZ SAIT.—Then I also cannot allow the House to proceed with these wild allegations.

Sri D. B. KALMANKAR.—When the Leader of the Opposition has made some vague and wild allegations, he must substantiate them. It is no good making vague, wild and amorphous allegations without quoting instances. What is happening in this august House is that only some vague and wild allegations are being made. It is no good making character assassination without substantiating the allegations.

Sri B. SUBBAIAH SHETTY.—The Leader of the Opposition has given a threat to this House that he wont allow this House to continue. I demand that he should take back those words.

Sri M. Y. GHORPADE (Minister for Finance).—It is only to avoid this kind of thing that we, the members of this House whether on this side or on that side, are expected to follow certain well established conventions. To may mind one of the functions is to avoid saying in this House what one would not normally say outside the House because we are all very privileged persons in the House and get away with it. But, I think the spirit of functioning of the House demands that we put restraint on ourselves and avoid saying things which we will not normally say outside. Sometimes in the heat of debate certain words are exchanged and when that Happens, I think, it creates an unfortunate situation and I am sure the Leader of the Opposition or the Minister Sri Azeez Sait had no intention of casting serious aspersions. They have said certain thingt in the heat of the moment. My suggestion is it is an appeal mainly to the Leader of the Opposition that this exchange should be forgotten and he should proceed with the debate. After all what was said, was stated in the heated moment and there was no intention to insult each other. I would once again appeal to the Leader of the Opposition and also to members on this side of the House to avoid using expressions or casting aspersions which might create a situation of this kind. It is an unfortunate situation which I think we should forget and proceed with the work.

ಶ್ರೀ ಟಿ. ಎಂ. ಮಂಜುನಾಥ.—ಮಂತ್ರಿಗಳ ಬಾಯಲ್ಲಿ ಈ ಮಾತು ಬರಬಾರದು.

ಶ್ರೀ ಎಂ. ವೈ. ಘೋರ್ಪಡೆ,—ಅವರೂ ಹೇಳಿದ್ದಾರೆ, ಇವರೂ ಹೇಳಿದ್ದಾರೆ.

ಶ್ರೀ ಅಜೀಜ್‌ಸೇಟ್.—ಕಳ್ಳ ಬೇರೆಯವರನ್ನೂ ಹಾಗೆ ತಿಳಿದಿರುತ್ತಾನೆ. ಯಾರಿಗೆ ದುಡ್ಡು ಹೊಡೆದು ಅಭ್ಯಾಸವಾಗಿರುತ್ತದೆ ಅವರೇ ಈ ಮಾತನ್ನು ಹೇಳುತ್ತಾರೆ.

Sri M. Y. GHORPADE.—It amounts to character assisination.

Mr. CHAIRMAN.—I request the hon. members not to use harsh words. Please continue the debate.

Sri H. D. DEVEGOWDA.—I am prepared to challenge what hon. Minister has thrown against me.

Sri AZEEZ SAIT.—I too am prepared to meet the challenge of the Leader of the Opposition.

Sri H. D. DEVE GOWDA.—There are two points. ನನ್ನ ಕ್ಯಾರೆಕ್ಟರನ್ನು ನಾನು ಕಳೆದುಕೊಂಡಿದ್ದೇನೆ ಎಂದು ಅವರು ಹೇಳಿದ್ದಾರೆ. ಯಾರು ದುಡ್ಡನ್ನು ಹೊಡೆದಿದ್ದಾರೆಯೋ ಅವರೇ ಈ ಮಾತನ್ನು ಹೇಳುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ. I am not at all going back. I am prepared to assert the charges that I have levelled against him. I am going to prove it.

Sri AZEEZ SAIT.—Why are you threatening? If you are in possession of documents, please forward them to the Speaker and let an enquiry be conducted. I have been accepting your challenge.

ಶ್ರೀ ಎಚ್. ಡಿ. ದೇವೇಗೌಡ.—ನಾನು ಟ್ರಾನ್ಸ್‌ಪೋರ್ಟ್ ಮಂತ್ರಿಗಳ ಮೇಲೆ ಏನು ಅಪಾದನೆ ಮಾಡಿದ್ದೇನೆ ಅದನ್ನು ಸಾಬೀತು ಮಾಡುವುದಕ್ಕೆ ತಯಾರಾಗಿದ್ದೇನೆ. ನಾನು ನನ್ನ ಕ್ಯಾರೆಕ್ಟರನ್ನು ಕಳೆದುಕೊಂಡಿದ್ದೇನೆ ಎಂದು ಅವರು ಹೇಳಿದ್ದಾರೆ. ಮತ್ತು ಯಾರು ದುಡ್ಡನ್ನು ಹೊಡೆದಿದ್ದಾರೋ ಅವರೇ ಈ ಮಾತನ್ನು ಹೇಳುತ್ತಿದ್ದಾರೆ ಎಂದು ಹೇಳಿದ್ದಾರೆ. ಈ ಎರಡು ಛಾರ್ಜುಗಳನ್ನೂ ಅವರು ಸಮರ್ಥನೆ ಮಾಡಬೇಕು.

Sri M. Y. GHORPADE.—The point is, whatever words that are used is unfortunate. Both have accused each other of corruption.

Sri H. D. DEVE GOWDA.—I am going to stand by whatever the words I used.

(*Mr. Deputy Speaker in the Chair*)

Sri AZEEZ SAIT.—I have not said that. I quoted a proverb.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಮಾನ್ಯ ಮಂತ್ರಿಗಳಾದ ಶ್ರೀ ಅಜೀಜ್‌ಸೇಟ್ ಅವರ ಮೇಲೆ ಏನು ಛಾರ್ಜ್ ಮಾಡಿದ್ದಾರೆಯೋ ಅದನ್ನು ಪ್ರೂವ್ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ ಎಂದು ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಡೆದಂತಹ ಚರ್ಚೆಯಲ್ಲಿ ಶ್ರೀಮಾನ್ ಅಜೀಜ್ ಸೇಟ್ ಅವರು ಏನು ಹೇಳಿದ್ದಾರೆ ಎಂಬುದನ್ನು ರೆಕಾರ್ಡ್ ತರಿಸಿ ನೋಡಿದರೆ ಗೊತ್ತಾಗುತ್ತದೆ.

Sri AZEEZ SAIT.—I have been in public life for the last 25 years and I have some blood running in my veins. If the member is prepared, he must substantiate his charges. There is no use of threatening and dragging my name like this. The world is there to see you and see me.

Mr. DEPUTY SPEAKER.—We will examine the records. In the meanwhile the hon. member may please continue the speech.

Sri H. D. DEVE GOWDA.—You are going to examine the words used and then you will give your ruling. I do not want any reply. He has made two allegations. He must be prepared to prove. He said "you have lost your character". ಮತ್ತು "ಯಾರು ದುಡ್ಡನ್ನು ಹೊಡೆದಿದ್ದಾರೆಯೋ ಅವರೇ ಈ ಮಾತನ್ನು ಹೇಳುತ್ತಿದ್ದಾರೆ" ಎಂದು ಹೇಳಿದ್ದಾರೆ. ಇವುಗಳನ್ನು ಅವರು ಪ್ರೂವ್ ಮಾಡಬೇಕು.

Sri M. Y. GHORPADE.—This is a heated moment. I say on behalf of the Government that those unfortunate exchanges may be expunged.

MEMBERS.—No, no.

Sri H. D. DEVE GOWDA.—I am not prepared for expunging those things. I am prepared to take these challenges and whatever allegations made so far as my character and integrity are concerned I will give whatever time Sri Azeez Sait requires to prove those things.

Sri AZEEZ SAIT.—I have better things to do.

Sri H. D. DEVE GOWDA.—Whatever the allegations I have made against the Transport Minister, I have sufficient documents to place before the House and to question his integrity. That I am going to do. If I am not able to do it, I am prepared to apologise. I have got sufficient....

Sri AZEEZ SAIT.—You place it.

Sri H. D. DEVE GOWDA.—I am going to place it before the House and I will ask the Speaker to take up the matter whenever time permits.

Sri AZEEZ SAIT.—It should be taken up tomorrow itself.

Sri M. Y. GHORPADE.—The procedure is, if any one makes a serious allegation against a member, then he will give personal explanation. He is willing and therefore the matter ends there.

Sri H. D. DEVE GOWDA.—So far as the Minister is concerned I agree that whatever allegations I have made, I am prepared to take that responsibility. With responsibility I have made that challenge. So far as other charges are concerned, let the Minister be prepared to take. I do not want to leave it at that. Please don't try to deviate. If I have lost my character, I have no moral right to stay here. I am prepared to take the challenge. I am prepared to allow time to prove those two charges. He must accept that challenge.

Sri M Y. GHORPADE.—The point is...

Sri H. D. DEVE GOWDA.—I have great respect for the Finance Minister. Let the Chair take a decision.

Sri M. Y. GHORPADE.—Sri Deve Gowda here is not functioning in his personal capacity. Of course I understand his feelings. As the Leader of the Opposition he has to advise.

Sri H. D. DEVE GOWDA.—I have respect for you. He must accept my challenge and I am prepared to accept his challenge.

Sri M. Y. GHORPADE.—I am only trying to say that you should advise all of us as to how the House should proceed. Whenever such unpleasant exchanges have taken place, it has not resulted in the complete stoppage of business of the House. The rights of other members are also involved and let us not make it a personal thing.

Sri D. B. KALMANKAR.—On a point of order. During the debate the hon. Leader of the Opposition said certain things. ' I will refere to rule 289. When the Leader of the opposition was speaking he made some allegations against the hon. Minister for Transport regarding a

particular deal, about the property belonging to the ex-Maharaja of Mysore and said that the Divisional -Commissioner and the Minister have got a hand in the deal. He also said that he has got evidence and notes that the hon. Minister has got a hand in the purchase of certain chassis and deals are of a doubtful character. So my subbmission is, as per rule 289 no allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply. Therefore, before he makes specific allegations he should have given intimation.

Mr. DEPUTY SPEAKER.—All that I would urge is, the debate must be conducted in a very sober way and in a dignified way, not making personal insinuations. All the same, something has happened and I would urge upon the Leader of the Opposition to proceed with the speech. We are getting the records in a couple of minutes and we will examine and see what best we can do. I request the leader of the opposition to proceed with the speech.

ಶ್ರೀ ವಾಟಾಳ್ ನಾಗರಾಜ್.—ಈಗ ತಾವು ರಿಕಾರ್ಡು ತರಿಸಿ ನೋಡಿ ಹೇಳಬಹುದು. ಮಾನ್ಯ ದೇವೇಗೌಡರು ಬಹಳ ಗುರುತರವಾದ ಅಪಾದನೆಯನ್ನು ತಂದಿರತಕ್ಕಂತಹ ರಿಕಾರ್ಡುಗಳ ಮೂಲಕ ಮಾಡಿದ್ದಾರೆ. ಸಚಿವರು ಅವರು ತಂದಿರತಕ್ಕಂತಹ ರಿಕಾರ್ಡುಗಳ ಆಧಾರದ ಮೇಲೆ ಆ ರೀತಿ ಹೇಳಲು ಬಿಡಬೇಕಾಗಿತ್ತು. ಅದು ಬಿಟ್ಟು, ತಮ್ಮ ಮೇಲೆ ಆರೋಪಣೆ ಬಂತಲ್ಲವೆಂದು ಕೋಪದಿಂದ ಉದ್ರೇಕದಿಂದ ಇವರ ಕ್ಯಾರೆಕ್ಟರನ್ನು ಪ್ರಶ್ನೆ ಮಾಡತಕ್ಕಂತಹ ಪದಗಳನ್ನು ಉಪಯೋಗಿಸಿ ಮಾತನಾಡಿದ್ದಾರೆ. ಇದು ಒಳ್ಳೆಯದಲ್ಲ. ಆದ್ದರಿಂದ ಅದನ್ನು ಮುಂದಕ್ಕೆ ಹಾಕಬೇಕಾಗಿಲ್ಲ; ಇದು ಈಗಲೇ ತೀರ್ಮಾನವಾಗಲಿ. ಇದರಿಂದ ಇವರ ಮಂತ್ರಿಮಂಡಲದಲ್ಲಿ ಒಂದು ಸಮನ್ವಯುವಿಲ್ಲವೆಂದು ಅರ್ಥವಾಗುತ್ತದೆ.

Sri D. B. KALMANKAR.—I insist on the ruling because an allegation is made. I also invite your attention to rule 288.

Mr. DEPUTY SPEAKER.—I have followed what you mentioned. Strictly considered those rules do not apply in this case. The leader of the opposition will proceed.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಸ್ಪಷ್ಟವಾದ ಅಪಾದನೆಗಳನ್ನು ಮಾಡ ವುದಕ್ಕೆ ತಯಾರಾಗಿದ್ದಾರೆಂದು ಹೇಳಿದ್ದಾರೆ. ಅದನ್ನು ಅಲ್ಲಿಗೆ ಅವಾಯ್ಡ್ ಮಾಡುವುದು ಬೇಡ. ಏಕೆಂದರೆ ಇವರು ಅಷ್ಟು ಖಚಿತವಾಗಿ ಹೇಳಿದ ಮೇಲೆ ಅದನ್ನು ರುಜುವಾತು ಮಾಡುವುದಕ್ಕೆ ಕೂಡ ತಯಾರಾಗಿದ್ದಾರೆ. ಆದ್ದರಿಂದ ಒಬ್ಬ ರಾಜ್ಯದ ಮಂತ್ರಿಯ ಮೇಲೆ ಇಷ್ಟೊಂದು ಗುರುತರವಾದ ಅಪಾದನೆ ಬಂದ ಮೇಲೆ ಇದನ್ನು ವಿಚಾರಣೆಗೆ ಒಳಪಡಿಸಬೇಕಾಗುತ್ತದೆ.

4-00 P. M.

ಅದೊಂದು ಭಾಗ. ಇನ್ನು ಅದರ ಎರಡನೆಯ ಭಾಗವನ್ನು ಹಾಗೆಯೇ ಕೈಬಿಡುವುದಕ್ಕಾಗುವುದಿಲ್ಲ. ಇಂತಹ ಪ್ರಶ್ನೆಯನ್ನು ಇಲ್ಲಿ ಒಂದು ಸಾರಿ ಪ್ರಸ್ತಾಪಮಾಡಿದಮೇಲೆ ಅದು ಒಂದು ರೀತಿಯಲ್ಲಿ ಮುಕ್ತಾಯವಾಗಲೇ ಬೇಕು. ಇಲ್ಲದಿದ್ದರೆ ಅದರಿಂದೇನೂ ಪ್ರಯೋಜನವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇನ್ನೊಂದು ಮೂಲಭೂತವಾದ ವಿಷಯ. ಅದೇನೆಂದರೆ, ವಿರೋಧಪಕ್ಷದವರು ಯಾವಾಗಲೂ ಮಂತ್ರಿಗಳ ಮೇಲೆ ಸರಿಯಾದ ಆಧಾರಗಳನ್ನು ಇಟ್ಟುಕೊಂಡು ಅರೋಪಣೆಗಳನ್ನು ಮಾಡುತ್ತಾರೆ. ಹಾಗೆ ಮಾಡಿದಾಗ ಮಂತ್ರಿಗಳಾದವರು ಯಾರು

(ಶ್ರೀ ಎಸ್. ಬಂಗಾರಪ್ಪ)

ಲಂಚ ತೆಗೆದುಕೊಳ್ಳುತ್ತಿದ್ದಾರೋ ಮತ್ತು ಲಂಚ ತೆಗೆದುಕೊಂಡವರ ಮೇಲೆ ಯಾವಾಗ ಇಂತಹವರು ಲಂಚ ತೆಗೆದುಕೊಂಡಿದ್ದಾರೆಂದು ಹೇಳುತ್ತಾರೋ ಅಂತಹವರಮೇಲೆ ನಾವು ಅರೋಪಣಾಟೀಕೆಗಳನ್ನು ಮಾಡುವುದಕ್ಕೆ ಇಲ್ಲಿಗೆ ಬಂದಿದ್ದೇವೆ.

Mr. DEPUTY SPEAKER.—Things which are very clear need not be rendered further clear. It is like this ; I will read it.—

"Sri AZEEZ SAIT.—Sir, the Leader of the Opposition is making wild allegations. He must prove them, frame a charge sheet and pass it on to you. Because he has the privilege to talk anything, he is abusing that privilege. I cannot tolerate it. Merely because he is the Leader of the Opposition, he cannot insult, insinuate or defame me. Let him say this outside the House, so that I can take action against him.

ಶ್ರೀ ಎಚ್. ಡಿ ದೇವೇಗೌಡ.—ನಾನು ಆ ರೀತಿ ಯಾವುದನ್ನೂ ಇಲ್ಲಿ ಹೇಳಲಿಲ್ಲ. ಮತ್ತು ಅವರ ಕ್ಯಾರೆಕ್ಟರ್ ಬಗ್ಗೆ ಕೂಡ ಹೇಳಲಿಲ್ಲ ಹೀಗಿರುವಾಗ ಅವರು ನನ್ನ ಕ್ಯಾರೆಕ್ಟರ್ ಬಗ್ಗೆ ಹೇಳಿದ ಪದವನ್ನು ಅವರು ವಾಪಸ್ಸು ತೆಗೆದುಕೊಳ್ಳಲೇ ಬೇಕು. ಹಾಗಿಲ್ಲದಿದ್ದರೆ, ನಾನು ಇನ್ನು ಮುಂದೆ ಹೆಚ್ಚು ಮಾತನಾಡಲು ಅಪೇಕ್ಷಿಸುವುದಿಲ್ಲ.

Sri AZEEZ SAIT.—The question of big or small does not arise. If I lose money, I lose something ; but If I lose my character, I lose everything. I have not lost my character like him."

Mr. DEPUTY SPEAKER.—I feel the last sentence is very unpleasant. I would urge upon the Hon'ble Minister to withdraw it.

Sri AZEEZ SAIT.—Sir, since you desire, I withdraw that sentance.

I am not questioning your ruling. I request you to judge the Leader of the Opposition also with the same yard-stick.

Mr. DEPUTY SPEAKER.—unfortunately, at that time, I was just called for Tea. But judged in the context of things...

Sri AZEEZ SAIT.—Sir, you have with you the portion from where I have started addressing the Hon'ble Speaker who was in the Chair at that time. But the earlier portion as to under what context I was forced to say this is not before you.

Merely because he is the Leader of the Opposition, can he make wild allegations as he like; because he has the privilege to talk anything ? At this rate, he can hang anybody.

Mr. DEPUTY SPEAKER.—He has explained the position clearly.

Sri AZEEZ SAIT.—Sir, I request you to call for the earlier record also.

Mr. DEPUTY SPEAKER.—That can also be done. But I would urge upon the hon. members to have a dignified approach so that dignity and decorum can be maintained.

Sri AZEEZ SAIT.—With due respects to the Chair, I would like to submit one thing. As you know I was your colleague in this House when we were in the Opposition. If one has to make a charge, he must be in a position to make it outside also. Because one has the privilege to talk anything here, one cannot make wild allegations. One can fool a person once, but not always. I would bow my head if the charges are proved. I am not sticking to the power. I have seen lot of power. I was born with a golden spoon. Since the Leader of the Opposition made a challenge, he has to prove it. One cannot make vague allegations. One should make sober speeches.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಾರಿಗೆ ಮಂತ್ರಿಗಳು ಏನು ಹೇಳಿದರೋ ಅದನ್ನು ಒಪ್ಪಿಕೊಳ್ಳುತ್ತೇನೆ. ಆ ರೀತಿಯಾಗಿ ಒಪ್ಪಿಕೊಂಡು ಈ ಸಭೆಯಲ್ಲಿ ಅವರ ಮೇಲೆ ಆಪಾದನೆಗಳನ್ನು ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಮತ್ತು ಅದನ್ನು ಪುಷ್ಟೀಕರಿಸುವುದಕ್ಕೂ ನಾನು ತಯಾರಿದ್ದೇನೆ. ಮಾನ್ಯ ಅಧ್ಯಕ್ಷರು ಯಾವತ್ತು ಅದಕ್ಕೆ ನನಗೆ ಅನುಮತಿ ಕೊಡುತ್ತಾರೋ ಅವತ್ತು ಎಲ್ಲ ಅಂಶಗಳನ್ನೂ ಮಾತನಾಡುತ್ತೇನೆ. ನಾನು ಮಾಡಿದಂಥ ಆಪಾದನೆಗಳ ಬಗ್ಗೆ ಹಿಂದೆ ಸರಿಯುವವನಲ್ಲ. ಅದಕ್ಕೆ ನಾನು ತಯಾರಾಗಿಲ್ಲ. ಸಾರ್ವಜನಿಕ ಜೀವನದಲ್ಲಿ ನಾವು ಯಾರೇ ಆಗಲಿ ವೇಗ್ ಅಲಿಗೇಷನ್ಸ್ ಮಾಡಿ ಹೋಗುವುದು ಸರಿಯಲ್ಲ, ಯೋಗ್ಯವೂ ಅಲ್ಲ, ಅವರ ಮೇಲೆ ಮಾಡಿದಂಥ ಎಲ್ಲ ಅಪಾದನೆಗಳ ಬಗ್ಗೆ ಎಲ್ಲಾ ವಿವರಗಳನ್ನು ಕೊಡಲು ನಾನು ಸಿದ್ಧ.

ಶ್ರೀ ಅಜೀಜ್‌ಸೇಟ್,—ಇದರ ಬಗ್ಗೆ ಸುಮ್ಮನೆ ಆಪಾದನೆ ಮಾಡಿ ಚರ್ಚೆಮಾಡಿ ಎಂದು ಹೇಳಿದರೆ ಅದು ಅಲ್ಲಿಗೇ ಮುಕ್ತಾಯವಾಗುವುದಿಲ್ಲ. ಅವರು ಏನೇನು ಅಪಾದನೆಗಳನ್ನು ಮಾಡಿದ್ದಾರೆ, ಕೋಟ್ಯಾಂತರ ರೂಪಾಯಿಗಳು, ಲಕ್ಷಾಂತರ ರೂಪಾಯಿಗಳು, ಸಾವಿರಾರು ರೂಪಾಯಿಗಳು ನೂರಾರು ರೂಪಾಯಿಗಳನ್ನು ತಿಂದುಹಾಕಿ ಮಂತ್ರಿಗಳು ಹಾಳುಮಾಡಿದ್ದಾರೆಂದು ಏನು ಹೇಳುತ್ತಾರೆಯೋ ಆ ಅಪಾದನೆಗಳಿಗೆಲ್ಲಾ ಮಾನ್ಯ ಅಧ್ಯಕ್ಷರು ವಿಚಾರಣೆ ಮಾಡಬೇಕು. ಇಲ್ಲದಿದ್ದರೆ ನಾನು ಇದರ ಚರ್ಚೆಗೆ ಇಲ್ಲಿ ಅವಕಾಶ ಕೊಡುವುದಿಲ್ಲ. ನಾನು ಚರ್ಚೆಗೂ ತಯಾರಾಗಿಲ್ಲ. ಈ ಸಭೆಯಲ್ಲಿ ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೂ, ಹೇಳುವುದಕ್ಕೂ ಲಂಗು, ಲಗಾಮು ಏನೂ ಇಲ್ಲವೆಂದು ಹೇಳಬಹುದು.

Sri H. S. SIDDAPPA.—The Hon'ble Minister said that the speeches should be sober. I whould like to know from the Chair who was not sober. ಲಂಗು, ಲಗಾಮು ಇಲ್ಲದೆ ಸದಸ್ಯರು ಮಾತನಾಡುತ್ತಿದ್ದಾರೆಂದು ಹೇಳಿದ ಮಾತನ್ನು ನೀವು ಹೇಗೆ ಈ ಸಭೆಯಲ್ಲಿ ಅಲೌ ಮಾಡಿದ್ದೀರಿ ?

(*Many Members from the Opposition stood up*)

Sri B. B. SAYANAK.—It is too much from the Hon'ble Minister.

Sri H. D. DEVE GOWDA.—I will condemn the way in which the Minister talks.

Mr. DEPUTY SPEAKER.—Hon. members may please resume their eats.

Sri H. S. SIDDAPPA.—I am sorry for the words used by the Minister.

Sri M. Y. GHORPADE.—Sir, this should be put an end to. When the Leader of the Opposition sends the record to you, the Chair can take appropriate action at the appropriate time.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಮಾನ್ಯ ಸಚಿವರು ಲಂಗೂ ಲಗಾಂ ಇಲ್ಲದೆ ಮಾತನಾಡಬಹುದು ಎಂದು ಹೇಳುತ್ತಾರೆ. ಇದು ಸರಿಯೇ ? ಅವರು ಹಾಗೆ ಹೇಳಬಹುದೇ ?

ಉಪಾಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ. ನಾನು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಅವರ ಭಾಷಣವನ್ನು ಮುಂದುವರಿಸಲು ಸೂಚಿಸುತ್ತೇನೆ.

I request the hon. member to resume his seat. Hon. leader of the Opposition may kindly resume his speach.

Sri H. D. DEVE GOWDA.—Whatever I have said, I am going to own it. I do not go back upon them.

Mr. DEPUTY SPEAKER.—I ve y much appreciate it. Please continue your speech

ಶ್ರೀ ಎಚ್. ಎಸ್. ಸಿದ್ದಪ್ಪ.—ಲಂಗು ಲಗಾಮು ಇಲ್ಲದೆ ಮಾತನಾಡಬಹುದು. It applies to all the members of this House.

(Sriyuths: Vi tal Nagaraj, K. Lingappa, Byregowpa stoop up)

These words must be expunged from the proceedings. The Hon. Minister cannot use such words.

Mr. DEPUTY SPEAKER.—I request all the hon. members standing to resume their seats.

(Sri Azeez Sait was seen going out)

Sri S. BANGARAPPA.—I request you to please get the Hon. Minister to the House.

ಶ್ರೀ ವಾಟಾಳ್ ನಾಗರಾಜ್.—ಸಚಿವರು ಓಡಿಹೋಗುತ್ತಿದ್ದಾರೆ. ತಮ್ಮ ಮಾರ್ಷಲ್‌ರನ್ನು ಕಳುಹಿಸಿ ಅವರನ್ನು ಹಿಡಿದು ತರಿಸಿ. ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಬಗ್ಗೆ ಮಾತನಾಡುತ್ತಿದ್ದಾಗ ಮಾನ್ಯ ಅಜೀಜ್ ಸೇಟ್‌ರವರು ಹಾಗೆ ಸಭೆಯಿಂದ ಎದ್ದು ಓಡಿ ಹೋಗಬಹುದೇ?

Mr. DEPUTY SPEAKER.—Let us be a bit serious. I have told that we must have some restraint and sober language. Even if some members are erring, the Chair is there to do the needful. I shall go through the entire records and see what can be done. I cannot understand so many members standing and talking at the top of their voices. The followers of the Hon. Leader of the Opposition were making parallel speeches.

Sri H. S. SIDDAPPA.—I never made any speech.

Mr. DEPUTY SPEAKER.—Your leader requested you to resume your seat, but you did not resume. I shall go through the entire record and see what best can be done. If something is there which is required to be expunged, I shall certainly expunge them ; but some time is necessary for that.

(ಶ್ರೀಗಳಾದ ಬಂಗಾರಪ್ಪ, ಸಿದ್ದಪ್ಪ, ವಾಟಾಳ್ ನಾಗರಾಜ್, ಬೈರೇಗೌಡ ಇವರೆಲ್ಲರು ಮಾತನಾಡಲು ಎದ್ದು ನಿಂತಿದ್ದರು)

Mr. DEPUTY SPEAKER.—This is not the way of working the Parliamentary democracy. Hon. Leader of the Opposition may please continue his speech.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಮೊದಲೇ ಇಲ್ಲಿ ಗಂಡಸರು ಹಿಡಿತ ತಪ್ಪಿ ಹೋಗುತ್ತಿದ್ದಾರೆ, ಆದಕ್ಕಾಗಿ ಇಲ್ಲಿ ಹೆಣ್ಣು ಮಕ್ಕಳ ಮಂತ್ರಿಮಂಡಲ ರಚನೆಯಾಗಬೇಕೆಂದು ಹೇಳಿದ್ದೆ. ಈಗಲೂ ಅದೇ ಸೂಚನೆಯನ್ನು ತಮ್ಮ ಪರಿಶೀಲನೆಗೆ ಇಡುತ್ತಿದ್ದೇನೆ.

ಶ್ರೀ ಪಾಟಾಳ್ ನಾಗರಾಜ್.—ಸ್ವಾಮಿ, ಯಾರ ಬಗ್ಗೆ ಸಭೆಯಲ್ಲಿ ಟೀಕೆ ನಡೆಯುತ್ತಿತ್ತೋ ಅವರು ಸ್ವಲ್ಪ ಹೊತ್ತಿನ ಹಿಂದೆ ಬಾಗಿಲಲ್ಲಿ ನಿಂತಿದ್ದರು. ಈಗಾಗಲೇ ಅವರು ತಮ್ಮ ಸ್ಥಾನಕ್ಕೆ ಬಂದು ಕುಳಿತಿದ್ದಾರೆ. ಇವರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರೇನು ಛಾರ್ಜುಗಳನ್ನು ಹೇಳುತ್ತಿದ್ದರು ಆ ಛಾರ್ಜುಗಳನ್ನೆಲ್ಲಾ ಮಾನ್ಯ ದೇವೇಗೌಡರು ಈಗಲೇ ಅವುಗಳನ್ನೆಲ್ಲಾ ಕಲೆಕ್ಟ್ ಮಾಡಿಕೊಂಡು ತಂದು ಅವುಗಳನ್ನು ಅಧ್ಯಕ್ಷರ ಕಡೆಗೆ ಕೊಟ್ಟು ಈ ಚರ್ಚೆಯನ್ನು ಇಲ್ಲೇ ಈಗಲೇ ಕುಳಿತು ತೀರ್ಮಾನ ಮಾಡಬೇಕು. ಇಲ್ಲವಾದರೆ ನಾವು ಸಭೆಯ ಕಾರ್ಯಕಲಾಪಗಳನ್ನು ನಡೆಯುವುದಕ್ಕೆ ಬಿಡುವುದಿಲ್ಲ.

ಉಪಾಧ್ಯಕ್ಷರು.—ಮಾನ್ಯ ದೇವೇಗೌಡರೇ ತಾವು ತಮ್ಮ ಭಾಷಣವನ್ನು ಪ್ರಾರಂಭಮಾಡಿ.

ಶ್ರೀ ಎಚ್. ಡಿ. ದೇವೇಗೌಡ.—ನಾನು ನನ್ನ ಭಾಷಣವನ್ನು ಮುಂದುವರಿಸುತ್ತೇನೆ. ಆದರೆ ಈ ದಿವಸ, ಅತ್ತ ಕಡೆ ನಾಯಕರು ಯಾವಾಗಲೂ ನನಗೆ ತಾಳ್ಮೆಯನ್ನು ಕಳೆದುಕೊಂಡು ಮಾತನಾಡುತ್ತೇನೆಂದು ಹೇಳುತ್ತಿದ್ದರು; ಆದರೆ ಈ ದಿವಸ ನಾನು ಮಾನ್ಯ ಅಜೀಜ್ ಸೇಟರು ಏನೇ ಹೇಳಿದರೂ ನನ್ನ ತಾಳ್ಮೆಯನ್ನು ನಾನು ಕಳೆದುಕೊಂಡಿಲ್ಲ. ಆದರೆ ನಾನು ಶ್ರೀ ಅಜೀಜ್ ಸೇಟ್‌ರ ಬಗ್ಗೆ ಏನು ಹೇಳಿದ್ದೇನೆ ಆ ಬಗ್ಗೆ ಅದನ್ನು ಇದೇ ಸಭೆಯಲ್ಲಿ ಕುಳಿತು ಚರ್ಚೆಮಾಡಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಯಾವತ್ತೂ ತಯಾರಿದ್ದೇನೆ. ಆದರೆ ಅತ್ತ ಕಡೆಯ ಪಕ್ಷದವರಿಗಾಗಲಿ ಅಥವಾ ಇತ್ತ ಕಡೆಯ ಪಕ್ಷದವರಿಗಾಗಲಿ, ಲಂಗುಲಗಾಮು ಇಲ್ಲದೆ ಮಾತನಾಡಬಹುದು ಎಂದು ಹೇಳತಕ್ಕದ್ದು ಯಾರಿಗೆ ಆಗಲಿ ಅದು ಯೋಗ್ಯವಾದುದಲ್ಲ. ಅಲ್ಲದೆ ಇಲ್ಲಿ ವೃಥಾ ಸಭೆಯ ಕಾಲವನ್ನು ವ್ಯರ್ಥಮಾಡಬೇಕು ಅಥವಾ ಹರಣ ಮಾಡಬೇಕೆಂಬ ಉದ್ದೇಶವಿಲ್ಲ.

ಇಲ್ಲಿ ಇವರೇನು ಮಾನ್ಯ ಅರ್ಥ ಸಚಿವರು ಒಂದು 14 ಲಕ್ಷ ರೂಪಾಯಿಗಳ ವ್ಯವಹಾರ ತಿಳಿಸಿದ್ದಾರೆ ಇದರ ಬಗ್ಗೆ ಒಂದು ವಿಚಾರಣೆ ಆಗಲೇಬೇಕು. ಸಾರ್ವಜನಿಕರ ಹಣ ಪೋಲಾಗಬಾರದು. ಇಲ್ಲಿ ಈ 14 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುವುದಕ್ಕೆ, ಅದನ್ನು ಅಷ್ಟಕ್ಕೇ ನಿಗದಿ ಮಾಡುವುದಕ್ಕೆ ನೀವು ಯಾವ ಯಂತ್ರವನ್ನು ನಿರ್ಧರಮಾಡಿದ್ದೀರಿ ? ಇಲ್ಲಿ ಇಷ್ಟು ಪರಿಹಾರವನ್ನು ಕೊಟ್ಟೇ ಈ ಪ್ರಾಪರ್ಟಿಗಳನ್ನು ತೆಗೆದುಕೊಳ್ಳಬೇಕಾಗಿತ್ತೇ ಅಥವಾ ಬೇರೆ ರೀತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ, ಇದರ ಔಚಿತ್ಯವೇನೆಂದು ಹೇಳಬಯಸುತ್ತೇನೆ. ಅದುದರಿಂದ ಇದರ ಬಗ್ಗೆ ವಿಚಾರಣೆ ಆಗಲೇಬೇಕೆಂದು ಹೇಳುತ್ತಿದ್ದೇನೆ. ಈ ಕಾರ್ಯದ ವಿಚಕ್ಷಣೆಯ ಬಗ್ಗೆ ವಿಚಾರಣೆ ಅಗತ್ಯ. ತಾವು ಏನು ಇಲ್ಲಿ ಒಟ್ಟು 30—34 ಲಕ್ಷ ರೂಪಾಯಿಗಳನ್ನು ಕೇಳಿದ್ದೀರಿ ಇದು ಸ್ವಜನ ಪಕ್ಷಪಾತಕ್ಕೆ ಎಡೆಮಾಡಿಕೊಟ್ಟಿದೆ ಎಂಬುದಕ್ಕೆ ಇಲ್ಲಿ ಸಾಕಷ್ಟು ಪ್ರತ್ಯಕ್ಷ ನಿದರ್ಶನವಿದೆ. ಇಷ್ಟು ಮೊಬಲಗು ಏತಕ್ಕೆ ಬೇಕೆಂದು ಕೇಳಿದ್ದಾರೆ ಎಂದರೆ ರಾಯನಕೆರೆಗೆ 14 ಲಕ್ಷ, ಬನ್ನಿಮಂಟಪದ ಜಮೀನಿಗೆ 6 ಲಕ್ಷ, ಮದ್ದಿನ ಮನೆಗೆ 3 ಲಕ್ಷ ಮತ್ತು ಬೆಂಗಳೂರು ಅರಮನೆಯ ಎರಡು ಎಕರೆ ಜಮೀನಿಗೆ 11 ಲಕ್ಷ ಹೀಗೆ ಒಟ್ಟು 34 ಲಕ್ಷ ರೂಪಾಯಿ ಬೇಕೆಂದು ಕೇಳಿದ್ದಾರೆ. ಇಲ್ಲಿ ಸರ್ಕಾರದವರು ಕಾನೂನು ಬಾಹಿರವಾದ ಕೆಲಸವನ್ನು ಮಾಡುವುದಕ್ಕೆ ಹೊರಟಿರುವುದರಿಂದ ಇದಕ್ಕೆ ಸಂಬಂಧಪಟ್ಟಂತೆ ಒಂದು ವಿಚಾರಣೆ ನಡೆಯಬೇಕು ಸಾರ್ವಜನಿಕರಿಗೆ ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂಬುದು ತಿಳಿಯಲಿ ಎಂದು ಹೇಳುತ್ತಿದ್ದೇನೆ.

ಈ ದಿವಸ ಈ ಸರ್ಕಾರ ರಾಜ್ಯದಲ್ಲಿ ನಗರ ಆಸ್ತಿಯ ಮಿತಿಯನ್ನು ಜಾರಿಗೆ ತರಬೇಕೆಂದಿರುವಾಗ ಈ ಕೆಲಸವನ್ನು ಇವರು ಮಾಡಬಹುದೆ ? ಯಾವ ಒಬ್ಬ ವ್ಯಕ್ತಿಗೇ ಆಗಲಿ 5 ಲಕ್ಷಕ್ಕೆ ಮೇಲೆ ನಗರ ಆಸ್ತಿ ಇರಬಾರದೆಂದು ಬೇರೆಯವರು ಹೇಳುತ್ತಿರುವಾಗ ನಿಮ್ಮ ಆಡಳಿತ ಪಕ್ಷದವರು ನಿಮ್ಮ ಎಂ. ಪಿ. ಸಿ. ಸಿ. ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿ ಯಾರಿಗೂ 2 ಲಕ್ಷಕ್ಕೆ ಮೀರಿ ಆಸ್ತಿ ಪಾಸ್ತಿಗಳು ಇರಬಾರದೆಂದು ಹೇಳುತ್ತಿರುವಾಗ ಇವರು ಈ ಆಸ್ತಿಗಳನ್ನು ಕೊಳ್ಳತಕ್ಕ ಔಚಿತ್ಯವೇನಿತ್ತು ಎಂದು ಪ್ರಶ್ನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ ? ಏಕೆಂದರೆ ಶ್ರೀಮಾನ್ ಘೋರ್ಪಡೆಯವರು ಹಣ ಹೊಡೆಯಲು ಪ್ರಯತ್ನ ಮಾಡಿದ್ದಾರೆಂದು ನಾನು ಹೇಳುತ್ತಿಲ್ಲ. ಸರಕಾರ ಈ ಕೆಲಸಕ್ಕೆ ಕೈಹಾಕುವುದು, ಇಂದು ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲದೆ ಇರುವಾಗ 14 ಲಕ್ಷ ರೂಪಾಯಿ ಕೊಡಬಾರದು. ಇಷ್ಟು ಹಣ ಕೊಡುವುದರ ಔಚಿತ್ಯವೇನು ? ಇದಕ್ಕೆ ವಿವರಣೆ ಕೊಡಬೇಕು. ಈ ಸಂಭಂಧವಾಗಿ ಬಹಿರಂಗವಾದ ಪರಿಶೀಲನೆಯಾಗಬೇಕು ?

ಇಂದು ರಾಜ್ಯದ ಆಹಾರ ನೀತಿಯ ಬಗ್ಗೆ ಒಂದು ಸೂಚನೆ ಇದೆ, ಒಂದು ಕೋಟಿ ರೂಪಾಯಿಗಳನ್ನು ಮೈಸೂರು ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ನಿಗೆ ಕೊಡಲು ಬೇಡಿಕೆ ಇದೆ. ಅದು ಆಹಾರಧಾನ್ಯವನು ಕೊಂಡು ಮಾರಾಟಮಾಡುವುದು ಎಂದು ತಿಳಿಸಲಾಗಿದೆ ಮೊನ್ನೆ ಮುಖ್ಯ ಮಂತ್ರಿಗಳು ಮಾರ್ಕೆಟಿಂಗ್ ಫೆಡರೇಷನ್ನಿನ ಒಂದು ಸಮಾ

(ಶ್ರೀ ಎಚ್. ಡಿ. ದೇವೇಗೌಡ)

ರಂಭದಲ್ಲಿ ಒಂದು ಸೂಚನೆ ಕೊಟ್ಟಿದ್ದಾರೆ. ಇಂದು ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದವರು ಆಹಾರ ಪದಾರ್ಥಗಳನ್ನು ಮಾರಾಟ ಮಾಡುವುದನ್ನು ಸರಿಯಾಗಿ ಮಾರಾಟ ಮಾಡುತ್ತಿಲ್ಲವೆಂಬ ಅನುಮಾನವಿದೆ. ಇದಕ್ಕೆ ಬದಲಾಗಿ ಬೇರೆ ವ್ಯವಸ್ಥೆ ಮಾಡಲು ಆಲೋಚನೆ ಮಾಡಬೇಕಾದ ಕಾಲ ಬಂದಿದೆ ಎಂದು ಅವರು ಸೂಚಿಸಿದ್ದಾರೆ. ಇಂದು ಸರಕಾರ ಸಗಟು ವ್ಯಾಪಾರವನ್ನು ವಹಿಸಿಕೊಳ್ಳಬೇಕೆಂದು ನಿರ್ಣಯ ಮಾಡಿರುವಾಗ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್‌ಗೆ ಒಂದು ಕೋಟಿ ರೂಪಾಯಿಗಳ ಪದಾರ್ಥಗಳನ್ನು ಕೊಳ್ಳಲು ಕೊಡುತ್ತಿದ್ದೇವೆ ಎಂದು ತಿಳಿಸಿದ್ದಾರೆ. ಈ ಹೊಸ ಬೇಡಿಕೆಯಿದೆ. ಈ ಬಗ್ಗೆ ಎಚ್ಚರಿಕೆ ಕೊಡಬೇಕಾಗಿದೆ. ಇಂದು ಆಹಾರ ಪದಾರ್ಥಗಳನ್ನು ಕೊಂಡು ವಿತರಣೆ ಮಾಡುವ ಕಾರ್ಯವನ್ನು ಸ್ಟೇಟ್ ಮಾರ್ಕೆಂಟಿಗ್ ಫೆಡರೇಷನ್‌ಗೆ ವಹಿಸುವುದು ಉಚಿತಲ್ಲ ಇದರಿಂದ ಅನೇಕವಾಗಿ ಹಸ್ತಕ್ಷೇಪಕ್ಕೆ ಅವಕಾಶವಾಗುತ್ತದೆ. ಸರಿಯಾಗಿ ವಿತರಣೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ಸಕಾರಣ ಕೊಡಬಹುದು. ಸಹಕಾರ ಸಂಸ್ಥೆಗಳಲ್ಲಿ ಇಂದು ಹೇಗೆ ವಿತರಣೆಯಾಗುತ್ತಿದೆ ಎಂಬುದನ್ನು ನೋಡಬಬುದು. ಸಕ್ಕರೆ ಹಂಚಿಕೆ ವಿಚಾರದಲ್ಲೇನಾಗುತ್ತಿದೆಯೆಂಬುದು ಗೊತ್ತಿದೆ. ಸಕ್ಕರೆ ಮೂಟೆಗಳನ್ನು ಹಳ್ಳಿಗಳಿಗೆ ಹಂಚಿದಾಗ ಅವು ಹಳ್ಳಿಗಳಿಗೆ ಹೋಗದೆ ಪೇಟೆಯಲ್ಲೇ ಮಾರಾಟವಾಗುತ್ತಿವೆ.

Sri D. B. KALMANKAR.—It is not the fault of the Government. It is the fault of the Society or the persons who man the Society. They indulge in doing such things. Should we blame the Government for this ?

Sri V. N. PATIL.—Is it not the duty of the Government to mould the character of the society ?

Sri D. B. KALMANKAR.—It is the responsibility of the people

ಶ್ರೀ ಎಚ್. ಡಿ. ದೇವೇಗೌಡ.—ಪ್ರಶ್ನೆಗೆ ಕೊಟ್ಟಿರುವ ಉತ್ತರದ ಆಧಾರದಮೇಲೆ ನಾನು ಹೇಳುವುದು. ಸಂಘಸಂಸ್ಥೆಗಳ ಮೂಲಕ ವಿತರಣೆ ಸರಿಯಾಗಿ ಆಗಲು ಈಗಿನ ಯಂತ್ರದಿಂದ ಸಾಧ್ಯವಿಲ್ಲ ಎಂಬ ಅನುಭವವಿರುವುದರಿಂದ ಸ್ಟೇಟ್ ಮಾರ್ಕೆಂಟಿಗ್ ಫೆಡರೇಷನ್ನಿಗೆ ಈ ವ್ಯವಹಾರ ವಹಿಸುವುದು ಸರಿಯಲ್ಲ ಎಂದು ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳ ಭಾಷಣದ ಆಧಾರದಿಂದ ಹೇಳುತ್ತಿದ್ದೇನೆ. ಲೆವಿ ಬತ್ತವನ್ನು ಕೊಳ್ಳಲು ತಾಲ್ಲೂಕು ಮಾರ್ಕೆಂಟಿಗ್ ಸೊಸೈಟಿಗೆ ಹಣ ಕೊಟ್ಟಿರುವ ಹಿನ್ನೆಲೆ ಇದೆ. ಈ ಮಾರ್ಕೆಟಿಂಗ್ ಫೆಡರೇಷನ್ನಿಗೆ ಸಗಟು ವ್ಯಾಪಾರ ವಹಿಸಿದರೆ ಬಹುಶಃ ಉತ್ತಮವಾದ ಫಲ ದೊರೆಯುವುದಿಲ್ಲ. ಆದುದರಿಂದ ಇಂದು ಒಂದು ಸ್ಟ್ಯಾಚುಟರಿ ಬಾಡಿ ಮಾಡಿ. ಅದು ಲಾಭ ಅಥವ ನಷ್ಟ ಇಲ್ಲದೆ ನೋ ಲಾಸ್ ನೋಪ್ರಾಫಿಟ್ ಬೇಸಿನ ಮೇಲೆ ವ್ಯವಹಾರ ನಡೆಸಲಿ. ಅದು ತನ್ನದೇ ಆದ ಕಣಕಾನನ್ನು ರೂಢಿಸಿ ಕೊಂಡು ಕೆಲಸಮಾಡಲಿ, ಅಂಥ ಸ್ವಯಂಚಾಲಿತ ಯಂತ್ರವನ್ನು ರೂಪಿಸಿ. ಅದಕ್ಕೆ ಸ್ವತಂತ್ರವಾದ ಅಧಿಕಾರವಿರಬೇಕು ; ಹಸ್ತಕ್ಷೇಪವಿರಬಾರದು, ಅದನ್ನು ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಷನ್ ಎಂದು ಬೇಕಾದರೂ ಕರೆಯಿರಿ. ತನ್ನದೇ ಆದ ಹಸ್ತಕ್ಷೇಪಕ್ಕೆ ಅವಕಾಶವಿಲ್ಲದ ಸ್ಟ್ಯಾಚ್ಯುಟರಿ ಬಾಡಿ ಈ ವ್ಯವಹಾರ ನಿರ್ವಹಿಸಲು ಅವಕಾಶಮಾಡುವುದು ಉಚಿತ. ಸರಕಾರ ಕೈಸುಟ್ಟು ಕೊಳ್ಳಲು ಅವಕಾಶವಿರಬಾರದು. ಇಂದು ಅನುಸರಿಸಿರುವುದು ದ್ವಿಮುಖ ನೀತಿಯಾಗಿದೆ ಕೊಳ್ಳುವುದರಲ್ಲಿ ಈ ನೀತಿ ಅನುಸರಿಸಲಾಗುತ್ತಿದೆ. ಸಹಕಾರ ಸಂಸ್ಥೆಗಳು ಓಪನ್ ಮಾರ್ಕೆಟ್ಟಿಕಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಕೊಳ್ಳುವುವು. ಅವು ಸಂಪೂರ್ಣವಾಗಿ ಆಹಾರ ಪದಾರ್ಥಗಳನ್ನು ತೆಗೆದುಕೊಂಡ ದರದಲ್ಲೇ ವಿತರಣೆ ಮಾಡಬೇಕು. ಅಲ್ಲದೆ ಮಿಲ್ಲು ಮಾಲೀಕರು, ಖಾಸಗಿ ವರ್ತಕರು ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಕೊಳ್ಳುವುದು. ಬೇರೆ ಜಿಲ್ಲೆಗೆ ತೆಗೆದುಕೊಂಡು ಹೋದಾಗ 50 ಪರ್ಸೆಂಟ್ ಲೆವಿ ಬಿಟ್ಟು ಉಳಿದಿರುವುದನ್ನು ತೆಗೆದುಕೊಂಡು ಹೋಗಿ ತಮ್ಮ ಇಷ್ಟ ಬಂದಹಾಗೆ ಮಾರಬಹುದು. ಇದರಿಂದ ಬೆಲೆ ಹಿಡಿತದಲ್ಲಿಡುವುದು ಸಾಧ್ಯವೇ ? ಇಂಥ ಒಂದು ಅವಕಾಶ ಕಲ್ಪಿಸಿರುವಾಗ ತಮ್ಮ ನೀತಿ ಧೋರಣೆ ಏನು ? ಈ ದಿವಸ ಖಾಸಗಿ ಮಿಲ್ ಮಾಲೀಕ ಕೊಂಡಿದ್ದರಲ್ಲಿ ಶೇಕಡ 50ಭಾಗ ಸರಕಾರಕ್ಕೆ ಕೊಟ್ಟು ಉಳಿದಿರುವುದನ್ನು ಮನಸ್ಸಿಗೆ, ಬಂದಹಾಗೆ ಮಾರುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ಬೆಲೆ ನಿಯಂತ್ರಣ ಮಾಡಲು ಅವಕಾಶ ವಿಲ್ಲ. ನಿಮ್ಮ ವ್ಯವಸ್ಥೆಯಲ್ಲಿ ಇದೊಂದು ಲೋಪವೆಂಬುದನ್ನರಿತು ಇರುವ ವ್ಯವಸ್ಥೆಯನ್ನು ಮಾರ್ಪಾಡು

ಮಾಡಬೇಕು, ಇಂದು ವ್ಯವಹಾರ ಮಾಡುವಾಗ ಖಾಸಗಿ ಸಂಸ್ಥೆಗಳಿಗೇ ಒಂದು ನೀತಿ ಖಾಸಗಿಯವರಿಗೆ ಇಲ್ಲದವರಿಗೆ ಒಂದು ನೀತಿ ಹೀಗೆ ದ್ವಿಮುಖ ನೀತಿ ಅನುಸರಿಸುವುದು ಯೋಗ್ಯವಲ್ಲ.

ಇನ್ನೊಂದು ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟಿಗೆ ಬ್ಯಾನ್ ಹಾಕಿರುವದು. ಕೆಲವರು ಇದರ ಬಗ್ಗೆ ಪ್ರಭಾವ ಬೀರಿ ಒತ್ತಡ ಹಾಕಿದ್ದಾರೆ. ಒಂದು ಜಿಲ್ಲೆಯ ಪರಿಸ್ಥಿತಿ ಸುಧಾರಿಸುವುದಕ್ಕೆ ಯಾವ ಜಿಲ್ಲೆಯಲ್ಲಿ ಸರ್ಪ್ಲಸ್ ಇದೆಯೋ ಅಲ್ಲಿಂದ 4-5ಸಾವಿರ ಕ್ವಿಂಟಾಲ್ ತೆಗೆದುಕೊಂಡು ಹೋಗುವುದಕ್ಕೆ ಒತ್ತಾಯವಿದೆ. ಇದಕ್ಕೆ ಮಣಿಯಬಾರದು. ಖಾಸಗಿ ವರ್ತಕರು ಇದರಿಂದ ಲಾಭ ಪಡೆಯಲು ಪ್ರಯತ್ನಮಾಡುವರು.

ಇನ್ನೊಂದು ನಮ್ಮ ಲೆವಿ ಬತ್ತವಿದೆ. ಇದರ ಟಾರ್ಜೆಟ್ ರೀಚ್ ಆಗಿದೆಯೋ, ಇಲ್ಲವೋ ಗೊತ್ತಿಲ್ಲ, ಒಂದೂವರೆ ಲಕ್ಷದಲ್ಲಿ ಬಹುಶಃ 50 ಸಾವಿರ ಟನ್ ಶೇಖರಣೆ ಆಗಿರಬಹುದು. ಉಳಿದಿರುವುದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಮುಂದೆ ಪರಿಸ್ಥಿತಿ ಹದಗೆಡಬಹುದು ಎಂದು ಇದನ್ನು ಹೇಳುವುದು, ಕೇಂದ್ರದಿಂದ ಸಾಕಷ್ಟು ತರಿಸುವುದಕ್ಕೆ ಪ್ರಯತ್ನಮಾಡಬೇಕು. ರಾಜ್ಯದಲ್ಲಿ ಬಿಗಿಯಾದ ಪರಿಸ್ಥಿತಿ ಇದೆ, ಕಠಿಣ ಪರಿಸ್ಥಿತಿ ಇದೆ. ಆಹಾರದ ಅಭಾವ ಬಹಳ ಉಲ್ಬಣವಾಗಿದೆ. ಮಾರುಕಟ್ಟೆಯಲ್ಲಿ ಕೊಂಡು ತಿನ್ನುವುದಕ್ಕೆ ಅಲ್ಪ ಉತ್ಪತ್ತಿಯಿರುವವರಿಗೆ ಬಹಳ ಕಷ್ಟವಾಗಿದೆ.

4-30 P.M.

ತಮಗೆ ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ, ಎಲ್ಲಾ ಪದಾರ್ಥಗಳ ಬೆಲೆ ಗಗನಕ್ಕೇರಿದೆ. ಇದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಮಾನ್ಯ ಮಂತ್ರಿಗಳು ಈ ದಿಸೆಯಲ್ಲಿ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ಕೇಂದ್ರದಿಂದ ಒಂದು ಕೋಟಿ ರೂಪಾಯಿಗಳನ್ನು ಏನು ರಾಜ್ಯಸರ್ಕಾರಕ್ಕೆ ಒದಗಿಸಿದ್ದಾರೆ ಆ ಒಂದು ಹಿನ್ನಲೆಯಲ್ಲಿ ಇದನು ಹೇಳುತ್ತಿದ್ದೇನೆ. ಕೇಂದ್ರದಿಂದ ನನಗೆ ತಿಳಿದಿರುವ ರೀತ್ಯ 15ಸಾವಿರ ಟನ್ ಗೋಧಿ 5 ಸಹಸ್ರ ಟನ್ ಮೈಲೋ ಬಂತು ಎಂದುಕೇಳಿದ್ದೇನೆ. ಪತ್ರಿಕೆಯಲ್ಲಿ ಬಂದಿರುವ ವರದಿಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಕೇಂದ್ರದಿಂದ ಬಂದಿರುವ ಆಹಾರ ಪದಾರ್ಥದ ಪ್ರಮಾಣ ಸಾಲದು. ನಮ್ಮ ದೇಶಕ್ಕೆ ಒಟ್ಟು 50 ಸಹಸ್ರ ಟನ್ ಆಹಾರ ಪದಾರ್ಥನ್ನು ತರಿಸಿಕೊಳ್ಳಬೇಕಾಗುತ್ತದೆ. ಇಂಥ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಸರ್ಕಾರದವರು ಮುನ್ನೆಚ್ಚರಿಕೆವಹಿಸಬೇಕು.

ಇವತ್ತು ಬೆಂಗಳೂರು ವಾಟರ್‌ಸಪ್ಲೈ ಸೂಯರೇಜ್ ಬೋರ್ಡಿಗೆ 35ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಇದರ ಬಗ್ಗೆ ನಾನು ಹೆಚ್ಚು ಮಾತನಾಡಿದರೆ ರಾಜಕೀಯ ಬೆಳೆಸುತ್ತಾರೆ ಎನ್ನುವ ಭಾವನೆ ಬರುತ್ತದೆ. ಅಲ್ಲಿರತಕ್ಕ ಅಧಿಕಾರಿಯ ಮೇಲೆ ಹಲವಾರು ಜವಾಬ್ದಾರಿಯುತ ಹೊರೆಗಳನ್ನು ಹೊರಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಆ ಬೋರ್ಡಿನ ವ್ಯವಹಾರ ಎಷ್ಟರ ಮಟ್ಟಿಗೆ ಆಗುತ್ತದೆ ಎನ್ನುವುದನ್ನು ನಾನು ಕೇಳಿದ್ದೇನೆ. ಇವತ್ತು ನೀವು ಕೊಡತಕ್ಕ ಹಣವನ್ನು ನ್ಯಾಯವಾದ ರೀತಿಯಲ್ಲಿ ಖರ್ಚು ಮಾಡಬೇಕು ಸಮನ್ವಯ ಅಧಿಕಾರಿ ಎಂದು ಎಲ್ಲಾ ಹುಕುಂಗಳನ್ನು ಅವರಿಗೆ ಕೊಟ್ಟಿದ್ದಾರೆ. ಅವರ ಪೂರ್ತಿ ಕಾಲವನ್ನು ರಾಜ್ಯದ ಬರಗಾಲದ ಪ್ರದೇಶದಲ್ಲಿ ವಿನಿಯೋಗಿಸತಕ್ಕ ಕಾಲದಲ್ಲಿ ಅವರು ಚೇರ್ಮನ್ ಕೆಲಸವನ್ನು ಮಾಡುವುದಕ್ಕೆ ಆಗುತ್ತದೆಯೇ? ನಾನು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ, ನಾನು ಲಘುವಾಗಿ ಅಪಾದನೆ ಮಾಡುವುದಕ್ಕೆ ತಯಾರಿಲ್ಲ, ಅದರಲ್ಲಿ ನಾನು ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡುವಾಗ ಅಪಾದನೆ ಮಾಡುವಾಗ ನಾನು ಜವಾಬ್ದಾರಿ ರಹಿತವಾಗಿ ಮಾಡಿದರೆ ನಾನು ಇಲ್ಲಿರುವುದಕ್ಕೆ ನಾಲಾಯಕ್ ಆಗುತ್ತೇನೆ. ಫ್ಯಾಮಿನ್ ರಿಲೀಫ್ ಬಗ್ಗೆ ಕೆಲವು ಯಂತ್ರಗಳನ್ನು ನೀವು ಪರ್ಚೇಸ್ ಮಾಡುತ್ತಾ ಇದ್ದೀರಿ. ಇದರ ಬಗ್ಗೆ ಬಹಳ ಎಚ್ಚರದಿಂದ ವ್ಯವಹಾರ ಮಾಡಬೇಕಾಗುತ್ತದೆ. ಒಂದೇ ಒಂದು ಮಾತು ಹೇಳುತ್ತೇನೆ, ಸಂದರ್ಭ ಬಂದಾಗ ಎಲ್ಲಾ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಯಾರಿದ್ದೇನೆ. ಇವತ್ತು ಈ ಕೆಲಸವನ್ನು ನೀವು ಮಾಡತಕ್ಕ ಕಾಲದಲ್ಲಿ ನಿಮ್ಮ ಬೆನ್ನು ತಟ್ಟತಕ್ಕ ಒಂದು ಮಾತನ್ನು ಇಲ್ಲಿ ಹೇಳಲು ಬಯಸುತ್ತೇನೆ. ಈ ಸಮಸ್ಯೆಯನ್ನು ಎದುರಿಸುವುದಕ್ಕೆ ಕೋಟ್ಯಾಂತರ ರೂಪಾಯಿಗಳ ಯಂತ್ರಗಳನ್ನು ಖರೀದಿ ಮಾಡತಕ್ಕ ಕಾಲದಲ್ಲಿ ನಿಮ್ಮ ಮೇಲೆ ಆರೋಪಣೆಯನ್ನು ಹೆಡಂಬೂತವನ್ನು ಊಹಿಸುವುದಕ್ಕೆ ನಾನು ತಯಾರಿಲ್ಲ. ಇದರ ಬಗ್ಗೆ ಬಹಳ ಎಚ್ಚರಿಕೆವಹಿಸಿ ಮುಂದಕ್ಕೆ ಹೋಗಿ ಎಂದು ಹೇಳುತ್ತೇನೆ. ಈ ಸಭೆಯಲ್ಲಿ ಜವಾಬ್ದಾರಿ ಸ್ಥಾನದಲ್ಲಿರುವ ಮಂತ್ರಿಗಳ ವರ್ತನೆಯ ಬಗ್ಗೆ ನಾನು ನೊಂದ ಮನಸ್ಸಿನಿಂದ ಇದನ್ನು ಹೇಳಬೇಕಾಗುತ್ತದೆ. ಯಾವ ಮಂತ್ರಿಗಳು ಇದರ ಬಗ್ಗೆ ಏನು ಹೇಳಿದ್ದಾರೆ, ಎಲ್ಲಾ ಅಧಾರದ ಮೇಲೆ ನಾನು ಪ್ರಸ್ತಾಪ ಮಾಡುವುದಕ್ಕೆ ತಯಾರಿದ್ದೇನೆ. ಬೆಡ್‌ಫೋರ್ಡ್ ಚಾಸೀಸ್ ಪರ್ಚೇಸಿನ ಅ ವ್ಯವಹಾರದ

(ಶ್ರೀ ಎಚ್. ಡಿ. ದೇವೇಗೌಡ)

ಬಗ್ಗೆ ಮುನ್ಸೂಚನೆ ಕೊಟ್ಟರೂ ಕೂಡ, ಮಂತ್ರಿ ಏನು ಮಾಡಿದ್ದಾರೆ ಎನ್ನುವ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ನಾನು ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ. ಈ ದಿಸೆಯಲ್ಲಿ ಅರ್ಥ ಸಚಿವರಾಗಿರತಕ್ಕವರು, ರಾಜ್ಯದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಿಂದ ಬಿಗಿ ಮುಷ್ಟಿಯಿಂದ ಕೆಲಸ ಮಾಡಬೇಕಾಗುತ್ತದೆ ಎನ್ನುವ ಸೂಚನೆಯನ್ನು ಮಾಡಲು ಇಚ್ಛೆಪಡುತ್ತೇನೆ. ಏಕೆಂದರೆ ನಿಮ್ಮ ವ್ಯವಹಾರದ ಬಗ್ಗೆ ನಂಬಿಕೆ ಇದೆ, ವಿಶ್ವಾಸವಿದೆ, ಪಕ್ಷದ ದೃಷ್ಟಿಯಿಂದ ಮಾತನಾಡಬೇಕು ಎನ್ನುವ ಭಾವನೆಯಿಲ್ಲ. ಈ ವ್ಯವಹಾರವನ್ನು ಮಾಡತಕ್ಕವರ ಒಂದು ಹಿನ್ನಲೆಯನ್ನು ನಾನು ಪ್ರಶ್ನೆ ಮಾಡುವ ಕಾಲ ಬರುತ್ತದೆ. ಎಂದು ಮುನ್ಸೂಚನೆ ಕೊಟ್ಟಿದ್ದೇನೆ,

ಬೆಂಗಳೂರು ವಾಟರ್ ಸಪ್ಲೈ ಸೂಯರೇಜ್ ಬೋರ್ಡ್ ವ್ಯವಹಾರಕ್ಕೆ ಯೋಗ್ಯ, ದಕ್ಷ, ಇಂಡಿಪೆಂಡೆಟ್ ಅಧಿಕಾರಿಯನ್ನು ಹಾಕುವುದು ಉಚಿತ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಬಸವಲಿಂಗಪ್ಪನವರು ಹೇಳಿದರು, ಅಲ್ಲಿರತಕ್ಕ ಅವ್ಯವಹಾರಗಳನ್ನು ತೋರಿಸುತ್ತೇವೆಂದು. ನೀವು ಕರೆಯಿರಿ ನಾನು ಬರುವುದಕ್ಕೆ ತಯಾರಿದ್ದೇನೆ ಎಂದು ಹೇಳಿದೆ ಕರೆಯಲಿಲ್ಲ. ಒಂದು ವೇಳೆ ಅಪಾದನೆಗಳನ್ನು ದೃಢೀಕರಿಸುವುದಕ್ಕೆ ಜವಾಬ್ದಾರಿಯನ್ನು ಕೊಟ್ಟಿದ್ದೇವೆ, ಹೋಗೋಣ ಎಂದು ಹೇಳಿದ್ದಾರೋ ಏನೋ, ಈ ಸಭೆ ಅಡ್ಜರ್ನ್ ಆದಮೇಲೆಯೂ ಸಹ ಕರೆಯಲಿಲ್ಲ. ಬೋರ್ಡಿನ ವ್ಯವಸ್ಥೆ ಉತ್ತಮ ರೀತಿಯಲ್ಲಿ ನಡೆಯಲಿಕ್ಕೆ ಸ್ವತಂತ್ರ್ಯವಾದ ಛೇರ್ಮನ್ನರನ್ನು ಮಾಡುವುದು ಒಳ್ಳೆಯದು. ಈ ಸಂದರ್ಭದಲ್ಲಿ ಬೆಂಗಳೂರು ವಾಟರ್ ಸಪ್ಲೈ ಸೂಯರೇಜ್ ಬೋರ್ಡಿಗೆ ಏನು 35 ಲಕ್ಷ ರೂಪಾಯಿಗಳನ್ನು ಕೊಡುತ್ತಿರೋ ಅದಕ್ಕೆ ನನ್ನ ವಿರೋಧವಿಲ್ಲ. ಕೊಟ್ಟಂಥ ಹಣ ಸರಿಯಾದ ರೀತಿಯಲ್ಲಿ ಖರ್ಚಾಗಬೇಕು, ನಿಗಧಿಯಾದ ಕಾಲದಲ್ಲಿ ಬೆಂಗಳೂರಿಗೆ ನೀರು ಕೊಡುವ ಬಗ್ಗೆ ಸರ್ಕಾರ ವ್ಯವಸ್ಥೆ ಮಾಡಬೇಕು. ಇದರಲ್ಲಿ ಅವ್ಯವಹಾರ, ಅಪವ್ಯಯಗಳನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಬೋರ್ಡಿನಲ್ಲಿ ಒಬ್ಬ ಕಂಟ್ರಾಕ್ಟರು ಇದ್ದಾನೆ, ಅವನ ಹೆಸರು ಹೇಳಿದರೆ ನೋವು ಬರುತ್ತದೆ. ಕಂಟ್ರಾಕ್ಟರ್ ವ್ಯವಹಾರ ಮಾಡಿರುವ ಬಗ್ಗೆ ಅವರ ಮನಸ್ಸಿನಲ್ಲಿ ಏನೋ ಪೆಡಂಭೂತ ಕೂತಿದೆ. ಕಂಟ್ರಾಕ್ಟರ್ ಒಬ್ಬ ಬೋರ್ಡ್ ಮೆಂಬರ್, ಕಂಟ್ರಾಕ್ಟರ್ ಅವನ ಇತಿ ಮಿತಿ ಏನು ಎಂದು ತಿಳಿದುಕೊಂಡು ವ್ಯವಹಾರ ಮಾಡಬೇಕಾಗುತ್ತದೆ. ಅವನು ಬೋರ್ಡಿನಲ್ಲಿ ಕೂತು ನಿರ್ಣಯ ಮಾಡತಕ್ಕ ಅವಕಾಶ ಕೊಡುವುದು ಸರ್ಕಾರದ ಜಾಣ್ಮೆಯಲ್ಲ. ಈ ದಿಸೆಯಲ್ಲಿ ಸರ್ಕಾರ ಎಚ್ಚರಿಕೆ ವಹಿಸಬೇಕು. ಇನ್ನು ಒಂದು ಹೆಜ್ಜೆ ಮುಂಚೆ ಹೋಗಿ ಹೇಳುತ್ತೇನೆ, ಆ ಕಂಟ್ರಾಕ್ಟರನ್ನು ಬೋರ್ಡಿನ ಛೇರ್ಮನ್ ಮಾಡತಕ್ಕ ಹಿನ್ನೆಲೆ ನಡೆಯುತ್ತಿದೆ, ಇದು ಆಗಬಾರದು. ಇದು ಸರ್ಕಾರಕ್ಕೆ ಲಕ್ಷಣ ತರತಕ್ಕ ವ್ಯವಹಾರವಲ್ಲ ; ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಕೊನೆಯದಾಗಿ, ಒಂದು ಮಾತನ್ನು ಹೇಳುತ್ತೇನೆ, ಈ ರಾಜ್ಯದಲ್ಲಿರತಕ್ಕ ಜನ ನಮ್ಮನ್ನು ನೋಡುತ್ತಿದ್ದಾರೆ. ನಮ್ಮ ಹಿನ್ನೆಲೆಯನ್ನು ನೋಡುತ್ತಿದ್ದಾರೆ. ನಮ್ಮ ಬೆನ್ನು ಹಿಂದೆ ಏನು ಇದೆ ಎಂದು ನಮಗೆ ಗೊತ್ತಾಗುವುದಿಲ್ಲ ; ಆದ್ದರಿಂದ ನಮ್ಮ ಮಿತ್ರರು ಎರಡು ಮಾತುಗಳನ್ನು ಏನು ಹೇಳಿದರು, ಅದರ ಪ್ರಕಾರ ನನ್ನ ವ್ಯಕ್ತಿಶಃ ನಡೆ, (ಅವರು ವಿತ್‌ಡ್ರಾ ಮಾಡಿಕೊಂಡಿರಬಹುದು) ವ್ಯಕ್ತಿ ಚಾರಿತ್ರ್ಯದ ಬಗ್ಗೆ ಪ್ರಶ್ನೆ ಬಂದಾಗ ನಾನು ಈ ಸ್ಥಾನದಲ್ಲಿ ಅವಗಳಿಗೆ ಕೊಡುವುದಿಲ್ಲ ಎಂದು ಹೇಳುತ್ತೇನೆ. ಮಂತ್ರಿಗಳ ಮೇಲೆ ಮಾಡಿರತಕ್ಕ ಅಪಾದನೆಯನ್ನು, ಈ ಸಭೆಯು ಅನುಮತಿಯನ್ನು ಕೊಡುವುದಾದರೆ, ನೋಟೀಸ್ ಕೊಟ್ಟು ಎಲ್ಲಾ ದಾಖಲಾತಿಗಳನ್ನು ಇಟ್ಟು ಚರ್ಚೆ ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ. ಮಂತ್ರಿಗಳು ಮಾತನಾಡುವ ಕಾಲದಲ್ಲಿ ಜವಾಬ್ದಾರಿಯಿಂದಿರಬೇಕು. ವಿರೋಧಪಕ್ಷದ ನಾಯಕನಿಗೆ ಎಷ್ಟು ಜವಾಬ್ದಾರಿ ಜವಾಬ್ದಾರಿ ಮಂತ್ರಿಗಳಿಗೂ ಇರಬೇಕು. ನಾವು ಹೋಗತಕ್ಕ ಮಾರ್ಗ ವರ್ತನೆ ನಮ್ಮ ನಡತೆ ಚೆನ್ನಾಗಿರಬೇಕು, ಈ ಸ್ಥಾನದಲ್ಲಿ ಕೂತಿರುವವರೆಗೂ ರಾಜಕಾರಣಿಯಾಗಿರುವವರೆಗೂ, ಇದನ್ನು ಯಾರಾದರೂ ಪ್ರಶ್ನೆ ಮಾಡುವುದಕ್ಕೆ ತಯಾರಿದ್ದರೆ, ನಾನು ಈ ಸ್ಥಾನದಲ್ಲಿ ಅರಗಳಿಗೆ ಮುಂದುವರಿಯುವುದಕ್ಕೆ ತಯಾರಿಲ್ಲ ಎಂದು ಹೇಳಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri V. N. PATIL (Humnabad).—The question of opposing or approving this Appropriation Bill, becomes altogether different. because, there are sever l additioual demands which reqire more amounts and it has not been done and where lesser amounts could have been sufficient, more amounts are given. At the same time, why I

have got my own reservations about it-I am not opposing it-is because, if I am to support this Appropriation Bill, definitely, there must be some cogent evidence for it. The activities of this Government can be considered to be based on its speeches. It will be wisdom rather to consider such things. If the Government stands for Socialitic lines, we will have to support it We will have to support it at any cost, when it is preaching on Socialistic lines, but if the ultimats benfits of its preaching are reaching the vested interests of the monopolists, then definitely we will have to oppose.

The wholesale grain merchants in Bangalore came in a procession to Vidhana Soudha on 21-3-73 to protest against the nationalisation of wholesale trade in foodgrains. By whom was this 'bundh' call was given? By whom was this organised? It was not for the benefit of the common man, peasantry, middleclass. It was organised by the vested interests. Unfortunately, the Chief Minister committed an indiscreet act in gracing that occasion when businessmen of Bangalore were protesting against the policy of Governm nt. The Chief Minister who swears by socialism, secularism and democracy should not have met the processionists who consisted of monopolists and men belonging to big trade. How are these black-marketeers helping the Gavernment? Can you purchase anywere in Bangalore City rice for less than Rs 2-per kg.? The Chief Minister unfortunatley also received a memorandum from these big traders opposing Government decision. I think some Ministers also met these monopolists. These monopolists are citizens representing a particular class of vested interests.

SRI M.Y. GHORPADE.—The Chief Minister has reiterated the policy of the Government. He did not resile from the policy of the Government regarding wholesale trade in foodgrains.

SRI V.N. PATIL.—It may be so. But Government in addition to implementing what they preach should also in their action so show that they are above suspicion and that they are not allying with vested interests. In that way they must make people believe them. In Bangalore we cannot get five kgs.- even 2 kgs. of rice per head. The morale of the ordinary man is shattered; his eeonomic structure has completely collapsed. There is a parallel Government by black-marketeers and by those who are indulging in anti-social activities. But these are the gentlemen who are honoured as V.I.P.s when high dignitories come to the State. For instance, when the Hon' ble Prime Minister visited Basavakalyan, it was a job for me to obtain a pass and get entrance to the function. It took a lot of time for me. But to my great surprise I saw toddy contractors were there securing comfortable places. It my be imagined what is the amount of pressure that those tycoons exert on official circle. Practieally officials are at their mercy. These toddy contractors, though rich persons, cannot sign their names; they can put their thumb impressions only. Yet because they maintain big cars and command all sorts of influences they can command anything from officials. This kind of attitude

(SRI V. N. PATIL)

should change and real practical socialism should be practiced. Now coming to drought situation I am sorry to say that whatever programme is chalked out for the drought area. is not implemented properly because that programme is being mis-used again by these vested interests. Government are aware that 70 per cent of the cattle in those areas are dead and gone and only 25 per cent remain with the peasantry. Likely in the month of May or June when we are hoping welcome rain showers it is likely that most of the agriculturists will not be able to cultivate their lands for want of cattle. The Finance Minister has got a clear perspective of the situation there and the future needs. Then, as the Government make provision for purchasing maximum number of tractors what instructions have they given to the Agro-Industries Corporation for fetching the maximam number of contractors? Then what about the arrangements made for supply of agricultural implements and tools which the agriculturists require. Let the Finance Minister apply his mind to these aspeets first. Let him see in Maharashtra. For speedy implementation of relief measures in drought areas, where one Assistant Commissioner existed it is increased to two; where one Tahisldar existed, there are two in that place; one for day-to-day administration and another for looking after relief measures such measrues should be adopted in our State also to facilitate expenditious disposal of work.

Another very curious thing I noticed was that chits have been issued to farmers to collect seeds for cultivation now in this summer season. Bajra and Jawar seeds will be supplied at subsidised rates I think. This is neither the climate nor the apportune time for sowing of and cultivation of this Bajra and Jawar. The cultivators need these seeds in the month of May and June when rains are expected. Now what is to be done is to build a buffer stock. If it is supplied now, they will not be available when they are necessary. It is a pity that the problems of the peasantry are not understood by the official machinery. The pace of drought operations has also suffered considerably on account of offieial lethargy.

Donated fodder that is being supplied is sold at 25 paise per kg. This fodder is being supplied from the old Mysore area collecting it as dole. What is collected as dole should be supplied free to the poor people in drought areas. That apart even the full quantity of fodder collected from old Mysore area is not loaded to the lorry. Half the lorry is being loaded with rice and that rice is being sent to Gangavathi area. With the result fodder does not reach the drought striken areas; even two tonnes of fodder does not reach its destination. For this, officers are responsible because they are not alert in detecting smuggling of rice. I have represented this to the Finance Minister.

Inhuman conditions could be seen in relief centres. Children of 8 to 10 years are using hammer for metal breaking; their hands are

always bleeding. On the spot or nearby there is not even one First Aid Centre.

Their hands are bleeding and they are suffering from titanous infection. But there is no medical aid for them. While putting the black stone is it not possible to put them just below a tree so that human beings can go there and work in human conditions? Not a single shed has been put up and they have to work in the hot sun in a place where rains have miserably failed under miserable climatic conditions. In these circumstances, if human beings are made to work, will this not remind them of the days of slavery? Are they not entitled to say that they are being exploited more than during the salvery period? With these words, I conclude my speech.

† ಶ್ರೀ ಬೈರಪ್ಪಾಜಿ (ತುರುವೇಕೆರೆ).—ಅಧ್ಯಕ್ಷರೇ, ಈ ದಿವಸ ಮಾನ್ಯ ಅರ್ಥ ಮಂತ್ರಿಗಳು ನಮ್ಮ ಮುಂದೆ ಮಂಡಿಸಿರತಕ್ಕಂಥ ಮೈಸೂರು ಅಪ್ರೋಪ್ರಿಯೇಷನ್ ಬಿಲ್ 1973ಕ್ಕೆ ನಾನು ಹೃತ್ಪೂರ್ವಕವಾಗಿ ಬೆಂಬಲ ನೀಡುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ.

ಡಿಮ್ಯಾಂಡ್ ನಂಬರ್ 2 ತೆಗೆದುಕೊಂಡರೆ ಲ್ಯಾಂಡ್ ರೆವಿನ್ಯೂ ಇಲಾಖೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಹಿಂದೆ ಇದ್ದಂತೆ ಇಲ್ಲ. ಈ ರೆವಿನ್ಯೂ ಇಲಾಖೆ ಸ್ವಲ್ಪ ಉತ್ತಮ ಪರಿಸ್ಥಿತಿಗೆ ಬಂದಿರುವುದನ್ನು ನಾವು ಕಾಣುತ್ತಿದ್ದೇವೆ. ಮೊದನೆಯದಾಗಿ ಈ ಇಲಾಖೆಯಲ್ಲಿ ವಸೂಲಿ ವ್ಯವಸ್ಥೆಯನ್ನು ಚೆನ್ನಾಗಿ ಮಾಡಿದ್ದಾರೆ. ಮತ್ತು ಸಬ್ ಡಿವಿಷನ್ ಆಫೀಸರಿಗೆ ಜೀಪನ್ನು ಒದಗಿಸಿ ಉತ್ತಮ ವೇಗದಲ್ಲಿ, ಹೆಚ್ಚಿನ ವೇಗದಲ್ಲಿ ಕೆಲಸಕಾರ್ಯಗಳು ಆಗುವುದಕ್ಕೆ ನೆರವನ್ನು ಮಾಡಿದ್ದಾರೆ. ಹಾಗೆಯೇ ತಾಸೀಲ್ದಾರರ ಮಟ್ಟದಲ್ಲಿ ತಾಸೀಲ್ದಾರರಿಗೂ ಕೂಡ ಅನೇಕ ಕೆಲಸಕಾರ್ಯಗಳು ಮಾಡತಕ್ಕಂಥ ಸಂದರ್ಭದಲ್ಲಿ ಅವರಿಗೂ ಸಹ ವಾಹನದ ಆವಶ್ಯಕತೆ ಬೇಕಾಗಿರುವುದರಿಂದ ಅವರಿಗೂ ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡಿ. ಬಹುಭಾಗ ಕಾರ್ಯ ತಾಲ್ಲೂಕು ಆಫೀಸಿನ ಮಟ್ಟದಲ್ಲೇ ಇರುತ್ತವೆ. ಮತ್ತು ಸಬ್‌ಡಿವಿಷನ್ ಆಫೀಸಿನ ಮಟ್ಟದಲ್ಲೂ ರೈತರಿಗೆ ಆಗಬೇಕಾದಂಥ ಕೆಲಸ ಕಾರ್ಯಗಳು ಬಹಳ ಇರುತ್ತವೆ. ಯಾವ ಕೆಲಸ ಬಂದರೂ ಕೂಡ, ಯಾವ ಅಧಿಕಾರಿ ಬಂದರೂ ಕೂಡ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಂತೆ ಹೆಚ್ಚು ಸಂಪರ್ಕ ಇರುತ್ತದೆಯೇ ವಿನಾ ಇತರೇ ಇಲಾಖೆಗಳ ಸಂಪರ್ಕ ಜಾಸ್ತಿಯಾಗಿ ಹೊಂದುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹೆಚ್ಚಿನ ಜವಾಬ್ದಾರಿ ರೆವಿನ್ಯೂ ಇಲಾಖೆಗೆ ಇರತಕ್ಕಂಥ ಸಂದರ್ಭದಲ್ಲಿ ಅವರಿಗೆ ಸಾಕಷ್ಟು ವಾಹನ ಸೌಕರ್ಯವನ್ನೂ ಮತ್ತು ಸಿಬ್ಬಂದಿಯನ್ನೂ ಕೊಡಬೇಕು. ಈ ಇಲಾಖೆಗೆ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಒಪ್ಪಿಗೆ ಕೇಳತಕ್ಕಂಥ ಸಂದರ್ಭದಲ್ಲಿ ಇದು ಉತ್ತಮವಾಗಿ ನಡೆಯುವುದಕ್ಕೆ ಇನ್ನೂ ಹೆಚ್ಚು ಖರ್ಚಾದರೂ ಪರವಾಯಿಲ್ಲ ಈ ಇಲಾಖೆಯ ವ್ಯವಸ್ಥೆ ಚೆನ್ನಾಗಿ ನಡೆಯುವ ರೀತಿಯಲ್ಲಿ ಗಮನ ಕೊಡಬೇಕೆಂದು ನಾನು ಹೇಳುತ್ತೇನೆ. ಉದಾಹರಣೆ ಹೇಳುವುದಾದರೆ ನನ್ನ ಕ್ಷೇತ್ರವಾದ ತುರುವೇಕೆರೆ ಬಗ್ಗೆ ಹೇಳುತ್ತೇನೆ. ಅಲ್ಲಿ ತಾಲ್ಲೂಕು ಆಫೀಸಿನ ಒಂದು ಸಿಬ್ಬಂದಿ ವರ್ಗದ ವಿಷಯ ಹೇಳಬೇಕಾದರೆ 1934 ನೇ ಇಸವಿಯಲ್ಲೋ ಅಥವಾ 1938 ನೇ ಇಸವಿಯಲ್ಲೋ ನೇಮಿಸಿದಂಥ ಸಿಬ್ಬಂದಿ ಸಂಖ್ಯೆ ಈವೊತ್ತಿನವರೆಗೂ ಕೂಡ ಕೆಲಸ ಮಾಡುತ್ತಾ ಇದೆ ಎಂದರೆ ಎಷ್ಟು ಶೋಚನೀಯವಾದುದು. ಅಲ್ಲಿ ಕೆಲಸದ ಒತ್ತಡ ಜಾಸ್ತಿಯಾಗಿದೆ ಆದರೆ ಸಿಬ್ಬಂದಿ ವರ್ಗ ಕಡಿಮೆಯಾಗಿದೆ. ಈ ಒಂದು ದೃಷ್ಟಿಯಲ್ಲಿ ಪರಿಪಕ್ವವಾಗಿ ಸಮರ್ಪಕವಾಗಿ ಆಗತಕ್ಕಂಥಾದ್ದು ಉತ್ತಮ ಎಂದು ನಾನಾದರೂ ಕೂಡ ಹೇಳುತ್ತೇನೆ. ಅದಕೋಸ್ಕರವಾಗಿ ಅಲ್ಲಿಯ ಕೆಲಸಕ್ಕನುಗುಣವಾಗಿ ಸಿಬ್ಬಂದಿ ವರ್ಗವನ್ನು ನೇಮಿಸಿ ಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ ರೈತರಿಗೆ ಹೆಚ್ಚಾಗಿ ಆಗಬೇಕಾದಂಥ ಕೆಲಸ ಕಾರ್ಯಗಳು ತಾಲ್ಲೂಕ್ ಆಫೀಸಿನ ವತಿಯಿಂದಲೇ ಆಗಬೇಕಾಗಿರುವುದರಿಂದ ಮತ್ತು ರೈತರ ಹಿತದೃಷ್ಟಿಯಿಂದ ಅವರ ಕೆಲಸ ಕಾರ್ಯಗಳು ಉತ್ತಮವಾಗಿ ನಡೆಯಬೇಕು ಎನ್ನುವ ದೃಷ್ಟಿಯಿಂದ ಅವರಿಗೆ ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ನಾನಾದರೂ ಕೂಡ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 3 ಈ ಬಗ್ಗೆ ಹೇಳಬೇಕಾದರೆ ಇದು ಹಿಂದಿನ ಸರ್ಕಾರ ಮಾಡಿದ ಪಾಪದ ಕೆಲಸ ಎಂದು ನಾನಾದರೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು

(ಶ್ರೀ ಬಿ. ಬೈರಪ್ಪಾಜಿ)

ಮಾಡಿದ ಪಾಪದ ಕೆಲಸವನ್ನು ಗತ್ಯಂತರವಿಲ್ಲದೆ, ವಿಧಿಯಿಲ್ಲದೆ ಮುಂದುವರಿಸಿಕೊಂಡು ಹೋಗ ತಕ್ಕಂಥ ಕಾರ್ಯ ನಮ್ಮ ಸರ್ಕಾರಕ್ಕೆ ಬಂದಿದೆ. ಆದರೂ ಕೂಡ ವಿಧಿ ಇಲ್ಲದೆ ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಈ ಒಂದು ಇಲಾಖೆಯಲ್ಲಿ ನೈತಿಕಮಟ್ಟ ಕಡಿಮೆ ಆದರೂ ಕೂಡ ಸರ್ಕಾರ ಇದನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಸಲಿಕ್ಕೆ ಇನ್ನೂ ಹೆಚ್ಚಿನ ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಈ ಒಂದು ಬಾಬಿನಲ್ಲಿ ಹೇಳಬೇಕಾದರೆ ಈಗ ಟಾಡಿ ಹರಾಜನ್ನು ಜಿಲ್ಲಾವಾರಾಗಿ ಹರಾಜು ಹಾಕುತ್ತಿದ್ದಾರೆ. ನೀವು ಸರಿಯಾದ ರೀತಿಯಲ್ಲಿ ಸಮಾಜವಾದ ಧ್ಯೇಯವನ್ನು ಇಟ್ಟುಕೊಂಡು ನಡೆಸಬೇಕೆಂದರೆ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಬೇಕು. ಇವೆಲ್ಲಿರ ತಕ್ಕಂಥ ಐಶ್ವರ್ಯವನ್ನು ಸಾಮಾನ್ಯ ಜನಕ್ಕೆ ಮುಟ್ಟುವಂತೆ ಮಾಡಬೇಕು. ಆದುದರಿಂದ ಈ ಇಲಾಖೆಯಲ್ಲಿ ಈ ಟಾಡಿ ಮತ್ತು ಲಿಕ್ಕರ್‌ನ್ನು ಅಂಗಡಿವಾರಾಗಿ ಹರಾಜು ಹಾಕುವಂತೆ ಮಾಡಬೇಕು. ಈವಾಗ ಸ್ಟೇಟ್ ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಮಾಡತಕ್ಕಂಥ ಹರಾಜನ್ನು ಈ ವರ್ಷವೇ ಕೂಡಲೇ ನಿಲ್ಲಿಸತಕ್ಕಂಥ ವ್ಯವಸ್ಥೆ ಆರ್ಥಿಕ ಮಂತ್ರಿಗಳು ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಈರೀತಿ ಮಾಡಿದರೆ ಹೆಚ್ಚಿನ ಹಣವನ್ನು ತನ್ಮೂಲಕ ಸರ್ಕಾರದ ಒಂದು ಬೊಕ್ಕಸಕ್ಕೆ ಪಡೆಯುವುದರ ಮೂಲಕ ಸಮಾಜವಾದದ ಒಂದು ಹಂತವನ್ನು ತರುವುದಕ್ಕೆ ಸಾಧ್ಯ. ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ನನ್ನ ಮನೋಭಾವವನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಅದರಲ್ಲಿ ಹಲವಾರು ರೀತಿಯಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಿದ್ದೀರಿ. ಈ ಒಂದು ಜಿ. ಎ. ಡಿ.ನಲ್ಲಿ ನೀವು ಖರ್ಚು ಮಾಡತಕ್ಕಂಥ ಹಣ ಸಾಕಷ್ಟುಮಟ್ಟಿಗೆ ವರಪ್ರದವಾಗಿದೆ. ಎಂದು ನಾನಾದರೂ ಕೂಡ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಟಿ. ಎ ಮತ್ತು ಇತರೇ ಖರ್ಚುಗಳಿಗಾಗಿ ಏನು ಹಣವನ್ನು ಖರ್ಚು ಮಾಡಿದ್ದೀರೋ ಅದು ಸಾಕಷ್ಟುಮಟ್ಟಿಗೆ ಉಪಯೋಗವಾಗಿದೆ. ಅದನ್ನು ನಾವು ಒಪ್ಪತಕ್ಕಂಥಾದ್ದು ಸೂಕ್ತ. ತಾವು ಖರ್ಚು ಮಾಡಿದತಕ್ಕಂಥ ಬಾಬುಗಳು ಯಶಸ್ವಿಯಾಗಿ ನಡೆದಿವೆ ಎಂದು ನಾನಾದರೂ ಕೂಡ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು 13 ನೇ ಡಿಮ್ಯಾಂಡ್ ಬಗ್ಗೆ ಹೇಳುವುದಾದರೆ ಅದಕ್ಕೂ ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದೀರಿ. ಅನೇಕ ಹುದ್ದೆಗಳನ್ನು ನಿರ್ಮಿಸಿದ್ದೀರಿ. ಇವು ಅತ್ಯಾವಶ್ಯಕವಾಗಿ ಬೇಕಾಗಿತ್ತು ಎಂದು ನಾನಾದರೂ ಕೂಡ ಹೇಳುತ್ತೇನೆ. ಈ ಒಂದು ಇಲಾಖೆಯಲ್ಲಿ ಉತ್ತಮವಾದ ಕೆಲಸವನ್ನು ನಡೆಸುತ್ತಿದ್ದೀರಿ. ಇದು ದೇಶದ ಮೂಲೆ ಮೂಲೆಯಲ್ಲೂ ಕೂಡ ಇನ್ನೂ ವ್ಯವಸ್ಥಿತವಾದ ರೀತಿಯಲ್ಲಿ ನಡೆಯಬೇಕು. ಸಾಮಾನ್ಯ ಜನರ ಹಿತದೃಷ್ಟಿಯಿಂದ ಸಾಮಾನ್ಯ ಜನರ ಹಿತವನ್ನು ಕಾಪಾಡ ತಕ್ಕಂಥ ಈ ಇಲಾಖೆಗೆ ರಕ್ಷಣೆಯನ್ನು ಕೊಡತಕ್ಕಂಥ ಇಲಾಖೆ. ಇದು ಇನ್ನೂ ಕೂಡ ವ್ಯವಸ್ಥಿತವಾದ ರೀತಿಯಲ್ಲಿ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುವುದು ಸೂಕ್ತವಾಗಿದೆ ಎಂದು ನಾನಾದರೂ ಕೂಡ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಇಲಾಖೆಯಲ್ಲಿ ಅನೇಕರು ಉತ್ತಮವಾದ ಅಧಿಕಾರಿಗಳು ಇದ್ದಾರೆ. ಅವರು ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದಾರೆ.

ಈ ಇಲಾಖೆ ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂದು ನಮಗೆ ತೃಪ್ತಿಯಾದರೂ ಕೂಡ ಇನ್ನೂ ದಕ್ಷತೆಯ ಮತ್ತು ಪ್ರಾಮಾಣಿಕತೆಯ ಅಭಾವ ಅಲ್ಲಲ್ಲಿವೆ ಎಂಬುದನ್ನು ಕಂಡಿದ್ದೇನೆ. ಅನೇಕಸಾರಿ ಈ ಸಭೆಯಲ್ಲಿ ಟೀಕೆಟಿಪ್ಪಣಿಗಳು ಬರುತ್ತಿವೆ ಇದನ್ನು ಮುಂದುವರಿಸಿಕೊಂಡು ಹೋಗ ತಕ್ಕದ್ದು ಸೂಕ್ತವಲ್ಲವೆಂದು ನಾನಾದರೂ ಭಾವಿಸುತ್ತೇನೆ. ಆದುದರಿಂದ ಈ ಇಲಾಖೆ ಸ್ವಲ್ಪ ಚೇತನವನ್ನು ಹೊಂದಿದ ಇಲಾಖೆಯಾಗಬೇಕು. ಅಲ್ಲಿ ಲೋಪದೋಷಗಳು ಕಾಣುತ್ತಿವೆ. ಸಾಕಷ್ಟು ಹಣವನ್ನು ಖರ್ಚು ಮಾಡಿದರೂ ಕೂಡ ಅದರ ಪ್ರತಿಫಲ ಉತ್ತಮ ರೀತಿಯಲ್ಲಿ ಬರಬೇಕಾದ್ದು ಮುಖ್ಯ. ಅಂಥ ಉತ್ತಮ ಗುಣವನ್ನು ಸ್ವಲ್ಪಮಟ್ಟಿಗೆ ಕಡಿಮೆ ಪ್ರಮಾಣದಲ್ಲಿ ಕಾಣುತ್ತಿರತಕ್ಕ ಕಾಲದಲ್ಲಿ ಸರ್ಕಾರದ ಪ್ರತಿಯೊಂದು ಹಂತದಲ್ಲಿಯೂ ತಾಲ್ಲೂಕು ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ವ್ಯವಸ್ಥಿತವಾದ ಪೋಲೀಸ್ ಸಿಬ್ಬಂದಿಯನ್ನು ನೇಮಿಸುವುದು ಉತ್ತಮ. ಅಲ್ಲದೆ ಆ ಇಲಾಖೆಯ ಅಧಿಕಾರಿಗಳಿಗೆ ಸರಿಯಾದ ಶಿಕ್ಷಣವನ್ನು ಕೊಡುವ ಕೆಲಸವೂ ಕೂಡ ಆಗಬೇಕು. ಸಾರ್ವಜನಿಕರಲ್ಲಿ ಯಾವರೀತಿ ನಡೆದುಕೊಳ್ಳಬೇಕು ಎನ್ನುವುದನ್ನು ಕೂಡ ಅವರಿಗೆ ಕಲಿಸತಕ್ಕದ್ದು, ಶಿಕ್ಷಣವನ್ನು ಕೊಡತಕ್ಕದ್ದು ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಇಲಾಖೆಗೆ ಬಂದಿರತಕ್ಕ ಕಳಂಕವನ್ನು ಇನ್ನು ಮುಂದಾದರೂ ಕೂಡ ತೊಡೆದು ಹಾಕಿ ಸರಿಪಡಿಸತಕ್ಕ ದಾರಿಯಲ್ಲಿ ಪ್ರಯತ್ನ ಪಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

5-00 P.M.

ವಿದ್ಯಾಭ್ಯಾಸ ಇಲಾಖೆ ಸಾಕಷ್ಟು ಪ್ರಗತಿಯನ್ನು ಪಡೆದಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕೆ ಕಾರಣವಿಷ್ಟೆ. ಪ್ರಾಥಮಿಕ ಶಾಲೆಗಳ ಹಂತದಲ್ಲಿ ಶಾಲೆಗಳನ್ನು ಪ್ರಾರಂಭ ಮಾಡುವ ದಿಸೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಪ್ರಾಥಮಿಕ ಶಾಲೆಗಳ ಹಂತದಲ್ಲಿ ಅಧ್ಯಾಪಕ ವರ್ಗಕ್ಕೆ ಸ್ವಲ್ಪಮಟ್ಟಿಗಾದರೂ ತರಬೇತಿಯನ್ನು ಕೊಟ್ಟು ಮಕ್ಕಳಿಗೆ ಕೊಡತಕ್ಕ ಶಿಕ್ಷಣದ ಕ್ರಮವನ್ನು ಕಲಿಸತಕ್ಕದ್ದು ಬಹಳ ಮುಖ್ಯವಾದ ಕಾರ್ಯ. ಪಾಠಶಾಲೆಗಳಲ್ಲಿ ಅಭ್ಯಾಸ ಮಾಡತಕ್ಕ ಮಕ್ಕಳಿಗೆ ಸರಿಯಾದ ಶಿಕ್ಷಣವನ್ನು ಒದಗಿಸತಕ್ಕ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ಯೋಚನೆ ಮಾಡಿ ಮುಂದು ವರಿಯಬೇಕು. ಈ ಹಂತದಲ್ಲಿ ಸ್ವಲ್ಪಮಟ್ಟಿಗೆ ಕಳಂಕವನ್ನು ತರತಕ್ಕ ರೀತಿಯ ವಿದ್ಯಾಭ್ಯಾಸ ನಡೆಯುತ್ತಿದೆ ಎಂದು ನಾನಾದರೂ ಕೂಡ ಹೇಳುತ್ತಿದ್ದೇನೆ. ಆದುದರಿಂದ ಪ್ರಾಥಮಿಕ ಶಾಲೆಗಳ ಹಂತದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ವ್ಯವಸ್ಥಿತ ರೀತಿಯಲ್ಲಿ, ಸಮರ್ಪಕವಾಗಿ ಆಗದೆ ಇದ್ದರೆ ಮುಂದಿನ ಮಕ್ಕಳ ಭವಿಷ್ಯ ಉತ್ತಮವಾಗಲಾರದು. ಈ ಹಂತದಲ್ಲಿ ಸಾಕಷ್ಟು ರೀತಿಯಲ್ಲಿ ಉತ್ತಮವಾದ ವಿದ್ಯಾಭ್ಯಾಸವನ್ನು ಕೊಡಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಈ ವರ್ಷ 240 ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ ಸಾಕಷ್ಟು ಪ್ರಗತಿಯಾಗಿದೆ ಎಂದು ನಾವಾದರೂ ಸಂತೋಷದಿಂದ ಹೇಳಬೇಕು. ಅಲ್ಲಿಗೆ ಬೇಕಾದ ಸಿಬ್ಬಂದಿ ವರ್ಗವನ್ನೂ ಕೂಡ ಶೀಘ್ರವಾಗಿ ನೇಮಿಸಿದ್ದಾರೆ. ಸ್ವಲ್ಪ ಲೋಪದೋಷಗಳು ಅಲ್ಲಲ್ಲಿ ಕಾಣುತ್ತಿದ್ದರೂ ಕೂಡ ಇನ್ನು ಮುಂದೆ ಅದನ್ನು ಸರಿಪಡಿಸತಕ್ಕ ಕ್ರಮದಲ್ಲಿ ಪ್ರಯತ್ನ ನಡೆಯುತ್ತದೆ, ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಹಕಾರ ಇಲಾಖೆಯಲ್ಲಿ ಅನೇಕ ಕಡೆ ಹಣ ದುರುಪಯೋಗವಾಗುವ ಸಂದರ್ಭಗಳಿವೆ, ವಿಶೇಷವಾಗಿ ಒಂದು ನ್ಯಾಯಾಲಯನ್ನು ಪ್ರಾರಂಭ ಮಾಡಿ ಎಲ್ಲಿ ಹಣ ದುರುಪಯೋಗವಾಗುತ್ತದೆ. ಅಲ್ಲಿ ಒಂದು ವರ್ಷದೊಳಗೆ ತಕ್ಸೀರು ಸಾಬೀತು ಮಾಡಬೇಕು ಮತ್ತು ತಕ್ಸೀರು ಸಾಬೀತಾದರೆ ಶಿಕ್ಷೆ ವಿಧಿಸಿ ಸಹಕಾರ ಸಂಘ ಹಣಕ್ಕೆ ತನ್ಮೂಲಕ ಜನಗಳ ಹಣಕ್ಕೆ ಲೋಪ ಬಾರದಂತೆ ವ್ಯವಸ್ಥೆಯನ್ನು ಮಾಡತಕ್ಕದ್ದು ಉಚಿತ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಈ ಇಲಾಖೆ ಜನಗಳಿಂದ, ಜನಗಳಿಗಾಗಿ ದುಡಿಯತಕ್ಕ ಇಲಾಖೆ, ಜನಗಳ ಆರ್ಥಿಕ, ಸಾಮಾಜಿಕ ಬೆಳವಣಿಗೆಯನ್ನು ತರತಕ್ಕ ಇಲಾಖೆ. ಈ ಇಲಾಖೆಯಲ್ಲಿ ಎಲ್ಲಿ ನೋಡಿದರೂ ಕೂಡ ಹಣದ ದುರುಪಯೋಗ, ಹಣದ ಅವ್ಯವಹಾರ ಇವುಗಳು ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿವೆ. ಇದು ಸರಿಯಲ್ಲ ಎಂದು ನಾನಾದರೂ ಕೂಡ ಭಾವಿಸುತ್ತೇನೆ. ಈ ಬಗ್ಗೆ ಕ್ರಮ ತೆಗೆದುಕೊಂಡು ಯಾವ ರೀತಿಯಲ್ಲಿಯೂ ಕೂಡ ಜನತೆಯ ಹಣ, ಸಹಕಾರ ಸಂಸ್ಥೆಯ ಹಣ ಲೋಪವಾಗದಂತೆ ಸೂಕ್ತ ಬಂದೋಬಸ್ತು ಮಾಡತಕ್ಕ ದಾರಿಯಲ್ಲಿ ಸರ್ಕಾರ ನಡೆಯಬೇಕೆಂದು ಹೇಳುತ್ತೇನೆ.

ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಅನೇಕ ರೀತಿಯ ಪ್ರಗತಿಪರ ಕಾರ್ಯಗಳು ನಡೆದಿವೆ. ಆದರೂ ಕೂಡ ಇನ್ನೂ ನಡೆಯಬೇಕಾದ್ದು ಬಹಳವಿದೆ. ಮಾನ್ಯ ಅರ್ಥಸಚಿವರು ಸಣ್ಣ ನೀರಾವರಿ ಯೋಜನೆಗಾಗಿ ಸಾಕಷ್ಟು ಹಣವನ್ನು ಕೊಟ್ಟಿಲ್ಲ. ಕಳೆದ ವರ್ಷ ಸಾಕಷ್ಟು ಹಣವನ್ನು ಖರ್ಚು ಮಾಡಿಲ್ಲ. ಈ ವರ್ಷವೂ ಕೂಡ ಹೆಚ್ಚು ಹಣವನ್ನು ಕೊಟ್ಟಿಲ್ಲ. ಜನಗಳಿಗೆ ನೆಮ್ಮದಿಯನ್ನು ತರತಕ್ಕ, ಆರ್ಥಿಕವಾಗಿ ಸಹಾಯ ಮಾಡತಕ್ಕ ಈ ಸಣ್ಣ ನೀರಾವರಿ ಯೋಜನೆಗಳು ಎಂದರೆ ಕೆರೆಗಳು ಮತ್ತು ಲಿಫ್ಟ್ ಇರಿಗೇಷನ್ ಇವುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರಂಭ ಮಾಡಬೇಕು, ತನ್ಮೂಲಕ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಬರಗಾಲ ಪರಿಹಾರದ ಬಗ್ಗೆ ಹೇಳಬೇಕಾದರೆ, ಗುಲ್ಬರ್ಗ, ಬೀದರ ಜಿಲ್ಲೆಗಳಲ್ಲಿನ ತೊಂದರೆಯನ್ನು ನಾವು ಅರಿತಿದ್ದೇವೆ. ಅಲ್ಲಿರುವ ತೊಂದರೆಯನ್ನು ನಿವಾರಣೆ ಮಾಡಲು ಸರ್ಕಾರ ಪ್ರಯತ್ನಿಸಿರತಕ್ಕದ್ದು ಸೂಕ್ತ. ಒಂದು ಮಾತನ್ನು ಮಾನ್ಯ ಮಂತ್ರಿಗಳಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಮ್ಮಲ್ಲಿಯೂ ಕೂಡ ಅನೇಕ ಭಾಗಗಳಲ್ಲಿ ಬಹಳ ತೊಂದರೆಯಾಗಿದೆ. ಅವನ್ನು ನಾನು ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಕುಡಿಯುವುದಕ್ಕೆ ನೀರಿಲ್ಲ, ದನಕರುಗಳಿಗೆ ಮೇವಿಲ್ಲ. ಗುಲ್ಬರ್ಗ ಮುಂತಾದ ಕಡೆ ಆಗಿರುವಷ್ಟು ತೊಂದರೆ ಇಲ್ಲದೆ ಇದ್ದರೂ ಕೂಡ ಕುಡಿಯುವುದಕ್ಕೆ ನೀರು, ದನಕರುಗಳಿಗೆ ಮೇವು ಇಲ್ಲ ಮತ್ತು ಜನಗಳಿಗೆ ಕೂಲಿ ಸಿಕ್ಕುವಂತಾಗಲು ಕೆಲಸಗಳನ್ನು ಪ್ರಾರಂಭ ಮಾಡಿಲ್ಲ. ತುಮಕೂರು ಜಿಲ್ಲೆಯ ಅನೇಕ ಭಾಗಗಳಲ್ಲಿ, ಚಿತ್ರದುರ್ಗ ಜಿಲ್ಲೆ ಮತ್ತು ಕೋಲಾರ ಜಿಲ್ಲೆಯ ಅನೇಕ ಭಾಗಗಳಲ್ಲಿ ತೊಂದರೆಯಾಗಿದೆ. ಈ ಭಾಗಗಳನ್ನು ಕೂಡ ನಿರ್ಲಕ್ಷ್ಯ ಮಾಡಲಾಗಿದೆ ಎನ್ನುವ ನಂಬಿಕೆ ಇದೆ ದಯಮಾಡಿ ಕೂಡಲೇ ಕುಡಿಯುವ ನೀರಿನ

(ಶ್ರೀ ಬಿ. ಬೈರಪ್ಪಾಜಿ)

ವ್ಯವಸ್ಥೆ ಮಾಡತಕ್ಕದ್ದು, ದನಕರುಗಳಿಗೆ ಮೇವನ್ನು ಒದಗಿಸತಕ್ಕದ್ದು ಈ ವ್ಯವಸ್ಥೆ ಮಾಡ ಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಂಡು, ನಮ್ಮ ಮುಂದೆ ಇಟ್ಟಿರತಕ್ಕ ಹೆಚ್ಚುವರಿ ಬೇಡಿಕೆಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* Sri C. M. ARUMUGHAM.—Sir, I have a point to make. Article 205 (1) (a) of the Constitution reads thus :

> "205. (1) (a) if the amount authorised by any law made in accordance with the provisions of article 204 to be expended for a particular service for the current financial year is found to be insufficient for the purposes of that year or when a need has arisen during the current financial year for supplementary or additional expenditure upon some new service not contemplated in the annual financial statement for that year, or......"

Sir, I would like to bring to your kind notice that the Government and Mr. Ghorpade with all his rich experience and expertise knowledge of economics is misusing his position.

Sri M. Y. GHORPADE.—Sir, I may point that a similar point was raised two days ago and the Chair has given a ruling to that effect. This is a thing which happens not only in Mysore State but almost all other States do have supplementary and additional demands...

Sri C. M. ARUMUGHAM.—I want the Hon. Finance Minister to compare always with what is good and not with what is bad.

Sir, the amount of about 11 crores that is now asked for by way of Supplementary Demands is not for any particular service. It is for about 26 items and is not new also. They knew it. When the budget is prepared the officer in charge of budget must forsee these things They have 365 days at their disposal ; they have a big army of officers; so many section officers ; so many Clerks and any number of IAS Secretaries, who are now called as Commissioners. They have also the Financial Advisor. In case any particular item is overlooked ...

Sri M. Y. GHORPADE.—Don't you expect the Hon'ble Speaker to give a Rulling ?

Sri C. M. ARUMUGHAM.—All over the country there are Rulings on this We are following very old practices. 100 years back, they used to say that the world was flat. Now things have changed. The Hon'ble Minister for Finance, I think, is arguing a very bad case. I want a new Ruling because it is a new set up.

Mr. DEPUTY SPEAKER.—This is a wonderful Point of Order which I have come across today. This was raised some time back and it was replied also. But the vehemence is original. I may add it is valourous also. But it is a thing which has been almost decided. I

could have understood it if it had been raised yesterday. Supplementary Demands have already been voted and accepted unanimously by the House. Now we are in the midst of Appropriation Bill. At this late hour, there is no force in raising that point. Morever this is a practice adhered to in the Government of India and other State Legislatures. Therefore, I am unable to uphold the Point of Order and I hope the hon. member Sri C. M. Arumugham would also appreciate it.

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಉಪಾಧ್ಯಕ್ಷರೇ ನನ್ನದು ಅರ್ಧಗಂಟೆ ಚರ್ಚೆ ಇದೆ. ಅದನ್ನು ಇವೊತ್ತು ತೆಗೆದುಕೊಳ್ಳುತ್ತೀರಾ ಹೇಗೆ ಎಂಬುದನ್ನು ಹೇಳಿದರೆ ನಮಗೆ ಇಲ್ಲಿರುವುದಕ್ಕೆ ಅನುಕೂಲವಾಗುತ್ತದೆ.

Mr. DEPUTY SPEAKER.—Appropriation Bill will have to be passed, the half-an-hour discussion must also be concluded today.

Sri T. R. SHAMANNA.—Appropriation Bill can be taken up jointly or severally.

† ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಉಪಾಧ್ಯಕ್ಷರೇ, ಇವೊತ್ತಿನದಿವಸ ಈ ಸಭೆಯ ಮುಂದೆ ಇರುವ ಹೆಚ್ಚುವರಿ ಬೇಡಿಕೆಗಳು ಮತ್ತು ಅಪ್ರೋಪ್ರಿಯೇಷನ್ ಬಿಲ್ಲಿಗೆ ಬೆಂಬಲವನ್ನು ಕೊಡುತ್ತಾ, ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಈ ಸರ್ಕಾರ ಸಮಾಜವಾದ ರಚನೆ ಮಾಡುವುದಕ್ಕೋಸ್ಕರ ಹೊರಟಿದೆ. ಈ ಬಗ್ಗೆ ಸರ್ಕಾರದವರು ಸಾಕಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಈ ಸರ್ಕಾರದ ಮೇಲೆ ಜನಗಳಿಗೆ ವಿಶ್ವಾಸ ಹೆಚ್ಚಬೇಕಾದರೆ ಅವರು ಮಾಡಿದ ಘೋಷಣೆಗಳನ್ನೂ, ಮತ್ತು ನೀಡಿದ ವಚನವನ್ನೂ ಸರ್ಕಾರ ಪೂರೈಸಬೇಕು.

ಎರಡನೆಯದು ಏನೆಂದರೆ ಕ್ಲೀನ್ ಅಡ್ಮಿನಿಸ್ಟ್ರೇಷನ್ ಅನ್ನು ಜನಗಳಿಗೆ ಕೊಟ್ಟರೆ ಸರ್ಕಾರದ ಮೇಲೆ ವಿಶ್ವಾಸ ಹೆಚ್ಚುತ್ತದೆ. ಈ ದೃಷ್ಟಿಯಿಂದ ಹೆಚ್ಚುವರಿ ಬೇಡಿಕೆಗಳನ್ನು ನಾವು ನೋಡಿದರೆ ಸರ್ಕಾರ ಜನಗಳಿಗೆ ಕೊಟ್ಟಂತಹ ವಚನವನ್ನು ಎಲ್ಲಿಯವರೆಗೆ ಪಾಲಿಸುವುದಿಲ್ಲ ಅಲ್ಲಿಯವರೆಗೆ ಜನಗಳಿಗೆ ಸರ್ಕಾರದ ಮೇಲೆ ವಿಶ್ವಾಸ ಬರುವುದಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಕೈಗಾರಿಕಾ ಖಾತೆಯಲ್ಲಿ ನೇಕಾರರ ಕೈಗಾರಿಕೆಯ ಬಗ್ಗೆ ಒಂದು ಸೆಪರೇಟ್ ಡೈರೆಕ್ಟೋರೇಟ್ ಪ್ರಾರಂಭ ಮಾಡುತ್ತೇವೆ ಎಂದು ಕಳೆದ ಅಧಿವೇಶನದಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಸಭೆಯಲ್ಲಿ ವಚನವನ್ನು ಕೊಟ್ಟಿದ್ದಾರೆ. ಆದರೆ ಆ ಬಗ್ಗೆ ಸಪರೇಟ್ ಡೈರೆಕ್ಟೋರೇಟ್ ಮಾಡುವ ಬಗ್ಗೆ ಯಾವ ರೀತಿಯಿಂದಲೂ ಬಜೆಟ್ ಅಂದಾಜು ಪತ್ರಿಕೆಯಲ್ಲಾಗಲೀ, ಹೆಚ್ಚುವರಿ ಬೇಡಿಕೆಯಲ್ಲಾಗಲೀ ಉಲ್ಲೇಖ ಇಲ್ಲ. ಈ ದೃಷ್ಟಿಯಿಂದ ಜನಗಳಿಗೆ ಕೊಟ್ಟಂತಹ ವಚನವನ್ನು ಇಲ್ಲಿಯವರೆಗೂ ಪಾಲಿಸಿಲ್ಲ ಎಂದು ಹೇಳಲು ವಿಷಾದವಾಗುತ್ತದೆ. ಆದ್ದರಿಂದ ಸರ್ಕಾರದವರು ಏನಾದರೂ ವಚನವನ್ನು ಕೊಟ್ಟರೆ ಅದನ್ನು ಪಾಲಿಸಬೇಕು ಎಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ನಿರ್ಮಲವಾದಂತಹ ಆಡಳಿತವನ್ನು ಕೊಡುವುದೂ ಸರ್ಕಾರದ ಮೇಲೆ ಹೊಣೆ ಇದೆ. ಎಲ್ಲಾ ವಿಷಯಗಳಲ್ಲೂ ಜನಗಳಿಗೆ ನಿರ್ಮಲವಾದ ಆಡಳಿತ ಸಿಕ್ಕಿಲ್ಲ. ಇದು ನಿಜವಾಗಿಯೂ ವಿಷಾದ ಎನಿಸುತ್ತದೆ. ಮಾನ್ಯ ಅರ್ಥ ಮಂತ್ರಿಗಳ ಅಧೀನದಲ್ಲಿದ್ದಂತಹ ಸೇಲ್ಸ್ ಟ್ಯಾಕ್ಸ್ ಇಲಾಖೆಯ ವಿಷಯದಲ್ಲಿ ಹೇಳುವುದಾದರೆ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ನಿರ್ಮಲವಾದ ರೀತಿಯಿಂದ ನಡೆದುಕೊಳ್ಳದೇ ಇರುವುದು ವಿಷಾದ ಅನಿಸುತ್ತದೆ. ಜಮಖಂಡಿಯಲ್ಲಿ ಕಳೆದ 6 ತಿಂಗಳಲ್ಲಿ ಸೇಲ್ಸ್ ಅಧಿಕಾರಿಗಳ ವಿಷಯದಲ್ಲಿ ಜನಗಳಿಗೆ ಬೇಜಾರು ಬಂದಿದೆ. ಈ ಬಗ್ಗೆ ಜನಗಳು ಸತ್ಯಾಗ್ರಹ ಕೂಡ ಮಾಡಿದ್ದಾರೆ. ಆದರೂ ಕೂಡ ಮಾನ್ಯ ಅರ್ಥ ಮಂತ್ರಿಗಳು ಈ ಬಗ್ಗೆ ಎಳ್ಳಷ್ಟೂ ಕೂಡ ಗಮನ ಕೊಟ್ಟಿಲ್ಲ. ಜಮಖಂಡಿಯಲ್ಲಿ ಅಸಿಸ್ಟೆಂಟ್ ಸೇಲ್ಸ್ ಟ್ಯಾಕ್ಸ್ ಆಫೀಸರು ಇದ್ದರೂ ಕೂಡ ಜನಗಳಿಗೆ ಬೇಜಾರು ಆಗಿದೆ. ಅವರು ಅಧಿಕಾರಿಗಳ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಯಾರ ಮೇಲೆ ದೂರುಗಳು ಬಂದಿದೆಯೋ ಆ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾವಣೆ ಕೂಡ ಮಾಡಿಲ್ಲ. ಇದು ವಿಷಾದ ಎನಿಸುತ್ತದೆ.

ಶಿಕ್ಷಣದ ಬಗ್ಗೆ ನಾಲ್ಕು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಶಿಕ್ಷಣ ವಿಷಯದಲ್ಲಿ ಸರ್ಕಾರದವರು ಸುಮಾರು 300 ಜೂನಿಯರ್ ಕಾಲೇಜುಗಳನ್ನು ತೆಗೆದು ಪ್ರಗತಿಪರವಾದ ಒಂದು ಹೆಜ್ಜೆಯನ್ನು ಇಟ್ಟಿದ್ದಾರೆ. ಆದರೆ ಪ್ರೈವೇಟ್ ಜೂನಿಯರ್ ಕಾಲೇಜುಗಳಿಗೆ ಇಲ್ಲಿಯವರೆಗೂ

(ಶ್ರೀ ಪಿ. ಎಂ. ಬಂಗಿ)

ಸರ್ಕಾರ ಯಾವ ರೀತಿಯ ಗ್ರ್ಯಾಂಟನ್ನು ಕೊಟ್ಟಿಲ್ಲ. ಇದರಿಂದಾಗಿ ಅವರು ಮುಂದಿನ ವರ್ಷದಲ್ಲಿ ಜೂನಿಯರ್ ಕಾಲೇಜುಗಳನ್ನು ಬಂದ್ ಮಾಡುವ ಪ್ರಸಂಗ ಒದಗಿದೆ. ಮತ್ತು ಕಂಪಲ್ಸರಿ ಎಜ್ಯುಕೇಷನ್ ಬಗ್ಗೆ ಸರ್ಕಾರದವರು ಗಮನ ಕೊಟ್ಟಿಲ್ಲ. ನಮ್ಮ ತಾಲ್ಲೂಕಿನಲ್ಲಿ ಕೆಲವು ಖಾಸಗೀ ಜನಗಳು ಕಂಪಲ್ಸರಿ ಎಜುಕೇಷನ್ ಕೊಡುವ ದೃಷ್ಟಿಯಿಂದ ಕೆಲವು ಶಾಲೆಗಳನ್ನು ಪ್ರಾರಂಭ ಮಾಡಿದರೂ ಕೂಡ ಸರ್ಕಾರಿ ಅಧಿಕಾರಿಗಳು ಇದು ಕ್ರಮಬದ್ಧವಾಗಿಲ್ಲ, ನಿಮಗೆ ಶಾಲೆಗಳನ್ನು ನಡೆಸುವ ಅಧಿಕಾರವಿಲ್ಲ ನಿಮ್ಮ ಮೇಲೆ ಏತಕ್ಕೆ ಕ್ರಮವನ್ನು ತೆಗೆದುಕೊಳ್ಳಬಾರದು ಎಂದು ಹೆದರಿಕೆ ನೋಟೀಸ್ ಕೊಡುತ್ತಿದ್ದಾರೆ. ಈ ದೃಷ್ಟಿಯಿಂದ ಶಿಕ್ಷಣ ಸಂಸ್ಥೆಯಲ್ಲಿ ನಿರ್ಮಲವಾದಂತಹ ಮತ್ತು ಪವಿತ್ರವಾದಂತಹ ಆಡಳಿತ ಇಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಸರಿಯಾಗಿ ಗಮನ ಕೊಟ್ಟು ಶಾಲೆಗಳನ್ನು ಸರಿಯಾಗಿ ನಡೆಸುವ ವ್ಯವಸ್ಥೆಯನ್ನು ಮಾಡಿಲ್ಲ.

ಮೆಡಿಕಲ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಮಾತನಾಡುವುದಾದರೆ ಡಾಕ್ಟರುಗಳು ಪ್ರೈವೇಟ್ ಪ್ರಾಕ್ಟೀಸ್ ಮಾಡಿಕೊಳ್ಳಬಹುದು ಎಂದು ಸರ್ಕಾರದವರು ಪರವಾನಿಗೆ ಕೊಟ್ಟ ಮೇಲೆ ಎಷ್ಟೋ ತಾಲ್ಲೂಕುಗಳಲ್ಲಿ ಸರ್ಕಾರಿ ಆಸ್ಪತ್ರೆಯ ಡಾಕ್ಟರುಗಳು ಖಾಸಗೀ ದವಾಖಾನೆಗಳನ್ನು ತೆರೆದು ಅವುಗಳನ್ನು ನಡೆಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸರ್ಕಾರಿ ಆಸ್ಪತ್ರೆಗಳ ವಿಷಯದಲ್ಲಿ ಸರ್ಕಾರದವರು ಸಾಕಷ್ಟು ಗಮನ ಕೊಡುವುದಿಲ್ಲ. ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ ಜಮಖಂಡಿಯಲ್ಲಿ ಒಂದು ಎಕ್ಸ್‌ರೇ ಪ್ಲಾಂಟ್ ಟ್ಯೂಬನ್ನು ಹಾಲೆಂಡಿನಿಂದ ತರಿಸುವುದಕ್ಕೆ ಕಳೆದ ಒಂದು ವರ್ಷದಿಂದ ಪ್ರಯತ್ನ ಮಾಡಿದರೂ ಕೂಡ ಇಲ್ಲಿಯವರೆಗೂ ಅದು ಸಪ್ಲೈ ಆಗಿಲ್ಲ.

ಕೋಆಪರೇಟೀವ್ ಸೊಸೈಟಿಗಳ ವಿಷಯದಲ್ಲಿ ಎಷ್ಟು ಹೇಳಿದರೆ ಅಷ್ಟೂ ಕಡಿಮೆ. ಎಷ್ಟೋ ಸಂಸ್ಥೆಗಳಲ್ಲಿ 4ನೇ ಸೆಕ್ಷನ್ ಪ್ರಕಾರ ಕ್ರಮತೆಗೆದುಕೊಳ್ಳಬೇಕು ಎಂದು ಡೆಪ್ಯುಟಿ ರಿಜಿಸ್ಟ್ರಾರ್ ಅವರು ಹುಕುಂ ಮಾಡಿದರೂ ಕೂಡ ಆ ಸಂಸ್ಥೆಗಳ ಮೇಲೆ ಆ ಕ್ರಮಗಳನ್ನು ತೆಗೆದುಕೊಂಡಿಲ್ಲ. ಈ ಎಲ್ಲಾ ಸಂಸ್ಥೆಗಳಲ್ಲಿ ಹೆಚ್ಚಾಗಿ ಹಣದ ದುರುಪಯೋಗವಾಗಿದೆ. ಈ ಬಗ್ಗೆ ಸರ್ಕಾರದವರು ಕ್ರಮವನ್ನು ತೆಗೆದುಕೊಂಡು ಅವರ ಮೇಲೆ ಕೇಸ್ ಹಾಕಿ ಹಣ ವಸೂಲು ಮಾಡುವ ವ್ಯವಸ್ಥೆಯನ್ನು ಇದುವರೆಗೂ ಮಾಡಿಲ್ಲ. ಅದೇ ರೀತಿ ಆರ್ಬಿಟ್ರೇಶನ್ ಪದ್ಧತಿಯಿಂದ ಮಾಡಿದಂತಹ ಅವಾರ್ಡುಗಳು ಇಂದಿನವರೆಗೂ ಕಾರ್ಯಾಚರಣೆಗೆ ಬಂದಿಲ್ಲ. ಆದ್ದರಿಂದ ಈ ಆರ್ಬಿಟ್ರೇಶನ್ ಪದ್ಧತಿ ತೆಗೆದು ದಿವಾನಿ ಕೋರ್ಟುಗಳನ್ನು ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಈ ಫ್ಯಾಮಿನ್ ಬಗ್ಗೆ ಹೇಳಬೇಕಾದರೆ ಈ ಕ್ಷಾಮಗ್ರಸ್ಥ ನಾಡಿನಲ್ಲಿ ಕುಡಿಯುವ ನೀರಿನ ಕೊರತೆ ಇದೆ. ಅದೇ ರೀತಿ ಆಹಾರ ಧಾನ್ಯಗಳ ಕೊರತೆಯೂ ಇದೆ. ಈ ವರ್ಷವೂ ಇದರ ಕಡೆ ಗಮನ ಕೊಟ್ಟು ಜನರಿಗೆ ಅನುಕೂಲ ಮಾಡಿಕೊಡಬೇಕು. ಹಾಗೆಯೇ ಜನರಿಗೆ ಡ್ಯೈಲಿ ವೇಜಸ್ ಕೊಟ್ಟು ಅಲ್ಲಿಯ ಜನರನ್ನು ಸಂರಕ್ಷಣೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಮುಂದೆ ಕುಡಿಯುವ ನೀರಿನ ವಿಷಯದಲ್ಲಿ ಹೆಚ್ಚಿನ ಗಮನ ಕೊಡಬೇಕು. ಇನ್ನೂ ಕೊಯ್ನಾ ಜಲಾಶಯ ದಿಂದ ಕೃಷ್ಣಾ ನದಿಗೆ ನೀರು ತರುವ ವಿಚಾರದಲ್ಲಿ ಮಹಾರಾಷ್ಟ್ರ ಸರ್ಕಾರದೊಡನೆ ವ್ಯವಹಾರ ಮಾಡಿದ್ದರು. ಅದರ ಬಗ್ಗೆ ಕೂಡ ಬೇಗನೇ ಕ್ರಮ ತೆಗೆದುಕೊಂಡು ಕೃಷ್ಣಾ ನದಿಗೆ ನೀರನ್ನು ತರಿಸಿ ಅಲ್ಲಿಯ ಜನರಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪೆನ್‌ಶನ್‌ದಾರರ ವಿಚಾರದಲ್ಲಿ ಹೇಳುವುದಾದರೆ ನಮ್ಮ ತಾಲ್ಲೂಕಿನ 53 ಜನ ಪ್ರಾಥಮಿಕ ಶಿಕ್ಷಕರಿಗೆ ಇಂದಿನವರೆಗೆ ಪೆನ್‌ಶನ್ ಹೋಗಿಲ್ಲ. ಅದರ ಬಗ್ಗೆ ಎ ಜಿ ಆಫೀಸಿನಲ್ಲಿಯೂ ವಿಚಾರ ಮಾಡಿದ್ದೇನೆ. ಆದ್ದರಿಂದ ಆರ್ಥಿಕ ಮಂತ್ರಿಯವರು ಬೇಗನೇ ಅದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಪೆನ್‌ಶನನ್ನು ನಾನು ನೇರವಾಗಿ ಕೊಡುವುದಕ್ಕಾಗುವುದಿಲ್ಲ. ಅದನ್ನು ವಿದ್ಯಾ ಇಲಾಖೆಯಲ್ಲಿ ಹೋಗಿ ವರ್ಕ್ ಔಟ್ ಮಾಡಿ ಫೈಲ್ ನನ್ನ ಹತ್ತಿರ ಬರುವಂತೆ ಮಾಡಿದರೆ ಅದನ್ನು ಕೂಡಲೇ ಮಾಡಬಹುದು. ಉಪಾಧ್ಯಾಯರ ಬಗ್ಗೆ ನನಗೂ ಅನುಕಂಪ ಇದೆ. ಆದ್ದರಿಂದ ಇದನ್ನು ಮೊದಲು ಮಾಡದೆ ಅರ್ಥ ಮಂತ್ರಿಯವರು ಮಾಡಿಲ್ಲವೆಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಪಿ. ಎಂ. ಬಂಗಿ.—ನಾನು ವಿದ್ಯಾ ಇಲಾಖೆಯಲ್ಲಿಯೂ ತನಿಖೆ ಮಾಡಿದ್ದೇನೆ. ಅಲ್ಲಿಂದ ತಮ್ಮ ಇಲಾಖೆಗೆ ಫೈಲು ಬಂದಿದೆ. ಎ ಜಿ ಆಫೀಸಿನಲ್ಲಿಯೂ ನಾನು ವಿಚಾರಿಸಿದ್ದೇನೆ. ಆದ್ದರಿಂದ

ತಮ್ಮ ಇಲಾಖೆಯಲ್ಲಿ ಶೀಘ್ರದಲ್ಲಿ ಇದನ್ನು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸದಸ್ಯರು ಭಾಷಣ ಪ್ರಾರಂಭ ಮಾಡುವ ಮೊದಲು ಒಂದು ಮಹತ್ವವಾದ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗ ಸುಮಾರು 500 ಜನ ಹುಡುಗರು ಹೊರಗಡೆ ಬಂದು ನಿಂತಿದ್ದಾರೆ. ಇದಕ್ಕೆ ಕಾರಣವೇನೆಂದರೆ ನಗರದಲ್ಲಿ ಸ್ಟೇಟ್ ಚಿತ್ರಮಂದಿರದಲ್ಲಿ 'ಬಂಗಾರದ ಮನುಷ್ಯ' ಎಂಬ ಚಿತ್ರವು ಇನ್ನು 15 ದಿವಸ ನಡೆದರೆ ಒಂದು ವರ್ಷ ಪೂರ್ತಿಯಾಗುತ್ತದೆ. ಅದಕ್ಕೆ ಅವಕಾಶ ಕೊಡದೆ ಆ ಚಿತ್ರವನ್ನು ಇದ್ದಕ್ಕಿದ್ದ ಹಾಗೆ ತೆಗೆದು ಹಾಕಿದ್ದಾರೆ. ಇದು ಡಿಸ್ಟ್ರಿಬ್ಯೂಟರ್ಸ್ ರಾಜಕೀಯದಲ್ಲಿ ಈ ರೀತಿ ನಡೆದಿದೆ. ಆದ್ದರಿಂದ ಸರ್ಕಾರದವರು ತಕ್ಷಣ ಸಿನೇಮಾ ಮಂದಿರದ ಮಾಲೀಕರಿಗೆ ಸೂಚನೆ ಕೊಟ್ಟು ಅದನ್ನು ಇನ್ನೂ 15 ದಿವಸ ಹೆಚ್ಚು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ನಾಳೆ ಲಾ ಅಂಡ್ ಆರ್ಡರ್ ಸಿಚುವೇಶನ್ ವಿಕೋಪಕ್ಕೆ ಹೋಗುವ ಪರಿಸ್ಥಿತಿ ಬರುತ್ತದೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಈ ವರ್ಷಕ್ಕೆ ಸಂಬಂಧಪಟ್ಟ ಓಟ್ ಆನ್ ಅಕೌಂಟ್ ಮತ್ತು ಸಪ್ಲಿಮೆಂಟರಿ ಬಜೆಟ್‌ನ್ನು ಚರ್ಚೆಗೆ ಇಟ್ಟಿದ್ದಾರೆ. ಒಂದು ವಿಷಾದಕರವಾದ ಸಂಗತಿ ಏನೆಂದರೆ, ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಇರತಕ್ಕಂತಹ ಈ ಒಂದು ಸಪ್ಲಿಮೆಂಟರಿ ಡಿಮ್ಯಾಂಡಿನ ಬಗ್ಗೆ ಹೆಚ್ಚು ಅವಕಾಶವನ್ನು ಉಪಯೋಗಿಸದೆ ಈ ಸಭೆಯ ಹೆಚ್ಚಿನ ಸಮಯವನ್ನು ಬೇರೆ ಬೇರೆ ವಿಚಾರಗಳ ಕಡೆಗೆ ಎಳೆಯುತಕ್ಕದ್ದು ಸಂತೋಷದ ವಿಚಾರವಲ್ಲ. ನಮ್ಮ ಅರ್ಥ ಸಚಿವರು ನಮ್ಮ ಮುಂದಿಟ್ಟಿರತಕ್ಕಂತಹ ಈ ಬಜೆಟ್ಟಿನ ವೈಶಿಷ್ಟ್ಯವೇನೆಂದರೆ ದೇಶದ 21 ರಾಜ್ಯಗಳ ಪೈಕಿ ನಮ್ಮ ರಾಜ್ಯವು 67 ಕೋಟಿ ರೂಪಾಯಿಯ ಖೋತಾ ಬಜೆಟನ್ನು ಹೊಂದಿದೆ. ಬೇರೆ ಯಾವ ರಾಜ್ಯದಲ್ಲಿಯೂ ಇಷ್ಟು ಖೋತಾ ಇಲ್ಲ. ಇದು ಒಂದು ದೊಡ್ಡ ಕ್ರೆಡಿಟ್ ಎಂದು ತಿಳಿದುಕೊಂಡಿದ್ದೇನೆ. ಇನ್ನು ಮೊದಲನೆಯದಾಗಿ ಸಾಲ ಸೋಲಗಳ ಬಗ್ಗೆ ಹೊಸದಾಗಿ ಒಂದು ಕೋಟಿ ರೂಪಾಯಿ ಕೇಳುತ್ತಿದ್ದಾರೆ. ಈಗಾಗಲೇ ಅರೆ ಕೋಟಿ ರೂಪಾಯಿ ಪ್ರೊವೈಡ್ ಮಾಡಲಾಗಿದೆ. ಈ ಸಾಲಗಳನ್ನು ರಾಜ್ಯದ ಅಭಿವೃದ್ಧಿಗೋಸ್ಕರ ಮಾಡಬೇಕೇ ಹೊರತು ಬೇರೆ ಉದ್ದೇಶಗಳಿಗೆ ಮಾಡುವುದು ರಾಜ್ಯದ ಹಣಕಾಸಿನ ಶಿಸ್ತಿನ ದೃಷ್ಟಿಯಿಂದ ಒಳ್ಳೆಯದಲ್ಲ. ಅದೇ ರೀತಿ ಟಿ.ಎ. ಡಿ.ಎ. ಮತ್ತು ಜೀಪುಗಳನ್ನು ಕೊಂಡುಕೊಳ್ಳುವುದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡುವುದು ಒಳ್ಳೆಯದಲ್ಲ. ಇವತ್ತು ಹೆಚ್ಚು ಹಣವನ್ನು ಕ್ಷಾಮ ಡಾಮರಗಳಿಗೆ ಖರ್ಚು ಮಾಡಬೇಕೆಂದು ನನ್ನ ಸಲಹೆ. ಈ ಡಿಮ್ಯಾಂಡಿನಲ್ಲಿ ಅನೇಕ ಕಡೆ ಜೀಪ್ ಕೊಂಡು ಕೊಳ್ಳುವುದಕ್ಕೆ ಹಣವನ್ನು ಒದಗಿಸಿದ್ದಾರೆ. ಇವತ್ತು ಸರ್ಕಾರೀ ಜೀಪುಗಳನ್ನು ಸಹ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಿಲ್ಲ ಮತ್ತು ಒಂದು ಹತೋಟಿಯನ್ನು ಇಟ್ಟುಕೊಳ್ಳುವುದಿಲ್ಲವೆಂದು ಹೇಳುತ್ತೇನೆ.

ಇನ್ನು ಪೋಲೀಸ್ ಎಕ್ಸ್‌ಪೆಂಡೀಚರ್ ಬಗ್ಗೆ ಪ್ರತಿ ವರ್ಷದ ಬಜೆಟ್ಟಿನಲ್ಲಿಯೂ ಹೆಚ್ಚು ಹೆಚ್ಚಿಗೆ ಬೇಡಿಕೆ ಬರುತ್ತಲೇ ಇವೆ. ಇದರ ಬೇಡಿಕೆಯು ಖರ್ಚು ಹೆಚ್ಚುತ್ತಾ ಇರುವಂತೆ ಪೋಲೀಸ್‌ನವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಪೋಲೀಸಿನವರು ಮಾಮೂಲು ತೆಗೆದುಕೊಳ್ಳುವುದನ್ನು ಕಡಿಮೆಮಾಡಿದರೆ, ಹೆಚ್ಚು ಬೇಡಿಕೆಯನ್ನು ಇಲ್ಲ ತೆಗೆದುಕೊಂಡು ಬರುವುದು ಪರವಾ ಇಲ್ಲವೆಂದು ಹೇಳಬಹುದು. ಪೋಲೀಸಿನವರ ಅವ್ಯತೆಗೆ ಅವರ ಲಂಚಕೋರತನವೇ ಕಾರಣ. ಅದರ ಬಗ್ಗೆ ಸರ್ಕಾರ ಹೆಚ್ಚು ಗಮನ ಕೊಡಬೇಕು.

ಇನ್ನು ಬಡ್ಜೆಟ್ಟಿನಲ್ಲಿ ಜೂನಿಯರ್ ಕಾಲೇಜುಗಳ ಬಗ್ಗೆ 30 ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಕೇಳಿದ್ದಾರೆ. ವ್ಯಾಸಂಗಕ್ಕೋಸ್ಕರ ಕೇಳಿದ್ದರೂ ಜೂನಿಯರ್ ಕಾಲೇಜುಗಳು ನಾನು ತಿಳಿದ ಹಾಗೆ ಸಮರ್ಪಕವಾಗಿ ಕೆಲಸ ಮಾಡುತ್ತಾ ಇಲ್ಲ. ಮಂಡ್ಯ ಜಿಲ್ಲೆಯಲ್ಲಿ ಒಂದು ಜೂನಿಯರ್ ಕಾಲೇಜಿನಲ್ಲಿ 13 ಜನ ವಿದ್ಯಾರ್ಥಿಗಳು, 15 ಜನ ಲೆಕ್ಚರರ್ಸ್ ಇದ್ದಾರೆ. ಆ ರೀತಿಯಾಗಿ ಇದ್ದರೆ ಎಷ್ಟರಮಟ್ಟಿಗೆ ಈ ದೇಶದ ವಿದ್ಯಾಭ್ಯಾಸಕ್ಕೆ ಒದಗಿಸುವ ಹಣ ಸರಿಯಾದಂಥ ರೀತಿಯಲ್ಲಿ ಖರ್ಚಾಗುತ್ತದೆಂಬುದನ್ನು ನೋಡಬೇಕು. 216 ಹೈಯರ್ ಸೆಕೆಂಡರಿ ಸ್ಕೂಲುಗಳನ್ನು ಈಗ ಜೂನಿಯರ್ ಕಾಲೇಜುಗಳಾಗಿ ಮಾಡಿದ್ದಾರೆ. ಅದರ ಸರಿಯಾದಂಥ, ತರಪೇತಾದಂಥ ಉಪಾಧ್ಯಾಯರುಗಳಿಲ್ಲ. ಎಕ್ವಿಪ್‌ಮೆಂಟ್ಸ್ ಸಹ ಇಲ್ಲ. ಫರ್ನಿಚರ್ ಸಹ ಇಲ್ಲ ಲ್ಯಾಬೋರೇಟರಿ ಸೌಕರ್ಯಗಳಿಲ್ಲ. ಇಂತಹ ಕಾಲೇಜುಗಳನ್ನು ಸ್ಥಾಪನೆ ಮಾಡಿದರೆ ಹುಡುಗರಿಗೆ ಸರಿಯಾದಂಥ ವಿದ್ಯಾಭ್ಯಾಸ ಸಿಗುತ್ತದೆಯೇ ಎಂಬುದನ್ನು ನಾವು ಈಗ ಯೋಚನೆ ಮಾಡಬೇಕಾಗಿದೆ. ಪಬ್ಲಿಕ್ ಹೆಲ್ತ್‌ಗೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಒದಗಿಸಿದ್ದಾರೆ. ಇದಕ್ಕೆ ಟೋಕನ್

(ಶ್ರೀ ಟಿ. ಆರ್. ಶಾಮಣ್ಣ)

ಗ್ರಾಂಟ್ 100 ರೂಪಾಯಿಗಳನ್ನು ಒದಗಿಸಿರುವುದು ಸರಿಯೇ ಎಂಬುದನ್ನು ನೋಡಬೇಕು. This is an authenticated information that there are 13 students in that Junior College with 13 lecturers.

Mr. DEPUTY SPEAKER.—Please be brief.

Sri T. R. SHAMANNA.—You have allowed me 10 minutes to speak. I don't take more than 10 minutes.

ಇನ್ನು ಕೋಆಪರೇಟಿವ್ ಇನ್‌ಸ್ಟಿಟ್ಯೂಷನ್‌ಗಳಿಗೆ ಹೆಚ್ಚಿನ ಹಣವನ್ನು ಒದಗಿಸುವ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಕೆಲವು ಸಂಸ್ಥೆಗಳು ಮುಳುಗಿಹೋಗುತ್ತಿರುವಾಗ ಅವಕ್ಕೆ ಮತ್ತೆ ಹಣವನ್ನು ಕೊಟ್ಟು ಹಾಳು ಮಾಡುವುದು ಸರಿಯಲ್ಲ. ಈಗ ಸಾಮಾನುಗಳ ಬೆಲೆ ಏರುತ್ತಿರುವುದನ್ನು ಕೂಡಲೇ ತಡೆಗಟ್ಟಬೇಕೆಂದು ಹೇಳಿದಾಗ ನಿನ್ನೆ ದಿವಸ ಕೇಂದ್ರ ಸರ್ಕಾರದ ನೀತಿಯ ಪ್ರಕಾರ ರಾಜ್ಯ ಸರ್ಕಾರಕ್ಕೆ ಹೆಚ್ಚಿಗೆ ಅವಕಾಶವಿಲ್ಲವೆಂದು ಹೇಳಿದರು. ಅನೇಕ ಸಂದರ್ಭಗಳಲ್ಲಿ ಇಂಥಾದ್ದಕ್ಕೆ ರಾಜ್ಯ ಸರ್ಕಾರದ ಹೊಣೆ ಇದೆಯೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಬೆಂಗಳೂರು ನಗರದಲ್ಲಿ ಪೆಟ್ರೋಲ್ ಸಿಗುತ್ತಿಲ್ಲ. ಡೀಸಲ್ ಪತ್ತೆ ಇಲ್ಲ. ಅವು ಸಿಗದಿದ್ದರೆ ಜನರಿಗೆ ಬಹಳ ಕಷ್ಟವಾಗುತ್ತದೆ. ಪೆಟ್ರೋಲ್ ಬಂಕ್‌ನಲ್ಲಿ ಡೀಸಲ್ ಇಲ್ಲವೇ ಇಲ್ಲ. ಕೆಲವು ಕಡೆಗಳಲ್ಲಿ ಕೇವಲ ದಾಕ್ಷಿಣ್ಯಕ್ಕೆ ಕೊಡುತ್ತಿದ್ದಾರೆ. ಡೀಸಲ್ ಸಾಕಷ್ಟು ದೊರೆಯದಿದ್ದರೆ ಟ್ರಾನ್ಸ್‌ಪೋರ್ಟ್ ಫೆಸಿಲಿಟೀಸ್ ಹೇಗೆ ಸಿಗುತ್ತದೆ? 22 ರೂಪಾಯಿಗಳನ್ನು ಕೊಟ್ಟರೂ ಒಂದು ಮೂಟೆ ಸಿಮೆಂಟ್ ಕೂಡ ಸಿಗುತ್ತಾ ಇಲ್ಲ. ಇದಕ್ಕೆ ಯಾರು ಹೊಣೆ? ಮೈಸೂರಿನಲ್ಲಿ ಒಳ್ಳೆಯ ಅಕ್ಕಿ 1-75 ಪೈಸೆ. ಅದೇ ಅಕ್ಕಿ ಬೆಂಗಳೂರಿನಲ್ಲಿ 2-25 ಪೈಸೆ. ಇದಕ್ಕೆ ರಾಜ್ಯ ಸರ್ಕಾರದವರು ಕಾರಣರೋ ಅಥವಾ ಕೇಂದ್ರ ಸರ್ಕಾರದವರು ಕಾರಣರೋ ಎಂಬುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕು. ಇನ್ನು ತೆಂಗಿನಕಾಯಿ ಬೆಲೆ ಈಗ ಒಂದು ರೂಪಾಯಿಗೆ ಬಂದಿದೆ. ಈ ರೀತಿಯಾಗಿ ಎಲ್ಲಾ ಸಾಮಾನುಗಳ ಬೆಲೆ ಏರುತ್ತಿದ್ದರೆ ಇನ್ನೆಷ್ಟು ತೆರಿಗೆ ಹಾಕಿದರೆ ರಾಜ್ಯ ಸರ್ಕಾರದ ಬಡ್ಜೆಟ್ಟನ್ನು ನಾವು ಸರಿದೂಗಿಸುವುದಕ್ಕಾಗುತ್ತದೆ? ಇನ್ನೆಷ್ಟು ವರಮಾನವನ್ನು ನಿರೀಕ್ಷೆ ಮಾಡಬೇಕು? ನಾವು ಈಗ ಒಂದು ಕೋಟಿ ರೂಪಾಯಿಗಳನ್ನು ಹೋಲ್‌ಸೇಲ್ ಸ್ಟೋರ್ಸ್‌ಗೆ ಹಾಗೂ ಸೆಂಟ್ರಲ್ ಸ್ಟೋರ್ಸ್ ಇವುಗಳಿಗೆ ಕೊಡುತ್ತಿದ್ದೇವೆ. ಅದು ಮೋಸವಾಗಿದೆ. ಮಾನ್ಯ ಶ್ರೀ ದೇವೇಗೌಡರು ಆಗಲೇ ಇದರ ಬಗ್ಗೆ ಮಾತನಾಡಿದ್ದಾರೆ. ಗೊಬ್ಬರ ವ್ಯವಹಾರದಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು, ಇನ್ನು ಗ್ರೀನ್ಸ್ ಪರ್ಚೇಸ್ ಮಾಡುವುದರಲ್ಲಿ ನನಗೆ ವಿಪರೀತವಾಗಿ ನಷ್ಟವಾಗುತ್ತಿದೆ. ಸೆಂಟ್ರಲ್ ಸ್ಟೋರ್ಸ್‌ನಲ್ಲಿಯೂ ಸಹ ಬಹಳ ಲಾಸ್ ಆಗುತ್ತಿದೆ. ಅದು ನಷ್ಟದಲ್ಲಿಯೇ ಕೆಲಸ ಮಾಡುತ್ತಿದೆ. ಜನತಾ ಬಜಾರ್ ಬಿಟ್ಟರೆ ಯಾವ ವ್ಯವಹಾರವೂ ಸಹ ಸರಿಯಾಗಿ ಆಗುತ್ತಾ ಇಲ್ಲ. ಇಲ್ಲಿ ಹಾಕತಕ್ಕ ದುಡ್ಡು ಅನ್ಯಾಯವಾಗಿ ಇದರಿಂದ ಲಾಸ್ ಆಗುತ್ತಿದೆ. ಸರ್ಕಾರದ ಬೊಕ್ಕಸದ ದುಡ್ಡು ವ್ಯರ್ಥವಾಗುತ್ತಿದೆ. ಜನರಿಗೆ ಅನುಕೂಲವೆಂಬುದೇ ಇದರಿಂದ ಇಲ್ಲ.

ಇನ್ನು ಪೊಲಿಟಿಕಲ್ ಸಫರರ್ಸ್ ಪೆನ್‌ಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಯಾವಾಗ ಅವರಿಗೆ ಸರ್ಟಿಫಿಕೇಟ್ ಕೊಡುತ್ತಾರೋ ಆಗ ಅವರು ಪೆನ್‌ಷನನ್ನು ಕ್ಲೇಮ್ ಮಾಡುತ್ತಾರೆ. ಅಂತಹ ಜನರಿಗೆ ಮಾತ್ರ ಇದು ಸಿಗುತ್ತದೆ. ಇದು ಬಹಳ ಶೋಚನೀಯವಾದ ವಿಚಾರ. ಕೇಂದ್ರ ಸರ್ಕಾರದಿಂದ ಬರತಕ್ಕವರಿಗೆ ಅಲ್ಲಿ ಪೆನ್‌ಷನನ್ನು ನಿಗದಿಮಾಡುವುದರಿಂದ ಅವರು ಇಲ್ಲಿಗೆ ಬಂದು ಅನೇಕ ತೊಂದರೆಗಳನ್ನು ಅನುಭವಿಸುತ್ತಾರೆ. ರಾಜ್ಯ ಸರ್ಕಾರದ ನೌಕರರಿಗೆ ಕೇಂದ್ರ ಸರ್ಕಾರದ ನೌಕರರ ಸರಿಸಮಾನವಾಗಿ ತುಟ್ಟಿಭತ್ಯ ಕೊಡಬೇಕು. ಹಿಂದೆ ರಾಜ್ಯ ಸರ್ಕಾರದಲ್ಲಿ ಸೇವೆ ಮಾಡಿದಂಹವರಿಗೆ ಅನುಕೂಲ ಮಾಡಿಕೊಡದೇ ಹೋದರೆ ನಮ್ಮ ನೌಕರರು ಬಹಳವಾಗಿ ತೊಂದರೆ ಪಡುತ್ತಾರೆ.

ಇನ್ನು ರಿಲಿಜಿಯಸ್ ಇನ್ಸ್‌ಸ್ಟಿಟ್ಯೂಟ್‌ಗೆ ಕಂಪೆನ್ಸೇಷನ್ ಕೊಡುತ್ತಿದ್ದಾರೆ. ಆದರೆ ಈ ಸಂಸ್ಥೆಗಳು ಸರಿಯಾಗಿ ನಡೆದುಕೊಂಡು ಹೋಗುತ್ತಿವೆಯೇ ಎಂಬುದನ್ನು ನೋಡಿಕೊಳ್ಳುವುದಕ್ಕೆ ಸರಿಯಾಗಿ ವ್ಯವಸ್ಥೆ ಮಾಡಬೇಕು. ಅದನ್ನು ಬೇರೆ ಇನ್‌ವೆಸ್ಟ್‌ಮೆಂಟಿಗೆ ಎಂಬುದಾಗಿ ಹಾಕುತ್ತಿದ್ದಾರೆ. ಅದನ್ನು ದೈನಂದಿನ ಖರ್ಚುಗಳಿಗೆ ವಿನಿಯೋಗಿಸಬಾರದು. ಇದಕ್ಕೆ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ 2 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇನ್ನು ಮುಂದೆ ಇನ್ನೂ ಹೆಚ್ಚಿನ ಹಣವನ್ನು ಇವಕ್ಕೆ ಒದಗಿಸಬೇಕು. ಆದರೆ ಈ ಸಂಸ್ಥೆಗಳು ಸರಿಯಾಗಿ ನಡೆದುಕೊಂಡು ಹೋಗುವುದಕ್ಕೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ

†ಶ್ರೀ ಎಂ. ವೈ. ಘೋರ್ಪಡೆ.—ಸಪ್ಲಿಮೆಂಟರಿ ಡಿಮ್ಯಾಂಡ್ ಮೇಲೆ ಮಾತನಾಡುತ್ತಾ ಅದರ ಉದ್ದೇಶವೇನೆಂಬುದನ್ನು ಈಗಾಗಲೇ ಹೇಳಿದ್ದೇನೆ. ಅದನ್ನು ಪುನಃ ಹೇಳುವುದರಲ್ಲಿ ಅರ್ಥವಿಲ್ಲ. ಈ ಡಿಮ್ಯಾಂಡ್ ದೊಡ್ಡದಾಗಿದ್ದರೂ 11 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಕೋಟಿ ರೂಪಾಯಿಗಳ ಬಗ್ಗೆ ಪ್ರಸ್ತಾಪ ಮಾಡಿದರು. ಈ ಒಂದು ಕೋಟಿ ಮಾರ್ಕೆಟಿಂಗ್ ಸೊಸೈಟಿಗೆ ಕೊಟ್ಟಿದ್ದಲ್ಲ. ಆ ಒಂದು ಸೊಸೈಟಿಯ ಮೂಲಕ ಕೆಲವಾರು ಪದಾರ್ಥಗಳನ್ನು ಅಂದರೆ ಮುಖ್ಯವಾಗಿ ಬತ್ತವನ್ನು ಕೊಂಡುಕೊಳ್ಳುವುದಕ್ಕೆ ಡಿ.ಸಿ.ಸಿ. ಬ್ಯಾಂಕಿಗೆ ಕೊಟ್ಟಿದ್ದು. ಅದು ಅನಂತರ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ನಿಗೆ ಬರುತ್ತದೆ. ಈಗಾಗಲೇ ಒಂದು ಕೋಟಿ 27 ಲಕ್ಷದ ಮೇರೆ ಸರ್ಕಾರದವರು ಬತ್ತವನ್ನು ಖರೀದಿ ಮಾಡಿದ್ದಾರೆ. 6,856 ಟನ್ನುಗಳಷ್ಟು ರೈಸ್, 5,538 ಟನ್‌ಗಳಷ್ಟು ಬತ್ತವನ್ನು ಈಗ ಖರೀದಿ ಮಾಡಿದ್ದಾರೆ. ಇದು ಈಗಿನ ಪರಿಸ್ಥಿತಿಗೆ ಅನ್ವಯಿಸುವುದಿಲ್ಲ.. ಇದು ಹೋಲ್‌ಸೇಲ್‌ಗೆ ಸಂಬಂಧವಿಲ್ಲ. ಅದು ಬೇರೆ ವಿಷಯ. ಆದಕಾರಣ ಹೋಲ್‌ಸೇಲ್ ಟ್ರೇಡ್ ಬಗ್ಗೆ ಸರ್ಕಾರ ಕ್ರಮ ಕೈಗೊಂಡಾಗ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಇನ್ನು ಡೈರಿ ಫಾರಂ ವಿಷಯ. ಮಾನ್ಯ ಮುಖ್ಯಮಂತ್ರಿಗಳಿಗೆ ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಹೇಳುತ್ತೇನೆ. ಆದಕಾರಣ ಅದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಸಂಬಂಧಪಟ್ಟ ಇಲಾಖೆಯಿಂದ ಡೈರಿ ಫಾರಂಗೆ ಯೋಗ್ಯವಾಗಿರುವ ಭೂಮಿ ಬೇಕೆಂಬುದಾಗಿ ಒಂದು ಪ್ರೊಪೋಸಲ್ ಬಂತು. ಅಕ್ವಿಸಿಷನ್ ರೇಟ್ ಹಿಂದೆ ಸರ್ಕಾರದವರು ಏನು ಮಾಡಿದ್ದರೋ ಅದು 20-22 ಲಕ್ಷ ರೂಪಾಯಿಗಳಾಗಿತ್ತು. ಈ ಒಂದು ದೃಷ್ಟಿಯಿಂದ ಹಿಂದೆ ಏನು ಅಕ್ವೈಸಿಷನ್ ರೇಟ್ ಮಾಡಿದ್ದರೋ ಅವಕ್ಕಿಂತ ಈಗ ಕಡಿಮೆ ಇರುವುದರಿಂದ ಅದರ ಬಗ್ಗೆ ನಾನು ಆಕ್ಷೇಪಣೆ ಕೈಗೊಳ್ಳುವ ಪ್ರಶ್ನೆ ಬರಲಿಲ್ಲ. ಕ್ಯಾಬಿನೆಟ್ ತೀರ್ಮಾನ ಪ್ರಕಾರ ಒಂದು ಕ್ರಮ ತೆಗೆದುಕೊಂಡಿದ್ದೇವೆ. ನೀವು ಅಡ್ಜರ್ನ್‌ಮೆಂಟ್ ಮೋಷನ್ ಇದರ ಬಗ್ಗೆ ತರುತ್ತೇವೆಂದು ಹೇಳಿದರೆ, ಆ ಕಾಲಕ್ಕೆ ಇದನ್ನು ಚರ್ಚೆ ಮಾಡಬಹುದು,

ಇನ್ನು ಆಗ್ರಿಕಲ್ಚರಲ್ ಇನ್‌ಪುಟ್ಸ್ ಬಗ್ಗೆ ಮಾನ್ಯ ಶ್ರೀ ಸಿ. ಎಂ. ಪಾಟೀಲ್ ಅವರು ಕೆಲವು ಸಲಹೆಗಳನ್ನು ಮಾಡಿದರು. ಅದರ ಬಗ್ಗೆ 5 ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆದಕ್ಕಾಗಿ ಟ್ರಾಕ್ಟರ್‌ಗಳನ್ನು ಎಷ್ಟು ಕಳುಹಿಸಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಇನ್ನು ಮಾನ್ಯ ಶ್ರೀ ವಿ. ಎನ್ ಪಾಟೀಲ್ ಅವರೂ ಸಹ ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿದಂಥ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಬರಗಾಲದ ಪರಿಹಾರ ಕೆಲಸ ಕಾರ್ಯಗಳನ್ನು ಹೆಚ್ಚುಹೆಚ್ಚಾಗಿ ತೆಗೆದುಕೊಳ್ಳುತ್ತೇವೆ. ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಎಲ್ಲದಕ್ಕೂ ಉತ್ತರ ಕೊಡುವುದಕ್ಕಾಗುವುದಿಲ್ಲ. ಬೇರೆ ಬೇರೆ ವಿಷಯಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವುದಕ್ಕೆ ಈಗ ಆಸ್ಪದವಿಲ್ಲವೆಂದು ನಾನು ಹೇಳುತ್ತೇನೆ. ಆದಕಾರಣ ನಾನು ಈ ಸಂದರ್ಭದಲ್ಲಿ ಅಷ್ಟು ಹೆಚ್ಚು ಮಾತನಾಡಬೇಕಾದ ಪ್ರಮೇಯವಿಲ್ಲವೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಬಾಕಿ ವಿಚಾರಗಳ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ತಮ್ಮ ಅಂಗೀಕಾರ ನೀಡುತ್ತಾರೆಂದು ನಂಬಿದ್ದೇನೆ.

Mr. DEPUTY SPEAKER.—I will put the Mysore Appropriation Bill, 1973 for consideration and vote of the House.

The question is:

"That the Mysore Appropriation Bill, 1973, be taken into consideration.

The Motion was adopted

Clauses 2, 3 and the Schedule

Mr. DEPUTY SPEAKER.—I will put the clauses and a the Schedule to the vote of the House.

(Mr. DEPUTY SPEAKER)

The question is :

"That Clauses 2 and 3 and the Schedule do stand part of the Bill."

The Motion was adopted

Clauses 2 and 3 and Schedule were added to the Bill.

Clause, 1 etc

Mr. DEPUTY SPEAKER.—I will now put Clause 1, etc to the vote of the House. The question is :

"That Clause 1, the long Title, the Preamble and the enacting formula do stand part of the Bill.

The Motion was adopted

Clauses 1, the long Title, the Preamble and the enacting formula were added to the Bill.

Motion to Pass

Sri M. Y. GHORPADE.—I beg to move :

"That the Mysore Appropriation Bill, 1973, be passed.

Mr. DEPUTY SPEAKER.—The question is :

"That the Mysore Appr priati n Bill be passed."

The Motion was adopted, and the Bill was passed.

Mysore Appr priation (Vote on Account Bill 1973) Motion to Consider

Sri M. Y. GHORPADE.—I beg to move :

"That the Mysore Appropriation (Vote on Account) Bill, 1973, be taken into consideration."

Mr. DEPUTY SPEAKER.—I will put the Mysore Appropriation (Vote on Account) Bill, 1973 for consideration and vote of the House.

The question is .

"That the Mysore Appropriation (Vote on Account) Bill, 1973 be taken into consideration.

The Motion was adopted

Clauses 2, 3 and the Schedule

Mr. DEPUTY SPEAKER.—I will put the Clause and the Schedule to the Vote of the House :

The question is :

"That Clauses 2, 3 and the Schedule do stand part of the Bill.

The Motion was adopted

Clauses 2, 3 and the Schedule were added to the Bill.

Clause, 1 etc

Mr. DEPUTY SPEAKER.—I will now put Clause I, etc to the Vote of the House.

The question is :

"That Clause 1, the long Title and the Preamble and the enacting formula do stand part of the Bill.

The Motion was adopted

Clause 1, the long Title and the Preamble and the enacting formula were added to the Bill.

Motion to pass

Sri M. Y. GHORPADE.—I beg to move :

"That the Mysore Appropriation (Vote on Account) Bill, 1973, be passed.

Mr. DEPUTV SPEAKER.—Motion moved :

The question is :

"That the Mysore Appropriation (Vote on Account) Bill, 1973, be passed.

The Motion was adopted and the Bill was possed.

Mr. DEPUTY SPEAKER.—There is one Half-an-hour discussion on the agenda. I have received an intimation that the Minister is busy on some work and he has requested it may be taken up some other day.

Absence of the Minister for Municipal Administration

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಇಲ್ಲಿ ಸಭೆ ನಡೆಯುತ್ತಿರುವಾಗ ಆ ಮಂತ್ರಿಗಳಿಗೆ ಇದಕ್ಕಿಂತಲೂ ಪ್ರಾಮುಖ್ಯವಾದಂಥ ಕೆಲಸ ಏನಿತ್ತು? ಅವರು 'ನಾನು ಬಿಜಿಯಾಗಿದ್ದೇನೆ.' ಎಂದು ಒಂದು ಕಾಗದ ಕಳುಹಿಸಿದರೆ ಇಲ್ಲಿ ನಾವೇನೂ ಉದ್ಯೋಗವಿಲ್ಲದವರು ಇಲ್ಲಿ ಕುಳಿತಿದ್ದೇವೆಂದು ಅವರ ಅರ್ಥವೆ?

Sri S. BANGARAPPA.—I am also busy. That is not the way a Minister should conduct himself. The matter is on the agenda, and the Minister knows it.

Mr. DEPUTY SPEAKER.—I know that. Please resume your seat.

ಶ್ರೀ ಎಸ್.ಬಂಗಾರಪ್ಪ,—ಅಧ್ಯಕ್ಷರೇ, ಈ ಸಭೆಯ ಕಾರ್ಯಕಲಾಪಗಳು ತಮ್ಮ ನಿರ್ದೇಶನದಂತೆ ನಡೆಯಬೇಕು. ಈ ದಿವಸದ ಅಜೆಂಡಾದಲ್ಲಿ ಅರ್ಧಗಂಟೆಯ ಚರ್ಚೆ ಇದೆ ಎಂದು ಅವರಿಗೆ ನೋಟೀಸನ್ನು ಕಳುಹಿಸಿದೆ.

ಶ್ರೀ ವಾಟಾಳ್ ನಾಗರಾಜ್.—ಹಾಗಿರುವಾಗ ಅವರು ಏಕೆ ಸಭೆಯಲ್ಲಿ ಇರದೆ ಹೋದರು? ಮಂತ್ರಿಗಳಿಗೆ ಇಂಥಾ ವರ್ತನೆ ಸಲ್ಲದು. ಇದು ಸಭೆಗೆ ಅವರು ತೋರಿಸಿರತಕ್ಕ ದೊಡ್ಡ ಅಗೌರವ. ಇದೇನು ಸಭೆ ಎಂದು ಅವರು ಅರ್ಥ ಮಾಡಿಕೊಂಡಿದ್ದಾರೆ? ಏತಕ್ಕಾಗಿ ಇಲ್ಲಿ ಬೆಳಗಿನಿಂದಲೂ ಮಾನ್ಯ ಘೋರ್ಪಡೆಯವರು ಕುಳಿತಿದ್ದಾರೆ? ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರೇಕೆ ಇಲ್ಲಿ ಕುಳಿತ್ತಿದ್ದಾರೆ? ಇವರೆಲ್ಲರಿಗೂ ಏನೂ ಉದ್ಯೋಗ ಇಲ್ಲವೋ? ಅವರನ್ನು ತಾವು ಈಗ ಸಭೆಗೆ ಕರೆಸಲೇ ಬೇಕು.

ಶ್ರೀ ಎಸ್.ಬಂಗಾರಪ್ಪ.—ಅವರು ಸಭೆಯನ್ನು ಬಿಟ್ಟು ಹೋಗುವಂಥ ಕೆಲಸ ದೇಶ ಹಾಳಾಗಿ ಹೋಗುತ್ತಿದ್ದಂಥ ಕೆಲಸ ಅವಾಗೇ ಇತ್ತೇನು? ಸಭೆಯಲ್ಲಿ ಈ ದಿವಸ ಚರ್ಚೆ ಮಾಡಬೇಕಾದ್ದನು ಮುಂದಕ್ಕೆ ಹಾಕಿ ಎಂದು ಹೇಳುವುದಕ್ಕೆ ಹೇಗೆ ಸಾಧ್ಯ? ಇದು ಸಭಾಗೌರವಕ್ಕೆ ತಕ್ಕದ್ದೇ?

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ಪಿ. ಸಿ. ಸಿ, ಸಭೆ ನಡೆಯುತ್ತಿದೆ. ಅಲ್ಲಿ ಅವರನ್ನು ಮಂತ್ರಿಮಂಡಲದಿಂದ ತೆಗೆದು ಹಾಕಬೇಕೆಂದು ಚರ್ಚೆ ನಡೆಯುತ್ತಿದೆ, ಅದಕ್ಕೆ ಅವರು ಸಭೆಯನ್ನು ಧಿಕ್ಕರಿಸಿ ಹೋಗಿದ್ದಾರೆ......

Sri B. B. SAYANAK.—Sir, you yourself have said that there is half-an-hour discussion. at that time, had you not received any intimation from the Minister? When the discussion is about to begin, you are telling there is intimation from the Minister.

Mr. DEPUTY SPEAKER.—I know what you have been telling. I have also stated repeatedly that no work is more important than the work in this House. About the query, Mr. Sayanak has raised, I must tell you, I received it only about 5 minutes earlier. If I had received it much earlier, I would have told the House at that time. So far as I am concerned, I am not going to conceal anything.

Sri S. BANGARAPPA.—This is highly intolerable, Sir.

Sri K. M. NAGANNA.—'I am otherwise busy and so this may be taken up some other day' he says. Is this the way he should treat this honourable House? It is an insult to this House. He has no right to remain as a Minister. He must immediately resign or he must be asked to get out.

ಅಧ್ಯಕ್ಷರೇ, ನನಗೆ ಒಂದು ವಿಷಯ ತಮ್ಮಿಂದ ತಿಳಿಯಬೇಕಾಗಿದ್ದಿದೆ; ಅದು ಏನೆಂದರೆ ಈಗ ತಾವೇನು ಸಭೆಗೆ ಓದಿ ತಿಳಿಸಿದಿರಿ ಆ ಪತ್ರಕ್ಕೆ ಯಾರು ರುಜು ಮಾಡಿದ್ದಾರೆ. ಅವರು ಅಂದರೆ ಮಂತ್ರಿಗಳು ಮಾಡಿದ್ದಾರೇಯೇ? ಅಥವಾ ಅವರ ಪರ್ಸನಲ್ ಸಿಕ್ರೆಟರಿ ಮಾಡಿದ್ದಾರೆಯೇ ಎಂಬುದನ್ನು ಸಭೆಗೆ ಬಹಿರಂಗ ಪಡಿಸಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಇದೂ ಕೂಡ ಬಹಳ ಪ್ರಾಮುಖ್ಯವಾದ ವಿಷಯ. ಅದನ್ನು ಅಧ್ಯಕ್ಷರು ಮೊದಲು ಸಭೆಗೆ ಬಹಿರಂಗ ಪಡಿಸಬೇಕೆಂದು ನಾನೂ ಕೂಡ ತಮ್ಮನ್ನು ಒತ್ತಾಯ ಮಾಡುತ್ತೇನೆ.

Mr. DEPUTY SPEAKER.—He has said he is held up in the midst of urgent work.

ಶ್ರೀ ವಾಟಾಳ್ ನಾಗರಾಜ್.—ಅವರು ಸಭೆಗೆ ತುಂಬಾ ಅಗೌರವವನ್ನು ಮಾಡಿದ್ದಾರೆ. ಇದನ್ನು ಸಭೆ ಸಹಿಸವುದಕ್ಕಾಗುದಿವುಲ್ಲ.

Sri B. B. SAYANAK.—The House is more important than any other work.

Mr. DEPUTY SPEAKER.—That I have myself stated.

ಶ್ರೀ ವಾಟಾಳ್ ನಾಗರಾಜ್.—ಅವರು ಬೇಜವಾಬ್ದಾರಿಯ ಮಂತ್ರಿಗಳು ಅನ್ನುವುದಕ್ಕೆ ಇದೇ ಒಂದು ನಿದರ್ಶನ ಸಾಲದೆ?

ಶ್ರೀ ಕೆ. ಎಂ. ನಾಗಣ್ಣ.—ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಈ ಕೂಡಲೆ ಅವರ ಬಗ್ಗೆ ಒಂದು ಪ್ರಿವಿಲೇಜ್ ಮೋಷನ್ನನ್ನು ಮಂಡಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ದಿವಸ ಅಜೆಂಡಾದಲ್ಲಿ ಅರ್ಧಗಂಟೆಯ ಚರ್ಚೆ ಇದೆ ಎಂಬುದನ್ನು...

Mr. DEPUTY SPEAKER.—If some of the Hon, Ministers take the responsibility of bringing the Minister, it would be better, because I have my own limitations. I have only duties to perform and no rights. I cannot be a dummy spectator here.

Sri K. M. NAGANNA.—He is supposed to be here at 6 O' Clock.

6-00 P.M.

Sri H. D. DEVE GOWDA.—According to the Agenda Hon. member Sri K. Puttaswamy has to raise half-an-hour discussion. Some Minister of State has been made to run to bring Sri Basavalingappa. That is way, I request the Hon,ble Deputy Speaker to kindly allow the House to take up this matter. By the time Sri Puttaswamy raises the discussion and completes his speech, the Hon'ble Minister Sri Basavalingappa can come and reply. There is joint responsibility.

Sri M. Y. GORPADE.—Fortunately I am informed that we have been able to contact Sri Basavalingappa over telephone and it is likely that he will come shortly.

Sri S. BANGARAPPA.—We cannot wait here for the arrival of the Hon'ble Minister.

Sri M.Y.GHORPADE—I agree that the Minister oughat to have been here because his subject is on today's Agenda. Now that the Minister is not here, under the circumstances, the best that we could do is to try to contact him and ask him to rush to the House. He has been contacted and he will come. It is better that he replies to the discussion because any reply from me will not be equally satisfactory. Let us proceed with the Agenda and in the meanwhile the Minister will come and reply.

Sri K. M. NAGANNA.—I think there should be no objection.

ಶ್ರೀ ವಾಟಾಳ್ ನಾಗರಾಜ್.—ಈ ಸಭೆ ಒಬ್ಬ ಮಂತ್ರಿಗಳಿಗಾಗಿ ಕಾದು ಕುಳಿತಿರಬೇಕೆಂದರೆ ಇದು ಅಧ್ಯಕ್ಷರಿಗೆ ಮತ್ತು ಸಭೆಗೆ ಅಗೌರವಮಾಡಿದಂತಾಗುವುದು.

ಶ್ರೀ ಎಸ್. ಬಂಗಾರಪ್ಪ.—ಇಂದು ಕಾರ್ಯಕ್ರಮ ಪಟ್ಟಿ ಪ್ರಕಾರ ಅರ್ಧಗಂಟೆ ಚರ್ಚೆ ಇರುವಾಗ ಪೌರಾಡಳಿತ ಸಚಿವರು ಸಭೆಯಲ್ಲಿ ಹಾಜರಿರಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್.—ಇದು ಬೇಜವಾಬ್ದಾರಿಯೇ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಒಂದು ಚೀಟಿ ಕಳುಹಿಸಿದ್ದಾರೆ, ಅದರಲ್ಲಿ ತಮಗೆ ಜರೂರು ಕೆಲಸವಿರುವುದರಿಂದ ಈ ಸಭೆಗೆ ಬರುವುದಕ್ಕಾಗುವುದಿಲ್ಲ, ಚರ್ಚೆಗಿರುವ ವಿಷಯವನ್ನು ಮುಂದಕ್ಕೆ ಹಾಕಬೇಕು ಎಂದು ತಿಳಿಸಿದ್ದಾರೆಂದು ಹೇಳಿದರು. ಆ ಚೀಟಿಯನ್ನು ಸಭೆ ಮುಂದಿಡಬೇಕೆಂದು ಅಧ್ಯಕ್ಷರಲ್ಲಿ ಕೇಳುತ್ತೇನೆ. ಎರಡನೆಯದಾಗಿ ಮೊದಲು ಅರ್ಜೆಂಟ್ ಕಲಿಸಿದ ಚರ್ಚೆಗಿರುವ ವಿಷಯವನ್ನು ಮುಂದಕ್ಕೆ ಹಾಕಬೇಕೆಂದು ಚೀಟಿ ಕಳಿಸಿ ನಂತರ ಹೇಳಿಕಳಿಸಿದಮೇಲೆ ಬರುವುದಾಗಿ ಹೇಳಿಕಳಿಸಿದ್ದಾರೆ. ಅದುದರಿಂದ ಅವರು ಚೀಟಿ ಬರೆದು ಕಳಿಸಿರುವುದರಲ್ಲಿ ತೋರಿಸಿರುವ ಕಾರಣ ಸತ್ಯಕ್ಕೆ ದೂರವಾದುದು. ಇದರಿಂದ ಈ ಸಭೆಯ ಅಮುಲ್ಯವಾದ ಕಾಲ ವ್ಯಯವಾಗಿದೆ. ಇದು ಸಭೆಯ ಘನತೆ, ಗೌರವ ಮತ್ತು ಮರ್ಯಾದೆಗೆ ಸಂಬಂಧಪಟ್ಟ ಪ್ರಶ್ನೆ, ಅದಕ್ಕೆ ಚುತಿ ಬಂದಿದೆ. ಆದುದರಿಂದ ರೂಲ್ 377ರ ಪ್ರಕಾರ ನಾನು ಮತ್ತು ಶ್ರೀ ವಾಟಾಳ್ ನಾಗರಾಜ್ ರವರು ಹಕ್ಕುಬಾಧ್ಯತೆ ನಿರ್ಣಯ ಕಳುಹಿಸಿದ್ದೇವೆ. ಆದನ್ನು ಸ್ವೀಕರಿಸಿ ಚರ್ಚೆಗೆ ಅವಕಾಶ ಕೊಡಬೇಕು. ಮಾನ್ಯ ಮಂತ್ರಿಗಳು ಈ ಸಭೆಗೆ ಅಗೌರವವನ್ನುಂಟುಮಾಡಿದ್ದಾರೆ, ಮತ್ತು ಹಕ್ಕಿಗೆ ಚ್ಯುತಿ ತಂದಿದ್ದಾರೆ, ಸಭೆಯ ಘನತೆ ಗೌರವಕ್ಕೆ ಚ್ಯುತಿ ತಂದಿದ್ದಾರೆ.

Mr. DEPUTY SPEAKER.—On the spur of the moment I cannot give a decision. If 4 to 5 members stand up simultaneously and speak, what am I to do ?

Sri K. PUTTASWAMY.—I have a humble suggestion to make. If it is sure that the Hon. Minister Sri Basavalingappa is coming, I will raise the Half-an-hour discussion.

Mr. DEPUTY SPEAKER.—Hon. member Sri K. Puttaswamy will kindly resume his seat. If I get an assurance on behalf of the Government that Hon'ble Minister, for Municipal Administration Sri Basavalingappa is coming now, I will give permission to start the discussion. Otherwise, I cannot allow the discussion.

Sri K. PUTTASWAMY.—Not that I have any objection for it. The only point I stress is that the House should have some work to transact.

Mr. DEPUTY SPEAKER.—I fully agree.

Sri K. PUTTASWAMY.—I have absolutely no objection if on the ground of inconvenience to the Hon'ble Minister Sri Basavalingappa to be present in the House, the Discussion is postponed. If it is your pleasure that this matter should be taken on some other day, I have no objection.

Mr. DEPUTY SPEAKER.—The hon. members must understand my embarrassing situation.

Sri K. PUTTASWAMY.—This House cannot wait indefinitely without any work. That would detract the dignity of the House.

Mr. DEPUTY SPEAKER.—I fully agree. In case, the hon. member Sri K. Puttaswamy starts his speech and if the Hon'ble Minister Sri Basavalingappa is not here to reply, there will be still more complication. I would permit the discussion if I have an assurance from the Government that the hon. Minister is positively coming to the House now. I have already sufficient trouble and as such I cannot permit the discussion without that assurance.

SRI M. Y. GHORPADE.—We are trying to contact him. We have sent a Minister of State.

SRI S. BANGARAPPA.—When the Hon. Minister Basavalingappa knew that this subject pertaining to his Ministry is put on the Agenda and coming for discussion, it is his duty and responsibility to be present in the House. It is expected that he should be present in the house. He has insulted the House.

SRI D. B. KALMANKAR.—Since the hon. member Sri K. Puttaswamy says that he has no objection if this matter is taken up on some other day, I think it will be proper if the House is adjourned now in order to maintain the dignity of the House.

ಶ್ರೀ ಎಚ್. ಡಿ. ದೇವೇಗೌಡ.—ಅಜೆಂಡಾದಲ್ಲಿರತಕ್ಕ ಕಾರ್ಯಕ್ರಮದ ಪ್ರಕಾರ ಕೆಲಸ ನಡೆಸುವುದಕ್ಕೆ ಸಂಬಂಧಪಟ್ಟ ಸದಸ್ಯರು ಒಪ್ಪಿಕೊಳ್ಳುವ ಇಚ್ಛೆಯಂತೆ ಕಾರ್ಯಕಲಾಪಗಳನ್ನು ನಡೆಸುವುವಕ್ಕೆ ಸಾಧ್ಯವಿಲ್ಲ. ಸಂಬಂಧಪಟ್ಟ ಸದಸ್ಯರು ಒಪ್ಪಿಕೊಳ್ಳುತ್ತಾರೆ ಅದಕ್ಕೋಸ್ಕರ ಅಡ್ಜರ್ನ್ ಮಾಡಿ ಎಂದು ಹೇಳುವ ವಾದ ಸರಣಿ ಸರಿಯಾದ ಸಂಪ್ರದಾಯವಲ್ಲ. ಇವತ್ತು ಮಂತ್ರಿಗಳು ಸಭೆಗೆ ಬಾರದಿದ್ದರೆ, ಬಹುಶಃ ಜಂಟಿ ಜವಾಬ್ದಾರಿ ಹೊಣೆ ಹೊತ್ತಿರತಕ್ಕದ್ದು ಎಲ್ಲಾ ಮಂತ್ರಿಗಳ ಮೇಲೆ ಇದೆ. ಇಲ್ಲಿ ಇಬ್ಬರು ಕ್ಯಾಬಿನೆಟ್ ಸಚಿವರು ಕುಳಿತಿದ್ದಾರೆ. ಆ ಜವಾಬ್ದಾರಿಯಿಂದ ತಾವು ಉತ್ತರ ಕೊಡಲಿಕ್ಕೆ ತಯಾರಿಲ್ಲವೆ ಎಂದು ಕೇಳಬೇಕಾಗುತ್ತದೆ. ತಾವು ಚರ್ಚೆಯಾಗುತ್ತಾ ಇದ್ದಾಗ ಎರಡು ದರ್ಜೆ ಮಂತ್ರಿಗಳು ಕುಳಿತರೆ ಸಾಕು, ಜಂಟಿ ಜವಾಬ್ದಾರಿ ಇದೆಯೆಂದು ಹೇಳಿದ್ದೀರಿ.

MR. DEPUTY SPEAKER.—I have repeatedly said what my duties are and I have also stated that no work is more important than the work in this House. I am sorry the Minister is not here now.

ಶ್ರೀ ಎಚ್. ಡಿ. ದೇವೇಗೌಡ.—ಆದ್ದರಿಂದ ಇವತ್ತು ಈ ಸಭೆಯ ಕಾರ್ಯಕಲಾಪವನ್ನು ತಡೆಹಿಡಿಯಲಿಕ್ಕೆ ತಯಾರಿಲ್ಲ. ಈ ಸಭೆಯನ್ನು ಮುಂದುವರಿಸಬೇಕು ಎನ್ನುವ ಅಭಿಪ್ರಾಯವಿದೆ. ನಾವು ಸಿದ್ಧವಾಗಿಲ್ಲ ಎಂದು ಹೇಳಿದರೆ ಅದು ಕೆಟ್ಟ ಸಂಪ್ರದಾಯ ಆಗುತ್ತದೆ. ಅಜೆಂಡಾದ ಕಾರ್ಯಕ್ರಮವನ್ನು ಸದಸ್ಯರ ಮತ್ತು ಮಂತ್ರಿಗಳ ಇಚ್ಛೆಯಂತೆ ಬದಲಾವಣೆ ಮಾಡುವುದಕ್ಕೆ ತಯಾರಾಗತಕ್ಕ ಕಾಲ ಬರುತ್ತದೆ, ಇಂಥ ಕೆಟ್ಟ ಸಂಪ್ರದಾಯ ಹಾಕುವುದು ಬೇಡ. ಮಂತ್ರಿಗಳು ದೊಡ್ಡವರು ಇರಬಹುದು. ಆದರೆ ಅವರು ಈ ಸಭೆಗಿಂತ ದೊಡ್ಡವರಲ್ಲ. ನಗೆಪಾಟಲಾಗುವಂತ ಕಾಲ ಬರುತ್ತದೆ. ಪ್ರೈವೇಟ್ ಸೆಕ್ರೆಟರಿ ಭಾಷಣ ಮಾಡಬಹುದು ಎಂದು ನಿನ್ನೆಯ ದಿವಸ ಹೇಳುತ್ತಾರೆ, ನಾಳೆ ನಾನು 15 ದಿವಸ ವಿರಾಮ ತೆಗೆದುಕೊಳ್ಳಬೇಕಾಗಿದೆ, ಪ್ರೈವೇಟ್ ಸೆಕ್ರೆಟರಿ ಮಂತ್ರಿ ಕೆಲಸ ಮಾಡಬಹುದು ಎಂದು ಹುಕುಂ ಮಾಡಬಹುದು. ಇಷ್ಟೊಂದು ಹಾಸ್ಯಾಸ್ಪದ ಪರಿಸ್ಥಿತಿಗೆ ಇವರು ಬಂದಿದ್ದಾರೆ ನಿಮ್ಮನ್ನು ನೋಡಿ ದೇಶದ ಜನ ನಗುತ್ತಾರೆ. ಆದ್ದರಿಂದ ದಯಮಾಡಿ ಈ ಸಭೆಯನ್ನು ಅಡ್ಜರ್ನ್ ಮಾಡದೆ ಮಂತ್ರಿಗಳು ಸಭೆಗೆ ಬಂದು ಉತ್ತರ ಕೊಡಬೇಕು. ಅಡ್ಜರ್ನ್ ಮಾಡಿದರೆ ಕೆಟ್ಟ ಸಂಪ್ರದಾಯವನ್ನು ಹಾಕಿದಂತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನಾನು ಹಕ್ಕುಭಾದ್ಯತೆ ನಿರ್ಣಯವನ್ನು ಕಳುಹಿಸಿದ್ದೇನೆ, ಆದರ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

MR. DEPUTY SPEAKER.—The House will now adjourn to re-assemble tomorrow at 9 A.M.

The House adjourned at Fifteen Minutes Past Six of the Clock to meet again at nine of the Clock on Saturday, the 24th March 1973.

THE MYSORE APPROPRIATION BILL, 1973

(L. A. Bill No. 25 of 1973)

A Bill to authorise payment and appropriation of certain further sums from and out of the Consolidated Fund of the State for the services of the financial year 1972-73.

WHEREAS it is expendient to authorise payment and appropriation of certain further sums from and out of the Consolidated Fund of the State for the services of the financial year 1972-73;

Be it enacted by the Mysore State Legislature in the Twenty-fourth Year of the Republic of India as follows:—

1. **Short title.**—This Act may be called the Mysore Appropriation Act, 1973.

2. **Issue of Rupees 2,27,20,97,900 out of the Consolidated Fund of the State for the financial year 1972-73.**—From and out of the Consolidated Fund of the State of Mysore, there may be paid and applied sums not exceeding those specified in column 3 of the Schedule amounting in the aggregate to the sum of two hundred twenty seven crores twenty lakhs ninety seven thousand and nine hundred rupees towards defraying the several charges which will come in course of payment during the financial year 1972-73 in respect of the services specified in column 2 of the Schedule.

3. **Appropriation.**—The sums authorised to be paid and applied from and out of the Consolidated Fund of the State of Mysore by this Act shall be appropriated for the services and purposes expressed in the Schedule in relation to the said year.

SCHEDULE

(*See* Sections 2 and 3)

No. of Vote	Services and purposes	Sums not exceeding		
		Voted by the Legislative Assembly	Charged on the Consolidated Fund	Total
1	2		3	
		Rs.	Rs.	Rs.
2	Land Revenue ...	1,30,00,000	5,00,800	1,35,00,800
3	State Excise ...	11,55,000	...	11,55,000
6	Other Taxes Administration ...	1,00,000	...	1,00,000
...	*Debt Services* ...	...	1,89,98,000	1,39,98,000
10	General Administration ...	13,55,000	3,32,000	16,87,000
11	Administration of Justice ...	1,32,000	5,00,000	6,32,000
13	Police ...	50,30,100	...	50,30,100
15	Miscellaneous Departments ..	19,02,000	...	19,02,000
16	Scientific Departments ...	6,50,000	...	6,50,000
17	Education ...	1,55,32,300	...	1,55,32,300
18	Medical, Public Health and Family Planning ...	1,25,00,100	15,700	1,25,15,800
20	Agriculture, Horticulture and Fisheries ...	100	12,900	13,000
22	Animal Husbandry ...	14,00,100	...	14,00,1 0
23	Co-operation ...	4,00,500	...	4,00,500
24	Industries Including Sericulture ...	10,49,000	...	10,49,000
27	Miscellaneous and Developmental Organisations	75,00,0000	...	75,00,000

1	2		3	
		Rs.	Rs.	Rs.
29	Irrigation (commercial) ...	66,84,000	...	66,84,000
30	Irrigation (Non-commercial) ...	1,09,000	...	1,09,000
30B	Capital Outlay on Irrigation etc., (within the Revenue Account) ...	10,00,000	...	10,00,000
31	Public Works ...	2,40,50,000	...	2,04,50,000
32	Ports and Pilotage ...	1,75,000	...	1,75,000
33	Famine Relief ...	11,07,92,000	...	11,07,92,000
34	Pensions and Other Retirement Benefits ...	34,32,000	...	34,32,000
35	Territorial and Political Pensions ...	3,42,000	...	3,42,000
38	Forest ...	48,00,000	...	48,00,000
40	Commutation of Pensions ...	7,34,000	...	7,34,000
41	Miscellaneous Compensations and Assignments	51,51,700	...	51,51,700
43	Capital outlay on Improvement of Public Health ...	95,00,000	...	95,00,000
44	Capital outlay on Industrial and Economic Development ...	57,97,15,400	...	57,97,15,400
45	Capital outlay on Irrigation etc., (Commercial)	3,87,14,000	12,28,000	3,99,42,000
47	Capital Account of Electricity schemes ...	...	13,00,000	13,00,000
48	Capital Outlay on Public Works ...	15,12,000	...	15,12,000
52	Commuted Value of Pensions ...	7,34,000	...	7,34,000
53	Capital Outlay on Schemes of Government Trading ...	2,51,39,000	...	2,51,39,000
...	*Public Debt–Repayments etc.,* ...	...	61,50,99,000	61,50,99,000
54	Advances and Loans ...	76,84,21,200	...	76,84,21,200
	Total ...	1,63,91,11,500	63,29,86,400	2,27,20,97,900

THE MYSORE APPROPRIATION (VOTE ON ACCOUNT) BILL, 1973.

(L. A. Bill No. *26* of *73*)

A Bill to authorise payment and appropriation of certain sums from and out of the Consolidated Fund of the State of Mysore for the services of a part of the financil year 1973-74.

Whereas it is expedient to authorise payment and appropriation of certain sums from and out of the Consolidated Fund of the State for the services of a part of the financial year 1973-74.

Be it encated by Mysore State Legislature in the Twenty-fourth Year of the Republic of India as follows :—

1. **Short title** :—This Act may be called the Mysore Appropriation (Vote on Account) Act, 1973.

2. **Issue of rupees 1,29,70,80,000 out of the Consolidated Fund of the State of Mysore for the financial year 1973-74.**—From and out of the Consolidated Fund of the State of Mysore, there may be paid and applied sums not exceeding those specified in column 3 of the Schedule amounting in the aggregate to the sum of one hundered and twenty-nine crores, seventy lakhs and eighty thousand rupees towards defraying the several charges which will come in course of payment during part of the financial year 1973-74, in respect of the services specified in column 2 of the Schedule.

3. **Appropriation.**—The sums authorised to be paid and applied from and out of the Consolidated Fund of the State of Mysore by this Act shall be appropriated for the services and purposes expressed in the Schedule in relation to the said year.

SCHEDULE

...

(*See* Sections 2 and 3)

No. of Vote	Services and Purposes	Sums not exceeding		
		Voted by the Legislative Assembly	Charged on the Consolidated Fund	Total
1	2		3	
		Rs.	Rs.	Rs.
1	Taxes on Income other than Corporation Tax ...	1,89,000	500	1,89,500
2	Land Revenue ...	90,52,000	1,000	90,53,000
3	State Excise ...	40,22,000	500	40,22,000
4	Motor Vehicles Acts—Administration ...	6,25,000	500	6,25,500
5	Sales Tax—Administration ...	27,49,000	500	27,49,500
6	Other Taxes—Administration ...	4,03,000	...	4,09.000
7	Stamp- ...	5,33,000	...	5,33,000
8	Registration ...	7,67,000	...	7,67,000
...	Debt Services ...	...	8,79,00,000	8,79,00,000
9	State Legislature and Elections ...	10,06,000	20,000	10,26,000
10	General Administration (excluding Treasuries and Local Fund Audit) ...	98,98,000	4,18,000	1,03,16,000
10A	Taeasuries and Local Fund Audit ...	17,03,000	...	17,03,000
11	Administration of Justice ...	43,02,000	6,33,000	49.35,000
12	Jails ...	18,66,000	...	18,66,000

1	2		3	
		Rs.	Rs.	Rs.
13	Police ...	2,39,00,000	8,000	2,39,66,000
14	Supplies and Disposals ...	67,000	...	67,000
15	Miscallaneous Departments (excluding Civil Supplies Department, Department of Information and Small Savings ...	20,00,000	...	20,08,000
15A	Civil Supplies Department ...	14,65,000	...	14,65,000
15B	Department of Information ...	13,49,000	...	18,49,000
15C	Small Savings ...	92,000	...	92,000
16	Scientific Departments ...	11,04,000	...	11,04,000
17	Education (Excluding Youth Services) ...	11,16,90,000	1,500	11,16,92,500
17A	Youth Services ...	10,00,000	...	10,00,000
18	Medical, Public Health and Family Planning ...	4,41,48,000	1,500	4,41,44,500
20	Agriculture and Horticulture (excluding Fisheries) ...	2,48,92,000	...	2,58,92,000
20A	Fisheries ...	19,22,000	...	19,22.0 0
21	Rural Development ...	1,01,00,000	...	101,00,000
22	Animal Husbandry ...	52,00,000	...	52.12, 00
23	Co-operation ...	67,6,000	1,500	67,61,500
24	Industries (excluding Sericulture) ...	2,03,81,000	...	2,63,8,000
24A	Sericulture ...	15,22,000	...	15,22,000
25	Community Development etc. ...	1,03,27,000	...	1,03,27,000
26	Labour and Employment ...	32,67,000	...	32,67,000
27	Miscellaneous Social and Developmental Organisations ...	2,30,89,000	500	2,39,89,500
29	Irrigation (Commercial) ...	3,37,53,000	...	3,37,53,000
30	Irrigation (Non-Commercial) ...	81,09,000	1,000	81,10,500

30B	Capital Outlay on Irrigation etc. (within the Revenue Account) ...	80,16,000	...	80,16,909
31	Public Works ...	8,10,82,000	25,000	8,11,07,000
31A	Capital Outlay on Public Works (within the Revenue Account) ...	71,05,000	500	71,05,000
32	Ports and Pilotage ...	3,84,000	...	3,84,000
33	Famine Relief ...	9,64,60,000	...	9,64,60,000
34	Pensions and Other Retirement Benefits ...	1,27,26,000	4,60,000	1,31,86,000
35	Territorial and Political Pensions ...	11,85,000	10,000	11,95,000
36	Privy Purses and Allowances ...	2,000	16,000	18,000
37	Stationery and Printing ...	38,00,000	...	33,00,000
38	Forest ...	1,75,10,000	11,000	1,75,27,000
39	Miscellaneous ...	58,60,000	1,000	58,51,000
39A	Grant-in-aid Contributions to Local Bodies and Housing ...	1,00,04.000	...	1,00,01,000
39B	State Lotteries ...	41,67,000	...	41,67,000
40	Commutation of Pensions ...	10,83,000	...	10,80,000
41	Miscellaneous Compensations and Assignment ...	42,54,000	2,50,000	45,04,000
42	Compensation to Zamindars ...	16,00,000	...	16,00,000
43	Capital Outlay on Improvement of Public Health ...	15,79,000	...	15,79,000
44	Capital Outlay on Industrial and Economic Development ...	2,80,19,000	...	2,80,19,000
45	Capital Outlay on Irrigation Etc. (commercial) ...	7,01,84,000	88,000	7,02,17,000
46	Capital Outlay on Irrigation Etc. (Non-commercial) ...	16,00,000	...	16,00,000
47	Capital Outlay on Electricity Schemes ...	4,74,000	...	4,74,000
48	Capital Outlay on Public Works ...	1,51,97,000	8,000	1,52,05,000
50	Development of Minor Ports ...	6,62,000	97,000	7,59,000
50A	Capital Outlay on Road and Water Transport Schemes ...	1,27,000	...	1,27,000

1	2		3	
		Rs.	Rs.	Rs.
51	Capital Outlay on Forests ...	8,67,000	...	8,67,000
52	Commuted value of Pensions ...	10,50,000	87,000	10,57,000
53	Capital Outlay on Schemes of Government Trading	8,89,17,000	...	8,89,17,000
...	*Public Debt—Repayments etc.* ...	...	29,98,88,000	29,98,88,000
54	Advances and Loans ...	7,46,88,000	...	7,46,83,000
	Total ...	90,77,10,000	82,28,70,000	1,29,70,80,000

Statement of Objects and Reasons

This Bill is introduced in pursuance of the provisions of Article 204 (1) read with 206 of the Constitution of India, to provide for the appropriation out of the Consolidated Fund of the State of moneys required towards defraying the several charges which will come in course of payment during the part of the financial year 1973-74.

M. Y. GHORPADE

TE. HANUMANTHAPPA,
Secretary.

WD 20129—GPB—550—18-7-74

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday, 24th March, 1973/ Chaitra 3, 1895 S.

The House met in the Assembly Chamber, Vidhana Soudha, at Nine of the Clock.

Mr. DEPUTY SPEAKER [SRI. B. P. KADAM] in the Chair.

STARRED QUESTIONS

(to which oral answers were given)

Leakage in Sluice Gates of T. B. Dam

23. SRI B. SATYANARAYANA SINGH (Hospet).—

Will the Minister of State for Major Irrigation be pleased to state :—

(*a*) whether there is heavy leakage of water in the sluice gates at T. B. Head Works at T. B. Dam ;

(*b*) whether the leakage water goes into the river which is advantageous to Andhra Pradesh ;

(*c*) whether it is fact that leakage of water comes to about 200 cusecs of water ;

(*d*) the steps the State Government have taken to move the Tungabhadra Board to stop this leakage ?

SRI H.N. NANJE GOWDA (Minister of State for Major Irrigation).—

(*a*) There is no leakage in the sluice gates. Some leakage has been observed in the spillway gates.

(*b*) The leakage water will be advantageous both to Andhra Pradesh and Mysore.

(*c*) No, it is about 60 cusecs.

(*d*) Tungabhadra Board Authorities have been urged to complete the repairs to the crest gates during this season.

ಶ್ರೀ ಬಿ. ಸತ್ಯನಾರಾಯಣಸಿಂಗ್.—ತಾವು (ಆ)ಗೆ ಉತ್ತರವಾಗಿ ಸೋರಿದ ನೀರು ಆಂಧ್ರ ಪ್ರದೇಶಕ್ಕೂ ಮತ್ತು ಮೈಸೂರು ರಾಜ್ಯಗಳೆರಡಕ್ಕೂ ಅನುಕೂಲವಾಗುತ್ತದೆ ಎಂದು ತಿಳಿಸಿದ್ದೀರಿ. ಆದರೆ ನಾನು ಹೇಳುತ್ತೇನೆ ಈ ಉತ್ತರ ತಪ್ಪು ಎಂದು. ಸೋರಿದ ನೀರು ನದಿಗೆ ಹೆಚ್ಚಾಗಿ ಹೋಗುವುದರಿಂದ ಆಂಧ್ರದವರಿಗೆ ಉಪಯೋಗವಾಗುತ್ತದೆ, ನಮಗೆ ಉಪಯೋಗವಾಗುವುದಿಲ್ಲ. ತಾವು ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಇಬ್ಬರಿಗೂ ಉಪಯೋಗವಾಗುತ್ತದೆ ಎಂದು ವರದಿ ಇದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಇಬ್ಬರಿಗೂ ಉಪಯೋಗವಾಗುವುದು ಹೇಗೆ ? ನದಿಯ ಕೊನೆಯ ಭಾಗದಲ್ಲಿ ಆಂಧ್ರ ಏರಿಯಾ ಇರುವುದರಿಂದ ನೀರು ಹೆಚ್ಚಾಗಿ ಹರಿಯುತ್ತದೆ, ಮತ್ತು ಅಲ್ಲಿ ಹೆಚ್ಚಿಗೆ ಉಪಯೋಗವಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ವರ್ಕಿಂಗ್ ಟೇಬಲ್ ಮಾಡುವಾಗ ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡು ತಯಾರು ಮಾಡಿರುತ್ತಾರೆ. ಇದರಿಂದ ಇಬ್ಬರಿಗೂ ಉಪಯೋಗವಾಗುತ್ತದೆಂದು ವರದಿ ಸೂಚಿಸಿದ್ದಾರೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಈ ರೀತಿ ತೂಬು ಮತ್ತು ಬಾಗಿಲುಗಳಿಂದ ಸೋರುವ 200 ಕ್ಯೂಸೆಕ್ಸ್‌ಗಳು ಎಂದು ರಾಜ್ಯ ಸರ್ಕಾರದ ಪ್ರತಿನಿಧಿಗಳು ತುಂಗಭದ್ರಾ ಬೋರ್ಡ್‌ನವರ ಗಮನಕ್ಕೆ ತಂದಿದ್ದಾರೆ. ಆದರೆ ಇವತ್ತಿನವರೆಗೂ ಅದರ ರಿಪೇರಿಯಾಗಲಿಲ್ಲ. ಹರಿದು ಹೋಗುವ ನೀರನ್ನು ನಿಲ್ಲಿಸುವುದಕ್ಕೆ ಪ್ರಯತ್ನಪಟ್ಟಿಲ್ಲ. You have said Thungabhadra Board Authorities have been urged to complete the repairs. ಅವರು ಪ್ರಾರಂಭಮಾಡಿಲ್ಲ, ಕಂಪ್ಲೀಟ್‌ಮಾಡುವ ಪ್ರಶ್ನೆ ಬರುವುದಿಲ್ಲ. ಬೋರ್ಡಿನಲ್ಲಿ ಇದನ್ನು ಚರ್ಚೆ ಮಾಡಿ ನಿರ್ದಿಷ್ಟ ಕಾಲದಲ್ಲಿ ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್. ಎನ್. ನಂಜೇಗೌಡ.—ಪ್ಯಾಕಿಂಗ್ ಮೆಟೀರಿಯಲ್ ಸವೆದು ಹೋಗುತ್ತದೆ. ಆದ್ದರಿಂದ ಲೀಕೇಜ್ ಇರುತ್ತದೆ. 5 ಗೇಟ್ ಕಡೆ ಲೀಕೇಜ್ ಗೇಜ್ ಮಾಡಿದ್ದಾರೆ. ಮತ್ತು ಇರತಕ್ಕಂಥ ಗೇಟ್ಸ್‌ಗಳಲ್ಲಿಯೂ ಕೂಡ ಲೀಕೇಜ್ ಅನ್ನು ಗೇಜ್ ಮಾಡಿದ್ದಾರೆ. ಸೋರಿ ಹೋಗುತ್ತಿರುವ ನೀರು 60 ಕ್ಯೂಸೆಕ್ಸ್ ಇದೆ. ಇದು ನಮಗೆ ಬಂದಿರತಕ್ಕ ವರದಿ. ಇದರ ರಿಪೇರಿಯನ್ನು ಮಾಡಬೇಕು ಎಂದು ಒತ್ತಾಯ ಮಾಡಿದ್ದೇವೆ, ಮಾಡುತ್ತಾರೆ ಎನ್ನತಕ್ಕದ್ದು ನಮ್ಮ ನಿರೀಕ್ಷೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ಪಿಲ್‌ವೇ ಗೇಟ್ಸ್ ವಿಷಯ ಹೇಳಿದಿರಿ, ಯಾವಾಗ ಲೀಕೇಜಸ್ ಅನ್ನು ಅಬ್ಸರ್ವ್ ಮಾಡಿದ್ದು, ಎನ್‌ಕ್ವಯರಿ ಮಾಡಿ, ವರದಿ ತರಿಸಿಕೊಂಡಿದ್ದು ಯಾವಾಗ ? ಯಾವಾಗ ರಿಪೇರಿ ಕಂಪ್ಲೀಟ್ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಸೋರಿಹೋದ ನೀರಿನಿಂದ ಎರಡು ರಾಜ್ಯಕ್ಕೆ ಅನುಕೂಲವಾಗುತ್ತದೆಂದು ಹೇಳಿದಾಗ, ಮಾನ್ಯ ಸತ್ಯನಾರಾಯಣಸಿಂಗ್ ಅವರು ಸರಿಯಲ್ಲ ಎಂದು ಹೇಳಿದರು. ನಾವು ಗಲಾಟೆಮಾಡಿದ ಮೇಲೆ ಬೋರ್ಡ್ ಅಥಾರಿಟೀಸ್, ಸೋರಿಹೋಗುವ ನೀರು 60 ಕ್ಯೂಸೆಕ್ಸ್ ಎಂದು ಗೇಜ್ ಮಾಡಿರತಕ್ಕದ್ದು. ಇಲ್ಲಿಂತಕ್ಕ ವರದಿಯ ಪ್ರಕಾರ ಇದನ್ನು ಗೇಜಿನ ರಬ್ಬರ್ ಲೈನಿಂಗ್ ಬದಲಾವಣೆಮಾಡಿ ಪ್ಯಾಕ್‌ಅಪ್ ಮಾಡಿದ್ದಾರೆ. ಇನ್ನು ಎಷ್ಟು ಗೇಟುಗಳಲ್ಲಿ ಲೀಕೇಜ್ ಆಗಿದೆ ಎನ್ನತಕ್ಕದ್ದು ಗೊತ್ತಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಸದಸ್ಯರು 200 ಕ್ಯೂಸೆಕ್ಸ್ ಪ್ರಮಾಣದಲ್ಲಿ ನೀರು ಲೀಕೇಜ್ ಆಗುತ್ತದೆಂದು ಹೇಳಿದ್ದಾರೆ. ತಾವು 60 ಕ್ಯೂಸೆಕ್ಸ್ ಮಾತ್ರ ಲೀಕೇಜ್ ಆಗುತ್ತದೆಂದು ಹೇಳಿದ್ದೀರಿ. ನೀವು ಅಲ್ಲಿ ಮಾಡಿದಂಥ ಅಧ್ಯಯನ, ಪರೀಕ್ಷೆ ಯಾವುದು ? ಇನ್ನೊಂದು ಅಂಶ, ಎರಡು ರಾಜ್ಯಗಳಿಗೆ 60 ಕ್ಯೂಸೆಕ್ಸ್ ನೀರಿನಿಂದ ಅನುಕೂಲವಾಗುತ್ತದೆ ಎಂದು ಹೇಳಿದ್ದೀರಿ, ಇದರಲ್ಲಿ ಮೈಸೂರು ರಾಜ್ಯಕ್ಕೆ ಎಷ್ಟು ನೀರು ಸಿಕ್ಕುತ್ತದೆ, ಆಂಧ್ರಪ್ರದೇಶಕ್ಕೆ ಎಷ್ಟು ನೀರು ಸಿಕ್ಕುತ್ತದೆ ?

ಶ್ರೀ ಎಚ್. ಎನ್. ನಂಜೇಗೌಡ.—ಡಿಸೆಂಬರ್ ತಿಂಗಳಿಂದ ಜನವರಿ 1973ರ ವರೆಗೆ ಗೇಜ್ ಮಾಡಿದ್ದಾರೆ. ಅದರ ಆಧಾರದ ಮೇಲೆ ಎಷ್ಟು ಲೀಕೇಜಸ್ ಇದೆ ಎಂದು ಅರಿತುಕೊಂಡು, ಎರಡು ರಾಜ್ಯಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದೇವೆ. 60 ಕ್ಯೂಸೆಕ್ಸ್ ಮೇಲೆ ಡ್ರಾ ಮಾಡಬಾರದು ಎಂದು ಒತ್ತಾಯ ಮಾಡಿ, ಅದನ್ನು ಅವರು ಒಪ್ಪಿಕೊಂಡು ಆ ರೀತಿ ನಡೆದುಕೊಳ್ಳುತ್ತಿದ್ದಾರೆ. ಇದರಿಂದ ಇಬ್ಬರಿಗೂ ಅನುಕೂಲವಾಗುತ್ತದೆ, ಒಬ್ಬರಿಗೆ ಲಾಭವೆಂದು ಗೊತ್ತಿಲ್ಲ.

Raising the Level of Spillways of Certain Tanks in Dharwar District

48.—SRI K. H. KURADAGI (Mundargi).—

Will the Minister of for Public Works and Electricity be pleased to state :

(a) whether it has come to the notice of the Government if the spillways of the following tanks are raised, the irrigational facilities will be provided to more acres of lands in the respective areas.

(i) Janthali-Shirur tanks in Mundargi Taluk, Dharwar District.

(ii) Dambal Tank in Mundargi Taluk.

(b) if so, the action taken by the Government in this behalf ;

(c) the reason for not taking up the work for raising the spillway of Mushtikoppa tank even though the amount was provided in the Budget ?

SRI H. M. CHANNABASAPPA (Minister for Public Works and Electricity).—

(a) and (b) As the quantum of water flowing into this tank is not sufficient, no programme has been chalked out.

(c) As the water and land are not fit for cultivation, no steps have been taken.

ಶ್ರೀ ಕೆ. ಎಚ್. ಕುರಡಗಿ.—ನೀರು ಸಾಕಷ್ಟು ಪ್ರಮಾಣದಲ್ಲಿ ಇಲ್ಲದೆ ಇರುವುದರಿಂದ ಯಾವ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದಿರಿ, ನೀರು ಕೆರೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಂದು ಹೆಚ್ಚಾಗಿ ಹಳ್ಳಿಗಳಿಗೆ ಹೋಗುವುದಕ್ಕೆ ಹತ್ತಿದೆ.

† ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಚ್ಚಿಗೆ ನೀರು ಬಂತು ಎಂದು ತಾವು ಹೇಳಿದರೆ ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಕೆ. ಯಂಕಟಪ್ಪ.—ಮಾನ್ಯ ಸದಸ್ಯರು ಕೇಳಿದ್ದಕ್ಕೆ ತಾವು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಿದ್ದೀರಿ, ತಮ್ಮ ಇಲಾಖೆಯವರು ತಮಗೆ ಸರಿಯಾದ ಮಾಹಿತಿಗಳನ್ನು ಕೊಡದಿದ್ದರೆ, ಅದರ ಬಗ್ಗೆ ಈಗಲಾದರೂ ವಿಚಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರು ಇದೆ, ಇಲ್ಲ, ಎನ್ನತಕ್ಕದ್ದು ಅಂಕಿ ಅಂಶಗಳ ಆಧಾರದ ಮೇಲೆ ಲೆಕ್ಕಹಾಕಿ ಇದು ಆಗುವುದಿಲ್ಲ, ಅದು ಆಗುತ್ತದೆ ಎಂದು ಅವರು ಹೇಳುತ್ತಾರೆ. ಆಗುವುದಿಲ್ಲ ಎಂದು ಹೇಳಬೇಕಾದರೆ, ಈ ಪ್ರಮೇಯ ಏನೂ ಇಲ್ಲ.

ಶ್ರೀ ಜೆ. ಎಲ್. ಕಬಾಡಿ.—ಕೆರೆಗೆ ಬರುವ ನೀರು ಉಪಯೋಗ ಇದೆಯೇ ? ಇಲ್ಲವೇ, ಎಂಬುದನ್ನು ಲ್ಯಾಬೋರೆಟರಿಯಿಂದ ಟೆಸ್ಟ್ ಮಾಡಿ ನೋಡಿದಾಗ ಆಗಿದೆಯೇ, ನೋಡಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ, ಈಗ ಏನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲಸವೇ ಮಾಡಿಲ್ಲ. ಕೆಲಸ ಮಾಡಬೇಕೆಂದು ಕೇಳಿದ್ದಾರೆ, ನೀರು ಉಪಯೋಗ ಬರಲಿಲ್ಲ ಎಂದು ಆ ಕೆಲಸ ತೆಗೆದುಕೊಂಡಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಹೇಳಿದ್ದಾರೆ ಕೆರೆಗೆ ಬರುವ ನೀರು ಸಾಕಷ್ಟು ಪ್ರಮಾಣದಲ್ಲಿ ಇಲ್ಲದೆ ಇರುವುದರಿಂದ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಕೆರೆ ಕಟ್ಟುವಾಗ ಟೆಕ್ನಿಕಲ್ ಫೀಸಿಬಿಲಿಟಿ ನೋಡಲಿಲ್ಲವೇ ? ನೀರು ಎಷ್ಟು ಬರುತ್ತದೆ ಎನ್ನುವುದನ್ನು ಪರೀಕ್ಷೆ ಮಾಡಲಿಲ್ಲವೇ ? ಸುಮ್ಮನೆ ಕೆರೆ ಕಟ್ಟಿ ನೀರು ಇಲ್ಲ ಎಂದು ಹೇಗೆ ಹೇಳುತ್ತೀರಿ ?

†Indicates that the remarks or speeches have not been revised by the member concerned.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ವಿಷಯ ತಿಳಿಯದೆ ಮಾತನಾಡುತ್ತಿದ್ದಾರೆ. ಅಲ್ಲಿ ಕೆರೆ ಇದೆ, ನೀರು ಇದೆ, ಒಂದುಸಾವಿರ ಎಕರೆಗೆ ನೀರಾವರಿ ಮಾಡುತ್ತಿದ್ದಾರೆ ಡ್ಯಾಂಬರ್ ಟ್ಯಾಂಕ್ ಇದೆ. ಅಲ್ಲಿ 2ಸಾವಿರ ಎಕರೆಗೆ ನೀರು ಕೊಡುತ್ತಾ ಇದ್ದೇವೆ. ಅವರು ಕೇಳುವುದು ಇನ್ನಷ್ಟು ಬಡಾವಣೆ ಮಾಡಿ ಎಷ್ಟು ಹೆಚ್ಚಿಗೆ ಭೂಮಿಗೆ ನೀರು ಕೊಡಲಿಕ್ಕೆ ಸಾಧ್ಯವಾಗುತ್ತದೋ ಅಷ್ಟು ನೀರು ಎಂದು ಕೇಳುತ್ತಿದ್ದಾರೆ ನಾವು ನೀರು ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದೇವೆ. ನೀವು ಅದರ ಬಗ್ಗೆ ಪ್ರಶ್ನೆ ಹಾಕುತ್ತಿದ್ದೀರಿ.

Mr. DEPUTY SPEAKER.—Sri B. Sathyanarayana Singh may put Question. No 164.

Abolitor of Check-Posts

164. Sri B. E. RAMAIAH (Siruguppa).—

Will the Minister for Finance be pleased to state:—

(a) the total number of check-posts which are functioning in Bellary District at present (give details) ;

(b) whether the Government is aware of the widespread opinion of the public that corruption is rampant among officers working in the check-posts ;

(c) in view of it, will Government take immediate steps to abolish the check-posts as recommended by the Boothalingam Committee ?

Sri M. Y. GHORADE (Minister for Finance).—

(a) Two ; one at Siruguppa and another at Hospet.

(b) No.

(c) Does not arise.

ಶ್ರೀ ಬಿ. ಸತ್ಯನಾರಾಯಣಸಿಂಗ್.—ತಾವು (ಬಿ) ಗೆ ಉತ್ತರವಾಗಿ ಗೊತ್ತಿಲ್ಲ ಎಂದು ಹೇಳುತ್ತೀರಿ, ಚೆಕ್ ಪೋಸ್ಟ್‌ಗಳಲ್ಲಿ ಲಂಚಗುಳಿತನ ತುಂಬಿದೆ. ಗೊತ್ತಿಲ್ಲ ಎಂದು ಹೇಳುತ್ತೀರಿ. ಅನೇಕಸಲ ಈ ವಿಷಯ ಚರ್ಚೆಗೆ ಬಂದಿದೆ. ಈಗಲಾದರೂ ಅಪಾದನೆ ಮಾಡುತ್ತಿದ್ದೇನೆ ಚೆಕ್ ಪೋಸ್ಟ್‌ನಲ್ಲಿ ಲಂಚಗುಳಿತನ ತುಂಬಿದೆ ಅದಕ್ಕೆ ಏನು ಹೇಳುತ್ತೀರಿ ?

†ಶ್ರೀ ಕೆ. ಎಚ್. ಪಾಟೀಲ್.—ಅಪಾದನೆ ಮಾಡುವುದು ಬೇರೆ. ನಿರ್ದಿಷ್ಟವಾಗಿ ಸರ್ಕಾರದ ಗಮನಕ್ಕೆ ತರುವುದು ಬೇರೆ. ನಿರ್ದಿಷ್ಟವಾಗಿ ಚಾರ್ಜ್ ಬಂದಿಲ್ಲ. ಲಂಚದ ಅಪಾದನೆ ಸಾರ್ವತ್ರಿಕವಾಗಿ ಇದ್ದೇ ಇದೆ.

ಉಪಾಧ್ಯಕ್ಷರು.—ತಮ್ಮ ಕಡೆ ಸಕಾರಣವಾಗಿ ಚಾರ್ಜ್‌ಸ್ ಇದ್ದರೆ ಕಳುಹಿಸಿಕೊಡಿ.

ಶ್ರೀ ಬಿ. ಸತ್ಯನಾರಾಯಣ ಸಿಂಗ್. – ಏನಾದರೂ ಹೇಳುತ್ತಾರೆ, ಚೆಕ್‌ಪೋಸ್ಟ್‌ನಲ್ಲಿ ಕೆಲಸ ಮಾಡುವ ಅಧಿಕಾರಿಗಳು ದುಂದು ಜೀವನ ನಡೆಸುವುದನ್ನು ನೋಡಿದರೆ ಅವರು ಹೆಚ್ಚಿನ ಸಂಪತ್ತು ಗಳಿಸಿರುವುದು ಗೊತ್ತಾಗುತ್ತದೆ. ಸಿ.ಐ.ಡಿ. ಮೂಲಕ ತನಿಖೆ ನಡೆಸಿ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ವಿಷಯ ಇದಕ್ಕೆ ಸಿ.ಐ.ಡಿ. ಏತಕೆ ಮಾನ್ಯ ಸದಸ್ಯರೇ ಬರೆದರೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆ.

Railway Station at Kyathankeri

472. Sri J. L. KABADE (Ballolli).—

Will the Minister for Public Works and Electricity be pleased to state:—

(a) whether the Government has urged the Central Government about the necessity of a railway station on Sholapur-Hubli line at Kyathanakeri ;

(b) if so, the action taken by the Government of India in this regard ?

Sri H. M. CHANNABASAPPA.—(Minister for Public Works and Electricity.—

(a) Yes.

(b) This is being examined by the Railways.

ಶ್ರೀ ಜೆ. ಎಲ್. ಕಬಾಡಿ.— ಕ್ಯಾತನಕೆರೆ ರೈಲ್ವೆಸ್ಟೇಷನ್ ಮಾಡಬೇಕೆಂದು ಸಾರ್ವಜನಿಕರಿಂದ ಬಹಳ ದಿವಸಗಳಿಂದ ಒತ್ತಾಯ ಬಂದಿದೆ. ಇದನ್ನು ಪರಿಶೀಲನೆ ಮಾಡಲಿಕ್ಕೆ ಕೇಂದ್ರ ಸರ್ಕಾರಕ್ಕೆ ತಿಳಿಸಲಾಗಿದೆ ಎಂದು ತಾವು ಹೇಳಿದ್ದೀರಿ. ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಏನಾದರೂ ಉತ್ತರ ಬಂದಿದೆಯೇ ? ಬಂದಿದ್ದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ಎಚ್. ಎಂ. ಚನ್ನಬಸಪ್ಪ.— ಉತ್ತರ ಬಂದಿದೆ. ಈ ಸೈಟು ಸ್ವಲ್ಪ ಅನಾನುಕೂಲವಾಗಿದೆ. ಅಲ್ಲಿ ಗ್ರೇಡಿಯಂಟ್ ಮತ್ತು ಕರ್ವ್ ಇರುವುದರಿಂದ ಕ್ಯಾತನಕೆರೆ ಹತ್ತಿರ ಮಾಡುವುದಕ್ಕೆ ಆಗುವುದಿಲ್ಲ. 211.83 ಕಿಲೋಮೀಟರ್ ಮೇಲೆ ಒಂದು ಸೂಟಬಲ್ ಸೈಟ್‌ನಲ್ಲಿ ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದೇನೆ. ಮತ್ತೆ ಅವರಿಂದ ಮೊನ್ನೆತಾನೇ ಉತ್ತರ ಬಂದಿದೆ. ಜನರಲ್ ಮ್ಯಾನೇಜರ್ ಪರೀಕ್ಷೆ ಮಾಡುತ್ತಾ ಇದ್ದಾರೆ. ಒಂದು ಫ್ಲಾಗ್ ಸ್ಟೇಷನ್ ಮಾಡಬೇಕು ಎಂದರೆ ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ !

ಶ್ರೀ ಜೆ. ಎಲ್. ಕಬಾಡಿ.— ಕ್ಯಾತನಕೆರೆ ಹತ್ತಿರವಾಗಲಿ ಅಥವಾ ಅದರ ಸಮೀಪದಲ್ಲಿ ಆಗಲಿ ರೈಲ್ವೆಸ್ಟೇಷನ್ ಮಾಡಿದರೆ ಅಲ್ಲಿ ಹೆಚ್ಚಿಗೆ ವ್ಯವಸಾಯಗಾರರು ಅಂದರೆ ಸೇಂಗಾ ಮತ್ತು ಮೆಣಸಿನಕಾಯಿ ಬೇರೆ ಕಡೆಗೆ ರವಾನಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಅದು ಸರಿ. ಆ ಸ್ಥಳದಲ್ಲಿ ಸ್ಟೇಷನ್ ಮಾಡುವುದಕ್ಕೆ ಗ್ರೇಡಿಯಂಟ್ ಅನುಕೂಲವಾಗಿಲ್ಲ ಕರ್ವ್ ಅನುಕೂಲವಾಗಿಲ್ಲ, ಆದುದರಿಂದ ಬೇರೆಕಡೆಗೆ ಮಾಡಬೇಕು ಎನ್ನುವುದು ಸರ್ಕಾರದ ವಿಚಾರದಲ್ಲಿ ಇದೆ.

Conversion of Upper Tunga Project Into Lift Irrigation Scheme

497. Sri K. YENKATAPPPA (Shikaripur).—

Will the Minister of State for Major Irrigation be pleased to state.—

(a) whether the Conversion of the Upper Tunga Project into Lift Irrigation scheme is under the consideration of the Government ;

(b) if so, the height to which it is proposed to be raised ;

(SRI . VENKATAPPA)

(c) the exent of excess lands gonig to be irrigated if the present level of water is raised;

(d) whether a channel will be constructed to lead the water to the upper region of Kumudvathy right bank canal ?

SRI H.N. NANJE GOWDA (Minister of State for Major Irrigation).—

(a) and (b) The Upper Tunga Project is under investigation its implementation depends upon the award in respect of Krishna River water dispute by the Tribunal.

ಶ್ರೀ ಕೆ. ಯಂಕಟಪ್ಪ.—ಸ್ವಾಮಿ (ಅ) ಮತ್ತು (ಇ) ಎಲ್ಲಕ್ಕೂ ಒಂದೇ ಉತ್ತರ ಕೊಟ್ಟಿದ್ದೀರಿ, ಅಪ್ಪರ್ ತುಂಗಾ ಯೋಜನೆಯು ಇನ್ನು ತನಿಖೆಯಲ್ಲಿದೆ, ಮತ್ತು ಈ ಯೋಜನೆಯು ಕೃಷ್ಣಾ ನೀರಾವರಿ ತೀರ್ಮಾನದ ಮೇಲೆ ಅವಲಂಬಿಸಿದೆ'' ಎಂದು ಅಪ್ಪರ್ ತುಂಗ ಪ್ರಾಜೆಕ್ಟ್‌ನಲ್ಲಿ ಎಷ್ಟು ಅಡಿ ನೀರನ್ನು ಎತ್ತರಿಸಿ ತೆಗೆದುಕೊಂಡು ನೀರಾವರಿ ಕೊಡಬೇಕು ಎಂದು ಸರ್ಕಾರದ ವಿಚಾರದಲ್ಲಿ ಇದೆ ಮತ್ತು ಅದರ ಸರ್ವೆ ಆಗುತ್ತಿದೆಯೆ ?

ಶ್ರೀ ಎಚ್. ಎನ್. ನಂಜೇಗೌಡ.—ಇದರಲ್ಲಿ ಎರಡು ಅಭಿಪ್ರಾಯಗಳು ಇವೆ ಒಂದು ತುಂಗ ಉಪನದಿಯಾದ ಮಾಲತಿ ನದಿಗೆ ಒಂದು ಅಣೆಕಟ್ಟನ್ನು ಕಟ್ಟುವುದು ಮತ್ತು ಅದನ್ನು ರಿಸರ್‌ವಾಯರ್ ಇರತಕ್ಕ ತುಂಗಾ ಅಣೆಕಟ್ಟು ಎತ್ತರವಾಡಿ 350 ಮೈಲಿ ನಾಲೆ ತೆಗೆದುಕೊಳ್ಳಬಹುದು ಎಂದು ಜೊತೆಗೆ ಇನ್ನೊಂದು ಅಲ್ಲಿ ಮೂರು ಲಿಫ್ಟ್ ಸ್ಕೀಮ್ ಗಾಜಿನಕೆರೆ, ಬೈರನಪಾದ, ಸಿಂಗಟಲೂರು ಹತ್ತಿರ ಮಾಡಬೇಕು, ಎಂದು ಇದೆ. ಯಾವುದು ಎರಡರಲ್ಲಿ ಫೈನಲೈಸ್ ಆಗಿಲ್ಲ. ಟ್ರಿಬ್ಯೂನಲ್ ತೀರ್ಮಾನಬಂದನಂತರ ನೀರಿನ ಪರಿಸ್ಥಿತಿ ನೋಡಿಕೊಂಡು ಮಾಡಬೇಕು.

ಶ್ರೀ ಜೆ. ಎಲ್. ಕಬಾಡಿ.—ತಾವು ಆದೇಶ ಕೊಟ್ಟಿದ್ದೀರಿ. ಮೂರು ಹಂತದಲ್ಲಿ ಯಾತ ನೀರು ಕೊಡುವುದಕ್ಕೆ ಯೋಚನೆ ಇದೆ. ಏರಿ ಎತ್ತರಿಸಿ ಮಾಡುವುದಕ್ಕೆ ಯೋಚನೆ ಇದೆ. ಸದ್ಯದಲ್ಲಿ ಇಲಾಖೆಯವರು ಏನು ಸರ್ವೆ ಮಾಡುತ್ತಿದ್ದಾರೆ, ಈ ಎರಡು ಯೋಜನೆಯಲ್ಲಿ ಯಾವ ಯೋಜನೆಯ ಮೇಲೆ ಮಾಡುತ್ತಿದ್ದಾರೆ, ಎಷ್ಟು ಅಡಿ ಎತ್ತರಿಸಿ ಯಾವ ಕಾಂಟೂರ್‌ನಲ್ಲಿ ಹೋಗುತ್ತದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ನಾವು ಇಲಾಖೆಯವರು ಎಲ್ಲಾ ಕೂಡಿ ತಯಾರು ಮಾಡಿ ಅಂದಾಜು ಮಾಡಿ ನೋಡುತ್ತೇವೆ. ಫೈನಲ್ ತೀರ್ಮಾನ ತೆಗೆದುಕೊಳ್ಳಬೇಕಾದರೆ ಟ್ರಿಬ್ಯೂನಲ್ ತೀರ್ಮಾನ ಬಂದಾಗ ನೀರು ಎಷ್ಟು ಅಡಿ ಇವೆ ಯೋಚನೆಮಾಡಿ ಯಾವ ಸ್ಕೀಮ್ ಸರಿ ಎಂದು ನೋಡಿಕೊಂಡು ತೆಗೆದುಕೊಳ್ಳಬೇಕಾಗುತ್ತದೆ. ಡಬ್ಲ್ಯೂ. ಆರ್. ಡಿ. ಇಲಾಖೆ ಇದೆ. ಆ ಇಲಾಖೆಯವರು ಎಲ್ಲಾ ಕೂಡಿ ಮಾಡಬೇಕು. ಏನೇನು ಮಾಡುವುದಕ್ಕೆ ಸಾಧ್ಯ ಎಂದು ಸರ್ವೆ ಮಾಡುತ್ತಾ ಇದ್ದಾರೆ. ಅಂದಾಜಿನ ಸ್ಟೇಜಿನಲ್ಲಿ ಇರುವುದರಿಂದ ಅಂಕಿ ಅಂಶಗಳನ್ನು ಕೇಳಿದರೆ ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ತಾವು ಇದೇ ಪ್ರಶ್ನೆಯಲ್ಲಿ 1972ರ ಪ್ರಾರಂಭದಲ್ಲಿ ಕೇಳಿದ್ದು ಆಗಲೂ ಇದೆ. ಉತ್ತರ ಕೊಟ್ಟಿದ್ದೀರಿ, ಸರ್ವೆ ಆಗಬೇಕು ಕೃಷ್ಣ ವಾಟರ್ ಡಿಸ್ಪ್ಯೂಟ್ ತೀರ್ಮಾನವಾಗಬೇಕು ಅನಂತರ ಪರಿಶೀಲನೆ ಮಾಡಿ ಕಾಲ ಮಿತಿ ಹೇಳುತ್ತೇನೆ ಎಂದು. ಯಾವಾಗ ತೀರ್ಮಾನವಾಗುತ್ತದೆ ; ಯಾವೊತ್ತು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಆಗ ಉತ್ತರ ಹೇಳುವಾಗಲೂ ಟ್ರಿಬ್ಯೂನಲ್ ಮುಂದೆ ಇತ್ತು ಈಗ ಉತ್ತರ ಹೇಳುತ್ತಿದ್ದೇನೆ ಈಗಲೂ ಟ್ರಿಬ್ಯೂನಲ್ ಮುಂದೆ ಇದೆ. ಈಗಲೂ ತೀರ್ಮಾನ ಕೊಟ್ಟಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ಅಪ್ಪರ್ ತುಂಗಾ ಯೋಜನೆ ಕೊಡಬೇಕು ಎಂದು ಯೋಚನೆ ಇದೆ ಎಂದು ಹೇಳುತ್ತಿದ್ದೀರಿ. ಅಲ್ಲಿ ಇರತಕ್ಕ ಅರಣ್ಯಪ್ರದೇಶ ಪೂರ್ತಿಯಾಗಿ ಮುಳುಗಡೆ ಆಗುವುದು. ಆದ್ದರಿಂದ ಅಲ್ಲಿ ಇರತಕ್ಕ ಭೂಮಿ ಬಹಳ ಬೆಲೆ ಬಾಳತಕ್ಕ ಅಡಕೆತೋಟ, ತರಿಜಮಾನು

ಮುಳುಗಿಹೋಗುವುದು ಅಷ್ಟು ನಮ್ಮ ಗಮನಕ್ಕೆ ಬಂದಿಲ್ಲವೇ? ಅದು ಬಹಳ ಉತ್ಪತ್ತಿ ಆಗುವ ಪ್ರದೇಶ. ಅಲ್ಲಿ ಹೊಸದಾಗಿ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡಿ, ಆ ಪ್ರದೇಶ ಮುಳುಗಡೆಗೆ ಸಿಕ್ಕಿದರೆ ಅದರಿಂದ ಸರ್ಕಾರಕ್ಕೆ ಉತ್ಪತ್ತಿ ಕಡಿಮೆಯಾಗುವುದಿಲ್ಲವೇ? ಆದ್ದರಿಂದ ತುಂಗಾಕ್ಕೆ ಜಾಸ್ತಿ ಮಾಡುವ ಯೋಜನೆಯನ್ನು ಜಾರಿಗೆ ತರುವುದು ಸೂಕ್ತವಲ್ಲವೇ?

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸದಸ್ಯರು ಹೇಳುವುದನ್ನು ಗಮನದಲ್ಲಿ ಇಟ್ಟುಕೊಂಡು ಈ ತರಹ ಆಗಬಾರದು ಎಂದು ಹೇಳಿ ಮೂರು ಲಿಫ್ಟ್ ಇರಿಗೇಷನ್ ಸ್ಕೀಂಮನ್ನು ಗಾಜಿನ ಕೆರೆ, ಬೈರನಪಾದ ಮತ್ತು ಲಿಂಗಟಲೂರಿನಲ್ಲಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಯಾವುದೂ ತೀರ್ಮಾನ ಮಾಡಿದ ಮೇಲೆ ಮಾಡಬೇಕಾಗುತ್ತದೆ. ಪ್ರಾಯಶಃ ಸದಸ್ಯರು ಗಾಬರಿ ಪಡಬಹುದು, ಈಗ ಗಾಬರಿ ಪಡಬೇಕಾಗಿಲ್ಲ. ಎಲ್ಲಾ ಪರಿಶೀಲನೆ ಮಾಡಿ; ಕಡಿಮೆ ಅನಾನುಕೂಲ ಆಗುವ ರೀತಿಯಲ್ಲಿ ಬಹಳ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕೆನ್ನುವುದೇ ಸರ್ಕಾರದ ಉದ್ದೇಶ.

ಶ್ರೀ ಕೋಣಂದೂರು ಲಿಂಗಪ್ಪ.—ತುಂಗಾ ನದಿ ನಮ್ಮ ಊರಿನ ಹತ್ತಿರ ಹತ್ತಿರ ಹೋದಂತೆ ಮಲೆನಾಡು ಮುಳುಗಿಹೋಗಿ ಅಲ್ಲಿನ ಜನರು ನಿರ್ವಸತಿಯಾಗುವಂತೆ ಸರ್ಕಾರದವರು ಮಾಡುತ್ತಿದ್ದಾರೆ. ಕಟ್ಟೆ ಹಾಕಿ ನಮ್ಮ ಊರುಗಳನ್ನು ಮುಳುಗಿಸಿ ಜನರನ್ನು ನಿರ್ಗತಿಕರನ್ನಾಗಿ ಮಾಡುವಂಥ ಯೋಜನೆಯನ್ನು ಮಾಡಬಾರದು. ಅದರ ಬದಲು ನೀರು ಬೇಕಾದರೆ ಬೇರೆ ಯೋಜನೆಯಿಂದ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಎನ್. ನಂಜೇಗೌಡ. – ಮಾನ್ಯ ಸದಸ್ಯರು ಆಕಾಶದಲ್ಲಿ ಪಾತಾಳದಲ್ಲಿ ನೀರು ನಿಲ್ಲತಕ್ಕ ಏರ್ಪಾಡು ಮಾಡಿದರೆ, ಯಾವುದು ಮುಳುಗಡೆ ಆಗದೆ ಕಟ್ಟೆ ಕಟ್ಟುವುದಕ್ಕೆ ಸಾಧ್ಯ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಗಳು ಹೇಳಿದ ರೀತಿಯಲ್ಲಿ ಆ ಧಾಟಿಯನ್ನು ಒಪ್ಪತಕ್ಕಂಥಾದ್ದಲ್ಲ. ನಾವು ಮಲೆನಾಡಿನಲ್ಲಿ ಬಹಳ ಕಾಲ ಇದ್ದುದರಿಂದ ನಾವು ಕೇಳುತ್ತಾ ಇದ್ದೇವೆ. ಈ ನೀರಿನ ಸಂಪತ್ತನ್ನು ಬೇರೆ ಕಡೆಗೆ ಉಪಯೋಗಿಸಿಕೊಳ್ಳಲು ನಾವು ಬೇಡ ಎಂದು ಹೇಳುವುದಿಲ್ಲ. ನಮ್ಮನ್ನೂ ಕೂಡ ಸ್ವಲ್ಪ ರಕ್ಷಣೆ ಮಾಡಿ ಎಂದು ಕೇಳುತ್ತಿದ್ದೇವೆ. ಆದರೆ ಮಾನ್ಯ ಮಂತ್ರಿಗಳು ಹೇಳುವ ಧಾಟಿ, ಅವರ ವ್ಯಂಗ್ಯ ಭಾಷೆ ನಾವು ಕೇಳುವುದಕ್ಕೆ ತಯಾರಾಗಿಲ್ಲ. ಅವರನ್ನು ಯಾವ ದೃಷ್ಟಿಯಲ್ಲಿ ನೋಡುತ್ತಿದ್ದೀರೋ ಅದೇ ದೃಷ್ಟಿಯಲ್ಲಿ ನಮ್ಮನ್ನೂ ನೋಡಬೇಕು ಎಂದು ಹೇಳುತ್ತೇನೆ.

Mr. DEPUTY SPEAKER.—What all the hon. members wants is that adequate protection facilities must be given to the people in those areas.

Sri H. N. NANJEGOWDA.—While answering a question by Sri Veerappa Gowda, I have told that we have thought of alternative proposals and while finalising the decision, we will consider all these aspects. Our main idea would be less effects and more benefits.

ಶ್ರೀ ಕೋಣಂದೂರು ಲಿಂಗಪ್ಪ.—ಶರಾವತಿ ಮತ್ತು ತುಂಗಾ ನದಿ ಇರತಕ್ಕಂಥಾದ್ದು ನಮ್ಮ ತಾಲ್ಲೂಕಿನಲ್ಲಿ. ನಮ್ಮ ತಾಲ್ಲೂಕಿನ ನೀರನ್ನು ಉಪಯೋಗಿಸಿ ಅಣೆಕಟ್ಟು ಕಟ್ಟಿ ನಮ್ಮ ಜನರನ್ನೇ ನಿರ್ಗತಿಕರನ್ನಾಗಿ ಮಾಡಿದ್ದಾರೆ. ನೀವು ಮತ್ತೆ ಅಣೆಕಟ್ಟೆ ಕಟ್ಟುವುದಕ್ಕೆ ಬಂದರೆ ಒಂದೊಂದು ಕಲ್ಲಿಗೂ ಒಂದೊಂದು ಹೆಣ ಬೀಳುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.— ಆ ಪುಣ್ಯದ ಪ್ರಭಾವಕ್ಕೆ ಅವರೇ ಬದ್ಧರಾಗಿರುತ್ತಾರೆ. ದೇವರು ಒಳ್ಳೆಯದು ಮಾಡಲಿ ಎಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ನಿಮ್ಮ ಗೋರಿಯನ್ನು ಅಲ್ಲಿ ಕಟ್ಟುತ್ತೀರಾ, ಆ ಪುಣ್ಯ ಸಾಧುವಾದುದೇ?

Mr. DEPUTY SPEAKER.—These are all questions which will have to be settled by mutual understanding taking each other into confidence.

ಶ್ರೀ ಕಾಗೋಡು ತಿಮ್ಮಪ್ಪ.—ಶರಾವತಿ ಯೋಜನೆಯಿಂದ ಮುಳುಗಡೆಯಾಗಿರುವ ಭದ್ರಾವತಿ ಮತ್ತು ಶಿವಮೊಗ್ಗ ಜನಗಳಿಗೆ ಕೊಟ್ಟಿರುವ ಜಮೀನುಗಳಿಗೆ 5-6 ವರ್ಷಕಳೆದರೂ ಕೂಡ ಇನ್ನೂ ಸಾಗುವಳಿ ಚೀಟಿ ಕೊಟ್ಟಿಲ್ಲ. 1 ಸಾವಿರ, 2 ಸಾವಿರ ಟಿ, ಟಿ. ಕೇಸಸ್ ಹಾಕಿದ್ದಾರೆ. ಆದುದರಿಂದ ಅವರಿಗೆ ಸಾಗುವಳಿ ಚೀಟಿ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri H. M. CHANNABASAPPA.—This need not generate so much of heat because that is the reason why the Hon. Minister of State stated that we have been thinking of alternatives of lift irrigation at Gajanor, Byranpada and other places which is more economical than other works. Therefore Government will definitely take their sentiments into consideration while constructing the reservoirs.

ಶ್ರೀ ಕೆ. ಯಂಕಟಪ್ಪ.—ನನ್ನ ಪ್ರಶ್ನೆಗೆ ತಾವು ಸರಿಯಾಗಿ ಉತ್ತರ ಕೊಟ್ಟಿಲ್ಲ. (ಈ) ಗೆ ಉತ್ತರವಾಗಿ ಇದು ಪಂಚಾಯಿತಿಯ ತೀರ್ಪನ್ನು ಅವಲಂಬಿಸಿದೆ ಎಂದು ಹೇಳಿದ್ದೀರಿ. ಆ ತೀರ್ಪು ಬಂದ ಮೇಲೆ ಆಗ ಇಲಾಖೆಯವರು ಸರ್ವೆ ಮಾಡಬೇಕು. ಈ ಕೆಲಸ ನಿಧಾನವಾದರೆ ಶಿವಮೊಗ್ಗ ತಾಲ್ಲೂಕಿನಲ 64 ಹಳ್ಳಿಗಳು 8 ವರ್ಷದಿಂದಲು ಬರಗಾಲ ಪೀಡಿತವಾಗಿವೆ, ಹಾಗೆಯೇ ಷಿಕಾರಿಪುರ ತಾಲ್ಲೂಕಿನಲ್ಲಿ 40-50 ಹಳ್ಳಿಗಳು ಬರಗಾಲ ಪೀಡಿತವಾಗಿವೆ. ಆದುದರಿಂದ ಆ ಹಳ್ಳಿಗಳಿಗೆ ನೆರವನ್ನು ಒದಗಿಸುವ ಸಲುವಾಗಿ ಏನಾದರೂ ಒಂದು ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

Sri H. N NANJEGOWDA.—This is a suggestion for consideration.

Anjanapur Reservoir in Shikaripur Taluk

543. Sri K. YENKATAPPA (Shikaripur).—

Will the Minister for Public Works and Electricity be pleased to state :—

(*a*) the year in which the Anjanapur Reservoir in Shikaripur Taluk was constructed ;

(*b*) the extent of land irrigated under its Achkat ;

(*c*) the year from which the water from this Reservoir was released to more acres than that of the fixed one and on whose advice and the extent of excess lands irrigated ;

(*d*) the revenue income derives to the Government from this Reservoir ;

(*e*) whether the representation from ryots regarding water supply has been received by the Government ; if so, when the demands of ryots mentioned therein will be fulfilled ;

(*f*) whether the Government have considered a scheme to mitigate the water difficulty of the ryots by raising the level of the wasteweir and the bund of reservoir and by increasing the storage capacity of water ;

(*g*) if so, the estimated cost of the same and when it will be completed ?

SRI H. M. CHANNBASAPPA (Minister for Public Works and Electricity).—

(*a*) In 1938.

(*b*) 15,680 acres.

(*c*) Fixed achkat is 10,000 acres. 5,680 acres of excess lands were supplied with water at the instance of ryots since 1950.

(*d*) Rs. 1,72,377-50 per annum.

(*e*) No.

(*f*) It is being studied to increase irrigational potential with the help of Kumadwati River water.

(*g*) As the plan and estimates are not prepared, no precise reply can be given.

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ತಾವು (ಅ) ಗೆ ಉತ್ತರವಾಗಿ 15,680 ಎಕರೆ ನೀರಾವರಿ ಯಾಗುತ್ತದೆ ಎಂದು ಕೊಟ್ಟಿದ್ದೀರಿ. ಮತ್ತು ನಿಗದಿಯಾದ ಅಚ್ಚುಕಟ್ಟು 10 ಸಾವಿರ ಎಕರೆ. ರೈತರ ಒತ್ತಾಯದ ಮೇಲೆ 5680 ಎಕರೆಗಳಿಗೆ ಹೆಚ್ಚಿಗೆ ನೀರನ್ನು ಕೊಡಬೇಕಾಗಿದೆ ಎಂದು ಹೇಳಿದ್ದೀರಿ. ಇದಲ್ಲದೆ ಇನ್ನೂ ಹೆಚ್ಚಾಗಿ ಸುಮಾರು 2000 ಎಕರೆಗೆ ಈ ನೀರಿನ ಸೌಲಭ್ಯ ಒದಗಿಸಿರುವ ದಾಖಲಾತಿಗಳು ಇವೆ. ನಿಮ್ಮ ಇಲಾಖೆಯವರೇ ಹೇಳಿದ್ದಾರೆ, ಇದರಿಂದ 17,702 ಎಕರೆ 32 ಗುಂಟೆಗೆ ಇದರ ಸೌಲಭ್ಯ ಇದೆ ಎಂದು. ಆದರೆ ನಿಮಗೆ ಕೊಟ್ಟಿರುವ ಮಾಹಿತಿಯಲ್ಲಿ 15,680 ಎಕರೆ ಅಂತ ಇದೆ. ಈ ರೀತಿ ವ್ಯತ್ಯಾಸ ಇರುವುದಕ್ಕೆ ಕಾರಣ ಏನು? ಮತ್ತು ಇದರಿಂದ ಬರತಕ್ಕಂಥ ಉತ್ಪತ್ತಿ ಏನು ಇದೆಯೋ ಅದು ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ? ಇದನ್ನು ಆಲೋಚನೆ ಮಾಡುತ್ತೀರಾ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಬಂದಿರುವ ವರದಿ ಪ್ರಕಾರ 15,680 ಎಕರೆ ಅಂತ ಅಧಿಕೃತವಾದ ವರದಿಯಲ್ಲಿ ಇದೆ. ಮಾನ್ಯ ಸದಸ್ಯರು ಹೇಳಿರುವ ಪ್ರಕಾರ ಇನ್ನೂ 1—2 ಸಾವಿರ ಎಕರೆ ಅಷ್ಟು ಹೆಚ್ಚಾಗಿದ್ದ ಪಕ್ಷದಲ್ಲಿ ಅದನ್ನು ವಿಚಾರ ಮಾಡಿ, ಅದರಿಂದ ಸರ್ಕಾರದ ವರಮಾನಕ್ಕೆ ಧಕ್ಕೆ ಬಾರದ ರೀತಿಯಲ್ಲಿ ನೋಡಿಕೊಳ್ಳುತ್ತೇನೆ.

ಶ್ರೀ ಕೆ. ಯಂಕಟಪ್ಪ.—ತಾವು ಈ ಬಗ್ಗೆ ವಿಚಾರ ಮಾಡುತ್ತೇನೆ ಎಂದು ಹೇಳಿದಿರಿ. ತಮಗೆ ಇಲಾಖೆ ಅಧಿಕಾರಿಗಳು ಏನು ಮಾಹಿತಿ ಒದಗಿಸಿದ್ದಾರೆ ಎಂದು ಹೇಳಿದರೆ ನನಗೆ ಒದಗಿಸಿರತಕ್ಕಂಥ ಮಾಹಿತಿಯನ್ನೂ ಕೂಡ ಹೇಳುತ್ತೇನೆ. ಹಾಗೂ ಇಷ್ಟು ಬೇಜವಾಬ್ದಾರಿಯಿಂದ ಮಾಹಿತಿಯನ್ನು ಒದಗಿಸುವುದಕ್ಕೆ ಕಾರಣ ಏನು! ಇದರಿಂದ ರೈತರಿಗೆ ನಷ್ಟವಾಗುವುದಿಲ್ಲವೇ! ಸರ್ಕಾರದಲ್ಲಿ ಕೇಳಿದರೆ ಟೆಕ್ನಿಕಲ್ ಫೀಸಿಬಲಿಟಿ ಇಲ್ಲ ಎಂದು ಹೇಳುತ್ತೀರಿ. ಇದರಿಂದ ರೈತರಿಗೆ ನಷ್ಟವಾಗುವುದಿಲ್ಲವೇ!

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಜನಾಪುರದ ಜಲಾಶಯದ ಅಚ್ಚುಕಟ್ಟಿನಲ್ಲಿ 15,680 ಎಕರೆ ಯಷ್ಟು ನೀರಾವರಿಯಾಗುತ್ತದೆ ಎಂದು ಅಧಿಕೃತವಾಗಿ ಕಂದಾಯ ಇಲಾಖೆಯಲ್ಲಿ ಇದೆ. ಇದರ ಜೊತೆಗೆ ಅನಧಿಕೃತವಾದ ಅಚ್ಚುಕಟ್ಟು ಬೇರೆ ಇರಬಹುದು ಅದು ಎಲ್ಲರಿಗೂ ಗೊತ್ತಿದೆ. ಅನಧಿಕೃತವಾಗಿ ಬಡಾವಣೆ ಮಾಡಿರುವುದನ್ನು ಇಲ್ಲ ಎಂದು ನಾನು ಪ್ರತಿಭಟನೆ ಮಾಡುವುದಿಲ್ಲ. ಒಂದುವೇಳೆ ಆ ರೀತಿ ಅನಧಿಕೃತವಾಗಿ ಬಡಾವಣೆ ಮಾಡಿಕೊಂಡು ತೊಂದರೆ ಮಾಡಿದ್ದರೆ ಅದನ್ನು ವಿಚಾರ ಮಾಡುತ್ತೇನೆ. ಮತ್ತು ಇದರ ಬಗ್ಗೆ ಸರ್ಕಾರಕ್ಕೆ ಏನಾದರೂ ತೊಂದರೆ ಆಗಿದ್ದರೆ ಅದನ್ನು ಪರೀಕ್ಷೆ ಮಾಡುತ್ತೇನೆ ಎಂದು ಹೇಳಿದೆ.

ಶ್ರೀ ಕೆ. ಯಂಕಟಪ್ಪ.—ತಾವು ಹೇಳಿದ ಪ್ರಕಾರ ಇದರಿಂದ 10 ಸಾವಿರ ಎಕರೆ ಇದ್ದುದನ್ನು ಈವೊತ್ತಿನ ದಿವಸ ರೈತರ ಒತ್ತಾಯದ ಮೇಲೆ ಇನ್ನೂ 5680 ಎಕರೆಗಳಿಗೆ ಹೆಚ್ಚಿಗೆ ಒದಗಿಸಿದ್ದಾರೆ. ಇದರಲ್ಲಿ ಅನ್ ಆಥರೈಸ್ಡ್ ಕಲ್ಟಿವೇಷನ್ ಎಲ್ಲಾ ಸೇರಿದರೆ ನಮ್ಮ ರೈತರ ಅಂದಾಜು 20 ಸಾವಿರ ಎಕರೆಯಾಗುತ್ತದೆ. ಈ ಅಂದಾಜು ಅಧಿಕೃತವಾಗಿ ಇಲ್ಲದಿದ್ದರೂ ಅನಧಿಕೃತವಾಗಿ ಇಷ್ಟು ಆಗುತ್ತದೆ. ಆದುದರಿಂದ ಇದನ್ನು ಎತ್ತರಿಸಿ ಕೋಡಿಯನ್ನು ಹೆಚ್ಚಿಗೆ ಮಾಡುವುದಕ್ಕೆ ತಾವು ಪರಿಶೀಲನೆ ಮಾಡುತ್ತೀರಾ? ಮತ್ತು ಈ ಬಗ್ಗೆ ಅತಿ ಶೀಘ್ರವಾಗಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—10 ಸಾವಿರ ಎಕರೆ ಇದ್ದುದನ್ನು ಈವೊತ್ತಿನ ದಿವಸ ಇಷ್ಟಕ್ಕೆ ಇಳಿಸಿದ್ದೇವೆ. ಈಗ ಟೆಕ್ನಿಕ್ ಆಫ್ ಇರ್ರಿಗೇಷನ್ ಇದೆ. ಅದನ್ನು ಉಪಯೋಗಮಾಡಿದರೆ ಈಗ ಎಷ್ಟು ಎಕರೆಗೆ ನೀರು ಬಂದಿದೆ ಅದಕಿಂತಲೂ ಇನ್ನೂ ಒಂದೂವರೆ 2 ಸಾವಿರ ಎಕರೆಗೆ ಹೆಚ್ಚು ನೀರು ಬರುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಹುಂಚದ ಕಟ್ಟೆ ಮತ್ತು ಅಂಜನಾಪುರದ ರಿಸರ್ವಾಯರ್‌ನ್ನು ಎತ್ತರಿಸಿದರೆ ಸಾಕಷ್ಟು ನೀರು ಬರುತ್ತದೆ ಅಲ್ಲವೇ ಮತ್ತು ಇದರಿಂದ ಎಷ್ಟು ಎಕರೆ ಮುಳುಗಡೆ ಯಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರು ಬರುತ್ತದೆಯೋ, ಇಲ್ಲವೇ ಅನ್ನುವ ಪ್ರಶ್ನೆ ಅಲ್ಲ. ಅದನ್ನು ಎತ್ತರಿಸಿದರೆ ಅದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ವಿಚಾರ ಮಾಡಬೇಕು. ಅಲ್ಲಿ ಒಂದು ಅಡಿ ಏರಿಯನ್ನು ಎತ್ತರಿಸಿದರೆ ಅಂಜನಾಪುರದ ರಿಸರ್ವಾಯರ್ ನಿಂದ 254 ಎಕರೆ ಮುಳುಗಡೆಯಾಗುತ್ತದೆ. ಅಲ್ಲಿ ಬಲದಂಡೆ ನಾಲೆವೆ ವಿಚಾರ ಮಾಡುವುದಾದರೆ ಆ ನೀರು ಮಾಸೂರ್ ಕೆರೆಗೆ ಹೋಗಿ ಸೇರುತ್ತದೆ. ಇನ್ನು ಎಡದಂಡೆ ನಾಲೆವೆ ವಿಚಾರ ಮಾಡುವುದಾದರೆ ಆ ನೀರು ಕುಮುದ್ವತಿ ನದಿಗೆ ಹೋಗುತ್ತದೆ. ಮತ್ತು ಅದನ್ನು ಒಂದು ಅಡಿ ಎತ್ತರಿಸಿ ಹೈಲೆವಲ್ ಕೆನಾಲ್ ಮಾಡಿದರೆ ಅದರಿಂದ 254 ಎಕರೆ ಮುಳುಗಡೆಯಾಗುತ್ತದೆ. ಇದು uneconomical and technically also not feasible ಎಂದು ಕಂಡುಬರುತ್ತದೆ. ಇಂದು ಮಾಡಿದರೆ 31 ಲಕ್ಷ ರೂಪಾಯಿ ಖರ್ಚಾಗುತ್ತದೆ. ಅಷ್ಟೇ ಅಲ್ಲ ಇದರಿಂದ ಅಷ್ಟೊಂದು ಜಮೀನು ಮುಳುಗಡೆ ಯಾದರೂ ಕೂಡ ಹೈಡ್ರಾಲಜಿ ಪ್ರಕಾರ ಅದನ್ನು ಪರೀಕ್ಷೆ ಮಾಡಿ ನೋಡಬೇಕು. ಮತ್ತು ಮುಂದೆ ಮಾಸೂರ್ ಟ್ಯಾಂಕ್‌ಗೆ ಏನು ಪರಿಣಾಮ ಆಗುತ್ತದೆ ಅದನ್ನೂ ಕೂಡ ಹೈಡ್ರಾಲಜಿ ಪ್ರಕಾರ ಪರೀಕ್ಷೆ ಮಾಡಿ ನೀರು ಯಥೇಚ್ಛವಾಗಿದೆಯೋ ಇಲ್ಲವೇ ಎನ್ನುವುದನ್ನು ನೋಡಬೇಕು ಒಂದುವೇಳೆ ಪರಿಣಾಮ ಆಗದೆ ಇದ್ದರೆ ಅದನ್ನು ಯಾವರೀತಿಯಾಗಿ ಉಪಯೋಗ ಮಾಡಬೇಕು ಎಂದು ಆಮೇಲೆ ಯೋಚನೆ ಮಾಡಬೇಕಾಗುತ್ತದೆ.

9-30 A. M.

ಶ್ರೀ ಕೆ. ಯಂಕಟಪ್ಪ.—ಹೈಡ್ರಾಲಜಿ ಬಗ್ಗೆ ವಿಚಾರ ಮಾಡಬೇಕು, ಏರಿಯನ್ನು ಒಂದು ಅಡಿ ಎತ್ತರಿಸಿದರೆ 250 ಎಕರೆ ಮುಳುಗಡೆಯಾಗುತ್ತದೆ ಎಂದು ಹೇಳಿದರು. 1938 ರಲ್ಲಿ ಕಟ್ಟಿದಾಗ 10 ಸಾವಿರ ಎಕರೆ ಅಚ್ಚುಕಟ್ಟು ಇದ್ದುದು ಈಗ ಜಾಸ್ತಿಯಾಗಿದ್ದು ಮಳೆ ಕಡಮೆಯಾಗಿರುವುದರಿಂದ ಅಲ್ಲಿರತಕ್ಕ ರೈತರಿಗೆ ನೀರನ್ನು ಪೂರ್ಣವಾಗಿ ಉಪಯೋಗ ಮಾಡಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇಂದಿನ ಪರಿಸ್ಥಿತಿಯೊಳಗೆ ಏರಿಯನ್ನು ಎತ್ತರಿಸಿ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ. ಎಚ್. ಎಂ. ಚನ್ನಬಸಪ್ಪ.—ಎತ್ತರಿಸುವ ಬಗ್ಗೆ ಅಷ್ಟು ಸುಲಭವಾಗಿ ನಾನು ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಈಗಿರತಕ್ಕ ಅಯಕಟ್ಟಿಗೆ 44 ಟಿ. ಎಂ. ಸಿ. ನೀರು ಬೇಕು ಎಂದು ನಮಗೆ ಬಂದಿರುವ ವರದಿ ಪ್ರಕಾರ ತಿಳಿದುಬಂದಿದೆ. ಇರುವ ನೀರನ್ನು ಬಹಳ ಎಕನಾಮಿಕಲ್ ಆಗಿ ಉಪಯೋಗ ಮಾಡಿದರೆ ಇರುವುದರಲ್ಲಿ ಅಡ್ಜಸ್ಟ್ ಮಾಡುವುದು ಸಾಧ್ಯ ಎನ್ನುವ ಅಭಿಪ್ರಾಯವೂ ಬರುತ್ತಿದೆ. ಇದರ ಬಗ್ಗೆ ಮಾನ್ಯ ಸದಸ್ಯರು ಅಷ್ಟೊಂದು ಕಳವಳ ಪಡಬೇಕಾಗಿಲ್ಲ.

ಶ್ರೀ ಕೆ. ಯಂಕಟಪ್ಪ.—ಸುಮಾರು ಹಳ್ಳಿಗಳ ಜನರ ಜೀವನ ಪರಿಸ್ಥಿತಿಗೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ಸ್ವಲ್ಪ ಪ್ರಮಾಣದಲ್ಲಾದರೂ ಏರಿಯನ್ನು ಎತ್ತರಿಸಿ ಆ ಜನಗಳು ಬದುಕಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತಿದ್ದೇನೆ. ಇಲಾಖೆಯಿಂದ ಚಾನಲ್ ಮತ್ತು ಸ್ಲೂಯಿಸ್‌ಗಳನ್ನು ಬಹಳ ಹಿಂದೆ ರಿಪೇರಿ ಮಾಡಿದ್ದು ಅವುಗಳಲ್ಲಿ ಹೂಳು ತುಂಬಿದೆ. ಈ ಎರಡೂ ಕೆಲಸಗಳನ್ನು ಮಾಡಿಸಿ ಕೊಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚಾನಲ್ ರಿಪೇರಿ, ತೂಬುಗಳ ರಿಪೇರಿಯಲ್ಲಿ ಏನಾದರೂ ಹೆಚ್ಚು ಕಡಮೆಯಾಗಿದ್ದರೆ ಕೂಡಲೇ ಮಾಡಿಸಿಕೊಡತಕ್ಕ ಆಶ್ವಾಸನೆಯನ್ನು ನಾನು ಕೊಡುತ್ತಿದ್ದೇನೆ.

Anjanapur Reservoir

546. SRI K. YENKATAPPA (Shikaripura).—

Will the Minister for Public Works and Electricity be pleased to state :—

(a) the achakat area of the Anajanapur Reservoir ;

(b) the extent of land reserved for the construction of this Reservoir previously ;

(c) the extent of land wherein seepage water is flowing after the construction of the Reservoir ;

(d) whether the Government propose to grant this land for cultivation ; if so, the survey numbers of the area ;

(e) whether the Government intends to release this land for cultivation in view of the fact that the land will be affected if the said land is left uncultivated ?

SRI H. M. CHANNABASAPPA (Minister of Public Works and Electricity).—

(a) Water spread area at F. T. L. is 674 Hectares (1664 acres).

(b) 376 Hectares (923 acres and 33 Guntas).

(c) 11½ Hectares (28 acres and 19 Guntas).

(c) and (e) This has not come to the notice of the Government. However, it is felt that it is not desirable to release this land for cultivation in order to protect the Reservoir.

ಶ್ರೀ ಕೆ. ಯಂಕಟಪ್ಪ.—ಜಲಾಶಯದ ಕೆಳಗಡೆ ಇರತಕ್ಕ ಸೀಪೇಜ್ ನೀರು ಹರಿಯುವ ಪ್ರದೇಶ 28 ಎಕರೆ 19 ಕುಂಟೆ ಎಂದು ಹೇಳಿರುವುದರಲ್ಲಿ ಯಾರಾದರೂ ಅದನ್ನು ಉತ್ತು ಬಿತ್ತಿದ್ದಾರೆಯೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಬಂದಿರುವ ವರದಿ ಪ್ರಕಾರ ಹಾಗೆಯೇ ಆ ಜಮೀನನ್ನು ಬಿಟ್ಟಿದೆ.

ಶ್ರೀ ಕೆ. ಯಂಕಟಪ್ಪ,—ಎರಡು ವರ್ಷದ ಹಿಂದೆ ಒಬ್ಬ ಅಗರ್ಭ ಶ್ರೀಮಂತರು ಬುಲ್‌ಡೋಜರ್ ಹೊಡೆದು, ನೆಲವನ್ನು ಸಮ ಮಾಡಿ ತೆಂಗಿನಗಿಡ ಇಟ್ಟಿದ್ದಾರೆ. ಇದರ ಬಗ್ಗೆ ಆದಷ್ಟು ಬೇಗ ಸರ್ವೆ ಮಾಡಿಸಿ ಆ ಜಾಗ ಮಂಜೂರಾಗಿರಲಿ ಅಥವಾ ಬಗರಹುಕಂನಿಂದ ಸಾಗುವಳಿ ಮಾಡಿಕೊಂಡಿ ಕೂಡಲೇ ರದ್ದು ಪಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲೇ ಈ ಪ್ರಶ್ನೆ ಕೇಳಿದ್ದರೆ ಉತ್ತರ ಕೊಡುತ್ತಿದ್ದೆ. ನನಗೆ ಬಂದಿರತಕ್ಕ ವರದಿ ಪ್ರಕಾರ ಈ ಜಾಗ ಬಂಜರು ಬಿದ್ದಿದೆ.

ಶ್ರೀ ಕೆ. ಯಂಕಟಪ್ಪ.—ಈ ಜಾಗಕ್ಕೆ ಲಗತ್ತಾಗಿರತಕ್ಕ ಜಾಗದ ದೊಡ್ಡ ರೈತರು ದುಡ್ಡು ಖರ್ಚು ಮಾಡಿ, ಬುಲ್‌ಡೋಜರ್ ಹೊಡೆಸಿ ಸಮ ಮಾಡಿ ತೆಂಗಿನ ಗಿಡ ನೆಟ್ಟಿದ್ದಾರೆ. ಅಧಿಕಾರಿಗಳ ಪೋಷಣೆ ಇದೆಯೋ ಏನೋ ಗೊತ್ತಿಲ್ಲ. ಇದನ್ನು ತಕ್ಷಣ ಸರ್ವೆ ಮಾಡಿಸಿ ಬಗರ್‌ಹುಕುಂ ಮಾಡಿರುವ ಪ್ರದೇಶದಿಂದ ಅವರನ್ನು ಉಚ್ಚಾಟನೆ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ತಕ್ಷಣ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ. ಯಂಕಟಪ್ಪ.—ಈ ಪ್ರದೇಶವನ್ನು ಬಡರೈತರಿಗೆ ಕೊಟ್ಟಿದ್ದರೆ ಚಿಂತೆ ಮಾಡುತ್ತಿರಲಿಲ್ಲ. ಆಗರ್ಭ ಶ್ರೀಮಂತರೆನ್ನಿಸಿಕೊಂಡಿರುವವರಿಗೆ ಅಧಿಕಾರಿಗಳು ಈ ಜಮೀನನ್ನು ಕೊಟ್ಟಿದ್ದರೆ ಅಥವಾ ಮಂಜೂರು ಮಾಡಿದ್ದರೂ ಕೂಡ ರದ್ದು ಪಡಿಸುವ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ. ಅಕ್ರಮ ಸಾಗುವಳಿ ಮಾಡಿದ್ದರೆ ಬಡವರು ಮಾಡಿರಲಿ, ಐಶ್ವರ್ಯವಂತರು ಮಾಡಿರಲಿ ಅದು ತಪ್ಪೇ. ಆದರ ಬಗ್ಗೆ ಪರಿಶೀಲನೆ ಮಾಡಿಸಿ ಕಾನೂನು ಪ್ರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ, ಕಾನೂನು ಪ್ರಕಾರ ಏನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡುವುದಕ್ಕೆ ಆಲೋಚನೆ ಮಾಡುತ್ತೇವೆಂದು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಚನ್ನಬಸಪ್ಪನವರ ಬಾಯಿಂದ ಇಂಥ ಉತ್ತರ ಬರುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಒಬ್ಬ ದೊಡ್ಡ ಮನುಷ್ಯ ಅಕ್ರಮವಾಗಿ ಸಾಗುವಳಿ ಮಾಡಿದ್ದಾನೆ, ತೆಂಗಿನ ಗಿಡ ಹಾಕಿದ್ದಾನೆ, ಕೂಡಲೇ ಎವಿಕ್ಷನ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಮಾನ್ಯ ಸದಸ್ಯರು ಕೇಳಿದರು. ಅದಕ್ಕೆ ಖಚಿತವಾಗಿ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

Sri H. M. CHANNABASAPPA.—According to technical opinion 28 acres and 19 guntas has got to be retained and should not be cultivated, otherwise it will affect the strength of the dam. If the Hon. Member says that somebody has occupied it, I will look into the matter and take such action as may be necessary in the public interest.

Distribution of Foodgrains

703. Sri B. BYRAPPAJI (Turuvekere).—

Will the Minister of State for Food and Civil Supplies be pleased to state :—

(*a*) the procedure of supplying foodgrains in cities and villages of the State ;

(*b*) whether it has come to their notice that foodgrains are not being supplied according to rules ;

(*c*) if so, the steps proposed to be taken by the Government to rectify the same ?

Smt E. E. VAZ (Minister of State for Food and Civil Supplies).—

(*a*) Informal rationing system is in force in Bangalore City and K. G. F. Arrangements have been made in other important towns of Districts (where more number of labourers reside) to distribute food-grains subject to availability of stock. Orders have been issued to distribute at not more than 8 k gs. per head.

(*b*) The schemes to distribute foodgrains in villages is not taken up. However some quantity of foodgrains will be distributed in such villages also subject to availability of adequate quantity of stocks and according to needs of the situation. Instructions have been issued to distribute foodgrains at not more than 5 Kgs. per head.

(*c*) Such situation has not arisen.

ಶ್ರೀ ಬಿ. ಬೈರಪ್ಪಾಜಿ.—ಈಗ ಹಂಚುತ್ತಿರುವ ಆಹಾರ ಪದಾರ್ಥಗಳ ವ್ಯವಸ್ಥೆ ಸರಿಯಾಗಿಲ್ಲ. ಇದರಲ್ಲಿರುವ ಲೋಪದೋಷಗಳನ್ನು ನಿವಾರಣೆ ಮಾಡಲು ಇದು ವರೆಗೆ ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ ?

† ಶ್ರೀಮತಿ ಇ. ಇ. ವಾಜ್. ಆಯಾ ಜಿಲ್ಲೆಗಳಲ್ಲಿರುವ ಡೆಪ್ಯೂಟಿ ಕಮಿಷನರ್‌ರವರು ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲೆಲ್ಲಾ ಫೇರ್ ಪ್ರೈಸು ಡಿಪೋಗಳನ್ನು ತೆರೆದು ಆಹಾರ ಪದಾರ್ಥಗಳನ್ನು ಹಂಚುವ ವ್ಯವಸ್ಥೆ ಮಾಡುತ್ತಿದ್ದಾರೆ; ಮತ್ತು ಇದರಲ್ಲಿ ಏನಾದರೂ ಲೋಪ ದೋಷಗಳು ಅಲ್ಲಲ್ಲಿ ಕಂಡು ಬಂದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶವನ್ನೂ ಅವರಿಗೆ ಕೊಡಲಾಗಿದೆ ?

ಶ್ರೀ ಬಿ. ಬೈರಪ್ಪಾಜಿ.—ಬೆಂಗಳೂರಿನಲ್ಲಿ ಕೂಡ ರೇಷನ್ ಇದೆ. ಇಲ್ಲಿ ಹೊಸ ಕಾರ್ಡುಗಳನ್ನು ಹಂಚುವಾಗ ಲಂಚವಿಲ್ಲದೆ ಯಾವ ಕಾರ್ಡು ಕೊಡುತ್ತಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೆ? ಮತ್ತು ಈಗ ಹಂಚುವ ಧಾನ್ಯ ಕೂಡ ಡಿಪೋಗಳಲ್ಲಿ ಸರಿಯಾಗಿ ಹಂಚಿಕೆಯಾಗುತ್ತಿಲ್ಲ ಎನ್ನುವುದೂ ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಇ. ಇ. ವಾಜ್.—ಈಗ ಹೊಸ ಪದ್ಧತಿಯಲ್ಲಿ ಕಾರ್ಡುಗಳನ್ನು ಹಂಚಲಾಗುತ್ತಿದೆ, ಇದರಿಂದ ಹಿಂದೆ ಇದ್ದ ಕಾರ್ಡುಗಳ ಸಂಖ್ಯೆಗಿಂತ ಬಹಳ ಕಡಿಮೆಯಾಗಿರುವುದು ಕಂಡು ಬಂದಿದೆ, ಬೋಗಸ್ ಕಾರ್ಡುಗಳನ್ನು ಪತ್ತೆ ಮಾಡುತ್ತಿದ್ದಾರೆ. ಇದಕ್ಕಾಗಿ ಅಲ್ಲಲ್ಲಿ ಡಿಪೋಗಳನ್ನು ತೆರೆದು ಅವರು ಎಷ್ಟು ಧಾನ್ಯ ಅವರಿಗೆ ಬಂದಿದೆ ಅದರ ಬಗ್ಗೆ ವಿವರವಾಗಿ ಬೋರ್ಡಿನಲ್ಲಿ ಬರೆದು ಅದರಂತೆ ಹಂಚುವ ವ್ಯವಸ್ಥೆ ಮಾಡಬೇಕೆಂದು ಯೋಚಿಸಲಾಗಿದೆ. ಏನಾದರೂ ಲೋಪ ದೋಷಗಳು ಇದ್ದರೆ ಅದನ್ನು ಕೂಡಲೇ ತನಿಖೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ಎಲ್ಲ ಅಧಿಕಾರಿಗಳಿಗೂ ಸೂಚನೆಗಳನ್ನು ಕೊಡಲಾಗಿದೆ ಮತ್ತು ಇದನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕೆಂದೂ ಅವರಿಗೆ ಹೇಳಲಾಗಿದೆ.

Sri B. B. SAYANAK.—Has it come to the notice of the Gevernment that from 1st of March to 20th of March, no wheat and rice was available in the Ration Shops in Belgaum and only 2 K.Gs. of rice were given in the ration shops in the month of February, per person ?

MR. DEPUTY SPEAKER.—It is a broad question. A separate question may be put.

Smt. E. E. VAZ.—It has not come to come the notice of the Government. We get day-to-day information from the Deputy Commissioners concerned as to the stock position. Whenever there is no stock, we will make efforts to rush foodgrains to all the Districts, without any loss of time.

Sri ABDUL KHUDDUS ANWAR.—In spite of our repeated requests, Government is not in a position to supply foodgrains at Bhadravathi. No foodgrain shops have been opened so far.

Smt. E. E. VAZ.—It does not come under Informal Rationing Area. Government has given a free hand to the Deputy Commissioners regarding supply of foodgrain quotas to Fair Price Shops.

ಶ್ರೀ ಜೆ. ಎರ್. ಕಬಾಡಿ.—ಉತ್ತರದಲ್ಲಿ ಈ ಪರಿಸ್ಥಿತಿ ಉಂಟಾಗಿಲ್ಲ ಎಂದು ಹೇಳಲಾಗಿದೆ. ಬಿಜಾಪುರ ಜಿಲ್ಲೆ ಬರಗಾಲಕ್ಕೆ ಸಿಕ್ಕಿದಂತೆ ಇದೆ, ಬೀದರು, ಗುಲ್ಬರ್ಗಾ ಹೀಗೆ ಎಲ್ಲೆಲ್ಲಿ ಬರಗಾಲದ ಸ್ಥಿತಿ ಇದೆಯೋ ಅಲ್ಲೆಲ್ಲಾ ಜನರಿಗೆ ಸಾಕಷ್ಟು ದವಸಗಳು ಸಿಗುತ್ತಿಲ್ಲ. ಇಲ್ಲಿನ ಪರಿಸ್ಥಿತಿ ಉಲ್ಬಣವಾಗುತ್ತಿದೆ, ಇದಕ್ಕೋಸ್ಕರ ಇಲ್ಲಿಗೆ ಹೆಚ್ಚಿನ ಆಹಾರ ಧಾನ್ಯಗಳನ್ನು ಒದಗಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.— ಬಿಜಾಪುರ ಜಿಲ್ಲೆಗೆ ಕೊಟ್ಟಂತೆ ಬೇರೆ ಎಲ್ಲೂ ಅಷ್ಟು ಆಹಾರ ಧಾನ್ಯಗಳನ್ನು ಕೊಡಲಿಲ್ಲ. ಇದರಲ್ಲೂ ಎಲ್ಲ ಬರಗಾಲದ ಪ್ರದೇಶಗಳು ಎಂದು ಇದ್ದವೋ ಅಲ್ಲಿಗೆಲ್ಲಾ ಹೆಚ್ಚು ಗಮನ ಕೊಟ್ಟು ಹಂಚುತ್ತಿದ್ದಾರೆ ಮತ್ತು ಮಾನ್ಯ ಸದಸ್ಯರಿಗೆ ತಿಳಿದಂತೆ ಬಿಜಾಪುರದ ಕಡೆಗೆ ಮಿಲೋ ಕೂಡ ಒದಗಿಸುವ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ಪಡಿತರ ಪದ್ಧತಿಯಲ್ಲಿ ಅನೇಕ ಲೋಪದೋಷಗಳು ಬರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಅಲ್ಲದೆ ತೆರೆದಿರುವ ಡಿಪೋಗಳಲ್ಲಿ ಸಾಕಷ್ಟು ದವಸದ ದಾಸ್ತಾನಿಲ್ಲದೆ ಜನಕ್ಕೆ ಅಕ್ಕಿ ಸಿಗುತ್ತಿಲ್ಲ ಮತ್ತು ನೀವು ಮಾಡಿರುವ ನಿಯಮಗಳ ಪ್ರಕಾರ ಒಬ್ಬ ವ್ಯಕ್ತಿಗೆ ಎಂಟು ಕೆ ಜಿ ಧಾನ್ಯ ಎಂದು ಕೊಟ್ಟರೆ ಇದು ಅವನಿಗೆ ಗಂಜಿಗೂ ಕೂಡ ಸಾಲುವುದಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀಮತಿ ಇ. ಇ. ವಾಜ್.—ಕೋಟಾ ಪ್ರಕಾರ ಸ್ಟಾಕ್ ಕೊಡಲಾಗುತ್ತಿದೆ, ಅದರಂತೆ ಹಂಚುತ್ತಿದ್ದಾರೆ. ಎಲ್ಲಿ ಜಾಸ್ತಿ ಕೊಡಬೇಕೋ ಅಲ್ಲಿಗೆ ಕೊಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್. ಹೊಸ ಕಾರ್ಡನ್ನು ಕೊಡಲು ಈಚೆಗೆ ಒಂದು ಹೊಸ ಫಾರಂನ್ನು ಪ್ರಿಂಟು ಮಾಡಿಸಿದ್ದಾರೆ. ಇದರಲ್ಲಿ ಮೈಗ್ರೇಷನ್ ಸರ್ಟಿಫಿಕೇಟು, ರೆಂಟು ರಿಸೀಟ್, ಎಂಪ್ಲಾಯರ್ ಸರ್ಟಿಫಿಕೇಟು ಮತ್ತು ಎಲೆಕ್ಟರಲ್ ರೋಲ್‌ನಲ್ಲಿ ಇವರ ಹೆಸರಿರುವ ಕಾಪಿ ಇತ್ಯಾದಿಗಳನ್ನೆಲ್ಲಾ ಕೊಡಬೇಕೆಂದರೆ ಸಾಮಾನ್ಯರಿಗೆ ಕಾರ್ಡು ತೆಗೆದುಕೊಳ್ಳಲು ಸಾಧ್ಯವೇ ? ಇದು ಸರಕಾರದ ಗಮನಕ್ಕೆ ಬರಲಿಲ್ಲವೇ ? ಇದರ ಕಷ್ಟಗಳನ್ನು ನಿವಾರಣೆ ಮಾಡಲು ಸಾಧ್ಯವೇ ?

ಶ್ರೀಮತಿ ಇ. ಇ. ವಾಜ್.—ಎಲ್ಲಿ ಇದರಿಂದ ತೊಂದರೆಗಳಾಗಿದೆಯೋ ಅವನ್ನು ನೋಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಈಗ ಹೊಸದಾಗಿ ಮಾಡಿರತಕ್ಕ ಫಾರಂ ಪ್ರಕಾರ ಬೋಗಸ್ ಕಾರ್ಡುಗಳು ಆಗುವುದು ಕಡಿಮೆಯಾಗಿದೆ. That is the only way to eliminate bogus cards. Otherwise, in the absence of a view details, how do you except the Government to decide which is bogus and which is genuine ?

Sri M. S. KRISHNAN.—I am not opposed to steps being taken to eliminate bogus cards. They are expected to give migration certificates. How can they give it ? There must be some sense of proportion in what they do.

MR. DEPUTY SPEAKER.—I have called Mr. Jayaprakash Narayan.

Sri M. H. JAYAPRAKASH NARAYAN.—In some areas, particularly, in the Sriramapuram area, the foodgrains supplied to the mill coolies through the Co-operative Societies and Fair Price Depots are not good. Will you kindly see that this is set right.

Smt. E. E. VAZ.—The suggestion of the hon. member will be considered.

ಶ್ರೀ ಸಿ. ಬೈರೇಗೌಡ.—ಅಮೆರಿಕಾದಿಂದ ಬಂದ ಮಿಲೋ ದತ್ತೂರಿ ಬೀಜದಿಂದ ಕೂಡಿದ್ದು ವಿಷಮಿಶ್ರಿತವಾಗಿತ್ತು ಎನ್ನುವ ದೂರು ಬಂದಿತ್ತು ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದರೆ ಅಂತಹ ಮಿಲೋವನ್ನು ಶುದ್ಧಿ ಮಾಡಿ ಎಷ್ಟು ಕಡೆ ಒದಗಿಸಿದ್ದೀರಿ ?- ಮತ್ತು ಹಿಂದೆ ಬಂದ ದತ್ತೂರಿ ಮಿಶ್ರಿತ ಮಿಲೋ ಉಪಯೋಗ ಮಾಡಿ ಯಾರಾದರೂ ತೊಂದರೆಗೆ ಈಡಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಇ. ಇ. ವಾಜ್.—ಇದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ. ಆದರೂ ಇಷ್ಟು ಮಾತ್ರ ಸದಸ್ಯರಿಗೆ ತಿಳಿಸುತ್ತೇನೆ. ನಮಗೆ ನಾಲ್ಕು ಸಾವಿರ ಟನ್ನುಗಳಷ್ಟು ಮಿಲೋ ಬಂದಿತ್ತು.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಇದುವರೆಗೆ ಎಷ್ಟು ನ್ಯಾಯಬೆಲೆಯ ಅಂಗಡಿಗಳನ್ನು ರೈಡ್ ಮಾಡಿದ್ದೀರಿ ; ಮತ್ತು ಎಷ್ಟು ನ್ಯಾಯಬೆಲೆ ಅಂಗಡಿಗಳ ವಿರುದ್ಧ ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ವಿವರಗಳನ್ನು ಕೊಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಆ ವಿವರಗಳು ಈಗ ಇಲ್ಲ. ತಪ್ಪು ಕಂಡುಬಂದಾಗ ಲೈಸನ್ಸನ್ನು ರದ್ದು ಮಾಡಿದ್ದೇವೆ. ಮತ್ತು ಬೇರೆಯಾವ ಬೇರೆ ಕ್ರಮ ತೆಗೆದುಕೊಳ್ಳಬೇಕೊ ಅದನ್ನು ಪೂರ್ತಿಯಾಗಿ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಶ್ರೀರಾಮುಲು.—ಈಗ ತಿಂಗಳಿಗೆ 8 ಕೆ. ಜಿ. ಆಹಾರ ಧಾನ್ಯಗಳನ್ನು ಕೊಡುವಂತೆ ಆದೇಶ ನೀಡಲಾಗಿದೆ ಎಂದು ಹೇಳಿದ್ದೀರಿ. ಈ ತಿಂಗಳು ಖರೀದಿ ಮಾಡಿದವರಿಗೆ ಮುಂದಿನ ತಿಂಗಳು ಖರೀದಿ ಮಾಡುವುದಕ್ಕೆ ಅನುಮತಿ ಕೊಡಲು ಮಾನ್ಯ ಚಿಕ್ಕೇಗೌಡರು ಒಪ್ಪಿಕೊಂಡಿದ್ದರು. ಅದರ ಪ್ರಕಾರ ಈಗ ನಡೆದುಕೊಳ್ಳಲಾಗುತ್ತಿದೆಯೇ ಅಥವಾ ಇನ್ನು ಮುಂದೆಯಾದರೂ ಈ ರೀತಿ ಮಾಡುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಕೊಂಡುಕೊಳ್ಳುವವರಿಗೆ ಅನಾನುಕೂಲವಾಗಿ ತೆಗೆದುಕೊಳ್ಳದಿದ್ದರೆ ಮುಂದಿನ ತಿಂಗಳು ಕೊಡುವುದಕ್ಕಾಗುವುದಿಲ್ಲ. ಆದರೆ ನಮ್ಮಲ್ಲಿ ಸ್ಟಾಕ್ ಇಲ್ಲದಿದ್ದರೆ ಅದನ್ನು ಮುಂದಿನ ತಿಂಗಳಲ್ಲಿ ಕೊಡಿಸುವ ಏರ್ಪಾಡು ಮಾಡುತ್ತೇವೆ.

ಶ್ರೀ ಪಿ. ಎಂ. ಬಂಗಿ.—ಬರಗಾಲ ಪೀಡಿತ ಪ್ರದೇಶವಾದ ಬಿಜಾಪುರ ಪಟ್ಟಣದಲ್ಲಿ ಕೂಲಿಗಾರರು ಜಾಸ್ತಿ ಇದ್ದಾರೆ. ಅವರಿಗೆ ತಿಂಗಳಿಗೆ ಎಷ್ಟು ಕೆ.ಜಿ. ಆಹಾರಧಾನ್ಯ ಕೊಡುವ ಏರ್ಪಾಡು ಮಾಡಿದ್ದೀರಿ ?

ಶ್ರೀಮತಿ ಇ. ಇ. ವಾಜ್.—ಬಿಜಾಪುರ ಜಿಲ್ಲೆಯಲ್ಲಿ ಈ ಮೊದಲು ಇದ್ದ 1900 ನ್ಯಾಯಬೆಲೆ ಅಂಗಡಿಗಳನ್ನು 1973ಕ್ಕೆ ಹೆಚ್ಚಿಸಿದ್ದೇವೆ. ಅಗತ್ಯ ಕಂಡುಬಂದರೆ ಇನ್ನೂ ಜಾಸ್ತಿ ಮಾಡುವುದಕ್ಕೆ ಜಿಲ್ಲಾಧಿಕಾರಿಯವರಿಗೆ ಆದೇಶ ಕೊಡಲಾಗಿದೆ.

ಶ್ರೀ ಕೆ. ಎಂ. ನಾಗಣ್ಣ.—ಈ ಸರ್ಕಾರದವರು ಅಧಿಕಾರಕ್ಕೆ ಬಂದಮೇಲೆ ಸ್ಟಾಕ್ ಇದ್ದರೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈಗ ಒದಗಿಸುತ್ತಿರುವ ಗೋಧಿಯಲ್ಲಿ ಹತ್ತು ಕೆ.ಜಿ.ಗೆ ಎರಡು ಕೆ.ಜಿ.ಯಷ್ಟು ಕಸಕಡ್ಡಿ ಇರುತ್ತದೆ. ಇಂಥಾದ್ದನ್ನು ಏತಕ್ಕೆ ಖರೀದಿ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಗೋಧಿಯಲ್ಲಿಯೂ ಕಸಕಡ್ಡಿ ಇರುತ್ತದೆ. ನಮ್ಮ ಹಂಚುವ ಗೋಧಿಯಲ್ಲಿ ಜಾಸ್ತಿ ಕಸಕಡ್ಡಿ ಇದ್ದರೆ ಅದರ ಬಗ್ಗೆ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಭದ್ರಾವತಿ ಪಟ್ಟಣದಲ್ಲಿ 20 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿರುವುದರಿಂದ ಅನೌಪಚಾರಿಕ ಪಡಿತರ ಪದ್ಧತಿಯನ್ನು ಜಾರಿಗೆ ತರುವುದು ಉಚಿತವಲ್ಲವೇ ? ಆ ಬಗ್ಗೆ ತಕ್ಷಣ ಕ್ರಮ ಕೈಕೊಳ್ಳುತ್ತೀರಾ ?

Smt. E. E. VAZ.—The Suggestion will be examined.

Bifurcation of First Grade College at Tumkur

777. **Sri B. BYRAPPAJI** (Turuvekere).—

Will the Minister for Education be pleased to state.—

(*a*) the number of students studying in First Grade College, Tumkur ;

(*b*) the number of lecturers in the College ;

(*c*) whether it has come to the notice of Government that due to increa e in students' strengh and due to unsmooth administration in the college stu lents disturbance took place last year ;

(*d*) if so, whether the Government realise that it is desirable to bifurcate the college into Arts and Science Colleges ?

Sri A. R. BADARINARAYANA (Minister for Education).—

(*a*) 3,500 Students.

(*b*) 106.

(SRI A. R. BADARINARAYANA)

(*c*) No disturbance took place due to increase in students' strength and unsmooth administration in the said college.

(*d*) The Government have issued an order to bifurcate the college into Arts and Science Colleges in view of increase in students' strength.

ಶ್ರೀ ಬಿ. ಬೈರಪ್ಪಾಜಿ.—ಎರಡು ಭಾಗಗಳಾಗಿ ಮಾಡಲು ಸರ್ಕಾರ ಆಜ್ಞೆಯನ್ನು ಹೊರಡಿಸಿದೆ ಎಂದು ಹೇಳಿದ್ದೀರಿ. ಈ ರೀತಿ ಸರ್ಕಾರದ ಆಜ್ಞೆಯನ್ನು ಹೊರಡಿಸಿದ್ದರೂ ಸಹ ಇಲ್ಲಿಯವರೆಗೆ ಎರಡು ಭಾಗಗಳಾಗಿ ಮಾಡದಿರುವುದಕ್ಕೆ ಕಾರಣವೇನು ? ಮತ್ತು ಆ ರೀತಿ ಆರ್ಡರ್ ಆಗಿ ಎಷ್ಟು ಕಾಲವಾಯಿತು ?

† ಶ್ರೀ ಎ. ಆರ್. ಬದರಿನಾರಾಯಣ.—ಆರ್ಡರ್ ಆಗಿ ಮೂರು ತಿಂಗಳಾಯಿತು. ಈಗ ಮಿಡ್-ಟರ್ಮ್ ಆದ್ದರಿಂದ ಮುಂದಿನ ಅಕಡಮಿಕ್ ವರ್ಷದಿಂದ ಮಾಡುತ್ತಾರೆ.

ಶ್ರೀ ಬಿ. ಬೈರಪ್ಪಾಜಿ.—ನಮಗೆ ಬಂದಿರುವ ವರ್ತಮಾನದ ಪ್ರಕಾರ ಕಟ್ಟಡದ ಕೊರತೆಯಿಂದ ಎರಡು ಭಾಗಗಳಾಗಿ ಮಾಡುವುದಕ್ಕೆ ತೊಂದರೆಯಾಗಿದೆ ಎಂದು. ಅದಕಾರಣ ಕಟ್ಟಡಗಳನ್ನು ಕಟ್ಟಿಸಲು ಕೂಡಲೇ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಕಟ್ಟಡಗಳ ತೊಂದರೆ ಎಲ್ಲ ಕಡೆಗಳಲ್ಲಿಯೂ ಇದೆ. ಕಟ್ಟಡದ ತೊಂದರೆ ಇರಲಿ, ಅಥವಾ ಇಲ್ಲದಿರಲಿ ; ಇರುವ ಅನುಕೂಲದಲ್ಲಿಯೇ ಎರಡು ಭಾಗಗಳಾಗಿ ಮಾಡುವುದಕ್ಕೆ ಏರ್ಪಾಡು ಮಾಡಲಾಗುತ್ತದೆ.

Recovery of Term Fees from Scheduled Castes and Scheduled Tribes Students

836. SRI D. NARAYANA DAS (Harapanahalli).—

Will the Minister for Education be pleased to state:—

(*a*) the amount of fees recovered per term from Scheduled Castes and Scheduled Tribes students in Veerashaiva College at Bellary and Vijayanagar College at Hospet ;

(*b*) the action taken by the Government regarding recovery at the same rate of fees from the students of Scheduled Castes and Scheduled Tribes in the said Colleges as is done compulsorily in respect of other Community students although the constitution forbids such recovery of fees from Scheduled Castes and Scheduled Tribes students;

(*c*) whether it is possible to refund the fees recovered in the above Colleges from their inception to the respective students or whether Government will de-recognise such colleges ?

SRI A. R. BADARINARAYANA (Minister for Education).—

(*a*) According to Government Order No. ED 130 CSS 67 dated 14th March, 1968 the fees need not be recovered from the students of S.C./S.T. But in case such students have failed to produce an

eligibility certificate the fees could be recovered from such students. Fee per term is Rs. 72.

This rule applies to Veerashaiva College, Bellary and Vijayanagar College, Hospet.

(b) It is learnt from the reports received from the Hospet and Bellary Colleges that the tuition and laboratory fees are being deducted from the student's scholarships and that official receipts are given to them. Of the remaining scholarships amount book grant and boarding and lodging grants are being given to students after obtaining payment receipt from them.

As such the question of Government taking action in this behalf does not arise.

(c) As the fees recovered in those Colleges is in accordance with the law, the question of refunding does not arise.

ಶ್ರೀ ಡಿ. ನಾರಾಯಣದಾಸ್.—ರಾಜ್ಯಾಂಗದ ಪ್ರಕಾರ ಪರಿಶಿಷ್ಟ ವರ್ಗಗಳಿಂದ ಕಾಲೇಜು ಫೀ ವಸೂಲಿ ಮಾಡಬಾರದೆಂದಿದ್ದರೂ ಸಹ ಬಳ್ಳಾರಿಯ ವೀರಶೈವ ಮತ್ತು ಹೊಸಪೇಟೆಯ ವಿಜಯ ನಗರ ಕಾಲೇಜುಗಳಲ್ಲಿ 1968ರಿಂದೀಚೆಗೆ ಅರ್ಧ ಟ್ಯೂಷನ್ ಫೀಜನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎ. ಆರ್. ಬದರಿನಾರಾಯಣ.—ಕಾನೂನು ಪ್ರಕಾರ ಆ ರೀತಿ ವಸೂಲಿ ಮಾಡು ವಂತಿಲ್ಲ. ಆ ರೀತಿ ಆ ಕಾಲೇಜಿನವರು ವಸೂಲಿ ಮಾಡಿಲ್ಲ ಎಂದು ಸರ್ಕಾರಕ್ಕೆ ವರ್ತಮಾನ ಬಂದಿದೆ. ಆದರೆ ಎಲ್ಲಿಯಾದರೂ ಅನ್ಯಾಯ ಮಾಡಿದ್ದಾರೆಂದು ಸರ್ಕಾರಕ್ಕೆ ತಿಳಿಸಿದರೆ ಅದನ್ನು ಸರಿ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ಫೀಯನ್ನು ಮನ್ನಾ ಮಾಡಿಸಿಕೊಳ್ಳಲು ಅರ್ಹತಾ ಪತ್ರವನ್ನು ಕೊಡಬೇಕೆಂದು ಇಲ್ಲಿ ಹೇಳಲಾಗಿದೆ. ಹೈಸ್ಕೂಲ್ ಗಳಲ್ಲಿ ಯಾವ ರೀತಿ ಫೀಯನ್ನು ಮನ್ನಾ ಮಾಡಲಾಗುತ್ತದೋ ಅದೇ ಆಧಾರದ ಮೇಲೆ ಕಾಲೇಜು ಗಳಲ್ಲಿಯೂ ಸಹ ಅರ್ಹತಾ ಪತ್ರವಿಲ್ಲದಿದ್ದರೂ ಮನ್ನಾ ಮಾಡುವುದನ್ನು ಮುಂದುವರಿಸುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಮಾನ್ಯ ಸದಸ್ಯರು ಹೇಳುವ ವಿಚಾರವನ್ನು ಪರಿ ಶೀಲನೆ ಮಾಡೋಣ.

ಶ್ರೀ ಕೋಣಂದೂರು ಲಿಂಗಪ್ಪ.—ರಾಜ್ಯದಲ್ಲಿ ಖಾಸಗೀ ಕಾಲೇಜುಗಳು ಏನಿವೆ, ಅಲ್ಲಿಯ ಅಧಿ ಕಾರ ವರ್ಗದವರು ಹರಿಜನ ಮಕ್ಕಳು ವಿದ್ಯಾರ್ಥಿಗಳಿಂದ ರುಜು ಹಾಕಿಸಿಕೊಂಡು ಮೋಸದಿಂದ ಫೀ ಹಣವನ್ನು ತಾವೇ ಒಳಹಾಕಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ !

ಶ್ರೀ ಎ. ಆರ್. ಬದರಿನಾರಾಯಣ.—ಮೋಸದಿಂದ ರುಜು ಹಾಕಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂಥಾದ್ದು ಏನಾದರೂ ಇದ್ದರೆ, ಅದನ್ನು ಸರ್ಕಾರದ ಗಮನಕ್ಕೆ ತಂದರೆ ಸರಿ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಪ್ರೈಮರಿ ವಿದ್ಯಾಭ್ಯಾಸದಿಂದ ಹಿಡಿದು ಪೋಸ್ಟ್ ಗ್ರಾಜುಯೇಟ್‌ವರೆಗೆ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಂದ ಫೀ ವಸೂಲಿ ಮಾಡಬಾರ ದೆಂದು ನಿಯಮವಿದ್ದರೂ ಸಹ ಡಿ. ಮರಿಯಪ್ಪ ಎಂಬ ಪ್ರಿನ್ಸಿಪಾಲರು 1972ನೇ ಸಾಲಿನ ಟ್ಯೂಷನ್ ಫೀ ಕೊಡಿ, ನೀವೇನು ಸರ್ಕಾರದ ದತ್ತು ಮಕ್ಕಳೇ ಎಂದು ಪರಿಶಿಷ್ಟ ವರ್ಗದ ಮಕ್ಕಳಿಗೆ ಹೇಳು ತ್ತಿದ್ದಾರೆ. ಈ ಭಾವನೆ ಇರತಕ್ಕಂಥ ಕಾಲೇಜುಗಳಿಗೆ ಪರಿಶಿಷ್ಟ ವರ್ಗದ ಮಕ್ಕಳಿಗೆ ರಕ್ಷಣೆ ಇಲ್ಲ ವಾಗಿದೆ. ಈ ಬಗ್ಗೆ ಸರಿಯಾದ ಬಂದೋಬಸ್ತು ಮಾಡಿಸುತ್ತೀರಾ?

10-00 A.M.

ಶ್ರೀ ಎ. ಆರ್. ಬದರಿನಾರಾಯಣ.—ಪುರಿಯಪ್ಪ ಎನ್ನುವವರು ಏನು ಹೇಳಿದ್ದಾರೋ ಅದು ನನಗೆ ಗೊತ್ತಿಲ್ಲ, ಹರಿಜನ್ ಗಿರಿಜನ ವಿದ್ಯಾರ್ಥಿಗಳಿಂದ ಫೀಸ್‌ನ್ನು ವಸೂಲು ಮಾಡಬಾರದು ಎನ್ನತಕ್ಕಂಥಾದ್ದು ಬಹಳ ಕರೆಕ್ಟಾಗಿ ಇದೆ. ಅದನ್ನು ಯಾರಾದರೂ ತಪ್ಪಿ ನಡೆದರೆ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವೀರಭದ್ರಪ್ಪ.—ಈಗ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಊಟವಸತಿ ಇತ್ಯಾದಿಗಳಿಗೆ ಸಂಬಧಪಟ್ಟಹಾಗೆ ವಿದ್ಯಾರ್ಥಿ ವೇತನವನ್ನು ಏನು ಕೊಡುತ್ತಿದ್ದಾರೆ. ಅದು ಕಡಿಮೆ ಇದೆ. ಆದ್ದರಿಂದ ಅದನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎ. ಆರ್. ಬದರಿನಾರಾಯಣ.—ಇದು ಹೊಸ ಸಲಹೆ, ಅದನ್ನು ವಿಮರ್ಶೆ ಮಾಡುತ್ತೇವೆ.

SHORT NOTICE QUESTION AND ANSWER

Supply of Electricity to Tamilnadu

20. Sri M. S. KRISHNAN (Malleswaram).—

Will the Minister for Public Works and Electricity be pleased to state :—

(a) whether the Government of Tamilnadu has requested the Government of Mysore to give them more Electricity and power ;

(b) if so, how-much power has been requested ;

(c) whether the Government of Mysore has agreed to give additional Electrical power to Tamilnadu ;

(d) if so, how much ?

Sri H. M. CHANNABASAPPA (Minister for Public Works and Electricity).—

(a) Yes ; an oral request for supply of power to Tamilnadu was made when the representatives of that Government and of the State Electricity Board recently visited Bangalore.

(b) No firm indication has been given.

(c) No.

(d) Does not arise in view of replay to clause (c).

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ತಮಿಳುನಾಡಿನವರು ಓರಲ್ ರಿಕ್ವೆಸ್ಟ್ ಮಾಡಿದ್ದರು ಎಂದು ಹೇಳಿದ್ದೀರಿ, ಅವರು ಓರಲ್ ರಿಕ್ವೆಸ್ಟ್ ಏನು ಮಾಡಿದ್ದಾರೆ ಮತ್ತು ಎಷ್ಟು ಮಾಡಿದ್ದಾರೆ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ತಮಿಳುನಾಡಿನ ಚೀಫ್ ಸೆಕ್ರೆಟರಿಯವರು ಎಂ.ಎಸ್.ಇ.ಬಿ. ಚೇರ್ಮನ್ ಅವರು ಮತ್ತು ಇತರ ಅಧಿಕಾರಿಗಳು ನನ್ನನ್ನು ಭೇಟಿ ಮಾಡಿದ್ದರು. ಅವರು ನಮಗೆ ವಿದ್ಯುಚ್ಛಕ್ತಿಯನ್ನು ಎಷ್ಟು ಕೊಡುವುದಕ್ಕೆ ಸಾಧ್ಯವೋ ಅದಷ್ಟು ಕೊಡಿ ಎಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಎಷ್ಟು ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟು ವಿದ್ಯುಚ್ಛಕ್ತಿಯನ್ನು ಕೊಡಿ ಎಂದು ಅವರು ಕೇಳಿದರು. ಅದಕ್ಕೆ ತಮ್ಮ ಅಭಿಪ್ರಾಯ ಏನು ಎಂದು ಅವರು ಕೇಳಲಿಲ್ಲವೇ ? ಮತ್ತು ತಾವು ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೀರಾ ಎಂದು ನಮಗೆ ತಿಳಿದು ಬಂದಿದೆ. ಆದ್ದರಿಂದ ಆ ಬಗ್ಗೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವಾಗ ಎಷ್ಟು ಕೊಡಬೇಕು ಎನ್ನುವ ಪ್ರಶ್ನೆಯೇ ಇಲ್ಲ.

Sri M. S. KRISHNAN.—Supplementary to (B) : Can I take it that even if afirm indication is given, the Government is not going to spare any electricity to the Tamil Nadu Government ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮಲ್ಲಿಯೇ ವಿದ್ಯುಚ್ಛಕ್ತಿ ಇಲ್ಲದೇ ಇರುವಾಗ ಬೇರೆಯವರಿಗೆ ವಿದ್ಯುಚ್ಛಕ್ತಿಯನ್ನು ಕೊಡುವ ಪ್ರಶ್ನೆಯೇ ಇಲ್ಲ.

ಶ್ರೀ ಸಿ. ಬೈರೇಗೌಡ.—ಹಿಂದೆ ತಾವು ತುಂಗಭದ್ರಾದಿಂದ ಆಂಧ್ರಪ್ರದೇಶಕ್ಕೆ ನೀರು ಕೊಡುವುದಿಲ್ಲ ಎಂದು ಕ್ಯಾಬಿನೆಟ್ ತೀರ್ಮಾನ ಮಾಡಿ ಆ ಮೇಲೆ ಒಂದು ವಾರದ ನಂತರ ತಾವು ತೀರ್ಮಾನ ಮಾಡಿ ಆಂಧ್ರಕ್ಕೆ ನೀರನ್ನು ಬಿಟ್ಟಿದ್ದೀರಿ. ಈ ಸಂದರ್ಭದಲ್ಲಿ ತಾವು ಆ ರೀತಿ ನಡೆದುಕೊಳ್ಳುವುದಿಲ್ಲ ಎಂದು ಈ ಸದನಕ್ಕೆ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವೊತ್ತು ನಂಬಿಕೆ ಇರುವಾಗ ಭರವಸೆ ಕೊಟ್ಟು ಏನು ಪ್ರಯೋಜನ ?

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ (ಈ) ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ತಮಿಳುನಾಡು ಸರ್ಕಾರದ ಹಾಗೂ ಆ ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯ ಪ್ರತಿನಿಧಿಗಳು ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದಾಗ ತಮಿಳುನಾಡಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕೆಂದು ಮುಖತಃ ಕೋರಿದ್ದರು ಎಂದು ಹೇಳಿದ್ದೀರಿ, ಅವರು ಆ ರೀತಿ ಕೇಳಿದಾಗ ತಾವು ಮುಖತಃ ನಾವು ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಏತಕ್ಕೆ ಹೇಳಲಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಕೊಡುತ್ತೇವೆ ಎಂದು ಹೇಳಲಿಲ್ಲ.

Mr. DEPUTY SPEAKR.—Now Question Hour is over

QUESTIONS FOR ANSWERS ON THE DAY
(But not taken up)

Ranebennur T.A.P.C. Marketing and Processing Society Ltd.

366. Sri K. B. KOLIWAD (Ranebennur):—

Will the Minister for Co-operation be pleased to state :—

(a) whether the Government is aware that all the books of Ranebennur Taluk Agriculture Produce Co-operative Marketing and Processing Society Ltd., are not recovered from the old management ;

(b) if so, the steps the Government has taken to recover the books ;

Sri A. SHANKARA ALVA (Minister for Co-operation).

(a) Yes.

(SRI A. SHANKARA ALVA)

(b) The Administrator appointed for the society has taken action under section 31 of the Mysore Co-operative Societies Act, 1959 to obtain a search warrant from the I Class Magistrate.

Irrigation works in Magadi Taluk

389. Sri H. G. CHANNAPPA (Magadi).—

Will the Minister for Public Works and Electricity be pleased to state:—

the stage of the irrigation works sanctioned in Magadi Taluk such as:

(i) Hutchahanume Gowdana Palya Tank,

(ii) Gollarahatti Tank

(iii) Restoration of Agalabathi Tank.

Sri H. M. CHANNABASAPPA (Minister for Public Works and Electricity).—

(i) Hutchahanume Gowdana Palya Tank is proposed to be dropped since it is technically infeasible.

(ii) Gollarahatti Tank is proposed to be dropped since it is technically infeasible.

(iii) Restoration of Agalabathi Tank—the estimate is not sanctioned.

Rural Communication Roads in Magadi Taluk

390. Sri H. G. CHANNAPPA (Magadi).—

Will the Minister for Public Works and Electricity be pleased to state:—

(a) whether it is not the policy of the Government to improve 80 K.ms. of Rural Communication road under comprehensive integrated Rural Communication Scheme;

(b) if so, the extent of mileage approved for Magadi Taluk;

(c) the reasons for the shortfall?

Sri H. M. CHANNABASAPPA (Minister for Public Works and Electricity).—

(a) No. The Scheme contemplates both construction of rural roads and improvements to exisiting rural roads.

(b) Under R.C. Programme	...	64.20
Rural Employment	...	10.00
		(in K.ms.)

(c) As 80 K.ms. per Taluka under R.C. Programme is only an average per Taluka and there is no minimum mileage fixed, the question of shortfall in this Taluka does not arise.

Upper Bhima Irrigation Project in Afzalpur Taluk

495. Sri D. B. KALMANKAR (Afzalpur).—

Will the Minister of State for Major Irrigation be pleased to state :—

(a) the stage at which the Upper Bhima Irrigation Project in Afzalpur Taluk of Gulbarga District is pending ;

(b) the estimated cost of the Project and the area likely to be irrigated and the names of taluks that will benefit ;

(c) whether the Government proposes to take up the said Project at the earliest in view of the acute drought recurring in that area ?

Sri H. N. NANJE GOWDA (Minister of State for Major Irrigation).—

(a) and (b) Project is under investigation.

(c) This is a Major Project and can be taken up after it is finalised and approved.

Barrage-*Cum*-Bridge on Manjra River at Saigaon

587. Sri BAPURAO ANAND RAO (Basavakalyan).—

Will the Minister for Public Works and Electricity of pleased to state :—

(a) whether all the State M. L. As., M. L. Cs. and M. Ps. have represented to the Government to take up the barrage-*cum*-bridge on the Manjra River at Saigaon in Bhalki Taluka of Bidar District;

(SRI BAPU RAO ANANDA RAO)

(b) if so, whether survey work has been completed and estimates prepared;

(c) the steps taken by the Government to sanction the work immediately?

SRI H. M. CHANNABASAPPA (Minister for Public Works and Electricity).—

(a) No.

(b) and (c) Does not arise in view of the reply to clause (a).

CALLING ATTENTION TO MATTERS OF URGENT PUBLIC IMPORTANCE

re: Acute Scarcity of Drinking Water in Villages of Shiggaon, Savanur and Hangal Taluks.

SRI M. M. NADAF (Shiggaon).—Sir, I call the attention of the Minister for Community Development and Social Welfare to the acute scarcity of drinking water in Villages of Shiggaon, Savanur and Hangal Taluks.

SRI M. MALLIKARJUNA SWAMY (Minister for Community Development and Social Welfare).—Sir, in reply to the Call attention Notice I wish to make the following statement:—

It is not a fact that the villagers have started leaving their villages for want of drinking water. No such instances have come to the notice of Government. There are some villages where the people have to fetch drinking water from a distance of one to two miles. The Tahsildars have been instructed to supply drinking water by engaging bulluck carts in such villages. It is a fact that the cartmen are demanding exhorbitant rates for supply of drinking water in the town area. The Deputy Commissioner, Dharwar has been instructed to arrange supply of water in cooperation with the local body concerned to over-come such difficulty being faced by the people.

The following measures have also been taken in each of the three taluks:—

(1) Shiggaon Taluk. Deepening of drinking water wells in 10 villages has already been sanctioned under 64 Famine, and instructions have been issued by the Deputy Commissioner to take up the works on priority basis. Rs. 5,000 has been released as initial grants. National Rural Water Supply and

Sanitation Scheme has also been sanctioned to Shiggaon Town in February 1973. For Bankapur and 4 villages water supply scheme has been sanctioned under the Accelerated Water Supply programme.

(2) Savanur Taluk. Deepening of drinking water wells in 15 villages has been sanctioned under '64 Famine Relief' and instructions have been issued to take up the work on priority. Rs. 7,·00 has been released to the Block Development Officer as initial grant.

(3) Hangal Taluk. Deepening of the drinking water wells in 17 villages has been sanctioned under '64 Famine Relief' and instructions are issued to take up the work on priority. Rs. 8,500 has been released to the Block Development Officer as initial grant. Further grants will be released as and when required.

One high speed rig has been deployed in Dharwar District to meet the situation wherever necessary.

It is not a fact that Government servants and servants of Mysore State Electricity Board and Other Departmnts have requested for shifting the offices from Taluk Headquarters. However, there is a demand from them for payment of water allowance as there will be scarcity of drinking water during summer. Payment of any such allowance does not arise as arrangements are made for supply of water to them along with the general public.

To enable transportation of water from sources wherever available, necessary arrangements have been made to deploy the required trucks/tankers.

ಶ್ರೀ ಪಿ.ಸಿ. ಶೆಟ್ಟರ್.—ಶಿಗ್ಗಾವಿ ತಾಲ್ಲೂಕು, ಸವಣೂರು ತಾಲ್ಲೂಕು ಮತ್ತು ಹಾನಗಲ್ ತಾಲ್ಲೂಕುಗಳಲ್ಲಿ ಬಾವಿಗಳನ್ನು ತೆಗೆಯುವುದಕ್ಕೆ ಎರಡು ತಿಂಗಳ ಹಿಂದೆ ಮಾನ್ಯ ರೆವಿನ್ಯೂ ಮಂತ್ರಿಗಳು 64ನೇ ಫ್ಯಾಮಿನ್ ಹೆಡ್ ಪ್ರಕಾರ ಆ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಡೆಪ್ಯುಟಿ ಕಮಿಷನರಿಗೆ ಹೇಳಿದ್ದಾರೆ. ಆದರೆ ಇದೂವರೆಗೂ ಆ ಕೆಲಸವನ್ನು ತೆಗೆದುಕೊಂಡಿಲ್ಲ. ಆ ಕೆಲಸವನ್ನು ಕೂಡಲೇ ತೆಗೆದುಕೊಳ್ಳುವಂತೆ ಕ್ರಮ ತೆಗೆದುಕೊಳ್ಳುತ್ತೀರಾ !

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಯಾವ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆಯೋ ಅಂಥಾ ಕಡೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಏರ್ಪಾಟು ಮಾಡುತ್ತೇನೆ.

SRI M. M NADAF.—Taluk Development Board in both the taluks have reported in this regard for deepening the wells and supplying drinking water, but still no positive steps have been taken by the Deputy Commissioner. Will the Government take immediate steps in this regard ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.- ಮಾನ್ಯ ಸದಸ್ಯರಿಗೆ ಈಗಾಗಲೇ ಉತ್ತರವನ್ನು ಹೇಳುತ್ತಾ ಅದರ ಬಗ್ಗೆ ಹೇಳಿದ್ದೇವೆ. ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವ ಇದೆ, ಮತ್ತು ಬಾವಿಗಳನ್ನು ಆಳಪಡಿಸತಕ್ಕಂತಹ ಕೆಲಸ ಇದೆ ಅದನ್ನು ಮಾಡಬೇಕೆಂದು ಹೇಳಿದ್ದೇವೆ. ಮತ್ತು ಕುಡಿಯುವ ನೀರಿನ ಕೊಂದರೆ ಎಲ್ಲಿ ಇದೆ, ಅಲ್ಲಿ ಗಾಡಿಗಳನ್ನು ಬಾಡಿಗೆಗೆ ತೆಗೆದುಕೊಂಡು ನೀರನ್ನು ಒದಗಿಸಿ ಕೊಡಬೇಕೆಂದು ಏರ್ಪಾಡು ಮಾಡಿದ್ದೇವೆ.

Sri J. P. SARWESH.—May I know how many tankers have been sent not only to this taluk but to other areas where there is difficulty for drinking water ?

Mr. DEPUTY SPEAKER.—It is outside the scope.

ಶ್ರೀ ಪಿ. ಸಿ. ಶೆಟ್ಟರ್.—ನಮ್ಮ ತಾಲ್ಲೂಕಿನಲ್ಲಿ ಕುಡಿಯುವುದಕ್ಕೆ ನೀರೇ ಇಲ್ಲ. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ನೇರವಾಗಿ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ನಾನು ಆಗಲೇ ಉತ್ತರದಲ್ಲಿ ಹೇಳಿದ್ದೇನೆ. ತೆಗೆದುಕೊಳ್ಳದಿದ್ದರೆ ಅದನ್ನು ಕೂಡಲೇ ಮಾಡುತ್ತೇವೆ.

Mr. DEPUTY SPEAKER.—It will be speedily attended to. Next calling attention notice.

(*ii*) *re* : **Fall in Prices of Arecanut**

Sri S. M. SHEERNALLY CHANDRASHEKAR (Hosanagar).—I call the attention of the Minister for Agriculture and Forests to the fall in the prices of arecanuts in Sagar, Shimoga and Mangalore.

Sri K. H. PATIL (Minister for Agriculture and Forests).—I state as follows :—

There has been a steep fall in the price of Arecanut in the various markets in the State. Representations have been received by Government in and outside the Legislature requesting Government to take steps to arrest further fall in the prices of Areca. Government have examined the situation at length and various steps have been taken to stabilise the price and prevent further fall of price. There is at present no scientific and authentic data giving the cost of production of Arecanut in the State. In the absence of such data it is difficult to work out the reasonable magin of profit for areca growers. Therefore, Government are of the view that the question of collecting necessary data and keeping an upto date record enabling them to determine whether any rate of arecanut ruling on any particular date is economic and whether it leaves a reasonable margin for the Agriculturist should be examined. Since the question involves collection of data and scrutiny of various aspects of production, marketing and prices of Areca, it was considered necessary to constitute a Committee of Experts to undertake a study of the entire question and make recommendations based on the study for the consideration of Government.

Accordingly Government have constituted a Committee consisting of the following persons to study the price structure of areca and other allied matters.

1. Sri T. T. Paulose, Director, Government of India, Directorate of Arecanut and Spices Development, Ministry of Agriculture (Department of Agriculture, Calicut 5.) ... CHAIRMAN.
2. A Nominee of the Director, Bureau of Economics and Statistics, Government of Mysore, Bangalore. MEMBER.
3. A Representative of the Areca Research Stations. MEMBER.
4. A Nominee of the Chief Marketing Officer, Government of Mysore, Bangalore. MEMBER.
5. The Joint Director of Horticulture (Development). CONVENER OF THE COMMITTEE.

The terms of reference of the Committee are as under ;—

(i) The committee will examine the causes relating to the fall in prices of areca and collect such data as essential to work out the reasonable cost of production under certain assured conditions, which will enable the Government to compare the cost of production with the selling price of Areca at any given time.

(ii) The Committee will also suggest as to what should constitute a selling price giving the growers a reasonable margin of profits which should be calculated with reference to the cost of production in the recent past years, the selling price of Arecanut in those years and the general market conditions in the State in particular and the country in gene al.

The Committee has been advised to submit its report by the end of March 1973. On receipt of report, Government will examine the recommendations of the committee and take appropriate action.

Further with a view to assess the impact created in the arecanut markets in the Mysore State and in the light of the experience gained in Kerala State in preventing fall of price of arecanut in the State, a meeting was held on 11-12-1972 at Bangalore with the Ministers of Agriculture and Co-operation of Kerala and Mysore Governments. The representatives of the Areca growers were also invited for the said meeting. The representatives after some discussion, accepted in

(SRI K. H. PATIL)-

principle the suggestion to have two purchasing societies, one in Kerala State and one in Mysore State and to these societies forming into a federation as a Apex Institution. Funds required for this federation would come from the purchasing Society, the N.C.D.C. and the Governments of Mysore and Kerala. After considering the advantages and disadvantages of forming such federation it was decided that necessary purchasing organisation in co-operative sector in both the States should be formed and registered in the respective States under the Co-operative Societies Act. These purchasing organisation should then combine together into a federation under the multi unit Co-operative Societies Act. This federation should start purchasing, stocking and selling of arecanut and wherever possible to take up processing also. Regarding the working details of these two purchasing organisations and the federation, it was decided that the officers of both the Governments should work out the Bye-laws for these institutions. It was also decided that the share capitals and other financial assistance required by the N. C. D. C. should be approached and both the State Governments should give them all the necessary assistance.

Accordingly the Kerala and Mysore State have drafted model bye laws for the proposed inter-State organisation providing for the purchase and sales of arecanut, quality control, grading, propaganda, processing study of market intelligence, research on areca based industries and exploring foreign markets for sale of arecanuts and membership for individual growers societies and the two Governments with an authorised share capital of one crore. Each State Government would contribute Rs. 37.50 lakhs each and other members from each state should contribute 12.50 lakhs each. After finalisation of the Bye-laws the same would be adopted by the promoters after getting the society registered in consultation with the Central Registrar of Co-operative Societies, New Delhi, as required under the multi-unit Act.

In view of the measures taken by Government, it is expected that the areca growers will be relieved of the present difficulties in the near future.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ನಾನು ಮತ್ತು ನಮ್ಮ ಮಿತ್ರರು ಹಿಂದೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆವು. ಅದಕ್ಕೂ ಇಂತಹ ಒಂದು ದೀರ್ಘವಾದ ಉತ್ತರವನ್ನು ಮಾನ್ಯ ಮಂತ್ರಿಯವರು ಕೊಟ್ಟಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಏನಿದ್ದರೂ ಅಡಿಕೆ ಬೆಲೆ ಕಡಿಮೆ ಯಾಗುತ್ತಾ ಹೋಯಿತು. ಆದರೆ ಇನ್ನಿತರ ಉಪಯುಕ್ತವಾದ ಸಾಮಾನುಗಳ ಬೆಲೆಗಳು ಏರುತ್ತಾ ಇವೆ. ಇದರಿಂದಾಗಿ ತುಂಬಾ ಬವಣೆಯಲ್ಲಿ ಅಡಿಕೆ ಬೆಳೆಗಾರರು ಇದ್ದಾರೆ. ಇದಕ್ಕೆ ತುರ್ತು ಕ್ರಮ ಕೈಗೊಳ್ಳುವುದರ ಬಗ್ಗೆ ಒಂದು ಸಲಹೆಯನ್ನು ಕೊಡುತ್ತೇನೆ. ಅದನ್ನು ತಾವು ವಿಚಾರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮಾರ್ಕೆಟಿಂಗ್ ಸೊಸೈಟಿಗಳು ಶಿವಮೊಗ್ಗ, ಮಂಗಳೂರು ಮತ್ತು ಸಾಗರದಲ್ಲಿ ಇವೆ. ಈ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಸರ್ಕಾರದ ಕಡೆಯಿಂದ ಒಬ್ಬ ಅಧಿಕಾರಿಯನ್ನು ನೇಮಕಮಾಡಿ 5-6 ಪರ್‌ಸೆಂಟ್‌ನಂತೆ ಸಾಲ ಕೊಟ್ಟು ಅಡಿಕೆಯನ್ನು ಕೊಳ್ಳತಕ್ಕ ವ್ಯವಸ್ಥೆಯನ್ನು ಕೂಡಲೇ ಮಾಡುತ್ತೀರಾ ಎಂದು ಕೇಳುತ್ತೇನೆ.

ಉಪಾಧ್ಯಕ್ಷರು.—ತಮ್ಮ ಸಲಹೆಯನ್ನು ಆ ಕಮಿಟಿಗೆ ಕಳುಹಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಉಪಾಧ್ಯಕ್ಷರು ಹೇಳಿದಂತೆ ಮಾನ್ಯ ಸದಸ್ಯರು ಹೇಳಿದಂಥ ಸಲಹೆಯನ್ನು ಕಮಿಟಿಯ ಎದುರಿಗೆ ವಿಚಾರಣೆಗೆ ಕಳುಹಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ರಾಜ್ಯಭಾರವಲ್ಲಿ ಈ ಮಾನ್ಯ ಸದಸ್ಯರನ್ನು ಆ ಕಮಿಟಿಗೆ ಹಾಕಿಸಿ, ಸಾಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಕಳೆದಸಾರಿ ಇದೇ ತರಹ ಸ್ಟೇಟ್‌ಮೆಂಟ್ ನಾನು ಮಾಡಿದ್ದೇನೆ. ಮಾನ್ಯ ಮಂತ್ರಿಗಳು ದೀರ್ಘವಾದ ಒಂದು ಯೋಜನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ವಿಚಾರವಾಗಿ ಮಾತನಾಡಿದ್ದಾರೆ. ಅದಕ್ಕೆ ನಾನು ಅವರನ್ನು ಸ್ವಾಗತಿಸುತ್ತೇನೆ. ತುರ್ತು ಪರಿಸ್ಥಿತಿಯಲ್ಲಿ ಇಂತಹ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಸರ್ಕಾರದವರು ಹೆಚ್ಚಿಗೆ ಈ ಬಾಬಿಗೆ ಹಣವನ್ನು ಒದಗಿಸಬೇಕು.

ಶ್ರೀ ಕೆ. ಎಚ್. ಪಾಟೀಲ್.—ಈಗಾಗಲೇ ಮಾನ್ಯ ಸದಸ್ಯರಿಗೆ ಗೊತ್ತಿರಬೇಕು. ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ಮಾರ್ಕೆಟಿಂಗ್ ಕೊಆಪರೇಟಿವ್ ಸೊಸೈಟಿಗಳಿಂದ ಈಗಾಗಲೇ ಅವನ್ನು ಖರೀದಿ ಮಾಡಿದ್ದಾರೆ. ಅಲ್ಲಿಂದ ಸಹಕಾರ ಸಂಘಗಳ ಮೂಲಕ ಸಹಕಾರ ಪಡೆದು ಕೆಲವು ಸೊಸೈಟಿಗಳಲ್ಲಿ ಖರೀದಿ ವ್ಯವಹಾರ ಮಾಡುವುದೂ ಉಂಟು. ಅದರ ಬಗ್ಗೆ ಏನೇನು ವ್ಯವಹಾರ ನಡೆದಿದೆಯೆಂಬುದು ಗೊತ್ತಿಲ್ಲ. ಆದರೂ ಮಾರ್ಚಿ 31ರೊಳಗೆ ಸರ್ಕಾರಕ್ಕೆ ವರದಿ ಕೊಡಬೇಕೆಂದು ಆದೇಶ ಕೊಟ್ಟಿತ್ತು. ಅದರಂತೆ ವರದಿಯೂ ಬಂದಿದೆ. ಇನ್ನು ಮೇಲೆ ಜಾಗ್ರತೆಯಾಗಿ ಸೂಕ್ತ ಕ್ರಮವನ್ನು ಅದರ ಬಗ್ಗೆ ತೆಗೆದುಕೊಳ್ಳಬೇಕೆಂದು ಸರ್ಕಾರದ ಉದ್ದೇಶ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರ ಬೇರೆ ರಾಷ್ಟ್ರಗಳಿಂದ ಅಂದರೆ, ಸಿಲೋನ್, ಮಲೇಸಿಯಾ, ಸಿಂಗಪೂರ್, ಬಂಗಾಳ ದೇಶಗಳಿಂದ ಹೆಚ್ಚಿಗೆ ಅಡಿಕೆ ಆಮದು ಮಾಡಿರುವುದರಿಂದ ಅಡಿಕೆ ಬೆಲೆ ಕುಸಿಯಿತೆಂಬುದು ನಿಜವೇ ? ಹಾಗಿಲ್ಲದೇ ಇದ್ದರೆ ರಾಜ್ಯಸರ್ಕಾರದವರು ಅದರ ಬಗ್ಗೆ ಭಾರತ ಸರ್ಕಾರದೊಡನೆ ಪತ್ರವ್ಯವಹಾರ ನಡೆಸಿದ್ದಾರೆಯೇ ? ಅದರ ಬಗ್ಗೆ ರಾಜ್ಯ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಕೆ. ಎಚ್. ಪಾಟೀಲ್.—ಅನೇಕ ಸಲ ಸುದಿನವೂ ಬರುತ್ತದೆ. ಪಾಕಿಸ್ತಾನದವರು ನಮ್ಮನ್ನು ಅಡಿಕೆ ಕಳುಹಿಸಿ ಎಂಬುದಾಗಿ ಕೇಳಿದ್ದಕ್ಕೆ ನಾವು ಅದನ್ನು ಕಳುಹಿಸಲಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ್ದು ಸರಿಯಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ಕಮಿಟಿಯವರನ್ನು ಈ ವಿಚಾರವಾಗಿ ಈಗಾಗಲೇ ಕೇಳಿದೇವೆ. ಅದಕ್ಕಾಗಿ ಪರ್ಮನೆಂಟ್ ಸಾಲ್ವೇಷನ್ ಏನು ಆಗಬೇಕೋ ಅದು ಆಗುತ್ತದೆ. ಅದನ್ನು ಒಪ್ಪಿಕೊಳ್ಳೋಣ. ಕೊಆಪರೇಟಿವ್ ಮಿನಿಸ್ಟರ್ ಗಮನಕ್ಕೂ ಈ ವಿಚಾರವನ್ನು ನಾನು ಈಗಾಗಲೇ ತಂದಿದ್ದೇನೆ. ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯಲ್ಲಿ ನಾನೂ ಒಬ್ಬ ಸದಸ್ಯನಾಗಿ ಇದ್ದೇನೆ. ಇದು ತಪ್ಪು. ಜಾಗ್ರತೆಯಾಗಿ ಬೆಲೆಯಲ್ಲಿ ಕುಸಿಯುವುದಕ್ಕೆ ಕಾರಣವೇನೆಂಬುದನ್ನು ಪ್ರತಿಯೊಬ್ಬರೂ ಗಮನಿಸಬೇಕಾಗಿದೆ. ಅಡಿಕೆ ಬೇರೆ ಕಡೆಗೆ ರವಾನೆಯಾಗದಂತೆ ಮಾಡಲು ಮತ್ತು ಹೊರಗಡೆಗೆ ವ್ಯಾಪಾರಕ್ಕಾಗಿ ಇದು ಹೋಗದೇ ಇರುವ ಹಾಗೆ ಒಂದು ವ್ಯವಸ್ಥೆ ಮಾಡಬೇಕು. ಪ್ರತಿಯೊಬ್ಬ ಮಂಡಿಯವರೂ ಸಹ ರವಾನೆ ಮಂಡಿ ಎಂಬುದಾಗಿ ಮಾಡಿಕೊಳ್ಳಬೇಕು. ಅವರು ಅದಕ್ಕೆ ಒಂದು ಪ್ರೈಸ್ ಕಂಟ್ರೋಲ್ ಮಾಡಬೇಕು. ಬಾಕಿದ್ದನ್ನು ನೇರವಾಗಿ ಸಪ್ಲೈಮಾಡುವುದಕ್ಕೆ ಅವಕಾಶಮಾಡಿಕೊಡಬೇಕು. ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಇದರ ಬಗ್ಗೆ ಒಂದು ರೂಲ್ ಮಾಡಿ ರವಾನೆ ಮಂಡಿಗಳನ್ನು ಇಟ್ಟುಕೊಂಡರೆ, ಆಗ ಇಷ್ಟು ದಿವಸಗಳೊಳಗೆ ಅಡಿಕೆ ಹೊರಗಡೆಗೆ ಹೋಗುತ್ತದೆಂಬುದು ಗೊತ್ತಾಗುತ್ತದೆ. ಹಾಗಿಲ್ಲದೇ ಹೋದರೆ ಇದು ಪುನಃ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಯಾರ್ಡ್‌ನೊಳಗೇ ಬರಬೇಕು. ಆದ್ದರಿಂದ ಸರ್ಕಾರದವರು ಈಗ ಅತಿ ಮುಖ್ಯವಾಗಿ ಮಾಡಬೇಕಾಗಿರುವುದು ಏನೆಂದರೆ ಎಲ್ಲಾ ಕಡೆಗಳಲ್ಲಿಯೂ ಜನತಾ ಮಾರ್ಕೆಟ್‌ಗಳನ್ನು ಸರ್ಕಾರದ ಪರವಾಗಿಯೇ ಪ್ರಾರಂಭಮಾಡಿದರೆ, ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರ ಮೂಲಕ ಜನತೆ ನೇರವಾಗಿ ಖರೀದಿಮಾಡಿ ಮಾರ್ಕೆಟ್ಟಿನಲ್ಲಿ ಅದನ್ನು ಚಿಲ್ಲರೆಯಾಗಿ ವ್ಯಾಪಾರ ಮಾಡುವ ಹಾಗೆ ಮಾಡಿದರೆ, ಆಗ ಅದು ಹೆಚ್ಚುಹೆಚ್ಚಾಗಿ ದೊಡ್ಡ ದೊಡ್ಡ ಕೇರಿಗೆ ಮಾರ್ಕೆಟ್ಟಿಗೆ ಬಂದು ಇತರೇ ಜನಗಳ ಮೂಲಕ ಕಾಂಪಿಟೇಷನ್ ಕಮೆನ್ಸ್ ಆಗುತ್ತದೆ. ಈಚೆಗೆ ಇಂಥಾದ್ದರಿಂದ ಚಿಲ್ಲರೆ ವ್ಯಾಪಾರ ಮಾಡುವವರಿಗೆ ಇದು ಅನುಕೂಲವಾಗಿರುವುದರಿಂದ ಆದಷ್ಟು ಜಾಗ್ರತೆಯಾಗಿ ಕೂಡಲೇ ಎಲ್ಲಾ ಅಡಿಕೆ ವ್ಯಾಪಾರಗಾರರಿಗೆ ಇದರಿಂದ ಹೆಚ್ಚಿನ ಅನುಕೂಲವನ್ನು ಮಾಡಿಕೊಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಎರಡನೆಯ ಸಲಹೆಯನ್ನು ನಮ್ಮ ಸಹಕಾರ ಮಂತ್ರಿಗಳು ಪರಿಶೀಲನೆ ಮಾಡಿಕೊಡಬೇಕಾಗಿದೆಯೆಂದು ಈಗಾಗಲೇ ನಾನು ಅವರಿಗೆ ಹೇಳಿದ್ದೇನೆ. ಅದು ಖಂಡಿತವಾಗಿ ನಡೆಯುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಶ್ರೀ ವೀರಪ್ಪಗೌಡರ ಸಲಹೆಯನ್ನು ನಾನು ಅನುಮೋದಿಸುತ್ತೇನೆ. ಆದರೆ ಇಂತಹ ರವಾನೆ ಮಂಡಿಗಳಿಂದ ಸಣ್ಣ ಸಣ್ಣ ಅಡಿಕೆ ಬೆಳೆಗಾರರಿಗೆ ಬಹಳ ತೊಂದರೆಯಾಗಿದೆ. ಅದನ್ನು ಕೂಡಲೇ ಸರಿಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಆದಷ್ಟು ಜಾಗ್ರತೆಯಾಗಿ ಅವೆಲ್ಲವನ್ನೂ ಸರಿಮಾಡುತ್ತೇವೆ.

Police excesses over public demanding Continuance of "Bangarada Manushiah"

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಬೆಂಗಳೂರಿನಲ್ಲಿ ನಿನ್ನೆ ರಾತ್ರಿ ಕೆಲವು ಜನರು ವಾಹನಗಳ ಮೇಲೆ ಧಾಳಿ ಮಾಡಿದ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಇವತ್ತು ಬೆಳಿಗ್ಗೆ ಕೊಟ್ಟಿದ್ದೇನೆ. ನಾನು ನಿನ್ನೆ ಕೆಲವು ದೃಶ್ಯಗಳನ್ನು ನೋಡಿ ನನ್ನ ಎದೆ ಒಡೆದು ಹೋಗಿದೆ. ಕೆಲವು ರಾಜಕಾರಣಿಗಳು ಇವತ್ತು ಕೆಲವಾರು ಜನ ನಿರಪರಾಧಿಗಳನ್ನು ಉಪಯೋಗಿಸಿಕೊಂಡು ಆ ಜನಗಳ ಮೇಲೆ ನಡೆದಂಥ ಪೋಲೀಸಿನವರ ಹಲ್ಲೆಯನ್ನು ಈ ಸಭೆಯ ಕೆಲವು ಮಾನ್ಯ ಸದಸ್ಯರು ನೋಡಿದ್ದಾರೆ. ಇಂಥಾದ್ದನ್ನು ಪ್ರಚೋದನೆ ಮಾಡುವುದಕ್ಕೆ ಲೆಜಿಸ್ಲೇಟರ್ಸ್ ಹೋಂಗೆ ಸಂಬಂಧಪಟ್ಟಹಾಗೆ ಒಬ್ಬ ಡಾಕ್ಟರ್ ಇದ್ದಾರೆ, ಹಾಗೆಯೇ ಜನರಲ್ ಹಾಸ್ಟಲ್‌ನಲ್ಲಿ ಕೆಲಸಮಾಡುತ್ತಿರುವ ಒಬ್ಬ ಹುಡುಗನಿದ್ದಾನೆ. ಅವನ ಹೆಸರು ಕೃಷ್ಣ. ಈತನು ನಿನ್ನೆ ರಸ್ತೆಯಲ್ಲಿ ಹೋಗುತ್ತಿದ್ದಂಥ ವಾಹನಗಳಿಗೆ ಮತ್ತು ರಿಕ್ಷಾಗಳಿಗೆ ಕಲ್ಲು ಹೊಡೆಯುತ್ತಿರುವುದನ್ನು ನೋಡಿದರೆ, ಯಾರು ತಾನೆ ಸಹಿಸುವುದಕ್ಕಾಗುತ್ತದೆ ? ಇದರ ಬಗ್ಗೆ ಸರ್ಕಾರದವರು ಒಂದು ಹೇಳಿಕೆಯನ್ನು ಕೊಡಬೇಕು. 'ಬಂಗಾರದ ಮನುಷ್ಯ' ಎಂಬ ಸಿನಿಮಾವನ್ನು ನಡೆಸಬೇಕು ಎಂಬುದಾಗಿ ಅಲ್ಲಿ ಹೋಗಿ ಹೇಳಿದಾಗ ಅಲ್ಲಿ ನಡೆದ ಒಂದು ಘಟನೆಯ ಬಗೆ ನಾನು ಈಗ ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ಈಗಾಗಲೇ ನನ್ನ ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ನೋಟೀಸ್ ಆಫೀಸಿಗೆ ಕೊಟ್ಟಿದ್ದೇನೆ.

MR. DEPUTY SPEAKER.—As it is, it has not come to my notice. I will look into it and have it examined.

ಶ್ರೀ ಕಾಗೋಡು ತಿಮ್ಮಪ್ಪ.—ನನಗೆ ಇದರ ಬಗ್ಗೆ ಸರ್ಕಾರದ ರು ಕೂಡಲೇ ಒಂದು ಹೇಳಿಕೆಯನ್ನು ಕೊಡಬೇಕು. ಇಲ್ಲದೇ ಹೋದರೆ, ಯಾವುದೋ ಒಂದು ಚಳುವಳಿಯ ಹೆಸರಿನಲ್ಲಿ ನಿರಪರಾಧಿಗಳನ್ನು ಹಾಡುಹಗಲಿನಲ್ಲಿಯೇ ಹಿಂಸೆ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಅದನ್ನು ನಾವು ಸಹಿಸುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ಪೇಟೆ).—ಮಾನ್ಯ ಸದಸ್ಯರು ಸ್ಪಷ್ಟವಾಗಿ ಆ ವಿಷಯ ಹೇಳಲಿ.

Sri B. B. SAYANAK.—I rise to a point of order. I want to know whether the Chair has allowed the Call Attention Notice to be raised; if not, whether it is proper to allow hon. Member, Sri Vatal Nagaraj to speak ?

ಶ್ರೀ ಕಾಗೋಡು ತಿಮ್ಮಪ್ಪ.— ಏಕೆಂದರೆ ಇಂತಹ ಸನ್ನಿವೇಶಗಳನ್ನು ಕೆಲವು ಸ್ವಾರ್ಥ ರಾಜಕಾರಣಿಗಳು ಉಪಯೋಗಿಸಿಕೊಂಡು ಕೇವಲ ಮುಗ್ಧ ಬಾಲಕರಿಂದ ಅವರ ಒಂದು ದೊಡ್ಡಸ್ತಿಕೆಯನ್ನು ಬೆಳೆಸಿಕೊಳ್ಳಲು ಪ್ರಯತ್ನಮಾಡುತ್ತಿದ್ದಾರೆ. ಲೆಜಿಸ್ಲೇಟರ್ ಹೋಂನಲ್ಲಿ ಕೆಲಸಮಾಡತಕ್ಕ ಒಬ್ಬ ಡಾಕ್ಟರ್ ಇದರೊಳಗೆ ನೇರವಾದ ಪಾತ್ರವನ್ನು ವಹಿಸಿಕೊಂಡ ಸಂದರ್ಭವೇನು ? ಇವರು ಒಬ್ಬ ಪೋಲೀಸ್ ಅಧಿಕಾರಿಯ ಮಗ. ಅಲ್ಲದೆ ನಿಮ್ಮ ಜನರಲ್ ಹಾಸ್ಟಲಿನಲ್ಲಿರತಕ್ಕ ಹುಡುಗರು ನೇರವಾದ ಪಾತ್ರವನ್ನು ವಹಿಸುವ ಸಂದರ್ಭವೇನಿತ್ತು ?

ಶ್ರೀ ವಾಟಾಳ್ ನಾಗರಾಜ್.—ನಾನು ನಿನ್ನೆ ರಾತ್ರಿ ನೋಡಿದ ಹಾಗೆ ಕೆಲವು ಜನ ಪೋಲೀಸಿನವರು ಅಂತಹ ನಿರಪರಾಧಿ ಹುಡುಗರ ಮೇಲೆ ಗೂಂಡಾಗಿರಿ ನಡೆಸಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಂತಹ ಒಂದು ಘಟನೆಗೆ ಯಾರು ಗೂಂಡಾಗಿರಿ ನಡೆಸಿದ್ದಾರೆಂಬುದು ಮೊದಲು ಗೊತ್ತಾಗಬೇಕು.

ಶ್ರೀ ವಾಟಾಳ್ ನಾಗರಾಜ್.—ಇದು ಒಂದು ಥಿಯೇಟರ್ ಡಿಸ್ಟ್ರಿಬ್ಯೂಟರ್ ಅವರ ಗಲಾಟೆಗೆ ಸಂಬಂಧಪಟ್ಟಿರುವಾಗ, ನಿರಪರಾಧಿಗಳಾದಂಥ ಹುಡುಗರಿಗೆ ಇದು ಏನೂ ಸಂಬಂಧವಿಲ್ಲ. ನಾನು ನಿನ್ನೆಯೇ ಸುಮಾರು 200–300 ಜನರು ವಿಧಾನಸೌಧದ ಹತ್ತಿರ ಬಂದಾಗ ನಾನು ಮೊದಲೇ ಇಂತಹ ಪರಿಸ್ಥಿತಿ ಆಗಬಹುದೆಂದು ಸರ್ಕಾರಕ್ಕೆ ಈ ಸಭೆಯಲ್ಲಿ ಹೇಳಿದ್ದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರಾದ ಶ್ರೀ ಕೊಡಗಿ ಅವರನ್ನು ಬೇಕಾದರೆ ಕೇಳಿ. ಅವರೇ ನಿನ್ನೆ ರಾತ್ರಿ ನಡೆದಂಥ ದೃಶ್ಯವನ್ನು ಕಣ್ಣಾರೆ ಕಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಪೋಲೀಸಿನವರು ಲಾಠಿ ಚಾರ್ಜು, ಟಿಯರ್ ಗ್ಯಾಸ್, ಮುಂತಾದ ಕ್ರಮಗಳನ್ನು ತೆಗೆದುಕೊಂಡಿದ್ದರಿಂದ ಅನೇಕ ಜನರಿಗೆ ಇದರಿಂದ ತೊಂದರೆಯಾಗಿದೆ.

10-30 A. M.

Mr. DEPUTY SPEAKER.—After the Question Hour and Call Attention Notice, by precedent, an hour has developed which is called 'Zero Hour'.

Sri AZEEZ SAIT (Minister for Labour).—That should be discouraged.

Sri KONANDUR LINGAPPA.—In that case, we will not allow the Ministers also to make any statement !

Mr. DEPUTY SPEAKER.—There is nothing in the Constitution and the Rules of Procedure that 'zero hour' should be allowed. But by precedent, something has developed like a Zero hour. All sorts of things cannot be raised in that hour. But things like calamity, tragedy by natural causes, act of God, floods, famine, breach of peace, violence and fire can be raised so the Government's attention can be immediately drawn to those matters and Government might attend to it. I do agree that other matters cannot be raised. Now, the matters raised by hon. members Sriyuths Vatal Nagaraj and Kagodu Thimmappa is a grave one and I will request the Government to make a statement on this on Monday. Of course, Sri Channabasappa, Hon'ble Minister may be in a position to make a statement. But, it should be in an effective manner.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಅಧ್ಯಕ್ಷರೇ, ತಮ್ಮಲ್ಲಿ ನಾನು ಒಂದು ವಿಷಯವನ್ನು ಮನವಿ ಮಾಡಿಕೊಳ್ಳಬೇಕಾಗಿದೆ. ಅವರು ಹೇಳಿಕೊಟ್ಟರೋ, ಇವರು ಹೇಳಿಕೊಟ್ಟರೋ ಅದು ನನಗೆ ಸಂಬಂಧವಿಲ್ಲ. ಇದರಲ್ಲಿ ಬಹಳ ಮಂದಿ ನಿರಪರಾಧಿಗಳಾದ ಹುಡುಗರು ಏಟನ್ನು ತಿಂದಿದ್ದಾರೆ. ಈ ದಿವಸ ಬೆಳಗ್ಗೆ ಇನ್ನೂ ಐದು ಗಂಟೆ ಆಗುವುದಕ್ಕಿಲ್ಲ ಆ ಏಟು ತಿಂದಿದ್ದ ಹುಡುಗರ ಅನೇಕ ತಂದೆ ತಾಯಿಗಳು ನನ್ನ ಮನೆಯ ಹತ್ತಿರ ಬಂದು ನನಗೆ ಅವರ ಹುಡುಗರಿಗೆ ಹಣೆಗೆ ತುಂಬಾ ಪೆಟ್ಟು ಬಿದ್ದಿರುವುದನ್ನು ತೋರಿಸಿದರು. ಅವರೆಲ್ಲರೂ ನಿರಪರಾಧಿಗಳು. ಇನ್ನೂ ಅನೇಕ ನಿರಪರಾಧಿ ಹುಡುಗರನ್ನು ಪೋಲೀಸ್ ಸ್ಟೇಷನ್ನಿನಲ್ಲಿ ಇಟ್ಟುಕೊಂಡಿದ್ದಾರೆ. ಅವರನ್ನು ಕೂಡಲೆ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ನಾನು ಹೇಳುತ್ತಿರುವುದು ಅಪರಾಧಿಗಳನ್ನು ಪತ್ತೆ ಮಾಡಿ ಅವರಿಗೆ ಬೇಕಾದ ಶಿಕ್ಷೆ ಮಾಡಿ ಬೇಡ ಎನ್ನುವುದಿಲ್ಲ. ಆದರೆ ನಿರಪರಾಧಿಗಳನ್ನು ಹೊಡೆಯುವುದು ಸರ್ವಥಾ ನ್ಯಾಯವಾದುದಲ್ಲ.

ಶ್ರೀ ವಾಟಾಳ್ ನಾಗರಾಜ್.—ನೆನ್ನೆ ನಾಲ್ಕೂವರೆ ಗಂಟೆ ಸಮಯದಲ್ಲಿ ಪೋಲೀಸಿನವರು ನಿರಪರಾಧಿ ಹುಡುಗರಿಗೆ ಬುರುಡೆ ಸೀಳಿಹೋಗುವಂತೆ ಹೊಡೆದಿದ್ದಾರೆ......

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ಇದ್ದ ಹುಡುಗರನ್ನು ಉದ್ರೇಕಗೊಳ್ಳುವಂತೆ ಯಾರು ಭಾಷಣ ಮಾಡಿದವರು ?

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ತಿಮ್ಮಪ್ಪನವರೇ ಹೇಳಲಿ ಯಾರು ಭಾಷಣ ಮಾಡಿದವರು ?

ಶ್ರೀ ಕಾಗೋಡು ತಿಮ್ಮಪ್ಪ.—ಆ ವಿಷಯ ಪತ್ರಿಕೆಯಲ್ಲೇ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮಲ್ಲಿ, ಅಧ್ಯಕ್ಷರು, ಒಂದು ವಿಷಯ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಇದರಲ್ಲಿ ಮುಖ್ಯವಾಗಿ ಎರಡು ಪ್ರಶ್ನೆಗಳಡಗಿವೆ. ಒಂದು ಇದನ್ನು ಆರಂಭಮಾಡಿದವರು ಯಾರು ? ಕಲ್ಲುಗಳೇಕೆ ಇದ್ದವು ? ಇನ್ನು ಎರಡನೇ ಪ್ರಶ್ನೆ ಅಲ್ಲಿಗೆ ಪೋಲೀಸರೇಕೆ ಬಂದು ಹಲ್ಲೆ ಮಾಡಿದರು ಎಂಬುದು. ಇಂಥವು ಆಗದಂತೆ ನೋಡಿಕೊಳ್ಳಬೇಕು.

Mr. DEPUTY SPEAKER.—I would certainly seek the advice of the hon. member if matters are not clear to me.

ಶ್ರೀ ಕಾಗೋಡು ತಿಮ್ಮಪ್ಪ.—'ರಾತ್ರಿ 9.30 ಗಂಟೆಯ ಸಮಯದಲ್ಲಿ ಸುಮಾರು ಒಂದು ಸಹಸ್ರ ಮಂದಿ ಚಿತ್ರ ಮಂದಿರದ ಮುಂದೆ ಸೇರಿ' ಬಂಗಾರದ ಮನುಷ್ಯ ಚಿತ್ರ ಪ್ರದರ್ಶಿಸಬೇಕೆಂದು ಪಟ್ಟು ಹಿಡಿದರು. ಈ ಮಧ್ಯೆ ಜನರಲ್ ಹಾಸ್ಟಲ್ ಬಳಿ ಸೇರಿದ್ದ 400—500 ಮಂದಿ ಗುಂಪು ಇದ್ದ ಸಭೆಯನ್ನು ಶ್ರೀ ವಾಟಾಳ್ ನಾಗರಾಜ್ ಅವರು ಉದ್ರೇಕಿಸಿ ಭಾಷಣ ಮಾಡಿದರೆಂದು ಹೇಳಲಾಗಿದೆ...

ಒಬ್ಬ ಮಾನ್ಯ ಸದಸ್ಯರು.—ಅಲ್ಲಿ ಇದ್ದ ಇನ್ನೊಬ್ಬ ಸದಸ್ಯರು ಯಾರು ?

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀ ಬಂಗಾರಪ್ಪನವರು.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ಏನು ಹೇಳಿದೆ ? 'ಭಾಷಣ ಮಾಡಿದರು' ಎಂದು ಹೇಳಲಾಗಿದೆ 'ಹೇಳಲಾಗಿದೆ' ಎಂಬುದನ್ನು ಸ್ವಲ್ಪ ನಿಧಾನವಾಗಿ ಅರ್ಥಮಾಡಿ. ಇದರ ಜೊತೆಗೆ ಅಧ್ಯಕ್ಷರು ಪೋಲೀಸ್ ಸ್ಟೇಟ್‌ಮೆಂಟ್‌ನ್ನೂ ತರಿಸಲಿ. ಅದರಲ್ಲಿ ನಾನು ನೆನ್ನೆ ದಿವಸ ಅಲ್ಲಿ ಭಾಷಣ ಮಾಡಿದ ಎಂದು ಅದರಲ್ಲಿದ್ದರೆ ನಾನು ಸೋಮವಾರವೇ ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಬರೆದು ಅಧ್ಯಕ್ಷರ ಕೈಲಿ ಕೊಟ್ಟು, ಅದನ್ನು ನಮ್ಮ ಲೀಡರಿಗೆ ಒಪ್ಪಿಸುವುದಿಲ್ಲ, ನಾನು ಹೋಗುತ್ತೇನೆ. ಇಲ್ಲಿ ಪತ್ರಿಕೆಯಲ್ಲಿ ಬರೆದಿರುವುದು ಅರ್ಥವಿಲ್ಲದ ಮಾತು. ನಮ್ಮನೆ ಯಾರಮೇಲೆಯೊ ಗೂಬೆ ಕೂಡಿಸಬೇಕೆಂದು ಹೀಗೆಲ್ಲಾ ಹೇಳುತ್ತಿರುವುದು ಸರಿಯಾದ್ದಲ್ಲ.

ಉಪಾಧ್ಯಕ್ಷರು.—ಮಂತ್ರಿಗಳು ಒಂದು ಹೇಳಿಕೆ ಕೊಡುವುದಕ್ಕೆ ಎದ್ದೆದ್ದು ನಿಲ್ಲುತ್ತಿದ್ದರೂ ಸದಸ್ಯರುಗಳು ಅದಕ್ಕೆ ಅವಕಾಶ ಕೊಡದಿದ್ದರೆ ನಾನು ಇನ್ನೇನು ಹೇಳಲಿ ?

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಇಲ್ಲಿ ನನ್ನ ಹೆಸರು ಬಂದಿರುವುದರಿಂದ ನಾನು ಎರಡು ಮಾತನ್ನು ಹೇಳುವುದಕ್ಕೆ ತಾವು ದಯಮಾಡಿ ಅವಕಾಶ ಕೊಡಿ. ನೆನ್ನೆಯ ದಿವಸ ಈ ವಿಚಾರವನ್ನು ಸಭೆಯಲ್ಲೇ ಸುಮಾರು ಸಾಯಂಕಾಲ ಐದೂವರೆಯ ಸುಮಾರಿನಲ್ಲಿ ಶ್ರೀ ವಾಟಾಳ್‌ರವರು ನನಗೆ ತಿಳಿಸಿದ್ದರ ಮೇಲೆ ನಾನೂ ಅವರೂ ಸೇರಿ ಸಭೆಯಲ್ಲಿದ್ದ ಮಾನ್ಯ ಹಣಕಾಸಿನ ಸಚಿವರಲ್ಲಿ ಇದೇ ವಿಷಯವನ್ನು ಪ್ರಸ್ತಾಪ ಮಾಡಿದೆವು. ಆಗ ನಾವು ಏನು ಹೇಳಿದೆವು ಎಂದರೆ ಕನ್ನಡ ಭಾಷೆ, ಕನ್ನಡ ಚಲನ ಚಿತ್ರ ಮತ್ತು ಕನ್ನಡ ಕಲೆಗೆ ಪ್ರೋತ್ಸಾಹ ಗಳಿಸತಕ್ಕ ಸಂದರ್ಭ ಒದಗಿದೆ. ಇಲ್ಲಿ ನಗರದಲ್ಲಿ 'ಬಂಗಾರದ ಮನುಷ್ಯ' ಎನ್ನತಕ್ಕ ಚಲನ ಚಿತ್ರ ಇನ್ನು ಒಂದು ವಾರ ನಡೆದರೆ ಇದಕ್ಕೆ 1 ವರ್ಷ ತುಂಬುತ್ತೆ. ನಮ್ಮ ದಕ್ಷಿಣ ಇಂಡಿಯಾದಲ್ಲೇ ಒಂದು ವರ್ಷಕಾಲ ನಡೆದಂಥ ಬೇರೊಂದು ಚಲನ ಚಿತ್ರವಿಲ್ಲ. ಅಂಥಾ ಒಂದು ಗೌರವ ಈ ಕನ್ನಡ ಚಲನ ಚಿತ್ರಕ್ಕೆ ದೊರೆಯುತಕ್ಕ ಅವಕಾಶ ಇರುವುದರಿಂದ ಇದನ್ನು ರನ್ ಮಾಡುವುದಕ್ಕೇ ಸರ್ಕಾರದವರು ಏನಾದರೂ ಮಾಡಿ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಂಡೆವು. ನಾನು ಆಗ್ಗೆ ವೇಳೆ ಎಷ್ಟಾಗಿತ್ತೆಂಬುದನ್ನು ಮರೆತಿದ್ದೇನೆ. ಇದ್ದರೆ ಸುಮಾರು 6.45 ಪಿ. ಎಂ. ಇರಬಹುದು. ಅಲ್ಲಿಂದ ಸಭೆ ಮುಗಿದ ನಂತರ ನಾವು ಇಲ್ಲಿಂದ ಹೊರಟು ಜನರಲ್ ಹಾಸ್ಟಲ್ ಬಳಿ ಸೇರುವ ಹೊತ್ತಿಗಾಗಲೇ ಅಲ್ಲಿ ಸಾವಿರಾರು ಜನರು ಸೇರಿದ್ದರು. ಈ ವಿಚಾರದಲ್ಲಿ ಮುಚ್ಚುಮರೆ ಮಾಡತಕ್ಕ ಅವಕಾಶವೇ ಇಲ್ಲ. ಇದೇ ವಿಚಾರವನ್ನು ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೂ ತಿಳಿಸಿದ್ದೇನೆ. ಅಲ್ಲಿ ಭಾಷಣವನ್ನು ಯಾರೂ ಮಾಡಲಿಲ್ಲ. ಹಾಗಿದ್ದರೂ ಕಾಗೋಡು ತಿಮ್ಮಪ್ಪನವರು ಏನು ಒಂದು ಮನೋಭಾವದಿಂದ

ಮಾತನಾಡುತ್ತಿದ್ದಾರೆ ಅದು ಸರಿಯಲ್ಲ ಆ ಪಿಕ್ಚರು ಪ್ರದರ್ಶನ ನಿಲ್ಲಿಸಿರುವುದರಿಂದ ಒಂದು ವರ್ಷ ಪೂರ್ತಿ ನಡೆಸಿದಂತಾಗುವುದಿಲ್ಲ.

ಉಪಾಧ್ಯಕ್ಷರು.—ಸೋಮವಾರ ಈ ವಿಚಾರದಲ್ಲಿ ಸರಕಾರ ಸ್ಟೇಟ್‌ಮೆಂಟ್ ಮಾಡುವುದು.

ಶ್ರೀ ಎಸ್. ಬಂಗಾರಪ್ಪ.—ಕಲ್ಲು ಹೊಡೆಸಿದವರು ನಾವು ಎನ್ನುವ ರೀತಿಯಲ್ಲಿ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳುತ್ತಿದ್ದಾರೆ. ಕಲ್ಲು ಹೊಡೆದರೆ ಎಲ್ಲರಿಗೂ ಬೀಳುವುದು. ವಿಚಾರ ಸರಿಯಾಗಿ ತಿಳಿಯದೆ ಯಾರ ತಲೆಯ ಮೇಲೋ ಗೂಬೆ ಕೂರಿಸುವುದು ಸರಿಯಲ್ಲ. ಜನರಲ್ ಹಾಸ್ಟಲಿಗೆ ಹೋದ ಮೇಲೆ ಕೆಂಪೇಗೌಡ ರೋಡ್‌ನಲ್ಲಿರುವ ಟಾಕೀಸಿಗೆ ಫೋನ್ ಕೂಡ ಮಾಡಲಾಯಿತು. ಐ. ಜಿ. ಪಿ. ಪೋಲೀಸು ಕಮೀಷನರು ಮುಂತಾದವರಿಗೆ ತಿಳಿಸಲಾಯಿತು. ಡಿ ಸಿ, ಡಿವಿಜನಲ್ ಕಮೀಷನರುಗಳಿಗೂ ತಿಳಿಸಲಾಯಿತು, ಗೃಹಕಾಖೆಯ ಸಚಿವರು ಸಿಕ್ಕಲಿಲ್ಲ, ಅರ್ಥಖಾತೆ ಕಾರ್ಯದರ್ಶಿಗಳಾದ ಶ್ರೀ ಮಣಿ ನಾರಾಯಣಸ್ವಾಮಿಗಳಿಗೆ ಫೋನ್ ಮಾಡಿದಾಗ ಅವರು ನೇರವಾಗಿ ಪೋಲೀಸು ಕಮೀಷನರಿಗೆ ಫೋನ್ ಮಾಡಿದರು. ಈ ಚಿತ್ರವನ್ನು ಮುಂದುವರೆಸುವುದು ಸೂಕ್ತ, ಹಾಗೆ ಮಾಡುವುದರಿಂದ ಜನರ ಮನಸ್ಸಿನಲ್ಲಿರುವ ನೋವನ್ನು ಹೋಗಲಾಡಿಸಲು ಅವಕಾಶವಾಗುವುದು ಎಂದು ಅವರು ಫೋನ್ ಮಾಡಿದರು. ಆಗ ದೇವೇಗೌಡರೂ, ಪುಟ್ಟಸ್ವಾಮಯ್ಯನವರೂ ಇದ್ದರು. ಟಾಕೀಸಿನವರನ್ನು ಕೇಳಲು ಕಾನೂನು ಪ್ರಕಾರ ತಮಗೆ ಅವಕಾಶವಿಲ್ಲವೆಂದು ತಿಳಿಸಿದರು. ಶ್ರೀ ಕಿತ್ತೂರರವರಲ್ಲಿಗೆ ಫೋನ್ ಮಾಡಿದಾಗ ಅವರೂ ಪ್ರಯತ್ನಮಾಡಿದರು. ಟಾಕೀಸಿನ ಜನರನ್ನು ಕಾಂಟ್ಯಾಕ್ಟ್ ಮಾಡಲು ಪ್ರಯತ್ನಿಸಿದರು. ಅವರು ರಾತ್ರಿ ಬರುವರೆಂದು ಗೊತ್ತಾಯಿತು. ಜನರಲ್ ಹಾಸ್ಟಲ್‌ನ ಹತ್ತಿರ ಯಾರೂ ಭಾಷಣಮಾಡಲಿಲ್ಲ. ಹಾಗಿರುವಾಗ ಜನರು ಕೇಳಿದಾಗ ಏನಾದರೂ ಹೇಳಬೇಕಾಗಿಬಂದು ಹೇಳಿದ್ದನ್ನೇ ಭಾಷಣವೆಂದು ಹೇಳುವುದಾದರೆ ಏನು ಹೇಳುವುದು ? ನಾವು ಜನರು ಸೇರಿದ್ದಾಗ ಅವರಿಗೆ ಶಾಂತ ರೀತಿಯಿಂದ ಚದುರಬೇಕೆಂದು ಹೇಳಿದೆವು. ಇದನ್ನು ಅಲ್ಲಿದ್ದ ಪೋಲೀಸ್ ಆಫೀಸರುಗಳು ಸಹ ಕೇಳಿದ್ದಾರೆ. ನನ್ನ ವಿಚಾರ ಪ್ರಸ್ತಾಪಿಸಿದಾಗ ಇದನ್ನೆಲ್ಲಾ ನಾನು ಹೇಳಬೇಕಾಗುವುದು. ಶ್ರೀ ಕೊಣಂದೂರು ಲಿಂಗಪ್ಪನವರೂ ಸಹ ಟಾಕೀಸ್ ಬಳಿಗೆ ಹೋಗಿದ್ದರೆಂದು ಯಾರೋ ಹೇಳಿದರು, ಗೊತ್ತಿಲ್ಲ. ಅದೇನೇ ಇರಲಿ, ಇದು ಒಳ್ಳೆಯ ಕೆಲಸ, ಜನತಾ ಕೆಲಸ. ಬಂಗಾರದ ಮನುಷ್ಯ ಚಿತ್ರವನ್ನು ಈಗ ಮುಂದುವರೆಸಲಾಗದಿದ್ದರೆ ಎರಡು ರೀಲನ್ನಾದರೂ ಹಾಕಿ ಮುಂದುವರೆಸಿ, ರಾತ್ರಿ ಒಂದು ಗಂಟೆಗೆ ಬಂದಿದೆ ಎಂದು ಹೇಳಲಾಯಿತು. ಕಲ್ಲು ರಸ್ತೆಯಲ್ಲಿ ಬಿದ್ದಿರುವುದಕ್ಕೂ ನನಗೂ ಸಂಬಂಧವಿಲ್ಲ. ಯಾರು ಹೋದರೂ ಕಲ್ಲು ಬೀಳುವುದು. ಏನೋ ಹೇಳಿ ಇನ್ನೊಬ್ಬರ ಮುಖಕ್ಕೆ ಮಸಿ ಬಳಿಯುವ ಕೆಲಸ ಮಾಡಬಾರದು.

(ಗಲಾಟೆ)

ಶ್ರೀ ಸಿ. ಬೈರೇಗೌಡ.—ಸರಕಾರ ಸ್ಟೇಟ್‌ಮೆಂಟ್ ಕೊಡುವುದೆಂದು ಹೇಳಿದಮೇಲೆ ಈ ವಿಷಯ ಮುಂದುವರೆಸಬಾರದು. ಮುಂದುವರೆಸಿದರೆ ಉದ್ರೇಕ ಪರಿಸ್ಥಿತಿ ಬರುವುದು.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮಲ್ಲೇನೂ ಉದ್ರೇಕವಿಲ್ಲ. ನಾನು ಸುಮಾರು ಎಂಟು ಗಂಟೆಗೆ ಜನರಲ್ ಹಾಸ್ಟಲ್ ಬಳಿಗೆ ಹೋದೆ. ಅಲ್ಲಿ ಸುಮಾರು 500 – 600 ಹುಡುಗರ ಗುಂಪಿತ್ತು. ನಾನು ಟಾಕೀಸ್ ಬಳಿಗೆ ಹೋಗಿದ್ದೆನೆಂದು ಬಂಗಾರಪ್ಪನವರು ಹೇಳಿದರು ನಾನು ರೂಮಿಗೆ ಹೋದೆ. ಆಗ ಹುಡುಗರು ಸೇರಿ ವರ್ಷವಾಗುವುದಕ್ಕೆ ಆರು ದಿವಸವಿದೆ, ಹೊಸ ಪಿಕ್ಚರನ್ನು ಹಾಕಿದ್ದಾರೆ ಎಂದು ಗಲಾಟೆ ಮಾಡುತ್ತಿದ್ದರು. ನಾನು ಅವರ ಹತ್ತಿರ ಮಾತನಾಡಿ ವಿಷಯ ತಿಳಿದುಕೊಂಡೆ, ಕನ್ನಡಿಗರಿಗೆ ಈ ಚಿತ್ರ ವರ್ಷ ಪೂರ್ತಿ ನಡೆಸಿದ್ದರೆ ಒಂದು ಒಳ್ಳೆಯ ಹೆಸರು ಬರುತ್ತಿತ್ತು, ನಿಲ್ಲಿಸಿದ್ದಾರೆ ಎಂದು ಹೇಳಿದರು. ಆಗ ಸಂಬಂಧಪಟ್ಟವರಿಗೆ ಎರಡನೆಯ ಷೋಗಾದರೂ ಅದನ್ನು ಹಾಕಿ, ಸಾಧ್ಯವಿಲ್ಲದಿದ್ದರೆ ಎರಡು ರೀಲ್ ಆದರೂ ಹಾಕಿ ಎಂದು ಹೇಳಿದೆ ಹಾಗೆ ಮಾಡಿದರೆ ಬ್ರೇಕ್ ಆದ ಹಾಗಾಗುವುದಿಲ್ಲ ಎಂದು ತಿಳಿಸಿದೆ, ಅದಕ್ಕೆ ಅವರು ಒಪ್ಪಿದರು.

ಶ್ರೀ ಕೆ. ಪುಟ್ಟಸ್ವಾಮಿ.—ಇದು ಅಸೆಂಬ್ಲಿಯಲ್ಲಿ ಚರ್ಚೆಯಾಗುವ ವಿಷಯವೇ ? This is not a proper place for discussing this matter.

SRI H. M. CHANNABASAPPA (Minister for Public Works and Electricity).—I raise a point of order Sir. (Sri M. S. Krishnan stood up)

MR. DEPUTY SPEAKER.—I request the hon. member Sri Krishnan to have a little restraint.

Mr. M. S. KRISHNAN.—I am having restraint. I request you to pull up Sri Puttaswamy.

Sri K. PUTTASWAMY.—You have no right to do so.

Mr. DEPUTY SPEAKER.—Hon. Minister Sri Channabasappa is on a point of order. Let us hear him first.

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನ ಕ್ರಿಯಾಲೋಪವಿಷ್ಯ : ಈ ವಿಷಯ ಪ್ರಸ್ತಾಪಿಸುವುದಕ್ಕೆ ಇದು ಯಾವ ಮೋಷನ್ ಮೂಲಕವೂ ಬಂದಿಲ್ಲ, ನೋಟೀಸು ಕೊಟ್ಟಿದ್ದಾರೆ. ಅಧ್ಯಕ್ಷರು ಅದನ್ನು ಪರಿಶೀಲಿಸಿ ಸರಕಾರಕ್ಕೆ ಕಳುಹಿಸಿ ಸರಕಾರ ಅದರ ಬಗ್ಗೆ ಹೇಳಿಕೆ ನೀಡುವಂತೆ ಆದೇಶ ಕೊಡುವರು. ಅಲ್ಲಿಗೆ ಮುಕ್ತಾಯವಾಗುವುದು.

ಅದಕ್ಕೆ ಮುನ್ನ ಅದರ ವಾತಾವರಣದ ಮೇಲೆ ಚರ್ಚೆಗೆ ಹೋಗುವಂಥಾದ್ದು ಅಧ್ಯಕ್ಷರು ಕೊಟ್ಟ ಆದೇಶಕ್ಕೆ ಎಲ್ಲೆ ಮೀರಿ ಹೋಗುವಂತಾಗುತ್ತದೆ. ನಮ್ಮ ವಿಧಿನಿಯಮಗಳಿಗೆ ಇದು ಹೊಂದುವುದಿಲ್ಲ. ಆದ್ದರಿಂದ ಇದರ ಬಗ್ಗೆ ಮುಂದುವರೆದು ಹೋಗತಕ್ಕದ್ದು ಸೂಕ್ತವಲ್ಲ ಎನ್ನುವುದು ನನ್ನ ಪಾಯಿಂಟ್ ಆಫ್ ಆರ್ಡರ್.

Mr. DEPUTY SPEAKER.—Let us leave it at that. When I told you that it will be taken up on Monday why should you go on firing speeches. We shall make some arrangements about this. If the scope is extended it creates a lot of trouble.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಈ ಸಭೆಯ ವಾತಾವರಣವನ್ನು ಕುಲುಕುವಂಥ ವಿಷಯವನ್ನು ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಮತ್ತು ಕಾಗೋಡು ತಿಮ್ಮಪ್ಪನವರು ಎತ್ತಿದರು. ಅದರ ಬಗ್ಗೆ ನಾನು ವಿವರಣೆ ಕೊಡುವುದಕ್ಕೆ ಹೋಗುವುದಿಲ್ಲ. ಈ ವಿಷಯದ ಬಗ್ಗೆ ಮುನ್ಸೂಚನೆ ಕೊಡುವುದರ ಮುಖಾಂತರ ಸರ್ಕಾರ ಮುಂಜಾಗ್ರತೆ ಕ್ರಮ ವಹಿಸಬೇಕು ಎನ್ನುವ ಪ್ರಸ್ತಾಪ ಇದೆ. ಈ ಘಟನೆ ಹೇಗೆ ನಡೆದಿದೆ, ಎನ್ನುವುದು ಸರ್ಕಾರದ ಪೋಲೀಸ್ ಅಧಿಕಾರಿಗಳಿಗೆ ಸಂಬಂಧಪಟ್ಟ ವಿಷಯ. ಮಾನ್ಯ ಪುಟ್ಟಸ್ವಾಮಿ ಯವರು ಚಳುವಳಿ ಮಾಡುವಾಗ ಕೆಲವು ದುಷ್ಟ ಶಕ್ತಿಗಳು ಇರುತ್ತವೆಂದು ಹೇಳಿದರು. ನಾವು ಯಾರೇ ಚಳುವಳಿ ಮಾಡಲಿ, ದುಷ್ಟ ಶಕ್ತಿಗಳು ಈ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಕೆಲವು ಸಂದರ್ಭದಲ್ಲಿ ಇಂಥ ಪರಿಸ್ಥಿತಿಯನ್ನು ಹದಗೆಡಿಸುವುದಕ್ಕೆ ಪ್ರಯತ್ನ ಮಾಡುವುದು ನಡೆದುಕೊಂಡು ಬಂದಿದೆ. ದುಷ್ಟ ಶಕ್ತಿಗಳಮೇಲೆ ಸರ್ಕಾರ ಬಿಗಿಯಾದ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕಾದುದು ಸರ್ಕಾರದ ಕರ್ತವ್ಯ. ಮೊನ್ನೆ ಗುಲ್ಬರ್ಗದಲ್ಲಿ ಗಲಾಟೆ ಆದಾಗ್ಗೆ, ಯಾರೋ ಗಲಾಟೆ ಮಾಡಿದರು, ಯಾರೋ ಒಬ್ಬರು ಸತ್ತರು, ಯಾರೋ ಒಬ್ಬರಿಗೆ ಹೊಡೆದರು, ಈ ರೀತಿ ಚಳುವಳಿಗಳನ್ನು ದುರುಪಯೋಗ ಮಾಡಿಕೊಳ್ಳುವ ಶಕ್ತಿಗಳು ಈ ದೇಶದಲ್ಲಿ ಬೆಳೆದುಕೊಂಡು ಬಂದಿವೆ. ಇದರಿಂದ ಯಾವ ರಾಜಕೀಯ ಪಕ್ಷಕ್ಕೆ, ಯಾವ ರಾಜಕೀಯ ಮುಖಂಡರ ಮುಖಕ್ಕೆ ಮಸಿ ಬಳಿಯಬೇಕಾಗಿಲ್ಲ. ಈ ದುಷ್ಟ ಶಕ್ತಿಗಳ ಹಿಂದೆ ಯಾರಾದರೂ ಮುಖಂಡರು ಇದ್ದರೆ, ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಲಿ ತಾವು ಸೋಮವಾರ ಏನು ಹೇಳಿಕೆ ಕೊಡುತ್ತೀರೋ ಕೊಡಿ. ಆ ಸಂದರ್ಭದಲ್ಲಿ ಮಾನ್ಯ ನಾಗಣ್ಣನವರು, ಕೆಲವರಿಗೆ ಪೋಲೀಸಿನವರು ಬುರುಡೆ ಒಡೆಯುವ ಹಾಗೆ ಹೊಡೆದಿದ್ದಾರೆಂದು ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—ಪೋಲೀಸರ್ ಕೈಯಲ್ಲಿ ಹುಡುಗರು, ಕಾರ್ಮಿಕರು ಸಿಕ್ಕಿದರೆ, ದನ ಹೊಡೆದ ಹಾಗೆ ಹೊಡೆಯುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ದಿಸೆಯಲ್ಲಿ ಸರ್ಕಾರ ಆಲೋಚನೆ ಮಾಡಿ ಸರಿಯಾದಂಥ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು. ಸೋಮವಾರ ತಾವು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಮುಂಚೆ ನಿರಪರಾಧಿಯಾಗಿರುವವರು ಪಾಚ್‌ನಲ್ಲಿ ಎಳೆದುಕೊಂಡು ಹೋಗಿರುವವರು ಎಲ್ಲರನ್ನೂ ಬಿಡಿಸಬೇಕಾಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಪ್ರಚೋದನೆ ಮಾಡುತ್ತೇವೆಂದು ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಲಘುವಾಗಿ, ಯಾರೇ ಆಪಾದನೆ ಮಾಡಿದರೂ ಅದು ಚೆನ್ನಾಗಿರುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಜನರಲ್ ಹಾಸ್ಪಲ್ ಮುಂದೆ ಗುಂಪು ಸೇರಿದ್ದಾಗ ನಾನು ಹೋದೆ. ದೇವೇಗೌಡರು ನೋಡಿದರು ಎಂದು ಹೇಳಿದರೆ ಏನು ಮಾಡುವುದಕ್ಕೆ ಆಗುತ್ತದೆ ? ಆದ್ದರಿಂದ ಸೋಮವಾರಕ್ಕೆ ಮುಂಚೆ ಈ ನಿರಪರಾಧಿಗಳಿಗೆ ರಕ್ಷಣೆ ಕೊಡುವುದು ಇದ್ದರೆ ಕೊಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಈ ಪ್ರಶ್ನೆಗೆ ಅಧಿಕೃತ ವರದಿಯ ಆಧಾರದ ಮೇಲೆ ಒಂದು ಸ್ಟೇಟ್‌ಮೆಂಟನ್ನು ಸೋಮವಾರ ಮಾಡಲಾಗುತ್ತದೆ. ಮತ್ತು ಬೆಂಗಳೂರು ಸದಸ್ಯರಾದ ನಾಗಣ್ಣನವರ ಏನು ಒಂದು ಸಲಹೆ ಕೊಟ್ಟಿದ್ದಾರೆ, ಮತ್ತು ದೇವೇಗೌಡರು ಏನು ಸಲಹೆ ಕೊಟ್ಟಿದ್ದಾರೆ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮುಖ್ಯವಾಗಿ ಯಾರು ಪ್ರಚೋದನೆ ಮಾಡಿದರು; ಯಾರು ಹೊಡೆದರು ಯಾರು ಬಿಟ್ಟರು ಯಾರು ಹೊಡೆಸಿಕೊಂಡರು, ಅದೆಲ್ಲಾ ವಿವರವಾದ ವರದಿ ಬಂದಮೇಲೆ ವಿಚಾರ ಮಾಡತಕ್ಕಂಥಾದ್ದೇ ವಿನಹ ಈಗ ಅದನ್ನು ಈ ಸಭೆಯಲ್ಲಿ ವಿಚಾರ ಮಾಡತಕ್ಕದ್ದು ಅಲ್ಲ. ಇಲ್ಲಿ ಮಾತನಾಡತಕ್ಕ ವಿಷಯದಿಂದ ನನಗೆ ಅರಿವು ಆಗಿರುವುದು, ಸಿನಿಮಾ ಮಂದಿರದ ಮಾಲೀಕರು-ಅಣ್ಣ ತಮ್ಮಂದಿರು ಇಬ್ಬರಿಗೂ ವ್ಯಾಜ್ಯ ಹುಟ್ಟಿದ್ದು, ಕೆಲವರು ಅವರಿಗೆ ಬೇಕಾದವರನ್ನು ಕೋಶೀಷು ಮಾಡಿಕೊಂಡು ಹೋದರು. ಇನ್ನೊಬ್ಬರು ಮತ್ತೊಬ್ಬರಿಗೆ ಕೋಶೀಷು ಮಾಡಿಕೊಂಡು ಹೋದರು. ಇದರ ಪರಿಣಾಮವಾಗಿ ನಿರಪರಾಧಿಗಳಿಗೆ ತೊಂದರೆಯಾಯಿತು. ಯಾರು ಪ್ರಚೋದನೆ ಮಾಡಿದರು, ಯಾರು ಬಿಟ್ಟರು, ಯಾರು ಯಾರನ್ನು ಹೊಡೆದರು, ಎಷ್ಟು ನಷ್ಟವಾಯಿತು. ಎನ್ನುವ ವಿವರಗಳನ್ನು ಸಂಗ್ರಹಣೆ ಮಾಡಿ ತಿಳಿಸುತ್ತೇನೆ. ಈ ಪರಿಸ್ಥಿತಿಯಲ್ಲಿ ಪೋಲೀಸರು ಯಾರು ಯಾರನ್ನು ಬಂಧನದಲ್ಲಿಟ್ಟಿದ್ದಾರೋ, ಯಾರು ನಿರಪರಾಧಿಗಳು ಯಾರು ಅಪರಾಧಿಗಳು ಎನ್ನುವುದನ್ನು ಪತ್ತೆ ಹಚ್ಚುವುದು ಕಷ್ಟ ; ನೂರಾರು ಜನರ ಹೊಡೆದಾಟ ಬಡಿದಾಟವಾಗಿರುವಾಗ ವಾಸ್ತವವಾಗಿ ತಪ್ಪು ಮಾಡಿರುವವರು ನುಸುಳಿಕೊಂಡು ಹೋಗುತ್ತಾರೆ. ನಿರಪರಾಧಿಗಳು ಕೈಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ಅದಕ್ಕೆ ಸ್ವಲ್ಪ ಕಾಲಾವಕಾಶ ಬೇಕು. ಯಾರು ನಿರಪರಾಧಿಗಳು ಯಾರು ಅಪರಾಧಿಗಳು ಎನ್ನುವುದನ್ನು ವಿಚಾರ ಮಾಡುವುದಕ್ಕೆ ಸ್ವಲ್ಪ ಕಾಲ ಬೇಕು ಎನ್ನುವುದನ್ನು ಮಾನ್ಯ ದೇವೇಗೌಡರು ಮತ್ತು ನಾಗಣ್ಣನವರು ಒಪ್ಪಿಕೊಳ್ಳುತ್ತಾರೆ. ನಮ್ಮ ಸರ್ಕಾರದ ದೃಷ್ಟಿಯಲ್ಲಿ ನಿರಪರಾಧಿಗಳಿಗೆ ಯಾತನೆ ಕೊಡಬಾರದು ಎಂದು ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಪೆಟ್ಟು ಬಿದ್ದಿದ್ದರೆ ಪಶ್ಚಾತ್ತಾಪ ಪಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಶ್ಚಾತ್ತಾಪಪಡುತ್ತೇನೆ. ತಾವು ಹೇಳುವುದನ್ನು ಗಮನದಲ್ಲಿಟ್ಟುಕೊಂಡು ನಿರಪರಾಧಿಗಳಿಗೆ ತೊಂದರೆಯಾಗಬಾರದು ಎನ್ನುವುದನ್ನು ಹೃತ್ಪೂರ್ವಕವಾಗಿ ಮನಸ್ಸಿನಲ್ಲಿಟ್ಟುಕೊಂಡು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ, ಮತ್ತು ವಿಚಾರ ಮಾಡಿ ಕೆಲಸ ಮಾಡುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ.—ಈಗ ಪೋಲೀಸ್ ಸ್ಟೇಷನ್‌ನಲ್ಲಿರತಕ್ಕವರನ್ನು ತಕ್ಷಣ ತಾವು ಬಿಡುಗಡೆ ಮಾಡಿದರೆ ಒಳ್ಳೆಯದು. ಅಪರಾಧಿಗಳು ಮತ್ತು ನಿರಪರಾಧಿಗಳ ಅಡ್ರಸ್ಸನ್ನು ತೆಗೆದುಕೊಳ್ಳಿ, ಅಪರಾಧಿಗಳೆಂದು ಕಂಡುಬಂದರೆ, ಅವರ ಮೇಲೆ ಕೇಸ್ ಬುಕ್ ಮಾಡಬಹುದು. ನಮ್ಮ ಮನೆಗೆ ಒಂದು ಫರ್ಲಾಂಗ್ ದೂರದಲ್ಲಿ ಈ ಘಟನೆ ನಡೆದಿದೆ, ನಾನು ಹೊರಗೆ ಬಂದಿದ್ದರೆ ನನ್ನನ್ನು ಹಿಡಿದುಕೊಂಡು ಹೋಗುತ್ತಿದ್ದರೋ ಏನೋ ? ಅಪರಾಧಿಗಳೆಂದು ಕಂಡುಬಂದಾಗ, ಅವರಿಗೆ ಕಠಿಣ ಶಿಕ್ಷೆ ಕೊಡಿ ಎಂದು ಹೇಳುವುದರಲ್ಲಿ ನಾನು ಹಿಂಜರಿಯುವುದಿಲ್ಲ. ದಯಮಾಡಿ ತಕ್ಷಣ ಅಲ್ಲಿರುವವರನ್ನು ರಿಲೀಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮಗೆ ವಾಸ್ತವವಾಗಿ ಏನು ಕಳಕಳಿ ಇದೆ, ಇದು ನಿಮ್ಮ ಮನಸ್ಸನ್ನು ಹೇಗೆ ಸೂರೆಗೊಂಡಿದೆ ಅದೇ ರೀತಿ ನಾವು ನಿರಪರಾಧಿಗಳಿಗೆ ತೊಂದರೆ ಕೊಡಬೇಕೆಂದು ಸ್ಪಷ್ಟವಾಗಿ, ಇಲ್ಲ. ಇದರಲ್ಲಿ ತೊಂದರೆ ಏನು ಎಂದರೆ, ಯಾರು ನಿರಪರಾಧಿಗಳು, ಯಾರು ಅಪರಾಧಿಗಳು, ಎನ್ನುವುದನ್ನು ಪತ್ತೆ ಹಚ್ಚುವುದಕ್ಕೆ ಸ್ವಲ್ಪ ಕಾಲ ತೆಗೆದುಕೊಳ್ಳುತ್ತದೆ. ಕನಿಷ್ಟ ಪ್ರಮಾಣದ ಕಾಲದಲ್ಲಿ ಅವರನ್ನು ಐಡೆಂಟಿಫೈ ಮಾಡಿ ನಿರಪರಾಧಿಗಳನ್ನು ಬಿಡುಗಡೆ ಮಾಡಬೇಕು ಎಂದು ತಮ್ಮ ಆಸೆ ಏನು ಇದೆ ಅದನ್ನು ಈಡೇರಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ನಾಳೆ ಭಾನುವಾರ ಇರುವುದರಿಂದ ಕೋರ್ಟಿನಲ್ಲಿ ಇವತ್ತೆ ತೀರ್ಮಾನವಾದರೆ ಒಳ್ಳೆಯದು, ಏಕೆಂದರೆ, ಇದರಲ್ಲಿ ಅನೇಕ ಕಾರ್ಖಾನೆಯ ಕೆಲಸಗಾರರು, ಇದ್ದಾರೆ. ಹೋಟೆಲ್ ಕೆಲಸಗಾರರು ಇದ್ದಾರೆ ಒಂದು ದಿವಸ ಅವರು ಕೆಲಸಕ್ಕೆ ಹೋಗದೇ ಹೋದರೆ, ಅವರು ತಮ್ಮ ಕೆಲಸವನ್ನೇ ಕಳೆದು ಕೊಳ್ಳುತ್ತಾರೆ.

Sri H. M. CHANNABASAPPA.—I cannot go into the details Mr. Speaker. It is very difficult for me to go into the details here. With this assurance that we will take action with the minimum time possible to locate who are mischievous, who have committed criminal act and who have not we will close the matter.

Best a Community Affairs at Kanakapura

ಶ್ರೀ ಎಚ್. ಡಿ. ದೇವೇಗೌಡ.—ಕನಕಪುರ ತಾಲ್ಲೂಕಿನಲ್ಲ, ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ತಮ್ಮ ಅನುಮತಿಯನ್ನು ಕೇಳಿದ್ದೇನೆ. ಈಗ ಈ ವಿಷಯವನ್ನು ಪ್ರಸ್ತಾಪಮಾಡ ಬೇಕಾದ ಹವಣಿಕೆ ಏನೂ ಇಲ್ಲ. ಅಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಕಾಲದಲ್ಲಿ, ಸರ್ಕಾರ ಇವರ ಬಗ್ಗೆ ಜಾಗ್ರತಾಕ್ರಮ ಏನು ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕು.

Mr. DEPUTY SPEAKER.—We have received it. We will put it on the agenda as early as possible.

ಶ್ರೀ ಎಚ್. ಡಿ. ದೇವೇಗೌಡ.—ಬೆಸ್ತರ ಕುಟುಂಬವನ್ನು ಓಡಿಸಬೇಕು ಎಂದು ಪ್ರಯತ್ನ ನಡೆಯುತ್ತಿದೆ.

11-00 A. M.

Mr. DEPUTY SPEAKER.—It will be included in the agenda as early as possible.

ಶ್ರೀ ಎಚ್. ಡಿ. ದೇವೇಗೌಡ.—ಸೋಮವಾರ ತೆಗೆದು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು.

Mr. DEPUTY SPEAKER.—If possible on Monday or at least on the subsequent day.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿಗೆ 9 ದಿವಸವಾಯಿತು. ಬೆಸ್ತರ ಕಮ್ಯೂನಿಟಿ ಹೊಡೆದು ಓಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿಗೆ ಎಸ್. ಪಿ. ಹೋಗಿ ನೋಡಿದ್ದಾರೆ. ಅಲ್ಪಸಂಖ್ಯಾತರ ಹೆಸರಿನಲ್ಲಿ ರಾಜ್ಯ ಆಳುವುದಕ್ಕೆ ಹೊರಟಿರುವುದರಿಂದ ತಾವು ಯಾರ ಪರವಾಗಿ ರಾಜ್ಯ ಆಳುತಿದ್ದೀರಿ I do not want to make any further comments. Unless the Government is prepared to answer, I do not want to take up this matter. I want to know when this matter should be raised.

Mr. DEPUTY SPEAKER.—This will be taken up as early as possible.

Question of Privilege against the Minister for Municipal Administration

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಹಕ್ಕುಬಾಧ್ಯತೆ ನಿಯಮಾವಳಿ ಪ್ರಕಾರ ಪೌರಾಡಳಿತ ಸಚಿವರ ಬಗ್ಗೆ ಅರ್ಧಗಂಟೆ ಚರ್ಚಿಸುವುದಕ್ಕೆ ಸೂಚನೆಯನ್ನು ಕೊಟ್ಟಿದ್ದೇನೆ ಅದಕ್ಕೆ ಅವಕಾಶ ಮಾಡಿಕೊಡಬೇಕು, ಕಾನೂನು ವಿರುದ್ಧ,ಈ ಸದನಕ್ಕೆ ಅಗೌರವ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಅದಕೋಸ್ಕರ ಈ ಸಭೆಯ ಮತ್ತು ತಮ್ಮ ಅವಗಾಹನೆಗೆ ಈ ವಿಷಯವನ್ನು ತಂದಿದ್ದೇನೆ. ಮಾನ್ಯ ಸಚಿವರ ಬಗ್ಗೆ ಏನು ಪ್ರಿವಿಲೇಜ್ ಮೋಷನ್ ಕೊಟ್ಟಿದ್ದೇನೆ ಅದಕ್ಕೆ ರೂಲ್ 177ರ ಕೆಳಗೆ ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

Mr. DEPUTY SPEAKER.—In that connection the Hon. Minister will have to be given a chance of being heard.

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ನಿನ್ನೆ ದಿವಸ ಎರಡೂವರೆಕ್ಕಾಲು ಗಂಟೆಗೆ ಒಂದು ಕಾರ್ಯಾರ್ಥವಾಗಿ ಹೊರಟೆ. ಅರ್ಧ ಗಂಟೆ ಚರ್ಚೆ

ಏನು ಇತ್ತು, ಅದಕ್ಕೆ ಸರಿಯಾದ ಕಾಲಕ್ಕೆ ಬರಬೇಕು ಎಂದು ಸರ್ವ ಪ್ರಯತ್ನ ಮಾಡಿದೆ. ಆದರೆ ಏನು ಪ್ರಯತ್ನ ಮಾಡಿದರೂ ಬರಲಿಕ್ಕೆ ಆಗಲಿಲ್ಲ. ಅದು ಉದ್ದೇಶಪೂರ್ವಕವಾಗಿ ಮಾಡಿರತಕ್ಕದ್ದು ಏನೂ ಅಲ್ಲ. ಮಾನ್ಯ ಸಭೆಗೆ ಅಗೌರವ ಮಾಡಬೇಕು ಎನ್ನುವ ಉದ್ದಿಶ್ಯವಿಲ್ಲ. ವರ್ತಮಾನವನ್ನು ಇಲ್ಲಿಗೆ ಕಳುಹಿಸಿದೆ. ಮಾನ್ಯ ಸದಸ್ಯರು ನಾನು ಸಭೆಯಲ್ಲಿ ಇಲ್ಲದೆ ಇರುವುದನ್ನು ಸ್ವಲ್ಪ ಜಾಸ್ತಿ ತಲೆಗೆ ಹಚ್ಚಿಕೊಂಡಿದ್ದಾರೆ ; ನನಗೆ ಅಂಥ ಉದ್ದಿಶ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಲೆಗೆ ಅಲ್ಲ, ಮನಸ್ಸಿಗೆ ಬಹಳ ಹಚ್ಚಿಕೊಳ್ಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—I will explain the position. ಲೀಡರ್ ಮೇಲೆ ವ್ಯಾಖ್ಯಾನ ಮಾಡಿದರೆ ಹೇಗೆ. ನಾನು ಸಭೆಗೆ ಹೇಳುತ್ತೇನೆ. ಏನಾದರೂ ನಾನು ಬರದೆ ಇದ್ದುದಕ್ಕಾಗಿ ಮಾನ್ಯ ಸದಸ್ಯರಿಗೆ ಬೇಸರ ಆಗಿದ್ದರೆ ದಯಮಾಡಿ ಮನ್ನಿಸಬೇಕು ಎಂದು ಹೇಳುತ್ತೇನೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಂದರ್ಭವಲ್ಲ ರೂಲ್ 177 ಪ್ರಕಾರ ಚರ್ಚೆಗೆ ಅವಕಾಶ ಕೊಡುವುದು ಬಿಡುವುದು ಮಾನ್ಯ ಅಧ್ಯಕ್ಷರಿಗೆ ಸೇರಿರತಕ್ಕ ವಿಷಯ. ಅವರಿಗೆ ಬಿಡುತ್ತೇನೆ. ನಿನ್ನೆ ಕಳುಹಿಸಿರತಕ್ಕ ಪತ್ರದಲ್ಲಿ ಅಧ್ಯಕ್ಷರೇ, ತಾವೇ ಓದಿದ್ದೀರಿ, ಅರ್ಜೆಂಟ್ ಕೆಲಸ ಇತ್ತು ಹೋಗಿದ್ದೇನೆ ಎನ್ನುವ ವಿಷಯ ಮನಸ್ಸಿಗೆ ಬಹಳ ಬೇಸರ ತರುವಹಾಗೆ ಹೇಳಿದ್ದಾರೆ.

Mr. DEPUTY SPEAKER.— Mr. Bangarappa, in good grace and understanding with a goodwill, the Hon· Minister for Municipal Administration has unequivocally and very candidly apologised and expressed his regret. Why don't you have the same grace and let us close the chapter ?

ಶ್ರೀ ಎಸ್. ಬಂಗಾರಪ್ಪ.—ನಿನ್ನೆ ಕಳುಹಿಸಿರುವ ಪತ್ರದಲ್ಲಿ...

Mr. DEPUTY SPEAKER.—that development is over. Let us have a sense of proportion and good restraint. this matter was discussed at considerable length with a good deal of emotion and a good deal of heat yesterday. We understood what it was yesterday. We understood each other's mind. I was very lenient to listen to all the hon. Members. I said no work is more important than the work in this House. The Minister has now given his statement. I wanted to know if he has understood the magnitude of what had happened yesterday. He has gone through the record. He said in perfect understanding he has expressed regret and expressed apologies. Why not let that matter rest at that ? If you are allowed to again rake it up, it will give handle to some other Member. It will generate heat when no heat is necessary. Let us show a little sense of proportion. We have discussed the matter a good deal. I am not allowing it.

Sri S. BANGARAPPA.—I am making a sincere request to the Hon'ble Chair to bear with me for a minute. ಹೊರಗಡೆ ಹೋಗಿದ್ದಾರೆ ತೊಂದರೆಯಾಗಿದೆ ಎನ್ನತಕ್ಕ ಮಾತು ಅವರ ಕಡೆ ಆಫೀಸರಿಂದ ಸೆಕ್ರೆಟರಿಯವರಿಂದ ಬಂದಿದ್ದರೆ ಒಪ್ಪುತ್ತೇನೆ. ಮಾನ್ಯ ಪೌರಾಡಳಿತ ಸಚಿವರು ನಿನ್ನೆ ಪತ್ರದಲ್ಲಿ ಕಳುಹಿಸಿರುವ ವಿಷಯ ಅರ್ಜೆಂಟ್ ಕೆಲಸ ಇರುವುದರಿಂದ ಬರುವುದಕ್ಕೆ ತೊಂದರೆಯಾಗಿದೆ ಎಂದು ಹೇಳಿದ್ದು, ತಾವು ಕೂಡ ಆ ಪತ್ರವನ್ನು ಓದಿದ್ದು ಆಗಿದೆ.

Mr. DEPUTY SPEAKER.—ನಾನು ಪತ್ರ ಓದಿಲ್ಲ. I know exactly what I read in the newspapers. I said that the Minister had intimated that he was busy on account of urgent work and this will have to be taken up on some other day. Let us not dilate upon things which are all very

(MR. DEPUTY SPEAKER)

clear and waste the time of the House. It is no use raking up things which are settled in a spirit of understanding and goodwill.

ಶ್ರೀ ಎಸ್. ಬಂಗಾರಪ್ಪ.—ನಾನು ಒಂದೇ ಒಂದು ವಿಷಯ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಪೌರಾಡಳಿತ ಸಚಿವರು ಅಪಾಲಜಿ ಕೇಳಿಕೊಂಡಿದ್ದಾರೆ ಎಂದು ಹೇಳಿದ್ದೀರಿ ಹಾಗೆ ಹೇಳಲಿಲ್ಲ. ಸಭೆಗೆ ಬರದಿದ್ದಕ್ಕೆ ಕಾರಣ ಕೊಟ್ಟರೆ ವಿನಃ ಹಾಗೆ ಕೇಳಲಿಲ್ಲ. ಪೌರಾಡಳಿತ ಸಚಿವರು ಅನ್ ಕಂಡಿಷನಲ್ ಅಪಾಲಜಿ ಸಭೆಗೆ ಕೇಳಬೇಕು. ದಯಮಾಡಿ ಅವರು ಹೇಳಬೇಕು ಅನ್ ಕಂಡಿಷನಲ್ ಅಪಾಲಜಿ ಬೇಡುತ್ತೇನೆ ಎಂದು ದಯಮಾಡಿ ಅವರು ಹೇಳಿದರೆ ನಮಗೆ ಸಮಾಧಾನ ಆಗುತ್ತದೆ. ಒಬ್ಬರಿಗೋಸ್ಕರ ಇಡೀ ಸಭೆಯನ್ನು ನಿಲ್ಲಿಸತಕ್ಕ ಪದ್ಧತಿ ಒಳ್ಳೆಯದಲ್ಲ.

SRI H. M. CHANNABASAPPA.—Mr. Speaker, Sir, I am so sorry that even after the expression of regret by the Hon. Minister for Municipal Administration, for having been disabled from attending the House in time this matter is being pursued. I hope the House will agree and the leader of the Opposition and all the Members of the Opposition will also agree with me if I say: Let us close it with grace.

MR. DEPUTY SPEAKER.—Hon. Member Bangarappa is a very very resourceful person. But he does not understand things.

Threat in the Name of Black December

ಶ್ರೀ ಎಚ್. ಡಿ. ದೇವೇಗೌಡ.—ಒಂದು ವಿಷಯ ತಮ್ಮ ಗಮನಕ್ಕೆ ತರಬೇಕಾಗಿದೆ. ಇದರ ಬಗ್ಗೆ ಅವರು ಏನೇನೋ ಕಷ್ಟ ಇದೆ ಎಂದು ಹೇಳಿದ್ದಾರೆ. ಈ ಒಂದು ತೊಂದರೆ ನನಗೂ ಕೂಡ ಆಗಬಹುದು. ಈ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಅದು ಏನೆಂದರೆ ಬ್ಲಾಕ್ ಡಿಶೆಂಬರ್ ಹೆಸರಿನಲ್ಲಿ ನನಗೂ ಕೂಡ ಥ್ರೇಟ್ ಮಾಡಿಬಿಟ್ಟಿದ್ದಾರೆ. ಈ ವಿಷಯವನ್ನು ನಾನು ಎತ್ತಿ ಹೇಳದೇ ಹೋದರೆ ನನಗೆ ಪೋಲೀಸ್ ರಕ್ಷಣೆ ಕೊಡುವುದಿಲ್ಲ. ಮುಖ್ಯಮಂತ್ರಿಗಳವರ ಹೆಸರು, ಶ್ರೀ ಬಸವಲಿಂಗಪ್ಪನವರ ಹೆಸರು. ಶ್ರೀ ಮುಗ್ಧಂ ಅವರ ಹೆಸರು ಇವರುಗಳಿಗೆ ಪ್ರಾಣಾಪಾಯಕ್ಕೆ ಅಪಘಾತವಾಗುವ ರೀತಿಯಲ್ಲಿ ಬರೆದಿದ್ದಾರೆ. ಅವರುಗಳಿಂದ ಇನ್ನೂ ಉಪಕಾರವಾಗಬೇಕಾಗಿದೆ. ಇದನ್ನು ನಾನು ಹೇಳದೆ ಹೋದರೆ ನನಗೆ ರಕ್ಷಣೆ ಇಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈವೊತ್ತಿನ ದಿವಸ ಶ್ರೀಮಾನ್ ದೇವರಾಜ್ ಅರಸ್ ಅವರಿಗೆ, ಶ್ರೀಮಾನ್ ಬಸವಲಿಂಗಪ್ಪ ಅವರಿಗೆ, ಶ್ರೀಮಾನ್ ಮುಗ್ಧಂ ಅವರಿಗೆ ಮತ್ತು ನನ್ನ ಪ್ರಾಣಕ್ಕೂ ಅಪಾಯ ಎಂದು ಹೇಳಿದ್ದಾರೆ. ಮತ್ತು ಅದರಲ್ಲಿ ಅವರುಗಳ ಸ್ಟೇನೋಸ್ ಮತ್ತು ಪ್ರೈವೇಟ್ ಸೆಕ್ರೆಟರಿಗಳ ಹೆಸರೂ ಸಹ ಇವೆ. ಅವರ ಮನೆ ಹತ್ತಿರ ಯಾರ ಕಾವಲೂ ಇಲ್ಲ, ಆದುದರಿಂದ ಅವರಿಗೂ ಕೂಡ ತೊಂದರೆ ಆದೀತು, ಅವರನ್ನೂ ನೋಡಿಕೊಳ್ಳಿ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

Business of the House

MR. DEPUTY SPEAKER.—Let us go to the Agenda now. We had to take the Mysore Sales Tax (Amendment) Bill, 1973. But, unfortunately the hon. Finance Minister is seriously ill. He has developed high temperature. He has suggested it may be taken up on Monday or Tuesday by which time he hopes to recover. He is sorry for the inconvenience caused to the House.

Now let us take up The Mysore Re-enacting (No. 2) Bill, 1973.

MYSORE RE-ENACTING (No. 2) Bill, 1973.

Motion to Consider

Sri AZEEZ SAIT.— (Minister for Labour).—Sir, I beg to move:

"That the Mysore Re-enacting (No. 2) Bill, 1973, be taken into consideration."

Mr, DEPUTY SPEAKER.—Motion Moved :

"That the Mysore Re-enacting (No. 2) Bill, 1973, be taken into consideration."

† **Sri AZEEZ SAIT.**—Sir, the hon. members are aware that taxation at 10 per cent of the fare payable under the Mysore Motor Vehicles (Taxation on Passengers and Goods) Act, 1961, for passengers has been enhanced to 15 per cent for raising additional resources for financing the Bangla Desh refugees. Under the President's Act 15 of 1971, it is proposed to continue this levy until, 31st March 1974 for financing the Bangla Desh Refugees. The salient features of this Bill has been given by the Hon'ble Finance Minister in his Budget Speech made on 7th March 1973. It is expected by the Finance Minister that this levy will fetch an additional revenue of about Rs. 53 lakhs during the year ending 31st March 1974. The previous sanction of the President for the Re-enacting (No. 2) Bill, 1973, has been obtained before introducing this Bill. Though the main object of imposing it on passengers and goods transport to provide relief to Bangla Desh Refugees ceased to operate, the levy is being continued to serve an equally important object. It is the intention of the Government to use the additional levy from this levy exclusively for the Rural Housing Programme.

So, I request the hon. memders to support this Mysore Re-enacting (No. 2) Bill, 1973.

† **ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).**—ಸನ್ಮಾನ್ಯ ಸಭಾಧ್ಯಕ್ಷರೇ, ಮತ್ತೆ ಪುನಃ ಮಾನ್ಯ ಸಾರಿಗೆ ಸಚಿವರು ಇನ್ನೊಂದು ಈ ಬಿಲ್ಲನ್ನು ಈ ದಿನ ಸಭೆಯ ಮುಂದೆ ತೆಗೆದುಕೊಂಡು ಬಂದಿದ್ದಾರೆ. ಮಸೂದೆಯನ್ನೂ ಸಹ ಹಿಂದೆ ಮಾನ್ಯ ಕಂದಾಯ ಸಚಿವರು ಮತ್ತು ಮಾನ್ಯ ಆರ್ಥಿಕ ಸಚಿವರು ತೆಗೆದುಕೊಂಡು ಬಂದಿದ್ದಾರೆ. ಅವರು ಬಾಂಗ್ಲಾ ದೇಶದ ಲೆವಿ ಅಂತ ಏನು ಇತ್ತೊ ಅದನ್ನು ತೆಗೆದು ಹಾಕಿ ಜನತಾ ಗೃಹ ನಿರ್ಮಾಣ ಕಾರ್ಯಕ್ಕೆ ಅದನ್ನು ಉಪಯೋಗಿಸುತ್ತೇವೆ ಅಂತ ಬಿಲ್ಲನ್ನು ತೆಗೆದುಕೊಂಡು ಬಂದು ಅದು ಪಾಸ್ ಆಗಿದೆ. ಅದೇ ರೀತಿಯಾಗಿ ಈ ದಿನ ಸಾರಿಗೆ ಸಚಿವರು ತೆಗೆದುಕೊಂಡು ಬಂದಿದ್ದಾರೆ. ಮಾನ್ಯ ಮಂತ್ರಿಗಳು ಇದರಿಂದ 53 ಲಕ್ಷ ಮಾತ್ರ ಬರುತ್ತದೆ, ಏತಕ್ಕೆ ಇದನ್ನು ವಿರೋಧ ಮಾಡುತ್ತೀರಿ, ಇದರಿಂದ ಎಷ್ಟು ಬರುತ್ತದೋ ಬರಲಿ, ಆದರಿಂದ ಜನತಾ ಗೃಹ ನಿರ್ಮಾಣ ಕಾರ್ಯಕ್ಕೆ ಅವರ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು. ಈ ಬಗ್ಗೆ ನಾನಾದರೂ ಕೂಡ ಹೇಳುವುದು ಇಷ್ಟೆ. ನಾನು ಬಡವರ ಗೃಹ ನಿರ್ಮಾಣ ಕಾರ್ಯಕ್ಕೆ ವಿರುದ್ಧವಾಗಿಲ್ಲ, ಆ ಕೆಲಸ ಆಗಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ಗೃಹ ನಿರ್ಮಾಣ ಕಾರ್ಯಕ್ಕೆ ಯಾರಿಂದ ಯಾವರೀತಿಯಾಗಿ ವಸೂಲ್ಮಾಡುತ್ತಿದ್ದಾರೆ ಅದು ಮುಖ್ಯ, ಅದಕ್ಕೆ ನನಗಾದರೂ ಏನು ಅನಿಸುತ್ತದೆ ಎಂದರೆ ಈ ಹಣವನ್ನು ಪಡೆಯುವುದಕ್ಕೆ ಅವರು ಒಂದು ಜೇಬಿಗೆ ಕೈ ಹಾಕಿದರೆ ತಾವು ಇನ್ನೊಂದು ಜೇಬಿಗೆ ಕೈ ಹಾಕಿ ಪಡೆಯುತ್ತೀರಿ. ಅಂದರೆ ಲಾರಿ, ಬಸ್ಸುಗಳು, ಕಾಂಟ್ರಾಕ್ಟ್ ಕ್ಯಾರಿಯೇಜಸ್ ಇಂಥಾವುಗಳ ಮೇಲೆಹಾಕಿದ್ದೀರಿ. ಇದರಿಂದ ನನಗಾದರೂ ಕೂಡ ಏನು ಅನಿಸುತ್ತದೆ ಎಂದರೆ ಇದಕ್ಕೆ ಒಂದು ಜನರಲ್ ಪ್ರಿನ್ಸಿಪಲ್ ಬೇಕು. ಅದಕ್ಕೆ ತದ್ವಿರುದ್ಧವಾಗಿದೆ. ಏತಕ್ಕೆಂದರೆ ಬಾಂಗ್ಲಾ ದೇಶದ ಲೆವಿ

(ಶ್ರೀ ಎಂ. ಎಸ್. ಕೃಷ್ಣನ್)

ಎಷ್ಟು ದಿವಸ ಇರಬೇಕೋ ಅಷ್ಟು ದಿವಸ ಮಾತ್ರ ಇರುತ್ತದೆ ಅಮೇಲೆ ಅದನ್ನು ಕಿತ್ತು ಹಾಕುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಆ ಆಶ್ವಾಸನೆಗೆ ತದ್ವಿರುದ್ಧವಾಗಿ ಸರ್ಕಾರ ನಡೆದುಕೊಳ್ಳುತ್ತಿದೆ. ಆಶ್ವಾಸನೆಗಳು ಬರೀ ಆಶ್ವಾಸನೆಗಳು ಆಗುತ್ತಿದೆಯೋ ಹೊರತು ಅದನ್ನು ಸರಿಯಾಗಿ ಪರಿಪಾಲಿಸುತ್ತಿದ್ದಾರೆಯೋ ಹೇಳಲಿ. ಅದನ್ನು ಪರಿಪಾಲಿಸಿಕೊಂಡು ಬಂದರೆ ಮರ್ಯಾದೆ ಕೊಡೋಣ. ಅವರು ಕೊಟ್ಟಂಥ ಆಶ್ವಾಸನೆಯನ್ನು ಪರಿಪಾಲಿಸುವುದಕ್ಕೆ ತಯಾರಾಗಿಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತೇನೆ. ಅದು 30 ಲಕ್ಷವೇ ಆಗಿರಲಿ, ಹತ್ತು ಲಕ್ಷವೇ ಆಗಿರಲಿ, 15ಲಕ್ಷವೇ ಆಗಿರಲಿ, ಇದು ತತ್ವದ ಪ್ರಶ್ನೆ ; ಆದುದರಿಂದ ಇದನ್ನು ವಿರೋಧ ಮಾಡುತ್ತೇನೆ.

ಇನ್ನು ಎರಡನೆಯದು ತತ್ವದ ಪ್ರಶ್ನೆ ಏನೆಂದರೆ ಅದರಲ್ಲೂ ಮಾನ್ಯ ಅಜೀಜ್ ಸೇಟ್‌ರವರಿಗೆ ಹೇಳಬೇಕಾಗುತ್ತದೆ. ಅವರು ಇದರಿಂದ ಬರತಕ್ಕಂಥ ಹಣವನ್ನು ಸಾರಿಗೆ ಅಭಿವೃಧ್ಧಿಗೆ ಉಪಯೋಗಿಸುತ್ತೇವೆ ಎಂದು ಹೇಳುತ್ತಾರೆ. ಇದರಲ್ಲಿ ಮೂಲಭೂತವಾದ ತತ್ವ ಅಡಕವಾಗಿದೆ ಎಂದು ಹೇಳುತ್ತೇನೆ. ಹೇಗೆಂದರೆ ಬಸ್ಸಿನ ಮೇಲೆ ಲೆವಿ ಹಾಕಿದರೆ ಅವರು ಪ್ಯಾಸೆಂಜರ್ಸ್ ಮೇಲೆ ಹಾಕಿ ವಸೂಲ್ಮಾಡುತ್ತಾರೆ. ಅದು ಸಾಮಾನ್ಯ ಜನರ ಮೇಲೇನೇ ಆ ಹೊರೆ ಬೀಳುತ್ತದೆ. ಲಾರಿಗಳ ಮೇಲೆ ಲೆವಿ ಹಾಕಿದರೆ ಯಾರು ಗೂಡ್ಸ್ ಕಳುಹಿಸುತ್ತಾರೋ ಆ ವರ್ತಕರ ಮೇಲೆ ಬೀಳುತ್ತದೆ ಎಂದು ಹೇಳಬಹುದು. ಆದರೆ ಅವನ್ನು ವರ್ತಕರು ಕೊಡುವುದಿಲ್ಲ. ಆ ವರ್ತಕರು ಗೂಡ್ಸ್ ಕಳುಹಿಸಿದ ಕಾಸ್ಟ್, ಅವರ ಲಾಭ ಎಲ್ಲವನ್ನೂ ಸೇರಿ ಮತ್ತೂ ಜಾಸ್ತಿಯಾಗಿ ಜನರಿಂದ ತೆಗೆದುಕೊಳ್ಳುತ್ತಾರೆ. ಇದರಿಂದ ಈ ಲೆವಿಯೂ ಕೂಡ ಸಾಮಾನ್ಯ ಜನರ ಮೇಲೆ ಬೀಳುತ್ತದೆಯೋ ವಿನಃ ಅವರ ಮೇಲೆ ಬೀಳುವುದಿಲ್ಲ. ಅದೂ ಅಲ್ಲದೆ ಅವರು ಬ್ಲಾಕ್ ಮಾರ್ಕೆಟ್‌ನಲ್ಲಿ ವ್ಯಾಪಾರ ಮಾಡಿ ಇನ್ನೂ ಹೆಚ್ಚಿನ ಹಣ ಸಂಪಾದನೆ ಮಾಡುತ್ತಾರೆ. ಒಟ್ಟಿನಲ್ಲಿ ಈ ಕರಭಾರಗಳು ಜನತೆಯ ಮೇಲೆ ಬೀಳುತ್ತದೆಯೋ ವಿನಾ ಯಾರ ಮೇಲೂ ಬೀಳುವುದಿಲ್ಲ. ಯಾರಿಗೆ ಕೊಡುವುದಕ್ಕೆ ಶಕ್ತಿ ಇದೆಯೋ ಅವರ ಮೇಲೆ ಬೀಳುತ್ತದೆ, ಸಾಮಾನ್ಯ ಜನರ ಮೇಲೆ ಬೀಳುವುದಿಲ್ಲ ಅಂತ ಹೇಳಿ ಇಂತಹ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೇವೆ ಎಂದು ಹೇಳುತ್ತಾರೆ, ತಾವು ಸೋಷಿಯಾಲಿಷಮ್ ತತ್ವ ಹೇಳುತ್ತಿದ್ದೀರಿ. ಆ ಸೋಷಿಯಾಲಿಸಮ್ ತತ್ವ ಏನು ಇದೆ ಎಂದು ತಮಗೂ ಗೊತ್ತಿದೆ. ಪ್ರತಿಯೊಬ್ಬ ಮನುಷ್ಯನಿಗೂ ಆಹಾರ ಇರಬೇಕು, ವಸತಿ ಸೌಕರ್ಯ ಇರಬೇಕು, ಸಂಚಾರ ಸೌಲಭ್ಯ ಕಡಿಮೆ ದರದರಲ್ಲಿ ಇರಬೇಕು ಅಂತ ಇದೆ.

ಶ್ರೀ ಅಜೀಜ್ ಸೇಟ್.—ಅದು ಬಹಳ ಕಡಿಮೆ ದರದಲ್ಲಿಯೇ ಇದೆ.

ಶ್ರೀ ಎಂ. ಎಸ್. ಕೃಷ್ಣನ್.- ಬಹಳ ಕಡಿಮೆ ದರದಲ್ಲಿಯೇ ಟ್ರಾನ್ಸ್‌ಪೋರ್ಟ್ ಇರಬೇಕು ಎನ್ನುವುದು ಸಮಾಜವಾದದ ಮೊದನೇ ಪ್ರಶ್ನೆ ಎಂದು ತಿಳಿದುಕೊಂಡಿದ್ದಾರೆ. ಸಾಮಾಜವಾದಿ ರಾಷ್ಟ್ರಗಳಿಗೆ ಮಾನ್ಯ ಅಜೀಜ್ ಸೇಟ್ ಅವರು ಹೋಗಿಲ್ಲವೆಂದು ಕಾಣುತ್ತದೆ. ಮಾಸ್ಕೋ ಮತ್ತು ಇತರ ರಾಷ್ಟ್ರಗಳಿಗೆ ಹೋಗಿ ನೋಡಿಕೊಂಡು ಬರಬೇಕು. ಅಲ್ಲಿ ಏನಿದೆ ಎಂದರೆ, ನಾನು ನೋಡಿದ್ದರಲ್ಲಿ ಬಸವನಗುಡಿಯಿಂದ ಯಶವಂತಪುರದಷ್ಟು ದೂರ ಹೋದರೂ ಮೂರು ಪೈಸೆ ಕೊಡಬೇಕು, ನಗರವನ್ನು ಸುತ್ತುವುದಕ್ಕೆ ಐದು ಪೈಸೆ ಕೊಟ್ಟರೆ ಸಾಕು, ಸುತ್ತುತ್ತ ಇರಬಹುದು, ಹಾಗೆ ಇದೆ. ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ಹೋದರೆ ಕೊಡಬೇಕಾದ್ದು ಮೂರು ಪೈಸೆ. ಸೋವಿಯಟ್ ರಷ್ಯ ಮತ್ತು ಇತರ ಸಮಾಜವಾದಿ ರಾಷ್ಟ್ರಗಳಿಗೆ ಮಾನ್ಯ ಮಂತ್ರಿಗಳು ಹೋಗಿ ತಿಳಿದುಕೊಂಡು ? ಂದ ಮೇಲಾದರೂ ಚೀಪಾಗಿ ಮಾಡುತ್ತಾರೆಂದು ನನ್ನ ಆಶಯ.

ತೆರಿಗೆ ಮೇಲೆ ತೆರಿಗೆ ಹಾಕಿ, ದರಗಳನ್ನು ಏರಿಸುವ ಪ್ರವೃತ್ತಿ ನಮ್ಮಲ್ಲಿ ಕಂಡು ಬರುತ್ತಿದೆ. ದರವನ್ನು ಏರಿಸುವುದೇ ಒಂದು ಕೆಲಸ. ಇದು ಸರಿಯಾದುದಲ್ಲ. ಸಮಾಜವಾದದ ತತ್ವಕ್ಕೆ ಇದು ವಿರೋಧ, ಅದಕ್ಕೆ ತಿಲಾಂಜಲಿ ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ನಾವು ಈ ಮಸೂದೆಯನ್ನು ವಿರೋಧ ಮಾಡಬೇಕಾಗಿದೆ. 53 ಲಕ್ಷ ರೂಪಾಯಿ ಜನಗಳಿಗೆ ಬಿಟ್ಟು ಕೊಟ್ಟರೆ ಜನಗಳಿಗೆ ಹೆಚ್ಚು ಪರಿಹಾರ ದೊರೆಯುತ್ತದೆ ಎನ್ನುವುದನ್ನು ಒಪ್ಪಿಕೊಳ್ಳದೆ ಹೋದರೂ ಸಹ ಸ್ವಲ್ಪವಾದರೂ ಪರಿಹಾರ ಸಿಕ್ಕಲಿ ಎನ್ನುವ ಕಾರಣದಿಂದ ವಿರೋಧ ಮಾಡುತ್ತೇನೆ.

ಜನತೆಯ ಹೌಸಿಂಗ್ ಪ್ರೋಗ್ರಾಂಗೆ ಇದರಿಂದ ಏಕೆ 53 ಲಕ್ಷ ರೂಪಾಯಿ ಪಡೆಯಬೇಕು? ಗೃಹ ನಿರ್ಮಾಣ ಕಾರ್ಯ ಮುಖ್ಯವೆಂದು ಹೇಳಿದರೂ ಇನ್ನೊಂದು ವಿಭಾಗದ ಜನಗಳ ಮೇಲೆ ತೆರಿಗೆ ಹಾಕುವುದು ನ್ಯಾಯವೋ ? ಅದನ್ನು ಬೇರೆ ರೀತಿಯಿಂದ ಪಡೆಯುವುದಕ್ಕೆ ಸಾಧ್ಯವಿಲ್ಲವೋ ಎಂದು

ನಾನು ಕೇಳುತ್ತೇನೆ. ಬೇರೆ ಕಡೆಯಿಂದ ಪಡೆಯುವುದಕ್ಕೆ ಸಾಧ್ಯವಿಲ್ಲವೆಂದರೆ ಇದನ್ನು ಮಾಡಬಹುದು. ಈ ಹೊತ್ತಿನ ದಿವಸ ಸರ್ಕಾರ ತನ್ನ ಸಂಪನ್ಮೂಲಗಳನ್ನು ಬೇರೆ ರೀತಿಯಾಗಿ ಜಾಸ್ತಿ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಕಾಂಟ್ರಾಕ್ಟ್ ಕ್ಯಾರೇಜಸ್ ಏನಿವೆ ಅವುಗಳನ್ನೆಲ್ಲ ಸರ್ಕಾರ ವಶಪಡಿಸಿಕೊಂಡರೆ, ಕವಾಂಡೀರ್ ಮಾಡಿದರೆ ಅದರಿಂದ ಬರುವ ರಿಸೋರ್ಸಸ್‌ನಲ್ಲಿ, ಬೇಕಾದರೆ ಸರ್ಕಾರದವರು ಜನತೆಯ ಗೃಹ ನಿರ್ಮಾಣ ಯೋಜನೆಗೆ ಅವಕಾಶ ಮಾಡಬಹುದು. ರಂಧ್ರಗಳಲ್ಲಿ ಹೋಗುವುದನ್ನು ತಡೆಗಟ್ಟಬೇಕು. ಆ ದೃಷ್ಟಿಯಿಂದ ಹೋಗುವುದು ಬಿಟ್ಟು ಬೇರೆ ದೃಷ್ಟಿಯಿಂದ ಹೋದರೆ ಸರಿಯಾದುದಲ್ಲವೆಂದು ಮಾತ್ರ ನಾನು ಹೇಳಬೇಕಾಗಿದೆ. ಆದ್ದರಿಂದ ಕಾಂಟ್ರಾಕ್ಟ್ ಕ್ಯಾರೇಜಸ್ ಕವಾಂಡೀರ್ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳಬೇಕಾಗಿದೆ.

ಷೆಡ್ಯೂಲಿನಲ್ಲಿ ದರಗಳನ್ನು ಸ್ವಲ್ಪ ಪ್ರಮಾಣದಲ್ಲಿ ಹೆಚ್ಚು ಮಾಡಿದ್ದಾರೆ. ಇದೆಲ್ಲ ಜನಸಾಮಾನ್ಯರ ಮೇಲೆ ಬೀಳುವ ತೆರಿಗೆ. ಸಾಹುಕಾರರ ಮೇಲೆ ಯಾವುದೂ ಬೀಳುವುದಿಲ್ಲ. ಆದ್ದರಿಂದ ತತ್ವಶಃ ನಾನು ಇದಕ್ಕೆ ವಿರೋಧವನ್ನು ವ್ಯಕ್ತಮಾಡುತ್ತೇನೆ.

†Sri T. R. SHAMANNA (Fort).—Sir. I rise to oppose this Bill, firstly on the ground that in principle such enactments should not be enacted. Specifically this levy was meant for meeting the heavy expenditure involved in maintaining the refugees and assisting Bangla Desh to get its freedom. The purpose for which that levy was imposed was continued beyond the period for which it was required. The Centre had promised that they would withdraw it and they kept up their promise and removed it. When the Central Government has removed it, there is no meaning whatsoever in the State Government sticking on to it and continuing it for an indefinite period. Further more, in a tax structure it mustbe specifically clear as to why a tax is levied and tagging on this levy to the housing programme and giving of houses to the poor is rather ununderstable. As I have already stated, the money required to build houses will be nearly about Rs. 20 crores. As against Rs. 20 crores, the additional resources that will be raised by this levy will amount to only about Rs. 2 crores; It will not touch the fringe of the problem; on the other hand, there will be lot of harassment. When a new levy is sought to be imposed, it should be seen whether the money that is proposed to be raised by that levy can be met out of normal resources. When all other methods of raising resources are exhausted, then after giving specific reasons a new levy may be proposed. Instead of doing that, Government has clearly tagged on this levy with the building of houses for the poor people. As I have already stated, Government has put us in a fix and it is sought to be made out as if we are opposing a progressive measure of the Government which seeks to provide houses to the poor. But I may make it quite clear that none of us are opposed to the building of houses and giving financial assistance to the poor people to have small shelters. What we are opposed to is the method by which money is being sought to be raised As already stated by my friend Sri Krishnan, this levy will be collected mostly from the poor passengers. It does not apply to lorries only as stated by the Hon. Minister but applies to all contract carriages whether it carries passengers or goods. The prices of essential commodities are going up day by day and people are finding it extremely difficult to make a living now and the Government instead

(SRI T. R. SHAMANNA)

of taking steps to see that the prices are brought down, by one levy or the other they are seeing that the prices go up indefinitly higher and higher causing very serious handicap to the poor consumers.

Any levy on the transport will directly add to the cost of commodities and if price of commodities were to increase naturally poorer sections of the society will suffer. Therefore, the Government should find out ways and means by which other sources can be tapped so that poorer sections are not affected. So it is from this point of view that I oppose this Bill.

The tax on motor vehicles has increased year after year. The Government should see that several loopholes that are there are plugged. If that is done instead of getting this 50 lakhs the Department will easily get f ur times this figure. So, insteal of tightening up the collection machinery, if additional levies are imposed, naturally the transport people will find ways and means to escape the tax and indirectly the consumers will be put to hardship.

In these circumstances, I strongly oppose this additional tax and I request the Minister to see that this Bill is withdrawn and a comprehensive scheme is brought as to how best we can provide necessary funds to meet the housing scheme without unduly burdening the poor people.

† SRI B. B. SAYANAK (Belgaum).—I rise to oppose the Mysore Re-enacting (No. 2) Bill, 1973. When this tax was levied the purpose of the Government was to give some amount to Bangladesh refugees. But Bangladesh today is independent and they have fought their election and their Government is running on a smooth basis. Yet the Mysore Government is levying tax in the name of this Bangladesh tax and hopes to get Rs. 53 lakhs. They propose to collect this tax for taking up the scheme of peoples housing programme. I am sorry to say that if the Government wants to construct or start this housing programme, they can collect the amount by leying other taxes and not extending the present tax. According to me the truck owners are paying huge sums of money to the Government as tax. We all know that prices of spare parts are very high and there is rationing of motor tyres and motor tyres are not available in the shops. They should purchase tyres in the blackmarket and there is a tax on the diesel also. So very great hardship is felt by the truck owners. I therefore wish to state that this tax should not be levied on the motor owners. I oppose this measure.

† SRI AZEEZ SAIT.—I have very carefully heard the points raised by several hon. members. The main plea put forth by them was that this Bangladesh Tax should be abolished since the cause for which it was imposed is over. What we have proposed is to retain this tax for one year and utilise the same for construction of houses

for the poor people. It is not mere Rs. 53 lakhs that is coming out of this additional levy. By retaining this levy, the other departments like the Registration, Stamps, Sales Tax, expect to collect about Rs. 2½ Crores. I may assure the House that we have come forward only to fulfil the laudable object of providing houses to people who are houseless. This levy we propose to impose is not going to affect all people. Therefore I request the House to pass this Bill.

Mr. DEPUTY SPEAKER.—The question is:

"That the Mysore Re-enacting (No. 2) Bill, 1973, be taken into consideration."

(*The motion was adopted.*)

CLAUSE 2

Mr. DEPUTY SPEAKER. We will take up clause by clause. There is an amendment by the Minister. He may move it.

Sri AZEEZ SAIT.—I moved:

"That in clause 2, at the end the following shall be added, namely"

"with the modification that in section 1, thereof the words 'and commencement' in the heading and sub-section (2) shall be omitted."

Mr. DEPUTY SPEAKER.—Amendment moved:

"That in clause 2, at the end the following shall be added, namely."

"with the modification that in section 1, thereof the words 'and commencement' in the heading and sub-section (2) shall be omitted."

Sri AZEEZ SAIT.—I have nothing to add what I have already stated.

MR. DEPUTY SPEAKER.—The question is:

"That in clause 2, at the end the following shall be added, namely,

"with the modification that in section 1, thereof the words 'and commencement' in the heading and sub-section (2) shall be omitted."

The amendment was adopted.

Mr. DEPUTY SPEAKER.—I will now put clause 2 as amended to the vote of the House. The question is:

"That clause 2, as amended do stand part of the Bill."

the Motion was adopted

Clause 2, as amended, was added to the Bill.

Clause 3

Mr. DEPUTY SPEAKER.—Now I will put clause 3 to the vote of the House. The question is :

"That clause 3 do stand part of the Bill.

The Motion was adopted

Clause 3 was added to the Bill.

Clause 1 etc

Mr. DEPUTY SPEAKER.–There are amendments to clause 1 tabled by Hon. Minister and Sri T R Shamanna;

Sri AZEEZ SAIT.—Sir, I move :

"That in Clause 1, for sub-clause (2) the following sub-clauses shall be snbstituted, namely :

(2) It shall be deemed to have come into force on the 19th day of March 1973.'

Mr. DEPUTY SPEAKER.—Amendment moved :

"That in Clauses 1, for sub-clause (2) the following sub-clause shall be substituted, namely :

(2) It shall be deemed to have come into force on the 19th day of March 1973.

Sri T.R. SHAMANNA.—Sir, I move :

"That in sub-clause 3, at the end, the following shall be added :
'and there after shall not be further extended.'

Mr. DEPUTY SPEAKER.—Amendment moved :

"That in sub-clause 3, at the end, the followiug shall be added :
'and thereafter shall not be further extended."

† Sri AZEEZ SAIT.—Sir, it was not possible to get this Bill passed betore 20-3-1973 when the present Act expired. Hence I have moved this amendment.

† Sri T. R. SHAMANNA.—Sir, the Government while levying the Bangla Desh refugee levy had assured that it would not be in force for any period which is more than actually necessary. Further move, the Hon. Finance Minister categorically stated that this levy will be not continued beyond 31-3-1974. But I feel that this levy will be countinued in one form or the other. I wanted a categorical assurance from the Government that it will not be coutinued or extended further. Sir, instead of relying on oral assurances given by the Government I feel it better that it is added on the statute itself that it will not be there beyond 31-3-1974. Hence, I have moved this amendment.

Sri AZEEZ SAIT.—Sir, I don't see any reason to accept the amendment moved by my learned friend Sri Shamanna. I also cannot give

a categorical assurance that a Bill will not be brought again before the House after 31-3-1974. I am concerned only up to 31-3-1974. What is going to happen thereafter is beyond my scope. Therefore I do not accept the amendment.

MR. DEPUTY SPEAKER.—I will now put the amendment of the Hon. Minister to the Vote of the House. The question is

"That in Clause 1, for sub-clause (2) the following sub-clause shall be substituted, namely :

(2) It shall be deemed to have come into force on the 19th day of March 1973."

The amendment was adopted

MR. DEPUTY SPEAKER.—Now I will put the amendment moved by hon. Member Sri Shamanna. The question is :

"That in sub-clause 3, at the end, the following shall be added:
'and thereafter shall not be further extended.

The amendment was negatived

MR. DEPUTY SPEAKER.—Now I will put Clause 1, as amended. Title, Preamble and the Enacting Formula to the vote of the House, The question is:

"That Clause 1, as amended, the long title, the Preamble and the Enacting Formula do stand part of the Bill.

The motion was adopted

Clause 1, as amended, the long Title, the Preamble and the Enacting Formula were added to the Bill.

Motion to pass

SRI AZEEZ SAIT.—Sir, I move:

"That the Mysore Re-enacting (No. 2) Bill, 1973, as amended, be passed."

MR. DEPUTY SPEAKER.—The question is :

"That the Mysore Re-enacting (No. 2) Bill, 1973, as amended, be passed.

The motion was adopted and the Bill as amended was passed

MR DEPUTY SPEAKER.—The House now stands adjourned to meet again at 1-00 P.M. on Monday, the 26th March 1973.

The House adjourned at Forty Seven Minutes past Eleven of the Clock to meet again at One of the Clock on Monday, the 26th March 1973.

W. 20189—GPB—550—19-7-1974

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, the 26th March 1973/Chaitra 5, 1895 S.E.

The House met in the Assembly Chambers, Vidhana Soudha, at One of the Clock.

MR. DEPUTY SPEAKER (SRI B. P. KADAM) in the Chair.

STARRED QUESTIONS

(to which oral answers were given)

Permitting the Teachers to undertake Private Tuition

510. SRI S. M. SHEERANALY CHANDRASEKHAR (Hosanagar).—

Will the Minister for Education be pleased to state:—

(*a*) whether there are any rules in Education Department, permitting teachers in Government Schools and Lecturers in Goverment Colleges to undertake private tuitions;

(*b*) if so, whether Government intend to do away with the practice of permitting Government teachers in Schools and Lecturers in Colleges to take up private tuitions and instead increase their salaries?

SRI A. R. BADARINARAYANA (Minister for Education).—

(*a*) (1) Standing Instructions issued by the Department of Public Instruction regulate permitting teachers in Government Schools regarding undertaking of private tuition.

(2) There are no such rules in regard to Lecturers in Government Colleges permitting them to undertake private tuition.

(*b*) (1) No such proposals are at present under consideration so far as schools are concerned.

(2) Does not arise in respect of Lecturers in Government Colleges in view of reply to (*a*) above.

(3) The pay scales of Tcaehers in Government Schools and Lecturers in Government Colleges have been revised recently and the revised scales are much more liberal than the pre-revision scales.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ಉತ್ತರದಲ್ಲಿ ಕೊಟ್ಟಿದ್ದೀರಿ, (2). ಸರ್ಕಾರಿ ಕಾಲೇಜುಗಳಲ್ಲಿ ಉಪನ್ಯಾಸಕರು ಖಾಸಗಿಯಾಗಿ ಪಾಠ ಹೇಳಿಕೊಡುವುದನ್ನು ಕೈಗೊಳ್ಳುವ ಬಗ್ಗೆ ನಿಯಮಗಳು ಏನೂ ಇಲ್ಲ ಎಂದು ಹೇಳಿದ್ದೀರಿ. ಸರ್ಕಾರಿ ಕಾಲೇಜು ಉಪಾಧ್ಯಾಯರುಗಳು ಅನೇಕರು ಸರ್ಕಾರಿ ಕಾಲೇಜುಗಳಲ್ಲಿ ಪಾಠ ಹೇಳಿಕೊಡದೆ, ಅದರಲ್ಲಿ ಆಸಕ್ತಿ ವಹಿಸದೆ ಪ್ರೈವೇಟ್ ಟ್ಯೂಷನ್‌ಗಳನ್ನು ನಡೆಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಡವಿದ್ಯಾರ್ಥಿಗಳಿಗೆ ಇದರಿಂದ ಅನಾನುಕೂಲವಾಗಿದೆ. ಬಡ ವಿದ್ಯಾರ್ಥಿಗಳು ಪ್ರೈವೇಟ್ ಟ್ಯೂಷನ್ ಇಟ್ಟುಕೊಳ್ಳುವುದು ಕಷ್ಟ. ಅಂಥವರಿಗೆ ಕಾಲೇಜಿನಲ್ಲಿ ಪಾಠ ತಪ್ಪಿಹೋಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎ. ಆರ್. ಬದರಿನಾರಾಯಣ್.—ಗೌರ್ನಮೆಂಟ್ ಸ್ಕೂಲುಗಳಲ್ಲಿ ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್ಸ್ ಏನು ಪ್ರೈವೇಟ್ ಟ್ಯೂಷನ್ ಇಟ್ಟುಕೊಳ್ಳಬಹುದು ಎಂದು ಇದೆ. ಗೌರ್ನಮೆಂಟ್ ಕಾಲೇಜುಗಳಲ್ಲಿ ಲೆಕ್ಚರರ್ಸ್ ರೂಲ್ಸ್‌ಗೆ ವಿರೋಧವಾಗಿ, ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್ಸ್‌ಗೆ ವಿರೋಧವಾಗಿ ಯಾರಾದರೂ ಖಾಸಗಿ ಪಾಠ ಪ್ರವಚನಗಳನ್ನು ಮಾಡುತ್ತಾ ಇದ್ದಾರೆ ಎಂದು ತಿಳಿದುಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಪಾಠ ಹೇಳಿಕೊಡುವುದಕ್ಕೆ ಅನುಮತಿ ಕೊಡುತ್ತಾ ಇರುವುದರಿಂದ ಶಾಲಾ ಮತ್ತು ಕಾಲೇಜುಗಳಲ್ಲಿ ಶಿಕ್ಷಕ ವರ್ಗ ಹೆಚ್ಚು ಗಮನ ಕೊಡದೆ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಾ ಇಲ್ಲ ಮತ್ತು ಆಸಕ್ತಿ ವಹಿಸುವುದಿಲ್ಲ. ಈ ರೀತಿ ಪ್ರತ್ಯೇಕವಾಗಿ ಪಾಠ ಹೇಳಿಕೊಡುವುದನ್ನು ತೆಗೆದುಹಾಕಬೇಕು. ಅದಕ್ಕೆ ಕಾನೂನು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ್.—ಕಾಲೇಜುಗಳಲ್ಲಿ ಅನುಮತಿ ಕೊಡತಕ್ಕ ಪದ್ಧತಿ ಇಲ್ಲ. ಹೈಸ್ಕೂಲು ಮತ್ತು ಪ್ರೈಮರಿ ಸ್ಕೂಲುಗಳಲ್ಲಿ ಒಂದೆರಡು ಟ್ಯೂಷನ್ ಇಟ್ಟುಕೊಳ್ಳಬಹುದು ಎಂದು ಅನುಮತಿ ಕೊಟ್ಟಿದೆ. ಅದನ್ನು ತೆಗೆದುಬಿಡಬೇಕು ಎಂದು ಸಲಹೆ ಕೊಟ್ಟಿದ್ದೀರಿ; ಆ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಕಾಲೇಜುಗಳಲ್ಲಿ ಇದನ್ನು ರೆಗ್ಯುಲೇಟ್ ಮಾಡತಕ್ಕ ಕಾನೂನನ್ನು ಹಾಕದೆ ಇರುವುದರಿಂದ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುವವ ಕಾರಣ ಕಾಲೇಜಿಗೂ ಹೊಸದಾಗಿ ರೆಗ್ಯುಲೇಟ್ ಮಾಡತಕ್ಕ ಕಾನೂನನ್ನು ಇಂಟ್ರಡ್ಯೂಸ್ ಮಾಡುತ್ತೀರಾ ? ಎರಡನೆಯ ಭಾಗದ ಪ್ರಶ್ನೆಗೆ ಸಂಬಳ ರಿವೈಸ್ ಆಗಿದೆ ಎಂದು ಹೇಳಿದ್ದೀರಿ ಉಪಾಧ್ಯಾಯರ ಸಂಬಳ ಎಲ್ಲಾ ನೌಕರರ ಸಂಬಳಕ್ಕಿಂತ ಕಡಿಮೆ ಇದೆ. ಬೇರೆ ನೌಕರರಿಗೆ ಟಿ.ಎ. ಮತ್ತು ಡಿ.ಎ. ಬೇರೆ ಇದೆ. ಅದೇ ರೀತಿ ಬೇರೆ ನೌಕರರಿಗೆ ಸಿಗತಕ್ಕ ರಿಯಾಯಿತಿ ಮತ್ತು ಅನುಕೂಲಗಳು ಇವರಿಗೂ ಸಿಕ್ಕುವಂತೆ ಹೆಚ್ಚು ಮಾಡುವ ಅವಕಾಶ ಕಲ್ಪಿಸಿಕೊಡಬೇಕು. ಟ್ಯೂಷನ್ ಅಮೂಲಾಗ್ರವಾಗಿ ತೆಗೆದುಹಾಕುವ ಯೋಚನೆ ಮಾಡುತ್ತೀರಾ? ಆ ರೀತಿ ಮಾಡಿ ಬಡವಿದ್ಯಾರ್ಥಿಗಳಿಗೆ ಅನುಕೂಲ ಆಗುವ ಹಾಗೆ ಮಾಡಬೇಕು.

ಶ್ರೀ ಎ. ಆರ್. ಬದರಿನಾರಾಯಣ್.—ಕಾಲೇಜುಗಳಲ್ಲಿ ಇರತಕ್ಕ ಲೆಕ್ಚರರುಗಳು ಪ್ರೈವೇಟ್ ಟ್ಯೂಷನ್ ಹೇಳಿಕೊಡತಕ್ಕ ವಿಚಾರದಲ್ಲಿ ಅವರಿಗೆ ಅನುಮತಿ ಕೊಟ್ಟಿಲ್ಲ. ಒಂದು ವೇಳೆ ಹಾಗೆ ಏನಾದರೂ ಅವರು ಖಾಸಗಿಯಾಗಿ ಪಾಠಗಳನ್ನು ಹೇಳುತ್ತಾ ಇದ್ದರೆ, ಸರ್ಕಾರಕ್ಕೆ ದೂರುಗಳು ಬಂದರೆ ಅಧಿಕಾರಿಗಳು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಸರ್ಕಾರಿ ಸಂಬಳ ಕಡಿಮೆ ಎನ್ನುವುದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಸರ್ಕಾರಿ ಸಂಬಳ ಈಗ ಜಾಸ್ತಿ ಮಾಡಿದ್ದೇವೆ, ಹೆಚ್ಚು ಸಂಬಳ ಕೊಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಹೇಳಿದರು ಕಾಲೇಜುಗಳಲ್ಲಿ ಅನುಮತಿ ಕೊಟ್ಟಿಲ್ಲ ಎಂದು. ಸರ್ಕಾರಿ ಶಾಲಾ ಉಪಾಧ್ಯಾಯರಿಗೆ ಅನುಮತಿ ಕೊಟ್ಟಿರತಕ್ಕ ನೀತಿಯಿಂದ ಉಪಾಧ್ಯಾಯರು ಶಾಲೆಗಳಲ್ಲಿ ಶ್ರದ್ಧೆಯಿಂದ ಪಾಠ ಹೇಳುವುದಿಲ್ಲ, ಹುಡುಗರನ್ನು ಪ್ರೈವೇಟ್ ಟ್ಯೂಷನ್ನಿಗೆ ಬನ್ನಿ ಎಂದು ಕರೆಯುತ್ತಾರೆ. ಅವರ ಮನೆಗಳಲ್ಲಿ ಸಣ್ಣ ಕ್ಲಾಸಸ್ ಮಾಡುತ್ತಿದ್ದಾರೆ. ಮತ್ತೆ ಈವಿನಿಂಗ್ ಕಾಲೇಜ್ ಮಾಡಿಕೊಂಡಿದ್ದಾರೆ. ಹೆಚ್ಚಿಗೆ ಹಣ ಇರತಕ್ಕ ಶ್ರೀಮಂತರ ಮಕ್ಕಳಿಗೆ ಪಾಠ ಹೇಳಿ ಅವರು ಹೆಚ್ಚಿಗೆ ಅಂಕಗಳನ್ನು ಪಡೆಯುವಂತೆ ಮಾಡುತ್ತಾರೆ. ಶಾಲೆಯಲ್ಲಿ ಓದತಕ್ಕ ನಿರ್ಗತಿಕ ಬಡವರ ಮಕ್ಕಳ ಬಗ್ಗೆ ಉಪಾಧ್ಯಾಯರಿಗೆ ಶ್ರದ್ಧೆ ಇಲ್ಲದೆ ಇರುವುದರಿಂದ ಅಂಕಗಳು ಕಡಿಮೆಯಾಗಿ ಬರುತ್ತವೆ. ಈ ರೀತಿ ಅನುಮತಿ ಕೊಡುವುದಾದರೆ ಬಡ ಮಕ್ಕಳ ತರಬೇತಿಗಾಗಿ ಬೇರೆ ಕೇಂದ್ರಗಳನ್ನು ಮಾಡುತ್ತೀರಾ ?

---

† Indicates that the remarks or speeches have not been revised by the member concerned.

ಉಪಾಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧ ಬರುತ್ತದಿಲ್ಲ.

Sri B. B. SAYANAK.—Has it come to the notice of Government that from the III standard onwards, the teachers are taking the tuition and it has become a habit with the teachers that they must have the tuition classes ?

Sri A. R. BADARINARAYANA.—The hon: member has generalised the entire question. There are some cases where there have been private tuition and it is regulated by rules and if theynfrings the rules, action will be taken against them.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಸ್ವಾಮಿ, 7-8 ಜನ ಉಪಾಧ್ಯಾಯರುಗಳು ಗೌರ್ನಮೆಂಟ್‌ನಿಂದ ರೆಕಗ್ನಿಷನ್ ತೆಗೆದುಕೊಂಡು ಈವೀಂಗ್ ಕ್ಲಾಸಸ್ ಶುರು ಮಾಡಿ ಅದರಿಂದ ಬರತಕ್ಕಂಥ ಆದಾಯವನ್ನು ಸಮನಾಗಿ ಹಂಚಿಕೊಂಡು ಸಂಪಾದನೆ ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಇದಕ್ಕೆ ಸರ್ಕಾರದವರು ಉತ್ತೇಜನ ಏನಾದರೂ ಕೊಡುತ್ತಿದ್ದೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಬೇರೆ ಸಂಸ್ಥೆಗಳು ಈವಿನಿಂಗ್ ಕ್ಲಾಸಸ್‌ನ್ನು ಕಂಡಕ್ಟ್ ಮಾಡಿ ಪ್ರೈವೇಟ್ ಟ್ಯೂಷನ್ ಇಟ್ಟುಕೊಂಡಿರಬಹುದು. ಆದರೆ ಸರ್ಕಾರಿ ಮೇಷ್ಟ್ರುಗಳು ಯಾರಾದರೂ ಈ ರೀತಿ ಈವಿನೀಂಗ್ ಕ್ಲಾಸ್‌ಸನ್ನು ಕಂಡಕ್ಟ್ ಮಾಡಿ ಪ್ರೈವೇಟ್ ಟ್ಯೂಷನ್ಸ್ ಮಾಡುತ್ತಿದ್ದಾರೆ ಎಂದು ಸರ್ಕಾರದ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಹಿಂದೆ ಇದಕ್ಕೆ ಅನುಮತಿ ಕೊಡದೆ. ಇದ್ದ ಕಾಲದಲ್ಲಿ ಎಲ್ಲಾ ಹೈಸ್ಕೂಲ್‌ಗಳಲ್ಲೂ ಉತ್ತಮವಾದ ಫಲಿತಾಂಶ ಬರುತ್ತಾ ಇತ್ತು ಇದನ್ನು ಕಡ್ಡಾಯವಾಗಿ ನಿಲ್ಲಿಸಿ ಬಡವರಿಗೆ ಅನುಕೂಲವಾಗುವ ಹಾಗೆ ಮಾಡುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ್—ಈ ಟ್ಯೂಷನ್ಸ್ ಹೊಸದಾಗಿ ಬಂದ ಪದ್ಧತಿ ಅಲ್ಲ. ಈ ಪದ್ಧತಿ ಬಹಳ ದಿವಸದಿಂದ ನಡೆದುಕೊಂಡು ಬರುತ್ತಾ ಇದೆ. ಶ್ರೀಮಾನ್ ಬಂಗಾರಪ್ಪನವರು ಪ್ರಶ್ನೆ ಕೇಳಿದಾಗ ಈ ರೀತಿ ಪ್ರೈವೇಟ್ ಟ್ಯೂಷನ್ ಮಾಡುವುದರಿಂದ ಬಡಮಕ್ಕಳಿಗೆ ಅನಾನುಕೂಲವಾಗುತ್ತದೆ ಆದ್ದರಿಂದ ಈ ರೀತಿ ಮಾಡಬಾರದು ಎನ್ನುವ ಒಂದು ಸಲಹೆ ಕೊಟ್ಟಿದ್ದಾರೆ ಅದನ್ನು ಗಮನಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಈ ಪ್ರೈವೇಟ್ ಟ್ಯೂಷನ್ ಏನು ಇವೆ ಇದು ಎಲ್ಲಾ ಶಾಲಾ ಕಾಲೇಜುಗಳಲ್ಲಿ ಇರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ಅಲ್ಲಿ ಕಡಿಮೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ್.—ಮಾನ್ಯ ಸದಸ್ಯರು ಹೇಳಿರತಕ್ಕದ್ದಾದು ಸರಿ ಎಂದು ಕಾಣುತ್ತದೆ. ಈ ಶಾಲಾ-ಕಾಲೇಜುಗಳಲ್ಲಿ ಟ್ಯೂಷನ್ ಹೇಳುವುದರಿಂದ ಬಡವರಿಗೆ ಅನಾನುಕೂಲವಾಗಿದೆ ಎಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಕಡೆಯೂ ಕೂಡ ಸರ್ಕಾರ ಗಮನ ಕೊಟ್ಟಿದೆ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ಕಾಲೇಜು ಉಪಾಧ್ಯಾಯರುಗಳು ಖಾಸಗಿಯಾಗಿ ವಿದ್ಯಾರ್ಥಿಗಳಿಗೆ ಟ್ಯೂಷನ್ ಹೇಳಿಕೊಡತಕ್ಕಂಥಾದ್ದಕ್ಕೆ ಹೊಸದಾಗಿ ಪರವಾನಿಗೆ ಕೊಡುವ ಪದ್ಧತಿಯನ್ನು ತಂದರೆ ಬಡ ವಿದ್ಯಾರ್ಥಿಗಳಿಗೆ ಟ್ಯೂಷನ್ ಹೇಳಿಕೊಡುವುದರ ಬಗ್ಗೆ ಅವರಿಗೆ ಎಕ್ಸ್‌ಟ್ರಾ ಅಲೋಯನ್ಸ್ ಏನಾದರೂ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಈಗಾಗಲೇ ಶಾಲಾ ಕಾಲೇಜುಗಳಲ್ಲಿ ಮತ್ತು ಪ್ರೈಮರಿ ಶಾಲೆಗಳಲ್ಲಿ ಈ ಟ್ಯೂಷನ್ ಪದ್ಧತಿ ಹೋಗಬೇಕು ಎಂದು ಹೇಳುತ್ತಿರುವಾಗ ಇನ್ನು ಹೊಸದಾಗಿ ಪರವಾನಿಗೆ ಕೊಡತಕ್ಕಂಥ ಪ್ರಶ್ನೆ ಬರುವುದಿಲ್ಲ. ಇದರಿಂದ ಬಡಮಕ್ಕಳಿಗೆ ಅನಾನುಕೂಲವಾಗುತ್ತದೆ ಎಂದು ಮಾನ್ಯ ಸದಸ್ಯರುಗಳ ಅಭಿಪ್ರಾಯವೂ ಕೂಡ ಇರುವುದರಿಂದ ಈ ವಿಷಯದಲ್ಲಿ ಏನು ಮಾಡಬೇಕು ಎಂದು ಯೋಚನೆ ಮಾಡಬೇಕಾಗುತ್ತದೆ.

Pension to Primary School Teachers of Ex-Princely States

695. **Sri P. M. BANGI** (Jamkhandi):—

Will the Minister for Eduction be pleased to state:—

(*a*) the reasons for not finalising pension cases of primary school teachers of ex-Princely States of Jamkhandi, Mudhol, Ramdurg (Sangli, Miraj) since the last three years ;

(*b*) whether it is a fact that the Accountant-General has asked clarifications as to whether the primary school teachers who were serving as Government servants in the ex-Princely Deccan States and who were then absorbed and taken up by the School Boards of North Karnataka and subsequently hadbecome Government servents of Mysore State are Governed by M.C.S. Rules or B.C.S. Rs. and is awaiting the reply from the Finance Department since the last two years ;

(*c*) whether it is a fact that the Government in Education Department has also sought the said clarifications from Finance Department ;

(*d*) whether the Gove nment has any proposal to ameliorate the sufferings of the poor p imary teachers of ex-Princely States by finalising their pension and awarding the same at an early date?

Sri A. R. BADARINARAYANA (Minister for Education).—

(*a*) Rules under which these teachers are eligible for Pension were under examination of Government.

(*b*) Clarification sought for by the Accountant General has since been issued after consultation with Finance Department.

(*c*) Yes.

(*d*) With a view to mitigate any harbship, orders have also been irsued for payment of anticipatory pension to teachers pending settlement of final pension claims.

ಶ್ರೀ ಪಿ. ಎಂ. ಬಂಗಿ.—ಸ್ವಾಮಿ, (ಅ) ಗೆ ಉತ್ತರವಾಗಿ ಹಣಕಾಸು ಇಲಾಖೆಯೊಂದಿಗೆ ಸಮಾಲೋಚಿಸಿ ಮಹಾ ಲೇಖಾಪಾಲರು ಕೇಳಿದ ಸ್ಪಷ್ಟೀಕರಣವನ್ನು ಈಗಾಗಲೇ ನೀಡಲಾಗಿದೆ ಎಂದು ಹೇಳಿದ್ದೀರಿ. ಆದರೆ ಅದನ್ನು ಇತ್ಯರ್ಥ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲವೇ ?

† ಶ್ರೀ ಎ. ಆರ್. ಬದರಿನಾರಾಯಣ್.—ಕೆಲವು ತಿಂಗಳುಗಳ ಕೆಳಗೆ ಅದನ್ನು ಕಳುಹಿಸಿದ್ದೇವೆ. ಮಾನ್ಯ ಸದಸ್ಯರು ಈಗ ಮಾತ್ರ ಅದನ್ನು ಗಮನಕ್ಕೆ ತಂದಿದ್ದಾರೆ. ಅದನ್ನೂ ಗಮನಿಸಿದ್ದೇನೆ. ಅವರಿಗೆ ತೊಂದರೆ ಆಗದೇ ಇರುವ ಹಾಗೆ ಆಂಟಿಸಿಪೇಟರಿ ಪೆನ್‌ಷನ್ ಕೊಡುವ ಹಾಗೆ ಆದೇಶಗಳನ್ನು ನೀಡಲಾಗಿದೆ. ಅಕೌಂಟೆಂಟ್ ಜನರಲ್‌ರವರಿಗೂ ಕ್ಲಾರಿಫಿಕೇಷನ್ ಬಗ್ಗೆ ಉತ್ತರ ಕೊಟ್ಟಿದ್ದೇವೆ. ಆದುದರಿಂದ ಇದು ಬೇಗ ಇತ್ಯರ್ಥವಾಗಬಹುದು ಎಂದು ತಿಳಿದಿದ್ದೇನೆ.

ಶ್ರೀ ಪಿ. ಎಂ. ಬಂಗಿ.—ಎಂದು ಉತ್ತರಕೊಟ್ಟಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ? ಮತ್ತು ಅಕೌಂಟೆಂಟ್ ಜನರಲ್ ಅವರಿಗೆ ಯಾವಾಗ ಕಳುಹಿಸಿದ್ದೀರಾ ?

Sri A. R. BADARINARAYANA.—I cannot give you the exact date.

ಶ್ರೀ ಪಿ. ಎಂ. ಬಂಗಿ.—ಮಾನ್ಯ ಮಂತ್ರಿಗಳು ಆಂಟಿಸಿಪೇಟರಿ ಪೆನ್‌ಷನ್ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಆದರೆ ಶ್ರೀ ಎಚ್. ಆರ್. ದೇಶಪಾಂಡೆ ಮತ್ತು ಶ್ರೀ ದೊಡ್ಡಮಣಿ ಇವರಿಬ್ಬ

ರಿಗೂ ಕೂಡ ಅಂಟಿಸಿಪೇಟರಿ ಪೆನ್‌ಷನ್ ಇನ್ನೂ ಫೈನಲೈಸ್ ಆಗಿಲ್ಲ. ಆದುದರಿಂದ ಅವರು ದವಾಖಾನೆಗೆ ಬಿದ್ದು ಸಾಯುವುದಕ್ಕೆ ಹತ್ತಿದ್ದಾರೆ. ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಇದಕ್ಕೆ ಒಂದು ಜನರಲ್ ಗೌರ್ನಮೆಂಟ್ ಆರ್ಡರ್ ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅವರಿಬ್ಬರಿಗೂ ತೊಂದರೆ ಇದೆ ಎಂದು ಬರೆದುಕೊಟ್ಟರೆ ಅದರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—(ಅ) ಗೆ ಉತ್ತರವಾಗಿ ಈ ಉಪಧ್ಯಾಯರು ಯಾವ ನಿಯಮಗಳ ಮೇರೆಗೆ ನಿವೃತ್ತಿ ವೇತನ ಪಡೆಯಲು ಅರ್ಹರಾಗಿದ್ದಾರೆಂಬ ವಿಷಯವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಆದುದರಿಂದ ಇದು ಎಷ್ಟು ದಿವಸದಿಂದ ಪರಿಶೀಲನೆಯಲ್ಲಿದೆ, ಮತ್ತು ಈಗ ಯಾವ ಹಂತದಲ್ಲಿ ಇದೆ ? ಎಷ್ಟು ದಿವಸದೊಳಗೆ ಆ ನಿಯಮಗಳನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಶ್ರೀಮಾನ್ ಬಂಗಾರಪ್ಪನವರು ಈಗ ತಾನೇ ನನ್ನ ಗಮನಕ್ಕೆ ತಂದರು. ಮತ್ತು ನಾನು ಪ್ರವಾಸಕ್ಕೆ ಹೋದಾಗಲೂ ಕೂಡ ಉಪಾಧ್ಯಾಯರು ತಿಳಿಸಿದರು. ಆದುದರಿಂದ ಈ ಬಗ್ಗೆ ಕೂಡಲೇ ವಿಮರ್ಶೆಮಾಡಿ ಅಂಟಿಸಿಪೇಟರಿ ಪೆನ್‌ಷನ್ ಬೇಗ ಕೊಡುವ ಹಾಗೆ ಸೂಚನೆ ಕೊಡುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಇದು ಎಷ್ಟು ದಿವಸದಿಂದ ಪೆಂಡಿಂಗ್ ಇದೆ ?

ಶ್ರೀ ಎ. ಆರ್. ಬದರಿನಾರಾಯಣ್.—ಇದು ಎಷ್ಟು ದಿವಸದಿಂದ ಪೆಂಡಿಂಗ್ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ನನ್ನ ಗಮನಕ್ಕೆ ಬಂದ ತಕ್ಷಣ ಈ ಬಗ್ಗೆ ಕ್ರಮ ತೆಗೆಧುಕೊಂಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—(ಅ) ಗೆ ಉತ್ತರವಾಗಿ ಈ ಉಪಾಧ್ಯಾಯರುಗಳು ಯಾವ ನಿಯಮಗಳ ಮೇರೆಗೆ ನಿವೃತ್ತಿ ವೇತನ ಪಡೆಯಲು ಅರ್ಹರಾಗಿದ್ದಾರೆಂಬ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಅವರು ಶಿಕ್ಷಣ ಇಲಾಖೆಯವರು ಮಾಡಿದ ನಿಯಮಗಳ ಆಧಾರದ ಮೇಲೆ ಅರ್ಹರಾಗಿದ್ದಾರೆ ಎನ್ನುವ ಪ್ರಪೋಸಲ್ಸ್ ಇದ್ದಮೇಲೆ ಪುನಃ ಈಪ್ರೊತ್ತು ತವಾಗೆ ಅನುಮಾನ ಬರುವುದಕ್ಕೆ ಕಾರಣ ಏನು ?

ಶ್ರೀ ಎ. ಆರ್. ಬದರಿನಾರಾಯಣ್.—ಅವರು ಹಳೇ ಬಾಂಬೆ ಸ್ಟೇಟ್‌ನಲ್ಲಿದ್ದಂಥಾವರು. ಆದುದರಿಂದ ಅಲ್ಲಿಯ ರೂಲ್ಸ್ ಅಂಡ್ ರೆಗ್ಯೂಲೇಷನ್ಸ್ ತರಿಸಿಕೊಂಡು ಇದರ ಬಗ್ಗೆ ಫೈನಲೈಸ್ ಮಾಡಬೇಕು. ನಮ್ಮ ಸ್ಟೇಟ್‌ನಲ್ಲಿರುವ ರೂಲ್ಸ್‌ಗೂ ಹಳೇ ಬಾಂಬೆನಲ್ಲಿರುವ ರೂಲ್ಸ್‌ಗೂ ವಿಮರ್ಶೆ ಮಾಡಬೇಕಾಗಿರುವುದರಿಂದ ಈ ಬಗ್ಗೆ ಇನ್ನೂ ಫೈನಲೈಸ್ ಆಗಿಲ್ಲ.

SRI B. B. SAYANAK.—May I know when the anticipatory pension and the final pension claims have been paid and how many teachers have died without getting the pension ?

SRI A. R. BADARINARAYANA.—I do not know the exact number.

SRI B. B. SAYANAK.—Since when the orders for anticipatory pensions have been issued ?

SRI A. R. BADARINARAYANA.—I cannot give you the exact date ; but I can tell that it is about three months back.

Apology by State Government

747. **SRI S. BANGARAPPA** (Sorab).—

Will the Minister for Education be pleased to state :—

(a) whether it is not a fact that the State Government tendered apology to Supreme Court in the case of piomotion of Sri R.S. Nanjundappa, Principal, J. C. Polytechnic, Bangalore ;

(SRI S. BANGARAPPA)

(*b*) if so, the reasons for the same ;

(*c*) whether the Supreme Court has accepted the apology ?

SRI A. R. BADARINARAYANA (Minister for Education).—

(*a*) No.

(*b*) and (*c*) Do not arise in view of reply to clause (*a*).

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಬೆಂಗಳೂರಿನ ಜೆ. ಪಿ. ಪಾಲಿಟೆಕ್ನಿಕ್ ಪ್ರಿನ್ಸಿಪಾಲರಾದ ಶ್ರೀ ಆರ್. ಎಸ್. ನಂಜುಂಡಪ್ಪನವರ ಬಡ್ತಿಗೆ ಸಂಬಂಧಿಸಿದ ವಿಷಯದಲ್ಲಿ ಅವರು ಸುಪ್ರೀಂ ಕೋರ್ಟಿಗೆ ಹೋದಾಗ ಅವರಿಗೆ ಪ್ರಮೋಷನ್ ಕೊಡಬೇಕು ಎಂದು ತೀರ್ಮಾನವಾಗಿರುವುದು ನಿಜ ವಲ್ಲವೇ ?

† ಶ್ರೀ ಎ. ಆರ್. ಬದರಿನಾರಾಯಣ್.—ಅವರು ಸುಪ್ರೀಂಕೋರ್ಟಿಗೆ ಹೋಗಿರಬಹುದು, ಅವರಿಗೆ ಏನು ಬೇಕೋ ಅದನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅವರಿಗೆ ಬಡ್ತಿ ಸಿಗತಕ್ಕಂಥ ವಿಷಯದಲ್ಲಿ ಅನ್ಯಾಯವಾಗಿದೆ ಎಂದು ತೀರ್ಪು ಬಂದನಂತರ ಅದನ್ನು ಜಾರಿಗೆ ತರುವುದರಲ್ಲಿ ರಾಜ್ಯ ಸರ್ಕಾರ ವಿಳಂಬ ಮಾಡಿರು ವುದು ಅದು ಕಂಟೆಂಪ್ಟ್ ಆಫ್ ಪ್ರೊಸೀಡಿಂಗ್ಸ್, ಅದನ್ನು ಮಾನ್ಯ ಮಾಡದೇ ಇದ್ದುದು ನಿಜವಲ್ಲವೇ ಮತ್ತು ಅದಕ್ಕಾಗಿ ರಾಜ್ಯ ಸರ್ಕಾರದವರು ಕ್ಷಮಾಪಣೆ ಕೇಳಿದ್ದು ನಿಜವಲ್ಲವೇ?

ಶ್ರೀ ಎ. ಆರ್. ಬದರಿನಾರಾಯಣ್.—ಅವರ ಪ್ರಮೋಷನ್‌ಗೂ ತಾವು ಕೇಳಿದ ವಿಷಯಕ್ಕೂ ಸಂಬಂಧ ಇಲ್ಲ. ಅವರಿಗೆ ಪ್ರಮೋಷನ್ ಕೊಡತಕ್ಕಂಥಾ ವಿಚಾರದಲ್ಲಿ ಸರ್ಕಾರ ಅದನ್ನು ಪರಿ ಶೀಲಿಸುತ್ತಾ ಇದೆ. ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳು ತ್ತೇನೆ.

ಶ್ರೀ ಕೆ. ಯೆಂಕಟಪ್ಪ—ಈ ಬಗ್ಗೆ ಸುಪ್ರೀಂ ಕೋರ್ಟಿನಿಂದ ತೀರ್ಪು ಬಂದಿದ್ದರೂ ಕೂಡ ಸರ್ಕಾರ ಇಲ್ಲಿಯವರೆಗೂ ಜಾರಿಗೆ ತರದೇ ವಿಳಂಬ ಮಾಡುವುದಕ್ಕೆ ಕಾರಣ ಏನು ?

ಶ್ರೀ ಎ. ಆರ್. ಬದರಿನಾರಾಯಣ್.—ಸುಪ್ರೀಂ ಕೋರ್ಟ್‌ನ ತೀರ್ಮಾನದ ವಿಚಾರವೇ ಬೇರೆ; ನೀವು ಕೇಳತಕ್ಕಂಥ ವಿಚಾರವೇ ಬೇರೆ. ಅವರು ನನಗೆ ಸೀನಿಯಾರಿಟಿ ಬರಬೇಕು ಎಂದು ಕೇಳಿ ದ್ದಾರೆ. ಆದುದರಿಂದ ಆ ಬಗ್ಗೆ ಏನೂ ತೊಂದರೆ ಇಲ್ಲ, ಅವರಿಗೆ ಏನು ದೊರೆಯಬೇಕೋ ಅದನ್ನು ಕೊಟ್ಟಿದೆ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ಜಾರಿಗೆ ಕೊಡುವುದರಲ್ಲಿ ಅನ್ಯಾಯವಾಗಿದೆ ಎಂದು ಕಂಟೆಂಪ್ಟ್ ಆಫ್ ಕೋರ್ಟು ಬಗ್ಗೆ, ರಾಜ್ಯ ಸರಕಾರ ಕ್ರಮ ತೆಗೆದುಕೊಳ್ಳುವ ಬಗ್ಗೆ ಈ ಎಲ್ಲ ವಿವರ ಗಳೂ ಪತ್ರಿಕೆಗಳಲ್ಲಿ ಬಂದಿದ್ದವು, ಅದರಂತೆ ರಾಜ್ಯ ಸರಕಾರ ಕ್ಷಮಾಪಣೆ ಕೇಳಿದ್ದು ನಿಜವೇ ?

ಶ್ರೀ ಎ. ಆರ್. ಬದರೀನಾರಾಯಣ.—ಈ ಸಂದರ್ಭದಲ್ಲಿ ಅಂಥಾದ್ದು ಯಾವುದೂ ಇಲ್ಲ.

Varahi Hydro-Electric Project

561. SRI A. G. KODGI (Baindur).—

Will the Minister for Public Works and Electricity be pleased to state :—

(*a*) the quantum of energy that would be available to the State by Varahi Hydro Electric Project and the revenue to be derived to the State Exchequer therefrom ;

(b) the quantum of water that would be available for irrigation from this project ; the extent of land to be benefited and the employment potentiality ;

(c) the probable time of taking up this project and the time within which it will be completed ?

Sri H. M. CHANNABASAPPA (Minister for Public Works and Electricity).—

(a) Amount of energy that could be generated is 1,180 Million Kilowatt hours per year and the revenue would be about Rs. 5 crores.

(b) (i) A continuous discharge of 1,200 cusecs will be available below the power-house which can be used for irrigation, the feasibility of which has to be worked out.

(ii) The project will provide employment to about 10,000 persons during the peak period of its construction.

(c) The project will be taken up this year and is expected to be completed by 1979.

ಶ್ರೀ ಕೋಣಂದೂರು ಲಿಂಗಪ್ಪ.—ವರಾಹಿ ಯೋಜನೆ ಕೆಳಗಡೆ ಭೂಹೀನರಾಗುವ ರೈತರಿಗೆ ಬೇರೆ ಕಡೆ ಭೂಮಿ ಕೊಡುವ ಬಗ್ಗೆ ಪುನರ್‌ವ್ಯವಸ್ಥೆಮಾಡಲು ಯಾವುದಾದರೂ ಒಂದು ಯೋಜನೆ ಸರಕಾರದ ಮುಂದೆ ಇದೆಯೇ ?

† ಶ್ರೀ ಹೆಚ್.ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಾದ ಶ್ರೀ ಶೀರನಹಳ್ಳಿ ಚಂದ್ರಶೇಖರ್‌ರವರು ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ಕೊಟ್ಟಿದ್ದರು. ಅದರ ಎಲ್ಲ ವಿವರಗಳನ್ನೂ ಈಗಾಗಲೇ ಸಭೆಗೆ ಒದಗಿಸಿಕೊಡಲಾಗಿದೆ.

Minor Irrigation Investigation Division

702. Sri B. BYRAPPAJI (Turuvekere).—

Will the Minister for Public Works and Electricity be pleased to state:—

(a) whether it is a fact that there was a minor irrigation investigation division with Executive Engineers in each of the S. E. Circles ;

(b) if so, the reasons for closing down such division recently ;

(c) whether it has come to the notice of the Government that the progress of minior irrigation investigation work has slowed down due to this policy ;

(d) if so, whether proper arrangements would be made immediately to re-start these divisions ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) During 1965-67, the then Chief Engineer (Genl.) recommended to Government for reorganisation of P. H. E. Circle by adjustment of existing P.H.E. and Minor Irrigation Divisions in view of the large provision made in the IV Five Year Plan and Government considered that the additional staff required for P. H.E. Cirele should be met only by re-adjustment of P.H.E. and M. I. Divisions and Sub-Divisions even by reducing the tempo of investigation work.

(*c*) No.

(*d*) There are five M. I. I. Divisions under the control of the P.W.D. Circles at Mysore, Shimoga, Dharwar, Belgaum and Gulbaraga and there are no M. I.I. Divisions under Bangalore and Mangalore Circles. The question of sanctioning the creation of M. I. I. Division at Bangalore, under Bangalore Circle is under the consideration of Government. There are two M. I. I. Sub-Divisions under Mangalore Circle, one each at Udipi and Kushalnagar.

ಶ್ರೀ ಬಿ. ಬೈರೆರಪ್ಪಾಜಿ.—ಇದರಲ್ಲಿ 93 ಜನರಿಗೆ ಸಂಬಳ ಹಾಗೂ ಭತ್ಯ ಇದರ ವಿವರಗಳನ್ನು ಕೇಳಿದ್ದೆ. ಅದು ಇದರಲಿಲ್ಲ. ಇದರ ವಿವರಗಳನ್ನು ಕೊಡಲಾಗುವುದೇ ?

† ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದರಲ್ಲಿ ಆ ವಿವರಗಳನ್ನು ಕೇಳಿರಲಿಲ್ಲ. ಕೇಳಿದ್ದರೆ ಒದಗಿಸಿ ಕೊಡಬಹುದಾಗಿತ್ತು.

Autorickshaws fitted with new Meters

437. Sri KAGODU THIMMAPPA (Sagar).—

Will the Minister for Labour be pleased to state:—

(*a*) whether Government has issued direction to fix new meters to the Autorickshaws ;

(*b*) if so, which are the companies authorised by Government to supply these new meters ;

(*c*) to whom the agency of supplying meters in the State has been given ;

(*d*) the number of autorickshaws so far fitted with new meters ?

Sri AZEEZ SAIT (Minister for Labour).—

(*a*) Mysore State Transport Authority has issued directions to fix new meters to the Autorickshaws.

(*b*) Dimond Fare Meters, Fare Master Meters and Correct Fare Meters manufactured by the following companies are approved as they comply with the requirements of the Mysore Motor Vehicles Rules:—

1. M/s. Dimond Clock Manufacturing Co. (Private) Limited, 1180, Budavarpet, Poona-2.

2. Sales Manager, Vibronics (Private) Limited, Manufacturers of Fare Master, Taxi and Autorickshaw Maters, No. 19, Bank Street, Bombay-1.

3. M/s. Abletool Room, Manufacturer of Correct Meters, No. 32/1/9, Karve Road, Poona-4.

(*c*) Since the agents are being appointed by the Manufacturers themselves, Government has no knowledge about this.

(*d*) The total number of Autorickshaws fitted with new meters is as hereunder:—

1.	Diamond meters	...	156
2.	Correct matters	...	3
3.	Fare Masters	...	18

ಶ್ರೀ ಕಾಗೋಡು ತಿಮ್ಮಪ್ಪ.—ಹೊಸದಾಗಿ ಆಟೋರಿಕ್ಷಾಗಳಿಗಾಗಿ ಮೀಟರನ್ನು ಹಾಕ ಬೇಕೆಂದು ಏಕೆ ತೀರ್ಮಾನ ಮಾಡಿತು ? ಮತ್ತು ಇದರಲ್ಲಿ ಯಾರಿಗಾದರೂ ಅನುಕೂಲಮಾಡ ಬೇಕೆಂದು ಈ ರೀತಿ ಕ್ರಮ ತೆಗೆದುಕೊಳ್ಳಲಾಯಿತೇ ?

SRI AZEEZ SAIT.—According to Rule 261 of the Mysore Motor Vehicles Rules, 1963, every taxi-meter shall be fitted with nn indicator handle in the form of a flag, on which shall be printed the words 'for Hire'. The metter shall be so constructed that when the flag is horizontal, the taxi motter shall be out of action. Such indicator shall be so placed as to be so clearly visible ta any person outside and in front of the vehicle and to the hirer when inside. This matter was taken up in the year 1969 by the State Transport Authority and said that these maters shauld be got fixed to the Autorickshaws and the owners of the Auto-rickshaws went in apyeal to the Mysore Apbellate Tribunal and brought a stay. The stay was vacated in the year 1972. We have beee implementing the resolution of the State Transport Authority.

ಶ್ರೀ ಕಾಗೋಡು ತಿಮ್ಮಪ್ಪ.—ಮೀಟರು ಏಜನ್ಸಿಗಳು ಕೆಲವರು ಯಾರು ಇದ್ದಾರೆಂದು ಇಲ್ಲಿ ಹೇಳಿದ್ದಾರೆ ಅವರಿಗೆ ಅನುಕೂಲ ಮಾಡಲು ಉದ್ದೇಶಪೂರ್ವಕವಾಗಿ ಇದನ್ನು ತಡಮಾಡಿ ಶೀಘ್ರ ವಾಗಿ ತಕ್ಕ ಕ್ರಮ ತೆಗೆದುಕೊಳ್ಳದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್.—ಇದು ಸತ್ಯಕ್ಕೆ ದೂರವಾದುದು. ಇದರಲ್ಲಿ ಯಾರಿಗೂ ಸಹಾಯ ಮಾಡಬೇಕೆಂದು ಮಾಡಿರುವುದು ಕಂಡು ಬಂದಿಲ್ಲ. 1969ನೇ ಇಸವಿಯಲ್ಲೇ ಇಂತಹ ಮೀಟರು ಗಳನ್ನು ಹಾಕಬೇಕೆಂದು ಎಸ್.ಟಿ.ಎ. ನವರು ರೆಸಲ್ಯೂಷನ್ ಮಾಡಿದ್ದರು ಅದರಂತೆ ಮಾಲೀಕರಿಗೆ ತಿಳಿಸಿದಾಗ ಅವರು ಅಪೆಲೆಟ್ ಟ್ರಿಬ್ಯುನಲ್‌ಗೆ ಅಪೀಲು ಹೋದರು. ಅನಂತರ ಇದರ ಮೇಲೆ ಸ್ಟೇ ಆರ್ಡರಾಗಿತ್ತು. ಮತ್ತು ಕೆಲವರು ಹೈ ಕೋರ್ಟಿಗೂ ಹೋಗಿದ್ದರು, ಇದರ ಮೇಲೆ ಕೆಲವು ಮಾಲೀಕರು ಇದನ್ನು ಹಾಕಲು ಟೈಂ ಬೇಕೆಂದು ಕೇಳಿದರು. ಅವರಿಗೆ ಆ ವರ್ಷದ ಜೂನ್ ತಿಂಗಳ ವರೆಗೆ ಟೈಂ ಕೊಡಲಾಗಿತ್ತು. ಇದರ ಸ್ಟೇ ಆರ್ಡರು ವೆಕೇಟು ಆಯಿತು ಎಂದು ಮೊದಲೇ ಹೇಳಿ

(ಶ್ರೀ ಅಜೀಜ್ ಸೇಟ್)

ದ್ದೇನೆ. ಅದರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ಆರ್.ಟಿ.ಎ.ರವರು ಪ್ರಯತ್ನ ಮಾಡುತ್ತಿದ್ದಾರೆ. ಇದರಲ್ಲಿ ಉತ್ತರದಲ್ಲಿ ಹೇಳಿರುವಂತೆ ಮೂರು ಕಂಪನಿಗಳ ಹೆಸರೂ ಕೂಡ ಕೊಡಲಾಗಿದೆ. ಆದರೆ ಇದರಲ್ಲಿರುವ ಡೈಮಂಡು ಕಂಪನಿಯವರ ಮೀಟರು ಸರಿಯಾಗಿಲ್ಲ ಎಂದು, ಕೈ ಬಿಡಲಾಯಿತು, ಯಾಂಕಿ ಮೀಟರು ಸರಿಯಾಗಿಲ್ಲ ಎಂದು ಅದನ್ನೂ ಕೈ ಬಿಡಲಾಯಿತು. ಮೂರ ನೇಯದು ಫೇರು ಮಾಸ್ಟರು ಕಂಪನಿಯವರ ಮೀಟರು ಸರಿಯಾಗಿದೆ. ಅದನ್ನು ಎಲ್ಲ ಜನರೂ ಹಾಕಿದರೆ ಇದರಿಂದ ವ್ಯಾಜ್ಯ ಬರುವುದಿಲ್ಲ, ಮೀಟರು ಚೆನ್ನಾಗಿ ಕೆಲಸ ಮಾಡುತ್ತೆ ಎಂದು ಇದನ್ನು ಪಬ್ಲಿಕ್ ಇಂಟರೆಸ್ಟಿನಿಂದ ನೋಡಿ 1969 ರಲ್ಲಿ ಆದ ತೀರ್ಮಾನವನ್ನು 1972ರಲ್ಲಿ ಜಾರಿಗೆ ತರಲು ಪ್ರಯತ್ನ ಮಾಡಲಾಗುತ್ತಿದೆ.

Sri V. N. PATIL.—Has the Government made any provision for the Autorickshaw Walas to approach any Bank to raise loans for the meters proposed to be fixed to their Autorickshaws? Does it not go a long way to help them? The loan raised by these people could be recovered by easy instalments.

Sri AZEEZ SAIT.—Though it was not an obligation on the Part of the Government, but as the Minister for Labour I have written to almost all the Scheduled Banks and other Banks to come forward in helping the owners by advancing money at reasonable interest to purchase the meters. Many of them have approached the Banks and taken loans.

ಶ್ರೀ ಕೆ. ಎನ್. ವೀರಪ್ಪಗೌಡ.—ಮೋಟಾರು ವೆಹಿಕಲ್ಸ್ ಅಕ್ಟ್ ಜಾರಿಗೆ ಬಂದು ಎಷ್ಟು ವರ್ಷಗಳಾದವು ? ಮೀಟರುಗಳು ಸರಿಯಾಗಿಲ್ಲ ಇದನ್ನು ಬದಲಾವಣೆ ಮಾಡಬೇಕು ಎಂದು ಯಾರಾದರೂ ದೂರುಗಳನ್ನು ಕೊಟ್ಟಿದ್ದಾರೇ ? ಈಗಿರತಕ್ಕ ಮೀಟರುಗಳನ್ನು ತೆಗೆದು ಹೊಸ ಮೀಟರುಗಳನ್ನು ಹಾಕಿದರೆ ಇದರಿಂದ ಎಷ್ಟು ಹಣ ಉಳಿತಾಯವಾಗುತ್ತದೆ; ಹಣ ಉಳಿತಾಯವಾಗುತ್ತದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಿದ್ದೀರಾ ? ಇದರಲ್ಲಿ ಪಬ್ಲಿಕ್ ಇಂಟರೆಸ್ಟಿಗಾಗಿ ಎಂದು ಹೇಳುವಾಗ ರಿಕ್ಷಾದಲ್ಲಿ ಓಡಾಡುವವರೇನಾದರೂ ಸರಕಾರಕ್ಕೆ ದೂರುಗಳನ್ನೇನಾದರೂ ಕೊಟ್ಟಿದ್ದಾರೇ ? ಇದನ್ನೆಲ್ಲಾ ತನಿಖೆ ಮಾಡಿದ್ದೀರಾ ?

ಶ್ರೀ ಅಜೀಜ್ ಸೇಟ್.—ಇದರ ಬಗ್ಗೆ ಸಾಕಷ್ಟು ದೂರುಗಳಿವೆ ಎನ್ನುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ ಮತ್ತು ಲೆಜಿಸ್ಲೇಚರುಗಳಲ್ಲಿ ಮೀಟರುಗಳನ್ನು ಹಾಕುತ್ತಿಲ್ಲ ಎಂದು ಪೋಲೀಸು ಸ್ಟೇಷನ್ನುಗಳಿಗೆ ದೂರುಗಳು ಬರುತ್ತಿದ್ದವು. ಇದರ ಮೇಲೆ ಮೀಟರಿನಂತ ನಾರ್ಮಲ್ ಚಾರ್ಜ್ ಇದ್ದರೂ ಎಂಟಾಣೆ ತೆಗೆದುಕೊಳ್ಳುತ್ತಾರೆಂದು ಅಲ್ಲಲ್ಲಿ ವ್ಯಾಜ್ಯಗಳಾಗುತ್ತಿದ್ದವು ಮತ್ತು ಮೀಟರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಇದರಿಂದ ಹೆಚ್ಚು ಬಾಡಿಗೆ ಕೊಡಬೇಕಾಗಿದೆ ಎಂದು ದೂರುಗಳು ಬಂದವು. ಇದಕ್ಕಾಗಿ ಇದರಲ್ಲಿ ಕೂಡ ಟ್ಯಾಕ್ಸಿ ಮೀಟರನಂತೆ ಹೊಸದಾಗಿರುವ ಒಂದು ಮೀಟರನ್ನು ಹಾಕಬೇಕೆಂದು ಎಸ್.ಟಿ.ಎ. ರವರು ತೀರ್ಮಾನ ಮಾಡಿದ್ದರು. ಅದರಂತೆ ಮಾಡುವಾಗ ಕೋರ್ಟಿಗೆ ಕೆಲವರು ಹೋಗಿದ್ದರು ಎಂದು ಆಗಲೇ ಹೇಳಿದೆ. ಇದು 1969 ರಲ್ಲೇ ಆಗಬೇಕಾಗಿತ್ತು. ಇದರ ಮೇಲೆ ಕೋರ್ಟಿನಲ್ಲಿ ಸ್ಟೇ ಬಂದಿತ್ತು. ಇದು ವೆಕೇಟು ಆದದ್ದು 1972 ರಲ್ಲಿ ಆ ನಂತರ ಸರಕಾರ ಎಸ್.ಟಿ.ಎ. ತೀರ್ಮಾನದಂತೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು, ಈಗ ಹೊಸ ಮೀಟರುಗಳನ್ನು ಅಳವಡಿಸಬೇಕೆಂದು ಸೂಚನೆಗಳನ್ನೂ ಮಾಲೀಕರಿಗೆ ಕೊಡಲಾಗಿದೆ. ಅದರಂತೆ ಎಷ್ಟೋ ಜನರು ಹೊಸ ಮೀಟರುಗಳನ್ನು ಹಾಕುತ್ತಿದ್ದಾರೆ.

1-30 P.M.

Sri DODDATHIMMAYYA.—May I know whether these new meters are readjustable as and when the taxi fare is enhanced?

Sri AZEEZ SAIT.—The rates can be re-adjusted in the meters. Suppose it is 50 paise to-day, and it is made 60 paise tomorrow, instead of 50 paise it can be made 60 paise.

ಶ್ರೀ ಎಂ. ಎಸ್. ಕೃಷ್ಣನ್.—ಹೊಸ ಮೀಟರ್‌ಗಳನ್ನು ಅಳವಡಿಸುವಂತೆ ಹೇಳಲಾಗಿದೆ ಎಂದು ಹೇಳಿದಿರಿ. ಈಗ ಹಳೆಯ ಮೀಟರ್‌ಗಳು ಎಷ್ಟಿವೆ ? ಮತ್ತು ಹಳೆಯ ಮೀಟರ್‌ಗಳನ್ನು ತೆಗೆಸಿ ಹೊಸ ಮೀಟರ್‌ಗಳನ್ನು ಅಳವಡಿಸುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಅಜೀಜ್ ಸೇಟ್.—ಎಲ್ಲ ಆಟೋರಿಕ್ಷಾಗಳಿಗೂ ಹೊಸ ಮೀಟರ್‌ಗಳನ್ನು ಅಳವಡಿಸುವುದಕ್ಕೆ 6 ತಿಂಗಳ ಸಮಯ ಕೇಳಿದ್ದಾರೆ. ಅದರಂತೆ ಜೂನ್ ತಿಂಗಳವರೆಗೆ ಸಮಯ ಕೊಟ್ಟಿದ್ದೇವೆ.

We are insisting that the new meters should be fixed. We have given them some breathing time to shift from old meters to new meters.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ 3 ಖಾಸಗೀ ಕಂಪನಿಗಳ ಹೆಸರುಗಳನ್ನು ಕೊಟ್ಟಿದ್ದೀರಿ. ಈ ಮೀಟರ್‌ಗಳನ್ನು ತಯಾರು ಮಾಡುವ ಸರ್ಕಾರೀ ಕಂಪನಿಗಳು ಇರಲಿಲ್ಲವೇ ? ಸರ್ಕಾರೀ ಕಂಪನಿಗಳಿಂದ ಮೀಟರ್‌ಗಳನ್ನು ಪಡೆಯುವುದಕ್ಕೆ ಏನಾದರೂ ಪ್ರಯತ್ನ ನಡೆಸಿದ್ದೀರಾ ?

Sri AZEEZ SAIT.—ಸರ್ಕಾರಿ ಕಂಪನಿಯೋ ಖಾಸಗೀ ಕಂಪನಿಯೋ ಎಂಬುವು ತೀವ್ರವಾದ ವಿಷಯಗಳಲ್ಲ. The cases of applicants who fulfil the requisite conditions will be favourably considered. The S.T.A. has approved the three meters. The applications will be sent to him.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರೀ ವಲಯದಲ್ಲಿ ಈ ಮೀಟರ್‌ಗಳನ್ನು ತಯಾರು ಮಾಡುವ ಕಂಪನಿಗಳು ಇವೆಯೋ ಎಂಬುದನ್ನು ತಾವು ತಿಳಿದುಕೊಳ್ಳಲಿಲ್ಲವೇ ?

ಶ್ರೀ ಅಜೀಜ್ ಸೇಟ್.—ಅಪ್ಲಿಕೇಷನ್ ಹಾಕುವವರು ಅದನ್ನು ಆಲೋಚನೆ ಮಾಡಬೇಕೆ ಹೊರತು, ಹಾಲು ಎಲ್ಲಿ ಸಿಗುತ್ತದೆ, ಮೊಸರು ಎಲ್ಲಿ ಸಿಗುತ್ತದೆ ಎಂಬುದನ್ನು ನಾವು ಹುಡುಕಿಕೊಂಡು ಹೋಗುವುದಕ್ಕಾಗುವುದಿಲ್ಲ. ಸರ್ಕಾರಿ ಕಂಪನಿಗಳು ಏನಾದರೂ ಇದ್ದರೆ ಅವರು ಖಾಸಗೀ ಕಂಪನಿಯವರೊಡನೆ ಕಾಂಪಿಟ್ ಮಾಡಿಕೊಂಡು ಮುಂದೆ ಬರಬೇಕು.

Sri B. B. SAYANAK.—Has it come to the notice of the Government that the Auto-rickshaw drivers, though they have fixed these meters to the autorickshaw, when the passengers sit in the rickshaw, they are not using them and are demanding money according to the whims and fancies of the drivers ?

Mr. DEPUTY SPEAKER.—That is outside the scope of the question.

ಶ್ರೀ ಎಸ್. ಬಂಗಾರಪ್ಪ.—ತಾವು ಆಟೋರಿಕ್ಷಾಗಳಿಗೆ ಸಂಬಂಧಪಟ್ಟ ಮೀಟರ್‌ಗಳನ್ನು ಖರೀದಿ ಮಾಡುವ ಸಮಯದಲ್ಲಿ ಖಾಸಗೀ ಕ್ಷೇತ್ರದಿಂದ ಮತ್ತು ಸರ್ಕಾರೀ ಕ್ಷೇತ್ರದಿಂದ ಅಪ್ಲಿಕೇಶನ್‌ಗಳನ್ನು ಇನ್‌ವೈಟ್ ಮಾಡಿದ್ದೀರಾ ?

Sri AZEEZ SAIT.—I have already told you about this matter. It had become a matter of public importance, because the applications were there before the S.T.A. but the matter has gone for review to the Appllate Tribunal. There is hue and cry even to-day. All appelications are still pending before the S.T.A. If there are any others, they can also come forward.

Sri S. BANGARAPPA.—Did the Governnent invite applications either from the Public Sector or the Private Sector ?

Mr. DEPUTY SPEAKER.—Mr. Bangarappa, I like your interpellation but it is not within the scope of the question.

Sri S. BANGARAPPA.—It arises out of the question.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮೂರು ಖಾಸಗೀ ಕಂಪನಿಯವರಿಗೆ ಅನುಮತಿ ನೀಡಿರಬೇಕಾದರೆ ಅಪ್ಲಿಕೇಷನ್ ಪಡೆದಿರಬೇಕು. ಆ ರೀತಿ ಅಪ್ಲಿಕೇಷನ್‌ಗಳನ್ನು ಪಡೆದಾಗ ಸರ್ಕಾರೀ ಕಂಪೆನಿಗಳು ಏನಾದರೂ ಮುಂದೆ ಬಂದಿದ್ದವೇ ಎಂಬುದನ್ನು ತಿಳಿಸಬೇಕು ?

Mr. DEPUTY SPEAKER.—It has already been replied.

ಶ್ರೀ ಎಸ್. ಬಂಗಾರಪ್ಪ.—ರಾಜ್ಯ ಸರ್ಕಾರದವರು ಖಾಸಗೀ ಕ್ಷೇತ್ರದಲ್ಲಿಯಾಗಲೀ, ಸರ್ಕಾರೀ ಕ್ಷೇತ್ರದಲ್ಲಿಯಾಗಲೀ ಇರತಕ್ಕಂಥ ಕಂಪನಿಯವರು ಅಪ್ಲಿಕೇಷನ್‌ಗಳನ್ನು ಹಾಕಿಕೊಳ್ಳಬಹುದೆಂದು ಈ ಬಗ್ಗೆ ಅಪ್ಲಿಕೇಷನ್ ಕಾಲ್‌ಫಾರ್ ಮಾಡಿದ್ದರೇ ಎಂಬ ಬಗ್ಗೆ ನಾವು ಕೇಳುತ್ತಿರುವುದು ?

Sri AZEEZ SAIT.—The best thing is Notice.

Sri V. N. PATIL.—It is for the Speaker to decide whether we should give notice or not.

ಉಪಾಧ್ಯಕ್ಷರು.—ಆ ಬಗ್ಗೆ ಉತ್ತರ ಕೊಡಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರಿ ಕಂಪೆನಿಗಳು ಏನಾದರು ಅಪ್ಲಿಕೇಷನ್ ಹಾಕಿಕೊಂಡಿದ್ದವೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬಹುದು ?

Mr. DEPUTY SPEAKER.—Those who manufacture good meters might have been authorised.

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಮಂತ್ರಿಗಳು best thing is notice ಎಂದು ಹೇಳಿದರು. Best thing ಅನ್ನುವುದರ ಅರ್ಥವಾದರೂ ಏನು ! ಆ ರೀತಿ ಉತ್ತರ ಕೊಟ್ಟರೆ ಪ್ರಶ್ನೆ ಕೇಳುವವರಿಗೆ ಅವಮಾನ ಮಾಡಿದಂತೆ ಆಗುವುದಿಲ್ಲವೇ !

Mr. DEPUTY SPEAKER.—I will explain. 'The best thing is Notice' means: 'I require Notice'. Interpellation must arise resonably out of the answer given. This is outside the scope. When details which cannot be sought for in the body of the question and which cannot be replied by the Mintster, are asked, the best thing for the Minister would be to say: 'I will require Notice', instead of confusing himself.

ಶ್ರೀ ಕೋಣಂದೂರು ಲಿಂಗಪ್ಪ.—ಯಾವ ಯಾವ ಕಂಪನಿಗಳಿಂದ ಅರ್ಜಿಗಳು ಬಂದಿದ್ದವು ಎಂಬ ಬಗ್ಗೆ ಇಲ್ಲಿ ಪ್ರಶ್ನೆಯೇ ಇರಬೇಕಾದರೆ ನೋಟೀಸ್ ಬೇಕು ಎಂದರೆ ಏನು ಹೇಳುವುದು ?

ಶ್ರೀ ಕೆ. ಎಫ್. ಪಾಟೀಲ್—ಯಾರು ಆಟೋರಿಕ್ಷಾ ಮೀಟರ್‌ಗಳನ್ನು ತಯಾರು ಮಾಡುವವರಿದ್ದಾರೆ, ಅವರುಗಳು ತಮ್ಮಲ್ಲಿ ತಯಾರಾಗತಕ್ಕಂಥ ಮೀಟರ್‌ಗಳನ್ನು ಕೊಳ್ಳಬೇಕೆಂದು ಸರ್ಕಾರದವರನ್ನು ಕೇಳಿರಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದವರು ಕೊಳ್ಳುತ್ತಾರೆ ಎಂದು ಕನಸು ಬೀಳಬೇಕೇ !

Sri AZEEZ SAIT.—I say that the matter is very simple; I have furnished the information that I have with me. If my friend Mr. Thimmappa thinks that the STA has not acted justifiably in this matter, let him spell out which is the company which he has in mind; I will see that the matter is looked into. Where is the difficulty ?

ಶ್ರೀ ಕಾಗೋಡು ತಿಮ್ಮಪ್ಪ.—ಅರ್ಜಿಗಳನ್ನು ವಿಲೇವಾರಿ ಮಾಡತಕ್ಕ ಸಂದರ್ಭದಲ್ಲಿ ಮೀಟರುಗಳನ್ನು ತಯಾರು ಮಾಡತಕ್ಕ ಕಂಪನಿಗಳಿಂದ ಏನಾದರೂ ಅರ್ಜಿಗಳನ್ನು ಬಹಿರಂಗವಾಗಿ ಕರೆದಿದ್ದೀರಾ ? ಹಾಗಿದ್ದರೆ ಯಾರ ಯಾರಿಂದ ಅರ್ಜಿಗಳು ಬಂದಿದ್ದುವು ಎಂದು ಕೇಳಿದ್ದೇವೆ. ಅದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಅಜೀಜ್ ಸೇಟ್.—ನೋಟೀಸ್ ಬೇಕು ಎಂದು ಹೇಳಿದ್ದೇನೆ.

Illicit removal of Halmaddi Trees in the State Forets

560. SRI A. G. KODGI (Baindur).—

Will the Minister for Agriculture and Forests be pleased to state :-

(a) whether it has come to the notice of the Government that illiet removal of Halmaddi trees is going on since 1970 in the State Forests ;

(b) the action taken by the Government in this behalf ;

(c) whether there is any hand of contractors in such illicit removal of said trees ;

(d) whether details regarding illiet removal of said trees in Mangalore and Coondapur Divisions would be furnished ;

(e) the number of contractors who have been fined in this behalf and the extent of fine levied ;

(f) whether it is a fact that there is a complaint to the effect that such contractors are again granted Halmaddi contracts ; if so, the action taken ?

SRI K. H. PATIL (Minister for Agriculture and Forests).—

(a) Yes.

(b) Action has been taken against the persons responsible by imposing fines.

(c) Yes,

(d) Yes. Please see Statement I appended.

(e) The details are as at Statement II appended.

(f) Yes. As the contractors have been penalised heavily, it was not felt necessary to forbid them from participation in the tenders.

STATEMENT-I

Sl. No.	Name of the Contractor		Penalty levied
1	2		3
	Coondapur Division		
	Sriyuths :		Rs.
1	B. S. Mohiddin Saheb	...	20,525-00
2	do	...	17,050-00
3	do	...	12,700-00
4	T. M. Zackariya	...	2,300-00
5	B. S. Ahamed Pasha	...	11,275-00
6	do	...	26,900-00
7	do	...	6,800-00

(SRI K. H. PATIL)

1	2	3
	Mangalore Division	
	Sriyuths :	Rs.
1	Keshava Naik ...	30-00
2	Chaniya Naik ...	30-00
3	Pakeeramaniyar ...	80-00
4	B. S. Usman Saheb ...	3,000-00
5	Mohamed ...	1,400-00
6	M. Malik ...	25-00
7	Ibrahim Saheb ...	100-00
8	B. S. Usman ...	5,000-00
9	Manjappa ...	700-00
10	Kannappa ...	300-00

STATEMENT II

(Concerns entire State)

1	2	3
	Sriyuths :	Rs.
1	B. S. Akbar Sab Sakim Sagar ...	13,150-00
2	B. S. Khaleel Bhasha ...	3,800-00
3	Abdul Rasheed ...	5,600-00
4	B. S. Mohiddin Sab ...	50,275-00
5	T. M. Zackariya ...	2,300-00
6	B. S. Ahamed Pasha ...	44,975-00
7	Keshava Naik ...	30-00
8	Chaniya Naik ...	30-00
9	Pakeeramaniyar ...	80-00
10	B. S. Usman Saheb ...	8,000-00
11	Mohamed	1,400-00
12	M. Malik ...	25-00
13	Ibrahim Sahib	100-00
14	B. S. Usman ...	5,000-00
15	Manjappa ...	700-00
16	Kannappa	300-00

ಶ್ರೀ ಯು. ಟಿ. ಫರೀದ್.—ಕೆಲವು ಕಂಟ್ರಾಕ್ಟರುಗಳು ಅಕ್ರಮವಾಗಿ ಹಾಲುಮಡ್ಡಿ ಮರಗಳನ್ನು ತೆಗೆದಿರುವುದಕ್ಕೆ ದಂಡ ಸಹ ವಿಧಿಸಿ ಅವರಿಗೇ ಕಂಟ್ರಾಕ್ಟ್ ಕೊಡಲಾಗಿದೆ ಎಂದು ಹೇಳಿದ್ದಾರೆ. ಇನ್ನು ಮುಂದಾದರೂ ಹಾಗೆ ಕೊಡದೆ ತಡೆಯುವುದು ಒಳ್ಳೆಯದಲ್ಲವೇ ?

† ಶ್ರೀ ಕೆ. ಎಚ್. ಪಾಟೀಲ್.—ಈಗ ಇದ್ದ ಕಾನೂನು ಪ್ರಕಾರ ಅವರಿಗೆ ಹೆವಿ ಪೆನಾಲ್ಟಿ ಹಾಕಿದ್ದೇವೆ ಮತ್ತು ಪೆನಾಲ್ಟಿ ಬದ್ದವರಿಗೆ ಕೂಡ ಕಂಟ್ರಾಕ್ಟ್ ಮುಂದುವರಿಸಬಹುದೆಂದು ಕಾನೂನು ಇಲಾಖೆಯಿಂದ ಸಲಹೆ ಬಂದಿದೆ. ಆದರೆ ಮಾನ್ಯ ಸದಸ್ಯರು ಅಭಿಪ್ರಾಯ ಪಡುವುದಾದರೆ ನಾನು ಅವರನ್ನು ಬ್ಲಾಕ್ ಲಿಸ್ಟಿನಲ್ಲಿ ಹಾಕುವ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಬಹಳ ಕಾಲದಿಂದ ಹಾಲು ಮಡ್ಡಿ ಕಳ್ಳ ವ್ಯಾಪಾರ ಮಾಡುತ್ತಿದ್ದ ಒಬ್ಬ ಮನುಷ್ಯ ಸಾಗರದಲ್ಲಿ ಸಿಕ್ಕಿಬಿದ್ದಿದ್ದು ಆತನಿಂದ ಹಾಲುಮಡ್ಡಿಯನ್ನು ಕೂಡ ವಶಪಡಿಸಿಕೊಂಡಿದ್ದಾರೆ. ಇವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ? ಒಬ್ಬ ಮಂತ್ರಿವರ್ಯರ ರಕ್ಷಣೆಯಲ್ಲಿ ಕ್ರಮ ತೆಗೆದುಕೊಳ್ಳುವುದನ್ನು ತಪ್ಪಿಸುವ ಪ್ರಯತ್ನ ನಡೆದಿದೆ ಎಂದು ಗೊತ್ತಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ ?

ಶ್ರೀ ಕೆ. ಎಚ್. ಪಾಟೀಲ್.—ಯಾವ ಮಂತ್ರಿಗಳೂ ಕೂಡ ಇಂಥ ಕಳ್ಳರನ್ನು ಬಿಡಿರಿ ಎನ್ನುವಂಥ ಮಾತನ್ನು ಈ ತನಕ ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅರಣ್ಯದಲ್ಲಿ ಮರಗಳನ್ನು ಕಡಿಯತಕ್ಕ ವಿಷಯದಲ್ಲಿ ಪತ್ತೆ ಹಚ್ಚಲು ಒಂದು ಸ್ಕ್ವಾಡ್ ಮಾಡಿರುವುದಾಗಿ ಹೇಳಿದ್ದಾರೆ. ಅದರಿಂದ ಕಳ್ಳ ಸಾಗಾಣಿಕೆ ಬಹಳ ಕಡಮೆ ಮಾಡಿದ್ದಾರೆ, ಬೇರೆ ಮರಗಳನ್ನು ಕಡಿಯುವುದನ್ನು ನಿಲ್ಲಿಸುವುದಕ್ಕೆ ಏನು ಸ್ಕ್ವಾಡ್ ಮಾಡಿದ್ದಾರೆ ಅವರಿಗೆ ಹಾಲು ಮಡ್ಡಿ ಮರ ಕಡಿಯುವುದನ್ನು ನಿಲ್ಲಿಸುವ ಕೆಲಸವನ್ನೂ ವಹಿಸಿದ್ದಾರೆಯೋ, ಅಥವಾ ಇದಕ್ಕಾಗಿ ಬೇರೆ ಏನಾದರೂ ಕಾರ್ಯಕ್ರಮವಿದೆಯೋ ?

ಶ್ರೀ ಕೆ. ಎಚ್. ಪಾಟೀಲ್.—ಸ್ಕ್ವಾಡ್‌ಗೂ ಅಧಿಕಾರ ಕೊಟ್ಟಿದ್ದೇವೆ, ಇಲಾಖೆಯ ಅಧಿಕಾರಿಗಳೂ ಬಂದ್ ಮಾಡಲಕ್ಕೆ ಪ್ರಯತ್ನ ಮಾಡುತ್ತಾರೆ. ಇನ್ನು ಯಾವುದಾದರೂ ಬೇರೆ ರೀತಿ ಮಾಡಬೇಕೆಂಬುದು ಮಾನ್ಯ ಸದಸ್ಯರ ಗಮನದಲ್ಲಿದ್ದರೆ, ತಿಳಿಸಿದರೆ ಅದನ್ನು ಅಮಲಿನಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಹಾಲುಮಡ್ಡಿ ಮರವನ್ನು ಕಳ್ಳ ಸಾಗಾಣಿಕೆ ಮಾಡಿದವರಿಗೆ ಹೆಚ್ಚಿನ ಪೆನಾಲ್ಟಿ ಹಾಕಿರುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಒಂದು ಸಲ ಹೆಚ್ಚು ಪೆನಾಲ್ಟಿ ಹಾಕಿದರೆ ಅವರನ್ನು ಬ್ಲಾಕ್ ಲಿಸ್ಟಿನಲ್ಲಿಡುತ್ತಾರೆ. ಹೆವಿ ಪೆನಾಲ್ಟಿಯನ್ನು ಹಾಕಿದ ಮೇಲೆ ಕೂಡ ಅವರಿಗೇ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಸಮಾಜಘಾತುಕ ಕೆಲಸಗಳನ್ನು ಮಾಡುವವರಿಗೆ ಸರಿಯಾದ ಶಿಕ್ಷೆ ವಿಧಿಸಲು ಅಗತ್ಯವಾದಲ್ಲಿ ಇರುವ ಕಾನೂನನ್ನು ತಿದ್ದುಪಡಿ ಮಾಡುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅವರಿಗೆ ಹಾಕಿರುವುದು ಪೆನಾಲ್ಟಿ ಎಂದು ಆಗುವುದಿಲ್ಲ. ನಿಯಮಗಳ ಪ್ರಕಾರ ಅವರಿಗೆ ಕಾಂಟ್ರಾಕ್ಟ್ ಪುನಃ ಮುಂದುವರಿಸಲೇ ಬೇಕಾಗುತ್ತದೆಂದು ನನಗೆ ಲಾ ಡಿಪಾರ್ಟ್‌ಮೆಂಟಿನಿಂದ ಸಲಹೆ ಬಂದಿದೆ. ನನ್ನ ಅಭಿಪ್ರಾಯದಲ್ಲಿ ಮಾನ್ಯ ಸದಸ್ಯರು ಹೇಳುವುದನ್ನು ಒಪ್ಪುತ್ತೇನೆ. ಫಾರೆಸ್ಟ್ ಆಕ್ಟಿಗೆ ಒಂದು ತಿದ್ದುಪಡಿಯನ್ನು ಮಾಡಬೇಕು ಎನ್ನುವುದಾದರೆ ಅದನ್ನೂ ಮಾಡುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಮರಗಳನ್ನು ಕಂಟ್ರಾಕ್ಟಿಗೆ ಕೊಡುವಾಗ ಅಲ್ಲಲ್ಲಿರುವ ಮರಗಳನ್ನು ಕಡಿಯುವ ಉದ್ದೇಶದಿಂದ ಪತ್ತೆ ಮಾಡುವುದಕ್ಕಾಗಿ ಅನೇಕ ಮರಗಳನ್ನು ಕಡಿದು ಹಾಕತಕ್ಕ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಅದೇ ರೀತಿ ಬೆಂಕಿ ಬಿದ್ದು ಸಾವಿರಾರು ಎಕರೆ ಕಾಡು ಸುಟ್ಟು ಹಾಕಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ? ಕಾಡಿನ ಒಳಗೆ ಹೋಗುವುದಕ್ಕೆ ದೊಡ್ಡ ದೊಡ್ಡ ಮರಗಳನ್ನು ಕಡಿದು ಹಾಕತಕ್ಕದ್ದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೆ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿದ್ದ ಹಾಗೆ ಧೂಪದ ಮರಗಳು ಅಲ್ಲೊಂದು ಇಲ್ಲೊಂದು ಇರುತ್ತವೆ. ಅವುಗಳಿಗೆ ನಂಬರ್ ಹಾಕಿರುತ್ತೇವೆ. ಇಷ್ಟು ಧೂಪದ ಮರಗಳನ್ನು ಕಂಟ್ರಾಕ್ಟಿಗೆ ಕೊಟ್ಟಿದೆ ಎಂದು ಹೇಳುತ್ತೇವೆ. ಸಮಾಜದಲ್ಲಿರುವಂಥ ಎಲ್ಲರೂ ಒಳ್ಳೇ ಜನರಿರುವುದಿಲ್ಲ, ಕೆಲವರು ಕೆಟ್ಟ ಜನರೂ ಇರುತ್ತಾರೆ. ಕೆಟ್ಟ ಜನರು ಗಿಡಗಳನ್ನು ಕಡಿದೇ ತೆಗೆದುಕೊಂಡು ಹೋಗುತ್ತಾರೆ. ಅಂಥದನ್ನು ಬಂದ್ ಮಾಡಲಿಕ್ಕೆ ಏನು ಮಾಡಬೇಕೆಂದು ದೀರ್ಘವಾಗಿ ಆಲೋಚನೆ ಮಾಡಲಿಕ್ಕೆ ಹತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಾಂಗ್ರೆಸ್ ಪಕ್ಷದ ಒಬ್ಬ ಪ್ರಮುಖ ಕಾರ್ಯಕರ್ತ ಸಾಗರದ ಅಶೀವಂದಪ್ಪ ಎಂಬುವವರಿಂದ ಹಾಲುಮಡ್ಡಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಎಚ್. ಪಾಟೀಲ್.—ನೋಟೀಸ್ ಕೊಟ್ಟರೆ ಹೇಳುತ್ತೇನೆ. ನನ್ನ ಹತ್ತಿರ ಕೆಲವು ದಪರುಗಳು ಬಂದಿವೆ. ಅದರಲ್ಲಿ ಮಾನ್ಯ ಸದಸ್ಯರು ಹೇಳುವ ಹೆಸರು ಇದೆಯೋ ಇಲ್ಲವೋ ಗಮನಿಸುತ್ತೇನೆ. ಯಾರು ಯಾವ ಪಕ್ಷಕ್ಕೆ ಸಂಬಂಧಿಸಿದವರು ಎನ್ನುವುದು ನನಗೆ ಗೊತ್ತಿಲ್ಲ.

Categories of Posts Entrusted to Recruitment Committees

666. SRI DODDATHIMMAIHA (Gulur).—

Will the Chief Minister be pleased to state :—

(a) the Classes of posts that have been taken from purview of Public Service Commission for the past 3 years and entrusted to the Recruitment Committees;

(b) the reasons therefor ?

SRI D. DEVARAJ URS (Chief Minister).—

(a) The following posts were taken out of the purview of the Public Service Commission and Recruitment was entrusted to the Departmental Recruitment Committees in 1971.

All Class III Posts other than the posts of Assistants, I Division Clerks. Junior Assistants and II Division Clerks in all Departmene and Secondary School Assistants (Grade II) and Secondary Scho-Language Assistants (Grade II) in the Department of Public Instruction, in the following scales of pay, namele :—

(i) Rs. 80-3-110-4-130-5-145.

(ii) Rs. 90-4-110-5-170-EB-6-200.

(iii) Rs. 100-5-150-6-180-EB-10-220.

(vi) Rs. 120-5-150-8-190-EB-10-240.

(v) Rs. 130-5-140-8-180-EB-10-260-15-290.

The posts of Stenographers in the scales of Rs. 160-10--260 EB-15-350 in the Mysore Government Secretariat Services.

(b) This was done on the recommendations of the Pay Commission.

SRI DODDA THIMMIAH.—Sir, will the Government give us an idea whether these recruitment committees have observed the reservation in appointments of SC and ST *in toto*.

† SRI D. DEVARAJ URS.—Government is aware that they are observing the rules.

ಶ್ರೀ ಎಸ್. ಬಂಗಾರಪ್ಪ.—ಪಟ್ಟಿಯಲ್ಲಿರತಕ್ಕ ಅಧಿಕಾರಿಗಳ ನೇಮಕಾತಿ ವಿಷಯದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ವ್ಯಾಪ್ತಿಯಿಂದ ತಗೆದು ಪ್ರತ್ಯೇಕ ಸಮಿತಿಗಳನ್ನು ಮಾಡಲಾಗಿದೆ ಎಂದು ತಿಳಿಸಿದ್ದಾರೆ, ಇತ್ತೀಚೆಗೆ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಪ್ರಥಮ ದರ್ಜೆ ಗುಮಾಸ್ತರನ್ನು ಸೆಲೆಕ್ಟ್ ಮಾಡಿ ಲಿಸ್ಟ್ ಒಂದು ತಿಂಗಳ ಮುಂಚೆ ಪಬ್ಲಿಷ್ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

Sri D. DEVARAJ URS.—These appointments were with the PSC and that is why they have given. Now we have removed them.

ಶ್ರೀ ಎಸ್. ಬಂಗಾರಪ್ಪ.—ಪ್ರಥಮ ದರ್ಜೆ ಗುಮಾಸ್ತರ ನೇಮಕವನ್ನು ಪಬ್ಲಿಕ್ ಸರ್ವಿಸ್ ಕಮಿಷನ್‌ನಿಂದ ತೆಗೆದು ಬೇರೆ ಸಮಿತಿಗಳಿಗೆ ಕೊಟ್ಟಿದ್ದಾರೆ. ಆದರೆ ಪಬ್ಲಿಕ್ ಸರ್ವಿಸ್ ಕಮಿಷನ್ ನವರು ಈಚೆಗೆ ಒಂದು ಪಟ್ಟಿಯನ್ನು ಪ್ರಕಟ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ?

ಶ್ರೀ ಡಿ. ದೇವರಾಜ ಅರಸ್.— ಉತ್ತರದಲ್ಲಿ ಕೊಟ್ಟಿರುವ ಹುದ್ದೆಗಳನ್ನುಳಿದು ಬಾಕಿ ಹುದ್ದೆಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಸಮಿತಿಗಳನ್ನು ಮಾಡಲಾಗಿದೆ, ಎಂದು ಕೊಟ್ಟಿದೆ.

Sri DODDA THIMMIAH.—May I know whether these recruitment committees formed out of the jurisdiction of the PSC, follow the same rules of recruitment that are followed by the PSC ?

Sri D. DEVARAJ URS.—We have framed different rules of recruitment. In some matters they may differ. For the departmental recruitment, seperate rules have been framed.

ಶ್ರೀ ಎಂ. ಎಚ್ ಜಯಪ್ರಕಾಶ ನಾರಾಯಣ.— ಕೇಡರ್ ಆಡ್ ರಿಕ್ರೂಟ್‌ಮೆಂಟ್ ರೂಲ್ಸ್ ಏನಿದೆ ಅದನ್ನು ರಿಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ಜಾರಿಗೆ ತಂದಿದೆ ಎಂದು ಹೇಳಿದ್ದರು. ಹೊಸದಾಗಿ ನೇಮಕವಾಗಿರತಕ್ಕ ಕಮಿಟಿಗಳಲ್ಲಿ ಜಾತಿವಾದಗಳು ನಡೆಯುತ್ತಿವೆ, ರಾಜಕೀಯ ನಡೆಯುತ್ತಿವೆ, ಆದ್ದರಿಂದ ಈ ಕಮಿಟಿಗಳನ್ನು ರದ್ದು ಮಾಡಿ ಪಬ್ಲಿಕ್ ಸರ್ವಿಸ್ ಕಮಿಷನ್ ನವರೇ ಅದನ್ನೂ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ? ಕ್ಲಾಸಿಫಿಕೇಷನ್ ಆಫ್ ವೇಕೆನ್ಸಿ ಮತ್ತು ಸ್ಕೈಕಲ್ ಆಫ್ ಅಪಾಯಿಂಟ್‌ಮೆಂಟ್ಸ್ ರದ್ದು ಮಾಡಿದ್ದಾರೆ. ಅದನ್ನೂ ಜಾರಿಗೆ ತರುತ್ತೀರಾ ?

Mr. DEPUTY SPEAKER.—For that, you will have to bring a separate question.

Sri D. DEVARAJ URS.—I am sorry, the Hon'ble Member is bringing more than one issue in this question. I can only say, it may be his opinion that it is *jathivada* ete. It is stated by everybody. Unless there are specific instances and they are brought up, Government cannot take action and rectify, Otherwise, I am not prepared to accept his opinion.

Secondly, even this Divisional recruitment Committees came into existance because of the recommendations of the Pay Commission. Government also found it rather difficult to get recruitment in time from the PSC. That is the experience we had at one time. We had to take away these things from the purview for quickening the pace of work particularly in regard to recruitmeat of certain categories of posts. The constitutional requirements reservations, Safeguards, etc., will be followed whether here or there.

ಶ್ರೀ ಎಂ. ಎಸ್. ಕೃಷ್ಣನ್.— ತಾವು ಈಗ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಏನು ಮಾಡಿದ್ದೀರಿ ಅವು ಒಂದೊಂದೂ ಒಂದೊಂದು ರೀತಿ ಸೇರುತ್ತವೆ. 6 ತಿಂಗಳಿಗೆ ಒಂದು ಸಾರಿ ಸೇರುತ್ತವೆ ಎಂದು ದೂರುಗಳು ಬಂದಿವೆ. ಆದ್ದರಿಂದ ಅಲ್ಲಿ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಸೇರಿ

(ಶ್ರೀ ಎಂ. ಎಸ್. ಕೃಷ್ಣನ್)

ರಿಕ್ರೂಟ್‌ಮೆಂಟ್ ಮಾಡುತ್ತಿಲ್ಲ. ಆದ್ದರಿಂದ ಆ ಕಮಿಟಿಗಳು 3 ತಿಂಗಳಿಗೆ ಒಂದು ಸಾರಿ ಸೇರಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ತಾವು ಡೈರೆಕ್ಷನ್ ಕೊಡುತ್ತಿರಾ ?

Sri D. DEVARAJ URS.—The hon. Member's suggestion will be kept in mind.

Rise in the Firewood Permit Rate

739. **Sri S. BANGARAPPA** (Sorab).—

Will the Minister for Agriculture and Forests be pleased to state :—

(*a*) whether it has come to the notice of Government that there was a peaceful agitation by the people of Kharwar District demanding the reduction in the rates of permit for firewood ;

(b) the action the Government propose to take to reduce the rates ?

Sri K. H. PATIL (Minister for Agriculture and Forests).—

(*a*) Yes.

(b) Government has considered and taken decision. However Legislators are being consulted over the subject.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಕಾರವಾರ ಜಿಲ್ಲೆಯಲ್ಲಿ ಸೌದೆ ವಿಷಯದಲ್ಲಿ ಸತ್ಯಾಗ್ರಹ ಬಹಳ ದಿವಸಗಳಿಂದ ನಡೆಯುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ರಾಜ್ಯದ ಅನೇಕ ಕಡೆಗಳಿಂದ ಸೌದೆ ದರವನ್ನು ಕಡಿಮೆ ಮಾಡಬೇಕೆಂದು ಸಾರ್ವಜನಿಕರಿಂದ ಅರ್ಜಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಕೆ. ಎಚ್. ಪಾಟೀಲ್.—ಅರ್ಜಿಗಳು ಬಂದಿವೆ. ಅವುಗಳನ್ನು ಸರ್ಕಾರ ವಿಚಾರ ಮಾಡುತ್ತಿದೆ. ಆ ದರವನ್ನು ಕಡಿಮೆ ಮಾಡುವ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಕೇಳಿದೆ. ಮತ್ತು ಅದನ್ನು ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ಎಸ್ ಎಂ. ಶೀರನಾಳಿ ಚಂದ್ರಶೇಖರ್.—ತಾವು ಶಾಸಕರ ಸಭೆಯನ್ನು ನಡೆಸಿ ಆ ಸೌದೆಯ ರೇಟನ್ನು ಕಡಿಮೆ ಮಾಡುವ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದಿರಿ, ಆದನ್ನು ಪೂರ್ತಿ ಮಾಡುವ ಬಗ್ಗೆ ಸರ್ಕಾರದ ಆಜ್ಞೆಯನ್ನು ಯಾವಾಗ ಹೊರಡಿಸುತ್ತೀರಾ ?

ಶ್ರೀ ಕೆ. ಎಚ್ ಪಾಟೀಲ್.—ಈಗಾಗಲೇ ಈ ಸಂಬಂಧದಲ್ಲಿ ಒಂದು ಸಭೆ ನಡೆದದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಇನ್ನೊಂದು ಸಭೆಯನ್ನು ಯಾವಾಗ ಮಾನ್ಯ ಸದಸ್ಯರಿಗೆ ಅನುಕೂಲವಾಗುತ್ತದೆ ಆಗ ಕರೆಯುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಮತ್ತೊಂದು ಸಭೆಯನ್ನು ಯಾವಾಗ ಕರೆಯುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ್.—ಶೀಘ್ರವಾಗಿ ಸಾಧ್ಯವಾದರೆ ನಾಳೆಯೇ ಕರೆಯುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈಗ ಇರುವ ದರ ಜಾಸ್ತಿಯಾಗಿರುವುದರಿಂದ ಜನಗಳಿಗೆ ಅನ್ಯಾಯವಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಇದು ನ್ಯಾಯಾನ್ಯಾಯದ ಪ್ರಶ್ನೆಯಲ್ಲ. ಅದನ್ನು ಜನಗಳಿಗೆ ಪುಕ್ಕಟೆಯಾಗಿ ಕೊಡಬೇಕೆಂದರೆ ಸರ್ಕಾರಕ್ಕೆ ಅನ್ಯಾಯವಾಗುತ್ತದೆ. ಜನಗಳಿಗೆ ಬೇಕಾದಂತಹ ಸೌಲಭ್ಯವನ್ನು ಎಷ್ಟರಮಟ್ಟಿಗೆ ಕೊಡವುದಕ್ಕೆ ಸಾಧ್ಯ ಎಂಬುದನ್ನು ರಾಜ್ಯದ ಹಿತವನ್ನು ನೋಡಿ ಕೊಂಡು ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಎಷ್ಟರಮಟ್ಟಿಗೆ ಈ ಬಗ್ಗೆ ಉತ್ಸುಕತೆ ಇದೆಯೆಂಬುದನ್ನು ನಾನು ತಿಳಿದುಕೊಂಡಿದ್ದೇನೆ.

New Steel Plant of M. I. S. L.

780. Sri B. BYRAPPAJI (Turuvekere).—

Will the Minister for Industries be pleased to state :—

(*a*) when the new steel pant was commissioned at Mysore Iron and Steel Ltd;

(*b*) the number of German Engineers who were deputed to work ;

(*c*) the amount of expenditure towards these Engineers (Salary, allowances, entertainment etc.) since the last one year ?

Sri S. M. KRISHNA (Minister for Industries).—

(*a*) The dates of commissioning of the various units of the new steel Plant are furnished below :—

1.	New Rolling Mills—Blooming Mills	2-9-1964
2.	120 Tonne Arc Furnace	10-2-1965
3.	Oxygen plant	14-6-1965
4.	New Rolling Mills Finishing Section	17-6-1965
5.	L. D. Plant	1-7-1965
6,	Lime Calcination plant	27-8-1965

(b) The total number of foreign technical personnel engaged in the new Steel Plant were 85 up to 1970-71.

(*c*) There was no foreign technicians serving the company for the New Steel Plant during the year 1971-72.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ ಎಂ. ಐ. ಎಸ್. ಎಲ್. ನಲ್ಲಿ ವಿದೇಶಿ, ತಾಂತ್ರಿಕ ಸಿಬ್ಬಂದಿ ವರ್ಗದವರು 85 ಜನ ಇಂಜಿನಿಯರು ಇದ್ದರು ಎಂದು ಹೇಳಿದ್ದೀರಿ, ಹಾಗಾದರೆ ಅಲ್ಲಿ ಅಷ್ಟು ವಿದೇಶಿ ಇಂಜಿನಿಯರುಗಳ ಅವಶ್ಯಕತೆ ಇತ್ತೇ ? ಅವರು ಅಲ್ಲಿ ಇದ್ದಂತಹ ಕಾಲದಲ್ಲಿ ಲಕ್ಷಾಂತರ ರೂಪಾಯಿ ಗಳನ್ನು ತಾವು ಖರ್ಚು ಮಾಡಿದ್ದೀರಿ, ಆದರೂ ಸಹ ಎಂ. ಐ. ಎಸ್. ಎಲ್. ನಲ್ಲಿ ಯಾವುದೂ ಅನು ಕೂಲವಾಗಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

† ಶ್ರೀ ಎಸ್. ಎಂ. ಕೃಷ್ಣ.—1962 ನೇ ಇಸವಿಯಿಂದ 1972 ನೇ ಇಸವಿಯವರೆಗೆ ನ್ಯೂ ಪ್ಲಾಂಟ್ ಕನ್‌ಸ್ಟ್ರಕ್ಷನ್‌ಗೋಸ್ಕರ 85 ಜನ ವಿದೇಶೀ ತಾಂತ್ರಿಕಾರರು ಅಲ್ಲಿ ಇದ್ದರು. ಆಗ ಸರ್ಕಾ ರವನ್ನು ನಡೆಸುತ್ತಿದ್ದಂತಹ ಜನ 92 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 85 ಜನ ತಾಂತ್ರಿ ಕಾರರನ್ನು ಇಟ್ಟುಕೊಂಡು ಕೆಲಸ ಮಾಡಿಸುತ್ತಿದ್ದರು.

Sri ABDL KHUDDUS ANWAR.—If I remember correct, the Blooming Mills and the New Rolling Mills Finishing Section were both commissioned on 2-9-1964. If so, what happened to the production during these four months ?

Sri S. M. KRISHNA.—How can I answer a question which is thrown up like this ? The question pertains to the date on which some of these Sections were commissioned and I have furnished the answers. If the non. Member wants any partieular information, he may frame a separate question.

ಶ್ರೀ ಬಿ. ಬೈರಪ್ಪಾಜಿ.—ಅವರಿಗೆ 92 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅವರನ್ನು ಕರೆಸಿದ್ದರು ಎಂದು ಹೇಳಿದ್ದೀರಿ, ಅವರನ್ನು ವಾಪಸ್ಸು ಕಳುಹಿಸುವುದಕ್ಕೆ ಮುಂಚೆ ಅವರಿಂದ ಆಗಬೇಕಾದಂತಹ ಕೆಲಸವನ್ನು ಇಲ್ಲಿಯ ಸಿಬ್ಬಂದಿ ವರ್ಗದವರೇ ಮಾಡುವಂತೆ ಅವರಿಂದ ನಮ್ಮ ಸಿಬ್ಬಂದಿ ವರ್ಗದವರಿಗೆ ಟ್ರೈನಿಂಗ್ ಕೊಟ್ಟು ಅದನ್ನು ಪೂರ್ತಿ ಮಾಡಿ ಕಳುಹಿಸಿದ್ದೀರಾ, ಮತ್ತು ಅವರಿಗೆ 92 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದಮೇಲೆ ಅದರಿಂದ ಅನುಕೂಲವಾಗಿದೆಯೋ ಅಥವಾ ಇಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಆ ಕೆಲಸ ಮುಗಿಯುವುದಕ್ಕೆ ಮುಂಚೆ ಆ ಟೆಕ್ನಿಷಿಯನ್ಸ್‌ಅನ್ನು ವಾಪಸು ಕಳುಹಿಸಿರತಕ್ಕ ಪ್ರಸಂಗ ನನ್ನ ಗಮನಕ್ಕೆ ಬಂದಿಲ್ಲ. ಆ ತಾಂತ್ರಿಕಜ್ಞರು ಅವರ ಕೆಲಸವನ್ನು ಮುಗಿಸಿದ ಮೇಲೆ ಅವರ ಅವಶ್ಯಕತೆ ಏನೂ ಇಲ್ಲ, ಇನ್ನು ಅಲ್ಲಿ ನಡೆಯಬೇಕಾಗಿರತಕ್ಕ ಎಲ್ಲಾ ಕೆಲಸ ಕಾರ್ಯಗಳೂ ಮತ್ತು ಪ್ರೊಡಕ್ಷನ್ ಎಲ್ಲವನ್ನೂ ನಮ್ಮ ರಾಜ್ಯದ ಸಿಬ್ಬಂದಿ ವರ್ಗದವರೇ ಮಾಡತಕ್ಕ ಅರ್ಹತೆಯನ್ನು ಪಡೆದಿದ್ದಾರೆ. ಇನ್ನು ವಿದೇಶಿ ತಾಂತ್ರಿಜ್ಞರು ಬೇಕಾಗಿಲ್ಲ ಎಂದು ನಮ್ಮ ಅಭಿಪ್ರಾಯ.

ಶ್ರೀ ಎಂ. ಎಸ್. ಕೃಷ್ಣನ್.—ಜರ್ಮನಿಯ ತಾಂತ್ರಿಜ್ಞರು, ವಿದೇಶಿಯರು ಬಹಳ ಜನ ಇದ್ದಾರೆ, ಅವರಿಂದ ಆಗಬೇಕಾದಂತಹ ಕೆಲಸವನ್ನು ನಮ್ಮದೇಶದ ಜನಗಳೇ ಮಾಡುವಂತಹ ಶಕ್ತಿ ಇದೆ ಎಂದು ಎಸ್ಟಿಮೇಟ್ ಕಮಿಟಿಯವರು ವರದಿ ಮಾಡಲಿಲ್ಲವೇ ? ಆ ವರದಿಯನ್ನು ತಾವು ಕಾರ್ಯಗತ ಮಾಡಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇದು ಕೇವಲ ನ್ಯೂಪ್ಲಾಂಟ್ ಸ್ಟೀಲ್ ಒಂದೇ ಅಲ್ಲ. ಅಲಾಯ್ ಸ್ಟೀಲ್ ಪ್ಲಾಂಟ್‌ನಲ್ಲಿ 83ಜನ ಇದ್ದರು. ಪಿಗ್ ಐರನ್ ಎಲೆಕ್ಟ್ರಿಕ್ ಫರ್ನೇಸ್‌ನಲ್ಲಿ 24ಜನಗಳು ಇದ್ದರು. ರಿಫ್ರಾಕ್ಟರಿ ಎಕ್ಸ್‌ಪ್ಯಾನ್‌ಷನ್‌ನಲ್ಲಿ 26 ಜನ ಇದ್ದರು. ಎಸ್ಟಿಮೇಟ್ ಕಮಿಟಿಯವರು ತಮ್ಮ ಅಭಿಪ್ರಾಯವನ್ನು ಹೊರಗಡವಿದ ಮೇಲೆ ಅಲ್ಲಿ ತಾಂತ್ರಿಕಜ್ಞರ ಅವಶ್ಯಕತೆ ಇಲ್ಲ ಎಂದು ಮ್ಯಾನೇಜ್‌ಮೆಂಟಿನವರು ಎಂದು ಒಂದು ನಿರ್ಧಾರಕ್ಕೆ ಬಂದಮೇಲೆ ಅವರೆಲ್ಲರನ್ನೂ ವಾಪಸ್ಸು ಕಳುಹಿಸಿದೆ.

ಉಪಾಧ್ಯಕ್ಷರು.—ಶ್ರೀ ಯು. ಟಿ. ಫರೀದ್ ಅವರು ಪ್ರಶ್ನೆ ನಂ. 805 ಕೇಳಬಹುದು.

Upgrading of Government Hospiatal, Coondapur

805. Sri U. T. FAREED (Magalore-II) [(on behelf of SRI A. G. KODGI (Baindur)].—

Will the Minister for Health be pleased to state :—

(*a*) whether any proposal has been received to upgrade the Government Hospital, Coondapur ;

(*b*) whether any proposal has been received to convert Kollur and Shiroor L. F. Dispensaries into Health Unit Type Dispensaries (Coondapur Taluk, South Kanara) ?

Sri H. SIDDAVEERAPPA (Minister for Health).—

(*a*) Yes.

(*b*) Orders sanctioning a Health Unit Type Dispensary at Kollur and to shift the existing Rural Dispensary (Ayurvedic) from Kollur to Kalthod village in Coondapur Taluk have been issued in G O. No. HMA 211 PPS 71, dated 24th November 1972.

Proposals for sanction of a Health Unit Type Dispensary at Shiroor has not been received.

ಶ್ರೀ ಯು. ಟಿ. ಫರೀದ್.—ನಾನು ಈ ಪ್ರಶ್ನೆಗೆ ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಲು ಬಯಸುವುದಿಲ್ಲ.

Hoarding of Foodgrains

352. H. D. DEVE GOWDA (Holenarasipur).—

Will the Minister of State for Food and Civil Supplies be pleased to state :—

(*a*) the number of persons in the State against whom action has been taken for hoarding essential commodities of daily need illegaly (Detailed information may be furnished upto 31st December 1972) ;

(*b*) out of them, the number of cases against whom prosecution were launched have been withdrawn (Detailed information may be furnished upto 31st December 1972) ?

Smt. E. E. VAZ (Minister of State for Food and Civil Supplies).—

(*a*) 3,356,

(*b*) 203. Further details can be had from the statement placed on the Table of the House.*

ಶ್ರೀ ಎಚ್. ಡಿ. ದೇವೇಗೌಡ.—ತಾವು ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ 513 ಕೇಸುಗಳನ್ನು ಡ್ರಾಪ್ ಮಾಡಲಾಗಿದೆ ಎಂದು ಹೇಳಿದ್ದೀರಿ, ಇದಕ್ಕೆ ಕಾರಣವೇನು ?

† ಶ್ರೀಮತಿ ಇ. ಇ. ವಾಜ್.—ಯಾವ ಕೇಸುಗಳು ಪ್ರೂವ್ ಆಗಿಲ್ಲ ಅಂಥಾ ಕೇಸುಗಳನ್ನೂ ಮತ್ತು ಮಿಸ್ಟೇಕ್ ಆಗಿರತಕ್ಕ ಕೇಸುಗಳನ್ನೂ ಡ್ರಾಪ್ ಮಾಡಿದೆ. ಮತ್ತು 3356 ಕೇಸುಗಳ ಸಂಬಂಧದಲ್ಲಿ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—203 ಕೇಸುಗಳನ್ನು ವಿತ್‌ಡ್ರಾ ಮಾಡಿದ್ದೇವೆ ಎಂದು ಹೇಳಿದ್ದೀರಿ, ಇದಕ್ಕೆ ಕಾರಣವೇನು ?

ಶ್ರೀಮತಿ ಇ. ಇ. ವಾಜ್.—ಸರಿಯಾಗಿ ಪ್ರೂಫ್ ಇಲ್ಲದೆ ಇರತಕ್ಕ ಕೇಸುಗಳನ್ನೂ ಮತ್ತು ಆಫೀಸರುಗಳು ಕೊಟ್ಟಂತಹ ಕೇಸುಗಳಲ್ಲಿ ಮಿಸ್ಟೇಕ್ ಆಗಿದ್ದಂತಹ ಕೇಸುಗಳನ್ನೂ ವಿತ್‌ಡ್ರಾ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇ ಗೌಡ.—ಚಾರ್ಜ್ ಷೀಟ್ ಹಾಕುವಾಗ ನಿಮ್ಮ ಅಧಿಕಾರಿಗಳು ನೋಡುವುದಿಲ್ಲವೇ ; ಮತ್ತು ಇದು ನಿಮ್ಮ ಪಕ್ಷದ ರಾಜಕೀಯ ಒತ್ತಡದಿಂದ ಆಗಿರುವುದು ಎಂದು ಒಪ್ಪಿಕೊಳ್ಳುತ್ತೀರಾ ?

---

* Library *Vide* No. 23, Dated 26-3-1973,

2-00 P. M.

ಶ್ರೀಮತಿ ಇ. ಇ. ವಾಜ್.—ಕೆಲವು ಸಲ ರೂರಲ್ ಏರಿಯಾಸ್‌ನಲ್ಲಿರುವ ಅಧಿಕಾರಿಗಳಿಗೆ ಅಮೆಂಡೆಡ್ ಆರ್ಡರ್ಸ್ ಗೊತ್ತಾಗುವುದಿಲ್ಲ. ಅಂಥ ಕೇಸುಗಳನ್ನು ವಿತ್‌ಡ್ರಾ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ನಗರದಲ್ಲಿ ಕೇಸ್ ವಿತ್‌ಡ್ರಾ ಮಾಡಿರುವುದು ಇಲ್ಲಿರುವಂತಹ ದೊಡ್ಡ ದೊಡ್ಡ ವರ್ತಕರು ಏನಿದ್ದಾರೆ ಅವರು ನಿಮ್ಮ ಪಕ್ಷಕ್ಕೆ ಹಣ ಕೊಡುವುದರಿಂದ. ಅವರ ಒತ್ತಡದಿಂದ ಹೀಗೆ ಮಾಡಿದ್ದೀರಲ್ಲವೇ ?

ಶ್ರೀಮತಿ ಇ. ಇ. ವಾಜ್.—ಇದು ತಪ್ಪು ಅಭಿಪ್ರಾಯ. ಅಂಥದ್ದು ಏನಾದರೂ ಇದ್ದರೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ.—ನೀವು ಹಾಕಿದ ಕೇಸುಗಳಲ್ಲಿ ಬೆಂಗಳೂರು ನಗರದಲ್ಲಿ ಎಷ್ಟೆಷ್ಟು ಸೇರಿವೆ ?

ಶ್ರೀಮತಿ ಇ. ಇ. ವಾಜ್.-ಅದರ ಬಗ್ಗೆ ಪ್ರತ್ಯೇಕವಾಗಿ ಒಂದು ಪಟ್ಟಿಯನ್ನು ಒದಗಿಸಿದ್ದೇವೆ. ಅದನ್ನು ತಾವು ನೋಡಬಹುದು.

ಶ್ರೀ ಎಂ. ಬಿ. ರಾಮಸ್ವಾಮಿ.—ಇಷ್ಟು ಕೇಸುಗಳಲ್ಲಿ ಎಷ್ಟು ಕೇಸುಗಳ ಮೇಲೆ ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂದು ತಿಳಿಸುತ್ತೀರಾ ?

Smt. E. E. VAZ.—Number of cases charge sheeted 2,381; No, of cases prosecuted 1,638, cases pending trial 778, cases acquitted 179, case under investigation 397, cases dropped 513.

Sri D. B. KALMANKAR.—May I know what type of action is taken against them ?

Smt. E. E. VAZ.—In some cases persons have been fined, in some cases goods have been confiscated and other action taken according to law.

ಶ್ರೀ ಎಸ್. ಬಂಗಾರಪ್ಪ.—ತಾವು (ಆ) ಉತ್ತರಕ್ಕೆ 203 ಕೇಸುಗಳನ್ನು ಕೈಬಿಡಲಾಗಿದೆ ಎಂದು ಹೇಳಿದ್ದೀರಿ. ಅಂದರೆ ಈ 203ರಲ್ಲಿ ಕಾನೂನುಗಳ ಬಗ್ಗೆ ಅಧಿಕಾರಿಗಳಿಗೆ ತಿಳಿವಳಿಕೆ ಇಲ್ಲದೆ ಹೀಗೆ ಕೈಬಿಟ್ಟಿದ್ದಾರೆಯೇ ಅಥವಾ ಬೇರೆ ಕಾರಣಗಳಿಗೆ ಮಾಡಿದ್ದಾರೆಯೇ ?

ಶ್ರೀಮತಿ ಇ. ಇ. ವಾಜ್.—ಅದು ಒಂದೇ ಅಲ್ಲ; ಅದರ ಜೊತೆಗೆ ಇತರ ಕಾರಣಗಳೂ ಇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಇತ್ತೀಚೆಗೆ ತೀರ್ಥಹಳ್ಳಿಯ ಆಗುಂಬೆಯಲ್ಲಿ ಲಾರಿಯಲ್ಲಿ ಆಹಾರಧಾನ್ಯವನ್ನು ಕೊಂಡೊಯ್ಯುತ್ತಿದ್ದಾಗ ಪೋಲೀಸರು ತಡೆಗಟ್ಟಿದರು. ಆಗ ಇವರು ಪೋಲೀಸರಿಗೆ ಹೊಡೆದು ತಪ್ಪಿಸಿಕೊಂಡು ಹೋಗಿದ್ದಾರೆ. ಅದು ಸಹ ಇದರಲ್ಲಿ ಸೇರಿದೆಯೇ ?

ಶ್ರೀಮತಿ ಇ. ಇ. ವಾಜ್.—ಅದು ಡಿಸೆಂಬರ್ 31ರ ಒಳಗೆ ಆಗಿದ್ದರೆ ಅದು ಇದರಲ್ಲಿ ಸೇರಿಸಲ್ಪಟ್ಟಿದೆ.

Sri B. B. SAYANAK.—You have said that 203 cases were withdrawn and 100 cases resulted in acquittal. Was it because there was no evidence ? Does that not mean it was an harassment to the persons who were prosecuted ?

Smt. E. E. VAZ.—Whenever a case is detected prosecution is launched and when they are proved such cases cannot be withdrawn.

Sri V. N. PATIL.—May I know what is the maximum amount of penalty levied and what was the maximum quantity of foodgrains confiscated ?

Smt. E. E. VAZ.—I can give detaills :—

From 1-1-1972 to 31-12-1972	quantity seized 91,240 qtls. worth Rs. 50,08,600
From 1-1-1973 to 22-3-1973	quantity seized 22,298 qtls. worth Rs. 15,63,540

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ಉತ್ತರದಲ್ಲಿ 3359 ಕೇಸುಗಳನ್ನು ಬುಕ್ ಮಾಡಿದ್ದಾರೆಂದು ಹೇಳಿದ್ದೀರಿ. ಅಂದರೆ ಇದರಲ್ಲಿ 10 ಕೆಜಿ, 20 ಕೆಜಿ, 15 ಕೆಜಿ ಯನ್ನು ಹಿಡಿದದ್ದೇ ಹೆಚ್ಚು ಎಂದು ಕಾಣುತ್ತದೆ. ಮನೆಗೆ ಉಪಯೋಗಿಸಲು ಇಟ್ಟಂತಹ ಅಕ್ಕಿಯನ್ನು ಪೋಲೀಸರು ಹಿಡಿದು ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರಿಗೆ ಗೊತ್ತಿದೆ ಹೇಗೆ ನಾವು ಲಾರಿಯನ್ನು ಹಿಡಿಯುತ್ತೇವೆಯೋ ಹಾಗೆಯೇ ಹೆಡ್ ಲೋಡುಗಳನ್ನು ಸಹ ಹಿಡಿಯುತ್ತಿದ್ದೇವೆ. ಲಾರಿಯಲ್ಲಿ ಹೋದರೆ ಹಿಡಿಯುತ್ತಾರೆಂದು 20-30 ಜನರು ಸೇರಿ ಹೆಡ್ ಲೋಡಿನಲ್ಲಿ ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ ಹಾಗೆ ಅದು ಕಾಣುತ್ತದೆ. ಅದರ ಜೊತೆಯಲ್ಲಿ ಮಾನ್ಯ ಸದಸ್ಯರ ಸಲಹೆಯನ್ನು ಸಹ ಗಮನಿಸುತ್ತೇವೆ.

Sri D. DEVARAJ URS.—Let us know if there are any cases which have been booked and which do not come within the purview of law. If there are any cases which do not come within the purview of law, we are wrong.

ಶ್ರೀ ಎಚ್. ಡಿ. ದೇವೇಗೌಡ.—ವಿವರಣೆ ಬೇಕಾದರೆ ಕೊಡಬಹುದು. ಸಣ್ಣ ಪುಟ್ಟ ಕೇಸುಗಳು ಅಂದರೆ 5 ಕೆಜಿ, 10 ಕೆಜಿ ಯ ಕೇಸುಗಳೇ ಇದರಲ್ಲಿ ಜಾಸ್ತಿ ಇವೆ.

Sri D. DEVARAJ URS.—I would submit that we need not jump to conclusions. If there is any harassment, it is highly wrong and I don't intend to continue such things. As long as the cases are booked according to law, nothing can be done.

Sri H. D. DEVE GOWDA.—You have given here hundreds of cases which have been acquitted without prosecution. Such cases are booked only with the purpose of harrasment by the police officers.

Sri D. DEVARAJ URS.—We are not in the least interested in harassing the people. With that approach we should not look into the cases. Sometimes withdrawals do take place for want of evidence, etc. Under what circumstance each case has been withdrawn is a matter which has got to be gone into. In majority of cases we cannot straightaway accept that they were all with a view to cause harassment. That is my point.

Mr. DEPUTY SPEAKER.—We will go to the next item.

CALLING ATTENTION TO A MATTER OF URGENT PUBLIC IMPORTANCE

re : Distrubances and Lathi Charge in Mudigere.

Sri M. S. KRISHNAN (Malleswaram).—I call the attention of the Hon'ble Chief Minister to the disturbance and lathi charge in Mudigere.

Sri D. DEVARAJ URS (Chief Minister).—I state as follows :—

The Police of Mudigere received a complaint on 25-2-1973 alleging that a girl aged about 16 years was assaulted by an unknown miscreant while she was returning to Gunibylu from Mudigere at about 13.00 hrs. on 24-2-1973. A case in Mudigere Police Station under section 341, 498, 506, 363 read with 511 IPC was registered. After thorough investigation, the identity of the accused was established and he was arrested, and the girl was subjected to Medical Examination.

Alleging that the Police had failed to take servere action against the accused person in this case, a group of students took out a procession in Mudigepe town on 27-2-1973 and proceeded to Bidarahalli Village (2 miles from Mudigere) where the incident took place and blocked the main road with stones and other materials. The local Police proceeded to the spot with armed reserve and requested the demonstrators to disperse. But the demonstrators not only refused to disperse, but also indulged in pelting stones at the Police party and attempted to damage a van carrying Kerosene oil. 3 Police constables received stone hits and the Police Jeep was slightly damaged. Apprehending further trouble, the Police resorted to a mild cane charge to disperse the crowd. Two persons who sustained minor injuries were treated in the hospital.

As precautionary measure, prohibitory order under Section 35 of the Mysore Police Act was promulgated. A peace Committee was constituted to restore normalcy and police pickets were posted to avert any untowards developments and to maintain law and order.

Principal of the local Junior College was requested to close the College till 4-3-1973.

Situation is reported to be peaceful.

ಶ್ರೀ ಎಂ. ಎಸ್. ಕೃಷ್ಣನ್.—ಈ ಘಟನೆ ಫೆಬ್ರುವರಿ 24ನೇ ತಾರೀಖಿನಲ್ಲಿ ಆಯಿತು. ನೀವು ಯಾರನ್ನು ಅರೆಸ್ಟ್ ಮಾಡಿದ್ದೀರಿ ? ಅದು ಯಾವ ತಾರೀಖು !

ಶ್ರೀ ಡಿ. ದೇವರಾಜ ಅರಸ್.—26-2-1973.

ಶ್ರೀ ಕೋಣಂದೂರು ಲಿಂಗಪ್ಪ.—24ನೇ ತಾರೀಖು ಘಟನೆ ನಡೆದಿದೆ. 27ನೇ ತಾರೀಖು ವಿದ್ಯಾರ್ಥಿಗಳು ಪ್ರದರ್ಶನವನ್ನು ನಡೆಸಿದ್ದಾರೆ. ಅದರ ವಿವರಗಳೇನು ?

ಶ್ರೀ ಡಿ. ದೇವರಾಜ ಅರಸ್.—ಈ ಘಟನೆಗೆ ಬೇರೆಬೇರೆ ಕಾರಣಗಳಿವೆ. ಈ ಘಟನೆ 23ನೇ ತಾರೀಖಿನಲ್ಲಿ ನಡೆದಿದೆ. 26ನೇ ತಾರೀಖಿನಲ್ಲಿ ಅರೆಸ್ಟ್ ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—24ನೇ ತಾರೀಖಿನಲ್ಲಿ ಘಟನೆ ನಡೆಯಿತು. 25ನೇ ತಾರೀಖಿನಲ್ಲಿ ಅರೆಸ್ಟ್ ಮಾಡಿದ್ದಾರೋ ಅಥವಾ 27ನೇ ತಾರೀಖಿನಮೇಲೆ ಅರೆಸ್ಟ್ ಮಾಡಿದ್ದಾರೋ ?

ಶ್ರೀ ಡಿ. ದೇವರಾಜ ಅರಸ್.—27ನೇ ತಾರೀಖಲ್ಲ. ಅದಕ್ಕಿಂತ ಮುಂಚೆಯೇ ಅರೆಸ್ಟ್ ಮಾಡಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮೆಡಿಕಲ್ ಎಗ್ಸಾಮಿನೇಷನನ್ನು ಯಾವಾಗ ಮಾಡಿಸಿದ್ದೀರಿ ! ಅದಕ್ಕೇನಾದರೂ ಮಾಹಿತಿ ಇದೆಯೇ ?

ಶ್ರೀ ಡಿ. ದೇವರಾಜ ಅರಸ್.—ಅದು ಆದದ್ದು ಮಾರನೇ ದಿನ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಇಲ್ಲಿ ಏನು ಹೇಳಿಕೆಯನ್ನು ಕೊಟ್ಟಿದ್ದೀರೋ ಅದರಲ್ಲಿ ಬಹಳ ಅಂಶಗಳು ಸತ್ಯಕ್ಕೆ ದೂರವಾಗಿವೆ. ಕಾರಣವಿಷ್ಟೇ. 24ನೇ ತಾರೀಖು ಈ ಘಟನೆ ನಡೆಯಿತು. ಮೂಡಿಗೆರೆ ಸುತ್ತಮುತ್ತಲೂ ಕೆಲವು ಜನರು ಈ ರೀತಿ ಪ್ರಚೋದನೆಗಳನ್ನು ಮಾಡುತ್ತಿದ್ದಾರೆ. ಅಂತಹವರ ಮೇಲೆ ಏನಾದರೂ ಹತೋಟಿ ಇಟ್ಟುಕೊಳ್ಳುತ್ತೀರೋ ಅಥವಾ ಹೀಗೆಯೇ ಬಿಡುತ್ತೀರೋ ? ಇದನ್ನು ಹೀಗೆಯೇ ಬಿಟ್ಟರೆ ಮುಂದೆ ಇದು ಬಹಳ ಪ್ರಕೋಪಕ್ಕೆ ಹೋಗುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ !

ಶ್ರೀ ಡಿ. ದೇವರಾಜ ಅರಸ್.—ಆಗಾಗ್ಗೆ ಇಂತಹ ಘಟನೆಗಳು ಅಲ್ಲಿ ಸಂಭವಿಸದ ಹಾಗೆ ನೋಡಿಕೊಳ್ಳಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಅನೇಕ ಜನರು ತಮ್ಮ ಕೈಕೆಳಗೆ ಅಧಿಕಾರ ತೆಗೆದುಕೊಳ್ಳುವುದನ್ನು ತಪ್ಪಿಸಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಪೋಲೀಸಿನವರು ಈ ಕೇಸನ್ನು ಶೀಘ್ರವಾಗಿ ತೆಗೆದುಕೊಂಡಿದ್ದಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಅವರಿಗೆ ಗೊತ್ತಾದ ಕೂಡಲೇ ತೆಗೆದುಕೊಂಡಿದ್ದಾರೆ. A case was registered. But immediately he could not be identified. He was apprehended probably on 25th. Whatever statements we made we have to make with an element of caution. Secondly, it might result in my revelation of certain things. The police have not delayed or acted with a view to allow somebody to escape. At the same time, I want to say if the people were to take the law into their own hands then how can the Government keep quiet.

SRI V. N. PATIL.—It is reported that a girl of 16 years was assaulted and medical examination is done after 24 hours. The evidence of assault and physical injuries are bound to be banished by that time. Further whether the students who demonstrated were arrested and if so will the Government withdraw the cases booked against them ?

SRI D. DEVARAJ URS.—Under what circumstances the cases were booked I cannot say now. I cannot also say that the cases will be withdrawn.

SRI B. B. SAYANAK.—May I know whether that girl was assaulted or molested.

MR. DEPUTY SPEAKER.—That question can't be allowed because the matter is *sub-judice*.

SRI M. S. KRISHNAN.—It has been specifically stated that the girl has been aasaulted, which is on the basis of the Police report. But, according to the information we have, the girl was molested. Admittedly the girl was examined the next day. That is why all this trouble !

MR. DEPUTY SPEAKER.—A report may be here. But the whole thing is under the purview of the Court now. Does the hon. member want that somebody here should give the judgement ?

SRI M. S. KRISHNAN.—I remember there is a Ruling that even though some matters are before the Court, it does not mean that the concerned Minister should not clarify the matter.

MR. DEPUTY SPEAKER.—The facts have been elucidated. Since the matter is *sub-judice*, it is better it rests there.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಕಾಲ್ ಅಟೆನ್‌ಷನ್ ನೋಟೀಸುಗಳಿಗೆ ಸರ್ಕಾರದವರು ಇಲ್ಲಿ ಬೇಕೆಂದೇ ಉದ್ದೇಶಪೂರ್ವಕವಾಗಿ ಉತ್ತರಕೊಡುವುದನ್ನು ನಿಧಾನ ಮಾಡುವುದರಿಂದ ಅತ್ತ ಪೋಲೀಸರು ಕೋರ್ಟಿಗೆ ಚಾರ್ಜಿಷೀಟನ್ನು ಕೊಡುತ್ತಾರೆ. ಆಗ ಇಲ್ಲಿ ಸರ್ಕಾರದವರು ಸಬ್‌ಜುಡೀಸ್ ಎಂದು ನಮ್ಮ ಬಾಯಿ ಮುಚ್ಚಿಸುವುದಕ್ಕೆ ಪ್ರಯತ್ನ ಮಾಡುವುದು ಯಾವ ನ್ಯಾಯ ?

Mr. DEPUTY SPEAKER.—That is a wrong conclusion.

ಶ್ರೀ ಎಸ್. ಬಂಗಾರಪ್ಪ.—ಕೋರ್ಟಿಗೆ ಪೋಲೀಸಿನವರು ಚಾರ್ಜ್‌ಷೀಟನ್ನು ಕೊಟ್ಟಿರಬಹುದು. ಆದರೆ ಪೋಲೀಸಿನವರ ತನಿಖೆಯಲ್ಲೇ ಲೋಪದೋಷಗಳಿದ್ದರೆ ಅವುಗಳನ್ನು ನಾವು ಇಲ್ಲಿ ಚರ್ಚೆ ಮಾಡುವುದಕ್ಕೇನು ಅಭ್ಯಂತರವಿದೆ ?

Mr. DEPUTY SPEAKER.—Does the hon. member mean defects in investigation?

Sri S. BANGARAPPA.—If there are some lapses by the Police during investigation, we can put questions so far as those matters are concerned.

Sri H. M. CHANNABASAPPA (Minister for Public Works).—Sir, I rise to a Point of Order. When the Chair has ruled that it is *sub-judice*, it is not in the fitness of things and it will be contrary to the Rules of Procedure that the hon. members try to pursue the matters further. If the hon. members have any information at their command it is open to them to pass it on to the Investigating Officers, which would help the Investigating Officers.

Mr. DEPUTY SPEAKER.—In the Rules of Procedure itself it is stated that when a decision has been given by the Chair it is to be obeyed and it is not to be questioned. I said that the matter is *sub-judice*. Hon. member Sri Bangarappa seems to have a vigourous mind and says that the investigation is defective ; he wants to correct it. The investigation papers cannot be entrusted to him. How can the hon. member know whether there is a lacuna ? If he still has any doubt, he can write a letter to the Government or the Chief Minister himself.

Sri D. DEVARAJ URS.—Sir, let not the hon. members be under the misapprehension that there was delay in the matter. As soon as the Police received the complaint, they have gone to the spot immediately and taken action. There is no delay on the part of the Police and there is also no delay in medical examination.

Sri M. S. KRISHNAN.—Sir, if I remeber correct, there is a Ruling on a similar situation by late Sri B. V. Baliga that even if the matter is before the Court......

Mr. DEPUTY SPEAKER.—I also remember about it. When the matter is pending by way of first-hand report or actually the charge-sheet is not sent, there is a line of demarkation. Here, it is very clear that the charge-sheet has been sent and therefore the matter is clearly *sub-judice*. Too much of details cannot be elicited in this case. It is all for the Court to decide. Let us go to the next Call Attention Notice.

Sri S. M. SHEERNALI CHANDRASEKHAR.—Sir, I have been autho rised. I may be permitted to call the attention of the Hon'ble Minister.

Mr. DEPUTY SPEAKER.—The letter that I have received just now is faulty. Your name is not there. Only questions can be authorised but not Call Attention notices.

Sri S. BANGARAPPA.—Sir, since the matter is important, Sri Chandrasekhar may please be permitted.

Mr. DEPUTY SPEAKER.—I cannot be so much liberal violating the Rules of procedure.

Arrest and Release of Sri Kadasiddappa–Announcement

Mr. DEPUTY SPEAKER.—I have received a communication from the Sub-Inspector of Police, Honnali, Shimoga District, stating that Sri Kadasiddappa, M.L.A. was arrested on 23-3-1973 at 8.10 a.m. at Honnali under non-bailable warrant for an offence under sections 406 and 408 of I.P.C. issued by the Munsiff Magistrate, Shikaripura and that he was produced before the Court and later discharged and released since the case was withdrawn

First Report of the Committee on Petitions–Presentation

Mr. DEPUTY SPEAKER.—I present the First Report of the Committee on Petitions. Report presented.

Disturbances at Bangalore on 23-3-1973

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ನಗರದಲ್ಲಿ ಶನಿವಾರದ ದಿನ ಪೋಲೀಸಿನವರು ನಡೆಸಿದ ರಾಟಿ ಚಾರ್ಜಿನ ವಿಚಾರದಲ್ಲಿ ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಈ ದಿವಸ ಕೊಡುವುದಾಗಿ ಸರ್ಕಾರದವರು ತಿಳಿಸಿದರು. ಆ ಘಟನೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ಅಧ್ಯಕ್ಷರ ಮೂಲಕ ಸರ್ಕಾರದವರ ಗಮನವನ್ನು ಸೆಳೆಯಬಯಸುತ್ತೇನೆ.

2-30 P.M.

Statement by the Minister for Public Works and Electricity *re*: Disturbances at Bangalore on 23-3-1973.

† Sri H. M. CHANNABASAPPA (Minister for Public Works).—Mr. Deputy Speaker, Sir, it is reported that a Kannada picture entitled "Bangarada Manushya" is being exhibited at the States Cinema

(SRI H. M. CHANNABASAPPA)

Theatre, Kempegouda Road, Bangalore for the past 51 weeks and the picture would be completing a one year run if it were to be exhibited for 6 days more. The distributor of the film was very keen that this film should set up a record of having run for one year. But due to some differences between the distributor and the exhibitor of the film over the amount of daily rent, the exhibitor decided to stop the exhibition of this picture with effect from 23-3-1973 and started exhibiting another Kannada film entitled "Parvathi Kalyanam." At about 10.30 a.m. on 23-3-1973, about 200 people are reported to have gathered at the States Cinema Theatre. As there was a likelihood of a breach of peace, the police dispersed the crowd. At about 2-30 P.M. about 500 people are reported to have gathered near the States Cinema Theatre and started pelting stones at the Theatre and the police party on duty. The miscreants were chased away. Six Policemen received stone injuries. Sixteen persons were arrested in this connection and a ease in Ooparpet Police Station U/ss 143, 144, 149, 323 and 427 I P C has been registered and is under investigation.

Thereafter the crowd attempted to gather around the States Cinema Theatre at frequent intervals but the police promptly intervened and prevented any damage.

At about 9-30 p.m. there were some stray incidents of stone throwing. It is reported that at about 9-45 p.m. a crowed of about 500 persons gathered near the General Hostel which was addressed by Sri Vatal Nagaraj, M L A and Sri Bangarappa, M L A. Thereafter the mob rushed towards States Cinema Theatre, The police intercepted them at the Mysore Bank Circle. The mob indulged in pelting of stones indiscriminately at passing vehicles. Simultaneously mobs collected in Avenue Road, Cubbonpet, Kempegouda Road and Kilari Road and pelted stones on city buses and police parties on duty. The street lights on the Avenue Road were smashed. Stones were also pelted at a few other Cinema Theatres causing minor damage. The police had to use tear gas shells to disperse the mob. In all, 8 tear gas shells were burst. 14 Police Officers and men were injured due to stone hits in the incident reported late in the night. 26 persons were arrested in connection with this incident. A case in Ooparpet Police Station has been registered U/ss 143, 144, 149, 323, 427 IPC and is being investigated.

The situation was brought to normalcy completely at about 11-30 p.m.

Normal life was not affected in this area due to the disturbances. The Cinema houses ran their shows as usual.

As a result of negotiation, the management of the States Cinema Theatre is reported to have resumed exhibiting the film "Bangarada Manushya"

Sri H.M. CHANNABASAPPA.—The hon. member is under a wrong premise. At about 9-30 p. m. there were some stray incidents of stone-throwing. It is reported that at about 9-45 p. m. a crowd of 500 persons gatherd near the General Hostel and which was addressed by Sri Vatal Nagaraj and Sri Bangarappa, MLAs. Thereafter the mob rushed to the State Cinema Theatre. ವಾಸ್ತವಾಂಶ ತಿಳಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಹೇಳಿಕೆ ಪ್ರಕಾರ ಸುಮಾರು 400-500 ಜನರು ಜನರಲ್ ಹಾಸ್ಟಲಿನ ಹತ್ತಿರ ಬಂದಿದ್ದರು, ಶ್ರೀ ವಾಟಾಳ್‌ರವರು ಮತ್ತು ಶ್ರೀ ಬಂಗಾರಪ್ಪನವರು ಭಾಷಣ ಮಾಡಿದರು ; ಜನ ಕಲ್ಲು ಹೊಡೆದರು, ಗಲಾಟೆ ಮಾಡಿದರು ಎಂದು ಗೊತ್ತಾಗುವುದು. ಇದರ ಅರ್ಥ ಅವರು ಭಾಷಣ ಮಾಡಿದ ನಂತರ ಗಲಾಟೆ ಷುರುವಾಯಿತು ಎಂಬುದು. ಅದು ತಮಗೆ ಗೊತ್ತಿದ್ದ ವಿಷಯ, ಏತಕ್ಕೆ ಮರೆಮಾಚುತ್ತೀರಿ, ತಾವು ಅವರು ಪ್ರಚೋದನೆ ಮಾಡಿದ್ದಾರೆ ಎಂದು ಆಪಾದನೆ ಮಾಡುತ್ತಿದ್ದೀರಿ. ವಾಟಾಳ್ ನಾಗರಾಜ ಅವರು, ಏನು ಏನು ಮಾತನಾಡಿದರು ಎಂದು ಸಾಬೀತು ಮಾಡುವ ಹಾಗಿದ್ದರೆ, ಅವರು ರಾಜೀನಾಮೆ ಕೊಡುತ್ತಾರ ಎಂದು ಹೇಳಿದ್ದಾರೆ. ಈ ಚಾಲೆಂಜನ್ನು ತಾವು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೀರಾ ?

ಉಪಾಧ್ಯಕ್ಷರು.—ಏನೇನು ಪ್ರವೋಕ್ ಮಾಡಿದರು, ಇನ್‌ಸ್ಟಿಗೇಟ್ ಮಾಡಿದರು ಅದು ಅಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಯಾವ ಮನುಷ್ಯ ಓದಿದರೂ ಇದು ಏನು ಎಂದು ಅರ್ಥವಾಗುತ್ತದೆ. ಸುಮ್ಮಸುಮ್ಮನೆ ಹೇಳಿಸಿಬಿಟ್ಟರೆ ಏನು ಪ್ರಯೋಜನ ? ಅವರ ಸವಾಲನ್ನು ನೀವು ಎದುರಿಸುತ್ತೀರಾ ? ಅವರು ಹೇಳುತ್ತಾರೆ, ನೀವು ಅವರು ಅಲ್ಲಿ ಭಾಷಣ ಮಾಡಿದರು ಎಂದು ಸಾಬೀತು ಮಾಡಿದರೆ ರಾಜೀನಾಮೆ ಕೊಡುತ್ತೇನೆ ಎಂದು. ಈಗ ಇಬ್ಬರಲ್ಲಿ ಒಬ್ಬರು ರಾಜೀನಾಮೆ ಕೊಡಬೇಕು.

† ಶ್ರೀ ಎಸ್ ಬಂಗಾರಪ್ಪ.—ಸ್ವಾಮಿ, ಈಗ ತಾನೇ ಸರ್ಕಾರದವರು ನೀಡಿರತಕ್ಕ ಹೇಳಿಕೆಯ ಪ್ರಕಾರ, ನಾವು ಮಾತನಾಡಿರುವ ಮಾತು ಏನೇ ಇರಲಿ, ಭಾಷಣ ಮಾಡಿರುವುದು ಏನೇ ಇರಲಿ ಅದು ಇಂಟರ್‌ಪ್ರಿಟೇಷನ್ ಪ್ರಕಾರ ಹೋಗುತ್ತದೆ. ನಾನು ಆ ದಿವಸ ಹೇಳಿದ ಮಾತನ್ನು ಇಲ್ಲಿ ಪುನಃ ವಿಚಾರ ಮಾಡುವುದಕ್ಕೆ ಹೋಗುವುದಿಲ್ಲ. ಜನರಲ್ ಹಾಸ್ಟಲ್ ಹತ್ತಿರ ಜನ ಬಂದು ತುಂಬಿಕೊಂಡರು. ಕನ್ನಡ ಭಾಷೆಯ ಈ ಒಂದು ಫಿಲಂ ಒಂದು ವರ್ಷ ನಡೆದಿರತಕ್ಕ ಒಂದು ಮರ್ಯಾದೆ; ಸಿಕ್ಕುತ್ತದೆ, ಎನ್ನುವ ಒಳ್ಳೆಯ ದೃಷ್ಟಿಯಿಂದ ನಾನು ಅಲ್ಲಿ ಮಾತನಾಡಿದ್ದೇನೆ. ನೆಗೋಸಿಯೇಷನ್ ಮಾಡಿ ರಾಜಿ, ಸಂಧಾನದಿಂದ ಇದು ಬಗೆಹರಿಯಿತು, ಅದಕ್ಕೆ ನಾನು ಕಾರಣ, ಇದು ಎಲ್ಲರಿಗೂ ಗೊತ್ತಿದೆ. ದೇವೇಗೌಡರಿಂದ ಐ. ಜಿ. ಪಿ. ಯವರಿಗೆ ಫೋನ್ ಮಾಡಿಸಿದ್ದೇನೆ, ಇದು ಜನರಲ್ ಹಾಸ್ಟಲ್‌ನಲ್ಲಿರುವ ಅನೇಕ ಜನ ಸದಸ್ಯರಿಗೆ ಗೊತ್ತಿದೆ. ಆದಿನ ರಾತ್ರಿ ನಾನು ಅಲ್ಲಿಗೆ 11 ಗಂಟೆಗೆ ಹೋಗಿ, ಫಿಲಂ ಹಾಕಿಸಿ, ಬ್ಯಾನರ್ಸ್ ಅನ್ನು ಬದಲಾವಣೆ ಮಾಡಿಸಿದ್ದೇನೆ. ಅಲ್ಲಿ ಪೋಲೀಸ್ ಆಫೀಸರ್ಸ್ ಇದ್ದಾರೆ. ಏಕೆಂದರೆ ಅಲ್ಲಿ ಜನಗಳ ಗುಂಪು ಕೂಗುತ್ತಿತ್ತು, ಸಮಾಧಾನ ಮಾಡುವ ದೃಷ್ಟಿಯಿಂದ, ಐ ಜಿ ಪಿ ಯವರಿಗೆ ಫೋನ್ ಮಾಡಿ ಹೇಳಿದ್ದೇನೆ. ಈ ಸಮಯದಲ್ಲಿ ಮಾನ್ಯ ಸಚಿವರಾದ ಕಿತ್ತೂರ್ ಅವರನ್ನು ಅಭಿನಂದಿಸಬೇಕು. ಅವರೂ ಕೂಡ ಫೋನ್ ಮಾಡಿದರು. ಅವರು ಥಿಯೇಟರ್ ಓನರ್ ಅನ್ನು ಕಾಂಟಾಕ್ಟ್ ಮಾಡಿ, ಇದು ಏನೇ ಇರಲಿ, ಯಾರೇ ಇದಕ್ಕೆ ಜವಾಬ್ದಾರಿ ಇರಲಿ ಈ ಚಿತ್ರವನ್ನು ಎರಡು ರೀಲ್ಸ್ ಹಾಕಿಸಿ, ಮುಂದುವರಿಯುವುದಕ್ಕೆ ನಾವು ಎಲ್ಲರೂ ಮಾಡಿರತಕ್ಕದ್ದು ಒಳ್ಳೆಯದು, ಸರ್ಕಾರದವರು ಕೊಟ್ಟಂಥ ಹೇಳಿಕೆಯಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರ ಹೆಸರನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅಲ್ಲಿ ಅವರ ಹೆಸರೇ ಇರಲಿಲ್ಲ.

ಉಪಾಧ್ಯಕ್ಷರು.—ತಾವು ವಾಟಾಳ್ ಅವರ ಬಗ್ಗೆ ಯೋಚನೆ ಮಾಡಬೇಡಿ. ವಾಟಾಳ್ ನಾಗರಾಜ್ ಏನೇನು ಮಾಡಿದರು, ಎಂದು ಅವರು ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ನಾನು ಭಾಷಣ ಮಾಡಲಿಲ್ಲ, ಶಾಂತಿಯುತವಾಗಿ ಇರಬೇಕು ಎಂದು ಹೇಳಿದಾಗ ಅಲ್ಲಿ ಕಾನ್‌ಸ್ಟೇಬಲ್ಸ್, ಪೋಲೀಸ್ ಆಫೀಸರ್ಸ್ ಇದ್ದರು, ಸಿ ಐ ಡಿ ಗಳು ಬೇಕಾದಷ್ಟು ಜನ ಇದ್ದರು. ಅಲ್ಲಿ ನಾಗರಾಜ್ ಅವರು ಮಾತ್ರ ಇಲ್ಲವೇ ಇಲ್ಲ. ಅವರ ಹೆಸರನ್ನು ತೆಗೆದುಕೊಂಡು ಬಂದು, ಇಲ್ಲಿ ಸೇರಿಸಿದ್ದಾರೆ. ನಾವು ಒಳ್ಳೆಯ ಉದ್ದೇಶದಿಂದ ಕೆಲಸ ಮಾಡಿದ್ದೇವೆ, ಆ ಚಿತ್ರ ಒಂದು ವರ್ಷದವರೆಗೆ ಮುಂದುವರೆದರೆ ಕನ್ನಡಕ್ಕೆ ಗೌರವ ಎಂದು, ಈಗ ಅದು ನಡೆಯುತ್ತಾ ಇದೆ. ಇದು ಬಹಳ ಸಂತೋಷದ ವಿಷಯ.

In all, 42 persons have been arrested in connection with the disturbances in the City on 23-3-1973. The situation is peaceful.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ಘಟನೆ ನಡೆದಾಗ ಯಾರನ್ನಾದರೂ ಬಂಧಿಸಿರುವರೇ? ಕಲ್ಲು ತೂರಾಟ ವಗೈರೆ ನಡೆದಾಗ ಜನರಲ್ ಹಾಸ್ಟಲ್ ಬಳಿ, ಕಾರಿಡಾರ್ ಬಳಿ ಇದ್ದ ಯಾರನ್ನಾದರೂ ದಸ್ತಗಿರಿ ಮಾಡುವ ಪ್ರಯತ್ನ ನಡೆದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರು ಯಾರು ಎಲ್ಲೆಲ್ಲಿದ್ದರು ಎಂಬ ವಿವರವಿಲ್ಲ. ಒಟ್ಟಿನಲ್ಲಿ 42 ಜನರನ್ನು ಅರೆಸ್ಟ್ ಮಾಡಲಾಗಿದೆ. ಬೆಳಿಗ್ಗೆ ಮತ್ತು ಸಾಯಂಕಾಲ ಎರಡು ಸಲ ಅರೆಸ್ಟ್ ಮಾಡಿದ್ದಾರೆ ಎಂದು ನಾನು ಓದಿ ಹೇಳಿದೆ.

ಶ್ರೀ ಆರ್. ಎಸ್. ಪಾಟೀಲ್.—ಮಂತ್ರಿಗಳ ಸ್ಟೇಟ್‌ಮೆಂಟಿನಲ್ಲಿ ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಬಂಗಾರಪ್ಪನವರು ಜನತೆಯನ್ನುದ್ದೇಶಿಸಿ ಭಾಷಣ ಮಾಡಿದರು ಎಂದಿದೆ. ಅದರ ಅರ್ಥ ಅವರ ಭಾಷಣದಿಂದ ಜನರು ಉದ್ರೇಕಗೊಂಡರು ಎಂದಾಗುವುದು. ಆ ಕಾರಣ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಲಾಗಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಫ್ಯಾಕ್ಚುಯಲ್ ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ. ಯಾರನ್ನು ಹೇಗೆ ಪ್ರಚೋದನೆ ಮಾಡಿದರು ಎಂಬುದು ಇನ್‌ವೆಸ್ಟಿಗೇಟ್ ಮಾಡಬೇಕಾದ ವಿಚಾರ.

ಶ್ರೀ ಕೆ. ಎಂ. ನಾಗಣ್ಣ.—ಮೊನ್ನೆ ಶ್ರೀ ವಾಟಾಳ್ ನಾಗರಾಜ್‌ರವರು ನಾನು ಭಾಷಣ ಮಾಡಿರುವುದಾಗಿ ರುಜುವಾತು ಮಾಡಿದರೆ ನಾನು ರಾಜೀನಾಮೆಯನ್ನು ನಿಮ್ಮ ಕೈಗೆ ಕೊಡುತ್ತೇನೆಂದು ಹೇಳಿದರು. ಈಗ ಶ್ರೀ ಚನ್ನಬಸಪ್ಪನವರು ಓದಿದ್ದು ಪೋಲೀಸು ವರದಿ. ವಾಟಾಳರು ಭಾಷಣ ಮಾಡಿದರು ಎಂಬುದನ್ನು ಪ್ರೂವ್ ಮಾಡಬೇಕು. ಆರೋಪ ಮಾಡಲು ವರದಿ ಈ ರೀತಿ ತರಿಸಿದ್ದೀರಿ. ವಿರೋಧ ಪಕ್ಷದ ಸದಸ್ಯರನ್ನು ನಾನು ಹೀಗೆ ಬಿಟ್ಟುಕೊಡುವುದಕ್ಕೆ ತಯಾರಿಲ್ಲ. ಅನ್ಯಾಯವಾಗಿ ಆರೋಪಿಸಿ ಸರಕಾರ ಸಮರ್ಥನೆ ಮಾಡುತ್ತಿದೆ. ಎರಡನೆಯದಾಗಿ ರಿಸೀವರ್‌ಗೆ ಹಿಂದಿನ ದಿವಸ ಟೆಲಿಗ್ರಾಂ ಕೊಟ್ಟರು, ಅಗ್ರಿಮೆಂಟ್ ಮಾಡಿಕೊಳ್ಳಬೇಕು, ಇಲ್ಲದಿದ್ದರೆ ಪಿಕ್ಚರ್ ನಿಲ್ಲಿಸುತ್ತೇವೆ ಎಂದು ತಿಳಿಸಿದರು. ಡಿಸ್ಟ್ರಿಬ್ಯೂಟರ್ ರಿಸೀವರ್ ಹತ್ತಿರ ಬಂದು ಅಗ್ರಿಮೆಂಟ್ ಮಾಡಿಕೊಳ್ಳದಿರುವುದರಿಂದ ನಿಲ್ಲಿಸಬೇಕೆಂದು ಹೇಳಿದರು.

ಸ್ಟೇಟ್‌ಮೆಂಟ್ ತಪ್ಪು, ವಾಟಾಳರು ಭಾಷಣ ಮಾಡಿದರು ಎಂದರೇನರ್ಥ? ಅವರು ಶಾಮ ಪ್ರಸಾದ ಹೋಟಲಿನಲ್ಲಿ ಒಂದು ಗಂಟೆವರೆಗೆ ಇದ್ದರು ಅವರು ಭಾಷಣ ಮಾಡಿಲ್ಲ. ಹಾಗಿರುವಾಗ ಸುಮ್ಮನೆ ಏಕೆ ಅವರ ಮೇಲೆ ಆರೋಪ ಮಾಡುವುದು?

Sri H. M. CHANNABASAPPA.—Mr. Speaker Sir, we are not interested in implicating either Sri Vatal Nagaraj or anybody else; on the other hand I am very anxious that Sri Vatal Nagaraj must be in the Assembly.

MR. DEPUTY SPEAKER.—Yesterday Sri Vatal Nagaraj told me that he would hand over his resignation to some other person but I told him that under the rules he should hand over the resignation letter to me.

ಶ್ರೀ ಎಚ್. ಎಂ. ಚನ್ನಬಸಪ್ಪ—ಲಾ ಅಂಡ್ ಆರ್ಡರ್ ಪ್ರಶ್ನೆ ಮಾತ್ರ ಸರಕಾರಕ್ಕೆ ಸಂಬಂಧಪಟ್ಟಿರುವುದು. ಡಿಸ್ಟ್ರಿಬ್ಯುಟರಿಗೂ ಎಗ್ಸಿಬಿಟರ್‌ಗೂ ಏನು ವ್ಯಾಜ್ಯವಾಯ್ತು ಆ ಪ್ರಶ್ನೆ ನಮಗೆ ಬೇಕಿಲ್ಲ. ಅವರ ವ್ಯಾಜ್ಯ ಕಾನೂನು ಪ್ರಕಾರ ನಡೆಸಿಕೊಳ್ಳುವರು. ಲಾ ಅಂಡ್ ಆರ್ಡರನ್ನು ನಾವು ಮೈಂಟೈನ್ ಮಾಡಬೇಕು. ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವುದು, ಒಳ್ಳೆಯವರಿಗೆ ರಕ್ಷಣೆ ಕೊಡುವುದು ನಮಗೆ ಸಂಬಂಧಪಟ್ಟಿದೆ. ಅವರವರಿಗಿರುವ ವ್ಯಾಜ್ಯ ನಮಗೆ ಪ್ರಕೃತವಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಅದನ್ನು ಒಪ್ಪುತ್ತೇನೆ. ಆದರೆ ತಾವು ಹೇಳಿದ್ದು ವಾಸ್ತವಾಂಶಕ್ಕೆ ದೂರವಾದುದು ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಗಳ ಹೇಳಿಕೆಯಲ್ಲಿ ಪ್ರಚೋದನೆ ಮಾಡಿದವರ ಹೆಸರನ್ನೂ ಹೇಳಿದರು. ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಬಂಗಾರಪ್ಪನವರು ಇವರಿಬ್ಬರೂ ಕೂಡ....

ಉಪಾಧ್ಯಕ್ಷರು.—ತಾವು ಸಿಟ್ಟು ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್.—ಸಿಟ್ಟು ಇಲ್ಲವೇ ಇಲ್ಲ, ಸಿಟ್ಟು ಮಾಡುವ ಪ್ರಶ್ನೆಯೇ ಇಲ್ಲ. ಅವೊತ್ತಿನ ದಿವಸ ಘಟನೆ ನಡೆಯುವುದಕ್ಕೆ ಮುಂಚೆ, ವಿಧಾನಸೌಧದ ಮುಂದೆ, 200 ಜನ ಹುಡು ಗರು ಬಂದರು. ನಾನು ಸಾಮಾನ್ಯವಾಗಿ ಸಭೆಯನ್ನು ಬಿಟ್ಟು ಹೊರಗೆ ಹೋಗುವವನಲ್ಲ, ಅರ್ಜೆಂಟಾಗಿ ಯಾರೋ ನನ್ನ ಮಿತ್ರರು ಬಂದಿದ್ದರಿಂದ ಹೊರಗಡೆ ಹೋದೆ. ಬಾಗಿಲಿಗೆ ಹೋದ ನಂತರ, ವಿಧಾನ ಸೌಧದ ಮುಂದೆ ಹುಡುಗರು ಸಿಳ್ಳು ಹಾಕಿಕೊಂಡು ಬಂದರು. ಸಣ್ಣ ಸಣ್ಣ ಹುಡುಗರು, ಆ ಹುಡುಗರು, ಬಂಗಾರದ ಮನುಷ್ಯ ಚಿತ್ರವನ್ನು ತೆಗೆದು ಹಾಕಿದ್ದಾರೆ, ಇದರಿಂದ ದೇಶಕ್ಕೆ ಅನ್ಯಾಯವಾಗುತ್ತದೆ ಎಂದು ಒಂದು ಅಭಿಮಾನದಿಂದ ಹೇಳಿದರು. ನಾನು ಅವರಿಗೆ, ವಿಧಾನ ಸೌಧದ ಮುಂದೆ ಶಾಸನ ಸಭೆ ನಡೆಯುತ್ತಾ ಇದೆ, ಜನರಲ್ ಹಾಸ್ಟಲ್ ಹತ್ತಿರ ಇರಿ, ನಾವು ಸರ್ಕಾರದೊಡನೆ ಮಾತನಾಡಿ, ಆ ಚಿತ್ರ ಒಂದು ವರ್ಷ ನಡೆಯುವ ಹಾಗೆ ಮಾಡುತ್ತೇ ವೆಂದು ಸಮಾಧಾನ ಮಾಡಿ ಕಳುಹಿಸಿದೆ. ಆರು ಗಂಟೆಗೆ ಶಾಸನ ಸಭೆ ಮುಗಿಯಿತು. ಜನರಲ್ ಹಾಸ್ಟಲ್ ಬಳಿ ಜನ ಸೇರಿದ್ದಾರೆ ಎಂದು ಕೇಳಿದೆ, ನಾನು ಈ ಸಂದರ್ಭದಲ್ಲಿ ಅಲ್ಲಿಗೆ ಹೋದರೆ ಜನರು ಪ್ರವೋಕ್ ಆಗಿ ಬೇರೆ ರೂಪಕ್ಕೆ ಇಳಿಯಬಹುದು ಎಂದು ತಿಳಿದು, ನಾನು ಶ್ಯಾಮಪ್ರಕಾಶ್ ಹೋಟೆ ಲ್‌ಗೆ ಹೋದೆ. ಆಗ ನನ್ನ ಜೊತೆಯಲ್ಲಿ ವಿಶ್ವಕರ್ನಾಟಕದ ಪತ್ರಿಕೋದ್ಯಮಿಗಳಾದ ಶ್ರೀಮಾನ್ ಧರಣೇಂದ್ರಯ್ಯನವರು 6 ಗಂಟೆಯಿಂದ ಸುಮಾರು ಏಳು ಗಂಟೆಯವರೆಗೆ ಇದ್ದರು. ಆಗ ನಾನು ಎ ಸಿ ಪಿ ಮುದ್ದಪ್ಪನವರಿಗೆ ಫೋನ್ ಮಾಡಿ, ಜನರಲ್ ಹಾಸ್ಟಲ್ ಹತ್ತಿರ ಕ್ರೌಡ್ ಇದೆ, ನಾನು ಅಲ್ಲಿಗೆ ಹೋದ ತಕ್ಷಣ ಪ್ರವೋಕ್ ಆಗುತ್ತದೆ, ತಾವು ಚಿತ್ರಮಂದಿರದ ಮಾಲೀಕರಿಗೆ ಫೋನ್ ಮಾಡಿ ಹೇಗಾದರೂ ಮಾಡಿ ಮುಂದಕ್ಕೆ ಹಾಕಿ, ಅವರ ವಾದ ವಿವಾದವನ್ನು ತೀರ್ಮಾನ ಮಾಡೋಣ, ಇನ್ನು ಐದು ದಿವಸದಲ್ಲಿ ಬಂಗಾರದ ಮನುಷ್ಯ, ಕನ್ನಡ ಚಿತ್ರ ಒಂದು ವರ್ಷ ನಡೆದಂತಾಗುತ್ತದೆ, ಆದ್ದರಿಂದ ಕನ್ನಡಕ್ಕೆ ಗೌರವ ತರುವ ಬಗ್ಗೆ ಧಕ್ಕೆಯಾಗುತ್ತದೆ, ಇದು ನಾಡಿಗೆ ಉತ್ತಮ ಹೆಸರು ತಂದಿದೆ ಎಂದು ಹೇಳಿ. ನೀವು ಮಾಲೀಕರನ್ನು ಕರೆದುಕೊಂಡು ಶ್ಯಾಮಪ್ರಕಾಶ್ ಹೋಟೆಲಗೆ 10-45 ಗಂಟೆಗೆ ಬರಬೇಕು ಎಂದು ಹೇಳಿದೆ. ಇದರ ಪ್ರೊಡ್ಯೂಸರ್ಸ್, ಗೋಪಾಲ್ ಮತ್ತು ಲಕ್ಷ್ಮಣ್ ಅವರು ಚಿತ್ರ ತೆಗೆದು ಇರುವವರು ಹಣವನ್ನು ಸಂಪಾದನೆ ಮಾಡುವವರು ಇವರು, ನಮ್ಮ ಹುಡುಗರು ಅಭಿಮಾನಕ್ಕೆ ಹೋಗಿ ಲಾಟಿಏಟುಗಳನ್ನು ತಿನ್ನಬೇಕಾಗಿದೆ. ಇಬ್ಬರ ಜಗಳದಲ್ಲಿ ಇವರು ಲಾಟಿ ಏಟು ತಿನ್ನಬೇಕಾಗಿದೆ, ಕೂಡಲೇ ಶ್ಯಾಮಪ್ರಕಾಶ್ ಹೋಟೆಲಿಗೆ ಬನ್ನಿ ಎಂದು ಹೇಳಿದೆ, ಅವರು 11 ಗಂಟೆಗೆ ಬಂದರು. ಥಿಯೇಟರ್ ಡಿಸ್ಟ್ರಿಬ್ಯೂಟರ್ಸ್ ಮದ್ರಾಸ್‌ಗೆ ಹೋಗಿ ದ್ದರು. ಅವರು ಮದ್ರಾಸಿನಿಂದ ಬರುವ ಹೊತ್ತಿಗೆ ಲಾಟಿ ಚಾರ್ಜು ಶುರುವಾಗಿತ್ತು. ಅವರ ಕಾರಿಗೆ ಕಲ್ಲು ಏಟು ಬಿದ್ದಿದೆ. ಇದು ಸತ್ಯವಾಗಿ ಹೇಳತಕ್ಕ ಮಾತು. ನಾನು ಭಾಷಣ ಮಾಡು ತ್ತೇನೆ, ಮೀಟಿಂಗ್ ಮಾಡುತ್ತೇನೆ, ಅವಕ್ಕೆ ಎಂದೂ ಹೆದರಿಕೊಳ್ಳುವುದಿಲ್ಲ. ಯಾವ ಗಲಾಟೆಗೂ ತಯಾರಾಗಿದ್ದೇನೆ. ಈಗ ಆ ಹುಡುಗರನ್ನು ಪೋಲೀಸಿನವರು ಸುಮ್ಮನೆ ಬಿಟ್ಟಿಲ್ಲ, 46 ಜನಕ್ಕೆ ಎಂಟು ತರಹ ಸೆಕ್ಷನ್ ಹಾಕಿ ಕೇಸುಗಳನ್ನು ಹಾಕಿದ್ದಾರೆ. ಜಾಮೀನ ಮೇಲೆ ಅವರಿಗೆ ಬಿಡುಗಡೆ ಯಾಗಿದೆ. ನಿಮ್ಮ ಕೃಪಕಟಾಕ್ಷದಿಂದ ಅವರನ್ನು ಬಿಡುಗಡೆ ಮಾಡಲಿಲ್ಲ, ಕೋರ್ಟಿನವರು ಜಾಮೀ ನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಅಲ್ಲಿಗೆ ಬಂದಂಥ ಹುಡುಗರು ಮುಗ್ಧ ಬಾಲಕರು ಅವರಿಗೆ ಒಂದು ಅಭಿಮಾನದಿಂದ, ಕನ್ನಡ ಚಿತ್ರ ಒಂದು ವರ್ಷ ನಡೆಯಬೇಕು ಎಂದು ಬಂದಿದ್ದರು. ಅಲ್ಲಿ ಮಾನ್ಯ ಬಂಗಾರಪ್ಪನವರು ಹೋಗಿ ರಾಜಕೀಯ ಮಾಡಬೇಕಾಗಿಲ್ಲ. ಅವರು ಅವರ ಪಾರ್ಟಿಯನ್ನು ಅಲ್ಲಿ ಬೆಳೆಸಬೇಕಾಗಿಲ್ಲ, ಇಂಥ ಹುಡುಗರನ್ನು ಕಟ್ಟಿಕೊಂಡು ಪಾರ್ಟಿ ಬೆಳೆಸಬೇಕೆ ? ಅಂಥ ಉದ್ದೇಶ ಏನೂ ಇಲ್ಲ, ನಮಗೆ ಹೋರಾಟ ಮಾಡುವುದಕ್ಕೆ ಬೇರೆ ಅವಕಾಶ ಬೇಕಾದಷ್ಟು ಇದೆ. ಯಾವುದೋ ಒಂದು ಬಗ್ಗೆ ಬಂತು ಎಂದು ಬ್ಯಾನರ್ ಹಾಕಿಕೊಂಡು ಹೋಗುವ ಜನ ಅಲ್ಲ. ನಮಗೂ ರಾಜಕೀಯ ಪ್ರಜ್ಞೆ ಇದೆ. ಹೋರಾಟ ಮಾಡಬೇಕು ಎಂದರೆ, ನೋಟೀಸ್ ಹಾಕುತ್ತೇವೆ, ಹೆಸರು ಹಾಕುತ್ತೇವೆ, ಕದ್ದು ಹೋಗುವುದಿಲ್ಲ. ಆದ್ದರಿಂದ ನಿಮಗೆ ಪ್ರಾರ್ಥನೆ ಮಾಡಿ ಹೇಳುತ್ತೇನೆ, ಇದರಲ್ಲಿ ಯಾವ ರಾಜಕಾರಣದ ದುಷ್ಟ ಶಕ್ತಿಯೂ ಇಲ್ಲ, ಯಾರದೋ ವ್ಯಾಜ್ಯ, ನಮ್ಮ ಹುಡುಗರು ಅಭಿಮಾನಕ್ಕೆ ಹೋಗಿ ಸಿಕ್ಕಿ ಹಾಕಿಕೊಂಡಿದ್ದಾರೆ. ಇದನ್ನು ನಾನು ಬಹಳ ವ್ಯಥೆಯಿಂದ ಹೇಳುತ್ತಿದ್ದೇನೆ. ಒಂದು ಗಂಟೆಗೆ ಸರಿಯಾಗಿ ಕೆಂಪೇಗೌಡ ರೋಡಿಗೆ ಹೋದೆ ಅಲ್ಲಿ ಶ್ರೀಮಾನ್ ಅಲಂಕಾರ್ ಮತ್ತು ಎ ಸಿ ಪಿ ಮುದ್ದಪ್ಪ ಇದ್ದರು, ಆಗ ನಾನು ಹೇಳಿದೆ, ನನ್ನ ಹತ್ತಿರ ಮಾಲೀಕರನ್ನು ಕರೆದುಕೊಂಡು ಬಂದಿದ್ದರೆ, ಇಷ್ಟೊಂದು ಆಗುವುದಕ್ಕೆ ಬಿಡುತ್ತಾ ಇರ ಲಿಲ್ಲ ಎಂದು. ಅಲ್ಲಿಗೆ ಅನಂತರ ಪೋಲೀಸ್ ಕಮೀಷನರ್ ರಾಮಣ್ಣ ಮತ್ತು ಇತರೆ ಪೋಲಿಸ್ ಅಧಿಕಾರಿಗಳು ಬಂದರು. ಆಗ ಪೋಲಿಸರು ಕೇಳಿದರು, ಎಲ್ಲಿ ಹೋಗಿದ್ದೀರಿ ಎಂದು. ಇಷ್ಟಾ

(ಶ್ರೀ ವಾಟಾಳ್ ನಾಗರಾಜ್)

ದರೂ ನನ್ನನ್ನು ಭಾಷಣ ಮಾಡಿದೆ ಎಂದು ನನಗೆ ಮಸಿ ಬಳಿಯುವುದು ಒಳ್ಳೆಯದಲ್ಲ. ನಾನು ಅಲ್ಲಿ ಇದ್ದೆ ಎನ್ನುವುದನ್ನು ರುಜುವಾತು ಮಾಡಿಸಿದರೆ, ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ನಾಳೆ ಇಲ್ಲಿಗೆ ಬರುವುದಿಲ್ಲ. ಸರ್ಕಾರ ಸುಳ್ಳು ಹೇಳಿಕೆ ಕೊಡಬಾರದು ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಕೊಡುತ್ತಿದ್ದಾರೆ, ಜನತೆಯಲ್ಲಿ ಒಂದು ಕೆಟ್ಟ ಅಭಿಪ್ರಾಯವನ್ನು ಉಂಟು ಮಾಡಬಾರದು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಾ ಇದ್ದೇನೆ. ನಡೆದಿರುವುದು ಒಂದು ಸಣ್ಣ ವಿಷಯ, ಆ ದಿವಸ ಹಿಂದೆ ನಾನು ಇಲ್ಲಿ ನಾಲ್ಕೂವರೆ ಗಂಟೆಗೆ ಎಚ್ಚರಿಕೆ ಕೊಟ್ಟೆ, ಈ ತರಹ ಆಗುತ್ತದೆ, ಪೋಲೀಸರು ಮುಂಜಾಗ್ರತೆ ಕ್ರಮ ವಹಿಸಬೇಕು ಎಂದು ಎಚ್ಚರಿಕೆ ಕೊಟ್ಟೆ.

2-00 P.M.

ಇದರ ಬಗ್ಗೆ ಪೋಲೀಸರು ಮುಂಜಾಗ್ರತೆ ಕ್ರಮವಹಿಸಿದ್ದರೆ ಈ ತೊಂದರೆಗಳು ಆಗುತ್ತಿರಲಿಲ್ಲ. 2ಗಂಟೆಗೆ ಅಲ್ಲಿ ಬಂಗಾರದ ಮನುಷ್ಯ ಚಿತ್ರ ಹಾಕುವ ಬದಲು ನಾಲ್ಕುವರೆ ಗಂಟೆಗೆ ಮಾಡಿದ್ದಾರೆ. ಅಲ್ಲಿ ಲಾಟಿ ಚಾರ್ಜು ಆಗುತ್ತಾ ಇರಲಿಲ್ಲ ಏಟು ಆಗುತ್ತಾ ಇರಲಿಲ್ಲ, ಬಹುಶಃ ಯಾವುದು ಆಗುತ್ತಾ ಇರಲಿಲ್ಲ. ಚಳುವಳಿ ನಡೆಯುವಾಗ ಮತ್ತು ಚಳುವಳಿ ರಸ್ತೆಯಲ್ಲಿ ಶಾಂತವಾಗಿ ನಡೆಯುವ ಚಳುವಳಿಕೂಡ ಸ್ವಲ್ಪ ಗಲಾಟೆಗಳು ನಡೆಯುತ್ತವೆ. ಹಿಂದೆ ಒಂದು ಸಾರಿ ಬಡನ್‌ಕರರು ಮೆರವಣಿಗೆ ಮಾಡಿದಾಗ ಕೆಂಪೇಗೌಡ ರೋಡಿನಲ್ಲಿ ಗಲಾಟೆಯಾಯಿತು. ಚಳುವಳಿ ಮಾಡುವವರು ಗಲಾಟೆಕೋರರು ಎಂದು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಚಳುವಳಿಗಾರರು ಯಾರು ಚಳುವಳಿಗಾರರ ಬಗ್ಗೆ ಅವರು ಗುಂಡಾಗಳು ಎಂದು ನಾನು ಹೇಳುವುದಕ್ಕೆ ಸಿದ್ಧನಿಲ್ಲ. ಅವರಿಗೆ ಸಂಪೂರ್ಣ ಬೆಂಬಲ ಇದೆ. ರಸ್ತೆಯಲ್ಲಿ ಸ್ವಲ್ಪ ಗಲಾಟೆ ಆಗಬಹುದು. ಸರ್ಕಾರದವರು ಕೊಟ್ಟಂಥ ಕೊಡುಗೆ, ಇದು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಮೂರು ಹುಡುಗರ ಬುರುಡೆಗೆ ಹೊಡೆದಿದ್ದಾರೆ, ಬುರುಡೆ ಸೀಳಿ ಹೋಗುವ ಹಾಗೆ ಹೊಡೆದಿದ್ದಾರೆ. ಅಧ್ಯಕ್ಷರೇ. ಪೋಲೀಸರ ಅಟ್ಟಹಾಸ ಎಲ್ಲಿಯವರೆಗೆ ಹೋಗಿದೆ ತೋರಿಸುತ್ತೇನೆ. ಇದು ರಕ್ತದ ತಲೆಬುರುಡೆಯನ್ನು ಹೊಡೆದಿರುವುದು ಇದು ರಕ್ತದ ಕಲೆ ನಿಮ್ಮ ಸರ್ಕಾರಕ್ಕೆ ಕೊಡುತ್ತೇನೆ. ಯಾವ ಜನತೆಯಮೇಲೆ ಕಣ್ಣೀರು ಹರಿಸುತ್ತಿದ್ದ ನಿರಪರಾಧಿ ಬಾಲಕರ ಮೇಲೆ ಲಾಠಿ ಪ್ರಹಾರ ಮಾಡಿ ಅವರ ಬುರುಡೆಯನ್ನು ಹೊಡೆದಿದ್ದಾರೆ. ಸಂಕಟವಾಗುತ್ತಾ ಇದೆ. ಇದು ಪೋಲೀಸ್ ಸರ್ಕಾರ. ನಿಮ್ಮ ಪೋಲೀಸ್ ಗುಂಡಾಗಿರಿಯನ್ನು ನೋಡುವುದಕ್ಕೆ ಆಗುವುದಿಲ್ಲ. ಇನ್ನು ಯಾರಯಾರ ತಲೆ ತೆಗೆಯುತ್ತಾರೋ ನಿರಪರಾಧಿ ಹುಡುಗರು ಚಿತ್ರವನ್ನು ಹಾಕಿ ಎಂದು ಹೇಳಿದ್ದಕ್ಕೆ ನಿರಪರಾಧಿ ಹುಡುಗರನ್ನು ಹೊಡೆದಿದ್ದಾರೆ ನನಗೆ ದುಃಖವಾಗುತ್ತದೆ, ಆ ಹುಡುಗರ ಪರಿಸ್ಥಿತಿಯನ್ನು ನೋಡಿದರೆ ಸಂಕಟವಾಗುತ್ತಿದೆ. ಸಣ್ಣ ಸಣ್ಣ ಹುಡುಗರನ್ನು ಹಿಡಿದು ಬುರುಡೆ ಹೊಡೆದಿದ್ದಾರೆ. ಇದು ನಿಮ್ಮ ಸರ್ಕಾರದ ಕೊಡುಗೆ, ಇಂಥ ಪೋಲೀಸವರ್ತನೆ ಹದ್ದು ಮೀರಿ ಹೋಗಿದೆ. ನಾನು ಯಾರನ್ನು ಬಯ್ಯುತ್ತಾ ಇಲ್ಲ. ಐ.ಜಿ.ಪಿ. ಯವರಿಗೆ ದಯಮಾಡಿ ನನ್ನ ಹತ್ತಿರ ಬನ್ನಿ ಎಂದು ಹೇಳಿದೆ ನನ್ನ ಹತ್ತಿರ ಬಂದಿದ್ದರೆ ಯಾವುದಾದರೂ ನ್ಯಾಯವಾಗಿ ಸಮಾಧಾನ ಮಾಡುತ್ತಿದೆ. ಅವರು ಬರದೆ ಹೋದದ್ದರಿಂದ ಈ ದುರಂತಕ್ಕೆ ಕಾರಣವಾಗಿದೆ. ಮೂರು ಹುಡುಗರಿಗೆ ಹೊಡೆದಿದ್ದಾರೆ. ಜನರಲ್ ಹಾಸ್ಟೆಲ್ ಒಬ್ಬ ಹುಡುಗ, ಟೆಲಿಫೋನ್ ಆಪರೇಟರ್, ಅವನಿಗೂ ಈ ಚಳುವಳಿಗೂ ಯಾವ ಸಂಬಂಧವಿಲ್ಲ, ಅವನನ್ನು ಹೊರಗಡೆ ಎಳೆದು ಹೊಡೆದಿದ್ದಾರೆ. ಫೋಟೋ ತಂದಿದ್ದೇನೆ. ಇದು ಸಂಕಟ ತರತಕ್ಕ ಸುದ್ದಿ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಆಕ್ಷೇಪಣೆ ಮಾಡುತ್ತಾ ಇಲ್ಲ ತಾವು ಹಾಗೆ ತಿಳಿದುಕೊಳ್ಳಬಾರದು. ಕೆಲವು ಸಮಯದಲ್ಲಿ ಚಳುವಳಿ ಮಾಡಬೇಕಾಗುತ್ತದೆ ಚಳುವಳಿ ಮಾಡಬೇಕಾದ ಸಂದರ್ಭ ಬಂದಾಗ ರಕ್ತವೇ ಅಲ್ಲಿಗುಂಡಿಕ್ಕಿ ಕೊಂದರೂ ನಮ್ಮ ಚಳುವಳಿ ಬಿಡುವುದಿಲ್ಲ, ಯಾರು ನಮ್ಮ ತಲೆ ತೆಗೆದರೂ ಚಿಂತೆಯಿಲ್ಲ, ಚಳುವಳಿ ನಿಲ್ಲುವುದಿಲ್ಲ. ಪೋಲೀಸ್ ಗುಂಡಾಗಿರಿಯನ್ನು ನಿಲ್ಲಿಸುತ್ತೇವೆ ಎಂದು ಹೇಳಿ ಅವರಿಗೆ ಎಚ್ಚರಿಕೆ ಕೊಟ್ಟು ಪೋಲೀಸ್ ಸರ್ಕಾರಕ್ಕೆ ಧಿಕ್ಕಾರ ಇರಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ್‌ಅರಸ್.—ಅವರು ಹೇಳಿರುವುದರಲ್ಲಿ ಎರಡು ವಿಚಾರ ತಿಳಿಸಬೇಕು. ಎಲ್ಲಿಯವರಿಗೆ ಜನ ಕಾನೂನು ಪರಿಪಾಲನೆ ಮಾಡದೆ ಗುಂಡಾಗಿರಿ ಮಾಡುತ್ತಾರೆ, ಹಾದಿಯಲ್ಲಿ ಬೀದಿಯಲ್ಲಿ ಹೋಗತಕ್ಕವರ ಮೇಲೆ ಕಲ್ಲು ಹೊಡೆಯುವುದು, ಬಸ್ಸುಗಳಿಗೆ ಕಲ್ಲು ಹೊಡೆಯುವುದು ಮತ್ತು ಜನರಿಗೆ ತೊಂದರೆ ಕೊಡುತ್ತಾರೆ ಬೇರೆ ಜನರಿಗೆ ತಲೆ ಹೊಡೆಯುತ್ತಾರೆ, ಸಿನಿಮಾ ಥಿಯೇಟರ್ ಗ್ಲಾಜುಗಳನ್ನು ಒಡೆಯುತ್ತಾರೆ, ಬಹುಶಃ ಶ್ರೀಮಾನ್ ನಾಗರಾಜ್‌ರವರ ಬೆಂಬಲಿಗರು ಅಲ್ಲ

ಎಂದು ತಿಳಿದುಕೊಂಡಿದ್ದೇನೆ, ಅಂಥವರು ಬೆಂಬಲ ಕೊಡುವುದೇ ಆಗಲಿ ಅವರನ್ನು ಬಿಡುವುದೇ ಆಗಲಿ ಸಾಧ್ಯವಿಲ್ಲ. ಅಂಥವರಿಗೆ ಯಾರನ್ನೂ ಬಿಡುವುದಕ್ಕೆ ಆಗುವುದಕ್ಕೆ ಆಗುವುದಿಲ್ಲ. ಕಾನೂನು ರಕ್ಷಣೆ ಸರ್ಕಾರ ಮಾಡೇ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಕಾನೂನು ರಕ್ಷಣೆ ಮಾಡಿ, ಆದರೆ ನಿರಪರಾಧಿಗಳನ್ನು ಕೊಲ್ಲುವುದಕ್ಕೆ ಹೋಗಬೇಡಿ.

ಶ್ರೀ ಡಿ. ದೇವರಾಜ ಅರಸ್.—ಯಾರು ನಿರಪರಾಧಿಯೆಂದು ಯಾರಿಗೆ ಗೊತ್ತು ?

ಶ್ರೀ ವಾಟಾಳ್ ನಾಗರಾಜ್.—ಜನರಲ್ ಹಾಸ್ಟೆಲ್‌ನಲ್ಲಿ ನಿಮ್ಮ ಗುಂಡಾಗಿರಿ ನಡೆಯುತ್ತದಿಲ್ಲ, ಅನೇಕ ಮಂತ್ರಿ ಮಂಡಲಗಳು ಉರುಳಿ ಹೋದವು, ಶ್ರೀ ಕೆ. ಸಿ. ರೆಡ್ಡಿಯವರ ಕಾಲದಲ್ಲೂ ನೋಡಿದೆವು. ಒಂದೊಂದಾಗಿ ಉರುಳುತ್ತವೆ, ಇದಕ್ಕೂ ಕಾಲ ಸನ್ನಿಹಿತವಾಗುತ್ತಿದೆ।

ಶ್ರೀ ಡಿ. ದೇವರಾಜ ಅರಸ್.—ನಾವು ಚಳುವಳಿ ಮಾಡಿದಾಗ ನೀವು ಹುಡುಗರು, ಇಷ್ಟು ಇದ್ದವರು, ನಿಮಗೆ ಏನು ಗೊತ್ತಾಗುತ್ತದೆ ?

ಉಪಾಧ್ಯಕ್ಷರು.—ನಾಗರಾಜ್‌ರವರೇ ದಯಮಾಡಿ ಮುಕ್ತಾಯ ಮಾಡಿ.

ಶ್ರೀ ವಾಟಾಳ್ ನಾಗರಾಜ್.—ಯಾವಾಗ ಮುಕ್ತಾಯ ಮಾಡುವುದು.

Mr. DEPUTY SPEAKER.—Even shedding of a single drop of blood is very bad. You asked for statement. The statement has been made. Government has made the stand clear. Let us leave it at that.

Sri M. S KRISHNAN. It casts really very serious doudt on one point on which the statement as been made. ಪತ್ರಿಕೆಯಲ್ಲಿ ವಾಟಾಳ್ ನಾಗರಾಜ್ ಮಾತನಾಡಿದವರು ಎಂದು ಇದೆ. ಬಂಗಾರಪ್ಪನವರು ನಾನು ಮಾತನಾಡಿದ್ದು ಉಂಟು, ವಾಟಾಳ್ ನಾಗರಾಜ್‌ರು ಮಾತನಾಡಿದ್ದು ಇಲ್ಲ, ಮಾತನಾಡಿದ್ದರೆ ರಾಜಿನಾಮೆ ಕೊಡುವುದಕ್ಕೆ ತಯಾರಿದ್ದೇನೆ ಎಂದು ಹೇಳುತ್ತಿದ್ದಾರೆ. ಅವರು ಭಾಷಣಮಾಡಿದ್ದರೆ ರುಜುವಾತು ಪಡಿಸಬೇಕು ರುಜುವಾತಾದರೆ ರಾಜಿನಾಮೆ ಕೊಡುತ್ತಾರೆ. ಇಲ್ಲದಿದ್ದರೆ ಇವರು ರಾಜಿನಾಮೆ ಕೊಡಬೇಕು.

Mr. DEPUTY SPEAKER.—Mr. Krishanan, have you taken a 'vakalath' for Mr. Vatal Nagaraj.

Sri M. S. KRISHNAN.—I am prepared to take vakalath for Mr. Vatal Nagaraj if he gets some justice. There is nothing wrong in it. You can not insinuate me in that manner.

Mr. DEPUTY SPEAKER.—Mr. Vatal Nagaraj has been physically present. His voice has been equivocally clear and candid. He has given us his say as to what he has done and what he has not done and everybody has followed it. Government has made a statement on that. Taking vakalat is not bad. There is no insinuation. Let there be no imputation where nothing is meant.

Sri D. B. KALMANKAR.—I want to narrate what happened on that day.

Mr. DEPUTY SPEAKER.—Mr. Kalmankar, why not we leave the matter at that ?

Sri D. DEVARAJ URS.—Sir, are we holding a cross-examination ? If the hon. Member feels that he was not present, let him go and prove it. Beyond that what happens is : there are so many hon Members who are present there and they too may start saying so many things. Are we gogin to decide this issue here ? Let us understand the position

(SRI D. DEVARAJ URS)

clearly. The hon. member has his own say and Government har put forth what we have to say. So, there it ends. The Court is there to look after gfter this case.

SRI M. S. KRISHNAN.—I do not know whether it is such a simpel matter as that. ಅವರು ಪ್ರೂವ್ ಮಾಡಬೇಕು, ಪ್ರೂವ್ ಮಾಡುವ ಜವಾಬ್ದಾರಿ ಯಾರದು ?

ಉಪಾಧ್ಯಕ್ಷರು.—ಯಾರು ಪ್ರೂವ್ ಮಾಡಬೇಕು ?

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದವರು ಪ್ರೂವ್ ಮಾಡಬೇಕು. ಜನಗಳ ಮುಂದೆ ಪ್ರೂವ್ ಮಾಡಬೇಕು, ಎಲ್ಲಾ ಕಡೆ ಪ್ರೂವ್ ಮಾಡಬೇಕು ಸದಸ್ಯರ ಮೇಲೆ ಆರೋಪ ಮಾಡಿ ಹೊರಟು ಹೋಗುವುದು ಅಲ್ಲ.

SRI V. N. PATIL.—It is for the prosecution to prove the case Let the Government prove it.

SRI B. V. KAKKILAYA.—Govornment must satisify us whether the statement is correct or not. A responsible Member denies it here. We must know whether Mr. Vatal Najaraj was there or not.

SRI KRISHNAN.—The Hon. Minister cannot make an irresponsible statement like that I am thoroughly dissatisfied with the statement. It is highly condemnable that he should make such a statement.

MR. DEPUTY SPEAKER.—You have a right to say what you have to say ; but if you volate the dignity of the House...

SRI H. N. NANJE GOWDA.—The hon. Member cannot be allowed to say all sorts of things.

MR. DEPUTY SPEKER.—Mr. Krishan, we cannot tolerate all these things. Don't be under the impression that you can raise your voice and silence anybody. You have been doiog it for so long a time Don't think you can raise your voice without being called.

SRI M. S. KRISHNAN.—I feel agitated about it and that is why I am giving expression to my feelings. We did not expce a statement of this type from the Government which is a clean chit and an alibi to the police.

3-00 P.M.

ಶ್ರೀ ಎಚ್. ಡಿ. ದೇವೇಗೌಡ.—ನನಗೆ ಈ ವಿಷಯದಲ್ಲಿ ಮುಂದುವರಿಸಿಕೊಂಡು ಹೋಗಬೇಕು ಎನ್ನುವ ಆಸಕ್ತಿ ಇಲ್ಲ. ಆದರೆ ಶುಕ್ರವಾರ ನಡೆದ ಘಟನೆ ಬಗ್ಗೆ ಸರ್ಕಾರದವರು ಕೊಟ್ಟ ಉತ್ತರ ಏನು ಇದೆ ಅದು ನೈಜ ಪರಿಸ್ಥಿತಿಗೆ ದೂರವಾದ ಉತ್ತರ ಕೊಟ್ಟಿದ್ದಾರೆ. ಪೋಲೀಸಿನವರು ಕೊಟ್ಟಿರತಕ್ಕಂಥ ವರದಿಯನ್ನು ನೀವು ಓದಬೇಕು ಏತಕ್ಕೆಂದರೆ ನೀವು ಹೋಗಿ ಇನ್‌ವೆಸ್ಟಿಗೇಷನ್ ಮಾಡುವುದಕ್ಕಾಗುವುದಿಲ್ಲ. ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಆ ಪ್ರೆಮಿಸಸ್‌ಗೇ ಬಂದಿಲ್ಲ, ನಾನು 10-40ಕ್ಕೆ ನನ್ನ ರೂಮು ಬಿಟ್ಟಿದ್ದೇನೆ. ಏತಕ್ಕೆಂದರೆ ನಾನು ಎಲ್ಲೋ ಬೇರೆ ಕಡೆಗೆ ಟ್ರಂಕ್ ಕಾಲ್ ಮಾಡಿ ಕೂತುಬಿಟ್ಟಿದ್ದರಿಂದ ಬಹಳ ಹೊತ್ತಿನವರೆಗೂ ರೂಮ್‌ನಲ್ಲೇ ಇದ್ದೆ. ನಾನು ಅಲ್ಲಿಗೆ ಹೋದಾಗ ಗುಂಪು ಇದ್ದುದು ನಿಜ. ಆದುದರಿಂದ ನನ್ನ ಕಾರಿಗೆ ಎಲ್ಲಿ ಕಲ್ಲು ಏಟು ಬೀಳುತ್ತದೋ ಎಂದು ಕಾರನ್ನು ಹಿಂದಕ್ಕೆ ತಿರುಗಿಸಿಕೊಂಡು ಕಬ್ಬನ್ ಪಾರ್ಕ್ ಮುಖಾಂತರ ಜಯನಗರಕ್ಕೆ ಹೋದೆ. ಪೋಲೀಸಿನವರ ದೌರ್ಜನ್ಯದ ಬಗ್ಗೆ ಈಗ ಈ ಸಭೆಯಲ್ಲಿ ಆರೋಪಣೆ ಮಾಡಿದ್ದಾರೆ. ನೀವು ಈ ಸದನದಲ್ಲಿ ಕೊಟ್ಟಂಥ ವಿವರಣೆ ಏನು ಇದೆ ಅದು ಸತ್ಯಕ್ಕೆ

ದೂರವಾದ ಹಾಗೆ ಕಾಣುತ್ತದೆ ಮತ್ತು ಅದನ್ನು ಸಾಬೀತು ಮಾಡುವುದಕ್ಕೆ ಕಾರಣಗಳೂ ಕೂಡ ಇವೆ. ಈ ಸದನದಲ್ಲಿ ತಾವು ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟ್ ನೋಡಿದರೆ ಸತ್ಯವಾಗಿ ಹೇಳಿದ್ದಾರೋ, ಅಸತ್ಯವಾಗಿ ಹೇಳಿದ್ದಾರೋ ಎನ್ನುವುದು ಗೊತ್ತಾಗುತ್ತದೆ. ಶ್ರೀಮಾನ್ ವಾಟಾಳ್ ನಾಗರಾಜ್ ಅವರ ಮೇಲೆ ರಾಜಕೀಯ ಮಾಡುವುದಾದರೆ ಅದು ಬೇರೆ ವಿಷಯ. ಆದರೆ ಸತ್ಯಕ್ಕೆ ದೂರವಾದ ವಿಷಯಗಳನ್ನು ಹೇಳುವುದು ಸರ್ಕಾರಕ್ಕೆ ಭೂಷಣವಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕು. ಯಾರು ತಪ್ಪು ವರದಿಯನ್ನು ಕೊಟ್ಟಿದ್ದಾರೋ ಅಂಥಾ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈವೊತ್ತು ಪುನಃ ಅದನ್ನು ಪರಿಶೀಲಿಸಿ ಅದರಲ್ಲಿ ಯಾರದೇ ತಪ್ಪು ಇರಲಿ ಕಾಂಗ್ರೆಸ್ (ಒ) ನವರೇ ಇರಲಿ, (ಆರ್) ನವರೇ ಇರಲಿ, ಬೇರೆ ಪಕ್ಷದವರೇ ಇರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಖಂಡಿತವಾಗಿಯೂ ಕೇಳುತ್ತೇನೆ. ಇಲ್ಲದೇ ಹೋದರೆ ಇದು ಸರ್ಕಾರಕ್ಕೆ ಗೌರವ ತರತಕ್ಕಂಥಾದ್ದಲ್ಲ ಎಂದು ಸರ್ಕಾರದ ಗಮನಕ್ಕೆ ತರುತ್ತೇನೆ.

Mr. DEPUTY SPEAKER.— Things will have to be decided elsewhere if necessary. All these things which have been flung here shold have been produced in the court if necessary. I cannot work as a court work as a court here. You require certain facts that have been stated by the Government.

ಶ್ರೀ ಜಿ. ಪುಟ್ಟಸ್ವಾಮಿ.— ಸುಳ್ಳು ವರದಿ ಕೊಟ್ಟಿರುವ ಪೋಲೀಸರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಧೈರ್ಯ ಮತ್ತು ನಿಯತ್ತು ಇದೆಯೇ ?

Sri H. D. DEVE GOWDA.– Government is making a baseless charge aganist a member of this House. We cannot keep quiet. Goverument cannot make a sweeping remark against the member of the Opposition.

Sri H. M. CHANNABASAPPA.— I am very sorry that the Hon'ble Leader of Opposition should execrcise himself on this issue. He is a very good parliamentarian. He knows what to do and what not to do. Knowing full well that these matters are to be adjudicated in the court of law, to question the veracity of the statement made here is not correct. If he wants to question the veracity of the statement, as you rightly put it, it is in the court of law. ಸರ್ಕಾರಕ್ಕೆ ಯಾರಮೇಲೂ ದ್ವೇಷ ಇಲ್ಲ. ಯಾರ ಮೇಲೂ ಆಕ್ರೋಶವೂ ಇಲ್ಲ ಅನುಚಿತವಾಗಿ ಯಾವ ವಿಧವಾದ ಅಂಶವನ್ನೂ ಮುಚ್ಚಬೇಕು ಎನ್ನುವ ಆಕಾಂಕ್ಷೆ ಇಲ್ಲ. ಈ ಒಂದು ಘಟನೆ ಏನು ನಡೆಯಿತು ಆ ಘಟನೆ ಬಗ್ಗೆ ವಿವರಣೆಗಳನ್ನು ಕೊಡಬೇಕೆಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಕೇಳಿದರು. ಆಗ ಆ ವಿಷಯಗಳನ್ನು ಸಂಗ್ರಹಿಸಿ ಮಾಡಿ ವರದಿಯನ್ನು ಹೇಳುತ್ತೇನೆ ಎಂದು ನಾನು ವಾಗ್ದಾನ ಮಾಡಿದೆ. ಆಗಲೇ ಈ ವಿಚಾರದಲ್ಲಿ ಸ್ವಲ್ಪ ಚಕಮಕಿ ಆಯಿತು ಇದರಲ್ಲಿ ಉದ್ದೇಶಪೂರ್ವಕವಾಗಿ ಮುಚ್ಚಿಡಬೇಕಾದ ಪ್ರಕೃತ ಏನೂ ಇಲ್ಲ. ಸರ್ಕಾರಕ್ಕೆ ಏನು ವರದಿ ಬಂದಿದೆ ಆ ವರದಿಯನ್ನು ಸಭೆಯ ಮುಂದೆ ಇಡತಕ್ಕದ್ದು ನನ್ನ ಕರ್ತವ್ಯ.

ಶ್ರೀ ಎಸ್. ಬಂಗಾರಪ್ಪ.—ಅದು ಅಸತ್ಯವಾದದ್ದು, ಸುಳ್ಳು ಸ್ಟೇಟ್‌ಮೆಂಟ್.

ಶ್ರೀ ಎಚ್. ಎಂ. ಚನ್ನಬಸಪ್ಪ. - ಇದರಲ್ಲಿ ಸತ್ಯ ಯಾವುದು. ಅಸತ್ಯ ಯಾವುದು ಎಂದು ತೀರ್ಮಾನ ಮಾಡುವುದಕ್ಕೆ ಬೇರೆ ಸ್ಥಳ ಇದೆ ಆ ಸ್ಥಳದಲ್ಲಿ ಕೇಳುತ್ತೇವೆ. ವಾದ ವಿವಾದಕ್ಕೆ ಇದು ಸ್ಥಳವಲ್ಲ. ಸರ್ಕಾರಕ್ಕೆ ಬಂದಿರುವ ವರದಿಯನ್ನು ಕೊಟ್ಟಿದ್ದೇನೆ. ಆದರಲ್ಲಿ ಕೆಲವರಿಗೆ ತೃಪ್ತಿ ಆಗಬಹುದು, ಇನ್ನು ಕೆಲವರಿಗೆ ಅತೃಪ್ತಿ ಆಗಬಹುದು, ಅದು ಸ್ವಾಭಾವಿಕ. ಈಗ ಏನು ಸ್ಟೇಟ್‌ಮೆಂಟ್ ಮಾಡಿದ್ದೇನೆ ಅದು ಸರ್ಕಾರಕ್ಕೆ ಬಂದಿರುವ ವರದಿ. ನಾನು ಈ ಸಭೆಯ ಮುಂದೆ ಏನು ವಾಗ್ದಾನ ಮಾಡಿದೆನೋ ಆ ವಾಗ್ದಾನ ಮಾಡಿದ ಪ್ರಕಾರ ನಡೆದುಕೊಂಡಿದ್ದೇನೆ. ಈ ವಿಷಯ ಇಲ್ಲಿಗೇ ಮುಗಿಯಬೇಕು ಎಂದು ನನ್ನ ಕೋರಿಕೆ. ಸರ್ಕಾರಕ್ಕೆ ಬಂದಿರುವ ವರದಿಯನ್ನು ಸಭೆಯ ಮುಂದೆ ಇಟ್ಟಿದ್ದೇನೆ, ಹಾಗೆ ಇಡತಕ್ಕದ್ದು ನನ್ನ ಕರ್ತವ್ಯ. ಆ ಕರ್ತವ್ಯವನ್ನು ನಾನು ಇಲ್ಲಿ ಪರಿಪಾಲನೆ ಮಾಡಿದ್ದೇನೆಯೇ ವಿನಾ ಅವರ ಮೇಲೆ ನನಗೆ ಹೊಟ್ಟೆಕಿಚ್ಚು ಏನಿದೆ ? ಮತ್ತೊಬ್ಬರ ಮೇಲೆ ಏನಿದೆ ? ಸುಮ್ಮನೆ ತಾವು ಮನಸ್ಸಿನಲ್ಲಿ ಭಾವನೆ ಮಾಡಿಕೊಳ್ಳತಕ್ಕದ್ದು ಅನಾವಶ್ಯಕ.

ಶ್ರೀ ಸಿ. ಬೈರೇಗೌಡ.—ಈ ಸಭೆಯ ಮಾನ್ಯ ಸದಸ್ಯರ ಮೇಲೆ ಆರೋಪವಿದೆ. ಅವರು ಅಂದು ಸಭೆ ನಡೆದಾಗ ಅಲ್ಲಿ ಇಲ್ಲದೆ ಇದ್ದರೂ ಸಹ ಸರ್ಕಾರ ಆರೋಪ ಮಾಡಿದೆ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ, ಸನ್ಮಾನ್ಯ ಸದಸ್ಯರೂ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ.—ಈ ವಿಷಯದ ಬಗ್ಗೆ ಸರಿಯೋ ತಪ್ಪೋ ಎನ್ನುವುದನ್ನು ಕೋರ್ಟಿನವರು ತೀರ್ಮಾನ ಕೊಡುವುದಕ್ಕೆ ಅಧಿಕಾರವಿಲ್ಲ. ಈ ಸಭೆಯಲ್ಲಿ ಮಾನ್ಯ ಸದಸ್ಯರ ಮೇಲೆ ಒಂದು ಆರೋಪ ಬಂದಿರುವುದರಿಂದ ಸದಸ್ಯರು ಕೋರ್ಟಿಗೆ ಹೋಗುವುದಕ್ಕೆ ಮಾರ್ಗವಿಲ್ಲ. ಆದುದರಿಂದ ಈ ವಿಷಯ ಇಲ್ಲಿಯೇ ಪರಿಹಾರವಾಗಬೇಕಾಗಿದೆ.

ಶ್ರೀ ಕೆ. ಎಂ. ನಾಗಣ್ಣ.—ಮೊನ್ನೆ ದಿವಸ ಶ್ರೀ ವಾಟಾಳ್ ನಾಗರಾಜ್ ಅವರು ಆ ದಿವಸ ನಾನು ಅಲ್ಲಿ ಇರಲಿಲ್ಲ, ಇದ್ದರೆ ರಾಜಿನಾಮೆ ಕೊಡುತ್ತೇನೆ ಎಂದು ಹೇಳಿದ್ದರು. ಅದಾದ ಮೇಲೆ ಈ ದಿವಸ ಶ್ರೀ ವಾಟಾಳ್ ಅವರು ಭಾಷಣ ಮಾಡಿದರು ಎಂದು ಮಾನ್ಯ ಚನ್ನಬಸಪ್ಪನವರು ಹೇಳುತ್ತಿದ್ದಾರೆ. ಅವರು ಸರ್ಕಾರಕ್ಕೆ ಪೋಲೀಸರಿಂದ ಬಂದ ವರದಿಯ ಮೇಲೆ ಹೇಳಿದ್ದಾರೆ. ಇಂಥ ಸತ್ಯಕ್ಕೆ ದೂರವಾದ ವರದಿಯನ್ನು ಕೊಟ್ಟಿರುವುದು ನಿಜವಾದರೆ ಅಂಥ ವರದಿಯನ್ನು ಕೊಟ್ಟಿರುವ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ! ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಅಂಶವನ್ನು ಸ್ಪಷ್ಟಪಡಿಸುತ್ತೇನೆ. ಸರ್ಕಾರದ ಆಡಳಿತ ವ್ಯವಸ್ಥೆ ನಡೆಯುವಂಥದ್ದರಲ್ಲಿ ಯಾರಾದರೂ ತಪ್ಪು ಮಾಡಿದ್ದರೆ ಅಂಥ ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ವಿಧಿಸತಕ್ಕದ್ದು ಸರ್ಕಾರದ ಕರ್ತವ್ಯ.

ಶ್ರೀ ಕೆ. ಎಂ. ನಾಗಣ್ಣ.—ಎರಡು ಮೂರು ದಿವಸದಲ್ಲಿ ವಿಚಾರಿಸಿ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಬೇಕು. ಸಂಬಂಧಪಟ್ಟ ಸದಸ್ಯರು ಅಲ್ಲಿ ಇರಲಿಲ್ಲವೆಂದರೆ ಇದ್ದರು ಎಂದು ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್.—ನನ್ನ ನಿಲುವಿಗೆ ನಾನು ನಿಂತಿದ್ದೇನೆ. ಮಾನ್ಯ ಮಂತ್ರಿಗಳು ಮತ್ತೆ ವಿಮರ್ಶೆ ಮಾಡಬೇಕು. ಪೋಲೀಸಿನವರು ಅವರನ್ನು ಮಿಸ್‌ಲೀಡ್ ಮಾಡಿದ್ದಾರೆ. ನಾನು ಇದಕ್ಕೆಲ್ಲ ಹೆದರುವುದಿಲ್ಲ. ಇದ್ದರೆ ಇದೆ ಎಂದು ಹೇಳುತ್ತೇನೆ. ನಾನು ಸಂಪೂರ್ಣವಾಗಿ ಆ ದಿನ ಅಲ್ಲಿ ಇರಲಿಲ್ಲ. ಪೋಲೀಸಿನವರ ರಿಪೋರ್ಟ್ ಸುಳ್ಳು ಎನ್ನುವುದಕ್ಕೆ ಇದೊಂದು ನಿದರ್ಶನ. ನಾನು ಮಾನ್ಯ ಚನ್ನಬಪಪ್ಪನವರ ಬಗ್ಗೆ ಗೌರವ ಇಟ್ಟುಕೊಂಡಿದ್ದೆ, ಬಹಳ ದಕ್ಷರು, ಸತ್ಯ ಹೇಳುತ್ತಾರೆಂದು ತಿಳಿದುಕೊಂಡಿದ್ದೆ. ಈ ಹೊತ್ತು ಇವರು ಕೊಟ್ಟಿರುವ ಹೇಳಿಕೆಯನ್ನು ಸಂಪೂರ್ಣವಾಗಿ ಪುನರ್ವಿಮರ್ಶೆ ಮಾಡಲೇ ಬೇಕು. ನಾಳೆ ಅಥವಾ ನಾಳಿದ್ದು ಸಭೆಗೆ ಒಂದು ಸರಿಯಾದ ಹೇಳಿಕೆಯನ್ನು ಕೊಡಬೇಕು. ಸುಮ್ಮಸುಮ್ಮನೆ ಹೇಳಿ ಮುಖಕ್ಕೆ ಮಸಿ ಬಳಿಯುವ ಕ್ರಮಕ್ಕೆ ಹೋಗುವುದಾದರೆ ನಾವೂ ಬೇರೆ ಕ್ರಮ ಅನುಸರಿಸಬೇಕಾಗುತ್ತದೆ. ವಿರೋಧ ಪಕ್ಷದ ನಾಯಕರಾದ ಶ್ರೀ ದೇವೇಗೌಡರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಇದನ್ನು ಒತ್ತಾಯ ಮಾಡಿ ರುಜುವಾತು ಪಡಿಸಬೇಕು. ನಾನು ಅವರಿಗೆ ನನ್ನ ರಾಜಿನಾಮೆ ಪತ್ರವನ್ನು ಕೊಡುತ್ತೇನೆ. ಯಾವ ಕಾಲದಲ್ಲಿ ಬೇಕಾದರೂ ರಾಜಿನಾಮೆ ಪತ್ರವನ್ನು ಉಪಯೋಗಿಸಬಹುದು. ನಾನು ಈ ಸಭೆಯಲ್ಲಿ ಇರಬೇಕೆಂದು ಹೇಳುತ್ತಿಲ್ಲ, ಬಾಯಿಗೆ ಬಂದ ಹಾಗೆ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಮಾನ್ಯ ಚನ್ನಬಸಪ್ಪನವರಿಗೆ ಹೇಳುತ್ತೇನೆ, ಅವರು ಮತ್ತೊಮ್ಮೆ ಪರಿಶೀಲನೆ ಮಾಡಿ ಯಾವುದು ಸರಿ ಯಾವುದು ತಪ್ಪು ಎನ್ನುವ ತೀರ್ಮಾನಕ್ಕೆ ಬರಬೇಕು ಮತ್ತು ಸಭೆಗೆ ಸರಿಯಾದ ವಿಷಯವನ್ನು ತಿಳಿಸಬೇಕು.

Sri H. M. CHANNABASAPPA.—Sir, if anybody has committed any wrong, I made it very clear that whoever it may be, whether big or small, Government would definitely take necessary action.

(Sri V. N. Patil stood up twice or thrice but the Deputy Speaker asked him to resume his seat).

(Sri V. N. Patil again rose.)

Mr. DEPUTY SPEAKER.—I have heard the hon. Member's party man and that is enough.

Sri V. N. PATIL.—Why is the Deputy Speaker injecting party politics here ? That is uncharitable and unfair. Please refrain from doing so.

Sri H. M. CHANNABASAPPA.—On a point of order, Sir. While agreeing that all members who would like to have a say should have a right and opportunity to say, it is for the Chair to call upon such members who, he desires, should speak. It is also our common knowledge that however much we may like to speak we may not get a chance and naturally we get displeased. But that is not a justification for casting aspersions on the Chair.

Sri V. N. PATIL.—Please do not bring in the question of aspersions.

Sri H. M. CHANNABASAPPA.—To say that the Deputy Speaker in indulging in party politics is an aspersion and such a thing cannot be tolerated here.

Sri V. N. PATIL.—It is not for the Hon. Minister to say that he is not going to tolerate it. If the Deputy Speaker says so, it is a matter between him and us.

Mr. DEPUTY SPEAKER.—There is force in the point of order raised by the hon. Minister. On innumerable occasions when the hon. Member Sri Kagodu Thimmappa has spoken on a subject, I have not allowed his own followers Sri Konandur Lingappa to speak. On innumerable occasions when the hon. Member Sri Naganna has spoken, I have not allowed the hon. Member Sri Shamanna who belongs to the same party to speak, Similarly, on innumerable occasions when the Hon. the Leader of the Opposition has spoken, I have precluded a number of members of the Opposition belonging to his party from speaking. That is a matter of duty. Similarly, when the hon. Member Sri Krishnan has spoken on this subject, I have not given an opportunity to his own party man to speak. It is in that context that I said his own party man has already explained the position. The hon. Member Sri V. N. Patil will know from the records whether injustice has been done to his party or justice has been done. Ther-fore, making an insinnuation let him consider whether he is justified in doing so, Otherwise, I will be perfectly justified in following the spirit of the rules.

Sri M. S. KRISHNAN.—On a point of order. You were pleased to say that "your party spokesman has already spoken".

Mr. DEPUTY SPEAKER.—It means the Leader of the party here.

Sri M. S. KRISHNAN.—I am not trying to say what the spokesman means. Probably the Chair meant that I have already spoken and so there was no necessity for the same partyman to raise an important question. This raises an important point because as far as we are concerned here, we are not only members of the party but members of the House. As member of this Assembly, we are supposed to discharge certain duties and responsibilities and whenever issues like

(SRI M. S. KRISHNAN)

this come up, each of us will have our own manner of speaking or understanding on the points. When we spoke we also speak not exactly in consonance with the party's principle, unless it is involved. I feel even though we belong to the same party, by the virtue of statement made about what happened, it may be a matter of curtailing the rights of other members to speak, whethor he belongs to this party or other party. I know the Chair has full discretion to permit a member to speak. I am not trying to impute any motive and I know you have the right under the law. But if you say because the hon. member is a member of a particular party he cannot speak because that party's spokesman has already spoken, that will amount to curtailing the right and discharging that responsibility. That is my humble opinion. I would request the Chair to give a ruling.

Mr. DEPUTY SPEAKER.—You have raised a point of order but you have asked for clarification. The thing is, I would have certainly allowed Sri V. N. Patil to seek a clarification if other members of his party had not stated. In this case Sri Krishnan has stated thrice and on all the three occasions I have heard him with rapt attention. So if it is justified that I should give other member of his party the same latitude, that will result in other parties asking for the same thing. There is no force in the point of order.

ಶ್ರೀ ವಾಟಾಳ್ ನಾಗರಾಜ್.—ನಾನು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಸಿಗಲಿಲ್ಲ. ನಾನು ಇದ್ದೆನೋ ಇಲ್ಲವೋ ಅದನ್ನು ತಕ್ಷಣ ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ ಬಗ್ಗೆ ತಾವು ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಆದರೆ ಇದರಲ್ಲಿರುವುದು ಅಂದಿನ ದಿನ ಅಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಭಾಷಣ ಮಾಡಿಲ್ಲ ಎಂದು ಹೇಳುತ್ತಾರೆ. ಇದು ಸರಿಯೇ ಅಲ್ಲವೇ ಎನ್ನುವ ಬಗ್ಗೆ ಮಾತ್ರ ಇಲ್ಲಿ ತಿಳಿಸಿದರೆ ಸಾಕು. ಇತರ ವಿಚಾರಗಳ ಬಗ್ಗೆ ನಾನು ತಮ್ಮಲ್ಲಿ ವಿವರಗಳನ್ನು ಕೇಳುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಸತ್ಯಕ್ಕೆ ದೂರ ವಾದುದು, ಪೋಲೀಸರು ಉದ್ದೇಶಪೂರ್ವಕವಾಗಿ ಇಂತಹ ವರದಿ ಕಳುಹಿಸಿದ್ದಾರೆ. ಅಂದು ನಾನು ಅಲ್ಲಿರಲಿಲ್ಲ, ಇದರ ಬಗ್ಗೆ ಸರಿಯಾಗಿ ಉತ್ತರ ಕೊಡದೇ ಇದ್ದರೆ ನಾನು ಸಭಾಧ್ಯಕ್ಷರ ಬಳಿ ಧರಣಿ ಸತ್ಯಾಗ್ರಹ ಮಾಡುತ್ತೇನೆ, ಇದನ್ನು ನನಗೆ ಮೋಸ ಮಾಡಲು ಹೊರಟಿದ್ದಾರೆ ಮತ್ತು ಇದು ನನ್ನ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕ್ರಮ.

ಶ್ರೀ ಎಚ್. ಡಿ. ದೇವೇಗೌಡ.—ತಪ್ಪು ವರದಿ ತಮಗೆ ಕಳುಹಿಸುವವರ ಬಗ್ಗೆ ಕ್ರಮ ತೆಗೆದು ಕೊಳ್ಳುವುದು ಬಿಡುವುದು ತಮಗೆ ಸೇರಿದ್ದು, ಇದು ಎರಡನೇ ಮಾತು. ಅವರು ಅಂದಿನ ಸಭೆಯಲ್ಲಿ ಇದ್ದರೇ ಇಲ್ಲವೇ ಅದನ್ನು ವಿಮರ್ಶೆ ಮಾಡಿ ತಿಳಿಸಿದರೆ ಸಾಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರಕಾರದ ಜವಾಬುದಾರಿ ಇದರಲ್ಲಿಲ್ಲ ಎಂದು ತಿಳಿದು ಮಾತನಾಡುವುದು ಸರಿಯಲ್ಲ.

Sri H. D. DEVE GOWDA.—It is a small matter. Taking action against an officer who has given incorrect reply is different. Whether the hon. member was present or not, that point may be clarified after ascertaining information.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರಕಾರ ಎಲ್ಲ ವಿಚಾರಗಳನ್ನೂ ಪರಿಶೀಲನೆ ಮಾಡುವಾಗ ಜವಾಬುದಾರಿಯಿಂದ ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಆದರೆ ಇದರಲ್ಲಿ ಜವಾಬುದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಹೋಗುವಂತೆ ತಾವು ಹೇಳುವ ಮಾತುಗಳಿಂದ ಇಲ್ಲ ಅರ್ಥವಾಗುತ್ತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಲ್ಲಿ ಮಾನ್ಯ ಸದಸ್ಯರು ತಪ್ಪು ವಿಚಾರಗಳನ್ನು ತಿಳಿದು ಕೊಂಡು ಹೇಳುತಾರೆ ಎಂದು ಹೇಳುತ್ತಿಲ. I have heard all of you with great patience. I have respect for every member of this House, whether on this side or that side and the Government is here to safeguard the interests of everybody, including the members of the House and the people outside The Government is responsidle to discharge its duties. If any member is aggr eved on the report that is placed before t e House or finds something wrong in the report or inc rrect in the report, as the Chair has said, they hav expressed themselves on what they feel about it. But, when I have made a statement here based on the reports received and if in due course it is proved incorrect, the Government will not resist or desist to take any action against any person. It will be stated at appropriate time, if it is proved w o g.

Sri V. N. PATIL.—I want to ask for one clarification. I do not think that the Chair will insist that my partymen has already spoken.

Now it has been stated by the Minister in his statemen that some person was pres nt. Several other members were there and they know that that per on w s not there. The Minister will kindly tell the House what time he would require to verify whether the hon. member he mentioned was there or not. This is ne essary because when the Minister said it, the hon. member is present here and tomorrow that would be a piece of evidence which may be used against the member. In order to see that proper protecti n is given, the Chair should insist that the Minister should clear the point within a specified time.

Mr. DEPUTY SPEAKER.—We will go to the next item.

3-30 P. M,

ಶ್ರೀ ವಾಟಾಳ್ ನಾಗರಾಜ್.—ತಪ್ಪಿಸಿಕೊಳ್ಳುವ ಮಾತನ್ನು ಹೇಳುತ್ತಿದ್ದಾರೆ. ಉದ್ದೇಶ ಪೂರ್ವಕವಾಗಿ ನಾನು ಅಂದು ಅಲ್ಲಿ ಇಲ್ಲದಿದ್ದರೂ ನನ್ನ ಹೆಸರನ್ನು ಪೋಲೀಸರು ತಮ್ಮ ವರದಿಯಲ್ಲಿ ಸೇರಿಸಿಬಿಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಪೋಲೀಸಿನವರೂ ಯಾವಾಗಲೂ ಬದುಕಿರುವವರನ್ನು ಸಾಯಿಸುತ್ತಾರೆ, ಸತ್ತವರನ್ನು ಬದುಕಿಸುತ್ತಾರೆ.

ಉಪಾಧ್ಯಕ್ಷರು. - ತಾವು ಕುಳಿತುಕೊಳ್ಳಿ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದರೂ ಸಹ ಸರ್ಕಾರದವರು ಇವೇಡ್ ಮಾಡುವ ಉತ್ತರವನ್ನು ಕೊಡುತ್ತಿದ್ದಾರೆ. ಶುಕ್ರವಾರದ ಘಟನೆಯಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಇದ್ದರೇ ಅಥವಾ ಇಲ್ಲವೇ ಎಂಬುದನ್ನು ತಿಳಿಸಬೇಕು. ಸರ್ಕಾರದ ಹೇಳಿಕೆ ನಿಜವಾದರೆ ತಮ್ಮ ರಾಜೀನಾಮೆ ಕೊಡುವುದಾಗಿ ಷರತ್ತು ಕೂಡ ಅವರು ಇಟ್ಟಿದ್ದಾರೆ. ಆದಕಾರಣ ಈಗ ಕೊಟ್ಟಿರುವ ಸರ್ಕಾರದ ಹೇಳಿಕೆ ಏನಿದೆ ಅದನ್ನು ಪುನರ್ ಪರಿಶೀಲನೆ ಮಾಡಿಸಿ ಎಂದು ಅವರು ಹೇಳುತ್ತಿರುವುದು ? ಅದನ್ನು ಏತಕ್ಕೆ ಒಪ್ಪಿಕೊಳ್ಳಬಾರದು.

ಉಪಾಧ್ಯಕ್ಷರು.— ಪುನರ್‌ಪರಿಶೀಲನೆ ಮಾಡಿಸುವುದಾಗಿ ಹೇಳಿದ್ದಾರೆ.

Sri H. D. DEVEGOWDA.—I want to know when the Government will be able to give reply so far as this issue is concerned ?

ಶ್ರೀ ವಾಟಾಳ್ ನಾಗರಾಜ್ —ಇದನ್ನು ಅಷ್ಟು ಸುಲಭವಾಗಿ ಬಿಡುವುದಕ್ಕಾಗುವುದಿಲ್ಲ !

Sri A. A. DESAI.—On a point order. Sub-rule (viii) of Rule 288 says :

> "A member while speaking shall not use his right of speech for the purpose of obstructing the business of the Assembly."

Now the hon. Member is trying to obstruct the business of the Assembly. Whether it is proper ?

Mr. DEPUTY SPEAKER.—There is great force in the point of order raised by hon. Member Sri A. A. Desai.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಹೇಳುತ್ತಿರುವಂತೆ ಸರ್ಕಾರದವರು ಇನ್ನೊಂದು ಸಲ ಪರಿಶೀಲನೆ ಮಾಡಿಸಿ ಏನಾದರೂ ಆಕಸ್ಮಿಕವಾಗಿ ತಪ್ಪಾಗಿದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು ! ಆ ರೀತಿ ಪುನರ್ ಪರಿಶೀಲನೆ ಮಾಡಿಸುತ್ತೇವೆಂದು ಏತಕ್ಕೆ ಹೇಳಬಾರದು ?

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವುದು ಎರಡನೆಯ ಪ್ರಶ್ನೆ. ಆದರೆ ಅಂದು ಅಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಇದ್ದರೆ ಅಥವಾ ಇಲ್ಲವೇ ಎಂಬ ಬಗ್ಗೆ ಮತ್ತೊಂದು ಸಲ ತನಿಖೆ ಮಾಡಿಸುವುದಾಗಿ ಆಶ್ವಾಸನೆ ಮಾಡಬೇಕು.

Sri H. M. CHANNABASAPPA.—I making it very clear that this is the information that has been received by the Government and it is my duty to place it before the House. If by subsequent enquiry and examination if it is found that something is wrong I will not only convey it to this House but also take necessary action against the persons responsidle for giving that wrong information.

Sri H. D. DEVE GOWDA.—If it is found means what ? I want a categorical reply from you as to when you will tell us whether Mr. Vatal Nagaraj was there or not ?

Sri H. M. CHANNABASAPPA.—It means on examination if it is found.

Sri B. SUBBAIAH SHETTY —Sir, on a point of order. The Chair had already gone to the next item. But the hon. members are raising the same previous issue and thus causing obstruction which is not permitted under Rule 288 (viii).

Mr. DEPUTY SPEAKER.— There is force in your point of order.

ಶ್ರೀ ಕೋಣಂದೂರು ಲಿಂಗಪ್ಪ.—ಜಾರಿಕೆ ಉತ್ತರ ಅಥವಾ ಸುಳ್ಳು ಹೇಳಿಕೆ ಕೊಟ್ಟು ನುಣುಚಿಕೊಳ್ಳುವುದಕ್ಕೆ ನಾವು ಬಿಡುವುದಿಲ್ಲ. ಆ ರೀತಿ ಜಾರಿಕೆ ಉತ್ತರ ಕೊಡುವುದು ಸರಿಯೂ ಅಲ್ಲ. ಈಗ ಏನು ಸುಳ್ಳು ಹೇಳಿಕೆ ಕೊಡಲಾಗಿದೆ ಅದನ್ನು ಪುನರ್ ಪರಿಶೀಲನೆ ಮಾಡಿ ಅದರ ವರದಿಯನ್ನು ಯಾವಾಗ ಸಭೆಯ ಮುಂದ ಇಡುತ್ತೀರಾ ! ಮತ್ತು ತಪ್ಪು ಹೇಳಿಕೆ ಕೊಟ್ಟ ಅಧಿಕಾರಿಯ ಮೇಲೆ ಏನು ಕ್ರಮ ಕೈಕೊಳ್ಳುತ್ತೀರಾ ಎಂಬುದನ್ನು ಹೇಳಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಯಾರಮೇಲೂ ಸಹ ಅಭಿಮಾನವನ್ನಾಗಲೀ ದುರಭಿಮಾನವನ್ನಾಗಲಿ ಇಟ್ಟುಕೊಳ್ಳಬೇಕೆಂಬುದು ಇಲ್ಲ. ಅದು ಸರ್ಕಾರದ ಇಚ್ಛೆಯೂ ಅಲ್ಲ. ಈ ಕಡೆಯ ಸದಸ್ಯರ ಬಗ್ಗೆ ಎಷ್ಟು ಗೌರವ ನಮಗೆ ಇದೆಯೋ ಅದಕ್ಕಿಂತಲೂ ಒಂದು ಕೈ ಹೆಚ್ಚು ಗೌರವ ವಿರೋಧ ಪಕ್ಷದ ಸದಸ್ಯರ ಬಗ್ಗೆ ಇದೆ.

ಶ್ರೀ ವಾಟಾಳ್ ನಾಗರಾಜ್.--ನಿಮ್ಮ ನೆಂಟಸ್ಥನ, ನಿಮ್ಮ ಪುರಾಣ ನಮಗೆ ಬೇಕಾಗಿಲ್ಲ; ಯಾವೊತ್ತು ಪುನರ್ ಪರಿಶೀಲನೆ ಮಾಡಿಸುತ್ತೀರಾ, ಯಾವೊತ್ತು ಅದನ್ನು ಸಭೆಯ ಮುಂದೆ ಇಡುತ್ತೀರಾ ಎಂಬುದನ್ನು ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.--ಈಗ ಸರ್ಕಾರಕ್ಕೆ ಬಂದಿರುವ ವರದಿಯನ್ನು ತಮ್ಮ ಮುಂದೆ ಇಟ್ಟಿದ್ದೇನೆ, ಅದರ ಬಗ್ಗೆ ಅನೇಕರು ನಾನಾ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ ಅದಕ್ಕೆ ನನ್ನ ಅಡ್ಡಿ ಇಲ್ಲ. ಈ ಸಭೆಯಲ್ಲಿ ಎಲ್ಲ ಸದಸ್ಯರೂ ಹೇಳಿರತಕ್ಕ ಅಂಶವನ್ನೂ ಮತ್ತು ಸದಸ್ಯರ ವ್ಯಾಕುಲತೆಯನ್ನೂ ನಾನು ಪ್ರೀತಿಯಿಂದ ಕೇಳಿದ್ದೇನೆ. ಇದರಲ್ಲಿ ತಪ್ಪು ವರದಿಯಾಗಿದೆ ಎಂಬುದು ತಮ್ಮ ಅಭಿಪ್ರಾಯ. ನನಗೆ ಬಂದಿರತಕ್ಕದ್ದು ಸರಿ ಎಂದು ನನ್ನ ಮುಂದೆ ಬಂದಿರತಕ್ಕ ವರದಿಯಲ್ಲಿ ಇದೆ. ತಾವು ಇದು ತಪ್ಪು-ಎಂದು ಹೇಳುವುದಾದರೆ ಅದನ್ನು ಸರ್ಕಾರದವರು ಸುಮ್ಮನೆ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಿಲ್ಲ. ಈ ಬಗ್ಗೆ ಇದು ಯೋಗ್ಯ ವಿಷಯ, ಇದನ್ನು ಪರಿಶೀಲನೆ ಮಾಡಬೇಕು ಎನ್ನುವ ಕಾಲ ಬಂದಾಗ.................

ಶ್ರೀ ವಾಟಾಳ್ ನಾಗರಾಜ್.—ಅದನ್ನು ನಾನು ಕೇಳಿದ್ದೇನೆ. ಉದ್ದೇಶಪೂರ್ವಕವಾಗಿ ನನ್ನ ಮುಖಕ್ಕೆ ಮಸಿ ಬಳಿಯಲು ಹೊರಟಿದ್ದಾರೆ. ಅವರು ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಹೇಳಿದ್ದಾರೆ. ಆದ್ದರಿಂದ ಅವರು ಸ್ಪಷ್ಟವಾಗಿ ಇಂಥಾ ತಾರೀಖು ಇಷ್ಟು ದಿವಸಗಳಲ್ಲಿ ಅದನ್ನು ಪುನರ್ ಪರಿಶೀಲನೆ ಮಾಡುತ್ತೇವೆ ಎಂದು ಹೇಳಲಿ. ಇಲ್ಲದೇ ಹೋದರೆ ನಾನು ಧರಣಿ ಕುಳಿತುಕೊಳ್ಳುತ್ತೇನೆ.

Sri H. M. CHANNABASAPPA.—I am not here to be dictated. I do respect reason. Am I to be dictated by the hon. member !

(ಈ ಸಂದರ್ಭದಲ್ಲಿ ಶ್ರೀ ವಾಟಾಳ್‌ನಾಗರಾಜ್ ಅವರು ಉದ್ದೇಶ ಪೂರ್ವಕವಾಗಿ ಈ ರೀತಿ ಮಾಡುತ್ತಿದ್ದಾರೆ ಎಂದು ಹೇಳುತ್ತಾ ಅಧ್ಯಕ್ಷರ ವೇದಿಕೆಯ ಹತ್ತಿರ ಹೋಗಿ ಧರಣಿ ಕುಳಿತುಕೊಂಡರು. ಆ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ದೇವೇಗೌಡರು ಮತ್ತು ವಿರೋಧ ಪಕ್ಷದ ಸದಸ್ಯರು ಕೆಲವರು ಸ್ವಲ್ಪ ತಡೆಯಿರಿ ಎಲ್ಲಾ ಒಟ್ಟಿಗೆ ಕೂರೋಣ ತಾವು ವಾಪಸ್ಸು ಬಂದು ಕುಳಿತುಕೊಳ್ಳಿ ಎಂದು ಕರೆದ ಮೇಲೆ ಅವರು ವಾಪಸ್ಸು ಬಂದು ಕುಳಿತುಕೊಂಡರು)

Sri H. M. CHANNABASAPPA.—Please hear me. I am not here to be dictated or threatened. I do not yield to threat or any other thing other than reason. Reason and reason alone can only appeal and not a threat.

ಶ್ರೀ ವಾಟಾಳ್‌ನಾಗರಾಜ್.—ಈಗ ತಮಗೆ ಬಂದಿರುವುದು ಸುಳ್ಳು ವರದಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ತಮ್ಮ ಅಭಿಪ್ರಾಯ.

ಶ್ರೀ ಕೆ. ಎಂ. ನಾಗಣ್ಣ.—ಇದನ್ನು ಯಾವುದೂ ಪರಿಶೀಲನೆ ಮಾಡಿ ತಿಳಿಸುತ್ತೇನೆ ಎಂಬುದನ್ನು ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೇ ಹೇಳುತ್ತಿದ್ದರೆ ನಾನು ಮಾಡತಕ್ಕದ್ದು ಏನಿದೆ ?

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೆಗೆ ನೇರವಾಗಿ ಉತ್ತರ ಕೊಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡು ನಿಮಿಷಕ್ಕೆ ಒಬ್ಬೊಬ್ಬರು ಎದ್ದು ನಿಂತುಕೊಂಡು ಮಾತನಾಡಿದರೆ ನಾನು ಮಾಡತಕ್ಕದ್ದು ಏನಿದೆ ? ಈಗ ನನಗೆ ಬಂದಿರತಕ್ಕ ವರದಿಯ ಪ್ರಕಾರ ಅದು ಸತ್ಯ ಎಂದು ಬಂದಿದೆ. ಮಾನ್ಯ ಸದಸ್ಯರು ಅನೇಕರು ಈ ವಿಷಯದಲ್ಲಿ ಲೋಪ ಇದೆ ಎಂದು ಹೇಳುತ್ತಿದ್ದಾರೆ. ಅದನ್ನು ಸರ್ಕಾರ ಗಮನಗಂಡಿದೆ. ಇದರ ಬಗ್ಗೆ ಸತ್ಯವಿದೆಯೇ ಅಥವಾ ಲೋಪ ಇದೆಯೇ ಎಂಬುದನ್ನು ಸರ್ಕಾರದವರು ವಿಚಾರ ಮಾಡುತ್ತಾರೆ. ಇದರಲ್ಲಿ ಲೋಪ ಇದೆ ಎಂದು ಕಂಡುಬಂದಲ್ಲಿ ಅದನ್ನು ಈ ಸಭೆಗೆ ತಿಳಿಸುವುದಲ್ಲದೆ ಇದಕ್ಕೆ ಯಾರು ಕಾರಣರಾಗಿದ್ದಾರೆ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುತ್ತೇವೆ. ನಿಮ್ಮ ಅಭಿಪ್ರಾಯ ಏನಿದೆ, ನಿಮ್ಮ ಮನಸ್ಸಿನಲ್ಲಿ ಉದ್ವೇಗ ಏನಿದೆ ಎಂಬುದನ್ನು ನಾನು ತಿಳಿಯಬಲ್ಲೆ. ಇದರಲ್ಲಿ ತಪ್ಪು ಇದ್ದರೆ ಇದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ನನಗೆ ಬಂದಿರುವ ವರದಿಯ ಪ್ರಕಾರ ಇದು ಸರಿ ಎಂದು ತಾವು ಹೇಳುತ್ತಿದ್ದೀರಿ, ಇದು ಸರಿಯಿಲ್ಲ ಎಂದು ಅನೇಕ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಆದ್ದರಿಂದ ತಾವು ಈ ಬಗ್ಗೆ ಸರಿಯಾಗಿ ವಿಚಾರ ಮಾಡಿ ವರದಿಯನ್ನು ತರಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ವಿಚಾರ ಮಾಡುತ್ತೇನೆ,

ಶ್ರೀ ವಾಟಾಳ್ ನಾಗರಾಜ್.—ಅದನ್ನು ಯಾವೊತ್ತು ಈ ಸಭೆಗೆ ಹೇಳುತ್ತೀರಿ ?

ಶ್ರೀ ಎಚ್. ಎಂ ಚನ್ನಬಸಪ್ಪ —15 ದಿವಸಗಳ ಒಳಗೆ ಹೇಳುತ್ತೇನೆ.

Budget Estimates for 1973-74

Demands for Grants

(Demand No. 23 (34) Co-operation)

SRI A. SHANKARA ALVA (Minister for Co-operation).—Sir, on the recommendation of the Governor, I beg to move:

> "That a sum not exceeding Rs. 4,05,62,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demeand No. 23. 'Co-operation'."

MR. DEPUTY SPEAKER.—Motion moved—

> "That a sum not exceeding Rs. 4,05,62,000 inclusive of the the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No.23. 'Co-operation'."

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸನ್ಮಾನ್ಯ ಉಪಸಭಾಪತಿಗಳೇ, ಈ ದಿವಸ ನಮ್ಮ ಮುಂದೆ ಸಹಕಾರ ಇಲಾಖೆಗೆ ಸಂಬಂಧಪಟ್ಟಂಥಾ ಬೇಡಿಕೆಗಳನ್ನು ಮಾನ್ಯ ಸಹಕಾರ ಸಚಿವರು ಮಂಡಿಸಿದ್ದಾರೆ. ಇದನ್ನು ನಾನು ವಿರೋಧಿಸತಕ್ಕ ಕಾಲದಲ್ಲಿ ಕಳೆದ ಒಂದು ವರ್ಷದಿಂದ ಸಹಕಾರ ಸಚಿವರು ಈ ರಾಜ್ಯದಲ್ಲಿ ಏನು ಪ್ರಗತಿಯನ್ನು ಈ ಸಹಕಾರ ರಂಗದಲ್ಲಿ ಸಾಧಿಸಿದ್ದಾರೆ ಎನ್ನತಕ್ಕಂಥಾದ್ದನ್ನು ನಾವು ವಿಮರ್ಶೆ ಮಾಡಬೇಕಾಗಿದೆ ಮಾನ್ಯ ಸಹಕಾರ ಸಚಿವರು ನೋಡುವುದಕ್ಕೆ ಬಹಳ ಮೃದು ಸ್ವಭಾವದವರು. ಆದರೆ ಅವರ ನೀತಿ ಗೋಮುಖ ವ್ಯಾಘ್ರ ಇದ್ದ ಹಾಗೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವರು ನೋಡುವುದಕ್ಕೆ ಎಷ್ಟು ಮೃದುಸ್ವಭಾವದವರಾಗಿ ಕಾಣಿಸಿಕೊಳ್ಳುತ್ತಾರೆಯೋ, ಅಷ್ಟೇ ಕಠಿಣ ಹೃದಯ, ಅಷ್ಟೇ ಕಲ್ಮಷ ಹೃದಯ, ಅಷ್ಟೇ ಅನೀತಿಯುತ ಆಡಳಿತದ ಹಿನ್ನಲೆಯನ್ನು ಅಳವಡಿಸಿಕೊಂಡು ಈ ಇಲಾಖೆಯಲ್ಲಿ ಒಂದು ವರ್ಷದಿಂದ ಕೆಲಸ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಸಹಕಾರೀ ರಂಗ ರಾಜ್ಯದ ಅಭಿವೃದ್ಧಿಗೆ ಅದರಲ್ಲೂ ನೂರಕ್ಕೆ 70 ಭಾಗ ರೈತಾಪಿ ಜನರು ಇದ್ದಾರೆ ಅಂಥ ನಾಡಿನ ಮುಖವಾದ ಅಭಿವೃದ್ಧಿಗೆ ಬುನಾದಿಯಾಗಿ ಕೆಲಸ ಮಾಡಬೇಕೆಂದು ಇರುವುದು. ಆದರೆ ಈ ಒಂದು ಇಲಾಖೆ ರಾಜಕೀಯ ಹಸ್ತಕ್ಷೇಪಕ್ಕೆ ಒಳಗಾಗಿ ತನ್ನ ಆಡಳಿತದ ದುರ್ಬಲತೆಯನ್ನು ತೋರಿಸಿಕೊಟ್ಟಿದೆ ಎಂದು ಹೇಳಿದರೆ ತಪ್ಪಾಗಲಾರದು. ಬಹುಶಃ ಶ್ರೀ ಮಾನ್ ಶಂಕರ ಆಳ್ವರವರು ಎಲ್ಲರಿಗಿಂತಲೂ ಮೇಲ್ಪಟ್ಟ ಆಡಳಿತವನ್ನು ನಡೆಸುತ್ತಾರೆ ಎಂದು ತಿಳಿದಿದ್ದೆ. ಆದರೆ ಈ ಗೊಂದಲದಲ್ಲಿ ಸಿಕ್ಕಿ ತಮ್ಮ ಅಶಕ್ತತೆಯನ್ನು ಪ್ರದರ್ಶಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಕಳೆದ ಒಂದು ವರ್ಷದಿಂದ ಆದಂತಹ ಹಲವಾರು ವಿದ್ಯಮಾನಗಳನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಈ ಸಹಕಾರೀ ಇಲಾಖೆಯ ಆಡಳಿತ ಎತ್ತ

ಸಾಗುತ್ತದೆ ಎಂಬುದನ್ನು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಇವೊತ್ತಿನ ದಿವಸ ಇದನ್ನು ನಡೆಸತಕ್ಕವರು ಯಾವ ಪಕ್ಷದವರೇ ಇರಲಿ, ಈ ಸಂಸ್ಥೆಗಳ ಮುಖಾಂತರ ರೈತರ ಪುರೋಭಿವೃದ್ಧಿಯಾಗಬೇಕಾಗಿದೆ. ಅದರ ಬದಲಾಗಿ ಈ ಸಂಘಗಳ ಮುಖಾಂತರ ಕೆಲವು ಶಕ್ತಿಗಳು ತಮ್ಮ ಸ್ವಾರ್ಥ ಸಾಧನೆಯನ್ನು ಬೆಳೆಸಿಕೊಂಡು ಬಂದಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ರೈತನ ಅಭಿವೃದ್ಧಿಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರಗಳನ್ನು ನಾವು ಈ ಸಹಕಾರಿ ಸಂಘಗಳ ಮೂಲಕ ಮಾಡತಕ್ಕಂತಹ ಧೋರಣೆಯನ್ನು ನಾವು ಇಟ್ಟುಕೊಂಡಿದ್ದೇವೆ. ಅದು ಗೊಬ್ಬರದ ವಿತರಣೆಯಾಗಿರಲಿ, ಪೆಸ್ಟಿಸೈಡ್ಸ್ ವಿತರಣೆಯಾಗಲಿ ಅಥವಾ ರೈತ ಬೆಳೆದ ಪದಾರ್ಥಗಳನ್ನು ಯೋಗ್ಯ ಬೆಲೆಗೆ ಮಾರುವುದೇ ಆಗಲಿ ಇವೆಲ್ಲದಕ್ಕೂ ಸಹಕಾರಿ ಸಂಸ್ಥೆಗಳು ಬಹಳ ಮುಖ್ಯವಾದವುಗಳು. ಆದರೆ ಇವುಗಳು ಯಾವ ಹಂತದಲ್ಲಿ ಸಾಗುತ್ತಿವೆ ಎಂಬುದನ್ನು ನೋಡಿದರೆ, ನಾವು ಏನು ಉದ್ದೇಶಗಳನ್ನು ಇಟ್ಟುಕೊಂಡಿದ್ದೆವೋ ಅವುಗಳ ಸಾಧನೆಯಾಗಲಿಲ್ಲ. ಇದಕ್ಕೆ ರಾಜಕೀಯ ಹಸ್ತಕ್ಷೇಪಗಳೇ ಮೂಲ ಕಾರಣವೆಂದು ಹೇಳುತ್ತೇನೆ. ಕಳೆದ ಒಂದು ವರ್ಷದಲ್ಲಿ ತಮ್ಮ ಪಕ್ಷ ರಾಜಕೀಯ ಮಾಡುವುದಕ್ಕೆ ಈ ಸಹಕಾರ ಸಂಘಗಳನ್ನು ಉಪಯೋಗಿಸುತ್ತಿದ್ದಾರೆ. ಅದನ್ನ ಬಿಟ್ಟು ಈ ಸಂಸ್ಥೆಗಳಲ್ಲಿ ದುರುಪಯೋಗ ಮಾಡುವುದಕ್ಕೆ ಅವಕಾಶ ಕೊಟ್ಟು, ಅಲ್ಲಿಯ ವ್ಯವಹಾರದಲ್ಲಿ ಕೈಹಾಕುವುದಕ್ಕೆ ಪ್ರಯತ್ನ ಮಾಡಿದರೆ ಇದಕ್ಕಿಂತ ಅವಹೇಳನವಾದ ಕೆಲಸ ಬೇರೊಂದು ಇಲ್ಲ. ನಾನು ಇವತ್ತು ಬಿಜಾಪುರ ಮತ್ತು ಗುಲ್ಬರ್ಗ ಬ್ಯಾಂಕುಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ ಇಲ್ಲ, 19 ಜಿಲ್ಲಾ ಬ್ಯಾಂಕುಗಳ ವರದಿಯನ್ನು ಇಲ್ಲಿ ಇಟ್ಟಕಾಲದಲ್ಲಿ ಅದರ ಬಗ್ಗೆ ಚರ್ಚೆ ಮಾಡುತ್ತೇನೆ. ನಾನು ಈ ಇಲಾಖೆಯಲ್ಲಿ ಇರತಕ್ಕಂತಹ ಅವ್ಯವಹಾರಗಳ ಬಗ್ಗೆ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸಹಕಾರ ಇಲಾಖೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ವ್ಯವಹಾರಗಳನ್ನು ನಡೆಸಿಕೊಂಡು ಬಾರದಿರುವುದಕ್ಕೆ ಕಾರಣ ಇಷ್ಟೇ. ಮಂತ್ರಿಗಳು ಈ ಇಲಾಖೆಯ ಅಧಿಕಾರಿಗಳನ್ನು ಕೇವಲ ತಮಗೆ ಇಚ್ಛೆ ಇಲ್ಲದಿರತಕ್ಕಂತಹ ಸಂಸ್ಥೆಗಳನ್ನು ತುಳಿಯುವುದಕ್ಕೆ ಉಪಯೋಗ ಮಾಡುತ್ತಿದ್ದಾರೆ. ಆದ್ದರಿಂದ ಈ ಇಲಾಖೆಯು ಉತ್ತಮ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಸಹಕಾರ ಸಂಸ್ಥೆಗಳಲ್ಲಿ ಯಾರು ತಪ್ಪು ಮಾಡುತ್ತಾರೆ, ಯಾರು ಹಣ ದುರುಪಯೋಗ ಮಾಡುತ್ತಾರೆ, ಅಂಥವರ ಮೇಲೆ ನೇರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಇವರಿಗೆ ಅಡ್ಡಿಯಾದರೂ ಏನು ? ಆದರೆ ಇವರು ಇತರ ಪಕ್ಷದಲ್ಲಿರತಕ್ಕಂಥ ಸಂಸ್ಥೆಗಳನ್ನು ಬಿಟ್ಟು ಉಳಿದ ಪಕ್ಷದ ಅಧೀನದಲ್ಲಿರತಕ್ಕಂತಹ ಸಂಸ್ಥೆಗಳನ್ನು ಹದಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ಪ್ರಾಮಾಣಿಕತನದ ಅಧಿಕಾರಿಗಳು ಸಹ ತಮ್ಮ ಕರ್ತವ್ಯವನ್ನು ಪ್ರಾಮಾಣಿಕತನದಿಂದ ಮಾಡುವುದಕ್ಕೆ ಆಗುತ್ತಿಲ್ಲ. ಇದರಿಂದಾಗಿ ರಾಜ್ಯದಲ್ಲಿರುವ ಸಹಕಾರ ಇಲಾಖೆಯ ಅಧಿಕಾರಿಗಳು ತಮ್ಮ ಒಂದು ನೈತಿಕ ಹಕ್ಕನ್ನೇ ಕಳೆಕೊಂಡಿದ್ದಾರೆ. ಈ ಇಲಾಖೆಯು ಮೊರಲ್ ಡಿಗ್ರೆಡೇಶನ್ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಐ. ಎ. ಎಸ್. ಅಧಿಕಾರಿಗಳು ಕೂಡ ಮೂರನೆ ದರ್ಜೆಯ ನೌಕರರಿಗಿಂತಲೂ ಕಡಿಮೆ ರೀತಿಯಲ್ಲಿ ಇವರು ಹೇಳಿದ ಹಾಗೆ ಕೆಲಸ ಮಾಡುತ್ತಿದ್ದಾರೆಂದು ಹೇಳಿದರೆ ನಾಚಿಕೆ ಪಡಬೇಕಾದ ಸಂಗತಿ. ಇದರಿಂದ ತಮ್ಮ ಆಡಳಿತದ ವೈಖರಿ ಎತ್ತ ಸಾಗಿದೆ ಎಂಬುದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ಇವತ್ತು ಸಹಕಾರಿ ಇಲಾಖೆಯಲ್ಲಿ ಹಣವನ್ನು ಹೊಡೆಯತಕ್ಕ ಜನರು ಯಾರೇ ಇರಲಿ, ಯಾವ ಪಕ್ಷದವರೇ ಇರಲಿ, ಅವರನ್ನು ಗಲ್ಲಿಗೆ ಬೇಕಾದರೂ ಏರಿಸಿರಿ ಎಂದು ಹೇಳುತ್ತಿದ್ದೇನೆ. ಆದರೆ ಕೇವಲ ತಮಗೆ ವಿರೋಧವಾಗಿರತಕ್ಕಂತಹ ಪಕ್ಷದ ಕೈಯಲ್ಲಿರುವ ಸಂಸ್ಥೆಗಳನ್ನು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ತೀರಾ ನಾಚಿಕೆಗೇಡಿನ ಸಂಗತಿ. ಇವತ್ತು ಯಾವ ಸಂಸ್ಥೆಗಳು ತಪ್ಪು ಮಾಡುತ್ತವೆ, ಅವುಗಳನ್ನು ಶಿಕ್ಷೆ ಮಾಡುವುದಕ್ಕೆ ಏಕೆ ನೀವು ಪ್ರಯತ್ನ ಮಾಡುವುದಿಲ್ಲ. ಈ ದೆಸೆಯಲ್ಲಿ ನೀವು ಕೆಲಸ ಮಾಡಿಲ್ಲವೆಂದು ಹೇಳುತ್ತೇನೆ. ತಮಗೆ ಯಾವುದರ ಮೇಲೆ ಇಷ್ಟ ಇಲ್ಲ, ಅವುಗಳ ಮೇಲೆ ಕೈ ಹಾಕುತ್ತಿದ್ದೀರಿ. ಇದರಿಂದ ನೀವು ಒಂದು ಹೇಯವಾದ ರಾಜಕಾರಣವನ್ನು ಮಾಡುತ್ತಿದ್ದೀರಿ. ಇವತ್ತು ಈ ಇಲಾಖೆಯ ಮುಖಾಂತರ ಎಷ್ಟು ಪ್ರಗತಿಯಾಗಿದೆ ಎಂಬುದನ್ನು ಪ್ರಶ್ನೆ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಇಂತಹ ಸಹಕಾರ ಸಂಘಗಳ ಮೂಲಕ ರೈತರಿಗೆ ಗೊಬ್ಬರ ಪೆಸ್ಟಿಸೈಡ್ಸ್ ಮತ್ತು ಆತನು ಬೆಳೆದ ಪದಾರ್ಥಗಳಿಗೆ ನ್ಯಾಯವಾದ ಬೆಲೆಯನ್ನು ಒದಗಿಸಿಕೊಡಬೇಕಾಗುತ್ತದೆ. ಇದರಿಂದ ಕನ್‌ಸ್ಯೂಮರ್ಸ್‌ಗೂ ಸಹ ಅನುಕೂಲವಾಗಬೇಕೆಂಬುದೇ ಇದರ ಉದ್ದೇಶ. ಆದರೆ ಇವತ್ತು ಅದರ ಬದಲು ಇಡೀ ರಾಜ್ಯದಲ್ಲಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇವತ್ತು ಒಂದು ವರ್ಷದಲ್ಲಿ ಎಲ್ಲವನ್ನೂ ಸುಧಾರಣೆ ಮಾಡಬೇಕೆಂದು ನಾನು ಹೇಳುವುದಿಲ್ಲ; ಅಥವಾ ಎಲ್ಲಾ ತಪ್ಪುಗಳನ್ನು ಒಂದು ವರ್ಷದಲ್ಲಿ ಸರಿಪಡಿಸಿ ಎಂದು ಸಹ ಹೇಳುವುದಿಲ್ಲ. ಆದರೆ ಈ ದೆಸೆಯಲ್ಲಿ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂದು ನೋಡಿದರೆ ನೀವು ನಾಲ್ಕೈದು ಬ್ಯಾಂಕುಗಳನ್ನು ಸೂಪರ್‌ಸೀಡ್ ಮಾಡಿದ್ದೀರಿ, ಅಷ್ಟೆ. ಇದು ಮುಖ್ಯವಲ್ಲ. ಮತ್ತು ಕೆಲವು ಜಿಲ್ಲೆಗಳಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಯಾವುದೇ ವ್ಯವಹಾರವನ್ನು ಹಚ್ಚು

(ಶ್ರೀ ಎಚ್. ಡಿ. ದೇವೇಗೌಡ)

ವುದಕ್ಕೆ ಇವರು ತಯಾರಾಗಿಲ್ಲ. ಏಕೆಂದರೆ ಅದು ತಮ್ಮ ವಶದಲ್ಲಿ ಇಲ್ಲ. ಇದರಿಂದ ತಮ್ಮ ಉದ್ದೇಶ ಎತ್ತ ಕಡೆ ಸಾಗಿದೆ ಎಂಬುದನ್ನು ಕೇಳಬೇಕಾಗುತ್ತದೆ.

4-00 P. M.

ಮಾನ್ಯ ಸಭಾಧ್ಯಕ್ಷರೇ, ಇವತ್ತು ನಾನು ಒಂದೊಂದಾಗಿ ಹೇಳುವುದಕ್ಕೆ ಹೋದರೆ ಬಹುಶಃ ಬಹಳ ಹೆಚ್ಚು ಕಾಲವನ್ನು ಇದರ ಬಗ್ಗೆ ವಿನಿಯೋಗಮಾಡಬೇಕಾಗುತ್ತದೆ. ಇವತ್ತು ಗೊಬ್ಬರದ ವಿತರಣೆಯಿಂದ ಒಂದು ಕಡೆ ವ್ಯವಸಾಯೋತ್ಪನ್ನ ಜಾಸ್ತಿಯಾಗಬೇಕು. ಮತ್ತೊಂದು ಕಡೆ ಇವತ್ತು ರೈತನಿಗೆ ಕೊಡ ಬೇಕಾದಂಥ ಎಲ್ಲಾ ಸೌಲಭ್ಯಗಳನ್ನು ಕೊಡುವುದಕ್ಕೆ ಸರ್ಕಾರ ಎಷ್ಟರಮಟ್ಟಿಗೆ ಮುಂದೆ ಹೋಗಿದೆ ಎಂಬುದನ್ನು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಇನ್ನು ಮುಂದೆ ರೈತರ ಮನೆಯ ಬಾಗಿಲಿಗೆ ಗೊಬ್ಬರವನ್ನು ವಿತರಣೆ ಮಾಡು ತ್ತೇವೆಂದು ಹೇಳಿದರು. ಇದೇ ಮಾತನ್ನು ಅವರು ಒಂದು ಕಡೆ ಭಾಷಣಮಾಡುವಾಗಲೂ ಹೇಳಿ ದ್ದಾರೆ. ಇವತ್ತು ಇವರು ಈ ದೇಶದಲ್ಲಿ ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ರಾಜ್ಯದಲ್ಲ ಇವತ್ತು ಗೊಬ್ಬರವನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡಬೇಕೆಂದು ಮೈಸೂರು ಸ್ಟೇಟ್ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್, ಮೈಸೂರು ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ —ಈ ಎರಡು ಪ್ರಮುಖ ಸಂಸ್ಥೆಗಳು ಸಹಕಾರ ಸಂಘಗಳ ಮೂಲಕ ನೇರವಾಗಿ ಗೊಬ್ಬರವನ್ನು ವಿತರಣೆಮಾಡುವುದಕ್ಕೆ ಈಗ ಒಂದು ಹೊಸ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಹೊರಟಿದ್ದಾ ರೆಂದು ನಾನು ಕೇಳಿದ್ದೇನೆ. ಆದರೆ ಇನ್ನೂ ಹಳೆಯ ಆರ್ಡರನ್ನೇ ಜಾರಿಗೆ ಕೊಟ್ಟಿದ್ದಾರೆ. ತಾಲ್ಲೂಕು ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿಗಳನ್ನು ಬಿಟ್ಟು ರಾಜ್ಯಮಟ್ಟದ ಮಾರಾಟ ಸಹಕಾರ ಸಂಸ್ಥೆ ಏನಿದೆ ಅದು ನೇರವಾಗಿ ಜಿಲ್ಲಾಧಿಕಾರಿಗಳ ಮುಖಾಂತರ ಫರ್ಟಿಲೈಜರ್‌ಗಳ ಪರ್ಮಿಟ್ಟುಗಳನ್ನು ಇಷ್ಯೂ ಮಾಡುವಾಗ ಗೊಬ್ಬರವನ್ನು ಸಹ ವಿತರಣೆ ಮಾಡುವ ಒಂದು ಹೊಸ ಯೋಜನೆಯನ್ನು ಮಾಡುತ್ತಿದ್ದಾರೆ. ಅದರಲ್ಲಿ ಈಗ ಎಷ್ಟರಮಟ್ಟಿಗೆ ದುರುಪಯೋಗವಾಗು ತ್ತಿದೆ. ಎಂಬುದನ್ನು ಯೋಚನೆಮಾಡಬೇಕು. ಕೆಲವು ಪ್ರಮುಖ ಸಹಕಾರ ಸಂಸ್ಥೆಗಳಿಂದ ಎಲ್ಲಿ ಬ್ಲ್ಯಾಕ್‌ಮಾರ್ಕೆಟ್ ಆಗುತ್ತಿದೆಯೆಂಬುದನ್ನು ನಾನು ಕೇಳಿದ್ದೇನೆ. ಈ ದೇಶದಲ್ಲಿ ಇವತ್ತು ಆಡಳಿತದಲ್ಲಿ ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಗೊಬ್ಬರದ ವಿತರಣೆ ಚೆನ್ನಾಗಿ ಆಗಬೇಕೆನ್ನುವಾಗ ರಾಷ್ಟ್ರದಲ್ಲಿ ಗೊಬ್ಬರದ ಅಭಾವಿದೆ. ಅದನ್ನು ಸರಿಯಾಗಿ ವಿತರಣೆ ಯಾಗುವಂತೆ ನೋಡಿಕೊಳ್ಳಬೇಕು. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ ಹೋದಂಥ ಗೊಬ್ಬರ ಅಲ್ಲಿ ಪ್ರೈಮರಿ ಸೊಸೈಟಿಗಳಿಗೆ ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಇದ್ದಂಥ 3 ಟೈರ್ ಸಿಸ್ಟಂ ತೆಗೆದು ಎರಡು ಟೈರ್ ಸಿಸ್ಟಂಗೆ ತಂದಿರುವುದು ಹಿಂದ ಮಾಡಿದಂಥ ತಪ್ಪು. ಈಗ ಗೊಬ್ಬರದ ವಿತರಣೆ ಸರಿಯಾಗಿ ಆಗುತ್ತಾ ಇಲ್ಲವೆಂದು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈ ಗೊಬ್ಬರದ ವಿತರಣೆಯಲ್ಲಿ 3 ಟೈರ್ ಸಿಸ್ಟಂ, 2 ಟೈರ್ ಸಿಸ್ಟಂ ಎನ್ನುವದಕ್ಕೆ ಬದಲಾಗಿ, ಗೊಬ್ಬರದ ವಿತರಣೆಯಲ್ಲಿ ರೈತರಿಗೆ ಸಮೀಪವಾಗಿ ಹತ್ತಿರದಲ್ಲಿಯೇ ಅದು ಸಿಗುವಂತೆ, ಅದು ಅವರ ಬಾಗಿಲಿಗೆ ಮುಟ್ಟುವಂತೆ ಏರ್ಪಾಡುಮಾಡಬೇಕು ಎಂಬುದೇ ನಮ್ಮ ಉದ್ದೇಶ. ಇವನ್ನು ಬಿಟ್ಟು ಉಳಿದ ಎಲ್ಲಾ ಎಜೆನ್ಸಿಗಳನ್ನು ಬಂದ್‌ಮಾಡಿದ್ದೇವೆ. ಇದರಲ್ಲಿ ಬ್ಲಾಕ್‌ಮಾರ್ಕೆಟ್‌ಗೆ ಅವಕಾಶವಿರಬಾರದು. ಅಂಥಾದ್ದು ಇದ್ದರೆ ಕೂಡಲೇ ಅವುಗಳ ಬಗ್ಗೆ ಉಗ್ರ ಕ್ರಮವನ್ನು ತೆಗೆದುಕೊಳ್ಳಬೇಕು. ಗ್ರಾಮಾಂತರ ಜನಗಳು ಸಹಕಾರಸಂಘಗಳ ಮುಖಾಂತರ ಗೊಬ್ಬರವನ್ನು ತೆಗೆದುಕೊಂಡು ಹೋಗಬೇಕೆಂಬುದೇ ನಮ್ಮ ಉದ್ದೇಶ. ಇನ್ನು ಬೇರೆ ಯಾವುದಾದರೂ ಒಳ್ಳೆಯದಿದ್ದರೆ ಅದನ್ನು ವಿಚಾರಮಾಡೋಣ.

ಶ್ರೀ ಎಚ್. ಡಿ. ದೇವೇಗೌಡ.—ಅವರು ಹೇಳಿದ ವಿಷಯವನ್ನು ನಾನು ಪುಷ್ಟೀಕರಿಸುತ್ತೇನೆ. ಹೊಸಪದ್ಧತಿ ಬೇಡ. ಈಗ ಇಂತಹ ಸಹಕಾರ ಸಂಘಗಳೇ ಉತ್ತಮ ರೀತಿಯಲ್ಲಿ ಕೆಲಸಮಾಡು ವುದಕ್ಕೆ ಅವಕಾಶ ಮಾಡಬೇಕಾಗುತ್ತದೆ. ತಾಲ್ಲೂಕಿನಲ್ಲಿ ಎ.ಟಿ.ಡಿ.ಓ. ಎಷ್ಟು ಗೊಬ್ಬರ ಬೇಕು, ಎಷ್ಟು ಸ್ಟಾಕ್ ಬಂದಿದೆ ಎಂಬುದನ್ನು ಎಲ್ಲರಿಗೂ ಸರಿಯಾಗಿ ತಿಳಿಸಿದರೆ ಸಾಕು. ಆಗ ಆ ವಿಷಯ ಎಲ್ಲರಿಗೂ ಚೆನ್ನಾಗಿ ಗೊತ್ತಾಗುತ್ತದೆ. ಇವತ್ತು ಅಲ್ಲಿರತಕ್ಕ ಗ್ರಾಮಾ ಸುಧಾರಕರೆಂದು ಏನಿದ್ದಾರೆ, ಅವರು ಎಲ್ಲಿ ಫರ್ಟಿಲೈಜರ್ಸ್‌ನ್ನು ವಿತರಣೆ ಮಾಡುತ್ತಾರೆ ಎಂಬ ಮಾಹಿತಿಯನ್ನು ಜನರಿಗೆ ಕೊಡ ಬೇಕು. ಗೊಬ್ಬರವನ್ನು ಪ್ರೈಮರಿ ಸೊಸೈಟಿಗಳ ಮೂಲಕ ತಂದಿದ್ದೇವೆ. ಅದು ನ್ಯಾಯವಾದ ರೀತಿ

ಯಲ್ಲಿ ವಿತರಣೆಯಾಗಬೇಕೆಂದು ಹೇಳಿ ಅದರ ಬಗ್ಗೆ ಒಂದು ಸರ್ಕಾರದ ಹುಕುಂ ಜಾರಿ ಮಾಡಿದರೆ ಬಹುಶಃ ಆಗ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಅದು ಹೋಗುವುದನ್ನು ತಡೆಯಬಹುದು. ಈ ದೇಶದಲ್ಲಿ ಸರ್ಕಾರದ ಇಲಾಖಾಧಿಕಾರಿಗಳು ಈ ಬಗ್ಗೆ ಬಿಗಿ ಮುಷ್ಟಿ ಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಗೊಬ್ಬರದ ವಿತರಣೆಯಲ್ಲಿ ಅವ್ಯವಹಾರ ನಡೆಯುತ್ತಿದೆ. ಸಹಕಾರ ಇಲಾಖೆ ಒಂದೇ ಅಲ್ಲ, ಅಗ್ರಿಕಲ್ಚರಲ್ ಇಲಾಖೆಯೂ ಸಹ ಸಮಪಾಲಾಗಿ ಕೆಲಸಮಾಡಬೇಕು. ಇನ್ನು ಗೊಬ್ಬರದಲ್ಲಿ ನಡೆಯುತಕ್ಕ ಅಡಲ್ಟ್ರೇಷನ್ ಏನಿದೆ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಅನೇಕ ಕಡೆಗಳಲ್ಲಿ ಅಡಲ್ಟ್ರೇಷನ್ ಬಹಳ ಹೆಚ್ಚಾಗುತ್ತಿದೆ. ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರೂ ಸಹ ಸಾಕಷ್ಟು ಈ ವಿಚಾರದಲ್ಲಿ ಮುಂಜಾಗರೂಕತೆಯ ಕ್ರಮವನ್ನು ತೆಗೆದುಕೊಳ್ಳಬೇಕು. ಏಕೆಂದರೆ ಇವತ್ತು ಅನೇಕ ಕಡೆಗಳಿಂದ ಈ ಅಡಲ್ಟ್ರೇಷನ್ ಬಗ್ಗೆ ದೂರುಗಳು ನಮ್ಮ ಗಮನಕ್ಕೆ ಬಂದಿದೆ. ವ್ಯವಸಾಯ ಇಲಾಖೆ ನನಗೆ ತಿಳಿದು ಬಂದಿರುವ ಪ್ರಕಾರ ಅಷ್ಟು ಸಮರ್ಥವಾಗಿ ಕೆಲಸ ಮಾಡುತ್ತಾ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ್ ಅರಸ್ ಅವರು ಇವತ್ತು ಸಹಕಾರ ಸಂಸ್ಥೆಗಳು ಏನೊಂದು ಬಡ್ಡಿ ದರವನ್ನು ವಿಧಿಸುತ್ತಿದ್ದಾರೋ ಅದರ ಬಗ್ಗೆ ಒಂದು ಸೂಚನೆಯನ್ನು ಕೊಟ್ಟರು ರಾಜ್ಯದಲ್ಲಿ ಇವತ್ತು ಅಪೆಕ್ಸ್ ಬ್ಯಾಂಕ್‌ಗಳು ಹಾಗೂ ಪ್ರೈಮರಿ ಸೊಸೈಟಿಗಳ ಮುಖಾಂತರ ರೈತರಿಗೆ ಹಣ ವಿತರಣೆಯಾಗುತ್ತಿದೆ. ಅದರೆ ಬಡ್ಡಿ ಬಹಳ ಹೆಚ್ಚು. ಅದನ್ನು ಕಡಿಮೆಮಾಡುವುದಕ್ಕೆ ಒಂದು ತ್ರೆಟ್ ಕೊಟ್ಟರು, ಒಂದು ಡೈರೆಕ್ಟೀವ್ ಕೊಟ್ಟರೆಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ಆದರೆ ಬಹಳ ಬಡ್ಡಿದರವಿದೆ. ಅದನ್ನು ಕಡಿಮೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನಮಾಡಬೇಕು. ಈ ಅಂದ ದೇಶದಲ್ಲಿ ಇವತ್ತು ರೈತರಿಗೆ ಸಾಲ ಕಡಿಮೆ ಬಡ್ಡಿಯಲ್ಲಿ ಸಿಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟು 8 ತಿಂಗಳುಗಳಾದವು. ಅಂದಮೇಲೆ ಇದರ ಬಗ್ಗೆ ಈ ದೇಶದಲ್ಲಿ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆಂದು ನಾನು ಕೇಳುತ್ತೇನೆ. ಮಂತ್ರಿಗಳು ಎಲ್ಲಿಯವರೆಗೆ ಹೋಗಿದ್ದಾರೆಂದರೆ ಮಾರವಾಡಿಗಳಿಗಿಂತ ಹೆಚ್ಚು ಬಡ್ಡಿ ದರವನ್ನು ಹಾಕುತ್ತಿದ್ದಾರೆ. ಸಹಕಾರ ಸಂಘಗಳು ಇದರ ಬಗ್ಗೆ ಆರೋಪಣೆ ಮಾಡಿದ್ದರೂ ಅದು ಬರೀ ಆರೋಪಣೆಯಾಗಿಯೇ ಉಳಿದಿದೆಯೇ ಹೊರತು ಮತ್ತೆ ಬೇರೆ ಏನೂ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಈ ಖಚಿತವಾದ ಹೇಳಿಕೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಬಹಳವಾಗಿ ತಮ್ಮ ಸಂಸ್ಥೆ ಏನೇನು ಕೆಲಸಗಳನ್ನು ಮಾಡುತ್ತಿದೆ ಎಂಬುದನ್ನು ದಯಮಾಡಿ ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರ ಜೊತೆಗೆ ಇನ್ನೊಂದು ವಿಷಯ. ಒಂದು ಸೊಸೈಟಿಯೊಳಗೆ ಒಬ್ಬ ರೈತ ಸಾಲ ಪಡೆದರೆ, ಅವನು ಒಂದು ವೇಳೆ ಡಿಫಾಲ್ಟರ್ ಆದರೆ, ಅವನಿಗೆ ಹಾಕುವ ಬಡ್ಡಿದರ ಇವತ್ತು ಸುಮಾರು ಸೇಕಡ 15 ಅಥವಾ 16ರಷ್ಟು ವರ್ಕ್‌ಔಟ್ ಆಗುತ್ತದೆ. ಒಂದು ಸಾರಿ ಅವನು ಡಿಫಾಲ್ಟ್ ಆದರೆ ಇಂಟರೆಸ್ಟ್ ಪೀನಲ್ ಇಂಟರೆಸ್ಟ್ ಅವನ ಮೇಲೆ ನೋಟೀಸ್ ಎಗ್ಸಿಕ್ಯೂಟ್ ಮಾಡುವ ಕಾಲದಲ್ಲಿ ಆಗತಕ್ಕ ಖರ್ಚುಗಳು ಒಂದುವೇಳೆ ದನಗಳನ್ನು ಹಿಡಿದುಕೊಂಡು ಬಂದರೆ ಅದರ ಖರ್ಚು, ಡೋಲ್ ಹೊಡೆಯುವವನ ಖರ್ಚು—ಇವೆಲ್ಲಾ ಸುಮಾರು ಸೇಕಡ 15 ಅಥವಾ 16ಕ್ಕೆ ಬರುತ್ತದೆ. ರೈತನಿಗೆ ಒಂದುವೇಳೆ ಸಕಾಲದಲ್ಲಿ ಮಳೆಬೆಳೆಯಾಗದಿದ್ದರೆ, ಅವನು ತೆಗೆದುಕೊಂಡಿರತಕ್ಕ ಷಾರ್ಟ್ ಟರ್ಮ್ ಹಾಗೂ ಮೀಡಿಯಂ ಟರ್ಮ್ ಲೋನ್‌ಗಳನ್ನು ಕೊಡದೇ ಹೋದರೆ ಸರ್ಕಾರದವರು ಹಾಕುವಂಥ ವಿವಿಧ ರೀತಿಯ ಬಡ್ಡಿಗಳನ್ನು ಸೇರಿಸಿದಾಗ ಸುಮಾರು ಸೇಕಡ 18 ರಷ್ಟು ವರ್ಕ್‌ಔಟ್ ಆಗುತ್ತದೆ. ಈ ಒಂದು ವಿಷಯವನ್ನು ನಾವು ಹಿಂದಿನಿಂದಲೂ ಹೇಳಿಕೊಂಡು ಬಂದಿದ್ದೇವೆ. ಒಟ್ಟಿನಲ್ಲಿ ರೈತರಿಗೆ ಈ ದೇಶದಲ್ಲಿ ಸುಲಭ ದರದಲ್ಲಿ ಎಷ್ಟರಮಟ್ಟಿಗೆ ಬಡ್ಡಿ ಹಾಕುವುದಕ್ಕೆ ಪ್ರಯತ್ನಮಾಡಿದ್ದಾರೆಂಬುದನ್ನು ನನಗೆ ಈಗ ಸರ್ಕಾರದವರು ತಿಳಿಸಬೇಕಾಗಿದೆ. ಏಕೆಂದರೆ, ಇವತ್ತು ಈ ಸಾಲವನ್ನು ಪಡೆದಿರುವ ಒಂದು ಪರಿಸ್ಥಿತಿಯಲ್ಲಿ ಅವನು ತೀರಿಸುವುದಕ್ಕೆ ಅವನಿಗೆ ಬೆಳೆಯೆ ಆಧಾರ. ಇವತ್ತು ಸೇಕಡ 10ರಷ್ಟೂ ಕೂಡ ಈ ರಾಜ್ಯದಲ್ಲಿ ನೀರಾವರಿ ಸೌಲಭ್ಯಗಳೇ ಇಲ್ಲ. ಸೇಕಡ 90ರಷ್ಟು ಮಳೆಯ ಆಧಾರದ ಮೇಲೆ ಜೀವನ ನಡೆಸುತ್ತಾ ಅವನು ಪಡೆದಿರತಕ್ಕ ಸಾಲವನ್ನು ಅನೇಕ ಸಂದರ್ಭಗಳಲ್ಲಿ ವಾಪಸ್ಸು ಕೊಟ್ಟಿದ್ದಾನೆ. ಇದರಿಂದ ಅನೇಕ ಸಂದರ್ಭಗಳಲ್ಲಿ ರೈತರಿಗೆ ನಾನಾ ರೀತಿಯಲ್ಲಿ ತೊಂದರೆಯಾಗಿರುವುದನ್ನೂ ಸಹ ನಾನು ನೋಡಿದ್ದೇನೆ. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಏನಾದರೂ ಈ ಮೈಸೂರು ರಾಜ್ಯದಲ್ಲಿ ಒಂದು ಹೊಸ ಪ್ರಯೋಗವನ್ನು ಮಾಡುವುದಕ್ಕೆ ತಯಾರಾಗಿದ್ದರೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಯಾವಾಗಲೂ ರೈತರಿಗೆ ವಿವಿಧ ರಂಗಗಳಲ್ಲಿ ಸಾಲ ಕೊಡುವುದನ್ನು ಕೂಡಲೇ ತಪ್ಪಿಸಬೇಕು. ಅವರಿಗೆ ಕೊಡುವ ಸಾಲಗಳು ಈ ರೀತಿಯಾಗಿವೆ. ಷಾರ್ಟ್ ಟರ್ಮ್ ಲೋನ್, ಮೀಡಿಯಂ ಟರ್ಮ್ ಲೋನ್, ಲಾಂಗ್‌ಟರ್ಮ್ ಲೋನ್, ತಗಾವಿ ಲೋನ್, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್, ಕ್ರಾಪ್‌ಲೋನ್, ಹೀಗೆ ಎಲ್ಲಾ ಸಾಲಗಳನ್ನು ಕೊಡುವುದಕ್ಕೆ ಬದಲಾಗಿ ಯಾವುದಾದರೂ ಒಂದೇ

(ಶ್ರೀ ಹೆಚ್. ಡಿ. ದೇವೇಗೌಡ)

ಏಜೆನ್ಸಿ ಮುಖಾಂತರ ಅವರಿಗೆಲ್ಲರಿಗೂ ಸಾಲ ಕೊಡುವ ಏರ್ಪಾಡು ಮಾಡುವುದು ಬಹಳ ಒಳ್ಳೆಯದು. ಒಬ್ಬ ಒಂದು ಸಂಘದಲ್ಲಿ ಸಾಲ ತೆಗೆದುಕೊಳ್ಳುತ್ತಾನೆನ್ನೋಣ. ಅದನ್ನು ತೀರಿಸುವುದಕ್ಕೆ ಅವನು ಇನ್ನೊಂದು ಕಡೆ ಸಾಲ ಮಾಡುತ್ತಾನೆ. ಇವನಿಗೆ ಬಸ್ತಿ ಸಿಸ್ಟಂ ಇಂಟ್ರಡ್ಯೂಸ್ ಮಾಡಿದಮೇಲೆ, ಅವನ ಆಸ್ತಿಯಮೇಲೆ ಎಷ್ಟು ಸಾಲ ಪಡೆಯಬೇಕೆಂದು ನಿಗದಿಮಾಡಿ ಅವನ ಬೊರೊಯಿಂಗ್ ಕೆಪ್ಯಾಸಿಟಿ ಎಷ್ಟಿದೆ ಎಂಬುದನ್ನು ಇಲಾಖಾ ಅಧಿಕಾರಿಗಳು ನಿಗದಿ ಮಾಡಿದಮೇಲೆ, ಯಾವುದಾದರೂ ಒಂದು ಬ್ಯಾಂಕಿನಿಂದ ಜಿಲ್ಲಾ ಕೋಆಪರೇಟಿವ್ ಬ್ಯಾಂಕ್ ಮುಖಾಂತರ ಸಾಲ ಪಡೆಯಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇಂತಹ ಬ್ಯಾಂಕುಗಳನ್ನು ತೆರೆದು ಅವುಗಳ ಮುಖಾಂತರ ರೈತರ ಸಾಲ ತೆಗೆದುಕೊಳ್ಳುವ ಹಾಗೆ ಏರ್ಪಾಡುಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಅವನಿಗೆ ಒಂದೋ ಅಥವಾ ಎರಡೋ ಲಕ್ಷ ರೂಪಾಯಿಗಳ ಆಸ್ತಿ ಇದ್ದರೆ ಆತನಿಗೆ 50 ಸಾವಿರ ರೂಪಾಯಿ ಸಾಲ ಪಡೆಯತಕ್ಕ ಅವಕಾಶ ಇದೆ ಎಂದು ಅದಕ್ಕೆ ಒಂದು ಇತಿಮಿತಿಯನ್ನು ಕಲ್ಪಿಸಿ. ಈ ದಿವಸ ಅನೇಕ ಏಜನ್ಸಿಗಳು ರೈತರಿಗೆ ಸಾಲ ಕೊಡುತ್ತಿವೆ. ರೈತ ತನಗೆ ಗೊಬ್ಬರ ಬೇಕಾದರೆ ಅದಕ್ಕೇ ಒಂದು ಏಜನ್ಸಿ, ಅವನಿಗೆ ಬೀಜದ ಆಲೂಗಡ್ಡೆ ಬೇಕಾದರೆ ಅದಕ್ಕೇ ಒಂದು ಏಜನ್ಸಿ ಹೀಗೆ ಒಂದೊಂದಕ್ಕೂ ಒಂದೊಂದು ಏಜೆನ್ಸಿ ಇವೆ. ಆದರೆ ಇವುಗಳನ್ನೆಲ್ಲಾ ರದ್ದು ಮಾಡಿ ಒಂದೇ ಒಂದು ಏಜನ್ಸಿಯನ್ನು ಇಡತಕ್ಕದ್ದು ಉತ್ತಮ ಎಂಬುದು ನನ್ನ ಅಭಿಪ್ರಾಯ. ಆದರೆ ಈ ದಿವಸ ರೈತ ಎಲ್ಲಿ ಸಾಲ ಸಿಕ್ಕುತ್ತೆ ಎಂದರೆ ಅಲ್ಲಿ ಹಾಜರ್. ಒಂದು ಏಜನ್ಸಿಯಲ್ಲಿ ಮಾಡಿರತಕ್ಕ ಸಾಲ ತೀರಿಸಲು ಇನ್ನೊಂದು ಏಜನ್ಸಿಯಲ್ಲಿ ಕೈ ಹಾಕುತ್ತಾನೆ; ಅದನ್ನು ತೀರಿಸುವುದಕ್ಕೆ ಬೇರೊಂದು ಏಜನ್ಸಿಯಲ್ಲಿ ಸಾಲ ಬಳಸುತ್ತಾನೆ. ಆದರೆ ಆತನಿಗೆ ಕೊಡತಕ್ಕ ಅನೇಕ ಸಾಲಗಳ ದಾಖಲೆ ಅವನ ಆರ್. ಆರ್. ಇತ್ಯಾದಿ ಯಾವುದರಲ್ಲೂ ಸಿಕ್ಕುವುದಿಲ್ಲ. ಹೀಗಾಗಿ ಅನೇಕ ಸಂದರ್ಭಗಳಲ್ಲಿ ಅವನು ಪಡೆದಿರತಕ್ಕ ಸಾಲಗಳನ್ನು ವಸೂಲ್ಮಾಡುವುದಕ್ಕೂ ಕೂಡ ಬಹಳ ಕಷ್ಟವಾಗಿ ಅವುಗಳನ್ನು ಕಡೆಗೆ ಕೈಬಿಡತಕ್ಕ ಅನೇಕ ಪ್ರಸಂಗಗಳನ್ನು ನಾವು ನೋಡಿದ್ದೇವೆ. ಈ ದಿವಸ ರಿಜರ್ವ್ ಬ್ಯಾಂಕಿನವರು ಯಾವುದೇ ಒಂದು ಬ್ಯಾಂಕ್ ಅಥವಾ ಸೊಸೈಟಿ ತಾನು ಪಡೆದಿರತಕ್ಕ ಸಾಲದಲ್ಲಿ ಶೇ :50–60ರಷ್ಟನ್ನಾದರೂ ಮರುಪಾವತಿ ಮಾಡದಿದ್ದರೆ ಅಂಥವುಗಳಿಗೆ ಅವರು ಮತ್ತೆ ಸಾಲ ಕೊಡುವುದಿಲ್ಲ. ಹಾಗೆ ಡಿಫಾಲ್ಟರ್ ಆಗಬಾರದೆಂದು ಆ ಸಂಸ್ಥೆಗಳು ಹಣವನ್ನು ರಿಜರ್ವ್ ಬ್ಯಾಂಕಿಗೆ ಪಾವತಿ ಮಾಡಿದಲ್ಲಿ ಇತ್ತ ರೈತರಿಗೆ ಹಣವನ್ನು ಕೊಡುವುದಕ್ಕೆ ಅವರಲ್ಲಿ ಬಂಡವಾಳವೇ ಇಲ್ಲದಂತಾಗುತ್ತದೆ. ಇಂಥಾ ಅನೇಕ ತೊಂದರೆಗಳು ಇದರಲ್ಲಿವೆ. ಆದರೆ ಯಾರು ಸಾಲವನ್ನು ಪಡೆದನಂತರ ಅದನ್ನು ಕರಾರು ವಾಕ್ಯಾಗಿ ಹಿಂದಿರುಗಿಸುತ್ತಾರೋ ಅಂಥವರಿಗೆ ಮಾತ್ರವೇ ಅದನ್ನು ಕೊಡುವಂತೆ ಮಾಡಬೇಕು. ಅಲ್ಲದೆ ರೈತನ ಯಾವುದೇ ವರ್ಷ ಇರಲಿ ಅದಕ್ಕೆ ಒಂದು ಕಡೆಯಲ್ಲಿ ಸಾಲ ಸಿಕ್ಕುವಂತೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ರೈತನಿಗೆ ಅಗತ್ಯವಾಗಿ ಬೇಕಾಗಿರುವಂಥ ಈ ಷಾರ್ಟ್ ಟರ್ಮಿನ ಸಾಲ ಅವನಿಗೆ ಬಹಳವಾಗಿ ಮೇ—ಜೂನ್ ತಿಂಗಳಲ್ಲಿ ಬೇಕಾಗುತ್ತದೆ. ಅವನು ಕಡಲೆಕಾಯಿ ಇತ್ಯಾದಿಗಳನ್ನು ಹಾಕ ತಕ್ಕ ಕಾಲ ಅದು. ಅವನು ಆ ಸಾಲಕ್ಕೆ ಅರ್ಜಿ ಹಾಕಿದರೆ ಅದು ಅವನಿಗೆ ಸಿಕ್ಕುವುದು ಯಾವಾಗ? ಮುಂದಿನ ಆಗಸ್ಟ್—ಸೆಪ್ಟೆಂಬರ್ ತಿಂಗಳುಗಳಲ್ಲಿ ಅಂಥಾ ಸಾಲದಿಂದ ಅವನಿಗೆ ಬಂದ ಲಾಭವೇನು? ಸಕಾಲದಲ್ಲಿ ಅವನಿಗೆ ಈ ಷಾರ್ಟ್ ಟರ್ಮ್ ಲೋನ್ ಸಿಕ್ಕದಿದ್ದರೆ ಮತ್ತೆ ಅದನ್ನು ತೀರಿಸುವುದಕ್ಕೂ ಸಕಾಲದಲ್ಲಿ ಅವನಿಗೆ ಸಾಧ್ಯವಾಗುವುದಿಲ್ಲ. ಅವನು ಸಕಾಲಕ್ಕೆ ಸಾಲ ತೀರಿಸದಿದ್ದರೆ ಅವನಿಗೆ ಮತ್ತೆ ಸಾಲ ದೊರೆಯುವುದಿಲ್ಲ. ನೋಡಿ ಹೇಗಿದೆ ಇದು? ಈ ವಿಚಾರದಲ್ಲಿ ನನ್ನ ಖಚಿತವಾದ ಸಲಹೆ ಏನೆಂದರೆ ಯಾರು ಕರಾರುವಾಕಾಗಿ ಸಕಾಲಕ್ಕೆ ಸಾಲವನ್ನು ಪಾವತಿ ಮಾಡುತ್ತಾರೋ ಅಂಥವರಿಗೆ ಮಾತ್ರ ಈ ಏಜನ್ಸಿಯಿಂದ ಸಾಲ ಕೊಡುವಂತೆ ಮಾಡಬೇಕೆಂದು ಹೇಳುತ್ತೇನೆ. ಇಂಥಾ ಒಂದು ಹೊಸ ಪದ್ಧತಿಯನ್ನು ಸರ್ಕಾರ ಜಾರಿಗೆ ತರಬೇಕೆಂದು ಹೇಳುತ್ತೇನೆ. ಅಲ್ಲದೆ ಈ ದಿವಸ ಸರ್ಕಾರ ಈ ಸೊಸೈಟಿಗಳ ಮೂಲಕ ರೈತರಿಗೆ ಕೊಡತಕ್ಕ ಸಾಲದ ಬಡ್ಡಿ ದರವಾದರೋ ಕೆಲವು ಸಂದರ್ಭಗಳಲ್ಲಿ ಅದು 16 ಪರ್ಸೆಂಟ್, 17 ಪರ್ಸೆಂಟ್ ಮತ್ತು 18 ಪರ್ಸೆಂಟ್ ವರೆಗೂ ಹೋಗುತ್ತಿದೆ ಇದನ್ನು ತಪ್ಪಿಸಿ. ಈ ದಿವಸ ನಮ್ಮ ರಾಜ್ಯದಲ್ಲಿ ಈ ಸಹಕಾರ ಸಂಘಗಳು ಯಾವ ಬಡ್ಡಿದರದಲ್ಲಿ ಎಷ್ಟು ಸಾಲವನ್ನು ಕೊಟ್ಟಿರುತ್ತವೆಂಬುದನ್ನು ನಾವು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ನಮ್ಮ ರಾಜ್ಯ ಈ ಫೀಲ್ಡಿನಲ್ಲಿ ಉತ್ತಮ ಕೆಲಸ ಮಾಡಿದೆ ಎನ್ನಬಹುದು. ಕೃಷಿರಂಗದಲ್ಲಿ ಸಾಲ ಕೊಡಲು ಹರಿಯಾಣದಲ್ಲಿ 65 ರಿಂದ 70 ಪರ್ಸೆಂಟಿನವರೆಗೂ ಹೋಗಿದ್ದಾರೆ

ಅಲ್ಲಿ, ಕೆಲವು ರಂಗಗಳಲ್ಲಿ ಕಮರ್ಷಿಯಲ್ ಬ್ಯಾಂಕ್ 43 ಪರ್ಸೆಂಟಿನಿಂದ 60 ಪರ್ಸೆಂಟಿನವರೆಗೂ ಸಾಲ ನೀಡಿದೆ. ಆದರೆ ಇದರಲ್ಲಿ ಒಂದು ಮುಖ್ಯವಾದ ವಿಚಾರ ಎಂದರೆ ರೈತನಿಗೆ ಈ ಸಾಲಗಳು ಸಕಾಲಕ್ಕೆ ಸಿಕ್ಕಬೇಕು, ಹಳ್ಳಿಗಳಲ್ಲಿ ಈ ದಿವಸ ಯಾರೂ ರೈತನಿಗೆ ಸಾಲ ಕೊಡುವುದಕ್ಕೆ ತಯಾರಾಗಿಲ್ಲ. ಅವರಿಗೆ ಇನ್ನು ಉಳಿದಿರತಕ್ಕದ್ದು ಇದೊಂದೇ ಮಾರ್ಗ. ರೈತನಾದವನು ಇನ್ನು ಮುಂದಕ್ಕೆ ಈ ಸಹಕಾರಸಂಘಗಳನ್ನೇ ನಂಬಿಕೊಂಡು ತನ್ನ ಜೀವನ ಸಾಗಿಸಬೇಕಾಗಿರುತ್ತದೆ. ಆದುದರಿಂದ ಈ ದಿವಸ ನಾನಾ ರೂಪದಲ್ಲಿ ಕೆಲಸ ಮಾಡುತ್ತಿರುವ ಈ ಲೇವಾದೇವಿಯ ಸಂಸ್ಥೆಗಳನ್ನೆಲ್ಲಾ ಒಂದುಗೂಡಿಸಬೇಕಾದದ್ದು ಅತಿಮುಖ್ಯವಾದದ್ದು ಎಂದು ಹೇಳುತ್ತೇನೆ. ರೈತನಿಗೆ ಕೊಡತಕ್ಕ ಯಾವುದೇ ಸಾಲವಾಗಲಿ ಅದು ಒಂದು ಏಜೆನ್ಸಿಯಿಂದ ದೊರೆಯುವಹಾಗೆ ಇರಬೇಕು. ರಾಜ್ಯದಲ್ಲಿ ಇರತಕ್ಕ ಅನೇಕ ಚಿಕ್ಕ ಪುಟ್ಟ ಸಂಘಗಳೇನಿವೆ ಅವುಗಳನ್ನು ತಪ್ಪಿಸಿ ಹೋಬಳಿಗೊಂದು, ಇಲ್ಲವೆ ತಾಲ್ಲೂಕಿಗೊಂದರಂತೆ ಮಾಡಿ. ಇಲ್ಲಿ ಕೆಲಸಮಾಡತಕ್ಕ ಸಿಬ್ಬಂದಿಗೆ ಇತರೇ ಸರ್ಕಾರಿನೌಕರರಿಗೆ ಕೊಡುವಂತೆ ಸಂಬಳ ಸಾರಿಗೆಗಳನ್ನು ಕೊಡದಿದ್ದರೆ ಅವು ಉಪಯೋಗವಾಗುವುದಿಲ್ಲ; ಮತ್ತು ಸರಿಯಾಗಿ ಕೆಲಸವನ್ನೂ ಕೂಡ ಮಾಡುವುದಿಲ್ಲ.

ಇನ್ನು ಈ ಮಾರ್ಕೆಟಿಂಗ್ ಸೊಸೈಟಿಗಳ ವಿಚಾರದಲ್ಲಿ ತಾವು ಹೇಳಿರತಕ್ಕುದೆಲ್ಲಾ ಕೇವಲ ಒಂದು ವೇದಾಂತ ಇದ್ದಹಾಗಿದೆ.

They have stated the philosophy about it; they have said that the object is to help reduce the prices to help the consumers and also to ensure better return to the primary producer. ತಾವು ಹೇಳುವ ಫಿಲಾಸಫಿಯನ್ನು ಹೇಳಿದ್ದೀರೇ ವಿನಾ ತಾವು ಈ ದಿಶೆಯಲ್ಲಿ ಎಷ್ಟು ದೂರ ಹೋಗಿದ್ದೀರಿ ? ಈ ದಿವಸ ಒಂದು ರೀಜನಬಲ್ ರೇಟಿನಲ್ಲಿ ಎಷ್ಟು ಯಾವ ಕನ್ಸ್ಯೂಮರಿಗೆ ಸಾಮಾನುಗಳು ಸಿಕ್ಕುತ್ತಿವೆ? ಇದರಲ್ಲಿ ರಾಜಕೀಯಪಕ್ಷಗಳ ಬಗ್ಗೆ ನಾನು ಟೀಕೆ ಮಾಡುತ್ತಿಲ್ಲ. ಈ ದಿವಸ ಪರಿಸ್ಥಿತಿಯೇ ಹಾಗಾಗಿದೆ. ಈ ದಿವಸ ಎರಡು ಸಕ್ಕರೆ ಮೂಟೆಗಳನ್ನು ಮಾರಾಟಕ್ಕೆ ಯಾವುದಾದರೊಂದು ಸೊಸೈಟಿಗೆ ರಿಲೀಜ್ ಮಾಡಿದರೆ ಆ ತಕ್ಷಣವೇ ಅವು ಸೊಸೈಟಿಗೆ ಹೋಗದೆ ನೇರವಾಗಿ ಒಬ್ಬ ಸೆಟ್ಟಿ ಅಂಗಡಿಗೆ ಹೋಗುತ್ತವೆ. ಹೀಗಾಗಿ ಈ ದಿವಸ ಒಂದೊಂದು ಸೊಸೈಟಿಯನ್ನು ನಡೆಸತಕ್ಕ ವ್ಯಕ್ತಿಯಾರಿದ್ದಾನೆ ಅವನು ತಿಂಗಳಿಗೆ ಒಬ್ಬ ಮಂತ್ರಿಯ ಸಂಬಳದಷ್ಟನ್ನಾದರೂ ಗಿಟ್ಟಿಸದೆ ಬಿಡುವುದಿಲ್ಲ. ಸಕ್ಕರಿಯ ಕಂಟ್ರೋಲ್ ಬೆಲೆ 200 ರೂಪಾಯಿ ಒಂದು ಮೂಟೆಗಿದ್ದರೆ ಅದಕ್ಕೆ ಓಪನ್ ಮಾರುಕಟ್ಟೆಯಲ್ಲಿ 400 ರೂಪಾಯಿ ಕೊಡುತ್ತಾರೆ. ಅಂದರೆ ಇದರ ಮೂಲ ದೋಷ ಸರ್ಕಾರದ ಮಾರಾಟದ ನೀತಿ ಏನಿದೆ ಅದರಲ್ಲೇ ಇದೆ. ಇಂಥ ಒಂದು ನ್ಯೂನತೆಯನ್ನು ವರ್ತಕರು ಸದುಪಯೋಗ ಮಾಡಿಕೊಂಡು ಜನರನ್ನು ಹಿಂಡುತ್ತಿದ್ದಾರೆ. ಪ್ರತಿ ಹಂತದಲ್ಲೂ ಭ್ರಷ್ಟಾಚಾರ ಪ್ರಾರಂಭವಾಗಿದೆ, ಸಹಕಾರ ಸಂಸ್ಥೆಗಳಲ್ಲಿ ವಿತರಣೆ ಸರಿಯಾಗಿ ಆಗುತ್ತದೆಂಬುದರಲ್ಲಿ ಸಂಶಯವಿದೆ. ಕೆಲವು ಕಡೆ ಉತ್ತಮ ರೀತಿಯಲ್ಲಿ ನಡೆಯುತ್ತಿರಬಹುದು. ಆದರೆ ಹಾಗಿರುವ ಸಂದರ್ಭಗಳು ಕಡಿಮೆ. 5ವರ್ಷ ಈಗಿರುವವರೇ ಸಹಕಾರ ಇಲಾಖೆ ಸಚಿವರಾಗಿರಬೇಕೆಂಬುದು ನನ್ನ ಆಸೆ. ಅವರು ರಾಜಕೀಯ ಒತ್ತಡಕ್ಕೆ ಸಿಕ್ಕಿ ನರಳುತ್ತಿದ್ದಾರೆ. ಅವರು ಹೊರದೇಶಕ್ಕೆ ಹೋಗಿ ಅಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ವ್ಯವಸ್ಥೆ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡಿಕೊಂಡು ಬಂದರೆ ಅನುಕೂಲ ನೋಡಿಕೊಂಡು ಬಂದು ಇಲ್ಲ ಅಲ್ಲಿರುವಂತೆ ಅನುಕೂಲ ನೋಡಿಕೊಂಡು ಬಂದು ಇಲ್ಲಿ ಅಲ್ಲಿರುವಂತೆ ಅನುಷ್ಠಾನಕ್ಕೆ ತಂದರೆ ಒಳ್ಳೆಯದು ಗತ್ಯಂತರವಿಲ್ಲದ ರೈತ ಇಂದು ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಹೋಗಿ ಸಿಕ್ಕಿದ್ದನ್ನು ತಂದುಕೊಂಡು ಹೋಗುತ್ತಿದ್ದಾನೆ. ಅಲ್ಲಿ ದಳ್ಳಾಳಿಗಳ ಕೈಗೆ ಸಿಕ್ಕಿ ಅವನು ಒದ್ದಾಡಬೇಕಾಗಿದೆ. ಅನೇಕವೇಳೆ ಅವನಿಗೆ ಸರಿಯಾದ ದರ ಸಿಕ್ಕುವುದಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಪಕ್ಕದಲ್ಲೇ ವೇರಹೌಸ್-ಗೋಡೌನ ಇರುವುದು, ಅಲ್ಲಿ ಮಾರ್ಕೆಟ್ಟಿನಲ್ಲಿ ಸರಿಯಾದ ದರ ದೊರೆಯದಿದ್ದಾಗ ಇಡಬಹುದು, ಪಕ್ಕದಲ್ಲೇ ಬ್ಯಾಂಕಿರುವುದು, ಅಲ್ಲಿ ತಕ್ಷಣ ಸೇಕಡ 70-80 ರಷ್ಟು ಸಾಲ ದೊರೆಯುವುದು ಇದರಿಂದ ರೈತನಿಗೆ ತೊಂದರೆಯಾಗುವುದಿಲ್ಲ. ಉತ್ತಮವಾದ ಬೆಲೆ ಬಂದಾಗ ಗೋಡೌನಿನಲ್ಲಿಟ್ಟದ್ದನ್ನು ಮಾರಲು ಅವಕಾಶವಿರುವುದು ಆದೇ ನಮ್ಮಲ್ಲಿ ಆ ಅವಕಾಶವಿಲ್ಲ; ಇಲ್ಲಿ ರೈತರಿಗೆ ಮಾರುಕಟ್ಟೆಯಲ್ಲಿ ಅನೇಕ ವೇಳೆ ಸರಿಯಾದ ಬೆಲೆ ಸಿಕ್ಕುವುದಿಲ್ಲ ಎಂಬುದು ಅನೇಕರಿಗೆ ಗೊತ್ತಿರುವ ವಿಚಾರವೇ. ಆಗಿದ ವೆಚ್ಚಕ್ಕನುಗುಣವಾದ ಬೆಲೆ ಅನೇಕ ಸಂದರ್ಭಗಳಲ್ಲಿ ದೊರೆಯುವುದಿಲ್ಲ.

ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ ಪ್ರಾಡ್ಯೂಸ್ ಲೋನ್ ಪಡೆಯಲು ಹಲವಾರು ತೊಂದರೆಗಳಿವೆ. 40 ಕ್ವಿಂಟಾಲಗಿಂತ ಹೆಚ್ಚಾಗಿದ್ದರೆ ಲೆವಿ ಕೊಟ್ಟರೂ ತೆಗೆದುಕೊಳ್ಳುವುದು ಕಷ್ಟ. ಡಿಕ್ಲರೇಷನ್ ಕೊಟ್ಟಿದ್ದರೂ ಯಾರಾದರೂ ಅರ್ಜಿ ಕೊಟ್ಟರೆ, ಹೆಚ್ಚು ಉತ್ಪತ್ತಿಯಾಗಿದೆ ಎಂದು

(ಶ್ರೀ ಎಚ್. ಡಿ. ದೇವೇಗೌಡ)

ಯಾರಾದರೂ ಮೂಗರ್ಜಿ ಬರೆದರೆ ತೊಂದರೆಯಾಗುವುದು. ಆದಕಾರಣ ರೈತರು ಬೆಳೆಯುವ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಕ್ಕದೆ ಹೋಗುತ್ತಿದೆ, ರೆಗ್ಯುಲೇಟೆಡ್ ಮಾರುಕಟ್ಟೆ ನಿರೀಕ್ಷೆ ಮಾಡಿರುವ ಮಟ್ಟದಲ್ಲಿ ಕೆಲಸಮಾಡುತ್ತಿಲ್ಲ ಎಂದು ಹೇಳಿದರೆ ತಪ್ಪಲ್ಲ.

ಈಗ ವೇರಹೌಸಿಂಗ್ ಗೋಡೌನುಗಳಿವೆ. ರೆಗ್ಯುಲೇಟೆಡ್ ಮಾರ್ಕೆಟ ಒಂದು ಕಡೆ, ಗೋಡೌನುಗಳು ಒಂದು ಕಡೆ ಹೀಗಿದೆ. ಕೆಲವು ಸಂದರ್ಭಗಳಲ್ಲಿ ಮೂರು ಮೈಲಿಗಳಷ್ಟು ದೂರದಲ್ಲಿ ಅವು ಇರುವುವು. ಅಷ್ಟು ದೂರ ಹೋಗಬೇಕಾಗುವುದು ಇದು ಸರಿಯಲ್ಲ ಈ ಪರಿಸ್ಥಿತಿ ಸುಧಾರಣೆಯಾಗಬೇಕು.

ಕೋಅಪರೇಟಿವ್ ಷುಗರ್ ಮಿಲ್ಸ್. ರಾಜ್ಯದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಉತ್ತಮ ಭವಿಷ್ಯವಿಲ್ಲವೆಂದು ಶ್ರೀ ಕೃಷ್ಣರವರು ಹೇಳಿದರು. ತಮ್ಮ ಸಹೋದ್ಯೋಗಿಗಳನ್ನು ಅವರು ಮೂಲಭೂತವಾಗಿ ಪ್ರಶ್ನಿಸಿದ್ದಾರೆ. ಅವರು ಹೇಳಿರುವುದಾಗಿ ಪತ್ರಿಕೆಯಲ್ಲಿ ಬಂದಿದೆ. ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆ ನಡೆಸಲು ಉತ್ತೇಜನ ಕೊಡಲು ಸಮಾಜವಾದಿ ಸರಕಾರ ಗಮನ ಕೊಡದೆ ಇದಕ್ಕೆ ತಿಲಾಂಜಲಿ ಕೊಡುವುದಾದರೆ ಇದಕ್ಕೇನು ಹೇಳಬೇಕೋ ಗೊತ್ತಾಗುವುದಿಲ್ಲ. ಮೈಸೂರು ಕಸಬ ಲಾರ್ಜಸ್ಕೇಲ್ ಕೋಅಪರೇಟಿವ್ ಸೊಸೈಟಿ, ಮಿಲ್ಕ್ ಪ್ರೊಡ್ಯೂಸರ್ಸ್ ಕೋಅಪರೇಟಿವ್ ಯೂನಿಯನ್, ಮೈಸೂರು, ವಜಿಟಬಲ್ ಗ್ರೋಯರ್ಸ್ ಕೋಅಪರೇಟಿವ್ ಸೊಸೈಟಿ, ಬಸವೇಶ್ವರ ಮಿಲ್ಕ್ ಪ್ರೊಡ್ಯೂಸರ್ಸ್ ಕೋಅಪರೇಟಿವ್ ಸೊಸೈಟಿ ಇವುಗಳಲ್ಲಷ್ಟು ಹಣದುರುಪಯೋಗವಾಗಿದೆ ಎಂಬುದನ್ನು ನೋಡಬಹುದು.

[MR. DEPUTY SPEAKER in the Chair]

ಅದು ಯಾವ ಟೋಪಿಯೋ, ಸಂಸ್ಥಾ ಕಾಂಗ್ರೆಸ್ ಟೋಪಿಯೋ ಅಥವಾ ಆರ್. ಕಾಂಗ್ರೆಸ್ ಟೋಪಿಯನ್ನು ಹಾಕಿರುವ ಜನ ಅಲ್ಲಿ ಇದ್ದಾರೋ ? ಮಾನ್ಯ ಶಿವಯ್ಯನವರು ಕುಪ್ಪಳಿಸುತ್ತಿದ್ದಾರೆ, ಅದಕ್ಕಾಗಿ ಇದನ್ನು ಓದಬೇಕಾಗಿದೆ. ಈ ಒಂದು ವಿಷಯವನ್ನು ಏತಕ್ಕೆ ಪ್ರಸ್ತಾಪಮಾಡುತ್ತಿದ್ದೇನೆಂದರೆ, ಮಾನ್ಯ ಶಿವಯ್ಯನವರಿಗೆ ಉತ್ತರ ಕೊಡಬೇಕು ಎನ್ನುವ ಹಂಬಲ ನನಗೆ ಇಲ್ಲ. ಮೊದಲೆ ಹೇಳಿದೆ, ರಾಜ್ಯದಲ್ಲಿ ಸಹಕಾರ ಸಂಸ್ಥೆಗಳು ಕೆಲಸಮಾಡತಕ್ಕಂಥ ಕಾಲದಲ್ಲಿ ಯಾವುದೇ ಪಕ್ಷದಲ್ಲಿದ್ದರೂ ತಪ್ಪು ಮಾಡತಕ್ಕ ಅನೇಕ ಘಟನೆಗಳು ಇವೆ. ಒಂದೇ ಪಕ್ಷಕ್ಕೆ ಇದು ಸೀಮಿತವಾದದು ಎಂದು ಅಲ್ಲ. ತಮ್ಮ ತಮ್ಮ ವ್ಯವಹಾರವನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ನಡೆಸಿಕೊಂಡು ಹೋಗಬೇಕಾದದು ತಮ್ಮ ಮೇಲೆ ಬಿದ್ದಿರುವ ಹೊಣೆಗಾರಿಕೆ ಎಂದು ತಾವು ಅರಿಯಬೇಕು. ಕೇವಲ ಒಂದು ಪಕ್ಷದಲ್ಲಿರುವ ಜನರಿಗೆ ರಕ್ಷಣೆ ಕೊಟ್ಟು, ವಿರೋಧವಾಗಿರುವ ಜನತೆಗೆ ಕತ್ತು ಹಿಸುಕುವ ಕೆಲಸ, ಪಾಪದ ಕೆಲಸ, ಇದು ಮಾನ್ಯ ಶಂಕರ್ ಆಳ್ವ ಅವರಿಂದ ಆಗ ಬಾರದಾಗಿತ್ತು.

ಶ್ರೀ ಎ. ಶಂಕರ್ ಆಳ್ವ.—ಆ ಲಿಸ್ಟನ್ನು ಕೊಡಿ.

ಶ್ರೀ ಎಚ್. ಡಿ. ದೇವೇಗೌಡ.—ಅವರು ಗೌರವಾನ್ವಿತ ಸಭೆಯ ಸದಸ್ಯರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ರಕ್ಷಣೆ ಕೊಡುವುದು ಸರ್ಕಾರಕ್ಕೆ ಗೌರವ ತರತಕ್ಕದ್ದು ಅಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇನ್ನೊಂದು, ಕಂಟ್ರೋಲರ್ಸ್ ಆಫೀಸ್ ಕೋ-ಅಪರೇಟಿವ್ ಬ್ಯಾಂಕ್ ಲಿಮಿಟೆಡ್, 209, ಕಬ್ಬನ್ ಪೇಟೆ ರೋಡ್, ಬೆಂಗಳೂರು-3 ಈ ಸೊಸೈಟಿ ಹೇಗೆ ಕೆಲಸ ಮಾಡುತ್ತಿದೆ ? 75 ಸಹಸ್ರ ರೂಪಾಯಿಗಳು shown as remittence to the D.C.C. Bank, ದುರುಪಯೋಗವಾಗಿದೆ. ಇದರ ಮೇಲೆ ಜಾಯಿಂಟ್ ರಿಜಿಸ್ಟ್ರಾರ್ ಅವರು, ರಿಜಿಸ್ಟ್ರಾರ್ ಅವರು ಸೂಪರ್‌ಸೀಡ್ ಮಾಡಬೇಕು ಎಂದು ಬರೆದರೆ, ಮೇಲಿನ ಅಧಿಕಾರಿಗಳು ಇದನ್ನು ಸೂಪರ್‌ಸೀಡ್ ಮಾಡಬಾರದು ಎಂದು ಹುಕುಂ ಮಾಡಿದ್ದಾರೆ, ಐ ಸಿ ಎಸ್ ಆಫೀಸರ್ ಪರಿಸ್ಥಿತಿ ಏನಾಗಬೇಕು ?

ಶ್ರೀ ಕೆ. ಎನ್. ವೀರಪ್ಪಗೌಡ.—ಮಂತ್ರಿಗಳು ಮೇಲಿನ ಅಧಿಕಾರಿಗಳು.

ಶ್ರೀ ಎಚ್. ಡಿ. ದೇವೇಗೌಡ.—ಈ ಒಂದು ಸಂಸ್ಥೆಯ ಮೇಲೆ ಗುರುತರವಾದ ಅಪಾದನೆ ಇದ್ದು ವಿಚಾರಣೆಯಾಗಬೇಕು ಎಂದು ಸಂಬಂಧಪಟ್ಟ ಎಂಪ್ಲಾಯೀಸ್ ಒಂದೇ ಸಮನೆ ಸರ್ಕಾರಕ್ಕೆ ಮನವಿ ಮಾಡಿದ ಮೇಲೆ, ವಿಚಾರಣೆ ಮಾಡಿ ಅಧಿಕಾರಿಗಳು ಸೂಪರ್‌ಸೀಡ್ ಮಾಡಬೇಕು ಎಂದು

ಬರೆದರೆ, ಇವತ್ತು ಅದನ್ನು ಸೂಪರ್‌ಸೀಡ್ ಮಾಡಬಾರದು ಎಂದು ನಿರ್ಣಯ ಕೊಟ್ಟಿದ್ದಾರೆ. ಇದು ತಮ್ಮ ನೀತಿಯೇ ಎಂದು ನಾನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ತಾವು ಈ ಸಂಸ್ಥೆಯಲ್ಲಿ ನಡೆಯತಕ್ಕ ಅವ್ಯವಹಾರಗಳನ್ನು ಹತ್ತಿಕ್ಕಲಿಕ್ಕೆ ದ್ವಿಮುಖ ನೀತಿ ಬೇಡ. ಯಾರೇ ಇರಲಿ, ತಪ್ಪಿತಸ್ಥಸ್ಥಾನದಲ್ಲಿರುವವರಿಗೆ ಯಾವುದೇ ಹಸ್ತಕ್ಷೇಪಕ್ಕೆ ಅವಕಾಶ ಕೊಡುವುದು ಬೇಡ. ತಮ್ಮ ವೈಯಕ್ತಿಕ ಚಾರಿತ್ರ್ಯದ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ತಮ್ಮಲ್ಲಿ ಒಳ್ಳೆಯ ಗುಣಗಳು ಇದೆಂದು ಕೇಳಿದ್ದೇನೆ. ತಮ್ಮ ಆಡಳಿತವನ್ನು ಸ್ವತಂತ್ರ್ಯವಾಗಿ ನಡೆಸಲಿಕ್ಕೆ ಅರ್ಹತೆ ಇಲ್ಲದೆ ತಾವು ಪ್ರಲಾಪ ಪಡುತ್ತಾ ಇರತಕಂಥಾದ್ದನ್ನು ನೋಡಿ ನಾನು ವಿಷಾದಪಡಬೇಕಾಗುತ್ತದೆ. ತಾವು ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ಇದಕ್ಕೆ ಕಾರಣ ಹಲವಾರು ಇವೆ. ಅನೇಕ ಕಡೆ ರಾಜಕೀಯ ಒತ್ತಡಗಳು ಇವೆ. ಇವತ್ತು ಡಿಪಾರ್ಟ್‌ಮೆಂಟಿನ ಎಲ್ಲಾ ಅಧಿಕಾರಿಗಳು ಅದನ್ನು ಸೂಪರ್‌ಸೀಡ್ ಮಾಡತಕ್ಕದ್ದರ ಬಗ್ಗೆ ಅವರು ಸಿಫಾರಸ್ ಮಾಡಿದ್ದಾರೆ. ಆದರೆ ರಿಜಿಸ್ಟ್ರಾರ್ ಅವರು ಅದನ್ನು ಸೂಪರ್‌ಸೀಡ್ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು ಒಂದು ಆರ್ಡರ್ ಕೊಟ್ಟಿದ್ದಾರೆ. ಏತಕ್ಕೆ? ನಾನು ಯಾವ ಅಧಿಕಾರಿಗಳ ಮೇಲೆ ಆರೋಪ ಮಾಡಬೇಕು ಎನ್ನುವ ಸ್ವಭಾವ ನನಗಿಲ್ಲ. ಅಧಿಕಾರಿಗಳು ಇಷ್ಟು ನಿರ್ವೀರ್ಯರಾಗಿ ಕೆಲಸ ಮಾಡಬೇಕಾದರೆ, ಅಧಿಕಾರಿಗಳನ್ನು ಭಯಗ್ರಸ್ತರನ್ನಾಗಿ ಮಾಡಿಟ್ಟುಕೊಳ್ಳುವ ಪರಿಸ್ಥಿತಿಯಲ್ಲಿ ಹೋಗಬೇಕಾದರೆ ನಾನು ಕೇಳುತ್ತೇನೆ. ರಾಜ್ಯದಲ್ಲಿ ಸಹಕಾರ ಸಂಸ್ಥೆಗಳ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲ ಎಂದು. ಇವತ್ತು ಈ ಒಂದು ಸನ್ನಿವೇಶ ಏನು ಇದೆ, ಆ ಸನ್ನಿವೇಶವನ್ನು ಸರಿಪಡಿಸಬೇಕಾದರೆ, ಬಹುಶಃ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡುವುದು ಯೋಗ್ಯವಲ್ಲ; ಎಂದು ನಾನು ಸಲಹೆ ಕೊಡುತ್ತಿದ್ದೇನೆ. ದಯಮಾಡಿ, ತಾವು ಉತ್ತಮವಾದಂಥ ಆಡಳಿತವನ್ನು ನಡೆಸಬೇಕು ಎನ್ನುವ ಇಚ್ಛೆ ಇದ್ದರೆ ಈ ರೀತಿಯ ಹಸ್ತಕ್ಷೇಪಕ್ಕೆ ಅವಕಾಶ ಕೊಡಬಾರದು. ಒಂದು ವೇಳೆ ರಾಜಕೀಯ ಮುಖಂಡರು ರಿಜಿಸ್ಟ್ರಾರ್ ಮೇಲೆ ಒತ್ತಡ ತರತಕ್ಕ ಪರಿಸ್ಥಿತಿ ಬಂದರೆ ರಿಜಿಸ್ಟ್ರಾರ್ ಅವರು ಉತ್ತಮ ಕೆಲಸ ಮಾಡುವುದಕ್ಕೆ ಅನರ್ಹರು ಅಂದರೆ ಅದು ಸರಿಯಲ್ಲ. ಅವರು ವ್ಯಕ್ತಿಚಾರಿತ್ರ್ಯದ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ, ಅವರಲ್ಲಿ ಒಳ್ಳೆಯ ಗುಣ ಇದೆಯೆಂದು ಕೇಳಿದ್ದೇನೆ, ದುರ್ದೈವದಿಂದ ದೇಶದಲ್ಲಿ ಒಂದು ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಬಂದು ಯಾವುದೋ ಒಂದು ಜಾತಿಗೆ ಸೇರಿರತಕ್ಕವರು ಯಾವುದೋ ಒಂದು ರಾಜಕೀಯ ಪಕ್ಷಕ್ಕೆ ಪರೋಕ್ಷವಾಗಿ ಸಹಾಯ ಮಾಡುತ್ತಾರೆ ಎನ್ನುವ ಭಾವನೆ ಕಳೆದ ಒಂದು ವರ್ಷದಿಂದ ಬಂದಿದೆ. ದಯಮಾಡಿ ಆ ಜಾಗದಿಂದ ಅವರನ್ನು ಹೊರಗಡೆ ಕಳುಹಿಸಿ ಬೇಡ ಎಂದು ಹೇಳುವುದಿಲ್ಲ. ಏತಕ್ಕೆ ಈ ಮಾತು ಹೇಳುತ್ತೇನೆ ಎಂದರೆ, ರಿಜಿಸ್ಟ್ರಾರ್ ಅವರು ನಿಷ್ಪಕ್ಷಪಾತವಾದಂಥ ಕೆಲಸ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಅವರಿಗೆ ಒಂದೇ ಒಂದು, ಮನಸ್ಸಿನಲ್ಲಿ ಭಯಗ್ರಸ್ತರಾಗಿ ಕೆಲಸ ಮಾಡತಕ್ಕ ಪರಿಸ್ಥಿತಿ ಏನು ಇದೆ ಅದನ್ನು ಬಿಟ್ಟು ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕೆ ತಯಾರು ಆಗಬೇಕಾಗುತ್ತದೆ. ಅದು ಇಲ್ಲದಿದ್ದರೆ, ಇನ್ನೊಂದು ಉತ್ತಮ ಕೆಲಸ ಮಾಡುವುದಕ್ಕೆ ಶಕ್ತಿ ಇರತಕ್ಕ ವ್ಯಕ್ತಿ ಅವರು. ಆದರೆ ಅವರನ್ನು ಸ್ಥಳಾಂತರ ಮಾಡಿಸಿ ನನ್ನ ಅಡ್ಡಿ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಮನಸ್ಸಿಗೆ ತದ್ವಿರುದ್ಧವಾದ ಶಿಫಾರಸ್‌ಗಳನ್ನು ಅವರಿಂದ ಪಡೆಯಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ, ಕುತ್ತಿಗೆ ಹಿಸುಕುತ್ತಿದ್ದೀರಿ, ಎನ್ನುವುದಕ್ಕೆ ಸಾಕಷ್ಟು ಆಧಾರಗಳು ಇವೆ. ಅವರನ್ನು ಸ್ವತಂತ್ರವಾಗಿ ಕೆಲಸಮಾಡುವುದಕ್ಕೆ ಬಿಡುತ್ತಾ ಇಲ್ಲ, ಎನ್ನುವ ಆರೋಪಣೆ ಸರ್ಕಾರದ ಮೇಲಿದೆ.

ಇನ್ನು ಐಡಿಯಲ್ ಹೋಂ ಬಗ್ಗೆ, ಇದು ಮಾನ್ಯ ಧರ್ಮವೀರ ಅವರ ಕಾಲದಲ್ಲಿ ಒಂದು ವಿಚಾರಣೆಗೆ ಆರ್ಡರ್ ಆಯಿತು; ಮೊನ್ನೆ ಮೇಲ್ಮನೆಯ ಸದಸ್ಯರೊಬ್ಬರು ಇದರ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದಾಗ, ಒಬ್ಬಿಬ್ಬರನ್ನು ಅಲ್ಲಿ ಸಸ್ಪೆಂಡ್ ಮಾಡಿದ್ದೇವೆ ತೆಗೆದುಹಾಕಿದ್ದೇವೆ ಎನ್ನುವುದನ್ನು ಹೇಳಿದ್ದು ನಾನು ಪತ್ರಿಕೆಯಲ್ಲಿ ಓದಿದ್ದು ಜ್ಞಾಪಕ ಇದೆ. ಆ ಸಂಸ್ಥೆಯಲ್ಲಿ ನಡೆದ ಅವ್ಯವಹಾರಗಳನ್ನು ತಡೆಗಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ರಾಜಕೀಯ ಒತ್ತಡ ಕಾರಣ. ಇಂಥ ರಾಜಕೀಯ ಒತ್ತಡಕ್ಕೆ ಮಣಿಯಬಾರದು. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕಾದರೆ, ಹಸ್ತಕ್ಷೇಪ ಅಲ್ಲಿಯವರೆಗೆ ಹೋಗಿದೆ.

ಸೇಡಂ ಕೋ-ಅಪರೇಟಿವ್ ಸೊಸೈಟಿಯ ಬಗ್ಗೆ ಹೇಳುತ್ತೇನೆ. ತಮ್ಮ ಹೃದಯವನ್ನು ಮುಟ್ಟಿಕೊಂಡು ತಾವು ಈ ಪ್ರಶ್ನೆಗೆ ಉತ್ತರ ಕೊಡಬೇಕು. ಸೇಡಂ ಹರಿಜನ ಕೋ-ಆಪರೇಟೀವ್ ಸೊಸೈಟಿಯಿಂದ ಸಾಲವನ್ನು ವಿತರಣೆ ಮಾಡುವುದಕ್ಕೆ, ಕೇವಲ ಬೇರೆ ಪಕ್ಷಕ್ಕೆ ವೋಟು ಮಾಡಿದರು ಎಂದು ಕೊಲೆ ಮಾಡಲಿಕ್ಕೆ ಪ್ರಯತ್ನ ಮಾಡಿದರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಡೆಪ್ಯೂಟಿ

(ಶ್ರೀ ಹೆಚ್. ಡಿ. ದೇವೇಗೌಡ)

ರಿಜಿಸ್ಟ್ರಾರ್ ಅವರು ಶಿಫಾರಸ್ ಮಾಡಿ ಸಾಲ ಕೊಡಿ ಎಂದು ಹೇಳಿದರು; ಆಗಲಿಲ್ಲ. ಮಾನ್ಯಸಭೆಯ ಸದಸ್ಯರು ಮುಖ್ಯ ಮಂತ್ರಿಗಳ ಹತ್ತಿರ ಹೋದರೆ, ತಕರಾರು ಹಾಕಿ, ಅವರು ಹುಕುಂ ಬರೆದರು. ಮುಖ್ಯಮಂತ್ರಿಗಳು ಹೇಳುತ್ತಾರೆ, ನಾವು ಇಲಾಖೆಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು. ಒಳ್ಳೆಯ ಮೇಲ್ಮಟ್ಟದಲ್ಲಿ ಭಾಷಣ ಮಾಡುವ ಮುಖಾಂತರ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಆದರೆ ವ್ಯವಹಾರಿಕವಾಗಿ ಏನು ನಡೆಯುತ್ತಿದೆ ? ಈ ಸಭೆಯ ಸದಸ್ಯರಾದ ಜೆ. ಪಿ. ಸರ್ವೇಶ್ ಅವರು ಒಂದು ಪತ್ರವನ್ನು ಮುಖ್ಯಮಂತ್ರಿಗಳಿಗೆ ಬರೆದರು. ಮುಖ್ಯಮಂತ್ರಿಗಳು ಇನ್‌ವೆಸ್ಟಿಗೇಟ್ ಮಾಡಿ ಎಂದು ಹುಕುಂ ಮಾಡಿದರು. ಅಲ್ಲಿಗೆ ಇನ್ನೊಬ್ಬರು ಜಾಯಿಂಟ್ ರಿಜಿಸ್ಟ್ರಾರ್ ಹೋದರು, ಅವರು ಒಂದು ರಿಪೋರ್ಟ್ ಕೊಟ್ಟರು. ಅಲ್ಲಿಯ ವ್ಯವಹಾರ ಚೆನ್ನಾಗಿ ನಡೆದಿದೆ, ಆಫೀಸ್ ಬಿಯರರ್ಸ್ ತಪ್ಪು ಇದ್ದರೆ, ಮನೆ ಕಟ್ಟಿಕೊಂಡಿರುವವರ ಮಟ್ಟಿಗೆ ರೀಲಿಸ್ ಮಾಡುವುದಕ್ಕೆ ತೊಂದರೆ ಕೊಡುವುದು ಬೇಡ. ಆಫೀಸ್ ಬಿಯರರ್ಸ್‌ರು ತಪ್ಪು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಂಡು, ಯಾರು ಮೊದಲನೆಯ ಕಂತನ್ನು ಪಡೆದಿದ್ದಾರೋ ಏನು ಇದೆ ಅದು ಅವರಿಗೆ ಎರಡನೆಯ ಕಂತನ್ನು ರಿಲೀಸ್ ಮಾಡಬೇಕು ಎಂದು ಮಾಡಿರುವುದು ಇನ್ನೂ ಸಕ್ರೆಟೇರಿಯೇಟ್‌ನಲ್ಲಿ ಮೂರು ತಿಂಗಳಿಂದ ನಿಂತಿದೆ.

ವಾದ ವಿವಾದ ನಡೆದಿದೆ. ಅಮೇಲೆ ಹುಕುಂ ಮಾಡುತ್ತಾರೆ. ಹುಕುಂ ಕೊಟ್ಟಮೇಲೆ ಅರ್ಧ ಕಂತು ರೀಲೀಸ್ ಮಾಡಿಲ್ಲ ಯಾವ ಕಾರಣಕ್ಕೋಸ್ಕರ ಮಾಡಿದರು ? ಇದು ಹಸ್ತಕ್ಷೇಪ ಅಲ್ಲವೇ ? ನಾನು ಕೇಳುತ್ತೇನೆ ನಿಮಗೆ ಬಹಳ ಚಾರಿತ್ರ್ಯವಿದೆ. ಆ ಸ್ಥಾನದಲ್ಲಿ ನಿಷ್ಪಕ್ಷಪಾತವಾಗಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದೆ ಹೋದರೆ ಆ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಹೋಗಿ. ಸ್ಥಾನಕ್ಕೆ ಗಂಟು ಹಾಕಿಕೊಳ್ಳುವುದಕ್ಕೆ ಹೋಗಬೇಡಿ ನಿಮ್ಮ ಚಾರಿತ್ರ್ಯಕ್ಕೆ ಮಸಿ ಬಳಿಯುವ ಪರಿಸ್ಥಿತಿಗೆ ಹೋಗಬೇಡಿ ಎಂದು ಹೇಳುತ್ತೇನೆ. ಇವೊತ್ತು ಇನ್ನೂ ಕೂಡ ಅರ್ಧ ಜನರಿಗೆ ಸಾಲ ವಿತರಣೆಯಾಗಿಲ್ಲ. ಅವರು ಏನು ತಪ್ಪು ಮಾಡಿದರು ? ಸಂಸ್ಥಾ ಕಾಂಗ್ರೆಸ್‌ಗೆ ಓಟು ಕೊಟ್ಟಿರುವುದು ಒಂದು ತಪ್ಪು ಎಂದು ಇಷ್ಟೊಂದು ಸೇಡು ತೆಗೆದುಕೊಳ್ಳಬೇಕೇ ? 7—8 ತಿಂಗಳಾಯಿತು. ಇದು ನಿಮಗೆ ಭೂಷಣ ತರತಕ್ಕ ವ್ಯವಹಾರವಲ್ಲವೆಂದು ಹೇಳುತ್ತೇನೆ. ಇನ್ನು ಧಾರವಾಡ ಜಿಲ್ಲೆ ಸಂಘಸಂಸ್ಥೆಗಳ ಮಟ್ಟಿಗೆ ಇವೊತ್ತು ಸಾಕಷ್ಟು ಆರೋಪಣೆಗಳು ಮೇಲ್ಮನೆಯಲ್ಲಿ ನಡೆದಿದೆ. ಒಂದು ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ರಾಜಕೀಯ ದೃಷ್ಟಿಯಿಂದ ಆರೋಪಣೆ ಮಾಡಬೇಕು ಎನ್ನುವ ಹಂಬಲ ನನಗೆ ಇಲ್ಲ. ಆದರೆ ಅವೊತ್ತು ಏನು ಸಂಸ್ಥೆಗಳು ಕೆಲಸ ಮಾಡುತ್ತಾ ಇವೆ, ಸಂಸ್ಥೆಗಳಲ್ಲಿ ಲೋಪ ಇದೆಯೋ ಇಲ್ಲವೇ ವಿಚಾರಣೆಯಾಗಬೇಕು. ತಾವು ಏನು ರಾಜ್ಯದಲ್ಲಿ ಕೆಲವು ಸಂಸ್ಥೆಗಳ ಕತ್ತು ಹಿಸುಕಲಿಕ್ಕೆ ಪ್ರಾರಂಭಮಾಡಿದಿರಿ ಅದರ ಹಿನ್ನಲೆಯಲ್ಲಿ ಕೇಳುತ್ತೇನೆ. ರಾಜ್ಯದಲ್ಲಿ ಇರತಕ್ಕ ಎಲ್ಲಾ ಸಹಕಾರ ಸಂಸ್ಥೆಗಳನ್ನು ಸುಧಾರಿಸುವುದಕ್ಕೆ ಸಾಧ್ಯವಾಗದೆ ಇರಬಹುದು. ಧಾರವಾಡ ಜಿಲ್ಲೆಯಲ್ಲಿ ಇರತಕ್ಕ ಕೆಲವು ಸಂಸ್ಥೆಗಳು ಎಷ್ಟರ ಮಟ್ಟಿಗೆ ಇವೊತ್ತು ಕೆಲಸಮಾಡಿವೆ ಎನ್ನುವುದರ ಬಗ್ಗೆ ನಾನು ಕೆಲವು ವಿವರಣೆಗಳನ್ನು ಕೊಡಲಿಕ್ಕೆ ಪ್ರಯತ್ನಮಾಡುತ್ತೇನೆ. ಶ್ರೀಮಾನ್ ಶಿವಯ್ಯನವರು ನಮ್ಮ ಮೇಲೆ ಹೇಳುತ್ತಿದ್ದಾರೆ, ಎಲ್ಲಾ ನಿಮ್ಮ ಕಂಪನಿಯಲ್ಲಿ ಇದ್ದಾರೆ ಎಂದು. ಹುಲಕೋಟಿ ಟೆಕ್ಸ್‌ಟೈಲ್ ಕೋ ಆಪರೇಟೀವ್ ಮಿಲ್ಸ್ ಯಾರದು ? ನಿಮ್ಮ ಸಹಕಾರಸಂಸ್ಥೆ ಅಥವಾ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮಾಡಿದ್ದಾರೆ ? ಯಾರು ಇದಕ್ಕೆ ಹೊಣೆಗಾರರು. ? ನೆನ್ನೆ ಹಾವೇರಿಗೆ ಹೋಗಿದ್ದೆ ನನಗೆ ಬಂದಂತಹ ವಿಷಯಗಳು, ನನಗೆ ಹೇಳಿರುವುದು. ಈ ವಿಷಯಗಳು ಎಲ್ಲಾ ಕರಾರುವಾಕ್ಕು ಎಂದು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಕೆಲವು ವಿಷಯಗಳನ್ನು ನಿಮಗೆ ತಿಳಿಸಿ ಅದಕ್ಕೆ ಉತ್ತರ ಕೊಡಬೇಕು ಎಂದು ಹೇಳುತ್ತೇನೆ. ಮೂರು ನಾಲ್ಕು ತಿಂಗಳು ಆಗಿದ್ದೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಪ್ರಾರಂಭವಾಗಿ, ಇದರ ಚೇರ್‌ಮನ್ ನಮ್ಮ ಶ್ರೀ ಕೆ. ಎಚ್. ಪಾಟೀಲರ ಅಣ್ಣನವರ ಮಕ್ಕಳು ಅವರು ಅವರ ಅಣ್ಣನವರ ಮಕ್ಕಳು ಆಗಿದ್ದರೆ ಆಗಬಾರದು ಎಂದು ಇಲ್ಲ. ನಾಳೆ ನನ್ನ ಮಗ ಈ ಸಭೆಯಲ್ಲಿ ಶಾಸನ ಸಭಾ ಸದಸ್ಯ ಆಗಿದ್ದರೆ ಅಸೂಯೆ ಪಡುವುದಕ್ಕೆ ಆಗುವುದಿಲ್ಲ. ಶಾಸನಸಭಾ ಸದಸ್ಯನಾಗುವುದು ಬೇಡ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದರಲ್ಲಿ ಯಾವ ರೀತಿಯಿಂದ ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಾರೆ ಎನ್ನುವ ಪ್ರಶ್ನೆ ಇದೆ. ಚುನಾವಣೆಯಲ್ಲಿ ಗೆದ್ದು ಬಂದರೆ ಅಣ್ಣನ ಮಗ ಮ್ಯಾನೇಜಿಂಗ್ ಡೈರೆಕ್ಟರ್ ಅಥವಾ ಚೇರ್‌ಮನ್ ಆದರೆ ಅಡ್ಡಿಯಿಲ್ಲ. ಸರ್ಕಾರ ಇವೊತ್ತು ನಾಮಿನೇಟ್ ಮಾಡಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ನನಗೆ ಗೊತ್ತಿದೆ. ನನ್ನ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಸೊಸೈಟಿ ಆಗಿದೆ, ಶ್ರೀ ದೇವೇಗೌಡರು ಏನು ತಿಳಿದುಕೊಂಡಿದ್ದಾರೆ ಆ ಆಧಾರದಿಂದ ಹೋದರೆ ತಪ್ಪು ವರದಿ ಯಾಗುತ್ತದೆ. ವಿರೋಧಪಕ್ಷದ ನಾಯಕರು ಹೀಗೆ ವರದಿ ಸಂಬುತ್ತಾರೆಂದು ಆಗುತ್ತದೆ. ಡಿ. ಆರ್. ಪಾಟೀಲ್ ಪ್ರೆಸಿಡೆಂಟ್, ಅವರನ್ನೂ ನಾಮಿನೇಟ್ ಮಾಡಿಲ್ಲ. ಸರ್ಕಾರ ನಾಮಿನೇಟ್ ಮಾಡಿರು ವುದು ಮೂರು ಮಂದಿ ಅಧಿಕಾರಿಗಳು. ಸೊಸೈಟಿ ಅವರೇ ಹುಟ್ಟಿಸಿದ್ದು. ಮೊದಲನೆ ಕಮಿಟಿ ಆ ಕಮಿಟಿಯೊಳಗೆ ಅವರು ಅಧಿಕಾರದಲ್ಲಿ ಬಂದಿದ್ದಾರೆ. ಮೊದಲು ಷೇರ್ಸ್ ವಂತಿಗೆ ಪೂರ್ಣ ಕೂಡಿಸಿ ಕೊಂಡು ವಂತಿಗೆ ಎರಡರಷ್ಟು ಕೊಡಬೇಕು ಎಂದು ಕೇಳಿದ್ದಾರೆ. ಇನ್ನೂ ಸರ್ಕಾರ ಪ್ರಮಾಣ ಬದ್ಧವಾಗಿ ಕೊಡಬೇಕಾದುದು ಕೊಟ್ಟಿಲ್ಲ. ದಯಮಾಡಿ ಕೊಟ್ಟಿದ್ದರೆ ಹೇಳಿ ?

ಶ್ರೀ ಎ. ಶಂಕರ ಆಳ್ವ.—ಅವರು ಹೇಳಿದ್ದು ಚೇರ್‌ಮನ್ ಅವರು ಅಣ್ಣನ ಮಗ ಎಂದು ಆರೋಪ ಮಾಡಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನನಗೆ ಏನು ವರ್ತಮಾನ ಬಂದಿದೆ ಅದರ ಮೇಲೆ ಅಂಕಿ ಅಂಶ ಗಳ ಮೇಲೆ ಸಭೆಯಲ್ಲಿ ಚರ್ಚೆಮಾಡಬೇಕು. ಶ್ರೀಮಾನ್ ಕೆ. ಎಚ್. ಪಾಟೀಲರು ಜವಾಬ್ದಾರಿ ಯುತ ಜಾಗದಲ್ಲಿ ಇದ್ದಾರೆ ಅವರ ಅಧಿಕಾರ ಸ್ಥಾನದಿಂದ ಹಸ್ತಕ್ಷೇಪ ನಡೆದರೆ ತಪ್ಪಾಗುತ್ತದೆ. ಆದುದರಿಂದ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಸುಮಾರು 28 ಲಕ್ಷ ರೂಪಾಯಿ ಗಳ ಷೇರನ್ನು ಕಲೆಕ್ಟ್ ಮಾಡಿದ್ದಾರೆ ಎಂದು ನಾನು ಕೇಳಿದ್ದೇನೆ. 28 ಲಕ್ಷ ರೂಪಾಯಿ ಷೇರು ಗಳನ್ನು ಕಲೆಕ್ಟ್ ಮಾಡುವ ಕಾಲದಲ್ಲಿ ..

ಶ್ರೀ ಕೆ. ಎಚ್. ಪಾಟೀಲ್.—35 ಲಕ್ಷ ರೂಪಾಯಿಗಳು,

ಶ್ರೀ ಎ. ಶಂಕರ್ ಆಳ್ವ.—ಅದು ಮೊದಲಿನ ಲೆಕ್ಕ ಇರಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಡೈರೆಕ್ಟರ್ ಯಾರನ್ನು ನೇಮಕಮಾಡಿದ್ದಾರೆ ? ಬೋರ್ಡ್ ಆಫ್ ಡೈರೆಕ್ಟರ್ಸ್ ಚುನಾವಣೆಯಾಗಿದೆ. ಶ್ರೀ ಕೆ. ಎಚ್. ಪಾಟೀಲರ ಊರಿನವರು ನಾಲ್ಕು ಜನ ಇದ್ದಾರೆಂದು ಕೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಶ್ರೀ ಡಿ. ಆರ್. ಪಾಟೀಲ್ ದೂರದ ಸಂಬಂಧಿಗಳು, ಅವರ ಅಜ್ಜ ನಮ್ಮ ಅಜ್ಜ ಬೇರೆ. ರೆಡ್ಡಿ ಜನರು ಆಗಿದ್ದವರು ಇದ್ದಾರೆ, ನೀವು ಹೇಳುವುದು ಸರಿ. ರೆಡ್ಡಿ ಜನರು ಇಬ್ಬರು ಇದ್ದರೆ ನಾಲ್ಕು ಮಂದಿ ಇದ್ದಾರೆಂದು ಸುಳ್ಳು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಹೇಳಿದಮೇಲೆ ನೋಡೋಣ. ಇಲ್ಲ ಎಂದು ಹೇಳುವುದಿಲ್ಲ. ಉಳಿದ ಡೈರೆಕ್ಟರ್ಸ್ ಏನು ಇದ್ದಾರೆ ಅವರಲ್ಲಿ ವ್ಯವಸಾಯಗಾರರು ಯಾರು ಇಲ್ಲ. ನನಗೆ ತಿಳಿದಿರುವ ಪ್ರಕಾರ ಬಹುತೇಕ ವ್ಯಾಪಾರಸ್ಥರು.

ಶ್ರೀ ಎ. ಶಂಕರ್ ಆಳ್ವ.—ಅಲ್ಲಿ ಎಲ್ಲಾ ವ್ಯವಸಾಯ ಗಾರರು.

ಶ್ರೀ ಎಚ್. ಡಿ. ದೇವೇಗೌಡ.—ವೆರಿಫೈ ಮಾಡಿಸುತ್ತೇನೆ, ಮುಂದೆ ಪ್ರಿವಿಲೇಜ್ ಮೋಷನ್ ಬರಬೇಕೋ ಏನೋ ನೋಡೋಣ ? ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ 18 ಲಕ್ಷ ರೂಪಾಯಿ ಕೊಟ್ಟಿದ್ದಾರೆಂದು ಕೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.— 5 ಲಕ್ಷ.

ಶ್ರೀ ಎಚ್. ಡಿ. ದೇವೇಗೌಡ.—ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಮಂಗ ಳೂರು ಫರ್ಟಿಲೈಸರ್ಸ್‌ಗೆ 100 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಶ್ರೀಮಾನ್ ಸಿದ್ದವೀರಪ್ಪನವರ ಸಕ್ಕರೆ ಕಂಪನಿಗೆ ಎಷ್ಟು ಕೊಟ್ಟಿದ್ದಾರೆ ?

ಶ್ರೀ ಕೆ. ಎಚ್. ಪಾಟೀಲ್.—ಸಹಕಾರ ಸಂಘ ಯಾರದೇ ಇರಲಿ, ಶ್ರೀಮಾನ್ ದೇವೇಗೌಡರದೇ ಆಗಲಿ, ಕೆ. ಎಚ್. ಪಾಟೀಲರದೇ ಆಗಲಿ, ಸಿದ್ದವೀರಪ್ಪನವರದೇ ಆಗಲಿ, ಇವೊತ್ತು ನಾವು ಇರಬಹುದು ನಾಳೆ ನೀವು ಇರಬಹುದು. ಸಹಕಾರಸಂಘ, ಸಹಕಾರ ಸಂಘವೇ ಎಂದು ದಯ ವಿಟ್ಟು ತಿಳಿದುಕೊಂಡು ಅರ್ಥಮಾಡಿಕೊಳ್ಳಿ.

ಶ್ರೀ ಎ. ಶಂಕರ ಆಳ್ವ.—ದಾವಣಗೆರೆ, ಚಿತ್ರದುರ್ಗ ಎಲ್ಲಾ ಸಿದ್ದವೀರಪ್ಪನವರದೇ ಎಂದು ಹೇಳಬೇಡಿ.

ಶ್ರೀ ಎಚ್. ಡಿ. ದೇವೇಗೌಡ.- ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಬಂಡವಾಳ ಇರುವುದೇ ಎರಡು ಕೋಟಿ ರೂಪಾಯಿ ಇದ್ದರೆ 100 ಲಕ್ಷ ರೂಪಾಯಿ ಮಂಗಳೂರು ಫರ್ಟಿಲೈಸರ್ಸ್‌ಗೆ ಕೊಟ್ಟು, ದಾವಣಗೆರೆ ಸಕ್ಕರೆ ಕಂಪನಿಗೆ 15 ಲಕ್ಷ ರೂಪಾಯಿ ಇನ್ನಾವುದೋ ಒಂದಕ್ಕೆ 15 ಲಕ್ಷ ರೂಪಾಯಿ ಕೊಟ್ಟು ಉಳಿದ 50-60 ಲಕ್ಷ ರೂಪಾಯಿಗಳಲ್ಲಿ ಒಂದು ಸಂಸ್ಥೆ ವ್ಯವಹಾರ ನಡೆಸಬೇಕು. ಏತಕ್ಕೆ ಹೇಳುತ್ತೇನೆ ಎಂದರೆ ಈ ದಿವಸ ಅಧಿಕಾರ ದುರುಪಯೋಗ ಹೇಗೆ ಆಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಡೈರೆಕ್ಟರ್ ಕೇವಲ ಕಾನೂನು ಪ್ರಕಾರ ಮಾಡಿರುವುದು. ತಾವು ತಪ್ಪು ತಿಳಿದುಕೊಂಡಿದ್ದರೆ, ಮೇಲ್ಮನೆಯಲ್ಲೂ ಹೇಳಿದ್ದೇನೆ ಇಲ್ಲೂ ಹೇಳಿದ್ದೇನೆ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಒಂದೊಂದು ಅಗ್ರೋ ಬೇಸ್ಡ್ ಇಂಡಸ್ಟ್ರೀಸ್ ಮಾಡಲೇಬೇಕು ಎಂದು ನಿರ್ದಿಷ್ಟವಾಗಿ ಸಲಹೆ ಮಾಡಿದ್ದೇನೆ. ಸಹಕಾರ ಸಂಘಗಳು ತಾವೂ ಮಾಡಬೇಕು ಎಂದು ಮುಂದೆ ಬಂದರೆ ಮಾಡಬಹುದು. ದೇವೇಗೌಡರ ನೇತೃತ್ವದಲ್ಲಿ ಜಾಯಿಂಟ್ ಸ್ಟಾಕ್ ಕಂಪನಿ ಮಾಡಿಕೊಂಡು ಮಾಡಿದರೂ ಆಗಬಹುದು ಏನು ತಪ್ಪು ?

ಶ್ರೀ ಎಚ್. ಡಿ. ದೇವೇಗೌಡ.—ಈಗ ನಾನು ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ನೀವು ಅದರಲ್ಲಿ ಇನ್‌ವೆಸ್ಟ್‌ಮೆಂಟ್ ಹಾಕುವುದಕ್ಕೆ ನನ್ನ ತಕರಾರು ಇಲ್ಲ. ಬೇರೆ ಜಿಲ್ಲೆಯೊಳಗೆ ಸಕ್ಕರೆ ಕಾರ್ಖಾನೆಯನ್ನು ಓಪನ್ ಮಾಡುವುದಕ್ಕೆ ಅಲ್ಲಿನ ಜನರು ಮುಂದೆ ಬಂದರೆ ಅವರಿಗೂ ಸಹಾಯ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಅವರೂ ಸಹ ಒಂದು ಕೋ-ಆಪರೇಟೀವ್ ಫಾರಂ ಮಾಡಿಕೊಂಡು ಅದು ಚೆನ್ನಾಗಿ ಕೆಲಸ ಮಾಡಿದರೆ ಅವರು ಸಹಾಯ ಬೇಕು ಎಂದು ಅಪೇಕ್ಷೆ ಪಟ್ಟು ಮುಂದೆ ಬಂದರೆ ಅವರಿಗೂ ಅವಶ್ಯವಾಗಿ ಸಹಾಯ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಈಗ ಏನು ಒಂದು ಆಶ್ವಾಸನೆ ಕೊಟ್ಟಿರೋ, ಅವಶ್ಯವಾಗಿ ಸಹಾಯ ಮಾಡುತ್ತೇವೆ ಎಂದು ಏನು ಹೇಳಿದರೋ ಅದನ್ನು ಕಾರ್ಯರೂಪಕ್ಕೆ ತರುತ್ತೀರಾ ? ಈ ಬಗ್ಗೆ ಸಂದರ್ಭ ಬಂದಾಗ ಹೇಳುತ್ತೇನೆ. ಈಗ ಹಾಸನದಲ್ಲಿ ಒಂದು ಷುಗರ್ ಫ್ಯಾಕ್ಟರಿ ಮಾಡುತ್ತೇವೆ ಎಂದು ಅಲ್ಲಿನ ಜನ ಮುಂದೆ ಬಂದರೆ ತಾವು ಅಗ್ರೋ ಇಂಡಸ್ಟ್ರೀಸ್ ಮುಖಾಂತರ ಅವರಿಗೆ ಸಹಾಯ ಮಾಡುತ್ತೇವೆ ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.— ಅಲ್ಲಿ ಕೊಟ್ಟಿದ್ದಾರೆ, ಇಲ್ಲಿ ಕೊಟ್ಟಿದ್ದಾರೆ ಎಂದು ಏನು ಹೇಳುತ್ತೀರೋ ಆ ರೀತಿ ನೀವೂ ಕೂಡ ಒಂದು ಸೊಸೈಟಿ ಮಾಡಿಕೊಂಡು, ನೀವು ಬಂಡವಾಳ ಹಾಕಿ ಆ ಕಾರ್ಖಾನೆ ಚೆನ್ನಾಗಿ ನಡೆಸುವುದಾದರೆ ಅದಕ್ಕಿಂತಲೂ ಜಾಸ್ತಿ ಸಹಾಯ ಕೊಡುತ್ತೇವೆ. ಈ ರೀತಿಯಾಗಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಚೆನ್ನಾಗಿ ಕೆಲಸ ಮಾಡುತ್ತಾ ಇರುವುದರಿಂದ ರಾಜ್ಯ ಸರ್ಕಾರದಿಂದಲೂ ಸಹಾಯ ಪಡೆಯುತ್ತಾರೆ, ಮತ್ತು ಸೆಂಟರ್‌ನಿಂದಲೂ ಸಹಾಯ ಪಡೆಯುತ್ತಾರೆ. ಇದು ರೊಟೀನ್ ಆಗುತ್ತಾ ಇರುತ್ತದೆ. ರಾಜ್ಯದ 19 ಜಿಲ್ಲೆಯೊಳಗೂ 19 ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾದರೆ ಎಷ್ಟೋ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆವಾಗ ನಿಮ್ಮ ಬೇಡಿಕೆಗಳನ್ನು ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲಾ, ಅಂಥಾ ಸಮಯದಲ್ಲಿ ನಾವೂ ಕೂಡ ಸಾಲ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇನ್ನು ಕಟ್ಟಡಗಳ ಕನ್‌ಸ್ಟ್ರಕ್ಷನ್ ಬಗ್ಗೆ ಹೇಳುವುದಾದರೆ ಇದು ಕಾನೂನಿನ ಚೌಕಟ್ಟಿನೊಳಗೆ ನಡೆಯುತ್ತಾ ಇದೆಯೋ ಇಲ್ಲವೋ ಎನ್ನುವುದನ್ನು ತಿಳಿಸಬೇಕು. ಏತಕ್ಕೆಂದರೆ ಲಕ್ಷಾಂತರ ರೂಪಾಯಿಗಳನ್ನು ಹಾಕಿ ಕಟ್ಟಡಗಳನ್ನು ಕಟ್ಟುತ್ತಾ ಇರತಕ್ಕಂಥ ಕಾಲದಲ್ಲಿ ಟೆಂಡರ್ ಕರೆದಿದ್ದರೂ ಸಹ ಸಾಕಷ್ಟು ಕೆಲಸ ನಡೆಯುತ್ತಾ ಇಲ್ಲ. ಅದರ ಬಗ್ಗೆ ವಿವರಣೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ರೀತಿಯಾಗಿ ಇನ್ನೂ ಹಲವಾರು ಸಂಸ್ಥೆಗಳ ಬಗ್ಗೆ ಆರೋಪಣೆಗಳು ಇವೆ.

ಮೊದಲನೆಯದಾಗಿ ಕೃಷ್ಣಾ ಡೈರಿ ಬಗ್ಗೆ ತೆಗೆದುಕೊಂಡರೆ ಈ ಬಗ್ಗೆ ಬೇಕಾದಷ್ಟು ಆರೋಪಣೆಗಳು ಇವೆ. ಈ ಕೃಷ್ಣಾ ಡೈರಿ ಒಂದಾನೊಂದು ಕಾಲದಲ್ಲಿ ಇದು ಮುಚ್ಚುವ ಸ್ಥಿತಿಗೆ ಬಂದಿತ್ತು. ಅಂಥಾ ಸಂದರ್ಭದಲ್ಲಿ ಶ್ರೀಮಾನ್ ಧರ್ಮವೀರರ ಕಾಲದಲ್ಲಿ ಇವರಿಗೆ 5 ಲಕ್ಷ ರೂಪಾಯಿಗಳ ಸಹಾಯ ಕೊಟ್ಟು ಇದನ್ನು ಸಹಕಾರೀ ಫೋಲ್ಡಿಂಗ್‌ಗೆ ತೆಗೆದುಕೊಂಡರು. ಈವೊತ್ತು ಈ ಒಂದು ಖಾಸಗಿ ಸಂಸ್ಥೆ ಏನು ಇದೆ, ನಷ್ಟಕ್ಕೆ ಒಳಗಾಗುವಂಥ ಈ ಸಂಸ್ಥೆಗೆ ಕೋ-ಆಪರೇಷನ್ ಇಲಾಖೆಯವರು ಏತಕ್ಕೆ ಕೈಹಾಕಿದರು ? ಇದರ ಹಿನ್ನೆಲೆಗೆ ಕಾರಣ ಏನು ? ಈ ಬಗ್ಗೆ ಪೂರ್ಣವಾದ

ವಿವರಗಳನ್ನು ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಈವೊತ್ತು ಈ ಒಂದು ಸಂಸ್ಥೆಗೆ 5 ಲಕ್ಷ ರೂಪಾಯಿಗಳನ್ನು ಏನು ಕೊಟ್ಟಿದ್ದಾರೋ ಅದಕ್ಕೆ ಆ ಡ್ಯೈರಿಯಲ್ಲಿರುವ ಪದಾರ್ಥಗಳು ಅಷ್ಟು ಬಾಳುತ್ತದೋ ಇಲ್ಲವೋ ಎನ್ನುವುದನ್ನು ವ್ಯಾಲ್ಯೂಯೇಷನ್ ಮಾಡಿಸಿದ್ದೀರಾ ? ಅವರಿಗೆ ಮೆಷಿನರಿ ಪರ್ಚೇಸ್ ಮಾಡುವುದಕ್ಕೆ ಯಾರು ಅಡ್ವೈಸ್ ಮಾಡಿದರು ? ಇದರ ವಿವರಣೆಯನ್ನು ತಿಳಿಸಬೇಕು.

ಶ್ರೀ ಕೆ. ಎಚ್. ಪಾಟೀಲ್.—ತಾವು ಹೇಳತಕ್ಕಂಥ ಸಂಸ್ಥೆಗೆ ಯಾವ ಕಾರಣದಿಂದ ಸಹಾಯ ನೀಡಿದ್ದಾರೆ ಎಂದರೆ ಆ ಸಂದರ್ಭದಲ್ಲಿ ಧರ್ಮವೀರರೇ ಇರಲಿ, ವೀರೇಂದ್ರ ಪಾಟೀಲರೇ ಇರಲಿ, ಯಾರೇ ಇರಲಿ ಸಹಕಾರಿ ಸಂಸ್ಥೆಗಳು ಹೊಸದಾಗಿ ಪ್ರಾರಂಭವಾದಾಗ ಮೆಷಿನರಿ ಮತ್ತು ಪಾತ್ರೆಗಳನ್ನು ಕೊಂಡುಕೊಳ್ಳುವುದಕ್ಕೆ ಧನಸಹಾಯವನ್ನು ಕೇಳುವುದು ಸೂಕ್ತ. ಆದರೆ ಅವರು ನಿರ್ದಿಷ್ಟವಾಗಿ ಯಾವುದು ಏನು ಎಂದು ಹೇಳಲಿಲ್ಲಾ. ಮಾನ್ಯ ಅಪೋಸಿಷನ್ ಲೀಡರ್ ಅವರು ಈ ಬಗ್ಗೆ ಏನಾದರೂ ಶಂಕೆ ಇದ್ದರೆ ಹೇಳಬಹುದು. ಇದಕ್ಕೆ ಸಹಾಯ ಕೊಟ್ಟಿರುವವರು ಎನ್. ಸಿ. ಡಿ. ಸಿ. ಯವರು. ಅಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ಎನ್. ಸಿ. ಡಿ. ಸಿ. ಯವರಾದರೂ ಕೊಡಲಿ, ಸ್ಮಾಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜನ್ಸಿಯವರಾದರೂ ಕೊಡಲಿ, ವರ್ಲ್ಡ್ ಬ್ಯಾಂಕಿನವರಾದರೂ ಕೊಡಲಿ ಆದರೆ ಇದಕ್ಕೆ ವಿತರಣೆ ಯಾವರೀತಿಯಾಗುತ್ತದೆ ಎನ್ನುವುದು ಮುಖ್ಯ. ಈವೊತ್ತು ವರ್ಲ್ಡ್ ಬ್ಯಾಂಕ್‌ನಿಂದ ಹಣ ಪಡೆಯಬಹುದು. ಆದರೆ ಅದರಿಂದ ಪಡೆಯತಕ್ಕಂಥ ಹಣ ಸದ್ವಿನಿಯೋಗವಾಗುತ್ತದೆಯೇ, ದುರ್ವಿನಿಯೋಗವಾಗುತ್ತದೆಯೇ ಎನ್ನುವುದು ಮುಖ್ಯ. ಈವೊತ್ತು ಈ ಖಾಸಗೀ ಡ್ಯೈರಿಗೆ ಸಾಮಾನುಗಳನ್ನು ಪರ್ಚೇಸ್ ಮಾಡುವುದಕ್ಕೆ ವೆಚ್ಚ ಮಾಡಿರತಕ್ಕಂಥ ಹಣ ಸದುಪಯೋಗವಾಗದೆ ದುರುಪಯೋಗವಾಗಿದೆ. ಇದಕ್ಕೆ ವಿವರಣೆಯನ್ನು ಕೊಡಬೇಕು. ಇದಕ್ಕೆ ಹಳೇ ಮಿಷನರಿಗಳನ್ನು ಪರ್ಚೇಷ್ ಮಾಡುವುದಕ್ಕೆ ನಿಮ್ಮ ಇಲಾಖೆಯವರು ಸರ್ಟಿಫಿಕೇಟ್ ಕೊಟ್ಟಿದ್ದಾರೆಯೇ ? ಕೊಟ್ಟಿದ್ದರೆ ಯಾರು ಬಂದು ಇದರ ವ್ಯಾಲ್ಯೂಯೇಷನ್ ಮಾಡಿದ್ದಾರೆ ? ಇದರ ವಿವರಗಳನ್ನೂ ಕೂಡ ಒದಗಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈವೊತ್ತು ನಾನು ತಮ್ಮ ಮೇಲೆ ಆರೋಪಣೆ ಮಾಡುವಾಗ ನಿರಾಧಾರವಾದ ಆರೋಪಣೆ ಮಾಡುವುದು ಉಚಿತವಲ್ಲ; ಅದು ಯೋಗ್ಯವೂ ಅಲ್ಲ. ಅದಕ್ಕಾಗಿ ನಾನು ಈ ವಿವರಗಳನ್ನು ಕೇಳಿದ್ದೇನೆ, ಅದನ್ನು ಒದಗಿಸಬೇಕೆಂದು ನಾನು ಮತ್ತೊಮ್ಮೆ ತಮ್ಮನ್ನು ಒತ್ತಾಯ ಮಾಡುತ್ತೇನೆ.

ಇನ್ನು ಹುಲಕೋಟಿ ಕ್ಯಾಟಲ್‌ಫೀಡ್ ಸೊಸೈಟಿ ಇದರ ಬಗ್ಗೆ ವಿವರಣೆ ಬೇಕು. ಈವೊತ್ತು ಅದಕ್ಕೆ ಅಪೆಕ್ಸ್ ಇನ್ಸ್ಟಿಟ್ಯೂಷನ್‌ನಿಂದ ಸುಮಾರು 10 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ ಮತ್ತು ಫೈನಾನ್ಸ್ ಕಾರ್ಪೋರೇಷನ್ನಿನಿಂದ ಹಣ ಪಡೆದಿದ್ದಾರೆ. ನನಗೆ ಅದರ ವಿವರಣೆಯೂ ಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕಾಗಿಯೇ ಒಬ್ಬರನ್ನು ನೇಮಿಸಿಬಿಡೋಣ.

Sri H. D. DEVE GOWDA.—As the Chairman of the Public Accounts committee I will visit all the institutions and enquire the whole matter. I have got the right. Nobody can prevent me.

ಇನ್ನು ಗದಗ್ ಕಾಟನ್ ಸೇಲ್ಸ್ ಸೊಸೈಟಿ ವಿಚಾರ ಇವರ ಬಗ್ಗೆ ಈವೊತ್ತು ಸಾಕಷ್ಟು ಅಪಾದನೆಗಳು ಇವೆ. ಆ ಸೊಸೈಟಿ ಬಗ್ಗೆ ತಾವು ಉತ್ತರ ಕೊಡಬೇಕು. ಏತಕ್ಕೆಂದರೆ ಕೆ. ಸಿ. ಸಿ. ಬ್ಯಾಂಕ್‌ಗೆ 30 ಲಕ್ಷ ರೂಪಾಯಿಗಳಷ್ಟು ಬಾಕಿ ಇತ್ತು. ಈವೊತ್ತು ಅದು 15 ಲಕ್ಷಕ್ಕೋ, 12 ಲಕ್ಷಕ್ಕೋ ಅಥವಾ 8 ಲಕ್ಷಕ್ಕೋ ಇಳಿದಿರಬಹುದು. ಆದರೆ ಈವೊತ್ತಿನ ದಿವಸ ಇದರಲ್ಲಿ ಎಷ್ಟು ಬಾಕಿ ಇದೆ ಎನ್ನುವ ವಿವರಣೆ ಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಆಹಾರ ವಿತರಣೆ ಸಂಬಂಧವಾಗಿ ಹೇಳುವುದಾದರೆ ಈ ಸಂಸ್ಥೆಗೆ 5 ಲಕ್ಷ ರೂಪಾಯಿ ಏನು ಕೊಟ್ಟಿದ್ದೀರೋ ಅದರ ಬಗ್ಗೆ ಏನು ಬಾಕಿ ಇದೆ; ಎಷ್ಟು ವಸೂಲಾತಿ ಆಗಿದೆ ಎನ್ನುವ ವಿವರಣೆಯನ್ನೂ ಕೂಡ ಕೊಡಬೇಕೆಂದು ಕೇಳಲು ಇಚ್ಛೆಪಡುತ್ತೇನೆ.

ಇನ್ನು ಫರ್ಟಿಲೈಸರ್ಸ್ ಡೀಲರ್ಸ್‌ಗಾಗಿ ಈ ಸಂಸ್ಥೆಗೆ 4 ಲಕ್ಷ ರೂಪಾಯಿ ಏನು ಕೊಟ್ಟಿದ್ದೀರೋ ಅದರ ವಿವರಣೆಯೂ ಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಇನ್ನು ಆಯಿಲ್ ಸೀಡ್ಸ್ ಪ್ರೊಸೆಸಿಂಗ್ ಕೋಆಪರೇಟೀವ್ ಸೊಸೈಟಿಗೆ ಸರ್ಕಾರದವರು 5 ಲಕ್ಷ ರೂಪಾಯಿ ಬಂಡವಾಳ ಹೂಡಿದ್ದಾರೆ. ಈವೊತ್ತಿನ ದಿವಸ ಸರ್ಕಾರದವರು 2 ಲಕ್ಷಕಿಂತ

(SRI H. D. DEVE GOWDA)

ಹೆಚ್ಚಿಗೆ ಬಂಡವಾಳ ಹೂಡಿರುವ ಕಡೆ ಸರ್ಕಾರದ ನಾಮಿನೇಟೆಡ್ ಮೆಂಬರ್ಸ್ ಇರುತ್ತಾರೆ. ಅಂಥಾದ್ದರಲ್ಲಿ ಕೆಲವು ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಲಿಲ್ಲ ಎಂದು ಸೂಪರ್‌ಸೀಡ್ ಮಾಡುತ್ತೀರಿ. ಇದಕ್ಕೆ 50 ಲಕ್ಷ ರೂಪಾಯಿ ಬಂಡವಾಳವನ್ನು ಏನು ಹೂಡಿದ್ದೀರೋ ಅದು ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆ? ಅದರ ವಿವರಣೆಯನ್ನು ಕೂಡ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಇದನ್ನು ಶ್ರೀಮಾನ್ ವೀರೇಂದ್ರ ಪಾಟೀಲರ ಕಾಲದಲ್ಲಿ ಕೊಟ್ಟಿದ್ದು.

ಶ್ರೀ ಎಚ್. ಡಿ. ದೇವೇಗೌಡ.—ಯಾರ ಕಾಲದಲ್ಲೇ ಕೊಟ್ಟಿರಲಿ. ಸೆಕ್ಷನ್ 54ರ ಪ್ರಕಾರ ಈಗ ಆ ಸಂಸ್ಥೆಯನ್ನು ತಾವು ವಾಪಸ್ಸು ತೆಗೆದುಕೊಂಡಿದ್ದೀರಿ. ನಿಮ್ಮ ವಶದಲ್ಲೇ ಇದೆ. ಅದೇರೀತಿ ಧಾರವಾಡ ಜಿಲ್ಲೆಯಲ್ಲಿ ಕೂಡ ನಿಮ್ಮ ಕಂಪನಿ ಒಂದಿದೆ. ಈ ಎರಡರ ಬಗ್ಗೆಯೂ ವಿವರಗಳನ್ನು ಒದಗಿಸಿ ಕೊಡಿ. ಮತ್ತು ಅದು ಪಿ. ಎಂ. ನಾಡಗೌಡರ ಕಂಪನಿಯೇ ಆಗಿರಲಿ, ಶ್ರೀಮಾನ್ ಕೆ. ಎಚ್. ಪಾಟೀಲರ ಕಂಪನಿಯೇ ಆಗಿರಲಿ ಯಾರದೇ ಇರಲಿ ಆ ಬಗ್ಗೆ ವಿಚಾರಣೆ ನಡೆಯಲಿ. ಶ್ರೀ ನಾಡಗೌಡರ ರಕ್ಷಣೆಯಿಂದ ಏನೇನು ನಡೆದುಕೊಂಡು ಬಂದಿದೆ ಅದರ ಬಗ್ಗೆಯೂ ವಿಚಾರಣೆಯಾಗಲಿ. ಶ್ರೀ ಕೆ. ಎಚ್. ಪಾಟೀಲ್ ಕಂಪನಿಯಿಂದ ಏನು ನಡೆದುಕೊಂಡು ಬಂದಿದೆ. ಅವುಗಳ ಬಗ್ಗೆಯೂ ವಿಚಾರಣೆಯಾಗಲಿ. ರೆಡ್ಡಿ ಕೋ-ಆಪರೇಟಿವ್ ಬ್ಯಾಂಕ್,......

5-00 P.M.

ಶ್ರೀ ಕೆ. ಎಚ್. ಪಾಟೀಲ್.—ಅವರ ಮಾತನ್ನು ಏಕೆ ಹೇಳುತ್ತೀರಿ? ಅವರೇನಾದರೂ ಸಾಲ ಕೇಳಿದ್ದಾರೆಯೇ, ಸಹಾಯ ಧನ ಕೇಳಿದ್ದಾರೆಯೇ? ಯಾವುದಾದರೂ ಸಂಸ್ಥೆ ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ಅದರ ಬಗ್ಗೆ ಮಾನ್ಯ ಸದಸ್ಯರು ಏಕೆ ಹೇಳಬೇಕು? ನಾನೂ ಬಹಳ ದಿವಸ ಅದರ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದೆ.

ಶ್ರೀ ಎಚ್. ಡಿ. ದೇವೇಗೌಡ.—ಉದಾಹರಣೆಗೆ ವೈಶ್ಯ ಬ್ಯಾಂಕ್ ಇದೆ. ಅದನ್ನು ಕೆಲವು ಕಮ್ಯೂನಿಟಿಯವರು ನಡೆಸಿಕೊಂಡು ಹೋಗುತ್ತಿದ್ದಾರೆ. ಅವರು ಏನಾದರೂ ತಪ್ಪು ಮಾಡಿದರೆ ಅದನ್ನು ಕೇಳಲಿಕ್ಕೆ ಸರ್ಕಾರಕ್ಕೆ ಅಧಿಕಾರವಿಲ್ಲವೇ?

ಶ್ರೀ ಎ. ಶಂಕರ ಆಳ್ವ.—ಅಧಿಕಾರ ಉಂಟು.

ಶ್ರೀ ಕೆ. ಪುಟ್ಟಸ್ವಾಮಿ.—ರೆಡ್ಡಿ ಕೋ-ಆಪರೇಟಿವ್ ಬ್ಯಾಂಕ್ ವಿಚಾರ ಏನು ಎಂದು ಅಸೆಂಬ್ಲಿಯಲ್ಲಿ ಎತ್ತುವುದಕ್ಕೆ ಅಧಿಕಾರವಿದೆ. ಆದರೆ ನಿಮ್ಮ ಹತ್ತಿರ ಯಾವುದಾದರೂ ಸ್ಪಷ್ಟವಾದ ಆರೋಪಣೆ ಇದ್ದರೆ ಹೇಳಿ.

ಶ್ರೀ ಎಚ್. ಡಿ. ದೇವೇಗೌಡ.—ಬ್ಯಾಂಕಿನಿಂದ ಕೆಲವರು ಹಣವನ್ನು ತೆಗೆದುಕೊಂಡಿದ್ದಾರೆ. ಆ ಹಣ ಮರುಪಾವತಿಯಾಗಿದೆಯೇ? ಅವಾರ್ಡ್ ಪಾಸಾಗಿದ್ದರೂ ಎಷ್ಟು ಹಣ ಮರುಪಾವತಿ ಮಾಡಿದ್ದಾರೆ ಎನ್ನುವುದರ ಬಗ್ಗೆ ವಿವರಣೆ ಕೊಡಬೇಕು. ನಾನು ಆ ವ್ಯಕ್ತಿಯ ಹೆಸರನ್ನು ಹೇಳುವುದಿಲ್ಲ. 90 ಸಾವಿರ, 95 ಸಾವಿರಕ್ಕೆ ಅವಾರ್ಡ್ ಪಾಸಾಗಿರತಕ್ಕದ್ದು ಇದೆ. ಬ್ಯಾಂಕಿನವರು ಸಾಲ ಕೊಡುವಾಗ ಕಾಯಿದೆಯನ್ನು ಅನುಸರಿಸಿ ಕೊಟ್ಟಿದ್ದಾರೆಯೇ, ಹೇಗೆ ಕೊಟ್ಟಿದ್ದಾರೆ? ಸೆಕ್ಯೂರಿಟಿ ಇಟ್ಟುಕೊಂಡು ಕೊಟ್ಟಿದ್ದಾರೆಯೇ ಹೇಗೆ ಎನ್ನುವುದರ ಬಗ್ಗೆ ಮತ್ತು ಎಷ್ಟು ಹಣಕ್ಕೆ ಅವಾರ್ಡ್ ಪಾಸಾಗಿ ಡಿಕ್ರಿ ಆಗಿದೆ, ಹಣ ವಸೂಲಾಗಿದೆಯೇ ಎನ್ನುವುದರ ಬಗ್ಗೆ ವಿವರ ಕೊಡಬೇಕು.

ನಾನು ಆಪಾದನೆ ಮಾಡುವಾಗ ಅಷ್ಟೊಂದು ಲಘುವಾಗಿ ಮಾಡುತ್ತಿಲ್ಲ. ಗದಗ್ ಕೋ-ಆಪರೇಟಿವ್ ಕಾಟನ್ ಮಿಲ್ಸ್ ಸೊಸೈಟಿ, ಕೃಷ್ಣ ಡೈರಿ, ಸೀಡ್ಸ್ ಪ್ರೊಸೆಸಿಂಗ್ ಕೋ-ಆಪರೇಟಿವ್ ಸೊಸೈಟಿ, ಟೆಕ್ಸ್‌ಟೈಲ್ ಸೊಸೈಟಿ ಇವುಗಳ ಬಗ್ಗೆ ವಿಚಾರಣೆಯಾಗಬೇಕಾಗಿದೆ. ನಾನು ಏನೇನು ಆಪಾದನೆ ಮಾಡಿದ್ದೇನೆ ಅದರ ಬಗ್ಗೆ ವಿವರಣೆಯನ್ನು ಸಭೆಗೆ ಕೊಡುತ್ತೇನೆ. ಶ್ರೀ ಕೆ. ಎಚ್. ಪಾಟೀಲರು ಆಪಾದನೆಯಿಂದ ವಿಮುಕ್ತಿಗೊಂಡರೆ ನಾವೆಲ್ಲರೂ ಸೇರಿ ಭೇಷ್ ಎಂದು ಹೇಳೋಣ. ಆದರೆ ಒಂದು ವೇಳೆ ಆಪಾದನೆ ರುಜುವಾತಾದರೆ ತಪ್ಪನ್ನು ಅವರು ಒಪ್ಪಿಕೊಳ್ಳಬೇಕಾಗುತ್ತದೆ.

ಕೊನೆಯದಾಗಿ ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಂತ್ರಿಗಳು ಈ ಇಲಾಖೆಯ ಆಡಳಿತವನ್ನು ಮುಂದುವರಿಸಿಕೊಂಡು ಹೋಗತಕ್ಕ ಕಾಲದಲ್ಲಿ ಪಕ್ಷಾತೀತ ಆಡಳಿತ

ವನ್ನು ಮಾಡಿ ಇಲಾಖೆಯು ಸರ್ವತೋಮುಖವಾದ ಅಭ್ಯುದಯಕ್ಕೆ ಕಾರಣಕರ್ತರಾಗಬೇಕು. ಕೇವಲ ರಾಜಕೀಯ ಒತ್ತಡಕ್ಕೆ ಮಣಿದು ಕೆಲವರನ್ನು ಮಾತ್ರ ತಮ್ಮ ಅಧಿಕಾರದ ಕತ್ತಿಯಲ್ಲಿ ವಧೆ ಮಾಡುವುದು ಯೋಗ್ಯವಲ್ಲ, ಭೂಷಣವಲ್ಲ ಎನ್ನುವ ಮಾತನ್ನು ಹೇಳಿ, ಈ ಸಹಕಾರಿ ಇಲಾಖೆಯ ಬೇಡಿಕೆಗಳನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎನ್. ವೀರಪ್ಪ ಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈ ಹೊತ್ತು ಸಹಕಾರ ಇಲಾಖೆಗೆ ಸಂಬಂಧಪಟ್ಟ ಡಿಮಾಂಡ್ ಬಂದಿದೆ. ಅದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಸಹಕಾರ ಸಂಸ್ಥೆಗಳು ನಮ್ಮ ದೇಶದಲ್ಲಿ ಸಾಕಷ್ಟು ಕೆಲಸ ಮಾಡತಕ್ಕ ಅವಕಾಶವಿದೆ. ಮಾನ್ಯ ದೇವೇ ಗೌಡರು ಹೇಳಿದ ಹಾಗೆ ಅತಿ ಒಳ್ಳೆಯವರು ಎಂದು ಹೇಳತಕ್ಕ ನಮ್ಮ ಸಹಕಾರ ಮಂತ್ರಿಗಳಿದ್ದಾರೆ, ಒಳ್ಳೆಯವರು ಎಂದು ಹೇಳತಕ್ಕ ರಿಜಿಸ್ಟ್ರಾರ್ ಅವರಿದ್ದಾರೆ. ಅತಿ ಒಳ್ಳೆಯವರು ಬಂದರೆ ಬಹುಶ: ತಮ್ಮೆಲ್ಲರಿಗೂ ಅರ್ಥವಾಗಿದೆ. ಹೇಳಿದ್ದಕ್ಕೆಲ್ಲ. ಹೂ. ಎನ್ನುವ ಅಭ್ಯಾಸ. ಯಾರ ಮನಸ್ಸನ್ನೂ ನೋಯಿಸಬಾರದು ಎನ್ನುವ ಅಭ್ಯಾಸ. ಇಂಥ ಅಭ್ಯಾಸವಿದ್ದರೆ ಆಡಳಿತ ನಡೆಯುವುದು ಸ್ವಲ್ಪ ಕಷ್ಟ. ಜೊತೆಗೆ ತಮ್ಮ ಇಲಾಖೆ ತಾವೇ ಹಿಡಿದು ನಡೆಸತಕ್ಕ ಧೈರ್ಯ ಬೇಕಾಗುತ್ತದೆ.

ಕೋ ಆಪರೇಟಿವ್ ಇನ್‌ಸ್ಟಿಟ್ಯೂಷನ್ಸ್ ಇದೇ ರೀತಿ ಇಟ್ಟುಕೊಂಡು, ಸಾಕಷ್ಟು ಅಧಿಕಾರಿಗಳನ್ನು ನೇಮಿಸಿಕೊಂಡು ಹೋಗುವುದರಿಂದ ಅನುಕೂಲವಾಗುವುದಿಲ್ಲವೆನ್ನುವ ಅನುಭವವನ್ನು ನಾನು ಈ ಸಭೆಯ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. 1949ನೇ ಇಸವಿಯಿಂದ ಎಲ್ಲ ಸೊಸೈಟಿಗಳಲ್ಲಿ ಕೂಡ ಪ್ರೆಸಿಡೆಂಟ್ ಆಗಿ ಕೆಲಸ ಮಾಡಿದ್ದೇನೆ. ಸ್ಟೇಟ್ ಬ್ಯಾಂಕ್ ಡೈರೆಕ್ಟರಾಗಿ ಕೆಲಸ ಮಾಡಿದ್ದೇನೆ, ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ ಕೆಲಸ ಮಾಡಿದ್ದೇನೆ. ಅಲ್ಲಿ ಡೈರೆಕ್ಟರಾಗಿದ್ದರೂ ಕೂಡ ನನಗೆ ಕಂಡದ್ದನ್ನು ಯೋಚನೆ ಇಲ್ಲದ ಹಾಗೆ ವಿರೋಧಿಸಿ ಆ ಬಗ್ಗೆ ರಿಕಾರ್ಡ್ ಕೂಡ ಮಾಡಿಸಿದ್ದೇನೆ. ಈಗ ಇರತಕ್ಕ ರಿಜಿಸ್ಟ್ರಾರ್ ಅವರ ಬಗ್ಗೆ ಮಾನ್ಯ ದೇವೇ ಗೌಡರು ಹೇಳಿರುವುದಕ್ಕಿಂತ ಹೆಚ್ಚಾಗಿ ಹೇಳಬಲ್ಲೆ. ಕೋ ಆಪರೇಟಿವ್ ಡಿಪಾರ್ಟ್‌ಮೆಂಟಿಗೆ ಅದೃಷ್ಟವಶಾತ ಇಂಥವರೊಬ್ಬರು ಸಿಕ್ಕಿದ್ದಾರೆ ಆದರೆ ಎಷ್ಟೋ ಜನ ಫೋನ್ ಮಾಡಿ ಅವರನ್ನು ಚಲಾಯಿಸಬೇಕು ಎನ್ನುತ್ತಾರೆಂದು ಕೇಳಿ ನನಗೆ ಅನುಮಾನಕ್ಕೆ ಬರುತ್ತದೆ. ಸಾಲ ವಸೂಲು ಮಾಡುವುದಕ್ಕೆ ಹೋದರೆ ಸದ್ಯಕ್ಕೆ ನಿಲ್ಲಿಸು ಎಂದು ಹೇಳುವ ಮಟ್ಟದಲ್ಲಿ ಈ ಹೊತ್ತು ಆಡಳಿತ ನಡೆಯುತ್ತಿದೆ. ಇದಕ್ಕೆಲ್ಲ ಅವಕಾಶವಿಲ್ಲದೆ ಸರಿಯಾಗಿ ನಡೆಯಬೇಕು. ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆಯುತ್ತಿದೆ, ರೈತರ ಆಗುಹೋಗುಗಳು ಅವರ ಮೇಲೇ ಅವಲಂಬಿಸಿದೆ ಎಂದು ಇದ್ದರೆ ಅದನ್ನು ಸರಿಯಾದ ವ್ಯವಸ್ಥೆಯಲ್ಲಿ ಮಾಡತಕ್ಕದ್ದು ಬಹಳ ಒಳ್ಳೆಯದು. ನನ್ನ ಊರಿನಲ್ಲಿ ಯಾರಾದರೂ ಒಬ್ಬ ಸೊಸೈಟಿ ಡೈರೆಕ್ಟರಾಗಿ ಅಥವಾ ಪ್ರೆಸಿಡೆಂಟಾಗಿದ್ದು, ಅತ ನನಗೆ ಆಗದೆ ಹೋದರೆ, ನಾನು ದುರುದ್ದೇಶದಿಂದ ಬೇರೆ ಒಂದು ಸೊಸೈಟಿ ಸ್ಥಾಪನೆಯಾಗಬೇಕು ಎಂದು ಹೊರಟು, ನನ್ನದು ಎಂದು ಒಂದು ಸೊಸೈಟಿ ರಿಜಿಸ್ಟರ್ ಮಾಡಿಸತಕ್ಕದ್ದು ಈ ರೀತಿಯಲ್ಲಿ ನಡೆಯುತ್ತಿದೆ. ಮಾನ್ಯ ಮಂತ್ರಿಗಳು ಹೇಳಿರುವ ಹಾಗೆ ನಮ್ಮ ರಾಜ್ಯದಲ್ಲಿ 19,407 ಸಹಕಾರ ಸಂಘಗಳಿವೆ. ಇನ್ನು ಪಂಚಾಯತಿಗಳು ಇರತಕ್ಕದ್ದು ಸುಮಾರು 8307, ಒಂದೊಂದು ಪಂಚಾಯತಿಗಳಿಗೂ ಒಂದೊಂದು ಸೊಸೈಟಿ ಇರಬೇಕು ಮತ್ತು ಆ ಸೊಸೈಟಿ ಮೂಲಕ ರೈತರುಗಳಿಗೆ ಸಾಲ ಕೊಡಬೇಕು ಎಂದು ಸರಕಾರದ ಸೂಚನೆಗಳೇನೋ ಇವೆ, ಆದರೆ ಇದರಲ್ಲಿ ನಾವು ನೋಡುವಂತೆ ದೇಶದಲ್ಲೆಲ್ಲಾ ಕೋಆಪರೇಟೀವ್ ಮೂವ್‌ಮೆಂಟನ್ನು ಬೆಳೆಸಿಕೊಂಡು ಹೋಗಬೇಕೆನ್ನುವುದೇನೋ ಸರಿ. ಅದಕ್ಕಾಗಿಯೇ ನಮ್ಮ ಸರಕಾರ ಬಹಳ ಹೆಮ್ಮೆಯಿಂದ ನಮ್ಮ ದೇಶದಲ್ಲಿ ಈಗ 19,607 ಸೊಸೈಟಿಗಳಿವೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಎಷ್ಟು ಸೊಸೈಟಿಗಳು ಡಿಫಂಕ್ಟ್ ಆಗಿವೆ, ಎಷ್ಟು ಸೊಸೈಟಿಗಳು ಕೆಲಸ ಮಾಡುತ್ತಿವೆ, ಎಷ್ಟು ಸೊಸೈಟಿಗಳು ನಾಮಕಾವಾಸ್ತೆ ಬೋರ್ಡುಗಳನ್ನು ಹಾಕಿಕೊಂಡು ಸರಕಾರದ ಹಣ ಪಡೆಯುತ್ತಿವೆ! ಮತ್ತು ಎಷ್ಟು ಸೊಸೈಟಿಗಳಲ್ಲಿ ಲೆಕ್ಕಗಳನ್ನು ಸರಿಯಾಗಿ ಬರೆದು ಅಧಿಕಾರಿಗಳಿಗೆ ವರದಿ ಕಳುಹಿಸುತ್ತಿದೆ ಇವನ್ನೆಲ್ಲಾ ಸರಿಯಾಗಿ ಪರಿಶೀಲನೆ ಮಾಡಿ ಇದರಲ್ಲಿ ಒಂದು ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಬಹುಶ: ಇದಕ್ಕಾಗಿಯೇ ರಿಜಿಸ್ಟ್ರಾರ್‌ರವರು ಇದನ್ನೆಲ್ಲಾ ಸರಿಯಾಗಿ ಅರ್ಥ ಮಾಡಿಕೊಂಡು ಈಗ ಇರುವ ಕಾಯಿದೆಗೆ ಒಂದು ರೀತಿಯಾದ ತಿದ್ದುಪಡಿಯನ್ನು ತರುವುದು ಅಗತ್ಯ ಮತ್ತು ಈಗಿರುವ ಕಾನೂನನ್ನು ಸಡಿಲ ಮಾಡುವುದರಿಂದ ಇದರಲ್ಲಿ ಅನೇಕ ದೋಷಗಳಾಗಿವೆ ತಿಳಿದು ಬರುತ್ತಿದೆ. ಕನಿಷ್ಟಪಕ್ಷ ಒಂದು ಪಂಚಾಯಿತಿಗೆ 15 ಸಾವಿರ ರೂಪಾಯಿ ಉತ್ಪತ್ತಿ ಇರಬೇಕೆಂದು ತುಕೋಳ ಕಮಿಷನ್ ರಿಪೋರ್ಟ್ ಇದೆ. ಇಂತಾ ಪಂಚಾಯಿತಿ ಪ್ರದೇಶಕ್ಕೆ ಒಂದು ಸೊಸೈಟಿ ಇದ್ದು ಇದರಲ್ಲಿ ಬ್ರಾಂಚ್ ರೂಪದಲ್ಲಿ ಎಲ್ಲಾ ಕೆಲಸವೂ ಒಂದರಲ್ಲೇ ನಡೆಯುವಂತೆ ಮಾಡಬೇಕು. ಬಹಳ ಸೊಸೈಟಿ ಇರಬಾರದು ಎಂದು ಒಂದು ಷರತ್ತು ಹಾಕಿದ್ದಾರೆ ಇಂದು

(ಶ್ರೀ ಕೆ. ಎನ್ ವೀರಪ್ಪಗೌಡ)

ಸೊಸೈಟಿಗಳು ಇಷ್ಟು ಹೆಚ್ಚು ಆಗಲು ಅವಕಾಶವಾಗುತ್ತಿರಲಿಲ್ಲ. ಒಂದು ಸೊಸೈಟಿ ಇರಬೇಕೆಂದರೆ ಸುಮಾರು 600 ರಿಂದ 800 ಜನರಿರಬೇಕು ಮತ್ತು ಒಂದು ಪಂಚಾಯಿತಿ ಏರಿಯಾಕ್ಕೆ ಒಂದು ಸೊಸೈಟಿ ಎಂದು ನಿರ್ಧಾರ ಮಾಡಿದ್ದರೆ ಅದರಿಂದ ಅನುಕೂಲವಾಗುತ್ತಿತ್ತು. ಇಂದು ಕೆಲವು ಕಡೆ ನಾವೇ ನೋಡಿರುವಂತೆ ಸೊಸೈಟಿ ಎಂದು ಬೋರ್ಡು ಮಾತ್ರ ಇರುತ್ತದೆ. ಇದರಲ್ಲಿರುವ ಪದಾಧಿಕಾರಿಗಳು ಅವರ ವ್ಯವಹಾರಗಳನ್ನೆಲ್ಲಾ ಅವರ ಮನೆಗಳಲ್ಲೇ ಕುಳಿತುಕೊಂಡು ನಡೆಸುತ್ತಾರೆ ಮತ್ತು ಸರಕಾರದಿಂದ ಪಡೆಯುವ ಸಾಲಗಳನ್ನು ವಾಪಸು ಕೊಡುವುದರ ಬಗ್ಗೆ ಕೂಡ ಯೋಚನೆ ಮಾಡುತ್ತಿಲ್ಲ, ಸುಳ್ಳು ಲೆಕ್ಕಗಳನ್ನು ಬರೆಯುವ ಸೊಸೈಟಿಗಳೇ ಹೆಚ್ಚಾಗುತ್ತಿವೆ ಎನ್ನುವುದೂ ಒಂದು ಕಾರಣವಾಗಿದೆ. ಇದಕ್ಕೆ ಅನುಕೂಲವಾಗಿ ಇಂದು ಡಿಸ್ಟ್ರಿಕ್ಟ್ ಬ್ಯಾಂಕುಗಳು ಬೇರೆ ಇವೆ. ಇದರ ಉದ್ದೇಶ ಎಲ್ಲ ತಾಲ್ಲೂಕುಗಳಲ್ಲಿರುವ ಬ್ಯಾಂಕುಗಳಿಗೆ ಸಹಾಯ ಮಾಡಿ ರೈತರಿಗೆ ಅನುಕೂಲಗಳನ್ನು ಮಾಡಿಕೊಡಬೇಕೆನ್ನುವುದು. ಇದರಲ್ಲಿ ಡೈರೆಕ್ಟರುಗಳು ವೋಟು ಪಡೆದು ಬಂದಿರುತ್ತಾರೆ. ಇವರು ಅವರಿಗೆ ಬೇಕಾದ ಸೊಸೈಟಿಯೋ ಇಲ್ಲವೇ ಬ್ಯಾಂಕಿನಕಡೆ ರೈತರನ್ನು ಜಿಲ್ಲಾ ಬ್ಯಾಂಕಿಗೆ ಕರೆದುಕೊಂಡು ಬಂದು ರೈತರಿಗೆ ಸಾಲ ಕೊಡಿಸುತ್ತಾರೆ ಮತ್ತು ಎಲ್ಲಾ ವಿವಾದದಿಂದಲು ರೈತರಿಗೆ ಸಾಲಗಳನು ಕೊಡಬೇಕೆಂದು ಕೊಡಿಸುತ್ತಾರೆ ಅನಂತರ ಕ್ಯಾಷ್ ಕ್ರೆಡಿಟ್ ಇತ್ಯಾದಿ ರೈತರಿಗೆ ಕೊಡಿಸುತ್ತೇವೆಂದು ಹೇಳಿ ಸಾಲಗಳನ್ನು ಬೇಕಾದ ಹಾಗೆ ಕೊಡಿಸುತ್ತಾರೆ ಮತ್ತು ಇವೆಲ್ಲಾ ಒಂದು ರೀತಿಯಾದ ಅಡಜಸ್ಟ್‌ಮೆಂಟ್ ಮೇಲೆ ನಡೆಯುವ ವ್ಯವಹಾರಗಳು. ಇವನ್ನು ನಾವು ನೋಡುತ್ತಲೇ ಬರುತ್ತಿದ್ದೇವೆ. ಇದರಲ್ಲಿ ಯಾವ ಯಾವ ಅಧಿಕಾರಿಗಳು ಇರುತ್ತಾರೆ ಅವರನ್ನು ಜವಾಬ್ದಾರರನ್ನಾಗಿ ಮಾಡಿ ಇದನ್ನು ಸರಕಾರ ಯಾರಿಂದಲಾದರೂ ಇದುವರೆಗೆ ತನಿಖೆ ಮಾಡುತ್ತಿದ್ದಾರೆಯೋ ಎಲ್ಲಾ ಸರಿಯಾಗಿ ತನಿಖೆ ಮಾಡಿರುವುದು ಗೊತ್ತಾಗುತ್ತಿಲ್ಲ. ಎಲ್ಲೋ ಕೆಲವು ಕಡೆ ನಾವು ನೋಡಿರುವ ಹಾಗೆ ಕೆಲಸ ಇನ್ಸ್‌ಪೆಕ್ಟರುಗಳು ಬ್ಯಾಂಕಿಗೆ ಇಲ್ಲವೆ ಸೊಸೈಟಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಿ ಅಲ್ಲಿ, ಸೀನ್ ಎಂದು ನೋಡಿ ಸೈನು ಹಾಕಿ ಬಂದು ಬಿಡುತ್ತಾರೆ. ಯಾವುದನ್ನೂ ಸರಿಯಾಗಿ ವಿಚಾರ ಮಾಡಿ ನೋಡುವುದೇ ಇಲ್ಲ. ಒಂದು ಸಲ ನಾನಿದ್ದ ಒಂದು ಸೊಸೈಟಿಯಲ್ಲಿ ಬ್ಯಾಂಕು ಲೆಕ್ಕಕ್ಕೆ 200 ರೂಪಾಯಿಗಳು ಜಮಾ ಆಗಿದೆ ಎಂದು ಖರ್ಚು ಹಾಕಿದ್ದರು. ಆದರೆ ಅದರ ಮಾತ್ರ ಬ್ಯಾಂಕಿಗೆ ಜಮಾ ಆಗಿರಲಿಲ್ಲ. ಇದನ್ನು ಇನ್ಸ್‌ಪೆಕ್ಟರು ಬಂದಾಗ ಕೂಡ ಎಲ್ಲ ಸರಿಯಾಗಿದೆ ಎಂದು ಬರೆದು ಹೋದರು ಅನಂತರ ನಾನು ಒಂದು ಸಾರಿ ಸೊಸೈಟಿ ಮೀಟಿಂಗಿಗೆ ಹೋದಾಗ ಇದನ್ನು ಕಟ್ಟದೇ ಇರುವುದು ಗಮನಕ್ಕೆ ಬಂದು ಅಲ್ಲಿನ ಅಧಿಕಾರಿಗಳಿಗೆ ಹೇಳಿ ಇದರಲ್ಲಿ ತಪ್ಪಿದೆ ಎಂದು ರಿಕಾರ್ಡು ಕೂಡ ಮಾಡಿಸಿ ಆ ನಂತರ ಅದರಲ್ಲಿದ್ದ ತಪ್ಪನ್ನು ಸರಿ ಮಾಡಬೇಕಾಗಿ ಬಂತು. ಇನ್ಸ್‌ಪೆಕ್ಷನ್ ಮಾಡುವ ಅಧಿಕಾರಿಗಳು ಇನ್ಸ್‌ಪೆಕ್ಷನ್‌ಗೆ ಹೋಗುವಾಗ ಸರಿಯಾಗಿ ವೆರಿಫೈ ಮಾಡಿ ತನಿಖೆ ಮಾಡುತ್ತಿಲ್ಲ. ಇದರಿಂದ ಇಂತಹ ಅವ್ಯವಹಾರಗಳಿಗೆ ಕಾರಣವಾಗಿದೆ. ಯಾವುದೇ ಸೊಸೈಟಿಗಳಲು ಅಧಿಕಾರಿಗಳು ವಿವರಗಳನ್ನು ಕೊಟ್ಟು ಆ ಬಗ್ಗೆ ಮೇಲಿನ ಅಧಿಕಾರಿಗಳಿಗೆ ಸರಿಯಾದ ಒಂದು ರಿಪೋರ್ಟನ್ನು ಕಳುಹಿಸುವ ಪದ್ಧತಿಯನ್ನೂ ಸರಿಯಾಗಿ ಇಟ್ಟಿಲ್ಲ. ಕೋ ಆಪರೇಟಿವ್ ಇಲಾಖೆ ಸಾಕಷ್ಟು ಮಟ್ಟಿಗೆ ಕೆಲಸ ಮಾಡತಕ್ಕದ್ದು ಅವಶ್ಯಕ ಎಂದು ತಿಳಿದು ಸರಿಯಾದ ಕಟ್ಟುನಿಟ್ಟಾದ ಅಧಿಕಾರಿಗಳನ್ನು ಇದರಲ್ಲಿ ಹಾಕಿದ್ದರೆ ಬಹುಶಃ ಇಂತಹ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಲು ಒಂದು ಅವಕಾಶ ಸಿಗುತ್ತಿತ್ತೋ ಏನೋ! ರಿಜಿಸ್ಟ್ರಾರ್‌ರವರು ಕೂಡ ಮುಂಜಾಗರೂಕತೆಯಿಂದ ಸೊಸೈಟಿಗಳನ್ನು ಕೊಟ್ಟಿರೂಅದನ್ನೂ ಸರಿಯಾಗಿ ಅನುಷ್ಠಾನಕ್ಕೆ ತರುತ್ತಿಲ್ಲ. ಇನ್ನು ರೂರಲ್ ಇಂಡಸ್ಟ್ರಿಯಲ್ ಬ್ಯಾಂಕು ಎಂದು ಹಳ್ಳಿಗಳ ಕಡೆ ತೆಗೆದಿರುತ್ತಾರೆ. ಇದರಲ್ಲಿ ಕೈಗಾರಿಕೆಗೆ ಎಂದು ಹಣ ಕೊಡುತ್ತಾರೆ, ಹಣ ತೆಗೆದುಕೊಳ್ಳುತ್ತಾರೆಯೇ ವಿನಾ ಅದನ್ನು ಸರಕಾರಕ್ಕೆ ವಾಪಸು ಕೊಡುವ ಗೋಜಿಗೇ ಹೋಗುವುದಿಲ್ಲ. ಈ ರೀತಿ ವ್ಯವಹಾರಗಳಾಗಿ ರೈತರಿಗೆ ಅನೇಕ ರೀತಿಯ ಸಾಲ ಸೋಲಗಳಾಗಿ ಇಂದು ಅವನು ಬದುಕುವ ಸ್ಥಿತಿಯಲ್ಲಿಲ್ಲ. ರೈತರಿಗೆ ಪರಿಹಾರ ಕೊಡಬೇಕೆಂದು ಸರಕಾರ ಬೇಕಾದ ಹಾಗೆ ಇಂತಹ ಸೊಸೈಟಿಗಳನ್ನು ಮಾಡಿ ರೈತರಸಾಲಗಳು ಬಹು ಹೆಚ್ಚಿವೆ ಹೀಗಾದರೆ ರೈತರ ಋಣ ಎಂದು ಪರಿಹಾರವಾಗುವುದಿಲ್ಲ. ರೈತರಿಗೆಂದು ಬೇರೆ ಬೇರೆ ಬಾಬು ಗಳಲ್ಲಿ ಸಾಲಗಳನ್ನೆನ್ನೋ ಕೊಡುತ್ತಿದ್ದಾರೆ. ಅದನ್ನು ಅವರಿಂದ ವಾಪಸು ಪಡೆಯಲು ಕಷ್ಟಸಾಧ್ಯ ವಾಗಿದೆ. ಇದರಲ್ಲಿ ಸರಿಯಾಗಿ ವಸೂಲು ಮಾಡುವ ಸಂಪ್ರದಾಯಗಳನ್ನು ಎಲ್ಲ ಸೊಸೈಟಿಗಳೂ ಇಲ್ಲವೇ ಬ್ಯಾಂಕುಗಳೂ ಅನುಸರಿಸಿದರೆ ಆಗ ಸ್ವಲ್ಪಮಟ್ಟಿಗೆ ರೈತರಿಗೆ ಅನುಕೂಲಗಳಾಗಬಹುದು. ಒಂದು ಸಲ ಡಿಫಾಲ್ಟರು ಆದವರಿಗೆ ಮತ್ತೆ ಹಣ ಕೊಡುವುದಿಲ್ಲ ಎನ್ನುವ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ಆದರೆ ಇದರಲ್ಲಿರುವ ಕೆಲವು ಡೈರೆಕ್ಟರುಗಳು ರೈತರಿಗೆ ತೊಂದರೆ ಇದೆ ಎಂದು

ಇಲ್ಲದ ನೆಪಗಳನ್ನು ಹೂಡಿ ಅವನಿಗೆ ಸಾಲ ಕೊಡಿಸಲು ಲಂಚ ಪಡೆದು ಕೊಡುತ್ತಾರೆ ಮತ್ತು ಮುಂದೆ ಅವನು ವಾಪಸು ಕೊಡುತ್ತಾನೆಯೋ ಇಲ್ಲವೇ ಇವರ ಕಡೆಗೆ ಅಧಿಕಾರಿಗಳು ಗಮನ ಕೊಡುವುದೇ ಇಲ್ಲ. ರಿಸರ್ವ್‌ಬ್ಯಾಂಕಿನವರೇನೊ ರೈತರಿಗಾಗಿ ಬೇಕಾದಷ್ಟು ಸಾಲ ಕೊಡುತ್ತಾರೆಂದು ತೆಗೆಯುತ್ತಾ ಹೋದರೆ ಅದರಿಂದೇನೂ ಲಾಭವಾಗುವುದಿಲ್ಲ, ಕೊಟ್ಟ ಹಣಕ್ಕೆ ಸರಿಯಾಗಿ ಅದರಿಂದ ಏನು ಹೆಚ್ಚು ಉತ್ಪಾದನೆಯಾಗಿದೆ ರೈತರಿಗೆ ಎಷ್ಟು ಅನುಕೂಲಗಳಾಗಿವೆ ಇದನ್ನು ಯಾರೂ ಸರಿಯಾಗಿ ಪರಿಶೀಲಿಸುತ್ತಿಲ್ಲ. ಸಾಲ ಕೊಡುವಾಗ ಸರಿಯಾಗಿ ಷ್ಯೂರಿಟಿಗಳನ್ನು ಇಟ್ಟು ಕೊಂಡು ಸಾಲ ಕೊಡುವುದು ಅಗತ್ಯ ಎಂದು ತಮ್ಮಲ್ಲಿ ಸಲಹೆ ಮಾಡುತ್ತೇನೆ. ಇದರಲ್ಲಿ ನಾನು ಕೆಲವು ಸಲಹೆಗಳನ್ನು ಕೊಡಬೇಕೆಂದು ಇದ್ದೇನೆ. ಮೊದಲನೇದು ಎಲ್ಲಿ ವಯಬಲ್ ಯೂನಿಟ್‌ಗಳಿಲ್ಲವೋ ಮತ್ತು ಎಲ್ಲಿ ಆರ್ಥಿಕವಾಗಿ ಚೆನ್ನಾಗಿ ನಡೆಯುವ ಸೊಸೈಟಿಗಳಿಲ್ಲವೇ ಅಂತಹ ಕಡೆಗಳಲ್ಲಿರುವ ಸೊಸೈಟಿಗಳನ್ನೆಲ್ಲಾ ಕ್ರೋಢೀಕರಿಸಿ ಅದಕ್ಕೆ ತಕ್ಕಂತೆ ಸೊಸೈಟಿಗಳನ್ನು ಅಲ್ಲಿ ತೆರೆದು ಜನರಿಗೆ ಸರಿಯಾಗಿ ಸಹಾಯ ದೊರಕುವಂತೆ ಮಾಡಬೇಕು ಮತ್ತು ಅದು ಸರಿಯಾಗಿ ವಾಪಸು ಬರುವಂತೆ ತಕ್ಕ ಕ್ರಮಗಳನ್ನು ಅನುಸರಿಸಬೇಕು. ಮತ್ತು ಇವರಲ್ಲಿರುವ ಅಧಿಕಾರಿಗಳು ಕಟ್ಟುನಿಟ್ಟಾಗಿ ಕೆಲಸಮಾಡಬೇಕಾಗಿ ಬರುತ್ತದೆ, ತಪ್ಪಿತಸ್ಥ ರೈತರಿಗೆ ಸಾಲಗಳನ್ನು ಕೊಡುವುದನ್ನು ತಪ್ಪಿಸಬೇಕು ಬಂಡವಾಳವಿಲ್ಲದ ಸೊಸೈಟಿಗಳಿಗೆ ಸಹಾಯವನ್ನು ಕೊಡಬಾರದು, ಒಂದೊಂದು ತಾಲ್ಲೂಕಿನಲ್ಲೂ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಮತ್ತು ಲ್ಯಾಂಡು ಡೆವೆಲ್ಪ್‌ಮೆಂಟು ಬ್ಯಾಂಕು ಇದ್ದರೆ ಸಾಕು. ಒಂದೇ ಸೊಸೈಟಿಯಲ್ಲಿ ಎಲ್ಲಾ ತರಹದ ಸಾಲ ಅಲ್ಲಿ ರೈತರಿಗೆ ಕೊಡುವಂತೆ ಆಗಬೇಕು. ಅವನ ಭೂಮಿ ಡೆವಲಪ್ ಮಾಡುವವರಿಗೆ ಸಾಲ ಕೊಡಬೇಕು ಮತ್ತು ಅವರ ಫಸಲಿನ ಮೂಲಕ ಕೊಟ್ಟ ಸಾಲವನ್ನು ಮರುಪಾವತಿ ಮಾಡಲು ಒತ್ತಾಯದ ಕ್ರಮ ಅನುಸರಿಸಬೇಕು ಇಂದು ಇದರಲ್ಲಿ ಕಳ್ಳವ್ಯಾಪಾರಗಳೇ ಹೆಚ್ಚಾಗಿ ಇದರಲ್ಲಿ ಭೂಮಿಗೆ ಸಾಲ ಕೊಡುವಾಗ ಅಲ್ಲಿನ ಅಧಿಕಾರಿಗಳೊಡನೆ ರೈತರು ಸೇರಿ ಕೊಂಡು ಸಾಲ ಪಡೆಯುತ್ತಾರೆ, ಇವನ್ನು ಸರಿಯಾಗಿ ಚೆಕ್ ಮಾಡಲು ಒಬ್ಬರು ಡೆಪ್ಯೂಟಿ ರಿಜಿಸ್ಟ್ರಾರ್‌ರವರನ್ನು ನೇಮಕ ಮಾಡಬೇಕು. ಇದರಿಂದ ಕಳ್ಳ ವ್ಯವಹಾರ ಮಾಡುವುದನ್ನು ತಪ್ಪಿಸಬಹುದು. ಸರಕಾರ ಸರಿಯಾಗಿ ತನಿಖೆ ಮಾಡುವ ಅಧಿಕಾರಿಗಳನ್ನು ಅಲ್ಲಲ್ಲಿ ನೇಮಿಸಬೇಕು. ಯಾವ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೊ ಅಂತಹವರ ಮೇಲೆ ಕೂಡಲೇ ತಕ್ಕ ಕ್ರಮ ಜರುಗಿಸಬೇಕು.

ಇನ್ನ ಕೆಲವು ಸಂಘಗಳಲ್ಲಿ ಎಲೆಕ್ಷನ್‌ಗಳು ನಡೆಯುತ್ತಿವೆ. ಇದರಲ್ಲಿ ಕೆಲವು ಕಡೆ ವರ್ಷಕ್ಕೊಂದು ಸಾರಿ ಚುನಾವಣೆಗಳಾಗುತ್ತವೆ ಮತ್ತು ಕೆಲವು ಕಡೆ ಇರುವ ಸೊಸೈಟಿಗಳಲ್ಲಿ ಮೂರು ವರ್ಷಕ್ಕೊಂದು ಸಾರಿ ಎಲೆಕ್ಷನ್ ಆಗುತ್ತವೆ. ಒಂದು ವರ್ಷ ಎಲೆಕ್ಷನ್ ಎಂದು ಮಾಡುವುದಕ್ಕಿಂತ ಮೂರು ವರ್ಷಕೊಂದು ಸಾರಿ ಚುನಾವಣೆಗಳು ಎಲ್ಲ ಸೊಸೈಟಿಯಲ್ಲೂ ಆಗುವಂತೆ ವ್ಯವಸ್ಥೆ ಮಾಡಿದರೆ ಸರಿಯಾಗಿರುತ್ತದೆ. ಇದರಲ್ಲಿ ಅಲ್ಲಲ್ಲಿ ಕ್ಷೇತ್ರ ಜಗಳಗಳು ಬರುತ್ತವೆ, ಇವನ್ನೆಲ್ಲಾ ನೋಡಿ ಸರಿಯಾಗಿ ಚುನಾವಣೆಗಳು ಆಗುವಂತೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸುಮ್ಮನೆ ಪ್ರೋತ್ಸಾಹಕ್ಕಾಗಿ ಚುನಾವಣೆ ಎಂದು ಮಾಡಿ ಒಂದು ವರ್ಷಕ್ಕೆ ಒಂದು ಸಾರಿ ಎಂದು ಎಲೆಕ್ಷನ್ ಮಾಡಿದರೆ ಅದು ಸರಿಹೋಂದುವುದಿಲ್ಲ. ಮತ್ತು ಚುನಾವಣೆಯಲ್ಲಿ ಆಯಾ ಕ್ಷೇತ್ರದ ಜನರೇ ಭಾಗ ವಹಿಸುವಂತೆ ಇರಬೇಕು. ಈಗ ಇರುವಂತೆ ಸೊಸೈಟಿ ಪ್ರದೇಶದ ಎಲ್ಲಾ ಜನರು ಓಟು ಮಾಡಲು ಅವಕಾಶವಿರಬಾರದು. ಆಗ ಒಳ್ಳೆಯ ಜನರು ಆರಿಸಿ ಬರುವುದಕ್ಕೆ ಅವಕಾಶವಾಗುತ್ತದೆ. ಇಲ್ಲ ದಿದ್ದರೆ ಬೇರೆ ಕ್ಷೇತ್ರದ ಜನರು ಅಂದರೆ ಪ್ರಭಾವಯುತರಾದಂಥವರೇ ಮತ್ತೆ ಮತ್ತೆ ಗೆಲ್ಲುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದು ಸರಿಯಲ್ಲ. ಚಿಕ್ಕಮಗಳೂರು, ಶಿವಮೊಗ್ಗ, ಸಾಗರ, ಮಲೆನಾಡು ಅಡಿಕೆ ಮಾರ್ಕೆಟಿಂಗ್ ಸೊಸೈಟಿಗೆ ಇವೆ. ಈ ಕ್ಷೇತ್ರಗಳ ಜನರೇ ಓಟು ಮಾಡಲು ಅವಕಾಶವಿಲ್ಲದೆ ಎಲ್ಲಾ ಕ್ಷೇತ್ರದ ಜನರು ಓಟು ಮಾಡಲು ಅವಕಾಶವಿದ್ದು ಕೆಲವು ವರ್ಷಗಳಿಂದಾ ಒಂದೇ ಜಾತಿಯವರು ಬರುವಂತೆ ಆಗಿದೆ. ಇಲ್ಲೆಲ್ಲಾ ಜಾತೀಯತೆ ಎಷ್ಟರಮಟ್ಟಿಗಿದೆ ಎಂಬುದು ಗೊತ್ತಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಸೂಕ್ತ ರೀತಿಯ ಬದಲಾವಣೆಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಾಲ ಕೊಡುವ ವಿಚಾರದಲ್ಲಿ ಹೇಳುವುದಾದರೆ, ಎಲ್ಲ ರೀತಿಯ ಸಾಲಗಳನ್ನು ಸಹ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್ ಮೂಲಕವೇ ಕೊಡುವ ವ್ಯವಸ್ಥೆ ಮಾಡಬೇಕು. ಆ ರೀತಿ ಮಾಡಿದರೆ ಒಬ್ಬ ಮನುಷ್ಯ ಯಾವ ಯಾವ ಕಾರಣಕ್ಕಾಗಿ ಎಷ್ಟೆಷ್ಟು ಸಾಲ ಮಾಡಿದ್ದಾನೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಆತನ ಕ್ಯಾಪಾಸಿಟಿ ಎಷ್ಟಿದೆ ಎಂಬುದು ಸಹ ಗೊತ್ತಾಗುತ್ತದೆ. ಒಂದು ವಿಷಯ ಹೇಳುವುದಾದರೆ ನನಗೆ ತಿಳಿದಂತೆ ರೂರಲ್

(ಶ್ರೀ ಕೆ. ಎನ್. ವೀರಪ್ಪಗೌಡ)

ಇಂಡಸ್ಟ್ರಿಯಲ್ ಬ್ಯಾಂಕಿನಲ್ಲಿ 25 ಸಾವಿರ ರೂಪಾಯಿ ಡಿಫಾಲ್ಟರು ಆದರು. ಆ ಹಣ ಕಟ್ಟಲು ಸೆಂಟ್ರಲ್ ರೂರಲ್ ಇಂಡಸ್ಟ್ರಿಯಲ್ ಬ್ಯಾಂಕಿಗೆ 50 ಸಾವಿರ ರೂ ಸಾಲಕ್ಕೆ ಅರ್ಜಿ ಹಾಕಿ ಪಡೆದು ಆ ಇಪ್ಪತ್ತೈದು ಸಾವಿರ ತೀರಿಸಿದರು—ಡಿಫಾಲ್ಟರ್ ಆದವರಿಗೆ ಸಾಲ ಕೊಡಬಹುದೇ – ಹೀಗೆ ಅವರೆ ಇನ್ನೊಂದು ಕಡೆ ಲಕ್ಷ ಪಡೆದು 50 ಸಾವಿರ ತೀರಿಸಿದರೆ ಆಯ್ತು ಉತ್ಪತ್ತಿ ಮಾಡಬೇಕಾಗಿಲ್ಲ, 25 ಸಾವಿರ ರೂಪಾಯಿಗಳನ್ನು ಸ್ವಂತಕ್ಕೆ ಖರ್ಚು ಮಾಡಿಕೊಂಡು ಬಿಡುತ್ತಾರೆ. ನಂತರ ಡಿಫಾಲ್ಟರ್ ಆಗುತ್ತಾರೆ. ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಕೋಆಪರೇಟಿವ್ ಬ್ಯಾಂಕಿನವರು ನೋಟೀಸ್ ಜಾರಿ ಮಾಡಿದ ಮೇಲೆ ಆ ಮನುಷ್ಯ ಇನ್ನೊಂದು ಕಡೆ ಲಕ್ಷ ರೂಪಾಯಿಗಳಿಗೆ ಅರ್ಜಿ ಹಾಕುತ್ತಾನೆ ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳು ಕಣ್ಣು ಬಿಟ್ಟು ನೋಡದೆ ಸಾಲದ ಅರ್ಜಿಗಳನ್ನು ಮಂಜೂರು ಮಾಡುತ್ತಾ ಹೋದರೆ, ಈ ದೇಶದಲ್ಲಿ ಕೋಆಪರೇಟಿವ್ ಮೂವ್‌ಮೆಂಟ್ ಯಾವ ರೀತಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇಂದು ಕಾನೂನು ಇದೆ, ರೂಲ್ಸ್ ಇದೆ, ಆಡಳಿತ ಇದೆ, ಅಧಿಕಾರಿಗಳನ್ನು ಸಾಕಷ್ಟು ಜಾಸ್ತಿ ಮಾಡಿದ್ದೀರಿ ; ಆದರೆ ಈ ಅಧಿಕಾರಿಗಳು ಮಾಡುತ್ತಿರುವ ಕರ್ತವ್ಯವಾದರೂ ಏನು ? ಈ ಅಧಿಕಾರಿಗಳಿಗೆ ಯಾವ ಅಧಿಕಾರವೂ ಇಲ್ಲ, ಎಲ್ಲವನ್ನೂ ಖಾಸಗೀ ಮುಖಂಡರಿಗೇ ಬಿಟ್ಟಿದ್ದೇವೆಂದು ತಾವು ಹೇಳುವುದಾದರೆ ಅದನ್ನಾದರೂ ನಾವು ಒಪ್ಪಿಕೊಳ್ಳಬಹುದು.

ಉಪಾಧ್ಯಕ್ಷರು:– ತಮಗೆ ಇನ್ನು ಎಷ್ಟು ಸಮಯಬೇಕು ?

ಶ್ರೀ ಕೆ. ಎನ್. ವೀರಪ್ಪಗೌಡ.—ಇನ್ನು ಹತ್ತು ನಿಮಿಷಗಳಲ್ಲಿ ಮುಗಿಸಿಬಿಡುತ್ತೇನೆ. ಇಂದು ನಮ್ಮ ತಾಲ್ಲೂಕಿನಲ್ಲಿ 6 ಸೊಸೈಟಿಗಳಿವೆ ಇವುಗಳಲ್ಲಿ 4 ಡಿಫಾಲ್ಟರ್ ಆಗಿವೆ. ಒಂದು ಬೈಲಾ ಪ್ರಕಾರ ಕೆಲಸ ಮಾಡುತ್ತಿಲ್ಲ. ಈ ರೀತಿ ಡಿಫಾಲ್ಟರ್ ಆದ ಸೊಸೈಟಿಗಳು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟೀವ್ ಬ್ಯಾಂಕಿಗೆ ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳಿಸುವಂತಿಲ್ಲ. ಇದರಿಂದ ಏನಾಗುತ್ತದೆಂದರೆ, ಚೆನ್ನಾಗಿ ಕೆಲಸ ಮಾಡುತ್ತಿರುವ ಒಂದೆರಡು ಸೊಸೈಟಿಯವರು ಮಾತ್ರ ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳಿಸುತ್ತಾರೆ ; ಅವರೇ ಜಿಲ್ಲಾ ಬ್ಯಾಂಕಿನಲಿ ಡೈರೆಕ್ಟರ್ ಆಗುತ್ತಾರೆ. ಇಂತಹ ಡೈರೆಕ್ಟರ್‌ಗಳು ತಮ್ಮ ಕ್ಷೇತ್ರದ ಸೊಸೈಟಿಗಳ ಕಡೆಗೆ ಹೆಚ್ಚಿನ ನಿಗಾ ವಹಿಸುತ್ತಾರೆಯೇ ಹೊರತು, ಡಿಫಾಲ್ಟರ್ ಆದ ಸೊಸೈಟಿಗಳ ಕಡೆಗೆ ಹೆಚ್ಚಿನ ನಿಗಾ ಕೊಡುವುದಿಲ್ಲ. ಇದರಿಂದ ಅನೇಕ ಜನರಿಗೆ ತೊಂದರೆಯಾಗುತ್ತಿದೆ. ನನ್ನ ಒಂದು ಅನುಭವದಿಂದ ಹೇಳುವುದೇನೆಂದರೆ, ಯಾರು ಹಣವನ್ನು ಸಾಲವಾಗಿ ಪಡೆದುಕೊಂಡು ಕಟ್ಟದೆ ಇರುತ್ತಾರೋ ಅವರನ್ನು ಡಿಫಾಲ್ಟರ್ ಎಂದು ಪರಿಗಣಿಸಬೇಕೇ ಹೊರತು, ಸಂಬಂಧಪಟ್ಟ ಸೊಸೈಟಿಯನ್ನೇ ಡಿಫಾಲ್ಟರ್ ಎಂದು ಪರಿಗಣಿಸುವುದು ಸರಿಯಲ್ಲ. ಇಂದು ನಮ್ಮ ಜಿಲ್ಲೆಯಲ್ಲಿ ಕೇವಲ 2-3 ಸೊಸೈಟಿಯವರು ಮಾತ್ರ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಆಡಳಿತವನ್ನು ನಡೆಸತಕ್ಕಂಥ ಸಂದರ್ಭ ಬಂದಿದೆ. ಬೇಕಾದರೆ ಮಾನ್ಯ ಮಂತ್ರಿಗಳು ವರದಿಯನ್ನು ತರಿಸಿಕೊಂಡು ನೋಡಿದರೆ ಗೊತ್ತಾಗುತ್ತದೆ. ಇದನ್ನೆಲ್ಲಾ ಸರಿಪಡಿಸುವುದು ಅಗತ್ಯವಿದೆ. ಯಾರು ಹಣ ತಿಂದುಹಾಕಿದ್ದಾರೆ ಅವರನ್ನು ಮಾತ್ರ ಡಿಫಾಲ್ಟರ್ ಮಾಡಬೇಕೇ ಹೊರತು, ಇಡೀ ಸೊಸೈಟಿಯನ್ನೇ ಡಿಫಾಲ್ಟರ್ ಎಂದು ಪರಿಗಣಿಸುವುದು ಸರಿಯಲ್ಲ. ಶಾರದಾ ಕೋಆಪರೇಟಿವ್ ಸ್ಟೋರ್ಸ್ ಎಂಬುದು ಮುಚ್ಚಿ 10 ವರ್ಷವಾಯಿತು ; ಆ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ, 14 ಸಾವಿರ ರೂಪಾಯಿ ಮುಳುಗಿದೆ. ಕೇಸ್ ನಡೆಯುತ್ತಲೇ ಇದೆ. ಖಾದಿಗ್ರಾಮೋದ್ಯೋಗ ಮಂಡಲಿಯವರೂ ಸಹ ಸೊಸೈಟಿಗಳನ್ನು ಸ್ಥಾಪಿಸಿ ಸಾಲ ಕೊಡುತ್ತಿದ್ದಾರೆ. ಈ ಮಂಡಲಿಯಿಂದ ಸಾಲ ಪಡೆದವರು ಸರಿಯಾಗಿ ವಾಪಸ್ ಮಾಡುತ್ತಿಲ್ಲ. ನಾನು ಈ ಮಂಡಲಿಯ ಮೆಂಬರ್ ಆಗಿದ್ದೆ. ಆ ಒಂದು ಅನುಭವದಿಂದ ಹೇಳುತ್ತಿದ್ದೇನೆ. ಮುಖ್ಯವಾಗಿ ಈ ಸಹಕಾರಿ ಇಲಾಖೆಯ ಅಧಿಕಾರಿಗಳು ಏನಿದ್ದಾರೆ, ಅವರು ರಾಜಕೀಯಕ್ಕೆ ಬಲಿಯಾಗದೆ ನಿರ್ದಾಕ್ಷಿಣ್ಯವಾಗಿ ನಡೆದುಕೊಂಡರೆ ಬಹುಶಃ ಎಲ್ಲವೂ ಸರಿಹೋಗುತ್ತದೆಂದು ಕಾಣುತ್ತದೆ. ನನಗೆ ತಿಳಿದಂತೆ ಡಿಸ್‌ಮಿಸ್ಡ್ ಪೋಲೀಸ್ ಅಧಿಕಾರಿ ಶ್ರೀ ಬಸಪ್ಪ ಎಂಬುವವರು ಬೆಂಗಳೂರು ಜರಗನಹಳ್ಳಿಯಲ್ಲಿ ಒಂದು ಸೊಸೈಟಿ ಪ್ರಾರಂಭ ಮಾಡುವುದಾಗಿ 36 ಸಾವಿರ ರೂಪಾಯಿಗಳನ್ನು ಸಾಲ ತೆಗೆದುಕೊಂಡು ಬೋರ್ಡನ್ನು ಸಹ ಹಾಕಿದರು. ಆದರೆ ಆ ಸೊಸೈಟಿ ಏನಾಗಿದೆ, ಸಾಮಾನು ಸರಂಜಾಮುಗಳನ್ನು ಕೊಂಡರೇ ಅಥವಾ ಇಲ್ಲವೇ ಎಂಬ ಬಗ್ಗೆ ವಿವರವಿಲ್ಲ. ಹಣವನ್ನು ಮಾತ್ರ ಎಲ್ಲರೂ ಹಂಚಿಕೊಂಡುಬಿಟ್ಟರು. ಅಧಿಕಾರಿಗಳು ಹೊಸದುರ್ಗದಲ್ಲಿ ಕೆಲವರು ಸೇರಿಕೊಂಡು ಇಟ್ಟಿಗೆ ತಯಾರು ಮಾಡುವ ಸಲುವಾಗಿ ಒಂದು ಸೊಸೈಟಿಯನ್ನು 24ನೇ ತಾರೀಖು ರಿಜಿಸ್ಟರ್ ಮಾಡಿಲ್ಲ 25ನೇ ತಾರೀಖು ದುಡ್ಡು ತೆಗೆದುಕೊಂಡರು. ಸೊಸೈಟಿ ಮಾತ್ರ ಪ್ರಾರಂಭವಾಗಲಿಸಿ

ಇದನ್ನೆಲ್ಲಾ ಸರಿಪಡಿಸಬೇಕೆಂಬ ಮನೋಭಾವ ಮಾನ್ಯ ಮಂತ್ರಿಗಳಿಗೆ ಬರುತ್ತದೆಂದು ನಾನು ಭಾವಿಸಿದ್ದೇನೆ. ಹೆಚ್ಚಿನ ಉದ್ರೇಕಕ್ಕೆ ಹೋಗದೆ ಶಾಂತ ರೀತಿಯಿಂದ ಎಲ್ಲವನ್ನೂ ಪರಿಶೀಲನೆ ಮಾಡುವ ಶಕ್ತಿ ಮಾನ್ಯ ಮಂತ್ರಿಗಳಿಗೆ ಇದೆ. ಮುಖ್ಯವಾಗಿ ಕೋಆಪರೇಟೀವ್ ಸೊಸೈಟಿಗಳನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ಆದಷ್ಟು ಜಾಗ್ರತ ಮಾಡಬೇಕು. ಈ ಸಂದರ್ಭದಲ್ಲಿ ನಾನು ಕೆಲವು ಸೊಸೈಟಿಗಳ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಚಿಕ್ಕಮಗಳೂರಿನ ಕನ್‌ಸ್ಯೂಮರ್ ಸೊಸೈಟಿಗೆ ಜಿಲ್ಲಾ ಬ್ಯಾಂಕ್‌ನವರು 59858-63 ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಈಗ ಅಲ್ಲಿರತಕ್ಕಂಥ ಬಂಡವಾಳ 14899 ರೂಪಾಯಿಗಳು ಮಾತ್ರ. ಈ ಸೊಸೈಟಿಯ ಅಧಿಕಾರವರ್ಗದಲ್ಲಿ ಹಿಂದಿನ ಎಂ. ಪಿ. ಮತ್ತು ಹಿಂದಿನ ಎಂ.ಎಲ್.ಎ. ಇದ್ದರು ಜನರಲ್ ಬಾಡಿ ಮೀಟಿಂಗನ್ನು ತಾ. 23-12-1963 ರಂದು ತಾ. 17-12-1965 ರಂದು ತಾ. 12-1-1969 ರಂದು ಮತ್ತು ತಾ. 29-12-1972ರಂದು ಕರೆದಿದ್ದಾರೆ.

5-30 P. M.

ನಿಮ್ಮ ಆಕ್ಟಿನಲ್ಲಿ ಇದೆ. ರೂಲ್ಸಿನಲ್ಲಿ ಇದೆ. ಜನರಲ್ ಬಾಡಿಯನ್ನು ಮಾಡದೇ ಹೋದರೆ ಪರ್ಮಿಷನ್ ತೆಗೆದುಕೊಳ್ಳಬೇಕು. ಆ ರೀತಿ ಪರ್ಮಿಶನ್ ತೆಗೆದುಕೊಳ್ಳದೇ ಹೋದರೆ ಇಷ್ಟು ಫೈನ್ ಹಾಕಬೇಕು ಎಂದು. ಆ ರೀತಿ ಸೆಕ್ರೆಟರಿಯವರಿಗೆ, ಪ್ರೆಸಿಡೆಂಟರಿಗೆ ಇಷ್ಟಿಷ್ಟು ಫೈನ್ ಎಂದು ಹಾಕಿದ್ದೀರಾ ? ನಿಜವಾಗಿ ನಿಮ್ಮ ಕಾನೂನನ್ನು ಜಾರಿಗೆ ಕೊಟ್ಟಿದ್ದೀರಾ ? ಒಂದು ಸೊಸೈಟಿಯ ಸೆಕ್ರೆಟರಿಗಳು ಒಂದು ತಿಂಗಳಲ್ಲಿ 35 ಸಾವಿರ ರೂಪಾಯಿಗಳನ್ನು ಉಪಯೋಗಿಸಿಕೊಂಡಿದ್ದಾರೆ ಇಂಥವುಗಳ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಹೇಗೆ ? ಮೂಡಿಗೆರೆಯಲ್ಲಿ ಒಂದು ಸೊಸೈಟಿಯಲ್ಲಿ ಇಬ್ಬರು ದೊಡ್ಡ ವ್ಯಕ್ತಿಗಳು ಕೆಲವರಿಂದ ಹೆಬ್ಬೆಟ್ಟು ರುಜು ಹಾಕಿಸಿಕೊಂಡು 84270 ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ. ಅದರ ವಸೂಲಿಯೇ ಇಲ್ಲಾ ಅಂಥವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದಾಗ ಕೆಲವು ಮುಖಂಡರು ಅಧಿಕಾರಿಗಳಿಗೆ ಅದನ್ನು ನಿಲ್ಲಿಸುವಂತೆ ಫೋನು ಮಾಡಿಸಿದರಂತೆ ಈ ರೀತಿ ಸೊಸೈಟಿಗಳ ವ್ಯವಹಾರದಲ್ಲಿ ಕೈ ಇಕ್ಕೆ ಹಾಕಬೇಕು. ಈ ಸೊಸೈಟಿಗಳಲ್ಲಿ ಚುನಾವಣೆಗಳು ನಡೆಯುವಾಗ ಸರಿಯಾಗಿ ನಡೆಯುವುದಿಲ್ಲ. ಕೆಲವು ಬ್ಯಾಂಕಿನವರು ವಿಮಾನದಲ್ಲಿ ಪ್ರವಾಸ ಮಾಡಿಸುವುದು, ಕೈಗಡಿಯಾರಗಳನ್ನು ಕೊಡುವುದು ಇವೆಲ್ಲಾ ನಡೆಯುತ್ತಿವೆ ಅಧ್ಯಕ್ಷರ ಚುನಾವಣೆ ಕಾಲದಲ್ಲಿ ಕೆಲವು ಸೊಸೈಟಿಗಳಲ್ಲಿ ಧೆಡ್ಡೆ ರಕ್ಕುರುಗಳು ಆಡಳಿತವನ್ನು ನಡೆಸುವುದನ್ನು ನೋಡಿದರೆ ಕೋಆಪರೇಟೀವ್ ರೂಲ್ಸ್ ಆಕ್ಟ್ ಜಾರಿಯಲ್ಲಿ ಇವೆಯೋ ಇಲ್ಲವೋ ಎನ್ನುವಂಥಾ ಅನುಮಾನ ಬರುತ್ತದೆ. ಅಂಥಾ ಸೊಸೈಟಿಗಳನ್ನು ಕಂಟ್ರೋಲ್ ಮಾಡುವಂತಹ ಶಕ್ತಿಯನ್ನು ಸರ್ಕಾರದವರು ಇಟ್ಟುಕೊಳ್ಳಬೇಕು. ರಾಜಕೀಯಕ್ಕಾಗಿ ಸೊಸೈಟಿಗಳನ್ನು ಬ್ಯಾಂಕ್‌ಗಳನ್ನು ಉಪಯೋಗಿಸಿಕೊಂಡರೆ ಸೊಸೈಟಿಗಳು ಬ್ಯಾಂಕುಗಳು ಉದ್ಧಾರವಾಗುವುದಿಲ್ಲ. ರೆಗ್ಯುಲೇಟೆಡ್ ಮಾರ್ಕೆಟ್‌ಗಳಲಿಯೂ ಇದೇ ರೀತಿ ನಡೆಯುತ್ತದೆ. ಆದ್ದರಿಂದ ಅವುಗಳ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಶಿವಮೊಗ್ಗಾದಲ್ಲಿ ರವಾನೆ ಮಂಡಿಯನ್ನು ಮಾಡಿಕೊಂಡು ಕಮಿಷನ್ ಏಜೆಂಟ್ಸ್ ಆಗಿ ಇರುವ ಪ್ರೈಕಿಯವರೇ ವ್ಯಾಪಾರ ಮಾಡುವ ಲೈಸೆನ್ಸ್ ತೆಗೆದುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಈ ರೀತಿ ಲೈಸೆನ್ಸ್ ತೆಗೆದುಕೊಳ್ಳುವದಕ್ಕೆ ಇರುವಂತಹ ಅವಕಾಶವನ್ನು ತಪ್ಪಿಸಲು ಆಕ್ಟನ್ನು ತಿದ್ದುಪಡಿ ಮಾಡಬೇಕು. ಒಂದೇ ಫ್ಯಾಮಿಲಿಯವರು ತಂದೆ ಮತ್ತು ಮಗ ಕಮಿಷನ್ ಏಜೆಂಟ್ಸ್ ಮತ್ತು ರವಾನೆ ಮಂಡಿ ವರ್ತಕರು ಇಬ್ಬರೂ ಅವರೇ ಆಗಿ ಹೆಚ್ಚು ಫಾಯದೇ ಪಡೆಯುವ ದೃಷ್ಟಿಯಿಂದ ವ್ಯಾಪಾರ ಮಾಡಿಕೊಂಡು ಹೋಗುತ್ತಿರುತ್ತಾರೆ. ಹೊರಗಿನವರನ್ನು ಬರುವುದಕ್ಕೆ ಬಿಡುವುದಿಲ್ಲ ಆದ್ದರಿಂದ ಇಷ್ಟು ದಿವಸಗಳಾದ ಮೇಲೆ ಮಾಲು ಮಾರ್ಕೆಟ್ ಯಾರ್ಡಿನಿಂದ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ವ್ಯಾಪಾರಕ್ಕೆ ಬರಬೇಕು ಎಂದು ಮಾಡಿದರೆ ಆಗ ಸ್ವಾಕು ಹೊರಗಡೆ ಬರುತ್ತದೆ. ಈ ದೃಷ್ಟಿಯನ್ನು ಇಟ್ಟುಕೊಂಡು ಆಕ್ಟನ್ನು ಅಮೆಂಡ್ ಮಾಡಬೇಕು. ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ಕಡೆ ಸರ್ಕಾರದವರು ಗಮನ ಕೊಡಬೇಕು. ಮತ್ತು ಸೊಸೈಟಿಗಳು ಸರಿಯಾದ ರೀತಿಯಲ್ಲಿ ವ್ಯವಹಾರವನ್ನು ನಡೆಸಿಕೊಂಡು ಹೋಗುವಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳಿ ನನಗೆ ಮಾನ್ಯ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಹಕಾರ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಸಹಕಾರಿ ಆಂದೋಳನ ಹಾಗೂ ಸಹಕಾರಿ ರಂಗದ ಇತಿಹಾಸವನ್ನು ಈಗ ತಾನೇ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಸಹಕಾರಿ ಇಲಾಖೆಗೆ ಸಂಬಂಧಪಟ್ಟ ವರದಿ ಈ ರಾಜ್ಯದ

(ಶ್ರೀ ಕಾಗೋಡು ತಿಮ್ಮಪ್ಪ)

ಜನಗಳಿಗೆ ಗೊತ್ತಾಗಬಾರದು ಎನ್ನುವ ಇರಾದೆ ಈ ಇಲಾಖೆಯ ಮಂತ್ರಿಗಳಿಗೆ ಇದೆಯೋ ಅಥವಾ ಈ ಇಲಾಖೆಯ ಅಧಿಕಾರಿಗಳಿಗೆ ಇದೆಯೋ ನನಗೆ ಗೊತ್ತಾಗಲಿಲ್ಲ. ಈ ಇಲಾಖೆಗೆ ಸಂಬಂಧಪಟ್ಟ ವರದಿಯನ್ನು ಇಂಗ್ಲೀಷಿನಲ್ಲಿ ತಯಾರಿಸಿ ನಮಗೆ ಕೊಟ್ಟಿದ್ದಾರೆ. ಈ ಸಹಕಾರಿ ಇಲಾಖೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ, ಎಷ್ಟು ಕುಲಗೆಟ್ಟಿದೆ ಎಂಬುದನ್ನು ಜನತಾ ಭಾಷೆಯಾದ ಕನ್ನಡ ಭಾಷೆಯಲ್ಲಿ ಅದರ ವಿವರಗಳನ್ನು ಹೇಳುವುದಕ್ಕೆ ತಾವು ತಯಾರಿಲ್ಲ. ಎಲ್ಲಿಯವರೆಗೆ ತಾವು ಈ ಸಹಕಾರಿ ರಂಗದ ವ್ಯವಹಾರ ಮತ್ತು ಅವ್ಯವಹಾರಗಳನ್ನು ಜನತಾ ಭಾಷೆಯಲ್ಲಿ ಹೇಳುವುದಕ್ಕೆ ತಯಾರಿಲ್ಲ, ಅಲ್ಲಿಯವರೆಗೆ ಈ ಸಂಸ್ಥೆ ಈ ಸಹಕಾರಿ ಆಂದೋಳನ ಉದ್ಧಾರವಾಗುವುದಿಲ್ಲ. ಆದ್ದರಿಂದ ಇನ್ನು ಮುಂದಾದರೂ ಕೂಡ ತಾವು ಈ ಸಹಕಾರಿ ಇಲಾಖೆಯ ವರದಿಯನ್ನು ಕನ್ನಡದಲ್ಲಿ ಮುದ್ರಿಸಿಕೊಡಬೇಕೆಂದು ನಾನು ಹೇಳುತ್ತೇನೆ. ಈಗ ತಾವೇನು ವರದಿಯನ್ನು ಕೊಟ್ಟಿದ್ದೀರಿ ಇದನ್ನು ಬರೀ ಹೆಸರಿಗೆ ಮಾತ್ರ ಕೊಟ್ಟಿದ್ದೀರಿ. ಈ ವರದಿಯಲ್ಲಿ ಈ ಸಹಕಾರಿ ರಂಗದಲ್ಲಿ, ಆಡಳಿತದಲ್ಲಿ ಎಲ್ಲೆಲ್ಲಿ ಕೆಟ್ಟಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿಲ್ಲ. ಇದರಲ್ಲಿ ಒಳ್ಳೆಯದನ್ನು ಹೇಳಬೇಕು, ಕೆಟ್ಟದ್ದನ್ನೂ ಹೇಳಬೇಕು. ಒಳ್ಳೆಯದು ಯಾವುದು ಕೆಟ್ಟದ್ದು ಯಾವುದು ಎಂಬುದನ್ನು ಜನತೆಗೆ ತೋರಿಸಿಕೊಟ್ಟು ಅದರಲ್ಲಿ ಸುಧಾರಣೆ ಮಾಡಿದ್ದನ್ನೂ ವರದಿಯಲ್ಲಿ ಕೊಡಬೇಕು, ನಾಮಕಾವಸ್ಥೆಗೆ ಒಂದು ವರದಿಯನ್ನು ಈ ಸಭೆಗೆ ಕೊಡುವುದು ಸರಿಯಲ್ಲ. ಸರ್ಕಾರದವರು ಕೊಟ್ಟಿರುವ ವರದಿಯ ಕೊನೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಸಹಕಾರಿ ಆಂದೋಳನ ಬಹಳ ವಿಸ್ತಾರವಾಗಿದೆ, ವಿಶಾಲವಾಗಿದೆ ಎಂದು ಬರೆದಿದ್ದಾರೆ. ಈ ಕ್ಷೇತ್ರ ವಿಶಾಲವಾಗಿ ವಿಸ್ತರಿಸುತ್ತಾ ಇದೆ. ಆದರೆ ಅದಕ್ಕೆ ಹತ್ತಿರತಕ್ಕಂತಹ ಕ್ಷಯ ಅದು ಕಾಲನ್ನು ತಿಂದುಬಿಟ್ಟಿದೆ. ಇನ್ನು ಇಡೀ ದೇಶವನ್ನು ತಿನ್ನುವುದಕ್ಕೆ ಕಾಯುತ್ತಾ ಇದೆ. ಆದ್ದರಿಂದ ಇನ್ನು ದೇಹವನ್ನು ಯಾವತ್ತು ಬೇಕಾದರೂ ಆವರಿಸಿ, ನಿಮ್ಮನ್ನು ಸಂಪೂರ್ಣವಾಗಿ ನಾಶ ಮಾಡುವ ಸ್ಥಿತಿಗೆ ಬಂದು ಬಿಡುತ್ತದೆ. ಇವತ್ತು ಜನರು ಸ್ಮಶಾನಕ್ಕೆ ಹೋದ ಹೆಣ ಮತ್ತು ಸೊಸೈಟಿಗೆ ಹೋದಂತಹ ಹಣ–ಇವೆರಡು ವಾಪಸ್ಸು ಬರುವುದಿಲ್ಲವೆಂದು ತಿಳಿದುಕೊಂಡಿದ್ದಾರೆ, ಇವೆಲ್ಲವನ್ನೂ ಲೆಕ್ಕ ಹಾಕಿದರೆ ಇದಕ್ಕೆ ಕೊಟ್ಟಿರತಕ್ಕಂತಹ ಹಣ ವಾಪಸ್ಸು ಬರುತ್ತದೆಯೋ ಎಂಬ ನಂಬಿಕೆ ಜನರಲ್ಲಿ ಇಲ್ಲ. ಆದ್ದರಿಂದ ಈ ಕ್ಷೇತ್ರವನ್ನು ದುರುಸ್ತಿಪಡಿಸುತ್ತಾರೆಂಬುದು ನಮ್ಮೆಲ್ಲರ ಆಶೆ. ಹಿಂದೆ ಬಂದರೆ ಒದೆಯಬೇಡಿ, ಮುಂದೆ ಬಂದರೆ ಹಾಯಬೇಡಿ ಎನ್ನತಕ್ಕಂತಹ ಮನುಷ್ಯರು ತಾವು. ಆದರೆ ಇವತ್ತು ಯಾವ ಸೊಸೈಟಿಯನ್ನು ನೋಡಿದರೂ, ಅಲ್ಲಿ ಅವ್ಯವಹಾರ ಇದ್ದೇ ಇದೆ. ಇದನ್ನು ಸರಿಪಡಿಸತಕ್ಕ ಕೆಲಸ ನಿಮ್ಮಿಂದ ಸಾಧ್ಯವೇ ? ಈ ಇಲಾಖೆಯು ನಿಮ್ಮಲ್ಲಿ ಮೂರು ನಾಲ್ಕು ವರ್ಷ ಇನ್ನು ಇದ್ದರೆ ಈ ರೀತಿಯ ಅವ್ಯವಹಾರ ಇನ್ನೂ ಮುಂದುವರಿಯುತ್ತದೆ. ತಾವು ಕಳೆದ ಒಂದು ವರ್ಷದಿಂದ ಈ ಅವ್ಯವಹಾರಗಳನ್ನು ಸುಧಾರಿಸುವುದಕ್ಕೆ ಏನೂ ಪ್ರಯತ್ನಪಟ್ಟಿಲ್ಲ. ತಮ್ಮ ವರದಿಯ ಪ್ರಕಾರ ನಮ್ಮ ರಾಜ್ಯದಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಸುಮಾರು 8 ಸಾವಿರ ಸೊಸೈಟಿಗಳು ಇವೆಯೆಂದು ಹೇಳಿದ್ದೀರಿ. ಸರ್ಕಾರ ಕೊಟ್ಟಿರತಕ್ಕಂತಹ ಉತ್ತರದ ಪ್ರಕಾರ ಎರಡು ಸಾವಿರ ಸೊಸೈಟಿಗಳು ವಯಬೇಲ್ ಸೊಸೈಟಿಗಳು ಇವೆಯೆಂದು ಹೇಳಿದ್ದಾರೆ. ಉಳಿದವುಗಳು ಏನಾಗಿವೆ ಎಂಬುದನ್ನು ಇದರಲ್ಲಿ ಹೇಳಿಲ್ಲ. ನಮ್ಮ ಇಡೀ ರಾಜ್ಯದಲ್ಲಿರುವ ಎಲ್ಲಾ ಸೊಸೈಟಿಗಳ ಬಗ್ಗೆ, ಡಿ ಸಿ ಸಿ ಬ್ಯಾಂಕುಗಳ ಬಗ್ಗೆ, ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟ್ ಬಗ್ಗೆ, ರೆಡ್ಡಿ ಬ್ಯಾಂಕುಗಳ ಬಗ್ಗೆ— ಇತ್ಯಾದಿಗಳ ಬಗ್ಗೆ ತಮಗೆ ಇದರಲ್ಲಿ ಹೇಳುವುದಕ್ಕೆ ಸಮಯ ಇರಲಿಲ್ಲವೆ ? ನೀವಾದರೂ ಸಹ ವ್ಯವಸಾಯ ಕ್ಷೇತ್ರದಲ್ಲಿರತಕ್ಕಂತಹ ಸೊಸೈಟಿಗಳು ಎಷ್ಟು, ಜಿಲ್ಲಾ ಬ್ಯಾಂಕುಗಳು ಎಷ್ಟು ಮತ್ತು ಬ್ಯಾಂಕುಗಳಲ್ಲಿ ಎಷ್ಟು ಹಣ ತಿಂದು ಹಾಕಿದ್ದಾರೆ, ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ ಇತ್ಯಾದಿಗಳ ಸಂಪೂರ್ಣವಾದ ವರದಿಯನ್ನು ತಯಾರು ಮಾಡಿಲ್ಲ. ಏಕೆಂದರೆ ಇಂತಹ ವರದಿಯನ್ನು ತಯಾರು ಮಾಡಿದರೆ ಅದು ಒಂದು ಮಹಾಭಾರತ ಅಥವಾ ರಾಮಾಯಣವಾಗುತ್ತದೆ. ತಾವು ತಮ್ಮ ವರದಿಯನ್ನು ಕೇವಲ 12ವರೆ ಪುಟದಲ್ಲಿ ಕೊಟ್ಟಿದ್ದೀರಿ. ಇಂಥ ವರದಿಯನ್ನು ಕೊಟ್ಟರೆ ನಾವು ಸಹಕಾರ ಆಂದೋಳನದ ಬಗ್ಗೆ ಯಾವ ರೀತಿಯಲ್ಲಿ ಚರ್ಚೆ ಮಾಡಬೇಕು ? ಆದ್ದರಿಂದ ಈ ಒಂದು ಪ್ರಯತ್ನಕ್ಕೆ ತಾವು ಕೈಹಾಕಬೇಡಿ. ನಿಮ್ಮ ಹುಳುಕನ್ನು ನೀವು ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಒಂದು ವಿವರವಾದ ಸಹಕಾರೀ ಆಂದೋಳನದ ಚಿತ್ರವನ್ನು ಈ ಸದನದ ಮುಂದೆ ಇಡಬೇಕು. ಆದ್ದರಿಂದ ಇವತ್ತು ಪಶು ಸ್ವಭಾವದ ಜನರು ಒಂದು ಕಡೆ ಇದ್ದಾರೆ; ನಿಮ್ಮ ಇಲಾಖೆಯಲ್ಲಿ ಕರುಳನ್ನು ಕಿತ್ತು ತಿನ್ನತಕ್ಕ ಜನರು ಇನ್ನೊಂದು ಕಡೆ ಇದ್ದಾರೆ. ಇವೆರಡರ ಮಧ್ಯ ಇರತಕ್ಕದ್ದು ಈ ರಾಜ್ಯದ ಸದನ ಮತ್ತು ಜನರು. ಆದ್ದರಿಂದ ಇಂತಹ ಸಹಕಾರೀ ಕ್ಷೇತ್ರದಲ್ಲಿ ಸಾರ್ವಜನಿಕರ, ಸರ್ಕಾರದ ಹಣವನ್ನು ತಿಂದು ತೇಗುತ್ತಾ ಇರತಕ್ಕಂತಹ ಜನರನ್ನು ನಾವು

ಸಾರೋದ್ಧಾರವಾಗಿ ಕಾಣುತ್ತಿದ್ದೇವೆ. ಇದು ಸಹಕಾರೀ ಕ್ಷೇತ್ರದಲ್ಲಿ ಕಾಣುತ್ತಿದ್ದ ನಿಜವಾದ ಚಿತ್ರ. ಈ ಸಹಕಾರಿ ಆಂದೋಳನದ ತತ್ವದಿಂದ ಗ್ರಾಮಾಂತರ ಪ್ರದೇಶಗಳ ಜನರ ಏಳಿಗೆಯಾಗಬೇಕೆಂದು ಇಂತಹ ಸಂಸ್ಥೆಗಳು ಪ್ರಾರಂಭವಾದವು. ಇದರ ಉದ್ದೇಶ ಬಡ ಜನರನ್ನು ಶ್ರೀಮಂತರ ಶೋಷಣೆಯಿಂದ ತಪ್ಪಿಸಬೇಕೆಂದು ಇರುವುದು. ಆದರೆ ಯಾವ ಉದ್ದೇಶದಿಂದ ಇದು ಪ್ರಾರಂಭವಾಯಿತೋ, ಅವನ್ನು ಈಡೇರಿಸದೆ, ಯಥಾ ಪ್ರಕಾರವಾಗಿ ಶ್ರೀಮಂತರ ಕೈಗೆ ಇದು ಪುನಃ ಹೋಗಿ ನಿಂತಿದೆ. ಇವತ್ತು ಇಂತಹ ಸಂಸ್ಥೆಗಳು ಲಾಭಕೋರರ ಕೈಗೆ ಹೋಗಿ ಜನರ ಶೋಷಣೆಯಲ್ಲಿ ಇವರು ಸಂಪೂರ್ಣವಾಗಿ ತೊಡಗಿದ್ದಾರೆ. ಇದರಿಂದಾಗಿ ಜನರನ್ನು ಇನ್ನೊಂದು ವಿಧದಲ್ಲಿ ಶೋಷಣೆ ಮಾಡತಕ್ಕಂತಹ ವ್ಯವಸ್ಥೆ ಇವತ್ತು ಉಂಟಾಗಿದೆ. ನಮ್ಮ ರಾಜ್ಯದಲ್ಲಿ ಶೇಕಡಾ 30 ಪರ್‌ಸೆಂಟ್ ವಿದ್ಯಾವಂತರು ಇದ್ದಾರೆ. ಆದರೆ ನಮ್ಮಲ್ಲಿರತಕ್ಕಂತಹ ಅವಿದ್ಯಾವಂತರು ಇಂಥ ಸಹಕಾರೀ ಸಂಘಗಳಿಗೆ ಹೋದರೆ ಏನು ಅನಾಹುತವಾಗುತ್ತದೋ ಎಂಬ ಭಯ ಜನರಲ್ಲಿ ಉಂಟಾಗಿದೆ. ಇದರಿಂದಾಗಿ ಮುಗ್ಧ ಜನರು ಇಂತಹ ಸಹಕಾರೀ ಸಂಘಗಳಿಗೆ ಹೋಗಿ ಅನುಕೂಲ ಪಡೆಯುತಕ್ಕಂತಹ ಅವಕಾಶ ಕಡಿಮೆಯಾಗಿದೆ. ಇವತ್ತು ಯಾವುದೇ ಸಹಕಾರ ಸಂಘವನ್ನು ತೆಗೆದುಕೊಂಡರೆ ಅಲ್ಲಿ ಹಣ ಲಪಟಾಯಿಸಿ ಜನರ ಶೋಷಣೆ ನಡೆಯುವುದು ಜಾಸ್ತಿಯಾಗಿದೆಯಲ್ಲದೆ ಸಾಮಾನ್ಯ ಜನರಿಗೆ ಈ ಸಹಕಾರ ಸಂಘಗಳಿಂದ ಯಾವ ತರದ ಸಹಾಯವೂ ಸಿಗುತ್ತಾ ಇಲ್ಲ. ಇದರಿಂದಾಗಿ ಸಾಮಾನ್ಯ ಜನರು ಇಂತಹ ಸಹಕಾರ ಸಂಘಗಳಿಂದ ಸಾಧ್ಯವಾದಷ್ಟು ದೂರ ಇರುತ್ತಾರೆ. ಅವರು ದೂರ ಇದ್ದ ಹಾಗೆ ಜನರ ಶೋಷಣೆ ಮಾಡತಕ್ಕ ಜನರು ಇದರೊಳಗೆ ಸೇರಿಕೊಳ್ಳಲು ಅವಕಾಶವಾಗುತ್ತದೆ. ಈ ಹಿನ್ನೆಲೆಯಲ್ಲಿ ನಿಮ್ಮ ಸೊಸೈಟಿಗಳು ನಡೆಯುತ್ತಿವೆ. ನಿಮ್ಮ ಅಸಿಸ್ಟೆಂಟ್ ರಿಜಿಸ್ಟ್ರಾರ್‌ವರು, ಆಡಿಟರ್‌ಗಳ-ಇವರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇಂಥ ಜನರಿಗೆ ಸಹಕಾರವನ್ನು ಕೊಡುತ್ತಿದ್ದಾರೆ. ಇಲ್ಲದಿದ್ದರೆ 8–10 ವರ್ಷ ಒಂದು ಸೊಸೈಟಿಯಲ್ಲಿ ಹಣ ದುರುಪಯೋಗವಾದರೂ ಅದನ್ನು ಬಯಲಿಗೆ ಎಳೆಯುತಕ್ಕ ಪ್ರಸಂಗ ಇಲ್ಲಿಯವರೆಗೂ ಆಗಿಲ್ಲ. ಉದಾಹರಣೆಗೆ ನಮ್ಮ ಸಾಗರ ತಾಲೂಕಿನಲ್ಲಿರುವ ಒಂದು ಸಹಕಾರ ಸಂಘದಲ್ಲಿ ಒಬ್ಬ ಆಡಿಟರ್ 22 ಸಾವಿರ ದುರುಪಯೋಗವಾಗಿದೆ ಎಂದು ವರದಿ ಕೊಟ್ಟಿದ್ದಾರೆ. ಇನ್ನೊಬ್ಬರು ಆಡಿಟರ್ ಬಂದು ಹಾಗೆ ಆಗಿಲ್ಲವೆಂದು ಹೇಳಿದ್ದಾರೆ. ಇದನ್ನು ಹೇಗೆ ಸರಿಪಡಿಸುತ್ತೀರೆಂದು ನಾನು ಕೇಳುತ್ತೇನೆ.

ಬೆಂಗಳೂರು ಜಿಲ್ಲೆಯ ಅನೇಕ ಸೊಸೈಟಿಗಳಲ್ಲಿ ಹಣದ ಲುಕ್ಸಾನ್ ಎಷ್ಟಾಗಿದೆಯೆಂದರೆ, 25 ಲಕ್ಷದ 34 ಸಾವಿರ ರೂಪಾಯಿಗಳು. ಇದರಲ್ಲಿ ಕೇವಲ ಅಧಿಕಾರಿಗಳು ಹಣವನ್ನು ದುರುಪಯೋಗ ಮಾಡಿರತಕ್ಕದ್ದು 14 ಲಕ್ಷ 60 ಸಾವಿರ ರೂಪಾಯಿಗಳು. ಬೆಂಗಳೂರು ಜಿಲ್ಲೆ ಒಂದರಲ್ಲಿಯೇ ಇಷ್ಟು ಲುಕ್ಸಾನು ಆಗಿದೆ. ಇನ್ನು ಟಿ. ನರಸೀಪುರ, ಧಾರವಾಡ ಜಿಲ್ಲೆ ಮುಂತಾದ ಕೆಲವು ಕಡೆಗಳಲ್ಲಿ ಸೊಸೈಟಿಗಳಲ್ಲಿ ಎಷ್ಟೆಷ್ಟು ನಷ್ಟವಾಗಿದೆಯೋ ಗೊತ್ತಿಲ್ಲ. 1968-69ರಿಂದ 70-71ನೇ ಸಾಲಿಗೆ ತಾಲ್ಲೂಕು ಅಗ್ರಿಕಲ್ಚರಲ್ ಪ್ರೊಡ್ಯೂಸಿಂಗ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ 1 ಲಕ್ಷ 94 ಸಾವಿರ ರೂಪಾಯಿಗಳಷ್ಟು ನಷ್ಟವಾಗಿದೆ. ಇದಕ್ಕೆ 3 ಲಕ್ಷ 47 ಸಾವಿರ ರೂಪಾಯಿಗಳಷ್ಟು ಷೇರು ಬಂಡವಾಳವನ್ನು ಸರ್ಕಾರದವರು ಕೊಟ್ಟಿದ್ದಾರೆ. ಈ ಅಂಶಗಳನ್ನು ನಾನು ಸರ್ಕಾರದ ಉತ್ತರದಿಂದ ಶೇಖರಿಸಿಕೊಂಡು ತಂದಿರತಕ್ಕಂಥಾದ್ದು. ತಾಲ್ಲೂಕಿನ ಪ್ರತಿಯೊಂದು ವ್ಯವಸಾಯ ಮಾರ್ಕೆಟ್ ಸಮಿತಿಯಲ್ಲಿ ಮುಖ್ಯವಾಗಿ ತಾಲ್ಲೂಕಿನ ಕನ್‌ಸ್ಯೂಮರ್ಸ್ ಸೇವಾ ಸಹಕಾರ ಸಂಘವೇನಿದೆಯೋ ಅಲ್ಲಿ ಹಣದ ದುರುಪಯೋಗ ಕೆಲಸದಲ್ಲಿ ಸಂಪೂರ್ಣವಾಗಿ ನಿರತರಾಗಿದ್ದಾರೆ. ಇದರ ಬಗ್ಗೆ ನಿಶ್ಚಿತ ಕ್ರಮ ನಿಮ್ಮ ಅಧಿಕಾರಿಗಳಿಂದ ಆಗಲಿಲ್ಲ. ಅಲ್ಲಿನ ಜನರನ್ನು ಆಸಕ್ತಿಯಿಂದ ಹಿಡಿತದಲ್ಲಿಟ್ಟುಕೊಳ್ಳುವ ಬಗ್ಗೆ ಅಲ್ಲಿ ಇಂದು ಯಾರು ಸ್ಥಳೀಯ ಅಧಿಕಾರಿಗಳು ಇದ್ದಾರೆಯೋ ಅವರು ನೇರವಾಗಿ ಆಡಳಿತದಲ್ಲಿ ವಿಚಕ್ಷಣೆ ಇಟ್ಟುಕೊಳ್ಳದೇ ಇರುವುದರಿಂದ ಅವರ ಬೇಜವಾಬ್ದಾರಿ ವರ್ತನೆಯಿಂದ ಈ ಸಹಕಾರ ಸಂಘಗಳಲ್ಲಿ ಇಷ್ಟು ಹಣದ ದುರುಪಯೋಗ ಪ್ರಸಂಗಗಳು ನಡೆಯುತ್ತಿವೆ. ಆದರೂ ಅವನ್ನು ಮುಚ್ಚಿಹಾಕಿದ್ದಾರೆ. ಸಾರ್ವಜನಿಕ ಸೇವಾ ಮುಖಂಡರು ಹಾಗೂ ರಾಜಕಾರಣಿಗಳ ಒತ್ತಾಯದಿಂದ ಇಂಥಾದ್ದಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಇಂತಹುಗಳನ್ನು ಬಲಿಹಾಕುವುದಕ್ಕೆ ಸರ್ಕಾರದವರು ಯಾವರೀತಿಯಲ್ಲಿಯೂ ಪ್ರಯತ್ನವನ್ನು ನಡೆಸುತ್ತಾ ಇಲ್ಲ. ಆದ್ದರಿಂದ ಈಗ ಸಹಕಾರೀ ಆಂದೋಳನ ಯಶಸ್ವಿಯಾಗಬೇಕಾದರೆ ನಿಜವಾಗಿಯೂ ಬಡ ಜನರಿಗೆ ಇದರಿಂದ ಪ್ರಯೋಜನ ತಲುಪಬೇಕಾದರೆ, ಹಿತಾಸಕ್ತಿಗಳನ್ನು ಸ್ವಲ್ಪಮಟ್ಟಿಗೆ ದೂರ ಇಡಬೇಕು. ಅದಕ್ಕಾಗಿ ನಾನು ಒಂದು ತಿದ್ದುಪಡಿಯನ್ನು ತಂದಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಖಾಸಗೀ ವಿದ್ಯಾಶಾಲೆಗಳಲ್ಲಿ ಪ್ರತಿಯೊಂದಕ್ಕೂ ಒನ್‌ಮ್ಯಾನ್ ಕಮಿಷನ್ ಮಾಡಿದ ಹಾಗೆ ಸಹಕಾರ ಸಂಘಗಳಲ್ಲಿಯೂ ರಾಜ್ಯದಲ್ಲಿರತಕ್ಕ ರಾಜಕೀಯ ಮುಖಂಡರನ್ನೊಳಗೊಂಡಂತೆ ಒಂದು ಕಮಿಷನ್ನನ್ನು ರಚನೆಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಸೊಸೈಟಿ, ಎರಡು ಸೊಸೈಟಿಗಳು, ಒಂದು ಜಿಲ್ಲೆ, ಎರಡು ಜಿಲ್ಲೆಗಳು, ಒಂದು ತಾಲ್ಲೂಕು ಎರಡು ತಾಲ್ಲೂಕುಗಳು ಎಂಬುದಾಗಿ ಹೇಳಬಹುದು. ಎಲ್ಲೇ ಆಗಲಿ ಯಾವಾಗಲಾದರೂ ಒಂದು ಸೊಸೈಟಿ ಎಂದು ರಚನೆಮಾಡ ಕೂಡಲೇ ಅಲ್ಲಿ ಹಣದ ದುರುಪಯೋಗ, ಅಧಿಕಾರದ ದುರುಪಯೋಗ ಸರ್ವೇಸಾಧಾರಣವಾಗಿ ನಡೆಯುತ್ತದೆ. ಇದರ ಒಂದು ನಿಜವಾದ ಸ್ಥಿತಿಯನ್ನು ನಾವು ತಿಳಿಯಬೇಕಾದರೆ ಒಂದು ಆಯೋಗವನ್ನು ರಚನೆಮಾಡಬೇಕು. ಅದರಲ್ಲಿರತಕ್ಕ ಹೇಳಿಕೆಯನ್ನು ಬಯಲಿಗೆ ತರಬೇಕು. ಅದಕ್ಕಾಗಿ ಸೂಕ್ತ ಪರಿಹಾರ ಕ್ರಮವನ್ನು ತೆಗೆದುಕೊಳ್ಳಬೇಕು. ಪ್ರತಿಯೊಂದು ಸೊಸೈಟಿಯಲ್ಲಿ 2 ಲಕ್ಷ 1 ಲಕ್ಷ ಎಂಬುದಾಗಿ ಲೆಕ್ಕಗಳು ಇವೆಯೇ ವಿನಹ ಆ ಲಕ್ಷಗಳಿಗೆ ವಿವರಗಳೇ ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಇವೆಲ್ಲವೂ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವ್ಯಾಪ್ತಿಯೊಳಗೇ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ವಿಧಾನಮಂಡಲದ ಪಬ್ಲಿಕ್ ಅಕೌಂಟ್ಸ್ ಕಮಿಟಿ ಎಲ್ಲಾ ಸಂಸ್ಥೆಗಳನ್ನು ಹೋಗಿ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಸೂಕ್ತವಾದ ಡೈರೆಕ್ಷನ್‌ಗಳನ್ನು ಕೊಡಬಹುದು. ನಾವು ಈ ರಾಜ್ಯದಲ್ಲಿರುವ 25 ಸಾವಿರ ಸಂಸ್ಥೆಗಳನ್ನು ನೋಡುವುದಕ್ಕೆ ಆಗುವುದಿಲ್ಲ. ಅದು ಸಾಧ್ಯವೂ ಆಗುವುದಿಲ್ಲ. ಆದ್ದರಿಂದಲೇ ನಾನು ಇದಕ್ಕಾಗಿ ಒಂದು ಕಮಿಷನ್ನನ್ನು ರಚನೆಮಾಡುವುದು ಬಹಳ ಒಳ್ಳೆಯದೆಂದು ನನ್ನ ಸಲಹೆಮಾಡಿದೆ. ಇದನ್ನು ಪಕ್ಷಾತೀತವಾದ ದೃಷ್ಟಿಯಿಂದ ನೋಡಬೇಕು. ಬಹುತೇಕವಾಗಿ ನಾನು ನೋಡಿದ ಹಾಗೆ ಒಂದು ಜುಬ್ಬ ಒಂದು ಲೆದರ್ ಬ್ಯಾಗ್ ಹಿಡಿದುಕೊಂಡರೆ ಸಾಕು. ಅವನು ಸೊಸೈಟಿಯ ಪ್ರೆಸಿಡೆಂಟ್ ಅಥವಾ ಸೆಕ್ರೆಟರಿ ಆಗುತ್ತಾನೆ. ಅವರಿಗೆ ತಿಂಗಳಿಗೆ ಸಂಬಳ ಎರಡು ಸಾವಿರ, ಮೂರು ಸಾವಿರ ರೂಪಾಯಿ ಸಂಬಳ. ಒಂದು ವೇಳೆ ಅವನು ಮಾಡಿದ ತಪ್ಪನ್ನು ಯಾವನಾದರೂ ಒಬ್ಬ ಅಧಿಕಾರಿ ಹಿಡಿಯುವುದಕ್ಕೆ ಪ್ರಯತ್ನಮಾಡಿದರೆ, ಕೂಡಲೇ ನನ್ನ ಹತ್ತಿರವೋ, ಅಥವಾ ಮಿನಿಸ್ಟರ್ ಹತ್ತಿರವೋ ಬಂದು ಏನಾದರೂ ಒಂದು ವರದಿಮಾಡಿಬಿಡುತ್ತಾರೆ. ಈ ರಾಜ್ಯದಲ್ಲಿ ಬಹುತೇಕವಾಗಿ ಇಂತಹ ಸಂಸ್ಥೆಗಳಿವೆ. ಇದಕ್ಕೇನಾದರೂ ಒಂದು ಮದ್ದನ್ನು ನಾವು ಕಂಡುಹಿಡಿಯಬೇಕು. ಮತ್ತು ಎಂಟೈರಾಗಿ ಒವರ್‌ಹಾಲ್ ಮಾಡಬೇಕು. ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಒನ್‌ಮ್ಯಾನ್ ಕಮಿಷನ್ ಮಾಡಿದಹಾಗೆ ಇಲ್ಲಿಯೂ ಮಾಡಬೇಕೆಂದು ನನ್ನ ಸಲಹೆ.

ಶ್ರೀ ಪಾಟಾಳ್ ನಾಗರಾಜ್.—ಡಿಫಾಲ್ಟರ್ ಸೊಸೈಟಿ ಎಂಬುದಾಗಿ ಟ್ರೇಡ್ ಮಾರ್ಕ್ ಬೇರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ಶುದ್ಧೀಕರಣ ಮಾಡುವ ಪ್ರಯತ್ನವನ್ನು ಸರ್ಕಾರ ಮಾಡದೇ ಹೋದರೆ ಸಂಪೂರ್ಣವಾಗಿ ವಿನಾಶ ಹೊಂದುವ ಕಾಲ ಬಹಳ ಹತ್ತಿರದಲ್ಲಿಯೇ ಇದೆ. ಅದಕ್ಕೆ ಅವಕಾಶ ಮಾಡಿಕೊಡದೆ, ಈಗಲೇ ಕಣ್ಣು ತೆರೆದು ಈ ಶುದ್ಧೀಕರಣ ಪ್ರಯತ್ನಮಾಡುವುದಕ್ಕೆ ಒಂದು ಆಯೋಗವನ್ನು ರಚಿಸಿ ಸಹಕಾರ ಆಂದೋಳನವನ್ನು ಯಶಸ್ವಿಯಾಗಿ ಮಾಡಲಿ ಎಂಬುದಾಗಿ ತಮ್ಮನ್ನು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ ನಾನು ಈ ಡಿಮ್ಯಾಂಡನ್ನು ಸ್ವಾಗತಮಾಡುತ್ತೇನೆ. ಸರ್ಕಾರದವರು ಈಗ 4 ಸಾವಿರ ಕೋಟಿ ರೂಪಾಯಿಗಳ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮಾನ್ಯ ಸದಸ್ಯರು ತಿಳಿಸಿದಂತೆ ಇದು ಬಹಳ ವ್ಯಾಪಕವಾದ ಇಲಾಖೆಯಾಗಿ ಬೃಹದಾಕಾರವಾಗಿ ಬೆಳೆಯುತ್ತಿದೆ. ಈಗಾಗಲೇ ಮಾನ್ಯ ಸದಸ್ಯರು ಸೂಚಿಸಿದಂತೆ ಸುಮಾರು 20 ಸಾವಿರ ಸೊಸೈಟಿಗಳು ಕೆಲಸಮಾಡುತ್ತಿವೆ. ಅವರ ಅವುಗಳು ಯಾವ ರೀತಿ ಕೆಲಸ ಮಾಡುತ್ತಿವೆ, ಮತ್ತು ಸಮರ್ಪಕವಾದ ಕೆಲಸವಾಗಿದೆಯೋ ಇಲ್ಲವೇ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಹಕಾರ ಸಂಘಗಳಲ್ಲಿ ನೀವು ಕಂಡುಹಿಡಿಯಬೇಕಾಗಿರುವುದು ಅದರ ಅವ್ಯವಹಾರಗಳನ್ನು ನೋಡಿ ಸರಿಪಡಿಸಬೇಕಾದದು. ಯಾವುದೋ ಸೊಸೈಟಿ ವಿಷಯದಲ್ಲಿ ಯಾವುದೋ ರೀತಿಯಲ್ಲಿ ದುರುದ್ದೇಶವನ್ನು ಇಟ್ಟುಕೊಂಡು ನಾನು ಪ್ರಸ್ತಾಪಮಾಡುತ್ತಾ ಇಲ್ಲ. ಏನಾದರೂ ಪರಿಹಾರವನ್ನು ಕಂಡುಹಿಡಿದರೆ ನಿಜವಾಗಿಯೂ ಸಹಕಾರ ಸಂಘಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಇದರ ಬಗ್ಗೆ ದೀರ್ಘವಾಗಿ ಚರ್ಚೆಮಾಡುವುದಕ್ಕೆ ಅವಕಾಶ ಕೊಟ್ಟರೆ ಬಹಳ ಒಳ್ಳೆಯದು. ಇದನ್ನು ಕೇವಲ 5 ನಿಮಿಷ, 10 ನಿಮಿಷಗಳು ಈ ರೀತಿಯಾಗಿ ಚರ್ಚೆಮಾಡಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ.

ಉಪಾಧ್ಯಕ್ಷರು.—ನಾಳೆದಿನವೂ ಇದನ್ನು ಮುಂದುವರಿಸಬೇಕಾಗಿದೆ. ಆನಂತರ ಸೇಲ್ಸ್ ಟ್ಯಾಕ್ಸ್ ಬಿಲ್ಲನ್ನು ತಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾಳೆ ಸೇಲ್ಸ್ ಟ್ಯಾಕ್ಸ್ ಬಿಲ್ ಪಾಸ್ ಮಾಡಿದ ಮೇಲೆ ಕೋ-ಆಪರೇಟಿವ್ ಡಿಮ್ಯಾಂಡ್ ಮುಂದುವರಿಯಲಿದೆ. ಈಗ ಏನು ಮುನಿಸಿಪಾಲಿಟಿ ಡಿಮ್ಯಾಂಡ್ ಇದೆಯೋ ಅದು ಎಂದೂ ಇಲ್ಲಿ ಚರ್ಚೆಗೆ ಬರುತ್ತಿರಲಿಲ್ಲ. ಬೇರೆ ಡಿಮ್ಯಾಂಡ್‌ಗಳ ಜೊತೆಯಲ್ಲಿ ಅದರಲ್ಲಿಯೂ ಮಿಸಲೇನಿಯಸ್ ಡಿಮ್ಯಾಂಡ್‌ಗಳಲ್ಲಿ ಅದು ಬರುತ್ತಿತ್ತು. ಈಗ ಮಾನ್ಯ ಶ್ರೀ ಬಸವಲಿಂಗಪ್ಪನವರು ಬಹಳ ಸಂತೋಷದಿಂದ ಅದನ್ನು ಈ ಸಭೆಯ ಮುಂದಿಡುತ್ತಿದ್ದಾರೆ. ಆದ್ದರಿಂದ ಅದನ್ನೂ ಕೂಡ ನಾವು ಇಲ್ಲಿ ಚರ್ಚೆಮಾಡೋಣ.

ಶ್ರೀ ಕೆ. ಎಂ. ರುದ್ರಪ್ಪ.—ಈ ಒಂದು ಯೋಜನೆಯನ್ನು ಸರ್ಕಾರವಾಗಲೀ ಅಥವಾ ವಿಶ್ವ ಬ್ಯಾಂಕ್ ಆಗಲೀ ಮಾಡಲಿಲ್ಲ. ನಮ್ಮಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟ್ ಪ್ರಾರಂಭ ಮಾಡಬೇಕೆಂಬ ಒಂದು ಆಶೆ ಇದೆ. ತುಂಗಭದ್ರಾ ಯೋಜನೆಯನ್ನು ಮಾಡಿದ ಹಾಗೆ ಎಲ್ಲಾ ಪ್ರದೇಶಗಳಲ್ಲಿಯೂ ಮಾರ್ಕೆಟ್ ಬ್ಯಾಂಕ್‌ಗಳನ್ನು ವ್ಯಾಪಕವಾದ ರೀತಿಯಲ್ಲಿ ಮುಂದುವರಿಸಿಕೊಂಡು ಬರುವುದಕ್ಕೆ ಸರ್ಕಾರದವರು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು ಬಂದಿದ್ದಾರೆ. ಇದು ಸ್ವಾಗತಾರ್ಹವಾದುದಾಗಿದೆ. ಆದರೆ ಈ ಸಹಕಾರ ಸಂಘಗಳಿಂದ ವ್ಯವಸಾಯ, ಸಣ್ಣ ಕೈಗಾರಿಕೆ ಮತ್ತು ಹಳ್ಳಿಗಾಡಿನಲ್ಲಿ ವಿದ್ಯುಚ್ಛಕ್ತಿ ಒದಗಿಸುವ ವಿಚಾರದಲ್ಲಿ ಹೆಚ್ಚಿನ ಅನುಕೂಲ ಉಂಟಾಗಬೇಕು. ಗೃಹನಿರ್ಮಾಣ ಯೋಜನೆಯೂ ಸಹ ಸಹಕಾರ ಸಂಘಗಳಿಂದ ನಿರ್ಮಾಣವಾಗಿದೆ.

ಆದರೆ ಯಾವ ಸಹಕಾರ ಸಂಘವನ್ನು ನಾವು ಈ ದಿವಸ ತೆಗೆದುಕೊಂಡರೂ ಅದು ಖಾಸಗೀ ಜನರ ಕೈಯಲ್ಲಿದ್ದು ಯಾವುದೊಂದೂ ಪ್ರಾಮಾಣಿಕ ರೀತಿಯಿಂದ ಕೆಲಸ ಮಾಡುತ್ತಿಲ್ಲ; ಎನ್ನತಕ್ಕ ಟೀಕೆಗಳನ್ನು ಎಲ್ಲರೂ ಮಾಡುತ್ತಾರೆ. ನಾನು ಉದಾಹರಣೆಗಾಗಿ ಹೇಳುವುದಾದರೆ—ಸಕಲೇಶಪುರ ತಾಲ್ಲೂಕ್ ಬೆಳಗೋಡು ಎಂಬ ಒಂದು ಸೊಸೈಟಿಯಲ್ಲಿ ಸೆಕ್ರಟರಿ ಮತ್ತು ಒಬ್ಬ ಕ್ಲಾರ್ಕ್ ಒಂದು ಲಕ್ಷ 75 ಸಾವಿರ ರೂಪಾಯಿಗಳನ್ನು ಮಿಸ್‌ಅಪ್ರೋಪ್ರಿಯೇಟ್ ಮಾಡಿದ್ದಾರೆಂದು ಗೊತ್ತಾಗಿದೆ. ಆದರೆ ಇಲ್ಲಿಯವರೆಗೆ ಈ ಸಂದರ್ಭದಲ್ಲಿ ಯಾರನ್ನೂ ಪೋಲೀಸಿನವರು ದಸ್ತಗಿರಿ ಮಾಡಿಲ್ಲ; ಯಾರನ್ನು ಪ್ರಾಸಿಕ್ಯೂಟ್ ಮಾಡಿಲ್ಲ; ಯಾರ ಮೇಲೂ ಯಾವ ಕ್ರಮವನ್ನೂ ಜರುಗಿಸಿಲ್ಲ. ಇದರ ಕಡೆಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ಸೊಸೈಟಿಗಳ ವ್ಯವಹಾರಕ್ಕಾಗಿ ಆರ್ಬಿಟ್ರೇಟರ್ಸ್ ಎಂದು ಕೆಲವರನ್ನು ನೇಮಕ ಮಾಡುತ್ತಿದ್ದಾರೆ. ಇವರಿಂದೇನೂ ಪ್ರಯೋಜನವಾಗುತ್ತಿಲ್ಲ. ನಮ್ಮ ಕಡೆ ಇರತಕ್ಕ ಒಂದು ಸೊಸೈಟಿಯಲ್ಲಿ ಅಂದರೆ ಬೆಳಗೋಡು ಎಂಬ ಸೊಸೈಟಿಯಲ್ಲಿ ಹಣ ದುರುಪಯೋಗ ಮಾಡಿದವರನ್ನು ಅಲ್ಲಿ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದ್ದಾರೆ ಅಲ್ಲಿ ಹಣ ದುರುಪಯೋಗಿಸಿದ್ದು ಅವರು ಆ ಕಾರ್ಯದರ್ಶಿಮೇಲೆ ಕ್ರಮ ತೆಗೆದುಕೊಂಡದ್ದು ಕೇಸು ಎಲ್ಲಲಿಲ್ಲ. ಆದುದರಿಂದ ಸಾಧ್ಯವಾದ ಮಟ್ಟಿಗೂ ಈ ಆರ್ಬಿಟ್ರೇಟರ್ಸ್‌ನು ನೇಮಕ ಮಾಡತಕ್ಕ ಕಾಲದಲ್ಲಿ ಪದವೀಧರರನ್ನು ನೇಮಕ ಮಾಡಿಕೊಳ್ಳುವುದು ಅಷ್ಟು ಮುಖ್ಯವಲ್ಲ-ಅವರು ಲಾ ಗ್ರಾಜುಯೇಟುಗಳಾಗಿದ್ದರೆ ಒಳ್ಳೆಯದೆಂದು ಹೇಳುತ್ತೇನೆ. ಲಾಗ್ರಾಜುಯೇಟ ಗಳಾದರೆ ವಿಷಯ ಗಳನ್ನು ಚನ್ನಾಗಿ ವಿಮರ್ಶೆಮಾಡಿ ತೀರ್ಮಾನ ಮಾಡುತ್ತಾರೆ. ಆದರೆ ಹಾಲಿ ಇರತಕ್ಕ ಆರ್ಬಿಟ್ರೇಟರ್ ಕೆಲಸಕಾರ್ಯಗಳು ಸಮರ್ಪಕವಾಗಿಲ್ಲ. ಹೀಗಾಗಿ ಜನರು ಕೋರ್ಟಿಗೆ ಅಲೆಯುವುದಕ್ಕೆ ಪ್ರಾರಂಭವಾಗಿದೆ. ಈ ವಿಚಾರಕ್ಕೆ ಮಾನ್ಯ ಸಚಿವರು ತಮ್ಮ ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು ನನ್ನ ಕ್ಷೇತ್ರದಲ್ಲಿ ಬ್ಯಾಕರವಳ್ಳಿ ಎಂಬ ಒಂದು ಸೊಸೈಟಿಗೆ ಒಬ್ಬ ಪೈಡ್ ಸೆಕ್ರೆಟರಿಯನ್ನು ಹಾಕಿದ್ದಾರೆ. ಆದರೆ ಆತನು ಅದೇ ಸ್ಥಳದವನು; ಆತನಿಗೆ ಅಲ್ಲಿ ಹೊಲ ಗದ್ದೆ ತೋಟಗಳೆಲ್ಲಾ ಇವೆ. ಈ ವಿಚಾರ ಸಂಪೂರ್ಣವಾಗಿ ಅಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರರಿಗೆ ಗೊತ್ತಿದೆ. ಅವನ ಬಗ್ಗೆ ಜನರಿಂದ ಅನೇಕ ದೂರುಗಳ ಅರ್ಜಿ ಅಧಿಕಾರಿಗಳಿಗೆ ಕೊಟ್ಟಾಗ್ಯೂ ಏನು ಕ್ರಮ ಕೈಗೊಳ್ಳಲಿಲ್ಲ. ಇದರ ಈ ದಿವಸ ಆತನಿಂದ ಆ ಸೊಸೈಟಿಯಲ್ಲಿ 60 ಸಾವಿರ ರೂಪಾಯಿ ದುರುಪಯೋಗವಾಗಿದೆ ಎಂದು ಜನರು ಹೇಳುತ್ತಿದ್ದಾರೆ. ಹೀಗಾದರೆ ಈ ಸಹಕಾರ ತತ್ವದಲ್ಲಿ ಜನರಿಗೆ ನಂಬಿಕೆ ಉಳಿಯಬೇಕು ಎಂದರೆ ಹೇಗಾಗುತ್ತದೆ ?

ಇನ್ನು ವೇರ್‌ಹೌಸಿಂಗ್ ಕಾರ್ಪೊರೇಷನ್ನಿನ ವಿಚಾರಕ್ಕೆ ಬಂದರೆ ಇದೊಂದು ಅಟಾನಮಸ್ ಬಾಡಿ. ರೈತನು ತಾನು ಬೆಳೆದ ದವಸಧಾನ್ಯಗಳಲ್ಲಿ ಇದರಲ್ಲಿ ಸ್ಟಾಕ್ ಇಡುವುದು ಬಹಳ ಒಳ್ಳೆಯದು ಎಂದು ಹೇಳುತ್ತಾ ಇದ್ದಾರೆ. ಅಲ್ಲಿ ಇಡತಕ್ಕ ದಾಸ್ತಾನಿಗೆ ಬ್ಯಾಂಕುಗಳು ಸಾಲ ಕೊಡುತ್ತವೆ. ಆದರೆ ರಾಜ್ಯದಲ್ಲಿ ಇಂಥವು ಕೇವಲ 35 ಕಡೆಗಳಲ್ಲಿ ಮಾತ್ರ ಇರುತ್ತವೆ. ಆದರೆ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ವೇರ್‌ಹೌಸ್ ಇರಬೇಕೆಂದು ಸಲಹೆಮಾಡುತ್ತೇನೆ.

(ಶ್ರೀ ಕೆ. ಎಂ. ರುದ್ರಪ್ಪ)

ಈ ಕಾರ್ಪೋರೇಷನ್ ಮ್ಯಾನೇಜಿಂಗ್ ಡೈರೆಕ್ಟರ್ ಐ.ಸಿ.ಎಸ್. ಆಫೀಸರ್ ಇರತಕ್ಕದ್ದು. ಅಂಥವರನ್ನೇ ಇದಕ್ಕೆ ನೇಮಕ ಮಾಡಬೇಕಾದ್ದು ಅಗತ್ಯ. ಸರ್ಕಾರ ಮುಂದೆ ಸಗಟು ವ್ಯಾಪಾರವನ್ನು ಕೈಗೊಳ್ಳಬೇಕೆಂಬ ಇರಾದೆ ಇರುವುದರಿಂದ ಇವುಗಳನ್ನು ಮಾಡಬೇಕಾದ್ದು ಅಗತ್ಯ. ಇನ್ನು ಕೆಲವು ರೈಸ್‌ಮಿಲ್ಲುಗಳಲ್ಲಿ ಸರ್ಕಾರದವರು ತಮ್ಮ ಮಾಲನ್ನು ಇಟ್ಟಿದ್ದಾರೆ. ಅವು ಅಷ್ಟು ಸಮರ್ಪಕವಾಗಿ ಕೆಲಸಮಾಡುತ್ತಿಲ್ಲ. ನಮ್ಮಲ್ಲಿ ಸರ್ಕಾರದವರು ಲೆವಿ ಬಗ್ಗೆ ವಸೂಲ್ಮಾಡಿದ್ದ 14 ಲಕ್ಷ ಕ್ವಿಂಟಾಲ್ ಭತ್ತವನ್ನು ಈ ಕೆಲವು ರೈಸ್ ಮಿಲ್ಲುಗಳಲ್ಲಿ ಇಟ್ಟಿದ್ದರು. ಆ ಭತ್ತವನ್ನು ಸಕಾಲದಲ್ಲಿ ಇವರು ಎತ್ತದೆ ಇದ್ದ ಕಾರಣ ಅಷ್ಟೂ ಭತ್ತ ಕೊಳೆತು ಕೆಟ್ಟು ಹೋಯಿತು. ಅದನ್ನು ಜನರು ಇನ್ನು ಬಳಸುವುದಕ್ಕೆ ಸಾಧ್ಯವಿಲ್ಲ. ಆ ಕೊಳೆತು ಹೋದ ಭತ್ತ ಇನ್ನೂ ಹಾಗೆ ಅಲ್ಲಿ ಬಿದ್ದಿದೆ. ಅವರಲ್ಲಿ ಕೆಟ್ಟಿರತಕ್ಕ ಭತ್ತದ ಮೂಟೆಗಳನ್ನು ಎಲ್ಲಿ ಒಳ್ಳೆಯ ಭತ್ತ ದಾಸ್ತಾನು ಇದೆಯೋ ಅಲ್ಲಿಗೆ ಸಾಗಿಸಿ ಆ ಒಳ್ಳೆ ಭತ್ತದ ಜಾಗದಲ್ಲಿ ಈ ಕೆಟ್ಟ ಭತ್ತ ಇಟ್ಟು ಒಳ್ಳೇ ಭತ್ತವನ್ನು ರೈಸ್ ಮಿಲ್ಲಿನವರು ಮಾರಾಟ ಮಾಡುತ್ತಿದ್ದಾರೆ. ಸರ್ಕಾರದವರು ಇದನ್ನು ಮೊದಲು ತಡೆಗಟ್ಟಬೇಕು.

ಇನ್ನು ಡಿ. ಸಿ. ಸಿ. ಬ್ಯಾಂಕುಗಳ ವ್ಯವಹಾರದ ಬಗ್ಗೆ ಅನೇಕರು ಪ್ರಸ್ತಾಪಮಾಡಿದ್ದಾರೆ. ಅನೇಕ ಡಿ. ಸಿ. ಸಿ. ಬ್ಯಾಂಕುಗಳಲ್ಲಿ ಒಬ್ಬೊಬ್ಬರೇ ಹತ್ತಾರು ವರ್ಷಗಳ ಕಾಲ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅದಕ್ಕೆ ಅವಕಾಶವಿಲ್ಲದೆ ಸರ್ಕಾರದವರು ಕಾನೂನನ್ನು ತಿದ್ದುಪಡಿ ಮಾಡಿ ಯಾರೇ ಆಗಲಿ ಎರಡು ಟರ್ಮಿಗೆ ಮೀರಿ ಅಧ್ಯಕ್ಷರಾಗಿರುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಇಲ್ಲವಾದರೆ ಅಲ್ಲಿ ಗುಂಪುಗಳ ರಾಜಕೀಯ ಉಂಟಾಗಿ ಅದರ ವ್ಯವಹಾರ ಕೆಡುವುದಕ್ಕೆ ಆಸ್ಪದವಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದು.

ಇನ್ನು ಕನ್‌ಸ್ಯೂಮರ್ಸ್ ಕೋ—ಆಪರೇಟಿವ್ ಸೊಸೈಟಿಗಳ ವಿಚಾರವಾಗಿ ಅದರಲ್ಲೂ ಈ ಸಕ್ಕರೆ ಮಾರಾಟದ ಬಗ್ಗೆ ಅನೇಕ ವಿಷಯಗಳನ್ನು ಹೇಳಿದ್ದಾರೆ. ಕೆಲವು ಕಡೆ ಈ ಸೊಸೈಟಿಗಳಿಗೆ ಕೊಡುವುದಕ್ಕಾಗಿ ಕೆಲವು ಮೂಟೆ ಸಕ್ಕರೆಯನ್ನು ಕೊಟ್ಟಿದ್ದಾರೆ. ಅವರು ಬಳಕೆದಾರರಿಗೆ ಒಂದೆರೆಡು ಕೆ.ಜಿ. ಯನ್ನು ಕೊಟ್ಟು ಉಳಿದುದನ್ನೆಲ್ಲಾ ಬ್ಲಾಕ್‌ನಲ್ಲಿ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಅಲ್ಲಿ ಇವರ ಮಾರಾಟದ ಬಗ್ಗೆ ಯಾವ ರಿಜಿಷ್ಟರೂ ಇದ್ದ ಹಾಗೆ ನಾನು ಕಾಣೆ. ಇದನ್ನು ಸರ್ಕಾರ ಹತೋಟಿಗೆ ತಾರದಿದ್ದರೆ ಖಂಡಿತ ಸಾಮಾನ್ಯ ಜನರಿಗೆ ಸಹಾಯಮಾಡುವುದಕ್ಕಾಗುವುದಿಲ್ಲ.

ಇನ್ನು ಸಹಕಾರ ಇಲಾಖೆಯಲ್ಲಿ ಕೆಲಸವಿಲ್ಲದೆ ಇರತಕ್ಕ ಅನೇಕ ಅಧಿಕಾರಿಗಳಿದ್ದಾರೆ. ರಿಜಿಸ್ಟ್ರಾರ್, ಅಡಿಷನಲ್ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್ ಹೀಗೆ ಅನೇಕ ಹುದ್ದೆಗಳನ್ನು ನಿರ್ಮಿಸಿ ವೃಥಾ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಇದರಿಂದ ದಕ್ಷತೆ ಕುಗ್ಗಿದೆ, ಅನೇಕ ಕಡೆ ಕೆಲಸಗಳು ಓವರ್‌ಲ್ಯಾಪಾಗಿ ಯಾವುದೂ ಸಕಾಲಕ್ಕೆ ಸರಿಯಾಗಿ ನಡೆಯುತ್ತಿಲ್ಲ. ಇನ್ನು ಇವರು ಕೋರ್ಟಿನಲ್ಲಿ ದಾಖಲು ಮಾಡತಕ್ಕ ನೂರು ಕೇಸುಗಳಲ್ಲಿ 99 ಡಿಸ್‌ಮಿಸ್ ಆಗುತ್ತವೆ. ಆದುದರಿಂದ ಇನ್ನು ಮುಂದೆ ಈ ಕೇಸುಗಳನ್ನು ಕೋರ್ಟಿಗೆ ದಾಖಲ್ಮಾಡುವುದಕ್ಕೆ ಮೊದಲು ಪ್ರಾಸಿಕ್ಯೂಷನ್ ಬಾಬಿನಲ್ಲಿರುವ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಸಹಾಯವನ್ನು ಪಡೆದು ಅನಂತರ ಇವುಗಳನ್ನು ಕೋರ್ಟಿಗೆ ದಾಖಲೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಇದಕ್ಕೆ ಅಗತ್ಯವಾದ ಬದಲಾವಣೆಯನ್ನು ನಮ್ಮ ಕೋ-ಆಪರೇಟಿವ್ ಆಕ್ಟಿನಲ್ಲಿ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಬಾಬಿನಬಗ್ಗೆ ಹೇಳುವುದಾದರೆ ಇದು ಈ ದಿವಸ ಸರಿಯಾದ ರೀತಿಯಲ್ಲಿ ಎಲ್ಲೂ ಕೆಲಸಮಾಡುತ್ತಿಲ್ಲ ಎಂದು ಹೇಳಬಹುದು. ಹಾಸನ ತಾಲ್ಲೂಕಿನಲ್ಲಿ ಕಟ್ಟಾಯ ಎಂಬ ಒಂದು ಗ್ರಾಮದಲ್ಲಿ ಕುಂಬಾರರಿಗೆ—ಮಡಕೆಗಳನ್ನು ಮಾಡತಕ್ಕವರಿಗೆ ಸಾಲ ಕೊಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಆ ಕುಂಬಾರರೇ ಇಲ್ಲ ಎಂದು ಹೇಳುತ್ತಿದ್ದಾರೆ. ಅಲ್ಲಿ ಯಾವ ಸಹಕಾರ ಸಂಘವೂ ಇಲ್ಲ ಎಂದು ಹೇಳುತ್ತಿದ್ದಾರೆ. ಹೀಗೆ ಅನೇಕ ತಪ್ಪುಗಳು ನಡೆಯುತ್ತಿವೆ. ಇವುಗಳನ್ನು ಬಗೆಹರಿಸಬೇಕು. ಆದರೆ ನಮ್ಮ ಮಂತ್ರಿಗಳು ಬಹಳ ಒಳ್ಳೆಯವರು; ದಕ್ಷರು; ಸತ್ಯವಂತರು. ಆದರೆ ಇವರು ಇನ್ನೂ ಬಿಗಿಯಾಗಿ ಕೆಲಸಮಾಡಿ ಸಹಕಾರ ತತ್ವ ಯಶಸ್ವಿಯಾಗುವಂತೆ ಇವರು ಕೆಲಸ ಮಾಡಬೇಕೆಂದು ಆಶಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

BUSINESS OF THE HOUSE

Mr. DEPUTY SPEAKER.—Before adjourning the House I have an announcement to make.

The Business Advisory Committee which met today has recommended that the House may adjourn on Saturday the 31st March and meet again on Monday the 9th April 1973.

The Committee has also recommended that the House may take up the consideration and passing of the Mysore Sales Tax (Amendment) Bill, 1973, tomorrow and allotted one hour for it.

To afford more time for the business I have dispensed with the Question Hour tomorrow.

Now the House will adjourn and meet tomorrow at 1 P. M.

The House adjourned at Ten Minutes past Six of the Clock to meet again at Nine of the Clock on Tuesday, the 27th March 1973.

WD 20213—GPB—550—18-7-1974

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 27th March 1973/Chaitra 6, 1895 (Saka Era)

The House met in the Assembly Chamber, Vidhana Soudha, at One of the Clock.

MR DEPUTY SPEAKER [SRI. B. P. KADAM] in the Chair.

NOTICE OF ADJOURNMENT MOTION

re : Elections in Haliyal

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷರೇ, ನಾನು ಒಂದು ನೋಟಿಸ್‌ನ್ನು ಕಳುಹಿಸಿದ್ದೆ. ನಾನು ಆ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ ಹಳಿಯಾಳ್‌ನಲ್ಲಿ ಇತ್ತೀಚೆಗೆ ಪುರಸಭಾ ಚುನಾವಣೆ ನಡೆಯಿತು. ಆ ಪುರಸಭಾ ಚುನಾವಣಾ ಪ್ರಚಾರಕ್ಕಾಗಿ ಪೌರಾಡಳಿತ ಸಚಿವರಾದ ಶ್ರೀ ಮಾನ್ ಬಿ. ಬಸವಲಿಂಗಪ್ಪನವರು ಮತ್ತು ಪಾರ್ಟಿ ಅಧ್ಯಕ್ಷರೂ ಕೂಡ ಒಟ್ಟಿಗೆ ಹೋಗಿದ್ದರು. ಆ ಸಮಯದಲ್ಲಿ ಅವರ ಕಾರಿಗೂ ಕಲ್ಲಿನ ಏಟು ಬಿದ್ದು ಕಾರಿಗೂ ಜಖಂ ಆಗಿ ಬಹಳ ತೊಂದರೆಗಳಾಯಿತು. ಅವರೂ ಕೂಡ ಅಲ್ಲಿನ ಚುನಾವಣೆಯಲ್ಲಿ ಸಂಪೂರ್ಣವಾಗಿ ಪರಾಭವ ಹೊಂದಿದ್ದಾರೆ. ಅಲ್ಲಿಯ ಫಲಿತಾಂಶವನ್ನು ನೋಡಿದರೆ ಈ-ರೀತಿ ಇದೆ—ಆಡಳಿತ ಪಕ್ಷಕ್ಕೆ 4. ವಿರೋಧ ಪಕ್ಷಕ್ಕೆ 11 ಬಂದಿದೆ. ಈ ರೀತಿ ಇದ್ದ ಮೇಲೆ ನನಗೆ ಏನು ಅನಿಸುತ್ತದೆ ಎಂದರೆ ಈ ಬಡ್ಜೆಟ್ ಅಧಿವೇಶನದಲ್ಲಿ ನಾವು ಇಲ್ಲ ಆ ಬಗ್ಗೆ ಚರ್ಚೆ ಮಾಡಬೇಕಾದರೆ, ಹೇಗೆ ಮಾಡಬೇಕು ? ಆಡಳಿತ ಪಕ್ಷದವರು ಸಂಪೂರ್ಣವಾಗಿ ಈಗಾಗಲೇ ಜನತೆಯ ಬೆಂಬಲವನ್ನು ಕಳೆದು ಕೊಂಡಿದ್ದಾರೆ. ಇದೇ ರೀತಿ ಉಡುಪಿ ಚುನಾವಣೆಯಲ್ಲೂ ಜನತೆಯ ಬೆಂಬಲವನ್ನು ಕಳೆದುಕೊಂಡಿದ್ದಾರೆ. ಇಷ್ಟೇ ಅಲ್ಲ, ಮೊನ್ನೆ ನಡೆದ ಪದವೀಧರರ ಕ್ಷೇತ್ರದಲ್ಲೂ ಕೂಡ ಜನತೆಯ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಈ ರೀತಿ ಎಲ್ಲಾ ಚುನಾವಣೆಗಳಲ್ಲೂ ಕೂಡ ಜನತೆಯ ಬೆಂಬಲವನ್ನು ಕಳೆದುಕೊಂಡಿದ್ದಾರೆ ಎಂದು ಈ ಚುನಾವಣೆಯಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದುದರಿಂದ ನನಗೆ ಏನು ಅನಿಸುತ್ತದೆ ಎಂದರೆ ಅವರು ಈ ಎಲ್ಲಾ ಚುನಾವಣೆಗಳಲ್ಲೂ ಬಿದ್ದು ಹೋಗಿರುವುದರಿಂದ ಈ ರಾಜ್ಯಸರ್ಕಾರವನ್ನು ಆಳುವುದಕ್ಕೆ ಅವರಿಗೆ ಸರಿಯಾದ ಒಂದು ಅಧಿಕಾರವಿಲ್ಲ ಎಂದು ನನ್ನ ಮನವಿ.

Sri M. H. JAYAPRAKASH NARAYAN (Sirsi).—May I know whether the Chair has permitted Sri Vatal Nagaraj to make a statement ?

Sri M. MALLAPPA (Birur).—I rise to a point of order. Under what rule the hon. member is making a statement ?

---

†Indicates that remarks or speeches have not been revised by the member concerned.

Mr DEPUTY SPEAKER.—The Hon. member Sri Vatal Nagaraj has already been replied and he must be content with it. His adjournment motion has nothing to do with the elections at Haliyal or other Municipal Elections. He must give an adjournment motion of a definite matter of urgent public importance. The House is not concerned with the Municipal Elections results. These are all party matters.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—I raise a point of order ಅಧ್ಯಕ್ಷರೇ, ಮಾನ್ಯ ಸದಸ್ಯರಾಗಿರತಕ್ಕಂಥ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಇದ್ದಕ್ಕಿದ್ದ ಹಾಗೆ ಎದ್ದು ನಿಂತು ಈ ಒಂದು ಮುನಿಸಿಪಾಲಿಟಿಯಲ್ಲಿ ಆಗಿರತಕ್ಕಂಥ ಚುನಾವಣೆಯ ಫಲಿತಾಂಶದ ಬಗ್ಗೆ ಅವರು ಸ್ಟೇಟ್‌ಮೆಂಟ್ ಮಾಡುವುದು ಸರಿಯೇ ? ಅವರ ಸ್ಟೇಟ್‌ಮೆಂಟ್ ಬಗ್ಗೆ ಈ ದಿವಸದ ಕಾರ್ಯಕಲಾಪದ ಯಾವ ಪಟ್ಟಿಯಲ್ಲೂ ಕೂಡ ಸೇರಿಲ್ಲ. ಅವರು ಕೊಟ್ಟಂಥ ನೋಟೀಸನ್ನು ತಾವು ಆಲೋ(ಮಾಡಿಲ್ಲ. ಆದುದರಿಂದ ಅವರು ಈಗ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವರಿಗೆ ಯಾವ ವಿಧವಾದ ಹಕ್ಕು ಇದೆ ಎನ್ನುವುದನ್ನು ತಿಳಿಸಬೇಕು.

Mr. DEPUTY SPEAKER.—There is great force in what Sri Jayaprakash Narayain says. The Hon. member Sri Vatal Nagaraj has been replied and he must be satisfied with it. Now let us go to further discussion on the Demands for Grants listed in the agenda.

ಶ್ರೀ ವಾಟಾಳ್ ನಾಗರಾಜ್.– ನನ್ನ ಪ್ರಶ್ನೆ ಇಷ್ಟೆ ಜನತೆಯ ಪ್ರಭಾವದಿಂದ ಇವರು ದೂರವಾಗಿದ್ದಾರೆ. ಇವರು ಸರ್ಕಾರದಲ್ಲಿ, ಮಂತ್ರಿಮಂಡಲದಲ್ಲಿ ಇರುವುದಕ್ಕೆ ಇವರಿಗೆ ನೈತಿಕ ಮಟ್ಟವಿಲ್ಲ. ಎಲ್ಲ ಚುನಾವಣೆಗಳಲ್ಲಿಯೂ ಸಂಪೂರ್ಣವಾಗಿ ಸೋಲುತ್ತ ಇದ್ದಾರೆ. ಆದ್ದರಿಂದ ನಾನು ಕೇಳುತ್ತಿದ್ದೇನೆ ......

Mr. DEPUTY SPEKER.—I have told the chapter is closed. Now let us take up the motion which has been moved yesterday.

Sri S. M. SHEERANALY CHANDRASEKHAR (Hosanagar).—I have raised a privilege issue which has not been answered. This kind of thing should be discouraged.

ಶ್ರೀ ವಾಟಾಳ್ ನಾಗರಾಜ್.—ಎಂ.ಪಿ ಸಿ.ಸಿ ಯಲ್ಲಿ ದೊಡ್ಡ ಕೋಲಾಹಲವಾಗಿದೆ, ಕೈ ಕೈ ಮಿಲಾಯಿಸಿದೆ ......

Mr DEPUTY SPEAKER.—You are repeating the samething, again and again. I cannot ask the Government to go out. There is some procedure. If you want you can bring a no confidence motion. I cannot give too much importance to that. I have faced two elections from that place and I know much about that place. Let us have a sense of proportion. A little restraint is necessary. Going on saying something which has no luster and fire is no use. Mr. Shamanna may speak now.

BUDGET ESTIMATES FOR 1973-74
DEMANDS FOR GRANTS

Demand No 23—(34) Co-operation

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಕೋ-ಆಪರೇಷನ್ ಡಿಮಾಂಡ್ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಇದನ್ನು ನಾನು ವಿರೋಧಿಸತಕ್ಕ ಒಂದು ಕಾರಣವಾದರೂ ಇಲ್ಲ. ನಮ್ಮ ರಾಜ್ಯಕ್ಕೆ ಮತ್ತು ನಮ್ಮ ದೇಶಕ್ಕೆ

ಏನಾದರೂ ಉತ್ತಮವಾದ ಸದ್ಗತಿ ಕಾಣಬೇಕಾದ ಪಕ್ಷದಲ್ಲಿ ಕೋ-ಆಪರೇಷನ್ ಬಿಟ್ಟರೆ ಇನ್ನು ಯಾವ ವಿಧದಲ್ಲಿಯೂ ಸಾಧ್ಯವಿಲ್ಲ. ಸಹಕಾರವಿಲ್ಲದೆ ಹೋದರೆ ನಮ್ಮ ರಾಜ್ಯದ ಪ್ರಗತಿ ಖಂಡಿತ ಸಾಧ್ಯವಾಗುವುದಿಲ್ಲ. ನಮ್ಮ ದೇಶದಲ್ಲಿ ಅರ್ಧಮರ್ಧ ಬಂದಿರತಕ್ಕ ಸಮಾಜವಾದಿಂದಲಾಗಲೀ, ಬಂಡವಾಳಶಾಹಿಯಿಂದಾಗಲೀ ನಮ್ಮ ರಾಜ್ಯಕ್ಕೆ ಸುಖಶಾಂತಿ ಮತ್ತು ಪ್ರಗತಿ ದೊರೆಯುವುದು ಬಹಳ ಕಷ್ಟ. ನಮ್ಮ ದೇಶದಲ್ಲಿ ಕೋ ಆಪರೇಷನ್ ಸರಿಯಾದ ರೀತಿಯಲ್ಲಿ ನಡೆಯದೆ ಇರುವುದಕ್ಕೆ ಮುಖ್ಯ ಕಾರಣವೆಂದರೆ ಅದನ್ನು ನಡೆಸತಕ್ಕವರು ಕೋ-ಆಪರೇಷನ್ ಪ್ರಿನ್ಸಿಪಲ್ಸ್ ಪ್ರಕಾರ ನಡೆಸದೆ ತಮ್ಮ ಸ್ವಾರ್ಥಕ್ಕೆ ಸಹಕಾರ ಸಂಸ್ಥೆಗಳನ್ನು ಬಳಸಿಕೊಂಡು ಬರುತ್ತಿರುವುದೇ ಮುಖ್ಯ ಕಾರಣವೆಂದು ನಾನು ತಿಳಿದುಕೊಂಡಿದ್ದೇನೆ. ಇಗ್ಲೆಂಡಿನಲ್ಲಿ ರಾಸ್ಡೇಲ್ ಪಯನಿಯರ್ಸ್ ಕೋ ಆಪರೇಟಿವ್ ಮೂವ್‌ಮೆಂಟ್ ಯಶಸ್ವಿಯಾಗಿ ಬೆಳೆಯಿತು ಮತ್ತು ರೈಫಿಸನ್ ಕ್ರೆಡಿಟ್ ಮೂವ್‌ಮೆಂಟ್ ಜರ್ಮನಿಯಲ್ಲಿ ಯಶಸ್ವಿಯಾಗಿ ಬೆಳೆಯಿತು. ಕಳೆದ 70 ವರ್ಷಗಳಿಂದ ನಮ್ಮ ದೇಶದಲ್ಲಿ ಸಹಕಾರ ಪ್ರಗತಿಯಾಗದೆ ಇರುವುದಕ್ಕೆ ಏನು ಕಾರಣವೆಂದು ನಾವು ಮುಖ್ಯವಾಗಿ ನೋಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಕೆಲವು ಮುಖ್ಯವಾದ ಸೊಸೈಟಿಗಳನ್ನು ಬಿಟ್ಟರೆ ಹೆಚ್ಚು ಭಾಗದ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದಕ್ಕೆ ಕಾರಣಗಳಾದರೂ ಇಷ್ಟೇ ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರದವರು ಸಹಕಾರ ಸಂಘಗಳನ್ನು ತಮ್ಮದೇ ಆದ ನಿಲುವಿನಲ್ಲಿ, ಸಹಕಾರ ಧೋರಣೆಯನ್ನು ಅನುಸರಿಸದೆ ಸರ್ಕಾರದ ಇಲಾಖೆಗಳ ರೀತಿಯಲ್ಲಿ ನಡೆಸಿಕೊಂಡು ಬರುತ್ತಿರುವುದು ಮುಖ್ಯವಾದ ಕಾರಣ. ಏಕೆಂದರೆ ಒಂದು ಶಿಶುವಿಗೆ ಬರೀ ಹಾಲು ಕೊಟ್ಟು ಸಾಕುವುದರಿಂದ ಹೆಚ್ಚಾಗಿ ಅದರ ಬೆಳವಣಿಗೆ ಸಾಧ್ಯವಾಗುವುದಿಲ್ಲ ಸಹಕಾರ ಸಂಘಗಳ ತತ್ವವನ್ನೇ ಮರೆತು ಶಿಶುವಿನೋಪಾದಿಯಲ್ಲಿ ಇವುಗಳನ್ನು ಸರ್ಕಾರದವರು ಬೆಳೆಸಿಕೊಂಡು ಬರುತ್ತಿರುವುದು ಶೋಚನೀಯ. ಅಲ್ಲದೆ ಕೆಲವರು ಕೋ ಆಪರೇಟರ್ಸ್ ತಮ್ಮ ಸ್ವಾರ್ಥಕ್ಕೆ ಇವುಗಳನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಸಹಕಾರ ಸಂಘದ ಸದಸ್ಯರೂ ಕೂಡ ತಮ್ಮ ಹಕ್ಕುಬಾಧ್ಯತೆಗಳ ಬಗ್ಗೆ ತಮ್ಮ ಕರ್ತವ್ಯದ ಬಗ್ಗೆ ಮತ್ತು ತಮಗೆ ಇರತಕ್ಕ ತೊಂದರೆ ತೊಡಕುಗಳನ್ನು ಯಾವ ರೀತಿ ನಿವಾರಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಗಮನವಿಲ್ಲದೆ ಸೊಸೈಟಿಗಳಲ್ಲಿ ಕೆಲವರೇ ಮನಾಪಲಿ ಮಾಡಿಕೊಂಡು ತಮ್ಮ ಸ್ವಂತಕ್ಕೆ ಬೆಳೆಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ. ಸರ್ಕಾರ, ಅಲ್ಲಿರತಕ್ಕ ಸದಸ್ಯರು ಮತ್ತು ಸ್ವಾರ್ಥಕ್ಕೆ ಬೆಳೆಸಿಕೊಳ್ಳುತ್ತಿರುವ ಡೈರೆಕ್ಟರುಗಳು ಇವರೆಲ್ಲರೂ ಸೊಸೈಟಿಗಳು ಚೆನ್ನಾಗಿ ನಡೆಯದೆ ಇರುವುದಕ್ಕೆ ಕಾರಣರು ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಸರ್ಕಾರದವರು ಸಾಧ್ಯವಾದಷ್ಟು ಸಹಕಾರ ಸಂಘಗಳು ತಮ್ಮ ಕಾಲ ಮೇಲೆ ತಾವು ನಿಂತುಕೊಂಡು ಕೆಲಸ ಮಾಡುವ ರೀತಿಯಲ್ಲಿ ತಕ್ಕ ಬಂದೋಬಸ್ತು ಮಾಡತಕ್ಕದ್ದು ಅತಿ ಮುಖ್ಯವಾದುದು.

ಸರ್ಕಾರದವರು ಚೆನ್ನಾಗಿ ಕೆಲಸ ಮಾಡತಕ್ಕ ಸೊಸೈಟಿಗಳಿಗೆ ಉತ್ತೇಜನ ಕೊಡದೆ ಕ್ಷುಲ್ಲಕ ಕಾರಣಗಳಿಂದ ಉತ್ತಮವಾಗಿ ಕೆಲಸ ಮಾಡತಕ್ಕ ಸೊಸೈಟಿಗಳಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡುತ್ತಿದ್ದಾರೆ. ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕು ಎಂದು ಸದಸ್ಯರು ಹೇಳುತ್ತಿದ್ದರೆ ಅಂಥ ಸೊಸೈಟಿಗಳನ್ನು ಹಾಗೆಯೇ ಬಿಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಬಸವನಗುಡಿ ಸೊಸೈಟಿ 70 ವರ್ಷಗಳಿಂದ ಕೆಲಸ ಮಾಡುತ್ತಿರುವ ಸೊಸೈಟಿ. ಕೆಲವು ಕಾಲ ಅದು ಕೆಲಸ ಮಾಡುತ್ತಿರಲಿಲ್ಲ. ಸೊಸೈಟಿಯ ಡೈರೆಕ್ಟರುಗಳು ಹೊಸದಾಗಿ ಚುನಾಯಿತರಾಗಿದ್ದು, ಉತ್ತಮವಾಗಿ ಕೆಲಸ ಮಾಡುವಂಥ ಕಾಲಕ್ಕೆ ಆಡಳಿತಾಧಿಕಾರಿಯವರನ್ನು ಹಾಕಿದರು. ಅದೇ ರೀತಿಯಲ್ಲಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಸೊಸೈಟಿ, ಮಲ್ಲೇಶ್ವರ ಸೊಸೈಟಿ ಹೀಗೆ ಪ್ರತಿಯೊಂದು ಸೊಸೈಟಿಯನ್ನು ಕೂಡ, ನವನಾಗರೀಕತೆಯಲ್ಲಿ ರಾಜ್ಯದ ಕೇಂದ್ರವಾಗಿರತಕ್ಕ ಒಂದು ಪಟ್ಟಣದಲ್ಲಿ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡುವುದರ ಧೋರಣೆ ಏನು ? ಇದರ ಜೊತೆಗೆ ಬೆಂಗಳೂರು ನಗರದಲ್ಲಿ ಒಂದು ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಇದೆ. ಅದೂ ಹಳೇ ಸೊಸೈಟಿ. ಅಲ್ಲಿ ಆಡಳಿತ ಚೆನ್ನಾಗಿಲ್ಲ ಎಂದು ಸದಸ್ಯರು ಅನೇಕ ಸಲ ಒತ್ತಾಯ ಮಾಡಿದ್ದರೂ ಕೂಡ ಅದರ ಬಗ್ಗೆ ಸಾಕಾದಷ್ಟು ಕಾರ್ಯಕ್ರಮ ಸರ್ಕಾರದವರು ತೆಗೆದುಕೊಂಡಿಲ್ಲ. ಆದುದರಿಂದ ಸರ್ಕಾರದ ಧೋರಣೆ ಏನಾಗಿದೆಯೆಂದರೆ ನ್ಯಾಯವಾಗಿ ಕೆಲಸ ಮಾಡತಕ್ಕ ಕಡೆ ಆಡಳಿತಾಧಿಕಾರಿಯನ್ನು ಹಾಕಿ ಡೈರೆಕ್ಟರುಗಳು ಅನ್ಯಾಯವಾಗಿ ನಡೆಯುವ ಕಡೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳದೆ ಇರುವುದರಿಂದ ಸೊಸೈಟಿಗಳ ಆಡಳಿತ ಹದಗೆಟ್ಟಿರುವುದನ್ನು ನಾವು ಅನೇಕ ಕಡೆ ನೋಡುತ್ತ ಇದ್ದೇವೆ. ಮತ್ತು ಡಿಸ್ಟ್ರಿಕ್ಟ್ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಕೆಲವರು ಇದೊಂದು ಮನಾಪಲಿ ರೀತಿಯಲ್ಲಿ ಮಾಡಿಕೊಂಡು ಅವರ ಎಲೆಕ್ಷನ್ನು ಹಾಗೂ ಇನ್ನಿತರ ಎಲ್ಲ ವ್ಯವಹಾರಗಳನ್ನೂ ಇಲ್ಲೇ ನಡೆಸಿಕೊಂಡು ಬರುತ್ತಿದ್ದಾರೆ, ಇದಕ್ಕೆ ಅವಕಾಶ ಕೊಡಬಾರದು. ಕಾನೂನಿನಲ್ಲಿರುವಂತೆ ಕೆಲಸಗಳು ಸಹಕಾರದ ಸಂಘಗಳಲ್ಲಿ ನಡೆಯಬೇಕು, ಸಹಕಾರ ಸಂಘಗಳಲ್ಲಿ ರಾಜಕೀಯಕ್ಕೆ ಅವಕಾಶ ಕೊಡಬಾರದು,

(ಶ್ರೀ ಟಿ. ಆರ್. ಶಾಮಣ್ಣ)

ಪ್ರಭಾವಕ್ಕೆ ಅವಕಾಶ ಕೊಡಬಾರದು ಕೆಲವು ಕಡೆ ಇರುವ ಸಂಘಗಳಲ್ಲಿ ಕೆಲವು ದುಷ್ಟ ಶಕ್ತಿಗಳು ಸೇರಿಕೊಂಡು ಅವುಗಳ ಕೆಲಸವನ್ನು ನಡೆಸಲು ಅಡ್ಡಿಯಾಗುತ್ತಿದೆ. ದಿನೇ ದಿನೇ ಸರಕಾರದ ಮೇಲೆ ಪ್ರಭಾವ ಬೆಳೆಯುತ್ತಿರುವುದು ಹೆಚ್ಚಾಗುತ್ತಿದೆ. ಕೋ ಆಪರೇಷನ್ ಕ್ಷೇತ್ರದಲ್ಲಿ ಪಾಲಿಟಿಕ್ಸ್‌ಗೆ ಅವಕಾಶ ಕೊಡಬಾರದು. ಕೆಲವು ಕಡೆ ಇರುವ ಸೊಸೈಟಿಗಳಲ್ಲಿ ಅವರೇ ಎಲ್ಲಾ ಅಧಿಕಾರಗಳನ್ನೂ ಗುತ್ತಿಗೆಗೆ ತೆಗೆದುಕೊಂಡಂತೆ ಕೆಲಸಗಳನ್ನು ಮಾಡುತ್ತಿರುವುದು ನೋಡಿ ತುಂಬಾ ವ್ಯಸನಕರವಾಗುತ್ತಿದೆ, ನಮ್ಮ ಮಂತ್ರಿಗಳು ಕೂಡ ಬಹು ಶ್ರದ್ಧೆಯಿಂದ ಕೆಲಸ ಮಾಡುವ ಮನಸ್ಸುಳ್ಳವರು ಎಂದು ಕೇಳಿದ್ದೇವೆ. ಆದರೆ ಅವರ ಮೇಲೂ ಒಂದು ರೀತಿಯಾದ ಶ್ರದ್ಧೆ ವಹಿಸಿ ಕೆಲಸ ಮಾಡುವ ಮಂತ್ರಿಗಳು ಎಂದು ಇದ್ದರೂ ಅವರ ಮೇಲೂ ಪ್ರಭಾವ ತರುತ್ತಿದ್ದಾರೆಂದು ತಿಳಿದು ಬರುತ್ತದೆ, ಇದಕ್ಕೆ ಮಂತ್ರಿಗಳ ಅವಕಾಶ ಕೊಡದೆ ಧೈರ್ಯವಾಗಿ ಕೆಲಸ ಮಾಡಿದರೆ ಅವರಿಗೂ ಒಂದು ಒಳ್ಳೆಯ ಹೆಸರು ಬರುತ್ತದೆ. ಎಲ್ಲ ಕಾರ್ಯಕ್ರಮಗಳನ್ನೂ ನಿಯಮಗಳಂತೆ ಕಟ್ಟುನಿಟ್ಟಾಗಿ ಮಾಡಿದರೆ ಇಲ್ಲಿನ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡಲು ಸಹಾಯವಾಗುತ್ತದೆ. ಈಗಿರುವ ರಿಜಿಸ್ಟ್ರಾರ್‌ರವರು ಕೂಡ ಸಹಕಾರ ಕ್ಷೇತ್ರದಲ್ಲಿ ಚೆನ್ನಾಗಿ ಕೆಲಸಮಾಡಬೇಕೆಂಬ ಆಸೆಯೇನೋ ಇದೆ ಮತ್ತು ಅವರ ಇಲಾಖೆಯಲ್ಲಿರುವ ಎಷ್ಟೋ ಶಕ್ತಿಗಳು ಅವರಿಗೆ ಮುನ್ನುಗ್ಗಲು ಅವಕಾಶ ಕೊಡುತ್ತಿಲ್ಲ. ಮತ್ತು ಅವರ ಕೈ ಕೆಳಗೆ ಇರುವ ಆಫೀಸರುಗಳು ಸರಿಯಾಗಿ ಸಹಕಾರ ಕೊಡುತ್ತಿಲ್ಲ ಎನ್ನುವುದು ನನಗೆ ಕಂಡುಬರುತ್ತಿದೆ. ಇದರಲ್ಲಿ ರಾಜಕೀಯ ಬೆಳೆಯುತ್ತಿರುವುದು ತುಂಬಾ ಶೋಚನೀಯವಾದ ವಿಚಾರ, ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡು ರಾಜಕೀಯ ಬರದಂತೆ ತಡೆಗಟ್ಟಬೇಕೆಂದು ಸಲಹೆ ಮಾಡುತ್ತೇನೆ. ಯಾರು ಇಂತಹ ಸಂಸ್ಥೆಗಳಲ್ಲಿ ರಾಜಕೀಯ ಮಾಡುತ್ತಾರೋ ಅವರು ದೇಶಕ್ಕೆ ದ್ರೋಹ ಬಗೆದಂತೆ ಆಗುತ್ತದೆ. ಈಗೇನೋ ಕೇಂದ್ರ ಸರಕಾರದವರು ರಾಜ್ಯಸರ್ಕಾರದವರು ಕೋ-ಆಪರೇಟೀವ್ ಸೊಸೈಟಿಗಳಿಗೆ ಅಪೆಕ್ಸ್ ಬ್ಯಾಂಕ್‌ಗಳ ಮೂಲಕ ಬೇಕಾದಷ್ಟು ಹಣ ಒದಗಿಸುತ್ತಿದ್ದಾರೆ. ಸಾಲಗಾರರಿಗೆ ಸಹಾಯ ಮಾಡಬೇಕೆಂದು ಸಾಲ ಕೊಟ್ಟು ಅವರಿಂದ ಶೇಕಡಾ 10–12ರಂತೆ ಬಡ್ಡಿ ವಸೂಲು ಮಾಡುತ್ತಿದ್ದಾರೆ. ಇದರಿಂದ ಬಡವರು ಉದ್ಧಾರವಾಗಲು ಸಾಧ್ಯವಿಲ್ಲ. ಶೇಕಡಾ ಮೂರರಂತೆ ಹಣ ಪಡೆದು ಅದನ್ನು ಬ್ಯಾಂಕುಗಳ ಮೂಲಕ ಹಂಚುವಾಗ ಅದು ಶೇಕಡಾ 8, 9 ಇಲ್ಲವೇ ಹತ್ತರವರೆಗೆ ಹೋಗುತ್ತದೆ; ಇದರಿಂದ ಬಡಜನರಿಗೆ ಬಡ್ಡಿ ದರ ಹೆಚ್ಚಾಗುತ್ತದೆ, ಬಡ್ಡಿ ಹೆಚ್ಚಾದರೆ ಕಂತು ಕಟ್ಟಲು ಕಷ್ಟವಾಗುತ್ತದೆ. ಇದಕ್ಕಾಗಿ ಇದರಲ್ಲಿ ತ್ರೀ ಟೈರು ಸಿಸ್ಟಂ ತರಬೇಕೇ ಇಲ್ಲವೇ ಟೂ ಟೈರ್ ಸಿಸ್ಟಂ ತರಬೇಕೇ ಎನ್ನುವುದನ್ನೂ ಇನ್ನೂ ಯೋಚನೆ ಮಾಡುತ್ತಿದ್ದಾರೆ. ಇದನ್ನು ಮಾಡುವಾಗ ಅದಷ್ಟು ಕನ್‌ಸ್ಯೂಮರ್ಸ್‌ಗೆ ಕಡಿಮೆ ದರದ ಬಡ್ಡಿಯಲ್ಲಿ ಸಾಲ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ಸಹಕಾರ ಸಂಘಗಳ ಮೂಲಕ ಸಾಲವನ್ನು ಕೊಟ್ಟಮೇಲೆ ಅದನ್ನು ವಸೂಲಿ ಮಾಡುವುದರಲ್ಲಿ ಯಾರ ದಾಕ್ಷಿಣ್ಯಕ್ಕೂ ಒಳಗಾಗದೇ ಕೊಟ್ಟ ಸಾಲವನ್ನು ವಾಪಸು ಪಡೆಯಲು ಬಿಗಿಯಾದ ಕ್ರಮ ಅನುಸರಿಸಬೇಕು. ಅನೇಕ ಸೊಸೈಟಿಗಳಲ್ಲಿ ನಾವು ನೋಡಿರುವಂತೆ ಶೇಕಡಾ 60 ರಿಂದ 70ರವರೆಗೆ ಕೊಟ್ಟ ಸಾಲದ ಹಣ ವಸೂಲಾಗದೇ ಹಾಗೇ ನಿಂತಿವೆ. ಆದುದರಿಂದ ಸರಕಾರ ಸಾಲ ವಸೂಲಾತಿ ಕ್ರಮವನ್ನು ಆದಷ್ಟು ತೀವ್ರವಾಗಿ ತೆಗೆದುಕೊಳ್ಳಬೇಕು. ಈಗ ಇರುವ ಸೇಲ್ಸ್ ಆಫೀಸುಗಳು ಬಹು ಕಡಿಮೆ. ಇವನ್ನು ಸಾಧ್ಯವಾದಷ್ಟು ಹೆಚ್ಚು ಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕು ಮತ್ತು ವಸೂಲಿ ಕಾರ್ಯಕ್ರಮದಲ್ಲಿ ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ಹಾಕಿಕೊಂಡು ಅನುಸರಿಸಬೇಕು ಎಂದು ಇಲ್ಲಿ ಸೂಚಿಸುತ್ತೇನೆ. ಕೋ–ಆಪರೇಟಿವ್ ಇನ್‌ಸ್ಟಿಟ್ಯೂಷನ್‌ಗಳಿಗಾಗಿ ಸಹಾಯ ಮಾಡುವಾದ ಅದಕ್ಕೆ ತಕ್ಕಂತೆ ವಾಪಸು ಕೊಡಬೇಕಾದ ಕಂತುಗಳನ್ನು ಸಕಾಲದಲ್ಲಿ ಬರುವಂತೆ ತಕ್ಕ ಕ್ರಮ ಅನುಸರಿಸಲೇಬೇಕು. ಇದರಲ್ಲಿ ಯಾರ ಪ್ರಭಾವಕ್ಕೂ ಒಳಗಾಗದೆ ಮಾಡಿದರೆ ಸರಕಾರಕ್ಕೆ ಬರುವ ಹಣ ಕೂಡಲೇ ವಸೂಲಾಗುತ್ತವೆ ಇಲ್ಲದೇ ಇದ್ದರೆ ಇಲ್ಲದ ಕಷ್ಟಗಳಿಗೆ ಬಡ ಜನ ಸಿಗುತ್ತಾರೆ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಇನ್ನು ಕೋ–ಆಪರೇಟಿವ್ ಸೊಸೈಟಿಗಳಲ್ಲಿ ಪ್ರತಿ ವರ್ಷವೂ ಆಡಿಟ್ ಆಗಲೇಬೇಕು ಮತ್ತು ಇದರ ವರದಿ ರಿಜಿಸ್ಟ್ರಾರ್‌ರವರಿಗೂ ಕಳುಹಿಸಬೇಕು, ಇದರಿಂದ ಯಾವ ಯಾವ ಸಂಸ್ಥೆಗಳು ಕೆಲಸ ಮಾಡುತ್ತಿವೆ ಮತ್ತು ಎಷ್ಟು ಡಿಫಂಕ್ಟ್ ಆಗಿವೆ ಎನ್ನುವುದು ತಿಳಿಯುತ್ತದೆ. ಮತ್ತು ಈಗ ಇರುವ ಕೋಆಪರೇಟಿವ್ ಆಕ್ಟನ್ನು ಸಮಗ್ರವಾಗಿ ಸುಧಾರಿಸಿ ಮಾಡುವುದು ಅಗತ್ಯವೆಂದು ತೋರುತ್ತದೆ. ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕೆ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಜೆ. ಎಸ್. ಅಮ್ಮಣ್ಣವರ್ (ಸದಲಗಾ).—ಮಾನ್ಯ ಅಧ್ಯಕ್ಷರೇ, ಇವೊತ್ತು ಸಹಕಾರ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವಾರು ಸಲಹೆಗಳನ್ನು ಮಾಡ ಬಯಸುತ್ತೇನೆ. ಈಗಾಗಲೇ ಕೆಲವಾರು ವಿರೋಧ ಪಕ್ಷದ ಸದಸ್ಯರುಗಳು ಮಾತನಾಡಿರುವು ದನ್ನು ನೋಡಿದರೆ ಇನ್ನು ಮುಂದೆ ಸಹಕಾರ ಸಂಘಗಳು ಇರಬೇಕೋ ಬೇಡವೋ ಎನ್ನುವಂತೆ ಒಂದು ಭಾವನೆ ಬರುವ ರೀತಿಯಲ್ಲಿ ಮಾತನಾಡಿದರು, ಆದರೆ ಸಹಕಾರದ ಅಂದೋಲನದಲ್ಲಿ ಕಳೆದ ಐವತ್ತು ವರ್ಷಗಳಿಂದಲೂ ಸಹಕಾರ ಸಂಘಗಳಿಂದ ಬಹಳ ಉಪಯೋಗಗಳಾಗುತ್ತಿವೆ, ರಾವಣನ ಹತ್ತು ಮುಖಗಳು ಇರುವಂತೆ ನಮ್ಮ ಸಹಕಾರ ಕ್ಷೇತ್ರ ಹತ್ತು ದಿಸೆಯಲ್ಲೂ ಬೆಳೆಯುತ್ತ ಒಳ್ಳೆಯ ಕೆಲಸಗಳನ್ನು ಮಾಡುತ್ತ ಬರುತ್ತಿವೆ. ಮತ್ತು ಚೆನ್ನಾಗಿ ಬೆಳೆಯುತ್ತಿದೆ. ಆದರೆ ಈ ದೃಷ್ಟಿಯಿಂದ ಹೇಳುವಾಗ ಕೆಲವಾರು ದೋಷಗಳು ಬರುತ್ತವೆ. ಅವುಗಳನ್ನು ಹೋಗಲಾಡಿಸಿದರೆ ನಮ್ಮ ಸಹ ಕಾರ ಸಂಘಗಳು ಎಲ್ಲ ದೇಶಗಳಿಗೂ ಒಂದು ಮಾದರಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಎಲ್ಲ ಸೊಸೈಟಿಗಳಲ್ಲೂ ದೋಷಗಳು ಇರುವುದಿಲ್ಲ. ಕೆಲವು ಸೊಸೈಟಿಗಳಲ್ಲಿ ಅವ್ಯವಹಾರಗಳಾಗಿವೆ ಎಂದು ಇಲ್ಲೂ ಕೂಡ ತಿಳಿಸಲಾಗಿದೆ. ನನ್ನ ತಾಲ್ಲೂಕಿನಲ್ಲಿ ಭೋಜ ಎನ್ನುವ ಗ್ರಾಮದಲ್ಲಿ ಒಂದು ಸೊಸೈಟಿ ಇದೆ. ಇದು ಬಹಳ ಉತ್ತಮವಾಗಿ ಕೆಲಸ ಮಾಡುತ್ತಿದೆ, ಇದೇ ರೀತಿ ಚಿಕ್ಕೋಡಿಯಲ್ಲಿ ರುವ ಅರಬನ್ ಬ್ಯಾಂಕು ಬಹಳ ಉತ್ತಮವಾಗಿ ಕೆಲಸ ಮಾಡುತ್ತಿದೆ. ಚಿಕ್ಕೋಡಿ ಲ್ಯಾಂಡು ಮಾರ್ಟ್‌ಗೇಜ್ ಬ್ಯಾಂಕು ಒಳ್ಳೆಯ ಕೆಲಸಗಳನ್ನು ಮಾಡುತ್ತಿವೆ. ಇಂತಹ ಕೆಲವು ಉತ್ತಮವಾದ ಸೊಸೈಟಿಗಳೂ ಇವೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಮಾತನಾಡಬಹುದಾಗಿತ್ತು. ಆದರೆ ಎಲ್ಲಿ ಕೆಲಸಗಳು ಚೆನ್ನಾಗಿ ಆಗುತ್ತಿಲ್ಲವೋ ಅಂತಹ ಸೊಸೈಟಿಗಳೇ ಜನರ ನಜರಿಗೆ ಬರುವುದು ಹೆಚ್ಚು. ಇದಲ್ಲಿರುವ ದೋಷಗಳನ್ನು ಸಕಾಲದಲ್ಲಿ ಸರಕಾರದ ಗಮನಕ್ಕೆ ತಂದರೆ ಅದನ್ನು ಕಾಯಿದೆ ಮೂಲಕ ಸರಿಪಡಿಸಬಹುದು. ಕೇವಲ ಸರಕಾರವೇ ಹಾಗೂ ಇದರ ಸಿಬ್ಬಂದಿಯವರೇ ಇದರಲ್ಲಿ ಚನ್ನಾಗಿ ಕೆಲಸ ಮಾಡಬೇಕೆಂದರೆ ಸರಿಯಲ್ಲ ಇದರಲ್ಲಿ ಜನತೆಯ ಸಹಕಾರವನ್ನೂ ತೆಗೆದು ಕೊಳ್ಳಲೇಬೇಕಾಗುತ್ತದೆ. ಜನತೆಯ ಅಭಿವೃದ್ಧಿಗೆ ಅನುಕೂಲವಾಗುವಂತಹ ಸಲಹೆಗಳನ್ನು ಮಾಡುವುದು ನಮ್ಮ ಕರ್ತವ್ಯ. ಇದನ್ನು ಮೊದಲು ತಿಳಿದುಕೊಳ್ಳಬೇಕೆಂದು ನನಗನಿಸುತ್ತದೆ. ಇನ್ನು ಕೆಲವಾರು ಸಮಸ್ಯೆಗಳು ಅಡಚಣೆಯಾಗಿವೆ. ಇಂದು ಬರಗಾಲಕ್ಕೆ ಸುಮಾರು 40–50 ತಾಲ್ಲೂಕುಗಳು ಸಿಕ್ಕಿವೆ, ಇಂತಹ ಬರಗಾಲದ ಪ್ರದೇಶದಲ್ಲಿರುವ ಜನಕ್ಕೆ ಸಹಕಾರದ ಸಾಲದ ಕಂತು ಗಳನ್ನು ಕೊಡಲು ಆಗುವುದಿಲ್ಲ. ಇದನ್ನು ಸ್ವಲ್ಪ ಕಾಲ ವಿಸ್ತರಿಸಬೇಕು. ಇವರಿಗೆ ಕೊಟ್ಟಿರುವ ಷಾರ್ಟ್ ಟರ್ಮ್ ಲೋನನ್ನು ಮೀಡಿಯಂ ಟರ್ಮ್ ಲೋನಾಗಿ ಪರಿವರ್ತಿಸಲು ಪ್ರಯತ್ನ ಮಾಡ ಬೇಕು ಮತ್ತು ಯಾರಿಗೆ ಸಾಲದ ಅವಧಿ ಐದು ವರ್ಷಗಳೆಂದು ಕೊಟ್ಟಿರುತ್ತಾರೋ ಅಂತಹವರಿಗೆ ಒಂದು ವರ್ಷ ಹೆಚ್ಚು ಕೊಟ್ಟು ಆರು ವರ್ಷಗಳೆಂದು ಮಾಡಬೇಕು. ಹತ್ತು ವರ್ಷದ ಅವಧಿಯವ ರೆಗೆ ದೀರ್ಘಾವಧಿ ಸಾಲ ಕೊಟ್ಟಿದ್ದರೆ ಅದನ್ನು 11 ವರ್ಷಗಳವರೆಗೆ ವಿಸ್ತರಣೆ ಮಾಡಬೇಕು ಷಾರ್ಟ್ ಟರ್ಮ್ ಸಾಲವನ್ನು ಮಧ್ಯವರ್ತಿ ಸಾಲವನ್ನಾಗಿ ಪರಿಗಣಿಸಬೇಕು.

1-30 P. M.

ಅಷ್ಟೇ ಅಲ್ಲದೆ ಕ್ಷಾಮ ಪೀಡಿತ ಪ್ರದೇಶಗಳಲ್ಲಿರುವ ಸಹಕಾರ ಸಂಘಗಳನ್ನು ಡಿಫಾಲ್ಟರ್ ಎಂದು ಟ್ರೀಟ್ ಮಾಡದೆ ಮುಂದಿನ ಸಾಲಿನಲ್ಲಿಯೂ ಅವಕ್ಕೆ ಸಾಲ ಒದಗಿಸುವ ಏರ್ಪಾಡು ಮಾಡ ಬೇಕೆಂದು ಹೇಳುತ್ತೇನೆ. ಇಂದು ಸಹಕಾರ ಸಂಘಗಳಲ್ಲಿ ನಾವು ದೋಷಗಳನ್ನು ಕಾಣುತ್ತಿರುವು ದಕ್ಕೆ ಕಾರಣ ಸರಿಯಾಗಿ ಆಡಿಟ್ ಆಗದಿರುವುದು. ಆಡಿಟ್ ಆಗುವುದರಲ್ಲಿಯೂ ರಾಜಕೀಯ ಬರು ತ್ತಿದೆ: ಮತ್ತು ಅಧಿಕಾರಿಗಳ ಕೈವಾಡವೂ ಇರುತ್ತದೆ. ಇದಕ್ಕೆ ಉದಾಹರಣೆ ಕೊಡಬೇಕೆಂದರೆ, ಚಿಕ್ಕೋಡಿ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಿಟ್ ಕಾಲಕ್ಕೆ ಜಾಯಿಂಟ್ ರಿಜಿಸ್ಟ್ರಾರ್ ಅವರು ಸಂಬಂಧಪಟ್ಟ ಆಡಿಟರ್‌ಗೆ ಕಾರ್ಖಾನೆಯ ಆಡಿಟ್ ಮಾಡುವುದಕ್ಕೆ ಮುನ್ನ ನಿಮ್ಮ ಜೊತೆಯಲ್ಲಿ ಮಾತನಾಡಬೇಕಾಗಿದೆ ಆದ್ದರಿಂದ ತಮ್ಮನ್ನು ಭೇಟಿ ಮಾಡಬೇಕೆಂದು ಪತ್ರ ಬರೆದಿದ್ದಾರೆ. ಈ ಬಗ್ಗೆ ರೆಕಾರ್ಡ್ ತರಿಸಿಕೊಂಡು ನೋಡಿದರೆ ತಿಳಿಯುತ್ತದೆ. ಈ ರೀತಿ ಜಾಯಿಂಟ್ ರಿಜಿಸ್ಟ್ರಾರ್ ಅವರು ಆಡಿಟ್ ವಿಚಾರದಲ್ಲಿ ಹಸ್ತಕ್ಷೇಪ ಮಾಡಿರಬೇಕಾದರೆ ಅದರಲ್ಲಿ ಅವರಿಗೆ ಸರ್ಕಾರದ ರಕ್ಷಣೆ ಇರ ಬೇಕೆಂದು ಭಾಸವಾಗುತ್ತದೆ. ಇದೇ ರೀತಿ ಚಿಕ್ಕೋಡಿಯ ಕನ್ಸ್ಯೂಮರ್ ಕೋ-ಅಪರೇಟಿವ್ ಸೊಸೈಟಿಗೆ ಈ ಹಿಂದಿನ ಸರ್ಕಾರದವರ ಹಸ್ತ ಇತ್ತು. ಈ ಸೊಸೈಟಿಯಲ್ಲಿ ಗೋಧಿಯ ವ್ಯವಹಾ ರದಲ್ಲಿ ಪ್ರತಿ ಟ್ರಕ್ ಲೋಡಿಗೆ 400 ರೂ. ಠರಾಯಿಸಿದ್ದರೂ 460 ರೂ. ಗಳವರೆಗೂ ಕೊಟ್ಟು ಒಂದು ಸಲ ಒಂದೇ ಟ್ರಕ್ ಲೋಡಿಗೆ 900 ರೂ. ಖರ್ಚು ಹಾಕಿದ್ದರೂ ಸಹ ಯಾರ ಮೇಲೂ ಕ್ರಮ ಇದುವರೆಗೆ ತೆಗೆದುಕೊಂಡಿಲ್ಲ. ಇಂದು ಒಬ್ಬರೇ ವ್ಯಕ್ತಿ ಎರಡು ಸಕ್ಕರೆ ಕಾರ್ಖಾನೆಗಳ ಡೈರೆಕ್ಟರಾ

(ಶ್ರೀ ಜೆ. ಎಸ್. ಅಮ್ಮಣ್ಣವರ್)

ಗಿದ್ದುಕೊಂಡು, ಇತರೇ ನೂರಾರು ಸೊಸೈಟಿಗಳಲ್ಲಿ ಮೇನೇಜಿಂಗ್ ಕಮಿಟಿಯ ಸದಸ್ಯರಾಗಿ ಸಹ ಇದ್ದಾರೆ. ಇದು ಸರಿಯಲ್ಲ. ಯಾವುದೇ ವ್ಯಕ್ತಿ ಎರಡು ಸಹಕಾರ ಸಂಘಗಳಿಗಿಂತ ಹೆಚ್ಚು ಸಹಕಾರ ಸಂಘಗಳಲ್ಲಿ ಪದಾಧಿಕಾರಿಯಾಗಿರಬಾರದು ಎಂದು ಕಾಯಿದೆ ಮಾಡಬೇಕು. ಮೊನ್ನೆ ಚರ್ಚೆಗೆ ಬಂದ ಬಿಲ್ ಪ್ರಕಾರ ಒಬ್ಬ ವ್ಯಕ್ತಿ 6 ವರ್ಷಗಳ ಕಾಲ ಅಧಿಕಾರದಲ್ಲಿರಬಹುದು. ಈ ರೀತಿ 6 ವರ್ಷಗಳ ಕಾಲ ಒಬ್ಬರೇ ಅಧಿಕಾರದಲ್ಲಿರುವುದಕ್ಕೆ ಬದಲು ಮುಂಚಿನಂತೆ ಮೂರು ವರ್ಷ ಇದ್ದರೆ ಸಾಕು. 3 ವರ್ಷಗಳಲ್ಲಿ ಜನರಿಗೆ ಒಳ್ಳೆಯ ಮಾರ್ಗ ದರ್ಶನ ಮಾಡಿದರೆ ಒಳ್ಳೆಯ ಲಾಭವಾಗುತ್ತದೆಂದು ನನಗನ್ನಿಸುತ್ತದೆ. ಮುಖ್ಯವಾಗಿ ಆಡಿಟ್ ಡಿಪಾರ್ಟ್‌ಮೆಂಟ್ ಕೋ ಆಪರೇಟಿವ್ ಡಿಪಾರ್ಟ್‌ಮೆಂಟಿನ ಕೈ ಗೆ ಇರಬಾರದು. ಅದೇ ಪ್ರತ್ಯೇಕವಾಗಿ ಇರುವಂತೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಇನ್ನೂ ಹತ್ತು ಸಕ್ಕರೆ ಕಾರ್ಖಾನೆಗಳು ಆಗುವುದಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಸಕ್ಕರೆ ಕಾರ್ಖಾನೆಗಳು ರಾಷ್ಟ್ರೀಕರಣವಾಗಬೇಕೆಂದು ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಈಗಾಗಲೇ ಕೊಟ್ಟಿದ್ದೇನೆ. ಈ ರೀತಿ ಮಾಡದೆ ಸಹಕಾರಿ ಸಂಘಗಳ ಮುಖಾಂತರವಾಗಲೀ ಅಥವಾ ಖಾಸಗೀಯವರಿಗೆ ಪ್ರಾರಂಭ ಮಾಡಲು ಅನುಮತಿ ಕೊಟ್ಟರೆ ಹೊಸ ರೀತಿಯ ಜಹಗೀರ್‌ದಾರರನ್ನು, ರಾಜ ಮಹಾರಾಜರನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶ ಕೊಟ್ಟಂತಾಗುತ್ತದೆ ಇಂತಹವರಿಂದ ಜನರ ಶೋಷಣೆ ಕೆಟ್ಟ ನ ರೀತಿಯಲ್ಲಿ ಆಗುತ್ತದೆ ಇವರುಗಳು ತಮಗೆ ಬೇಕಾದವರಿಗೆ ಅನುಕೂಲ ಮಾಡುತ್ತಾರೆಯೇ ಹೊರತು ಎಲ್ಲರಿಗೂ ಅನುಕೂಲ ಮಾಡುವುದಿಲ್ಲ ಈ ಕಾರಣದಿಂದ ಸರ್ಕಾರದವರೇ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಿ ಮೊದಲು 5 ವರ್ಷದವರೆಗೆ ನಡೆಸಿ ನಂತರ ಚುನಾವಣೆ ನಡೆಸಿ ಜನರ ಕೈಗೆ ಅಧಿಕಾರ ಕೊಡುವುದು ಒಳ್ಳೆಯದು. ಚಿಕ್ಕೋಡಿಯ ಸಕ್ಕರೆ ಕಾರ್ಖಾನೆ 3—4 ವರ್ಷದಿಂದ ನಡೆಯುತ್ತಿದೆ. ಇಲ್ಲಿ ನಡೆಯುತ್ತಿರುವ ಅನಾಹುತ ನೋಡಿದರೆ ಶರಾವತಿಯ ಕರ್ಮಕಾಂಡಕ್ಕಿಂತಲೂ ದೊಡ್ಡ ಕರ್ಮಕಾಂಡವಾಗಿವೆ ಎಂದು ಹೇಳಬಹುದು. ಆದರೂ ಇಲ್ಲಿಯವರೆಗೆ ಹಿಂದಿನ ಸರ್ಕಾರದವರೇ ಆಗಲೀ, ಈಗಿನ ಸರ್ಕಾರದವರೇ ಆಗಲಿ ಕ್ರಮ ತೆಗೆದುಕೊಂಡಿಲ್ಲ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಸಲುವಾಗಿ 700 ರಿಂದ 9 0 ಜನರು 1969 ನೇ ಇಸವಿಯಲ್ಲಿ ದುಡ್ಡು ಕೊಟ್ಟರು. ಆದರೆ ಆ ಜನರ ಮೆಂಬರ್‌ಷಿಪ್‌ನ್ನು ಇನ್ನೂವರೆಗೆ ಅಡ್ಮಿಟ್ ಮಾಡಿಕೊಂಡಿಲ್ಲ. ಇದೇ ರೀತಿಯ ಅನಾಹುತ ಸಂಕೇಶ್ವರದ ಸಕ್ಕರೆ ಕಾರ್ಖಾನೆಯಲ್ಲಿಯೂ ನಡೆದಿದೆ ಸಂಕೇಶ್ವರ ಸಕ್ಕರೆ ಕಾರ್ಖಾನೆಯವರು 10 ಲಕ್ಷ ರೂಪಾಯಿಗಳನ್ನು ಚಿಕ್ಕೋಡಿ ಕಾರ್ಖಾನೆಗೆ ವಿಶಿಷ್ಟ ಜನರನ್ನೇ ಮೆಂಬರ್ ಮಾಡಿಕೊಳ್ಳಲು ಕೊಟ್ಟಿದೆ. ಅದರ ಮೇಲೆ ಸರಕಾರ ಏನೂ ಕ್ರಮ ಕೈಕೊಂಡಿಲ್ಲಾ. ಟಾಟಾ ಮತ್ತು ಬಿರ್ಲಾದವರು ಕೆಲವೊಂದು ಎಂ. ಪಿ. ಗಳನ್ನು ಕಂಟ್ರೋಲ್ ಮಾಡುತ್ತಾರೆಂದು ಕೇಳಿದ್ದೇನೆ. ಅದೇ ರೀತಿ ಈ ಸಕ್ಕರೆ ಕಾರ್ಖಾನೆಯವರು ಕೆಲವೊಂದು ಎಂ. ಎಲ್. ಎ. ಗಳನ್ನು ಕಂಟ್ರೋಲ್ ಮಾಡುವ ಕಾಲ ಬರಬಹುದೆಂದು ನನಗನ್ನಿಸುತ್ತದೆ. ಯಾರು ಕಬ್ಬು ಬೆಳೆದಿರುತ್ತಾರೋ ಅವರಿಂದ ಕಬ್ಬು ಪಡೆಯುವುದಿಲ್ಲ. ಯಾರು ಕಬ್ಬು ಬೆಳೆಯುವುದಿಲ್ಲವೋ ಅಂತಹವರಿಗೆ ಕಬ್ಬು ಬೆಳೆಯಲು ಸಾಲ ಕೊಡುವುದು ನಡೆಯುತ್ತಿದೆ. ಇದೆಲ್ಲಾ ಹೋಗಬೇಕಾದರೆ ಈ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡುವುದೊಂದೇ ಮಾರ್ಗ ಎಂದು ನನ್ನ ಭಾವನೆ.

ಇನ್ನು ಈ ಸಹಕಾರಿ ಸಂಘಗಳಲ್ಲಿ ಆಡಳಿತ ಸರಿಯಾಗಿ ನಡೆಯದಿರುವುದಕ್ಕೆ ಕಾರಣವೆಂದರೆ ಸರಿಯಾದ ಟ್ರೈನಿಂಗ್ ಆದ ಸಿಬ್ಬಂದಿ ವರ್ಗ ಇಲ್ಲದಿರುವುದು. ಈ ಸಹಕಾರಿ ಸಂಘಗಳ ಆಡಳಿತ ವರ್ಗದವರು ತಮಗೆ ಬೇಕಾದವರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಆಡಳಿತದಲ್ಲಿ ಏನಾದರೂ ಲೋಪ ದೋಷ ಕಂಡುಬಂದಾಗ ಅದರ ಮೇಲೆ ಕಂಬಳಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ಕಾರಣದಿಂದ ಸಹಕಾರಿ ಸಂಘಗಳಿಗೇ ಆಗಲಿ, ಸೊಸೈಟಿಗಳಿಗೇ ಆಗಲಿ, ಸಕ್ಕರೇ ಕಾರ್ಖಾನೆಗಳಿಗೇ ಆಗಲೀ, ಪ್ರೊಸೆಸಿಂಗ್ ಯೂನಿಟ್‌ಗಳಿಗೇ ಆಗಲೀ ಅಭ್ಯರ್ಥಿಗಳನ್ನು ನೇಮಕ ಮಾಡುವ ವಿಚಾರದಲ್ಲಿ ಸ್ಟೇಟ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿ, ಆ ಕಮಿಟಿ ಮೂಲಕ ನೇಮಕ ಮಾಡಬೇಕು. ಈಗ ನೇಮಕವಾಗುತ್ತಿರುವ ಸಿಬ್ಬಂದಿ ವರ್ಗ ಏನಿದೆ ಅವರಿಗೆ ಜಮಾ ಖರ್ಚು ಸಹ ಬರೆಯುವುದಕ್ಕೆ ಬರುವುದಿಲ್ಲ : ಲೆಕ್ಕ ಪತ್ರ ಸರಿಯಾಗಿಡುವುದಕ್ಕೆ ಬರುವುದಿಲ್ಲ. ತಮ್ಮ ತಮ್ಮವರನ್ನೆಲ್ಲ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಮಿಸ್ ಅಪ್ರೋಪ್ರಿಯೇಷನ್ ಆಗುವುದಕ್ಕೆ ಅವಕಾಶವಾಗುತ್ತಿದೆ. ಈ ಅನಾಹುತಗಳು ತಪ್ಪಬೇಕಾದರೆ ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಯ ಮೂಲಕ ನೇಮಕ ಮಾಡಬೇಕೆಂದು ನನ್ನ ಸಲಹೆ.

ಇನ್ನು ಸಾಲ ಮರುಪಾವತಿ ಎಲ್ಲ ಕಡೆಯೂ ಅಷ್ಟೊಂದು ಸಮಾಧಾನಕರವಾಗಿ ಇಲ್ಲ. ಇದಕ್ಕೆ ರಾಜಕಾರಣಗಳು ಸಹಿತ ಕಾರಣರಿದ್ದಾರೆ. ಈ ವರ್ಷ 300 ರೂಪಾಯಿ ಸಾಲ ಕೇಳುವ ರೈತ ಮುಂದಿನ ವರ್ಷ 600 ರೂಪಾಯಿ ಸಾಲ ಬೇಕೆಂದು ಕೇಳುತ್ತಾನೆ. ಸಾಲಮರು ಪಾವತಿ ಕಡಿಮೆ ಯಾಗದಂತೆ ಬೇಡಿಕೆ ಹೆಚ್ಚುತ್ತಿದೆ. ಈ ಗುಣ ದೋಷವನ್ನು ಕಂಡುಹಿಡಿಯಲು ಕೂಲಂಕಷವಾಗಿ ವಿಚಾರ ಮಾಡಬೇಕಾಗಿದೆ. ಹಿಂದೆ ಮಾನ್ಯ ಕರಿಯಪ್ಪನವರು ಒಂದು ಠರಾವನ್ನು ಈ ಬಗ್ಗೆ ಮಂಡನೆ ಮಾಡಿದ್ದಾಗ ಅದನ್ನು ವಿಚಾರಣೆ ಮಾಡುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದರು. ಅದರಂತೆ ಈಗಿನ ಕಾಯಿದೆಯಲ್ಲಿರತಕ್ಕಂಥ ದೋಷಗಳನ್ನು ದುರಸ್ತಿ ಮಾಡಲು ಒಂದು ಸಮಿತಿ ನೇಮಕ ಮಾಡಬೇಕೆಂದು ನನ್ನ ಸಲಹೆ. ಅವರು ಕೂಲಂಕಷವಾಗಿ ವಿಚಾರ ಮಾಡಲಿ. ಮಾನ್ಯ ದೇವೇಗೌಡರು ಒಂದು ಸಲಹೆ ಕೊಟ್ಟರು ; ಏನೆಂದರೆ ಸಾಲ ಒಂದೇ ಸಂಸ್ಥೆಯ ಮೂಲಕ ಸಿಗ ಬೇಕೆಂಬುದು. ಜಪಾನ್‌ನಲ್ಲಿ ಈ ತರಹ ಮಾಡುತ್ತಿದ್ದಾರೆಂದು ನಾನು ತಿಳಿದಿದ್ದೇನೆ. ಈ ಕಾರಣ ದಿಂದ ಸರ್ಕಾರದವರು ಕೆಲವು ಒಂದು ಸ್ಥಳಗಳಲ್ಲಿ ಪ್ರಾಯೋಗಿಕವಾಗಿ ಆ ರೀತಿ ಮಾಡಿ ನೋಡಲು ಅಡ್ಡಿ ಏನೂ ಇಲ್ಲ.

ನಮ್ಮ ರಾಜ್ಯದಲ್ಲಿ ಅತ್ಯಂತ ಉತ್ತಮವಾಗಿ ಕೆಲಸ ಮಾಡಿದಂತಹ ದೀರ್ಘಾವಧಿ ಸಾಲ ವಿತರಣ ಸಂಸ್ಥೆಗಳ ವಿಷಯವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ ಉದಾಹ ರಣೆಗೆ ಹೇಳಬೇಕಾದರೆ 15 ಸಾವಿರ ಬಾವಿಗಳನ್ನು ತೋಡುವುದಕ್ಕಾಗಿ 20 ಕೋಟಿ ರೂಪಾಯಿಗ ಳನ್ನು ಸಾಲ ಕೊಡುವುದಕ್ಕಾಗಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಈಗಾಗಲೇ 36 ಸಾವಿರ ಬಾವಿಗಳು ಕಂಪ್ಲೀಟಾಗಿವೆ. 11677 ಪಂಪು ಸೆಟ್ಟುಗಳನ್ನು ಕೊಟ್ಟಿದ್ದಾರೆ. ಈ ರೀತಿ ಯಾಗಿ ಈ ದೀರ್ಘಾವಧಿ ಸಹಕಾರಿ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡಿವೆ ಎಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವು ದಕ್ಕೆ ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸು ತ್ತೇನೆ.

† ಶ್ರೀ ಟಿ. ರಾಮೇಗೌಡ (ದೊಡ್ಡ ಬಳ್ಳಾಪುರ).—ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಮಾತ ನಾಡಬೇಕೆಂಬ ಅಭಿಪ್ರಾಯ ಇರಲಿಲ್ಲ. ಮಾನ್ಯ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡಿದ್ದರ ದೆಸೆಯಿಂದ ನಾನು ಮಾತನಾಡಬೇಕಾಗಿ ಬಂತು. ಈಗ ಮಾನ್ಯ ಸಹಕಾರ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ನಾನು ಸರ್ವಸಮ್ಮತವಾಗಿ ಒಪ್ಪಿ ಅವುಗಳಿಗೆ ಬೆಂಬಲ ಕೊಡುತ್ತಾ ಈ ಸಂದರ್ಭದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳಬಯ ಸುತ್ತೇನೆ. ಸಹಕಾರ ತತ್ವವನ್ನು ಸರ್ವರೂ ಒಪ್ಪಿಕೊಳ್ಳುತ್ತಾರೆ. ಅದನ್ನು ಕಾರ್ಯರೂಪಕ್ಕೆ ತರುವಾಗ ಕೆಲವು ಅನುಕೂಲಗಳೂ ಆಗುತ್ತವೆ. ಅನಾನುಕೂಲಗಳೂ ಆಗುತ್ತವೆ. ಇದರಲ್ಲಿ ಏನಾದರೂ ಅನಾಹುತಗಳು ಆದಾಗ ಇದರಲ್ಲಿ ಕೆಲವರು ತಪ್ಪಿತಸ್ಥರು ಇದ್ದರೆ ಸತ್ಯವಾಗಿ ಕೆಲಸ ಮಾಡಿದವರನ್ನೂ ಅದರಲ್ಲಿ ಸೇರಿಸಿಕೊಂಡು ಅಪವಾದ ಮಾಡತಕ್ಕ ಕಾಲ ಈಗ ಬಂದಿದೆ. ಸಹಕಾರ ತತ್ವದ ಬಗ್ಗೆ ಅಭಿಪ್ರಾಯ ಕೊಡತಕ್ಕವರಲ್ಲಿ ಎರಡು ವಿಧ ಇದೆ. ಒಬ್ಬರು ಜನಗಳಲ್ಲಿ ಸಂಘಟನೆಯ ನ್ನುಂಟು ಮಾಡಿ ಸಂಘಗಳನ್ನು ಕಟ್ಟಿ ಅದನ್ನು ಬಲಪಡಿಸಿ ಅದನ್ನು ಬೆಳೆಸಿಕೊಂಡು ಬಂದರೆ ಅಂಥ ವರಿಗೆ ಸಮಾಜದಲ್ಲಿ ಒಂದು ಅವಕಾಶವನ್ನು ಕೊಡಬೇಕು ಎನ್ನುವವರು ಒಬ್ಬರು. ಸಹಕಾರ ಸಂಘಗಳ ವಿಚಾರವನ್ನು ತಿಳಿಯದೆ ಇನ್ನೊಬ್ಬರು ಹೇಳತಕ್ಕಂಥಾ ಮಾತುಗಳ ಆಧಾರದ ಮೇಲೆ ಸರ್ವರನ್ನೂ ಶೋಷಣೆ ಮಾಡತಕ್ಕವರು ಒಬ್ಬರು. ಶ್ರೀಮಾನ್ ಕಾಗೋಡು ತಿಮ್ಮಪ್ಪನವರಿಗೆ ಈ ಅಭಿಪ್ರಾಯ ಜಾಸ್ತಿ ಇದೆ ಎಂದು ಕಾಣುತ್ತದೆ. ಏತಕ್ಕೆಂದರೆ ಅವರಿಗೆ ಯಾವ ಸಹಕಾರ ಸಂಘ ದಲ್ಲಿಯೂ ಕೆಲಸ ಮಾಡಿ ವಿಷಯ ಗೊತ್ತಿಲ್ಲ. ಯಾವ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತವೆಯೋ, ಉತ್ತಮವಾಗಿ ಕೆಲಸ ಮಾಡುತ್ತವೆಯೋ ಅಂಥವರಿಗೆ ಪ್ರೋತ್ಸಾಹ ಕೊಡ ಬೇಕು. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಬೆಂಗಳೂರು ಜಿಲ್ಲಾ ಬ್ಯಾಂಕ್ ನಲ್ಲಿ ಸುಮಾರು 13—14 ಲಕ್ಷ ರೂಪಾಯಿಗಳನ್ನು ಅಧಿಕಾರ ವರ್ಗದವರು ತಿಂದಿದ್ದಾರೆ ಎಂದು ಹೇಳಿದರು. ಅದು ಸತ್ಯಕ್ಕೆ ದೂರವಾದ ಮಾತು.

ಶ್ರೀ ಕಾಗೋಡು ತಿಮ್ಮಪ್ಪ.—ಮಂತ್ರಿಗಳು ಏನು ಹೇಳಿದ್ದಾರೆ ಅದನ್ನು ನಾನು ಹೇಳುತ್ತಿ ದ್ದೇನೆ.

ಶ್ರೀ ಟಿ. ರಾಮೇಗೌಡ– ಮಂತ್ರಿಗಳು ಹೇಳಿರುವುದೂ ಸತ್ಯಕ್ಕೆ ದೂರವಾದ ಮಾತು. ಮಾನ್ಯ ಮಂತ್ರಿಗಳು ಸತ್ಯಕ್ಕೆ ದೂರವಾದ ಅಂಕಿ ಅಂಶಗಳನ್ನು ಅಧಿಕಾರಿಗಳಿಂದ ತರಿಸಿಕೊಂಡಿ ದ್ದಾರೆ, ಈ ಬಗ್ಗೆ ಅಧಿಕಾರಿಗಳು ಸುಳ್ಳು ಮತ್ತು ಸತ್ಯಕ್ಕೆ ದೂರವಾದ ಅಂಕಿ ಅಂಶಗಳನ್ನು ಕೊಟ್ಟಿ

(ಶ್ರೀ ಜಿ. ರಾಮೇಗೌಡ)

ದ್ದಾರೆ. ನಾನು ಬೆಂಗಳೂರು ಜಿಲ್ಲಾ ಬ್ಯಾಂಕಿನಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಆದ್ದರಿಂದ ಆ ಬ್ಯಾಂಕಿನ ಅಧ್ಯಕ್ಷನಾಗಿ ನಾನು ಹೇಳುತ್ತೇನೆ ಈ ಬ್ಯಾಂಕಿನಲ್ಲಿ ಆಗಿರತಕ್ಕ 50 ಸಾವಿರ ರೂಪಾಯಿಗಳ ಯಾವ ಒಂದು ಅನ್ಯಾಯ ಮತ್ತು ಮೋಸ ಮಾಡಿರತಕ್ಕ ಅಂಶಗಳಲ್ಲಿ ಶ್ರೀಮಾನ್ ವೀರೇಂದ್ರಪಾಟೀಲರ ಸರ್ಕಾರದಲ್ಲಿ ಬೆಂಗಳೂರು ಜಿಲ್ಲಾಧಿಕಾರಿಗಳು ಆ ಬ್ಯಾಂಕಿಗೆ ಅಧ್ಯಕ್ಷರಾಗಿದ್ದಾಗ 1971 ನೇ ಇಸವಿಯಲ್ಲಿ ಎಂದರೆ ಪಾರ್ಲಿಮೆಂಟ್ ಎಲೆಕ್ಷನ್ ಬರುವುದಕ್ಕೆ ಮುಂಚೆ ಆ ಬ್ಯಾಂಕಿನ ಒಬ್ಬ ಮ್ಯಾನೇಜರ್ ಸುಮಾರು 22 ಸಾವಿರ ರೂಪಾಯಿಗಳನ್ನು ಕಳವು ಮಾಡಿ ತೆಗೆದುಕೊಂಡಿರತಕ್ಕ ನಿದರ್ಶನಗಳು ಇವೆ. ಅದಕ್ಕೆ ಇನ್‌ಷ್ಯೂರೆನ್ಸ್ ಮಾಡಿತ್ತು. ಆದ್ದರಿಂದ ಅದರ ಕ್ಲೈಮ್ ಇದೆ. ಆ ದುಡ್ಡು ಬರತಕ್ಕ ವ್ಯವಸ್ಥೆ ಇದೆ. ಅದು ಬ್ಯಾಂಕಿಗೆ ಏನೂ ಲುಕ್ಸಾನೂ ಆಗಿಲ್ಲ. ಇನ್ನೊಂದು ಸಂದರ್ಭದಲ್ಲಿ ಬ್ಯಾಂಕಿನ ಒಬ್ಬ ಅಧಿಕಾರಿ 1½ ಸಾವಿರ ರೂಪಾಯಿಗಳನ್ನು ಕಳುವು ಮಾಡಿದ್ದಾನೆ. ಆ ಬಗ್ಗೆ ಕ್ರಮ ತೆಗೆದುಕೊಂಡಿದೆ. ಆ ಬಗ್ಗೆ ಡಿಕ್ರಿ ಮಾಡಿಸಿ ಅದರ ವಸೂಲಾತಿಗೆ ಕ್ರಮತೆಗೆದುಕೊಳ್ಳಲಾಗಿದೆ. ಈಗ ಇರುವ ಬ್ಯಾಂಕುಗಳಲ್ಲಿ ಬೆಂಗಳೂರು ಜಿಲ್ಲಾ ಬ್ಯಾಂಕು ಒಳ್ಳೆಯದು ಮತ್ತು ಇದು ಚೆನ್ನಾಗಿ ಕೆಲಸ ಮಾಡುತ್ತಿದೆ. ಮಾನ್ಯ ಮಂತ್ರಿಗಳು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುವುದು ಸರಿಯಲ್ಲ, ಆ ಬಗ್ಗೆ ಮಾನ್ಯ ಮಂತ್ರಿಗಳಿಗೆ ನಾನು ಪತ್ರದಲ್ಲಿ ನೋಟೀಸ್ ಕೊಟ್ಟಿದ್ದೇನೆ. ಆದ್ದರಿಂದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಮಾತನಾಡಬಾರದಾಗಿತ್ತು. ಅವರು ಹೇಳಿದಂತಹ ಮಾತುಗಳಿಂದ ನನ್ನ ಮನಸ್ಸಿಗೆ ನೋವಾಗಿದೆ.

ಬೆಂಗಳೂರು ಜಿಲ್ಲಾ ಸಹಕಾರಿ ಬ್ಯಾಂಕು ಕೂಲಿಗಾರರಿಗೆ ಸುಮಾರು ಒಂದು ಕೋಟಿ ರೂಪಾಯಿಗಳವರೆಗೂ ಸುಮಾರು 10 ಪರ್ಸೆಂಟ್ ಬಡ್ಡಿಯಂತೆ ನೆರವು ನೀಡಿ ಸಮಾಜದಲ್ಲಿ ಅವರ ಶೋಷಣೆಯನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಿದೆ. ಜನತಾ ಬಜಾರುಗಳಿಗೆ ನೆರವು ನೀಡಿದೆ. 33 ಲಕ್ಷ ರೂಪಾಯಿಗಳು ಸೊಸೈಟಿಯಲ್ಲಿ ನಷ್ಟವಾಗಿದೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಆದ್ದರಿಂದ ಮಾನ್ಯ ಸದಸ್ಯರು ಹೇಳಿರುವ ಮಾತುಗಳಲ್ಲಿ ಸತ್ಯಾಂಶವಿಲ್ಲ. ಮಂತ್ರಿಗಳಿಗೆ ಅಧಿಕಾರಿಗಳು ತಪ್ಪು ಅಂಕಿ ಸಂಖ್ಯೆಗಳನ್ನು ನೀಡಿ ಜನರಲ್ಲಿ ತಪ್ಪು ಕಲ್ಪನೆ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ನಮ್ಮ ಬ್ಯಾಂಕಿಗೆ ಬಂದು ನನ್ನ ಜೊತೆಯಲ್ಲಿ ಮಾತನಾಡಬಹುದು. ನಮ್ಮ ಜಿಲ್ಲೆಯಲ್ಲಿ ಸುಮಾರು 100 ಸಹಕಾರ ಸಂಘಗಳು ಇವೆ. ಅವು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿವೆ ಎಂಬುದನ್ನು ತೋರಿಸಿ ಕೊಡುತ್ತೇನೆ. ಈಗ ಇರುವ ಸಹಕಾರ ಸಂಘದ ರಿಜಿಸ್ಟ್ರಾರರು ತುಂಬಾ ಒಳ್ಳೆಯವರು. ಇಲಾಖೆಯ ಕಾರ್ಯದ ಬಗ್ಗೆ ಇಲ್ಲದ ಸಲ್ಲದ ಅಪಾದನೆ ಮಾಡಿದರೆ ಅವರು ಬೇಸತ್ತು ಬಿಟ್ಟು ಹೋಗುತ್ತಾರೋ ಏನೋ ಎನ್ನುವ ಭಯ ನಮಗೆ ಬಂದಿದೆ. ಸಮಾಜದಲ್ಲಿ ಒಳ್ಳೆಯವರೂ ಇರುತ್ತಾರೆ, ಕೆಟ್ಟವರೂ ಇರುತ್ತಾರೆ. ಆದ್ದರಿಂದ ಇಂಥ ಸಂಸ್ಥೆಗಳಲ್ಲಿ ಕೆಟ್ಟ ಜನರು ಇಲ್ಲವೆಂದು ಹೇಳುತ್ತಾ ಇಲ್ಲ. ಉದಾಹರಣೆಗೆ ನಾನು ಒಬ್ಬ ಮಿತ್ರರನ್ನು ಮನೆಗೆ ಕರೆದರೆ ಅಲ್ಲಿ ನನ್ನ ಮನೆ ಮತ್ತು ನಾನು ಕೊಡತಕ್ಕ ತಿಂಡಿ, ಸತ್ಕಾರವನ್ನು ನೋಡಿ ಮಾತನಾಡಬೇಕೇ ಹೊರತು ನನ್ನ ದನಗಳ ಕೊಟ್ಟಿಗೆಯನ್ನು ಮತ್ತು ನಾಯಿ ಕಟ್ಟುವ ಜಾಗವನ್ನು ನೋಡಿಕೊಂಡು ಅವೆಲ್ಲ ಕೆಟ್ಟು ಹೋಗಿದೆ ಎಂದು ಹೇಳಿದರೆ ಹೇಗೆ ಆಗುತ್ತದೆ ? ಆದ್ದರಿಂದ ಈ ಸಂಘ ಸಂಸ್ಥೆಗಳಿಗೆ ಬೆಂಬಲ ಕೊಡುವುದು ನಮ್ಮ ಧರ್ಮ. ಸೇವಾ ಸಹಕಾರ ಸಂಘಗಳನ್ನು ನಾವು ಭದ್ರಪಡಿಸಬೇಕು. ಇವತ್ತು ಹಳ್ಳಿಗಳಲ್ಲಿ ಏನೊಂದು ತೊಂದರೆಗಳು ಇವೆ ಎಂಬುದನ್ನು ನಾವು ಪರಿಗಣಿಸಬೇಕು. ಮೊನ್ನೆಯ ದಿವಸ ನಮ್ಮ ಸ್ನೇಹಿತರು ಬಿಜಾಪುರ ಬ್ಯಾಂಕನ್ನು ಸುಪರ್‌ಸೀಡ್ ಮಾಡಿದಾಗ ಏನು ಗಲಾಟೆ ಮಾಡಿದರೋ, ಅದೇ ಗಲಾಟೆ ನಮ್ಮ ಬ್ಯಾಂಕನ್ನು ಸುಪರ್‌ಸೀಡ್ ಮಾಡಿದಾಗ ಯಾರೂ ಮಾಡಿಲ್ಲ.

ಶ್ರೀ ಸಿ. ಬೈರೇಗೌಡ.—ಇಲ್ಲಿ ಗಲಾಟೆ ಯಾರೂ ಮಾಡಿಲ್ಲವಲ್ಲ.

ಶ್ರೀ ಜಿ. ರಾಮೇಗೌಡ.—ವಿರೋಧ ಪಕ್ಷದ ನಾಯಕರು ಕಾನೂನಿಗೆ ವಿರುದ್ಧವಾಗಿ ಹೋಗಿ ಎಲ್ಲಾ ಕೆಲಸಗಳಿಗೆ ಅಡಚಣೆ ಮಾಡುತ್ತೇವೆಂದು ಹೇಳಿದರು ಗಲಾಟೆಯಲ್ಲದೆ ಮತ್ತೇನು ! ಅದನ್ನು ಮಾನ್ಯ ಸ್ನೇಹಿತರು ಅರ್ಥ ಮಾಡಿಕೊಂಡಿಲ್ಲ. ಅವರು ರೂಲ್ಸ್ ರೆಗ್ಯುಲೇಶನ್ ಎಲ್ಲವನ್ನೂ ಬಿಟ್ಟು ವಿರೋಧ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಹಿಂದೆ ನಾಡಗೌಡರು ಈ ರೀತಿ ಮಾಡಿದಾಗ ನಾವು ಯಾರೂ ಸಂಕಟ ಪಡಲಿಲ್ಲ. ನಮ್ಮಲ್ಲಿ ನಾಳೆ ಚುನಾವಣೆ ಎಂದು ಇರುವಾಗ ನಮ್ಮ ಡೈರೆಕ್ಟರುಗಳನ್ನು ಕರಕೊಂಡು ಹೋಗಿ ಪೋಲೀಸ್ ಸ್ಟೇಷನ್ನಿನಲ್ಲಿ ಇರಿಸಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸದನದಲ್ಲಿ 19 ಜಿಲ್ಲಾ ಬ್ಯಾಂಕುಗಳ ವರದಿಯನ್ನು ಇಡುತ್ತಾರೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಆಗ ಯಾವ್ಯಾವ ಬ್ಯಾಂಕು ಚೆನ್ನಾಗಿ ಕೆಲಸ ಮಾಡುತ್ತದೆ ಎಂಬುದನ್ನು ನೋಡಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಬಹುಶಃ ನಿರಾಧಾರವಾದ ಅಪಾದನೆಯನ್ನು ನಾನು ಮಾಡಿದ್ದರೆ ಅದನ್ನು ವಾಪಸ್ಸು ಪಡೆಯುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಜಿ. ರಾಮೇಗೌಡ.—ಆದ್ದರಿಂದ ಸೇವಾ ಸಹಕಾರ ಸಂಘಗಳನ್ನು ಯಾವ ರೀತಿ ಭದ್ರಪಡಿಸಬೇಕೆಂದು ಎಲ್ಲರೂ ಅರಿತಿದ್ದಾರೆ. ನಮ್ಮ ಸಹಕಾರೀ ಇಲಾಖೆಯಲ್ಲಿ ತನಿಖಾ ವಿಭಾಗ ಬಹಳ ಕಮ್ಮಿ ಇದೆ. ಒಂದು ತಿಂಗಳಿಗೊಮ್ಮೆ ತನಿಖೆ ಮಾಡಿದರೆ ಮುಂದೆ ಆಗತಕ್ಕಂತಹ ಅನ್ಯಾಯಗಳನ್ನು ನಿಲ್ಲಿಸಬಹುದು. ತಪ್ಪು ಮಾಡುವವರನ್ನು ಮುಂದೆ ಮಾಡದ ಹಾಗೆ ನಿಲ್ಲಿಸಬಹುದು. ಇವತ್ತು ಇಂತಹ ಸಹಕಾರೀ ಬ್ಯಾಂಕುಗಳಲ್ಲಿ ಸಾಲ ವಸೂಲು ಮಾಡತಕ್ಕದ್ದು ಬಹಳ ಕಷ್ಟಕರವಾದ ಕೆಲಸ. ಆದ್ದರಿಂದ ಸೇಲ್ಸ್ ಆಫೀಸರ್ ಹುದ್ದೆಗಳಿಗೆ ಯಾರೂ ಮುಂದೆ ಬರುವುದಿಲ್ಲ. ಏಕೆಂದರೆ ಸಾಲವನ್ನು ವಸೂಲು ಮಾಡುವುದು ಬಹಳ ಕಷ್ಟ. ಅದಕ್ಕೆ ಸರ್ಕಾರದವರು ಒಳ್ಳೆ ರೀತಿಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳನ್ನು ಇಲ್ಲಿ ಹಾಕಿದರೆ ಸಾಲಗಳನ್ನು ಆದಷ್ಟು ಜಾಗ್ರತೆ ವಸೂಲ ಮಾಡುವುದಕ್ಕೆ ಸಹಾಯಕವಾಗುತ್ತದೆ. ಸರ್ಕಾರ ಮಾಡಿದಂತಹ ಆರ್ಡರನ್ನು ಹೊಂದಿಕೊಂಡು ಕೆಲಸ ಮಾಡುವಂತಹ ಅಧಿಕಾರಿಗಳನ್ನು ಹಾಕಿದರೆ ಸಾಲ ಬಹಳ ಚೆನ್ನಾಗಿ ವಸೂಲು ಆಗುತ್ತದೆ. ಅದಕ್ಕೆ ಇಲಾಖೆಯು ಬಹಳ ಸಹಾಯ ಮಾಡಬೇಕಾಗಿದೆ. ಇನ್ನು ಕೆಲವು ಸದಸ್ಯರು 12—13 ಪರ್ಸೆಂಟ್ ಬಡ್ಡಿಗೆ ಸಾಲ ಕೊಡುತ್ತಾರೆಂದು ಹೇಳಿದರು. ಬಹುಶಃ ನಾವ್ ಅಗ್ರಿಕಲ್ಚರಲ್ ಪರ್ಪಸ್ಸಿಗೆ ಮಾತ್ರ 11 ಪರ್ಸೆಂಟ್ ಇದೆ. ಆದರೆ ಅಗ್ರಿಕಲ್ಚರಲ್ ಪರ್ಪಸಿಗೆ ಸೇಕಡಾ 7 ವರೆ ಪರ್ಸೆಂಟ್‌ಗೆ ಸೇವಾ ಸಹಕಾರ ಸಂಘಗಳಲ್ಲಿ ಕೊಡುತ್ತಾರೆ. ಆದರೆ ಈ ಬ್ಯಾಂಕುಗಳಲ್ಲಿ ವ್ಯವಸಾಯಗಾರರಿಗೆ 9 ವರೆ ಪರ್ಸೆಂಟಿಗೆ ಕೊಡುತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ ಇದರ ಬಗ್ಗೆ ಬ್ಯಾಂಕಿಗೆ ಸಾಲ ಎಲ್ಲಿಂದಲೂ ದೊರೆಯುವುದಿಲ್ಲ. ನಾವು ನಮ್ಮ ಡಿಪಾಸಿಟಿನಿಂದ ಕೊಡುವುದರಿಂದ 1—2 ಪರ್ಸೆಂಟ್ ಮಾರ್ಜಿನ್ ಇಟ್ಟುಕೊಂಡು ಕೊಡುವುದರಿಂದ ಆ ರೀತಿ ಆಗುತ್ತದೆಯೇ ವಿನಹ ಬೇರೇನೂ ಅಲ್ಲ. ಇದರಿಂದ ವೈಯಕ್ತಿಕವಾಗಿ ಯಾರಿಗೂ ತೊಂದರೆಯಾಗುವುದಿಲ್ಲ.

ಇನ್ನೊಂದು ಅನಾನುಕೂಲ ಇದೆ. ಸರ್ಕಾರದವರು ಆರ್ಬಿಟ್ರೇಟರ್‌ನ್ನು ನೇಮಕ ಮಾಡತಕ್ಕ ಅವಕಾಶ ನಮ್ಮ ಆಕ್ಟಿನಲ್ಲಿ ಇದೆ. ನನ್ನ ಅನುಭವದಲ್ಲಿ ಆರ್ಬಿಟ್ರೇಟರ್ಸ್ ಮಾಡತಕ್ಕ ದೋಷ, ಇವರು ಮಾಡತಕ್ಕ ಅನ್ಯಾಯ, ಇಡೀ ಸಮಾಜಕ್ಕೆ ದ್ರೋಹ ಮಾಡುವ ರೀತಿಯಲ್ಲಿ ಇದೆ. ಆದ್ದರಿಂದ ಆದಷ್ಟು ಜಾಗ್ರತೆ ಈ ಆರ್ಬಿಟ್ರೇಟರ್ಸ್‌ನ್ನು ತೆಗೆದು ಹಾಕಿ ನ್ಯಾಯಾಧೀಶರನ್ನು ಈ ಕೆಲಸಕ್ಕೆ ನೇಮಿಸಿದರೆ ಕ್ಷೇಮ ಎಂದು ಹೇಳುತ್ತೇನೆ. ಅವರನ್ನು ತೆಗೆದು ಹಾಕದಿದ್ದರೆ ಅವರಿಂದ ಆಗುವ ಹಾವಳಿ ತಪ್ಪುವುದಿಲ್ಲ. ಲಂಚದ ಹಾವಳಿಯಿಂದ ಇವತ್ತು ಒಂದು ತರಹ ಆರ್ಡರ್, ನಾಳೆ ಒಂದು ತರಹ ಆರ್ಡರ್ ಮಾಡುತ್ತಿದ್ದಾರೆ. ಆದ್ದರಿಂದ ಈ ಆರ್ಬಿಟ್ರೇಟರ್ಸ್‌ನ್ನು ದಯವಿಟ್ಟು ಆದಷ್ಟು ಜಾಗ್ರತೆ ತೆಗೆದುಹಾಕಬೇಕು. ಇನ್ನು ಮಾರ್ಕೆಟ್ ಫೆಸಿಲಿಟಿಯ ಬಗ್ಗೆ ಹೇಳುವುದಾದರೆ ಕನ್‌ಸ್ಯೂಮರ್ಸ್‌ಗೆ ಅಥವಾ ಗ್ರೋಯರ್ಸ್‌ಗೆ, ಯಾರಿಗೂ ನ್ಯಾಯವಾದ ಬೆಲೆ ಸಿಗುವುದಿಲ್ಲ. ಇದರಿಂದ ನಮ್ಮ ಸಹಕಾರೀ ಸಂಘಗಳ ಕೆಲಸಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ನೇರವಾಗಿ ಕನ್‌ಸ್ಯೂಮರ್ ಸೊಸೈಟಿಗೆ ಪದಾರ್ಥಗಳು ಹೋಗಿ ಅಲ್ಲಿಂದ ಕನ್‌ಸ್ಯೂಮರ್ಸ್‌ಗೆ ಹೋದರೆ ನಮ್ಮ ವ್ಯವಸಾಯ ಉತ್ಪತ್ತಿಗೂ ಒಳ್ಳೆಯ ಬೆಲೆ ಸಿಗುತ್ತದೆ, ಮತ್ತು ಸಹಕಾರೀ ಸಂಘಗಳು ಸಹ ಒಳ್ಳೆಯ ಕೆಲಸವನ್ನು ಮಾಡಿದ ಹಾಗೆ ಆಗುತ್ತದೆ. ಇಷ್ಟೊಂದು ಹೇಳಿ ಸಹಕಾರಿ ಸಂಘಗಳಲ್ಲಿರುವಂತಹ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಏನು ಕೆಲಸವನ್ನು ಮಾಡಬೇಕೋ, ಅದನ್ನು ಸರ್ಕಾರ ಹಾಗೂ ಸಮಾಜದ ಮುಖ್ಯಸ್ಥರು ಮಾಡಿ ಇದರಿಂದ ಸಮಾಜವಾದವನ್ನು ಸಂಪೂರ್ಣವಾಗಿ ಜಾರಿಗೆ ತರುವಂತೆ ಮಾಡಿ ಸಾಮಾನ್ಯ ಜನರಿಗೆ ಉಪಕಾರವಾಗುವಂತೆ ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

2-00 P.M.

Issue of Passes to Visitor's Gallery

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಶಾಸನಸಭೆಯ ಗ್ಯಾಲರಿಗೆ ಬರತಕ್ಕ ಜನರಿಗೆ ತೀರಾ ನಿರ್ಬಂಧವನ್ನು ಹಾಕುತ್ತಾ ಇರುವುದನ್ನು ನೋಡಿದರೆ ನನಗೆ ತೀರಾ ಆಶ್ಚರ್ಯವಾಗುತ್ತದೆ. ನಾವು ಲೆಟರ್ ಕೊಟ್ಟರೂ ಕೂಡ ಏನೋ ಒಂದು ಅನಾದರಣೆಯಿಂದ ಪಾಸ್ ಕೊಡದೆ ಮಾರ್ಷಲ್ ಆದವರು ರಿಜೆಕ್ಟ್ ಮಾಡುತ್ತಿದ್ದಾರೆ. ಈ ಗ್ಯಾಲರಿಯನ್ನು ಮಾಡಿಸಿರುವುದು ಏತಕ್ಕೇ ?

ಶ್ರೀ ಎಚ್. ಡಿ. ದೇವೇಗೌಡ.—ಪಬ್ಲಿಕ್ ಗ್ಯಾಲರಿಯನ್ನು ಬೇಕಾದರೆ ಕಿತ್ತು ಹಾಕಿಬಿಡಿ. ಕುರ್ಚಿಗಳನ್ನು ತೆಗೆದುಬಿಡಿ. ಪತ್ರಿಕೆಯವರನ್ನೂ ಹೊರಗೆ ಕಳುಹಿಸಿಬಿಡಿ. ನಾಳೆ ನಾವೇ ಇನ್ ಕ್ಯಾಮೆರಾ ಮೀಟಿಂಗ್ ಮಾಡಿಬಿಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಬಗ್ಗೆ ಹಿಂದೆಯೇ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಆಯಿತು. ಅದೊಂದು ದೊಡ್ಡ ಕಥೆಯೇ ಆಗಿದೆ. ಸಣ್ಣ ವಿಚಾರ ಇದು. ಕೇವಲ ಒಂದು ಪಾಸ್ ಕೊಡುವುದಕ್ಕೆ ಇಷ್ಟು ರಿಸ್ಟ್ರಿಕ್ಷನ್ನೇ.

ಶ್ರೀ ವಾಟಾಳ್ ನಾಗರಾಜ್.—ಒಬ್ಬರಿಗೆ ಎರಡು ಪಾಸುಗಳನ್ನು ಕೊಡುತ್ತೇವೆಂದು ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಮೊದಲು ಒಂದು ಫಾರಂ ಕೊಡುತ್ತಿದ್ದರು ಅದಕ್ಕೆ ನಾವು ರುಜು ಹಾಕಿ ಕೊಟ್ಟಮೇಲೆ ಜನರಿಗೆ ಪಾಸ್‌ಗಳನ್ನು ಕೊಡುತ್ತಿದ್ದರು. ಪಬ್ಲಿಕ್ ಗ್ಯಾಲರಿ ಇರುವುದು ಜನರು ಈ ಸಭೆಯ ನಡೆವಳಿಕೆಗಳನ್ನು ನೋಡುವುದಕ್ಕಾಗಿ. ಆತ ಇಲ್ಲಿ ಮಿಲಿಟರಿ ಕಾರ್ಯ ನಡೆಸುತ್ತಿದ್ದಾನೆ.

Mr. DEPUTY SPEAKER.—These galleries are meant for disciplined public. It is their right to see the deliberations of this House. I will look into the matter.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಕಾಗದಕ್ಕೆ ಪಾಸ್‌ಗಳನ್ನು ಕೊಡುವುದನ್ನು ಆತ ರೆಫ್ಯೂಜ್ ಮಾಡಿದ್ದಾನೆ. ನಾವು ಇಲ್ಲಿ ಸುದೈವವೋ ಅಥವಾ ದುರ್ದೈವವೊ ಸದಸ್ಯರಾಗಿ ಇದ್ದೇವೆ. What business he has got to refuse passes ?

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ ನಮಗೆ ಇದರಿಂದ ಬಹಳ ತೊಂದರೆಯಾಗಿದೆ. ಎರಡೆರಡು ಹೆಸರುಗಳನ್ನು ನಾವು ಬರೆದುಕೊಟ್ಟರೆ...... ....

Mr. DEPUTY SPEAKER.—I will look into the matter,

ಶ್ರೀ ಕಾಗೋಡು ತಿಮ್ಮಪ್ಪ.—ಇಂತಹ ಸಣ್ಣವಿಷಯವನ್ನು ಆತ ಬಗೆಹರಿಸುವುದಕ್ಕೆ ಆಗದೇ ಹೋದರೆ ಹೇಗೆ ! ನಾವು ಈ ವಿಷಯವನ್ನು ಈ ಸಭೆಯಲ್ಲಿ ತರಬೇಕೇ ?

ಶ್ರೀ ಎಸ್. ಬಂಗಾರಪ್ಪ.—ಮಾರ್ಷಲ್ ಸುಪ್ರೀಂ ಅತಾರಿಟಿಯೇ ? ಸದಸ್ಯರುಗಳು ಪುಕ ಸಟ್ಟೆಯಾಗಿ ಸಿಗುತ್ತಾರೆಂದು ಮಾರ್ಷಲ್ ಆಗಿರುವವನು ತನ್ನ ಮನಸ್ಸು ಪ್ರಕಾರ ಇಲ್ಲಿ ವ್ಯವಹಾರ ಮಾಡುತ್ತಿದ್ದಾನೆಯೇ ? ಅಷ್ಟು ಅಧಿಕಾರ ಅವನಿಗೆ ಇರಕೂಡದು. ಎಂ.ಎಲ್.ಎ.ಗಳು ಅಂದರೆ ಮಾರ್ಷಲ್ ಆಗಿರುವವನು ಏನು ಅಂದುಕೊಂಡಿದ್ದಾನೋ ಗೊತ್ತಿಲ್ಲ. ನಮಗೆ ನೀವು ಸರಿಯಾಗಿ ಇದರ ಬಗ್ಗೆ ಉತ್ತರ ಹೇಳಬೇಕು.

ಉಪಾಧ್ಯಕ್ಷರು.—ನಾನು ಅದನ್ನು ವಿಚಾರಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಬಹಳ ಹಿಂದೆಯೇ ನಾನು ಈ ವಿಚಾರವನ್ನು ತಮ್ಮ ಗಮನಕೆ ತಂದಿದ್ದೇನೆ. ಪ್ರೇಕ್ಷಕರ ಗ್ಯಾಲರಿಯಲ್ಲಿ ಜನರಿಗೆ ಪಾಸ್ ಕೊಡುವುದರಲ್ಲಿ ಆತ ಬಹಳ ರಿಸ್ಟ್ರಿಕ್ಟ್ ಮಾಡುತ್ತಿದ್ದಾನೆಂದು.

ಉಪಾಧ್ಯಕ್ಷರು.—ಅದು ನನಗೆ ಗೊತ್ತಿದೆ. ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—15 ದಿವಸಗಳ ಹಿಂದೆಯೇ ನಾನು ಈ ವಿಚಾರವಾಗಿ ಈ ಸಭೆಯಲ್ಲಿ ಪ್ರಸ್ತಾಪಮಾಡಿದ್ದೆ. ಅದಿನ್ನೂ ಸರಿಹೋಗಿಲ್ಲ.

ಮತ್ತೊಂದು ವಿಷಯವನ್ನು ಈ ಸಭೆಯ ಗಮನಕ್ಕೆ ತೆಗೆದುಕೊಂಡು ಬರುತ್ತಿದ್ದೇನೆ ಶಾಸಕರ ಭವನದಲ್ಲಿ ಶಾಸಕರನ್ನು ಯಾರಾದರೂ ಅವರ ಕ್ಷೇತ್ರದಿಂದ ಬಂದು ನೋಡಬೇಕೆಂದರೆ, ಅಲ್ಲಿ ಒಂದು ದೊಡ್ಡ ಕ್ಯೂ ಇರುತ್ತದೆ. ಅನೇಕರು ಬಹಳ ದೂರದಿಂದ ಶಾಸಕರನ್ನು ನೋಡಲು ಬಂದಿರುತ್ತಾರೆ. ಅವರು ಅಷ್ಟು ಸಲೀಸಾಗಿ ಶಾಸಕರ ಭವನದೊಳಗೆ ಬರುವುದಕ್ಕೆ ಆಗುವುದಿಲ್ಲ. ಅಲ್ಲಿ ಮಿಲಿಟರಿ ಆಫೀಸ್ ಇದ್ದಹಾಗೆ ಆಗಿದೆ. ಕೂಡಲೇ ಅದನ್ನು ಸರಿಪಡಿಸುವ ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕು.

Budget Estimates for 1973–74.

Demands for Grants

Demand No. 23 (34) Co-oparation (Continued)

† ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು (ಬೇತಮಂಗಲ).—ಮಾನ್ಯ ಅಧ್ಯಕ್ಷರೆ, ಸೊಸೈಟಿಗಳನ್ನು ಸ್ಥಾಪನೆಮಾಡುವ ಮೂಲ ಉದ್ದೇಶ, ಸಹಬಾಳ್ವೆ, ಸಮಪಾಲು ಅಥವಾ ಸಮಹಂಚಿಕೆ ಇರಬೇಕೆಂಬುದು. ಈ ತತ್ವವನ್ನು ಎಷ್ಟರಮಟ್ಟಿಗೆ ನಾವು ಅರಿತುಕೊಂಡಿದ್ದೇವೆ. ಅದನ್ನು ಅನುಷ್ಠಾನಕ್ಕೆ ತರಲು ಎಷ್ಟು ಪ್ರಯತ್ನಪಟ್ಟಿದ್ದೇವೆಂಬುದನ್ನು ಸಿಂಹಾವಲೋಕನ ಮಾಡಬೇಕಾಗುತ್ತೆ, ಅನುಭವದಲ್ಲಿ ನೋಡಿದರೆ 100ಕ್ಕೆ 80 ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕಾರಣ. ನಮ್ಮ ಜನರಲ್ಲಿ ಮುಖ್ಯವಾಗಿ ದುರಾಶೆಯೆಂಬ ಗುಣ ಬಹು ಹೆಚ್ಚಾಗಿದೆ. ಈಗ ಸೊಸೈಟಿಗಳನ್ನು ನಡೆಸತಕ್ಕಂಥವರು, ಸ್ವಲ್ಪ ವಿದ್ಯಾವಂತರು, ರಾಜಕಾರಿಣಿಗಳು, ಹಣವುಳ್ಳವರು. ಇವರು ಸ್ವಾರ್ಥಪರರಾಗಿರುತ್ತಾರೆ. ಅನೇಕವಾಗಿ ಸೊಸೈಟಿಗಳಲ್ಲಿ ಬರತಕ್ಕ ಹಣವನ್ನು ಸ್ವಂತ ಅನುಕೂಲಕ್ಕೆ ಉಪಯೋಗಿಸುತ್ತಾರೆ. ಮೂಲ ತತ್ವದ ತಪ್ಪೇನು ಇಲ್ಲ ಆದರೆ ನಾವು ಕಾರ್ಯಾಚರಣೆ ಮಾಡತಕ್ಕುದೆ ತಪ್ಪೆಂದು ಎಲ್ಲರೂ ಒಪ್ಪಿಕೊಳ್ಳಬೇಕು. ಹೀಗಿರುವ ಸಂದರ್ಭದಲ್ಲಿ ಒಳ್ಳೆಯವರು, ಸುಸಂಕೃತರು, ನ್ಯಾಯ ನೀತಿ ಪರಿಪಾಲಕರು, ಇದರ ಮುಂದಾಳತ್ವ ವಹಿಸಬೇಕು, ಸ್ವಜನ ಪಕ್ಷಪಾತ, ಅಧಿಕಾರಿಗಳ ಕೈವಾಡ ಕಮ್ಮಿಯಾಗಿ ಸರಿಯಾದ ರೀತಿಯಲ್ಲಿ ಸಂಘಗಳನ್ನು ನಡೆಸಬೇಕು. ತಮಗೆ ಗೊತ್ತಿದ್ದಹಾಗೆ ಈ ಸಹಕಾರ ಸಂಘಗಳು ಎಷ್ಟೋ ತರ ಇರುತ್ತೆ. ಉದಾಹರಣೆಗೆ : ವ್ಯವಸಾಯ, ಕೈಗಾರಿಕೆ, ವಾಣಿಜ್ಯ, ಸೇವಾ ಇತ್ಯಾದಿ. ಇದನ್ನು ಮನಗಂಡು ಘನಸರ್ಕಾರದವರು ದೊಡ್ಡ ಸಿಬ್ಬಂದಿಯನ್ನು ಇಟ್ಟಿದ್ದಾರೆ. ಈ ಸೊಸೈಟಿಗಳ ದುರಾಡಳಿತಕ್ಕೆ ಹಣವೇ ಮುಖ್ಯ ಕಾರಣ. ವಿದ್ಯಾವಂತರೇ ಈ ತರ ನಡೆಯುವಾಗ, ಅವಿದ್ಯಾವಂತ ಎಡಕ್ಕೆ ಹೆಬ್ಬೆಟ್ಟಿನ ಗುರ್ತು ಹಾಕುವವನು ಮೂಕಪ್ರಾಣಿಯಂತಿರುವವನ ಪಾಡೇನು ಆದ್ದರಿಂದ ಇನ್ನು ಮೇಲಾದರೂ ಈ ಘನ ಸರ್ಕಾರದವರು ಈ ಸೊಸೈಟಿಗಳ ಆಡಳಿತದ ಬಗ್ಗೆ ತಕ್ಕ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ನಾನು ಈ ಸಂದರ್ಭದಲ್ಲಿ, ಈಗಿರುವ ಕಾನೂನಿನಲ್ಲಿ ಏನಾದರೂ ತಪ್ಪಿದ್ದರೆ ಅದಕ್ಕೆ ತಿದ್ದುಪಡಿಯನ್ನು ತಂದು ಲೋಪದೋಷಗಳನ್ನು ಸರಿಪಡಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಪ್ರತಿ ವರ್ಷ ಈ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಕ್ರಮಬದ್ಧವಾಗಿ ಆಡಿಟ್ ಮಾಡಿಸಬೇಕು. ಅದೇನಾದರೂ ಸಂಬಂಧಪಟ್ಟ ಸಹಕಾರ ಸಂಘ ಆಡಿಟ್ ಮಾಡಿಸದೇ ಹೋದರೆ ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸೊಸೈಟಿಗಳಲ್ಲಿ ನಷ್ಟ ಬಂದಿದೆ ಎಂದು ತಿಳಿದುಬಂದ ಮೇಲೆ ಅದನ್ನು ವಿಚಾರಣೆಮಾಡಿ ಯಾರಿಂದ ಏನು ಆಗಿದೆ ಎಂದು ಸೊಸೈಟಿ ಅಧಿಕಾರಿಗಳು ಸರಿಯಾಗಿ ತನಿಖೆಗೆ ತೆಗೆದುಕೊಂಡು ಬಂದೋಬಸ್ತು ಮಾಡಿದರೆ ಹಣ ದುರುಪಯೋಗವಾಗುವುದಕ್ಕೆ ಅವಕಾಶವಿಲ್ಲ. ಸೊಸೈಟಿಗಳಿಗೆ ಬರಬೇಕಾದ ಲೋನುಗಳು ವಸೂಲು ಆಗಬೇಕಾದ್ದು ಸಹಜ. ಆದರೆ ವಸೂಲಿಯನ್ನು ವರ್ಷಗಟ್ಟಲೆ ಮುಂದಕ್ಕೆ ಹಾಕಿ ಒಂದೇ ಸಲ ವಸೂಲಿ ಕ್ರಮ ತೆಗೆದುಕೊಂಡು, ಪೂರ್ತಿ ಹಣ ಒಂದೇ ಸಲ ಕಟ್ಟಬೇಕೆಂದು ಜಪ್ತಿ ವಗೈರೆ ಮಾಡಿ, ಅವಮಾನಪಡಿಸಿ, ಜನರನ್ನು ತೊಂದರೆಗಳಿಗೆ ಈಡುಮಾಡುತ್ತಿರುತ್ತಾರೆ. ಅದನ್ನು ಒಂದೇ ಸಲ ಮಾಡದೆ 2–3 ಕಂತುಗಳ ಮೂಲಕ ವಸೂಲಿ ಮಾಡಿಕೊಳ್ಳಬೇಕು. ದನಗಳನ್ನು ಹಾಗೂ ಪಂಪುಸೆಟ್ಟು ವಗೈರೆಗಳನ್ನು ಮನೆಗೆ ನುಗ್ಗಿ ಜಪ್ತಿ ಮಾಡುವುದನ್ನು ತಪ್ಪಿಸಬೇಕಾಗಿ ಕೋರುತ್ತೇನೆ. ಇಂಥಾದನ್ನೆಲ್ಲ ತಡೆಗಟ್ಟುವುದಕ್ಕೆ ಅಧಿಕಾರಿಗಳಾದವರು ಹೆಚ್ಚಿಗೆ ನಿಗಾಕೊಟ್ಟು ನೋಡಿಕೊಳ್ಳಬೇಕು.

ಕೊನೆಯದಾಗಿ ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಸಹಕಾರೀ ಪದ್ಧತಿಯು ತತ್ವವು ಸಮಾಜವಾದದ ಗುರಿಯನ್ನು ಹೊಂದಿಕೊಂಡಿದೆ. ಎಲ್ಲಿ ಸಮಾಜವಾದದ ತತ್ವಗಳನ್ನು ಜಾರಿಗೆ ತರುವುದಕ್ಕೆ ಅಡ್ಡಿ ಅಡಚಣೆಗಳುಂಟಾಗಿ ಜನರು ಶೋಷಣೆಗೊಳಗಾಗಿದ್ದಾರೋ ಅಲ್ಲಿ ಆ ಜನರನ್ನು ಆ ಒಂದು ಶೋಷಣೆಯಿಂದ ತಪ್ಪಿಸತಕ್ಕ ಒಂದು ಹಿರಿಯ ಉದ್ದೇಶದಿಂದ ಈ ಸಹಕಾರೀತತ್ವಗಳನ್ನು ಸ್ಥಾಪನೆ ಮಾಡಿದ್ದಾರೆ. ಸಹಕಾರಿ ತತ್ವ ಎಂದರೆ ಹಸ್ತ ಲಾಘವ. ಹೀಗೆ ಇದರಲ್ಲಿ ಅಡಗಿರತಕ್ಕ ಈ ಘನ ಉದ್ದೇಶ ಮಾಯವಾಗಿ ಅಲ್ಲಿ ಇರತಕ್ಕ ಜನರು ಹಸ್ತ ಲಾಘವಕ್ಕೆ ಬದಲಾಗಿ ಒಬ್ಬೊರಿಗೊಬ್ಬರಿಗೆ ಕೈ ಕೊಡುವುದಕ್ಕೆ ಪ್ರಾರಂಭಮಾಡಿದರೆ ಇದು ಯಾವ ಬುನಾದಿಯ ಮೇಲೆ, ಏತಕ್ಕಾಗಿ ನಿಂತಿದೆಯೋ ಅದು ಸಫಲವಾಗುವುದಿಲ್ಲ ಎನ್ನತಕ್ಕ ಮಾತನ್ನು ಎಲ್ಲರೂ ಒಪ್ಪಲೇ ಬೇಕು.

ಆದರೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ದೇವೇಗೌಡರು ಸರ್ಕಾರದವರ ಮೊನ್ನೆ ವಶಪಡಿಸಿಕೊಂಡಿರತಕ್ಕ ಬಿಜಾಪುರ ಜಿಲ್ಲಾ ಬ್ಯಾಂಕಿನ ಬಗ್ಗೆ ಕೆಲವು ಮಾತುಗಳನ್ನಾಡಿದ್ದಾರೆ. ಅಷ್ಟೇ ಅಲ್ಲ ಅದರ ಬಗ್ಗೆ ಒಂದು ದೊಡ್ಡ ಗಲಾಟೆಯನ್ನೇಎಬ್ಬಿಸಿ ರಾಜ್ಯದಲ್ಲಿರತಕ್ಕ 19 ಜಿಲ್ಲಾ ಬ್ಯಾಂಕುಗಳ ಆಡಳಿತದ ಒಂದು ವರದಿಯನ್ನು ಈ ಸಭೆಯ ಮುಂದೆ ಇಡಬೇಕೆಂದು ಹೇಳಿದ್ದಾರೆ. ಅಲ್ಲಿ ಮಳೆಯಿಲ್ಲದೆ ಜನರು ಕಷ್ಟಪಡುತ್ತಿದ್ದು ಅನೇಕ ಹಾಹಾಕಾರಗಳಿಗೆ ತುತ್ತಾಗಿರುವಾಗ ಅಂಥಾ ಜನರ ಕಷ್ಟ ಕಾರ್ಪಣ್ಯಗಳನ್ನು ನಿವಾರಣೆ ಮಾಡುವುದಕ್ಕಾಗಿ ಅವುಗಳಿಗೆ ಸರ್ಕಾರ ಹಣವನ್ನು ಒದಗಿಸಿದ್ದಾಗ್ಯೂ ಅದನ್ನು ಆ ಕಷ್ಟದಲ್ಲಿರತಕ್ಕ ಜನರಿಗೆ ವಿನಿಯೋಗ ಮಾಡದೆ ರಾಜಕೀಯ ನಡೆಸುತ್ತಿದ್ದ ಕಾರಣ ಅದನ್ನು ಸರ್ಕಾರ ತನ್ನ ವಶಕ್ಕೆ ತೆಗೆದಕೊಂಡಿದ್ದರೆ ಅದರಲ್ಲಿ ತಪ್ಪೇನಿದೆ ? ಆ ಹಣ ವನ್ನು ರಾಜಕೀಯಕ್ಕೆ ಉಪಯೋಗ ಮಾಡುತ್ತಿದ್ದುದರಿಂದಲೇ ಸರ್ಕಾರ ಅದನ್ನು ಮುಟ್ಟುಗೋಲೇ ಹಾಕಿಕೊಂಡಿತು. ಅದರಲ್ಲಿ ತಪ್ಪೇನಿದೆ ?

ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಸದಸ್ಯರು ರಾಜಕೀಯಕ್ಕೆ ಹಣವನ್ನು ಬಳಸುತ್ತಿದ್ದಾರೆ ಎಂದು ಹೇಳುತ್ತಿರುವುದು, ಶುದ್ಧ ಸುಳ್ಳು ವಿಷಯ. ಅವರಲ್ಲಿ ಅದಕ್ಕೆ ಆಧಾರಗಳುಂಟೇ ಎಂದು ಕೇಳುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ದಿವಸ ಈ ಸಹಕಾರ ತತ್ವಕ್ಕಾಗಿ ನಿರ್ಮಾಣವಾಗಿರತಕ್ಕ ಸಂಸ್ಥೆಗಳೆಲ್ಲಾ ರಾಜಕೀಯ ವೇದಿಕೆಗಳಾಗಿವೆ. ಹೀಗೆ ಸಹಕಾರಸತ್ತ್ವಗಳು ರಾಜಕೀಯ ವೇದಿಕೆಗಳಾಗಿರುವುದು ದೇಶದ ದೌರ್ಭಾಗ್ಯ. ಆದರೆ ನನಗೆ ಬಿಜಾಪುರ ಜಿಲ್ಲೆಯ ವಿಚಾರ ಅಷ್ಟಾಗಿ ಗೊತ್ತಿಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಗೆ ಮಾನ್ಯ ಕಬಾಡಿಯವರು ಬರಲಿ, ಅವರಿಗೆ ಸಾಕಷ್ಟು ನಿದರ್ಶನಗಳನ್ನು ತೋರಿಸಬಲ್ಲೆ. ನಮ್ಮ ಜಿಲ್ಲೆಯಲ್ಲಿ ಕೇವಲ ಒಂದು ಚುನಾವಣೆಯ ಕಾರಣಕ್ಕಾಗಿ ಒಂದೇ ರಾತ್ರಿಯಲ್ಲಿ ಬೆಳಕು ಹರಿಯುವುದರೊಳಗಾಗಿ 10-20 ಸಹಕಾರ ಸಂಘಗಳು ಸ್ಥಾಪಿತವಾಗಿವೆ. ಇಂಥವುಗಳನ್ನು ಸರ್ಕಾರದವರ ಮುಟ್ಟುಗೋಲು ಹಾಕಿಕೊಳ್ಳದಿದ್ದರೆ ದೇಶ ಉದ್ಧಾರವಾಗುವುದಿಲ್ಲ. ಅಲ್ಲಿ ಅನೇಕರು ಡೈರಿಫಾರಂಗಳನ್ನು ಮಾಡಿದ್ದಾರೆ, ಹಣವನ್ನು ಪಡೆದಿದ್ದಾರೆ. ಆದರೆ ಯಾವ ಒಂದು ಡೈರಿಫಾರಂನಲ್ಲೂ ಒಂದಾದರೂ ಹಸು ಕರುಗಳಿಲ್ಲ. ಅಂಥ ಡೈರಿಫಾರಂಗಳನ್ನು ಅಧಿಕಾರಿಗಳು ಯಾರಾದರೂ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಬರುತ್ತಾರೆಂದರೆ ಆ ವರ್ತಮಾನ ಅವರಿಗೆ ಒಂದೆರಡು ದಿನಗಳ ಮುಂಚೆಯೇ ಗೊತ್ತಾಗುವುದರಿಂದ ಅವರು ಆ ಅಧಿಕಾರಿಗಳು ಬರುವುದಕ್ಕೆ ಸರಿಯಾಗಿ ಅಲ್ಲಿ ಪಕ್ಕದ ಮನೆಯವರ ರಾಸುಗಳನ್ನು ತಂದು ಕಟ್ಟಿ ಅವರಿಗೆ ತೋರಿಸುತ್ತಾರೆ. ಇಂಥ ಸಂಸ್ಥೆಗಳ ಸೃಷ್ಟಿಗೆ ಪಾಠಹಾಕಿದ್ದು ಶ್ರೀ ದೇವೇಗೌಡರ ಸರ್ಕಾರ. ಈ ದಿವಸ ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕ ಜಿಲ್ಲಾ ಸಹಕಾರ ಬ್ಯಾಂಕ್ ಸಂಸ್ಥಾ ಕಾಂಗ್ರೆಸಿನವರ ಕೈಯ್ಯಲ್ಲೇಇದೆ. ಈ ದಿವಸ ನಮ್ಮ ಶಿವಮೊಗ್ಗಾ ಜಿಲ್ಲೆಯ ಶಿವಮೊಗ್ಗ, ಚನ್ನಗಿರಿ, ಹೊನ್ನಾಳಿ ಮತ್ತು ಶಿಕಾರಿಪುರ ಈ ತಾಲ್ಲೂಕುಗಳಲ್ಲಿ ಮಳೆಯ ಅಭಾವದಿಂದ ಜನರು ಬಹಳ ಕಷ್ಟಕ್ಕೊಳಗಾಗಿದ್ದಾರೆ. ಅಂಥ ಜನಕ್ಕೆ ಸಹಾಯ ಮಾಡದೆ ಈ ಜಿಲ್ಲಾ ಬ್ಯಾಂಕ್ ಅಲ್ಲಿ ರಾಜಕೀಯ ನಡೆಸುತ್ತಿದೆ. ಕಳೆದ ಜನರಲ್ ಎಲೆಕ್ಷನ್ನಿನಲ್ಲಿ ಈ ತಾಲ್ಲೂಕಿನ ಜನರು ಇಂದಿರಾ ಗಾಂಧಿಯವರ ಪಕ್ಷಕ್ಕೆ ಓಟ್ ಹಾಕಿದ್ದಾರೆಂದು ಅವರಿಗೆ ಸಾಲ ಕೊಡತಕ್ಕ ವಿಚಾರದಲ್ಲಿ ಅವರ ಅರ್ಜಿಯ ಬಗ್ಗೆ ಏನಾದರೊಂದು ಕೊಕ್ಕೆಯನ್ನು ಹಾಕಿ ಅವರಿಗೆ ಸಾಲ ಸಿಕ್ಕದಂತೆ ಮಾಡುತ್ತಿದ್ದಾರೆ. ಹೀಗೆ ಒಂದು ರಾಜಕೀಯದಲ್ಲಿ ವ್ಯವಹಾರ ನಡೆಸತಕ್ಕ ಸಂಸ್ಥೆಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡರೆ ಅದರಲ್ಲಿ ತಪ್ಪೇನಿದೆ ? ಈ ಕಾರಣಕ್ಕಾಗಿ ನಾನು ಸುಮಾರು 25 ಛಾರ್ಜುಗಳನ್ನು ಫ್ರೇಂ ಮಾಡಿ ಅದನ್ನು ಮಾನ್ಯ ಸಚಿವರ ಕಡೆಗೆ ಕಳುಹಿಸಿದ್ದೇನೆ, ಅವರು ದಯಮಾಡಿ ಈ ಸಂಸ್ಥೆಯನ್ನು ಮೊದಲು ಮುಟ್ಟುಗೋಲುಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಗೋಕುಲಾಷ್ಟಮಿಗೂ ಇಮಾಂ ಸಾಹೇಬರಿಗೂ ಎಷ್ಟು ಸಂಬಂ

ಧವೋ ಈ ಸಹಕಾರ ತತ್ವಕ್ಕೂ ರಾಜಕೀಯಕ್ಕೂ ಅಷ್ಟೇ ಸಂಬಂಧ. ಆದ್ದರಿಂದ ರಾಜಕೀಯ ನಡೆಸತಕ್ಕ ಸಂಸ್ಥೆಗಳನ್ನು ಸರ್ಕಾರದವರು ಮೊದಲು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ತಮ್ಮ ವೇಳೆ ಮುಗಿಯಿತು.........

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ ತಾವು ನನಗೆ ಕೊಟ್ಟಿದ್ದ ಹತ್ತು ನಿಮಿಷದ ಕಾಲವನ್ನೆಲ್ಲ ವಿರೋಧಪಕ್ಷದವರೇ ಎದ್ದೆದ್ದು ಪ್ರಶ್ನೆಗಳನ್ನು ಹಾಕುವುದಕ್ಕೆ ತೆಗೆದುಕೊಂಡಿದ್ದಾರೆ,..........

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಸುಳ್ಳು ಹೇಳುವುದಕ್ಕೂ ಅದರಲ್ಲೂ ಇಂಥಾ ಸಭೆಯಲ್ಲಿ ಅದಕ್ಕೆ ಒಂದು ಮಿತಿ ಇರಬೇಡವೇ ? ಮಾನ್ಯ ಸದಸ್ಯರಿಗೆ ಮಾತನಾಡಲು ಅಧ್ಯಕ್ಷರು ಹತ್ತು ನಿಮಿಷ ಅವಕಾಶವನ್ನೇ ಕೊಟ್ಟಿಲ್ಲ. ಹಾಗಿದ್ದರೂ ವಿರೋಧ ಪಕ್ಷದವರೇ ಹತ್ತು ನಿಮಿಷ ಉಪಯೋಗಿಸಿಕೊಂಡಿದ್ದಾರೆಂದು ಹೇಳತಕ್ಕ ಮಾನ್ಯ ಸದಸ್ಯರ, ಭಾಷಣದಲ್ಲಿ ಇನ್ನೆಷ್ಟರ ಮಟ್ಟಿಗೆ ನಿಜಾಂಶವಿರಬಹುದು............

ಉಪಾಧ್ಯಕ್ಷರು.—ತಾವು ಜಾಗ್ರತೆ ಮುಗಿಸಬೇಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಇನ್ನು ಮಾನ್ಯ ಮಿತ್ರರಾದ ಶ್ರೀ ರಾಮೇಗೌಡರು ಈ ಆರ್ಬಿಟ್ರೇಟರುಗಳ ವಿಚಾರದಲ್ಲಿ ಒಂದು ತಪ್ಪನ್ನು ತಿಳಿದುಕೊಂಡಿದ್ದಾರೆ. ಅವರು ಹತ್ತಾರು ವರ್ಷಗಳಿಂದ ಈ ಸಹಕಾರೀ ಕ್ಷೇತ್ರದಲ್ಲಿದ್ದಾರೆ. ನಾನೂ ಕೂಡ ಹತ್ತಾರು ವರ್ಷಗಳಿಂದ ಆರ್ಬಿಟ್ರೇಟರಾಗಿ ಕೆಲಸ ಮಾಡುತ್ತಿದ್ದೇನೆ. ಈ ವ್ಯವಹಾರದಲ್ಲಿ ಜನರು ಸಿವಿಲ್ ಕೋರ್ಟಿಗೆ ಅಲೆದು ಹಣವನ್ನು ಹಾಳುಮಾಡಿಕೊಳ್ಳುವುದನ್ನು ತಪ್ಪಿಸುವುದಕ್ಕಾಗಿ ಇಲ್ಲಿ ಆರ್ಬಿಟ್ರೇಟರುಗಳನ್ನು ಇಡಲಾಗಿದೆ. ಇವರಲ್ಲಿ ಒಬ್ಬಿಬ್ಬರು ತಪ್ಪು ಮಾಡಿರಬಹುದು. ಅದಕ್ಕಾಗಿ ಇಲ್ಲಿ ಯಾವ ಆರ್ಬಿಟ್ರೇಟರೂ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳುವುದು ಸರಿಯಿಲ್ಲ. ಅನೇಕ ವೇಳೆ ನೋಟೀಸನ್ನು ಕಳುಹಿಸಿದಾಗ ಪಾರ್ಟಿ ಊರಲ್ಲೇ ಇದ್ದುಕೊಂಡು ಪೋಸ್ಟ್ ಮ್ಯಾನ್‌ನನ್ನು ಕೈಲಿ ಹಾಕಿಕೊಂಡು ಪಾರ್ಟಿ ಊರಲಿಲ್ಲ ಎಂದು ಷರಾ ಬರೆಸುತ್ತಾನೆ.

Sri H. S. SIDDAPPA.—There is provision in the Act for serving a notice. The hon. member does not know it.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನೋಟೀಸು ಜಾರಿಯಾಗಿಲ್ಲ, ಪುನಃ ಕೊಡಬೇಕು ಎಂದು ವಾಪಸುಮಾಡುವರು. ಇದರಿಂದ ಪುನಃ ನೋಟೀಸು ಕೊಡಬೇಕಾಗುವುದು. ಇದರಿಂದ ಸೊಸೈಟಿ ಅಥವಾ ಬ್ಯಾಂಕುಗಳಿಗೆ ಸಲ್ಲಬೇಕಾದ ಹಣದ ಬಗ್ಗೆ ಡಿಕ್ರಿ ಕೊಡವೇ ಹಣ ಬರುವುದು ನಿಧಾನವಾಗುತ್ತಿದೆ. ಎವಿಡೆನ್ಸ್ ಆಕ್ಟಿನ 110 ನೇ ಸೆಕ್ಷನ ಪ್ರಕಾರ ಪೋಸ್ಟ್ ಮಾಡಿರುವುದಕ್ಕೆ ದಾಖಲೆ ಇದ್ದರೆ ಸಾಕು ಎಂದಿದೆ ತಲ್ಪಿದೆ ಎಂದು ಹೇಳಬಹುದು. ಪ್ರಿಸಮ್ಷನ್ ಹೀಗಿದೆ. ಹೀಗಿರುವಾಗ ರಿಜಿಸ್ಟರ್ಡ್ ನೋಟೀಸು ಕೊಡುವರು, ಹೀಗೆ ಕೊಡುವ ಪದ್ಧತಿ ಎಲ್ಲೂ ಇಲ್ಲ. ಈ ಪದ್ಧತಿ ತೆಗೆದು ಸರಿಯಾದ ರೀತಿಯಲ್ಲಿ ವಸೂಲುಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕು.

ಇನ್ನೊಂದು ನ್ಯೂನತೆ, ಸಹಕಾರಸಂಘಗಳ ಅಮಲ್ದಾರಿ ಬಗ್ಗೆ ಇದೆ. ಜೂನ ಮತ್ತು ಜುಲೈ ತಿಂಗಳಲ್ಲಿ ಮನೆ ಜಫ್ತಿ ಮಾಡುವರು, ಆದರೆ ಏನೂ ಮನೆಯಲ್ಲಿರಲಿಲ್ಲ ಎಂದು ವಾಪಸು ಬರುವರು. ಡಿಸೆಂಬರು ಮತ್ತು ಜನವರಿಯಲ್ಲಾದರೂ ಬೆಳೆ ಬಂದಿರುವುದು, ಆಗ ಜಫ್ತಿ ಮಾಡಿದ್ದರೆ ಏನಾದರೂ ದೊರೆಯುವುದು. ಆದುದರಿಂದ ಈ ವಿಚಾರದಲ್ಲಿರುವ ನ್ಯೂನತೆ ಸರಿಪಡಿಸಬೇಕು.

ಇನ್ನು ಸೊಸೈಟಿಯಲ್ಲಿರುವ ಇನ್ನೊಂದು ನ್ಯೂನತೆಯನ್ನು ಗಮನಿಸಬೇಕು. ಹಣ ಕೆಲವರಿಗೆ ಕೊಟ್ಟಿರುತ್ತಾರೆ, ಅವರು ಕೊಡಲಿಲ್ಲವೆಂಬ ಕಾರಣಕ್ಕಾಗಿ ಕೆಲವು ಸೊಸೈಟಿಗಳಿಗೆ ಜಿಲ್ಲಾ ಬ್ಯಾಂಕಿನಿಂದ ಹಣ ಸಿಕ್ಕುತ್ತಿಲ್ಲ. ಇದರಿಂದೇನಾಗುವುದೆಂದರೆ ಎಲ್ಲೋ 3-4 ಜನರು ಸಾಲವನ್ನು ವಾಪಸು ಸಕಾಲದಲ್ಲಿ ಕೊಡದಿದ್ದರೆ ಸಂಬಂಧಪಟ್ಟ ಸೊಸೈಟಿಗಳಿಗೆ ಹಣ ಸಹಾಯ ದೊರೆಯದ ರೈತರಿಗೆ ಹಣ ಸಿಕ್ಕುವುದಿಲ್ಲ. ಹಿಂದೆ ಕೊಟ್ಟ ಅಲ್ಪಾವಧಿ ಸಾಲವನ್ನಾದರೂ ಲಾಂಗ್‌ಟರ್ಮ್ ಲೋನ್ ಎಂದು ಭಾವಿಸಿ ಬರುವ ವರ್ಷಕ್ಕೆ ಮುಂದುವರಿಸಿ ಫ್ರೆಷ್ ರಿಕಾರ್ಡ್ ಬಿಲ್ಡ್‌ಅಪ್ ಮಾಡುವುದು ಹೀಗೇನಾದರೂ ಮಾಡಿ ರೈತರಿಗೆ ಹಣ ದೊರೆಯಲು ವ್ಯವಸ್ಥೆಮಾಡಬೇಕು. ಈಗ ಕೊಟ್ಟಿರುವ ಹಣ ಬಾರದೆ ಹೊಸ ಸಹಾಯ ಬ್ಯಾಂಕುಗಳಿಂದ ದೊರೆಯದೆ ಅನೇಕ ಸೊಸೈಟಿಗಳು ಡಿಫಂಕ್ಟ್ ಆಗಿ ಕೆಲಸ ಮಾಡುತ್ತಿಲ್ಲ, ಇದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ತಾಲ್ಲೂಕಿನಲ್ಲಿ ಹರಿಜನರ ಸೊಸೈಟಿಯಿದೆ, ಅಲ್ಲಿ ನಾಲ್ಕೈದು ಜನರು ಹಣ ತೆಗೆದುಕೊಂಡು ಕೊಟ್ಟಿಲ್ಲ. ನೂರಾರು ಸದಸ್ಯರಿರುವಾಗ ನಾಲ್ಕು ಜನರು ಬಾಕಿ ಕೊಡದಿದ್ದರೆ ಅದರಿಂದ ಉಳಿದವರೂ ತೊಂದರೆ ಪಡಬೇಕಾಗುವುದು. ಬಾಕಿ ನಿಂತಾಗ ಯಾವ ಕೆಲಸಕಾರ್ಯವನ್ನೂ ಮಾಡುವಹಾಗಿಲ್ಲ. ಈ ನ್ಯೂನತೆ ಸರಿಪಡಿಸಬೇಕು.

ತಾಲ್ಲೂಕು ಸೊಸೈಟಿಗಳಿಗೆ ಓಪನ್ ಮಾರ್ಕೆಟ್‌ನಲ್ಲಿ ಬತ್ತ ಕೊಳ್ಳಬೇಕೆಂದು ಆದೇಶ ಕೊಡಲಾಗಿದೆ. ಆದರೆ ಕೊಟ್ಟಿರುವ ಆದೇಶದಲ್ಲಿ ಯಾವ ದರಕ್ಕೆ ಕೊಳ್ಳಬೇಕೆಂದು ತಿಳಿಸಿದೆ? ಮಾರುಕಟ್ಟೆಯಲ್ಲಿ ಖಾಸಗಿ ವ್ಯಾಪಾರಿಗಳು ಕೊಳ್ಳುವುದಕ್ಕೂ ಸೊಸೈಟಿ ಕೊಳ್ಳುವ ದರಕ್ಕೂ 15 ರೂಪಾಯಿ ಅಂತರವಿದೆ. ಹಾಗಿರುವಾಗ 15 ರೂಪಾಯಿ ಕಡಿಮೆ ದರಕ್ಕೆ ಯಾವ ರೈತ ಓಪನ್ ಮಾರ್ಕೆಟ್ಟಿನಲ್ಲಿ ಬತ್ತ ಕೊಡುವನು ಎಂಬುದನ್ನು ಯೋಚನೆಮಾಡಿ. ಅಲ್ಲದೆ ಪ್ರೊಕ್ಯೂರ್‌ಮೆಂಟಿಗೆ ಹಣದ ವ್ಯವಸ್ಥೆ ಸರಕಾರದಿಂದ ಇದುವರೆಗೂ ಆಗಿಲ್ಲ. ಇಡೀ ದೇಶದಲ್ಲಿ ತಾಲ್ಲೂಕು ಸೊಸೈಟಿಗಳವರು ಓಪನ್ ಮಾರ್ಕೆಟ್ಟಿನಲ್ಲ ವ್ಯಾಪಾರಮಾಡಲು ಅವರಿಗೆ ಮೂಲ ಧನವಿಲ್ಲ. ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ತಮ್ಮ ಕೈಯಿಂದ ಹಣ ಹಾಕಿ ಈ ಕೆಲಸ ಮಾಡಬೇಕು. ಎಷ್ಟೋ ಸಲ ಸರಕಾರಕ್ಕೆ ಇದನ್ನು ಹೇಳಿದರೂ ಗಮನಕೊಟ್ಟಿಲ್ಲ ಒಂದು ಸೀಸನ್ ಕಳೆದಿದೆ. ಈ ವಿಚಾರವನ್ನು ಕೂಡಲೇ ಗಮನಿಸಿ ತುರ್ತು ಪರಿಸ್ಥಿತಿ ಎಂದು ಭಾವಿಸಿ ಎಲ್ಲಾ ತಾಲ್ಲೂಕು ಸೊಸೈಟಿಗಳಿಗೂ ಸರಕಾರ ಕೊಡಬೇಕಾದ ಹಣದಲ್ಲಿ ಕನಿಷ್ಟಪಕ್ಷ ಸೇಕಡ 30 ಭಾಗವಾದರೂ ಕೊಡಲು ವ್ಯವಸ್ಥೆ ಮಾಡಬೇಕು. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri B. B. SAYANAK (Belgaum).—Mr Deputy Speaker, I rise to oppose the demand tabled by the Hon. Minister for Co-operation a demand for Rs. 4,05,62,000. The main intentions of the Societies are to uplift the poor, to help the down-trodden and to provide the necessary financial help to agriculturists. I want to ask: have we achieved that objective even though we got the independence in the year 1947 ? We have not uplifted the poor and the down-trodden agriculturists so far. I am sorry to state that the persons who are rich are becoming richer and the poor are becoming poorer. The poor people are not getting the needed help from the co-operative societies. These co-operative societies are being managed by the rich and the money-lenders. These people do not want the agriculturists to prosper. There is a Seva Sahakara Society in my village at Angol with a population of 15,000 The share-holders of that society are only 152 persons. The Directors of that society have framed a bye-law to the effect that if a man purchased 20 shares of Rs. 5 each, he alone should be a share-holder. Such a bye-law has been ignored by the Assistant Registrar, the Deputy Registrar the Registrar and the Minister. I want to ask the Hon. Minister : while it is the intention of the society to help the poor agriculturists, how many agriculturists are there in that society as its members; why only the rich persons are the members of this society ?

Sri H. S. SIDDAPPA.—May I know how many shares the hon Minister Sri Shankara Alva is having in the Co-operative Societies ?

Sri B. B. SAYANAK.—There is a Marath Co-operative Bank in Belgaum. I have no grouse against that Bank That bank is considered as A-1 bank by the Hon. Minister. But I am of the opinion that this Bank is also managed by rich people because they have

passed a bye law to the effect that a man who is having Rs. 1000 as share amount is entitled to become a member of that Bank. Is it fair on the part of that Bank to have passed such a bye law ? This being so, I want to know why the Government has not taken any action against this bank when they have passed such a bye law which s violative of the provisions.

There are some caste banks in the State. For instance, there is a Muslim Bank, the Reddy Bank etc., Why should we have such caste-banks when our country is a secular State. The Banks should not be associated with the castes.

There is a Janatha Bazaar in Belgaum. The Hon. Minister might be aware that this Janatha Bazaar is running under a loss from its very inception. So far this Janatha Bazaar has incurred a loss of more than Rs. 5,00,000. This being so, the Janatha Bazaar was continued to be run. This year only, the Government has taken over this Bazaar.

For the last 5 to 6 years there is a loss to the tune of Rs. 1 lakh every year. I am of the opini n this co-operative movement has failed in this country. Israel is the only country in the world where this co-operative movement has been successful. The people of that country are very honest, sincere and patriotic. If at all, the Co-operative movement is to succeed in this country, our people should be honest and straight forward and they should be patriotic too. Then only the co-operative movement will be successful. Our people should be honest, straight forward and should have sympathy for the poor and the down trodden. Until and unless this change takes place this co-operative movement will never be successful.

2-30 P. M.

The Minister said there is a co-operative Housing scheme. There is one co-operative Housing Society formed by Harijans in Angal. They got 5 acres of land from the Government for the construction of houses. In order to construct houses, they asked for loan from the Government. For the last two years that Society did not get loan from the Government. Why should this happen ; when the Government is thinking of helping the poor people, that too Scheduled Caste and Scheduled Tribes people ? Therefore the Government should immediately sanction loan to this Society to enable them to construct houses for themselves.

There is one Krishi Bhavan in Belgaum constructed by a congress-man who was once a right hand person to Sri Nijalingappa and Veerendra Patil. The land on which this Bhavan is constructed belongs to Central Government. This man got this land form the Central Government with the help of Sri Nijalingappa and Sri Veerendra Patil. This Krishi Bhavan was constructed purely for agriculturists only to keep fertilizers, seeds, pesticides etc. But what

(SRI B. B. SAYANAK)

is there in this Krishi Bhavan ? There are liquor shops, toddy shops etc. What for this Bhavan was constructed ? Has it been fulfilled ? I want to know why the Government is keeping quiet without taking action against this man who happens to be a Congressman. He has taken loan from the Government.

SRI J. S. AMMANNAWAR.—Probably he might have opposed you in the election.

SRI B. B. SAYANAK.—Though he opposed me I have been elected. Dont worry about my opposition in Belgaum. There is one Taluk Marketing Society in Belgaum. I was a member of that Society six years back and that Society was running in profit. But now the Government has appointed a Manager and the salary of that Manager is Rs. 800 and it becomes Rs. 9,600 per annum. Now that Society is running in a loss. So, I request the Government not to appoint your Officers as Managers to any of the Societies. A Society can appoint a Graduate for Rs. 400 per month. Even a B.Com graduates are available for this salary and they can look after these accounts and management of the Societies. We have appointed one B.A., LL.B., for Rs. 500 for our Society and this was running in profit. So, I request the Government not to appoint any Government servant.

The Minister has stated that there is a Co-operative Farming Society. There are so many Co-operative Farming Societies. But I am doubtful whether the Co-operative Farming Societies are running in good or bad. I am of the opinion that unless and until the people are honest and have the good intention of serving the Nation, the Co-operative Farming Movement will not be a success. With these words I thank the Chair for having given me an opportunity to speak.

† ಶ್ರೀ ಪಿ. ಸಿ. ಶೆಟ್ಟರ್. (ಹಾನಗಲ್).—ಮಾನ್ಯ ಅಧ್ಯಕ್ಷರೇ, ಇವತ್ತಿನದಿವಸ ಸಹಕಾರ ಮಂತ್ರಿಗಳು ಕೇಳಿದ ಹಣವನ್ನು ಸಮರ್ಥಿಸುತ್ತಾ ನಾನು ಕೆಲವೊಂದು ಸಲಹೆಗಳನ್ನು ಮಾಡಬಯಸುತ್ತೇನೆ. ಸಹಕಾರಿ ತತ್ವದಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾದದ್ದು ಇಲ್ಲ. ಅಥವಾ ನಮ್ಮ ಸಹಕಾರಿ ಮಂತ್ರಿಗಳ ದಕ್ಷತೆಯ ಬಗ್ಗೆಯೂ ಸಹ ನಾನು ಏನನ್ನೂ ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಒಂದು ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ, ಏನೆಂದರೆ, ಹೋದ ಬಡ್ಜೆಟ್ಟಿನಲ್ಲಿ ಮಾಡಿದಂಥ ಸೂಚನೆಗಳನ್ನು ಆಪಾದನೆಗಳನ್ನು ಮತ್ತೆ ಈ ಬಡ್ಜೆಟ್ಟಿನ ಅಧಿವೇಶನದಲ್ಲಿ ಮಾಡುತ್ತಾ ಇದ್ದೇವೆ ಎಂದು ಸ್ವಲ್ಪಮಟ್ಟಿಗೆ ಹೇಳಬಹುದು. ನಾನು ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಬಿನ್ನವಿಸಿಕೊಳ್ಳುವುದು ಏನೆಂದರೆ, ಇವತ್ತು ನಾವು ಮಾಡತಕ್ಕ ಸಲಹೆಸೂಚನೆಗಳನ್ನು ಅಥವಾ ಆಪಾದನೆಗಳನ್ನು ಅಥವಾ ಕುಂದುಕೊರತೆಗಳನ್ನು ಏನು ಹೇಳುತ್ತಿದ್ದೇವೆಯೋ ಅವುಗಳನ್ನು ಮುಂದಿನ ವರ್ಷ ಹೇಳುವ ಪರಿಸ್ಥಿತಿಯನ್ನು ಇನ್ನಾದರೂ ತರಬಾರದು, ಅದಕ್ಕೆ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಹೇಳುತ್ತಾ ಇದ್ದೇನೆ. ಹೋದ ಸಲ ಹೇಳಿದ ವಿಷಯಗಳನ್ನು ಈ ಸದನದಲ್ಲಿ 1973ನೇ ಇಸವಿಯಲ್ಲಿ ಹೇಳುತ್ತಿದ್ದೇವೆ. ನನಗೆ ಹೆದರಿಕೆಯಾಗಿ ಅನ್ನಿಸುತ್ತವೆ, 1974ನೇ ಇಸವಿಯಲ್ಲಿ ಮತ್ತೆ ಇದೇ ಸಲಹೆಗಳನ್ನು ಹೇಳುವ ಸಂಭವಬರಬಹುದು. ಅದು ಬರುವುದುಬೇಡ ಎಂದು ನಾನು ಹೇಳುತ್ತೇನೆ. ಇವತ್ತು ಸಹಕಾರ ತತ್ವವನ್ನು ಒಪ್ಪಿಕೊಂಡು ಜನಸಾಮಾನ್ಯರ ಹಿತಕ್ಕಾಗಿ ಸಹಕಾರವನ್ನು ಎಷ್ಟರಮಟ್ಟಿಗೆ ಉಪಯೋಗಮಾಡಿಕೊಂಡಿದ್ದೇವೆ ಎನ್ನುವುದರ ಬಗ್ಗೆ ಮಾನ್ಯ

ರಾಮೇಗೌಡರು ಸ್ವಲ್ಪ ಪರವಾಗಿ ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ಸದನದಲ್ಲಿ ಒಬ್ಬರಾದರೂ ಸಹಕಾರ ಸಂಘಗಳನ್ನು ದಕ್ಷತೆಯಿಂದ ನಡೆಸಿಕೊಂಡು ಹೋದವರು ಇದ್ದಾರಲ್ಲಾ ಅವರನ್ನು ಕೇಳುವ ಅವಕಾಶವಾಯಿತಲ್ಲಾ ಎಂದು ನನಗೆ ಅನಿಸುತ್ತದೆ. ಅವರು ಹೇಳುತ್ತಾ ಹೇಳಿದರು, ಮನೆಗೆ ಬಂದಾಗ ಸ್ವಚ್ಛ ನೋಡಿಕೊಂಡು ಸ್ವಚ್ಛ ಇದೆಯೆಂದು ಹೇಳಬೇಕು. ನಾಯಿ ಮಲಗುವ ಜಾಗ ನೋಡಿಕೊಂಡು ಕೆಟ್ಟದ್ದು ಎಂದು ಹೇಳಬಹುದು. ನಾಯಿಮಲಗಿದ ಜಾಗ ಇದ್ದಾಗ ಸ್ವಚ್ಛ ಎನ್ನುವುದು ಸ್ವಲ್ಪಸ್ವಚ್ಛ ಇದ್ದಾಗ, ಸ್ವಚ್ಛ ಇಲ್ಲದೆ ಇದ್ದಾಗ ಸ್ವಚ್ಛ ಇಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಹೇಳಬೇಕಾಗುತ್ತದೆ. ಇವತ್ತು ಸಹಕಾರ ಸಂಘಗಳು ವೈಯಕ್ತಿಕ ಹಿತಾಸಕ್ತಿಗಳ ಶೋಷಣೆಯ ವಿರುದ್ಧ ಹೋರಾಟ ಮಾಡಬೇಕು, ಅಥವಾ ಅಂಥ ಒಂದು ತಳಹದಿಯ ಮೇಲೆ ಸುಮಾರು 70 ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದೇವೆ. ನಾನು ಸರ್ಕಾರಕ್ಕೆ ವಿನಂತಿ ಮಾಡಿ ಕೊಳ್ಳುವುದು ಏನೆಂದರೆ, ನಿಷ್ಪಕ್ಷಪಾತವಾದ ಕಮಿಟಿಯನ್ನು ನೇಮಿಸಿ ಎಂದು.

ಇವೊತ್ತು ಇರುವ ಸಹಕಾರಿ ವ್ಯವಸ್ಥೆಯಲ್ಲಿ ಅಥವಾ ಸಹಕಾರಿ ಡಿಪಾರ್ಟ್‌ಮೆಂಟಿನಲ್ಲಿ ನಡೆಯುತಕ್ಕ ಅವ್ಯವಹಾರಗಳನ್ನು ನಾವು ಏನು ಮಾಡಿದರೂ ನಿವಾರಣೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಅಭಿಪ್ರಾಯ ನನಗೆ ಅನಿಸುತ್ತದೆ ಸಹಕಾರಿ ಡಿಪಾರ್ಟ್‌ಮೆಂಟ್ ಬಂದ್ ಮಾಡುವ ಪ್ರಸಂಗ ಬಂದಿದೆಯೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಆದುದರಿಂದ ನಾವು ಇವೊತ್ತು ವಿನಂತಿ ಮಾಡುವುದು ಏನು ಎಂದರೆ ಸಹಕಾರಿ ಸಂಘಗಳ ಅವ್ಯವಹಾರಗಳ ಬಗ್ಗೆ ಮಾತನಾಡಬೇಕಾದರೆ ಸಂಸ್ಥಾ ಕಾಂಗ್ರೆಸ್ಸಿನ ಸದಸ್ಯರು ನಿಂತು ಮಾಡಿದ ಕೈವಾಡವೇ ಎಂದು ಅವುಗಳನ್ನು ನೋಡಿದರೆ ಅರ್ಥವಾಗುತ್ತದೆ. ಸಹಕಾರಿ ಸಂಘಗಳು ಹೆಚ್ಚಿಗೆ ವ್ಯವಸ್ಥೆ ಅಗ ಮಾಡುತ್ತಿದ್ದರು, ಇವೊತ್ತಿನವರೆಗೂ ಸಂಸ್ಥಾ ಕಾಂಗ್ರೆಸ್ ಆಗಲಿ ಅಥವಾ ವಿರೋಧ ಪಕ್ಷದವರೇ ಆಗಲಿ ವ್ಯವಸ್ಥೆ ಮಾಡುತ್ತಿದ್ದರೂ ಸೆಂಟ್ರಲ್‌ಬ್ಯಾಂಕ್‌ಗಳನ್ನು 64 ಕಾಲಮಿನ ಕೆಳಗೆ ತೆಗೆದುಕೊಳ್ಳುವದು ವಿಹಿತ ಪಕ್ಷದ ಹಿತದೃಷ್ಟಿಯಿಂದ, ಪಕ್ಷದ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದ ಇದನ್ನು ತಿಳಿದುಕೊಳ್ಳುವುದು ಬೇಡ. ಸಾಮಾನ್ಯವಾಗಿ ಹೆಚ್ಚು ಕಡಿಮೆ ಎಲ್ಲಾ ಸೆಂಟ್ರಲ್‌ಬ್ಯಾಂಕ್‌ಗಳಲ್ಲಿ ಅವ್ಯವಹಾರದ ವ್ಯವಸ್ಥೆ ಇರುವುದರಿಂದ, ವೈಯಕ್ತಿಕ ಹಿತಾಸಕ್ತಿಗಳು ಹೆಚ್ಚಿಗೆ ಕೆಲಸಮಾಡುವುದರಿಂದ, ಯಾವ ಜನತೆಗೆ ಉಪಯೋಗ ಆಗಬೇಕೋ ಆ ಉಪಯೋಗ ಆಗದ ಕಾರಣ ರಾಜ್ಯದಲ್ಲಿ 19 ಸೆಂಟ್ರಲ್ ಬ್ಯಾಂಕುಗಳು ಏನು ಇವೆ, ಅವೆಲ್ಲಾ ಸೆಂಟ್ರಲ್ ಬ್ಯಾಂಕುಗಳನ್ನು ಸರ್ಕಾರ ವಹಿಸಿಕೊಳ್ಳಬೇಕು ಎಂದು ಸೂಚನೆ ಮಾಡುತ್ತಿದ್ದೇನೆ.

ಇನ್ನು ಎರಡನೆಯದಾಗಿ ಸಹಕಾರ ಸಂಘಗಳಲ್ಲಿ ಸಾಲ ಕೊಡತಕ್ಕದ್ದರಲ್ಲಿ ಏನು ನಡೆಯುತ್ತಾ ಇದೆ ಆ ವಿಷಯಗಳನ್ನು ಪರಿಶೀಲನೆ ಮಾಡಬೇಕಾಗಿದೆ. ಸಾಲ ಕೊಡತಕ್ಕಂಥ ಸಹಕಾರ ಸಂಘಗಳು ಸಾಮಾನ್ಯವಾಗಿ ಯಾರ ಕೈಯ್ಯಲ್ಲಿ ಇವೆ ಎಂದರೆ ಯಾವನು ವೈಯಕ್ತಿಕವಾಗಿ ಸಾಲ ಕೊಡುವ ವ್ಯವಹಾರ ಕೈಕೊಂಡಿದ್ದಾನೆ ಅಂತಹ ಮನುಷ್ಯನ ಕೈಯಲ್ಲಿ ಸಹಕಾರ ಸಂಘಗಳು ಇವೆ. ಅಂದರೆ ಇವೊತ್ತಿಗೆ 100ಕ್ಕೆ 10 ಪರ್ಸೆಂಟ್‌ನಂತೆ ಬಡ್ಡಿ ಹಾಕಿ ರೈತನಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ಸಿಕ್ಕಬೇಕು. ಅದರೆ ಇವೊತ್ತು 100ಕ್ಕೆ 50—60 ರೂಪಾಯಿಗೆ ಬಡ್ಡಿಕೊಡುವವರ ಕೈಯ್ಯಲ್ಲಿ ಈ ಸಹಕಾರ ಸಂಘಗಳು ಇವೆ. ಅದಕ್ಕೆ ಅವರು ಚೇರ್‌ಮನ್ ಆಗಿರುವುದು ಹಾಗಿರುವಾಗ ಅಧಿಕಾರಿಗಳ ದಕ್ಷ ಆಡಳಿತ ಇರಬಹುದು, ಒಬ್ಬ ದಕ್ಷ ಅಡಳಿತಗಾರ ಇದನ್ನು ನಿರ್ವಹಣೆ ಮಾಡುವುದಕ್ಕೆ ಸಾಧ್ಯವೇ ಎಂದು ಪ್ರಶ್ನೆ ಕೇಳಬೇಕಾಗಿದೆ. ಈ ಸಂದರ್ಭದಲ್ಲಿ ಎಲ್ಲಾ ಸಹಕಾರಿ ಕ್ಷೇತ್ರದಲ್ಲಿ ಇರತಕ್ಕ ಒಂದು ಹೊಲಸನ್ನು ತೆಗೆದು ಹಾಕಲಿಕ್ಕೆ ರಿಜಿಸ್ಟ್ರಾರ್ ಮತ್ತು ಸರ್ಕಾರಕ್ಕೆ ಹೆಚ್ಚಿನ ಅಧಿಕಾರವನ್ನು ಕೊಡತಕ್ಕ ಶಾಸನ ಬರಬೇಕು ಎಂದು ಇಚ್ಛೆಪಡುತ್ತೇನೆ.

ಡಿಫಾಲ್ಟರ್ಸ್ ಬಗ್ಗೆ ಬಗ್ಗೆ ಹೇಳಬೇಕು ಎಂದರೆ ರೈತ ತೆಗೆದುಕೊಂಡು ಹೋದಂಥ ಸಾಲ ಕೊಡದೆ ಇರುವ ಪರಿಸ್ಥಿತಿ ಉದ್ಭವಿಸಿರುವುದು ಹೆಚ್ಚಿಗೆ ರೈತನಿಂದ ಅಲ್ಲ. ಸೆಂಟ್ರಲ್ ಬ್ಯಾಂಕ್ ಅಧಿಕಾರಿಗಳು ಮತ್ತು ಸಾಲ ಕೊಡತಕ್ಕ ಸಂಘದ ವ್ಯವಸ್ಥಾಪಕ ಮಂಡಲಿ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಸಹಕಾರ ಸಂಘಗಳಲ್ಲಿ ಇರತಕ್ಕ ಸಾಲ 100ಕ್ಕೆ 40ಬೇನಾಮಿ ಸಾಲ ಇದೆ. ರೈತನ ಹೆಸರಿನಲ್ಲಿ ಸಾಲ ತೆಗೆದುಕೊಳ್ಳುವುದು ವ್ಯವಸ್ಥಾಪಕ ಮಂಡಲಿ ಸದಸ್ಯರ ಮೇಲೆ ಸಾಲ ಇದೆ. ಇದನ್ನು ತನಿಖೆ ಮಾಡುವ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆಯೇ ಎನ್ನುವ ಪ್ರಶ್ನೆ ಹಾಕಬೇಕಾಗಿದೆ. ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಸೆಂಟ್ರಲ್ ಬ್ಯಾಂಕ್‌ನ ಎಷ್ಟು ಆಫೀಸುಗಳಲ್ಲಿ ಜಮಾ ಖರ್ಚು ಮಾತ್ರ ನಡೆಯುತ್ತಿದೆ. ಇವೊತ್ತು ರೊಕ್ಕ ಇಲ್ಲದಂತಹ ಪರಿಸ್ಥಿತಿ ಬಂದಿದೆಯೆಂದು ಬಹಳ ಖೇದದಿಂದ ಹೇಳಬೇಕಾಗಿದೆ. ಹೇ ಆಫೀಸ್ ಮ್ಯಾನೇಜರ್. ಸಹಕಾರಸಂಘದ ಚೇರ್‌ಮನ್, ಸಹಕಾರ

(ಶ್ರೀ ಪಿ. ಸಿ. ಶೆಟ್ಟರ್)

ಸಂಘದ ಕಾರ್ಯದರ್ಶಿಗಳು ಕೂಡಿಕೊಂಡು ಅದಲು ಬದಲು ಮಾಡುವ ಅಕೌಂಟ್ಸ್ ಬಹಳ ಇವೆ. ಏಕೆಂದರೆ ಎಲ್ಲಾ ಕಾಗದ ತಯಾರು ಮಾಡಿಕೊಂಡು ಬ್ಯಾಂಕಿನ ಕಟ್ಟೆಮೇಲೆ ಕೂತುಕೊಂಡು ಬ್ಯಾಂಕಿಗೆ ಜಮಾ ಬರೆಯಿಸುವುದು ರೊಕ್ಕ ಜಮಾ ಇಲ್ಲ, ಮಾರುದಿವಸ ಇಂಥವರಿಗೆ ಕೊಟ್ಟಿದ್ದೇವೆಂದು ಖರ್ಚು ಹಾಕುವುದು, ಈ ಒಂದು ವ್ಯವಸ್ಥೆ ಸಲುವಾಗಿ ಹೇ ಆಫೀಸಿನಲ್ಲಿ ಇರತಕ್ಕ ಏಜೆಂಟ್‌ಗಳು ಅಥವಾ ಮ್ಯಾನೇಜರು 100ಕ್ಕೆ 5 ರೂಪಾಯಿ ಪಡೆಯುತ್ತಿದ್ದಾರೆ. ಇವೊತ್ತಿಗೂ ನಾನು ವಿಷಾದದಿಂದ ಹೇಳಬೇಕಾಗಿದೆ. ಹಾನಗಲ್ ಹತ್ತಿರ ಅಕ್ಕಿ ಆಲೂರಿನಲ್ಲಿ ಒಬ್ಬ ಮ್ಯಾನೇಜರ್ ಇದ್ದಾರೆ ಅವರಿಗೆ ತಿಂಗಳಿಗೆ 150—200 ರೂಪಾಯಿ ಪಗಾರ ಕೊಡುತ್ತಿದ್ದಾರೆ, ಇವೊತ್ತು ಅವರ ಆಸ್ತಿ ಲೆಕ್ಕಾಚಾರ ಮಾಡಿದರೆ ಅವರಿಗೆ 10 ಲಕ್ಷ ರೂಪಾಯಿ ಆಸ್ತಿ ಇದೆ. ಸೆಂಟ್ರಲ್ ಬ್ಯಾಂಕನ್ನು ಕೊಂಡುಕೊಳ್ಳಬಹುದು ಅಷ್ಟು ದುಡ್ಡು ಇದೆ, ಅಂಥ ಒಂದು ಪರಿಸ್ಥಿತಿ ಇದೆ. ಇವೊತ್ತು ಕೆಲವೊಂದು ಭಾಗದಲ್ಲಿ ಕೆಲವೊಂದು ಸೊಸೈಟಿ ಚೇರ್‌ಮನ್ ಇದ್ದಾರೆ, ಸಹಕಾರ ಸಂಘಗಳಲ್ಲಿ ಎಷ್ಟು ಲಾಭದಾಯಕವಾಗಿದೆ ಎಂದರೆ ಮಾನ್ಯ ಮಂತ್ರಿಗಳು ಒಬ್ಬ ಚೇರ್‌ಮನ್‌ಗೆ ಆ ಕೆಲಸವನು ಬಿಟ್ಟು ಬಾ ನಿನ್ನನ್ನು ಎಂ.ಎಲ್.ಎ. ಮಾಡುತ್ತೇವೆ ಎಂದು ಹೇಳಿದರೆ ಅವನು ಬರುವ ಪರಿಸ್ಥಿತಿಯಲ್ಲಿ ಇಲ್ಲ. ಇದರಿಂದ ಸಹಕಾರ ಸಂಘದ ಚೇರ್‌ಮನ್ ಕೆಲಸ ಯಾವರೀತಿ ಲಾಭದಾಯಕವಾಗಿದೆ ಎಂದು ಅರ್ಥ ಮಾಡಿಕೊಳ್ಳಬಹುದು. ವೈಯಕ್ತಿಕ ಹಿತಾಸಕ್ತಿಗಳು ಹಿಡಿದುಕೊಂಡಿವೆ. ಅವುಗಳನ್ನು ನಿರ್ಮೂಲ ಮಾಡುವ ಸಲುವಾಗಿ ಉಗ್ರವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಇವೊತ್ತು ಬದಲಾವಣೆ ಆದ ಪರಿಸ್ಥಿತಿಯಲ್ಲಿ ಒಂದು ಸಲಹೆ ಮಾಡುತ್ತಿದ್ದೇನೆ, ಅದೇನೆಂದರೆ ಸರ್ಕಾರ ಇನ್ನು ಮುಂದೆ ಸಮಗ್ರ ಆಹಾರದ ವ್ಯಾಪಾರವನ್ನು ವಹಿಸಿಕೊಳ್ಳುವುದರಿಂದ ಸಹಕಾರಿ ರಂಗವು ಹೆಚ್ಚಿನ ಪಾತ್ರ ವಹಿಸಬೇಕಾಗುತ್ತದೆ. ಆಹಾರ ಧಾನ್ಯಗಳ ವ್ಯಾಪಾರವನ್ನು ಇವೊತ್ತು ಸರ್ಕಾರ ಸಂಪೂರ್ಣವಾಗಿ ವಹಿಸಿಕೊಳ್ಳಬೇಕು ಎನ್ನುವ ತೀರ್ಮಾನವನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತಿದ್ದೇವೆ. ಇವೊತ್ತು ಲಕ್ಷ್ಯದಲ್ಲಿ ಇಟ್ಟುಕೊಳ್ಳುವುದು ಏನು ಎಂದರೆ ಎಲ್ಲಾ ವ್ಯಾಪಾರಸ್ಥರು ಕೂತುಕೊಂಡು ಬೇರೆ ವಿಚಾರ ಮಾಡುತ್ತಾ ಇದ್ದಾರೆ. ಸಹಕಾರ ಸಂಘಗಳ ಮುಖಾಂತರ ಸರ್ಕಾರ ಕೆಲಸಮಾಡುವುದು ಅನಿವಾರ್ಯ ಪ್ರಸಂಗ ಬರುತ್ತಿದೆ. ಇಂಥ ಸಹಕಾರಿ ರಂಗದಲ್ಲಿ ಅನೇಕರು ಸೇರಿಕೊಳ್ಳುವ ವ್ಯವಸ್ಥೆ ನಡೆಯುತ್ತಾ ಇದೆ. ಇದನ್ನು ನಮ್ಮ ಸರ್ಕಾರ ತಿಳಿದು ಕೊಳ್ಳಬೇಕು. ಇಂಥ ಒಂದು ಪರಿಸ್ಥಿತಿಯಲ್ಲಿ ಸಲಹೆಮಾಡುತ್ತಿದ್ದೇನೆ. ವ್ಯಾಪಾರಸ್ಥರ ಅಥವಾ ದಳ್ಳಾಳಿಗಳ ಹಾಗೂ ಇಂಡಸ್ಟ್ರಿಯಲಿಸ್ಟ್ ಅವರ ಹಿತಾಸಕ್ತಿಗೆ ಕೈಹಾಕುವುದಕ್ಕೆ ಸಹಕಾರ ಸಂಘಗಳು ಇಲ್ಲ. ಅವರ ವಿರುದ್ಧ ಸಹಕಾರ ಸಂಘಗಳು ಸ್ಥಾಪನೆಯಾಗಿವೆಯೇ ಹೊರತು ಅವರಿಗಲ್ಲ. ಅಂಥ ಜನ ಈ ಸಂಘಗಳಲ್ಲಿ ಸಾಮಾನ್ಯ ಸದಸ್ಯತ್ವ ಹೊಂದದ ರೀತಿಯಲ್ಲಿ ಕಾನೂನು ಬದಲಾವಣೆ ಮಾಡಬೇಕು ಎಂದು ಸೂಚನೆ ಮಾಡುತ್ತೇನೆ.

ಈ ಸಗಟು ವ್ಯಾಪಾರವನ್ನು ಸಹಕಾರಿ ರಂಗದ ಮುಖಾಂತರ ಮಾಡಬೇಕು ಅಂತ ಏನು ಮಾಡಿದ್ದೀರೋ ಅಲ್ಲಿ ಇವರಿಗೆ ಅವಕಾಶ ಕೊಟ್ಟರೆ ತಮ್ಮ ಚಟುವಟಿಕೆಗಳನ್ನು ಕೂಡ ಬದಲಾಯಿಸುತ್ತಾರೆ. ಆದುದರಿಂದ ಸಹಕಾರಿ ರಂಗಗಳಿಗೆ ಇವರು ಬರದೇ ಇರುವ ರೀತಿಯಲ್ಲಿ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಚುನಾವಣೆ ವಿಚಾರ ಹೇಳುವುದಾದರೆ ಸಹಕಾರೀ ರಂಗದಲ್ಲಿ ಬಹಳ ಅವ್ಯವಹಾರ ಇದೆ. ಸಾಮಾನ್ಯವಾಗಿ ವರ್ಷಕ್ಕೊಂದು ಸಾರಿ ಚುನಾವಣೆ ನಡೆಯಬೇಕು. ಈ ಮಧ್ಯೆ ಯಾವುದಾದರೂ ಡಿಸ್‌ಪ್ಯೂಟ್ ಬಂದರೆ 2—3 ವರ್ಷವಾದರೂ ಜನರಲ್ ಬಾಡಿ ಮೀಟಿಂಗ್ ಆಗುವುದಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಪ್ರತಿವರ್ಷ ಜನರಲ್ ಬಾಡಿ ಮೀಟಿಂಗ್ ನಡೆಯದೇ ಇದ್ದರೂ ಕನಿಷ್ಟ ಪಕ್ಷ 3 ವರ್ಷಕ್ಕೊಂದು ಸಾರಿಯಾದರೂ ಈ ಪದ್ಧತಿಯನ್ನು ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಕೊನೆಯದಾಗಿ ನಾನು ಸಹಕಾರಿ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ಮುಂದಾದರೂ ಕೂಡ ಹೆಚ್ಚಾಗಿ ದೊಡ್ಡ ತಪ್ಪುಗಳನ್ನು ಮಾಡದೆ ಈವೊತ್ತಿನ ದಿವಸ ಮಾಡಿರತಕ್ಕಂಥ ತಪ್ಪುಗಳನ್ನು ಕಡಿಮೆ ಮಾಡಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಸಭಾಧ್ಯಕ್ಷರೇ, ಸಹಕಾರ ಸಚಿವರು ತಮ್ಮ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈ ಸಭೆಯ ಮುಂದೆ ಏನು ಇಟ್ಟಿದ್ದಾರೋ ಅವನ್ನು ವಿರೋಧಿಸಿ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಸಹಕಾರಿ ಸಂಘ ಅಥವಾ ಸಹಕಾರಿ ತತ್ವ ಇರತಕ್ಕಂಥಾದ್ದು ಈವೊತ್ತು ದೇಶದಲ್ಲಿರುವ

ಶೋಷಣೆಗಳನ್ನು ತಪ್ಪಿಸಿ ಸಾಮಾನ್ಯ ಜನಗಳಿಗೆ ಹೆಚ್ಚಿನ ರೀತಿಯಲ್ಲಿ ಉಪಯೋಗವಾಗಬೇಕು ಎನ್ನುವುದು ಮುಖ್ಯ ಉದ್ದೇಶ. ಈವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸಹಕಾರೀ ಸಂಘಗಳು ಯಾವರೀತಿ ನಡೆಯುತ್ತಾ ಇವೆ ಎಂದು ನೋಡುವುದಾದರೆ ಅದು ಸಹಕಾರೀ ತತ್ವದ ವಿರುದ್ಧವಾಗಿ ನಡೆದಿದೆ. ಇದು ನಮ್ಮ ದುರಾದೃಷ್ಟವೋ ಅಥವಾ ಜನತೆಯ ದುರಾದೃಷ್ಟವೋ ಹೇಳಬೇಕಾಗಿದೆ. ಇದಕ್ಕೆ ಮುಖ್ಯ ಕಾರಣ ಏನೆಂದರೆ ಕಾನೂನಿನಲ್ಲಿಯೂ ಸಹ ಇವರ ಹಿತಾಸಕ್ತಿಗಳ ಪರವಾಗಿಯೇ ಕಾನೂನು ರಚನೆ ಮಾಡಿ ಅದನ್ನು ದುರುಪಯೋಗ ಮಾಡಿಕೊಂಡು ಈ ಸಹಕಾರೀ ಸಂಘಗಳನ್ನು ಗುತ್ತಿಗೆಗೆ ಪಡೆದುಕೊಂಡಿದ್ದಾರೆ. ಯಾವುದೇ ಸಹಕಾರೀ ಸಂಘಗಳಾಗಲಿ ವರ್ಷಕ್ಕೊಂದು ಸಾರಿ ವಾರ್ಷಿಕ ಸಭೆ ಆಗಬೇಕು. ಆದರೆ ಈವೊತ್ತಿನ ದಿವಸ ಯಾವರೀತಿ ನಡೆಯುತ್ತಾ ಇದೆ ಎಂದರೆ ಒಂದು ಉದಾಹರಣೆ ಹೇಳುವುದಾದರೆ ನಮ್ಮ ಕೋಲಾರ ಜಿಲ್ಲೆ ತೆಗೆದುಕೊಂಡರೆ ಅಲ್ಲಿ ಸಹಕಾರ ಸಂಘಗಳಲ್ಲಿ ಒಂದು ವರ್ಷವೂ ಕೂಡ ಸರಿಯಾಗಿ ಜನರಲ್ ಬಾಡಿ ಮೀಟಿಂಗ್ ಆಗದೇ ಇರುವುದು ಇದೆ. ಈವೊತ್ತಿನ ದಿವಸ ಕಾನೂನು ಪ್ರಕಾರ ಯಾರಾದರೂ ಕೂಡ ಎರಡು ವರ್ಷ ಕಾನೂನು ದುರುಪಯೋಗ ಮಾಡಿಕೊಂಡಿದ್ದರೆ ಅಥವಾ ವಸೂಲಾತಿ ಕ್ರಮ ಸರಿಯಾಗಿ ಜರುಗಿಸದಿದ್ದರೆ ಹಣದ ಜವಾಬ್ದಾರಿ ಯಾರ ಮೇಲೂ ಇಲ್ಲ. ಯಾರು ಹಣ ದುರುಪಯೋಗ ಮಾಡಿದ್ದಾರೆ ಅದು ಅವರ ಪಾಲಿಗೆ ಸೇರತಕ್ಕಂಥ ಪರಿಸ್ಥಿತಿ ಇದೆ. ಆದ್ದರಿಂದ ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಶ್ರೀಮಾನ್ ಶೆಟ್ಟಾರ್ ಅವರು ಹೇಳಿದ ಹಾಗೆ ಜನರಲ್ ಬಾಡಿ ಮೀಟಿಂಗ್ ಪ್ರತಿವರ್ಷವೂ ನಡೆಯದೇ ಇದ್ದರೂ ಕೂಡ 3 ವರ್ಷಕ್ಕೊಂದು ಸಾರಿಯಾದರೂ ಕೂಡ ಈ ವಾರ್ಷಿಕ ಸಭೆ ನಡೆಯ ಬೇಕು ಎನ್ನುವ ನೀತಿಯನ್ನು ಸರ್ಕಾರ ಈಗ ತಂದಿರತಕ್ಕಂಥ ಕಾನೂನಿನಲ್ಲಿ ಅಳವಡಿಸಬೇಕು ಎಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಸಹಕಾರೀ ರಂಗದಲ್ಲಿ ಇರತಕ್ಕಂಥ ಹಣ ಜನತೆಯ ಹಣ. ಆ ಹಣವನ್ನು ಏನಾದರೂ ದುರುಪಯೋಗ ಮಾಡಿದರೆ ಅವರ ಮೇಲೆ ಕ್ರಮ ಜರುಗಿಸಬೇಕಾದರೆ 2 ವರ್ಷ ಮಿತಿ ಇರತಕ್ಕಂಥಾದ್ದನ್ನು 6 ವರ್ಷಕ್ಕೆ ಹೆಚ್ಚಿಸಿದ್ದೇವೆ ಎಂದು ಹೇಳುತ್ತೀರಿ. ಮಾನ್ಯ ಮಂತ್ರಿಗಳು ತಂದಿರತಕ್ಕಂಥ ಬಿಲ್ಲನ್ನೂ ಕೂಡ ನಾನು ನೋಡಿದ್ದೇನೆ. ಆ ರೀತಿಯಾಗಿ 6 ವರ್ಷ ಮಿತಿ ಇರಬಾರದು ಎಂದು ಹೇಳುತ್ತೇನೆ.

ಇನ್ನು ಸಹಕಾರಿ ಸಂಘದಲ್ಲಿ ಎಷ್ಟೋ ಸೊಸೈಟಿಗಳು ಆಡಿಟ್ ಆಗಿಲ್ಲ. ಯಾವನಾದರೂ ಕೂಡ 2 ವರ್ಷ ಅದರಲ್ಲಿ ಹಣ ದುರುಪಯೋಗಪಡಿಸಿಕೊಂಡಿದ್ದರೆ, ಆ ಸೊಸೈಟಿ 3 ವರ್ಷದವರೆಗೆ ಆಡಿಟ್ ಆಗದೇ ಹೋದರೆ ಆ ಹಣ ಹೋಯಿತು. ಉದಾಹರಣೆಗೆ ಕೋಲಾರ ಜಿಲ್ಲೆಯಲ್ಲಿ ನಾನು ಅನೇಕ ಸಂಸ್ಥೆಗಳಲ್ಲಿ ಡೈರೆಕ್ಟರ್ ಆಗಿದ್ದೇನೆ. ಕೋಲಾರದ ಒಂದು ಸಂಘದಲ್ಲಿ ಸುಮಾರು 50 ಲಕ್ಷ ರೂಪಾಯಿಗಳಷ್ಟು ಹಣ ಹಾಳಾಗಿ ಹೋಗಿದೆ. ಕಾರಣ ಸಕಾಲದಲ್ಲಿ ವಸೂಲಾತಿ ಕ್ರಮ ಮಾಡದೇ ಇದ್ದುದರಿಂದ, ಟೈಂ ಲಿಮಿಟೇಷನ್ ಆಗಿರುವುದರಿಂದ ಅದು ಲ್ಯಾಪ್ಸ್ ಆಗಿದೆ. ಸಾಮಾನ್ಯ ಜನತೆಯ ಹಣ ಈ ರೀತಿ ದುರುಪಯೋಗವಾಗುತ್ತಿದೆ. ಈ ಹಣ ಯಾರ ವಶಕ್ಕೆ ಹೋಗಿದೆ ಎಂದರೆ ಇದು ರಾಜಕೀಯ ಪುಡಾರಿಯ ಕೈಗೆ ಹೋಗಿದೆ. ಇದು ಮಾನವೀಯತೆಯ ದೃಷ್ಟಿಯಿಂದ ಸಾಧುವಾದುದಲ್ಲ, ಎಂದು ಹೇಳುತ್ತೇನೆ. ಏನಾದರೂ ಸ್ಟೆಬಿಲೈಸ್ಡ್ ಗೌರ್ನಮೆಂಟ್ ಇದ್ದಿದ್ದರೆ ಅವರನ್ನು ಗುಂಡಿಟ್ಟು ಕೊಲ್ಲಬೇಕಾದ ಪರಿಸ್ಥಿತಿ ಬರುತ್ತಿತ್ತು. ಈವೊತ್ತು ಅವನು ರಾಜಬೀದಿ ಯಲ್ಲಿ ತಿರುಗುತ್ತಿದ್ದಾನೆ. ಇದರಲ್ಲಿ ಆಡಳಿತ ನಡೆಸುತ್ತಾ ಇರತಕ್ಕಂಥ ಸರ್ಕಾರದ ಪಾಲು ಕೂಡ ಇದೆ. ಇದನ್ನು ತೀವ್ರ ಗಮನಕ್ಕೆ ತೆಗೆದುಕೊಂಡು ಹಾಳಾಗಿ ಹೋಗಿರತಕ್ಕಂಥ ಹಣವನ್ನು ರಕ್ಷಣೆ ಮಾಡುವುದಕ್ಕೆ ಸ್ಪೆಷಲ್ ಆಗಿ ಬೇರೆ ಒಂದು ಕಾನೂನು ತರಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಈಗ ಇರತಕ್ಕಂಥ ಕಾನೂನಿನ ಪ್ರಕಾರ ಆ ಹಣವನ್ನು ವಸೂಲ್ಮಾಡುವುದಕ್ಕೆ ಅವಕಾಶ ಇಲ್ಲಾ. ಇದರಲ್ಲಿ ಯಾರೇ ಇರಲಿ ಮುಲಾಜು ನೋಡದೇ ಆ ಹಣವನ್ನು ವಸೂಲ್ಮಾಡುವುದಕ್ಕೆ ಬೇರೆ ಒಂದು ಕಾನೂನು ತರಬೇಕು ಎಂದು ನಾನು ಸೂಚಿಸುತ್ತೇನೆ.

ಇನ್ನು ಈವೊತ್ತಿನ ದಿವಸ ಸರ್ವಿಸ್ ಸೊಸೈಟಿ ಇದೆ. ಅಲ್ಲಿ ಫುಡ್ ಸೆಕ್ರೆಟರೀಸ್ ಅಂತ ಮಾಡಿ ಕೊಂಡು ಅವರಿಗೆ 100 ರೂಪಾಯಿ ಕೊಡುತ್ತಿದ್ದಾರೆ. ಆದರೆ ಆ ಸಹಕಾರ ಸಂಘಗಳಲ್ಲಿ ಅವರು ಸರಿಯಾಗಿ ಯಾವ ಕೆಲಸವನ್ನೂ ಮಾಡುತ್ತಾ ಇಲ್ಲ. ಅಲ್ಲಿ ಅವರಿಗೆ ಏನೂ ಕೆಲಸ ಇಲ್ಲಾ. ಈ ರೀತಿ ಅವರಿಗೆ 100 ರೂಪಾಯಿ ಸಂಬಳ ಕೊಡುತ್ತಾ ಹೋದರೆ ಅನೇಕ ಸಂಘಗಳು ಮುಚ್ಚಬೇಕಾದ ಸಂದರ್ಭ ಬರುತ್ತದೆ.

ಇನ್ನು ಈವೊತ್ತಿನ ದಿವಸ ಕೋ-ಆಪರೇಟೀವ್ ಅಪೆಕ್ಸ್ ಬ್ಯಾಂಕ್ ಏನು ಇದೆ ಅದು ಇರುವುದು ಆವಶ್ಯಕತೆ ಇಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ರಿಸರ್ವ್ ಬ್ಯಾಂಕ್‌ನವರು ಇವರಿಗೆ 4 ಪರ್ಸೆಂಟ್ ಬಡ್ಡಿಯಂತೆ ಹಣ ಕೊಟ್ಟರೆ ಅದು ರೈತನಿಗೆ ಹೋಗಿ ಮುಟ್ಟುವ ತನಕ 9 ಪರ್ಸೆಂಟ್

(ಶ್ರೀ ಸಿ. ಬೈರೇಗೌಡ)

ಬಡ್ಡಿ ಆಗುತ್ತದೆ ಮತ್ತೆ ಕೆಲವು ಸೊಸೈಟಿಗಳಲ್ಲಿ 11 ಪರ್ಸೆಂಟ್ ಬಡ್ಡಿ ಹಾಕುತ್ತಾರೆ. ಆದ್ದರಿಂದ ಈ ಶೋಷಣೆ ತಪ್ಪಿಸುವ ದೃಷ್ಟಿಯಿಂದ ಈ ಅಪೆಕ್ಸ್ ಬ್ಯಾಂಕ್‌ನ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ. ಈವೊತ್ತಿನದಿವಸ ರಾಜ್ಯದಲ್ಲಿ ಕಮರ್ಷಿಯಲ್ ಬ್ಯಾಂಕ್ಸ್ ಚೆನ್ನಾಗಿ ಕೆಲಸಮಾಡುತ್ತವೆ. ಆದುದರಿಂದ ಈ ವ್ಯವಸ್ಥೆಯನ್ನು ಅವರಿಗೆ ಒಪ್ಪಿಸಿದರೆ ರೈತರಿಗೆ ನೇರವಾಗಿ ಹಣ ಮುಟ್ಟುತ್ತದೆ. ಈ ಕಾರಣ ದಿಂದ ಅಪೆಕ್ಸ್ ಬ್ಯಾಂಕ್‌ನ್ನು ತೆಗೆಯಬೇಕು ಎಂದು ಹೇಳುತ್ತೇನೆ.

ಇನ್ನು ಕೋ-ಅಪರೇಟೀವ್ ಫೆಡರೇಷನ್‌ನಲ್ಲಿ ಏನಾಗಿದೆ ಎಂದರೆ ಸರ್ಕಾರದವರು ಅವರಿಗೆ ಲಕ್ಷಾಂತರ ರೂಪಾಯಿ ಗೊಬ್ಬರವನ್ನು ಕೊಟ್ಟಿದ್ದಾರೆ. ಅದನ್ನು ಅವರು ಸಮರ್ಪಕವಾಗಿ ಹಂಚುತ್ತಾ ಇಲ್ಲ. ಕೆಲವು ಸಂದರ್ಭಗಳಲ್ಲಿ ಅದನ್ನು ಇಲಿ ತಿಂದು ಬಿಟ್ಟಿದೆ ಎಂದು ವರದಿ ಮಾಡಿದ್ದಾರೆ. ಇದು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಈವೊತ್ತಿನ ದಿವಸ ಪ್ರತಿಯೊಂದು ತಾಲ್ಲೂಕಿನಲ್ಲೂ ಇರತಕ್ಕಂಥ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಚೆನ್ನಾಗಿ ಕೆಲಸ ಮಾಡುತ್ತಾ ಇವೆ.

3-00 P.M.

ಆದರೆ ಕೆಲವು ತೊಡಕುಗಳಿಂದ ಅವು ಈಚೆಗೆ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅವಕಾಶವಿಲ್ಲವಾಗಿದೆ. ಬಾವಿಗಳನ್ನು ತೆಗೆಯಲು ಸಾಲ ಕೊಡಬೇಕಾದರೆ ಒಂದು ಬಾವಿಗೂ ಮತ್ತೊಂದು ಬಾವಿಗೂ 600 ಅಡಿಗಳ ಅಂತರವಿರಬೇಕು ಮತ್ತು ಎರಡೂವರೆ ಎಕರೆ ಜಮೀನು ಹೊಂದಿರಬೇಕು ಎನ್ನುವ ನಿರ್ಬಂಧವನ್ನು ಹಾಕಿದ್ದಾರೆ. ದುಡ್ಡಿರುವವರು, ಅನುಕೂಲಸ್ಥರು ಬಾವಿಗಳನ್ನು ತೆಗೆಸಿದ್ದಾರೆ. ಯಾರಲ್ಲಿ ಹಣವಿಲ್ಲ ಅಂಥವರು ಸಾಲಕ್ಕಾಗಿ ಬ್ಯಾಂಕಿಗೆ ಬರುತ್ತಾರೆ. ಆದರೆ ಈ ನಿರ್ಬಂಧವನ್ನು ಹಾಕಿರುವುದರಿಂದ ಅವರಿಗೆ ಸಾಲ ಸಿಕ್ಕುವುದು ತೊಂದರೆಯಾಗಿದೆ. ಬಾವಿ ಇಲ್ಲದೆ ಇರುವವರು ಬಾವಿ ತೆಗೆದು, ಬೆಳೆ ಬೆಳೆದು ನನ್ನ ಕುಟುಂಬವನ್ನು ಸಾಕಬೇಕಾಗಿದೆ, ಸಾಲ ಕೊಡಿ ಎಂದು ಎಂದರೆ ಅವರಿಗೆ ಸಾಲ ಸಿಕ್ಕುವುದಕ್ಕೆ ಅವಕಾಶವಿಲ್ಲವಾಗಿದೆ. ಇಂಥ ನಿರ್ಬಂಧಗಳನ್ನು ಬಡವರ ಮೇಲೆ ಹಾಕುವುದು ಯಾವ ಸಮಾಜವಾದ ಎಂದು ಕೇಳುತ್ತೇನೆ. ಇದು ಸಮಾಜವಾದವಲ್ಲ, ಸಮಾಜ ವಾದದ ಸಮಾಧಿಯಾಗಿದೆ ಎಂದು ಹೇಳಬೇಕಾಗಿದೆ.

ಜನತಾ ಬಜಾರುಗಳನ್ನು ಅಲ್ಲಲ್ಲಿ ತೆಗೆಯುತ್ತಿದ್ದಾರೆ. ಅಲ್ಲಿ ಯಾರ ವಸ್ತುಗಳನ್ನು ಮಾರಾಟ ಮಾಡುತ್ತಾರೆಂದರೆ ಕೋಟ್ಯಾಧೀಶರು ಮತ್ತು ಬಂಡವಾಳಶಾಹಿಗಳು ತಯಾರಿಸಿದ ವಸ್ತುಗಳು. ಈ ಸಂಸ್ಥೆಗಳಲ್ಲಿ ಯಾರ ಬಂಡವಾಳವಿದೆ, ಯಾರ ದೃಷ್ಟಿಯಿಂದ ಮಾಡುತ್ತಿದ್ದೀರಿ. ಈ ಸಂದರ್ಭದಲ್ಲಿ ಸೂಚನೆ ಮಾಡುವುದೆಂದರೆ, ಸಹಕಾರ ಸಂಘಗಳು ಯಾವರೀತಿ ಕೆಲಸ ಮಾಡುತ್ತಿವೆ, ಅದರಿಂದ ಏನಾದರೂ ಸೌಲಭ್ಯ ಜನಸಾಮಾನ್ಯರಿಗೆ ಸಿಕ್ಕುತ್ತಿದೆಯೇ ಎನ್ನುವುದರ ಬಗ್ಗೆ ವಿಚಾರಣೆ ನಡೆಸಲು ಒಂದು ಆಯೋಗವನ್ನು ಮಾಡಬೇಕು. ಅಲ್ಲದೆ ಹಣ ಎಲ್ಲೆಲ್ಲಿ ದುರುಪಯೋಗವಾಗಿದೆ, ಅದನ್ನು ವಸೂಲು ಮಾಡುವುದು ಯಾವರೀತಿ ಸಹಕಾರ ಸಂಘಗಳನ್ನು ಹೇಗೆ ರಕ್ಷಣೆ ಮಾಡಬೇಕು, ಇವನ್ನೆಲ್ಲ ಪರಿಶೀಲಿಸಲು ಒಂದು ನ್ಯಾಯಬದ್ಧವಾದ ಕಮಿಷನ್ ಏರ್ಪಾಡು ಮಾಡಿ ಮಾಡರನೈಸ್ ಮಾಡಿ ರೆವಲ್ಯೂಷನೈಸ್ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಆಹಾರಧಾನ್ಯಗಳ ಸಗಟು ವ್ಯಾಪಾರವನ್ನು ವಹಿಸಿಕೊಳ್ಳಬೇಕೆಂದು ಮಾಡುತ್ತಿದ್ದಾರೆ. ಈ ಕೆಲಸವನ್ನು ಬೇರೆ ಯಾವ ಏಜೆನ್ಸಿಗೂ ವಹಿಸದೆ ಸಹಕಾರ ಸಂಘಗಳಿಗೇ ವಹಿಸಬೇಕು ಮತ್ತು ಇದರ ವಿತರಣೆಯನ್ನು ಕೂಡ ಸಹಕಾರ ಸಂಘಗಳಿಗೇ ವಹಿಸಬೇಕು ಎಂದು ಸೂಚಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಕೃಷ್ಣರಾವ್ (ಗೌರಿಬಿದನೂರು).—ಸನ್ಮಾನ್ಯ ಉಪಾಧ್ಯಕ್ಷರೇ ಮಾನ್ಯ ಸಹಕಾರ ಸಚಿವರು ಮಂಡಿಸಿರುವ ಬೇಡಿಕೆಯನ್ನು ಸ್ವಾಗತಿಸಿ ಒಂದೆರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ನಮ್ಮ ದೇಶದಲ್ಲಿ ಸಹಕಾರ ಸಂಘಗಳು ಸಾಮಾನ್ಯವಾಗಿ ಜನತೆಗೆ ಸೌಕರ್ಯಗಳನು ಮಾಡಿಕೊಡಬೇಕೆಂಬ ಸದುದ್ದೇಶದಿಂದ ಸ್ಥಾಪಿತವಾದುವು. ಮಧ್ಯವರ್ತಿ ಜನರನ್ನು ಕಡಿಮೆ ಮಾಡಿ, ಯಾರು ಉತ್ಪಾದನೆ ಮಾಡುತ್ತಾನೆ ಮತ್ತು ಯಾರು ಉಪಯೋಗಿಸುತ್ತಾನೆ ಅವರಿಗೆ ನೇರವಾದ ಸಂಪರ್ಕವನ್ನು ಕಲ್ಪನೆ ಮಾಡತಕ್ಕ ಉದ್ದೇಶದಿಂದ ಸಹಕಾರ ಸಂಘಗಳು ಸ್ಥಾಪನೆಯಾದಮೇಲೆ ಸ್ವಲ್ಪ ಕಾಲ ಸರ್ಕಾರದ ಕುಮ್ಮಕ್ಕು ಇರುವವರೆಗೂ ಸಹಕಾರ ಸಂಘಗಳು ಕೆಲವು ಕಡೆ ಬಹಳ ಚೆನ್ನಾಗಿ ಮುಂದೆ ಬಂದವು. ಹಿಂದೆ ಕಂಟ್ರೋಲ್ ಇದ್ದ ಕಾಲದಲ್ಲಿ ಸಹಕಾರ ಸಂಘಗಳಿಗೆ ಹೆಚ್ಚಿನ ಮಾನ್ಯತೆ ಇತ್ತು. ಕಂಟ್ರೋಲ್ ಹೋದನಂತರ ಸಹಕಾರ ಸಂಘಗಳು ಒಂದೊಂದಾಗಿ ಮುಳುಗು

ವುದಕ್ಕೆ ಪ್ರಾರಂಭವಾಯಿತು. ಸಹಕಾರ ಸಂಘಗಳಲ್ಲಿ, ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ ಬಹಳ ಕೆಟ್ಟ ಹುಳಗಳು ಇದ್ದು ಅವುಗಳನ್ನು ನಾಶ ಮಾಡುವುದಕ್ಕೆ ಪ್ರಯತ್ನ ಪಟ್ಟವು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ ಈ ರೋಗ ಬಂದು ಸಹಕಾರ ಸಂಘಗಳು ಕ್ಷೀಣ ದೆಸೆಗೆ ಹೋಗುತ್ತಿವೆ. ಪ್ರತಿಯೊಂದು ಪಂಚಾಯಿತಿ ಪ್ರದೇಶದಲ್ಲಿಯೂ ಸಾಮಾನ್ಯವಾಗಿ ಪ್ರಾಥಮಿಕ ಸಹಕಾರ ಸಂಘ ಸ್ಥಾಪನೆಯಾಗಿ ಅದರ ಆಡಳಿತ ಅಲ್ಲಿನ ಮುಖಂಡರ ಕೈಯಲ್ಲಿ ಸಿಕ್ಕಿ ಸಾಮಾನ್ಯ ಜನತೆಗೆ ಸಹಕಾರ ಸಂಘದ ಸೌಲಭ್ಯವನ್ನು ಒದಗಿಡುತ್ತಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಅನೇಕ ಜನರ ಹೆಸರಿನಲ್ಲಿ ಅಲ್ಲಿರುವ ಮುಖಂಡರೇ ಸಾಲಗಳನ್ನು ಪಡೆದು, ಆ ಹಣವನ್ನು ವಾಪಸು ಕೊಡದೆ ಅವು ಮಲಗಿವೆ. ಇಂಥವರು ಸಹಕಾರ ಸಂಘಗಳು ಬೆಳೆಯುವುದಕ್ಕೆ ಕೂಡ ಅವಕಾಶ ಕೊಡುತ್ತಿಲ್ಲ. ಇದರಿಂದ ನಿಜವಾದ ಸಹಕಾರ ತತ್ವವೇನಿದೆ ಅದರ ಫಲ ಸಾಮಾನ್ಯ ಜನಗಳಿಗೆ ಸಿಕ್ಕುತ್ತಿಲ್ಲ. ಅನೇಕ ಲಕ್ಷ ರೂಪಾಯಿ ಸಹಕಾರ ಸಂಘಗಳಲ್ಲಿ ದುರುಪಯೋಗವಾಗಿದೆ ಎಂದು ರಿಪೋರ್ಟಿನಲ್ಲಿ ಕೂಡ ತಿಳಿಸಿದ್ದಾರೆ. ಹಣ ದುರುಪಯೋಗವಾಗುತ್ತಿರುವುದನ್ನು ತಡೆಗಟ್ಟುವುದಕ್ಕೆ ಕಟ್ಟುನಿಟ್ಟಾದ ನಿರ್ಬಂಧಗಳು ಇಲ್ಲದೆ ಇದ್ದ ಪಕ್ಷದಲ್ಲಿ ಇಂಥ ದುರುಪಯೋಗ ಇನ್ನೂ ಹೆಚ್ಚಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಯಾರು ಈ ರೀತಿ ಹಣವನ್ನು ದುರುಪಯೋಗ ಮಾಡುತ್ತಾರೆ ಅಂಥವರಿಗೆ ತೀವ್ರವಾದ ಶಿಕ್ಷೆ ವಿಧಿಸುವಂತೆ ಕಾನೂನು ತಿದ್ದುಪಡಿ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಹಕಾರ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಈ ಹೊತ್ತಿನ ದಿವಸ ಪ್ರಾಥಮಿಕ ಸಹಕಾರ ಸಂಘಗಳ ಮೂಲಕ ಪಂಚಾಯಿತಿ ಅಥವಾ ನಿಯಮಿತ ಪ್ರದೇಶದಲ್ಲಿ ಸಾಮಾನ್ಯವಾಗಿ ಒಬ್ಬ ರೈತನಿಗೆ ಅಥವಾ ಒಬ್ಬ ಸಂಸಾರಿಗೆ ಏನೇನು ಸೌಲಭ್ಯಗಳನ್ನು ಒದಗಿಸಬೇಕೋ ಅದೆಲ್ಲವನ್ನೂ ಕೂಡ ಸಹಕಾರ ಸಂಘಗಳ ಮೂಲಕವೇ ಒದಗಿಸತಕ್ಕ ವ್ಯವಸ್ಥೆಯನ್ನು ಮಾಡುವಂತೆ ತಿದ್ದುಪಡಿಯನ್ನು ಕಾನೂನಿನಲ್ಲಿ ಅಳವಡಿಸುವಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಪ್ರತಿಯೊಬ್ಬ ರೈತನಿಗೆ ಬೇಕಾದ ನಿತ್ಯೋಪಯೋಗಿ ವಸ್ತುಗಳು, ವ್ಯವಸಾಯದ ಉಪಕರಣಗಳು ಇಂಥವೆಲ್ಲವನ್ನೂ ಸಹಕಾರ ಸಂಘದ ಮೂಲಕವೇ ಸರಬರಾಜು ಮಾಡಬೇಕು ಮತ್ತು ಆತ ಬೆಳೆಯಕ್ಕ ಎಲ್ಲ ಪದಾರ್ಥಗಳನ್ನೂ ಸಹಕಾರ ಸಂಘದ ಮೂಲಕವೇ ಮಾರಾಟ ಮಾಡಬೇಕು. ಈ ರೀತಿ ಮಾಡುವಂತೆ ಅವಕಾಶವನ್ನು ಕಲ್ಪಿಸಿಕೊಟ್ಟು ಮಧ್ಯವರ್ತಿ ಜನರನ್ನು ತೊಡೆದು ಹಾಕಿದರೆ ಸಹಕಾರ ತತ್ವ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಈಗ ಇರುವಂಥ ಕಾನೂನು ಬಹಳ ಸಡಿಲವಾಗಿದೆ. ಯಾರು ಬೇಕಾದರೂ ಸಹಕಾರ ಸಂಘದಲ್ಲಿ ತಿಂದು ಹಾಕುವುದಕ್ಕೆ ಅವಕಾಶವಿದ್ದು ಮಾನ್ಯ ಸ್ನೇಹಿತರು ಹೇಳಿದಂತೆ ಬಹಳಮಟ್ಟಿಗೆ ದುರುಪಯೋಗವಾಗುತ್ತಿದೆ. ಕಾಳಸಂತೆ ವ್ಯಾಪಾರವನ್ನು ತಡೆಗಟ್ಟಬೇಕಾದರೆ ಬಲವಾದ ಕಾನೂನನ್ನು ಜಾರಿಗೆ ತರಬೇಕು. ಇಲ್ಲದೆ ಹೋದರೆ ಜನತೆಗೆ ಅವರ ನೈತಿಕ ಮಟ್ಟವನ್ನು ಉತ್ತಮಗೊಳಿಸಿಕೊಳ್ಳತಕ್ಕ ಶಿಕ್ಷಣವನ್ನು ಕೊಡಬೇಕು. ಜನರ ನೈತಿಕಮಟ್ಟ ಸ್ವಲ್ಪ ಮೇಲೇರಬೇಕು. ಇಲ್ಲದೆ ಹೋದರೆ ಈ ಮಂತ್ರಿಮಂಡಲವಲ್ಲ, ಯಾವ ಮಂತ್ರಿಮಂಡಲ ಬಂದರೂ ಕೂಡ ದೇಶದಲ್ಲಿರುವ ಸಹಕಾರ ಸಂಘಗಳನ್ನು ಸರಿ ಮಾಡುವುದಕ್ಕೆ ಅಸಾಧ್ಯ. ಇಂಥ ಸಂದರ್ಭದಲ್ಲಿ ಸಹಕಾರ ಮಂತ್ರಿಗಳ ಮೇಲೆ ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಅವರು ಒಳ್ಳೆಯವರು, ಸರಳ ಸ್ವಭಾವದವರು, ಶಾಂತ ಮೂರ್ತಿಗಳು ಇದ್ದ ಹಾಗೆ ಇದ್ದಾರೆ. ಆದರೆ ಅವರ ಮನಸ್ಸು ಮಾತ್ರ ಕಠಿಣ ಎಂದು ಹೇಳಿದಾಗ ನನಗೆ ಮನಸ್ಸಿಗೆ ಸ್ವಲ್ಪ ನೋವಾಯಿತು. ಏಕೆಂದರೆ ಮಾನ್ಯ ಶಂಕರ ಆಳ್ವ ಅವರು ನಿಜವಾಗಿ ಒಳ್ಳೆಯ ಮನುಷ್ಯರು. ಅವರ ಮುಖ ಎಷ್ಟು ಶಾಂತವಾಗಿದೆಯೋ ಅವರು ಎಷ್ಟು ಶಾಂತ ಮೂರ್ತಿಗಳಾಗಿ ಕಾಣುತ್ತಾರೆಯೋ ಹಾಗೆಯೇ ಅವರು ಒಳ್ಳೆಯವರು, he is a man of conscience ಎಂದು ನಾನು ಹೇಳಬಯಸುತ್ತೇನೆ.

ಎರಡನೇಯದು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕು ಮೂಲಕ ರೈತರಿಗೆ ಬಾವಿಗಳಿಗಾಗಿ ಸುಮಾರು ಎಂಟು ಸಾವಿರ ರೂಪಾಯಿಗಳವರೆಗೆ ಸಾಲ ಕೊಡುತ್ತಾರೆ. ಬಾವಿಗಳಲ್ಲಿ ಕೆಲವು ಕಡೆ ನೀರು ಬರುತ್ತದೆ ಕೆಲವು ಬಾವಿಗಳಲ್ಲಿ ನೀರು ಬರುವುದಿಲ್ಲ. ನೀರು ಬಾರದೇ ಇರುವ ಬಾವಿಗಳಿಗಾಗಿ ಸಾಲ ಕೊಟ್ಟ ರೈತರು ಅವರ ಸಾಲವನ್ನು ತೀರಿಸುವುದಕ್ಕಾಗಿ ಬಹಳ ಕಷ್ಟಪಡುತ್ತಾರೆ. ಈ ಸಾಲವನ್ನು ಅವನ ಮಕ್ಕಳ ಹಾಗೂ ಮೊಮ್ಮಕ್ಕಳ ಕಾಲಕ್ಕೂ ತೀರಿಸಲಾಗುವುದಿಲ್ಲ. ಆದುದರಿಂದ ನಾನು ಸರಕಾರಕ್ಕೆ ಸಲಹೆ ಮಾಡುವುದು ಬಾವಿಗಾಗಿ ಎಲ್ಲಿ ಸಾಲ ಕೊಟ್ಟಿದ್ದಾರೋ ಆ ಬಾವಿಯಲ್ಲಿ ನೀರು ಬರದೇ ಹೋದರೆ ಅಂತಹ ಬಾವಿಗಳಿಗೆ ಸರಕಾರ ಸಬ್‌ಸಿಡಿ ರೂಪದಲ್ಲಿ ಸಹಾಯ ಮಾಡಿ ರೈತರಿಗೆ ಸಹಾಯ ಮಾಡಬೇಕು. ಎಲ್ಲಿ ಬಾವಿಗಳಲ್ಲಿ ನೀರು ಬರುತ್ತೋ ಅಂತಹವರಿಂದ ಪೂರ್ತಿ ಸಾಲ ವಾಪಸ್ಸು ಪಡೆಯಬೇಕು. ಬಾವಿಯಲ್ಲಿ ನೀರು ಇಲ್ಲದೆ ಇರುವ ರೈತರಿಂದ ಸಾಲ ಮಾಡುವುದು ಎಂದರೆ ಬಹು ಕಠಿಣವಾಗುತ್ತದೆ. ನಮ್ಮ ಕೋಲಾರ ಜಿಲ್ಲೆ ನೋಡಿದರೆ ಮಳೆ ಇಲ್ಲ ಬೆಳೆಯೂ ಇಲ್ಲ,

(ಶ್ರೀ ವಿ. ಕೃಷ್ಣರಾವ್)

ನೂರಕ್ಕೆ 95 ಜನ ರೈತರು ಸಹಕಾರ ಕಂಪನಿಗಳಲ್ಲಿ ಸಾಲ ಮಾಡಿ ಕಷ್ಟಕ್ಕೆ ಸಿಕ್ಕಿರುತ್ತಾರೆ. ಆದರೆ ಇಲ್ಲಿರುವ ಅಧಿಕಾರಿಗಳು ರೈತರಿಂದ ಹಣ ವಸೂಲಿಗೆ ಹೋಗುವಾಗ ಅವರ ಮನೆಗಳಿಗೆ ನುಗ್ಗಿ ನಿರ್ದಾಕ್ಷಿಣ್ಯವಾಗಿ ತೊಂದರೆ ಕೊಟ್ಟು ಅವರ ಮನೆಯೊಳಗಿರುವ ದವಸಗಳನ್ನು ಅಲ್ಲಿರುವ ಸೊಸೈಟಿ ಯಲ್ಲೋ ಇಲ್ಲವೇ ಪಂಚಾಯತಿ ಹಾಲಿನಲ್ಲೋ ತೆಗೆದುಕೊಂಡು ಹೋಗಿ ಇಲ್ಲದ ಕಷ್ಟಗಳಿಗೆ ಗುರಿ ಮಾಡುತ್ತಿದ್ದಾರೆ. ಇದನ್ನು ಸರಕಾರ ತಪ್ಪಿಸಬೇಕು. ಇಂತಹ ಕಡೆಗಳಲ್ಲಿ ಬಡ ರೈತರಿಗೆ ಸ್ವಲ್ಪ ಕಾಲಾವಕಾಶ ಕೊಡಬೇಕು ಎಂದು ಸಹಕಾರ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರ ಸಂಘಗಳಲ್ಲಿ ಪ್ರತಿವರ್ಷವೂ ಆಡಿಟ್ಟನ್ನು ಕಡ್ಡಾಯವಾಗಿ ಮಾಡಬೇಕೆಂದು ನಿಯಮ ಇದ್ದರೂ ಅದರಂತೆ ಆಗುತ್ತಿಲ್ಲ. ಆಡಿಟ್ ಮಾಡಿ ಇದರ ರಿಪೋರ್ಟು ಬಂದರೆ ಎಲ್ಲಿ ಸೊಸೈಟಿಗಳು ಕೆಲಸ ಮಾಡುತ್ತಿವೆ ಎಲ್ಲಿ ಡಿಫಂಕ್ಟ್ ಆಗಿವೆ ಅವು ಚೆನ್ನಾಗಿ ಗೊತ್ತಾಗುತ್ತಿವೆ. ಆದುದ ರಿಂದ ಪ್ರತಿ ವರ್ಷವೂ ಎಲ್ಲ ಸಹಕಾರ ಸಂಘಗಳೂ ಕಡ್ಡಾಯವಾಗಿ ಆಡಿಟ್ ಮಾಡಿಸಬೇಕೆಂದು ಸರಕಾರ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಮಾನ್ಯ ಸಹಕಾರ ಮಂತ್ರಿಗಳು ಇಟ್ಟಿರುವ ಡಿಮ್ಯಾಂಡನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಅವರನ್ನೂ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಶ್ರೀ ರಾಮೇಗೌಡರವರು ಇಲ್ಲಿ ಕೇಳಿದ ಪ್ರಶ್ನೆ ಬಗ್ಗೆ ಹೇಳುವುದಾದರೆ ಈ ಸಹಕಾರ ಬಾಬಿನ ಬೇಡಿಕೆಗಳು ಇಲ್ಲಿ ಚರ್ಚೆ ಮಾಡುವಾಗ ನಮ್ಮ ರಾಜ್ಯದಲ್ಲಿರುವ ಎಲ್ಲ ಹತ್ತೊಂಬತ್ತು ಜಿಲ್ಲೆಗಳಲ್ಲೂ ಕೇಂದ್ರ ಸಹಕಾರಿ ಬ್ಯಾಂಕುಗಳು ಯಾವ ರೀತಿ ಕೆಲಸಗಳನ್ನು ಮಾಡುತ್ತಿವೆ ಎನ್ನುವುದರ ಬಗ್ಗೆ ಕಳೆದ ನಾಲ್ಕೈದು ವರ್ಷಗಳ ವರದಿಗಳನ್ನು ನಮ್ಮ ಮುಂದೆ ಇಲ್ಲಿ ಇಟ್ಟಿದ್ದರೆ ನಮಗೆ ಇದರಲ್ಲಿ ಚರ್ಚೆ ಮಾಡಲು ಒಳ್ಳೆಯ ಅವಕಾಶವು ಇರುತ್ತಿತ್ತು. ಮತ್ತು ನಾವು ಏನಾದರೂ ಅವಶ್ಯಕವಾದ ಸೂಚನೆಗಳನ್ನೂ ಇದರ ಸಾಧನೆಗಾಗಿ ಕೊಡಬಹುದಾಗಿತ್ತು. ಇದನ್ನು ಇದುವರೆಗೆ ಕೊಡಲಿಲ್ಲ. ಸರಕಾರದವರು ಸಹಕಾರ ಚಳುವಳಿಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆಯೋ ಅಥವಾ ಮಾಡುವು ದಿಲ್ಲವೇ ಎನ್ನುವುದರ ಅಂಕೆ ಸಂಖ್ಯೆಗಳನ್ನು ವಾಸ್ತವವಾದ ರೀತಿಯಲ್ಲಿ ನೋಡಿದರೆ ಇದರ ಅಂದಾಜು ಮಾಡಬಹುದು. ಕಳೆದ ಒಂದು ವರ್ಷದಲ್ಲಿ ನಾನು ಹೇಳುವುದಾದರೆ, ನಮ್ಮ ಮಂತ್ರಿಗಳಾದ ಶ್ರೀ ಆಳ್ವರವರು ನಮ್ಮ ಊರಿನವರು. ಆದರೂ ಅವರು ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸ್‌ರವರ ಗರಡಿಯಲ್ಲಿ ಬಹಳ ಚೆನ್ನಾಗಿ ಶಿಕ್ಷಣ ಪಡೆದಿದ್ದಾರೆ. ಇತ್ತೀಚೆಗೆ ಅವರು ಕೆಲವು ಕಾರ್ಯ ಕ್ರಮಗಳನ್ನು ತೆಗೆದುಕೊಂಡಿರುವುದನ್ನು ನೋಡಿದರೆ ನಿಜವಾಗಿಯೂ ಹಿಂದೆ ಇದ್ದ ಸರಕಾರ ಏನು ಕಾರ್ಯಕ್ರಮಗಳನ್ನು ಮಾಡುತ್ತಿತ್ತೋ ಅದನ್ನೇ ಇವರೂ ಅನುಸರಿಸಿಕೊಂಡು ಬರುತ್ತಿದ್ದಾರೆ ಮತ್ತು ಅದೇ ಕಾರ್ಯಕ್ರಮವನ್ನು ಈಗಿನ ಸರಕಾರವೂ ಅನುಸರಿಸುತ್ತಿದ್ದಾರೆಂದು ಧೈರ್ಯವಾಗಿ ಹೇಳಬಹುದು. ನೂರರಲ್ಲಿ ತೊಂಬತ್ತೈದು ಪಾಲು ಸಹಕಾರ ಸಂಘಗಳ ಸೂತ್ರಧಾರರು ಹಾಗೂ ನಾಯಕರಾಗಿರುವವರೇ ಇಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇವೆಂದು ಹೇಳಿದರೂ ಅಲ್ಲಿನ ಕೆಲಸಗಳೆಲ್ಲಾ ಅಪ್ರಾಮಾಣಿಕವಾಗಿಯೇ ನಡೆಯುತ್ತಿವೆ, ಪ್ರಾಮಾಣಿಕವಾಗಿ ಕೆಲಸ ಮಾಡುವ ಸಂಘಗಳು ನೂರರಲ್ಲಿ ಐದು ಸಂಘಗಳು ಬರಬಹುದು, ತೊಂಬತ್ತು ತೊಂಬತ್ತೈದು ಭಾಗದಷ್ಟು ಸಂಘಗಳು ಪ್ರಾಮಾಣಿಕವಾಗಿಲ್ಲ, ಇಂತಹ ಸಹಕಾರ ಸಂಘಗಳಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತಿವೆ ಮತ್ತು ಇವರು ಆಡಳಿತ ಪಕ್ಷಕ್ಕೆ ಸೇರಿದವರೂ ಆಗಿರುವುದರಿಂದ ಅವರ ಪಕ್ಷದ ಲಾಭವನ್ನು ಪಡೆಯುವುದರಲ್ಲಿ ಬಹು ಪ್ರವೀಣರಾಗಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡು ವವರೆಲ್ಲಾ ಸಹಕಾರ ಚಳುವಳಿಯನ್ನು ಮುಂದೆ ತರಬೇಕೆಂದು ಹೇಳುತ್ತಾ ಇದರಲ್ಲಿ ರಾಜಕೀಯ ಮಾಡಲು ಹೊರಟಿದ್ದಾರೆ. ಇದರಲ್ಲಿರುವವರೆಲ್ಲಾ ಅನೇಕರು ರಾಜಕೀಯ ಸಂತ್ರಸ್ತರು ಆಗಿರು ವವರೂ ಇದ್ದಾರೆ. ರಾಜಕೀಯ ಸಂತ್ರಸ್ತರು ದೇಶಕ್ಕಾಗಿ ತ್ಯಾಗ ಮಾಡಿದವರು ಎಂದು ಇವರು ಗಳು ಸಹಕಾರ ಸಂಘಗಳನ್ನು ಮಾಡಿಕೊಳ್ಳಲು ಅವಕಾಶ ಕೊಟ್ಟಿದ್ದಾರೆ. ವಾಸ್ತವವಾಗಿ ಇದರ ಹಿನ್ನೆಲೆಯನ್ನು ವಿಚಾರ ಮಾಡಿ ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಬಾರದಂತೆ ಬದಲಾವಣೆಗಳನ್ನು ಮಾಡಿ ಇದಕ್ಕೇನು ಮಾಡಬೇಕು ಎನ್ನುವುದನ್ನು ಸರಕಾರ ತೀವ್ರವಾಗಿ ಪರಿಶೀಲನೆ ಮಾಡಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಕಳೆದ ವರ್ಷ ಬಡ್ಜೆಟ್ಟಿನಲ್ಲಿ ನಾನು ಇಲ್ಲಿ ಮಾತನಾಡುವಾಗ ಎರಡು ಕೋಆಪರೇಟೀವ್ ಸಂಸ್ಥೆಗಳ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆದಾಗ ಎಂದರೆ ಮೊದಲನೆಯದು ಬೆಂಗಳೂರಿ ನಲ್ಲಿರುವ ಐಡಿಯಲ್ ಹೋಂಸ್ ಕೋಆಪರೇಟೀವ್ ಸೊಸೈಟಿ ಮತ್ತು ಮಂಗಳೂರಿನಲ್ಲಿರುವ

ಜನತಾ ಬಜಾರು, ಇವೆರಡು ಸಂಸ್ಥೆಗಳ ಅವ್ಯವಹಾರಗಳ ಬಗ್ಗೆ ಮಾನ್ಯ ಸಚಿವರು ತಕ್ಕ ಕ್ರಮಗಳನ್ನು ತೆಗೆದುಕೊಂಡಿರುವುದಕ್ಕಾಗಿ ಅವರು ಅಭಿನಂದನಾರ್ಹರು. ಇವೆರಡು ಸಂಸ್ಥೆಗಳೂ ಮಾಡಿರುವ ಅವ್ಯವಹಾರಗಳನ್ನು ಈಗ ತನಿಖೆ ಮಾಡಲು ಅವರು ಏರ್ಪಾಡು ಮಾಡಿದ್ದಾರೆ. ಇಷ್ಟು ಬಿಟ್ಟರೆ ಇದರ ಬಗ್ಗೆ ಬೇರೇನೂ ಗೊತ್ತಾಗಲಿಲ್ಲ. ತನಿಖೆ ಯಾವ ರೀತಿ ನಡೆಯುತ್ತಿದೆ, ಎನ್ನುವುದನ್ನು ಇಲ್ಲಿ ಗಮನಿಸುವುದು ಅಗತ್ಯ. ತನಿಖೆಯಾಗುವಾಗ ಅದೇ ವ್ಯಕ್ತಿಗಳು ಅಲ್ಲೇ ಇರುವಂತೆ ತನಿಖೆಗಳಾದರೆ ತನಿಖೆ ಸರಿಯಾಗಿ ಆಗುತ್ತದೆಯೇ ? ಇದನ್ನು ವಿಚಾರ ಮಾಡಬೇಕು. ಯಾರು ಇಲ್ಲಿನ ದುರ್ವ್ಯವಹಾರಗಳಲ್ಲಿ ನಿರತರಾಗಿದ್ದಾರೋ ಅವರನ್ನು ಅಲ್ಲೇ ಇಟ್ಟು ತನಿಖೆ ಮಾಡಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಇದರಲ್ಲಿ ಕೆಲವರು ಅಲ್ಲಿ ಇಲ್ಲದಿದ್ದರೂ ಅವರ ಪ್ರಾಕ್ಸಿಗಳನ್ನು ಇಟ್ಟು ತನಿಖೆಗಳಾಗುವಾಗ ಎಷ್ಟು ಅನಾನುಕೂಲಗಳಾಗಬೇಕೋ ಅಷ್ಟನ್ನೂ ಮಾಡಲು ಶಕ್ತರಾಗಿದ್ದಾರೆ, ಇದು ಹೇಗಾಗುತ್ತದೆ ಎಂದರೆ ಕೋತಿ ಮೊಸರನ್ನು ತಿಂದು ಹೋತನ ಬಾಯಿಗೆ ಬಳಿದು ಓಡಿಹೋದಂತಾಗುತ್ತದೆ. ಆ ರೀತಿ ಇಲ್ಲಿ ತನಿಖೆ ಮಾಡುವ ವ್ಯವಹಾರಗಳು ಆಗಬಾರದು ಎಲ್ಲ ವಿಚಾರಗಳನ್ನೂ ಕೂಲಂಕಷವಾಗಿ ತನಿಖೆ ಮಾಡಿ ಸರಿಯಾದ ಒಂದು ವರದಿ ಬರುವಂತೆ ತಕ್ಕ ಕ್ರಮಗಳನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ಇದರ ಬಗ್ಗೆ ನ್ಯಾಯವಾಗಿ ವಿಚಾರ ಮಾಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರ ಸಂಘಗಳಲ್ಲಿ ಆಡಿಟ್ ಮಾಡುವ ಬಗ್ಗೆ ಅನೇಕರು ಈಗಾಗಲೇ ಹೇಳಿದ್ದಾರೆ. ಸರಿಯಾಗಿ ಆಡಿಟ್ಟಾದರೆ ಅವರು ಕೊಡುವ ವರದಿಗಳಿಂದ ಏನೇನು ಅವ್ಯವಹಾರಗಳಾಗಿವೆ ಅದನ್ನು ಇಲಾಖೆಯವರು ಗಮನಕ್ಕೆ ತೆಗೆದುಕೊಂಡು ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಸರಿಯಾದ ರೀತಿಯಲ್ಲಿ ಆಡಿಟ್ಟು ಕೆಲವು ಸಹಕಾರ ಸಂಘಗಳಲ್ಲಿ ಆಗದೆ ಲಕ್ಷಾಂತರ ರೂಪಾಯಿಗಳಷ್ಟು ದುರುಪಯೋಗವಾಗಿರುವುದು ತಮಗೆಲ್ಲಾ ಗೊತ್ತಿದೆ ಮತ್ತು ಮಾನ್ಯ ಸಚಿವರ ಗಮನಕ್ಕೆ ಕೂಡ ಇವನ್ನು ತಂದಿದ್ದಾರೆ. ನಮ್ಮ ಭಾಗದ ಬಂಟ್ವಾಳ ಜನರಲ್ ಕೋಆಪರೇಟೀವ್ ಬ್ಯಾಂಕಿನಲ್ಲಿ ಸಲಾಸಲವೂ ಆಡಿಟ್ಟಾಗದೆ ಇಲ್ಲಿನ ವ್ಯವಹಾರಗಳೂ ಸರಿಯಾಗಿ ನಡೆಯದೆ ಇದರಲ್ಲಿ ಸುಮಾರು ಒಂದೂವರೆಲಕ್ಷ ರೂಪಾಯಿಗಳಷ್ಟು ದುರುಪಯೋಗವಾಗಿದೆ ಎಂದು ಕಾಣುತ್ತದೆ. ಇದರ ಬಗ್ಗೆ ಡಿಪಾರ್ಟ್‌ಮೆಂಟಿನವರು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ? ಪ್ರತಿ ವರ್ಷವೂ ಆಡಿಟ್ ರಿಪೋರ್ಟುಗಳು ಬಂದರೆ ಅವನ್ನು ಅಧಿಕಾರಿಗಳು ನೋಡಿ ಸರಿಯಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಇನ್ನೊಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಸೌತ್‌ಕೆನರಾ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಸೊಸೈಟಿಯ ಕರ್‌ನಾಡ್ ಶಾಖೆಯಲ್ಲಿ ಎಲ್ಲವೂ ಸರಿಯಾಗಿದೆ ಎಂದು ಆಡಿಟ್ ರಿಪೋರ್ಟಿನಲ್ಲಿ ವರದಿ ಕೊಡುತ್ತಿದ್ದರು. ಆದರೆ ಆ ಬ್ರಾಂಚ್‌ನ ಏಜೆಂಟ್ 1967ರಲ್ಲಿಯೇ ತೀರಿಹೋದ ವಿಷಯವನ್ನು ಮತ್ತು ಆ ಬ್ರಾಂಚ್‌ನಲ್ಲಿ ಎರಡು ಲಕ್ಷ ರೂಪಾಯಿಗಳು ಕಾಣೆಯಾಗಿರುವುದನ್ನು ಆಡಿಟ್ ರಿಪೋರ್ಟಿನಲ್ಲಿ ಕಾಣಿಸಿರಲಿಲ್ಲ ? ಮುಂದೆ ಈ ಬ್ರಾಂಚ್‌ನ ನಷ್ಟವನ್ನು ಆ ಸೊಸೈಟಿಯವರೇ ಭರ್ತಿ ಮಾಡಿಕೊಡಬೇಕಾಗಿ ಬಂತು. ತಪ್ಪು ವರದಿ ಕೊಟ್ಟ ಆಡಿಟರಿಗೆ ತಮ್ಮ ಇಲಾಖೆಯವರು ಕೊಟ್ಟ ಶಿಕ್ಷೆ ಎಂದರೆ ಒಂದು ಇಂಕ್ರಿಮೆಂಟನ್ನು ನಿಲ್ಲಿಸಿದ್ದು. ಆಡಿಟನ್ನು ಸರಿಯಾಗಿ ಮಾಡದವರಿಗೆ, ಏನು ಅವ್ಯವಹಾರಗಳು ಇದ್ದರೂ ಸಹ ಎಲ್ಲವೂ ಸರಿಯಾಗಿದೆ ಎಂದು ಹೇಳುವ ಆಡಿಟ್‌ನವರಿಗೆ ಇಂತಹ ಸುಲಭವಾದ ಶಿಕ್ಷೆ ವಿಧಿಸಿದರೆ ಆಗುವುದಿಲ್ಲ, ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕೆಂದು ಹೇಳುತ್ತೇನೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯವರು 1969–70ರಲ್ಲಿ ಮತ್ತು 1970–71ರಲ್ಲಿ ಲೆವಿ ಭತ್ತವನ್ನು ಖರೀದಿ ಮಾಡಿದರು. ಆದರೆ ಅದನ್ನು ಅನೇಕ ಸಮಯದವರೆಗೆ ಸರ್ಕಾರದವರು ಕೊಂಡುಕೊಳ್ಳದ್ದರಿಂದ ಆ ಸೊಸೈಟಿಯವರಿಗೆ ನಷ್ಟವಾಯಿತು. ಆ ನಷ್ಟವನ್ನು ಭರ್ತಿ ಮಾಡಿಕೊಡುವುದಾಗಿ ಸರ್ಕಾರದವರು ಹೇಳಿ ಎರಡು ವರ್ಷಗಳಾದರೂ ಸಹ ಇನ್ನೂ ಭರ್ತಿ ಮಾಡಿಕೊಟ್ಟಿಲ್ಲ ಇದನ್ನು ಜಾಗ್ರತೆ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ನಾನು ಕಟ್ ಮೋಷನ್ ಮೂಲಕ ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಅವುಗಳ ಪೈಕಿ ಮೂರು ಮುಖ್ಯವಾದ ಅಂಶಗಳ ಕಡೆಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಒಂದನೆಯದೆಂದರೆ, ಈ ಸಹಕಾರಸಂಘಗಳಲ್ಲಿ ಕೆಲಸ ಮಾಡುವಂತಹ ನೌಕರರು ಏನಿದ್ದಾರೆ, ಅವರನ್ನೆಲ್ಲಾ ಬೇರೆಬೇರೆ ತರಹ ವಿಂಗಡನೆ ಮಾಡಿ ಅವರ ಸರ್ವಿಸ್ ಕಂಡೀಷನ್ಸ್ ಮತ್ತು ಸಂಬಳ ಸಾರಿಗೆಯ ಬಗ್ಗೆ ಒಂದು ಸರಿಯಾದ ರೂಲ್ಸ್‌ನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳಿಗೆ ತಮ್ಮ ಇಲಾಖೆಯಿಂದಲೇ ನೌಕರರನ್ನು ನೇಮಕ ಮಾಡುತ್ತಿದ್ದೀರಿ. ಇವರ ವಿಚಾರದಲ್ಲಿ ಸೀನಿಯಾರಿಟಿ ಲಿಸ್ಟನ್ನು ಜಾಗ್ರತೆ ತಯಾರು ಮಾಡಬೇಕಲ್ಲವೆ, ಈಗ ಖಾಲಿ ಇರುವ ಎರಡು ಡಜನ್ ಪೋಸ್ಟ್‌ಗಳಿಗೆ ಜಾಗ್ರತೆ ಭರ್ತಿ ಮಾಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು,—ತಾವು ಕೊಟ್ಟಿರುವ ಕಟ್ ಮೋಷನನ್ನು ಸರ್ಕುಲೇಟ್ ಮಾಡಲಾಗಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆ ; ಆದ್ದರಿಂದ ಈಗ ಮತ್ತೆ ಅದರ ಬಗ್ಗೆ ಹೇಳುವುದು ಬೇಡ.

ಶ್ರೀ ಬಿ. ವಿ. ಕಕ್ಕಿಲ್ಲಾಯ,—ಆಗಬಹುದು.

† ಶ್ರೀ ಟಿ. ಎಂ. ಮಂಜುನಾಥ (ತಿಪಟೂರ್).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತಿನದಿವಸ ನಮ್ಮ ರಾಜ್ಯದ ಸಹಕಾರ ಮಂತ್ರಿಗಳು ಏನು ಬೇಡಿಕೆಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ, ಆ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ಈ ಒಂದು ಸಹಕಾರ ಇಲಾಖೆ ಎಷ್ಟರಮಟ್ಟಿಗೆ ಸಮಾಜದಲ್ಲಿರತಕ್ಕಂಥ ದುರ್ಬಲರನ್ನು ಮುಂದೆ ತರುವುದಕ್ಕೆ ಅಶಕ್ತವಾಗಿದೆ ಮತ್ತು ಆ ಬಗ್ಗೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಸಹಕಾರ ಕ್ಷೇತ್ರಗಳಲ್ಲಿ ಇಂದು ಸಮಾಜದ್ರೋಹಿಗಳು ಬಹಳ ಜನರು ಇದ್ದರೂ ಸಹ ಅವರಿಗೆ ಶಿಕ್ಷೆ ಮಾಡುವುದಕ್ಕೆ ಬಹುಶಃ ತಮಗೆ ತಾಕತ್ತು ಇಲ್ಲನೆಂದು ಕಾಣುತ್ತದೆ. ತಾವು ಹಸುವಿನಂತಹ ಪ್ರಾಣಿ ; ಹಿಂದೆ ಬಂದರೆ ಒಡೆಯುವುದಿಲ್ಲ, ಮುಂದೆ ಬಂದರೆ ಹಾಯು ವುದಿಲ್ಲ. ಮಂತ್ರಿಗಳ ಅವಸ್ಥೆ ಈ ರೀತಿಯಾದರೆ ರಿಜಿಸ್ಟ್ರಾರ್ ಅವರ ಪಾಡು ಇನ್ನೊಂದು ರೀತಿ ಯಾಗಿದೆ. ಅವರೇನೋ ಕಟ್ಟುನಿಟ್ಟಾಗಿ ಕಾನೂನು ಪರಿಪಾಲನೆ ಮಾಡುವುದಕ್ಕೆ ತಯಾರಿದ್ದಾರೆ. ಆದರೆ ಅವರಲ್ಲಿದ್ದ ಬಾಣಬಿರುಸುಗಳನ್ನೆಲ್ಲಾ ಕಿತ್ತುಕೊಂಡುಬಿಟ್ಟಿದ್ದಾರೆ. ನ್ಯಾಯವೋ ಅನ್ಯಾಯವೋ ತಾವು ಕೆಲಸ ಮಾಡಿಕೊಂಡು ಹೋಗಿ ಎಂದು ಅವರಿಗೆ ಹೇಳಿಬಿಟ್ಟಿದ್ದಾರೆ. ಈ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿದ್ದರೆ ಸಹಕಾರ ತತ್ವಗಳಿಂದ ಸಮಾಜಕ್ಕೆ ಎಷ್ಟರಮಟ್ಟಿಗೆ ಉಪಯೋಗ ವಾಗುತ್ತದೆ ಎಂಬುದು ಗೊತ್ತಾಗುತ್ತದೆ. ದೇಶದ ಕಲ್ಯಾಣವಾಗಬೇಕಾದರೆ, ಜನರ ಅಭಿವೃದ್ಧಿ ಯಾಗಬೇಕಾದರೆ ಸಹಕಾರ ತತ್ವ, ಸಹಕಾರ ಸಂಘಗಳ ಮೂಲಕವೇ ಆಗಬೇಕೆಂಬುದನ್ನು ನಾವು ಒಪ್ಪಿದ್ದೇವೆ. ಆದ್ದರಿಂದ ಜನತೆಗೆ ಒಳ್ಳೆಯದನ್ನು ಮಾಡಬೇಕಾದರೆ ಯಾವ ತರಹದ ವ್ಯಕ್ತಿಗಳು ಅಧಿಕಾರದಲ್ಲಿರಬೇಕೆಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇಂದು ಸಹಕಾರ ತತ್ವ ಏನಾಗಿದೆ ಎಂದರೆ, ಕೆಲವು ಜನ ಪುಡಾರಿಗಳು, ಕೆಲವು ಜನ ಅಧಿಕಾರಿ ವರ್ಗದವರು ಸೇರಿಕೊಂಡು ಯಾವ ಯಾವ ಹಂತಗಳಲ್ಲಿ ಎಷ್ಟೆಷ್ಟು ಹಣವನ್ನು ದೋಚಬಹುದು ಎಂಬುದನ್ನು ಯೋಚನೆ ಮಾಡುತ್ತಿರುತ್ತಾರೆ. ಇಂತಹವರಿಗಾಗಿ ನಾವು 4 ಕೋಟಿ ಚಿಲ್ಲರೆ ಹಣವನ್ನು ಕೊಡಬೇಕಾಗಿದೆ ಎಂದು ಕಾಣುತ್ತದೆ. ನಮ್ಮ ತಾಲ್ಲೂಕಿನ ಉದಾಹರಣೆಯನ್ನೇ ಕೊಡಬೇಕೆಂದರೆ, ಹೋದ ವರ್ಷ ಕೂಡ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದರೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ; ನಮ್ಮ ತಾಲ್ಲೂಕಿನ ಟಿ. ಎ. ಪಿ. ಎಂ. ಎಸ್.ನಲ್ಲಿ ಕಳೆದ ನಾಲ್ಕು ವರ್ಷದಿಂದ ಜನರಲ್ ಬಾಡಿ ಮೀಟಿಂಗ್ ಮಾಡಿಲ್ಲ. ಅದರ ಆದಾಯ ನಷ್ಟ ಏನು ಎಂಬುದು ನಮಗೆ ತಿಳಿಯುತ್ತಿಲ್ಲ. ಮಾಲು ಇಲ್ಲದೆ ಸಾಲ ಕೊಟ್ಟ ಉದಾಹರಣೆಗಳಿವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅದರ ಅಧ್ಯಕ್ಷರು ಯಾರು ?

ಶ್ರೀ ಟಿ. ಎಂ. ಮಂಜುನಾಥ್.—ಆಡಳಿತ ಕಾಂಗ್ರೆಸ್‌ನವರೇ ಅಲ್ಲಿರುವುದರಿಂದ ಅದರ ಬಗೆ ಇನ್ನೂ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಬಿಟ್ಟಿದ್ದಾರೆ. ಡೆಪ್ಯೂಟಿ ರಿಜಿಸ್ಟ್ರಾರ್ ಅವರು ಆ ಸೊಸೈಟಿಯನ್ನು ಏತಕ್ಕೆ ಸೂಪರ್‌ಸೀಡ್ ಮಾಡಬಾರದೆಂದು ನೋಟೀಸ್ ಜಾರಿ ಮಾಡಿದ್ದಾರೆ. ಆದರೂ ಅದರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ; ಈಗಲಾದರೂ ಸಹ ಮಾನ್ಯ ಮಂತ್ರಿ ಗಳು ಮತ್ತು ಸಂಬಂಧಪಟ್ಟ ಮೇಲಿನ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆಂಧು ನಾನು ತಿಳಿಯುತ್ತೇನೆ. ಅಲ್ಲಿ ಒಂದು ಕಳ್ಳರ ಗುಂಪೇ ಸೇರಿಕೊಂಡುಬಿಟ್ಟಿದೆ. ಯಾವ ರೀತಿ ಹಣ ಹಂಚಿ ಕೊಳ್ಳಬೇಕು, ಯಾವ ರೀತಿ ಹಣವನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳಬೇಕು ಎಂಬುದ ರಲ್ಲಿಯೇ ಯಾವಾಗಲೂ ಮಗ್ನರಾಗಿರುತ್ತಾರೆ. ಆ ಸೊಸೈಟಿಗೆ ಒಂದು ಜೀಪನ್ನು ಕೊಡಲಾಗಿದೆ. ಅದು ಏಕೆ ಬೇಕು ? ಆ ಪ್ರೆಸಿಡೆಂಟರು ಹೆಂಡತಿ ಮನೆಗೆ ಹೋಗಲು ಆ ಜೀಪನ್ನು ಉಪಯೋಗಿ ಸುತ್ತಾರೆ ; ಚುನಾವಣೆಯ ಸಂದರ್ಭದಲ್ಲಿ ಅದನ್ನು ಉಪಯೋಗಿಸುತ್ತಾರೆ ; ಈ ಸೊಸೈಟಿಯಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಿಗೆ ಹೇಳಿದರೂ ಸಹ ಅವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಸಹಕಾರಿ ಇಲಾಖೆಯಲ್ಲಿ ಆಡಳಿತ ದಕ್ಷತೆಯಿಂದ ಕೂಡಿದೆ ಎಂದು ಜನರಿಗೆ ಕಂಡುಬರಬೇಕಾದರೆ ಈ ಸೊಸೈಟಿಯ ಬಗ್ಗೆ ಕೂಡಲೇ ಕ್ರಮ ಕೈಕೊಳ್ಳಬೇಕು. ಮಾಲು ಇಲ್ಲದಿದ್ದರೂ ಸಾಲ ಕೊಟ್ಟ ಉದಾಹರಣೆಗಳು ಇವೆ ; ಕೊಟ್ಟಸಾಲದ ಹಣಕ್ಕಿಂತ ಎರಡರಷ್ಟು ಹಣಕ್ಕೆ ತಿಳಿಯದ ಜನರಿಂದ ಎಬ್ಬೆಟ್ಟು ಒತ್ತಿಸಿಕೊಂಡ ಉದಾಹರಣೆಗಳು ಇವೆ. ಬಡವರಿಗೆ ಅನ್ಯಾಯ ಮಾಡಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ತನಿಖೆ ಮಾಡಿಸುವುದಿಲ್ಲ ಎಂದು ಹೇಳಿದರೆ ಏನು ಮಾಡುತ್ತೀರಿ ?

ಶ್ರೀ ಟಿ. ಎಂ. ಮಂಜುನಾಥ.—ಸರ್ಕಾರದವರು ತಪ್ಪುಗಳನ್ನು ಕಂಡುಹಿಡಿಯದಿದ್ದರೆ ಜನರೇ ಮುಂದೆ ತಪ್ಪುಗಳನ್ನು ತೋರಿಸಿಕೊಡುತ್ತಾರೆ. ಇಂದಿರಾಗಾಂಧಿಯವರ ನೇತೃತ್ವದಲ್ಲಿ ಬಡವರಿಗೆ ಆಶ್ರಯ ಕೊಟ್ಟೇಕೊಡುತ್ತಾರೆಂಬ ನಂಬಿಕೆ ನನಗೆ ಇದೆ. ಅದನ್ನು ಕಾದು ನೋಡಬೇಕಾಗಿದೆ. ನಮ್ಮ ತಾಲ್ಲೂಕ್‌ನಲ್ಲಿ ನಿಮ್ನ ವರ್ಗದ ಗೃಹನಿರ್ಮಾಣ ಸಹಕಾರ ಸಂಘ ಇದೆ. ಇಡೀ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿಯೂ ಇಂತಹ ಸಹಕಾರ ಸಂಘಗಳು ಚೆನ್ನಾಗಿ ನಡೆಯುತ್ತಿದ್ದರೆ ನಮ್ಮ ತಾಲ್ಲೂಕ್‌ನಲ್ಲಿ ಮಾತ್ರ ಸರಿಯಾಗಿ ಕೆಲಸವಾಗದೆ ಮುಳುಗಿಹೋಗಿದೆ. ಇದರಿಂದ ಹರಿಜನರಿಗೆ ಸಾಲ ಸಿಗುತ್ತಿಲ್ಲ. ಈಗಲಾದರೂ ನಮ್ಮ ತಾಲ್ಲೂಕ್‌ನಲ್ಲಿರುವ ಹರಿಜನ ಬಂಧುಗಳಿಗೆ ಸಾಲವನ್ನು ಮಂಜೂರು ಮಾಡುವ ವ್ಯವಸ್ಥೆಯನ್ನು ಸನ್ಮಾನ್ಯ ಮಂತ್ರಿಗಳು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಕೆಲವರು ಸೇರಿಕೊಂಡು ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿ ಎಂದು ಮಾಡಿಕೊಂಡಿದ್ದಾರೆ. ಅಂತಹ ಒಂದು ಸೊಸೈಟಿಯಲ್ಲಿ ನಮ್ಮ ತಾಲ್ಲೂಕ್‌ನ ಒಬ್ಬ ದೊಡ್ಡ ರೈತರು ತಮ್ಮ ಹೆಂಡತಿ, ಮಾವ, ಅಳಿಯ, ಮಗ ಮುಂತಾದ ಬಂಧುಗಳ ಹೆಸರಿನಲ್ಲಿಯೇ ಷೇರ್ ಹಾಕಿಸಿ, ಎರಡು ಸಾವಿರ ತೆಂಗಿನ ಮರಗಳನ್ನು ಬೆಳೆಸಲು ಜಮೀನು ಬೇಕೆಂದು ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿಯ ಹೆಸರಿನಲ್ಲಿ ಜಮೀನು ಹೊಡೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ ಈ ಸೊಸೈಟಿಗೆ ಭೂಮಿ ಕೊಡಬಾರದೆಂದು ಹಿಂದಿನ ಸರ್ಕಾರದವರು ಸ್ಟೇ ಕೊಟ್ಟಿದ್ದರು. ನಾಲ್ಕು ಲಕ್ಷ ರೂಪಾಯಿ ಬೆಲೆ ಬಾಳುವ ಆ ಜಮೀನಿನಲ್ಲಿ ಈಗ ತೆಂಗಿನ ಗಿಡಗಳನ್ನು ಹಾಕಿದ್ದಾರೆ.

3-30 P.M.

ಈ ರೀತಿ ಸೇವಾ ಸಹಕಾರ ಸಂಘಗಳ ಹೆಸರನ್ನು ಹೇಳಿಕೊಂಡು ದೊಡ್ಡ ರೈತರು ಬಡವರನ್ನು ಶೋಷಣೆ ಮಾಡಿ ಬಡವರ ಜಮೀನನ್ನು ಹರಿಜನರಿಗೆ ಮೀಸಲು ಇಟ್ಟಿದ್ದ ಜಮೀನನ್ನು ವಶಪಡಿಸಿಕೊಳ್ಳಬೇಕಾದರೆ ಅಧಿಕಾರಿಗಳು ಮತ್ತು ಸರ್ಕಾರ ಏತಕ್ಕೆ ಸುಮ್ಮನೆ ಕುಳಿತುಕೊಂಡಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಮೊನ್ನೆತಾನೆ ಒಂದು ಘಟನೆ ನಡೆದಿದೆ. ಒಬ್ಬರು ಉನ್ನತ ಅಧಿಕಾರಿಗಳು ಎಂದರೆ ಬೆಂಗಳೂರು ಡಿವಿಷನ್ನಿನ ಜಾಯಿಂಟ್ ರಿಜಿಸ್ಟ್ರಾರ್ ಅವರು ಇಂಥಾದ್ದೇ ಒಂದು ಏಜೆನ್ಸಿಯಲ್ಲಿ ಗೊಬ್ಬರವನ್ನು ಕೊಂಡುಕೊಳ್ಳಬೇಕೆಂದು ಹೇಳಿದ್ದಾರೆ. ಅವರ ಮೇಲೆ ಕ್ರಮತೆಗೆದುಕೊಳ್ಳದೆ ಯಾರೋ ಒಬ್ಬರು ಬಡ ಸೆಕ್ರೆಟರಿಯನ್ನು ಸಸ್ಪೆಂಡ್ ಮಾಡಿದರೆ ಇದು ಸರ್ಕಾರದ ನೀತಿಯೇ? ಆ ಜಾಯಿಂಟ್ ರಿಜಿಸ್ಟ್ರಾರ್ ಅವರು ಕ್ರಮ ತೆಗೆದುಕೊಂಡು ತಾವು ದೇಶಕ್ಕೆ ಪರಿಶುದ್ಧವಾದ ಆಳ್ವಿಕೆಯನ್ನು ಕೊಡಬೇಕು, ಯಾರ ಯಾರ ಮೇಲೆ ಅಪಾದನೆ ಇದೆಯೋ ಅಂಥವರ ಮೇಲೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಇಲಾಖೆಯಲ್ಲಿ ಇರತಕ್ಕ ಲಂಚಗುಳಿತವನ್ನು ಹೋಗಲಾಡಿಸಬೇಕು. ಇನ್ನು ಮುಂದಾದರೂ ಮಾನ್ಯ ಸಹಕಾರ ಮಂತ್ರಿಗಳು ತಮ್ಮ ಮೃದು ಸ್ವಭಾವವನ್ನು ಬಿಟ್ಟು ಸ್ವಲ್ಪ ಜಬರ್‌ದಸ್ತ್ ಆಗಿ 'ತಪ್ಪಿತಸ್ಥರ' ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹರಿಜನ ಗಿರಿಜನರ ಸೊಸೈಟಿಯನ್ನು ಸರಿಯಾಗಿ ನಡೆಯುವಂತೆ ಮಾಡಿ ಅದನ್ನು ಚುರುಕುಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಹಕಾರ ಮಂತ್ರಿಗಳು ಈ ಸಭೆಯ ಮುಂದಿಟ್ಟಿರುವ ಬೇಡಿಕೆಗಳ ಮೇಲೆ ಮಾತನಾಡುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ಸರ್ಕಾರದಲ್ಲಿ ಯಾವ ಇಲಾಖೆಯೇ ಆಗಲೀ ಚೆನ್ನಾಗಿ ನಡೆಯದೇ ಇರತಕ್ಕ ಇಲಾಖೆಗಳನ್ನು ತೆಗೆದು ಹಾಕಿದರ ಸರ್ಕಾರಕ್ಕೆ ಆಗತಕ್ಕಂಥಾ ಖರ್ಚು ಉಳಿಯುತ್ತದೆ. ಅದರಲ್ಲಿ ಚೆನ್ನಾಗಿ ಕೆಲಸ ಮಾಡದೇ ಇರತಕ್ಕ ಇಲಾಖೆ ಎಂದರೆ ಈ ಸಹಕಾರ ಇಲಾಖೆ. ಈ ಸಹಕಾರ ಇಲಾಖೆ ಹೆಸರಿಗೆ ಮಾತ್ರ ಇದೆ. ಸಹಕಾರ ತತ್ವ ಏನಿದೆ ಅವನ್ನು ಪಾಲಿಸುತ್ತಾ ಇಲ್ಲ. ಈ ಇಲಾಖೆಯಲ್ಲಿ ಅಸಹಕಾರ ಜಾಸ್ತಿಯಾಗುತ್ತಿದೆ. ಇಲ್ಲಿ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ. ಸಹಕಾರ ಸಂಘಗಳಲ್ಲಿ ಏತಕ್ಕೋಸ್ಕರ ಡೈರೆಕ್ಟರಾಗುತ್ತಾರೆ ಎಂದರೆ ಅವನು ಇಷ್ಟು ಹೊಡೆದ ನಾನು ಇಷ್ಟು ಹೊಡೆಯಬೇಕು ಎಂದು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಡೈರೆಕ್ಟರಾಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅನುಕೂಲತೆಯನ್ನು ಹೊಂದಬೇಕು ಎನ್ನುವ ದೃಷ್ಟಿಯಿಂದ ಸಹಕಾರ ಸಂಘಗಳಲ್ಲಿ ಸ್ಪರ್ಧೆ ನಡೆಯುತ್ತಿದೆ. ಈ ಸಹಕಾರ ಸಂಘಗಳಲ್ಲಿ ಹಣ ತಿಂದವರ ಮೇಲೆ ಸರಿಯಾದಂತಹ ಕ್ರಮ ತೆಗೆದುಕೊಳ್ಳುವುದಿಲ್ಲ. ಈ ಸಹಕಾರ ಸಂಘಗಳಲ್ಲಿ ತಿಂದು ತಿಂದು ಗೂಳಿಗಳ ಹಾಗೆ ತಿರುಗಾಡುತ್ತಿದ್ದಾರೆ. ಈ ಸಹಕಾರ ಸಂಘ ಎನ್ನುವುದು ರಾಜಕೀಯಕ್ಕೆ ತೌರುಮನೆಯಾಗಿದೆ. ಆದ್ದರಿಂದ ಸಹಕಾರ ತತ್ವ ಕೆಳಮಟ್ಟಕ್ಕೆ ಹೋಗುತ್ತಿದೆ. ಮದ್ರಾಸಿನಲ್ಲಿ ಸಹಕಾರ ಸಂಸ್ಥೆಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ನಮ್ಮಲ್ಲಿ ಸಹಕಾರ ಸಂಘಗಳು ಏತಕ್ಕೆ ಚೆನ್ನಾಗಿ

(ಶ್ರೀ ಎಚ್. ಜಿ. ಚನ್ನಪ್ಪ)

ನಡೆಯುತ್ತಿಲ್ಲ ಎಂದರೆ ಯಾರು ಸಹಕಾರ ಸಂಘಗಳಲ್ಲಿ ದುಡ್ಡು ಹೊಡೆಯುತ್ತಾರೆಯೋ ಅವರ ಮೇಲೆ ಸರಿಯಾಗಿ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅವನು 10 ಸೊಸೈಟಿಗಳ ಡೈರೆಕ್ಟರಾಗಿದ್ದಾನೆ, ನಾನು 30 ಸೊಸೈಟಿಗಳ ಡೈರೆಕ್ಟರಾಗಬೇಕು, ಪ್ರೆಸಿಡೆಂಟಾಗಬೇಕು, ವ್ಯವಹಾರವನ್ನು ಮಾಡಬೇಕು ಎನ್ನುವಂಥಾ ಆಶೆ ಆಕಾಂಕ್ಷೆಯನ್ನು ಹೊಂದಿದ್ದಾರೆ, ಲೂಟಿ ಹೊಡೆಯುವುದರಲ್ಲಿ ಪೈಪೋಟಿ ನಡೆಯುತ್ತಿದೆ. 12 ವರ್ಷಗಳಿಂದ ಜನರಲ್‌ಬಾಡಿ ಮೀಟಿಂಗ್ ನಡೆಯದಿದ್ದರೂ ಕ್ರಮ ತೆಗೆದುಕೊಳ್ಳುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಅದನ್ನು ಸೂಪರ್‌ಸೀಡ್ ಮಾಡುವುದಕ್ಕೆ ಸರ್ಕಾರಕ್ಕೆ ಬರೆದಿದ್ದೇವೆ ಎಂದು ಹೇಳುತ್ತಾರೆ. ಅದು ಏನೂ ಆಗಿರುವುದಿಲ್ಲ ಹಾಗೆಯೇ ಇರುತ್ತದೆ. ಇದರಿಂದಾಗಿ ನಮ್ಮನ್ನು ಯಾರು ಏನು ಮಾಡುತ್ತಾರೆ ಎಂದು ಹೇಳುವ ಮಟ್ಟಕ್ಕೆ ಹೋಗಿದೆ. ಸೊಸೈಟಿಗಳಲ್ಲಿ ತಿಂದು ಗೂಳಿಗಳ ಹಾಗೆ ತಿರುಗಾಡುತ್ತಿರುತ್ತಾರೆ. ಮೊನ್ನೆ ಮಾಗಡಿಯಲ್ಲಿ ಮಾರ್ಕೆಟಿಂಗ್ ಸೊಸೈಟಿ ಎಲೆಕ್ಷನ್‌ನಲ್ಲಿ ಪ್ರೆಸಿಡೆಂಟರ ಎಲೆಕ್ಷನ್ ಖರ್ಚನ್ನು ಆ ಸೊಸೈಟಿಯ ಸೆಕ್ರೆಟರಿ ಮೇಂಟೇನ್ ಮಾಡಿದರು. ಇಂಥಾ ಒಂದು ಮಟ್ಟಕ್ಕೆ ಇದು ಹೋಗಿದೆ. ಅದಕ್ಕೋಸ್ಕರವಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಇರುವ ಎಲ್ಲಾ ಮ್ಯಾನೇಜ್‌ಮೆಂಟನ್ನು ಸೂಪರ್‌ಸೀಡ್ ಮಾಡಿ ಸಹಕಾರಿ ರೂಲ್ಸ್ ಮತ್ತು ಬೈಲಾಗಳನ್ನು ಅಮೆಂಡ್ ಮಾಡಿ ಲೋಪದೋಷಗಳಿಗೆ ಅವಕಾಶ ಇಲ್ಲದಂತೆ ಕಾನೂನು ಮಾಡಿ ಅದನ್ನು ಕಾರ್ಯರೂಪಕ್ಕೆ ತಂದರೆ ಇದು ಸರಿಗೆ ಆಗಬಹುದು. ಆ ರೀತಿ ಮಾಡಿದರೆ ಸಹಕಾರ ಮಂತ್ರಿಗಳ ಹೆಸರು ಚಿರಸ್ಥಾಯಿಯಾಗಿ ಉಳಿದು ಅವರ ಹೆಸರನ್ನು ಸುವರ್ಣಾಕ್ಷರಗಳಿಂದ ಬರೆಯಬಹುದಾದಂತಹ ಸನ್ನಿವೇಶ ಬರುತ್ತದೆ. ಈಗಾಗಲೇ ನಮ್ಮ ಸ್ನೇಹಿತರನೇಕರು ಹೇಳಿದ್ದಾರೆ. ಎಲ್ಲಾ ಖಾಸಗಿ ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳ ಎಲೆಕ್ಷನ್‌ಗಳಲ್ಲಿಯೂ ಆ ಬ್ಯಾಂಕಿನ ಸೆಕ್ರೆಟರಿಯವರು ಎಲೆಕ್ಷನ್ ಖರ್ಚನ್ನು ವಹಿಸಿಕೊಂಡು ಅಣಧ ವಿಲೇವಾರಿ ಆಗುತ್ತದೆ. ಈ ಪರಿಸ್ಥಿತಿಯಲ್ಲಿ ವ್ಯವಹಾರ ನಡೆಯುತ್ತಿದ್ದರೆ ಏತಕ್ಕೋಸ್ಕರ ಕೋಆಪರೇಟಿವ್ ಸೊಸೈಟಿಗಳು ಇರಬೇಕು ? ಈ ಡಿಪಾರ್ಟ್‌ಮೆಂಟ್ ಏತಕ್ಕೆ ಇರಬೇಕು ? ಈ ಸಹಕಾರ ಸಂಘಗಳಲ್ಲಿ ಚುನಾವಣೆ ನಡೆಯುವಾಗ ಆಗತಕ್ಕಂಥಾ ಅನ್ಯಾಯ ಅಚಾತುರ್ಯಗಳ ಬಗ್ಗೆ ವಿಚಾರಣೆ ಮಾಡಲು ಆರ್ಬಿಟ್ರೇಟರ್ಸ್ ನೇಮಕ ಮಾಡಿಕೊಳ್ಳುತ್ತಾರೆ. ಆ ಆರ್ಬಿಟ್ರೇಟರ್ಸ್ 25 ರೂಪಾಯಿಗಳಿಂದ 50 ರೂಪಾಯಿಗಳವರೆಗೂ ಒಂದೊಂದು ಜಡ್ಜ್‌ಮೆಂಟ್ ಬರೆಯುತ್ತಾರೆ. ರಿಟೈರಾದ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಮಂತ್ರಿಗಳ ಇನ್‌ಫ್ಲುಯೆನ್ಸ್ ಮಾಡಿ ಆರ್ಬಿಟ್ರೇಟರಾಗುತ್ತಾರೆ. ಅದರಿಂದ ಸಂಪಾದನೆ ಮಾಡಿಕೊಂಡು ಅವರು ತಮ್ಮ ಜೀವನೋಪಾಯವನ್ನು ಮಾಡಿಕೊಳ್ಳುತ್ತಾರೆ. ನಾನು ಒಂದು ವರ್ಷ ಸಹಕಾರಿ ರಂಗದಲ್ಲಿ ಕೆಲಸ ಮಾಡಿ ಅನುಭವ ಬಂದಮೇಲೆ ಕ್ಷಮಿಸಿ ಬಿಟ್ಟು ಬಂದೆ. ನನಗೆ ದುಡ್ಡು ಹೊಡೆಯುವುದಕ್ಕೆ ಬರುವುದಿಲ್ಲ. ಅಲ್ಲದ್ದು ನೋಡಿ ಅದನ್ನು ಸಹಿಸುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ನಾನು ಸಹಕಾರಿ ರಂಗದಿಂದ ನಿವೃತ್ತನಾಗಿದ್ದೇನೆ. ಸಹಕಾರ ಸಂಘಗಳಿಗೆ ಸಂಬಧಪಟ್ಟ ಕೇಸುಗಳಲ್ಲಿ ಕೋರ್ಟಿಗೆ ಹೋಗಿ ಕೈಕಟ್ಟಿಕೊಂಡು ನಿಂತುಕೊಳ್ಳಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಆರ್ಬಿಟ್ರೇಟರುಗಳನ್ನು ತಮ್ಮವರನ್ನೇ ನೇಮಕ ಮಾಡಿಕೊಂಡಿದ್ದಾರೆ. ಅವರು ಹೇಳಿದ ಹಾಗೆ ಆರ್ಬಿಟ್ರೇಟರು ಕೇಸುಗಳನ್ನು ನಡೆಸುತ್ತಾರೆ. ಕೋರ್ಟಿನಲ್ಲಿ ಕೇಸು ನಡೆಯುವಾಗ ನಾವು ಒಂದು ದಿವಸ ಕೋರ್ಟಿಗೆ ಹೋಗದಿದ್ದರೆ ತೊಂದರೆಯಾಗುತ್ತದೆ. ಎಕ್ಸ್‌ಪಾರ್ಟಿಯಾಗಿ ಕೇಸನ್ನು ತೀರ್ಮಾನ ಮಾಡುತ್ತಾರೆ. ಬೇರೆಯವರು ಎಂದರೆ ಹಣಕೊಟ್ಟ ಪಾರ್ಟಿಯವರು 15 ದಿವಸ ಕೋರ್ಟಿಗೆ ಬಾರದಿದ್ದರೆ ತೊಂದರೆ ಬಾರದ ಹಾಗೆ ಕೇಸನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ಈ ಲೋಪದೋಷಗಳನ್ನು ತಪ್ಪಿಸುವುದಕ್ಕಾಗಿ ಆರ್ಬಿಟ್ರೇಟರಿಗೆ ಕೋಆಪರೇಟಿವ್ ಟ್ರಿಬ್ಯೂನಲ್ ರೀತಿ ಆರ್ಬಿಟ್ರೇಟರ್ ಒಂದು ಪರ್ಮನೆಂಟ್ ಕೋರ್ಟನ್ನು ಮಾಡಿ. ಆಗಲೇನಾದರೂ ನ್ಯಾಯ ದೊರಕಬಹುದು. ಇಂಥಾ ಕೋಆಪರೇಟೀವ್ ಫೀಲ್ಡ್ ಏತಕ್ಕೋಸ್ಕರ ಇರಬೇಕು ? ಇಂಥಾ ಡಿಪಾರ್ಟ್‌ಮೆಂಟ್ ಇರುವುದು ಬೇಡ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಆಡಳಿತ ಕಾಂಗ್ರೆಸ್ಸಿನವರು ಎಲ್ಲರೂ ಸಹಕಾರ ಮಂತ್ರಿಗಳು ಮಂಡಿಸಿರುವ ಡಿಮ್ಯಾಂಡಿಗೆ ಸಪೋರ್ಟ್ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಅವರು ಮಾತನಾಡುವಾಗ ವಿರೋಧವಾಗಿ ಮಾತನಾಡಿದ್ದಾರೆ. ಬೇಕಾದರೆ ತಾವು ರೆಕಾರ್ಡ್ ತರಿಸಿ ನೋಡಿ ಗೊತ್ತಾಗುತ್ತದೆ. ಮೊದಲು ಮಾತನಾಡುವಾಗ ನಾವು ಸಪೋರ್ಟ್ ಮಾಡುತ್ತೇವೆ, ಬೆಂಬಲಿಸುತ್ತೇವೆ ಎಂದು ಹೇಳಿ ಆ ಮೇಲೆ ಟೀಕೆ ಮಾಡುತ್ತಾರೆ. ಆದ್ದರಿಂದ ಈ ಕೋಆಪರೇಟಿವ್ ಡಿಪಾರ್ಟ್‌ಮೆಂಟ್ ಮೊದಲು ಹೋಗಬೇಕು. ಪ್ರತಿಯೊಂದು ಸೊಸೈಟಿಯಲ್ಲಿಯೂ ತಮ್ಮ ಪಕ್ಷದವರೇ ಮೆಜಾರಿಟಿ ಇರಬೇಕು. ಮತ್ತು ತಮ್ಮವರೇ ಪ್ರೆಸಿಡೆಂಟ್ ಆಗಬೇಕು. ಈ ರೀತಿ ಆದರೆ ಸೊಸೈಟಿಗಳು ಸರಿಯಾಗಿ ನಡೆಯುತ್ತವೆಯೇ ? ಮಾಗಡಿ ಅಡಮಾನ ಬ್ಯಾಂಕಿನ

ಸೆಕ್ರೆಟರಿ ಡೈರೆಕ್ಟರುಗಳು ಹೇಳಿದ ಹಾಗೆ ಕೇಳದೆ ಇದ್ದುದರಿಂದ ಅವರನ್ನು ಗುಲ್ಬರ್ಗಾಕ್ಕೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಅಲ್ಲಿ ಹಿಂದೆ ಇದ್ದ ಸೆಕ್ರೆಟರಿಯವರು ಅಧ್ಯಕ್ಷರು ಮತ್ತು ಡೈರೆಕ್ಟರುಗಳನ್ನು ಹೊಂದಿಕೊಂಡು ಅವರು ಹೇಳಿದ ಹಾಗೆ ಕೇಳಿಕೊಂಡು ಅಡ್ಜಸ್ಟ್ ಮಾಡಿಕೊಂಡು ಹೋಗುತ್ತಿದ್ದರು. ಇವರು ಸರಿಯಾಗಿ ಅಧ್ಯಕ್ಷರ ಜೊತೆಯಲ್ಲಿ ಹೊಂದಿಕೊಂಡು ಹೋಗದೆ ಇದ್ದುದರಿಂದ ಇವರಿಗೆ ತೊಂದರೆಯಾಯಿತು. ಇಂಥಾ ಒಂದು ಪರಿಸ್ಥಿತಿ ಇದೆ. ಈ ಡಿಪಾರ್ಟ್‌ಮೆಂಟಿನಲ್ಲಿ ಮೇಲಿನಿಂದ ಕೆಳಗಿನವರೆಗೂ ಅಧಿಕಾರಿ ವರ್ಗದಲ್ಲಿ ಲಂಚಮಯವಾಗಿದೆ, ಲಂಚ ಕೊಟ್ಟರೆ ಯಾವ ಲೋಪದೋಷಗಳಿದ್ದರೂ ಅಧಿಕಾರಿಗಳು ಅದನ್ನು ಮುಚ್ಚಿಬಿಡುತ್ತಾರೆ ಇದನ್ನು ಸರಿಯಾದ ತನಿಖೆ ನಡೆಸಿ ಸರಿಯಾದ ಕ್ರಮ ತೆಗೆದುಕೊಂಡರೆ ಸರಿಹೋಗಬಹುದು. ಇಂಥಹ ಉದಾಹರಣೆಗೆ. ನಮ್ಮ ಬೆಂಗಳೂರು ವಿಭಾಗದ ಜಾಯಿಂಟ್ ರಿಜಿಸ್ಟ್ರಾರರೇ ಒಬ್ಬರು. ಒಟ್ಟಿನಲ್ಲಿ ನನ್ನ ಅಭಿಪ್ರಾಯವೇನೆಂದರೆ ಈಗ ಇರುವ ಎಲ್ಲಾ ಆಡಳಿತವನ್ನೂ ರದ್ದು ಮಾಡಿ ಒಂದು ತಜ್ಞರ ಕಮಿಟಿಯನ್ನು ಮಾಡಿ ಈಗಿರತಕ್ಕ ಬೈಲಾ ಮತ್ತು ರೂಲ್ಸ್‌ಗಳನ್ನು ಬದಲಾವಣೆ ಮಾಡಿ ಲೋಪದೋಷಗಳು ಇಲ್ಲದೆ ಇರುವಂತಹ ಕಾನೂನನ್ನು ತಂದು ಈ ಸಹಕಾರಿರಂಗವನ್ನು ಸರಿಮಾಡದಿದ್ದರೆ ಇದು ಏಳಿಗೆಯಾಗುವುದಿಲ್ಲ ಈಬಾಬಿಗೆ ಖರ್ಚು ಮಾಡುವಂತಹ ಹಣ ವ್ಯರ್ಥವಾಗುತ್ತದೆ ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗಟ್ಟಿ ಚಂದ್ರಶೇಖರ್ (ಗುಟ್ಟಿ).—ಮಾನ್ಯ ಅಧ್ಯಕ್ಷರೇ, ಸಹಕಾರೀ ಮಂತ್ರಿಯವರು ಇಟ್ಟಿರತಕ್ಕಂತಹ ಬೇಡಿಕೆಯನ್ನು ಸಮರ್ಥನೆ ಮಾಡುತ್ತಾ ಎರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಸಹಕಾರ ಮಂತ್ರಿಯವರು ಸಹೃದಯರು, ಮತ್ತು ದೈವಭಕ್ತರು. ಅವರನ್ನು ನೋಡಿದರೆ ಪಾಪ ಅಯ್ಯೋ ಅನಿಸುತ್ತದೆ. ಗ್ರಹಚಾರ ಯಾರನ್ನೂ ಬಿಟ್ಟಿಲ್ಲ. ಯಾವ ಜನ್ಮದ ಪಾಪದ ಫಲವೋ ಅದರಿಂದಾಗಿ, ಪಾಪ ಅವರಿಗೆ ಯಾವ ಒಂದು ಪಾಪದ ಇಲಾಖೆಯನ್ನು ಕೊಟ್ಟಿದ್ದಾರೆ ಅಂದರೆ, ಅಂಥ ಪಾಪದ ಇಲಾಖೆ ಯಾವುದೂ ಇಲ್ಲ. ದೇವರು ಶಂಕರ ಆಳ್ವರವರನ್ನು ಸ್ಟ್ರಾಂಗರ್ (stronger) ಆಳ್ವ ಆಗುವ ಹಾಗೆ ಮಾಡಲಿ ಎಂದು ಪ್ರಾರ್ಥಿಸುತ್ತೇನೆ. ಅದೇ ರೀತಿಯಲ್ಲಿ ಇಲಾಖೆಯಲ್ಲಿ ಇರುವಂತಹ ರಿಜಿಸ್ಟ್ರಾರವರು ಸಹ ಬಹಳ ದೈವಭಕ್ತರು. ಇವತ್ತು ಈ ಇಲಾಖೆಯಲ್ಲಿ ಏನೊಂದು ಸಹಕಾರ ತತ್ವವನ್ನು ಕೊಲೆ ಮಾಡಿದ್ದಾರೆ, ಅದನ್ನು ಸರಿಪಡಿಸುವುದಕ್ಕೆ ಇವರಿಬ್ಬರಿಗೂ ಬಹಳ ಕಷ್ಟವಾಗಿದೆ. ಈ ಸಹಕಾರ ತತ್ವದಲ್ಲಿ ಲೂಟಿ ಮಾಡುವುದಕ್ಕೆ ಬಹಳ ಸ್ಕೋಪ್ ಇದೆ. ಇದಕ್ಕೆ ಬಂಡವಾಳ ಬೇಕಾಗಿಲ್ಲ; ಬುದ್ಧಿ ಬೇಕಾಗಿಲ್ಲ. ಒಬ್ಬ 120 ರೂಪಾಯಿ ಸಂಬಳ ಇರತಕ್ಕ ಸೆಕ್ರೆಟರಿಯು ಇವತ್ತು 10-6 ಲಕ್ಷ ರೂಪಾಯಿ ಮಾಡಿಕೊಂಡಿದ್ದಾನೆ. ಹೀಗಿರುವಾಗ ನಾವು ಸಹ ಏಕೆ ಒಂದು ಸೊಸೈಟಿ ಮಾಡಿಕೊಂಡಿರಬಾರದು ಎಂದು ಕಾಣುತ್ತದೆ. ಇದುವರೆಗೂ ಹಿಂದೆ ರಾಜ್ಯ ಆಳಿದಂತವರು ತಮ್ಮ ಪಕ್ಷದ ಬಾಲಬಡುಕರಿಗಾಗಿ, ಮತ್ತು ಬೆಂಬಲಗರಿಗಾಗಿ ಹಾಕುತ್ತಿದ್ದಂತಹ ಮೇವು ಇವುಗಳು. ಇದಕ್ಕೆ ನಮ್ಮ ಊರಿನ ಒಂದು ಉದಾಹರಣೆಯೇ ಸಾಕು. ಅಲ್ಲಿ ನಾಲ್ಕು ಸೊಸೈಟಿಗಳನ್ನು ನುಂಗಿ ನೀರು ಕುಡಿದಿದ್ದಾರೆ. ಇದರ ಬಗ್ಗೆ ನಾನು ಒಂದು ಪ್ರಶ್ನೆ ಕೂಡ ಕಳಿಸಿದ್ದೇನೆ. ಸಂಸ್ಥಾ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷನಾದವನು ಅಧಿಕಾರಿಗಳ ಸಹಾಯ ಪಡೆದು, ಅವರ ಸಹಕಾರದಿಂದ, ಸೊಸೈಟಿಯನ್ನು ನುಂಗಿ ನೀರು ಕುಡಿದಿದ್ದಾನೆ. ಇದರ ಬಗ್ಗೆ ತನಿಖೆ ಕೂಡ ಇಲ್ಲಿಯವರೆಗೆ ಮಾಡಿಲ್ಲ. ಇನ್ನೊಂದು ಸೊಸೈಟಿಯು 7-8 ವರ್ಷಗಳಿಂದ ಕೆಲಸ ಮಾಡುತ್ತಾ ಇಲ್ಲ. ಇದರ ಬಗ್ಗೆ ಇಲಾಖೆಯವರು ಸಹ ಏನೊಂದು ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಡಿಫಾಲ್ಟರ್ ಆಗಿರುವವರು ಕಳೆದ ಸ್ಟೇಟ್ ಮಾರ್ಕೆಟಿಂಗ್ ಡೈರೆಕ್ಟರು. ಚುನಾವಣೆಯಲ್ಲಿ ಓಟುದಾರರಾಗಿ ಬಂದು ಓಟು ಸಹ ಚಲಾಯಿಸಿದ್ದಾರೆ. ಇವತ್ತು ಈ ಇಲಾಖೆಯನ್ನು ಯಾರು ಬೇಕಾದರೂ ಲೂಟಿ ಮಾಡಬಹುದು. ಹಿಂದೆ ಘಜನಿ ಮಹಮ್ಮದ್ ನಮ್ಮ ದೇಶದಲ್ಲಿ ದಂಡ ಯಾತ್ರೆ ಮಾಡಿ ಲೂಟಿ ಮಾಡಿದ ಹಾಗೆ ಈ ಸೊಸೈಟಿಗಳಲ್ಲಿ ನಡೆಯುತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಸೊಸೈಟಿಗಳ ಬಗ್ಗೆ ಸರಿಯಾದ ತನಿಖೆ ನಡೆಸಿ ಉಗ್ರವಾದ ಶಿಕ್ಷೆ ವಿಧಿಸದೆ ಹೋದರೆ ಇನ್ನೂ ದೊಡ್ಡ ಘಾತಕ ದೇಶಕ್ಕೆ ಆಗುತ್ತದೆ. ಇದರ ಬಗ್ಗೆ ಸರ್ಕಾರದವರು ಮತ್ತು ಇಲಾಖೆಯವರು ಸಮಾಜಘಾತುಕರು ಯಾರಿದ್ದಾರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳದಿದ್ದರೆ ಈ ಇಲಾಖೆಗೆ ಯಾವ ಒಂದು ಒಳ್ಳೆಯ ಹೆಸರೂ ಬರುವುದಿಲ್ಲ. ಆದ್ದರಿಂದ ಅಂಥ ಉಗ್ರ ಕ್ರಮಗಳನ್ನು ತೆಗೆದುಕೊಂಡು ಇಲ್ಲಿ ನಡೆಯುತಕ್ಕಂತಹ ಅವ್ಯವಹಾರಗಳನ್ನು ತಡೆಗಟ್ಟಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಮಾನ್ಯ ಉಪಾಧ್ಯಕ್ಷರೆ. ಈ ದಿವಸ ನಮ್ಮ ಮಾನ್ಯಮಂತ್ರಿಯವರು ತಂದಿರತಕ್ಕಂತಹ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಂತ್ರಿಯವರು ಮುಖ ನೋಡಿದರೆ, ಇವರು ಗುಣಶೀಲರು,

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಒಳ್ಳೆಯವರು. ಯೋಗ್ಯರು ಮತ್ತು ಯೋಗ್ಯಮನೆತನದವರು ಎಂದು ಕಾಣುತ್ತದೆ. ಅದರೆ ಮಾನ್ಯ ಆಳ್ವರುವವರು ವಹಿಸಿಕೊಂಡಿರತಕ್ಕಂತಹ ಖಾತೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳದೆ ಗತ್ಯಂತರವಿಲ್ಲ. ಸಮಾಜದಲ್ಲಿ ದೀನ ದಲಿತರ ಮಟ್ಟ ಮೇಲಕ್ಕೆ ಬರಬೇಕಾದರೆ, ಈ ಸಹಕಾರ ಪದ್ಧತಿಯಿಂದ ಮಾತ್ರ ಸಾಧ್ಯವೆಂದು ಹೇಳುವವರಲ್ಲಿ ನಾನೊಬ್ಬ. ಈ ಸಹಕಾರ ಪದ್ಧತಿ ಕುಂಠಿತವಾದ ಪಕ್ಷದಲ್ಲಿ ಇಡೀ ರಾಷ್ಟ್ರಕ್ಕೆ ಕ್ಷೇಮವಿಲ್ಲ. ಇದನ್ನು ಟೀಕೆಗಾಗಿ ಹೇಳುತ್ತಾ ಇಲ್ಲ. ಇವತ್ತು ಈ ಸಂಸ್ಥೆಗಳ ಬಗ್ಗೆ ದೂರು ಕೊಟ್ಟರೆ ಸಮಸ್ಯೆ ಬಗೆಹರಿಯುತ್ತದೆ ಎಂದು ನಾನು ತಿಳಿದು ಕೊಂಡಿಲ್ಲ. ಇವತ್ತು ನಾವು ನೀವೂ ಎಲ್ಲರೂ ಸೇರಿ ಇದನ್ನು ಬಗೆಹರಿಸಬೇಕಾದ ಒಂದು ಗುರು ತರವಾದ ಹೊಣೆಗಾರಿಕೆ ನಮ್ಮಲ್ಲಿ ಇದೆ. ಇದನ್ನು ಬಗೆಹರಿಸುವಾಗ ಬರತಕ್ಕಂತಹ ಎಡರು ತೊಡರುಗಳ ಬಗ್ಗೆ ನಾವು ಜಾಗರೂಕರಾಗಿರುವುದು ಅವಶ್ಯಕ. ಮಾನ್ಯ ಆಳ್ವರವರು ಪ್ರಾಯಶಃ ಮುಖ್ಯಮಂತ್ರಿಯವರ ಮತ್ತು ಇತರ ಸಹೋದ್ಯೋಗಿಗಳ ಒತ್ತಡದಿಂದ ತಮ್ಮ ಇಲಾಖೆಯಲ್ಲಿ ಸ್ವಚ್ಛವಾದ ಆಡಳಿತವನ್ನು ರೂಪಿಸುವುದಕ್ಕೆ ವಿಫಲರಾಗಿದ್ದಾರೆಂದು ಹೇಳಿರುವುದಕ್ಕೆ ನನ್ನಲ್ಲಿ ಸಾಕಷ್ಟು ಮಾಹಿತಿಗಳು ಇವೆ. ಇದರ ರಿಜಿಸ್ಟ್ರಾರ್‌ರಾದರೂ ಒಬ್ಬ ದಕ್ಷ ಆಡಳಿತಗಾರರು. ಹಿಂದೆ ಇದರಲ್ಲಿ ತಿಪ್ಪೇರುದ್ರಯ್ಯರೆಂಬ ಒಬ್ಬ ಐ ಎ ಎಸ್ ಅಧಿಕಾರಿ ಇದ್ದರು. ಅವರು ಜಾತ್ಯಾತೀತವಾಗಿ, ಮತ್ತು ಪಕ್ಷಾತೀತವಾಗಿ ಹೇಗೆ ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದರೋ, ಅದೇ ರೀತಿ ಯಲ್ಲಿ ಶ್ರೀಮಾನ್ ಮಹಾರುದ್ರಯ್ಯನವರು ನಡೆಸಿಕೊಂಡು ಹೋಗುತ್ತಾರೆಂದರೆ ಅತಿಶಯೋಕ್ತಿ ಯಾಗಲಾರದು. ಆದರೆ ಸಹಕಾರೀತತ್ವದಲ್ಲಿ ಆಗತಕ್ಕಂತಹ ಅನ್ಯಾಯಗಳನ್ನು ಹತ್ತಿಕ್ಕಿದರೆ, ಬಡ ಜನರಿಗೆ ಸಾಕಷ್ಟು ಅನುಕೂಲವನ್ನು ಇದರಿಂದ ಮಾಡಬಹುದು, ಇವತ್ತು ಸರ್ವಿಸ್ ಕೋಪ ರೇಟಿವ್ ಸೊಸೈಟಿಯಲ್ಲಿ ರೈತರಿಗೆ ಸಾಲಗಳನ್ನು ನೇರವಾಗಿ ಕೊಡಬೇಕಾಗಿದೆ, ಆದರೆ ನಿಮ್ಮ ಇಲಾಖೆಯು ಇವತ್ತು ಮಂಜೂರಾದ ಪೂರ್ಣ ಸಾಲವನ್ನು ರೈತರಿಗೆ ಕೊಟ್ಟು ಸೇರುವ ಹಾಗೆ ಮಾಡುವುದಿಲ್ಲ. ನಮ್ಮ ಹಳ್ಳಿಯಲ್ಲಿ ಮದುವೆ ಆದಾಗ ಒಂದು ವೀಳ್ಯ ಹಂಚುವ ಪದ್ಧತಿ ಇದೆ. ಇದು ಅವರ ವಿಳ್ಯ ಇದು ಇವರ ವೀಳ್ಯ ಎಂದು ವೀಳ್ಯ ಹಂಚುತ್ತಿದ್ದಾರೆ.ಅದೇ ರೀತಿ ರೈತರಿಗೆ ಸಾಲ ಮಂಜೂ ರಾದ ಮೇಲೆ ಈ ರೀತಿ ಹಂಚತಕ್ಕ ಪದ್ಧತಿ ನಡೆಯುತ್ತಿದೆ. ಹಂಚುವಾಗ ಸೆಕ್ರೆಟರಿಯವರಿಗೆ ಇಷ್ಟು ಭಾಗ ಇದರಲ್ಲಿ ಹೋಗಿ, ಮತ್ತೊಬ್ಬರಿಗೆ ಇಂತಿಷ್ಟು ಭಾಗ ಹೋಗಿ ಕೊನೆಗೆ ಈಗ ವಿಧಾನ ಸೌಧದ ವೀಳ್ಯ ಎಂದು ವಸೂಲು ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಇದು ಯಾರಿಗೆ ಹೋಗಿ ಸೇರುತ್ತದೆ ಎಂಬುದನ್ನು ಧೈರ್ಯವಾಗಿ ಇವರು ಹೇಳಲಿ. ಅದು ಯಾರಿಗೂ ಇಲ್ಲಿ ಬಂದು ಸೇರುವುದಿಲ್ಲದ್ದರೆ ಅದರ ಬಗ್ಗೆ ಒಂದು ವಿಚಾರಣೆ ಇಡಿ ಎಂದು ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿ ಸರ್ವಿಸ್ ಕೋಅಪ ರೇಟಿವ್ ಸೊಸೈಟಿಗಳಲ್ಲಿ, ಇತರೇ ಸಹಕಾರ ಸಂಘಗಳಲ್ಲಿ ಮಂಜೂರಾದಂಥ ಸಾಲ ಪಡೆದವನಿಂದ ಪೂರ್ಣವಾಗಿ ರೈತರಿಗೆ ಸೇರುತ್ತದೆಂದು ಯಾರಾದರೂ ಧೈರ್ಯವಾಗಿ ಹೇಳಿದರೆ ನಾನು ತಲೆ ಬಗ್ಗಿಸು ತ್ತೇನೆ. ಸಾಲ ತೀರುವಿಕೆಗೆ ರೈತನಿಗೆ ಅವನು ಪಡೆದಂಥ ಪೂರ್ಣ ಸಾಲದ ಲಾಭವನ್ನು ಪಡೆದಿದ್ದೇ ಆದರೆ ಆಗ ಅವನು ಸಾಲವನ್ನು ಮರುಪಾವತಿ ಮಾಡುವುದಕ್ಕೆ ಯೋಗ್ಯವಾಗುತ್ತದೆ. ಈ ಮಾತನ್ನು ಯಾಕೆ ಹೇಳುತ್ತಿದ್ದೇನೆಂದರೆ, ರೈತನಿಗೇ ಆಗಲೀ ಕೈಗಾರಿಕೋದ್ಯಮಿಗೇ ಆಗಲೀ ಸಾಲ ಪೂರ್ಣವಾಗಿ ಸೇರಬೇಕು. ಅವರು ಯಾವ ಒಂದು ಉದ್ದೇಶಕ್ಕೆಂದು ಸಾಲವನ್ನು ತೆಗೆದುಕೊಂಡಿರುತ್ತಾರೋ ಆ ಒಂದು ಉದ್ದೇಶಕ್ಕೇ ಅದನ್ನು ವಿನಿಯೋಗಮಾಡ ಬೇಕು. ಇದನ್ನು ಸಿಬ್ಬಂದಿವರ್ಗ ಕಡ್ಡಾಯವಾಗಿ ಕಣ್ಣು ಇಟ್ಟು ನೋಡಬೇಕು. ಆದ್ದರಿಂದಲ್ಲೇ ಎಲ್ಲಾ ಸಹಕಾರ ಸಂಘಗಳಲ್ಲಿಯೂ ಬರೀ ನುಸ್ತಿಯಾಗುತ್ತದೆ. ಅದರಿಂದಲೇ ಸಹಕಾರದ ತತ್ವ, ಆಂದೋಳನ ಅಲ್ಲಿ ಕುಂಠಿತವಾಗುತ್ತದೆ. ಮುಖ್ಯವಾಗಿ ಅವರು ತೆಗೆದುಕೊಂಡ ಸಾಲ ಆ ಕಾರ್ಯಕ್ಕೇ ಉಪಯೋಗವಾಗಬೇಕು. ಅವರ ಬಗ್ಗೆ ಸರ್ಕಾರದವರು ತಕ್ಕ ಮೇಲ್ವಿಚಾರಣೆಯನ್ನು ಸ್ಪಷ್ಟ ವಾಗಿ ಮಾಡಬೇಕು.

ಮೈಸೂರು ರಾಜ್ಯದಲ್ಲಿ ಸ್ಟೇಟ್ ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿ ಎಂದು ಇದೆ. ಮಾನ್ಯ ಶ್ರೀ ಆಳ್ವ ಅವರಿಗೆ ನಾನು ಚಾಲೆಂಜ್ ಮಾಡಿ ಕೇಳುತ್ತೇನೆ. ಅಲ್ಲಿ ನಿಮ್ಮ ಸರ್ಕಾರದ 3-4 ಜನ ಡೈರೆ ಕ್ಟರ್‍ಸ್ ಇದ್ದಾರೆ. ಆದರೂ ಅಲ್ಲಿ 3-4 ವರ್ಷಗಳ ಲೆಕ್ಕ ಇನ್ನೂ ಆಡಿಟ್ ಆಗಿಲ್ಲ. ಈ ಸರ್ಕಾರದಲ್ಲಿ ಹೆಚ್ಚು ಆಡಿಟರ್‍ಸ್ ಇಲ್ಲವೇ ? ಅಲ್ಲಿಗೆ ನಿಮ್ಮ ಪಕ್ಷದವರೇ ಅಧ್ಯಕ್ಷರು. ಅವರು ಈಗಾಗಲೇ 20-25 ಲಕ್ಷ ರೂಪಾಯಿಗಳನ್ನು ದುರ್ವಿನಿಯೋಗಮಾಡಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಆಶೀರ್ವಾದ, ಸಹಾಯ ಇದೆ. ಇದರಿಂದ ಅಲ್ಲಿ ಅನೀತಿ, ಅನ್ಯಾಯ ಬಹಳ ಹೆಚ್ಚಾಗಿದೆ. ಈ ರಾಜ್ಯದಲ್ಲಿ ಎಲ್ಲಿಯವರೆಗೆ ಈ ಸರ್ಕಾರ ಇಂತಹ ಆದೇಶಗಳನ್ನು ಕೊಡುತ್ತದೋ ಅಲ್ಲಿಯವರೆಗೂ ಈ

ದೇಶಕ್ಕೆ ಉಳಿಗಾಲವಿಲ್ಲ. ಈಗ ಇವರಿಗೆ ಬಂದಿರುವ ಕೆಟ್ಟ ಹೆಸರು ಸಾಕು. ಈ ಸರ್ಕಾರದಲ್ಲಿ ಎಷ್ಟೆಷ್ಟು ಸಿಗುತ್ತದೋ ಅದನ್ನು ಬಳಕೊಂಡು ಹೋಗುವುದಕ್ಕೆ ಯಾರೂ ಪ್ರಯತ್ನಮಾಡಬೇಡಿ. ತಾವೇನೋ ನೋಡುವುದಕ್ಕೆ ಒಳ್ಳೆಯವರಿದ್ದೀರಿ. ಕೆಟ್ಟ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡು ತೊಂದರೆ ಪಡುವುದು ಬೇಡ. ಉತ್ತಮವಾದ ಸರ್ಕಾರ ಈ ರಾಜ್ಯಕ್ಕೆ ಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಲಂಚಕೋರ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಡುವ ಸರ್ಕಾರ ಅನಾವಶ್ಯಕ. ಅದನ್ನು ಎಲ್ಲರೂ ವಿರೋಧಿಸಬೇಕು. ಈ ಮೈಸೂರು ರಾಜ್ಯದಲ್ಲಿ ರೈತನ ಏಳಿಗೆಗೆ ಸಹಕಾರ ಸಂಘ, ವಿದ್ಯಾ ಸಂಸ್ಥೆ ನಡೆಸುವುದಕ್ಕೆ ಸಹಕಾರ ಸಂಘ ಕೈಗಾರಿಕೋದ್ಯಮಿಗಳಿಗೆ ಸಹಕಾರ ಸಂಘ, ಅಧಿಕಾರಿಗಳು ಆದವರು ಮನೆಗೆ ಹೋದರೆ ಸಹಕಾರ ಸಂಘ, ಮದುವೆಗಳಿಗೆ ಸಹಕಾರ ಸಂಘ ಬೇಕೇ ಬೇಕು. ಇದು ಬೇರೆ ರಾಜ್ಯಗಳಲ್ಲಿಯೂ ಇದೆ. ಸ್ಟೇಟ್ ಟ್ರೇಡಿಂಗ್ ಮಾರ್ಕೆಟಿಂಗ್ ಸೊಸೈಟಿ ಎಂದು ಇದೆ. ಅಲ್ಲಿ ಸಹಕಾರ ಆಂದೋಳನದಲ್ಲಿ ಎಲ್ಲ ಕುಟುಂಬಗಳಿಗೂ ಅನುಕೂಲವಾಗುವ ಕೆಲಸಗಳನ್ನು ನಾವು ಮಾಡಬೇಕಾಗುತ್ತದೆ. ಹಿಂದೆ ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಯಾವುದೋ ಒಂದು ಸೊಸೈಟಿಯ ಬಗ್ಗೆ ವಿಚಾರಣೆ ಮಾಡಿಸುತ್ತೇನೆ, ಅದನ್ನು ತ್ವರಿತಗತಿಯಿಂದ ನೋಡುತ್ತೇನೆಂದು ಹೇಳಿದರು. ಆ ವಿಚಾರವನ್ನು ನಾನು ಸಂತೋಷವಾಗಿ ಸ್ವಾಗತಿಸುತ್ತೇನೆ. ಅದರ ಬಗ್ಗೆ ನ್ಯಾಯಾಂಗ ತನಿಖೆ ಮಾಡಲಿ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಶ್ರೀ ನಾಗಣ್ಣನವರು ದುಡ್ಡಿನ ಚೀಲದಿಂದ 2 ಲಕ್ಷ ರೂಪಾಯಿಗಳು ಬಟವಾಡೆಯಾಗಿರುವುದನ್ನು ಹೇಳುತ್ತಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಸದಸ್ಯರು ಹೇಳಿದ್ದು ತಪ್ಪಲ್ಲ. ಯಜಮಾನರವರು ನಾನು ಹೇಳಿದ್ದನ್ನು ಬಹಳ ಕೂಲಂಕಷವಾಗಿ ಕೇಳಿದ್ದಾರೆ. ಅದಕ್ಕೆ ಜವಾಬ್ದಾರಿಯಾಗಿರುವವರು ಇದ್ದರೆ ಅವರ ಬಾಯಿಂದ ಕೇಳಿ ಅದನ್ನು ತನಿಖೆಮಾಡುತ್ತೀರಾ ?

ಶ್ರೀ ಕೆ. ಎಂ. ನಾಗಣ್ಣ.—ಇಲಾಖೆಯ ಮಂತ್ರಿಗಳಿಗೆ ಅದರ ಬಗ್ಗೆ ಆಸಕ್ತಿ ಇಲ್ಲ; ಅದರಿಂದ ನಾವು ಏಕೆ ಅದರ ಬಗ್ಗೆ ಮಾತನಾಡಬೇಕು ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದು ಬಿಚ್ಚುಮನಸ್ಸಿನ ಸವಾಲು. ಅದನ್ನು ಒಪ್ಪಿಕೊಳ್ಳುತ್ತಾರೆ. ತಾವು ನ್ಯಾಯಾಂಗವಾಗಿ ತನಿಖೆಮಾಡಿದರೆ ಬೇಕಾದರೆ 100 ಅಂಕಿ ಅಂಶಗಳನ್ನು ಕೊಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎ. ಶಂಕರ ಆಳ್ವ.—ಒಂದು ಮಾತನ್ನು ಹೇಳಿದರೆ ಸಾಕು. ಅದು ಮಾನ್ಯ ಮುಖ್ಯ ಮಂತ್ರಿಗಳಿಗೆ ತಲುಪಿದೆಯೋ ಅಥವಾ ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರಿಗೆ ತಲುಪಿದೆಯೋ ಗೊತ್ತಿಲ್ಲ, ಅಲ್ಲಿ ಅವರು ಅದನ್ನು ನೋಡಿ ಸಾಬೀತು ಮಾಡಿಕೊಟ್ಟರೆ ಅವತ್ತೇ ವಿಚಾರಣೆ ಮಾಡಲಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಿಮ್ಮನ್ನು ಅಂತಹ ವಿಚಾರಣೆಗೆ ಇಡುವುದು ನ್ಯಾಯವಲ್ಲ. ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹಂಜಿ ಶಿವಣ್ಣ.—(ತರೀಕೆರೆ).—ಸನ್ಮಾನ್ಯ ಉಪಾಧ್ಯಕ್ಷರೇ, ಸಹಕಾರ ಇಲಾಖೆಯ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಡಿಮ್ಯಾಂಡ್‌ಗಳನ್ನು ನಾನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಆಡಬೇಕೆಂದು ಇಷ್ಟಪಡುತ್ತೇನೆ. ಪ್ರತಿಯೊಂದು ಸಾರಿಯೂ ಈ ಇಲಾಖೆಯ ಲೋಪದೋಷಗಳ ಬಗ್ಗೆ ಎಲ್ಲ ವಿರೋಧಪಕ್ಷದ ಸದಸ್ಯರೂ ಮತ್ತು ಆಡಳಿತ ಪಕ್ಷದ ಸದಸ್ಯರೂ ಕೂಡ ಪದೇಪದೇ ಮಾತನಾಡುವುದು ಸ್ವಾಭಾವಿಕವಾಗಿದೆ. ಇದರ ಲೋಪದೋಷಗಳನ್ನು ಇವತ್ತಿನವರೆಗೂ ಕೂಡ ಹೋಗಲಾಡಿಸುವುದಕ್ಕೆ ಸಾಧ್ಯವಾಗಿಲ್ಲ. ಮುಂದೆ ಸಾಧ್ಯವಾಗುತ್ತದೋ ಇಲ್ಲವೋ ಎಂಬ ಒಂದು ದೊಡ್ಡ ಶಂಕೆ ನನಗೆ ಬಂದಿದೆ. ಕಾರಣ ಇದರಲ್ಲಿ ಇತಕ್ಕ ಲೋಪದೋಷಗಳನ್ನು ಕಂಡುಹಿಡಿದು ಅವನ್ನು ಸರಿಪಡಿಸಿದ್ದೇ ಆದರೆ ಆಗ ಮಾತ್ರ ಅವನ್ನು ಮುಂದುವರಿಸಬಹುದು. ಅದು ಸಾಧ್ಯವಿಲ್ಲದಿದ್ದರೆ ಅವನ್ನು ಇಲ್ಲಿಗೇ ಕೊನೆಗಾಣಿಸಬಹುದು. ನಾನು ಮಾತನಾಡಿದಾಗ ಹಿಂದೆ ಮಾನ್ಯ ವಿರೋಧಪಕ್ಷದ ಸದಸ್ಯರಾದ ಶ್ರೀ ಚನ್ನಪ್ಪನವರು ನೀವೂ ಕೂಡ ತಪ್ಪನ್ನು ಮುಚ್ಚುವುದಕ್ಕೆ ಆಗುವುದಿಲ್ಲ, ಅದನ್ನು ಸರಿಪಡಿಸಿಕೊಳ್ಳಬೇಕೆಂದು ಹೇಳಿದರು. ಅದು ನಿಮ್ಮ ನಮ್ಮೆಲ್ಲರ ಕರ್ತವ್ಯವೆಂದು ಹೇಳಿದ್ದು ಆಯಿತು. ಆದರೂ ಒಟ್ಟಿನಲ್ಲಿ ಸರ್ಕಾರದವರು ಇವನ್ನು ಸರಿಪಡಿಸಬೇಕು. ಮಾನ್ಯ ಶ್ರೀ ಶಂಕರ ಆಳ್ವ ಅವರು ಅವರ ಕಾಲದಲ್ಲಿ ಇವುಗಳನ್ನು ಒಂದು ನೈತಿಕ ಮಟ್ಟದಲ್ಲಿ ತರಬೇಕು ಇಲ್ಲದೆ ಹೋದರೆ ಇವನ್ನು ಇಲ್ಲಿಗೇ ಅಂತ್ಯಗೊಳಿಸಿ ಎಂಬುದಾಗಿ ನಾನು ಬಿನ್ನೈಸಿಕೊಳ್ಳುತ್ತೇನೆ.

(ಶ್ರೀ ಹಂಜಿ ಶಿವಣ್ಣ)

ಇನ್ನು ಸಹಕಾರ ಸಂಘಗಳ ನಡೆವಳಿಕೆಗಳ ವಿಷಯವನ್ನು ಕುರಿತು ಈಗ ಪ್ರಸ್ತಾಪ ಮಾಡುತ್ತೇನೆ. ಅಲ್ಲಿರತಕ್ಕ ಲೋಪದೋಷಗಳನ್ನು ಕೆಲವು ಮಾನ್ಯ ಸದಸ್ಯರು ಹೇಳಿ ಮುಗಿಸಿದ್ದಾರೆ. ಬಹುತೇಕವಾಗಿ ಅಧಿಕಾರಿಗಳಿಂದ, ಕಾರ್ಯಕರ್ತರಿಂದ ಬೇಕಾದಷ್ಟು ಲೋಪದೋಷಗಳಿವೆಯೆಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ತಾಲ್ಲೂಕಾ ಲೆವೆಲ್‌ನಲ್ಲಿ ರಿಜಿಸ್ಟ್ರಾರ್ ಅವರ ಅಧಿಕಾರ ಇಟ್ಟಿದ್ದಾರೆ, ಜಿಲ್ಲಾ ಲೆವಲ್‌ನಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರ ಅಧಿಕಾರವೆಂದು ಇಟ್ಟಿದ್ದಾರೆ. ಜೊತೆಗೆ ಡೆಪ್ಯುಟಿ ರಿಜಿಸ್ಟ್ರಾರ್ ಅವರ ಅಧಿಕಾರವೂ ಇದೆಯೆಂದು ಇಟ್ಟಿದ್ದಾರೆ. ಅವರ ಕೆಲಸಕಾರ್ಯಗಳು ಅಷ್ಟಾಗಿ ಸಮರ್ಪಕವಾಗಿಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲ. ನಮ್ಮ ಊರಿನಲ್ಲಿಯೂ ಸೊಸೈಟಿಗಳಿವೆ. ಅಲ್ಲಿನ ಸೊಸೈಟಿಗಳನ್ನು ಗಿಣಿ ಸಾಕುವ ಹಾಗೆ ಸಾಕುತ್ತಿದ್ದಾರೆ. 25 ವರ್ಷಗಳ ಹಿಂದೆ ಸ್ಥಾಪನೆಯಾದಂಥ ಸೊಸೈಟಿ ಇದು ಮಾತ್ರ ನಂತಹ ಸೊಸೈಟಿಯಾಗಿದೆ. ನಾವು ಆ ಊರಿನ ಜನರೊಡನೆ ಸೇರಿಕೊಂಡು ಅದನ್ನು ಸಾಕುತ್ತಿದ್ದೇವೆ. ಅಂತಹ ಸೊಸೈಟಿಗೆ ನುಗ್ಗಿ ನಿಮ್ಮ ಅಧಿಕಾರಿಗಳೂ ಸಹ ಮೂರು ತಿಂಗಳ ಕೆಳಗೆ ಬಟ್ಟೆ ಬರೆಗಳನ್ನು ದೋಚಿಕೊಂಡು ಲಾರಿಗಳಲ್ಲಿ ತೆಗೆದುಕೊಂಡು ಹೋದರು. ಸೊಸೈಟಿ ಬೀಗ ಹಾಕಿದ್ದರೂ ಅದನ್ನು ಮಣ್ಣುಪಾಲು ಮಾಡಿದ ಸಂದರ್ಭವೂ ಬಂತು. ಇದಕ್ಕೆ ಅಧಿಕಾರಿಗಳೇ ಕಾರಣವೆಂದು ನಾನು ಹೇಳುತ್ತೇನೆ. ಇದರಿಂದ ಡೆಪ್ಯುಟಿ ರಿಜಿಸ್ಟ್ರಾರ್ ಅವರಿಗೆ ನಾನು ಹೇಳಿದ್ದೇನೆಂದರೆ, ನಿಮ್ಮ ಜಿಲ್ಲಾ ಸೊಸೈಟಿಗಳನ್ನು ಜಾಗ್ರತೆ ಮುಚ್ಚಿಸಬೇಕಾಗಿದೆಯೆಂದು ಹೇಳಿದ್ದೇವೆ ಅದನ್ನು ಈಗ ಸೂಪರ್‌ಸೀಡ್ ಮಾಡಿದ್ದಾರೆ. ಜಾಯಿಂಟ್ ರಿಜಿಸ್ಟ್ರಾರ್ ಮಟ್ಟಕ್ಕೆ ಬಂದಮೇಲೆ ಅವರಲ್ಲಿ ಇನ್ನೂ ಲೋಪವಾಗುತ್ತದೆಂದು ಅದನ್ನು ಮತ್ತೆ ಸೂಪರ್‌ಸೀಡ್ ಮಾಡಿರುವುದನ್ನು ರದ್ದುಪಡಿಸಿ ಎಂಬುದಾಗಿ ಹೇಳಿದ್ದೇವೆ. ಕೆಲವು ಸೊಸೈಟಿಗಳಲ್ಲಿ ಎಷ್ಟರಮಟ್ಟಿಗೆ ಕೆಲಸಕಾರ್ಯಗಳು ಆಗುತ್ತಿವೆಯೆಂದರೆ, 300 ಚೀಲ ಸಕ್ಕರೆಗಳಲ್ಲಿ 200 ಚೀಲಗಳು ಬ್ಲ್ಯಾಕ್‌ಮಾರ್ಕೆಟ್ಟಿನಲ್ಲಿ ವ್ಯಾಪಾರವಾಗುತ್ತಿತ್ತು. ಅಂತಹ ಅವಕಾಶವನ್ನು ಅಲ್ಲಿನ ಸೊಸೈಟಿಗಳಲ್ಲಿ ಅವಕಾಶಮಾಡಿಕೊಟ್ಟಿದ್ದಾರೆ. ನಾನು ಹೇಳುವುದಿಷ್ಟೇ, ಉಪಕಾರ ಮಾಡದೇ ಇದ್ದರೂ ಚಿಂತೆ ಇಲ್ಲ, ಅಪಕಾರ ಮಾಡಬೇಡಿಯೆಂದು.

4–00 P. M.

ಇನ್ನು ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಸಾಲ ಪಡೆಯುವುದೇ ಒಂದು ದೊಡ್ಡ ಗಂಡಾಂತರವಾಗಿದೆ. ಇದರ ಬಗ್ಗೆ ವಿರೋಧಪಕ್ಷದ ಸದಸ್ಯರೇನೇನು ಹೇಳಿದ್ದಾರೋ ಅದೆಲ್ಲಾ ಸರಿಯಾಗಿದೆ. ಒಂದು ವೇಳೆ ಸಾಲ ಮಂಜೂರಾದರೆ ಆ ಸಾಲ ಪಡೆದವನಿಗೆ ಆ ಬ್ಯಾಂಕಿನಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಯಾರಿದ್ದಾರೆ ಅವರು ಮಂಜೂರಾದ ಹಣ ಎಷ್ಟಿದೆಯೋ ಅಷ್ಟನ್ನೂ ಪೂರ್ತಿಯಾಗಿ ಕೊಡುವುದೇ ಇಲ್ಲ. ಕೆಲವು ಸಂದರ್ಭಗಳನ್ನು ನೋಡಿಕೊಂಡು ಅರ್ಧಕ್ಕೂ ಹೆಚ್ಚು ಹಣವನ್ನು ಅವರೇ ಇಟ್ಟುಕೊಂಡು ಬಿಡುತ್ತಾರೆ, ಏಕೆಂದರೆ ಸಾಲಗಾರನು ಮೂಕ ಪ್ರಾಣಿ, ಅವಿದ್ಯಾವಂತ, ಸಾಲದ ಕಾಗದ ಪತ್ರಗಳಿಗೆ ಹೇಗಿದ್ದರೂ ಅವನು ರುಜುವನ್ನು ಮಾಡೇ ಮಾಡುತ್ತಾನೆ ಎಂಬ ಖಾತರಿಯಿಂದ ಈ ಅನ್ಯಾಯಗಳೆಲ್ಲಾ ನಡೆಯುತ್ತಿವೆ. ಇನ್ನು ಕೆಲವು ಸಂದರ್ಭಗಳಲ್ಲಿ ಸಾಲ ಪಡೆದವರಿಂದ ಎಷ್ಟು ಕಾನೂನು ಪ್ರಕಾರ ಬಡ್ಡಿ ವಸೂಲ್ಮಾಡಬೇಕೋ ಅದಕ್ಕೂ ಹೆಚ್ಚಿನ ಬಡ್ಡಿಯನ್ನು ವಸೂಲ್ಮಾಡುತ್ತಿದ್ದಾರೆ. ಹಾಗೂ ಒಂದು ವೇಳೆ ಎಲ್ಲಿಯಾದರೂ ಬ್ಯಾಂಕಿನವರು ಬಡ್ಡಿಯನ್ನು ಕಡಿಮೆ ತೆಗೆದುಕೊಂಡಿದ್ದರೆ ಸಾಲಗಾರರಿಗೆ ನೋಟೀಸನ್ನು ಕಳುಹಿಸಿ ಅದನ್ನು ವಸೂಲ್ಮಾಡಿಕೊಳ್ಳುತ್ತಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಹೆಚ್ಚಿನ ಬಡ್ಡಿಯನ್ನು ಅವರು ಸಾಲಗಾರರಿಂದ ಪಡೆದಿದ್ದರೆ ಅದರ ಬಗ್ಗೆ ಯಾವ ನೋಟೀಸನ್ನೂ ಕಳುಹಿಸುವುದಿಲ್ಲ—ಅದನ್ನು ವಾಪಸ್ಸೂ ಮಾಡುವುದಿಲ್ಲ.

ಇನ್ನು ಕೊನೆಯದಾಗಿ ಈ ಜಿಲ್ಲಾ ಬ್ಯಾಂಕುಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇವುಗಳು ನಡೆಸುತ್ತಿರುವ ಈ ಸ್ಟಡಿ ಟೂರ್ ಅನ್ನುವುದೇನಿದೆ ಅದನ್ನು ಮೊದಲು ತಕ್ಷಣವೇ ನಿಲ್ಲಿಸಬೇಕೆಂದು ಹೇಳುತ್ತೇನೆ. ಇಂಥಾ ಅನೇಕ ಬ್ಯಾಂಕುಗಳಲ್ಲಿ ಈ ಶಾಸನಸಭೆಯ ಸದಸ್ಯರುಗಳನ್ನು ಈ ಬ್ಯಾಂಕುಗಳಿಗೆ ಡೈರೆಕ್ಟರನ್ನಾಗಿ ಮಾಡಲಾಗುತ್ತಿದೆ. ಇದನ್ನು ಸರ್ಕಾರ ಮೊದಲು ರದ್ದು ಮಾಡಬೇಕು. ಇಲ್ಲಿ ಶಾಸನ ಸಭೆಯಲ್ಲಿ ಕೆಲಸಮಾಡುವುದಕ್ಕೆ ಯೋಗ್ಯತೆ ಇಲ್ಲದವನಿಗೆ ಇನ್ನು ಈ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ಯೋಗ್ಯತೆ ಎಲ್ಲಿಂದ ಬರಬೇಕು ? ಆದುದರಿಂದ ಇನ್ನು ಮುಂದೆ ಯಾರು ಈ ಶಾಸನ ಸಭೆಗಳಲ್ಲಿ ಸದಸ್ಯರಾಗಿರುತ್ತಾರೋ ಅವರನ್ನು ಈ ಜಿಲ್ಲಾ ಬ್ಯಾಂಕುಗಳಲ್ಲಿ

ಡೈರೆಕ್ಟರುಗಳನ್ನಾಗಿ ನೇಮಕ ಮಾಡದಂತೆ ಪ್ರತಿಬಂಧಕ ಮಾಡಬೇಕೆಂದು ತಿಳಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಉಪಸಭಾಪತಿಯವರೇ, ಈ ಸಹಕಾರಿ ತತ್ವದ ಬಗ್ಗೆ ಅಥವಾ ಆಂದೋಳನದ ಬಗ್ಗೆ......

ಶ್ರೀ ಶಿರನಾಳಿ ಚಂದ್ರಶೇಖರ್.—ತಾವು ಈ ವ್ಯವಹಾರದಲ್ಲಿ ಒಂದು ಬಹಳ ಪಳಗಿದ ಕೈ ಎಂದು ಹೇಳುತ್ತಿದ್ದಾರೆ......

ಶ್ರೀ ಎಚ್. ಎಸ್. ಸಿದ್ದಪ್ಪ.—ಹೌದು ತಾವೇ ಹೇಳಿಕೊಟ್ಟದ್ದು. ಈ ಮಾತು ಹಾಗಿರಲಿ. ಇನ್ನು ಸರ್ವೇಸಾಮಾನ್ಯವಾಗಿ ಈ ಸಹಕಾರಿ ರಂಗದಲ್ಲಿರತಕ್ಕ ನ್ಯೂನತೆಗಳನ್ನು ನಾವು ಕಾನೂನು ಮೂಲಕ ಸರಿಪಡಿಸುತ್ತೇವೆ ಅನ್ನುವುದಕ್ಕೆ ಇದು ಅಂಥಾ ತತ್ವವಲ್ಲ ಎಂದು ಹೇಳಬಯಸುತ್ತೇನೆ. ಈ ಕ್ಷೇತ್ರದಲ್ಲಿ ಯಾರು ಯಾರು ಕೆಲಸಮಾಡುತ್ತಾರೋ ಅಂಥ ಜನರ ಎಲ್ಲ ನರ ನರಗಳಲ್ಲೂ ರಕ್ತಕಣಗಳಲ್ಲೂ ಈ ಸಹಕಾರಿ ತತ್ವ ಬೆರೆಯಬೇಕು. ಹಾಗಾದರೆ ಇದನ್ನು ಬರೀ ಒಂದು ಕಾನೂನು ಮೂಲಕ ಸರಿಪಡಿಸುತ್ತೇವೆಂದು, ಇದನ್ನು ಎಲ್ಲಾ ಜನರಿಗೂ ಪಸರಿಸುತ್ತೇವೆ ಎಂದರೆ ಅದೊಂದು ಪೊಳ್ಳು ಮಾತಾದೀತು. ಈ ದಿವಸ ನಮ್ಮ ಆಡಳಿತ ಪಕ್ಷದ ರಾಜಕೀಯ ದೃಷ್ಟಿ ಈ ಸಹಕಾರ ಸಂಸ್ಥೆಗಳತ್ತ ಬಿದ್ದಿರುವುದಷ್ಟೇ ಅಲ್ಲದೆ ಮುನಿಸಿಪಾಲಿಟಿಗಳತ್ತಲೂ ಬಿದ್ದಿದೆ. ಈ ದಿವಸ ಸಂಸ್ಥಾ ಕಾಂಗ್ರೆಸ್ ಪಕ್ಷದ ಕೈಲಿದ್ದ ಸಹಕಾರ ಸಂಸ್ಥೆಗಳನ್ನೆಲ್ಲಾ ಈ ಸರ್ಕಾರ ಸೂಪರ್ ಸೀಡ್ ಮಾಡುತ್ತಿದೆ. ಇನ್ನು ಆಡಳಿತ ಪಕ್ಷದವರ ಕೈಲಿರತಕ್ಕ ಸಂಸ್ಥೆಗಳಲ್ಲಿ ಏನೇ ಅಪಚಾರಗಳು ನಡೆಯಲಿ, ಅಲ್ಲಿ ಏನೇ ಹಣ ದುರುಪಯೋಗವಾಗಿರಲಿ ಅವುಗಳನ್ನು ಸರ್ಕಾರ ಪೋಷಣೆ ಮಾಡಿಕೊಂಡು ಬರುತ್ತಿದೆ. ಕಾರ್ಯದಲ್ಲಿ ಈ ಕೃತ್ಯಗಳನ್ನು ಮಾಡುತ್ತಾ ಬಾಯಲ್ಲಿ ಸಮತಾವಾದ ಬಿತ್ತುತ್ತಿದ್ದಾರೆಂದು ಹೇಳುವುದಕ್ಕೆ ಅವರಿಗೆ ಮನಸ್ಸಾದರೂ ಹೇಗೆ ಒಪ್ಪುತ್ತೇ ? ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ ಯಾವ ಒಂದು ಸಹಕಾರ ಸಂಸ್ಥೆ ಯಾರ ಕೈಲೇ ಇರಲಿ ಆದರ ಸಿದ್ಧಿ ಬೇಡ. ನೀವು ರಾಜ್ಯದಲ್ಲಿರತಕ್ಕ ಎಲ್ಲಾ ಸಂಸ್ಥೆಗಳನ್ನೂ ಸೂಪರ್‌ಸೀಡ್ ಮಾಡಿ ಮತ್ತೆ ಎಲ್ಲಕ್ಕೂ ಹೊಸ ಚುನಾವಣೆಗಳನ್ನು ನಡೆಸಿ. ಅದಕ್ಕಾಗಿ ಈಗಿರತಕ್ಕವುಗಳಿಗೆಲ್ಲ ಇತಿಶ್ರೀಯನ್ನು ಹಾಡಿ. ಇಲ್ಲಿ ನಾವೂ ನೀವೂ ಅಪಾದನೆ–ಪ್ರತ್ಯಾಪಾದನೆಗಳನ್ನು ಮಾಡುತ್ತಾ ಕಾಲಹರಣ ಮಾಡುವುದು ಬೇಡ. 19 ಜಿಲ್ಲೆಗಳಲ್ಲಿರತಕ್ಕ ಎಲ್ಲಾ ಸಹಕಾರ ಸಂಸ್ಥೆಗಳು ಬ್ಯಾಂಕುಗಳು ಎಲ್ಲವನ್ನೂ ಸೂಪರ್‌ಸೀಡ್ ಮಾಡಿ ಹೊಸದಾಗಿ ಚುನಾವಣೆಗಳನ್ನು ನಡೆಸಿ. ಯಾರು ನಿಜವಾದ ಸಹಕಾರಿಗಳಿದ್ದಾರೋ ಅವರು ಆರಿಸಿ ಬರುತ್ತಾರೆ.

ಇನ್ನು ಈ ಸಹಕಾರಸಂಸ್ಥೆಗಳಿಗೆ ಏನೊಂದು ಲಕ್ವಾ ಹೊಡೆದಿದೆ ಇದಕ್ಕೆ ನನ್ನ ಸ್ನೇಹಿತರನೇಕರು ಏನೇನೋ ಕಾರಣಗಳನ್ನು ಹೇಳಿದ್ದಾರೆ. ಆದರೆ ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಇವುಗಳ ಈ ರೋಗಕ್ಕೆ ಮೂಲ ಕಾರಣವೆಂದರೆ ಅಲ್ಲಿ ಇರತಕ್ಕ ಅಧಿಕಾರಿಗಳೇ ಎಂದರೆ ತಪ್ಪಲ್ಲ. ಈ ಇಲಾಖೆಯ ಅಂದರೆ ಕೋ ಆಪರೇಟಿವ್ ಸೊಸೈಟಿಗಳ ರಿಜಿಷ್ಟ್ರಾರ್ ಅನ್ನತಕ್ಕವರೇನು ಇದ್ದಾರೆ ಅವರು ಎಂದಾದರೂ ಈ ಸಂಸ್ಥೆಗಳನ್ನು ಭೇಟಿ ಮಾಡಿ ಅಲ್ಲಿ ಇನ್‌ಸ್ಪೆಕ್ಷನ್ ನಡೆಸಿದ್ದಾರೆಯೆ ಎಂದು ಕೇಳುತ್ತೇನೆ ? ಎಲ್ಲಿಯಾದರೂ ಏನಾದರೂ ಸಮಾರಂಭಗಳು ನಡೆದರೆ ಆಗ ಇವರು ಅಲ್ಲಿಗೆ ಹಾರತುರಾಯಿಗಳನ್ನು ಹಾಕಿಸಿಕೊಳ್ಳುವುದಕ್ಕೆ ಬರುತ್ತಾರೆ. ಅಷ್ಟು ಶಿವಾಯಿ ಇವರು ಎಂದೂ ಯಾವ ಒಂದು ಸಂಸ್ಥೆಯ ಇನಸ್ಪೆಕ್ಷನನ್ನೂ ಮಾಡಿರುವುದಿಲ್ಲ. ಇನು ಈ ಸಂಸ್ಥೆಗಳಿಗೆ ಸಹಕಾರ ತತ್ವದ ಗಂಧವೇ ಇಲ್ಲದ ಐ. ಎ.ಎಸ್. ಅಧಿಕಾರಿಗಳನ್ನು ತಂದು ಇವರ ತಲೆಯ ಮೇಲೆ ಕೂಡಿಸುತ್ತಿದ್ದಾರೆ. ಇದರಲ್ಲಿ ಏನಾದರೂ ಅರ್ಥವಿದೆಯೇ? ಆ ಐ. ಎ. ಎಸ್. ಅಧಿಕಾರಿಗಳೇನಿದ್ದಾರೆ ಅವರನ್ನು ಇಲ್ಲಿ ದಿನವಹಿ ಸೆಕ್ರೆಟೇರಿಯಟ್ಟಿನಲ್ಲಿ ನಡೆಯತಕ್ಕ ಕೆಲಸ ಕಾರ್ಯಗಳೇನಿವೆ ಅದಕ್ಕೆ ಅವರನ್ನು ಹಾಕಲಿ. ಆದರೆ ನಾನು ಕೇಳುತ್ತೇನೆ—ಈ ಐ. ಎ. ಎಸ್. ಅಧಿಕಾರಿಗಳನ್ನು ಈ ಇಲಾಖೆಗೆ ಅಧ್ಯಕ್ಷರನ್ನಾಗಿ ಹಾಕಿದ ಮೇಲೆ ಇಲ್ಲಿ ಭ್ರಷ್ಟಾಚಾರ ಎಷ್ಟು ಕಡಿಮೆಯಾಗಿದೆ, ಇವರನ್ನು ಹಾಕುವುದಕ್ಕೆ ಇಲ್ಲಿ ಈ ಭ್ರಷ್ಟಾಚಾರ ಯಾವ ಪ್ರಮಾಣದಲ್ಲಿತ್ತು ಅನ್ನುವುದನ್ನು ತಿಳಿಸುತ್ತಾರೆಯೇ ? ಆದರೆ ನನಗೆ ಗೊತ್ತಿರುವ ಹಾಗೆ ಒಂದು ಭೂ ಅಭಿವೃದ್ಧಿ ಬ್ಯಾಂಕಿಗೆ ಒಂದು ಕಡೆ ಒಬ್ಬ ಐ. ಎ. ಎಸ್. ಅಧಿಕಾರಿಗಳನ್ನು ಅಧ್ಯಕ್ಷರನ್ನಾಗಿ ಹಾಕಿದ್ದಾರೆ. ಅವರನ್ನು ಅಲ್ಲಿಗೆ ನೇಮಕ ಮಾಡಿದ್ದ ಅವಧಿಯಲ್ಲೇ ಅವರು 10-16 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ನಿವೇಶನವನ್ನೂ ಪಡೆದು ಅದರಲ್ಲಿ ಸುಮಾರು 68 ಸಾವಿರ ಖರ್ಚುಮಾಡಿ ಒಂದು ಮನೆಯನ್ನು ಕಟ್ಟಿಸಿದ್ದಾರೆ. ಅದನ್ನು ಕಟ್ಟಿಸತಕ್ಕ ಬಗ್ಗೆ ಅವರು ಅಧಿಕ ಬಡ್ಡಿ ದರದಲ್ಲಿ ಹಣವನ್ನು ಸಾಲಮಾಡಿದ್ದಾರೆ ಎಂದು ಅವರಿಗೆ ಆ ಬ್ಯಾಂಕಿ

(ಶ್ರೀ ಎಚ್. ಎಸ್. ಸಿದ್ದಪ್ಪ)

ನಿಂದ 200 ರೂಪಾಯಿಗಳನ್ನು ಹೌಸ್ ರೆಂಟ್ ಅಲೋಯನ್ಸ್ ಎಂದು ಪ್ರತಿ ತಿಂಗಳೂ ಕೊಡುವಂತೆ ಒಂದು ನಿರ್ಣಯವನ್ನು ಪಾಸ್ ಮಾಡಿದ್ದಾರೆ. ಇದು ಈ ಆಡಳಿತಪಕ್ಷದವರ ಸಮ್ಮತಾವಾದ? ಇದನ್ನೇ ಇವರೀಗ ಜಾರಿಗೆ ತರುತ್ತಿರುವುದು. ಆದರೆ ಅದೇ ಬ್ಯಾಂಕಿನಲ್ಲಿ ಕೆಲಸ ಮಾಡತಕ್ಕ ಇನ್ನೊಬ್ಬ ನೌಕರನು ಅದೇ ರೀತಿ ಹೆಚ್ಚಿನ ಬಡ್ಡಿದರದಲ್ಲಿ ಸಾಲ ಮಾಡಿ ಮನೆಯನ್ನು ಕಟ್ಟಿಸಿದ್ದಾಗ ಆವನಿಗೂ ಅದೇ ರೀತಿ ಹೌಸ್‌ರೆಂಟ್ ಅಲೋಯನ್ಸನ್ನು ಕೊಡುತ್ತಾರೆಯೇ ? ಒಬ್ಬರಿಗೆ ಹಾಗೆ, ಇನ್ನೊಬ್ಬರಿಗೆ ಹೀಗೆ ಮಾಡುವುದು ಸಹಕಾರಿ ತತ್ವದ ಗುರಿಯೋ ? ಈ ಸಹಕಾರಿ ಸಂಸ್ಥೆಗಳು ಉಳಿಯಬೇಕು. ಇವು ತಲೆಯೆತ್ತಬೇಕು, ಇವುಗಳ ಎಕನಾಮಿಕ್ ಅಫ್‌ಲಿಫ್ಟ್‌ಮೆಂಟ್ ಆಗಬೇಕು ಅನ್ನತಕ್ಕ ಕಾಲದಲ್ಲಿ ಈ ಅಕ್ರಮ ನಡವಳಿಕೆಗಳನ್ನು ನಡೆಸಬಹುದೇ ? ಇದನ್ನು ಸರ್ಕಾರ ಕೂಡಲೇ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ಇಲಾಖೆಗೆ ಇಲ್ಲಿಯುವರೆಗಾದರೂ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ತಯಾರಿಸಿಲ್ಲ. ಒಬ್ಬ ಅಲ್ಲಿ ಚಪ್ರಾಸಿಯಾಗಿ ಕೆಲಸಮಾಡತಕ್ಕವನೂ ಕೂಡ ಇಲಾಖೆಯ ಮುಖ್ಯಾಧಿಕಾರಿಯಾಗುವುದಕ್ಕೆ ಅವಕಾಶ ಇದೆ. ಈ ದಿವಸ, ಅಲ್ಲಿನ ರೂಲ್ಸ್‌ಗಳು ಹಾಗಿವೆ. ಅವನು ಅಲ್ಲಿ ಚಪ್ರಾಸಿಯಾಗಿದ್ದಾಗ 2 ರೂಪಾಯಿ ಲಂಚ ಕೇಳುತ್ತಿದ್ದ; ಅವನು ಅಲ್ಲಿ ಇಲಾಖೆ ಮುಖ್ಯಾಧಿಕಾರಿಯಾದಾಗ 200 ರೂಪಾಯಿ ಲಂಚ ಕೇಳುತ್ತಾನೆ ಅಷ್ಟೇ ಆಗಕ್ಕೂ ಈಗಕ್ಕೂ ವ್ಯತ್ಯಾಸ. ಅಲ್ಲಿ ಯೋಗ್ಯತೆ, ಅರ್ಹತೆಗಳ ಪ್ರಾಮುಖ್ಯತೆಯೇನೂ ಬೇಕಾದಂತೆ ಕಾಣುತ್ತಿಲ್ಲ.

Sri C. M. ARUMUGHAM.—This is a very important demand ; so important that it has to be discussed for three days. So far as the comparison Mr. Siddappa has made is concerned, he said that a chaprasi has become a Joint Registrar. I have visited almost all important cities of India. A sweeper, to my knowledge never becomes a Joint Registrar, but Mr. Siddappa says he has become a Joint Registrar in Mysore State. I would like to know from the Hon. Minister Mr. Shankara Alva, whether any sweeper has been promoted, or upgraded or posted as a Joint Registrar. This information I want immediately. So, the Chair may direct him to reply.

Mr. DEPUTY SPEAKER.—His reply is there ? He has to reply to all your suggestions and criticisms.

Sri C. M. ARUMUGHAM.—Is it a fact?

Sri A. SHANKAR ALVA.—I will give reply.

Mr. DEPUTY SPEAKER.—After Mr. Siddappa, I may call upon the Minister to reply. Then he will reply to it.

Sri C. M. ARUMUGHAM—Is it the presumption of the Chair that I am not taking part in ths discussion on this demand ?

Mr. DEPUTY SPEAKER—Mr. Armugham, you are a Member of the Business Advisory Committee. We have come to certain conclusion in the meeting of the Committee and we have to adhere to it. You were also present then.

Sri C. M ARUMUGHAM.—Whether I was present at the Business Advisory Commitiee meeting or not, I will strictly adhere to the conclusion of the Committee.

ಶ್ರೀ ಎಚ್. ಎಸ್. ಸಿದ್ದಪ್ಪ.—ಅಧ್ಯಕ್ಷರೇ, ಈ ದಿವಸ ಅಧಿಕಾರಿಗಳು ಸಹಕಾರಸಂಘದ ತತ್ವಗಳನ್ನು ಸರಿಯಾಗಿ ಆಚರಣೆಗೆ ತರುತ್ತಿಲ್ಲ ಎಂದು ಮತ್ತೊಮ್ಮೆ ಪ್ರತಿಪಾದಿಸುತ್ತೇನೆ. ಈ ಇಲಾಖೆಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ.

ಇಂದು ಪ್ರೊಬೇಷನರಿ ಆಫೀಸರುಗಳನ್ನು ನೇಮಕಮಾಡಿದ್ದಾರೆ, ಅವರಿಗೆ ಯಾವ ವಿಧವಾದ ತರಬೇತಿಯೂ ಇಲ್ಲ, ಅವರಿಗೆ ಪ್ರಮೋಷನ್ನಿಗೆ ಅವಕಾಶವಿಲ್ಲ, ಸಹಕಾರಿ ಇಲಾಖೆಯಲ್ಲಿ ಹಣ ಮಾಡುತ್ತಿದ್ದಾರೆ, ಇದು ಸರಿಯಲ್ಲ, ಇಂಥ ಪರಿಸ್ಥಿತಿ ಇದೆ. ಈಗ ಇಂಥ ಪೊಸಿಷನ್ನಿನಲ್ಲಿದ್ದೀರಿ, ಇನ್ನು ಮೂರು ವರ್ಷಗಳಿಗೆ ಇಂಥ ಪೊಸಿಷನ್ನಿಗೆ ಬರುತ್ತೀರಿ ಎಂದು ಸರಕಾರ ಅಧಿಕಾರಿಗಳಿಗೆ ಹೇಳಬೇಕು. ಇಲ್ಲದಿದ್ದರೆ ನಾಲ್ಕು ಕಾಲು ಹೆಗ್ಗಣಗಳಿಗೆ ಬದಲಾಗಿ ಎರಡು ಕಾಲು ಹೆಗ್ಗಣಗಳು ಸಹಕಾರ ಸಂಘಗಳಲ್ಲಿ ಧಾಳಿ ಮಾಡುವ ಪರಿಸ್ಥಿತಿ ಬರುವುದು. ಆದುದರಿಂದ ಈ ಇಲಾಖೆಯಲ್ಲಿ ಅಧಿಕಾರಿಗಳಿಗೆ ಒಂದು ವ್ಯವಸ್ಥಿತ ರೀತಿಯಲ್ಲಿ ತರಬೇತಿ ಕೊಡಬೇಕು, ಜೊತೆಗೆ ಅವರಿಗೆ ಅಪರ್ಚುನಿಟೀಸ್ ಕ್ರಿಯೇಟ್ ಮಾಡಬೇಕು, ಹಾಗೆ ಮಾಡಿ ಸಹಕಾರಿ ತತ್ವವನ್ನು ಅಧಿಕಾರಿಗಳು ಕಾಯಾವಾಚಾಮನಸಾ ಜನರಿಗೆ ತಿಳಿಸುವ ಹಾಗೆ ಮಾಡಬೇಕು.

ಇನ್ನು ಕಟ್ಟಕಡೆಯದಾಗಿ ಒಂದು ವಿಷಯ ಹೇಳುತ್ತೇನೆ. ಸಹಕಾರಿ ತತ್ವ ಪ್ರತಿಯೊಬ್ಬ ಮಾನವನ ರಕ್ತ ಕಣದಲ್ಲೂ ಬೆರೆತಿರಬೇಕು. ಇಂದು ಅನೇಕ ಅಪಾದನೆಗಳಿವೆ, ಅವುಗಳಿಂದ ವಿಮುಕ್ತರಾಗಬೇಕು. ಎಲ್ಲ 19 ಜಿಲ್ಲೆಗಳಲ್ಲಿ ಇರುವ ಸಹಕಾರಿ ಕೇಂದ್ರ ಬ್ಯಾಂಕುಗಳನ್ನು ಸೂಪರ್‌ಸೀಡ್ ಮಾಡಿ ಒಂದು ಹೊಸ ವ್ಯವಸ್ಥೆಯನ್ನು ತಂದು ಈ ತತ್ವದ ಆಂದೋಳನದಲ್ಲಿ ನಿಷ್ಠಾವಂತ ಜನರು ಸೇವೆ ಮಾಡಲು ಒಂದು ಅವಕಾಶ ಮಾಡಿಕೊಡಬೇಕು ಎಂದು ಆಗ್ರಹ ಪೂರ್ವಕವಾಗಿ ಹೇಳುತ್ತಾ, ಸಹಕಾರಿ ಡಿಮ್ಯಾಂಡು ಯಾವಾಗಲೂ ಜನರಿಗೆ ಸೇರುವ ಡಿಮಾಂಡು ಅಲ್ಲ, ಅಧಿಕಾರಿಗಳು ಮತ್ತು ಆಸಕ್ತಿ ಇರುವವರು ನುಂಗುವ ಡಿಮಾಂಡು ಎಂದು ತಿಳಿಸಿ ಪೂರ್ಣವಾಗಿ ಈ ಬೇಡಿಕೆಯನ್ನು ವಿರೋಧಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎ. ಶಂಕರ ಆಳ್ವ (ಸಹಕಾರ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರೂ ಸೇರಿ 20 ಜನರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ, ಅನೇಕ ಸಲಹೆಗಳನ್ನು ಸಹ ಕೊಟ್ಟಿದ್ದಾರೆ. ಅವರೆಲ್ಲರ ಅಪೇಕ್ಷೆಯೇನೆಂದರೆ ಈ ಸಹಕಾರಿ ಸಂಸ್ಥೆಗಳನ್ನು ಸರಿಯಾಗಿ ನಡೆಸುವುದಿಲ್ಲ, ಅದರಲ್ಲಿ ತುಂಬಾ ಲೋಪದೋಷಗಳುಂಟು, ಮುಖ್ಯವಾಗಿ ಮಂತ್ರಿಗಳು, ರಿಜಿಸ್ಟ್ರಾರರು ಹಾಗೂ ಆಫೀಸರುಗಳು ಮತ್ತು ಕೆಲವು ದುಷ್ಟ ಜನರು ಇದರಲ್ಲಿ ಸೇರಿಕೊಂಡಿರುವವರು ಈ ಸಂಘ ಸಂಸ್ಥೆಗಳನ್ನು ಸರಿಯಾಗಿ ನಡೆಯುವುದಕ್ಕೆ ಬಿಡುವುದಿಲ್ಲ ಎಂದು ತಿಳಿಸಿದ್ದಾರೆ. ಒಂದು ಮಾತನ್ನು ಶ್ರೀ ಶಾಮಣ್ಣನವರು ಸ್ಪಷ್ಟವಾಗಿ ಹೇಳಿದರು, ಈ ಸಹಕಾರ ಸಂಸ್ಥೆಗಳು ಪ್ರಗತಿ ಪಡೆಯುವುದಕ್ಕೆ ಬೇರೆ ಯಾವ ದಾರಿಯೇ ಇಲ್ಲ ಎಂಬುದಾಗಿ ಹೇಳಿದರು. ಸಹಜವಾಗಿಯೂ ಅವರು ಹೇಳಿದ್ದು ಸತ್ಯ. ಮತ್ತು ಆ ವಿಷಯದಲ್ಲಿ ಕೆಲವು ಸಲಹೆಗಳನ್ನು ಸಹ ಅವರು ಕೊಟ್ಟಿದ್ದಾರೆ.

ಇದನ್ನು ನಡೆಸುವ ಪ್ರತಿಯೊಬ್ಬನೂ ಸಹಕಾರಿ ತತ್ವವನ್ನು ಪಾಲಿಸಿಕೊಂಡು ಬರಲಿಲ್ಲ, ಮತ್ತು ಕೆಲವರು ಪ್ರೊಫೆಷನಲ್ ಕ್ಯಾಪಿಟಲಿಸ್ಟ್ಸ್ ಏನು ಇದ್ದಾರೆ ಅವರನ್ನು ತೆಗೆಯಬೇಕು. ಡಿ.ಸಿ.ಸಿ ಬ್ಯಾಂಕುಗಳು ಮನಾಪಲಿಯಾಗಿವೆ, ಮತ್ತು ರಾಜಕೀಯ ಇನ್ನೊಂದು ದೊಡ್ಡ ದುರಂಗವಾಗಿ ಬಂದಿದೆ. ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಸಾಲ ಪಡೆದುಕೊಂಡಿರುವವರು ಸಾಲವನ್ನು ವಾಪಸ್ಸು ಕೊಡುವುದಿಲ್ಲ. ಇದರಲ್ಲಿ ಕೆಲವು ಸೇಲ್ ಆಫೀಸರ್ಸ್ ಗುಂಪಾಗಿ ಬಹಳ ತೊಂದರೆಯಾಗಿದೆ ಎಂದು ಕೆಲವರು ಹೇಳಿದರು. ಇವೆಲ್ಲವನ್ನೂ ನಾವು ಒಪ್ಪಬೇಕಾಗುತ್ತದೆ. ಮತ್ತೆ ಕೆಲವರು ಸದಸ್ಯರು ಈ ಸಹಕಾರ ಸಂಸ್ಥೆಗಳನ್ನು ವಜಾ ಮಾಡಬೇಕು ಎನ್ನುವ ಆಶಯನ್ನು ಸಹ ವ್ಯಕ್ತಪಡಿಸಿದರು. ಆದರೆ ಇದು ಸರಿಯಾದ ಸಲಹೆ ಅಲ್ಲ ಎಂಬುದಾಗಿ ನಾನು ಭಾವಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಹಾಗೆ ಮಾಡಿದರೆ ನಿಮಗೆ ಪೋರ್ಟ್‌ಫೋಲಿಯೋ ಇಲ್ಲದಂತಾಗುತ್ತದೆ.

ಶ್ರೀ ಎ. ಶಂಕರ ಆಳ್ವ.—ನಾನು ಹೋಗುತ್ತೇನೆ, ಆದರೆ ತಮ್ಮಲ್ಲಿ ಒಂದು ಅರಿಕೆಮಾಡಿಕೊಳ್ಳುವುದು ಏನೆಂದರೆ, ಆಡಳಿತ ಪಕ್ಷದ ಮತಿಯುಳ್ಳಿದ್ದ ಕೆಲವು ಸಂಸ್ಥೆಗಳಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ, ಅದಕ್ಕೆ ವಿರುದ್ಧವಾಗಿದ್ದ ಸಂಸ್ಥೆಗಳನ್ನು ತೆಗೆದುಹಾಕಿದ್ದಾರೆ ಎನ್ನುವ ಆರೋಪಗಳನ್ನು ಏನು ಹೇಳಿದ್ದೀರಿ ಅದಕ್ಕೆ ನಾನು ಪ್ರತ್ಯೇಕವಾದ ಜವಾಬು ಕೊಡುತ್ತೇನೆ. ಅದಕ್ಕೆ ಮುನ್ನ ಸಹಕಾರ ಸಂಸ್ಥೆಗಳು ಸಾಧಿಸಿದ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳ ಉತ್ತರ ಕೊಡುವುದಕ್ಕೆ 4-20ಕ್ಕೆ ಸರಿಯಾಗಿ ನಿಂತರು. ಈಗ ಅನ್ನಿಸುತ್ತದೆ ಏನಾಯಿತು ಎಂದು.

ಉಪಾಧ್ಯಕ್ಷರು.—4-25ಕ್ಕೆ ಮಾನ್ಯ ಮಂತ್ರಿಗಳು ನಿಂತಿದ್ದು.

ಶ್ರೀ ಎ. ಶಂಕರ್‌ಆಳ್ವ.—ಸಹಕಾರ ಸಂಘದಲ್ಲಿ 4-20 ಬರುವುದಿಲ್ಲ, ಹೆಚ್ಚಾಗಿ 406, 408ನೇ ರೂಲ್ಸ್ ಬರುತ್ತದೆ.

ಈಗ 1970-71ನೇ ಇಸವಿಯಲ್ಲಿ ಅನ್ಯುಯಲ್ ಪ್ಲಾನ್ ಔಟ್‌ಲೇಸ್ 295-50ಲಕ್ಷ ರೂಪಾಯಿ,ಆಕ್ಚುಯಲ್ಸ್ 280.19 ಲಕ್ಷ ರೂಪಾಯಿ. 1971-72ರಲ್ಲಿ ಔಟ್‌ಲೇಸ್ 279.00 ಲಕ್ಷ ರೂಪಾಯಿ, ಆಕ್ಚುಯಲ್ಸ್233.617ಲಕ್ಷ ರೂಪಾಯಿ, ಆಕ್ಚುಯಲ್ಸ್ 1972-73ಕ್ಕೆ 317ಲಕ್ಷ ರೂಪಾಯಿ, 1973-74ಕ್ಕೆ 437 ಲಕ್ಷ ರೂಪಾಯಿ, ಹೀಗೆ ಜಾಸ್ತಿಯಾಗುತ್ತಾ ಬಂದಿದೆ. ಆದ್ದರಿಂದ ಪ್ರತಿವರ್ಷ ಬಡ್ಜೆಟ್ಟಿನಲ್ಲಿ ಜಾಸ್ತಿ ಹಣ ಇಟ್ಟಿದ್ದೇವೆ. 1971-72ರಲ್ಲಿ 19,407 ಕೋ-ಆಪರೇಟಿವ್ ಸೊಸೈಟಿಗಳು ಪ್ರಾರಂಭವಾಗಿ, ಮೆಂಬರ್‌ಷಿಪ್ ವರ್ಷದ ಕೊನೆಯಲ್ಲಿ 43-45ಲಕ್ಷ ಇತ್ತು. The movement has so far covered 99 % of the villages and 49 % of the Rural Population. By the end of IV Five-year Plan it is proposed to cover 55 % of the rural populotion or 61% of the Agricultural families by the Agricultural Co-operatives. ಅಗ್ರಿಕಲ್ಚರಲ್ ಫ್ಯಾಮಿಲೀಸ್‌ಗೆ ಹೆಚ್ಚಾಗಿ ಮೆಂಬರ್‌ಷಿಪ್ ಸಿಕ್ಕಬೇಕು ಎಂದು ಹೇಳಿ ಅವರ 22ಲಕ್ಷ ಮೆಂಬರ್‌ಷಿಪ್ ಇರಬೇಕು ಎಂದು ಪ್ರಪೋಸ್ ಮಾಡಲಾಗಿದೆ. ಈಗ ಕಮರ್ಷಿಯಲ್ ಬ್ಯಾಂಕುಗಳಿಗೆ ಸೇರಿದ 8580 ಪ್ರೈಮರಿ ಅಗ್ರಿಕಲ್ಚರಲ್ ಕ್ರೆಡಿಟ್ ಕೋ-ಆಪರೇಟೀವ್ ಸೊಸೈಟಿಗಳು ಇವೆ. ಅದರಲ್ಲಿ 190 ವೀಕ್ ಮತ್ತು ಡಾರ್ಮೆಂಟ್ ಸೊಸೈಟಿಗಳು ಇವೆ, ಇವುಗಳನ್ನು ಲಿಕ್ವಿಡೇಟ್ ಮಾಡಬೇಕು, ಇಲ್ಲದಿದ್ದರೆ ಅಮಾಲ್ಗಮೇಟ್ ಮಾಡಬೇಕಾಗಿದೆ. 8390 ಸೊಸೈಟಿಗಳಲ್ಲಿ 2557 ವೈಯಬಲ್ ಮತ್ತು 4595 ಪೊಟೆನ್‌ಷಿಯಲ್ಲಿ ವೈಯಬಲ್. ಉಳಿದ 1238 ಸೊಸೈಟಿಗಳು ವೀಕ್ ಮತ್ತು ಡಾರ್ಮೆಂಟ್ ಸೊಸೈಟಿಗಳು, ಅವನ್ನು ಲಿಕ್ವಿಡೇಟ್ ಮಾಡುತ್ತೇವೆ.

ಷಾರ್ಟ‌ಟರ್ಮ ಬಗ್ಗೆ ವಿವರ ಬೇಕಾದರೆ, 3,249-88ಲಕ್ಷ ರೂಪಾಯಿಗಳನ್ನು 1971-72ನೇ ಇಸವಿಯಲ್ಲಿ ಹಂಚಲಾಗಿದೆ. ಹಿಂದಿನ ವರ್ಷ 3,150-75ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು. 1971-72ರಲ್ಲಿ ಕಮರ್ಷಿಯಲ್ ಬ್ಯಾಂಕ್‌ನಿಂದ 645 ಸೊಸೈಟಿಗಳ ಮೂಲಕ ಲೋನ್ ಅಡ್ವಾನ್ಸ್ ಮಾಡಿದ್ದು 178-16ಲಕ್ಷ ರೂಪಾಯಿಗಳು. ಹಿಂದಿನ ವರ್ಷ 562 ಸೊಸೈಟಿಗಳ ಮುಖಾಂತರ 110.32 ಲಕ್ಷ ರೂಪಾಯಿಗಳನ್ನು ಲೋನ್ ಅಡ್ವಾನ್ಸ್ ಮಾಡಲಾಗಿತ್ತು.

1971-72ರಲ್ಲಿ 444-66ಲಕ್ಷ ರೂಪಾಯಿಗಳನ್ನು ಮೀಡಿಯಂ ಲೋನ್ ಆಗಿ ಕೊಡಲಾಗಿದೆ. ಅದರ ಹಿಂದಿನ ವರ್ಷ 345.45ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು. 1971-72ರಲ್ಲಿ ಕಮರ್ಷಿಯಲ್ ಬ್ಯಾಂಕ್ಸ್ ಅಡ್ವಾನ್ಸ್ ಮಾಡಿದ್ದು 7-68ಲಕ್ಷ ರೂಪಾಯಿಗಳು. ಅದರ ಹಿಂದಿನ ವರ್ಷ 2-04ಲಕ್ಷ ರೂಪಾಯಿಗಳು.

ಪಿ.ಎಲ್.ಡಿ. ಬ್ಯಾಂಕಿನವರು ಲಾಂಗ್ ಟರ್ಮ ಲೋನ್ ಕೊಟ್ಟಿದ್ದಾರೆ. 1972ನೇ ಇಸವಿಯಲ್ಲಿ ಗುರುತರವಾದ ಇನ್ನು ಎರಡು ಯೋಜನೆಗಳನ್ನು ಸಹ ನಾವು ಕೈಗೊಂಡಿದ್ದೇವೆ. ಒಂದು ಭೂ ಅಭಿವೃದ್ಧಿ ಬ್ಯಾಂಕ್, ವಿಷಯದಲ್ಲಿ. ಕಳೆದ ಸೆಪ್ಟೆಂಬರ್‌ನಲ್ಲಿ ಇದು ಜಾರಿಗೆ ಬಂದಿದೆ. ಈಗ ತಾನೆ ಇದು ಕಾರ್ಯಗತವಾಗಬೇಕಾಗಿದೆ. ಲ್ಯಾಂಡ್ ಡೆವಲಪ್‌ಮೆಂಟ್‌ಗೆ 53ಕೋಟಿ ರೂಪಾಯಿಗಳು. ಇದು ಮೂರು ವರ್ಷದಲ್ಲಿ ಕಾರ್ಯಗತವಾಗಬೇಕಾಗಿದೆ.ತಮಗೆ ತಿಳಿದ ಹಾಗೆ ಲ್ಯಾಂಡ್ ಡೆವಲಪ್‌ಮೆಂಟ್ ಮತ್ತು ಮೈನರ್ ಇರಿಗೇಷನ್ ಪಂಪ್‌ಸೆಟ್ಸ್, ಇರಿಗೇಷನ್‌ವೆಲ್ಸ್, ಲೋನ್ ರಿಫೆನಾನ್ಸ್ ಇದರಲ್ಲಿ ಅಡಕವಾಗಿ ಉಂಟು. ಅದಕ್ಕೆ 53ಕೋಟಿ ರೂಪಾಯಿಗಳು, ಉಂಟು. ಅದರಲ್ಲಿ 30 ಕೋಟಿ ರೂಪಾಯಿಗಳನ್ನು ವರ್ಲ್ಡ್ ಬ್ಯಾಂಕಿನಿಂದ ಸಾಲ ಕೊಡುತ್ತಿದ್ದಾರೆ. ಇನ್ನೊಂದು ರೆಗ್ಯುಲೇಟೆಡ್ ಮಾರ್ಕೆಟ್ಸ್, ಸಾಲ ಪಡೆದುಕೊಳ್ಳುವುದಕ್ಕೆ ಮತ್ತು ಅದರಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಮಾರ್ಕೆಟ್ ವ್ಯವಸ್ಥೆ ಮಾಡಿದ್ದೇವೆ. ಕಟ್ಟಡವನ್ನು ಕಟ್ಟುವುದಕ್ಕೆ, ಮತ್ತು ಸ್ಯಾನಿಟರಿ ಅರೆಂಜಮೆಂಟ್ಸ್, ಇದಕ್ಕೆಲ್ಲಾ 43ಕೋಟಿ ರೂಪಾಯಿಗಳು. ಇದರಲ್ಲಿ 97 ಮೇಜರ್ ಮಾರ್ಕೆಟ್ ಮತ್ತು 103 ಸಬ್‌ಮಾರ್ಕೆಟ್ಸ್ ಸೇರಿವೆ. ಇದನ್ನು 3—4 ಫೇಜ್‌ನಲ್ಲಿ ಕಾರ್ಯಗತ ಗೊಳಿಸುತ್ತೇವೆ. ಮೊದಲನೆಯ ಫೇಜ್‌ನಲ್ಲಿ 10ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಈ ಕೆಲಸ ಮಾಡಲಿಕ್ಕೆ ನಾವು ಪ್ರಾರಂಭ ಮಾಡಿದ್ದೇವೆ. ಅದನ್ನೂ ಸಹ ನಾವು ಕಾರ್ಯಗತಗೊಳಿಸುತ್ತಿದ್ದೇವೆ. ಇನ್ನು ಮಾರ್ಕೆಟ್ ವಿಷಯದಲ್ಲಿ ಹೇಳುವುದಾದರೆ ಮೊದಲು ಬಾಂಬೆ ಕರ್ನಾಟಕದಲ್ಲಿ ಒಂದು ಡಿವಿಜನಲ್ ಮಾರ್ಕೆಟ್ ಕಮಿಟಿ ಆಯಿತು. ಇದನ್ನು ಬಾಂಬೆ ಆಕ್ಟ್ ಪ್ರಕಾರ ಮಾಡಿದ್ದಾರೆ. ಅದರಲ್ಲಿ ರೆಗ್ಯುಲೇಟ್ ಮಾರ್ಕೆಟ್ ವಿಷಯದಲ್ಲಿ ಬಹಳ ಮಾಹಿತಿ ಕೊಟ್ಟಿದ್ದಾರೆ. ಅದನ್ನು ಸೇರಿ ಇನ್ನೊಂದು ಮೂರು ಡಿವಿಷನ್‌ಗಳನ್ನು, ಬೆಂಗಳೂರು, ಗುಲ್ಬರ್ಗ ಮತ್ತು ಮೈಸೂರುಗಳಲ್ಲಿಯೂ ಸಹ ವಿಸ್ತರಿಸುತ್ತಿದ್ದೇವೆ. ಇದು ಸಹ ಕಾರ್ಯಗತವಾಗುತ್ತಾ ಇದೆ. ಅದೂ ಜಾರಿಗೆ ಬಂದಿದೆ. ಈ ವರ್ಷ ಒಂದು ಸ್ಟೇಟ್ ಮಾರ್ಕೆಟ್ ಬೋರ್ಡು ಎಂದು ಒಂದು ಬೋರ್ಡನ್ನು ಕೂಡ ಸ್ಥಾಪನೆ ಮಾಡಿದ್ದೇವೆ.

4-30 P.M.

ಅದರ ಪ್ರಕಾರ ಈ ಮಾರ್ಕೆಟ್‌ಗಳಿಗೆ ಎರ್ರಾ ಸಾಲಕೊಡಲಿಕ್ಕೆ ನಾವು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅನೇಕ ಅನುಕೂಲವಾಗಿರುವ ಸಂಘಕ್ಕೆ ಕೊಡುವ ಅವಶ್ಯಕವಿರುವುದಿಲ್ಲ. ಸ್ವಾತಂತ್ರ್ಯವಾಗಿ ಎಲ್ಲವೂ ಅದಷ್ಟು ಜಾಗ್ರತೆಯಲ್ಲಿ ಕೆಲಸ ಮಾಡುವುದಕ್ಕೆ ಕೊಡುತ್ತಾ ಇದ್ದೇವೆ ಮತ್ತು ಆ ಬಗ್ಗೆ ಅನೇಕ ಸಲಹೆಗಳನ್ನು ಸಹ ಸದಸ್ಯರು ಕೊಟ್ಟಿದ್ದಾರೆ. ಒಂದು ವಿಷಾದ ಏನು ಎಂದರೆ ನಮ್ಮ ಮಿತ್ರರು ವೈಯಕ್ತಿಕವಾಗಿ ಬಹಳ ಅಪಾದನೆ ಮಾಡಿದರು. ಅದರಲ್ಲಿ ನನಗೆ ಬೇಸರವಾಯಿತು. ಹೆಚ್ಚಾಗಿ ಅವರು ಹೇಳಿರುವುದೆಂದರೆ ಅನಾವಶ್ಯಕವಾಗಿ ಕೆಲವರ ಒತ್ತಡಕ್ಕೆ ಆಗಿ ಇಲ್ಲದಿದ್ದರೆ ಮಂತ್ರಿಗಳಾಗಲಿ, ಶ್ರೀ ಕೆ.ಎಚ್. ಪಾಟೀಲರಾಗಲಿ,ಹಾಗೇನೆ ಇತರರಒತ್ತಡಕ್ಕೆ ಆಗಲಿ ಈ ಮಂತ್ರಿ ಕೆಲಸ ಮಾಡಿದ್ದಾರೆ ಮತ್ತು ಇವರಿಗೆ ಇಂತಹದರಲ್ಲಿ ಇಚ್ಛೆಯಿಲ್ಲ ಬೇರೆಯವರ ಒತ್ತಡಕ್ಕೆ ಮಣಿದು ಕೆಲವು ಕೆಲಸ ಮಾಡಿದ್ದಾರೆ ಎಂಬುದಾಗಿ ಸ್ವಲ್ಪ ಅಪಾದನೆಮಾಡಿದ್ದಾರೆ, ಹಾಗೆಯೇ ಅನೇಕ ಮಿತ್ರರು ಒಬ್ಬೊಬ್ಬರು ಒಂದು ರೀತಿ ಹೇಳುತ್ತಾ ಬಂದಿದ್ದಾರೆ. ನಾನು ಒಂದು ಅವರಿಗೆ ತಿಳಿಸುತ್ತೇನೆ. ಯಾವ ಒಂದು ತಕರಾರಿಗಾಗಲಿ ನಾನು ಯಾರ ಒತ್ತಡಕ್ಕೆ ಆಗಲಿ ಒಂದು ತಪ್ಪು ಕೆಲಸಮಾಡಲಿಕ್ಕೆ ಹೋದವನಲ್ಲ. ಪ್ರತಿಯೊಂದು ನಾನು ಖುದ್ದಾಗಿ ಮಾಡಿದ ಕೆಲಸವಾದುದರಿಂದ ಅದರ ಜವಾಬ್ದಾರಿ ನನ್ನದಾಗಿದೆ. ಈ ಸಭೆಯಲ್ಲಾಗಲಿ ಖಾಸಗಿಯಾಗಿ ಆಗಲಿ ಯಾರಾದರೂ ಬಂದು ನಾನು ಒಂದು ಕೆಲಸಮಾಡಿದ್ದೇನೆ. ಅದು ನನ್ನ ಇಚ್ಛೆಯಿಂದಲ್ಲ ಬೇರೆಯವರ ಇಚ್ಛೆಯ ಮಾತು ಕೇಳಿ ಮಾಡಿದ್ದು ಎಂದು ಹೇಳಿದರೆ ಆ ಬಗ್ಗೆ ಯಾವ ತಪ್ಪಿಗೂ ನಾನು ಹೊಣೆಯಾಗಲು ಸಿದ್ಧನಿದ್ದೇನೆ, ಇನ್ನೊಂದು ನಾನು ತಮ್ಮ ಕೂಡ ಅರಿಕೆಮಾಡುವುದು ಏನು ಎಂದರೆ ಆಫೀಸರ್ಸ್ ಐಎಎಸ್ ಅಫೀಸರ್ ಇರಲಿ ಯಾರೆ ಇರಲಿ ಬೇರೆ ಅಫೀಸರ್ ಹಾಕಬೇಡಿ ಎಂದು ಹೇಳುವುದು ಸರಿಯಲ್ಲ. ಇದು ಸಹಜವಾದ ವಾದ ಅಲ್ಲ ಅದರಲ್ಲಿ ಹೆಚ್ಚು ಹೇಳುವ ಅಗತ್ಯತಲ್ಲ. ಅವರವರ ಅಭಿಪ್ರಾಯ. ಆದರೆ ನನಗೆ ಒಂದು ಸಂತೋಷ ಏನು ಎಂದರೆ ಈಗಿನ ರಿಜಿಸ್ಟ್ರಾರ್ ಬಹಳ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದಾರೆಂಬುದು.

ಶ್ರೀ ಎಚ್. ಡಿ. ದೇವೇಗೌಡ.—ನೀವು ಹೇಳಿದ ಹಾಗೆ ಬರೆಯುತ್ತಾರೆಯೆ ?

ಶ್ರೀ ಎ. ಶಂಕರ ಆಳ್ವ.—ಒಂದು ಒತ್ತಡಕ್ಕೆ ಬೀಳುತ್ತೇನೆ, ನನ್ನನ್ನು ಒತ್ತಾಯ ಮಾಡುತ್ತಾರೆ ಅದರಿಂದ ಅವರ ಒತ್ತಾಯಕ್ಕೆ ಮಣಿದು ಕೆಲವು ಕೆಲಸಗಳನ್ನು ಮಾಡುತ್ತೇನೆಂದು ಒಂದು ಆರೋಪ ಮಾಡಿದ್ದಾರೆ. ಒಂದು ಸ್ಪಷ್ಟವಾಗಿ ಹೇಳುತ್ತೇನೆ. ನನ್ನ ಮೇಲೆ ರಿಜಿಸ್ಟ್ರಾರ್‌ಗೆ ಆಗಲಿ, ಬೇರೆ ಯಾವ ಆಫೀಸರ್‌ಗೆ ಆಗಲಿ ಏನಾದರೂ ಒತ್ತಾಡ ಹೇರುತ್ತಾ ಇಲ್ಲ. ನ್ಯಾಯವಾಗಿ ಕೆಲಸ ಮಾಡುತ್ತಾ ಬಂದಿದ್ದೇನೆ. ಆ ಬಗ್ಗೆ ಆಗಾಗ್ಗೆ ಅವರಿಗೆ ಸಲಹೆ ಕೊಡುತ್ತಾ ಇದ್ದೇನೆ. ಕೆಲವೊಮ್ಮೆ ಕನ್ಸಲ್ಟ್ ಮಾಡುತ್ತೇನೆ. ಇನ್ನು ಯಾವ ರೀತಿಯಲ್ಲೇ ಆಗಲಿ ಅವರ ಮೇಲೆ ಒತ್ತಡ ತರುವಅಗತ್ಯ ಇರುವುದಿಲ್ಲ. ಒಳ್ಳೆಯ ಅಧಿಕಾರಿಗಳು ಸರಿಯಾಗಿ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಾ ಬಂದಿದ್ದಾರೆ. ಇದನ್ನು ಕಡೆಗಣಿಸಿ ಅವರು ಸರಿಯಾಗಿ ಕೆಲಸಮಾಡುವುದಿಲ್ಲ ಬೇರೆಯವರ ಒತ್ತಡಕ್ಕೆ ಕೆಲಸಮಾಡುತ್ತಿದ್ದಾರೆ ಎಂಬುದು ನಿಜವಾಗಿ ಸರಿಯಲ್ಲ. ಇನ್ನೊಂದು ಅಪಾದನೆ ಮಾನ್ಯ ಮಿತ್ರರು ಮಾಡಿದಂದು ಈ ಮಂತ್ರಿಗೆ ಧೈರ್ಯ ಇಲ್ಲ, ಸ್ವಲ್ಪ ಹೆದರುತ್ತಾರ ಎಂದು ಸ್ವಲ್ಪ ಹೆದರುವುದು ಸರಿ. ಯಾರಾದರೂ ಅನ್ಯಾಯ ಮಾಡಬೇಕೆಂದು ಹೇಳುವಾಗ ಅಂಥ ಅನ್ಯಾಯ ಮಾಡುವುದಕ್ಕೆ ಹೆದರಿಕೆಯಾಗುತ್ತದೆ. ಅಂದರೆ ಹೆದರಿಕೊಂಡು ಕೆಲಸಮಾಡಲಿಲ್ಲ ಆದರೆ ನ್ಯಾಯವಾಗಿ ಮಾಡುವ ಕೆಲಸ ಮಾಡುತ್ತಾ ಬಂದಿದ್ದೇನೆ. ಅದಕ್ಕೆ ನನ್ನ ಕಾನ್ಸಿಯೆನ್ಸ್ ಎಗೇನಸ್ಟ್ ಮಾಡಬೇಕು ಎಂದು ಹೇಳುವಾಗ ನಿಜವಾಗಿ ಹೆದರಿಕೆಯಾಗುತ್ತದೆ. ಅಂಥ ಕೆಲಸಗಳಿಗೆ ಕೈಹಾಕುವುದಕ್ಕೆ ಆಗುವುದಿಲ್ಲ. ಅಂಥ ಕೆಲಸಮಾಡುವುದಿಲ್ಲ. ಇನ್ನೊಂದು ಮಿತ್ರರಿಗೆ ಹೇಳಬೇಕಾದರೆ ಸಾಧಾರಣವಾಗಿ 45 ವರ್ಷದ ಮೊದಲು ನಾನು ವಕಾಲತ್ತು ಮಾಡಬೇಕು ಎಂದು ಆಲೋಚನೆ ಮಾಡುವಾಗ ನನಗೆ ತಪ್ಪು ಅಭಿಪ್ರಾಯ ಇತ್ತು. ವಕಾಲತ್ತು ಎಂದರೆ ಏನೋ ತಪ್ಪು ಕೆಲಸಮಾಡಬೇಕು ಸುಳ್ಳು ಕೆಲಸಮಾಡಬೇಕು ಇಲ್ಲದಿದ್ದಾರೆ ಒಳ್ಳೆಯ ವಕೀಲರಾಗುವುದಿಲ್ಲ ಎಂದು ತಪ್ಪು ಅಭಿಪ್ರಾಯವಿತ್ತು. ಈ ಸಂದರ್ಭದಲ್ಲಿ ನಾನು ಒಂದು ಯೋಗ್ಯ ವಕೀಲರ ಹತ್ತಿರ ಹೋಗಿದ್ದ ಈ ಅಭಿಪ್ರಾಯ ಹೇಳಿದೆ. ಅವರು ಹೇಳಿದರು ಏನು ತೊಂದರೆಯಿಲ್ಲ ಯೋಗ್ಯ ವಕೀಲರಾಗಿ ಕೇಸಮಾಡಬಹುದು, ಆದರೆ you can keep your conscience and go on doing your work ಏನಾದರೂ ತೊಂದರೆ ಬಂದರೆ better be without a lawyer and keep your conscelousenoss. ಅದನ್ನೇ ಮಂತ್ರಿ ಮಂಡಕ್ಕೆ ಸೇರುವಾಗ ಪಾಲಿಸುವ ನಿರ್ಧಾರ ಮಾಡಿದ್ದೇನೆ. ಆ ಅಭಿಪ್ರಾಯ ಇಟ್ಟುಕೊಂಡು

(ಶ್ರೀ ಎ. ಶಂಕರ ಆಳ್ವ)

ಮಂತ್ರಿ ಕೆಲಸ ಮಾಡಬೇಕೆಂದಿದ್ದೇನೆ. ಆದರೆ ಕಾನ್‌ಷಸನೆಸ್ ಬಿಡಬೇಕು ಎನ್ನುವ ಬಗ್ಗೆ ಒತ್ತಡ ಬಂದರೆ ಕಾನ್‌ಷಸ್‌ನೆಸ್ ಇಟ್ಟುಕೊಂಡು ಮಂತ್ರಿಮಂಡಲ ಬಿಡಬೇಕು ಎನ್ನುವ ಅಭಿಪ್ರಾಯ. ಮಾನ್ಯ ಅಧ್ಯಕ್ಷರೇ, ಇದನ್ನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಪ್ರಜ್ಞೆ ತಪ್ಪಿದ ಮಂತ್ರಿಯಲ್ಲವಲ್ಲ!

ಶ್ರೀ ಎ. ಶಂಕರ ಆಳ್ವ.—ಪ್ರಜ್ಞೆ ಉಂಟು ತಮಗೆ ಹೇಳುತ್ತೇನೆ ಮಾನ್ಯ ಮಿತ್ರರು ಹೇಳಿದ್ದಾರೆ ಅನೇಕ ಸಲಹೆಗಳನ್ನು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಒಂದು ಕಂಡು ಬರುತ್ತದೆ ಕೆಲವು ಸೊಸೈಟಿಗಳು ಸರಿಯಾಗಿ ನಡೆಯುವುದಿಲ್ಲ, ಸೊಸೈಟಿಗಳ ವಿಷಯದಲ್ಲಿ ನಿಗದಿ ತೆಗೆದುಕೊಳ್ಳಬೇಕು ಮತ್ತು ಕೆಲವು ಸೊಸೈಟಿಗಳನ್ನು ನಾವು ಬೇರೆ ಕಾರಣಗಳಿಂದ ತೆಗೆದುಕೊಳ್ಳುವುದಿಲ್ಲ. ಕೆಲವೇ ಸೊಸೈಟಿಗಳನ್ನು ಹತೋಟಿಯಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ ಎಂದು ಹೇಳುತ್ತಿದ್ದಾರೆ. ತಮಗೆ ಆ ವಿಷಯದ ನಾನು ಅರಿಕೆ ಮಾಡಿಕೊಳ್ಳುವುದು ಏನು ಎಂದರೆ ಒಂದೇ ಸಾರಿ ಎಲ್ಲಾ ಸೊಸೈಟಿಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಕೆಲವು ಸಂದರ್ಭದಲ್ಲಿ ಏನಾದರೂ ಉಗ್ರ ಕ್ರಮ ತೆಗೆದುಕೊಳ್ಳಬೇಕಾದರೆ ಕಾನೂನು ಪ್ರಕಾರ ಕೆಲವು ಸಂದರ್ಭದಲ್ಲಿ ನೋಟೀಸ್ ಕೊಡಬೇಕಾಗುತ್ತದೆ, ಕೆಲವು ಸಂದರ್ಭದಲ್ಲಿ ಅವರ ಉದಾಹರಣೆ ಕೇಳಬೇಕಾಗುತ್ತದೆ, ಕೆಲವು ಸಂದರ್ಭದಲ್ಲಿ ತನಿಖೆ ಮಾಡಬೇಕಾಗುತ್ತದೆ ಇದು ಆದ ನಂತರ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಕೆಲವು ಸಂದರ್ಭದಲ್ಲಿ ಫಿರ್ಯಾದೆ ಮಾಡುತ್ತೇವೆ, ಕೆಲವು ಸಂದರ್ಭದಲ್ಲಿ ಸರ್‌ಚಾರ್ಜ್ ಮಾಡಬೇಕು ಮತ್ತು ಲಿಕ್ವಿಡೇಷನ್ ಕೆಲವು ಮಾಡಬೇಕಾಗುತ್ತದೆ ಮತ್ತು ಕೆಲವು ವಿಷಯದಲ್ಲಿ ನಾನು ಮಾನ್ಯ ವಿರೋಧಪಕ್ಷದ ನಾಯಕರು ಕೆಲವು ಸೊಸೈಟಿಗಳ ವಿಷಯ ಪ್ರಸ್ತಾಪಮಾಡಿದರು ಪ್ರಥಮವಾಗಿ ನನ್ನ ಮಿತ್ರರಾದ ಪಾಟೀಲರ ಸಂಬಂಧಪಟ್ಟ ಸೊಸೈಟಿಗಳು ಉಂಟು ಅವರಲ್ಲಿ ಕೆಲವು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಸ್ಪಷ್ಟವಾಗಿ ಒಂದೊಂದು ಸೊಸೈಟಿಗಳನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಒಂದು ಕೃಷ್ಣ ಡೈರಿ ಎಂದು ಕಾಣುತ್ತದೆ. ಕೃಷ್ಣ ಡೈರಿ ವಿಷಯದಲ್ಲಿ ನ್ಯಾಷನಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನವರು ಅದನ್ನು ಅಸ್ಯೂಮ್ ಮಾಡಿಕೊಂಡು ಎನ್ ಸಿ ಡಿ ಸಿ ಸಹಿತ ಹಣಕೊಟ್ಟದ್ದು 1.81 ಕೊಟ್ಟಿಲ್ಲ. ಗೌರ್ನ್‌ಮೆಂಟ್ ಷೇರ್ 1.63 ಲೋನ್ ಫ್ರಮ್ ಎನ್ ಸಿ ಡಿ ಸಿ ಗೌರ್ನಮೆಂಟ್ 7-30 ಲ್ಯಾಕ್ಸ್ ಒಟ್ಟಿಗೆ 9-4 ಲಕ್ಷ ಗೌರ್ನಮೆಂಟ್ ಅಪ್ರೂವ್ ಮಾಡಿ 8.0 ಅಪ್ರೂವ್ ಆಗಿ ಅವರು ಹಣ ರಿಲೀಸ್ ಮಾಡಿದ್ದಾರೆ. ಲೋನ್ 6-65, ಷೇರ್ 0-85 ಈಗ ರಿಲೀಸ್ ಮಾಡಿದ್ದಾರೆ ಡೈರಿ ಪ್ಲ್ಯಾಂಟ್ ಮೆಷನರಿ ತೆಗೆದುಕೊಂಡು ಅದರ ಅಮೌಂಟ್ 4-80 ಲಕ್ಷ ಪ್ಲ್ಯಾಂಟ್ ಮೆಷನರಿ ಅವನೆಲ್ಲಾ ಸರಿಯಾದ ಸ್ಥಿತಿಯಲ್ಲಿ ಇತ್ತು ಎಂದು ಅದನ್ನು ಸರ್ಟಿಫೈ ಮಾಡಿದ್ದಾರೆ. ಸೂಪರಿಂಡೆಂಟ್ ಆಫ್ ಡೈರಿ ಧಾರ್‌ವಾರ್ ಅವರು ತಾಂತ್ರಿಕ ತಜ್ಞರು ಅವರಿಗೆ ಡೈರಿಯಲ್ಲಿ ಹೆಚ್ಚು ಅನುಭವ ಉಂಟು, 10 ವರ್ಷಗಳವರೆಗೆ ಕೆಲಸ ಮಾಡಲಿಕ್ಕೆ ತೊಂದರೆ ಇಲ್ಲ ಎಂದು ಹೇಳಿದ್ದಾರೆ. ಲಾರ್ಸನ್ ಟೂಬ್ರೋ ಅವರ ನ್ಯೂ ಪ್ಲ್ಯಾಂಟ್ ಮತ್ತು ಮೆಷನರಿ ಕೊಡುತ್ತಿದ್ದರು. ಇದರಲ್ಲಿ ಯಾವುದು ಒಂದು ಸರ್ಕಾರ ಔಟ್ ಆಫ್ ವೇ ಯಾರೂ ಹೋಗಿಲ್ಲ, ಹೇಗೆ ಕ್ರಮ ಇದೆಯೋ ಆ ಪ್ರಕಾರ ಅವರು ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಖಾಸಗಿ ಡೈರಿ ಪರ್ಚೇಸ್ ಮಾಡುವ ಔಚಿತ್ಯ ಏನು ಇತ್ತು! ಪಾಪರ್ಟಿ ತೆಗೆದುಕೊಂಡರು, ತೆಗೆದುಕೊಳ್ಳುವುದಕ್ಕೆ ಏನು ಕಾರಣ?

ಶ್ರೀ ಎ. ಶಂಕರ ಆಳ್ವ.—ಮುಂದುವರಿಸಿಕೊಂಡು ಹೋಗುವುದಕ್ಕೆ ಆಗಲಿಲ್ಲ ಕೋ-ಆಪರೇಟೀವ್ ತೆಗೆದುಕೊಂಡರು. ಖಾಸಗಿ ಸಂಸ್ಥೆಯಲ್ಲಿ ಇತ್ತು.

ಶ್ರೀ ಎಚ್. ಡಿ. ದೇವೇಗೌಡ.—ಯಾರದು ಕೃಷ್ಣ ಡೈರಿ? ಕೋ ಆಪರೇಟೀವ್ ಫೋಲ್ಡ್‌ಗೆ ಯಾವಾಗ ಬಂತು? ಕೊಂಡುಕೊಳ್ಳುವ ಅವಶ್ಯಕತೆ ಏನು ಇತ್ತು!

ನೀವು ಈ ಸಭೆಯಲ್ಲಿ ತಪ್ಪು ಉತ್ತರ ಹೇಳಿ ತಪ್ಪಿಸಿಕೊಂಡು ಹೋಗುವುದಕ್ಕೆ ನಾನು ಬಿಡುವುದಿಲ್ಲ. ನನ್ನ ಹತ್ತಿರ ಎಲ್ಲಾ ರಿಕಾರ್ಡ್ ಇದೆ. ಆದುದರಿಂದ ತಪ್ಪು ಉತ್ತರ ಹೇಳಿದರೆ ಅದಕ್ಕೆ ಅವಕಾಶ ಕೊಡುವುದಿಲ್ಲ. ಆ ರೀತಿ ಮಾಡಿದರೆ ಈ ಜಾಗದಿಂದ ನಾನು ಬಿಟ್ಟು ಹೋಗಬೇಕು ಇಲ್ಲವೇ ನೀವು ಈ ಜಾಗದಿಂದ ಹೋಗಬೇಕು ಎನ್ನುವ ಶರತ್ತಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಕೃಷ್ಣ ಡೈರಿ ಮೊದಲು ಯಾರದ್ದು, ಯಾವಾಗ ಕೋಆಪರೇಟೀವ್ ಫೋಲ್ಡ್‌ಗೆ ಬಂತು ಎನ್ನುವುದನ್ನು ಹೇಳಬೇಕು.

ಶ್ರೀ ಎ. ಶಂಕರ ಆಳ್ವ.—ನಾನು ಹೇಳಿದ್ದುದರಲ್ಲಿ ತಪ್ಪೇನೂ ಇಲ್ಲ.

SRI H. D. DEVE GOWDA.—I have made certain specific charges against this particular institution. In case the Hon. Minister wants to give reply let him have all documentary evidences before him.

ಶ್ರೀ ಎ. ಶಂಕರ ಆಳ್ವ.—ಇನ್ನು ಹುಲಕೋಟಿ ಟೆಕ್ಸ್‌ಟೈಲ್ ಮಿಲ್ ಬಗ್ಗೆ ಹೇಳುತ್ತೇನೆ.

SRI C. M. ARUMUGHAM.—Sir, we have made certain allegations. When he begins to reply about Krishna Dairy he is not replying to those specific points. We have been persistingly asking him who was the Chairman; who were the Members. I request you kindly to direct the Hon. Minister to reply to the points that have been raised and not deviate or try to withhold some information which we want. If the Minister for co-operation wants our co-operation he must speak on the relevant points. We are not here to listen to any stories.

SRI A. SHANKAR ALVA.—Sir, this is not the way I should be asked to reply. I will get the information and furnish it.

SRI K. H. PATIL.—I want to know whether this society has been assisted in any manner after you took charge as Minister for Co-operation or after I was elected ?

SRI C. M. ARUMUGHAM.—Sir, the Hon. Minister Mr. Patil cannot inspire the Minister for Co-operation that he should answer in a particular way.

SRI H. D. DEVE GOWDA.—Sir, I have charged that this Krishna Dairy was brought into the co-operative fold during the period of Governor's rule. This present Milk Co-operative society purchased this dairy for Rs 4.78 lakhs. I want to know who valued it; and who certified the assets and liabilities of that dairy ?

SRI A. SHANKAR ALVA.—It is not actually purchased. What happened is that a society was formed with a share capital of Rs. 0.81 lakhs; Government contribution was Rs. 1.63 lakhs and NCDC Rs. 7.30 lakhs. The condition was that if they collected half the share capital then the Government and NCDC will release half of their shares each. When they collected half the share the NCDC gave Rs. 3.65 lakhs and Government contributed Rs. 0.815 lakhs. From this they purchased the machines of that private dairy.

SRI H. D. DEVE GOWDA.—It was not a private dairy. The machinery of the private dairy was purchased by this co-operative institution. Am I correct ?

SRI A. SHANKAR ALVA.—Yes there is a technical man and he has gone through it; he has valued it.

SRI KAGODU THIMMAPPA.—To whom this private dairy *i.e.* Krishna Dairy belonged to ?

SRI H. D. DEVEGOWDA.—Sir, if the Hon. Minister has not got information let him collect and furnish it.

SRI A. SHANKAR ALVA.—I will give you the information. Sir, I can understand if the Government has favoured anybody. But this is a society and it has a right to do anything it wants !

Sri H. D. DEVE GOWDA.—After you took charge as Minister you might not have given anything. ಧರ್ಮವೀರರ ಆಡಳಿತವಿದ್ದಾಗ ಅನೇಕ ಕಡೆ ಕೊಟ್ಟಿದ್ದಾರೆ..

ಶ್ರೀ ಎ. ಶಂಕರ ಆಳ್ವ.—ಆಗಿರಬಹುದು ನನಗೆ ಗೊತ್ತಿಲ್ಲ. We are not responsible for that when the society has purchased it.

Sri H. D. DEVE GOWDA.—Who valued it? What are all the materials purchased?

Sri K. H. PATIL.—Sir, the hon. Members have alleged against me. I am prepared to reply to their allegations. But why should they not allow the concerned Minister to continue his speech. If they want more facts about this I am prepared to give them. I will give the facts not only pertaining to this Ministry but also to the previous Ministry.

ಶ್ರೀ ಎಚ್. ಡಿ. ದೇವೇಗೌಡ.—ನಾನು ವಿರೋಧಪಕ್ಷದ ನಾಯಕನಾಗಿ ಕುಳಿತಿರುವಾಗ 10 ವರ್ಷದಲ್ಲಿ ಯಾರೇ ತಪ್ಪು ಮಾಡಿದ್ದರೂ ಎಲ್ಲದರ ವಿಚಾರಣೆಯೂ ಆಗಬೇಕು ಎಂದು ಕೇಳುವವನು ನಾನು. ಶ್ರೀ ಕೆ. ಎಚ್. ಪಾಟೀಲರದು ತಪ್ಪಾಗಿದ್ದರೆ, ಶ್ರೀ ನಾಡಗೌಡರದು ತಪ್ಪಾಗಿದ್ದರೆ, ಅವರ ಹಿಂದಿದವರದು ತಪ್ಪಾಗಿದ್ದರೆ ವಿಚಾರಣೆ ಆಗಲಿ. I will tell you, I am the last person to spare anybody. I want Mr. Patil to come out with facts. What do I care?

Sri K. H. PATIL.—You are not caring far the reply too.

Sri H. D. DEVE GOWDA.—So far as this institution is concerned I don't want any evasive answers.

ಶ್ರೀ ಕೋಣಂದೂರು ಲಿಂಗಪ್ಪ.—ಗಗನ ಮುಟ್ಟುವಷ್ಟು ಅವರು ಕೂಗುತ್ತಿದ್ದಾರೆ. ಅವರಿಗೂ ತಾವು ಸೂಚನೆ ಕೊಡಬೇಕು.

Mr. DEPUTY SPEAKER.—I know my duties. The hon. member need not try to impress further. I told the Hon'ble Minister for Agriculture that he may resume his seat—I mentioned his name also. If the hon. members go on obstructing every minute can it be justified? If nobody wants a reply from the Hon'ble Minister, I will simply put the Demand to vote.

ಶ್ರೀ ಪಾಟೀಲ್ ನಾಗರಾಜ್.—ಬಹಳ ಜನ ಮಂತ್ರಿಗಳು ಸೊಸೈಟಿಗಳಲ್ಲಿದ್ದವರು; ಶ್ರೀ ಶಂಕರ ಆಳ್ವ ಅವರು ಇದ್ದರೋ ಇಲ್ಲವೋ ಗೊತ್ತಿಲ್ಲ. ನಾನು ಮಾನ್ಯ ಪಾಟೀಲರ ಬಗ್ಗೆ ಗೌರವವನ್ನು ಇಟ್ಟುಕೊಂಡಿದ್ದೇನೆ. ಹಳ್ಳಿ ಕಡೆ ಒಂದು ಮಾತು ಹೇಳುವರು 'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿದ' ಎನ್ನುವಂತೆ ಇವರು ಏಕೆ ಇಷ್ಟು ಸುಮ್ಮನೆ ಮಾತನಾಡಬೇಕು.

Mr. DEPUTY SPEAKER.—The hon. member having 'gowrava' for somebody is his private affair. I am not going to allow any interruption. If there is interpution, I will straightaway put the Demand to vote.

Sri C. M. ARUMUGHAM.—Sir, I rise to a Point of Order.

Mr. DEPUTY SPEAKER.—The Point of Order must be candid and precise.

Sri C. M. ARUMUGHAM.—When the concerned Minister is answering on certain charges made by the Opposition and particularly the Leader of the Opposition about the working of certain co-operative

institutions, how can the Hon'ble Minister for Agriculture Sri K. H. Patil, stand up and reply to the charges? The Minister concerned with the Department alone should reply—we cannot ask the Directors or Chairmen of the Co-operative institutions to come and reply. Can the Directors or Chairmen of the co-operative institutions on whom allegations are made be permitted to come here and reply? Is a person who was connected with several institutions, just because he is now a Member and Minister, entitled to reply on behalf of those intitutions? These are the two points on which I request a Ruling.

5-00 P.M.

Sri S. M. SHEERNALY CHANDRASEKHAR.—Is it a point of order?

Mr. DEPUTY SPEAKER.—The Hon. member Sri Arumugam has raised a point of order with great vehemence. Whenever I am pressed for time and seek little co-operation, I require real spirit of co-operation.

The point which Sri Arumugam has raised is whether every Chairman can come to the House and defend himself. If he is present in the House in the capacity of a member or in the capacity of Minister, he is perfectly justified in sitting in the house and defending himself. Once a member or a Minister, that identity cannot be separated. The second point raised is: whether the hon. Minister Sri K. H. Patil can reply to the points raised by other hon. member in respect of Cooperation Department. I can say yes. Some Hon. Member directly mentioned the name of Sri K. H. Patil and even mentioned his constituency. In that case, he is perfectly justified in refusing the charges and he will not be justified unless he has repudiated them with all the vigour and strength.

Thirdly, Sri Arumugam enquire whether Sri K. H. Patil can be given an opportunity to defend himself. I may inform the hon. member that when he is a Minister, he is always a Minister—all the 24 hours. When he is a Minister having good health and physically present, I will give him an opportunity and he will be perfectly justified in refuting the allegations.

Hon. Minister for Co-operation may now continue his speech.

ಶ್ರೀ ಎ. ಶಂಕರ ಆಳ್ವ.—ಕೋ ಆಪರೇಷನ್ ವಿಚಾರದಲ್ಲಿ ಏನೇನು ವಿರೋಧ ಪಕ್ಷದ ಸದಸ್ಯರು ಆಪಾದನೆಗಳನ್ನು ಮಾಡಿದ್ದಾರೋ ಅದು ಪ್ರಧಾನವಾಗಿ ನನ್ನ ಇಲಾಖೆಗೆ ಸಂಬಂಧಪಟ್ಟದ್ದಲ್ಲ. ಈ ಸೊಸೈಟಿಯಲ್ಲಿ ಇದ್ದ ಷೇರು ಬಂಡವಾಳ 8.1 ಲಕ್ಷ ರೂಪಾಯಿ ಇದರಲ್ಲಿ ಸರಕಾರದ ಷೇರು 1.34 ಲಕ್ಷ ರೂಪಾಯಿ. ಇದರಲ್ಲಿ ಎನ್ ಸಿ ಡಿ ಸಿ ಯಿಂದ ಸಾಲ 7.30 ಲಕ್ಷ ರೂಪಾಯಿ, ಇದರಲ್ಲಿ ಒಟ್ಟು 9.74 ಲಕ್ಷ ರೂಪಾಯಿ ಅವರು ವಸೂಲು ಮಾಡಿದ್ದಾರೆ. ಇಷ್ಟಾದರೂ ಅವರು ಷೇರು ಕೊಡಲಿಲ್ಲ. ಇದರಲ್ಲಿ ಸರ್ಕಾರದ್ದು ಅರ್ಧ ಷೇರು ಮತ್ತು ಎನ್ ಸಿ ಡಿ ಸಿ ಯವರದ್ದು ಅರ್ಧ ಷೇರು ಎಂದು ವಸೂಲು ಮಾಡಬೇಕೆಂದು ಷರತ್ತು ಇದೆ. ಷರತ್ತಿಗನುಗುಣವಾಗಿ ಅರ್ಧದಷ್ಟು ಹಣ ಅವರು ವಸೂಲು ಮಾಡಿದರು, ಇದರಲ್ಲಿ ಸರಕಾರ ಒಟ್ಟು 8.15 ಲಕ್ಷ ರೂಪಾಯಿ, ಮತ್ತು ಎನ್ ಸಿ ಡಿ ಸಿ ಯಿಂದ 3.50 ಲಕ್ಷ ರೂಪಾಯಿ ಮತ್ತು 4.65 ಲಕ್ಷ ರೂಪಾಯಿ ಉಳಿಕೆ ಇದ್ದ ಹಣ

(ಶ್ರೀ ಎ. ಶಂಕರ ಆಳ್ವ)

ಪನ್ನು ಸೇರಿಸಿಕೊಂಡು ಎಂದರೆ ಸುಮಾರು 4.80 ಲಕ್ಷ ರೂಪಾಯಿ ಸೊಸೈಟಿ ಮೂಲಕ ಪಡೆದು ಕೊಂಡು ಮೆಷಿನರಿ ಕೊಂಡಿದ್ದಾರೆ, ಇದರಲ್ಲಿ ಯಾವ ದುರುಪಯೋಗವೂ ಆಗಿಲ್ಲ, ಇದರಲ್ಲಿ ಅವರ ಟೆಕ್ನಿಕಲ್ ಎಕ್ಸ್‌ಪರ್ಟ್ ಅಡ್ವೈಸನು ತೆಗೆದುಕೊಂಡು, ಅವರಿಂದ ತನಿಖೆ ಮಾಡಿಕೊಂಡು, ಆ ನಂತರ ಇದರ ಮೆಷಿನು ಪಡೆದುಕೊಂಡಿದ್ದಾರೆ, ಇದರಲ್ಲಿ ಬೇರೇನೂ ಇಲ್ಲ, ಇದರಲ್ಲಿ ಯಾವ ದುರುಪ ಯೋಗವೂ ಕಂಡುಬರುವುದಿಲ್ಲ.

ಇನ್ನೊಂದು ಹುಲಕೋಟಿ ಕ್ಯಾಟಲ್ ಫೀಡ್ ಪ್ರೊಸೆಸಿಂಗ್ ಸೊಸೈಟಿ ಬಗ್ಗೆ ಹೇಳಿದರು, ಇದರ ವಿವರಗಳು ಹೀಗಿವೆ :

Hulkote Cattle Feed Processing Society. It was stated that substantial assistance had been given by the Government and by different agencies, The assistance given to the Hulkote Cattle Feed Processing Society are as under.—

	Rs.
Government Share capital	3 lakhs
Marginal Share Capital	4.87 lakhs
Mysore State Financial Corpn,	5 lakhs
Plus	2 lakhs

Out of the above amount the outstanding amount

	Rs.
as on 31-12-72 :	4.50 lakhs
	1.81 lakhs
	6.31 lakhs

An amount of Rs, 4.90 lakhs has been availed of as clean cash credit against the amount of Rs, 5 lakhs sanctioned.

ಇನ್ನು ಗದಗ್ ಕಾಟನ್ ಸೇಲ್ಸ್ ಸೊಸೈಟಿ 30 ಲಕ್ಷದ ಬಗ್ಗೆ ಹೇಳಿದರು, ಇದರ ಬಗ್ಗೆ ಎನ್‌ಕ್ವೈರಿ ಮಾಡುತ್ತೇನೆ.

Gadag Cotton Mills : It was stated by the Leader of the Opposition that an amount of Rs, 30 lakhs is overdue. A detailed information in this regard will be ascertained and suitable action taken if necessary. ಇನ್ನು ಧಾರವಾಡದ ಆಯಿಲ್ ಸೀಡ್ಸ್ ಪ್ರೊಸೆಸಿಂಗ್ ಸೊಸೈಟಿ ಬಗ್ಗೆ ಹೇಳಿದರು. ಇನ್ನು ಗದಗ್ ಬಗ್ಗೆ ಕೆ. ಪಿ. ಸಿ. ಸಿ. ಬ್ಯಾಂಕಿನವರು 30 ಲಕ್ಷ ರೂಪಾಯಿ ಕೊಟ್ಟಿದ್ದಾರು. ಇದರಲ್ಲಿ ನಾಲ್ಕು ಲಕ್ಷ ರೂಪಾಯಿ ಆಹಾರಧಾನ್ಯಕ್ಕೆ ಕೊಟ್ಟು ಇನ್ನೂ ಐದು ಲಕ್ಷ ರೂಪಾಯಿ ಬಾಕಿ ಇದೆ ಎಂದು ತಿಳಿಸಿದ್ದಾರೆ. ಇದನ್ನೂ ಪರಿಶೀಲನೆ ಮಾಡಿ ತಿಳಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರತಿಯೊಂದು ವಿಚಾರದಲ್ಲೂ ತನಿಖೆ ಮಾಡಬೇಕೆಂದು ಹೇಳಿದರೆ ನಾವು ಇಲ್ಲಿ ಪ್ರತಿಯೊಂದಕ್ಕೂ ನೋಟೀಸು ಕೊಟ್ಟು ಎಲ್ಲ ವಿಚಾರಗಳನ್ನೂ ಎತ್ತಬೇಕೇನು !

Sri A. SHANKARA ALVA.—Dharwar District Oil Seed Processing Centre. It was stated by the Leader of the Opposition that though the Centre was not working well, Government has not exercised power under Sec. 54 of the Co-operative Societies Act. I may inform him that Government have exercised powers under this section as far back a s 1953 and the same is still continued.

ಹುಲಕೋಟಿ ಬಗ್ಗೆ ಮೂರು ಡೈರೆಕ್ಟರುಗಳನ್ನು ನಾಮಿನೇಟು ಮಾಡಲಾಗಿದೆ, ಇದರಲ್ಲಿ ಒಬ್ಬರು ಶ್ರೀ ಎಸ್. ಬಿ. ಪಾಟೀಲ್‌ರವರನ್ನು ಸರ್ವೆ ಸೆಟಲ್‌ಮೆಂಟು ಇಲಾಖೆಗೆ ಸೇರಿದ ಅಧಿಕಾರಿಗಳನ್ನು ಇಲ್ಲಿಗೆ ಮ್ಯಾನೆಜಿಂಗ್ ಡೈರೆಕ್ಟರಾಗಿ ನೇಮಕ ಮಾಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಇನ್ನೂ ಅವರಿದ್ದಾರೋ ಇಲ್ಲವೇ ರಿಟೈರಾದರೋ ?

ಶ್ರೀ ಎ. ಶಂಕರ ಅಳ್ವ.—ಅವರು ಇನ್ನೂ ರಿಟೈರಾಗಿಲ್ಲ.

SRI C. M. ARUMUGHAM.—The Hon. Minister does not know whether the concerned officer is a retired person or not.

SRI K. H. PATIL.—If Sri Devegowda has got records to prove that he is a retired person, then we will go. The Minister for Co-operation has categorically stated that he is not a retired man. He is a man drawn from the Industries Department and he is a lent hand.

ಶ್ರೀ ಎಚ್. ಡಿ. ದೇವೇಗೌಡ.—ನಾನು ನೆನ್ನೆ ದಿವಸ ಮಾತನಾಡುವಾಗ 6 ಸಂಸ್ಥೆಗಳ ಮೇಲೆ ಚಾರ್ಜ್ ಮಾಡಿದ್ದೇನೆ. ನನಗೂ ಶ್ರೀಮಾನ್ ಕೆ.ಎಚ್. ಪಾಟೀಲರಿಗೂ ವೈಯಕ್ತಿಕವಾದ ದ್ವೇಷ ಇಲ್ಲ. ನಿಮ್ಮ ಅಣ್ಣನ ಮಗನನ್ನು ಒಂದು ಸಹಕಾರಿ ಸಂಘಕ್ಕೆ ಚೇರ್‌ಮನ್ ಆಗಿ ಮಾಡಿದ್ದೀರಿ ಎಂದು ನಾನು ನೆನ್ನೆ ಮಾತನಾಡುವ ಕಾಲಕ್ಕೆ ಚಾರ್ಜ್ ಮಾಡಿದಾಗ ಅತ ನನ್ನ ದೂರದ ದಾಯಾದಿಯೇ ಹೊರತು, ಹತ್ತಿರದ ಸಂಬಂಧವಿಲ್ಲ ಎಂದು ಅವರು ಹೇಳಿದರು. ನನ್ನ ಹತ್ತಿರ ಒಂದು ಕಾಗದವಿದೆ ; ಅದನ್ನು ಕಳುಹಿಸಿಕೊಡುತ್ತೇನೆ ; ಸಂಯುಕ್ತಕರ್ನಾಟಕ ಪತ್ರಿಕೆಯಲ್ಲಿ ಆ ಬಗ್ಗೆ ಇನ್‌ಫರ್‌ಮೇಷನ್ ಬಂದಿದೆ. ಅದನ್ನು ಓದುತ್ತೇನೆ :

ಉಪಾಧ್ಯಕ್ಷರು.—ಅದನ್ನು ನನ್ನ ಕಡೆ ಕಳಿಹಿಸಿಕೊಡಿ, ಈಗ ಓದುವುದು ಬೇಡ.

ಶ್ರೀ ಕೆ. ಎಚ್. ಪಾಟೀಲ್.—ಅವರು ತಪ್ಪು ಅರ್ಥ ಕಲ್ಪನೆ ಮಾಡಿಕೊಳ್ಳುತ್ತಿದ್ದಾರೆ. 1912ರಲ್ಲಿಯೇ ಅವರಿಗೂ ನಮಗೂ ಪಾರ್ಟಿಷನ್ ಆಯಿತು. ಈಗ ಅವರಿಗೂ ನನಗೂ ಹತ್ತಿರದ ಸಂಬಂಧವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಂದರೆ ದೂರದ ಸಂಬಂಧವಿದೆ ಎಂದು ಅರ್ಥವಾಯಿತು ?

ಶ್ರೀ ಕೆ. ಎಚ್. ಪಾಟೀಲ್.—ಸಂಬಂಧವಿದೆ, ಆದರೆ ಹತ್ತಿರದ್ದಲ್ಲ ; ದೂರದ್ದು ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಏನು ಷರತ್ತು ಹಾಕಿದ್ದಾರೆ ಅದನ್ನು ನಾನು ಸ್ವೀಕಾರ ಮಾಡುತ್ತೇನೆ. ಮುಖ್ಯವಾಗಿ ಅಧಿಕಾರ ದುರುಪಯೋಗವಾಗಬಾರದೆಂದು ಈ ಮಾತನ್ನು ಹೇಳುತ್ತಿದ್ದೇನೆ. ನಾನು 6 ಸಂಸ್ಥೆಗಳ ಮೇಲೆ ಏನು ಅಪಾದನೆ ಮಾಡಿದ್ದೇನೆ, ಆ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ನಾವು ಹೇಳುವುದಿಲ್ಲ. ಅದಕ್ಕೆ ತಾವು ಒಪ್ಪುವುದಿಲ್ಲ ಎಂಬುದೂ ನಮಗೆ ಗೊತ್ತು. ಆದಕಾರಣ ಈ ಬಗ್ಗೆ ಒಂದು ನಿಷ್ಪಕ್ಷ ಪಾತವಾದ ತನಿಖೆ ನಡೆಸಲು ಈ ಮನೆಯ ನಾಲ್ಕು ಅಥವಾ ಮೂರು ಜನರಿಂದ ಕೂಡಿದ ಒಂದು ಸಮಿತಿಯನ್ನು ನೇಮಕ ಮಾಡಿ. ಅವರು ತನಿಖೆ ಮಾಡಲಿ. ನಾನೇನಾದರೂ ಬೇಜವಾಬ್ದಾರಿಯಿಂದ ಚಾರ್ಜ್ ಮಾಡಿದ್ದೇನೆಂದು ಕಂಡುಬಂದರೆ ಈ ಜಾಗ ಬಿಟ್ಟು ಹೋಗುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಅವರು ಹೋಗುವುದು ಬೇಡ, ನೀವು ಹೋಗುವುದು ಬೇಡ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲದಿದ್ದರೆ ಮಾನ್ಯ ಕೆ. ಎಚ್. ಪಾಟೀಲರು ಮತ್ತು ಮಾನ್ಯ ಶಂಕರ ಆಳ್ವ ಅವರು ಅವರವರ ಜಾಗಗಳನ್ನು ಬಿಟ್ಟು ಹೋಗಲಿ.

SRI C. M. ARUMUGHAM.—He is making a serious allegation. Let him come out with a challenge to face it.

SRI K. H. PATIL.—I have already come out and I know how to face Hon. Member Sri Deve Gowda. He is depending upon his own information. This is a matter to be decided. This poor fellow is guided by the newspapers. I challenge if I have used the office as a Minister contrary to law to my benefit. Sri Deve Gowda can challenge me. I am prepared to receive it.

Sri H. D. DEVE GOWDA.—It is a fact I am a poor man. To become rich I have not swalled any society.

Sri C. M. ARUMUGHAM.—I am bringing to the notice of the Hon. Chair that while Sri K. H. Patil was addressing Sri Geve Gowda he used the words 'poor follow got the information from the papers'. He is the Leader of the Opposition and he can refer any matter that helps him to argue the case. We are entitled to refer to it. We are seeking your protection, I want to know whether a Minister can address the leader of the Opposition as a 'poor fellow'. I want a ruling from you. Otherwise as a mark of protest we will have to stage a walk out for his behaviour.

Sri K. H. PATIL.—I have no ill-will or anything against Sri Deve Gowda.

Sri C. M. ARUMUGHAM.—It is applied to one and all of the Opposition Members. I want an unconditional appology from him.

Mr. DEPUTY SPEAKER.—After all it is a simple thing. Why are you making it as a big thing ?

(At this stage many Opposition members stood up and were shouting demanding unconditional apology from Sri K. H. Patil)

Mr. DEPUTY SPEAKER.—When Sri Deve Gowda was making some allegations I asked the Hon. Minister what exactly was the position. The Hon. Minister said he has done good work in the Co-operation field and the Opposition Leader has a poor knowledge of it and and does not know this and he would leave it to the Opposition to arrive at their own conclusion. Then the Leader of the Opposition said 'I am poor man and I have not swallowed the Societies'. Then Sri K. H. Patil said he had no ill-will or intention while using those words. This is a simple thing. It is not fair on your part to allow the matter to go on like this.

Sri C. M. ARUMUGHAM.—We are submitting through you, Mr. Deputy Speaker, that Mr. K. H. Patil should apologise to the House.

ಶ್ರೀ ವಾಟಾಳ್ ನಾಗರಾಜ್.—ಅವರು ಕ್ಷಮಾಪಣೆ ಕೇಳಬೇಕು. ಇದು ಶ್ರೀಮಾನ್ ದೇವೇಗೌಡರ ಪ್ರಶ್ನೆಯಲ್ಲ. ಇದು ಇಡೀ ವಿರೋಧ ಪಕ್ಷದವರಿಗೆ ಸಂಬಂಧಪಟ್ಟದ್ದು, ಅವರು ಕ್ಷಮಾಪಣೆ ಕೇಳದಿದ್ದರೆ ನಾವು ಬಿಡುವುದಿಲ್ಲ.

Sri C. M. ARUMUGHAM.—He said : "Poor fellow'. It will mean a a type of man who has no knowledge ; a man who has no capacity to collect information.

(Interruptions)

Mr. DEPUTY SPEAKER.—The Hon. Minister says he has withdrawn the statement already. The Hon. Minister tells me that he has withdrawn those remarks.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷರು ಈ ಮಾತನು ಹೇಳಿದರೆ ನಾವು ಒಪ್ಪುವುದಕ್ಕಾಗುವುದಿಲ್ಲ. ಅವರು ಕ್ಷಮಾಪಣೆಯನ್ನು ಕೇಳಲೇಬೇಕು.

(ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಎದ್ದು ನಿಂತರು)

SRI H. M. CHANNABASAPPA.—(Minister for Public Works and Electricity) I have a Point of Order.

(*Interruptions*)

MR. DEPUTY SPEAKER.—I have called upon the Hon. Minister for Public Works. He has a Point of Order.

SRI C. M. ARUMUGHAM.—Please call the Minister concerned to tender unconditional apology, for the word he has used insulting the Leader of the Opposition.

MR. DEPUTY SPEAKER.—The Hon. Puplic Works Minister has a Point of Order.

(*Interruptions*)

SRI C. M. ARUMUGAM.—We are not going to yield ; we are not going to listen to him. He cannot address the Hon. Leader of the Opposition as 'poor fellow'.

MR. DEPUTY SPEAKER.—Are you going to resume your seats ? There is a Point of Order.

SRI K. H. PATIL.—Hon. Speaker, you are already aware that I never meant to insult the Hon. Leader of the Opposition. I have said many a time specifically that I have got the highest regard and respect for him and he has also said the same thing about me. But, during the heat of discussion, some points have been thrashed out and if the Hon. Leader of Opposition is really wounded I am really sorry and I withdraw it. I never meant to insult any of the Members on the Opposition side.

MR. DEPUTY SPEAKER.—Is it sufficient ? I have not got extraordinary command over English as some other Members have.

SRI H. D. DEVE GOWDA.—We want to hear the reply of the Hon. Minister for Co-operation. So far as his demands are concerned, I have made certain charges against some of the institutions relating to Mr. K. H. Patil in Dharwar District. If the charges are baseless, I am prepared to apologise to this House. If the charges are with facts and figures, then, what will be the consequence ? I want to know.

*** Matter not recorded as ordered by the Chair.

Sri H. SIDDAVEERAPPA (Minister for Health).—The guilty man will take the consequences if they are proved.

Sri H. D. DEVE GOWDA.—Don't try to evade things. Let there be a Committee apointed by this House, consisting of three Members. Let them probe into the matter—into the affairs relating to these institutions—and let them submit a report to this House. I am prepared to face the consequences after the report is submitted. ಸಿದ್ಧವೀರಪ್ಪನವರಾಗಲೀ, ವೀರೇಂದ್ರಪಾಟೀಲರಾಗಲೀ, ಕೆ. ಎಚ್. ಪಾಟೀಲರಾಗಲೀ, ಚನ್ನಬಸಪ್ಪನವರಾಗಲೀ ದೇವರಾಜ್ ಅರಸ್ ಆಗಲೀ ರಾಜ್ಯದಲ್ಲಿ ಯಾರೇ ತಪ್ಪು ಮಾಡಲಿ, ಆ ರೀತಿ ತಪ್ಪು ಮಾಡಿದವರನ್ನು ಗಲ್ಲಿಗೇರಿಸ ಬೇಕು. Whose money is that ? Don't try to take shelter under these pretexts.

Sri H. SIDDAVEERAPPA.—When I was making that demand, you never supported me.

Sri H. D. DEVE GOWDA.—Now, you are in the office. You do not want to do that.

ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರಿಗೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಇದನ್ನು ನಾನು ನಿನ್ನೆ ದಿವಸ ಹೇಳಿದ್ದೇನೆ.

5-30 P. M.

Under the Constitution, there is provision. This House is sovereign. You are at perfect liberty to frame any charge provided it is sustainable in law. You must be able to give a *prima facie* case.

Sri H. D. DEVE GOWDA.—I have made specific charges in support of these allegations. I am prepared to substantiate the allegations. Let a committee be appointed by this House. Let it probe into the matter. I am prepared to place all these papers before the committee. I am not prepared to shirk my responsibility.

Mr. DEPUTY SPEAKER.—Is the Opposition in a mood to listen to the Hon'ble Minister ? It was agreed that we must complete the Sales-Tax Bill within half an hour.

Sri H. M. CHANNABASAPPA.—I do not see any reason for so many Hon'ble Members to be exercised over these matters. The Hon'ble Leader of the Opposition said he has made six charges and the Hon'ble Minister is on his legs to reply. Even before the replies are made, if so many Members get exercised in this matter, I think it would not be correct. The Hon'ble Minister may be prepared to answer these charges. If they are not still statisfied, then it is for the House to take such decision as it deems fit.

ಶ್ರೀ ಎ. ಶಂಕರ ಆಳ್ವ.—ಆ ಮೇಲೆ ಸೇಡಂ ತಾಲ್ಲೂಕಿನ ಎಸ್. ಸಿ. ಮತ್ತು ಎಸ್. ಟಿ. ಗಳಿಗೆ ಮನೆಕಟ್ಟಿಸುವುದಕ್ಕೆ ಕೊಡುವ ಹಣದಲ್ಲಿ ಒಂದು ಆರೋಪ ಬಂದಿದೆ. ಈ ಮನೆಯ ಸದಸ್ಯರೊಬ್ಬರು ಮುಖ್ಯಮಂತ್ರಿಗಳಿಗೆ ಕಾಗದ ಬರೆದು ಸೆಕೆಂಡ್ ಇನ್‌ಸ್ಟಾಲ್‌ಮೆಂಟ್ ಕೊಡಕೂಡದು ಎಂದು ಹೇಳಿದರು. ಅದರ ಬಗ್ಗೆ ಒಂದು ವಿಚಾರಣೆ ಮಾಡಿ, ಪ್ಲಿಂತ್ ಲೆವಲಿಗೆ ಯಾರು ಬಂದಿದ್ದಾರೆ ಅವರಿಗೆ ಹಣ ಕೊಟ್ಟಿದ್ದೇವೆ. ಹೀಗೆ ಒಟ್ಟು 149 ಜನರಿಗೆ ಹಣ ಕೊಟ್ಟಿದ್ದೇವೆ. ಇನ್ನು ಕೆಲವರು ಪ್ಲಿಂತ್ ಲೆವೆಲ್‌ಗೆ ಬಂದಿಲ್ಲ. ಬಂದಮೇಲೆ ಹಣ ಕೊಡಬೇಕೆಂದು ಹುಕುಂ ಮಾಡಿದ್ದೇವೆ.

ಆಮೇಲೆ ಸಕ್ಕರೆ ಕಾರ್ಖಾನೆಯ ವಿಷಯದಲ್ಲಿ ಹೇಳುವುದಾದರೆ, ಸಹಕಾರೀ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಗಳು ಬೆಳೆದುಕೊಂಡು ಬರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಅದೇ ರೀತಿ ಚಿಕ್ಕೋಡಿ, ರಾಯಬಾಗ್, ಭದ್ರ ಮತ್ತು ಕೊಳ್ಳೇಗಾಲ—ಈ ನಾಲ್ಕು ಜಾಗಗಳಲ್ಲಿ ಸಕ್ಕರೆ ಕಾರ್ಖಾನೆಯನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಚಿಕ್ಕೋಡಿ ವಿಷಯದಲ್ಲಿ ಕೆಲವು ಆಕ್ಷೇಪಣೆಯನ್ನು ಮಾನ್ಯ ಸದಸ್ಯರೊಬ್ಬರು ಹೇಳಿದರು. ಅಲ್ಲಿ ಕಾರ್ಖಾನೆ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರದವರು ಅನುಮತಿ ಕೊಡಬೇಕಾಗಿದೆ. ಅದರ ಬಗ್ಗೆ ಮೊನ್ನೆ ಒಂದು ಕಮಿಟಿಯು ಸಹ ತನಿಖೆ ಮಾಡಿ, ಆದಷ್ಟು ಜಾಗ್ರತೆ ಅದರ ಕಾರ್ಯವನ್ನು ಮಾಡಬೇಕೆಂದು ಹೇಳಿದ್ದಾರೆ. ಇನ್ನು ಸಂಕೇಶ್ವರದವರು ಚಿಕ್ಕೋಡಿಯವರಿಗೆ ಹಣ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಅದನ್ನು ಸಹ ನಾವು ಪರಿಶೀಲನೆ ಮಾಡುತ್ತಿದ್ದೇವೆ.

ಮತ್ತು ಮಾನ್ಯ ವೀರಪ್ಪಗೌಡರು ಚಿಕ್ಕಮಗಳೂರು ಕನ್‌ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿಯ ವಿಚಾರದಲ್ಲಿ ಸ್ವಲ್ಪ ಹೇಳಿದರು. ಅಲ್ಲಿ 27-1-1973 ರಂದು ಹೊಸ ಮ್ಯಾನೇಜ್‌ಮೆಂಟ್ ಬಂದಿದೆ. ಈಗ ಅದು ಮೊದಲಿನಿಂದ ಚೆನ್ನಾಗಿ ಕೆಲಸ ಮಾಡಿಕೊಂಡು ಬರುತ್ತಿದೆ. ಅದರ ಬಗ್ಗೆ ಏನು ಅಪಾದನೆಗಳು ಬಂದಿವೆ, ಅವುಗಳನ್ನು ಡೆಪ್ಯೂಟಿ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ಸ್ ನೋಡಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಹಾಗೆಯೇ ಸೊಸೈಟಿಯವರು ಗೋವೆಗೆ ಹೋಗಿ ಮೀಟಿಂಗ್ ಮಾಡಿದ್ದಾರೆ ಎಂದು ಸಹ ಹೇಳಿದರು. ಈ ವಿಷಯದಲ್ಲಿ ತಮಗೆಲ್ಲಾ ತಿಳಿದ ಹಾಗೆ ಒಂದು ಹೊಸ ತಿದ್ದುಪಡಿಯನ್ನು ತರುತ್ತಿದ್ದೇವೆ. ಅದರಲ್ಲಿ ಇಷ್ಟೇ ನಿರ್ದಿಷ್ಟವಾಗಿ ಖರ್ಚು ಮಾಡಬೇಕೆಂದು ಅಳವಡಿಸಿದ್ದೇವೆ. ಮತ್ತು ಅಪೆಕ್ಸ್ ಬ್ಯಾಂಕ್ ಸೊಸೈಟಿಯವರು ಒಂದೊಂದು ರಿಸ್ಟ್ ವಾಚಸ್ ಕೊಟ್ಟಿದ್ದಾರೆಂದು ಸಹ ಅವರು ಹೇಳಿದರು. ಅಂಥ ವಿಚಾರಗಳನ್ನು ಸಹ ಹೊಸ ತಿದ್ದುಪಡಿಯಲ್ಲಿ ತಡೆಹಿಡಿಬಹುದು.

ಆ ಮೇಲೆ ಮಾನ್ಯ ರಾಮೇಗೌಡರು ಡಿ.ಸಿ.ಸಿ. ಬ್ಯಾಂಕ್ ವಿಚಾರದಲ್ಲಿ ಕೆಲವು ಮಾತುಗಳನ್ನು ಆಡಿದರು. ಕೆಲವು ಆಕ್ಷೇಪಣೆಗಳನ್ನು ಅವರೇ ಅಲ್ಲಗಳೆದಿದ್ದಾರೆ. ನಮಗೆ ವರದಿ ಬಂದ ಪ್ರಕಾರ ಒಟ್ಟು ಎಲ್ಲಾ ಜಿಲ್ಲಾ ಬ್ಯಾಂಕುಗಳಲ್ಲಿ ಮಿಸ್ ಅಪ್ರೋಪ್ರಿಯೇಟ್ ಆಗಿದ್ದುದು 16 ಲಕ್ಷ 22 ಸಾವಿರ ಚಿಲ್ಲರೆ ರೂಪಾಯಿಗಳು. ಅದರಲ್ಲಿ ಪೋಲೀಸರಿಗೆ ಕೇಸ್ ಕೊಟ್ಟಿದ್ದು 38. ಕೋ-ಆಪರೇಟಿವ್ ಸೊಸೈಟಿಗಳಲ್ಲಿ 2.86 ಲಕ್ಷ ರೂಪಾಯಿ ಇನ್‌ವಾಲ್ವ್ ಆಗಿದೆ. ಅದರ ಬಗ್ಗೆ ಸಹ ಕ್ರಿಮಿನಲ್ ಕೇಸ್ ಕೋರ್ಟಿನಲ್ಲಿ ಹಾಕಲಾಗಿದೆ. ಆದರೆ ಅದರಲ್ಲಿ ಒಂದು ಲಕ್ಷ 30 ಸಾವಿರ ರೂಪಾಯಿ ಚಿಲ್ಲರೆ ಈಗಾಗಲೇ ವಸೂಲು ಆಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ನಾನು ಹೇಳಿರತಕ್ಕ ಮಾತನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ರಾಮೇಗೌಡರು ಚಾಲೆಂಜ್ ಮಾಡಿದರು. ಪಾರ್ಲಿಮೆಂಟಿಗೆ ಗೌರವ ಕೊಡುವುದು ನನ್ನಂಥವನಿಗೆ ಹೇಳುವ ಅವಶ್ಯಕತೆ ಇಲ್ಲ. ನಾನು ನಿನ್ನೆ ಬೆಂಗಳೂರು ಜಿಲ್ಲಾ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ 14 ಲಕ್ಷ ರೂಪಾಯಿಗಳಷ್ಟು ಮಿಸ್‌ಅಪ್ರೋಪ್ರಿಯೇಷನ್ ಇದೆಯೆಂದು ಹೇಳಿದ್ದಾರೆ. ಕೆಲವು ಅಧಿಕಾರಿಗಳು ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ರಾಮೇಗೌಡರು ಮಾತನಾಡುವಾಗ ಸರ್ಕಾರದವರು ಸುಳ್ಳು ಹೇಳಿದಾರೆಂದು ಹೇಳಿ, ಸುಳ್ಳು ಎಂಬ ಮಾತನ್ನು ಹೇಳಿದ್ದಾರೆ. ಹಾಗಿದ್ದರೆ ನಿಮ್ಮ ಪ್ರಕಾರ ಅಲ್ಲಿ ಹಣದ ದುರುಪಯೋಗ ನಡೆದುದು ನಿಜವೇ ಅಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಮಾನ್ಯ ಶ್ರೀ ಎಂ. ಬಿ. ರಾಮಸ್ವಾಮಿಯವರು ಒಂದು ಸವಾಲು ಕೇಳಿದ್ದರು. ಬ್ಯಾಂಕಿನಲ್ಲಿ ಎಷ್ಟು ಮಿಸ್‌ಅಪ್ರೋಪ್ರಿಯೇಷನ್ ಆಗಿದೆ. ಡಿ.ಸಿ.ಸಿ. ಬ್ಯಾಂಕಿನಲ್ಲಿ ಎಷ್ಟು ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎಂಬುದಾಗಿ. ಆದರೆ ಅದರ ಬಗ್ಗೆ ಅಲಿಗೇಷನ್ಸ್ ಬೇಕಾದಷ್ಟು ಇದೆಯೆಂದು ಹೇಳಿದೆ. ಆದರೆ ಡಿ.ಸಿ.ಸಿ. ಬ್ಯಾಂಕಿನಲ್ಲಿ ಮಿಸ್.ಅಪ್ರೋಪ್ರಿಯೇಷನ್ ಎಷ್ಟು ಆಗಿದೆ ಎಂಬುದಾಗಿ ಅವರು ಹೇಳಲಿಲ್ಲ. ಆ ರೀತಿ ಉತ್ತರ ಕೊಟ್ಟಿದ್ದು ಸರಿಯಲ್ಲ. ಆಫೀಸಿನವರದು ಸುಳ್ಳು ಎಂದು ಹೇಳಿದಮೇಲೆ ಅದನ್ನು ತನಿಖೆ ಮಾಡುತ್ತಿದ್ದೇನೆ. ಈಗ ಜಿಲ್ಲೆಯಲ್ಲಿ 14 ಲಕ್ಷ, ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ 2.86 ಲಕ್ಷ ರೂಪಾಯಿಗಳು ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ಅಲ್ಲಿ ಕ್ರಿಮಿನಲ್ ಕೇಸಸ್ ಆಗಿವೆ. ಅವಾರ್ಡ್‌ನಿಂದ 1 ಲಕ್ಷ 232 ಸಾವಿರ ರೂಪಾಯಿಗಳು ವಸೂಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ವಿಚಾರದಲ್ಲಿ ಹಿಂದಿನ ಸರ್ಕಾರದವರು ಹಾಗೂ ಮಾನ್ಯ ಶ್ರೀ ರಾಮೇಗೌಡರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ರಿಜರ್ವ್ ಬ್ಯಾಂಕ್ ರಿಪೋರ್ಟ್ ಇದೆ, ಅದನ್ನು ದಯವಿಟ್ಟು ಈ ಸಭೆಯ ಮುಂದೆ ಇಡಿ. ರಿಜರ್ವ್ ಬ್ಯಾಂಕ್ 'ಒ' ಕಾಂಗ್ರೆಸ್ಸಿಗೆ ಸೇರಿದುದಲ್ಲ, ಅದರ ಬಗ್ಗೆ ಈಗ ವಾದ ಬೇಡ.

ಶ್ರೀ ಎ. ಶಂಕರ ಆಳ್ವ.—ಇನ್ನೊಂದು ವಿಷಯ. ಅದು ಗೊಬ್ಬರ ವಿತರಣೆಗೆ ಸಂಬಂಧ ಪಟ್ಟದ್ದು. 1968-69ರ ವರೆಗೆ ಗೊಬ್ಬರ ಅಭಾವ ಇರಲಿಲ್ಲ. ಅದರ ನಂತರವೇ ಸ್ವಲ್ಪ ಅದಕ್ಕೆ ಅಭಾವವಾದುದೆಂಬುದಾಗಿ ನಮಗೆ ತಿಳಿದಿದೆ. ಅದರಲ್ಲಿ ಮಾರ್ಕೆಟಿಂಗ್ ಕೊ-ಆಪರೇಟಿವ್ ಸೊಸೈಟಿಯಲ್ಲಿ ಮುಖ್ಯವಾಗಿ ಎರಡು ಕಮಿಟಿಗಳ ಮೂಲಕ ಡಿಸ್ಟ್ರಿಬ್ಯೂಟ್ ಮಾಡಬೇಕೆಂದಿದ್ದಾರೆ. ಅದರಲ್ಲಿ ಒಂದು ಜಿಲ್ಲಾ ಸಮಿತಿ, ಇನ್ನೊಂದು, ತಾಲ್ಲೂಕು ಕಮಿಟಿ ಎಂಬುದಾಗಿ ಮಾಡಿಕೊಂಡಿದ್ದಾರೆ. ಅದರ ಮೂಲಕ ಪರ್ಮಿಟ್ಟುಗಳನ್ನು ಕೊಡುತ್ತಾರೆ. ಆದಷ್ಟು ಜಾಗ್ರತೆಯಾಗಿ ಗೊಬ್ಬರ ಎಲ್ಲರಿಗೂ ಅದು ಸಿಗುವ ಹಾಗೆ ಪ್ರಯತ್ನಮಾಡುತ್ತಿದ್ದೇವೆ. ಕೆಲವರು ಮತ್ತೆ ಗೊಬ್ಬರ ಹಾಳಾಗಿ ಹೋಗಿದೆಯೆಂದು ಹೇಳಿದರು. ಗೊಬ್ಬರ ಮಿಕ್ಸ್ಚರ್ ಆಗಿದೆಯೆಂದು ಜಾಯಿಂಟ್ ರಿಜಿಸ್ಟ್ರಾರ್ ಅವರು ಫೋನ್ ಮಾಡಿದ್ದಾರೆ. ಆ ರೀತಿಯಾಗಿ ಮಾರಾಟ ಮಾಡಿದಂತಹವನ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಜಾಯಿಂಟ್ ರಿಜಿಸ್ಟ್ರಾರ್ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲವೆಂದು ಕೇಳಿದರು. ಅದರಲ್ಲಿ ಸರಿಯಾದ ತನಿಖೆ ಮಾಡಬೇಕು. ಆದರೆ ರಿಜಿಸ್ಟ್ರಾರ್ ಅವರು ಫೋನ್ ಮಾಡಿದಾಗ್ಗೆ ಒಬ್ಬ ಸೇಲ್ಸ್ ಮನ್ನಿನ ತಪ್ಪು ಹಿಡಿದಿದ್ದಾರೆಂದು ಹೇಳುವುದು ಸರಿಯಲ್ಲ. ಇನ್ನು ಗೊಬ್ಬರ ವಿತರಣೆಯಲ್ಲಿ ಕೊರಟಗೆರೆ, ಕುಣಿಗಲ್, ಚಿಕ್ಕನಾಯಕನಹಳ್ಳಿ, ಗುಬ್ಬಿ, ದೇವನಹಳ್ಳಿ ಮುಂತಾದ ಸ್ಥಳಗಳಲ್ಲಿ ಕೆಲಸ ನಾನು ನೋಡಿದ ಹಾಗೆ ಅಷ್ಟು ಹಾಳಾಗಿ ಹೋಗಿಲ್ಲ. ಅಲ್ಲಿ ಎಲ್ಲ ಅಧಿಕಾರಿಗಳು ಸೇರಿಕೊಂಡಿದ್ದರೂ ಕೆಲಸಗಳು ಸಮರ್ಪಕವಾಗಿ ಹಾಗೂ ಸರಿಯಾಗಿ ಆಗುತ್ತಿಲ್ಲ. ಆದ್ದರಿಂದ ಈ ಸೊಸೈಟಿಗಳಲ್ಲಿ ಈ ಕೆಲಸ ಹಾಳಾಗಿ ಹೋಗುತ್ತಿದೆಯೆಂದು ಹೇಳಿದರು. ಜನರು ಹೇಗೆ ಇರುತ್ತಾರೋ ಅದರ ಪ್ರಕಾರ ಆಫೀಸರ್ಸ್ ಒಳ್ಳೆಯವರು ಹಾಗೂ ಕೆಟ್ಟವರು ಇರುತ್ತಾರೆ. ಆದರೆ ಎಲ್ಲರೂ ಚೆನ್ನಾಗಿ ಕೆಲಸಮಾಡುತ್ತಾರೆಂದು ಯಾರೂ ಹೇಳುವುದಿಲ್ಲ. ಎಲ್ಲಿ ಲೋಪದೋಷಗಳು ಕಂಡುಬರುತ್ತವೆಯೋ ಅಲ್ಲಲ್ಲಿ ತನಿಖೆಮಾಡುತ್ತಿದ್ದೇವೆ. ತಪ್ಪು ಮಾಡಿದವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಇನ್ನೊಂದು ವಿಷಯ. ಸೊಸೈಟಿಗಳಲ್ಲಿ ಸರಿಯಾಗಿ ಆಡಿಟ್ ಆಗುವುದಿಲ್ಲವೆಂದು ಹೇಳಿದರು. ಅದಕ್ಕಾಗಿಯೇ ಆಡಿಟ್ ಸೆಲ್ಲನ್ನು ಪ್ರತ್ಯೇಕವಾಗಿ ಮಾಡುತ್ತಿದ್ದೇವೆ. ಅಲ್ಲಿ ಒಂದೇ ಸೊಸೈಟಿಯಲ್ಲಿ ಕೆಲಸ ಮಾಡುವವರು ಅವರ ಪೈಕಿ ಒಬ್ಬರನ್ನು ಆಡಿಟ್ ಮಾಡಿ ಎಂದು ಹೇಳುವುದು ಸರಿಯಲ್ಲ. ಅದರ ಬಗ್ಗೆ ಪ್ರತ್ಯೇಕ ವಿಭಾಗ ತೆರೆಯಬೇಕೆಂದು ನೆನಸಿಕೊಂಡಿದ್ದೇವೆ. ಇನ್ನೊಂದು ವಿಷಯ. ಅದಕ್ಕಾಗಿ ವಿಜಿಲೆನ್ಸ್ ಸೆಲ್ ಎಂದು ನೇಮಿಸಿದ್ದೇವೆ. ಆದರೆ ಅದು ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿಯೇ ಖಾಯಂ ಆಗಿ ಇರುತ್ತಾರೆಂದು ಹೇಳಿದರು. ಏನಾದರೂ ದೂರು ಬಂದರೆ ಇಂತಹ ಕಡೆ ದುರುಪಯೋಗವಾಗಿದೆಯೆಂದು ಹೇಳಿದರೆ ಅಲ್ಲಿಂದಿಲ್ಲಿಗೆ ತಾತ್ಕಾಲಿಕವಾಗಿ ಕಳುಹಿಸಿಕೊಟ್ಟು ಅದರ ವಿಚಾರವನ್ನು ತಿಳಿದುಕೊಳ್ಳುವುದಕ್ಕೂ ಸಹ ನಾವು ಹೆಚ್ಚಿಗೆ ಪ್ರಯತ್ನ ಮಾಡುತ್ತಿದ್ದೇವೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ವಿ. ಎನ್. ಪಾಟೀಲ್.—ವಿಜಿಲೆನ್ಸ್ ಕಮಿಟಿ ಏನು ಮಾಡಿದ್ದಾರೆ? ಈ ಸಭೆಯ ಮುಂದೆ ಕಟ್ ಮೋಷನ್ಸ್ ಬಂದಾಗ ಅವರ ವಿಚಾರವಾಗಿ ನಾನು ಹೇಳುತ್ತೇನೆ. ಅವರು ಏನಾದರೂ ಕಳುಹಿಸಿದಂಥ ವರದಿಗಳನ್ನು ಸಂಬಂಧಪಟ್ಟ ಈ ಇಲಾಖೆ ಸರಿಯಾಗಿ ಎನ್‌ಕ್ವೈರಿಯನ್ನೂ ಸಹ ಮಾಡುತ್ತಾ ಇಲ್ಲ.

ಶ್ರೀ ಎ. ಶಂಕರ ಆಳ್ವ.—ಈಗ ಸರಿಯಾದ ಸಿಬ್ಬಂದಿಯನ್ನು ನೇಮಕ ಮಾಡುತ್ತಿದ್ದೇವೆ. ಪೋಸ್ಟ್ ಸ್ಯಾಂಕ್ಷನ್ ಆಗಿವೆಯೆಂದು ಹೇಳಿದರು. ಆದರೆ ಅದು ದೊಡ್ಡ ಮೊತ್ತ. ವಿಜಿಲೆನ್ಸ್‌ನವರು ತಿಳಿಸಿದ ಕಡೆ ಹೋಗಿ ಎವಿಡೆನ್ಸ್ ತೆಗೆದುಕೊಂಡು ಅಂತಹವರ ಬಗ್ಗೆ ತನಿಖೆ ನಡೆಸಿ ವಿಚಾರ ಕಂಡುಹಿಡಿಯುತ್ತಾರೆ.

ಇನ್ನು ಷುಗರ್ ವಿಷಯದಲ್ಲಿ ಸೆಪರೇಟ್ ಡೈರೆಕ್ಟೊರೇಟ್ ಫಾರ್ ಷುಗರ್ ಎಂಬುದಾಗಿ ಈಗಾಗಲೇ ನೇಮಿಸಿದ್ದೇವೆ. ಇದು ಎರಡು ಮೂರು ವಿಭಾಗ ಆಗುವುದಕ್ಕೆ ಬದಲಾಗಿ ಒಂದೇ ಆಫೀಸರ್ ಇರಬೇಕೆಂದು ಮಾಡಿದ್ದೇವೆ. ಇದರಿಂದ ಮುಂದೆ ಷುಗರ್ ಫ್ಯಾಕ್ಟರೀಸ್ ಚೆನ್ನಾಗಿ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಈಗಾಗಲೇ ಮಾಡಿದ್ದೇವೆ.

ಇನ್ನು ಕೆಲವು ಮಾನ್ಯ ಸದಸ್ಯರು ಹಲವಾರು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಮಾನ್ಯ ಶ್ರೀ ನಯನಕ್ ಅವರು ಸದಸ್ಯರು ಬೆಳಗಾಂನ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಷೇರು ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಮೆಂಬರು ಆಗುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಅದು ಬೈಲಾನಲ್ಲಿ ಇದ್ದೇ ಇರುತ್ತದೆ. ಅದರ ಬಗ್ಗೆ ಏನಾದರೂ ವಿರೋಧವಿದ್ದರೆ, ಅದನ್ನು ರದ್ದುಮಾಡುವ ವಿಚಾರವನ್ನು ಪರಿಶೀಲನೆಮಾಡಲಾಗುತ್ತದೆ.

ಇನ್ನು ಒಂದು ಕಂಟ್ರೋಲರ್ಸ್ ಕೋ-ಆಪರೇಟಿವ್ ಸೊಸೈಟಿಯ ವಿಷಯದಲ್ಲಿ ಒಂದು ಕ್ರಿಮಿನಲ್ ಕೇಸನ್ನು ಹಾಕಿದ್ದಾರೆ. ಇದನ್ನ ಸೂಪರ್‌ಸೀಡ್ ಮಾಡಬೇಕೆಂದೂ ಬರೆದರು. ಆದರೆ ಸೂಪರ್‌ಸೀಡ್ ಮಾಡುವ ಅಗತ್ಯವಿಲ್ಲ. ಸೂಪರ್‌ಸೀಡ್ ಮಾಡುವುದಕ್ಕೆ ಕೆಲವು ಕಾರಣಗಳಿದ್ದರೂ ಆ ಸಮಯದಲ್ಲಿ ಸೂಪರ್‌ಸೀಡ್ ಮಾಡುವುದು ಬೇಡವೆಂದು ಆರ್ಡರ್ ಪಡೆದುಕೊಂಡರೂ ಸೆಕ್ಷನ್ 64ರ ಪ್ರಕಾರ ಅದರ ಬಗ್ಗೆ ಎನ್‌ಕ್ವೈರಿ ಆರ್ಡರ್ ಮಾಡಿದರು. ಈಗ ಕೇಸ್ ಹಾಕಿದ್ದಾರೆ. ಯಾರ ಮೇಲೆ ಅದನ್ನು ಸರ್‌ಚಾರ್ಜ್ ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ರಿಪೋರ್ಟ್ ಬಂದ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ. ಪೋಲೀಸ್ ಕೇಸ್ ಸಹ ದಾಖಲಾಗಿದೆ. ಆ ವಿಷಯದಲ್ಲಿ ಈಗ ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಟ್ರೇಡ್ ಮಾರ್ಕೆಟಿಂಗ್ ಸೊಸೈಟಿಯ ಹಣ ದುರ್ವಿನಿಯೋಗವಾಗಿದೆ.

ಶ್ರೀ ಎ. ಶಂಕರ ಆಳ್ವ.—ಅದನ್ನೂ ಸಹ ತನಿಖೆಮಾಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಎಲ್ಲಿ ನೋಡಿದರೂ ಕೋ-ಆಪರೇಟಿವ್ ಸೊಸೈಟಿಗಳ ಬಗ್ಗೆ ತುಂಬಾ ಗೊಂದಲವಿದೆ. ಇದೊಂದು ಸಾಂಕ್ರಾಮಿಕ ರೋಗ. ಅಲ್ಲಿ ಇಷ್ಟು ಲಂಚಗುಳಿತನ ವಾಗುತ್ತಾ ಇರುವುದರಿಂದ ಎರಡು ವರ್ಷಗಳ ಮಟ್ಟಿಗೆ ಎಲ್ಲಾ ಸೊಸೈಟಿಗಳನ್ನು ಬಂದ್ ಮಾಡಿ ಅಲ್ಲಿಗೆ ಅಡ್ಮಿನಿಸ್ಟ್ರೇಟರ್‌ಗಳನ್ನು ಹಾಕಿ ಅವಕ್ಕೆ ಜೀವಕಳೆ ಕೊಡುತ್ತೀರಾ ?

ಉಪಾಧ್ಯಕ್ಷರು.—ಸರ್ಕಾರದವರೇ ಅವನ್ನು ತೆಗೆದುಕೊಳ್ಳಬೇಕಷ್ಟೇ.

ಶ್ರೀ ಎ. ಶಂಕರ ಆಳ್ವ.—ಅದೊಂದು ಹೊಸ ಸಲಹೆ. ಅದನ್ನು ಪರಿಶೀಲನೆಮಾಡುತ್ತೇವೆ.

Sri B. B. SAYANAK.—In Belgaum society the Chairman is a blind man. Still he wants to be Chairman. You must change that man.

Sri A. SHANKAR ALVA.—If the society wants him, what can we do ?

Sri K. PRABHAKAR.—The Registrar of Co-operative Societies has been excluded from the World Bank Delegation.

ಶ್ರೀ ಎ. ಶಂಕರ ಆಳ್ವ.—ಅದು ಗೌರ್ನಮೆಂಟ್ ಆಫ್ ಇಂಡಿಯಾದವರ ಆಹ್ವಾನ. ಅದರ ಪ್ರಕಾರ 3 ಜನ ಹೋಗಬೇಕಾಗಿತ್ತು. ಅದರಲ್ಲಿ ಮೊದಲು ನಮ್ಮ ರಿಜಿಸ್ಟ್ರಾರ್ ಅವರೂ ಸೇರಿದ್ದರು ಕಡೆಯಲ್ಲಿ ಇವರನ್ನು ಕೈಬಿಡಬೇಕಾಯಿತು.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಈ ದಿವಸ ಯಾರು ಮಾಡುತ್ತಾರೋ ಅದರಲ್ಲಿ, ಉದಾಹರಣೆಗೆ ಆ ಗೋಕಾಕ ಮತ್ತು ಚಿಕ್ಕೋಡಿಗಳಲ್ಲಿ ಇರತಕ್ಕ ಕಾರ್ಖಾನೆಗಳಲ್ಲಿ ಒಂದೇ ಮನೆಗೆ ಸೇರಿದವರು, ಅಪ್ಪ, ಚಿಕ್ಕಪ್ಪ, ಮಕ್ಕಳು ಇತರೇ ಬಂಧುವರ್ಗ ಸೇರಿಕೊಂಡು ಡೈರೆಕ್ಟರುಗಳಾಗುತ್ತಿದ್ದಾರೆ. ಅಲ್ಲಿ ಬೇರೆ ಜನರಿಗೆ ಅವಕಾಶವೇ ಇಲ್ಲ. ಇದು ಎಂಥಾ ನ್ಯಾಯ ? ನೀತಿ ? ಇದರಲ್ಲಿ ಸರಕಾರದ ಅಂಶ ಎಲ್ಲಿದೆ ?

(ಉತ್ತರವಿಲ್ಲ).

Sri K. H. PATIL.—Sir, Before putting the Demand to vote I would like to clarify one or two points.

ಶ್ರೀ ಕೆ. ಪ್ರಭಾಕರ್.—ಅಧ್ಯಕ್ಷರೇ ; ನನಗೆ ಮಾನ್ಯ ಮಂತ್ರಿಗಳಿಂದ ಸರಿಯಾದ ಉತ್ತರ ಬರಲಿಲ್ಲ.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೇ, ವರ್ಲ್ಡ್ ಬ್ಯಾಂಕಿನ ಡೆಲಿಗೇಟ ಗಿ ಹೋಗುವುದಕ್ಕೆ ನಮ್ಮ ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್ ಇವರಿಗೂ ಪಾಸ್‌ಪೋರ್ಟ್ ಇತ್ಯಾದಿ ಎಲ್ಲವೂ ಬಂದಿದ್ದವು. ಆದರೆ ಕಡೇ ಘಳಿಗೆಯಲ್ಲಿ ಅವರನ್ನು ಕೈಬಿಟ್ಟಿದ್ದಾರೆ. ಆದ್ದರಿಂದ ಮಂತ್ರಿಗಳು ಈ ವಿಚಾರದಲ್ಲಿ ಸರಿಯಾದ ಅಂಶಗಳನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವರನ್ನು ಕೈಬಿಡುವುದಕ್ಕೇನು ಕಾರಣ ಎಂಬುದನ್ನು ತಿಳಿಸಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರು ಲಿಂಗಾಯಿತರು, ಅದಕ್ಕಾಗಿ ಕೈಬಿಟ್ಟರು.

ಶ್ರೀ ಕೆ. ಪ್ರಭಾಕರ್.—ನಮ್ಮ ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಏನಿದೆ ಎಂಬುದನ್ನು ಚೆನ್ನಾಗಿ ಅರಿಯದವರು ಆ ಡೆಲಿಗೇಷನ್‌ನಲ್ಲಿದ್ದು ನಮ್ಮ ರಾಜ್ಯಕ್ಕೆ ಯಾವ ಅನುಕೂಲವನ್ನು ತರಬಲ್ಲರು ? ನಮ್ಮ ಸರ್ಕಾರದ ಪ್ರತಿನಿಧಿ ಒಬ್ಬರಿದ್ದರೆ ನಮ್ಮ ರಾಜ್ಯಕ್ಕೇ ಅನುಕೂಲವಾಗುತ್ತ ಇತ್ತು. ಆದ್ದರಿಂದ ಆ ಕೇಂದ್ರದವರು ಯಾರೋ ಒಬ್ಬರನ್ನು ಹಾಕಿದರಾಯಿತು ಎಂದಾಗ ನಾವೂ ಸುಮ್ಮನೆ ಕುಳಿತರೆ ಆಗಬಹುದೇ ?

ಶ್ರೀ ಎ. ಶಂಕರ ಆಳ್ವ.—ನಮ್ಮ ರಾಜ್ಯ ಒಂದೇ ಅಲ್ಲ. ಇನ್ನೂ ಹೊರಗಿನ ರಾಜ್ಯಗಳಲ್ಲಿ ಅನೇಕರನ್ನು ಕೈಬಿಡಲಾಗಿದೆ. ಮೊದಲು ಮಾಡಿದ್ದ ಸ್ಕೀಮಿನಲ್ಲಿ ನಮ್ಮವರ ಹೆಸರಿತ್ತು. ಆದರೆ ಕಡೇ ಘಳಿಗೆಯಲ್ಲಿ ಕೇಂದ್ರದ ಡೈರೆಕ್ಷನ್ ಬಂತು ಎಂದು ರಿಜರ್ವ್ ಬ್ಯಾಂಕಿನವರು ತಮ್ಮ ಕಡೇ ಮೀಟಿಂಗಿನಲ್ಲಿ ಇವರ ಹೆಸರನ್ನು ಕೈಬಿಟ್ಟಿದ್ದಾರೆ.

† ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಕೆಲವು ಸಹಕಾರ ಸಂಘಗಳ ಬಗ್ಗೆ ಮಾತನಾಡುತ್ತಾ ನನ್ನ ಬಗ್ಗೆ ಸಾರ್ವಜನಿಕರಲ್ಲಿ ಒಂದು ತಪ್ಪು ಭಾವನೆಯನ್ನು ಹುಟ್ಟಿಸತಕ್ಕ ರೀತಿಯಲ್ಲಿ ಮಾತನಾಡಿದ್ದಾರೆ. ಆ ಸಂದರ್ಭದಲ್ಲಿ ಅವರು ನನ್ನ ಹೆಸರನ್ನು ಬಳಸಿ ಐದಾರು ಸಹಕಾರ ಸಂಘಗಳ ಹೆಸರನ್ನೂ ಹೇಳಿದ್ದಾರೆ. ಅವುಗಳಲ್ಲಿ ಒಂದೆರಡನ್ನು ಬಿಟ್ಟು ಉಳಿದವುಗಳಲ್ಲಿ ನಾನೆಂದೂ ಸದಸ್ಯನಾಗಿದ್ದಿರಲಿಲ್ಲ. ಇನ್ನುಳಿದವುಗಳಲ್ಲಿ ನಾನು ಸದಸ್ಯನಾಗಿದ್ದುದು ನಿಜ. ಆದರೆ ನಾನು ಅವುಗಳಲ್ಲಿ ಸದಸ್ಯನಾಗಿದ್ದುದು ನಾನು ಇಲ್ಲಿ ಮಂತ್ರಿಯಾಗುವುದಕ್ಕೆ ಮೊದಲು. ಅಷ್ಟೇ ಅಲ್ಲದೆ ಆ ಸಂಸ್ಥೆಗಳೇನಿವೆ ಅವುಗಳನ್ನು ನಾನು ಮಂತ್ರಿಯಾದ ಬಳಿಕ ಸ್ಥಾಪನೆಯನ್ನೇನೂ ಮಾಡಲಿಲ್ಲ. ಹಾಗೊಂದು ವೇಳೆ ಮಾಡಿದ್ದಿದ್ದರೆ ಅದರ ಬಗ್ಗೆ ನಾನು ನನ್ನ ಮಂತ್ರಿ ಸ್ಥಾಪನದ ವರ್ಚಸ್ಸನ್ನು ಬೀರಿ ಅವುಗಳಿಗೆ ಅನುಕೂಲ ಮಾಡಿದ್ದಾನೆ ಅನ್ನುವಂಥ ಮಾತುಗಳು ಬರಬಹುದಾಗಿತ್ತು. ಅದರಲ್ಲಿ ಸ್ವಜನರನ್ನು ಬಳಸಿದ್ದಾನೆ ಹಾಗೆ ಮಾಡಿದ್ದಾನೆ ಹೀಗೆ ಮಾಡಿದ್ದಾನೆಂಬ ಅಪಾದನೆಗೆ ಇಲ್ಲಿ ಅವಕಾಶವೇ ಇರುವುದಿಲ್ಲ. ಆದರೆ ಈ ಹಿಂದೆ ನಾನು ಇಲ್ಲಿ ಮಂತ್ರಿಯಾಗುವುದಕ್ಕೆ ಮುಂಚೆ ಒಂದು ಕ್ಯಾಟಲ್ ಫೀಡಿಂಗ್ ಅಂಡ್ ಪ್ರೊಸೆಸಿಂಗ್ ಸೊಸೈಟಿಯನ್ನು ಸ್ಥಾಪಿಸಿದ್ದು ನಿಜ. ಅದಕ್ಕೆ ನಾನು ಮೊದಲು ಸದಸ್ಯನೂ ಆಗಿದ್ದೆ. ಡೈರೆಕ್ಟರನೂ ಆಗಿದ್ದೆ. ಆದರೆ ಅದನ್ನು ಸ್ಥಾಪನಾ ಮಾಡುವ ಕಾಲಕ್ಕೆ ನನಗೆ ಹೀಗೆ ಚುನಾವಣೆಗೆ ನಿಲ್ಲುತ್ತೇನೆ ಅನ್ನುವುದಾಗಲೀ ಅಥವಾ ಇಲ್ಲ ಒಬ್ಬ ಮಂತ್ರಿಯಾಗುತ್ತೇನೆಂಬ ಒಂದು ಕಲ್ಪನೆ ಸ್ವತಾ ಆಗ್ಗೆ ನನ್ನ ಕನಸುಮನಸಿನಲ್ಲೂ ಕೂಡ ಇರಲಿಲ್ಲ. ಆದರೆ ನಾನು ಇಲ್ಲಿ ಮಂತ್ರಿಯಾದಕೂಡಲೇ ಅಲ್ಲಿ ನಾನು ನನ್ನ ಸದಸ್ಯತ್ವ ಮತ್ತು ಡೈರೆಕ್ಟರ್ ಪದವಿ ಇವನ್ನೆಲ್ಲಾ ಬಿಟ್ಟುಕೊಟ್ಟಿದ್ದೇನೆ. ಆದರೆ ಈ ದಿವಸ ಅಲ್ಲಿ ಆಡಳಿತ ಅಷ್ಟು ಮೆಚ್ಚಿಗೆಯಾಗತಕ್ಕ ರೀತಿಯಲ್ಲಿ ನಡೆದುಕೊಂಡು ಬರುತ್ತಿದೆ. ಅದರ ವಿಚಾರದಲ್ಲಿ ಏನಾದರೂ ಅಕ್ರಮ ನಡವಳಿಕೆಗಳು ವಿರೋಧಪಕ್ಷದ ನಾಯಕರ ಗಮನಕ್ಕೆ ಬಂದಿದ್ದರೆ ಅವರು ಅದನ್ನು ಸಭೆಯಲ್ಲಿ ಹೇಳುವುದು ಬೇಡ ನನ್ನ ಕಿವೀಲಿ ಸ್ವತ ಬಂದು ಹೇಳಿದರೂ ನಾನು ಅದರ ಬಗ್ಗೆ ತಕ್ಕ ಕ್ರಮಕೈಗೊಳ್ಳುತ್ತೇನೆ. ಇನ್ನು ಹುಲ್ಕೋಟಿಯಲ್ಲಿ ಸ್ಥಾಪಿಸಿರತಕ್ಕ ಕ್ಯಾಟಲ್ ಫೀಡಿಂಗ್ ಅಂಡ್ ಪ್ರೊಸೆಸಿಂಗ್ ಸೊಸೈಟಿ ಏನಿದೆ ಅದನ್ನು ಸ್ಥಾಪನೆ ಆದದ್ದು ವಿರೋಧ ಪಕ್ಷದ ಕಾಂಗ್ರೆಸ್ ಸರ್ಕಾರ ಇದ್ದಾಗ. ಆದರೆ ಅದಕ್ಕೆ ಒಮ್ಮೆ ರಾಜ್ಯಪಾಲರು ಭೇಟಿ ಕೊಟ್ಟಿದ್ದ ಕಾಲಕ್ಕೆ ಅಲ್ಲಿನ ಕೆಲಸಕಾರ್ಯಗಳನ್ನು ಅವರು ಬಹಳವಾಗಿ ಮೆಚ್ಚಿಕೊಂಡು, ಅದಕ್ಕೆ ಎನ್.ಸಿ.ಡಿ.ಸಿ. ಗೆ ಅದರ ವಿಚಾರದಲ್ಲಿ ಶಿಫಾರ್ಸನ್ನು ಮಾಡಿ ಸಾಲ ದೊರೆಯುವುದಕ್ಕೆ ಅನುಕೂಲ ಮಾಡಿಕೊಟ್ಟರು. ಅನಂತರ ಇಲ್ಲಿನ ಸರ್ಕಾರ ಕೂಡ 10 ಲಕ್ಷ ರೂಪಾಯಿಗಳನ್ನು ಸಾಲರೂಪದಲ್ಲಿ ಕೊಟ್ಟಿದೆ. ಅದಕ್ಕೆ ಫೈನಾನ್ಸ್ ಕಾರ್ಪೊರೇಷನ್ನಿನಿಂದಲೂ 7-8 ಲಕ್ಷ ರೂಪಾಯಿ ಸಾಲ ದೊರೆತಿದೆ. ಅದು ಬಹಳ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಆದರೆ ಅದಕ್ಕೆ ಇಷ್ಟೆಲ್ಲಾ ಹಣಕಾಸಿನ ಸಹಾಯ ದೊರೆಯುವುದಕ್ಕೆ ಮೊದಲು ಅವರು 30 ಲಕ್ಷ ರೂಪಾಯಿ ಬಂಡವಾಳ ಹಾಕಿ ಅದನ್ನು ಪ್ರಾರಂಭಮಾಡಿದ್ದರು. ಆ ಹಣವನ್ನು ಅವರು ತಮ್ಮ ಸ್ವಂತದಿಂದ ಹಾಕಿದ್ದಾಗಿದೆ. ಅದನ್ನು ಅವರು ಎಲ್ಲಿಂದಲೂ ಲೂಟಿಮಾಡಿ ತರಲಿಲ್ಲ. ಅದೂ ಕೂಡ ಈ ದಿವಸ ಉತ್ತಮ ರೀತಿಯಲ್ಲಿ ಕೆಲಸಮಾಡುತ್ತಿದೆ. ಇಂಥ ಉತ್ತಮರೀತಿಯ ಸೇವೆ ಸಲ್ಲಿಸತಕ್ಕ ಬೇರೆ ಸಂಸ್ಥೆಗಳಿದ್ದರೆ ಅವರು ತಿಳಿಸಲಿ, ಅದಕ್ಕೆ ನಾನು ಅವರಿಗೆ ಶಾಹಭಾಸಗಿರಿ ಕೊಡುತ್ತೇನೆ.

ಇನ್ನು ಕೃಷ್ಣಾ ಮಿಲ್ಕ್ ಡೈರಿಯ ಬಗ್ಗೆ ಅವರು ಪ್ರಸ್ತಾಪಮಾಡಿದ್ದಾರೆ. ಅದು ಪ್ರಾರಂಭವಾದದ್ದು ಎಂದು ? ಅದರ ಸ್ಥಾಪನಾಕಾಲಕ್ಕೂ ನಾನು ಇಲ್ಲಿ ಒಬ್ಬ ಮಂತ್ರಿಯಾಗುತ್ತೇನೆ ಎಂಬ

ಕಲ್ಪನೆ ನನಗೆ ಕನಸುಮನಸಿನಲ್ಲೂ ಇರಲಿಲ್ಲ. ಮೈಸೂರು ಸರ್ಕಾರದವರು ಅದರ ಪ್ರತಿಯೊಂದು ಹಕ್ಕೀಕತ್ತನ್ನು ಸರಿಯಾಗಿ ತಿಳಿದುಕೊಂಡ ಮೇಲೆ ಅದರ ಧಡೂತಿ ನೋಡಿ ಅದಕ್ಕೆ ಎನ್.ಸಿ.ಡಿ.ಸಿ. ಅವರಿಗೆ ರೆಕಮೆಂಡ್ ಮಾಡಿ ಸಾಲ ಕೊಡಿಸಿದ್ದಾರೆ.

6-00 P.M.

ಹಣ ಸಾಲವಾಗಿ ಕೊಟ್ಟಿದ್ದಾರೆ, 81ಸಾವಿರ ಚಿಲ್ಲರೆ ರೂಪಾಯಿ ಕೊಟ್ಟಿರುವುದು ಸಾಲ. ನಾವೇನು ಸಾಧಿಸಿದ್ದೇವೆಂಬುದನ್ನು ಹೇಳುತ್ತೇನೆ. ಒಬ್ಬಬ್ಬರು ರೆಡ್ಡಿಗಳಿದ್ದರೆ ಅವರು ಅಪ್ತರು ಎಂದು ಶ್ರೀ ದೇವೇಗೌಡರು ಹೇಳಿದ್ದಾರೆ. ನಾನು ಸಮಾಜ ಧುರೀಣನಾಗಿದ್ದಾಗ ನನ್ನ ಹೆಸರನ್ನು ಲಗ ಪತ್ರಿಕೆಗಳಲ್ಲಿ ಕೆಲವರು ಹಾಕಿಸಿದ್ದಾರೆ. ನನಗೆ ಅಣ್ಣ ಇಲ್ಲ, ನನ್ನ ತಮ್ಮ ಒಬ್ಬನಿದ್ದಾನೆ, ನನಗೆ ಎರಡು ಸಣ್ಣ ಮಕ್ಕಳಿದ್ದಾರೆ. ಕೃಷ್ಣ ಡೈರಿಯಲ್ಲಿ ನನ್ನವರು ಯಾರೂ ಇಲ್ಲ. ಒಬ್ಬಬ್ಬರು ರೆಡ್ಡಿಗಳಿದ್ದರೆ ಅದು ನನ್ನ ತಪ್ಪಲ್ಲ? ಖಾಸಗಿ ಸಂಸ್ಥೆಯಾದ ಕೃಷ್ಣ ಡೈರಿಯವರು ಜಾಹೀರಾತು ಮಾಡಿ ಅಲ್ಲದ್ದ ಮೆಷೀನರಿಯನ್ನು 10 ಲಕ್ಷ ರೂಪಾಯಿಗಳಿಗೆ ಮಾರುವುದರಲ್ಲಿದ್ದರು. ಕಡಿಮೆಗೆ ಕೇಳಿದರೆಂದು ಟೆಂಡರನ್ನು ಕ್ಯಾನ್ಸಲ್ ಮಾಡಿ ಬೇರೆ ಕೊಟ್ಟರು. ಕೊಲ್ಹಾಪುರಕ್ಕೆ ಕೊಟ್ಟ ಟೆಂಡರು ಕಡದು ಮಾಡಿ ಈ ಸಂಸ್ಥೆಗೆ ಕೊಟ್ಟರು. ಅದೂ ಒಂದು ಸಂಸ್ಥೆ ಆ ಫರ್ಮನಲ್ಲಿ ನಾನೂ ಒಂದಾಣೆ ಸದಸ್ಯ. ಅದರ ಮೆಷನರಿ ಕೊಡುವ ಪೂರ್ವದಲ್ಲಿ ನನ್ನ ಹೆಸರಿಗೆ ಮಾರಾಟಮಾಡಿದರು. ಮಂತ್ರಿಯಾದ ಮೇಲೆ ಅದರಲ್ಲಿ ನನ್ನದೇನೂ ಇಲ್ಲ. ಮಂತ್ರಿಮಂಡಲಕ್ಕೆ ನಾನು ಸೇರಿದಮೇಲೆ ಅದಕ್ಕೆ ಮಾಡಿದ ಸಹಾಯವೆಂದರೆ ಆಕ್ಷೇಪಣೆ ಬಂದಾಗ ತಕರಾರು ಮಾಡಿದಾಗ ಕೊಡುವ ಸಹಾಯವನ್ನೂ ನಿಲ್ಲಿಸಿದ. ಹೆಚ್ಚು ಬೆಲೆ ಬಾಳುವ ಮೆಷೀನರಿಯನ್ನು ಕಡಿಮೆಗೆ ತೆಗೆದುಕೊಂಡರು, ಅದು ಹೊಸ ಮೆಷಿನ್ ಎಂದು ಗೊತ್ತಾದಮೇಲೆ ಅದರ ಬೆಲೆ ಹೆಚ್ಚಾಯ್ತು ಎಂದು ತಿಳಿದಮೇಲೆ ಸರಕಾರವೇನು ಆಜ್ಞೆ ಮಾಡಿದೆಯೋ ಗೊತ್ತಿಲ್ಲ. ಹಾಗಿರುವಾಗ ವಸ್ತುಸ್ಥಿತಿಗಮನಿಸದೆ ಒಬ್ಬ ವ್ಯಕ್ತಿಯ ಶೀಲ, ಚಾರಿತ್ರ್ಯಕ್ಕೆ ಧಕ್ಕೆ ತರುತ್ತಿರುವುದನ್ನು ನೋಡಿ ವಿಷಾದವಾಗುತ್ತದೆ. ಈ ರೀತಿ ಮಾಡಬಾರದು. ಎರಡನೆಯದು ಮಿಲ್ಲಿನ ವಿಷಯ. ಅಲ್ಲಿ ಒಬ್ಬರನ್ನು ನಾಮಿನೇಟ್ ಮಾಡಿಲ್ಲದ್ದಾರೆ ಎಂದು ಹೇಳಿದರು. ಯಾರನ್ನೂ ನಾಮಿನೇಟ ಮಾಡಿಲ್ಲ. ಆದರ ಬಗ್ಗೆ ರಿಕಾರ್ಡಿದ. ನಿವೃತ್ತ ಅಧಿಕಾರಿಯನ್ನು ಮ್ಯಾನೇಜಿಂಗ್ ಡೈರಕ್ಟರಾಗಿ ನಾಮಿನೇಟ್ ಮಾಡಿದ್ದಾರೆಂಬುದನ್ನು ಸಾಬೀತು ಮಾಡಿದರೆ ನಾನು ಈ ದಿವಸವೇ ಹೊರಗೆ ಹೋಗುತ್ತೇನೆ. ನಮ್ಮ ಅಣ್ಣನ ಮಗ ಎಂದು ಹೇಳಿದರು, ನನಗೆ ದೂರದ ಸಂಬಂಧ ಇದೆ. ಆದರೆ ಅಣ್ಣನ ಮಗನನ್ನು ಸರಕಾರ ನಾಮಿನೇಟ್ ಮಾಡಿದ ಎಂದು ಹೇಳಿದರೆ ಅದನ್ನು ಸಾಬೀತು ಮಾಡಿದರೆ ನಾವಿರುವುದಕ್ಕೆ ಸಾಧ್ಯವಿಲ್ಲ. ಶ್ರೀ ದೇವೇಗೌಡರು ರಾಜೀನಾಮೆ ಕೊಡಬೇಕಾಗಿಲ್ಲ, ಅವರು ಬಹಳ ಕಾಲ ಇರಬೇಕು, ಲೀಡರ್ ಆಗಿರಬೇಕು, ಹೆಚ್ಚಿನ ಹುದ್ದೆಗೆ ಅವರು ಹೋಗಲಿ. ತಕರಾರು ಮಾಡುವಾಗ ವಿಷಯವನ್ನು ಹೆಚ್ಚಾಗಿ ಅರಿತು ಪರಿಶೀಲಿಸಿ ಹೇಳಬೇಕು. ನಾನು ಮಂತ್ರಿಯಾದರೆ ನನ್ನ ಮಗ ಎಲ್ಲಾದರೂ ಕೆಲಸಮಾಡಿದರೆ ಪ್ರಜಾಪ್ರಭುತ್ವದಲ್ಲಿ ಅದನ್ನು ತಪ್ಪಿಸುವುದಕ್ಕಾಗುತ್ತದೆಯೇ? ಯಾವುದೇ ವಿಚಾರವಾಗಲಿ ಮಂತ್ರಿಯಾದಮೇಲೆ ಅಕ್ರಮವಾಗಿ ವರ್ತಿಸಿದ್ದರೆ ಅದನ್ನು ಹೇಳಬಹುದೇ ಹೊರತು ಗಹನವಾದ ರೀತಿಯಲ್ಲಿ ಪ್ರಚಾರ ದೃಷ್ಟಿಯಿಂದ ಏನೂ ಮಾಡಬಾರದು.

† ಶ್ರೀ ಎಚ್. ಡಿ. ದೇವೇಗೌಡ.—ಆರು ಸಂಸ್ಥೆಗಳ ಮೇಲೆ ನಾನು ಅಪಾದನೆ ಮಾಡಿದ್ದೇನೆ. ಅದನ್ನು ಆಧಾರರಹಿತವಾಗಿ ಮಾಡಿದ್ದೇನೆ, ವಿವರಣೆ, ಕೊಟ್ಟಿಲ್ಲದೆ ಮಾಡಿದ್ದೇನೆ ಎಂದು ಹೇಳುವುದಾದರೆ ನನ್ನ ಹತ್ತಿರ ಅಪಾದನೆಗಳನ್ನು ಧೃಢಿಕರಿಸಲು ಬೇಕಾದ ಸ್ಯಾಕ್ಷ ಸಾಹಿತ್ಯ ಇದೆ. ಪಾರ್ಟನರ್‌ಷಿಪ್ ಡೀಡ್ ಮುಂತಾದ್ದು ಯಾರ ಮುಂದೆ ಪ್ರೊಡ್ಯೂಸ್ ಮಾಡಬೇಕು ! ಇಲ್ಲಿ ಹಿರಿಯರಿದ್ದಾರೆ, ನನಗೂ ಹತ್ತು ವರ್ಷದ ಅನುಭವವಿದೆ. ನಾನು ಜುಡಿಷಿಯಲ್ ಪ್ರೋಬ್ ಮಾಡಿ ಎಂದು ಹೇಳಿಲ್ಲ. I have not asked for a judicial probe. I have only requested to constitute a committee of three members of this House. That is all.

Sri H. SIDDAVEERAPPA.—There are committees like Public Accounts Committee, Estimates Committee, etc. Can you think of better committee than these ? In fact you are more powerful than the Chief Minister, being the Chairman of Public Accounts Committee.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀ ಕೆ. ಎಚ್. ಪಾಟೀಲರು ಮಂತ್ರಿಗಳಾದಮೇಲೆ ಪರೋಕ್ಷವಾಗಿ ಕೆಲವು ವ್ಯವಹಾರಗಳನ್ನು ಮಾಡಿ ಕೆಲವರಿಗೆ ಸಹಾಯಮಾಡಿದ್ದಾರೆ. ನನ್ನ ಭಾಷಣವನ್ನು ಪೂರ್ತಿಯಾಗಿ ಅವರು ನೋಡಬಹುದು, ಕೆಲವು ಸಂಸ್ಥೆಗಳಮೇಲೆ ಅವ್ಯವಹಾರದ ಆರೋಪವನ್ನು ನಾನು ಮಾಡಿದ್ದೇನೆ. ನಾನು ಶ್ರೀ ಕೆ. ಪಾಟೀಲರ ಹೆಸರನ್ನೆತ್ತಿಲ್ಲ. ನಾನು ಆರೋಪಮಾಡಿರುವ ವಿಚಾರದಲ್ಲಿ ಸರಿಯಾದ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.— ಸೆಕ್ಷನ್ 54ಕ್ಕೆ ರೂಪರೇಖೆ ಕೊಟ್ಟಿದ್ದು ಕಾಂಗ್ರೆಸ್ 'ಒ' ನವರು. ಹುಣಿಸೆ ಗಿಡ ಮುಪ್ಪಾದರೂ ಹುಳಿ ಬಿಡುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ರಾಜ್ಯಪಾಲರಾದ ಶ್ರೀ ಧರ್ಮವೀರರ ಕಾಲದಲ್ಲಿ ಅಥವ ಹಿಂದಿನ ಸರಕಾರದ ಕಾಲದಲ್ಲಿ ಅವ್ಯವಹಾರ ನಡದಿದ್ದರೆ ಅದನ್ನು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

ಈ ಸಭೆಯಲ್ಲಿ ಏನಾದರೂ ಅರೋಪಮಾಡದರೆ ಅದಕ್ಕೆ ಸಂಬಧಪಟ್ಟ ಆಧಾರಗಳನ್ನು ಯಾರ ಮುಂದಿಡಬೇಕು ? ಈಗ ಮಾಡಿರುವ ಅಪಾದನೆಯನ್ನು ಪರಿಶೀಲಿಸಲು ಈ ಮನೆಯ ಮೂರು ಜನ ಸದಸ್ಯರ ಒಂದು ಸಮಿತಿ ಮಾಡಿ, ಅದು ಪರಿಶೀಲಿಸಿ ವರದಿಮಾಡಲಿ. ಆ ವರದಿಯಲ್ಲಿ ನಾನು ಮಾಡಿರುವ ಅಪಾದನೆಗಳು ಆಧಾರ ರಹಿತವಾದವು ಎಂದು ತಿಳಿಸಿದರೆ ನಾನು ಈ ಸಭೆಯ ಕ್ಷಮೆ ಕೇಳುತ್ತೇನೆ.

Sri H. M. CHANNABASAPPA.—Sir, I have heard with great patience the arguments made by the hon. the Leader of the Oppo ition. He is trying to make out a case that the charges against these six institutions should be enquired into by a Committee of this House. I would like to submit the State has created machineries for this purpose.

Sri H. D. DEVE GOWDA.—I know how the Hon'ble Minister is gonig to twist things.

Sri H. M. CHANNABASAPPA.—There are statutory institutions to enquire into, to go into the allegations and give findings. I am very clear in my mind and the hon. the Leadet of the Opposition will agree that under the Statute it is the Registrar of Co-operative Societies who has got to make enquiries into the lapses and misdeds of any institution function under the Co-operative Act. Therefore there is no force in the point made out and we shall be very happy...

Sri H. D. DEVE GOWDA —Please do not say r no force'.

Sri H. M. CHANNABASAPPA.—All the material that he has and that any one else has may be given to us. There is a statutory authority and we will enquire into it.

Sri H. SIDDAVEERAPPA.—Sir, apart from the Registrar of Co-operative Societies I would respectfully snbmit that the proper forum would be the Public Accounts Committee and the Estimates Committee Let them do it. The Hon, the Leader of the Opposition is the Chairman of the Public Accounts Committee.

Sri H. D. DEVE GOWDA.—The functions of the Public Accounts Committee confine only to the audit paras ; we cannot go beyond that.

ಶ್ರೀ ಪಾಟೀಲ್ ನಾಗರಾಜ್.—ಯಾವ ಕಮಿಟಿಯೂ ಬೇಕಿಲ್ಲ. ಇವರು ಗುರುತರವಾದ ಆರೋಪಗಳನ್ನು ಡಾಕ್ಯುಮೆಂಟ್ಸ್ ಇಟ್ಟುಕೊಂಡು ಮಾಡಿದ್ದಾರೆ. ಇದರ ಬಗ್ಗೆ ನನ್ನ ಪ್ರಾರ್ಥನೆ ಏನೆಂದರೆ ಅಧ್ಯಕ್ಷರು ಇದ್ದಾರೆ, ಅವರ ಅಧ್ಯಕ್ಷತೆಯಲ್ಲಿ, ಯಾರನ್ನು ಬೇಕಾದರೂ ಒಬ್ಬರನ್ನು ಅಥವಾ ಇಬ್ಬರನ್ನು ನೇಮಿಸಿ ನೋಡಿಸಬೇಕು. ಡಾಕ್ಯುಮೆಂಟ್ಸ್‌ಗಳನ್ನು ಅಧ್ಯಕ್ಷರಿಗೆ ಕೊಡಿ, ತಾವು ನಮಗೆ ನ್ಯಾಯ ಒದಗಿಸಬೇಕು.

Sri D. B. KALMANKAR.—Are there any precedents like that in the past ?

ಶ್ರೀ ಕೆ. ಎಫ್ ಪಾಟೀಲ್.—ಪ್ರತಿಯೊಂದು ಪ್ರಶ್ನೆಗೂ ಈ ಪ್ರಕಾರ ಮಾಡುವುದಾದರೆ, ಇಲ್ಲಿಯೇ ಒಂದು ಕೋರ್ಟನ್ನು ಮಾಡಬೇಕಾಗುತ್ತದೆ. What precedent is there ?

Sri C. M. ARUMUGAM.—The hon' the Leader of the Opposition has made allegations against six institutions, and he says that he has got documents with him. It is a serious matter concerning the irregularities committed in those institutions, and to prove those allegations the hon. the Leader of the Opposition has got docoments. He wants to know to the whom he should give those documents. The other side says that he must give those documents to the Registrar. But the Registrar is a Government servant and is a subordinate of the Minister.

Sri R. GUNDU RAO (Somwarpet).—Sir, I rise to a Point of Order Now that it is past Six, o'clock. I want to know in the first instance whether the time has been extended. Secondly there is no charg against the Hon'ble Minister; there is a charge against the institution. The Registar of Co-operative Societies is there to look into the matter. Therefore, there is no neecssity to appoint a Committee at all.

Mr. DEPUTY SPEAKER.—A point was raised whether the time has been extedned. As per the List of Business, the starting time is 1.00 P.M. But nothing is mentioned as to when it should colse. There fore, the time need not be extended.

Sri C. M. ARUMUGHAM.—it is not a statutory body. The Registrar is a subordinate to the Government and the Minister. If the Government is going to appoint a three member Committee, it is all right ; otherwise...

Sri SUBHASH ASTURE.—I rise to a Point of Order. The hon membes said that it is not a statutory body, It is a statutory body working under the Ministry.

Sri C. M ARUMUGHAM.—Sir, let us follow some procedure. During the debate, a member makes certain allegations and he says that he has got documents to prove those allegations ; he has got orginal records. When such is the case what is to be done ? The Chair will have to guide us. We are not prepared to hand over the papers to the Registrar.

Mr. DEPUTY SPEAKER.—If it were one of my functions, I would have done it. It is a thing which is beyond my sphere of work. The hon. member may bring in a non official resolution.

Sri H. SIDDAVEERAPPA.—Sir, under Rule 253, this House has got full power to refer any matter to the Estimates Committee.

Sri C. M. ARUMUGHAM.—Sir, is the Government prepared to appoint a three-member Committee ?

Mr. DEPUTY SPEAKER.—Government has made the position very clear.

Sri H. M. CHANNABASAPPA.—Mr. Speaker Sir, we are all functioning under the statute. The Co-operative Societies are functioning under statute.

Sri C. M. ARUMUGHAM.—I have not yielded Sir. I was submitting to the House that when Sri Devegowda has records, something must be done to prove the charges.

Sri H. SIDDAVEERAPPA.—Though vanquished you can argue still.

Mr. DEPUTY SPEAKER.—It is not within my powers to appoint a committee to go into the matter. It lies within your power to move a non-official resolution and urge for the constitution of a Committee to go into the matter.

Sri C. M. ARUMUGHAM.—Since they were talking about probe etc. that is why I suggested for the constitution of a committee to go into the matter.

Mr. DEPUTY SPEAKER.—If you go on haranguing like this, we cannot come to any finality. Please permit us to transact some other business.

Sri H. M. CHANNABASAPPA.—As I submitted earlier to this House, we are functioning under a statute and the statute makes it very clear, under section 64 of the Mysore Co-operative Societies Act there is ample power to appoint the Registrar of Co-operative Societies and gives ample power for making inquciries of all allegations against the Societies including inspection of books of societies and power to seize books and property and to go into all asp3cets of the question. When there is a statutoity authorly appointed by this House through this Act, I fai to understand the arguments advanced in this House saying, you appoint some other committee. We cannot go on appointing committee. s and give them powers. I therefore submit that the provisions of the statute are enough to go into all the allegations that have been made by the hon. Leader of the Opposition and this is clearly the stand of the Government.

MR. DEPUTY SPEAKER.—The question is :

"That a sum not exceeding Rs. 4,05,62,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 23 'Co-operation'."

The motion was adopted and the demand was voted

MR. DEPUTY SPEAKER.—The House stands adjourned to meet tomorrow the 28th March 1973 at 1 P. M.

The House adjourned at Twenty-five Minutes Post Six of the Clock to meet again at One of the Clock on Wednesday, the 28th March 1973.

W D 2021—GPB—550—15-7 1974

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 28th March 1973/Chaitra 7, 1895 (Saka Era).

The House met in the Assembly Chamber, Vidhana Soudha, at One of the Clock.

MR. DEPUTY SPEAKER (SRI B. P. KADAM) in the Chair.

STARRED QUESTIONS

(to which Oral Answers were given)

Preservation of Sandalwood Trees

674. SRI K. M. DORASWAMY NAIDU (Bethamangala).—

Will the Minister for Agriculture and Forests be pleased to state :—

(*a*) the reasons for Sandalwood trees in private holdings of the State being destroyed ;

(*b*) whether the Government have thought that the Sandalwood trees in the State would be developed by entrusting the rights to the private Hiduvalidars as it exists in Bombay Karnatak, Hyderabad Karnatak, Tamilnadu and Andhra Pradesh and maintain the name "Gandhada Gudi Idu Mysoru" ?

SRI K. H. PATIL (Minister for Agriculture and Forests).—

(*a*) Sandal is a parasite. It obtains its food by absorbing the same through its roots from the roots of other plants in the vicinity. Hence for the sandal tree to be healthy it needs the maintanence of some tree growth around it. In the private lands when these trees are removed it affects the nourishment of the sandal stems due to which it gets to be unhealthy.

(*b*) The rules concerning ownership of sandal grown in Hiduvali lands differ in the various parts of Mysore State. In some parts the ownership vests with the Hiduvalidars while in some other parts it is the property of the Government. The Mysore Forest Rules of 1969 has provided for the Government to extract the sandal in case of all areas. As per these Rules even in case of the Hiduvalidars who did not have

(SRI K. H. PATIL)

any right on the sandal they would be paid bonus estimated at 50 percent value of the sandalwood. This should encourage the Hiduvalidars to protect and maintain the sandal trees existing on their land in a healthy condition.

ಶ್ರೀ ಕೆ. ಎಂ. ದೊರಸ್ವಾಮಿ ನಾಯ್ಡು.—ನಾನು ಪ್ರಶ್ನೆ ಕೇಳಿರುವುದರ ಉದ್ದೇಶ, ಹಿಡುವಳಿ ಜಮೀನಿನಲ್ಲಿರುವ ಗಂಧದ ಮರಗಳನ್ನು ತೆಗೆದುಕೊಂಡಾಗ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿರುವಂತೆ ಸ್ಥಳದಲ್ಲಿಯೇ ಮರಗಳನ್ನು ತೆಗೆದುಕೊಂಡು, ಅದಕ್ಕೆ ಹಣವನ್ನು ಪಾವತಿ ಮಾಡುವುದನ್ನು ತಪ್ಪಿಸುವುದಕ್ಕೋಸ್ಕರ ಈ ಮರಗಳನ್ನು ಬೆಳಸದೆ ಹಿಡುವಳಿದಾರರು ಹಾಳು ಮಾಡುತ್ತಿದ್ದಾರೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

† ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಮೊದಲು ಸ್ವಲ್ಪ ಹಣವನ್ನು ಗಿಡ ಬೆಳೆದವರಿಗೆ ಕೊಡುತ್ತಿದ್ದರು. ಈಗ ಗಂಧದ ಮರವನ್ನು ಬೆಳೆಯುವುದಕ್ಕೆ ಉತ್ತೇಜನವನ್ನು ಕೊಡುವುದರ ಸಲುವಾಗಿ ಬೆಲೆಯಲ್ಲಿ 50 ಪರ್ಸೆಂಟ್ ಕೊಡಲಿಕ್ಕೆ ನಿರ್ಣಯ ಮಾಡಿದೆ.

ಶ್ರೀ ಕೆ. ಎಂ. ದೊರಸ್ವಾಮಿ ನಾಯ್ಡು.—ಆ ರೀತಿ ಕೊಡಬೇಕೆಂದು ಮಾಡಿರುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಸ್ಥಳದಲ್ಲಿಯೇ ಮರಗಳನ್ನು ಸರ್ಟಿಫೈ ಮಾಡಿ, ಕ್ಲಾಸಿಫೈ ಮಾಡಿ ಹಣವನ್ನು ಪಾವತಿ ಮಾಡಲಾಗುತ್ತದೆಯೇ?

ಶ್ರೀ ಕೆ. ಎಚ್. ಪಾಟೀಲ್.—ಇದು ಯೋಗ್ಯವಾದ ಸಲಹೆ ಇದೆ. ಹಣವನ್ನು ಸ್ಥಳದಲ್ಲಿಯೇ ಪಾವತಿ ಮಾಡುವುದು ಆಗಲಿಕ್ಕಿಲ್ಲ. ಸ್ಥಳದಲ್ಲಿಯೇ ಸರ್ಟಿಫೈ ಮಾಡಿ ಇಂಥಿಂಥವರ ಮರ ಎನ್ನುವುದನ್ನು ಗೊತ್ತು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.- ಖಾಸಗಿ ಜಮೀನುಗಳಲ್ಲಿರುವ ಗಂಧದ ಮರಗಳನ್ನು ಈಗ ತೆಗೆದುಕೊಂಡು ಹೋಗಿ, ಚಕ್ಕೆ ತೆಗೆದು, ಸರ್ಟಿಫೈ ಮಾಡಿ, ಕ್ಲಾಸಿಫೈ ಮಾಡಿ ಹಣವನ್ನು ಕೊಡಬೇಕಾದರೆ ಹತ್ತಾರು ತಿಂಗಳು ಆಗುತ್ತದೆ. ಹತ್ತಾರು ತಿಂಗಳು ಕಳೆದ ಮೇಲೆ ಮಾಲೀಕರಿಗೆ ಹಣವನ್ನು ಕೊಡತಕ್ಕ ಪದ್ಧತಿ ಇದೆ. ಕೇರಳ, ತಮಿಳುನಾಡು ರಾಜ್ಯಗಳಲ್ಲಿರುವಂತೆ ಅಧಿಕಾರವರ್ಗದವರು ಸ್ಥಳದಲ್ಲಿಯೇ ಪರೀಕ್ಷೆ ಮಾಡಿ ಬೇಗ ಹಣ ಪಾವತಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ಈಗಾಗಲೇ ಮಾನ್ಯ ಸದಸ್ಯರು ಇದೇ ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಹೇಳಿದ್ದೇನೆ.

Improvement of Transport System in Bangalore City

258. Sri M. H. JAYAPRAKASH NARAYAN (Sirsi).—

Will the Minister for Public Works and Electricity be pleased to state :—

(a) the details of the study conducted by the State Government to arrange for Railway Transport so as to improve transport system in Bangalore City;

(b) whether the Metropolitan City Transport Board had been asked to conduct a survey for erecting a circular or underground railway;

(c) if so, the progress achieved in this behalf?

†Indicates that the remarks or speeches have not been revised by the member concerned.

Sri H. M. CHANNABASAPPA (Minister for Public Works and Electricity).—

(a) Bangalore Metropalitan City like other Metropolitan areas has to face many traffic problems. In order to study such problems and to suggest suitable remedial measures, Planning Institute of Mysore City in consultation with the Central Road Transport Research Institute conducted a comprehensive study of traffic and transport problems in Bangalore City in 1964.

After conducting the necessary field survey, and the study of the problem details and the recommendations are published in the form of following reports:—

1 Interim report on the study of Transport and Traffic.
2 Study relating to journey time.
3 The study relating to joining of roads.
4 The study relating to parking of vehicles and mobile centres.
5 Traffic rules.
6 Study relating to alteration of working house.
7 Traffic specialities in cities.
8 Imparting of education in traffic control procedures and steps for implementing regulations.
9 Study relating to cyclists and pedestrians.
10 Transport and cost facility system.
11 Study of Bangalore Transport Service.
12 Analysation of journery and traffic plan.

(b) Yes.

(c) A small committee has been constituted under the Chairmanship of Secretary to Government, Home Department together with other officials of State Government on the 1st of Augnst so as to enable them to study the city transport and traffic problems at time of visit of the Metropolitan Transport Council to Bangalore City.

The Metropolitan Transport Council had discussion with the State Government authorities on 24th and 25th August, 1972. They considered the reports mentioned above and asked to bring upto date the statistics mentioned therein. The Council has informed that it would suggest a long term and short term plans for the improvement of the City, Road Transport.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಬೆಂಗಳೂರು ನಗರದಲ್ಲಿರತಕ್ಕ ಈಗಿನ ಸಂಚಾರ ಪರಿಸ್ಥಿತಿಯನ್ನು ನೋಡಿದರೆ ಪ್ರತಿ ದಿವಸ ಸಾವು ನೋವುಗಳಾಗುತ್ತಿವೆ. ಈ ಬಗ್ಗೆ ಪರಿಶೀಲನಾ ಸಮಿತಿ ಏನನ್ನು ವರದಿ ಮಾಡಿದೆ? ಈ ಬಗ್ಗೆ ವೃತ್ತಾಕಾರದ ರೈಲ್ವೆ ಲೈನ್ ಮಾಡಿ, ನಗರದ ಒಳಗಡೆ ಸಂಚಾರದ ಮಿತಿಯನ್ನು ಕಡಮೆ ಮಾಡತಕ್ಕ ನೀತಿಯನ್ನು ಸರ್ಕಾರ ಯೋಚನೆ ಮಾಡಿದೆಯೇ? ಆ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ ಹೇಗೆ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಏನೇನು ಕಾರ್ಯಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ತಿಳಿಸಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—1964ರಲ್ಲಿ ಈ ಬಗ್ಗೆ ಪರಿಶೀಲನೆ ನಡೆಯಿತು ಎಂದು ಹೇಳಿದ್ದಾರೆ. ಆ ಪ್ರಕಾರವಾಗಿ ಮಾಡಿದಂಥ ವರದಿಯಲ್ಲಿರುವ ಅಂಶಗಳನ್ನೆಲ್ಲಾ ಕಾರ್ಯಗತ ಮಾಡುವುದು ಯಾವಾಗ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಭಾರತ ಸರ್ಕಾರದವರು ಈ ರೈಲ್ವೆ ವಿಚಾರವಾಗಿ ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಟೆಕ್ನಿಕಲ ಅಂಡ್ ಫೈನಾನ್‌ಷಿಯಲ ಫೀಸಿಬಲ್ ಎಂದು ಕಂಡು ಬಂದ ಮೇಲೆ ಅದಕ್ಕೆ ಹಣವನ್ನು ಒದಗಿಸಿ ಅವರು ಮಾಡತಕ್ಕದ್ದು.

ಶ್ರೀ ಎಂ. ಎಸ್. ಕೃಷ್ಣನ್.—(ಸಿ) ಭಾಗಕ್ಕೆ ಉತ್ತರವಾಗಿ ಮೆಟ್ರೋಪಾಲಿಟನ್ ಟ್ರಾನ್ಸ್‌ಪೋರ್ಟ್ ಕೌನ್ಸಿಲ್ ಸರ್ಕಾರದ ಜೊತೆಗೆ ಮಾತುಕತೆ ನಡೆಸಿದೆ ಮತ್ತು ಅವರು ಸ್ಟಾಟಿಸ್ಟಿಕ್ಸ್ ಕೇಳಿದುದನ್ನು ಕೊಟ್ಟಿದ್ದೇವೆ, ಅವರು ಯೋಚನೆ ಮಾಡುತ್ತಿದ್ದಾರೆ ಎಂದು ಎಲ್ಲವನ್ನೂ ಮೆಟ್ರೋಪಾಲಿಟನ್ ಟ್ರಾನ್ಸ್‌ಪೋರ್ಟ್ ಕೌನ್ಸಿಲ್ ಮೇಲೆ ಹಾಕಿದ್ದಾರೆ. ಇದರಿಂದ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವುದಕ್ಕೆ ಯೋಚನೆ ಮಾಡಿದ್ದಾರೆಯೇ ? ಬೆಂಗಳೂರು ನಗರಕ್ಕೆ ಸರ್ಕ್ಯುಲರ್ ರೈಲ್ವೆ ಬೇಕೋ ಅಥವಾ ಅಂಡರ್‌ಗ್ರೌಂಡ್ ರೈಲ್ವೆ ಬೇಕೋ ಎನ್ನುವುದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಸರ್ಕಾರ ಕೊಟ್ಟಿದೆಯೇ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಬಹಳ ಅವಶ್ಯಕ, ತಕ್ಷಣದಲ್ಲಿ ಆಗಬೇಕು ಎಂದು ಹೇಳಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಒಂದು ಕಮಿಟಿ ರಚನೆ ಮಾಡಿದ್ದೀರಿ, ಅದರಲ್ಲಿ ಹೋಂ ಸೆಕ್ರೆಟರಿ ಅಧ್ಯಕ್ಷರಾಗಿದ್ದಾರೆ. ಅವರ ಜೊತೆಗೆ ಯಾರಾದರೂ ಅಧಿಕಾರಿಗಳು ಇದ್ದಾರೆಯೇ ? ಅಧಿಕಾರೇತರರು ಯಾರಾದರೂ ತರುವುದಕ್ಕೆ ಅವಕಾಶ ಮಾಡಲಾಗಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಮಿಟಿಯಲ್ಲಿ ಹೋಂ ಸೆಕ್ರೆಟರಿ ಇದ್ದಾರೆ. ಕಮಿಷನರ್ ಫಾರ್ ಟ್ರಾನ್ಸ್‌ಪೋರ್ಟ್, ಕಮಿಷನರ್ ಫಾರ್ ಪೋಲೀಸ್, ಡೆಪ್ಯುಟಿ ಸೆಕ್ರೆಟರಿ ಪಬ್ಲಿಕ್ ವರ್ಕ್ಸ್, ಜನರಲ್ ಮ್ಯಾನೇಜರ್ ಬಿ.ಟಿ.ಎಸ್., ಟೌನ್ ಪ್ಲಾನಿಂಗ್ ಆಫೀಸರ್ ಮತ್ತು ಚೇರ್‌ಮನ್ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಇದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಅವಶ್ಯಕವಾಗಿ ಆಗಬೇಕೆಂಬುದು ನಮ್ಮ ಅಭಿಪ್ರಾಯ ಎಂದು ತಿಳಿಸಿರುವುದಾಗಿ ಹೇಳಿದರು. ಯಾವುದು ಅವಶ್ಯಕವಾಗಿ ಆಗಬೇಕು ಎಂದು ಹೇಳಿದ್ದಾರೆ. ಮೇಲುಗಡೆ ಓಡಾಡತಕ್ಕ ಸರ್ಕ್ಯುಲರ್ ರೈಲ್ವೆಯೋ ಅಥವಾ ಅಂಡರ್‌ಗ್ರೌಂಡ್ ರೈಲ್ವೆಯೋ ? ಯಾವುದು ಎಂಬುದನ್ನು ಹೇಳುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡನ್ನೂ ಕೂಡ, ಬೇರೆ ಬೇರೆಯಾಗಿ ಕೂಡ ಮಾಡತಕ್ಕದ್ದರ ಯೋಗ್ಯಾಯೋಗ್ಯತೆಯನ್ನು ಪರಿಶೀಲನೆ ಮಾಡಿ ಯಾವ ಯಾವ ಭಾಗದಲ್ಲಿ ಸರ್ಫೇಸ್ ರೈಲ್ವೆ ಹಾಕಬೇಕು, ಯಾವ ಭಾಗದಲ್ಲಿ ಅಂಡರ್ ಗ್ರೌಂಡ್ ರೈಲ್ವೆ ಹಾಕಬೇಕು, ಇವುಗಳ ಕಾಂಬಿನೇಷನ್ ಮಾಡುವುದನ್ನು ಕೂಡ ಯೋಚನೆ ಮಾಡುತ್ತಿದ್ದೇವೆ. ಇದರಲ್ಲಿ ಯಾವುದು ಟೆಕ್ನಿಕಲ ಫೀಸಿಬಲ್, ಯಾವುದು ಫೈನಾನ್‌ಷಿಯಲ ಫೀಸಬಲ್ ಎನ್ನತಕ್ಕದ್ದು ವಿವರವಾದ ಅಂದಾಜುಗಳನ್ನು ಮಾಡಿದ ಮೇಲೆ ಗೊತ್ತಾಗುತ್ತದೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಉತ್ತರದಲ್ಲಿ ರಸ್ತೆ ಸಾರಿಗೆಯನ್ನು ಉತ್ತಮಗೊಳಿಸಲು ದೀರ್ಘಾವಧಿ ಹಾಗೂ ಅಲ್ಪಾವಧಿ ಹೀಗೆ ಎರಡು ಹಂತಗಳ ಯೋಜನೆಯನ್ನು ಸೂಚಿಸುವುದಾಗಿ ಮಂಡಳಿ ತಿಳಿಸಿದೆ ಎಂದು ಹೇಳಲಾಗಿದೆ. ಇದರಲ್ಲಿ ದೀರ್ಘಾವಧಿ ಯೋಜನೆಗಳಾವುವು ? ಮತ್ತು ಅಲ್ಪಾವಧಿ ಯೋಜನೆಗಳಾವುವು ಎನ್ನುವುದರ ವಿವರಗಳನ್ನು ತಿಳಿಸಲಾಗುತ್ತದೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ. ಇದಕ್ಕೆ ಅವಶ್ಯಕವಾದ ಮಾಹಿತಿಗಳನ್ನು ಒದಗಿಸಿ ಕೊಟ್ಟ ಮೇಲೆ ಇದನ್ನು ತಿಳಿಸಬಹುದು. ಈಗ ಇದರ ಬಗ್ಗೆ ಹೇಳಲು ನಾವೇನೂ ಟೆಕ್ನೀಷಿಯನ್‌ಗಳಲ್ಲ. ಹಾಗೆ ತಿಳಿಸುವುದು ಸೂಕ್ತವೂ ಅಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈಗ ಮಂತ್ರಿಗಳು ಇದರ ಸದಸ್ಯರುಗಳ ಹೆಸರನ್ನು ಹೇಳಿದರು. ಇದರಲ್ಲಿ ಬೆಂಗಳೂರು ಕಾರ್ಪೊರೇಷನ್ ಕಮಿಷನರ್ ಹೆಸರು ಏಕೆ ಸೇರಿಸಲಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಲ್ಲಿ ಟೌನ್ ಪ್ಲಾನಿಂಗು ಆಫೀಸರಿದ್ದಾರೆ ಮತ್ತು ಸಿ ಐ ಟಿ ಬಿ ಚೇರ್ಮನ್ನರಿದ್ದಾರೆ, ಇದು ಟೆಕ್ನಿಕಲ್ ಕಮಿಟಿ. ಇದಕ್ಕೆ ಯಾರು ಬೇಕೆನ್ನುವುದನ್ನು ಅವರೇ ತೀರ್ಮಾನ ಮಾಡಿ ಮಾಡಲಾಗಿದೆ.

Supply of Controlled Cloth in South Kanara District

593. **Smt. WINNIFRED F. FERNANDES** (Coondapur).—

Will the Minister of State for Food and Civil Supplies be pleased to state :—

(*a*) whether Government is aware that no arrangements are made to make available controlled cloth to the people in the District of South Kanara ;

(*b*) if so, whether Government would be pleasad to make available controlled cloth to the people in South Kanara either through its own dealers or through the dealers who are already in the trade, without any more delay ?

Sri K. H. PATIL (Minister for Agriculture and Forests) [On behalf of] SMT. E. E. VAZ (Minister of State for Food and Civil Supplies).—

(*a*) No. Necesaary arrangements have been made.

(*b*) Does not arise in view of reply to Clause (*a*) above.

Smt. WINNIFRED F. FERNANDES.—To my que tion whether Government is aware that no arrangements are made to make available controlled cloth to the people in the District of South Kanara you have said No, and at the same time you have also said that necessary arrangements have been made.

† **Sri K. H. PATIL.**—The controlled cloth is beeing distributed through all the shops.

Smt. WINNIFRED F. FERNANDES.—Which are the various varieties of controlled cloth available in all the shops with all the dealers in South Kanara District ?

Sri K. H. PATIL.—Notice.

Sri M. S. KRISHNAN.—This is how answers are being given in a highly irresponsible manner. ಕಂಟ್ರೋಲು ಕ್ಲಾತುಗಳ ಬಗ್ಗೆ ಸರಿಯಾದ ವಿವರಗಳನ್ನು ಕೇಳುತ್ತಿರುವಾಗ ಮಾನ್ಯ ಮಂತ್ರಿಗಳು ಹೀಗೆ ಉತ್ತರ ಕೊಟ್ಟರೆ ಇದು ಸರಿಯಾಗುತ್ತದೆಯೋ ? ಇದಕ್ಕಾಗಿಯೇ ಇದೇ ಖಾತೆ ಸಚಿವರು ಇದರ ಬಗ್ಗೆ ಎಲ್ಲ ವಿವರಗಳನ್ನೂ ಕೊಡಲು ಅನುಕೂಲವಾಗುತ್ತೆ ಎಂದು ಹೇಳುವುದು.

Sri K. H. PATIL.—There are hundreds of varieties of cloths being distributed. It would be difficult to furnish details as to each variety to this House at such a short notice.

ಶ್ರೀ ಎಂ. ಎಸ್. ಕೃಷ್ಣನ್.—ಇದು ಹೇಗೆ ಸರಿಯಾಗುತ್ತದೆ ? ಕಂಟ್ರೋಲ್ ಕ್ಲಾತ್ ಎನ್ನುವುದರ ಬಗ್ಗೆ ಅನೇಕ ವಿಧಗಳಿರುತ್ತವೆ, ಇದು ಸರಿಯಾಗಿ ತಿಳಿದು ಇಲ್ಲಿ ಉತ್ತರ ಕೊಡುತ್ತಿಲ್ಲ.

Smt. WINNIFRED F. FERNANDES.—Who are the dealers who are dealing with controlled cloth in South Kanara District ?

Sri K. H. PATIL.—This has not been asked, Madam.

Mr. DEPUTY SPEAKER.—I was inclined to take up this question after a little while.

ಶ್ರೀ ಕೋಣಂದೂರು ಲಿಂಗಪ್ಪ.—ಹೀಗಾದರೆ ಹೇಗೆ ?

Hon'ble Minister of State for Food and Civil Supplies came to the House at this stage).

Mr. DEPUTY SPEAKER.—I would call upon the Hon. Minister for Food and Civil Supplies to reply to the question of Smt. Winnifred Fernandes.

Smt. WINNIFRED F. FERNANDES.—To my question (a) you have said 'No' and at the same time you have also said : that Necessary arrangements have been made to supply controlled cloth in South Kanara District. May I know what are the arrangements made in South Kanara District ?

Smt. E. E. VAZ.—The following dealers have been appointed as retailers in South Kanara District.

1. Janatha Bazar-Retail unit of S. K. Central Co-operative Wholesale Stores Ltd., Ganapathi High School Road, Mangalore-1.
2. The Mangalore Co-operative Stores Limited, Mangalore.
3. The Fr. Mullers Ch, I. Co-operative Stores Limited, Kankandy, Mangalore-2.
4. The C. P. C. Co. and its allied C. W. I. Consumers Co-operative Society Limited, Kodialbail, Mangalore-3.
5. The Karnataka Polytechnic Co-operative Society Limited Mangalore-4.
6. The Ajekar Co-operative Stores Limited, Ajekar, South Kanara, Karkal Taluk.
7. The Idkidu Service Co-operative Society Limited, Vittal Mudnur, S. K. Bantwal Taluk.
8. The Maravanthe Badakere Co-operative Society Limited, Navand, Coondapur Taluk.
9. The Kalanja Balia Co-operative Society, Kalanja Baliala, Sullia Taluk.
10. The Nerlakatte Co-operative Agricultural Bank Limited, Nerlakatte, Bantwal Taluk.

Smt. WINNIFRED F. FERNANDES.—Which are the different to varieties of controlled cloth which are now available in all the shops wit all the dealers in South Kanara District?

Smt. E. E. VAZ.—What exactly is available to-day, I will not be in a position to say ; but dhoties, sarees, long cloth and shirtings are available under the controlled categories of cloth.

ಶ್ರೀ ಎಂ. ಎಸ್. ಕೃಷ್ಣನ್.—ಕಂಟ್ರೋಲ್ ಕ್ಲಾತ್‌ನ್ನು ಹಂಚಬೇಕೆಂದು ಮಾಡಿರುವ ಕಡೆಗಳಲ್ಲಿ ಬಡವರಿಗೆ ಬೇಕಾದ ಕೋರ್ಸ್ ಕ್ಲಾತ್ ಬರುತ್ತದೆ. ಇದನ್ನು ಕೊಂಡುಕೊಳ್ಳಲು ಹೋದಾಗ ಅಂಗಡಿಗಳಲ್ಲಿ ಇದರ ಜೊತೆ ಫೈನ್ ಕ್ಲಾತನ್ನೂ ತೆಗೆದುಕೊಂಡರೆ ಕೋರ್ಸ್ ಕ್ಲಾತ್ ಕೊಡುತ್ತೀವೆಂದು ಒತ್ತಾಯಮಾಡುತ್ತಾರೆ ಎನ್ನುವ ದೂರುಗಳು ಅಲ್ಲಲ್ಲಿ ಬರುತ್ತಿವೆ. ಇದರ ಬಗ್ಗೆ ಸರಿಯಾದ ಸೂಚನೆಗಳನ್ನು ಕೊಡಲಾಗಿದೆಯೇ?

ಶ್ರೀಮತಿ ಇ. ಇ. ವಾಜ್.—ಕೋರ್ಸ್ ಕ್ಲಾತ್ ಜೊತೆಗೆ ಫೈನ್ ಕ್ಲಾತ್ ಕೊಳ್ಳಬೇಕೆಂದು ಎಲ್ಲೂ ಒತ್ತಾಯ ಮಾಡುತ್ತಿಲ್ಲ. ಒಬ್ಬರಿಗೆ ಹತ್ತು ಮೀಟರು ಕಂಟ್ರೋಲ್ ಕ್ಲಾತ್ ಅಥವಾ ಎರಡು ಕಂಟ್ರೋಲು ಸೀರೆಗಳನ್ನು ಹಂಚಬಹುದು ಎಂದಿದೆ

Smt. WINNIFRED F. FERNANDES.—In Coondapur, controlled cloth is not available with any of the dealers. Just now, you have given the answer that it is available. May I Know the reason for this ?

ಶ್ರೀಮತಿ ಇ. ಇ. ವಾಜ್.—ಸೌತ ಕ್ಯಾನರಾ ಡೆಪ್ಯುಟಿ ಕಮಿಷನವರಿಗೆ ಒಂಬತ್ತು ಬೇಲ್‌ಗಳಷ್ಟು ಕಂಟ್ರೋಲು ಕ್ಲಾತು ಕೊಡಲಾಗಿದೆ. ಇದನ್ನು ಅವರು ಎಲ್ಲರಿಗೂ ಸರಿಯಾದ ರೀತಿಯಲ್ಲಿ ಹಂಚುತ್ತಿದ್ದಾರೆ. ಇದರ ವಿವರಗಳು ಬೇಕಾದರೆ ಬೇರೆ ಪ್ರಶ್ನೆ ಕೇಳಿದರೆ ಆಗ ಒದಗಿಸಿಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಕುಂದಾಪುರದಲ್ಲಿ ಹಂಚಿಕೆಯಾಗಿಲ್ಲ ಎಂದು ನಿರ್ದಿಷ್ಟವಾಗಿ ಕೇಳಿದ್ದರೂ ಮಂತ್ರಿಗಳು ಸರಿಯಾಗಿ ಉತ್ತರ ಕೊಡುತ್ತಿಲ್ಲ. ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀಮತಿ ಇ. ಇ. ವಾಜ್.—ಎಲ್ಲೆಲ್ಲಿ ಯಾವ ಸೊಸೈಟಿಗಳ ಮೂಲಕ ಡಿ ಸಿ ಯವರು ಹಂಚಿಕೆ ಮಾಡಿದ್ದಾರೆ ಅದರ ವಿವರಗಳು ಸ್ಪಷ್ಟವಾಗಿ ಗೊತ್ತಿಲ್ಲ. ಮುಂದೆ ಇದರ ವಿವರಗಳನ್ನು ಒದಗಿಸುತ್ತೇನೆ. We will examine it.

Sri BAPU GOWDA RAYAPPA.—From the statement of the Hon. Minister it is seen that only Co-operative Societies has been issued this cloth I want to Know whether Government has made any arrangements to allot this cloth to the various retail shops at district level.

Smt. E. E. VAZ.—The cloth is always distributed on population basis. ಸುಮಾರು 78 ಬೇಲುಗಳಷ್ಟು ಬಂದಿವೆ ಎಂದು ಇಲ್ಲಿನ ಡಿ ಸಿ ಯವರಿಂದ ವರದಿ ಬಂದಿದೆ, ಇಲ್ಲಿನ ಕೋಆಪರೇಟೀವ್ ಸೊಸೈಟಿಗಳು ಇನ್ನೆಷ್ಟು ಬೇಕೆಂದು ಕೇಳಿದರೆ ಅದನ್ನು ಇಲ್ಲಿರುವ ಸಿವಿಲ್ ಸಪ್ಲೈಸ್ ಡೈರೆಕ್ಟರ್‌ರವರು ಅವರಿಗೆ ಒದಗಿಸುವ ಏರ್ಪಾಡು ಮಾಡುತ್ತಾರೆ.

Removal of Restrictions on Non-Controlled Cloth

594 **Smt. WINNIFRED F. FERNANDES** (Coondapur).—

Will the Minister of State for Food and Civil Supplies be pleased to state :—

(*a*) whether Government would exempt non-controlled cloth from the purview of the Mysore Cotton Textiles (Maintenance of Accounts and Control) Order, 1967 as no public interest is served by

(SMT. WINNIFRED F. FERNANDES)

such enforcement since non-controlled cloth is freely available in the market;

(b) whether the Government would review all similar restrictions imposed on various trades periodically and remove the same wherever they are found to be unnecessary?

Smt. E. E. VAZ (Minister of State for Food and Civil Supplies).—

(a) Not at present when there is alround increase in prices.

(b) Yes.

Smt. WINNIFRED F. FERNANDES.—My question is whethrr the Government would exempt non-controlled cloth from the purview of the Mysore Cotton Textiles Order, 1967. When no purpose is served, in the interest of the public, what is the fun of your having this order?

Smt. E. E. VAZ.—There is no such thing as 'no purpose is served' This is a means of checking price rise; otherwise, the dealers will be inclined to stock them. Unless minimum control is exercised, this cannot be checked.

Smt. WINNIFRED F. FERNANDES.—When are you going to remove all these restrictions? Is it in the very near future?

Smt. E. E. VAZ.—I cannot tell you exactly when the control will be repealed. But under the Essential Commdities Act, 55 items now come under the purview of that Act. Out of these, whenever there is necessity or when we find there is good supply in the market and demand is less, then such items ara deleted or for the time being suspended from the Control Order. Sometimes, if the demand is more and supply is for certain commodities, they will have to be included.

Sri M. S. KRISHNAN.—Is it not a fact that despite the Mysore Cotton Textile (Maintenance of Accounts and Control) Order there is good lot of cloth and prices are rising in such a manner that people are not able to purchase; should it not be the policy of the Government to see that more effective restrictions upon increase in prices are made?

Smt. E. E. VAZ.—The Hon'ble Member has given a very good suggestion. Just now, there is no compulsion for going in for superior cloth because control cloth is available which can meet the needs of the people.

Mr. DEPUTY SPEAKER.—I will go back to passed over questions.

Malnad Development Board

7 5. Sri S. BANGARAPPA (Sorab).—

Will the Chief Minister be pleased to state :—

(*a*) whether the Government has a proposal before it for constituting Malnad Development Board for the purpose of Developing the Malnad area in the State ;

(*b*) if so, when such a Board would be constituted ?

Sri DEVENDRAPPA GHALAPPA (Minister of State for Planning and Informetion) [on behalf Sri D. DEVARAJ URS (Chief Minister)].—

(*a*) and (*b*) No, Sir. But an integrated development plan for the Western Ghats Region including the coastal areas is being prepared.

ಶ್ರೀ ಎಸ್. ಬಂಗಾರಪ್ಪ.—ನನ್ನ ಮೊದಲನೆಯ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಹಿಂದೆ ಈ ಬಗ್ಗೆ ಪರಿಶೀಲನೆ ಮಾಡುವುದಾಗಿ ಸರ್ಕಾರದವರು ಆಶ್ವಾಸನೆ ಕೊಟ್ಟಿದ್ದರು ; ಆ ಒಂದು ಆಶ್ವಾಸನೆಯನ್ನು ಅನುಸರಿಸಿ ಈಗಲಾದರೂ ಒಂದು ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡುವುದಕ್ಕೆ ಪುನಃ ಯೋಚನೆ ಮಾಡುತ್ತೀರಾ ?

† ಶ್ರೀ ದೇವೇಂದ್ರಪ್ಪ ಘಾಳಪ್ಪ.—ಈಗ ಇರತಕ್ಕಂಥ ಮಲೆನಾಡು ಏರಿಯಾದಲ್ಲಿ ಸೆಮಿಮಲೆನಾಡು ಏರಿಯಾ ಕೂಡ ಬರುತ್ತದೆ. ಆದ್ದರಿಂದ ಮಲೆನಾಡಿನ ಸಮಗ್ರ ಅಭಿವೃದ್ಧಿಗಾಗಿ ಡೆವಲಪ್‌ಮೆಂಟ್ ಕಮೀಷನರ್ ಅವರ ಚೇರ್‌ಮನ್‌ಷಿಪ್‌ನಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಆ ಕಮಿಟಿಯಲ್ಲಿ ಟೆಕ್ನಿಕಲಿ ಸಂಬಂಧಪಟ್ಟ ಅಧಿಕಾರಿಗಳೆಲ್ಲಾ ಸದಸ್ಯರಾಗಿದ್ದಾರೆ. ಈಗ ಸಧ್ಯಕ್ಕೆ ಆ ಕಮಿಟಿಯ ಕೆಲಸ ನಡೆಯುತ್ತಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ಬಗ್ಗೆ ಪ್ಲಾನ್ಸ್ ತಯಾರಾಗುತ್ತಿದೆ ಎಂದು ಹೇಳಿದಿರಿ ; ಈ ಪ್ಲಾನ್ಸ್ ಎಷ್ಟು ದಿವಸದಲ್ಲಿ ಮುಗಿಯುತ್ತದೆ ಮತ್ತು ಅವನ್ನು ತ್ವರಿತವಾಗಿ ಮಾಡುವ ಯೋಚನೆ ಏನಾದರು ಇದೆಯೇ ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—5 ನೇ ಪಂಚವಾರ್ಷಿಕ ಯೋಜನೆಯೊಳಗೆ ತಯಾರು ಮಾಡಿ ಅಳವಡಿಸಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಿಂದೆ ಕೇಂದ್ರದ ಮಂತ್ರಿಗಳಾದ ಶ್ರೀ ಸಿ. ಸುಬ್ರಹ್ಮಣ್ಯಂ ಅವರು ಮಲೆನಾಡು ಅಭಿವೃದ್ಧಿಯನ್ನು ಟೆನಸಿವ್ಯಾಲಿ ಯೋಜನೆಯ ರೀತಿಯಲ್ಲಿ ಮಾಡಬಹುದೆಂದು ಹೇಳಿಕೆ ಕೊಟ್ಟಿದ್ದರು. ಆ ರೀತಿ ಏನಾದರು ಯೋಜನೆಯನ್ನು ಕೈಕೊಳ್ಳುವ ಬಗ್ಗೆ ಯೋಚನೆ ಮಾಡಿದ್ದೀರಾ ?

ಶ್ರೀ ದೇವೇಂದ್ರಪ್ಪ ಘಾಳಪ್ಪ. ಈಗ ಇನ್‌ಟೆನ್‌ಸಿವ್ ಪ್ರೋಗ್ರಾಮ್ ಮಾಡುತ್ತಿರುವಾಗ ಅದರಲ್ಲಿ ಇದೆಲ್ಲಾ ಕವರ್ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕರಾವಳಿ ಪ್ರದೇಶವನ್ನೊಳಗೊಂಡಂತೆ ಪಶ್ಚಿಮ ಘಟ್ಟಗಳ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಯೋಜನೆಯನ್ನು ತಯಾರಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಈ ಯೋಜನೆಯ ಪ್ರಕಾರ ಮಲೆನಾಡಿನ ಯಾವ ಯಾವ ಭಾಗಗಳು ಸೇರುತ್ತವೆ ಎಂಬುದನ್ನು ಹೇಳುತ್ತೀರಾ ?

Sri DEVENDRAPPA GHALAPA.—They are :

Belgaum District.—Khanapur Taluka

Dharwar District.—Kalghatgi

North Kanara District.—Whole District

(SRI DEVENDRAPPA GHALAPPA)

South Kanara District.—Coondapur, Belthangadi, Karkala, Puttur & Sullia Taluks.

Coorg.—Whole District

Shimoga.—Hosnagara, Thirthalli Sagar, Shikaripur. Shimoga, Sorab Taluks

Chikmagalur.—Chikmagalur, Koppa, Mudigere, Sringeri, Narasimharajapura, Tarikere Taluks

Hassan.—Alur and Manjarabad Taluks

Mysore.—Heggadadevanakote Taluk.

ಶ್ರೀ ಎಂ. ಎಚ್. ಜಯಪ್ರಕಾಶನಾ ರಾಯಣ್.—ಇಲ್ಲಿ ಕರಾವಳಿ ಪ್ರದೇಶವನ್ನೊಳಗೊಂಡಂತೆ ಪಶ್ಚಿಮ ಘಟ್ಟಗಳ ಪ್ರದೇಶದ ಸಮಗ್ರ ಅಭಿವೃದ್ಧಿ ಯೋಜನೆಯನ್ನು ತಯಾರಿಸಲಾಗುತ್ತಿದೆ ಎಂದು ಹೇಳಿದ್ದೀರಿ, ಈ ಯೋಜನೆಯನ್ನು ತಯಾರು ಮಾಡುವವರು ಯಾರು ? ಮತ್ತು ಯಾವ ರೀತಿ ತಯಾರು ಮಾಡುತ್ತಾರೆ ? ಇದರ ಬದಲು ಒಂದು ಮಂಡಲಿ ಮಾಡಿ ಅವರಿಗೆ ವಹಿಸುವುದು ಒಳ್ಳೆಯದಲ್ಲವೇ ? ಮತ್ತು ಮಲೆನಾಡಿನ ಅನುಕೂಲಗಳನ್ನು ನಾನಾ ರೀತಿಯಿಂದ ಉಪಯೋಗಿಸಿಕೊಳ್ಳಬೇಕಾದರೆ ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡುವುದು ಅವಶ್ಯಕತೆ ಇಲ್ಲವೇ ?

Sri DEVENDRAPPA GHALAPPA.—ಅದರ ಸಂಬಂಧವಾಗಿಯೇ Technical team unde: the Chairmanship of a Member, Planning Commission is being constituted to consolidate the information and proposals, which would be dovetailed in the Fifth Five-Year Plan. Similarly, under the Chairmanship of the Development Commissioner preparation of the scheme under the various Departments, of forestry, animal husbandry, minor irrigation dairying, fishery, rural electrification, mineral development town-planning and tourism. ಇವರುಗಳಿಂದ ಟೆಕ್ನಿಕಲ್ ಸಜೆಷನ್ ತೆಗೆದುಕೊಂಡು ಕೆಲಸ ಮಾಡಬೇಕಾಗುತ್ತದೆ.

Sri B. SUBBIAH SHETTY.—Except Mangalore, in South Kanara, the entire Mangalore Taluk is as backward or as forward as any other taluk which you have included in the category of Malnad. May I know why Mangalore Taluka is left out in the list of Malnad areas which you have just now read out ?

Sri DEVENDRAPPA GHALAPA.—Notice.

ಶ್ರೀ ಬಾಪೂಗೌಡ ಲಾಯಪ್ಪ.—ಮಲೆನಾಡಿನ ಅಭಿವೃದ್ಧಿ ಬಗ್ಗೆ ಮತ್ತು ಪಶ್ಚಿಮ ಘಟ್ಟಗಳ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಯೋಜನೆ ತಯಾರು ಮಾಡುವ ಕಾರ್ಯಕ್ರಮವಿರುವಂತೆ ಮೈಸೂರು ರಾಜ್ಯದ ಬೇರೆ ಪ್ರದೇಶಗಳ ಬಗ್ಗೆ ಅಂದರೆ ಹಿಂದುಳಿದ ಭಾಗಗಳನ್ನು ಮುಂದೆ ತರುವ ಬಗ್ಗೆ ಒಂದು ಬೋರ್ಡನ್ನು ರಚನೆ ಮಾಡುತ್ತೀರಾ ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಆ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.—ಮೈದಾನ ಏರಿಯಾಕ್ಕಿಂತ ಮಲೆನಾಡು ಏರಿಯಾದಿಂದ ಸರಕಾರಕ್ಕೆ ಹೆಚ್ಚು ಉತ್ಪನ್ನ ಬರುತ್ತಿದೆ. ಹಲವಾರು ಕೋಟಿ ರೂಪಾಯಿಗಳ ವರಮಾನ ದೊರಕುತ್ತಿದೆ. ಇದಕ್ಕಿಂತ ಇನ್ನೂ ಹೆಚ್ಚಿನ ಸಂಪನ್ಮೂಲಗಳನ್ನು ಪಡೆಯುವ ದೃಷ್ಟಿಯಿಂದ ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತಿದ್ದೇನೆ. ಈ ಬಗ್ಗೆ ಸರ್ಕಾರದವರು ಪುನರ್‌ಪರಿಶೀಲನೆ ಮಾಡಿ ಜಾಗ್ರತೆ ಒಂದು ಮಂಡಲಿಯನ್ನು ರಚನೆ ಮಾಡುತ್ತೀರಾ ?

Mr. DEPUTY SPEAKER.—It is a suggestion for action.

C. D. Works in Sira and Gubbi Taluks

225. **Sri T. TARE GOWDA** (Kallambella).—

Will the Minister for Public Works and Electricity be pleased to state :—

(*a*) whether the Superintending Engineer, P.W.D., Bangalore Circle, Bangalore has recommended to the Governmet to make provi sion in the current year's budget for 3½ lakhs C. D. Works in Tavarekere, Sira Taluk, Hayildhore, Manchaldhore, Hosakere in Gubbi Taluk and for P. W. D. or C. S. R. Road ;

(*b*) if so, whether the Government has made provision for the same in the current year's budget ?

Sri H. M. CHANNABASAPPA (Minister for Public Works and Electricity).—

(*a*) No.

(*b*) Dose not arise in view cf reply to Clause (*a*) above.

ಶ್ರೀ ಟಿ. ತಾರೇಗೌಡ.—ಸಿರಾ ತಾಲ್ಲೂಕಿನ ತಾವರೆಕೆರೆ ಹಾಗೂ ಹಯಿರ್‌ದೊರೆ, ಮಂಚಿಲ್ ದೊರೆ ಮತ್ತು ಗುಬ್ಬಿ ತಾಲ್ಲೂಕಿನ ಹೊಸಕೆರೆ. ಈ ರಸ್ತೆಯನ್ನು ಸರ್ಕಾರದವರು ಪಿ ಡಬ್ಲ್ಯು.ಡಿ ರಸ್ತೆಯಾಗಿ ಮಂಜೂರುಮಾಡಿ 3-4 ವರ್ಷಗಳಾದುವು. ಈ ರಸ್ತೆಯ ಕೆಲಸ ಮತ್ತು ಇದಕ್ಕೆ ಸಂಬಂಧಪಟ್ಟ ಡ್ರೈನೇಜ್ ಕೆಲಸ ಮಧ್ಯದಲ್ಲಿ ಹಾಗೆಯೇ ನಿಂತುಹೋಗಿದೆ. ಇದಕ್ಕೆ ಸಂಬಂಧಪಟ್ಟ ಎಸ್ಟಿಮೇಟನ್ನು ಎಗ್ಸಿಕ್ಯುಟೀವ್ ಇಂಜಿನಿಯರು ಸೂಪರಿನ್‌ಟೆಂಡಿಂಗ್ ಇಂಜಿನಿಯರಿಗೆ ಕಳುಹಿಸಿ ದ್ದಾರೆ ಎಂದು ಕೇಳಿದ್ದೇನೆ. ಇದು ಏರಿಡ್ ಏರಿಯಾ ಇದನ್ನು ಜಾಗ್ರತೆಯಾಗಿ ಮಾಡಿಸಿ ಕೊಡುತ್ತೀರಾ ?

1–30 P.M.

† ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ರಸ್ತೆ ಪಿ.ಡಬ್ಲ್ಯು.ಡಿ ರಸ್ತೆಯಾಗಿರುವುದು ನಿಜ. ಹಣ ದೊರೆತಂತೆ ಈ ಕೆಲಸವನ್ನು ಮಾಡಿಕೊಂಡು ಹೋಗುತ್ತೇವೆ.

ಶ್ರೀ ಟಿ. ತಾರೇಗೌಡ.—ಇದಕ್ಕೆ ಸ್ಪೆಷಲ್ ಗ್ರ್ಯಾಂಟ್‌ಕೊಟ್ಟು ಈ ಕೆಲಸವನ್ನು ಆದಷ್ಟು ಬೇಗ ಮಾಡಿಸಿಕೊಡುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಹಣ ದೊರೆತರೆ ಸ್ಪೆಷಲ್ ಗ್ರ್ಯಾಂಟ್ ಕೊಡುವುದು ತೊಂದರೆ ಯಾಗುವುದಿಲ್ಲ.

Financial Aid to Newly Started High Schools

708. **Sri B. BYRAPPAJI** (Turuvekere).—

Will the Minister for Education be pleased to state :—

(*a*) the number of High Schools newly started by the Private Institutions since the last three years in the State ;

(*b*) whether it is a fact that financial aid to the newly started High Schools is not given up to first five years ;

(SRI B. BYRAPPAJI)

(c) if so, whether the respresentations have been made to the Government that it is not possible to run the many High Schools without the financial aid from the Government ?

SRI A. R. BADARINARAYANA (Minister for Education).—

(a) Year	Number
1969 70	72
1970-71	90
1971-72	82

(b) No financial aid is being given to Boys and Co-Education Schools.

(c) Some of the Institutions have represented to reduce the time limit from five years to three years.

ಶ್ರೀ ಬಿ. ಬೈರಪ್ಪಾಜಿ.—ಈಗ್ಗೆ 3 ವರ್ಷಗಳ ಹಿಂದೆ 240 ಹೊಸ ಪ್ರೌಢ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. 4 ವರ್ಷಗಳ ಹಿಂದೆ ಪ್ರಾರಂಭ ಮಾಡಿದಂತಹ ಎಲ್ಲಾ ಹೈಸ್ಕೂಲು ಗಳಿಗೂ ಸರ್ಕಾರದವರು ಪೂರ್ತಿ ಗ್ರ್ಯಾಂಟ್ ಕೊಡುತ್ತಿದ್ದಾರೆ. ಈಚೆಗೆ ಪ್ರಾರಂಭಿಸಿದ ಸ್ಕೂಲುಗಳಿಗೆ 5 ವರ್ಷಗಳವರೆಗೆ ಸರ್ಕಾರದವರು ಗ್ರ್ಯಾಂಟ್ ಕೊಡುವುದಿಲ್ಲ ಎಂದು ಹೇಳಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭ ಮಾಡಿರುವ ಅನೇಕ ಹೈಸ್ಕೂಲುಗಳು ಆರ್ಥಿಕ ತೊಂದರೆಯಿಂದ ಮುಚ್ಚು ವುದಕ್ಕೆ ತಯಾರಾಗಿವೆ. ಇಂಥಾ ವರದಿಗಳೂ ಕೂಡ ಸರ್ಕಾರಕ್ಕೆ ಬಂದಿವೆ. ಆದ್ದರಿಂದ 5 ವರ್ಷ ಗಳ ನಿಬಂಧನೆಯನ್ನು ಏನು ಮಾಡಿದ್ದಾರೆ ಅದನ್ನು ಕಡಿಮೆಮಾಡಿ 3 ವರ್ಷ ಮಾಡುವ ವ್ಯವಸ್ಥೆ ಯನ್ನು ಸರ್ಕಾರದವರು ಕೈಗೊಳ್ಳುತ್ತಾರೆಯೇ ?

† ಶ್ರೀ ಎ. ಆರ್. ಬದರೀನಾರಾಯಣ.—ಆ ಪ್ರೌಢ ಶಾಲೆಗಳಿಗೆ ಮಂಜೂರಾತಿಯನ್ನು ಕೊಡುವಾಗ ಅವರ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ನೀವು 5 ವರ್ಷಗಳ ಕಾಲ ನಡೆಸು ವುದಕ್ಕೆ ಸಾಧ್ಯ ಇದೆಯೇ, ಆ ರೀತಿ ನೀವು ಒಪ್ಪುವುದಾದರೆ ನಿಮಗೆ ಹೈಸ್ಕೂಲು ನಡೆಸುವುದಕ್ಕೆ ಪರ್ಮಿಷನ್ ಕೊಡುತ್ತೇವೆ ಸರ್ಕಾರದವರು ತಿಳಿಸಿದಾಗ ಅದಕ್ಕೆ ಅವರು ಒಪ್ಪಿದ್ದರ ಮೇಲೆ ಸರ್ಕಾರ ದವರು ಪರ್ಮಿಷನ್ ಕೊಟ್ಟಿರುತ್ತಾರೆ. ಇದು ಹಿಂದಿನ ಸರ್ಕಾರದಲ್ಲಿ ತೀರ್ಮಾನ ಆದದ್ದು. ಈಗ ಅದನ್ನು ಮಾನ್ಯ ಸದಸ್ಯರು ಪುನರ್ ವಿಮರ್ಶೆ ಮಾಡಬೇಕು, 5 ವರ್ಷ ಇರುವುದನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತಿದ್ದಾರೆ. ಅದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಇದು ಬಹಳ ಪ್ರಮುಖವಾದ ವಿಚಾರ. ಗ್ರಾಮಾಂತರ ಪ್ರದೇಶ ಗಳಲ್ಲಿ ಅವರು ಹೈಸ್ಕೂಲು ಪ್ರಾರಂಭ ಆದರೆ ಸಾಕು ಎಂದು ಸರ್ಕಾರದವರು ಹೇಳಿದ್ದಕ್ಕೆ ಅವರು ಒಪ್ಪಿಕೊಳ್ಳುತ್ತಾರೆ. ಅದರಂತೆ ನಡೆಸಿಕೊಂಡು ಹೋಗುತ್ತಾರೆ. ಈಗ ಆ ಸ್ಕೂಲುಗಳನ್ನು ಪ್ರಾರಂಭ ಮಾಡಿದಮೇಲೆ ಈಗ ಅವರಿಗೆ ಆರ್ಥಿಕ ತೊಂದರೆಯಿಂದ ಅವುಗಳನ್ನು ನಡೆಸುವುದು ಕಷ್ಟ ವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಈಗ ಪ್ರಾರಂಭ ಮಾಡಿರತಕ್ಕ ಅನೇಕ ಹೈಸ್ಕೂಲುಗಳನ್ನು ಮುಚ್ಚುವ ಪರಿಸ್ಥಿತಿ ಬಂದಿದೆ. ಅದ್ದರಿಂದ ಸರ್ಕಾರದವರು ಪುನರ್ ವಿಮರ್ಶೆಮಾಡಿ 5 ವರ್ಷ ಇರ ತಕ್ಕದ್ದನ್ನು 3 ವರ್ಷಕ್ಕೆ ಇಳಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ಈಗ 3 ವರ್ಷಗಳಿಂದ ಹೊಸದಾಗಿ ಪ್ರಾರಂಭ ಮಾಡಿರತಕ್ಕ 240 ಹೈಸ್ಕೂಲುಗಳಿಗೆ ಸರ್ಕಾರದವರು ಗ್ರ್ಯಾಂಟ್ ಕೊಡುವುದಾದರೆ ಸರ್ಕಾರಕ್ಕೆ ಎಷ್ಟು ಹಣಬೇಕಾಗುತ್ತದೆ ಎಂಬುದನ್ನು ಲೆಕ್ಕಾಚಾರ ಹಾಕಿ ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಕೊಂಡು ಅದಕ್ಕೆ ಫೈನಾನ್ಷಿಯಲ್ ಒಪ್ಪಿಗೆ ಪಡೆದು ಅದನ್ನೆಲ್ಲಾ ಮಾಡಬೇಕಾಗುತ್ತದೆ.

ಶ್ರೀ ಪಿ. ಎಂ. ಬಂಗಿ.—ಇಲ್ಲಿ (ಬಿ) ಪ್ರಶ್ನೆಗೆ ಉತ್ತರವಾಗಿ ಗಂಡುಮಕ್ಕಳ ಮತ್ತು ಸಹ ವಿದ್ಯಾಭ್ಯಾಸದ ಶಾಲೆಗಳಿಗೆ 5 ವರ್ಷಗಳವರೆಗೂ ಆರ್ಥಿಕ ನೆರವನ್ನು ಕೊಡುತ್ತಿಲ್ಲ ಎಂದು ಹೇಳಿ ದ್ದೀರಿ, ಬರೀ ಹೆಣ್ಣುಮಕ್ಕಳು ಇರುವ ಶಾಲೆಗಳಿಗೂ 5 ವರ್ಷಗಳವರೆಗೂ ಗ್ರ್ಯಾಂಟ್ ಕೊಡುವು ದಿಲ್ಲವೇ ?

ಶ್ರೀ ಎ. ಆರ್. ಬದರೀನಾರಾಯಣ್.—ಮೊದಲು ಹೆಣ್ಣು ಮಕ್ಕಳ ಪ್ರೌಢಶಾಲೆಗಳನ್ನು ಪ್ರಾರಂಭಮಾಡುವುದರಲ್ಲಿ ಸ್ವಲ್ಪ ಕನ್‌ಸೆಷನ್ ಇತ್ತು. ಈಗ ಅದುಕೂಡ ಜಾಸ್ತಿಯಾಗಿದೆ. ಆದ್ದರಿಂದ ಹೆಣ್ಣು ಮಕ್ಕಳ ಶಾಲೆಗಳನ್ನು ಪ್ರಾರಂಭಮಾಡುವುದಕ್ಕೆ ಅರ್ಜಿಗಳು ಬಂದಾಗ ಕೂಡ ನಮಗೆ ಹಣ ಕಾಸಿನ ತೊಂದರೆ ಇರುವುದರಿಂದ 5 ವರ್ಷಗಳವರೆಗೆ ನಾವು ಗ್ರ್ಯಾಂಟ್ ಕೊಡುವುದಿಲ್ಲ ಎಂದು ಅನೇಕರಿಗೆ ಹೇಳಿದ್ದೇವೆ. ಅದಕ್ಕೆ ಅನೇಕರು ಒಪ್ಪಿ ಹೆಣ್ಣುಮಕ್ಕಳ ಹೈಸ್ಕೂಲುಗಳನ್ನು ನಡೆಸುತ್ತಿದ್ದಾರೆ.

ಶ್ರೀ ಕೆ. ಎಫ್. ಪಾಟೀಲ್.—ಹೈಸ್ಕೂಲನ್ನು ಸ್ಥಾಪನೆ ಮಾಡುವಾಗ 5 ಮೈಲಿ 10 ಮೈಲಿ ಅಂತರದಲ್ಲಿ ಯಾವುದೇ ಸ್ಕೂಲು ಇಲ್ಲದೇ ಇರುವಂತಹ ಸಂದರ್ಭದಲ್ಲಿ ಹೈಸ್ಕೂಲನ್ನು ಸ್ಥಾಪನೆ ಮಾಡಿದರೆ ಈ ನಿರ್ಬಂಧವನ್ನು ತೆಗೆದು ಹಾಕುತ್ತೀರಾ ?

Sri A. R. BADARINARAYANA.—That is a suggestion.

Sri B. B. SAYANAK.—Under the Grant-in-aid Code when girls school are started, the grants should be given to them. This year, 15 girls' schools have been started but only four of them have been given grants. Why not the other 11 also be given grants ?

ಶ್ರೀ ಎ. ಆರ್. ಬದರೀನಾರಾಯಣ್.—ನಾಲ್ಕು ವರ್ಷಗಳ ಮುಂಚೆ ಆ ರೀತಿ ಗ್ರ್ಯಾಂಟ್ ಕೊಡುವುದು ಇತ್ತು ಈಗ ಅದಕ್ಕೆ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಗರ್ಲ್ಸ್ ಹೈಸ್ಕೂಲ್ ಸ್ಟಾರ್ಟ್ ಮಾಡುವುದಕ್ಕಾಗುವುದಿಲ್ಲ ಫೈನಾನ್ಷಿಯಲ್ ಕಮಿಟ್‌ಮೆಂಟ್ ಜಾಸ್ತಿಯಾಗುತ್ತದೆ ಎಂದು ಹೇಳಿದ್ದೇವೆ. ಅವರು ನೀವು ಗ್ರ್ಯಾಂಟ್ ಕೊಡದಿದ್ದರೂ ಪರವಾಯಿಲ್ಲ; ಪರ್ಮಿಷನ್‌ಕೊಡಿ ನಾವು ಅದನ್ನು ನಡೆಸುತ್ತೇವೆ ಎಂದು ಹೇಳಿದಾಗ ನಾವು ಅವರಿಗೆ ಪರ್ಮಿಷನ್ ಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಪಟ್ಟಣ ಪ್ರದೇಶಗಳಲ್ಲಿ ನೂರಾರು ಸ್ಕೂಲುಗಳು ಮತ್ತು ಕಾಲೇಜುಗಳನ್ನು ಸರ್ಕಾರದವರು ತೆರೆಯುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗಿದೆ. ಈ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆಮಾಡತಕ್ಕ ಶಾಲೆಗಳಿಗೆ ಈ ರೀತಿಯ ನಿರ್ಬಂಧವನ್ನು ಹಾಕದೆ ಪ್ರಾರಂಭದಿಂದಲೇ ಗ್ರ್ಯಾಂಟು ಕೊಡಬೇಕಾಗಿತ್ತು. ಹೀಗಿರುವಾಗ 5 ವರ್ಷಗಳವರೆಗೆ ಶಾಲೆಗಳವರು ತಾವೇ ತಮ್ಮ ಸ್ವಂತ ಖರ್ಚಿನಿಂದಲೇ ನಡೆಸಿಕೊಂಡು ಬರಬೇಕೆಂದು ನಿರ್ಬಂಧವನ್ನು ಹಾಕಿರುವುದು ಸರಿಯಲ್ಲ. ಆದ್ದರಿದ ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲತೆಯನ್ನು ಒದಗಿಸುವ ದೃಷ್ಟಿಯಿಂದ ಈಗ ಸರ್ಕಾರದವರು ಏನು ನಿರ್ಬಂಧವನ್ನು ಹಾಕಿದ್ದಾರೆ ಅದನ್ನು ತಕ್ಷಣವಾಪಸ್ಸು ತೆಗೆದುಕೊಂಡು ಪಟ್ಟಣದಲ್ಲಿರುವ ಅನುಕೂಲತೆಯನ್ನು ಗ್ರಾಮಾಂತರ ಪ್ರದೇಶದ ಕಡೆ ಹೈಸ್ಕೂಲುಗಳನ್ನು ಕೊಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ವಿದ್ಯಾಭ್ಯಾಸ ಆಗಬೇಕು ಎಂದು ನಿಮಗಿಂತ ಆಸಕ್ತಿ ನಮಗೆ ಇದೆ. ಅದು ನಿರ್ವಿವಾದ. ಈಗ ನಮ್ಮ ದೇಶದಲ್ಲಿ 31 ಪರ್ಸೆಂಟ್ ಲಿಟ್ರಸಿ ಇದೆ, ಇನ್ನು 69 ಪರ್ಸೆಂಟ್ ಜನಗಳನ್ನು ಲಿಟರೇಟ್ ಆಗಿ ಮಾಡಲು ಪ್ರೈಮರಿ ಸ್ಕೂಲುಗಳನ್ನು ಜಾಸ್ತಿ ಸ್ಥಾಪನೆ ಮಾಡಬೇಕು ; ಅದಕ್ಕೆ ಬೇಕಾದಂತಹ ಉಪಾಧ್ಯಾಯರನ್ನು ನೇಮಕ ಮಾಡಬೇಕು ಎಂದು ಕಾನ್‌ಸ್ಟಿಟ್ಯೂಷನಲ್ ಆಬ್ಲಿಗೇಷನ್ ಇದೆ. ಕಾನ್‌ಸ್ಟಿಟ್ಯೂಷನ್ ಪ್ರಕಾರ 1960ನೇ ಇಸವಿಯಲ್ಲಿಯೇ 100ಕ್ಕೆ 100 ಲಿಟರಸಿ ಮಾಡಲು ಪ್ರೈಮರಿ ಶಾಲೆಗಳನ್ನು ಸ್ಥಾಪನೆ ಮಾಡಲು ಹೆಚ್ಚಿನ ಆದ್ಯತೆಯನ್ನು ಕೊಟ್ಟಿದೆ. ಅನಂತರ ಹೈಸ್ಕೂಲುಗಳಿಗೆ ಆದ್ಯತೆ ಕೊಡಬೇಕು, ನಂತರ ಕಾಲೇಜುಗಳಿಗೆ ಆದ್ಯತೆ ಕೊಡಬೇಕು. ಈಗ ಮೊದಲು ಪ್ರೈಮರಿ ಶಾಲೆಗಳಿಗೆ ಆದ್ಯತೆಯನ್ನು ಕೊಟ್ಟು ಆಮೇಲೆ ಹೈಸ್ಕೂಲು ಮತ್ತು ಕಾಲೇಜಿಗೆ ಆದ್ಯತೆಯನ್ನು ಕೊಡುವುದನ್ನು ಪರ್ಯಾಲೋಚನೆ ಮಾಡಬೇಕು ಎಂದು ಕಾಣುತ್ತದೆ.

ಶ್ರೀ ಆರ್. ಎಸ್. ಪಾಟೀಲ್.—ಈಗ 240 ಹೈಸ್ಕೂಲುಗಳನ್ನು ಸರ್ಕಾರದವರು ಗ್ರ್ಯಾಂಟ್ ಕೊಡದಿದ್ದರೂ ಅವರು ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ಹೇಳಿದಿರಿ. ಆದರೆ 5 ವರ್ಷಗಳ ಕಾಲ ಗ್ರ್ಯಾಂಟ್ ಇಲ್ಲದೆ ನಡೆಸಿಕೊಂಡು ಹೋಗುವುದಕ್ಕೆ ಅವರಿಗೆ ಹಣಕಾಸಿನ ತೊಂದರೆ ಇದೆ. ಆದ್ದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಆ ಹೈಸ್ಕೂಲುಗಳನ್ನು ನಡೆಸಲು ಸರ್ಕಾರದವರು ಏನು ಪರಿಹಾರ ಸೂಚಿಸುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ದುಡ್ಡು ಕೊಡಬೇಕೆಂಬ ಆಶೆ ಇದೆ. ಆದರೆ ಜೇಬಿನಲ್ಲಿ ದುಡ್ಡು ಇಲ್ಲ. ಏನು ಮಾಡುವುದು ?

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ನಡೆಸುವುದಕ್ಕೆ ಎಷ್ಟು ಕಷ್ಟ ಇದೆಯೆಂದು ಗೊತ್ತಾಯಿತು. ಅದೇ ರೀತಿಯಲ್ಲಿ ಪರಿಶಿಷ್ಟವರ್ಗದವರು ಸಹ ಶಾಲೆಗಳನ್ನು ತೆರದರೆ ಕಾನೂನು ಪ್ರಕಾರ ಇರುವ ರಿಯಾಯಿತಿಯನ್ನು ಕೊಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಅದರ ಬಗ್ಗೆ ನಾವು ನೀವು ಎಲ್ಲರೂ ಕುಳಿತುಕೊಂಡು ದೀರ್ಘವಾಗಿ ಆಲೋಚನೆ ಮಾಡಿ ಏನು ಪರಿಹಾರವನ್ನು ಕೊಡಬೇಕೆಂಬುದನ್ನು ಆಲೋಚನೆ ಮಾಡೋಣ.

ಶ್ರೀ ಎಂ. ಮಲ್ಲಪ್ಪ.—ಈ 5 ವರ್ಷದ ಮಿತಿಯನ್ನು ಮೂರು ವರ್ಷಕ್ಕೆ ಇಳಿಸಬೇಕೆಂದು ಕೆಲವು ಸಂಸ್ಥೆಗಳು ಕೇಳಿಕೊಂಡಿದ್ದಾರೆ ಎಂದು ಹೇಳಿದ್ದೀರಿ. ಅದರ ಬಗ್ಗೆ ಈ ಸದನದಲ್ಲಿ ಕೂಡ ಹಲವು ಸದಸ್ಯರು ಸಲಹೆಗಳನ್ನು ಕೊಟ್ಟು ಅದನ್ನು ಮೂರು ವರ್ಷಕ್ಕೆ ಇಳಿಸಬೇಕೆಂದು ಒತ್ತಾಯ ಮಾಡಿದ್ದಾರೆ. ತಮಗೆ ಗೊತ್ತಿದೆ, ಖಾಸಗೀ ಶಾಲೆಯನ್ನು 5 ವರ್ಷ ನಡೆಸಬೇಕಾದರೆ ಎಷ್ಟು ಕಷ್ಟ ಇದೆ ಎಂಬುದು. ಇವತ್ತು ಉಪಾಧ್ಯಾಯರಿಗೆ ಸರಿಯಾಗಿ ಸಂಬಳ ಕೊಡದಿದ್ದರೆ ಶಾಲೆಗಳಲ್ಲಿ ಗುಣಮಟ್ಟವನ್ನು ಇಟ್ಟುಕೊಳ್ಳಲಾಗುವುದಿಲ್ಲ. ಆದ್ದರಿಂದ ಅರ್ಥಿಕ ಮಂತ್ರಿಯವರ ಮನವೊಲಿಸಿ ಈ 5 ವರ್ಷದ ಅವಧಿಯನ್ನು ಮೂರು ವರ್ಷಕ್ಕೆ ಇಳಿಸಿ ಸಹಾಯ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ತಾವು ಹೇಳತಕ್ಕದ್ದು ಒಂದೊಂದು ಸ್ಕೂಲಿನ ಕಷ್ಟ. ಆದರೆ ಸರ್ಕಾರಕ್ಕೆ ಇರುವುದು ಸಾವಿರಾರು ಸ್ಕೂಲಿನ ಕಷ್ಟಗಳು.

ಶ್ರೀ ಎಂ. ಟಿ. ರಾಮಸ್ವಾಮಿ.—ತಾವು ತಮ್ಮ ಉತ್ತರದಲ್ಲಿ ಪ್ರೌಢ ಶಾಲೆಗಳ ಸಂಖ್ಯೆ 1969-70ರಲ್ಲಿ-72, 1970-71ರಲ್ಲಿ-90, ಮತ್ತು 1971-72ರಲ್ಲಿ-82 ಎಂದು ಹೇಳಿದ್ದೀರಿ. ಇವತ್ತು ಸರ್ಕಾರ ಗ್ರಾಂಟ್ ಇನ್ ಎಯಿಡ್ ಕೊಡುತ್ತಿರುವ ಶಾಲೆಗಳು ಸರ್ಕಾರದ ಕಾನೂನನ್ನು ಪರಿಪಾಲನೆ ಮಾಡದಿದ್ದರ ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ; ಮತ್ತು ಕೆಲವು ನಿರ್ಧಿಷ್ಟ ಉದಾಹರಣೆಗಳನ್ನು ಕೊಟ್ಟರೆ ಏನು ಕ್ರಮತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಆರ್. ಬದರೀ ನಾರಾಯಣ.—ಮಾನ್ಯ ಸದಸ್ಯರ ಪ್ರಶ್ನೆ ಇದರಲ್ಲಿ ಉದ್ಭವವಾಗುವದಿಲ್ಲ. ಅಧ್ಯಕ್ಷರು ಅದಕ್ಕೆ ಉತ್ತರ ಹೇಳಬೇಕೆಂದು ಹೇಳಿದರೆ ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಳೆದ ಅಧಿವೇಶನದಲ್ಲಿ ಈ 5 ವರ್ಷದ ಅವಧಿಯನ್ನು ಮೂರ. ವರ್ಷಕ್ಕೆ ಇಳಿಸುವ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡುತ್ತೇವೆಂದು ತಾವು ಉತ್ತರ ಹೇಳಿದ್ದೀರಿ. ಆದ್ದರಿಂದ ಈಗಲಾದರೂ ಮೂರು ವರ್ಷ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಈ ಸದನದ ತೀವ್ರತೆಯನ್ನು ಮಾನ್ಯ ಅರ್ಥಮಂತ್ರಿಯವರಿಗೆ ತಿಳಿಸಬೇಕಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಈಗ ಸದ್ಯಕ್ಕೆ ರೂಲ್ಸ್ ಪ್ರಕಾರ ಕೊಡುವುದಕ್ಕಾಗುವುದಿಲ್ಲ. ಹಣದ ತೊಂದರೆಯೂ ಇದೆ.

ಶ್ರೀ ಬಿ. ಬೈರಪ್ಪಾಜಿ.—ಇದು ಹಿಂದಿನ ಸರ್ಕಾರ ಮಾಡಿದ ಕಾನೂನು. ಆದ್ದರಿಂದ ವಿಧ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸತಕ್ಕ ರೀತಿಯಲ್ಲಿ ಇದು ಒಂದು ತಡೆಯಾಗುತ್ತದೆ. ಆದ್ದರಿಂದ ಇದನ್ನು ಕಡಿಮೆ ಮಾಡುವುದರ ಬಗ್ಗೆ ಪುನರ್‌ವಿಮರ್ಶೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಮನಸ್ಸು ಎಷ್ಟು ಹಿಗ್ಗಿದರೂ ಧನ ಅಷ್ಟು ಹಿಗ್ಗುವದಿಲ್ಲ.

Lands Brought Under Afforestation in The State

191. Sri ABDUL KHUDDUS ANWAR (Bhadravathi).—

Will the Minister for Agriculture and Forests be pleased to state:—

(*a*) the extent of land that is brought under afforestation in the State (Districtwise figures may be furnished);

(*b*) the cost of afforestation per acre;

(*c*) whether it is a fact that the lands granted to the Harijans and Girijans landless people in Shimoga District are taken back for afforestation;

(*d*) whether there are representations from these landless people that lands for which malki is paid, lands brought under cultivation in Kalanakatte, Kenchamnahalli, Nanjapura, Hagalmane, Bislemane of Bhadravathi Taluk are taken back by the Government and also Hatikote Machenahalli and other places in Shimoga District;

(*e*) whether a condition has been laid down that eucalyptus trees should be grown in these forest lands to be sold to Birla's at the rate of fifty paise per Cft. (after dressing it)?

Sri K. H. PATIL (Minister for Agriculture and Forests).—

(*a*) 5,75,143 acres. Please see statement appended.

(*b*) The cost ranges from Rs. 100 to 250 depending upon the soil condition, species to be planted, method of afforestation etc.

(*c*) No.

(*d*) No lands are released in Kalanakatte, Hagalmane and Bisalmane villages, Some extent of land released for cultivation in Kenchamanahalli and Nanjapura villages had been subsequently cancelled 200 acres out of S. No. 75 of Machenahalli has already been handed over to Revenue Department and an area of 150 acres yet to be handed over to Revenue Department out of S. No. 78 of Tedikatte.

(*e*) No.

Extent of land brought under afforestation

Sl. No.	District		Area in Acres
1	Belgaum	...	24,772
2	Dharwar	...	43,779
3	Bijapur	...	21,436
4	Mercara	...	50
5	Hassan	...	13,867
6	South Kanara	...	66,531
7	Mysore	...	26,689
8	Mandya	...	14,449
9	Bangalore	...	27,381
10	Kolar	...	41,035
11	Shimoga	...	75,128
12	Chickmagalur	...	25,701
13	Bellary	...	17,297
14	Raichur	...	13,900
15	Gulbarga	...	5,794
16	Bidar	...	9,328
17	Tumkur	...	19,521
18	Chitradurga	...	21,325
19	North Kanara	...	1,07,160
		Total	5,75,143

Sri ABDUL KHUDDUS ANWAR.—Is it not a fact that lands were given to Harjans for which malki was paid and the lands were taken-back by the Forest Department?

† Sri K. H. PATIL.—I have considered before replying. These lands were handed over to the Revenue Department for allocation. The Revenue Department did not find it easy to distribute the land therefore it is withdrawn.

Sri ABDUL KHUDDUS ANWAR.—The Revenue Department did not distribute because there is some discrepancy in the demarcation of forest land and revenue land. Will the Government order that forest land should be demarcated and distributed to landless people who have paid malki?

Sri K. H. PATIL.—Under Order No. FH 668 these lands were given to the possession of the Revenue Department for allocation amongst the Harijans. But unfortunately the demand was heavy and the lands were little. Therefore it was not at all allocated till 1963. The officers reported that it was better if a joint co-operarive farming society was organised. With this intention the land has been withdrawn now.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಯವರು (ಇ) ಪ್ರಶ್ನೆಗೆ ಇಲ್ಲವೆಂದು ಹೇಳಿದ್ದಾರೆ. ಹಾಗಾದರೆ ಭದ್ರಾವತಿ ತಾಲ್ಲೂಕಿನಲ್ಲಿ ಹರಿಜನ ಸೇವಾ ಸಂಘಕ್ಕೆ ಎಷ್ಟು ಜಮೀನು ಕೊಟ್ಟಿದ್ದೀರಿ ; ಮತ್ತು ಅದು ಅವರ ವಶದಲ್ಲಿ ಇದೆಯೇ ; ಮತ್ತು ಅದನ್ನು ಫಾರೆಸ್ಟ್ ಇಲಾಖೆಯವರು ವಾಪಸ್ಸು ತೆಗೆದುಕೊಂಡಿರುವುದು ನಿಜವೇ ?

ಶ್ರೀ ಕೆ. ಎಚ್. ಪಾಟೀಲ್.—ನಾವು ಅಫೋರೆಸ್ಟೇಶನ್ ಸಲುವಾಗಿ ತೆಗೆದುಕೊಂಡಿಲ್ಲ. ನಾವು ಕೊಟ್ಟಂತಹ ಜಮೀನನ್ನು 1966ರಿಂದ ಇಲ್ಲಿಯ ತನಕ ಉಪಯೋಗ ಮಾಡದ ಕಾರಣಕ್ಕಾಗಿ ಅಧಿಕಾರಿಗಳು ವರದಿ ಕೊಟ್ಟ ಮೇಲೆ ರೆವೆನ್ಯೂ ಇಲಾಖೆಯವರು ಆ ಲ್ಯಾಂಡ್ ಹಂಚುವುದಕ್ಕಾಗುವುದಿಲ್ಲವೆಂದು ಹೇಳಿ, ಅಲ್ಲಿ ಕೋಪರೇಟಿವ್ ಜಾಯಿಂಟ್ ಫಾರ್ಮಿಂಗ್ ಮಾಡಬೇಕೆಂದು ತಿಳಿಸಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನೀಲಗಿರಿ ಮರಗಳನ್ನು ಅಲ್ಲಿ ಬೆಳೆಸುವುದರಿಂದ ಭೂಮಿಯ ಒಳಗಡೆಯಲ್ಲಿರುವ ಜಲ ಆರಿಹೋಗುತ್ತದೆ. ನಮ್ಮ ಹಳ್ಳಿಯ ಜನಗಳಿಗೆ ಅದು ಸತ್ಯ, ನಂಬಿಕೆ ಎಂದು ಇರುತ್ತಾರೆ. ಆದ್ದರಿಂದ ಈ ನೀಲಗಿರಿ ಮರಗಳನ್ನು ಅಲ್ಲಿ ನೆಡುವುದಕ್ಕೆ ಬದಲು ಫಾರೆನ್ ಎಕ್ಸ್‌ಚೇಂಜ್ ಬರಲಿಕ್ಕೆ ಗೇರು ಮರಗಳನ್ನು ನೆಡುವುದು ಮತ್ತು ಅದರಿಂದ ಹೆಚ್ಚಿನ ಉತ್ಪತ್ತಿ ಮಾಡುವುದು—ಈ ವಿಚಾರಗಳ ಬಗ್ಗೆ ಯೋಚನೆಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ನಮ್ಮ ಹೊಸ ಯೋಜನೆಗಳ ಪ್ಲಾನ್ ಪ್ರಕಾರ ಅಲ್ಲಿ ಎಲ್ಲಾ ತರಗತಿಯ ಮರಗಳನ್ನು ಬೆಳೆಸಬೇಕೆಂದು ತಿಳಿಸಿದೆ. ಅಲ್ಲಿ ನೀಲಗಿರಿ ಮರಗಳನ್ನು ಬೆಳೆಸುವುದರಿಂದ ಭೂಮಿಯಲ್ಲಿನ ನೀರು ಹೋಗುತ್ತದೆಂದು ಹೇಳಿದ ಅಭಿಪ್ರಾಯ ತಪ್ಪು ಅಭಿಪ್ರಾಯ. ಅವರು ಹೇಳಿದ್ದು ಸರಿಯಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಬಾವಿಯಲ್ಲಿ ನೀರು ಬತ್ತಿಹೋಗಿರುವ ಅಂಶ ಕೆಲವು ಕಡೆಗಳಲ್ಲಿ ಕಂಡಿದೆ. ನಾಲ್ಕಾರು ಕಡೆಗಳಲ್ಲಿ ನೀಲಗಿರಿ ಮರಗಳನ್ನು ಬೆಳೆಸಿರುವುದನ್ನು ನಾನು ನೋಡಿ ಆ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರ ಸಲಹೆಯನ್ನು ಗಮನಿಸೋಣ. ನಮ್ಮ ರಿಸರ್ಚ್ ಮಾಡಿದುದರ ಪರಿಣಾಮ ತಪ್ಪು ಇದ್ದರೆ ವಿಚಾರಮಾಡೋಣ. ಒಟ್ಟಿನಲ್ಲಿ ಅಲ್ಲಿಮಾತ್ರ ಎಲ್ಲಾ ತರಹ ಮರಗಳನ್ನು ಬೆಳೆಯಬೇಕೆಂದು ಸಲಹೆ ಕೊಟ್ಟಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಭದ್ರಾವತಿ ಹರಿಜನ ಸೇವಕ ಸಂಘ ಜಾಯಿಂಟ್ ಕೋಆಪರೇಟಿವ್ ಫಾರ್ಮಿಂಗ್ ಮಾಡಿ 1966ನೇ ಇಸವಿಯಲ್ಲಿ ಸುಮಾರು 200 ಎಕರೆ ಜಮೀನನ್ನು ಭೂಹೀನ ಕೂಲಿಗಾರರಿಗೆ ಅದರಲ್ಲಿಯೂ ಹರಿಜನರಿಗೆ ಕೊಟ್ಟಿದ್ದರು. ಅದನ್ನು ಈಗ ವಾಪಸ್ಸು ತೆಗೆದುಕೊಂಡಿದ್ದಾರೆ. ದಯವಿಟ್ಟು ಅದನ್ನು ಅವರಿಗೇ ಕೊಟ್ಟು ಅವರ ಆ ಕೆಲಸವನ್ನು ಮುಂದುವರಿಸುವುದಕ್ಕೆ ಪ್ರಯತ್ನಮಾಡುತ್ತೀರಾ ?

SRI K. H. PATIL.—This question does not partain to the question that is before the House.

ಶ್ರೀ ಎಂ. ಬಿ. ರಾಮಸ್ವಾಮಿ.—1965ನೇ ಇಸವಿಯಿಂದಲೂ ಅದನ್ನು ಹರಿಜನರೇ ಅನುಭವಿಸಿಕೊಂಡು ಜಮೀನು ಮಾಡಿಕೊಂಡು ಬಂದಿದ್ದಾರೆ, ಅಂತಹವರನ್ನು ಬಿಡಿಸಿ ಈ ಜಮೀನನ್ನು ಬೇರೆಯವರಿಗೆ ಕೊಟ್ಟು ಆ ಮರಗಳನ್ನು ಇವರೇ ಈಗ ಬೆಳೆಸುವುದಕ್ಕೆ ತೆಗೆದುಕೊಳ್ಳುವ ಕಾರಣವಾದರೂ ಏನು ? ಸಾಗುವಳಿ ಚೀಟಿಗಳನ್ನು ಈಗಾಗಲೇ ಹಂಚಿದ್ದಾರೆ. ಅದನ್ನು ಈಗ ಆ ರೀತಿ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಮತ್ತು ಅದನ್ನು ಮತ್ತೊಂದು ಉದ್ದೇಶಕ್ಕಾಗಿ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅವರಿಗೆ ಕೊಟ್ಟಂಥ ಜಮೀನನ್ನು ಅವರು ಸದುಪಯೋಗ ಮಾಡಿಕೊಳ್ಳಲಿಲ್ಲ. ಇನ್ನೂ ಎಲ್ಲರಿಗೂ ಹಂಚಿಲ್ಲ. ಸಾಗುವಳಿ ಚೀಟಿಯನ್ನು ಈಗಲೂ ಸಹ ಸಹಕಾರ ಸಂಘಗಳು ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಮಾಡಿಕೊಂಡು ಮುಂದೆ ಬಂದರೆ ಆ ಜಮೀನನ್ನು ಅವರಿಗೇ ಕೊಡುವ ವಿಚಾರಮಾಡೋಣ.

I.T. Roads in Shimoga District

238. Sri ABDUL KUDDUS ANWAR (Bhadravathi).—

Will the Minister of State for Major Irrigation be pleased to state :—

(*a*) the extent of I.T. Roads completed in Shimaga District (Talukwise figures may be furnished) ;

(*b*) the amount sanctioned in this behalf during the last four years (yearwise figures may be furnished) ;

(*c*) whether it is a fact that the works are held up for want of funds ?

Sri H. N. NANJE GOWDA (Minister of State for Major Irrigation).—

(*a*) The extent of I.T. Roads completed in Shimoga District are as under :

Name of Taluk	*Extent of Roads completed*			
	Under Thunga Anicut M.F.	*Under I List M.F.*	*B.R. Project II List M.F.*	*Total M.F.*
1. Shimaga	39-6	25-6	18-6	84-2
2. Bhadravathi	...	101-7	57-2½	159-1½
3. Honnali	42-2	25-4	14-3	86-1
4. Channagiri	...	74-3	10-2	84-5
Total ...	86-0	227-4	100-5½	414-1½

(*b*) The I.T. Roads are executed from the grants allocated for B.R. Project under 99 INED funds. No seperate grants are alloted for I.T. Roads.

(*c*) The works are being tackled subject to the availability of funds.

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್.—ಉತ್ತರದಲ್ಲಿ ಅವೇಲಬಲಟಿ ಆಫ್ ಫಂಡ್ಸ್ ಮೇಲೆ ಇದು ಅವಲಂಬಿಸುತ್ತದೆಂದು ಹೇಳಿದ್ದೀರಿ. ಫಂಡ್ಸ್ ಅಂದರೆ ಅದು ಎಲ್ಲಿಂದ ಬರುತ್ತದೆ? ಯಾವಾಗ ಬರುತ್ತದೆ? ಮೂರು ವರ್ಷಗಳಿಂದ ಈ ಕೆಲಸ ಪೆಂಡಿಂಗ್ ಆಗಿಯೇ ಇದೆ.

†ಶ್ರೀ ಎಚ್. ಎನ್. ನಂಜೇಗೌಡ.—ಇರತಕ್ಕಂಥ ಹಣವನ್ನು ಪ್ರೈಯಾರಿಟಿಯ ಮೇಲೆ ನಿಗದಿ ಮಾಡುತ್ತಾರೆ. ಯಾವುದಕ್ಕೆ ಮೊದಲನೆಯದಾಗಿ, ಎರಡನೆಯದಾಗಿ, ಮೂರನೆಯದಾಗಿ, ನಾಲ್ಕನೆಯದಾಗಿ ಕೊಡಬೇಕೆಂದು ತೀರ್ಮಾನಮಾಡಿ ಇದಕ್ಕೆ ಎಷ್ಟು ಬೇಕೋ ಅಷ್ಟನ್ನು ಪ್ರೈಯಾರಿಟಿಯ ಮೇಲೆ ಕೊಡುತ್ತಾರೆ. ಅದರ ಪ್ರಕಾರ ಈ ಕಾಮಗಾರಿಗೆ ಎಷ್ಟು ಹಣ ಬರುತ್ತದೋ ಅಷ್ಟು ಹಣ ಅಲ್ಲಿಗೆ ಖರ್ಚು ಮಾಡಲಾಗುತ್ತದೆ.

Sri ABDUL KUDDUS ANWAR.—Instead of wasting money on roads, is it not better to have pucca roads ?

ಶ್ರೀ ಎಚ್. ಎನ್, ನಂಜೇಗೌಡ.—ನಾನು ಮೊದಲೇ ಉತ್ತರ ಹೇಳಿದ ಹಾಗೆ ರಸ್ತೆಗಳಲ್ಲಿಯೂ ಕೂಡ ತಾರತಮ್ಯ ಇದೆ. ಯಾವುದು ಮೊದಲು ಆಗಬೇಕು, ಯಾವುದು ಆಮೇಲೆ ಆಗಬೇಕೆಂಬುದನ್ನು ಯೋಚನೆ ಮಾಡಿ ಕೆಲಸಗಳನ್ನು ತೆಗೆದುಕೊಳ್ಳಲಾಗುತ್ತದೆ.

Mr. DEPUTY SPEAKER.—Now Short Notice Questions No. 16 and 22 but the hon. Member is absent. Now Question time is over.

QUESTION FOR ANSWER ON THE DAY

(but not taken up)

Misappropriation in Hulgi Town Panchayat Committee

380. Sri M. VIRUPAKSHAPPA (Koppal).—

Will the Minister for Community Development and Social Welfare be pleased to state :—

(*a*) whether there is any misappropriation in Hugli Town Panchayat Committee, Koppal Taluk ;

(*b*) if so, the extent of amount involved ;

(*c*) the action taken against the person who misappropriated the amount ;

(*d*) the result of action taken ?

Sri M. MALLIKARJUNASWAMY (Minister for Communitp Development and Social Welfare).—

(*a*) Yes.

(*b*)

Amount held for recovery under misappropriation	*Amount held under objection for other reasons :*
Rs. 3.520.39	Rs. 91.684.64.

(*c*) and (*d*) Action is being taken against the persons as per rules in force.

SHORT NOTICE QUESTIONS AND ANSWERS ON THE DAY (but not taken up)

Lift Irrigation Scheme on Left Bank of Krishna River at Almatti

16. Sri M. M. SAJJAN (Muddebihal).—

Will the Minister of State for Major Irrigation be pleased to state :—

(*a*) whether Lift Irrigation Scheme on the Left Bank of the Krishna River at Almatti has been finalised ;

(*b*) the command area of this Lift Irrigation ;

(*c*) the areas that are benefitted by this Lift Irrigation ;

(*d*) whether it is a fact that this work of Lift Irrigation would provide employment to about 20,000 labourers from the drought affected areas ;

(*e*) the estimated cost of the said scheme ;

(*f*) the probable period required for completion and commissioning of the scheme ;

(*g*) whether it is afact that this scheme will provide employment to all the labourers of taluks of Indi, Sindgi, Muddebihal, Basavana Bagewadi ;

(*h*) when the work of this scheme will be started ?

Sri H. N. NANJE GOWDA (Minister of State for Major Irrigation).—

(*a*) Yes. Preliminary Project report has been prepared ;

(*b*) 30,000 acres.

(*c*) Bagewadi and Muddebihal taluks in Bijapur District.

(*d*) Employment potential is about 4,000 persons.

(*e*) Rs. 496.20 lakhs.

(*f*) Three years from the date of commencement.

(*g*) It will provide employment to about 4,000 persons in Bagewadi and Muddebihal taluks.

(*h*) It will be taken up after obtaining necessary approval from Government of India.

L.I. Scheme from Almatti Reservoir

22.—Sri M. M. SAJJAN (Muddebihal).—

Will the Minister of State for Major Irrigation be pleased to state :—

(*a*) whether Government is contemplating any L.I. scheme from Almatti Reservior;

(*b*) if so, the details of the scheme ;

(*c*) if not, whether they will take it up immediately in view of the scarcity conditions ?

Sri H. N. NANJE GOWDA (Minister of State for Major Irrigation).—

(*a*) No.

(*b*) and (*c*) do not arise in view of reply to clause (*a*).

Calling Attention to Matters of Urgent Public Importance

re.: death of a Harijan boy at Somwarpet village in Chamarajanagar Taluk

Sri KAGODU THIMMAPPA.—I call the attention of the Hon. Chief Minister to the death of a Harijan boy at Somvarpet village in Chamarajnagar Taluk.

Sri H. M. CHANNABASAPPA (Minister for Public Works and Electricity).—

On behalf of the Hon. Chief Minister I make the following statement :

On 25-2-1973, Patel Krishnappa of Somvarpet village reported at Chamarajanagar East Police Station to the effect that on 24-2-1973 at 12 noon one Sri Parvathaiah, Harijan by caste of Somvarpet took his sickly boy aged six years to Siragally Thopu where God Saneswara is worshipped, to get the boy cured of the disease. It appears that the priest, Sri. Ranga Shetty lifted the boy by his neck, roughly handled him in an attempt to invoke divine grace and threw him to Parvathaiah who caught hold of the boy. In the process of this rough handling, the sickly boy died. A case in Crime No. 20/73 under section 302 I.P.C. is registered and is being investigated. Accused Ranga Shetty was arrested on 9-3-1973 ond remanded to judicial custody till 19-3-1973. The Superintendent of Police, Mysore District has visited the scene of occurence and is supervising the investigation.

ಶ್ರೀ ಕಾಗೋಡು ತಿಮ್ಮಪ್ಪ.—ದಿನಾಂಕ 25-2-1973ರಂದು ನಡೆದಂಥ ಘಟನೆ ತಮ್ಮ ಹೇಳಿಕೆ ಪ್ರಕಾರ ಇದು 24ರಲ್ಲಿ ನಡೆದುದು, 25ರಲ್ಲಿ ಪೋಲೀಸ್ ಸ್ಟೇಷನ್ನಿಗೆ ಇದರ ಸುದ್ದಿಯನ್ನು ಮುಟ್ಟಿಸಿದ್ದು ಮತ್ತು ಅಪರಾಧಿಯನ್ನು 9ನೇ ತಾರೀಖಿನಲ್ಲಿ ದಸ್ತಗಿರಿ ಮಾಡಿದ್ದೇವೆಂದು ಹೇಳಿದಿರಿ.

(ಶ್ರೀ ಕಾಗೋಡು ತಿಮ್ಮಪ್ಪ)

25ರಿಂದ 9ನೇ ತಾರೀಖಿನವರೆಗೆ ಅಪರಾಧಿಯನ್ನು ಯಾವ ಕಾರಣದಿಂದ ದಸ್ತಗಿರಿ ಮಾಡಲಿಲ್ಲ ? ಜೊತೆಗೆ ಈ ಕೇಸನ್ನು ರಿಜಿಸ್ಟರ್ ಮಾಡಿದೆಯೆಂದು ಹೇಳಿದ್ದೀರಿ. ಯಾವ ತಾರೀಖಿನಲ್ಲಿ ಈ ಕೇಸನ್ನು ರಿಜಿಸ್ಟರ್ ಮಾಡಿಕೊಂಡಿದೆ ?

2-00 P.M.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ.—ಮಾನ್ಯ ಮಂತ್ರಿಗಳು ಐ.ಪಿ.ಸಿ. 302 ರ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಿದೆ ಎಂದೂ ಮತ್ತು ಅಪರಾಧಿಯನ್ನು 19—3—73ರ ವರೆಗೆ ಜುಡಿಷಿಯಲ್ ಕಸ್ಟಡಿಯಲ್ಲಿಟ್ಟಿದ್ದರು ಎಂದು ಹೇಳಿದರು. ಅಂದರೆ ತಾ: 19—3—73ರ ನಂತರ ಅಪರಾಧಿಯನ್ನು ಬಿಡುಗಡೆಮಾಡಲಾಗಿದೆ ಎಂದಹಾಗೆ ಆಯಿತು. ಆಂದಾಗ ಆ ಸೆಕ್ಷನ್ 302 ಏನಾಯಿತು ? ಹೀಗೆ ಯಂತ್ರಮಂತ್ರಗಳಿಗೆ ಹರಿಜನ ಬಾಲಕರನ್ನು ಬಲಿಕೊಡತಕ್ಕದ್ದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಕ್ಲಾರಿಫಿಕೇಷನ್ ಈಗ ಸಭೆಯ ಮುಂದೆ ಇರತಕ್ಕ ಕಾಲ್ ಅಟೆನ್‌ಷನ್ ನೋಟೀಸಿಗೆ ಸಂಬಂಧವಿರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ತಾ: 25—2—73 ಕ್ಕೆ ತಿಮ್ಮಪ್ಪ ಎನ್ನತಕ್ಕವರು ಪೋಲಿಸಿಗೆ ಸುದ್ದಿಯನ್ನು ಕೊಟ್ಟರು. ಆಂದಾಗ ಸ್ಥಳಕ್ಕೆ ಪೋಲೀಸಿನವರು ಎಂದು ಹೋದರು ? ಮತ್ತು ಅವರು ಯಾವಾಗ ಕೇಸನ್ನು ರಿಜಿಸ್ಟರ್ ಮಾಡಿದರು ? ಅಲ್ಲಿ ಅಷ್ಟು ಡಿಲೇ ಮಾಡಿ ಕೇಸ್ ರಿಜಿಸ್ಟರಾಗುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ತಿಮ್ಮಪ್ಪನವರು ಲಾಯರು. ಅವರಿಗೂ ಚೆನ್ನಾಗಿ ಗೊತ್ತಿದೆ—ಪೋಲೀಸಿಗೆ ಒಂದು ಅರ್ಜಿ ಬಂದ ತಕ್ಷಣವೇ ಅದನ್ನು ರಿಜಿಸ್ಟರ್ ಮಾಡುವುದಿಲ್ಲ. ಅದು ಒಂದು ನಿಜವಾದ ತಕ್ರಾರಾಗುತ್ತದೆಯೇ, ಅದನ್ನು ಯಾರು ಮಾಡಿದ್ದಾರೆ, ಅದಕ್ಕೆ ಕಾರಣಗಳು ಏನು ಎಂಬುದರಕಡೆಗೆ ಅವರ ಗಮನಹರಿಸಿ, ವಿಚಾರ ಮಾಡಿ ಅದನ್ನೆಲ್ಲಾ ಮಾಡುವುದಕ್ಕೆ ಸ್ವಲ್ಪ ಕಾಲಾವಕಾಶ ಬೇಕು ಅನ್ನುವುದನ್ನೂ ಮಾನ್ಯ ತಿಮ್ಮಪ್ಪನವರೂ ಒಪ್ಪುತ್ತಾರೆಂದು ನಂಬಿದ್ದೇನೆ. ಪೋಲೀಸರಿಗೆ ವಿಷಯ ತಿಳಿದ ಕೂಡಲೇ ಒಬ್ಬರನ್ನು ದಸ್ತಗಿರಿ ಮಾಡುವುದಕ್ಕಾಗುವುದಿಲ್ಲ ಸಾಮಾನ್ಯವಾಗಿ ಅರ್ಜಿ ಕೊಡತಕ್ಕವರು ಕೆಲವರ ಮೇಲೆ ಗುಮಾನಿಮಾಡಿ, ಆಪಾದನೆ ಮಾಡಿರುತ್ತಾರೆ. ಪೋಲೀಸಿನವರು ತಮ್ಮ ವಿವೇಚನೆ ಉಪಯೋಗಿಸಿ ಅರೆಸ್ಟ್ ಮಾಡಬೇಕಾಗುವುದು. ಅದಕ್ಕೆಲ್ಲಾ ಸ್ವಲ್ಪ ಕಾಲಾವಕಾಶ ಬೇಕೆಂಬ ಅಂಶ ನನಗಿಂತಲೂ ಹೆಚ್ಚಿಗೆ ಲಾಯರಾಗಿರತಕ್ಕ ಶ್ರೀ ತಿಮ್ಮಪ್ಪನವರಿಗೆ ಗೊತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಎಫ್. ಐ. ಆರ್. ಯಾವಾಗ ಕೊಟ್ಟಿದ್ದಾರೆ ಹೇಳಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಅವರು ನಿಯಮಾವಳಿಗಳಿಗೆ ಅನುಸಾರವಾಗಿಯೇ ಕೊಟ್ಟಿದ್ದಾರೆಂದು ಕಾಣುತ್ತದೆ. In the absence of any information contrary to that I presume that the F. I. R. will have been filed at the appropriate time.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿ ಫೆಬ್ರುವರಿ 25 ನೇ ತಾರೀಖು ಘಟನೆ ನಡೆದಿದ್ದರೆ ಅಪರಾಧಿಯನ್ನು ದಸ್ತಗಿರಿಮಾಡಿರತಕದ್ದು ಅದರ ಮುಂದಿನ ತಿಂಗಳು ಮಾರ್ಚಿಯಲ್ಲಿ. ಅಲ್ಲಿ ಒಬ್ಬ ಹರಿಜನ ಹುಡುಗನ ಕೊಲೆಯಾಗಿದೆ ಎಂಬುದು ಎಲ್ಲರಿಗೂ ತಿಳಿದಿದ್ದವಿಷಯ.ಅದರ ಬಗ್ಗೆಪೋಲೀಸರು ಸಾಕಷ್ಟು ಗಮನ ಕೊಟ್ಟಿಲ್ಲ. ಆದ್ದರಿಂದ ತಮ್ಮ ಸ್ಟೇಟ್‌ಮೆಂಟ್ ಏನೂ ವಿವರಗಳನ್ನು ತಿಳಿಸಲಿಲ್ಲ. ಅಲ್ಲಿ ಕೇಸನ್ನು ಎಂದು ರಿಜಿಸ್ಟರ್ ಮಾಡಿದರು, ಯಾವಾಗ ಎಫ್. ಐ. ಆರ್. ಕೊಟ್ಟರು ಈ ವಿವರಗಳೊಂದೂ ನಿಮ್ಮ ಉತ್ತರದಲ್ಲಿ ಇಲ್ಲ. ದಯಮಾಡಿ ತಾವು ವಿವರಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

SRI H. M. CHANNABASAPPA.—I would like to submit that there has been a little time lag between the reported petition of the petitioner and the time of arrest. An arrest will have to take place after

due consideration and examination, and naturally the Police will require some time to locate the person and also to make further investigation to satisfy themselves about the truth of the case and then proceed to arrest him.

In regard to the date on which the crime has been registered, I have not got the date at present ; I will furnish it later,

ಇದೊಂದು ಐ.ಪಿ.ಸಿ. ಅಫೆನ್ಸ್ ಆಗಿರಲಿ ಯಾವುದೇ ಇರಲಿ, ಇದಕ್ಕೆ ತುತ್ತಾಗಿರತಕ್ಕ ಜನರು ಹರಿಜನರೇ ಆಗಿರಲಿ ಅಥವಾ ಬ್ರಾಹ್ಮಣರೇ ಆಗಿರಲಿ ಎಲ್ಲರಿಗೂ ಒಂದೆ. ಹರಿಜನರಾದರೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಬ್ರಾಹ್ಮಣರಾದರೆ ಕಡಮೆ ಪ್ರಾಮುಖ್ಯತೆ ಕೊಡಬೇಕೆಂಬ ಅಭಿಪ್ರಾಯ ಯಾರಿಗೂ ಇರಬಾರದು. ರಿಪೋರ್ಟ್ ಬಂದಮೇಲೆ ಸಂಬಂಧಪಟ್ಟ ವ್ಯಕ್ತಿಯನ್ನು ಅರೆಸ್ಟ್ ಮಾಡಿದ್ದಾರೆ. ಆ ತಕ್ಷಣವೇ ಏಕೆ ಅರೆಸ್ಟ್ ಮಾಡಲಿಲ್ಲ ಎಂದರೆ ಆತ ಪೋಲೀಸರಿಗೆ ಸಿಕ್ಕಿದನೋ, ಸ್ಥಳದಲ್ಲಿದ್ದನೋ ಇರಲಿಲ್ಲವೋ ಅದಕ್ಕೆಲ್ಲಾ ಕಾಲಾವಕಾಶ ಬೇಕು. ಇದಕ್ಕೆಲ್ಲಾ ಏನು ಕಾರಣ ಎಂದರೆ ಅದನ್ನು ತಿಳಿಸುವುದಕ್ಕೆ ಆಗುವುದಿಲ್ಲ. ಆದು ಪ್ರಕೃತವೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ಒಬ್ಬ ಪೂಜಾರಿ ಶನಿದೇವರು ಮೈಮೇಲೆ ಬಂತೆಂದು ಹುಡುಗನನ್ನು ಮೇಲಕ್ಕೆತ್ತಿಕೊಂಡು ಗರಗರನೆ ತಿರುಗಿ ಆ ಹುಡುಗನನ್ನು ನೆಲಕ್ಕೆ ಅಪ್ಪಳಿಸಿ ಒಗೆದ. ಅದಕ್ಕಾಗಿ ಹುಡುಗ ಸತ್ತ. ಮೈಸೂರು ಜಿಲ್ಲೆಯಲ್ಲಿ ಇಂಥಾ ಕೃತ್ಯಗಳು ಜಾಸ್ತಿಯಾಗಿವೆ. ನಂಜನಗೂಡು, ಚಾಮರಾಜನಗರ ಈ ಕಡೆಗಳಲ್ಲಿ ಈ ಒಂದು ಸೋಗಿನಲ್ಲಿ ಜನರನ್ನು ಬಹಳ ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

ಉಪಾಧ್ಯಕ್ಷರು.—ಈಗ ಸಭೆಯ ಮುಂದೆ ಬಂದಿರುವ ವಿಷಯಕ್ಕೂ ನಿಮ್ಮ ಪ್ರಶ್ನೆಗೂ ಯಾವ ಸಂಬಂಧವೂ ಇಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಮಂತ್ರಿಗಳ ಉತ್ತರದಿಂದ ಪೋಲೀಸರೇನು ಕೆಲಸ ನಿರ್ವಹಿಸಬೇಕೋ ಅದನ್ನು ನಿರ್ವಹಿಸಿಲ್ಲವೆಂಬುದು ಸ್ಪಷ್ಟವಾಗುವುದು. ಮೂಲ ಪ್ರಕರಣ 25 ನೇ ತಾರೀಖು ಆಗಿದೆ,ಪಟೇಲರೇ ಪೋಲೀಸ್ ಸ್ಟೇಷನ್ನಿಗೆ ಹೋಗಿ ಅದನ್ನು ವರದಿಮಾಡಿದ್ದಾರೆ.ಪೋಲೀಸರು ಅದನ್ನು ರಿಕಾರ್ಡ್‌ಮಾಡಿಕೊಂಡಿದ್ದಾರೆಯೇ? ಯಾವ ತಾರೀಖು ಮಾಡಿಕೊಂಡಿದ್ದಾರೆ? ಅವರ ಕರ್ತವ್ಯದಂತೆ ಎಫ್. ಐ. ಆರ್. ಇಷ್ಯು ಮಾಡಿದ್ದಾರೆಯೆ ? ಮಾಡದಿದ್ದರೆ ಪೋಲೀಸರ ಮೇಲೆ ಯಾವ ಕ್ರಮ ಕೈಕೊಳ್ಳುವಿರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಡೆಯುವುದೆಲ್ಲವನ್ನೂ ಸ್ಟೇಟ್‌ಮೆಂಟ್‌ನಲ್ಲಿ ಹೇಳುವುದಕ್ಕಾಗುವುದಿಲ್ಲ ಎಂದು ಆಗಲೇ ಹೇಳಿದ್ದೇನೆ ಎಫ್.ಐ.ಆರ್. ಇಷ್ಯು ಮಾಡುವುದು ಕ್ರಮ ವಿಧಿ. ನಿಯಮಗಳ ಪ್ರಕಾರ ಆಗುವುದು.

I have heard the hon. member with reverential patience. Why don't you hear me? The hon. member wanted to know when the FIR was filed. That is the information you wanted. That information is not before me. I have absolutely no objection to furnish the information on which date the FIR was filed and the same will be furnished during the course of the day.

MR. DEPUTV SPEAKER.—I was inclined to tell the Hon. Minister that particular information which they have been agitating for might be obtained as early as passible. He has stated that the information will be furnished to the House within the course of the day.

ಶ್ರೀ ಕಾಗೋಡು ತಿಮ್ಮಪ್ಪ.—25ನೇ ತಾರೀಖು 12ಗಂಟೆಗೆ ಫಿರ್ಯಾದು ಬಂದಿದೆ. ಯಾವ ತಾರೀಖು ಎಫ್.ಐ.ಆರ್. ಕೊಟ್ಟರು ? ಅಪರಾಧಿಯನ್ನು 9 ನೇ ತಾರೀಖಿನವರೆಗೆ ದಸ್ತಗಿರಿ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಇಲ್ಲಿ ಕೊಟ್ಟಿರುವ ಸ್ಟೇಟಮೆಂಟ್ ಪೂರ್ಣವಾಗಿಲ್ಲ. ಅದನ್ನು ನೋಡಿದ ತಕ್ಷಣ ಪೋಲೀಸರು ತಮ್ಮ ಕರ್ತವ್ಯ ಸರಿಯಾಗಿ ಮಾಡಿಲ್ಲ ಎಂಬುದು ಚನ್ನಾಗಿ ಎದ್ದು ಕಾಣುವುದು.25 ರಂದು ಆ ಊರಿನ ಪಟೇಲ ನೇರವಾಗಿ ಹೋಗಿ ಪೋಲೀಸ ಸ್ಟೇಷನ್ನಲ್ಲಿ ದೂರು ಕೊಟ್ಟರು. 9ನೆಯ ತಾರೀಖಿನವರೆಗೆ ಅಕ್ಯೂಸ್ಡ್ ರಾಮಸ್ವಾಮಿ ಎಲ್ಲಿದ್ದ? ಪೋಲೀಸಿನವರು ಎಷ್ಟು ದಿವಸ ಹುಡುಕಿದರು ? ತಪ್ಪಿಸಿಕೊಂಡು ಹೋಗಿದ್ದವನನ್ನು ಅರೆಸ್ಟ್ ಮಾಡಿ ತಂದರೆ ಅಥವ ಅವನು ಆ ಊರಲ್ಲೇ ಇದ್ದನೇ? ಈ ರೀತಿ ಅವನು ಎಷ್ಟು ಕೊಲೆ ಮಾಡಿದ್ದಾನೆ? ಪೂರ್ಣವಾದ ವಿವರ ಬೇಕು 9 ರಂದು ಅರಸ್ಟ್ ಮಾಡಿ 19 ರಂದು ಬಿಟ್ಟರೇ? ಹಾಗೆ ಕಾಣುವುದು. ಬಿಡುವುದಕ್ಕೆ ಕಾರಣವೇನು ? ಇಷ್ಟು ಸಮಾಚಾರ ಮತ್ತು ಪೂರ್ಣವರದಿ ಬೇಕೆಂದು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು.—ಅವಶ್ಯವಿರುವ ಸಮಾಚಾರವನ್ನು ಒದಗಿಸುವುದಾಗಿ ಹೇಳಿದ್ದಾರೆ.

Sri H. M. CHANNABASAPPA.—It is open to the hon.member to draw his own inference. I may submit to the House that any question which may be reasonably asked could be answered. To say that this report is like this; that all is not quite relevant. I stand committed to furnish to the House the information as to when the FIR was filed and where was the need for the time-lag in the arrest etc., On all these points,I will certainly ascertain the information and furnish it to the House.

ಶ್ರೀ ಎಂ. ಬಿ. ರಾಮಸ್ವಾಮಿ.—25 ರಂದು ದೂರು ಕೊಟ್ಟರೂ ರಿಜಿಸ್ಟರು ಮಾಡದಿರಲು ಕಾರಣವೇನು ? ನಿಧಾನವಾಗಿ ಕ್ರಮ ತಗೆದುಕೊಳ್ಳಲಾಗಿದೆ. ಪೋಲೀಸರ ದೌರ್ಜನ್ಯವಿದ್ಯೆಯೇ? ಪೋಲೀಸರು ಯಾವರೀತಿ ತಪ್ಪಿತಸ್ಥನನ್ನು ಬಂಧಿಸಿದರು ? 9-3-73ರಲ್ಲಿ ಅರೆಸ್ಟ್ ಮಾಡಿ ಜುಡಿಷಿಯಲ್ ಕಸ್ಟಡಿಗೆ ತಗೆದುಕೊಂಡರು. ಹಾಗೆ ಮಾಡಿದಮೇಲೆ 19 ರವರೆಗೆ ಇದ್ದ ಎಂದು ಗೊತ್ತಾಗಿದೆ ಈಗಲೂ ಕಸ್ಟಡಿಯಲ್ಲಿದ್ದಾನೆಯೇ?

Mr. DEPUTY SPEAKER.—Government is not anxious to shield anybody.

Sri H. M. CHANNABASAPPA.—Government is not at all interested in shielding anybody. It is the responsibility of the Government to collect certain information which the hon. members want. This much of information I can give.

Sri M. B. RAMASWAMY.—Because the statement which is furnished to the House is inadequate and it is inconsistent, I would like to have the full information.

ಶ್ರೀ ಕಾಗೋಡು ತಿಮ್ಮಪ್ಪ —ನಿಧಾನ ಪ್ರವೃತ್ತಿ ಅನೇಕ ಪೋಲೀಸು ಅಧಿಕಾರಿಗಳಲ್ಲಿದೆ. ಬಲಾತ್ಕಾರವಾಗಿ ನೆಡೆದಿರುವ ಪ್ರಕರಣವಿದು. ನಿರಪರಾಧಿಗೆ ತೊಂದರೆಯಾಗಿರುವಾಗ ಸುಮ್ಮನಿದ್ದಾರೆ.

MR. DEPUTY SPEAKER.—We will go to the next item of the programme.

(*ii*) *re* : non-application of some of the Government order to the employees of M. S E. B.

Sri H.S. SIDDAPPA (Arsikere).–I call the attention of the Minister for Public Works and Electricity to the non-application of some of the Government orders to the Employees of Mysore State Electricity Board.

SRI H.M. CHANNABASAPPA (Minister for Public Works and Electricity).—I state as follows.

On the formation of the Mysore State Electricity Board with effect from 1-10-1957 under section 5 of the Electricity (Supply) Act 1948, all the employees of the former Electrical Department of the Government of Mysore were given the option either to serve under the Board or to remain in Government Service. In pursuance of this all the employees of the Department, excepting 3 or 4, unequivocably and unreservedly opted for service under the Board and the services of these employees were transferred by Government to the Board from 1-10-1957. By exercising their option to serve under the Board, these employees ceased to be Government servants from 1-10-1957 and agreed to be governed by the service conditions of the Board from that date

2. Under Section 79 (c) of the Act, the Board is empowered to make regulations providing for the duties of its employees and their salaries allowances and other conditions of service. Appointments and promotions of its employees are regulated by the Cadre and Recruitment Rules framed by it in pursuance of these provisions. Orders of Government applicable to Government employees do not automatically therefore apply to Board employees, unless the Board adopts them if these are found to be in the interest of its employees. Government Orders No. GAD 123 SSR 66, dated 21-11 1956 GAD 2 SSR 67, dated 3-8-1967 and GAD 72 SSR 67 dated 20-7-1968 in the matter of passing of departmental tests for promotional purpeses applicable to Government employees will not be applicable to the employees of the Board unles these are adopted specifically by it. The conditions of service enjoyed by these employees under Government thus stand determined consequent on their option for service under the Board and they will be governed by the conditions as offered by the Board. The High Court of Mysore has also held that Board employees could not claim the status of allottees under Section 115 of S. R. Act after they relinquished their posts under the State Government and accepted fresh appointments under the Board. The Board is, therefore, justified legally and otherwise in framing its own Rules governing the promotion and other conditions of service of its employees.

SRI H. S. SIDDAPPA.—In para 2 it is stated that appointments and promotions to its employees are regulated by the Cadre and Recruitment Rules framed. I want to know whether there is any cadre and Recruitment Rules in the Department ? In the last para of the note you have stated the Board is therefore justified legally and otherwise in framing its own rules governing the promotion and other conditions of service. Has the Board framed the rules and conditions of service ?

SRI H. M. CHANNABASPPA.—The Department has framed its rules and conditions of servir long back.

Threa tening Annonymous letters to Sriyuths Konandur Lingappa and Vatal Nagaraj.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಈದಿನ ನನಗೆ ಒಂದು ಅನಾಮಿಕ ಪತ್ರ ಬಂದಿದೆ. ನನ್ನ ಜೀವಕ್ಕೆ, ದೇಹಕ್ಕೆ ಅಪಾಯ ಒದಗಿಸತಕ್ಕಂಥ ಒಂದು ಬೆದರಿಕೆಯ ಪತ್ರ ಬಂದಿವೆ.

MR. DEPUTY SPEAKER.—If the hon. member is realy serious he may please pass it on to me.

† ಶ್ರೀ ಕೋಣಂದೂರು ಲಿಂಗಪ್ಪ.—ಹೆದರುವ ಪ್ರಶ್ನೆಯಿಲ್ಲ, ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ, ಯಾರಾದರೂ ಬರೆಸಿದ್ದಾರೆ ಎಂದು ನಾನು ಹೇಳುತ್ತಿಲ್ಲ. ಅದರಲ್ಲಿ ಈ ರೀತಿ "ನೀವು ಕನ್ನಡ ಚಳುವಳಿಯ ಬಗ್ಗೆ ಬೈಯುವುದನ್ನು ನಿಲ್ಲಿಸದಿದ್ದರೆ, ಜನರಲ್ ಹಾಸ್ಟೆಲ್‌ಗೆ ಬಂದು ನಿನಗೆ ಕೈಕಾಲು ಮುರಿಯುತ್ತೇವೆ, ನಿನಗೆ ರಿಪೇರಿ ಮಾಡುತ್ತೇವೆ. ವಾಟಾಳ್ ಸುದ್ದಿಗೆ ನೀನು ಬಂದ್ರೆ ಮಾನ ಉಳಿಸಕ್ಕಿಲ್ಲ, ನೆನಪಿರಲಿ, ನಮ್ಮ ಛಲದಂಕಮಲ್ಲರ ಬಗ್ಗೆ ಯಾರೂ ಮಾತನಾಡಕೂಡದು. ಅವರ ಬಗ್ಗೆ ಮಾತನಾಡಿದ ಟಿ. ಆರ್. ಶಾಮಣ್ಣ, ರಾಜತಿಮ್ಮಯ್ಯನವರಿಗೆ ಸಹ ಮೊದಲು ರಿಪೇರಿ ಮಾಡಿದ್ದೆವು. ನಿನಗೆ ಇದು ಕಡೆಯ ಎಚ್ಚರಿಕೆ......"ಇಲ್ಲಿ ಯಾರ ಬಗ್ಗೆಯೂ ನಾನು ಆರೋಪ ಮಾಡುತ್ತಾ ಇಲ್ಲ. ಇಂಥ ಮನೋಭಾವದಿಂದ ಬೆದರಿಕೆ ಪತ್ರ ಬರೆಸಿ ನಮ್ಮನ್ನು ಬಾಯಿ ಮುಚ್ಚಿಸುತ್ತೇವೆಂದು ತಿಳಿದು ಕೊಳ್ಳುವುದು ಯಾರ ಜಾಯಮಾನದಲ್ಲೂ ಇಲ್ಲ. ಕನ್ನಡದ ಚಳುವಳಿಯ ಬಗ್ಗೆ ನನಗೆ ಅಪಾರವಾದ ಅಭಿಮಾನ ಇದೆ. ಈ ದಶಕದಲ್ಲಿ ಕನ್ನಡ ಚಳವಳಿಯನ್ನು ಮಾಡಿದವನು ನಾನು. ಅನಂತರ ವಾಟಾಳ್ ನಾಗರಾಜ್ ಅವರಿಂದ ಬೇಕಾದಷ್ಟು ಸೇವೆ ಸಂದಿದೆ. ಆದರೆ ಯಾವುದೇ ಚಳವಳಿಯಾಗಲೀ, ಕನ್ನಡ ಚಳುವಳಿಯಾಗಲಿ: ಸಮಾಜವಾದಿ ಚಳುವಳಿಯಾಗಲಿ, ಚಳುವಳಿಯ ಹೆಸರಿನಲ್ಲಿ ಹಿಂಸಾಕೃತ್ಯಗಳನ್ನು ನಡೆಸುವುದನ್ನು ನಾವು ಖಂಡಿತವಾಗಿಯೂ ವಿರೋಧಿಸುತ್ತೇವೆ. ಇದನ್ನು ಮಾತ್ರ ನಾನು ಒಪ್ಪತಕ್ಕಂಥವನಲ್ಲ. ಕನ್ನಡ ಚಳುವಳಿಯ ಬಗ್ಗೆ ನನಗೆ ಅಭಿಮಾನವಿಲ್ಲ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು. ಕನ್ನಡ ಚಳುವಳಿಯನ್ನು ಈ ದಶಕದಲ್ಲಿ ಪ್ರಾರಂಭ ಮಾಡಿದವನು ನಾನು ಇದು ಎಲ್ಲರಿಗೂ ಗೊತ್ತಿದೆ. ಇದು ಮಾನ್ಯ ವಾಟಾಳ್ ನಾಗರಾಜ ಅವರಿಗೂ ಗೊತ್ತಿದೆ. ಪುಣ್ಯಾತ್ಮ ಅ. ನಾ. ಕೃಷ್ಣರಾಯರು, ಮತ್ತು ದಿವಂಗತ ರಾಮಮೂರ್ತಿಯವರಿಗೆ ನಾನು ಕೃತಜ್ಞತೆಯನ್ನು ಈ ಸಂದರ್ಭದಲ್ಲಿ ಸಲ್ಲಿಸಬೇಕಾಗಿದೆ, ಮಾನ್ಯ ರಾಮಪ್ರಸಾದ್ ಅವರು ಇಲ್ಲಿಯೇ ಕುಳಿತಿದ್ದಾರೆ.

Mr. DEPUTY SPEAKER.—This evening please come to my room in the Legislators' home. If you are really serious please pass on that letter.

ಶ್ರೀ ಕಾಗೋಡು ತಿಮ್ಮಪ್ಪ.—ಮೊನ್ನೆ ಮಾತನಾಡುತ್ತಾ ಇರಬೇಕಾದರೆ ತಿಳಿದು ಬಂದದ್ದರಲ್ಲಿ ಜನರಲ್ ಹಾಸ್ಟೆಲ್‌ನಲ್ಲಿ ಕೆಲವು ಹುಡುಗರು ಸೇರಿದ್ದಾರೆ ಎಂದು ಅನುಮಾನ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ನನಗೂ ಪತ್ರ ಬಂದಿದೆ, ಯಾರೋ ಬರೆದಿದ್ದಾರೆ, ಅದಕ್ಕೆ ಬೆಲೆ ಕೊಟ್ಟುಕೊಂಡು ಕುಳಿತು ಕೊಳ್ಳುವುದಾದರೆ ದೇಶದಲ್ಲಿ ಏನು ಬೇಕಾದರೂ ಮಾಡಬಹುದು. ನನಗೆ ಡಿ. ಎಂ. ಕೆ ಯವರು ಕೊಲೆಮಾಡುತ್ತೇವೆಂದು ಬರೆಯುತ್ತಾರೆ, ಏನು ಮಾಡುವುದಕ್ಕೂ ಆಗುವುದಿಲ್ಲ. ವಿರೋಧ ಪಕ್ಷದಲ್ಲಿ ಕುಳಿತು ನಾವು ಗುದ್ದಾಡಬೇಕೇ ಹೊರತು ಆ ?

ಶ್ರೀ ಕೋಣಂದೂರು ಲಿಂಗಪ್ಪ.—ವಿರೋಧ ಪಕ್ಷದಲ್ಲಿದ್ದು ಗುದ್ದಾಡುವ ಪ್ರಶ್ನೆಯಿಲ್ಲ, ವಿರೋಧ ಪಕ್ಷದಲ್ಲಿರುವವರು ನಾವೆಲ್ಲ ಒಂದೇ

Taking up some Notices by Members

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ನಾನು ಸಾರಿಗೆ ಸಚಿವರ ಮೇಲೆ ಪ್ರಿವಿಲೇಜ್ ಮೋಷನ್ ಕೊಟ್ಟಿದ್ದೇನೆ. ಅವರು ಚಾಸಿಸ್ ಪರ್ಚೇಸ್ ಮಾಡುವುದರ ಬಗ್ಗೆ ಈ ಸಭೆಗೆ ಅಸತ್ಯವಾದಂಥ ಹೇಳಿಕೆ ಕೊಟ್ಟಿದ್ದಾರೆ. ಆ ಸಂಬಂಧದಲ್ಲಿ ಪ್ರಿವಿಲೇಜ್ ಮೋಷನ್ ಇದೆ. ಇನ್ನೊಂದು,

ರಾಯಚೂರ್‌ನಲ್ಲಿ ಡಿವಿಷನ್ ಹಾಕತಕ್ಕ ಬಗ್ಗೆ ಮಂತ್ರಿಗಳು ಕಾಗೋಡು ತಿಮ್ಮಪ್ಪನವರ ಕಾಲ್ ಅಟೆನ್ಷನ್‌ಗೆ ಉತ್ತರ ಕೊಟ್ಟ ಕಾಲದಲ್ಲಿ ಅಸತ್ಯವಾದ ಹೇಳಿಕೆ ಕೊಟ್ಟಿದ್ದಾರೆ. ಈ ಎರಡು ವಿಷಯಗಳ ಬಗ್ಗೆ ಪ್ರಿವಿಲೇಜ್ ಮೋಷನ್ ಇದೆ. ಇವುಗಳ ಚರ್ಚೆಗೆ ತಾವು ಅನುವು ಮಾಡಿಕೊಡಬೇಕು. ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಇಡಲಿಕ್ಕೆ ನಾನು ತಯಾರು ಇದ್ದೇನೆ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ತಾಲ್ಲೂಕು ಬೋರ್ಡಿನ ಬಗ್ಗೆ ರೂಲ್ 59ರ ಪ್ರಕಾರ ನೋಟೀಸ್ ಅನ್ನು ಕಳುಹಿಸಿದ್ದೇನೆ. ಅದನ್ನು ಇದುವರಗೂ ಚರ್ಚೆಗೆ ತೆಗೆದುಕೊಳ್ಳಲಿಲ್ಲ. ತಾಲ್ಲೂಕು ಬೋರ್ಡ್ ಅವಧಿ ಪೂರ್ಣವಾಗುತ್ತಾ ಇದೆ. ಸರ್ಕಾರಿ ಅಧಿಕಾರಿಗಳನ್ನು ತಾಲ್ಲೂಕು ಬೋರ್ಡುಗಳಿಗೆ ಒಳಪಡಿಸಬೇಕು ಎಂದು ಇದ್ದಾರೆ. ಇದರ ಬಗ್ಗೆ ಹೇಳಿಕೆ ಕೊಡಬೇಕು ಎಂದು ಕೇಳಿದ್ದೇನೆ.

Mr. DEPUTY SPEAKER —You have given under what rule ?

Sri KAGODU THIMMAPPA.—Under Rule 59.

Mr. DEPUTY SPEAKER.—Is it posible to take it up now, or can we have it tomorrow ?

Sri M. MALLIKARJUNASWAMY (Minister for Comunity Development and social welfare).—My demand will be coming tomorrow for discussion. We will have it with the demand.—

ಶ್ರೀ ಎಚ್. ಡಿ. ದೇವೇಗೌಡ.—ಡಿಮ್ಯಾಂಡ್‌ನಲ್ಲಿ ಇದನ್ನು ಒಂದುಗೂಡಿಸುವುದು ಬೇಡ. ಚುನಾವಣೆ ನಡೆಸುವುದು ಒಂದು ಭಾಗ ಮತ್ತೊಂದು ಭಾಗ ಚುನಾವಣೆಗಳನ್ನು ನಡೆಸುವವರೆಗೆ ತಾಲ್ಲೂಕು ಬೋರ್ಡುಗಳ ಅವಧಿ ಮುಂದುವರಿಸಿಕೊಂಡು ಹೋಗಬೇಕು ಎಂದು ಎರಡು ಇಷ್ಯೂ ಇವೆ. ಇದಕ್ಕೆ ಪ್ರತ್ಯೇಕವಾಗಿ ಚರ್ಚೆಗೆ ಅವಕಾಶ ಮಾಡಬೇಕಾಗುತ್ತದೆ. ಮಂತ್ರಿಗಳು ಪ್ರತ್ಯೇಕವಾಗಿ ಉತ್ತರ ಹೇಳಲಿ.

Mr. DEPUTY SPEAKER.—The hon. Leader of the Opposition will please give some cut motions on that partieular motion. Even otherwise the hon. Members will be dilating upon the particular issue. The particular issue is upper most in the mind of Sri Thimmappa. I feel that it can be taken up with the demand beeause it is a point to be raised there. Sri Thimmappa can agree with it.

2–30 P.M.

ಶ್ರೀ ಕಾಗೋಡು ತಿಮ್ಮಪ್ಪ.—ಡಿಮಾಂಡ್ ಚರ್ಚೆ ಆಗುವ ಸಂದರ್ಭದಲ್ಲಿ ಸಮರ್ಪಕವಾಗಿ ಉತ್ತರ ಬಂದರೆ ಆಯಿತು ಇಲ್ಲದಿದ್ದರೆ ನಾಳಿದ್ದು ಪ್ರತ್ಯೇಕವಾಗಿ ಚರ್ಚೆಗೆ ತೆಗೆದು ಕೊಳ್ಳಬೇಕು.

Cancellation of Examinaeion Centrs at Nonavinakere.

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ರೂಲ್ 63 ಪ್ರಕಾರ ನೋಟೀಸ್ ಕಳುಹಿಸಿದ್ದೇನೆ. ನೊಣವಿನಕೆರೆಗೆ ಇರುವ ಎಕ್ಸಾಮಿನೇಷನ್ ಸೆಂಟರ್ ರದ್ದು ಮಾಡಿದ್ದಾರೆ, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅದು ಕೊಟ್ಟು ಬಹಳ ದಿವಸವಾಯಿತು. ಎಕ್ಸಾಮಿನೇಷನ್ ಇಷ್ಟರಲ್ಲೇ ಶುರು ಆಗುತ್ತಿದೆ.

Mr. DEPUTY SPEAKER.—We have to receive the statement from the Government. I will see that it is pursued: I can assure you that our department is anxious to get the reply as early as possible and have it,

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಡಿಸೆಂಬರ್ ತಿಂಗಳಲ್ಲಿ ರೂಲ್ 49 ಪ್ರಕಾರ ಅರ್ಧಗಂಟೆಕಾಲದ ಚರ್ಚೆಗೆ ಅವಕಾಶ ಕೇಳಿದ್ದೆ ಅದಕ್ಕೆ ಅವಕಾಶ ಸಿಕ್ಕಲಿಲ್ಲ. ಪುನಃ 15ನೇ ಮಾರ್ಚಿ 1973ರಲ್ಲಿ ರೂಲ್ 63 ಪ್ರಕಾರ ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಅದಕ್ಕೂ ಅವಕಾಶ ಸಿಕ್ಕಲಿಲ್ಲ.

ಶ್ರೀ ಕೊಣಂದೂರು ಲಿಂಗಪ್ಪ.—9ನೇ ತಾರೀಖು ನೋಟೀಸ್ ಕೊಟ್ಟಿದ್ದೆ, ರಾಜ್ಯದ ಬಜಂತ್ರಿ ಸಂಘದ ಅಧ್ಯಕ್ಷರು ಇರುವ ಕಷ್ಟಗಳನ್ನು ಹೇಳಿಕೊಂಡಿದ್ದಾರೆ. ಅವರು ಅತ್ಯಂತ ಕೆಳಮಟ್ಟದ ಜನಾಂಗಕ್ಕೆ ಸೇರಿದವರು. ಅವರಿಗೆ ಜೀವನಕ್ಕೆ ಇಲ್ಲದೆ ಇರುವುದರಿಂದ ತೊಂದರೆಯಾಗಿದೆ. ಇದರ ಬಗ್ಗೆ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕ್ಷೌರ ಮಾಡಿಸಿಕೊಳ್ಳುವವರ ಸಂಖ್ಯೆ ಕಡಿಮೆಯಾಗಿದೆ, ಕಾರಣ ಕ್ಷೌರ ಮಾಡಿಸಿಕೊಳ್ಳುವವರಿಗೆ ಚಾರ್ಜ್ ಮಾಡುತ್ತಾ ಇರುವ ರೇಟ್ ಜಾಸ್ತಿಯಾಗಿದೆ. ಮಾನ್ಯ ಮಂತ್ರಿಗಳು ಇದನ್ನು ಹೇಳಬೇಕು.

Mr. DEPUTY SPEAKER.—Mr. Lingappa, you had seen me yesterday evening. If you had given me an inkling, I would have collected all the information. It depends upon the gravity of the situation and of the subject.

ಶ್ರೀ ಕಾಗೋಡು ತಿಮ್ಮಪ್ಪ.—ಸೊರಬ ತಾಲ್ಲೋಕಿನ ಜಡೆ ಹೋಬಳಿಯಲ್ಲಿ ಒಬ್ಬ ಹರಿಜನ ಮಹಿಳೆಯನ್ನು ಅಮಾನುಷವಾಗಿ ಥಳಿಸಿದ್ದಾರೆ ಎಂದು ಪ್ರಕರಣ ವರದಿಯಾಗಿದೆ, ಇಲ್ಲಿಯವರೆಗೆ ಪೋಲೀಸರು ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ವರ್ತಮಾನ ಬಂದಿದೆ. ಈ ಬಗ್ಗೆ ಮಂತ್ರಿಗಳ ಗಮನ ಸೆಳೆಯಬೇಕು ಎಂದು ನೋಟೀಸ್ ಕೊಟ್ಟಿದ್ದೇನೆ. ಅದಷ್ಟು ಜಾಗ್ರತೆ ಸರ್ಕಾರದವರು ಇದಕ್ಕೆ ಉತ್ತರ ಕೊಡಬೇಕೆಂದು ಒತ್ತಾಯ ತರಬೇಕೆಂದು ಕೇಳಿಕೊಳ್ಳುತ್ತೇನೆ.

Mysore Sales Tax (Amendment) Bill 1973–Motion to Censider.

Sri M. Y. GHARPADE.—(Minister for finance) I move :

"That The Mysore Sales Tax (Amendment) Bil', 1973, be taken into consideration."

Mr. DEPUTY SPEAKER.—Motion moved :

"That The Mysore Sales Tax (Amendmnet) Bill, 1973, be taken into consideration."

† ಶ್ರೀ ಎಂ. ವೈ. ಘೋರ್ಪಡೆ.—ಸ್ವಾಮಿ ಈ ಬಿಲ್ಲಿನ ಸ್ಟೇಟ್‌ಮೆಂಟ್ ಆಫ್ ಆಬ್‌ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಇದರ ಉದ್ದಿಶ್ಯ ಏನು ಎಂಬುದನ್ನೂ ಸ್ಪಷ್ಟವಾಗಿ ಹೇಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕೆಲವು ಕೋರ್ಟಿನ ತೀರ್ಮಾನಗಳ ಪರಿಣಾಮವಾಗಿ ಸೆಂಟ್ರಲ್ ಸೇಲ್ಸ್‌ಟ್ಯಾಕ್ಸ್ ಆಕ್ಟ್‌ನಲ್ಲಿ ಬದಲಾವಣೆ ಮಾಡಬೇಕಾಗಿದೆ. ಸೆಂಟ್ರಲ್ ಸೇಲ್ಸ್‌ಟ್ಯಾಕ್ಸ್ ಆಕ್ಟ್‌ನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಅದರಲ್ಲಿ ಸೆಕ್ಷನ್ 14–15 ಏನಿದೆ ಅದಕ್ಕೆ ಅನುಗುಣವಾಗಿ ನಮ್ಮ ಸೇಲ್ಸ್‌ಟ್ಯಾಕ್ಸ್ ಆಕ್ಟಿನಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವ ದೃಷ್ಟಿಯಿಂದ ಈ ಬಿಲ್ಲನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಇದರಲ್ಲಿ ಈ ಅಮೆಂಡ್‌ಮೆಂಟಿನ ಮುಖ್ಯ ಉದ್ದೇಶ ಇಷ್ಟೆ. ಸ್ಟೇಟ್ ಟ್ಯಾಕ್ಸ್ ರಿಫಂಡ್ ಮಾಡುವಾಗ " Subjet to the payment of sales tan on the inter-State sale " ಮಾಡಬೇಕು ಎಂದು ಇದೆ. ಇಂಥ ಒಂದು ಕಂಡಿಷನ್, ಟ್ಯಾಕ್ಸ್ ರೀ ಫಂಡ್ ಮಾಡಬೇಕಾದರೆ ಇಂಟರ್ ಸ್ಟೇಟ್ ಸೇಲ್ಸ್‌ಟ್ಯಾಕ್ಸ್ ಕೊಟ್ಟಿದ್ದರೆ ಮಾತ್ರ ರೀಫಂಡ್ ಮಾಡುತ್ತೇವೆ ಎನ್ನುವ ಕಂಡಿಷನ್ ಸ್ಟೇಟ್ ಸೇಲ್ಸ್‌ಟ್ಯಾಕ್ಸ್ ಆಕ್ಟ್‌ನಲ್ಲಿ ಇರಕೂಡದು, ಸೆಂಟ್ರಲ್ ಆಕ್ಟಿನಲ್ಲಿ ಇರಬಹುದು ಎಂಬುದು ಕೋರ್ಟಿನ ತೀರ್ಮಾನದ ಮುಖ್ಯ ಅಂಶ. ಅದರ ಪ್ರಕಾರ ಸೆಂಟ್ರಲ್ ಟ್ಯಾಕ್ಸ್ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ಮಾಡಿದ್ದಾರೆ. ಆ ಮೆಂಡ್‌ಮೆಂಟಿನ ಪ್ರಕಾರ ನಮ್ಮ ಸೇಲ್ಸ್‌ಟ್ಯಾಕ್ಸ್ ಆಕ್ಟ್‌ನಲ್ಲಿ

ಕೂಡ ಆ ರೀತಿ ಅಮೆಂಡಮೆಂಟ್ ಮಾಡಿದೆ. ಇದರ ಉದ್ದಿಶ್ಯ ಏನು ಎಂದರೆ ನಾವು ಡಿಕ್ಲೇರ್ಡ್ ಗೂಡ್ಸ್ ಮೇಲೆ ನಮ್ಮ ಟ್ಯಾಕ್ಸ್ ಏನಾದರೂ ರೀ ಫಂಡ್ ಮಾಡಬೇಕಾದರೆ ಅಲ್ಲಿ ಇಂಟರ್ ಸ್ಟೇಟ್ ಸೇಲ್ಸ್ ಟ್ಯಾಕ್ಸ್ ಕೊಟ್ಟಿದ್ದರೆ ರೀ ಫಂಡ್ ಮಾಡುತ್ತೇವೆ. ಈ ಉದ್ದಿಶ್ಯ ಸಾಧನೆ ಮಾಡುವುದರಲ್ಲಿ ಯಾವ ಕಾನೂನಿನ ಅಡ್ಡಿ ಆತಂಕವೂ ಬರುವುದಿಲ್ಲ.

ಇದೇ ಸಮಯದಲ್ಲಿ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಆಕ್ಟಿನಲ್ಲಿ ಇನ್ನೂ ಕೆಲವು ಬದಲಾವಣೆಗಳನ್ನು ಮಾಡಿದ್ದೇವೆ. ಬದಲಾವಣೆಗಳ ಉದ್ದಿಶ್ಯ ಡಿಕ್ಲೇರ್ಡ್ ಆರ್ಟಿಕಲ್ಸ್ ಮೇಲೆ ಇನ್ನು ವಿವರವಾಗಿ ಸ್ಪಷ್ಟವಾಗಿ ಬರೆದಿದ್ದೇವೆ. ಅದು ಸಂಶಯಾಸ್ಪದವಾಗಿ ಇರಕೂಡದು, ಚಾರ್‌ಕೋಲ್ ಕೋಲ್‌ನಲ್ಲಿ ಸೇರಿತು ಎಂದು ಅನುಮಾನ ಇತ್ತು ಅದನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಚಾರ್‌ಕೋಲ್ ಇಂಥ ಡಿಕ್ಲೇರ್ಡ್ ಗೂಡ್ಸ್ ಅಲ್ಲ ಎಂದು ಹೇಳಿದ್ದೇವೆ. ಅದರ ಜೊತೆಗೆ ನಾವು ಬಜೆಟಿನಲ್ಲಿ ಸೇಲ್ಸ್ ಟ್ಯಾಕ್ಸ್ ಬಗ್ಗೆ ಏನು ತೀರ್ಮಾನಗಳನ್ನು ಸರ್ಕಾರದ ಪತಿಯಿಂದ ಹೇಳಿದ್ದೆವು ಅದು ಕೂಡ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟಿನಲ್ಲಿ ಅಡಕವಾಗಿದೆ. ಉದಾಹರಣೆಗೆ ಥ್ರೋನ್ ಸಿಲ್ಕಿನ ಮೇಲೆ ಸೇಲ್ಸ್ ಟ್ಯಾಕ್ಸ್ ತಂದಿದೆ. ಆಮೇಲೆ ಪ್ಯಾಡಿ ಮೇಲೆ ಏನು ಪರ್ಚೇಸ್ ಟ್ಯಾಕ್ಸ್ ಇತ್ತು ಅದು ತೆಗೆಯುವುದು; ಅನಂತರ ಷ್ರಿಂಪ್ಸ್ ಮತ್ತು ಪ್ರಾನ್ಸ್ (Shrimps and prawns) ಮೇಲೆ ಒಂದೂವರೆ ಪರ್ಸೆಂಟ್ ಮೇಲ್ಪಟ್ಟು ಇದ್ದುದನ್ನು ನಾಲ್ಕು ಪರ್ಸೆಂಟ್ ಸಿಂಗಲ್ ಪಾಯಿಂಟ್ ಮಾಡಿದ್ದು; ಅದು ಕೂಡ ಈ ಬಿಲ್ಲಿನಲ್ಲಿ ಅಡಕವಾಗಿದೆ. ಆದುದರಿಂದ ಪುನಃ ಹೇಳಬೇಕಾದರೆ ಇದರಲ್ಲಿ ಎರಡು ಅಂಶಗಳು ಮುಖ್ಯವಾದುವು. ಸೆಂಟ್ರಲ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಆಗತಕ್ಕದ್ದು, ಅದಕ್ಕೆ ಅನುಗುಣವಾಗಿ ನಮ್ಮ ಕಾನೂನಿನಲ್ಲಿ ಮಾರ್ಪಾಡು ಮಾಡಬೇಕು ಅದನ್ನು ಮಾಡಿದ್ದೇವೆ. ಮತ್ತೆ ನಾವು ಮೈಸೂರು ಸರ್ಕಾರ ಬಜೆಟ್ ಮಂಡಿಸುವಾಗ ಹೇಳಿದಂತೆ ಸೇಲ್ಸ್ ಟ್ಯಾಕ್ಸ್ ಬಗ್ಗೆ ಕೆಲವು ಏಪ್ರಿಲ್ 1ನೇ ತಾರೀಜು ಜಾರಿಗೆ ತರುವ ದೃಷ್ಟಿಯಿಂದ ಈ ಬಿಲ್ಲನ್ನು ತಮ್ಮ ಮುಂದೆ ಇಟ್ಟಿದ್ದೇವೆ. ವಿಶೇಷವಾಗಿ ಯಾವುದಾದರೂ ಒಂದು ವಿಷಯದ ಮೇಲೆ ಹೆಚ್ಚಿಗೆ ಸಮಾಚಾರ ಏನಾದರೂ ಮಾನ್ಯ ಸದಸ್ಯರಿಗೆ ಬೇಕಾದರೆ ಖಂಡಿತ ಕೊಡುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಸಾಧಾರಣವಾಗಿ ತೆರಿಗೆ ಹೆಚ್ಚಿಗೆ ಮಾಡುವುದಾಗಲಿ, ತೆರಿಗೆ ಹಾಕುವುದಾಗಲಿ ಬಂದಾಗ ಜನಗಳ ಪ್ರತಿನಿಧಿಗಳು ನಾವು ವಿರೋಧಿಸಬೇಕಾದುದು ನಮ್ಮ ಕರ್ತವ್ಯ, ವಿರೋಧಿಸುತ್ತೇನೆ. ಇನ್ನೊಂದು ತೆರಿಗೆ ವಿನಾಯಿತಿ ಕೊಟ್ಟಿದ್ದಾರೆ, ಅವನ್ನು ವಿರೋಧಿಸಬೇಕಾಗಿ ಬಂದಿದೆ. ಅದನ್ನು ನಾನು ಕೊನೆಗೆ ಹೇಳುತ್ತೇನೆ.

ಈಗ ನಾನು Amendment of The fifth Schedule. In the Fifth Schedule to the Principal Act. (1) "in the entry relating to serial No. 38A, after the words "Raw Silk", the words "thrown silk or twisted silk" shall be inserted; ಅಂತ ಏನು ಇದೆಯೋ ಅದರ ಬಗ್ಗೆ ಮಾತನಾಡುತ್ತೇನೆ.

ಈ ಬಗ್ಗೆ ನಾನು ಮಾತನಾಡುವುದು ಏನೆಂದರೆ ಥ್ರೋನ್ ಸಿಲ್ಕ್‌ಗೆ ವಿನಾಯಿತಿ ಕೊಡುವುದಕ್ಕೆ ಕಾರಣ ಏನು ಎಂದು ಕೇಳುತ್ತೇನೆ. ಇದರ ಬಗ್ಗೆ ವಿವರವಾಗಿ ನಾನು ತಮಗೆ ತಿಳಿಯುವ ಹಾಗೆ ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಹೇಳುವುದಾದರೆ ಈ ರಾ ಸಿಲ್ಕ್‌ಗೆ ಇಡೀ ಭಾರತ ದೇಶದಲ್ಲಿ ತೆರಿಗೆ ಇರಲಿಲ್ಲ ಎನ್ನುವುದು ತಮಗೆಲ್ಲಾ ಗೊತ್ತಿದೆ. ನಮ್ಮ ದೇಶದಲ್ಲೂ ಇರಲಿಲ್ಲ. ಆದರೆ ಥ್ರೋನ್ ಸಿಲ್ಕ್‌ಗೆ 2 ಪರ್ಸೆಂಟ್ ಇದೆ. ಇದನ್ನು ಹುರಿ ಮಾಡಿ ಹೊರದೇಶಕ್ಕೆ ಕಳುಹಿಸುತ್ತಿದ್ದಾರೆ ಅದ್ದರಿಂದ 2 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಇತ್ತು. ಈಗ ಥ್ರೋನ್ ಸಿಲ್ಕ್ ಮೇಲೆ ಇರತಕ್ಕಂಥಾ 2 ಪರ್ಸೆಂಟ್ ಸೇಲ್ಸ್ ಟ್ಯಾಕ್ಸನ್ನು ನಮ್ಮ ಅರ್ಥಸಚಿವರು ವಜಾ ಮಾಡಿದ್ದಾರೆ. ಆದುದರಿಂದ ಈ ತೆರಿಗೆಯನ್ನು ವಜಾ ಮಾಡಿದುದರ ಬಗ್ಗೆ ವಿವರಣೆ ಕೊಡಬೇಕು ಎಂದು ಹೇಳುತ್ತೇನೆ.

ರಾ ಸಿಲ್ಕ್ ವಿಷಯ ಹೇಳುವುದಾದರೆ ನಮ್ಮ ದೇಶದಲ್ಲಿ ಟೋಟಲ್ ಪ್ರೊಡಕ್ಷನ್ 15 ಲಕ್ಷದಿಂದ 20 ಲಕ್ಷ ಕೆ.ಜಿ ಇದೆ. ಅದರಲ್ಲಿ 10 ಲಕ್ಷ ಕೆ.ಜಿ. ಸರ್ಕಾರದವರು ತಯಾರು ಮಾಡುವುದು ಬಿಟ್ಟರೆ ಬಾಕಿ ಉಳಿದದ್ದು ಖಾಸಗಿಯವರು ತಯಾರು ಮಾಡುತ್ತಾರೆ. ಮತ್ತು ಇದರಲ್ಲಿ ಥ್ರೋನ್ ಸಿಲ್ಕ್ 80 ಸಾವಿರ ಕೆ.ಜಿ. ಸಿಕ್ಕುತ್ತದೆ. ಇದರ ಮೇಲೆ 2 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಎಂದು ಇಟ್ಟುಕೊಂಡರೂ ಕೂಡ ನನ್ನ ಲೆಕ್ಕಾಚಾರದ ಪ್ರಕಾರ ಅಧಿಕಾರಿಗಳು ನಿರ್ವಂಚನೆಯಿಂದ ವಸೂಲ್ ಮಾಡಿದರೆ 40 ಲಕ್ಷ ರೂಪಾಯಿ ಸೇಲ್ಸ್ ಟ್ಯಾಕ್ಸ್ ವಸೂಲ್ಮಾಡಬಹುದು. ಆದರೆ ನಮ್ಮ ಅರ್ಥ ಸಚಿವರು ಬಜೆಟ್ ಭಾಷಣದಲ್ಲಿ ಹೇಳಿದರು, ನನಗೆ ಜ್ಞಾಪಕ ಇರುವ ಹಾಗೆ 2 ಲಕ್ಷ ರೂಪಾಯಿ ಕಲೆಕ್ಟ್ ಮಾಡುತ್ತೇವೆ ಅದರಲ್ಲಿ 1—1½ ಲಕ್ಷ ಖರ್ಚಾಗುತ್ತದೆ. ಆ ಕಾರಣದಿಂದ ತೆಗೆಯುತ್ತೇವೆ ಎಂದು ಹೇಳಿದರು.

ಶ್ರೀ ಎಂ. ವೈ. ಘೋರ್ಪಡೆ.—ನಾನು ಹೇಳಿದ್ದು ಟೋಟಲ್ 2.5 ಲಕ್ಷ ರೂಪಾಯಿ ಇನ್ ಕಂನಲ್ಲಿ 1.5 ಲಕ್ಷ ರೂಪಾಯಿ ಸರ್ಕಾರಿ ಫಿಲೇಚರ್‌ನಿಂದ ಬರುತ್ತದೆ ಎಂದು ಹೇಳಿದೆ.

ಶ್ರೀ ಕೆ. ಎಂ. ನಾಗಣ್ಣ.—ಈಗ ತಾವು 2-5 ಲಕ್ಷ ರೂಪಾಯಿ ಇನ್‌ಕಂ ಬರುತ್ತದೆ ಎಂದು ಏನು ಹೇಳಿದರೋ ಅದೂ ತಪ್ಪು. ಯಾವರೀತಿ ಎಂದರೆ ನನ್ನ ಲೆಕ್ಕಾಚಾರದ ಪ್ರಕಾರ ಥ್ರೋನ್ ಸಿಲ್ಕ್ 20,000 ಕೆ.ಜಿ. ಏನು ಸಿಕ್ಕುತ್ತದೋ ಇದರ ಮೇಲೆ 2 ಪರ್ಸೆಂಟ್ ಸೇಲ್ಸ್‌ಟ್ಯಾಕ್ಸ್ ಲೆಕ್ಕ ಹಾಕಿಕೊಂಡರೆ 40 ಲಕ್ಷ ರೂಪಾಯಿ ಆಗಲೇ ಬೇಕು. ಇದಕ್ಕೆ ನೀವು ಕೊಟ್ಟಿರುವ ಕಾರಣ ಸರಿಯಿಲ್ಲ. ನಾನು ಈ ಬಗ್ಗೆ ಸರ್ಕಾರಕ್ಕೆ ಒಂದು ಸವಾಲು ಹಾಕುತ್ತೇನೆ. ನೀವು ಇದರಿಂದ 2ಲಕ್ಷ ರೂಪಾಯಿ ಬರುತ್ತದೆ ಎಂದು ಏನು ಹೇಳಿದ್ದೀರೋ ಅದಕ್ಕೆ ನನ್ನ ಸವಾಲು ಏನೆಂದರೆ ಒಬ್ಬ ಮನುಷ್ಯನನ್ನು ಹುಡುಕಿಕೊಂಡು ಬರುತ್ತೇವೆ ವರ್ಷ ಒಂದಕ್ಕೆ 15ಲಕ್ಷ ರೂಪಾಯಿಗೆ ಕಾಂಟ್ರಾಕ್ಟ್ ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ, ಕೊಟ್ಟುಬಿಡಿ. ಆದ್ದರಿಂದ ನೀವು ಇದರಿಂದ 2.5ಲಕ್ಷ ರೂಪಾಯಿ ಇನ್‌ಕಂ ಬರುತ್ತದೆ ಎಂದು ಏನು ಹೇಳಿದರೋ ಇದರಲ್ಲಿ ಪ್ರಾಮಾಣ್ಯವಾಂಶ ಇಲ್ಲ. ನಾನು ಅತಿ ವಿನಯದಿಂದ ಹೇಳುತ್ತೇನೆ. ಈ ರೇಷ್ಮೆ ಬಾಬಿನಲ್ಲಿ ನನಗೆ ಚೆನ್ನಾಗಿ ಗೊತ್ತಿದೆ ಎಂದು ತಿಳಿದುಕೊಳ್ಳಬೇಕು. ಥ್ರೋನ್ ಸಿಲ್ಕ್ ಮಾಡುವ ಜನಗಳು ಯಾರು ಎಂದರೆ ರಾ ಸಿಲ್ಕನ್ನು ಹುರಿ ಮಾಡುವ ಜನಗಳು. ಅಂಥಾವರು 50 ರಿಂದ 80 ಜನ ಇರಬೇಕು. ಇದರಿಂದ ಅವರಿಗೆ ಅನುಕೂಲವಾಗುತ್ತದೆ. ಆದರೆ ರೇಷ್ಮೆ ಉಪಯೋಗ ಮಾಡತಕ್ಕಂಥ ವೀವರ್ಸ್ ಏನು ಇದ್ದಾರೆ ಸುಮಾರು 50 ಸಾವಿರ ಜನಕ್ಕೆ ಈ ತರಿಗೆಯಿಂದ ಉಪಯೋಗ ಇರಾಲ್ಲ. ಕೇವಲ 50 ರಿಂದ 80 ಜನಕ್ಕೆ ಮಾತ್ರ ಈ ತೆರಿಗೆಯಿಂದ ವಿನಾಯಿತಿ ಆಗುತ್ತದೆ.

ಇನ್ನೊಂದು ವಿಷಯ ಏನೆಂದರೆ ಕೃತಕ ರೇಷ್ಮೆ ಬಗ್ಗೆ ಹೇಳುವುದಾದರೆ ನಮಗೆ 2500 ಪೆಟ್ಟಿಗೆಗಳು ಬರುತ್ತವೆ. ಒಂದೊಂದು ಪೆಟ್ಟಿಗೆಗೆ 20 ರೂಪಾಯಿ ಅಂತ ಇಟ್ಟುಕೊಂಡರೂ ಕೂಡ 6 ಕೋಟಿ ರೂಪಾಯಿ ಆಗುತ್ತದೆ. ಇನ್ನು ಇದರ ಮೇಲೆ ಸೆಂಟ್ರಲ್ ಎಕ್ಸೈಜ್ 3.75 ರಿಂದ 11.40 ಲಕ್ಷದವರೆಗೆ ಟ್ಯಾಕ್ಸ್ ಇದೆ. ಅದೂ ಅಲ್ಲದೆ ಇನ್ನು ಸೆಂಟ್ರಲ್ ಸೇಲ್ಸ್‌ಟ್ಯಾಕ್ಸ್ 2 ಪರ್ಸೆಂಟ್ ಮತ್ತು ಸ್ಟೇಟ್ ಸೇಲ್ಸ್ ಟ್ಯಾಕ್ಸ್ 2 ಪರ್ಸೆಂಟ್ ಇದೆ. ಇದರಲ್ಲಿ 12 ಲಕ್ಷ ರೂಪಾಯಿಗಳು ವಸೂಲಾಗುತ್ತಾ ಇದೆ. ಈ 12 ಲಕ್ಷ ರೂಪಾಯಿಗಳನ್ನು ಆರ್ಟ್ ಸಿಲ್ಕ್‌ನಲ್ಲಿ ಕೆಲಸ ಮಾಡತಕ್ಕಂಥ 2ಲಕ್ಷ ಜನ ಬಡ ನೇಕಾರರು ಈ ಟ್ಯಾಕ್ಸನ್ನು ಕೊಡಬೇಕಾಗಿ ಬಂದಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಯೋಚನೆ ಮಾಡಬೇಕು 2ಲಕ್ಷ ಜನಗಳಿಗೆ ಅನುಕೂಲವಾಗತಕ್ಕಂಥ ಸೇಲ್ಸ್ ಟ್ಯಾಕ್ಸನ್ನು ತೆಗೆಯುವುದು ಒಳ್ಳೆಯದೋ ಅಥವಾ ಕೇವಲ 50 ರಿಂದ 80 ಜನ ಏನು ಇದ್ದಾರೋ ಆ ವರ್ತಕರಿಗೆ ಈ ಬೆನಿಫಿಟ್‌ನ ರಿಯಾಯಿತಿ ಕೊಡುವುದು ಒಳ್ಳೆಯದೋ? ಕೆಲವು ದಿವಸದ ಹಿಂದೆ ಮಾನ್ಯ ಸಚಿವರು ಅಪ್ಪಣೆ ಕೊಡಿಸಿದರು; ವೀವರ್ಸ್‌ನಿಂದ ರೆಪ್ರಸೆಂಟೇಷನ್ ಬಂದಿದೆ. ಆದುದರಿಂದ ಈ ಟ್ಯಾಕ್ಸನ್ನು ವಜಾ ಮಾಡಿದ್ದೇವೆ ಎಂದು. ನಾನಾದರೂ ಕೂಡ ಅವರಿಗೆ ಧೈರ್ಯವಾಗಿ ಹೇಳುತ್ತೇನೆ. ತಮಗೆ ವೀವರ್ಸ್ ಅವರಿಂದ ಯಾವ ರೆಪ್ರಸೆಂಟೇಷನ್ ಬಂದಿಲ್ಲ. ಏನಾಗೆ ಬಂದಿರತಕ್ಕಂಥ ರೆಪ್ರಸೆಂಟೇಷನ್ ಕೇವಲ 50 ರಿಂದ 80 ಜನ ಇರುವ ವರ್ತಕರಿಂದ ಬಂದಿದೆ. ನಾನು ಹೇಳಿದ್ದು ನಿಜವಾಗಿದ್ದರೆ ನೇಕಾರರ ರೆಪ್ರೆಸೆಂಟೇಷನ್ ಬಂದಿದ್ದರೆ ತೋರಿಸಿ; ದಯವಿಟ್ಟು ಟೇಬಲ್ ಮೇಲೆ ಇಡಿ ಸರ್ಕಾರಕ್ಕೆ ಬಂದಿರತಕ್ಕಂಥ ರೆಪ್ರೆಸೆಂಟೇಷನ್ ಏನು ಇದ್ದರೂ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರತಕ್ಕಂಥ ವರ್ತಕರಿಂದ ಬಂದಿದೆ ಎಂದು ನಾನು ಖಚಿತವಾಗಿ ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ರೆಪ್ರೆಸೆಂಟೇಷನ್ ಸಂಬಂಧಪಟ್ಟ ಮಂತ್ರಿಗಳಿಂದ ಬಂದಿದೆ ಎಂದು ಹೇಳುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ರೇಷ್ಮೆ ವ್ಯವಸಾಯ ಮಂತ್ರಿಗಳಿಗೆ ಕೇವಲ 50 ರಿಂದ 80 ಜನ ವರ್ತಕರು ಏನು ಇದ್ದಾರೋ ಅವರು ರೆಪ್ರೆಸೆಂಟೇಷನ್ ಕೊಟ್ಟಿರುವುದು. ಮಾನ್ಯ ಮುಖ್ಯ ಮಂತ್ರಿಗಳಿಗೆ ಹೋದ ಜುಲೈ ತಿಂಗಳಿನಲ್ಲಿ ಒಂದು ಕಾಗದವನ್ನು ಬರೆದಿದ್ದೇನೆ, ಅವರೂ ಕೂಡ ಪತ್ರ ಬರೆದಿದ್ದಾರೆ, ಮತ್ತು ವರ್ತಕರಿಂದ ರೆಪ್ರಸೆಂಟೇಷನ್ ಬಂದಿದೆ, ಅದನ್ನು ಘೋರ್ಪಡೆಯವರ ಇಲಾಖೆಗೆ ಕಳುಹಿಸಿದ್ದೇನೆ; ಅದನ್ನು ಪರಿಶೀಲನೆ ಮಾಡುತ್ತಾರೆ ಎಂದು ಹೇಳಿದರು. ನಾನು ತಮ್ಮ ಜೊತೆಯಲ್ಲಿ ಅತ್ತಕಡೆ ಕೂತಿದ್ದಾಗ ಹಿಂದಿನ ವಿಧಾನಸಭೆಯಲ್ಲಿ ಈ ವಿಚಾರವನ್ನು ಹೇಳಿದ್ದು ಜ್ಞಾಪಕ ಇದೆ. ನೀವು ಈ ತೆರಿಗೆಯನ್ನು ವಜಾ ಮಾಡಬೇಡಿ. ಸಾವಿರಾರು ಜನ ನಿರುದ್ಯೋಗಿಗಳಾಗುತ್ತಾರೆ. ಆ ಬಡವರಿಗೆ ತಪ್ಪಿಸಿ ವರ್ತಕರಿಗೆ ಸಹಾಯ ಮಾಡಬೇಡಿ ಎಂದು ಸೂಚನೆ ಕೊಟ್ಟಿದ್ದೆ. ಅದಕ್ಕೆ ಅವರು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದರು, ಈಗ ತಾವುದೂ

ಒತ್ತಡಕ್ಕೆ ಒಳಗಾಗಿ ಕೇವಲ 50 ರಿಂದ 80 ಜನಕ್ಕೆ ಸಹಾಯ ಮಾಡುವುದಕ್ಕೋಸ್ಕರ ಈ ರೀತಿ ಮಾಡಿರುವುದು ಬಹಳ ವಿಷಾದ ಎಂದು ಹೇಳುತ್ತೇನೆ. ಮುಖ್ಯಮಂತ್ರಿಗಳು ಆ ದಿವಸ ಹೇಳಿರುವ ಹಾಗೆ ಪತ್ರ ವ್ಯವಹಾರ ಮಾಡಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳಿಗೂ, ನಿಮಗೂ ಪರ್ಸನಲ್ ವ್ಯವಹಾರ ಏನು ಇದೆಯೋ ಅದನ್ನು ಸಭೆಯ ಮುಂದೆ ತಿಳಿಸಿದರೆ ನಾವು ತಿಳಿದುಕೊಳ್ಳಬಹುದು.

Sri K. M. NAGANNA.—The Chief Minister the other day expressed the same thing. we want to know what is the matter. The Chief Minister is not here, Whether this is in the interest of the middle-men or whether exemption is going to help the weavers, we want to know.

Mr. DEPUTY SPEAKER.—It is not a secret matter.

ಶ್ರೀ ಕೆ. ಎಂ. ನಾಗಣ್ಣ.—ನಾನು ಇದನ್ನು ಬಹಳ ವ್ಯಥೆಯಿಂದ ಹೇಳುತ್ತೇನೆ. ಅದು ಏನೆಂದರೆ ನನಗೆ ಸರ್ಕಾರದ ಮೇಲೆ ಗೌರವ ಇದೆ, ಮೇಲಾಗಿ ಮುಖ್ಯಮಂತ್ರಿಗಳ ಮೇಲೆ ವಿಶ್ವಾಸ ಇದೆ, ಆದರೆ ಮುಖ್ಯಮಂತ್ರಿಗಳ ಹೆಸರನ್ನು ಅವೆನ್ಯೂ ರೋಡ್‌ನಲ್ಲಿ ಹರಾಜು ಹಾಕಿ ಹಣವನ್ನು ವಸೂಲ್ಮಾಡಿದ್ದರು. ಹಿಂದೆ 2 ಲಕ್ಷ ರೂಪಾಯಿ ಹಣವನ್ನು ವಸೂಲ್ಮಾಡಿದ್ದರು. ಮುಖ್ಯಮಂತ್ರಿಗಳ ಹೆಸರಿನಲ್ಲಿ ಈ ಕಳ್ಳ ವರ್ತಕರುಗಳು ತೆರಿಗೆಯನ್ನು ವಸೂಲ್ಮಾಡುತ್ತೇವೆಂದು ಹೇಳಿ ಹಣವನ್ನು ವಸೂಲ್ಮಾಡುತ್ತಿದ್ದಾರೆ. ಇದು ಬಹಳ ಅನ್ಯಾಯ, ನೇಕಾರರಿಗೆ ರಿಯಾಯಿತಿ ತೋರಿಸುವುದನ್ನು ಬಿಟ್ಟು ಬಿಟ್ಟು ಈ ಕಳ್ಳ ವರ್ತಕರಿಗೆ ಏತಕ್ಕೆ ರಿಯಾಯಿತಿ ಕೊಡುತ್ತೀರಾ?

ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ನಾನು ಮುಖ್ಯಮಂತ್ರಿಗಳೊಡನೆ ಮಾಡಿದ ಪತ್ರ ವ್ಯವಹಾರವನ್ನು ಓದುತ್ತೇನೆ. ಅದು ಈ ರೀತಿ ಇದೆ:

"Shri D. Devaraj Urs, 18th July 1972.
Chief Minister,
Vidhana Soudha,
Bangalore-1.

Dear Sir,

I reliably understand that some Raw Silk and Twisted Silk merchants have raised a fund of more than 2 lakhs to be given to some middle men to be handed over to proper person, and in return they have promised to get sales tax on twisted silk sold in the State and outside places in Uttar Pradesh, Andhra Pradesh and Tamil Nadu States abolished. I have brought this to your kind notice so that corrupt practices are not encouraged under your administration. I have also been given to understand that Messrs. H. T. Reddy, M.L.C. and General Secretary of Mysore Pradesh Congress Committee and K. Samad, the President of the Mysore Silk Marketing Co operative Society, appears to know more about this affair.

In the interest of honest and clean administration, to which you and your party is pledged, I do hope you will give your serious attention to this matter and make enquiries about the truth of the above allegation.

Thanking you,

Yours sincerely,
K. M. NAGANNA

Copy to : Sri K. H. Ranganath, M.L.A.,
President, Mysore Pradesh,
Congress Committee, Edward Road.

(ಶ್ರೀ ಕೆ. ಎಂ. ನಾಗಣ್ಣ)

3rd August 1972.

To

Sri D. Devaraj Urs,
Chief Minister,
Vidhana Soudha,
Bangalore.

Dear Sir,

Sub : Alleged underhand dealings by some raw silk and twisted silk merchants.

Ref : My letter dated 18-7-72.

Kindly refer to my above letter. I do not know whether you have received my above letter at all, as the same has not even been acknowledged so far.

I hope at least this letter would be acknowledged.

Thanking you,

Yours Sincerely,
K. M. NAGANNA

Copy to : Sri K. H. Ranganath,
President, Mysore Pradesh Congress Committee (R),
Edward Road, Bangalore—1.

Sri D. DEVERAJ URS
Chief Minister.

Vidhana Soudha,
Bangalore-1
Dated August 7, 1972.

Dear Sri Naganna,

Received your letters dated 18th July and 3rd August, 1972. Since I was very busy, I am sorry I could not reply you earlier.

I have made enquiries about your allegation. I find there is nothing to warrant your suspicion. However, the Government have received a memorandum on behalf of the silk merchants to consider the question of abolishing the sales tax. It is with the Finance Department for examination.

With kind regards,

Yours sincerely,
D. DEVARAJ URS

Sri K. M. Naganna, MLA,
Bangalore-2

Dated 18th August 1972.

Dear Sri Devaraj Urs,

Many thanks for your letter No. CMI 929/72 dated 7-8-1972. I am sorry to note that you have not appreciated my point. I wish to impress upon you that when I once make some allegations, I will make myself sure about the truth or otherwise of the same. I realiably understand that the undermentioned pure Silk Merchants and Twisters and several others of the City have collected two lakhs of rupees and have given the same to the Party, who in turn has promised that he would get the Sales Tax on Twisted Silk abolished. Now, I will leave the matter at this.

Please acknowledge the letter,

With regards,

Yours sincerely,
K. M. NAGANNA

1. Mr. Kabadi Shankarsa,
2. Mr. Maghaji Dhoudusa (Aeroplane)
3. Mr. B. D. Narasimhaiah Setty.
4. Mr. Prabhu Dayal, Partner, Janatha Silk Trading Company. (Now Hansnaval and Company)

Copy to : Sri K. H. Ranganath, President Mysore Pradesh Congress Committee (R).

ಇಷ್ಟೆಲ್ಲ ನಾನು ವಿವರಗಳನ್ನು ಕೊಟ್ಟಿದ್ದೇನೆ. ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಇದರ ಬಗ್ಗೆ ಸಿ. ಬಿ. ಐ. ಪ್ರೋಬ್ ಆಗಬೇಕು ಎಂದು ಹೇಳಿದೆ. ನಮ್ಮಲ್ಲಿರುವ ವಿಜಿಲೆನ್ಸ್ ಕಮಿಷನ್ನಿಗೆ ವಹಿಸುವುದು ಸೂಕ್ತವಲ್ಲ ಏಕೆಂದರೆ ನನಗೆ ಅದರ ಅನುಭವವಿದೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಒಬ್ಬ ಇಂಜಿನಿಯರ್ ಬಂದು 10 ತಿಂಗಳಲ್ಲಿ ಒಂದು ಲಕ್ಷ ರೂಪಾಯಿ ಮನೆ ಕಟ್ಟಿದ್ದಾರೆ, ಆತನ ಹೆಸರು ಪರಮಶಿವಯ್ಯ ಎಂದು, ಅಷ್ಟು ಹಣ ಎಲ್ಲಿಂದ ಬಂತು ಎಂದು 1967 ರಲ್ಲಿ ನಾನು ಪತ್ರ ಬರೆದೆ. ವಿಜಿಲೆನ್ಸ್ ಕಮಿಷನ್ ಇದುವರೆಗೂ ಪತ್ತೆ ಮಾಡಲ್ಲ. ಆದ್ದರಿಂದ ವಿಜಿಲೆನ್ಸ್ ಕಮಿಷನ್ನಿಗೆ ಒಪ್ಪಿಸಿದರೆ ಉಪಯೋಗವಿಲ್ಲ, ಸಿ. ಬಿ. ಐ. ನಿಂದಲೇ ಪ್ರೋಬ್ ಆಗಬೇಕು, ಸರ್ಕಾರದವರು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಮಧ್ಯೆ ಪ್ರವೇಶ ಮಾಡಿದವರಿಗೆ ಶಿಕ್ಷೆ ಆಗಬೇಕು ಎನ್ನುವ ಘನವಾದ ಉದ್ದೇಶದಿಂದ, ಅರಸು ಮಂತ್ರಿ ಮಂಡಲಕ್ಕೆ ಒಳ್ಳೆಯ ಹೆಸರು ಬರಬೇಕು ಮತ್ತು ಅದರ ಕೀರ್ತಿ ಹೆಚ್ಚಾಗಬೇಕು ಎನ್ನುವ ಸದುದ್ದೇಶದಿಂದ ಕಾಗದ ಬರೆದೆ. ಆ ದಿವಸ ನಾನು ಕೇಳಿದಾಗ ಸಿ. ಬಿ. ಐ. ಪ್ರೋಬ್ ಮಾಡಿಸುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಸಿ. ಬಿ. ಐ. ಪ್ರೋಬ್ ಮಾಡಿ ಅದರಲ್ಲಿ ಏನೂ ಇಲ್ಲ ಎಂದರೆ ಬಿಟ್ಟುಬಿಡಬಹುದು. ವಿಚಾರಣೆ ಮಾಡಿದರೆ ನನ್ನಲ್ಲಿರುವ ಮಾಹಿತಿಯನ್ನು ಕೊಡುತ್ತೇನೆ. ಸಿ. ಬಿ. ಐ. ನಿಂದ ಪ್ರೋಬ್ ಮಾಡಿಸುತ್ತೇನೆಂದು ಒಪ್ಪಿ ಹಾಗೆ ಮಾಡದೆ ಇರುವುದಕ್ಕೆ ಕಾರಣವೇನು ? 50 ಜನ ತೆರಿಗೆ ಕಳ್ಳರಿಗೆ ಸಹಾಯ ಮಾಡುವುದು ನಿಮ್ಮ ಸಮಾಜವಾದವೇ, ನಿಮ್ಮ ಸರ್ಕಾರದ ನೀತಿಯೇ ? ಇದನ್ನು ಸ್ವಲ್ಪ ಯೋಚನೆ ಮಾಡಿ ಎಂದು ಹೇಳುತ್ತೇನೆ. ಎರಡು ಲಕ್ಷ ಜನಗಳಿಂದ ವಸೂಲು ಮಾಡುವ 12 ಲಕ್ಷ ರೂಪಾಯಿ ಬಿಡಲು ನಿಮಗೆ ಮನಸ್ಸಿಲ್ಲ, 50 ಜನಗಳಿಗೆ 40 ಲಕ್ಷ ರೂಪಾಯಿ ಬಿಡುವುದಕ್ಕೆ ತಯಾರಾಗಿದ್ದೀರಿ. ನೀವು ಅಧಿಕಾರ ವಹಿಸಿ ಕೊಡುವುದಾದರೆ 45 ಲಕ್ಷ ರೂಪಾಯಿಗಳನ್ನು 8 ದಿವಸಗಳೊಳಗಾಗಿ ವಸೂಲು ಮಾಡಿ ಕೊಡುತ್ತೇನೆ. ಆದ್ದರಿಂದ ನಾನು ಅತಿ ವಿನಯದಿಂದ ಮನವಿ ಮಾಡಿಕೊಳ್ಳುತ್ತೇನೆ, ಇದನ್ನು

(ಶ್ರೀ ಕೆ. ಎಂ. ನಾಗಣ್ಣ)

ಒತ್ತಾಯ ಮಾಡಬೇಡಿ, ಇದನ್ನು ಅಬೇಯನ್ಸ್‌ನಲ್ಲಿ ಇಡಿ. ಸಿ. ಬಿ. ಐ. ನಿಂದ ಪ್ರೋಬ್ ಆಗಲಿ. ಸಹಾಯ ಕೊಡುವುದಕ್ಕೆ ಸಾಕಷ್ಟು ಮಾಹಿತಿ ನನ್ನಲ್ಲಿದೆ. ಅರಸು ಮಂತ್ರಿಮಂಡಲದ ಕೀರ್ತಿ ಏರಬೇಕು ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ, ದಯಮಾಡಿ ಇದನ್ನು ಒತ್ತಾಯ ಮಾಡಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—It was agreed earlier that this mending Bill should not take more than half an hour. So I would request the hon. Member Sri Shamanna to take the opportunity to speak on his amendments, and I would request the other members to be as brief as possible.

Sri H. D. DEVEGOWDA.—No doubt, in the Business Advisory Committee we had agreed to see that this Bill is passed within half an hour. If the Government drops the item relating to exemption to thrown silk, even now we are prepared to pass it. Otherwise, we would like to have further discussion on this Bill.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮುಖ್ಯ ಮಂತ್ರಿಗಳವರು ಸಭೆಯಲ್ಲಿ ಇದ್ದಾಗ ಮಾನ್ಯ ನಾಗಣ್ಣನವರು ಈ ಬಗ್ಗೆ ಪ್ರಸ್ತಾಪ ಮಾಡಿ ವಿಷಯವನ್ನು ಅವರ ಗಮನಕ್ಕೆ ತಂದಿದ್ದಾರೆ. ಈ ಹೊತ್ತು ಕಾಗದ ಪತ್ರಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಕಾಂಗ್ರೆಸ್ ಪಕ್ಷದ ಶ್ರೀ ಎಚ್. ಟಿ. ರೆಡ್ಡಿ ಅವರ ಹೆಸರನ್ನು ಹೇಳಿ ಬಹಳ ಅಥೆಂಟಿಕೇಟೆಡ್ ಆಗಿ ಯಾರು ಯಾರು ಹಣವನ್ನು ವಸೂಲು ಮಾಡುತ್ತಿದ್ದರು, ಮುಖ್ಯ ಮಂತ್ರಿಗಳ ಹೆಸರನ್ನು ಹೇಳಿ ಯಾವ ಯಾವ ಅಂಗಡಿಗಳಲ್ಲಿ ವಸೂಲು ಮಾಡುತ್ತಿದ್ದರು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ, ಹಣಕಾಸಿನ ಮಂತ್ರಿಗಳಿಗೆ ಸಂಬಂಧ ಪಟ್ಟ ಮಂತ್ರಿಗಳು ಸಿಫಾರಸು ಮಾಡಿದರು, ಸಂಬಂಧಪಟ್ಟ ಮಂತ್ರಿಗಳಿಗೆ ಕೆಲವು ವರ್ತಕರು ರೆಕಮೆಂಡ್ ಮಾಡಿದರು ಎನ್ನುವ ಅಭಿಪ್ರಾಯದಲ್ಲಿ ಮಾನ್ಯ ಮಂತ್ರಿಗಳು ಹೇಳಿದರು. ಮಂತ್ರಿಗಳ ಮೇಲೆ ತಪ್ಪನ್ನು ಹೊರಿಸಬೇಕು ಎನ್ನುವ ಉದ್ದೇಶದಿಂದ ಹೇಳುತ್ತಿಲ್ಲ. ಮಾನ್ಯ ನಾಗಣ್ಣನವರು ಹೇಳಿದ ಹಾಗೆ ವಿಜಿಲೆನ್ಸ್ ಕಮಿಷನ್ ಬಗ್ಗೆ ನಮಗೆ ನಂಬಿಕೆ ಹೋಗಿದೆ. ಸಿ. ಬಿ. ಐ. ನಿಂದ ತನಿಖೆ ಮಾಡಿಸುತ್ತೇನೆಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈಗ ಸಂಬಂಧಪಟ್ಟ ಪ್ರೊಪೋಷನ್ ಎವಿದೆ ಥ್ರೋನ್ ಸಿಲ್ಕ್ ಅಥವಾ ಟ್ವಿಸ್ಟೆಡ್ ಸಿಲ್ಕ್ ಮೇಲೆ ತೆರಿಗೆ ಹಾಕದೆ ವಿನಾಯಿತಿ ಕೊಡುವ ವಿಚಾರವನ್ನು ಕೈ ಬಿಡಬೇಕು. ಈಗ ಅವರು ಗುರುತರವಾದ ಚಾರ್ಜ್ ಮಾಡಿದ್ದಾರೆ. ಮತ್ತು ಮುಖ್ಯ ಮಂತ್ರಿಗಳಿಗೆ ತೀರ ಹತ್ತಿರದವರಾದ ಶ್ರೀ ಎಚ್. ಟಿ. ರೆಡ್ಡಿ ಅವರ ಹೆಸರನ್ನೂ ಹೇಳಿದ್ದಾರೆ. ಇದನ್ನು ಕೇಳಿ ನನಗೆ ದಂಗು ಬಡಿದಂತಾಯಿತು. ಯಾವ ಯಾವ ವರ್ತಕರ ಹತ್ತಿರ ವಸೂಲು ಮಾಡುವುದಕ್ಕೆ ಹೋಗಿದ್ದರು ಎನ್ನುವುದನ್ನೂ ಹೇಳಿದ್ದಾರೆ.

Mr. DEPUTY SPEAKER.—That person is not here to defend himself. I find that his name is mentioned in the letter written by Sri Naganna but in the reply of the Chief Minister he has made it clear that there is no case for such apprehension at all.

3-00 P. M.

ಶ್ರೀ ವಾಟಾಳ್ ನಾಗರಾಜ್.—ಇವರು ವಿಧಾನಪರಿಷತ್ತಿನ ಸದಸ್ಯರು, ಇಂತಹವರ ಮೇಲೆ ಬಹಳ ಗುರುತರವಾದ ಅಪಾದನೆಗಳನ್ನು ಮಾಡಿದ್ದಾರೆ. ಇದನ್ನು ಸರಕಾರ ಒಪ್ಪುತ್ತಾರೆಯೋ ಬಿಡುತ್ತಾರೆಯೋ ಅದು ಅವರಿಗೆ ಸೇರಿದ್ದು, ಇದರ ಬಗ್ಗೆ ಮುಖ್ಯ ಮಂತ್ರಿಗಳು ಕೂಡ ಕಾಗದ ಬರೆದಿರುವುದರಿಂದ ಇದರಲ್ಲಿ ಸಿ. ಬಿ. ಐ, ಎನ್‌ಕ್ವೈರಿ ಮಾಡಲೇ ಬೇಕು. ಇದರ ಬಗ್ಗೆ ಎಲ್ಲ ಮಾಹಿತಿಗಳನ್ನೂ ಕೊಟ್ಟು ಹೆಸರುಗಳನ್ನೂ ಕೊಟ್ಟಿದ್ದಾರೆ. ಮುಖ್ಯ ಮಂತ್ರಿಗಳ ಹೆಸರಿನಲ್ಲಿ ಹಣವನ್ನು ವಸೂಲು ಮಾಡಲು ಹೋಗಿ ಇದರಲ್ಲಿ ಭ್ರಷ್ಟಾಚಾರವಾಗಿದೆ ಎನ್ನುವುದು ರುಜುವಾತಾಗಿದೆ ಮತ್ತು ಸತ್ಯವಾದುದು ಎಂದು ನಾವು ತಿಳಿಯಲೇಬೇಕಾಗಿದೆ, ಇದಕ್ಕಿಂತ ಬೇರೆ ನಿದರ್ಶನ ಬೇಕಾಗಿಲ್ಲ, ಈಗಿರುವ ವಿಜಿಲೆನ್ಸ್‌ನಿಂದ ಭ್ರಷ್ಟಾಚಾರದ ವಿಚಾರಣೆಯಾಗುವುದಿಲ್ಲ. ಇದಕ್ಕಾಗಿ ಕೂಡಲೇ ಇದರ ಬಗ್ಗೆ ಸಿ. ಬಿ. ಐ. ಎನ್‌ಕ್ವೈರಿ ಮಾಡಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದನ್ನೂ ಡ್ರಾಪ್ ಮಾಡಿದ್ದೇವೆ ಎಂದು ಸರಕಾರ ಹೇಳಿದರೆ ಸಾಕು.

ಶ್ರೀ ವಾಟಾಳ್ ನಾಗರಾಜ್.—ಇದರಲ್ಲಿ ಬಹು ಸೀರಿಯಸ್ ಅಲಿಗೇಷನ್‌ಗಳು ಬಂದಿರುವುದರಿಂದ ಇಲ್ಲಿ ಸಿ. ಬಿ. ಐ. ತನಿಖೆ ನಡೆಯಲೇಬೇಕು ಎಂದು ಇಲ್ಲಿ ಒತ್ತಾಯ ಮಾಡುತ್ತೇವೆ. ಇದಕ್ಕೆ ಒಪ್ಪದೇ ಇದ್ದರೆ ಬೇರೆ ರೀತಿಯಾದ ಪ್ರತಿಭಟನೆ ಮಾಡ ಬೇಕಾಗುತ್ತದೆ, ಆದರಿಂದ ಸಿ. ಬಿ. ಐ. ತನಿಖೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಟಿ. ಎಂ. ಮಂಜುನಾಥ (ತ್ರಿಪಟೂರು).—ಮಾನ್ಯ ಅಧ್ಯಕ್ಷರೇ. ಈ ಬಿಲ್ಲಿನ ಪುಟ (6)ರಲ್ಲಿ "and copra. till (gingelli) the brackets letters and words (i. e. copra excluding tender coconuts), sesamum or till (gingelly) shall be substituted." ಎಂದು ಹೇಳಿದ್ದೀರಿ. ಇದರ ಬಗ್ಗೆ ಸರಕಾರದಲ್ಲಿ ನಾನು ಹೇಳುವುದು ಕೊಪ್ರ ಬಗ್ಗೆ ಹೇಳುವಾಗ ಡಿಕ್ಲೇರ್ಡ್ ಗುಡ್ಸ್‌ಗಳಿಗೆ ತೆರಿಗೆ ಹಾಕುವಂತೆ ಇದರಲ್ಲಿ ಟ್ಯಾಕ್ಸು ವಸೂಲು ಮಾಡುವಾಗ ಹಿಂದೆ ಯಾದಾಳಂರವರ ಕೇಸಿನಲ್ಲಿ ಕೋರ್ಟಿಗೆ ಹೋದಾಗ ಇದರ ಬಗ್ಗೆ ರೀಫಂಡು ಮಾಡಬೇಕೆಂದು ಹೇಳಿ ಆಗ ರೀಫಂಡು ಮಾಡಿ ಕೊಟ್ಟರು. ಆದರೆ ಇದರ ಬಗ್ಗೆ ಸುಪ್ರೀಂ ಕೋರ್ಟಿಗೆ ಹೋದಾಗ ಇದು ಕ್ರಮಬದ್ಧವಾಗಿದೆ ಎಂದು ಹೇಳಿದಾಗ ಮತ್ತೆ ಇದನ್ನು ಇವರು ವಸೂಲು ಮಾಡಬಹುದು ಎಂದು ಹೇಳಿದ್ದರೂ ಇದೂ ಡಿಕ್ಲೇರ್ಡ್ ಗುಡ್ಸ್ ಎಂದು ಹೇಳಿ ಅದನ್ನು ವಸೂಲು ಮಾಡಲಿಲ್ಲ. ಹೀಗೆ ವಸೂಲು ಮಾಡದೇ ಇರುವ ಅವಧಿಯಲ್ಲಿ ಮತ್ತೆ ಟ್ಯಾಕ್ಸು ವಸೂಲು ಮಾಡುವುದು ಸರಿಯಲ್ಲ ಎಂದು ಹೇಳಿದ್ದರೂ ಈಗ ರಾಜ್ಯ ಸರಕಾರದ ಅಧಿಕಾರಿಗಳೂ ಮತ್ತು ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳೂ ತೆರಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆಗಿನ ಸರಕಾರದಲ್ಲಿ ಇದರ ಬಗ್ಗೆ ಹೇಳಿದಾಗ ಅವರೂ ಇದು ಒಂದು ಹಾರ್ಡ್ ಕೇಸು ಎಂದು ಪರಿಗಣಿಸಿ ಮುಂದೆ ಈ ಅವಧಿಯ ಬಾಕಿ ತೆರಿಗೆಯನ್ನು ವಸೂಲು ಮಾಡುವುದಿಲ್ಲ ಎಂದೂ ಹೇಳಿದ್ದರು. ಸೆಂಟ್ರಲ್ ಗವರ್ನಮೆಂಟಿನವರೂ ಇದನ್ನು ಹಾರ್ಡ್ ಕೇಸು ಎಂದು ತೆಗೆದುಕೊಳ್ಳಬೇಕೆಂದು ಹೇಳಿದರೂ ಇವರೂ ಇನ್ನೂ ಇದಕ್ಕೆ ಗಮನ ಕೊಡದೆ ಟ್ಯಾಕ್ಸ್ ಕೊಡಬೇಕೆಂದು ಹೇಳುತ್ತಾರೆ.

ಇನ್ನು ತೆಂಗಿನಕಾಯಿ ಕೂಡ ಇದೇ ಕ್ಯಾಟಗರಿಯಲ್ಲಿ ಸೇರಿರಬೇಕು. ಆಯಿಲ್ ಸೀಡ್‌ಗೆ ತೆರಿಗೆ ಹಾಕಿದ್ದಾರೆ, ತೆಂಗಿನ ಕಾಯಿ ಹಾಗೂ ಕೊಬ್ಬರಿ ಎಣ್ಣೆಗೆ ಎಕ್ಸ್ಟೈಜು ಟ್ಯಾಕ್ಸು ಹಾಕಿದ್ದಾರೆ, ನಮ್ಮ ದೇಶದಲ್ಲಿ ಬೆಳೆಯುವ ತೆಂಗಿನಕಾಯಿ ಹಾಗೂ ಕೊಬ್ಬರಿಯನ್ನು ತಿನ್ನುವುದಕ್ಕೋಸ್ಕರ ಉತ್ತರ ಕರ್ನಾಟಕದ ಭಾಗಗಳಿಗೆ ಇದನ್ನು ಕಳುಹಿಸುತ್ತಿದ್ದಾರೆ. ಈ ರೀತಿ ಹೊರಗೆ ಹೋಗುವುದನ್ನು ಸರಕಾರ ತಡೆಗಟ್ಟಬೇಕು ಇಲ್ಲವೆ ಇದ್ದರೆ ಇಲ್ಲಿ ಬೆಳೆಯುವವರಿಗೆ ತೊಂದರೆಯಾಗುತ್ತದೆ ಮತ್ತು ಹೊರಗಡೆ ರವಾನೆಯಾಗುವುದನ್ನು ತಪ್ಪಿಸಿ ಇದರ ಮೇಲೆ ತೆರಿಗೆ ಹಾಕಬಾರದು. ಇವೆರಡು ವಿಚಾರಗಳನ್ನು ಸರಕಾರ ಗಮನವಲ್ಲಿಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಈ ಬಿಲ್ಲಿನ ಮೇಲೆ ಮಾತನಾಡುತ್ತ ಮಾನ್ಯ ಸದಸ್ಯರಾದ ಶ್ರೀ ನಾಗಣ್ಣನವರು ಸರಕಾರದ ಮೇಲೆ ಕೆಲವು ಗುರುತರವಾದ ಅಪಾದನೆಗಳನ್ನು ಮಾಡಿದ್ದಾರೆ, ಈ ಸರಕಾರ ಬಂದು ಒಂದು ವರ್ಷದೊಳಗೆ ಇಂತಹ ಅನೇಕ ವಿಷಯಗಳನ್ನೂ ಕೇಳಿದ್ದೇವೆ. ಇವೊತ್ತಿನ ದಿವಸ ಇಲ್ಲಿ ತಂದಿರುವುದು ಅತಿ ಮಹತ್ವ ಉಳ್ಳ ಪರಿಸ್ಥಿತಿಯನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ, ಇದರ ಜೊತೆಗೆ ಶ್ರೀಮಾನ್ ಶಾಮಣ್ಣನವರೂ ಸಹ ಇಂತಹ ಅಪಾದನೆಗಳು ಇನ್ನೂ ಅನೇಕ ಇವೆ ಎಂದೂ ಇಲ್ಲಿ ಹೇಳಿದರು. ಇಂತಹ ಸಮಯದಲ್ಲಿ ನನಗೆ ಉಂಟಾಗಿರತಕ್ಕ ಒಂದು ಸಂಶಯ ಎಂದರೆ ಕೇವಲ 70–80 ಜನರ ಮೇಲೆ ಅನುಕೂಲವಾಗುವಂತೆ ಈ ಒಂದು ವಿಧೇಯಕವನ್ನು ಸಭೆಯ ಮುಂದೆ ಏಕೆ ತಂದಿದ್ದಾರೆ ಎನ್ನುವುದು. ಇವರಿಂದ ಟ್ಯಾಕ್ಸ್ ವಸೂಲು ಮಾಡುವುದು ಕಷ್ಟವೇನಿಲ್ಲ ಮತ್ತು ಇವರಿಂದ 70–80 ಸಾವಿರ ರೂಪಾಯಿಗಳವರೆಗೆ ಬರುತ್ತದೆ. ಯಾವ ಆಧಾರದ ಮೇಲೆ ಇದನ್ನು ಕೈಬಿಡಬೇಕೆಂದು ಹೇಳುತ್ತಾರೆ ? ಇದು ಯಾವ ರೀತಿಯಾದ ಸಮಾಜವಾದ ಎಂದು ಇಲ್ಲಿ ಕೇಳಬೇಕಾಗಿದೆ. ಇದರಲ್ಲಿ ಸಮಾಜವಾದಕ್ಕೆ ಯಾವ ರೀತಿ ಅಡ್ಡಿ ಬರುತ್ತದೆ ? ಇಂತಹ ಮಸೂದೆ ತಂದು ಸಮಾಜವಾದ ಮಾಡುವುದಕ್ಕೆ ಬದಲಾಗಿ ಸಮಾಜವಾದವನ್ನು ಸಮಾಧಿ ಮಾಡಲು ತರುತ್ತಿದ್ದಾರೆಂದು ಇಲ್ಲಿ ಹೇಳಬೇಕಾಗಿದೆ. ನಮ್ಮ ಸರಕಾರ ಯಾರ ಹತ್ತಿರ ಹಣ ಇದೆ ಮತ್ತು ಯಾರು ಸುಂಕ ಕೊಡಲು ತಯಾರಾಗಿದ್ದಾರೆ ಅಂತಹವರ ಮೇಲೆ ಹೆಚ್ಚಿಗೆ ಟ್ಯಾಕ್ಸ್ ಹಾಕಿ ವಸೂಲು ಮಾಡಬಹುದು, ಇವೊತ್ತಿನ ದಿವಸ ಇದರಲ್ಲಿ ಯಾವ ರೀತಿ ಹಾರ್ಡ್ ಕೇಸು ಇದೆ ? ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿ ಬಡ ಜನರನ್ನು ಶೋಷಣೆ ಮಾಡುವ ಜನಕ್ಕೆ ಏಕೆ ಅನುಕೂಲಗಳನ್ನು ಮಾಡಬೇಕು ? ಇದರಲ್ಲಿ ಕೇವಲ ಅನುಕೂಲವಾಗುವುದು

(ಶ್ರೀ ಸಿ. ಬೈರೇಗೌಡ)

70-80 ಜನರಿಗೆ ಮಾತ್ರ ಅನುಕೂಲವಾಗುತ್ತದೆ. ಇವರಿಗೆ ಶೇಕಡಾ ಎರಡರಷ್ಟು ಸುಂಕ ತೆಗೆಯುವುದರಿಂದ ಅಂತಹ ಅನುಕೂಲವೇನೂ ಆಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ನಾಗಣ್ಣನವರೇ ಹೇಳಿದಂತೆ ಅವರಿಗೆ ಇದರ ವಸೂಲಿ ಅಧಿಕಾರ ಕೊಟ್ಟರೆ ಇಂತಹ ವರ್ತಕರಿಂದಲೇ ಸುಮಾರು ನಲವತ್ತು ಲಕ್ಷದಷ್ಟು ವಸೂಲಿ ಮಾಡಬಹುದು ಎಂದು ಹೇಳಿ ಅವರು ಸರಕಾರಕ್ಕೆ ಸವಾಲು ಹಾಕಿದ್ದಾರೆ ಈಗ ಸುಮಾರು 15 ಲಕ್ಷ ರೂಪಾಯಿಗಳಷ್ಟು ವಸೂಲು ಮಾಡಿರುವ ಬಗ್ಗೆ ಭ್ರಷ್ಟಾಚಾರದ ಆಪಾದನೆಗಳನ್ನು ಮಾನ್ಯ ಶ್ರೀ ನಾಗಣ್ಣನವರು ಇಲ್ಲಿ ಹೇಳಿದ್ದಾರೆ, ಇದನ್ನು ನೋಡಿದರೆ ಸರಕಾರದಿಂದ ಯಾವ ರೀತಿ ನ್ಯಾಯ ಹೇಗೆ ದೊರಕುತ್ತದೆ? ಇದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಗುತ್ತಿದೆ.

It is a blatant coailition between the Government and the merchant. We have to expose it not only inside this House but also outside this House. ಈ ಒಂದು ಬಿಲ್ಲನ್ನು ತಂದಿರುವ ಶ್ರೀಮಾನ್ ಘೋರ್ಪಡೆಯವರ ವಿಚಾರದಲ್ಲಿ ನನಗೆ ವಿಶ್ವಾಸ ಇದೆ, ಮತ್ತು ರಾಜ್ಯಾದ್ಯಂತವಿರುವ ಜನತೆಯಲ್ಲಿ ವಿಶ್ವಾಸವಿದೆ. ಆದರೆ ಅವರು ಈ ಬಿಲ್ಲನ್ನು ಯಾರದೋ ಪ್ರಲೋಭಕ್ಕೆ ಒಳಗಾಗಿ, ಯಾರದೋ ಅಕೃತ್ಯಕ್ಕೆ ಒಳಗಾಗಿ ತಂದಿರುವುದನ್ನು ನೋಡಿದರೆ ನನಗೆ ವ್ಯಸನವಾಗುತ್ತದೆ. ಅವರು ಇದನ್ನು ವಾಪಸ್ ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಸಮಾಜವಾದದ ಸಮಾಧಿ ಖಂಡಿತ ಆಗುತ್ತದೆಂದು ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ ಅವರು ಇದನ್ನು ಖಂಡಿತವಾಗಿ ವಾಪಸ್ ಪಡೆಯುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಈ ಸೇಲ್ಸ್‌ಟ್ಯಾಕ್ಸ್ ಬಗ್ಗೆ ಹಿರಿಯ ಸದಸ್ಯರಾದಂಥ ಶ್ರೀಮಾನ್ ನಾಗಣ್ಣನವರು ಏನು ಸರ್ಕಾರದ ಮೇಲೆ ಅಪಾದನೆ ಹೊರಿಸಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಇಲ್ಲಿ ಕ್ಲಾಸ್ 6 ನಲ್ಲಿ ಈ ರೀತಿ ಹೇಳಲಾಗಿದೆ :

6. Amendment of the Fifth Schedule.—In the Fifth Schedule to the principal Act,

(1) in the entry relating to serial No. 38A, after the words "Raw Silk", the words "thrown silk or twisted silk" shall be inserted ; ಈ ರೀತಿ ಥ್ರೋನ್ ಸಿಲ್ಕ್ ಮತ್ತು ಟ್ವಿಸ್ಟೆಡ್ ಸಿಲ್ಕನ್ನು ಸೇರಿಸಿರುವುದರಿಂದ ಸರ್ಕಾರಕ್ಕೆ ಸುಮಾರು 40 ಲಕ್ಷ ರೂಪಾಯಿಗಳ ನಷ್ಟ ಆಗುತ್ತದೆಂಬ ವಾದವಿದೆ. ಯಾವುದೇ ಬಿಲ್ಲನ್ನು ತರುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ ಎಂಬ ಅಂಶ ನಿರ್ವಿವಾದವಾದುದು. ಜನತೆಯ ಹಿತದೃಷ್ಟಿಯಿಂದ ತಂದರೆ ಅದಕ್ಕೆ ಯಾರೂ ಅಡ್ಡಿ ಮಾಡುವುದಕ್ಕಾಗುವುದಿಲ್ಲ. ಆದರೆ ಈ ಬಿಲ್ಲನ್ನು ತರತಕ್ಕ ಸಂದರ್ಭದಲ್ಲಿ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ಇದರಿಂದಾಗುವ ಪರಿವೆಗಳನ್ನು ಆಳವಾಗಿ ಮತ್ತು ಕೂಲಂಕಷವಾಗಿ ವಿಚಾರ ಮಾಡಬೇಕಾಗಿತ್ತು ಇಲ್ಲಿ ಥ್ರೋನ್ ಸಿಲ್ಕ್ ಮತ್ತು ಟ್ವಿಸ್ಟೆಡ್ ಸಿಲ್ಕ್‌ಗೆ ತೆರಿಗೆಯಿಂದ ವಿನಾಯಿತಿ ಕೊಡುವುದಕ್ಕೆ ಏನು ಹೊರಟಿದ್ದಾರೆ; ಇದರಿಂದ ಸರ್ಕಾರಕ್ಕೆ 40 ಲಕ್ಷ ರೂಪಾಯಿಗಳ ನಷ್ಟವಾಗುತ್ತದೆ. ಈ ನಷ್ಟಕ್ಕೆ ಯಾರು ಹೊಣೆ ಎಂದು ಕೇಳಬೇಕಾಗುತ್ತದೆ. ಏತಕ್ಕಾಗಿ ಈ ರೀತಿ ವಿನಾಯಿತಿ ಕೊಡುತ್ತಿದ್ದಾರೆಂಬುದಕ್ಕೆ ಸಮಂಜಸವಾದ ಕಾರಣಗಳನ್ನು ಇಲ್ಲಿ ಕೊಟ್ಟಿಲ್ಲ. ಈ ಬಗ್ಗೆ ಮಾನ್ಯ ನಾಗಣ್ಣನವರು ಏನು ಗುರುತರವಾದ ಆಪಾದನೆಗಳನ್ನು ಹೊರಿಸಿದ್ದಾರೆ ಅದಕ್ಕೆ ಸಮಂಜಸವಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಅವರು ಮಾಡಿರತಕ್ಕಂಥ ಅಪಾದನೆಯ ಬಗ್ಗೆ ವಿಜಿಲೆನ್ಸ್ ಕಮಿಷನ್‌ನಿಂದ ತನಿಖೆ ಮಾಡಿಸುತ್ತೇವೆಂದು ಹೇಳಿದರೆ ಅದಕ್ಕೆ ನಾವು ಒಪ್ಪುವುದಿಲ್ಲ. ವಿಜಿಲೆನ್ಸ್ ಕಮಿಷನ್‌ನಲ್ಲಿ ನಮಗೆ ನಂಬಿಕೆ ಇಲ್ಲ. ಇದರ ತನಿಖೆ ಸಿ.ಐ.ಬಿ. ಯಿಂದಲೇ ಆಗಬೇಕೆಂದು ನಾವು ವಾದ ಮಾಡುತ್ತಿದ್ದೇವೆ. ಯಾವ ಯಾವ ಐಟಂಗಳಿಗೆ ವಿನಾಯಿತಿ ಕೊಡಬೇಕಾಗಿತ್ತು ಎಂಬ ಬಗ್ಗೆ ಮಾನ್ಯ ಮಂಜುನಾಥ್ ಅವರು ಹೇಳಿದ್ದಾರೆ. ಆದ್ದರಿಂದ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ.

Sri K. PUTTASWAMY.—I would like the hon. Finance Minister to explain the reasons for having given exemptions for prawns and certain other products few months back and now levying a higher sales tax on those products ?

Sri M. Y. GHORPADE.—In my reply I will explain it

ಶ್ರೀ ಎಸ್. ಬಂಗಾರಪ್ಪ.—ಮುಖ್ಯವಾಗಿ ನಾನು ಹೇಳುವುದು ಇಷ್ಟು, 40 ಲಕ್ಷ ರೂಪಾಯಿಗಳ ಆದಾಯವನ್ನು ಕಳೆಯುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದಾರೆ ಅದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಆ ಕಡೆ ಕುಳಿತಿರುವ ಸದಸ್ಯರು ಇದಕ್ಕೆ ನಿಜವಾಗಿಯೂ ಒಪ್ಪಿಗೆ ಕೊಡಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರಕ್ಕೆ 40 ಲಕ್ಷ ರೂಪಾಯಿಗಳ ಲುಕ್ಸಾನು ಇದರಿಂದ ಆಗುತ್ತದೆಂದು ತಿಳಿದೂ ಸಹ ಆ ಕಡೆಯ ಸದಸ್ಯರು ಏನಾದರು ಬೆಂಬಲ ಕೊಟ್ಟಿದ್ದೇ ಆದರೆ ಅದರಲ್ಲಿ ಏನೋ ಸಕಾರಣ ಇದೆ ಎಂದು ಭಾವಿಸಬೇಕಾಗುತ್ತದೆ. ಮತ್ತು ಈ ದೊಡ್ಡ ಮೊತ್ತದ ನಷ್ಟಕ್ಕೆ ನಾಳೆ ಈ ಸದನವೇ ಹೊಣೆಯಾಗಬೇಕಾಗುತ್ತದೆ. ಆದಕಾರಣ ನಾವು ಇದನ್ನು ಪಾಸ್ ಮಾಡುವುದಕ್ಕೆ ಖಂಡಿತವಾಗಿ ಆಸ್ಪದ ಕೊಡುವುದಿಲ್ಲ. ಈ ಬಿಲ್‌ನ್ನು ಮಾನ್ಯ ಮಂತ್ರಿಗಳು ವಿತ್‌ಡ್ರಾ ಮಾಡಿಕೊಳ್ಳಬೇಕು. ಮತ್ತು ಮಾನ್ಯ ನಾಗಣ್ಣನವರು ಮಾಡಿರತಕ್ಕಂಥ ಆಪಾದನೆಯ ಬಗ್ಗೆ ಸಿ. ಐ. ಬಿ. ಯಿಂದ ತನಿಖೆಯಾಗಬೇಕು. ವಿತ್‌ಡ್ರಾ ಮಾಡಿಕೊಳ್ಳದಿದ್ದರೆ ಏನಾಗುತ್ತದೆಂದು ಪ್ರಶ್ನೆ ಕೇಳಬೇಡಿ. ಇದರಿಂದ 40 ಲಕ್ಷ ರೂಪಾಯಿಗಳ ಹಾನಿ ಸರ್ಕಾರಕ್ಕೆ ಏನು ಆಗುತ್ತದೆ ಅದನ್ನು ನಾವೆಲ್ಲರೂ ಜವಾಬ್ದಾರಿಯಿಂದ ಯೋಚನೆ ಮಾಡಬೇಕಾಗುತ್ತದೆ. ಆದಕಾರಣ ಈ ಬಿಲ್ ಪಾಸಾಗುವುದನ್ನು ನಿಲ್ಲಿಸಬೇಕಾಗುತ್ತದೆ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ಭಾವಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥಮಂತ್ರಿಗಳು ಏನು ಸೇಲ್ಸ್‌ಟ್ಯಾಕ್ಸ್ ಬಿಲ್‌ನ್ನು ಮಂಡಿಸಿದ್ದಾರೆ ಅದರ ಬಗ್ಗೆ ಈ ಮನೆಯ ಹಿರಿಯ ಸದಸ್ಯರಾದಂಥ ಶ್ರೀಮಾನ್ಯ ನಾಗಣ್ಣನವರು ಏನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಮತ್ತು ಈ ಸಂದರ್ಭದಲ್ಲಿ ಮಾನ್ಯ ಅರ್ಥಿಕ ಮಂತ್ರಿಗಳಾದರೂ ಸಹ ಅವರು ಎತ್ತಿರತಕ್ಕಂಥ ಆಕ್ಷೇಪಣೆಗಳ ಬಗ್ಗೆ ಮಾಡಿರತಕ್ಕಂಥ ಆರೋಪಗಳ ಬಗ್ಗೆ ಜಾರಿಕೊಳ್ಳುವ, ತಪ್ಪಿಸಿಕೊಳ್ಳುವ ಉತ್ತರವನ್ನು ಕೊಡದೆ ಜವಾಬ್ದಾರಿಯುತವಾದ ಉತ್ತರವನ್ನು ಕೊಡಬೇಕಲ್ಲದೆ ಅದರ ಬಗ್ಗೆ ತನಿಖೆ ಕೂಡ ಆಗಬೇಕೆಂಬ ಮಾತನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಅವರು ಭ್ರಷ್ಟಾಚಾರದ ಆರೋಪವನ್ನು ಏನು ಮಾಡಿದ್ದಾರೆ ಅದರಿಂದ ಸರ್ಕಾರದವರು ವಿಮುಕ್ತರಾಗುವ ಬಗ್ಗೆ ದಿಟ್ಟ ನಿಲುವನ್ನು ತಳೆಯಬೇಕು. ಈ ಬಗ್ಗೆ ಸಿ. ಐ. ಬಿ.ಯಿಂದ ತನಿಖೆಯಾಗಲೇ ಬೇಕು. ಈ ಬಿಲ್‌ನಲ್ಲಿ ಶ್ರಿಂಪ್ಸ್ ಮತ್ತು ಪ್ರಾನ್ಸ್ ಮೇಲೆ 4 ಪರ್ಸೆಂಟ್ ತೆರಿಗೆ ಹಾಕಿದ್ದಾರೆ. ಈ ರೀತಿ ಹಾಕುವುದರಿಂದ ಅದರ ಪರಿಣಾಮ ಯಾರ ಮೇಲೆ ಆಗುತ್ತದೆಂದು ನಾವು ವಿಚಾರ ಮಾಡಬೇಕಾಗಿದೆ, ಈ ತೆರಿಗೆ ಶ್ರೀಮಂತರ ಮೇಲೆ ಬೀಳುವ ಹಾಗಿದ್ದರೆ ಅದರ ಬಗ್ಗೆ ನಮ್ಮದೇನು ಭಿನ್ನಾಭಿಪ್ರಾಯವಿರುತ್ತಿರಲಿಲ್ಲ. ಆದರೆ ನನಗೆ ತಿಳಿದುಬಂದ ಪ್ರಕಾರ ಈ ತೆರಿಗೆ ಕರಾವಳಿ ಪ್ರದೇಶದಲ್ಲಿ ಯಾರು ದೋಣಿಗಳಲ್ಲಿ ಇವುಗಳನ್ನು ಸಂಗ್ರಹ ಮಾಡಿಕೊಂಡು ತರುತ್ತಾರೋ ಅವರ ಮೇಲೆ ಬೀಳುತ್ತದೆ. ಇದನ್ನು ಸಂಬಂಧಪಟ್ಟವರು ನನಗೆ ತಿಳಿಸಿದ್ದಾರೆ. ಇದು ಬಂಡವಾಳಷಾಹಿಗಳ ಮೇಲೆ ಬೀಳುವಂತಿದ್ದರೆ ನಾವು ಸಂಪೂರ್ಣವಾದ ಬೆಂಬಲ ಕೊಡುತ್ತಿದ್ದೆವು. ಆದರೆ ಅವರ ಮೇಲೆ ಬೀಳುವುದಿಲ್ಲ. ಮೊಗವೀರ ಕೋಮಿನ ಹತ್ತು ಹದಿನಾರು ಲ ಜನರು ಎನಿದ್ದಾರೆ, ಆ ಬಡ ಜನರ ಮೇಲೆ ಇದರ ಪರಿಣಾಮ ಉಂಟಾಗುತ್ತದೆ. ಅವರ ಸುಲಿಗೆ ಇದರಿಂದಾಗುತ್ತದೆ. ನನಗೆ ಬಂದ ತಿಳಿವಳಿಕೆಯಿಂದ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಅವರನ್ನು ಹಿಂಡಿಹಿಪ್ಪೆಕಾಯಿ ಮಾಡುವುದಕ್ಕೆ, ಅವರ ರಕ್ತವನ್ನು ಹೀರುವುದಕ್ಕೆ ಈ ಟ್ಯಾಕ್ಸ್ ಹಾಕುವುದು ಸರಿಯಲ್ಲ. ಇದನ್ನು ಕೈಬಿಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಪುನರ್ವಿಮರ್ಶೆ ಮಾಡಿ ಹಿಂದೆ ಇದ್ದಂತ ಒಂದೂವರೆ ಪರ್ಸೆಂಟ್ ಟ್ಯಾಕ್ಸ್‌ನ್ನೇ ಮುಂದುವರೆಸುವುದರ ಬಗ್ಗೆ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಇಷ್ಟು ಮಾತನ್ನು ಹೇಳಿ ಮಾನ್ಯ ನಾಗಣ್ಣನವರು ಏನು ಆರೋಪ ಮಾಡಿದ್ದಾರೆ ಆ ಬಗ್ಗೆ ಸಿ. ಐ. ಬಿ. ಯಿಂದ ತನಿಖೆ ಮಾಡಿಸಬೇಕೆಂದು ಅಲ್ಲಿಯವರೆಗೆ ಇದನ್ನು ತಡೆಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಈ ಸಭೆಯ ಮುಂದೆ ತಂದಿರತಕ್ಕ ಸೇಲ್ಸ್ ಟ್ಯಾಕ್ಸ್ ಬಿಲ್ಲಿನ ಬಗ್ಗೆ ಒಂದೆರಡು ಮಾತುಗಳನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ,

ಈ ಮಂತ್ರಿಮಂಡಲದ ಮೇಲೆ ಮೊದಲಿನಿಂದಲೂ ಆಪಾದನೆಗಳು ಇವೆ. ಕೆಲವು ಮಂತ್ರಿಗಳ ನಡತೆಯ ಬಗ್ಗೆ ಕೆಲವು ಮಂತ್ರಿಗಳ ಆಚಾರ ವ್ಯವಹಾರದ ಬಗ್ಗೆ; ಕೆಲವು ಮಂತ್ರಿಗಳ ವಿಚಾರದಲ್ಲಿ ಲಂಚರುಷುವತ್ತುಗಳ ಬಗ್ಗೆ ಈ ರೀತಿ ಬಗೆ ಬಗೆಯ ಆಪಾದನೆಗಳು ಇವೆ. ದುರ್ದೈವ ವಶಾತ್

(ಶ್ರೀ ಬಿ. ಪುಟ್ಟಸ್ವಾಮಯ್ಯ)

22 ಜನ ಮಂತ್ರಿಗಳಲ್ಲಿ 5—6 ಜನಗಳನ್ನು ಬಿಟ್ಟರೆ ಬಾಕಿಯವರೆಲ್ಲರೂ ಬೇರೆ ಕಸುಬನ್ನು ಕಲಿತು ಕೊಂಡಿದ್ದಾರೆ. ಬೇರೆ ಕಸುಬನ್ನು ಕಲಿತುಕೊಳ್ಳದೇ ಇರತಕ್ಕ 5—6 ಜನ ಮಂತ್ರಿಗಳ ಪೈಕಿ ಶ್ರೀಮಾನ್ ಘೋರ್ಪಡೆಯವರೂ ಒಬ್ಬರು, ಅವರು ಲಂಚವಾಗುವತ್ತನ್ನು ತೆಗೆದುಕೊಳ್ಳುವುದಿಲ್ಲ. ಅವರಲ್ಲಿ ಕೆಟ್ಟ ನಡತೆ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಕೆಲವು ಲಂಚ ತೆಗೆದುಕೊಳ್ಳುವ ಮಂತ್ರಿಗಳಲ್ಲಿ 3 ಅಫಿಸುಗಳು ಇವೆ. ಮೊದಲನೆಯದು ಬುದ್ಧಿಯವರ ಆಫೀಸು, ಚಿಕ್ಕರಾಯರ ಆಫೀಸು, ಮತ್ತು ಅಮ್ಮಾವ್ರ ಆಫೀಸು. ಈ ರೀತಿ 3 ಆಫೀಸುಗಳು ಇವೆ. ಸೇಲ್ಸ್ ಕೊಡತಕ್ಕ ವರ್ತಕರು ಮತ್ತು ಇನ್ನೂ ಅನೇಕ ಕಾರ್ಯಕರ್ತರು ಮಂತ್ರಿಗಳ ಮನೆಗೆ ಯಾವುದಾದರೂ ಒಂದು ಕೆಲಸಕ್ಕೆ ಹೋದಾಗ ಸೇವಕರು ಏನು ಕೇಳುತ್ತಾರೆ ಎಂದರೆ ನೀವು ಬುದ್ಧಿಯವರ ಆಫೀಸಿಗೆ ಹೋಗುತ್ತೀರೋ ಅಥವಾ ಚಿಕ್ಕರಾಯರ ಆಫೀಸಿಗೆ ಹೋಗುತ್ತೀರೋ ಅಥವಾ ಅಮ್ಮಾವ್ರ ಆಫೀಸಿಗೆ ಹೋಗುತ್ತೀರೋ ಅಂತ ಹೊರಗಡೆಯವರು ಕೇಳುತ್ತಾರೆ. ಮಂತ್ರಿಗಳು ಹೊಸದಾಗಿ ಅಧಿಕಾರಕ್ಕೆ ಬಂದಾಗ ಲಂಚವನ್ನು ಹೋಗಲಾಡಿಸುತ್ತೇವೆ. ಲಂಚವನ್ನು ತೆಗೆದು ಕೊಳ್ಳತಕ್ಕ ಅಧಿಕಾರಿಗಳನ್ನು ನಿರ್ಮೂಲನ ಮಾಡುತ್ತೇವೆ ಎಂದು ಭಾಷಣ ಮಾಡುತ್ತಿದ್ದರು. ಈಗ ಸದ್ಯಕ್ಕೆ ಅದನ್ನು ನಿಲ್ಲಿಸಿದ್ದಾರೆ. ಲಂಚತೆಗೆದುಕೊಳ್ಳುವ ಮಂತ್ರಿಗಳ ಮನೆಗೆ ಹೋದರೆ ಒಳಗಡೆ ಹೋಗಬೇಕಾದರೆ ಬಾಗಿಲಿನಲ್ಲಿರುವ ಸೇವಕ 5 ರೂಪಾಯಿ ವಸೂಲು ಮಾಡುತ್ತಾನೆ. ಮಂತ್ರಿಗಳ ಪೈಕಿ 5—6 ಜನ ಒಳ್ಳೆಯವರು ಇದ್ದಾರೆ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ನಾಗಣ್ಣನವರಿಗೂ ವಯಸ್ಸಾಗಿದೆ. ಅವರು ಹೇಳುತ್ತಾರೆ ಹೋದ ವರ್ಷ ರೇಷ್ಮೆ ವರ್ತಕರಿಂದ 3 ಲಕ್ಷ ರೂಪಾಯಿ ವಸೂಲಾಯಿತು ಎಂದು. ಇದು ಯಾರಿಗೆ ಹೋಗಿದೆ? ಇದು ಲಕ್ಷ ರೂಪಾಯಿ ಮುಟ್ಟಬೇಕು ಎಂದು ವಸೂಲಿ ನಡೆದಿದೆ. ಇದು ಯಾರಿಗೆ ಸೇರುತ್ತದೆ? ಯಾರೋ ಒಬ್ಬ ದೊಡ್ಡ ಗಿರಾಕಿ ದುಡ್ಡನ್ನು ವಸೂಲು ಮಾಡುತ್ತಿದ್ದಾನೆ. ವಿಧಾನಸೌಧದ ವೀಳ್ಯ ಬರುತ್ತದೆ ಎಂದು ನಾನು ನಿನ್ನೆಯ ದಿವಸವೇ ಹೇಳಿದ್ದೇನೆ. ಈ ದಿವಸವೂ ಸ್ಪಷ್ಟವಾಗಿ ಹೇಳುತ್ತೇನೆ. ಇವರು ಮೊದಲು ಅಧಿಕಾರಕ್ಕೆ ಬಂದಾಗ ಲಂಚವನ್ನು ನಿರ್ಮೂಲನ ಮಾಡುತ್ತೇವೆ ಯಾರೂ ಲಂಚವನ್ನು ತೆಗೆದು ಕೊಳ್ಳಬೇಡಿ ಎಂದು ಹೇಳಿದ್ದಾರೆ. ಈಗ ನೇರವಾಗಿ ಕೆಲವು ಮಂತ್ರಿಗಳ ಮೇಲೆ ಲಂಚದ ಅಪಾದನೆ ಇದೆ. ಮಂತ್ರಿಗಳಲ್ಲಿ ಶೀಲತ್ವ ಇರಬೇಕು. ಸತ್ಯವಂತರು ಹಿರಿಯ ಸದಸ್ಯರು ಈ ಮಂತ್ರಿಮಂಡಲದಲ್ಲಿ 3—4 ಜನ ಇದ್ದಾರೆ. ಅವರು ಇವರನ್ನು ಹೇಗೋ ಸಹಿಸಿಕೊಂಡು ಹೋಗುತ್ತಿದ್ದಾರೆಯೋ ಗೊತ್ತಿಲ್ಲ, ಶ್ರೀಮಾನ್ ಘೋರ್ಪಡೆಯವರೂ ಯಾವ ಕಸಬನ್ನೂ ಕಲಿತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಪುಟ್ಟಸ್ವಾಮಯ್ಯನವರು ಬಹಳ ಗುರುತರವಾದ ಅಪಾದನೆಯನ್ನು ಮಾಡಿದ್ದಾರೆ. ಕೆಲವು ಮಂತ್ರಿಗಳ ಮನೆಯಲ್ಲಿ ಬುದ್ಧಿಯವರ ಆಫೀಸು, ಅಮ್ಮಾವ್ರ ಆಫೀಸು, ಚಿಕ್ಕರಾಯರ ಆಫೀಸು ಇದೆ ಎಂದು ಹೇಳಿದರು. ಯಾವ ಯಾವ ಮಂತ್ರಿಗಳ ಮನೆಯಲ್ಲಿ ಆ ರೀತಿ ಇದೆ. ಅದೇನು ಮಂತ್ರಿಗಳ ಮನೆಯಲ್ಲಿ ಒಳಗಡೆ ಇದೆಯೋ ಅಥವಾ ಹೊರಗಡೆ ಇದೆಯೋ ಎಂಬುದನ್ನು ಹೇಳಿದರೆ ನಮ್ಮ ಕೆಲಸಗಳನ್ನು ಮಾಡಿಸಿ ಕೊಳ್ಳುವುದಕ್ಕೆ ಡೈರೆಕ್ಟಾಗಿ ಅಲ್ಲಿಗೆ ಹೋಗಬಹುದು.

Mr. DEPUTY SPEAKER.—I can understand one being humourous and witty, but it must be within the scope of the subject under discussion. If it is not within the scope, it will not up hold the dignity of House.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕೆಲವು ಮಂತ್ರಿಗಳ ಬಗ್ಗೆ ನನಗೆ ಅಪಾರ ಗೌರವ ಇದೆ. ನಾನು ಮಾನ್ಯ ಉಪಾಧ್ಯಕ್ಷರ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು, ಈ ದೇಶದಲ್ಲಿ ಅನ್ಯಾಯ ಅನೀತಿ ಆಗುವುದಕ್ಕೆ ಅವಕಾಶವನ್ನು ಕೊಡಬಾರದು. ಆದ್ದರಿಂದ ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

3-30 P. M.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ನಾಗಣ್ಣನವರು ಏನೊಂದು ವಿಷಯ ಪ್ರಸ್ತಾಪ ಮಾಡಿದ್ದಾರೆ ಅದು ಬಹಳ ಗಂಭೀರವಾದುದು. ಅದರ ಬಗ್ಗೆ ಮಾನ್ಯ ಅರ್ಥ ಸಚಿವರು ಉತ್ತರ ಕೊಡುವಾಗ ಏನು ಹೇಳುತ್ತಾರೆಂದು ನೋಡಿಕೊಂಡು, ವಿವರಣೆ ಬೇಕಾದರೆ ಕೇಳುತ್ತೇನೆ. ಇದರಲ್ಲಿ ಶ್ರಿಂಪ್ಸ್, ಫ್ರಾಗ್‌ಲೆಗ್ಸ್ ಮತ್ತು ಲೋಬ್‌ಸ್ಟರ್ಸ್‌ಗೆ ನಾಲ್ಕು ಪರ್‌ಸೆಂಟ್ ಟ್ಯಾಕ್ಸ್ ಹಾಕುತ್ತೇವೆಂದು ಎಂದು ಸೂಚನೆ ಕೊಟ್ಟಿದ್ದಾರೆ. ಇದನ್ನು ಲಾಸ್ಟ್ ಡೀಲರ್ ಕೊಡಬೇಕೆಂದು ಮಾಡಿದ್ದಾರೆ. ಮಾನ್ಯ ಲಿಂಗಪ್ಪನವರು ಇದರ ಬಗ್ಗೆ ಏನೊಂದು ಸಂಶಯವನ್ನು ವ್ಯಕ್ತಪಡಿಸಿದರು, ಆ ಸಂಶಯಕ್ಕೆ ಕಾರಣವಿಲ್ಲವೆಂದು ಹೇಳುತ್ತೇನೆ. ಮೊದಲು ಶ್ರಿಂಪ್ಸ್, ಫ್ರಾಗ್‌ಲೆಗ್ಸ್ ಮತ್ತು ಲಾಬ್‌ಸ್ಟರ್ಸ್‌ಗೆ 6 ಪರಸೆಂಟ್ ಟ್ಯಾಕ್ಸ್ ಹಾಕಿದ್ದರು. ಹಿಂದಿನ ಸರ್ಕಾರ ಹೋದ ಮೇಲೆ ಧರ್ಮವೀರರ ಆಡಳಿತದ ಕಾಲದಲ್ಲಿ ಅದನ್ನು ಒಂದೂವರೆ ಪರ್‌ಸೆಂಟಿನಷ್ಟು ಇಳಿಸಿದರು. ಅವರು ಏಕೆ ಅದನ್ನು ಇಳಿಸಿದರು ಎಂಬುದರ ಬಗ್ಗೆ ವಿವರಣೆಗೆ ನಾನು ಹೋಗುವುದಿಲ್ಲ. ಅದಕ್ಕೆ ಅನೇಕ ರಾಜಕೀಯ ಕಾರಣಗಳು ಇವೆ. ಇದೇ ವಿಚಾರದಲ್ಲಿ ನಾನು ಒಂದು ಪ್ರಶ್ನೆ ಸಹ ಕೇಳಿದ್ದೆ. ಅದಕ್ಕೆ ಉತ್ತರವನ್ನು ಸಹ ಕೊಟ್ಟಿರುವುದನ್ನು ತಾವು ಕೇಳಿರಬಹುದು. ಇದರಲ್ಲಿ ಇವತ್ತು ಎರಡು ಪ್ರಶ್ನೆಗಳು ಉದ್ಭವವಾಗುತ್ತವೆ. ಹಿಂದೆ ಇದಕ್ಕೆ 6 ಪರ್‌ಸೆಂಟ್ ಹಾಕಿದ್ದರು, ಈಗ ಮಾನ್ಯ ಘೋರ್ಪಡೆಯವರು ಅದನ್ನು 4 ಪರ್‌ಸೆಂಟ್ ಸಿಂಗಲ್ ಪಾಯಿಂಟ್ ಎಂದು ಲೆಕ್ಕ ಹಾಕಿದ್ದಾರೆ. ಇಷ್ಟು ಹಾಕಿರುವುದು ಸರಿಯಾಗಿದೆ ಮತ್ತು ಅಗತ್ಯ ಎಂದು ಹೇಳುತ್ತೇನೆ. ಇದಕ್ಕೆ ಕೆಲವು ಆಕ್ಷೇಪಗಳು ಬಂದಿವೆ. ಈ ರೀತಿ ಟ್ಯಾಕ್ಸ್ ಹಾಕಿರುವುದರಿಂದ ಈ ಕೈಗಾರಿಕೆಗಳು ಹೊರಗಡೆ ಅಂದರೆ ಕೇರಳ ಮುಂತಾದ ರಾಜ್ಯಗಳಿಗೆ ಹೋಗಬಹುದು ಎಂದು ಹೇಳಿದರು. ಇವತ್ತು ಕೇರಳದಲ್ಲಿ ಸಹ ಈ ಟ್ಯಾಕ್ಸ್ ಇದೆ. ಅದೇ ರೀತಿ ಈ ಟ್ಯಾಕ್ಸ್ ಹಾಕುವುದರಿಂದ ಫ್ರೀಜಿಂಗ್ ಇಂಡಸ್ಟ್ರಿ ಮತ್ತು ಕೇನಿಂಗ್ ಇಂಡಸ್ಟ್ರಿಗಳು ಮೈಸೂರು ಸ್ಟೇಟಿನಿಂದ ಕೇರಳಕ್ಕೆ ಅಥವಾ ಆಂಧ್ರಕ್ಕೆ ಹೋಗಿ ನಮಗೆ ಸಿಗುವಂತಹ ಫಾರಿನ್ ಎಕ್ಸ್‌ಚೇಂಜಿಗೆ ತೊಂದರೆಯಾಗಬಹುದು ಎಂಬ ಶಂಕೆಯನ್ನು ಸಹ ವ್ಯಕ್ತಪಡಿಸಿದರು. ಮೈಸೂರು ರಾಜ್ಯದಲ್ಲಿರುವ ಕರಾವಳಿ ಪ್ರದೇಶವನ್ನು ಬಿಟ್ಟರೆ ಮತ್ತೆ ಕರಾವಳಿ ಪ್ರದೇಶ ಇರುವುದು ಕೇರಳದಲ್ಲಿ. ಆದ್ದರಿಂದ ಈ ಟ್ಯಾಕ್ಸ್ ಕೇರಳದಲ್ಲಿಯೂ ಇದೆ; ಮತ್ತು ಮಹಾರಾಷ್ಟ್ರದಲ್ಲಿಯೂ ಇರಬಹುದು. ಎಲ್ಲೆಲ್ಲಿ ಈ ಮೀನುಗಳು ಇವೆಯೋ, ಅಲ್ಲಿ ಈ ಟ್ಯಾಕ್ಸನ್ನು ಹಾಕುವುದು ಅಗತ್ಯ. ಆದ್ದರಿಂದ ಇಲ್ಲಿ ಟ್ಯಾಕ್ಸ್ ತಪ್ಪಿಸಿಕೊಂಡು ಬೇರೆ ಎಲ್ಲಿಯೂ ಹೋಗುವುದಕ್ಕಾಗುವುದಿಲ್ಲ. ಇಲ್ಲಿ ಟ್ಯಾಕ್ಸ್ ಇದೆ ಎಂದು, ರಾಜಸ್ಥಾನಕ್ಕೆ ಹೋಗಿ ಈ ಇಂಡಸ್ಟ್ರಿ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಟ್ಯಾಕ್ಸ್ ಏನಿದೆ, ಇದು ಸಾಮಾನ್ಯವಾಗಿ ಮೀನುಗಾರರ ಮೇಲೆ ಬೀಳುವುದಿಲ್ಲ. ಇವತ್ತು ಈ ಮೂರು ಜಾತಿಯ ಮೀನುಗಳಿವೆ, ವಿಶೇಷವಾದ ಬೇಡಿಕೆ ಇದೆ. ಇದರ ಫ್ಯಾಕ್ಟರಿಗಳಿಗೆ ಸಹ ಇವು ಸಾಕಷ್ಟು ಸಿಗುತ್ತಾ ಇಲ್ಲ. ಹಾಗಿರುವಾಗ ಇದರ ಮೇಲೆ ಟ್ಯಾಕ್ಸ್ ಹಾಕಿರುವುದು ತಪ್ಪು ಎಂದು ಹೇಳುವುದಕ್ಕಾಗುವುಲ್ಲ. ಎರಡನೆಯದು ಏನೆಂದರೆ ಇದನ್ನು ಫಸ್ಟ್ ಡೀಲರ್ ಕೊಡುವುದಿಲ್ಲ; ಇದನ್ನು ಲಾಸ್ಟ್ ಡೀಲರ್ ಕೊಡಬೇಕೆಂದು ಇದೆ. ಆದ್ದರಿಂದ ಇದು ಮೀನು ಹಿಡಿಯುವವರ ಮೇಲೆ ಬೀಳುವುದಿಲ್ಲ. ಇನ್ನೊಂದು ವಿಚಾರವೇನೆಂದರೆ ಆ ಮೀನಿನ ಕಾಲು, ತಲೆ, ಮತ್ತು ಕೈ ಎಲ್ಲಾ ಹೋದರೆ ಅಲ್ಲಿ ಉಳಿಯುವುದು ಕೇವಲ ಮೂವತ್ತು ಪರ್‌ಸೆಂಟ್ ಮಾತ್ರ. ಆದರೆ ಟ್ಯಾಕ್ಸ್ ಇಡೀ ಮೀನಿಗೆ ಹಾಕುತ್ತಾರೆಂದು ಹೇಳಿದರು. ಆದರೆ ಅವೆಲ್ಲವೂ ಹೋಗಿ ಏನು ಮೂವತ್ತು ಪರ್‌ಸೆಂಟ್ ಉಳಿದುದನ್ನು ಟಿನ್ನಿನಲ್ಲಿ ಕ್ಯಾನಿಂಗ್ ಮಾಡಿ ಕಳಿಸುತ್ತಾರೆ. ಅದರ ಮೇಲೆ ಮಾತ್ರ ಈ ಟ್ಯಾಕ್ಸ್ ಬೀಳುತ್ತದೆಯಲ್ಲದೆ ಇಡೀ ಮೀನಿನ ಒಟ್ಟು ಅಂಶದ ಮೇಲೆ ಬೀಳುವುದಿಲ್ಲ. ಇದನ್ನೆಲ್ಲಾ ಪರಿಶೀಲನೆ ಮಾಡಿ ನೋಡಿದರೆ ಯಾರು ಇಂಥ ಎಕ್ಸ್‌ಪೋರ್ಟ್ ವ್ಯಾಪಾರದಲ್ಲಿ ಸಾಕಷ್ಟು ಹಣ ಗಳಿಸುವಂಥವರು ಇದ್ದಾರೆ, ಅಂಥವರ ಮೇಲೆ ಟ್ಯಾಕ್ಸ್ ಹಾಕುವುದು ನ್ಯಾಯವಾಗಿದೆ. ಇಂಥವರ ಮೇಲೆ ಟ್ಯಾಕ್ಸ್ ಹಾಕದಿದ್ದರೆ ಇನ್ನು ಯಾರ ಮೇಲೆ ಹಾಕಬೇಕು? ಇವತ್ತು ಸಾಮಾನ್ಯ ರೈತರ ಮೇಲೆ ಮತ್ತು ಅಕ್ಕಿ ಮತ್ತಿತರ ಆಹಾರ ವಸ್ತುಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುತ್ತಿರುವಾಗ ಇಂಥ ವಸ್ತುಗಳ ಮೇಲೆ ಹಾಕಿ ಇದರಿಂದ ಯಾರು ಸಾಕಷ್ಟು ಲಾಭಗಳಿಸುತ್ತಾರೆ, ಅವರಿಂದ ಟ್ಯಾಕ್ಸ್ ವಸೂಲು ಮಾಡುವುದಕ್ಕೆ ಆಕ್ಷೇಪ ಮಾಡುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಆದ್ದರಿಂದ ಈ ಟ್ಯಾಕ್ಸ್ ಹಾಕಿರುವುದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ.

ಇನ್ನು ಸಿಲ್ಕಿಗೆ ಏನಾದರೂ ರಿಯಾಯಿತಿ ತೋರಿಸುವುದಾದರೆ, ಯಾರು ಸಿಲ್ಕನ್ನು ಉತ್ಪತ್ತಿ ಮಾಡುತ್ತಾರೆ, ಅಂಥವರಿಗೆ ರಕ್ಷಣೆ ಕೊಡಬೇಕು. ಇವತ್ತು ತ್ರೋನ್ ಸಿಲ್ಕ್ ಮತ್ತು ಟ್ವಿಸ್ಟೆಡ್ ಸಿಲ್ಕಿಗೆ ನಿಜವಾಗಿಯೂ ವಿನಾಯಿತಿ ಕೊಡಬೇಕಾದ ಅವಶ್ಯಕತೆ ಇಲ್ಲ. ಅದಕ್ಕೂ ಟ್ಯಾಕ್ಸ್ ಹಾಕಬೇಕಾಗಿತ್ತು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—I request the hon. member Sri T. R. Shamanna to be brief in his remarks.

Sri T. R. SHAMANNA.—You are not allowing sufficient time on matters involving several crores of rupees to the State but you have allowed several hours in discussing unimportant matters. There is no justification in curtailing the time while speaking on such important matters.

Mr. DEPUTY SPEAKER.—I request the hon. member to withdraw that remark. I am not responsible for allowing the discussion to go on unnecessarily.

Sri T. R. SHAMANNA.—On may occasion you have allowed the discussion which is not relevent The time of the House has been taken away by unimportant issues and many irreelevant things have gone into the proceedings of the House.

Mr. DEPUTT SPEAKER.—How am I responsible for that? You may proceed with your speech.

† Sri T. R. SHAMANNA (Fort).—I stand to oppose this Bill, *viz.*, the Mysore Sales Tax (Amendment) Bill. 1973 on the following grounds. In the name of rationalisation, you are putting additional tax burden on the people while in the budget speech you have stated that is a tax-free budget. While you are attempting to levy abnormal tax on the people, I have to oppose it.

This Bill is brought in some respects to help the vested interests and nextly it may affect the production. As you are all aware the Central Government will always levy extra taxas every year by raising one or two excice duties. Every year the State Government want to increass the sales tax. But our urge from time to time to plug the loopholes and increase the revenue has not been conceded. Further more the officers are instructed to show increase in revenue. Whatever accounts are given to the assessing officers, they increase by 25 per cent with a view to see that the taxes are levied. Apart from the mamools thay usually take from the merchants these officers levy taxes on production and make merchants to give false accounts. Further more there are a number of corrput Deputy Commissioners. There is one Deputy Commissioner by name Sri Ibrahim against whom a big file has been built up.

Mr. DEPUTY SPEAKER.—Please avoid mentioning name. You say 'a particular person', but not names.

Sri T. R. SHAMANNA.—The file which has been built against this man has been kept aside. He has been encouraged for staying in a place for a number of years. He is collecting mamools year after year, Strictures have been passed against a number of Deputy Commissioners about the collections and the mamools they take. But nothing has been done about them. On the other hand you are not allowing the efficient officers to man the administration of the Sales Tax Department. The previous Sales Tax Commissioner was an honest and

efficient man. Within three months of his taking charge he was transferred. If you don't allow the strong, efficient and honest officers to remain in a place for some time atleast how can you gear up the administration and keep it efficiently going ? May of the officers of corrupt nature are kept for more than 4 years in a place. They openly say that the tax will be reduced or the tax will not be levied on a particular portion of production provided the merchants pay them sufficiently. These officers are having links with the higher officers by giving some portion of their income to them They get promotions and transfers by paying mamools to the higher officers.

In the Department of Sales tax the senoirity list has not been finalised though a number of years have elapsed. The promotions and transfers are given according to the mamools one could afford to pay, but not according to the merits and seniority. Irrrgular promotions have become the order of the day in the Department, and they are very common. The enforcement officers will go round the City and threaten the merchants by saying that proceedings will be launehed against them and collect mamools. Then these officers will hush up the cases by taking illegal gratifications. With there irregularities how can you expect a good collection of sales tax. Every year we are urging that efficient collection of sales tax should be there and loopholes should be plugged. But nothing has been done so far. Without doing you are taxing the people year after year. If the sales tax is collected proprely and the loopbless are plugged, there will be no necessity to levy any tax more. In the present Bill you are getting about a crore of rupeses. The people are being unnecessarily taxed and this becomes an extra tax, just because your offieers are corrupt and they are not collecting the existing tax properly. On this ground I am opposing this Bill. The people want that the prices should be kept under control and the taxes should not be increased. If you are levying the taxes year after year, how it is possible to keep the prices under control ?

This time you have levied single point tax. They are. advocating the single point tax will give great relief to the poorer sections of the people. They have imposed tax from 5 to 6 paise on some commodities, and some essential commodities are not brought under single point. Even under the guise of single point tax you have increased the tax on some articles. Under the multipoint tax limit. you have got number of essential commodities and even food articles also. Nothing has been done to remove thi muitipoint tax on some essential articles. In a notification which has been published on March 12th amending the Rule 226, they have stated that separate accounts will have to be maintained in respect of declared goods and the sales tax. Some of the merchants do not know how to maintain accounts because some of them are not educated. The complicated accounting system may put them in trouble in maintaining accounts. On the other hand it will help the officers to collect more money and allow the merchants

(SRI T. R. SHAMANNA)

to produce false accounts. Under these circumstance I request the Government to see that the system of accounting procedure should be simpisfied.

In the Bill it has been stated shat exemptions are given for paddy and the twisted silk. Sri Naganna has stated very cleary that the twisted silk will be benefitting the richer class but not the poor people. The consumer, in the care of paddy, will never be benefited. The measures you have taken will clearly go to show that you are partial towards the richer class. This is your socialism. If you had exempted the rice, it would have been something, and it would have helped the poor to some extent.

With regard to sh.imps, prawn and lobsters, while you are trying to help some of the vested interests in the case of silk and paddy, you have here chosen as a target this fish coming from the coastal region of South Kanara. I am not against increasing tax. If you refer to the dictionary, you will find other kind of fish also included under the meaning of ' fish , . I want a clarification whether they are not classified as fish.

My impression here is that just as you want to help some people by removing sales tax on some items, you have got an eye on somebody whom you want to book. Furthermore, many of the articles you have brought under single point tax, are goods that are required for industry and they do not pass on from the first stage or second stage and since single poi t is given, the tax will be increased from 3 per cent to 6 percent and there will not be any additional benefit at all.

With regard to poultry feed and cattle feed, there is no fresh levy. On the one side you want food articles to be increasd and on the other side you want to levy tax there. Insecticides you are bringing under the levy. Articles which are mainly used by the agriculturists, you are bringing a new tax on them. It will be an additional burden cast on the agriculturists and it will not be a very welcome sign.

Then, in respect of fuel gas such as burshane, calgas, indane and the like I wish to say you have put the words 'and the like' and this will lead to the possibility of its being interpreted according to the whims and fancies of the assessing authorities. Therefore, further clarification should be given, so that they might not interpret to their own advantage. In the case of industrial gas such as oxygen, acetyline and nitrogen also, the words 'and the like' are added and this may be taken advantage of by the officers to take a decision according to their whims and fancies. Further clarification may be given instead of putting it in an ambiguous manner like that.

Then, copper, bronze and brass utensils are used mostly by commoners: The rate of copper is abnormal ; it is about 32 rupees per k g. It is a commodity which is purchased by the poor people and they will be hard hit by this tax.

Likewise, pressure cookers, their parts and accessories are not used by the common people, but still. now a days, when we have not got sufficient electric power and fuel, they will be forced to use them and will suffer a lot, if you levy extra charge.

Then, water meters are used by the house-holders and on that also you have brought single point tax. Water meter will pass on from the manufacturer to the whole-saler and from him to the consumer. Most of these articles do not pass through more than two stages. It will not, in any way, help the consumer class. Then in the case of foot-wear it will be six per cent. All these adjustments will naturally be a hard hit to the consumer and it will give additional revenue to the Government and I, therefore, strongly oppose this Bill.

ಶ್ರೀ ಎಚ್. ಡಿ. ದೇವೇಗೌಡ.—ಕೇಂದ್ರವರು 'ಡಿಕ್ಲೇರ್ಡ್ ಗೂಡ್ಸಿನ' ನ ಲಿಸ್ಟಿನಿಂದ ಏಲಕ್ಕಿಯನ್ನು ವಜಾ ಮಾಡಿದ್ದಾರೆಂದು ಕೇಳುತ್ತೇನೆ. ಆದ್ದರಿಂದ ಆ ಬೆಳೆಗಾರರಿಗೇನೊ ತೊಂದರೆ ಇದೆಯೆನ್ನುತ್ತಾರೆ, Is it a fact ?

Sri M. Y. GHORPADE.—Cardamom has been removed from the 'declared goods' category. That means that we can levy higher tax, but we heve not levied any higher tax, on cardamom. In the Central Act, it has been removed from the category of 'declared goods' and therefore, it has to go to some other category. There is a category called 'declared commodity' which is important in inter-State trade. The Central Government has power to declare certain commodities as 'declared commodities' so that no State Government can tax them more than a certain limit. Cardamom was one of the items under the declared category. To-day, they have removed it from that category. In other words, the State Government is now free to tax it more than the tax on a declared commodity. But we have not increased the tax on it. Though it has been removed from declared commodity list, the tax on cardamom remain the same.

Mr. DEPUTY SPEAKER.—The Hon. Finance Minister will now reply.

4 00 P. M.

† Sri M. Y. GHORPADE (Minister for Finance).—Mr. Speaker Sir, I never expected that on this Sales Tax (Amendment) Bill which contains very simple and straight forward proposals, there would be so much heat generated and serious allegations made. However, it is my duty in view of the discussion that has taken place, to reply to the debate at some length and to the maximum extent possible, in order to try to allay the fears expressed by the Hon'ble members and to meet the various points raised.

As I already said while moving this Bill for consideration, the Bill itself is largely a consequence of the Central amendment. As a result of the Central Amendmont, certatin consequential amendments have to be done. Apart from that, certain other sales-tax incorporated or announced at the time of the Budget has been put in this Bill.

(SRI M. Y. GHORPADE)

So far as thrown silk is concerned, I want to make it very clear that there are excellent reasons why silk in Mysore State should not be taxed at all. As a matter of fact silk is a very important industry in Mysore State and it is employment-oriented. Large number of people depend on it and silk is sent to various other States and exported. As Hon'ble Members know, this industry should not really have a tax. That has been the considered opinion of all experts on silk including the Central Silk Board.

As you know, there is no tax on raw-silk. This tax on thrown silk was an anarchronism; it had no business to be there: It has worked as an anachronism, because only a small number of twisters and twisting units were paying it. And there were various ways of escaping this tax legally. For instance, dealers from outside the State have opened their office in Bangalore. They purchase raw-silk and get it twisted and send it outside. Such product is not taxed. Some big traders in Bangalore have set up office outside the State. They also do the same thing. This is considered as a component and there is no tax on it.

Sri K. M. NAGANNA.—Is there no way of taxing it?

ಶ್ರೀ ಎಂ. ವೈ. ಘೋರ್ಪಡೆ.—ವರ್ಷಕ್ಕೆ 18 ಲಕ್ಷ ಕೆ. ಜಿ. ಸಿಲ್ಕ್ ತಯಾರಾಗುತ್ತದೆ, ಅದರಲ್ಲಿ ಅರ್ಧ ಹೊರಗಡೆಗೆ ಹೋಗುವುದು 25 ಪರ್ಸೆಂಟಿಗಿಂತ ಜಾಸ್ತಿ ಕಾಂಪೊನೆಂಟ್ ಸಿಲ್ಕ್ ಯೂನಿಟ್ಸ್ ಮಾಡುತ್ತಿದ್ದಾರೆ. ಒಂದು ಇಂಡಸ್ಟ್ರಿ ಮಾಡಿ ಸಿಲ್ಕ್ ಟ್ವಿಸ್ಟಿಂಗ್ ಯುನಿಟ್ ಮಾಡುವರು. ಅಂಥವರ ಮೇಲೆ ತೆರಿಗೆ ಬೀಳುವುದಿಲ್ಲ. ಈ ತೆರಿಗೆ ಬೀಳುವುದು ಸಣ್ಣವರ ಮೇಲೆ. ಅವರು ಸೇಲ್ ಮಾಡಿದರೆ ತಾನೆ ತೆರಿಗೆ ಹಾಕುವುದು ? ಇದರಿಂದ 2 ಲಕ್ಷ 20 ಸಾವಿರ ರೂಪಾಯಿ ಮಾತ್ರ ನಮಗೆ ಬರುವುದು. ಒಂದು ಲ 5 ಸಾವಿರ ರೂಪಾಯಿ ಗವರ್ನಮೆಂಟ್ ಫಿಲೇಚರ್ಸ್‌ನಿಂದ ಬರುವುದು 40 ಲಕ್ಷ ಬರಬಹುದೆಂದು ನಾಗಣ್ಣನವರು ಹೇಳಿದರು. ಬೆಂಗಳೂರಿನಿಂದ 15 ಲಕ್ಷ ಬರುವುದೆಂದು ಹೇಳಿದರು. ಬೇಕಾದಷ್ಟು ಹೇಳಬಹುದು, ಆದರೆ ಬರುವುದೆಷ್ಟು? ಇನ್ನೂರು ವರ್ಷದ ಹಿಂದೆ ಸರಕಾರಿ ಹುದ್ದೆಯಲ್ಲಿ ಕೆಲವನ್ನು ಆಕ್ಷನ್ ಮಾಡುತ್ತಿದ್ದರು.ಎಂಬ ಉದಾಹರಣೆ ಇತಿಹಾಸದಲ್ಲಿದೆ ತಹಸೀಲ್ದಾರು ಮತ್ತು ಡಿ. ಸಿ. ಹುದ್ದೆಗಳನ್ನು ಹಾಗೆ ಮಾಡುತ್ತಿದ್ದರು. ಈಗ ಆಧುನಿಕ ರೀತಿಯಲ್ಲಿ ನಡೆಯುತ್ತಿದೆ. ಇಂಥ ತೆರಿಗೆಗಳನ್ನು ಹರಾಜು ಹಾಕುವುದಕ್ಕಾಗುವುದಿಲ್ಲ. ತ್ರೋನ್ ಸಿಲ್ಕಿನಿಂದ ಎಷ್ಟು ಬರುತ್ತದೆ ಇದು ಟೆಕ್ನಿಕಲ್ ಪಾಯಿಂಟ್. ಸಿಲ್ಕ್ ಇಂಡಸ್ಟ್ರಿ ಮೇಲೆ ತೆರಿಗೆ ಮೈಸೂರು ದೇಶದಲ್ಲಿರಬಾರದು ಎಂಬುದು ನನ್ನ ಅಭಿಪ್ರಾಯ. ನೆರೆ ರಾಜ್ಯದಲ್ಲಿ ತ್ರೋನ್ ಸಿಲ್ಕ್ ಮೇಲೆ ತೆರಿಗೆ ಇಲ್ಲ ಹತ್ತಿಪ್ಪತ್ತು, ವರ್ಷಗಳಿಂದ ಎಷ್ಟು ತ್ರೋನ್ ಸಿಲ್ಕ್ ಯೂನಿಟ್ಟುಗಳು ನಮ್ಮ ರಾಜ್ಯದಲ್ಲಿ ಸ್ಥಾಪನೆಯಾಗಿವೆ, ಬೇರೆ ರಾಜ್ಯದಲ್ಲೆಷ್ಟಾಗಿವೆ ಎಂಬುದನ್ನು ನೋಡಬಹುದು. ಯಾವ ಪ್ರಮಾಣದಲ್ಲಿ ಸಿಲ್ಕ್ ಇಂಡಸ್ಟ್ರೀಸ್ ಬೆಳವಣಿಗೆಯಾಗಿದೆ ಎಂದು ನೋಡಬಹುದು. ಉದಾಹರಣೆಗೆ 1950 ರಲ್ಲಿ 7 ಲಕ್ಷ ಕೆ. ಜಿ. ಇತ್ತು, ಈಗ 18 ಲಕ್ಷವಿದೆ. ಇದೇ ಪ್ರಮಾಣದಲ್ಲಿ ತ್ರೋನ್ ಸಿಲ್ಕ್ ಯೂನಿಟ್ಸ್ ಆಗಿಲ್ಲ. ಇದಕ್ಕೆ ಪ್ರಬಲವಾದ ಕಾರಣವಿರಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನಿಮಗೆ ಸಿರಿಕಲ್ಚರ್‌ನಲ್ಲಿ ಅನುಭವವಿಲ್ಲ. ನಾಗಣ್ಣನವರಿಗೆ ಇದರ ವಿಷಯ ಹೆಚ್ಚಾಗಿ ಗೊತ್ತಿದೆ.

Sri M. Y. GHORPADE.—This is a very uncharitable remark. I know the silk industry. I know that we are struggling to compete in the international market. If you consider the Japanese silk industry the cost of production here is rather high. The Government of India is also giving its thought to this. The purchasing power in the

Indian hands is low. Therefore, they are not purchasing as much as they should. This is hampering the Indian Silk Industry. This will prove that there should not be any burdens by way of sales-taxes on silk industry.

ಯಾವ ದೃಷ್ಟಿಯಿಂದ ನೋಡಿದರೂ ಥ್ರೋನ್ ಸಿಲ್ಕ್ ಮೇಲೆ ತೆರಿಗೆ ಇರುವುದು ಸರಿಯಲ್ಲ. ನಾನಾ ದೃಷ್ಟಿಯಿಂದ ನೋಡಿದರೂ ಈ ತೆರಿಗೆ ತೆಗೆಯುವುದರಿಂದ ರಾಜ್ಯಕ್ಕೆ ಪೆಟ್ಟು ಆಗುತ್ತಿಲ್ಲ ಎಂದು ಪದೇ ಪದೇ ಹೇಳುತ್ತಿದ್ದೇನೆ. ಇದರಿಂದ 2 ಲಕ್ಷ 20 ಸಾವಿರ ರೂಪಾಯಿ ಮಾತ್ರ ಬರುವುದು. ಒಂದು ಲಕ್ಷ 50 ಸಾವಿರ ರೂಪಾಯಿ ಫಿಲೇಚರ್ ಸಿಲ್ಕ್‌ನಿಂದಬರುವುದು. ಇದರ ಬಗ್ಗೆ ಹಿಂದೆ ಮುಖ್ಯಮಂತ್ರಿಗಳೂ ಹೇಳಿದ್ದರು, ಅಭ್ಯಾಸ ಮಾಡಿ ನೋಡಿ ಇದರ ಮೇಲೆ ತೆರಿಗೆಇರಬಾರದು ಎಂಬ ಅಭಿಪ್ರಾಯ ಬಂದು ತೆಗೆದುಹಾಕಿದ್ದೇವೆ, ಯಾರ ಒತ್ತಡಕ್ಕೂ ಇದನ್ನು ಮಾಡಿಲ್ಲ. ಯಾರಿಗೆ ಫಾಯಿದೆ ಮಾಡುವುದಕ್ಕೂ ಇದನ್ನು ಮಾಡಿಲ್ಲ; ಕೆಲವರು ಹಣ ಕೊಟ್ಟಿದ್ದಾರೆಎಂದು ಹೇಳಿದರು. ನನಗೇನಾದರೂ 2 ಲಕ್ಷ ರೂಪಾಯಿ ಕೊಟ್ಟಿದ್ದರೆ ಅದನ್ನು ಅಭಾವ ಪರಿಸ್ಥಿತಿ ಇರುವ ಕಡೆಗೆ ಕಳುಹಿಸುತ್ತಿದ್ದೆ. Assuming that some people have given some money to X, Y or Z, does that become a reason for the Government not to do something which is right on merits? Like that any good move of Government may be sabotaged because we cannot prevent such allegations being made. ನಾಳೆ ನ್ಯಾಯವಾದ ಟ್ಯಾಕ್ಸೇಷನ ತತ್ವದ ಮೇಲೆ ಕೆಲಸಮಾಡುವಾಗ ಏನೂ ಸಂಬಂಧ ಇಲ್ಲದೆ ಇರುವ ಜನ ಹೇಳಿದ ತಕ್ಷಣ ನಾವು ಅದನ್ನು ವಾಪಸ್ ತೆಗೆದುಕೊಳ್ಳಬೇಕೇ? ಹಾಗಾದರೆ any move can be sabotaged.

ಶ್ರೀ. ಎಚ್. ಡಿ. ದೇವೇಗೌಡ.—ಏಳು ತಿಂಗಳ ಹಿಂದೆ ಮಾನ್ಯ ನಾಗಣ್ಣನವರು ಪತ್ರಿಕೆ ಹೇಳಿಕೆ ಕೊಟ್ಟು ಈ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೂ ತಂದಿದ್ದಾರೆ. ಮುಖ್ಯಮಂತ್ರಿಗಳಿಗೆ ಪತ್ರವ್ಯವಹಾರವಾಗಿರುವುದನ್ನು ಈ ಸಭೆಯಲ್ಲಿಟ್ಟಿದ್ದಾರೆ. ಒಂದೂವರೆ ಲಕ್ಷ ರೂಪಾಯಿ ಗವರ್ನಮೆಂಟ್ ಫಿಲೇಚರ್ಸ್‌ನಿಂದ ಬರುತ್ತದೆ. ತಾವು 75 ಸಾವಿರ ರೂಪಾಯಿ. ಏನು ಸಣ್ಣ ಹಣ, ಇದನ್ನು ಬಿಟ್ಟುಬಿಡಬಹುದು ಎನ್ನುವ ಭಾವನೆಯಿಂದ ಹೇಳುತ್ತಾ ಇದ್ದೀರಿ. ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಈ ಪೋರ್ಟ್‌ಪೋಲಿಯೋ ಇಟ್ಟುಕೊಂಡಂಥ ಕಾಲ ಇತ್ತು. ಕೈಗಾರಿಕೆ ಬೆಳವಣಿಗೆ ದೃಷ್ಟಿಯಿಂದ ಥ್ರೋನ್ ಸಿಲ್ಕ್ ಮೇಲೆ ಎಕ್ಸಂಪ್ಷನ್ ಕೊಡಬೇಕು ಎಂದು ಒತ್ತಡ ಬಂದಿದ್ದರೆ ಮೊದಲೆ ಕೊಡಲೇಬೇಕಾಗಿತ್ತು. ಈ ಸರ್ಕಾರ ಬಂದಮೇಲೆ ಹೊಸ ಪ್ರಯೋಗ ನಡೆಸುವುದಕ್ಕೆ ಹೊರಟಿದ್ದಾರೆ, ಯಾರ ದೃಷ್ಟಿಯಿಂದ ಇದನ್ನು ಮಾಡುವುದಕ್ಕೆ ಹೊರಟಿದ್ದೀರಿ?

Sri M. Y. GHORPADE.—It is not a good tax; it is an anachronism.

Sri H. D. DEVE GOWDA.—This is done because the Government wants to save some body. ಇದನ್ನು ತೆಗೆಯದೆ ಹೋದರೆ ಇಂಡಸ್ಟ್ರಿಸ್ ಬೆಳವಣಿಗೆ ಆಗುವುದಿಲ್ಲ ಎಂದು ಸರ್ಕಾರಕ್ಕೆ ಯಾರು ಶಿಫಾರಸ್ ಮಾಡಿದ್ದಾರೆ? ಅದನ್ನು ದಯಮಾಡಿ ಈ ಸಭೆಯ ಮುಂದೆ ಇಡಿ. ಇದು ಸ್ಪಾಂಟೇನಿಯಸ್ ಆಗಿ ನಿಮ್ಮ ತಲೆಯಲ್ಲಿ ಏತಕ್ಕೆ ಬಂತು?

Sri M. Y. GHORPADE.—Technically it is absolutely hundred per cent correct decision. Government cannot withdraw correct decisions merely because allegations are made. So far as allegations are concerned, I do not want to make counter-allegations or show disrespect to the elderly member Sri Naganna. So far as I am concerned, I am not bothered about enquiry that anybody would like to conduct on this or any other issue. We must consider it separately. Whatever information they have got, let it be looked into in such manner as this House feels necessary. I have the least objection to that. As a matter of fact, when the Chief Minister was here, there was a similar exchange. I think the Chief Minister also said that he has no objection if this matter is looked into. I wish he were here; then he would have taken a similar stand. When the Chief Minister is here, members can raise the matter so that he can decide what should be done about it.

ಶ್ರೀ ವಾಟಾಳ್ ನಾಗರಾಜ್.—ಮುಖ್ಯಮಂತ್ರಿಗಳು ಒಪ್ಪಿದ್ದಾರೆ, ನಾನೂ ಒಪ್ಪಿದ್ದೇನೆ, ಏನು ಅನುಮಾನವಿಲ್ಲ ಎಂದು ಹೇಳಿದ ಮೇಲೆ ಇದನ್ನು ಏತಕ್ಕೆ ಸಿ.ಬಿ.ಐ. ಗೆ ರೆಫರ್ ಮಾಡಬಾರದು?

Sri M. Y. GHORPADE.—I am making a fundamental point. The decision is correct on its merits. The allegations are a separate matter and they will be looked into. As I said, a good decision cannot be withdrawn or sabotaged merely because an alligation of that nature is made. The members can take up this matter with the Chief Minister. He is the proper person to state on behalf of the Goverument in what manner this should be looked into.

ಶ್ರೀ ಎಚ್. ಡಿ. ದೇವೇಗೌಡ.—ಕಳೆದ 25 ವರ್ಷಗಳಲ್ಲಿ ವಿರೋಧಪಕ್ಷದವರು ತೆರಿಗೆಯನ್ನು ತೆಗೆಯುವುದು ಬೇಡ ಎಂದು ಹೇಳಿದ್ದು ಇದು ಪ್ರಥಮ. ತೆರಿಗೆ ರಿಯಾಯಿತಿ ಕೊಡಬೇಕು ಎಂದು ಹೇಳುತ್ತಾರೆ, ಅದು ಬೇಡ ಎಂದು ಹೇಳುವುದು ಇದೇ ಪ್ರಥಮ. ಮಾನ್ಯ ಸದಸ್ಯರು ಇದಕ್ಕೆ ರಿಯಾಯಿತಿ ಕೊಡಬೇಕು ಎಂದು ಇಷ್ಟು ಕಾತುರತೆಯಿಂದ ಸಮರ್ಥನೆ ಮಾಡುತ್ತಿರುವುದು ಅರ್ಥವಾಗುತ್ತಿದೆ. ನಿಮ್ಮ ಮೇಲೆ ಯಾವುದೇ ಅಪಾದನೆಯನ್ನು ನಾವು ಮಾಡುತ್ತಿಲ್ಲ. ಮಾಡಿರತಕ್ಕ ಅಪಾದನೆ ಬೇರೆಯವರ ಮೇಲೆ. ಅರ್ಥಸಚಿವರು ಎಕ್ಸೆಂಪ್‌ಷನ್ ಕೊಡಲೇಬೇಕು, ಇದರಿಂದ ಇಂಡಸ್ಟ್ರೀಸ್ ಬೆಳವಣಿಗೆಯಾಗುತ್ತದೆ ಎನ್ನುವುದು ರೈಟ್ ಡಿಸಿಷನ್ನೇ ?

Sri M. Y. GHORPADE.—If the hon. Member says that this was a wrong decision that has been taken under influence…

Sri H. D. DEVE GOWDA.—Everybody knows the background.

Sri M. Y. GHORPADE.—The point is that the Opposition has not come out with a single argument to prove that the decision is wrong. All that they have said is that somebody has paid money to somebody. But that has nothing to do with giving this exemption.

ಶ್ರೀ ಕೆ. ಎಂ. ನಾಗಣ್ಣ.—ಸರ್ಕಾರದವರೇ, ಜನಗಳಿಗೆ ತೊಂದರೆಯಾಗಿದೆ ಎಂದು ರಿಯಾಯಿತಿ ಕೊಡುವುದಕ್ಕೆ ಮುಂದೆ ಬಂದಿದ್ದರೆ ಯೋಚನೆ ಮಾಡುವುದಕ್ಕೆ ಬೇರೆ ತರಹ ಇದೆ. ಮುಖ್ಯಮಂತ್ರಿಗಳು ಒಪ್ಪಿಕೊಂಡರು, ತೆರಿಗೆಗಾರರಿಂದ ಅರ್ಜಿ ಬಂದಿದ್ದರ ಮೇಲೆ ಫಿನಾನ್ಸ್ ಡಿಪಾರ್ಟ್‌ಮೆಂಟ್‌ನವರು ರಿಯಾಯಿತಿ ಮಾಡಿದ್ದಾರೆ. ಅದರ ಮೇಲೆ ನೀವು ವರ್ಕ್‌ಔಟ್ ಮಾಡಿರುವುದು.

ಶ್ರೀ ಎಂ. ವೈ. ಘೋರ್ಪಡೆ.—ಎಕ್ಸೆಂಪ್‌ಷನ್ ಮಾಡಿ, ಅದು ಸರಿಯಲ್ಲ ಅನ್ನಿಸಿದರೆ, ನಾನು ಆರೀತಿ ಹೇಳುತ್ತಾ ಇದ್ದೆ. ನಾವು ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ರೆಪ್ರೆಸೆಂಟೇಷನ್ಸ್ ಮತ್ತು ಬೇರೆ ಬೇರೆ ಅಭಿಪ್ರಾಯಗಳನ್ನು ಕೇಳಬೇಕಾಗುತ್ತದೆ. ಮತ್ತು ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಉದಾಹರಣೆಗಾಗಿ ಶ್ರಿಂಪ್ಸ ಇದೆ, ಇದಕ್ಕೆ 4 ಪರ್ಸೆಂಟ್ ಮಾಡಿದ್ದು ತಪ್ಪು ಎಂದು ಕೆಲವರು ಹೇಳಿದರು. ಇದನ್ನೇ ಮಾನ್ಯ ಕಕ್ಕಿಲಾಯ ಅವರು ಹೇಳುತ್ತಾರೆ, ಸರಿಯಾಗಿದೆ ಎಂದು. ಕೆಲವರು ಸರ್ಕಾರ ತಮ್ಮದೇ ಆದ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಇದರ ಬಗ್ಗೆ ಒತ್ತಾಯಕ್ಕೆ ಒಳಗಾಗಿ ಮಾಡಿರತಕ್ಕ ಕೆಲಸವಲ್ಲ. ಶ್ರಿಂಪ್ಸ ಮೇಲೆ ಟ್ಯಾಕ್ಸ್ ಹಾಕಿದ್ದೇವೆ, ಇದು ಸ್ಪಷ್ಟವಾಗಿ ತೋರಿಸುತ್ತದೆ, ನಾವು ಯಾರ ಒತ್ತಾಯಕ್ಕೆ ಒಳಗಾಗಿ ಸರ್ಕಾರ ತೀರ್ಮಾನಕ್ಕೆ ಹಣ ಕಾಸಿನ ವಿಷಯದಲ್ಲಿ ಬರುತ್ತಾ ಇಲ್ಲ ಎಂದು. ಒತ್ತಾಯಕ್ಕೆ ಒಳಗಾಗಿದ್ದರೆ ಶ್ರಿಂಪ್ಸ ಮೇಲೆ ನಾಲ್ಕು ಪರ್ಸೆಂಟ್ ಟ್ಯಾಕ್ಸ್ ಹಾಕುತ್ತಾ ಇರಲಿಲ್ಲ. ಮಾನ್ಯ ಪುಟ್ಟಸ್ವಾಮಿಯವರು ಒಂದು ವಿಷಯ ಕೇಳಿದರು, ಅದರ ಬಗ್ಗೆ ಕೆಲವು ವಿವರಗಳನ್ನು ಕೊಡುತ್ತೇನೆ. ಮೂರು ಪರ್ಸೆಂಟ್ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಇತ್ತು, ಗವರ್ನರ್ ರಜೀಮ್‌ನಲ್ಲಿ ಒಂದೂವರೆ ಪರ್ಸೆಂಟ್‌ಗೆ ಇಳಿಸಿದ್ದರು. ಎಂದು ಹೇಳಿದರು. ಶ್ರಿಂಪ್ಸ ವಿಷಯ ಇಳಿಸಿದ್ದು ಸರಿಯಲ್ಲ ಎಂದು ನನಗೆ ಅನಿಸಿತು. ನಾಲ್ಕು ಪರ್ಸೆಂಟ್ ಸಿಂಗಲ್ ಪಾಯಿಂಟ್ ಹಾಕಿದರೆ ತಪ್ಪಿಲ್ಲ. ಕಾನೂನಿನಲ್ಲಿ ಲಾಸ್ಟ್ ಪರ್ಚೇಸರ್ ಮೇಲೆ ಹಾಕಿದ್ದೇವೆ. ಲಾಸ್ಟ್ ಪರ್ಚೇಸರ್ ಯಾರು ಟಿನ್ ಮಾಡಿ ಎಕ್ಸಪೋರ್ಟ್ ಮಾಡುತ್ತಾರೆ, ಎಕ್ಸಪೋರ್ಟ್ ಮಾಡತಕ್ಕ ಆರ್ಗನೈಸ್ಡ್ ಇಂಡಸ್ಟ್ರೀ ಯಾವುದು ಇದೆ ಅದರ ಮೇಲೆ ಟ್ಯಾಕ್ಸ್ ಬೀಳುತ್ತದೆ. ಕೇರಳದಲ್ಲಿ 5 ಪರ್ಸೆಂಟ್ ಇತ್ತು, ಇತ್ತೀಚೆಗೆ 3 ಪರ್ಸೆಂಟ್ ಮಾಡಿದ್ದಾರೆ. ಕೇರಳದಲ್ಲಿ ಇರತಕ್ಕ ಟ್ಯಾಕ್ಸ್‌ಗೂ ನಮ್ಮ ರಾಜ್ಯದಲ್ಲಿ ಇರತಕ್ಕ ಟ್ಯಾಕ್ಸ್‌ಗೂ ಹೆಚ್ಚುಕಡಿಮೆ ಬಹಳ ವ್ಯತ್ಯಾಸವಿಲ್ಲ. ಆದುದರಿಂದ ಈ

ಇಂಡಸ್ಟ್ರೀ ಬೇರೆ ಯಾವ ರಾಜ್ಯಕ್ಕೂ ಹೋಗುವುದು ಬೇಡ ಎಂದು ಹೇಳಿದರೆ ಅದು ಸರಿಯಾದ ಮಾತು, ಸಂಪೂರ್ಣವಾಗಿ ಒಪ್ಪುತ್ತೇನೆ. ಟ್ಯಾಕ್ಸ್ ಹಾಕುವಾಗ ಆರ್ಗನೈಸ್ಡ್ ಸೆಕ್ಟರ್ ಮೇಲೆ ಟ್ಯಾಕ್ಸ್ ಹಾಕುವುದು. ಹಾಕದೆ ಬಿಟ್ಟರೆ ಸರ್ಕಾರ ನಷ್ಟಕ್ಕೆ ಗುರಿಯಾಗುವ ಅಪಾದನೆ ಬರುತ್ತದೆ, ಆ ದೃಷ್ಟಿಯಿಂದ 4 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೇವೆ. ಇಂಡಸ್ಟ್ರೀಸ್‌ಗೆ ದೊಡ್ಡ ಅಪಾಯವಾಗುತ್ತದೆ ಎಂದು ಹೇಳುವುದಾದರೆ ಅವರು ಸರ್ಕಾರಕ್ಕೆ ಮನದಟ್ಟು ಆಗುವಹಾಗೆ ಹೇಳುವ ಜವಾಬ್ದಾರಿ ಅವರದು ಎಂದು ನನಗನಿಸುತ್ತದೆ ಅಂಥ ಸಂದರ್ಭದಲ್ಲಿ ಸೂಕ್ತವಾಗಿ ಅವರಿಗೆ ನೆರವು ಕೊಡಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ತ್ರೋನ್ ಸಿಲ್ಕಮೇಲೆ ಯಾವಾಗನಿಂದ ಟ್ಯಾಕ್ಸ್ ಹಾಕಿದ್ದೀರಿ ? It has been there for the last 25 years.

M. Y. GHORPADE.—I am in office for one year. When issues come before me I should take decision objectively. I cannot correct history.

ಶ್ರೀ ಕೆ. ಪುಟ್ಟಸ್ವಾಮಿ.—Anachronism ಎಂದು ಹೇಳಿದಿರಿ. ಅದಕ್ಕೆ ಹೇಳಿದೆ.

ಶ್ರೀ ಎಂ. ವೈ. ಘೋರ್ಪಡೆ.—ಇನ್ನು ಒಂದು ಹೇಳುತ್ತೇನೆ. ಪ್ಯಾಡಿ ಪರ್ಚೇಸ್ ಟ್ಯಾಕ್ಸ್ ಅದರ ಹಿನ್ನಲೆ ಸಾಕಷ್ಟು ಗೊತ್ತಿದೆ, ಅದನ್ನು ತೆಗೆದು ಹಾಕಿದರೆ, ಟ್ರೇಡರ್ಸ್‌ಗೆ ಅನುಕೂಲ ಆಗುವ ದೃಷ್ಟಿಯಿಂದ ಮಾಡಿದಿರಿ, ಟ್ರೇಡರ್ಸ್ ನಿಮಗೆ ಏನೋ ಕೊಟ್ಟಿರಬಹುದು ಎಂದು ಹೇಳಬಹುದು. ಏತಕ್ಕೆ ಈ ರೀತಿ ಅನ್ನುತ್ತಾ ಇಲ್ಲ ? ಅದು ಟ್ರೇಡರ್ಸ್‌ಗೆ ಒಂದು ದೃಷ್ಟಿಯಿಂದ ಅನುಕೂಲವಾಗುತ್ತಾ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮಗೆ ಇರುವಷ್ಟು ತಲೆ ವಿರೋಧ ಪಕ್ಷದಲ್ಲಿ ಕುಳಿತಿರುವವರಿಗೆ ಯಾರಿಗೂ ಇಲ್ಲ ಎಂದು ತಿಳಿದುಕೊಂಡಿದ್ದೀರಾ ?

Sri M. Y. GHORPADE.—Therefore I am saying that this tax on shrimps has enormously increased, and that we are not concerned with pressure. We are concerned with pure economic logic. The opposition leader in the council, said that Ghorpade is trying to help the traders.

Sri H. D. DEVE GOWDA.—I am not concerned with what happens in the other House. What all I wanted is, when a member of this House has made a specific charge, you don't want to come out with correct decision and want to again defend it.

ಶ್ರೀ ಎಂ. ವೈ. ಘೋರ್ಪಡೆ.—ಯಾವ ಒಂದು ತೀರ್ಮಾನ ಶ್ರಿಂಪ್ಸ್ ಮೇಲೆ ಆಗಲಿ, ಬೇರೆ ಯಾವ ವಿಷಯದಲ್ಲಿ ಆಗಲಿ ಏನು ತೆಗೆದುಕೊಂಡಿದೆಯೋ ಅದು ಟ್ರೇಡರ್ಸ್‌ಗೆ ಸಹಾಯ ಮಾಡುವುದಕ್ಕೋಸ್ಕರ ಅಲ್ಲ ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಇರುವುದು ಸ್ಪೆಸಿಫಿಕ್ ಕೇಸ್.

ಶ್ರೀ ಎಂ. ವೈ. ಘೋರ್ಪಡೆ.—ಕಮ್ಯೂನಿಸ್ಟ್ ಪಾರ್ಟಿಯ ಶ್ರೀಮಾನ್ ಕೃಷ್ಣನ್‌ರವರು ಪದೇ ಪದೇ ಫುಡ್ ಮೇಲೆ ಟ್ಯಾಕ್ಸ್ ತೆಗೆಯಿರಿ ಎಂದು ಹೇಳುತ್ತಾರೆ. ಇದನ್ನು ಕನ್ಸೂಮರ್ಸ್ ಮೇಲೆ ಹಾಕಲಿಲ್ಲ. ಟ್ರೇಡರ್ಸ್ ಪ್ರಾಫಿಟ್ ಜಾಸ್ತಿ ಆಗಬಹುದು ಎಂಬ ಭಯ ಇದೆ. ಶ್ರೀಮಾನ್ ಕಾಗೋಡು ತಿಮ್ಮಪ್ಪ ಅವರು ಸೇಲ್ಸ್ ಟ್ಯಾಕ್ಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಷಯ ಬಂದಾಗ ಹೇಳಬೇಕಾಗುತ್ತದೆ. ಫುಡ್ ಮೇಲೆ ಟ್ಯಾಕ್ಸ್ ತೆಗೆಯುವುದರಲ್ಲಿ ಒಂದು ಅನುಮಾನ ಏನು ಎಂದರೆ ತೆಗೆದರೆ ಟ್ರೇಡರ್ಸ್ ಪ್ರಾಫಿಟ್ ಜಾಸ್ತಿ ಆಗಬಹುದು, ಕನ್ಸೂಮರ್ಸ್‌ಗೆ ಪಾಸ್ ಆನ್ ಮಾಡಲಿಕ್ಕಿಲ್ಲ ಎಂದು. ಪ್ಯಾಡಿ ಮೇಲೆ ಟ್ಯಾಕ್ಸ್ ತೆಗೆದು ನೋಡುತ್ತಿದ್ದೇವೆ. ಇದು ಕನ್ಸೂಮರ್ಸ್‌ಗೆ ಅನುಕೂಲ ಆಗುತ್ತಾ ಇದೆಯೆಂದು ಒಂದು ಸದುದ್ದೇಶದಿಂದ ಮಾಡಿರತಕ್ಕದ್ದು. ಯಾವುದೇ ಒಂದು ಗುಂಪಿಗೆ ಯಾವ ಒಂದು ಜನಾಂಗಕ್ಕೆ ಪ್ರೊಫೆಷನಲ್ ಗ್ರೂಪಿಗೆ ಫಾಯಿದೆ ಮಾಡಿಕೊಡುವ ದೃಷ್ಟಿಯಿಂದ ಇದನ್ನು ಮಾಡಿದ್ದಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀಮಾನ್ ಶಾಮಣ್ಣನವರು ಒಂದು ವ್ಯಾಲೀಡ್ ಪಾಯಿಂಟ್ ಸಜೆಸ್ಟ್ ಮಾಡಿದ್ದಾರೆ. ವಿರೋಧಪಕ್ಷದಿಂದ ಒಳ್ಳೆಯ ಸಲಹೆ ಬಂದರೆ ಅದಕ್ಕೆ ನಾನು ಹಠ ಮಾಡಬೇಕಾದುದೇ ನನ್ನ ಕೆಲಸವಲ್ಲ. ಸಾಮಾನ್ಯವಾಗಿ ಜನರು ಕಡಿಮೆ ಮತ್ತು ಚೀಪ್ ಫುಟ್‌ವೇರ್ ಉಪಯೋಗಿಸುವುದರಿಂದ 6 ಪರ್ಸೆಂಟ್ ಟ್ಯಾಕ್ಸ್ ಹಾಕಿದರೆ ತೊಂದರೆಯಾಗುತ್ತದೆ. ಬೂಟ್ಸ್‌ಮೇಲೆ 30-40 ರೂಪಾಯಿ ಬೆಲೆ

(ಶ್ರೀ ಎಂ. ವೈ. ಘೋರ್ಪಡೆ)

ಬಾಳುವ ಬೂಟ್ಸಿನ ಮೇಲೆ ಟ್ಯಾಕ್ಸ್ ಹಾಕಲಿಲ್ಲ. ಬಡ ಜನ ಕೊಂಡುಕೊಳ್ಳುವ ಫುಟ್‌ವೇರ್ಸ್‌ಗೆ ತೊಂದರೆಯಾಗಬಹುದು ಎನ್ನುವ ವಿಚಾರ ಹೇಳಿದ್ದಾರೆ ಇದರ ಬಗ್ಗೆ ಅಮೆಂಡ್‌ಮೆಂಟ್ ಕಳುಹಿಸಿದ್ದಾರೆ. ಫುಟ್‌ವೇರ್ಸ್ ಮೇಲೆ ಈ ವ್ಯಷ್ಟಿಯಿಂದ 6 ಪರ್ಸೆಂಟ್ ಇದ್ದದ್ದನ್ನು 4 ಪರ್ಸೆಂಟ್‌ಗೆ ಇಳಿಸಲಿಕ್ಕೆ ನಾನು ಒಪ್ಪುತ್ತಾ ಇದ್ದೇನೆ. ನಾನು ಅದರ ಬಗ್ಗೆ ತೀರ್ಮಾನ ತೆಗೆದುಕೊಂಡು ಅನೌನ್ಸ್ ಮಾಡಬೇಕೆಂದು ಇದ್ದೆ. ನಿಮ್ಮ ಮೇಲೆ ಪ್ರೆಷರ್ ತಂದರೇ ನೀವು ಮಾಡುವುದು ಎಂದು ಶಾಮಣ್ಣನವರು ಹೇಳಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.— ಯಾತಕ್ಕೆ ನೀವು ಅಸಮ್‌ಷನ್ ಮಾಡುತ್ತೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಕೆಲವರು ಮಾರ್ವಾಡಿ ಮರ್ಚೆಂಟ್ಸ್ ಹುಬ್ಬಳಿಯಿಂದ ಬಂದಿದ್ದರು. ನನಗೆ ಅವರ ಪರಿಚಯವಿಲ್ಲ. ಮನೆಗೆ ಬಂದರು. 6 ಪರ್ಸೆಂಟ್ ಪೇಪರ್ ಮೇಲೆ ಟ್ಯಾಕ್ಸ್ ಹಾಕಿದ್ದು ಸರಿ, ಆದರೆ ಎಕ್ಸರ್‌ಸೈಜ್ ಬುಕ್ ಮಾಡುವ ಜನರಿಗೆ ಪೆಟ್ಟು ಆಗುತ್ತದೆ ಎಂದು ಹೇಳಿದರು. ಎಕ್ಸರ್‌ಸೈಜ್ ಬುಕ್ಸ್ ಕಾಸ್ಟ್ ಏನು ಇದೆ ಅದು ಜಾಸ್ತಿಯಾದ್ದರಿಂದ ಬಾಂಬೆಯಿಂದ ಎಕ್ಸರ್‌ಸೈಜ್ ಬುಕ್ ಬರುವುದಕ್ಕೆ ಶುರುವಾಗುತ್ತಿದೆ. ಇದರ ಬಗ್ಗೆ ಯೋಚನೆ ಮಾಡಬೇಕು. ಅದರಿಂದ ತೊಂದರೆ ಆಗುವುದಾದರೆ ಅದನ್ನು ನೋಡಿಸಿ ಯೋಚನೆ ಮಾಡುತ್ತೇನೆ. ವಿದ್ಯಾರ್ಥಿಗಳು ಉಪಯೋಗಿಸುವ ಎಕ್ಸರ್‌ಸೈಜ್ ಬುಕ್ಸ್ ಮೇಲೆ ರಿಯಾಯಿತಿ ಕೊಡಲಿಕ್ಕೆ ಏನು ಸಾಧ್ಯ ಅದನ್ನು ಮಾಡುತ್ತೇನೆ. ನಿಮ್ಮ ಮೇಲೆ ಪ್ರೆಷರ್ ತಂದರು ಎಂದು ಹೇಳುವುದಕ್ಕೆ ಅವಕಾಶ ಆಗುತ್ತದೆ. ಆದರೂ 6 ಪರ್ಸೆಂಟ್ ಟ್ಯಾಕ್ಸ್ ವಿದ್ಯಾರ್ಥಿಗಳು ಉಪಯೋಗಿಸುವ ಎಕ್ಸರ್‌ಸೈಜ್ ಬುಕ್ಸ್ ಮೇಲೆ ಒಳ್ಳೆಯ ಪರಿಣಾಮವಾಗುವುದಿಲ್ಲ ಎಂದು ತಿಳಿದುಕೊಂಡಾಗ ಅದನ್ನು ನಾವು ಸರಿಪಡಿಸಬೇಕಾಗುತ್ತದೆ. ವಿದ್ಯಾರ್ಥಿಗಳು ಉಪಯೋಗಿಸುವ ಎಕ್ಸರ್‌ಸೈಜ್ ಬುಕ್ಸ್ ಮೇಲೆ ರಿಯಾಯಿತಿ ಕೊಡುವುದು, ಶ್ರಿಂಪ್ಸ ಮೇಲೆ ಮಾಡಿರತಕ್ಕದ್ದು ಮತ್ತು ಇದೇ ರೀತಿ ತ್ರೋನ್ ಸಿಲ್ಕ್ ಮೇಲೆ ಮಾಡಿರುವುದು ಏನು ಇದೆ ಇದೆಲ್ಲಾ ಸರಿಯಾದ ಡಿಸಿಷನ್ ಎಂದು ತೆಗೆದುಕೊಳ್ಳಬೇಕಾಗುತ್ತದೆ. ಇದರ ಹಿನ್ನೆಲೆಯಲ್ಲಿ ಅಪಾದನೆ ಮಾಡುವುದು ಇದ್ದರೆ ಅದಕ್ಕೆ ಎಳ್ಳಷ್ಟೂ ಭಯವಿಲ್ಲ. ಏನು ಬೇಕಾದರೂ ವಿಚಾರಣೆ ಮಾಡಬಹುದು. ನಾನು ವೈಯಕ್ತಿಕವಾಗಿ ಈ ತೀರ್ಮಾನವನ್ನು ಘೋಷಣೆ ಮಾಡುತ್ತಾ ಇದ್ದೇನೆ. I am not averse to my enqu ry on any matter. The Chief Minister has also stated that he has no objection. The appropriate way is not to tag on those allegations with these measures which are technically correct. I respect the seriousness of your allegations.

ಶ್ರೀ ವಾಟಾಳ್ ನಾಗರಾಜ್.—ಅಪಾದನೆ ನಿಮ್ಮ ಮೇಲೆ ಇಲ್ಲ. ಆದುದರಿಂದ ಯಾವಾಗಲಾದರೂ ವಿಚಾರ ಮಾಡಿ.

ಉಪಾಧ್ಯಕ್ಷರು.—ಎಷ್ಟು ಸಾರ್ತಿ ಹೇಳುವುದು ?

ಶ್ರೀ ವಾಟಾಳ್ ನಾಗರಾಜ್.—ಎಷ್ಟು ಸಾರ್ತಿ ಹೇಳಿದರೂ ಅರ್ಥಮಾಡಿಕೊಳ್ಳದಿದ್ದರೆ 20 ಸಾರ್ತಿ ಹೇಳಬೇಕಾಗುತ್ತದೆ.

Mr. DEPUTY SPEAKER.—If we have faith in the parliamentary democracy there should be some limitations to all these things. Simply one were to raise voice, it will not solve problems.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಬೀದಿಯಲ್ಲಿ ಸರ್ಕಾರ ಲಂಚ ತೆಗೆದುಕೊಳ್ಳುತ್ತಾ ಇದೆ ಎಂದು ಜನ ಹೇಳುತ್ತಾ ಇದ್ದರೆ ನಾವು ಏನು ಹೇಳುವುದು.

ಶ್ರೀ ಎಂ. ವೈ. ಘೋರ್ಪಡೆ.—ಜನ ನಮಗೂ ನಿಮಗೂ ಬಯ್ಯುತ್ತಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ರೋಡಿನಲ್ಲಿ ತಮ್ಮಟೆ ಹೊಡೆದುಕೊಂಡು ಅಪಾದನೆ ಮಾಡುತ್ತಿದ್ದಾರೆ ಎಂದು ನಾನು ಹೇಳುವುದು.

ಶ್ರೀ ಎ. ವಿ. ಮುನಿಸ್ವಾಮಿ.—ದೇಶದಲ್ಲಿ ರೇಷ್ಮೆ ಬೆಲೆ ಇಳಿಯಬೇಕು. ರೇಷ್ಮೆ ಉದ್ಯಮ ಬೆಳೆಯಬೇಕಾದರೆ ಅದಕ್ಕೆ ಬೇಕಾದ ಸೌಲಭ್ಯ ಕೊಡಬೇಕು.

4-30 P. M.

SRI M. Y. GHORPADE.—On principle I do not agree that good decisions should be withdrawn because of allegations. I certainly agree that the allegations could be taken up separately in such manner as the House deems it fit and the matter could be raised when the Chief Minister is here. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಡಿಸಿಷನ್‌ನಲ್ಲಿ ಏನಾಯಿತು ಎಂಬುದು ನಮಗೆ ಗೊತ್ತಿದೆ. ಅವರು ಒಂದು ಡಿಸಿಷನ್ ಮಾಡಿದರು. ಇಂಟರ್ ಸ್ಟೇಟ್ ಸೇಲ್ಸ್ ಟ್ಯಾಕ್ಸ್ ಹಾಕುವಾಗ ಇದನ್ನು ಪರ್ಚೆಸ್ ಟ್ಯಾಕ್ಸ್ ಅಂತ ಕೊಟ್ಟಿದ್ದರೆ ಸೇಲ್ಸ್ ಟ್ಯಾಕ್ಸ್ ಹಾಕಬಾರದು ಎಂದು. ಈ ಒಂದು ಡಿಸಿಷನ್‌ನಿಂದ ಪರಿಣಾಮ ಏನು ಆಯಿತು ಎಂದರೆ ಎರಡು ವರ್ಷಗಳ ಕಾಲ ಸಂಪೂರ್ಣವಾಗಿ ಈ ಟ್ಯಾಕ್ಸನ್ನು ವರ್ತಕರು ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟಂತಾಯಿತು. The fact is that for two years taking advantage of the confusion of court decision, which is now set right as a result of this amendment, several people have not paid taxes on the plea that because of the court's decision they did not collect it. Now the amendments are being given retrospective effect and you also know that for these two years confusion period we and many other State Governments have given the assurance that we will give the benefit of doubt to the traders during 14-2-1967 to 9-6-1969. Some traders may have collected tax but they are telling us they have not collected taxes becuse of the Coursts decision. But whether they have collected it or not we are giving them the benefit of doubt by giving retrospective effect to the amendment bill. Therefore I am sure the hon. Members will realise that Government has given full thought on this point and it is not the intention of Government to make unfair allegations against the traders or harass them. On the other hand we have given the benefit of doubt to them even though the State may have to lose some money by this.

With this explanation I sincerely hope that the hon. Members will be fully convinced that every amendment on the Sales Tax is drawn up in all honesty and they are techincally correct decisions.

† ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಸಚಿವರು ನ್ಯಾಯವಿಲ್ಲದ ವಿನಾಯಿತಿಯನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಬಹಳ ಕಷ್ಟಪಟ್ಟು ಸಮರ್ಥನೆ ಮಾಡಿಕೊಂಡಿದ್ದಾರೆ; ಅದು ಈ ದಿವಸದ ಅನುಭವದಲ್ಲಿ ನಮಗೆ ಗೊತ್ತಾಗಿದೆ. ಮೊಟ್ಟಮೊದಲನೆಯದಾಗಿ ಅವರ ಹೇಳಿಕೆ ವಾಸ್ತವಾಂಶಕ್ಕೆ ದೂರವಾದುದು. ಮತ್ತು ಸಿಲ್ಕ್ ಎಕ್ಸ್‌ಪೋರ್ಟ್ ಮಾಡುತ್ತಾರೆ ಎಂದು ಹೇಳಿದರು. ಆ ವಿಷಯದಲ್ಲಿ ನಾನು ಹೇಳಬೇಕಾದರೆ ಅವರು ಎಕ್ಸ್‌ಪೋರ್ಟ್ ಎಲ್ಲಿಗೂ ಮಾಡುತ್ತಾ ಇಲ್ಲ. ಅವರ ಜೊತೆಗೆ ಟ್ವಿಸ್ಟಿಂಗ್ ಮೆಷಿನ್ ಇಟ್ಟುಕೊಂಡಿದ್ದಾರೆ. ರಾ ಸಿಲ್ಕ್‌ಗೆ ಎಲ್ಲೂ ಟ್ಯಾಕ್ಸ್ ಇಲ್ಲ. ಅಡಕ್ಕೋಸ್ಕರ ಮದ್ರಾಸ್‌ನವರು, ಬಾಂಬೆಯವರು ಕೇರಳದವರು ಇಲ್ಲಿಗೆ ಬಂದು ರಾ ಸಿಲ್ಕ್ ತೆಗೆದುಕೊಂಡು ಅದನ್ನು ಟ್ವಿಸ್ಟ್ ಮಾಡಿ ನಿಮ್ಮ ಅಧಿಕಾರಿಗಳಿಂದ ರಾ ಸಿಲ್ಕ್ ಎಂದು ಸರ್ಟಿಫೈ ಮಾಡಿಸಿ ಹೊರಗಡೆ ದೇಶಕ್ಕೆ ಕಳುಹಿಸುತ್ತಿದ್ದಾರೆ. They are liable to pay 2per cent tax and your department should collect it ನಿಮ್ಮ ಅಧಿಕಾರಿಗಳು ಲಂಚ ತೆಗೆದುಕೊಂಡು ಬಿಟ್ಟುಬಿಡುತ್ತಿದ್ದಾರೆ. ಅದಕ್ಕೆ ರುಜುವಾತು ಇದೆ. ಇದರಿಂದ ನಿಮ್ಮ ಅಧಿಕಾರಿಗಳು ಫ್ರೆಂಡ್ ಆಗುತ್ತಿದ್ದಾರೆ. ಈ ಪ್ರೊತ್ತು 2 ಪರ್ಸೆಂಟನ್ನು ಸರಿಯಾಗಿ ವಸೂಲು ಮಾಡಿದರೆ 40 ಲಕ್ಷ ರೂಪಾಯಿ ವರಮಾನ ಬರುತ್ತದೆ. ಸರಿಯಾಗಿ ವಸೂಲ್ ಮಾಡುತ್ತಿಲ್ಲ. ಬಡ ನೇಕಾರನ ಸ್ಥಿತಿ ಈ ಪ್ರೊತ್ತಿನ ದಿವಸ ಬಹಳ ಕಷ್ಟವಾಗಿದೆ. ತಾವು ನನ್ನ ಜೊತೆಯಲ್ಲಿ ನಾಳೆ ಬೆಳಿಗ್ಗೆ ಒಂದು ಗಂಟೆಗೆ ಬಂದರೆ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಬೆಂಗಳೂರಿನಲ್ಲಿ ಸುಮಾರು 1 ಸಾವಿರ ಸ್ಪಿಂಡಲ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಅವರೆಲ್ಲಾ ಕೂಲಿಗಾರರು. ಅವರು ಕೆಲಸ ಮಾಡಿ ಈ ಸಿಲ್ಕನ್ನು ಈ ತೆರಿಗೆ ಕಳ್ಳರಿಗೆ ಸಪ್ಲೈ ಮಾಡುತ್ತಿದ್ದಾರೆ.

(ಶ್ರೀ ಕೆ. ಎಂ. ನಾಗಣ್ಣ)

They export this under the guise of raw-silk. ಅವರಿಗೆ ಈ ರಿಯಾಯಿತಿ ಕೊಡುತ್ತೀರಾ ? ಈ ರಿಯಾಯಿತಿಯಿಂದ ಆ ಬಡ ನೇಕಾರರಿಗೆ ಅನುಕೂಲವಾಗುತ್ತದೆ ಎಂದರೆ ಅದನ್ನು ಒಪ್ಪೋಣ, ಇಲ್ಲದಿದ್ದರೆ ಅದನ್ನು ಬಿಟ್ಟುಬಿಡುತ್ತೀರಾ ? ನೀವು ಈ ರೀತಿ ಮಾಡುವುದರಿಂದ ತೆರಿಗೆ ಕಳ್ಳರಿಗೆ ಅನುಕೂಲವಾಗುತ್ತದೆಯೇ ವಿನಾ ಬಡವರಿಗೆ ಅನುಕೂಲವಾಗುವುದಿಲ್ಲ. ಆದುದರಿಂದ ನಿಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಿ. ಅದೂ ಅಲ್ಲದೆ 2 ಲಕ್ಷ ಜನರಿಂದ ಬರುವ ವರಮಾನ ಕೇವಲ 12 ಲಕ್ಷ ರೂಪಾಯಿ, ಅದನ್ನು ವಜಾ ಮಾಡಿ. 2 ಲಕ್ಷ ಜನರಿಗೆ ರಿಯಾಯಿತಿ ಕೊಡುವ ಬದಲು 50 ಜನ ತೆರಿಗೆ ಕಳ್ಳರು ಏನು ಇದ್ದಾರೋ ಅವರಿಗೆ 40 ಲಕ್ಷ ರೂಪಾಯಿ ವಿನಾಯಿತಿ ಕೊಡುತ್ತೀರಾ ? ಅದರಲ್ಲೂ ಶ್ರೀಮಾನ್ ಘೋರ್ಪಡೆಯವರು ಈ ಬಗ್ಗೆ ಸಮರ್ಥನೆ ಮಾಡುವುದಾದರೆ ಅದು ಒಳ್ಳೆಯದಲ್ಲ, ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಮೈಸೂರು ರಾಜ್ಯದೊಳಗೆ ಸಿಲ್ಕ್ ಮೇಲೆ ತೆರಿಗೆ ಹಾಕಬೇಡವೋ ಎನ್ನುವುದನ್ನು ಹೇಳುತ್ತಾರೆಯೇ ?

ಶ್ರೀ ಕೆ. ಎಂ. ನಾಗಣ್ಣ.—ಮೈಸೂರು ರಾಜ್ಯದೊಳಗೆ ಥ್ರೋನ್ ಸಿಲ್ಕ್ ಮೇಲೆ ಇರುವ ತೆರಿಗೆ ಇರಲಿ. ಇದು ಹೊರಗಡೆ ಹೋಗುತ್ತದೆ. ಇಲ್ಲಿರುವ ಬಡ ನೇಕಾರರಿಗೆ ಕಷ್ಟ ಬಂದಿದೆ. ಹೊಟ್ಟೆಗೆ, ಅನ್ನವಿಲ್ಲದೆ ಅವಸ್ಥೆ ಪಡುತ್ತಿದ್ದಾರೆ. ಥ್ರೋನ್ ಸಿಲ್ಕನ್ನು ರಾ ಸಿಲ್ಕ್ ಎಂದು ಹೊರಗಡೆಗೆ ಕಳುಹಿಸಿ ರಾಜ್ಯದಲ್ಲಿ ಸ್ಕಿಲ್ ರೇಟ್ ಜಾಸ್ತಿಯಾಗಿ ನೇಕಾರರು ಸಾಯುತ್ತಿದ್ದಾರೆ. ಸರ್ಕಾರದವರು ಬೆಲೆ ಇನ್ನೂ ಹೆಚ್ಚು ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ಇದರಲ್ಲಿ ಅನುಭವವಿಲ್ಲವೆಂದು ಹೇಳಬೇಕಾಗಿ ಬರುತ್ತದೆ. ದಯಮಾಡಿ ನನ್ನ ಜೊತೆಯಲ್ಲಿ ಒಂದು ಗಂಟೆ ಬನ್ನಿ ಬಡಜನರ ಹತ್ತಿರ ಹೋಗಿ ವಿಚಾರಿಸೋಣ. ಈಗ ಕೊಟ್ಟಿರುವ ರಿಯಾಯಿತಿಯಿಂದ ಅವರಿಗೆ ಅನುಕೂಲವಾಗುತ್ತದೆ ಎಂದು ಒಪ್ಪಿಕೊಂಡರೆ ನಾನು ವಾದ ಮಾಡುವುದಿಲ್ಲ. ತೆರಿಗೆ ಕಳ್ಳರಿಗೆ ಸಹಾಯವಾಗುವುದನ್ನು ವಾಪಸು ತೆಗೆದುಕೊಳಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಟ್ವಿಸ್ಟಿಂಗ್ ರಾಜ್ಯದಲ್ಲಿ ಯಾವ ಪ್ರಮಾಣದಲ್ಲಿ ಬೆಳೆಯಬೇಕಾಗಿತ್ತೋ ಆ ಪ್ರಮಾಣದಲ್ಲಿ ಬೆಳೆದಿಲ್ಲ ಎನ್ನುವುದನ್ನು ಒಪ್ಪುತ್ತೀರಾ ?

ಶ್ರೀ ಕೆ. ಎಂ. ನಾಗಣ್ಣ.—ಬೇಕಾದಷ್ಟು ಪ್ರಮಾಣದಲ್ಲಿ ಬೆಳೆದಿದೆ, ತೆರಿಗೆ ಕಳ್ಳರಿಂದಲೇ ಹೆಚ್ಚಾಗಿ ಬೆಳೆದಿದೆ. ಸಾಮಾನ್ಯ ಜನರಿಗೆ ಇದರಿಂದ ಯಾವ ಅನುಕೂಲವೂ ಇಲ್ಲ. ಜನರ ಹತ್ತಿರ ಹೋಗುವುದಕ್ಕೆ ಏಕೆ ಹೆದರುತ್ತೀರಿ ? ಯಾವ ರೀತಿಯ ತಪ್ಪನ್ನೂ ನಿಮ್ಮ ಮೇಲೆ ನಾವು ಹೊರಿಸುತ್ತಿಲ್ಲ. ಒಂದು ಸಲ ನನ್ನೊಡನೆ ಬಂದರೆ ನಿಮಗೇ ಮನವರಿಕೆಯಾಗುತ್ತದೆ. ವಿನಾಯಿತಿಯಿಂದ ಸಾಮಾನ್ಯ ಜನರಿಗೆ ಅನುಕೂಲವಾಗುತ್ತದೆ ಎಂದರೆ ನಾನೂ ಇದಕ್ಕೆ ಬೆಂಬಲ ಕೊಡುತ್ತೇನೆ. ತೆರಿಗೆ ಕಳ್ಳರಿಗೆ ಅನುಕೂಲವಾಗುವಂಥ ವಿಚಾರವೇನಿದೆ ಅದನ್ನು ವಾಪಸು ತೆಗೆದುಕೊಳ್ಳಬೇಕು.

ಶ್ರೀ ಎ. ವಿ. ಮುನಿಸ್ವಾಮಿ.—ತೆರಿಗೆ ತೆಗೆಯುವುದರಿಂದ ಕೆಲವು ನೇಕಾರರಿಗೆ ತೊಂದರೆಯಾಗುವುದಾದರೆ ತೆರಿಗೆ ಹಾಕುವುದರಿಂದ ಬೆಳೆಗಾರರಿಗೆ ಬಹಳ ತೊಂದರೆಯಾಗುತ್ತದೆ. ರೇಷ್ಮೆ ಗೂಡಿನ ಬೆಲೆ ಏರಬೇಕು, ರೇಷ್ಮೆ ಬೆಲೆ ತಗ್ಗಬೇಕು. ರೇಷ್ಮೆ ಬೆಲೆಯನ್ನು ಏರಿಸಿದರೆ ಕೃತಕ ರೇಷ್ಮೆ ಅದರ ಸ್ಥಾನವನ್ನು ಆಕ್ರಮಿಸಿಕೊಂಡು ನಮ್ಮಲ್ಲಿ ಅನೇಕರು ನಿರ್ಗತಿಕರಾಗುತ್ತಾರೆ, ಬೆಳಗಾರರೆಲ್ಲ ಹಾಳಾಗುತ್ತಾರೆ ಎನ್ನುವುದನ್ನು ಮಾನ್ಯ ನಾಗಣ್ಣನವರು ದೀರ್ಘವಾಗಿ ಆಲೋಚನೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ 12 ಕೋಟಿ ರೂಪಾಯಿ ಹಿಪ್ಪುನೇರಳೆ ಬೆಳೆಯುತ್ತದೆ. ಮೈಸೂರು ಸಿಲ್ಕ್ ಎಂದರೆ ಬಹಳ ಹೆಸರುವಾಸಿಯಾದುದು. ಆದರ ಮೇಲೆ ತೆರಿಗೆ ಹಾಕುವುದರಿಂದ ಕೊಂಡು ಕೊಳ್ಳುವವರಿಗೆ ಸಹ ತೊಂದರೆಯಾಗುತ್ತದೆ. ಆದ್ದರಿಂದ ರೇಷ್ಮೆ ಮೇಲೆ ತೆರಿಗೆಯನ್ನು ತೆಗೆದಿರುವುದನ್ನು ಸಮರ್ಥಿಸುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಕಚ್ಚಾ ರೇಷ್ಮೆ ಮೇಲೆ ಇದುವರೆಗೂ ತೆರಿಗೆ ಇರಲಿಲ್ಲ. ಥ್ರೋನ್ ಸಿಲ್ಕ್ ಮೇಲೆ ತೆರಿಗೆ ಇರಬೇಕು, ಅದರಿಂದ ಲಾಭ ಬರುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಥ್ರೋನ್ ಸಿಲ್ಕ್ ಮೇಲೆ ಏಕೆ ತೆರಿಗೆ ಇರಬೇಕು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಕೆ. ಎಂ. ನಾಗಣ್ಣ.—ಇದನ್ನು ತೆಗೆಯುವುದರಿಂದ ಬಡಜನಗಳಿಗೆ ಅನುಕೂಲವಾಗುವುದಿಲ್ಲ ಎನ್ನುವ ಒಂದೇ ಒಂದು ಕಾರಣದಿಂದ ಇರಬೇಕು. ಎರಡು ಲಕ್ಷ ನೇಕಾರರಿಗೆ ಸಹಾಯ ಮಾಡುವುದಕ್ಕೆ 12 ಲಕ್ಷ ರೂಪಾಯಿ ತೆಗೆಯುವ ಸಾಹಸವನ್ನು ಮಾಡದೆ ಕೇವಲ 50 ಮಂದಿ ವರ್ತಕರಿಗೆ ಸಹಾಯ ಮಾಡುವುದಕ್ಕೋಸ್ಕರ, ಅವರ ಮನವಿ ನಿಮಗೆ ಬಂದ ಮೇಲೆ ತೆರಿಗೆ ತೆಗೆಯುವ ತೀರ್ಮಾನ ಮಾಡಿದ್ದೀರಿ. ತೆರಿಗೆ ಕಳ್ಳರು ಅರ್ಜಿ ಹಾಕಿದ ಮೇಲೆ ಮುಖ್ಯ ಮಂತ್ರಿಗಳು ನಿಮಗೆ ರವಾನೆ ಮಾಡಿದರು. ಅದರ ಮೇಲೆ ಫೈಲ್ ಬಿಲ್ಡ್ ಅಪ್ ಮಾಡಿ ಟ್ಯಾಕ್ಸ್ ತೆಗೆಯುವ ಪ್ರಯತ್ನ ಮಾಡಿದ್ದೀರಿ. ನಾವೆಲ್ಲ ಜನಗಳ ಪ್ರತಿನಿಧಿಗಳು.

Sri M. Y. GHORPADE.—If the removal of this tax will have any adverse affect on any section of the Silk industry, I am prepared to accept the point of the hon. member, and again to reintroduce it. My own feeling is that the thrown silk industry will grow if we remove this tax.

ಶ್ರೀ ಕೆ. ಎಂ. ನಾಗಣ್ಣ.—ತೆರಿಗೆ ತೆಗೆಯುವುದಕ್ಕೋಸ್ಕರ ಕೆಲವು ಜನ ಮಧ್ಯವರ್ತಿಗಳು ಲಕ್ಷಾಂತರ ರೂಪಾಯಿ ಹೊಡೆದಿದ್ದಾರೆನ್ನುವ ಬಹಳ ಗುರುತರವಾದ ಆಪಾದನೆಯನ್ನು ಜವಾಬ್ದಾರಿಯಿಂದ ಮಾಡುತ್ತಿದ್ದೇನೆ. ಅದಕ್ಕೆ ಸಿ.ಬಿ.ಐ. ನಿಂದ ಪ್ರೋಬ್ ಆಗಲಿ. ನೀವು ಸತ್ಯವಂತರು ಎಂದು ಇತ್ಯರ್ಥವಾದರೆ ನಾನು ಹೇಳಿದ್ದು ತಪ್ಪು ಎಂದು ಒಪ್ಪಿಕೊಳ್ಳುತ್ತೇನೆ, ಅಮೇಲ ತೆರಿಗೆ ಹಾಕಬಹುದು, ಇನ್ನೂ ರಿಯಾಯಿತಿ ಬೇಕಾದರೂ ಕೊಡಿ. ನನ್ನ ಗುರುತರವಾದ, ಜವಾಬ್ದಾರಿಯುತವಾದ ಅಪಾದನೆ ಸರ್ಕಾರದ ಮೇಲೆ ಇರುವಾಗ ಅದನ್ನು ತೆಗೆಯುವುದಕ್ಕೆ ಹೇಗೆ ಒಪ್ಪುತ್ತೀರಿ ಎಂದು ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಸಿ.ಬಿ.ಐ. ನಿಂದ ಪ್ರೋಬ್ ಮಾಡಿಸುವುದಕ್ಕೆ ಒಪ್ಪಿದ್ದರು. ಅವರ ವರದಿ ಬಂದ ಮೇಲೆ ನಾನು ಹೇಳುವುದು ತಪ್ಪಾಗಿದ್ದರೆ ಕ್ಷಮಾಪಣೆ ಕೇಳುವುದಕ್ಕೆ ತಯಾರಾಗಿದ್ದೇನೆ, ಕೊಡುವ ಶಿಕ್ಷೆಗೆ ಒಪ್ಪುತ್ತೇನೆ.

Sri M. Y. GHORPADE.—Sir, I am saying that if I agree to this, then any good measure can be tabotised on the same ground. There fore, I cannot do it. Let the question of allegation be treated separately. The hon. member may raise the matter when the Chief Minister comes I have no objection.

Sri K. M. NAGANNA.—I have written to the Chief Mieister on 18th July 1972 for which he has replied. ಸಿ.ಬಿ.ಐ. ರಿಪೋರ್ಟ್ ಬರುವುದರೊಳಗೆ ಮಾಡುವುದಕ್ಕೆ ಏನು ಅವಸರ ? ಈ ಹೊತ್ತು ತೆಗೆಯುವುದು ಬೇಡ, ಕೆಲವು ದಿನ ಬಿಟ್ಟು ತೆಗೆಯಿರಿ ಎಂದರೆ ಏಕೆ ಅವಸರ ಮಾಡುತ್ತಿದ್ದೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ಹೊಸದಾಗಿ ತೆರಿಗೆ ಹಾಕುವುದಾಗಿದ್ದರೆ ಆಯವ್ಯಯ ಪಟ್ಟಿ ತಯಾರು ಮಾಡಿದ್ದೇವೆ. ನಿಲ್ಲಿಸಿದರೆ ಹಣಕಾಸಿನ ಆದಾಯ ಕಡಮೆ ಯಾಗುತ್ತದೆ, ತೊಂದರೆಯಾಗುತ್ತದೆ ಎಂದು ಹೇಳಬಹುದು ಬರತಕ್ಕ ಆದಾಯವನ್ನು ನಿಲ್ಲಿಸುವುದಕ್ಕೆ ಹೊರಟಿದ್ದೀರಿ. ಇರುವ ತೆರಿಗೆಯನ್ನು ತೆಗೆಯತಕ್ಕ ವಿಚಾರದಲ್ಲಿ ಸ್ವಲ್ಪ ತಡ ಮಾಡಿದರೆ ಸರ್ಕಾರಕ್ಕೆ ಬರುವ ಆದಾಯ ಬರುತ್ತಿರುತ್ತದೆ. ಆದ್ದರಿಂದ ಏಕೆ ಇಷ್ಟೊಂದು ಗಡಿಬಿಡಿ ;

ಶ್ರೀ ಎಂ. ವೈ. ಘೋರ್ಪಡೆ.—ಸಿಲ್ಕ್ ಇಂಡಸ್ಟ್ರಿ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಯಾಗಬೇಕು ಎಂದು ಹೇಳುತ್ತಿದ್ದೇವೆ. Our actions must be consistent.

Sri KAGODU THIMMAPPA.—Leviying of sales tax on this was consistent throughout. Now the Minister fines it inconsistent–how !

ಶ್ರೀ ಸಿ. ಬೈರೇಗೌಡ.—ಸಿಲ್ಕ್ ಇಂಡಸ್ಟ್ರಿ ಮೇಲೆ ಯಾವ ವಿಧವಾದ ತೆರಿಗೆಯನ್ನೂ ಹಾಕಬಾರದು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಶಕ್ತಿ ಇರುವವರ ಮೇಲೆ ಟ್ಯಾಕ್ಸ್ ಹಾಕದೆ ಬಿಡುವುದಕ್ಕೆ ಸಾಧ್ಯವೇ ಎಂದೂ ಹೇಳಿದ್ದಾರೆ. ನಾನು ನೇರವಾದ ಒಂದು ಪ್ರಶ್ನೆ ಕೇಳುತ್ತೇನೆ, ರೇಷ್ಮೆ ಬೆಳೆಗಾರನಾಗಿ ನಾನು ಕೇಳುತ್ತಿದ್ದೇನೆ.

ನಾನು ರೇಷ್ಮೆ ಬೆಳೆಗಾರನಾಗಿ ಇಲ್ಲಿ ಕೇಳಬೇಕಾಗಿದೆ. ಇವೊತ್ತು ಇದರಲ್ಲಿ 60–70 ಜನ ಸಿಲ್ಕ್ ಮರ್ಚೆಂಟ್ಸ್‌ಗಳ ಅನುಕೂಲಕ್ಕಾಗಿ ಇಲ್ಲಿ ತೆರಿಗೆ ಹಾಕಬಾರದು ಎಂದು ಬಿಲ್ಲು ತಂದಿದ್ದೀರಿ. ಅದರ ರೇಷ್ಮೆ ಬೆಳೆಯುವ ರೈತರಿಗೆ ವಾಟರು ರೇಟು ಒಂದು ಎಕರೆಗೆ 60–70 ರೂಪಾಯಿಗಳಿನಂತೆ

(ಶ್ರೀ ಸಿ. ಬೈರೇಗೌಡ)

ಹಾಕಿದರೆ ಇದು ರೇಷ್ಮೆ ಇಂಡಸ್ಟ್ರಿ ಮೇಲೆ ತೆರಿಗೆ ಹಾಕಿದಂತಾಗಲಿಲ್ಲವೇ. ರೇಷ್ಮೆ ಬಟ್ಟೆಯ ಮೇಲೆ ಈ ತೆರಿಗೆ ಬೀಳುವುದಿಲ್ಲವೇ ? ಇಂತಹ ಸುಂಕವನ್ನು ಬೆಳೆಗಾರರ ಮೇಲೆ ಹಾಕಿರುವಾಗ ಇದರಲ್ಲಿ ಈ ವರ್ತಕರನ್ನೇಕೆ ಬಿಡಬೇಕು. ಇದು ಹೇಗಿದೆ ಎಂದರೆ ಕಳ್ಳನಿಗೆ ಒಂದು ಪಿಳ್ಳೇ ನೆಪ ಎನ್ನುವಂತೆ ನೀವು ಮಾಡಲು ಹೊರಟಿದ್ದೀರಿ. ಯಾರದೋ ಪ್ರಭಾವಕ್ಕೋಸ್ಕರ ಇದನ್ನು ಇಲ್ಲಿ ತೆಗೆಯುತ್ತಿದ್ದೀರಿ ಎನ್ನುವುದು ಇದರಿಂದ ಅರ್ಥವಾಗುತ್ತದೆ. ಯಾರಿಗೋ ಲಾಭ ಮಾಡಲು ಅನುಕೂಲ ಮಾಡಿ ಬಡ ರೈತರ ಮೇಲೆ ಹೆಚ್ಚು ಪಾಟರು ರೇಟು ಎಂದು ಹಾಕಿರುವುದನ್ನು ಏಕೆ ತೆಗೆಯಬಾರದು ? ಇದರಲ್ಲೇನು ನ್ಯಾಯವಿಲ್ಲವೇ ?

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ರೇಷ್ಮೆ ಮಂತ್ರಿಗಳಾದ ಶ್ರೀ ನಗರಾಳ್‌ರವರು ಕೂಡ ಇಲ್ಲದ್ದಾರೆ ಅವರಿಗೆ ಕೂಡ ಇದರ ಬಗ್ಗೆ ಮನವಿ ಕೊಟ್ಟಾಗ ಇದನ್ನು ಅವರೂ ಕೂಡ ಮೊನ್ನೆ ಇಲ್ಲಿ ಒಪ್ಪಿಕೊಂಡರು, ಇದು ಬಡಜನರಿಗೆ ಅನುಕೂಲವಾಡುವುದು ಇದನ್ನು ಪರಿಶೀಲನೆ ಮಾಡಬೇಕು ಎಂದೂ ಹೇಳಿದರು. ಇದರ ಬಗ್ಗೆ ಏನು ರೆಪ್ರಸೆಂಟೇಷನ್ ಬಂದಿದೆ ಅದನ್ನು ಇಲ್ಲಿ ತಂದು ನಾಳೆ ಈ ಸಭೆಗೆ ಕೊಡಲಿ. ಬೇಕಾದರೆ ಅವರಿಗೆ ಸ್ವಲ್ಪ ಕಾಲ ಕೊಡಿ.

ಶ್ರೀ ಎಸ್. ಬಿ. ನಾಗರಾಳ್.—ಮಾನ್ಯ ಸದಸ್ಯರು ಹೇಳಿದಂತೆ ನಾಳೆ ಬೇಕಾದರೆ ಅದನ್ನು ತರಿಸಿಕೊಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಈಗಲೇ ತಮ್ಮ ಆಫೀಸಿನಿಂದ ತೆಗೆದುಕೊಂಡು ಬನ್ನಿ.

ಶ್ರೀ ಎಸ್. ಬಿ. ನಾಗರಾಳ್.—ಆಗಲಿ, ಅದನ್ನೂ ತರಿಸಿಕೊಡುತ್ತೇನೆ.

ಉಪಾಧ್ಯಕ್ಷರು.—ಇದರಲ್ಲಿ ಮಾನ್ಯ ಸದಸ್ಯರು ಉದ್ವೇಗವಾಗಿ ಮಾತನಾಡಲು ಅವಕಾಶವಿಲ್ಲ. ಆದಾಗೂ ಮಾನ್ಯ ಸದಸ್ಯರಾದ ಶ್ರೀ ನಾಗಣ್ಣನವರು ಹಾಗೆ ಮಾತನಾಡುತ್ತಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ.—ಕಳ್ಳರಿಗೆ ಏಕೆ ರಿಯಾಯಿತಿಗಳನ್ನು ಕೊಡಬೇಕು ಎನ್ನುವುದಕ್ಕಾಗಿ ಸಂಕಟಪಡಬೇಕಾಗಿದೆ. ಸರಕಾರದವರು ಅವೆನ್ಯೂ ರೋಡಿನಲ್ಲಿರುವ ನಲವತ್ತು ಜನ ವರ್ತಕರುಗಳಿಗೆ ಎಂದು ಇಲ್ಲಿ ತೆರಿಗೆ ರದ್ದು ಮಾಡುತ್ತೀರಾ ?

Mr. DEPUTY SPEAKER.—This sort of encounter is not permissible in the House.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀ ನಾಗಣ್ಣನವರು ವೇಗ್ ಅಲಿಗೇಷನ್‌ಗಳ ಮೇಲೆ ರಿಲೈ ಮಾಡುವವರಲ್ಲ. ಆಧಾರ ಸಹಿತವಾಗಿ ಇದರಲ್ಲಿ ಮೋಸವಾಗಿದೆ, ಇದರಲ್ಲಿ ಯಾರೋ ಕೆಲವರು ಆಸಕ್ತಿ ವಹಿಸುತ್ತಿದ್ದಾರೆ ಮತ್ತು ಅವರು ಕೊಡುವ ಅಪಾದನೆಗಳನ್ನು ರುಜುವಾತು ಮಾಡುತ್ತೇವೆಂದೂ ಶ್ರೀ ನಾಗಣ್ಣನವರು ಇಲ್ಲಿ ಹೇಳಿದ್ದಾರೆ.

Mr. DEPUTY SPEAKER.—He has made that allegation which will appear in the news papers. I am very serious that the matter should be inquired into by the best possible authority.

Sri H. M. CHANNABASAPPA.—The issues are very clear. The Bill is before the House. Giving assent to the Bill or refusing assent is one issue and the objections raised and the charges made by the hon. member Sri Naganna and supported by good number of friends on the other side, is another issue. Now it is for this House to take a decision on the merits of the case. This one issue has got to be closed. The question of allegation that has been made is another issue which will have to be dealt with in accordance with the decision of this House. Therefore it would not be correct to mix up the issues and proceed in a haphazard manner or in a confused manner. So, I would appeal that the Bill may be dealt with on its merits. This is number one. The allegation made by the hon. member Sri Naganna, I do not

want to underwrite the importance of the allegations made as the Hon. Chief Minister has himself said on the floor of this House sometime ago, that may be dealt with separately.

ಶ್ರೀ ಕಾಗೋಡು ತಿಮ್ಮಪ್ಪ.—ಇಷ್ಟು ಜವಾಬುದಾರಿಯುತವಾಗಿ ಅಪಾದನೆಗಳನ್ನು ಉದ್ದೇಶ ಪೂರ್ವಕವಾಗಿ ಮಾಡುತ್ತಿಲ್ಲ. ಅವರು ಹೇಳುವ ಮಾತುಗಳಿಗೇ ಗೌರವ ಕೊಡುತ್ತಿಲ್ಲ ಹೀಗಾದರೆ ನಾವು ಏನು ಹೇಳಬೇಕು ? ಇಲ್ಲದೇ ಇರುವ ಮಾತುಗಳನ್ನು ಇಲ್ಲಿ ಹೇಳುತ್ತಾರೆನ್ನುವ ಅರ್ಥ ಬರುತ್ತದೆ.

Mr. DEPUTY SPEAKER.—You have to obey the decision of the House.

Sri H. M. CHANNA BASAPPA.—I am sorry, I do not say that we will cold-storage it. The matter that has been referred to b. hon. member Sri Naganna will definitely be looked into and such action as may be necessary to find the truth or otherwise, will be taken.

† ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ನಾಗಣ್ಣನವರ ಬಗ್ಗೆ ನಮಗೆಲ್ಲಾ ತುಂಬಾ ಗೌರವವಿದೆ ಮತ್ತು ಅವರು ಹೇಳುವ ಮಾತುಗಳನ್ನೆಲ್ಲಾ ಬಹಳ ಜವಾಬುದಾರಿಯಿಂದಲೇ ಹೇಳಿದ್ದಾರೆಂದು ತಿಳಿದುಕೊಳ್ಳೋಣ. ನಮ್ಮ ಅರ್ಥ ಮಂತ್ರಿಗಳು ಶ್ರೀ ನಾಗಣ್ಣನವರು ಹೇಳಿದ ವಿಚಾರಗಳ ಬಗ್ಗೆ ಅವರೇನೂ ಅಲ್ಲಗಳೆದಿಲ್ಲ, ಈಗ ನೀವು ಈ ಬಿಲ್ಲನ್ನು ಪಾಸು ಮಾಡದೆ ಇದ್ದರೆ ಅದರಿಂದ ನೀವು ಗೆದ್ದಿರಿ ಎಂದು ತಿಳಿಯಬಹುದು. ಆದರೆ ಈ ಸೇಲ್ಸ್ ಟ್ಯಾಕ್ಸ್‌ನಂತಹ ಬಿಲ್ಲುಗಳು ಮೊದಲಿಂದಲೂ ಬರುತ್ತಿವೆ. ಶ್ರೀ ಮಂಜುನಾಥರವರು ಇಲ್ಲಿ ಆಗಲೇ ಹೇಳಿದ ಹಾಗೆ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲವಿದ್ದಾಗಲೂ ಬಂದಿತ್ತು. ಆ ನಂತರ ಹೈಕೋರ್ಟ್ ಡಿಸಿಷನ್‌ಗಳಾಗಿ ಎಷ್ಟೋ ಕೇಸುಗಳಲ್ಲಿ ಸರಕಾರ ವಾಪಸು ಕೂಡ ಕೊಡಬೇಕಾಗಿ ಬಂತು. ಇದು ಎಲ್ಲರಿಗೂ ತಿಳಿದಿರುವ ವಿಚಾರ. ಎಷ್ಟೋ ಜನ ಲಕ್ಷಾಂತರ ರೂಪಾಯಿಗಳನ್ನು ಪಡೆದರು, ಇದರ ಮೇಲೆ ಸುಪ್ರೀಂ ಕೋರ್ಟ್ ಡಿಸಿಷನ್‌ಗಳೂ ಕೂಡ ಆದವು. ನೀವು ಹೇಳತಕ್ಕ ವಿಚಾರದಲ್ಲಿ ಈ ಭಾಗದಲ್ಲಿ ಇರುವವರಿಗಾಗಲೀ ಆ ಭಾಗದಲ್ಲಿರುವವರಿಗಾಗಲೀ ಏನೂ ವ್ಯತ್ಯಾಸಗಳಿಲ್ಲ. ಆದರೆ ಇಂದು ಬಿಲ್ಲಿನಲ್ಲಿರುವ ಟಾಕ್ಸನ್ನು ತೆಗೆದರೆ ನಾಳೆ ದಿನ ಮತ್ತೆ ಸರಕಾರವೇ ಒಂದು ಬೇರೆ ನೋಟಿಫಿಕೇಷನ್ ತಂದು ಮತ್ತೆ ಹಾಕಲು ಅವಕಾಶವಿದೆ. ಯಾವಾಗ ಬೇಕಾದರೂ ಸೇಲ್ಸ್ ಟ್ಯಾಕ್ಸ್ ಹಾಕಲು ತರಬಹುದು, ಇನ್ನು ಎರಡು ತಿಂಗಳಾದ ನಂತರ ಇದನ್ನು ಬದಲಾವಣೆ ಮಾಡಿ ತರಲು ಅವಕಾಶವಿದೆ.

5-00 P.M.

ಮಾನ್ಯ ಅರ್ಥಿಕ ಮಂತ್ರಿಗಳು ಹೇಳಿದ್ದೇನೆಂದರೆ, ಟೆಕ್ನಿಕಲಿ ಎಕ್ಸಾಮಿನ್ ಮಾಡಿದ್ದರಲ್ಲಿ ಈ ಟ್ಯಾಕ್ಸ್ ಇರುವುದು ಸರಿಯಲ್ಲ ಮತ್ತು ಈ ಟ್ಯಾಕ್ಸಿನಿಂದ ಸಿಲ್ಕ್ ಇಂಡಸ್ಟ್ರಿ ಮುಂದುವರೆಯುವುದರ ಬದಲು ಕುಂಠಿತವಾಗುತ್ತದೆಂದು ಹೇಳಿದರು. ಆದಕಾರಣ ತಾವು ಎರಡನ್ನೂ ಬೆರಕೆ ಮಾಡಬೇಡಿ. ತಾವು ಹೇಳಿದ್ದನ್ನು ಎನ್‌ಕ್ವೈರಿ ಮಾಡೋಣ. ಈಗ ಪಾಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಕೆ. ಎಂ. ನಾಗಣ್ಣ.—ಮುಂದೆ ಬೇಕಾದರೆ ನೋಟಿಫಿಕೇಷನ್ ಹೊರಡಿಸುವುದರ ಮೂಲಕ ಬದಲಾವಣೆ ಮಾಡಬಹುದೆಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಹಿಂದೆ ನಾನು ಈ ವಿಷಯವನ್ನು ಹಲವಾರು ಸಲ ಪ್ರಸ್ತಾಪ ಮಾಡಿದ್ದೇನೆ. ಆದರೆ ಈಗ ಇದನ್ನು ಬೇರೆ ರೂಪದಲ್ಲಿ ತಂದಿದ್ದಾರೆ. ಈಗ ಪಾಸ್ ಮಾಡುವುದನ್ನು ನಾಳೆ ಮಧ್ಯಾಹ್ನ ಒಂದು ಗಂಟೆಯವರೆಗೆ ಮುಂದಕ್ಕೆ ಹಾಕಿ ; ಮಾನ್ಯ ಅರ್ಥಿಕ ಮಂತ್ರಿಗಳು ಒಂದು ಗಂಟೆಯ ಕಾಲ ನಾಳೆ ಬೆಳಿಗ್ಗೆ ನನ್ನ ಜೊತೆಯಲ್ಲಿ ಬರಲಿ, ಅಲ್ಲಿ ಬಡವರಿಗೆ ಆಗುತ್ತಿರುವ ಅನ್ಯಾಯವನ್ನು ತೋರಿಸಿಕೊಡುತ್ತೇನೆ ; ಆಗಲಾದರೂ ಅವರಿಗೆ ಸತ್ಯಾಂಶ ತಿಳಿದುಬರುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಇದು ಬಡವರ ಮತ್ತು ಶ್ರೀಮಂತರ ಪ್ರಶ್ನೆಯಲ್ಲ. ಇದು ಸಿಲ್ಕ್ ಇಂಡಸ್ಟ್ರಿಯ ಪ್ರಶ್ನೆಯಾಗಿದೆ.

ಶ್ರೀ ಕೆ. ಎಂ. ನಾಗಣ್ಣ.—ಈ ಬಿಲ್ ಪಾಸಾಗುವುದಕ್ಕೆ ಮಾತ್ರ ನಾವು ಬಿಡುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಸಿಲ್ಕ್ ಇಂಡಸ್ಟ್ರಿಯ ಮೇಲೆ ಯಾವ ರೀತಿಯಿಂದಲೂ ಟ್ಯಾಕ್ಸ್ ಹಾಕುವುದು ಸರಿಯಲ್ಲ ಎಂದು ಹೇಳುವುದಾದರೆ ರೇಷ್ಮೆ ಬೆಳೆಯನ್ನು ಬೆಳೆಯುವ ರೈತರ ಮೇಲೆ ಹಾಕಿರುವ ಟ್ಯಾಕ್ಸ್‌ನ್ನು ತೆಗೆಯಲಿ. ಈಗ ಒಂದು ಎಕರೆಗೆ 50ರಿಂದ 60 ರೂಪಾಯಿಗಳವರೆಗೆ ಟ್ಯಾಕ್ಸ್ ಹಾಕಿದ್ದಾರೆ. ಅದನ್ನು ಮೊದಲು ತೆಗೆಯಲಿ.

ಶ್ರೀ ಎಂ. ವೈ. ಘೋರ್ಪಡೆ.—ರೈತರಿಗೆ ವಿದ್ಯುಚ್ಛಕ್ತಿ, ನೀರು, ಗೊಬ್ಬರ ಎಲ್ಲವನ್ನೂ ಉಚಿತವಾಗಿ ಕೊಡಬೇಕೆಂದು ಹೇಳುವುದರಲ್ಲಿ ಏನು ಅರ್ಥವಿದೆ? ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಿದ್ಧವೀರಪ್ಪನವರು ಮತ್ತು ಮಾನ್ಯ ಚನ್ನಬಸಪ್ಪನವರು ಏನು ಮನವಿ ಮಾಡಿದ್ದಾರೆ ಅದನ್ನು ಒಂದು ಷರತ್ತಿಗೊಳಪಟ್ಟು ಒಪ್ಪಿಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ಏನೆಂದರೆ ಮಾನ್ಯ ನಾಗಣ್ಣನವರು ಮಾಡಿದಂತಹ ಆಪಾದನೆ ಇದೇನು ಪ್ರಥಮ ಬಾರಿಯಲ್ಲ; ಮೂರನೆಯ ಸಲ ಮಾಡಿದ್ದಾರೆ. ಆದಕಾರಣ ಆ ಬಗ್ಗೆ ಸಿ. ಬಿ. ಐ.ಯಿಂದ ತನಿಖೆ ಮಾಡಿಸುತ್ತೇವೆಂದು ಹೇಳಿ ನಂತರ ಬಿಲ್ ಪಾಸ್ ಮಾಡಬಹುದು. If the Government agree to C B.I, probe, we are prepared to concede to the request of the Government. Let that assurance be given categorically.

Sri H. M. CHANNABASAPPA.—I would like to make it very clear that it is not the intention of the Government to disrespect or taking it lightly any of the views expressed by the Leader of the Opposition particularly by Sri Naganna. I would like to assure this House that this matter will be looked into.

ಶ್ರೀ ವಾಟಾಳ್ ನಾಗರಾಜ್.—ತಾವು ಸಮಯಕ್ಕೆ ತಕ್ಕ ಹಾಗೆ ಯಾವ ರೀತಿ ಭಾಷೆ ಉಪಯೋಗ ಮಾಡುತ್ತೀರಾ ಎಂಬುದನ್ನು ನಾವು ಮರೆತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಬಹಳ ಜಾಣ್ಮೆಯಿಂದ ಮಾತನಾಡುತ್ತಿದ್ದೀರಿ. ಮಾನ್ಯ ನಾಗಣ್ಣನವರು ಜವಾಬ್ದಾರಿಯುತವಾದಂಥ ಆಪಾದನೆ ಮಾಡಿದ್ದಾರೆ ಮತ್ತು ಇನ್ನೊಂದು ಸದನದ ಒಬ್ಬರು ಸದಸ್ಯರನ್ನೊಳಗೊಂಡಂತೆ ಅವರು ಆಪಾದನೆ ಮಾಡಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರದವರು ಮಾಡಿಸುವ ತನಿಖೆಯಿಂದ ನಮಗೆ ನಂಬಿಕೆ ಬರುವುದಿಲ್ಲ. ಆದಕಾರಣ ಸಿ. ಬಿ. ಐ. ಯಿಂದ ತನಿಖೆ ಮಾಡಿಸುತ್ತೇವೆಂದು ತಾವು ಒಪ್ಪಿಕೊಳ್ಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎನ್‌ಕ್ವೈರಿ ಮಾಡಿಸಬೇಕಾದರೆ ಸರ್ಕಾರದ ಮನಸ್ಸಿಗೆ ಸಮರ್ಪಕವಾಗಿದೆ ಎಂದು ಕಾಣಿಸಬೇಕು, ನೋಡಿದವರು ಎನ್‌ಕ್ವೈರಿ ಮಾಡಿಸುವುದು ನ್ಯಾಯ ಎಂದು ಒಪ್ಪಬೇಕು ಮತ್ತು ನ್ಯಾಯವಾಗಿದೆ ಎಂದು ಕಣ್ಣಿಗೆ ಕಾಣಿಸಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಪ್ರತ್ಯಕ್ಷವಾದರೂ ಪರಾಂಬರಿಸಿ ನೋಡಬೇಕೆಂದು ತಿಳಿದವರು ಹೇಳುತ್ತಾರೆ. ಆದ್ದರಿಂದ ತಾವು ಉಚಿತವಾದ ಶಬ್ದಗಳನ್ನು ಉಪಯೋಗಿಸಬೇಕೇ ಹೊರತು ಪಾಲಿಶ್ಡ್ ಲಾಂಗ್ವೇಜನ್ನು ಉಪಯೋಗ ಮಾಡಬಾರದು.

Sri H. M. CHANNABASAPPA.—I am not known for polished language. I can assure you that the serious allegation that has been made by the responsible member must be looked into with all seriousness. The Government will not disrespect such a proposition made by the Hon. Member. I would submit on behalf of the Government that the matter which has been referred to the Chief Minister some time back with some letters will definitely be taken up and take such action as it deems fit. So I request that the issues should not be clubbed and let us treat this issue.. ...

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಉತ್ತರದಿಂದ ನಾವು ತೃಪ್ತರಾಗುವುದಕ್ಕೆ ತಯಾರಿಲ್ಲ. ಮುಖ್ಯಮಂತ್ರಿಗಳು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ನೆನ್ನೆಯಿಂದ ಅವರು ಸಭೆಗೆ ಬಂದಿಲ್ಲ. ಪ್ರತಿಯೊಂದಕ್ಕೂ ತಾವೇ ಉತ್ತರ ಕೊಡುತ್ತಿದ್ದೀರಿ. ಇದು ಬಹಳ ಮುಖ್ಯವಾದ ವಿಷಯವಾದ್ದ

ರಿಂದ ಅವರನ್ನು ಕರೆಸಬೇಕು ; ನಾವು ಈ ರೀತಿಯ ಅಲಿಗೇಷನ್ ಮಾಡುತ್ತೇವೆಂದುಕೊಂಡು ಅವರು ಬಂದಿಲ್ಲವೆಂದು ಕಾಣುತ್ತದೆ. ಎಂ.ಪಿ.ಸಿ.ಸಿ.ಯಲ್ಲಿ ಗಲಾಟೆಯಾದ ಮೇಲೆ. * * * *

ಉಪಾಧ್ಯಕ್ಷರು.—ರೆಕಾರ್ಡ್ ಮಾಡಬೇಡಿ. The h n. Member is simply standing and talking something. I am very sorry to say this. He must also use good language. ಕರೆಯಿರಿ ಕರೆಯಿರಿ ಎಂದರೆ ಎಲ್ಲಿಂದ ಕರೆಯಬೇಕು ?

ಶ್ರೀ ವಾಟಾಳ್ ನಾಗರಾಜ್.—ಸ್ವಲ್ಪ ದಯಮಾಡಿ ನಾವು ಹೇಳುತ್ತಿದನ್ನು ತಾವು ಕೇಳಬೇಕು. ನಾವು ಇಲ್ಲಿ ಹುಡುಗಾಟ ಆಡುವುದಕ್ಕೆ ಬಂದಿಲ್ಲ. ಜವಾಬ್ದಾರಿ ಹೊತ್ತು ಬಂದಿದ್ದೇವೆ, ಮುಖ್ಯಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆಂದು ಕೇಳುವುದಕ್ಕೆ ನಮಗೆ ಅಧಿಕಾರವಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಾಯಿಂಟ್ ಆಫ್ ಆರ್ಡರ್. ಮುಖ್ಯಮಂತ್ರಿಗಳೇ ಆಗಲೀ, ಬೇರೆ ಮಂತ್ರಿಗಳೇ ಆಗಲೀ, ಅವರವರ ಕೆಲಸವನ್ನು ನಿರ್ವಹಣೆ ಮಾಡುವಂತಹ ಕಾಲದಲ್ಲಿ ಅವರುಗಳು ಏನಾದರೂ ಇಲ್ಲವಿದ್ದರೆ ಅಂತಹ ಸಂದರ್ಭದಲ್ಲಿ ಎಲ್ಲಿ ಹೋಗಿದ್ದಾರೆಂದು ಕೇಳುವುದರಲ್ಲಿ ನ್ಯಾಯವಿದೆ ; ಆದರೆ ಬೇರೆ ಸಮಯದಲ್ಲಿಯೂ ಸಹ ಯಾರು ಇರುವುದಿಲ್ಲವೋ ಅಂತಹವರನ್ನು ಕುರಿತು ಅವರು ಎಲ್ಲಿ ಹೋಗಿದ್ದಾರೆ, ಇವರು ಎಲ್ಲಿ ಹೋಗಿದ್ದಾರೆ, ಮುಖ್ಯ ಮಂತ್ರಿಗಳು ಎಲ್ಲಿ ಹೋಗಿದ್ದಾರೆ ಎಂದು ಕೇಳುವುದರಲ್ಲಿ ಏನು ಅರ್ಥವಿದೆ ?

ಶ್ರೀ ವಾಟಾಳ್ ನಾಗರಾಜ್.—ಈ ಸಭೆ ನಡೆಯುತ್ತಾ ಇರುವಾಗ ಮಾನ್ಯ ಮುಖ್ಯ ಮಂತ್ರಿಗಳು ಮೈಸೂರಿಗೆ ಹೋಗುತ್ತಾರೆ. ದೆಹಲಿಗೆ ಹೋಗುತ್ತಾರೆ. ಇದು ಈ ಸಭೆಯ ಘನತೆ ಗೌರವದ ಪ್ರಶ್ನೆ ಇದೆ. ಮುಖ್ಯ ಮಂತ್ರಿಗಳು ಈ ಸಭೆಗೆ ಬರಬೇಕು ಎಂದು ನಾನು ಚಾರ್ಜ್ ಮಾಡುತ್ತಿದ್ದೇನೆ.

Sri H. M. CHANNABASAPPA.—You have got an inherent right, as a Member of the House to make any charge against not only the Chief Minister, but against the entire Ministry. There is no question of that. ಈ ವಿಷಯವನ್ನು ಒಂದು ಕಡೆ ಇಡಬೇಕು ಎಂದು ನಮಗೆ ಇಷ್ಟ ಇಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದನ್ನು ಬೇಕಾದರೆ ಒಂದು ಸ್ಪೆಷಲ್ ಇಷ್ಯೂ ಎಂದು ಅನುಮತಿ ತೆಗೆದುಕೊಂಡು ಚರ್ಚೆ ಮಾಡಬೇಕು ಎಂದರೆ ಅದಕ್ಕೆ ನನ್ನ ಅಡ್ಡಿ ಇಲ್ಲ. I have got only one point to say to my hon. friends who are urging that there must be a C. B. I. enquiry. The Central Bureau of Investigation is not within the jurisdiction of the State Government. It is within the jurisdiction of the Central Government.

Sri H. D. DEVE GOWDA.—You can refer the matter to the Central Bureau of Investigation.

Sri H. M. CHANNABASAPPA.—Even if this matter is referred to the Central Bureau of Investigation, they must again refer it to the Government of India and they must take their permission and there are various other things. It is not an organisation on which the Mysore Government has control. Therefore, even for that—to consider what you say—it requires some time. You cannot ask the Minister to make an announcement here and now.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀ ಸಿದ್ದವೀರಪ್ಪನವರು ಮತ್ತು ಚನ್ನಬಸಪ್ಪನವರು ಹೋಮ್ ಮಿನಿಸ್ಟರಾಗಿದ್ದವರು. ಅವರಿಗೆ ಅನುಭವ ಇದೆ. ಅವರ ಅನುಭವವನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಈಗ ನಾವು ಆ ಬಗ್ಗೆ ಸಿ. ಬಿ. ಐ. ಎನ್‌ಕ್ವೈರಿ ಆಗಬೇಕು ಎಂದು ಹೇಳಿದ್ದೇವೆ. ಆದ್ದರಿಂದ ಆ ಬಗ್ಗೆ ಸರ್ಕಾರದವರು ಏನು ಮಾಡಬೇಕೋ ಅದನ್ನು ಮಾಡಲಿ.

**** Matter not recorded as ordered by the Chair.

Sri H. SIDDAVEERAPPA.—For the sake of argument, the Central Government may say that is not a fit case to be investigated by the Central Bureau of Investigation.

ಶ್ರೀ ಕೆ. ಎಂ. ನಾಗಣ್ಣ.—ಈಗ ಮೊನ್ನೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತಂದಾಗ ಅದಕ್ಕೆ ಶ್ರೀಮಾನ್ ಚನ್ನಬಸಪ್ಪನವರು ಸೂಕ್ತವಾದ ಸಮಯದಲ್ಲಿ ಉತ್ತರ ಹೇಳುತ್ತೇನೆ ಎಂದು ಹೇಳಲಿಲ್ಲ, ತಕ್ಷಣ ಜವಾಬು ಕೊಟ್ಟರು. ಈಗ ನಾವು ಏನೇನು ಚಾರ್ಜ್ ಮಾಡುತ್ತಿದ್ದೇವೆ ಇದನ್ನು ಸಿ. ಬಿ. ಐ. ಮುಖಾಂತರ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಿದ್ದೇವೆ. ಆ ರೀತಿ ಮಾಡಿದರೆ ಸರ್ಕಾರಕ್ಕೆ ಏನು ಲುಕ್ಸಾನು ಆಗುತ್ತದೆ ?

Sri H. M. CHANNABASAPPA.—I can only speak on behalf of the Government of Mysore and within the limited powers I enjoy. I cannot speak for the Government of India. I submit this Government cannot appropriate the powers of the Government of India and assure this House that I will have it done by an agency which is not at the command of the State Government. The Government of Mysore will exercise its mind with all the sincerity and with all the seriousness that it demands and will have it done by an appropriate authority within the command of the State Government. The Government of Mysore has many agencies and has much power under the Constitution.

ಶ್ರೀ ಎಸ್. ಬಂಗಾರಪ್ಪ.—ನಮಗೆ ನಿಮ್ಮ ವ್ಯಾಖ್ಯಾನ ಬೇಕಾಗಿಲ್ಲ. ರಾಜ್ಯ ಸರ್ಕಾರದ ತೀರ್ಮಾನ ಆದಮೇಲೆ, ಕೇಂದ್ರ ಸರ್ಕಾರಕ್ಕೆ ಹೇಳುವುದಕ್ಕೆ ಬರುತ್ತದೆ- ಸಿ. ಬಿ. ಐ. ಗೆ ರೆಫರ್ ಮಾಡುವುದಕ್ಕೆ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ —ಈ ಸಭೆಯಲ್ಲಿ ಆದಂತಹ ತೀರ್ಮಾನದ ಪ್ರಕಾರ ಆ ಬಗ್ಗೆ ಸಿ. ಬಿ. ಐ. ವಿಚಾರಣೆ ಆಗಬೇಕು ಎಂದು ತಿಳಿಸಿದ ಮೇಲೆ ತಾವು ಸಿ. ಬಿ. ಐ. ಮುಖಾಂತರ ಇದನ್ನು ವಿಚಾರಣೆ ಮಾಡಿಸಬೇಕು. ಸಿ. ಬಿ. ಐ. ನವರು ಇದು ಫಿಟ್ ಕೇಸ್ ಅಲ್ಲ ಎಂದು ತಿಳಿಸಲಿ ಆಮೇಲೆ ಯೋಚನೆ ಮಾಡೋಣ.

ಶ್ರೀ ಬಿ. ಪುಟ್ಟಸ್ವಾಮಯ್ಯ —ಶ್ರೀಮಾನ್ ಚನ್ನಬಸಪ್ಪನವರು ಮತ್ತು ಶ್ರೀಮಾನ್ ಸಿದ್ಧವೀರಪ್ಪನವರು ಮಂತ್ರಿಮಂಡಲದಲ್ಲಿದ್ದು ಬೇರೆ ಮಂತ್ರಿಗಳು ಲಂಚತೆಗೆದುಕೊಳ್ಳುವುದನ್ನು ಡಿಫೆಂಡ್ ಮಾಡುತ್ತಿದ್ದಾರೆ. ನೀವೇಕೆ ಇಂಥಾ ಪಾಪದ ಕೆಲಸವನ್ನು ಮಾಡುತ್ತೀರಾ ? ನಿಮಗೆ ಇದು ನ್ಯಾಯವೇ ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಸಿರ್ಕ ಮೇಲೆ ಹಾಕಿರತಕ್ಕ ಮಾರಾಟ ತೆರಿಗೆಯನ್ನು ಮುಂದುವರಿಸಿದರೆ ಸರ್ಕಾರಕ್ಕೆ ಏನೂ ಲುಕ್ಸಾನು ಆಗುವುದಿಲ್ಲ. ಇದರಿಂದ ಸರ್ಕಾರಕ್ಕೆ ಲಾಭವೆ ಆಗುತ್ತದೆಯೇ ವಿನಾ ಲುಕ್ಸಾನು ಆಗುವುದಿಲ್ಲ. ಆದ್ದರಿಂದ ಇನ್ನು 6 ತಿಂಗಳು ಈ ತೆರಿಗೆಯನ್ನು ಮುಂದುವರಿಸಲಿ. ಆ ಮೇಲೆ ಯಾವುತ್ತು ಬೇಕಾದರೂ ತರಲಿ. ಇದರಿಂದ ಸರ್ಕಾರಕ್ಕೆ ಏನೂ ಲುಕ್ಸಾನು ಆಗುವುದಿಲ್ಲ.

Sri A. A. DESAI.—I am on a Point of Order.

Mr. DEPUTY SPEAKER.—There is no disorder to raise a Point of Order.

Sri A. A. DESAI.— Under Ruls 289, I have a Point of Order. "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply". That is what Rule 289 says. They are making allegations of incriminating nature without giving notice.

Mr. DEPUTY SPEAKER.--Against whom ?

Sri A. A. DESAI.—Against the Government or against a Minister. Allegations cannot be raised unless they give notice.

Mr. DEPUTY SPEAKER.—I have heard your Point of Order.

ಶ್ರೀ ಕೆ. ಶ್ರೀರಾಮುಲು.—ಸ್ವಲ್ಪ ಹೊತ್ತಿನ ಮೊದಲು ಮಾನ್ಯ ಪುಟ್ಟಸ್ವಾಮಿಯವರು ಮಂತ್ರಿಯವರು ಲಂಚ ತೆಗೆದುಕೊಂಡಿದ್ದಾರೆಂದು ಅಪಾದನೆ ಮಾಡಿದರು. ಈ ಸಭೆಯಲ್ಲಿ ಮಾನ್ಯ ಸದಸ್ಯರು ಜವಾಬ್ದಾರಿಯುತವಾದ ಮಂತ್ರಿಯವರ ಮೇಲೆ ಒಂದು ಲಂಚ ತೆಗೆದುಕೊಂಡಿದ್ದಾರೆಂಬ ಅಪಾದನೆಯನ್ನು ಮಾಡುವಾಗ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಬೇಡ ; ತಾವು ಹೊರಟು ಹೋಗಬಹುದು.

ಶ್ರೀ ಕೆ. ಶ್ರೀರಾಮುಲು.—ನಾನು ತಮ್ಮ ಅಭಿಪ್ರಾಯ ಕೇಳುವುದಕ್ಕೆ ಬಂದಿಲ್ಲ. ನಾನು ಕೇಳುವುದು, ಮಾನ್ಯ ಪುಟ್ಟಸ್ವಾಮಯ್ಯನವರಿಗೆ ಮಂತ್ರಿಯವರು ಲಂಚ ತೆಗೆದುಕೊಂಡಿದ್ದಾರೆ ಎಂಬುದನ್ನು ರುಜುವಾತು ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದರ ಬಗ್ಗೆ ವಿಚಾರಣೆ ಮಾಡಿದಾಗ ಅದನ್ನು ರುಜುವಾತು ಮಾಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಕೆ. ಶ್ರೀರಾಮುಲು.—ಅವರಿಗೆ ಈಗಲೇ ಅದನ್ನು ರುಜುವಾತು ಮಾಡತಕ್ಕ ಶಕ್ತಿ ಇದ್ದರೆ ಮಾಡಲಿ; ಇಲ್ಲದಿದ್ದರೆ ಅವರು ಹೇಳಿದ್ದನ್ನು ರಿಕಾರ್ಡಿನಿಂದ ತೆಗೆದು ಹಾಕಬೇಕು. ಮೂರನೆಯ ಪ್ರಶ್ನೆ ಏನೆಂದರೆ ಇದು ಎರಡೂವರೆ ಗಂಟೆ ಚರ್ಚೆಯಾಗಿದೆ. ಈಗ ನಾಗಣ್ಣನವರ ವಾದವನ್ನು ಅಲ್ಲಗಳೆಯಬೇಕೆಂದು ನನ್ನ ಅಭಿಪ್ರಾಯವಲ್ಲ. ಆದ್ದರಿಂದ ದಯವಿಟ್ಟು ಇದನ್ನು 31ನೇ ತಾರೀಕಿನ ವರೆಗೆ ತಡೆಹಿಡಿಯುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

Sri K. PUTTASWAMY.—Mr. Deputy Speaker, I did not like to intervene in this affair. Now that I find there is too much of digression, I have felt it my duty to intervene.

Mr. Deputy Speaker, Sri K. M. Naganna was kind enough to pass on to me copies of his letters to the Chief Minister and the Chief Minister's replies thereto, in reply to his allegations. The Chief Minister on August 7 has replied in the following terms which should set at rest any further controversy in this matter: It says:

> "I have made enquiries about your allegations; I find there is nothing to warrant your suspicion."

Sir in the light of this, I do not think we are justified in presuming that the Chief Minister has said that this enquiry may go on, that he has agreed for an enquiry. In the face of this letter, I am not prepared to swallow the statement that the Chief Minister has made the offer co enquire into this matter. And when the Chief Minister has made a statement, we will go by it. He may have some information, but on verification, the Chief Minister has found that there is no justification for Mr. Naganna to have this suspicion. Therefore, I would very much svggest that this matter should rest there and there should be no question of any offer of any enquiry or any such thing in this matter.

Mr. DEPUTY SPEAKER.—These letters and replies are in the hands of the Minister. It is for the Government to say so.

ಶ್ರೀ ಕೆ. ಎಂ. ನಾಗಣ್ಣ.—ನಾನು ಇದರ ಮೇಲೆ ಮಾತನಾಡುವಾಗ ಮುಖ್ಯಮಂತ್ರಿಯವರು ಖುದ್ದಾಗಿ ಇಲ್ಲಿ ಇದ್ದರು ಬಹುಶಃ ಮಾನ್ಯ ಪುಟ್ಟಸ್ವಾಮಿಯವರು ಇರಲಿಲ್ಲವೆಂದು ಕಾಣುತ್ತದೆ. ನಾನು ಮಾತನಾಡುತ್ತಿದ್ದಾಗ ಅವರು ಎನ್‌ಕ್ವಯರಿ ಮಾಡಿಸುತ್ತೇನೆ ಎಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಘೋರ್ಪಡೆಯವರು ಇದನ್ನು ಪಾಸ್ ಮಾಡುವುದಕ್ಕೆ ಮೊದಲು ಒಂದು ಎನ್‌ಕ್ವಾಯರಿಯಾಗಲಿ; ಆ ಮೇಲೆ ಇದನ್ನು ತೆಗೆದುಕೊಂಡು ಬನ್ನಿ.

Sri H. SIDDAVEERAPPA.—That will arise if we pass this Bill. ಇವತ್ತು ಈ ಬಿಲ್ ಪಾಸ ಮಾಡಿ ನಾಳೆ ಅದು ಸರಿಯಿಲ್ಲವೆಂದು ಕಂಡರೆ ನಂತರ ಎರಡು ತಿಂಗಳೊಳಗೆ ಅದನ್ನು ಬದಲಾವಣೆ ಮಾಡಬಹುದು.

ಶ್ರೀ ಕೆ. ಎಂ. ನಾಗಣ್ಣ.—ಇದನ್ನು ನಿಲ್ಲಿಸಿದರೂ ಆ ರೀತಿ ಮಾಡಬಹುದು. ಆದ್ದರಿಂದ ಇದನ್ನು ಸ್ವಲ್ಪ ದಿವಸ ನಿಲ್ಲಿಸುವುದರಿಂದ ಸರ್ಕಾರಕ್ಕೆ ಏನೂ ಲುಕ್ಸಾನು ಆಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಬಿಲ್ ಈ ಮನೆಯಲ್ಲಿ ತಂದರೆ, ಆ ಬಿಲ್ಲಿಗೆ ಸಂಬಂಧಪಟ್ಟ ಆಪಾದನೆಗಳು ಇದ್ದರೆ ಆ ಬಿಲ್ಲನ್ನು ಹಿಡಿದು ನಿಲ್ಲಿಸತಕ್ಕ ಕೆಟ್ಟ ಸಂಪ್ರದಾಯ ಇಲ್ಲಿ ಹಾಕತಕ್ಕದ್ದು ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮೊನ್ನೆ ಈ ಸಭೆಯಲ್ಲಿ ಒಂದು ಪೌರಾಡಳಿತ ಸಚಿವರಿಗೆ ಸಂಬಂಧಪಟ್ಟ ಬಿಲ್ ಚರ್ಚೆಯಾಗಿ ಪಾಸಾಗುವ ಸಂದರ್ಭದಲ್ಲಿ ತಡೆಹಿಡಿದ ಉದಾಹರಣೆ ಇದೆ. ಆದ್ದರಿಂದ ನಿಮಗೆ ಅನುಕೂಲವಾಗುವ ಸಂದರ್ಭ ಇದ್ದರೆ ಹಾಗೆ ಹೇಳುತ್ತೀರಿ; ಈಗ ಹೀಗೆ ಹೇಳುತ್ತಿದ್ದೀರಿ. ಈ ರೀತಿ ಮಾತನಾಡಿಕೊಂಡು ಹೋಗಬೇಡಿ. ಮಾನ್ಯ ಶ್ರೀರಾಮುಲು ಅವರು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾರೂ ಬೇಜವಾಬ್ದಾರಿಯುತವಾದ ಅರೋಪಣೆಯನ್ನು ಮಾಡುವುದು ಒಳ್ಳೆಯದಲ್ಲ, ನಾನು ಹೇಳುವುದೇನೆಂದರೆ, ಮಾನ್ಯ ನಾಗಣ್ಣನವರು ಆಪಾದನೆ ಮಾಡಿರುವುದು ಎರಡು ಲಕ್ಷ ರೂಪಾಯಿ ಹಣ ವಸೂಲು ಮಾಡಿ ಈ ತೆರಿಗೆಯನ್ನು ಮನ್ನಾ ಮಾಡಬೇಕೆಂದು ಸರ್ಕಾರದ ವಕ್ತಾರರು ಮಂತ್ರಿಯವರಿಗೆ ಕೊಡುವುದಕ್ಕೆ ಕಲೆಕ್ಟ್ ಮಾಡಿದ್ದಾರೆಂದು ಇರುವುದು. ಇದರ ಬಗ್ಗೆ ರಾಜ್ಯಸರ್ಕಾರದವರು ಎನ್‌ಕ್ವಾಯರಿ ಮಾಡುವುದು ಬೇಡ, ಇದನ್ನು ಸಿ. ಬಿ. ಐ. ಗೆ ರೆಫರ್ ಮಾಡಿ ಎನ್‌ಕ್ವಾಯರ್ ಮಾಡಲಿ ಎಂದು ಹೇಳಿದ್ದಾರೆ. ನಾಲ್ಕೈದು ದಿವಸಗಳ ಹಿಂದೆ ಮುಖ್ಯಮಂತ್ರಿಯವರು ಇದರ ಬಗ್ಗೆ ವಿಚಾರಣೆ ಮಾಡಿಸುತ್ತೇವೆಂದು ಹೇಳಿದ್ದಾರೆ.

Mr. DEPUTY SPEAKER.—Under the Rules, I have heard you sufficiently long. You refer to earlier speeches. Government have not come up with any proposal. I therefore have no option but to put the motion to the vote of the House.

The question is :—

"That the Mysore Sales Tax (Amendment) Bill 1973 be taken into consideration."

The motion was adopted

CLAUSE 2

Mr. DEPUTY SPEAKER.—I will now take up clause by clause. There is an amendment by Sri T. R. Shamanna to clause 2. He may move it.

Sri T. R. SHAMANNA.—Sir, I beg to move :

"That in clause 2 in sub-clause (1) after the words 'paddy' the words 'and rice' shall be inserted."

Mr. DEPUTY SPEAKER.—Amendment moved :

" That in clause 2 in sub-clause (1) after the word paddy' the words 'and rice' shall be inserted."

† Sri T. R. SHAMANNA'—Sir, the purpose of this amendment is that the Government with an intention to give relief to rice consumers, they have decided to remove paddy from the list of taxable goods. And this amendment relates to the subject - in addition to paddy, you give the same exemption to rice also. And now you say that paddy is not a taxable commodity as far as growers are concerned, because paddy grower is not a dealer. P rchase tax on paddy is levied and that tax is collected from mill-owners and wholesale dealers. Now this levy is left out and it will not give any benefit to the consumers but it will be an advantage to the wholesalers and mill-owners. If real benefit has to be given to the consumer, then the sales tax on rice has to be removed. It is with this object that I have moved this amendment. I want that the advantage that is being given to the millers and the wholesalers be extended to the consumere also by adding the words 'and rice.' I request that my amendment may be accepted.

5-30 P.M.

† Sri M. Y. GHORPADE.—I cannot accept this amendment. The intention is not to remove the tax on rice. We have removed the tax on paddy in the hope that the benefit will be passed on to the consumer. Let us see what is the resu t of the removel of this tax on paddy. There is a responsible Sales Tax Advisory Committee where responsible members of all important parties in this house are represented. They know full well that these things are being done scientifically and with a completely open mind. Government is not dogmatic about it. If we have done something wrong we are prepared to correct it or if we have not done something which we ought to do we are prepared to do it. The hon. Member Sri Shamanna knows it. He is also a member of that committee. We are watching the situation together. In view of this very effective body which is watching every item of taxation, I sincerly request my good friend Sri Shamanna to withdraw his amendment in view of this assurance.

Sri T. R. SHAMANNA.—In view of the assurance given by the Hon. Minister that due consideration will be given if we find that there is need for it, Iwithdraw my amendment.

Mr. DEPUTY SPEAKER.—Has the member leave of the House to withdraw it ?

Hon'ble Members—Yes.

Amendment by leave was withdrawn.

Mr. DEPUTY SPEAKER.—The question is :

"That Clause 2 do stand part of the Bill.".

The motion was adopted.

Clause 2 was added to the Bill

Clause 3

Sri M. Y. GHORPADE.—Sir, I beg to move:

"In sub-clause (2) of clause 3, in page 3, in line 14, in the entry relating to '123 Footwear,' for the words 'six per cent' the words 'four per cent' shall be substituted."

Mr. DEPUTY SPEAKER.—Amendment moved :

"In sub-clause (2) of clause 3, in page 3, in line 14, in the entry relating to '123 Footwear,' for the words 'six per cent' the words 'four per cent' shall be substituted.

The hon. Member Sri T. R. Shamanna may now move his amendment.

Sri T. R. SHAMANNA.—Sir, in view of the fact that Hon. Minister for Finance has moved an amendment seeking to reduce the tax on footwear from 6 per cent to 4 per cent, I do not like to move my amendment.

Mr. DEPUTY SPEAKER.—The question is :

"In sub-clause (2) of clause 3, in page 3, in line 14, in the entry relating to '123 Footwear', for the words 'six per cent' the words 'four per cent' shall be substituted."

The motion was adopted

Mr. DEPUTY SPEAKER.—I shall now put clause 3 to the vote of the House.

The Question is :

"That clause 3, as amended do stand part of the Bill."

The motion was adopted

Clause 3, as amended, was added to the Bill.

Clauses 4 and 5

Mr. DEPUTY SPEAKER.—As there are no amendments to clauses 4 and 5, I shall put them to the vote of the House.

Sri T. R. SHAMANNA.—Sir, I have withdrawn only my first amendment to clause 3 and I want to speak on the other two one of which is about the tractor-trailer.

Mr. DEPUTY SPEAKER.—The hon. Member said that he was withdrawing his amendments. Besides, I have put clause 3 to the vote of the House and it has been adopted by the House. So, I cannot help him at this stage.

SRI M. Y. GHORPADE.—Regarding trailer and all that, I request my hon. Friend to kindly bear with me. If there are any changes to be made, we can always make them subsequently. I have got that matter examined. I do not have sufficient material with me to come to a conclusion that the hon. Member is right. Therefore, I am not in a position to make any changes on those items today. Further, he can always convince me in our committee about the need for those changes. I shall consider them with an open mind.

SRI T. R. SHAMANNA.—The tractor-trailer is an article used by the farmers. I therefore wanted that it should not be taxed heavily.

MR. DEPUTY SPEAKER.—Since clause 3 is already adopted by the House, I shall now put clauses 4 and 5 to the vote of the House as there are no amendments to them.

The question is :-

"That clauses 4 and 5 do stand part of the Bill.

The motion was adopted

Clauses 4 and 5 were added to the Bill.

Clause 6

MR. DEPUTY SPEAKER.—We shall now take up clause 6.

(At this stage, the members of the Opposition walked towards the dais. The hon. Members Sri Vatal Nagaraj sat on the dais close to the Speaker and other members were standing near the Secretary's table and were shouting that they would not allow clause 6 to be passed.)

MR. DEPUTY SPEAKER.—There are two amendments to clause 6 which are of a negative nature and so I cannot accept them.

I therefore put clause 6 to the vote of the House.

(Amidst uproar the Deputy Speaker proceeded to put clause 6 to the vote of the House)

MR. DEPUTY SPEAKER.—The question is:

"That clause 6 do stand part of the Bill."

Continuons uproar

The motion was adopted

Clause 6 was added to the Bill.

(Amidst continuous uproar)

CLAUSE 1 ETC

Mr. DEPUTY SPEAKER.—The question is :

"That clause 1, the long Tittle, the Preamble and the Enacting Formula do stand part of the Bill."

(*Again amidst continuovs uproar*)

The motion was adopted and clause 1, the long title. the Preamble and the Enacting Formula were added to the Bill.

Motion to pass

Mr. DEPUTY SPEAKER.—I now call upon the Hon. Finance Minister to make the motion to pass.

Sri M. Y. GHORPADE.—Sir I beg to move:

"That the Mysore Sales Tax (Amendment) Bill, 1973 as amended, be passed."

Mr. DEPUTY SPEAKER.—The question is :

"That the Mysore Sales Tax (Amendment) Bill, 1973, as amended be passed."

The motion was adopted and the Bill was passed

ಶ್ರೀ ವಾಟಾಳ್ ನಾಗಾರಾಜ್.—ಸರ್ವಾಧಿಕಾರಕ್ಕೆ ಧಿಕ್ಕಾರ, ಅರಸು ಮಂತ್ರಿ ಮಂಡಲಕ್ಕೆ ಧಿಕ್ಕಾರ, ಎಚ್. ಟಿ. ರೆಡ್ಡಿ ಗೋವಿಂದ, ಗೋವಿಂದ, ನೊ, ನೊ, ನೊ,

(ಶ್ರೀ ಕಾಗೋಡು ತಿಮ್ಮಪ್ಪ, ಶ್ರೀ ಬಿ. ಪುಟ್ಟಸ್ವಾಮಯ್ಯ, ಶ್ರೀ ಕೊಣಂದೂರು ಲಿಂಗಪ್ಪ, ಶ್ರೀ ನಾಗಣ್ಣ, ಶ್ರೀ ಟಿ. ಆರ್. ಶಾಮಣ್ಣ, ಶ್ರೀ ಎಸ್. ಬಂಗಾರಪ್ಪ, ಹನುಮೇಗೌಡ, ಮತ್ತು ಶ್ರೀ ದೇವೇಗೌಡ, ಎಲ್ಲರೂ ಸೇರಿ, ನೊ, ನೊ, ನೊ, ಎಂದು ಜೋರಾಗಿ ಹೇಳುತ್ತಾ ಈ ಸರ್ಕಾರಕ್ಕೆ ಧಿಕ್ಕಾರ ಎಂದು ಕೂಗಿದರು)

Mr; DEPUTY SEAKER:—The House stands adjourned to meet tomorrow at 1 P.M:

The House adjourned at forty Minutes past Five of the Clock to meet again at One of the Clock on Thursday the 29th March 1973.

WD 20221—GPB—550—19-7-1974

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 29th March 1973/ Chaitra 8, 1895 S. E.

The House met in the Assembly Chamber, Vidhana Soudha, at One of the Clock.

Mr. DEPUTY SPEAKER (Sri. B. P. KADAM) in the Chair.

STARRED QUESTIONS

(to which oral Answers were given)

Bridge Across Krishna River at Gogul Village

45. SRI A. SHARANAPPA (Deodurg).—

Will the Minister of State for Major Irrigation be pleased to state :—

(*a*) whether it is a fact that most of Deodurg and Raichur and taluks of Raichur District, Shorapur, Shahpur and Jewargi taluks of Gulbarga District are coming under Upper Krishna Project ;

(*b*) if so, the area of each taluk ;

(*c*) whether there is any proposal before the Government for the construction of bridge over Krishna river at Gogul village in Deodurg Taluk, to facilitate communication and transportation of goods etc. ;

(*d*) if so, whether the same has been included in future programme ;

(*e*) when the Government intend to take preliminary steps in the matter ?

SRI H.N. NANJE GOWDA (Minister of state for Major Irrigation).—

(*a*) Yes.

(SRI H. N. NANJE GOWDA)

(*b*) *Upper Krishna Project.*—

(*i*) *Stage II*

Deodurg Taluk	...	2,27,205 acres
Raichur Taluk	...	1,14,580 acres

(*ii*) *Stage I*

Shorapur Taluk	...	2,36,000 acres
Shahpur Taluk	...	2,30,000 acres
Jewargi Taluk	...	2,58,000 acres

(*c*) No.

(*d*) Does not arise in view of reply to (*c*) above.

(*e*) When the finacial position of State permits.

ಶ್ರೀ ಎ. ಶರಣಪ್ಪ.—ತಾವು (ಅ) ಗೆ ಉತ್ತರವಾಗಿ ನಿಜ ಎಂದು ಹೇಳಿದ್ದೀರಿ. ಇದರ ಅಂಕಿ ಸಂಖ್ಯೆಗಳನ್ನು ನೋಡಿದರೆ ಸುಮಾರು 10 ಲಕ್ಷ ಎಕರೆಗೆ ಮೇಲ್ಪಟ್ಟು 12 ಲಕ್ಷ ಎಕರೆವರೆಗೆ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನಿಂದ ನೀರಾವರಿಯಾಗುತ್ತದೆ. ಈ ನೀರಾವರಿಕೆಲಸ ಮುಗಿಯುವುದರೊಳಗೆ ಗುಲ್ಬರ್ಗ ಡಿಸ್ಟ್ರಿಕ್ಟ್ ಮತ್ತು ರಾಯಚೂರು ಡಿಸ್ಟ್ರಿಕ್ಟಿನ ಸಂಪರ್ಕ ಬೆಳೆದು ಆಹಾರ ಧಾನ್ಯ ಸಾಗಿಸುವುದಕ್ಕೆ ಒಕ್ಕಲಿಗರಿಗೆ ಸೌಕರ್ಯ ಮಾಡಿಕೊಡಬೇಕು ಮತ್ತು ಇದೇ ಪ್ರಶ್ನೆಯ (ಇ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಇದು ಸೇತುವೆ ಆಗುವುದಕ್ಕೆ ಉತ್ತಮವಾದಂಥ ಸ್ಥಳ ಅಲ್ಲಿ ಹಾರ್ಡ್‌ರಾಕ್ ಇದೆ. ಅದನ್ನು ಫೌಂಡೇಷನ್‌ಗೆ ಉಪಯೋಗಿಸಿ ಕೊಳ್ಳಬಹುದು. ಆದುದರಿಂದ ಈ ಕೆಲಸವನ್ನು ತೆಗೆದುಕೊಂಡರೆ ಎಲ್ಲಾ ಭಾಗದ ಜನಗಳಿಗೂ ಅನುಕೂಲವಾಗುತ್ತದೆ; ಆ ರೀತಿ ಮಾಡುವುದು ಒಳ್ಳೆಯದಲ್ಲವೇ ?

† ಶ್ರೀ ಹೆಚ್. ಎನ್. ನಂಜೇಗೌಡ.—ಗೋಗುಳ ಗ್ರಾಮದ 20 ಮೈಲಿ ಕೆಳಗಡೆ ಒಂದು ಸೇತುವೆ ಇದೆ. ದೇವದುರ್ಗದ ಗ್ರಾಮದ ಮೇಲುಗಡೆ 15 ಮೈಲಿ ದೂರದಲ್ಲಿ ಇನ್ನೊಂದು ಸೇತುವೆ ಕಟ್ಟುತ್ತಿದ್ದಾರೆ. ಮುಂದೆ ತಾವು ಹೇಳಿದುದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎ. ಶರಣಪ್ಪ.—20 ಮೈಲಿ ದೂರದಲ್ಲಿ ಇರತಕ್ಕಂಥ ಸೇತುವೆ ಆಂಧ್ರ ಪ್ರದೇಶದ್ದು. ಅದು ನಮ್ಮ ಸ್ಟೇಟ್‌ನಲ್ಲಿ ಇದೆ. ಇನ್ನೊಂದು ಸೇತುವೆ ಕಟ್ಟುತ್ತಾ ಇರತಕ್ಕಂಥದ್ದು 15 ಮೈಲಿ ದೂರದಲ್ಲಿದೆ ಎಂದು ಹೇಳಿದರು. ಅದು ಸುಮಾರು 30 ಮೈಲಿ ದೂರದಲ್ಲಿದೆ. ಆದುದರಿಂದ ಇದಕ್ಕೆ ಪ್ರಾಧಾನ್ಯತೆ ಕೊಟ್ಟು ಇಲ್ಲಿ ಸೇತುವೆ ಆಗುವುದಕ್ಕೆ ಇನ್‌ವೆಸ್ಟಿಗೇಷನ್ ಮಾಡಿಸಿ ಎಸ್ಟಿಮೇಟ್ ಮತ್ತು ಪ್ಲಾನ್ ಹಾಕುವುದು ಒಳ್ಳೆಯದಲ್ಲವೇ !

ಶ್ರೀ ಹೆಚ್. ಎನ್. ನಂಜೇಗೌಡ.—ಈಗ ತಾವು ಆ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದೀರಿ. ಸರ್ಕಾರ ಆದನ್ನು ಆಲೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತದೆ.

Seva Sahakari Society at Angol

111. **Sri B. B. SAYANAK** (Belgaum).—

Will the Minister for Co-operation be pleased to state :—

(*a*) whether it has come to the notice of Government that there is a Seva Sahakari Society at Angol, in Belgaum taluk in Belgaum District ;

†Indicates that remarks or speeches have not been revised by the member concerned.

(*b*) if so, the number of shareholders in this society ;

(*c*) the number of shareholders who have purchased shares of Rs. 10 to Rs. 50 ;

(*d*) the number of Harijans who are shareholders ;

(*e*) who is the Chairman of the society ?

Sri A. SHANKARA ALVA (Minister for Co-operation).—

(*a*) Yes.

(*b*) 196 (as on 9-11-1972).

(*c*) Nil. (All 196 members have purchased shares worth Rs. 100 and above.

(*d*) Nil.

(*e*) Sri N. A. Hanamanavar.

Sri B. B. SAYANAK.—The population of the village is more than 15,000 and share-holders of this society are 196. These share-holders have now purchased shares of Rs. 100. Here you have said '100 and above' According to me, there is no 'above'. There is not a single share-holder who is having a share above Rs. 100. May I know whether the Government has given special concession to this society to have a share-holder to purchase the shares for Rs. 100 ?

Sri A. SHANKARA ALVA.—According to the bye-law of the society, if a man purchases one share, then loan is given to him to purchase ten more shares, and evidently, they must have made use of it and everybody has purchased 20 shares and become members.

Sri B. B. SAYANAK.—May I know whether it is a fact that not a single Harijan is a share-holder there, because, nobody is going to purchase shares of Rs. 100 ? May I know whether the Government is going to direct the society to take share-holders of any caste, who are going to purchase shares of 5 to 10 ?

Sri A. SHANKARA ALVA.—It has not come to notice that anybody has been refused membership but if there is any such thing, I will ascertain and see that proper directions are given.

Sri B. B. SAYANAK.—When this bye law that a man should purchase shares of 20 is passed by the Society, is it not the duty of the Assistant Registrar to direct the Society that this bye-law is against the Co-operative Societies Act ?

Sri A. SHANKARA ALVA.—I do not know whether this offends the Co-operative Societies Act. Any how, I will examine the matter.

ಶ್ರೀ ಜೆ. ಎಲ್. ಕಬಾಡಿ.—ಹರಿಜನರು ಯಾರಾದರು ಈ ಸೊಸ್ಶೈಟಿಗೆ ಮೆಂಬರ್ ಆಗಬೇಕಾದರೆ ಅವರಲ್ಲಿ ನೂರು ಪೈಸೇ ಹಣ ಕೊಡುವ ಶಕ್ತಿ ಇರುವುದಿಲ್ಲವೆಂದರು. ಆದಕಾರಣ ಸಮಾಜ ಕಲ್ಯಾಣ ಇಲಾಖೆಯಿಂದ 90 ಪರ್ಸಂಟ್‌ವರೆಗೆ ಸಹಾಯ ಕೊಟ್ಟು ಉಳಿದ ಹತ್ತು ಪರ್ಸಂಟನ್ನು ಹರಿಜನರು ಯಾರಾದರು ಹಾಕಿದರೆ ಒಂದು ಷೇರ್ ಕೊಡುವಂತೆ ಆ ಸೊಸ್ಶೈಟಿಯವರಿಗೆ ಆದೇಶ ಕೊಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಈ ಸೊಸೈಟಿಯಲ್ಲಿ ನಿಯಮದ ಪ್ರಕಾರ ಒಂದು ಷೇರ್ ತೆಗೆದು ಕೊಂಡರೆ ಸಾಲ ಕೊಡುವ ವ್ಯವಸ್ಥೆ ಇದೆ.

ಶ್ರೀ ಜೆ. ಎಲ್. ಕಬಾಡಿ.—ನನ್ನ ಪ್ರಶ್ನೆ ಅದಲ್ಲ ; ಹರಿಜನರಿಗೆ ಒಂದು ಷೇರ್ ಕೊಳ್ಳಲು ನೂರು ರೂಪಾಯಿ ಕೊಡುವ ಶಕ್ತಿ ಇರುವುದಿಲ್ಲ. ಆದ್ದರಿಂದ 90 ಪರ್ಸೆಂಟ್‌ವರೆಗೆ ಸಹಾಯವನ್ನು ಸದಸ್ಯರಾಗಬಯಸುವವರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅಪೇಕ್ಷೆ ಇದ್ದರೆ ತೆಗೆದುಕೊಳ್ಳಬಹುದು.

Sri B. B. SAYANAK.—When I brought this to the notice of the notice of the Managing Committee members they told me that if a direction comes from the Government, they are not going to allow any person to purchas the shares below Rs. 100. If that is the case, I request the Hon. Minister to direct the society to allow any person to purchase these shares below Rs. 100.

Sri A. SHANKARA ALVA. I will examine this matter ! I am not sure whether under the Act I can give directions.

Deaths Due to Cholera in Gurmitkal Constituency

132. Sri MALLIKARJUNA KHARGE (Gurmitkal).—

Will the Minister for Health be pleased to state:—

(a) the number of deths that occurred due to cholrea in Gurmikal Consituency of Gulbarga District ;

(b) the steps that Government has taken to stop the spread of Cholera in that area ?

Sri H. SIDDAVEERAPPA (Minister for Health).—

(a) 32.

(b) 41,518 anti-cholera inoculation have been performed in all the infected villages and their surroundings. All the available water sources have been chlorinated. Containment measures are in progress

Sri MALLIKARJUNA KHARGE.—Which are the places where these 32 deaths have occurred in Gurmitkal Constituency ?

† Sri H. SIDDAVEERAPPA.—These deaths have occurred in 31 villages out of 105 villages of that constituency. I havs not got the list of villages.

Sri MALLIKARJUNA KHARGE.—My specific point is, in how many villages these deaths have occurred ?

Sri H. SIDDAVEERAPPA.—I shall furnish the list.

Sri MALLIKARJUNA KHARGE.—What steps have Government taken to prevent further deaths in Gurmitkal constituency as well in Gulbarga District ?

Sri H. SIDDAVEERAPPA.—In fact, we have been taking lot of of precautions for the last several months. Most of the villages have been covered and inoculations have taken place. Now, in order to avoid possible out break of epidemics due to summer, we have already given so many mobile hospitals For each district we have given at the rate of two or three mobile hospitals and each such hospital is manned by two doctrs and other auxiliary staff. They go from village to village and wherever it is necessary they attend to the patients at the village level itself, instead of the patients going to the hospital. We have stocked the necessary medicines and injections and all other possible precautions have been taken.

ಶ್ರೀ ಆರ್.ಎಸ್. ಪಾಟೀಲ್ — ಈ ಕ್ಷೇತ್ರದಲ್ಲಿ 32 ಜನರು ಸತ್ತಿರಬೇಕಾದರೆ ಪರಿಸ್ಥಿತಿ ಉಗ ವಾಗಿ ರಬೇಕೆಂದು ಕಾಣುತ್ತದೆ, ಅಲ್ಲಿ ಕಾಲರಾ ಅಟ್ಯಾಕ್ ಆಗಿದೆ ಎಂದು ತಿಳಿದುಬಂದ ಎಷ್ಟು ದಿವಸ ಗಳಲ್ಲಿ ಕಾಲ ನಿರೋಧಕ ಸೂಜಿ ಮದ್ದುಗಳನ್ನು ಹಾಕಲು ಪ್ರಯತ್ನ ಮಾಡಲಾಯಿತು ಮತ್ತು ಅಲ್ಲಿ ಒಟ್ಟು ಎಷ್ಟು ಜನರಿಗೆ ಈಕಾಲರಾ ರೋಗ ಅಟ್ಯಾಕ್ ಆಗಿದೆ ಎಂದು ವರದಿ ಬಂದಿದೆ ?

Sri H. SIDDAVEERAPPA.—There were 141 cases of attacks in that constituency and out of 141 cases, so many deaths have taken place. This gastro enteritis has been there from the months of June 1972. Of late it has been completely under control. The last case of attack was in the month of February. That was only one case and there was no death

Taxes Realised in Bangalore City

147. Sri K. SIRRAMULU (Gandhinagar).—

Will the Minister for Finance be pleased to state :—

(a) the annual income derived to the State Government through various taxes in Banglore City ;

(b) out of this, the amount spent for slum clearances and public developmental work ?

Sri M. Y. GHORPADE (Minister for Finance).—

(a) On an average there is an income of Rs. 3,364 lakhs per annum (As separate figures in respect ot Bangalore City toward Motor Vehicles Taxes are not maintained that amount is not included in the above figures).

(b) There is no relation between the taxes realised by the Government in the City and the amount spent in respect of slum clearances and other public developmental works.

ಶ್ರೀ ಕೆ. ಶ್ರೀರಾಮುಲು.—ತಮ್ಮ ಉತ್ತರದಲ್ಲಿ 3364 ಲಕ್ಷ ರೂಪಾಯಿಗಳು ಎಂದು ಹೇಳಿ ದ್ದೀರಿ. ಮತ್ತು ಇದರಲ್ಲಿ ಮೋಟಾರು ವಾಹನಗಳ ತೆರಿಗೆ ಸೇರಿ ಎಂದು ಹೇಳಿದ್ದೀರಿ. ಅದನ್ನು ಸೇರಿಸಿದರೆ ಸುಮಾರು 70 ಕೋಟಿ ರೂಪಾಯಿಗಳ ವರಮಾನ ಬೆಂಗಳೂರು ನಗರದಿಂದಲೇ ಬರುತ್ತ ದೆಂದು ನಾನು ಹೇಳುತ್ತೇನೆ ; ತಮ್ಮ ಅಭಿಪ್ರಾಯವೇನು ?

† ಶ್ರೀ ಎಂ. ವೈ. ಘೋರ್ಪಡೆ.—70 ಕೋಟಿ ರೂಪಾಯಿ ಆಗುವುದಿಲ್ಲ. ಬೆಂಗಳೂರು ಜಿಲ್ಲೆಯಿಂದ ಮೋಟಾರು ವಾಹನಗಳ ತೆರಿಗೆಯಿಂದ ಬರುವ 6 ಕೋಟಿ 17 ಲಕ್ಷ ರೂಪಾಯಿಗಳನ್ನು ಸೇರಿಸಿದರೆ ಒಟ್ಟು 40 ಕೋಟಿ ರೂಪಾಯಿಗಳಾಗಬಹುದು. ಇದರಲ್ಲಿ ಸೇಲ್ಸ್ ಟ್ಯಾಕ್ಸ್‌ನಿಂದ 25 ಕೋಟಿ, ಸ್ಟಾಂಪ್ ಡ್ಯೂಟಿಯಿಂದ ಒಂದು ಕೋಟಿ 90 ಲಕ್ಷ, ಎಕ್ಸೈಜ್‌ನಿಂದ 2.39 ಕೋಟಿ, ಎಲೆಕ್ಟ್ರಿಸಿಟಿಯಿಂದ 1.40ಕೋಟಿ ರೂಪಾಯಿ ಈ ರೀತಿ ಬೇರೆ ಬೇರೆ ಬಾಬುಗಳಿಂದ ಬರುವುದನ್ನು ಸೇರಿಸಿದರೆ 3364 ಲಕ್ಷ ರೂಪಾಯಿಗಳಾಗುತ್ತದೆ. ಇದಕ್ಕೆ ಬೆಂಗಳೂರು ಜಿಲ್ಲೆಯಿಂದ ಬರುವ ಮೋಟಾರ್ ವಾಹನಗಳ ತೆರಿಗೆಯನ್ನು ಸೇರಿಸಿದರೆ 40 ಕೋಟಿ ರೂಪಾಯಿ ಆಗಬಹುದು.

ಶ್ರೀ ಕೆ. ಶ್ರೀರಾಮುಲು.—ಈ ತೆರಿಗೆಗಳಿಗೂ ಬೆಂಗಳೂರು ನಗರದ ಅಭಿವೃದ್ಧಿ ಕೆಲಸಗಳಿಗೂ ಸಂಬಂಧವಿಲ್ಲವೆಂದು ಹೇಳಿದ್ದೀರಿ. ಹಾಗಾದರೆ ಬೆಂಗಳೂರಿನಲ್ಲಿ ಶಾಲೆಗಳಿಗಾಗಲೀ, ರಸ್ತೆಗಳಿಗಾಗಿಯಾಗಲೀ, ಆಸ್ಪತ್ರೆಗಳಿಗಾಗಲೀ, ಕೊಳಚೆ ಪ್ರದೇಶಗಳ ನಿರ್ಮೂಲೀಕರಣಕ್ಕಾಗಲೀ ತೆರಿಗೆಯಿಂದ ಬರುವ ಹಣವಲ್ಲದೆ ಬೇರೆ ಹಣವನ್ನು ಖರ್ಚು ಮಾಡಲಾಗುತ್ತಿದೆಯೇ ?

ಶ್ರೀ ಎಂ. ವೈ. ಘೋರ್ಪಡೆ.—ತಾವು ಕೊಳಚೆ ಪ್ರದೇಶಗಳ ನಿರ್ಮೂಲೀಕರಣದ ಬಗ್ಗೆ ಕೇಳಿದ್ದೀರಿ. ಆ ಬಗ್ಗೆ ಏನೇನು ಸ್ಕೀಮ್‌ಗಳಿವೆ ಎಂಬುದು ತಮಗೂ ಗೊತ್ತಿದೆ. ಇದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈ ತೆರಿಗೆಯಿಂದ ಬರುವ ಹಣಕ್ಕೂ ಸ್ಲಮ್ ಕ್ಲಿಯರೆನ್ಸ್‌ಗೆ ಮತ್ತು ಬೇರೆಬೇರೆ ಡೆವಲಪ್‌ಮೆಂಟ್ ಕೆಲಸಗಳಿಗೆ ಖರ್ಚು ಮಾಡುವ ಹಣಕ್ಕೂ ಸಂಬಂಧವಿಲ್ಲ. ಬೆಂಗಳೂರು ನಗರ ಈ ಮಟ್ಟಕ್ಕೆ ಬರಬೇಕಾದರೆ ಇದುವರೆಗೆ ಸರ್ಕಾರದವರು ಬಹಳಷ್ಟು ಹಣವನ್ನು ಬೆಂಗಳೂರು ನಗರದ ಅಭಿವೃದ್ಧಿಗಾಗಿ ಖರ್ಚು ಮಾಡಿರುವುದೇ ಕಾರಣ: ಇದರಿಂದ ಈಗ ಟ್ಯಾಕ್ಸ್ ಕೊಡುವ ಶಕ್ತಿ ಬೆಂಗಳೂರು ನಗರಕ್ಕೆ ಹೆಚ್ಚು ಇದ್ದರೆ ಅದನ್ನು ಬೇರೆ ಪ್ರದೇಶಗಳನ್ನು ಡೆವಲಪ್ ಮಾಡುವ ಸಲುವಾಗಿ ಖರ್ಚು ಮಾಡಿದರೆ ಅದರಲ್ಲಿ ತಪ್ಪೇನೂ ಇಲ್ಲ, ಈ ಟ್ಯಾಕ್‌ನಿಂದ ಬರುವ ಹಣವನ್ನು ರಾಜ್ಯದ ಎಲ್ಲ ಭಾಗಗಳೂ ಮುಂದೆ ಬರುವ ರೀತಿಯಲ್ಲಿ ಉಪಯೋಗ ಮಾಡಬೇಕಾಗುತ್ತದೆ. ಇಲ್ಲದೆಹೋದರೆ ಒಬ್ಬ ಶ್ರೀಮಂತ ಕೊಟ್ಟ ಟ್ಯಾಕ್ಸ್ ಹಣವನ್ನು ಅವನ ಕಾಂಪೌಂಡ್‌ನಲ್ಲಿಯೇ ಖರ್ಚು ಮಾಡಬೇಕೆಂದರೆ, ಅದರಿಂದ ಸಮಾಜವಾದವನ್ನು ಜಾರಿಗೆ ತರುವುದು ಕಷ್ಟವಾಗುತ್ತದೆ. ಮತ್ತು ಅದು ಸಮಾಜವಾದದ ತತ್ವಕ್ಕೆ ವಿರುದ್ಧವಾಗುತ್ತದೆ. ಸ್ಲಮ್ ಕ್ಲಿಯರೆನ್ಸ್‌ಗಾಗಿ ಇನ್ನೂ ಹೆಚ್ಚು ಹಣ ಖರ್ಚಾಗಬೇಕೆಂದು ತಾವು ಹೇಳುವುದಾದರೆ ಅದನ್ನು ನಾನು ಒಪ್ಪುತ್ತೇನೆ. ಆದರೆ ಬೆಂಗಳೂರಿನಿಂದ ಬರುವ ತೆರಿಗೆಯೆಲ್ಲವನ್ನೂ ಬೆಂಗಳೂರಿನಲ್ಲಿಯೇ ಖರ್ಚು ಮಾಡಬೇಕೆಂಬ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ. ಆ ರೀತಿ ಯಾವ ಸರ್ಕಾರವೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಶ್ರೀರಾಮುಲು.—ಆ ಉದ್ದೇಶದಿಂದ ನಾನು ಈ ಪ್ರಶ್ನೆಯನ್ನು ಕೇಳಲಿಲ್ಲ. ಇತರ ಕಡೆಯ ಟ್ಯಾಕ್ಸನ್ನು 25 ವರ್ಷಗಳಿಂದ ಬೆಂಗಳೂರಿನವರಿಗೆ ಸರ್ಕಾರದವರು ಏನಾದರೂ ಖರ್ಚು ಮಾಡಿದ್ದಾರೆಯೇ ? ಒಂದು ವೇಳೆ ಆ ರೀತಿ ಸರ್ಕಾರದವರು ಖರ್ಚು ಮಾಡಿದ್ದರೆ ಯಾವ ಅಭಿವೃದ್ಧಿಗೋಸ್ಕರ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎನ್ನುವ ವಿವರಣೆಯನ್ನು ಕೊಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಇಂಥಾ ಪ್ರಶ್ನೆಗೆ ಉತ್ತರ ಹೇಳುವುದಕ್ಕಾಗುವುದಿಲ್ಲ. ಬೆಂಗಳೂರಿನಲ್ಲಿ ಕಟ್ಟಡ, ನೀರು ಸರಬರಾಜು, ಕಾರ್ಖಾನೆಗಳು ಇತ್ಯಾದಿಗಳನ್ನು ಲೆಕ್ಕ ಹಾಕಿದರೆ ಹೆಚ್ಚು ಪ್ರಮಾಣದಲ್ಲಿ ಖರ್ಚಾಗಿದೆ ಎನ್ನುವುದು ಎಲ್ಲರಿಗೂ ಕಣ್ಣಿಗೆ ಕಾಣಿಸುತ್ತದೆ. ಅದನ್ನು ಪಟ್ಟಿ ಮಾಡಿ ನಾನು ತಂದಿಲ್ಲ.

Desilting the Gondi Channel

194. ABDUL KUDDUS ANWAR (Bhadravathi).—

Will the Minister of State for Major Irrigation be pleased to state :—

(*a*) the area that is irrigated by Gondi Right and Left Bank Channel of Bhadravathi Taluk ;

(b) the amount spent for desilting these channels, during the last 6 years (yearwise figure may be furnished) ;

(c) the amount sanctioned for desilting in Bhadravathi and Gondi Channel for the Years 1971-72, 1972-73 ?

Sri H. N. NANJE GOWDA (Minister of State for Major Irrigation).—

(a)	1.	Right bank Channel	...	10,520 acres
	2.	Left bank channel	...	520 acres
		Total	...	11,040

(b)	Years		Amount spent
1.	1966-67	...	Rs. 6,758
2.	1967-68	...	Rs. 4,056
3.	1968-69	...	Rs. 5,451
4.	1969-70	...	Rs. 4,976
5.	1970-71	..	Rs. 22,535
6.	1971-72	...	Rs. 9,850
		Total	53,626

(c)	Years		Amount sanctioned
1.	1971-72	...	Rs. 11,458
2.	1972-73	...	Rs. 6,908
		Total :	Rs. 18,366

Sri ABDUL KUDDUS ANWAR.—Supplementary to (a) ; Does this include unauthorised achkat also ?

†Sri H. N. NANJE GOWDA.—No.

Sri ABDUL KUDDUS ANWAR.—In the year 1970-71 the amount spent is Rs. 22,535 whereas in the year 1971-72 the amount spent is meagre. Since the estimates for desilting and deepening the right and left bank channels are ready, will the Government take up the work ?

Sri H. N. NANJE GOWDA.—Government is thinking of taking up this work in two stages. For the first stage we have received estimates costing Rs. 4.23 lakhs and it is being examined by the Chief Engineer. We hope to repair upto the tenth mile. The second stage we will take up afterwards. This is being examined. After proper scrutiny Government is thinking of sanctioning the same and taking up the work.

ಶ್ರೀ ಆರ್. ಎಸ್. ಪಾಟೀಲ್.—11,040 ಎಕರೆಗೆ ನೀರನ್ನು ಒದಗಿಸತಕ್ಕಂಥಾ ಈ ಚಾನಲ್ ಉದ್ದ ಎಷ್ಟು ? ಇದಕ್ಕೆ ಎಷ್ಟು ಹಣವನ್ನು ಒದಗಿಸಿದ್ದೀರಿ, ಈ ಚಾನಲ್‌ನಲ್ಲಿ ಎಷ್ಟು ದೂರ ಹೂಳು ಎತ್ತಬೇಕು ಎಂದು ಇದ್ದೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಈ ನಾಲೆಯ ಹೂಳನ್ನು ತೆಗೆಯಲು ಎಸ್ಟಿಮೇಟ್ ತಯಾರಾಗಿದೆ. 20 ಮೈಲಿ ಉದ್ದ ಇರುವ ಈ ನಾಲೆಯ ಕೆಲಸವನ್ನು ಎರಡು ಸ್ಟೇಜಿನಲ್ಲಿ ತೆಗೆದುಕೊಳ್ಳಬೇಕೆಂದಿದ್ದೇವೆ. ಈಗ ಮೊದಲನೇ ಹಂತದಲ್ಲಿ 10 ಮೈಲಿ ತೆಗೆದುಕೊಂಡು ಈ ಕೆಲಸವನ್ನು ಮಾಡಲು 4 ಲಕ್ಷ ಚಿಲ್ಲರೆ ರೂಪಾಯಿಗಳ ಎಸ್ಟಿಮೇಟ್ ತಯಾರಾಗಿದೆ. ಅದನ್ನು ಚೀಫ್ ಇಂಜನೀಯರು ನೋಡುತ್ತಿದ್ದಾರೆ. ಅದನ್ನು ಸರ್ಕಾರದವರು ಮಾಡಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ.

Sri ABDUL KUDDUS ANWAR.—Has it not come to the notice of the Government that more than 50 acres of sugarcane crop has been spoiled on account of these channels not being desilted ? Therefore, will the hon. Minister take up this work as early as possible ? The water which was coming from the main Bhadra channel has now been stopped completely.

Sri H. N. NANJE GOWDA.—Water is not stopped from the Bhadra channel. It will be continued for some time more. Any way, the rabi crops were not contemplated. Because seepage water was given to this crop. I will, however, examine the suggestion made by the hon. member.

Officials Working in the same section of secretariat for more than 5 years

420. Sri D. HALAGE GOWDA (Pandavapura).—

Will the Chief Minister be pleased to state :—

(*a*) the number and names of officials and officers in the Secretariat service who have been working in the Department and in the same Section of she Secretariat for more than 5 years ;

(*b*) the special reasons for keeping them in the same place without transferring them for such a long period ?

Sri H. M. CHANNABASAPPA (Minister for Public Works and Electricity [On behalf of Sri D. DEVARAJ URS (Chief Minister)].—

(*a*) 315 persons *vide* Statements placed on the Table of the House.*

(*b*) The continuance of Officers and officials in the same Department is due to administrative reasons, and in the interest of Government's works.

---

*Copy placed in the Mysore Legislature Library *vide No.* 24 dated 29-3-1973.

ಶ್ರೀ ಡಿ. ಹಲಗೇಗೌಡ.—ಆಡಳಿತಾತ್ಮಕ ದೃಷ್ಟಿಯಿಂದ ಅಧಿಕಾರಿಗಳು ಇರಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಈಗ ಸೆಕ್ರೆಟರಿಯೇಟ್‌ನಲ್ಲಿ ಒಂದೇ ಇಲಾಖೆ ಮತ್ತು ಶಾಖೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ 315 ಎಂದು ಕೊಟ್ಟಿದ್ದೀರಿ, ಆಡಳಿತಾತ್ಮಕ ದೃಷ್ಟಿಯಿಂದ ಬೇರೆ ಅಧಿಕಾರಿಗಳು ಕೆಲಸ ಮಾಡುತ್ತಾರೆ ಅಲ್ಲವೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ ಅವರು ಸೆಕ್ರೆಟೇರಿಯಟ್ ಸರ್ವೀಸ್‌ನಲ್ಲಿ ಬದಲಾವಣೆ ಆಗ ಬಹುದೇ ಹೊರತು, ಅವರನ್ನು ರಾಜ್ಯದ ಇನ್ನೊಂದು ಕಡೆಗೆ ಸೆಕ್ರೆಟೇರಿಯಟ್‌ನಿಂದ ಬದಲಾವಣೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹಲಗೇಗೌಡ.—ಈ ನೌಕರರನ್ನು ಸೆಕ್ರೆಟರಿಯಟ್‌ನಿಂದ ಬೇರೆ ವಿಭಾಗಗಳಿಗೆ ಏತಕ್ಕೆ ವರ್ಗ ಮಾಡಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೆಕ್ರೆಟೇರಿಯಟ್‌ನಲ್ಲಿ ಎಗ್ಸಿಕ್ಯೂಷನ್ ಆಫ್ ವರ್ಕ್ ವಿಧಾನವೇ ಬೇರೆ. ಸೆಕ್ರೆಟೇರಿಯಟ್‌ನಲ್ಲಿ ಕೆಲಸ ಮಾಡತಕ್ಕವರಿಗೆ ಹಿಂದಿನಿಂದ ಕೆಲಸ ಮಾಡಿರತಕ್ಕ ಅನುಭವ ಬೇಕು, ಯಾವುದೇ ಒಂದು ಸಮಸ್ಯೆಯ ವಿಷಯದಲ್ಲಾಗಲೀ, ಪಾಲಿಸಿ ವಿಷಯದಲ್ಲಾಗಲೀ ಸಲಹೆ ಮಾಡಬೇಕಾದರೆ ಅದಕ್ಕೆ ಬ್ಯಾಕ್‌ಗ್ರೌಂಡ್ ಬೇಕು, ನಾಲೆಡ್ಜ್ ಬೇಕು, ಅವರು ಅವೆಲ್ಲವನ್ನೂ ಸೇರಿಸಿ ಫೈಲ್‌ನಲ್ಲಿ ಸಲಹೆ ಮಾಡಿದರೆ ಮೇಲ್ಪಟ್ಟದಲ್ಲಿ ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಹೊಸ ಹೊಸ ಜನಗಳನ್ನು ತಂದು ಸೆಕ್ರೆಟೇರಿಯಟ್‌ನಲ್ಲಿ ಹಾಕಿದರೆ ಅವರು ತಕ್ಷಣ ಮಾಹಿತಿಯನ್ನು ಕೊಡುವುದು ಕಷ್ಟವಾಗುತ್ತದೆ.

Sri D. B. KALMANKAR.–The list that has been placed on the table only shows the officials who are Section Officers, Junior Asssistants, Stenographers, etc. They do not include Gezetted Officers. What is the number of such officers who are working here for more than five years ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಪ್ರಶ್ನೆಯಲ್ಲಿ ಸೆಕ್ಷನ್‌ನಲ್ಲಿ ಕೆಲಸ ಮಾಡತಕ್ಕವರನ್ನೇ ವಿನಾ ಮೇಲ್ಪಟ್ಟ ಆಫೀಸರ ವಿಷಯವನ್ನು ಕೇಳಿಲ್ಲ. ಆದ್ದರಿಂದ ಅದಕ್ಕೆ ಉತ್ತರ ಕೊಟ್ಟಿಲ್ಲ.

Sri M. MALLAPPA.—What were the administrative reasons that compelled the Government to keep these officers beyond the length of time ?

Sri H. M. CHANNABASAPPA.—There no question of 'beyond the length of time'. ಈ ಬಗ್ಗೆ ಸರ್ಕಾರಿ ಹುಕುಂ ಏನಿದೆ ಅದು ಸೆಕ್ರೆಟರಿಯಟ್ಟಿಗೆ ಅನ್ವಯವಾಗುವುದಿ .

Sri A. A. DESAI.—What technical advice these typists, Stenographers, Receptionists and Telephone Operators give to Government ?

Sri H. M. CHANNABASAPPA.– I have already said that these people are recruited for the Secretariat work. So, they can only be transferred within ihe Secretariat itself and between Sections and Sections and not outside.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ವೀಸ್‌ಗೆ ಸೇರಿದಾಗಿನಿಂದಲೂ ಹಿಡಿದು ರಿಟೈರಾಗುವವರೆಗೆ ಒಂದೇ ಇಲಾಖೆಯಲ್ಲಿ ಇಡುವುದರಿಂದ, ಒಂದೇ ಸೆಕ್ಷನ್‌ನಲ್ಲಿ ಇಡುವುದರಿಂದ ಅಧಿಕಾರಿಗಳಿಗೆ ಮಾಡಿದ ಕೆಲಸವನ್ನೇ ಮಾಡಿ ಮಾಡಿ ಬೇಜಾರು ಬಂದು ಆಲಸ್ಯ ಬರುವುದು ಸ್ವಾಭಾವಿಕ. ಅದಕ್ಕಾಗಿ ಆಡಳಿತ ಮುಂದಗತಿಯಲ್ಲಿ ಹೋಗುತ್ತದೆ ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದ್ದನ್ನೇ ಮಾಡಿ ಬೇಜಾರು ಆಗಿದ್ದರೆ ಬೇರೆ ಕೆಲಸ ಕೊಡುವ ಯೋಚನೆ ಮಾಡೋಣ.

Sri D. B. KALMANKAR.—Will the Government take steps to see that they are shifted from the Section where they have been working for so many years because the general complaint is that these officials are spending more time in their thindi and Coffee than in office ?

Sri H. M. CHANNABASAPPA.—They will do that even when they are transferred to other Sections,

ಶ್ರೀ ಎಚ್. ಎಸ್. ಸಿದ್ದಪ್ಪ.— ಒಂದೇ ಕಡೆ 5 ವರ್ಷ 6 ವರ್ಷ ಇರುವಂತಹ ಅಧಿಕಾರಿಗಳು ಮಂತ್ರಿಗಳು ಫೈಲ್ ಮೇಲೆ ಆರ್ಡರ್ ಮಾಡಿದ ತಕ್ಷಣ ಕೆಲಸವನ್ನು ಮಾಡಬೇಕಾಗಿಲ್ಲ; ನಾವು ಅದನ್ನು ವಿಚಾರ ಮಾಡುತ್ತೇವೆ ಎಂದು ಹೇಳುವಂತಹ ಅಧಿಕಾರಿಗಳು ಇದ್ದಾರೆ. ಅಂಥವರು ಎಷ್ಟು ಜನ ಇದ್ದಾರೆ, ಯಾರು ಯಾರು ಇದ್ದಾರೆ ಎಂಬ ಮಾಹಿತಿ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎಸ್ ಪಾಟೀಲ್.—ಸೆಕ್ರೆಟೇರಿಯಟ್‌ನಲ್ಲಿ ಇರತಕ್ಕ ನೌಕರರನ್ನು ಬೇರೆ ಕಡೆ ಟ್ರಾನ್ಸ್‌ಫರ್ ಮಾಡುವುದಿಲ್ಲ. ಒಳ್ಳೆಯ ಅನುಭವ ಇರತಕ್ಕವರು ಬೇಕಾಗುತ್ತಾರೆ ಎಂದು ಹೇಳಿದ್ದೀರಿ. 20 ವರ್ಷಗಳಿಂದ ಒಂದೇ ದೃಷ್ಟಿಯನ್ನು ಇಟ್ಟುಕೊಂಡಿರುವಂತಹ ನೌಕರರು ಇದ್ದಾರೆ. ಅವರು ಸಮಾಜವಾದ ಕಾರ್ಯಕ್ರಮಗಳಿಗೆ ಅನುಗುಣವಾಗಿ ಹೊಂದಿಕೊಳ್ಳುವ ಸ್ಥಿತಿಯಲ್ಲಿದ್ದಾರೆಯೇ ? ತಮಗೂ ಅವರಿಗೂ ಹೊಂದಾಣಿಕೆ ಇದೆಯೇ ?

1-30 P. M.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಮಾಜವಾದವೆಂಬುದು ಒಂದು ಮನಸ್ಸಿನ ಭಾವನೆ ಆ ಭಾವನೆ ತನ್ನಷ್ಟಕ್ಕೆ ಬದಲಾಗಬೇಕಲ್ಲದೆ ಏಕ್‌ದಂ ಬದಲಾವಣೆಯಾಗುವುದಿಲ್ಲ. ಹಾಗೆ ಬದಲಾವಣೆ ಯಾಗುವುದಕ್ಕೆ ತಕ್ಕ ವಾತಾವರಣವನ್ನು ಕಲ್ಪನೆ ಮಾಡಬೇಕಾಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ. ತಮ್ಮ ಉತ್ತರದಲ್ಲಿ ಹೇಳಿದಂತೆ ಮಾಡಿದರೆ ಆ ರೀತಿ ತಪ್ಪು ಮಾಡದೆ ಇರುವವರಿಗೂ ತಪ್ಪು ಮಾಡಲು ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಟ್ಟ ಜನರು ಎಲ್ಲಿ ಇದ್ದರೂ ಕೆಟ್ಟವರೆ ಎನ್ನುವ ಅರ್ಥದಲ್ಲಿ ನಾನು ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಬಹಳ ಜನ ಒಂದೇ ಸೆಕ್ಷನಿನಲ್ಲಿ ಬಹಳ ವರ್ಷದಿಂದ ಇದ್ದಾರೆ. ಇದರಿಂದ ಸರ್ಕಾರದವರು ಕೈಗಾರಿಕೆಗಳಿಗೆ ಮತ್ತು ಉದ್ಯಮಿಗಳಿಗೆ ಕಂಟ್ರಾಕ್ಟ್ ವಗೈರೆ ಕೊಡತಕ್ಕ ಸಂದರ್ಭದಲ್ಲಿ ಬಹುಕಾಲದಿಂದ ಇದ್ದಂತಹ ಅಧಿಕಾರಿಗಳು ಹೆಚ್ಚು ಲಾಭ ಮಾಡಿಕೊಂಡು ಸರ್ಕಾರಕ್ಕೆ ಮೋಸ ಮಾಡತಕ್ಕ ಸಂದರ್ಭ ಬರುತ್ತದೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ —ಅದು ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—5 ವರ್ಷದಿಂದ 315 ಜನ ಇದ್ದಾರೆಂದು ಹೇಳಿದ್ದೀರಿ. ಒಂದೇ ಇಲಾಖೆಯಲ್ಲಿ ಒಂದೇ ಸೆಕ್ಷನಿನಲ್ಲಿ ಸುಮಾರು 10-20 ವರ್ಷದಿಂದ ಇದ್ದವರೂ ಇದ್ದಾರೆ. ಅವರನ್ನು ಬೇರೆ ಬೇರೆ ಸೆಕ್ಷನುಗಳಿಗೆ ವರ್ಗಾಯಿಸಿ, ಕೆಲಸದಲ್ಲಿ ಹೊಸ ಅನುಭವ ಪಡೆಯುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಹಳೆಯ ಅನುಭವವನ್ನು ಕೊಡತಕ್ಕದ್ದು ಅವಶ್ಯ. ಯಾರಾದರೂ ತಮ್ಮ ಕೆಲಸ ಕಾರ್ಯಗಳಲ್ಲಿ ಲೋಪದೋಷಗಳನ್ನು ಮಾಡಿ ಅವರ ಅಯೋಗ್ಯತೆ ಕಂಡು ಬಂದರೆ, ಅವರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸೆಕ್ರೆಟರಿಯೇಟಿನಲ್ಲಿರುವ ಬಹುಭಾಗದ ಜನರು ಡೆಪ್ಯುಟೇಶನ್ ಮೇಲೆ ಬೇರೆ ಬೇರೆ ಇಲಾಖೆಗಳಿಗೆ ಹೋಗುತ್ತಿದ್ದಾರೆ. ಇದರಿಂದ ಅವರಿಗೆ ಹೆಚ್ಚು ಅನುಭವವಾಗುತ್ತದೆ. ಮತ್ತು ಅವರು ಪರಿವರ್ತನೆ ಸಹ ಆಗುತ್ತಾರೆ. ಆದ್ದರಿಂದ ಅವರನ್ನು ಡೆಪ್ಯುಟೇಶನ್ ಮೂಲಕ ಹೆಚ್ಚು ಅನುಭವ ಗಳಿಸುವುದಕ್ಕೋಸ್ಕರ ಕಳಿಸಿ ಸ್ವಲ್ಪ ಪರಿವರ್ತನೆಯಾಗುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಪರಿವರ್ತನೆಯಾಗಿ ಪರಿಶುದ್ಧವಾಗಿಲ್ಲ ಎಂಬುದನ್ನು ನಾನು ಒಪ್ಪುವುದಿಲ್ಲ. ಒಂದೊಂದು ಫೀಲ್ಡಿನಲ್ಲಿ ಟ್ರೈನಿಂಗ್ ಬೇಕಾದಾಗ ಡೆಪ್ಯುಟೇಶನ್ ಮೇಲೆ ಕಳಿಸಿಕೊಟ್ಟಿದ್ದೇವೆ. ಅಂಥ ಅವಶ್ಯಕತೆ ಬಂದಾಗ ಮಾಡೋಣ.

Sri D. B. KALMANKAR.—Whether in the interest of incaeasing efficiency of the staff Government will consider to effect transfers to various other sections and departments ?

Sri H. M. CHANNABASAPPA.—Where Government feel that such transfers are necessary in the interest of administrative efficiency it will certainly do it.

ಶ್ರೀ ಡಿ. ಹಲಗೇಗೌಡ.—ನಾನು ಈ ಪ್ರಶ್ನೆಯನ್ನು ಕಳೆದ ಅಧಿವೇಶನದಲ್ಲಿ ಕಳುಹಿಸಿದ್ದು. ಅದಕ್ಕೆ ಉತ್ತರ ಈಗ ತಾನೆ ಬಂದಿದೆ. ಇದಕ್ಕೆ ಅಂಕಿ ಅಂಶಗಳಾದರೂ ಸೆಕ್ರೆಟರಿಯೇಟಿನಲ್ಲಿಯೇ ಇದ್ದರೂ, ಇಷ್ಟು ನಿಧಾನವಾದುದರಿಂದ ನಿಮ್ಮ ಅಧಿಕಾರಿಗಳ ದಕ್ಷತೆ ಎಷ್ಟು ಇದೆಯೆಂದು ಗೊತ್ತಾಗುತ್ತದೆ. ಆದ್ದರಿಂದ ಇಂಥ ಅದಕ್ಷತೆಯುಳ್ಳ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಿಂದ ಮಾತ್ರ ಅವರ ದಕ್ಷತೆಯನ್ನು ಅಳೆಯತಕ್ಕದ್ದಲ್ಲ.

Industrial Survey of Gulbarga District

492. Sri D. B. KALMANKAR (Afzalpur).—

Will the Minister for Industries be pleased to state :—

(*a*) whether the Industrial Survey of Gulbarga District has been made ;

(*b*) if so, the Industries found favourable to be started there (talukwise) information may be furnihed) ?

Sri S. M. KRISHNA (Minister for Industries).—

(*a*) A quick survey of potential for small scale industries has been made.

(SRI S. M. KRISHNA)

(b) *Vide* list appended.

List of Small Scale Industries considered feasible for being set up in Gulbarga District

No.	Name of the Taluk		Industry
1.	Aland	(1)	Fruits and Vegetable preservation (2) Banana Powder (3) Surgical Cotton (4) Pundi ropes and sacks (5) Builder's hardwear (6) Handloom Industry.
2.	Chitapur	(1)	Precipitated Calcium Carbonate (2) Sand paper (3) Glass Industry (4) Sand lime bricks (5) Sodium Silicate (6) Quartz Powder (7) Pre stressed Concerete Pipes (8) Plastar of Paris (9) Gypsum plaster board (10) Industrial detergents (11) Handloom Indurtry.
	Shahabad		Ancillary industries attached to Shahabad Heavy Engineering Works:
		(1)	Steel Foundry (2) Pattern shop (3) Light fabrication (4) Medium fabrication (5) Machine shop (6) Machine Bolts and Nuts.
3.	Chincholi	(1)	Bleaching earth (2) Saw Mills (3) Ceramic Industry including L. T. insulators (4) Rugs and blankets for local consumption (5) Industries based on Fuller's earth.
4.	Yadgir	(1)	Glass Industry (2) Sodium Silicate (3) quartz Powder (4) Sand paper (5) Handloom Industry.
5.	Shorapur		Brick Industry.
6.	Gulbarga	(1)	Surgical cotton (2) Waste cotten (3) Bone Meal (4) Handloom Industry.

SRI D. B. KALMANKAR.—The list furnished does not include Jewargi, Sedum, Afzalpur and Shahpur talukas. Does it mean that there is no industrial potentiality in these taluks ?

† SRI S. M. KRISHNA.—That seems to be the impression of the Study Team which went to Gulbarga.

SRI D. B. KALMANKAR.—Whether any feasibility reports have been submitted to Government ?

Sri S. M. KRISHNA.—Some feasibility reports have been handed over to the Assistant Director, Gulbarga and he has been asked by Government to publicise these reports and also to get in touch with the legislators so that we can rope in as many entrepreneurs as possible.

Sri MALLIKARJUN KHARGE.—Whether Government is going to establish some of these industries in these areas in view of the fact that the Government have surveyed the areas and the feasibility report is also ready, so as to provide employment to people in those areas?

Sri S. M. KRISHNA.—I have made it repeatedly clear that it is not the business of the Government to establish small scale industries. Government can only think in terms of setting up medium and major industries. But Government is certainly taking steps to set up an ancillary units in the Shahbad Heavy Engineering Works. It has been made very clear in the report that it is possible to set up 7 units in Steel Foundry, Pattern shop. Light fabrication, Mediun fabrication, Machine shop and Machine Bolts and Nuts. Government is taking steps to set up industrial estate attached to the Shahabad Heavy Engineering Works. I am happy to convey to the hon. Members that this private sector factory has come forward to help to the extent possible to see that it achieves tremendous success.

ಶ್ರೀ ಎಂ, ಬಿ, ರಾಮಸ್ವಾಮಿ, —ಈ ತರಹ ಮಾಡುವುದರಿಂದ ಎಷ್ಟು ಜನರಿಗೆ ಉಪಯೋಗ ವಾಗುತ್ತದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್, ಎಂ, ಕೃಷ್ಣ,—ಅದು ಹೀಗೆ ಎಂದು ಹೇಳುವುದಕ್ಕಾಗುವುದಿಲ್ಲ, ಎಷ್ಟು ನಾವು ಸಣ್ಣ ಉದ್ಯಮಗಳನ್ನು ಸ್ಥಾಪನೆಮಾಡುತ್ತೇವೆಯೋ ಅದರ ಮೇಲೆ ಡಿಪೆಂಡ್ ಆಗುತ್ತದೆ,

Agricultural Research Centres In the State

566. Sri K. H. HANUME GOWDA (Hassan).—

Will the Minister for Agriculture and Forests be pleased to state :—

(a) the crops in respect of which the Research Centres of the Agricultural University (including I. C. R. Scheme) are conducting research together with their location in various districts of State ;

(b) the amount spent every year during the last 3 years towards Research Centres located in various districts :

(c) the special reasons for starting more number of Crop Research Centres in few districts only and not starting the same in some other districts ;

(d) the crops grown in the State in respect of which Research Centres are not yet started and the reasons therefor ?

Sri K. H. PATIL (Minister for Agriculture and Forests).—

(*a*) The information regarding the Districts in which the Research Centres are located and the crops in respect of which research is undertaken is furnished in the Statement I placed on the Table of the House.*

(*b*) The information regarding expenditure incurred during the last 3 years in each districts is furnished in Statement II placed on the Table of the House.*

The following are criteria for setting up Research Centre :— The land suitable for setting up Research Centre, the availability of all facilities necessary for Research, Climate, Staff etc.

Suitable climatic condition fit for cultivation in a particular place, humidity in the climate, temperature etc., are the most important factors which govern the success for implementation of research work in various districts and to grow crops.

The districts which possess the abovesaid factors naturally are given more preference in such selection than those which do not possess. However the results of the successful research work are being released and published to ryots of the surrounding places so as to enable them to improve production and grow more crops and also to follow it up.

(*d*) The Research work is to be strengthened regarding the items mentioned below :

1. Pulses, Oilseeds and Potato.
2. Fodder and Fodder crops.
3. Plantation crops, such as Coconut, Betelnut and spice crops.
4. Improvement of salty and saline lands in irrigated areas.
5. Vegetables, fruits and other horticultural crops.
6. Weather forecast for agriculture.
7. Agricultural engineering.

Financial stringency is the main reason for not undertaking research work regarding the items mentioned above.

ಶ್ರೀ ಕೆ. ಎಚ್. ಹನುಮೇಗೌಡ.—ಈ ಬೆಳೆಯ ಪರಿಶೋಧನಾ ಕೇಂದ್ರಗಳಲ್ಲಿ ಇರಬೇಕಾದ ಅವಶ್ಯಕವಾದ ಅನುಕೂಲಗಳು ಏನು ಮತ್ತು ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿ ಇಲಾಖೆಯಲ್ಲಿರುವ ಪರಿಶೋಧನಾ ಕೇಂದ್ರಗಳ ಕಾರ್ಯವ್ಯಾಪ್ತಿ ಏನು ?

† ಶ್ರೀ ಕೆ. ಎಚ್. ಪಾಟೀಲ್.—ಕೃಷಿ ವಿಶ್ವವಿದ್ಯಾನಿಲಯ ರಿಸರ್ಚ್ ಮಾಡಿ ಅಗ್ರಿಕಲ್ಚರಲ್ ಇಲಾಖೆಗೆ ಸಲಹೆಗಳನ್ನು ಕೊಡುವುದು ಮತ್ತು ಅದರಿಂದ ಬಂದಂತಹ ರಿಸಲ್ಟ್‌ಗಳ ಮೇಲೆ ಕಾರ್ಯಕ್ರಮಗಳನ್ನು ಅಳವಡಿಸುವುದು.

ಶ್ರೀ ಕೆ. ಎಚ್. ಹನುಮೇಗೌಡ.—ಈ ರಿಸರ್ಚ್ ಸ್ಟೇಶನ್ನುಗಳಲ್ಲಿ ಕೆಲಸ ಸರಿಯಾಗಿ ನಡೆಯಬೇಕಾದರೆ ಏನೇನು ಅನುಕೂಲಗಳು ಇರಬೇಕು ?

* This is inclusive of amount spent in respect of schemes of State Government, Government of India, P. L. 480 and Atomic Energy Commission.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಸಹ ಯುನಿವರ್ಸಿಟಿ ಸದಸ್ಯರಾಗಿರುತ್ತಾರೆ. ರಿಸರ್ಚ್ ಎಂದಾಗ, ಬೆಳೆ ತೆಗೆಯುವುದರಲ್ಲಾಗಲಿ, ಬೀಜಗಳನ್ನು ತಯಾರು ಮಾಡುವುದರಲ್ಲಾಗಲಿ, ಪ್ರತಿ ವರ್ಷ ಹೊಸ ಹೊಸ ರಿಸರ್ಚನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ ಆದಷ್ಟು ಕಡಿಮೆ ಖರ್ಚಿನಲ್ಲಿ ಬೀಜ ಬೆಳೆಸುವುದನ್ನು ಮತ್ತು ಇತರ ಬೆಳೆ ಬೆಳೆಸುವ ಸಂಶೋಧನೆಯನ್ನು ಅಲ್ಲಿ ಮಾಡುವುದು ಮುಖ್ಯವಾದುದು.

ಶ್ರೀ ಕೆ. ಎಚ್. ಹನುಮೇಗೌಡ.—ತಮ್ಮ ಅಭಿಪ್ರಾಯದ ಪ್ರಕಾರ ಕೃಷಿ ವಿಶ್ವವಿದ್ಯಾನಿಲಯ ರಿಸರ್ಚ್ ಕೆಲಸ ಮಾಡುತ್ತಿದೆ ಎಂದು ಹೇಳುತ್ತಿದ್ದೀರಿ. ಕೆಲವು ಪ್ರದೇಶದಲ್ಲಿ ಕೃಷಿ ಇಲಾಖೆಯು ರಿಸರ್ಚ್ ಕೆಲಸ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅಗ್ರಿಕಲ್ಚರಲ್ ಕಮೀಶನ್ನಿನವರು ಇಲ್ಲಿಯವರೆಗೆ ಬರೇ ರಿಸರ್ಚ್ ಮಾಡಬೇಕೆಂದು ಅವರಿಗೆ ಒಪ್ಪಿಸಿಲ್ಲ. ಎರಡು ಕಡೆಯೂ ಒಂದು ಕೋಆರ್ಡಿನೇಶನ್ ಇರಬೇಕೆಂದು ಅವರ ಅಭಿಪ್ರಾಯ. ನನ್ನ ಮಟ್ಟಿಗೆ ಹೇಳುವುದಾದರೆ ವಿಶ್ವವಿದ್ಯಾನಿಲಯ ರಿಸರ್ಚ್ ಕೆಲಸ ಮಾಡುವುದು ಸಮರ್ಪಕ. ಕ್ರಮೇಣ ಅದನ್ನು ಬದಲಾವಣೆ ಮಾಡಬಹುದು. ಯೂನಿವರ್ಸಿಟಿಯವರು ಸಹ ಸಾಕಷ್ಟು ಪ್ರಮಾಣದಲ್ಲಿ, ಹೆಚ್ಚಿನ ಬೆಳೆಗಳ ಬಗ್ಗೆ ರಿಸರ್ಚ್ ಮಾಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅರಸೀಕೆರೆಯಲ್ಲಿ ಕೋಕೊನಟ್ ರಿಸರ್ಚ್ ಸ್ಟೇಷನ್ ಇವೆ. ಅಲ್ಲಿ ಹೈಬ್ರಿಡ್ ತೆಂಗಿನ ಬೀಜವನ್ನು ರಿಸರ್ಚ್ ಮಾಡುತ್ತಾರೆ. ಆದ್ದರಿಂದ ಅಲ್ಲಿ ಹೈಬ್ರಿಡ್ ತೆಂಗಿನ ಬೀಜವನ್ನು ರೈತರಿಗೆ ಕೊಡುವ ವ್ಯವಸ್ಥೆ ಇನ್ನೆಷ್ಟು ದಿವಸಗಳಲ್ಲಿ ಆಗುತ್ತದೆ ?

ಶ್ರೀ ಕೆ. ಎಚ್. ಪಾಟೀಲ್.—ಈಗ ಕೈಲಿ ತೆಗೆದುಕೊಂಡಿರುವುದು ತೆಂಗಿನ ಬೀಜವನ್ನು ರಿಸರ್ಚ್ ಮಾಡುವುದು. ಅದು ಮುಂದೆ ಎಷ್ಟು ದಿವಸಗಳು ಇರುತ್ತದೆ, ಇನ್ನೂ ಎಷ್ಟು ದಿವಸಗಳವರೆಗೆ ರಿಸರ್ಚ್ ನಡೆಯಬೇಕೆಂಬುದನ್ನು ನೋಡಬೇಕು.

Sri MALLIKARJUNA KHARGE.—May I know whether the Government is going to establish a Pulses Research Station at Gulbarga ?

Sri K. H. PATIL.—It is under active consideration of the Government.

ಶ್ರೀ ಎಂ. ಬಿ. ರಾಮಸ್ವಾಮಿ.—ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಎಷ್ಟು ಮೀಡಿಯಂ ಮತ್ತು ಮೇಜರ್ ರಿಸರ್ಚ್ ಸ್ಟೇಷನ್ಸ್ ಇವೆ ? ಅವು ಎಲ್ಲೆಲ್ಲಿ ಇವೆ ?

Sri K. H. PATIL.—It has already been placed on the Table of the House.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಮತ್ತೊಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ವಿಷಯವನ್ನು ಹೇಳಿದ್ದೀರಿ. ಈಗ ಇನ್ನೊಂದು ಸ್ಥಾಪನೆಮಾಡುವ ಅವಶ್ಯಕತೆ ತಮಗೆ ಕಂಡುಬಂದಿದೆ. ಹಾಗೆ ಸ್ಥಾಪನೆ ಮಾಡುವುದಾದರೆ ಯಾವ ಪ್ರದೇಶದಲ್ಲಿ ಅದನ್ನು ಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡಿದ್ದೀರಿ ?

ಶ್ರೀ ಕೆ. ಎಚ್. ಪಾಟೀಲ್.—ನನ್ನ ಪ್ರತ್ಯಕ್ಷ ಅನುಭವದಿಂದ ಹೇಳುವುದಾದರೆ, ಅದು ಕಮಿಟಿಯ ವರದಿಯ ಮೇಲೆ ಅವಲಂಬಿಸಿದೆ. ಅದನ್ನು ಎಲ್ಲಿ ಸ್ಥಾಪನೆ ಮಾಡಬೇಕು ಎಂಬುದು ಅವರಿಂದ ವರದಿ ಬಂದನಂತರ ವಿಚಾರ ಮಾಡುತ್ತೇವೆ.

ಶ್ರೀ ಆರ್. ಎಸ್. ಪಾಟೀಲ್.—ಈ ವರ್ಷ ನೂರಾರು ಎಕರೆಗಳಷ್ಟು ಜಮೀನು ಇದರಲ್ಲಿ ನಿರುಪಯೋಗವಾಗುತ್ತಿದೆ. ಅದರ ಬಗ್ಗೆ ನಿವಾರಣೋಪಾಯಗಳನ್ನು ಇದುವರೆಗೆ ಕೈಗೊಂಡಿಲ್ಲ. ಪ್ರತಿವರ್ಷ ಈ ಸಂಶೋಧನಾ ಕಾರ್ಯಕ್ಕೆ ಎಷ್ಟು ಹಣ ಖರ್ಚು ಮಾಡಬೇಕೆಂದು ಉದ್ದೇಶಪಟ್ಟಿದ್ದೀರಾ? ಏನೇನು ಕಾರ್ಯಕ್ರಮವನ್ನು ಅದರ ಬಗ್ಗೆ ಹಾಕಿದ್ದೀರಾ ?

ಶ್ರೀ ಕೆ. ಎಚ್. ಪಾಟೀಲ್.—ಕೋಟಿಗಟ್ಟಲೆ ಹಣವನ್ನು ಈ ಬಾಬಿಗೆ ಖರ್ಚುಮಾಡಬೇಕೆಂಬ ಉದ್ದೇಶವಿದೆ. ಅದನ್ನು ರಿಸರ್ಚ್‌ನವರು ಒಪ್ಪಬೇಕು. ಮಾನ್ಯ ಸದಸ್ಯರು ಹೇಳಿದಂತೆ ಎಷ್ಟು ಹಣ ಸಾಧ್ಯವೋ ಅಷ್ಟು ಹಣವನ್ನು ಖರ್ಚು ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇನ್ನೊಂದು ವ್ಯವಸಾಯ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಬೇಕಾದಷ್ಟು ಮೆಡಿಕಲ್ ಕಾಲೇಜುಗಳು ಇಲ್ಲದಿದ್ದರೂ ಕೇವಲ ರಾಜಕೀಯ ಕಾರಣಕ್ಕೋಸ್ಕರವಾಗಿ ಇನ್ನೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ಆಲೋಚನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅದು ಮಾನ್ಯ ಸದಸ್ಯರ ಅಭಿಪ್ರಾಯ ಇರಬಹುದು. ಅಗ್ರಿಕಲ್ಚರಲ್ ಯೂನಿವರ್ಸಿಟಿಯ ಉದ್ದೇಶ, ಬೇರೆ ಕಾಲೇಜುಗಳನ್ನು ನಡೆಸುವುದಕ್ಕೆ ಮತ್ತು ಪ್ರಮುಖವಾದ ಉದ್ದೇಶ ರಿಸರ್ಚ್ ಮಾಡುವುದಕ್ಕೆಂದು ಮಾನ್ಯ ಸದಸ್ಯರ ಗಮನಕ್ಕೆ ಬಂದಿರಬಹುದು. ಪ್ರತಿಯೊಂದು ಹಳ್ಳಿಹಳ್ಳಿಗೂ ಈ ರಿಸರ್ಚ್ ಕಾರ್ಯ ಮುಟ್ಟಬೇಕೆಂದು ನಮ್ಮ ಉದ್ದೇಶ.

ಶ್ರೀ ಕೆ. ಎಚ್. ಪಾಟೀಲ್.—ಈ ರಾಜ್ಯದ ವಿವಿಧ ಭಾಗಗಳಲ್ಲಿಯೂ ಭೂಗುಣ, ಹವಾಗುಣ, ನೀರಾವರಿ ಅನುಕೂಲತೆ—ಇವುಗಳನ್ನು ನೋಡುವುದಲ್ಲದೆ ಮತ್ತೊಂದು ಯೂನಿವರ್ಸಿಟಿ ರಿಸರ್ಚ್ ಸ್ಟೇಷನ್ ತೆರೆಯಬೇಕೆಂದು ಮಾನ್ಯ ಮಂತ್ರಿಗಳಿಗೆ ಅನೇಕ ಕಡೆಗಳಿಂದ ಮನವಿಗಳು ಬಂದಿರುವುದು ತಮ್ಮ ಗಮನದಲ್ಲಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಇದನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ರಿಸರ್ಚ್ ಸ್ಟೇಷನ್ನಲ್ಲಿ ಪರಿಶೋಧನೆಗೆ ಅವಶ್ಯಕವಾಗಿ ಬೇಕಾದಂಥ ಕ್ವಾಲಿಫೈಡ್ ಸೈಂಟಿಸ್ಟ್ಸ್, ಲೈಬ್ರರಿ ಎಕ್ವಿಪ್‌ಮೆಂಟ್ಸ್ ಇಲ್ಲ. ಸಬ್‌ಸ್ಟೇಷನ್‌ಗಳಲ್ಲಿ ಬರೀ ಫಾರಮ್ ಮ್ಯಾನೇಜ್ ಮಾಡುತ್ತಿದ್ದಾರೆ. ಅಲ್ಲಿ ಯಾವ ವಿಧವಾದ ರಿಸರ್ಚ್ ವರ್ಕ್ ಸಹ ನಡೆಯುತ್ತಾ ಇಲ್ಲ. ಇದರಿಂದ ರೈತರಿಗೆ ಯಾವ ವಿಧವಾದ ಪ್ರಯೋಜನವೂ ಆಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದಕ್ಕಾಗಿ ಸ್ಮಾಲ್ ಸ್ಕೇಲ್ ರಿಸರ್ಚ್ ಕೇಂದ್ರಗಳನ್ನು ರದ್ದು ಮಾಡಿ ರೀಜನಲ್ ರಿಸರ್ಚ್ ಸ್ಟೇಷನ್‌ಗಳನ್ನು ಬಲಪಡಿಸಿ ಅಲ್ಲಿ ಹೆಚ್ಚು ರಿಸರ್ಚ್ ನಡೆಯುವುದಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ರೀಜನಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಏನು ಮಾಡುತ್ತದೆಯೋ ಅದರ ಪ್ರಕಾರ ಅಲ್ಲಿಯೂ ಕ್ರಮ ತೆಗೆದುಕೊಳ್ಳಲಾಗುತ್ತದೆ. ಸಣ್ಣ ಸಣ್ಣ ರಿಸರ್ಚ್ ಇನ್‌ಸ್ಟಿಟ್ಯೂಷನ್‌ಗಳನ್ನು ರದ್ದುಮಾಡುವ ವಿಷಯ ಇನ್ನೂ ತೆಗೆದುಕೊಂಡಿಲ್ಲ.

Levy Paddy in Coorg District

687. Sri G. K. SUBBAIAH (Virajpet).—

Will the Minister of State for Food and Civil Supplies be pleased to state :—

(a) the number of quintals of paddy collected as levy in Coorg District during the years of 1969-70, 1970-71, 1971-72 ;

(b) the number of quintals of paddy used and the paddy spoiled in godown (Yearwise figures may be furnished) ;

(c) the number of quintals of paddy still in the godowns ;

(d) the numbers of quintals of wheat stocked in Coorg District from 1969 to 1972 ;

(e) the number of quintals of wheat used and the quantity of wheat spoiled during these years ?

Smt. E. E. VAZ (Minister of State for Food and Civil Supplies).—

(a) 1969-70 (In Quintals)	1970-71 (In Quintals)	1971-72 (In Quintals)
44,940.64	7,088.60	17,743.52

(b) and (c) No instance of paddy having been spoiled in godown has been reported. A stock of 1,787 of paddy of 1971-72 season is available.

(d) 12,487.53 quintals of wheat of the year 1968-69.

(e) 6,386.58 quintals of wheat was utilised and 6,100.95 quintals of wheat which was partially deteriorated, was disposed of by tender sale.

ಶ್ರೀ ಜಿ. ಕೆ. ಸುಬ್ಬಯ್ಯ.—ಉತ್ತರದಲ್ಲಿ ಹೇಳಿರುವ ಪ್ರಕಾರ 6 ಸಾವಿರ ಚಿಲ್ಲರೆ ಕ್ವಿಂಟಾಲ್ ಗೋಧಿ ಹಾಳಾಗಲು ಕಾರಣವೇನು ?

ಶ್ರೀಮತಿ ಇ. ಇ. ವಾಜ್.—ಅಷ್ಟು ಗೋಧಿ ಸ್ಟಾಕ್ ಹಾಳಾಗಲಿಕ್ಕೆ ಕಾರಣ ಕೆಲವಾಟ್ಟಿಗೆ ಉಂಟು. ಅದಕ್ಕಾಗಿಯೇ ಅಲ್ಲಿನ ಜಿಲ್ಲಾಧಿಕಾರಿಗಳ ರಿಪೋರ್ಟ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. The above stocks of wheat were received at Ponnampet godown during the monsoon season (from 15-6-68 to 13-8-68) and due to bad climatic conditions the stocks became deteriorated. The stocks of wheat (as well as of Milo) were got fumigated on 7-8-1968, 7-10-1968 and 8-10-1968 and on 7-3-1969. The comprehensive disinfestation service had also been got done every month. Thus, timely precautions were taken by the Deputy Commissioner, Coorg District for the safety of the grains In spite of these precautions, deterioration and infestation set in.

ಶ್ರೀ ಜಿ. ಕೆ. ಸುಬ್ಬಯ್ಯ.—ಅದನ್ನು ಮಾರಾಟ ಮಾಡಿದ್ದರಿಂದ ಸರ್ಕಾರಕ್ಕೆ ಹಣ ಎಷ್ಟು ಬಂದಿದೆ ?

ಶ್ರೀಮತಿ ಇ. ಇ. ವಾಜ್.—ಅಲ್ಲಿ ಪಾವತಿ ಮಾಡಿದ ಪ್ರಕಾರ ಸುಮಾರು ಒಂದು ಲಕ್ಷ 10 ಸಾವಿರ ಚಿಲ್ಲರೆ ರೂಪಾಯಿ.

ಶ್ರೀ ಜಿ. ಕೆ. ಸುಬ್ಬಯ್ಯ.— ಕೊಡಗು ಜಿಲ್ಲೆಯಲ್ಲಿ ಗೋಧಿ ಹೆಚ್ಚಿಗೆ ಹೊಂದಿಲ್ಲದೇ ಇರುವುದರಿಂದ, ಮಾರಾಟ ಆಗುವುದಕ್ಕೆ ಅದು ಇಲ್ಲದೇ ಇರುವುದನ್ನು ತಾವು ಒಪ್ಪುತ್ತೀರಾ ? ಅಲ್ಲಿ ಆಹಾರಕ್ಕೆ ಬರೀ ಅಕ್ಕಿಯನ್ನೇ ಉಪಯೋಗಿಸುವುದರಿಂದ ಗೋಧಿ ಹೆಚ್ಚಿಗೆ ಉಪಯೋಗ ಅಲ್ಲಿ ಆಗದೇ ಇರುವುದರಿಂದ ಮತ್ತು ಗೋಧಿ ಅಷ್ಟು ಅಲ್ಲಿ ಹಾಳಾಗಿ ಹೋಗಿದೆಯೆಂಬುದನ್ನು ಒಪ್ಪುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಎಷ್ಟು ಅಗತ್ಯವಿದೆಯೋ ಅಷ್ಟನ್ನು ಕಳುಹಿಸುತ್ತೇವೆ, ಈಗ ಅದಷ್ಟು ಅಕ್ಕಿ ಕೊಟ್ಟು ಗೋಧಿಯನ್ನು ಕಡಿಮೆ ಕೊಡುತ್ತೇವೆ.

ಶ್ರೀ ಜಿ. ಕೆ. ಸುಬ್ಬಯ್ಯ.—ಈಗಲಾದರೂ ಎಲ್ಲಿ ಗೋಧಿ ಬೆಳೆಯುವುದಿಲ್ಲ ಅಲ್ಲಿಗೆ ಜೋಳವಾದರೂ ಕಳುಹಿಸಿ; ಎಲ್ಲಿ ಅಗತ್ಯವಾಗಿ ಗೋಧಿ ಬೇಕಾಗುತ್ತದೋ ಅಲ್ಲಿಗೆ ಅದನ್ನು ಎಷ್ಟು ಸಾಧ್ಯವೋ ಅಷ್ಟನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಪ್ರತಿಯೊಂದು ಕಡೆಗಳಲ್ಲಿಯೂ ಎಲ್ಲಿ ಗೋಧಿ ಕಡಿಮೆ ಇದೆಯೋ ಅಲ್ಲಿಗೆ ಕೊಡುತ್ತಿದ್ದೇವೆ. ನಮ್ಮಲ್ಲಿ ಗೋಧಿ ಕಡಿಮೆ ಪ್ರಮಾಣದಲ್ಲಿರುವುದರಿಂದ ಅದು ಬೇಡ ಎಂದು ಹೇಳುವ ಕಡೆಗಳಲ್ಲಿ ಅದನ್ನು ಕಳುಹಿಸುವುದಕ್ಕೆ ಸರ್ಕಾರ ಖಂಡಿತವಾಗಿಯೂ ತಯಾರು ಇಲ್ಲ.

Collection of Levy in Coondapur Taluk

690. Smt. WINNIFRED F. FERNANDES (Coondapur).—

Will the Minister of State for Food and Civil Supplies be pleased to state :—

(a) whether Government is aware that Loans are obtained against security of large quantities of paddy by Landlords, from Co-operative Banks and Societies in Coondapur Taluk, without filing declarations, as required under the relevant rules ;

(b) if not, whether Government would make enquiries in the matter and take such action as is proper, such as to collect Levy Paddy from the persons, who hold stocks over and above the allowed limit ?

Smt. E. E. VAZ (Minister of State for Food and Civil Supplies).—

(a) No

(b) (i) Levy is collected from the growers as per the scales prescribed under the Levy Orders ;

(ii) Instructions for the enforcement of the provisions of the Mysore Foodgrains (Declaration of Stocks) Order, 1967 have already been issued to all the concerned authorities ;

(iii) Collection of levy over and above the scales prescribed under the existing levy orders is not legally persimble.

Smt. WINNIFRED F. FERNANDES.—For my question (a) the reply is 'No'. Does it mean that the Government have made enquiries with the Co.operative societies and Banks for giving loans ?

† Smt. E.E. VAZ.—We got this report after making enquires only.

Smt. WINNIFRED F. FERNANDES.—What are the instructions issued to the authorities to enforce the provisions of the Mysore Food-grains Order 1967 ?

Smt. E. E. VAZ.- According to the Mysore Foodgrains (Declaration of Stocks) Order, 1967, every person who is in possession or control of 30 quintals or more of paddy or 25 quintals or more of rice or such quantity of paddy and rice, the aggregete of which comes to 25 quintals or more has to declare the stock to the local authorities.

Smt. WINNIFRED F. FERNANDES.—What is the target fixed for collection of levy paddy for the year 1972-73 in South Kanara District ?

Smt. E. E. VAZ.—The target fixed for South Canara is 3,500 tonnes ; but so far the procurement of paddy is of the orrer of 2,883 tonnes and for Coondapur Taluk in particular, the target fixed was 9,000 tonnes against which 4,329.22 quintals of paddy has been procured.

Smt. WINNIFRFD F. FERNANDES.—Is it not a fact the Co-operative Banks and the Co-operative Societies are duping the Government by taking this paddy whichis not accounted for and what is the action you are going to take against these persons ?

Smt. E. E. VAZ.—It cannot be admitted that they are taking paddy which is not accounted for because every grower has to declare the stock if he has more than 40 quintals of paddy. If it is not declared, then whatever stock he has, will be confiscated by the Government.

Mr. DEPUTY SPEAKER.—Since Sri Byrappaji desires to put supplimentaries I put question No. 662.

Complaints Against the Management of Geetha Sishuvihar Primary and MIddle Schools

662. Sri A. M. SURYANARAYANA GOWDA (Yelahanka).

Will the Minister for Education be pleased to state :—

(*a*) whether the teachers working in Geetha Sishuvihar Primary and Middle Schools at Bangnlore had complained to Government that they are paid less salary by the management of this school ; if so, the aotion taken in the matter ;

(*b*) whether all the accounts of the Institutions are written by the Secretary/Organiser/Member of the Board of Management of the said Institution ?

Sri A. R. BADARINARAYANA (Minister for Education).—

(*a*) On complaints to that effect, the Deputy Director of Public Instruction investigated the matter and found that all the teachers had signed for the full amount in the acquittance in token of their having received full salary.

(*b*) The accounts are written by the Head Master and scrutinised by the Founder Secretary of the Institute.

ಶ್ರೀ ಬಿ. ಬೈರಪ್ಪಾಜಿ.—ಇಲ್ಲಿ ತಿಳಿಸಿರತಕ್ಕ ಗೀತಾ ಶಿಶು ವಿಹಾರ ಮತ್ತು ಕಮಲಾ ನೆಹ್ರೂ ಮಕ್ಕಳ ಮಂದಿರ ಇತ್ಯಾದಿ ನೂರಾರು ಶಿಶುವಿಹಾರಗಳೂ ಮತ್ತು ಹೈಸ್ಕೂಲುಗಳೂ ಉಪಾಧ್ಯಾಯರಿಗೆ ಸರಿಯಾಗಿ ಸಂಬಳ ಕೊಡದೆ ಸಮಾಜ ಘಾತುಕ ಕಾರ್ಯದಲ್ಲಿ ತೊಡಗಿರುತ್ತವೆ. ಇವುಗಳ ಬಗ್ಗೆ ಸರ್ಕಾರದವರು ಒಂದು ಸಮಗ್ರ ಎನ್‌ಕ್ವೈರಿ ನಡೆಸಿ, ಈ ಶಿಕ್ಷಣದ ಬಗ್ಗೆ ಒಂದು ಉತ್ತಮ ವ್ಯವಸ್ಥೆಯನ್ನು ಏರ್ಪಾಡು ಮಾಡುತ್ತೀರಾ ?

† ಶ್ರೀ ಎ. ಆರ್. ಬದರಿನಾರಾಯಣ.—ಹೀಗೆ ಸಮಾಜಘಾತುಕ ಕೆಲಸಗಳನ್ನು ನಡೆಸತಕ್ಕ ಸಂಸ್ಥೆಗಳ ಬಗ್ಗೆ ಸೂಕ್ಷ್ಮ ರೀತಿಯಲ್ಲಿ ಬುದ್ಧಿ ಕಲಿಸತಕ್ಕ ಕಾರ್ಯಕ್ರಮಗಳನ್ನು ನಾವು ಕೈಗೊಳ್ಳುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.- ಇಂಥ ಅಪಾದನೆಗಳು ತಮಗೆಷ್ಟು ಬಂದಿವೆ, ಆ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಎ. ಆರ್. ಬದರಿನಾರಾಯಣ.—1970 ಕ್ಕೆ ಹಿಂದೆ ಸಂಬಳದಲ್ಲಿ 30—40 ರೂಪಾಯಿಗಳನ್ನು ಹಿಡಿದು ಕೊಡುತ್ತಿದ್ದಾರೆ, ಪೂರ್ತ ಸಂಬಳ ಕೊಡುತ್ತಿಲ್ಲ ಎಂಬ ಒಂದು ಅಪಾದನೆ ಬಂದಿತ್ತು. ಆಗ ಸಂಬಳವನ್ನು ಚೆಕ್ ಸಿಸ್ಟಂನಲ್ಲಿ ಕೊಡತಕ್ಕ ಪದ್ಧತಿ ಇರಲಿಲ್ಲ. ಈಗ ನಾವು ಅವರೆಲ್ಲರಿಗೂ ನೇರವಾಗಿ ಸಂಬಳ ಕೊಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಸಂಸ್ಥೆಯಲ್ಲಿ ಒಬ್ಬರೇ ಉಪಾಧ್ಯಾಯರು ಎರಡು ರೀತಿಯ ಸೈನ್ ಮಾಡಿ ಇಬ್ಬರು ಉಪಾಧ್ಯಾಯರ ಸಂಬಳವನ್ನು ಪಡೆಯುತ್ತಿದ್ದಾರೆ ಅನ್ನುವುದೂ ಮತ್ತು ಅಲ್ಲಿ ಕೆಲಸದಲ್ಲಿರತಕ್ಕ ಉಪಾಧ್ಯಾಯರೆಲ್ಲ ಒಂದೇ ಮನೆಯವರು ಅನ್ನತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಅನೇಕ ವರ್ಷಗಳಿಂದ ಇಂಥಾ ಕಳೆ ಬೆಳೆದುಬಂದಿದೆ. ನಾನು ನೋಡುವುದಕ್ಕೆ ಸೌಮ್ಯವಾಗಿ ಕಂಡರೂ ಕಾರ್ಯವನ್ನು ಉಗ್ರವಾಗೇ ಕೈಗೊಳ್ಳುತ್ತೇನೆ. ವಿದ್ಯಾ ಇಲಾಖೆ ಒಂದು ದೊಡ್ಡ ಸಮುದ್ರ. ನಾವು ಕೈಗೊಂಡಿರತಕ್ಕ ಕಾರ್ಯದಿಂದ ಸ್ವಲ್ಪ ಇಂಪ್ರೂವ್‌ಮೆಂಟ್ ಕಾಣುತ್ತಿದೆ.

ಶ್ರೀ ಎಚ್. ಎಸ್, ಸಿದ್ದಪ್ಪ.—ಹೊಸಹಳ್ಳಿಯಲ್ಲಿರತಕ್ಕ ಸಂಗಮೇಶ್ವರ ಎಂಬ ಖಾಸಗಿ ಶಾಲೆಯಲ್ಲಿ ಹಿಂದಿ ಅಧ್ಯಾಪಕರಿಗೆ ಸಂಬಳ ಕೊಡದೆ ಆಕೆಯನ್ನು ಹೊಡೆದು ಫಜೀತಿ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಅಲ್ಲಿಯೂ ಸಾಕಷ್ಟು ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲದೆ ಎಲ್ಲಿ ಮಕ್ಕಳ ತಾಯಿ ತಂದೆಗಳೂ ಮತ್ತು ಉಪಾಧ್ಯಾಯರೂ ಶಾಲೆಗಳನ್ನು ನಡೆಸುವುದಕ್ಕೆ ಮುಂದೆ ಬಂದರೆ ಅವರಿಗೆ ಸರ್ಕಾರ ಸಹಾಯ ನೀಡುವುದಕ್ಕೆ ಸಿದ್ಧವಿದೆ.

ಶ್ರೀ ಕೆ. ಎಂ. ನಾಗಣ್ಣ.—ನಾನು ಹಿಂದೆ ಉಪಾಧ್ಯಾಯರಿಗೆ ಸಂಬಳವನ್ನು ಚೆಕ್ ಮೂಲಕ ಕ್ರಾಸ್ ಮಾಡಿ 'ಪೇಯೀಸ್ ಅಕೌಂಟಿ'ಗೆ ಕೊಡುವಂತೆ ಹೇಳಿದ್ದನ್ನು ಪರಿಶೀಲನಾರ್ಹವಾದ ಸಲಹೆ ಎಂದು ತಾವು ತಿಳಿಸೋಣವಾಗಿತ್ತು. ಅದನ್ನು ಜಾರಿಗೆ ಕೊಟ್ಟಿದ್ದೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಎಷ್ಟು ಸಾಧ್ಯವೋ ಅಷ್ಟನ್ನು ಮಾಡಬಹುದು. ಇನ್ನು ಅವರಾಗೇ ಹೋಗಿ ಗುಂಡಿಗೆ ಬಿದ್ದರೆ ಏನು ಮಾಡುವುದು ?

ಶ್ರೀ ಕೋಣಂದೂರು ಲಿಂಗಪ್ಪ.—ಇದಕ್ಕೆ ಡಿ ಡಿ ಪಿ ಐ ಆಫೀಸಿನಲ್ಲಿರತಕ್ಕ ಕೆಲವು ಅಧಿಕಾರಿಗಳು ಪರೋಕ್ಷ ಬೆಂಬಲ ಕೊಡುತ್ತಿರುವುದರಿಂದ ಇವು ನಡೆಯುತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಎಲ್ಲರೂ ಎಂದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

SHORT NOTICE QUESTION AND ANSWER

Yarn Depots opened in North Karnataka Areas

6. **Sri MALLIKARJUNA KHARGE** (Gurmitkal).—

Will the Minister for Industries be pleased to state :—

(*a*) the number of Yarn depots opened in drought affected areas of North Karnataka ;

(*b*) the number of Identification Cards issued to Weavers in that region ?

Sri S. M. KRISHNA (Minister for Industries).—

(*a*) 7 (Seven).

(b) 37,000 (Thirty-seven thousand).

Sri MALLIKARJUNA KHARGE.—From the answer furnished, you have opened 7 Yarn Depots in North Karnataka. May I know how many Yarn Depots are in working condition and to whom you have entrusted this work ?

2-00 P.M.

Sri S. M. KRISHNA —All the yarn depots are in working condition according to the information available in the Department.

Sri MALLIKARJUNA KHARGE.—You have suspended two officers out of 7, is it a fact ? How many are working and what is the quantity of yarn distributed ?

Sri S. M. KRISHNA.—We have suspended some officials. But suitable substitutes have been sent there. So far 1,15,000 Kgs of yarn worth about Rs. 22 lakhs has been distributed among the 7 depots.

Sri MALLIKARJUNA KHARGE.—My question is what is the quantity of yarn and what are the counts you are supplying to the weavers and to 37 card holders ?

Sri S. M. KRISHNA.—It depends upon the counts we receive and is readily available for distribution. The people in Gurumitkal want 40 counts. But unfortunately 40 counts yarn is not available. We have to depend upon the Tamilnadu. The Hon. Members are aware that there is heavy power cut in Tamilnadu as a result of which there was some delay in procuring 40 counts yarn. But efforts were made by the Department and now we were able to procure some quantity of 40 counts. We have sent the some to Gurumitkal by giving priority.

ಶ್ರೀ ಜೆ. ಎಲ್. ಕಬಾಡಿ.—ವಿಜಾಪುರ ಜಿಲ್ಲೆಯಲ್ಲಿ ತೆರೆದಿರುವ ಭಂಡಾರಗಳ ಸಂಖ್ಯೆ ಎಷ್ಟು ? ಅಲ್ಲಿ ಸರಿಯಾಗಿ ಹಂಚಿಕೆ ವಗೈರೆ ಮಾಡದೆ ತಪ್ಪಿತಸ್ಥರಾಗಿರುವ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎಸ್. ಎಂ. ಕೃಷ್ಣ.—ಇಳಕಲ್ ಮತ್ತು ಬನಹಟ್ಟಿ ಈ ಎರಡುಕಡೆ ತೆರೆದಿದೆ. ಇಲ್ಲಿ ನೂಲನ್ನು ಹಂಚಿಕೆ ಮಾಡಿದ್ದಾರೆ. ಬನಹಟ್ಟಿಯಲ್ಲಿ ಇಬ್ಬರ ಮೇಲೆ ಮತ್ತು ಇಳಕಲ್ಲನಲ್ಲಿ ಇಬ್ಬ ಮೇಲೆ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದ.

ಶ್ರೀ ಜಿ. ಎಲ್. ಕಬಾಡಿ.—ಯಾವ ಕಾರಣಕ್ಕಾಗಿ ಕ್ರಮ ಅವರಮೇಲೆ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಎಂ. ಕೃಷ್ಣ.—ನೂಲನ್ನು ಯಾವರೀತಿ ಹಂಚಬೇಕೆಂದು ನಿರ್ದೇಶ ಕೊಟ್ಟಿತ್ತೋ ಅದನ್ನು ಮೀರಿ ವರ್ತಿಸಿದ್ದರಿಂದ ಅವರಿಬ್ಬರನ್ನೂ ಸಸ್ಪೆಂಡ್ ಮಾಡಿ ಕ್ರಮತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದೆ.

ಶ್ರೀ ಜೆ. ಎಲ್. ಕಬಾಡಿ.—ಬಿಜಾಪುರ ಜಿಲ್ಲೆಯಲ್ಲಿ 4 ಕಡೆ ಡಿಪೋಗಳನ್ನು ತೆರೆಯುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಅದರಂತೆ ಇಂಡಿ ಮುಂತಾದ ಕಡೆ ಏಕೆ ಭಂಡಾರವನ್ನು ತೆರೆದಿಲ್ಲ ?

ಶ್ರೀ ಎಸ್. ಎಂ. ಕೃಷ್ಣ.—ಆರ್ಥಿಕ ಮುಗ್ಗಟ್ಟಿದೆ. ಅದಕ್ಕಿಂತಲೂ ಹೆಚ್ಚಾಗಿ ನಮಗೆ ಬರುವ ನೂಲಿನ ಪ್ರಮಾಣ ಬಹಳಮಟ್ಟಿಗೆ ಕುಂದಿರುವುದರಿಂದ ತೊಂದರೆಯಾಗಿದೆ. ನಮ್ಮ ದೇಶದಲ್ಲಿ ಉತ್ಪತ್ತಿಯಾಗುವ ನೂಲಿನಲ್ಲಿ ಸೇಕಡ 60ರಷ್ಟು ತಮಿಳುನಾಡು ಒಂದರಲ್ಲೇ ಉತ್ಪತ್ತಿಯಾಗುತ್ತಿತ್ತು. ಅಲ್ಲಿ ಸೇಕಡ 70 ರಿಂದ 80ರವರೆಗೆ ಪವರ್ ಕಟ್ ಆಗಿರುವುದರಿಂದ ತಮಿಳು ನಾಡಿನಲ್ಲಿ ಈಗ ಅಲ್ಲಿನ ನೇಕಾರರಿಗೇ ನೂಲು ಸಾಕಷ್ಟು ಕೊಡಲು ಸಾಧ್ಯವಾಗುತ್ತಿಲ್ಲ. ಈ ವಿಶೇಷ ಪರಿಸ್ಥಿತಿಯಿಂದ ಹೆಚ್ಚು ಡಿಪೋಗಳನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಾಗುವುದಿಲ್ಲ.

Sri MALLIKARJUNA KHARGE.—The Hon. Minister has not answered my question. I wanted to know what is the quantity supplied to each card holder ?

Sri S. M. KRISHNA.—Every card-holder according to our estimate is entitled to get 5 Lbs per month.

ಶ್ರೀ ಜೆ. ಎಲ್, ಕಬಾಡಿ.—ಬಿಜಾಪುರ ಜಿಲ್ಲಾ ಸ್ಪಿನಿಂಗ್ ಮಿಲ್ಲುಗಳವರು ಮಾರ್ಚಿಯವರೆಗೆ ಇರುವ ದರದಮೇಲೆ ಉತ್ಪತ್ತಿಯಾಗುವ 40 ಮತ್ತು 34 ಕೌಂಟುಗಳ ನೂಲನ್ನು ತೆಗೆದುಕೊಳ್ಳಬೇಕು ಎಂದು ಮೀಟಿಂಗಿನಲ್ಲಿ ನಿರ್ಧಾರ ಮಾಡಿದ್ದಂತೆ ಖರೀದಿ ಮಾಡಲು ಸರಕಾರ ಮುಂದೆ ಬಂದಿಲ್ಲ. ಪ್ರತಿದಿನ ಒಂದು ಸಾವಿರ ಕೆ.ಜಿ. ನೂಲನ್ನು ತೆಗೆದುಕೊಳ್ಳಲು ಸರಕಾರ ಅಸಮರ್ಥವಾಗಿರುವುದು ನಿಜವೇ ?

ಶ್ರೀ ಎಸ್. ಎಂ. ಕೃಷ್ಣ.—ನಾನು ಮೀಟಿಂಗ್ ಕರೆದಮೇಲೆ ಕೇಂದ್ರ ಸರಕಾರದ ಕಾಮರ್ಸ್ ಮಂತ್ರಿಗಳು ಎಲ್ಲಾ ರಾಜ್ಯದ ಪ್ರತಿನಿಧಿಗಳ ಸಭೆಮಾಡಿ ಇನ್ನುಮೇಲೆ ಮಾರ್ಚ ಮಧ್ಯಭಾಗದಿಂದ ದೇಶದಲ್ಲಿ ಉತ್ಪತ್ತಿಯಾಗುವ ಎಲ್ಲಾ ನೂಲನ್ನೂ ಕೇಂದ್ರ ಸರಕಾರ ತೆಗೆದುಕೊಂಡು ರಾಜ್ಯ ಸರಕಾರಗಳಿಗೆ ಹಂಚುವ ಘೋಷಣೆ ಮಾಡಿರುವುದರಿಂದ ಯಾವ ನೂಲನ್ನೂ ಅವರ ಪರ್ಮಿಟ್ ಇಲ್ಲದೆ ನೇರವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ರಾಜ್ಯದ ನೇಕಾರರಿಗೆ ಸಾಕಷ್ಟು ಒದಗಿಸಲು ಕೇಂದ್ರ ಸರಕಾರದ ಮೇಲೆ ನಿಮ್ಮ ಪ್ರಭಾವ ಇಲ್ಲದಿರುವುದರಿಂದ ತೊಂದರೆಯಾಗಿದೆಯಲ್ಲವೇ !

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ಸರಕಾರದ ಒತ್ತಾಯದ ಮೇಲೆ ಇಡೀ ದೇಶದಲ್ಲಿ ಈಗ ಕಂಟ್ರೋಲ್ ಮಾಡಿದೆ. ಮೊದಲು ನಮ್ಮ ಪ್ರತಿನಿಧಿಗಳೇ ಕೇಂದ್ರಕ್ಕೆ ತಿಳಿಸಿದ್ದು. ಅನಂತರ ಕೇಂದ್ರ ಸರಕಾರ ನಿಯಂತ್ರಣ ತಂದಿದೆ.

ಶ್ರೀ ಆರ್. ಎಸ್. ಪಾಟೀಲ್.—ರಾಜ್ಯ ಸರಕಾರ ಈ ದೇಶದಲ್ಲಿ ನೂಲನ್ನು ಯಾವರೀತಿ ಹಂಚುವುದು ?

ಶ್ರೀ ಎಸ್. ಎಂ. ಕೃಷ್ಣ.—ಕೇಂದ್ರ ಸರಕಾರ ಕೊಡುವ ನೂಲನ್ನು ಮೈಸೂರು ಸ್ಟೇಟ್ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಹಂಚಲಾಗುವುದು, ಅದು ಏಜೆಂಟ್. ಅದು ವಿವಿಧ ಸಹಕಾರ ಸಂಘಗಳ ಮೂಲಕ ಹಂಚಿಕೆ ಮಾಡುವುದು.

ಶ್ರೀ ಜೆ. ಎಲ್. ಕಬಾಡಿ.—ಬರಗಾಲ ಪ್ರದೇಶದಲ್ಲಿ ಈಗ ನೇಕಾರರು ಭಿಕ್ಷೆ ಬೇಡಿ ಜೀವನ ಮಾಡುತ್ತಿದ್ದಾರೆ. ಈ ಬಗ್ಗೆ ಸರಕಾರಕ್ಕೆ ಮನವಿ ಮಾಡಿದರೂ ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಸರಕಾರದ ಶಿಥಿಲತೆ ಕಾರಣವೇ ಅಥವ ಕೇಂದ್ರ ಸರಕಾರದ ಮೇಲೆ ಪ್ರಭಾವ ಬೀರಿ ಸಾಕಷ್ಟು ಪಡೆಯುವ ಶಕ್ತಿಯಿಲ್ಲ ಎಂದು ತಿಳಿಯಬಹುದೇ ?

Sri S. M. KRISHNA.—This is outside the scope of the question. The Hon. Member may draw his own inference.

Mr. DEPUTY SPEAKER.—Now Question Hour is over.

Questions for Answers on the Day
(but not taken up)

Illiteracy in the State

463. **Sri K. B. KOLIWAD** (Ranebennur).—

Will the Minister for Education be pleased to state :—

(*a*) the percentage of literacy in the State ;

(*b*) the percentage of illiteracy in the age group 10-35 years ;

(*c*) the steps the Government have taken to reduce illiteracy ?

Sri A. R. BADARINARAYANA (Minister for Education).—

(*a*) 31.52 as per 1971 Census.

(*b*) Information on illiteracy in the age group 10-35 years is not available.

(*c*) The question is vague as to the age group it relates to. However :

(i) Government have already promulgated the Mysore Compulsory Primary Education Act, 1961 ;

(ii) Conduct literacy classes for adults through the—

(a) Mysore State Adult Education Council ;

(b) Regional Social Education Committee, Belgaum ;

(c) Pilot Project, Basavakalyan ; and

(d) Fuuctional Literacy Projects in Belgaum, Raichur, Bellary, Bangalore Rural District and Shimoga.

Allotment of School Maintenance Grant

523. Smt. SUMATI B. MADIMAN (Dharwar-Rural).—

Will the Minister for Education be pleased to state :—

(*a*) the amount of school maintenance grant in Rural areas allotted to each district ;

(*b*) the basis on which it is allotted ?

Sri A. R. BADARINARAYANA (Minister for Education).—

(*a*) The amount of grant allotted to each District is according to the requirement of the entire District without making any distinction between Rural and Urban areas. Statement showing distribution of funds districtwise is appended.

(*b*) On the basis of previous year's expenditure and forecast for the current year.

(SRI A. R. BADARINARAYANA)

Amount of maintenance grants allotted to each District for the year 1972-73.

	Districts	Aided Secondary Schools.	Local Body Secondary Schools. (Figures in lakhs).	Aided Primary Schools.
1	Bangalore City District.	89.00	13.00	91.00
2	Bangalore Rural District.	30.00	13.00	20.00
3	Kolar	19.04	22.00	12.80
4	Tumkur	36.00	12.50	2.00
5	Shimaga	24.00	20.00	6.50
6	Chitradurga	27.00	13.00	3·00
7	Mysore	37.00	22.27	16.16
8	Mandya	15.00	15.40	2.30
9	Coorg	20.00	0.40	1.89
10	South Kanara	72.00	20.50	120.00
11	Hassan	9.00	20.50	4.00
12	Chickmagalur	12.00	11.00	2.75
13	Gulbarga	14.00	7.50	4.50
14	Bidar	9.00	6.50	2.00
15	Raichur	11.35	6.25	4.25
16	Bellary	17.00	22.00	5.25
17	Dharwar	91.00	15.35	8.50
18	Bijapur	59.00	5.50	1.00
19	Belgaum	90.00	6.00	5.00
20	North Kanara	48.25	3.95	2.75

Appointment of Scheduled Castes an Scheduled Tribes as Assistant Surgeons and Stipendary Surgeons

665. SRI DODDATHIMMAIAH (Gulur).—

Will the Minister for Health be pleased to state :—

(*a*) the number of local candidates appointed as Assistant Surgeons and Stipendary Surgeons by the Government during last three years ;

(*b*) the number of them belonging to Scheduled Caste and Scheduled Tribe and Backward classes ?

SRI H. SIDDAVEERAPPA (Minister for Health).—

(a) (1) Health Officers, Class II-*cum*-Assistant Surgeons, Class II from 1970-71 to 1972-73 ... 658

(2) Medical Assistants (1972-73) ... 343

(b) Classification of the doctors has not been made as belonging to Scheduled Castes and Scheduled Tribes for purposes of appointment of local candidates. However, all the candidates, who had specifically mentioned in their applications as belonging to Scheduled Caste, Scheduled Tribe have been appointed.

Production of Nitrogenous Fertilisers and Mixtures at Belagola Factory

729 SRI A. D. BILIGOWDA (Maddur).—

Will the Minister for Industries be pleased to state;—

(a) whether Government have considered the possibility of producing nitrogenous fertilisers and mixtures at the Belagola factory in Mandya District ;

(b) if not, the reasons for the same ;

(c) whether another factory for the production of nitrogenous fertilisers and mixtures would be started in Mandya District to meet the requirements of the agriculturists ?

SRI S. M. KRISHNA (Minister for Industries).—

(a) No.

(b) The factory of Mysore Chemicals and Fertilisers at Belegola, is in the private sector, in which Government have no financial interest.

(c) This is not feasible.

Statement by the Minister for Public Works and Electricity

re : death of a Harijan boy at Somwarpet village, Chamarajanagar Taluk

SRI H. M. CHANNABASAPPA (Minister for Public Works and Electricity).—I promised to give during the course of Yesterday some information. The information was ready at 4 O' clock but on account of the fact that the House was adjourned I could not give it.

(SRI H. M. CHANNABASAPPA)

In this case F. I. R. was filed in the Court of the Munciff Magistrate on 25-2-1973, that is, the same day on which the case was registered. After registration of the complaint and completion of the formalities the Sub-Inspector of Police visited the spot of the incident at 4-30 p.m. on the same day.

Sri M. H. JAYAPRAKASH NARAYAN.--We want a copy of the statement.

Sri H. M. CHANNABASAPPA.—I only submitted that I weuld give further information. Therefore the hon. member will please bear with me,

The House wanted to know when the F. I. R. was filed. It was submitted on the same day. The Sub-Inspector of Police visited the spot of the incident at about 4-30 p. m. on the same day. The accused was absconding since the incident till he was arrested on 9-3-1973. Eversince the arrest and production of the accused before the Magistrate, he is continuing even now in judicial custody. The father of the deceased boy after the death of the boy did not know what to do. He contacted the Patel next day (25-3-1973) at about 11-30 a.m. A report was given to the police at about 1-30 p.m. on the same day. The case was registered the same day at 2 p.m. The accused could not be arrested earlier because he was absconding. According to the post mortem the cause of death is due to dehydration. After getting the report a *prima facie* case of murder was made out and the accused was charge sheeted before the Munsiff Magistrate, Chamarajanagar on 2-3-1973 for the offences committed under section 302.

Mr. DEPUTY SPEAKER.—We will go to the next item.

Calling Attention to Matters of Urgent Public Importance :

re : Levy of exhorbitant T. T. fines in Hosanagar Taluk.

Sri S. M. SHEERANALY CHANDRASEKHAR (Hosanagar).—I call the attention of the Minister for Revenue to the hardship caused to the ryots of Hosanagar Taluk due to levy of exorbitant T. T. fines.

Sri K. H PATIL (Minister for Agriculture and Forests).—In Hosanagar Taluk an extent of 3,388 acres of Government land is under unauthorised cultivation for many years. Occupation of Government land unauthorisedly is an offence and the person is liable for summary eviction by the Deputy Commissioner and any crop including trees raised in the land shall be forefeited to Government. The unauthorised occupant is required to pay twice such amount of assessment for every year and also a fine not exceeding Rs. 500 per acre. But in Hosanagar Taluk fines have been levied generally at the rate of Rs. 25 to 50 per

acre during the previous years. During the last one year, fines have been levied at the rate of Rs. 5 to 10 per acre and in the case of construction of huts a nominal fine of Re. 1 to Rs. 2 has been levied. However, in a few cases where the encroachments were in tank-beds, roads and sites required for public use heavy fines have been levied. A sum of about Rs. 2 lakhs is outstanding recovery. The amount includes T. T. fines, assessment and cesses. The amounts are reported to be outstanding recovery since about 10 years and therefore, a heavy sum has been accumulated. In some cases no application for regularisation of unauthorised occupation have been filed by the encroachers and hence no regularisation can be considered. In some other cases, it was found that the lands under unauthorised occupation have already been transferred to the Forest Department for afforestation work and Revenue Department cannot take any action in this behalf.

There are 1,129 applications for regularisation of the encroached lands. Generally, exorbitant T. T. Fines have not been levied and no grave situation has arisen on this account in Hosanagar Taluk as alleged by the Hon'ble Member.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಮ್ಮ ಹೇಳಿಕೆಯೊಳಗೆ ತಾವೇ ಒಪ್ಪಿಕೊಂಡಿದ್ದೀರಿ, 500 ರೂಪಾಯಿಯವರೆಗೆ ಒಂದು ಎಕರೆಗೆ ಟಿ ಟಿ ಫೈನ್ ಹಾಕಬಹುದು ಎಂದು. ಎಕರೆ ಒಂದಕ್ಕೆ 500 ರೂಪಾಯಿ ಟಿ ಟಿ ಫೈನ್ ಹಾಕಿರುವ ಕೇಸುಗಳು ನೂರಾರು ಇವೆ. ಇದು ಸತ್ಯವೇ? ಅಲ್ಲದೆ 10 ವರ್ಷಗಳಿಂದ ದರಖಾಸ್ತು ವಿಲೇವಾರಿ ಆಗದೆ ಇರುವುದರ ಕಾರಣ ಇಷ್ಟೊಂದು ಬಾಕಿ ನಿಲ್ಲುವುದಕ್ಕೆ ಕಾರಣ ಎನ್ನುವುದು ತಮ್ಮ ಗಮನಕ್ಕೆ ಬಂದಿರಬಹುದು ?

Mr. DEPUTY SPEAKER.—If you have got specific cases please pass on.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—1968ನೇ ಇಸವಿಯಲ್ಲಿ ಅರ್ಜಿ ಹಾಕಬೇಕು ಎಂದು ಕಾನೂನು ಬಂದಾಗ ಅರ್ಜಿಗಳನ್ನು ಹಾಕಿದರೂ ಕೂಡ 10 ವರ್ಷಗಳವರೆಗೆ ದರಖಾಸ್ತು ವಿಲೇವಾರಿಯಾಗದೆ ತೊಂದರೆಯಾಗಿದೆ, ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ?

Sri K. H. PATIL.—After the present Government came to power no person has been fined heavily. In the previous period it is true that levy has been levied and we cannot take action to remit it.

ಶ್ರೀ ಕಾಗೋಡು ತಿಮ್ಮಪ್ಪ.—ಟಿ ಟಿ ಫೈನ್ ಅನ್ನು ತಾವು ಹಾಕಿದ್ದೀರಿ. ಸಂಬಂಧಪಟ್ಟ ರೈತರು ಯಾವುದೇ ಕಾರಣದಿಂದ ಅದನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕಂಥ ಪರಿಸ್ಥಿತಿ ಕಂಡು ಬಂದಾಗ ವಿನಾಯಿತಿ ಕೊಡುವುದಕ್ಕೆ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಸೂಚನೆ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಅಂಥ ಪ್ರಸಂಗ ಬಂದಿಲ್ಲ. ಈಗ ಹೇಳುವುದು ಊಹೆಯಿಂದಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಸುಮಾರು 10 ವರ್ಷಗಳಿಂದ ರೈತರು ಸಾಗುವಳಿಮಾಡುತ್ತಾ ಇದ್ದಾರೆ. ಇತ್ತೀಚೆಗೆ ಆ ಭೂಮಿಯನ್ನು ಅಫಾರೆಸ್ಟೇಷನ್‌ಗೋಸ್ಕರ ತೆಗೆದುಕೊಂಡಿದ್ದಾರೆ. 10 ವರ್ಷಗಳಿಂದ ಶ್ರಮಪಟ್ಟು ಬೇಸಾಯ ಮಾಡಿದಂಥ ಭೂಮಿಯನ್ನು ಯಾವ ರೈತರು ಮಾಡಿದ್ದಾರೋ ಅವರಿಗೆ ಅದನ್ನು ಬಿಟ್ಟು ಕೊಡತಕ್ಕ ಸಾಗುವಳಿ ಚೀಟಿಯನ್ನು ಕೊಡತಕ್ಕ ಕೃಪೆ ತೋರಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದ ಉದ್ದೇಶ ಕ್ರಮಬದ್ಧವಾಗಿ ಎಲ್ಲಾ ವ್ಯವಸ್ಥೆ ನಡೆಯಬೇಕು ಎನ್ನುವುದು. ಅಕ್ರಮವಾಗಿ ವ್ಯವಸಾಯ ಮಾಡಲಿಕ್ಕೆ ಪ್ರಯತ್ನ ಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಯಾವುದಾದರೂ ಇಂಡಿವಿಜುಯಲ್ ಕೇಸ್‌ನಲ್ಲಿ ಸರ್ಕಾರಕ್ಕೆ ಯೋಗ್ಯ ಅನಿಸಿದರೆ, ಅಂಥ ಕೇಸನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ಉತ್ತರ ಕೊಡುವಾಗ ಹೇಳಿದ್ದೀರಿ, ಕಟ್ಟಲಾರದಂಥ ಇದ್ದ ಪರಿಸ್ಥಿತಿಯನ್ನು ಪರಿಶೀಲನೆ ಮಾಡೋಣ ಎಂದು. ಇಂಥ ಪರಿಸ್ಥಿತಿ ಬಂದಿದ್ದರಿಂದ ನಾನು ಕಾಲ್ ಅಟೆನ್‌ಷನ್ ನೋಟೀಸ್ ಅನ್ನು ಹಾಕಿರುವುದು. ಒಬ್ಬೊಬ್ಬ ರೈತರ ಮೇಲೆ ಸಾವಿರಾರು ರೂಪಾಯಿ ಟಿ ಟಿ ಫೈನ್ ಬಾಕಿ ಇದೆ. ಅರ್ಜಿ ಹಾಕಿ 15 ವರ್ಷಗಳಾಗಿದ್ದರೂ ದರಖಾಸ್ತನ್ನು ವಿಲೇವಾರಿ ಕೊಡದೆ ಇರುವುದರಿಂದ ಈ ಪರಿಸ್ಥಿತಿ ಬಂದಿದೆ. ಅಲ್ಲಿಂದ ಅವರು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಆದಕಾರಣ ಈ ಬಾಕಿಯಾಗಿದೆ. ಆದ್ದರಿಂದ ಇದನ್ನು ತೆರವು ಮಾಡಿ ಎಲ್ಲಿ ಸಾಗುವಳಿ ಮಾಡುತ್ತಿದ್ದಾರೋ ಅಲ್ಲಿ ಜಮೀನನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದ ಕಾಯಿದೆ ಪ್ರಕಾರ ತೆಗೆದುಕೊಂಡರೂ ಸಹ, ಹಣ ವಸೂಲಾಗದಿದ್ದರೆ ಆಗ ನೋಡೋಣ.

ಶ್ರೀ ಕೆ. ಯಂಕಟಪ್ಪ.—ಟಿ ಟಿ ಫೈನ್ ಅನ್ನು ಹೊಸನಗರ ತಾಲ್ಲೂಕಿನಲ್ಲಿ ಕಡಿಮೆ ಹಾಕಿದ್ದೇವೆ, ಆದ್ದರಿಂದ ಅಂಥ ಕ್ರಮ ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ ಎಂದು ಹೇಳಿದಿರಿ. ಅಲ್ಲಿ ಇದನ್ನು ಕೊಡದೆ ಇರುವುದಕ್ಕೆ ಕಾರಣ ಇದೆ. ಕೆಲವು ಸಂದರ್ಭಗಳಲ್ಲಿ ರೈತರೇ ಆ ಜಮೀನನ್ನು ಸ್ವಂತವಾಗಿ ತೆಗೆದುಕೊಂಡುಬಿಟ್ಟಿದ್ದಾರೆ, ಆದ್ದರಿಂದ ಈಗ ಅದನ್ನು ಪರ್ಯಾಲೋಚನೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಹೀಗಾಗಿ ಎಷ್ಟೋ ಜನ ಟಿ ಟಿ ಬಾಕಿಯನ್ನು ಕೊಡದೆ ಸ್ಥಳ ಬಿಟ್ಟಿದ್ದಾರೆ. ಆದ್ದರಿಂದ ಇದನ್ನು ಸರಿಯಾದ ರೀತಿಯಲ್ಲಿ ಪರ್ಯಾಲೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ನಾನು ಸ್ಪಷ್ಟವಾಗಿ ಆಗಲೇ ಹೇಳಿದೆ, ಹೊಸನಗರ ತಾಲ್ಲೂಕಿನಲ್ಲಿ ಟಿ ಟಿ ಹಾಕಿದ್ದು ಬಹಳ ಕಡಿಮೆ. ಮೊದಲು ಹೆಚ್ಚು ಹಾಕಿದ್ದನ್ನು ಈಗ ಕಡಿಮೆ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ರಿಕವರಿ ಆಫ್ ಅರಿಯರ್ಸ್ ಎಂದು ಸರ್ಕಾರದವರು ವಸೂಲು ಮಾಡುತ್ತಿದ್ದಾರೆ. ವಸೂಲಿ ಆಗದೆ ಇರುವ ಪ್ರಸಂಗದೊಳಗೆ ವ್ಯವಸ್ಥೆ ಮಾಡಲಿಕ್ಕೆ ನೋಡೋಣ.

ಶ್ರೀ ಸಿ. ಬೈರೇಗೌಡ.—1961ನೇ ಇಸವಿಯಲ್ಲಿ ಸರ್ಕಾರದ ನೋಟಿಫಿಕೇಷನ್ ಪ್ರಕಾರ ಗೋಮಾಳ ಇದ್ದರೆ, ಆ ಜಮೀನು ಪಂಚಾಯತಿಗೆ ಸೇರಿದ್ದು. ಅದಕ್ಕೆ ಟಿ ಟಿ ಹಾಕಬೇಕಾದರೆ ಪಂಚಾಯತಿಗೆ ಅಧಿಕಾರ ಇರುವುದು. ಆದರೆ ಈಗ ತಹಸೀಲ್ದಾರರು ಟಿ ಟಿ ಹಾಕಿದ್ದಾರೆ, ಇದು ಲ್ಯಾಂಡ್ ರೆವಿನ್ಯೂ ಕೋಡ್‌ಗೆ ವಿರುದ್ಧವಾಗಿದೆ. ಇದನ್ನು ಪರಿಶೀಲನೆ ಮಾಡಿ ಈಗ ಹಾಕಿರುವ ಟಿ ಟಿ ಯನ್ನು ವಿಚಾರ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಟಿ ಟಿ ಹಾಕುವುದಕ್ಕೆ ಸಂಬಂಧಪಟ್ಟವರೆಲ್ಲರಿಗೂ ಅಧಿಕಾರವಿದೆ.

(ii) *re* : attack on a Fisherman of Herindyathana Halli Village Kanakapura Taluk by a group of People

SRI B. PUTTASWAMAIAH (Ramanagar).—I beg to call the attention of the Hon. Chief Minister to the attack on a fisherman of Herindyathanahalli village, Kanakapur Taluk, by a group of people.

SRI H. M. CHANNABASAPPA (Minister for Public Works and Electricity).—Sir I state as follows :

Herindya Panahalli in Kanakapura Taluk has a population of about 1,500 people belonging to Bestar Community, 1,300 people belonging to Vokkaliga Community and smaller number of people of other communities. There is party feeling among the people of these major communities in the village. On 8-3-1973 at about 8 P.M. there was a quarrel between two brothers, namely, Kariya and Kamba of the

same village. Kariya is said to belong to Congress (O) supported by Bestar community people and Kamba belongs to Congress (R). Kamba had purchased one house belonging to Kariya and the same was given to one Guddaiah on rent. Kariya went to the house of Guddaiah in a drunken condition and asked him to vacate the house. On this, Guddaiah requested Kamba and his another brother to visit the spot and see the condition of Kariya. In spite of advice by his mother and brother, Kariya hurled abuses against the Vokkaliga community. At this juncture some more persons rushed to the spot with clubs and stones. They entered the street where Vokkaligas live and indulged in violence. As a result, 7 persons from the side of Vokkaligas and 3 persons from the side of Bestar community were injured. On receipt of a complaint, the Police Sub-Inspector, Kodihalli registered a case in Crm. No. 12/73 under sections 143, 147, 148, 324 IPC on 9-3-1973 and rushed to the spot. Six accused persons were arrested and the injured were taken for medical examination and treatement. Necoessary Police bandobust was arranged to prevent any trouble. One of the accused Kariya also gave a complaint to the Police on 9-3-1973 about this incident alleging that Vokkaligas are attempting to form an unlawful assembly and there was danger to him, His complaint was registered.

The accused persons and the leaders of their party took the arrest of their party members as an insult and hence they starred Sathyagraha on 10-3-1973 at Kodihalli, They alleged that they had been harassed by arresting them. On the advice of the leaders and Police Officers, they dispersed in the evening, The local Police have acted in accordence with law and there is no abuse of powers,

Adequate Police bondobust was made against any likelihood of breach of peace, The local Police have been instructed to watch the situation and take suitable action to prevent any breach of peace and to finalise the investigation of the case early.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಲ್ಲಿ ಕಿತ್ತಾಟ ಮಾಡಿರುವವರ ಮೇಲೆ ಪೋಲೀಸರು ಯಾವುದೇ ನ್ಯಾಯಬದ್ಧವಾದ ಕ್ರಮ ತೆಗೆದುಕೊಳ್ಳುವುದರಲ್ಲಿ ನಮಗೆ ಯಾವ ವಿಧವಾದ ಆಕ್ಷೇಪಣೆಯಿಲ್ಲ. ಅಲ್ಲಿ ನಡೆದಿರತಕ್ಕ ಸಂಗತಿ 8ನೇ ಮತ್ತು 9ನೇ ತಾರೀಖು ಫಿರ್ಯಾದು ಬಂದಮೇಲೆ 9ನೇ ತಾರೀಖು ರಾತ್ರಿ 11ವರೆ ಗಂಟೆಗೆ ಸ್ಥಳಕ್ಕೆ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಅಲ್ಲಿಗೆ ಹೋಗಿ ಸಂಬಂಧಪಡದೆ ಇರುವ ಹೆಂಗಸರು ಮತ್ತು ಗಂಡಸರನ್ನು ಬೂಟ್ಸಿನಿಂದ ಹೊಡೆದು ಕೋಲಿನಿಂದ ಹೊಡೆದ ಮೇಲೆ ಉದ್ರಿಕ್ತ ಜನರು ಪೋಲೀಸ್ ಸ್ಟೇಷನ್ ಹತ್ತಿರ ಸತ್ಯಾಗ್ರಹ ಮಾಡಲಿಕ್ಕೆ ಬಂದರು. 10ನೇ ತಾರೀಖು ಸಾಯಂಕಾಲ ನಾನು ಸಹ ಹೋಗಿದ್ದೆ. ಇನ್ನೂರು ಮುನ್ನೂರು ಜನ ಗಂಡಸರು ಮತ್ತು ಹೆಂಗಸರು ಇರುವುದನ್ನು ಖುದ್ದಾಗಿ ನೋಡಿದೆವು, ಪೋಲೀಸ್ ಸೂಪರೆಂಟೆಂಡೆಂಟ್‌ರವರು ಸ್ಥಳಕ್ಕೆ ಬಂದಿದ್ದರು, ಅವರು ನೋಡಿ ಇದು ನ್ಯಾಯವಾದುದಲ್ಲ ಸಬ್ ಇನ್ಸ್‌ಪೆಕ್ಟರ್ ಅವರು ಇದರ ಇನ್‌ವೆಸ್ಟಿಗೇಷನ್ ತೆಗೆದುಕೊಳ್ಳಕೂಡದು, ಕನಕಪುರ ಸರ್ಕಲ್ ಇನ್ಸ್‌ಪೆಕ್ಟರ್ ಅವರು ಇದನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದು ಕೇಳಿದೆವು. ಆ ಸಬ್‌ಇನ್ಸ್‌ಪೆಕ್ಟರ್ ಅವರ ವರ್ತನೆ ಸರಿಯಾಗಿ ಇರಲಿಲ್ಲ ಎಂದು ನನಗೆ ಮತ್ತು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಕಂಡುಬಂತು. ಅದರ ಬಗ್ಗೆ ಯಾವ ವಿಧವಾದ ಪ್ರಸ್ತಾಪವಿಲ್ಲ.

Sri H. M. CHANNABASAPPA.—The hon. Member has given the information I am only here to give you information as reported to us. And, if the hon. Member has any other information to give, he can pass it on to me. We will take necessary action.

ಶ್ರೀ ಎಸ್. ಕರಿಯಪ್ಪ.—ಕನಕಪುರ ತಾಲ್ಲೂಕಿನಲ್ಲಿ ಹೆರಿಂದಯಾತ್ತನಹಳ್ಳಿ ಜನರು ಪದೇಪದೇ ಗಲಾಟೆ ಮಾಡುತ್ತಾ ಇರುವುದರಿಂದ ವಾರಕ್ಕೆ ಒಂದಾದರೂ ಘಟನೆ ನಡೆಯುತ್ತಿದೆ. ಅದಕ್ಕೆ ಕೆಲವರು ಇದ್ದಾರೆ 3—4 ಜನರಿಗೆ ಇದೇ ಕಸಬಾಗಿದೆ. ಯಾವಯಾವ ಹಳ್ಳಿಯಲ್ಲಿ ಜನಗಳು ಸ್ವಲ್ಪ ನೆಮ್ಮದಿಯಾಗಿದ್ದಾರೆ ಅಲ್ಲಿಗೆ ಹೋಗಿ ಅವರವರಿಗೆ ತಂದು ಹಾಕುವುದು ಗಲಾಟೆಮಾಡುವುದು ಇದೇ ಇವರ ಉದ್ಯೋಗವಾಗಿದೆ. ಸ್ವಭಾವತಃ ಆ ಊರಿನವರು ಗಲಾಟೆಗೆ ಹೋಗುವುದಿಲ್ಲ. ಹಿಂದಿನಿಂದ ಹೀಗೆ ನಡೆಯುತ್ತಾ ಇರುತ್ತದೆ. ಹೀಗೆ ನಾಲ್ಕೈದು ಊರಿನಲ್ಲಿ ಬಂದಿದೆ. ಒಂದು ಊರಿನಲ್ಲಿ ಗಲಾಟೆಕೋರರು ಇದ್ದಾರೆ. ಒಂದು ಸಾರಿ ಮಲಗಿದಾಗ ಗುಡಿಸಲಿಗೆ ಬೆಂಕಿ ಹಾಕುವುದಕ್ಕೆ ಏರ್ಪಾಡು ಮಾಡಿದ್ದರು ಆಮೇಲೆ ಯಾವುದಕ್ಕೂ ಸಂಬಂಧಪಡದವರನ್ನೆಲ್ಲಾ ಸೇರಿಸಿ ಅವರ ಮೇಲೆ ಮರ್ಡರ್ ಮಾಡುವ ಕೇಸ್ ಶುರು ಮಾಡಿದರು. ಇಂಥದೇ ಮತ್ತೊಂದು ಊರಿನಲ್ಲಿ ಅಂಗಡಿಗೆ ನುಗ್ಗಿಸಿ ಲೂಟಿ ಮಾಡಿದರು ಇಂಥ ಘಟನೆಗಳು ಆಗಾಗ್ಗೆ ಹೆರಿಂದಯಾತ್ತನಹಳ್ಳಿಯಲ್ಲಿ ನಡೆಸುವುದರಲ್ಲಿದ್ದಾರೆ. ಪೋಲೀಸ್ ರಿಪೋರ್ಟ್ ತರಿಸಿ ಹೀಗೆ ನಡೆಯುತ್ತಿದೆ ಎಂದು ನೋಡಿಕೊಂಡರೆ ಎಷ್ಟು ಕೇಸುಗಳು ಅಲ್ಲಿ ಜನಗಳ ಮೇಲೆ ಆಗಿದೆ ಎಂಬುದು ಗೊತ್ತಾಗುತ್ತದೆ. ಹೀಗೆ ಪೋಲೀಸರ ಬಿಗಿ ಹೆಚ್ಚು ಇಲ್ಲದೆ ಹೋದರೆ ಇನ್ನು ಏನು ಘಟನೆ ಆಗುತ್ತಿತ್ತೋ ಹೇಳುವುದಕ್ಕೆ ಸಾಧ್ಯವಿಲ್ಲ. ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಕೆಲವು ವಿಚಾರಗಳನ್ನು ಅವಮಾನವಾಗುತ್ತದೆ ಎಂದು ಬರೆದುಕೊಂಡಿಲ್ಲ. ಅವನನ್ನ ಹಿಡಿದುಕೊಂಡು ಗಲಾಟೆ ಮಾಡುವುದಕ್ಕೆ ಹೋಗುತ್ತಾರೆ. ಏನು ಅವರ ಕರ್ತವ್ಯ ಇದೆ ಅದನ್ನ ನಡೆಸುವುದಕ್ಕೆ ಹೋದರೆ ಅವರ ಮೇಲೆ ಬಿದ್ದರೆ ಅಲ್ಲಿ ಹೇಗೆ ಇರಬೇಕು ಎಂದು ಪರಿಸ್ಥಿತಿ ಊಹೆ ಮಾಡಿ ತಿಳಿದುಕೊಳ್ಳಬಹುದು. ಇನ್ನು ಪೋಲೀಸ್ ಬಂದೋಬಸ್ತು ಹೆಚ್ಚಿಗೆ ಮಾಡಬೇಕಾದ ಅವಶ್ಯಕವಿದೆ. ಹಾಗಿಲ್ಲದೆ ಹೋದರೆ ಇಂಥ ಘಟನೆಗಳು ಹೆಚ್ಚಾಗುತ್ತವೆ. ನೆಮ್ಮದಿಯಾಗಿರತಕ್ಕ ಜನರಿಗೆ ಶಾಂತಪ್ರಿಯರಿಗೆ ತೊಂದರೆಯಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಾರ್ಟಿ ಇರತಕ್ಕ ಊರುಗಳಲ್ಲಿ ಪ್ರಚೋದನೆ ಮಾಡುವವರಿಗೆ ಹೆಚ್ಚು ಅವಕಾಶ ಇರುತ್ತದೆ. ಎಲ್ಲಾ ಪರಿಶೀಲನೆ ಮಾಡಿ ತಾವು ಹೇಳಿದ್ದು ಮತ್ತು ಮಾನ್ಯ ಪುಟ್ಟಸ್ವಾಮಯ್ಯನವರು ಹೇಳಿದ್ದು ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಆ ಪ್ರದೇಶದಲ್ಲಿ ಬಂದೋಬಸ್ತು ಮಾಡುವುದಕ್ಕೆ ಏನು ಬೇಕೋ ಆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಏನು ಹೇಳಿದಿರಿ, ಈ ಸಭೆಗೆ ಸ್ಟೇಟ್‌ಮೆಂಟ್ ಮಾಡುವುದರ ಮುಖಾಂತರ ಏನು ಇನ್‌ಫರ್‌ಮೇಷನ್ ಕೊಡುತ್ತಾ ಇದ್ದೀರಿ, ಏನು ವಿಚಾರ ಮಾಡಿದ್ದೇವೆಂದು ಹೇಳಿದ್ದೀರಿ ಅದಕ್ಕೂ ಶ್ರೀ ಪುಟ್ಟಸ್ವಾಮಯ್ಯನವರು ಹೇಳುವುದಕ್ಕೂ ಬಹಳ ವ್ಯತ್ಯಾಸ ಇದೆ. ಪೋಲೀಸ್ ಅಧಿಕಾರಿಗಳು ಕೊಟ್ಟಂಥ ವರದಿಯನ್ನು ಓದಿದರೆ ಅದು ಅಸತ್ಯಕ್ಕೆ ಎಡೆಕೊಟ್ಟಿದೆ. ಪೋಲೀಸ್ ಅಧಿಕಾರಿಗಳು ಎಕ್ಸೆಸ್ಸೀವ್ ಆಗಿ ವರ್ತನೆ ಮಾಡಿದ್ದರ ಪರಿಣಾಮವಾಗಿ ಇನ್ನೂರು ಮುನ್ನೂರು ಜನ ಬಂದು ಸತ್ಯಾಗ್ರಹ ಪ್ರಾರಂಭಮಾಡಿದ್ದಾರೆ ಅದರ ಮೇಲೆ ಜಿಲ್ಲಾಧಿಕಾರಿಗಳು ಹೋಗಿ ಬೇರೆ ಅಧಿಕಾರಿಗಳನ್ನು ಇನ್‌ವೆಸ್ಟಿಗೇಷನ್ ಆಫೀಸರ್ ಆಗಿ ಹಾಕಿದ್ದಾರೆ.

ಹೀಗೆ ಪರಸ್ಪರ ವ್ಯತ್ಯಾಸ ಇರತಕ್ಕ ಪರಿಸ್ಥಿತಿಯಲ್ಲಿ ಅನುಮಾನಬರತಕ್ಕ ಸನ್ನಿವೇಶಕ್ಕೆ ಎಡೆಕೊಟ್ಟಿದೆ. ಶ್ರೀಮಾನ್ ಕರಿಯಪ್ಪನವರು ಹೇಳುತ್ತಿದ್ದಾರೆ ಇದು ಪಾರ್ಟಿಗ್ರಾಮ 4—5 ಘಟನೆಗಳು ಆಗಿವೆ ಎಂದು. ಕಾಂಗ್ರೆಸ್ "ಓ" ಮತ್ತು ಕಾಂಗ್ರೆಸ್ "ಆರ್" ಹೆಸರು ಬೇರೆ ಬಂದಿದೆ. ಒಕ್ಕಲಿಗರು ಬೇರೆ, ಬೆಸ್ತರು ಬೇರೆ ಎಂದು ಅಲ್ಪಸಂಖ್ಯಾಂತರ ಹೆಸರಿನಲ್ಲಿ ರಾಜ್ಯದ ಆಡಳಿತ ಸೂತ್ರವನ್ನು ಹಿಡಿದಿದ್ದೀರಿ.

2.30 P.M.

ಈ ವಿಚಾರದಲ್ಲಿ ಕಾಂಗ್ರೆಸ್ (ಓ) ಆಗಲಿ, ಕಾಂಗ್ರೆಸ್ (ಆರ್) ಆಗಲಿ ಆ ಭಾವನೆಯನ್ನು ಬದಿಗೊತ್ತಬೇಕು. ಕಳೆದ ಒಂದು ವರ್ಷದಿಂದಲೂ ಕನಕಪುರ ತಾಲ್ಲೂಕಿನಲ್ಲಿ ಹಲವಾರು ಘಟನೆಗಳು ನಡೆದಿದೆ. ಇದರಲ್ಲಿ ಯಾರೇ ತಪ್ಪಿತಸ್ಥರು ಇರಲಿ, ಯಾವ ಪಾರ್ಟಿಗೇ ಸೇರಿರಲಿ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕು, ಪೋಲೀಸ್ ಅಧಿಕಾರಿಗಳು ಒಂದು ಪಕ್ಷಕ್ಕೇನೇ ಷಾಮೀಲು ಆಗಬಾರದು. ಅವರು ಮಿತಿಮೀರಿ ವರ್ತನೆ ಮಾಡುತ್ತಿದ್ದಾರೆ. ಇದೇ ರೀತಿ ಮುಂದುವರೆಯು

ವುದಾದರೆ ಈ ಪರಿಸ್ಥಿತಿ ಮುಂದೆ ವಿಕೋಪಕ್ಕೆ ಹೋಗುತ್ತದೆ ಇದರಲ್ಲಿ ಯಾರೇ ತಪ್ಪಿತಸ್ಥರೇ ಇರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಮತ್ತು ಇದರಲ್ಲಿ ಪೋಲೀಸ್ ಅಧಿಕಾರಿಗಳು ತಪ್ಪು ಮಾಡಿದ್ದರೆ ಅವರಿಗೂ ಶಿಕ್ಷೆ ಮಾಡಬೇಕು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈ ಬಗ್ಗೆ ನಾನು ಅಗಲೇ ಹೇಳಿದ್ದೇನೆ. ಅವರು ಒಂದು ಅಭಿಪ್ರಾಯ ಕೇಳಿದರು, ಅದಕ್ಕೆ ನಾವೂ ಕೂಡ ನಮ್ಮ ಹತ್ತಿರದ ಇರತಕ್ಕಂಥ ಒಂದು ಅಭಿಪ್ರಾಯ ಹೇಳಿದೆವು. ಈಗ ತಾವು ಹೇಳಿದ ಭಾಷಣ ಏನು ಇದೆ ಅದನ್ನು ಮತ್ತಷ್ಟು ವಿಚಾರ ಮಾಡುತ್ತೇನೆ. ಅಲ್ಲದೆ ಇದರಲ್ಲಿ ಕಾಂಗ್ರೆಸ್ (ಒ), ಕಾಂಗ್ರೆಸ್ (ಆರ್) ಅನ್ನುವ ಪ್ರಶ್ನೆ ಇಲ್ಲ. ಇರತಕ್ಕಂಥಾ ಸತ್ಯಾಂಶ ವನ್ನು ತಿಳಿಸಿದ್ದೇನೆ.

Datura seeds in wheat distributed in Gulbarga District.

Sri D. B. KALMANKAR (Afjlpur).—Mr. Deputy Speaker, I want to bring to the notice of the Minister for Food that wheat distributed in Gulbarga district is containing datura which is very poisonous. I have also seen the datura seeds brought by persons from Gulbarga. As you know on this question of datura seeds, so many things have been raised and so many people died. They are very poisonous and now the wheat is distributed to the workers and thousands of villagers on a large scale throughout the district of Gulbarga. If it is used there is the possibility that people may die. I want to bring this to the notice of the Government so that immediate arrangements are made to supply good wheat and datura is removed. Till then the wheat supplied must not be distributed and other arrangement may be made so that the people may get good wheat.

Mr. DEPUTY SPEAKER.—You have given a calling attention notice.

Sri D. B. KALMANKAR.—Every minute is important. Supposing it is distributed, people may die and it will become a serious matter.

Mr. DEPUTY SPEAKER.—It is being attended to.

Disturbances at Mangalore and Kodiyalbail due to Mangalore Bund

ಶ್ರೀ ಬಿ. ವಿ. ಕಕ್ಕಿಲಾಯ.—ಅಧ್ಯಕ್ಷರೇ, ನಾನು ಈಗಾಗಲೇ ಬೆಳಿಗ್ಗೆ ಒಂದು ನೋಟೀಸನ್ನು ಕಳುಹಿಸಿದ್ದೇನೆ. ಅದು ಏನೆಂದರೆ ಮಂಗಳೂರು ನಗರದಲ್ಲಿ ನಿನ್ನೆ ಒಂದು ದುರ್ಘಟನೆ ನಡೆಯಿತು. ಅದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಿನ್ನೆ ಮಂಗಳೂರು ನಗರದಲ್ಲಿ ಬಂದ್ ನಡೆದು ಬೇಕಾದಷ್ಟು ಆಸ್ತಿಪಾಸ್ತಿಗಳಿಗೆ ನಷ್ಟ ಉಂಟಾಗಿದೆ. ಆ ಸಂದರ್ಭದಲ್ಲಿ ಸಮಾಜ ಘಾತುಕರು ಬಂದು ಆರಪಣ ಪತ್ರಿಕೆಯ ಸಂಪಾದಕರನ್ನು ಹಿಡಿದುಕೊಂಡು ಹೊಡೆದರು. ಇದರಿಂದ ಅಲ್ಲಿನ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಮತ್ತು ಕೊಡಿಯಲ್ ಬೈಲ್‌ನಲ್ಲೂ ಕೂಡ ಸಮಾಜ ಘಾತುಕರು ಅಂಗಡಿಗಳಿಗೆ ನುಗ್ಗಿ ಬೇಕಾದಷ್ಟು ಸಾಮಾನುಗಳಿಗೆ ನಷ್ಟ ಉಂಟು ಮಾಡಿದ್ದಾರೆ. ಈ ವಿಚಾರ ಪತ್ರಿಕೆಯಲ್ಲೂ ಕೂಡ ಪ್ರಕಟಣೆಯಾಗಿದೆ. ಈ ವಿಚಾರದಲ್ಲಿ ಈವೊತ್ತು ಬೆಳಿಗ್ಗೆ ಡೆಪ್ಯೂಟಿ ಕಮೀಷನ ರನ್ನು ಫೋನ್‌ನಲ್ಲಿ ಕಾಂಟ್ಯಾಕ್ಟ್ ಮಾಡುವ ಅಂತ ಮಾಡಿದೆ, ಆದರೆ ಅವರನ್ನು ಕಾಂಟಾಕ್ಟ್ ಮಾಡುವುದಕ್ಕಾಗಲಿಲ್ಲ. ಆದುದರಿಂದ ಕೂಡಲೇ ಸರ್ಕಾರದವರು ಮುಂಜಾಗ್ರತೆ ಕ್ರಮ ತೆಗೆದು ಕೊಳ್ಳದೇ ಇದ್ದರೆ, ಪೋಲೀಸಿನವರ ಜೊತೆಗೆನೇ ಷಾಮೀಲ್ ಆದರೆ ಬೇಕಾದಷ್ಟು ಅನಾಹುತವಾ ಗುತ್ತದೆ ಎಂದು ಗಮನಕ್ಕೆ ತರಬಯಸುತ್ತೇನೆ.

Mr. DEPUTY SPEAKER.—You have sent it today all 11-00a.m. It has to be attended to. It cannot be admitted under rule 312. It can be treated as a call attention. Anyway it will be attended to.

Sri B. V. KAKKILAYA.—It is is a serious matter. It must be done today.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ಬಗ್ಗೆ ಈವಾಗಲೇ ಹೇಳಿಕೆ ಕೊಡುವುದಕ್ಕೆ ಸಿದ್ಧಪಡಿಸಿಕೊಂಡು ಬರಬೇಕಾಗಿತ್ತು. ಈ ಪರಿಸ್ಥಿತಿ ಮುಂದುವರೆಯುವುದಾದರೆ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗುತ್ತದೆ, ಆದುದರಿಂದ ತಾವು ತಕ್ಷಣ ಹೇಳಿಕೆ ಕೊಡುವುದಕ್ಕೆ ಮುಂದಾಗಬೇಕು.

ಶ್ರೀ ಎಚ್. ಡಿ. ದೇವೇಗೌಡ.—ರೂಲ್ 312 ರ ಪ್ರಕಾರ ಅವರು ನೋಟೀಸನ್ನು ಕಳುಹಿಸಿದ್ದಾರೆ. ಅದನ್ನು ಕಾಲ್ ಅಟೆನ್‌ಷನ್ ಅಗಿ ಪರಿವರ್ತನೆ ಮಾಡಿದ್ದೇನೆ ಎಂದು ಹೇಳಿದಿರಿ, ಅದಕೆ ಉತ್ತರ ಬರಬೇಕಾದರೆ ರೂಟೀನ್ ಕೋರ್ಸ್‌ನಲ್ಲಿ ಬರುತ್ತದೆ. ಇದಕ್ಕೆ ಮುಂಜಾಗ್ರತೆ ಕ್ರಮ ತೆಗೆದುಕೊಂಡಿದ್ದರೆ ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಆದುದರಿಂದ ಇದರ ಹಿನ್ನೆಲೆ ಏನು ಇದರಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಆದನ್ನು ನೋಡಬೇಕು. ಇದಕ್ಕೆ ಪೋಲೀಸ್‌ನವರು ಶಾಮೀಲ್ ಆಗಿದ್ದಾರೆ ಎಂದು ಹೇಳುತ್ತಾರೆ. ಈವೊತ್ತು ಸರ್ಕಾರದ ಯಂತ್ರ ಕೆಲಸ ಮಾಡತಕ್ಕಂಥ ಕಾಲದಲ್ಲಿ ನಿಮ್ಮ ಹೋಮ್ ಸೆಕ್ರೆಟರಿಯವರು ಅಲ್ಲಿಯ ಎಸ್. ಪಿ. ಅವರನ್ನು ಕಾಂಟ್ಯಾಕ್ಟ್ ಮಾಡಿ ವಿಷಯ ತಿಳಿದುಕೊಂಡು ಈ ಸಭೆಗೆ ಉತ್ತರ ಕೊಡುವುದು ಕಷ್ಟವಾಗುತ್ತದೆಯೇ ? ರೂಲ್ 312ರ ಪ್ರಕಾರ ನೋಟೀಸ್ ಕೊಟ್ಟಿದ್ದರೆ ಅದನ್ನು ನೀವು ಏತಕ್ಕೆ ಕಾಲ್ ಅಟೆನ್‌ಷನ್ ಮಾಡಿದಿರಿ. ಈ ರೀತಿ ಮಾಡಿದರೆ ಅದಕ್ಕೆ ಉತ್ತರ ಬರುವುದು 15—20 ದಿವಸ ಆಗುತ್ತದೆ. ಆದುದರಿಂದ ರೂಲ್ 312 ಇರುವುದು ಏತಕ್ಕೆ ?

Mr. DEPUTY SPEAKER.—I will read out rule 312:

"A member who wishes to bring to the notice of the Assembly any matter which is not a point of order shall give notice to the Secretary in writing stating briefly the point which he wishes to raise in the Assembly together whith reasons for wishing to raise it and he shall be permitted to raise it only after the Speaker has given his consent and at such time and date as the Speaker may fix."

He has given today. If it is said that it should be taken up today, it is something which is impossible. It will be fixed as soon as information is collected. If I had the authority to get the information I would have done is in a couple of minutes.

Beating of a Harijan women at Sorab

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ಸೊರಬ ತಾಲ್ಲೂಕಿನಲ್ಲಿ ಒಬ್ಬ ಹರಿಜನ ಮಹಿಳೆಯನ್ನು ಹಿಡಿದುಕೊಂಡು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಈ ವಿಷಯ ನಿನ್ನೆಯೇ ಪ್ರಸ್ತಾಪ ಮಾಡಿದ್ದೇನೆ. ಇದುವರೆಗೂ ಪೋಲೀಸ್ ಅಧಿಕಾರಿಗಳು ಆ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿಲ್ಲ. ಅದರ ಬಗ್ಗೆ ನಾನು ಮೊನ್ನೆ ದಿವಸವೇ ನೋಟೀಸ್ ಕೊಟ್ಟಿದ್ದೇನೆ.

Mr. DEPUTY SPEAKER.—There are so many call attention notices received and they have been sent to the Government. I will include them as and when replies are received.

ಶ್ರೀ ಕಾಗೋಡು ತಿಮ್ಮಪ್ಪ.—ನಾಳೆಯಾದರೂ ತೆಗೆದುಕೊಳ್ಳುವ ಹಾಗೆ ಮಾಡಬೇಕು, ಗಂಡ ಹೆಂಡತಿ ಊರಿಗೆ ಹೋಗದೆ ಇರುವ ಪರಿಸ್ಥಿತಿಯುಂಟಾಗಿದೆ. ಪೋಲೀಸಿನವರು ರಕ್ಷಣೆ ಕೊಡುತ್ತಿಲ್ಲ.

Issue of Passes to the Public Gallery

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ):—ಸದನದ ಎಲ್ಲ ಸದಸ್ಯರಿಗೂ ಸಂಬಂಧಪಟ್ಟಂಥ ತಮಗೂ ಸಂಬಂಧಪಟ್ಟಂಥ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅಪೇಕ್ಷೆಪಡುತ್ತೇನೆ. ರಾಜ್ಯಾಂಗದ ಆರ್ಟಿಕಲ್ 15 (2) (ಬಿ) ಪ್ರಕಾರ ಸಾರ್ವಜನಿಕರ ಪ್ರವೇಶಕ್ಕೆ ಒಳಗಾಗಿರತಕ್ಕ ಪ್ರದೇಶಗಳಿಗೆ ಹೋಗುವುದಕ್ಕೆ ಎಲ್ಲರಿಗೂ ಹಕ್ಕು ಇದೆ. ನಮ್ಮ ಸದನದಲ್ಲಿ ಈ ಹೊತ್ತು ನಮ್ಮ ಕಡೆಯಿಂದ ಬರತಕ್ಕವರಿಗೆ ಪ್ರವೇಶಕ್ಕೆ ಅಪ್ಪಣೆ ಚೀಟಿ ಕೊಡಬೇಕೆಂದು ಬರೆದು ಕಳುಹಿಸಿದರೆ ಅವರನ್ನು ವಾಪಸು ಕಳುಹಿಸಿದ್ದಾರೆ. ಯಾರು ನಮ್ಮನ್ನು ಆರಿಸಿ ಇಲ್ಲಿಗೆ ಕಳುಹಿಸಿದ್ದಾರೆಯೋ ಅವರನ್ನು ಪ್ರೇಕ್ಷಕರ ಗ್ಯಾಲರಿಗೆ ಬಿಡುವುದಕ್ಕೆ ಅವಕಾಶವಿಲ್ಲವೆಂದರೆ ಇದು ಪ್ರಜಾಪ್ರಭುತ್ವದ ವಿಪರ್ಯಾಸ ಎನ್ನದೆ ವಿಧಿ ಇಲ. ಈಗಿನ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಮೊದಲು ಪ್ರತಿ ಸದಸ್ಯರಿಗೂ ಎರಡು ಪಾಸು ಕೊಡುತ್ತಿದ್ದರು. ಈಗ ಅದೂ ಇಲ್ಲ. ನಾವು ಬರೆದು ಕಳುಹಿಸಿದರೆ ಪ್ರವೇಶ ಕೂಡ ಕೊಡುತ್ತಿಲ್ಲ.

ಉಪಾಧ್ಯಕ್ಷರು.—ಇಂಥ ಪ್ರಶ್ನೆ ಕೆಲವು ದಿವಸಗಳ ಹಿಂದೆ ಬಂದಾಗ ನಾನು ವಿಚಾರಿಸಿದೆ. ಸ್ವಲ್ಪ ನಿಧಾನಿಸಿರಿ ಎಂದು ಹೇಳಿದರಂತೆ. ಅಲ್ಲಿ ಕ್ಯೂ ಬಹಳ ದೊಡ್ಡದಾಗಿತ್ತು. ಆದ್ದರಿಂದ ಸ್ವಲ್ಪ ಕಾಲ, ನಿಧಾನ ಮಾಡಲು ಹೇಳಿದರೆ ಪಾಸುಗಳನ್ನೂ ಕೊಡಿ ನಾವೇ ತುಂಬಿಕೊಳ್ಳುತ್ತೇವೆಂದು ಕೇಳಿದರಂತೆ. ಪಾಸುಗಳನ್ನು ನಾವೇ ತುಂಬಿ ಕೊಡುತ್ತೇವೆ, ಸ್ವಲ್ಪ ನಿಧಾನ ಮಾಡಿ ಎಂದು ಹೇಳಿದ್ದಕ್ಕೆ ಅಷ್ಟರಲ್ಲಿ ಬಂದು ಪಾಸು ಕೊಡಲಿಲ್ಲವೆಂದು ಹೇಳಿದ್ದಾರೆ. ಪಾಸುಗಳನ್ನು ಕೊಡುವ ವಿಚಾರದಲ್ಲಿ ಸರಿಯಾದ ಸೂಚನೆಗಳನ್ನು ಕೊಡಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಈಗ ಅಲ್ಲಿ ಪಾಸು ಕೊಡುವವರು ಯಾರೂ ಇಲ್ಲ.

ಶ್ರೀ ಕೆ. ಎಸ್. ಹನುಮೇಗೌಡ.—ಹಿಂದೆ ಪ್ರತಿ ಶಾಸಕರಿಗೂ ಕಾರ್ಯಕ್ರಮದ ಪಟ್ಟಿಯ ಜೊತೆಯಲ್ಲಿ ಎರಡು ಪಾಸುಗಳನ್ನು ಕಳುಹಿಸುತ್ತಿದ್ದರು, ಈಗ ಅದನ್ನು ತಪ್ಪಿಸಿದ್ದಾರೆ. ಹಿಂದಿನಂತೆ ಪಾಸುಗಳನ್ನು ಕಳುಹಿಸಿಕೊಟ್ಟರೆ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ತೀರ ಸೂಕ್ಷ್ಮವಾದ ವಿಷಯ. ಸಾಕಷ್ಟು ಹೇಳಿದ್ದೇವೆ. ಇನ್ನೂ ಸರಿಪಡಿಸದೆ ಹೋದರೆ ನಾವು ಏನು ಮಾಡಬೇಕು ?

MR. DEPUTY SPEAKER.—Instead of raising this matter here even if you had sent me a small chit I would have speedily attented to it.

Difficulty in getting Ration Cards

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಏಪ್ರಿಲ್ ನಾಲ್ಕನೇ ತಾರೀಖು ಉಗಾದಿ ಹಬ್ಬ, ವರ್ಷಕ್ಕೆ ಒಂದು ಸಲ ಬರುವ ದೊಡ್ಡ ಹಬ್ಬ. ರೇಷನ್ ಸಾಮಾನು ಸಿಕ್ಕುತ್ತಿಲ್ಲ' ರೇಷನ್ ಕಾರ್ಡು ಸಿಕ್ಕುತ್ತಿಲ್ಲ. ಫೆಬ್ರವರಿ ತಿಂಗಳಲ್ಲಿ ಕೊಟ್ಟಿರುವ ಅರ್ಜಿಗಳಿಗೆ ಇನ್ನೂ ಕಾರ್ಡುಗಳು ಸಿಕ್ಕಿಲ್ಲ ಹೀಗಾದರೆ ಏನು ಮಾಡಬೇಕು ? ಬೆಂಗಳೂರು ದಕ್ಷಿಣರೇಂಜ್ ಆಫೀಸಿನಲ್ಲಿ ದೊಡ್ಡ ಕ್ಯೂ ಇದ್ದ ಫೋಟೋ ಪತ್ರಿಕೆಗಳಲ್ಲಿ ಬಂದಿದ್ದುದನ್ನು ತಾವೂ ನೋಡಿರಬಹುದು. ಅಕ್ಕಿ ಇಲ್ಲ, ಗೋಧಿ ಇಲ್ಲ, ರವೆ ಇಲ್ಲ, ಸಕ್ಕರೆ ಇಲ್ಲ, ಮೈದಾ ಇಲ್ಲ. ಈ ಸರ್ಕಾರದ ಬಂದ ಮೇಲೆ ಎಲ್ಲಕ್ಕೂ ಅಭಾವ ಪ್ರಾರಂಭವಾಗಿದೆ. ಇದರ ಜೊತೆಗೆ ಸರ್ಕಾರ ನಡೆಸುವವರ ನೈತಿಕ ಮಟ್ಟದ ಅಭಾವವೂ ಸೇರಿ ಹೋಗಿದೆ. ಬಸುಮತಿ ಅಕ್ಕಿ ತಿನ್ನುವಂಥ ಮಂತ್ರಿಗಳಿಗೆ ದಪ್ಪಕ್ಕಿ ತಿನ್ನುವ ಬಡ ಜನರ ತೊಂದರೆ ಹೇಗೆ ಗೊತ್ತಾಗಬೇಕು ? ಬಡಜನರಿಗೆ ತುಂಬ ತೊಂದರೆಯಾಗಿದೆ. ಇದನ್ನು ಸರಿಪಡಿಸಬೇಕು.

Sri T. R. SHAMANNA.—Sir, in my constituency people have been put to lot of hardship. They are finding it very difficult to get ration cards.

Mr. DEPUTY SPEAKER.—It is in everybody's constituency and not only in yours. I would urge upon the Hon. Minister for Social Welfare and Community Development to convey the feelings of the hon. Members to the Hon. Minister concerned.

Misappropriation in supply of wood for Construction of Houses to the Poor

ಶ್ರೀ ಕೆ. ಪ್ರಭಾಕರ್.—ನಾನೂ ಸೇರಿ ನಾಲ್ಕೈದು ಜನ ರುಜು ಹಾಕಿ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟು ಸುಮಾರು 10 ದಿವಸವಾಗಿದೆ. ಕಳೆದ 8 ವರ್ಷದಿಂದ ಸರ್ಕಾರದವರು ಬಡವರಿಗೆ ಮನೆ ಕಟ್ಟಿಕೊಳ್ಳುವುದರ ಸಲುವಾಗಿ ಅರಣ್ಯದಿಂದ ಮರಗಳನ್ನು ಕೊಡುತ್ತಿದ್ದರು. ಅದು ದುರ್ವಿನಿಯೋಗವಾಗುತ್ತಿದೆ ಎನ್ನುವುದರ ಬಗ್ಗೆ ಒಂದು ತನಿಖೆಗೆ ಏರ್ಪಾಡು ಮಾಡಿದ್ದಾರೆ. ಅದರಿಂದ ಪ್ರಯೋಜನವಾಗುವುದಕಿಂತಲೂ ಅಪ್ರಯೋಜನ ಜಾಸ್ತಿಯಾಗಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ರೀತಿಯಲ್ಲಿ ಕಾರ್ಯಕ್ರಮ ನಡೆಯುತ್ತಿದೆ ಇದರ ಬಗ್ಗೆ ಸರ್ಕಾರದ ಉತ್ತರವೇನು ಎಂದು ಕೇಳುತ್ತೇನೆ. ಉತ್ತರ ಬೇಗ ಬರುವ ಹಾಗೆ ಮಾಡಿದರೆ ಸಾಕು.

Closure of the General Hostel at Hassan

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ಈಗ್ಗೆ ಎಂಟು ದಿನಗಳ ಹಿಂದೆ ಐದಾರು ಜನ ಸದಸ್ಯರು ಸೇರಿ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳುಹಿಸಲಾಗಿತ್ತು. ಅದು ಹಾಸನದಲ್ಲಿದ್ದ ಒಂದು ಜನರಲ್ ಹಾಸ್ಟಲ್‌ನ್ನು ಮುಚ್ಚಿರುವುದರ ಬಗ್ಗೆ ಮತ್ತು ಅಲ್ಲಿದ್ದ ಮಕ್ಕಳ ಬಗ್ಗೆ ಇದರ ಬಗ್ಗೆ ಇಲಾಖೆಯವರು ಏನು ಮಾಡಿದ್ದಾರೆ ಎನ್ನುವುದು ತಿಳಿಯಲಿಲ್ಲ. ದಯವಿಟ್ಟು ನಾಳೆ ದಿನವಾದರೂ ಈ ಕಾಲ್ ಅಟೆನ್‌ಷನ್ ನೋಟೀಸಿಗೆ ಉತ್ತರ ಸರಕಾರದಿಂದ ಬರುವ ಹಾಗೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Incident in South Kanara

Sri B. SUBBAIAH SHETTY(Surathkal).—Sir, I had sent along with other hon. members a Call Attention Notice about 10 days back regarding the hooliganism by R. S. S. Workers in South Kanara District intimidating the minority and other poor tenants. There is another such incident recently in South Kanara. I request that my Call Attention may be brought before the House at the earliest.

Mr. DEPUTY SPEAKER.—I will have it examined.

Re-opening the Examination Centre at Nonavinakere

ಶ್ರೀ ಟಿ. ಎಂ. ಮಂಜುನಾಥ(ತಿಪಟೂರು).—ಸ್ವಾಮಿ, ನಾನು 20 ದಿನಗಳಿಗೆ ಮುಂಚೆಯೇ ವಿದ್ಯಾ ಮಂತ್ರಿಗಳ ಕಡೆಗೆ ನೊಣವಿನಕೆರೆ ಎಸ್. ಎಸ್. ಎಲ್. ಸಿ. ಪರೀಕ್ಷಾ ಕೇಂದ್ರವನ್ನು ಮುಚ್ಚಿರುವುದರ ಬಗ್ಗೆ ನೋಟೀಸ್ ಕಳುಹಿಸಿದ್ದರೂ ಇದುವರಗೂ ಸರಕಾರದಿಂದ ಈ ಸೆಂಟರನ್ನು ಪುನ: ತೆರೆಯುತ್ತೇವೆ ಅಥವಾ ಇಲ್ಲ ಎನ್ನುವುದಕ್ಕೆ ಉತ್ತರ ಇಲ್ಲ. ಸರಕಾರದಿಂದ ಇಂದೇ ಉತ್ತರ ಕೊಡಿಸಿ

ಕೊಡಬೇಕು. ಇಲ್ಲಿ 125 ಹೆಣ್ಣು ಮಕ್ಕಳು ಹಳ್ಳಿಗಾಡಿನಿಂದ ಬರುವವರು ಇದ್ದಾರೆ. ಇವರಿಗೆಲ್ಲಾ ಪರೀಕ್ಷೆಗೆ ಹೋಗಲು ಕಷ್ಟವಾಗುತ್ತಿದೆ. ದಯವಿಟ್ಟು ಈ ಕೇಂದ್ರವನ್ನು ಮತ್ತೆ ಪರೀಕ್ಷಾ ಕೇಂದ್ರ ಮಾಡುವುದರ ಬಗ್ಗೆ ಸರಕಾರ ಕೂಡಲೇ ಗಮನ ಕೊಡಬೇಕು.

ಉಪಾಧ್ಯಕ್ಷರು : ನಾನು ವಿಚಾರಮಾಡಿ ನೋಡುತ್ತೇನೆ.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ನಾನು 15 ದಿನಗಳಿಗೆ ಮುಂಚೆ ಹೆಚ್. ಎಂ. ಟಿ. ಕಾರ್ಮಿಕರ ಬಗ್ಗೆ ಒಂದು ಕಾಲಿಂಗ್ ಅಟೆನ್ಷನ್ ನೋಟೀಸು ಕಳುಹಿಸಿದ್ದೆ, ಇದರ ಬಗ್ಗೆ ಇನ್ನೂ ಉತ್ತರ ಬರದಿದ್ದರೆ ಹೇಗೆ ಸ್ವಾಮಿ ! ಇದನ್ನು ಬೇಗ ಉತ್ತರ ತರಿಸಿಕೊಡಬೇಕು. ಇದನ್ನು ಮಾರ್ಚ್ 15 ನೇ ತಾರೀಖೇ ಕಳುಹಿಸಿದ್ದೆ.

ಉಪಾಧ್ಯಕ್ಷರು.— ವಿಚಾರಮಾಡಿ ನೋಡುತ್ತೇನೆ.

Representation of the Thrown Silk Weavers

ಶ್ರೀ ಎಸ್. ಬಿ. ನಾಗರಾಳ್ (ರೇಷ್ಮೆ ಶಾಖೆಯ ರಾಜ್ಯ ಮಂತ್ರಿಗಳು).—ಸ್ವಾಮಿ, ನಾನು ನಿನ್ನೆ ದಿವಸ ಇಲ್ಲಿ ಚರ್ಚೆ ನಡೆಯುವಾಗ ಥ್ರೋನ್ ಸಿಲ್ಕ್ ವೀವರುಗಳು ಕಳುಹಿಸಿರುವ ಮನವಿ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ನಾಗಣ್ಣನವರು ಹೇಳಿದಂತೆ ಅದರ ಪ್ರತಿಯನ್ನು ನಾಳೆ ಕೊಡುತ್ತೇನೆಂದು ಭರವಸೆ ಕೊಟ್ಟಿದ್ದೆ. ಅದರಂತೆ ಇಂದು ತಮ್ಮ ಮೂಲಕ ಅವರಿಗೂ ಅದರ ಒಂದು ಕಾಪಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ನಾನು ನಿನ್ನೆ ದಿನವೇ ಹೇಳಿದ್ದೆ ಇಂತಹ ಅರ್ಜಿಗಳು ಬೇಕಾದರೆ 19 ಅರ್ಜಿಗಳನ್ನು ನಾನೂ ಬರೆಸಿ ತರಬಹುದು ಎಂದು. ನಿನ್ನೆಯೇ ಇದನ್ನು ಹಾಜರು ಮಾಡಬೇಕೆಂತಲೂ ತಿಳಿಸಿದ್ದೆ.

ಶ್ರೀ ಎಸ್ ಬಿ. ನಾಗರಾಳ್.—ನಾನು ಥ್ರೋನ್ ಸಿಲ್ಕ್ ವರ್ತಕರುಗಳ ಬಗ್ಗೆ ಅವರ ಸಂಘದ ಮೂಲಕ ಬಂದಿರುವ ವರದಿಯನ್ನು ಇಲ್ಲಿ ಸಭೆಗೆ ಓದುತ್ತೇನೆ. ಅದು ಈ ರೀತಿ ಇದೆ :—

"Extract from Memorandum dated 12-1-1973 submitted to the Hon'ble Chief Minister Sri Devaraj Urs by the President, The Mysore Silk Handloom Weavers' Association, Bangalore.

12. The Raw Silk has Sales Taxation in two stages namely, one at the Turnover stage with a maxium of Rs. 2,000 at Raw Silk dealers' level', and the second at 2% in the Throwing Stage. This is misused to a great extent. Because the Thrown silk which is sent out in disguise as Raw Silk, only to avoid Sales tax. The levy of sales tax at the Thrown silk level should be discontinued."

ಶ್ರೀ ಕೆ. ಎಂ. ನಾಗಣ್ಣ.—ಸ್ವಾಮಿ, ಇವರು ಹೇಳಿದ ಸಭೆಯಲ್ಲಿ ನಾನು ಕೂಡ ಇದ್ದೆ ಮತ್ತು ಮಾನ್ಯ ಮಂತ್ರಿಗಳೂ ಅಲ್ಲಿದ್ದರು ಮತ್ತು ಇದರಲ್ಲಿ ರುಜು ಹಾಕಿರುವ ಹನುಮಂತಪ್ಪ ಎನ್ನುವ ವರ್ತಕರೂ ಇದ್ದರು. ನಾನು ಮಾನ್ಯ ಮಂತ್ರಿಗಳಿಗೆ ಇವರೆಲ್ಲ ತೆರಿಗೆಗಳ್ಳರು ಇಂತಹವರಿಗೆ ತೆರಿಗೆ ವಿನಾಯಿತಿ ಕೊಡುವುದು ಸರಿಯಲ್ಲ ಎಂದು ಹೇಳಿದಾಗ ಅದಕ್ಕೆ ಮಂತ್ರಿಗಳು ಥ್ರೋನ್ ಸಿಲ್ಕ್ ವರ್ತಕರುಗಳಿಗೆ ತೆರಿಗೆ ಹಾಕಿರುವುದನ್ನು ತೆಗೆಯುವುದಿಲ್ಲ ಎಂದು ಅಲ್ಲೇ ಒಪ್ಪಿದ್ದರು. ಇಲ್ಲಿ ಬಂದು ಹುರಿ ಮಾಡುವ ಕಾರ್ಖಾನೆ ವರ್ತಕರುಗಳಿಗೆಲ್ಲಾ ತೆರಿಗೆ ತೆಗೆಯುತ್ತಿದ್ದಾರೆ. ಇದರಲ್ಲಿ ಯಾವುದೋ ಒಬ್ಬರು ಸೊಸೈಟಿಯ ಪ್ರೆಸಿಡೆಂಟರು ಹಾಗೂ ಸೆಕ್ರೆಟರಿಗಳು ಎಂದು ರುಜು ಹಾಕಿದರೆ ಇದು ಎಲ್ಲ ಜನರ ಪ್ರತಿನಿಧಿಗಳಾಗಿ ಕಳುಹಿಸಿರುವುದಲ್ಲ. ಇದು ವೀವರುಗಳಿಂದ ಬಂದ ಮನವಿ ಎಂದು ನಾವು ತಿಳಿಯುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು.—ಇದರ ಮೇಲೆ ಇನ್ನು ಹೇಳುವುದು ಸರಿಯಲ್ಲ.

ಶ್ರೀ ಕೊಣಂದೂರು ಲಿಂಗಪ್ಪ.—ನಾನು ವಿದ್ಯಾ ಮಂತ್ರಿಗಳ ಗಮನಕ್ಕೆ ಒಂದು ಜರೂರು ವಿಚಾರ ತರಬೇಕಾಗಿದೆ. ಬರುವ 31 ನೇ ತಾರೀಖನಂದು ಲೋಕಲ್ ಕ್ಯಾಂಡಿಡೇಟರುಗಳಾಗಿ ಕೆಲವು ಕಾಲೇಜುಗಳಲ್ಲಿ ಟೀಚರುಗಳು ಕೆಲಸ ಮಾಡುತ್ತಿರುವವರನ್ನು 31ನೇ ತಾರೀಖು ರಿಲೀವ್ ಮಾಡುತ್ತೇವೆಂದು ನೋಟೀಸು ಕೊಟ್ಟಿದ್ದಾರಂತೆ, ಮುಂದೆ ಇವರೆಲ್ಲ ಎಲ್ಲಿಗೆ ಹೋಗಬೇಕು ? ಇವರ ಬಗ್ಗೆ ಸರಕಾರ ನಾಳೆ ಇಲ್ಲಿ ಹೇಳಿಕೆ ಕೊಡಬೇಕೆಂದು ಕೇಳುತ್ತೇನೆ.

3-00 P. M.

Mr. DEPUTY SPEAKER.—This Assembly is a representative body of the people. I can assure the hon. member that I will do the best in the matter. The calling attention notices are so innumerable that it is difficult to attend to them ; they will still be attended to.

Moving of the Motion for Demands for Grants by Ministers

Sri A. R. BADRINARAYANA (Minister for Education).—Sir, on behalf of the Minister for Municipal Administration, I beg to move :

Sri H. D. DEVEGOWDA (Holenarsipur).—I strongly protest against the moving of the Demand of the Minister for Municipal Administration by the Education Minister. When his demand was to be moved, it was his duty to be present in the House. This is not the way that the Minister should treat this House with scant courtesy. Even the Chief Minister is not present in the House for the last three days even though he is present in the headquarters. This morning he has attended a function in the Horticulture Department. I am so sorry that the Ministers, including the Chief Minister, are showing disrespect to this House. Even the other day when the subject pertaining to the Municipal Administration Minister was taken up in this House, he was absent on that day.

Mr. DEPUTY SPEAKER.—I am intimated that the Minister for Municipal Administration is held up in the Council answering the questions which stand in his name. He will be coming to the House very soon.

Sri H. D. DEVEGOWDA.—When his demand was to be moved in this House, he would have deputed somebody to answer his questions in the Council.

Sri AZEEZ SAIT (Minister for Labour).—The Question Hour in the Council starts from 2 P. M. The Minister for Municipal Administration is held up in the Council because some questions are standing in his name He will be coming to the House soon after his reply to questions are over. Hon. Chief Minister attended a cabinet meeting in the morning today. This afternoon, as he had an important programme to be fulfilled, he has proceeded to Mysore. This does not mean that the Chief Minister has shown disrespect to this august House. This is the joint responsibility of the Ministers. In the absence of any Minister, another Minister can act in his place.

ಶ್ರೀ ಎಚ್. ಡಿ. ದೇವೇಗೌಡ.—ದಯಮಾಡಿ ಕ್ಷಮಿಸಬೇಕು. ತಾವು ಈ ಸಭೆಯಲ್ಲಿ ನಮಗಿಂತಲೂ ಹಿಂದಿನಿಂದ ಸದಸ್ಯರಾಗಿ ಒಳ್ಳೆಯ ಅನುಭವವನ್ನು ಪಡೆದಿದ್ದೀರಿ. ಮುಖ್ಯಮಂತ್ರಿಗಳು ಹೆಡ್‌ಕ್ವಾರ್ಟರ್ಸ್‌ನಲ್ಲಿ ಇದ್ದೂ ಸಹ ಸಭೆಗೆ ಏತಕ್ಕೆ ಬರಬಾರದು ? ಅವರು ಇಂದು ಮೈಸೂರಿನಲ್ಲಿ ಒಂದು ಕಾರ್ಯಕ್ರಮಕ್ಕೆ ಭಾಗವಹಿಸಲು ಹೋದರು ಎಂದು ಸಾರಿಗೆ ಮಂತ್ರಿಗಳು ಹೇಳಿದರು. ಅವರಿಗೆ ಈ ಸಭೆ ಮುಖ್ಯವಲ್ಲ, ಮೈಸೂರಿನ ಕಾರ್ಯಕ್ರಮ ಮುಖ್ಯವೆಂದು ಕಾಣುತ್ತದೆ. ಈ ಸಭೆಯ ಕೆಲಸಕಾರ್ಯಗಳಿಗಿಂತ ಅವರ ಪ್ರವಾಸ ದೊಡ್ಡದಲ್ಲ. ಈ ಸಭೆಯು ನಡೆಯುತ್ತಿರುವಾಗ ಮುಖ್ಯಮಂತ್ರಿಗಳು ಈ ಸಭೆಯನ್ನು ನಿರ್ಲಕ್ಷ್ಯ ಮನೋಭಾವದಿಂದ ನೋಡಿದರೆ ಅದನ್ನು ನಾವು ಖಂಡನೆ ಮಾಡಬೇಕಾಗುತ್ತದೆ. ನೀವು ಸರ್ಕಾರದ ಮುಖಕ್ಕೆ ಹೇಳಬೇಕಾಗುತ್ತದೆ. You must pull up these Ministers. We cannot tolerate this fype of attitude. ಬೇರೆ ಸಭೆಯಲ್ಲಿ ಮಾನ್ಯ ಮಂತ್ರಿಗಳು ಭಾಗವಹಿಸಿದ್ದರೆ ಅಲ್ಲಿಯ ಕಾರ್ಯಕಲಾಪಗಳು ಪ್ರಾಮುಖ್ಯವಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಬೇಡಿಕೆಗಳನ್ನು ಮಂಡಿಸುವ ಕಾಲಕ್ಕೆ ಅವರು ಇಲ್ಲಿರಬೇಕಾಗುತ್ತಿತ್ತು. ಇದು ಬಹಳ ಪ್ರಾಮುಖ್ಯವಾದುದು. On behalf of the Minister for Municipal Administration, sombody would have answered his questions in the Council.

Mr. DEPUTY SPEAKER.—He is held in the Council and he will be coming within a couple of minutes.

Sri K. M. NAGANNA.—I request the Chair to adjourn the house for some time.

ಶ್ರೀ ಎಸ್. ಬಂಗಾರಪ್ಪ.—ಇವೊತ್ತು ಪೌರಾಡಳಿತ ಮಂತ್ರಿಗಳು ತಮ್ಮ ಬೇಡಿಕೆಗಳನ್ನು ಮಂಡಿಸುವುದು ಇದ್ದಾಗ ಅವರು ಇಲ್ಲಿರಬೇಕಾಗಿತ್ತು. ಇದು ಜಾಯಿಂಟ್ ರೆಸ್‌ಪಾನ್ಸಿಬಲಿಟಿ ಎಂದು ಮಾನ್ಯ ಅಜೀಜ್‌ಸೇಟ್ ಅವರು ಹೇಳಿದರು.

ಉಪಾಧ್ಯಕ್ಷರು.—ಅವರು ಇನ್ನು ಕೆಲವು ನಿಮಿಷಗಳಲ್ಲಿ ಬಂದುಬಿಡುತ್ತಾರೆ.

Sri H. D. DEVEGOWDA.—On some other day when his business stood in his name, he was absent on that day. This kind of attitude cannot be tolerated.

Sri AZEEZ SAIT.—Yesterday the Minister for Municipal Administration was engaged in the Council till 5-45 P. M. as he had to pilot two bills which were standing in his name.

Sri B. B. SAYANAK.—If the Minister is not here, the House can be adjourned. I had given notice of a short notice question about 15 days back. The concerned Minister has not answered my question so far.

Mr. DEPUTY SPEAKER.—If the Minister is held up in the Council I cannot help it. I have understood the gravity of the situation. If he was not present in the Council, then you are justified in criticising him. He is coming to the House very soon. Let the demand be moved and by the time the members begin to speak on the Demand he will be present. I call upon the Minister for Education to move the demand.

(*Education Minister stood up.*)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬಸವಲಿಂಗಪ್ಪನವರ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈ ಸದನದ ಮುಂದೆ ಮಂಡಿಸುವ ಬಗ್ಗೆ ನಾನು ಅಡ್ಡಿ ಮಾಡುವುದಿಲ್ಲ ;

Mr. DEPUTY SPEAKER.—I am proud that you are an young legislator. When I became a member, I was still younger to you. If you want to make a name in the public life you must have little restraint.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಈಗ ಸಭೆಗೆ ಬಂದರು, ಅವರು ಬೇಡಿಕೆಗಳನ್ನು ಮಂಡನೆ ಮಾಡಲಿ. ಆದರೆ ಸಭೆಯು ನಡೆಯುವ ಪೂರ್ತಾ ಕಾಲ ಬೇಡಿಕೆಗಳಿಗೆ ಸಂಬಂಧಪಟ್ಟ ವಿಷಯಗಳೇ ಇಲ್ಲಿ ಪ್ರಸ್ತಾಪವಾಗುವದಿಲ್ಲ. ಅನೇಕ ವಿಷಯಗಳು ಪ್ರಸ್ತಾಪಕ್ಕೆ ಬರುತ್ತವೆ. ಪೋಲೀಸ್ ಖಾತೆಗೆ ಸಂಬಂಧಪಟ್ಟ ವಿಷಯ ಕೂಡ ಪ್ರಸ್ತಾಪವಾಗಬಹುದು ಆದಕಾರಣ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹಾಜರಿರಬೇಕಾಗುತ್ತದೆ. ದ್ರಾಕ್ಷಿ ಹಣ್ಣಿನ ಪ್ರದರ್ಶನದಲ್ಲಿ ಭಾಗವಹಿಸುವುದು ಈ ಸಭೆಗಿಂತ ಮುಖ್ಯವಾದುದೆಂದು ಅವರು ತಿಳಿದಿರುವಂತಿದೆ. ಈ ಸಭೆಯನ್ನು ಅವರು ನಿಕೃಷ್ಟವಾಗಿ ಕಾಣುತ್ತಿದ್ದಾರೆ. ಈ ಸಭೆಯ ಮಾನಮರ್ರ್ಯಾದೆ, ಘನತೆಗೌರವ ಯಾವುದಕ್ಕೂ ಅವರು ಬೆಲೆ ಕೊಡುತ್ತಿಲ್ಲ. ಹಿಂದೆ ಕೂಡ ಈ ಬಗ್ಗೆ ಅನೇಕ ಸಲ ಪ್ರಸ್ತಾಪವಾಗಿದ್ದರೂ ಸಹ ಅದೇ ರೀತಿ ನಡೆದುಕೊಳ್ಳುತ್ತಿದ್ದಾರೆ. ಈ ಸದನಕ್ಕೆ ಕುಂದು ತರುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರನ್ನು ಕೇಳಿಕೊಳ್ಳುವುದೇನೆಂದರೆ, ಅವರನ್ನು ಮೊದಲು ಸಭೆಗೆ ಕರೆಸಬೇಕು, ಅನಂತರ ಮುಂದಿನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕು. ಈ ಸಭೆ ನಡೆಯುತ್ತಿರುವಾಗ ಅವರು ಹಾಸನ ಮೈಸೂರು ಮುಂತಾದ ಕಡೆಗಳಿಗೆ ಪ್ರವಾಸ ಹೋಗುವುದು ಸರಿಯಲ್ಲವೆಂದು ಹೇಳುತ್ತೇನೆ.

(Sri B. Basavalingappa entered the House)

Sri B. BASAVALINGAPPA.—I raise a point of Order.

Mr. DEPUTY SPEAKER.—I have understood the view point of Sri Bangarappa. The Hon. Leader of the Opposition has put the same thing as vehemently as possible. Anyway I will convey the feelings of the hon. members to the Hon. Chief Minister. There is nothing on the agenda which stands in the name of the Chief Minister today.

BUDGET ESTIMATES FOR 1973-74

Demands for Grants

Demand No 39 A—Gant in Aid Contribution and Local Bodies and Housing

Sri B. BASAVALINGAPPA (Minister for Municipal Administration).—On the recommendation of the Governor, I beg to move :

"That a sum not exceeding Rs. 6,09,24,000 inclusive of the sum granted 'on account' be granted to the Government to defray the charges which will come in course of payment during the financial year ending 31 st day of March 1974, in respect of D. mand No. 39 A 'grants-in-aid, Contributions to Local Bodies and Housing."

Mr. DEPUTY SPEAKER.—Motion moved.

'On the recommendation of the Governor, that sum not exceeding Rs. 6,00,24,000 inclusive of the sum granted 'on account' be granted to the Government to defray the chares which will come in course of payment during the financial year ending 31st day of March 1974, in respect of Demand No. 39A 'grants-in-aid, Contributions to Local Bodies and and Housing."

The demand is for disscussion.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಪೌರಾಡಳಿತ ಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸಬೇಕಾಗಿದೆ. ಈಗ ನನ್ನ ಮಿತ್ರರು ಹೇಳುತ್ತಿದ್ದರು ಕೆಲವು ವರ್ಷಗಳ ಹಿಂದೆ ಪೌರಾಡಳಿತದ ಬಗ್ಗೆ ಹೆಚ್ಚು ಚರ್ಚೆ ನಡೆಯುತ್ತಾ ಇರಲಿಲ್ಲ ಎಂದು. ಈಗ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು ಮಂತ್ರಿಗಳಾದ ಮೇಲೆ ಪೌರಾಡಳಿತ ಇಲಾಖೆಯ ಬಗ್ಗೆ ಸಾಕಷ್ಟು ಪ್ರಾಶಸ್ತ್ಯ ಬಂದಿದೆ. ಅದಕ್ಕೆ ಅವರ ವ್ಯಕ್ತಿತ್ವವೇ ಕಾರಣ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ನಾನು ಕಳೆದ 5-6 ವರ್ಷಗಳಿಂದಲೂ ನೋಡುತ್ತಿದ್ದೇನೆ ಈ ಪೌರಾಡಳಿತ ಇಲಾಖೆ ಖಾಯಂ ಆಗಿ ಒಬ್ಬ ಮಂತ್ರಿಗಳ ಕೈಯಲ್ಲಿಯೂ ನಿಂತಿಲ್ಲ. ಹಿಂದಿನ ಶಾಸನ ಸಭೆಯ ಅವಧಿಯಲ್ಲಿ ಶ್ರೀಮಾನ್ ಆರ್. ಎಂ. ಪಾಟೀಲರು ಪೌರಾಡಳಿತ ಸಚಿವರಾಗಿದ್ದರು, ಆ ಮೇಲೆ ಪುಟ್ಟಸ್ವಾಮಿಯವರು ಬಂದರು, ಆ ಮೇಲೆ ಶ್ರೀಮಾನ್ ಬಿ ಎಂ ಪಾಟೀಲರು ಬಂದರು. ಈಗ ಇದು ಶ್ರೀಮಾನ್ ಬಸವಲಿಂಗಪ್ಪನವರ ಕೈಯ್ಯಲ್ಲಿ ಬಂದಿದೆ, ಈ ಇಲಾಖೆ ಜನಗಳಿಂದ ಬಹಳ ಕಾಂಟ್ರವರ್ಷಿಯಲ್ ಎನಿಸಿಕೊಂಡಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಅದು ಏನೆಂದರೆ ಪೌರಾಡಳಿತ ಇಲಾಖೆಗೆ ಸಂಬಂಧಪಟ್ಟ ಆಡಳಿತ ವರದಿ ನಮ್ಮ ಕೈಗೆ ಸೇರಿಲ್ಲ. ಈ ಇಲಾಖೆಗೆ ಸಂಬಂಧಪಟ್ಟ ಆಡಳಿತ ವರದಿಯನ್ನು ಸರ್ವೇ ಸಾಧಾರಣವಾಗಿ ಈ ಬೇಡಿಕೆಯನ್ನು ಚರ್ಚೆ ಮಾಡುವುದಕ್ಕೆ ಮುಂಚೆ ಸದಸ್ಯರಿಗೆ ಒದಗಿಸುತ್ತಿದ್ದರು. ಈ ಸಾರಿ ಅದನ್ನು ಒದಗಿಸದೇ ಇರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಕೊಡಬೇಕಾದ್ದು ನಿಜ. ಅದನ್ನು ಒದಗಿಸುವುದಕ್ಕೆ ಎಷ್ಟೇ ಪ್ರಯತ್ನ ಮಾಡಿದರೂ ಅದು ಸಾಧ್ಯವಾಗಲಿಲ್ಲ. ಇವೊತ್ತು ಸಾಯಂಕಾಲ ಆ ವರದಿ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಇಲಾಖೆಗೆ ಸಂಬಂಧಪಟ್ಟ ವರದಿಯನ್ನು ಈ ಇಲಾಖೆಯ ಕಾರ್ಯದರ್ಶಿಗಳು ಇವೊತ್ತಿನವರೆಗೂ ಕೊಟ್ಟಿಲ್ಲ ಎಂದರೆ ಯಾವ ರೀತಿ ನಾವು ಈ ಬೇಡಿಕೆಯ ಮೇಲೆ ಚರ್ಚೆ ಮಾಡಬೇಕು?

ಶ್ರೀ ಕೋಣಂದೂರು ಲಿಂಗಪ್ಪ.—ಆ ವರದಿ ಬರುವವರೆಗೂ ಈ ಚರ್ಚೆಯನ್ನು ಮುಂದು ಹಾಕಿ.

ಶ್ರೀ ಜೆ. ಹೆಚ್. ಕಬಾಡಿ.—ಆ ವರದಿ ಬಾರದೆ ಇದನ್ನು ಚರ್ಚೆಗೆ ತೆಗೆದುಕೊಳ್ಳಬಾರದು ಎಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಚೇರ್ಮನ್ (ಶ್ರೀ ಕೆ. ಎಂ. ನಾಗಣ್ಣ).—ಮೊದಲೇ ಕೊಡಬೇಕಾಗಿತ್ತು. ಆದರೆ ಅದು ತಯಾರಾಗಿಲ್ಲ ಇವೊತ್ತು ಸಾಯಂಕಾಲ ಬರುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಸ್ ಬಂಗಾರಪ್ಪ.—ಆಯಾ ಇಲಾಖೆಯ ಬೇಡಿಕೆಗಳು ಈ ಸಭೆಯಲ್ಲಿ ಚರ್ಚೆಗೆ ಬರುವುದಕ್ಕೆ ಮುಂಚೆ ಆಯಾ ಇಲಾಖೆಯ ಆಡಳಿತ ವರದಿಯನ್ನು ಮಾನ್ಯ ಸದಸ್ಯರಿಗೆ ಕೊಡತಕ್ಕಂಥಾ ಒಂದು ಪದ್ಧತಿಯನ್ನು ಹಿಂದಿನಿಂದ ನಡೆಸಿಕೊಂಡು ಬಂದಿದ್ದಾರೆ. ಆದರೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು ಈ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ನಿಗೆ ಸಂಬಂಧಪಟ್ಟ ಆಡಳಿತ

(ಶ್ರೀ ಎಸ್. ಬಂಗಾರಪ್ಪ)

ವರದಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿಲ್ಲ. ಆದ್ದರಿಂದ ಈಗ ಈ ಚರ್ಚೆಯನ್ನು ಮುಂದಕ್ಕೆ ಹಾಕಿ ವರದಿ ಬಂದ ಮೇಲೆ ಈ ಬೇಡಿಕೆಯನ್ನು ತೆಗೆದುಕೊಳ್ಳಬಹುದು. ಈಗ ಈ ಸಭೆಯಲ್ಲಿ ಮಾನ್ಯ ವಿದ್ಯಾ ಸಚಿವರು ಇದ್ದಾರೆ. ಅವರು ವಿದ್ಯಾ ಇಲಾಖೆಯ ವರದಿಯನ್ನು ಕೊಡುವುದಾದರೆ ಅವರ ಬೇಡಿಕೆಯನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಚೇರ್ಮನ್.—ಈಗಾಗಲೇ ಮಂತ್ರಿಗಳು ಆ ವರದಿ ತಯಾರಾಗುತ್ತಿದೆ. ಇವೊತ್ತು ಸಾಯಂಕಾಲ ಬರುತ್ತದೆ ಎಂದು ಹೇಳಿದ್ದಾರೆ.

ಶ್ರೀ ಎಚ್ ಎಸ್ ಸಿದ್ದಪ್ಪ.—ಆಯಾ ಇಲಾಖೆಯ ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮುಂಚೆ ಆಡಳಿತ ವರದಿಯನ್ನು ಸದಸ್ಯರಿಗೆ ಕೊಡತಕ್ಕಂಥಾ ಒಂದು ಸತ್ ಸಂಪ್ರದಾಯವನ್ನು ಹಿಂದಿನಿಂದ ನಡೆಸಿಕೊಂಡು ಬಂದಿದ್ದಾರೆ. ಆದ್ದರಿಂದ ಆ ವರದಿ ಬರುವವರೆಗೂ ಈ ಚರ್ಚೆಯನ್ನು ಮುಂದಕ್ಕೆ ಹಾಕಿ.

ಚೇರ್ಮನ್.—ಹಾಗಾದರೆ ಈ ಬೇಡಿಕೆಯನ್ನು ಮುಂದುವರಿಸಿ ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಯವರ ಇಲಾಖೆಗೆ ಸಂಬಂಧಪಟ್ಟ ಸೋಷಿಯಲ್ ವೆಲ್‌ಫೇರ್ ಡಿಮ್ಯಾಂಡನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಇವೊತ್ತು ಸಿದ್ಧವಾಗಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮುನಿಸಿಪಲ್ ಅಡ್ಮಿನಿಸ್ಟ್ರೇಶನಿಗೆ ಸಂಬಂಧಪಟ್ಟ ಅಡ್ಮಿನಿಸ್ಟ್ರೇಶನ್ ರಿಪೋರ್ಟು ಹಿಂದಿನಿಂದಲೂ ಕೊಟ್ಟುಕೊಂಡು ಬಂದ ಸಂಪ್ರದಾಯ ಇದೆ. ಆದರೆ ಇವೊತ್ತಿನ ದಿವಸ ಮಂತ್ರಿಗಳು ಈ ವಿಚಾರದಲ್ಲಿ ಎಡವಿದ್ದಾರೆ. ಅದನ್ನು ಸಂಜೆ ಕೊಡುತ್ತೇನೆಂದು ಹೇಳಿದ್ದಾರೆ. ಈಗ ಅಂತೂ ಶಾಮಣ್ಣನವರು ಭಾಷಣ ಪ್ರಾರಂಭ ಮಾಡಿದ್ದಾರೆ. ಸರ್ಕಾರದವರು ಇದನ್ನು ಮುಂದಾದರೂ ಸರಿಯಾಗಿ ಮಾಡಿಕೊಂಡು ಬರಬೇಕೆಂದು ಎಚ್ಚರಿಕೆಯನ್ನು ಕೊಟ್ಟು ಈಗ ನಾವು ನಮ್ಮ ಕಾರ್ಯಕಲಾಪಗಳನ್ನು ಮುಂದುವರಿಸಿಕೊಂಡು ಹೋಗೋಣ.

ಶ್ರೀ ಟಿ.ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬಸವಲಿಂಗಪ್ಪನವರು ಮಂತ್ರಿಯಾದಮೇಲೆ ಈ ಇಲಾಖೆಯ ಬಗ್ಗೆ ಸಾರ್ವಜನಿಕ ಗಮನವನ್ನು ಸೆಳೆಯುವುದಕ್ಕೆ ಸಾಕಷ್ಟು ಪ್ರಯತ್ನವನ್ನು ಮಾಡಿದ್ದಾರೆ. ಮೊದಲನೆಯದಾಗಿ ಈ ಮಂತ್ರಿಯವರಿಗೆ ನಾವೆಲ್ಲರೂ ಸೇರಿ ಸೂಪರ್‌ಸೀಡ್ ಮಂತ್ರಿಯೆಂಬ ಒಂದು ಬಿರುದನ್ನು ಕೊಡುವುದು ಉಚಿತವೆಂದು ಹೇಳುತ್ತೇನೆ. ಅಂದರೆ ಇವರನ್ನು ಮಿನಿಸ್ಟರ್ ಫಾರ್ ಸೂಪರ್‌ಸೆಶನ್ ಎಂದು ಕರೆಯಬಹುದು. ಇವರ ಕಾಲದಲ್ಲಿ ಆದಷ್ಟು ಸೂಪರ್ ಸಶನ್ ಬೇರೆ ಯಾರ ಕಾಲದಲ್ಲಿಯೂ ಆಗಲಿಲ್ಲ. ಇವರು ಚುನಾವಣೆಯ ಕಾಲದಲ್ಲಿ ಮಾಡಿರತಕ್ಕಂತಹ ಘೋಷಣೆಗೆ ವಿರುದ್ಧವಾಗಿ ನಡೆಯುತ್ತಿದ್ದಾರೆ. ಇವತ್ತು ಪ್ರಜಾಪ್ರಭುತ್ವಕ್ಕೆ ತಳಹದಿಯಾಗಿರತಕ್ಕಂತಹ ಈ ಸ್ಥಳೀಯ ಸಂಸ್ಥೆಗಳನ್ನು ಸೂಪರ್‌ಸೀಡ್ ಮಾಡತಕ್ಕದ್ದರ ಅರ್ಥವೇನೆಂಬುದನ್ನು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಇವತ್ತು ಕಾರ್ಪೊರೇಷನ್ ಮತ್ತು ಮುನಿಸಿಪಲ್ ಕೌನ್ಸಿಲ್ ಇರತಕ್ಕದ್ದು ನಗರದಲ್ಲಿರತಕ್ಕಂತಹ ಪಾರ್ಜನ್ ಜನರ ಪ್ರತಿನಿಧಿಗಳನ್ನು ಆರಿಸಿಕೊಂಡು ಆಡಳಿತ ನಡೆಸಬೇಕೆಂಬ ಉದ್ದೇಶದಿಂದ. ಆದರೆ ನೀವು ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದರೆ, ಆಡಳಿತವು ಅವರ ಕೈಯಲ್ಲಿ ಇರದೆ, ನಿಮ್ಮ ಮಂತ್ರಿಯವರ ಕೈಯಲ್ಲಿ ಇರುತ್ತದೆ. ಆದ್ದರಿಂದ ನಾನು ಸರ್ಕಾರಕ್ಕೆ ಒರಿಕೆ ಮಾಡಿಕೊಳ್ಳುವುದೇನೆಂದರೆ, ನಿಮ್ಮ ಸುಪರ್‌ಸಿಶನ್ ಮನೋಭಾವವನ್ನು ಬಿಡಬೇಕು. ಲೋಕಲ್ ಬಾಡಿಗಳಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಹಾಕುವುದಕ್ಕೆ ಜಾಗ್ರತೆಯಾಗಿ ಕ್ರಮ ಕೈಗೊಳ್ಳಬೇಕು. ಇವತ್ತು ನಗರಾಡಳಿತದಲ್ಲಿ ಯಾವ ಒಂದು ರಾಜಕೀಯ ಸಹ ಇರಕೂಡದು. ಆದರೆ ಇವತ್ತು ಸರ್ಕಾರದವರು ಮಾಡತಕ್ಕದ್ದು ರಾಜಕೀಯವಲ್ಲದೆ ಮತ್ತೇನೂ ಅಲ್ಲ. ನಾನಾದರೂ ಇದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ನಗರಾಡಳಿತದಲ್ಲಿ ರಾಜಕೀಯವನ್ನು ದೂರವಿಟ್ಟು ನಗರದ ಹಿತದೃಷ್ಟಿಯಿಂದ ಕೆಲಸ ಮಾಡತಕ್ಕವರನ್ನು ಚುನಾವಣೆಯಲ್ಲಿ ನಿಲ್ಲಿಸಿ, ನಗರಾಡಳಿತವನ್ನು ಮಾಡುವಂತಹ ವ್ಯವಸ್ಥೆ ಮಾಡುವುದು ಬಹಳ ಮುಖ್ಯವೆಂದು ಹೇಳುತ್ತೇನೆ. ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಆಡಳಿತ ಪಕ್ಷ ಇನ್ನು ಮೇಲೆ ಕಾರ್ಪೊರೇಶನ್ ಚುನಾವಣೆಗೆ ಯಾರನ್ನೂ ಪಕ್ಷದಿಂದ ನಿಲ್ಲಿಸುವುದಿಲ್ಲವೆಂದು ಹೇಳಬೇಕು. ಯಾರು ದಕ್ಷತೆ

ಯಿಂದ, ಕೈ ಬಾಯಿ ಶುದ್ಧವಾಗಿಟ್ಟುಕೊಂಡು ಕೆಲಸ ಮಾಡುತ್ತಾರೆ ಅಂಥವರಿಗೆ ಉತ್ತೇಜನ ಕೊಟ್ಟು ನಗರಾಡಳಿತವನ್ನು ನಡೆಸುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಹಿಂದೆ ನಗರಾಡಳಿತದಲ್ಲಿ ಚುನಾವಣೆಯಾಗಿ ಬಂದವರು ಲಂಚ ತೆಗೆದುಕೊಳ್ಳುತ್ತಿರಲಿಲ್ಲ; ಕುಸ್ತಿ ಮಾಡುತ್ತಿರಲಿಲ್ಲ, ಒಬ್ಬರು ಇನ್ನೊಬ್ಬರಿಗೆ ಕೈ ಎತ್ತುತ್ತಿರಲಿಲ್ಲ. ಆದರೆ ಅದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಅಲ್ಲಿ ನಾಗರಿಕರ ಹಿತದೃಷ್ಟಿಯಿಂದ ಇವರು ಕೆಲಸ ಮಾಡಬೇಕೇ ಹೊರತು ಒಬ್ಬರಿಗೊಬ್ಬರು ಜಗಳವಾಡುವುದಕ್ಕೆ ಬರುವುದಲ್ಲ.

ನಾನು ಏಕೆ ಈ ರಾಜಕೀಯ ಗೊಂದಲ ಬೇಡ ಎಂದು ಹೇಳುವುದಕ್ಕೆ ಕಾರಣವನ್ನು ಹೇಳುತ್ತೇನೆ, ಬೆಂಗಳೂರಿನಲ್ಲಿ ಕಳೆದ ಸಲ ನಡೆದ ಚುನಾವಣೆಯಲ್ಲಿ ಆಡಳಿತ ಪಕ್ಷಕ್ಕೆ ಸರಿಯಾದ ಮೆಜಾರಿಟಿ ಬರಲಿಲ್ಲ. ಅದರ ಪ್ರಕಾರ ಕಾಂಗ್ರೆಸ್ ಬಿಟ್ಟು ಹೋದವರು, ಡಿ. ಎಂ. ಕೆ. ಮತ್ತು ಇತರ ಸದಸ್ಯರನ್ನು ಸೇರಿಸಿಕೊಂಡು ಆಡಳಿತವನ್ನು ನಡೆಸುತ್ತಿದ್ದಾರೆ. ಆದರೆ ಇವತ್ತು ನಮಗೆ ಸ್ವಚ್ಛವಾದ ಆಡಳಿತ ಈ ಎಂಟು ಕೋಟಿ ರೂಪಾಯಿ ವರಮಾನ ಇರುವ ಕಾರ್ಪೊರೇಶನಿಗೆ ಬೇಕಾಗಿದೆ. ಅಂಥ ಒಂದು ಅವಕಾಶವನ್ನು ಸರ್ಕಾರದವರು ಅಲ್ಲಿ ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇರತಕ್ಕ ಆಡಳಿತವನ್ನು ಸರಿಯಾಗಿ ಸ್ವಚ್ಛವಾಗಿ ನಡೆಸಬೇಕೇ ಹೊರತು, ಅದನ್ನು ಸುಪರ್‌ಸೀಡ್ ಮಾಡಿದರೆ ಆಡಳಿತ ಸುಗಮವಾಗಿ ಮತ್ತು ಸಮರ್ಪಕವಾಗಿ ನಡೆಸುವುದಿಲ್ಲ ಅದಕ್ಕೆ ನಗರದಲ್ಲಿರುವ ಕೆಲವು ನುರಿತ ವೈದ್ಯರು, ನುರಿತ ಇಂಜಿನಿಯರು ಮತ್ತು ಉತ್ತಮ ಆಡಳಿತಗಾರರು ಚುನಾವಣೆಯಲ್ಲಿ ಮುಂದೆ ಬಂದು ಆಡಳಿತ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

3-30 P. M.

ಈಗ ಮೊಟ್ಟಮೊದಲನೆಯದಾಗಿ ನನಗೆ ಬಹಳ ಆಪ್ತರೂ, ಹಾಗೂ ಬುದ್ಧಿವಂತರೂ ಆಗಿರತಕ್ಕ ಮಾನ್ಯ ಶ್ರೀ ಬಸವಲಿಂಗಪ್ಪನವರು ಮಾಡಿರತಕ್ಕ ಅನ್ಯಾಯಗಳ ಬಗ್ಗೆ ಕೆಲವು ವಿಚಾರಗಳನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ ಈ ಬೆಂಗಳೂರು ನಗರದಲ್ಲಿ ಟ್ರಸ್ಟ್ ಬೋರ್ಡ್ ಸ್ಥಾಪನೆಯಾಯಿತು. ಆ ರೀತಿಯಾಗಿ ಟ್ರಸ್ಟ್ ಬೋರ್ಡ್ ಸ್ಥಾಪನೆಯಾದ ಮೇಲೆ ಟ್ರಸ್ಟ್ ಬೋರ್ಡಿನವರು ಬೆಂಗಳೂರು ಸುತ್ತಮುತ್ತಲೂ ಇರುವ ಜಾಗಗಳನ್ನು ತಮ್ಮ ಸ್ವಾಧೀನಪಡಿಸಿಕೊಳ್ಳದೆ ತಮಗೆ ಬೇಕಾದಂಥ ಕಡೆ ಜಾಗ ತೆಗೆದುಕೊಂಡು ಬೆಂಗಳೂರಿನ ಸುತ್ತಮುತ್ತಲೂ ಇರತಕ್ಕ ಕೆಲವು ಜಾಗಗಳನ್ನು ಹಾಗೆಯೇ ಬಿಟ್ಟರು. ಆಗ ಅನೇಕರು ಲಾಭದ ದೃಷ್ಟಿಯಿಂದ ಆ ಜಮೀನುಗಳನ್ನು ಕೊಂಡು ಆ ಜಮೀನುಗಳಲ್ಲಿ ಸೈಟುಗಳನ್ನು ಮಾಡಿ ಅನೇಕ ಬಡವರಿಗೆ ಮಾರಿದರು. ಆ ರೀತಿಯಾಗಿ ಮಾರಿದ ಒಂದು ಧಾಟಿಯಲ್ಲಿ ಹೆಚ್ಚಿಗೆ ದುಡ್ಡು ಮಾಡಿಕೊಂಡರು. ಅವರು ಜಮೀನು ಮಾಲೀಕರಾದರು. ಆದರೆ ಬಡವರು ಅನೇಕ ಸಂದರ್ಭಗಳಲ್ಲಿ ಮನೆಗಳನ್ನು ಮಾರಿಕೊಂಡು ರೆವಿನ್ಯೂ ಸೈಟುಗಳನ್ನು ಕೊಂಡರು. 19 5 ರಲ್ಲಿಯೇ ಕಾರ್ಪೊರೇಷನ್ನಿನವರು ಹಾಗೂ ಟ್ರಸ್ಟ್ ಬೋರ್ಡಿನವರು ಈ ಸೈಟುಗಳನ್ನೆಲ್ಲಾ ರೆಗ್ಯುಲರೈಜ್ ಮಾಡಿಕೊಂಡರು. ಆಗ ಪ್ರಭಾವಯುತಶಾಲಿಗಳು ಅದರಿಂದ ಬೇಕಾದಷ್ಟು ದುಡ್ಡು ಮಾಡಿಕೊಂಡರು ಬೇಕಾದಷ್ಟು ಸೈಟುಗಳನ್ನು ಹೆಚ್ಚು ಹೆಚ್ಚಾಗಿ ಕೊಂಡು ಕೊಂಡರು. ಆಗ ಸರ್ಕಾರದವರು ಇದರ ಬಗ್ಗೆ ಒಂದು ನೋಟಿಫಿಕೇಷನ್ ಮಾಡಿ ಸಬ್ ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ನಾವು ರಿಜಿಸ್ಟ್ರೇಷನ್ ಮಾಡುವುದಿಲ್ಲವೆಂದು ಹೇಳಿದ್ದರೆ, ಈ ರೆವಿನ್ಯೂ ಸೈಟುಗಳ ಸಮಸ್ಯೆಯೇ ಬರುತ್ತಿರಲಿಲ್ಲ. ಬಡವರಾದವರು ರೆವಿನ್ಯೂ ಸೈಟುಗಳನ್ನು ಕೊಂಡರೂ ಅಂತಹವರಿಗೆ ಯಾರೂ ಅನ್ಯಾಯ ಮಾಡಬೇಡಿ ಎಂಬುದಾಗಿ ನಾನು ಹೇಳುತ್ತೇನೆ. ಸೈಟು ಇಲ್ಲದೇ ಇರುವವರಿಗೆ ನಿಮ್ಮ ಟ್ರಸ್ಟ್ ಬೋರ್ಡ್ ರೂಲ್ಸಿಗೆ ವಿರೋಧವಾಗಿ ರಕ್ಷಣೆ ಇದ್ದರೆ ಆಗ ಅಂತಹವರಿಗೆ ಸೈಟು ಕೊಡಿ ಎಂಬ ಬೇಡಿಕೆಯನ್ನು ಕೊಟ್ಟಿದ್ದರೂ ಹಿಂದಿನ ಸರ್ಕಾರದವರು ಮಾನ್ಯತೆ ಕೊಟ್ಟಿದ್ದರೂ ರಾಜ್ಯಪಾಲರು ಟ್ರಸ್ಟ್ ಬೋರ್ಡ್ ರೂಲ್ಸಿಗೆ ಅನುಗುಣವಾಗಿ ಮಾಡಿದರು ಆದರೆ ಮಾನ್ಯ ಶ್ರೀ ಬಸವಲಿಂಗಪ್ಪನವರು ಅಧಿಕಾರಕ್ಕೆ ಬಂದಮೇಲೆ ಮಾನ್ಯ ಶ್ರೀ ಪುಟ್ಟಸ್ವಾಮಿಯವರ ನೇತೃತ್ವದಲ್ಲಿ ರೆವಿನ್ಯೂ ಸೈಟುಗಳನ್ನು ಕೊಡಿಸಬಾರದೆಂದು ಒಂದು ಹೊಸ ರೂಲ್ಸ್ ಮಾಡಿದರು. ಮಾನ್ಯ ಶ್ರೀ ಬಸವಲಿಂಗಪ್ಪನವರು ನ್ಯಾಯವಾದಿಗಳು, ಬಡವರ ಬಗ್ಗೆ ಹೋರಾಡಿದವರು. ಆದರೆ ರೆವಿನ್ಯೂ ಸೈಟುಗಳುಳ್ಳವರು ಹೆಚ್ಚಿಗೆ ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಇರತಕ್ಕ ಬಡವರು ಎಂದು ಹೇಳಿದರೆ ತಪ್ಪಾಗಲಾರದು.

ಶ್ರೀ ಬಿ. ಬಸವಲಿಂಗಪ್ಪ.—ರೆವಿನ್ಯೂ ಸೈಟುಗಳ ಬಗ್ಗೆ ಮಾನ್ಯ ಸದಸ್ಯರು ವಿಚಾರ ಎತ್ತಿದ್ದರೂ ಅದರ ಬಗ್ಗೆ ಪ್ರಿಲಿಮಿನರಿ ನೋಟಿಫಿಕೇಷನ್ ಆಗಿದೆ. ಟ್ರಸ್ಟ್‌ಬೋರ್ಡಿನಲ್ಲಿ ಏನಾಗಿದೆಯೆಂದರೆ, ಈ ನೋಟಿಫಿಕೇಷನ್ ಮಾಡುವುದಕ್ಕೆ ಮುಂಚೆ ಯಾರ್ಯಾರು ಸೈಟುಗಳನ್ನು ತಗೆದುಕೊಂಡಿದ್ದರೋ ಅಂತಹವರಿಗೇ ಅವನ್ನು ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ಇದನ್ನು 8–10 ವರ್ಷಗಳ ಹಿಂದೆಯೇ ಮಾಡಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಹಾಗಾದರೆ ಬಹಳ ಸಂತೋಷ. ಅದು ಮೊದಲು ಟ್ರಸ್ಟ್ ಬೋರ್ಡ್ ರೂಲ್ಸ್‌ನಲ್ಲಿರಲಿಲ್ಲ. ಅನೇಕರಿಗೆ ಪ್ರಿಲಿಮಿನರಿ ನೋಟಿಫಿಕೇಷನ್ ಪ್ರಕಾರ ಅವನ್ನು ಮೊದಲು ತೆಗೆದುಕೊಂಡಿರುವವರು ಇದ್ದಾರೆಂಬುದು ಗೊತ್ತಿಲ್ಲ. 1964ರಲ್ಲಿ ತೆಗೆದುಕೊಂಡ ರೆವಿನ್ಯೂ ಸೈಟುಗಳನ್ನು ಈಗ ತೆಗೆದುಕೊಂಡು ಅವರಿಗೆ ಬೇರೆ ಸೈಟುಗಳನ್ನು ಕೊಟ್ಟಿದ್ದಾರೆ. ಈಗಾಗಲೇ ಮನೆ ಕಟ್ಟುವುದಕ್ಕೆ ಬೇಕಾದಷ್ಟು ಕಾಗದಪತ್ರಗಳನ್ನು ಬರೆದಿದ್ದೇವೆ. ನನಗೆ ಯಾವ ಪರಿಹಾರವೂ ಸಿಗಲಿಲ್ಲವೆಂದು ಜನರು ರೆವಿನ್ಯೂ ಸೈಟಿನ ಬಗ್ಗೆ ಕೇಳಿದ್ದಾರೆಂದು ಮಂತ್ರಿಗಳು ಹೇಳಿದ್ದಾರೆ. ಇನ್ನೂ ಒಂದು ಎವಿಡೆನ್ಸ್ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಪಾರ್ಲಿಮೆಂಟಿನ ಮಾನ್ಯ ಶ್ರೀ ಮುರಗದಂ ಚಂದ್ರಶೇಖರಯ್ಯನವರಿಗೆ ಸೈಟು ಕೊಟ್ಟಿದ್ದಾರೆ. ಅವರು ಮೈಸೂರಿನವರು, ಕೇರಳದಿಂದ ಬಂದಿರುವವರು. ಈಗ ಮೈಸೂರಿನಲ್ಲಿ ಇಲ್ಲದೇ ಇರುವವರಾದರೂ ಅವರ ಮೇಲೆ ತಮ್ಮ ಕೃಪಾಕಟಾಕ್ಷ ಹಾಕಿರುತ್ತೀರಿ.

ಶ್ರೀ ಬಿ. ಬಸವಲಿಂಗಪ್ಪ.—ಇದನ್ನು ಅನಾವಶ್ಯಕವಾಗಿ ಇಲ್ಲಿ ವಿಚಾರಮಾಡುವುದು ಸರಿಯಲ್ಲ. ಅಂಥಾದ್ದು ಒಂದು ನಿದರ್ಶನವಲ್ಲ. ಟ್ರಸ್ಟ್‌ಬೋರ್ಡ್ ಅಲಾಟ್‌ಮೆಂಟ್ ರೂಲ್ಸ್ ಪ್ರಕಾರ ಯಾರ್ಯಾರಿಗೆ ಸೈಟುಗಳನ್ನು ಕೊಡಬೇಕೋ ಅವರೆಲ್ಲರಿಗೂ ಕೊಡಲೇ ಬೇಕು. ಮುಂದಿನ ತಿಂಗಳು 15ನೇ ತಾರೀಖಿನೊಳಗೆ 8 ಸಾವಿರ ಸೈಟುಗಳನ್ನು ಕೊಡುತ್ತೇವೆ. ಯಾರೇ ಬರಲಿ ಟ್ರಸ್ಟ್‌ಬೋರ್ಡ್ ರೂಲ್ಸ್ ಪ್ರಕಾರ ಮಾತ್ರ ಕೊಡುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.—ಅವರಿಗೆ ಕೊಡುವುದಿಲ್ಲವೆಂದು ಹೇಳಿದ್ದರೂ ಬದಲಾಗಿ ಕೊಡುತ್ತೇವೆಂದು ಹೇಳಿದ್ದೀರಿ. ಕೊಟ್ಟಿರತಕ್ಕ ಮಾತನ್ನು ಕಾರ್ಯಗತಮಾಡಬೇಕು.

ಇನ್ನು ಎರಡನೆಯ ಸಲಹೆ. ಈಗ ಆಡಳಿತ ಹದಗೆಟ್ಟಿರಬಹುದು. ಬೆಂಗಳೂರಿನಲ್ಲಿ ಕೆಲವು ಇಲಾಖೆಗಳ ಆಡಳಿತ ಹೇಗಿದೆಯೆಂದರೆ, ಒಬ್ಬೊಬ್ಬ ಅಧಿಕಾರಿಯನ್ನು ಕಿತ್ತು ಮತ್ತೊಂದು ಕಡೆಗೆ ಹಾಕುವುದು. ಒಂದು ಕಡೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್, ಎಲೆಕ್ಟ್ರಿಸಿಟಿ ಬೋರ್ಡ್, ಇನ್ನೊಂದು ಕಡೆ ವಾಟರ್ ಸಪ್ಲೈ ಬೋರ್ಡ್, ಮತ್ತೊಂದು ಕಡೆ ಪ್ಲಾನಿಂಗ್ ಅತಾರಿಟಿ. ಈಗ ಈ ಕಡೆಗಳಲ್ಲಿಯೂ ಅದೇ ರೀತಿಯಾಗಿದೆ. ಬೆಂಗಳೂರು ನಗರದ ಪುರಸಭೆಗೆ ಇರತಕ್ಕ ಅಧಿಕಾರ—ಬೀದಿ ಗುಡಿಸುವುದು, ರಸ್ತೆ ರಿಪೇರಿ ಮಾಡುವುದು, ಪರೀಕ್ಷೆಗಳಲ್ಲಿ ಪಾಸ್ ಆಗದೇ ಇರತಕ್ಕವರನ್ನು ಸೇರಿಸಿಕೊಂಡು ಸ್ಕೂಲುಗಳನ್ನು ನಡೆಸುವುದು, ಮೆಟರ್ನಿಟಿ ಹೋಂಗಳನ್ನು ನಡೆಸುವುದು ಇವುಗಳ ವಿನಃ ಬೇರೆ ಇನ್ನು ಯಾವ ಹೆಚ್ಚಿಗೆ ಕೆಲಸಗಳು ಇಲ್ಲವೆಂದು ಶೋಚನೀಯವಾಗಿದೆ. ಆದರೆ ಬೊಂಬಾಯಿ ಕಾರ್ಪೊರೇಷನ್ನಿನಲ್ಲಿ ವಾಟರ್ ಸಪ್ಲೈ, ಎಲೆಕ್ಟ್ರಿಸಿಟಿ, ಬಸ್ ಮತ್ತು ಟ್ರಾಂಗಳನ್ನು ನಡೆಸುವುದು—ಹೀಗೆ ಪ್ರತಿಯೊಂದು ಕೆಲಸವನ್ನೂ ಅಲ್ಲಿನ ಕಾರ್ಪೊರೇಷನ್ನಿನವರೇ ಸಮರ್ಪಕವಾಗಿ ನಡೆಸುತ್ತಿದ್ದಾರೆ. ಅದೇ ರೀತಿಯಲ್ಲಿ ಬೆಂಗಳೂರಿನಲ್ಲಿಯೂ ಇರತಕ್ಕ ಪುರಸಭೆ ಏತಕ್ಕೆ ಸಮರ್ಪಕವಾಗಿ ನಡೆಸಬಾರದು ? ಏಕೆಂದರೆ ಈಗ ಕಾರ್ಪೊರೇಷನ್ ಆಕ್ಟನ್ನು ಬದಲಾವಣೆ ಮಾಡಬೇಕೆಂಬ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಕಾರ್ಪೊರೇಷನ್ ಆಡಳಿತ ಸುಸೂತ್ರವಾಗಿ ಚೆನ್ನಾಗಿ ನಡೆಯುವುದಕ್ಕೆ ಯಾವ ರೀತಿಯಲ್ಲಿ ಅವಕಾಶ ಮಾಡಬೇಕೋ ಆ ರೀತಿಯಲ್ಲಿ ಮುಂದೆ ಬರತಕ್ಕ ಕಾರ್ಪೊರೇಷನ್ ಆಕ್ಟ್‌ನಲ್ಲಿ ಅಳವಡಿಸಬೇಕಾಗಿದೆ. ಒಟ್ಟಿನಲ್ಲಿ ಕಾರ್ಪೊರೇಷನ್ ಆಡಳಿತ ಚೆನ್ನಾಗಿ ಇರಬೇಕು. ಅದನ್ನು ದುರುಪಯೋಗ ಮಾಡಿಸಬಾರದೆಂದು ನಾನು ಸಲಹೆಮಾಡುತ್ತೇನೆ.

ಇನ್ನು ಬೆಂಗಳೂರಿನಲ್ಲಿ ಪ್ಲಾನಿಂಗ್ ಅತಾರಿಟಿಯೊಳಗೆ ರೆಸಿಡೆನ್ಸಿಯಲ್ ಏರಿಯಾ ಹಾಗೂ ನಾನ್ ರೆಸಿಡೆನ್ಸಿಯಲ್ ಏರಿಯಾ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದು ಸೂಪರ್ ಫ್ಲ್ಯೂಯಸ್ ಆಗುತ್ತದೆ. ಅದು ಬೇಡ. ಈಗಾಗಲೇ ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಟೌನ್ ಪ್ಲಾನಿಂಗ್ ಅತಾರಿಟಿ ಎಂದು ಇದೆ. ಯಾವುದಾದರೂ ಸರಿಯಾಗಿ ಕೆಲಸಮಾಡದಿದ್ದರೆ ಒಂದು ಅಪೆಲೆಟ್ ಅತಾರಿಟಿ ಇರುತ್ತದೆ. ಅದು ಕಾರ್ಪೊರೇಷನ್, ಸ್ಟ್ಯಾಚುಟರಿ ಬಾಡಿ. ಅದರ ಮೇಲೆ ಸೂಪರ್ ರೈಡಿಂಗ್ ಅತಾರಿಟಿ ಕಾರ್ಪೊರೇಷನ್. ಅದೂ ಕೂಡ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅಲ್ಲಿನ ಆಡಳಿತ ಕೂಡ ಈಗ ಎಷ್ಟೋ ಹದಗೆಟ್ಟಿರುವಾಗ ಇದರ ಬಗ್ಗೆ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಒಟ್ಟಿನಲ್ಲಿ ನಿಮ್ಮ ಪ್ಲಾನಿಂಗ್ ಅತಾರಿಟಿ ಚೆನ್ನಾಗಿ ಕೆಲಸಮಾಡುತ್ತಾ ಇಲ್ಲ. ತಮಗೆ 10–15 ನಿದರ್ಶನಗಳನ್ನು ಬೇಕಾದರೆ ಈಗಲೇ ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಟೌನ್ ಪ್ಲಾನಿಂಗ್ ಅಥಾರಿಟಿಯ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ. ಅದು ಸ್ವಲ್ಪ ನಿಜವಿದ್ದರೂ ಅದರ ಬಗ್ಗೆ ನಾವು ಯೂನಿಫಾರಂ ಆಕ್ಟನ್ನು ಈಗ ಜಾರಿಗೆ ತರುತ್ತಿದ್ದೇವೆ ಆದ್ದರಿಂದ ಇದರಲ್ಲಿ ಯಾವ ಒಂದು ಟೀಕೆಗೂ ಅವಕಾಶವಿಲ್ಲದೆ ಹಾಗೆ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಬಿಲ್ ಕೂಡ ತಯಾರು ಮಾಡಿದ್ದೇವೆ. ಅದನ್ನು ಈ ಅಧಿವೇಶನದಲ್ಲಿಯೇ ತರಬೇಕೆಂದಿದ್ದೇವೆ. ಅದು ಸಾಧ್ಯವಾಗಬಹುದು. ಒಟ್ಟಿನಲ್ಲಿ ಆ ಬಿಲ್‌ನಲ್ಲಿ ಅಂತಹ ನ್ಯೂನತೆಗಳು ಯಾವುದೂ ಬಾರದೇ ಇರುವ ಹಾಗೆ ಮಾಡುತ್ತೇವೆ.

ಚೇರ್‌ಮನ್.—ಮಂತ್ರಿಗಳು ಒಬ್ಬೊಬ್ಬ ಸದಸ್ಯರು ಮಾತನಾಡುತ್ತಿರುವಾಗಲೆಲ್ಲಾ ಜವಾಬು ಹೇಳುತ್ತಾ ಹೋದರೆ, ಚರ್ಚೆ ನಿಧಾನವಾಗಬಹುದು. ಆ ವಿಷಯದಲ್ಲಿ ತಾವು ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಈ ಪ್ಲಾನಿಂಗ್ ಅಥಾರಿಟಿ ಬಗ್ಗೆ ಮುಖ್ಯವಾಗಿ ಆರೋಪಣೆ ಮಾಡತಕ್ಕ ಉದ್ದೇಶವಾದರೂ ಇಷ್ಟೆ: ಇವರು ಎಲ್ಲಿ ಸಿನೀಮಗಳಿಗೆ, ಹೋಟಲುಗಳಿಗೆ ಲೈಸೆನ್ಸನ್ನು ಕೊಡಬಾರದೋ ಅಲ್ಲಿ ಲೈಸೆನ್ಸ್ ಕೊಡುತ್ತಾರೆ; ಎಲ್ಲಿ ಕೊಡಬೇಕೋ ಅಲ್ಲ ನಿರಾಕರಿಸುತ್ತಿದ್ದಾರೆ. ಹೀಗೆ ಮಾಡಿ ಇವರು ಈ ಬೆಂಗಳೂರಿನ ಸೌಂದರ್ಯವನ್ನು ಕೆಡಿಸುತ್ತಿದ್ದಾರೆ. ಈ ನಗರದ ಸೌಂದರ್ಯವನ್ನು ಕಾಪಾಡಿಕೊಂಡು ಬರುವುದು ಕಾರ್ಪೊರೇಷನ್ನಿನಿಂದ ಸಾಧ್ಯ ಆಗಲಿಲ್ಲ ಎಂದು ಇದಕ್ಕೆ ಒಂದು ಪ್ರತ್ಯೇಕ ಏಜನ್ಸಿಯನ್ನು ಕ್ರಿಯೇಟ್ ಮಾಡಿದಾಗ್ಯೂ ಅದೂ ಕೂಡ ತಪ್ಪುದಾರಿಯನ್ನೇ ಹಿಡಿದರೆ. ಇದು ಬಹಳ ಖಂಡನೀಯ. ಸರ್ಕಾರ ಇದರ ಕಡೆಗೆ ಗಮನ ಕೊಡಬೇಕು.

ಇನ್ನು ವಸತಿ ಸೌಕರ್ಯವಿಲ್ಲದವರಿಗೆ ನಿವೇಶನಗಳನ್ನು ಮತ್ತು ಮನೆಗಳನ್ನು ಒದಗಿಸಲು ಹೌಸಿಂಗ್ ಬೋರ್ಡ್ ಎಂಬ ಒಂದು ಬೋರ್ಡನ್ನು ಮಾಡಿದ್ದಾರೆ. ಸಾಲಕ್ಕಾಗಿ ಅರ್ಜಿಹಾಕಿದ್ದ ಅನೇಕರಿಗೆ ಕೆಲವು ದಿನಗಳ ಹಿಂದೆ ಸಾಲ ಸಿಕ್ಕದೆ ಬಹಳ ತೊಂದರೆಯಾಗಿತ್ತು. ಇತ್ತೀಚೆಗೆ ಅದನ್ನು ನಿವಾರಣೆ ಮಾಡಿದ್ದಾರೆಂದೂ ಬಡವರಿಗೆ ತೊಂದರೆಯಾಗದ ಹಾಗೆ ಮಾಡಿದ್ದಾರೆಂದು ಕೇಳುತ್ತಿದ್ದೇನೆ. ಬಹಳ ಸಂತೋಷ.

ಇನ್ನು ಕೆಲವು ದಿನಗಳ ಹಿಂದೆ ಬಡವರಿಗೆ ರಾಜ್ಯದಲ್ಲಿ ಅಲ್ಲಲ್ಲೇ ನಿವೇಶನಗಳನ್ನು ಅವರಿಗೆ ಉಚಿತವಾಗಿ ಕೊಡುವುದಕ್ಕಾಗದಿದ್ದರೂ, ಅಲ್ಪ ಬೆಲೆಯಲ್ಲಿ ಅವುಗಳನ್ನು ಒದಗಿಸಿದ್ದಾರೆಂದು ಹೇಳುತ್ತಿದ್ದಾರೆ. ನಿಜ, ಉಚಿತವಾಗಿ ಯಾರೂ ಇಂಥಾ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಆದರೆ ಬೆಂಗಳೂರು ನಗರದಲ್ಲೂ ಅನೇಕ ಜನ ಬಡವರಿದ್ದಾರೆ. ಇವರಿಗೂ ಕೂಡ ಇಲ್ಲಿ ನಿವೇಶನಗಳು ಸಿಕ್ಕುವುದಕ್ಕೆ ಅವಕಾಶ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೆಲವೇ ದಿನಗಳಲ್ಲಿ ಇಲ್ಲಿ ಸುಮಾರು 8–10 ಸಾವಿರ ನಿವೇಶನಗಳನ್ನು ಹಂಚುತ್ತಾರೆಂದು ಹೇಳುತ್ತಿದ್ದಾರೆ. ಆ ವೇಳೆಯಲ್ಲಿ ಪ್ರಭಾವಶಾಲಿಗಳಿಗೆ ಮಾತ್ರ ಸಿಕ್ಕಿ ಬಡವರಿಗೆ ಕೈಬಿಡತಕ್ಕ ಕೆಲಸ ಮಾಡದೆ ಎಲ್ಲರಿಗೂ ಅನುಕೂಲವಾಗತಕ್ಕ ರೀತಿಯಲ್ಲಿ ನಿವೇಶನಗಳ ವಿಲೇವಾರಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಟ್ರಸ್ಟ್ ಬೋರ್ಡಿನವರ ವಶದಲ್ಲಿರತಕ್ಕ ಸ್ಪೇರ್ ಸೈಟುಗಳನ್ನು ಹಂಚತಕ್ಕ ಬಗ್ಗೆ ಅವರ ಮಂತ್ರಿಗಳು ಅವರಿಗೆ ಕೊಡಬೇಕು ಇವರಿಗೆ ಕೊಡಬೇಕು ಎಂದು ಹೇಳಿದ್ದಾರೆಂದೂ ತಮಗೆ ಬೇಕಾದವರಿಗೆ ಅವನ್ನು ಹಂಚುತ್ತಿದ್ದಾರೆ. ಅದರಿಂದ ಅನೀತಿಯುತ ಕಾರ್ಯಗಳು ನಡೆಯುವುದಕ್ಕೆ ಆಸ್ಪದವಾಗುತ್ತದೆ. ಇದರ ಹಾಗೇ ಅಲ್ಲಿರತಕ್ಕ ಸದಸ್ಯರು ತಮ್ಮ ತಮಗೆ ಬೇಕಾದವರಿಗೆ ಈ ನಿವೇಶನಗಳನ್ನು ಹಂಚತಕ್ಕ ಬಗ್ಗೆ ಒಬ್ಬೊಬ್ಬರಿಗೂ 100–150 ನಿವೇಶನಗಳನ್ನು ಕೊಟ್ಟಿದೆ. ಇದರಿಂದಲೂ ಅಲ್ಲಿ ಲಂಚಂಗುಳಿತನಕ್ಕೆ ಆಸ್ಪದವಾಗುತ್ತದೆ. ಆದುದರಿಂದ ಇಂಥದಕ್ಕೆ ಅವಕಾಶ ಇರಬಾರದು, ಏನೋ ಅಲ್ಲೊಂದು ಇಲ್ಲೊಂದು ಇರತಕ್ಕ ಆಡ್ ಸೈಟುಗಳನ್ನು, ಸ್ಪೇರ್ ಸೈಟುಗಳನ್ನು ಹಂಚುವುದಕ್ಕೆ ಕೊಟ್ಟಿರತಕ್ಕ ಒಂದು ಆಸ್ಪದವನ್ನು ರೆಗ್ಯುಲರ್ ಸೈಟುಗಳ ಹಂಚಿಕೆಗೆ ಬಳಸುವುದು ಸರಿಯಾದದ್ದಲ್ಲ. ಇದರ ಮೇಲೆ ಸರ್ಕಾರದವರು ಖಂಡಿತವಾಗಿಯೂ ಒಂದು ಬಾಗಿಯನ್ನು ಇಟ್ಟುಕೊಳ್ಳಲೇಬೇಕು. ಇಲ್ಲವಾದರೆ ಅಲ್ಲಿ ನಡೆಯತಕ್ಕ ಕೆಲಸ ಕಾರ್ಯಗಳು ಸತ್ಯಸಂಧತೆಯಿಂದ ನಡೆಯುವುದಕ್ಕೆ ಸಾಧ್ಯವಿಲ್ಲ. ಆದರೆ ಮಾನ್ಯ ಸಚಿವರು ಉತ್ತರ ಕೊಡುವಾಗ ಅಲ್ಲಿ ಛೇರ್ಮನ್ನರೂ ಮತ್ತು ಸದಸ್ಯರೂ ಯಾರು ಯಾರು ಎಷ್ಟೆಷ್ಟು ಸೈಟುಗಳನ್ನು ತಮ್ಮ ಮೂಲಕ ಹಂಚಿಕೆಮಾಡಿದ್ದಾರೆಂಬ ವಿವರಗಳನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿ ಅಸಾಧ್ಯವಾಗಿರತಕ್ಕ ತೊಂದರೆ ಎಂದರೆ ಅದು ಸೊಳ್ಳೆಗಳ ಕಾಟ. ಇದರ ಬಗ್ಗೆ ನಾನು ಇದೇ ಸಭೆಯಲ್ಲಿ ಕೆಲವು ದಿನಗಳ ಹಿಂದೆ ಒಂದು ಖಾಸಗೀ ನಿರ್ಣಯವನ್ನು ತಂದು ಇದರ ವಿಚಾರವಾಗಿ ಎಲ್ಲಾ ಅಂಶಗಳನ್ನೂ ವಿವರವಾಗಿ ಹೇಳಿದ್ದೇನೆ. ಆದರೆ ಆ ದಿವಸ ಮಾನ್ಯ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿರಲಿಲ್ಲ. ಆದರೆ ಇತ್ತೀಚೆಗೆ ಇಲ್ಲಿ ಸರ್ಜ್

(ಶ್ರೀ ಟಿ. ಆರ್. ಶಾಮಣ್ಣ)

ಪ್ಲಾಂಟ್ ತಂದಿದೆ, ಒಳಚರಂಡೀ ವ್ಯವಸ್ಥೆಯನ್ನು ಉತ್ತಮಗೊಳಿಸಲಾಗುತ್ತದೆ, ಅದರಿಂದ ಈ ಸೊಳ್ಳೆ ಕಾಟ ಇರುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಕಾವೇರಿ ನೀರನ್ನು ನಗರಕ್ಕೆ ಒದಗಿಸುವ ಯೋಜನೆ ಕೂಡ ಸದ್ಯದಲ್ಲೇ ಮುಗಿಯುತ್ತದೆಂದು ಹೇಳುತ್ತಿರುವುದರಿಂದ ಅದು ಜಾರಿಗೆ ಮೊದಲೇ ಇದನ್ನು ಉತ್ತಮ ಪಡಿಸಬೇಕೆಂದು ಹೇಳುತ್ತೇವೆ. ಇಲ್ಲಿ ಅಂದರೆ ನಗರದಲ್ಲಿ ಇರತಕ್ಕ ಮುಖ್ಯವಾದ ಎರಡು ವ್ಯಾಧಿಗಳು ಎಂದರೆ ಒಂದು ಸೊಳ್ಳೆಯ ಕಾಟ, ಇನ್ನೊಂದು ಸ್ಲಂ ಏರಿಯಾ; ಅಂದರೆ ಕೊಳಚೆ ಪ್ರದೇಶ. ಇತ್ತೀಚೆಗೆ ಕೇಂದ್ರ ಸರ್ಕಾರದವರು ಈ ಕೊಳಚೆ ಪ್ರದೇಶಗಳನ್ನು ತಪ್ಪಿಸುವುದಕ್ಕೆ ಮತ್ತು ಅವುಗಳನ್ನು ನಿರ್ಮೂಲ ಮಾಡುವುದಕ್ಕೆ ಒಂದೂವರೆ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಆ ಹಣವನ್ನು ನಾವು ಸಕಾಲದಲ್ಲಿ ಸದ್ವಿನಿಯೋಗ ಮಾಡದಿದ್ದರೆ ಮುಂದೆ ಅವರಿಂದ ಹೆಚ್ಚು ಹಣವನ್ನು ಕೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇದರ ಕಡೆಗೆ ಮಾನ್ಯ ಸಚಿವರು ಹೆಚ್ಚಿನ ಗಮನ ಕೊಟ್ಟು ಅಲ್ಲಿ ನಡೆಯತಕ್ಕ ಕೆಲಸ ಕಾರ್ಯಗಳ ಬಗ್ಗೆ ಸರಿಯಾದ ನಿಗಾವಹಿಸಿ ಹಣವನ್ನು ಸದ್ವಿನಿಯೋಗಕ್ಕೆ ಬಳಸುವಂತೆ ನೋಡಬೇಕೆಂದು ಒತ್ತಾಯ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಒಂದಾವರ್ತಿ ಆ ಸ್ಥಳಕ್ಕೆ ಭೇಟಿಕೊಟ್ಟರೆ ಅವರಿಗೇ ಗೊತ್ತಾಗುತ್ತದೆ. ಅಲ್ಲಿ ಇನ್ನು 30 ನೇ ಮಾರ್ಚಿ ಆಖೈರಿನಲ್ಲಿ ಕೇಂದ್ರದವರು ನಮಗೆ ಕೊಟ್ಟಿರತಕ್ಕ ಹಣದಲ್ಲಿ ಮೂರನೆ ಒಂದು ಭಾಗ ಕೂಡ ಖರ್ಚು ಮಾಡುವುದಕ್ಕಾಗುವುದಿಲ್ಲ ಎಂಬುದು ಅವರಿಗೆ ವೇದ್ಯವಾಗುತ್ತದೆ. ಇದನ್ನು ನ್ಯಾಯವಾದ ರೀತಿಯಲ್ಲಿ ಸಕಾಲಕ್ಕೆ ಸರಿಯಾಗಿ ಖರ್ಚುಮಾಡಿದೆ, ಹೆಚ್ಚು ಹಣ ಕೇಳುವುದಕ್ಕೆ ಅವಕಾಶವಾಗುತ್ತದೆ. ನಮ್ಮಲ್ಲಿ 143 ಸ್ಲಂ ಪ್ರದೇಶ ಇರುತ್ತವೆ. ಸರ್ಕಾರದವರು ಇವುಗಳನ್ನು ಸ್ವಚ್ಛಮಾಡಬೇಕು ಇಲ್ಲವೇ ನಿರ್ಮೂಲ ಮಾಡಬೇಕು. ಈ ಸ್ಲಂ ಪ್ರದೇಶಗಳು ಹೆಚ್ಚಾಗಿ ಖಾಸಗಿಯವರ ಜಮೀನಲ್ಲಿರುತ್ತವೆ. ಅವು ಖಾಸಗೀ ಜನರ ಜಮೀನಿನಲ್ಲಿದ್ದರೂ ಕೊಳಚೆ ಪ್ರದೇಶವೇ ಸರ್ಕಾರದವರ ಭೂಮಿಯಲ್ಲಿದ್ದರೂ ಕೊಳಚೇ ಪ್ರದೇಶವೆ, ಆದರೆ ಖಾಸಗೀ ಜನರ ಜಮೀನಿನಲ್ಲಿ ಇರತಕ್ಕ ಕೊಳಚೆ ಪ್ರದೇಶಗಳನ್ನು ಸ್ವಚ್ಛಮಾಡತಕ್ಕ ಬಗ್ಗೆ ಅವರಿಂದ ಆ ಜಮೀನನ್ನು ಸರ್ಕಾರದವರು ವಶಪಡಿಸಿಕೊಳ್ಳಬಹುದೆಂದು ಹೇಳುತ್ತೇನೆ. ಏಕೆಂದರೆ ಅವರು ಈವರೆಗಾಗಲೇ ಆ ಜಮೀನಿನಿಂದ ಸಾಕಷ್ಟು ಲಾಭವನ್ನು ಅನುಭವಿಸಿದ್ದಾರೆ. ಮತ್ತು ಈ ಪಾಕೀಜ್ ಮಾಡತಕ್ಕ ಕಾರ್ಯವನ್ನು ಟ್ರಸ್ಟ್ ಬೋರ್ಡ್ ಮತ್ತು ಕಾರ್ಪೊರೇಷನ್ ಪ್ರದೇಶಗಳಿಗೂ ವಿಸ್ತರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದವರು ಕೊಡತಕ್ಕ ಗ್ರಾಂಟ್ ಮತ್ತು ಸಬ್‌ವೆನ್‌ಷನ್ ಇತ್ಯಾದಿಗಳನ್ನು ಓಬೀರಾಯನ ಕಾಲದ ಪದ್ಧತಿಯನ್ನೆ ಅನುಸರಿಸಿ ಕೊಡುತ್ತಿದ್ದಾರೆ. ಅದನ್ನು ಬದಲಾಯಿಸಬೇಕು. ಸರ್ಕಾರಕ್ಕೆ ಮೋಟಾರ್ ವೆಹಿಕಲ್ಸ್ ಬಾಬಿನಿಂದ 1946-47 ರಲ್ಲಿ ನಾಲ್ಕೂವರೆ ಲಕ್ಷ ಮಾತ್ರ ವರಮಾನವಿತ್ತು. ಈ ದಿವಸ ಅದು ಹಿಂದೆ ಇದ್ದುದರ 16-17 ಪಟ್ಟು ಜಾಸ್ತಿಯಾಗಿದೆ. ಆದಾಗ್ಯೂ ಆ ಹಳೇ ಗ್ರಾಂಟನ್ನೇ ಈಗಲೂ ಕೊಡುತ್ತಿದ್ದಾರೆ. ಇದನ್ನು ಕಾಲಕ್ಕೆ ತಕ್ಕಂತೆ ಆದಾಯಕ್ಕೆ ತಕ್ಕಂತೆ ಹೆಚ್ಚುಮಾಡಬೇಕೆಂದು ಹೇಳುತ್ತೇನೆ. ಈ ಸ್ಥಳೀಯ ಸಂಸ್ಥೆಗಳ ಆದಾಯ ಹೆಚ್ಚಬೇಕು ಅನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಅದೆ 1947 ರಲ್ಲಿ ಬೆಂಗಳೂರು ಕಾರ್ಪೊರೇಷನ್ ರಸ್ತೆಗಳ ಕೆಲಸಕ್ಕಾಗಿ 10 ಲಕ್ಷ ಮಾತ್ರ ಖರ್ಚುಮಾಡುತ್ತಿತ್ತು. ಆದರೆ ಈ ದಿವಸ ಅದೇ ಬಾಬಿಗೆ ಒಂದು ಕೋಟಿ ರೂಪಾಯಿ ಖರ್ಚಾಗುತ್ತಿದೆ. ಆದರಿಂದ ಗ್ರಾಂಟನ್ನು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೂ ಜಾಸ್ತಿಮಾಡಬೇಕೆಂದು ಹೇಳುತ್ತೇನೆ.

ಇನ್ನು ಹಿಂದೆ ಇದ್ದ ಸರ್ಕಾರ ರಾಜಾಜಿ ನಗರದಲ್ಲಿ ಒಂದು ದೊಡ್ಡ ಆಸ್ಪತ್ರೆ ಕಟ್ಟಬೇಕೆಂದು 5 ವರ್ಷಗಳ ಹಿಂದೆಯೇ ಅಲ್ಲಿ ಫೌಂಡೇಷನ್ ಕೂಡ ಹಾಕಿಸಿದ್ದರು. ಆದರೆ ಏಕೋ 2 ವರ್ಷಗಳಿಂದ ಕೆಲಸ ನಿಂತು ಹೋಗಿದೆ. ಕೇಳಿದ್ದರಲ್ಲಿ ಕೆಲವು ಕಾರ್ಪೊರೇಷನ್ ಕಂಟ್ರಾಕ್ಟರುಗಳು ಉದ್ದೇಶವಾಗಿ ಅಲ್ಲಿ ಹೆಚ್ಚು ಹಣವನ್ನು ಹೊಡೆಯುವುದಕ್ಕೆ ಅಂದಾಜು ಮಾಡಿಕೊಂಡು ಹಾಗೆ ಕೆಲಸ ನಿಲ್ಲಿಸಿದ್ದಾರೆಂದು ಸುದ್ದಿ ಕೇಳುತ್ತಿದ್ದೇನೆ. ಈ ಕೆಲಸವನ್ನು ಮಾಡುವುದಕ್ಕೆ ಕಾರ್ಪೊರೇಷನ್ನಿನವರಿಂದ ಸಾಧ್ಯವಿಲ್ಲ.

ಸರಕಾರದಲ್ಲಿ ಇನ್ನೊಂದು ಮನವಿ ಮಾಡಬೇಕಾಗಿದೆ. ಅಮೆನಿಟಿ ಸೈಟ್ಸ್ ಎಂದು ಟ್ರಸ್ಟ್ ಬೋರ್ಡಿನವರು ಅನೇಕ ಸೈಟುಗಳನ್ನು ಬಿಟ್ಟಿದ್ದರು, ಅಂಥ ಅನೇಕ ಸೈಟುಗಳನ್ನು ಹಂಚಿದ್ದಾರೆ. ಅದಕ್ಕೆ ಬಿಟ್ಟಿರುವ ಜಾಗದಲ್ಲಿ ಸೈಟುಗಳನ್ನು ಮಾಡಿ ಬೇರೆಯವರಿಗೆ ಹಂಚಲು ಪ್ರಯತ್ನ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಸಾಕಷ್ಟು ಓಪನ್ ಸ್ಪೇಸ್ ಇಲ್ಲ, ಗಾರ್ಡನ್ಸ್ ಇಲ್ಲ. ಆದುದರಿಂದ ಬಿಟ್ಟಿರುವ ಓಪನ್ ಸೈಟುಗಳನ್ನು ಇತರರಿಗೆ ಸೈಟು ಮಾಡಿ ಹಂಚದಂತೆ ತಕ್ಕ ಕ್ರಮ ತೆಗೆದುಕೊಳ್ಳ

ದಿದ್ದರೆ ಜನರಿಗೆ ಬಹಳ ತೊಂದರೆಯಾಗುವುದು. ಬೆಂಗಳೂರು ಸುಂದರ ಪಟ್ಟಣವಾಗಬೇಕಾದರೆ ಓಪನ್ ಸ್ಪೇಸ್ ಇರಬೇಕು ತಕ್ಕಷ್ಟು. ಎಷ್ಟೇ ತೊಂದರೆಯಾದರೂ ಓಪನ್ ಸ್ಪೇಸ್, ಪಾರ್ಕ್ ಮುಂತಾದುವು ಇರಬೇಕು, ಇದಕ್ಕೆ ಸರಕಾರ ಹೆಚ್ಚು ಗಮನ ಕೊಡಬೇಕು. ಎಂ. ಎಸ್. ಇ. ಬಿ. ನವರಿಗೆ ಬೆಂಗಳೂರು ಕಾರ್ಪೊರೇಷನ್ನಿನವರು ಪ್ರತಿ ವರ್ಷ ಸುಮಾರು 19 ಲಕ್ಷ ರೂಪಾಯಿ ಕೊಡು ವರು. ಆದರೆ ಶೇಕಡ 20ರಷ್ಟು ಲೈಟುಗಳು ಉರಿಯುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಇದನ್ನು ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಹೇಳಿದ್ದೇವೆ, ಇದರಿಂದ ಕಾರ್ಪೊರೇಷನ್ ಹಣ ವ್ಯರ್ಥವಾಗಿ ವ್ಯಯವಾಗುತ್ತಿದೆ, ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ದೀಪಗಳು ಸರಿಯಾಗಿ ಉರಿಯದಿದ್ದರೆ ಪನಾಲ್ಟಿ ಸೇರಿಸಿ ದಾಮಾಷಾ ಪ್ರಕಾರ ಕೊಡಬೇಕಾದ್ದರಲ್ಲಿ ಕಟ್ ಮಾಡುತ್ತೇವೆ ಎಂದು ಬೋರ್ಡಿನವ ರಿಗೆ ಹೇಳಬೇಕು. ಬೊಂಬಾಯಿನಲ್ಲಿ ಹೀಗೆ ಕೆಲವು ಕಾಲ ಬೀದಿ ದೀಪಗಳು ಉರಿಯದಿದ್ದಾಗ ಪನಾಲ್ಟಿ ಹಾಕುತ್ತಿದ್ದರು. ಹೀಗೇನಾದರೂ ಮಾಡಿ ದೀಪ ಸರಿಯಾಗಿ ಉರಿಯುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಕಾರ್ಪೊರೇಷನ್ನಿನವರು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಬೇಕೆಂದು ಕಡ್ಡಾಯವಿಲ್ಲದೆ ಇದ್ದರೂ ಅವರು ಸುಮಾರು 5 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಕೆಲವು ಶಾಲೆಗಳಲ್ಲಿ ಶೇಕಡ ಸೊನ್ನೆ, 4, 9, 14 ಹೀಗೆ ರಿಸಲ್ಟ್ ಬರುತ್ತಿದೆ, ಮ್ಯಾಕ್ಸಿಮಂ ಶೇಕಡ 25 ಇದೆ. ಇದರಿಂದ ಹಣ ವ್ಯರ್ಥವಾಗುವುದು. ಎಲ್ಲೂ ಸೀಟು ಸಿಕ್ಕದೆ ಪ್ರತಿಭೆ ಇಲ್ಲದವ ರನ್ನು ಕಾರ್ಪೊರೇಷನ್ ಶಾಲೆಗಳಿಗೆ ಸೇರಿಸುವುದರಿಂದ ಫಲಿತಾಂಶ ಕಡಮೆಯಾಗಿದೆ ಎಂದು ಹೇಳು ವರು. ಅನೇಕ ಉಪಾಧ್ಯಾಯರನ್ನು ಬೇರ ಕಡೆಗೆ ವರ್ಗ ಮಾಡುವುದಿಲ್ಲ, ಒಂದೇ ಕಡೆ ಪಟ್ಟು ಭದ್ರವಾಗಿ ಕೆಲವರು ಇದ್ದುಕೊಂಡು ಪ್ರೈವೇಟ್ ಟ್ಯೂಷನ್ ಮುಂತಾದುವನ್ನಿಟ್ಟುಕೊಂಡು ಶಾಲೆ ಗಳಲ್ಲಿ ಸರಿಯಾಗಿ ಪಾಠ ಹೇಳುವ ಕಡೆಗೆ ಗಮನ ಕೊಡುವುದಿಲ್ಲ. ಇದರಿಂದ ಸರಿಯಾದ ರಿಸಲ್ಟ್ ಬರುತ್ತಿಲ್ಲ. ಎಂಥ ಹುಡುಗರೇ ಬರಲಿ, ಸರಿಯಾಗಿ ಶಿಕ್ಷಣ ಕೊಟ್ಟರೆ ಕನಿಷ್ಟ ಶೇಕಡ 35 ರಷ್ಟಾ ದರೂ ರಿಸಲ್ಟ್ ಬರುವುದು. ಇದನ್ನು ಗಮನಿಸಿ ಸರಿಯಾದ ಕ್ರಮ ಕೈಕೊಂಡು ಖರ್ಚು ಮಾಡುವ ಹಣಕ್ಕೆ ತಕ್ಕ ಪ್ರತಿಫಲ ಬರುವಂತೆ ಮಾಡಬೇಕು.

ಬೆಂಗಳೂರು ನಗರದಲ್ಲಿ ನೀರಿನ ಹಂಚಿಕೆ ಸಮರ್ಪಕವಾಗಿಲ್ಲ ಎಂದು ಕಂಡುಬರುತ್ತದೆ. ಮಾನ್ಯ ಮಂತ್ರಿಗಳು ನಗರದ ಶಾಸಕರನ್ನೂ ಅಧಿಕಾರಿಗಳನ್ನೂ ಕರೆಸಿ ಚರ್ಚೆಮಾಡಿ ಏನು ಕ್ರಮ ಇದರ ಬಗ್ಗೆ ತೆಗೆದುಕೊಳ್ಳಬೇಕೆಂದು ಸಲಹೆ ಪಡೆದರು. ಆಗ ತೋಟಗಳು ಮುಂತಾದುವುಗಳಿಗೆ ಉಪಯೋಗಿಸುವ ನೀರಿನಲ್ಲಿ ಶೇಕಡ 2 ರಷ್ಟು ಕಟ್ ಮಾಡಬೇಕೆಂಬ ಸಲಹೆ ಬಂತು, ಕಟ್ ಮಾಡಿ ದರೆ ಗಿಡಗಳು ಒಣಗುತ್ತವೆ. ಆದರೆ ಜನತೆಗೆ ಕಷ್ಟಪಡಿಸಬೇಕೆಂದು ನಾನು ಹೇಳುವುದಿಲ್ಲ. ತಿಪ್ಪ ಗೊಂಡನಹಳ್ಳಿ ಕೆರೆಯಲ್ಲಿ ಬೇಕಾದಷ್ಟು ನೀರಿದೆ, ಅದನ್ನು ಒದಗಿಸಲು ತಕ್ಕ ಕ್ರಮ ತೆಗೆದುಕೊಳ್ಳ ಬೇಕು. ಅಗತ್ಯವಾದರೆ ತೋಟಗಳಿಗೆ ಉಪಯೋಗಿಸುವುದರಲ್ಲಿ ಖೋತ ಮಾಡಬಹುದು. ಅವಶ್ಯ ಕತೆ ಇಲ್ಲದಿದ್ದರೆ ಕಟ್ ಮಾಡಬಾರದು. ಗಿಡಗಳನ್ನು ಉಳಿಸುವುದಕ್ಕೆ ಸಾಧ್ಯವೇ ಎಂದು ನೋಡ ಬಹುದು. ಕುಡಿಯುವ ನೀರಿಗೆ ಕಷ್ಟವಾದರೂ ಗಿಡಗಳನ್ನುಳಿಸಬೇಕೆಂದು ನಾನು ಹೇಳುವುದಿಲ್ಲ. ನೀರಿನ ಅಭಾವವೇನೂ ಜಾಸ್ತಿಯಿಲ್ಲ ನೀರು ಬೇಕಾದ ಹಾಗಿದೆ. ಆದರೆ ಸರಬರಾಯಿ ಮಾಡುವು ದರಲ್ಲಿ ತೊಂದರೆಯಾಗಿದೆ. ತೋಟಗಳಿಗೆ ಉಪಯೋಗ ಮಾಡುವ ನೀರಿನಲ್ಲಿ ಖೋತಮಾಡಿ ಬೆಂಗಳೂ ರಿನಲ್ಲಿ ನೀರಿನ ಅಭಾವವಿದೆ ಎಂದು ಸ್ಕೇರ್ ಉಂಟು ಮಾಡದೆ ಸರಿಯಾಗಿ ಹಂಚಿದರೆ ಅನುಕೂಲವಾ ಗುತ್ತದೆ ಎಂಬ ವಿಶ್ವಾಸವಿದೆ.

ಬೆಂಗಳೂರು ನಗರವನ್ನು ಕಾರ್ಪೊರೇಷನ್ ಚೆನ್ನಾಗಿಡಬೇಕು, ನಮ್ಮ ಇಡೀ ದೇಶದಲ್ಲಿ ಬೆಂಗಳೂರು ಪ್ರಾಮುಖ್ಯವಾದ ಪಟ್ಟಣ. ರಾಜ್ಯದ ರಾಜಧಾನಿಯಾದ ಬೆಂಗಳೂರನ್ನು ಸರಿಯಾಗಿ ಡಬೇಕು. ಇದಕ್ಕೆ ಕಾರ್ಪೊರೇಷನ್ನಿಗೆ ಸಾಕಷ್ಟು ಹಣ ಬೇಕು, ಅದು ದೊರೆತರೆ ಸರಿಯಾದ ರೀತಿ ಯಲ್ಲಿ ಸುಧಾರಣೆ ಮಾಡಿ ಜನರ ಅನುಕೂಲಕ್ಕೆ ಬೇಕಾದ ಕ್ರಮ ತೆಗೆದುಕೊಳ್ಳಬಹುದು. ಆಗಲೇ ಹೇಳಿದಹಾಗೆ ರಾಜಕೀಯ ಬಣ್ಣ ಈ ವಿಷಯಕ್ಕೆ ಕೊಡದೆ ನಾಗರೀಕರ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ಎಲ್ಲಾ ನಗರಾಡಳಿತ ಸಭೆಗಳೂ ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ನಾನು ಹೇಳುವುದಿಲ್ಲ, ಆದರೆ ಚೆನ್ನಾಗಿ ನಡೆಯುವುದನ್ನು ಸೂಪರ್‌ಸೀಡ್ ಮಾಡಬಾರದು. ಅಡ್ಮಿನಿಸ್ಟ್ರೇ ಟರನ್ನು ನೇಮಕ ಮಾಡುವ ಸಂದರ್ಭಗಳು ಕಡಮೆಯಾಗಿ ಚುನಾವಣೆ ತಕ್ಷಣ ಮಾಡಿ ಸರಿಯಾದವ ರನ್ನು ತರಲು ಕ್ರಮ ತೆಗೆದುಕೊಳ್ಳಬೇಕು. ನಗರಾಡಳಿತ ಚುನಾಯಿತರಿಂದ ನಡೆದಂತೆ ಸರಕಾರ ವಹಿಸಿಕೊಂಡರೆ ನಡೆಯುವುದಿಲ್ಲ ಎಂದು ಎಚ್ಚರಿಕೆ ಕೊಡುತ್ತೇನೆ.

(ಶ್ರೀ ಟಿ. ಆರ್. ಶಾಮಣ್ಣ

ಈಗ ಬೆಂಗಳೂರು ನಗರದಲ್ಲಿ ನಾನಾಗಲೆ ಅರಿಕೆ ಮಾಡಿದಂತೆ ಕೆಲವು ಡಿವಿಜನ್ನುಗಳಲ್ಲಿ 36 ಸಾವಿರ, 16 ಸಾವಿರ ಹೀಗೆಲ್ಲಾ ಜನಸಂಖ್ಯೆ ಇದೆ. ಆದುದರಿಂದ 10 ರಿಂದ 12 ಸಾವಿರದೊಳಗೆ ಜನಸಂಖ್ಯೆ ಇರುವಂತೆ ಡಿವಿಜನ್ನುಗಳನ್ನು ಕಾರ್ಪೊರೇಷನ್‌ನಲ್ಲಿ ಮಾಡಬೇಕು. ಹಣ ಹಂಚುವಾಗ ಡಿವಿಜನ್‌ವಾರು ಹಂಚಬೇಕು. ದೊಡ್ಡ ಡಿವಿಜನ್ನುಗಳಿಗೆ ಕಡಿಮೆ ಸಹಾಯ ದೊರೆತು ಚಿಕ್ಕ ಡಿವಿಜನ್ನುಗಳಿಗೆ ಕಡಮೆ ದೊರೆಯಲು ಅವಕಾಶವಾಗುವುದು. ಒಬ್ಬ ಆಫೀಸರು, ಸ್ಯಾನಿಟರಿ ಇನ್‌ಸ್ಪೆಕ್ಟರ್, ಒಬ್ಬ ಅಸಿಸ್ಟೆಂಟ್ ಎಂಜನೀಯರು ಹೀಗೆ ಪ್ರತಿಯೊಂದು ಡಿವಿಜನ್‌ಗೂ ಇರುವರು. ಆದುದರಿಂದ ಆದಷ್ಟು ಬೇಗ ಒಂದೇ ಸಮನಾಗಿರುವಂತೆ ಜನಸಂಖ್ಯೆ ನೋಡಿ ಸರಿಯಾದ ಡಿವಿಜನ್ ಮಾಡಬೇಕು. ಮಾಡುವಾಗ ರಾಜಕೀಯ ದೃಷ್ಟಿಯಿಂದ ಮಾಡದೆ ಸ್ವಾಭಾವಿಕವಾಗಿ ಜನರ ಹಿತ ದೃಷ್ಟಿಯಿಂದ ಮಾಡಬೇಕು. ಸೊಳ್ಳೆಕಾಟ ತಪ್ಪಿಸಬೇಕು. ನೀರಿನ ಅಭಾವ ಕೆಲವು ಕಡೆ ಇದೆ, ಆರೇಳು ತಿಂಗಳಲ್ಲಿ ಅದು ತಪ್ಪುವುದು. ನೀರ್‌ ಈಗ, ಸರಿಯಾಗಿ ಹಂಚಿಕೆಯಾಗಬೇಕು. ಈಗ ಒಂದು ಸಾವಿರ ಗ್ಯಾಲನ್ನಿಗೆ ಒಂದು ರೂಪಾಯಿಯಿಂದ ಎರಡು ರೂಪಾಯಿಗಳವರೆಗೆ ಛಾರ್ಜ್ ಇದೆ, ಕಾವೇರಿ ನೀರು ಬಂದರೆ ಒಂದು ಸಾವಿರ ಗ್ಯಾಲನ್ನಿಗೆ ಸುಮಾರು 1 ರೂಪಾಯಿ ಕೊಡಬೇಕಾಗುವುದು. ಈ ಹೊರೆ ತಪ್ಪಿಸಲು ಕ್ರಮ ತೆಗೆದುಕೊಂಡರೆ ಅನುಕೂಲವಾಗುವುದು. ಹೆಚ್ಚು ಸೌಕರ್ಯ ಕೊಟ್ಟಾಗ ಹೆಚ್ಚು ದರ ವಿಧಿಸಬಹುದು. ಅನೇಕ ವರ್ಷದಿಂದ ಕಾರ್ಪೊರೇಷನ್ನಿಗೆ ನೀರು ಸರಬರಾಜು ಮಾಡುವ ಕಾರ್ಯ ಸರಕಾರದ ಸ್ವಾಧೀನದಲ್ಲಿತ್ತು, ಆಗ ನಗರದ ನಾಗರಿಕರಿಗೆ ಉಚಿತವಾದ ನೀರಿನ ಸೌಲಭ್ಯವಿತ್ತು. ಇದಕ್ಕೆ ಬದಲಾಗಿ ಆಸ್ತಿ ತೆರಿಗೆ ಒಂದು ಭಾಗ ನೀರು ಸರಬರಾಜಿಗಾಗಿ ಕೊಡಬೇಕಾಗಿತ್ತು. ಈಗ 5 ಕೋಟಿ ರೂಪಾಯಿಗಳ ಅಸೆಟ್ಸ್ ಸರಕಾರ ಕೊಟ್ಟು ಬಡ್ಡಿ ವಿಧಿಸುತ್ತಿದೆ. ಅದೇ ರೀತಿ ಕಾರ್ಪೊರೇಷನ್ನಿನಿಂದ ತೆಗೆದುಕೊಂಡಿರುವ 3 ಕೋಟಿ ರೂಪಾಯಿ ಬೆಲೆಯ ಅಸೆಟ್ಸ್‌ಗೆ ಪರಿಹಾರ ಕೊಟ್ಟಿಲ್ಲ. ಹೊಸ ಸಾಲಗಳಿಗೆ ಬಡ್ಡಿ ಹಾಕಿ ಹಳೆಯ ಅಸೆಟ್ಸನ್ನು ಉಚಿತವಾಗಿ ಬಿಡಬೇಕು.

4-00 P.M.

ಬೆಂಗಳೂರು ನಗರದ ನೀರಿನ ಸಮಸ್ಯೆಯ ಬಗ್ಗೆ ಸ್ವಲ್ಪ ಸಹಾನುಭೂತಿಯಿಂದ ತಾವು ನೋಡಿ. ಇಲ್ಲಿ ಕೇಂದ್ರ ಸರ್ಕಾರದ ಅನೇಕ ಕಾರ್ಖಾನೆಗಳು ಇವೆ, ಕಚೇರಿಗಳು ಇವೆ, ಮಿಲಿಟರಿ ಎಷ್ಟಾಬ್ಲಿಷ್‌ಮೆಂಟ್‌ಗಳು ಇವೆ. ಕೇಂದ್ರ ಸರ್ಕಾರದಿಂದ ಯಾವುದಾದರೂ ಸಹಾಯ ಸಿಕ್ಕುತ್ತದೆಯೋ ಎಂದು ನೋಡಿ, ಈಗಿನಿಂದಲೇ ಯೋಚನೆ ಮಾಡಿ. ಬೆಂಗಳೂರು ನಗರಕ್ಕೆ ನೀರಿನ ಸೌಲಭ್ಯ ಸಿಕ್ಕುವ ಹಾಗೆ, ಹೊರೆಯಾಗದ ಹಾಗೆ ನೋಡಿಕೊಂಡರೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ನನ್ನ ಮನವಿಯಾದರೂ ಇಷ್ಟು, ತಾವು ಅಧಿಕಾರಾವಧಿಯಲ್ಲಿ ಇರುವಾಗ ಬಡವರಿಗೆ ದೀನದಲಿತರಿಗೆ ಸಹಾಯ ಮಾಡಬೇಕು ಎಂದು ಯೋಚನೆ ಇಟ್ಟುಕೊಂಡಿದ್ದೀರಿ, ಅದರ ಬಗ್ಗೆ ಮೆಚ್ಚುಗೆಯೇ ಹೊರತು, ನೀವು ಮಾಡತಕ್ಕ ತಪ್ಪು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ತಮ್ಮ ದೃಷ್ಟಿಯಲ್ಲಿ ಮೈಸೂರು ರಾಜ್ಯದ ಮೂರು ಕೋಟಿ ಜನರಿಗೆ ನೀವು ಮಂತ್ರಿಗಳೇ ಹೊರತು, ಕೆಲವರಿಗೆ ಮಾತ್ರ ಮಂತ್ರಿಗಳಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಾವು ಬಡವರ ಬಗ್ಗೆ ತೆಗೆದುಕೊಂಡಂಥ ಕಾರ್ಯಕ್ರಮಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ಈ ದೃಷ್ಟಿಯನ್ನು ತಾವು ಸಂಕುಚಿತವಾಗಿಟ್ಟುಕೊಳ್ಳದೆ ವಿಶಾಲವಾಗಿಟ್ಟುಕೊಳ್ಳಬೇಕು. ಎಲ್ಲರನ್ನು ಮೇಲೆ ಹಾಕಿಕೊಳ್ಳಬೇಡಿ, ಎಲ್ಲರೂ ಹೇಳಿದ ಹಾಗೆ ಕೇಳಿ ಎಂದೂ ನಾನು ಹೇಳುವುದಿಲ್ಲ. 100 ಜನ ಮೆಚ್ಚತಕ್ಕ ರೀತಿಯಲ್ಲಿ ಕೆಲಸ ಮಾಡಿದರೆ ನಿಮಗೂ ಒಳ್ಳೆಯದು, ತಾವು ಇರತಕ್ಕ ಸ್ಥಾನಕ್ಕೂ ಒಳ್ಳೆಯದು. ನೀವು ಮೂರು ಕೋಟಿ ಜನಕ್ಕೆ ಮಂತ್ರಿಗಳು ಎಂಬುದನ್ನು ಮರೆಯಬೇಡಿ. ತಮಗೆ ಇರತಕ್ಕ ಅಧಿಕಾರ ಶಾಶ್ವತ ಎಂದು ತಿಳಿದುಕೊಳ್ಳಬೇಡಿ.

ಶ್ರೀ ಬಿ. ಬಸವಲಿಂಗಪ್ಪ.—ಅನಾವಶ್ಯಕವಾಗಿ ನನ್ನ ಮೇಲೆ ಬೀಳುವುದಕ್ಕೆ ಬರಬೇಡಿ.

ಶ್ರೀ ಟಿ. ಆರ್. ಶಾಮಣ್ಣ.—ಅದು ಎಲ್ಲಾ ತಮ್ಮ ಕೈಯಲ್ಲಿದೆ, ಅಧಿಕಾರ ಇದೆ ಏನು ಬೇಕಾದರೂ ಮಾಡಬಹುದು ಎಂದು ಮಾಡುವ ವಾದ ಗೊತ್ತಿದೆ, ಆದರೆ ಬಸವಲಿಂಗಪ್ಪನವರು ಮಂತ್ರಿಗಳಾಗಿದ್ದರು, ಇವರು ಹೋದರೆ ಸಾಕು ಎಂದು ಶಪಿಸುವುದಕ್ಕೆ ಅವಕಾಶ ಕೊಡಬೇಡಿ. ಇಷ್ಟು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪುಟ್ಟಸ್ವಾಮಿ (ಚಾಮುಂಡೇಶ್ವರಿ).—ಮಾನ್ಯ ಉಪಾಧ್ಯಕ್ಷರೇ, ಈ ಬೇಡಿಕೆಯನ್ನು ನಾನು ಪುಷ್ಟೀಕರಿಸುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗ ಸ್ವಲ್ಪ ಗೊಣಗಿದರು. ಅವರು ಹಾಗೆ ಅಲ್ಪತೃಪ್ತರಾಗಬಾರದು. ನಾವು ಈ ಒಂದು ಬೇಡಿಕೆಯ ಮೇಲೆ ಮಾತನಾಡಿ, ಆಡಳಿತ ಉತ್ತಮವಾಗುವುದಕ್ಕೆ ನಮಗೆ ತಿಳಿದಂಥ ಸಲಹೆಗಳನ್ನು ಕೊಡುವುದು ನಮ್ಮ ಕರ್ತವ್ಯ. ಆಡಳಿತ ನಡೆಸತಕ್ಕವರ ಜವಾಬ್ದಾರಿ ಹೊತ್ತಿರತಕ್ಕವರು ನಮ್ಮ ಸಲಹೆಗಳನ್ನು ಪರಿಶೀಲನೆ ಮಾಡಿ, ಆಡಳಿತ ದೃಷ್ಟಿಯಿಂದ ಎಷ್ಟು ಮಟ್ಟಿಗೆ ಅವನ್ನು ಜಾರಿಗೆ ಕೊಡುವುದಕ್ಕಾಗುತ್ತದೆ ಎಂದು ಪ್ರಯತ್ನ ಮಾಡಬೇಕಾದದು ಅವರ ಕರ್ತವ್ಯ. ಮೈಸೂರು ರಾಜ್ಯದಲ್ಲಿ ಇರತಕ್ಕಂಥ ಸ್ಥಳೀಯ ಸಂಸ್ಥೆಗಳ ಪರಿಸ್ಥಿತಿ ಅಷ್ಟು ಉತ್ತಮವಾಗಿಲ್ಲ. ಕಾರಣ ಯಾವ ಸಂಸ್ಥೆಗೂ ಕೂಡ ಹಣಕಾಸಿನ ಭದ್ರತೆ ಇಲ್ಲ. ಈಗ ತಾನೆ ಮಾತನಾಡಿದ ಮಾನ್ಯ ಶಿವಣ್ಣನವರು ಹೇಳಿದರು, ಬೆಂಗಳೂರಿನ ನಗರಸಭೆಯ ಹಣಕಾಸಿನ ಪರಿಸ್ಥಿತಿ ಎಷ್ಟು ಚೆನ್ನಾಗಿದೆ, ತನ್ನ ಮೇಲಿರತಕ್ಕ ಎಲ್ಲಾ ಕರ್ತವ್ಯ ನಿರ್ವಹಣೆಯನ್ನು ಮಾಡತಕ್ಕ ಶಕ್ತಿ ಅದಕ್ಕೆ ಇದೆಯೆಂದು ಹೇಳುವುದಕ್ಕಾಗುವುದಿಲ್ಲ ಎಂದು. ಅವರು ಬೆಂಗಳೂರು ಪುರಸಭೆಗೆ ಬಹಳ ಕಾಲದಿಂದಲೂ ಸದಸ್ಯರಾಗಿರುವುದರಿಂದ, ಅಲ್ಲಿಂದಲೇ ಜನರ ಪ್ರತಿನಿಧಿಗಳಾಗಿರುವುದರಿಂದ ಅವರ ಮಾತುಗಳು ಸಾಮಾನ್ಯವಾಗಿ ಬೆಂಗಳೂರಿನ ನಗರದ ಆಡಳಿತಕ್ಕೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದಾರೆ. ಆದರೆ ಬೆಂಗಳೂರಿನ ಪರಿಸ್ಥಿತಿ ಹೀಗಿರುವಾಗ ಸಣ್ಣ ಸಣ್ಣ ಸ್ಥಳೀಯ ಸಂಸ್ಥೆಗಳ ಪರಿಸ್ಥಿತಿ ಹೇಗೆ ಇರಬಹುದು ಎಂದು ನಾವು ಊಹೆ ಮಾಡಿಕೊಳ್ಳಬಹುದು. ಇಂಥ ಪರಿಸ್ಥಿತಿ ಇರುವಾಗ ಪುರಸಭೆಗಳ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಮಾಡಿಕೊಳ್ಳುವುದು ಹೇಗೆ ಎನ್ನುವ ಕಡೆ ಗಮನ ಕೊಡಬೇಕು. ಬಹುಶಃ ನಾವು ಯಾರೂ ಈ ಪ್ರಯತ್ನವನ್ನು ಮಾಡಿಲ್ಲ. ಸರ್ಕಾರ ಈ ದಿಸೆಯಲ್ಲಿ ಆಲೋಚನೆ ಮಾಡಬೇಕು. ಪುರಸಭೆಗಳ ಹಣಕಾಸಿನ ಪರಿಸ್ಥಿತಿ ಉತ್ತಮವಾಗದ ಹೊರತು ಅಲ್ಲಿ ವಾಸ ಮಾಡತಕ್ಕ ನಾಗರೀಕರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಸಾಕಷ್ಟು ಕುಡಿಯುವ ನೀರಿನ ಸೌಲಭ್ಯ, ಒಳಚರಂಡಿ ವ್ಯವಸ್ಥೆ, ಮತ್ತೆ ನಗರ ನಿರ್ಮಲೀಕರಣ ವ್ಯವಸ್ಥೆ ಸರಿಯಿಲ್ಲ ಎಂದು ನಾವು ಟೀಕೆ ಮಾಡಬಹುದು. ಆದರೆ ಅದಕ್ಕೆಲ್ಲಾ ಬೇಕಾದಂಥ ಸಿಬ್ಬಂದಿಯನ್ನು, ಹಣವನ್ನು ಅವರೇ ಒದಗಿಸಿಕೊಳ್ಳಬೇಕು, ಇಲ್ಲದಿದ್ದರೆ ಅವನು ಏನು ತಾನೆ ಮಾಡಿಯಾರು ? ಈ ಪುರಸಭೆಗಳಿಗೆ ಬಹುಭಾಗ ಹಣಕಾಸು ಬರುತ್ತಾ ಇರುವುದು ಆಕ್ಟ್ರಾಯ್‌ನಿಂದ. ಈ ಆಕ್ಟ್ರಾಯ್‌ನ್ನು ಮುಂದುವರೆಸಿಕೊಂಡು ಹೋಗಬೇಕ ಬೇಡವೇ, ಎನ್ನುವ ಪ್ರಶ್ನೆ ಇದೆ. ಇದನ್ನು ಸರ್ಕಾರದವರು ಸಮಗ್ರವಾಗಿ ಆಲೋಚನೆ ಆದಷ್ಟು ಜಾಗ್ರತೆ ತೀರ್ಮಾನ ಮಾಡಬೇಕು. ಇದು ಯಾವುದೋ ಹಳೆಯ ಕಾಲದ ಒಂದು ಕಂದಾಚಾರ ಪದ್ಧತಿ, ಇದು ಔಟ್‌ಡೇಟೆಡ್ ಟ್ಯಾಕ್ಸ್ ಎಂದು ಹೇಳುತ್ತಾರೆ. ಅರ್ಥಿಕ ತಜ್ಞರೂ ಕೂಡ ಈ ಸುಂಕವನ್ನು ತೆಗೆದುಹಾಕಬೇಕು ಎಂದು ಸ್ಪಷ್ಟವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದರಲ್ಲಿ ಭಿನ್ನಾಭಿಪ್ರಾಯ ಯಾವುದೂ ಇಲ್ಲ. ಆದರೆ ಅದನ್ನು ರದ್ದು ಮಾಡುವುದಕ್ಕೆ ಸರ್ಕಾರಕ್ಕೆ ಕೆಲವು ಕಷ್ಟ ಇದೆ. ಈ ಆಕ್ಟ್ರಾಯ್ ದಸೆಯಿಂದ ಸರ್ಕಾರಕ್ಕೆ ಏಳು ಕೋಟಿ ರೂಪಾಯಿಗಳ ಉತ್ಪನ್ನ ಬರುತ್ತದೆ. ಆಕ್ಟ್ರಾಯ್‌ನ್ನು ತೆಗೆದಿದ್ದೇ ಆದರೆ, ಬೇರೆ ರೀತಿಯಿಂದ ಇದನ್ನು ಕೊಡಿಸಿಕೊಡಬೇಕು. ಹೇಗೆ ಕೊಡಿಸಿಕೊಡಬೇಕು ಎನ್ನುವುದು ಒಂದು ಸಮಸ್ಯೆಯಾಗಿದೆ. ಸರ್ಕಾರದವರು ನೇಮಿಸಿದಂಥ ಆರ್ಥಿಕ ತಜ್ಞರ ಸಮಿತಿ ವರದಿ ಕೊಟ್ಟಿದೆ, ಅದನ್ನು ಸರ್ಕಾರದವರು ಪರಿಶೀಲನೆ ಮಾಡಿ, ಸರ್ಕಾರದವರೇ ಕಾರ್ಯಕ್ರಮ ತೆಗೆದುಕೊಳ್ಳಬೇಕು. ನನ್ನ ಅಭಿಪ್ರಾಯದಲ್ಲಿ, ಈ ಸುಂಕವನ್ನು ಆದಷ್ಟು ಬೇಗ ರದ್ದು ಮಾಡಬೇಕು. ಅದರಿಂದ ಎಷ್ಟೇ ತೊಂದರೆಯಾಗಲಿ, ಸರ್ಕಾರದ ಖಜಾನೆಯ ಮೇಲೆ ಎಷ್ಟೇ ಭಾರ ಬರಲಿ, ಈ ಸುಂಕವನ್ನು ರದ್ದು ಮಾಡುವುದು ಅತ್ಯಂತ ಅವಶ್ಯಕ. ಅದಕ್ಕೆ ನಾನು ಕೊಡುವಂತ ಕಾರಣ ಒಂದು. ಈ ಏಳು ಕೋಟಿ ರೂಪಾಯಿಗಳ ಸುಂಕ, ಪುರಸಭೆಗಳಿಗೆ ತಲುಪಬೇಕಾದರೆ, ಜನರ ಮೇಲೆ ಎಷ್ಟು ಪ್ರಮಾಣದ ತೆರಿಗೆ ಬರುತ್ತದೆ ಎಂದು ನಾವು ಆಲೋಚನೆ ಮಾಡಬೇಕು. ಬಹುಶಃ ಸುಂಕದ ವಸೂಲಾತಿಯಲ್ಲಿ ದೋಷವಿದೆ, ಸುಂಕ ಸರಿಯಾಗಿ ವಸೂಲಾಗುತ್ತಿಲ್ಲ. ಆದ್ದರಿಂದ ಇದನ್ನು ಆಲೋಚನೆ ಮಾಡಿದರೆ, ಬರತಕ್ಕ ತೆರಿಗೆ ಎಲ್ಲಾ ಸಂಪೂರ್ಣವಾಗಿ ಪುರಸಭೆಗಳಿಗೆ ತಲುಪುವಂತೆ ಮಾಡುವುದು ಬಹಳ ದುಸ್ಸಾಧ್ಯವಾದಂಥ ಕೆಲಸ. ಇದು ಸಾಧ್ಯವಿಲ್ಲ ಎಂದು ನನ್ನ ಅಭಿಪ್ರಾಯ. ನನ್ನ ತಿಳುವಳಿಕೆಯ ಪ್ರಕಾರ ಏಳು ಕೋಟಿ ರೂಪಾಯಿಗಳು ಪುರಸಭೆಗಳಿಗೆ ತಲುಪಬೇಕಾದರೆ, ಸುಮಾರು ನಾಲ್ಕು ಕೋಟಿ ರೂಪಾಯಿಗಳ ತೆರಿಗೆ ಜನರ ಮೇಲೆ ಬಿದ್ದೇ ಬೀಳುತ್ತದೆ. ಬಳಕೆದಾರರ ಮೇಲೆ ಆಕ್ಟ್ರಾಯ್ ಬಿದ್ದೇ ಬೀಳುತ್ತದೆ. ಅದು ವಸೂಲಾಗುವಾಗ ಪೋಲು ಆಗುತ್ತದೆ. ಇದನ್ನು ಕೊಡದೆ ತಪ್ಪಿಸಿಕೊಂಡು ಹೋದವರೂ ಜನಗಳ ಮೇಲೆ ತೆರಿಗೆ ಹಾಕಿ ವಸೂಲಿ ಮಾಡುತ್ತಾರೆ. ಅಂತೂ ಇಂತೂ ದೇಶಕ್ಕೆ ಏಳು ಕೋಟಿ ರೂಪಾಯಿಗಳು ವಸೂಲು ಆಗಬೇಕಾದರೆ, ನನ್ನ ಅಭಿಪ್ರಾಯದಲ್ಲಿ ಇದು 30 ಕೋಟಿ ಜನಗಳ ಮೇಲೆ ಬೀಳುತ್ತದೆ. ಇದನ್ನು ಸಂಪೂರ್ಣವಾಗಿ ವಸೂಲು ಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಯೋಚನೆ ಮಾಡಬೇಕು,

ಶ್ರೀ ಟಿ. ಆರ್. ಶಾಮಣ್ಣ.—ಸೇಲ್ಸ್ ಟ್ಯಾಕ್ಸ್ ಜನಸಾಮಾನ್ಯರ ಮೇಲೆ ಬೀಳುತ್ತದೆ, ಅವನ್ನು ಮುನಿಸಿಪಾಲಿಟಿಗಳಿಗೆ ಕೊಡಬೇಕಾದದ್ದು ಅಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಶಾಮಣ್ಣನವರು ನನ್ನನ್ನು ಬಹಳ ದಿವಸಗಳಿಂದ ಬಲ್ಲವರು, ಪುರಸಭೆಗಳಿಗೆ ಪರಿಹಾರ ಕೊಡದಿದ್ದರೆ, ಅವುಗಳು ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಅವುಗಳಿಗೆ ಪರಿಹಾರ ಕೊಡಬೇಕು, ಕೊಡಬೇಕಾದರೆ ಬೇರೆ ಯಾವುದಾದರೂ ತೆರಿಗೆ ಹಾಕಿ ಕೊಡಬೇಕು ಅಥವಾ ಸರ್ಕಾರದ ಖಜಾನೆಯಿಂದ ಕೊಡಬೇಕು ಎಂದು ನನ್ನ ವಾದ. ನನ್ನ ಅಭಿಪ್ರಾಯದಲ್ಲಿ ಇನ್ನೊಂದು ತೆರಿಗೆ ಹಾಕಿ ಪುರಸಭೆಗಳಿಗೆ ಕೊಡುವುದು ನ್ಯಾಯವಲ್ಲ. ಸರ್ಕಾರವೆ ಒಟ್ಟು ಬೊಕ್ಕಸದಿಂದ ಕೊಡಬಹುದು. ಭಾರ ಬೀಳದಂತಹ ಬೇಕಾದಂತಹ ತೆರಿಗೆ ಜನರ ಮೇಲೆ ಹಾಕುವುದರಲ್ಲಿ ಯಾವ ಆಕ್ಷೇಪಣೆ ಇರದು. ಈ ಆಕ್ಟ್ರಾಯ್ ಸುಂಕದ ತೆರಿಗೆ ತೆಗೆದರೆ ಬಹಳ ಮಟ್ಟಿಗೆ ನಷ್ಟವಾಗುತ್ತದೆ ಎಂದರೂ ವಾಹನಗಳು ಎಷ್ಟು ಕಡೆ ನಿಲ್ಲಬೇಕು, ನಿಂತು ಸುಂಕ ಕೊಟ್ಟು ಹೋಗಬೇಕಾದರೆ ಎಷ್ಟು ಕಾಲ ವಿನಿಯೋಗವಾಗುತ್ತದೆ, ಎಷ್ಟು ನಷ್ಟವಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡಿ ನೋಡಿದರೆ ಈ ಸುಂಕ ರದ್ದು ಮಾಡುವುದರಲ್ಲಿ ಕ್ಷೇಮ ಇದೆ ಎನ್ನುವುದು ಸ್ಪಷ್ಟವಾಗುತ್ತದೆ ಎಂದು ನನ್ನ ಅಭಿಪ್ರಾಯ. ಮತ್ತೆ ಈ ಪುರಸಭೆಗಳ ಆಡಳಿತದಲ್ಲಿ ಸರಿಯಾದಂತಹ ಕಾನೂನನ್ನು ಮಾಡದೆಹೋದರೆ ಆಡಳಿತವನ್ನು ಸುಧಾರಿಸುವುದಕ್ಕೆ ಆಗುವುದಿಲ್ಲ. ಈ ಮೈಸೂರು ರಾಜ್ಯದಲ್ಲಿ ಕಾರ್ಪೊರೇಷನ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಇದುವರೆಗೂ ಕೂಡ ಕಾನೂನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಯಾರ ಮೇಲೆ ಆದರೂ ನಾನು ಆಕ್ಷೇಪಣೆ ಮಾಡುತ್ತಾ ಇಲ್ಲ, ಕಾಲ ಗತಿಸಿಹೋಗಿದೆ. ಕಷ್ಟ ಏನಾದರೂ ಇರಬಹುದು. ಮೈಸೂರು ರಾಜ್ಯದಲ್ಲಿ ಪುರಸಭೆಗಳನ್ನು ಕಾರ್ಪೊರೇಷನ್ ಆಗಿ ಪರಿವರ್ತಿಸುವುದಕ್ಕೆ ಬೇಕಾದಂತಹ ಕಾನೂನನ್ನು ಆದಷ್ಟು ಜಾಗ್ರತೆ ಮಾಡಬೇಕು ಎಂದು ನಾನು ಸಲಹೆಯನ್ನು ಕೊಡುತ್ತೇನೆ. ಮೈಸೂರ ರಾಜ್ಯದಲ್ಲಿ ಕೆಲವು ಪಟ್ಟಣಗಳು ತೀವ್ರವಾಗಿ ಕಾರ್ಪೊರೇಷನ್ ಸ್ಥಾನಮಾನಗಳನ್ನು ಪಡೆಯುವುದಕ್ಕೆ ಅರ್ಹವಾಗಿವೆ. ಕಾನೂನು ಇದ್ದರೆ ಯಾವ ಯಾವ ಪಟ್ಟಣಗಳು ಕಾರ್ಪೊರೇಷನ್ ಆಗುವುದಕ್ಕೆ ಲಾಯಕ್ಕು ಆಗುತ್ತವೆ ಅವಕ್ಕೆ ಅದನ್ನು ಅನ್ವಯ ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಮೈಸೂರು ಮತ್ತು ಮಂಗಳೂರು ಈ 2 ಪಟ್ಟಣಗಳು ತೀವ್ರವಾಗಿ ಕಾರ್ಪೊರೇಷನ್ ಮಾಡುವುದಕ್ಕೆ ಅರ್ಹತೆಯನ್ನು ಪಡೆದಿವೆ. ಕಾನೂನು ಇದ್ದ ಪಕ್ಷದಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ನಾನು ಸಲಹೆ ಮಾಡುವುದು ಮೈಸೂರು ರಾಜ್ಯಕ್ಕೆಲ್ಲಾ ಅನ್ವಯವಾಗುವಂತೆ ಒಂದು ಕಾರ್ಪೊರೇಷನ್ ಕಾನೂನನ್ನು ಮಾಡುವುದು ಅತ್ಯಂತ ಅಗತ್ಯ. ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರ್‌ವಾರ್ ಕಾರ್ಪೊರೇಷನ್‌ಗಳಿಗೆ ಅನ್ವಯವಾಗುವಂತೆ ಯಾವುದು ಒಳ್ಳೆಯ ಅಂಶ ಇದೆ ಅದನ್ನು ಸೇರಿಸಿ ಆದಷ್ಟು ಜಾಗ್ರತೆ ಕಾನೂನು ಮಾಡಬೇಕು.

ಮತ್ತೆ ಸ್ಲಮ್ಸ್ ವಿಚಾರದಲ್ಲಿ ಹೇಳುವುದಾದರೆ ನಗರಾಭಿವೃದ್ಧಿ ಸಮಿತಿಗಳು ಅಗತ್ಯ. ಇಲ್ಲಿ ಇರತಕ್ಕ ಸದಸ್ಯರು ಅನೇಕರು ಬೆಂಗಳೂರು ಮತ್ತು ಮೈಸೂರು ಪಟ್ಟಣಗಳನ್ನು ನೋಡಿರಬಹುದು. ಮೈಸೂರು ಪಟ್ಟಣದಲ್ಲಿ ನಗರಾಭಿವೃದ್ಧಿ ಸಮಿತಿ 1904 ರಿಂದ ಇದೆ, ಹತ್ತಿರ ಹತ್ತಿರ 70 ವರ್ಷಗಳ ಕಾಲ ನಗರಾಭಿವೃದ್ಧಿ ಸಮಿತಿ ಆ ಪಟ್ಟಣದಲ್ಲಿ ಕಾರ್ಯ ಮಾಡುತ್ತಾ ಇದ್ದಾರೆ. ಇವೊತ್ತು ಮೈಸೂರು ನಗರ ಸುಂದರವಾದಂತಹ ಪಟ್ಟಣ ಆಗಿರಬೇಕಾದರೆ, ಮೈಸೂರು ನಗರ ಒಳ್ಳೆಯ ರೀತಿಯಲ್ಲಿ ನಗರಾಭಿವೃದ್ಧಿ ಹೊಂದಿರಬೇಕಾದರೆ, ಅದರ ಬೆಳವಣಿಗೆ ಪಡೆದಿರಬೇಕಾದರೆ ಆ ಕೀರ್ತಿ ಬಹಳ ಮಟ್ಟಿಗೆ ಸಲ್ಲತಕ್ಕದ್ದು ನಗರಾಭಿವೃದ್ಧಿ ಸಮಿತಿಗೆ ಎಂದು ಹೇಳಬಹುದು. ನಗರಾಭಿವೃದ್ಧಿ ಸಮಿತಿಯನ್ನು ಸ್ಥಾಪನೆ ಮಾಡಿ ಆ ಮೂಲಕ ನಗರಗಳನ್ನು ಅಭಿವೃದ್ಧಿ ಮಾಡುವುದು ಅತಗತ. ಮೈಸೂರು ಅಭಿವೃದ್ಧಿಯಾಗಿರುವುದನ್ನು ನೋಡಿದರೆ ನಮಗೆ ಮನಸ್ಸಿನಲ್ಲಿ ಏನೋ ಒಂದು ಸಂತೋಷವಾಗುತ್ತದೆ. ಅದೇ ರೀತಿ ಇತರ ಕಡೆಗಳಲ್ಲೂ ಆಗಲು ಇಡೀ ಮೈಸೂರು ದೇಶಕ್ಕೆ ಎಲ್ಲಾ ಅನ್ವಯವಾಗುವಂತಹ ನಗರಾಭಿವೃದ್ಧಿ ಸಮಿತಿಗೆ ಸಂಬಂಧಪಟ್ಟ ಕಾನೂನು ಆಗುವುದು ಆಗತ್ಯ. ಆದ್ದರಿಂದ ಆದಷ್ಟು ಜಾಗ್ರತೆ ಈ ಕಾನೂನು ಮಾಡಬೇಕು. ಮಂಗಳೂರು ಬೆಳೆದಿರತಕ್ಕ ಪಟ್ಟಣ ಅಲ್ಲಿ ಸರ್ವಕಾಲದ ಬಂದರು ಆಗುತ್ತದೆ ರೈಲ್ವೆ ಮಾರ್ಗ ಬರುತ್ತಿದೆ ಬಹಳ ಕೈಗಾರಿಕೆ ಚಟುವಟಿಕೆಗಳು ನಡೆಯುತ್ತಿವೆ. ಇಂಥ ನಗರಕ್ಕೆ ನಗರಾಭಿವೃದ್ಧಿ ಸಮಿತಿ ಇಲ್ಲದೆಹೋದರೆ ಸೂಕ್ತವಾಗಿ ಕಾಣುವುದಿಲ್ಲ, ಹುಬ್ಬಳ್ಳಿ-ಧಾರವಾರ ಅಷ್ಟೇ ಅಲ್ಲ. ಅದರಂತಹ ಅನೇಕ ಪಟ್ಟಣಗಳು ಇವೆ. ಆದ್ದರಿಂದ ನಗರಾಭಿವೃದ್ಧಿ ಸಮಿತಿಯನ್ನು ಸ್ಥಾಪನೆ ಮಾಡುವುದಕ್ಕೆ ಸಮಗ್ರವಾದ ಕಾನೂನನ್ನು ತರುವುದು ಅತ್ಯಗತ್ಯ. ಅದನ್ನು ಆದಷ್ಟು ಜಾಗ್ರತೆ ಈ ಸಭೆಗೆ ತಂದು ಕಾನೂನು ಮಾಡಬೇಕು ಎಂದು ಸರ್ಕಾರವಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಹಾಗೆ ಬೆಂಗಳೂರು ನಗರ ಸಮಿತಿ ಸಮಸೆ ಏನು ಎಂದರೆ ಸೊಳ್ಳೆ, ನೀರು ಮತ್ತು ಒಳ ಚರಂಡಿ ವ್ಯವಸ್ಥೆ ಅಲ್ಲದೆ ಕೊಳಚೆಪ್ರದೇಶ ನಿರ್ಮೂಲ ಮಾಡತಕ್ಕದು. ಇದು ಬಹಳ ದೊಡ್ಡ ಕೆಲಸ. ನನ್ನ ಅಭಿಪ್ರಾಯದಲ್ಲಿ ನಗರಾಭಿವೃದ್ಧಿ ಮಂಡಲಿ ಕಾರ್ಯವನ್ನು ಪ್ರಾರಂಭಮಾಡು ವುದಕ್ಕೆ ಮೊದಲು ಇದ್ದಂಥ ಪುರಸಭೆ ಸಾಕಷ್ಟು ಮುಂಜಾಗ್ರತೆ ಕಾರ್ಯಕ್ರಮವನ್ನು ತೆಗೆದು ಕೊಳ್ಳದೇ ಇದ್ದುದರಿಂದ ಈ ಕೊಳಚೆ ಪ್ರದೇಶ ಬೆಳೆಯುವುದಕ್ಕೆ ಕಾರಣವಾಯಿತು. ಇತ್ತೀಚೆಗೆ ಸ್ವಾತಂತ್ರ್ಯ ಬಂದ ನಂತರ ಇಲ್ಲಿಗೆ ವಲಸೆ ಬಂದಂತಹ ಜನರು ಯಾವುದೋ ರೀತಿಯಲ್ಲಿ ವಾಸಮಾಡ ಬೇಕಾಗಿ ಬಂದು ಕೊಳಚೆ ಪ್ರದೇಶ ಬೆಳೆಯುವುದಕ್ಕೆ ಕಾರಣವಾಯಿತು. ಕೊಳಚೇ ಪ್ರದೇಶವನ್ನು ನಿರ್ಮೂಲನ ಮಾಡುವುದಕ್ಕೆ ಬೇಕಾದಂತಹ ಕಾನೂನು ಅಗತ್ಯ. 1958 ರಲ್ಲಿ ಆದಕ್ಕೆ ಬೇಕಾದ ಕಾನೂನು ಮಾಡಿದರು. ಆದರೆ ಕಾನೂನು ಜಾರಿಗೆ ಕೊಡುವುದಕ್ಕೆ ಆಗಲಿಲ್ಲ. ಅದಕ್ಕೆ ಅನೇಕ ಅಡಚಣೆಗಳು ಬಂದವು. ಈಗಲೂ ಕೂಡ ಸುಪ್ರೀಂ ಕೋರ್ಟಿನಲ್ಲಿ ವ್ಯಾಜ್ಯ ಇರಬೇಕು. ಸರ್ಕಾರ ದವರು ಸ್ಲಮ್ಸ್ ಕ್ಲಿಯರ್ ಮಾಡುವುದಕ್ಕೆ ಸಭೆಯ ಮುಂದೆ ಮಸೂದೆಯನ್ನು ಮಂಡಿಸಿ ಆದಷ್ಟು ಜಾಗ್ರತೆ ಕಾನೂನು ತಂದು ಅದನ್ನು ಜಾರಿಗೆ ಕೊಡಬೇಕು ಎಂದು ಹೇಳುತ್ತೇನೆ. ಕಾನೂನು ಮಾಡಿದ ಮೇಲೆ ಇರತಕ್ಕ ಕೊರತೆ ಎಂದರೆ ಕಾನೂನಿನಲ್ಲಿ ಅನೇಕ ರೂಲ್ಸ್‌ಗಳನ್ನು ಮಾಡುವುದಕ್ಕೆ ಉದ್ದೇಶ ಇರುತ್ತದೆ. ಕಾನೂನು ಮಾಡುತ್ತೇವೆಯೇ ವಿನಃ ಮತ್ತೆ ಅದನ್ನು ಜಾರಿಗೆ ಕೊಡು ವುದಕ್ಕೆ ಅನೇಕ ವೇಳೆ ರೂಲ್ಸ್‌ಗಳನ್ನು ಮಾಡುವುದು ನಿಧಾನವಾದ ಕಾರಣದಿಂದ ಅದು ಜಾರಿಗೆ ಬರುವುದು ಕುಂಠಿತವಾಗುತ್ತದೆ. ಆ ಕಡೆಗೆ ಸರ್ಕಾರ ಗಮನಕೊಡಬೇಕು ಎಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಬೆಂಗಳೂರು ನಗರಾಭಿವೃದ್ಧಿಗೆ ಸಂಬಂಧಪಟ್ಟ ಮೂರು ಸಂಸ್ಥೆಗಳು ಕಾರ್ಯ ಮಾಡುತ್ತಾ ಇವೆ. ಒಂದು ನಗರಾಭಿವೃದ್ಧಿ ಮಂಡಲಿ, ಮತ್ತು ಕಾರ್ಪೊ ರೇಷನ್ ಹಾಗೂ ಪ್ಲಾನಿಂಗ್ ಅತಾರಿಟಿ. ಪ್ಲಾನಿಂಗ್ ಅತಾರಿಟಿ ನನ್ನ ಅಭಿಪ್ರಾಯದಲ್ಲಿ ಇವೊತ್ತಿನ ವರೆಗೂ ಕೂಡ ಅದಕ್ಕೆ ಸೂಕ್ತವಾದಂತ ಲೀಗಲ್ ಸ್ಟೇಟಸ್ ಇಲ್ಲ. ಕಂಟ್ರಿ ಮತ್ತು ಟೌನ್ ಪ್ಲಾನಿಂಗ್ ಆಕ್ಟ್ ಈ ಸಭೆ ಒಪ್ಪಿಗೆ ಪಡೆದು ನಿರ್ಣಯವಾಯಿತು. ಕಂಟ್ರಿ ಮತ್ತು ಟೌನ್‌ಪ್ಲಾನಿಂಗ್ ಆಕ್ಟ್ ಪ್ರಕಾರ ಸಾಮಾನ್ಯವಾಗಿ ಒಂದು ಡ್ರಾಫ್ಟ್ ಮಾಸ್ಟರ್ ಪ್ಲಾನ್ ಆಗಬೇಕು. ಆ ಡ್ರಾಫ್ಟ್ ಮಾಸ್ಟರ್ ಪ್ಲಾನ್ ಪಬ್ಲಿಷ್ ಆಗಬೇಕು. ಡ್ರಾಫ್ಟ್ ಮಾಸ್ಟರ್ ಪ್ಲಾನ್ ಆಗುವುದು ನಿಧಾನ ವಾಗುತ್ತದೆ. ಹೆಚ್ಚು ಕಾಲ ಅಲ್ಲ ನಿಂತುಹೋಗುತ್ತದೆ. ಹಿಂದೆ ಸರ್ಕಾರದವರು ನೇಮಿಸಿದಂತ ದಿವಾನ್ ಮಾಧವರಾವ್ ರವರ ಅಧ್ಯಕ್ಷತೆಯಲ್ಲಿ ನೇಮಕವಾದಂತ ಮೆಟ್ರೊಪಾಲಿಟನ್ ಬೋರ್ಡು ರಚಿಸಿ ಮಾಸ್ಟರ್ ಪ್ಲಾನ್, ಔಟ್‌ಲೇ ಡೆವಲಪ್‌ಮೆಂಟ್ ಪ್ಲಾನ್ ಈ ಸಭೆ ಅಂಗೀಕರಿಸಿತು. ಆ ಔಟ್‌ಲೇ ಡೆವಲಪ್‌ಮೆಂಟ್ ಪ್ಲಾನ್ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳನ್ನು ಕೇಳಿ, ಆಖೈರು ಆದಂಥ ಮಾಸ್ಟರ್ ಪ್ಲಾನ್ ಆದುವರೆಗೂ ಮಾಡಿ ಆಗಿಲ್ಲ. ಆಕ್ಷೇಪಗಳನ್ನು ಕೇಳಿರಬಹುದು. ಆದರೆ ಆಖೈರು ತೀರ್ಮಾನಮಾಡಿ, ಮಾಸ್ಟರ್ ಪ್ಲಾನ್ ಇದುವರೆಗೆ ಒಪ್ಪಿಕೊಂಡಿಲ್ಲ. ಮಾಸ್ಟರ್ ಪ್ಲಾನ್ ಒಪ್ಪಿಕೊಳ್ಳದೆ ಅದರಲ್ಲಿ ಇರತಕ್ಕ ಅಂಶಗಳನ್ನು ಜಾರಿಗೆಕೊಡುವುದಕ್ಕೆ ಪ್ಲಾನಿಂಗ್ ಅತಾರಿಟಿ ಪ್ರಯತ್ನ ಮಾಡುತ್ತಾ ಇದ್ದಾರೆ. ಅವರಿಗೆ ಇರತಕ್ಕ ತೊಂದರೆ ಏನು ಎಂದರೆ ಯಾರಾದರೂ ಅವರ ಅಧಿಕಾರವನ್ನು ಪ್ರಶ್ನೆ ಮಾಡಿದರೆ ಅವರು ತಮ್ಮ ಅಧಿಕಾರವನ್ನು ಚಲಾಯಿಸುವುದಕ್ಕೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆ ಈ ಮಾಸ್ಟರ್ ಪ್ಲಾನ್ ವಿಚಾರದಲ್ಲಿ ಸರ್ಕಾರದವರು ಆಖೈರು ಆದಂತಹ ಹುಕುಂ ಹೊರಡಿಸುವುದು ಅಗತ್ಯ. ಮೈಸೂರು ನಗರದಲ್ಲಿ ಔಟ್‌ಲೇ ಡೆವಲಪ್‌ಮೆಂಟ್ ಪ್ಲಾನ್ ಇದ್ದರೂ ಕೂಡ ಆಖೈರು ಆರ್ಡರ್ ಹೊರಡಿಸಿಲ್ಲ. ಎಲ್ಲೆಲ್ಲಿ ನಗರ ಸಭೆಗಳನ್ನು ತೆಗೆದುಹಾಕಿದ್ದಾರೋ ಅಲ್ಲೆಲ್ಲಾ ಯಾವ ನಿಬಂಧನೆಗಳ ಆಧಾರದ ಮೇಲೆ ಡೆವಲಪ್ ಮೆಂಟ್ ಮಾಡಬೇಕೆಂದು ಏನಾದರೂ ಪ್ಲಾನು ಮಾಡಿದ್ದಿರಾ? ಅಲ್ಲದೆ ಕೆಲವು ನಗರಸಭೆಗಳನ್ನು ರದ್ದು ಮಾಡಬೇಕೆಂದು ಸಾರ್ವಜನಿಕರಿಂದೇನಾದರೂ ದೂರುಗಳು ಸರಕಾರಕ್ಕೆ ಬಂದಿದ್ದವೇ? ಇದರ ಮೇಲೆ ಏನಾದರೂ ಆರ್ಡರು ಮಾಡಿದರೇ? ಇದರ ಆವಶ್ಯಕತೆ ಇತ್ತೇ? ಇವನ್ನೆಲ್ಲಾ ತಿಳಿಸಬೇಕೆಂದು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕೆಲವು ಕಾನೂನುಗಳು ಇವೆ, ಕಂಟ್ರಿ ಟೌನ್ ಪ್ಲಾನಿಂಗ್ ಆಕ್ಟ್, ಸಿಟಿ ಇಂಪ್ರೂವ್ ಮೆಂಟ್ ಆಕ್ಟ್ ಮತ್ತು ಕಾರ್ಪೊರೇಷನ್ ಆಕ್ಟ್, ಈ ಮೂರು ಕಾನೂನುಗಳಲ್ಲಿರುವ ಕೆಲವು ಪ್ರಾವಿಷನ್‌ಗಳು ಒಂದಕ್ಕೊಂದು ಓವರ್ ಲ್ಯಾಪಿಂಗ್ ಆಗುವಂತೆ ಇವೆ, ಇದನ್ನು ಸರಕಾರ ಪರಿ ಶೀಲನೆ ಮಾಡಿ ಇಂತಹ ಓವರ್ ಲ್ಯಾಪಿಂಗ್ ಪ್ರಾವಿಷನ್‌ಗಳನ್ನು ತೆಗೆದು ಹಾಕುವುದು ಅತ್ಯಗತ್ಯ ಎಂದು ಸಲಹೆ ಮಾಡುತ್ತೇನೆ. ಮೂರು ಸಂಸ್ಥೆಗಳೂ ಇರಬೇಕಾದುದು ಅತ್ಯಾವಶ್ಯಕ, ಪ್ಲಾನಿಂಗು ಅಥಾರಿಟಿ ಯಾವ ರೀತಿ ಪ್ಲಾನು ಮಾಡಬೇಕು ಎನ್ನುವುದನ್ನು ಯೋಚಿಸಿ ಅದಕ್ಕೆ ತಕ್ಕಂತೆ ಯೋಜನೆ ಗಳನ್ನು ಮಾಡಬೇಕು ಮತ್ತು ನಗರಗಳನ್ನು ಯಾವ ರೀತಿ ಬೆಳೆಯಲು ಅವಕಾಶ ಮಾಡಬೇಕು

(ಶ್ರೀ ಕೆ. ಪುಟ್ಟಸ್ವಾಮಿ)

ಎನ್ನುವುದನ್ನೂ ಅವರು ತೀರ್ಮಾನ ಮಾಡಬೇಕು. ಅದೇ ರೀತಿ ಅಭಿವೃದ್ಧಿ ಕಾರ್ಯಗಳನ್ನು ನಗರಸಭೆ ಸಮಿತಿಯವರು ಮಾಡಿ ಅಭಿವೃದ್ಧಿ ಕೆಲಸಗಳನ್ನು ನಡೆಸಿಕೊಂಡು ಹೋಗಬೇಕಾದುದು ಅವರ ಕೆಲಸ. ಕಾರ್ಪೋರೇಷನ್ ಕಾನೂನಿನಲ್ಲಿ ಬೇರೆ ಬೇರೆ ಬೋರ್ಡುಗಳಿವೆ. ಇವು ಬೇರೆ ಬೇರೆ ಕೆಲಸಗಳನ್ನು ಹಾಗೂ ಅತ್ಯಗತ್ಯವಾದ ಕೆಲಸಗಳನ್ನು ಮಾಡಬೇಕಾದುದು ಅತ್ಯಾವಶ್ಯಕ. ಈ ಮೂರು ಸಂಸ್ಥೆಗಳೂ ಇರಬೇಕಾದುದು ಅತ್ಯಾವಶ್ಯಕ. ಈ ಮೂರೂ ತಮ್ಮ ತಮ್ಮ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸುವಂತೆ ಒಂದು ವ್ಯವಸ್ಥೆ ಮಾಡುವುದು ಅತ್ಯಗತ್ಯ ಎಂದು ನಾನು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಶ್ರೀ ಶಾಮಣ್ಣನವರು ಇಲ್ಲಿ ಪುರಸಭೆಗಳನ್ನು ರದ್ದು ಮಾಡುವ ವಿಚಾರಗಳನ್ನು ಪ್ರಸ್ತಾಪ ಮಾಡಿದರು, ಅವರು ಹೇಳುವ ವಿಷಯಗಳನ್ನೂ ನಾನು ಒಪ್ಪುತ್ತೇನೆ. ಆದರೆ ಪುರಸಭೆಗಳನ್ನು ರದ್ದುಮಾಡುವ ಅಧಿಕಾರ ಸರಕಾರಕ್ಕಿದೆ, ಅದನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಹಾಗೆ ಸರಕಾರ ಈಗಾಗಲೇ ಸುಮಾರು 9–10 ಪೌರಸಭೆಗಳನ್ನು ಅವು ಮಾಡುವ ಕರ್ತವ್ಯಗಳಲ್ಲಿ ಕರ್ತವ್ಯ ವಿಮುಖವಾಗಿವೆ ಎಂದು ಅವರಿಗೆ ಮುನ್ನೆಚ್ಚರಿಕೆ ನೋಟೀಸನ್ನು ಕೊಟ್ಟು ಅವರು ಅದಕ್ಕೆ ಸಮಾಧಾನಕರವಾದ ಉತ್ತರಗಳನ್ನು ಕೊಡಲಿಲ್ಲ ಎಂದು ರದ್ದು ಮಾಡಿದ್ದೀರಾ.? ರದ್ದು ಮಾಡುವ ಸಂದರ್ಭದಲ್ಲಿ ಚುನಾವಣೆ ಮಾಡಲು ಆಗಲಿಲ್ಲ ಎಂದು ಅದನ್ನು ಕ್ರಮಬದ್ಧವಾಗಿ ಮಾಡಲು 9–10 ಪುರಸಭೆಗಳನ್ನು ರದ್ದು ಮಾಡಿರುವ ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಇನ್ನೂ ಸುಮಾರು ತೊಂಬತ್ತಕ್ಕೆ ಮೇಲ್ಪಟ್ಟು ಪುರಸಭೆಗಳು ಸರಕಾರದ ವಶದಲ್ಲಿವೆ, ಇಲ್ಲೆಲ್ಲಾ ಅಡ್ಮಿನಿಸ್ಟ್ರೇಟರುಗಳನ್ನು ನೇಮಕ ಮಾಡಿದ್ದಾರೆಂದರೆ ಅದು ಸರಕಾರದ ವಶದಲ್ಲಿದ್ದಂತೆಯೇ ಆಗುತ್ತದೆ. ಇತ್ತೀಚೆಗೆ ಸರಕಾರದವರು ಅವರ ಕ್ಯಾಬಿನೆಟ್ಟಿನಲ್ಲಿ ಒಂದು ತೀರ್ಮಾನ ಮಾಡಿದ್ದಾರೆ. ಅವು ಅಭಾವ ಪ್ರದೇಶಗಳಲ್ಲಿರುವ ಪುರಸಭೆಗಳಿಗೆ ಡಿಸೆಂಬರಿನಲ್ಲಿ ಚುನಾವಣೆಗಳನ್ನು ಮಾಡಬಾರದು ಎಂದು ಮತ್ತು ಇದು ಪತ್ರಿಕೆಗಳಲ್ಲಿ ಕೂಡ ಬಂದಿರುವುದನ್ನು ಓದಿದ್ದೇನೆ. ಅಭಾವ ಪ್ರದೇಶಗಳಲ್ಲಿ ಡಿಸೆಂಬರು ತಿಂಗಳಲ್ಲಿ ನಡೆಯುವ ಚುನಾವಣೆಗಳನ್ನು ಮುಂದೂಡುವುದು ಸರಿ, ಇದು ಅನ್‌ಅವಾಯ್‌ಡಬಲ್ ಎನ್ನುವುದು, ಇದಕ್ಕೆ ನನ್ನ ಅಡ್ಡಿ ಇಲ್ಲ. ಆದರೆ ಈಗಿರುವ ಕಾನೂನಿನ ಪ್ರಕಾರ ಇಂತಹ ವಿಶೇಷ ಸಂದರ್ಭಗಳಲ್ಲಿ ಕಾನೂನಿಗೆ ತಿದ್ದುಪಡಿ ಮಾಡಿ ತಂದು ಆ ನಂತರ ಚುನಾವಣೆಗಳನ್ನು ರದ್ದು ಮಾಡಬೇಕೆಂದು ಇದೆ. ಆದರೆ ಇದರಲ್ಲಿ ಅಂತಹ ಯಾವ ತಿದ್ದುಪಡಿಯನ್ನೂ ತರದೆ ಸರಕಾರವೇ ತಮ್ಮ ಪಕ್ಷದ ಧೋರಣೆಗೆ ಅನುಸಾರವಾಗಿದೆ ಎಂದು ತಮ್ಮ ಅಧಿಕಾರಕ್ಕೆ ಇದನ್ನು ತೆಗೆದುಕೊಂಡು ರದ್ದು ಮಾಡುವುದು ಸರಿಯಲ್ಲ. ಮತ್ತು ಈಗಿರುವಂತೆಯೇ ಇದನ್ನು ಮುಂದುವರಿಸಿಕೊಂಡು ಹೋಗುವುದೂ ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಹಿಂದೆ ಯುದ್ಧ ಪರಿಸ್ಥಿತಿ ಬಂದಿದ್ದ ಕಾಲದಲ್ಲಿ ಇಂತಹುದೇ ಒಂದು ತಿದ್ದುಪಡಿ ಕಾನೂನು ತಂದು ಆ ನಂತರ ಪುರಸಭೆಗಳ ಚುನಾವಣೆಗಳನ್ನು ಮುಂದುವರಿಸಿದ್ದರು. ಈಗೇನೋ ನಾಲ್ಕು ತಿಂಗಳಿಗಾಗಿ ಎಂದು ಮಾಡಬಹುದು, ಮುಂದೆ ಇದು ಒಂದು ವರ್ಷದಷ್ಟು ಕಾಲ ಮುಂದುವರಿಯಬಹುದು, ಅನಂತರ ಪುರಸಭೆಗಳಿಗೆ ಚುನಾವಣೆಗಳನ್ನು ಮಾಡಬಹುದು ಎಂದು ಹೇಳಬಹುದು. ಚುನಾವಣೆಗಳನ್ನು ನಡೆಸುತ್ತೇವೆಂದೂ ಇಲ್ಲಿ ಹೇಳಿಲ್ಲ. ಇದಕ್ಕೆ ಬದಲಾಗಿ ಇಂತಹ ಒಂದು ವಿಶೇಷ ಪರಿಸ್ಥಿತಿ ಇವೆ ಇಲ್ಲಿಗೆ ಒಂದು ತಿದ್ದುಪಡಿ ಕಾನೂನು ತಂದು ಅದರಂತೆ ಕ್ರಮ ತೆಗೆದುಕೊಳ್ಳುವುದು ಅತ್ಯಂತ ಅವಶ್ಯಕ ಎಂದು ನನಗಾದರೂ ಅನಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಯಾವುದೇ ಕಾರ್ಯ ಮಾಡಿದರೂ ನೇರವಾಗಿ ಮಾಡಬೇಕು, ಜನರ ಪ್ರತಿನಿಧಿಗಳಿಂದ ಅಭಿಪ್ರಾಯ ಪಡೆದು ಮಾಡಬೇಕು, ಇದು ಅತ್ಯಂತ ಅವಶ್ಯಕ, ಇದನ್ನು ಮಾನ್ಯ ಮಂತ್ರಿಗಳು ಆಲೋಚನೆ ಮಾಡಬೇಕು ಎಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಅಭಾವವಿಲ್ಲದೆ ಇರುವ ಅನೇಕ ಕಡೆಗಳಲ್ಲಿ ಇವೊತ್ತು ಇದ್ದ ಪುರಸಭೆಗಳನ್ನು ಸರಕಾರ ವಶಪಡಿಸಿಕೊಂಡಿದೆ, ಬಹುಶಃ ಅದಷ್ಟು ಜಾಗ್ರತೆ ಇಲ್ಲಿ ಚುನಾವಣೆಗಳನ್ನು ಮಾಡಬೇಕೆಂದು ಇರಬಹುದು ; ಆದರೆ ಮಾನ್ಯ ಮಂತ್ರಿಗಳು ಕೆಲವು ಕಡೆ ಹೇಳಿರುವ ಪತ್ರಿಕಾ ಹೇಳಿಕೆಗಳಲ್ಲಿ ಒಂದು ರೀತಿಯಾದ ಅನುಮಾನ ಬರುವಂತೆ ಹೇಳಿದ್ದಾರೆ. ಒಂದು ಕಡೆ ಅವರೇ ಹೇಳಿರುವ ಹೇಳಿಕೆಯಲ್ಲಿ ಎಲ್ಲಿಯವರೆಗೆ ಪುರಸಭೆಗಳ ಪರಿಸ್ಥಿತಿ ಸರಿಯಾಗುವುದಿಲ್ಲವೋ ಅಲ್ಲಿಯವರೆಗೆ ಚುನಾವಣೆಗಳನ್ನು ಮಾಡುವುದಿಲ್ಲ ಎಂದು ಹೇಳಿದ್ದಾರೆ. ಇವರು ಆ ರೀತಿ ಹೇಳುವಾಗ ಅವರ ಮನಸ್ಸಿನಲ್ಲಿ ಯಾವ ಪುರಸಭೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದಾರೋ ಅಥವಾ ಕೆಲವು ಪುರಸಭೆಗಳನ್ನು ಗಮನದಲ್ಲಿ ಇಟ್ಟುಕೊಂಡು ಹೇಳಿದ್ದಾರೋ ಅದರ ಬಗ್ಗೆ ಊಹೆ ಮಾಡಿ ನಾನು ಇಲ್ಲಿ ಟೀಕೆ ಮಾಡುವುದಕ್ಕೆ

ಹೋಗುವುದಿಲ್ಲ. ಈಗಿರುವ ಪರಿಸ್ಥಿತಿಯಲ್ಲಿ ಇಲ್ಲಿ ಚುನಾವಣೆಗಳನ್ನು ಮಾಡುವುದು ಯೋಗ್ಯವಲ್ಲ ಎಂದು ಅದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ. ಪುರಸಭೆಗಳನ್ನು ನಡೆಸಲು ಮತ್ತು ಇಲ್ಲಿ ಚುನಾವಣೆಗಳನ್ನು ಮಾಡಲು 1971 ನೇ ಸೆನ್‌ಸಸ್ ಎಂದರೆ ಜನಗಣತಿ ಲೆಕ್ಕದ ಪ್ರಕಾರ ಕೆಲವು ಕಡೆಗಳಲ್ಲಿ ವಾರ್ಡ್ ಹಾಗೂ ಡಿವಿಜನ್‌ಗಳು ಸರಿಯಾಗಿ ವಿಂಗಡಣೆಯಾಗಿರಲಿಲ್ಲ ಎಂದು. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಸರಿಯಾಗಿ ಪರಿಶೀಲನೆ ಮಾಡಿ ನೋಡಬೇಕೆಂದು ಹೇಳುತ್ತೇನೆ. 1971ನೇ ಜನಗಣತಿ ಪ್ರಕಾರ ಎಂದರೆ 1972ನೇ ಇಸವಿ ಮೇ ತಿಂಗಳಲ್ಲೇ ಇದನ್ನು ಇಂಡಿಯಾ ಸರ್ಕಾರದವರು ಪ್ರಕಟಣೆ ಮಾಡಿದ್ದಾರೆ. ಇದು ನಮ್ಮ ಲೈಬ್ರರಿಯಲ್ಲಿ ಕೂಡ ಇದೆ, ಇದರಲ್ಲಿ ಎಲ್ಲ ಅಂಕೆ ಅಂಶಗಳ ವಿವರಗಳೂ ಬಂದಿವೆ. ಅಷ್ಟೇ ಅಲ್ಲ, ನಾನು ತಿಳಿದಿರುವಂತೆ ಏಪ್ರಿಲ್ ತಿಂಗಳಿನಲ್ಲೇ ನಮ್ಮ ಸೆಕ್ರೆಟೇರಿಯಟ್‌ನಲ್ಲಿ ಸಂಬಂಧಪಟ್ಟ ಇಲಾಖೆಯವರು ಎಲ್ಲ ಡಿವಿಜನಲ್ ಕಮಿಷನರ್‌ರವರಿಗೂ ಇದರ ಬಗ್ಗೆ ಕಾಗದ ಬರೆದಿದ್ದಾರೆ. 1971ರ ಜನಗಣತಿಯಂತೆ ಪುನರ್‌ವಿಂಗಡಣೆಯಾಗಿರುವಂತೆ ಎಲ್ಲ ಕಡೆಗಳಲ್ಲೂ ಸಕಾಲದಲ್ಲಿ ಚುನಾವಣೆಗಳನ್ನು ಮಾಡುವ ವ್ಯವಸ್ಥೆ ಮಾಡಬೇಕು. ಹೀಗಿರುವಾಗ ಈ ಏಳು ತಿಂಗಳಿನಲ್ಲಿ ಕೆಲಸ ಮಾಡಲು ಸಾಧ್ಯವಿರಲಿಲ್ಲವೇ! ಎಲ್ಲಿ ಕೈ ತಪ್ಪಿದ್ದೀರಿ, ನಿಮ್ಮ ಸೆಕ್ರೆಟೇರಿಯಟ್ಟಿನವರು ಕೊಟ್ಟಿರುವ ಆದೇಶದಿಂದ ಮತ್ತು ಎಲ್ಲ ಡೆಪ್ಯುಟಿ ಕಮಿಷನರುಗಳಿಗೂ ಕೊಟ್ಟಿರುವ ಆದೇಶದಂತೆ ಚುನಾವಣೆಗಳು ಆಗದೆ ಇರುವ ಪುರಸಭೆಗಳಿಗೆ ಹೊಸ ಚುನಾವಣೆಗಳನ್ನು ಮಾಡಲು ಆಗುತ್ತಿರಲಿಲ್ಲವೇ? ಇದನ್ನು ತಾವು ಪರಿಶೀಲನೆ ಮಾಡಬೇಕು. ನಾವು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ಜನ. ನಾಲ್ಕು ವರ್ಷಗಳು ಇರುವ ಅವಧಿ ಪೂರೈಸದೆ ಅಲ್ಲಿ ಚುನಾವಣೆಗಳನ್ನು ನಡೆಸಲು ಅನಿವಾರ್ಯದಿಂದ ಚುನಾವಣೆ ಸಾಧ್ಯವಾಗದೇ ಹೋದರೆ ಕಾನೂನನ್ನು ವಿಸ್ತರಣೆ ಮಾಡುವುದು ಯೋಗ್ಯವಾದುದು, ಇದರ ಬಗ್ಗೆ ಸರಿಯಾಗಿ ವಿವೇಚನೆ ಮಾಡಬೇಕಾಗಿತ್ತು. ಸುಮ್ಮನೇ ಇಲ್ಲಿ ಚುನಾವಣೆ ಮಾಡಲಾಗಲಿಲ್ಲ ಎಂದು ಇದರ ಅಧಿಕಾರವನ್ನು ವಹಿಸಿಕೊಳ್ಳಬೇಕೆಂದು ಇಲ್ಲಿ ತೆಗೆದುಕೊಂಡಿದ್ದಾರೆಯೇ? ಮುಂದೆ ಯಾವ ಯಾವ ಪುರಸಭೆಗಳನ್ನು ವಶಪಡಿಸಿಕೊಂಡು ಅಲ್ಲಿಗೆ ಅಡ್ಮಿನಿಸ್ಟ್ರೇಟರುಗಳನ್ನು ಹಾಕಿ ಅಲ್ಲಿ ಚುನಾವಣೆಗಳನ್ನು ಯಾವಾಗ ಮಾಡಬೇಕೆಂದಿದ್ದೀರಿ? ನನಗಿರತಕ್ಕ ಅನುಭವ ಪುರಸಭೆಯ ಕಾನೂನಿನಲ್ಲಿ ಇರುವಂತೆ ವಿಚಾರ ಮಾಡಿದರೆ ಇಂತಹ ಅನಾನುಕೂಲಗಳಿಂದಾಗಿ ಆ ಸಮಸ್ಯೆಯನ್ನು ಪರಿಹಾರ ಮಾಡುವುದು ಸಾಧ್ಯವಿಲ್ಲ.

4-30 P.M.

ಎಷ್ಟೇ ಕೇಡು ಕೆಟ್ಟರೂ ಜನರ ಪ್ರತಿನಿಧಿಗಳ ಆಡಳಿತ ಅಧಿಕಾರಿಗಳ ಆಡಳಿತಕ್ಕಿಂತ ಮೇಲು. ಅದರ ಅನುಭವ 1971ನೇ ಇಸವಿಯಲ್ಲಿ ಮೈಸೂರು ರಾಜ್ಯದಲ್ಲಿ ಆಗಿದೆ. ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ರಾತ್ರಿ ಕಂಡ ಹಳ್ಳದಲ್ಲಿ ಹಗಲ ಹಾರಿದರು ಎನ್ನುವಂತಾಗಬಾರದು. ಮಾನ್ಯ ಮಂತ್ರಿಗಳು ದಯವಿಟ್ಟು ಗಮನ ಕೊಡಬೇಕು. ನಮಗೆ ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆ, ತೆಗೆದುಕೊಂಡ ಮೇಲೆ ಹೇಗೋ ನಡೆಯುತ್ತದೆ, ಹೇಗಾದರೂ ನಡೆದುಕೊಂಡು ಹೋಗಲಿ ಎಂದಾಗಬಾರದು. ಅಲ್ಲಿಯ ಕೂಗು ಇಲ್ಲಿಗೆ ಮುಟ್ಟುವುದಿಲ್ಲ. ನಾನು ಮೈಸೂರು ನಗರದಲ್ಲಿ ನೋಡಿದ್ದೇನೆ, ಮ್ಯಾನ್‌ಹೋಲ್‌ನಲ್ಲಿ ಹೊಳೆ ಹರಿದ ಹಾಗೆ ಹರಿಯುತ್ತಿದ್ದರೂ ಅದಕ್ಕೆ ಹೇಳುವವರಿಲ್ಲ, ಕೇಳುವವರಿಲ್ಲ. ಮೈಸೂರು ನಗರದಲ್ಲಿ ಹಾಸುಹೊಕ್ಕಾಗಿ ಬೆಳೆದಿರತಕ್ಕ ನನಗೆ, ಆ ಪುರಸಭೆಯಲ್ಲಿ ಸಾಕಷ್ಟು ಕಾಲ ಸದಸ್ಯನಾಗಿದ್ದವನಿಗೆ, ಕೆಲವು ವೇಳೆ ಅಧ್ಯಕ್ಷನಾಗಿ ಕೆಲಸ ಮಾಡಿರುವವನಿಗೆ ಆ ನಗರದ ಬೆಳವಣಿಗೆಯಲ್ಲಿ ಸಂಪೂರ್ಣ ಆಸಕ್ತಿ ವಹಿಸುತ್ತಿರತಕ್ಕ ನನಗೆ ಈ ಹೊತ್ತು ಇರತಕ್ಕ ಪರಿಸ್ಥಿತಿಯನ್ನು ನೋಡಿ ನಾಚಿಕೆಯಾಗಿದೆ. ಮೈಸೂರು ನಗರದ ಅಭಿವೃದ್ಧಿ ಬಗ್ಗೆ ನನಗೆ ಹೆಮ್ಮೆ ಇದೆ. ಅದು ಬಹಳ ಚೆನ್ನಾಗಿ ನಡೆದುಕೊಂಡು ಬಂದಿದೆ. ಬಹುಶಃ ಸದಸ್ಯರು ಕ್ಷಮಿಸುತ್ತಾರೆ, ಇದನ್ನು ನಾನು ಸ್ಥಳೀಯ ಅಭಿಮಾನದಿಂದ ಹೇಳುತ್ತೇನೆಂದೂ ಯಾರೂ ಭಾವಿಸಬಾರದು. ಮೈಸೂರು ನಗರದ ಆಡಳಿತ ಬಹಳ ಯಶಸ್ವಿಯಾಗಿ ನಡೆದಿದೆ, ಮಾದರಿಯಾಗಿ ನಡೆದಿದೆ. ಅಂಥ ಪುರಸಭೆಯನ್ನು ವಶಪಡಿಸಿಕೊಂಡಮೇಲೆ ಸುಂದರವಾದ ನಗರದಲ್ಲಿ ಈ ಹೊತ್ತು ಎಲ್ಲ ನಾಗರಿಕ ಸೌಲಭ್ಯಗಳು ಇರತಕ್ಕ ನಗರದಲ್ಲಿ, ಅದರ ವ್ಯವಸ್ಥೆ ಸರಿಯಾಗಿ ನಡೆಯುತ್ತಿಲ್ಲ ಎನ್ನುವುದನ್ನು ನೋಡಿದಾಗ ನನಗೆ ನೋವಾಗುತ್ತದೆ. ಮಾನ್ಯ ಮಂತ್ರಿಗಳು ಇದಕ್ಕೆ ಗಮನ ಕೊಡಬೇಕು. ನೇರವಾದ ಆಡಳಿತದಲ್ಲಿ ಅವರು ನಂಬಿಕೆ ಇಟ್ಟರೆ ಒಳ್ಳೆಯದಲ್ಲ, ಆದಾಗುವುದಿಲ್ಲ. ಯಾವ ಯಾವ ಸಂಸ್ಥೆ ಯಾವ ಕಾರ್ಯ ಮಾಡಬೇಕೋ ಆ ಸಂಸ್ಥೆ ಆ ಕಾರ್ಯ ಮಾಡುವಂತೆ, ಆ ಕಾರ್ಯ ಮಾಡುವುದಕ್ಕೆ ಬೇಕಾದ ಸಲಕರಣೆಗಳನ್ನು, ಪ್ರೋತ್ಸಾಹವನ್ನು ಕೊಟ್ಟು ಮಾರ್ಗವನ್ನು ತೋರಿಸಬೇಕಾದ್ದು ಸರ್ಕಾರದ ಕರ್ತವ್ಯವೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪುರಸಭೆಗಳ ವಿಚಾರದಲ್ಲಿ ಇಷ್ಟು ಹೇಳಿದರೆ ಸಾಕು.

(ಶ್ರೀ ಕೆ. ಪುಟ್ಟಸ್ವಾಮಿ)

ಈ ಹೊತ್ತಿನ ಬೇಡಿಕೆಯಲ್ಲಿ ಹೌಸಿಂಗ್ ಬೋರ್ಡ್ ವಿಚಾರ ಕೂಡ ಇವೆ. ಹೌಸಿಂಗ್ ಬೋರ್ಡ್ ವಿಚಾರವನ್ನು ಸ್ವಲ್ಪ ಚರ್ಚೆ ಮಾಡುವುದು ಅತ್ಯಂತ ಅಗತ್ಯವೆಂದು ನನಗನ್ನಿಸುತ್ತದೆ. ನನಗೆ ತಿಳಿದಿರುವಂತೆ ಈ ಸಭೆಯಲ್ಲಿ ಹೌಸಿಂಗ್ ಬೋರ್ಡ್ ಬಗ್ಗೆ ಚರ್ಚೆ ಯಾವತ್ತೂ ಕೂಡ ಅಷ್ಟು ಹೆಚ್ಚಾಗಿ ಆಗಿಲ್ಲ. ನಾನು ಸಚಿವನಾಗಿದ್ದಾಗ ಕೆಲವು ಕಾಲ ಹೌಸಿಂಗ್ ಬೋರ್ಡ್ ನನ್ನ ಅಧೀನದಲ್ಲಿತ್ತು. ಈಗ ಅದಕ್ಕೆ ಹೆಚ್ಚು ಪ್ರಾಮುಖ್ಯತೆ ಬಂದಿದೆ. ಈ ಸಭೆ ಆ ವಿಚಾರದಲ್ಲಿ ಚರ್ಚೆಮಾಡಿ ಅದರ ಸೌಲಭ್ಯಗಳು ಜನರಿಗೆ ಹೆಚ್ಚುವಂತೆ ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದು ಅಗತ್ಯ. ಈಗ ಈ ಹೌಸಿಂಗ್‌ಬೋರ್ಡಿನಲ್ಲಿ ಆಗಿರತಕ್ಕ ಪರಿಸ್ಥಿತಿಯನ್ನು ನನಗೆ ತಿಳಿದಿರತಕ್ಕ ಪರಿಸ್ಥಿತಿಯನ್ನು ಹೇಳುವುದಕ್ಕೆ ನನಗೆ ಬಹಳ ನೋವಾಗುತ್ತದೆ. ಮಾನ್ಯ ಮಂತ್ರಿಗಳು ಆ ಪರಿಸ್ಥಿತಿ ಇಲ್ಲ, ನಾವು ತಿಳಿದುಕೊಂಡಿರುವುದು ತಪ್ಪು, ನಮಗೆ ಬಂದಿರತಕ್ಕ ವರದಿ ಸರಿಯಾದುದಲ್ಲ ಎಂದರೆ ಬಹುಶಃ ನನ್ನಷ್ಟು ಸಂತೋಷ ಪಡುವವರು ಯಾರೂ ಇಲ್ಲ ಎಂದು ಹೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಹೌಸಿಂಗ್ ಬೋರ್ಡಿನಲ್ಲಿ 13 ಜನ ಸದಸ್ಯರಿದ್ದಾರೆ. ಅವರೆಲ್ಲರೂ ಸರ್ಕಾರದಿಂದ ನೇಮಕ ಮಾಡಲ್ಪಟ್ಟ ಸದಸ್ಯರು. 13 ಜನರಲ್ಲಿ 5 ಜನ ಅಧಿಕಾರಿ ಸದಸ್ಯರಿದ್ದಾರೆ. ಹೌಸಿಂಗ್ ಬೋರ್ಡ್ ಆಕ್ಟ್ ಪ್ರಕಾರ ಎಂಟು ಜನ ಸದಸ್ಯರಿದ್ದ ಹೊರತು ಅದು ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗುವುದಿಲ್ಲ. ಹೌಸಿಂಗ್ ಬೋರ್ಡಿನಲ್ಲಿರುವ ಜವಾಬ್ದಾರಿ ಸಾಮಾನ್ಯವಾದುದಲ್ಲ. ಅದು ಬಹಳ ದೊಡ್ಡ ಜವಾಬ್ದಾರಿ. ಎಲ್ಲರಿಗೂ ಕೂಡ ಮನೆ ಹೊಂದಬೇಕು ಎನ್ನುವ ಆಸೆ ಇದೆ. ಸರ್ವಜ್ಞ ಹೇಳಿರುವಂತೆ ಬೆಚ್ಚನೆಯ ಮನೆಯನ್ನು ಪಡೆದುಕೊಳ್ಳುವುದಕ್ಕೆ ಎಲ್ಲರೂ ಕಾತರರಾಗಿರುತ್ತಾರೆ. ಪೋಲೀಸ್ ಇಲಾಖೆ ವಿಚಾರದಲ್ಲಿ ಈ ಸಭೆಯಲ್ಲಿ ಎಷ್ಟು ಗಮನ ಕೊಡುತ್ತೇವೆಯೋ ಅದರಲ್ಲಿ ಹತ್ತನೇ ಒಂದು ಭಾಗ ಜನೋಪಯುಕ್ತ ಸಂಸ್ಥೆಗಳ ವಿಚಾರದಲ್ಲಿ ಗಮನಕೊಟ್ಟರೆ ಜನರಿಗೆ ಹೆಚ್ಚಿನ ಸೌಲಭ್ಯ ದೊರಕಬಹುದು ಎನ್ನುವ ಆಸೆ ನನಗೆ ಇದೆ. ಹೌಸಿಂಗ್ ಬೋರ್ಡ್ ಸಭೆಗಳಲ್ಲಿ ಎಂಟು ಜನ ಸದಸ್ಯರು ಹಾಜರಿರಬೇಕು. ಅಲ್ಲಿರುವ ಸದಸ್ಯರಲ್ಲಿ ಮೂರು ಜನ ಅಧಿಕಾರಿ ಸದಸ್ಯರು ರಾಜಿನಾಮೆ ಕೊಟ್ಟಿದ್ದಾರೆಂದೂ, ಅದು ಇನ್ನೂ ಒಪ್ಪಿಗೆಯಾಗಿಲ್ಲವೆಂದೂ ಕೇಳಿದ್ದೇನೆ. ಖಾಸಗಿ ಸದಸ್ಯರು ರಾಜಿನಾಮೆ ಕೊಟ್ಟಿದ್ದರೆ ಖಾಸಗಿ ಕಾರಣಗಳಿಗಾಗಿ ರಾಜಿನಾಮೆ ಕೊಟ್ಟರು ಎಂದು ಹೇಳಬಹುದು. ಆದರೆ ಅಧಿಕಾರಿ ಸದಸ್ಯರು ರಾಜಿನಾಮೆ ಕೊಡುವುದರಲ್ಲಿ ಇರತಕ್ಕ ರಹಸ್ಯವೇನು ? ಇದನ್ನು ಸಭೆ ತಿಳಿದುಕೊಳ್ಳುವುದಕ್ಕೆ ಕಾತುರವಾಗಿದೆ. ಏಕೆ ಅವರು ರಾಜಿನಾಮೆ ಕೊಡ ಬೇಕಾಯಿತು, ಅವರು ಇನ್ನು ಯಾವುದಾದರೂ ಒಂದು ಕಾರಣಕ್ಕಾಗಿ ಬಿಟ್ಟರೇ ? ಅವರು ರಾಜಿನಾಮೆ ಯಾವತ್ತು ಕೊಟ್ಟರೋ ಆ ಹೊತ್ತೆ ರಾಜಿನಾಮೆಯನ್ನು ಒಪ್ಪಿಕೊಂಡು ಅವರಿಗೆ ಬದಲು ಸದಸ್ಯರನ್ನು ನೇಮಕ ಮಾಡುವುದಕ್ಕೆ ಸಾಧ್ಯವಿರಲಿಲ್ಲವೇ ? ಡೈರೆಕ್ಟರ್ ಆಫ್ ಟೌನ್ ಪ್ಲಾನಿಂಗ್, ಚೀಫ್ ಇಂಜಿನಿಯರ್ ಸಿ. ಅಂಡ್ ಬಿ., ಡೈರೆಕ್ಟರ್ ಆಫ್ ಇಂಡಸ್ಟ್ರೀಸ್, ಮೂರು ಜನ ರಾಜಿನಾಮೆ ಕೊಟ್ಟಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಮಂಡಲಿಯ ಅಧ್ಯಕ್ಷರು ಮತ್ತು ಲೇಬರ್ ಕಮಿಷನರ್ ಸಭೆಗಳಿಗೆ ಹೋಗುತ್ತಿಲ್ಲ. 13 ಜನ ಸದಸ್ಯರಿರುವ ಕಡೆ ಇವರು ಐದು ಜನ ಹೋಗಲಿಲ್ಲ ಎಂದರೆ 8 ಜನ ಉಳಿದರು. ಒಬ್ಬರು ಖಾಸಗಿ ಸದಸ್ಯರು ರಾಜಿನಾಮೆ ಕೊಟ್ಟಿದ್ದಾರೆ. 7 ಜನ ಆಯಿತು ಎಂದರೆ ಆ ಸಂಸ್ಥೆ ತನ್ನ ಕಾರ್ಯವನ್ನು ಮಾಡುವುದಕ್ಕಾಗುವುದಿಲ್ಲ. ಅದನ್ನು ಮಾಡಬಾರದು. ಆ ಸಂಸ್ಥೆ ಬೇಕಾಗಿಲ್ಲ, ಅದನ್ನು ನಾವೇ ಬೇರೆ ರೀತಿಯಲ್ಲಿ ಮಾಡಬಹುದು ಎನ್ನುವುದಕ್ಕೆ ಸರ್ಕಾರಕ್ಕೆ ಸ್ವಾತಂತ್ರ್ಯವಿದೆ. ಅದಕ್ಕೆ ಹೌಸಿಂಗ್ ಬೋರ್ಡ್ ಆಕ್ಟ್‌ನಲ್ಲಿ ಅವಕಾಶವಿದೆ. ಆ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ಡಿಸೊಲ್ಯೂಷನ್ ಆಫ್ ದಿ ಬೋರ್ಡ್ ಸಹ ಮಾಡಬಹುದು. ರದ್ದು ಮಾಡಬೇಕಾದರೆ ಈ ಸಭೆಯ ಮುಂದೆ ಬರಬೇಕಾಗುತ್ತದೆ, ಸರ್ಕಾರದವರೇ ಮಾಡುವುದಕ್ಕಾಗುವುದಿಲ್ಲ. ಪ್ರಬಲವಾದ ಕಾರಣಗಳಿಲ್ಲದೆ ಇದ್ದರೆ ರದ್ದು ಮಾಡುವುದಕ್ಕಾಗುವುದಿಲ್ಲ, ಸೂಪರ್‌ಸೆಷನ್ ಮಾಡುವುದಕ್ಕೆ ಅವಕಾಶವಿದೆ. ಸೂಪರ್‌ಸೆಷನ್ ಮಾಡಬೇಕಾದರೆ ಕಾನೂನಿದೆ, ರೂಲ್ಸ್ ಇದೆ, ಆ ಪ್ರಕಾರ ಮಾಡಬೇಕು. ಮೊದಲನೆಯದಾಗಿ ರೂಲ್ ಮೇಕಿಂಗ್ ಪವರ್‌ನಲ್ಲಿ ಈ ಒಂದು ಸಂಸ್ಥೆಯನ್ನು ಸೂಪರ್‌ಸೀಡ್ ಮಾಡಬೇಕಾದರೆ ರೂಲ್ಸ್ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಅಂಥ ರೂಲ್ಸ್ ಏನಾದರೂ ಮಾಡಿದ್ದಾರೆಯೇ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಈ ಪುಸ್ತಕದಲ್ಲಿರುವ ರೂಲ್ಸನಲ್ಲಿ ಆ ವಿಚಾರವಿಲ್ಲ. ಇನ್ನೇನಾದರೂ ರೂಲ್ಸ್ ಇದ್ದರೆ ಇರಬಹುದು. ರೂಲ್ಸ್ ಫಾರ್ ಸೂಪರ್ ಸೆಷನ್ ಎಂದು ಮಾಡಬೇಕು. ನನ್ನ ಅನುಭವದಲ್ಲಿ ಹೇಳುವುದಾದರೆ, ಆಕ್ಟ್ ಮಾಡುವಾಗ ಎಷ್ಟು ಸುಲಭವಾಗಿ ನಾವು ಮಾಡುತ್ತೇವೆ ರೂಲ್ ಮೇಕಿಂಗ್ ಪವರ್ ಸರ್ಕಾರಕ್ಕೆ ಬಿಟ್ಟು ಕೊಡುತ್ತೇವೆ. ಆದರೆ ಒಂದು ರೂಲ್ಸ್ ಸಹ ಮಾಡುವುದಿಲ್ಲ. ಅನಿವಾರ್ಯ ಬಂದಾಗ ಮಾತ್ರ ರೂಲ್ಸ್ ಮಾಡಿಕೊಳ್ಳುತ್ತೇವೆ. ಈಗ ಸೂಪರ್‌ಸೀಡ್ ಮಾಡಬೇಕಾದರೆ ಮೊದಲು ರೂಲ್ಸ್ ಮಾಡಿ

ಕೊಂಡಿಲ್ಲ ಎಂದು ನಾನು ಹೇಳುತ್ತೇನೆ. ಒಂದು ವೇಳೆ ರೂಲ್ ಇದ್ದರೂ ಕೂಡ, ಸೂಪರ್‌ಸೀಡ್ ಮಾಡಬೇಕಾದರೆ ಕಾರಣವೇನಿದೆ ? ಅಧಿಕಾರಿಗಳು ಐದು ಜನರಿದ್ದಾರೆ ಮತ್ತೆ ಖಾಸಗಿ ಸದಸ್ಯರು ಸನ್ಮಾನ್ಯರಾದವರು ಎಂಟು ಜನರಿದ್ದಾರೆ. ಸೂಪರ್‌ಸೀಡ್ ಮಾಡುವುದಕ್ಕೆ ಗಹನವಾದ ತಪ್ಪು ಮಾಡಿದ್ದರೆ ಸೂಪರ್‌ಸೀಡ್ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಿ. ಆದರೆ ನನಗೆ ತಿಳಿದಮಟ್ಟಿಗೆ ಇಂದು ಅದಕ್ಕೆ ಕೊಟ್ಟಿರತಕ್ಕ ಸೂಪರ್‌ಸೆಷನ್ ನೋಟೀಸ್ ನೋಡಿದರೆ ಮಸೀದಿಯನ್ನು ಮೇಲೆ ಕೆಡವಿಕೊಂಡಂತೆ, ಮರ ಕಡಿದು ಮೇಲೆ ಕೆಡವಿಕೊಂಡ ಹಾಗೆ ಆಗಿದೆ. ಸೂಪರ್‌ಸೀಡ್ ಮಾಡುವುದಕ್ಕೆ ಅಧಿಕಾರವಿಲ್ಲ ಎಂದು ನಾನು ಹೇಳುತ್ತಿಲ್ಲ. ಅಧಿಕಾರ ಚಲಾಯಿಸುವುದಕ್ಕೂ ಮಾರ್ಗವಿದೆ. ನಮ್ಮಲ್ಲಿ ಹರಿತವಾದ ಕತ್ತಿ ಇಟ್ಟುಕೊಂಡಿರುತ್ತೇವೆ. ಆದರೆ ಬಳಸಬೇಕಾದರೆ ಯಾವುದಕ್ಕೆ ಬಳಸಬೇಕು ಎನ್ನುವುದನ್ನು ಸ್ವಲ್ಪ ತಿಳಿದುಕೊಳ್ಳಬೇಕು. ನಾನು ಒಂದು ಪ್ರಶ್ನೆ ಕೇಳಿದಾಗ ಸಾರ್ವಜನಿಕ ಹಿತದೃಷ್ಟಿಯಿಂದ ಕೊಡುವುದಕಾಗುವುದಿಲ್ಲವೆಂದು ಹೇಳಿದರು. ಹೇಗೋ ಏನೋ ನೋಟೀಸ್ ಕಾಪಿ ನನ್ನ ಕೈಗೆ ಬಿದ್ದಿದೆ. ಅದರ ಮೂಲ ಕೇಳುವುದಕ್ಕೆ ಅವಕಾಶವಿಲ್ಲ. ಇದು ಅನೇಕ ಸದಸ್ಯರ ಕೈಯಲ್ಲಿದೆ ಎಂದು ನಾನು ತಿಳಿದಿದ್ದೇನೆ. ಅದನ್ನು ಪ್ರಯತ್ನಮಾಡಿ ಪಡೆದದ್ದಲ್ಲ.

ನನ್ನ ಇಂಟರ್‌ಪೆಲೇಷನ್ ಅವರಿಗೆ ಉತ್ತರ ಕೊಡುವುದಕ್ಕೆ ಸರಿಯಾಗಿ ಗೊತ್ತಾಗಲಿಲ್ಲ ಎಂದು ತೋರುತ್ತದೆ.

Section 86(1) says :

> "If the State Government is satisfied that the Board has made a default in performing any duty imposed upon it by or under this Act, it may fix a period for the performance of that duty."

Government is entitled to do it. For every good reasons if the Government tries to exercise its power under Section 86, I shall be very happy and I welcome it.

ಅವರೇ ಇದರಲ್ಲಿ ಏನು ಮಾಡಿದ್ದಾರೆ ? ಸೆಕ್ಷನ್ 66ರಲ್ಲಿ ಈ ರೀತಿ ಇದೆ :—

Under Sub-section (1) of Section 66 of the Mysore Housing Board Act, the Government of Myosre can give the Mysore Housing Board further time and fix a further period of 15 days to comply with the directions Government has issued orally at the time of inspection. I want to ask, what are those instructions ? Are those instructions of such a nature that they cannot be reduced to writing. I hope this is the correct document. If this document is wrong, I am prepared to make any amends ; I will express my regret for quoting a wrong document. It is submitted that the oral instructions have not been confirmed so far. It is also submitted that these oral instructions have been carried out. Now, oral instructions have been issued ; they have been confirmed and they have been carried out. This House is entitled to demand what are those oral instructions. There is a circular in the Governmnnt Secretariat making it obligatory on the part of any Minister to issue and confirm oral instructions. I would further ask, how is the Housing Board entitled to implement those oral instructions, w en they have not been confirmed. This requires a very detailed clari ation and the duty is very heavily cast on the Minister to convince this House. I am taking much time of this House ; yet I am conscious I am not doing justice to the subject which I am dealing with. Very recently i.e. on 20-3-73 Government have issued a letter to the Housing Board and they have asked the Board to send recommendations for amending the regulation. They are entitled to do so. In this letter

(ಶ್ರೀ ಕೆ. ಪುಟ್ಟಸ್ವಾಮಿ)

the Government have stated." The Houses constructed under the low income group housing scheme should be allotted as per the policy of the Government that no two persons belonging to a caste should be allotted the houses side by side." I would very much advise the Government not to be too much conscious of this caste.

ಇದೇನು ಮಂತ್ರದಲ್ಲಿ ಮಾವಿನಕಾಯಿ ಉದುರಿಸಿದಂತೆ ಆಗುತ್ತದೆಯೋ ? 5 per cent of the houses should be allotted to the nomadic, semi-nomadic and de-notified tribes.

ಇದರಲ್ಲಿ ಎಷ್ಟು ಜನ ತಮ್ಮ ಜಾತಿ, ಕುಲ, ಗೋತ್ರ ಇವುಗಳನ್ನು ಹೇಳುತ್ತಿದ್ದಾರೇ ? ಎಷ್ಟೋ ಜನ ಅವರ ಜಾತಿ ಪಂಗಡಗಳನ್ನೇ ಹೇಳುವುದಿಲ್ಲ. ಅರ್ಜಿಗಳನ್ನು ಹಾಕುವಾಗ ಅದರಲ್ಲಿ ಕೆಲವರು 'ಹಿಂದೂ' ಇಲ್ಲವೇ 'ಮುಸ್ಲಿಂ' ಎಂದು ಬರೆಯುತ್ತಾರೆ. ನಿಮ್ಮ ಮನಸ್ಸಿನಲ್ಲಿ ಏನಿತ್ತೋ ಅದು ಈಗ ಹೊರಕ್ಕೆ ಬಂತು. ನಿಮ್ಮ ರಾ ಏನಿದೆ ? ಮತ್ತು ಯಾವ ಕಾನೂನಿನೊಳಗೆ ಜಾತಿಗಳನ್ನು ಹೇಳಬೇಕು ಎಂದು ಕಡ್ಡಾಯ ಮಾಡಿದ್ದೀರಿ ? ಕಾನೂನು ಯಾವುದೂ ಇಲ್ಲದೇ ಇರುವಾಗ ನಾನು 'ಇಂಡಿಯನ್' ಎಂದು ಬರೆಯುತ್ತೇನೆ. ಹಿಂದು ಎಂದೂ ಕೂಡ ಬರೆಯುವುದಿಲ್ಲ. ಜಾತಿ ಪಂಗಡಗಳನ್ನು ನಿರ್ಮೂಲ ಮಾಡಬೇಕು ಎನ್ನುವುದನ್ನು ಒಪ್ಪಬಹುದು ? 7 per cent for minorities such as Muslims, Jains and Christians. ಇದು ಸಾಕಷ್ಟು ನಮ್ಮ ದೇಶಕ್ಕೆ ಹಾನಿಮಾಡಿದೆ. ಈ ರೀತಿ ಇರುವ ಕಾಲದಲ್ಲಿ ಇದನ್ನು ಅನೂರ್ಜಿತ ಮಾಡಲು ಯಾವ ಹೊಸ ನೀತಿಯನ್ನು ಅಲಾಟುಮೆಂಟು ಮಾಡುವಾಗ ಅನುಸರಿಸಬೇಕೆಂದಿದ್ದೀರಿ ?

Sri B. BASAVALINGAPPA.—Sir, I am glad Sri Puttaswamy has raised this issue. It is one thing to preach and another thing to practice. We have been practising the caste system without mentioning it all these days, though we openly say we do not observe the caste system. All these 25 years after independence we have seen the working of the administration but the question is, how we have practised it and how we have reacted to it. We are wedded to eradicate this caste system in the country but the question is whether we have taken any steps to distribute justice.

ಇದರಲ್ಲಿ ಡಿನೋಟಿಫೈಡ್ ಟ್ರೈಬ್ಸ್ ಹಾಗೂ ಷೆಡ್ಯೂಲು ಕ್ಯಾಸ್ಟಿನವರಿಗೆ ಹಾಗೂ ಇತರರಿಗೆ ಸರ್ಟಿಫಿಕೇಟು ಕೊಡಬೇಕೆಂದು ನಮ್ಮಲ್ಲಿ ಬರುತ್ತಾರೆ. ಕೆಲವರು ನಮ್ಮನ್ನು ಬೆಸ್ತರು ಎಂದು ಬರೆದು ಕೊಡಿ ಎನ್ನುತ್ತಾರೆ ಗೊಲ್ಲರ್ ಎಂದು ಬರೆದುಕೊಡಿ ಎನ್ನುತ್ತಾರೆ. ಡೀನೋಟಿಫೈಡು ಎಂದು ಇರುವುದರಲ್ಲಿ ಇವರನ್ನೂ ಏಕೆ ಸೇರಿಸಬಾರದು ? ಇದರಲ್ಲಿ ಯಾವ ರೀತಿ ದುರುಪಯೋಗವಾಗುತ್ತದೆ ? ಶೇಕಡಾ ಐದರಷ್ಟು ಯಾವ ರೀತಿ ಹಂಚಿಕೆಮಾಡುತ್ತೀರಿ ? ಇದರ ವಿವರಣೆ ಕೊಡಬೇಕು. ಷೆಡ್ಯೂಲು ಕ್ಯಾಸ್ಟ್ಸು, ಟ್ರೈಬ್ಸ್ ಎಂದು ಇರುವಂತೆ ಇನ್ನು ಕೆಲವರು ಮೈನಾರಿಟಿ ಪಂಗಡಗಳವೆ, ಇವರು ಶೇಕಡ ಏಳರಷ್ಟು ಇರಬಹುದು. ಇವರಲ್ಲಿ ಜೈನರು, ಕ್ರಿಶ್ಚಿಯನ್ನರು ಹಾಗೂ ಇತರ ಮೈನಾರಿಟಿ ಪಂಗಡಗಳವರಿಗೆ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಕೇಳುತ್ತಿದ್ದಾರೆ ? ಮುಸ್ಲಿಂಸ್ ಹಾಗೂ ಕ್ರಿಶ್ಚಿಯನ್‌ಗಳು ಎನ್ನುವವರಿಗೆ ವಿನಾಯತಿ ಕೊಡಬೇಕೆಂದು ಮಾಡುವಾಗ ಇದರಲ್ಲಿ ಯಾವ ರೀತಿ ಡಿಸ್‌ಕ್ರಿಮಿನೇಷನ್ ಮಾಡುತ್ತೀರಿ ? For example, take the Muslims, the Christians, the Parsees and other minorities. Have we given them ? How many are given ! We have constructed thousands of houses but how many of them are allotted to the Muslims, to the Scheduled Castes and to those who have been pushed to the wall ? Taking into consideration all these things which we have done for the last 25 years, I have issued orders fixing priority. What is wrong in doing so ?

ಶ್ರೀ ಕೆ. ಪುಟ್ಟಸ್ವಾಮಿ.—ತಾವು ತಪ್ಪು ಎಂದು ಒಪ್ಪಿಕೊಳ್ಳುತ್ತೀರಿ ಎಂಬ ಒಂದು ಆಶೆಯಿಂದ ನಾನು ಇದನ್ನು ಹೇಳುತ್ತಿಲ್ಲ. ನೀವು ಮಾಡುತ್ತಿರುವುದನ್ನು ಸಾಬೀತು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಇದುವರೆಗೆ ಹಂಚಿಕೆ ಮಾಡಿರುವ ಮನೆಗಳು ಏನಿವೆ, ಅವುಗಳ ಪೈಕಿ ಮುಸ್ಲೀಮರಿಗೆ ಎಷ್ಟು ಕೊಟ್ಟಿದ್ದೀರಿ, ಕ್ರಿಶ್ಚಿಯನ್ನರಿಗೆ ಎಷ್ಟು ಕೊಟ್ಟಿದ್ದೀರಿ, ಇತರೇ ಬೇರೆ ಬೇರೆ ಪಂಗಡಗಳವರಿಗೆ ಎಷ್ಟೆಷ್ಟು ಕೊಟ್ಟಿದ್ದೀರಿ ಅದನ್ನು ಡಾಟಾ ಮೇಲೆ ಮಾಡಿದ್ದೀರಾ? ಅಥವಾ ನಿಮ್ಮ ಮನಸ್ಸಿನಲ್ಲಿ ಏನೋ ಇದೆ ಎಂದು ಮಾಡಿದ್ದೀರಾ ?

SRI B. BASAVALINGAPPA.—Please put a question and I will answer.

ಶ್ರೀ ಕೆ. ಪುಟ್ಟಸ್ವಾಮಿ.—ಈ ಒಂದು ಮೈನಾರಿಟಿ ಕೋಮುಗಳಾದ ಮುಸ್ಲಿಮರು, ಕ್ರಿಶ್ಚಿಯನರು, ಜೈನರು ಮುಂತಾದ ಪಂಗಡಗಳವರಿಗೆ ರಾಜ್ಯಾಂಗದಲ್ಲಿ ಕೊಡದಿರುವ ರಿಜರ್‌ವೇಷನ್‌ಗಳನ್ನು ನೀವು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ನಾವು ಯಾವುದೇ ನಗರಕ್ಕೆ ಹೋದರೂ ಬ್ರಾಹ್ಮಣರ ಕೇರಿ, ಲಿಂಗಾಯಿತರ ಕೇರಿ, ಮುಸ್ಲಿಮರ ಕೇರಿ, ಕ್ರಿಶ್ಚಿಯನರ ಕೇರಿ ಎಂಬುದಾಗಿ ಇರುತ್ತವೆ. ಜಾತೀಯತೆ ಹೋಗಬೇಕೆಂದು ನಾವೆಲ್ಲರೂ ಹೇಳುತ್ತಿರುವಾಗ, ಮತ್ತು ಆ ಬಗ್ಗೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡು ಎಲ್ಲ ಜಾತಿಯವರು ಒಂದೇ ಕಡೆ ವಾಸ ಮಾಡುವ ದೃಷ್ಟಿಯಿಂದ ಒಂದು ಕಾರ್ಯಕ್ರಮ ಹಾಕಿಕೊಳ್ಳುವುದಾದರೆ ಅದಕ್ಕೆ ಯಾವ ರೂಪದ ಕಾರ್ಯಕ್ರಮ ಇರಬೇಕೆಂದು ಮಾನ್ಯ ಪುಟ್ಟಸ್ವಾಮಿಯವರು ಹೇಳಿದರೆ ಒಳ್ಳೆಯದು.

ಶ್ರೀ ಕೆ. ಪುಟ್ಟಸ್ವಾಮಿ.—ಆ ಕೇರಿ ಈ ಕೇರಿ ಎಂದು ಹೇಳುವುದು 19ನೇ ಶತಮಾನಕ್ಕೆ ಸೇರಿದ್ದು. ಈಗ ಎಲ್ಲ ಕಡೆಗಳಲ್ಲಿಯೂ ಬಡಾವಣೆಗಳಾಗುತ್ತಿರುವುದರಿಂದ ಯಾವ ಕೇರಿಗಳೂ ಇಲ್ಲ. ಈ ಬಡಾವಣೆಗಳಿಗೆ ಆರ್ಥಿಕ ಮುಗ್ಗಟ್ಟಿನಿಂದ ಬಡವರಿಗೆ ಹೋಗುವುದಕ್ಕೆ ಆಗದಿರಬಹುದು. ಆದರೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುವವರು ಬಡಾವಣೆಗಳಲ್ಲಿ ಮನೆಗಳನ್ನು ತೆಗೆದುಕೊಂಡು ಅಲ್ಲಿಯೇ ಜೀವನ ಮಾಡುತ್ತಿದ್ದಾರೆ. ಆ ಕೇರಿ, ಈ ಕೇರಿ ಎಂಬ ಪ್ರಸ್ತಾಪ ಈಗ ಆಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಒಬ್ಬ ಲಿಂಗಾಯಿತ ಎಷ್ಟೇ ದೊಡ್ಡ ಮನುಷ್ಯನಾಗಿದ್ದರೂ ಸಹ ಅವರ ಜಾತಿಯವರಿರುವ ಕಡೆಯಲ್ಲಿಯೇ ವಾಸ ಮಾಡುವುದಕ್ಕೆ ಇಷ್ಟಪಡುತ್ತಾನೆ. ಇಂದು ಸಹ ಈ ಒಂದು ವಾಸ್ತವಿಕವಾದಂಥ ಪರಿಸ್ಥಿತಿ ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದು ಹಳೆಯ ಊರುಗಳಲ್ಲಿ ಇರಬಹುದು. ಇಂದಿನ ಹೊಸ ಬಡಾವಣೆಗಳಲ್ಲಿ ಆ ರೀತಿ ಇಲ್ಲ.

ಶ್ರೀ ಎಸ್. ಹಮೀದ್ ಷಾ.—ಮುಸ್ಲೀಮ್ ಜನಾಂಗಕ್ಕೆ ಮನೆಗಳನ್ನು ಕೊಟ್ಟಿದ್ದು ತಪ್ಪು ಎಂದು ಮಾನ್ಯ ಸದಸ್ಯರು ಹೇಳುತ್ತಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಹೌಸಿಂಗ್ ಬೋರ್ಡಿನಲ್ಲಿ ಈ ಜನಾಂಗದ ಹಿತ ಕಾಪಾಡಲು 4 ಜನ ಮುಸ್ಲೀಮರನ್ನು, 4 ಜನ ಕ್ರಿಶ್ಚಿಯನರನ್ನು ಹಾಕಲಿ. ಅದಕ್ಕೆ ನನ್ನ ಆಕ್ಷೇಪ ಇಲ್ಲ. ಆದರೆ ಮನೆಗಳನ್ನು ಹಂಚುವಾಗ ಈ ರೀತಿ ಜಾತೀವಾರು ವಿಂಗಡಣೆ ಮಾಡುವ ಅವಶ್ಯಕತೆ ಇಲ್ಲ. ಅವಶ್ಯಕತೆ ಇಲ್ಲದಿರುವ ಕಡೆಗಳಲ್ಲಿ ಕಂಪಾರ್ಟ್‌ಮೆಂಟ್‌ಗಳನ್ನು ಜಾಸ್ತಿ ಮಾಡುತ್ತಿದ್ದೀರಿ. ಇದರಿಂದ ದೇಶದಲ್ಲಿ ಉತ್ತಮವಾದ ಪರಿಸ್ಥಿತಿ ಬರುವುದಿಲ್ಲ. ಮತ್ತು ಕಾನೂನು ಪ್ರಕಾರ ಯಾವುದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೋ ಅದನ್ನು ಮಾಡುವುದಕ್ಕೆ ಹೊರಟಿದ್ದೀರಿ. ಆರ್ಥಿಕ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಆಯಾ ವರ್ಗಗಳವರಿಗೆ ಹಂಚಿಕೆ ಮಾಡುವುದಾದರೆ ಅದಕ್ಕೆ ನಮ್ಮ ಆಕ್ಷೇಪವಿಲ್ಲ. ಅದನ್ನು ಬಿಟ್ಟು ಜಾತಿ, ಗುಂಪು, ಪಂಗಡ, ಮತದ ಮೇಲೆ ಹಂಚಿಕೆ ಮಾಡಿದರೆ ಅದು ಕಾನೂನಿನ ಪ್ರಕಾರ ಸಿಂಧುವಾಗುವುದಿಲ್ಲ. ಆದಕಾರಣ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹರಿಜನರೆಲ್ಲಾ ಒಂದೇ ಕಡೆ ಇರಬೇಕು, ಬೇರೆಯವರ ಜೊತೆಯಲ್ಲಿ ವಾಸ ಮಾಡಬಾರದೆಂದು ತಮ್ಮ ಅಭಿಪ್ರಾಯವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ಜಯಪ್ರಕಾಶ್‌ನಾರಾಯಣ್ ಅವರ ಸಮಾಧಾನಕ್ಕೆ ಒಂದು ವಿಚಾರವನ್ನು ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ. ಕೇರಿಗಳನ್ನು ಸ್ಥಾಪನೆ ಮಾಡಿ ಅಲ್ಲಿ ಒಂದೊಂದು ಜಾತಿಯ ಜನರು ಇರಬೇಕೆಂದರೆ ಅದನ್ನು ನಾನು ಒಪ್ಪುವವನಲ್ಲ. ಒಂದು ಬಡಾವಣೆಯಲ್ಲಿ ಮನೆಗಳನ್ನು ಕಟ್ಟಿಸಿದ ಮೇಲೆ ಅವುಗಳು ಎಲ್ಲ ಜಾತಿಯವರಿಗೆ ಸಿಗಬೇಕು; ಅದಕ್ಕೆ ಸರಿಯಾದ

(ಶ್ರೀ ಕೆ. ಪುಟ್ಟಸ್ವಾಮಿ)

ವ್ಯವಸ್ಥೆ ಮಾಡಬೇಕು ಎಂಬುದನ್ನು ಸಹ ಒಪ್ಪುತ್ತೇನೆ. ಆದರೆ ಆ ಬಗ್ಗೆ ಈ ರೀತಿ ಜಾತೀವಾರು ಹಂಚಿಕೆ ಮಾಡುತ್ತೇವೆಂದು ಕಾನೂನು ಮಾಡಿದರೆ ರಾಜ್ಯಾಂಗದ ಪ್ರಕಾರ ಅದು ಸಿಂಧುವಾಗುವುದಿಲ್ಲ. ಅದಕ್ಕಾಗಿ ಆ ರೀತಿ ಮಾಡಬೇಡಿ ಎಂದು ನಾನು ಹೇಳುತ್ತಿರುವುದು. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಎಷ್ಟು ಪ್ರಗತಿಪರವಾದ ಅಭಿಪ್ರಾಯಗಳನ್ನು ಇಟ್ಟುಕೊಂಡಿದ್ದಾರೋ ಆ ಅಭಿಪ್ರಾಯಗಳಿಗೆ ಕಿಂಚಿತೂ ಕೂಡ ಹಿಂದುಳಿದ ಅಭಿಪ್ರಾಯವನ್ನು ನಾನು ಹೊಂದಿಲ್ಲ. ಮಾನ್ಯ ಸದಸ್ಯರಿಗೆ ನನ್ನ ರಾಜಕೀಯ ಜೀವನ ಇನ್ನೂ ತಿಳಿದಿಲ್ಲ. ಇವೊತ್ತಿಗೂ ಕೂಡ ನಾನು ಕಾರ್ಯ ಮಾಡುತ್ತಿರುವುದು ಕಾರ್ಮಿಕರ ಮತ್ತು ಕೆಳದರ್ಜೆ ಜನರ ಹತ್ತಿರ. ಮೇಲೆ ಕುಳಿತುಕೊಂಡು ಮೇಲ್ದರ್ಜೆ ಜನರ ಹತ್ತಿರ ವ್ಯವಹಾರ ಮಾಡುತ್ತಿಲ್ಲ. ಮತ್ತು ಕೆಳದರ್ಜೆ ಜನರಿಗೆ ಏನು ತೊಂದರೆ ಇದೆ ಎಂಬುದನ್ನು ಕೇಳದಂಥ ಮನುಷ್ಯ ನಾನಲ್ಲ. ಆದರೆ ಇಂತಹ ಕಾನೂನು ಮಾಡುವುದು ಸರಿಯಲ್ಲ. ಇಲ್ಲಿ ಬೈ-ಔಟ್ ರೈಟ್ ಸೇಲ್ ಎಂದು ಮಾಡಿದ್ದೀರಿ.

> "recovering the cash without postponing, by hire purchase, by allotting to scheduled castes, by auctioning corner buildings by selling to middle income group"

ಎಂದು ಮಾಡಿದ್ದೀರಿ. ಇದು ಯಾವ ಕಾರಣಕ್ಕಾಗಿ ! ಮಧ್ಯಮವರ್ಗದ ಜನರಿಗೆ ಮನೆಗಳನ್ನು ಹರಾಜ್ ಮೂಲಕ ವಿತರಣೆ ಮಾಡಿ ಅದರಿಂದ ಬಂದಂಥ ಹಣವನ್ನು ಬೇರೆ ಕಡೆ ಮತ್ತೆ ಇನ್‌ವೆಸ್ಟ್ ಮಾಡುತ್ತೇವೆಂದು ಹೇಳಿದ್ದೀರಿ. ಇಂದು ನಾವು ಹೌಸಿಂಗ್ ಬೋರ್ಡನ್ನು ಯಾವ ಕಾರಣಕ್ಕಾಗಿ ಸ್ಥಾಪನೆ ಮಾಡಿದ್ದೇವೆಂಬುದನ್ನು ನೋಡಬೇಕಾಗಿದೆ. ಮಧ್ಯಮ ವರ್ಗದ ಜನರಿಗೆ ಮನೆಗಳನ್ನು ಹರಾಜ್ ಮೂಲಕ ವಿತರಣೆ ಮಾಡುವುದು ಸರಿಯಲ್ಲ. ಏಕೆಂದರೆ ಅವರೇನೂ ಶ್ರೀಮಂತ ವರ್ಗವಲ್ಲ. ಇನ್ನೊಬ್ಬರಿಗೆ ಸಬ್ಸಿಡೈಸ್ ಮಾಡುವ ಶಕ್ತಿ ಅವರಿಗೆ ಇರುವುದಿಲ್ಲ. ಅವರ ಅವಶ್ಯಕತೆಗೆ ಒಂದು ಮನೆಯನ್ನು ಕೊಂಡುಕೊಳ್ಳುವುದೂ ಸಹ ಕಷ್ಟವಾಗಿರುತ್ತದೆ. ಅಂಥಾದ್ದರಲ್ಲಿ ಇವರುಗಳಿಗೆ ಮನೆಗಳನ್ನು ಹರಾಜ್ ಮೂಲಕ ಈ ವಿತರಣೆ ಮಾಡಿ ಅದರಿಂದ ಬಂದಂಥ ಹಣದಿಂದ ಇನ್ನೂ ಹತ್ತು ಮನೆಗಳನ್ನು ಕಟ್ಟುವುದಕ್ಕೆ ಹೋಗಬೇಡಿ. ವಲ್ನರಬಲ್ ಸೆಕ್ಷನ್‌ಗೆ ಈ ಮೂಲಕ ಸಬ್ಸಿಡೈಜ್ ಮಾಡುವುದು ಸರಿಯಲ್ಲ. ಸಬ್ಸಿಡೈಜ್ ಮಾಡುವುದಕ್ಕೆ ಸರ್ಕಾರದ ಖಜಾನೆ ಇದೆ. ಅದರಿಂದ ಮಾಡಿಯೆಂದು ಹೇಳುತ್ತಾ ಈ ವಿಚಾರವನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲನೆ ಮಾಡಿ ನಾನು ಹೇಳಿದ್ದರಲ್ಲಿ ಒಳ್ಳೆಯದಿದ್ದರೆ ಒಪ್ಪಿಕೊಳ್ಳಿ ; ಒಳ್ಳೆಯದಿಲ್ಲವಿದ್ದರೆ ಒಪ್ಪಿಕೊಳ್ಳಬೇಡಿ.

5-00 P. M.

† SRI B. B. SAYANAK (Belgaum).—Mr. Deputy Speaker Sir, I rise to oppose the demands put forth by the Hon. Minister for Municipal Administration. When Britishers were ruling India the then Viceroy Lord Ripan had brought this Municipalities Act and they gave so many rights to the Municipal Councillors. But after independence, according to the Mysore Municipal Act 1964 the Municipal Councillors have no powers at all. Take for example, Belgaum City Municipality. Though the Budget of this Municipality is more than one crore the Municipal Councillors have powers only to sanction a sum of Rs. 50,000 and beyond that they have no powers. They even have no right to appoint the Chief Officer, the Health Officer and other officers they have only a right to appoint the Class IV servants. I request the Government to amend the Mysore Municipal Act 1969 suitably and bring it on par with that of the Maharashtra Municipal Act wherein they have given so many rights to the Municipal Councillors.

In Belgaum City the rate of wtter was fifty four rupees previously and now the Government has increased it to Rs. 72 and no water meters are fixed there. I have been insisting upon the Government since last year to take initiative and order to fix water meters in Belgaum City. But no action has been taken yet by the Government.

There are no good roads in Belgaum. There is the Town Planning authority. Though several buildings are being constructed adjascent to the roads the Town Planning Authority has not taken any action against the owners of such buildings. There is a big hotel in Belgaum which is constructed in front of Bus Stand. But neither the Town Planning Authority nor the Municipal authorities have taken cognizance of this building. There is a new area also coming up in Belgaum City, But the Town Planning Authority has completely neglected to do justice to the people of Belgaum. There is malmaruti scheme and also Angolmal extension scheme coming up. But proper attention for all these areas is not being given by the Town Planning Authority.

In Belgaum there are 14 dispensaries. In all these dispensaries there are only Ayurvedic Doctors and not a single MBBS Doctor is appointed there, though Belgaum is a big city consisting of a population of more than two lakhs of people. The villages *viz.*, the Angol, Vadgaon and Mazgaon which were merged recently. Previously the dispensaries were functioning there both in the morning and evening, but now the dispensary is working only during evening times which has caused great hardship to the people there. There is no dispensary at June-Belgaum which was also recently merged in Belgaum City.

Then with regard to fixing of tubelights, I am Sorry to mention that they are being fixed only in front of the houses of Municipal Councillors I want to know in what way they are superior to other citizens ? Why this discrimination ? The Hon. Minister has visited Belgaum several times, but has he visited at least one lane there ?

Then there is a huge slum area. I would request the Government to eradicate the slums. I would also request the Hon. Minister to visit Madras State which is trying its level best to eradicate these slums. Then there are the areas where Muslims and Harijans live. These are the dirtiest areas. Why not the Government think of cleaning those areas ? Why should you not give some sites to these Harijans and Muslims under the malamaruti extension scheme ?

Recently Angol, Mazgaon, Vadgaon and June-Belgaum have been merged in Belgaum City. But no public latrine is constructed there. There are very few playgrounds in Belgaum City. Last year the Hon. Minister promised that he would not give any site to any person for construction of any building. But I am sorry to state that you have given 10 guntas of land in Subhash Maidan in Talakwadi to Vishwa Bharath Society for construction of a school building, Is it good on your part ? This is the only ground available for boys to play. The Government should cancel this order.

(SRI B. B. SAYANAK)

There is a drainage scheme which was started six years ago but so far you have not acquired land for allowing the waste water to flow.

Regarding Octroi levy I may mention that in Tamil Nadu there is no octroi levy there and when Mr. Ramakrishna Hegde was the Finance Minister he stated in his budget speech that he will abolish it and the persons who are now ruling the State were then agitating for its abolition. I want to know why this Government has not taken initiative to abolish it ? Even in Maharashtra it has been abolished.

There is no uniform policy in respect of appointment of Administrators or conducting the elections or extending the term of the Municipalities. The Government have appointed Administrators for 103 Municipalities in the State. Of course, municipal councils may commit mistakes. Sardar Vallabhai Patel and Sri Rajagopalaehri were the products of these municipalities. They were big leaders of India. A person will become perfect only after commiting a mistake. When such is the case, why the Government should take away the rights of the municipal councils who commit mistakes. Justice will be done to the people when elected representatives are there. Government, conducted elections to five or six municipalities. But what is the fate of Haliyal Municipality ? Government thinking that their party will get a chance because the M.L.A. of Haliyal is a congressman, conducted elections to this municipality. But the Congress party was routed and therefore the Government have passed a resolution that they are not going to conduct elections.

In Belgaum the municipal councillors have passed a Resolution that there is drought in some parts of the District. The resolution is not unanimous ; it is 18 verses 14. The Government Notification says that wards have not been finalised and therefore elections could not be conducted. Government also say that the administration of the municipality is good. I want to bring to the notice of the Government that the present President of Belgaum Municipality was in minority for two years and he was not conducting any meetings. There was a letter from the Divisional Commissioner to the President of the Municipality that not a single meeting was conducted. Even if a municipal meeting had to be conducted, the President used to conduct the meeting with the help of the Police. Is this good administration I ask the Hon'ble Minister ? When the term of the Municipality was extended on the 20th of last month, six Municipal councillors resigned in protest of the Government Order. As per section 19 of the Mysore Municipalities Act, if the period is more than six months, there must be a bye-election. I want to know whether the Government intends to conduct bye-elections or not The same is the case with Nippani Municipality also. Government is worried about Belgaum and Nippani, because if

elections are conducted they know that only M.E.S. people will be elected. and therefore the Government have extended the term of these municipalities and they do not want to conduct the elections.

With these words I conclude.

†Smt. SHEILA IRANI (Nominated).—Hon'ble Deputy Speaker, Sir while supporting the Demands, I would also seek your kind permission to bring before the House some observations and suggestions for the streamlining of the municipalities whose administration over the year has been on a slow and steady decline and therefore the tax payer has not been able to avail himself of the basic civic amenities.

The procedure of the collection of octroi has always caused much harrassment and evasion to the public at large, and therefore the Government should form a Committee to go into the details of this collection of octroi. Certain retailers and petty traders ean be exempt from the octroi tax, because on the aggregate it will be only ·5 or 10 percent. Therefore, all small retailers and petty traders should be exempt from this tax and the streamlining of the tax should be done in such a way that all the public will benefit and there would be no harrassment to the public, and no evasion of this octroi duty. I also suggest to the Government that the collection of octroi can be done in the same manner as the sales tax, *i.e.*, the turnover should be given by the assessees and they should be taxed on these declarations.

The Housing Boards, Trust Boards and various private institutions have been putting up a number of houses in various towns and cities, but they have not approached anywhere to the fringe of the problem. Therefore, if Municipalities, Co-operatives and Taluk Development Boards were to invest money and put up mossive housing schemes, it would be very good, because in the long run this would definitely benefit the community and the housing shortage would be not so acute. In many instances, for slum clearance properties had to be acquired and the acquisition proceedings are so long drawn-out that is very difficult for housing schemes to be implemented. Therefore, rules should be made much easier for lands to be acquired and money to be paid so that housing schemes can follow one after the other without any undue waste of time. Government should give attention for the clearance of slums. There is already a scheme working for the removal of slums. There is a joke that if one slum is cleared, five slums will spring up in some other place. I request the Government to see that if a slum is removed, they should definitely see the slum should not reappear in another place and do not allow the slum dwellers to put up huts elsewhere.

The Municipalities have always been spending a lot of money on the maintenance of sewage lines. Some miscreants are trampling with these sewage lines and therefore there has been a wastage of water. The watch and ward also has not been able to see or check the trampling of these lines. The Municipalities should be told to give special

(SMT. SEHEILA IRANI)

attention towards the maintenance of these sewage lines in good condition. If necessary a special squad should be formed so that these sewage lines could be well looked after.

The filtered water is being diverted for use of gardens. I therefore suggest that in addition to filter water, raw water should be provided to the consumers so that they should not draw upon the filter woter. Such a system is existing in Delhi City. I think that scheme can be made use of in our State. The Municipalities should make an effort to put up overhead tanks in each Mohalla with one lakh gallon capacity so that enough water could be made available during summer, should the need arises.

The collection of revenue such as house-tax and water tax has always been a problem to the Municipality. I think some incentive can be given to the people if they pay the dues on time. Some small rebate should be given to the house owners so that they may pay up their dues to the Municipality at the appointed time.

The City Transport in Mysore City can be taken over by the Municipality and control the entire transport system in the City. Just at the moment there is a great deal of chaos and the services are not working properly. If Mysore City Municipality takes over the transport system and if it proves satisfactory, then the Municipalities in other Cities might take over the transport services.

The Exhibition building which is coming up in Mysore City may be taken over by the Municipality and maintained by it. The villages which have come recently under the administration of the Mysore City Municipality should be considered as equal to other parts of the City and they should be provided with all the amenities like approach roads, electricity and water. Same of these villages have been neglected by the Municipality and they are starved of these amenities. I request the Government to see that all these villeges are provided with the civic amenities just like other parts of the City.

Mysore City is not having a Leprosium. It is very necessary that this City should have a Leprosium. We have a plot of land and it is very easy to put up sheds. If the Municipality were to give us some financial help it would be possible for us to run the Leprosium. we have not been able to make much headway in this direction. There is a school for Deaf and Dumb in Mysore City but we are handicapped for want of Leprosium.

I would like to bring to the notice of this house the sorry state of affair of the creamation ground in Mysore City. It is very distressing to note that the cremation ground is completely neglected. The place where the last rites are to be performed, the mourners who go there are absolutely shocked of conditions prevailing there. There is no place for taking shelter. There are one or two old houses which are not at

all sufficient to meet the requirements. The stray cattle roam about freely in the cremation ground. The person in-charge of this ground does not remain at the spot. The wood that would be stocked there by the members of the bereaved familty is often taken away and sold outside. These are some of the irregularities that are taking place at that place.

Sri B. BASAVALINGAPPA.—The description of the cremation. Now the Government has taken a decision to instal an electric crematorium in that place, and the entire area will be taken over by the Government.

Smt. SHEILA IRANI.—I thank the Hon. Minister for having given me a good news.

I would like to bring to the notice of the conveyance of night soil. The removal of night soil has left much to be desired. I request the Government to supply implements for carrying of night soil so that it would be easy for them te handle it. The scheme for conversion of night soil into manure should be implemented. If this scheme is imple mented, the Municipality would get a good revenue.

Lastly, the Mysore City Municipality Act 1964 has curtailed the powers of the Presidene and the Councillors. According to the existing Act, they have no powers to make appeal and also sanction the estim ates of works. I would therefore request the Government to bring in some amendments so that the President and the members will have the powers to deal with these matters straightaway and thus make this institution as an efficient democratic institution.

The Municpal employees by some political forces for their personal ends. It is appreheeneed that these employees would turn out to be anti-social elements. I therefore plead for framing of service rules to these employees so that they could work in an efficient manner.

I thank the Chair for having given me an opportunity to speak on this demand.

5-30 P. M.

†ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ : ಈ ಗಾಗಲೇ ನನ್ನ ಮಾನ್ಯ ಸ್ನೇಹಿತರುಗಳಾದ ಶ್ರೀ ಕೆ. ಪುಟ್ಟಸ್ವಾಮಿಯವರು ಮತ್ತು ಶ್ರೀ ಟಿ. ಆರ್. ಶ್ಯಾಮಣ್ಣನವರು ನಾನು ಏನೇನು ಹೇಳಬೇಕೆಂದು ಇದ್ದೆನೋ ಅದೆಲ್ಲವನ್ನೂ ಅವರಾಗಲೇ ಹೇಳಿರುವುದರಿಂದ ನನಗೆ ಇನ್ನು ಉಳಿದಿರುವುದು ಬಹಳ ಕಡಮೆ ಮತ್ತು ಅವರೇನು ಹೇಳದೆ ಬಿಟ್ಟಿದ್ದಾರೆ ಎಂಬುದನ್ನು ನಾನು ಹುಡುಕಿ ನೋಡಿ ಹೇಳಬೇಕಾಗಿದೆ.

ನಾನು ಮೊಟ್ಟಮೊದಲನೆಯದಾಗಿ ನಮ್ಮ ಮುನಿಸಿಪಲ್ ಸಚಿವರ ಬಗ್ಗೆ ಅಂದರೆ ಸ್ಥಳೀಯ ಸಂಸೆಗಳ ಸಚಿವರ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಇವರಿಗಾಗಲೇ ನಮ್ಮ ಮಿತ್ರರಾದ ಶ್ಯಾಮಣ್ಣನವರು ' ಮುನಿಸಿಪ್ಯಾಲಿಟಿಗಳನ್ನು ಸೂಪರ್ ಸೀಡ್ ಮಾಡತಕ್ಕ ಮಂತ್ರಿಗಳು-ಬಸವ ಲಿಂಗಪ್ಪನವರು, ಎಂಬುದಾಗಿ ಟೈಟಲನ್ನೇ ಕೊಟ್ಟಿದ್ದಾರೆ. ಈ ಟೈಟಲನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೋ ಏನೋ ಎಂಬಂತೆ ಇವರಾಗಲಿ ಅ ಮಂಡ್ಯಾ ಮುನಿಸಿಪ್ಯಾಲಿಟಿಗೂ ಇತ್ತೀಚಿಗೆ ನೋಟೀಸನ್ನು ಕೊಟ್ಟಿದ್ದಾರಂತೆ. ಇದಕ್ಕೆ ಮಾನ್ಯ ಸಚಿವರೇನೋ ಒಂದು ಕಾರಣ ಕೊಟ್ಟಿದ್ದಾರೆ. ಆದರೆ ಅದು ನಿಜವಾದ ಕಾರಣವಲ್ಲ. ಆದರೆ ಈ ದಿವಸ ಯಾರು ಈ ಮಂತ್ರಿಗಳು ಹೇಳದಂತೆ

(ಶ್ರೀ ಕೆ. ಎಂ. ನಾಗಣ್ಣ)

ಕೇಳುವುದಿಲ್ಲವೋ ಅಂಥವರಿಗೆಲ್ಲಾ ನೋಟೀಸನ್ನು ಕೊಡುವುದು ಇವರ ಒಂದು ಪದ್ಧತಿಯಾಗಿ ಬಂದಿದೆ. ಇನ್ನು ಮುಂದಕ್ಕಾದರೂ ಹಾಗೆ ಮಾಡಬಾರದೆಂದು ಹೇಳುತ್ತೇನೆ. ಇನ್ನು ಹೋದ ವರ್ಷವೇ ಈ ಮುನಿಸಿಪ್ಯಾಲಿಟಿಗಳಿಗೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ರಚನೆ ಮಾಡುವುದಾಗಿ ಇವರು ತಿಳಿಸಿದ್ದರು ; ಇನ್ನು ಕೆಲವು ಕಾಮನ್ ಕೇಡರ್ ಮಾಡುತ್ತೇವೆಂದು ಹೇಳಿದ್ದರು. ಆದರೆ ಇನ್ನೂ ಯಾವುದನ್ನೂ ಮಾಡಿಲ್ಲ. ಇದನ್ನು ಇನ್ನೂ ಮಾಡದೆ ಇರುವುದಕ್ಕೆ ಒಂದು ಪ್ರಬಲವಾದ ಕಾರಣ ಏನೆಂದರೆ ಈ ದಿವಸ ಮಂತ್ರಿಗಳಿಗೆ ಯಾರು ಯಾರನ್ನು ಎಲ್ಲೆಲ್ಲಿ ಉಳಿಸಿಕೊಳ್ಳಬೇಕೋ ಅದಕ್ಕೆ ಈ ಕೇಡರ್ ಅಂಡ್ ರೆಕ್ರೂಯಿಟ್‌ಮೆಂಟ್ ರೂಲ್ಸ್‌ಗಳು ಅಡ್ಡಬರುತ್ತವೆಂಬುದನ್ನು ತಿಳಿದು ಕೊಂಡು ಇದನ್ನು ತಡೆಹಿಡಿದಿದ್ದಾರೆ.

ಇನ್ನು ಇತ್ತೀಚಿಗೆ ಎಲ್ಲೆಲ್ಲೂ ಸ್ಲಂ ಏರಿಯಾಗಳು ಜಾಸ್ತಿಯಾಗುತ್ತಿವೆ. ಇವುಗಳನ್ನು ತಡೆಗಟ್ಟಲು ಕೇಂದ್ರ ಸರ್ಕಾರದಿಂದ ಹಣ ಬಂದಿದೆ ಎಂದು ಹೇಳುತ್ತಿದ್ದಾರೆ. ಆದರೆ ಅದರಲ್ಲಿ ಎಲ್ಲೆಲ್ಲಿಗೆ ಎಷ್ಟು ಹಣವನ್ನು ಖರ್ಚುಮಾಡಲಾಯಿತು, ಇನ್ನೆಷ್ಟು ಹಣ ಉಳಿದಿದೆ ಎಂಬುದರ ಬಗ್ಗೆ ವಿವರಗಳನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಬೆಂಗಳೂರು ಕಾರ್ಪೊರೇಷನ್ನಿನ ಅಧಿಕಾರವನ್ನೆಲ್ಲಾ ಕಸಿದುಕೊಳ್ಳುತ್ತಿದ್ದಾರೆಂದು ಹಿಂದಿದ್ದ ಸರ್ಕಾರಗಳನ್ನು ನಾವು ಟೀಕೆ ಮಾಡುತ್ತಿದ್ದೆವು ಆದರೆ ಆಗ ಅದಕ್ಕೆ ಇನ್ನೂ ಎಷ್ಟೋ ಅಧಿಕಾರಗಳಿದ್ದವು. ಆದರೆ ಈ ದಿವಸ ಇರತಕ್ಕ ಸರ್ಕಾರ ಬೆಂಗಳೂರು ಕಾರ್ಪೊರೇಷನ್ನಿಗೆ ಯಾವ ಒಂದು ಚೂರು ಅಧಿಕಾರವನ್ನು ಬಿಟ್ಟು ಕೊಡುವಂತೆ ಕಂಡು ಬರುತ್ತಿಲ್ಲ. ಅದಕ್ಕೆ ಯಾವ ಜಮೀನನ್ನೂ ಅಕ್ವಯಿರ್ ಮಾಡಿಕೊಳ್ಳುವುದಕ್ಕೆ ಅಧಿಕಾರವಿಲ್ಲ. ಹಿಂದೆ ನಾನು ಅಲ್ಲಿ ಮೇಯರಿದ್ದಾಗ ಎಷ್ಟೋ ವೇಕೆಂಟ್ ಸೈಟುಗಳನ್ನು ಅಕ್ವಯಿರ್ ಮಾಡಿ ಜನರಿಗೆ ಹಂಚಿಸಿದ್ದೆ. ಆದರೆ ಅಲ್ಲಿ ಚುನಾಯಿತರಾಗಿ ಕೆಲಸ ಮಾಡಿದರೆ ಮುಂದೆ ರಾಜಕೀಯದಲ್ಲಿ ಇಂಥಾ ಸಭೆಗಳಲ್ಲಿ ದಕ್ಷತೆಯಿಂದ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರಿಂದ ಅಲ್ಲಿಯ ಅಧಿಕಾರಗಳನ್ನು ಮೊಟಕು ಮಾಡುವುದು ಸರಿಯಲ್ಲ. ಹಿಂದೆ ನನಗೆ ಜ್ಞಾಪಕವಿದ್ದಹಾಗೆ ಮಾನ್ಯ ಬಸವಲಿಂಗಪ್ಪನವರೂ ಕೂಡ 1951 ರಲ್ಲಿ ಬೆಂಗಳೂರು ಮುನಿಸಿಪ್ಯಾಲಿಟಿಗೆ ಸದಸ್ಯರಾಗಿ ಆರಿಸಿಬಂದಿದ್ದಂತೆ ನನಗೆ ಜ್ಞಾಪಕವಿದೆ. ಅದಕ್ಕಾಗಿ ನಾನು ಹೇಳುತ್ತಿರುವುದು ಈ ಸ್ಥಳೀಯ ಸಂಸ್ಥೆಗಳನ್ನು ಸುಮ್ಮನೆ ಸೂಪರ್‌ಸೀಡ್ ಮಾಡುತ್ತಾ ಹೋಗಬೇಡಿ ಎಂದು ಹೇಳುತ್ತಿದ್ದೇನೆ.

ಇನ್ನು ಈ ಸ್ಥಳೀಯ ಸಂಸ್ಥೆಗಳೆಲ್ಲಾ ತಾವು ಹೇಳಿದಂತೆ ಕೇಳಬೇಕು ಎಂಬ ಏನೋ ಒಂದು ಸಂಕಲ್ಪವನ್ನು ಮಾನ್ಯ ಸಚಿವರು ಮಾಡಿದ್ದಾರೆ, ಅದೇ ಮಂತ್ರವನ್ನು ಈಗ ಈ ಟ್ರಸ್ಟ್‌ಬೋರ್ಡಿಗೂ ಹಾಡಿದ್ದಾರಂತೆ. ಇದರಿಂದ ಎಲ್ಲಾ ಅಧಿಕಾರವೂ ಒಂದೇಕಡೆ ಕೇಂದ್ರಿಕೃತವಾಗುತ್ತದೆ. ಅದನ್ನು ನಿಭಾಯಿಸುವುದಕ್ಕೂ ಮಾನ್ಯ ಸಚಿವರಿಗೂ ಕಷ್ಟವಾಗುತ್ತದೆ. ಆಗ ಇವರ ಬಗ್ಗೆ ಅನೇಕ ತಪ್ಪುಗಳು ಎದ್ದು ಕಾಣುವುದಕ್ಕೆ ಕಾರಣವಾಗುತ್ತದೆ. ಆದುದರಿಂದ ಮಾನ್ಯ ಸಚಿವರು ತಮ್ಮಲ್ಲಿರತಕ್ಕ ಅಧಿಕಾರವನ್ನೆಲ್ಲಾ ಸಂಸ್ಥೆಗಳಿಗೂ ಹಂಚಿ ಇವರು ಅವುಗಳ ಮೇಲೆ ಸೂಪರ್‌ವೈಸ್ ಮಾಡಿಕೊಂಡಿದ್ದರೆ ಸಾಕೆಂದು ಹೇಳುತ್ತೇನೆ. ನಾನು ಕೇಳಿದ್ದರಲ್ಲಿ ಆ ಹೌಸಿಂಗ್ ಬೋರ್ಡಿನವರಿಗಾಗಲಿ ಟ್ರಸ್ಟ್ ಬೋರ್ಡಿನವರಿಗಾಗಲಿ ಯಾರಿಗೂ ಒಂದು ಸೈಟನ್ನೂ ಕೂಡ ಕೊಡತಕ್ಕ ಅಧಿಕಾರವಿಲ್ಲ ಎಂದು ಮಾನ್ಯ ಪುಟ್ಟಸ್ವಾಮಿಯವರು ಆಗಲಿ ಆ ಮೈಸೂರು ಹೌಸಿಂಗ್ ಬೋರ್ಡಿನ ವಿಷಯವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅಲ್ಲಿರತಕ್ಕ ಸದಸ್ಯರಲ್ಲಿ ಐದು ಮಂದಿ ಮಂತ್ರಿಗಳಿಗೆ ಆಗದವರು, ಇನ್ನು 3 ಮಂದಿ ರಾಜೀನಾಮೆ ಕೊಟ್ಟಿದ್ದಾರೆ. ಇನ್ನು ಅಲ್ಲಿಯ ಆಡಳಿತ ಎಷ್ಟರ ಮಟ್ಟಿಗೆ ನಡೆಯಬೇಕು ಇದಕ್ಕೆ ಮೂಲ ಕಾರಣ ಈಗ್ಗೆ 6 ತಿಂಗಳ ಹಿಂದಕ್ಕೆ ಈ ಮಾನ್ಯ ಮಂತ್ರಿಗಳು ಹೌಸಿಂಗ್ ಬೋರ್ಡಿನಲ್ಲಿ ಯಾರಿಗೂ ಸಾಲ ಕೊಡಕೂಡದು ಎಂದು ಒಂದು ಆಜ್ಞೆ ಹೊರಡಿಸಿದ್ದರು. ಅದೇ ಇದಕ್ಕೆಲ್ಲಾ ಮೂಲ ಕಾರಣ. ಆದರೆ ಇತ್ತೀಚೆಗೆ ಇದನ್ನು ಬದಲಾಯಿಸಿದ್ದಾರೆಂದು ಕೇಳುತ್ತೇನೆ.

ಇನ್ನು ಆಕ್ಟ್ರಾಯಿ ಬಗ್ಗೆ ಪುಟ್ಟಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಇದು ಹೋಗಬೇಕು ಎನ್ನತಕ್ಕವರ ಪೈಕಿ ನಾನೂ ಒಬ್ಬ. ಕಾರಣ ಏನೆಂದರೆ ಇದನ್ನು ಸ್ವಚ್ಛವಾಗಿ ನಡೆಸುವುದಕ್ಕೆ ಇವರಿಂದ ಸಾಧ್ಯವಿಲ್ಲ. ಈ ಬಾಬಿನಲ್ಲಿ ಎಷ್ಟು ಹಣವನ್ನು ವಸೂಲ್ಮಾಡಬೇಕೋ ಅಷ್ಟನ್ನು ವಸೂಲ್ಮಾಡುತ್ತಿಲ್ಲ. ನಾನು ಮೇಯರಾಗಿದ್ದಾಗ ಎಷ್ಟು ಲಾರಿಗಳನ್ನು ಹಿಡಿಯುತ್ತಿದೆ, ಈಗ ಎಷ್ಟನ್ನು ಹಿಡಿಯುತ್ತಿದ್ದಾರೆ. ಅಲ್ಲಿ ಹಿಡಿದರೆ ಶಾಕಾಯಲವಣಾಯ ಸಿಕ್ಕುವುದು ತಪ್ಪಿಹೋಗುತ್ತದೆ. ನಾನು ಇದ್ದಾಗಲೇ ಇದು 30 ಲಕ್ಷಕ್ಕೆ ಹೋಗಿತ್ತು. ಈಗ ಅದು ಒಂದಕ್ಕೆ 40 ರಷ್ಟು ಜಾಸ್ತಿ

ಯಾಗಿದೆ ಎನ್ನಬಹುದು. ಆದರೆ ಈದಿವಸ ಯಾರೂ ಇದನ್ನು ಸರಿಯಾಗಿ ನಿಗಾ ಕೊಟ್ಟು ನೋಡುತ್ತಿಲ್ಲ. ಮೊದಲು ಈ ಸುಂಕ ಕೊಡತಕ್ಕ ಸಾಮಾನುಗಳು ನಗರದ ಎಲ್ಲೆಯೊಳಗೆ ಬಂದರೆ ಟ್ಯಾಕ್ಸ್ ಕೊಡಬೇಕೆಂದಿತ್ತು. ಅದಕ್ಕಾಗಿ ಈಗ ಏನು ಮಾಡುತ್ತಿದ್ದಾರೆ ಎಂದರೆ ಲಾರಿಗಳಲ್ಲಿ ಈ ಸಾಮಾನುಗಳನ್ನು ತಂದು ನಗರದ ಸರಹದ್ದಿನಿಂದ ಹೊರಗಡೆ ಇಳಿಸಿಕೊಂಡು, ಅವನ್ನು ರಾತ್ರಿಯಾದ ಮೇಲೆ ಕದ್ದು ನಗರದೊಳಕ್ಕೆ ತರುತ್ತಿದ್ದಾರೆ. ಹೀಗೆಲ್ಲಾ ನಡೆಯುತ್ತಿರುವುದರಿಂದ ಇವರಿಂದ ದಕ್ಷತೆಯಿಂದ ಇದನ್ನೆಲ್ಲಾ ತಡೆಗಟ್ಟಿ ಟ್ಯಾಕ್ಸನ್ನು ವಸೂಲ್ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಿರುವಾಗ ಇದನ್ನು ಏತಕ್ಕೆ ಇಟ್ಟುಕೊಂಡಿದ್ದಾರೋ ನನಗೆ ತಿಳಿಯದು. ಅಂತೂ ಈ ಆಕ್ಟ್ರಾಯಿ ಬಾಬು ಲಂಚದ ತವರುವ ನೆಯಾಗಿದೆ. ನಾನು ಹಿಂದೆ ಇದರ ಬಗ್ಗೆ ಒಂದು ಸಲಹೆಯನ್ನು ಕೊಟ್ಟಿದ್ದೆ. ಏನೆಂದರೆ ಇದನ್ನು ಪೂರ್ಣವಾಗಿ ರದ್ದು ಮಾಡಿ ಸೇಲ್ಸ್ ಟ್ಯಾಕ್ಸಿನ ಮೇಲೆ ಒಂದರಷ್ಟು ತೆರಿಗೆಯನ್ನು ಹಾಕಿ ವಸೂಲ್ಮಾಡಿ ಆಗ ಇದು ಸಲೀಸಾಗಿ ವಸೂಲಾಗುತ್ತದೆ, ಅದರಲ್ಲಿ ಒಂದು ಭಾಗವನ್ನು ಕಾರ್ಪೋರೇಷನ್ನಿಗೆ ಹಂಚಿ ಎಂದು. ಈಗಲೂ ಸಹಾ ಮಾನ್ಯ ಸಚಿವರು ಈ ವಿಚಾರದಲ್ಲಿ ದೀರ್ಘವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ ಮತ್ತು ಈ ಆಕ್ಟ್ರಾಯನ್ನು ರದ್ದು ಮಾಡವುದು ಒಳ್ಳೆಯದೆಂದು ಹೇಳುತ್ತೇನೆ. ಈ ವಿಚಾರದಲ್ಲಿ ನಾವು ಎಷ್ಟು ಹೇಳಿದರೂ ಮಂತ್ರಿಗಳಿಗೆ ಅದು ರುಚಿಸುವುದಿಲ್ಲ ಅವರು ನಮ್ಮ ಮಾತನ್ನು ಕೇಳುವುದಿಲ್ಲ, ಅವರ ಇಷ್ಟ ದೇಶದಲ್ಲಿ ಲಂಚಕೋರರೂ ಮತ್ತು ತೆರಿಗೆ ಕೋರರೂ ಹೆಚ್ಚಬೇಕು ಅನ್ನುವುದು ಇವರ ಒಂದು ನೀತಿ.

ಇಬ್ರಾಹಿಂ ಎನ್ನತಕ್ಕವರು ಕಾರ್ಪೊರೇಷನ್ ಕಂಟ್ರಾಕ್ಟರು. ಇವರು ರೆವಿನ್ಯೂ ಭೂಮಿಯನ್ನು ತೆಗೆದುಕೊಂಡು ಅಲ್ಲಿ ಸೈಟುಗಳನ್ನು ಮಾಡಿ ಜನರಿಗೆ ಹಂಚಿ ವಿಶೇಷ ಹಣವನ್ನು ಮಾಡುತ್ತಿದ್ದಾರಂತೆ. ಆತನಿಗೆ ಮಾನ್ಯ ಸ್ಥಳೀಯಸಂಸ್ಥೆಗಳ ಸಚಿವರ ಆಶೀರ್ವಾದ ಇದೆಯಂತೆ. ಹಾಗೇ ಇನ್ನೊಬ್ಬರು ನರಸಿಂಹಯ್ಯ ಎನ್ನತಕ್ಕವರು ಈ ಮಂತ್ರಿಗಳ ಶಿಷ್ಯ.

ಶ್ರೀ ಬಿ. ಬಸವಲಿಂಗಪ್ಪ.—ಯಾವ ನರಸಿಂಹಯ್ಯ? ಎಷ್ಟೋ ಜನ ನನ್ನ ಶಿಷ್ಯರಿದ್ದಾರೆ?

ಶ್ರೀ ಕೆ. ಎಂ, ನಾಗಣ್ಣ.—ಯಾವ ನರಸಿಂಹಯ್ಯ—ತಮ್ಮ ಮನೆಯಲ್ಲಿದ್ದಾರೆಂದು ಹೇಳಲಾಗುತ್ತಿರುವ ನರಸಿಂಹಯ್ಯ—ನಮ್ಮ ಕೋಣಂದೂರು ಲಿಂಗಪ್ಪನವರು ಹೇಳುತ್ತಿರುವಂತೆ ನೀವೂ 'ಅಹುದಾದರಹುದೆನ್ನಿ—ಇಲ್ಲವಾದರೆ ಇಲ್ಲವೆನ್ನಿ'. ಈತನೂ ಕೂಡ ರೆವಿನ್ಯೂ ಲ್ಯಾಂಡ್ ತೆಗೆದುಕೊಂಡು ಸೈಟುಗಳನ್ನು ಮಾಡಿ ಮಾರಾಟ ಮಾಡುತ್ತಿದ್ದಾನೆ ಎಂದು ಹೇಳುತ್ತಿದ್ದಾರೆ. ನಾನು ಏತಕ್ಕಾಗಿ ಇದನ್ನೆಲ್ಲಾ ಹೇಳುತ್ತಿದ್ದೇನೆಂದರೆ ತಪ್ಪು ಇದ್ದರೆ ಅದನ್ನು ತಿದ್ದಿ ಸರಿಮಾಡಿಕೊಳ್ಳಲಿ ಎಂದು.

ಇನ್ನು ಬೇಗೂರು ವಿಚಾರ ಅಲ್ಲಿ ಭದ್ರಯ್ಯ ಎನ್ನತಕ್ಕವನ ಮನೆ ರಸ್ತೆಗೆ ಎನ್‌ಕ್ರೋಚ್ ಮಾಡಿದ್ದಾನೆಂದು ಆತನ ಮನೆಯನ್ನು ನೋಟೀಸ್ ಕೊಡದೆ ಕೆಡವಿಸಿದ್ದಾರೆ.

(ಆ ಸಂಬಂಧವಾದ ಫೋಟೋ ಅಥವಾ ಕಾಗದವನ್ನು ಅಧ್ಯಕ್ಷರ ಕಡೆಗೆ ಕಳುಹಿಸಿದರು)

'ಅದನ್ನು ಹೊಡೆಸಿ ಹಾಕಿಸಿದವರು ಯಾರು ಎಂದರೆ ಮಾನ್ಯ ಮಂತ್ರಿಗಳ ಬಂಧುಗಳಾದ ನರೇಂದ್ರ ಸಿಂಗ್ ಎನ್ನತಕ್ಕವರು..........

ಶ್ರೀ ಬಿ. ಬಸವಲಿಂಗಪ್ಪ.—ಸಿಂಗ್ ನನಗೆ ಹೇಗೆ ಬಂಧುವಾಗುತ್ತಾನೆ?

ಶ್ರೀ ಕೆ. ಎಂ. ನಾಗಣ್ಣ.—ಅವರು ಇತ್ತೀಚೆಗೆ ಹರಿಜನರಾಗಿದ್ದಾರೆಂದು ಕೇಳುತ್ತೇನೆ. He has recently become a harijan. ಎ. ಸಿ. ಬೆಂಗಳೂರು ಡಿವಿಜನ್ನಿನವರು ಒಂದು ದಿವಸ ಇದ್ದಕ್ಕಿದ್ದಹಾಗೆ ಹೋಗಿ ಮಡಿವಾಳದ ಪೋಲೀಸರ ಸಹಾಯ ತೆಗೆದುಕೊಂಡು 20 ಜನರ ಸಹಾಯ ಪಡೆದು ಮನೆಯಲ್ಲಿ ಮಾಲೀಕ ಯಜಮಾನ ಇಲ್ಲದೆ ಕೆಲಸಕ್ಕೆ ಹೋಗಿದ್ದಾಗ ಹೆಣ್ಣುಮಕ್ಕಳು ಮಾತ್ರ ಮನೆಯಲ್ಲಿರುವಾಗ ಹೋಗಿ ಒಡೆದುಹಾಕಿ ಕಲ್ಲುಗಳನ್ನು ಬೇರೆ ಕಡೆ ಹಾಕಿದ್ದಾರೆ. ಹಿಂದೆ ಇಂಥದೇ ಕೆಲಸ ಮಾಡಿದಾಗ ಶ್ರೀ ಅಜೀಜ್‌ಸೇಟರಿಗೆ ಹೇಳಿದೆ. ಸ್ಮಶಾನದ ಪಕ್ಕದಲ್ಲಿ ಗುಡಿಸಲು ಕೀಳಿಸಿದರು, ಅವರು ನಿಮ್ಮ ಪರವಾಗಿ ಆ ಕೆಲಸ ಮಾಡಿಸಿದರು. ಅದನ್ನು ಗಮನಕ್ಕೆ ತಂದೆ. ಈ ರೀತಿ ಆಕ್ರಮ ಮಾಡಿದ್ದಾರೆ, ನಿಮ್ಮ ನರೇಂದ್ರ ಸಿಂಗ್ ಎನ್ನುವವರು. ಇದೂ ಅಲ್ಲದೆ ಮಡಿವಾಳದ ಪೋಲೀಸಿನವರಿಂದ ದೌರ್ಜನ್ಯ ನಡೆದಿದೆ, ನೋಟೀಸ್ ಕೊಡದೆ ಈ ಕೆಲಸಮಾಡಿದ್ದಾರೆ. ಇದಲ್ಲದೆ ಬೇಗೂರು ಮುನಿಲಿಂಗಪ್ಪ ಎಂಬುವವರು ಆಸ್ಪತ್ರೆ ಕಟ್ಟಿ ಎರಡು ವರ್ಷವಾಗಿರಬೇಕು. ಇದನ್ನು ಓಪನ್ ಮಾಡುವುದಕ್ಕೆ ತಾವು ಹೋಗುವುದಿಲ್ಲ. ಕಾರಣವೇನೆಂದರೆ ಅವರು ನಿಮಗೆ ವಿರೋಧವಾಗಿ ಚುನಾವಣೆಯಲ್ಲಿ ಕೆಲಸಮಾಡಿದ ಜನ. ನಿಮ್ಮನ್ನು ಕರೆಯುವುದಕ್ಕೂ ಅವರು ತಯಾರಾಗಿಲ್ಲ. ಶ್ರೀ ಸಿದ್ದವೀರಪ್ಪನವರನ್ನು ಕರಸಿ ಓಪನ್ ಮಾಡಿಸಿ ಎಂದು ಹೇಳುತ್ತಿದ್ದರು. ಆದರೆ ನಿಮ್ಮಲ್ಲಿ ಒಂದು ಕನ್‌ವೆನ್

(ಶ್ರೀ ಕೆ. ಎಂ. ನಾಗಣ್ಣ)

ಪನ್ ಇದೆ. ಯಾವ ಪತಿಯಿಂದ ಎಲೆಕ್ಟ್ ಆಗಿದ್ದಾರೋ ಅವರಿಲ್ಲದೆ ಯಾವ ಮಂತ್ರಿಗಳೂ ಅಲ್ಲಿಗೆ ಹೋಗಬಾರದು ಎಂದಿದೆ. ಇವಕ್ಕಾಗಿ ಶ್ರೀ ಸಿದ್ಧವೀರಪ್ಪನವರು ಭಯಪಡುವರು. ಈ ಮುಂದುಕ ಬಸವಲಿಂಗಪ್ಪನವರಿಲ್ಲದೆ ಹೇಗೆ ಬರುವನೋ ಎಂದು ಮಾತನಾಡುವರು. ಆದುದರಿಂದ ದಯಮಾಡಿ ಒಂದು ಲಕ್ಷ ರೂಪಾಯಿ ವೆಚ್ಚಮಾಡಿ ಕಟ್ಟಿಸಿರುವ ಮೆಟರ್ನಿಟಿ ಹೋಂ ಓಪನ್ ಮಾಡುವುದಕ್ಕೆ ಅವಕಾಶ ಕೊಡದೆ ಇರುವುದು ಸರಿಯಲ್ಲ ಎಂಬ ಭಾವನೆಯಿದೆ. ಇದಕ್ಕೆ ಅವಕಾಶವಿಲ್ಲದಂತೆ ತಿದ್ದಿಕೊಳ್ಳಬೇಕು ಎಂದು ನಾನು ಹೇಳುತ್ತಿದ್ದೇನೆ.

ಇನ್ನೊಂದು. ನಿಮ್ಮ ತಮ್ಮ ಒಬ್ಬರು ಇದ್ದಾರೆ, ಬಿ. ಗುರುಸಿದ್ದಪ್ಪ ಡಾಕ್ಟರ್. ಅವರು ನಾಲ್ಕೈದು ತಿಂಗಳ ಕೆಳಗೆ ಒಂದು ನಾಟಕದ ಅಧ್ಯಕ್ಷತೆ ವಹಿಸಲು ಬೇಗೂರಿಗೆ ಹೋಗಿದ್ದರು.

Sri B. BASAVALINGAPPA.—I object to that. There are six brothers of mine. I do not think he can bring all those things here.

ಶ್ರೀ ಕೆ. ಎಂ. ನಾಗಣ್ಣ.— ಬೇರೆಯವರಾದರೆ ಹೇಳುವುದಿಲ್ಲ, ಅವರು ನಿಮ್ಮ ಸಂಬಂಧೀಕರು ಎಂದು ಹೇಳುತ್ತಿದ್ದೇನೆ. ತಪ್ಪು ಮಾಡಿದ್ದರೆ ನೀವು ಒಪ್ಪಿಕೊಳ್ಳಬೇಕು.

Mr. DEPUTY SPEAKER.—Those persons are not here to defend themselves.

ಶ್ರೀ ಕೆ. ಎಂ. ನಾಗಣ್ಣ.—His brother is here to defend him. ಅವರು ನಾಲ್ಕು ತಿಂಗಳ ಕೆಳಗೆ ನಾಟಕದ ಅಧ್ಯಕ್ಷತೆ ವಹಿಸಲು ಹೋಗಿದ್ದಾಗ ಸ್ಟೇಟ್ ಕಾರಿನಲ್ಲಿ ಸರ್ಕಾರದ ಗಾಡಿಯಲ್ಲಿ ಹೋಗಿದ್ದರು. ಅದು ಸ್ವಂತ ಗಾಡಿಯಲ್ಲ. ಸರ್ಕಾರದ ಗಾಡಿಯಲ್ಲಿ ಕೂಡಬೇಕೆಂದು ಅವರು ಹಿಂದೆ ಹೇಳುತ್ತಿದ್ದರಂತೆ.

ಶ್ರೀ ಬಿ. ಬಸವಲಿಂಗಪ್ಪ.— ನಾನೂ ಪ್ರೈವೇಟ್ ಗಾಡಿಯಲ್ಲಿ ಹೋಗುತ್ತೇನೆ. I do not allow anybody to use this car. Hearsay evidence is not admissible.

ಶ್ರೀ ಕೆ. ಎಂ. ನಾಗಣ್ಣ.—ಅದು ಬಸವಲಿಂಗಪ್ಪನವರ ಗಾಡಿಯೆಂದು ನಾನು ಹೇಳಲಿಲ್ಲ. ಅಲ್ಲಿ ಅವರು ಭಾಷಣ ಮಾಡಿರುವುದು ನಮ್ಮ ವಿರೋಧಿಗಳನ್ನು ಆರಿಸಿದರೆ ನಿಮ್ಮ ಕೆಲಸ ಏನೂ ಕೆಲಸಮಾಡುವುದಿಲ್ಲ ಎಂದು. ಇದು ಯಾವ ನ್ಯಾಯ ಸ್ವಾಮಿ ? ನೀವು 3 ಕೋಟಿ ಪ್ರಜಾಸಂಖ್ಯೆಗೆ ಮಂತ್ರಿಗಳು, ಕೇವಲ ನಿಮ್ಮ ಮನೆ ಮಕ್ಕಳಿಗೆ ಮಾತ್ರ ಮಂತ್ರಿಗಳಲ್ಲ. ಅದುದರಿಂದ ದಯಮಾಡಿ.

ಶ್ರೀ ಬಿ. ಬಸವಲಿಂಗಪ್ಪ.—ಯಾರೋ ಹೇಳಿದ್ದನ್ನು ಕೇಳಿ ಇಲ್ಲಿ ಬಂದು ಹೇಳುವುದು ಸರಿಯಲ್ಲ

Mr. DEPUTY SPEAKER.—Mr. Naganna, in the first place you said that you would take only ten minutes. You have taken naerly half an hour already.

That is not a good argument. If you have got concrete proof, you please put it here, so that the Minister can defend. Otherwise, how can it be defended ?

Sri C. M. ARUMUGHAM.—Are we having this demand tomorrow? Earlier, it was agreed to complete it today.

Mr. DEPUTY SPEAKER.—Let us struggle our utmost and see.

Sri C. M. ARUMUGHAM.—It is now 5-45 p. m. Mr. Sri Ramulu will take at least 15 minutes.

Sri K. SRIRAMULU.—I will take five minutes.

Sri C. M. ARUMUGHAM.—Mr. Vatal Nagaraj wants half an hour.

Mr. DEPUTY SPEAKER.—He said he wants only ten minutes.

Sri VATAL NAGARAJ.—No, Sir.

Sri C. M. ARUMUGHAM.—I would like to take part on this demand. Kindly consider. If you are there on the Chair, I always have the privilege.

Mr. DEPUTY SPEAKER.—It is something very bad on your part and bad for me. But any way, let us see. We will see if we can adjust about ten minutes to you either today or tomorrow.

† ಶ್ರೀ ಕೆ. ಶ್ರೀರಾಮುಲು (ಗಾಂಧೀನಗರ).—ಪೌರಾಡಳಿತ ಸಚಿವರು ಮಂಡಿಸಿರತಕ್ಕ ಡಿಮ್ಯಾಂಡ್ ಏನು ಇದೆ ಅದನ್ನು ನಾನು ಪುಷ್ಟೀಕರಿಸುತ್ತಾ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಪೌರಸಭೆಗಳ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಒಂದು ವಿಷಯವನ್ನು ಪ್ರಸ್ತಾಪಮಾಡಬೇಕೆಂದು ಇದ್ದೇನೆ. ಹಿಂದಿನ ಸರ್ಕಾರದವರು ಕಾರ್ಮಿಕರಿಗೋಸ್ಕರ ರಿಸರ್ವ್ ಆಗಿದ್ದಂಥ, ಕಾರ್ಮಿಕರೇ ಆರಿಸಿಬರುವಂಥ ನಾಲ್ಕು ಸ್ಥಾನಗಳು ಏನು ಇದ್ದವು, ಅವನ್ನು ಕಿತ್ತು ಹಾಕಿದ್ದಾರೆ. ಕಾರ್ಮಿಕರು ನಗರ ಸಭೆಗಳಲ್ಲಿ ಇರಬಾರದು ಎನ್ನುವ ಉದ್ದೇಶವನ್ನು ಬಿಟ್ಟರೆ ಬೇರೇ ಏನೂ ಕಾರಣ ಇರಬಾರದು ಎಂದು ನನಗೆ ಅರ್ಥವಾಗುತ್ತದೆ. ಅಷ್ಟು ಮಾತ್ರವಲ್ಲ, ಹೆಣ್ಣುಮಕ್ಕಳು ಆರಿಸಿ ಬರತಕ್ಕ 9 ಸ್ಥಾನಗಳು ಇದ್ದುವು. ಅದನ್ನೂ ಕೂಡ ಹಿಂದಿನ ಸರ್ಕಾರದವರು ಹೆಣ್ಣುಮಕ್ಕಳು ನಗರಸಭೆಯಲ್ಲಿ ಭಾಗವಹಿಸಬಾರದು ಎಂದು ಕಿತ್ತು ಹಾಕಿದ್ದಾರೆ. ಪೌರಾಡಳಿತ ಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಕಾರ್ಮಿಕರು ಹೆಣ್ಣುಮಕ್ಕಳು ನಗರಸಭೆಗೆ ಆರಿಸಿಬರಬಾರದು ಎಂದು ಆ ಸ್ಥಾನಗಳನ್ನು ಕಿತ್ತು ಹಾಕುವುದು ಸರಿಯೇ? ಇದು ಪ್ರಜಾಪ್ರಭುತ್ವದಲ್ಲಿ ಯಾವ ಭಾಗದಲ್ಲಿ ಹೇಳಿದೆ. ಯಾರೇ ಮಾಡಿರಲಿ, ಇದನ್ನು ಈ ಕೆಲಸ ಮಾಡುವುದರಿಂದ ಸಾಧಾರಣವಾಗಿ ಈ ಜನರು ಕಾರ್ಪೋರೇಷನ್‌ಗೆ ಬರಬಾರದು ಎನ್ನುವ ಉದ್ದೇಶವನ್ನು ಬಿಟ್ಟರೆ, ಬೇರೆ ಏನೂ ಇಲ್ಲ. ಯಾರು ತಮಗೆ ಬೇಕೋ, ಅಂಥ ದೊಡ್ಡ ದೊಡ್ಡವರು ಆರಿಸಿಬರಬೇಕು ಎನ್ನುವ ಅಭಿಪ್ರಾಯದಲ್ಲಿ ಇದನ್ನು ಮಾಡಿರಬೇಕು. ನನ್ನ ಅಭಿಪ್ರಾಯದಲ್ಲಿ ಹೆಣ್ಣುಮಕ್ಕಳು ನಗರಸಭೆಗೆ ಆರಿಸಿಬರುವುದರಿಂದ ಅನೇಕ ವಿಷಯಗಳನ್ನು ಪೌರಾಡಳಿತ ವಿಷಯವಾದ್ದರಿಂದ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಹೆಣ್ಣುಮಕ್ಕಳ ಬಗ್ಗೆ ಪ್ಲಾಟ್‌ಫಾರಂನಲ್ಲಿ ವಿಶಾಲವಾಗಿ ಮಾತನಾಡುತ್ತೇವೆ. ಹೆಣ್ಣುಮಕ್ಕಳು ಅಧಿಕಾರಕ್ಕೆ ಬಂದರೆ ಏನು ಮಾಡುತ್ತಾರೆಂದು ಹಲವಾರು ವಿಷಯದಿಂದ ಅರ್ಥವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಹೆಣ್ಣುಮಕ್ಕಳಿಗೆ ಅವಕಾಶ ಇದ್ದ 9 ಸ್ಥಾನಗಳನ್ನು ಕಾನೂನಿನಲ್ಲಿ ಅಳವಡಿಸಿ ಅವಕಾಶ ಮಾಡಿಕೊಡಬೇಕು. ಹಾಗೂ ಕಾರ್ಪೋರೇಷನ್‌ಗೆ ಕಾರ್ಮಿಕರೇ ಆರಿಸಿ ಬರಬೇಕಾದ ನಾಲ್ಕು ಸ್ಥಾನಗಳನ್ನು, 8-10ಕ್ಕೆ ಹೆಚ್ಚಿಸಿ ಅವರು ಆರಿಸಿ ಬರುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಮೊಟ್ಟ ಮೊದಲು ಕಾರ್ಪೋರೇಷನ್ ಸದಸ್ಯರಾಗಿದ್ದವರು. ಅವರಿಗೂ ಅನುಭವ ಇದೆ. ಇತ್ತೀಚೆಗೆ ಅನೇಕ ಕಾರ್ಪೋರೇಷನ್‌ಗಳ ವಿಷಯದಲ್ಲಿ ಬೆಂಗಳೂರಿನ ಪುರಸಭೆಯಲ್ಲಿ ನಡೆದ ಅಕ್ರಮ ಅನ್ಯಾಯಗಳು ನನಗೆ ಗೊತ್ತಿದೆ. ಆದ್ದರಿಂದ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಎಂದು ಏನು ಹೇಳುತ್ತಾರೋ ಅದು ಮೇಯರ್ ಇಂದ ಹಿಡಿದು ಕಾರ್ಪೋರೇಷನ್ ಸದಸ್ಯರವರೆಗೂ ಇರಬೇಕು, ಮೇಯರ್ ಇಂದ ಹಿಡಿದು ಕಾರ್ಪೋರೇಟರ್‌ವರೆಗೂ ಕೂಡ ಹಣ ಪೋಲು ಆದರೆ, ದುರ್ವ್ಯವಹಾರ ನಡೆದರೆ ಅವರಿಗೆ ಏನಾದರೂ ಜವಾಬ್ದಾರಿ ಇದೆಯೇ ? ಕಾನೂನು ಪ್ರಕಾರ ಏನೂ ಇಲ್ಲ. ಅದು ತಮಗೂ ಗೊತ್ತಿದೆ, ನನಗೂ ಗೊತ್ತಿದೆ. ಲಕ್ಷಾಂತರ ರೂಪಾಯಿ ದುರ್ವ್ಯವಹಾರ ನಡೆದು ವಿಚಾರಣೆ ನಡೆಸಬೇಕು ಎಂದು ಹೇಳಿ ಹಿಂದೆ ಹನುಮಂತಪ್ಪನವರು ಕಮಿಷನರ್ ಆಗಿರುವಾಗ ವ್ಯವಹಾರ ನಡೆದದ್ದು ಗೊತ್ತಿದೆ. ಇಲ್ಲಿರತಕ್ಕ ಮಾನ್ಯ ಸದಸ್ಯರೊಬ್ಬರು ಅಲ್ಲಿಯೂ ಕೂಡ ಸದಸ್ಯರಾಗಿದ್ದಾರೆ. ಅವರ ಮೇಲೆ ಎರಡು ಲಕ್ಷ ರೂಪಾಯಿ ಲಂಚ ತೆಗೆದುಕೊಂಡಿದ್ದಾರೆ ಎಂದು ನಾರಾಯಣ್ ಕುಮಾರ್ ಅವರು ಕಾರ್ಪೋರೇಷನ್ ಸಭೆಯಲ್ಲಿ ಆಪಾದನೆ ಮಾಡಿದ್ದಾರೆ. ಒಬ್ಬ ಸದಸ್ಯರ ಮೇಲೆ ಎರಡು ಲಕ್ಷ ರೂಪಾಯಿಗಳ ಲಂಚ ತೆಗೆದುಕೊಂಡಿದ್ದಾರೆ ಎಂದು ಆಪಾದನೆ ಮಾಡಿದಾಗಲೂ ಕೂಡ ಅದು ವಿಚಾರಣೆಯಾಗದೆ, ಸಂಬಂಧಪಟ್ಟ ಸದಸ್ಯರು ಏನೂ ಇಲ್ಲ, ಎನ್ನುವ ಮಟ್ಟಕ್ಕೆ ಹೇಳುವುದಕ್ಕೆ ಪ್ರಯತ್ನ ಪಟ್ಟಿಲ್ಲ. ಅದನ್ನು ಅವರು ಒಪ್ಪಿಕೊಂಡ ಹಾಗಾಯಿತು. ಈ ಮಟ್ಟಕ್ಕೆ ಕಾರ್ಪೋರೇಷನ್ ಮತ್ತು ಪುರಸಭೆಗಳು ನಡೆಯುತ್ತಾ ಇರುವುದು ಸರಿಯಲ್ಲ. ಆದ್ದರಿಂದ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಇರಬೇಕು. ಬಿಲ್‌ಗಳಲ್ಲಿ ಯಾರು ಯಾರು ಸೈನ್ ಮಾಡಿ ಬಿಲ್ಸ್ ಕೊಡಬೇಕು ಎಂಬುದನ್ನು ಯೋಚನೆ ಮಾಡಬೇಕು. 8 ಕೋಟಿ ರೂಪಾಯಿಗಳ ವರಮಾನದಲ್ಲಿ ಸುಮಾರು 4 ಕೋಟಿ ರೂಪಾಯಿಗಳು ಸಿಬ್ಬಂದಿಯ ಸಂಬಳವಾಗುತ್ತದೆ. ಉಳಿದಿರತಕ್ಕ 4 ಕೋಟಿ

(ಶ್ರೀ ಕೆ. ಶ್ರೀರಾಮುಲು)

ರೂಪಾಯಿಗಳಿಂ ಪಬ್ಲಿಕ್ ವರ್ಕ್ಸ್, ಹೆಲ್ತ್, ಟೌನ್ ಪ್ಲಾನಿಂಗ್, ಇತ್ಯಾದಿಗಳಿಗಾಗಿ ಖರ್ಚು ಮಾಡುತ್ತಿದ್ದಾರೆ. ಇದು ತಮಗೂ ಗೊತ್ತಿದೆ. ಒಬ್ಬೊಬ್ಬ ಸದಸ್ಯರು ಒಂದು ವರ್ಷ ಸದಸ್ಯರು ಆಗಿರುವುದರಿಂದ ಎರಡು ಅಂಬಾಸಿಡರ್ ಕಾರು, ಮನೆ ಮಾಡಿಕೊಂಡಿರುತ್ತಾರೆ. ಇದು ಹೇಗೆ ಸಾಧ್ಯ ? ಅವರಿಗೆ ಯಾವುದೇ ವರಮಾನ ಇರುವುದಿಲ್ಲ. ಅಂಬಾಸಿಡರ್ ಕಾರ್ ತೆಗೆದುಕೊಳ್ಳುವುದಕ್ಕೆ, ಒಂದು ಮನೆ ಮಾಡುವುದಕ್ಕೆ ಹೇಗೆ ಸಾಧ್ಯ ?

ಶ್ರೀ ಕೆ. ಎಂ. ನಾಗಣ್ಣ.—ಅವರ ಹೆಸರನ್ನು ಹೇಳುವುದರಿಂದ ತಪ್ಪು ಏನು ಹೇಳಿ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಎರಡು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡ ಸದಸ್ಯರು ಆ ಕಡೆಯವರೊ, ಈ ಕಡೆಯವರೊ !

ಶ್ರೀ ಕೆ. ಶ್ರೀರಾಮುಲು.—ನಿಮ್ಮ ಕಡೆಯವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇದು ಸೀರಿಯಸ್ ಆದದ್ದು, ಸುಮ್ಮನೆ ಹೇಳಿಕೊಂಡು ಹೋಗುವ ಹಾಗಿಲ್ಲ, ಯಾರು ನಮ್ಮ ಕಡೆ ಇರುವವರು ಹೇಳಬೇಕು. ಶ್ರೀ ರಾಮುಲು ಅವರು ಬಹಳ ಚೆನ್ನಾಗಿ ರಾಜಕೀಯ ಮಾಡುತ್ತಾ ಇದ್ದಾರೆ. ಅವರಿಂ ಯಾರು ಹೇಳಬೇಕು ?

Sri C. M. ARUMUGHAM.—Sir, the hon. Member Sri Sriramulu said that a member of this House who is also a member of the Corporation and belongs to the Opposition has taken about Rs. 2 lakhs. There are only three members of the Corporation who are also members of this House. It is an aspersion on the members of the Opposition. It is a very serious charge which he has made. I therefore request him to name the member. If he does not do so, we will have to raise a privilege issue.

Sri SUBHAS ASTURE.—The members of the Opposition made a similar allegation yesterday. It was a hearsay allegation.

Sri C. M. ARUMUGHAM.—It is not a question of the member being a member of the Opposition or a member of the ruling party. The prestige and honour of a member of this House is involved. He should consider the House as a whole and not distinguish between this side and that side and play politics.

ಶ್ರೀ ಕೋಣಂದೂರು ಲಿಂಗಪ್ಪ.—ಯಾರೇ ಆರೋಪ ಮಾಡುವುದಾದರೂ ಆಧಾರಪೂರ್ವಕವಾಗಿ ಮಾಡಬೇಕು, ನೇರವಾಗಿ ಹೇಳಲಿ.

ಶ್ರೀ ಕೆ. ಶ್ರೀರಾಮುಲು.—ಹೇಳುತ್ತಾ ಇದ್ದೇನೆ, ಮಾನ್ಯ ಅಧ್ಯಕ್ಷರೇ, ನಾನು ಹೇಳಿದ ಭಾಷೆ, ಬಹುಶಃ ಮಾನ್ಯ ಅರುಗಂ ಅವರು ಅರ್ಥ ಮಾಡಿಕೊಂಡಿದ್ದಾರೆಯೇ ? ತಿವಾರಿಯವರು ಮೇಯರ್ ಆಗಿದ್ದಾಗ. ವಾಟಾಳ್ ನಾಗರಾಜ್ ಅವರು, ನಾಗಣ್ಣನವರು, ಶಾಮಣ್ಣನವರು, ನಾರಾಯಣ ಕುಮಾರ್ ಅವರು ಇದ್ದರು. ಒಬ್ಬ ಸದಸ್ಯರು ವರ್ಕಿಂಗ್ ಕಮಿಟಿಯ ಚೇರ್ಮನ್ ಆಗಿದ್ದವರು, ಈಗ ಅವರು ಈ ಸಭೆಯಲ್ಲಿಲ್ಲ. ನಾನು ಕ್ರಿಟಿಸಿಸಮ್ ಮಾಡತಕ್ಕ ವ್ಯವಹಾರಕ್ಕೆ ಹೋಗುವುದಿಲ್ಲ, ಇನ್ನೊಬ್ಬರು ಮಾಡಿದರೆ ಸಹಿಸುವುದಿಲ್ಲ. ನಾನು ಹೇಳಿದ್ದು ಪತ್ರಿಕೆಯಲ್ಲಿ ಓಪನ್ ಆಗಿ ಬಂದಿರತಕ್ಕ ವಿಷಯ. ಒಂದಲ್ಲ, ಮೂರು ಸಲ ಪ್ರಸ್ತಾಪ ಮಾಡಿರತಕ್ಕ ವಿಷಯ.

6-00 P. M.

Mr. DEPUTY SPEAKER.—I am here belonging to no party. I belong to the entire House as a trustee to protect every hon. member. My rights are limited. I cannot force him to give any information which he does not want to give or incapable of giving. when a

insinuation is made it is upto the member to substantiate it, giving full facts and details so that it can be understood. If that is not done then the charge has no meaning.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿ ಸದಸ್ಯರು ಈಗಿರತಕ್ಕವರ ಮೇಲೆ ಆರೋಪಣೆ ಮಾಡಿದಾಗ ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ.

ಉಪಾಧ್ಯಕ್ಷರು.—ಅವರು ಸಬ್‌ಸ್ಟ್ಯಾಂಸಿಯೇಟ್ ಮಾಡಬೇಕು ಇಲ್ಲದಿದ್ದರೆ ಜನ ಏನು ಹೇಳುತ್ತಾರೆ......

Sri C.M. ARUMUGHAM.—There is a convention not only here but in other States too.

Sri A. A. DESAI.—I have a point of order. Under rule 288 a member while speaking shall not make a personal charge against another member. So this House cannot take cognisance of the charge made by the hon. member. That portion may be expunged from the proceedings.

Mr. DEPUTY SPEAKER.—The same point was raised by the hon. member the other day. The hon. member Sri Sriramulu has said that one hon. member from this side. He may please name him. Otherwise please withdraw the remark.

Sri K. F. PATIL.—He did not make allegation himself. He said that it appeared in the papers.

Mr. DEPUTY SPEAKER.—I have heard clearly, He said one member from this side. Either you have to name him or withdraw the remark.

Sri M. MALLAPPA.—He said that it has appeared in the press. He did not make the allegation.

ಶ್ರೀ ಕೆ. ಶ್ರೀರಾಮುಲು.—ಒಬ್ಬ ಕಾರ್ಪೊರೇಷನ್ ಸದಸ್ಯರು ಒಂದು ವರ್ಷ ಸದಸ್ಯರು ಆದರೆ ಎರಡು ಅಂಬಾಸಿಡರ್ ಕಾರ್ ಮಾಡುತ್ತಾರೆ, ಒಂದು ಮನೆ ಮಾಡುತ್ತಾರೆ ಅಂತ ಒಂದು ಚಾರ್ಜ್ ಇತ್ತು. ಕಾರ್ಪೊರೇಷನ್ ವರ್ಕಿಂಗ್ ಕಮಿಟಿ ಚೇರ್‌ಮನ್ ಆಗಿ ಇದ್ದವರ ಮೇಲೆ ಶ್ರೀಮಾನ್ ನಾರಾಯಣ ಕುಮಾರ್ ಅವರು ಮೂರು ಸಲ ಈ ಪ್ರಶ್ನೆ ರೈಸ್ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಇಲ್ಲಿ ಡೈರೆಕ್ಟ್ ಆಗಿ ಇಂಥವರೇ ತೆಗೆದುಕೊಂಡಿದ್ದಾರೆ ಎಂದು ಡೈರೆಕ್ಟ್ ಚಾರ್ಜ್ ಮಾಡಿಲ್ಲ, ಪತ್ರಿಕೆಯಲ್ಲಿ ಬಂದಿದೆ, ಅದನ್ನು ಮಾತನಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಯಾರು ಹೇಳಲೇ ಬೇಕು. ಗುರಿಯಿಲ್ಲದೆ ಹೇಳಿದರೆ ಒಪ್ಪುವುದಿಲ್ಲ. ಈ ಸಭೆಯಲ್ಲಿ ಹೇಳಬೇಕು.

ಉಪಾಧ್ಯಕ್ಷರು.—ಪತ್ರಿಕೆಯಲ್ಲಿ ನಾನು ನೋಡಲಿಲ್ಲ, ಬಾಕಿ ಸದಸ್ಯರಿಗೆ ಗೊತ್ತಿಲ್ಲ. ತಾವು ಈ ಸದನದ ಆ ಬದಿ ಒಬ್ಬ ಸದಸ್ಯರು ಎಂದು ಹೇಳಿದ್ದೀರಿ. ಆದರ ಸಲುವಾಗಿ ಸದಸ್ಯರ ಹೆಸರನ್ನು ಸ್ಪಷ್ಟವಾಗಿ ಹೇಳಬೇಕು. ತಾವು ದಯಮಾಡಿ ಯಾವುದೇ ಕಾರಣದಿಂದ ಅದು ಸಾಧ್ಯವಿಲ್ಲದಿದ್ದಲ್ಲಿ ಆ ರಿಮಾರ್ಕನ್ನು ಹಿಂತೆಗೆದುಕೊಳ್ಳಬೇಕು.

ಶ್ರೀ ಕೆ. ಶ್ರೀರಾಮುಲು.—ಶ್ರೀ ಪೂಸಲಿಂಗಮ್ ಎಂದು ಪತ್ರಿಕೆಯಲ್ಲಿ ಬಂದಿದೆ. ಅವರಿವರು ಆ ರೀತಿ ಹೇಳಿದ್ದಾರೆ ಎಂದರೆ ಪ್ರೊಸಿಡಿಂಗ್ಸ್ ತರಿಸಿ ತಮಗೆ ಗೊತ್ತಾಗುತ್ತದೆ. ಆ ಸದಸ್ಯರು ಇಲ್ಲದೆ ಇದ್ದ ಕಾರಣ ನಾನು ಹೆಸರು ಹೇಳಲಿಲ್ಲ. ಒಬ್ಬ ಸದಸ್ಯರು ಇಲ್ಲದೆ ಇದ್ದಾಗ ಅವರ ಹೆಸರು ಹೇಳಬಾರದು ಎಂದು ಪಾರ್ಲಿಮೆಂಟರಿ ಪ್ರೊಸೀಜರ್ ನನಗೆ ಗೊತ್ತಿದೆ. ಆದಕ್ಕೋಸ್ಕರ ಹೆಸರನ್ನು ಹೇಳಲಿಲ್ಲ. ಕಾಂಗ್ರೆಸ್ (ಆರ್) ಕಡೆ ಇದ್ದಾರೆಂದು ಅವರು ಹೆಸರು ಕೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ಇದು ಕಾಂಗ್ರೆಸ್ "ಆರ್" ಕಾಂಗ್ರೆಸ್ "ಓ" ಪ್ರಶ್ನೆಯಲ್ಲ. ಈ ಕಡೆಯಲ್ಲಿ ಎಂದು ಸ್ಪಷ್ಟವಾಗಿ ಆರೋಪಣೆ ಮಾಡಿದ್ದೀರಿ...It is for the member either to deny or refute the charge. We will give an opportunity to him to defend himself.

ಶ್ರೀ ಕೆ. ಶ್ರೀರಾಮುಲು.—ಒಬ್ಬ ಸದಸ್ಯರಿಗೆ ಅವಮಾನ ಮಾಡಬೇಕೆಂದು ನನ್ನ ಇಚ್ಛೆ ಇಲ್ಲ. ಆದುದರಿಂದ ನಾನು ಮಾತನಾಡುವಾಗ ಅನೇಕ ಸದಸ್ಯರು ಹೆಸರನ್ನು ಕೇಳಿದ್ದಕ್ಕೆ ಹೇಳಿದೆ.

Sri C. M. ARUMUGAM.—What has been done all these days is, during the course of the debate there used to be some attack against the members of the ruling party and ministers.

Sir, the hon. Member has made some allegations against another hon. Member. The freedom of speech and democracy is not only here but also in U.K. and other countries. We have copied many of the rules from U.K. I want to know from the Hon. Chair whether you have permitted Sri Sriamulu to make such allegations ?

Mr. DEPUTY SPEAKER.—I must tell hon. Member Sri Sriramulu that he has made a charge against another hon. Member based on some newspaper reports. When you have made the charge you must stand by and take the responsibility. But you cannot be under the impression that proceedings of the House cannot be challenge in any Court of law. If you make a charge you must also be prepared to face it.

Sri K. H. PATIL.—Sir, I would like to know as a Member of this House whether what the Hon. Chair has just now stated is a ruling based on the point of order raised by hon. Member Sri Armugham ?

Mr. DEPUTY SPEAKER.—I might tell you that hon. Member Sri Armughum did not raise a point of order and what I stated was not at all a ruling: But there are certain precedents that making charges against another hon. Member is a serious matter and if any hon. Member makes a charge he must take the responsibility for it.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಕೆ. ಎಚ್. ಪಾಟೀಲರು ಒಂದು ಪಾಯಿಂಟ್ ಎತ್ತಿದರು. ಆ ಕಡೆಯಿಂದಾಗಲಿ ಈ ಕಡೆಯಿಂದಾಗಲಿ ಮಾನ್ಯ ಸದಸ್ಯರ ಮೇಲಾಗಲಿ, ಮಾನ್ಯ ಮಂತ್ರಿಗಳ ಮೇಲಾಗಲಿ ಆಪಾದನೆ ಮಾಡುವುದು...

Sri K. H. PATIL.—I don't say that Ministers should not be accused. But as the Hon. Deputy Speaker observed just now any member who makes a charge against another hon. Member should take the responsibility.

Sri H. D. DEVE GOWDA.—I quite agree with the point raised by Mr. K. H. Patil. But so far as the charges made by me yesterday, if they are baseless, people will certainly judge us.

Sri K. H. PATIL.—I am not taking the benefit of this ruling for previous happenings. But for future guidance.

Mr DEPUTY SPEAKER.—Such precedents are already there.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಸ್ವಾಮಿ, ನಾನು ಒಂದು ಕ್ರಿಯಾಲೋಪ ವನ್ನು ಎತ್ತಿದ್ದೇನೆ. ಅದು ಏನೆಂದರೆ ಈಗ ಗಂಟೆ 6ಕ್ಕೆ ಬರುತ್ತಾ ಇದೆ. ಈ ಸಭೆಯ ಕಾಲವನ್ನು ಮುಂದುವರಿಸಿಲ್ಲ, ಆದುದರಿಂದ ಈಗ ನಡೆಯುತ್ತಾ ಇರುವುದು ಕ್ರಮಬದ್ಧವಾದುದಲ್ಲ. ಈ ಬಗ್ಗೆ ತಾವು ತೀರ್ಮಾನ ಕೊಡಬೇಕು.

Mr. DEPUTY SPEAKER.—Yesterday a similar point of Order was raised and I replied that in the List of Business only the commencement time is given, but not the concluding time. Therefore, I am within my powers to continue the discussion.

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಅಧ್ಯಕ್ಷರೇ, ತಮ್ಮ ರೂಲಿಂಗ್‌ನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ನಾನು ಈ ಸಭೆಯ ಸದಸ್ಯನಾಗಿ ನೇರವಾಗಿ ಇಂಥ ಸದಸ್ಯರು ಎಂದು ಹೇಳಲಿಲ್ಲ. ನಾನು ಹೇಳಿದ ವಿಷಯ ಕಾರ್ಪೋರೇಷನ್ ಸಭೆಯಲ್ಲಿ ನಡೆದಂಥ ವಿಷಯಗಳು ಪತ್ರಿಕೆಗಳಲ್ಲಿ ಪ್ರಕಟ ವಾಗುತ್ತಿವೆ. ಪ್ರೊಸೀಡಿಂಗ್ಸ್ ತರಿಸಿ ಪರಿಶೀಲಿಸಬಹುದು. ಅದ್ದರಿಂದ ಮಾನ್ಯ ಮಂತ್ರಿಗಳು ಒಂದು ಕಾನೂನು ಮಾಡಿ ಕಾರ್ಪೋರೇಷನ್ ಸದಸ್ಯರಲ್ಲಿ ಇಂಥ ಲೂಪ್‌ಹೋಲ್ಸ್, ಆಗುವುದಕ್ಕೆ ಅವಕಾಶವಿಲ್ಲದಂತೆ ಮಾಡಲು ಒಂದು ಕಾನೂನನ್ನು ಮಾಡಿ ಎಂದು ನಾನು ಹೇಳುತ್ತಿದ್ದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಮಾಡಿದ್ದೆಲ್ಲ ಮಾಡಿ ತಪ್ಪಿಸಿಕೊಳ್ಳುವುದಕೆ ಮೇಲೆ ಕೆಳಗೆ ಮಾಡುವುದು ಸರಿಯಲ್ಲ.

Mr. DEPUTY SPEAKER.—I have pinpointed what exactly the hon: member has to do, and he has to substantiate it. Whatever he has said is on record. It is clear that the charge is not substantiated. It will rest there only. What can I further do?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಮಾತನಾಡುವಾಗ ಯಾವುದೋ ಸಂದರ್ಭ ದಲ್ಲಿ ಯಾವುದೋ ಪತ್ರಿಕೆಯಲ್ಲಿ ಹೀಗೆ ವರದಿಯಾಗಿದೆ ಎನ್ನುವುದನ್ನು ಹೇಳಿದರು...

Mr. DEPUTY SPEAKER.—I have made the position very clear, If he cannot substantiate and if some other members are repeating the same thing, what can I do?

Sri C. M. ARUMUGHAM.—I have one submission to make. The hon. member Sri Sreeramulu made an allegation against Sri Poosalingam. Sri Poosalingam belongs to D.M.K. party. With the support of 13 councillors belonging to D.M.K., the newly-born baby of 10 months, the Ruling Congress is ruling the Bangalore City Corporation. Just because of the fear that they may not support them in future, the hon. member is trying to twist his statement. Without the support of the D.M.K., it is impossible for the Congress (R) to rule the Bangalore City Corporation.

(Many members from both sides stood up and began to speak)

Sri K. H. PATIL.—Sir, I wish to submit that discussion about party matter is outside the scope.

ಶ್ರೀ ವಾಟಾಳ್ ನಾಗರಾಜ್.—ಎಲ್ಲರೂ ಕುಳಿತುಕೊಳ್ಳುವವರೆಗೂ ನಾನು ನಿಂತೇ ಇರುತ್ತೇನೆ.

Mr. DEPUTY SPEAKER.—Order, Order. The hon. member may continue his speech.

ಶ್ರೀ ಕೆ. ಶ್ರೀರಾಮುಲು.—ಇನ್ನೊಬ್ಬರ ಮೇಲೆ ಅವರು ಹೇಳುವುದಕ್ಕೆ ಅವಕಾಶ ಕೊಡಬೇಕು, ಆದರೆ, ನಾವು ಹೇಳುವುದನ್ನು ಕೇಳುವುದಿಲ್ಲ.

(ಶ್ರೀ ಕೆ. ಶ್ರೀರಾಮುಲು)

ಶ್ರೀ ತಿವಾರಿ ಅವರು ಛೇರ್ಮನ್ ಆಗಿದ್ದ ಕಾಲದಲ್ಲಿ ಮಾನ್ಯ ಪೂಸಲಿಂಗಂ ಅವರು ವರ್ಕ್ಸ್ ಕಮಿಟಿ ಛೇರ್‌ಮನ್ ಆಗಿದ್ದಾಗ ನಡೆಯಿತು ಎನ್ನುವ ವಿಚಾರ ಶ್ರೀ ನಾರಾಯಣ ಕುಮಾರ್ ಅವರು ಪ್ರಸ್ತಾಪ ಮಾಡಿದ್ದು ಅದೆಲ್ಲ ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ಯಾರೂ ಕೂಡ ಇಲ್ಲ ಎಂದು ಹೇಳಿಲ್ಲ. ಆದುದರಿಂದ ಇಂಥದಕ್ಕೆ ಅವಕಾಶ ಕೊಡಬೇಡಿ, ಕಾರ್ಪೊರೇಷನ್ ಸದಸ್ಯರಲ್ಲಿ ಇಂಥ ಲೂಪ್‌ಹೋಲ್ಸ್ ನಡೆದರೆ ಅವರನ್ನು ಜವಾಬ್ದಾರಿ ಮಾಡುವುದಕ್ಕೆ ಕಾನೂನು ತನ್ನಿ ಎನ್ನುವ ವಿಚಾರವನ್ನು ನಾನು ಹೇಳುತ್ತಿದ್ದೆ. ನಾನು ಡೈರೆಕ್ಟಾಗಿ ಇಂಥವರು ಎಂದು ಹೆಸರು ಹೇಳಲಿಲ್ಲ. ಆ ಕಡೆಯವರೋ ಈ ಕಡೆಯವರೋ ಎಂದು ಕೇಳಿದ್ದಕ್ಕೆ ಆ ಕಡೆಯವರು ಎಂದು ಹೇಳಿದೆ.

Sri C. M. ARUMUGHAM.—Sir, you will have to kindly give a Ruling.

Mr. DEPUTY SPEAKER.—It amounts to withdrawal.

Sri C. M. ARUMUGHAM.—No, Sir, it is not.

6–30 P. M.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಇಲ್ಲಿ ಕೆಲವು ಮಾತುಗಳನ್ನು ಹೇಳುತ್ತ ಡೈರೆಕ್ಟ್ ಆಗಿ ಇದರಲ್ಲಿ ಶ್ರೀ ಪೂಸಲಿಂಗಂರವರು ಜವಾಬುದಾರರು ಎಂದು ಪತ್ರಿಕೆಗಳಲ್ಲಿ ಬಂದಿರುವ ಹೇಳಿಕೆಯನ್ನು ಅವರು ಡಿನೈ ಮಾಡಿಲ್ಲ ಎಂದು ಹೇಳಿದರು. ಇದನ್ನೆಲ್ಲಾ ಇಲ್ಲಿ ಹೇಳಲು ರೈಟ್ ಇಲ್ಲ. ಶ್ರೀ ಪೂಸಲಿಂಗಂರವರ ಬಗ್ಗೆ ಆಪಾದನೆಗಳನ್ನು ಮಾಡುವಾಗ ಮಾನ್ಯ ಸದಸ್ಯರು ಅದನ್ನು ಸರಿಯಾಗಿ ಸಬ್‌ಸ್ಟಾನ್‌ಷಿಯೇಟು ಮಾಡಿ ಹೇಳಬೇಕು. ಇದನ್ನು ವಿವರವಾಗಿ ಹೇಳುತ್ತಾರೆಯೇ ?

ಶ್ರೀ ಕೆ. ಶ್ರೀರಾಮುಲು.—ಒಬ್ಬ ಸದಸ್ಯರು ಒಂದೇ ವರ್ಷದಲ್ಲಿ ಒಂದು ಲಕ್ಷ ರೂಪಾಯಿ ಬೆಲೆ ಬಾಳುವ ಮನೆ ಕಟ್ಟಿಕೊಂಡಾಗ, ಇದನ್ನೆಲ್ಲಾ ಸಾರ್ವಜನಿಕರು ಕೊಡುವ ತೆರಿಗೆಗಳಿಂದ ಸಂಪಾದನೆ ಮಾಡಿಕೊಂಡು ಕಟ್ಟಿರುವುದು ಎಂದು ಹೇಳಿದರೆ ಅದರಲ್ಲಿ ತಪ್ಪೇನು ? ಇಷ್ಟು ಮಾತನಾಡುವುದಕ್ಕೂ ಅವಕಾಶ ಇರಬೇಡವೇ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಶ್ರೀ ಶ್ರೀರಾಮುಲುರವರು ಹೇಳುವಂತೆ ಎಲ್ಲಿಯೇ ಭ್ರಷ್ಟಾಚಾರದ ಆಪಾದನೆಗಳನ್ನು ಯಾರೆ ಮಾಡಿರಲಿ ಅಂತಹವರಿಗೆ ಶಿಕ್ಷೆಯಾಗಲೇ ಬೇಕು. ಆದರೆ ಪತ್ರಿಕೆಯಲ್ಲಿ ಬಂದಿರುವುದನ್ನು ಒಂದು ಆಧಾರವಾಗಿ ಇಟ್ಟು ಇಲ್ಲಿ ಆಪಾದನೆ ಮಾಡುವುದು ಸರಿಯೆ ? ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

(ಐದಾರು ಜನ ಸದಸ್ಯರು ಒಟ್ಟಿಗೆ ಎದ್ದು ಪ್ರತಿಭಟಿಸಿದರು)

ಶ್ರೀ ಹೆಚ್. ಡಿ. ದೇವೇಗೌಡ.—ಯಾವ ಮುಖಕ್ಕಾದರೂ ಬಣ್ಣ ಹೊಡೆಯಬೇಕೆಂದು ಇಲ್ಲವೇ ಟಾರು ಹೊಡೆಯಬೇಕೆಂದು ಇಲ್ಲಿ ಹೇಳುವುದು ಸರಿಯಲ್ಲ. ರಾಜಕೀಯ ಜೀವನದಲ್ಲಿ ಇವೆಲ್ಲ ಬರುತ್ತದೆ. ನಿನ್ನೆ ಶ್ರೀ ನಾಗಣ್ಣನವರು ಮಾತನಾಡುವಾಗ ಮುಖ್ಯ ಮಂತ್ರಿಗಳಿಂದ ಲಿಖಿತವಾಗಿ ಬಂದ ಕಾಗದದ ಆಧಾರದ ಮೇಲೆಯೇ ಅವರು ಇಲ್ಲಿ ಪ್ರಸ್ತಾಪ ಮಾಡಿದರು ಮತ್ತು ಅವರು ತಮ್ಮ ಜವಾಬುದಾರಿಯಿಂದ ಹಿಂದೆ ಹೋಗಲಿಲ್ಲ.

Mr. DEPUTY SPEAKER.—The proceedings of yesterday need not be referred to day. It is not permissible.

Sri K. H. PATIL.—I may bring to the notice of the Hon. Leader of the Opposition the relevant rule of the Rules of Procedure. Rule 285 of the Rules of Procedure reads like this :

"Whilst the Assembly is sitting, a member —

(i) shall not read any book, newspaper or letter except in connection with the business of the Assembly ; "

Sri K. M. NAGANNA.—No body has prevented him from quoting from the news paper.

Sri K. H. PATIL.—He has not quoted from the news paper but he is stating from his memory of what had appeared in the newspaper sometime back and which remains uncontradicted. This does not mean that he should read the newspaper or quote from the press.

Mr. DEPUTY SPEAKER.—If one has to base his remark on something which has appeared in the newespaper, he must base it so, taking all the responsibility almost vouchsafing and he must be prepared to face the consequences also.

ಶ್ರೀ ಹೆಚ್. ಡಿ. ದೇವೇಗೌಡ.— ಮೊನ್ನೆ ಆಡಳಿತ ಪಕ್ಷದ ಮಾನ್ಯ ಸದಸ್ಯರು ಚಾರ್ಜ್ ಮಾಡಿದರು. ಅವರೇ ಜವಾಬು ದಾರಿ ವಹಿಸಿಕೊಂಡು ಚಾರ್ಜು ಮಾಡುವಾಗ ಇದನ್ನು ಹಾಗೇ ಬಿಡುವ ಪ್ರಶ್ನೆ ಯಿಲ್ಲ.

ನಿನ್ನೆ ನಾನು ಸಾರಿಗೆ ಮಂತ್ರಿಗಳ ಮೇಲೆ ಚಾರ್ಜುಗಳನ್ನು ಮಾಡಿದ್ದೇನೆ.

I have made certain charges against some institutions and I have told that I whould abide by those charges. Sri Sriramalu has referred to the proceedings of the Corporation which had appeared in the press. I do not know what those proceedings are and what has appeared in the press. If he wants to base his remarks on the Press report, I want to know from him whether he is prepared to substantiate that charge? That is all what I want to know from him.

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ ಈ ಮಾತನ್ನು ರಾಜಕೀಯ ಆಧಾರದ ಮೇಲೆ ಹೇಳು ತ್ತಿಲ್ಲ. ಪತ್ರಿಕೆಗಳಲ್ಲಿ ಬಂದಿರತಕ್ಕ ವಿಷಯ ಕಾರ್ಪೊರೇಷನ್ ಸದಸ್ಯರು ಹೇಳಿದರು ಎಂದು ಇದೆ. ಇಲ್ಲದ್ದ ಸದಸ್ಯರು, ಇಲ್ಲ ಎಂದು ಹೇಳಲಿಲ್ಲ.

(Some hon. members were standing and there were shouts and countershouts. There was confusion in the House and nothing was audible)

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ರುಜುವಾತು ಮಾಡುವುದು ಕಷ್ಟ.

ಶ್ರೀ ವಾಟಾಳ್ ನಾಗರಾಜ್.—ನಿನ್ನೆ ಶ್ರೀಮಾನ್ ನಾಗಣ್ಣನವರು ಕೆಲವು ಅಪಾದನೆಗಳನ್ನು ರುಜುವಾತು ಮಾಡಲು ಎಲ್ಲ ಆಧಾರಗಳನ್ನೂ ಇಲ್ಲಿ ತಂದಿದ್ದರು. ಅದೇ ರೀತಿ ಇಲ್ಲಿ ಕೂಡ ಮಾನ್ಯ ಸದಸ್ಯರು ಏಕೆ ತರಲಿಲ್ಲ ? ಅವರ * * * ಇವರೆಲ್ಲ ಆಗ ಎಲ್ಲಿಗೆ ಹೋಗಿದ್ದರು ?

ಅನೇಕ ಸದಸ್ಯರು ಒಟ್ಟಿಗೆ ಎದ್ದರು. (ಗಲಾಟೆ)

Mr. DEPUTY SPEAKER.—I request all the hon. members who are standing to please resume their seats.

(Many hon. members were standing and Sri Vatal Nagaraj was shouting at the top of his voice and nothing was heard).

Mr. DEPUTY SPEAKER.—When I tell something to one hon. member, the same thing applies to all other hon. members. Repeatdely I told the same thing to Sri C.M Armugam and the same thing to Sri Kagodu Thimmappa What applies to one member, applies to other members also. You must have patience to hear the hon. member Sri Sriramalu. He is explaining the whole position. If you go on interrupting and shouting, there would be counter shouts. The matter cannot be solved and will not be solved by rising the voice. You must

* * * Words expunged as ordered by the Chair

(Mr. DEPUTY SPEAKER)

be patient enough to hear him. Hon. members have got other procedure to pursue the matter and that I need not explain to you from this place. Why the hon. members are feeling so helpless, I cannot under stand. Hon, member Sri Sriramalu has got a right to speak and he must be heard with rapt attetion, I request Sri Sriramalu to please speak in a petient voice and explain the whole position as briefly as possible.

ಶ್ರೀ ಕೆ. ಎಚ್. ರಂಗನಾಥ.—ನನ್ನದೊಂದು ಕ್ರಿಯಾಲೋಪವಿದೆ ಏನೆಂದರೆ, ಶ್ರೀ ವಾಟಾಳ್ ನಾಗರಾಜ್‌ಅವರು ಭಾವನಾಪರವಶರಾಗಿ ಮಾತನಾಡುವಾಗ ಏನು ಮಾತನಾಡುತ್ತಿದ್ದೇನೆಂಬುದ್ ಅವರಿಗೇ ಗೊತ್ತಿರುವುದಿಲ್ಲ. ಶ್ರೀಮಾನ್ ಆರ್ಮುಗಂ ಅವರು ಮತ್ತು ಶ್ರೀಮಾನ್ ದೇವೇಗೌಡರು ರಿಲೆವೆಂಟ ಆಗಿ ಡಿಸ್‌ಕಸ್ ಮಾಡುತ್ತಿದ್ದಾಗ ಇವರು ಎದ್ದುನಿಂತುಕೊಂಡು. *** Sri Armugam has raised an issue that the respect and dignity of the members should be protected, ಎಂದು ಹೇಳಿದ್ದಾರೆ. ಅಂತಹ ಪರಿಸ್ಥಿತಿಯಿರುವಾಗ ಅಂತಹ ವಾತಾವರಣವಿರುವಾಗ ಶ್ರೀ ವಾಟಾಳ್ ನಾಗರಾಜ್ ಅವರು ಆ ರೀತಿ ಕೇಳಿದ್ದು ಸರಿಯೇ? As if he the only potent man and all others are impotent ಎನ್ನುವ ಅರ್ಥ ಬರುವ ರೀತಿಯಲ್ಲಿ ಅವರು ಏನು ಹೇಳಿದರು ಅದು ಈ ಸಭೆಯ ಘನತೆ ಗೌರವಕ್ಕೆ ತಕ್ಕದ್ದಲ್ಲ. ಅವರು ಹೇಳಿದ್ದು ಪ್ರೊಸೀಡಿಂಗ್ಸ್‌ನಲ್ಲಿ ಬಂದಿದ್ದರೆ ಅದನ್ನು ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಈ ಸಭೆಯ ಘನತೆಗೌರವವನ್ನು ಕಾಪಾಡುವ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ತಾವು ಅವರಿಗೆ ಡೈರಕ್ಷನ್ ಕೊಡಬೇಕೆಂದು ಸಹ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ--ಈ ಸಭೆಯ ಘನತೆ ಗೌರವಕ್ಕೆ ಚ್ಯುತಿ ತರುವಂತೆ ಈ ಸಭೆಯ ಯಾವ ಸದಸ್ಯರು ಮಾತನಾಡಿದರೂ ಅದು ಸರಿಯಲ್ಲ. ಶ್ರೀಮಾನ್ ರಂಗನಾಥ್ ಅವರ ಫೀಲಿಂಗ್ ಏನಿದೆ ಅದನ್ನು ತಪ್ಪು ಎಂದು ನಾನು ಹೇಳುತ್ತಿಲ್ಲ. ಆದರೆ ಈ ವಿಚಾರದಲ್ಲಿ ತಾವು ರೂಲಿಂಗ್ ಕೊಡುವಾಗ ಸ್ವಲ್ಪ ಯೋಚನೆ ಮಾಡಿ ರೂಲಿಂಗ್ ಕೊಡುವುದು ಒಳ್ಳೆಯದು. ಏಕೆಂದರೆ ಶ್ರೀಮಾನ್ ಸಿದ್ದವೀರಪ್ಪನವರು ಈ ಕಡೆ ಇದ್ದಾಗ ಆಗಿನ ಸರ್ಕಾರವನ್ನು ಷಂಡ ಸರ್ಕಾರ ಎಂದು ಹೇಳಿದ್ದನ್ನು ನಾವು ಕೇಳಿದ್ದೇವೆ. ಅದು ಪ್ರೊಸೀಡಿಂಗ್ಸ್‌ನಲ್ಲಿಯೂ ಇದೆ.

ಉಪಾಧ್ಯಕ್ಷರು.—ಅದು ನನಗೆ ಗೊತ್ತಿದೆ.

(ಅನೇಕ ಮಾನ್ಯ ಸದಸ್ಯರು ಮಾತನಾಡಲು ಎದ್ದು ನಿಂತರು)

Mr. DEPUTY SPEAKER. I am on my legs. When one point of order is there must reply it. Why do you come in the way. I have allowed the Leader of the Opposition to speak and I have heard him,

There is great force in the point of order raised by Sri K H. Ranganath. I have heard him patiently. I have heard Sri Vatal Nagaraj when he said it. What he said is not proper. I do not know whether it is entered in the records, because so many people were speaking at the top of their voice. If it is entered in the records let it be treated as expunged,

ಶ್ರೀ ಕೆ. ಪುಟ್ಟಸ್ವಾಮಿ.—ಸರ್ಕಾರ, ನ್ಯೂಟರ್ ಜಂಡರ್.

Sri H. S. SIDDAPPA.--I am on a point of order. I want to know whether the Government is a neuter gender. If it is so how can it be a neuter gender?

*** words expunged as ordered by the chair.

Mr. DEPUTY SPEAKER.—I have listened to your point of order. It requires some little time for giving ruling. I will give my ruling at leisure.

Sri B. V. KAKKILAYA.—He was referring to a Press Report and said that the report was not denied by the concerned member. When the Press report is not denied by the member concerned, can it be taken as correct and can a member make reference of that report which is not contradicted by the concerned person? This is a very important point of order I am raising. Please give a ruling on that.

Sri K. H. PATIL.—Whether it is to be confirmed or denied is to be taken in the right spirit. It is left to the parties concerned. On this you may not elaborate any decision.

Mr. DEPUTY SPEAKER—I have not heard Sri Kakkilaya correctly. Let him repeat his point of order.

Sri B. V. KAKKILAYA.-Sri Sriramulu said certain allegations were made in the Press against Sri Poosalingam and these allegations were not contradicted by Sri Poosalingam. When the allegations are not denied by the Hon. Member Poosalingam it implies that the Press is correct and Sri Poosalingam has accepted the allegations made This is the implication of the statement made by Sri Sriramulu. Can we take it as correct when it is not denied by the member and can we refer the same in the House?

Mr. DEPUTY SPEAKER. It is a hypothetical point of order. I do not know what appeared in the paper. But the Hon Member says it appeared in the Press and it was not denied or contradicted by the concerned member or something like that. If certain things do not come to my information on certain matter, I cannot give a rulling on hypothetical issues.

ಶ್ರೀ ಕೆ. ಶ್ರೀರಾಮುಲು.-ಆದ್ದರಿಂದ ಮತ್ತೊಂದು ಸಲ ಹೇಳುತ್ತೇನೆ. ಈ ಸದನದ ಸದಸ್ಯರ ಮನಸ್ಸನ್ನು ನೋಯಿಸಬೇಕೆಂದು ನಾನು ಯಾವ ವಿಷಯವನ್ನು ಹೇಳಲಿಲ್ಲ. ಪತ್ರಿಕೆಗಳಲ್ಲಿ ಬಂದಿರುವ ವಿಷಯವನ್ನು ಮಾತ್ರ ನಾನು ಹೇಳಿದೆ. ಅದನ್ನು ಪ್ರಸ್ತಾಪ ಮಾಡುವುದೇ ಅಪರಾಧ ಎಂದು ಮಾನ್ಯ ಸದಸ್ಯರು ಪ್ರಶ್ನೆ ಮಾಡುವುದಾದರೆ, ಹಿಂದೆ ಈ ಸದನದಲ್ಲಿ ಅನೇಕ ಮಾನ್ಯ ಸದಸ್ಯರು ಪತ್ರಿಕೆಗಳ ಆಧಾರದ ಮೇಲೆ ಮಾತನಾಡಿರುವುದನ್ನು ಕಳೆದ ಒಂದು ವರ್ಷದ ಅವಧಿಯಲ್ಲಿ ಕೇಳಿದ್ದೇನೆ. ಸ್ಪಷ್ಟವಾದ ಆಪಾದನೆಗಳನ್ನು ಸಹ ಮಾಡಿದ್ದಾರೆ

ಉಪಾಧ್ಯಕ್ಷರು.—ಅದನ್ನು ಬಿಟ್ಟು ಬೇರೆ ವಿಷಯವನ್ನು ಹೇಳಿ.

ಶ್ರೀ ಕೆ. ಶ್ರೀರಾಮುಲು.—ನಾನು ಲಂಚಗುಳಿತನವನ್ನು ಯಾವ ರೀತಿ ಕಡಿಮೆ ಮಾಡಬೇಕೆಂಬುದರ ಬಗ್ಗೆ ಮಾತನಾಡುತ್ತಿದ್ದೆ. ಈ ಬಗ್ಗೆ ಮತ್ತೊಂದು ಸಲ ಮಾನ್ಯ ಮಂತ್ರಿಗಳಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ನಾವೆಲ್ಲರೂ ಚುನಾಯಿತ ಸದಸ್ಯರು. ಜನಗಳು ನಮ್ಮನ್ನು ಆರಿಸಿ ಇಲ್ಲಿಗೆ ಕಳುಹಿಸಿದ್ದಾರೆ. ನಾವು ದೇಶಕ್ಕೆ ಒಳ್ಳೆಯದು ಮಾಡಬೇಕು. ಮುನಿಸಿಪಾಲಿಟಿಗಳಾಗಲೀ, ಟ್ರಸ್ಟ್ ಬೋರ್ಡ್ ಆಗಲಿ ಹೌಸಿಂಗ್ ಬೋರ್ಡ್ ಆಗಲೀ ಅಲ್ಲಿ ಏನಾದರೂ ನ್ಯೂನತೆಗಳು ಇದ್ದರೆ ಅವುಗಳನ್ನು ಸರಿಪಡಿಸಬೇಕು. ಈಗ ಒಂದು ವೇಳೆ ಆಫೀಸರುಗಳ ಮೇಲೆ ಲಂಚದ ಆಪಾದನೆಗಳು ಇದ್ದರೆ ಅವನ್ನು ವೇವ್ ಮಾಡುವ ಪ್ರಶ್ನೆ ಬರುವುದಿಲ್ಲ. ಈಗ ಯಾವುದೇ ಕಾರ್ಪೊರೇಷನ್ ಸದಸ್ಯರು ಕಾರ್ಪೊರೇಷನ್ ಏರಿಯಾದಲ್ಲಿ ಯಾವುದೇ ಕೆಲಸವನ್ನು ಮಾಡಿಸುವುದಕ್ಕೆ ಒಪ್ಪಿಕೊಂಡಾಗ ಎಲ್ಲಿ ಕೆಲಸವನ್ನು ಮಾಡಿಸಿಕೊಳ್ಳುತ್ತಾರೆಯೋ ಆ ಕೆಲಸಕ್ಕೆ ಅವರು ಜವಾಬ್ದಾರರಾಗಬೇಕು. ಲಂಚಗುಳಿತನ ಹೋಗಬೇಕು.

(ಶ್ರೀ ಕೆ. ಶ್ರೀರಾಮುಲು)

ಈಗ ಟ್ರಸ್ಟ್ ಬೋರ್ಡಿನಲ್ಲಿ ಹತ್ತಾರು ವರ್ಷಗಳಿಂದ ಸದಸ್ಯರಾಗಿರುವವರೇ ಇನ್ನೂ ಮುಂದುವರಿಯುತ್ತಿದ್ದಾರೆ, ಈ ರೀತಿ ಅವರು ಮುಂದುವರಿಯುವುದು ಸರಿಯಲ್ಲ. ಅದನ್ನು ಸರಿಪಡಿಸುವುದಕ್ಕೆ ಒಂದು ಕಾನೂನು ತರಬೇಕು. ಹೌಸಿಂಗ್ ಬೋರ್ಡ್, ಟ್ರಸ್ಟ್, ಬೋರ್ಡ್, ಕಾರ್ಪೊರೇಷನಗಳಲ್ಲಿ ಇಡೀ ಮೈಸೂರು ಸಂಸ್ಥಾನದಲ್ಲಿ ಒಳ್ಳೆಯ ಕೆಲಸ ನಡೆಯುತ್ತಿಲ್ಲ. ಕಾರ್ಪೋರೇಷನಗಳು ಮತ್ತು ಮುನಿಸಿಪಾಲಟಿಗಳು ಸಾರ್ವಜನಿಕರಿಗೆ ತೆರಿಗೆದಾರರಿಗೆ ಬೇಕಾದಂತಹ ಕೆಲಸವನ್ನು ತಕ್ಷಣ ಮಾಡುವುದಕ್ಕೆ ಅವಕಾಶವಿರುವಂತಹ ಕಾನೂನು ಏನಿದೆ ಅದನ್ನು ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಭೆಯು ಮುಖಾಂತರ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಂಡು ಈಗ ಈ ಸಭೆಯು ಮುಂದೆ ಸರ್ಕಾರದವರು ತಂದಿರತಕ್ಕ ಬೇಡಿಕೆಗಳು ಏನಿವೆ ಅವುಗಳಿಗೆ ನನ್ನ ಒಪ್ಪಿಗೆ ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER—Whenever there is some trouble, I would urge upon every hon. Member to help to see that the trouble is eradicated and the work in the House is continued in a spirit of good will. Otherwise, if some other hon. Members like to precipitate things, it is not good on their part, because, we have to carry on the work in a spirit of understanding, co-operation and good-will. So, I urge upon the hon. Members to co-operate in this regard. Otherwise, it will be a short of unfair thing on the part of the hon. Members and a sad duty for the Presiding Officers, who, as I have said before, have only duties to perform and absolutely no rights.

The House now stands adjourned to meet to-morrow at 1 p.m.

The House adjourned at Fifty-three Minutes Past Six of the Clock to meet again at One of the Clock on Friday the 30th March 1973.

W 2 246 -GPB—550—23-7-1974

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, the 30th March 1973/Chaitra 9, 1895 S. E.

The House met in the Assembly Chamber, Vidhana Soudha at One of the Clock.

MR. DEPUTY SPEAKER (Sri. B. P. KADAM) in the Chair.

STARRED QUESTIONS

(to which oral answers were given)

Officials Involved in Sandal Smuggling Cases

193. SRI ABDUL KHUDUS ANWAR (Bhadravathi).—

Will the Minister for Agriculture and Forests be pleased to state.—

(*a*) the quantity of sandalwood seized after the appointment of special squad in the State and its cost ;

(*b*) the number of officers involved in this smuggling cases and were penalised ;

(*c*) whether there are any complaints pending with Government against the officials in connection with the smuggling of teak and rose wood; if so, the action taken against those officers in the State ?

SRI K. H. PATIL (Minister for Agriculture and Forests).—

		Ton. Kg. Gms.
(*a*)	(i) Billet class	1106-865-765
	(ii) Stumps and roots	1242 Nos.
	(iii) Chips (in bags)	253½

(*b*) 32 Officers and officials are found to have been involved in Sandal smuggling cases.

(*c*) Yes. In some cases Departmental enquiries have been ordered and in some cases the matter has been referred to the Police. After knowing the findings of these enquiries, further action will be taken.

Sri ABDUL KHUDUS ANWAR.—Sir, Have you taken action against all those people against whom action is pending for similar offence, and if action is taken, what is the final result ?

† **Sri K. H. PATIL.**—On the part of the Government, action has been already taken suspending the officers who where alleged to be guilty in this smuggling. Enquiry is pending and Government is pressing for the early disposal of the enquiry.

Sri ABDUL KUDUS ANWAR.—How long will it take ?

Sri K. H. PATIL.—It will take such time as is necessary, because it is with the enquiry officer and those involved persons are demanding time.

ಶ್ರೀ ಹಂಜಿ ಶಿವಣ್ಣ.—ಈ ಕಳ್ಳಸಾಗಾಣಿಕೆ ಪ್ರಕರಣದಲ್ಲಿ 32 ಮಂದಿ ಅಧಿಕಾರಿಗಳು ತೊಡಗಿದುದ್ದು ಕಂಡು ಬಂದಿದೆ ಎಂದು ಹೇಳಿದ್ದೀರಿ. ಇಂತಹವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಮತ್ತು ಕೋರ್ಟ್ ಮೂಲಕ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಕೆ. ಎಚ್. ಪಾಟೀಲ್.—ಯಾರು ಯಾರು ಈ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದಾರೆ, ಅವರೆಲ್ಲರ ಮೇಲೂ ಸಹ ಕ್ರಮ ತೆಗೆದುಕೊಳ್ಳಲಾಗುತ್ತದೆ. ಕಾಂಪ್ಲಿಕೇಟೆಡ್ ಕೇಸ್ ಇರುವುದನ್ನು ವಿಜಿರೆನ್ಸ್ ಕಮಿಷನ್‌ಗೆ ಕಳುಹಿಸಿದ್ದೇನೆ, ಉಳಿದ ಕೇಸ್‌ಗಳ ಬಗ್ಗೆ ಇಲಾಖಾ ತನಿಖೆ ನಡೆದಿದೆ.

Sri ABDUL KHUDUS ANWAR.—Actually you have not given the amount involved. You were pleased to say once, it is about Rs. two lakhs.

Sri K. H. PATIL.—The valuation of this smuggled goods is estimated to be Rs. 80 lakhs.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—1972ರಲ್ಲಿ ನಮ್ಮ ಹೊಸನಗರ ತಾಲ್ಲೂಕಿನಲ್ಲಿ ಇಂತಹ ಒಂದು ಕೇಸನ್ನು ಅಧಿಕಾರಿಗಳು ಹಿಡಿದಾಗ, ಆ ಅಧಿಕಾರಿಗಳಿಗೆ ಬಹುಮಾನ ಕೊಡುವುದರ ಮೂಲಕ ಪುರಸ್ಕಾರ ಮಾಡುವುದನ್ನು ಬಿಟ್ಟು ಪೊಲಿಟಿಕಲ್ ಪ್ರಜರ್‌ಗೆ ಒಳಗಾಗಿ ಕೇಸ್ ಹಿಡಿದ ಅಧಿಕಾರಿಗಳ ಮೇಲೆಯೇ ಕೇಸ್ ಹಾಕಿರುವುದು ನಿಜವಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್—ಈ ಸ್ಮಗ್ಲಿಂಗ್ ವಿಷಯದಲ್ಲಿ ನಿಜವಾಗಿ ಪ್ರಾಮಾಣಿಕವಾಗಿ ಯಾವ ಅಧಿಕಾರಿಗಳು ವರ್ತನೆ ಮಾಡುತ್ತಾರೆಯೋ ಅಂಥಾ ಅಧಿಕಾರಿಗಳಿಗೆ ಪುರಸ್ಕಾರ ಕೊಡುತ್ತೇವೆ. ಹೆಸರಿಗೆ ಮಾತ್ರ ಸ್ಮಗ್ಲಿಂಗ್ ಬಗ್ಗೆ ಸರ್ಕಾರಕ್ಕೆ ಸಹಾಯ ಮಾಡುತ್ತೇವೆ ಎಂದು ಹೇಳಸಕ್ಕ ಉಳಿದ ಅಧಿಕಾರಿಗಳಿಗೆ ತಕ್ಕ ಶಿಕ್ಷೆಯನ್ನು ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಗಂಧದ ಮರದ ಕಳ್ಳತನದ ಪ್ರಮಾಣ ಕಡಿಮೆಯಾಗಿದೆ. ನಾನು ಅದನ್ನು ಒಪ್ಪುತ್ತೇನೆ. ಈ ಗಂಧದ ಮರದ ಕಳ್ಳಸಾಗಾಣಿಕೆಯಲ್ಲಿ ತೊಡಗಿದ ನೌಕರರು 32 ಜನ ಎಂದು ಹೇಳಿದ್ದೀರಿ, ಆದರೆ ಇನ್ನೂ ಜಾಸ್ತಿ ಜನ ಇದ್ದಾರೆ. ಆದ್ದರಿಂದ ಅವರನ್ನು ತನಿಖೆ ಮಾಡಿ ಹಿಡಿದು ಹಾಕುವ ಸಲುವಾಗಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ನಾನು ಸ್ವಾಗತ ಮಾಡುತ್ತೇನೆ. ಅಧಿಕಾರಿಗಳು ಅಂಥವರು ಯಾರಾದರೂ ಇದ್ದರೆ ಅಂಥವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ.

Sri ABDUL KHUDUS ANWAR—Are there no complaints pending with the Government in connection with the smuggling of rosewood and teak ? Will similar action be taken against those officers also?

---

indisate that remarks or speches have not been revised by the member concerned.

Sri K. H. PATIL—Yes, without waiting even for a day.

ಶ್ರೀ ಕೆ. ಎಂ. ನಾಗಣ್ಣ—ತಾವು ಕೆಲವು ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರಿ, ಈ ಅಧಿಕಾರಿಗಳ ಪರವಾಗಿ ರಾಜಕೀಯ ಒತ್ತಡ ಬಂದರೂ ಕೂಡ ಆ ಕ್ರಮವನ್ನು ಮುಂದುವರಿಸುವ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಅದನ್ನು ಮುಂದುವರಿಸುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಅರಣ್ಯ ಖಾತೆಯನ್ನು ವಹಿಸಿಕೊಂಡ ಮೇಲೆ ಗಂಧದ ಮರದ ಕಳ್ಳಸಾಗಾಣಿಕೆ ಕಡಿಮೆಯಾಗಿದೆ ಎಂದು ಹೇಳಿದರು, ಅವರ ಆರೋಹಣ, ಅವರೋಹಣದ ಅಂಕಿ ಅಂಶಗಳನ್ನು ಹೇಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಈಗಾಗಲೇ ಈ ಸಂಬಂಧದಲ್ಲಿ ಮಾನ್ಯ ಸದಸ್ಯರನೇಕರು ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಬರತಕ್ಕ ಉತ್ಪನ್ನ ಹೆಚ್ಚಾಗುತ್ತಿದೆ. ಮತ್ತು ಹಿಡಿಯತಕ್ಕವರ ಸಂಖ್ಯೆಯೂ ಕಡಿಮೆ ಆಗುತ್ತಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ತಾವು ಗಂಧದ ಮರದ ಸ್ಮಗ್ಲಿಂಗ್ ಕೇಸುಗಳನ್ನು ಇಂತಿಷ್ಟು ಕೇಸುಗಳನ್ನು ಹಿಡಿಯಬೇಕು ಎಂದೇನಾದರೂ ನಿಗದಿ ಮಾಡಿದ್ದೀರಾ ? ಏತಕ್ಕೆಂದರೆ ಪೋಲೀಸಿನವರು ಟ್ರಾಫಿಕ್ ಕೇಸ್ ಮತ್ತು ಇಲ್ಲಿಸಿಟ್ ಕೇಸ್ ಇಂತಿಷ್ಟು ಕೇಸ್ ಕೊಡಬೇಕು ಎಂದು ನಿಗದಿ ಮಾಡಿದ್ದಾರೆ. ಪೋಲೀಸಿನವರಿಗೆ ರೆಫರ್ ಮಾಡಿದ ಕೇಸುಗಳಲ್ಲಿ ಇಲಾಖೆಯ ಅಧಿಕಾರಿಗಳು ಜೊತೆಯಲ್ಲಿ ಶಾಮೀಲಾಗಿ ಕೇಸನ್ನು ಕೆಡಿಸುವ ಪ್ರಸಂಗ ಬಂದರೆ ಏನು ಮಾಡುತ್ತೀರಿ!

ಶ್ರೀ ಕೆ. ಎಚ್. ಪಾಟೀಲ್.—ಯಾರು ಕಳ್ಳತನ ಮಾಡದಿದ್ದರೂ ಇಂತಿಷ್ಟು ಕೇಸನ್ನು ಹಿಡಿಯಬೇಕು ಎಂದರೆ ಅವರೇ ಕಳ್ಳತನ ಮಾಡಬೇಕಾಗುತ್ತದೆ. ಪೋಲೀಸ್ ಅಧಿಕಾರಿಗಳು ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿ ಕೇಸನ್ನು ಕೆಡಿಸುವ ಪ್ರಸಂಗ ಬಂದರೆ ಅದನ್ನು ತಪ್ಪಿಸುವ ದೃಷ್ಟಿಯಿಂದ ಪ್ರಾಮಾಣಿಕ ರೀತಿಯಿಂದ ನಿಷ್ಠೆಯಿಂದ ಕೆಲಸ ಮಾಡುವ ಒಬ್ಬರು ಡಿ. ಐ. ಜಿ. ಅವರನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಪ್ರತ್ಯೇಕವಾಗಿ ಒಬ್ಬರನ್ನು ಕೊಟ್ಟಿದ್ದೇವೆ. ಈಗ ಮೊನ್ನೆ ಅವರು ಧಾರವಾಡ ಜಿಲ್ಲೆಯಲ್ಲಿ ಕಳ್ಳತನವಾದ 7 ಸಾವಿರ ರೂಪಾಯಿ ಬೆಳೆಬಾಳುವ ಗಂಧದ ಮರವನ್ನು ಬೆಳಗಾವಿನಲ್ಲಿ ಹಿಡಿದಿದ್ದಾರೆ.

ಶ್ರೀ ಟಿ. ಎಂ. ಮಂಜನಾಥ್.—ಸರ್ಕಾರದ ಜಮೀನಿನಲ್ಲಿ ಸಾರ್ವಜನಿಕರು ಗಂಧದ ಮರವನ್ನು ಬೆಳೆಸುವುದಕ್ಕೆ ಸರ್ಕಾರದವರು ಪ್ರೋತ್ಸಾಹ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಆ ರೀತಿ ಯಾರಾದರೂ ಬೆಳೆಸಿದ್ದರೆ ಅವಕ್ಕೆ ಅರ್ಧ ಬೆಲೆಯನ್ನು ಕೊಡುತ್ತೇವೆ ಎಂದು ಸರ್ಕಾರದವರು ಪ್ರಕಟನೆ ಮಾಡಿದ್ದಾರೆ.

Sri B. B. SAYANAK.—In how many cases departmental enquiries are ordered and in how many cases this matter has been referred to the police ?

Sri K. H. PTIAL.—It is a long list. If the hon. Member so desires, I shall place it on the Table of the House. I can say that in all cases departmental enquiry has been ordered without leaving a single case but in certain cases the matter has been referred to the Vigilance Commission.

ಶ್ರೀ ಎಸ್ ಬಂಗಾರಪ್ಪ.—ಇರುವರೆಗೆ ಕಳ್ಳಸಾಗಾಣಿಕೆಯಲ್ಲಿ ಹೋಗುತ್ತಿದ್ದ ತೇಗದ ಮರ, ಬೀಟೆಯ ಮರ ಇವುಗಳನ್ನು ಎಷ್ಟು ರೂಪಾಯಿ ಬೆಲೆಬಾಳುವ ಮರವನ್ನು ಪೋಲೀಸಿನವರು ಹಿಡಿದಿದ್ದಾರೆ ?

ಶ್ರೀ ಕೆ ಎಚ್. ಪಾಟೀಲ್.—ಸುಮಾರು 80 ಲಕ್ಷ ರೂಪಾಯಿ ಬೆಲೆ ಬಾಳುವ ಮರವನ್ನು ಹಿಡಿದಿದ್ದಾರೆ.

Submersion Of Lands Under Gundal Project

532. **Sri R. RACHE GOWDA** (Hanur):—

Will the Minister for Revenue be pleased to state.—

(*a*) the extent of patta land that is going to be submerged in Gundal Project of Kollegal Tauk ;

(*b*) wether compensation has been paid to the land holder whose lands whould be submerged ;

(*c*) if not, the reason therefor ?

Sri N. HUTCHAMASTHY GOWDA (Minister for Revenue).—

(*a*) 882 acres and 81 cents.

(*b*) Crop compensation has been paid.

(*c*) Compensation amount has not been paid as acquisition proceedings have not been completed.

ಶ್ರೀ ಆರ್. ರಾಚೇಗೌಡ.—ಸ್ವಾಮಿ ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಅಕ್ವಿಜಿಷನ್ ನಡವಳಿಕೆಗಳು ಪೂರ್ಣವಾಗದೆ ಇರುವ ಕಾರಣ ಜಮೀನು ಪರಿಹಾರ ಕೊಟ್ಟಿಲ್ಲ ಎಂದು ಹೇಳಿದ್ದೀರಿ, ಇದು ಎಷ್ಟು ದಿನಗಳಲ್ಲಿ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಆಗುತ್ತದೆ? ಮತ್ತು ಆ ಮುಳುಗಡೆ ಆಗಿರುವ ಜಮೀನಿನ ಮಾಲೀಕರಿಗೆ ಎಷ್ಟು ದಿವಸಗಳಲ್ಲಿ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿರತಕ್ಕ ಒಟ್ಟು ಭೂಮಿ ಎಂದರೆ ಮುಳುಗಡೆ ಆಗದಿರುವ ಜಮೀನು 882 ಎಕರೆ 81 ಸೆಂಟು. ಇದರಲ್ಲಿ 506 ಎಕರೆ 65 ಸೆಂಟ್ ಭೂಮಿಗೆ 8-8-72 ರಲ್ಲಿ ಫೈನಲ್ ನೋಟಿಫಿಕೇಷನ್ ಆಗಿದೆ. ಅದಕ್ಕೆ ಆದಷ್ಟು ಜಾಗ್ರತೆ ಅವಾರ್ಡ್ ಪಾಸುಮಾಡಿ ಪರಿಹಾರವನ್ನು ಕೊಡುತ್ತೇವೆ. ಇನ್ನು ಉಳಿದ 376 ಎಕರೆ 16 ಸೆಂಟ್ ಜಮೀನಿಗೆ ಇಷ್ಟರಲ್ಲೇ ಪ್ರಿಲಿಮಿನರಿ ನೋಟಿಫಿಕೇಷನ್ ಆಗುವ ಸಂದರ್ಭ ಇದೆ. ಆದಷ್ಟು ಜಾಗ್ರತೆ ಅದರ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಪೂರ್ತಿ ಮಾಡಿ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಅಲ್ಲಿ ಸುಮಾರ 200 ಸಂಸಾರಗಳು 882 ಎಕರೆ 81 ಸೆಂಟ್ ಜಮೀನನ್ನು ಕಳೆದುಕೊಂಡಿದ್ದಾರೆ. ಅವರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಇಂಥಾ ಪ್ರಾಜೆಕ್ಟುಗಳನ್ನು ಕಟ್ಟುವಾಗ ಅದರಲ್ಲಿ ಮುಳುಗಡೆ ಆಗತಕ್ಕವರಿಗೆ ಬೇರೆ ಕಡೆ ರಿಹ್ಯಾಬಿಲಿಟೇಟ್ ಮಾಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಅಲ್ಲಿರತಕ್ಕ ಫಾರೆಸ್ಟ್ ಜಮೀನಿನಲ್ಲಿ ಒಂದು ಕಾಲನಿ ಮಾಡಿ ಅವರನ್ನು ಪುನರ್ವಸತಿ ಮಾಡಬೇಕೆಂದು ಅಲ್ಲಿ ಮುಳುಗಡೆಯಾಗಲಿರುವ ಜಮೀನಿನ ಮಾಲೀಕರು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿಲ್ಲವೇ? ಆ ಮನವಿಯನ್ನು ತಾವು ಪರಿಶೀಲನೆ ಮಾಡಿ ಅವರಿಗೆ ಇರತಕ್ಕ ಕಷ್ಟವನ್ನು ನಿವಾರಣೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಜಮೀನು ಕಳೆದುಕೊಂಡವರಿಗೆ ಪುನರ್ವಸತಿ ಮಾಡಬೇಕು, ಜಮೀನು ಕೊಡಬೇಕು ಎಂದು ಸರ್ಕಾರದ ನೀತಿಯೇನೂ ಇಲ್ಲ. ಎಲ್ಲೆಲ್ಲಿ ಯಾರು ಯಾರು ಪೂರ್ಣವಾಗಿ ಜಮೀನು ಕಳೆದುಕೊಳ್ಳುತ್ತಾರೆ ಅಂಥವರಿಗೆ ಪುನರ್ವಸತಿ ಮಾಡಬೇಕಾಗುತ್ತದೆ. ಇದರಲ್ಲಿ ಯಾರು ಯಾರು ಎಷ್ಟೆಷ್ಟು ಜಮೀನನ್ನು ಕಳೆದುಕೊಂಡಿದ್ದಾರೆ ಎಂಬುದನ್ನೆಲ್ಲಾ ನೋಡಿ, ಎಷ್ಟು ಜನ ಪೂರ್ಣವಾಗಿ ಜಮೀನು ಕಳೆದುಕೊಂಡಿದ್ದಾರೆ, ಅವರಿಗೆ ಎಲ್ಲಿ ಜಮೀನು ಕೊಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಆಲೋಚನೆ ಮಾಡಿ ಮಾಡಬೇಕಾಗುತ್ತದೆ.

Sri B. B. SAYANAK.—Has it not come to the notice of the Government that if the Government is acquiring land for some tank or dam, the Government is paying compensation after six years. Will the Government take action to pay compensation promptly ?

MR. DEPUTY SPEAKER.—That is outside the scope of the main Question.

Fish Farm Scheme at Bhadravathi

564. SRI K. H. HANUME GOWDA (Hassan).—

Will the Minister of State for Fisheries be pleased to state.—

(*a*) the amount spent so far for Bhandra Fish Farm Scheme ;

(*b*) the number of Fishlets produced during the last three years and their total value ;

(*c*) the ranks of the Officers of Fisheries Department who are working under this Scheme and the amount spent towards their salary every year ;

(*d*) when the State will get full benefit of the Fish Farm and its Qnantum ?

SRI K. T. RATHOD (Minister of State for Fisheries).—

(*a*) Rs. 4.23 lakhs have been spent so far from the inception of Bhandra Fish Farm Scheme *i.e.* from 1965-66.

(*b*) 40500 Fishlets were produced during 1969-70 and its value was Rs. 4050; 1,18,500 Fishlets were produced during 1970-71 and its value was Rs. 11,850; 4,24,000 Fishlets were produced during 1971-72 and its value was Rs. 23,500.

(*c*) Only 3 Class III Officials were working under this scheme during 1965-66. The Staff was increased from 24-2-1972 and now One Class I Officer and 5 Class III Officials are working and an amount of Rs 31,800 is being spent towards their salary per year.

(*d*) Under the present financial position it cannot be said as to when the full benefit would be derived from this Fish Farm. Because this depends upon the amount made available for this scheme every year. After completion of this scheme, there will be an expenditure of about Rs. 10 lakhs per year and 5 crores of fishlets can be produced every year worth of Rs. 50 lakhs (estimate).

ಶ್ರೀ ಕೆ. ಎಚ್. ಹನುಮೇಗೌಡ.—ಈ ಸ್ಕೀಮಿನ ಅಂದಾಜು ಮೊಬಲಗು ಎಷ್ಟು? ಕಳೆದ 4-5 ವರ್ಷಗಳಿಂದ ಎಷ್ಟು ಖರ್ಚಾಗಿದೆ ?

† ಕೆ. ಟಿ. ರಾಥೋಡ್.—ನಮ್ಮ ಸದಸ್ಯರಿಗೆ ಗೊತ್ತಿರುವಂತಹ ಈ ಸ್ಕೀಮಿನ ಅಂದಾಜು ಸುಮಾರು ಒಂದುವರೆ ಕೋಟಿಯಿಂದ ಎರಡು ಕೋಟಿ ರೂಪಾಯಿಗಳವರೆಗೆ ಇದೆ. ಇಷ್ಟರವರೆಗೆ ಎಷ್ಟು ಖರ್ಚಾಗಿದೆ ಎಂಬುದನ್ನು ಪ್ರಿಂಟೆಂಡ್ ಉತ್ತರದಲ್ಲಿ ಕೊಟ್ಟಿದೆ. ಈ ಸ್ಕೀಮನ್ನು ಪೂರ್ತಿಯಾಗಿ ಕಾರ್ಯಗತ ಮಾಡುವುದನ್ನು ಇಂತಿಷ್ಟೇ ವೇಳೆಯಲ್ಲಿ ಎಂದು ಹೇಳುವುದಕ್ಕಾಗುವುದಿಲ್ಲ ಏಕೆಂದರೆ ನಮಗೆ ಲಭ್ಯವಾಗುವಂತಹ ಹಣದ ಮೇಲೆ ಈ ಸ್ಕೀಮಿನ ಪ್ರಗತಿ ಅವಲಂಬಿಸಿಕೊಂಡಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ದೇಶದಲ್ಲಿ ಅವಶ್ಯವಿರುವಷ್ಟು ಮೀನಿನ ಮರಿಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದೀರಿ ಮತ್ತು ಪಶ್ಚಿಮ ಬಂಗಾಳದಿಂದ ಸಹ ತರಿಸುತ್ತಿದ್ದೀರಿ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಆದ್ದರಿಂದ ಈ ಸ್ಕೀಮನ್ನು ಆದಷ್ಟು ಜಾಗ್ರತೆಯಾಗಿ ಪೂರ್ತಿ ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಕೆ. ಟಿ. ರಾಥೋಡ್.—ಇದಕ್ಕೆ ಮುಖ್ಯವಾದಂತಹ ಕಾರಣ ಹಣದ ಅಭಾವ. ಈ ಸಮಸ್ಯೆಯನ್ನು ಆದಷ್ಟು ಜಾಗ್ರತೆ ಬಗೆಹರಿಸುವ ಸಲುವಾಗಿ ನಾಲ್ಕನೆಯ ಯೋಜನೆಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮತ್ತು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಎರಡೂವರೆ ಕೋಟಿಯಷ್ಟು ಹಣವನ್ನು ತೊಡಗಿಸಬೇಕೆಂದು ಅಂದಾಜು ಮಾಡಲಾಗಿದೆ. ಅಷ್ಟು ಹಣ ಲಭ್ಯವಾದರೆ 5ನೇ ಯೋಜನೆ ಮುಗಿಯುವುದರೊಳಗೆ ನಮಗೆ ಬೇಕಾಗುವಷ್ಟು ಮೀನಿನ ಮರಿಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಈ ಫಾರ್ಮಿನಲ್ಲಿ ಉತ್ಪಾದನೆಯಾಗತಕ್ಕ ಮೀನಿನ ಮರಿಗಳು ನಮ್ಮ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಕೆರೆಗಳಿಗೆ ಮತ್ತು ಇತರ ಫಾರ್ಮುಗಳಿಗೆ ಸಾಕಾಗುವಷ್ಟು ಸಿಗುತ್ತವೆಯೇ ಮತ್ತು ಹಾಗಿದ್ದರೆ ಇದು ಎಷ್ಟು ವರ್ಷಗಳಲ್ಲಿ ಪೂರೈಸಲು ಸಾಧ್ಯವಾಗುತ್ತದೆ ?

ಶ್ರೀ ಕೆ. ಟಿ. ರಾಥೋಡ್.—ನಮ್ಮ ಪ್ರಾಂತ್ಯಕ್ಕೆ ಬೇಕಾಗಿರತಕ್ಕದ್ದು 15 ರಿಂದ 20 ಕೋಟಿಯಷ್ಟು ಮೀನಿನ ಮರಿಗಳು. ಸದ್ಯದ ನಮ್ಮ ಯೋಜನೆಗಳ ಪ್ರಕಾರ ನಮಗೆ ಲಭ್ಯವಾಗತಕ್ಕಂತಹ ಮೀನಿನ ಮರಿಗಳು 3 ಕೋಟಿ ಮಾತ್ರ. ಅದಕ್ಕೆ ದೊಡ್ಡ ದೊಡ್ಡ ಫಾರ್ಮಿನಲ್ಲಿ ಇಂತಹ ಮೀನಿನ ಮರಿಗಳನ್ನು ಸಾಕುವುದಕ್ಕೆ ಕಾರ್ಯಕ್ರಮ ಹಾಕಿಕೊಂಡರೆ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

Shifting of Defence Establishments

567. Sri K. R. SRINIVASULU NAYUDU (Shanthinagar).—

Will the Chief Minister be pleased to state.—

whether there is any proposal before Government to recommend to the Centre to shift the various Defence Establishments and Military barracks situated within the Municipal limits of the Bangalore City Corporation to other areas like Jalahalli, Agaram Hunusemaranahalli, etc. ?

Sri D. DEVARAJ URS (Chief Minister).— No.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನನ್ನ ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ನನ್ನ ಅನುಭವದಲ್ಲಿ ಹೇಳುವುದಾದರೆ ಈ ಮಿಲಿಟರಿ ಎಸ್ಟ್ಯಾಬ್ಲಿಸ್‌ಮೆಂಟ್‌ಗಳು ಸಿಟಿ ಮಧ್ಯ ಇರುವುದರಿಂದ ಕಂಟೋನ್‌ಮೆಂಟ್ ಮುಂತಾದ ಭಾಗಗಳ ಬೆಳವಣಿಗೆಗೆ ಕುಂಠಿತವಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಡಿ. ದೇವರಾಜ ಅರಸ್.—ಅವರು ಕೇಳಿರುವ ಪ್ರಕಾರ ಪ್ರೊಪೋಸಲ್ಸ್ ಏನೂ ಇಲ್ಲವೆಂದು ಹೇಳಿದೆ. ನಾವು ಅವರ ಹತ್ತಿರ ಮಾತನಾಡಿ ಕೇಳುತ್ತಿದ್ದೇವೆ. ಅವರು ಒಂದೆರಡು ಕಡೆ ಒಪ್ಪಿದ್ದಾರೆ. ಅದನ್ನು ಬಿಟ್ಟುಕೊಡುತ್ತೇವೆಂದು ಹೇಳಿದ್ದಾರೆ. ಬಾಕಿ ಉಳಿದವುಗಳ ಬಗ್ಗೆ ಏನೂ ಹೇಳಿಲ್ಲ.

ಶ್ರೀ ಕೆ. ಆರ್ ಶ್ರೀನಿವಾಸಲು ನಾಯ್ಡು.—ಅನೇಕ ಕಡೆ ಬರೇ ಮೈದಾನಗಳು ಇವೆ. ಹಿಂದೆ ಬ್ರಿಟಿಷರ ಕಾಲದಲ್ಲಿ ಈ ರೀತಿ ಮಿಲಿಟರಿ ನೆಲೆಗಳು ಮಧ್ಯದಲ್ಲಿ ಇರಬೇಕಾಗಿತ್ತು. ಆದರೆ ಈಗ

ಬೇಕಾಗಿಲ್ಲ. ಈ ರೀತಿ ಇರುವುದರಿಂದ ಅವರು ಕೇಳಿದರೆ ಖಂಡಿತವಾಗಿಯೂ ಹೊರಗಡೆ ಹೋಗುತ್ತಾರೆ. ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರವ್ಯವಹಾರ ಮಾಡಿ, ಈ ಮಿಲಿಟರಿ ಇನ್‌ಸ್ಟಲೇಶನುಗಳನ್ನು ಹೊರಗಡೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇವೆಲ್ಲಾ ಕಾರ್ಪೊರೇಶನ್ ಲಿಮಿಟ್‌ನಲ್ಲಿ ಇದ್ದರೆ, ಕಾರ್ಪೊರೇಷನಿನವರು ಸರ್ಕಾರಕ್ಕೆ ಬರೆದಾಗ ಅದರ ಬಗ್ಗೆ ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ನಾನು ಸಲಹೆ ಮಾಡುವುದು, ಬೆಂಗಳೂರು ಕಾರ್ಪೊರೇಷನಿನವರು ಇದರ ಬಗ್ಗೆ ಏನು ಹೇಳುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮುಖ್ಯಮಂತ್ರಿಯವರು ಹೇಳಿದರು, ಕಾರ್ಪೊರೇಷನ್ ಲಿಮಿಟನಲ್ಲಿರುವ ಮಿಲಿಟರಿ ಇನ್‌ಸ್ಟಲೇಶನುಗಳನ್ನು ಹೊರಗಡೆ ವರ್ಗಾಯಿಸುವುದರ ಬಗ್ಗೆ ಕೆಲವಕ್ಕೆ ಅವರು ಒಪ್ಪಿದ್ದಾರೆ, ಕೆಲವಕ್ಕೆ ಒಪ್ಪಿಲ್ಲವೆಂದು ಹೇಳಿದ್ದಾರೆ. ಅವರು ಯಾವುದಕ್ಕೆ ಒಪ್ಪಿದ್ದಾರೆ, ಯಾವುದಕ್ಕೆ ಒಪ್ಪಿಲ್ಲವೆಂದು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅವರು ಎರಡು ಜಾಗಗಳ ಬಗ್ಗೆ ಒಪ್ಪಿದ್ದಾರೆ. ಒಂದನೆಯದು ಕಾರ್ನರ್ ಹೌಸ್ ಬೌಂಡೆಡ್ ಬೈ ಕ್ವೀನ್ಸ್ ರೋಡ್, ಮಹಾತ್ಮಾ ಗಾಂಧಿ ರೋಡ್, ಸೈಂಟ್ ಮಾರ್ಕ್ಸ್ ರೋಡ್ ಮತ್ತು ಕಬ್ಬನ್ ರೋಡ್. ಆ ಮೇಲೆ ಇನ್ನೊಂದು ಈಗ ಇರುವ ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟೇಬ್ಲಿಷ್‌ಮೆಂಟ್ ಶಿಫ್ಟ್ ಮಾಡುವುದಕ್ಕೆ ಒಪ್ಪಿದ್ದಾರೆ.

Planting of Road Side Trees

692. Sri P. M. BANGI (Jamkhandi).—

Will the Minister for Agriculture and Forests be pleased to state :—

(*a*) the number of pits dug for planting road-side trees on major District Roads, State and National High-ways during 1972-73 of the State (Talukwise information may be furnished) ;

(*b*) the total cost incurred by Government for digging these pits ;

(*c*) the rate fixed for digging and forming each pit ;

(*d*) the number of pits in which avenue trees are planted, rearred and grown ?

Sri K. H. PATIL (Minister for Agriculture and Forests).—

(*a*) 1,56,872 pits. Please see statement appended.

(*b*) Rs. 8,18,034.

(*c*) The rate for digging and forming each pit inclusive of the protective trench mound alround varies from Rs. 3.78 to Rs. 5.99 depending upon the type of the soil. The total cost including earth-work, sowing on trench mound, planting including cost on transporting of 5 seedlings, and weeding charges varies from Rs. 4.14 to Rs. 6.35.

(SRI K. H. PATIL)

(d) 6,336 during 1972-73.

STATEMENT

The Talukwise figures regarding the number of pits etc., are not available as the accounts are maintained in the Ranges with reference to the Range and not Taluk as a Unit. The figures are hence furnished according to jurisdiction of Forest Divisions.

	Divisions	No. of Pits	Cost incurred
	Under Normal Budget Head		
		Rs.	Rs. Ps.
1	Extension Forestry Programme and afforestation Division, Mandya (Covering Mysore, Mandya, Bangalore and Kolar Districts).	7,139	30,444-56
2	Extension Forestry Programme and afforestation Division, Gulbarga, (Covers Gulbarga, Bidar and Raichur Districts).	18,000	1,08,000-00
3	Hassan (Hassan District) Division.	1,000	4,132-50
4	Chitradurga Division (Chitradurga District).	2,028	7,966-00
5	Bellary Division (Bellary District)	2,860	19,425-10
6	Bagalkot Division (Bijapur District)	2,800	17,489-75
7	Belgaum Division (Parts of Belgaum District).	120	484-00
		33,947	1,87,941-91
	(Under 64—Famine Relief)		
	Gulbarga, Raichur and Bidar Districts	1,22,925	6,30,092-00
	Total (1972-73)	1,56,872	8,18,034-00

ಶ್ರೀ ಪಿ. ಎಂ. ಬಂಗಿ.—ಒಂದು ಲ– 56 ಸಾವಿರದ 872 ಗುಂಡಿಗಳನ್ನು ತೋಡಿಸಿದ್ದೀರಿ ಎಂದು ಹೇಳಿದ್ದೀರಿ. ಉಳಿದ 6 ಸಾವಿರ ಗುಂಡಿಗಳಲ್ಲಿ ಏಕೆ ಗಿಡಗಳನ್ನು ನೆಟ್ಟಿಲ್ಲ? ಮತ್ತು ಹೀಗೆ ನೆಡದೆ ಇದ್ದುದರಿಂದ ಗುಂಡಿಗಳ ಮಣ್ಣು ಬಿದ್ದು ಹಾಳಾಗಿ ಹೋಗಿವೆ. ಕೆಲವು ಗುಂಡಿಗಳಲ್ಲಿ ಗಿಡಗಳು ಬರಲೇ ಇಲ್ಲ.

† ಶ್ರೀ ಕೆ. ಎಚ್. ಪಾಟೀಲ್.—ಗಿಡಗಳನ್ನು ನೆಡುತ್ತಾರೆ. ಎಲ್ಲಿ ಗಿಡಗಳು ಹುಟ್ಟುವುದಿಲ್ಲವೋ ಅಲ್ಲಿ ಪುನಃ ನೆಡಬೇಕಾಗುತ್ತದೆ.

ಶ್ರೀ ಪಿ. ಎಂ. ಬಂಗಿ.—ಉಳಿದ ಗುಂಡಿಗಳಲ್ಲಿ ಏಕೆ ಗಿಡಗಳನ್ನು ಹಾಕಿಲ್ಲ ?

ಶ್ರೀ ಕೆ. ಎಚ್. ಪಾಟೀಲ್.—ಬೇಸಿಗೆ ಕಾಲದಲ್ಲಿ ಗುಂಡಿಗಳನ್ನು ತೆಗೆಯುತ್ತಾರೆ ; ಮಳೆಗಾಲ ದಲ್ಲಿ ಗಿಡಗಳನ್ನು ನೆಡುತ್ತಾರೆ.

ಶ್ರೀ ಹಂಜಿ ಶಿವಣ್ಣ.—ಎಲ್ಲಾ ಕಡೆಗಳಲ್ಲಿಯೂ ಸಸಿಗಳನ್ನು ಹಾಕದಿರುವುದಕ್ಕೆ ಕಾರಣ ವೇನು ?

ಶ್ರೀ ಕೆ. ಎಚ್. ಪಾಟೀಲ್.—ಅದನ್ನು ಮಳೆ ಇರುವಾಗ ಹಾಕಬೇಕಾಗುತ್ತದೆ. ಬೇಸಿಗೆ ಕಾಲದಲ್ಲಿ ಹಾಕುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಒಂದು ಗುಂಡಿ ತೆಗೆಯುವುದಕ್ಕೆ 6 ರೂಪಾಯಿ ಚಿಲ್ಲರೆ ಖರ್ಚಾಗು ತ್ತದೆ. ಇದರಿಂದ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ ರಸ್ತೆ ಪಕ್ಕದಲ್ಲಿರ ತಕ್ಕಂತಹ ಹಿಡುವಳಿದಾರರು ಏನಿದ್ದಾರೆ ಅವರಿಗೆ ಇಂಥ ಕಡೆಗಳಲ್ಲಿ ಗಿಡಗಳನ್ನು ಬೆಳೆಸುವುದಕ್ಕೆ ವಹಿಸಿದರೆ ಸರ್ಕಾರಕ್ಕೂ ವೆಚ್ಚ ತಪ್ಪುತ್ತದೆ ಮತ್ತು ಅವರು ಅದನ್ನು ಗಾರ್ಡ್ ಮಾಡಿ ಬೆಳೆಸು ವುದಕ್ಕೂ ಅನುಕೂಲವಾಗುತ್ತದೆ. ಆದ್ದರಿಂದ ರಸ್ತೆಯ ಪಕ್ಕದಲ್ಲಿರತಕ್ಕಂತಹ ಹಿಡುವಳಿದಾರರು ಯಾರು ಇದ್ದಾರೆ, ಅವರಿಗೆ ಇದರ ಜವಾಬ್ದಾರಿಯನ್ನು ವಹಿಸುತ್ತೀರಾ ?

1–30 P.M.

ಶ್ರೀ ಕೆ. ಎಚ್. ಪಾಟೀಲ್.—ಅವರು ತಂತಮ್ಮ ಜಮೀನುಗಳಲ್ಲಿ ಮರಗಳನ್ನು ಹಾಕಿಕೊಂಡರೆ ಸರ್ಕಾರಕ್ಕೆ ಬಹಳ ಸಂತೋಷವಾಗುತ್ತದೆ. ರಸ್ತೆಗಳಲ್ಲಿ ನೇರವಾಗಿ ಅಳತೆಮಾಡಿ ಅವುಗಳನ್ನು ಹಾಕಬೇಕಾಗಿರುವುದರಿಂದ, ಅವುಗಳನ್ನು ರಸ್ತೆಗಳ ಇಕ್ಕೆಲಗಳಲ್ಲಿ ಸಿಕ್ಕಾಪಟ್ಟೆ ಕೊಡುವುದಕ್ಕಾಗು ವುದಿಲ್ಲ. ಈ ದೃಷ್ಟಿಯಿಂದ ಸರ್ಕಾರವೇ ಅದನ್ನು ಮಾಡಬೇಕಾಗುತ್ತದೆ.

ಶ್ರೀ ಜೆ. ವೆಂಕಟಪ್ಪ.—ಸರ್ಕಾರದವರು ಕೊಟ್ಟಿರತಕ್ಕ ಆದೇಶದ ಪ್ರಕಾರ ಹಾಗೂ ಅಧಿಕಾರಿ ಗಳು ಹೇಳಿದ ಪ್ರಕಾರ ಗುಳಿಗಳನ್ನು ತೆಗೆಯಬೇಕು. ಕೆಲವು ಕಡೆಗಳಲ್ಲಿ ಆದೇಶವನ್ನು ಕೊಟ್ಟಿದ್ದರೂ ಅದನ್ನು ತೆಗೆದುಹಾಕಿ ಗುಳಿಗಳನ್ನು ಮಾಡಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಕೆಲವು ಕಡೆಗಳಲ್ಲಿ ಆ ರೀತಿ ಗುಂಡಿ ತೆಗೆದಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆ. ಅಂತಹವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಜೆ. ವೆಂಕಟಪ್ಪ.—ಈ ಗುಂಡಿಗಳನ್ನು ಇಲಾಖೆಯ ಮೂಲಕ ತೆಗೆಸಿದ್ದೀರೋ ಅಥವಾ ಟೆಂಡರ್ ಕರೆದು ಅನಂತರ ರೇಟ್ ಫಿಕ್ಸ್ ಮಾಡಿದ್ದೀರೋ ?

ಶ್ರೀ ಕೆ. ಎಚ್. ಪಾಟೀಲ್.—ಇಲಾಖೆಯ ಮುಖಾಂತರ.

ಶ್ರೀ ಎಸ್. ಬಂಗಾರಪ್ಪ.—ಈ ಸಸಿಗಳನ್ನು ಮಳೆಗಾಲ ಬರುವಾಗ ಹಾಕಬೇಕೆಂಬುದು ಒಳ್ಳೆಯ ಸಲಹೆ. ಈಗ ಮುಂದೆ ಬರತಕ್ಕ ಮಳೆಗಾಲದಲ್ಲಿ ಸಂಪೂರ್ಣವಾಗಿ ರಾಜ್ಯದಲ್ಲಿರತಕ್ಕ ಎಲ್ಲಾ ರಸ್ತೆಗಳ ಇಕ್ಕೆಲಗಳಲ್ಲಿ ವಿಶೇಷವಾಗಿ ಸಸಿಗಳನ್ನು ಹಾಕುವ ಕಾರ್ಯವನ್ನು ಪೂರ್ಣಗೊಳಿಸು ತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ನನ್ನ ಇಚ್ಛೆಯೂ ಅದೇ.

Sorab Taluk Land Grant Consultative Committee

741. Sri S. BANGARAPPA (Sorab).—

Will the Minister for Revenue be pleased to state :—

(a) whether it has come to the notice of the Government that in the Land Consultative Committees constituted in all the Taluks of the State many R-Congressmen are included ;

(SRI S. BANGARAPPA)

(b) whether in the Committee formed in Sorab Taluk, Sorab Taluk Congress-R President and another person of the same party are included and if so the basis on which such selections has been made ?

Sri N. HUTCHAMASTHY GOWDA (Minister for Revenue).—

(a) No. But some persons belong to Congress party.

(b) Yes. Government considered them suitable.

ಶ್ರೀ ಎಸ್. ಬಂಗಾರಪ್ಪ.—ಈ ಕಮಿಟಿಯಲ್ಲಿ ಎಷ್ಟು ಜನ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಸೇರದೇ ಇರುವವರು ಎಷ್ಟು ಜನರಿದ್ದಾರೆ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿದರೆ ಲೆಕ್ಕಮಾಡಿ ಹೇಳಬಹುದು.

ಶ್ರೀ ಟಿ. ಎಂ. ಮಂಜುನಾಥ್.—ಇಂತಹ ಒಂದು ಕಮಿಟಿಯನ್ನು ರಚನೆಮಾಡಬೇಕಾದರೆ ಆಯಾ ಸ್ಥಳದ ಉಭಯ ಸದನಗಳ ಸದಸ್ಯರ ಸಲಹೆಗಳನ್ನು ತೆಗೆದುಕೊಂಡು ಮಾಡಿದ್ದಾರೋ ಅಥವಾ ಅವರು ಬರೆದುಕೊಟ್ಟ ಪಟ್ಟಿಯಲ್ಲಿರುವವರನ್ನು ಆ ಕಮಿಟಿಯಲ್ಲಿ ಸೇರಿಸಿದ್ದಾರೋ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿಮ್ಮ ಪಕ್ಷದ ಸದಸ್ಯರನ್ನು ನಿಮ್ಮ ಪಕ್ಷದವರು ಕೇಳಿ ಕೊಟ್ಟಿರಬಹುದು. ಆದರೆ ಸರ್ಕಾರ ಯಾವ ಮಾನ್ಯ ಸದಸ್ಯರನ್ನೂ ಕೇಳಿ ಹಾಕಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಭೂ ವಿತರಣೆಯ ಸಮಿತಿಯಲ್ಲಿ ಮೆಂಬರುಗಳನ್ನು ಹಾಕುವಾಗ ಒಂದು ವಿಚಾರವನ್ನು ಯೋಚನೆಮಾಡಬೇಕು. ಶಿವಮೊಗ್ಗಾ ಹಾಗೂ ಬಾಕಿ ತಾಲ್ಲೂಕುಗಳಲ್ಲಿ ಮತ್ತು ಇತರ ಕಡೆಗಳಲ್ಲಿಯೂ ಈಗ ಡಿವೈಡೆಡ್ ಕಾಂಗ್ರೆಸ್ ಕ್ಯಾಂಡಿಡೇಟ್ಸ್ ಇದ್ದಾರೆ. ನಿಮ್ಮ ತಾಲ್ಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರನ್ನು ಹಾಕಿದ್ದಾರೆ. ಸ್ಥಳೀಯ ತಾಲ್ಲೂಕು ಹಾಗೂ ಹೋಬಳಿಯಲ್ಲಿರತಕ್ಕ ನಾನು ಹೇಳಿದ ಒಬ್ಬ ಕ್ಯಾಂಡಿಡೇಟನ್ನು ಅಲ್ಲಿಗೆ ಹಾಕಿಲ್ಲ. ಅದನ್ನು ತಾವು ಗಮನಿಸಿದ್ದೀರಾ! ದಾವಣಗೆರೆಯಲ್ಲಿ ಒಬ್ಬ ಎಂ. ಎಲ್. ಎ. ಇದ್ದಾರೆ. ನಿಜ ಅವರನ್ನು ಹಾಕಿದ್ದೀರಾ! ಕೇವಲ ಪಕ್ಷದ ದೃಷ್ಟಿಯಿಂದ ಈ ಸಮಿತಿಗಳನ್ನು ರಚನೆಮಾಡಿದ್ದೀರಾ ಎಂದು ಹೇಳಿದರೆ, ಅದನ್ನು ಒಪ್ಪಿಕೊಳ್ಳುತ್ತೀರಾ ? ಸೊರಬ ಹಾಗೂ ತೀರ್ಥಹಳ್ಳಿ ತಾಲ್ಲೂಕಿನ ಡಿವೈಡೆಡ್ ಕಾಂಗ್ರೆಸ್ಸಿನ ಅಧ್ಯಕ್ಷರನ್ನು ಅಲ್ಲಿಗೆ ಹಾಕಿದ್ದೀರಿ. ಭೂಮಿಯ ಬಗ್ಗೆ ರಕ್ಷಣೆ ಅಥವಾ ತಿಳುವಳಿಕೆ ಇಲ್ಲದೇ ಇರುವಂತಹ ವ್ಯಾಪಾರಿಗಳನ್ನು ಅಲ್ಲಿಗೆ ಹಾಕಿದ್ದೀರಿ. ಅದನ್ನು ಬೇಕಾದರೆ ಪ್ರೂವ್ ಮಾಡಿ ತೋರಿಸುತ್ತೇವೆ. ಅಂತಹವರನ್ನು ಆ ಕಮಿಟಿಗೆ ಏಕೆ ಹಾಕಿದ್ದೀರಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಪ್ರತ್ಯೇಕವಾಗಿ ಕೆಲವು ತಾಲ್ಲೂಕುಗಳನ್ನು ಕೇಳಿದರೆ ಹೇಳುತ್ತೇನೆ. ಈಗ ಸೊರಬ, ತೀರ್ಥಹಳ್ಳಿ ತಾಲ್ಲೂಕುಗಳ ಭೂ ವಿತರಣೆಯ ಸಲಹಾ ಸಮಿತಿಗಳಲ್ಲಿ ಯಾರ್‍ಯಾರು ಇದ್ದಾರೆಂಬುದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಆಯಾ ಕ್ಷೇತ್ರದಲ್ಲಿ ಆಯಾ ತಾಲ್ಲೂಕಿನಲ್ಲಿಯೇ ಕೆಲಸಮಾಡುತ್ತಾ ಬಂದಿದ್ದಾರೆ. ಅವರು ಅಲ್ಲಿನ ಜನಗಳ ಕಷ್ಟಗಳನ್ನು ತಿಳಿದುಕೊಂಡಿದ್ದರೆ ಅಂತಹವರು ಯಾರು ಎಂಬುದನ್ನು ತಿಳಿದು ಅಲ್ಲಿಗೆ ನಾವು ನಾಮಿನೇಟ್ ಮಾಡುತ್ತೇವೆ.

Sri B. B. SAYANAK.—During the previous Ministry, one Committee was constituted in Belgaum Taluk. Now a Committee has been constituted and two persons have been added belong to the Ruling party. Is it not a fact that only persons belonging to Ruling party are taken on these Committees ?

Mr. DEPUTY SPEAKER.—It is out side the scope.

(Many members on both sides stood up)

The question is about Sorab Taluk Land Grant Consultative Committee !

Sri KONANDUR LINGAPPA.—Sir, even in Sagar Taluk......

Sri D. DEVARAJ URS (Chief Minister).—Sir, the first question is general—what are the principles on which the committees are formed. The second question refers to the Committee constituted in Sorab taluk. If the hon. members want information either of a particular taluk or all the taluks or the district, they will appreciate that they will have to put a separate question.

Sri B. B. SAYANAK.—The first question is about all taluks of the State.

Sri D. DEVARAJ URS.—The Chair has the power about what is to be admitted and what is not to be admitted.

ಶ್ರೀ ಕೋಣಂದೂರು ಲಿಂಗಪ್ಪ.—ಮೊದಲನೆಯ ಪ್ರಶ್ನೆ ಕೇಳಿರುವುದು ಎಲ್ಲಾ ತಾಲ್ಲೂಕುಗಳಿಗೂ ಸಂಬಂಧಪಟ್ಟಿದ್ದು.

ಶ್ರೀ ಡಿ. ದೇವರಾಜ್ ಅರಸ್.—ನೀವು ಪ್ರಿನ್ಸಿಪಲ್ ತಪ್ಪೋ, ಸರಿಯೋ ಎಂಬುದನ್ನು ಹೇಳಿ. ಅದರ ಬಗ್ಗೆ ಪ್ರಶ್ನೆಮಾಡುವ ಕಾಲ ನಿಮಗೂ ಬರುತ್ತದೆ. ಆಗ ಹೇಳಿ.

ಶ್ರೀ ಎಚ್. ಡಿ. ದೇವೇಗೌಡ.—ಇದರಲ್ಲಿ ಯಾವ ಪ್ರಿನ್ಸಿಪಲ್ಲು, ಏನೂ ಇಲ್ಲ. 45 ಜನ ವಿರೋಧಪಕ್ಷದವರಲ್ಲಿ ಬೇಕಾದರೆ ಯಾರನ್ನೂ ಹಾಕಬೇಡಿ. ನಿಮಗೆ ಇಷ್ಟಬಂದವರನ್ನು ಹಾಕಿ.

ಶ್ರೀ ಡಿ. ದೇವರಾಜ್ ಅರಸ್.—ಎಲ್ಲಾ ತಾಲ್ಲೂಕುಗಳಲ್ಲಿ ಯಾರ್ಯಾರು ಅಲ್ಲಿಗೆ ಎಂ.ಎಲ್.ಎ. ಗಳಾಗಿದ್ದಾರೋ ಅಂತಹವರನ್ನು ಆ ಕಮಿಟಿಯೊಳಗೆ ಹಾಕುತ್ತಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಯಾರನ್ನೂ ಬಿಟ್ಟಿಲ್ಲ. ಒಂದು ವೇಳೆ ಏನಾದರೂ ಎಲ್ಲಿಯಾದರೂ ಬಿಟ್ಟಿದ್ದರೆ, ಅದು ತಪ್ಪಾಗುತ್ತದೆ. ಅದನ್ನು ಆದಷ್ಟು ಜಾಗ್ರತೆಯಾಗಿ ಸರಿಪಡಿಸುತ್ತೇವೆ.

(Many members on both sides stood up and began to speak simultaneously)

Mr. DEPUTY SPEAKER.—Order, Order. The hon. members may please resume their seats.

To the question put, many of the questions have been answered. Subsequently upon a supplementary, a reply has been given as others are also included. This is a very wide question. If you want any information about a particular Taluk, you will have to put a separate question; but still, if the hon. Minister has got the information and if he is confident that he can reply adequately, he may reply..

ಶ್ರೀ ಕಾಗೋಡು ತಿಮ್ಮಪ್ಪ.—ನಾವಿಲ್ಲಿ ಈಗ ಪ್ರಾಮುಖ್ಯವಾಗಿ ಈ ಸೊರಬಾ ತಾಲ್ಲೂಕಿನ ವಿಚಾರವೊಂದನ್ನೇ ಗಣನೆಗೆ ತೆಗೆದುಕೊಂಡರೂ ಅಲ್ಲಿ ಇವರು ತಮ್ಮ ಆಡಳಿತ ಕಾಂಗ್ರೆಸ್ ಪಕ್ಷದವರನ್ನೇ ಹಾಕಿಕೊಂಡಿರಲಿ, ನಮ್ಮ ಅಭ್ಯಂತರವಿಲ್ಲ. ಆದರೆ, ಇವರು ಅದೇ ಪಕ್ಷದಲ್ಲಿರತಕ್ಕ ಬಡವರನ್ನು, ಅನುಭವಸ್ಥರನ್ನು ಹಾಕದೆ ಚುನಾವಣೆಯಲ್ಲಿ ಸೋತ ವ್ಯಕ್ತಿಯನ್ನು ಏಕೆ ಹಾಕಿದ್ದಾರೆ? ಮುಂದೆ ಯಾದರೂ ಇಂಥಾದನ್ನು ತಡೆಗಟ್ಟುತ್ತೀರಾ?

Sri S.M. SHEERANALI CHANDRASEKHAR.—I raise a point of order.

(Many hon. members were standing and talking simultaneously. There was confusion and nothing was heard. Hon. Chief Minister also spoke but was inaudible)

Mr. DEPUTY SPEAKER.—Let us hear the hon. member Sri Chandrasekher who has raised a point of order. I know the limitation of raising a point of order during question hour, still let us hear him because all the members are agitating.

Sri S. M. SHEERANALI CHANDRASEKHER.—This is a question hour. How can hon. member Sri K. Thimmappa try to make a speech during the question hour ?

Mr. DEPUTY SPEAKER.—I quite agree with the hon. member Sri Chandrasekher.

(Sriyuths K. Lingappa and Bangarppa were speaking with a raised voice)

Sri S. BANGARAPPA.—The hon. member Sri R. S. Patil cannot threaten us like this.

Mr. DEPUTY SPEAKER.—I request you to please be quiet for a while. By making noise you cannot make the cloud to appear and set rain here.

Sri S. BANGARAPPA.—This is a very serious matter which affects the party politics. This has been thurst upon us and upon every member of this House.

Mr. DEPUTY SPEAKER.—There is no force in the point of order raised by Sri Chandrasekhar.

Sri S. BANGARAPPA.—Government should cancel all these committees and reconstitute them afresh.

Mr. DEPUTY SPEAKER.—The hon. member Sri Sayanak has put a supplimentary and he has to be replied to.

Sri N. HUTCHAMASTHY GOWDA.—Tahsilder, Range Fosest Officer, Surveyor, Taluk Board President, MLAs and MLCs and few others are nominated on the Committe.

Sri S. BANGARAPPA.—The nomination of defeated candidates on the said committee is not proper.

Sri B. B. SAYANAK.—I asked him a specific question regarding Belgaum Taluk. Two Congressmen have been included in this committee. I want a specific answer from the Minister, I do not want a general answer.

Mr. DEPUTY SPEAKER.—He has said that he requires a notice to answer that question.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನಾಗಲೇ ಹೇಳಿದ ಹಾಗೆ ತಾಲ್ಲೂಕ್ ಮಟ್ಟದಲ್ಲಿ ನೇಮಕ ಮಾಡತಕ್ಕ ಅಭಿವೃದ್ಧಿ ಸಮಿತಿಗಳಲ್ಲಿ ತಹಶೀಲ್ದಾರರು, ರೇಂಜ್ ಫಾರೆಸ್ಟ್ ಆಫೀಸರೂ, ಸರ್ವೆಯರು, ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು, ಶಾಸನಸಭಾ ಸದಸ್ಯರೂ ಇವರಲ್ಲದೆ ಐದು ಜನರು ಬೇರೆ ಖಾಸಗಿಯುವರೂ ಇರುತ್ತಾರೆ. ಆ ಐದು ಜನರಲ್ಲಿ 3 ಜನ ಕಾಂಗ್ರೆಸ್ಸಿನವರು, ಇನ್ನುಳಿದವರು ಬೇರೆ ಇರುತ್ತಾರೆ.

Mr. DEPUTY SPEAKER.—All those names have appeared in the Gazette.

Sri B. B. SAYANAK.—I want to know whether only congressmen are put on that committe or some others are also put ?

Mr. DEPUTY SPEAKER.—The Hon. Minister who is giving the information has not concealed in his confidential desk ; all these names have already appeared in the Gazette long back. The Gazette is a public document and every hon. member is getting a copy of it.

(Member stood up)

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—1972 ನೇ ಸೆಪ್ಟಂಬರ್ ಒಂದನೇ ತಾರೀಖು ಗೆಜೆಟ್ಟಿನಲ್ಲಿ ಪಬ್ಲಿಶ್ ಆಗಿರತಕ್ಕ ಪ್ರಕಾರ ಅಲ್ಲಿ ಯಾರು ಯಾರ ಸದಸ್ಯರಿದ್ದಾರೆಂದರೆ ಮಾನ್ಯ ಶ್ರೀ ಬಿ, ವಿ. ಸೈನಕ್, ಮೊಳಗಲ್ಲಿ ಕುಟ್ರಿ, ಕೋಲ್ಕಾರ್, ತಾಲ್ಲೂಕ್ ಬೋರ್ಡ್ ಅಧ್ಯಕ್ಷರು, ವಲ್ಲನ ಗೌಡ ಬಸವನ ಗೌಡ, ಇತ್ಯಾದಿಯುವರೆಲ್ಲಾ ಇದ್ದಾರೆ.

Sri B. B. SAYANAK.—I want to know whether two congressmen have been included in this committee. Let him say whether they are congressman or not.

(No Answer)

ಶ್ರೀ ಎಸ್. ಬಂಗಾರಪ್ಪ.—ಚುನಾವಣೆಯಲ್ಲಿ ಸೋತವನನ್ನು ಬಿಟ್ಟರೆ ನಿಮಗೆ ಇನ್ನು ಬೇರೇ ಜನರೇ ಇಲ್ಲವೇ! ಜನರಿಂದ ಆರಿಸಿ ಬಂದ ಪ್ರತಿನಿಧಿಗಳಲ್ಲಿ ತಾವು ಯಾರನ್ನಾದರೂ ಹಾಕಿ. ಇತ್ತ ಕಡೆಯುವರಾದರೂ ಸರಿ, ಅಥವಾ ಅತ್ತ ಕಡೆಯುವರಾದರೂ ಇರಲಿ. ಆದರೆ ಬೇರೆ ಸದಸ್ಯರನ್ನು ಹಾಕುವುದಕ್ಕೆ ಅವಕಾಶವಿದ್ದಾಗ ಅಲ್ಲಿ ನೂರಕ್ಕೆ 99 ಜನ ಆಡಳಿತ ಪಕ್ಷದವರನ್ನೇ ಹಾಕಿದ್ದಾರೆ. ಅದು ಸರಿಯಲ್ಲ. ದಯಮಾಡಿ ಈ ಭಾವನೆಯುನ್ನು ತಪ್ಪಿಸಿ ಇನ್ನು ಮುಂದಕ್ಕೆ ಇದನ್ನು ಪುನರುಚ್ಚಾರಣೆ ಮಾಡಬಾರದೆಂದು ಹೇಳುತ್ತೇನೆ.

Mr. DEPUTY SPEAKER.—There is no scope for putting two supplimentaries at a time as the rules do not provide for it.

Sri D. DEVARAJ URS.—I would like to submit this much. Similar committees were constituted previously also. There are instances where congressmen were put on the committees ; and in one district no congressmen—though they belonged to congress party, had been put and in some places even MLAs had not been put. Even such instances are there. Now, we have adopted a principle or a uniform policy that everywhere at the Taluk level committees, the MLA's, Taluk Board President irrespective of the party to which they belonged are going to be there. There is no bar, there is no sin even if congressmen are put,

(At this stage many opposition members stood up and were shouting).

Mr DEPUTY SPEAKER.—Sri Thimmappa, you please tell your friend Sri Bangarappa to observe some rules. If he does not observe the rules and regulations, I have to take the sternest disciplinary action against him. I do not hesitate to do it. There is no single occasion where I have denied anybody to ventiatel his views or grievances. When I am doing that why you are standing and speaking together— This I cannot understand.

Sri D. DEVERAJ URS.—We are following some procedure just to help all. If you still feel it is wrong it is your right to say like that. You can criticise. I said some congressmen are also there. About Harijans we ha e taken a decision that atleast one Harijan should be there on the Committee and even if there are more than one Harijan, there is no bar. If the Hon. Member feel that a particular member should not be there, it is another matter. If there is any genuine mistake committed by the Government I certainly welcome it and we will try to rectify it. The Congressmen have been asked to run the administration and when that is the position, there is no bar to put them on the Committee.

Mr. DEPUTY SPEAKER.—The period of the Committee is almost terminated. One year is over The Hon. Members are fully within their right to make suggestions.

ಶ್ರೀ ಎಚ್. ಡಿ. ದೇವೇಗೌಡ.—ಲ್ಯಾಂಡ್ ಗ್ರಾಂಟ್ಸ್ ಕಮಿಟಿಯಲ್ಲಿ ಪ್ರತಿಯೊಂದು ತಾಲ್ಲೂಕಿನ ಎಂ.ಎಲ್.ಎ. ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್ ಮತ್ತು ಹರಿಜನ ಮೆಂಬರ್ ಸೇರಿಸಿದೆ. ಮುಖ್ಯ ಮಂತ್ರಿಗಳು ಹಿಂದೆ ಮಾಡಿದ ಸಮಿತಿಗಳಲ್ಲಿ ಎಂ.ಎಲ್.ಎ. ಗಳಿರಲಿಲ್ಲವೆಂದು ಹೇಳಿದರು.

Sri D. DEVARAJ URS.—I stand corrected.

Mr. DEPUTY SPEAKR.—There were two types of Committees one for distribution of the revenue lands and another for distribution of forest land. In all the Districts including Shimoga for distribution of forest lands the M. L. As are there. So far as the South Kanara is concerned, thousands of acres of lands are there, but M.L.As are excluded and they are excluded with vengence.

ಶ್ರೀ ಎಚ್. ಎಸ್. ಸಿದ್ದಪ್ಪ.—ಎಲ್ಲಾ ಲ್ಯಾಂಡ್ ಗ್ರಾಂಟ್ಸ್ ಕಮಿಟಿಗಳಲ್ಲೂ ಹರಿಜನರಿದ್ದಾರೆಂದು ಮುಖ್ಯಮಂತ್ರಿಗಳು ಹೇಳಿದರು. ನಮ್ಮ ಊರಿನಲ್ಲಿ ಸೇಕಡ 70 ರಷ್ಟು ಹರಿಜನರಿದ್ದರೂ ಲ್ಯಾಂಡ ಗ್ರಾಂಟ್ಸ್ ಕಮಿಟಿಯಲ್ಲಿ ಹರಿಜನರಿಲ್ಲ. There is no Harijan in the Land Grant Committee. I have given a representation to the Minister in this regard.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಿ. ಲಚ್ಚೇಗೌಡ ಎನ್ನುವವರು ಮೆಂಬರ್, ಅವರು ಡಿಪ್ರೆಸ್ಡ್ ಕ್ಲಾಸಿಗೆ ಸೇರಿದವರು.

ಶ್ರೀ ಸಿ. ಬೈರೇಗೌಡ.—ಕೆಲವು ಕಡೆ ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷರೊಬ್ಬರು ಮತ್ತು ವಿಧಾನಸಭೆ ಸದಸ್ಯರೊಬ್ಬರು ಇರುವರು. ಇಬ್ಬರಿಗೆ ರೆಪ್ರೆಸೆಂಟೇಷನ್ ಕೊಡಲು ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೂಲ್ಸ್ ಪ್ರಕಾರ ನಾವು ಮಾಡಿದ್ದೇವೆ, ಅದನ್ನು ಬಿಟ್ಟು ಎಲ್ಲೂ ಮಾಡಿಲ್ಲ.

Name Plates in Kannada Language

744. **Sri S. BANGARAPPA** (Sorab).—

Will the Chief Minister be pleased to state :—

(a) whether Government has any proposal before it to change compulsorily the name boards of all the Government Departments including Vidhana Soudha from English to Kannada language so as to give priority to Kannada Language ;

(*b*) if so, when the Government would issue orders to change these name boards ?

Sri D. DEVARAJ URS (Chief Minister).—

(*a*) and (*b*) Circular insititructions have been issued ordering that wherever the name plates are only in English, the names of the office or/and officer be written in Kannada also.

ಶ್ರೀ ಎಸ್. ಬಂಗಾರಪ್ಪ.—ಮೈಸೂರು ರಾಜ್ಯದಲ್ಲಿ ಇರುವ ರಸ್ತೆಗಳು, ಸರಕಾರಿ ಕಚೇರಿಗಳು ವಿಧಾನಸೌಧವೂ ಸೇರಿ ಇವೆಲ್ಲಕ್ಕೂ ಕನ್ನಡದಲ್ಲೇ ಹೆಸರಿನ ಬೋರ್ಡುಗಳಿರಬೇಕಾದ್ದು ಅವಶ್ಯಕ, ಇಂಗ್ಲೀಷಿನಲ್ಲಿರಬೇಕಾದ ಪ್ರಮೇಯವಿಲ್ಲ. ಆದುದರಿಂದ ಸಂಪೂರ್ಣವಾಗಿ ಇಂಗ್ಲೀಷಿನಲ್ಲಿರುವ ಬೋರ್ಡುಗಳನ್ನು ತೆಗೆದು ಕನ್ನಡದಲ್ಲೇ ಇರುವಂತೆ ಮಾಡುವಿರಾ ? ಹೊರಗಡೆ ಕೂಡ ಎಲ್ಲಾ ಬೋರ್ಡುಗಳೂ ಕೂಡ ಕನ್ನಡದಲ್ಲೇ ಇರಬೇಕು. ಇದರ ಬಗ್ಗೆ ಯೋಚನೆ ಮಾಡುವಿರಾ ?

† ಶ್ರೀ ಡಿ. ದೇವರಾಜ ಅರಸ್.—ಕನ್ನಡದ ಬೋರ್ಡುಗಳನ್ನು ಹಾಕಬೇಕೆಂದು ಆಜ್ಞೆ ಮಾಡಲಾಗಿದೆ. ಕೆಲವು ಕಡೆ ಕನ್ನಡದ ಬೋರ್ಡಿನ ಜೊತೆಗೆ ಇಂಗ್ಲೀಷಿನ ಬೋರ್ಡು ಇರಬೇಕೆಂದು ಹೇಳಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಕನ್ನಡದ ನಾಮಫಲಕ ಸರಕಾರಿ ಕಛೇರಿಗಳಲ್ಲಿ ಅಲ್ಲದೆ ಖಾಸಗಿಯವರ ಅಂಗಡಿ ಮುಂತಾದ ಕಡೆಗಳಲ್ಲೂ ಇಡುವಂತೆ ಸೂಚನೆ ಕೊಡುವಿರಾ ?

ಶ್ರೀ ಡಿ. ದೇವರಾಜ ಅರಸ್.—ಹೋಟಲು, ಅಂಗಡಿ ಮುಂತಾದ ಕಡೆಗಳಲ್ಲಿ ಇಂಗ್ಲೀಷಿನಲ್ಲಿ ಬೋರ್ಡ್ ಇದ್ದರೆ ಕನ್ನಡದಲ್ಲೇ ಹಾಕಿ ಎಂದು ಒತ್ತಾಯಮಾಡುವುದು ಹೇಗೆ ?

ಶ್ರೀ ಪಾಟೀಲ್ ನಾಗರಾಜ.—ವಿಧಾನಸೌಧದಲ್ಲಿ ಇಂಗ್ಲೀಷಿನಲ್ಲಿರುವುದನ್ನು ಕನ್ನಡಕ್ಕೆ ಸರಿಯಾಗಿ ತರ್ಜುಮೆ ಮಾಡುತ್ತಿಲ್ಲ, ಅಂಡರ್ ಸೆಕ್ರೆಟರಿ ಎಂಬುದಕ್ಕೆ ಪಾದೇಶಕ ಎಂದು ಹಾಕಿದ್ದಾರೆ. ಕನ್ನಡ ಬಾರದಿರುವವರ ಕೈಯಲ್ಲಿ ತರ್ಜುಮೆ ಮಾಡಿಸಿದ್ದಾರೆ ಎಂದು ಕಾಣುತ್ತದೆ. ಸರಿಯಾಗಿ ಕನ್ನಡ ಬರುವವರ ಕೈಯಲ್ಲಿ ತರ್ಜುಮೆ ಮಾಡಿಸಿ ಸರಿಯಾದ ಕನ್ನಡ ಪದ ಬಳಸುವಂತೆ ಮಾಡುವಿರಾ? ಬೇಕಾದರೆ ಸಾಹಿತ್ಯ ಪರಿಷತ್ತು ಮುಂತಾದ ಕಡೆಗಳಿಂದ ಅದಕ್ಕೆ ಬೇಕಾದ ಸಹಾಯವನ್ನು ಪಡೆದುಕೊಳ್ಳಬಹುದು.

2-00 P.M.

ಶ್ರೀ ಡಿ. ದೇವರಾಜ ಅರಸ್.—ಅವರ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತು ತರ್ಜುಮೆ ಮಾಡತಕ್ಕ ಆ ಒಂದು ಕಷ್ಟ ಏನಿದೆ ಅದನ್ನು ಅವರು ಯೋಚನೆ ಮಾಡುವುದು ಒಳ್ಳೆಯದು. ಹೆಚ್ಚು ಪಾಂಡಿತ್ಯ ಪಡೆದವರಿಗೆ ಕರೆ ಕಳುಹಿಸೋಣ, ಅವರು ಸುಲಭ ಪದಗಳನ್ನು ಕೊಟ್ಟರೆ ಹಾಕೋಣ. ನನ್ನ ಅಭ್ಯಂತರವಿಲ್ಲ, ನಮ್ಮಲ್ಲಿ ರೀಜನಲ್ ವೈಸ್ ಬಳಕೆಯಲ್ಲಿರುವ ಕನ್ನಡ ಇದೆ. ದಕ್ಷಿಣ ಕನ್ನಡಭಾಗದಲ್ಲಿ ಮಾತನಾಡುವ ಕನ್ನಡ ಬೇರೆ, ಕಾಲೇಜು ಎನ್ನುವುದಕ್ಕೆ ಕೋಲೇಜ್ ಎಂದು ಬರೆಯುತ್ತಾರೆ, ಧಾರವಾಡದ ಕಡೆ ಕನ್ನಡ ಪದಗಳು ಬೇರೆಬೇರೆಯಾಗುತ್ತವೆ. Unless it is verified ಅದನ್ನು ನಾನು ತಪ್ಪು ಎಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಕನ್ನಡ ತರ್ಜುಮೆ ಮಾಡುವವರು ಯಾವ ರೀಜನ್‌ನಿಂದ ಬಂದಿರುತ್ತಾರೋ ಆ ಭಾಷೆಯನ್ನು ಅವರು ಉಪಯೋಗ ಮಾಡಿರುತ್ತಾರೆ. ನಿನ್ನೆ ಮಾನ್ಯ ಸದಸ್ಯರು ಒಬ್ಬರು ಹೇಳುತ್ತಿದ್ದರು, 'ರನ್ನನ ಕಥೆಯ ರೀತಿಯಲ್ಲಿ ಓದರಿದರು' ಎಂದು. ಸಾಮಾನ್ಯವಾಗಿ ಓದುರೋದು ಎಂದು ನಾವು ಮಾತನಾಡಿದರೆ ಆ ಕಡೆಯವರು ಆಕ್ಷೇಪಣೆ ಮಾಡುತ್ತಾರೆ.

Grant of Plot in Bangalore to Ex-M. P. from Gulbarga

783. Sri MALLIKARJUNA KHARGE (Gurmitkal).—

Will the Minister for Municipel Administration be pleased to state :—

(*a*) whether the Government has granted a plot at Jayamahal Extension to Sri Mahadevappa Rampure, Ex-M. P. from Gulbarga for starting of Arts College at Bangalore in the name of Hyderabad Education Society ;

(*b*) whether the Government has made any enquiry about illegal collection of amount in the name of Society ?

Sri B. BASAVALINGAPPA (Minister for Municipal Administration).

(*a*) No.

(*b*) No.

Sri MALLIKARJUNA KHARGE.—Is it a fact that the Mysore Government has given the same plot which was sanctioned to the People's Education Society Bombay, to Hyderabad Karnatak Educa-Society, Gulbarga—to late Sri Mahadevappa Rampure ?

†Sri B. BASAVALINGAPPA.—That site is not given to Mahadevappa Rampure.

Sri MALLIKARJUNA KHARGE.—One year back the people of Gulbarga represented regarding illegal collection of amount to establish a College in Bangalore. What action has the Government taken to establish a College in Bangalore City by Sri Mahadevappa Rampure ?

Sri B. BASAVALINGAPPA.—If there are illegal collections by certain individuals, people who are aggrieved must go to the proper forum.

Sri H. D. DEVE GOWDA.—If any illegal collection is made by an Institution recognised by the State Government, then Government must take action. I don't think there is any difficulty in taking action against an institution which is recognised by the Government in case it is involved in illegal actions. May I know the reaction of the Government ?

Sri B. BASAVALINGAPPA.—So far, we have not received any complaint about this.

Veterinary Dispensary at Koppa

812. Sri A. D. BILI GOWDA (Maddur).—

Will the Minister of State for Animal Husbandry be pleased to state :—

whether there is any proposal to provide a full-pledged Veterinary at Dispensary for Koppa in Muddur Taluk ?

Sri N. CHIKKE GOWDA (Minister of State for Animal Husbandry).–

Yes.

ಶ್ರೀ ಎ. ಡಿ. ಬಿಳೀಗೌಡ.—ಸ್ವಾಮಿ 25 ಮೈಲಿಗಳ ದೂರದಲ್ಲಿ ಪಶು ವೈದ್ಯಶಾಲೆಯ ಸೌಲಭ್ಯ ಇಲ್ಲದೆ ಇರುವುದರಿಂದ, ಆದಷ್ಟು ಬೇಗ ಪಶು ವೈದ್ಯ ಶಾಲೆಯನ್ನು ಮಾಡಿಕೊಡುತ್ತೀರಾ ?

† **Sri N. CHIKKE GOWDA.**—Subsequent to this reply three days back, Government have sanctioned upgrading of Government Veterinary Dispensary at Koppa.

Grant of Land for Cultivation in Bandehalli Forest Area

869. **Sri C. BYRE GOWDA** (Vemgal).—

Will the Minister for Agriculture and Forests be pleased to state :—

(*a*) whether the Government is aware of the sathyagraha from 25-8-1972 to 4-9-1972 by the agricultural workers and poor peasants of Egaleti-Thimmasandra and other villages of Sidlagatta taluk in Kolar District for grant of lands for cultivation in the Bandehalli Forest Area ;

(*b*) the number of persons arrested for taking part in the above satyagraha ;

(*c*) whether it is not a fact that the Government had declared in 1970 that the 600 acres of land will be granted to the landless peasants in the above area ;

(*d*) if so, the steps taken to distribute those lands to the land less and poor peasants ?

Sri K. H. PATIL (Minister for Agriculture).—

(*a*) Yes.

(*b*) 375 persons.

(*c*) No.

(*d*) Does not arise.

ಶ್ರೀ ಸಿ. ಬೈರೇಗೌಡ.—ತಾವು ಭೂದಾನ ಚಳುವಳಿಯ ಬಗ್ಗೆ ಗೊತ್ತಿದೆ ಎಂದು ಹೇಳಿದ್ದೀರಿ, ಮತ್ತು 375 ಜನ ವ್ಯಕ್ತಿಗಳನ್ನು ಅರೆಸ್ಟ್ ಮಾಡಿದ್ದೇವೆ ಎಂದು ಹೇಳಿದ್ದೀರಿ, ಒಂದು ಸಾರಿ ಅರೆಸ್ಟ್ ಆದಮೇಲೆ, ಮತ್ತೊಂದು ಸಾರಿ ಜಿಲ್ಲೆಯಿಂದ ಹೊರಗಡೆ ಅದೇ ವ್ಯಕ್ತಿಗಳನ್ನು ಹಾಕುವ ಬಗ್ಗೆ ನೋಟೀಸ್ ಕೊಟ್ಟಿರತಕ್ಕಂಥಾದ್ದು ಸರಿಯೇ ?

† ಶ್ರೀ ಕೆ. ಎಚ್. ಪಾಟೀಲ್.—ಹ್ಯಾಬ್ಯುಚಯಲ್ ಅಫೆಂಡರ್ಸ್ ಇದ್ದರೆ ಹೊರಗೆ ಹಾಕಬೇಕು ಎಂದು ಕಾಯಿದೆಯಲ್ಲಿ ಪ್ರಾವಿಷನ್ ಇದೆ. ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ.—ನಾವು ದರೋಡೆ ಮಾಡುವುದಕ್ಕೆ ಹೋಗಲಿಲ್ಲ, ಪ್ರಜಾಸತ್ತಾತ್ಮಕವಾದ ನೀತಿಯನ್ನು ಅನುಸರಿಸಿ, ಪ್ರಜಾಸತ್ತಾತ್ಮಕವಾದ ಸತ್ಯಾಗ್ರಹವನ್ನು ನಡೆಸಿರತಕ್ಕಂಥಾದ್ದು ಇಂಥ ಹಕ್ಕನ್ನು ಕಸಿದುಕೊಳ್ಳುವ ದೃಷ್ಟಿಯಿಂದ ನೀವು ಅವರನ್ನು ಜಿಲ್ಲೆಯ ಹೊರಗಡೆ ಹಾಕುವುದು ಸರಿಯೇ ?

ಶ್ರೀ ಕೆ. ಎಚ್. ಪಾಟೀಲ್.—ನಿಮ್ಮ ಅಭಿಪ್ರಾಯದಲ್ಲಿ ಸತ್ಯಾಗ್ರಹ ನನ್ನ ಅಭಿಪ್ರಾಯದಲ್ಲಿ ದುರಾಗ್ರಹ ಆಗಬಹುದು. ಆದ್ದರಿಂದ ಅವರನ್ನು ಕಾಯಿದೆಯೊಳಗೆ ಒಳಪಡಿಸಬೇಕಾಗುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈಗಾಗಲೇ ಜಿಲ್ಲೆಯಿಂದ ಹೊರಗಡೆ ಹಾಕಿದ್ದೇವೆಂದು ಹೇಳಿದಿರಿ, ಬಹುಭಾಗ ಜನ ಜಮೀನು ಇಲ್ಲದೆ ಇರತಕ್ಕಂಥವರು ಬಹಳ ವರ್ಷಗಳಿಂದ ಅವರು ಆ ಜಮೀನನ್ನು ಮಾಡಿಕೊಂಡು ಬಂದಿದ್ದಾರೆ, ತಾವು ದೊಡ್ಡ ಮನಸ್ಸು ಮಾಡಿ ಅವರಿಗೆ ಜಮೀನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಇದು ಗವರ್ನಮೆಂಟ್ ಪಾಲಿಸಿ ವಿಷಯ, ತೀರಾ ಬಡವರು, ಗತಿ ಇಲ್ಲದವರು ಎಂದರೆ ವಿಚಾರ ಮಾಡೋಣ.

SHORT NOTICE QUESTION AND ANSWER

S. S. L. C. Examination Centre at Nonavinakere

27. Sri T. M. MANJUNATH (Tiptur).—

Will the Minister for Education be pleased to state :—

(*a*) whether it is a fact that there was a Public Examination Centre for conducting S. S. L .C. Examination at Nonavinakere, Tiptur Taluk till 1972 ;

(*b*) whether that centre has been cancelled in 1973 ;

(*c*) if so, the resons for cancelling the Centre ;

(*d*) whether the Government is aware of the fact that a large number of students of the area will be put to hardships due to the cancellation of Centre ;

(*e*) whether the Government has any proposal to restore the Centre at Nonavikere ?

Sri A. R. BADARINARAYAN (Minister for Education).—

(*a*) Yes.

(*b*) Yes.

(*c*) Administrative convenience and economy.

(*d*) At places which are not centre some inconvenience in inevitable.

(*e*) No, as the pre-exmination work has already been finalised.

ಶ್ರೀ ಟಿ. ಎಂ. ಮಂಜುನಾಥ್.—ನಮ್ಮ ತಾಲ್ಲೂಕಿನ ನೊಣವಿನಕೆರೆ ಪರೀಕ್ಷಾ ಕೇಂದ್ರವನ್ನು ತೆಗೆದುಹಾಕಿರುವ ಸನ್ನಿವೇಶ ಯಾವುದು, ತಮ್ಮ ಕಾನೂನಿಗೆ ವ್ಯತಿರಿಕ್ತವಾದ ಸನ್ನಿವೇಶ ಏನು ಬಂತು ?

† ಶ್ರೀ ಎ. ಆರ್. ಬದರಿನಾರಾಯಣ್.—ಮೈಸೂರು ಸೆಕೆಂಡರಿ ಎಕ್ಸಾಮಿನೇಷನ್ ಬೋರ್ಡ್ ಎನ್ನತಕ್ಕದ್ದು ಒಂದು ಸ್ಟ್ಯಾಚುಟರಿ ಬಾಡಿ, ಅದರಲ್ಲಿ ಬರತಕ್ಕ ಹಣವನ್ನು ಉಪಯೋಗಿಸಿಕೊಂಡು ಎಕ್ಸಾಮಿನೇಷನ್ ನಡೆಸತಕ್ಕದ್ದು, ಸೆಂಟರ್‌ಗಳನ್ನು ಮಾಡತಕ್ಕದ್ದು. ಟಿ, ಎ, ಡಿ, ಎ, ವಗೈರೆ, ಆರ್ಟಿಕಲ್ಸ್, ಸ್ಟೇಷನರಿ, ಆನ್ಸರ್ ಬುಕ್ಸ್ ಇವೆಲ್ಲವುಗಳ ಬೆಲೆ ಜಾಸ್ತಿಯಾಗಿದ್ದ ಕಾರಣ

ಅದಕ್ಕೆ ಬಹಳ ಹಣ ಖರ್ಚಾಗುವುದರಿಂದ, ಸರ್ಕಾರದಿಂದ ಬೋರ್ಡಿಗೆ ಯಾವ ಗ್ರಾಂಟ್ ಕೊಡದೆ ಇರುವುದರಿಂದ, ಅಲ್ಲಿ ಎಷ್ಟು ಖರ್ಚಾಗುತ್ತದೆ ಅಷ್ಟು ಮಾತ್ರ ನಡೆಸತಕ್ಕದು ಅವರಿಗೆ ಅಧಿಕಾರವಿದೆ. ಅಲ್ಲಿಗೆ ಹೆಚ್ಚಿಗೆ ಖರ್ಚಾಗುವುದರಿಂದ, ಇಂಥ ಇನ್ನೂ 72 ಎಕ್ಸಾಮಿನೇಷನ್ ಸೆಂಟರ್ ಗಳನ್ನು ಕಡಿಮೆ ಮಾಡಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ನೊಣವಿನಕೆರೆ ಕೇಂದ್ರದಲ್ಲಿ ಸುಮಾರು 250 ಮಕ್ಕಳು ಪರೀಕ್ಷೆಗೆ ಕೂಡತಕ್ಕ ವಿದ್ಯಾರ್ಥಿಗಳು ಇರುವುದರಿಂದ ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ, ತಕ್ಷಣ ಅಲ್ಲಿಗೆ ಪರೀಕ್ಷಾ ಕೇಂದ್ರವನ್ನು ಕೊಡುವುದಕ್ಕೆ ಸಹಾಯ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಸಹಾನುಭೂತಿ ಸಂಪೂರ್ಣವಾಗಿ ಇದೆ, ಸಹಾನುಭೂತಿ ಇಲ್ಲ ಎನ್ನತಕ್ಕದ್ದಲ್ಲ, ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ನೋಡಬೇಕಾಗಿದೆ. ಅಲ್ಲಿ ಏನಾಗಿದೆ ಎಂದರೆ, ಆಲದ ಹಳ್ಳಿಯಲ್ಲಿ ಹೈಸ್ಕೂಲು ಇದೆ, ಅವರು ಹೇಳುತ್ತಾರೆ, ಇದು ಬಹಳ ದೂರವಾಗುತ್ತದೆ, ನಮಗೆ ತುರುವೇಕೆರೆ ಸ್ಕೂಲಿಗೆ ಸೇರಿಸಬೇಕು ಎಂದು ಹೇಳುತ್ತಾರೆ. ನೊಣವಿನಕೆರೆ ತಿಪಟೂರಿಗೆ 8 ಮೈಲಿ ದೂರವಿದೆ, ಹುಣಸೆಗಟ್ಟ—ತುಮಕೂರ್‌ಗೆ ಇನ್ನೂ ಕಡಿಮೆ ಡಿಸ್ಟೆನ್ಸ್ ಇದೆ, ಏನೂ ಅನಾನುಕೂಲ ಆಗದ ಹಾಗೆ ಹತ್ತಿರ ಇರುವುದರಿಂದ, ಅನಾನುಕೂಲ ಕಡಿಮೆ ಆಗುವ ಹಾಗೆ ವ್ಯವಸ್ಥೆ ಮಾಡಿದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಟಿ.ಎ. ಡಿ.ಎ. ಹೆಚ್ಚು ಖರ್ಚಾಗುತ್ತದೆ, ಹಣಕಾಸಿನ ದೃಷ್ಟಿಯಿಂದ ಸೆಂಟರ್ ಗಳನ್ನು ಕಡಿಮೆ ಮಾಡಿದೆ ಎಂದು ಹೇಳಿದಿರಿ. ಟಿ. ಎ ಡಿ ಎ ದೃಷ್ಟಿಯಿಂದ ಸೆಂಟರ್ಸ್‌ಗಳನ್ನು ಕಡಿಮೆ ಮಾಡಿದರೆ ಅದು ಒಳ್ಳೆಯದಲ್ಲ. ಸೆಂಟರ್ಸ್ ತೆಗೆಯುವಾಗ ಮಕ್ಕಳಿಗೆ ಅನುಕೂಲವಾಗಲೀ ಎನ್ನುವ ದೃಷ್ಟಿಯಿಂದ ಸೆಂಟರ್ ಗಳಿಗೆ ಟಿ ಎ, ಡಿ ಎ, ಒದಗಿಸಿಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಸರ್ಕಾರದವರು ಗ್ರಾಂಟ್ ಕೊಡಿ. ಅಲ್ಲಿ 125 ಜನ ಹೆಣ್ಣುಮಕ್ಕಳು ಇದ್ದಾರೆ. ಒಟ್ಟು 250 ಜನ ಬಾಲಕ ಬಾಲಕಿಯರು ಪರೀಕ್ಷೆಗೆ ಅಪಿಯರ್ ಆಗುವ ಸನ್ನಿವೇಶದಲ್ಲಿ, ಅವರಿಗೆ ಬೋರ್ಡಿಂಗ್ ಲಾಡ್ಜಿಂಗ್ ತೊಂದರೆಯಾಗುತ್ತದೆ. ಹಣಕಾಸಿನ ದೃಷ್ಟಿಯಿಂದ ತಾವು ಏನು ನಿರ್ಣಯ ತೆಗೆದು ಕೊಂಡಿದ್ದೀರಿ ಅದನ್ನು ಪುನರ್ ಪರಿಶೀಲನೆ ಮಾಡಿ

ಶ್ರೀ ಎ. ಆರ್. ಬದರಿನಾರಾಯಣ.—ಮಾನ್ಯ ಅಪೋಜಿಷನ್ ಲೀಡರ್ ಅವರು ಹೇಳಿದ್ದನ್ನು ಒಪ್ಪಬೇಕಾದದ್ದು, ಇದೇ ರೀತಿ 72 ಸೆಂಟರ್‌ಗಳನ್ನು ಕಡಿಮೆ ಮಾಡಿದ್ದೇವೆ. ಜಾಸ್ತಿ ಸೆಂಟರುಗಳನ್ನು ಮಾಡುವುದಾದರೆ ಖರ್ಚು ಜಾಸ್ತಿಯಾಗುತ್ತದೆ. ಈ ವರ್ಷ ಪುನಃ ರೀಕನ್‌ಸಿಡರ್ ಮಾಡುವುದಕ್ಕೆ, ಈಗಾಗಲೇ ತಡವಾಗಿದೆ, I have no objection to re-examine it; but I am afraid it is too late.

ಶ್ರೀ ಎಚ್ ಎಸ್ ಸಿದ್ದಪ್ಪ —ಸರ್ಕಾರದವರು ಈಗಾಗಲೇ, ಪ್ರಿಯೂನಿವರ್ಸಿಟಿ ಎಕ್ಸಾಮಿನೇಷನ್ ಸೆಂಟರ್ಸ್ ವ್ಯವಸ್ಥೆ ಮುಗಿಸಿ ಹೋಗಿದೆ ಎಂದು ಹೇಳುತ್ತೀರಿ, ಆದ್ದರಿಂದ ಪುನರ್‌ಪರಿಶೀಲನೆ ಮಾಡುವುದಕ್ಕೆ ಕಷ್ಟ ಆಗಬಹುದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ, ಸರ್ಕಾರದವರು ಇಷ್ಟಪಟ್ಟರೆ ಈ ಸಣ್ಣ ಕಷ್ಟವನ್ನು ಓವರ್‌ಕಮ್ ಮಾಡುವುದು ಕಠಿಣವಾಗುವುದಿಲ್ಲ, ದಯವಿಟ್ಟು 125 ಹೆಣ್ಣು ಮಕ್ಕಳ ದೃಷ್ಟಿಯಿಂದ ತಕ್ಷಣ ಸೆಂಟರ್ ಮಾಡಿಕೊಡುವುದು ಸೂಕ್ತ, ಆ ರೀತಿ ಮಾಡಿ ಕೊಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಈಗ ಎಲ್ಲಾ ಚೇಪ್ ರೆಡಿಯಾಗಿ ಪ್ರಿಂಟ್ ಆಗಿ ಹೋಗಿದೆ ; ಇದರ ಬಗ್ಗೆ ಕೇಳುವುದಕ್ಕೆ ಸಹಾನುಭೂತಿ ಇದ್ದರೂ ಕೂಡ ಇದನ್ನು ಮಾಡುವುದಕ್ಕೆ ತೊಂದರೆ ಇದೆ.

ಶ್ರೀ ಎಚ್. ಎಸ್. ಸಿದ್ದಪ್ಪ,—ಮುಂದಿನ ವರ್ಷ ಕೊಡಿ.

ಶ್ರೀ ಎ ಆರ್. ಬದರಿನಾರಾಯಣ.—ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಪರೀಕ್ಷಾ ಕೇಂದ್ರವನ್ನು ತೆಗೆದುಹಾಕಿದ್ದರ ಕಷ್ಟವನ್ನು ತಮ್ಮ ಗಮನಕ್ಕೆ ತಂದಿದ್ದೇವೆ ; ಸಾಕಷ್ಟು ಅವಕಾಶ ಇದ್ದಾಗಲೂ ತಮ್ಮ ಗಮನಕ್ಕೆ ತಂದಿದ್ದೇವೆ, ಆದ್ದರಿಂದ ಈ ಸಂದರ್ಭದಲ್ಲಿ ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಅಲ್ಲಿ 125 ಹೆಣ್ಣುಮಕ್ಕಳಿಗೆ, ತೊಂದರೆಯಾಗಿರುವುದರಿಂದಲೂ ತಿಪಟೂರಿಗೆ ಸಾವಿರಾರು ಜನ ವಿದ್ಯಾರ್ಥಿಗಳು ಬರುವುದರಿಂದಲೂ ತೊಂದರೆಯಾಗಿದೆ. ಮುಖ್ಯ ಮಂತ್ರಿಗಳು ಇದ್ದಾರೆ, ಆದ್ದರಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಇದಕ್ಕೆ ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್—ತಮ್ಮ ಮುಖಾಂತರ ಸರ್ಕಾರಕ್ಕೆ ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳಿಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಗೌರ್ನರ್ ಆಡಳಿತ ಇದ್ದ ಕಾಲದಲ್ಲಿ ಒಂದು ಸಾರಿ ಹೀಗೆ 8 ದಿವಸಗಳಿದ್ದಾಗ ಕ್ಯಾನ್ಸಲ್ ಮಾಡಿದ್ದು ಪುನಃ ಕೊಟ್ಟಿದ್ದಾರೆ ಪ್ರಜಾಪ್ರಭುತ್ವ ಸರ್ಕಾರ ಇದ್ದಾಗ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಹೇಗೆ? ಅಲ್ಲಿ ಬಹಳ ತೊಂದರೆ ಇದೆ ಎಂಬುದು ಗೊತ್ತು.

Mr. DEPUTY SPEAKER.—I do appriciate your feelings and senti ments. What can I do ?

ಎಕ್ಸಾಮಿನೇಷನ್ ಸೆಂಟರ್ ಬದಲಾವಣೆಯಾಗುವಾಗ ಮಾಡಬಹುದಿತ್ತು.

ಶ್ರೀ ಎಂ ಬಿ. ರಾಮಸ್ವಾಮಿ —ಮಂತ್ರಿಗಳು ಹೇಳಿದರು ಅಲ್ಲ ಅಡ್ಮಿನಿಸ್ಟ್ರೇಷನ್ ಡಿಫಿಕಲ್ಟೀಸ್ ಇದೆ ಆದರಿಂದ ಕಷ್ಟವಾಗುತ್ತದೆ ಎಂದು. ಆದರ ಬಗ್ಗೆ ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ, ನಿಜವಾಗಿ ಯಾವ ಯಾವ ಸೆಂಟರ್ ಬಗ್ಗೆ ಆರೋಪ ಇದೆ ಮತ್ತು ಕೆಲವು ಉಪಾಧ್ಯಾಯರಿಗೆ ಶಿಕ್ಷೆ ಕೊಟ್ಟಿದ್ದರೆ ಅಂಥ ಕಡೆ ಸೆಂಟರ್ ತೆಗೆದುಹಾಕಿ. ಎಲ್ಲಿ ಜಾಸ್ತಿ ಅನುಕೂಲ ಇದೆ ಅಂತಹ ಕಡೆ ಕಿತ್ತು ಹಾಕಿದ್ದೀರಿ ಆದ್ದರಿಂದ ಮುಂದೆ ಮಂತ್ರಿಗಳು ಇದನ್ನು ಕನ್ಸಿಡರ್ ಮಾಡುವಾಗ ಮಕ್ಕಳಿಗೆ ಅನುಕೂಲ ಆಗುವ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತೇನೆ,

ಶ್ರೀ ಎ. ಆರ್. ಬದರಿನಾರಾಯಣ —ಕೂಲಂಕುಷವಾಗಿ ಪರಿಶೀಲನೆ ಮಾಡಿ ಆದಷ್ಟು ಮಟ್ಟಿಗೆ ಕಡಿಮೆ ತೊಂದರೆಯಾಗಬೇಕು ಎನ್ನುವ ದೃಷ್ಟಿಯಿಂದ ಇದನ್ನು ಏರ್ಪಾಡು ಮಾಡಿದೆ.

Mr. DEPUTY SPEAKER.—Now the Question Hour is over.

QUESTIONS FOR ANSWERS ON THE DAY

(but not taken up)

Cash grants to the Temples in Raichur and Bellary Districts

97. **Sri H. R. SRIRAMULU** (Gangavathi).—

Will the Minister for Revenue be pleased to state :—

(*a*) whether the Government has fixed any annual cash grants to be paid in lieu of the abolition of Jagirs and Shrotriyam villages of the temples ;

(*b*) if so, the amount fixed for each of the temples in Raichur and Bellary districts ;

(*c*) whether the amount is being regularly paid to the trustees or the temple committee in the said Districts ;

(*d*) if not, the reasons therefor ?

Sri N. HUTCHAMASTHY GOWDA (Minister for Revenue).—

(*a*) Yes, Jagir communication amount (Tasdik allowance) as been fixed.

(*b*) *Vide* List appended.

(c) In Raichur District the amount is being paid regularly to Sri Chintamani Mutt at Anegundi. As regards Sri Jayalakshmi Temple. Pampasarovara, Anegundi the amount has not been paid from 1-4-1968 onwards for want of authorisation from the Accountant General.

In Bellary District the amount has been paid up to 1374 Fasli (*i. e.*, 1964 AD) and also for 1377 Fasli (1967 AD). As regards the paymens for the Faslis 1375 (1965 AD) and 1376 and (1966 AD) and 1378 to 1381 (1968 AD to 1971 AD), the amounts have not yet been paid for want of budget allotment. The matter is being pursued by the Deputy Commissioner, Bellary District with the Divisional Commissioner, Gulbarga,

(d) *Vide* reply to clause (c).

List showing the amount fixed for each of the temples in Raichur and Bellary Districts

Raichur District :—

(1) Sri Chintamani Mutt, Anegundi Village	Rs. 176-00	per quarter.
(2) Sri Jailakshmi Temple, Pampasarovara, Anegundi ...	234-00	do

Bellary District :—

(1) Sri Uttaradhi Mutt ...	Rs. 399-76	per annum
(2) Sri Malleswaraswamy Temple, Bellary	363-03	do
(3) Sri Satyadharswamy Mutt, Nanjangud ...	371-06	do
(4) Sri Virupakshaswamy Temple, Hampi ...	2,903-61	do
(5) Sri Vyasaraya Mutt, T.N. Pur....	710-21	do
(6) Sri Shankana Bharathi Mutt, Hampi ...	426-58	do
(7) Sri Ranganathaswamy Temple Anegundi ...	1,005-44	do
(8) Sri Veerabhadrasawmi Temple, Harapanhalli ...	156-53	do

Compensation to Hereditary Trustees of Temples in Raichur and Bellary Districts

98. Sri H. R. SRIRAMULU (Gangavathi).—

Will the Minister for Revenue be pleased to state :—

(*a*) whether Government is giving any compensation to the hereditary trustees of temples in lieu of abolition of the Jagirs and Shrotriyam villages of the temples ;

(*b*) if so, the amount of compensation fixed for payment to the trustees of the temples of Raichur and Bellary districts ;

(*c*) the amount paid to each of them annually ?

Sri N. HUTCHAMASTHY GOWDA (Minister for Revenue).—

(*a*) Yes.

(*b*) An amount of Rs. 28,803-23 P. was fixed for payment to the trustees of Sri Jailakshmi Temple, Pampasarovara, Anegundi, Raichur District. In respect of Bellary District, no such payment is made.

(*c*) The entire amount has been paid to the trustee of the said temple in Raichur District in fifteen annual instalments each of Rs. 1,920-21.

Allotment of Sites to Revenue Site Owners in Rajajinagar

553. Sri M. S. KRISHNAN (Malleswaram).—

Will the Minister for Municipal Administration be pleased to state :—

(*a*) the number of Khatedars from whom the sites/land have been acquired by the City Improvement Trust Board, Bangalore in West of Chord Road I and II stage layouts, Rajajinagar, Bangalore ;

(*b*) the number of revenue site owners from whom the sites have been acquired by the City Improvement Trust Board ;

(*c*) whether Government is aware that the over-whelming majority of these revenue site owners is from the poorer section of society, namely, workers, middle class employees, Class IV servants of the Government, etc. ;

(*d*) of them, the number of persons applied to the City Improvement Trust Board for alloting the sites to them alone and the number of persons have been alloted sites in the above layout ;

(e) whether the Government is aware that in the pre-1972 City Improvement Trust Board Rules, these revenue sites owners were to be given preference in the matter of allotment of sites ;

(f) what are the preference to be given in the present rules of the City Improvement Trust Board ;

(g) wether the Government reconsider the position and amend the rules so as to give preference to the revenue site owners in allotting sites ?

Sri B. BASAVALINGAPPA (Minister for Municipal Administration).—

(a) West of Chord Road :

I Stage	...	299
II Stage	...	73

(b) Information is not available.

(c) No ; They come from the poor, middle and rich class of the society.

(d) 15. Their cases are under consideration of the Board.

(e) Yes.

(f) No preference is given to revenue site holders in the present rules.

(g) No.

Madhuvana Gardens in Mysore City

585. Sri K. PUTTASWAMY (Chamundeswari).—

Will the Minister for Revenue be pleased to state :—

(a) whether the Government have permitted the Agricultural Produce Market Committee at Mysore, to purchase Madhuvana Gardens in Mysore City by private negotiations ;

(b) whether the owner has filed a declaration as required by Section 66 of the Mysore Land Reforms Act, 1961 ;

(c) whether his right to retain this garden has been determined under section 67 of the Mysore Land Reforms Act, 1961 ?

Sri N. HUTCHAMASTHY GOWDA (Minister for Revenue).—

(a) No.

(b) No.

(c) Does not arise.

Compensation to Lands Acquired for Tanks in Chikodi Constituency

616. Sri P. P. HEGRE (Chikodi).—

Will the Minister for Revenue be pleased to state :—

(a) the names of the villages and the number of persons whose lands have been acquired for the construction of tanks in Chikodi Constituency ;

(b) when the construction (of tanks) works were completed ;

(c) whether compensation amount has been paid to them all ;

(d) if not, the reasons for not paying the compensation amount ;

(e) the time required for the payment of compensation to all of them ?.

Sri N. HUTCHAMASTHY GOWDA (Minister for Revenue).—

(a) and (b)—

Names of villages	No. of persons	Year of completion
Kadapur	120	1972
Chinchani	15	
Kabbur at Kanikikur	50	nearing completion
Kabbur at Mirapurhatti	15	
Jadkurli	57	1972
Toranhalli (near Jainapur)	72	
Jainapur	70	
Nej	90	1970

(c) No.

(d) Acquisition procedings are yet to be completed.

(e) Compensation will be paid as soon as the acquisition proceedings are finalised.

CALLING ATTENTION TO MATTERS OF URGENT PUBLIC IMPORTANCE

(i) *Re* : manhandling of some persons at Hanumanthapura and Banderahalli by Police Sub-Inspector.

Sri R. CHIKKAIAH (Madhugiri).—I call the attention of the Chief Minister to the alleged manhandling of some persons of Hanumanthapura and Banderahalli Villages Mudigere Taluk by the Police Sub-Inspector.

SRI D. DEVARAJA URS (Chief Minister).—Sir, I state at follows:

(i) On 19th October 1972' a complaint was made in Medigesi Police Station by Shri Aswathappa S/o Narayanappa of Bandenahally alleging that the fence of his land in S. No. 19/1 of Nellahally was removed, the bund in the land was destroyed causing damge to the extent of Rs. 100, and that he was also assaulted. A case was registered on the same day in Cr. No. 26/72 under Sections 143, 447, 427 and 323 I.P.C. The accused persons were arrested and released on bail. The investigation disclosed that the allegation of tresspass was not proved and the assault on the Complainant was simple, Hence, a 'B' report was submittd in this case on 8-11-1972.

(ii) On 29th November 1972, one Sri. Siddalingappa of Bandenahalli gave a complaint making allegations of tresspass into the lands of Sri. Narayanappa and damage to land and standing crops etc., In this connection, a case was registered in Cr. No. 35/72 and the same is now pending trial-Hence, the matter is *sub-judice*.

(iii) On 3rd January 1973, Shri Gopalakrishna Reddy of Hanumanthapura gave a complaint that he was assaulted with a club in front of his house and bleeding injuries were caused on his head. A case was registered in Cr. No. 1/73 under Section 324—34 I. P. C. and this case is also pending trial in the court. The matter is *sub-judice.*

(iv) On the same day (3-1-73), Sri Hanumantha Reddy of Hanumanthapura also gave a complaint to the Police alleging that he was assaulted with clubs. Hence, a counter case in Cr. No. 2/73 under Section 324 I.P.C. was registered and charge sheet has been filed. This case is also pending trial in the court. The matter is *sub-judice.*

(v) On 4-1-1973, Shri Sadasiv Reddy filed a private complaint in the Court of the First Class Magistrate, Madhugiri stating that on 3-1-1973 at 9-00 A.M. when he was standing near the old school at Hanumanthapura, he was assaulted and detained by Police-Inspector Sri Ballad. A private case has been taken on file by the court and is pending trial. Hence, this case is sub-judice.

MR. DEPUTY SPEAKER.—Most of the cases are *sub-judice.* There is no scope for you to ask clarification.

SRI R. CHIKKAIAH.—In item No. 1, it is said that a B-Report is given. My Call Attention notice relates to the assault by the Sub-Inspector against the Complaint; In item no. 1 and 5, Sub-Inspector has assaulted and beaten the complainant and unnecessarily detained him in the station without arresting him and without any complaint against him. What action has been taken against the Sub-Inspector. for the acts which he has committed against the complainant?

SRI D. DEVARAJ URS.—I have said, he has gone to court in a private way.

MR. DEPUTY SPEAKER.—Next Call Attention notice.

(*ii*) *Re*: Power cut to M.S.K. Mills, Gulbarga

SRI MALLIKARJUNA KHARGE.—I call the attention of the Hon. Minister for Public Works and Electricity to the power cut to the M.S.K. Mills Company Limited, Gulbarga.

SRI H. M. CHANNABASAPPA (Minister for Public Works and Electricity).—Sir, I state as follows :

Due to successive failure of monsoons during 1971 and 1972 and the consequent low level of water in Linganamakki Reservoir, it became inevitable to enforce a cut of 25 per cent in the consumption of energy in the State from 1-10-1972 till the on-set of the next monsoons. This cut has been enforced on all consumers except certain utility services essential to the community. For purposes of enforcing this cut, the actual energy consumed by a consumer during the period Febraray-July 1972 has been taken into account by the Mysore State Electricity Board. On this basis, the monthly energy entitlement of the M.S.K. Mills, Gulbarga was fixed at 5,32,576 units. The Mills however, consumed energy in excess of their entitlement during October 1972 and the Chairman of the Mills agreed to this excess as also the anticipated excess consumption if any in November 1972 being adjusted during the months of December 1972 and January 1973 as the mills proposed to set up diesel generating sets to supplement the energy required by them. The Board agreed on 18-11-1972 to the mills drawing power in excess of their entitlement subject to the condition that this excess will be made good during the subsequent months. The total quantum of energy drawn in excess by the mills during the period from November 1972 to February 1973 was of the order of 4,92,992 units. Since there was no reduction in the consumption of energy in subsequent months also, the Board had to disconnect the installation on 5th March 1973.

2. According to the norms prescribed by the Board, an installation has to be disconnected for excess consumption for a period of one week or for a period corresponding to the excess energy consumed, whichever is higher. In the case of this mills, the period of disconnetion will be 27 days. As this would have resulted in closure of the mills and retrenchment of the workers, apart from affecting the production, the Board, as a special case, agreed to re-connect the installation subject to the payment of penal charges for the excess consumption and also for adjustment of excess energy of 4,92,992 units in three euqal monthly instalments during the subsequent period ending June 1973. The installation was accordingly re-connected by the Board on 12-3-1973. Thus power supply had to be disconnected only for seven days as the mills could not reduce their consumption inspite of the concession given by the Board.

3. Representations were received by Government from the Member, the Mill Management also from the Mill Mazdur Sabha, indicating that the enforcement of 25per cent cut in the consumption of

energy by the mills and adjustment of excess energy drawn by them during November 1972 to February 1973 in the subsequent months, will put the mills into great hardships resulting in its closure and retrenchment of workers of the area which is hit by scarcity conditions. Government on considering the representations have instructed the State Electricity Board that the excess energy drawn by the mills during November 1972 to February 1973 should not be adjusted in the current and future months and that the monthly energy entitlement of the mills should be fixed on the basis of its actual consumption of energy during the period for which it worked to its full capacity, subject to a cut of 25 per cent, as has been done in the case of other two sick mills *viz.*, Mysore and Minerva Mills taken over by the Textile Corporation. Complete exemption of the mills from power cut is not feasible nor desirable. However, with the concession now shown, it is hoped that the mills will be in a position to utilise the power allowed fully to their advantage without any interference in their working and without any hinderance to their production.

Sri MALLIKARJUNA KHARGE.—I want to know whether the Chairman of the Electricity Board had sent a letter to the M. S. K. Mills, Gulbarga stating that only 6,32,576 units should be consumed, so as to implement the 25 per cent power cut and thereby the labourers also would get full employment ?

Sri H. M. CHANNABASAPPA.—No, that is not correct. He will calculate the power that has been consumed by the Mill. I have made it very clear that the excess consumption they have made is exempted as special case. The 25 per cent cut will continue and the quantum of 75 per cent power will be calcutated on the total consumption that they have made during the period when the Mill was working to its full capacity.

Sri MALLIKARJUNA KHARGE.—I want to know whether any such letter was sent ?

Sri H. M. CHANNABASAPPA.—I can't tell you what correspondence took place between the Mills and the Electricity Board. The Government passed the orders in this way and it will stand.

Mr. DEPUTY SPEAKER.—Next item, papers to laid.

Papers Laid on the Table

Sri N. HUTCHAMASTHY GOWDA (Minister for Revenu).—I beg to lay :

Order No. RD 52 EST 72 dated 21st March 1973. Remission of fifty per cent Stamp Duties chargeable in respect of all instruments, mortgage deeds, agreements, security bonds, affidavits etc., executed by the Co-operative Societies registered under Mysore Co-operative Societies Act 1960 and all

(SRI N. HUTCHAMASTHY GOWDA)

instruments, agreements, security bonds, mortgage deeds, affidavits executed by the individual artisans in favour of the Mysore State Khadi and Village Industries Board; under section 9 (2) of the Mysore Stamp Act, 1957.

SRI AZEEZ SAIT (Minister for Labour).—I lay:

Notification No. S.O. 2311 dated 3rd-7th December 1972,

Reduction of tax payable under the Mysore Motor Vehicles Taxation Act, 1957 in respect of vehicles registered in the States of Andhra and Maharashtra and engaged in the transportation of sugarcane from the fields situated in Mysore State to the Bidar Sahakara Sakkare Karkhane Limited, Bidar; under sub-section (2) of section 16 of the Mysore Motor Vehicles Taxation Act, 1957."

SRI K. H. PATIL (Minister for Agriculture and Forests).—I lay:

" Notification No. AF 204 AMS 67 dated ... February, 1973;

Cotton Transport (Mysore) Amendmeni Rules, 1973; under section 8 of the Cotton Transport Act 1923 (Central Act No. 3 of 1923)."

MR. DEPUTY SPEAKER.—All the Papers are laid.

First Report of the Committee on Public Accounts

Presentation

SRI H. D. DEVE GOWDA (Holenarsipur).—I present :

" First Report of the Committee on Public Accounts on the Appropriation and Finance Accounts 1968-69 and the Audit Report (Civil) 1970."

MR. DEPUTY SPEAKER.—The Report is presented.

Alleged inconveniences caused to people while collecting lease etc. in Thirthahalli

2-30 P.M.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ತೀರ್ಥಹಳ್ಳಿ ತಾಲ್ಲೂಕಿನ ಮುಜರಾಯಿ ಗೇಣಿದಾರರಿಗೆ ಸಂಬಂಧಪಟ್ಟಂತೆ ಮೂರು ವರ್ಷಕ್ಕೆ ಸಂಬಂಧಪಟ್ಟ ಗೇಣಿ ಮುಂತಾದುದವನ್ನು ಒಂದೇ ಸಲ ವಸೂಲು ಮಾಡುವುದಕ್ಕೆ ಹೋಗಿ ಕಿರುಕುಳ ಕೊಡುತ್ತಿದ್ದಾರೆ ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ತಿಳಿಸಬೇಕೆಂದು ಕೇಳುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಕೋಣಂದೂರು ಲಿಂಗಪ್ಪನವರು ತಿಳಿಸಿದ ಕೂಡಲೇ ನಾನು ಜಿಲ್ಲಾಧಿಕಾರಿಗಳನ್ನು ಫೋನ್‌ನಲ್ಲಿ ಕಾಂಟ್ಯಾಕ್ಟ್ ಮಾಡಿ ಇಂಥ ಪರಿಸ್ಥಿತಿ ಇದೆ ಎಂದು ಗೊತ್ತಾಗಿದೆ, ಅಲ್ಲಿಯ ರೈತರಿಗೆ ಯಾವ ವಿಧದಲ್ಲಿಯೂ ಕಿರುಕುಳ ಕೊಡತಕ್ಕದ್ದನ್ನು ಅಥವಾ ತೊಂದರೆ ಕೊಡತಕ್ಕದ್ದನ್ನು ಮಾಡಬಾರದೆಂದು ಸ್ಪಷ್ಟವಾಗಿ ತಿಳಿಸಿದ್ದೇನೆ. ಈಗಾಗಲೇ ಶ್ರೀ ಲಿಂಗಪ್ಪನವರು ತಿಳಿಸಿದ ಹಾಗೆ ಗೇಣಿದಾರರಿಂದ ಹಿಂದೆ ಇದ್ದ ಜೋಡಿದಾರರು ಗೇಣಿಯನ್ನು ತೆಗೆದುಕೊಂಡು ಬಿಟ್ಟಿದ್ದಾರೆ ಎಂದು ನನಗೆ ಗೊತ್ತಾಗಿದೆ. ಆದರಲ್ಲಿ ಎಷ್ಟರಮಟ್ಟಿಗೆ ನಿಜವಿದೆ, ಆ ಗೇಣಿದಾರರಿಂದ ವಸೂಲು ಮಾಡಿದ್ದಾರೆಯೇ ಇಲ್ಲವೇ, ಈ ವಿಷಯಗಳನ್ನೆಲ್ಲ ತಿಳಿದುಕೊಂಡು ಕಂದಾಯ ಮತ್ತು ಗೇಣಿ ವಸೂಲು ಮಾಡುವುದರಲ್ಲಿ ತೊಂದರೆ ಕೊಡಬಾರದೆಂದು ತಿಳಿಸಿದ್ದೇನೆ. ಆ ರೀತಿ ನಮ್ಮ ಅಧಿಕಾರಿಗಳು ಮಾಡುತ್ತಿದ್ದಾರೆಂದು ನಾನು ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

STATEMNT BY THE CHIEF MINISTER

re : Price Trends, Price and Price Policy

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಈ ಹಿಂದೆ ಬೆಲೆಗಳ ವಿಚಾರದಲ್ಲಿ ಮಾನ್ಯ ಸದಸ್ಯರು ಈ ಸಭೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಅನೇಕ ಸಂದರ್ಭದಲ್ಲಿ ಕಳವಳವನ್ನು ವ್ಯಕ್ತಪಡಿಸಿದ್ದಾರೆ ಮತ್ತು ಹೀಗೆ ಬೆಲೆಗಳು ಏರತಕ್ಕದ್ದರಿಂದ ಜನಸಾಮಾನ್ಯರಿಗೆ ಬಹಳ ತೊಂದರೆಯಾಗಿದೆ ಎನ್ನುವ ಬಗ್ಗೆ ಕೂಡ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ನಾನು ಅದಕ್ಕಾಗಿ ಈ ಸಭೆಗೆ ಒಂದು ಹೇಳಿಕೆಯನ್ನು ಸರ್ಕಾರದ ವತಿಯಿಂದ ಕೊಡಬೇಕು ಎಂದು ಅಪೇಕ್ಷೆಪಟ್ಟು ತಮ್ಮ ಅಪ್ಪಣೆಯನ್ನು ಪಡೆದು ನಿಂತಿದ್ದೇನೆ.

ಬೆಲೆಗಳು ಸರ್ಕಾರದ ಕೈಯಲ್ಲಿಲ್ಲ. ಅದು ಬಹು ಮಟ್ಟಿಗೆ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದ ನೀತಿಯನ್ನು ಅವಲಂಬಿಸಿರತಕ್ಕದ್ದು. ಆದರೂ ನನ್ನ ಈ ಹೇಳಿಕೆಯಲ್ಲಿ ಎರಡೂ ಸರ್ಕಾರದ ಬಗ್ಗೆ ಯಾವ ಪ್ರಮಾಣದಲ್ಲಿ ಚರ್ಚಿಸಬಹುದೋ ಆ ಪ್ರಮಾಣದಲ್ಲಿ ಚರ್ಚೆ ಮಾಡಿ ತಮಗೆ ಕೊಟ್ಟಿರತಕ್ಕ ಹೇಳಿಕೆಯಲ್ಲಿ ಅದನ್ನು ಸ್ಪಷ್ಟಪಡಿಸುವುದಕ್ಕೆ ನಾನು ಪ್ರಯತ್ನ ಪಟ್ಟಿದ್ದೇನೆ. ಮಾನ್ಯ ಸಭಾಧ್ಯಕ್ಷರೆ,

ಇತ್ತೀಚಿನ ಬೆಲೆ ಏರಿಕೆ ಬಗ್ಗೆ ಈ ಸಭೆಯ ಅನೇಕ ಸದಸ್ಯರು ಕಳವಳಗೊಂಡಿದ್ದು, ಆ ವಿಚಾರದಲ್ಲಿ ಅನೇಕ ಪ್ರಶ್ನೋತ್ತರಗಳಾಗಿವೆ. ಇವೆಲ್ಲ ಬಹುಮಟ್ಟಿಗೆ ಸಂಬಂಧಪಟ್ಟ ಇಲಾಖೆಗಳ ಧೋರಣೆ ಮತ್ತು ಬೆಲೆ ಹತೋಟಿಗೊಳಿಸುವುದಕ್ಕಾಗಿ ಕೈಗೊಂಡ ಆಡಳಿತ ಕ್ರಮಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿವೆ ಎಂಬುದಕ್ಕೆ ಮಾತ್ರ ಸಂಬಂಧಪಟ್ಟಿವೆ. ಬೆಲೆಗಳ ಪ್ರವೃತ್ತಿಯ ವ್ಯಾಪಕವಾದ ವಿಶ್ಲೇಷಣೆ ಹಾಗೂ ಬೆಲೆಗಳ ಬಗ್ಗೆ ಸರಕಾರದ ಸಮಗ್ರ ನೀತಿಯನ್ನು ಈವರೆಗೆ ಸಭೆಯ ಮುಂದಿಟ್ಟಿಲ್ಲವಾದ್ದರಿಂದ ಇಂದು ಈ ಹೇಳಿಕೆಯನ್ನು ನೀಡುತ್ತಿದ್ದೇನೆ.

ಆರ್ಥಿಕ ಅಭಿವೃದ್ಧಿಯೊಂದಿಗೆ ಹೆಚ್ಚು ವರಮಾನ, ಹೆಚ್ಚು ಉದ್ಯೋಗಾವಕಾಶ ಮತ್ತು ಹೆಚ್ಚು ಬೆಲೆಗಳು ಹೊಂದಿಕೊಂಡು ಬರುತ್ತವೆ. ಯೋಜನಾಬದ್ಧ ಅಭಿವೃದ್ಧಿ ಸಾಧನೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚುತ್ತಿರುವ ವರಮಾನ, ಹೆಚ್ಚುತ್ತಿರುವ ಸರಕುಗಳ ಪೂರೈಕೆ ಮತ್ತು ಹೆಚ್ಚು ಸೇವಾ ವ್ಯವಸ್ಥೆಗಳ ನಡುವೆ ಹೊಂದಾಣಿಕೆಯನ್ನು ಇರಿಸಿಕೊಂಡು ಬರಲಾಗುವುದು. ಇದರಿಂದ ಬೆಲೆಗಳ ಸ್ಥಿಮಿತಕ್ಕೆ ಸಹಾಯವಾಗುತ್ತದೆ. ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಹೋಗುವ ಆರ್ಥಿಕ ವ್ಯವಸ್ಥೆಯಲ್ಲಿ ಬೆಲೆಗಳು ಬದಲಾಗುವುದೇ ಇಲ್ಲ ಎಂದು ಇದರಿಂದ ಅರ್ಥಮಾಡಲಾಗದು. ಅಭಿವೃದ್ಧಿಯ ಮಟ್ಟದಲ್ಲಾಗುವ ಬದಲಾವಣೆಗೆ ಅನುಸಾರವಾಗಿ, ಬೆಲೆಗಳ ಸ್ಥಿಮಿತವಾಗುವ ಮಟ್ಟವೂ ಕೂಡ ಬದಲಾಗುತ್ತವೆ. ಬೆಲೆಗಳ ಹೊಸಮಟ್ಟ ಅಭದ್ರವಾಗಿರಕೂಡದೆಂದು ಇದರ ಅರ್ಥ. ಬೆಲೆ ಏರಿಕೆಗಿಂತ ವರಮಾನದ ಪ್ರಮಾಣ ಹೆಚ್ಚಾದರೆ ಆಗ ನಿಜವಾದ ವರಮಾನ ಹೆಚ್ಚಾದಂತೆ. ಆದರೆ ವರಮಾನ ಬೆಲೆ ಏರಿಕೆಗೆ ಸಮಾನವಾಗಿ ಹೆಚ್ಚದಿದ್ದರೆ, ನಿಜವಾದ ವರಮಾನ ಕಡಿಮೆಯಾಗಿ ಕಷ್ಟಕರ ಪರಿಸ್ಥಿತಿ ಉಂಟಾಗುತ್ತದೆ. ಹೀಗಾದಾಗ ನಿಶ್ಚಿತವಾದ ಹಾಗೂ ಕಡಿಮೆ ಆದಾಯ ಬರುವ ವರ್ಗದ ಜನ ಅತಿ ಹೆಚ್ಚಿನ ಕಷ್ಟಕ್ಕೀಡಾಗುತ್ತಾರೆ. ಏಕೆಂದರೆ, ಅವರು ಸಂಪಾದಿಸುವ ಹಣದಿಂದ ಮೊದಲಿಗಿಂತ ಕಡಿಮೆ ಸರಕುಗಳು ದೊರಕುತ್ತವೆ. ಹೆಚ್ಚುತ್ತಿರುವ ಬೆಲೆಗಳಿಂದಾಗಿ ವೆಚ್ಚವನ್ನು ಸರಿತೂಗಿಸಲು

(ಶ್ರೀ ಡಿ. ದೇವರಾಜ ಅರಸ್)

ಹೆಚ್ಚಿನ ತುಟ್ಟಿಭತ್ಯ ಬೇಕೆಂದು ಸರಕಾರ ಮತ್ತು ಖಾಸಗೀ ಕ್ಷೇತ್ರಗಳ ಕೆಲಸಗಾರರು ಒತ್ತಾಯ ಪಡಿಸುತ್ತಾರೆ. ತುಟ್ಟಿಭತ್ಯ ಹೆಚ್ಚಿಸುವುದು ಅನಿವಾರ್ಯವಾಗುತ್ತದೆ. ಆದರೆ ಅದರಿಂದ ಹಣ ದುಬ್ಬರ ಹೆಚ್ಚಾಗಿ ಒಂದು ವಿಷವ್ಯೂಹವೇ ನಿರ್ಮಿತವಾಗುತ್ತದೆ. ಅಲ್ಲದೆ ಲಾಭಕೋರರು ಹಾಗೂ ಸಟ್ಟಾ ವ್ಯಾಪಾರ ವರ್ಗದವರಿಗೆ ಹೆಚ್ಚುತ್ತಿರುವ ಬೆಲೆಗಳಿಂದ ಅನುಕೂಲವಾಗಿ, ಶ್ರೀಮಂತರಾಗಿ ರುವವರೇ ಹೆಚ್ಚು ಶ್ರೀಮಂತರಾಗಲು ಕಾರಣವಾಗುತ್ತದೆ. ಪರಿಣಾಮವಾಗಿ ವರಮಾನಗಳ ಅಂತರವೂ ಹೆಚ್ಚುತ್ತದೆ. ಆದ್ದರಿಂದಲೇ ಸ್ಥಿಮಿತವಾದ ಬೆಲೆಗಳು ಹಾಗೂ ಸಾಮಾಜಿಕ ನ್ಯಾಯ ದೊಂದಿಗೆ ಯೋಜನಾಬದ್ಧ ಅಭಿವೃದ್ಧಿಯ ಗುರಿ ಸಾಧಿಸಲು, ಹಣದುಬ್ಬರದ ನಿವಾರಣೆಗೆ ಪರಿಣಾ ಮಕಾರಿಯಾದ ಕ್ರಮಗಳನ್ನು ರೂಪಿಸಿಕೊಳ್ಳಬೇಕು.

ಮೈಸೂರು ರಾಜ್ಯ ಪಂಚವಾರ್ಷಿಕ ಯೋಜನೆಗಳಿಂದಾಗಿ ಹೆಚ್ಚಿನ ಅಭಿವೃದ್ಧಿ ಮಹತ್ವದತ್ತ ಸಾಗಿದೆ. ಅಭಿವೃದ್ಧಿಯ ಪ್ರಮಾಣ ಮತ್ತು ಸ್ವರೂಪ ಹಾಗೂ ಯೋಜನೆಗಳಿಗೆ ಹಣ ಒದಗಿಸುವ ಕ್ರಮಗಳು ಬೆಲೆಗಳ ಮೇಲೆ ಯಾವ ಪರಿಣಾಮಗಳನ್ನು ಉಂಟುಮಾಡುತ್ತವೆಂಬುದನ್ನು ಎಚ್ಚರಿಕೆ ಯಿಂದ ಪರಿಶೀಲಿಸಬೇಕು. ಮುಖ್ಯವಾಗಿ ಉತ್ಪಾದನೆಗೆ ಪ್ರೋತ್ಸಾಹಕೊಡುವ ಕ್ರಮಗಳು, ಅಸ ಮಾನತೆಯನ್ನು ತಡೆಗಟ್ಟುವ ಕ್ರಮಗಳು, ಆಸ್ತಿಪಾಸ್ತಿಗಳು, ಭವ್ಯ ಮನೆಗಳು, ಆಭರಣಗಳು, ಮುಂದೆ ಲಾಭಗಳಿಸುವ ದೃಷ್ಟಿಯಿಂದ ವಸ್ತುಗಳನ್ನು ಸಂಗ್ರಹಿಸಿಡುವುದು, ಆಡಂಬರದ ಖರ್ಚು ಗಳು ಮುಂತಾದ ಸಾಮಾಜಿಕವಾಗಿ ನಿರರ್ಥಕವಾದ ವ್ಯವಹಾರಗಳಿಗೆ ಸಂಪತ್ತಿನ ಬಳಕೆಯನ್ನು ತಡೆಗಟ್ಟುವುದು. ಕೈಗಾರಿಕೆಗಳಲ್ಲಿ ಘರ್ಷಣೆಗಳು ಮತ್ತು ಅಭದ್ರ ಪರಿಸ್ಥಿತಿಯನ್ನು ತಡೆಗಟ್ಟು ವುದು, ಈ ಅಂಶಗಳನ್ನು ದೃಷ್ಟಿಯಲ್ಲಿರಿಸಿಕೊಳ್ಳಬೇಕು. ಸಮಗ್ರವಾಗಿ ಬೆಲೆಗಳ ಸ್ಥಿಮಿತ ಸಾಧಿಸ ಬೇಕೆಂದರೆ, ಪರಿಸ್ಥಿತಿಗಳಿಗೆ ಹೊಂದಿಕೊಂಡಂತೆ ಬದಲಾವಣೆಗಳನ್ನು ಮಾಡಲು ಅವಕಾಶವಿರಬೇಕು. ಅನೇಕ ವೇಳೆ ಹೂಡಿರುವ ಬಂಡವಾಳಕ್ಕೆ ನ್ಯಾಯವಾದ ಪ್ರತಿಫಲ ಬರುವಂತೆ, ಉತ್ಪಾದನೆ ಹೆಚ್ಚಿ ಸುವುದಕ್ಕೆ ಪ್ರೋತ್ಸಾಹ ಕೊಡುವುದಕ್ಕೆ ಅನಾವಶ್ಯಕವಾದ ಬಳಕೆಯನ್ನು ತಡೆಗಟ್ಟುವುದಕ್ಕೆ ಕಡಿಮೆ ಇರುವ ಸಂಪನ್ಮೂಲಗಳನ್ನು ರಕ್ಷಿಸುವುದಕ್ಕೆ ಮತ್ತು ಕಡಿಮೆ ಇರುವ ಸರಕಿನ ಬೇಡಿಕೆ ಮತ್ತು ಸರಬ ರಾಜನ್ನು ಸರಿಹೊಂದಿಸುವುದಕ್ಕೆ ಬೆಲೆಗಳನ್ನು ಉದ್ದೇಶಪೂರ್ವಕವಾಗಿ ಹೆಚ್ಚು ಕಡಿಮೆ ಮಾಡಬೇಕಾ ಗುತ್ತದೆ. ಇಂತಹ ಸಂದರ್ಭಗಳಲ್ಲಿ ಅರ್ಥ ವ್ಯವಸ್ಥೆಯ ನಿಯಂತ್ರಣಕ್ಕೆ ಬೆಲೆಗಳ ಹೊಂದಾಣಿಕೆ ಒಂದು ಪ್ರಮುಖ ನೀತಿಯು ಸಾಧನವಾಗುತ್ತದೆ. ಸಾಧಿಸಿರುವ ಅಭಿವೃದ್ಧಿಯ ಪರಿಣಾಮವಾಗಿ ಹೆಚ್ಚಿನ ವರಮಾನದೊಂದಿಗೆ ಉತ್ಪಾದನೆಯಲ್ಲಿ ಅಸಮಾನತೆಯೂ ಕಂಡುಬಂದು ಬೆಲೆಗಳು ಏರಿರುವ ಪರಿಸ್ಥಿತಿ, ದೇಶದ ಇತರೆಲ್ಲ ಕಡೆಗಳಂತೆ ರಾಜ್ಯದಲ್ಲೂ ಪ್ರತಿಬಿಂಬಿತವಾಗಿದೆ. ಆದರೆ 1972ರ ಮೇ ತಿಂಗಳಿಂದ ಕಂಡುಬಂದಿರುವ ಅಪೂರ್ವ ಬೆಲೆ ಏರಿಕೆ ಕಳವಳಕ್ಕೆ ಕಾರಣವಾಗಿದೆ. ಇದೂ ಕೂಡ ಅಂತಹ ವಿಶಿಷ್ಟವಾದುದೇನೂ ಅಲ್ಲ ಏಕೆಂದರೆ, ಸರಬರಾಯಿ ಮತ್ತು ಬೇಡಿಕೆಗಳು ಸರಿಸಮಾ ನವಾಗುವ ದೀರ್ಘಕಾಲದ ಯತ್ನದಲ್ಲಿ ಸ್ವಲ್ಪಕಾಲ ಅಸಮಾನತೆಗಳು ಕಂಡುಬರುತ್ತವೆ. ಇದನ್ನು ಮುಖ್ಯವಾಗಿ ವ್ಯವಸಾಯ ಉತ್ಪಾದನೆಯಲ್ಲಿ ಕಾಣಬಹುದು. ಅದರಲ್ಲೂ ವ್ಯವಸಾಯ ಉತ್ಪನ್ನ ಹಂಚಿಕೆ, ಲಾಭಗಳಿಕೆಯ ಉದ್ದೇಶ ಒಂದೇ ಇರುವ ಖಾಸಗೀ ವ್ಯಾಪಾರ ಕ್ಷೇತ್ರದಲ್ಲಿ ಇದಕ್ಕೆ ಕಾರಣ. ಈ ವರ್ಷ ಆಹಾರ ಧಾನ್ಯ, ಎಣ್ಣೆ, ಸಕ್ಕರೆ, ಬಟ್ಟೆ, ನೂಲು, ಸಿಮೆಂಟ್ ಮುಂತಾದ ಅತ್ಯಗತ್ಯ ಪದಾರ್ಥಗಳ ಹಂಚಿಕೆಯಲ್ಲಿ ಅಸಮಾನತೆ ಕಂಡುಬಂದಿದೆ. ಹಂಚಿಕೆ ವ್ಯವಸ್ಥೆಯ ಮೇಲೆ ತಮಗಿರುವ ಹತೋಟಿಯನ್ನು ದುರುಪಯೋಗಪಡಿಸಿಕೊಂಡು ಜನಸಾಮಾನ್ಯರ ಶೋಷಣೆಯಿಂದ ಶ್ರೀಮಂತರಾ ಗಲು ಖಾಸಗೀ ವ್ಯಾಪಾರಿಗಳು, ಸಮಾಜ ವಿರೋಧಿ ವ್ಯಕ್ತಿಗಳು ಈ ಪರಿಸ್ಥಿತಿಯನ್ನು ಉಪಯೋಗಿಸಿ ಕೊಂಡಿದ್ದಾರೆ. ಇತರ ಪದಾರ್ಥಗಳ ಬೆಲೆಗಳ ಮೇಲೂ ಈ ಅತ್ಯಗತ್ಯ ಪದಾರ್ಥಗಳ ಬೆಲೆ ಪರಿ ಣಾಮ ಉಂಟುಮಾಡುವುದರಿಂದ ಅವುಗಳ ಬಗ್ಗೆ ರಾಜ್ಯ ಸರ್ಕಾರದ ನೀತಿಯನ್ನು ಸ್ಪಷ್ಟಪಡಿಸಲು ಸಂಕ್ಷಿಪ್ತವಾಗಿ ಕೆಲವು ವಿವರಣೆಗಳನ್ನು ಕೊಡಬಯಸುತ್ತೇನೆ.

ಇತ್ತೀಚಿನ ತಿಂಗಳುಗಳಲ್ಲಿ ಕಂಡುಬಂದ ಬೆಲೆ ಏರಿಕೆಗೆ ಮುಖ್ಯ ಕಾರಣಗಳೆಂದರೆ, ಅನಾವೃಷ್ಟಿ ಯಿಂದ ಉತ್ಪಾದನೆ ತತ್ಕಾಲಿಕವಾಗಿ ಕಡಿಮೆಯಾದದ್ದು ಹಾಗೂ ಬರಗಾಲ ಮತ್ತು ನೈಸರ್ಗಿಕ ವಿಪತ್ತುಗಳು, ಜುಲೈ 1972ರಲ್ಲಿ ಮುಂಗಾರು ಮಳೆ ತಡವಾಗಿ ಬಂದು, ಅದರಿಂದಾಗಿ ಮೊದಲು ಖಾರೀಫ್ ಬೆಳೆಯು ನಷ್ಟವಾಗಿ ಅನಂತರ ರಾಬಿ ಬೆಳೆಯೂ ಕೈಗೆ ಬರುವುದಿಲ್ಲವೆಂಬ ಭೀತಿಯ ಪರಿಸ್ಥಿ ತಿಯನ್ನು ಸಮಾಜ ವಿರೋಧಿ ಶಕ್ತಿಗಳು ದುರುಪಯೋಗಿಸಿಕೊಂಡು ಲಾಭ ಗಳಿಕೆಯಲ್ಲಿ ನಿರತರಾ ದುದೂ ಸಹ ಈ ಬೆಲೆ ಏರಿಕೆಗೆ ಇನ್ನೊಂದು ಕಾರಣ. ಬೆಲೆ ಏರಿಕೆ ರಾಜ್ಯದ ಅಭಿವೃದ್ಧಿ ಗತಿಯ

ಮೇಲೆ ಪರಿಣಾಮ ಉಂಟುಮಾಡುವುದರಿಂದ ಮತ್ತು ಸಮಾಜದ ದುರ್ಬಲ ವರ್ಗಗಳಿಗೆ ತುಂಬಾ ತೊಂದರೆ ಉಂಟುಮಾಡುವುದರಿಂದ, ಸರ್ಕಾರಕ್ಕೆ ಬಹಳ ಕಳವಳ ಉಂಟಾಗಿದೆ; ಆದರಿಂದಲೇ ಬೆಲೆ ನಿಯಂತ್ರಣಕ್ಕೆ ಸರ್ಕಾರ ತೀವ್ರ ಗಮನ ಕೊಡುತ್ತಿದೆ.

ಮೈಸೂರು ರಾಜ್ಯದಲ್ಲಿ ಬೆಲೆ ಏರಿಕೆಯ ವಿಚಾರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ರಂಗಗಳಲ್ಲಿ ಏನಾಗಿದೆಯೆಂಬುದನ್ನು ಕಡೆಗಾಣಿಸುವಂತಿಲ್ಲ. ಯಾವುದೇ ಒಂದು ಕ್ಷೇತ್ರದಲ್ಲಿ ಉಂಟಾಗುವ ಹಣದ ಉಬ್ಬರವು ಉಳಿದ ಕ್ಷೇತ್ರಗಳಿಗೂ ಬೇಗ ಹರಡುತ್ತದೆ. ಅಮೇರಿಕ ಮತ್ತು ಇಂಗ್ಲೆಂಡ್‌ಗಳಂತಹ ಮುಂದುವರಿದ ರಾಷ್ಟ್ರಗಳಲ್ಲೂ ಹಣದುಬ್ಬರದ ಸಮಸ್ಯೆ ಇದ್ದು ಅವುಗಳೂ ಕೂಡ ಬೆಲೆ ನಿಯಂತ್ರಣಕ್ಕೆ ಶಕ್ತಿಮೀರಿ ಶ್ರಮಿಸುತ್ತಿವೆ. ಕಳೆದ ಮೂರು ವರ್ಷಗಳ ಹೆಚ್ಚುವರಿ ಪರಿಸ್ಥಿತಿಗೆ ಹೋಲಿಸಿದರೆ, 1973ರಲ್ಲಿ ಪ್ರಪಂಚದಲ್ಲಿ ಆಕ್ಕಿ ಪೂರೈಕೆ ತುಂಬಾ ಕಠಿಣವಾಗಿ ಬೆಲೆಗಳು ಗಣನೀಯವಾಗಿ ಹೆಚ್ಚಿವೆ ಎಂಬುದನ್ನು ವಿಶ್ವಸಂಸ್ಥೆಯ, ಆಹಾರ ಮತ್ತು ಕೃಷಿ ಸಂಸ್ಥೆಯ ಇತ್ತೀಚಿನ ಒಂದು ವರದಿ ವ್ಯಕ್ತಪಡಿಸಿದೆ. ದೀರ್ಘ ಕಾಲದ ಬರಗಾಲ ಮತ್ತು ನೆರೆ ಹಾವಳಿ ಹಾಗೂ ಯುದ್ಧಗಳಿಂದಾಗಿ ದಕ್ಷಿಣ ಹಾಗೂ ಆಗ್ನೇಯ ಏಷ್ಯದ ಅನೇಕ ಆಯಾತ ಮತ್ತು ನಿರ್ಯಾತ ರಾಷ್ಟ್ರಗಳಲ್ಲಿ, ಬೆಲೆಗಳಿಗೆ ಉಂಟಾದ ನಷ್ಟ ಈ ತೀವ್ರ ಬದಲಾವಣೆಗೆ ಮುಖ್ಯ ಕಾರಣವಾಗಿದೆ. ಇದರ ಪರಿಣಾಮವಾಗಿ, ಪ್ರಸಕ್ತ ಸಾಲಿನಲ್ಲಿ ಪ್ರಪಂಚದ ಭತ್ತದ ಉತ್ಪಾದನೆ 306 ಮಿಲಿಯನ್ ಟನ್ನುಗಳಿಂದ 296 ಮಿಲಿಯನ್ ಟನ್ನುಗಳಿಗೆ ಇಳಿದಿದೆ, ಎಂದರೆ 10 ಮಿಲಿಯನ್ ಟನ್ನುಗಳಷ್ಟು ಕಡಿಮೆಯಾಗಿದೆ, ಎಂದು ಅಂದಾಜು ಮಾಡಲಾಗಿದೆ. ಮುಂದಿನ ಸಾಲಿಗೆ ದಾಸ್ತಾನೂ ತುಂಬಾ ಕಡಿಮೆಯಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಹೇಳುವುದಾದರೆ, ದೇಶದಲ್ಲಿ ಉತ್ಪಾದನೆಯು 1972-73ರಲ್ಲಿ ಹಿಂದಿನ ವರ್ಷಗಳ ಸರಾಸರಿ ಪ್ರಮಾಣವನ್ನೂ ಮುಟ್ಟಿಲ್ಲ. ಖಾರೀಫ್ ಉತ್ಪಾದನೆ ಕಳೆದ ಎರಡು ವರ್ಷಗಳಿಂದಲೂ ಕಡಿಮೆಯಾಗಿದೆ. ರಾಬಿ ಬೆಳೆ ಉತ್ಪಾದನೆಯೂ ಹೆಚ್ಚು ಆಶಾದಾಯಕವಾಗಿಲ್ಲ. 1970-71ರಲ್ಲಿ ಭಾರತದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು 108.4 ಮಿಲಿಯನ್ ಟನ್. ಅದು 1971-72ರಲ್ಲಿ 104.7 ಟನ್‌ಗಳಿಗೆ ಇಳಿಯಿತು. ಮಾನ್ಯ ಅಧ್ಯಕ್ಷರೇ,

ಇದರ ಅಂದಾಜು ಇನ್ನೂ ಕಡಿಮೆಯಾಗಿರಬಹುದು, ಲೋಕಸಭೆಯಲ್ಲಿ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಹೇಳಿರುವಂತೆ ಈಚೆಗೆಸುಮಾರು ನೂರು ಮಿಲಿಯನ್ ಟನ್‌ಗಳಷ್ಟು ಆಗಬಹುದು, ಇದರಲ್ಲಿ ನಾವು ಹೇಳಿರುವಂತೆ ಕಳೆದ ಎರಡು ವರ್ಷಗಳಿಂದ ಇದ್ದದ್ದು 108 ಮಿಲಿಯನ್ ಟನ್‌ಗಳಿಂದ 104.4 ಮಿಲಿಯನ್ ಟನ್‌ಗಳಷ್ಟು ಕಡಿಮೆಯಾಯಿತು. ಈ ವರ್ಷ ಅನೇಕ ಕಡೆ ಆಗಿರುವ ಕ್ಷಾಮ ಡಾಮರಗಳಿಂದಾಗಿ ಇದರ ಹಿನ್ನೆಲೆಯಲ್ಲಿ ನೋಡಿದರೆ ಇದು ಇನ್ನೂ ನಾಲ್ಕು ಟನ್‌ಗಳಷ್ಟು ಕಡಿಮೆಯಾಗಬಹುದು ಎನ್ನುವ ಒಂದು ಅಂದಾಜೂ ಗೊತ್ತಾಗಿದೆ.

ಅದೇ ಸಮಯದಲ್ಲಿ ಆರ್ಥಿಕ ರಂಗದ ಸಮಗ್ರ ವ್ಯಯದ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ಸ್ವಾವಲಂಬನೆಯ ಸಾಧನೆಗಾಗಿ ಮತ್ತು ಬಡತನ ನಿವಾರಣೆಗೆ ಕೈಕೊಂಡ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸರ್ಕಾರದ ಖರ್ಚು ಬಹುಮಟ್ಟಿಗೆ ಹೆಚ್ಚಿದೆ. ಕ್ಷಾಮ ಮತ್ತು ಪ್ರಕೃತಿ ವಿಕೋಪಗಳು ದೇಶದ ವಿವಿಧ ಭಾಗಗಳಲ್ಲಿ ಸಂಭವಿಸಿವೆ. ವಿಶೇಷವಾಗಿ ನಮ್ಮ ರಾಜ್ಯ ಈ ವರ್ಷ ಹಿಂದೆಂದೂ ಕಾಣದಂತಹ ತೀವ್ರ ಅಭಾವ ಪರಿಸ್ಥಿತಿಗೆ ಗುರಿಯಾಗಿದೆ. ಅಭಿವೃದ್ಧಿ ಗತಿಯನ್ನು ಮುಂದುವರಿಸಿಕೊಂಡು ಬರುವುದಕ್ಕೂ, ನಿರುದ್ಯೋಗಿಗಳಿಗೆ ಉದ್ಯೋಗಾವಕಾಶವನ್ನು ಒದಗಿಸುವುದಕ್ಕೂ ಮತ್ತು ಅಭಾವ ಪೀಡಿತ ಜನರಿಗೆ ಪರಿಹಾರ ಒದಗಿಸುವುದಕ್ಕೂ 1972ರಲ್ಲಿ ಅನಿವಾರ್ಯವಾಗಿ ಹೆಚ್ಚು ಖರ್ಚು ಮಾಡಬೇಕಾಯಿತು. ವಾಸ್ತವಿಕ ಅಂಕಿ ಅಂಶಗಳನ್ನು ತಮ್ಮೆದುರಿಗೆ ಮಂಡಿಸಿದಾಗ ಈ ವೆಚ್ಚದ ಪ್ರಮಾಣ ಮನವರಿಕೆಯಾದೀತು. ಕೇಂದ್ರ ಮತ್ತು ರಾಜ್ಯಸರ್ಕಾರಗಳು ಅಭಿವೃದ್ಧಿ ಕಾರ್ಯಕ್ರಮಗಳಿಗೆ 1970-71ರಲ್ಲಿ ಮಾಡಿದ ಒಟ್ಟು ವೆಚ್ಚ 8,207 ಕೋಟಿ ರೂಪಾಯಿ. ಈ ವೆಚ್ಚ 1972-3 ರಲ್ಲಿ 10,273 ಕೋಟಿ ರೂಪಾಯಿಗೇರಿತು. ಇದರ ಪೈಕಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಅಭಿವೃದ್ಧಿಯೇತರ ಕಾರ್ಯಗಳಿಗೆ ವಹಿಸಿದ ವೆಚ್ಚ 1970-71 ರಿಂದ 1972-73ರ ವರೆಗೆ 3,491 ಕೋಟಿ ರೂಪಾಯಿಯಿಂದ 4,292 ಕೋಟಿ ರೂಪಾಯಿಗೆ ಹೆಚ್ಚಿತು. 1971-72ಕ್ಕೆ ಹೋಲಿಸಿದರೆ, 1972-73ರಲ್ಲಿ ಕಂಡುಬಂದ 791 ಕೋಟಿ ರೂಪಾಯಿಯ ಅಧಿಕ ವೆಚ್ಚಕ್ಕೆ ಕಾರಣಗಳು ಹೀಗಿವೆ: ನಿರಾಶ್ರಿತರ ಪರಿಹಾರ ಖರ್ಚು (265 ಕೋಟಿ ರೂಪಾಯಿ), ರಕ್ಷಣಾ ವ್ಯವಸ್ಥೆ (169ಕೋಟಿ ರೂಪಾಯಿ), ಬಂಗ್ಲಾ ದೇಶಕ್ಕೆ ನೆರವು (62 ಕೋಟಿ ರೂಪಾಯಿ), ಕ್ಷಾಮ ಪರಿಹಾರ (128 ಕೋಟಿ ರೂಪಾಯಿ) ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣ; ತಾತ್ಕಾಲಿಕ ಪರಿಹಾರ ಮತ್ತು ತುಟ್ಟಿಭತ್ಯ (133 ಕೋಟಿ ರೂಪಾಯಿ). ನಮ್ಮ ರಾಜ್ಯದಲ್ಲಿ ಯೋಜನೇತರ ವೆಚ್ಚ

(ಶ್ರೀ ಡಿ. ದೇವರಾಜ ಅರಸ್)

1970-71ರಲ್ಲಿ 405.5 ಕೋಟಿ ರೂಪಾಯಿ ಇದ್ದು, 1972-73ರಲ್ಲಿ 459.1 ಕೋಟಿ ರೂಪಾಯಿ ಗೇರಿತು. ನಮ್ಮ ಯೋಜನೇತರ ವೆಚ್ಚದಲ್ಲಿ, ಅಭಿವೃದ್ಧಿ ಕಾರ್ಯಕ್ರಮಗಳ ಖರ್ಚು ಹೆಚ್ಚು ಪ್ರಮಾಣದಲ್ಲಿ ಸೇರಿದೆ. 1970-71ರಲ್ಲಿ ಯೋಜನಾ ವೆಚ್ಚ 76.3 ಕೋಟಿ ರೂಪಾಯಿ. ಇದು 1972-73ರಲ್ಲಿ 80.1 ಕೋಟಿ ರೂಪಾಯಿಗಳಷ್ಟಾಯಿತು. 1970-71ರಲ್ಲಿ ಯೋಜನಾ ಮತ್ತು ಯೋಜನೇತರ ವೆಚ್ಚ 481 ಕೋಟಿ ರೂಪಾಯಿ. ಇವೆರಡೂ ವೆಚ್ಚಗಳು ಒಟ್ಟಿಗೆ 539 ಕೋಟಿ ರೂಪಾಯಿಗೆ ಏರಿದವು ಇವೆಲ್ಲವುಗಳ ಒಟ್ಟು ಪರಿಣಾಮವಾಗಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ, 1972ರಲ್ಲಿ ಹಣದುಬ್ಬರವು ಹೆಚ್ಚಾದುದು ಕಂಡು ಬರುತ್ತದೆ.

ಬೆಲೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಬಗ್ಗೆ ಸರ್ಕಾರ ಅನುಸರಿಸುವ ಕಾರ್ಯನೀತಿಯು ಪರಿಣಾಮಕಾರಿಯಾಗಿದೆಯೋ ಇಲ್ಲವೋ ಎಂಬುದನ್ನು ವಾಸ್ತವಿಕ ದೃಷ್ಟಿಯಿಂದ ಪರಿಶೀಲಿಸಬೇಕಾದರೆ ನಮ್ಮ ರಾಜ್ಯದಲ್ಲಿ ಬೆಲೆಗಳ ಪ್ರವೃತ್ತಿಯ ಹಿನ್ನೆಲೆಯನ್ನೂ ಗಮನಿಸಬೇಕಾಗಿದೆ.

ಬೆಲೆಗಳ ಪರಿಸ್ಥಿತಿ

ನಮ್ಮ ರಾಜ್ಯದಲ್ಲಿ ಫೆಬ್ರುವರಿ 1972 ರಿಂದ ಫೆಬ್ರುವರಿ 1973ರ ವರೆಗೆ (ಮಧ್ಯಮವರ್ಗದ) ಅಕ್ಕಿಯ ಸಗಟು ಬೆಲೆ 125 ರೂಪಾಯಿಯಿಂದ 157.50ಕ್ಕೆ ಎಂದರೆ, 22.50 ರೂಪಾಯಿಯಷ್ಟು ಹೆಚ್ಚಿತು. ಜೋಳದ ಬೆಲೆ ಕ್ವಿಂಟಾಲಿಗೆ 65.50 ರೂಪಾಯಿಯಿಂದ 91 ರೂಪಾಯಿಗೆ ಎಂದರೆ, 26 ರೂಪಾಯಿಯಷ್ಟು ಹೆಚ್ಚಿತು. ಕಡಲೆಕಾಯಿ ಎಣ್ಣೆ ಮತ್ತು ತೆಂಗಿನ ಎಣ್ಣೆ ಸಗಟು ಬೆಲೆಗಳಲ್ಲಿ ವಿಪರೀತ ಹೆಚ್ಚಳ ಕಂಡುಬಂದಿತು. ಸಕ್ಕರೆಯ ಸಗಟು ಬೆಲೆ ಕ್ವಿಂಟಾಲಿಗೆ 272.50 ರೂಪಾಯಿಯಿಂದ 360.50 ರೂಪಾಯಿಗೆ ಎಂದರೆ, 88 ರೂಪಾಯಿಯಷ್ಟು ಹೆಚ್ಚಿತು. ಸಗಟು ಬೆಲೆಗಳಲ್ಲಿ ಉಂಟಾದ ಏರಿಕೆಗನುಗುಣವಾಗಿ, ಚಿಲ್ಲರೆ ಮಾರಾಟ ಬೆಲೆಗಳು ಸಹ ಸರಿಸುಮಾರು ಅದೇ ಪ್ರಮಾಣದಲ್ಲಿ ಹೆಚ್ಚಾಗಿವೆ.

ಕಡಲೆಕಾಯಿ ಎಣ್ಣೆ ಬೆಲೆ ಕ್ವಿಂಟಾಲಿಗೆ 370 ರೂಪಾಯಿಯಿಂದ 665 ರೂಪಾಯಿಗೆ ಹೆಚ್ಚಿತು. ಕೊಬ್ಬರಿ ಎಣ್ಣೆಯ ಬೆಲೆ ಕ್ವಿಂಟಾಲಿಗೆ 642.50 ರೂಪಾಯಿಯಿಂದ 825 ರೂಪಾಯಿಗೆ ಹೆಚ್ಚಿತು. ಈ ಬೆಲೆ ಏರಿಕೆಯನ್ನು ಸಮಗ್ರ ದೇಶದಲ್ಲಿ ಸಂಭವಿಸಿರುವ ಖಾದ್ಯ ತೈಲಗಳ ಕೊರತೆಯ ಹಾಗೂ ಸಟ್ಟಾ ವ್ಯಾಪಾರದ ಹಿನ್ನೆಲೆಯಲ್ಲಿ ಗಮನಿಸಬೇಕು. 1970-71ರಲ್ಲಿ ದೇಶದಲ್ಲಿ ಒಟ್ಟು ಉತ್ಪತ್ತಿಯಾದ ಎಣ್ಣೆಬೀಜದ ಪ್ರಮಾಣ ಕೇವಲ 9.2 ಮಿಲಿಯನ್ ಟನ್ನು. ಇದರಿಂದ ದೊರಕುವ ಎಣ್ಣೆ ತಲಾ 3.3 ಕೆ. ಜಿ. ಈ ಪ್ರಮಾಣವು 1971-72ರಲ್ಲಿ 8.2 ಮಿಲಿಯನ್ ಟನ್ನಿಗೆ ಇಳಿಯಿತು. ಇದರಿಂದ ತಲಾ ಒಬ್ಬರಿಗೆ ದೊರೆಯುವ ಖಾದ್ಯ ತೈಲದ ಪ್ರಮಾಣವು 2.7 ಕೆ.ಜಿ.ಗೆ ಇಳಿಯಿತು. ಕೇಂದ್ರ ಸರ್ಕಾರ ಎಣ್ಣೆ ಬೀಜಗಳ ವಾಯಿದೆ ವ್ಯಾಪಾರವನ್ನು ನಿಷೇಧಿಸಿದೆ. ಕಡಲೆಕಾಯಿ ಎಣ್ಣೆಯ ವಾಯಿದೆ ವ್ಯಾಪಾರವನ್ನು ಬಹಳ ಹಿಂದೆಯೇ ನಿಷೇಧಿಸಲಾಗಿತ್ತು. ಇದಲ್ಲದೆ ಆಹಾರಧಾನ್ಯ, ಎಣ್ಣೆಬೀಜ ಮತ್ತು ವನಸ್ಪತಿ ತೈಲಗಳ ಆಧಾರದ ಮೇಲೆ ಕೊಡುವ ಬ್ಯಾಂಕ್ ಮುಂಗಡಗಳಿಗೆ ಕಡಿಮೆ ಮಿತಿಯನ್ನು ಗೊತ್ತುಪಡಿಸಿದ್ದರೂ, ಸಾಲಸೌಕರ್ಯ ನಿಯಂತ್ರಣ ಕ್ರಮವನ್ನು ಇನ್ನಷ್ಟು ಕಟ್ಟುನಿಟ್ಟಾಗಿ ಮಾಡಿದ್ದರೂ ಸಹ ಫೆಬ್ರುವರಿ 1973ಕ್ಕೆ ಅಂತ್ಯವಾದ ವರ್ಷದಲ್ಲಿ ಸಗಟು ಹಾಗೂ ಚಿಲ್ಲರೆ ವ್ಯಾಪಾರದ ಬೆಲೆಗಳಲ್ಲಿ ಏರಿಕೆ ಕಂಡುಬಂದಿದೆ.

ನಾನು ಈ ಮೊದಲೇ ಹೇಳಿದಂತೆ, ರಾಜ್ಯದಲ್ಲಿ ಈ ಕೆಲವು ಪದಾರ್ಥಗಳ ಬೆಲೆಯೇರಿಕೆಯನ್ನು, ಇತರ ರಾಜ್ಯಗಳಲ್ಲಿ ಕಂಡುಬಂದಿರುವ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಗಮನಿಸಬೇಕು. ಬೆಲೆಗಳ ಹೆಚ್ಚಳದ ಬಗ್ಗೆ ಸ್ಪಷ್ಟ ತಿಳುವಳಿಕೆಗೆ ಇದು ಅವಶ್ಯ. ದೇಶದಲ್ಲಿ ಆಯ್ದ ಕೆಲವು ವ್ಯಾಪಾರ ಕೇಂದ್ರಗಳಲ್ಲಿ 3-3-1972 ಮತ್ತು 2-3-1973 ರಂದು ಅಕ್ಕಿ, ಗೋಧಿ, ಜೋಳ, ಸಜ್ಜೆ, ಕಡಲೆಕಾಯಿ ಎಣ್ಣೆ, ಕೊಬ್ಬರಿ ಎಣ್ಣೆ ಮತ್ತು ಸಕ್ಕರೆಯ ಬೆಲೆಗಳ ಸಂಬಂಧವಾಗಿ ಅಂಕಿ ಅಂಶಗಳನ್ನು ಸರ್ಕಾರ ಪರಿಶೀಲಿಸಿದೆ.

ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ದರ್ಜೆಯ ಆಹಾರಧಾನ್ಯಗಳಿರುವುದರಿಂದ ಅವುಗಳ ಬೆಲೆಗಳನ್ನು ನೇರವಾಗಿ ಹೋಲಿಸುವುದು ಕಷ್ಟಸಾಧ್ಯ. ಆದರೂ ಸ್ಥೂಲವಾಗಿ ಕೆಲವು ವಿಷಯಗಳನ್ನು ತಿಳಿದುಕೊಳ್ಳಬಹುದು. ಸಾಮಾನ್ಯವಾಗಿ, ನಮ್ಮ ರಾಜ್ಯದಲ್ಲಿ ಬೆಲೆ ಏರಿಕೆ ಇತರ ರಾಜ್ಯಗಳಿಗಿಂತ ಕಡಿಮೆ ; ಆದರೂ ಕೆಲವು ವಸ್ತುಗಳಲ್ಲಿ ಬೆಲೆ ಇತರ ಕಡೆಗಳಿಗಿಂತ ಹೆಚ್ಚಿರುವುದೂ ಕಂಡುಬರುತ್ತದೆ. ಉದಾಹರಣೆಗೆ : ಫೆಬ್ರುವರಿ 1973ರಲ್ಲಿ ಮುಂಬಯಿಯಲ್ಲಿ ಅಕ್ಕಿಯ ಚಿಲ್ಲರೆ ಮಾರಾಟ ಬೆಲೆ ಒಂದು

ಕೆ.ಜಿ.ಗೆ 5 ರೂ.ಯಿಂದ 6 ರೂ.ಗಳವರೆಗೆ ಇತ್ತು. ಆದರೆ ಒಂದು ವರ್ಷದ ಹಿಂದೆ ಕೆ.ಜಿ.ಗೆ 3-ರೂ. ಯಿಂದ 4 ರೂ.ವರೆಗೆ ಇತ್ತು. ನಮ್ಮ ರಾಜ್ಯದಲ್ಲಿ, ಸಣ್ಣಕ್ಕಿಯು ಬೆಲೆ ಹೆಚ್ಚಿದೆ. ಅದರ ಸಗಟು ಬೆಲೆ ಕ್ವಿಂಟಾಲಿಗೆ 140 ರೂ.ಯಿಂದ 180 ರೂ.ಗೆ ಏರಿದೆ. ಅದರ ಚಿಲ್ಲರೆ ಮಾರಾಟದಲ್ಲಿ ಬೆಲೆ ಕೆ.ಜಿ.ಗೆ ಸುಮಾರು 1.60 ರೂಪಾಯಿಯಿಂದ 2.00 ರೂಪಾಯಿಗೆ ಏರಿದೆ. ಭಾರತ ಸರ್ಕಾರದ ಆಹಾರ ಮತ್ತು ಕೃಷಿ ಮಂತ್ರಾಲಯವು ಹೊರಡಿಸಿದ ಆಹಾರ ಧಾನ್ಯಗಳ ಸಗಟು ವ್ಯಾಪಾರ ಮತ್ತು ಚಿಲ್ಲರೆ ವ್ಯಾಪಾರ ದರಗಳನ್ನು ಸೂಚಿಸುವ ಅರ್ಥ ಸಾಪ್ತಾಹಿಕ ಪತ್ರಿಕೆಯ ಪ್ರಕಾರ, ದಪ್ಪಕ್ಕಿಯ ಬೆಲೆ ಆಂಧ್ರ ಪ್ರದೇಶದಲ್ಲಿ ಬಹಳವಾಗಿ ಹೆಚ್ಚಿರುವಂತೆ ಕಂಡುಬಂದಿದೆ. ದಪ್ಪಕ್ಕಿಯ ಸಗಟು ವ್ಯಾಪಾರ ಬೆಲೆ ನಿಜಾಮಾಬಾದಿನಲ್ಲಿ ಕ್ವಿಂಟಾಲಿಗೆ 116 ರೂ ಯಿಂದ 165 ರೂ.ಗೆ ಹೆಚ್ಚಿದೆ. ಗೋಧಿಯ ಬೆಲೆಯೂ ಹೆಚ್ಚಿದೆ. ಅಹಮದಾಬಾದಿನಲ್ಲಿ ಗೋಧಿಯ ಸಗಟು ಬೆಲೆ ಕ್ವಿಂಟಾಲಿಗೆ 100 ರೂ.ಗಳಿಂದ 165 ರೂ.ಗಳವರೆಗೆ ಹೆಚ್ಚಿದೆ. ಬೆಂಗಳೂರಿನಲ್ಲಿ ಬನ್ಸಿ ಗೋಧಿಯ ಬೆಲೆ 125 ರೂ.ಯಿಂದ 165 ರೂ.ಗಳಿಗೆ ಹೆಚ್ಚಿದೆ. ಅಹಮದಾಬಾದಿನಲ್ಲಿ (ಶರಬತೀ) ಗೋಧಿಯ ಬೆಲೆ ಕ್ವಿಂಟಾಲಿಗೆ 100 ರೂ. ಯಿಂದ 170 ರೂ.ಗೆ ಏರಿದೆ. ಗುಜರಾತಿನಲ್ಲಿ ಜೋಳದ ಬೆಲೆ ಏರಿಕೆ ಪರಮಾವಧಿಯನ್ನು ಮುಟ್ಟಿದೆ. ಗುಜರಾಥಿನ ಪಾಟಣದಲ್ಲಿ ಜೋಳದ ಬೆಲೆ ಕ್ವಿಂಟಾಲಿಗೆ 88.75 ರೂ.ಯಿಂದ 142.75 ರೂ.ಗಳಿಗೆ ಏರಿದೆ. ಆದರೆ ನಮ್ಮ ರಾಜ್ಯದ ಹುಬ್ಬಳ್ಳಿಯಲ್ಲಿ ಜೋಳದ ಬೆಲೆ ಕ್ವಿಂಟಾಲಿಗೆ 127 ರೂ.ಯಲ್ಲಿ ನಿಂತಿದೆ. ಗುಜರಾತಿನಲ್ಲಿ ಜೋಳದ ಚಿಲ್ಲರೆ ಬೆಲೆ ಕ್ವಿಂಟಾಲಿಗೆ 84 ರೂ.ಯಿಂದ 146 ರೂ.ಗೆ ಹೆಚ್ಚಿದೆ. ಆದರೆ ಹುಬ್ಬಳ್ಳಿಯಲ್ಲಿ ಕಂಡುಬಂದ ಹೆಚ್ಚಳ ಸುಮಾರು 34 ರೂ. ಅಹಮದಬಾದಿನಲ್ಲಿ ಸಜ್ಜೆಯ ಸಗಟು ಬೆಲೆ 75 ರೂ.ಯಿಂದ 152 ರೂ.ಗೆ ಹೆಚ್ಚಿದೆ. ಮುಂಬಯಿಯಲ್ಲಿ ಅದರ ಬೆಲೆ 135 ರೂ.ಯಿಂದ 160 ರೂ.ಗೆ ಹೆಚ್ಚಿದೆ. ನಮ್ಮ ರಾಜ್ಯದ ಬಳ್ಳಾರಿಯಲ್ಲಿ ಅದರ ಬೆಲೆ 72 ರೂ. ಯಿಂದ 105.15 ರೂ.ಗೆ ಮಾತ್ರ ಹೆಚ್ಚಿದೆ.

ಕಡಲೆಕಾಯಿ ಎಣ್ಣೆಯ ಬೆಲೆಯಲ್ಲಿ ದೇಶದ ಎಲ್ಲೆಡೆಗಳಲ್ಲಿಯೂ ಒಂದೇ ರೀತಿಯ ತೀವ್ರ ಏರಿಕೆ ಕಂಡುಬಂದಿದೆ. ಮದರಾಸಿನಲ್ಲಿ ಕ್ವಿಂಟಾಲಿಗೆ ರೂ 355 ಯಿಂದ 610 ಕ್ಕೆ ಏರಿತು. ಮುಂಬಯಿಯ ಈ ಬೆಲೆ ಅತ್ಯಧಿಕ ಪ್ರಮಾಣದಲ್ಲ ಕ್ವಿಂಟಾಲೆಗೆ ರೂ. 600 ಯಿಂದ 863 ರೂ.ವರೆಗೆ ಹೆಚ್ಚಾಯಿತು. ಬೆಂಗಳೂರಿನಲ್ಲಿ ಇದು ರೂ. 370 ರಿಂದ 6.5 ರೂ.ಗೆ ಏರಿತು. ಈ ತಿಂಗಳ ಮಧ್ಯದೊಳಗಾಗಿ ಬೆಲೆ 630 ರೂ.ಗೆ ಇಳಿದಂತೆ ಕಾಣುತ್ತದೆ. ಅಲೆಪ್ಪಿಯಲ್ಲಿ ಕೊಬ್ಬರಿ ಎಣ್ಣೆಯ ಬೆಲೆಯಲ್ಲಿ ರೂ. 475 ರಿಂದ 675ರ ವರೆಗಿನ ಪರಮಾವಧಿ ಏರಿಕೆಯಾಯಿತು. ಬೆಂಗಳೂರಿನಲ್ಲಿ ಅದರ ಬೆಲೆ ಕ್ವಿಂಟಾಲಿಗೆ ರೂ. 642.50 ರಿಂದ 825.00 ರೂ.ವರೆಗೆ ಹೆಚ್ಚಿತು. ಅನೀತಿವಂತ ವ್ಯಾಪಾರಿಗಳು ಬಳಕೆದಾರರನ್ನೂ, ಬೆಳೆಗಾರರನ್ನೂ ಶೋಷಿಸಲು ಹೇಗೆ ವರ್ತಿಸುತ್ತಾರೆಂಬುದಕ್ಕೆ ಇದೊಂದು ಸ್ಪಷ್ಟ ಉದಾಹರಣೆ; ಜನವರಿ 1971ರಲ್ಲಿ ಕ್ವಿಂಟಾಲಿಗೆ ರೂ. 655—ರೂ. 717 ಗಳ ವರೆಗಿದ್ದ ಕೊಬ್ಬರಿ ಬೆಲೆಯು ಜನವರಿ 1973ರಲ್ಲಿ ಕ್ವಿಂಟಾಲಿಗೆ ರೂ. 415—ರೂ. 480ರ ವರೆಗೆ ಸತತವಾಗಿ ಇಳಿಯುತ್ತಲೇ ಬಂದಿದೆ ಎಂಬ ಅಂಶವನ್ನು ಗಮನಿಸಿದರೆ ಇದು ಮತ್ತಷ್ಟು ಸ್ಪಷ್ಟವಾಗುತ್ತದೆ. ಕೊಬ್ಬರಿಯ ಬೆಲೆಯು ಶೇ. 40 ರಷ್ಟಕ್ಕೂ ಮೀರಿ ಇಳಿದಿರುವಾಗ, ಕೊಬ್ಬರಿ ಎಣ್ಣೆಯ ಬೆಲೆ ಶೇ. 35 ರಿಂದ ಶೇ. 40 ರಷ್ಟು ಹೆಚ್ಚಿದೆ. ಇದರಿಂದ ತೆಂಗು ಬೆಳೆಗಾರರು ಮತ್ತು ಬಳಕೆದಾರರು—ಇವರಿಬ್ಬರಿಗೂ ತೊಂದರೆಯಾಗುವಂತೆ ಮಾರುಕಟ್ಟೆಯಲ್ಲಿ ಯಾವ ರೀತಿ ದುರ್ವ್ಯವಹಾರ ನಡೆಯುತ್ತದೆಯೆಂಬುದು ಅರ್ಥವಾಗುತ್ತದೆ.

ದೇಶದ ಎಲ್ಲಾ ಕೇಂದ್ರಗಳಲ್ಲೂ ಸಕ್ಕರೆ ಬೆಲೆ ಹೆಚ್ಚಿದೆ. ಉತ್ತರ ಪ್ರದೇಶದ ಮುಜಾಫರ್ ನಗರದಲ್ಲಿ ಸಕ್ಕರೆ ಬೆಲೆ ಅತಿ ಹೆಚ್ಚಾಗಿದೆ. ಅಲ್ಲಿ ಬೆಲೆ ಕ್ವಿಂಟಾಲಿಗೆ ರೂ. 267.50 ಯಿಂದ 375 ರೂ. ವರೆಗೆ ಏರಿತು. ಕಡಿಮೆ ಪ್ರಮಾಣದಲ್ಲಿ ಬೆಲೆ ಏರಿಕೆ ಕಂಡುಬಂದಿರುವ ಸ್ಥಳಗಳಲ್ಲಿ ಬೆಂಗಳೂರು ಸೇರಿದೆ. ಇಲ್ಲಿ ಸಕ್ಕರೆ ಬೆಲೆ ರೂ. 360.50.

ನಾನು ಇದುವರೆಗೆ ಹೇಳಿದ ಅಂಶಗಳಿಂದ, ಬೆಲೆ ಏರಿಕೆ ಕೇವಲ ಮೈಸೂರು ರಾಜ್ಯಕ್ಕೆ ಸೀಮಿತವಾದುದಲ್ಲವೆಂದೂ, ಇತರ ರಾಜ್ಯಗಳಿಗೆ ಹೋಲಿಸಿದರೆ ಕೆಲವು ಪದಾರ್ಥಗಳ ಬೆಲೆ ಏರಿಕೆ ಮೈಸೂರಿನಲ್ಲಿ ಕಡಿಮೆ ಎಂಬುದೂ ಮನವರಿಕೆಯಾಗುತ್ತದೆ.

ನಾವೀಗ ಎದುರಿಸುತ್ತಿರುವ ಬೆಲೆ ಏರಿಕೆ ಕೇವಲ ಆರ್ಥಿಕ ಘಟನೆಯಲ್ಲ. ಅದು ಸಾಮಾಜಿಕ—ಆರ್ಥಿಕ ಘಟನೆಯೂ ಹೌದು. 1971-72 ರಲ್ಲಿ ನಮ್ಮ ರಾಜ್ಯದಲ್ಲಿ 60.6 ಲಕ್ಷ ಟನ್ನು ಆಹಾರ ಧಾನ್ಯ ಉತ್ಪಾದನೆಯಾಗಿತ್ತು. ಇದು ತೀವ್ರ ಅನಾವೃಷ್ಟಿಯಿಂದಾಗಿ 1972-73 ರಲ್ಲಿ ಸುಮಾರು 48 ಲಕ್ಷ ಟನ್ನಿಗೆ ಇಳಿದಿರುವುದಾಗಿ ಅಂದಾಜಾಗಿದೆ. ಅಕ್ಕಿ, ಜೋಳ ಮತ್ತು ರಾಗಿ ಇವೇ ಮುಂತಾದ

(ಶ್ರೀ ಡಿ. ದೇವರಾಜ ಅರಸ್)

ಬೇರೆ ಬೇರೆ ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾಗಿರುವ ವಿವರಗಳನ್ನು ಈ ಮುಂದೆ ಕೊಟ್ಟಿದೆ :

ಆಹಾರಧಾನ್ಯ	1971-72 (ಲಕ್ಷ ಟನ್ನು)	1972-73 (ಲಕ್ಷ ಟನ್ನು)
ಅಕ್ಕಿ	20.9	18.9
ಜೋಳ	18.9	13.6
ರಾಗಿ	8.8	6.0
ಬೇರೆ ಆಹಾರ ಧಾನ್ಯಗಳು	12.0	9.5
ಮೊತ್ತ	60.6	98.0

(ವ್ಯವಸಾಯ ಇಲಾಖೆಯ ಮುಖ್ಯಾಧಿಕಾರಿ ಮತ್ತು ಅರ್ಥಿಕ ಹಾಗೂ ಅಂಕಿ ಅಂಶಗಳ ಇಲಾಖೆಯ ಮುಖ್ಯಾಧಿಕಾರಿಗಳಿಂದ ಸಂಗ್ರಹಿಸಿದ ಅಂಕಿ ಅಂಶಗಳು).

ಕಡಿಮೆ ಉತ್ಪಾದನೆಯಿಂದ ಬೆಲೆಗಳ ಮೇಲಾಗುವ ಪರಿಣಾಮವನ್ನು ನೀತಿ ನಿಷ್ಠೆಯಿಲ್ಲದ ವ್ಯಾಪಾರಿಗಳು ದಾಸ್ತಾನು ಕೂಡಿಟ್ಟುಕೊಂಡು ಸಟ್ಟಾ ಚಟುವಟಿಕೆಗಳಲ್ಲಿ ತೊಡಗಿ ಸ್ವಪ್ರಯೋಜನಕ್ಕೆ ಬಳಸಿಕೊಂಡಿದ್ದಾರೆ. ಈ ಮೊದಲೇ ಹೇಳಿದಂತೆ ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಈ ವಿಷಮ ವರ್ಷದಲ್ಲಿ ಇಳಿದಿತ್ತು. 1970-71ರಲ್ಲಿ ನಮ್ಮ ದೇಶದಲ್ಲಿ 108.4 ಮಿಲಿಯನ್ ಟನ್ನುಗಳಷ್ಟು ಆಹಾರಧಾನ್ಯಗಳ ಉತ್ಪಾದನೆಯಾಗಿತ್ತು. ಅದು 1971-72ರಲ್ಲಿ 104.7 ಮಿಲಿಯನ್ ಟನ್ನುಗಳಿಗೆ ಇಳಿಯಿತು. ಆದ ದರಿಂದ ರಾಜ್ಯದ ಕೊರತೆ ನಿವಾರಣೆಗಾಗಿ ಕೇಂದ್ರದಿಂದ ಸಾಕಷ್ಟು ಆಹಾರಧಾನ್ಯ ಪಡೆಯಲು ಸಾಧ್ಯವಾಗಲಿಲ್ಲ. ಒಂದು ಕಡೆ, ಆಹಾರಧಾನ್ಯಗಳ ಉತ್ಪಾದನೆ ತಾತ್ಕಾಲಿಕವಾಗಿ ಕಡಿಮೆಯಾಗಿದೆ ಇನ್ನೊಂದು ಕಡೆ ಬರಗಾಲ ಪರಿಹಾರಕ್ಕಾಗಿ ಮತ್ತು ನಿರುದ್ಯೋಗಿಗಳಿಗೆ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ದುರ್ಬಲ ವರ್ಗಗಳಿಗೆ ಉದ್ಯೋಗ ಒದಗಿಸುವುದಕ್ಕಾಗಿ ಸರ್ಕಾರದ ವೆಚ್ಚವನ್ನು ಕಡಿಮೆ ಮಾಡುವುದಕ್ಕೂ ಸಾಧ್ಯವಿರಲಿಲ್ಲ. ನಾನು ಈಗಾಗಲೇ ಹೇಳಿದ ಯೋಜನಾ ವೆಚ್ಚಗಳ ಜೊತೆಗೆ, ಬರಗಾಲ ಪರಿಹಾರಾರ್ಥವಾಗಿಯೇ ರಾಜ್ಯ ಸರ್ಕಾರ 1972-73ರಲ್ಲಿ 26 ಕೋಟಿ ರೂಪಾಯಿ ಖರ್ಚುಮಾಡಿ, ಸುಮಾರು 11 ಲಕ್ಷ ಮಂದಿಗೆ ಉದ್ಯೋಗ ಒದಗಿಸಿದೆ. ಗ್ರಾಮಾಂತರ ಉದ್ಯೋಗ ವ್ಯವಸ್ಥೆಯ ತೀವ್ರ ಕಾರ್ಯಕ್ರಮದ ಬಗ್ಗೆ 1971ರ ಮತ್ತು 1972ರಲ್ಲಿ (ಡಿಸೆಂಬರ್ ವರೆಗೆ) ಸರ್ಕಾರ ಸುಮಾರು 3 ಕೋಟಿ ರೂಪಾಯಿ ವೆಚ್ಚ ಮಾಡಿ 70 ಲಕ್ಷ ಕೆಲಸದ ದಿನಗಳ ಉದ್ಯೋಗವನ್ನು ಕಲ್ಪಿಸಿಕೊಟ್ಟಿದೆ. ಈ ವೆಚ್ಚಗಳೆಲ್ಲವನ್ನೂ ಭೂಸಾರ ರಕ್ಷಣೆ, ಅರಣ್ಯ ನಿರ್ಮಾಣ, ಸಣ್ಣ ಪ್ರಮಾಣದ ನೀರಾವರಿ ಮತ್ತು ರಸ್ತೆ ನಿರ್ಮಾಣ ಇವೇ ಮುಂತಾದ ಉತ್ಪಾದನಾ ಕಾಮಗಾರಿಗಳ ಮೇಲೆ ಮಾಡಲಾಗಿದೆ. ಅದರ ಬೆಲೆಯನ್ನು ಕಡಿಮೆ ಮಾಡಬಲ್ಲ ವಸ್ತುಗಳ ತ್ವರಿತವಾದ, ಅಧಿಕ ಉತ್ಪಾದನೆ ಆಗಿಲ್ಲ. ಹಣದುಬ್ಬರವನ್ನು ತಡೆಗಟ್ಟುವ ಸಲುವಾಗಿ ಇಂಥ ಖರ್ಚುಗಳನ್ನು ಕಡಿಮೆ ಮಾಡುವುದು ಸಾಧ್ಯವಿತ್ತು. ಆದರೆ ಅದರಿಂದ ನಿರುದ್ಯೋಗ ಸಮಸ್ಯೆ ಇನ್ನಷ್ಟು ಹೆಚ್ಚಿ ಬರಗಾಲ ಪೀಡಿತರ ಸಂಕಟ ಇನ್ನಷ್ಟು ಉಲ್ಬಣವಾಗುತ್ತಿತ್ತು. ಈ ಬಗೆಯ ಚಿಕಿತ್ಸೆ, ರೋಗಕ್ಕಿಂತಲೂ ಕೆಟ್ಟದಾಗುತ್ತಿತ್ತು. ಆದುದರಿಂದ ಹೆಚ್ಚಿನ ಖರ್ಚು ಅನಿವಾರ್ಯವಾಗಿತ್ತು. ಈ ಸಮಸ್ಯೆಯನ್ನು ಸ್ಪಷ್ಟವಾಗಿ ತಿಳಿದಿರಬೇಕು.

ಬೆಲೆಯೇರಿಕೆಯನ್ನು ತಡೆಗಟ್ಟಬೇಕಾದರೆ ಅನವಶ್ಯ ಖಾಸಗಿ ವೆಚ್ಚಕ್ಕೆ ತೊಡಗದೆ, ಅಂಥ ವೆಚ್ಚವನ್ನು ತೀವ್ರವಾಗಿ ಕಡಿಮೆ ಮಾಡುವುದು ಅತ್ಯವಶ್ಯ. ಆದರೆ ದುರದೃಷ್ಟವಶಾತ್ ನಮ್ಮ ಜನ ಅದರಲ್ಲೂ ಶ್ರೀಮಂತರು ಇದರ ಕಡೆಗೆ ಲಕ್ಷ್ಯ ಕೊಡುವುದಿಲ್ಲ. ಅವರು ಆಡಂಬರದ ಸಾಮಾಜಿಕ ಸಮಾರಂಭಗಳಲ್ಲಿ ಆಸಕ್ತರಾಗುತ್ತಾರೆ. ಲಗ್ನ ಸಮಾರಂಭಗಳಲ್ಲಿ ದುರ್ಲಭವಾದ ಆಹಾರ ಧಾನ್ಯಗಳು ಮತ್ತು ಇತರ ಅತ್ಯವಶ್ಯ ಬಳಕೆದಾರರ ವಸ್ತುಗಳು ಪೋಲಾಗಿ ಹೋಗುವುದನ್ನು ಲಕ್ಷಿಸದೆ ಭಾರೀ ಪ್ರಮಾಣದಲ್ಲಿ ಭೋಜನ ಕೂಟಗಳನ್ನು ನಡೆಸುತ್ತಾರೆ. ಅತಿಥಿಗಳ ಸಂಖ್ಯೆಯ ಮೇಲೆ

ಸರ್ಕಾರ ವಿಧಿಸಿದ ಪ್ರತಿಬಂಧಗಳನ್ನು ಒಳಗೊಳಗೆ ಉಲ್ಲಂಘಿಸಿದ್ದಾರೆ. ತಾವು ಮನಬಂದಂತೆ ವೆಚ್ಚ ಮಾಡಬಹುದೆಂದು ಭಾವಿಸಿಕೊಂಡವರು ಇಂತಹ ಕಾರ್ಯಗಳಿಂದ ಜನಸಾಮಾನ್ಯರಿಗೆ ಎಷ್ಟು ಕಷ್ಟ ಉಂಟುಮಾಡುತ್ತಾರೆ ಎಂಬುದನ್ನು ಗಮನಿಸುತ್ತಿಲ್ಲ. ಅತ್ಯವಶ್ಯ ದಿನಸಿಗಳನ್ನು ಭಾರೀ ಪ್ರಮಾಣದಲ್ಲಿ, ಹೆಚ್ಚಿನ ಬೆಲೆಗೆ ಕೊಂಡುಕೊಂಡು ಉತ್ಪಾದನೆಯ ಇಳಿತದಿಂದ ಈಗಾಗಲೇ ಉಂಟಾಗಿರುವ ಅಭಾವವನ್ನು ಇನ್ನಷ್ಟು ಹೆಚ್ಚಿಸುತ್ತಾರೆ. ಇಷ್ಟು ದೊಡ್ಡ ಪ್ರಮಾಣದ ಖಾಸಗೀ ಖರ್ಚು ಕಳವಳಕ್ಕೆ ಕಾರಣವಾಗಿದೆ. ಇಂಥ ಅನಾವಶ್ಯಕ ಖರ್ಚಿನ ಮೇಲೆ ಇನ್ನಷ್ಟು ಹತೋಟಿಯನ್ನು ಇಟ್ಟುಕೊಂಡರೆ ಬೆಲೆ ಪರಿಸ್ಥಿತಿ ನಿಜವಾಗಿಯೂ ಸುಧಾರಿಸೀತು ; ಸಹನೀಯ ಮಿತಿಯೊಳಗೆ ನಿಂತೀತು.

ಬೆಲೆ ನೀತಿ

ಪರಿಣಾಮಕಾರಿಯಾದ ಬೆಲೆ ನೀತಿ ಪ್ರಮುಖ : ಸಮಗ್ರ ಬೇಡಿಕೆಯ ದಕ್ಷ ನಿಯಂತ್ರಣ, ವ್ಯವಸಾಯ ಮತ್ತು ಕೈಗಾರಿಕೆಗಳ ಹೆಚ್ಚಿನ ಉತ್ಪಾದನೆ ಮತ್ತು ಹಂಚಿಕೆ ವ್ಯವಸ್ಥೆಯನ್ನು ಉತ್ತಮಗೊಳಿಸುವುದು. ಇಂತಹ ನೀತಿಯಲ್ಲಿ ಅಲ್ಪ ಹಾಗೂ ದೀರ್ಘಾವಧಿಯ ಅಂಶಗಳೂ, ರಾಷ್ಟ್ರ ಹಾಗೂ ರಾಜ್ಯಕ್ಕೆ ಸಂಬಂಧಿಸಿದ ಅಂಶಗಳೂ ಅಡಕವಾಗಿವೆ. ಸಕ್ಕರೆ, ಸಿಮೆಂಟ್, ನೂಲು, ಬಟ್ಟೆ ಮತ್ತು ಕಲ್ಲಿದ್ದಲುಗಳ ಬಗ್ಗೆ ರಾಷ್ಟ್ರೀಯ ಬೆಲೆ ನೀತಿಯೊಂದಿದೆ. ಆದ್ದರಿಂದ ನಮ್ಮ ರಾಜ್ಯದ ವ್ಯಾಪ್ತಿಗೆ ನೇರವಾಗಿ ಸೇರಿರುವ ಕ್ಷೇತ್ರಗಳ ಬಗ್ಗೆ ಕೈಗೊಂಡಿರುವ ಕ್ರಮಗಳು ಮತ್ತು ಕೈಗೊಳ್ಳಬೇಕೆಂದಿರುವ ಕ್ರಮಗಳನ್ನೂ ಪ್ರಸ್ತಾಪಿಸಿ, ಅನಂತರ ಆ ವಿಚಾರಗಳನ್ನು ಪರಿಶೀಲಿಸುತ್ತೇನೆ.

ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ, ಇತರ ಭಾಗಗಳಿಗಿಂತ ಹೆಚ್ಚಾಗಿ ಅಭಾವ ಪೀಡಿತ ಜಿಲ್ಲೆಗಳಲ್ಲಿ ಹೆಚ್ಚು ತೊಂದರೆಯುಂಟಾಗಿದೆ. ಬೆಲೆ ಏರಿಕೆಯನ್ನು ತಡೆಹಿಡಿಯುವ ರಾಜ್ಯದ ಆಹಾರ ನೀತಿ ರೂಪಿಸುವುದರಲ್ಲಿ ಈ ವಿಚಾರಕ್ಕೆ ವಿಶೇಷ ಗಮನ ಕೊಡಲಾಗಿದೆ. ಬೆಲೆಗಳನ್ನು ಹತೋಟಿಯಲ್ಲಿಡುವುದಕ್ಕಾಗಿ ಹಂಚಿಕೆ ವ್ಯವಸ್ಥೆಯಲ್ಲಿ ಈ ಮುಂದೆ ಸೂಚಿಸಿರುವ ಕೆಲವು ಕ್ರಮಗಳನ್ನು ಈಗಾಗಲೇ ಕಾರ್ಯಗತ ಮಾಡಲಾಗಿದೆ.

(1) ಬೆಲೆ ಏರಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಸಕಾಲದಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡುವುದಕ್ಕೆ ಆಹಾರ ಧಾನ್ಯಗಳ ದಾಸ್ತಾನಿಡುವುದು.

(2) ಒಂದು ನಿಯಮಿತ ಪ್ರಮಾಣದಲ್ಲಿ ಭತ್ತ ಮತ್ತು ಜೋಳ ಮುಂತಾದ ಆಹಾರ ಧಾನ್ಯಗಳನ್ನು ಸರಕಾರ ಕೊಂಡು ಸಂಗ್ರಹಿಸುವುದು.

(3) ಸಮಾಜದ ದುರ್ಬಲವರ್ಗದವರಿಗೆ ನ್ಯಾಯಬೆಲೆಯಲ್ಲಿ ಆಹಾರ ಧಾನ್ಯ ಒದಗಿಸಲು ಕೆಲವು ಕಡೆ (ಬೆಂಗಳೂರು ನಗರ ಮತ್ತು ಕೋಲಾರ ಚಿನ್ನದಗಣಿ ಪ್ರದೇಶ) ಅನೌಪಚಾರಿಕ ಪಡಿತರ ಪದ್ಧತಿಯನ್ನು ಜಾರಿಗೆ ತರಲಾಗಿದೆ ಮತ್ತು ಇತರ ಕಡೆ, ಅಗತ್ಯವಾದ ಕಾಲಕ್ಕೆ ಸಾಕಷ್ಟು ಆಹಾರಧಾನ್ಯಗಳನ್ನು ಸರಬರಾಜು ಮಾಡಲಾಗುತ್ತಿದೆ.

(4) ನ್ಯಾಯ ಬೆಲೆಯ ಅಂಗಡಿಗಳನ್ನು ಆರಂಭಿಸುವುದರಲ್ಲಿ ಅಭಾವ ಪೀಡಿತ ಜಿಲ್ಲೆಗಳಿಗೆ ವಿಶೇಷ ಗಮನ ಕೊಡಲಾಗಿದೆ. ಅಭಾವ ಪರಿಸ್ಥಿತಿ ತೀವ್ರವಾಗಿರುವ ಗುಲ್ಬರ್ಗ, ಬೀದರ್, ಬಿಜಾಪುರ ಜಿಲ್ಲೆಗಳು ಹಾಗೂ ಬೆಳಗಾವಿ ಮತ್ತು ರಾಯಚೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಪ್ರತಿ ತಾಲ್ಲೂಕಿನಲ್ಲಿ 100ಕ್ಕೆ ಕಡಿಮೆ ಇಲ್ಲದಂತೆ ನ್ಯಾಯ ಬೆಲೆಯ ಅಂಗಡಿಗಳನ್ನು ಆರಂಭಿಸಲಾಗಿದೆ. ಪರಿಸ್ಥಿತಿ ಅಷ್ಟು ತೀವ್ರವಾಗಿಲ್ಲದೆ ಇರುವ ಜಿಲ್ಲೆಗಳಾದ ಚಿತ್ರದುರ್ಗ, ಬಳ್ಳಾರಿ ಮತ್ತು ಬೆಳಗಾವಿ ಹಾಗೂ ರಾಯಚೂರು ಜಿಲ್ಲೆಯ ಕೆಲವು ಭಾಗಗಳು ಮುಂತಾದ ಕಡೆ ಪ್ರತಿ ತಾಲೂಕಿನಲ್ಲೂ ಕಡೆಯ ಪಕ್ಷ 50 ನ್ಯಾಯ ಬೆಲೆ ಅಂಗಡಿಗಳನ್ನು ಆರಂಭಿಸಲಾಗಿದೆ.

(5) ವ್ಯವಹಾರ ಆರಂಭಿಸಲು ದಾಸ್ತಾನು ಕೊಳ್ಳಲು ಸಾಧ್ಯವಿಲ್ಲದೆ ಇರುವ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳನ್ನು ಪಿ. ಡಿ. ಲೆಕ್ಕದಿಂದ ಒದಗಿಸಲಾಗುತ್ತಿದೆ. ಇದರಲ್ಲಿ ಸಾಗಾಣಿಕೆ ಖರ್ಚನ್ನು ಕ್ಷಾಮಪರಿಹಾರ ಲೆಕ್ಕಕ್ಕೆ ಸೇರಿಸಿ ಉಳಿದುದನ್ನು ಮುಂದೆ ನ್ಯಾಯ ಬೆಲೆಯ ಅಂಗಡಿಗಳಿಂದ ವಸೂಲು ಮಾಡಿಕೊಳ್ಳಲಾಗುವುದು.

(6) ಸೀಮೆ ಎಣ್ಣೆ, ಡಿಸೇಲ್ ಎಣ್ಣೆ, ವನಸ್ಪತಿ, ಬಟ್ಟೆಗಳು, ಕಾಗದ, ಸ್ಕೂಟರ್ ಟೈರು ಮತ್ತು ಟ್ಯೂಬು, ಟಾರ್ಚಿಗೆ ಉಪಯೋಗಿಸುವ ಸೆಲ್ಲುಗಳು, ಡ್ರೈಸೆಲ್ಲುಗಳು ಮತ್ತು ಬ್ಯಾಟರಿಗಳು, ಟ್ರಾನ್ಸಿಸ್ಟರ್ ರೇಡಿಯೋ ಮತ್ತು ಎಲ್ಲ ವಾಹನಗಳಿಗೂ ಬಳಸುವ ಟೈರುಗಳ ಬೆಲೆ ಪಟ್ಟಿಯನ್ನು ವ್ಯಾಪಾರಸ್ಥರು ಪ್ರದರ್ಶನ ಮಾಡಬೇಕೆಂಬ ಕಾನೂನನ್ನು ಕಾರ್ಯಗತ ಮಾಡಲಾಗುತ್ತಿದೆ.

(ಶ್ರೀ ಡಿ. ದೇವರಾಜ ಅರಸ್)

(7) ಜೀವನಾವಶ್ಯಕ ವಸ್ತುಗಳ ಕಾಯಿದೆಯ ಪ್ರಕಾರ ಇರುವ ಆಜ್ಞೆಗಳನ್ನು ಹೆಚ್ಚು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುತ್ತಿದೆ. ಅಲ್ಲದೆ ನಿಯಂತ್ರಣ ಆಜ್ಞೆಗಳನ್ನೂ ಉಲ್ಲಂಘಿಸಿರುವ ಅನುಮಾನ ಬಂದಕೂಡಲೆ ಧಾಳಿ ಮಾಡುವುದೇ ಅಲ್ಲದೆ ಹಂಚಿಕೆ ವ್ಯವಸ್ಥೆಯ ಬಗ್ಗೆ ನಿರಂತರ ಎಚ್ಚರಿಕೆ ವಹಿಸಲಾಗುತ್ತಿದೆ.

ನ್ಯಾಯಬೆಲೆಯ ಅಂಗಡಿಗಳ ಮೂಲಕ ಹಂಚಿಕೆ ವ್ಯವಸ್ಥೆ ಯಶಸ್ವಿಯಾಗಲು ಎರಡು ಮುಖ್ಯ ಅಂಶಗಳಿವೆ.

(1) ಸಾಕಷ್ಟು ಸಂಖ್ಯೆಯಲ್ಲಿ ನ್ಯಾಯಬೆಲೆಯ ಅಂಗಡಿಗಳನ್ನು ಆರಂಭಿಸಿ ಅವುಗಳ ಮಾರಾಟ ವ್ಯವಹಾರಗಳ ಮೇಲೆ ಕಟ್ಟುನಿಟ್ಟಾದ ಹತೋಟಿ ಇಟ್ಟುಕೊಳ್ಳುವುದು.

(2) ರಾಜ್ಯದ ಆಹಾರ ಧಾನ್ಯ ಉತ್ಪಾದನೆಯಿಂದ ಸಾಕಷ್ಟು ಧಾನ್ಯ ಕೊಂಡು ಸಂಗ್ರಹಿಸುವುದೇ ಅಲ್ಲದೆ ಕೇಂದ್ರ ಸರ್ಕಾರದಿಂದಲೂ ಸಾಕಷ್ಟು ಧಾನ್ಯ ಪಡೆಯುವುದು. ಈ ಮೂಲಕ ನ್ಯಾಯಬೆಲೆ ಅಂಗಡಿಗಳ ಮೂಲಕ ಹಂಚಲು ಅಗತ್ಯವಾದಷ್ಟು ಆಹಾರ ಧಾನ್ಯ ಸರ್ಕಾರದ ಬಳಿ ಇರುವಂತೆ ಮಾಡಿಕೊಳ್ಳಬೇಕು.

ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಬಗ್ಗೆ ಹೇಳುವುದಾದರೆ ಅವು ಅತ್ಯಗತ್ಯವಾದದ್ದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಆರಂಭವಾಗಿದೆ ಎಂಬುದು ಸರ್ಕಾರಕ್ಕೆ ಬಹಳ ಸಂತೋಷಕರ ವಿಷಯವಾಗಿದೆ. ರಾಜ್ಯದಲ್ಲಿ ಒಟ್ಟು 13,706 ನ್ಯಾಯಬೆಲೆ ಅಂಗಡಿಗಳಿವೆ. ಅದರಲ್ಲಿ 10,465 ಗ್ರಾಮಾಂತರದಲ್ಲೂ, 181 ಸುಲಭ ಸಂಪರ್ಕ ಇಲ್ಲದೆ ಇರುವ ಸ್ಥಳಗಳಲ್ಲೂ ಉಳಿದವು ನಗರ ಪ್ರದೇಶಗಳಲ್ಲೂ ಇವೆ. ಅಂದರೆ ಸರಾಸರಿಯಾಗಿ ಪ್ರತಿ 2,000 ಜನಸಂಖ್ಯೆಗೆ ಒಂದು ನ್ಯಾಯಬೆಲೆಯ ಅಂಗಡಿ ಇದೆ. ತೀವ್ರ ಅಭಾವ ಪರಿಸ್ಥಿತಿ ಇರುವ ಪ್ರತಿ ತಾಲ್ಲೂಕಿನಲ್ಲೂ 100 ನ್ಯಾಯಬೆಲೆಯ ಅಂಗಡಿ ಮತ್ತು ಇತರ ಅಭಾವ ಪ್ರದೇಶಗಳಲ್ಲಿ ಪ್ರತಿ ತಾಲ್ಲೂಕಿಗೆ 50 ಅಂಗಡಿಗಳನ್ನು 1972ರ ಅವಧಿಯಲ್ಲಿ ಆರಂಭಿಸಬೇಕೆಂಬ ಗುರಿಯನ್ನು ಸರ್ಕಾರ ಸಾಧಿಸಿದೆ.

ರಾಜ್ಯದ ಅಭಾವ ಪೀಡಿತ ಪ್ರದೇಶಗಳಲ್ಲಿ ಜೋಳ ಸಂಗ್ರಹಿಸುವ ಕ್ರಮವನ್ನು ಈ ವರ್ಷ ಸರ್ಕಾರ ಕೈಬಿಟ್ಟಿದೆ. 1972-73ರಲ್ಲಿ 66,500 ಟನ್ ಭತ್ತವನ್ನು 2,676 ಟನ್ ಜೋಳವನ್ನು ಸಂಗ್ರಹಿಸಲಾಗಿತ್ತು. ಕೇಂದ್ರ ಸರ್ಕಾರ 3,000 ಟನ್ ಅಕ್ಕಿಯನ್ನು ಒದಗಿಸಿತು. ರಾಜ್ಯದಲ್ಲಿ ಗೋಧಿಯನ್ನು ಅತಿ ಕಡಿಮೆ ಪ್ರಮಾಣದಲ್ಲಿ ಬೆಳೆಯುವುದರಿಂದ ನಾವು ಕೇಂದ್ರವನ್ನು ಅವಲಂಬಿಸಬೇಕಾಗಿದೆ. ಸರ್ಕಾರ 50,000 ಟನ್ ಗೋಧಿಯನ್ನು ಕೇಳಿದರೂ ನಮಗೆ ಕೊಟ್ಟಿರುವುದು 15,000 ಟನ್ ಈ ವಿಚಾರದಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಇಡೀ ದೇಶದಲ್ಲಿ ಕಂಡುಬಂದಿರುವ ಆಹಾರಧಾನ್ಯ ಕೊರತೆ ಹಾಗೂ ಹೆಚ್ಚು ಕೊರತೆ ಇರುವ ರಾಜ್ಯಗಳು ಮತ್ತು ಅಭಾವ ಪೀಡಿತ ರಾಜ್ಯಗಳ ಅಗತ್ಯಗಳೆಲ್ಲವನ್ನೂ ಗಣನೆಗೆ ತಂದುಕೊಂಡು ಕೇಂದ್ರ ಸರ್ಕಾರ ಒದಗಿಸಬೇಕಾಗಿದೆ.

ಧಾನ್ಯ ಸಂಗ್ರಹಣೆಯ ವಿಚಾರದಲ್ಲಿ ಜಾರಿಯಲ್ಲಿರುವ ನಿಯಮಗಳಿಗನುಸಾರವಾಗಿ ತಮ್ಮ ದಾಸ್ತಾನನ್ನು ತಿಳಿಸಿರುವವರು ಹಾಗೂ ತಮ್ಮ ಭಾಗದ ''ಲೆವಿ'' ಕೊಟ್ಟಿರುವವರ ಬಗ್ಗೆ ಸರ್ಕಾರ ಮಧ್ಯ ಪ್ರವೇಶಿಸುವುದಿಲ್ಲ. ಆದರೆ ದಾಸ್ತಾನು ತಿಳಿಸದೆ ಇರುವವರು ಮತ್ತು ''ಲೆವಿ'' ಕೊಡದೆ ಇರುವವರ ವಿರುದ್ಧ ಸರ್ಕಾರ ತೀವ್ರ ಕ್ರಮ ಕೈಗೊಳ್ಳುವುದು.

ಬೆಲೆ ನಿಯಂತ್ರಣಗೊಳಿಸಲು ರಾಜ್ಯ ಸರ್ಕಾರ ಕೈಗೊಳ್ಳುವ ಯಾವುದೇ ಕ್ರಮ ಬಳಕೆದಾರರಿಗೆ ಆಗಬಹುದಾದ ತೊಂದರೆಯನ್ನು ಕಡಿಮೆ ಮಾಡುವಂತಿರಬೇಕು, ಜೊತೆಗೆ ಸ್ವತಂತ್ರ ಮಾರುಕಟ್ಟೆಯ ವ್ಯವಹಾರ ಅನವಶ್ಯಕವಾಗಿ ಗೊಂದಲಕ್ಕೆ ಈಡಾಗದಂತಿರಬೇಕು. ಇದು ನಿಜಕ್ಕೂ ಬಹಳ ಕಠಿಣವಾದ ಕೆಲಸ. ಎಷ್ಟೇ ಮಿತವಾದ ಹತೋಟಿ ಕ್ರಮವನ್ನು ಜಾರಿಗೆ ತಂದರೂ ಆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಅದನ್ನು ದುರುಪಯೋಗಪಡಿಸುವ ಅವಕಾಶವಿರುತ್ತದೆ. ಜೀವನಾವಶ್ಯಕ ವಸ್ತುಗಳಲ್ಲಿ ಆಹಾರ ಧಾನ್ಯಗಳು ಮುಖ್ಯವಾಗಿದ್ದು ಅಕ್ಕಿ, ಗೋಧಿ, ಜೋಳ ಮತ್ತು ಸಕ್ಕರೆಯನ್ನು ಬಳಕೆದಾರರಿಗೆ ನ್ಯಾಯವಾದ ಬೆಲೆಯಲ್ಲಿ ಅತ್ಯಗತ್ಯವಾದಷ್ಟು ಪ್ರಮಾಣದಲ್ಲಿ ಯಾವಾಗಲೂ ದೊರಕಿಸಬೇಕೆಂಬುದು ಸರ್ಕಾರದ ಸ್ಪಷ್ಟ ನಿಲುವು. ಇದು ಇತರ ವಸ್ತುಗಳ ಬೆಲೆ ಏರುವುದನ್ನು ತಡೆಗಟ್ಟುವುದಕ್ಕೆ ಸಹಾಯಕವಾಗುತ್ತದೆ. ಈ ಉದ್ದೇಶದಿಂದಲೇ ನಗರ ಕೇಂದ್ರಗಳಾದ ಬೆಂಗಳೂರು ಮತ್ತು ಕೋಲಾರ ಚಿನ್ನದಗಣಿ ಪ್ರದೇಶದಲ್ಲಿ ಅನೌಪಚಾರಿಕ ಪಡಿತರ ಪದ್ಧತಿಯನ್ನೂ ಜೊತೆಗೆ, ಇತರ ಪ್ರದೇಶಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಹಂಚುವ ಕ್ರಮವನ್ನೂ ಜಾರಿಗೆ

ತೆರಲಾಯಿತು. ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯವನ್ನು ಕೊಂಡು ಸಂಗ್ರಹಿಸುವ ದೃಷ್ಟಿಯಿಂದ ಪಡಿತರ ಪದ್ಧತಿಯ ಕೇಂದ್ರಗಳನ್ನು ಮಿತಿಗೊಳಿಸಬೇಕಾಯಿತು. ಆಹಾರ ಧಾನ್ಯಗಳನ್ನು ಅಧಿಕಪ್ರಮಾಣದಲ್ಲಿ ದಾಸ್ತಾನು ಮಾಡಿಕೊಂಡು ಹಂಚಿಕೆ ಮತ್ತಿತರ ಸೇವಾ ಖರ್ಚನ್ನು ಹೆಚ್ಚು ಪ್ರಮಾಣದಲ್ಲಿ ಬೆಲೆಗಳಿಗೆ ಸೇರಿಸುವುದನ್ನು ತಪ್ಪಿಸುವುದಕ್ಕಾಗಿಯೂ ಮತ್ತು ಸಗಟು ವ್ಯಾಪಾರದಲ್ಲಿ ಮಧ್ಯವರ್ತಿಗಳು ಇಲ್ಲದಂತೆ ಮಾಡುವುದಕ್ಕೂ ಮುಂದಿನ ಖಾರಿಫ್ ಕಾಲದಲ್ಲಿ ಭತ್ತದ ಸಗಟು ವ್ಯಾಪಾರವನ್ನು ತಾನೇ ವಹಿಸಿಕೊಳ್ಳಲು ಸರ್ಕಾರ ನಿರ್ಧರಿಸುವುದು ಸದಸ್ಯರಿಗೆಲ್ಲಾ ತಿಳಿದ ವಿಷಯವೇ ಆಗಿದೆ. ಅಕ್ಕಿಯ ಚಿಲ್ಲರೆ ವ್ಯಾಪಾರ ಕ್ರಮದಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. ಸಮರ್ಪಕ ಹಂಚಿಕೆ ದೃಷ್ಟಿಯಿಂದ ಚಿಲ್ಲರೆ ವ್ಯಾಪಾರ ಕ್ರಮಬದ್ಧ ರೀತಿಯಲ್ಲಿ ಮುಂದುವರೆಯಲು ಸರ್ಕಾರ ಅವಕಾಶ ಮಾಡಿಕೊಡುವುದು. ಈ ಕ್ರಮದಿಂದ ಬಳಕೆದಾರರಿಗೆ ಯಾವ ತೊಂದರೆಯೂ ಆಗದಂತೆ ಸರ್ಕಾರ ಎಚ್ಚರಿಕೆ ವಹಿಸುತ್ತದೆ. ಈ ಕ್ರಮದಿಂದ ಹಾಗೂ ಮಿತಪ್ರಮಾಣದಲ್ಲಿ ಜೋಳ ಸಂಗ್ರಹಿಸುವುದರಿಂದ ನ್ಯಾಯಬೆಲೆಗೆ ಆಹಾರ ಧಾನ್ಯಗಳ ಕನಿಷ್ಠ ಅಗತ್ಯಗಳನ್ನು ಪೂರೈಸಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ.

ಆದರೆ ಬೆಲೆ ಏರಿಕೆಗೆ ಅತಿ ಹೆಚ್ಚಿನ ಪ್ರೋತ್ಸಾಹ ಸಿಗುವುದು, ಕೆಲವು ಪ್ರತಿಷ್ಠಿತ ಹಾಗೂ ಪ್ರಬಲ ವರ್ಗದವರ ಬಳಿ ಇರುವ ಹಣ ಸುಲಭವಾಗಿ ಸಿಗುವ ದೊಡ್ಡ ನಗರ ಪ್ರದೇಶಗಳಲ್ಲಿ ಈ ವರ್ಗದವರು ಬಳಕೆದಾರರನ್ನು ಶೋಷಣೆ ಮಾಡದಂತೆ ನಾವು ತಟ್ಟಗಟ್ಟಬೇಕಾಗಿದೆ. ಈ ಪ್ರದೇಶಗಳಲ್ಲಿ ಎಲ್ಲರಿಗೂ ಅತಿ ಅವಶ್ಯಕವಾದಷ್ಟಾದರೂ ಆಹಾರ ಧಾನ್ಯಗಳನ್ನು ಒದಗಿಸಿದರೆ ಮಾತ್ರ ಇದು ಸಾಧ್ಯ. ಆದ್ದರಿಂದಲೇ ಒಂದು ಲಕ್ಷ ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಎಲ್ಲಾ ನಗರ ಕೇಂದ್ರಗಳಿಗೂ ಅನೌಪಚಾರಿಕ ಪಡಿತರ ಪದ್ಧತಿಯನ್ನು ವಿಸ್ತರಿಸುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆ. ಅಗತ್ಯವಾದರೆ ಕೆಲವು ಇಂತಹ ಕೇಂದ್ರಗಳಲ್ಲಿ ಅಥವಾ ಎಲ್ಲಾ ಕೇಂದ್ರಗಳಲ್ಲೂ ಶಾಸನ ಬದ್ಧ ಪಡಿತರ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರ ಹಿಂತೆಯುವುದಿಲ್ಲ. ಅಲ್ಲದೆ ಇತರ ಕಡೆ ನ್ಯಾಯಬೆಲೆ ಅಂಗಡಿಗಳ ಮೂಲಕ ಇರುವ ಆಹಾರ ಧಾನ್ಯ ಬಿಡುಗಡೆ ಮಾಡುವ ಪದ್ಧತಿಯನ್ನು ಸರ್ಕಾರ ಮುಂದುವರೆಸಿಕೊಂಡು ಹೋಗುವುದು.

ಭತ್ತದ ಸಗಟು ವ್ಯಾಪಾರವನ್ನೂ, ಅತ್ಯಗತ್ಯ ಆಹಾರ ಧಾನ್ಯಗಳ ಹಂಚಿಕೆಯನ್ನೂ ವಹಿಸಿಕೊಳ್ಳುವುದರಲ್ಲಿ ನಾವು ಅನೇಕ ಆಡಳಿತ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಉತ್ಪಾದನೆ ಖರ್ಚು ಮತ್ತು ನ್ಯಾಯವಾದ ಪ್ರಮಾಣದಲ್ಲಿ ಲಾಭ ದೊರಕುವ ಆಧಾರದ ಮೇಲೆ ನಾವು ಬೆಳೆಗಾರರಿಗೆ ಕೊಡಬೇಕಾದ ಬೆಲೆಯನ್ನು ನಿಗದಿ ಮಾಡಬೇಕಾಗಿದೆ. ಹಂಚಿಕೆ ಮತ್ತು ಇತರ ಸೇವೆಗಳ ಮತ್ತು ಖರ್ಚನ್ನು ಕಡಿಮೆ ಮಾಡಿ ಬಳಕೆದಾರರಿಗೆ ಬೆಲೆ ಹೆಚ್ಚಾಗುವಂತೆ ಹಾಗೂ ಬೆಳೆಗಾರರಿಗೆ ಹೆಚ್ಚು ಬೆಲೆ ಕೊಡುವಂತೆ ಮಾಡುವ ಸಾಧ್ಯತೆಗಳಿವೆ. ಈ ವಿಚಾರಗಳನ್ನೆಲ್ಲಾ ಸರ್ಕಾರ ಪರಿಶೀಲಿಸುತ್ತಿದೆ. ಈ ಸವಾಲನ್ನೆದುರಿಸಲು ನಾಗರೀಕ ವಸ್ತುಗಳ ಪೂರೈಕೆ ಇಲಾಖೆಯನ್ನು ಪೂರ್ಣವಾಗಿ ಪುನರ್ವ್ಯವಸ್ಥೆಗೊಳಿಸಲಾಗುವುದು. ಮೇಲ್ವಿಚಾರಣೆ ಮತ್ತು ಸಾದಿಲ್ವಾರು ಖರ್ಚನ್ನು ಕಡಿಮೆ ಮಾಡಲು ನಮ್ಮದೇ ಆದ ಕೊಳ್ಳುವ ವ್ಯವಸ್ಥೆಯೊಂದನ್ನು ರಚಿಸಬೇಕಾಗುತ್ತದೆ.

ಈಗ ಸೀಮೆಎಣ್ಣೆ, ವಾಹನಗಳ ಟೈರುಗಳು ಮತ್ತು ವನಸ್ಪತಿ ವ್ಯಾಪಾರಸ್ಥರಿಗೆ ಲೈಸೆನ್ಸ್ ಕೊಡುವ ಪ್ರಸ್ತುತ ಕ್ರಮ ಸಮರ್ಪಕವಾಗಿಲ್ಲ. ಆದ್ದರಿಂದ ಈ ಲೈಸೆನ್ಸನ್ನು ಕೊಡುವ ಪದ್ಧತಿಯನ್ನು ಸುಧಾರಣೆ ಮಾಡಿ ಮಾರಾಟ ಹಾಗೂ ದಾಸ್ತಾನು ಬಹಿರಂಗಪಡಿಸುವ ಬಗ್ಗೆ ಹೆಚ್ಚು ಕಟ್ಟುನಿಟ್ಟಾದ ಕ್ರಮವನ್ನು ಅನುಸರಿಸಬೇಕೆಂದು ಉದ್ದೇಶಿಸಲಾಗಿದೆ. ವ್ಯಾಪಾರಿ ವರ್ಗದವರಿಂದ ಸಾಕಷ್ಟು ಸಹಕಾರವಿಲ್ಲದೆ, ಬೆಲೆ ಪಟ್ಟಿಯ ಪ್ರದರ್ಶನದಿಂದ ಬೆಲೆ ನಿಯಂತ್ರಣ ಯಶಸ್ವಿಯಾಗಿಲ್ಲ. ಬೆಲೆ ಸ್ಥಿಮಿತದ ಪ್ರಾಮುಖ್ಯತೆಯನ್ನು ಅರಿತು ಬೆಲೆ ತಡೆಹಿಡಿಯುವುದಕ್ಕಾಗಿ ಸರ್ಕಾರದೊಂದಿಗೆ ಸಹಕರಿಸಬೇಕೆಂದು ವ್ಯಾಪಾರಸ್ಥರಿಗೂ, ಬಳಕೆದಾರರಿಗೂ, ಮನವಿ ಮಾಡುತ್ತೇನೆ.

ಅಗತ್ಯವಾದ ಎಣ್ಣೆಗಳು ಮತ್ತಿತರ ಜೀವನಾವಶ್ಯಕ ವಸ್ತುಗಳ ಗರಿಷ್ಠ ಬೆಲೆಯನ್ನು ನಾವು ನಿಗದಿಮಾಡುತ್ತೇವೆ. ನಿಗದಿಯಾಗುವ ಬೆಲೆಗೇ ಮಾರಬೇಕೆಂದು ವಸ್ತುಗಳನ್ನು ತಯಾರಿಸುವವರು, ಚಿಲ್ಲರೆ ವ್ಯಾಪಾರಸ್ಥರನ್ನು ಒತ್ತಾಯಪಡಿಸಬೇಕು. ಹಾಗೆ ಮಾಡದೇ ಇವರು ಚಿಲ್ಲರೆ ವ್ಯಾಪಾರಗಾರರಿಗೆ ತಯಾರಿಕೆದಾರರು ಸರಬರಾಯಿ ನಿಲ್ಲಿಸಬೇಕು. ಆಹಾರಕ್ಕೆ ಬಳಸುವ ಎಣ್ಣೆ ಮತ್ತಿತರ ಪದಾರ್ಥಗಳ ಮರುಮಾರಾಟ ಬೆಲೆ ನಿಗದಿ ಮಾಡಿಕೊಳ್ಳುವ ಪದ್ಧತಿಗೆ ಕಾನೂನಿನಲ್ಲಿ ವಿನಾಯಿತಿ ಇರುವಂತೆ ಏಕಸ್ವಾಮ್ಯ ಹಾಗೂ ನಿರ್ಬಂಧಿತ ವ್ಯಾಪಾರ ಪದ್ಧತಿ ಮಂಡಲಿಗೆ ಸೂಚಿಸಬೇಕಾಗಿದೆ. ವ್ಯಾಪಾರಸ್ಥರಿಂದ ಶೋಷಣೆಯನ್ನು ತಡೆಗಟ್ಟಲು ಬಳಕೆದಾರರ ಸಹಕಾರ ಸಂಘಗಳ ರಚನೆ ಅತ್ಯಗತ್ಯವಾಗಿದೆ.

(ಶ್ರೀ ಡಿ. ದೇವರಾಜ್ ಅರಸ್)

ಈಗ ಸರ್ಕಾರಕ್ಕೆ ಕಳವಳ ಉಂಟುಮಾಡುತ್ತಿರುವ ಆಹಾರೇತರ ವಸ್ತುಗಳ ಬೆಲೆ ಏರಿಕೆ ವಿಚಾರ ಪ್ರಸ್ತಾಪಿಸುತ್ತೇನೆ: ಟೆಕ್ಸ್‌ಟೈಲ್ ಕಮಿಷನರ್ ಅವರಿಂದ ರಾಜ್ಯಕ್ಕೆ ಸಾಕಷ್ಟು ಪ್ರಮಾಣದಲ್ಲಿ ದೊರೆಯದೇ ಇರುವ ವಸ್ತುವೆಂದರೆ ಬಟ್ಟೆ. 1972ರ ಡಿಸೆಂಬರ್ ಹಾಗೂ 1973ರ ಜನವರಿ ಮತ್ತು ಫೆಬ್ರುವರಿ ತಿಂಗಳಲ್ಲಿ ಟೆಕ್ಸ್‌ಟೈಲ್ ಕಮಿಷನರ್ ಅವರು 578 ಬೇಲುಗಳಷ್ಟು ಬಟ್ಟೆಯನ್ನು ನಮಗೆ ನಿಗದಿ ಮಾಡಿದರು. ಅದರಲ್ಲಿ 294 ಬೇಲುಗಳಿಗೆ ಕೇಳಿಕೆ ಇತ್ತು. ಆದರೆ ನಮಗೆ ನಿಜವಾಗಿ ಬಂದಿದ್ದು 24 ಬೇಲುಗಳು ಮಾತ್ರ. ದೇಶದ ಕೆಲವು ಭಾಗಗಳಲ್ಲಿ ಆದ ಗಲಭೆಗಳಿಂದ ಸಾಗಾಣಿಕೆ ತೊಂದರೆ, ಹಾಗೂ ಬಟ್ಟೆ ಉತ್ಪಾದನೆ 1970–71ರಲ್ಲಿ 7 9.7 ಕೋಟಿ ಮೀಟರ್ ಇದ್ದುದು 1971-72ರಲ್ಲಿ 754.7 ಕೋಟಿ ಮೀಟರ್‌ಗೆ ಇಳಿದದ್ದು ಸ್ವಲ್ಪಮಟ್ಟಿಗೆ ಇದಕ್ಕೆ ಕಾರಣವಾಯಿತು.

ನಾನು ಮೊದಲೇ ಹೇಳಿರುವಂತೆ ನಮ್ಮ ರಾಜ್ಯದ ತೆರೆದ ಮಾರುಕಟ್ಟೆಯಲ್ಲಿ ಇತರ ಕಸಿಗಳಿಗೆ ಹೋಲಿಸಿದರೆ ಸಕ್ಕರೆ ಬೆಲೆ ಏರಿಕೆ, ಕಡಿಮೆ ಪ್ರಮಾಣದಲ್ಲಿದೆ. ಸಕ್ಕರೆ ಸರಬರಾಯಿಯಲ್ಲಿ ಕೊರತೆ ಇರುವುದು ಸದಸ್ಯರಿಗೆಲ್ಲ ತಿಳಿದ ವಿಷಯ. ಇದರ ಜೊತೆಗೆ ಸಕ್ಕರೆ ಉತ್ಪಾದನೆ 1970-71ರಲ್ಲಿ 3-8 ಮಿಲಿಯನ್ ಟನ್‌ಗಳಷ್ಟಿದ್ದುದು 1971-72ರಲ್ಲಿ 3-4 ಮಿಲಿಯನ್ ಟನ್‌ಗಳಿಗೆ ಇಳಿಯಿತು. ನಮ್ಮ ರಾಜ್ಯದಲ್ಲಿ ಸಕ್ಕರೆ ಉತ್ಪಾದನೆ 1970–71ರಲ್ಲಿ 3,03,153 ಟನ್‌ಗಳಷ್ಟಿದ್ದುದು 1971-72ರಲ್ಲಿ 2,43,339 ಟನ್‌ಗಳಿಗೆ ಇಳಿಯಿತು. ಸಕ್ಕರೆಯ ಸಮಾನ ಹಂಚಿಕೆ ಮಾಡುವುದಕ್ಕೂ, ಉತ್ಪಾದನೆ ಹೆಚ್ಚಿಸಲು ಕಬ್ಬಿನ ಬೆಳಗಾರರಿಗೆ ಪ್ರೋತ್ಸಾಹ ಕೊಡುವುದಕ್ಕೂ ರಾಷ್ಟ್ರೀಯ ಮಟ್ಟದಲ್ಲಿ ಬೆಲೆ ನೀತಿಯೊಂದನ್ನು ಅನುಸರಿಸಲಾಗುತ್ತಿದೆ. ಈ ನೀತಿ, ತೃಪ್ತಿಕರ ಫಲಿತಾಂಶ ನೀಡುವುದರಲ್ಲಿ ವಿಫಲವಾಗಿದೆ. ಆದ್ದರಿಂದ ರಾಷ್ಟ್ರೀಯ ಸಕ್ಕರೆ ನೀತಿ ಸಮಗ್ರವಾಗಿ ಸುಧಾರಣೆಯಾಗಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಲಾಭದಾಯಕವಲ್ಲದ ಸಕ್ಕರೆ ಕಾರ್ಖಾನೆಗಳಿಗೆ ಉತ್ತೇಜನ ಕೊಡುವ ಬದಲಾಗಿ ಸ್ಥಾಪನೆಯ ಸ್ಥಳದಿಂದ ಹಾಗೂ ಕಬ್ಬಿನಲ್ಲಿ ಸಕ್ಕರೆಯ ಅಂಶದಿಂದ ಹೆಚ್ಚು ಅನುಕೂಲಕರವಾದ ಪ್ರದೇಶಗಳಲ್ಲಿ ಹೊಸ ಕಾರ್ಖಾನೆಗಳನ್ನು ಆರಂಭಿಸುವುದಕ್ಕೆ ಪ್ರೋತ್ಸಾಹ ನೀಡುವುದು ಅಗತ್ಯ. ಮೈಸೂರು ರಾಜ್ಯದಲ್ಲಿ ಸಕ್ಕರೆ ಉದ್ಯಮದ ಅಭಿವೃದ್ಧಿಗೆ ಈ ಎಲ್ಲ ಅನುಕೂಲಗಳು ಅಪಾರವಾಗಿವೆ. ಸಕ್ಕರೆ ಅಭಾವವನ್ನು ನೀಗುವ ದಿಸೆಯಲ್ಲಿ ಮುಖ್ಯ ಕಾರ್ಯಕ್ರಮವಾಗಿ ಸರ್ಕಾರ ಮತ್ತೆ ಹೆಚ್ಚು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲಿದೆ. ರಾಷ್ಟ್ರೀಯ ಸಕ್ಕರೆ ನೀತಿಯನ್ನು ಪುನರ್ ಪರಿಶೀಲಿಸುವಾಗ ಅಗತ್ಯವಾದರೆ ಸಕ್ಕರೆ ಉತ್ಪಾದನೆಯ ಮೇಲೆ ಪೂರ್ಣ ಹತೋಟಿಯನ್ನು ಜಾರಿಗೆ ತರಬೇಕಾಗುತ್ತದೆ.

ಸಿಮೆಂಟಿನ ಅಭಾವ ಉಂಟಾಗಿ, ಅದರ ಬೆಲೆಯೂ ಹೆಚ್ಚಿದೆ. ದೇಶದಲ್ಲಿ ಈಗ ಸುಮಾರು 15 ಮಿಲಿಯನ್ ಟನ್ ಸಿಮೆಂಟ್ ಉತ್ಪಾದನೆಯಾಗುತ್ತಿತ್ತು, ಅದು ನಮ್ಮ ಅಗತ್ಯಕ್ಕಿಂತ 25 ಮಿಲಿಯನ್ ಟನ್ ಕಡಿಮೆಯಾಗಿದೆ. ನಮ್ಮ ರಾಜ್ಯದಲ್ಲಿ 18 ಲಕ್ಷ ಟನ್ ಸಿಮೆಂಟ್ ಉತ್ಪಾದಿಸುವ ಸಾಮರ್ಥ್ಯವಿದ್ದು, ಸಾಮಾನ್ಯವಾಗಿ ಒಂದು ವರ್ಷದಲ್ಲಿ 15 ರಿಂದ 16 ಟನ್ ತಯಾರಿಸಲಾಗುತ್ತಿದೆ. ದುರದೃಷ್ಟವಶಾತ್ 1972-73ರಲ್ಲಿ ವಿದ್ಯುತ್ ಕಡಿತದಿಂದ ಸಿಮೆಂಟ್ ಉತ್ಪಾದನೆ ಕಡಿಮೆಯಾಯಿತು. ಸಕ್ಕರೆಗಿಂತ ಸಿಮೆಂಟ್ ಬಗ್ಗೆಯೂ ರಾಷ್ಟ್ರೀಯ ನೀತಿಯೊಂದಿದೆ. ಸಿಮೆಂಟ್ ಸರಬರಾಯಿಯಲ್ಲಿ ಕೊರತೆ ಕಂಡುಬಂದರೆ, ಎಲ್ಲ ರಾಜ್ಯಗಳೂ ಸಮ ಭಾಗಿಗಳಾಗಬೇಕಾಗುತ್ತದೆ. ವಿದ್ಯುತ್ ಕಡಿತ ಹೆಚ್ಚು ಪ್ರಮಾಣದಲ್ಲಿ ಆಗಿರುವ ತಮಿಳುನಾಡು, ಮತ್ತು ಆಂಧ್ರ ಪ್ರದೇಶಗಳು ಸೇರಿರುವ ಸಿಮೆಂಟ್ ಮಾರುಕಟ್ಟೆ ವಲಯಕ್ಕೆ ನಮ್ಮ ರಾಜ್ಯವೂ ಸೇರಿದೆ. ರೈಲ್ವೆ ವ್ಯಾಗನ್ನುಗಳ ಅಭಾವ, ಅಭಿವೃದ್ಧಿ ಯೋಜನೆಗಳಿಗೆ ಸಿಮೆಂಟ್‌ನ ಹೆಚ್ಚುವರಿ ಅಗತ್ಯ ಹಾಗೂ ಅಭಾವ ಪೀಡಿತ ಪ್ರದೇಶಗಳಲ್ಲಿ ಕೈಗೊಂಡಿರುವ ಯೋಜನೆಗಳ ಕಾರ್ಯಗಳಿಂದಲೂ ಸಿಮೆಂಟ್ ಪೂರೈಕೆ ಪರಿಸ್ಥಿತಿ ಹೆಚ್ಚು ಬಗಡಾಯಿಸಿದೆ. ಸಿಮೆಂಟಿನ ಸಮಾನ ಹಂಚಿಕೆ ಮಾಡಲು ಮತ್ತು ಅದರ ಬೆಲೆಯನ್ನು ಹತೋಟಿಯಲ್ಲಿಡಲು ನನ್ನ ಸಹೋದ್ಯೋಗಿಗಳಾದ ಕೈಗಾರಿಕೆ ಮಂತ್ರಿ ಎಸ್. ಎಂ. ಕೃಷ್ಣರವರು ಈಗಾಗಲೇ ಸೂಚಿಸಿರುವಂತೆ, ಸಿಮೆಂಟಿನ ಬೆಲೆ ನಿಗದಿ ಮಾಡಲು ಹಾಗೂ ಹಂಚಿಕೆಗೆ "ಪರ್ಮಿಟ್" ಪದ್ಧತಿ ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ. ಸಿಮೆಂಟ್‌ನ ಅಭಾವ ಎದುರಿಸಲು, ಅದರ ಬಳಕೆಯಲ್ಲಿ ಮಿತವ್ಯಯವೂ ಅಗತ್ಯ. ಒಳ್ಳೆಯ ದರ್ಜೆಯ ಸುಣ್ಣ ಮತ್ತು ಮರಳು ನಮ್ಮ ರಾಜ್ಯದಲ್ಲಿ ಹೇರಳವಾಗಿ ದೊರಕುತ್ತದೆ. ಅದನ್ನು ಹೆಚ್ಚಿಗೆ ಬಳಸದೇ ಇರುವುದಕ್ಕೆ ಯಾವ ಕಾರಣವೂ ಇಲ್ಲ. ಎಲ್ಲ ಸರ್ಕಾರಿ ಕಟ್ಟಡಗಳ ನಿರ್ಮಾಣದಲ್ಲೂ ಸಿಮೆಂಟ್ ಬದಲಾಗಿ ಆದಷ್ಟು ಹೆಚ್ಚು ಗಾರೆಯನ್ನು ಬಳಸಬೇಕೆಂದು ಆಜ್ಞೆ ಮಾಡಲಾಗುವುದು.

ನೂಲಿನ ಸರಬರಾಯಿಯಲ್ಲಿ ಕೊರತೆ ಮತ್ತು ಅದರ ಪರಿಣಾಮವಾಗಿ ನೂಲಿನ ಬೆಲೆ ಏರಿರುವುದು ಸರ್ಕಾರಕ್ಕೆ ತೀವ್ರ ಕಳವಳ ಉಂಟುಮಾಡಿದೆ. ದೇಶದಲ್ಲಿ ಕೈಮಗ್ಗ ಉದ್ಯಮದಲ್ಲಿ 8 ಮಿಲಿಯನ್ ಕೆಲಸಗಾರರೂ, ವಿದ್ಯುತ್ ಚಾಲಿತ ಮಗ್ಗಗಳ ಉದ್ಯಮದಲ್ಲಿ ಮೂರು ಮಿಲಿಯನ್ ಕೆಲಸಗಾರರೂ ಇದ್ದಾರೆ. ಈ ವರ್ಷ ಹತ್ತಿ ಬೆಳೆ ಉತ್ತಮವಾಗಿದ್ದರೂ ನೂಲಿನ ಉತ್ಪಾದನೆಯಲ್ಲಿ ಶೇಕಡ 30ರಷ್ಟು ಕೊರತೆ ಇರುವುದೆಂದು ನಿರೀಕ್ಷಿಸಲಾಗಿದೆ. ನೂಲು ಉತ್ಪಾದನೆಯಲ್ಲಿ ಮುಖ್ಯ ರಾಜ್ಯಗಳಾದ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ವಿದ್ಯುಚ್ಛಕ್ತಿ ಸರಬರಾಯಿ ಕಡಿತವೇ ಈ ಕೊರತೆಗೆ ಕಾರಣ. ದೇಶದಲ್ಲಿ ಉತ್ಪಾದನೆಯಾಗುವ ನೂಲಿನಲ್ಲಿ ಶೇಕಡ 45 ರಷ್ಟನ್ನು ಮಿಲ್ಲುಗಳೇ ಉಪಯೋಗಿಸಿಕೊಳ್ಳುತ್ತವೆ. ಈ ಪ್ರಮಾಣವನ್ನು ಮಿಲ್ಲುಗಳು ಕಡಿಮೆ ಮಾಡಿಕೊಳ್ಳದೇ ಇದ್ದರೆ, ನೂಲಿನ ಕೊರತೆಯನ್ನು ಪೂರ್ಣವಾಗಿ ಕೈಮಗ್ಗಗಳು, ಹಾಗೂ ವಿದ್ಯುತ್ ಚಾಲಿತ ಮಗ್ಗಗಳು ವಹಿಸಿಕೊಳ್ಳಬೇಕಾದ ಪರಿಸ್ಥಿತಿ ಉಂಟಾಗಿ, ಅವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಉದ್ಯಮವನ್ನೇ ಕೈಬಿಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ 1,37,000 ಕೈಮಗ್ಗಗಳೂ, 24,000 ವಿದ್ಯುತ್ ಚಾಲಿತ ಮಗ್ಗಗಳೂ ಇದ್ದು ಅವುಗಳಿಗೆ 175 ರಿಂದ 200 ಲಕ್ಷ ಕೆ.ಜಿ.ಯಷ್ಟು ನೂಲು ಬೇಕಾಗುತ್ತದೆ. ರಾಜ್ಯದಲ್ಲಿ ನೂಲಿನ ಉತ್ಪಾದನೆ 1971-72ರಲ್ಲಿ 1971ಕ್ಕಿಂತ ಸ್ವಲ್ಪ ಹೆಚ್ಚು ಅಂದರೆ 394 ಲಕ್ಷ ಕೆ.ಜಿ.ಯಷ್ಟಿದೆ. ದೇಶದ ಎಲ್ಲ ಕಡೆ ನೇಕಾರರಲ್ಲಿ ಬಡವರ್ಗದವರ ಹಿತರಕ್ಷಣೆ ದೃಷ್ಟಿಯಿಂದ ನೂಲಿನ ಕೊರತೆಯನ್ನು ಎಲ್ಲ ರಾಜ್ಯಗಳೂ ಸಮನಾಗಿ ಹಂಚಿಕೊಳ್ಳಲು ಸಾಧ್ಯವಾಗುವಂತೆ, ಉತ್ಪಾದನೆಯಾದ ನೂಲನ್ನೆಲ್ಲಾ ಒಂದು ಕಡೆ ಕಲೆ ಹಾಕುವ ರಾಷ್ಟ್ರೀಯ ನೀತಿ ಇದೆ. ಆ ಕಾರಣ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾದ ನೂಲನ್ನು ನಮ್ಮ ಮಗ್ಗಗಳಿಗೇ ಮೀಸಲಾಗಿಡಲು ಸಾಧ್ಯವಿಲ್ಲ. ನೂಲು ಸರಬರಾಯಿನ ಕಷ್ಟಕರ ಪರಿಸ್ಥಿತಿಯನ್ನು ಅರಿತು ನೂಲಿನ ತೀವ್ರ ಅಭಾವವನ್ನು ನೀಗಲು ಕೇಂದ್ರ ಸರ್ಕಾರ ಹತ್ತಿ ನೂಲಿನ ಹಂಚಿಕೆಯನ್ನು ಕೂಡಲೇ ವಹಿಸಿಕೊಂಡು, ಬೆಲೆಯನ್ನು 1972ರ ಆಗಸ್ಟ್-ಡಿಸೆಂಬರ್‌ನಲ್ಲಿದ್ದ ಮಟ್ಟದಲ್ಲೇ ಇರಬೇಕೆಂದು ನಿಗದಿಮಾಡಿದೆ. ಅದರ ಪ್ರಕಾರ ನಾಗರೀಕರ ಬಳಕೆಗೆ ತಯಾರಿಸುವ ನೂಲಿನ ಉತ್ಪಾದಕರು ಶೇಕಡ 60 ರಷ್ಟನ್ನು ಕೈಮಗ್ಗಗಳಿಗೆ ಅಗತ್ಯವಾದ ಲಡಿಗಳಾಗಿಯೂ, ಶೇಕಡ 30ಕ್ಕೆ ಕಡಿಮೆ ಇಲ್ಲದಂತೆ ವಿದ್ಯುತ್ ಮಗ್ಗಗಳಿಗೆ ''ಕೋನ್'' ರೂಪದಲ್ಲೂ, ಸಿದ್ಧಪಡಿಸಬೇಕು. ಅಲ್ಲದೆ ನೂಲಿನ ರಫ್ತನ್ನು ಆಂತರಿಕ ಪೂರೈಕೆಗೆ ಹೆಚ್ಚು ತೊಂದರೆಯಾಗದಂತೆ ನಿಯಂತ್ರಿಸಲಾಗಿದೆ.

ನೇಕಾರರಿಗೆ ಉದ್ಯೋಗ ಉಳಿಸುವ ದೃಷ್ಟಿಯಿಂದ ಹಾಗೂ ನೂಲಿನ ಬೆಲೆ ಹತೋಟಿಗೊಳಿಸುವ ದೃಷ್ಟಿಯಿಂದ ಇದು ಸರಿಯಾದ ಮಾರ್ಗದಲ್ಲಿ ಕೈಗೊಂಡ ಮುಖ್ಯಕ್ರಮ ಎಂದು ಪರಿಗಣಿಸುತ್ತೇನೆ. ನಮ್ಮ ರಾಜ್ಯದಲ್ಲಿ ನೂಲಿನ ಸಮಾನ ಹಂಚಿಕೆಗೆ ಎಲ್ಲ ಕ್ರಮಗಳನ್ನೂ ಕೈಗೊಳ್ಳಲು ದೃಢನಿರ್ಧಾರ ಮಾಡಿದ್ದೇವೆ. ಬೇಡಿಕೆ ಇರುವ ಪ್ರದೇಶಗಳಲ್ಲಿ ಹೆಚ್ಚು ನೂಲಿನ ಗಿರಣಿ ಆರಂಭಿಸುವುದಕ್ಕೆ ನಾವು ಪೂರ್ಣ ಬೆಂಬಲ ಕೊಡುತ್ತೇವೆ. ನೇಕಾರರಿಗೆ ಅಗತ್ಯವಾದ ಬಣ್ಣಗಳು, ಇತರ ರಾಸಾಯನಿಕ ವಸ್ತುಗಳು ಮತ್ತಿತರ ಕಚ್ಚಾ ವಸ್ತುಗಳ ಬೆಲೆ ಮತ್ತು ಹಂಚಿಕೆಯನ್ನು ನಿಯಂತ್ರಣಗೊಳಿಸಿ ಸದ್ಯದರಲ್ಲೇ ಆಜ್ಞೆ ಮಾಡುತ್ತೇವೆ.

ನೇಕಾರರಿಗೆ ನೂಲು ಒದಗಿಸುವ ಸಮಸ್ಯೆಯನ್ನು ಪರಿಹರಿಸುವುದೇ ಅಲ್ಲದೇ, ಮಿಲ್ಲುಗಳ ಸ್ಪರ್ಧೆಯಿಂದಲೂ ಅವರನ್ನು ರಕ್ಷಿಸಬೇಕಾಗಿದೆ. ಅನವಶ್ಯಕವಾದ ಹಾಗೂ ಆಡಂಬರದ ಉಪಯೋಗಕ್ಕಾಗಿ ದಿಗ್ಭ್ರಮೆ ಹಿಡಿಸುವಷ್ಟು ಅಸಂಖ್ಯಾತ ರೀತಿಯ ಬಟ್ಟೆಗಳನ್ನು ತಯಾರಿಸಲು ಮಿಲ್ಲುಗಳಿಗೆ ಅವಕಾಶ ಕೊಡಲಾಗಿದೆ. ವಿರಳವಾಗಿರುವ ನಮ್ಮ ಸಂಪನ್ಮೂಲಗಳ ಅಪವ್ಯಯಕ್ಕೆ ಇದು ಕಾರಣವಾಗಿದೆ. ಆದ್ದರಿಂದ ಧೋತಿಗಳು ಮತ್ತು ಸೀರೆಗಳ ಪೂರ್ಣ ಉತ್ಪಾದನೆಯನ್ನೂ ಕೈಮಗ್ಗಗಳಿಗೆ ಕಾದಿರಿಸಿ ಮಿಲ್ಲುಗಳು ಕೆಲವು ಅಗತ್ಯ ವಸ್ತುಗಳನ್ನು ಮಾತ್ರ ಉತ್ಪಾದಿಸುವಂತೆ ಮಿತಗೊಳಿಸುವ ದಿಟ್ಟ ನಿರ್ಧಾರ ಕೈಗೊಳ್ಳಬೇಕೆಂದು ನಾನು ಒತ್ತಾಯಪಡಿಸುತ್ತೇನೆ. ಇಂತಹ ಕ್ರಮದಿಂದ ಬಡವರ್ಗದ ಜನರಿಗೆ ಹೆಚ್ಚಿನ ಉದ್ಯೋಗಾವಕಾಶ ದೊರಕಿ ಅವರಿಗೆ ಈಗಾಗಿರುವ ಅನ್ಯಾಯವನ್ನು ಸರಿಪಡಿಸಲು ಸಾಧ್ಯವಾಗುತ್ತದೆ. ಜೊತೆಗೆ ಜನಸಾಮಾನ್ಯರಿಂದ ಅತಿ ಹೆಚ್ಚಿನ ಪ್ರಮಾಣದಲ್ಲಿ ಬೇಡಿಕೆ ಇರುವ ಬಟ್ಟೆಗಳನ್ನು ಒದಗಿಸಲು ಸಾಧ್ಯವಾಗುತ್ತದೆ.

ಕಲ್ಲಿದ್ದಲಿನ ವ್ಯಾಪಾರಿಗಳು ಕಲ್ಲಿದ್ದಲು ಗಣಿಗಳ ರಾಷ್ಟ್ರೀಕರಣವಾದನಂತರ ಉಂಟಾದ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಕಲ್ಲಿದ್ದಲು ಮತ್ತು ಮನೆಗಳಲ್ಲಿ ಉಪಯೋಗಿಸುವ ಕಲ್ಲಿದ್ದಲಿನ ಕಿಟ್ಟದ ಬೆಲೆಯನ್ನು ಹೆಚ್ಚಿಸಿದರು. ಈ ಬೆಲೆ ಹೆಚ್ಚಲು ಮಧ್ಯವರ್ತಿಗಳೇ ಕಾರಣ. ಸರ್ಕಾರವಾಗಲಿ ಅಥವಾ ಕಲ್ಲಿದ್ದಲು ಗಣಿಗಳ ಆಡಳಿತ ವ್ಯವಸ್ಥೆಯವರಾಗಲಿ ಕಾರಣರಲ್ಲ. ದೇಶದ ಒಳಗೆ ಕಲ್ಲಿದ್ದಲಿನ ಕಿಟ್ಟದ ಅನಧಿಕೃತ ಸಾಗಣಿಕೆಯೂ ನಡೆಯುತ್ತಿದೆ. ಒಟ್ಟು ಉತ್ಪಾದನೆಯಲ್ಲಿ ಶೇ. 97ರಷ್ಟು ಭಾರಿ ಬಳಕೆದಾರರಿಗೆ ಹೋಗುವುದರಿಂದ ಮನೆಗಳಲ್ಲಿ ಬಳಸುವವರ ಸಂಖ್ಯೆ ಕೇವಲ ಶೇ. [illegible]ರಷ್ಟು.

(ಶ್ರೀ ಡಿ. ದೇವರಾಜ್ ಅರಸ್)

ಇವರಿಗೆ ನ್ಯಾಯವಾದ ಹಂಚಿಕೆಯನ್ನು ವ್ಯವಸ್ಥೆ ಮಾಡಲು ಕಲಿದ್ದಲು ಮತ್ತು ಕಿಟ್ಟದ ಬಟ್ಟೆ ಹಾಗೂ ಚಿಲ್ಲರೆ ವ್ಯಾಪಾರವನ್ನು ಕೇಂದ್ರ ಸರ್ಕಾರವೇ ವಹಿಸಿಕೊಳ್ಳಲು ಉದ್ದೇಶಿಸಿದೆ. ಈ ಕ್ರಮಕ್ಕೆ ರಾಜ್ಯಸರ್ಕಾರ ಬೆಂಬಲನೀಡಿ, ಅದನ್ನು ಪರಿಣಾಮಕಾರಿಯಾಗಿ ಕಾರ್ಯಗತ ಮಾಡಲು ಎಲ್ಲ ಯತ್ನ ಮಾಡುತ್ತದೆ.

ಇದೆಲ್ಲ ಹಂಚಿಕೆ ಮತ್ತು ಬೇಡಿಕೆ ವ್ಯವಸ್ಥೆಗೆ ಸಂಬಂಧಿಸಿದ ವಿಚಾರವಾಯಿತು. ಉತ್ಪಾದನೆಗೆ ಸಂಬಂಧಿಸಿದ ವಿಚಾರಗಳಿಗೆ ಯೋಜನಾ ಕಾರ್ಯಕ್ರಮಗಳು ಉತ್ತರ ನೀಡುತ್ತವೆ. ಈ ಕಾರ್ಯಕ್ರಮಗಳ ಪ್ರಕಾರ ಹೆಚ್ಚುತ್ತಿರುವ ಬೇಡಿಕೆಗಳಿಗೆ ಅನುಸಾರವಾಗಿ ಬಳಕೆ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಲಾಗುವುದು. ಮುಖ್ಯವಾಗಿ ಆಹಾರಧಾನ್ಯ, ಎಣ್ಣೆಬೀಜ ಮತ್ತು ಸಕ್ಕರೆ ಇವುಗಳ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಲಾಗುವುದು. ನಾಲ್ಕನೇ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷವಾದ ಪ್ರಸ್ತುತ ವರ್ಷದಲ್ಲಿ ಇದಕ್ಕಾಗಿ ಸಾಕಷ್ಟು ವ್ಯವಸ್ಥೆ ಮಾಡಲಾಗಿದೆ. ಇದೇ ರೀತಿ ರಾಜ್ಯದ ಐದನೇ ಯೋಜನೆಯಲ್ಲೂ ಸಾಕಷ್ಟು ಅವಕಾಶಗಳನ್ನು ಒದಗಿಸಲಾಗುವುದು ವಿಶೇಷವಾಗಿ ಶೀಘ್ರದಲ್ಲೇ ಪ್ರತಿಫಲ ಕೊಟ್ಟು ಉತ್ಪಾದನೆ ಹೆಚ್ಚಿಸುವಂತಹ ನೀರಾವರಿ ಯೋಜನೆಗಳನ್ನು ತ್ವರಿತಗೊಳಿಸಲು ಎಲ್ಲ ಯತ್ನ ಮಾಡುತ್ತೇವೆ. ರಾಜ್ಯದಲ್ಲಿ ಇರುವ ನೀರಾವರಿ ಹಾಗೂ ವಿದ್ಯುತ್ ಸಂಪನ್ಮೂಲಗಳನ್ನೆಲ್ಲಾ ಪೂರ್ಣವಾಗಿ ಬಳಸಿಕೊಳ್ಳಲಾಗುವುದು. ಘಟಪ್ರಭಾ, ಮಲಪ್ರಭಾ, ಕೃಷ್ಣಮೇಲ್ದಂಡೆ, ಹೇಮಾವತಿ, ಕಬಿನಿ ಮತ್ತು ಹಾರಂಗಿ ನೀರಾವರಿ ಯೋಜನೆಗಳು ಪೂರ್ಣವಾದರೆ ನಮ್ಮ ರಾಜ್ಯದಲ್ಲ ವ್ಯವಸಾಯ ಉತ್ಪಾದನೆ ಇನ್ನೂ 20 ಲಕ್ಷ ಟನ್ನಿನಷ್ಟು ಹೆಚ್ಚುತ್ತದೆ. ಅದರಲ್ಲಿ ಬಹುಭಾಗ ಆಹಾರಧಾನ್ಯ, ಕಬ್ಬು, ಹತ್ತಿ ಮತ್ತು ಎಣ್ಣೆ ಬೀಜಗಳು. ಕಾಳೀ ನದಿ ವಿದ್ಯುತ್ ಯೋಜನೆ ಬೇಗ ಪೂರ್ಣವಾದಾಗ ಕೈಗಾರಿಕೆಗೆ ಉತ್ಪಾದನೆ ಅದರಲ್ಲೂ ಸಿಮೆಂಟ್, ಸಕ್ಕರೆ, ಬಟ್ಟೆ, ಮತ್ತಿತರ ಉತ್ಪಾದನೆ ಹೆಚ್ಚಳಕ್ಕ ಇರುವ ತೊಂದರೆ ನಿವಾರಣೆಯಾಗುತ್ತದೆ.

ರಾಷ್ಟ್ರೀಯ ನೀತಿಯ ಚೌಕಟ್ಟಿನಲ್ಲಿ ರಾಜ್ಯ ಸರ್ಕಾರದ ಬೆಲೆ ನೀತಿಯ ಮುಖ್ಯ ಅಂಶಗಳನ್ನು ವಿವರಿಸಲು ಯತ್ನಿಸಿದ್ದೇನೆ. ಅದರಲ್ಲಿ ಬಹುಸಂಖ್ಯಾತರಿಗೆ ಅತಿ ಪ್ರಮುಖವಾದ ವಸ್ತುಗಳ ಬೆಲೆಯ ಪ್ರವೃತ್ತಿಯನ್ನು ಮಾತ್ರ ಪ್ರಸ್ತಾಪಿಸಿದ್ದೇನೆ. ಯಾವುದೇ ಬೆಲೆಯ ನೀತಿ ಯಶಸ್ವಿಯಾಗಲು ಅಗತ್ಯವಾದ ಪ್ರಮುಖಾಂಶಗಳನ್ನು ಸೂಚಿಸಿ ನನ್ನ ಹೇಳಿಕೆಯನ್ನು ಮುಗಿಸುತ್ತೇನೆ. ಅದೇನೆಂದರೆ, ಬೆಲೆಗಳು, ವೇತನಗಳು ಮತ್ತು ವರಮಾನಗಳಲ್ಲಿ ಸೂಕ್ತವಾದ ಹೊಂದಾಣಿಕೆ ಇಲ್ಲದಿದ್ದರೆ ಬೆಲೆಗಳನ್ನು ಹತೋಟಿಯಲ್ಲಿಡುವುದು ಅಸಾಧ್ಯ. ಆದ್ದರಿಂದ ಕೇಂದ್ರ ಸರ್ಕಾರ ಸೂಕ್ತವಾದ ಒಂದು ವರಮಾನ ನೀತಿಯನ್ನು ರೂಪಿಸಬೇಕೆಂದು ಸೂಚಿಸ ಬಯಸುತ್ತೇನೆ. ಐದನೇ ಪಂಚವಾರ್ಷಿಕ ಯೋಜನೆ ಪ್ರಸ್ತಾವನಾ ಪತ್ರದಲ್ಲಿ ಈ ರೀತಿಯ ಅವಶ್ಯಕತೆಯನ್ನು ಮನಗಂಡಿರುವುದು ನನಗೆ ಸಂತೋಷವನ್ನುಂಟು ಮಾಡಿದೆ. ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಇತ್ತೀಚಿನ ಸಭೆಯೊಂದರಲ್ಲಿ ಬೆಲೆಗಳು ಮತ್ತು ವರಮಾನ ಮಂಡಲಿಯೊಂದನ್ನು ರಚಿಸಬೇಕೆಂದು ನಾನು ಸಲಹೆಮಾಡಿದ್ದೇನೆ. ಆ ಸಲಹೆಯನ್ನು ಮತ್ತೆ ಈ ಸಭೆಯಲ್ಲಿ ಪ್ರತಿಪಾದಿಸಲು ಇಚ್ಛೆಪಡುತ್ತೇನೆ. ಅಭಿವೃದ್ಧಿ ಯತ್ನಗಳು ಸಹನೀಯವಾದ ಬೆಲೆ ಏರಿಕೆಯ ಮಿತಿಯೊಳಗೆ ಮುಂದುವರಿಸಲು ಸಾಧ್ಯವಾಗುವಂತೆ ಕಾರ್ಮಿಕರು, ಉತ್ಪಾದಕರು ಮತ್ತು ಎಲ್ಲ ಜನತೆ ಇಂತಹ ಬೆಲೆ ಹಾಗೂ ವರಮಾನ ನೀತಿಗೆ ಬದ್ಧರಾಗಿರಬೇಕು.

ಬೆಲೆಗಳ ವಿಚಾರದಲ್ಲಿ ಸರ್ಕಾರದ ನೀತಿ ಯಶಸ್ವಿಯಾಗಲು ದೀರ್ಘಾವಧಿ ಹಾಗೂ ಅಲ್ಪಾವಧಿಯ ಕ್ರಮಗಳ ಸಮ್ಮಿಳನವಿರಬೇಕು. ನಾನು ಈಗಾಗಲೇ ವಿವರಿಸಿರುವಂತೆ ಅಂತಹ ಕ್ರಮಗಳನ್ನು ಸರ್ಕಾರ ಕಾರ್ಯಗತ ಮಾಡುತ್ತಿದೆ. ಕೇಂದ್ರ ಸರ್ಕಾರದ ಹಣಕಾಸು ನೀತಿಗಳು ಪರಿಣಾಮಕಾರಿಯಾದ ಬೆಲೆ ನೀತಿಯ ಮುಖ್ಯ ಅಂಶಗಳು. ಇದನ್ನು ಕೇಂದ್ರ ಸರ್ಕಾರವೇ ನಿರ್ವಹಿಸುವುದಾದರೂ ರಾಜ್ಯ ಸರ್ಕಾರದ ಬೆಂಬಲ ಮತ್ತು ಪೂರಕ ಕ್ರಮಗಳಿಂದ ಬೆಲೆಗಳನ್ನು ತಡೆಹಿಡಿಯಲು ಉಪಯೋಗಿಸಲಾಗುತ್ತವೆ. ಬೆಲೆ ನೀತಿಯ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೂರ್ಣ ಸಹಕಾರದಿಂದ ಕೆಲಸ ಮಾಡುತ್ತಿವೆ. ನಮ್ಮ ಹೊಣೆಗಾರಿಕೆಗನುಸಾರವಾಗಿ ವಾಣಿಜ್ಯ ಮತ್ತು ಹಂಚಿಕೆಯಲ್ಲಿ ಸಾರ್ವಜನಿಕ ಕ್ಷೇತ್ರವನ್ನು ಗಣನೀಯವಾಗಿ ವಿಸ್ತರಿಸಿ ಖಾಸಗೀ ವ್ಯಾಪಾರಿಗಳಿಂದ ಬಳಕೆದಾರರ ಶೋಷಣೆಯನ್ನು ತಪ್ಪಿಸುವ ಪರಿಣಾಮಕಾರಿಯಾದ ಸರ್ಕಾರಿ ಹಂಚಿಕೆಯ ವ್ಯವಸ್ಥೆಯನ್ನು ರೂಪಿಸುತ್ತೇವೆ. ಸಮಾಜವಾದೀ ರಾಜ್ಯದಲ್ಲಿ ಬೆಲೆಗಳ ಸ್ಥಿಮಿತ ಸಾಧಿಸುವುದು ಹಾಗೂ ಉಳಿಸಿಕೊಳ್ಳುವುದು ಸುಲಭ. ಏಕೆಂದರೆ, ಸಮಾಜವಾದಿ ನೀತಿ ಪ್ರಕಾರ ಸರ್ಕಾರದ ಎಲ್ಲ ಕಾರ್ಯಕ್ರಮಗಳೂ ಜನ ಸಾಮಾನ್ಯರ ಹಿತ ರಕ್ಷಣೆಯಿಂದಲೇ ಪ್ರೇರೇಪಿತವಾಗಿರುತ್ತವೆ. ಸಮಾಜವಾದೀ ನೀತಿಯ ಮೂಲಕ ರಾಜ್ಯದಲ್ಲಿ ಅಭಿವೃದ್ಧಿಯ ವೇಗವನ್ನು ತ್ವರಿತಗೊಳಿಸುತ್ತೇವೆಂದೂ,

ಜನತೆಯ ಜೀವನ ಮಟ್ಟವನ್ನು ಸುಧಾರಿಸಲು ಎಲ್ಲ ಕ್ರಮ ಕೈಗೊಳ್ಳುತ್ತೇವೆಂದೂ ನಾವು ಭರವಸೆ ಕೊಟ್ಟಿದ್ದೇವೆ, ಈ ಒಂದು ವರ್ಷದ ಅವಧಿಯಲ್ಲಿ ಅತಿ ಪ್ರಮುಖವಾದ ಅನೇಕ ನಿರ್ಧಾರಗಳನ್ನು ಕೈಗೊಂಡಿದ್ದೇವೆ. ಹತ್ತಿ ವ್ಯಾಪಾರ, ಕಲ್ಲಿದ್ದಲು ಗಣಿಗಳು ಮತ್ತು ನೂಲಿನ ಹಂಚಿಕೆಯನ್ನು ರಾಷ್ಟ್ರೀಕರಣ ಮಾಡಲಾಗಿದೆ. ಭತ್ತ ಮತ್ತು ಗೋಧಿಯ ಸಗಟು ವ್ಯಾಪಾರವನ್ನು ರಾಷ್ಟ್ರೀಕರಣ ಮಾಡಲು ನಿರ್ಧರಿಸಿದೆ. ದುರ್ಬಲವರ್ಗದವರಿಗಾಗಿ ಅಧಿಕ ಸಂಖ್ಯೆಯಲ್ಲಿ ಮನೆ ಕಟ್ಟುವ ನಿವೇಶನಗಳನ್ನು ಹಂಚಲಾಗಿದೆ. ಅಲ್ಲದೆ ಗ್ರಾಮಾಂತರದಲ್ಲಿ ಗೃಹ ವಸತಿ ಕಾರ್ಯಕ್ರಮವಂದನ್ನು ಈ ವರ್ಷದ ಯೋಜನೆಯಲ್ಲಿ ಸೇರಿಸಲಾಗಿದೆ. ಬಡತನ, ನಿರುದ್ಯೋಗ ಮತ್ತು ಪೂರ್ಣ ಉದ್ಯೋಗ ಇಲ್ಲದೇ ಇರುವ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಅರ್ಥವ್ಯವಸ್ಥೆಯ ಅತಿ ಮುಖ್ಯ ಕ್ಷೇತ್ರಗಳನ್ನು ಸರ್ಕಾರ ವಹಿಸಿಕೊಂಡಿದೆ. ಜನ ಸಾಮಾನ್ಯರ ಏಳಿಗೆಗಾಗಿ ಸರ್ಕಾರ ಎಲ್ಲ ಕ್ರಮ ಕೈಗೊಳ್ಳುವುದೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡಬಯಸುತ್ತೇವೆ. ಜನತೆಯ ಮತ್ತು ಅವರ ಚುನಾಯಿತ ಪ್ರತಿನಿಧಿಗಳ ಸಹಕಾರದಿಂದ ನಮ್ಮ ಸಮಾಜವಾದಿ ನೀತಿಗಳು ಯಶಸ್ವಿಯಾಗಿ ಕಾರ್ಯಗತವಾಗುವುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಿಮ್ಮ ಮಂತ್ರಿಗಳು ಯಾವ ಸೀರೆ ಉಟ್ಟುಕೊಂಡಿದ್ದಾರೆ ?

ಶ್ರೀ ಡಿ. ದೇವರಾಜ್ ಅರಸ್.—ರೇಷ್ಮೆ ಸೀರೆ ಇರಬಹುದು. ಕೊನೆಯದಾಗಿ ಒಂದು ಮಾತು. ಈ ಸಾಲಿನಲ್ಲಿ ನಮ್ಮ ದೇಶದಲ್ಲಿ ಗೋಧಿಯ ಸಗಟು ವ್ಯಾಪಾರವನ್ನು (ಹೋಲ್ ಸೇಲ್ ಟ್ರೇಡ್) ಸರ್ಕಾರ ತೆಗೆದುಕೊಳ್ಳಬೇಕೆಂದು ನಮ್ಮ ಅಭಿಪ್ರಾಯ ಇದೆ. ಆ ವಿಷಯವನ್ನು ಈ ಸಭೆಯಲ್ಲಿ ಇವತ್ತು ತಿಳಿಸಲು ಇಚ್ಛೆಪಡುತ್ತೇನೆ. ಏನೇ ಆದರೂ ನಾವು ಗೋಧಿಯನ್ನು ತೆಗೆದುಕೊಳ್ಳಲೇ ಬೇಕೆಂದು ಕೇಂದ್ರ ಸರ್ಕಾರ ನಮಗೆ ಕಡ್ಡಾಯಮಾಡಲಿಲ್ಲ. ಇಲ್ಲಿ ಕೆಲವು ಕಡೆ ಹೆಚ್ಚಿಗೆ ಗೋಧಿ ಬೆಳೆಯುವ ಪ್ರದೇಶಗಳಿವೆ. ಇನ್ನು ಕೆಲವು ಪ್ರದೇಶಗಳಲ್ಲಿ ಗೋಧಿ ಬೆಳೆಯುತಕ್ಕದ್ದು ಬಹಳ ಕಡಿಮೆ ಇದೆ. ಗೋಧಿ ಬೆಳೆ ಬೆಳಗಾವಿ, ಧಾರವಾಡ, ಗುಲ್ಬರ್ಗಾ, ಬಿಜಾಪುರ ಮತ್ತು ರಾಯಚೂರು—ಈ ಭಾಗಗಳಲ್ಲಿ ಬಹಳ ಕಡಿಮೆಯಾಗಿರುವುದರಿಂದ, ನಮಗೆ ಅದರ ಉತ್ಪಾದನೆಯೂ ಕಡಿಮೆಯಾಗಿದೆ. ಏನೇ ಆದರೂ ಈ ಸಾಲಿ ಗೋಧಿ ಸಗಟು ವ್ಯಾಪಾರವನ್ನು ತೆಗೆದುಕೊಳ್ಳುವುದು ಸೂಕ್ತವೆಂದು ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಇದರಿಂದ ನಮಗೆ ಬಹಳ ಗೋಧಿ ಬರುತ್ತದೆಂದಲ್ಲ ಅಲ್ಪಸ್ವಲ್ಪ ಬಂದರೂ ಮುಂದೆ ಬತ್ತದ ವ್ಯಾಪಾರವನ್ನು ಕೈಗೆ ತೆಗೆದುಕೊಳ್ಳುವುದು ಹೆಚ್ಚಾಗಿದೆ. ಇದರಿಂದ ಸ್ವಲ್ಪ ಅನುಭವ ಬಂದೀತೆಂಬ ದೃಷ್ಟಿಯಿಂದ ಅದನ್ನು ಸರ್ಕಾರದ ಕ್ಷೇತ್ರದಲ್ಲಿ ಜಾರಿಗೆ ತೆಗೆದುಕೊಂಡು ಬರುತ್ತಿದ್ದೇವೆ. ಇಷ್ಟೊಂದು ದೀರ್ಘವಾದ ಹೇಳಿಕೆಯನ್ನು ಕೊಡುವುದಕ್ಕೆ ಅಧ್ಯಕ್ಷರು ಹಾಗೂ ಸದಸ್ಯರು ಅವಕಾಶವನ್ನು ಕೊಟ್ಟಿದ್ದಕ್ಕೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಸುಮಾರು 16 ಪುಟಗಳುಳ್ಳ ಭಾಷಣ ಮಾಡಿದ್ದಾರೆ. ಸರ್ಕಾರದ ನೀತಿ ನಿಯಮ, ಬೆಲೆಗಳ ಏರಿಕೆಯನ್ನು ಇಳಿಸುವ ಬಗ್ಗೆ ಜನಗಳಿಗೆಲ್ಲಾ ತಿಳುವಳಿಕೆ ಕೊಡುವುದು. ಹಿಂದೆ ಹೇಳಿರುವಂಥಾದ್ದನ್ನೆಲ್ಲಾ ಸೇರಿಸಿ ಈ ಒಂದು ಹೇಳಿಕೆಯನ್ನು ಇವರು ಇಲ್ಲಿ ಕೊಟ್ಟಿದ್ದಾರೆಂದು ನಾನು ತಿಳಿಯುತ್ತೇನೆ. ಈ 16 ಪುಟಗಳ ಒಂದು ಭಾಷಣವನ್ನು ತಯಾರುಮಾಡುವುದಕ್ಕೆ ಮೂರು ಜನ ಅಧಿಕಾರಿಗಳು ಸೇರಿದ್ದಾರೆ. ಅವರೆಲ್ಲರೂ ಸೇರಿಕೊಂಡು ಈ ಎಲ್ಲ ಅಂಕಿಅಂಶಗಳನ್ನು ತಯಾರುಮಾಡಿದ್ದಾರೆ.

ಉಪಾಧ್ಯಕ್ಷರು.- ಮೂರ ಜನರು ಇರಬಹುದು, ಅಥವಾ 6 ಜನರು ಇರಬಹುದು.

ಶ್ರೀ ವಾಟಾಳ್ ನಾಗರಾಜ್.—ಆದಿರಲಿ, ಇದು ಸರ್ಕಾರದ ಕೆಲಸ. ಆದ್ದರಿಂದ ಬಹಳ ಮೇಧಾವಿಗಳು ಯಾರುಇದ್ದಾರೋ ಅವರೆಲ್ಲರೂ ಸೇರಿಕೊಂಡು ಇದನ್ನು ಮಾಡಿದ್ದಾರೆ. ನಾನು ಈಗ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಅರಿಕೆಯನ್ನು ಮಾಡಿಕೊಳ್ಳುತ್ತೇನೆ. ಇದನ್ನು ಸಂಪೂರ್ಣವಾಗಿ ಇಲ್ಲಿ ಚರ್ಚೆಮಾಡುವುದಕ್ಕೆ ಅವಕಾಶ ಕೊಡಬೇಕು. ಅವರು ಈ ರೀತಿಯಾಗಿ ಹೇಳಿರುವುದರಿಂದ ಜನಗಳಿಗೆ ಒಂದು ರೀತಿ ಕನ್‌ಫ್ಯೂಷನ್ ತರುವುದಕ್ಕೆ ಅವಕಾಶವಾಗಿದೆ. ಕನಿಷ್ಠ ಪಕ್ಷ 3 ದಿನಗಳಾದರೂ ವಿರೋಧ ಪಕ್ಷದ 48 ಜನರೂ ಇದರ ಬಗ್ಗೆ ಮಾತನಾಡಬೇಕಾಗುತ್ತದೆ. ಇವರ ಒಂದು ಹೇಳಿಕೆಯನ್ನು ನಮ್ಮ ಕಡೆ ಬಹಳ ಜನರು ನಂಬುವುದಿಲ್ಲ. ಇವರು ಮಾಯಾಲೋಕವನ್ನು ಇಲ್ಲಿ ತೋರಿಸಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಇದು ನಮಗೆ ಅರ್ಥವಾಗಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅವರಿಗೆ ಅರ್ಥವಾಗದಿದ್ದರೆ ನಾವೇನು ಮಾಡಬೇಕು ?

ಶ್ರೀ ಎಚ್. ಎಸ್. ಸಿದ್ದಪ್ಪ.—ನಮ್ಮ ವಿರೋಧ ಪಕ್ಷದ ಜನರು 48 ಅಲ್ಲ, 46 ಜನ ಸದಸ್ಯರೂ ಇದರ ಬಗ್ಗೆ ಮಾತನಾಡಬೇಕು.

3-30 P.M.

ಶ್ರೀ ವಾಟಾಳ್ ನಾಗರಾಜ್.—ಈಗ ತಾನೆ ಮಾನ್ಯ ಮುಖ್ಯಮಂತ್ರಿಗಳು 16 ಪುಟದ ಭಾಷಣ ಓದಿದ್ದಾರೆ. ನಮಗೆ ಇದರ ಬಗ್ಗೆ ಟೀಕೆ ಟಿಪ್ಪಣಿ ಮಾಡುವುದಕ್ಕೆ ಅವಕಾಶ ಬೇಡವೇ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಆಹಾರದ ನೀತಿಯ ಬಗ್ಗೆ ಮತ್ತು ಧಾರಣವಾಸಿಗಳ ಏರಿಳಿತದ ಬಗ್ಗೆ ಒಂದು ಸುಧೀರ್ಘವಾದ ಭಾಷಣವನ್ನು ಮಾಡಿದ್ದಾರೆ. ಹಾಗೂ ಆ ಧಾರಣವಾಸಿಗಳು ಏರುವುದನ್ನು ತಡೆಗಟ್ಟತಕ್ಕ ಬಗ್ಗೆ ಕೈಗೊಳ್ಳತಕ್ಕ ಕ್ರಮಗಳ ಸೂಚನೆ ಗಳನ್ನೂ ಮಾಡಿದ್ದಾರೆ. ಆದರೆ ಈ ವಿಚಾರದಲ್ಲಿ ಪ್ರತಿ ಸದಸ್ಯರೂ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಒಂದು ಅವಕಾಶಬೇಕು. ಆದುದರಿಂದ ಅಧ್ಯಕ್ಷರು ಇದರ ಚರ್ಚೆಗೆ ಒಂದೆರಡು ದಿನಗಳ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

Sri C. M. ARUMUGHAM.—The Hon. Chief Minister has collected information regarding the prices in not only the State, but also in other parts of India and U.K......

Mr. DEPUTY SPEAKER.—You want a discussion. Is it not?

Sri C. M. ARUMUGHAM.—I am not competent to put it in a single word. That is my difficulty. You will have to kindly bear with me for some time and hear what I want to say.

Mr. DEPUTY SPEAKER.—The Rule is very clear. I will read the relevant Rule No. 306. "A statement may be made by a Minister on a matter of public importance with the consent of the Speaker, but no question shall be asked at the time the statement is made." The Hon. Leader of the Opposition has demanded a discussion; if the Government is willing it can be done. Now, further time may not be utilised over this.

Sri C. M. ARUMUGHAM.—I appeal to the Government through you to agree for a discussion on this.

ಶ್ರೀ ಕೆ. ಪ್ರಭಾಕರ್.—ನಮ್ಮ ಮುಖ್ಯಮಂತ್ರಿಗಳು ನ್ಯಾಷನಲ್ ಡೆವಲಪ್‌ಮೆಂಟ್ ಕಮಿಷನ್ನಿಗೆ ಹೋಗಿ ನಮ್ಮ ದೇಶಕ್ಕೆ ಅನುಕೂಲವಾಗತಕ್ಕ ಕೆಲಸಗಳನ್ನು ಮಾಡುವುದಕ್ಕೆ ದೇವರು ಅವರಿಗೆ ಅವಕಾಶವನ್ನು ಕೊಟ್ಟಿದ್ದಾನೆ. ಅವರು ಈ ಸಭೆಯಲ್ಲಿ ಒಂದು ಸುಧೀರ್ಘವಾದ ಭಾಷಣವನ್ನು ಮಾಡಿ ಅದರ ಬಗ್ಗೆ ಸದಸ್ಯರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಒಂದು ಅವಕಾಶಮಾಡಿ ಕೊಟ್ಟಿದ್ದಾರೆ. ಅವರು ಅಂಥಾ ಒಂದು ಭಾಷಣವನ್ನು ಮಾಡದೆ ಇದ್ದಿದ್ದರೆ ನಮಗೆ ಇಷ್ಟೆಲ್ಲಾ ವಿಷಯಗಳು ತಿಳಿಯುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಅದಕ್ಕಾಗಿ ನಾವು ಅವರ ಭಾಷಣದ ಬಗ್ಗೆ ಬಹಳ ಸಂತೋಷಪಡಬೇಕಾಗಿದೆ.

Sri H. S. SIDDAPPA.—He is making a discussion on the statement of the Minister.

ಶ್ರೀ ಕೆ. ಪ್ರಭಾಕರ್.—ಅವರಿಗೆ ಒಂದು ಕಾಂಪ್ಲಿಮೆಂಟ್ಸನ್ನು ಕೊಡುವುದಕ್ಕೂ ಅವಕಾಶ ವಿಲ್ಲವೇ ?

ಉಪಾಧ್ಯಕ್ಷರು.—ಅದಕ್ಕೆ ಬೇರೆ ಅವಕಾಶವಿದೆ, ಈಗಲ್ಲ.

Sri D. DEVARAJ URS.—He asked for a discussion. What is it you want? Do you want a discussion?

Sri K. PRABHAKAR.—I too want a discussion in the matter.

Sri .D DEVARAJ URS.—I am glad almost all the hon. Members want a discussion on my statement. I am certainly happy to agree to this, provided the Hon. Speaker spares a day or two according to the convenience of the House.

Mr. DEPUTY SPEAKER.—We will fix a time for it. We will go to the next item.

Allowing discussion on the Report of the P.A.C. and P.S.C.

Sri C. M. ARUMUGHAM.—Sir, the Chairman has submitted the report of the Public Accounts Committee but a copy has not been given to us so far. It is also necessary that this report should be discussed in this House.

Mr. DEPUTY SPEAKER.—The copies of the report are ready and will be circulated ; you will have a copy immediately.

Sri H. D. DEVE GOWDA.—The Public Service Commission's Report has been presented. I hope Government will agree for a discussion.

Sri D. DEVARAJ URS.—If they want, they can have a discussion.

Allowing personal explanation to Sri D. Poosalingam

Sri D. POOSALINGAM (Bharathinagar).—Sir, yesterday, hon. Member Sri Sriramulu has made some allegations against me on the floor of the House. I was not present. You were kind enough to say that whenever a Member made an allegation against another Member on the basis of press reports, he has to take the full responsibility for it. Now, I request you, Sir, to direct the Member to substantiate his statement. I am prepared to undergo any enquiry. If it is proved, I am prepared to resign even to-morrow ; if it is not proved, I want the Member to withdraw the charge and also unconditionally apologise.

Sri B, SUBBAIAH SETTY.—Yesterday, the matter was decided in this Assembly...

Sri S. BANGARAPPA.—It was not decided yesterday.

Mr. DEPUTY SPEAKER.—Mr. Bangarappa, is this the way ? If both of you speak, I cannot hear him.

Sri B. SUBBAIAH SETTY.—May I know the Rules under which Mr. Poosalingam can raise the issue ? He has not fulfilled the conditions under Rules 177, 178 and 179. Therefore, he should not be allowed to raise this issue and waste the time of this Assembly.

Mr. DEPUTY SPEAKER.—I was about to tell you that he is entitled to make a personal explanation. Therefore, it is not out of order.

Sri A. A. DESAI.—Under what Rule ?

Mr. DEPUTY SPEAKER.—As per Rule 293, a Member may, with the permission of the Speaker, make a personal explanation although there is no question before the Assembly, but in this case, no debatable matter may be brought forward, and no debate shall arise.

Yesterday only there was a reference to particular Member who was not present. Therefore, I am not in a position to uphold the Point of Order which the hon. Member has raised.

About the other things, Rule 177 and 178 referred by Mr. Subbiah Setty, already there is a privillege motion tabled by Sri C. M. Armugam. It reached me at 1.50 so late as that. It has not been possible for me to examine it. We will examine it as early as possible. Question of privilege is a very important matter and it nas got to be examined in all its details and scrutinised. Let not Mr. Armugam be anxious to dilate upon it at this stage.

Sri C. M. ARUMUGHAM.—No, Sir. I only got up to say that I have tabled a motion for your consent. You can take your own time to scrutinise it and examine it.

ಶ್ರೀ ಎಸ್. ಬಂಗಾರಪ್ಪ.—ಈಗ ಯಾರಮೇಲೆ ಅಪಾದನೆ ಮಾಡಿರುವರೋ ಅವರೂ ಕೂಡ ಛಾಲೆಂಜ್ ಮಾಡಿದ್ದಾರೆ. ನಿನ್ನೆ ಹೇಳಿರುವುದನ್ನು ಸಬಸ್ಟ್ಯಾನಸಿಯೇಟ್ ಮಾಡಬೇಕೆಂದು ತಿಳಿಸಿದ್ದಾರೆ. ರುಜುವಾತು ಮಾಡಿದರೆ ತಾವು ರಾಜೀನಾಮೆ ಕೊಡುವುದಾಗಿ ಹೇಳಿದ್ದಾರೆ. ರುಜುವಾತು ಮಾಡದಿದ್ದರೆ ಅಪಾದನೆ ಮಾಡಿದವರು ಅಪಾಲಜಿ ಕೇಳಬೇಕೆಂದು ಹೇಳಿರುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಈಗ ಪ್ರಿವಿಲೇಜ್ ಮೋಷನ್ ಅಧ್ಯಕ್ಷರ ಮುಂದಿದೆ, ಶ್ರೀರಾಮುಲುರವರ ಹೇಳಿಕೆ ಇದೆ. ಪರ್ಸನಲ್ ಎಕ್ಸಪ್ಲನೇಷನ್ ಕೊಟ್ಟಿದ್ದಾರೆ. ಅಧ್ಯಕ್ಷರು ಪ್ರಿವಿಲೇಜ್ ಮೋಷನ್ ಪರೀಕ್ಷೆಮಾಡಿ ಅವಕಾಶ ಕೊಟ್ಟಾಗ ಉಳಿದ ವಿಚಾರ ಹೇಳಬಹುದು.

ಶ್ರೀ ಎಸ್. ಬಂಗಾರಪ್ಪ.—ಶ್ರೀ ಪೂಸಲಿಂಗಂರವರು ಛಾಲೆಂಜ್ ಮಾಡಿರುವಾಗ ಶ್ರೀರಾಮುಲುರವರು ತಾವು ಸಬ್‌ಸ್ಟ್ಯಾನಷಿಯೇಟ್ ಮಾಡುವುದಾಗಿ ಹೇಳಲಿ.

Mr. DEPUTY SPEAKER.—Please note that yesterday Mr. Poosalingam was not present in the House. His absence was felt and we wanted him to be present here. He is physically present now for making a personal explanation. Not only that, he has thrown a challenge. Is it not sufficiant ? The other matter, the privilege motion is here just now and it is being examined and scrutinised.

ಶ್ರೀ ಎಚ್. ಡಿ. ದೇವೇಗೌಡ.—ರೂಲಿಂಗ್ ಕೊಡುವ ಹಗ್ಗೆ ನನಗೆ ಕಾತುರತೆಯಿಲ್ಲ, ಕೊಡಬಹುದು. ನನ್ನ ಸಲಹೆಯೇನೆಂದರೆ ಪೂಸಲಿಂಗಂರವರು ಪರ್ಸನಲ್ ಎಕ್ಸಪ್ಲನೇಷನ್ ಕೊಟ್ಟರು. ಶ್ರೀರಾಮುಲುರವರು ತಾವು ಹೇಳಿದ್ದನ್ನು ವಿತಡ್ರಾ ಮಾಡಿಕೊಂಡರೆ ಒಂದೇ ಸಲ ಈ ವಿಷಯ ಮುಕ್ತಾಯವಾಗುವುದು. The matter will be ended once for all. ಚರ್ಚೆಗೆ ಅವಕಾಶ ಕೊಟ್ಟರೆ ಮತ್ತೆ ಬೆಳೆಯುತ್ತದೆ. I leave it to the House. If Mr. Sriramulu is prepared to wishdraw his remark, the matter ends there. Otherwise, let it take its own course.

Sri D. DEVARAJ URS.—I was not present in the House yesterday, nor have I had an opportunity of looking into the records. Please let us have some time. I do not know what the records contain.

Mr. DEPUTY SPEAKER.—I also mentioned something ; the Hon. Minister for Agriculture also said certain things. Both of us stand by what we have said. Beyond that how can I compel any body ?

Sri H. D. DEVE GOWDA.—The privilege motion is before you. You may examine the pros and cons and give a ruling.

Mr. DEPUTY SPEAKER.—We shall go to the next time *vix.* the discussion and voting of Demands for Grants. The hon. Member Sri Arumugham will speak on the Demand, 'Grants in aid Contributions to Locai Bodies and Housing.

BUDGET ESIMATES FOR 1973-74-DEMANDS FOR GRANTS

Demand No. 394 Grants in aid Contributions to Local Bodies and Housing (Debate Continued)

Sri C. M. ARUMUGHAM.—Mr. Deputy Speaker, Sir, the functions of the Municipal Abministration in the State need to be examined in the light of the orders and actions taken by the Government. We can understand the postponement of elections to the Municipalities in drought-affected areas like Gulbarga, Bidar, Bijapur and parts of Belgaum. But we are unable to understand why and for what reason the Government is hesitating to conduct elections to several Municipalities in other areas. These Municipalities come directly under the Deputy Commissioner of the District and over him there is the Divisional Commissioner. It is the responsibility of these two officers to coduct Municipal elections. How on earth these officers are devoting their time to conduct Municipal elections I connot understand. Is it because the Government is not having any confidence in the working of democracy ? If they feel that there must be democracy at the top level, they must agree to have democratic institutions at the bottom level also. In the past one year, though the term of office of several Municipalities has expired, no arrangement has been made to conduct elections thereto. Government has got one explanation, namely, that the delimitation of constituencies has not been completed. But they could conduct elections to those Municipalities where the constituencies have been demarcated. Appointing Administrators who are otherwise not qualified will naturally affect the interests of those living in the Municipal areas. For instance, take my Municipality *viz,* the Kolar Gold Field Municipality. Government appointed an Administator. The Tahsildar of Gulbarga who was upgraded as the Assistant Commissioner has been posted as the Administrator. He is yet to understand the working of the Municipality. Therefore, we on this side demand that Government should take immediate action for conducting elections to all the Municipalities to which they have appointed Administrators.

(SRI C. M. ARUMUGAM)

Most of the Municipalities are not able to fulfil the obligatory functions on account of financial difficulties. They are not able to carry out certain welfare measures which they are bound to do because they do not get m ch help from the Government. What they collect by way of octroi and taxes alone is not sufficient. Further, the Municipalities are not empower to stop a private car and see whether octroiable goods are being transported through it. We have raised this point and we have also written to the Deputy Commissioner in this behalf but we have not yet received any reply. In my area every prosperous merchant is having two cars, one for himself and another for bringing goods from Bangalore. This car is used for evading the taxes due to the Municipality. This was happening when we had a Council and it is now happening on a bigger scale during the regime of the Administrator. I do not know who drafted the present Municipalities Act and how it was passed. At any rate, it requires amendments so that the Municipal Councils will have more powers to plug the loopholes and they will be able to deal properly with tax evaders.

Yesterday I was not here when my friend Sri Puttaswamy, a senior member of this House and a former Minister, spoke. It appears he has a little objection to the Government Order dated 20th March 1973 which deals with the policy of the Government in the matter of allotment of houses. This order says that 'the houses constructed under the low income group housing scheme should be allotted as per the policy of the Government and that no two persons belonging to a caste should be allotted houses side by side'. Of course any progressive man in the country and more so the members of this House will definitely see that the whole Hindu society or Hinduism is based on the caste system. The people belonging to the upper class society are living in Jayanagar, Jayamahal Extension, Rajajinagar, Palace Orchads, etc. These are the areas meant exclusively for the upper class people and that is the reason why in the whole of the country there are two colonies : one is the upper class colony and the other one is the lower class colony *i. e.* the slums or cheris. It is impossible to abolish them except by law. Any amount of preaching and any amount of philosophy of Mahathma Gandhi and other top leadere cannot persuade this caste-ridden society to accept a low caste man as his neighbour.

4-00 P. M.

Therefore I welcome this rule, One may ask whether such a provision is there in the Constitution. I can tell this House that during the last 25 years nobody has bothered to implement the safeguards provided in the Constitution for the welfare of scheduled castes and scheduled tribes. The Government had all the power in all these 25 years and I want to know, what have they done to implement

the provisions in the Constitution. You had no heart to implement them and no mind to follow it and now you come and say that there is no provision in the constitution to provide for this sort of rules. In a growing society and in a country which is advancing, in a country which has been cursed with caste system, races and groups, it is very necessary that the Government should direct and indicate how these houses should be allotted. I want the Government to take census of Bangalore to know how many of the upper classes are having houses,in Jayanagar which is said to be the largest extension in South-East Asia, how many have houses. Will the Minister find out how many houses are owned by a single family. I can quote instances where a single man having houses in his name, his wife's name, children's name. This is how all these years the Housing Board has allotted houses without following any rules or procedure.

[MR. CHAIRMAN (SRI K. M. NAGANNA) IN THE CHAIR].

I know persons having two or three houses in Bangalore and in Hubli. They rent out their houses in Hubli and live here So far there is not vene one per cent reservation for any of these communities. It is all general allotment and one section of officers and their families who are allotted and not the poor men. Even urban areas are growing like rural areas. We know that in villages if a river flows from west to east, the upper class colony will be on the western side and the scheduled castes' colony will be in the eastern side because these scheduled caste people must drink the water let out by the upper class people. We must break such a system, remove it from roots. How to do it ? This is the only answer. Therefore, with all respects and apologies to hon. member Sri Puttatwamy, I wish to say that such a rule must be there and two houses should not be allowed to a same community. Whoever might be the chairman of the Board, after all he is also a human being and he is brougt up in the same old atmosphere, custom and manners and we cannot expect him to attempt all the reforms by himself. I think such a rule will certainly result in the abolishing of cheris and colonies.

Some reservations for certain communities are contemplated. The Government wants to direct that in future the Mysore Housing Board should make reservations in all allotments in a particular manner. This applies to Hubli also. Hubli is fast growing and developing. This Vidhana Soudha was costructed at a cost of 1.75 crores. Immediately after this was constructed there was a demand for an enquiry and there was an enquiry and the first of the report was published but the second part printed was not published. In Hubli the cost of construction of Medical College alone comes to 3 crores. The Housing Board is constructing thousands of houses there. Therefore Hubli is also included. The order says that 5 per cent of the houses constructed should be allotted to nomadics and semi nomadic tribes. It may not be possible for those people to purchase houses on lease because they have

(SRI C. M. ARUMUGAM)

no resources and they are in the streets going about with their belongings and dogs. How can they purchase ? If possible I wish they are given houses free of cost. Next 17 per cent of houses are reserved for scheduled castes people. In this connection I want to tell the House what happened when I asked one minister who was in charge of the Housing Board some time ago. I casually met him and represented to him that the Housing Board which constructs thousands of houses while makes allotmentt does not give any house to the schednled castes, and why no prevision was made to that effect, He said "do you want reservation even in the allotment of houses". As if other provisions of the cons itution were implemented he put this question. Now at least attempt is made to practice it and I hope next year the Hon. Minister will come before the House and tell us how many houses were constructed by the Housing Board and how many were allotted to the Scheduled Castes.

Sri B. BASAVALINGAPPA.—We will make a statement.

Sri C. M. ARUMUGHAM.—For the first time reservation is made not only for the scheduled castes but also for other minorities like Muslims, Christians. People belonging to these communities were not considered in allotment of house constructed by the Housing Board.

Sir, about this City Improvement Trust Board I want to say that they have distributed thousands of sites without following any proper procedure. They were giving sites only to big officers. Sir, the sites in Bangalore are costlier than those in U. K. If the Government is really meant to help the poor they should allot sites at such cost which could be easily purchased by poor and common man.

Sri B. BASAVALINGAPPA.—Sir, if the hon. Member looks into the present rules in regard to allotment of sites by C. I. T. B. he will be satisfied.

Sri C. M. ARUMUGHAM.—Sir, while they form new layouts they must allot sites to poor people and the cost of which should be such that even a common man or a poor man can purchase and construct houses in Bangalore. Sir if this is not done, in course of time Bangalore will become the city of only upper class people. Sir, this allotmeut of sites to poor people should be done not only in Bangalore but almost in all important cities of the State.

Then Sir, the Municipal Administration Department should also concentrate for supply of water in all urban areas. They are spending croresof rupees for water supply in Bangalore. But Bangalore is not the only place where people live. There are also other districtheadpuarters and municipal areas and the Municipalities of those areas have very limited income ; such district headquarters also should be provided with proper water supply facilities..

The Hon. Minister is talking about increasing of emoluments of employees in the municipalities. I welcome it. All these years the municipal employees, particularly, the sweepers which was exclusively reserved for a particular section of the society has suffered a lot. these Sweepers posts should be made open to one and all. The other people will come and take up this work only when the salaries are attractive. You ask a man to do a dirty work; you keep him dirty and you call him untouchable. That should not happen.

Lastly, the Government have stated that they have distributed about 2 lakhs and odd sites in the rural areas. I don't know whether even 500 sites out of this have been given to poorer section of the people; otherwise, these big landlords in the name of socialism and in the name of ruling congress can take hundered sites without any names and without any persons. Therefore it is very necessary to verify and they must furnish to this House the details of the population, the number of families, and among them how many have sites' how many have houses and how many have no sites, so that we could know by what time the Gevernment would take steps to provide not only sites but also houses, not ouly sanitry amenities but other welfare amenities that are provided in the urban areas to these rural people.

With these few words, I thank the Chair and conclude my speech.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ಮಾನ್ಯ ಸಭಾಧ್ಯಕ್ಷರೇ ಪೌರಾಡಳಿತ ಸಚಿವರ ಇಲಾಖೆಗೆ ಸಂಬಂಧಪಟ್ಟಂತೆ ಇರುವ ಬೇಡಿಕೆಗಳ ಮೇಲೆ ಈ ಸಭೆಯಲ್ಲಿ ಚರ್ಚೆ ಆಗುತ್ತಾ ಇದೆ. ನಾನು ಆ ವಿಷಯದಲ್ಲಿ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಶ್ರೀಮಾನ್ ಬಸವಲಿಂಗಪ್ಪನವರು ಅವರು ಅಧಿಕಾರದ ಗದ್ದುಗೆಯನ್ನು ಏರಿದ ಮೇಲೆ ಅವರು ಹೋಗತಕ್ಕಂಥ ಮಾರ್ಗ ಬಹುಶಃ ಸರ್ವಾಧಿಕಾರಿಯ ಆಡಳಿತಕ್ಕೆ ಎಡೆಮಾಡುವ ಕಡೆಗೆ ಹೋಗುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಮೈಸೂರು ದೇಶದಲ್ಲಿ ಕಳೆದ 25 ವರ್ಷಗಳಲ್ಲಿ ಈ ಒಂದು ದಿಟ್ಟವಾದ ನಿಲುವನ್ನು ತಾಳಿರತಕ್ಕಂಥ ಮಂತ್ರಿಗಳು ಎಂದರೆ ಶ್ರೀಮಾನ್ ಬಸವಲಿಂಗಪ್ಪನವರನ್ನು ಬಿಟ್ಟರೆ ಇನ್ನಾರೂ ಇಲ್ಲ. ಆದಕಾರಣ ನಮ್ಮ ಮೆಚ್ಚುಗೆಯನ್ನು ಕೂಡ ವ್ಯಕ್ತಪಡಿಸಬೇಕಾಗುತ್ತದೆ. ಏತಕ್ಕೆಂದರೆ ಈ ನಿಲುವನ್ನು ತೆಗೆದುಕೊಳ್ಳುವದಕ್ಕೆ ಶಕ್ತಿ ಬೇಕು. ಎಲ್ಲಾ ಮಂತ್ರಿಗಳಿಗೂ ಈ ಶಕ್ತಿ ಬರುವುದಕ್ಕೆ ಸಾಧ್ಯವಿಲ್ಲ. ನಿಮ್ಮಲ್ಲಿ ಆ ಶಕ್ತಿ ಇದೆ. ಆದರಿಂದ ವಿರೋಧಪಕ್ಷದ ನಾಯಕನಾಗಿರುವ ನಾನು ತಮಗೆ ಅಭಿನಂದಿಸುತ್ತೇನೆ. ಏತಕ್ಕೆಂದರೆ ಈ ಸದನದಲ್ಲಿ ಪ್ರಸ್ತಾಪ ಮಾಡದೆ ರಾಜ್ಯದ ಹೈಕೋರ್ಟ್ ಆದೇಶವನ್ನೂ ಕೂಡ ತಡೆಹಿಡಿಯುವುದಕ್ಕೆ ಶಕ್ತಿಯನ್ನು ರಾಜ್ಯದಲ್ಲಿ ಇನ್ನಾವ ಮಂತ್ರಿಗಳೂ ಕೂಡ ತೋರಿಸಿಲ್ಲ. ಹೈಕೋರ್ಟ್ ಆರ್ಡರನ್ನು ಬದಿಗೊತ್ತಿ It is a scrap of paper – ಎಂದು ಭಾವಿಸತಕ್ಕ ಆ ಮಟ್ಟಕ್ಕೆ 25 ವರ್ಷದಿಂದಲೂ ಯಾವ ಮಂತ್ರಿಗಳೂ ಹೋಗಿಲ್ಲ. ಅದಕ್ಕಾಗಿ ನಿಮ್ಮನ್ನೂ ಅಭಿನಂದಿಸಬೇಕು. ಆದರ ಜೊತೆಗೆ ಕೆಲವರಿವೆ ಈ ವಿವಾದವನ್ನು ಎಬ್ಬಿಸುವ ಮೂಲಕವೇನೇ ಪ್ರಾಶಸ್ತ್ಯ ಕೊಡುತ್ತಾರೆ,

Sri J.P. SARVESH.—In the previous ministry also there were some Ministers including Sri Veerendra Patil who were more powerful.

Sri H. D. DEVE GOWDA,—I know you will have to survive only by telling the name of Sri Veerendra Patil. I am the Leader of the Opposition only to safeguard the interests of the State and not Sri Veerendra Patil, the hon. member should know.

Sri MALLIKARJUN KHARGE.—The hon. the Leader of the Opposition should remember that Sri Sarvesh refused your ticket.

Sri J. P. SARVESH.—Sri Veerendra patil offered me money and gave me a ticket. I rejected it and I got elected by defeating your party candidate.

ಶ್ರೀ ಎಚ್. ಡಿ. ದೇವೇಗೌಡ.—ನಾನು ಇನ್ನೂ ಒಂದು ಸಾರಿ ಹೇಳುತ್ತೇನೆ. ನಾನು ವಿರೋಧ ಪಕ್ಷದ ನಾಯಕನಾಗಿ ರಾಜ್ಯದಲ್ಲಿ ಕಳೆದ 25 ವರ್ಷಗಳಿಂದ ರಾಜ್ಯವನ್ನು ಆಳಿದವರು ಪಾಪ ಮಾಡಿದ್ದರೆ ಅದನ್ನು ಮುಚ್ಚುವುದಕ್ಕೆ ಇಲ್ಲಿ ಕುಳಿತಿಲ್ಲ. ವೀರೇಂದ್ರ ಪಾಟೀಲರಿರಲಿ, ನಿಜಲಿಂಗಪ್ಪನವರಿರಲಿ, ಹನುಮಂತಯ್ಯನವರಿರಲಿ, ಯಾರು ಬೇಕಾದರೂ ಇರಲಿ ಅವರು ಮಾಡಿರುವ ತಪ್ಪನ್ನು ಮುಚ್ಚುವುದಕ್ಕೆ ಹೋಗುವುದಿಲ್ಲ. ಆದರೆ ನಿಮ್ಮ ಮನಸ್ಸಿನಲ್ಲಿರುವ ಭಾವನೆ ಹೋಗಬೇಕು. 165 ಜನ ಪೈಕಿ ಯೋಗ್ಯರಾದವರು ಕೆಲವರಿದ್ದಾರೆ, ಇಲ್ಲ ಎಂದು ಹೇಳುವುದಿಲ್ಲ. ಆದರೆ ನಿಮ್ಮ ಮನಸ್ಸಿನಲ್ಲಿ ಯಾರು ಈ ಹೊತ್ತು ಆಡಳಿತದಲ್ಲಿ ಅನ್ಯಾಯಗಳನ್ನು ಮಾಡುತ್ತ ಇದ್ದಾರೆ ಅವರ ವಿರುದ್ಧ ಪ್ರತಿಭಟಿಸಲು ನಿಮಗೆ ನೈತಿಕ ಸಾಮರ್ಥ್ಯವಿಲ್ಲ. ಕಾರಣವೇನೆಂದರೆ ಪಾರ್ಟಿ ಡಿಸಿಪ್ಲಿನ್ ಅಷ್ಟೆ; ಬಂದಿರುವ ಗೋಳು ಅದೇ. ವೀರೇಂದ್ರ ಪಾಟೀಲರು ನನ್ನನ್ನು ವಿರೋಧ ಪಕ್ಷದ ನಾಯಕನಾಗಿ ಮಾಡಿದ್ದಾರೆ ; ಆದರೆ ಅವರ ಮೇಲೆ ವಿಚಾರಣೆ ಮಾಡಿದರೆ ನನಗೆ ಭಯವಿಲ್ಲ. ನಾನು ಈ ಸ್ಥಾನ ಬೇಕಾದರೂ ಬಿಟ್ಟುಕೊಡಲಿಕ್ಕೆ ತಯಾರಾಗಿದ್ದೇನೆ. ಈ ಹೊತ್ತು ತಪ್ಪು ಮಾಡಿದವರನ್ನು ಮುಚ್ಚಬೇಕು ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ.

Sri B. SUBBAYYA SHETTY.—Sir, I rise to a Point of Order. The hon. the Leader of the Opposition just now said "ನೈತಿಕ ಸಾಮರ್ಥ್ಯವಿಲ್ಲ."

This violates Rules 288 sub-rule (vii) of the Rules of Procedure which prohibits use of treasonable, seditious or defamatory words. Sri Deve Gowda has uttered a defamatory expression on the members of this side and he should withdraw that expression. I want a Ruling on this.

ಚೇರ್‌ಮನ್.—"ನೈತಿಕಮಟ್ಟವಿಲ್ಲ' ಎಂದು ಹೇಳುವುದು ಡೆಫಮೇಟರಿ ಅಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಪೌರಾಡಳಿತ ಸಚಿವರು ಅವರ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ವರದಿಯನ್ನು ಕೊಟ್ಟಿದ್ದಾರೆ ಬಹುಶಃ ಪ್ರಮುಖವಾಗಿ ಎಷ್ಟು ಪುರಸಭೆಗಳನ್ನು ರದ್ದು ಮಾಡಿ ಅಲ್ಲಿಗೆ ಆಡಳಿತಾಧಿಕಾರಿಯನ್ನು ಹಾಕಿದ್ದಾರೆ ಎನ್ನುವುದು ಗೊತ್ತಾಗುತ್ತಾ ಇತ್ತು. ನಿನ್ನೆ ಮಾನ್ಯ ಪುಟ್ಟಸ್ವಾಮಿಯವರು ಮಾತನಾಡತಕ್ಕ ಕಾಲದಲ್ಲಿ 9 ಪುರಸಭೆಗಳನ್ನು ಅವುಗಳ ಕೆಲಸ ಸಮರ್ಪಕವಾಗಿಲ್ಲ ಎಂದು ರದ್ದು ಮಾಡಿದ್ದಾರೆ. ಸುಮಾರು 90 - 92 ಪುರಸಭೆಗಳನ್ನು ಅವುಗಳ ಆಯುಸ್ಸು ಮುಗಿದು ಹೋದ ಮೇಲೆ, ಕಾನೂನು ಚೌಕಟ್ಟಿನಲ್ಲಿ ಅವುಗಳನ್ನು ಒಂದು ವರ್ಷ ಮುಂದುವರಿಸುವುದಕ್ಕೆ ಅವಕಾಶವಿದ್ದರೂ ಕೂಡ ಈ ಹೊತ್ತು ಅಡ್ಮಿನಿಸ್ಟ್ರೇಟರುಗಳನ್ನು ನೇಮಕ ಮಾಡಿದ್ದಾರೆ. ಹಾಗೆ ಮಾಡತಕ್ಕ ಕಾಲದಲ್ಲಿ ಹೇಳಿದ್ದಾರೆ, ಚುನಾವಣೆಗಳನ್ನು ನಡೆಸಲಿಕ್ಕೆ ಸಿದ್ಧವಿದ್ದೇವೆ, ಆದರೆ 1971ರ ಜನಗಣತಿಯ ಆಧಾರದ ಮೇಲೆ ಟೆರಿಟೋರಿಯಲ್ ಡಿವಿಜನಲ್ಸ್ ಮಾಡಬೇಕಾದ್ದು ವಿಳಂಬವಾದುದರಿಂದ ಅಡ್ಮಿನಿಸ್ಟ್ರೇಟರನ್ನು ಹಾಕುತ್ತೇವೆಂದು ಹೇಳಿದ್ದಾರೆ ಮತ್ತೊಂದು ಕಡೆ ಬರಗಾಲ ಪರಿಸ್ಥಿತಿ ಇರುವುದರಿಂದ ಅಡ್ಮಿನಿಸ್ಟ್ರೇಟರನ್ನು ಹಾಕತಕ್ಕದ್ದು ಉಚಿತ ಎನ್ನುವ ರೀತಿಯಲ್ಲಿ ಸಮರ್ಥನೆ ಮಾಡಿಕೊಂಡಿದ್ದಾರೆ. 1971ರ ಜನಗಣತಿಯ ಆಧಾರದ ಮೇಲೆ ಶಾಸನ ಸಭೆಗಳಿಗೆ 1972 ರಲ್ಲಿ ಚುನಾವಣೆಗಳು ನಡೆದಿವೆ. ಹೀಗಿರುವಾಗ ಟೆರಿಟೋರಿಯಲ್ ಡಿವಿಜನ್ಸ್ ಮಾಡುವುದಕ್ಕೆ ಇದ್ದ ತೊಂದರೆ ಏನು ? 1972ರ ಅಸೆಂಬ್ಲಿ ಚುನಾವಣೆಗೆ ಏನು ಮತದಾರರ ಪಟ್ಟಿ ಇತ್ತೋ ಅದೇ ಪಟ್ಟಿಯ ಆಧಾರದ ಮೇಲೆ ಚುನಾವಣೆ ನಡೆಯಬೇಕಾಗಿತ್ತು. ಪುರಸಭೆಗಳ ಕಾಯಿದೆಯಲ್ಲಿ ಸ್ಪಷ್ಟವಾಗಿದೆ, ಶಾಸನ ಸಭೆಯ ಮತದಾರರ ಪಟ್ಟಿಯ ಆಧಾರದ ಮೇಲೆ ಪುರಸಭೆಗಳ ಚುನಾವಣೆ ನಡೆಯುವುದಕ್ಕೆ ಅವಕಾಶವಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಹೇಳತಕ್ಕ ನೆಪ ಸರಿಯಲ್ಲ ಎನ್ನುವುದು ನನ್ನ ಭಾವನೆ.

ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಿದ್ದಾರೆ, ಜನತೆಯಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳ ಆಡಳಿತಕ್ಕಿಂತ ಅಡ್ಮಿನಿಸ್ಟ್ರೇಟರ್ ಕಾಲದಲ್ಲಿ ಆಡಳಿತ ಚೆನ್ನಾಗಿ ನಡೆಯುತ್ತದೆ ಎನ್ನುವ ದೃಷ್ಟಿಯಲ್ಲಿ ತಮ್ಮ ಭಾಷಣದಲ್ಲಿ ಕೆಲವು ಕಡೆ ವ್ಯಕ್ತಪಡಿಸಿದ್ದಾರೆ. ಜನತೆಯಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಮಾಡದ ಇರತಕ್ಕ ಕೆಲಸಗಳನ್ನು ಈಗ ನಾನು ಮಾಡುವುದಕೆ

ಸಾಧ್ಯ ಎನ್ನುವ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಆ ಭಾಷಣದ ವರದಿಯನ್ನು ಬೇಕಾದರೆ ಕೊಡುತ್ತೇನೆ, ತಮ್ಮ ಬೆನ್ನು ತಟ್ಟಿಕೊಂಡು ಹೇಳಿದ್ದಾರೆ. ಅಡ್ಮಿನಿಸ್ಟ್ರೇಟರ ಕಾಲದಲ್ಲಿ ಉತ್ತಮ ಕೆಲಸ ನಡೆಯುತ್ತದೆ ಎಂದು ಬೆನ್ನು ತಟ್ಟಿಕೊಂಡು ಹೇಳಿದ್ದಾರೆ. ಹೀಗೆ ಪೌರಾಡಳಿತ ಮಂತ್ರಿಗಳು ಹೇಳಿರುವುದನ್ನು ನೋಡಿದಾಗ ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಹಾಕಿದ್ದಾರೆಂದರೆ ತಪ್ಪೇನೂ ಇಲ್ಲ. ಇದರ ಜೊತೆಗೆ ಅವರಿಗೆ ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಈಗ ಏನು ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ್ದಾರೆ, ಆ ಪುರಸಭೆಗಳಲ್ಲಿ ಹಿಂದೆ ಬರುತ್ತಿದ್ದ ವರಮಾನವೇನು; ಮತ್ತು ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ ಮೇಲೆ ಬರುತ್ತಿರುವವರಮಾನವೇನು ;ಇದರ ಅಂಕಿ ಅಂಶಗಳನ್ನು ಸಭೆಗೆ ಒದಗಿಸಿಕೊಡುವುದಾದರೆ ಬಹುಶಃ ಅವರ ಅಭಿಪ್ರಾಯವೇನಿದೆಯೋ ಅದನ್ನು ಅವರೆ ಬದಲಾವಣೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಏಕೆ ಹೇಳುತ್ತಿದ್ದೇನೆಂದರೆ, ಕೆಲವು ಪುರಸಭೆಗಳಲ್ಲಿ ಇವೊತ್ತು ಅಡ್ಮಿನಿಸ್ಟ್ರೇಟರುಗಳನ್ನು ನೇಮಕ ಮಾಡಿದ ಮೇಲೆ ಅವರು ಮಾಡಿರತಕ್ಕ ಕೆಲಸಗಳು ಉತ್ತಮವಾಗಿವೆಯೇ, ಇಲ್ಲವೇ ಕಡಿಮೆಯಾಗಿವೆಯೇ ಎನ್ನುವುದರ ಅಂಕೆ ಅಂಶಗಳನ್ನು ಈ ಸಭೆಗೆ ಒದಗಿಸಿದರೆ ಅವುಗಳು ತೃಪ್ತಿಕರವಾಗಿ ಕೆಲಸಗಳನ್ನು ಮಾಡುತ್ತಿವೆ ಇಲ್ಲವೇ ಎನ್ನುವುದನ್ನು ತಿಳಿಯಲು ಅನುಕೂಲವಾಗುತ್ತದೆ ಅಡ್ಮಿನಿಸ್ಟ್ರೇಟರುಗಳೇ ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದು ನೀವು ಮಾಡುವುದನ್ನು ಕೈ ಬಿಡಬೇಕು, ಇದು ಯೋಗ್ಯವಾದುದಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಅಡ್ಮಿನಿಸ್ಟ್ರೇಟರುಗಳು ಇಲ್ಲದ ಕಡೆಯಲ್ಲಿ ತಹಸೀಲುದಾರರುಗಳನ್ನು ನೇಮ ಮಾಡಿದ್ದೀರಿ. ತಹಶೀಲುದಾರರುಗಳಿಗೆ ಇರುವ ಕೆಲಸಗಳೇ ಹೆಚ್ಚು, ಅವರು ರೆವಿ ಕರೆಕ್ಷನ್ ಮಾಡಬೇಕು, ರೆವಿನ್ಯೂ ವರ್ಕ್ ಮಾಡಬೇಕು ಇದರ ಜೊತೆಗೆ ಪುರಸಭೆಗಳ ಕೆಲಸಗಳನ್ನೂ ಮಾಡಬೇಕೆಂದು ಹೇಳಿದರೆ ಖಂಡಿತ ಆತನಿಗೆ ಸರಿಯಾಗಿ ಅಟೆನ್‌ಶನ್ ಕೊಡಲಿಕ್ಕೆ ಅವಕಾಶವಾಗುವುದಿಲ್ಲ, ಆದುದರಿಂದ ಪುರಸಭೆಗಳಿಗೆ ಚುನಾವಣೆಗಳನ್ನು ಮಾಡಬೇಕು. ಆದಷ್ಟು ಜಾಗ್ರತೆಯಾಗಿ ತೀರ್ಮಾನತೆಗೆದುಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ.

4–30 P. M.

ಮೊನ್ನೆ ಒಂದು ಕಡೆ ತಾವು ಹೇಳಿದ್ದೀರಿ, ಅಡ್ವೈಸರಿ ಕಮಿಟಿಗಳನ್ನು ನೇಮಕ ಮಾಡುತ್ತೇವೆ ಎಂದು, ಈಗ ನೀವು ಮಾಡದೇ ಇದ್ದರೂ ಪರೋಕ್ಷವಾಗಿ ನಿಮ್ಮ ಅಭಿಪ್ರಾಯ ಇದರಿಂದ ವ್ಯಕ್ತವಾಗುತ್ತದೆ, ನಿಮ್ಮ ಮನಸ್ಸಿನಲ್ಲಿ ಪುರಸಭೆಗಳಿಗೆ ಚುನಾವಣೆಗಳನ್ನು ಮಾಡಬಾರದು ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ, ಎಲ್ಲ ಪುರಸಭೆಗಳನ್ನೂ ನಿಮ್ಮ ಕೈಯ್ಯಲ್ಲಿಟ್ಟುಕೊಂಡು ಇದರಲ್ಲಿ ನಾಮಿನೇಟೆಡ್ ಮೆಂಬರುಗಳೇ ಇರಬೇಕು ಎಂದು ಮಾಡುವುದಾದರೆ ನಿಜವಾಗಿಯೂ ಇದು ನಿಮಗೆ ಗೌರವತರತಕ್ಕುದಲ್ಲ, ಪುರಸಭೆಗಳ ಚುನಾವಣೆಗಳ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಸಾಕಷ್ಟು ಸಂಶಯ ಬಂದಿದೆ ಎನ್ನುವುದು ವ್ಯಕ್ತವಾಗಿದೆ. ಕಳೆದ ಒಂದು ವರ್ಷದ ಕಾಲದಲ್ಲಿ ಪುರಸಭೆಯ ಬೆಳವಣಿಗೆಗಳ ಬಗ್ಗೆ ನಿಮಗೆ ಸ್ವಲ್ಪ ಮನಸ್ಸಿನಲ್ಲಿ ಅಂಜುಪುರಕತನ ಬಂದಿದೆ ಎನ್ನುವುದು ವ್ಯಕ್ತವಾಗುತ್ತದೆ, ಇದೇ ಕಾರಣದಿಂದ ಸರಕಾರದವರೇನಾದರೂ ಎಲ್ಲ ಪುರಸಭೆಗಳನ್ನೂ ತಮ್ಮ ಅಧಿಕಾರಕ್ಕೆ ತೆಗೆದುಕೊಂಡು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳಬೇಕೆಂದು ಮಾಡುವುದು ಯೋಗ್ಯವಲ್ಲ. ಹಾಗೇನಾದರೂ ಮಾಡಿದರೆ ಅದನ್ನು ತೀವ್ರವಾಗಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಕ್ಯಾಟಗಾರಿಕಲಿ ಎಂದು ಚುನಾವಣೆ ಮಾಡುತ್ತೀರಿ ಎನ್ನುವುದರ ಬಗ್ಗೆ ಇಲ್ಲಿ ಹೇಳಬೇಕು. ಇದರಲ್ಲಿ ಯಾರೇ ಗೆಲ್ಲಲಿ ಅದು ನಮಗೆ ಮುಖ್ಯವಲ್ಲ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇರತಕ್ಕ ನಾವು ಚುನಾವಣೆ ನಡೆಯುತಕ್ಕ ಕಾಲದಲ್ಲಿ ಮತದಾರರು ಯಾರನ್ನೂ ಆರಿಸಿ ಕಳುಹಿಸುತ್ತಾರೋ ಅವರೇ ಜನತಾ ಪ್ರತಿನಿಧಿಗಳಾಗಿ ಚುನಾಯಿಸಿ ಬರುತ್ತಾರೆ, ಇದರಲ್ಲಿ ಯಾರೇ ಬರಲಿ ಅದರ ಬಗ್ಗೆ ಹೇಳುತ್ತಿಲ್ಲ. ಪ್ರಜಾತಂತ್ರದಿಂದ ನಡೆಯುವ ಈ ಸಂಸ್ಥೆಗಳನ್ನು ಕಿತ್ತುಕೊಳ್ಳುವುದು ಸರಿಯಲ್ಲ. ಅಧಿಕಾರವನ್ನು ಕೈಯಲ್ಲಿ ತೆಗೆದುಕೊಳ್ಳಬೇಕು ಎನ್ನುವುದು ನಿಮ್ಮ ಸರ್ವಾಧಿಕಾರತ್ವವನ್ನು ತೋರಿಸುತ್ತದೆ. ಇದು ಯೋಗ್ಯವಾದುದಲ್ಲ.

ಇನ್ನು ಬೆಂಗಳೂರು ಹೌಸಿಂಗ್ ಬೋರ್ಡಿನ ವಿಚಾರದಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀ ಆರ್ಮುಗಂರವರು ಮಾತನಾಡುತ್ತ ಕೆಲವು ಅಂಶಗಳನ್ನು ಹೇಳಿದರು. ನಾನು ಕೂಡ ಒಂದು ಸಾರಿ ಮುಖ್ಯ ಮಂತ್ರಿಗಳಿಗೆ ಹಿಂದೆ ಹೇಳಿದ್ದೆ. ಇದರ ಬಗ್ಗೆ ಒಂದು ಹೆಡಂಭೂತವಾದ ಆರೋಪಣೆಗಳನ್ನು ಹೊರಿಸಲಿಕ್ಕೆ ಏಕೆ ಹೊರಟಿದ್ದೀರಿ ಎಂದು. ರಾಜ್ಯದಲ್ಲಿರುವ ಹೌಸಿಂಗ್ ಬೋರ್ಡಿನಲ್ಲಿ ಮನೆಗಳನ್ನು ಹಂಚುವಿಕೆಯು ಒಂದು ಕೆಲಸ ಇದನ್ನು ಹಂಚುವಾಗ ಒಂದೇ ಕೋಮಿನವರಿಗೆ ಮೈಸೂರು ಹೌಸಿಂಗ್ ಬೋರ್ಡಿನವರು ಮನೆಗಳನ್ನು ಹಂಚುತ್ತಿದ್ದಾರೆ ಎಂದು ಮಾನ್ಯ ಮಂತ್ರಿ

(ಶ್ರೀ ಎಚ್. ಡಿ. ದೇವೇಗೌಡ)

ಗಳು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ. ಇದನ್ನು ಅವರು ಹೇಳುತ್ತಾರೋ ನನಗೆ ಗೊತ್ತಿಲ್ಲ. ಹೌಸಿಂಗ್ ಬೋರ್ಡಿನಲ್ಲಿ ಒಂದೇ ಕೋಮಿನವರ ಹಿತಾಸಕ್ತಿ ಬಗ್ಗೆ ಮನೆಗಳ ಹಂಚಿಕೆ ಬಗ್ಗೆ ನಾನೂ ಕೂಡ ಮಾನ್ಯ ಮುಖ್ಯ ಮಂತ್ರಿಗಳಲ್ಲೂ ಇದನ್ನು ಪ್ರಸ್ತಾಪ ಮಾಡಿದ್ದೆ. ಹೌಸಿಂಗ್ ಬೋರ್ಡು ಉದಯವಾದುದು ಹೇಗೆ ಎಂದರೆ ಶ್ರೀಮಾನ್ ಭೀಮಪ್ಪನಾಯಕರವರು ಅಧ್ಯಕ್ಷರಾಗಿದ್ದಾಗ ಇದು ಆರಂಭವಾಯಿತು. ಇವರಾದ ನಂತರ ಶ್ರೀಮಾನ್ ಹೆಚ್. ಎಲ್. ತಿಮ್ಮೇಗೌಡರು ಇಲ್ಲಿ ಅಧ್ಯಕ್ಷ ರಾಗಿದ್ದರು, ಮಧ್ಯದಲ್ಲಿ ಯಾರಿದ್ದರೋ ಗೊತ್ತಿಲ್ಲ. ಈಗ ಶ್ರೀಮಾನ್ ಅಗಡಿ ಸಂಗಣ್ಣನವರು ಅಧ್ಯಕ್ಷರಾಗಿದ್ದಾರೆ. ಇವರ ಕಾಲದಲ್ಲಿ ರಾಜ್ಯದಾದ್ಯಂತ ಕಟ್ಟಿರತಕ್ಕ ಮನೆಗಳು ಎಷ್ಟು ? ಇದರಲ್ಲಿ ಲೋ ಇನ್‌ಕಂ ಗ್ರೂಫ್ ಅಥವಾ ಮಿಡಲ್ ಇನ್‌ಕಂ ಗ್ರೂಪಾಗಲೀ ಅದರ ಬಗ್ಗೆ ಚಿಂತೆ ಇಲ್ಲ. ಮನೆ ಗಳಿಗಾಗಿ ಅರ್ಜಿಗಳನ್ನು ಕರೆದಾಗ ಎಷ್ಟು ಅರ್ಜಿಗಳು ಬಂದಿವೆ ? ಮತ್ತು ಯಾವ ಯಾವ ಜಾತಿ ಯವರಿಂದ ಎಷ್ಟು ಅರ್ಜಿಗಳು ಬಂದಿವೆ ? ಯಾರಿಗಾದರೂ ಜಾತಿಯ ಆಧಾರದ ಮೇಲೆ ಅಲಾಟು ಮೆಂಟು ಮಾಡಿದ್ದಾರೆಯೆ ? ಇವೆಲ್ಲ ಅಂಕೆ ಅಂಶಗಳನ್ನು ಈ ಸಭೆಗೆ ನೀವು ಕೊಡಬೇಕು. ಈಗ ನಿವೇಶನಗಳನ್ನು ಕೊಟ್ಟು ಮನೆಗಳನ್ನು ಕಟ್ಟಲು ಹಂಚಿದ್ದೀರಿ. ತಮ್ಮ ಆರ್ಡರು ಏನು ತೆಗೆದಿದ್ದೀ ದ್ದೀರಿ ಆ ಆರ್ಡರಿನ ಮೆರಿಟ್ಸ್ ಬಗೆ ಅಥವಾ ಇದು ರಾಜ್ಯಾಂಗದ ಪ್ರಕಾರ ಸರಿ ಇಲ್ಲವೇ ತಪ್ಪು ಎಂದು ಹೇಳುವುದರ ಬಗ್ಗೆ ಹೇಳುತ್ತಿಲ್ಲ. ಮತ್ತು ಇದರ ವ್ಯಾಖ್ಯಾನ ಮಾಡುವುದಕ್ಕೂ ಹೋಗು ವುದಿಲ್ಲ. ಮತ್ತು ಒಂದು ಮನೆಯ ಪಕ್ಕದಲ್ಲಿ ಮನೆಗಳನ್ನು ಕಟ್ಟುವಾಗ ಅದೇ ಜಾತಿಯವರಿಗೆ ಮನೆಗಳನ್ನು ಕಟ್ಟಲು ಅವಕಾಶ ಕೊಡಬಾರದು ಎಂದು ಹೇಳಿದರೆ ಅವರೇನು ತಪ್ಪು ಮಾಡಿದರು ಎನ್ನತಕ್ಕ ಪ್ರಶ್ನೆ ಇಲ್ಲಿ ಬರುತ್ತದೆ. ಶ್ರೀಮಾನ್ ಆರುಮುಗಂರವರು ಇಲ್ಲಿ ಮಾತನಾಡುತ್ತ ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಕ್ರಿಶ್ಚಿಯನ್ನರಿಗೆ ಮನೆ ಕೊಟ್ಟಿಲ್ಲವೇ ? ಮುಸ್ಲಿಂಸ್‌ಗಳಿಗೆ ಮನೆ ಕೊಟ್ಟಿಲ್ಲವೇ ? ಎಂದು ಹೇಳಿದರು. ಒಂದೇ ಕೋಮಿನವರಿಗೆ ಮನೆಗಳನ್ನು ಕಟ್ಟಬೇಕಾದರೆ ಅದಕ್ಕೆ ಕಾನ್‌ಸ್ಟಿಟ್ಯೂಷನ್ ಅಮೆಂಡುಮೆಂಟು ಬೇಕು, ಹೀಗೆ ಕೇವಲ ಒಂದೇ ಕೋಮಿನವರಿಗಾಗಿಯೇ ಮನೆಗಳನ್ನು ಕಟ್ಟಬೇಕೆಂದು ಹೇಳುವ ಅಭಿಪ್ರಾಯ ಉಚಿತವಲ್ಲ, ಹಾಗೆ ಯಾರಾದರೂ ಮಾಡಿದ್ದರೆ ಅದು ತಪ್ಪು, ಇದರ ಜೊತೆಗೆ ಅವರು ಅಂಕೆ ಸಂಖ್ಯೆಗಳನ್ನೂ ಕೊಟ್ಟಿಲ್ಲ. ಮಂತ್ರಿಗಳ ದೃಷ್ಟಿ ಯಾವಾಗಲೂ ಜಯನಗರ ಇಲ್ಲವೇ ಪ್ಯಾಲೇಸು ಆರ್ಚರ್ಡ್ ಮೇಲೇನೆ ಇರುತ್ತದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ಊರಿನಲ್ಲಿ ಎಂದರೆ ಹುಣಸೂರಿನಲ್ಲಿ ಕೂಡ ಇಂತಹ ಮನೆಗಳನ್ನು ಅವರ ಜಾತಿ ಯವರಿಗಾಗಿ ಕಟ್ಟಿದ್ದಾರೋ ಏನೋ ?

ಶ್ರೀ ಡಿ. ದೇವರಾಜ ಅರಸ್.—ನನ್ನ ಊರಿನಲ್ಲಿ ಯಾವುದೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕೇವಲ ಯಾವುದೇ ಒಂದು ಕೋಮಿನವರಿಗೆ ಸೌಕರ್ಯ ಗಳನ್ನು ಮಾಡಿಕೊಡಬೇಕೆಂದು ಅದಕ್ಕಾಗಿ ಒಂದು ಕಾನೂನು ತರಲು ಅವಕಾಶ ಮಾಡಿ ಕೊಟ್ಟರೆ ಅದು ಸರಿಯಲ್ಲ ಮತ್ತು ಭೂಷಣವೂ ಅಲ್ಲ. ಇದರ ಜೊತೆಗೆ ಒಂದು ಮನೆ ಪಕ್ಕದಲ್ಲೇ ಇನ್ನೊಂದು ಮನೆ ಕೊಡುವಾಗ ಒಂದೇ ಜಾತಿಯವರಿಗೇ ಕೊಡಬಾರದು ಎನ್ನುವ ಒಂದು ಹೊಸ ಅಭಿಪ್ರಾಯ ವನ್ನು ಇಲ್ಲಿ ವ್ಯಕ್ತ ಮಾಡಿದ್ದಾರೆ, ಬಹುಶಃ ಇದನ್ನು ಎಷ್ಟರ ಮಟ್ಟಿಗೆ ಜಾರಿಗೆ ತರುತ್ತಾರೆಯೋ ಅದು ಸಂಶಯವಾಗಿದೆ. ಶ್ರೀ ಆರ್ಮುಗಂರವರು ಷೆಡ್ಯೂಲು ಕ್ಯಾಸ್ಟು ಹಾಗೂ ಟ್ರೈಬ್ ಪಂಗಡದವರಿಗೆ ಯಾವ ರೀತಿ ಕೊಡಬೇಕು ಎಂದು ರಾಜ್ಯಾಂಗದಲ್ಲಿದೆ ಆರೀತಿ ಕೊಡಬೇಕು ಎಂದು ಹೇಳಿದರೂ ಅದ ರಂತೆ ಕೊಡುತ್ತಿಲ್ಲ ಎಂದರು. ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು ಕೂಡ ಇದರ ಬಗ್ಗೆ ಹೇಳಿದರು. ನಾನು ಆ ವಿಚಾರಗಳ ಬಗ್ಗೆ ಅಥವಾ ಅದನ್ನು ಇಂಪ್ಲಿಮೆಂಟು ಮಾಡುವುದರ ಬಗ್ಗೆ ನನಗೆ ಯಾವ ತಕರಾರೂ ಇಲ್ಲ. ಮನೆಗಳಿಗಾಗಿ ಅರ್ಜಿಗಳನ್ನು ಹಾಕುವಾಗ ಇನ್ನು ಮುಂದೆ ಜಾತಿಯನ್ನೂ ಸ್ಪೆಸಿಫೈ ಮಾಡಬೇಕು. ಎರಡನೇದು, ಒಂದು ಜಾತಿಯವರಿಗೆ ಮನೆ ಕೊಟ್ಟಾಗ ಅವರು ಬೇಡ ಎಂದರೆ ಆಗ ಯಾರು ಅದನ್ನು ಇಟ್ಟುಕೊಳ್ಳಬೇಕು ? ಯಾರೂ ಮನೆಗಳನ್ನು ಪುಕ್ಕಟೆ ಯಾಗಿ ಕೊಡುವುದಿಲ್ಲ, ಇದಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ಮೊದಲಿಗೆ ತುಂಬಬೇಕು. ಹಾಗೇ ನೀವೇ ಯಾರಾದರೂ ತುಂಬಲಿಕ್ಕೆ ತಯಾರಿದ್ದೀರೇನು ? ಇದ್ದರೆ ಅದಕ್ಕೆ ಅಡ್ಡಿ ಇಲ್ಲ. ಹಿಂದೆ ಇಲ್ಲಿ ಜನತಾ ಹೌಸಿಂಗ್ ಸ್ಕೀಂ ತರುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದಾಗ ಅದನ್ನು ಪುಕ್ಕಟೆ ಯಾಗಿ ಕೊಡುತ್ತೀರಾ ಎಂದು ಕೇಳಿದುದಕ್ಕೆ ಅವರು ಬಹಳ ಖಿನ್ನವಾಗಿ ಆ ರೀತಿ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಮಾನ್ಯ ಸದಸ್ಯರಾದ ಶ್ರೀ ಪ್ರಭಾಕರ್‌ರವರು ಹತ್ತು ಸಾವಿರ ವನ್ನು ತುಂಬಿ ಕೊಡಲು ಸಾಧ್ಯವಿದ್ದರೆ ಅವರು ತುಂಬಿ ಕೊಡಲಿ. ಅಕ್ಕಪಕ್ಕದಲ್ಲಿ ಎಲ್ಲಾ ಜಾತಿಯ ವರೂ ಇರಲು ಅವಕಾಶವಿದೆ ಮತ್ತು ಯಾರು ಹಣವನ್ನು ಕೊಡಲಿಕ್ಕೆ ಸಾಧ್ಯವಿದೆಯೋ ಅವರಿಗೆ

ಮನೆಗಳನ್ನು ಕೊಡಬಹುದು. ಒಂದು ವೇಳೆ ಹಣವಿಲ್ಲದೇ ಹೋದರೆ ಅದನ್ನು ಬೇರೆಯವರಿಗೆ ಕೊಡಲೂ ಸಾಧ್ಯವಿದೆ ಎನ್ನುವುದನ್ನು ಇದರಲ್ಲಿ ಮಾಡಲಿಲ್ಲ, ಅಮೇಲೆ ಟ್ರಸ್ಟ್ ಬೋರ್ಡಿನವರು ಸೈಟ್‌ಗಳನ್ನು ಹಂಚಿಕೆ ಮಾಡಿರುವ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಈ ಬೋರ್ಡಿನಲ್ಲಿ ಚನ್ನಯ್ಯನವರು ಕೆಲವು ಕಾಲ ಇದ್ದರು. ಕಳೆದ 25 ವರ್ಷಗಳಿಂದ ಬೆಂಗಳೂರು ನಗರದಲ್ಲಿ ಸೈಟ್‌ಗಳಿಗಾಗಿ ಅರ್ಜಿ ಹಾಕಿದವರು ಎಷ್ಟು ಮಂದಿ, ಅವರು ಯಾವ ಯಾವ ಜಾತಿಗೆ ಸೇರಿದವರು, ಮತ್ತು ಯಾವ ಯಾವ ಜಾತಿಯವರಿಗೆ ಎಷ್ಟೆಷ್ಟು ಹಂಚಿಕೆ ಮಾಡಿದ್ದೀರಿ ಎಂಬ ಬಗ್ಗೆ ಒಂದು ಪಟ್ಟಿಯನ್ನು ಕೊಡಿ. ಯಾರು ಯಾರಿಗೆ ಎಷ್ಟೆಷ್ಟು ಸಿಕ್ಕಿದೆ ಎಂಬುದನ್ನು ನೋಡೋಣ, ಒಂದೇ ಒಂದು ಜನಾಂಗದವರು ಸೈಟ್‌ಗಳನ್ನು ಮಾಡಿಕೊಂಡಿದ್ದಾರೆಂಬ ಆರೋಪ ಏನಿದೆ ಅದರಲ್ಲಿ ಎಷ್ಟು ಸತ್ಯವಿದೆ ಎಂಬುದನ್ನು ನೋಡಬೇಕಾಗಿದೆ ನಾನು ಸಹ ಹೌಸಿಂಗ್ ಬೋರ್ಡ್ ಮನೆಯಲ್ಲಿ ಬಾಡಿಗೆಗೆ ಇದ್ದೇನೆ. ನನ್ನ ಮನೆಯ ಪಕ್ಕದಲ್ಲಿರುವ ಮನೆಯಲ್ಲಿ ಹರಿಜನರು ಇದ್ದಾರೆ. ಅವರು ಹಿಂದೆ ಮಂತ್ರಿಗಳೊಬ್ಬರ ಹತ್ತಿರ ಪ್ರೈವೇಟ್ ಸೆಕ್ರೆಟರಿಯಾಗಿದ್ದರು. ಮುಖ್ಯವಾಗಿ ಸೈಟ್‌ಗಳ ವಿತರಣೆಯಲ್ಲಿ ಏನೇನು ಲೋಪವಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿರುವುದರಿಂದ ಆ ಬಗ್ಗೆ ವಿವರಣೆಯನ್ನು ತಾವು ಕೊಡಬೇಕು.

[MADAM SPEAKER in the Chair]

ಇನ್ನು ತಾವು ಮಂತ್ರಿಗಳಾಗಿ ಅಧಿಕಾರಕ್ಕೆ ಬಂದಮೇಲೆ ಕೆಲವರು ಸೊಸೈಟಿಗಳನ್ನು ಮಾಡಿಕೊಂಡು ಹಣವನ್ನು ಪಡೆಯುತಕ್ಕಂಥ ಪದ್ಧತಿ ಏನಿತ್ತು ಅದನ್ನು ತಡೆಹಿಡಿದ್ದೀರಿ. ತಮ್ಮ ಒಂದು ಹೊಸ ನೀತಿಯನ್ನು ಜಾರಿಗೆ ತರುವುದಕ್ಕಾಗಿ ಆ ರೀತಿ ಮಾಡಲಾಗಿದೆ ಎಂದು ತಾವು ಉತ್ತರ ಕೊಡಬಹುದು. ಮಧ್ಯಮ ವರ್ಗದವರಿಗಾಗಿ ಕಟ್ಟಿಸುವ ಮನೆಗಳನ್ನು ಹರಾಜು ಮೂಲಕ ವಿತರಣೆ ಮಾಡಿ ಅದರಿಂದ ಬರುವ ಹಣವನ್ನು ಲೋ–ಇನ್‌ಕಂ ಗ್ರೂಪ್‌ನವರಿಗೆ ಮನೆಗಳನ್ನು ಕಟ್ಟಿಸಿಕೊಡುದಕ್ಕೆ ಉಪಯೋಗಿಸಲಾಗುತ್ತದೆಂದು ತಾವು ಹೇಳಿದ್ದೀರಿ. ಹೌಸಿಂಗ್ ಬೋರ್ಡನ್ನು ತಾವು ಮಾರಾಟ ಸಂಸ್ಥೆಯನ್ನಾಗಿ ಪರಿವರ್ತನೆ ಮಾಡುವುದಾದರೆ, ಆ ಪದ್ಧತಿಯನ್ನೇ ರದ್ದು ಮಾಡಿ ಕೇವಲ ಲೋ-ಇನ್‌ಕಂ ಗ್ರೂಪ್‌ನವರಿಗೆ ಮಾತ್ರ ಮನೆಗಳನ್ನು ಕಟ್ಟಿಸಿಕೊಡುವ ಕಾರ್ಯವನ್ನು ಮಾಡಲಿ. ಮಿಡಲ್ ಇನ್‌ಕಂ ಗ್ರೂಪ್‌ನವರಿಗೆ ಮನೆಗಳನ್ನು ಕಟ್ಟಿಸಿಕೊಡುವುದೇ ಬೇಡ. ಏಕೆಂದರೆ ಹರಾಜಿನಲ್ಲಿ ನಾಳೆ ನಿಮ್ಮ ಕೈಕಚ್ಚಬಹುದು. ಕೆಲವು ಸಲ ಕಟ್ಟಿಸಿರುವ ಮನೆಗಳಲ್ಲಿ ಲೋಪದೋಷ ಕಂಡುಬಂದರೆ ಹರಾಜ್‌ನಲ್ಲಿ ಜಾಸ್ತಿ ಹಣ ಬರದಿರಬಹುದು. ಈಗ 17 ಪರ್ಸೆಂಟ್ ಸೂಪರ್‌ವಿಷನ್ ಚಾರ್ಜ್ ಹಾಕುತ್ತಿದ್ದೀರಿ. ನಾಳೆ ಸ್ಪೆಸಿಫಿಕೇಷನ್ ಪ್ರಕಾರ ಮನೆ ಕಟ್ಟದಿದ್ದರೆ ಹರಾಜಿನಲ್ಲಿ ಕೈಸುಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಹರಾಜಿನಲ್ಲಿ ಸಾಕಷ್ಟು ಹಣ ಬರದಿದ್ದರೆ ಹರಾಜನ್ನು ನಿಲ್ಲಿಸಬಹುದು. ಈಗ ಎಲ್ಲಾ ಮನೆಗಳನ್ನು ಹರಾಜು ಮಾಡುವುದಿಲ್ಲ. ಕಾರ್ನರ್ ಸೈಟ್‌ಗಳಲ್ಲಿ ಕಟ್ಟಿಸಿರುವ ಮನೆಗಳನ್ನು ಮಾತ್ರ ಆ ರೀತಿ ಮಾಡಲಾಗುತ್ತದೆ. 50 ಮನೆಗಳನ್ನು ಕಟ್ಟಿಸಿದ ಕಡೆಗಳಲ್ಲಿ 4 ಕಾರ್ನರ್ ಸೈಟಿನ ಮನೆಗಳು ಇರುತ್ತವೆ. ಅವುಗಳನ್ನು ಮಾತ್ರ ಹರಾಜು ಮಾಡಲಾಗುತ್ತದೆ. ಈಗ ಕಾರ್ನರ್ ಸೈಟ್‌ಗಳನ್ನು ಹರಾಜು ಮಾಡುವ ಪದ್ಧತಿ ಸಹ ಇದೆ. 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಹರಾಜಿನಲ್ಲಿ ಅಷ್ಟು ಹಣ ಬರದಿದ್ದರೆ ಏನು ಮಾಡುತ್ತೀರಿ ಎಂಬುದು ನಿಮ್ಮ ಪ್ರಶ್ನೆ ಇರಬಹುದು. ಅಂತಹ ಸಮಯದಲ್ಲಿ ಹರಾಜನ್ನು ನಿಲ್ಲಿಸಬಹುದು. ನಾವು ದುಡ್ಡನ್ನು ಕಳೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾಲ್ಕು ಮನೆಗಳನ್ನು ಹರಾಜು ಮಾಡಬೇಕೆಂಬ ನಿಮ್ಮ ಉದ್ದೇಶ ಏನಿದೆ ಅದರಿಂದ ನೀವು ನಿರೀಕ್ಷಿಸಿದ ಫಲ ಎಷ್ಟು ಸಿಗುತ್ತದೆಂಬುದನ್ನು ಮುಂದೆ ನೋಡೋಣ. ಇಂದು ಹೌಸಿಂಗ್ ಬೋರ್ಡಿನವರು ಉತ್ತಮ ರೀತಿಯಿಂದ ಕೆಲಸ ಮಾಡುತ್ತಿಲ್ಲ, ಸರ್ಕಾರದವರು ಕೊಟ್ಟಂತಹ ಸೂಚನೆಗಳನ್ನು ಕಾರ್ಯಗತ ಮಾಡುತ್ತಿಲ್ಲವೆಂಬ ಕಾರಣದಿಂದ ಮಾನ್ಯ ಮಂತ್ರಿಗಳು ಆ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ಅವರಿಗೆ ಕೊಟ್ಟ ಸೂಚನೆಗಳಾದರೂ ಸಹ ಬಾಯಿ ಮಾತಿನ ಸೂಚನೆಗಳು.

ಶ್ರೀ ಕೆ. ಪ್ರಭಾಕರ್.—ನಿರ್ಣಯ ಇನ್ನೂ ತೆಗೆದುಕೊಂಡಿಲ್ಲ; ರೈಲು ಇನ್ನೂ ಹೊರಟೇ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಒರಲ್ ನೋಟೀಸ್ ಎಂಬ ನಿರ್ಣಯದ ರೈಲು ಅಲ್ಲಿಗೆ ಹೋಗಿ ಮುಟ್ಟಿದೆ. ಅಲ್ಲಿಂದ ಸೆಕ್ರೆಟೇರಿಯಟ್‌ಗೆ ಇನ್ನೂ ವಾಪಸ್ ಬಂದಿಲ್ಲ. ಹೌಸಿಂಗ್ ಬೋರ್ಡಿನವರು ಏನಾದರೂ ಉತ್ತಮವಾದ ಕೆಲಸವನ್ನು ಮಾಡಿದ್ದರೆ ಸರ್ಕಾರ ತನ್ನ ಕಾರ್ಯಕ್ರಮವನ್ನು ಜರುಗಿಸುವುದರಲ್ಲಿ ನನ್ನ ಅಡ್ಡಿಯಿಲ್ಲ. ಆದರೆ ಕೇವಲ ರಾಜಕೀಯ ದೃಷ್ಟಿಯಿಂದ ನೀವು ಈ ಕೆಳಮಟ್ಟದ ಕೆಲಸಕ್ಕೆ ಕೈಹಾಕಿದರೆ ಅದು ನಿಮಗೆ ಗೌರವ ತರುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಅಧಿಕಾರಕ್ಕೆ ಬಂದ ಕೇವಲ 3 ತಿಂಗಳಲ್ಲಿ ಅಲ್ಲಿದ್ದ ಸರ್ಕಾರೀ ಸದಸ್ಯರ ಪೈಕಿ 3 ಜನರಿಂದ ರಾಜೀನಾಮೆ ಕೊಡಿಸಿದಿರಿ. ಹೌಸಿಂಗ್ ಬೋರ್ಡ್ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡಲಿ ಎಂಬ ಆಕಾಂಕ್ಷೆ ನಿಮಗೆ ಇದ್ದಿದ್ದರೆ ಆ ಕೆಲಸಕ್ಕೆ ಕೈಹಾಕುತ್ತಿರಲಿಲ್ಲ. ಇದರ ಹಿನ್ನೆಲೆ ಏನು ಎಂಬುದನ್ನು ನೋಡಬೇಕಾಗಿದೆ. ಹೌಸಿಂಗ್ ಬೋರ್ಡ್ ಉತ್ತಮವಾಗಿ ಕೆಲಸ ಮಾಡುತ್ತಿದ್ದರೂ ಸಹ ಮಾಡುತ್ತಿಲ್ಲ ಎಂದು ಆರೋಪ ಮಾಡುತ್ತಿರುವ ನೀವು, ಅದು ಸರಿಯಾಗಿ ಕೆಲಸ ಮಾಡುವುದಕ್ಕೂ ಸಹ ಬಿಡದೆ ಅದರ ಕತ್ತನ್ನು ಹಿಸುಕುವುದಕ್ಕೆ ಹೊರಟಿದ್ದೀರಿ. ಇಲ್ಲದ ಆರೋಪಗಳನ್ನು ಹೊರಿಸುವುದಕ್ಕೆ ಹೊರಟಿದ್ದೀರಿ. ಅದರ ಜೊತೆಗೆ ಇನ್ನೂ ಇಬ್ಬರು ಹೌಸಿಂಗ್ ಬೋರ್ಡ್ ಸದಸ್ಯರನ್ನು ಮೀಟಿಂಗ್‌ಗೆ ಹೋಗುವುದಕ್ಕೆ ಅಡ್ಡಿ ಮಾಡುತ್ತಿದ್ದೀರಿ. ಸಭೆ ಸೇರಲು 8 ಜನರ ಕೋರಂ ಇರದಂತೆ ಮಾಡುತ್ತಿದ್ದೀರಿ. ಒಂದು ಮಾತನ್ನು ತಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿ; ಏನೆಂದರೆ ಹೌಸಿಂಗ್ ಬೋರ್ಡನ್ನು ರದ್ದು ಮಾಡುವುದು ಬಿಡುವುದು ಎರಡನೆಯ ಪ್ರಶ್ನೆ. ಆದರೆ ನಿಮ್ಮ ಅಧಿಕಾರ ಹೋದಮೇಲೆ ಏನಾಗುತ್ತದೆಂಬುದನ್ನು ಸ್ವಲ್ಪ ನೋಡಿ. ಐಶ್ವರ್ಯ ಹೋದರೆ ಹಾಳೂರ ಶುನಕನಂತಕ್ಕು ಸರ್ವಜ್ಞ ಎಂದು ಸರ್ವಜ್ಞ ಕವಿ ಹೇಳಿರುವುದು ನಿಮಗೆ ನೆನಪು ಇದ್ದರೆ ಅಷ್ಟೇ ಸಾಕು.

ಇನ್ನು ಕೊನೆಯದಾಗಿ ಒಂದು ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಹೈದರಾಬಾದ್ ಎಜುಕೇಷನ್ ಸೊಸೈಟಿಗೆ ಬೆಂಗಳೂರಿನಲ್ಲಿ ಒಂದು ಸೈಟನ್ನು ಕೊಡಲಾಗಿತ್ತು. ಅದನ್ನು ಈಗ ರದ್ದು ಮಾಡಿದ್ದಾರೆ. ಅವರು ಹಣವನ್ನು ಸಹ ಸೈಟ್‌ಗಾಗಿ ತುಂಬಿದ್ದರು. ಅದು ಒಂದು ವಿದ್ಯಾಸಂಸ್ಥೆ. ಕಾಲೇಜು ಸ್ಥಾಪನೆ ಮಾಡುವುದಕ್ಕಾಗಿ ಎಂದು ಕಾಣುತ್ತದೆ, ಒಂದು ಸೈಟನ್ನು ಕೊಡಲಾಗಿತ್ತು. ಅದು ರಿಜಿಸ್ಟರ್ಡ್ ಆದ ಸಂಸ್ಥೆ. ತಾವು ಅವರಿಗೆ ಕೊಟ್ಟ ಸೈಟನ್ನು ರದ್ದು ಮಾಡಿರುವುದು ಒಳ್ಳೆಯ ಉದ್ದೇಶಕ್ಕೇ ಇರಬಹುದು. ಡಾಕ್ಟರ್ ಅಂಬೇಡಕರ್ ಅವರಿಗೆ ಸೇರಿದ ಜಾಗ ಎಂದು ತಾವು ಹೇಳಬಹುದು.

ಶ್ರೀ ಬಿ. ಬಸವಲಿಂಗಪ್ಪ.—ಅದು ಅವರಿಗೆ ಸೇರಿದ ಜಮೀನು.

Sri H. D. DEVE GOWDA.—You are always a controvertial figure. You create problems and you will try to solve it

ನಾನು ಅಂಬೇಡ್ಕರ್ ಅವರಿಗೆ ಕೊಡಬೇಡಿ ಎಂದು ಹೇಳುವುದಿಲ್ಲ. ಹೈದರಾಬಾದ್ ಕರ್ನಾಟಕದ ಶಿಕ್ಷಣ ಸಂಸ್ಥೆಗೆ ಕೊಟ್ಟಿದ್ದಂತಹ ನಿವೇಶನವನ್ನು ರದ್ದು ಮಾಡಿ ಅವರಿಗೆ ಕೊಟ್ಟಿದ್ದೀರಿ, ಅವರಿಗೆ ನಿವೇಶನವನ್ನು ಕೊಡುವುದಕ್ಕೆ ಬೇರೆ ಜಾಗ ಇರಲಿಲ್ಲವೇ ? ಅವರು ಕಾನೂನು ಪ್ರಕಾರ ಕೋರ್ಟಿಗೆ ಹೋಗುತ್ತಾರೆ. ಈ 25 ವರ್ಷಗಳ ಅವಧಿಯಲ್ಲಿ ಈ ರೀತಿ ತಮ್ಮ ಹೆಸರನ್ನು ಪ್ರದರ್ಶನ ಮಾಡಿದಂತಹ ಮಂತ್ರಿಗಳು ಈ ರಾಜ್ಯದಲ್ಲಿ ಯಾರೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—1958ನೇ ಇಸವಿಯಲ್ಲಿ ಆ ಜಮೀನನ್ನು ಅಂಬೇಡ್ಕರ್ ಅವರ ಸಂಸ್ಥೆಗೆ ಕೊಟ್ಟಿದ್ದಾರೆ. ಆ ಜಮೀನನ್ನು ಹೈದರಾಬಾದ್ ಎಜುಕೇಷನ್ ಸಂಸ್ಥೆಯವರು ಈ ಸರ್ಕಾರ ಬರುವುದಕ್ಕೆ ಮುಂಚೆ ವಶೀಲಿ ಬಾಜಿ ಮಾಡಿ ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಆ ಹೈದರಾಬಾದ್ ಶಿಕ್ಷಣ ಸಂಸ್ಥೆಗೆ ಕೊಟ್ಟಿದ್ದಂತಹ ನಿವೇಶನವನ್ನು ಕಿತ್ತುಕೊಂಡಿರುವುದು ಸರಿಯಲ್ಲ.

ಕೊನೆಯದಾಗಿ ಪುರಸಭೆಗಳಿಗೆ ಚುನಾವಣೆಯನ್ನು ಆದಷ್ಟು ಜಾಗ್ರತೆ ನಡೆಸಬೇಕು. ಇಲ್ಲದಿದ್ದರೆ ಗೊಂದಲ ಉಂಟಾಗುತ್ತದೆ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಎಸ್. ಹಮೀದ್‌ಷಾ (ಶಿವಾಜಿನಗರ್).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳು ಈ ಸಭೆಯಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾಲ್ಕು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಈಗ ಮಾನ್ಯ ಮಂತ್ರಿಗಳು ಈ ಬೇಡಿಕೆಯಲ್ಲಿ 6 ಕೋಟಿ ಚಿಲ್ಲರೆ ರೂಪಾಯಿಗಳನ್ನು ಕೇಳಿದ್ದಾರೆ. ಇದನ್ನು ಸ್ವಲ್ಪ ಹೆಚ್ಚು ಮಾಡಬೇಕಾಗಿದೆ. ಈಗ ನಾನು ಬೆಂಗಳೂರು ಕಾರ್ಪೊರೇಷನ್ ಬಗ್ಗೆ ಕೆಲವು ಮಾತುಗಳನ್ನು ಹೇಳ

ಬೇಕೆಂದಿದ್ದೇನೆ. ಬೆಂಗಳೂರು ಕಾರ್ಪೊರೇಷನ್ ಮದ್ರಾಸ್ ಕಾರ್ಪೊರೇಷನ್ ಆಕ್ಟ್ ಅನ್ನು ಕಾಪಿ ಮಾಡಿಕೊಂಡಿದ್ದಾರೆ. ಆದ್ದರಿಂದ ನಮ್ಮ ಬೆಂಗಳೂರು ಕಾರ್ಪೊರೇಷನ್ನಿಗೆ ಒಂದು ಹೊಸ ಕಾನೂನನ್ನು ತಯಾರು ಮಾಡಬೇಕಾಗಿದೆ. ಹುಬ್ಬಳ್ಳಿ ಮತ್ತು ಧಾರವಾಡ ಕಾರ್ಪೊರೇಷನ್‌ನವರು ಬೊಂಬಾಯಿ ಕಾರ್ಪೊರೇಷನ್ ಆಕ್ಟ್ ಅನ್ನು ಕಾಪಿ ಮಾಡಿದ್ದಾರೆ. ಆದ್ದರಿಂದ ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್ ಮತ್ತು ಬೆಂಗಳೂರು ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಹಾಗೆ ಒಂದು ಹೊಸ ಕಾನೂನನ್ನು ಮಾಡಬೇಕಾಗಿದೆ. ಆ ರೀತಿ ಒಂದು ಹೊಸ ಕಾನೂನು ಮಾಡಿ ಕಾರ್ಪೊರೇಷನ್ ಏರಿಯಾದಲ್ಲಿ ಜನತೆಗೆ ಒಳ್ಳೆಯ ಕೆಲಸವನ್ನು ಮಾಡಬೇಕು. ಇದರ ಜೊತೆಗೆ ಮೇಯರ್ ಅವರಿಗೆ ಸ್ವಲ್ಪ ಹೆಚ್ಚಿನ ಅಧಿಕಾರವನ್ನು ಕೊಡಬೇಕು, ಇಲ್ಲದಿದ್ದರೆ ಅವರು ಸರಿಯಾಗಿ ಆಳಿತವನ್ನು ನಡೆಸುವುದಕ್ಕೆ ಆಗುವುದಿಲ್ಲ. ಕಾರ್ಪೊರೇಷನ್ ಆಕ್ಟ್ ಮತ್ತು ಮುನಿಸಿಪಾಲಿಟಿ ಆಕ್ಟನ್ನು ಬದಲಾವಣೆ ಮಾಡಬೇಕು. ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲಿ ಎಷ್ಟೋ ಜನ ಅಲ್ಲಿಯೇ ಕೆಲಸಕ್ಕೆ ಸೇರಿ ಅಲ್ಲಿಯೇ ರಿಟೈರ್ ಆಗುತ್ತಾರೆ. ಈ ನೌಕರರು ಅನೇಕ ವರ್ಷಗಳು ಕಾಲ ಒಂದೇ ಕಡೆ ಇದ್ದರೆ ಒಳ್ಳೆಯ ಕೆಲಸಗಳು ಆಗುವುದಿಲ್ಲ. ಆದ್ದರಿಂದ ಈ ನೌಕರರನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಬದಲಾವಣೆ ಮಾಡಿದರೆ ಅಲ್ಲಿ ಒಳ್ಳೆಯ ಕೆಲಸಗಳು ಆಗುತ್ತವೆಂದು ನಾನು ಹೇಳುತ್ತೇನೆ.

ಟ್ರಸ್ಟ್ ಬೋರ್ಡ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಹಳೆಯ ಕಾಲದಲ್ಲಿ ನಾವು ಏನು ಹೇಳುತ್ತಿದ್ದೆವು ಎಂದರೆ ನಮ್ಮ ರಸ್ತೆಗಳು ಬಹಳ ಚಿಕ್ಕದಾಗಿವೆ ಆದ್ದರಿಂದ ರಸ್ತೆಗಳಲ್ಲಿ ಆಕ್ಸಿಡೆಂಟ್‌ಗಳು ಆಗುತ್ತಿವೆ ಎಂದು ; ಇವೊತ್ತು ಬೆಳಿಗ್ಗೆ ಎದ್ದರೆ ಪತ್ರಿಕೆಯಲ್ಲಿ 4-5 ಆಕ್ಸಿಡೆಂಟ್‌ಗಳು ಆಗಿವೆ ಎಂದು ಬರುತ್ತಿದೆ. ಇವೊತ್ತು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡುವುದಕ್ಕೆ ಯೋಜನೆಗಳನ್ನು ತಯಾರು ಮಾಡುವಾಗ ರಸ್ತೆಗಳನ್ನು ಬಹಳ ಚಿಕ್ಕದಾಗಿ ಮಾಡುತ್ತಿದ್ದಾರೆ. ಆದ್ದರಿಂದ ಇದನ್ನು ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕು. ಮತ್ತು ಸಿಟಿ ಇಂಪ್ರೂವ್‌ಮೆಂಟ್ ಬೋರ್ಡಿನವರು ಏನು ಲೇಔಟ್ ಪ್ಲಾನುಗಳನ್ನು ತಯಾರು ಮಾಡುತ್ತಾರೆ ಅದನ್ನು ಸರ್ಕಾರದವರು ಸ್ವಲ್ಪ ಪರಿಶೀಲನೆ ಮಾಡಬೇಕು. ಈಗ ಉದಾಹರಣೆಗೆ ಹೇಳುವುದಾದರೆ ವಿಕ್ಟೋರಿಯಾ ಲೇಔಟ್ ಮಾಡಿದ್ದಾರೆ. ಅಲ್ಲಿ 12 ಅಡಿ ರಸ್ತೆಗಳನ್ನು ಮಾಡಿದ್ದಾರೆ. ಈ ರೀತಿ ಮಾಡಿದರೆ ಜನಗಳು ಮತ್ತು ವಾಹನಗಳು ತಿರುಗಾಡುವುದಕ್ಕೆ ಯಾವಾಗ ಇಕಟ್ಟಾಗುತ್ತದೆಯೋ ಆಗ ಆಕ್ಸಿಡೆಂಟ್‌ಗಳು ಆಗೆಯೇ ಆಗುತ್ತವೆ. ಆದ್ದರಿಂದ ಇಂಥಾದ್ದನ್ನು ಸರ್ಕಾರದವರು ಗಮನಿಸಬೇಕು. ಬೆಂಗಳೂರು ನಗರ ದಿನೇ ದಿನೇ ಬೆಳೆದುಕೊಂಡು ಹೋಗುತ್ತದೆ. ಬೆಂಗಳೂರು ನಗರಕ್ಕೆ ಪ್ರತಿದಿವಸ 200 ಸಂಸಾರಗಳು ಹೊರಗಡೆಯಿಂದ ಬರುತ್ತವೆ. ಯಾರು ಬರುತ್ತಾರೆ, ಎಲ್ಲಿಂದ ಬರುತ್ತಾರೆ ಎಂಬುವನ್ನು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಬೆಂಗಳೂರಿಗೆ ಒಂದು ಉಪನಗರವನ್ನು ಕಟ್ಟಬೇಕಾಗಿದೆ. ಉಪನಗರವನ್ನು ಕಟ್ಟಿ ಅದಕ್ಕೆ ಏನೇನು ಸೌಲಭ್ಯಗಳು ಬೇಕೋ ಅವುಗಳನ್ನೆಲ್ಲಾ ಕೊಡಬೇಕಾಗುತ್ತದೆ.

ಸ್ಯೂಯರೇಜ್ ಬೋರ್ಡಿನವರು ರಸ್ತೆಗಳಲ್ಲಿ ಮ್ಯಾನ್‌ಹೋಲ್ ಮಾಡಿ ಹಾಗೆಯೇ ಹೊರಟು ಹೋಗುತ್ತಾರೆ. ಅವಕ್ಕೆ ಮುಚ್ಚಳವನ್ನು ಹಾಕುವ ಕೆಲಸ ನಮ್ಮದಲ್ಲ ಎಂದು ಸ್ಯೂಯರೇಜ್ ಬೋರ್ಡಿನವರು ಹೇಳುತ್ತಾರೆ. ಕಾರ್ಪೊರೇಷನ್ನಿನವರು ನಮಗೆ ಸಹಾಯ ಮಾಡಿದರೆ ಅದಕ್ಕೆ ಮುಚ್ಚಳವನ್ನು ನಾವು ಹಾಕುತ್ತೇವೆ ಇಲ್ಲದಿದ್ದರೆ ಅದನ್ನು ನಾವು ಹಾಕುವುದಕ್ಕಾಗುವುದಿಲ್ಲ ಎಂದು ಅವರು ಹೇಳುತ್ತಾರೆ. ಕೆಲವು ಕಡೆ ಮ್ಯಾನ್ ಹೋಲ್‌ಗಳಿಗೆ ಮುಚ್ಚಳವನ್ನು ಹಾಕಿರುವ ಕಡೆ ಕೆಲವು ಜನಗಳ ಆ ಮುಚ್ಚಳವನ್ನು ಹೊಡೆದುಕೊಂಡು ಹೋಗಿ ಭದ್ರಾವತಿಗೆ ಕಳುಹಿಸುತ್ತಾರೆ. ಮಾನ್ಯ ಮಂತ್ರಿಗಳು ಒಂದೊಂದು ಬಡಾವಣೆಗೆ ಒಂದೊಂದು ಗಂಟೆಯ ಕಾಲ ಭೇಟಿ ಕೊಟ್ಟು ಅವರು ಕಣ್ಣಾರೆ ನೋಡಿದರೆ ಅವರಿಗೆ ಅರ್ಥವಾಗುತ್ತದೆ. ಬೆಂಗಳೂರು ನಗರದಲ್ಲಿರುವ ಜನಗಳು ಬಹಳ ಕಷ್ಟದಲ್ಲಿದ್ದಾರೆ. ಆದ್ದರಿಂದ ಅವರಿಗೆ ಹೆಚ್ಚಿನ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ, ಮತ್ತು ಮಾನ್ಯ ಮಂತ್ರಿಗಳು ಒಂದೊಂದು ಡಿವಿಜನ್ನಿಗೆ ಒಂದೊಂದು ದಿವಸ ಭೇಟಿ ಕೊಟ್ಟು ಅಲ್ಲಿರುವ ಜನಗಳಿಗೆ ಏನೇನು ಕುಂದುಕೊರತೆಗಳು ಇವೆ ಎಂಬುದನ್ನು ವಿಚಾರಿಸಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಎಲ್ಲಿ ಮುನಿಸಿಪಾಲಿಟಿಯ ಅಧಿಕಾರಿಗಳು ಇರಲಿ, ಕಾರ್ಪೊರೇಷನ್ ಕೌನ್ಸಿಲರ್ ಇರಲಿ, ಮುನಿಸಿಪಲ್ ಕೌನ್ಸಿಲರ್ ಇರಲಿ, ಅಂಥಾ ಕಡೆ ರಸ್ತೆಗಳನ್ನು ಚೆನ್ನಾಗಿ ಗುಡಿಸಿ ಚೆನ್ನಾಗಿ ಇಟ್ಟಿರುತ್ತಾರೆ. ಬಡಜನಗಳು, ಇರುವ ಕಡೆ ಸರಿಯಾಗಿ ರಸ್ತೆಗಳನ್ನು ಗುಡಿಸುವುದಿಲ್ಲ. ಮತ್ತು ನಿವೇಶನಗಳನ್ನು ಹಂಚುವಾಗ ಬಡವರಿಗೆ ಹರಿಜನ ಗಿರಿಜನರಿಗೆ, ಮುಸ್ಲಿಮರಿಗೆ ಎಲ್ಲರಿಗೂ ಸಮಾನವಾಗಿ ಸೈಟುಗಳನ್ನು ಹಂಚಬೇಕು. ಎಲ್ಲರಿಗೂ ಸಮಾನವಾಗಿ ಸೈಟುಗಳನ್ನು ಹಂಚದಿದ್ದರೆ

(ಶ್ರೀ ಎಸ್. ಹಮೀದ್ ಷಾ)

ಇಷ್ಟೊಂದು ಟೀಕೆಗಳು ಬರುತ್ತಿರಲಿಲ್ಲ. ಇನ್ನೊಂದು ಮಾತು ಏನೆಂದರೆ, 25 ವರ್ಷಗಳಿಂದ ಏನೊಂದು ಕೆಲಸ ಆಗಲಿಲ್ಲ ಅದನ್ನು ಈಗ ನಮ್ಮ ಸರ್ಕಾರದವರು ಮಾಡಿದ್ದಾರೆ. ಇವತ್ತು ಈ ಅಲ್ಪಜನಾಂಗದವರು ಏನಿದ್ದಾರೆ ಅವರಿಗೆ ಏನೂ ಕೊಡಕೂಡದು : ಅವರು ವ್ಯಾಪಾರ ಮಾಡ ಕೂಡದು ಮತ್ತು ಅವರ ಹತ್ತಿರ ಏನಿದರೂ ಕಿತ್ತುಕೊಳ್ಳಬೇಕನ್ನುವ ಮನೋಭಾವ ಕೆಲವರಲ್ಲಿ ಇದೆ. ಇದರಿಂದಾಗಿ ಈ ಜನಾಂಗದವರಿಗೆ ರಿಸರ್ವೇಶನ್ ಕೊಟ್ಟದ್ದು ನೋಡಿ ಕೆಲವರಿಗೆ ಹೊಟ್ಟೆಕಿಚ್ಚು ಬಂದಿದೆ.

5.00 P. M.

ಇನ್ನೊಂದು ವಿಚಾರವೇನೆಂದರೆ, ನಾನು ಮತ್ತು ಮಾನ್ಯ ಸೂರ್ಯನಾರಾಯಣ ಗೌಡರು ಒಂದು ಪಿ ಅಂಡ್ ಟಿ ಮೀಟಿಂಗಿಗೆ ಹೋಗಿದ್ದೆವು ಅಲ್ಲಿ ನಿಮ್ಮ ಮುನಿಸಿಪಾಲಿಟಿಯವರು ನಮಗೆ ಬಹಳ ತೊಂದರೆ ಕೊಡುತ್ತಿದ್ದಾರೆಂದು ಹೇಳಿದರು. ನಮಗೆ ಆಶ್ಚರ್ಯವಾಯಿತು. ಅದಕ್ಕೆ ಕಾರಣ ಏನೆಂದು ಕೇಳಿದಾಗ, ನೋಡಿ ನಿಮ್ಮ ಮುನಿಸಿಪಾಲಿಟಿಯವರು ಮನೆಗಳಿಗೆ ಒಂದು ಹೊಸ ನಂಬರು ಮತ್ತೊಂದು ಹಳೆಯ ನಂಬರ್—ಹೀಗೆ ಎರಡು ನಂಬರುಗಳನ್ನು ಕೊಟ್ಟಿದ್ದರಿಂದ ಪೋಸ್ಟಲ್ ಇಲಾಖೆಯವರಿಗೆ ಕಾಗದ ಪತ್ರಗಳನ್ನು ತಲಪಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಒಬ್ಬನಿಗೆ ಟೆಲಿಗ್ರಾಂ ಬಂದರೆ ಅದನ್ನು ಇನ್ನೊಬ್ಬನಿಗೆ ಕೊಡುವ ಪ್ರಸಂಗ ಬರುತ್ತದೆ. ಹೀಗೆ ತಪ್ಪು ಡೆಲಿವರಿ ಮಾಡುವುದರಿಂದ ಒಬ್ಬನ ಮನೆಯಲ್ಲಿ ಸತ್ತರೆ ಯಾರೋ ಇನ್ನೊಬ್ಬ ಅಳಬೇಕಾಗಿದೆ. ಇದರ ಬಗ್ಗೆ ಸಹ ಸರ್ಕಾರ ಗಮನ ಕೊಡಬೇಕೆಂದು ಹೇಳುತ್ತೇನೆ. ಅವಕ್ಕೆ ಒಂದೊಂದು ಬೀದಿಯಲ್ಲಿ ಎಷ್ಟು ಮನೆಗಳು ಇವೆ, ಅವುಗಳ ನಂಬರನ್ನು ಬೀದಿಯು ಪ್ರಾರಂಭವಾಗುವ ಜಾಗದಲ್ಲಿ ಬರೆದು ಯಾರೂ ಬಂದರೂ ಒಂದು ಮನೆಯ ನಂಬರು ಕಂಡುಹಿಡಿಯುವ ಹಾಗೆ ವ್ಯವಸ್ಥೆ ಕಾರ್ಪೋರೇಷನವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಏನೆಂದರೆ ಎಲೆಕ್ಟ್ರಿಸಿಟಿ ಬೋರ್ಡಿನವರು ಮತ್ತು ಸಿವರೇಜ್ ಬೋರ್ಡಿನವರು ಕೆಲಸ ಮಾಡುವಾಗ ಒಬ್ಬರಿಗೊಬ್ಬರು ಹೊಂದಾಣಿಕೆಯಿಂದ ಮಾಡುತ್ತಾ ಇಲ್ಲ. ಒಂದು ಕಡೆ ಒಬ್ಬರು ಅಗೆಯುವುದು, ಇನ್ನೊಂದು ಕಡೆ ಇನ್ನೊಬ್ಬರು ಅಗೆಯುವುದು. ಇದರಿಂದಾಗಿ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ. ಇವತ್ತು ನಾನು ಕಾರಿನಲ್ಲಿ ಒಬ್ಬರ ಜೊತೆಗೆ ಬರುವಾಗ ಇಂಥ ಅಗೆದ ರೋಡುಗಳನ್ನು ನೋಡಿ ನೀವು ಕಾರ್ಪೋರೇಶನ್ ಮೇಲೆ ಕೇಸ್ ಹಾಕಿರಯ್ಯ ಎಂದು ಹೇಳಿದೆ. ಅಷ್ಟು ರಸ್ತೆಗಳು ಅವ್ಯವಸ್ಥೆಗೊಂಡಿದೆ.

ಆದ್ದರಿಂದ ಇಂತಹ ಕೆಲಸಗಳನ್ನು ಮಾಡುವಾಗ ಒಂದು ಇಲಾಖೆಗೂ ಇನ್ನೊಂದು ಇಲಾಖೆಗೂ ಹೊಂದಾಣಿಕೆ ಇಟ್ಟುಕೊಂಡು ಸಾರ್ವಜನಿಕರಿಗೆ ಹೆಚ್ಚು ತೊಂದರೆಯಾಗದ ಹಾಗೆ ಮಾಡಬೇಕಾಗುತ್ತದೆ. ಕಾರ್ಪೋರೇಷನಿನಲ್ಲಿಯೂ ಸಹ ಹೊಸ ಹೊಸ ಕಮೀಶನರ್ಸ್ ಬರುವಾಗ ಹೊಸ ಹೊಸ ರೂಲ್ಸ್ ಮಾಡುತ್ತಾರೆ. ಅಲ್ಲಿ ವರ್ಷಕ್ಕೆ ಒಂದು ಸಾರಿ ಕಮೀಶನರನ್ನು ಬದಲಾವಣೆ ಮಾಡುತ್ತಾರೆ. ಒಬ್ಬ ಹೊಸಬ ಬಂದು ಕೆಲಸ ಕಲಿತು 6 ತಿಂಗಳಾದ ತಕ್ಷಣ ಬೇರೆ ಕಡೆ ಹಾಕಿ ಬಿಡುತ್ತಾರೆ. ಇದರಿಂದ ಅಲ್ಲಿ ಕೆಲಸವು ಸಹ ಸಮರ್ಪಕವಾಗಿ ನಡೆಯುವುದಿಲ್ಲ. ಎಷ್ಟೋ ಕಡೆಗಳಲ್ಲಿ ಕಾರ್ಪೋರೇಷನ್ ರಸ್ತೆ ಮಧ್ಯದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ನಾವು ಏನಾದರೂ ಇದರ ಬಗ್ಗೆ ಕಾರ್ಪೋರೇಷನಿಗೆ ಪತ್ರ ಬರೆದರೆ ಯಾವ ಒಂದು ಜವಾಬು ಸಹ ಬರುವುದಿಲ್ಲ. ನಮ್ಮ ಕಾರ್ಪೋರೇಷನ್ ಹೆಚ್ಚಾಗಿ ಸ್ಕೂಲುಗಳನ್ನು ಮತ್ತು ಮೆಟರ್ನಿಟಿ ಹೋಂಗಳನ್ನು ನಡೆಸುತ್ತಿದ್ದಾರೆ. ಆದರೆ ಅಲ್ಲಿ ಕೊಡುವಂತಹ ಸೌಲಭ್ಯ ಬಹಳ ಕಡಿಮೆ. ಬೆಂಗಳೂರು ನಗರದಲ್ಲಿ ಇವರು ನಡೆಸುವಂತಹ 4-5 ಆಸ್ಪತ್ರೆಗಳು ಇವೆ. ಆದರೆ ಅಲ್ಲ ನಾಗರೀಕರಿಗೆ ಒದಗಿಸುವಂತಹ ಸೌಲಭ್ಯ ಏನೂ ಸಾಲದು. ಅದನ್ನು ಇನ್ನೂ ಹೆಚ್ಚು ಮಾಡಿ ಬಡ ಜನರಿಗೆ ಅನುಕೂಲವಾಗುವಂತಹ ಮದದ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ಎಲ್ಲೆಲ್ಲಿ ದೊಡ್ಡ ರಸ್ತೆಗಳು ಮತ್ತು ಹರಿಜನ ಕೇರಿಗಳು ಇವೆ ಅಲ್ಲಿ ಸೇಂದಿ ಅಂಗಡಿಗಳನ್ನು ತೆರೆಯಬಾರದು. ಇವತ್ತು ಇವುಗಳ ಸಂಖ್ಯೆ ಬಹಳ ಜಾಸ್ತಿ ಇವೆ. ಬೆಂಗಳೂರಿನ ಕಂಟೋನ್ಮೆಂಟಿನಲ್ಲಿ ನೋಡಿದರೆ ಹೆಜ್ಜೆ ಹೆಜ್ಜೆಗೂ ಒಂದೊಂದು ಅಂಡಿಗಳು ಇವೆ. ಹಿಂದೆ ಬೆಂಗಳೂರು ನಗರ ದೊಡ್ಡ ಗಾರ್ಡನ್ ಸಿಟಿ ಎಂದು ಹೆಸರುವಾಸಿಯಾಗಿತ್ತು. ಆದರೆ ಇವತ್ತು ಆ ಹೆಸರಿಗೆ ತಕ್ಕಂತೆ ನಮ್ಮ ಸಿಟಿ ಇಲ್ಲ. ಹೆಚ್ಚಾಗಿ ಹರಿಜನರು ಮತ್ತು ಮುಸ್ಲಿಂಸ್ ಇರುವಂತಹ ಗಲಿಗಳಲ್ಲಿ ಯಾವ ರೀತಿ ಸೌಲಭ್ಯವಿದೆ ಎಂಬುದನ್ನು ನಾವು ನೋಡಿದರೆ ಗೊತ್ತಾಗುತ್ತದೆ.

ಅಲ್ಲಿ ಆ ಜನರು ಎಷ್ಟು ಕಷ್ಟದಿಂದ ಮತ್ತು ದುಃಖದಿಂದ ಜೀವನ ಮಾಡುತ್ತಾರೆ ಎಂಬುದನ್ನು ನಾವು ನೋಡಬೇಕು. ಇವತ್ತು ನಾವು ಸ್ಲಂ ಕ್ಲಿಯರೆನ್ಸ್ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ಇವತ್ತು ಸ್ಲಂಸ್ ಹೆಚ್ಚಾಗಿ ಬೆಳೆಯುತ್ತಾ ಇವೆ. ಇವತ್ತು ನಮ್ಮ ಎಲ್ಲಾ ಡಿವಿಜನ್‌ಗಳನ್ನು ಮಂತ್ರಿಯವರು ನೋಡಿಕೊಂಡು ಬಂದರೆ ಅದು ಗೊತ್ತಾಗುತ್ತದೆ. ಆದ್ದರಿಂದ ಇಂತಹ ಅವ್ಯವಸ್ಥೆಯನ್ನು ತಪ್ಪಿಸಿ ಒಳ್ಳೆಯ ಸಿಟಿಯಾಗುವಂತೆ ಕಾರ್ಪೊರೇಷನ್ ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಸ್ಥಳೀಯ ಸಂಸ್ಥೆಯ ಇಲಾಖೆಯ ಸಚಿವರು ತಂದಿರತಕ್ಕಂತಹ ಬೇಡಿಕೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ಕೆಲವು ಮಾತುಗಳನ್ನು ಆಡಬಯಸುತ್ತೇನೆ. ಪ್ರಥಮವಾಗಿ ಬೆಂಗಳೂರು ಕಾರ್ಪೊರೇಷನ್ ಒಂದು ರೀತಿಯಲ್ಲಿ ಇಡೀ ರಾಜ್ಯದಲ್ಲಿರುವ ಮುನಿಸಿಪಾಲಿಟಿಗಳಿಗೆ ಸಮನಾಗಿರುತ್ತದೆ ಎಂದು ಭಾವಿಸುತ್ತೇನೆ. ಬೆಂಗಳೂರು ಕಾರ್ಪೊರೇಷನಿನಲ್ಲಿ ಕಾಗ್ರೆಸ್ ಪಾರ್ಟಿಯವರು ಡಿ.ಎಂ.ಕೆ ಮತ್ತಿತರರನ್ನು ಸೇರಿಸಿಕೊಂಡು ಆಡಳಿತ ನಡೆಸುತ್ತಿದ್ದಾರೆ. ಇವತ್ತು ಭ್ರಷ್ಟಾಚಾರದ ಆರೋಪಣೆ ಮಾಡುವುದಾದರೆ, ಅದು ನಿಮ್ಮ ಪಾರ್ಟಿಯ ಮೇಲೆ ಮತ್ತು ಅದಕ್ಕೆ ಹೊಂದಿಕೊಂಡಿರತಕ್ಕಂತಹ ಕಾರ್ಪೊರೇಟರ್‌ಗಳ ಮೇಲೆ ಗುರುತರವಾದ ಆಪಾದನೆಯನ್ನು ಮಾಡಬಹುದು. ಕಾರ್ಪೊರೇಷನ್ ಜಾಗವನ್ನು ಕಾರ್ಪೊರೇಟರುಗಳು ತಮ್ಮ ಸ್ವಂತ ಸಂಬಂಧಿಕರ ಹೆಸರಿನಲ್ಲಿ ಮಾಡಿಕೊಂಡ ಅನೇಕ ನಿದರ್ಶನಗಳು ಇವೆ. ಕೆಲವರು ಕಾರ್ಪೊರೇಷನ್ ಕಟ್ಟಡಗಳನ್ನು ಸ್ವಂತ ಮನೆಗಳನ್ನಾಗಿ ಮಾಡಿಕೊಂಡಿದ್ದಾರೆ. ಆ ಪ್ರಕಾರವಾಗಿ ಕಾರ್ಪೊರೇಷನ್ ಆಡಳಿತ ನಡೆಯುತ್ತಾ ಇದೆ. ಕಾರ್ಪೊರೇಷನ್ ಜಮೀನು ಏನಿದೆ ಅದನ್ನು ಗುತ್ತಿಗೆಗೆ ಕೊಟ್ಟಿರತಕ್ಕ ನೀತಿ ಸರಿಯಾಗಿಲ್ಲ. ಸರ್ಕಾರದವರು ಆ ರೀತಿಯಾಗಿ ಕೊಡಬಾರದೆಂಬ ನೀತಿ ಇಟ್ಟುಕೊಂಡು ಇರುವಾಗ ನಿಮ್ಮನ್ನು ಧಿಕ್ಕರಿಸಿ ನಿಮ್ಮ ನೀತಿಯನ್ನು ಕಾರ್ಯಾಚರಣೆಗೆ ತರದೆ ಬಡ ಜನಗಳಿಗೆ 11 ತಿಂಗಳವರೆಗೆ ಕೋಟ್ಯಾಂತರ ರೂಪಾಯಿಗಳ ಜಾಗವನ್ನು ಗುತ್ತಿಗೆಗೆ ಕೊಟ್ಟಿದ್ದಾರೆ. ಆ ಜಾಗ ತೆಗೆದುಕೊಂಡಿರುವವರು ಬಹುತೇಕ ಕಾರ್ಪೊರೇಷನ್ನಿನಲ್ಲಿ ಅಡಳಿತ ನಡೆಸತಕ್ಕ ತಮ್ಮ ಪಕ್ಷದವರು. ಹಾಗೂ ತಮ್ಮ ಪಕ್ಷಕ್ಕೆ ಬೆಂಬಲ ಕೊಟ್ಟಿರುವ ಡಿ.ಎಂ.ಕೆ. ಅವರು ಈಗ ನಿಮ್ಮ ಕಾರ್ಪೊರೇಷನ್ ಆಡಳಿತ ನಡೆಸುತ್ತಾ ಇರತಕ್ಕವರು. ನಾನು ಕಾರ್ಪೊರೇಷನ್ ಆಡಳಿತವನ್ನು ಮೊದಲಿನಿಂದಲೂ ನೋಡಿದ ಪ್ರಕಾರ, ಸೂಪರ್‌ಸೀಡ್ ಅವಶ್ಯಕತೆ ಇದೆಯೋ ಏನೋ ಎಂದು ಅನ್ನಿಸಿತು. ಆದರೆ ಈಗಲೂ ಅಲ್ಲಿನ ಆಡಳಿತ ಏನೂ ಚೆನ್ನಾಗಿಲ್ಲ, ಸರಿಯಾಗಿಲ್ಲವೆಂದು ನಾನು ಹೇಳುತ್ತೇನೆ. ಚುನಾವಣೆಯಾದಮೇಲೆ ಚುನಾಯಿತ ಪ್ರತಿನಿಧಿಗಳು ಬಂದು ಬೆಂಗಳೂರು ನಗರವನ್ನು ಇನ್ನೂ ಸುಂದರ ನಗರವನ್ನಾಗಿ ಮಾಡಿ ನಾಗರೀಕರಿಗೆ ಹೆಚ್ಚಿನ ಅನುಕೂಲಗಳನ್ನು ಒದಗಿಸಬೇಕೆಂಬ ದೃಷ್ಟಿಯಿಂದ ನಾವೆಲ್ಲರೂ ಸತತವಾಗಿ ಹೋರಾಡಿದ್ದೇವೆ. ಆದರೆ ಈಗ ಅಲ್ಲಿ ಆಡಳಿತವನ್ನು ನಡೆಸತಕ್ಕಂಥ ತಮ್ಮ ಪಕ್ಷದವರ ರೀತಿನೀತಿ ನೋಡಿದರೆ ಸಂಪೂರ್ಣವಾಗಿ ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ಒಂದು ರೀತಿಯ ಕ್ಯಾನ್ಸರ್ ರೋಗ ತಗುಲಿದ ಹಾಗೆ ಆಗಿದೆ. ಈಗ ಇದನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವೇ ಇಲ್ಲವೇ ಎಂಬುದು ಶಂಕೆಯಾಗಿದೆ. ಅದನ್ನು ಮಾಡುವುದಕ್ಕೆ ನಿಮಗೆ ಸಾಧ್ಯವಿಲ್ಲ. ತಮ್ಮ ಹೇಳಿಕೆಯ ಪ್ರಕಾರ ಹಿಂದಿದ್ದಂಥ ಇಬ್ಬರು ಮೇಯರ್‌ಗಳ ಕಾಲದಲ್ಲಿ ಆಡಳಿತ ಯಂತ್ರ ಬಹಳವಾಗಿ ಕೆಟ್ಟುಹೋಗಿದೆಯೆಂದು ಹೇಳಿದ್ದೇವೆ. ಅದರಿಂದಲೇ ಅಲ್ಲಿಂದೀಚೆಗೆ ಬೆಂಗಳೂರು ಕಾರ್ಪೊರೇಷನ್ನಿಗೆ ಕ್ಯಾನ್ಸರ್ ರೋಗ ಬಂದಿದೆ. ಆದರೆ ಇನ್ನೊಂದು ವಿಷಯ ಇವರು ಏನು ಮಾಡುತ್ತಿದ್ದಾರೆಂದರೆ, ಎಲ್ಲೆಲ್ಲಿ ಮುನಿಸಿಪಾಲಿಟಿಗಳಲ್ಲಿ ಬಹಳ ಚೆನ್ನಾಗಿ ಆಡಳಿತ ನಡೆಯುತ್ತಿದೆಯೋ ಅಂತಹ ಮುನಿಸಿಪಾಲಿಟಿಗಳನ್ನು ಮುಚ್ಚಿಹಾಕುತ್ತಿದ್ದಾರೆ. ಕಾರಣ ನಮ್ಮ ಮಾತು ಏನೂ ನಡೆಯುವುದಿಲ್ಲವೆಂಬುದು ಆಗಿದೆ. ನಿಮ್ಮ ಇಷ್ಟ ಬಂದಹಾಗೆ ಆಡಳಿತ ಮಾಡಿ ಎಂದರೆ ಹೇಗೆ? ಅವರನ್ನು ಕೈಗೊಂಬೆಗಳ ಹಾಗೆ ಮಾಡಿಕೊಂಡಿದ್ದಾರೆ. ಮೈಸೂರಿನಲ್ಲಿ ನಾನು ನೋಡಿಕೊಂಡು ಬಂದಿದ್ದೇನೆ. ಅಲ್ಲಿನ ಮುನಿಸಿಪಾಲಿಟಿಯಲ್ಲಿ ಬಹಳ ಚೆನ್ನಾಗಿ ಆಡಳಿತ ನಡೆಯುತ್ತಿದೆ. ಅದನ್ನು ಈಗ ಸಂಪೂರ್ಣವಾಗಿ ಮುಚ್ಚಿಹಾಕಿ ಯಾರೋ ಒಬ್ಬ ಅಡ್ಮಿನಿಸ್ಟ್ರೇಟರ್ ಅವರನ್ನು ತಂದು ಇಟ್ಟಿದ್ದಾರೆ. ಅವರು ಈಗ ಅಲ್ಲಿ ಲಂಗುಲಗಾಮು ಇಲ್ಲದೆ ಸ್ವೇಚ್ಛಾವರ್ತನೆಯಿಂದ ಆಡಳಿತವನ್ನು ನಡೆಸುತ್ತಿದ್ದಾರೆ. ಅದು ಒಂದು ಮಿಲಿಟರಿ ರಾಜ್ಯದಂತಿದೆಯೆಂಬ ಪ್ರಶ್ನೆ ಬಂದಿದೆ. ಈಗ ಬೆಂಗಳೂರು ನಗರದಲ್ಲಿ ಒಂದು ಷಾಪ್ ಸೆಂಟರ್ ಅಂದರೆ ಅಂಗಡಿಗಳ ಚೌಕದ ಕೇಂದ್ರವೊಂದನ್ನು ಮಾಡುವುದಕ್ಕೆ ಇತ್ತೀಚೆಗೆ ಒಬ್ಬ ದೊಡ್ಡ ಬಿಲ್ಡರ್ ಏಜೆಂಟರಾದ ಮಾನ್ಯ ಶ್ರೀ ಸಿ. ಸಿ. ಮಲ್ಲಪ್ಪನವರು ಎನ್ನುವವರಿಗೆ ಕೊಟ್ಟಿದ್ದಾರೆ. ಇದರಿಂದ ಕಾರ್ಪೊರೇಷನ್ನಿನಲ್ಲಿ ಸ್ವೇಚ್ಛಾವರ್ತನೆಯಿಂದ ಆಡಳಿತವನ್ನು ನಡೆಸಿ ಹಣವನ್ನು ಸರಿಯಾಗಿ ವಿನಿಯೋಗಿಸಿಲ್ಲವೆಂದು ನನ್ನ ಅಭಿಪ್ರಾಯ. ಇತ್ತೀಚೆಗೆ ಕಾರ್ಪೊರೇಷನ್ನಿನಲ್ಲಿದ್ದಂಥ ಒಬ್ಬ ಇಂಜನಿಯರ್ ಮಾನ್ಯ ಶ್ರೀ ಚುಳ್ಳಿ

(ಶ್ರೀ ವಾಟಾಳ್ ನಾಗರಾಜ್)

ಎಂಬುವರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ನಾನು ಅವರ ಕೆಲಸವನ್ನು ಟ್ರಸ್ಟ್ ಬೋರ್ಡಿನಲ್ಲಿಯೂ ನೋಡಿದ್ದೇನೆ. ಮತ್ತು ಇನ್ನೂ ಅನೇಕ ಕಡೆಗಳಲ್ಲಿಯೂ ಅವರು ಕೆಲಸ ಮಾಡಿರುವುದನ್ನೂ ನೋಡಿದ್ದೇನೆ. ಅವರು ಬಹಳ ದಕ್ಷ ಆಡಳಿತಗಾರರು. ಅಂತಹ ಒಬ್ಬ ಎ ಒನ್ ಆಫೀಸರನ್ನು ಅದರಲ್ಲಿಯೂ ಪ್ರಾಮಾಣಿಕರಾದಂಥ ಅಧಿಕಾರಿಗಳನ್ನು ಈಗ ವರ್ಗ ಮಾಡಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರಿಗೆ ಅಲ್ಲಿ ಲಂಚ ತೆಗೆದುಕೊಳ್ಳುವುದಕ್ಕೆ ಬರಲಿಲ್ಲವೆಂದು ಅವರನ್ನು ಅಲ್ಲಿಡಲಿಲ್ಲ. ಅವರನ್ನು ಹೇಗಾದರೂ ಮಾಡಿ ಮನೆಗೆ ಕಳುಹಿಸಬೇಕೆಂದು ತಾವು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಸನ್ನಾಹ ನಡೆಸಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅದು ಬಹಳ ಸಣ್ಣ ಕೆಲಸ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶ್ರೀ ಪಿ. ಸಿ. ಮುಲ್ಲಾನಿಯವರನ್ನೂ ಕೂಡ ಹಿಂದೆ ಒಬ್ಬ ಕಂಟ್ರಾಕ್ಟರ್ ಅವರ ಮಾತನ್ನು ಕೇಳಿದ್ದಾರೆಂದು ತೆಗೆದಿರುವುದು ನಿಜವಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಶ್ರೀ ನಾಗರಾಜ್ ಅವರು ಮಾತನಾಡಿದ್ದು ಸರಿಯಲ್ಲ, ಏನೂ ವಿಷಯ ಸರಿಯಾಗಿ ತಿಳಿದುಕೊಳ್ಳದೆ ಹೀಗೆ ಸುಮ್ಮನೆ ಒಬ್ಬರ ಮೇಲೆ ಚಾರ್ಜ್ ಮಾಡುವುದು ಅಷ್ಟು ದೊಡ್ಡ ಕೆಲಸವಲ್ಲ. ಅವರು ಈಗ ಹೇಗೆ ಮಾತನಾಡುತ್ತಿದ್ದಾರೋ ಹಾಗೆಯೇ ಅದನ್ನು ಅವರು ರಿಸೀವ್ ಮಾಡಬೇಕಾಗುತ್ತದೆ. ಆದ್ದರಿಂದ ದಯಮಾಡಿ ವಿಚಾರಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿ, ಕಾಂಟ್ರಾಕ್ಟ್ ಕಾನೂನು ಪ್ರಕಾರ ಯಾರಿಗೋ ಕೊಟ್ಟಿರುವುದನ್ನು ಬಿಟ್ಟು ಬೇರೆ ಯಾವರು ಕಡಿಮೆ ರೇಟ್ ಕೊಟ್ಟರೆಂದು ಅವರಿಗೆ ಕೊಟ್ಟಿದ್ದಾರೆ, ಕಡಿಮೆ ಕೊಟೇಷನ್ ಇದ್ದವರಿಗೆ ಏಕೆ ಕೊಡಲಿಲ್ಲವೆಂದು ಅವರು ಹೇಳಬಹುದು. ಅದೆಲ್ಲಾ ಬಿಟ್ಟು ಬೇರೆಯವರಿಗೆ ಕೊಟ್ಟರೆ ಹೇಗೆ! ಮಾನ್ಯ ಶ್ರೀ ಚುಲ್ಕಿಯವರು ಒಬ್ಬ ಅಧಿಕಾರಿ. ಅವರಿಗೂ ಇವರಿಗೂ ಏನು ಸಂಬಂಧ! ಹೀಗಾದರೆ ಯಾವ ಆಫೀಸಿನಲ್ಲಿ ಏನು ಕೆಲಸ ಮಾಡಬಹುದು? ಈಗ ಆ ಅಧಿಕಾರವನ್ನು ಯಾರು ನಡೆಸುತ್ತಿದ್ದಾರೆ! ಯಾವ ಅಧಿಕಾರಿ ಮಾನ್ಯ ಶ್ರೀ ಚುಲ್ಕಿಯವರನ್ನು ಮನೆಗೆ ಕಳುಹಿಸಿದ್ದಾರೆ? ಇದೇನು ವಿಚಾರ! ಮಾನ್ಯ ಸದಸ್ಯರು ಜವಾಬ್ದಾರಿಯುತವಾಗಿ ಕೆಲಸ ಮಾಡಿದಂತಹವರು. ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡು ಜವಾಬ್ದಾರಿಯಿಂದ ಈ ಸಭೆಯಲ್ಲಿ ಮಾತನಾಡಿದರೆ ಕ್ಷೇಮ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಚುಲ್ಕಿಯವರನ್ನು ಮನೆಗೆ ಕಳುಹಿಸಿಲ್ಲ, ಟ್ರಾನ್ಸ್‌ಫರ್ ಆಗಿದೆಯೆಂದು ಹೇಳುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ಇರಬಹುದು.

ಶ್ರೀ ವಾಟಾಳ್ ನಾಗರಾಜ್.—ಏಕೆ ತಾವು ಇಷ್ಟು ಇರ್ರಿಟೇಟ್ ಆಗುತ್ತೀರಿ? ಒಬ್ಬ ಕಂಟ್ರಾಕ್ಟರ್ ಪಿ. ಸಿ. ಮುಲ್ಲಾನಿ ಮೇಲೆ ಚಾರ್ಜ್ ಇದೆ. ಅವರು ಎಲ್ಲಿದ್ದರೆಂಬುದು ಗೊತ್ತು. ಆದರೆ ಮಾನ್ಯ ಶ್ರೀ ಚುಲ್ಕಿಯವರು ಚೀಫ್ ಇಂಜಿನಿಯರ್ ಆಗಿದ್ದರು.

ಶ್ರೀ ಡಿ. ದೇವರಾಜ್ ಅರಸ್.—ಸೆಕ್ಷನ್ 288ರ ಪ್ರಕಾರ ಒಬ್ಬ ಸದಸ್ಯರು ಏನು ಮಾತನಾಡಬೇಕು ಎಂಬುದು ಇದೆ. ಅದರ ಪ್ರಕಾರ ಮಾತನಾಡಲಿ. ಯಾರಮೇಲಾದರೂ ಚಾರ್ಜ್ ಇದ್ದರೆ ಅದನ್ನೂ ಸಹ ಇಲ್ಲಿ ಪ್ಲೇಸ್ ಮಾಡಲಿ. ಇನ್ನೊಬ್ಬರ ಮೇಲೆ ಇವರು ಚಾರ್ಜ್ ಮಾಡಿದರೆ ಇದು ಅವರಿಗೂ ಅನ್ವಯಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಹಿಂದೆ ಲಕ್ಕವಳ್ಳಿ ಡ್ಯಾಂನಲ್ಲಿ ಮಾನ್ಯ ಶ್ರೀ ಮುಲ್ಲಾನಿಯವರು ಕೆಲಸ ಮಾಡುತ್ತಿದ್ದರು. ಅವರು ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿದ್ದರು. ಅವರ ಅಕ್ರಮಗಳನ್ನು ಬಯಲಿಗೆ ಎಳೆದಾಗ ಹಿಂದೆ ಅವರ ಮೇಲೂ ಅಪಾದನೆಗಳು ಬಂದಿದ್ದುವು. ಆದ್ದರಿಂದ ನಾನು ಕೆಲವು ದಕ್ಷರಾದ ಅಧಿಕಾರಿಗಳ ವಿಷಯವನ್ನು ಇಲ್ಲಿ ಹೇಳದೇ ಹೋದರೆ, ನಾನು ಕರ್ತವ್ಯಕ್ಕೆ ಚ್ಯುತಿ ಮಾಡಬೇಕಾಗುತ್ತದೆ. ನಮ್ಮ ಕಾರ್ಪೋರೇಷನ್ನಿನಲ್ಲಿಯೂ ಕೆಲವು ದಕ್ಷರಾದ ಅಧಿಕಾರಿಗಳು ಇದ್ದಾರೆ, ಅದರ ಒಂದು ಆಡಳಿತದಲ್ಲಿ ತಮ್ಮದು ಹಸ್ತಕ್ಷೇಪ ಈ ಕಾರ್ಪೋರೇಷನ್ನಿನಲ್ಲಿ ಇದೆ. ಈ ರೀತಿಯಾಗಿ ಹಸ್ತಕ್ಷೇಪ ಮಾಡಿ ಒಬ್ಬ ದಕ್ಷ ಅಧಿಕಾರಿಯನ್ನು ಹೊರಗೆ ಕಳುಹಿಸುವಂತಹ ನೀತಿಯನ್ನು ಹಾಕುವುದಾದರೆ, ನಿಮ್ಮ ಈ ಒಂದು ಆಡಳಿತ ಸರಿಯೇ ಎಂದು ನಾನು ಈಗ ಪ್ರಶ್ನೆ ಮಾಡಬೇಕಾಗಿದೆ.

ಇನ್ನೊಂದು ವಿಷಯ, ಬೆಂಗಳೂರು ಕಾರ್ಪೋರೇಷನ್ನಿನಲ್ಲಿ 1966ರಿಂದ ಇಲ್ಲಿಯವರೆಗೂ ಅಲ್ಲಿನ ಲೆಕ್ಕಪತ್ರಗಳು ಆಡಿಟ್ ಆಗಿಲ್ಲ. ಆಡಿಟ್ ವರದಿಯನ್ನು ಕಾರ್ಪೋರೇಷನ್ ಮುಂದೆ ಇಟ್ಟಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಇವರು ಅಪ್ರೂವ್ ಮಾಡಿದ್ದು ಎಂದು ಹೇಳುತ್ತಾರೆ. ಇದನ್ನು ಸರ್ಕಾರ ಮಾಡುತ್ತದೋ ಅಥವಾ ಕಾರ್ಪೊರೇಷನ್ ಮಾಡುತ್ತದೋ ?

ಶ್ರೀ ವಾಟಾಳ್ ನಾಗರಾಜ್.—ಇದು ಅಂತಿಮವಾಗಿ ಸರ್ಕಾರಕ್ಕೇ ಬರಬೇಕು. ಇಲ್ಲದಿದ್ದರೆ ನಮ್ಮ ಮಾತು ಅಲ್ಲಿ ಏನು ನಡೆಯುತ್ತದೆ ?

ಶ್ರೀ ಡಿ. ದೇವರಾಜ್ ಅರಸ್.—ಕಾರ್ಪೊರೇಷನ್ ಅಪ್ರೂವ್ ಮಾಡಿದ್ದನ್ನೇ ನಾವು ಅಪ್ರೂವ್ ಮಾಡುವುದು.

ಶ್ರೀ ವಾಟಾಳ್ ನಾಗರಾಜ್.—ಕಾರ್ಪೊರೇಷನ್ ಸಭೆ ಹೇಗೆ ನಡೆಯುತ್ತದೆಂದರೆ ಅರ್ಧ ರಾತ್ರಿಯಲ್ಲಿ ಸಭೆಯನ್ನು ನಡೆಸುತ್ತಾರೆ. ಒಂದರಿಂದ 60ನೇ ಸಬ್ಜೆಕ್ಟ್‌ವರೆಗೂ ಪಾಸ್ಡ್ ಎಂದು ಹೇಳಿ ಒಂದು ನಿರ್ಣಯ ಮಾಡುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ಕಾರ್ಪೊರೇಷನ್ನಿನವರು ಬಹುಮತದಿಂದ ನಡೆಸಿದರೆ ಅದು ಪ್ರಜಾಪ್ರಭುತ್ವ ಆದರೆ ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಮೇಯರ್ ಆದರೂ ಅವರು ನಡೆಸುವುದೂ ಸಹ ಹಾಗೆಯೇ ಮಾನ್ಯ ಸದಸ್ಯರು ಹಿಂದೆ ಎಷ್ಟೋ ಸಾರಿ ನಾನೇ ಮೇಯರ್ ಎಂದು ಮೇಯರ್ ಸೀಟಿನಲ್ಲಿ ಕುಳಿತಿದ್ದೂ ಉಂಟು. ಕಾರ್ಪೊರೇಷನ್ನಿನವರು ಮಾಡಿದಂಥ ಶಿಫಾರಸುಗಳಿಗೆ ವಿರೋಧವಾಗಿ ನಾವು ಒಳಸಂಚು ಮಾಡಿದ್ದೇವೆಂದು ಯಾವುದಾದರೂ ನಿದರ್ಶನವನ್ನು ಕೊಟ್ಟರೆ, ಆಗ ನಾವು ಒಪ್ಪಿಕೊಳ್ಳುತ್ತೇವೆ. ಕಾರ್ಪೊರೇಷನ್ನಿನವರು ಶಿಫಾರಸು ಮಾಡಿದ್ದನ್ನು ನಾವು ಒಪ್ಪಿಕೊಂಡದ್ದೂ ಉಂಟು.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಾರ್ಪೊರೇಷನ್ನಿನಲ್ಲಿ ಷೆಡ್ಯೂಲ್ಡ್ ರೇಟನ್ನು ನಿಗದಿ ಮಾಡುವುದಕ್ಕಿಂತ ಮೊದಲೇ ಶೇಕಡ 33ರಂತೆ ಒಂದು ಕಾಮಗಾರಿಯನ್ನು ಕಂಟ್ರಾಕ್ಟ್ ರೂಪವಾಗಿ ಕೊಟ್ಟಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಕಾರ್ಪೊರೇಷನ್ನಿನವರು ಆ ರೀತಿಯಾಗಿ ಅನ್ಯಾಯ ಮಾಡಿದ್ದರೆ ಅದನ್ನು ವಿಚಾರ ಮಾಡೋಣ.

ಶ್ರೀ ವಾಟಾಳ್ ನಾಗರಾಜ್.—ಅವರಿಗೆ ಬಹುಮತವಿದೆ, ಮಾಡಲಿ. ಆದರೆ ಅಲ್ಲಿ ನಡೆಯತಕ್ಕ ಅವ್ಯವಹಾರಗಳನ್ನು ಕೇಳತಕ್ಕವರೇ ಇಲ್ಲವೋ ? ವೆಂಕಟರೆಡ್ಡಿ ಎನ್ನತಕ್ಕವನು ಅಲ್ಲಿ ಒಬ್ಬ ಸದಸ್ಯರನ್ನು ಹೊಡೆದ. ಆತನ ಮೇಲೆ ಯಾರು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಡಿ. ದೇವರಾಜ್ ಅರಸ್.—ಅವರು ಬೈದಿರಬಹುದು, ಇವರು ಹೊಡೆದಿರಬಹುದು. ಅದಕ್ಕೆ ನಾವು ಇಲ್ಲಿ ಏನು ಮಾಡುವುದಿದೆ ?

ಶ್ರೀ ವಾಟಾಳ್ ನಾಗರಾಜ್.—ಈ ಸಂದರ್ಭದಲ್ಲಿ ಹಾಗಾದರೆ......

Mr. DEPUTY SPEAKER.—That is outside the scope.

Sri C. M. ARUMUGHAM.—This is a sovereign body and it can discuss whatever happens in any municipality. If a particular municipality is not functioning in a democratic way we can raise it.

Mr. DEPUTY SPEAKER.—You can raise such issues but not wha a particular man talked.

Sri DEVARAJ URS.—How can we know what they talked ? It is a statutory body. Except policy matters and to pin point the responsiblity of the Govermment, other matters cannot be brought here.

Sri. H. D. DEVE GOWDA.—On a previous occasion when a similar issue was raised the Speaker summoned the proceedings of the corporation. If a corporate body misbehaves, we can discuss it. We have the right to criticise if the corporate bodies are not functioning properly.

Sri. D. DEVARAJ URS.—Let us understand the position. Definitely the hon. members have the right to criticise the functioning of the corporation. But what I am objecting to is, with reference to what an individual member is supposed to have spoken, who abused whom, and all that. I think the hon members are conversant with rule 288 which clearly lays down the manner in which debate can be held and what are thing that can be referred to. I am certainly not against any member making a general criticism of the working of the corporation. As some reference was made about some person I objected. For example a reference was made to what was stated in the corporation about Sri Poosalingam.

ಶ್ರೀ ಎಚ್. ಡಿ. ದೇವೇಗೌಡ.—ಆ ಕಾರ್ಪೋರೇಷನ್ ಸಭೆಯಲ್ಲಿ ಒಬ್ಬ ಸದಸ್ಯ ಕುಡಿದು ಮಿಸ್ ಬಿಹೇವ್ ಮಾಡಿದ್ದಾನೆಂದು ಭಾವಿಸೋಣ. ಅಂಥ ವಿಷಯವನ್ನು ಇಲ್ಲಿ ಚರ್ಚೆ ನಡೆಸತಕ್ಕ ಕಾಲದಲ್ಲಿ ಆತನ ಹೆಸರನ್ನು ಹೇಳದೆ ಹೇಗೆ ಚರ್ಚೆ ಮಾಡುವುದು ? ಅಥವಾ ಅಲ್ಲಿ ಒಬ್ಬ 10 ಲಕ್ಷ ರೂಪಾಯಿ ಮುಳುಗಿಸಿದ್ದಾನೆ. ಆತನ ಹೆಸರನ್ನು ಹೇಳದೆ ಹೇಗೆ ಇಲ್ಲಿ ಚರ್ಚೆಮಾಡುವುದು ?

The corporation has passed a resolution so far as the contract is concerned.

Sri D. DEVARAJ URS.—They have not done any wrong thing. I would like to read rule 288 ;

"A member while speaking shall not—

(i) refer to any matter of fact on which a judicial decision is pending ;

(ii) make a personal charge against a member ;

(iii) use offensive expressions about the conduct of proceedings of Parliament or any State Legislature ;

(iv) reflect on any determination of the Assembly except on a motion for rescinding it ;

(v) reflect upon the conduct of persons in high authority unless the discussion is based on a substantive motion drawn in proper terms ;

Explanation.—The words 'persons in high authority' mean persons whose conduct can only be discussed on a substantive motion drawn in proper terms under the Constitution or such other persons whose conduct, in the opinion of the Speaker should be discussed on a substantive motion drawn up in terms to be approved by him ;

(vi) use the Governor's name for the purpose of influencing the debate ;

(vii) utter treasonable, seditious or defamatory words ;

(viii) use his right of speech for the purpose of obstructing the business of the Assembly."

Having read this, I would like to bring to the notice of this House what transpired last time when a similar situation arose, when it came to be known that in the corporation members of the corporation resorted to criticisms of what transpired in this Assembly. When some of the hon. members here made certain criticisms on what happened in the corporation, the corporation members at their meeting started attacking or criticising the hon. members who made certain criticism about the functioning of the corporation. This House did take objection and went even to the extent of getting the tape recorded speech which was played and I do not remember whether a ruling was given but it was found nothing was objectionable. This House has the right to be as sensitive as it ought to be. At the same time when we are sensitive and are zealous to guard our rights, the Corporation also enjoys certain privileges. Can we discuss what transpires between the members of the corporation ? Certainly this House has the right to discuss whether the Corporation is functioning in the manner it is expected to, whether it is losing after the several amenities to be extended to the people, and so on. I am not objecting to that. Let us make this distinction that what takes place inside a meeting may not be the matter for criticism.

Sri H. D. DEVE GOWDA.—Before you proceed to give a ruling on the point raised by the Chief Minister I want further clarification. Supposing the proceedings of a corporate body is contrary to the Act, are we not entitled to discuss ?

Mr. DEPUTY SPEAKER.—I did not say it at all.

Sri H. D. DEVE GOWDA.—There is a provision to remove a member from a corporate body if he misbehaves. I remember there is such a provision in the Panchayat Act.

Sri D. DEVARAJ URS.—If a member of a panchayat misbehaves, may I know whether he is entitled to make a mention of it ? Rule 288 clearly states the procedure.

Sri H. D. DEVE GOWDA.—It does not give shelter to any Member of any Corporation.

Sri D. DEVARAJ URS.—Sir, there are rulings given in this House on the matter by previous Speakers.

5-30 P.M.

Mr. DEPUTY SPEAKER.—So far as self-govering bodies are concerned they are statutory bodies within their own spheres and they have rights too. But over and above if there are any policy matters where there are omissions and commissions and where they have erred and Government also is involved these things can be raised. But the internal administrative matters like the proceedings of any Municipal corporation cannot be referred to. Further the hon. Members cannot go on making allegations against anybody simply because the proceedings of this House cannot be challenged in a Court of Law.

Sri D. DEVARAJ URS.—Sir, even if a person's conduct is to be questioned there is a procedure laid down in the rules of procedure which should be followed.

Sri H. D. DEVE GOWDA.—So far as these higher authorities or dignitaries are concerned it is something else. But when I am charging against a contractor by using his name that does not mean it is defamatory. I can charge him with regard to his contract work.

Sri D. DEVARAJ URS.—What I wish to submit is that even these names should be avoided, There is a ruling given previously to this effect. If a person's conduct is to be reasonably protected we have to do it. If a contractor has comitted a fraud or influenced somebody I have no objection for criticising him. But let us not mix a contractor with a Corporator.

Mr DEPUTY SPEAKER.—Sub-rule (7) of rule 288 is quite clear in this regard. So far as contractors are concerned if you have specific charges you can make but that too it should be only to the extent the Government is involved in that.

ಶ್ರೀ ವಾಟಾಳ್ ನಾಗರಾಜ್.—1971 ರಲ್ಲಿ ಕಾರ್ಪೊರೇಷನದು ಒಂದು ದೊಡ್ಡ ಕರ್ಮ ಕಾಂಡವಾಗಿದೆ. ಸುಮಾರು ಒಂದೂವರೆ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ, ರೂಲ್ಸ್ ಪ್ರಕಾರ ಮಾಡದಿರುವ ಕಾಮಗಾರಿಗೆ ಒಂದೂವರೆ ಕೋಟಿ ರೂಪಾಯಿ ಬಿಲ್ಲು ಬಂದಿದೆ. ಸುಮಾರು 70 ಲಕ್ಷ ರೂಪಾಯಿಗಳಿಗೆ ಒಂದು ಬಿಲ್ಲಾಗಿದೆ, ಕೆಲಸ ಮಾಡದೆ ಚರಂಡಿ ಕಟ್ಟಿದೆ ಎಂದು ಬಿಲ್ಲಾಗಿದೆ. ಚರಂಡಿ ಮಾಡಿಲ್ಲ. ಇಂಥ ಪ್ರಕರಣಗಳು ನಡೆಯುತ್ತಿವೆ. ನಿಮ್ಮ ಪಕ್ಷ ಆಡಳಿತ ನಡೆಸುತ್ತಿದೆ, ನಿಮ್ಮ ಪಕ್ಷದ ಮೇಯರ್ ಇದ್ದಾರೆ ಎಂದು ಲಕ್ಷಾಂತರ ರೂಪಾಯಿ ಲೂಟಿಯಾಗಿದೆ. ಇದನ್ನು ಮುಚ್ಚಿ ಕೊಂಡು ಬರುತ್ತಿರುವುದು ಸರಿಯೇ ? ಆ ರೀತಿ ಕಾರ್ಪೊರೇಷನ್ನಿನಲ್ಲಿ ನಡೆಯುವುದು, ಹಣವನ್ನು ಅನ್ಯಾಯವಾಗಿ ಖರ್ಚುಮಾಡುವರು. ಇದನ್ನು ಕೇಳುವುದಕ್ಕೆ ಹೋದರೆ ವಿರೋಧ ಪಕ್ಷದ ಮೇಲೆ ಗೂಬೆ ಕೂರಿಸುವುದು ಸರಿಯೇ ? ಸಣ್ಣ ಮುನಿಸಿಪಾಲಟಿಗಳನ್ನು ರದ್ದುಮಾಡಿದ್ದೀರಿ. ಟ್ಯಾಸ್ಕರ್ ಟೌನ್ ಎಂದು ಬೆಂಗಳೂರಿನಲ್ಲಿದೆ. ಅಲ್ಲಿ ಒಂದು ಶಾಲೆ ಇದೆ, ಅಲ್ಲಿ ಒಂದು ಕರ್ಮಕಾಂಡ ನಡೆದು ತನಿಖೆಗೆ ಕಾರ್ಪೊರೇಷನ್ ಕಮೀಷನರ್, ಪೋಲೀಸ್ ಮುಂತಾದವರು ಹೋದಾಗ ಅಲ್ಲಿ ಕಂಡಿರುವುದು ವ್ಯಭಿಚಾರ ನಡೆಸುವ ರೂಮು. ಅಲ್ಲಿಗೆ ಹೋದಾಗ ಸಂಪೂರ್ಣವಾಗಿ ತನಿಖೆ ಮಾಡಿದಾಗ ಆ ಶಾಲೆಯಲ್ಲಿ ವ್ಯಭಿಚಾರ ನಡೆಸುವುದಕ್ಕೆ ಬೇಕಾದ ಸಾಮಗ್ರಿಗಳು ಸಿಕ್ಕಿದವು, ಅದನ್ನು ಸಂಬಂಧ ಪಟ್ಟವರು ತಂದು ರಿಕಾರ್ಡ್ ಮಾಡಿದ್ದಾರೆ. ನಿಮ್ಮ ಆಡಳಿತ ಇಷ್ಟರಮಟ್ಟಿಗಿದೆ. ಅಲ್ಲಿ ಸಿಕ್ಕಿದ ನಿರೋಧ ಕಲೆಕ್ಟ್ ಮಾಡಿ ಸೀಲ್ ಮಾಡಿ ಕಾರ್ಪೊರೇಷನ್ನಿನಲ್ಲಿಟ್ಟಿದ್ದಾರೆ. ಇದು ನಾಚಿಕೆಗೇಡು.

ಕೊನೆಯದಾಗಿ ಶ್ರೀಮಾನ್ ಬಸವಲಿಂಗಪ್ಪನವರು ಹಿಂದೆ ವಕೀಲರಾಗಿದ್ದಾಗ ಅವರ ಕಕ್ಷಿದಾರರನ್ನು ಉಳಿಸುವುದಕ್ಕೆ ಈಗ ತಮ್ಮ ಅಧಿಕಾರವನ್ನು ಯಾವರೀತಿ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಒಂದು ನಿದರ್ಶನವನ್ನು ತಮ್ಮ ಗಮನಕ್ಕೆ ತರುತ್ತೇನೆ. ಬಸಪ್ಪ ಸರ್ಕಲ್‌ನಲ್ಲಿ ಒಂದು ಎಕರೆ ಐದು ಗುಂಟೆ ಜಾಗ ಇದೆ, ಇದರ ಬೆಲೆ ಈಗ ಸುಮಾರು 8 ಲಕ್ಷ ರೂಪಾಯಿ ಆಗುತ್ತದೆ. 1964 ರಲ್ಲಿ ಇವರು ತಮ್ಮ ಕಕ್ಷಿದಾರನಪರ ವಾದ ಮಾಡಿ ಇದು ಕಾರ್ಪೊರೇಷನ್ ಜಾಗವಾದ್ದರಿಂದ ಪಾರ್ಟಿ ಜಾಗವಲ್ಲ ಎಂದು ಫೇಲ್ ಆದರು. 1964ರ ನಂತರ ಬಸವಲಿಂಗಪ್ಪನವರಿಗೆ ಪವರ್ ಆಫ್ ಆಟಾರ್ನಿ ಕೊಟ್ಟರೂ ಕೇಸ್‌ನಲ್ಲಿ ಇವರು ಫೇಲ್ ಆದರು. ಆಗ ಅದು ಕಾರ್ಪೊರೇಷನ್ ಜಾಗ ಆಯಿತು. ಕೋರ್ಟಿನಲ್ಲಿ ಇದು ಕಾರ್ಪೊರೇಷನ್ ಜಾಗ ಎಂದು ತೀರ್ಮಾನವಾಗಿ, ಇವತ್ತು ನಿಮ್ಮ ಹಸ್ತಕ್ಷೇಪದಿಂದ ಯಾರು ಇವರ ಕಕ್ಷಿದಾರರು ಇದ್ದರೋ ಅವರಿಗೆ ಸ್ವಂತದ್ದೆಂದು ಕೊಡಿಸುತ್ತಿದ್ದಾರೆ. ಇದಕ್ಕೆ ನಿಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದೀರಿ. ಅವರಿಂದ ನಿಮ್ಮ ವಕೀಲ ಫೀಸ್ ತೆಗೆದುಕೊಂಡು ನೀವು ಅವನಿಗೋಸ್ಕರ ಅನುಕೂಲ ಮಾಡಿಕೊಡುವುದಕ್ಕೆ ತಮ್ಮ ಮಂತ್ರಿ ಪದವಿಯನ್ನು ದುರುಪಯೋಗ ಮಾಡಿಕೊಂಡಿದ್ದೀರಿ ಎಂದು ನಾನು ಹೇಳುತ್ತೇನೆ. ಪವರ್ ಆಫ್ ಅಟಾರ್ನಿಯಲ್ಲಿ ನಿಮ್ಮ ಸಹಿ ಇರುವುದು ಕಾರ್ಪೊರೇಷನ್ ಸಭೆಯಲ್ಲಿದೆ, ಅದನ್ನು ತರಿಸಿ, ಇದು ನಿಮ್ಮ ಅಧಿಕಾರ ದುರುಪಯೋಗವಲ್ಲವೆ ?

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ, ಮುಖ್ಯಮಂತ್ರಿಗಳು ಇದ್ದಾರೆ; ಒಂದು ಮುಖ್ಯವಾದ ವಿಷಯವನ್ನು ಅವರ ಗಮನಕ್ಕೆ ತರಬೇಕಾಗಿದೆ. ಮುಖ್ಯಮಂತ್ರಿಗಳು ಒಪ್ಪಿದರೆ ಅದನ್ನು ಅವರ ಗಮನಕ್ಕೆ ತರುತ್ತೇನೆ. ಆ ಸ್ಥಳ ಒಂದು ಎಕರೆ, ಐದು ಗುಂಟೆ ಯಾವುದು ಇದೆ, ಅದು 1936 ನೇ ಇಸವಿಯಲ್ಲಿ ಮೊದಲನೆಯ ಸಾರಿ ನಾನು ಮುನಿಸಿಪಲ್ ಕೌನ್ಸಿಲ್ ಸದಸ್ಯನಾಗಿದ್ದಾಗ, ಅಲ್ಲಿ ಮುಸಲ್ಮಾನರು ಗುಡಿಸಲನ್ನು ಹಾಕಿದ್ದರು. ಆ ಜಾಗವನ್ನು ಉಸ್ಮಾನ್ ಖಾನ್ ಮತ್ತು ಮುಜೀದ್‌ಖಾನ್ ಎಂಬುವವರು ಕಬಳಿಸಬೇಕು ಎಂದು ಮುಸಲ್ಮಾನ್ ಹೆಂಗಸರಿಗೆ 50-100 ರೂಪಾಯಿಗಳನ್ನು ಕೊಟ್ಟು ಆ ಜಾಗವನ್ನು ಬರೆಸಿಕೊಂಡರು. ಮುಜೀದ್ ಖಾನ್ ಎಂಬುವನು ನನ್ನ ಸ್ನೇಹಿತ. ಅವರು ಕಾರ್ಪೊರೇಷನಿಗೆ ಬಂದು ಈ ಜಾಗ ಕೊಡಬೇಕು ಎಂದು ಕೇಳಿದರು, ಆಗ ನಾನು ಹೇಳಿದೆ, ನಾನು ಇರುವವರೆಗೆ ಆ ಜಾಗ ಕೊಡುವುದಕ್ಕಾಗುವುದಿಲ್ಲ, ನೀನು ನನ್ನ ಸ್ನೇಹಿತ ಇರಬಹುದು, ಇದಕ್ಕೆ ನಾನು ಸಹಾಯ ಮಾಡುವುದಕ್ಕಾಗುವುದಿಲ್ಲ ಎಂದು. 1936 ನೇ ಇಸವಿಯಿಂದಲೂ ಇದು ಕಾರ್ಪೊರೇಷನ್ ಸುಪರ್ದಿನಲ್ಲಿದ್ದ ಜಾಗ. ಇದು ಈಗ ಸುಮಾರು 8 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ಒಂದು ಚದರ ಗಜಕ್ಕೆ ಸುಮಾರು 200 ರೂಪಾಯಿಗಳು ಆಗಬಹುದು. ಮಾನ್ಯ ವಾಟಾಳ್ ನಾಗರಾಜ್ ಅವರು ಚಾರ್ಜ್ ಮಾಡುವ ರೀತಿಯಲ್ಲಿ, ಇದರಲ್ಲಿ ಮಾನ್ಯ ಬಸವಲಿಂಗಪ್ಪನವರ ಹಸ್ತಕ್ಷೇಪ ಇದ್ದರೆ, ನಾನು ವಿಷಾದದಿಂದ ಹೇಳುತ್ತೇನೆ, ಅವರು ಮಿನಿಸ್ಟರ್ ಆಗಿರುವುದಕ್ಕೆ ಅರ್ಹರಲ್ಲ ಎಂದು. ಇದರ ಬಗ್ಗೆ ಪೂರ್ತಿ ವಿವರವನ್ನು ಮುಖ್ಯಮಂತ್ರಿಗಳಿಗೆ ನಾನು ಬರೆದು ಕಳುಹಿಸುತ್ತೇನೆ. ಇದರ ಬಗ್ಗೆ ಅವರು ತನಿಖೆ ಮಾಡಲಿ. ಮಾನ್ಯ ಬಸವಲಿಂಗಪ್ಪನವರ ಹಸ್ತಕ್ಷೇಪ ಇದ್ದರೆ ಅವರನ್ನು ಕೂಡಲೇ ಡಿಸ್‌ಮಿಸ್ ಮಾಡಬೇಕು ಅವರು ಒಂದು ನಿಮಿಷವೂ ಕೂಡ ಇಲ್ಲಿರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಬಸಪ್ಪ ಸರ್ಕಲ್‌ನಲ್ಲಿರತಕ್ಕ ಜಮೀನು ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಗೆ ಸೇರಿದ ಒಬ್ಬ ಸ್ವಾಮಿಗಳ ಮಠ. ಅವರು ನಮ್ಮ ಕುಲಗುರುಗಳು. ಆ ಮಠ ಕಾರ್ಪೊರೇಷನ್‌ಗೆ ಸೇರಿರಲಿಲ್ಲ ಎಂದು ಹಿಂದಿನಿಂದಲೂ ವಾದ ವಿವಾದ ನಡೆದುಕೊಂಡು ಬಂದಿದೆ. ಅಲ್ಲಿ ಯಾರೋ ಒಬ್ಬ ಮುಸಲ್ಮಾನ್ ಸೇರಿಕೊಂಡು ದುರಾಕ್ರಮಣ ನಡೆಸಿಕೊಂಡು ಬಂದಿದ್ದಾನೆ. ಇದರ ಮೇಲೆ 20—30 ಕೇಸುಗಳು ಸಿವಿಲ್ ಕೋರ್ಟಿನಲ್ಲಿ ಈ ಸ್ವಾಮಿಗಳ ಪರವಾಗಿ ಆಗಿವೆ. ಸತ್ಯವಾಗಿ ಹೇಳಬೇಕಾದರೆ ಆ ಜಮೀನು ನೇರವಾಗಿ ಆ ಗುರುಗಳಿಗೆ ಸಲ್ಲಬೇಕಾದದ್ದು. ಕಾರ್ಪೊರೇಷನ್‌ಗೆ ಸೇರಬೇಕಾಗಿಲ್ಲ; ಯಾವ ಒಂದು ರೆವೆನ್ಯೂಗೂ ಸೇರಬೇಕಾಗಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದು ನಮ್ಮ ಕುಲಗುರುಗಳ ಸ್ವತ್ತು, ಅದನ್ನ ಅವರ ಸ್ವಾಧೀನಕ್ಕೆ ಮಾಡಿಸಿಕೊಳ್ಳಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ.—ಜೈ ಶಂಭುಲಿಂಗೇಶ್ವರ, ಬಸವಲಿಂಗೇಶ್ವರ.

Sri D. DEVARAJ URS.—I heard Sri Naganna as well as Sri Nagaraj. If there is any attempt made by anybody to give away this land with a view to benefit an individual, it is wrong. I fully agree. But now that they have said that they are going to send me a letter also, letter is not necessary because they have spoken on the floor of this House, I must take cognisanee of it-I must look into it immediately. But even before giving a chance to the Minister there is no point in concluding matters. Let us also know what exactly is the position. May be, according to their information, they say it is in the process of being given. But, let us hear the Minister whether it is so or not. Supposing if there is no such move, one need not feel exercised about it. That is all I can say.

ಶ್ರೀ ವಾಟಾಳ್ ನಾಗರಾಜ್.—ಕೊನೆಯದಾಗಿ, ಶ್ರೀಮಾನ್ ಬಸವಲಿಂಗಪ್ಪನವರಿಗೆ ಟ್ರಸ್ಟ್ ಬೋರ್ಡ್ ಅವರ ಕೈಯಲ್ಲಿದೆ, ಹಿಂದಿನ ಟ್ರಸ್ಟ್ ಬೋರ್ಡ್ ಚೇರ್ಮನ್ ಆಗಿದ್ದವರು ಬಡವರಿಗೋಸ್ಕರ, ಹರಿಜನರಿಗೋಸ್ಕರ ಸೈಟುಗಳನ್ನು ಕೊಡುತ್ತೇವೆಂದು ಹೇಳಿದರು ಅದನ್ನು ಸ್ವಾಗತ ಮಾಡುತ್ತೇನೆ, ಆದರೆ ಸದಾಶಿವನಗರ, ರಾಜಮಹಲ್‌ನಲ್ಲಿ ಕೊಟ್ಟಿರತಕ್ಕ ಸೈಟುಗಳನ್ನು ಎಷ್ಟು ಹರಿಜನರಿಗೆ ಕೊಟ್ಟಿದ್ದಾರೆ? ಎರಡು ತಿಂಗಳ ಹಿಂದೆ, ಕೆ. ಕೆ. ಮೂರ್ತಿಯವರಿಗೆ ಸೈಟು ಕೊಡಲಿಕ್ಕೆ ಎಲ್ಲಿ

(ಶ್ರೀ ವಾಟಾಳ್ ನಾಗರಾಜ್)

ಇತ್ತು? ಅಷ್ಟು ದೊಡ್ಡ ಸೈಟು ಎಲ್ಲಿತು? ನೀವು ಹರಿಜನರ ಪರವಾಗಿ ಹೇಳತಕ್ಕವರು, ಎಷ್ಟು ಹರಿಜನರಿಗೆ ಅಲ್ಲಿ ಸೈಟುಗಳನ್ನು ಕೊಟ್ಟಿದ್ದೀರಿ ? ನಿಮ್ಮ ತರಹ ಭವ್ಯವಾದ ಬಂಗಲೆಗಳು ಎಷ್ಟು ಜನ ಹರಿಜನರಿಗೆ ಇವೆ?

ಶ್ರೀ ಡಿ. ದೇವರಾಜ ಅರಸ್.—ನೀವು ದಿನವೂ ಟ್ಯಾಕ್ಸಿಯಲ್ಲಿ ಓಡಾಡುತ್ತೀರಿ, ಅಷ್ಟು ದುಡ್ಡು ನಿಮಗೆ ಎಲ್ಲಿತ್ತು? ಕುಮಾರ ಕೃಪಾದಲ್ಲಿ ಮನೆ ಕಟ್ಟಿದರೆ ಇವರಿಗೆ ಏತಕ್ಕೆ ಹೊಟ್ಟೆ ನೋವು ಎಷ್ಟೋ ಜನರಿಗೆ ಕಾಫಿ ಕುಡಿಯುವುದಕ್ಕೆ ದುಡ್ಡು ಇಲ್ಲ, ಇವರಿಗೆ ದಿನವೂ ಟ್ಯಾಕ್ಸಿಯಲ್ಲಿ ಓಡಾಡುವುದಕ್ಕೆ ದುಡ್ಡು ಎಲ್ಲಿ ಬರುತ್ತದೆ ? ಅವನ್ನೆಲ್ಲಾ ಹೇಳುವುದರಿಂದ ಪ್ರಯೋಜನವಿಲ್ಲ. ಸರ್ಕಾರದ ಜಮೀನೇ, ಸಾರ್ವಜನಿಕ ಆಸ್ತಿಯೇ, ವೈಯುಕ್ತಿಕವಾದದ್ದೇ ಎಂದು ನೋಡಬೇಕು.

ಶ್ರೀ ವಾಟಾಳ್ ನಾಗರಾಜ್.—ಕೆ. ಕೆ. ಮೂರ್ತಿಯವರ ಹೆಸರು ಹೇಳಿದರೆ ಮುಖ್ಯಮಂತ್ರಿಳಿಗೆ ಕೋಪ ಬರುತ್ತದ್ದೆ.

ಶ್ರೀ ಡಿ. ದೇವರಾಜ ಅರಸ್.—ಎಲ್ಲರಿಗೂ ಕಾನೂನು ಬಿಟ್ಟು ಕೊಟ್ಟಿದ್ದರೆ ಹೇಳಿ. ನಾಗರಾಜ ಅವರು ಹೇಳುತ್ತಾರೆಂದು ಹೆದರಿಕೊಂಡು ಕೂಳಿತುಕೊಳ್ಳುವುದಕ್ಕಾಗುವುದಿಲ್ಲ. ಗಾಣಿಗಿತ್ತಿ ಅಯ್ಯೋ ಎಂದರೆ ಮಕ್ಕಳ ನೆತ್ತಿ ತಣ್ಣಗಾಗುತ್ತದೆಯೇ ? ಆ ರೀತಿ ಇವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ಕೆ. ಕೆ. ಮೂರ್ತಿಯವರಿಗೆ ಅಲ್ಲಿ ಸೈಟು ಕೊಟ್ಟಿದ್ದಾರೆ. ನಿಮ್ಮ ಹತ್ತಿರದವರಿಗೆ ಕೊಡಬೇಕು ಎನ್ನುವ ಉದ್ದೇಶದಿಂದ ಕೊಟ್ಟಿದ್ದಾರೆಂದು ನಾನು ಆಪಾದನೆ ಮಾಡುತ್ತೇನೆ. ಮುಖ್ಯಮಂತ್ರಿಗಳಿಗೆ ಧೈರ್ಯ ಇದ್ದರೆ, ಚಾಲೆಂಜ್ ಮಾಡುತ್ತೇನೆ, ನಿಮ್ಮ ಪಾರ್ಟಿಯವರ ಆಸ್ತಿ ತನಿಖೆಯಾಗಲಿ, ನಾನು ಒಂದು ಸೈಟನ್ನು ಆಗಲೀ, ಒಂದು ರೂಪಾಯಿ ಲಂಚ ಆಗಲಿ ತೆಗೆದುಕೊಂಡಿದ್ದರೆ ಹೇಳಲಿ ನಾಳೆ ಬೆಳಿಗ್ಗೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ನಾಗರಾಜ ಅವರ ಉದ್ಯಮ ಏನು?

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಬಸವಲಿಂಗಪ್ಪನವರು ಇವರಿಗೂ ಒಂದು ಸೈಟು ಕೊಟ್ಟಿರುವುದು ಗೊತ್ತು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇವರು ಹೇಳಿರುವುದು ಸತ್ಯಕ್ಕೆ ದೂರವಾದುದು. ನನಗೆ ಸೈಟು ಕೊಟ್ಟಿರುವುದು ಎರಡು ವರ್ಷದ ಹಿಂದೆ, ಅಡ್ವರ್ಟೈಸ್‌ಮೆಂಟ್‌ನಲ್ಲಿ ಬಂದದ್ದನ್ನು ನೋಡಿ ಅಪ್ಲೈ ಮಾಡಿದ ಮೇಲೆ ರೂಲ್ಸ್ ಪ್ರಕಾರ ಟ್ರಸ್ಟ್ ಬೋರ್ಡಿನವರು ಕೊಟ್ಟಿದ್ದಾರೆ. ಇವರು ಮಂತ್ರಿಗಳಾಗಿ ಕೊಟ್ಟಿಲ್ಲ; ಮಾನ್ಯ ನಾಗರಾಜ್ ಅವರು ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಪೌರಾಡಳಿತದ ಬಗ್ಗೆ ಏನು ಒಂದು ಡಿಮ್ಯಾಂಡ್ ಇದೆ ಇದರ ಬಗ್ಗೆ ನನ್ನ ಗೆಳೆಯರು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಇನ್ನು ಕೆಲವು ವಿಷಯಗಳನ್ನು ಹೇಳಬೇಕಾದ ಪ್ರಸಂಗದಲ್ಲಿ ಒಂದು ವಿಷಯ ಹೇಳಬೇಕಾಗಿರುವುದು ಯಾವುದು ಎಂದರೆ ಅದು ಪೌರಾಡಳಿತ ಮಂತ್ರಿಗಳ ವರ್ತನೆಯ ಬಗ್ಗೆ ಅದರಲ್ಲೂ ಸದಸ್ಯರುಗಳ ಮೇಲೆ ಅವರು ಮಾವರೀತಿ ನಡೆದುಕೊಂಡಿದ್ದಾರೆ ಎಂಬು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಅವರು ನನ್ನ ಗೆಳೆಯರು, ಹಿಂದೆ ಅವರ ಹತ್ತಿರ ಹೋಗುತ್ತಿದೆ. ವಕಾಲತ್ತು ಕೊಡುತ್ತಿದ್ದೆ. ನನ್ನ ಕ್ಷೇತ್ರದಲ್ಲಿ ಹರಿಜನ ಸಮ್ಮೇಳನಕ್ಕೆ ನಮ್ಮ ಸೆಕ್ರಟರಿ ಮುಖಾಂತರ ಹರಿಜನ ಸಂಘದ ಅಧ್ಯಕ್ಷರು ಅರ್ಜಿ ಕೊಟ್ಟು ಇವರು ಕಾರ್ಯಕ್ರಮ ಒಪ್ಪಿಕೊಂಡರು. ಮುಖ್ಯಮಂತ್ರಿಗಳು ಈ ಸಭೆಯ ಒಂದಲ್ಲಿದು ಸ್ಟೇಟ್‌ಮೆಂಟ್ ಮಾಡಿದರು. ವಿರೋಧ ಪಕ್ಷದ ಸದಸ್ಯರೇ ಆಗಲಿ ಯಾವ ಪಕ್ಷದ ಸದಸ್ಯರೇ ಆಗಲಿ ಮಂತ್ರಿಗಳು ಕಾರ್ಯಕ್ರಮ ಒಪ್ಪಿಕೊಂಡಮೇಲೆ ಹೋಗಲೇಬೇಕು ಅದನ್ನು ಕೀಪ್ ಅಪ್ ಮಾಡಬೇಕು ಎಂದು ಹೇಳಿದರು. ಇವರು ಆ ಸಮ್ಮೇಳನಕ್ಕೆ ಬರಬೇಕಾಗಿದ್ದ ದಿವಸ ಫೋನಿನಲ್ಲಿ ಕಾಂಗ್ರೆಸ್ "ಒ"ನವರು ಪ್ರಿಸೈಡ್ ಮಾಡುತ್ತಾರೆ. (ಒ) ಕಾಂಗ್ರೆಸ್ (ಆರ್) ಕಾಂಗ್ರೆಸ್ ಎರಡೂ ಸೇರುವುದು ಸರಿ ಹೋಗುವುದಿಲ್ಲ, ಆದುದರಿಂದ ಬರುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಆದರೆ ಅಲ್ಲಿ ಕಾಂಗ್ರೆಸ್ (ಒ) ಅಥವಾ (ಆರ್) ಪ್ರಶ್ನೆಯೇ ಇಲ್ಲ, ಹರಿಜನ ಸಂಘದ ಅಧ್ಯಕ್ಷರು ಕನ್‌ವಿನ್ ಮಾಡಿದ್ದರು. ನೀವು ಬನ್ನಿ ನಾನು ಅಧ್ಯಕ್ಷತೆ ವಹಿಸುತ್ತೇನೆ ಎಂದು

ಹೇಳಿದೆ. 20 ಸಾರ್ತಿ 15 ನಿಮಿಷ ಫೋನ್ ಮಾಡಿದರೂ ಮಂತ್ರಿಗಳು ಇಲ್ಲ, ಮಂತ್ರಿಗಳು ಇಲ್ಲ ಎಂದು ಅವರು ಹೇಳಿದರು. ಪೌರಾಡಳಿತ ಸಚಿವರು ತಮ್ಮ ಕಾರ್ಯಕ್ರಮಗಳಲ್ಲಿ ಅವರು ಇವರು ಎಂದು ಭಿನ್ನಾಭಿಪ್ರಾಯ ಮಾಡಬಹುದೇ ? ನನಗೆ ಏನು ಅನಿಸುತ್ತದೆ ಎಂದರೆ ಮಾನ್ಯ ಪುಟ್ಟಸ್ವಾಮಿಯವರು ನೆನ್ನೆ ದಿವಸ ಹೇಳಿದರು, ಮರದಮೇಲೆ ಕೂತುಕೊಂಡು ಮರದ ಬುಡ ಕಡಿದುಕೊಳ್ಳುತ್ತಾರೆಂದು. ನಾನು ಹಾಗೆ ಹೇಳುವುದಿಲ್ಲ. ಸಾರ್ವಜನಿಕವಾಗಿ ಕೆಲಸ ಮಾಡುವಾಗ ಯೋಚನೆ ಮಾಡಿ ಕೆಲಸಮಾಡಿ. ಖಾಸಗಿ ಅಧ್ಯಕ್ಷರಿಗೆ ಪುರಸಭೆಯಲ್ಲಿ ಅಧಿಕಾರವಿಲ್ಲ, ಎಲ್ಲಾ ಅಧಿಕಾರ ಚೀಫ್ ಆಫೀಸರ್‌ಗೆ ಕೊಟ್ಟಿದ್ದಾರೆ. ಪುರಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳು, ಕಾರ್ಪೊರೇಷನ್‌ಗಳು ಉತ್ತಮವಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿದರೆ ಗೌರವಸ್ಥರು ಪುರಸಭೆ ಚುನಾವಣೆಯಲ್ಲಿ ನಿಲ್ಲುವುದಿಲ್ಲ, ಚುನಾವಣೆಗೆ ಹೋಗುವುದಿಲ್ಲ. ಮುನಿಸಿಪಾಲಿಟಿಗಳಲ್ಲಿ ಖಾಸಗಿ ಅಧ್ಯಕ್ಷರಿಗೆ ಯಾವ ವಿಧವಾದ ಅಧಿಕಾರ ಕೂಡ ಇಲ್ಲ. ಆದುದರಿಂದ ಅದನ್ನು ಬದಲಾವಣೆಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪುರಸಭೆ ಸಿಬ್ಬಂದಿ ವರ್ಗ ಏನು ಇದೆ ಆ ಸಿಬ್ಬಂದಿ ವರ್ಗಕ್ಕೆ ಒಂದು ಕೇಡರ್ ಮಾಡಬೇಕು. ಪುರಸಭೆಯಲ್ಲಿ ಯಾವರೀತಿ ಕೆಲಸಕಾರ್ಯಗಳನ್ನು ನಿರ್ವಹಿಸಬೇಕು ಎಂದು ಅವರಿಗೆ ಸಾಕಷ್ಟು ಟ್ರೈನಿಂಗ್ ಕೊಡದಿದ್ದರೆ ನಿಮ್ಮ ಪುರಸಭೆಗಳು ನಿಜವಾಗಿ ಸಾರ್ವಜನಿಕರ ಕಲ್ಯಾಣ ಮಾಡುವ ಬದಲು ಸಾರ್ವಜನಿಕರನ್ನು ಹಾಳುಮಾಡುತಕ್ಕ ಸಂಸ್ಥೆಗಳು ಆಗುತ್ತವೆಂದು ಹೇಳುತ್ತೇನೆ. ಇನ್ನು ಪುರಸಭೆಗಳಲ್ಲಿ ಸಾಕಷ್ಟು ಹಣವಿಲ್ಲ ಎನ್ನುವ ಬಗ್ಗೆ ಮಾನ್ಯಸದಸ್ಯರು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ ಇದು ಪೌರರ ಹಿತವನ್ನು ಕಾಪಾಡತಕ್ಕ ಸಂಸ್ಥೆ. ಪೌರರ ಹಿತವನ್ನು ಕಾಪಾಡಬೇಕು. ನರ್ಸರಿ ಎಜ್ಯುಕೇಷನ್ ಪೌರಸಭೆ ನಿರ್ವಹಿಸತಕ್ಕ ವ್ಯವಸ್ಥೆ ಮಾಡಿದರೆ ಬಹಳ ಜನರಿಗೆ ಒಳ್ಳೆಯದು ಮಾಡಿದಂತಾಗುತ್ತದೆ. ಹೈಸ್ಕೂಲು ಮತ್ತು ಮಿಡ್ಲ್‌ಸ್ಕೂಲ್ ಎಜುಕೇಷನ್ ಸರ್ಕಾರ ನಡೆಸುತ್ತಿದೆ. ಆದರೆ ನರ್ಸರಿ ಎಜುಕೇಷನ್ ಸಣ್ಣ ಸಣ್ಣ ಪಟ್ಟಣಗಳಲ್ಲಿ ಯಾರು ವಹಿಸಿಕೊಂಡು ನಡೆಸುತ್ತಾರೆ ? ಹಣಕಾಸು ಇರುವ ಶ್ರೀಮಂತರು ನರ್ಸರಿ ಎಜುಕೇಷನ್ ಸಂಸ್ಥೆಗಳನ್ನು ಮಾಡಿಕೊಂಡು ದುಡ್ಡು ಸಂಪಾದಿಸುತ್ತಿದ್ದಾರೆ. ಪೌರಸಭೆಗಳು ಇದನ್ನು ವಹಿಸಿಕೊಳ್ಳಬೇಕು ಮತ್ತು ನರ್ಸರಿ ಎಜುಕೇಷನ್ ಮಕ್ಕಳಿಗೆ ಕೊಡುವ ಅವಕಾಶ ಪೌರಸಭೆಯ ಆಕ್ಟ್‌ನಲ್ಲಿ ಅಳವಡಿಸಿ ಮಾಡಿದರೆ ಬಹು ಜನ ಬಡವರ ಕಲ್ಯಾಣ ಮಾಡಿದಂತಾಗುತ್ತದೆ ಬಡವರ ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲ ಮಾಡಿದಂತಾಗುತ್ತದೆ.

ಟ್ರಸ್ಟ್‌ಬೋರ್ಡಿನಲ್ಲಿ ರಿಸರ್ವೇಷನ್ ಕೆಲವರಿಗೆ ಮಾಡಿದ್ದಾರೆ. ಕಳೆದ ಅಧಿವೇಶನದಲ್ಲಿ ಪೌರಾಡಳಿತ ಸಚಿವರನ್ನು ಪ್ರಶ್ನೆ ಮೂಲಕ ಕೇಳಿದಾಗ ನಿವೃತ್ತ ಯೋಧರ ಮಕ್ಕಳಿಗೆ ಅವರ ಕುಟುಂಬಕ್ಕೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿನಲ್ಲಿ ರಿಸರ್ವೇಷನ್ ಮಾಡಿದ್ದಾರೆ ಎಂದು ಹೇಳಿದರು. ಅದೇರೀತಿ ಹೌಸಿಂಗ್ ಬೋರ್ಡಿನಲ್ಲಿ ಕೂಡ ನಿವೃತ್ತ ಯೋಧರಿಗೆ, ನಿರ್ಗತಿಗರಾಗಿರತಕ್ಕ ಅವರಿಗೆ ರಿಸರ್ವೇಷನ್ ಮಾಡಬೇಕು ಎಂದು ಸರ್ಕಾರಕ್ಕೆ ಅಧ್ಯಕ್ಷರ ಮುಖಾಂತರ ಮನವಿಮಾಡುತ್ತೇನೆ.

ಇನ್ನು ಪೌರಸಭೆಗಳನ್ನು ಸೂಪರ್‌ಸೀಡ್ ಮಾಡಿದಾಗ ಅಡ್ಮಿನಿಸ್ಟ್ರೇಟರ್ಸ್‌ನ್ನು ಏನು ಹಾಕುತ್ತೀರಿ ಆ ಅಡ್ಮಿನಿಸ್ಟ್ರೇಟರ್ಸ್ ಅಲ್ಲಿಯ ತಹಸಿಲ್ದಾರ್, ಅಲ್ಲಿರತಕ್ಕ ಅಸಿಸ್ಟೆಂಟ್ ಕಮಿಷನರ್‌ಗಳನ್ನು ಹಾಕುತ್ತೀರಿ, ಅವರಿಗೆ ಆ ಕೆಲಸ ಮಾಡುವುದಕ್ಕೆ ಪುರಸತ್ತು ಇರುವುದಿಲ್ಲ. ತಾಲ್ಲೂಕು ಆಫೀಸುಗಳಲ್ಲಿ ಅವರಿಗಿರತಕ್ಕ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕೆ ಅವರು ಅದರ ಕಡೆಗೆ ಗಮನ ಕೊಟ್ಟು ಪೌರಾಡಳಿತದ ಕೆಲಸ ಡೆಸರ್ಟ್ ಆಗುತ್ತದೆ. ಆದ್ದರಿಂದ ಅನಿವಾರ್ಯವಾಗಿ ಸೂಪರ್‌ಸೀಡ್ ಮಾಡುವ ಸಂದರ್ಭದಲ್ಲಿ ಪೌರಾಡಳಿತ ನಡೆಸುವುದಕ್ಕೆ ಸೂಕ್ತ ತರಪೇತಿ ಕೊಟ್ಟು ಅಂಥವರನ್ನು ಬಳಸಬೇಕು ಎಂದು ಹೇಳುತ್ತೇನೆ. ಸೂಪರ್‌ಸೀಡ್ ಮಾಡುವುದನ್ನೇ ಒಂದು ಸೂತ್ರವನ್ನಾಗಿ ಮಾಡಿಕೊಳ್ಳಬೇಡಿ. ಈ ರೀತಿ ಮಾಡಬಾರದು. ತಾವು ಹಿಂದೆ ಬಹುತೇಕ ಕಾರ್ಪೊರೇಟರ್ ಆಗಿದ್ದಿರಿ ಅಡ್ವೋಕೇಟ್ ಆಗಿದ್ದಿರಿ, ಹಿಂದೆ ಮಂತ್ರಿಗಳು ಆಗಿದ್ದಿರಿ, ಈಗ ಮಂತ್ರಿಗಳಾಗಿದ್ದೀರಿ. ನಿಮಗೆ ಒಂದು ಉದಾಹರಣೆ ಹೇಳುತ್ತೇನೆ. ಹಿಂದೆ ಗುಬ್ಬಿ ಕಂಪನಿಯಲ್ಲಿ ಸದಾರಮೆ ನಾಟಕ ನಡೆಸಿದರು, ಆದಿಮೂರ್ತಿ ಸೆಟ್ಟಿಗೆ ಸದಾರಾಮೆಯನ್ನು ಕೊಟ್ಟು ಮದುವೆ ಮಾಡಿಸಿಕೊಳ್ಳುವುದಕ್ಕಾಗಿ ಬಂಗಾರಸೆಟ್ಟಿ ಮಗನಿಗೆ ಪಟ್ಟಾಭಿಷೇಕ ಮಾಡಿಸಿ ಅವನ ಕೈಗೆ ಕತ್ತಿಕೊಡುತ್ತಾನೆ. ಕತ್ತಿಕೊಟ್ಟಾಗ ಅವನು ಅದನ್ನು ತಲೆಕೆಳಗಾಗಿ ಹಿಡಿದುಕೊಳ್ಳುತ್ತಾನೆ. ಕತ್ತಿ ಹಿಂದು ಮುಂದಾಗಿ ಹಿಡಿದುಕೊಂಡು ಕೈಯನ್ನು ಕೊಯ್ದುಕೊಳ್ಳುತ್ತಾನೆ. ಹಾಗೆ ನೀವು ಹೋಗಬೇಡಿ. ನೀವು ವಿದ್ಯಾವಂತರು, ಬುದ್ಧಿವಂತರು ಅಡ್ವೋಕೇಟ್ ಆಗಿದ್ದೀರಿ, ರಾಜ್ಯಭಾರ ಸರಿಯಾಗಿ ನಡೆಸಿ ಒಳ್ಳೆಯ ಹೆಸರುಗಳಿಸಿ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಶ್ರೀ ಎಚ್. ಎಸ್. ಸಿದ್ದಪ್ಪ)

ಇನ್ನೂ ಗ್ರಾಮಾಂತರ ಪ್ರದೇಶಗಳಲ್ಲಿ ಸೈಟುಗಳ ಹಂಚಿಕೆಯ ಬಗ್ಗೆ ನಮ್ಮ ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು, ನಾನೂ ಹೇಳುತ್ತೇನೆ. ಸೈಟುಗಳು ನಿರ್ಗತಿಕ ಹರಿಜನರಿಗೆ, ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಬಹುತೇಕ ಅಷ್ಟು ಲಭ್ಯವಾಗಿಲ್ಲ, ಮಾನ್ಯಸದಸ್ಯರು ಒಬ್ಬರು ಮಾತನಾಡುತ್ತಾ ಹೇಳಿದರು ಇವೊತ್ತು ಬಾಯಿಬಡುಕರಿಗೆ, ರಾಜಕೀಯ ಪುಢಾರಿಗಳಿಗೆ ಸಿಕ್ಕಿದೆ ಎಂದು ಇದನ್ನು ವಿಮರ್ಶೆಮಾಡಬೇಕು. ನಮ್ಮ ತಾಲ್ಲೋಕಿನ ಬಗ್ಗೆ ಪ್ರಶ್ನೆ ಹಾಕಿ ಕೇಳಿದಾಗ ಫಿಗರ್ಸ್ ಕೊಟ್ಟಿರಿ. ತಾವು ಅಧಿಕಾರಿಗಳು ಕಳುಹಿಸಿದ ಫಿಗರ್ಸ್ ಮೇಲೆ ಅಂಕಿ ಅಂಶ ಕೊಡುತ್ತೀರಿ. ನೀವೇ ಎಲ್ಲವನ್ನು ಹೋಗಿ ನೋಡಿಕೊಂಡು ಬರುವುದಕ್ಕೆ ಆಗುವುದಿಲ್ಲ. ಆದಕ್ಕೋಸ್ಕರ ಸರಿಯಾದ ವ್ಯವಸ್ಥೆಮಾಡಿ, ಸೈಟುಗಳನ್ನು ಯಾರಿಗೆ ಕೊಟ್ಟಿದ್ದಾರೆ, ಹರಿಜನರಿಗೆ ಕೊಟ್ಟಿದ್ದಾರೆಯೇ, ನಿವೇಶನಗಳನ್ನು ಹಿಂದುಳಿದ ಜನಗಳಿಗೆ ಕೊಟ್ಟಿದ್ದಾರೆಯೇ, ಸೈಟ್ ಇಲ್ಲದವರಿಗೆ ಗರೀಬರಿಗೆ ಸಿಕ್ಕುತ್ತದೆಯೇ ಎಂದು ಪರೀಕ್ಷೆಮಾಡಿ ಎಂದು ಹೇಳಬಯಸುತ್ತೇನೆ.

ನಾವು ಜಾತೀವಾದವನ್ನು ಬೆಳೆಸುವುದಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದ್ದರು. ಶ್ರೀಮಾನ್ ಹೆಚ್. ಡಿ. ದೇವೇಗೌಡರು ಅಡ್ಮಿನಿಸ್ಟ್ರೇಟರ್ಸ್‌ನಲ್ಲಿ ಯಾವ ಯಾವ ಜಾತಿಯವರು ಇದ್ದಾರೆ ಅವರು ಒಂದು ಲಿಸ್ಟನ್ನು ಕೊಡಿ ಎಂದು ಕೇಳಿದಾಗ ರಾಷ್ಟ್ರದ ದೃಷ್ಟಿಯಿಂದ ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಅದರೆ ಈವೊತ್ತಿನ ದಿವಸ ಅರ್ಜಿ ಹಾಕಬೇಕಾದರೆ ಜಾತಿ ನಮೂದು ಮಾಡಬೇಕು. ಇದು ಮುಖ್ಯಮಂತ್ರಿಗಳು ಹೇಳುವ ನೀತಿಗೆ ಸರಿಹೋಗುತ್ತದೆಯೇ ! ಇದರ ಬಗ್ಗೆ ವಿವರಣೆ ಕೊಡಬೇಕೆಂದು ಹೇಳಬಯಸುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

6-00 P.M.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಅಧ್ಯಕ್ಷರೇ, ಕಾರ್ಪೋರೇಷನ್ನಿನ ಎಜುಕೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದೆರಡು ವಾಕ್ಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜಧಾನಿಯಾದ ಬೆಂಗಳೂರಿನ ಕಾರ್ಪೋರೇಷನ್ನಿನಲ್ಲಿ ಒಂದು ಎಜುಕೇಷನ್ ಡಿಪಾರ್ಟಮೆಂಟ್ ಇದೆ. ಅದು ಬಹುಶ: ಹೊಲಸಾದಷ್ಟು ಇನ್ನು ಯಾವುದೂ ಹೊಲಸಾಗಿಲ್ಲ. ಈಗ ಇರತಕ್ಕಂಥ ಆಫೀಸರ ಮೇಲೆ ನೂರಾರು ಆರೋಪಣೆಗಳು ಇವೆ. ಅಲ್ಲಿ ಕೆಲಸ ಮಾಡತಕ್ಕಂಥ ಅಧ್ಯಾಪಕ ವರ್ಗಕ್ಕೆ ಸಂಪೂರ್ಣವಾಗಿ ಅತೃಪ್ತಿಯಾಗಿದೆ. ಈ ಅಸಮಾಧಾನದ ಫಲವಾಗಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ.

ಇನ್ನೊಂದು ವಿಷಯ ಏನೆಂದರೆ ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲಿ ಕನ್ನಡವನ್ನು ಅಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಶೀಘ್ರಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಒಂದು ವಿಷಯ ಹೇಳುವುದಾದರೆ ಸೈಟು ಹಂಚಿಕೆ ವಿಷಯದಲ್ಲಿ ಜಾತೀಯ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ನಾವು ಸೋಷಿಯಲಿಸ್ಟ್ ಪಾರ್ಟಿಯವರು. ಈ ಸಂಬಂಧದಲ್ಲಿ ನಮ್ಮ ನಿಲುವನ್ನು ಒಂದು ಮಾತಿನಲ್ಲಿ ಹೇಳುವುದು ಅತ್ಯಾವಶ್ಯಕ. ಅದು ಏನೆಂದರೆ ಈ ಜಾತೀಯತೆಯನ್ನು ನಿರ್ಮೂಲ ಮಾಡುವುದಕ್ಕೆ ಹಿಂದೆ ಇದ್ದ ಹಾಗೆ ಹರಿಜನರ ಕೇರಿ, ಬ್ರಾಹ್ಮಣರ ಕೇರಿ, ಮುಸಲ್ಮಾನರ ಕೇರಿ ಎಂದು ಈ ರೀತಿ ಮುಂದುವರೆಸಿಕೊಂಡು ಹೋದರೆ ಜಾತೀಯತೆಯನ್ನು ನಿರ್ಮೂಲ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ಜಾತಿಯವರು ಮತ್ತೊಂದು ಜಾತಿಯವರು ಅಕ್ಕಪಕ್ಕದಲ್ಲಿ ಮನೆಗಳನ್ನು ಕಟ್ಟಿಕೊಂಡರೆ ಅವರ ಮಕ್ಕಳು ಅಂಗಳದಲ್ಲಿ ಆಟವಾಡಿಕೊಳ್ಳುತ್ತಾ, ಅನ್ಯೋನ್ಯವಾಗಿ ಬೆಳೆಯುತ್ತಾರೆ. ಆ ರೀತಿ ಬೆಳೆದು ಪೌರರಾದ ನಂತರ ಜಾತೀಯ ಕಲ್ಮಶಗಳು ಮುಂದುವರೆಯದ ಹಾಗೆ ಅವರು ಹೊಸ ನಾಗರೀಕರಾಗಿ ಹೊಸ ಸಮಾಜ ಬೆಳೆಯುವುದಕ್ಕೆ ಅದು ಪೂರಕವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—How much time would the Hon. Minister like to take for the reply ?

Sri B. BASAVALINGAPPA —About 45 minutes.

Mr. DEPUTY SPEAKER.—You can have it tomorrow. After the reply we can have the non-official business tomorrow.

ಶ್ರೀ ಸಿ. ಬ್ಯೈರೇಗೌಡ.—ಅಧ್ಯಕ್ಷರೇ, ನಿನ್ನೆ ದಿವಸ ಈ ವಿಷಯದ ಬಗ್ಗೆ ಮಾತನಾಡಬೇಕು ಎಂದು ತಿಳಿಸಿದೆ. ಅದರಂತೆ ನನಗೆ ಮಾತನಾಡಲು ಈಗ ಅವಕಾಶ ಕೊಡಬೇಕು.

ಉಪಾಧ್ಯಕ್ಷರು.—ಪ್ರತಿಯೊಬ್ಬರಿಗೂ ಪ್ರತಿಯೊಂದು ಐಟಂ ಮೇಲೂ ಮಾತನಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ.

ಶ್ರೀ ಸಿ. ಬ್ಯೈರೇಗೌಡ.—ನಾನು ಹೇಳುವುದು ಏನೆಂದರೆ ಅಧ್ಯಕ್ಷರು ಕೊಟ್ಟಂಥ ಮಾತನ್ನು ನಾನು ಯಾವತ್ತೂ ಮೀರಿಲ್ಲ. ಈವೊತ್ತಿನ ದಿವಸ ಮೀರಬೇಕಾದ ಸಂದರ್ಭ ಇದೆ. ನಾನು ಹೆಸರು ಕೊಟ್ಟಾದ ಮೇಲೆ ಈ ಸಭೆಯಲ್ಲಿ ಬಂದವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ನಾನು ಮೊದಲೇ ಹೆಸರು ಕೊಟ್ಟಿದ್ದೇನೆ. ಈ ಸಭೆಗೆ ಎಲ್ಲ ಮಾನ್ಯ ಸದಸ್ಯರು ಹೇಗೆ ಆರಿಸಿ ಬಂದಿದ್ದಾರೋ ಅದೇರೀತಿ ನಾನು ಕೂಡ ಒಂದು ಪಕ್ಷದ ಸದಸ್ಯನಾಗಿ ಕೆಲಸ ಮಾಡುತ್ತಿದ್ದೇನೆ. ಏತಕ್ಕೆ ತಾವು ಈ ರೀತಿ ಮಾಡುತ್ತೀರೋ ನನಗೆ ಅರ್ಥವಾಗುವುದಿಲ್ಲ.

ಉಪಾಧ್ಯಕ್ಷರು.—ತಮ್ಮ ಕಡೆಯಿಂದ ಇಂಟಿಮೇಷನ್ ಬಂದಿಲ್ಲ. ನಿಮಗೆ ಕೋಆಪರೇಷನ್ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದು ಉಂಟು ಮತ್ತು ಗೌರ್ನರ್ ಅಡ್ರೆಸ್ ಮೇಲೆ ಸಾಮಾನ್ಯ ಚರ್ಚೆ ಮೇಲೆ ಮಾತನಾಡಿದ್ದೀರಿ. What are you talking? Yesterday, you might have given your name. But to-day it is a different matter. You have been given ample opportunity every time. Should I give the time because you want it? You have been given as much time as you wanted, I have never belittled you. You claim to be a C.P.M. member. I know it. Kindly resume your seat.

ಶ್ರೀ ಸಿ. ಬ್ಯೈರೇಗೌಡ.—ಹಾಗಾದರೆ ಹಿಂದೆ ಮಾತನಾಡಿರುವವರು ಮಾತನಾಡಿಲ್ಲವೇ ಎಂದು ನಾನು ತಮ್ಮನ್ನು ಕೇಳಬೇಕಾಗುತ್ತದೆ.

MR. DEPUTY SPEAKER.—Some of the members have not availed of an opportunity of speaking on this demand.

ಶ್ರೀ ಸಿ. ಬ್ಯೈರೇಗೌಡ.—ಅವರು ಕೇಳದೇ ಇರಬಹುದು. ಅದು ಅವರಿಗೆ ಬಿಟ್ಟಿರತಕ್ಕಂಥ ವಿಷಯ.

Mr. DEPUTY SPEAKER.—Please use sober language. Even the C.P.I. members could not avail of this opportunity.

ಶ್ರೀ ಸಿ. ಬ್ಯೈರೇಗೌಡ.—ನಾನು ತಮ್ಮ ಮಾತನ್ನು ಯಾವತ್ತೂ ಮೀರಿಲ್ಲ. ಈವೊತ್ತು ಮೀರಬೇಕಾಗುತ್ತದೆ. ಆದುದರಿಂದ ನಾನು ಈ ವಿಷಯವನ್ನು ಹೇಳಬೇಕಾಗುತ್ತದೆ.

Arrest and Release of Sri Vatal Nagaraj

Announcement

Mr. DEPUTY SPEAKER.—There is half-an-hour discussion. The Hon. Member concerned is abs nt. Before we rise I have an announcement to make. I have received a communication from the Superintendent of Police saying that Sri Vatal Nagaraj, memder of the Legislatative Assembly was arrested on 29-3-1972 at 12 hours under Section 151 Cr. P. C. and released at 14 hours on the same day.

Now the House stands adjourned to meet again at 9.A.M. tomrrow.

The House adjourned at Five Minutes past Six of the Clock to meet again at Nine of the Clock on 31st March 1973.

WD 20247 GPB 550—10-7-1974

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Saturday, 31st March 1973/Chaitra 10, 1895 (Saka Era)

The House met in the Assembly Chamber, Vidhana Soudha, at Nine of the Clock.

MR. DEPUTY SPEAKER [SRI B. P. KADAM] in the Chair.

STARRED QUESTIONS

(to which oral answers were given)

Somanahalli Potato Seed Producing Centre

102. SRI K. H. HANUME GOWDA (Hassan).—

Will the Minister for Agriculture and Forests be pleased to state.—

(*a*) the amount spent by the Government for the Somanahalli Potato Seed Producing Centre so far (the yearwise figures for levelling the land, digging Irrigation Wells, Contour Bunding and Construction of new tanks may be furnished separately) ;

(*b*) the amount spent on the establishment of the said Centre during the last three years ;

(*c*) the amount spent for seed production in this Centre during the last three years ; the quantum of potato produced ;

(*d*) the quantum of Potato Seeds distributed to ryots during the last three years ;

(*e*) the quantum of Potato remaining unused for seed production, how it is sold and at what rate and the money realised by the Government ?

Sri K. H. PATIL (Minister for Agriculture and Forests).—

(*a*) The expenditure incurred so far is Rs. 4,10,884–13 Details are given in the statement placed on the Table of the House *

(*b*) 1970-71	...	Rs.	43,338–00
1971-72	...	Rs.	44,338–00
1972-73	...	Rs.	45,338–75
Total	...	Rs.	1,33,014–75

(*c*) 1970–71	...	Rs.	14,000–00
1971–72	...	Rs.	15,000–00
1972–73	...	Rs.	16,000–00
Total	...	Rs.	45,000–00

The quantity of potato produced is as follows :—

1970–71	...	14,871	Kgs.
1971–72	...	24,441	-do-
1972–73	...	74,195	-do-
Total	...	1,13,507	-do-

(*d*) 1970–71	...	4,295	Kgs.
1971–72	...	13.780	-do-
1972–73	...	36,490	-do-

(*e*) (1) 81630 Kgs.

(2) Direct sales have been conducted in the following places.—

Regulated Markets at Hassan and Bangalore Grain Merchant Co-operative Bank, Bangalore, Taluk Level Horticulture Department Offices.

(3) That has been sold at Rs. 47 per quintal.

(4) The Government has realised Rs. 38,305–09.

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನ ಜಿಲ್ಲೆಯಲ್ಲಿ 25 ಸಾವಿರ ಎಕರೆ ಪ್ರದೇಶದಲ್ಲಿ ಆಲೂಗಡ್ಡೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಈಗ ಸೋಮನಹಳ್ಳಿ ಆಲೂಗಡ್ಡೆ ಬೀಜೋತ್ಪಾದನಾ ಕೇಂದ್ರದಲ್ಲಿ ಎಷ್ಟು ಎಕರೆಗೆ ಆಗುವಷ್ಟು ಬೀಜವನ್ನು ಉತ್ಪಾದನೆ ಮಾಡುತ್ತಿದ್ದಾರೆ ? ಪೂರ್ತಿ ಬೀಜವನ್ನು ಎಲ್ಲಾ ರೈತರಿಗೂ ಎಷ್ಟು ವರ್ಷಗಳ ಅವಧಿಯಲ್ಲಿ ಒದಗಿಸುವುದಕ್ಕೆ ಏರ್ಪಾಟು ಮಾಡುತ್ತೀರಿ ?

* Copy to placed in the Mysore Legislature Library vide No : 26/*dated* 31-3-73

† ಶ್ರೀ ಎಚ್. ಸಿದ್ಧವೀರಪ್ಪ.—ಕಳೆದ ಹಲವಾರು ವರ್ಷಗಳಿಂದ ಆ ಫಾರಂನಲ್ಲಿ ಆಲೂಗಡ್ಡೆ ಬೀಜೋತ್ಪಾದನೆಯನ್ನು ಮಾಡುತ್ತಿದ್ದಾರೆ. ಇದರಲ್ಲಿ ಈಗ ಚಂದ್ರಮುಖಿ, ಶಕ್ತಿ, ಮತ್ತು ಕುಫ್ರಿ ಜ್ಯೋತಿ, ಕುಫ್ರಜೀವನ ಎನ್ನುವ ಬೀಜಗಳನ್ನು ತಯಾರು ಮಾಡುತ್ತಿದ್ದಾರೆ. ಇದರಲ್ಲಿ 1970-71ನೇ ಸಾಲಿನಲ್ಲಿ 14,871 ಕೆ.ಜಿ. ಬೀಜ ಉತ್ಪಾದನೆಯಾಗಿದೆ. 1971-72ನೇ ಸಾಲಿನಲ್ಲಿ 24,401 ಕೆ.ಜಿ. ಬೀಜ ಉತ್ಪಾದನೆಯಾಗಿದೆ. 1972-73ನೇ ಸಾಲಿನಲ್ಲಿ 74-195 ಕೆ.ಜಿ ಬೀಜವನ್ನು ಉತ್ಪಾದನೆ ಮಾಡಿದ್ದಾರೆ. ವಿತರಣೆ ಮಾಡಿರುವುದು 1970-71ನೇ ಸಾಲಿನಲ್ಲಿ 4295 ಕೆ.ಜಿ. ಬೀಜವನ್ನು ವಿತರಣೆ ಮಾಡಿದೆ. 1971-72ನೇ ಸಾಲಿನಲ್ಲಿ 13780 ಕೆ.ಜಿ. ಬೀಜವನ್ನು ವಿತರಣೆ ಮಾಡಿದೆ. 1972-73ನೇ ಸಾಲಿನಲ್ಲಿ 36490 ಕೆ.ಜಿ. ಬೀಜವನ್ನು ವಿತರಣೆ ಮಾಡಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಈಗ ಉತ್ಪತ್ತಿ ಮಾಡತಕ್ಕ ಬೀಜ 10 ಸಾವಿರ ಎಕರೆಗೂ ಸಾಕಾಗುವುದಿಲ್ಲ. 25 ಸಾವಿರ ಎಕರೆಯಲ್ಲಿ ಈ ಆಲೂಗಡ್ಡೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಆ ಪೂರ್ತಿ ಜಮೀನಿಗೆ ಒಳ್ಳೆ ಬೀಜವನ್ನು ಉತ್ಪಾದನೆ ಮಾಡಿ ಎಲ್ಲಾ ರೈತರಿಗೂ ಒದಗಿಸುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಸರ್ಕಾರದವರು ಆದಷ್ಟು ಜಾಗ್ರತೆ ಸೆಲ್ಫ್‌ಸಫಿಷಿಯೆಂಟ್ ಆಗಿ ಬೀಜವನ್ನು ಒದಗಿಸಬೇಕು. ಮೊದಲು ಹೊರಗಡೆಯಿಂದ ಈ ಬೀಜವನ್ನು ತರಿಸಲಾಗುತ್ತಿತ್ತು. ಈಗ ಹೊರಗಡೆಯಿಂದ ತರಿಸುತ್ತಾ ಇಲ್ಲ. ಇಲ್ಲಿಯೇ ಅದನ್ನು ಉತ್ಪಾದನೆ ಮಾಡಬೇಕು ಎನ್ನುವ ದೃಷ್ಟಿಯಿಂದ ಸಂಶೋಧನಾ ಕೇಂದ್ರ ಪ್ರಾರಂಭವಾಗಿದೆ. ಆದಷ್ಟು ಜಾಗ್ರತೆ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ಫಾರಂನಲ್ಲಿ ಬೀಜ ಉತ್ಪಾದನೆ ಸರಿಯಾಗಿ ನಡೆಯುತ್ತಿಲ್ಲ, ಅನೇಕ ವಿಧವಾದ ಅಕ್ರಮಗಳು ನಡೆದಿವೆ, ಸರಿಯಾಗಿ ಕೆಲಸಕಾರ್ಯಗಳು ನಡೆಯುತ್ತಾ ಇಲ್ಲ ಎಂದು ದೂರುಗಳು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಸಿದ್ಧವೀರಪ್ಪ.—ಅಂಥಾ ದೂರುಗಳು ಮಾಹಿತಿಗಳು ಯಾವುದೂ ಇಲ್ಲ. ಮತ್ತೊಂದು ಪ್ರಶ್ನೆಯನ್ನು ಹಾಕಿದರೆ ಸರ್ಕಾರದವರು ವಿಚಾರಮಾಡಿ ದೂರುಗಳು ಇದ್ದರೆ ಅದರ ಮೇಲೆ ತನಿಖೆ ಮಾಡಿ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಎ. ವಿ. ಮುನಿಸ್ವಾಮಿ.—ಎಲ್ಲೆಲ್ಲಿ ಈ ಆಲೂಗಡ್ಡೆ ಸಂಶೋಧನಾ ಕೇಂದ್ರವನ್ನು ತೆರೆಯುತ್ತೀರಿ ?

ಶ್ರೀ ಎಚ್. ಸಿದ್ಧವೀರಪ್ಪ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಂ. ನಂಜೇಗೌಡ.—ಸೋಮನಹಳ್ಳಿಯ ಆಲೂಗಡ್ಡೆ ಬೀಜೋತ್ಪಾದನೆ ಕೇಂದ್ರದಲ್ಲಿ ಬೇಸಿಗೆ ಬೆಳೆಯನ್ನು ಬೆಳೆದು ಬೀಜವನ್ನು ನಷ್ಟ ಮಾಡಬೇಕಾಗಿದೆ. ಅಲ್ಲಿ ನೀರಿನ ಅನಾನುಕೂಲ ಇವೆ. ಆದ್ದರಿಂದ ಅಲ್ಲಿ ಹೆಚ್ಚು ನೀರನ್ನು ಒದಗಿಸಿ ಹೆಚ್ಚು ಬೀಜವನ್ನು ಉತ್ಪಾದನೆ ಮಾಡುವುದಕ್ಕೆ ಸರ್ಕಾರದವರು ತೀವ್ರಗಮನವನ್ನು ಕೊಡುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಇದನ್ನು ವಿಚಾರ ಮಾಡುತ್ತೇವೆ. ಈ ವರ್ಷದ ಪರಿಸ್ಥಿತಿ ನಿಮಗೆ ಗೊತ್ತಿರುವ ವಿಷಯ. ಅಲ್ಲಿ ಎಷ್ಟು ನೀರನ್ನು ಒದಗಿಸುವುದಕ್ಕೆ ಸಾಧ್ಯ ಇದೆ ಎನ್ನತಕ್ಕಂಥಾದ್ದನ್ನು ನೋಡಿ ಸರ್ಕಾರ ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತದೆ.

Sri MALLIKARJUNA KHARGE.—May I know how many up-to-date research stations have been established in the Mysore State to produce potato seeds ?

Mr. DEPUTY SPEAKER.—That is outside the scope of the question.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಯವರು ನಾವು ಸ್ವಾವಲಂಬನೆಯನ್ನು ಈ ಕೇಂದ್ರದಿಂದ ಮಾಡುತ್ತೇವೆಂದು ಹೇಳಿದರು. ಸ್ವಾವಲಂಬನೆ ಮಾಡಬೇಕಾದರೆ ಎಷ್ಟು ಅವಶ್ಯಕ ಆಲೂಗಡ್ಡೆ ಬೀಜ ಬೇಕಾಗುತ್ತದೆ ಮತ್ತು ಈ ಯೋಜನೆಗೆ ಖರ್ಚು ಎಷ್ಟು ಆಗುತ್ತದೆ ?

† Indicates that the remarks or speechs have not been revised by the member concerned

ಶ್ರೀ ಎಚ್. ಸಿದ್ಧವೀರಪ್ಪ.—ಅಷ್ಟೆಲ್ಲಾ ವಿವರ ನನ್ನಲ್ಲಿ ಇಲ್ಲ. ಈಗಿರತಕ್ಕಂತೆ ಅಲ್ಲಿ ಪ್ರಾರಂಭ ಮಾಡಿದ್ದಾರೆ. ಸ್ವಾವಲಂಬನೆಯಾಗುವುದಕ್ಕೆ ಕೆಲವು ದಿವಸಗಳು ಬೇಕಾಗುತ್ತದೆ. ಮೊದಲು ನಾವು ಸಿಮ್ಲಾ ಮುಂತಾದ ಕಡೆಗಳಿಂದ ಬೀಜಗಳನ್ನು ತರಿಸುತ್ತಿದ್ದೆವು. ಈಗ ಅದಷ್ಟು ನಮ್ಮ ದೇಶದಲ್ಲಿಯೇ ಇದರ ಬೆಳವಣಿಗೆ ಮಾಡಬೇಕೆಂದು ಸರ್ಕಾರದ ಉದ್ದೇಶವಾಗಿದೆ. ಈ ಕೇಂದ್ರದಲ್ಲಿ ಇದರ ಕಾರ್ಯವನ್ನು ತ್ವರಿತವಾಗಿ ಮಾಡುತ್ತಿದ್ದಾರೆ. ಹಾಸನ ಜಿಲ್ಲೆ ಎಲ್ಲಕ್ಕಿಂತಲೂ ಹೆಚ್ಚು ಆಲೂಗಡ್ಡೆ ಬೆಳೆಯುತ್ತಿರುವ ಜಿಲ್ಲೆ.

ಶ್ರೀ ಎಂ. ನಂಜೇಗೌಡ.—ಈ ಸಾರಿ ಅಲ್ಲಿ ಆಲೂಗಡ್ಡೆಯನ್ನು ಉತ್ತಮವಾಗಿ ಬೆಳೆದಿದ್ದರೂ ಜನರಿಗೆ ಅದನ್ನು ಕೊಂಡುಕೊಳ್ಳುವುದಕ್ಕೆ ಅನುಮಾನ ಇದೆ. ಅದನ್ನು ಹೆಚ್ಚಿಗೆ ಜನಪ್ರಿಯಗೊಳಿಸ ಬೇಕಾದರೆ ರೈತರಿಗೆ ರಿಯಾಯಿತಿ ದರದಲ್ಲಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ವಿಚಾರ ಮಾಡೋಣ.

ಶ್ರೀ ಕೆ. ಎಚ್. ಹನುಮೇಗೌಡ.—ಸೋಮನಹಳ್ಳಿ ಕೇಂದ್ರದಲ್ಲಿ ಉತ್ಪಾದನೆಯಾಗತಕ್ಕಂತಹ ಬೀಜದ ಬಗ್ಗೆ ಅನೇಕ ರೈತರು ಸಂಶಯ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಇಲ್ಲಿ ಇರತಕ್ಕಂತಹ ಅಧಿಕಾರಿ ಯಾರು ಇದ್ದಾರೆ, ಅವರ ಅನುಭವ, ಅರ್ಹತೆ ಮತ್ತು ಈ ಕ್ಷೇತ್ರದಲ್ಲಿ ಕೊಟ್ಟಿರತಕ್ಕಂತಹ ಕಾಣಿಕೆ ಏನೆಂದು ಹೇಳುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಒಬ್ಬ ಅಧಿಕಾರಿಯ ಮೇಲೆ ಒಂದು ಸಂಶೋಧನಾ ಕೇಂದ್ರ ಇರುವುದಿಲ್ಲ. ಆ ಮನುಷ್ಯ ನಾಲಾಯಕ್ ಆದರೆ, ಅವನನ್ನು ತೆಗೆದುಹಾಕಬಹುದು.

ಶ್ರೀ ಕೆ. ಎಚ್. ಹನುಮೇಗೌಡ.—ಲಕ್ಷಾಂತರ ರೂಪಾಯಿ ಖರ್ಚು ಮಾಡತಕ್ಕಂತಹ ಈ ಇಲಾಖೆಯಲ್ಲಿ ತಕ್ಕ ಅರ್ಹತೆ ಇರುವ ಮತ್ತು ಅನುಭವ ಇರುವ ಅಧಿಕಾರಿ ಇರಬೇಕು. ಇಲ್ಲಿ ಇರ ತಕ್ಕಂತಹ ಅಧಿಕಾರಿ ಕಳೆದ 10 ವರ್ಷದಿಂದ ಇದ್ದಾನೆ. ಆತನನ್ನು ಬಿಟ್ಟು ಬೇರೆಯವರು ಯಾರೂ ನಿಮಗೆ ಸಿಗಲಿಲ್ಲವೇ ? ಆತನ ಅರ್ಹತೆ ಮತ್ತು ಆತ ದೇಶಕ್ಕೆ ಕೊಟ್ಟಿರುವ ಕಾಣಿಕೆಯಾದರೂ ಏನು ?

ಶ್ರೀ ಎಚ್. ಸಿದ್ಧವೀರಪ್ಪ.—ಇಲ್ಲಿರತಕ್ಕಂತಹ ಪ್ರಶ್ನೆಯಲ್ಲಿ ಆ ಪ್ರಶ್ನೆಗಳು ಉದ್ಭವ ವಾಗುವುದಿಲ್ಲ. ಅವನು ಇನ್‌ಎಫಿಶಿಯೆಂಟ್ ಆದುದರಿಂದ ಕೆಟ್ಟು ಹೋಗಿದೆಯೇ ಎಂದು ಅವರು ಕೇಳಿಲ್ಲ. ಆದರೂ ಸರ್ಕಾರದ ಗಮನಕ್ಕೆ ಅದನ್ನು ತಂದಿದ್ದಾರೆ, ಅದನ್ನು ವಿಚಾರ ಮಾಡೋಣ.

Iggalur Pick-up

535. **Sri T. V. KRISHNAPPA** (Channapatna).—

Will the Minister of State for Major Irrigation be pleased to state :—

(*a*) whether the Estimate for Iggalur Pickup is ready ; if not, when it will be finalised ;

(*b*) when the Government proposes to take up the construction of this pick-up ?

Sri H. N. NANJE GOWDA (Minister of State for Major Irrigation).—

(*a*) It is ready.

(*b*) After the same is cleared by Government of India.

ಶ್ರೀ ಟಿ. ವಿ. ಕೃಷ್ಣಪ್ಪ.—ಈ ಪಿಕ್‌ಅಪ್ ಮಾಡುವುದಕ್ಕೆ ಎಷ್ಟು ಖರ್ಚಾಗಿದೆ ಮತ್ತು ಇದನ್ನು ಮಾಡಿದರೆ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ಒದಗುತ್ತದೆ ? ಮತ್ತು ಈಚೆಗೆ ಇದರ ಬಗ್ಗೆ ಕೇಂದ್ರಕ್ಕೆ ಒತ್ತಾಯ ಮಾಡಿ ಹೇಳಿದ್ದೀರಾ ?

† ಶ್ರೀ ಎಚ್. ಎನ್. ನಂಜೇ ಗೌಡ.—ಇದಕ್ಕೆ 132 ಲಕ್ಷ ರೂಪಾಯಿ ಆಗುತ್ತದೆಂದು ಅಂದಾಜು ಮಾಡಿದ್ದಾರೆ. ಇದರಿಂದ 10,700 ಎಕರೆ ಜಮೀನಿಗೆ ನೀರಿನ ಸೌಲಭ್ಯ ಸಿಗುತ್ತದೆ. ಕೇಂದ್ರಕ್ಕೆ ನಾವು ಜೂನ್ 21ರಲ್ಲಿ ಬರೆದಿದ್ದೇವೆ. ಆ ಮೇಲೆ ಅವರು ಅಕ್ಟೋಬರ್‌ನಲ್ಲಿ ಕೆಲವು ಕಾಮೆಂಟ್ಸ್ ಕೇಳಿದ್ದರು. ಅದಕ್ಕೆ ಪುನಃ ಫೆಬ್ರವರಿಯಲ್ಲಿ ಉತ್ತರ ಕಳುಹಿಸಿಕೊಟ್ಟಿದ್ದೇವೆ, ಇನ್ನೂ ಕ್ಲಿಯರೆನ್ಸ್ ಬಂದಿಲ್ಲ. ಇದಕ್ಕಾಗಿ ಕೇಂದ್ರವನ್ನು ಒತ್ತಾಯಮಾಡುತ್ತಿದ್ದೇವೆ.

ಶ್ರೀ ಎ. ಎಂ. ಬೆಳ್ಳಿಯಪ್ಪ.—ಈ ಯೋಜನೆಯಿಂದ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕಿನ ಕೆಲವು ಪ್ರದೇಶಗಳಿಗೆ ನೀರಾವರಿ ಸೌಕರ್ಯ ಒದಗಿಸುವುದಕ್ಕೆ ಏರ್ಪಾಡು ಮಾಡಲಾಗುತ್ತದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಇದರಲ್ಲಿ ಹೋಬಳಿವಾರ್ ಮಾಹಿತಿ ಇಲ್ಲ. ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

Tanks in Hassan Constituency

575. K. H. HANUME GOWDA (Hassan).—

Will the Minister for Public Works and Electricity be pleased to state :—

(*a*) the number of tanks in Hassan constituency having more than 10 acres of achkat ;

(*b*) the number of tanks repaired so far ;

(*c*) the number of tanks in respect of which estimates for repairs have been prepared ;

(*d*) the number of years within which the Government have programmed to repair the unrepaired tanks ?

Sri H. M. CHANNABASAPPA (Minister for Public Works and Electricity).—

(*a*) The number of tanks in Hassan Assembly Constituency having more than 10 acres of achkat is 4304 ;

(*b*) 116 tanks have been repaired from 1967-68 to 1971-72 ;

(*c*) Estimates for repairing 32 tanks have been prepared this year :

(*d*) The Department prepares the programme of repairs every year by taking decision depending upon the grant sanctioned. Naturally, as repair works crop up often it is not possible to say precisely that they will be completed within specified years.

ತಾವು (ಎ) ಪ್ರಶ್ನೆಗೆ ಉತ್ತರವಾಗಿ 4304ರ ಬದಲು 304 ಎಂದು ತಿದ್ದಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನ ತಾಲ್ಲೂಕು ಆಗಾಗ್ಗೆ ಬರಗಾಲಕ್ಕೆ ತುತ್ತಾಗತಕ್ಕಂತಹ ಪ್ರದೇಶ. ಈ ಭಾಗದ ಜನರು ಶಾಶ್ವತವಾಗಿ ಕ್ಷಾಮದ ದವಡೆಗೆ ಸಿಲುಕತಕ್ಕ ಜನರು. ಪರಿಸ್ಥಿತಿ ಹೀಗಿದ್ದರೂ ಕೂಡ ಈ ಕೆರೆಗಳ ರಿಪೇರಿಗೆ ಸೂಕ್ತವಾದ ಕಾರ್ಯಕ್ರಮ ಇದುವರೆಗೂ ತೆಗೆದುಕೊಂಡಿಲ್ಲ. ಅದನ್ನು ಇನ್ನು ಎಷ್ಟು ವರ್ಷಗಳಲ್ಲಿ ಅವುಗಳನ್ನು ತೆಗೆದುಕೊಂಡು ರಿಪೇರಿ ಮಾಡಿಸುತ್ತೀರಿ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಎಸ್ಟಿಮೇಟ್ ಮಾಡಿರುವ ಕೆಲಸಗಳನ್ನು ಈ ವರ್ಷ ಮಂಜೂರುಮಾಡಿ ಕೆರೆಗಳ ರಿಪೇರಿ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣದ ವ್ಯವಸ್ಥೆ ನೋಡಿಕೊಂಡು ಆದಷ್ಟು ಹೆಚ್ಚು ಕೆರೆಗಳನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ನಂಜೇಗೌಡ.—ಹಾಸನ ಕ್ಷೇತ್ರದಲ್ಲಿ ಕೆಲವು ಪ್ರಭಾವಶಾಲಿ ಜನರು ಇರುವುದರಿಂದ ಇಲ್ಲಿ ಪಿ. ಡಬ್ಲ್ಯು. ಡಿ. ಗೆ ಸಂಬಂಧಪಟ್ಟಹಾಗೆ ಕೆಲವು ಹೋಬಳಿಗಳನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಸನದಿಂದ ಬಂದಿರತಕ್ಕ ಎಲ್ಲಾ ಸದಸ್ಯರೂ ಪ್ರಭಾವಶಾಲಿಗಳು.

Dust Coming out From Ammasandra Cement Factory

709. SRI B. BYRAPPAJI (Turuvekere).—

Will the Minister for Industries be pleased to state :—

(*a*) whether it has come to the notice of the Government that the ryot's lands nearby villages are being damaged and also the health of the labourers and people around is being affected due to the dust coming out from the Ammasandra (Adithyapatna) Cement Factory of Turuvekere Taluk ;

(*b*) if so, the instructions issued to the management of the factory regarding the prevention of dust coming out ;

(*c*) the reasons for the factory being lethargic in preventing the dust coming out even though the local Legislators, Leaders and Members of Parliament altogether issuing suitable instructions to the management of the factory since many years ?

SRI H. SIDDAVEERAPPA (Minister for Health). [On be half of. SRI S. M. KRISHNA (Minister for Industries)].—

(*a*) Complaints have been received in this behalf.

(*b*) The company has been informed to take suitable steps to prevent the dust coming out.

(*c*) There has been delay in preventing the dust coming out due to some technical difficulties.

ಶ್ರೀ ಬಿ. ಬೈರಪ್ಪಾಜಿ.—ಉತ್ತರದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಕಂಪೆನಿಗೆ ತಿಳಿಸಲಾಗಿದೆ ಎಂದು ಹೇಳಿದ್ದೀರಿ. ಸುಮಾರು 8--10 ವರ್ಷಗಳಿಂದಲೂ ಹೀಗೆಯೇ ಸರ್ಕಾರದವರು ಹೇಳುತ್ತಿದ್ದಾರೆ. ಸರ್ಕಾರಕ್ಕೆ ಈಗಾಗಲೇ ವ್ಯವಸಾಯ ಇಲಾಖೆಯಿಂದ, ತೋಟಗಾರಿಕೆ ಇಲಾಖೆಯಿಂದ ಮತ್ತು ಕೈಗಾರಿಕಾ ಇಲಾಖೆಯಿಂದ ಇದರ ಬಗ್ಗೆ ಬಂದಿರತಕ್ಕಂತಹ ವರದಿಯನ್ನು ಕಳಿಸಿಕೊಟ್ಟಿದ್ದೇನೆ. ಅಲ್ಲಿ ಇದರಿಂದಾಗಿ ತೆಂಗಿನ ತೋಟ ಹಾಳಾಗುತ್ತಿದೆ ಎಂದು ತೋಟಗಾರಿಕೆ ಇಲಾಖೆಯವರು ಹೇಳುತ್ತಿದ್ದಾರೆ, ಆರೋಗ್ಯ ಇಲಾಖೆಯವರು ಅಲ್ಲಿಯ ಜನರ ಆರೋಗ್ಯ ಕೆಡುತ್ತಿದೆ ಎಂದು

ಹೇಳುತ್ತಿದ್ದಾರೆ. ಮತ್ತು ಕೇಂದ್ರಸರ್ಕಾರದಿಂದ ಕೈಗಾರಿಕೆ ಇಲಾಖೆಯವರು ಆ ಧೂಳನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆ. ಇಷ್ಟು ಹೇಳಿದರೂ ಕೂಡ ಆ ಕಂಪೆನಿಯವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳದೆ ಹಿಂದಕ್ಕೆ ಹೋಗಿರುವುದಕ್ಕೆ ಕಾರಣವೇನು ?

† ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಹೇಳಿದಂತೆ ಕೆಲವಾರು ವರ್ಷಗಳಿಂದ ಆ ಭಾಗದ ರೈತರಿಗೆ ಮತ್ತು ಆರೋಗ್ಯಕ್ಕೆ ತೊಂದರೆಯಾಗುತ್ತಿದೆ ಎಂದು ದೂರುಗಳು ಬಂದಿವೆ. ದೂರುಗಳು ಸಕಾರಣವಾಗಿವೆ ಎಂದು ಕೆಲವರ ಅಭಿಪ್ರಾಯ. ಇದೆಲ್ಲಾ ಆದ ಮೇಲೆ ಸರ್ಕಾರದವರು ಕಂಪೆನಿಯ ಮೇಲೆ ಒತ್ತಡ ತಂದು ಕೇಂದ್ರ ಸರ್ಕಾರದ ಒಬ್ಬ ಅಡ್‌ವೈಸರನ್ನು ಕರೆಸಿ ವಿಚಾರ ಮಾಡಿದ ಪ್ರಕಾರ ಕಂಪೆನಿಯವರು ಈಗಾಗಲೇ ಅದಕ್ಕೆ ಬೇಕಾದಂತಹ ಟೆಕ್ನಿಕಲ್ ಒಪಿನಿಯನ್ ಪಡೆದು ಯಾವ ಮೆಷನರಿ ತರಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ಹೊರಗಡೆಯಿಂದ ತರಿಸಬೇಕಾಗಿರುವುದರಿಂದ ಅದಕ್ಕೆ ಬೇಕಾದಂತಹ ಫಾರಿನ್ ಎಕ್ಸ್‌ಚೇಂಜ್ ರಿಲೀಸ್ ಮಾಡಬೇಕೆಂದು ಕೇಂದ್ರಸರ್ಕಾರಕ್ಕೆ ಬರೆದಿದ್ದಾರೆ. ಇದಕ್ಕೆ ನಾಲ್ಕು ಲಕ್ಷದ 50 ಸಾವಿರ ರೂಪಾಯಿ ಬೆಲೆಯಾಗುತ್ತದೆ. ಅದಲ್ಲದೆ ಇದಕ್ಕೋಸ್ಕರ ಕಂಪೆನಿಯವರು ಒಬ್ಬ ಮೆಕ್ಯಾನಿಕಲ್ ಇಂಜಿನಿಯರನ್ನು ವೆಸ್ಟ್‌ಜರ್ಮನಿಗೆ 1972ನೇ ಇಸವಿಯಲ್ಲಿ ಇದರ ಬಗ್ಗೆ ಸ್ಟಡಿ ಮಾಡುವುದಕ್ಕೆ ಕಳಿಸಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ನಾವು ಇದರ ಬಗ್ಗೆ ಕಣ್ಣುಮುಚ್ಚಿಕೊಂಡು ಕುಳಿತಿಲ್ಲವೆಂದು ಗೊತ್ತಾಗುತ್ತದೆ. ಇಲ್ಲಿ ನಮ್ಮ ಜನರಿಗೆ ಆಗಿರತಕ್ಕ ತೊಂದರೆಗಳನ್ನು ಈಗ ತಪ್ಪಿಸಬೇಕು. ಈ ಕಂಪೆನಿಯ ಮೇಲೆ ಒತ್ತಡ ತೆಗೆದುಕೊಂಡು ಬಂದು ಅಲ್ಲಿ ಕೆಲಸ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ಕಂಪೆನಿಯವರು ಮೊದಲೇ ನೋಡಿ ಮಾಡಬೇಕಾಗಿತ್ತು. ಅದನ್ನು ಮಾಡಲಿಲ್ಲ. ಈಗ ಮಾಡುತ್ತಾರೆಂದು ನಿರೀಕ್ಷಣೆ ಮಾಡುತ್ತೇವೆ. ಆ ವಿಚಾರದಲ್ಲಿ ಈಗಾಗಲೇ ಸೂಕ್ತ ಕ್ರಮವನ್ನು ಅವರು ಕೈಗೊಂಡಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—4-2-1972ರಲ್ಲಿ ಕೇಂದ್ರಸರ್ಕಾರದ ಒಬ್ಬ ಅಡ್ವೈಸರ್ ಬಂದು ಅವರಿಗೆ ತಿಳುವಳಿಕೆ ಕೊಟ್ಟು ಹೋಗಿದ್ದಾರೆ. ಸರ್ಕಾರಕ್ಕೆ ಬೇರೆ ಬರೆದಿದ್ದಾರೆ. ಐದುಮೈಲಿ ಫಾಸಲೆಯಲ್ಲಿ ಧೂಳು ಹೋಗುತ್ತಿದೆ, ಸಾವಿರಾರು ರೂಪಾಯಿಗಳಷ್ಟು ದಿನವೂ ನಷ್ಟವಾಗುತ್ತಿದೆ, ತೆಂಗಿನ ತೋಟ, ಅಡಿಕೆ ತೋಟಗಳಿಗೆ ಧಕ್ಕೆಯಾಗಿದೆ. ದನಕರುಗಳು ಹುಲ್ಲು ಮೇಯುವುದಕ್ಕೆ ಸಾಧ್ಯವಾಗಿಲ್ಲ. ಜನರ ಆರೋಗ್ಯವೂ ಸಹ ಕೆಟ್ಟುಹೋಗುತ್ತಿದೆ. ಇಷ್ಟಾದರೂ ಕೂಡ ತಾವು ಅವರಿಗೆ ನಿರ್ದೇಶನ ಕೊಡುವುದಕ್ಕೆ ಸಾಧ್ಯವಾಗಿಲ್ಲವೇ ? ಅಲ್ಲಿನ ರೈತರ ಸ್ಥಿತಿ ಚಿಂತಾಜನಕವಾಗಿದೆ. ಅವರು ಅಲ್ಲಿಂದ ಊರು ಬಿಡುವ ಪರಿಸ್ಥಿತಿಯಲ್ಲಿದ್ದಾರೆ. ಕಂಪೆನಿಯ ವ್ಯವಸ್ಥಾಪಕರಿಗೆ ಇದರಿಂದ ಹೆಚ್ಚು ತೊಂದರೆಯಾಗುತ್ತಿದೆ. ತೋಟಗಳಿಗೂ ತೊಂದರೆಯಾಗುತ್ತಿದೆ. ತೋಟಗಳ ಮಾಲೀಕರುಗಳಿಗೂ ಕೆಲಮಟ್ಟಿಗೆ ತೊಂದರೆಯಾಗಿ ಇರುವುದರಿಂದ ವರ್ಷೇವರ್ಷೇ ಅವರಿಗೆ ಪರಿಹಾರ ಕೊಡುವ ಏರ್ಪಾಡನ್ನು ಮಾಡಬೇಕೆಂದು ಸರ್ಕಾರದವರು ಆ ಕಂಪೆನಿಗೆ ಆದೇಶವನ್ನು ನೀಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಬೇರೆ ಪ್ರಶ್ನೆಯಾಗುತ್ತದೆ. ಇದರಲ್ಲಿ ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಮಾನ್ಯ ಸಚಿವರಿಗೆ ಇವರ ತೀವ್ರತೆ ಏನೆಂಬುದು ಮನವರಿಕೆಯಾಗಿದೆ. ನಮ್ಮ ರೈತರಿಗೆ ತೊಂದರೆಯಾಗದೇ ಇರುವ ರೀತಿಯಲ್ಲಿ ಏನೇನು ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕೋ ಅದಕ್ಕೆ ಹಿಂಜರಿಯುವುದಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಕಾರ್ಖಾನೆಯ ಮೇಲೆ ಬಹುತೇಕ ರಾಜಕೀಯ ಒತ್ತಡ ಇರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಕಾರ್ಖಾನೆಯನ್ನು ಅಲ್ಲಿಂದ ಷಿಫ್ಟ್ ಮಾಡಿ ಬೇರೆ ಕಡೆಗೆ ವರ್ಗಾಯಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ರಾಜಕೀಯ ಒತ್ತಡ ವಿಷಯ ಗೊತ್ತಿಲ್ಲ. ಕಾರ್ಖಾನೆ ತೆಗೆಯಬೇಕೆಂಬುದಕ್ಕೆ ಏನೂ ಕಾರಣ ಕೊಟ್ಟಿಲ್ಲ. ಆದರೂ ಆ ಕಾರ್ಖಾನೆಯನ್ನು ನಮ್ಮ ದೇಶದಲ್ಲಿಟ್ಟುಕೊಂಡಿದ್ದೇವೆ. ಅಲ್ಲಿ ಡಸ್ಟ್ ನ್ಯೂಸೆನ್ಸ್ ಇದೆ. ಅದನ್ನು ನೋಡಬೇಕು ಅದರಲ್ಲಿ ಟೆಕ್ನಿಕಲ್ ಡಿಫಿಕಲ್ಟೀಸ್ ಇವೆ. ಅದನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್.—ಈ ಕಾರ್ಖಾನೆ ಬಿರ್ಲಾ ಸಂಸ್ಥೆಗೆ ಸಂಬಂಧಪಟ್ಟಿರುವುದರಿಂದ ಬಿರ್ಲಾ ಸಂಸ್ಥೆಯವರು ಸಂಬಂಧಪಟ್ಟ ಮಂತ್ರಿಯವರ ಮೇಲೆ ಹಾಗೂ ಅಧಿಕಾರಿಗಳ ಮೇಲೆ ಒತ್ತಡ ತೆಗೆದುಕೊಂಡು ಬಂದು ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಎಚ್. ಸಿದ್ಧವೀರಪ್ಪ.—ಬಿರ್ಲಾ ಕಂಪನಿಯವರ ಒತ್ತಡ ಅವರ ಪಕ್ಷದ ಮೇಲೆ ಜಾಸ್ತಿ ಇದೆ. ನಮ್ಮ ಪಕ್ಷದವರ ಮೇಲೆ ಅಷ್ಟು ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಆ ಸ್ಥಳ ಪರೀಕ್ಷೆಗೆ ಹೋಗಿದ್ದಂಥ ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಸದಸ್ಯರಲ್ಲಿ ನಾನೂ ಒಬ್ಬ. ಆ ಕಾರ್ಖಾನೆ ಇರತಕ್ಕದ್ದು ಮೂರು ಮೈಲಿ ಸುತ್ತಳತೆ. ಅದರೂ ಜನಗಳ ಪರಿಸ್ಥಿತಿ ಅಧೋಗತಿಗೆ ಇಳಿದಿದೆ. ಇದರ ಬಗ್ಗೆ ಯಾವ ದೂರು ಬಂತು ! ಕಂಪೆನಿಯವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ಅದಲ್ಲದೆ ಏನೇ ಟೆಕ್ನಿಕಲ್ ಡಿಫಿಕಲ್ಟೀಸ್ ಇದ್ದರೂ ಅದನ್ನು ಇದುವರೆಗೂ ಪರಿಹಾರ ಮಾಡಲಿಲ್ಲವೆಂದು ನಾನು ಹೇಳುತ್ತೇನೆ. ಆ ಟೆಕ್ನಿಕಲ್ ಡಿಫಿಕಲ್ಟೀಸ್ ಯಾವುವು, ಕಂಪ್ಲೇಂಟ್ ಕೊಟ್ಟದ್ದು ಯಾರು ? ಇಷ್ಟು ನಿಧಾನ ಮಾಡಿದರೆ ಅಲ್ಲಿರತಕ್ಕ ಜನ ಸಾಯುತ್ತಾರೆ. ಅನ್ನ ಮತ್ತು ಬಟ್ಟೆವ್ಯವಸ್ಥೆ ಇಲ್ಲದೆ ಸರ್ಕಾರದವರು ಏನಾದರೂ ಒಂದು ಕಮಿಟಿಮಾಡಿ ಆ ಕಮಿಟಿಯ ಮೂಲಕ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಕೂಡಲೆ ಒಂದು ವರದಿಯನ್ನು ಆ ಕಮಿಟಿಯಿಂದ ತರಿಸುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಆ ರಿಪೋರ್ಟಿನಿಂದ ಪರಿಹಾರ ಏನೂ ಇಲ್ಲ. ಆ ಕಮಿಟಿಯನ್ನು ನೇಮಿಸುವುದರಿಂದ ಅಲ್ಲಿನ ಜನರ ಕಷ್ಟ ಪರಿಹಾರವಾಗುತ್ತದೆಂದು ನಾನು ತಿಳಿದಿಲ್ಲ. ಮಾನ್ಯ ಸದಸ್ಯರ ತೀವ್ರತೆಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಾನು ಈಗಾಗಲೇ ಹೇಳಿದ ಹಾಗೆ ಇದಕ್ಕೆ ಸಂಬಂಧಪಟ್ಟ ಮೆಷಿನರಿಬೇಕು. ಮೂರು ಆಕ್ಸಿಜನ್ ಪ್ಲಾಂಟ್ಸ್‌ಬೇಕೆಂದು ಹೇಳುತ್ತಾರೆ. ಎಲೆಕ್ಟ್ರೊಸ್ಟ್ಯಾಟಿಕ್ ಪ್ರೆಸಿಪಿಟೇಟರ್ಸ್ ಬೇಕಾಗಿದೆ. ಇದರಿಂದ ಡ್ರೈ ಪ್ರೋಸೆಸ್‌ನಲ್ಲಿ ಸಿಮೆಂಟ್ ಮಾಡುತ್ತಾರೆ. ಭದ್ರಾವತಿಯಲ್ಲಿರತಕ್ಕ ಪ್ರೋಸೆಸ್ಸೇ ಬೇರೆ, ಇಲ್ಲಿರತಕ್ಕ ಪ್ರೋಸೆಸ್ಸೇ ಬೇರೆ. ಇವತ್ತು ಅದು ಅವರಿಗೇ ಗೊತ್ತಾಗುತ್ತಿದೆ. ಆದರೆ ಕಂಪೆನಿಯವರು ಜನತೆಯನ್ನು ಎದುರಾಗಿ ಹಾಕಿಕೊಂಡು ಈ ಕಾರ್ಖಾನೆಯನ್ನು ಬಹಳ ವರ್ಷಗಳವರೆಗೆ ನಡೆಸುವುದಕ್ಕಾಗುವುದಿಲ್ಲ. ಅವರೂ ಸಹ ಜನರಿಗೆ ಈಗ ಆಗಿರತಕ್ಕ ತೊಂದರೆಗಳನ್ನು ಕಡಿಮೆಮಾಡುವುದಕ್ಕೆ ಸರ್ಕಾರ ಕೇಂದ್ರ ಸರಕಾರದ ಅಡ್ವೈಜರ್‌ಗಳು ಯಾವ ಸಲಹೆ ಮಾಡಿದ್ದಾರೋ ಆ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾದರೆ ಹೆಚ್ಚು ದುಡ್ಡು ಖರ್ಚಾಗುತ್ತದೆ. ಈಗಿರತಕ್ಕ ಅಂದಾಜು ಪ್ರಕಾರ 4½ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಅದನ್ನೂ ಸಹ ತರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಕಾರ್ಖಾನೆಯವರಲ್ಲಿ ನಾನು ಈಗಾಗಲೇ ಅರಿಕೆ ಮಾಡಿಕೊಂಡಿರುವ ಹಾಗೆ ಒಬ್ಬ ಮೆಕ್ಯಾನಿಕಲ್ ಇಂಜನಿಯರನ್ನು ಅಲ್ಲಿಗೆ ಕಳುಹಿಸಿದ್ದೇವೆ. ಅವರು ಆದಷ್ಟು ಜಾಗ್ರತೆಯಾಗಿ ಸೂಕ್ತ ಕ್ರಮವನ್ನು ಕೈಗೊಂಡು ಅಲ್ಲಿರತಕ್ಕ ತೊಂದರೆಯನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡುತ್ತಾರೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳುತ್ತೇನೆ.

ಶ್ರೀ ಜಿ. ರಾಮೇಗೌಡ.—ಈ ಪ್ರಶ್ನೆ ಈ ಸಭೆಯಲ್ಲಿ ಮೂರು ವರ್ಷಗಳ ಹಿಂದೆ ಒಂದು ಸಾರಿ ಬಂದಿತ್ತು. ಹಿಂದಿನ ಸರ್ಕಾರದವರೂ ಸಹ ಇದೇ ರೀತಿಯಲ್ಲಿ ಇದರ ಬಗ್ಗೆ ಭರವಸೆ ಕೊಟ್ಟಿತ್ತು. ಹಿಂದೆ ಖರ್ಚು 4 ಲಕ್ಷ ರೂಪಾಯಿಗಳು ಆಗುತ್ತದೆಂಬು ಹೇಳಿತ್ತು. ಈಗ ಇರತಕ್ಕ ಯಂತ್ರಗಳನ್ನು ತರಬೇಕಾದರೆ ಮೂರು ವರ್ಷಗಳು ಬೇಕೇ ? ಇದರಿಂದ ಈ ಕಾರ್ಖಾನೆಯ ಬಗ್ಗೆ ಸರ್ಕಾರ ಹೆಚ್ಚಿಗೆ ಆಸಕ್ತಿಯನ್ನು ವಹಿಸಲಿಲ್ಲವೆಂಬುದು ಅರ್ಥವಾಗುವುದಿಲ್ಲವೇ ?

ಶ್ರೀ ಎಚ್. ಸಿದ್ಧವೀರಪ್ಪ.—ಮೊಟ್ಟ ಮೊದಲನೆಯ ಸಾರಿ ಈ ಫ್ಯಾಕ್ಟರಿ ವರ್ಕಿಂಗ್ ವಿಷಯ ಟೆಕ್ನಿಕಲ್ ಅಡ್ವೈಜರ್ ಮಾನ್ಯ ಶ್ರೀ ವರ್ಮಾರವರು ಬಂದು ತಾರೀಖು, 21-10-1971 ರಂದು ಸ್ಥಳ ಅಜಮಾಯಿಷಿ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ. ಅಲ್ಲಿಂದ ಮತ್ತೆ ಬೇರೆ ರಿಪೋರ್ಟ್‌ಗಳೂ ಸಹ ಬಂದಿವೆ. ಈಗ ಅವರು ಆ ಒಂದು ಕಾರ್ಯಕ್ರಮದಲ್ಲಿ ತೊಡಗಿದ್ದಾರೆ. ಮೆಷಿನರಿಗಳನ್ನು ತರಿಸಲಿಕ್ಕೆ ಈಗ ತೊಡಗಿದ್ದಾರೆ. ಅದರ ಬಗ್ಗೆ ಕಂಪೆನಿಯವರೂ ಸಹ ವರದಿ ಮಾಡಿದ್ದಾರೆ. ಅದರ ಪ್ರಕಾರ ಕೆಲಸಗಳು ನಡೆಯುತ್ತಾ ಇವೆ. ಆದ್ದರಿಂದ ಸರ್ಕಾರದವರು ಏನು ಸೂಕ್ತ ಕ್ರಮವನ್ನು ಕೈಗೊಳ್ಳಬೇಕೊ ಅವನ್ನು ಕೈಗೊಳುತ್ತಿದ್ದಾರೆ. ಸರ್ಕಾರದ ದೃಷ್ಟಿಯಿಂದ ಈಗ ಬರೀ ಫ್ಯಾಕ್ಟರಿಯ ಇಂಟರೆಸ್ಟ್ ಒಂದೇ ಅಲ್ಲ, ಜನರ ಇಂಟರೆಸ್ಟ್ ಸಹ ಮುಖ್ಯವೆಂದು ಸರ್ಕಾರ ಮನಗಂಡಿದೆ.

ಶ್ರೀ ಕೆ. ಎಂ. ನಾಗಣ್ಣ.—ಈ ಕಾರ್ಖಾನೆಯನ್ನು ಈ ಸ್ಥಳದಲ್ಲಿ ಸ್ಥಾಪಿಸಲು ಸರ್ಕಾರದವರು ಪರವಾನೆ ಮಂಜೂರು ಮಾಡುವ ಮುನ್ನ ಮುಂದೆ ಈ ತರಹ ಸಂದರ್ಭಗಳು ಉದ್ಭವಿಸಬಹುದೆಂದು ಮೊದಲೇ ಯೋಚನೆ ಮಾಡಲಿಲ್ಲವೇ ?

ಶ್ರೀ ಎಚ್. ಸಿದ್ಧವೀರಪ್ಪ.—ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಿರುವವರು ಬಿರ್ಲಾ ಅವರಲ್ಲ. ನಾನು ಕೈಗಾರಿಕೆಯ ಮಂತ್ರಿಯಾಗಿದ್ದಾಗ ಇದಕ್ಕೆ ಲೈಸೆನ್ಸ್ ಕೊಟ್ಟಿತ್ತು. ಅದನ್ನು ಸ್ಥಾಪನೆ ಮಾಡಿರುವವರು ಇಲ್ಲಿಯವರೇ. ಹಿಂದೆ ಫ್ಯಾಕ್ಟರಿ ಇರುವ ಸ್ಥಳದಲ್ಲಿ ಅಷ್ಟು ತೊಂದರೆಗಳಿದ್ದಿಲ್ಲ, ಈಗ

ಬೇರೆ ಪ್ರೋಸೆಸ್ಸಿನಲ್ಲಿ ಮ್ಯಾನ್ಯುಫ್ಯಾಕ್ಚರ್ ಮಾಡುವುದರಿಂದ ಆ ಡಸ್ಟ್ ಹೆಚ್ಚಿಗೆ ಹೊರಗೆ ಬಾರದಂತೆ, ಹೊರಗಡೆಯಿಂದ ಬಂದಿರುವವರಿಗೆ ತೊಂದರೆಯಾಗದಂತೆ ನೋಡಿಕೊಂಡು ಆ ತೊಂದರೆಯನ್ನು ಬಗೆಹರಿಸಬೇಕು.

ಶ್ರೀ ಬಿ. ಭೈರಪ್ಪಾಜಿ.—1964ನೇ ಇಸವಿಯಲ್ಲಿಯೇ ನಾನು ಶಾಸನ ಸಭೆಯ ಸದಸ್ಯನಾಗಿ ಈ ಪ್ರಶ್ನೆಯನ್ನು ತಂದು ಆಗಿನಿಂದಲೂ ಪ್ರಯತ್ನಪಟ್ಟಿದ್ದಕ್ಕೆ ಎಲೆಕ್ಟ್ರೋಸ್ಟ್ಯಾಟಿಕ್ ಪ್ರೆಸಿಪಿಟೇಟರ್ಸ್‌ನ್ನು 1965ನೇ ಇಸವಿಯಲ್ಲಿ ಹಾಕಿದ್ದಾರೆ. ಆಗ ಕೆಲಸಮಾಡಲಿಲ್ಲ. ಆಗ ಕೂಡಲೇ ಅದರ ಲೋಪದೋಷವೇನೆಂಬುದನ್ನು ಕಂಡುಹಿಡಿದು ಬೇರೆ ಮೆಷನರಿಯನ್ನು ತರಿಸುವುದಾಗಲೀ ಅಥವಾ ಇರತಕ್ಕ ಮೆಷಿನರಿಯನ್ನು ರಿಪೇರಿ ಮಾಡಿಸುವುದಾಗಲೀ, 1965ನೇ ಇಸವಿಯಿಂದ ಏಕೆ ಮಾಡಿಸಲಿಲ್ಲ ? ಇದು ಸರ್ಕಾರದ ಉದಾಸೀನ ಮನೋಭಾವವಲ್ಲವೇ ? ಈಚೆಗೆ ಬಿರ್ಲಾ ಅವರು ಈ ಕಂಪೆನಿಯನ್ನು ಕೊಂಡುಕೊಂಡಿರುವುದರಿಂದ ಅವರು ಒಂದು ನೀತಿಗನುಗುಣವಾಗಿ ಹೋಗುವಾಗ, ಆ ಬಗ್ಗೆ ಇಷ್ಟು ವರ್ಷಗಳಾದರೂ ಕೂಡ ಸರ್ಕಾರ ಸುಮ್ಮನೆ ಇರುವುದು ಉಚಿತ ಮಾರ್ಗವೇ ಎಂದು ನಾನು ಪ್ರಶ್ನೆ ಮಾಡುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಅದಕ್ಕೆ ಈಗಾಗಲೆ ಉತ್ತರ ಹೇಳಿದ್ದೇನೆ. ಈಗ ಆ ಮೆಷಿನರಿಗಳು ಬಂದಿರುವುದರಿಂದ ನೂರಕ್ಕೆ ನೂರರಷ್ಟು ಎಫಿಷಿಯೆನ್ಸಿಯಿಂದ ಆ ಕೆಲಸ ಆಗುವುದಕ್ಕೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕೋ ಅವನ್ನು ಕೈಗೊಳ್ಳಬೇಕೆಂದು ನಿರ್ದಿಷ್ಟವಾಗಿ ಕಂಪನಿಗೆ ತಿಳಿಸಲಾಗಿದೆ. ಆದಷ್ಟು ಜಾಗ್ರತೆಯಾಗಿ ಈ ಸಭೆಯ ಮತ್ತು ಜನತೆಯ ತೀವ್ರತೆಯನ್ನು ಅರಿತುಕೊಂಡು ಕಂಪೆನಿಯವರು ನಡೆಯುತ್ತಾರೆಂದು ನಾನು ಆಶಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಪ್ರಶ್ನೆ 1965ನೇ ಇಸವಿಯಿಂದಲೂ ಈ ಸಭೆಯಲ್ಲಿ ಚರ್ಚೆಯಾಗುತ್ತಲೇ ಇದೆಯೆಂದು ಹೇಳುತ್ತಿರುವುದರಿಂದ, ಇದನ್ನು ಎಷ್ಟು ದಿವಸಗಳಲ್ಲಿ ಪೂರೈಸುತ್ತೀರೆಂದು ಭರವಸೆ ಕೊಡುತ್ತೀರಿ ?

ಶ್ರೀ ಎಚ್. ಸಿದ್ಧವೀರಪ್ಪ.- ಆದಷ್ಟು ಜಾಗ್ರತೆಯಾಗಿ.

V-31'N73
N74-13-1-16
(B)4896

9-30 A.M.

Milk Dairy at Hubli

713. Smt. SUMATI B. MADIMAN (Dharwar Rural).—

Will the Minister of State for Animal Husbandry be pleased to state.—

(a) whether the Government is aware that the capacity to pasturize milk in the dairy at Hubli is 10,000 litres (Ten thousand litres) whereas it is handling eighteen thousand (18,000) litres, and there is a demand for forty thousand (40,000) litres ;

(b) the arrangementsmade to collect milk from the villages ;

(c) whether the Government is also aware that Rs. 10,000 (Rupees ten thousand) are spent for the transport to bring water from Dharwar every month ;

(d) whether it is a fact that no sanitation and water facilities have been provided to the staff quarters of the said dairy built a year ago ;

(e) whether it is a fact that Government had sanctioned Rs. 50,000 (Fifty thousand) for a canteen, and toilet facilities in the dairy ?

Sri N. CHIKKE GOWDA (Minister of State for Animal Husbandry).—

(*a*) Yes.

(*b*) Milk is collected from the villages through hired vehicles.

(*c*) Yes, upto 5th March 1973.

(*d*) Sanitation has been provided to all the quarters. Water facilities are yet to be given.

(*e*) Yes.

Smt. SUMATI. B MADIMAN.—Will the Dairy be expanded to cater to the needs of the people, and if so, when ?

† Sri N. CHIKKE GOWDA.—The present capacity of the Dairy is 10,000 litres, and the Dairy at present is handling on an average 14,000 litres. The Government of India has decided to take up the expansion programme in 1973-74 to handle 25,000 litres of milk per day.

Smt. SUMATI B. MADIMAN.—I want to know whether the vehicles by which milk is transported have insulated tankers and whether milk is collected from chilling plants ?

Sri N. CHIKKE GOWDA—At present milk is collected in cans by hired vehicles. We have no arrangements to transport milk in insulated tankers, We have provided chilling units at places where the procurement is more than 5,000 litres and in these chilling units the milk will not get spoiled for 24 hours ?

Smt. SUMATI B. MADIMAN.—In answer to (*c*), the reply is: 'Yes upto 5th March 1973'. May I have a little clarification, Sir ?

Sri N. CHIKKE GOWDA —Sir, the new dairy site did not have much water and we were transporting water by collecting it from different places, and now we have made arrangements to acquire land and we have also put up an open well and we are drawing water from that well from 5-3-1973.

ಶ್ರೀ ಜಿ. ರಾಮೇಗೌಡ.—ಡೈರಿಗೆ ಹಾಲು ಕೊಳ್ಳುವ ರೇಟನ್ನು ಅದರಲ್ಲಿರತಕ್ಕ ಫ್ಯಾಟಿನಮೇಲೆ ನಿರ್ಧಾರಮಾಡಿದ್ದೀರೋ ಅಥವಾ ಒಂದು ಅವರೇಜಿನ ಮೇಲೆ ನಿರ್ಧಾರ ಮಾಡಿದ್ದೀರೊ ?

Sri N CHIKKE GOWDA.—If the hon. member puts a separate question I will be able to answer.

Intensive Poultry Project in Dharwar

714. Smt. SUMATI B. MADIMAN (Dhawar Rural).—

Will the Minister of State for Animal Husbandry be pleased to state :—

(*a*) the year in which the intensive poultry project was established in Dharwar, and the expenditure incurred so far ;

(*b*) whether the farmers and the public have been benefited by the project ?

SRI N. CHIKKE GOWDA (Minister of State for Animal Husbandry).—

(*a*) During 1969 Rs. 1,96,090-00

(*b*) Yes.

SMT. SUMATI B. MADIMAN.—I want to know whether this scheme has benefited the villages, and if so, how many ?

† SRI N. CHIKKE GOWDA.—The Intensive Poultry Development Project extends to a radius of 50 miles from Dharwar and it covers 7 taluks of Dharwar district, viz., Dharwar, Hubli, Kundgol, Shiggaon, Navalgund, Mundargi, and Kalghatgi, and two taklus of North Kanara, viz., Yellapura and Haliyal, and two taluks of Belgaum District, viz,, Bailhongal and Saundatti.

SMT. SUMATI B. MADIMAN.—May I know the number of farmers who have been benefited by this scheme and whether the scheme has been successful ?

SRI N. CHIKKE GOWDA.—Prior to starting of this Intensive Poultry Development Project there were only 10 farmers ; we have now 243 poultry farms having 23,000 birds.

ಶ್ರೀ ಕಾಗೋಡು ತಿಮ್ಮಪ್ಪ.—ದಿನಕ್ಕೆ ಎಷ್ಟು ಮೊಟ್ಟೆಗಳು ಸಿಕ್ಕುತ್ತೆ ? ಮತ್ತು ಅವುಗಳನ್ನು ಮಾರಾಟ ಮಾಡುವುದಕ್ಕೆ ಏನು ಮಾರುಕಟ್ಟೆ ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎನ್. ಚಿಕ್ಕೇಗೌಡ.—ಅಲ್ಲಿ 23 ಸಾವಿರ ಕೋಳಿಗಳಿವೆಂದು ಹೇಳಿದೆ. ಅಲ್ಲಿ ಅವುಗಳಲ್ಲಿ ಸುಮಾರು ಶೇ : 80 ರಷ್ಟು ಮೊಟ್ಟೆ ಕೊಡತಕ್ಕ ಕೋಳಿಗಳಿವೆ. ಧಾರ್ವಾಡ ಹುಬ್ಬಳಿಯಲ್ಲಿ ಪೌಲ್ಟ್ರಿ ಪ್ರಾಡಕ್ಟನ್ನು ಮಾರಾಟ ಮಾಡತಕ್ಕ ಸೊಸೈಟಿಯನ್ನು ಮಾಡಿದ್ದೇವೆ. ಅಲ್ಲಿಗೆ ಬೇಕಾದಷ್ಟನ್ನು ಕಳುಹಿಸಿ ಉಳಿದುದನ್ನು ಪೂನಾ ಮತ್ತು ಬೊಂಬಾಯಿಗೆ ರಫ್ತು ಮಾಡಲಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಕೋಳಿ ತಿಂಡಿ ತಯಾರು ಮಾಡತಕ್ಕ ಪದಾರ್ಥಗಳ ಬೆಲೆ ವಿಪರೀತವಾಗಿ ಏರಿರುವುದರಿಂದ ಪೌಲ್ಟ್ರಿಗಳನ್ನು ನಡೆಸುವುದೇ ಬಹಳ ಕಷ್ಟವಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದದೆಯೇ ?

ಉಪಾಧ್ಯಕ್ಷರು.—ಅದು ಈ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಕೋಳಿ ಮೇವಿನ ಬೆಲೆ ಹೆಚ್ಚಾಗಿದೆ ಎಂಬುದು ಸರ್ಕಾರದವರ ಗಮನಕ್ಕೂ ಬಂದಿದೆ. ಆದರೆ ಬೇಸಿಗೇ ಕಾಲದಲ್ಲಿ ಈ ಮೊಟ್ಟೆಗಳು ಸಿಕ್ಕುವುದು ಕಷ್ಟವಾದ್ದರಿಂದಲೂ ಮತ್ತು ನಾವು ವಾರಕ್ಕೆ ಒಂದು ಲಕ್ಷ ಮೊಟ್ಟೆಯನ್ನು ಸ್ಕೇಸಿಟಿ ಏರಿಯಾಕ್ಕೆ ಉಚಿತವಾಗಿ ಸಪ್ಲೈ ಮಾಡಬೇಕಾಗಿರುವುದರಿಂದ, ಅಲ್ಲಿನ ವರ್ತಕರುಗಳಿಗೆ ; ನಾವು ಮೊಟ್ಟೆಯೊಂದಕ್ಕೆ 28 ಪೈಸೆಯಂತೆ ಮೊಟ್ಟೆ ಮಾರಾಟ ಸಹಕಾರ ಸಂಘಗಳಿಂದಲೂ ಮತ್ತು ಮೈಸೂರು ಪೌಲ್ಟ್ರಿ ಫಾರ್ಮರ್ಸ್ ಅಸೋಸಿಯೇಷನ್ನಿಂದಲೂ ಕೊಳ್ಳಬೇಕಾಗಿದೆ. ಅದಕ್ಕಾಗಿ ಅವುಗಳನ್ನು ನಡೆಸಲೇಬೇಕು.

ಶ್ರೀ ಎಚ್. ಎಸ್, ಸಿದ್ದಪ್ಪ.—ಹೆಬ್ಬಾಳ ಫಾರಂನಲ್ಲಿ 'ಅರಸು' ಕೋಳಿ ಎಂಬ ಉತ್ತಮ ತಳಿಯನ್ನು ಕಂಡುಹಿಡಿದಿದ್ದಾರಂತೆ. ಅದನ್ನು ಆ ಹುಬ್ಬಳ್ಳಿ ಧಾರ್ವಾಡಕ್ಕೆ ಕಳುಹಿಸಿದ್ದೀರಾ ?

ಶ್ರೀ ಎನ್. ಚಿಕ್ಕೇಗೌಡ.—ತಮಗೆ ಯಾವಾಗಲೂ 'ಅರಸುರವರ ಧ್ಯಾನವೇ' ಇದ್ದಂತೆ ಕಾಣುತ್ತದೆ. ಅದು 'ಅರಸು' ಕೋಳಿಯಲ್ಲ. ಅದರ ಹೆಸರು ಏನೆಂದರೆ 'ಯೂಬ್ರೋ' ಅಂದರೆ 'ಯೂನಿವರ್ಸಿಟಿ ಬ್ರಾಯ್ಲರ್' ಎಂದು. ಅದು ಮೊಟ್ಟೆಗಳನ್ನು ಇಡತಕ್ಕ ಜಾತಿಯದಲ್ಲ.

Bore Wells Sunk In Gulbarga District

784. Sri MALLIKARJUNA KHARGE (Gurmitkal).—

Will the Minister for Public Works and Electricity be pleased to state :—

(*a*) the number of bore wells sunk in Gulbarga district during last 3 years ;

(*b*) of them, number of bore wells where water could not be found ;

(*c*) the total expenditure incurred on these bore wells ?

Sri H. M. CHANNABASAPPA (Minister for Public Works and Electricity).—

(*a*) 294.

(*b*) 67.

(*c*) Up to the end of February 1973—Rs. 33,91,861.

Sri MALLIKARJUNA KHARGE.—It is stated that so far 294 bore wells have been sunk in Gulbarga District, out of which 67 wells have been a failure. May I know the amount spent on this 67 bore wells ?

† Sri H. M. CHANNABASAPPA.—That figure is not before me.

Sri D. B. KALMANKAR.—May I know the break-up of the bore wells for the past three years ?

Sri H. M. CHANNABASAPPA.—The break-up figures are not with me here.

ಶ್ರೀ ಎಚ್. ಎಸ್. ಸಿದ್ದಪ್ಪ.—ಇಲ್ಲಿ 67 ಬೋರ್‌ವೆಲ್ಲುಗಳು ಫೇಲಾಗಿವೆ ಎಂದು ಹೇಳಲಾಗಿದೆ. ಅಂದಾಗ ಆ ತಜ್ಞರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ? ಹಾಗೆ ಏನೂ ಕ್ರಮ ಕೈಗೊಳ್ಳಬಾರದೆಂದಿದ್ದರೆ, ಅದೇ ತಜ್ಞರ ಸಲಹೆಯನ್ನು ಪಡೆದು ರಾಜ್ಯದಲ್ಲಿ ನೀರಿಲ್ಲದ ಬಾವಿಗಳನ್ನು ತೆಗೆಸತಕ್ಕ ಯೋಜನೆಯನ್ನು ಮುಂದುವರಿಸಬೇಕೆಂಬುದು ಸರ್ಕಾರದ ಉದ್ದೇಶವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರಿಲ್ಲ ಎಂದಲ್ಲ. ಅಲ್ಲಿ ಸಾಕಷ್ಟು ನೀರು ಬರಲಿಲ್ಲ ಅಷ್ಟೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಇಲ್ಲಿ ಯಾರ ಮೇಲೂ ಕ್ರಮ ಕೈಗೊಳ್ಳತಕ್ಕ ಪ್ರಮೇಯ ಉದ್ಭವಿಸುವುದಿಲ್ಲ. ನಮ್ಮಲ್ಲಿ ಈ ಭೂಗರ್ಭದಲ್ಲಿರತಕ್ಕ ಜಲವನ್ನು ಕಂಡುಹಿಡಿಯುವುದಕ್ಕೆ ಅಗತ್ಯವಾದ ಆಧುನಿಕ ಯಂತ್ರಗಳಿಲ್ಲ. ಅವನ್ನು ತರಿಸುವುದಕ್ಕೆ ಆರ್ಡರು ಮಾಡಿದ್ದೇವೆ. ಎಲ್ಲಾ ಕಡೆಗಳಲ್ಲೂ ಈ ತಜ್ಞರ ಸಲಹೆ ಫೇಲಾಗಿಲ್ಲ. ಕೆಲವು ಕಡೆ ಆಗಿದೆ. ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಹತ್ತಾರು ಸಂದರ್ಭಗಳಲ್ಲಿ ಸಕ್ಸಸ್ ಆಗಿ ಒಂದೆರಡು ಕಡೆ ಫೇಲಾದರೆ ಏನೂ ಮಾಡುವುದಕ್ಕಾಗುವುದಿಲ್ಲ.

Sri H.M. CHANNABASAPPA.—I would like to submit to the House, there are human factors also in the assessment of availability of water.

Sri MALLIKARJUNA KHARGE.—I am putting a specific question. What is the number of borewells sunk from January 1972 to January 1973 in Gulbarga District ?

Sri H. M. CHANNABASAPPA.—I have already informed the hon. member that those break-ups are not with me and he is repeating the same question over and over again.

Upgrading of Maddur Dispensary

810. Sri A. D. BILI GOWDA (Maddur).—

Will the Minister for Health be pleased to state :—

(a) whether there is any proposal to up-grade the Combined Dispensary at Maddur into a General Hospital ;

(b) whether the concerned Taluk Development Board and the Municipality have given their concurrence to meet the expenditure ;

(c) whether the dispensary at Gejjalagere is to be removed and the same staff continued at Maddur ?

Sri H. SIDDAVEERAPPA (Minister for Health).—

(a) No.

(b) No.

(c) There are no such proposals for the present.

ಶ್ರೀ ಎ. ಡಿ. ಬಿಳಿಗೌಡ.—ಮದ್ದೂರು ತಾಲ್ಲೂಕು ಪೌರರ ಹಿತದೃಷ್ಟಿಯಿಂದ ಮದ್ದೂರಿನ ಕಂಬೈನ್ಡ್ ಡಿಸ್ಪೆನ್ಸರಿಯನ್ನು ಮೇಲ್ದರ್ಜೆಗೇರಿಸಿ ಅಲ್ಲಿ ಎಕ್ಸ್‌ರೇ, ಬ್ಲಡ್ ಬ್ಯಾಂಕ್, ಹುಚ್ಚು ನಾಯಿ ಕಡಿತರೆ ಟ್ರೀಟ್ ಮಾಡುವುದಕ್ಕೆ ಸೌಲಭ್ಯ ಮುಂತಾದುವನ್ನು ಕಲ್ಪಿಸುವಿರಾ ? ಇದಕ್ಕೆ ತಗಲುವ ಹೆಚ್ಚುವರಿ ವೆಚ್ಚವನ್ನು ಸಹ ವಹಿಸುವುದಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿ ಹಾಗೂ ಪುರಸಭೆಗಳು ಒಪ್ಪಿರುವುದಾಗಿ ತಿಳಿದುಬಂದಿರುವುದರಿಂದ ಶೀಘ್ರವಾಗಿ ಈ ಮದ್ದೂರು ಕಂಬೈನ್ಡ್ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವಿರಾ ?

† ಶ್ರೀ ಎಚ್. ಸಿದ್ದವೀರಪ್ಪ.—ಪ್ರಯತ್ನಮಾಡೋಣ. ಮದ್ದೂರು ತಾಲ್ಲೂಕು ಸ್ಥಳ, ನೀವೂ ಸಹ ಮುಂದೆ ಬರಬೇಕು, ಅದು ಅನುಕೂಲವಾದ ಜಾಗ, ಸರಕಾರಕ್ಕೆ ಸ್ವಲ್ಪ ದ್ರವ್ಯ ಸಹಾಯ ಮಾಡಿ ದಾನಿಗಳು ಉದಾರವಾಗಿ ಸಹಾಯಮಾಡಲು ಮುಂದೆ ಬಂದರೆ ಸರಕಾರದವರು ಅಲ್ಲಿಗೆ ಒಳ್ಳೆ ಸೌಕರ್ಯ ಕೊಡಲು ಪ್ರಯತ್ನ ಮಾಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ದಾನಿಗಳು ಮುಂದೆ ಬರಬೇಕೆಂದು ಹೇಳಿದರು. ಬೆಂಗಳೂರಿನಲ್ಲಿ ಆಸ್ಪತ್ರೆ ಬಡಾವಣೆ ಮಾಡುವಾಗ ಸೌಕರ್ಯ ಒದಗಿಸುವಾಗ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಕಡೆ ನೋಡುವುದಿಲ್ಲ, ತಾಲ್ಲೂಕುಗಳಲ್ಲಿ ಸೌಕರ್ಯ ಕೇಳಿದರೆ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಒತ್ತಾಯಮಾಡುವರು. ಗ್ರಾಮಾಂತರ ಪ್ರದೇಶಗಳಲ್ಲಿ ಅನುಕೂಲ ಚೆನ್ನಾಗಿ ಮಾಡುವುದಾಗಿ ಅಧಿಕಾರ ವಹಿಸಿಕೊಂಡಾಗ ಮಂತ್ರಿಗಳು ಹೇಳಿದರು. ಹಾಗೆ ಹೇಳಿ ಈಗ ಎಲ್ಲಾ ತಾಲ್ಲೂಕುಗಳವರೂ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಕೇಳದೆ ಸರಕಾರದವರೇ ಬೇಕಾದ ಅನುಕೂಲತೆ ಒದಗಿಸಲು ಪ್ರಯತ್ನಮಾಡುವರೇ ?

ಶ್ರೀ ಎಚ್. ಸಿದ್ದವೀರಪ್ಪ.—ಸರಕಾರ ಹಳ್ಳಿಗಳ ಕಡೆ ಗಮನ ಕೊಡುವುದಾಗಿ ಹೇಳಿದ್ದು ನಿಜ. ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆ ಮತ್ತು ಇತರ ಆಸ್ಪತ್ರೆಗಳು ಮತ್ತು ಮೈಸೂರಿನಲ್ಲಿರುವ ಆಸ್ಪತ್ರೆಗಳು ಇವುಗಳಲ್ಲಿ ಅನುಕೂಲ ಪಡೆಯುತ್ತಿರುವ ಜನರ ಅಂಕಿಅಂಶ ನೋಡಿದರೆ ಬರೀ ಬೆಂಗಳೂರು, ಮೈಸೂರಿನವರು ಮಾತ್ರ ಅನುಕೂಲ ಪಡೆಯುತ್ತಿಲ್ಲ, ಹೊರಗಿನವರೂ ಅವುಗಳಿಂದ ಅನುಕೂಲ ಪಡೆದಿದ್ದಾರೆ. ನಾನು ಹೇಳಿದ್ದು ಎಲ್ಲಾ ಕಡೆಗೂ ಅನುಕೂಲ ಕೇಳುತ್ತಿದ್ದಾರೆ, ಅವರು ಮುಂದೆ ಬಂದು ಸರಕಾರಕ್ಕೆ ಸಹಾಯಮಾಡಿದರೆ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಬೇಕಾದ ಸೌಕರ್ಯ ಒದಗಿಸಬಹುದು ಎಂದು. ಮುಂದಿನ ಯೋಜನೆಯಲ್ಲಿ ಈಗ ಕೇಳಿರುವ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಕಾರ್ಯಕ್ರಮ ಕೈಕೊಳ್ಳುತ್ತೇವೆ. ಮುಂದಿನ ವರ್ಷ ಹೊಸ ಯೋಜನೆ ಪ್ರಾರಂಭವಾಗುವುದು, ಆಗ ಮಾಡಬೇಕೆಂಬ ಉದ್ದೇಶವಿದೆ. ಅದಕ್ಕೆ ನೀವೂ ಸಹಾಯಮಾಡಬೇಕೆಂದು ಹೇಳಿದೆ.

ಶ್ರೀ ಎ. ಡಿ. ಬಿಳಿಗೌಡ.—ಅಲ್ಲಿ ಹುಚ್ಚುನಾಯಿಗಳಿಂದ ಕಡಿಸಿಕೊಂಡು ಔಷಧಿಗಾಗಿ ಬರುವವರ ಸಂಖ್ಯೆ ಹೆಚ್ಚಾಗಿ ಜನರು ಕ್ಯೂ ನಿಲ್ಲಬೇಕಾಗಿದೆ. ಮಂಡ್ಯ ಜನರಲ್ ಆಸ್ಪತ್ರೆಯಲ್ಲಿ ಮಾತ್ರ ಅದಕ್ಕೆ ಸೌಲಭ್ಯವಿದೆ. ಆದುದರಿಂದ ಶೀಘ್ರವಾಗಿ ಹುಚ್ಚುನಾಯಿ ಕಡಿದವರಿಗೆ ತಾಲ್ಲೂಕು ಹೆಡ್ ಕ್ವಾರ್ಟರು ಆಸ್ಪತ್ರೆಯಲ್ಲಿ ಅನುಕೂಲ ಕಲ್ಪಿಸುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹುಚ್ಚುನಾಯಿಗಳಿದ್ದರೆ ಅವನ್ನು ಕೊಲ್ಲುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಕೆ. ಯೆಂಕಟಪ್ಪ.—ತಾಲ್ಲೂಕು ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯಾಗಿ ಬದಲಾಯಿಸಲು ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಪುರಸಭೆಗಳು ವಂತಿಗೆ ಕೊಡಬೇಕೆಂದು ಆದೇಶ ಕೊಡುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಜನರಲ್ ಆಸ್ಪತ್ರೆ ತಾಲ್ಲೂಕು ಮಟ್ಟದಲ್ಲಿ ಮಾಡುವುದಕ್ಕಾಗುವುದಿಲ್ಲ, ಇರುವುದನ್ನು ಅಪ್‌ಗ್ರೇಡ್ ಮಾಡಬೇಕು. ಅದಕ್ಕೆ ಜನರು ಮುಂದೆ ಬಂದು ಸಹಾಯ ನೀಡಿದರೆ ಅನುಕೂಲವಾಗುವುದು ಎಂದು ಹೇಳಿದೆ. ಮೊನ್ನೆ ಗೌರಿಬಿದನೂರಿನವರು ಸುಮಾರು 2 ಲಕ್ಷ ರೂಪಾಯಿಗಳನ್ನು ಕೊಟ್ಟರು. ಇಷ್ಟೇ ಕೊಡಬೇಕೆಂದಿಲ್ಲ, ಅನುಕೂಲವಿರುವವರು ಮುಂದೆ ಬಂದು ಕೈಲಾದ ಸಹಾಯಮಾಡಿದರೆ ಸರಕಾರ ತನ್ನಲ್ಲಿರುವುದನ್ನು ಹಾಕಿ ಕೆಲಸಮಾಡಬಹುದು.

ಶ್ರೀ ಕೆ. ಯೆಂಕಟಪ್ಪ.—ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಪುರಸಭೆಗಳು ವಂತಿಗೆ ಬಗ್ಗೆ ಬಜೆಟ್ಟಿನಲ್ಲಿ ಅವಕಾಶಮಾಡಿ ಇಂಥ ಆಸ್ಪತ್ರೆ ಮಾಡಬೇಕು ಎಂದು ಕೇಳುವಂತೆ ಆದೇಶ ಕೊಡುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.-ನಾವು ಕೊಡುವುದಕ್ಕಾಗುವುದಿಲ್ಲ, ಹಣ ಕೊಟ್ಟರೆ ತೆಗೆದುಕೊಳ್ಳುತ್ತೇವೆ. ಇದಕ್ಕೆ ಜಿ. ಒ. ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಡಿ. ಬಿಳಿಗೌಡ.—ಗೆಜ್ಜಲಗೆರೆ ಆಸ್ಪತ್ರೆಯನ್ನು ಹತ್ತಾರು ವರ್ಷಗಳ ಹಿಂದೆಯೇ ಮದ್ದೂರಿಗೆ ವರ್ಗಾಯಿಸಲಾಗಿದೆ. ಈಗ ಗೆಜ್ಜಲಗೆರೆಯಲ್ಲಿ ಆಸ್ಪತ್ರೆಯಿಲ್ಲ, ಹಿಂದಿತ್ತು. ಈಗ ತೆಗೆದಿದ್ದಾರೆ. ಪುನಃ ಅಲ್ಲಿಗೆ ಆಸ್ಪತ್ರೆ ಕೊಡಲು ಸಾಧ್ಯವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಪರಿಶೀಲಿಸುತ್ತೇವೆ.

Restoration of Annigopalaiah Tank

875. Sri HANJI SHIVANNA (Tarikere).—

Will the Minister for Public Works and Electricity be pleased to state:—

(*a*) the number of years passed after the repairs to Annigopalaiah tank of Ajjampura Hobli in Tarikere Taluk ;

(*b*) when the waste-weir of the tank was constructed whether it is repaired now, if not when it will be repaired ;

(*c*) whether a channel has been constructed to facilitate irrigation ;

(*d*) if not, the reasons therefor ?

Sri H. M. CHANNABASAPPA (Minister for Public Works and Electricity) —

(*a*) The restoration work of this tank was done in 1899. The repair work of the tank was done in 1965-66 and 1968-69.

(*b*) The waste-weir of this tank was constructed long back. The repair work of the waste-weir and the channel was done in 1966. At present no repair is needed for these works.

(*c*) Yes.

(*d*) Does not arise as there is a channel.

ಶ್ರೀ ಹಂಜಿ ಶಿವಣ್ಣ.—ವರ್ಷವರ್ಷ ಈ ಕೆರೆ ತುಂಬದಿರುವುದರಿಂದ ಬೇರೆ ನೀರಿನ ಸೋರ್ಸಿಗೆ ಅವಕಾಶವಿದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವಿರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಎಡಗಡೆ ಫೀಡರ್ ಚಾನಲ್ ಮಾಡಲಾಗಿದೆ, ಬಲಗಡೆ ಒಂದು ಮಾಡಬೇಕೆಂದು ಯೋಚನೆಮಾಡಿ ಇನ್‌ವೆಸ್ಟಿಗೇಷನ್ ಆಗುತ್ತಿದೆ, ಸಾಧ್ಯವಾದರೆ. ಅದಷ್ಟು ಬೇಗ ಮಾಡುತ್ತೇವೆ.

ಶ್ರೀ ಹಂಜಿ ಶಿವಣ್ಣ.—ಈ ಕೆರೆಗೆ ನೀರಿನ ಸೋರ್ಸ್ ಇಲ್ಲ, ಆವಕೆ ಅವಕಾಶಮಾಡುವುದು ಸೂಕ್ತವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೋರ್ಸ್ ಇಲ್ಲದೆ ಹೇಗೆ ನೀರು ಬರುವುದು ?

Breaching of Bekkinahalla Tank

877. Sri HANJI SHIVANNA (Tarikere).—

Will the Minister for Public Works and Electricity be pleased to state;—

(*a*) the number of years passed after the breach of Bekkinahalla Tank of Lingadahalli Hobli in Tarikere Taluk ;

(*b*) whether it has come to the notice of the Government that Kallahalu tank in Lingadahalli requires repair badly ;

(*c*) whether immediate steps would be taken up to repair the said works ?

Sri H. M. CHANNABASAPPA (Minister for Public Works and Electricity).—

(*a*) About 12 years have passed after the breach of the Bekkinahalla Tank.

(*b*) There is no such tank under this name.

(*d*) The estimate for restoration of Bekkinahalla Tank has been prepared.

ಶ್ರೀ ಹಂಜಿ ಶಿವಣ್ಣ.—ಬೆಕ್ಕಿನಹಳ್ಳದ ಕೆರೆ ಜೀರ್ಣೋದ್ಧಾರದ ಕೆಲಸಕ್ಕೆ ಅಂದಾಜಾಗಿದೆ ಎಂದು ತಿಳಿಸಲಾಗಿದೆ. ಯಾವಾಗಲೂ ಇದೇ ರೀತಿ ಹೇಳುತ್ತಿದ್ದೀರಿ. ಕೆಲಸವಾಗುವುದು ಯಾವಾಗ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಜಂಬದಹಳ್ಳ ಪ್ರಾಜೆಕ್ಟಿಗೂ ಇದಕ್ಕೂ ಸಂಬಂಧವಿದೆ. ಅಹಳ್ಳಕ್ಕೆ ನೀರು ಸರಬರಾಯಾಗುತ್ತಿಲ್ಲ. ಆದುದರಿಂದ ಇದು ವಿಚಾರಮಾಡಿ ಮಾಡಬೇಕಾದ ಕೆಲಸ. ಈ ಹಳ್ಳದಲ್ಲಿ ನೀರು ಸರಿಯಾಗಿ ಬಾರದಿರುವುದರಿಂದ ಯಾವುದೂ ಮಾಡಬಾರದೆಂದು ಅಜ್ಞೆ ಮಾಡಿತ್ತು. ಮತ್ತೆ ಪರಿಶೀಲಿಸಿ ಮಾಡಲು ಸಾಧ್ಯವೇ ಎಂಬುದನ್ನು ನೋಡುತ್ತೇನೆ.

ಶ್ರೀ ಹಂಜಿ ಶಿವಣ್ಣ.—ಕಳೆದವರ್ಷ ಜಂಬದಹಳ್ಳಿ ಅರ್ಧ ಭಾಗ ತುಂಬಿದ್ದು ಈ ಕೆರೆ ಕಟ್ಟಿದ ಮೇಲೆ ತುಂಬಲಿಲ್ಲ. ಹೆಸರಿಗೆ ಸರ್ಕಾರ ಈ ಯೋಜನೆಯನ್ನು ಮಂಜೂರು ಮಾಡಿದ್ದಾರೆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಜಂಬದಹಳ್ಳದ 1 ಕೋಟಿ 10 ಲಕ್ಷ ರೂಪಾಯಿಯ ಯೋಜನೆಯನ್ನು ಜಾಗ್ರತೆ ಕಾರ್ಯಗತ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜಂಬದಹಳ್ಳದಲ್ಲಿ ನೀರೇ ಇಲ್ಲದಿರುವಾಗ, ಆ ನ್ಯಾಲಿಯೊಳಗೆ ಬೇರೆ ಕೆರೆಗಳನ್ನು ಕಟ್ಟುವುದಕ್ಕೆ ಕಷ್ಟತವುವಾಗುತ್ತದೆ. ಜಂಬದಹಳ್ಳಕ್ಕೆ ಯಾವ ರೀತಿ ನೀರು ಒದಗಿಸಬೇಕು ಎಂಬ ವಿಷಯಕ್ಕೆ ಬೇರೆ ಪ್ರಶ್ನೆ ಹಾಕಿದರೆ, ವಿಚಾರ ಮಾಡಿ ತಿಳಿಸಿಕೊಡುತ್ತೇನೆ.

Public Men's Inquiry Bill

494. **Sri D. B. KALMANKAR** (Afzalpur).—

Will the Chief Minister be pleased to state :—

(*a*) whether the Government proposes to introduce a Bill called the Public Men's Inquiry Bill ;

(*b*) if so, when ?

Sri D. DEVARAJ URS (Chief Minister).—

(*a*) Government propose to introduce a LOKAYUKTA Bill which will contain adequate provisions to deal with such matter.

(*b*) At an early date.

Sri D. B. KALMANKAR.—Sir, May I know who will come under this Bill ?

† **Sri D. DEVARAJ URS.**—The public servants including the Legislators and Ministers perhaps.

Sri D. B. KALMANKAR.—You have said that the Bill will be introduced early. I want to know whether it is going to be introduced in this session ?

Sri D. DEVARAJ URS.—The Bill is before the Scrutiny Committee. I will try to see that it comes up during this Session only.

ಶ್ರೀ ಕೋಣಂದೂರು ಲಿಂಗಪ್ಪ.—ಈ ಲೋಕ ಆಯುಕ್ತ ವಿಧೇಯಕದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವವರು ಬರುತ್ತಾರೆ ಎಂದು ಹೇಳಿದಿರಿ, ಹಳೆಯ ಎಂ.ಎಲ್.ಎ., ಎಂ.ಎಲ್.ಸಿ., ಎಲ್ಲರೂ ಬರುತ್ತಾರೋ ಅಥವಾ ಕೆಲವರು ಮಾತ್ರ ಬರುತ್ತಾರೆಯೋ ?

ಶ್ರೀ ಡಿ. ದೇವರಾಜ್ ಅರಸ್.—ಯಾರು ಯಾರು ಬರಬೇಕೋ ಅವರು ಬರುತ್ತಾರೆ, ಹಳೆಯವರು ಇದರಲ್ಲಿ ಬರುತ್ತಾರೆ, ಆದರೆ ಸತ್ತುಹೋಗಿರುವವರು ಬರಬೇಕು ಎಂದರೆ ಹೇಗೆ ಸಾಧ್ಯ ? ಪ್ರಸ್ತುತದಲ್ಲಿ, ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರು ಬರಬೇಕಾಗುತ್ತದೆ ಎಂದು ಇಷ್ಟು ಮಾತ್ರ ಹೇಳಬಹುದು.

Sri MALLIKARJUNA KHARGE.—May I know salient features of the Lok Ayukth ?

Sri D. DEVARAJ URS.—There is an enactment to see that the people who work as public men not only public servants, but also

Government servants and also the Legislators and Ministers who have to maitain their moral conduct properly are to be booked if they have amassed illegal wealth against their moral Code.

Fish Famine in Deep Sea

699. Sri P. M. BANGI (Jamkhandi).—

Will the Minister of State for Fisheries be pleased to state :—

(*a*) whether Government is aware of the fish famine in the deep sea on the West Coast lines of North and South Kanara ;

(*b*) if so, whether it is a fact that fish famine is caused by over-fishing by local fishermen and also by Maharashtra fishermen sailing by steam launches and also by Japanese fishermen coming near Malpe and other ports ;

(*c*) whether any reliefs are given by the Government to fishermen on costal lines hit by the fish famine this year ;

(*d*) if so, the details of such relief given ?

Sri K. T. RATHOD (Minister of State for Fisheries).—

(*a*) Government are aware that there is fish famine in the in-shore waters of our State but there is no report of fish famine in the deep sea on the west coast-lines of North and South Kanara districts.

(*b*) No.

(*c*) Yes.

(*d*) The Government have sanctionod interest free loan of Rs. 250 per family.

ಶ್ರೀ ಪಿ. ಎಂ. ಬಂಗಿ.—ಮಲ್ಪೆ ಬಂದರಿನಲ್ಲಿ ಮೂರು ವರ್ಷಗಳ ಹಿಂದೆ ಸ್ಟೀಮ್ ಲಾಂಚಸ್ ಎಷ್ಟು ಇದ್ದುವು ಈಗ ಎಷ್ಟು ಆಗಿವೆ ಎಂದು ಹೇಳುವುದಕ್ಕೆ ಬರುತ್ತದೆಯೇ ?

† ಶ್ರೀ ಕೆ. ಟಿ. ರಾಥೋಡ್.—ತಾವು ಕೇಳಿದ ಉಪಪ್ರಶ್ನೆ, ಈ ಪ್ರಶ್ನೆಯ ಕಕ್ಷೆಯಲ್ಲಿ ಬರುವುದಿಲ್ಲ. ಬೇಕಾದರೆ ವಿವರ ತರಿಸಿಕೊಡುತ್ತೇನೆ.

ಶ್ರೀ ಪಿ. ಎಂ. ಬಂಗಿ.—ಮಲ್ಪೆ ಮತ್ತು ಉಳಿದ ಬಂದರುಗಳಲ್ಲಿ ಓವರ್ ಫಿಷಿಂಗ್ ಆಗುವುದಕ್ಕೆ ಕಾರಣ ಜಪಾನೀಸ್ ಬೋಟುಗಳಲ್ಲಿ ಅವರು ಬಂದು ಫಿಷಿಂಗ್ ಮಾಡಿಕೊಂಡು ಹೋಗುತ್ತಾರೆ. ಇದರಿಂದ ಫಿಷ್ ಫ್ಯಾಮಿನ್ ಉಂಟಾಗಿದೆ ಎಂದು ಹೇಳುತ್ತಾರೆ. ಈ ಬಗ್ಗೆ ತಾವು ಏನಾದರೂ ಎನ್‌ಕ್ವಯರಿ ಮಾಡಿದ್ದೀರಾ ?

ಶ್ರೀ ಕೆ. ಟಿ. ರಾಥೋಡ್.—ಓವರ್ ಫಿಷಿಂಗ್‌ನಿಂದ ಕ್ಷಾಮ ಬರುತ್ತದೆ ಎಂದರೆ, ಅದು ಅಷ್ಟು ಸಮಂಜಸವಾದ ವಿಚಾರವಲ್ಲ ಎಂದು ನನ್ನ ಅಭಿಪ್ರಾಯ. ಈ ಬಗ್ಗೆ ಈಗಾಗಲೇ ನಾವು ವಿಚಾರ ವಿನಿಮಯ ಮಾಡಲಿಕ್ಕೆ ಒಂದು ಸಮಿತಿಯನ್ನು ನೇಮಿಸಿದ್ದೇವೆ. ಆ ಸಮಿತಿಯವರು ಅದನ್ನು ಪರಿಶೀಲನೆ ಮಾಡುತ್ತಾರೆ.

ಶ್ರೀ ಪಿ. ಎಂ. ಬಂಗಿ.—ತಾವು (ಈ)ಗೆ ಉತ್ತರವಾಗಿ, ಕುಟುಂಬ ಒಂದಕ್ಕೆ 250 ರೂಪಾಯಿಗಳ ಬಡ್ಡಿ ರಹಿತ ಸಾಲವನ್ನು ಕೊಟ್ಟಿದ್ದೇವೆ ಎಂದು ಹೇಳಿದಿರಿ, ಒಟ್ಟಿಗೆ ಎಷ್ಟು ಹಣ ಮೀನುಗಾರರಿಗೆ ಕೊಟ್ಟಿದ್ದೀರಿ ?

ಶ್ರೀ ಕೆ. ಟಿ. ರಾಥೋಡ್.—ಇಲ್ಲಿ ಲಭ್ಯವಾದ ವಿವರದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆ, ಇವೆರಡು ಜಿಲ್ಲೆಗಳಿಗೆ ಇದು ಸಂಬಂಧಪಟ್ಟಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 13,30,000 ರೂಪಾಯಿಗಳು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 11,70,000 ರೂಪಾಯಿಗಳನ್ನು ಬಡ್ಡಿ ರಹಿತ ಸಾಲವಾಗಿ ಕೊಟ್ಟಿದ್ದೇವೆ.

ಶ್ರೀ ಎ. ಜಿ. ಕೊಡಗಿ.—ತಾವು ಕೊಡುವಂಥ ಪರಿಹಾರ 250 ರೂಪಾಯಿಗಳು ರಂಪಣಿಯವರಿಗೆ ಮಾತ್ರ ಇದೆಯೇ, ಅಥವಾ ಬಡ ಮೀನುಗಾರರಿಗೆ ಮತ್ತು ಬೇರೆ ರೀತಿಯ ಮೀನುಹಿಡಿಯುವವರಿಗೆ, ಮೀನಿನ ಅಭಾವದಿಂದ ತೊಂದರೆಯಾಗಿರುವವರಿಗೆ ಈ ಪರಿಹಾರವನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಪೂರ್ತಿ ವಿವರ ಗೊತ್ತಿರಲಿಕ್ಕಿಲ್ಲ. ನಾವು ರಂಪಣಿ ಬಲೆಯುವರ ಜೊತೆಗೆ ಪಟ್ಟೆ ಬಲೆಯುವರಿಗೆ ಪರಿಹಾರ ಕೊಟ್ಟಿದ್ದೇವೆ. ರಂಪಣಿ ಬಲೆಯುವರು 4517 ಜನ ಸದಸ್ಯರು, ಪಟ್ಟೆ ಬಲೆಯ 803 ಸದಸ್ಯರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಟ್ಟಿದ್ದೇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ರಂಪಣಿಯವರಿಗೆ 2637 ಜನ ಸದಸ್ಯರಿಗೆ ಮತ್ತು 2043 ಜನ ಪಟ್ಟೆ ಬಲೆಯ ಸದಸ್ಯರಿಗೆ ಪರಿಹಾರ ಕೊಟ್ಟಿದ್ದೇವೆ. ಇನ್ನು ಈ ಉದ್ದಿಮೆಯದಲ್ಲಿ ಕೆಲಸ ಮಾಡುವಂಥ ಜನಕ್ಕೂ ಕೂಡ, ಕೊಡಬೇಕು ಎನ್ನುವ ನಿದರ್ಶನಗಳು ಬಂದರೆ, ಯಾರಿಗಾದರೂ ಕೊಡುವಂಥ ಅವಶ್ಯ ಕಂಡುಬಂದರೆ, ಅವರಿಗೂ ಕೂಡ ನಾವು ಕೊಡಲಿಕ್ಕೆ ಆಜ್ಞೆ ಮಾಡುತ್ತೇವೆ.

ಶ್ರೀ ಎಂ. ಎಂ. ಸಜ್ಜನ್.—ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿ ಜಪಾನೀಸ್ ಬಂದು ಮೀನು ಹಿಡಿಯದಂತೆ ಮಾಡುವುದಕ್ಕಾಗುತ್ತದೆಯೇ ?

ಉಪಾಧ್ಯಕ್ಷರು.—ಅದಕ್ಕೆ ಆಗಲೇ ಉತ್ತರ ಹೇಳಿ ಆಗಿದೆ.

ಶ್ರೀ ಕೆ. ಯಂಕಟಪ್ಪ.—ತಾವು ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಡ್ಡಿ ರಹಿತ ಸಾಲ ಕೊಟ್ಟಿದ್ದೇವೆ ಎಂದು ಹೇಳಿದಿರಿ, ಅದೇ ರೀತಿ ರಾಜ್ಯದಾದ್ಯಂತ ಇರತಕ್ಕ ಮೀನುಗಾರರಿಗೂ ಈ ಒಂದು ಪರಿಹಾರ ಕೊಡುತ್ತೀರಾ ?

ಉಪಾಧ್ಯಕ್ಷರು.—ಅದು ಈ ಪ್ರಶ್ನೆಯ ಪರಿಮಿತಿಯ ಹೊರಗೆ ಆಗುತ್ತದೆ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಬರಗಾಲ ಪೀಡಿತ ಪ್ರದೇಶಗಳಲ್ಲಿ ಅನೇಕ ವಿಧವಾದ ಪರಿಹಾರ ಕಾಮಗಾರಿಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ಮೀನಿನ ಬರಗಾಲ ಪ್ರದೇಶದಲ್ಲಿ ಇಂಥ ಯೋಜನೆಯನ್ನು ಏನಾದರೂ ಇಟ್ಟುಕೊಂಡಿದ್ದೀರಾ ?

ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಒಳನಾಡಿನಲ್ಲಿ ಮೀನುಗಾರರ ಕೆಲವು ಸೊಸೈಟಿಗಳನ್ನು ಮಾಡಿಕೊಂಡಿದ್ದಾರೆ. ಅವರಿಗೆ ನಾವು ಸಾಲದ ರೂಪದಲ್ಲಿ ಹಣ ಕೊಡುವುದನ್ನು ವರ್ಷದ ಕಾರ್ಯಕ್ರಮದಲ್ಲಿಟ್ಟುಕೊಂಡಿದ್ದೇವೆ. ಕ್ಷಾಮ ಪರಿಸ್ಥಿತಿಗೆ ಒಳಗಾದಂಥ ಜಿಲ್ಲೆಗಳಲ್ಲಿ ಸಂಘ ಸಂಸ್ಥೆಗಳು ಇವೆ, ಅವರಿಗೆ ಸಾಲದ ರೂಪದಲ್ಲಿ ಸಹಾಯವನ್ನು ಕೊಟ್ಟಿದ್ದೇವೆ.

Smt. WINNIFRED F. FERNANDES.—Will the Government reconsider to see that Rs. 1,000 per family of fishermen is given and that is Rs. 500 as loan and Rs. 500 as relief ?

ಶ್ರೀ ಕೆ. ಟಿ. ರಾಥೋಡ್.—ಇಂಥ ಒಂದು ಸಂದಿಗ್ಧ ಪರಿಸ್ಥಿತಿ ಬಂದಾಗ ಜನರಿಗೆ ಸಹಾಯ ಕೊಡಬೇಕಾಗುವುದರಿಂದ ನಾವು ಸಾಲ ಏನು ಕೊಟ್ಟಿದ್ದೇವೆ ಅದು 25 ಲಕ್ಷ ರೂಪಾಯಿಗಳು ಆಗಿದೆ. ಅದರಲ್ಲಿ 10 ಸಾವಿರ ಕುಟುಂಬಗಳಿಗೆ ಕೊಡಬೇಕಾಗಿ ಬಂದಿದ್ದರಿಂದ 250 ರೂಪಾಯಿಗಳ ಬಡ್ಡಿರಹಿತ ಸಾಲವನ್ನು ಕೊಟ್ಟಿದ್ದೇವೆ.—ಇದನ್ನು ಒಂದು ಸಾವಿರ ರೂಪಾಯಿವರೆಗೆ ಕೊಡಬೇಕು ಎನ್ನುವ ವಿಚಾರವನ್ನು ಮುಂದಿನ ವರ್ಷ ಇಂಥಾದ್ದು ನಮ್ಮ ನಿದರ್ಶನಕ್ಕೆ ಬಂದರೆ ವಿಚಾರ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಸಮುದ್ರದಲ್ಲಿ ಮೀನಿನ ಕ್ಷಾಮ ಇದೆಯೆಂದು ಹೇಳುತ್ತಾರೆ, ಒಳನಾಡಿನಲ್ಲಿ ಸಾಕಷ್ಟು ಮೀನುಗಳು ಮರಿಗಳನ್ನು ಮಾಡಲಿಕ್ಕೆ ಇಂಥ ಒಂದು ಸ್ಕೀಂಗೆ

ದುಡ್ಡು ಇಲ್ಲ ಎಂದು ಹೇಳುತ್ತಾರೆ. ಮೀನು ಪೌಷ್ಟಿಕ ಆಹಾರ, ಇದನ್ನು ಜನಗಳಿಗೆ ಒದಗಿಸಿ ಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಉಪಾಧ್ಯಕ್ಷರು.—ಅದು ಈ ಪ್ರಶ್ನೆಯ ಪರಿಮಿತಿಯ ಹೊರಗೆ ಆಗುತ್ತದೆ.

10-00 A. M.

ಶ್ರೀ ವಿ. ಎನ್. ಪಾಟೀಲ್.—ಈ ಮೀನುಗಳ ಬರಗಾಲಕ್ಕೆ ಕಾರಣ ಕ್ಲೈಮೆಟಿಕಲ್ ಕಂಡಿಷನ್‌ನಿಂದ ಬಂದಿದೆಯೇ. ದೇಶದ ಬೇರೆ ಭಾಗಗಳಿಂದ ಬೇರೆ ಬೇರೆ ದೇಶದ ಜನರು ಬಂದು ಮೀನುಗಳನ್ನು ಹೆಚ್ಚಿಗೆ ಹಿಡಿಯುವುದರಿಂದ ಬರಗಾಲ ಉದ್ಭವಿಸಿತೇ ? ಬೇರೆಬೇರೆ ದೇಶಗಳಿಂದ ಬಂದು ಮೀನುಗಳನ್ನು ಹಿಡಿಯುವುದನ್ನು ತಪ್ಪಿಸುವುದಕ್ಕೆ ಸರ್ಕಾರ ವಿಚಾರಮಾಡಿದೆಯೇ ?

ಶ್ರೀ ಕೆ. ಟಿ. ರಾಥೋಡ್.—ನಮ್ಮ ಕಾನೂನು ಪ್ರಕಾರ ಬೇರೆ ಕಡೆಯಿಂದ ನಮ್ಮ ಸಮುದ್ರದ ಸಮೀಪಕ್ಕೆ ಬಂದು ಮೀನು ಹಿಡಿಯುವಂತಹ ಬೇಟೆಗಾರರಿಗೆ ಅಡಚಣೆ ಮಾಡುವಂತಹ ನಿರ್ಬಂಧಗಳು ಇಲ್ಲ. ಆ ತರಹ ನಿರ್ಬಂಧ ಇರುವುದಕ್ಕೆ ಇದು ಎಲ್ಲಾ ರಾಷ್ಟ್ರಗಳಿಗೂ ಸಂಬಂಧ ಪಟ್ಟಿರುವುದರಿಂದ ಆ ಬಗ್ಗೆ ಬೇರೆ ವಿಚಾರ ವಿನಿಮಯ ನಡೆಯುತ್ತಿದೆ. ತಾವು ಹೇಳಿದ ರೀತಿಯಲ್ಲಿ ಇಂಥ ಕ್ಷಾಮ ಬರುವುದು 10 ವರ್ಷಗಳಿಗೆ ಒಮ್ಮೆ ಬರುತ್ತಾ ಇದೆ ಎಂದು ಗಮನಕ್ಕೆ ಬಂದಿದೆ. ಮೊದಲೇ ಈ ಸಭೆಗೆ ತಿಳಿಸಿದ್ದೇನೆ. 10 ವರ್ಷಗಳಿಗೊಮ್ಮೆ ಮೀನಿನಕ್ಷಾಮಾ ಬರಬೇಕಾದರೆ ಯಾವ ಕಾರಣದಿಂದ ಬರುತ್ತದೆ ಎನ್ನುವುದನ್ನು ಕೂಡ ಪರಿಶೀಲಿಸುವುದಕ್ಕೆ ನಾವು ಏನು ಒಂದು ಸಮಿತಿಯನ್ನು ನೇಮಿಸಿದ್ದೇವೆ ಆ ಸಮಿತಿಯವರು ನಮಗೆ ರಿಪೋರ್ಟು ಕೊಟ್ಟಿಲ್ಲ ಅವರು ರಿಪೋರ್ಟು ಕೊಟ್ಟ ನಂತರ ನಾನು ಹೇಳುತ್ತೇನೆ.

Mr. DEPUTY SPEAKER.—Expert opinion is that if there is failure of rain in June, that particular species do not lay their eggs in abundance and the percentage of fertilization also is poor. This ishappening forthe last so many years. That is the expert opinion till to-day.

SHORT NOTICE QUESTION AND ANSWER

Deaths due to Cholera in Shimoga District

25. Sri S. BANGARAPPA (Sorab).—

Will the Minister for Health be pleased to state :—

(a) whether it has come to the notice of Government that seven persons died due to cholera in Shimoga District ;

(b) whether it has come to the notice of Government that the same disease is still spreading to other places ;

(c) if so, the steps taken by Government to prevent this disease ?

Sri H. SIDDAVEERAPPA (Minister for Health).—

(a) Yes.

(b) Yes.

(c) The Health Authorities have performed a total of 31,000 Anti-Cholera Inoculations and disinfection of infected houses and

(SRI H. SIDDAVEERAPPA)

spraying of infected localitiee in addition to the super chlorination of water sources. The Deputy Commissioner has promulgated a notification under Section 76 of Mysore Public Health Act on 15th March 1973 prohibiting congregations and sale of cut fruits, meat, prepared food, etc., in unprotected manner within the city limits and closing down of hotels and cinema houses in the affected areas of the city. Meanwhile the Pubiic Health Department and Municipal Authorities have taken adequate steps for inoculation of people with Anti-cholera Vaccine and have ensured that adequate measures have been taken for strict supervision of hotels and eating houses in other parts of the City. There is no cause for anxiety. All effctive measures are undertaken to contain the epedemic.

ಶ್ರೀ ಎಸ್. ಬಂಗಾರಪ್ಪ.—ನಾನು ಪ್ರಶ್ನೆ ಕಳುಹಿಸಿದಾಗ ಶಿವಮೊಗ್ಗದಲ್ಲಿ ಕರುಳು ವ್ಯಾಧಿ ಇದೆಯೆಂದು ಸರ್ಕಾರ ಪ್ರಕಟಣೆ ಮಾಡಿತ್ತು. 7 ಜನ ಸತ್ತಾಗ ಪ್ರಶ್ನೆ ಕೊಟ್ಟಿದ್ದೆ. ಈಗ ಎಷ್ಟು ಜನ ಸತ್ತಿದ್ದಾರೆ ? ಇನಾಕ್ಯೂಲೇಷನ್ ಹಾಕುವುದು ಒಳ್ಳೆಯದಲ್ಲವೇ ? ಈಗೆ ಕಂಟ್ರೋಲ್‌ನಲ್ಲಿ ಇದೆಯೇ ಅಥವಾ ಇಲ್ಲವೇ ?

† ಶ್ರೀ ಎಚ್. ಸಿದ್ದವೀರಪ್ಪ.—ಈಗ ಕಾಯಿಲ್ ಕಂಟ್ರೋಲ್‌ನಲ್ಲಿ ಇದೆ. ನನಗೆ ಬಂದಿರತಕ್ಕ ವರದಿ ಪ್ರಕಾರ ಆಗಲೇ ನಾನು ತಮಗೆ ತಿಳಿಸಿದ್ದೇನೆ. There were 35 suspected cases of gastro-enteritis. There wsre 12 deaths and during the last few days according to the report, there are no deaths.

ಶ್ರೀ ಎಸ್. ಬಂಗಾರಪ್ಪ.—ಬೆಂಗಳೂರು ನಗರ ಅಲ್ಲದೆ ಷಿಕಾರಿಪುರ, ಭದ್ರಾವತಿ ಹಾಗೂ ತರಿಕೆರೆ ಕಡೆಗೆ ಈ ರೋಗಸಮೀಪಿಸಿದೆ ಎಂದು ವರಧಿ ಇದೆ ಆ ಕಡೆ ಇನಾಕ್ಯೂಲೇಷನ್ ಹಾಕತಕ್ಕ ಕಾರ್ಯಕ್ರಮ ಇದೆಯೇ, ಮುಂಜಾಗ್ರತೆ ಕಾರ್ಯಗ್ರಮಗಳು ನಡೆದಿವೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರವನ್ನು ಸರ್ಕಾರದವರು ತೀವ್ರವಾಗಿ ಗಮನದಲ್ಲಿಟ್ಟು ಕೊಂಡಿದ್ದೇವೆ ಈ ಬೇಸಿಗೆಯಲ್ಲಿ ಈ ಕರುಳುಬೇನೆ ಮತ್ತು ಕಾಲರಾ ಮುಂತಾದ ಕಾಯಿಲೆಗಳು ಹಬ್ಬತಕ್ಕ ಅವಕಾಶಗಳು ಇವೆ ಏತಕ್ಕೆಂದರೆ ನೀರಿನ ಅನುಕೂಲ ಸಾಕಷ್ಟು ಇಲ್ಲದೆ ಇರುವುದರಿಂದ ಪ್ರಿವೆಂಟೀವ್ ಆಕ್ಷನ್ ಪ್ರಕಾರ ಮೆಡಿಸನ್ ಸ್ಟಾಕ್ ಇಟ್ಟು ಕೊಂಡಿರುವುದು ಎಲ್ಲಾ ಕಡೆ ಅವುಗಳನ್ನು ಕೊಟ್ಟು ಪ್ರತಿಯೊಂದು ಜಿಲ್ಲೆಯಲ್ಲಿಯೂ ಸ್ಟಾಕ್ ಮಾಡಿದ್ದಾರೆ. ಅಂಟಿಸಿಪೇಟ್ ಮಾಡಿ ಇನಾಕ್ಯೂಲೇಷನ್ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲೆಲ್ಲಿ ಅನುಮಾನ ಬರುತ್ತದೆ ಅಲ್ಲಿ ತಕ್ಷಣ ಪ್ರಿವೆಂಟೀವ್ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ—ಹಣ್ಣುಹಂಪಲುಗಳು, ತಿಂಡಿ ಪದಾರ್ಥಗಳು ಕೆಡದಹಾಗೆ ನೋಡುವುದಕ್ಕೆ ಕಾರ್ಯಕ್ರಮ ಕೈಕೊಂಡಿದ್ದೀರಾ ? ಇನ್ನು ಕೆಲವುಕಡೆ ಇಂತಹ ಪದಾರ್ಥಗಳನ್ನು ಮಾರುತ್ತಾ ಇದ್ದಾರೆ ಇದನ್ನು ಹತೋಟಿಗೆ ತರಬೇಕು. ಇದಕ್ಕೆ ಕೂಡಲೇ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ? ಅಲ್ಲಿನ ಡಿ. ಎಚ್. ಓ. ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ನಾನು ಅಪ್ರಿಷಿಯೇಟ್ ಮಾಡುತ್ತೇನೆ. ಇದರ ಬಗ್ಗೆ ಸೂಚನೆ ಕೊಟ್ಟರೆ ಸಂಪೂರ್ಣ ಕೆಲಸವಾಗಬಹುದು ಎಂದು ನಮ್ಮ ನಂಬಿಕೆ ಇದೆ.

ಶ್ರೀ ಎಚ್. ಸಿದ್ದವೀರಪ್ಪ.—ಜಿಲ್ಲಾಧಿಕಾರಿಗಳಿಗೆ ಈ ವಿಷಯದಲ್ಲಿ ತಿಳಿಸುತ್ತೇನೆ. ಮತ್ತು ಅವರು ಪೋಲೀಸ್ ಅಧಿಕಾರಿಗಳಿಗೆ ಸಹ ತಿಳಿಸಿ ಎಲ್ಲೆಲ್ಲಿ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು ಅದನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಮತ್ತು ಫುಡ್ ಫ್ರೂಟ್ಸ್ ಮತ್ತು ಹೋಟೇಲ್‌ಗಳಲ್ಲಿ ಆಹಾರ ಪದಾರ್ಥಗಳನ್ನು ಸರಿಯಾದ ರೀತಿಯಲ್ಲಿ ಇಟ್ಟು ಇರತಕ್ಕಂಥಾದ್ದು ಇದನ್ನು ನಿಲ್ಲಿಸಲಿಕ್ಕೆ ಪ್ರಯತ್ನ ಇದ್ದಾರೆ, ಆ ರೀತಿ ಏನಾದರೂ ಹೆಚ್ಚುಕಡಿಮೆ ಆದರೆ ಸರಿಯಾದ ಕಾರ್ಯಕ್ರಮಗಳನ್ನು ಕಾನೂನು ಪ್ರಕಾರ ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇನೆ.

MADAM SPEAKER.—Now Question Hour is over.

QUESTIONS FOR ANSWERS ON THE DAY

(but not taken up)

Bet Balkonda Tank in Basavkalyan Taluk

588. Sri BAPURAO ANAND RAO (Basavakalyan).—

Will the Minister for Public Works and Electricity be pleased to state :—

(*a*) whether the Government has receiv d any representation complaining against the tardy execution of Bet Balkonda tank in Basavakalyan Taluk of Bidar District ;

(*b*) the average daily strength of labourers working on this tank since the beginning ;

(*c*) the steps taken by the Government to force the contract to employ more labourers on the tank in view of drought conditions there ;

(*d*) the average daily wages received by the labourers ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) The average labour strength working from 8th December 1972 to 4th March 1973 is 159 per day.

(*c*) Depending on the availability of water which is required for consolidation, the bund work is programmed to be done.

(*d*) 1 A man Mazdoor gets an average of Rs. 2-50 per day

2 A woman Mazdoor gets an average of Rs. 1-50 per day.

3 A Vodder gets an average of Rs. 4 per day.

Health Unit Type Dispensary at Wadawadgi

751. Sri M. M. SAJJAN (Muddebihal).—

Will the Minister for Health be pleased to state :—

(*a*) the date when the Taluk Development Board of Basavanna Bagewadi recommended for establishing Health Type Dispensary at Wadawadgi :

(*b*) whether the Director of Medical Services and Family Planning recommended for establishing this dispensary ;

(*c*) whether the sanction has been accorded by the Government?

Sri H. SIDDAVEERAPPA(Minister for Health).—

(a) 2nd December 1970.

(b) and (c) Orders sanctioning a Health Unit Type Dispensary at Wadawadgi, have been issued in G. O. No. HMA 392 PPS 72, dated 22nd March 1973.

Lokapavani Lift Irrigation Near Karighatta

759. Smt. DAMAYANTHI BORE GOWDA (Srirangapatna).—

Will the Minister for Public Works and Electricity be pleased to state.—

(a) the atchkat to be benfited by the Lokapavani Lift Irrigation near Karighatta in Srirangapatna Taluk ;

(b) when this will be taken up ?

Sri H. M. CHANNABASAPPA (Minister for Public Works and Electricity).—

(a) 2,000 acres of Semi-dry atchkat above C. D. S. Channel and 1,200 acres of wet atchkat for stabilisation under C. D. S. Channel are proposed to be benefited.

(b) After sanction to the Plans and estimates.

CALLING ATTENTION TO MATTERS OF URGENT PUBLIC IMPORTANCE

(1) *re* : deaths due to gastro-enteitis in Gulbarga District.

Sri V. N. PATIL (Humnabad).—I beg to call the attention of the Hon. Minister for Health to the deaths due to gastro enteritis in Gulbarga District.

Sri H. SIDDAVEERAPPA (Minister for Health).—I state as follows

During the month of February 1973, there were a total of 123 attacks and 26 deaths due to gastro-enteritis in 18 Villages of Aland, Afzalpur, Yadgir, Chitapur, Shahapur and Gulbarga Taluks. 63,006 anti-Cholera inoculations were done and all the available water sources were chlorinated. A statement showing the names of Villages were the incidence occured, number of attacks and deaths and the number of anti-cholera inoculations done is attached.

Statement Showing The Incidence of Gastro Enteritis in Gulbarga District During the Month of February 1973.

	Name of the Village		Taluk	Date of attack and Death	Attack	Death	Anti-cholera inoculations done
1.	Norona	...	Aland	8-2-73	1	–	2920
2.	Bairmandagi	...	Afzalpur	8-2-73 to 12-2-73	10	3	2300
3,	Kagnoor	...	do	12-2-73 to 18-2-73	45	–	1800
4.	Gudur	...	do	5-2-73 to 5-2-73	5	1	225
5.	Goudagaon	...	do	6-2-73	1	–	825
6.	Wasnalli	...	Yadgir	2-2-73	2	1	915
7.	Satarshalli	...	do	3-2-73	2	–	1473
3.	Yaragal	...	do	11-2-73		–	2520
9.	Koilur	...	do	15-2-73	2	–	520
10.	Wadi	...	Chittapur	23-2-73 to 28-2-73	8	7	11287
11.	Ingalgi	...	do	6-2-73 to 8-2-73	3	2	612
12.	Indagi	...	do	17-2-73 to 19-2-73	3	2	412
13.	Talabatanda	...	do	22-2-73 to 25-2-73	4	3	320
14.	Chittpur	...	do	15-2-73	1	–	12350
15.	Settikera	...	Shahapur	18-2-73 to 22-2-73	12	1	820
16.	Manganama	...	do	24-2-73 to 28-2-73	11	2	3035
17.	Halkal	...	do	26-2-73	1	–	585
18.	Nilogi	...	Jeevargi	26-2-73 to 28-2-73	10	3	3555
19.	Pattana	...	Gulbarga	24-2-73 —	1	1	1855
	18 Villoges		7 Taluks		123	26	50329
	1 Town			Anticipatory incoculation done in the other surrounding Villages			2677
							53,006

Mr. DEPUTY SPEAKER.—There is no provision under the Rules for clarification. Still, one or two clarifications have been allowed. I will allow you to seek one clarification, if necessary.

Sri V. N. PATIL.—Sir, as you mentioned out of 123 cases, 26 people have died. That shows that the percentage of deaths among the affected is more than 20.

Sri H. SIDDAVEERAPAA.—How can you have better statistical data ?

Sri V. N. PATIL.—It can be about 5 or 6 per cent. The attacks are very severe. The reports which we are getting from most of the famine-affected areas, indicate that the disease is a water-borne disease. Will the Government assure us that sufficient stock of preventive innoculation vaccine is supplied to almost all the villages ? Can it be an unbearable expenditure for the Government ? Or is it a possibility ? Will the Hon. Minister for Health take steps to innoculate all the people in almost all the villages, where there is water scarcity ?

Sri H SIDDAVEERAPPA.—I can assure tho hon. Member that in all these areas, Government have speared no pains to see that this disease is brought under control and checked. As a matter of fact, the hon. Member is aware, they take medicine along with the doctors and ancillary staff, from village to village. We have got 12 mobile hospitals. They go from village to village, with necessary medicine and all that. Wherever it is necessary, they give all preventive medicines-both innoculation and other things. Therefore, I can assure the hon. Member that that part of the State has received special attention because we know there is acute water scarcity in that area.

re : Direct recruitment to Assistant Engineers Posts

Sri M. H. JAYAPRAKASH NARAYAN (Sirsi).—I call the attention of the Hon. Minister for Public Works to Direct Recruitment to the posts of Assistant Engineers. Division No. I- Reservation of posts in respect of Scheduled Castes and Scheduled Tribes.

Sri H. M. CHANNABASAPPA (Minister for Public Works and Electricity).—I state as : The point raised in the Calling Attention Notice No. 36 by Shri M. H. Jayaprakash Narayan is that in P.W.D. 800 Junior Engineers have been promoted to the posts of Assistant Engineers Division I, one month back, that the recruitment of Assistant Engineers in accordance with the Mysore Public Works Department Engineering Services Recruitment Rules, 1960, have not been made, thereby the constitutional provision of reservation of posts in favour of SC and ST, has been violated and it is not in accordance with the Recruitment Rules.

2. Under the Mysore Public Works Department Engineering Services Recruitment Rules 1960, the category of posts of Assistant Engineers consists of (i) Assistant Engineers Division I and (ii) Assistant Engineere Division II. The categories of posts of Assistant Engineers Division I are required to be filled by Direct Recruitment on the basis of an interview and by promotion in the ratio of 33.1/3 per cent and 66.2/3 per cent respectively. The posts of Asaistant Engineers Division II are filled only by promotion from the cadre of Junior Engineers (Non-Graduates) and Draughtsmen in the ratio of 7 : 1.

3. Under the existing rules, the State Government have provided reservation of posts in favour of SC and ST to the exent of 15 per cent and 3 per cent respectively when direct recruitment is made. There is no reservation in favour of SC and ST when the vacancies are filled by promotion.

4. After the State reorganisation on 1-11-1956, Direct Recruitment to the posts of Assistant Engineers Division I have been made 3 times so far, once during each of the years 1957, 1958 and 1961. Two SC were recruited during the year 1957, 3 in the year 1958 and 15 in the year 1961 to the post of Assistant Engineers. Direct Recruitment made during the year 1961 was challenged by way of Writ-Petitions before the High-Court and the matter went up in appeal before the Supreme Court, challenging the said appointment of Probationers made during that year. Consequently, the appointments and absorption of these probationers had to be deferred till the year 1966, when the Supreme Court held that the appointments were validly made. As the Writ Petitions were pending and the decision of the Supreme Court was also awaited, no Direct Recruitment to the posts of Assistant Engineers was possible all these years. The last promotion to the cadre of Assistant Engineers made was in the year 1963 and no promotion was made between 1963 and 1969 and only in-charge arrangements were made.

5. The State Government have decided to appoint Assistant Engineers by Direct Recruitment on the basis of a written competitive examination and necessary rules are being framed for the purpose, and the P.S.C. has also been consulted in the matter. The Recruitment will be made in a phased manner to ensure quality. Even on an earlier occasion in 1971, it was proposed to recruit 30 candidates and a Notification was in fact issued for the purpose. This recruitment was however cancelled on the ground that it should be by a competitive examination followed by an interview instead of Recruitment by interview only. The subjects and the syllabi for the written competitive examination have since been finalised and the concurrence of the P.S.C. has also been obtained and the matter is pursued vigourously with a view to hold a competitive examinations as early as possible. While making a phased direct recruitment on basis of written competitive examinations to the posts of Assistant Engineers, the prescribed reservation

(SRI H. M. CHANNABASAPPA)

in favour of Scheduled Castes and Scheduled Tribes candidates shall be observed in accordance with the rules regarding reservation of posts in favour of all backward classes as provided under the constitution.

6. Under the existing policy of the State Government reservation in favour of S.Cs. and S.Ts. is provided only for direct recruitment and the percentage fixed is 15 per cent for the S.Cs. and 3 per cent for S.Ts, as already said above.

7. The promotions of Junior Engiueers made to the Cadre of Assistant Engineers Division I are subject to review in accordance with the provisions of the Mysore Public Works Department Engineering Services Cadre & Recruitment Rules, when directly recruited candidates are appointed on the basis of the written competitive examinations, rules, regarding which are under the active consideration of Government. The Hon'ble Member need not apprehend that constitutional provisions as to the reservation of posts to the S.Cs. and STs. candidates are being violated in making promotions to the posts of Assistant Engineers.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಈ ಬಗ್ಗೆ ಒಂದು ಹೇಳಿಕೆಯನ್ನು ಸಭೆಯ ಮುಂದೆ ಇಟ್ಟು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಕಾನ್ಸ್ಟಿಟ್ಯೂಷನಲ್ ಪ್ರಕಾರ ಅವರಿಗೆ ಏನು ರಿಸರ್ವೇಷನ್ ಬರಬೇಕಾಗಿತ್ತೋ ಅದನ್ನು ಉಲ್ಲಂಘನೆ ಮಾಡುವುದಿಲ್ಲ ಎಂದು ಈ ಸ್ಟೇಟ್‌ಮೆಂಟಿನ ಕೊನೆಯ ಪ್ಯಾರಾದಲ್ಲಿ ಭರವಸೆ ಕೊಟ್ಟಿದ್ದಾರೆ. ಆದರೆ ಈ ಬಗ್ಗೆ ಪೂರ್ಣವಾಗಿ ಉಲ್ಲಂಘನೆ ಮಾಡಿದ್ದಾರೆ ಎಂದು ಹೇಳುತ್ತೇನೆ. ಏತಕ್ಕೆಂದರೆ 10 ವರ್ಷದಿಂದಲೂ ಈ ಕೇಸು ಸುಪ್ರೀಂ ಕೋರ್ಟ್‌ನಲ್ಲಿ ಇದ್ದುದರಿಂದ ಈ ವೇಕೆನ್ಸಿಗಳನ್ನು ಭರ್ತಿ ಮಾಡಲಿಲ್ಲ ಎಂದು ಹೇಳಿದ್ದಾರೆ. ನಾನು ಇದುವರೆಗೆ ಶ್ರೀಮಾನ್ ವೀರೇಂದ್ರ ಪಾಟೀಲರೇ ಕಾನ್ಸ್ಟಿಟ್ಯೂಷನಲ್ ಫ್ರಾಡ್ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೆ. ಈಗ ಇದನ್ನು ನೋಡಿದರೆ ತಾವೇ ಮಾಡಿದ್ದೀರೆಂದು ನಾನು ಹೇಳುತ್ತೇನೆ. ಈ ವಿಚಾರದಲ್ಲಿ ಹೇಳುವುದಾದರೆ ಮುಖ್ಯವಾಗಿ ಈವಾಗ 800 ಜನಕ್ಕೆ ಪ್ರಮೋಷನ್ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅದರಲ್ಲಿ ರಿಸರ್ವೇಷನ್ ಪ್ರಕಾರ 15 : 3 ಪರ್ಸೆಂಟ್ ರೇಶಿಯೋ ಏನು ಇದೆ ಆ ಪ್ರಕಾರ 13-14 ವರ್ಷದಿಂದಲೂ ಇರತಕ್ಕಂಥ ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ವರ್ಗದವರಿಗೆ 120 ಜನಕ್ಕೆ ಬರಬೇಕಾಗಿತ್ತು, ಅದನ್ನು ಏತಕ್ಕೆ ಕೊಟ್ಟಿಲ್ಲ ?

ಷೆಡ್ಯೂಲ್ ಟ್ರೈಬ್ಸ್‌ಗೆ 3 ಪರ್ಸೆಂಟ್ ಎಂದರೆ 24 ಜನಗಳಿಗೆ ಕೊಡಬೇಕಾಗಿತ್ತು. ಅದನ್ನು ಕೊಟ್ಟಿಲ್ಲ. ಈ 10 ವರ್ಷಗಳಲ್ಲಿ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡದೆ ಇರುವುದರಿಂದ ಆ ಲೋಪವನ್ನು ಸರಿ ಮಾಡುವುದಕ್ಕೆ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಪ್ರಮೋಷನಲ್ ವೇಕೆನ್ಸಿಗಳಲ್ಲಿ ಸಹ ರಿಸರ್ವೇಷನ್ ಕೊಡಬೇಕೆಂದು ಇರುವುದರಿಂದ ಅದನ್ನು ಪರಿಶೀಲನೆ ಮಾಡಿ ಜಾರಿಗೆ ತರುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಉದ್ವೇಗದಲ್ಲಿ ಏನು ಹೇಳುತ್ತಾರೆನ್ನುವುದು ಅರ್ಥವಾಗುವುದಿಲ್ಲ. ಒಂದು ಸಲ 700 ಜನ ಎಂದು ಹೇಳುತ್ತಾರೆ, ಒಂದು ಸಲ 800 ಜನ ಎಂದು ಹೇಳುತ್ತಾರೆ ಅವರು ಕರಾರುವಾಕ್ಕಾಗಿ ವಿಷಯ ತಿಳಿದುಕೊಂಡು ಹೇಳಿದರೆ ಒಳ್ಳೆಯದು. ಅವರು ಬರವಣಿಗೆಯಲ್ಲಿ ಕೊಟ್ಟಿರುವುದರಲ್ಲಿ 800 ಜನ ಎಂದು ಹೇಳಿದ್ದಾರೆ. ಆದರೆ ಈಗ ಪ್ರಮೋಷನ್ ಕೊಟ್ಟಿರುವುದು 4‌0 ಜನಗಳಿಗೆ ಮಾತ್ರ.

The point raised in the Calling Attention Notice by Sri Jayaprakash Narayan is that in P.W.D. 800 Junior Engineers have been promoted to the posts of Assistant Engineers Division I. There is no reservation in the Constitution so far as promotions are concerned.

Promotions are always made on merit-*cum*-service. As I have already said, the direct recruitment and promotion is in the ratio of 1:2. If the hon. Member reads para 7 of my statement, his question will not arise. It reads :

> "The promotions of Junior Engineers made to the Cadre of Assistant Engineers, Division I are subject to review in accordance with the provisions of the Mysore Public Works Department Engineering Services, Cadre and Recruitment Rules, when directly recruited candidates are appointed on the basis of the written competitive examinations, rules, regarding which are under the active consideration of Government."

Therefore, the hon. Members need not have any apprehension whatsover that the provisions of the Constitution and the safeguards that have been paovided in the Constitution will be violated. I assure this House that as far as reservations are concerned they will be very zealously safeguarded.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—800ಜನರನ್ನು ಪ್ರಮೋಟ್ ಮಾಡಿಲ್ಲ, 450 ಜನರನ್ನು ಮಾಡಿದ್ದೇವೆಂದು ಹೇಳಿದ್ದಾರೆ. 10 ವರ್ಷದಿಂದ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಲಿಲ್ಲ. 450 ಜನರನ್ನು ಪ್ರಮೋಟ್ ಮಾಡಿರುವುದರಲ್ಲಿ ರಿಸರ್ವೇಷನ್ ಕೂಡ ಮಾಡಿಲ್ಲ. ಸಿ ಅಂಡ್ ಆರ್. ರೂಲ್ಸ್ ಪ್ರಕಾರ ಕ್ಲಾಸಿಫಿಕೇಷನ್ ಕೂಡ ಮಾಡಿಲ್ಲ. ಈ ಲೋಪವನ್ನು ಸರಿಪಡಿಸುವುದಕ್ಕೆ ರಾಜ್ಯಾಂಗದಲ್ಲಿರುವಂತೆ ಅವಕಾಶವನ್ನು ಕಲ್ಪಿಸಿಕೊಡುತ್ತೀರಾ ?

Sri H. M. CHANNABASAPPA.—Without understanding what I have said the hon. Member is saying the same thing over and over again. I would request the hon. Member to read para 7 where the matters are made amply clear. I may repeat that promotions are not made an the basis of reservations but they are made on the basis of service *cum*-merit.

Mr. DEPUTY SPEAKER.—I want the co-operation of all the members. Under the Rules of Procedure we have to include not more than one calling attention notice in the list of business but we have been including two each per day and still hon. Members are complaining that their calling attention notices have not been included in the list of business. This time we have received over 190 calling attention notices. Under the Rules of Procedure there is no provision for calrification at all but certain precedents have developed and we have given scope for one or two clarifications by the member who has tabled it. If the hon. Members are prepared to accept this procedure where by the scope is restricted to one or two clarifications and that to by the member who has tabled it, we can include two more per day. I seek the co-operation of the hon. Members in this behalf.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಪಾರ್ಲಿಮೆಂಟಿನಲ್ಲಿ ಸಹ ಇತರ ಸದಸ್ಯರು ಕಾಲಿಂಗ್ ಅಟೆನ್‌ಷನ್ ಬಗ್ಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವಿದೆ. ಅರ್ಧ ಗಂಟೆಯಾದರೂ ವಿಮರ್ಶೆ ಮಾಡುವ ಪದ್ಧತಿ ಇದೆ. ಇದು ಬಹಳ ಮುಖ್ಯವಾದ ವಿಚಾರವಾಗಿ ಇರುವುದರಿಂದ ಇತರ ಸದಸ್ಯರಿಗೂ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡಬೇಕು ಎಂದು ಅಧ್ಯಕ್ಷರಲ್ಲಿ ಪ್ರಾರ್ಥಿಸುತ್ತೇನೆ.

(Several members rose to ask clarification

Mr. DEPUTY SPEAKER.—We shall go to the next subject.

Notice *re* : Lottery Organisations called Kamadhenu Enterprises

Sri H. S SIDDAPPA (Arasiker).—Sir, I have given an important Calling Attention Notice. During this session only one has come up. One organisation called the Kamadhenu Enterprises has constituted a a body which is parrallel to the Government organisation dealing with lottery tickets and they have collected Rs. 2½ lakhs. I have given the details to the Chief Minister, the Home Minister and the I. G. P. No reply has been received so far.

I have received a letter from the Chief Minister stating that the matter is referred to the Commissioner and he is taking action. Public money to the tune of Rs. 2½ lakhs is involved.

Mr. DEPUTY SPEAKER.—We will look into it.

10–30 A. M.

ಶ್ರೀ ಕೊಣಂದೂರು ಲಿಂಗಪ್ಪ.— ನಮ್ಮ ಈ ಸದನ ಇಂದಿನಿಂದ ಒಂದು ವಾರ ಸೇರುವುದಿಲ್ಲವಾದುದರಿಂದ ಅತಿ ಮುಖ್ಯವಾದ ಮೂರು ವಿಚಾರಗಳ ಬಗ್ಗೆ ಸರಕಾರದವರಿಂದ ಒಂದು ವಾಕ್ಯದ ಉತ್ತರ ಕೊಡಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಮೊದಲನೆಯದು, ಅಗ್ರಿಕಲ್ಚರಲ್ ಯೂನಿವರ್ಸಿಟಿಗಾಗಿ ಪಿ. ಎಸ್. ಸಿ. ಯವರು ಉಮೇದುವಾರರುಗಳನ್ನು ಆಯ್ಕೆ ಮಾಡುವಾಗ ಬಿ. ಎಸ್. ಸಿ. (ಅಗ್ರಿಕಲ್ಚರು) ಹಾಗೂ ಬಿ. ಎಸ್. ಸಿ. ಕ್ಯಾಂಡಿಡೇಟುಗಳು ಅರ್ಜಿ ಹಾಕಿದ್ದರು. ಇದರಲ್ಲಿ ಮುಖ್ಯವಾಗಿ ಬಿ. ಎಸ್. ಸಿ. (ಅಗ್ರಿಕಲ್ಚರು) ಕ್ಯಾಂಡಿಡೇಟರುಗಳನ್ನೇ ಮೊದಲು ನೇಮಕ ಮಾಡಿ ಅನಂತರ ಬಿ. ಎಸ್. ಸಿ. ಯವರಿಗೆ ಅವಕಾಶ ಕೊಡಬೇಕಾಗಿತ್ತು. ಹಾಗೆ ಮಾಡದೆ ಬಿ. ಎಸ್. ಸಿ. (ಅಗ್ರಿಕಲ್ಚರು) ಡಿಗ್ರಿ ಪಡೆದವರು ನಾಲ್ಕು ಜನರಿದ್ದರೂ ಅವರನ್ನು ಬಿಟ್ಟು ಬರೀ ಬಿ. ಎಸ್ ಸಿ. ಡಿಗ್ರಿಯವರನ್ನು ಮಾತ್ರ ಆಯ್ಕೆ ಮಾಡಿದರು ಎಂದು ನಮ್ಮ ವಿಧಾನಸೌಧದ ಮುಂದೆ ಆ ಹುಡುಗರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ, ಇದರ ಬಗ್ಗೆ ಸರಕಾರದ ಅಭಿಪ್ರಾಯ ಕೇಳಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಸತ್ಯಾಗ್ರಹ ಮಾಡುತ್ತಿರುವವರಲ್ಲಿ ಒಬ್ಬರು ಬಂದು ನನ್ನನ್ನು ನೋಡಿ ಅವರ ವಿಚಾರಗಳನ್ನೆಲ್ಲಾ ತಿಳಿಸಿದರು, ಇವರು ಹೇಳಿರುವುದು ವಾಸ್ತವವಾಗಿರುವಂತೆ ತೋರಿದುದರಿಂದ ಇದನ್ನು ವಿಚಾರ ಮಾಡೋಣ ಎಂದು ಹೇಳಿ ಅವರು ಸತ್ಯಾಗ್ರಹವನ್ನು ವಾಪಸು ತೆಗೆದುಕೊಳ್ಳಬೇಕೆಂದೂ ಹೇಳಿದ್ದೇನೆ. ಮಾನ್ಯ ಸದಸ್ಯರು ಕೂಡ ಅವರ ಸತ್ಯಾಗ್ರಹವನ್ನು ವಾಪಸು ತೆಗೆದುಕೊಳ್ಳಲು ಸಲಹೆ ಮಾಡಬೇಕೆಂದು ಅವರಿಗೂ ಹೇಳುತ್ತೇನೆ. I want the hon. members to advise them. Once when I have said that there appears to be some force, there need not be any argument. ಈಗ ಈವಿಷಯದಲ್ಲಿ ಹೇಳಲು ನನಗೆ ವಿವರಗಳಿಲ್ಲ. ಸುಮ್ಮನೆ ಇಲ್ಲಿ ಬಂದು, ಸತ್ಯಾಗ್ರಹ ಮಾಡುತ್ತೇವೆ ಎಂದು ಹೇಳುತ್ತಾರೆ. ಪಿ. ಎಸ್. ಸಿ. ಯವರು ಅನ್ಯಾಯ ಮಾಡಿದ್ದಾರೆಂದು ಹೇಳುತ್ತಾರೆ. ಪ್ರತಿಯೊಂದಕ್ಕೂ ಸತ್ಯಾಗ್ರಹ ಮಾಡುತ್ತೇವೆ ಎಂದು ಸತ್ಯಾಗ್ರಹ ಮಾಡುತ್ತ ಹೋದರೆ ಅದಕ್ಕೆ ಏನೂ ಅರ್ಥ ಬರುವುದಿಲ್ಲ. ಇದರಲ್ಲಿ ಸತ್ಯವೂ ಇಲ್ಲ, ಆಗ್ರಹವೂ ಇಲ್ಲ ಹೀಗೆ ಪ್ರತಿಯೊಂದಕ್ಕೂ ಸತ್ಯಾಗ್ರಹ ಮಾಡಿದರೆ ನಾವೇನು ಹೇಳುವುದು ? ಇದಕ್ಕೇನು ಬೆಲೆ ಬರುತ್ತದೆ ?

ಶ್ರೀ ವಾಟಾಳ್ ನಾಗರಾಜ್.—ಸತ್ಯಾಗ್ರಹ ಮಾಡದೇ ಇದ್ದರೆ ಸರಕಾರ ಅದಕ್ಕೆ ಗಮನವೇ ಕೊಡುವುದಿಲ್ಲ. ಸತ್ಯಾಗ್ರಹ ಮಾಡುವುದು ಸ್ವಾಭಾವಿಕವಾದದ್ದು.

ಶ್ರೀ ಡಿ. ದೇವರಾಜ ಅರಸ್.—ಪ್ರತಿಯೊಂದು ಸಾರಿ ಸತ್ಯಾಗ್ರಹ ಮಾಡುತ್ತೇವೆ ಎಂದು ಸತ್ಯಗ್ರಹ ಮಾಡಲು ಹೋದರೆ ಅದರಿಂದೇನಾಗುತ್ತದೆ ? ಇದರಲ್ಲಿ ಸತ್ಯವೂ ಇಲ್ಲ ಆಗ್ರಹವೂ ಇಲ್ಲ.

Retrenching the Local Candidates

ಶ್ರೀ ಕೊಣಂದೂರು ಲಿಂಗಪ್ಪ.—ನಾನು ಸರಕಾರಕ್ಕೆ ಒಂದು ನೋಟೀಸು ಕಳುಹಿಸಿ ಇದೇ ತಿಂಗಳು 31 ರಂದು ಖಾಸಗಿ ಶಿಕ್ಷಕರು ಕೆಲವರನ್ನು ಬರ್ತರಫ್ ಮಾಡುವುದರ ಬಗ್ಗೆ ಅವರನ್ನು ಮುಂದುವರಿಸಬೇಕೆಂದು ಕೇಳಿದ್ದೆ, ಇದರ ಬಗ್ಗೆ ಸರಕಾರದ ಕ್ರಮ ಏನೂ ತಿಳಿಯಲಿಲ್ಲ. ನೂರಾರು ಜನ ಶಿಕ್ಷಕರಿಗೆ ಇದರಿಂದ ಹಾನಿಯಾಗುತ್ತದೆ.

Sri D. DEVARAJ URS.—We will try to see what it is.

Re : Distribution of Sugar for Ugadi

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮೀ, ನನಗೆ ಬಂದ ಪತ್ರವನ್ನು ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ಕಳುಹಿಸುತ್ತೇನೆ. ಇದು ಬೇನಾಮಿ ಪತ್ರವಲ್ಲ. ರುಜು ಹಾಕಿರುವ ಪತ್ರ. ಬರುವ ಯುಗಾದಿ ಹಬ್ಬಕ್ಕೆ ಸಕ್ಕರೆ ಹಾಗೂ ಇನ್ನಿತರ ಆಹಾರಪದಾರ್ಥಗಳ ಬಗ್ಗೆ ಹೇಳಿ ಕೊನೆಯಲ್ಲಿ ಅವರು ಒಂದು ವಾಕ್ಯ ಬರೆದಿದ್ದಾರೆ. ಈ ಪತ್ರವನ್ನು ವಿಧಾನ ಸಭೆಯಲ್ಲೇ ತಿಳಿಸಿದರೆ ಸಂಬಂಧಪಟ್ಟ ಇಲಾಖೆಯವರು ಇದರಲ್ಲಿರುವ ಅವ್ಯವಹಾರಗಳನ್ನು ಸರಿಮಾಡಿಸಲು ಸಾಧ್ಯ ಎಂದು ಮನವಿ ಮಾಡಿದ್ದಾರೆ. ಅದರಂತೆ ಈ ಪತ್ರವನ್ನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ. ಇದರ ಬಗ್ಗೆ ಏನೂ ಸಾಧ್ಯವೋ ಅವರೇ ಮಾಡಲಿ.

Acts of the Authorities of the Karnataka University

ಶ್ರೀ ಕೊಣಂದೂರು ಲಿಂಗಪ್ಪ.—ಇನ್ನೊಂದು ಮುಖ್ಯ ವಿಚಾರ ಎಂದರೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿರುವ ಅಧಿಕಾರಿಗಳು ಒಂದು ರೀತಿಯಾಗಿ ದೌರ್ಜನ್ಯಕಾರಕವಾದ ಚಳುವಳಿ ಮಾಡಲು ಅವಕಾಶಕೊಡುತ್ತಿದ್ದಾರೆ. ಇದರ ಬಗ್ಗೆ ಸರಕಾರದ ವಿವರಣೆಯನ್ನು ಕೇಳಿದ್ದೆ. ಮತ್ತು ಇಲ್ಲಿನ ಅಧಿಕಾರಿ ವರ್ಗದವರಿಗೂ ತಕ್ಕ ಸೂಚನೆಗಳನ್ನು ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್.—ಇದರ ಬಗ್ಗೆ ನಮಗೆ ಏನೂ ಹೇಳದೆ ಏಕಾಏಕಿ ಸಭೆಯಲ್ಲಿ ಹೀಗೆ ವಿಚಾರಗಳನ್ನು ಪ್ರಸ್ತಾಪಮಾಡಿದರೆ ನಾವೇನು ಹೇಳಲಿಕ್ಕೆ ಸಾಧ್ಯ ? ಇದರಲ್ಲಿ ದೌರ್ಜನ್ಯವಾಗಿದೆ ಎನ್ನುತ್ತಾರೆ. ಏನು ವಿಚಾರ ಎನ್ನುವುದು ತಿಳಿಯದೇ ಇರುವಾಗ ನಾವು ಇದರ ಬಗ್ಗೆ ಹೇಳುವುದು ಕಷ್ಟ. ಮಾನ್ಯ ಸದಸ್ಯರು ಅಲಾಯದ ನಮಗೆ ಬರೆಯಲಿ ಆಮೇಲೆ ನೋಡೋಣ.

Accounts of the Mysore Dasara Exhibition

ಶ್ರೀ ವಾಟಾಳ್ ನಾಗರಾಜ್.—ನಾನು ಹಾಗೂ ವಿರೋಧ ಪಕ್ಷದ ನಾಯಕರು ಬಹಳ ಗುರುತರವಾದ ಆಪಾದನೆಗಳನ್ನು ಮಾಡಿದ್ದೆವು. ಅವೇ ಮೈಸೂರು ಎಕ್ಸಿಬಿಷನ್ ಬಗ್ಗೆ, ಸರಕಾರ ಸ್ಟೇಟುಮೆಂಟು ಕೊಡುತ್ತೇವೆಂದು ಹೇಳಿದರು. ಮತ್ತೆ ಇನ್ನೊಂದು ವಿಚಾರದಲ್ಲಿ ಪೋಲೀಸು ರಿಪೋರ್ಟ್ ತರಿಸಿಕೊಡುತ್ತೇವೆಂದು ಹೇಳಿದರು. ಅದು ಇನ್ನೂ ಬರಲಿಲ್ಲ. ಮತ್ತು ಎಕ್ಸಿಬಿಷನ್ ಅಕೌಂಟುಗಳ ವಿವರಗಳನ್ನೂ ಸಭೆಯಲ್ಲಿ ಇಡುತ್ತೇವೆಂದು ಹೇಳಿದರೂ ಇನ್ನೂ ಅದನ್ನು ಇಡಲಿಲ್ಲ. ಆದುದರಿಂದ ನಿರ್ದಿಷ್ಟವಾಗಿ ಯಾವತ್ತು ಈ ಸಭೆಯಲ್ಲಿ ವಿವರಗಳನ್ನು ಕೊಡುತ್ತೀರಿ ಅದನ್ನಾದರೂ ತಿಳಿಸಬೇಕೆಂದು ಕೋರುತ್ತೇನೆ. ಈಗಾಗಲೇ ನಾವು ಇದನ್ನು ಪ್ರಸ್ತಾಪ ಮಾಡಿ 15 ದಿವಸಗಳಾದರೂ ಅವುಯಾವುವೂ ಇನ್ನೂ ಇಲ್ಲಿ ಬರಲಿಲ್ಲ. ಇದರಿಂದ ಅವರು ಏನು ಮಾಡುತ್ತಾರೆ ಎನ್ನುವುದು ಅರ್ಥವಾಗುತ್ತಿಲ್ಲ.

Sri D. DEVERAJ URS.—What action I have taken, I will tell the House,

Sri H. D. DEVEGOWDA.—So far as accounts are concerned, the Minister had made a promise to place it on the Table during the current session.

ಪದೇ ಪದೇ ಇದರ ಬಗ್ಗೆ ರಿಕಾರ್ಡುಗಳ ಬಗ್ಗೆ ಹೇಳಲು ಹೋಗುವುದಿಲ್ಲ. ಇಂದು ಸಭೆ ಪ್ರೊರೋಗ್ ಮಾಡುತ್ತಿಲ್ಲ. ಸುಮ್ಮನೆ ಅಡ್ಜರ್ನ್ ಮಾಡುತ್ತಿರುವುದರಿಂದ ಮುಂದೆ ಇಲ್ಲಿಗೆ ಬರುವ ವೇಳೆಗಾದರೂ ಇದರ ಎಲ್ಲ ವಿವರಗಳನ್ನೂ ಸರಕಾರ ಒದಗಿಸಿಕೊಡುತ್ತದೆಯೇ ಹೇಗೆ ? ನಮಗೆ ಅಕೌಂಟು ಬಗ್ಗೆ ವಿವರಗಳು ಬೇಕು.

Sri AZEEZ SAIT (Minister for Labour).—I have made clear that I will place it on the Table of the House. After the accounts are over, it will be placed.

ಶ್ರೀ ಡಿ. ದೇವರಾಜ ಅರಸ್.—ಮುಂದೆ ಇಲ್ಲಿ ಸೆಷನ್ ಸೇರುವಾಗ ನೀವೆಲ್ಲಾ ಬರುತ್ತೀರಿ. ಬರುವ ಒಂಭತ್ತನೇ ತಾರೀಖಿನ ಸೆಷನ್‌ನಲ್ಲಿ ಕೊಡೋಣ.

BUDGET ESTIMATES FOR 1973-74

Demands for Grants—Demand No. 39A—Grants in Aid-Contribution to Local Bodies and Housing

† ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಇಲಾಖೆಯ ಬೇಡಿಕೆಗಳ ಬಗ್ಗೆ ಮಾನ್ಯ ಸದಸ್ಯರುಗಳು ಅತಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಾವು ಮಾಡಿದ ಕೆಲಸಕ್ಕೆ ಕೆಲವು ಮಾನ್ಯ ಸದಸ್ಯರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಮತ್ತೆ ಕೆಲವು ಮಾನ್ಯ ಸದಸ್ಯರು ಒಂದೆರಡು ವಿಷಯಗಳ ಬಗ್ಗೆ ವೈಯುಕ್ತಿಕವಾದ ಟೀಕೆಗಳನ್ನು ಮಾಡಿದ್ದಾರೆ. ಎಲ್ಲಕ್ಕೂ ಸಹ ನನ್ನ ದನ್ಯವಾದಗಳು. ನಾನು ಉತ್ತರ ಕೊಡುವಾಗ ಮೂರು ಭಾಗಗಳಾಗಿ ವಿಂಗಡಿಸಿ ಉತ್ತರ ಕೊಡುತ್ತೇನೆ. ಒಂದನೆಯದು, ಈ ಒಂದು ಲೆಜಿಸ್ಲೇಚರ್ ವರ್ಕ್ ಏನಿವೆ, ಅ ಬಗ್ಗೆ ನಾವು ಏನು ಮಾಡಿದ್ದೇವೆ ಬಾದು. ಎರಡನೆಯದು, ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳು ಮತ್ತು ಟೀಕೆ ಟಿಪ್ಪಣಿಗಳಿಗೆ ಉತ್ತರ ಕೊಡುವುದು. ಮೂರನೆಯದು, ನನ್ನ ಬಗ್ಗೆ ವೈಯುಕ್ತಿಕವಾಗಿ ಮಾನ್ಯ ಸದಸ್ಯರು ಏನಾದರು ಹೇಳಿದ್ದರೆ ಆದಕ್ಕೆ ಉತ್ತರ ಕೊಡುವುದು ; ಈ ರೀತಿ ಮೂರುಬಾಗಗಳಾಗಿ ವಿಂಗಡಣೆ ಮಾಡಿಕೊಂಡು ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ಇಲಾಖೆಯಿಂದ ಎಷ್ಟು ಮಸೂದೆಗಳನ್ನು ಪಾಸ್ ಮಾಡಲಾಗಿದೆ ಮತ್ತು ಎಷ್ಟು ಮಸೂದೆಗಳು ಪಾಸ್ ಮಾಡಬೇಕೆಂದಿದ್ದೇವೆಂಬ ಬಗ್ಗೆ ವಿವರಗಳನ್ನು ಕೊಡುತ್ತೇನೆ. ಈಗಾಗಲೇ ಈ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಪಾಸಾಗಿರತಕ್ಕಂಥ ಮಸೂದೆಗಳೆಂದರೆ :

1. The Mysore Acquisition of land for grant of House Sites Bill.
2. The Mysore Apartment Ownership Bill.
3. The Mysore Urban Water Supply and Drainage Board Bill.
4. The Mysore Slum Areas (Improvement and Clearance) Bill.
5. The Mysore Ownership Flats (Regulation of the Promotion of construction, sale, management and transfer) Bill.

ಈಗ ನಮ್ಮ ಇಲಾಖೆಯಲ್ಲಿ ತಯಾರಾಗಿರತಕ್ಕಂಥ ಮಸೂದೆಗಳು ಯಾವುವು ಎಂದರೆ :

1. Bangalore Development Authority Bill.
2. Extension of Town and Country Planning Bill.
3. Urban Development Board Bill.

ಇವುಗಳ ಜೊತೆಗೆ ಯೂನಿಫಾರಮ್ ಕಾರ್ಪೊರೇಷನ್ ಆಕ್ಟ್ ತರಬೇಕೆಂಬ ಉದ್ದೇಶ ಕೂಡ ಇದೆ. ಈಗ ಇರತಕ್ಕಂಥ ಮೈಸೂರು ಮುನಿಸಿಪಾಲಿಟೀಸ್ ಆಕ್ಟ್ ಏನಿದೆ ಆದನ್ನು ತಿದ್ದುಪಡಿ ಮಾಡಿ

ಯೂನಿಫಾರಮ್ ಆಕ್ಟನ್ನು ತರಬೇಕೆಂಬ ಇಚ್ಛೆ ನಮಗೆ ಇದೆ. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಇಲಾಖೆಯಲ್ಲಿ ಯೂನಿಫಾರಮ್ ಆಡ್ಮಿನಿಸ್ಟ್ರೇಟಿವ್ ಸರ್ವಿಸ್ ರೂಲ್ಸ್ ಎಂದು ಮಾಡಿದ್ದೇವೆ. ಈಗ ಮುಂಬೈ ಕರ್ನಾಟಕ ಏರಿಯಾದಲ್ಲಿ, ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಮತ್ತು ಹಳೆಯ ಮೈಸೂರು ಭಾಗದಲ್ಲಿ ಕೆಲಸ ಮಾಡುತ್ತಿರುವ ನೌಕರರು ಎನಿದ್ದಾರೆ ಅವರುಗಳು ವರ್ಗಾವಣೆ ಇಲ್ಲದೆ ಒಂದೇ ಕಡೆ ಇದ್ದುಕೊಂಡು ಖದೀಮರಾಗಿದ್ದಾರೆ. ಅವರುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡುವುದನ್ನು ಅದರಲ್ಲಿ ಅಳವಡಿಸಿದ್ದೇವೆ. ಮತ್ತು ಈಗ ರೆಕ್ರೂಟ್‌ಮೆಂಟ್ ರೂಲ್ಸನ್ನು ಸಹ ಮಾಡಿದ್ದೇವೆ. ಇದುವರೆಗೆ ಬೇರೆ ಇಲಾಖೆಯ ನೌಕರರು ಈ ಈ ಇಲಾಖೆಗೆ ಬಂದು ಕೆಲಸ ಮಾಡುತ್ತಿದ್ದರು. ಅವರುಗಳು ಇಷ್ಟಬಂದಾಗ ತಮ್ಮ ಇಲಾಖೆಗೆ ವಾಪಸ್ ಹೋಗುತ್ತಿದ್ದರು ಮತ್ತು ಇಷ್ಟಬಂದಾಗ ರಜಾ ಹೋಗುತ್ತಿದ್ದರು. ಇವರನ್ನು ಕಂಟ್ರೋಲ್ ಮಾಡುವುದು ಕಷ್ಟವಿತ್ತು. ಆದಕಾರಣ ರೆಕ್ರೂಟ್‌ಮೆಂಟ್ ರೂಲ್ಸನ್ನು ಜಾರಿಗೆ ತಂದಿದ್ದೇವೆ. ನಾನು ಮಂತ್ರಿಯಾಗಿ ಈ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ, ನಮ್ಮ ಪಕ್ಷದವರು ಚುನಾವಣೆಯಲ್ಲಿ ಕೊಟ್ಟಿರತಕ್ಕಂಥ ಘೋಷಣೆಯ ಪ್ರಕಾರ ಸಮಾಜವಾದಿ ಸಮಾಜವನ್ನು ಸೃಷ್ಟಿ ಮಾಡುವುದಕ್ಕೆ ಏನೇನು ಕಾರ್ಯಕ್ರಮ ಕೈಕೊಂಡಿದ್ದೇನೆ ಮತ್ತು ನಾನು ಹೊರಡಿಸಿರುವ ಆಜ್ಞೆಗಳು ಏನು ಎಂಬುದನ್ನು ಹೇಳುತ್ತೇನೆ. ಕಳೆದ 25 ವರ್ಷಗಳಲ್ಲಿ ಏನೇನು ಕೆಲಸಗಳಾಗಿವೆ, ಏನು ಕೆಲಸಗಳು ಆಗಿಲ್ಲ ಎಂಬ ಬಗ್ಗೆ ಹೇಳುವುದಕ್ಕೆ ಈಗ ಹೋಗುವುದಿಲ್ಲ. ಆದರೆ ಕಳೆದ 25 ವರ್ಷಗಳಲ್ಲಿ ಆಗದಿರುವುದನ್ನು ಸರಿಪಡಿಸುವುದಕ್ಕೆ ಏನೇನು ಮಾಡಲಾಗಿದೆ ಎಂಬ ಬಗ್ಗೆ ವಿವರಗಳನ್ನು ಸೈಕ್ಲೋಸ್ಟೈಲ್ ಮಾಡಿಸಿ ಮಾನ್ಯ ಸದಸ್ಯರುಗಳಿಗೆಲ್ಲಾ ಹಂಚಿಸುತ್ತೇನೆ. ನಾನು ಮಂತ್ರಿಯಾದ ಮೇಲೆ ಹೊರಡಿಸಿರುವ ಮೊದಲನೆಯ ಆಜ್ಞೆಯೆಂದರೆ, ಮುನಿಸಿಪಾಲಿಟಿಗಳಲ್ಲಿ ಕಸ ಗುಡಿಸಲು ಜನರು ಎನಿದ್ದಾರೆ, ಅವರುಗಳಿಗೆಲ್ಲಾ ತುಕೋಳ್ ಪೇ ಕಮೀಷನ್ ಪ್ರಕಾರ ಸಂಬಳ ಕೊಡಬೇಕೆಂದು ಆಜ್ಞೆ ಹೊರಡಿಸಿದ್ದೇನೆ. ತಿಂಗಳಿಗೆ 20-30 ರೂಪಾಯಿಗಳನ್ನು ಕೊಟ್ಟು ಇದುವರೆಗೆ ಕೆಲಸ ಮಾಡಿಸುತ್ತಿದ್ದರು : 10–15 ವರ್ಷಗಳ ಕಾಲ ಕೆಲಸ ಮಾಡಿದ್ದರೂ ಹಂಗಾಮಿಯಾಗಿಯೇ ಇದ್ದರು. ಇಂತಹವರನ್ನೆಲ್ಲಾ ಕಾಯಂಗೊಳಿಸಬೇಕೆಂದು ಹುಕ್ಕುಂ ಮಾಡಿದ್ದೇನೆ. ನಾನು ಅದು ಮಾಡಿದೆ, ಇದು ಮಾಡಿದೆ ಎಂದು ಹೇಳಿಬಿಟ್ಟು ಹೋಗುವ ಮನುಷ್ಯ ಅಲ್ಲ. ಈ ನಾಲ್ಕನೇ ದರ್ಜೆಯ ನೌಕರರು, ಎನಿದ್ದಾರೆ, ಇವರ ಸರ್ವಿಸ್ ಕಂಡಿಷನ್ಸನ್ನು ಉತ್ತಮಪಡಿಸುವುದು ಒಂದು ಆದರೆ, ಇವರುಗಳು ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಮಲವನ್ನು ಕೈಯಿಂದ ಎತ್ತುವುದು, ಮತ್ತು ತಲೆಯ ಮೇಲೆ ಹೊರುವ ಪದ್ಧತಿ ಎನಿವೆ ಅದನ್ನು ಕಾಯಂ ಆಗಿ ಕೊನೆಗಾಣಿಸಬೇಕೆಂಬುದು ನನ್ನ ಇಚ್ಛೆಯಾಗಿದೆ. ಆ ಬಗ್ಗೆ ಕೂಡ ಹುಕ್ಕುಂ ಮಾಡಿದ್ದೇನೆ. 1973ನೇ ಆಗಸ್ಟ್ ತಿಂಗಳೊಳಗೆ ಇದು ಕೊನೆಗಾಣಬೇಕೆಂಬುದು ನನ್ನ ಇಚ್ಛೆ. ಈ ಮಲವನ್ನು ಹೊರುವ ಭಂಗಿಗಳು ಎನಿದ್ದಾರೆ, ಇವರ ಸಲುವಾಗಿ ಕಳೆದ 25 ವರ್ಷಗಳಿಂದ ನಮ್ಮ ಹೃದಯದಿಂದ ಕೆಲಸ ಮಾಡಿಲ್ಲ ಎಂದು ನನ್ನ ಭಾವನೆ. ಈ ಪದ್ಧತಿ ಇರಬಾರದು, ಹೋಗಬೇಕೆಂದು ಮಹಾತ್ಮಾಗಾಂಧೀಜಿಯವರು ಸಹ ಹೇಳಿದ್ದರು ಮತ್ತು ಅದಕ್ಕಾಗಿ ದುಡಿದರು. ಆದಕಾರಣ ಈಗಾಲಾದರೂ ಆ ಬಗ್ಗೆ ಪ್ರಯತ್ನ ಮಾಡೋಣ ಮತ್ತು ಅದನ್ನು ಹೋಗಲಾಡಿಸುವುದರ ಮೂಲಕ ಮಹಾತ್ಮಾಗಾಂಧೀಜಿಯವರಿಗೆ ಕಾಣಿಕೆ ರೂಪದಲ್ಲಿ ಅರ್ಪಿಸೋಣ ಎಂದು ಮನಸ್ಸು ಮಾಡಿದ್ದೇನೆ. ಮೈಸೂರು ರಾಜ್ಯದ ಯಾವ ಯಾವ ಪ್ರದೇಶಗಳಲ್ಲಿ ಅಂಡರ್‌ಗ್ರೌಂಡ್ ಸಿವರೇಜ್ ಕನೆಕ್ಷನ್ ಇದೆ, ಅದಕ್ಕೆ ಕನೆಕ್ಷನ್ ಇಲ್ಲದ ಮನೆಯವರು ಕನೆಕ್ಷನ್ ತೆಗೆದುಕೊಂಡು ಆ ಕೆಲಸ ಮೊದಲು ಮಾಡಬೇಕೆಂದು ಕಟ್ಟಾಜ್ಞೆ ಮಾಡಿದ್ದೇನೆ. ಯಾರು ಕನೆಕ್ಷನ್ ತೆಗೆದುಕೊಳ್ಳದೆ ನಿರ್ಲಕ್ಷದಿಂದ ಇರುತ್ತಾರೋ, ಅಂತಹವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಕೇಸ್ ಹಾಕಬೇಕೆಂದು ಆಜ್ಞೆ ಸಹ ಮಾಡಿದ್ದೇನೆ. ಈ ರೀತಿ ನಾನು ಆಜ್ಞೆ ಮಾಡಿರುವ ಬಗ್ಗೆ ಕೆಲವರು ಅಸಮಾಧಾನ ಪಟ್ಟುಕೊಳ್ಳಬಹುದು, ಏಕೆಂದರೆ ಇದು ಅವರ ಕರ್ಮಫಲ. ಮುಂದೆಯೂ ಮಾಡಿಕೊಂಡು ಹೋಗಲಿ ಎಂದು ಅವರು ಹೇಳಬಹುದು. ಆದರೆ ಈ ಜನರು ತಾವು ಕರ್ಮ ಮಾಡಿರಬೇಕೆಂದು ಹಿಂದಿನಿಂದ ಸಮಾಧಾನಪಟ್ಟುಕೊಂಡು ಏನು ಬಂದಿದ್ದಾರೆ ಅದನ್ನು ಹೋಗಲಾಡಿಸಬೇಕೆಂದು ಮತ್ತು ಈ ಮೈಸೂರು ರಾಜ್ಯದಲ್ಲಿಯೇ ಆ ಪದ್ಧತಿ ಇರಬಾರದೆಂದು, ಅದನ್ನು ಕೊನೆಗಾಣಿಸಬೇಕೆಂದು ನಾನು ನಿಶ್ಚಯಿಸಿದ್ದೇನೆ. ಸಿವರೇಜ್ ಕನೆಕ್ಷನ್ ತೆಗೆದುಕೊಳ್ಳಲು ಸಾಧ್ಯವಿಲ್ಲದ ನಿರ್ಗತಿಕರು ಮತ್ತು ಬಡವರು ಯಾರು ಇದ್ದಾರೆ, ಅಂತಹವರ ಸಣ್ಣ ಸಣ್ಣ ಮನೆಗಳಿಗೆ ಆಯಾ ಮುನಿಸಿಪಾಲಿಟಿಯವರೇ 50 ರೂಪಾಯಿಗಳ ಖರ್ಚಿಗೆ ಮೀರದಂತೆ ಆ ಕೆಲಸ ಮಾಡಿಸಿ ಕೊಡಬೇಕೆಂದು ಆಜ್ಞೆ ಮಾಡಿದ್ದೇನೆ. ಈ ಮೂಲಕ ಎಲ್ಲ ವರ್ಗದ ಜನರಿಗೂ ಈ ಒಂದು ಅನುಕೂಲವನ್ನು ಒದಗಿಸಿಕೊಡಬೇಕೆಂದು ನಾನು ಪ್ರಯತ್ನ ಮಾಡಿದ್ದೇನೆ. ಇಂದು ಎಲ್ಲೆಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ, ಅಂತಹ ಕಡೆಗಳಲ್ಲಿ ವಾಟರ್ ಬೋರನ್ ಸೋಕ್ ಪಿಟ್‌ಗಳನ್ನು ಮಾಡಿಸಬೇಕೆಂದು ಕಡ್ಡಾಯ ಮಾಡಿ

(ಶ್ರೀ ಬಿ. ಬಸವಲಿಂಗಪ್ಪ)

ದ್ದೇನೆ. ಇನ್ನು ಮುಂದೆ ಮನೆಗಳನ್ನು ಕಟ್ಟಿಸಬೇಕೆಂದು ಯಾರು ಅರ್ಜಿ ಹಾಕುತ್ತಾರೋ ಅವರು ಈ ಕೆಲಸಗಳನ್ನು ಮಾಡದಿದ್ದರೆ ಲೈಸೆನ್ಸ್ ಕೊಡಬಾರದೆಂದು ಕಡ್ಡಾಯವಾಗಿ ಆರ್ಡರ್ ಮಾಡಿದ್ದೇನೆ. ಒಟ್ಟಿನಲ್ಲಿ ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಇಂದಿಗೂ ತಲೆಯ ಮೇಲೆ ಮಲವನ್ನು ಹೊರುವ ಪದ್ಧತಿ ಇದೆ ಅದನ್ನು ಕೊನೆಗಾಣಿಸಬೇಕೆಂದು ಕೆಲಸ ಮಾಡುತ್ತಿದ್ದೇನೆ. ಮತ್ತು ಈ ಭಂಗಿಗಳಿಗೆ ಅಗತ್ಯವಾದ ಬಟ್ಟೆಗಳು ಮತ್ತು ಇತರೇ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಎಲ್ಲಾ ಮುನಿಸಿಪಾಲಿಟಿಯವರಿಗೂ ಸರ್ಕಾರದಿಂದ ಹುಕ್ಕುಂ ಮಾಡಿದ್ದೇನೆ. ಗಾಂಧಿ ಶತಮಾನೋತ್ಸವದ ವರ್ಷದಲ್ಲಿ ಈ ಒಂದು ಪದ್ಧತಿಯನ್ನು ಕೊನೆಯದಾಗಿ ಕೊನೆಗಾಣಿಸಬೇಕೆಂಬ ವಿಚಾರದಲ್ಲಿ ದಿಟ್ಟ ಹೆಜ್ಜೆಯನ್ನು ಇಟ್ಟಿರುವುದೇ ಅಲ್ಲದೆ ಆ ವಿಚಾರದಲ್ಲಿ ಸರ್ಕಾರದವರು ಮುಂದೆ ನಡೆಯುತ್ತಾರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ತಮ್ಮೆಲ್ಲರ ಸಹಕಾರ ಇದಕ್ಕೆ ಬೇಕಾಗುತ್ತದೆ. ಬಹಳ ದಿವಸಗಳಿಂದ ಬಂದಿರತಕ್ಕ ಪದ್ಧತಿ ಇದು. ಕೆಲವು ಜನಗಳು ಇಂಥಾ ಕೆಲಸ ಮಾಡುವುದನ್ನು ನೋಡಿ ಹಿಂದೆ ಕರ್ಮ ಮಾಡಿರಬೇಕು ಪಾಪ ಮಾಡಿರಬೇಕು ಎಂದು ಸಮಾಧಾನಪಟ್ಟುಕೊಂಡು ಅದನ್ನು ಮನಸ್ಸಿನಲ್ಲಿಟ್ಟುಕೊಂಡಿರತಕ್ಕ ಜನ ಇದ್ದಾರೆ ಈ ಜನಗಳಲ್ಲಿ ಇದನ್ನು ಕೊನೆಗಾಣಿಸಬೇಕು. ಈ ಕ್ರಮದಿಂದ ಕೆಲವರಿಗೆ ಅಸಮಾಧಾನ ಬೇಡ ಅನಿಸುತ್ತದೆ. ಸೀವರೇಜ್ ಬೋರ್ಡಿನಲ್ಲಿ ನೈಟ್ ಸಾಯಿಲ್ ವ್ಯವಸ್ಥೆಯ ಬಗ್ಗೆ ಮಲ ಗೊಬ್ಬರ ಅಭಿವೃದ್ಧಿ ಸಮಿತಿ ಎಂದು ಒಂದು ಕಮಿಟಿಯನ್ನು ಮಾಡಿದೆ. ಪ್ರತಿಯೊಂದು ಮುನಿಸಿಪಾಲಿಟಿಯಲ್ಲಿಯೂ ಮಲವನ್ನು ಗೊಬ್ಬರವಾಗಿ ಪರಿವರ್ತನೆ ಮಾಡಿ, ಈ ಉತ್ಕೃಷ್ಟವಾಗಿರತಕ್ಕ ಗೊಬ್ಬರವನ್ನು ವ್ಯವಸಾಯಗಾರರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರೂ ಕೂಡ ಒಪ್ಪಿಕೊಂಡಿದ್ದಾರೆ. ಇಂಥಾ ಗೊಬ್ಬರವನ್ನು ಉತ್ಪತ್ತಿ ಮಾಡಿ ರೈತರಿಗೆ ಒದಗಿಸಬೇಕೆಂದು ಮಾಡಿದ್ದೇವೆ. ಮಲವನ್ನು ಗೊಬ್ಬರವನ್ನಾಗಿ ಪರಿವರ್ತನೆ ಮಾಡುವಾಗ ಅಸಹ್ಯ ಮನೋಭಾವನೆ ಇದ್ದರೂ ಕೂಡ ಉತ್ಕೃಷ್ಟವಾದ ಒಂದು ಸಂಪತ್ತನ್ನು ಉತ್ಪಾದನೆ ಮಾಡುತ್ತೇವೆ ಎನ್ನುವ ಭಾವನೆಯಿಂದ ಅದನ್ನು ಪರಿವರ್ತನೆ ಮಾಡಬೇಕು ಎಂದು ಆ ಬಗ್ಗೆ ಒಂದು ಸರ್ಕಾರಿ ಹುಕುಂ ಮಾಡಿದ್ದೇವೆ. ಎಲ್ಲಾ ಮುನಿಸಿಪಾಲಿಟಿಯವರು ಈ ಆದೇಶವನ್ನು ಉಪಯೋಗ ಮಾಡಿಕೊಂಡು ಗೊಬ್ಬರವನ್ನು ತಯಾರು ಮಾಡಬೇಕು ಎಂದು ಹೇಳಿದ್ದೇವೆ. ಅತಿ ಶೀಘ್ರದಲ್ಲೇ ಎಲ್ಲಾ ಮುನಿಸಿಪಾಲಿಟಿಯವರೂ ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದನ್ನು ಕಾರ್ಯಗತ ಮಾಡುವುದಕ್ಕೆ ತೀವ್ರವಾಗಿ ಹೆಜ್ಜೆಯನ್ನು ಇಟ್ಟು ಮುಂದೆ ಹೋಗುತ್ತೇವೆ. ಆ ರೀತಿ ಹೆಜ್ಜೆಯನ್ನಿಟ್ಟು ಮುಂದೆ ಹೋಗುವಾಗ ಕೆಲವು ಜನ ಇದನ್ನು ಏತಕ್ಕೆ ಮಾಡಬೇಕು ಎಂದು ಇರಬಹುದು. ಈ ಒಂದು ದೃಷ್ಟಿಯಿಂದಲೇ ಸುಮಾರು 100 ಚಿಲ್ಲರೆ ಮುನಿಸಿಪಾಲಿಟಿಗಳು ಅಡ್ಮಿನಿಸ್ಟ್ರೇಟರ ಕಂಟ್ರೋಲಿನಲ್ಲಿರುವುದರಿಂದ ನಾವು ಈ ಎಲ್ಲಾ ಕಾರ್ಯಕ್ರಮಗಳನ್ನೂ ಹಾಕಿಕೊಂಡಿದ್ದೇವೆ. ಇದನ್ನು ಎಷ್ಟು ವರ್ಷಗಳಲ್ಲಿ ಸಾಧನೆ ಮಾಡುವುದಕ್ಕೆ ಆದೀತು ಎನ್ನುವ ನನ್ನದು ಒಂದು ಆಶೆ ಇದೆ.

ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಬಿಲ್ ತಮ್ಮ ಮುಂದೆ ಇದೆ. ಈ ಸ್ಲಮ್‌ನಲ್ಲಿ ಖಾಸಗೀ ಜನಗಳ ಜಮೀನು ಇದೆ. ಖಾಸಗಿ ಜನಗಳ ಜಮೀನಿನಲ್ಲಿ ಕೊಳಚೆ ಪ್ರದೇಶಗಳು ಇವೆ. ಕಾರ್ಪೋರೇಷನ್ನಿನ ರೆವಿನ್ಯೂ ಇಲಾಖೆಗೆ ಸೇರಿರತಕ್ಕ ಭೂಮಿಯಲ್ಲಿಯೂ ಕೊಳಚೆ ಪ್ರದೇಶಗಳು ಇವೆ. ಕೊಳಚೆ ನಿರ್ಮೂಲನ ಹಾಗೂ ಕೊಳಚೆ ಪ್ರದೇಶದ ಜನರ ಅಭಿವೃದ್ಧಿ ಕಡೆಗೆ ಸಹ ವಿಶೇಷ ಗಮನ ಕೊಡಬೇಕಾಗಿದೆ, ಈ ಬಗ್ಗೆ ಎರಡು ಯೋಜನೆಗಳು ಇವೆ. ಖಾಸಗಿ ಜಮೀನಿನಲ್ಲಿರತಕ್ಕ ಕೊಳಚೆ ನಿವಾರಣೆಯನ್ನು ನಂತರ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿ, ಎಲ್ಲೆಲ್ಲಿ ನಮ್ಮ ಭೂಮಿಯ ಮೇಲೆ ಎಂದರೆ ಸರ್ಕಾರದ ಭೂಮಿಯ ಮೇಲೆ ಕೊಳಚೆ ಪ್ರದೇಶಗಳು ಇವೆ ಆ ಪ್ರದೇಶಗಳಲ್ಲಿರತಕ್ಕ ಜನಗಳ ಜೀವನ ಮಟ್ಟವನ್ನು ಸುಧಾರಿಸಬೇಕು ಎಂದು ಈ ತರಹ ಎರಡು ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಒಂದು ಸ್ಲಮ್ ಕ್ಲಿಯರೆನ್ಸ್ ಸ್ಕೀಮ್ ಇನ್ನೊಂದು ಸ್ಲಮ್ ಇಂಪ್ರೂವ್‌ಮೆಂಟ್ ಸ್ಕೀಮು, ಈ ತರಹ ಎರಡು ಸ್ಕೀಮುಗಳು ಇವೆ. ಈ ಸ್ಲಮ್, ಇಂಪ್ರೂವ್‌ಮೆಂಟ್ ಸ್ಕೀಮಿಗಾಗಿ ಕೇಂದ್ರ ಸರ್ಕಾರದವರು $1\frac{1}{2}$ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಒಂದೂವರೆ ಕೋಟಿ ರೂಪಾಯಿಗಳಲ್ಲಿ ನಾವು ಈಗ 30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಎಲ್ಲೆಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೋ ಅಲ್ಲೆಲ್ಲಾ ಕೆಲಸಗಳನ್ನು ಮಾಡುತ್ತಿದ್ದಾರೆ. ಕೊಳಚೆ ಪ್ರದೇಶಗಳಲ್ಲಿ ಆಗಿರತಕ್ಕ ಕೆಲಸಗಳನ್ನು ಮಾನ್ಯ ಸದಸ್ಯರು ನೋಡಿದರೆ ಅವರು ತಮ್ಮ ಮೆಚ್ಚಿಗೆಯನ್ನು

ವ್ಯಕ್ತಪಡಿಸುತ್ತಾರೆ ಎಂದು ನಾನು ದೃಢವಾಗಿ ನಂಬಿದ್ದೇನೆ. ಮದ್ರಾಸಿನಲ್ಲಿರತಕ್ಕ ಕೊಳಚೆ ಪ್ರದೇಶಗಳಿಗೂ ನಮ್ಮ ರಾಜ್ಯದಲ್ಲಿರತಕ್ಕ ಕೊಳಚಪ್ರದೇಶಗಳಿಗೂ ಹೋಲಿಕೆ ಮಾಡಿ ನೋಡಿದರೆ ಮದ್ರಾಸಿನಲ್ಲಿರತಕ್ಕ ಕೊಳಚೆ ಪ್ರದೇಶಗಳು ಬಹಳ ಹೀನಾಯ ಸ್ಥಿತಿಯಲ್ಲಿವೆ. ನಮ್ಮಲ್ಲಿರತಕ್ಕ ಕೊಳಚೆ ಪ್ರದೇಶಗಳನ್ನು ಇಂಪ್ರೂವ್ ಮಾಡತಕ್ಕದ್ದು, ಇರಾಡಿಕೇಟ್ ಮಾಡತಕ್ಕದ್ದು ಬಹಳ ಸುಲಭ. ಈ ಕೊಳಚೆ ಪ್ರದೇಶದ ಇಂಪ್ರೂವ್‌ಮೆಂಟ್ ಸ್ಕೀಮು ಏನಿದೆ ಇದನ್ನು ಟ್ರಸ್ಟ್‌ಬೋರ್ಡ್ ಮುಖಾಂತರ ಮತ್ತು ಕಾರ್ಪೋರೇಷನ್ ಮುಖಾಂತರ ಮಾಡುವುದಕ್ಕೆ ತಮ್ಮೆಲ್ಲರ ಸಹಕಾರವೂ ಬೇಕಾಗಿದೆ. ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಹಿಂದಿನಿಂದ ಕಾರ್ಪೋರೇಷನ್ನಿನವರು ಮತ್ತು ಟ್ರಸ್ಟ್ ಬೋರ್ಡಿನವರು ಕೆಲಸ ಮಾಡುತ್ತಿದ್ದಾರೆ. ನಾವು ಈ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ಕೆಲಸವನ್ನು ಹಲವಾರು ಪ್ರದೇಶಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಇದನ್ನು ಪ್ರಾರಂಭ ಮಾಡಿದಾಗ ತಮಗೆ ಇದರ ಕಷ್ಟವನ್ನು ಹೇಳದಿದ್ದರೆ ನೀವು ಪ್ರಯತ್ನ ಮಾಡಿಲ್ಲ ಎಂದು ಹೇಳಬಹುದು. ಮದ್ರಾಸಿನಲ್ಲಿ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದಕ್ಕೆ ಯಾವರೀತಿ ದೇಶಭಕ್ತಿಯಿಂದ, ಯಾವ ನಿಷ್ಠೆಯಿಂದ ಕೆಲಸ ಮಾಡಿದರೂ ಅಂಥಾ ನಿಷ್ಠೆ ನಮ್ಮ ದೇಶದಲ್ಲಿರತಕ್ಕ ಜನಗಳಲ್ಲಿ ಬಹಳ ಕಡಿಮೆ. ನಮ್ಮ ದೇಶದ ಜನಗಳು ಈ ಪ್ರಯತ್ನವನ್ನು ಮಾಡಿಲ್ಲ, ದೇಶಾಭಿಮಾನವಿಲ್ಲ, ನಿಷ್ಠೆಯಿಲ್ಲ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ದೇಶಾಭಿಮಾನದಿಂದ ನಿಷ್ಠೆಯಿಂದ ಕೊಳಚೆ ಪ್ರದೇಶದಲ್ಲಿರತಕ ನಿರ್ಭಾಗ್ಯ ಜನರ ಸೇವೆ ಮಾಡತಕ್ಕ ಮನಸ್ಸು ನಮ್ಮ ದೇಶದ ಜನಗಳಿಗೆ ಇನ್ನೂ ಪ್ರಾರಂಭವಾಗಿಲ್ಲ. ಆದಷ್ಟು ಜಾಗ್ರತೆ ಈ ಒಂದು ಗುರಿಯನ್ನು ಸಾಧನೆ ಮಾಡಬೇಕು ಎಂದು ತೀವ್ರವಾದ ಪ್ರಯತ್ನವನ್ನು ಮಾಡಿದೆ. ಅದು ಇನ್ನೂ ಸಾಧನೆಯಾಗಿಲ್ಲ. ಈಗ ಬರತಕ್ಕ ಫೈನಾನ್ಸಿಯಲ್ ಇಯರ್ ಏನಿದೆ ಅದರ ಕೊನೆಯೊಳಗೆ ಇದನ್ನು ಸಾಧನೆ ಮಾಡುವುದಕ್ಕೆ ಆಗುತ್ತದೆ ಎಂದು ನಾನು ನಂಬಿದ್ದೇನೆ. ಕೆಲಸ ಪ್ರಾರಂಭವಾಗಿದೆ. ಏತಕ್ಕೋಸ್ಕರ ಅದನ್ನು ಮಾಡಲಿಲ್ಲ, ಎಷ್ಟು ಮಾಡಬೇಕಾಗಿತ್ತೋ ಅಷ್ಟು ಮಾಡಿಲ್ಲ ಎಂದು ಮಾನ್ಯ ಸದಸ್ಯರು ಟೀಕೆ ಮಾಡಿದರೂ ಕೂಡ, ನಾನು ಮಾನ್ಯ ಸದಸ್ಯರ ಟೀಕೆಗೆ ತಲೆಬಾಗಿದರೂ ಕೂಡ ನಾನು ನನ್ನ ಕಷ್ಟವನ್ನು ಹೇಳಿದ್ದೇನೆ. ನನ್ನ ಕಷ್ಟವನ್ನು ಮಾನ್ಯ ಸದಸ್ಯರು ಸ್ವಲ್ಪ ಮನಸ್ಸಿನಲ್ಲಿಟ್ಟುಕೊಂಡರೆ ಜಾಸ್ತಿ ಟೀಕೆ ಮಾಡುವುದಿಲ್ಲ ಎಂದು ನನ್ನ ಆಶೆ.

(ಈ ಸಂದರ್ಭದಲ್ಲಿ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಬೆಂಗಳೂರು ಸೇರಿಕೊಂಡು ಯಾವ ಪಟ್ಟಣಗಳಲ್ಲಿ 8 ಲಕ್ಷ ಜನಸಂಖ್ಯೆ ಇರುತ್ತದೆ ಆ ಪಟ್ಟಣಗಳಿಗೆ ಈ ಯೋಜನೆಯಲ್ಲಿ ಹಣ ಸಹಾಯ ಸಿಕ್ಕುತ್ತದೆ. ಅದಕ್ಕಾಗಿ ನಾವು ಕೇಂದ್ರ ಸರ್ಕಾರದವರಿಗೆ ಹೇಳಿದ್ದೇವೆ ಎಲ್ಲೆಲ್ಲಿ ಒಂದು ಲಕ್ಷ ಪ್ರಜಾಸಂಖ್ಯೆ ಇದೆ ಅಂಥಾ ಪಟ್ಟಣದಲ್ಲಿ ಇಂಥಾ ಯೋಜನೆ ಲಾಗು ಆಗಬೇಕು ಎಂದು ಕೇಳಿಕೊಂಡಿದ್ದೇವೆ. ಇದು ಶೀಘ್ರವಾಗಿ ಆಗಬಹುದು ಎಂದು ಅನಿಸುತ್ತದೆ. ಕೇಂದ್ರ ಸರ್ಕಾರದವರೂ ಸಹ 8 ಲಕ್ಷ ಪ್ರಜಾಸಂಖ್ಯೆ ಇರುವುದನ್ನು ಕಡಿಮೆ ಮಾಡಬೇಕೆಂದು ಮನಸ್ಸು ಮಾಡಿದ್ದಾರೆ ಎಂದು ನನ್ನ ಭಾವನೆ. ಆ ಬಗ್ಗೆ ಈ ವರ್ಷವೇ ತೀರ್ಮಾನ ತೆಗೆದುಕೊಳ್ಳಬಹುದು ಎನ್ನುವ ಭರವಸೆ ಇದೆ.

ಪಟ್ಟಣಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ಬಡವರಿಗೆ ಸೈಟುಗಳನ್ನು ಹಂಚುವ ದೃಷ್ಟಿಯಿಂದ ಹಲವಾರು ಯೋಜನೆಗಳನ್ನು ನಾವು ತಂದಿದ್ದೇವೆ. ಇದು 100ಕ್ಕೆ 100 ಕಾರ್ಯಗತವಾಗಿದೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಹೊಸದಾಗಿ ಬಡಾವಣೆಗಳನ್ನು ಮಾಡಿ ಎಲ್ಲಾ ವರ್ಗದವರಿಗೂ ಸೈಟುಗಳನ್ನು ಹಂಚತಕ್ಕ ಭಾವನೆಯನ್ನು ಇಟ್ಟುಕೊಂಡಿದ್ದೇವೆ.

ಮುನಿಸಿಪಾಲಿಟಿಗಳಿಗೆ ಇಂಪ್ರೂವ್‌ಮೆಂಟ್ ಸ್ಕೀಮುಗಳಿಗೆ ವರ್ಷದ ಕೊನೆಯಲ್ಲಿ ಮಾರ್ಚಿ ತಿಂಗಳಿನಲ್ಲಿ ಡೆವಲಪ್‌ಮೆಂಟ್ ಗ್ರಾಂಟನ್ನು ಕೊಡುತ್ತಿದ್ದರು. ಎಂದರೆ ಮಾರ್ಚಿ ತಿಂಗಳು 8-10 ದಿವಸ ಇದ್ದಹಾಗೆ ಗ್ರಾಂಟನ್ನು ಕೊಡುತ್ತಿದ್ದರು. ಆದ್ದರಿಂದ ಆ ಹಣ ದುರುಪಯೋಗವಾಗುವುದಕ್ಕೆ ಅವಕಾಶವಾಗುತ್ತಿತ್ತು. ಈಗ ಅದನ್ನು ಬದಲಾವಣೆ ಮಾಡಿ ಈ ಹಣವನ್ನು 8-10 ತಿಂಗಳು ಮುಂಚೆ ಕೊಡಲಾಗುತ್ತದೆ. ಮುನಿಸಿಪಾಲಿಟಿಗಳು ಇದನ್ನು ಬೀಜ ಬಂಡವಾಳವಾಗಿ ಹೊಂದಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು ಎನ್ನುವ ದೃಷ್ಟಿಯಿಂದ ಒಂದು ಹುಕ್ಕುಂ ಮಾಡಿದ್ದೇವೆ. ಇದರಿಂದ ಪ್ರತಿಯೊಂದು ಮುನಿಸಿಪಾಲಿಟಿಗಳಿಗೂ 10 ಸಾವಿರ ರೂಪಾಯಿಗಳು ಸಿಕ್ಕುತ್ತವೆ. ಆದ್ದರಿಂದ ಅವರು ಈ ಹಣವನ್ನು ಕೈಗೆ ತೆಗೆದುಕೊಂಡು ಹೆಚ್ಚುಹೆಚ್ಚಿನ ನಿವೇಶನಗಳನ್ನು ಮಾಡಿ ಅವುಗಳನ್ನು ಬಡವರಿಗೆ ಹಂಚುವುದಕ್ಕೆ ನಾವು ನಿರ್ದೇಶನ ಕೊಟ್ಟಿದ್ದೇವೆ. ಇಂತಿಂಥವರಿಗೆ ಬಡವರಿಗೆ ಹೀಗೆ ಕೊಡಬೇಕು ಎಂದು ಹೇಳಿದ್ದೇವೆ. ಇದರಿಂದ ಮಾನ್ಯ ಸದಸ್ಯರಾದ ಶ್ರೀಮಾನ್

(ಶ್ರೀ ಬಿ. ಬಸವಲಿಂಗಪ್ಪ)

ಪುಟ್ಟಸ್ವಾಮಿಯವರಿಗೆ ಮತ್ತು ಇನ್ನೂ ಕೆಲವು ಸದಸ್ಯರಿಗೆ ಇದು ಹೊಸದಾಗಿರುವುದರಿಂದ ಇದರಿಂದ ಅನುಕೂಲವಾಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಇದೆ. ಸಮಾಜವಾದದ ತತ್ವದ ಪ್ರಕಾರ ಬಡವರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಎನ್ನುವವರಲ್ಲಿ ನಾನೂ ಒಬ್ಬ. ಇದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ. ಈಗ ಸಾಹುಕಾರರಿಂದ ಅಭಿವೃದ್ಧಿ ಕಾರ್ಯಗಳು ಪ್ರಾರಂಭವಾಗುತ್ತದೆ. ಮುನಿಸಿಪಾಲಿಟಿಗಳಲ್ಲಿ ಎಲ್ಲಾ ಬಡಾವಣೆಗಳ ಅಭಿವೃದ್ಧಿ ಕಾರ್ಯ ಹಿಂದಿನಿಂದಲೂ ಎಲ್ಲಿಂದ ಪ್ರಾರಂಭವಾಗುತ್ತಿತ್ತೆಂದರೆ, ಯಾರು ಅದರ ಪ್ರೆಸಿಡೆಂಟರು ಇರುತ್ತಾರೆ, ಅವರ ಮನೆಯ ಮುಂದೆ ಮತ್ತು ಅವರ ನೆಂಟರ ಮತ್ತು ಸಂಬಂಧಿಕರ ಮನೆಯ ಮುಂದೆ ಪ್ರಾರಂಭವಾಗುತ್ತಿತ್ತು. 25 ವರ್ಷಗಳಿಂದಲೂ ಈ ರೀತಿ ನಡೆಯುತ್ತಿತ್ತು. ಆದರೆ ನಾವು ವಿಶೇಷವಾದ ಒಂದು ಹುಕುಂ ಮಾಡಿ ಇಂಥ ಮುನಿಸಿಪಾಲಿಟಿ ಏರಿಯಾದಲ್ಲಿ ಎಲ್ಲಿ ಬಡವರು ಇರುತ್ತಾರೆ, ಎಲ್ಲಿ ಹರಿಜನರು ಇದ್ದಾರೆ, ಅವರು ವಾಸ ಮಾಡತಕ್ಕ ಜಾಗದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಸಮಾಜವಾದವನ್ನು ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ನಾವು ಸಾರ್ವಜನಿಕ ಜೀವನದಲ್ಲಿ ಎಲ್ಲಾ ಹಂತಗಳಲ್ಲಿಯೂ ಪ್ರಯೋಗ ಮಾಡಬೇಕು. ಮುನಿಸಿಪಾಲಿಟಿಗಳಲ್ಲಿ ಎಲ್ಲಿ ಬಡವರು ಇರುತ್ತಾರೆ, ಎಲ್ಲಿ ದಿಕ್ಕು ಇಲ್ಲದ ಜನರು ಇದ್ದಾರೆ ಅಲ್ಲಿ ಸಮಾಜವಾದದ ಕಾರ್ಯಕ್ರಮ ಪ್ರಾರಂಭವಾಗಬೇಕಾಗಿದೆ. ಈ ಇಲಾಖೆಯು ಬಡವರು ಸುಖವಾಗಿ ಇರುವಂತೆ ಪ್ರಯತ್ನ ಮಾಡಬೇಕು. ಸ್ವಾತಂತ್ರ್ಯ ಬಂದ ಮೇಲೆ ಅದರ ಹಣ್ಣು ಏನಿದೆ, ಅದು ಇಂಥ ಬಡ ಜನರಿಗೆ ಸಿಗುವಂತೆ ಮಾಡಬೇಕೆಂದು ನಾವು ಹುಕುಂ ಮಾಡಿದ್ದೇವೆ. ಮಾನ್ಯ ಸದಸ್ಯರು ಇದನ್ನು ನೂರಕ್ಕೆ ನೂರು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ.

11-00 A.M.

ಆ ನಂತರ ಈ ಟ್ರಸ್ಟ್ ಬೋರ್ಡು ಏನಿದೆ, ಅಲ್ಲಿಯೂ ಇದೇ ರೀತಿಯ ಕಾರ್ಯಕ್ರಮ ಹಾಕಿಕೊಂಡಿರುತ್ತಾರೆ. ಮಾನ್ಯ ದೇವೇಗೌಡರು ಒಂದು ವಿಚಾರ ಹೇಳಿದ್ದಾರೆ. ನನ್ನ ತಿಳಿವಳಿಕೆ ಮಟ್ಟಿಗೆ ಹೇಳುವುದಾದರೆ, ಇದುವರೆಗೂ ನಿವೇಶನಗಳನ್ನು ಹಂಚಿಕೊಂಡು ಕೆಲವು ಬಡಾವಣೆಗಳನ್ನು ಅಲ್ಲಲ್ಲಿ ಮಾಡಿದ್ದಾರೆ. ಇಲ್ಲಿ ಹೇಗೆ ನಿವೇಶನಗಳನ್ನು ಹಂಚಿದ್ದಾರೆ, ಯಾರಿಗೆಲ್ಲಾ ಹಂಚಿದ್ದಾರೆ ಎಂಬುದು ನಮ್ಮ ಜಯನಗರ ಬಡಾವಣೆಯನ್ನು ನೋಡಿದರೆ ಗೊತ್ತಾಗುತ್ತದೆ. ಸಮಾಜವಾದವನ್ನು ಜಾರಿಗೆ ತರಬೇಕೆಂದು ಕಾಂಗ್ರೆಸ್ ಪಕ್ಷದ ಉದ್ದೇಶವಾದರೂ ಅಧಿಕಾರದಲ್ಲಿರತಕ್ಕಂಥವರು ಯಾವ ರೀತಿ ಅದನ್ನು ಉಪಯೋಗಿಸಿದ್ದಾರೆಂಬುದನ್ನು ನಾವು ಜಯನಗರವನ್ನು ನೋಡಿ ಹೇಳಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಮಂತ್ರಿಯವರು ಜಯನಗರದ ವಿಚಾರ ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಯವರು ಜಯನಗರದ ಬಡಾವಣೆ ಹೇಗೆ ಆಯಿತು ಅಲ್ಲಿ ಸೈಟ್ ಹೇಗೆ ಹಂಚಿಕೆಯಾಯಿತು ಎಂಬುದರ ಬಗ್ಗೆ ಅಧ್ಯಯನ ಮಾಡಿದ್ದರೆ ಈ ರೀತಿಯ ಉತ್ತರ ಹೇಳುತ್ತಿರಲಿಲ್ಲ. 1947-48 ರಲ್ಲಿ ಅಲ್ಲಿ ಸೈಟ್ ಹಂಚಿಕೆಯಾಯಿತು ಎಂದು ಕಾಣುತ್ತದೆ. ಆಗ ಅಲ್ಲಿ ಸೈಟೇ ತೆಗೆದುಕೊಳ್ಳುವವರು ಇರಲಿಲ್ಲ. ಆಗ ಯಾರು ಕೇಳಿದರೂ ಆರ್ಥಿಕ ಕಾರಣಗಳಿಂದಾಗಿ ಕೆಲವರು ತೆಗೆದುಕೊಳ್ಳುವವರೇ ಇರಲಿಲ್ಲ. ಎಷ್ಟೋ ಜನರು ಅಲ್ಲಿ ಹೋಗಲಿಕ್ಕೆ ಸಹ ಬಯಸಿರಲಿಲ್ಲ. ಅಲ್ಲದೆ ಬೇರೆ ಯಾವ ವರ್ಗದ ಜನರೂ ಬರಬಾರದು ಎಂದು ಬಂದ ಅರ್ಜಿಗಳನ್ನು ತಳ್ಳಿ ಹಾಕಿಲ್ಲ. 1948ರಲ್ಲಿ ನಾನು ಅಲ್ಲಿ ಹೋಗಿ ನೋಡಿದ್ದೇನೆ. ಸೈಟುಗಳನ್ನು ಅಲ್ಲಿ ಉತ್ತು ಅದರಲ್ಲಿ ಜೋಳ ಬೆಳೆಸುತ್ತಿದ್ದರು. ಆದ್ದರಿಂದ ಅವರಿಗೆ ಹೃದಯವಿರಲಿಲ್ಲ; ಆದ್ದರಿಂದ ಸೈಟುಗಳನ್ನು ಬೇರೆ ವರ್ಗದವರಿಗೆ ಕೊಡಲಿಲ್ಲವೆಂದು ಹೇಳುವುದು ಸರಿಯಲ್ಲ. ಅದಕ್ಕೆ ಆರ್ಥಿಕ ಕಾರಣವೇ ಮೂಲ ಕಾರಣ.

ಶ್ರೀ ಕೆ. ಎಂ. ನಾಗಣ್ಣ.—ಅಲ್ಲಿ ಮೈಸೂರು ಬ್ಯಾಂಕಿನವರು ದೊಡ್ಡ ಮನಸ್ಸು ಮಾಡಿ ಅವರ ಅಧಿಕಾರಿಗಳಿಗೆ ಮನೆಗಳನ್ನು ಮಾಡಿ ಕೊಡದಿದ್ದರೆ ಅಲ್ಲಿ ಯಾರೂ ಹೋಗುತ್ತಿರಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅರ್ಜಿ ಯಾರ್ಯಾರು ಹಾಕಿದ್ದಾರೆ, ಯಾವ್ಯಾವ ಜಾತಿಯವರು ಹಾಕಿದ್ದಾರೆ, ಎಂಬುದರ ವಿವರಣೆ ಕೊಟ್ಟರೆ ಅದು ಗೊತ್ತಾಗುತ್ತದೆ. ಹೌಸಿಂಗ್ ಬೋರ್ಡಿನವರು 10 ಸಾವಿರ ರೂಪಾಯಿ ಕೊಟ್ಟರೆ ಮನೆ ಕೊಡುತ್ತಾರೆ. Certain rul s have been framed for the allotment of sites and houses. If any Chairman or the Board has violated the rules in alloting a house or site,

that is a different aspect. ಆದ್ದರಿಂದ ಅದರ ಬಗ್ಗೆ ತಾವು ಡೈವರ್ಟ್ ಮಾಡ ಬೇಕಾಗಿಲ್ಲ. ಹಿಂದೆ ಚನ್ನಯ್ಯನವರು ಸಹ ಟ್ರಸ್ಟ್ ಬೋರ್ಡಿನ ಚ್ಯಾರ್‌ಮೇನ್ ಆಗಿದ್ದರು. ಅರ್ಜಿ ಯಾರಾದರೂ ಹಾಕಿ ಅದನ್ನು ತಿರಸ್ಕರಿಸಿದರೆ, ಅದು ತಪ್ಪಾಗುತ್ತದೆ.ಆದ್ದರಿಂದ ಇದರ ಬಗ್ಗೆ ವಿವರ ಕೊಡುವ ಮೊದಲು ಒಂದು ಕಂಕ್ಲೂಶನಿಗೆ ಜಂಪ್ ಮಾಡುವುದು ಬೇಡ. I agree with you because you are stating it sincerely. If Jayanagar 9th Block out of 28 houses, 4 houses have been allotted to Christians and 3 houses to Muslims. Till the facts and figures are furnished why should you unnecessarily jump only on inference ? 9ನೇ ಬ್ಲಾಕಿನಲ್ಲಿ 23 ಮನೆಗಳಲ್ಲಿ 4 ಜನ ಕ್ರಿಶ್ಚಿಯನ್ಸ್‌ಗೆ, 3 ಮಹಮ್ಮಡನ್ಸಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ಲೋ ಇನ್‌ಕಂ ಗ್ರೂಪಿನಲ್ಲಿ ಯಾವ್ಯಾವ ಜಾತಿಯವರಿಗೆ, ಎಷ್ಟೆಷ್ಟು ಅರ್ಜಿಗಳನ್ನು ಹಾಕಿ, ಎಷ್ಟು ಜನರಿಗೆ ಕೊಟ್ಟಿದ್ದಾರೆಂದು ಹೇಳಿದರೆ ಗೊತ್ತಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಪುಟ್ಟಸ್ವಾಮಿಯವರು ಹೇಳಿದ ಮೇಲೆ ಅದಕ್ಕೆ ಏನಾದರು ಹೇಳಲೇಬೇಕಾಗುತ್ತದೆ. ಮಾನ್ಯ ನಾಗಣ್ಣನವರು ಸಹ ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಈ ಸಂಪ್ರದಾಯ ಏನಿದೆ, ಅದು ನಾವು ಒಳ್ಳೆಯ ಸ್ಥಿತಿಯಲ್ಲಿರತಕ್ಕಂತಹ ಜನ ಹೇಳತಕ್ಕಂತಹ ಸಂಪ್ರದಾಯ. ಇರಲಿ, ಸುಖವಾಗಿರುವ ಜನ ಸುಖವಾಗಿ ಇರಲಿ; ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಯಾರು ತಿಳುವಳಿಕೆ ಇಲ್ಲದ ಜನ ಇದ್ದಾರೆ, ಅವರ ಬಗ್ಗೆ ನಾವು ಚಿಂತೆ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನೀವು ತಪ್ಪು ಭಾವನೆ ಮಾಡಿಕೊಂಡಿದ್ದೀರಿ. ಈಗ ಪ್ಯಾಲೇಸ್ ಆರ್ಚರ್ಡ್‌ನಲ್ಲಿ ಸೈಟುಗಳನ್ನು ಹರಿಜನರು ಕೊಂಡುಕೊಳ್ಳುವುದಕ್ಕಾಗುತ್ತದೆಯೇ ? I do not dispute your sincerity, If one is economically sound and who is capable of going in for a site, even he is a Harijan he can be allotsed a site. A person who is capable of going in for a site in Palace Orchard, even if he is a Harijan you can allot a site. ಅವನ ಆರ್ಥಿಕ ಶಕ್ತಿ ಅಷ್ಟು ಇಲ್ಲ. ಮಾನ್ಯ ಬಸವಲಿಂಗಪ್ಪನವರಾಗಲಿ ಅಥವಾ ಪ್ರಭಾಕರ್‌ರವರಾಗಲಿ ಅಲ್ಲಿ ಸೈಟನ್ನು ತೆಗೆದುಕೊಳ್ಳಬಹುದು. ಆದರೆ ಒಬ್ಬ ಬಡ ಮನುಷ್ಯ ತೆಗೆದುಕೊಳ್ಳುವುದಕ್ಕಾಗುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಹಿಂದೆ ಯಾರೋ ಮಾಡಿದ್ದಾರೆ, ಅದು ತಪ್ಪು ಎಂದು ನಾನು ಹೇಳುವುದಿಲ್ಲ. ಮೊನ್ನೆ ನಾನು ಕುಂದಾಪುರಕ್ಕೆ ಹೋಗಿದ್ದೆ. ಅಲ್ಲಿ ಹರಿಜನರು ಗುಲಾಮರಾಗಿದ್ದಾರೆ. ಅವರು ಅರ್ಜಿ ಕೇಳಿದರೂ ಕೂಡ ಕೊಡುವುದಿಲ್ಲ. ಅಂದರೆ ಅವರು ಬರುವುದಿಲ್ಲ, ಅಜ್ಞಾನಿಗಳು, ಜ್ಞಾನಿಗಳಲ್ಲ, ಲೌಕಿಕ ಜ್ಞಾನಿಗಳಲ್ಲ; ಆದ್ದರಿಂದ ಅದನ್ನು ಬಿಡಬೇಕಾದ ಪ್ರಶ್ನೆ ಬರುತ್ತದೆ. ಸಮಾಜವಾದೀ ಸಮಾಜಕಾರ್ಯಕರ್ತರು ಅಧಿಕಾರಿಗಳಿಗೆ ಅರ್ಜಿಗಳನ್ನು ತೆಗೆದುಕೊಂಡು ಹೋಗಿ ಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳ ನಿವೇಶನವನ್ನು ಹಂಚಿದ್ದೇವೆ. ಈಗ 3 ಲಕ್ಷದ 25 ಸಾವಿರ ಸೈಟುಗಳನ್ನು ಸಿದ್ಧಮಾಡಿದ್ದೇವೆ. ಅದರಲ್ಲಿ 2 ಲಕ್ಷದ 35 ಸಾವಿರ ಸೈಟುಗಳನ್ನು ಇವತ್ತು ಹಂಚಿದ್ದೇವೆ. ಇದು ಒಂದು ದೊಡ್ಡ ಸಾಧನೆ. ಹಿಂದೆ ಎಲ್ಲಿ ನಿವೇಶನಗಳನ್ನು ಮಾಡಿದ್ದರೊ, ಸರ್ಕಾರದ ಜಮೀನುಗಳು ಎಲ್ಲೆಲ್ಲಿತ್ತೋ ಅಲ್ಲಲ್ಲಿ 25 ವರ್ಷಗಳಿಂದಲೂ ಆ ಜಮೀನುಗಳು ಇದ್ದೇ ಇತ್ತು.

ಶ್ರೀ ಎಚ್. ಡಿ. ದೇವೇಗೌಡ.—25 ವರ್ಷಗಳಿಂದ ಎಷ್ಟು ಜಮೀನುಗಳನ್ನು ಹಂಚಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಆ ಜಮೀನುಗಳು ಈ ಸರ್ಕಾರದಲ್ಲಿ ಇದ್ದೇ ಇತ್ತು. ದೇಶಭಕ್ತಿ ಇದ್ದಂಥ ಜನಗಳಿಗೆ ಏನಾದರೂ ಈ ಗಮನ ಬಂದಿದ್ದರೆ ನಿಜವಾಗಿಯೂ ಅವನ್ನು ನಿವೇಶನಗಳನ್ನಾಗಿ ಮಾಡಿ ಹಂಚುತ್ತಿದ್ದರು. ಆದರೆ ಅವರ ಏಕೆ ಮಾಡಲಿಲ್ಲವೆಂಬ ಬಗ್ಗೆ ನಾನು ಏನೂ ಹೇಳುವುದಿಲ್ಲ. ಅವರಿಗೆ ಅಷ್ಟಾಗಿ ಹೃದಯ ಪರಿವರ್ತನೆಯಾಗಿರಲಿಲ್ಲವೆಂದು ನನಗನ್ನಿಸುತ್ತದೆ. ಆ ರೀತಿಯಾಗಿದ್ದರೂ ಕಾರ್ಯಗತಮಾಡಲಿಕ್ಕೆ ಆಗಲಿಲ್ಲ. ಆದರೆ ನಾವು ಅದನ್ನು ಈಗ ಸಾಧನೆ ಮಾಡಿದ್ದೇವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಆದರೆ ಇದನ್ನು ಮಾಡುವಾಗ ನಾವು ಯಾವ ಒಂದು ಜಾತಿ, ಜನಗಳ ಹುಟ್ಟು, ಮುಂತಾದ ವಿಷಯಗಳ ಬಗ್ಗೆ ಯಾವ ತಾರತಮ್ಯವನ್ನೂ

(ಶ್ರೀ ಬಿ. ಬಸವಲಿಂಗಪ್ಪ)

ಇಟ್ಟುಕೊಂಡಿಲ್ಲ. ಯಾರ್ಯಾರು ನಿರ್ಗತಿಕರಾಗಿದ್ದಾರೋ ಅಂತಹವರಲ್ಲಿ ಪ್ರತಿಯೊಬ್ಬರಿಗೂ ಕೊಡುವುದೇ ನಮ್ಮ ತತ್ವ. ಆ ಪ್ರಕಾರವಾಗಿ ಈಗ 2 ಲಕ್ಷದ 35 ಸಾವಿರ ಸೈಟುಗಳನ್ನು ಹಂಚಿದ್ದೇವೆ. ಅದರಲ್ಲಿ 6 ಸಾವಿರ ಸೈಟುಗಳನ್ನು ಹರಿಜನರಿಗೆ ಕೊಟ್ಟಿದ್ದೇವೆ. ಇಂತಹವರಿಗೇ ಕೊಡಬೇಕೆಂಬ ನಿರ್ದೇಶನವೇನೂ ಇಲ್ಲ. ಉಳಿದವರೆಲ್ಲರಿಗೂ ಕೊಟ್ಟಿದ್ದೇವೆ. ಇದರಲ್ಲಿ ಮಾತ್ರ ನಮಗೆ ತಾರತಮ್ಯ ಭಾವನೆ ಇರಕೂಡದು. ಎಲ್ಲರ ಏಳಿಗೆಯಾಗಬೇಕೆಂಬುದೇ ಈ ಸರ್ಕಾರದ ಮುಖ್ಯ ಗುರಿ. ಇವತ್ತು ಆದಿಲ್ಲದೆ ಹಾಗೆಯೇ ಬಿಟ್ಟರೆ ಸಮಾಜವಾದ, ಸಮಾಜದೃಷ್ಟಿ ಕೇವಲ ಶಂಕೆಯಾಗುತ್ತದೆ. ಅದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೂಡ ಏನೇನು ಸೈಟುಗಳನ್ನು ಕೊಟ್ಟಿದ್ದೇವೋ ಅಲ್ಲಿ ಮನೆಗಳನ್ನೂ ಸಹ ಕಟ್ಟಿಕೊಡಬೇಕು. ಇನ್ನೂ 25 ಸಾವಿರ ಸೈಟುಗಳನ್ನು ಕೊಡಬೇಕೆಂದು ಪ್ರಯತ್ನಮಾಡಿದ್ದೇವೆ. ಇದೇ ವರ್ಷ 50 ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರ ಆದ್ಯತೆ ಕೊಟ್ಟು, ಅದರ ಬಗ್ಗೆ ಸರ್ಕಾರಕ್ಕೆ ಪೂರ್ಣ ಭರವಸೆಯೂ ಇದೆ. ಇನ್ನು ಐದು ವರ್ಷಗಳಲ್ಲಿ ಯಾರಾರಿಗೆ ತಲೆಯಮೇಲೆ ನೆರಳು ಇಲ್ಲವೋ ಅಂತಹವರಿಗೆಲ್ಲ ಮನೆಗಳನ್ನು ಕಟ್ಟಿಕೊಡುವ ವ್ಯವಸ್ಥೆಯನ್ನು ಮಾಡಿ ಜನಗಳಿಗೆ ತೋರಿಸುತ್ತೇವೆ. ಇದು ನನ್ನ ದೃಢವಾದ ಸಂಕಲ್ಪ. ಅದಕ್ಕಾಗಿ ತಾವೆಲ್ಲರೂ ಬೆಂಬಲಕೊಡಬೇಕು. ನಾನು ಈ ಕೆಲಸ ಮಾಡದೇ ಹೋದರೆ, ಅಗ ನೀವು ಏನು ಹೇಳುತ್ತೀರೋ ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ನಾನೇನು ಇಲ್ಲಿ ಇರಲೇ ಬೇಕೆಂದೇನೂ ಇಲ್ಲ. ಅದು ಹೇಗಾದರೂ ಆಗಲಿ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಅ ರೀತಿಯಾಗಿ ಮಾಡಿ. ನಾವು ಮಾನ್ಯ ಶ್ರೀ ಡಿ. ದೇವರಾಜ್ ಅರಸ್ ಅವರಿಗೆ ಹೇಳುತ್ತೇವೆ. ಚಾಮರಸರು ಪ್ರಭುಲಿಂಗಲೀಲೆಯನ್ನು ಬರೆಸಿದರಂತೆ, ಬಸವಲಿಂಗಲೀಲೆಯನ್ನು ಬರೆಸಿ ಎಂದು ಮಾನ್ಯ ಶ್ರೀ ದೇವರಾಜ್ ಅರಸ್ ಅವರಿಗೆ ಹೇಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಏನು ಟೀಕೆಮಾಡಿದರೂ ಪರವಾ ಇಲ್ಲ; ವೈಯುಕ್ತಿಕವಾಗಿ ನನ್ನ ಲೀಲೆ ಬರೆಯಲಿ. ಅವೇಲೆ ನಿಮ್ಮ ಲೀಲೆಯೂ ಸಹ ಬರೆಯಲಿ. My 'Leele' is open for criticism. I have determined to do something. Whether social philosophy or economic philosophy I have got to do it and I will do it before I go out of this office.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರು ನಮ್ಮೆಲ್ಲರ ಲೀಲೆಯನ್ನೂ ಬರೆಸಲಿ. ನಿಮ್ಮಿಬ್ಬರದೇ ಏಕೆ ?

ಶ್ರೀ ಬಿ. ಬಸವಲಿಂಗಪ್ಪ.—ಈಗ ಸೈಟುಗಳನ್ನು ಕೊಡುವುದರಲ್ಲಿ ಹಳ್ಳಿಗಾಡುಗಳಲ್ಲಿ ನಿರ್ಗತಿಕರಾದ ಜನರಿಗೆ ಮಾತ್ರ ನಾವು ಹೆಚ್ಚಿಗೆ ಗಮನ ಕೊಡುತ್ತೇವೆ. ಇನ್ನು ಟೌನುಗಳಲ್ಲಿ ಇರುವವರಿಗೆ ಸೈಟು ಕೊಡುವ ವಿಚಾರದಲ್ಲಿ ಏನೂ ಗಮನಕೊಡುತ್ತಿಲ್ಲವೆಂದು ಇನ್ನೊಂದು ಶಂಕೆ ಎದ್ದಿತು. ನಾವು ಸಿಟಿಯಲ್ಲಿಯೂ ಕೂಡ ಅಷ್ಟೇ ರೀತಿಯಲ್ಲಿ ಅಭಿವೃದ್ಧಿಯಾಗಬೇಕು. ನಾವು ಈ ಸೈಟುಗಳನ್ನು ಹಂಚುವುದರಲ್ಲಿ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳ ಬಗ್ಗೆ ಒಂದು ಪ್ರಾಜೆಕ್ಟ್ ರಿಪೋರ್ಟನ್ನು ತಯಾರುಮಾಡಿಸಿದ್ದೇವೆ. ಮಧ್ಯಮವರ್ಗದವರಲ್ಲಿ ಯಾರು ಸಾಹುಕಾರರು ಇದ್ದಾರೆಂಬು ಮೊದಲು ಕಂಡುಹಿಡಿದು, ಅವರಲ್ಲಿ ಬಡವರಿಗೆ ಎಷ್ಟೆಷ್ಟು ಸೈಟುಗಳು ಬೇಕು ಎಂಬ ಬಗ್ಗೆ ಅಂಕಿ ಅಂಶಗಳನ್ನು ಶೇಖರಣೆಮಾಡಿ ಕೊಡಬೇಕಾಗಿದೆ. ಇದಕ್ಕಾಗಿಯೇ ಒಂದು ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಲು ಅರ್ಬನ್ ಡೆವಲಪ್‌ಮೆಂಟ್ ಹೌಸಿಂಗ್ ಕಾರ್ಪೊರೇಷನ್ ಸಂಸ್ಥೆಯೊಂದನ್ನು ಕೇಂದ್ರಸರ್ಕಾರದವರು ರಚನೆಮಾಡಿದ್ದಾರೆ. ಆ ಪ್ರಾಜೆಕ್ಟ್‌ಗಳಿಗೆಲ್ಲಾ ಹಣ ಕೊಡುವ ಹಾಗೆ ಏರ್ಪಾಡುಮಾಡಿದ್ದೇವೆ. ಎಲ್ಲಾ ಪಟ್ಟಣಗಳಲ್ಲಿಯೂ ಇಂತಹ ಅಭಿವೃದ್ಧಿಯಾಗಬೇಕು. ಸಿಟಿಯಲ್ಲಿ ಬಿಜಿನೆಸ್ ಕಾಂಪ್ಲೆಕ್ಸ್ ಕಟ್ಟಬೇಕೆಂದು ಯೋಚನೆ ಮಾಡಿದ್ದೇವೆ. ಈಗಾಗಲೇ ಮೈಸೂರಿನಲ್ಲಿ ಅದನ್ನು ಮಾಡಬೇಕೆಂದು ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಬೆಂಗಳೂರಿನಲ್ಲಿ ಆ ರೀತಿಯಾಗಿ ತಯಾರುಮಾಡಬೇಕೆಂಬ ಯೋಜನೆಯನ್ನು ಮಾಡಿದ್ದೇವೆ. ಮಂಗಳೂರಿನಲ್ಲಿಯೂ ಆ ರೀತಿ ಒಂದು ಯೋಜನೆಯನ್ನು ತಯಾರುಮಾಡಬೇಕೆಂದಿದ್ದೇವೆ. ಅದೇ ರೀತಿಯಾಗಿ ಎಲ್ಲಾ ಪಟ್ಟಣಗಳಲ್ಲಿಯೂ ತಯಾರುಮಾಡಬೇಕೆಂದು ಮನಸ್ಸುಮಾಡಿದ್ದೇವೆ. ಹುಬ್ಬಳ್ಳಿ, ಧಾರವಾಡ ಮಧ್ಯೆ ಸ್ವಲ್ಪಮಟ್ಟಿಗೆ ಅಂತರವಿದೆ. ಅಲ್ಲಿ ಟೌನ್‌ಷಿಪ್‌ಗಳನ್ನು ಕಟ್ಟಿಸಿ ಆ ಟೌನುಗಳು ಚೆನ್ನಾಗಿ ಬೆಳೆಯಬೇಕೆಂಬ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಈಗಾಗಲೇ ಅಲ್ಲಿ ಒಂದು

ಟೌನ್‌ಷಿಪ್ ಕಟ್ಟಿಸಬೇಕೆಂದು ಯೋಜನೆಮಾಡಿ ಅವಕ್ಕೆ ಮಂಜೂರಾತಿಯನ್ನೂ ಸಹ ಕೊಟ್ಟಿದ್ದಾರೆ. ಈಗಾಗಲೇ ಅದನ್ನು ಕಟ್ಟಬೇಕೆಂದಿದ್ದೇವೆ. ಎಲ್ಲಾ ಪಟ್ಟಣಗಳಲ್ಲಿಯೂ ಎಲ್ಲರ ಸುಖಸಂತೋಷಕ್ಕಾಗಿ ಇಂತಹ ಅನುಕೂಲಗಳನ್ನು ಬಹಳ ಜಾಗ್ರತೆಯಾಗಿ ಮಾಡಿಕೊಡಬೇಕೆಂದಿದ್ದೇವೆ. ಅದ್ದರಿಂದ ಇದಕ್ಕೆಲ್ಲಾ ತಾವು ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕು. ಅದನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ನನಗೇನೂ ಯಾರ ಬಗ್ಗೆಯೂ ಮತ್ತು ಯಾವ ವಿಷಯದಲ್ಲಿಯೂ ಏನೂ ವ್ಯತ್ಯಾಸವಿಲ್ಲ. ಎಲ್ಲರೂ ಬಾಳಿ ಚೆನ್ನಾಗಿ ಬದುಕಬೇಕೆಂಬುದೇ ನನ್ನ ಇಷ್ಟ. ಹಳ್ಳಿಯವರು ಯಾವರೀತಿಯಲ್ಲಿ ಸುಖವಾಗಿ ಬಾಳಿ ಬದುಕುತ್ತಾರೋ ಅದೇ ರೀತಿಯಾಗಿ ಪಟ್ಟಣಗಳಲ್ಲಿರುವವರೂ ಸಹ ಅದೇ ರೀತಿ ಬಾಳಿ ಬದುಕಿ ಬೆಳೆಯಬೇಕೆಂಬುದಾಗಿ ನಾನು ಉದ್ದೇಶ ಪಟ್ಟಿದ್ದೇನೆ. ಇದರ ಬಗ್ಗೆ ತಾವೆಲ್ಲರೂ ಒಪ್ಪುವುದಾದರೆ, ನಾನು ಏನೇನು ಸಾದನೆಮಾಡಿದ್ದೇನೆ. ಎಂಬುದನ್ನು ನಿಮಗೆ ತೋರಿಸುತ್ತೇನೆ. ಆಗ ನೀವು ಮೆಚ್ಚುಗೆ ವ್ಯಕ್ತಪಡಿಸುವುದಾದರೆ ಮಾಡಿ. ಬಸವಲೀಲೆಯಾಗಲೀ ಅಥವಾ ಬಸವಲಿಂಗಪ್ಪನ ಲೀಲೆಯಾಗಲಿ, ಯಾರು ಅದನ್ನು ಬರೆಸುವುದನ್ನು ಬೇಡವೆಂದು ಹೇಳುತ್ತಾರೆ ?

ಶ್ರೀ ವಾಟಾಳ್ ನಾಗರಾಜ್.—ಲೀಲೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಇದ್ದರೆ ಹೇಳಿ. ಅವರು ಈಗಲೇ ಸಾಕ್ಷಿ, ಸಾಹಿತ್ಯಗಳನ್ನು ಕೂಡಿ ಹಾಕಿಕೊಳ್ಳಲಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಮೊದಲೇ ಮಂತ್ರಿಯಾಗುವುದಕ್ಕೆ ಮುಂಚೆ ಹೇಳಿದ್ದೇನೆ. All my public action is subject to public criticism. ನಾನು ಏನೇನು ಬಹಿರಂಗವಾಗಿ ಮಂತ್ರಿಯಾಗಿ ಕೆಲಸಮಾಡಿದ್ದೇನೆಯೋ ಅವೆಲ್ಲವನ್ನೂ ತರ್ಕಮಾಡುವುದಕ್ಕ ತಮಗೆಲ್ಲರಿಗೂ ಅಧಿಕಾರ ಉಂಟು. ಏನಾದರೂ ಮಾಡಿದ್ದರೆ ಅದಕ್ಕೆ ನಾನು ಯಾವ ಒಂದು ಪೆನಾಲ್ಟಿಯನ್ನು ಕೊಡುವುದಕ್ಕೆ ತಯಾರು ಆಗಿದ್ದೇನೆ. ನನ್ನ ಆಶೆ ನಿಜವಾಗಿ ಏನೂ ಇಲ್ಲ: ನನ್ನ ಮಕ್ಕಳಿಗೆ, ಮೊಮ್ಮಕ್ಕಳಿಗೆ ಸಮಾಜವಾದೀ ಸಮಾಜವನ್ನು ರಚಿಸುವ ಈ ಸಂದರ್ಭದಲ್ಲಿ ಯಾವುದೂ ಬಿಟ್ಟು ಹೋಗುವ ವ್ಯವಸ್ಥೆ ಇಲ್ಲದೇ ಹೋದರೆ, ಅಂತಹ ಒಂದು ಏರ್ಪಾಡು ಆದರೆ ಸಾಕು, ಬಹಳ ಒಳ್ಳೆಯದು. ಸಾರ್ವಜನಿಕ ಜೀವನದಲ್ಲಿ ಯಾವುದೇ ರೀತಿಯಲ್ಲಿಯಾಗಲೀ ನನ್ನನ್ನು ಕೈಹಿಡಿದು ಕೇಳಬಹುದು. ಯಾವುದಕ್ಕೂ ಅನುಮಾನವಿಲ್ಲ. ಅವರೆ ಈಗ ಮಾನ್ಯ ಸದಸ್ಯರು ಕೆಲವು ಟೀಕೆಗಳನ್ನೂ ಹಾಗೂ ಸಲಹೆಗಳನ್ನೂ ಮಾಡಿದ್ದಾರೆ. ಆದರ ಬಗ್ಗೆ ಈಗ ಹೇಳುತ್ತೇನೆ. ಮೊಟ್ಟಮೊದಲನೆಯದಾಗಿ ಈ ಮುನಿಸಿಪಾಲಿಟಿಗಳಲ್ಲಿ ಹಣದ ಕೊರತೆ ಬಹಳವಾಗಿ ಇರುತ್ತದೆ. ಅಲ್ಲಿರತಕ್ಕ ಉತ್ಪತ್ತಿ ಏನಿರುತ್ತದೋ ಅದು ಅಷ್ಟಾಗಿ ಸರಿಯಾಗಿರುವುದಿಲ್ಲ. ಆದ್ದರಿಂದ ಅಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಏನೂ ಅಗುವುದಿಲ್ಲವೆಂದು ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರದವರು ಪರಿಶೀಲನೆಮಾಡಿ ಈಗಾಗಲೇ ಒಂದು ಮುನಿಸಿಪಲ್ ಫೈನಾನ್ಸ್ ಕಮಿಷನ್ ಅಥವಾ ಕಮಿಟಿ ಎಂಬುದಾಗಿ ಮಾಡುವುದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ಮುಂದೆ ಪ್ರಕಟಣೆಯನ್ನು ಮಾಡುತ್ತೇವೆ.

ನಂತರ ಈ ಸೂಪರ್ ಸೆಷನ್ ಬಗ್ಗೆ ಅನೇಕರು ಸಲಹೆಗಳನ್ನೂ ಕೊಟ್ಟಿದ್ದಾರೆ; ಇನ್ನು ಕೆಲವರು ಕೆಟ್ಟ ಟೀಕೆಗಳನ್ನೂ ಮಾಡಿದ್ದಾರೆ. ಅದರೆ ಇದರಲ್ಲಿ ಒಂದು ಅಂಶವನ್ನು ತಾವು ಗಮನಿಸಬೇಕಾಗಿದೆ. ನಾನು ಮಂತ್ರಿಯಾಗಿ ಬರುವುದಕ್ಕೂ ಮತ್ತು ಈ ಮುನಿಸಿಪ್ಯಾಲಿಟಿಗಳ ಅವಧಿ ಮುಗಿಯುವುದಕ್ಕೂ ಒಂದೇ ಆಗಿ ಅವುಗಳನ್ನೆಲ್ಲಾ ಮತ್ತೆ ಹೊಸದಾಗಿ ರಚನೆಮಾಡಬೇಕಾಯಿತು. ಇದನ್ನು ಕಾನ್‌ಸ್ಪೆರಸಿ ಆಫ್ ಟೈಂ ಅಂತಲಾದರೂ ಹೇಳಬಹುದು ಅಥವಾ ಕಾನ್‌ಸ್ಪೆರೆಸಿ ಆಫ್ ಆಪರ್ಚುನಿಟಿ ಎಂತಲಾದರೂ ಹೇಳಬಹುದು. ಇದರಲ್ಲಿ ನನ್ನ ಕೈವಾಡವೇನೂ ಇರುವುದಿಲ್ಲ. ಆಗ ಇವುಗಳ ಚುನಾವಣೆಯನ್ನು ನಡೆಸುವುದಕ್ಕೆ 1961 ನೇ ಇಸವಿ ಸೆನ್‌ಸಸ್ ಪ್ರಜಾ ಸಂಖ್ಯಾ ಪ್ರಕಾರ ಓಟರ್ ಲಿಸ್ಟುಗಳನ್ನು ತಯಾರಿಸಿದ್ದರು. ಅದರೆ ಅದು ಬೇಡ 1971 ರ ಸೆನ್‌ಸಸ್ ಪ್ರಕಾರ ಅವುಗಳನ್ನು ನಡೆಸಬೇಕೆಂದು ತೀರ್ಮಾನವಾದ್ದರಿಂದ ಆ ಓಟರ್ಸ್ ಪಟ್ಟಿಗಳನ್ನೆಲ್ಲಾ ರಿವೈಜ್ ಮಾಡಬೇಕಾಯಿತು. ಯಾವಾಗ ಚುನಾವಣೆಗಳು ಹಿಂದಕ್ಕೆ ಬಿದ್ದವೋ ಅಗ ಅಲ್ಲಿಯ ಕೆಲಸಕಾರ್ಯಗಳು ನಡೆಯಲೇಬೇಕಾಗಿದ್ದುದರಿಂದ ಅವುಗಳನ್ನು ಸೂಪರ್‌ಸೀಡ್ ಮಾಡಬೇಕಾಗಿ ಬಂದಿತು. ಹೀಗೆ ಏನೋ ಒಂದು ಕಾಲದ ಪ್ರಭಾವದಿಂದಾದ ಕೆಲಸಕ್ಕೆ ನನ್ನ ಹೊಣೆ ಮಾಡುವುದು ಸರಿಯಲ್ಲ. ಆದರೆ ಶ್ರೀ ಶ್ಯಾಮಣ್ಣನವರು ನನಗೇನು ‘ಸೂಪರ್ ಸೆಷನ್ ಮಂತ್ರಿ ಎಂದು ಕರೆದಿದ್ದಾರೆ ಅದಕ್ಕೆ ನಾನು ನಿಜವಾಗಿಯೂ ಅರ್ಹನಲ್ಲ. ನಾನು ಈ ಎಲ್ಲಾ ಸಂಸ್ಥೆಗಳ ಅಧಿಕಾರವನ್ನು ಕೈಗೆತೆಗೆದುಕೊಂಡು ಅವುಗಳಮೇಲೆ ನಾನೊಬ್ಬನೇ ಅಧಿಕಾರಿಯಾಗಿ ನಿಲ್ಲಬೇಕೆಂಬ ಇಚ್ಛೆ ನನಗಿಲ್ಲ. ಅದರೆ ಕೆಲವು ಕಡೆ ಈ ಚುನಾವಣೆಗಳು ಬರುತ್ತವೆ ಎಂದೋ ಅಥವಾ ಮತ್ತೆ ಯಾವ ಕಾರಣದಿಂದಲೋ ವಸೂಲಿಯನ್ನೆ ಮಾಡದೆ ಕೈ ಬಿಟ್ಟಿದ್ದಾರೆ. ನಾನು ಸವಣೂರು ಮುನಿಸಿಪ್ಯಾಲಿಟಿಯನ್ನು ಇನ್‌ಸ್ಪೆಕ್ಷನ್ ಮಾಡಿದಾಗ್ಗೆ ಅಲ್ಲಿ ಅವರು ಆ ನೌಕರರ ಒಂದು ತಿಂಗಳ ಸಂಬಳಕ್ಕೆಷ್ಟು ಹಣ ಅಗತ್ಯವೋ ಅಷ್ಟನ್ನು

(ಶ್ರೀ ಬಿ. ಬಸವಲಿಂಗಪ್ಪ)

ಮಾತ್ರವೇ ವಸೂಲ್ಮಾಡಿದ್ದರು. ಅದರೆ ಅಲ್ಲಿಗೆ ಅಡ್ಮಿನಿಷ್ಟ್ರೇಟರನ್ನು ಹಾಕಿದ ಮೇಲೆ ಬಹಳ ಅನು ಕೂಲವಾಗಿದೆ. ಅವರು ಒಂದು ಲಕ್ಷಕ್ಕೂ ಹೆಚ್ಚಿನ ಬಾಕಿಯನ್ನು ವಸೂಲ್ಮಾಡಿದ್ದಾರೆ. ಇನ್ನು ಅ ಗೋಕಾಕ್ ವಿಷಯ ಮಾನ್ಯ ಕೌಜಲ್ಗಿಯವರಿಗೆ ಚೆನ್ನಾಗಿ ಗೊತ್ತಿದೆ; ಅಲ್ಲಿ ಮುನಿಸಿಪಲ್ ನೌಕರ ರಿಗೆ ಸಂಬಳಕೊಡುವುದಕ್ಕೂ ದುಡ್ಡಿರಲಿಲ್ಲ. ಅಲ್ಲಿ ಅಧ್ಯಕ್ಷರು ಯಾರಿದ್ದರೋ ಅವರ ಕಡೆಯವರನ್ನೇ ಅಲ್ಲಿ ಕೆಲಸಗಳಿಗೆಲ್ಲಾ ನೇಮಕ ಮಾಡಿದ್ದಾರೆ. ಎಲ್ಲಾ ಅವರ ಸಂಬಂಧೀಕರು ಅದರಿಂದಲೇನೋ ಏನೋ ಅವರು ಅಲ್ಲ ತೆರಿಗೆಯನ್ನೇ ವಸಲ್ಮಾಡಿರಲಿಲ್ಲ. ಅಲ್ಲಿಗೆ ಆಡ್ಮಿನಿಷ್ಟ್ರೇಟರನ್ನು ಹಾಕಿದ ಮೇಲೆ ಈಗ 3 ಲಕ್ಷ ಬಾಕಿ ವಸೂಲಾಗಿದೆ. ಇನ್ನು 50 ಸಾವಿರ ಬಾಕಿ ಉಳಿದಿದೆ. ಈ ದಿವಸ ಇಲ್ಲಿ ನಡೆಯು ತ್ತಿರವ ಅಡಳಿತ ಡೆಮಾಕ್ರಸಿ ತತ್ವಗಳಿಗೆ ಅನುಗುಣವಾಗಿದೆ. ನಾನು ಒಬ್ಬನೇ ಎಲ್ಲವನ್ನೂ ಹೊತ್ತು ಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ನಿರಂಕುಶ ಪ್ರಭುತ್ವವಿಲ್ಲ ಸಾಂಕುಶ ಪ್ರಭುತ್ವ ಇರುವುದು. ಡೆಮಾಕ್ರಸಿ ನಿರಂಕುಶಪ್ರಭುತ್ವಕ್ಕೆ ಒಂದು ಅಂಕುಶವಿದ್ದ ಹಾಗೆ...

ಶ್ರೀ ಎಚ್. ಡಿ. ದೇವೇಗೌಡ.—ತಾವು ಈ ಸೂಪರ್ ಸೀಡ್ ಮಾಡಿರುವುದರಲ್ಲಿ ತಮ್ಮ ಕೈ ವಾಡವೇನೂ ಇಲ್ಲ ಅದು ಕಾಲದ ಒಂದು ಪ್ರಭಾವ ಎಂಬುದಾಗಿ ಹೇಳೋಣವಾಯಿತು. ಆದರೆ ತಾವು ಮಂತ್ರಿಗಳಾಗಿ ಬಂದ ಮೇಲೆ 95 ಮುನಿಸಿಪ್ಯಾಲಿಟಿಗಳಿಗೆ ಅಡ್ಮಿನಿಷ್ಟ್ರೇಟರುಗಳನ್ನು ಹಾಕಿ ದ್ದೀರಿ; ಕೆಲವು ಮುನಿಸಿಪ್ಯಾಲಿಟಿಗಳ ಕಾಲವನ್ನು ವಿಸ್ತರಿಸಿದ್ದೀರಿ, ಅಂದರೆ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೀರಿ, ಕೆಲವಕ್ಕೆ ನಾನ್‌ಫಿಷಿಯಲ್ಸ್‌ನ್ನು ಅಡ್ಮೈಸರರಾಗಿ ಹಾಕಿದ್ದೀರಿ, ಇದೆಲ್ಲಾ ಸ್ವೇಚ್ಛಾ ಚಾರವಲ್ಲವೇ ?

ಶ್ರೀ ಕೆ. ಎಂ. ನಾಗಣ್ಣ.—ಸೂಪರ್ ಸೀಡ್ ಮಾಡಿರುವುದನ್ನು ತಾವು ನೋಟೀಸ್ ಕೊಟ್ಟು ಮಾಡಿದ್ದೀರೋ ಹಾಗೇ ಮಾಡಿದ್ದೀರೋ ?

ಶ್ರೀ ಬಿ. ಬಸವಲಿಂಗಪ್ಪ.—15ನೇ ಸೆಕ್ಷನ್ ಪ್ರಕಾರ ಇದಕ್ಕೆ ನೋಟೀಸ್ ಕೊಡತಕ್ಕ ಪ್ರಮೇಯವಿಲ್ಲ. ಬೆಳಗಾಂ ಒಂದನ್ನು ಬಿಟ್ಟರೆ ನಾವು ಇನ್ನೆಲ್ಲಿಯೂ ಸೂಪರ್‌ಸೀಡ್ ಮಾಡಿಲ್ಲವಲ್ಲ?

ಶ್ರೀ ಎಚ್. ಡಿ. ದೇವೇಗೌಡ.—ಆದರೆ ತಾವು ಆ ಬೆಳ್ಳೂರು ವಿಚಾರದಲ್ಲಿ ಮಾಡಿದ ಹಾಗೆ ಮತ್ತೆ ಎಲ್ಲಿಯೂ ಮಾಡಬೇಡಿ...

Sri K. PUTTASWAMY.—I have not questioned the right of the Government to supersede a Municipality. By all means, they have a legal rsght to do it But they can issue notice—show cause notice—and after receipt of reply, they can proceed to take any action to suprsede. I am not holding any brief on behalf of the Municipalities which have been superseded. I would like to ask the hon, Minister the reasons for taking over the administration of the Mysore Municipalitys. On 20-10-1972 the preliminary notification was published in respect of division of Wards based on 1971 population. The term of the Municipal Council expired on 5-1-1973. Was this time of three months not sufficient to hold the electlons ? If the time was considered sufficient, why was the Municipality taken over? We are only asking the Hon. Minister to explain the reasons for taking over such of the Manici-palities whose term expired, when there was enough time for the Government to arrange for elections.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಪುಟ್ಟಸ್ವಾಮಿಯವರಿಗೆ ನಾನು ಅನಂತವಂದನೆಗಳನ್ನು ಅರ್ಪಿಸಬೇಕಾಗಿದೆ. ಏಕೆಂದರೆ ಅವರು ಎತ್ತಿರತಕ್ಕ ಪ್ರಶ್ನೆಗೆ ಉತ್ತರವನ್ನೂ ಕೂಡ ಅವರೇ ಹೇಳಿ ದ್ದಾರೆ. ಅದರಲ್ಲಿ ನಾವು ಯಾವ ತಾರತಮ್ಯ ಮಾಡುವುದಕ್ಕೂ ಹೋಗಿಲ್ಲ. ಮೈಸೂರಲ್ಲಿ ಅದನ್ನೆಲ್ಲಾ ಹೇಳಬೇಕೆಂದರೆ ಕಾರಣಗಳು ಬಹಳ ಇವೆ. ಅಲ್ಲಿ ನಾವು ಒಂದು ಅಡ್ವೈಸರಿ ಸಮಿತಿಯನ್ನು ಮಾತ್ರ ನೇಮಕ ಮಾಡಿದ್ದೇವೆ. ಮಾನ್ಯ ಪುಟ್ಟಸ್ವಾಮಿಯವರೂ ಕೆಲವು ಹೆಸರನ್ನು ಸೂಚಿಸಲಿ...

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ಚುನಾವಣೆಗಳನ್ನು ನಡೆಸುವುದಕ್ಕೆ ಇನ್ನೂ 3 ತಿಂಗಳ ಕಾಲಾವಕಾಶ ಇತ್ತು. ಹಾಗಿದ್ದರೂ ಏಕೆ ಅದನ್ನು ಸೂಪರ್‌ಸೀಡ್ ಮಾಡಿದಿರಿ ?

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಸೂಪರ್‌ಸೀಡ್ ಮಾಡಿಲ್ಲ—ಅದರ ಕಾಲವೇ ಮುಗಿಯಿತು.

ಶ್ರೀ ಎಚ್. ಡಿ. ದೇವೇಗೌಡ.—ಅಡ್ವೈಜರಿ ಸಮಿತಿಯನ್ನು ನೇಮಕ ಮಾಡತಕ್ಕ ಅಗತ್ಯವೇನಿತ್ತು ?

ಶ್ರೀ ಬಿ. ಬಸವಲಿಂಗಪ್ಪ.—ಕ್ಷಾಮ ಪೀಡಿತ ಪ್ರದೇಶಗಳಲ್ಲಿ 35 ಮುನಿಸಿಪ್ಯಾಲಿಟಿಗಳಿಗೆ ಅಡ್ಮಿನಿಸ್ಟ್ರೇಟರನ್ನು ಹಾಕಿದ್ದೇವೆ. ಅಲ್ಲಿ ಅಡ್ವೈಜರಿ ಸಮಿತಿಗಳ ಅಗತ್ಯವಿದ್ದೇ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಚುನಾವಣೆಗಳನ್ನು ಎಂದು ನಡೆಸುತ್ತೀರಿ ?

ಶ್ರೀ ಬಿ. ಬಸವಲಿಂಪಪ್ಪ.—ಮಾನ್ಯ ಅಧ್ಯಕ್ಷರೇ, ಶ್ರೀ ದೇವೇಗೌಡರ ಸಲಹೆಯನ್ನು ತೀವ್ರವಾಗಿ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು, ಈಗಿರುವ ಹಾಗೆ ಮುಂದುವರೆಸಬೇಕೆಂಬ ಇಚ್ಛೆ ಇಲ್ಲ. ದಯಮಾಡಿ ಇದನ್ನು ತಿಳಿದುಕೊಳ್ಳಬೇಕು. ಎಲ್ಲೆಲ್ಲಿ ಫೈನಲ್ ಆಗುತ್ತದೆ ಅಲ್ಲಲ್ಲಿ ಆರ್ಡರು ಮಾಡಲು ತಯಾರಿದ್ದೇವೆ. ಅಡ್ವೈಜರಿ ಕಮಿಟಿಗಳನ್ನು ಮಾಡಲೇಬಾರದು ಎಂಬುದಕ್ಕೆ ನನ್ನ ಸಮ್ಮತಿಯಿಲ್ಲ.

11-30 A. M.

ಶ್ರೀ ವಾಟಾಳ್ ನಾಗರಾಜ್.—ಅದು ಪೊಲಿಟಿಕಲ್ ಅಪಾಯಿಂಟ್‌ಮೆಂಟ್ ಏಕೆ ಆಗಬೇಕು ?

ಶ್ರೀ ಎಚ್. ಡಿ. ದೇವೇಗೌಡ.—ಮೊನ್ನೆ ಹಳಿಯಾಳದಲ್ಲೇನಾಗಿದೆಯೆಂಬುದನ್ನು ನೋಡಬಹುದು. ಕೆಲವು ಕಡೆ ನಾವು ನೋಡುವಂತೆ ಚುನಾವಣೆ ಮಾಡಲು ಸರಕಾರಕ್ಕೆ ಇಚ್ಛೆಯಿಲ್ಲ. ಚುನಾವಣೆ ನಡೆಸಲು ಅವಕಾಶವಿದ್ದು ಸಿದ್ಧತೆ ಮಾಡಿಕೊಂಡಿರುವ ಕಡೆ ಕಾಲಾವಕಾಶವೇಕೆ ಬೇಕು ? ಅಂಥ ಕಡೆ ಚುನಾವಣೆ ಮಾಡುತ್ತೇವೆಂದು ಹೇಳಲಿ. ರಾಜಕೀಯ ಮಾಡುವುದು ಬೇಡ.

ಶ್ರೀ ಬಿ. ಬಸವಲಿಂಗಪ್ಪ.—ಎಲ್ಲಿ ಅಡ್ಮಿನಿಸ್ಟ್ರೇಟರುಗಳು ಈಗ ನೇಮಕವಾಗಿದ್ದಾರೋ ಅಲ್ಲಿ ಕಟುವಾಗಿ ಟೀಕೆ ಬಂದಿದೆ. ತಾಸಿಲ್ದಾರರಿಗೆ ಮತ್ತು ಬಿ ಡಿ ಓ ಗಳಿಗೆ ಈ ಕೆಲಸವಾಡಲು ಅವಕಾಶವಿರುವುದಿಲ್ಲ; ಅದುದರಿಂದ ಇದಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತಿದ್ದಾರೆ. ಈಗ ತಾಸಿಲ್ದಾರರು ಮತ್ತು ಬಿ ಡಿ ಓ ಗಳು ಅಡ್ಮಿನಿಸ್ಟ್ರೇಟರುಗಳಾಗಿ ಅಡೀಷನ್ನಲ್ ಛಾರ್ಜಿನಲ್ಲಿದ್ದಾರೆ, ಇದು ಸರಿಯಲ್ಲವೆಂದು ಕಂಡುಬಂದಿದೆ. ದೊಡ್ಡದೊಡ್ಡ ಮುನಿಸಿಪಾಲಿಟಿಗಳಿರುವ ಕಡೆ ಅಭಿವೃದ್ಧಿ ಕಾರ್ಯ ಜಾಸ್ತಿ ಇರುವ ಕಡೆ ಅಂಥ ಮುನಿಸಿಪಾಲಿಟಿಗಳಿಗೆ ಸ್ವತಂತ್ರವಾಗಿ ಇಂಡಿಪೆಂಡೆಂಟ್ ಛಾರ್ಜಿನಲ್ಲಿರುವ ತಾಹಸೀಲ್ದಾರರು ಮತ್ತು ಬಿ ಡಿ ಓ ಗಳನ್ನು ಹಾಕಬೇಕೆಂದು ತೀರ್ಮಾನವಾಗಿದೆ; ಇಷ್ಟರಲ್ಲೇ ಪೋಸ್ಟ್ ಮಾಡುತ್ತೇವೆ. ಮುನಿಸಿಪಾಲಿಟಿಗಳಲ್ಲಿ ಪಾಲಿಟಿಕ್ಸ್ ಇರಬಾರದೆಂದು ಶ್ರೀ ಶಾಮಣ್ಣನವರು ಹೇಳಿದ್ದಾರೆ. ಕೆಲಸಮಾಡುವಾಗ ನೇರವಾಗಿ ಏಕೆ ಮಾಡಬಾರದು ಎಂದು ಸರಕಾರ ವಿಚಾರಮಾಡಿ ಪಾರ್ಟಿ ಬೇಸಿಸ್ ಮೇಲೆ ಚುನಾವಣೆ ನಡೆಯಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ಪೊಲಿಟಿಕಲ್ ಪಾರ್ಟೀಸ್‌ಗೆ ಯಾವ ಸಿಂಬಲ್ ಬೇಕು ಎಂದು ಬರೆಯಲು ತೀರ್ಮಾನಿಸಿದ್ದೇವೆ. ಮುನಿಸಿಪಾಲಿಟಿ ಮತ್ತು ತಾಲ್ಲೂಕು ಬೋರ್ಡುಗಳು ರಾಜಕೀಯ ಪ್ರಾರಂಭವಾಗುವ ಸ್ಥಳಗಳು, ಉಗಮ ಸ್ಥಾನಗಳು, ಈ ಉಗಮ ಸ್ಥಾನಗಳಲ್ಲಿ ಎಲ್ಲ ರಾಜಕೀಯ ಪಕ್ಷಗಳಿಗೂ ಅವಕಾಶವಿರಬೇಕು. ಆದುದರಿಂದ ಕಾಗದ ಬರೆದಿದ್ದೇವೆ, ಸರಿಯಾದ ಪಾರ್ಟಿ ಸಿಂಬಲ್ ಹಂಚಲು ಅಕ್ಕಿನಲ್ಲ ಅವಕಾಶಮಾಡುತ್ತೇವೆ.

[Mr. Deputy Speaker in the Chair]

ಅಕ್ವಾಯರ್ ವಿಚಾರದಲ್ಲಿ ಕೆಲವು ಸಲಹೆಗಳು ಬಂದಿವೆ, ಇದು ಬಹಳ ಪುರತನವಾದುದು. ಇದನ್ನು ರದ್ದುಪಡಿಸಬೇಕು ಎಂದು ತಿಳಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಚುನಾವಣೆ ವಿಚಾರ ಹೇಳಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇಷ್ಟು ಅವಧಿಯೊಳಗಾಗಿ ಮಾಡುತ್ತೇವೆಂದು ಹೇಳಿ, ಆರುತಿಂಗಳೊಳಗೆ ಮಾಡುವಿರಾ ?

ಶ್ರೀ ಬಿ. ಬಸವಲಿಂಗಪ್ಪ.—ಕ್ಷಾಮ ಪೀಡಿತ ಪ್ರದೇಶಗಳ ಬಗ್ಗೆ ಒಂದು ತೀರ್ಮಾನವಾಗಿದೆ. ಅಂದಾಜು ಪ್ರಕಾರ ಆರು ತಿಂಗಳಾಗಬಹುದು ಎಂದು ಊಹಿಸಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಇಂಥ ದಿವಸ ಚುನಾವಣೆ ಮಾಡುತ್ತೇವೆಂದು ಹೇಳಿ, ಇವೇಸಿವ್ ಆನ್ಸರ್ ಬೇಡ. ಯಾವಾಗ ಮಾಡುತ್ತೇವೆಂದು ಹೇಳಿ. ಅಡ್ವೈಜರಿ ಕೌನ್ಸಿಲ್ ಮಾಡುವುದಾದರೆ ಅದಕ್ಕೆ ಅವಕಾಶ ಕೊಡುವುದಿಲ್ಲ, ಆಂದೋಳನವಾಗುತ್ತದೆ, ಗಲಾಟೆಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಬರಗಾಲ ಪ್ರದೇಶದ ಬಗ್ಗೆ ಒತ್ತಾಯವಿಲ್ಲ. ಅಡ್ವೈಜರಿ ಕೌನ್ಸಿಲ್ ಮಾಡಿ ತಮಗೆ ಬೇಕಾದವರನ್ನು ಹಾಕಿ ರಾಜಕೀಯ ಮಾಡುವುದಕ್ಕೆ ಬದಲು ಸ್ಪೆಸಿಫಿಕ್ಕಾಗಿ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದೆರಡು ತಿಂಗಳು ಹೆಚ್ಚು ಕಡಿಮೆಯಾದರೂ ಚಿಂತೆಯಿಲ್ಲ, ನಿರ್ದಿಷ್ಟವಾಗಿ ಹೇಳಿ, ಮೇನಲ್ಲಿ ಮಳೆ ಬರುವುದು. ಯಾವಾಗ ಮಾಡುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರು ಹೇಳಿದ ಹಾಗೆ ಆರು ತಿಂಗಳಲ್ಲಿ ಪೂರ್ಣವಾಗಿ ಮಾಡಬೇಕೆಂದು ತೀರ್ಮಾನಮಾಡುತ್ತೇವೆ.

ಇನ್ನು ಈ ಆಕ್ಟ್ರಾಯ್ ವಿಚಾರದಲ್ಲಿ ಮಾನ್ಯ ಸದಸ್ಯರು ಹಲವಾರು ಕಾರಣಗಳನ್ನು ಕೊಟ್ಟಿದ್ದಾರೆ. ಇದು ಪುರಾತನವಾದಂಥ ಟ್ಯಾಕ್ಸ್ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು, ಇದರಲ್ಲಿ ಬಹಳ ಲೀಕೇಜ್ ಇದೆ, ಮತ್ತು ಇದು ಕೆಳಗಿನ ಬಡವರ ಮೇಲೆ ಹೊರೆಯಾಗುತ್ತದೆ ಎಂದು ಹೇಳಿದರು. ಮಾನ್ಯ ನಾಗಣ್ಣನವರು ಇದರಿಂದ ಕರಪ್ಷನ್‌ಗೆ ಎಡೆಯಾಗುತ್ತದೆ ಆದ್ದರಿಂದ ಟ್ಯಾಕ್ಸ್ ಬೇಡ ಎಂದು ಹೇಳಿದರು. ಈ ಮೂರು ಕಾರಣಗಳನ್ನು ನಾನು ಒಪ್ಪುವುದಾದರೂ ಸಹ ನಾವು ದೇಶದಲ್ಲಿ ಇನ್ನೂ ಯಾವ ತರಹದ ಟ್ಯಾಕ್ಸನ್ನು ಹಾಕುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಟ್ಯಾಕ್ಸನ್ನು ತೆಗೆದುಬಿಟ್ಟು, ಬೇರೆ ವರಮಾನ ಬರುವ ಹಾಗೆ ಸೂಚನೆ ಕೊಟ್ಟಿದ್ದೇನೆ, ಅದನ್ನು ತಾವು ಮರೆತು ಬಿಟ್ಟಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ದೇಶದಲ್ಲಿ ಇದರ ಬಗ್ಗೆ ವಿಚಾರವಾಗುತ್ತಾ ಇದೆ. ಆಕ್ಟ್ರಾಯ್ ಅನ್ನು ತೆಗೆಯಬೇಕು ಎಂದು ಕೆಲವರು, ತೆಗೆಯಬಾರದು ಎಂದು ಕೆಲವರು. ಈ ಆಕ್ಟ್ರಾಯ್ ಅನ್ನು ತೆಗೆಯುವುದಕ್ಕೆ, ಮೂರು ಕಾರಣಗಳ ಜೊತೆಗೆ ಇನ್ನೊಂದು ಕಾರಣವೇನೆಂದರೆ, ಸಾಮಾನುಗಳನ್ನು ಹೊತ್ತು ತರತಕ್ಕ ಲಾರಿಗಳು ಏನು ಇವೆ, ಆ ಲಾರಿಗಳಿಗೆ ತಕ್ಷಣ ಕ್ಲಿಯರೆನ್ಸ್ ಕೊಟ್ಟು ಕಳುಹಿಸುವುದಿಲ್ಲ, ತಡವಾಗುತ್ತಾ ಇದೆ, ಆದ್ದರಿಂದ ಇದನ್ನು ತೆಗೆಯಬೇಕು ಎಂದು. ಈ ಒಂದು ವಾದ ಆಲ್ ಇಂಡಿಯಾ ಲೆವೆಲ್‌ನಲ್ಲಿದೆ. ಈ 3—4 ವಾದಗಳನ್ನು ನಾನು ಮನಸ್ಸಿನಲ್ಲಿಟ್ಟುಕೊಂಡು ಸರಿಪಡಿಸತಕ್ಕ ವಿಧಾನ ಇದೆ, ಮೂಲತಃ ಇದನ್ನು ಸರಿಪಡಿಸತಕ್ಕ ವಾದದ ವಿನಹ ತೆಗೆಯತಕ್ಕ ವಾದವಿಲ್ಲ. ಇದನ್ನು ಪರಿಶೀಲನೆ ಮಾಡಿ ಭೂತಲಿಂಗಂ ಕಮಿಟಿಯವರು ಶಿಫಾರಸ್ ಮಾಡಿದ್ದಾರೆ. ಮಾನ್ಯ ನಾಗಣ್ಣನವರ ಅಂದಾಜು ಪ್ರಕಾರ ಇದರಿಂದ ಸರ್ಕಾರಕ್ಕೆ 15 ಕೋಟಿ ರೂಪಾಯಿಗಳ ವರಮಾನ ಇದೆ. ಆಕ್ಟ್ರಾಯನ್ನು ತೆಗೆದರೆ, ಈ 15 ಕೋಟಿ ರೂಪಾಯಿ ವರಮಾನವನ್ನು ಯಾವ ರೀತಿ ತುಂಬಬೇಕು ಎನ್ನುವ ಪ್ರಶ್ನೆ ಬರುತ್ತದೆ. ಇಂಥ ದುರ್ಬಲವಾಗಿರತಕ್ಕ ಆರ್ಥಿಕ ಪರಿಸ್ಥಿತಿಯಲ್ಲಿ 15 ಕೋಟಿ ರೂಪಾಯಿಗಳನ್ನು ಸಮತೂಕ ಮಾಡಲಿಕ್ಕೆ ನಾವು ಇನ್ನೂ ಯೋಚನೆ ಮಾಡಿಲ್ಲ ; ಇದು ಆಗತಕ್ಕದ್ದೂ ಕೂಡ ನನಗೆ ನಂಬಿಕೆಯಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ದುಡ್ಡಿಗೆ ಏತಕ್ಕೆ ತೊಂದರೆ, ನಾಸಿಕ್‌ನಿಂದ ಪ್ರಿಂಟ್ ಮಾಡಿ ತರುವುದು. ಇದು ಮಂಗಳೂರು ವಿನಹ ಎಲ್ಲಾ ಡಿಸ್ಟ್ರಿಕ್ಟ್‌ನಲ್ಲಿ ಬಹಳ ದಿವಸಗಳಿಂದ ಇದೆ. ಕೆಲವು ಮುನಿಸಿಪಾಲಿಟಿಗಳಿಗೆ ಇದನ್ನು ಬಿಟ್ಟರೆ ಬೇರೆ ಆದಾಯವೇ ಇಲ್ಲ. ಇದನ್ನು ತೆಗೆಯಿರಿ ಎಂದರೆ ನಾವು ಪುನಃ ಅವರಿಗೆ ಹಣವನ್ನು ಕೊಡದೆ ಹೋದರೆ ಅವರು ಅಲ್ಲಿಯ ಆಡಳಿತವನ್ನು ನಡೆಸುವುದಕ್ಕಾಗುವುದಿಲ್ಲ. ಆದನ್ನು ಆಗ ಕ್ಲೋಜ್ ಮಾಡಬೇಕಾಗುತ್ತದೆ. ಈ ಮುನಿಸಿಪಾಲಿಟಿಗಳಿಗೆ ಈ ಆಕ್ಟ್ರಾಯ್ ಒಂದು ವಸ್ತುರೂಪ ; ಇರತಕ್ಕ ಆದಾಯ ಮುಖ್ಯವಾಗಿರತಕ್ಕ ಆದಾಯ, ಇದನ್ನು ತೆಗೆಯಲಿಕ್ಕೆ ಆಗುವುದಿಲ್ಲ. ನಾನು ಮಂಗಳೂರಿಗೆ ಹೋಗಿದ್ದಾಗ ಅಲ್ಲಿ ಕೆಲವರು ಆಕ್ಟ್ರಾಯ್ ಹಾಕಬೇಡಿ ಎನ್ನುವ ವಾದ ಹೇಳುತ್ತಾರೆ, ಏತಕ್ಕೆ ಹಾಕಬಾರದು? ಉತ್ತರ ಹೇಳಿ ಅಂದರೆ, ಅವರು ಪದಾರ್ಥಗಳ ಬೆಲೆ ಜಾಸ್ತಿಯಾಗುತ್ತದೆ, ಆದ್ದರಿಂದ ಹಾಕಬೇಡಿ ಎಂದು ಹೇಳಿದರು. ನಾನು ಹೇಳಿದೆ, ದಯಮಾಡಿ ಹೇಳಿ ಇವತ್ತಿನ ದಿವಸ ಏನು ಬೆಲೆ ಇದೆ, ಆ ಬೆಲೆ ಬಿಟ್ಟುಬಿಟ್ಟು ಮುಂದೆ ಬೆಲೆಯನ್ನು ಏರಿಸಬಾರದು ಎಂದು ಎಲ್ಲಾ ಮರ್ಚೆಂಟ್ಸ್ ವಾಗ್ದಾನ ಮಾಡಿದರೆ ನಾನು ಆಕ್ಟ್ರಾಯ್ ಹಾಕುವುದಿಲ್ಲ ಎಂದು.

ಶ್ರೀ ಕೆ. ಎಂ. ನಾಗಣ್ಣ.—ಮದ್ರಾಸ್ ಪ್ರಾಂತದಲ್ಲಿ ಬೇಕಾದಷ್ಟು ಮುನಿಸಿಪಾಲಿಟಿಗಳು ಇವೆ, ಅಲ್ಲಿ ಆಕ್ಟ್ರಾಯ್ ಇಲ್ಲ, ಅವರು ಹೇಗೆ ನಡೆಸುತ್ತಾರೆ ಸ್ವಲ್ಪ ಯೋಚನೆ ಮಾಡಿ ?

ಶ್ರೀ ಬಿ. ಬಸವಲಿಂಗಪ್ಪ.—ಅವರು ಹೇಳತಕ್ಕ ವಾದ ಯಾರಿಗೆ ರಿಲೀಫ್ ಕೊಡುತ್ತಾರೆ ಎಂದರೆ, ಯಾರು ಸಿರಿವಂತರು ಇದ್ದಾರೆ, ಮರ್ಚೆಂಟ್ಸ್ ಇದ್ದಾರೆ, ವ್ಯಾಪಾರಸ್ಥರು ಇದ್ದಾರೆ. ಅವರಿಗೆ ರಿಲೀಫ್ ಕೊಡುವುದೇ ವಿನಹ ಬಡವರು ಎಲ್ಲಾ ಹೊರೆ ತಲೆಯ ಮೇಲೆ ಹೊತ್ತುಕೊಂಡು ಸಾಯಲಿ ಎನ್ನುತ್ತಾರೆ. ಮುಖ್ಯವಾಗಿ ಇದು ಮನುಷ್ಯನ ನಡವಳಿಕೆಯಾಗಿರುವುದರಿಂದ ಮುನಿಸಿಪಾಲಿಟಿಗಳಲ್ಲಿ ಆದಾಯ ಇರಲೇಬೇಕು ಎಂದು ನನ್ನ ಅಭಿಪ್ರಾಯ. ಮಂಗಳೂರು ಮುನಿಸಿಪಾಲಿಟಿಯವರಿಗೆ 66 ಲಕ್ಷ ರೂಪಾಯಿಗಳನ್ನು ಕೊಡಲೇಬೇಕು, ಇನ್ನೂ ಕೊಟ್ಟಿಲ್ಲ. ಅಂಡರ್‌ಗ್ರೌಂಡ್ ಡ್ರೈನೇಜ್ ಮತ್ತು ಒಳಚರಂಡಿ ಯೋಜನೆ ಮಾಡುವುದಕ್ಕೆ ಕೋಟ್ಯಾಂತಾರ ರೂಪಾಯಿಗಳು ಬೇಕಾಗುತ್ತದೆ. ನೀವೇ ಮಾಡಿ, ನಾವು ಟ್ಯಾಕ್ಸ್ ಕೊಡುವುದಿಲ್ಲ ಎಂದರೆ, ಈ ಭಾವನೆ ಏನು ಇದೆ ಇದು ಸರಿಯಾದ ಭಾವನೆಯಲ್ಲ. ಯಾರು ನಾಗರಿಕನಾಗಿರುತ್ತಾನೋ, ನಾಗರೀಕ ಸೌಲಭ್ಯವನ್ನು ಅನುಭವಿಸುತ್ತಾನೋ ಅಂಥ ಮನುಷ್ಯ ಇದನ್ನೆಲ್ಲಾ ಕೊಡದೆ ಹೋದರೆ ಹೇಗೆ ? ಆದ್ದರಿಂದ ಈ ಆಕ್ಟ್ರಾಯ್‌ನ್ನು ತೆಗೆಯತಕ್ಕ ಪ್ರಶ್ನೆ ಬರುವುದಿಲ್ಲ. ಯಾರಾದರೂ ಇದರಲ್ಲಿ ರಾಜಕೀಯ ಮಾಡಿದರೆ, ರಾಜಕೀಯವನ್ನು ಸರಿಯಾಗಿ ನೋಡಿಕೊಳ್ಳಲಿಕ್ಕೆ ನಾನು ತಯಾರಿದ್ದೇನೆ. ಮತ್ತೆ ಇನ್ನೊಂದು ವಿಷಯ, ಕೆಲವು ಮುನಿಸಿಪಾಲಿಟಿಗಳವರು ಸ್ಕೂಲು ಕಾಲೇಜುಗಳನ್ನು ನಡೆಸಿಕೊಂಡು ಬಂದು ಬಿಟ್ಟು ವರಮಾನವನ್ನು ಇವುಗಳಿಗೆ ಖರ್ಚು ಮಾಡಿಬಿಟ್ಟು ಬೇರೆ ಕೆಲಸಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರತಕ್ಕಂಥ ಸನ್ನಿವೇಶಗಳು ನಮ್ಮ ಮೈಸೂರು ದೇಶದಲ್ಲಿವೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಒಂದು ತೀರ್ಮಾನ ಮಾಡಿದೆ, ಈ ಮುನಿಸಿಪಲ್ ಫಂಡ್ಸ್ ಏನು ಇದೆ ಅದನ್ನು ಈ ಸ್ಕೂಲು ಕಾಲೇಜುಗಳನ್ನು ನಡೆಸುವುದಕ್ಕೆ ಉಪಯೋಗಿಸಬಾರದು ಎಂದು. ಅವರು ಇನ್ನು ಮೇಲೆ ಮೇಲೆ ಇಂಥ ಬಾಬುಗಳಿಗೆ ಖರ್ಚುಮಾಡುವುದಿಲ್ಲ ಎಂದು ನಮಗೆ ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗಾಗಲೇ ನಗರ ಸಭೆಗಳವರು ಕೆಲವು ಹೈಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಅವುಗಳನ್ನು ಸರ್ಕಾರವೇ ವಹಿಸಿಕೊಳ್ಳಿ ಎಂದು ಎಂದು ಕೇಳಿದರೂ ಸರ್ಕಾರದವರು ವಹಿಸಿಕೊಳ್ಳುತ್ತಿಲ್ಲ. ಈಗಲಾದರೂ ಕೂಡ ನಗರಸಭೆಯವರು ನಡೆಸತಕ್ಕ ಹೈಸ್ಕೂಲುಗಳನ್ನು ಸರ್ಕಾರದವರು ವಹಿಸಿಕೊಂಡು ನಡೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳಿದ ಹೇಳಿಕೆ ಏನು ಇದೆ, ಅದರ ಪರಿಣಾಮ ಅದೇ ಆಗುವುದು. ಸರ್ಕಾರ ವಹಿಸಿಕೊಳ್ಳಬೇಕಾಗುತ್ತದೆ. ಮತ್ತೆ ಆಸ್ಪತ್ರೆಗಳನ್ನು ಕೂಡ ಕೆಲವು ಮುನಿಸಿಪಾಲಿಟಿಗಳವರು ನಡೆಸುತ್ತಿದ್ದಾರೆ. ನನಗೆ ಒಂದು ಆಶ್ಚರ್ಯವೇನೆಂದರೆ, ರಾಬರ್ಟಸನ್ ಪೇಟೆಯಲ್ಲಿ ಮುನಿಸಿಪಾಲಿಟಿಯವರು ಒಂದು ದನದ ಆಸ್ಪತ್ರೆಯನ್ನು ನಡೆಸುತ್ತಿದ್ದಾರೆ. ಕಾರಣ ಏನೋ ನನಗೆ ಅರ್ಥವಾಗಲಿಲ್ಲ. ಅದನ್ನೂ ಕೂಡ ನಾವು ವರ್ಗಾವಣೆ ಮಾಡುತ್ತೇವೆ. ಆಸ್ಪತ್ರೆಗಳನ್ನು ನಡೆಸುವುದಕ್ಕೆ ಈ ಹಣವನ್ನು ಉಪಯೋಗಿಸಬಾರದು ಎಂದು ಹೇಳಿದೆ. ಅದಕ್ಕೋಸ್ಕರ ಸರ್ಕಾರದವರು ತೀರ್ಮಾನ ತೆಗೆದುಕೊಂಡು ಇದನ್ನು ಕೊನೆಗಾಣಿಸುತ್ತೇವೆ.

ಬೆಂಗಳೂರು ಸಿಟಿಯಲ್ಲಿ ಈ ಸೊಳ್ಳೆಕಾಟ ವಿಪರೀತವಾಗಿದೆ. ಇದು ಅಂತರರಾಷ್ಟ್ರೀಯ ಪಟ್ಟಣವಾಗಿದ್ದರೂ ಇನ್ನೂ ಇದರ ಬಗ್ಗೆ ಕ್ರಮ ತೆಗೆದು ಕೊಳ್ಳಲಿಲ್ಲ. ಮಾನ್ಯ ಸಿದ್ಧವೀರಪ್ಪನವರ ನೇತೃತ್ವದಲ್ಲಿ ಇರುವ ಸಮಿತಿ ಸರಿಯಾಗಿ ಸಲಹೆ ಕೊಟ್ಟು ಇದನ್ನು ಮಾಡದೆ ಸುಮ್ಮನೆ ಇದೆ. ಅವರ ದೃಷ್ಟಿಯಿಂದ ಅವರು ಮಾಡುತ್ತಿದ್ದಾರೆ, ಮುನಿಸಿಪಲ್ ಸೈಡ್‌ನಿಂದ ನಾವೂ ಮಾಡುತ್ತಾ ಇದ್ದೇವೆ. ಒಟ್ಟಿನಲ್ಲಿ ಸೊಳ್ಳೆಯಕಾಟ ನಿರ್ನಾಮವಾಗಬೇಕು. ನಮ್ಮ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಮೊನ್ನೆ ತಾನೇ ನಿರ್ಣಯ ತೆಗೆದುಕೊಂಡು ಇದನ್ನು ಚರ್ಚೆ ಮಾಡಿ ಆದೇಶ ಕೊಟ್ಟಿದ್ದೇವೆ. ಅದಕ್ಕೆ ಏನಾದರೂ ಕಾನೂನು ತಿದ್ದುಪಡಿ ಆದರೂ ಕೂಡ ಮಾಡಲಿಕ್ಕೆ ಸಿದ್ಧವಾಗಿದ್ದೇನೆ ಎಂದು ಇಷ್ಟು ಹೇಳಬಲ್ಲೆ. ಆರು ತಿಂಗಳಲ್ಲಿ ಇಷ್ಟು ಸೊಳ್ಳೆಗಳು ಇರುವುದಿಲ್ಲ ಎಂದು ನನ್ನ ಭಾವನೆ. ಸೂಯಿರೇಜ್ ವಾಟರನ್ನು ಉಪಯೋಗಿಸಿಕೊಂಡು ಹುಲ್ಲು ಬೆಳೆದು ಕೆಲವು ಜನ ದೊಡ್ಡ ದೊಡ್ಡ ಸಾಹುಕಾರರಾಗಿದ್ದಾರೆ. ಇದನ್ನೆಲ್ಲಾ ಊಹಿಸಿಕೊಂಡು ಇಂಥಾದ್ದಕ್ಕೆ ಅವಕಾಶ ಕೊಡಬಾರದು ಎಂದು ಮಾಡಿದ್ದೇನೆ. ಸೂಯಿರೇಜ್ ಬೋರ್ಡಿನಿಂದ ನಿರ್ಮಿಸಿರತಕ್ಕ ಸೂಯಿರೇಜ್ ಪ್ಲಾಂಟ್ ಏನು ಇದೆ, ಅದು ಸಂಪೂರ್ಣವಾಗಿ ಕೊನೆಯ ಹಂತದಲ್ಲಿದೆ. ಅವೆಲ್ಲವನ್ನೂ ಕಾರ್ಯಗತ ಮಾಡಿದರೆ ಇಂಥ ಒಂದು ಸೊಳ್ಳೇ ಕಾಟ ಕೊನೆಯಾದೀತು ಎಂದು ನಾನು ಹೇಳುತ್ತೇನೆ.

ಸ್ಲಂ ವಿಚಾರದಲ್ಲಿ ನಾನು ಸವಿಸ್ತಾರವಾಗಿ ಹೇಳಿದ್ದೇನೆ. ಸುಮಾರು 155 ಸ್ಲಂಗಳು ದೊಡ್ಡದು ಸಣ್ಣದು ಇವೆ. 72 ಸ್ಲಂ ಕಾರ್ಪೋರೇಷನ್ ಜಮೀನಿನಲ್ಲಿ ಸರ್ಕಾರಿ ಜಮೀನಿನಲ್ಲಿ ಇರತಕ್ಕದ್ದು. ಅಲ್ಲಿರತಕ್ಕ ಸ್ಲಂ ಅನ್ನು ನಾವು ಕ್ಲಿಯರ್ ಮಾಡಬೇಕು ಈ ಬಗ್ಗೆ ತೀವ್ರಕರವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು ನೋಡುತ್ತಿದ್ದೇವೆ. ಮತ್ತು ಮಾನ್ಯ ಪುಟ್ಟಸ್ವಾಮಿಯವರು ಬೆಂಗಳೂರು ಸಿಟಿಯಲ್ಲಿ, ಟೌನ್ ಪ್ಲಾನಿಂಗ್, ಸಿ. ಐ. ಟಿ. ಬಿ. ಹಾಗೂ ಕಾರ್ಪೋರೇಷನ್ ಆಕ್ಟ್ ಈ

(ಶ್ರೀ ಬಿ. ಬಸವಲಿಂಗಪ್ಪ)

ಮೂರಕ್ಕೂ ವ್ಯತ್ಯಾಸ ಬಂದು ಒಂದಕ್ಕೊಂದು ತಾರತಮ್ಯ ಬಂದು ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು ಹೇಳಿದರು. ಇದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು, ಡೆಲ್ಲಿಯಲ್ಲಿ ಡೆವಲಪ್‌ಮೆಂಟ್ ಅಥಾರಿಟಿ ಏನು ಸಾಧನೆ ಮಾಡಿದೆ. ಅದೇ ರೀತಿಯಲ್ಲಿ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಎಂದು ಒಂದು ಬಿಲ್ಲನ್ನು ತರುವವನಿದ್ದೇನೆ. ಅದು ಇಂಥ ಸಣ್ಣ ಸಣ್ಣ ನ್ಯೂನತೆಗಳನ್ನು ಸರಿ ಮಾಡುವುದು ಎಂದು ನನ್ನ ಆಶೆ. ನಂತರ ವಾಟರ್ ಸೂಯರೇಜ್ ಬೋರ್ಡ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು 235 ಮುನಿಸಿಪಾಲಿಟಿಗಳು ಇವೆ. ನಗರ ಪ್ರದೇಶಗಳಲ್ಲಿ ಎಲ್ಲಾ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರ ಉದ್ದೇಶ ಪಟ್ಟು, ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್ ಬಿಲ್ಲನ್ನು ತಮ್ಮ ಮುಂದೆ ಇಟ್ಟಿದ್ದೇವೆ, ಅದು ಶೀಘ್ರವಾಗಿ ಪಾಸ್ ಆದ ನಂತರ, ಅದರ ಮುಖಾಂತರ ಎಲ್ಲಾ ಪುರಸಭೆಗಳಿಗೂ ಈ ಒಂದು ಸೌಲಭ್ಯಗಳನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಹೌಸಿಂಗ್ ಕೋ ಆಪರೇಟೀವ್ ಸೊಸೈಟಿಯ ಬಗ್ಗೆ ಮತ್ತು ಬೆಂಗಳೂರು ಪಟ್ಟಣದಲ್ಲಿರುವ ಸಿ. ಐ. ಟಿ. ಬಿ. ಬಗ್ಗೆ ಕೆಲವರು ಆಕ್ಷೇಪಣೆ ಎತ್ತಿದ್ದಾರೆ. ಕೆಲವು ಸಹಕಾರ ಸಂಸ್ಥೆಗಳು ಸ್ವೇಚ್ಛೆಯಾಗಿ ಕೆಲಸ ಮಾಡುತ್ತಿವೆ ಎಂದು ಗಮನಕ್ಕೆ ಬಂತು. ಅದಕ್ಕೆ ಕೆಲವು ನಿಯಮಗಳನ್ನು ಹಾಕಿದ್ದೇವೆ. ಬಡವರು, ಕಾರ್ಮಿಕರ ಸೊಸೈಟಿಗಳು ಯಾವುದೇ ನಿಯಮಗಳನ್ನು ಹಾಕಿದ್ದಾರೆ ಅದರ ಪ್ರಕಾರ ಯಾರು ಯಾರೇ ಲೇಔಟು ಮಾಡಲಿ-ಅವರವರ ಜಾತಿಗೆ ಸಂಬಂಧಪಟ್ಟಂತೆ ಮಾಡಕೂಡದು ಅದು ಆಗಬಾರದು ಎನ್ನುವ ಏನು ಉದ್ದಿಶ್ಯ ಇದೆ ಅದಕ್ಕೆ ತದ್ವಿರುದ್ಧವಾಗಿ ಆಗುತ್ತಿದೆ ಎಂಬ ಆತಂಕ ಇರುವುದರಿಂದ ಕೆಲವು ನಿಯಮಗಳನ್ನು ಮಾಡಿದ್ದೇವೆ. ಇದರ ಪ್ರಕಾರ ಎಲ್ಲರಿಗೂ ಒಳ್ಳೆಯದು ಎಂದು ನನ್ನ ಆಸೆ. ರೆವಿನ್ಯೂ ಸೈಟುಗಳ ಬಗ್ಗೆ ಶ್ರೀಮಾನ್ ಶಾಮಣ್ಣನವರು, ನಾಗಣ್ಣನವರು ಮತ್ತು ವಾಟಾಳ್ ನಾಗರಾಜ್ ರವರು ಹೇಳಿದ್ದಾರೆ. ಮೊನ್ನೆ ತಾನೇ ಸರ್ಕಾರ ಹುಕುಂ ಮಾಡಿದ್ದೇವೆ ಯಾರು ಯಾರು ಪ್ರಿಲಿಮಿನರಿ ನಿವೇಶಗಳನ್ನು ಹೊಂದಿ ಯಾರು ಯಾರು ರೆವಿನ್ಯೂ ಸೈಟು ಪರ್ಚೇಸ್ ಮಾಡಿದ್ದಾರೆ ಅಂಥವರಿಗೆ ಅವರ ಸೈಟುಗಳನ್ನು ಅವರಿಗೇ ಕೊಡಬೇಕು ಎಂದು ಆದೇಶ ಕಳುಹಿಸಿದ್ದೇನೆ. ಬಡವರಾದರೆ ಅಭ್ಯಂತರವಿಲ್ಲ. ಬಡವರಿಗೆ ನಿವೇಶನ ಕೊಡಬೇಕು ಎಂದು ಉದ್ದಿಶ್ಯ ಪಟ್ಟಾಗ ರೆವಿನ್ಯೂ ಸೈಟ್ ತೆಗೆದುಕೊಂಡು ಮನೆ ಕಟ್ಟಿಕೊಳ್ಳುತ್ತೇವೆ ಎಂದರೆ ನಮ್ಮ ಆತಂಕವೇನು ಇಲ್ಲ. ಕೆಲವರು ರೆವಿನ್ಯೂ ಸೈಟ್ ತೆಗೆದುಕೊಂಡು ವ್ಯಾಪಾರ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ನಾವು ಹಸ್ತಕ್ಷೇಪ ಮಾಡಬೇಕಾಗುತ್ತದೆ: ಸರ್ವೇಸಾಮಾನ್ಯವಾಗಿ ಸರ್ಕಾರ ಉದ್ದಿಶ್ಯ ಪಟ್ಟಿರುವುದು ಎಲ್ಲರಿಗೂ ಸೈಟು ಸಿಕ್ಕಬೇಕು ನಿರ್ಗತಿಕರಿಗೆ, ಬಡವರಿಗೆ ಸಿಕ್ಕಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದ್ದೇವೆ. ಅದನ್ನು ಸಾಧನೆ ಮಾಡಲಿಕ್ಕೆ ಆದೀತು ಎನ್ನುವ ಇಚ್ಛೆ ನನ್ನದು ಎಂದು ಇಷ್ಟು ಹೇಳಿದ್ದೇನೆ.

ಇನ್ನು ಕೊನೆಯದಾಗಿ ಶ್ರೀಮಾನ್ ನಾಗಣ್ಣನವರು ಎತ್ತಿರತಕ್ಕ ಪ್ರಶ್ನೆಗೆ ಉತ್ತರ ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ. ಇವರು ಬಸಪ್ಪ ಸರ್ಕಲ್‌ನಲ್ಲಿ ಒಂದು ಜಮೀನು ಇದೆ, ಬಸವಲಿಂಗಪ್ಪನವರು ಅದರಲ್ಲಿ ಆಸಕ್ತಿ ವಹಿಸಿದ್ದಾರೆಂದು ಹೇಳಿದರು. ಆಶಕ್ತಿ ವಹಿಸಲಿಕ್ಕೆ ಬೇಕು ಇಲ್ಲದಿದ್ದರೆ ಕೆಲಸವಮಾಡುವುದಕ್ಕೆ ಆಗುವುದಿಲ್ಲ. ಆಸಕ್ತಿ ಎನ್ನುವುದರಲ್ಲಿ ಎರಡು ವಿಧ ಒಂದು ಆಸಕ್ತಿ, ಇನ್ನೊಂದು ದುರಾಸಕ್ತಿ. ದುರಾಸಕ್ತಿ ಯಾರಿಗೆ ಇರುತ್ತದೆ ಅದು ಕೆಟ್ಟದ್ದು ಆಸಕ್ತಿ ವಹಿಸಿವರೆ ಕೆಟ್ಟದ್ದು ಏನೂ ಅಲ್ಲ. ಸಾವಿರಾರು ಅರ್ಜಿಗಳು ಬರುತ್ತವೆ ಸೈಟುಗಳು ಬೇಕು ಎಂದು ಹೇಳುತ್ತಾರೆ ಕೊಡಿ ಎಂದು ಬರೆಯುತ್ತೇನೆ. ಕೊಡಿ ಎಂದು ಹೇಳಿದರೆ ನನ್ನ ಉದ್ದಿಶ್ಯ ಅವರಿಗೆ ಒಂದು ಸೈಟ್ ಸಿಕ್ಕಿ ಸುಖವಾಗಿ ಇರಲೆಂದು. ಇಂಥಾದ್ದು ಆಸಕ್ತಿಯೇ ? ಇದು ಸರಿಯೋ ತಪ್ಪೋ? ಜನಗಳಿಗೆ ಉಪಕಾರ ಆಗುವ ಹಾಗೆ ಇದ್ದರೆ ಮಾಡೇ ಮಾಡುತ್ತೇವೆ. ದುರಾಸಕ್ತಿ ಯಾವಾಗ ಆಗುತ್ತದೆ ಆಗ ದಯಮಾಡಿ ಇದೇ ಸದನದಲ್ಲಿ ಕ್ವೆಶ್ಚನ್ ಮಾಡಬಹುದು. ಯಾವ ಯಾವ ಕೆಲಸಗಳಲ್ಲಿ ದುರಾಸಕ್ತಿ ಇಟ್ಟುಕೊಂಡು ಕೆಲಸಮಾಡಿದ್ದೇನೆ ಅದಕ್ಕೆ ತಮಗೆ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಬಸಪ್ಪ ಸರ್ಕಲ್‌ನ ವಿಚಾರದಲ್ಲಿ ಆಸಕ್ತಿಯಿಲ್ಲ, ಅದು ದುರಾಸಕ್ತಿಯೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅದು ಸುಮ್ಮನೆ ವಿಶ್ಲೇಷಣೆಯ ಮಾತು. ನಾನು ಲಾಯರು ಆಗಿದ್ದಾಗ ಕಕ್ಷಿಗಾರರು ಸಾವಿರಾರು ಜನ ಬರುತ್ತಾರೆ. ಲಾಯರ್ ಕೆಲಸ ಮಾಡಬೇಕು ಅವರ ಹತ್ತಿರ ದುಡ್ಡು ವಸೂಲು ಮಾಡಬೇಕು ಅದು ನನ್ನ ಕರ್ತವ್ಯ. ಕಾನೂನು ಪ್ರಕಾರ ಎಲ್ಲಾ ಲಾಯರು ಫೀಸ್ ವಸೂಲು ಮಾಡುತ್ತಾರೆ. ಕಕ್ಷಿಗಾರರು ಬಂದೇ ಬರುತ್ತಾರೆ. ಅದರಲ್ಲಿ ಅವರು ಒಬ್ಬ ಕಕ್ಷಿಗಾರರು ಇರಬಹುದು. 4–5 ವರ್ಷಗಳ ಹಿಂದಿನ ಮಾತು ಲಾಯರಾಗಿದ್ದಾಗ ಕೋರ್ಟಿನಲ್ಲಿ ವಾದ ಮಾಡಿರಬಹುದು ವಿವಾದ ಮಾಡಿರಬಹುದು.

ಶ್ರೀ ಎಚ್. ಡಿ. ದೇವೇಗೌಡ.—ದುಡ್ಡು ತೆಗೆದುಕೊಂಡಿರಬಹುದು !

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಕಷ್ಟ ನಿಮಗೇನು ಗೊತ್ತು ? ನೀವು ಲಾಯರ್ ಕೆಲಸ ಮಾಡಿದರೆ ಗೊತ್ತಾಗುತ್ತದೆ. ಎಲ್ಲಾ ಲಾಯರುಗಳು ಬೇರೆಯವರಿಂದ ದುಡ್ಡು ವಸೂಲು ಮಾಡೇ ಜೀವನ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ಜೀವನ ಮಾಡುವುದಕ್ಕೆ ಆಗುವುದಿಲ್ಲ. ನಾನು ಸುಮಾರು 5 ವರ್ಷಗಳ ಹಿಂದೆ ಲಾಯರು ಆಗಿರಬಹುದು. ಶಂಭುಲಿಂಗಸ್ವಾಮಿ ಮಠದಲ್ಲಿ ಹರಿಜನರು ವಾಸಿಸುತ್ತಿದ್ದಾರೆ. ಅವರಿಗೆ ಅದು ಶಂಭುಲಿಂಗ ಸ್ವಾಮಿ ಸಂಬಂಧ ಇರಬೇಕು ಎಂದು ಕಾಣುತ್ತದೆ ಆ ಜಮೀನು ಅವರದು ಎಂದು ನೂರಾರು ವರ್ಷಗಳಿಂದ ಕಾರ್ಪೊರೇಷನ್‌ನಲ್ಲಿ ದಾಖಲಾತಿ ಇದೆ. ಈ ಒಂದು ಆಧಾರದ ಮೇಲೆ ಆ ಮಠ ಅವರಿಗೆ ಸೇರಬೇಕು ಎಂದು ಲಾಯರು ಆಗಿದ್ದಾಗ ವಾದಿಸಿರಬಹುದು. ನನ್ನ ತಿಳುವಳಿಕೆ ಪ್ರಕಾರ 4 ವರ್ಷಗಳ ಹಿಂದೆ ಈ ಕೆಲಸ ಮಾಡಿರುತ್ತೇನೆ. ಆಗ ನಾನು ಅಧಿಕಾರದಲ್ಲಿ ಇದ್ದಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಎಲೆಕ್ಷನ್‌ನಲ್ಲಿ ಸೋತಿದ್ದಿರಿ, ನೀವು ಇರಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಏತಕ್ಕೆ ಸೋತಿದ್ದೆ ನಿಮಗೆ ಏನು ಗೊತ್ತು ? ನಮ್ಮ ನಮ್ಮವರೇ ಹೊಡೆದಾಡಿ ಸೋತಿದ್ದು. 3–4 ವರ್ಷಗಳು ರಾಜಕೀಯಕ್ಕೆ ಬಂದಾಗ ಲಾಯರ್ ಕೆಲಸ ಬಿಟ್ಟೆ. ಹೈಕೋರ್ಟಿನಲ್ಲಿ ಮಾತ್ರ ಪ್ರಾಕ್ಟೀಸ್ ಮಾಡುತ್ತಾ ಇದೆ. ಕೆಳಗಿನ ಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡುವುದು ಬಿಟ್ಟೆ. ಬಿಟ್ಟ ಮೇಲೆ ಆಸಕ್ತಿ ಯಾವುದು ? ಹೋಗಲಿ ಅಲ್ಲಿರತಕ್ಕ ಪರಿಸ್ಥಿತಿ ತಮಗೆ ಹೇಳಬೇಕು ಎಂದರೆ ನೂರಾರು ಗುಡಿಸಲುಗಳು ಇವೆ ನೂರಾರು ಜನ ಬಹಳ ದಿವಸಗಳಿಂದ ಇದ್ದಾರೆ, ಒಬ್ಬರಿಗೊಬ್ಬರು ಹೊಡೆದಾಡುತಿದ್ದಾರೆ, ನನಗೆ ಗೊತ್ತಿದೆ. ನೂರಾರು ಹಕ್ಕುದಾರರು ಇದ್ದಾರೆ, ಸಾವಿರಾರು ಇರಬಹುದು ಗೊತ್ತಿಲ್ಲ. ಯಾರು ಯಾರು ಗುಡಿಸಲು ಹಾಕಿಕೊಂಡು ಇದ್ದಾರೆ ಆ ಗುಡಿಸಲು ನನ್ನದು ಎಂದು ಹೇಳುತ್ತಾರೆ. ಹೊಡೆದು ಹಾಕಿದರೆ ಅವರು ಕೋರ್ಟಿಗೆ ಹೋಗುತ್ತಾರೆ, ಎಲ್ಲಾ ಕೋರ್ಟಿನಲ್ಲಿ ಇರುತ್ತದೆ. ಆಸಕ್ತಿ ಏನು ಬಂತು ? ಆದುದರಿಂದ ಯಾರೋ ಒಬ್ಬರು ಹರಿಜನರು ಒಂದು ಮಠ ಆಸ್ತಿ ಬಗ್ಗೆ ಹೊಡೆದಾಟ ಮಾಡಿದಾಗ ಲಾಯರಾಗಿ ವಾದ ಮಾಡುವುದು ತಪ್ಪಲ್ಲ. ನಾಗಣ್ಣನವರು ಹೇಳುತ್ತಾರೆ, ಹಿಂದೆಲ್ಲಾ ರಾಜಿನಾಮೆ ಕೊಡಿ ಎಂದು ಹೇಳುತ್ತಿದ್ದರು, ಈಗ ಡಿಸ್‌ಮಿಸ್ ಮಾಡಿ ಎಂದು ಹೇಳುತ್ತಿದ್ದಾರೆ. ರಾಜೀನಾಮೆ ಕೊಡುವುದನ್ನು ಮುಗಿಸಿದರು ಅದು ಹೋಯಿತು ಡಿಸ್ ಮಿಸ್ ಮಾಡಿರಿ. ರಾಜಿನಾಮೆ ಬೇಕಿಲ್ಲ. ಆ ಪದ ಹೋಗಿ ಈ ಪದ ಉಪಯೋಗಿಸುತ್ತಿದ್ದಾರೆ. ಆದರೆ ನನಗೆ ಒಂದು ಜ್ಞಾಪಕಕ್ಕೆ ಬರುತ್ತಿದೆ. ಒಂದು ಕಡೆ ಹೊಸದಾಗಿ ಮದುವೆಯಾದ ದಂಪತಿಗಳು ವಾಸಮಾಡುತ್ತಿದ್ದರು, ಬಹಳ ಚೆನ್ನಾಗಿ ದಾಂಪತ್ಯ ಜೀವನವನ್ನು ನಡೆಸುತ್ತಾ ಇರಬೇಕಾದರೆ ಪಕ್ಕದ ಮನೆಯಲ್ಲಿ ಒಬ್ಬ ಮುಂಡಾಕಿ ಇದ್ದರು. ಅವರು ಸುಖವಾಗಿ ಜೀವನ ಮಾಡುವುದನ್ನು ನೋಡಿ ಸಹಿಸಲಾರದೆ ಪ್ರತಿ ದಿವಸ ಕೈ ನೆಟ್ಟಿಗೆ ಮುರಿಯುವುದು, ಇವರು ಹಾಳಾಗಿ ಹೋಗಲಿ ಎಂದು ಹೇಳುವುದು ಈ ರೀತಿ ಮಾಡುತ್ತಿದ್ದರಂತೆ, ಹಾಗೆ ನಾಗಣ್ಣನವರು ನನ್ನನ್ನು ಡಿಸ್‌ಮಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇ ಗೌಡ.—ಗರೀಬಿ ಹಟಾವ್ ಅದಮೇಲೆ ಅವಕಾಶ ಆಗಲಿಕ್ಕಿಲ್ಲ. ಆ ವಾದ ಹೇಳುವುದು ಕಷ್ಟ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್.—ನಾಗಣ್ಣನವರು ಮಂತ್ರಿ ಆಗಬೇಕೆಂದು ಅವರಿಗೆ ಆಸೆ ಇಲ್ಲ, ಅವರು ಎಂದೂ ಕೇಳಿಲ್ಲ. ಯಾವುದೇ ಪಕ್ಷ ಆಡಳಿತಕ್ಕೆ ಬರಲಿ ಅವರು ವಿರೋಧಪಕ್ಷದಲ್ಲಿ ಇರುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ನನಗೆ ಬಹಳ ಚೆನ್ನಾಗಿ ಗೊತ್ತು ? ನಿಮ್ಮದು ನನಗೆ ಏನೂ ಗೊತ್ತಿಲ್ಲವೆಂದು ತಿಳಿಯಬೇಡಿ. ನನಗೆ ಗೊತ್ತು.

ಶ್ರೀ ವಾಟಾಳ್ ನಾಗರಾಜ್.—ನಮ್ಮದು ಏನು ಗೊತ್ತು ಅವರು ಹೇಳಲಿ !

12 NOON

ಶ್ರೀ ಬಿ. ಬಸವಲಿಂಗಪ್ಪ.—ಶ್ರೀ ವಾಟಾಳ್ ನಾಗರಾಜ್‌ರವರು ಕನ್ನಡ ಚಳುವಳಿಗಾರರು. ಬಹಳ ಹಿಂದಿನಿಂದಲೂ ಬೆಂಗಳೂರಿನಲ್ಲಿ ಕನ್ನಡ ಚಳುವಳಿಗಾರರು ಏನೇನು ಮಾಡಿದ್ದಾರೆ ಅವೆಲ್ಲಾ ಗೊತ್ತು. ಅವರ ಕೇಸು ನಡೆಸಿದ್ದೇನೆ, ಅವರು ನನಗೆ ಕಕ್ಷಿಗಾರರು, ಫೀಸ್ ಕೊಟ್ಟಿಲ್ಲ.

ಶ್ರೀ ಅಜೀಜ್ ಸೇಟ್.—ಫೀಸ್ ಕೊಡದೇ ಲಾಯರ್ ಆಗಿದ್ದರೆ ಎಷ್ಟು ಕೇಸ್ ಉಂಟೆಂಡ್ ಮಾಡಿದಿರಿ, ಎಷ್ಟು ಕೇಸು ಡಿಸ್ಮಿಸ್ ಆಯಿತು ?

ಶ್ರೀ ಬಿ. ಬಸವಲಿಂಗಪ್ಪ.—ಅವರ ಸ್ನೇಹ ಮಾಡಿದೆ. ಹಾಗೆಯೇ ಶ್ರೀಮಾನ್ ನಾಗಣ್ಣನವರು ಬಹಳ ವರ್ಷದಿಂದಲೂ ಪರಿಚಯ. ಅವರೂ ಕೌನ್ಸಿಲರ್ ಆಗಿದ್ದಾಗ ನಾನೂ ಕೌನ್ಸಿಲರ್ ಆಗಿದ್ದೆ. ಅವರ ಬಗ್ಗೆ ಒಳ್ಳೇದು ಯೋಚನೆ ಮಾಡಿದ್ದೇನೆಯೇ ಹೊರತು ಕೆಟ್ಟದ್ದು ಎಂದೂ ಯೋಚನೆ ಮಾಡಿಲ್ಲಾ. ನನ್ನ ಬಗ್ಗೆ ಯಾವ ಮಾನ್ಯ ಸದಸ್ಯರೂ ಅಂದೇ ಇರುವಾಗ ಶ್ರೀಮಾನ್ ನಾಗಣ್ಣನವರೊಬ್ಬರೇ ಹೇಳಬೇಕಾಗಿದ್ದರೆ ಆಕ್ರೋಶ ಇರಲೇ ಬೇಕು. ಮೊನ್ನೆ ಬ್ಯಾಕ್‌ವರ್ಡ್ ಕಮೀಷನ್ ಮಾಡುವಾಗ ಅದರಲ್ಲಿ ನಾಗಣ್ಣನವರು ಇರಲೇ ಬೇಕೆಂದು ಹೇಳಿದ್ದೇನೆ. ಅವರ ಮೇಲೆ ನನಗೆ ಕೆಟ್ಟ ಅಭಿಪ್ರಾಯ ಇದ್ದಿದ್ದರೆ ನಾನು ಏತಕ್ಕೆ ಹೇಳುತ್ತಿದ್ದೆ ? ಅವರು ಬಹಳ ವರ್ಷದಿಂದ ನಿರ್ಗತಿಕ ಜನಾಂಗದ ಉದ್ಧಾರಕ್ಕಾಗಿ ಹೋರಾಟ ಮಾಡಿಕೊಂಡು ಬಂದವರು. ಅದಕ್ಕೋಸ್ಕರ ಸಹಕಾರ ಮನೋಭಾವದಿಂದ ಅವರನ್ನು ಈ ಕಮೀಷನ್‌ನಲ್ಲಿ ಹಾಕಿದ್ದೇವೆ. ಅವರೂ ಕೂಡ ನನ್ನ ಬಗ್ಗೆ ಇಂತಹ ಒಂದು ಆಕ್ರೋಶ ಇಟ್ಟುದು ಸರಿಯಲ್ಲ. ನಾನು ಹೇಳದೇ ಹೋಗಿದ್ದರೆ ಅವರು ಮೆಂಬರ್ ಆಗುವ ಪ್ರಶ್ನೆಯೇ ಬರುತ್ತಾಇರಲಿಲ್ಲ. ಈರೀತಿ ಮಾಡಿದ್ದಕ್ಕೆ ತಕ್ಕ ಪ್ರತಿಫಲ ಇದೇನು ?

ಶ್ರೀ ಕೆ. ಎಂ. ನಾಗಣ್ಣ.—ಯಾವ ಮೆಂಬರ್‌ತನವೂ ನನಗೆ ಬೇಕಿಲ್ಲ. ಶ್ರೀಮಾನ್ ಬಸವಲಿಂಗಪ್ಪನವರ ಬಗ್ಗೆ ನನಗೆ ಅಭಿಮಾನ ಇದೆ, ಆದರೆ ಮಂತ್ರಿಗಳಾದ ಬಸವಲಿಂಗಪ್ಪನವರ ನಡವಳಿಕೆಗಳ ಮೇಲೆ ನನಗೆ ಎಳ್ಳಷ್ಟೂ ಅಭಿಮಾನ ಇಲ್ಲ, ದುರಭಿಮಾನ ಇದೆ. ಅವರಿಂದ ನಾನು ಯಾವುದಕ್ಕಾದರೂ ಮೆಂಬರ್‌ತನ ಆಗಿದ್ದರೆ ಈಗಲೇ ನಾನು ರಾಜೀನಾಮೆ ಕೊಡುತ್ತೇನೆ. ಯಾವ ಮಂತ್ರಿಗಳ ದಾಕ್ಷಿಣ್ಯವೂ ಬೇಕಿಲ್ಲ. ಯಾವತ್ತೂ ಅವರ ಹತ್ತಿರ ಹೋಗುವುದಿಲ್ಲ. ನನ್ನ ಸ್ವಂತಕ್ಕಾಗಿ ಇದುವರೆಗೂ ಹೋಗಲಿಲ್ಲ. ನನ್ನ 36 ವರ್ಷದ ರಾಜಕೀಯದೊಳಗೆ ಒಬ್ಬರಾದರೂ ಹೇಳಲಿ, ಈಗಲೂ ಹೋಗಿಲ್ಲ, ಮುಂದೂ ಹೋಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ದುರಭಿಮಾನ ನನಗೆ ಇಲ್ಲ. ಹಿಂದೆ ಹೇಳಿದ ಹಾಗೆ ಮುದಿ-ಮುದುಕಿ ದುರಭಿಮಾನ ಇರಕೂಡದು. ನಾನು ಸಂಸಾರ ಚನ್ನಾಗಿ ಮಾಡಿಕೊಂಡು ಹೋಗುತ್ತೇನೆ. ಹೇಗೆ ಮಾಡಿಕೊಂಡು ಹೊಗಬೇಕೆಂಬುದು ನನಗೆ ಗೊತ್ತು. ಮುದಿ-ಮುದುಕಿ ದುರಭಿಮಾನ ಅವರೇ ಇಟ್ಟುಕೊಳ್ಳಲಿ.

ಶ್ರೀ ಕೆ. ಎಂ. ನಾಗಣ್ಣ.—ನಾವು ಮಾತನಾಡಿದರೂ ಪರವಾಯಿಲ್ಲಾ, ಆದರೆ ಮಂತ್ರಿಗಳು ಮಾತನಾಡಬೇಕಾದರೆ ಮರ್ಯಾದೆಯಿಂದ ಮಾತನಾಡಬೇಕು. ಅವರೂ ಮುದುಕರಾಗುತ್ತಾರೆ, ಆದರೆ ಅವರು ನನ್ನ ವಯಸ್ಸಿನವರೆಗೆ ಇರುತ್ತಾರೋ ಇಲ್ಲವೋ ಗೊತ್ತಿಲ್ಲ. ಎಲ್ಲರೂ ಮುದುಕರಾಗುತ್ತಾರೆ, ಅವರ ತಂದೆಯವರೂ ಮುದುಕರಾಗಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಮುದುಕನಾದರೆ ನಿಮ್ಮ ಹಾಗೆ ವರ್ತನೆ ಮಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇದು ತೀರಾ ಅತಿರೇಕವಾಯಿತು. ಬಾಯಿಗೆ ಬಂದಹಾಗೆ ಮಾತನಾಡುವುದು ಸರಿಯಲ್ಲ.

ಶ್ರೀ ಕೆ. ಎಂ. ನಾಗಣ್ಣ.—ನಾವು ಮಾಡಿದ ಕೆಲಸ ನೀವು ಯಾವತ್ತೂ ಮಾಡುವುದಿಲ್ಲ. ಬಸವಲಿಂಗಪ್ಪನವರು ಯಾರು, ನಾಗಣ್ಣನವರು ಯಾರು ಎಂದು ದೇಶದ ಜನಗಳೇ ಹೇಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ನನ್ನನ್ನು ಡಿಸ್ಮಿಸ್ ಮಾಡಿ ಎಂದು ಹೇಳಿದ್ದು ಸರಿಯೇ ?

ಶ್ರೀ ಕೆ. ಎಂ. ನಾಗಣ್ಣ.—ಆರೀತಿ ಅನಿಸಿತು ಹೇಳಿದ್ದೇನೆ. ದೇವರಾಜ್ ಅರಸ್‌ರವರಿಗೂ ಹೇಳುತ್ತೇನೆ. ಕೊಡುವುದು ಬಿಡುವುದು ಅವರು. ಯಾವ ಮಂತ್ರಿಗಳಿಗೂ ನಾನು ಭಯಪಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಯಾರೂ ಶಾಶ್ವತವಲ್ಲ. ಈ ಸರ್ಕಾರವನ್ನು ಡಿಸ್ಮಿಸ್ ಮಾಡಿ ಎಂದು ನೂರು ಸಾರಿ ಹೇಳುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—1936 ರಿಂದ 1973 ರವರೆಗೂ ನಿಮ್ಮ ಕಥೆ ಒಂದು ಸಾವಿರ ಇದೆ. ನನ್ನ ಬಗ್ಗೆ ಮಾತನಾಡುವುದಕ್ಕೆ ಯಾರಿಗೂ ಧೈರ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಬಸವಲಿಂಗಪ್ಪನವರಿಗೆ ಗೌರವ ಕೊಡೋಣ. ಆದರೆ ಅವರು ಬೇಜವಾಬ್ದಾರಿಯಿಂದ ವರ್ತನೆ ಮಾಡುವುದು ಸರಿಯಲ್ಲ.

ಶ್ರೀ ಕೆ. ಎಂ ನಾಗಣ್ಣ.—ನನ್ನ 36 ವರ್ಷದ ರಾಜಕೀಯ ಜೀವನದಲ್ಲಿ ಏನಾದರೂ ಇದ್ದರೆ ಹೇಳಲಿ. ಯಾರಿಗೆ ಧೈರ್ಯ ಇದೆ ?

ಶ್ರೀ ಟಿ. ಆರ್. ಶಾಮಣ್ಣ.—ನಾಗಣ್ಣನವರು 36 ವರ್ಷದ ಆಸ್ತಿ ವಿವರಗಳನ್ನು ಕೊಡುತ್ತಾರೆ, ಮಿಕ್ಕವರೂ ಕೂಡ ಕೊಡುತ್ತಾರೆಂದು ಹೇಳಲಿ.

Mr. DEPUTY SPEAKER.—Let us use sobre language and go ahead with the work.

ಶ್ರೀ ವಾಟಾಳ್ ನಾಗರಾಜ್.—ನಾಗಣ್ಣನವರು ಆಸ್ತಿ ಮಾಡಿರುವ ಬಗ್ಗೆ ಅಂಕಿ ಅಂಶಗಳನು ಕೊಡುತ್ತಾರೆ. ಬಸವಲಿಂಗಪ್ಪನವರು ಮತ್ತು ಅವರ ಕ್ಯಾಬಿನೆಟ್‌ನವರು ಕೊಡುವುದಕ್ಕೆ ತಯಾರು ಆಗಿದ್ದಾರೆಯೇ ?

ಶ್ರೀ ಕೆ. ಎಂ. ನಾಗಣ್ಣ.—16 ವರ್ಷ ಕಾರ್ಪೋರೇಷನ್ ಮುನಿಸಿಪಾಲಟಿಯಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದೆ. ಟ್ರಸ್ಟ್‌ಬೋರ್ಡ್ ಪ್ರಾರಂಭ ಆದಾಗ ಮೊದಲನೇ ಸದಸ್ಯನಾಗಿದ್ದೆ. ಎರಡು ಕಡೆಯಿಂದಲೂ ಒಂದು ಇಂಚು ಜಾಗ ತೆಗೆದುಕೊಂಡಿದ್ದನ್ನು ಸಾಬೀತು ಮಾಡಿದರೆ ರಾಜೀನಾಮೆ ಕೊಡುತ್ತೇನೆ ಒಂದು ಅರ್ಜಿ ಸರ್ಕಾರಕ್ಕೆ ಹಾಕಿಲ್ಲ, ಟ್ರಸ್ಟ್‌ಬೋರ್ಡ್‌ಗೆ ಹಾಕಿಲ್ಲ. ಇಂತಹ ರಾಜಕೀಯ ನಡೆಸಿದ್ದೇನೆ. ಇವರ ಕತೆ ಒಂದು ಸಾವಿರ ಇದೆ. ಆದರೆ ನನ್ನ ಬಗ್ಗೆ ಮಾತನಾಡುವುದಕ್ಕೆ ಎಲ್ಲರೂ ಹುಷಾರಾಗಿರಬೇಕು.

ಶ್ರೀ ಟಿ. ಆರ್. ಶಾಮಣ್ಣ.—ನಾಗಣ್ಣನವರ ಪ್ರತಿಯೊಂದು ಅಂಶವನ್ನೂ ನೋಡಿದ್ದೇನೆ. ಅವರು ಎಷ್ಟು ಸ್ವಚ್ಛ ಹೃದಯರು ಎನ್ನುವುದು ಎಲ್ಲರಿಗೂ ಗೊತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ನಾಗಣ್ಣನವರ ಬಗ್ಗೆ ಈವೊತ್ತಿನವರೆಗೂ ಗೌರವ ಇದೆ ಅವರ ಬಗ್ಗೆ ಬಳ್ಳಷ್ಟೂ ಕೂಡ ಚಕಾರ ಶಬ್ದ ಎತ್ತಿದ್ದರೆ ಹೇಳಲಿ. ಅಷ್ಟು ಗೌರವದಿಂದ ಕಂಡಿದ್ದೇನೆ. ಅವರು ಕೌನ್ಸಿಲರ್ ಆಗಿದ್ದರು, ನಾನೂ ಕೌನ್ಸಿಲರ್ ಆಗಿದ್ದೆ. ನಂತರ ನಿನ್ನೆಯ ವರೆಗೂ ಕೂಡ ಅಷ್ಟು ಗೌರವದಿಂದ ಕಂಡಿದ್ದೆ. ಒಳ್ಳೆಯ ಕೆಲಸ ಮಾಡಿದ್ದರೆ ಒಳ್ಳೆಯಕೆಲಸ ಮಾಡಿದ್ದಾರೆ ಎಂದು ಹೇಳಲಿ. ಕೆಟ್ಟ ಕೆಲಸ ಮಾಡಿದ್ದರೆ ಬಯ್ಯಲಿ. ಅಭ್ಯಂತರವಿಲ್ಲ. ನಾನೇನಾದರೂ ಒಳ್ಳೆ ಕೆಲಸ ಮಾಡಿದ್ದನ್ನು ಹೇಳುವುದಕ್ಕೆ ಇಷ್ಟ ಇಲ್ಲದೆ ಗಾಳಿಗೋಪುರ ಕಟ್ಟಿಕೊಂಡು ನನ್ನನ್ನು ಡಿಸ್ಮಿಸ್ ಮಾಡಿ ಎಂದು ಅವರು ಹೇಳಿದರು. ಅವರ ಬಗ್ಗೆ ತಮಗೆ ಎಷ್ಟು ಗೌರವ ಇದೆಯೋ ನನಗೆ ಅದಕ್ಕಿಂತ ಕಡಿಮೆ ಏನೂ ಇಲ್ಲ. 30 ವರ್ಷದವರೆಗೂ ನಾನ ಅವರ ಬಗ್ಗೆ ಯಾವರೀತಿ ವರ್ತನೆ ಮಾಡಿಕೊಂಡು ಬಂದಿದ್ದೇನೆ ಎನ್ನುವುದು ಗೊತ್ತು. ಆದಕ್ಕೆ ನಾನು ಹೇಳಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ನಾನು ಇನ್ನಿಬ್ಬರ ಮೇಲೆ ಅಪಾದನೆ ಮಾಡಿದ್ದೆ. ಒಂದನೆಯದು ಇಬ್ರಾಹಿಂ, ಎರಡನೆಯದು ನರಸಿಂಹಯ್ಯ, ಆ ಬಗ್ಗೆ ಹೇಳಲಿಲ್ಲಾ.

ಶ್ರೀ ಬಿ. ಬಸವಲಿಂಗಪ್ಪ.—ಇಬ್ರಾಹಿಂ ಅನ್ನತಕ್ಕಂಥಾವರು ಕಂಟ್ರಾಕ್ಟರ್. ಇರಬಹುದು, ಅಂಥಾವರು ಸಾವಿರ ಇರಬಹುದು. ಇನ್ನೊಬ್ಬರು ನರಸಿಂಹಯ್ಯ ಅನ್ನುವವರು ಯಾರು ಎಂದು ನನಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಟ್ರಸ್ಟ್ ಬೋರ್ಡ್ ಸೈಟುಗಳ ಹಂಚಿಕೆ ವಿಷಯದಲ್ಲಿ ಶ್ರೀ ಕೆ. ಕೆ. ಮೂರ್ತಿ ಎಂಬುವವರಿಗೆ ರಾಜಮಹಲ್ ಬಡಾವಣೆಯಲ್ಲಿ ಒಂದು ದೊಡ್ಡ ಸೈಟನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಬಡವರ ಬಂಧುಗಳು. ಇಂಥವರು ಇವರಿಗೆ ಸೈಟನ್ನು ಏತಕ್ಕಾಗಿ ಕೊಟ್ಟರು ? ಅವರಿಗೆ ಬೆಂಗಳೂರಿನಲ್ಲಿ ಮನೆಯಿಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಸೈಟುಗಳನ್ನು ಹಂಚಿರುವ ಬಗ್ಗೆ ಪಟ್ಟಿಯನ್ನು ತರಿಸುತ್ತೇನೆ. ಅದು ಬೇರೆ ವಿಚಾರ. ಆದರೆ ನನಗೆ ತಿಳಿದಮಟ್ಟಿಗೆ ಶ್ರೀ ಕೆ.ಕೆ. ಮೂರ್ತಿ ಅವರು ಹರಾಜಿನಲ್ಲಿ ಸೈಟನ್ನು ತೆಗೆದು ಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ನನಗೆ ತಿಳಿದ ಮಟ್ಟಿಗೆ ಹರಾಜಿನಲ್ಲಿ ತೆಗೆದುಕೊಂಡಿಲ್ಲ; ಅಲಾಟ್‌ಮೆಂಟಿನಲ್ಲಿ ದೊಡ್ಡ ಸ್ಕೈಟನ್ನು ಮುಖ್ಯ ಮಂತ್ರಿಗಳ ಒತ್ತಾಯದ ಮೇಲೆ ಉದ್ದೇಶಪೂರ್ವಕ ವಾಗಿ ಕೊಟ್ಟಿದ್ದಾರೆಂದು ಗೊತ್ತಾಗಿದೆ. ಮಾನ್ಯ ಮಂತ್ರಿಗಳು ಸ್ಕೈಟುಗಳು ಅಲಾಟ ಆಗಿರುವ ಪಟ್ಟಿಯನ್ನು ತರಿಸಿ ಯಾವ ಕಾರಣದಿಂದ ಅಲಾಟ ಆಗಿದೆ ಎಂಬುದನ್ನು ನೋಡಬೇಕು. ಈ ಬಗ್ಗೆ ವಿವರಗಳನ್ನು ಸಭೆಗೆ ತಿಳಿಸ ಬೇಕು.

ಶ್ರೀ ಕೆ. ಪ್ರಭಾಕರ್.—ಪೌರಾಡಳಿತ ಸಚಿವರು ಬಡವರ ವಿಷಯದಲ್ಲಿ ಸಮಾಜವಾದ ತತ್ವಕ್ಕೆ ತಕ್ಕ ಹಾಗೆ ಆದಷ್ಟು ಜಾಗ್ರತೆ ದೊಡ್ಡ ಹೆಜ್ಜೆಯನ್ನು ಇಟ್ಟು ಕ್ರಾಂತಿಯನ್ನೇ ಮಾಡಿದ್ದಾರೆ. ಅದು ಬಹಳ ಸಂತೋಷದ ಸಮಾಚಾರ. ಬಡವರ ಬಗ್ಗೆ ಕ್ರಾಂತಿಯನ್ನು ಮಾಡಿರತಕ್ಕ ಎಷ್ಟು ಕೇಸುಗಳು ನಮ್ಮ ಸಮಾಜದಲ್ಲಿವೆ ಎನ್ನುವುದರ ಅರಿವು ನಮಗೆ ಇದೆ. ಸ್ವೀಪರ್ಸ್ ಮತ್ತು ಸ್ಕ್ಯಾವೆಂಜರ್ಸ್, ಸ್ಯಾನಿಟರಿ ವರ್ಕರ್ಸ್ ಎಸೆನ್‌ಯಾಷಿಲ್ ಸರ್ವಿಸ್ ಒಳಗೆ ಬಂದರೂ ಕೂಡ ಆ ಹುದ್ದೆಗಳನ್ನು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗೆ ಒಳಪಡಿಸದೆ, ಅವರಿಗೆ ಇರತಕ್ಕ ಸಂಬಳಸಾರಿಗೆಗಳನ್ನು ಅಪ್ ಗ್ರೇಡ್ ಮಾಡತಕ್ಕದ್ದು ಕಡ್ಡಾಯವಾಗಿ ಮನೆ ಕಟ್ಟಿ ಕೊಡುವುದನ್ನು ಸ್ಲಂ ಇಂಪ್ರೂವ್‌ಮೆಂಟ್ ಬೋರ್ಡ್ ಮೂಲಕ ಮಾಡುತ್ತೇವೆ ಎಂದು ಹೇಳಬಹುದು, ಈ ಕೆಲಸ ಗಳನ್ನೆಲ್ಲ ಧೈರ್ಯದಿಂದ ಮಾಡಿ ಆ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಪ್ರಾರ್ಥಿ ಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಹೌಸಿಂಗ್ ಬೋರ್ಡಿನಲ್ಲಿ ಕೂಡ ನಿವೃತ್ತಿಯೋಧರಿಗೆ ರಿಸರ್ವೇ ಷನ್ ಬಗ್ಗೆ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದ್ದೆ. ಅದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು

ಶ್ರೀ ಕೆ. ಎಂ. ನಾಗಣ್ಣ.—ಬಡಾವಣೆಗಳನ್ನು ಮಾಡುವಾಗ ಅವರವರ ಮನೆಗಳಿಗೆ ಹೋಗಿ ಅರ್ಜಿಗಳನ್ನು ತೆಗೆದುಕೊಂಡು ಬರಬೇಕಾಗಿತ್ತು ಎಂದು ಮಂತ್ರಿಗಳು ಹೇಳಿದರು. ಬೆಂಗಳೂರು ನಗರದಲ್ಲಿ ರೇಷನ್ ಕಾರ್ಡಿಗೆ ಜನ ಅವಸ್ಥೆ ಪಡುತ್ತಿದ್ದಾರೆ. ರೇಷನ್ ಕಾರ್ಡ ಪಡೆಯಲು ಉದ್ದಕ್ಯೂ ಗಳಲ್ಲಿ ಜನ ನಿಂತಿರುತ್ತಾರೆ. ಅವರವರ ಮನೆಗಳಿಗೇ ಅಧಿಕಾರಿಗಳನ್ನು ಕಳುಹಿಸಿ ರೇಷನ್ ಕಾರ್ಡ್ ಕೊಡುವ ವ್ಯವಸ್ಥೆಯನ್ನು ಏಕೆ ಮಾಡುವುದಿಲ್ಲವೆಂದು ನಾನು ಕೇಳುತ್ತಿದ್ದೇನೆ. ಬೆಂಗಳೂರ ನಗರಾ ಭಿವೃದ್ಧಿ ಮಂಡಲಿ ಜಯನಗರದಲ್ಲಿ ಸ್ಕೈಟುಗಳನ್ನು ಹಂಚಿದಾಗ ಆ ಕಾಲದಲ್ಲಿ ಸ್ಕೈಟುಗಳನ್ನು ಕೊಂಡುಕೊಳ್ಳಿ ಎಂದು ಒತ್ತಾಯ ಮಾಡಿದರೂ ಯಾರೂ ಹೋಗುತ್ತಿರಲಿಲ್ಲ. 1945ರಲ್ಲಿ ಗಾಂಧಿ ನಗರದಲ್ಲಿ ಸ್ಕೈಟುಗಳ ಹರಾಜು ನಡೆದಾಗ ಒಂದು ಚದುರ ಗಜಕ್ಕೆ ಮೂರು ರೂಪಾಯಿ ಕೊಟ್ಟು ಜನ ತೆಗೆದುಕೊಳ್ಳುತ್ತ ಇರಲಿಲ್ಲ. ಈ ಹೊತ್ತು ಅದರ ಬೆಲೆ 300ರೂಪಾಯಿ ಇದೆ. ಆಗಿನ ಪರಿಸ್ಥಿತಿ ಹಾಗಿತ್ತು. ಬೆಂಗಳೂರು ನಗರಾಭಿವೃದ್ಧಿ ಮಂಡಲಿ 1945-46 ರಲ್ಲಿ ಸ್ಥಾಪನೆಯಾದಾಗ ಅದರಲ್ಲಿ ಸದಸ್ಯರಾದ ಮೊದಲಿಗರಲ್ಲಿ ನಾನೂ ಒಬ್ಬ. ಆಗ ಸ್ಕೈಟುಗಳನ್ನು ಯಾವರೀತಿ ಹಂಚಿಕೆ ಮಾಡಲಾಗುತ್ತಿತ್ತು ಎಂದರೆ ಸ್ಕೈಟುಗಳ ವಿಂಗಡಣೆಯಾಗಿ ಅಲ್ಲಿ ಆಗಬೇಕಾದ ಕೆಲಸಗಳು ಮುಗಿದ ತಕ್ಷಣ ಸ್ಕೈಟುಗಳು ಇರುವ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿ ಸ್ಕೈಟು ಬೇಕಾಗಿರುವವರು ಅರ್ಜಿ ಹಾಕಬಹುದೆಂದು ತಿಳಿಸುತ್ತಿದೆವು. ಅರ್ಜಿಗಳ ಜೊತೆಯಲ್ಲಿ ಪ್ರಮಾಣ ಪತ್ರಿಕೆ ಕೊಡಬೇಕಾಗಿತ್ತು. ಅರ್ಜಿಗಳು ಬಂದ ನಂತರ ಅವನ್ನೆಲ್ಲ ವಿಂಗಡಣೆ ಮಾಡಿ ಎಷ್ಟು ಜನ ಸ್ಕೈಟಿಗೆ ಅರ್ಜಿ ಹಾಕಿದ್ದಾರೆ, ಎಷ್ಟು ಸ್ಕೈಟು ಗಳಿವೆ ಎಂಬುದನ್ನು ನೋಡಿಕೊಂಡು, ನೂರು ಅರ್ಜಿ ಬಂದಿದ್ದು, 20 ಸ್ಕೈಟುಗಳಿದ್ದರೆ, 10 ಜನರ ಅರ್ಜಿಗಳನ್ನು ಒಂದು ಕಡೆ ಹಾಕಿ 20 ಸ್ಕೈಟುಗಳ ನಂಬರುಗಳನ್ನು ಮತ್ತೊಂದು ಕಡೆ ಹಾಕಿ ಚೀಟಿ ಗಳನ್ನು ಎತ್ತಿ ಯಾರಿಗೆ ಸ್ಕೈಟು ಬಂದರೆ ಅವರಿಗೇ ಕೊಡುತ್ತಿದ್ದೆವು. ಆಗ ಸದಸ್ಯರು ಆ ನಂತರ ಬಂದವರು ನಾನು ಒಂದು ಸ್ಕೈಟು ತೆಗೆದುಕೊಳ್ಳುತ್ತೇನೆ ನೀನೂ ಒಂದನ್ನು ತೆಗೆದುಕೊ ಎನ್ನುವ ರೀತಿ ನಡೆಯುತ್ತ ಇದ್ದಾರೆ. ಯಾರೂ ಒಂದು ಸ್ಕೈಟನ್ನೂ ತೆಗೆದುಕೊಳ್ಳಲಿಲ್ಲ. ಆವಾಗ ಯಾವುದೇ ರೀತಿಯ ಭ್ರಷ್ಟಾಚಾರಕ್ಕೆ ಅವಕಾಶವಿಲ್ಲದಂತೆ ಕೆಲಸ ಮಾಡಿದ್ದೇವೆ. ಆಗ ಇದ್ದ ಚೇರ್‌ಮನ್ ಅವರಿಗೆ ಸಹ ಒಂದು ಮನೆ ಇಲ್ಲ. ಈಗ ಇರುವವರು ಒಂದು ವರ್ಷದಲ್ಲಿ ಬೇಕಾದಷ್ಟು ಸಂಪಾದನೆ ಮಾಡು ತ್ತಾರೆ.

ಬಸಪ್ಪ ಸರ್ಕಲ್ ಬಳಿಯ ಜಾಗದ ಬಗ್ಗೆ ಮಾನ್ಯ ಮಂತ್ರಿಗಳು ಏನು ವಿವರಣೆ ಕೊಟ್ಟಿದ್ದಾರೆ, ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆಯುತ್ತೇನೆ. ಅವರು ಅದರ ಬಗ್ಗೆ ಪೂರ್ಣ ವಿಚಾರ ಮಾಡಿ ಏನು ತೀರ್ಮಾನ ತೆಗೆದುಕೊಳ್ಳುತ್ತಾರೆಯೋ ತೆಗೆದುಕೊಳ್ಳಲಿ.

ಶ್ರೀ ಕೆ. ಶ್ರೀರಾಮುಲು.—ಸಣ್ಣ ನಗರವಾಗಲೀ, ದೊಡ್ಡ ಪಟ್ಟಣವಾಗಲೀ ಅಭಿವೃದ್ಧಿ ಹೊಂದಿರತಕ್ಕ ಜಾಗವಿರುತ್ತದೆ, ಅಭಿವೃದ್ಧಿ ಹೊಂದದೆ ಇರತಕ್ಕ ಜಾಗವಿರುತ್ತದೆ. ಈ ಪ್ರದೇಶಗಳಲ್ಲಿ ಯಾವ ಸ್ಥಳ ಅಭಿವೃದ್ಧಿ ಹೊಂದಿವೆಯೋ ಅಲ್ಲಿಯೇ ಹೆಚ್ಚು ಹಣವನ್ನು ಖರ್ಚು ಮಾಡುತ್ತಾರೆ ಮತ್ತು ಅಲ್ಲಿಯೇ ಹೆಚ್ಚು ಕೆಲಸಗಳನ್ನೂ ಮಾಡಿಸುತ್ತಾರೆ. ಅಭಿವೃದ್ಧಿ ಹೊಂದದೆ ಇರುವ ಜಾಗಗಳಲ್ಲಿ ಹಣವನ್ನು ಖರ್ಚು ಮಾಡುವುದಿಲ್ಲ. ಆದ್ದರಿಂದ ಅಭಿವೃದ್ಧಿ ಆಗದೆ ಇರುವಂಥ ಜಾಗಗಳಿಗೆ ಆದ್ಯತೆಯನ್ನು ಕೊಡುವಂತೆ ನೋಡಿಕೊಳ್ಳುತ್ತಾರೆಯೇ ?

ಶ್ರೀ ಸಿ. ಬೈರೇಗೌಡ.—ಅನೇಕ ನಗರಗಳಲ್ಲಿ ಕುಡಿಯುವ ನೀರಿನ ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಹಳ ವರ್ಷಗಳಿಂದ ಪೆಂಡಿಂಗ್ ಇದೆ. ಕೆಲಸವಾಗಿಲ್ಲ. ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ನಿಲ್ಲಿಸುವುದಾಗಿ ಹೇಳಿದ್ದಾರೆ. ಅದು ಒಳ್ಳೆಯದೇ. ಸರ್ಕಾರದ ನೀತಿಯಿಂದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯಲ್ಲಿ ಕೆಲಸ ಹೊಂದಾಣಿಕೆಯಿಂದ ಆಗುತ್ತಿಲ್ಲ. ಕೋಲಾರ ಪಟ್ಟಣದಲ್ಲಿ ಕುಡಿಯುವ ನೀರಿಗೆ ಸ್ವಲ್ಪ ತೊಂದರೆ ಬರುವ ಹಾಗಿದೆ. ಕೆರೆಯಲ್ಲಿ ಸ್ವಲ್ಪ ಮಾತ್ರ ನೀರಿದೆ. ಇನ್ನು ಒಂದೆರಡು ತಿಂಗಳು ಮಳೆ ಇಲ್ಲದೆ ಹೋದರೆ ಕುಡಿಯುವ ನೀರಿಗೆ ತೀವ್ರ ಕ್ಷಾಮ ಬಂದು ಜನಗಳಿಗೆ ತೊಂದರೆಯಾಗುತ್ತದೆ. ಅದೇ ರೀತಿ ಒಳಚರಂಡಿ ಯೋಜನೆ ಹತ್ತಾರು ವರ್ಷಗಳಿಂದ ಆಗಿಲ್ಲ. ಇದೇ ಪರಿಸ್ಥಿತಿ ರಾಜ್ಯದಲ್ಲಿ ಇನ್ನೂ ಅನೇಕ ಕಡೆ ಇರಬಹುದು. ಆದ್ದರಿಂದ ಈ ಎಲ್ಲ ಕೆಲಸಗಳನ್ನೂ ಬೇಗ ಮುಗಿಸುತ್ತಾರೆಯೇ ?

ಸೈಟುಗಳನ್ನು ಹಂಚುವುದರಲ್ಲಿ ಕೆಲವು ರಿಸರ್ವೇಷನ್ ಇಟ್ಟಿದ್ದಾರೆ. ಅದರ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಅದೇ ರೀತಿಯಾಗಿ ವರ್ಕಿಂಗ್ ಕ್ಲಾಸಸ್‌ಗೆ ರಿಸರ್ವೆಷನ್ ಬೆಂಗಳೂರಿನಲ್ಲಿ ಇದೆಯೇ?

ಶ್ರೀ ಟಿ. ಎಂ. ಮಂಜುನಾಥ್.—ತಿಪಟೂರು ತಾಲ್ಲೂಕು ಆಫೀಸು ಆವರಣ ಮತ್ತು ಕಟ್ಟಡವನ್ನು ತೆಗೆದುಕೊಂಡು ಅಲ್ಲಿ ಮಾರ್ಕೆಟ್ ಕಟ್ಟುವ ಸಂಬಂಧದಲ್ಲಿ ಮುನಿಸಿಪಾಲಿಟಿಯವರು ಒಂದು ಲಕ್ಷ ರೂಪಾಯಿ ಕಟ್ಟಿದ್ದಾರೆ. ಈ ವಿಚಾರ ಎರಡು ವರ್ಷದಿಂದ ಸರ್ಕಾರದಲ್ಲಿದೆ. ಸರ್ಕಾರ ಇನ್ನೂ ವಿಳಂಬ ಮಾಡದೆ, ಕೆಲಸ ಬೇಗ ಆಗುವಂತೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತಾರೆಯೇ ?

12-30 P.M.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಸ್ವಾಮೀ ಮಾನ್ಯ ಮಂತ್ರಿಗಳು ಮುನಿಸಿಪಲ್ ಇಲಾಖೆ ಬಗ್ಗೆ ಒಂದು ದಿಟ್ಟ ಹೆಜ್ಜೆ ಇಟ್ಟು ಕೆಲಸ ಮಾಡುತ್ತಿದ್ದಾರೆ. ತಮ್ಮ ಕಾಲದಲ್ಲಿ ಒಂದು ಮುನಿಸಿಪಲ್ ಬುಲೆಟಿನ್ ಬರುವಂತೆ ಏಕೆ ಏರ್ಪಾಡು ಮಾಡಬಾರದು ? ಈಗ ಬರೀ ವಾರ್ಷಿಕ ವರದಿ ಬರುತ್ತಿದೆ, ನಿಮ್ಮ ಕಾಲದಲ್ಲಾದರೂ ಒಂದು ಮುನಿಸಿಪಲ್ ಬುಲೆಟಿನ್ ಬರುವಂತೆ ಏರ್ಪಾಡು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

Sri B. B. SAYANAK.—The Harijan Colony and the Mohammadan colony in Belgaum, is a slum area. Are you going to give them sites in Maruthi Scheme to these people ?

Sri B. BASAVALINGAPPA.—We have reserved certain sites to them and we will give them.

ಮಾನ್ಯ ಅಧ್ಯಕ್ಷರೇ, ಶ್ರೀ ಪೂಸಲಿಂಗಂರವರು ಕಸ ಗುಡಿಸತಕ್ಕವರ ಬಗ್ಗೆ ಹಾಗೂ ನಾಲ್ಕನೇ ವರ್ಗದವರ ಬಗ್ಗೆ ತುಕೋಳ್ ಕಮಿಷನ್‌ನಂತೆ ಇವರ ಸಂಬಳವನ್ನೂ ಹೆಚ್ಚು ಮಾಡಿಕೊಡಬೇಕೆಂದು ಹೇಳಿದರು. ಈಗಾಗಲೇ ತುಕೋಳ್ ಕಮಿಷನ್ ಪ್ರಕಾರ ಸಂಬಳ ಕೊಡಬೇಕೆಂದು ತೀರ್ಮಾನ ಮಾಡಲಾಗಿದೆ ಮತ್ತು ಬೇರೆ ಪ್ರದೇಶಗಳಲ್ಲಿ ಕೂಡ ಕಸ ಗುಡಿಸುವವರಿಗೆ ಜಾಸ್ತಿ ಸಂಬಳ ಕೊಡುತ್ತಿದ್ದಾರೆಂದು ಹೇಳಿದರು. ಇದನ್ನು ಸರಕಾರ ಪರಿಶೀಲನೆ ಮಾಡಿ ಜಾಸ್ತಿ ಸಂಬಳ ಕೊಡಬಹುದೇ ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ. ಕಸ ಗುಡಿಸುವವರಿಗೆ ಹಾಗೂ ಮಲ ಹೊರುವಂತಹ ಜನಗಳಿಗೆ ಇಂತಹ ಕೆಲಸಗಳನ್ನು ತಪ್ಪಿಸಬೇಕು ಮತ್ತು ವಂಶಪಾರಂಪರ್ಯವಾಗಿ ಇರುವ ಪದ್ಧತಿ ತೆಗೆದು ಎಲ್ಲರೂ ಬರಲು ಅವಕಾಶವಿರಬೇಕು, ಇದು ನಮ್ಮ ಉದ್ದೇಶ. ಇದಕ್ಕನುಗುಣವಾಗಿ ಯಾರು ಬೇಕಾದರೂ ಕೆಲಸ ಮಾಡಲು ಬರಲಿ. ಇನ್ನು ಶ್ರೀ ಶ್ರೀರಾಮುಲುರವರು ಕೆಲವು ನ್ಯೂನತೆಗಳು ಇರುವುದರ ಬಗ್ಗೆ ಹೇಳಿದ್ದಾರೆ. ಕಾರ್ಪೊರೇಷನ್‌ನಲ್ಲಿ ಎಲ್ಲೆಲ್ಲಿ ಕೆಲಸಗಳಾಗಿವೆಯೋ ಅಲ್ಲೇ ಪುನಃ ಕೆಲಸಗಳನ್ನು ಮಾಡಿ ಹಣವನ್ನು ದುರುಪಯೋಗ ಮಾಡುತ್ತಿದ್ದಾರೆಂದು ಹೇಳಿದರು. ಮಾನ್ಯ ಸದಸ್ಯರು ನಿರ್ದಿಷ್ಟವಾದ ವಿಚಾರಗಳಿದ್ದರೆ ಅದನ್ನು ನನ್ನ ಗಮನಕ್ಕೆ

(SRI B. BASAVALINGAPPA)

ತಂದರೆ ಅದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಇದನ್ನು ಶ್ರೀ ಬೈರೇಗೌಡರು ಕಾರ್ಮಿಕವರ್ಗದವರಿಗೆ ಸೈಟುಗಳನ್ನು ಕೊಡುತ್ತಿಲ್ಲ ಎಂದು ಹೇಳಿದರು. ನಾವು ಕಾರ್ಮಿಕವರ್ಗದವರಿಗೆ ಅನುಕೂಲವಾಗಲಿ ಎಂದು ಎಲ್ಲಿ ಕೋಆಪರೇಟೀವ್ ಸೊಸೈಟಿಗಳಿವೆಯೋ ಅಂತಹವರ ವಿಚಾರದಲ್ಲಿ ರಿಯಾಯಿತಿ ಕೊಡಬೇಕೆಂದು ಮೊನ್ನೆ ತಾನೇ ಆರ್ಡರು ಮಾಡಲಾಗಿದೆ. ಬೇಕಾದರೆ ತಮಗೆ ಒಂದು ಜಿ ಓ ಕಾಪಿ ಕಳುಹಿಸಿಕೊಡುತ್ತೇನೆ.

ಶ್ರೀ ಮಂಜುನಾಥ್‌ರವರು ಅವರ ಊರಿನ ಮುನಿಸಿಪಾಲಿಟಿ ಬಗ್ಗೆ ಇಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಸೂಕ್ತವಾಗಿ ಕ್ರಮ ತೆಗೆದುಕೊಳ್ಳಲು ಪರಿಶೀಲನೆ ಮಾಡುತ್ತೇನೆ.

ಹೌಸಿಂಗು ಬೋರ್ಡುಗಳ ಅಂಕೆ ಸಂಖ್ಯೆಗಳನ್ನೂ ಆಮೇಲೆ ಒದಗಿಸುತ್ತೇನೆ.

ಶ್ರೀ ಸೈನಕ್‌ರವರು ಬಾಲಮಾರುತಿ ಎಕ್ಸ್‌ಟೆನ್‌ಷನ್‌ನಲ್ಲಿ ಹರಿಜನ ಗಿರಿಜನರಿಗೆ ಸೈಟುಗಳನ್ನು ಕೊಡುತ್ತಾರೆಯೋ ಎಂದು ಕೇಳಿದರು. ಇದನ್ನು ಅವರಿಗಾಗಿಯೇ ರಿಸರ್ವ್ ಮಾಡಲಾಗುತ್ತದೆ ಮತ್ತು ಇದರಲ್ಲಿ ಸ್ಪೆಸಿಫ಼ಿಕ್ ಕೂಡ ಮಾಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಕೆ. ಕೆ. ಮೂರ್ತಿಯವರ ಸೈಟು ಬಗ್ಗೆ ಹೇಳಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀ ಕೆ. ಕೆ. ಮೂರ್ತಿಯವರು ಆಕ್ಷನ್‌ನಲ್ಲಿ ತೆಗೆದುಕೊಂಡಿದ್ದಾರೋ ಇಲ್ಲವೇ ಬೇರೆ ಜಮೀನು ತೆಗೆದುಕೊಂಡಿದ್ದಾರೋ ಅದರ ವಿಚಾರದಲ್ಲಿ ವಿವರಗಳನ್ನು ತರಿಸಿ ಕೊಡುತ್ತೇನೆ, ಒಂದು ವಿಷಯ ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ನಾವು ಈಚೆಗೆ ಒಂದು ನಿಯಮಾವಳಿಗಳನ್ನು ಮಾಡಿದ್ದೇವೆ ಆ ನಿಯಮಗಳಂತೆ ಯಾರಿಗೆ ಬೇಕಾದರೂ ಸೈಟುಗಳನ್ನು ಕೊಡುತ್ತೇವೆ. ಇದರಲ್ಲಿ ತಾವು ಬೇಕಾದರೂ ಬನ್ನಿ, ತಮಗೂ ಸೈಟುಗಳನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ತಾವು ಬಡವರ ಬಂಧುಗಳು ಎನ್ನುವುದು ಗೊತ್ತು. ಇಲ್ಲಿ ಯಾವ ಕಾನೂನು ಮೇರೆಗೆ ಅವರಿಗೆ ಕೊಟ್ಟಿರಿ ಎನ್ನುವುದನ್ನು ತಿಳಿಸಬೇಕು.

Mr. DEPUTY SPEAKER.—The question is :

'That a sum not exeeding Rs, 6,00,24,00 inclusive of the sum granted "on account" be granted to the Government to defray the charges which will come in course of payment during the financial year ending 31st day of March 1974 in respect of Demand No. 39 A Grant-in-aid, Contributions to Local Bodies and Housing."

The Motion was adopted and the demand was granted

PRIVATE MEMBERS RESOLUTION

re : Aquiring Private Lands Near Slums in Bangalore City and Alloting the same to the Slum Dwellers

Mr. DEPUTY SPEAKER.—For the resolution of hon. member Sri Shamanna was 30 minute but the time actually taken was 10 minutes. Now I call upon the Hon. Minister for Municipal Administration to reply to the debate.

† ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಡಿಮ್ಯಾಂಡುಗಳ ಬಗ್ಗೆ ಮಾತನಾಡುವಾಗ ಇದರ ವಿಚಾರಗಳನ್ನೂ ಹೇಳಿದೆ, ಎಲ್ಲೆಲ್ಲಿ ಪ್ರೈವೇಟು ಲ್ಯಾಂಡುಗಳಿವೆ ಅವುಗಳನ್ನು ವಶಪಡಿಸಿಕೊಂಡು ಕಾರ್ಪೊರೇಷನ್ ಏರಿಯಾದಲ್ಲಿರುವ ಎಲ್ಲಾ ಸ್ಲಂಸ್‌ಗಳನ್ನೂ ತೆಗೆದು ಇವರಿಗೆಲ್ಲಾ ಸಹಾಯ ಮಾಡಬೇಕೆಂದು ಇದ್ದೇವೆ. ಆದಷ್ಟು

ಸ್ಲಂಸ್‌ಗಳನ್ನು ಕ್ಲಿಯರ್ ಮಾಡಬೇಕೆಂಬುದೇ ನಮ್ಮ ಉದ್ದೇಶ ಮತ್ತು ಇದಕ್ಕೆ ತಕ್ಕ ಕಾರ್ಯಕ್ರಮವನ್ನೂ ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರು ಕೂಡ ಇದರ ಬಗ್ಗೆ ಇಷ್ಟು ಹೇಳಿರುವುದರಿಂದ ತೃಪ್ತಿಪಟ್ಟುಕೊಳ್ಳುತ್ತಾರೆಂದು ಆಶಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿದಂತೆ ಈ ವರ್ಷವೇ ಖಾಸಗಿ ಜಮೀನುಗಳನ್ನೆಲ್ಲಾ ಅಕ್ವೈರು ಮಾಡಿಕೊಂಡು ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಬೇಕೆಂದು ಕೋರುತ್ತೇನೆ. ಮತ್ತು ಅವರು ಕೊಟ್ಟ ಆಶ್ವಾಸನೆಯನ್ನೂ ಸ್ವಾಗತಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಎಂದರೆ ಮೈಸೂರು ರೋಡು ಹಾಗೂ ಕಲಾಸಿಪಾಳ್ಯ ಇಂತಹ ಕಡೆಗಳಲ್ಲಿರುವ ಕೊಳಚೆ ಪ್ರದೇಶಗಳನ್ನು ಬೇಗನೆ ತೆಗೆದು ಅದನ್ನು ಉತ್ತಮಪಡಿಸಬೇಕೆಂದೂ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಮಂತ್ರಿಗಳು ಇದರ ಬಗ್ಗೆ ಆಶ್ವಾಸನೆ ಕೊಟ್ಟಿರುವುದರಿಂದ ನಾನು ನನ್ನ ನಿರ್ಣಯವನ್ನು ಸಭೆಯ ಅಪ್ಪಣೆ ಪಡೆದು ವಾಪಸು ತೆಗೆದುಕೊಳ್ಳುತ್ತೇನೆ.

The resolution was, by leave, withdrawn..

Mr. DEPUTY SPEAKER.—Let us now go to the next r solution given notice of by Sri B. Satyanarayan Singh. This resolution was not taken last time because though that was a non-official day but that had to be converted into an official day. If we do not take up this resolution, it will lapse. Therefore I am anxious that this resolution should be taken up.

(ii) *re*: Introduction of Sale of Toddy on Licence Basis Instead of Bidding by Publication

Sri B. SATYANARAYAN SINGH (Hospet).—My resolution reads like this:

> "That this Assembly recommends to the Government to do away with the present system of bidding by public auction the sale of toddy and arrack and to introduce the system of sale of toddy and arrack on licence basis in the State forthwith.".

Mr. DEPUTY SPEAKER.—Resolution moved :

> "That this Assemlby recommends to the Government to do away with the present system of bidding by public auction the sale of toddy and arrack and to introduce the system of sale of toddy and arrack on licence basis in the State forthwith."

† ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಸನ್ಮಾನ್ಯ ಅಧ್ಯಕ್ಷರೇ, ಈ ನನ್ನ ಗೊತ್ತುವಳಿಯನ್ನು ಈ ಸಭೆಯ ಮುಂದೆ ಇರುವ ಉದ್ದೇಶವಾದರೂ ಇಷ್ಟೆ, ಇಂದು ಇರುವ ಪರಿಸ್ಥಿತಿಯಲ್ಲಿ ಈ ಸೇಂದಿ ಮತ್ತು ಸಾರಾಯಿಗಳ ಮಾರಾಟ ಪಟ್ಟಭದ್ರಾ ಹಿತಾಶಕ್ತಿಗಳ ಮುಷ್ಠಿಯಲ್ಲಿರುವುದರಿಂದ ಏನಾಗಿದೆ ಎಂದರೆ, ಪ್ರಜಾಸತ್ತಾತ್ಮಕವಾದ ಸಮತಾವಾದ ಸಮಾಜವನ್ನು ಜಾರಿಯಲ್ಲಿ ತರಬೇಕೆಂಬ ಉದ್ದೇಶವನ್ನು ಏನು ನಾವು ಇಟ್ಟುಕೊಂಡಿದ್ದೇವೆ ಅದನ್ನು ಕಾರ್ಯಗತ ಮಾಡಲು ಸಾಧ್ಯವಾಗುತ್ತಿಲ್ಲ. ಇವೊತ್ತಿನ ಒಂದು ಪದ್ಧತಿ ಏನಿದೆ ಅದನ್ನು ಸಂಬಂಧಪಟ್ಟ ಅಧಿಕಾರಿಗಳು ರಚನೆ ಮಾಡಿದ್ದಾರೆ. ಇದರಿಂದ ಕೆಲವೇ ಜನ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗಿದೆ. ಈ ಒಂದು ಕಾನೂನು ಬದಲಾವಣೆಯಾಗಬೇಕಾಗಿದೆ. ಮತ್ತು ಈಗಿನ ಪದ್ಧತಿ ದೂರವಾಗಬೇಕಾಗಿದೆ. ಕೆಲವೇ ಜನರ ಅನುಕೂಲಕ್ಕಾಗಿ ಇಟ್ಟಿರುವ ಈಗಿನ ಕಾನೂನು ಏನಿದೆ ಇದು ನಿಜಕ್ಕೂ ದುಃಖಕರವಾದ ಸಂಗತಿ

(ಶ್ರೀ ಬಿ. ಸತ್ಯನಾರಾಯಣಸಿಂಗ್)

ಯಾಗಿದೆ ಎಂದು ಹೇಳಬಹುದು. ಇವೊತ್ತಿನ ದಿವಸ ನಾವು ಒಂದು ಕಡೆ ಭೂಮಿತಿಯನ್ನು ಜಾರಿಯಲ್ಲಿ ತರುವುದಕ್ಕೆ ಹೊರಟಿದ್ದೇವೆ, ಮತ್ತೊಂದು ಕಡೆ ಪಟ್ಟಣದ ಆಸ್ತಿಯ ಮೇಲೆ ಮಿತಿ ತರುವುದಕ್ಕೆ ಹೊರಟಿದ್ದೇವೆ; ಆದರೆ ಈ ಕ್ಷೇತ್ರದಲ್ಲಿ ಮಾತ್ರ ನಾವು ಇಂದು ಹೋಗುತ್ತಿರುವ ದಾರಿ ಸರಿಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಈ ಕ್ಷೇತ್ರದಲ್ಲಿಯೂ ಬದಲಾವಣೆಯಾಗಬೇಕಾದುದು ಬಹಳ ಆವಶ್ಯಕವಿದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಈ ಸೇಂದಿ ಹಾಗೂ ಸಾರಾಯಿ ವಾರಾಟದ ವ್ಯವಸ್ಥೆ ಏನಿದೆ, ಇದು ಇಂದು ಪ್ರತಿ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಹರಾಜು ಮೂಲಕ ಕಂಟ್ರಾಕ್ಟರ್‌ಗಳಿಗೆ ವಹಿಸುವುದು ಇದೆ, ಇದರಿಂದ ಕೆಲವೇ ಜನ ಕಂಟ್ರಾಕ್ಟದಾರರಿಗೆ ಅನುಕೂಲವಾಗುತ್ತಿದೆ. ಸಣ್ಣ ಪ್ರಮಾಣದಲ್ಲಿ ವ್ಯಾಪಾರ ಮಾಡುವ ಜನರು ಏನಿದ್ದಾರೆ ಅವರಿಗೆ ಈ ಹರಾಜಿನಲ್ಲಿ ಭಾಗವಹಿಸುವ ಅವಕಾಶ ಇದರಿಂದ ಇಲ್ಲವಾಗಿದೆ ಎಂದರೆ ತಪ್ಪಾಗಲಾರದು. ಆದ್ದರಿಂದ ಈ ಒಂದು ವ್ಯವಸ್ಥೆಯಲ್ಲಿ ಕೆಲವೊಂದು ಸುಧಾರಣೆಗಳಾಗಬೇಕಾಗಿದೆ. ಮುಖ್ಯವಾಗಿ ಪ್ರತಿ ಅಂಗಡಿಗೆ ಬೇರೆ ಬೇರೆಯಾಗಿ ಮಾರಾಟ ಮಾಡುವಂತಹ ವ್ಯವಸ್ಥೆಯಾಗಬೇಕು; ಈ ಬಗ್ಗೆ ಸರ್ಕಾರದವರು ಮುಂದೆ ಬರಲೇಬೇಕೆಂದು ಕೇಳಿಕೊಳ್ಳುತ್ತೇನೆ. ಇಂದು ನಮ್ಮ ರಾಜ್ಯದಲ್ಲಿ ಹೆಂಡದ ಮರಗಳು ಕಡಿಮೆ ಇರುವುದರಿಂದ ನಮ್ಮ ಸರ್ಕಾರದವರು ಆಂಧ್ರರಾಜ್ಯದಿಂದ ತರುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಆದರೆ ಆಂಧ್ರದಿಂದ ನಿಜವಾದ ಹೆಂಡ ಬರುತ್ತಲೇ ಇಲ್ಲ. ಒಂದು ಲಾರಿ ನಿಜವಾದ ಹೆಂಡ ಬಂದರೆ ನಾಲ್ಕು ಲಾರಿಗಳಲ್ಲಿ ರಾಸಾಯನಿಕ ವಸ್ತುಗಳಿಂದ ತಯಾರಾದ ಹೆಂಡ ಬರುತ್ತಿದೆ. ಇದಲ್ಲದೆ ಕಂಟ್ರಾಕ್ಟದಾರರು ಒಂದು ಲಾರಿ ಹೆಂಡಕ್ಕೆ ಕೊಡಬೇಕಾದ ತೆರಿಗೆಯನ್ನು ಕೊಟ್ಟು ನಾಲ್ಕು ಲಾರಿ ಕೃತಕ ರಾಸಾಯನಿಕ ವಸ್ತುಗಳಿಂದ ತಯಾರಾದ ಹೆಂಡವನ್ನು ಏನು ತರುತ್ತಿದ್ದಾರೆ ಅದಕ್ಕೆ ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳುತ್ತಿದ್ದಾರೆ. ಇದರಿಂದ ಕಪ್ಪು ಹಣ ಬೆಳೆಯುವುದಕ್ಕೆ ಅವಕಾಶವಾಗಿದೆ. ಈ ಒಂದು ವ್ಯವಸ್ಥೆಯನ್ನು ಸಹ ದೂರ ಮಾಡಬೇಕಾದುದು ಆವಶ್ಯಕವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇಂದು ಎಕ್ಸೈಜ್ ಇಲಾಖೆಯವರು ನಿಜವಾಗಿಯೂ ಬಡವರ ಮತ್ತು ಬಳಕೆದಾರರ ಹಿತಕ್ಕಾಗಿ ಕೆಲಸ ಮಾಡುತ್ತಿದ್ದಾರೆಯೇ ಎಂಬ ಬಗ್ಗೆ ಸಂದೇಶ ಬರುತ್ತದೆ. ಏಕೆಂದರೆ ಈ ಇಲಾಖೆಯ ಅಧಿಕಾರಿಗಳು ಕಂಟ್ರಾಕ್ಟುದಾರರಿಗೆ ಕಳ್ಳತನದಿಂದ ವ್ಯಾಪಾರ ಮಾಡುವುದಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಇದರಿಂದ ಅವರು ಸಹ ಅಧಿಕಾರಗಳನ್ನು ಪೋಷಣೆ ಮಾಡುತ್ತಿದ್ದಾರೆ. ಈ ಕಂಟ್ರಾಕ್ಟುದಾರರು ಮತ್ತು ಅಧಿಕಾರಿಗಳ ವ್ಯವಹಾರದಲ್ಲಿ ಜನರಿಗೆ ಒಳ್ಳೆಯ ಹೆಂಡ ಸಿಗುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಇವೆಲ್ಲ ಕಾರಣದಿಂದ ಪಟ್ಟಭದ್ರಹಿತಾಸಕ್ತಿಗಳನ್ನು ದೂರ ಮಾಡಬೇಕಾಗಿದೆ. ಮತ್ತು ಕೆಲವೇ ಶ್ರೀಮಂತರಿಗೆ ಅನುಕೂಲ ಮಾಡುವ ಪದ್ಧತಿಯನ್ನು ಹೋಗಲಾಡಿಸಲು ಸಾಮಾನ್ಯ ಜನರಿಗೆ ಅಂಗಡಿವಾರು ಸೇಂದಿ ಹಾಗೂ ಸಾರಾಯಿಗಳನ್ನು ಮಾರಾಟ ಮಾಡುವ ಪರವಾನಗೆಗಳನ್ನು ಕೊಡಬೇಕು. ಈ ರೀತಿ ಮಾಡಿದರೆ ಸಾಮಾನ್ಯ ಜನರು ಸಹ ಈ ಒಂದು ವ್ಯಾಪಾರದಲ್ಲಿ ಸ್ವತಂತ್ರವಾಗಿ ತೊಡಗುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತಾ ಈ ಒಂದು ಗೊತ್ತುವಳಿಯನ್ನು ಸಭೆಯ ಮುಂದೆ ಮಂಡಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸತ್ಯನಾರಾಯಣ ಸಿಂಗ್ ಅವರ ಖಾಸಗೀ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈಗಿನ ಜಿಲ್ಲಾವಾರು ಹರಾಜನ್ನು ತಪ್ಪಿಸಿ ಅಂಗಡಿವಾರು ಹರಾಜು ಹಾಕುವುದರ ಮೂಲಕ ಒಬ್ಬೊಬ್ಬರಿಗೆ ಪ್ರತ್ಯೇಕವಾಗಿ ವಹಿಸಿಕೊಡಬೇಕೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದಕ್ಕೆ ನನ್ನ ಸಂಪೂರ್ಣವಾದ ಬೆಂಬಲವಿದೆ. ಇಂದು ಏನಾಗಿದೆಯೆಂದರೆ, ನಮ್ಮ ರಾಜ್ಯದಲ್ಲಿ ಹತ್ತಾರು ಜನ ಶ್ರೀಮಂತರು ಏನಿದ್ದಾರೆ ಅವರುಗಳು ಸೇರಿಕೊಂಡು ಜಿಲ್ಲಾಮಟ್ಟದಲ್ಲಿ ನಡೆಯುವ ಹರಾಜಿನಲ್ಲಿ ಭಾಗವಹಿಸಿ ತಮ್ಮ ಹೆಸರಿಗೆ ಮಾಡಿಕೊಂಡು ವಿಪರೀತ ಲಾಭ ಮಾಡಿಕೊಳ್ಳುತ್ತಿದ್ದಾರೆ. ಸಮಾಜವಾದಿ ಸಮಾಜವನ್ನು ರಚನೆ ಮಾಡಬೇಕೆಂಬ ಕಲ್ಪನೆಯನ್ನು ಸರ್ಕಾರದವರು ಏನು ಇಟ್ಟುಕೊಂಡಿದ್ದಾರೆ ಅದಕ್ಕೆ ಇದು ಅಡ್ಡಿಯಾಗಿದೆ ಮತ್ತು ಅದನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ವಿಫಲವಾಗಿದ್ದಾರೆಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈಗಿನ ಪದ್ಧತಿಯ ಬದಲು ಅಂಗಡಿವಾರು ಹರಾಜು ಮಾಡಿದ್ದೇ ಆದರೆ ಲಕ್ಷಾಂತರ ಜನರಿಗೆ ಈ ಬಾಬಿನಲ್ಲಿ ಉದ್ಯೋಗ ದೊರಕುತ್ತದೆ. ಮತ್ತು ಇದರಿಂದ ಲಕ್ಷಾಂತರ ಬಡ ಕುಟುಂಬಗಳ ಬದುಕು ಬಂಗಾರವಾಗುತ್ತದೆ. ಇಂದು ಏನಾಗುತ್ತಿದೆ ಎಂದರೆ, ಹಳ್ಳಿಗಳಲ್ಲಿ ಕಷ್ಟಪಟ್ಟು

ದುಡಿಯುವ ಜನರು ಏನಿದ್ದಾರೆ, ಅದರ ಒಂದು ಪ್ರತಿಫಲವನ್ನು ಬೆಂಗಳೂರಿನಲ್ಲಿರುವ ಶ್ರೀಮಂತರು ದೋಚಿಕೊಂಡು ಬರುತ್ತಿದ್ದಾರೆ. ಹಳ್ಳಿಗಳಲ್ಲಿ ಕಷ್ಟನಷ್ಟ ಅನುಭವಿಸುವ ಸಾಮಾನ್ಯ ಜನರ ಪಾಡು ಒಂದುಕಡೆಯಾದರೆ, ಅದರ ಫಲವನ್ನು ಉಣ್ಣುವವರು ಬಂಡವಾಳಶಾಹಿಗಳಾಗಿದ್ದಾರೆ. ಇಂದು ತಮಿಳುನಾಡಿನಲ್ಲಿ ಸಹ ಅಂಗಡಿವಾರು ಹರಾಜು ಹಾಕುತ್ತಿರುವುದರಿಂದ ಹೆಚ್ಚು ಆದಾಯವನ್ನು ಗಳಿಸುತ್ತಿದ್ದಾರೆ. ಅದೇ ಪದ್ಧತಿಯನ್ನು ಇಲ್ಲಿಯೂ ಸಹ ಜಾರಿಗೆ ತಂದರೆ ಒಂದಕ್ಕೆ ಹತ್ತರಷ್ಟು ಲಾಭ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆಯಲ್ಲದೆ ಲಕ್ಷಾಂತರ ಬಡಜನರು ತಮ್ಮ ಜೀವನವನ್ನು ಚೆನ್ನಾಗಿ ನಡೆಸಿಕೊಂಡು ಹೋಗುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ಈಗಿರತಕ್ಕಂಥ ಪದ್ಧತಿ ಏನಿದೆ ಅದನ್ನು ಸಂಪೂರ್ಣವಾಗಿ ಕೈಬಿಡಬೇಕೆಂದು ಹೇಳುತ್ತೇನೆ. ತಮಿಳುನಾಡಿನಲ್ಲಿ ಅಂಗಡಿವಾರು ಹರಾಜು ಹಾಕುತ್ತಿರುವುದರಿಂದ ಹೆಚ್ಚಿನ ಅನುಕೂಲ ಕಂಡುಬಂದಿದೆ ಮತ್ತು ಅದು ಯಶಸ್ವಿಯಾಗಿದೆ ಎಂದು ಕಂಡುಬಂದಿರುವಾಗ ನಮ್ಮ ರಾಜ್ಯದಲ್ಲಿ ಏತಕ್ಕೆ ಆಗುವುದಿಲ್ಲ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಬಂಡವಾಳಶಾಹಿಗಳ ಕೈಗೊಂಬೆಯಾಗಿ ಸರ್ಕಾರದವರು ಈಗಿನ ನೀತಿಯನ್ನು ರೂಪಿಸಿರುವುದರಿಂದ, ಅದು ಯಶಸ್ವಿಯಾಗಿಲ್ಲ ಎಂದು ಹೇಳಬೇಕಾಗುತ್ತದೆ. ಲಕ್ಷಾಂತರ ಜನ ಬಡವರಿಗೆ ಅನುಕೂಲವಾಗಬೇಕೆಂದಿದ್ದರೆ ತಮಿಳುನಾಡು ಸರ್ಕಾರದ ರೀತಿಯಲ್ಲಿ ಅಂಗಡಿವಾರು ಹರಾಜು ಹಾಕಬೇಕು ಮತ್ತು ಈ ಬಗ್ಗೆ ಮಾನ್ಯ ಸತ್ಯನಾರಾಯಣಸಿಂಗ್ ಅವರು ಏನು ಠರಾವು ತಂದಿದ್ದಾರೆ ಅದನ್ನು ಮಾನ್ಯ ಸಭೆ ಅಂಗೀಕಾರ ಮಾಡಬೇಕು ಮತ್ತು ಸರ್ಕಾರದವರು ಈ ಒಂದು ತತ್ವಗಳಿಗೆ ಅನುಸಾರವಾಗಿ ನಡೆಯಬೇಕೆಂದು ಕೇಳಿಕೊಂಡು ಈ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಬೆಂಬಲ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ್).-ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸತ್ಯನಾರಾಯಣಸಿಂಗ್ ಅವರು ಈ ಸಭೆಯ ಮುಂದೆ ತಂದಿರುವ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ನಾನು ನಾಲ್ಕು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಈ ಕುಡಿಯುವಿಕೆ ನಮ್ಮ ದೇಶಕ್ಕೆ ಹೊಸದೇನೂ ಅಲ್ಲ. ಶಾಸ್ತ್ರದ ಆಧಾರದ ಮೇಲೆ ನಾವು ಹೇಳುವುದಾದರೆ ಇದು ಅನಾದಿ ಕಾಲದಿಂದಲೂ ನಮ್ಮ ದೇಶದಲ್ಲಿ ಇದ್ದೇ ಇದೆ. ಅನಾದಿ ಕಾಲದಿಂದ ಸುರಪಾನ, ಸೋಮಪಾನ, ವನಲಕ್ಷ್ಮಿ, ಸುರಾಲಕ್ಷ್ಮಿ ಎಂದು ಕರೆಯುವ ಪದ್ಧತಿ ಸಹಾ ಇದೆ. ಈ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹಿಂದೆ ಸರ್ಕಾರದವರು ಎಷ್ಟೇ ಪ್ರಯತ್ನ ಮಾಡಿದರೂ ಅದು ಸಾಧ್ಯವಾಗಲಿಲ್ಲ. ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಪುಣ್ಯಾತ್ಮ ಮಹಾತ್ಮ ಗಾಂಧೀಜಿಯವರು ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಆದರೂ ಸಹ ಪ್ರಗತಿಪರವಾಗಿ ಈ ''ಪ್ರೊಹಿಬಿಷನ್'' ಜಾರಿಗೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಈಗ ನಮ್ಮ ಮಾನ್ಯ ಮಿತ್ರರು ಹೇಳಿದಂತೆ ನಾವು ಕೆಲವು ನೀತಿ ನಿಯಮವನ್ನು ಅನುಸರಿಸಿ ಸಮಾಜವಾದವನ್ನು ಜಾರಿಗೆ ತರಲು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಈಗ ಸೇಂದಿ ಮತ್ತು ಸಾರಾಯಿಗಳ ಮೂಲಕ ನಮ್ಮ ರಾಜ್ಯಕ್ಕೆ ಏನು ಆದಾಯ ಬರುತ್ತದೆ ಅದನ್ನು ಬಲಪಡಿಸಿ ಸರ್ಕಾರಕ್ಕೆ ಹೆಚ್ಚು ಆದಾಯ ಬರುವಂತೆ ಮಾಡುವುದಕ್ಕೋಸ್ಕರ ಶ್ರೀಮಾನ್ ಸತ್ಯನಾರಾಯಣಸಿಂಗ್‌ರವರು ಈಗ ಈ ನಿರ್ಣಯವನ್ನು ನಮ್ಮ ಈ ಸಭೆಯಮುಂದೆ ತಂದಿದ್ದಾರೆ. ಅಂಗಡಿವಾರು ಈ ಸೇಂದಿಯ ಮಾರಾಟವನ್ನು ಹರಾಜು ಹಾಕಬೇಕು ಎನ್ನುವ ದೃಷ್ಟಿಯಿಂದ ಅವರು ಈ ನಿರ್ಣಯವನ್ನು ಈ ಸಭೆಯಮುಂದೆ ತಂದಿದ್ದಾರೆ. ಕುಡಿಯುವ ಅಭ್ಯಾಸ ಕೆಲವು ಜನಾಂಗದಲ್ಲಿ ಇದೆ. ಕುಡಿಯುವ ಚಟ ಇರತಕ್ಕವರು ಗೌರವಸ್ಥರಾಗಿರತಕ್ಕವರು ''ಬಾರ್‌ನಲ್ಲಿ'' ''BAR'' ಗೆ ಹೋಗಿ ಕುಡಿಯುತ್ತಾರೆ. ಸಾಮಾನ್ಯ ಜನಗಳು ಸೇಂದಿ ಷರಾಬು ಅಂಗಡಿಗಳಿಗೆ ಹೋಗಿ ಕುಡಿಯುತ್ತಾರೆ. ಈ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ಸಾಮಾನ್ಯವಾಗಿ ಬಡವರು ವಾಸ ಮಾಡತಕ್ಕ ಪ್ರದೇಶಗಳಲ್ಲಿ ವಿಶೇಷವಾಗಿ ಇಟ್ಟಿದ್ದಾರೆ. ಆದ್ದರಿಂದ ಘನ ಸರ್ಕಾರದವರು ಈ ಸೇಂದಿ ಮತ್ತು ಷರಾಬು ಅಂಗಡಿಗಳನ್ನು ಇಡುವುದಕ್ಕೆ ಲೈಸನ್ಸ್ ಕೊಡತಕ್ಕ ಕಾಲದಲ್ಲಿ ವಾಸದ ಮನೆಗಳು ಸ್ಕೂಲುಗಳು, ಸಾರ್ವಜನಿಕ ಪ್ರದೇಶ ಇರುವ ಜಾಗದಲ್ಲಿ ಇಡುವುದಕ್ಕೆ ಅವಕಾಶವನ್ನು ಕೊಡಕೂಡದು. ಅದನ್ನು ತಪ್ಪಿಸಿ ಪ್ರೈವೇಟ್ ಏರಿಯಾದಲ್ಲಿ ವಾಸದ ಮನೆಗಳಿಗೆ ದೂರದಲ್ಲಿ ಅಂಗಡಿಗಳನ್ನು ಇಡುವುದಕ್ಕೆ ಲೈಸನ್ಸ್ ಕೊಟ್ಟರೆ ಒಳ್ಳೆಯದು. ಅನೇಕ ಕಡೆ ಸ್ಲಮ್ ಏರಿಯಾದಲ್ಲಿ ಬಡ ಜನಗಳು ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುವ ಕಡೆ ಸೇಂದಿ ಮತ್ತು ಷರಾಬು ಅಂಗಡಿಗಳನ್ನು ಇಡುವುದಕ್ಕೆ ಹೆಚ್ಚಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿಯೇ ಕಾಲೇಜಿನ ಪಕ್ಕದಲ್ಲಿ ''ಸಾರಾಯಿ'' ಅಂಗಡಿಗೆ ಲೈಸನ್ಸ್ ಕೊಟ್ಟಿರುತ್ತಾರೆ. ಇದು ಬಹಳ ವಿಷಾದಕರವಾದ ಸಂಗತಿ. ಬಡವರು ಬೆಳಗಿನಿಂದ ಸಾಯಂಕಾಲದವರೆಗೆ ಕಷ್ಟಪಟ್ಟು ಕೆಲಸ ಮಾಡಿ ಬಂದಿರುತ್ತಾರೆ. ಆದ್ದರಿಂದ ಅವರಿಗೆ ಮೈ ಕೈ ನೋವಾಗಿರುತ್ತದೆ. ಆದಕಾರಣ ಅವರು ಸೇಂದಿ ಅಂಗಡಿಗೆ ಹೋಗಿ ಸೇಂದಿ

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು)

ಯನ್ನು ಕುಡಿಯುತ್ತಾರೆ, ಆದರೆ ಇದರಿಂದ ಬೇಕಾದಷ್ಟು ಅನಾಹುತಗಳು ಆಗುತ್ತವೆ. ಆದ್ದರಿಂದ ಜನಗಳು ವಾಸ ಮಾಡುವ ಸ್ಥಳದಲ್ಲಿ ಸೇಂದಿ ಮತ್ತು ಷರಾಬು ಅಂಗಡಿಗಳನ್ನು ಇಡುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಸರ್ಕಾರಕ್ಕೆ ಒತ್ತಾಯ ಪಡಿಸುತ್ತೇನೆ. ಮತ್ತು (Temperance Committee) ಟೆಂಪರೆನ್ಸ್ ಕಮಿಟಿಯನ್ನು ಸಹ ನೇಮಕ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಮಿತ್ರರು ಈ ಸಭೆಯ ಮುಂದೆ ತಂದಿರುವ ಠರಾವನ್ನು ಸಂಪೂರ್ಣವಾಗಿ ಅನುಮೋದಿಸಿ ಸರ್ಕಾರದವರು ಇದನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ನಂಬಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. 'ಜೈ ಕರ್ನಾಟಕ'.

†ಶ್ರೀ ಕೆ. ಪ್ರಭಾಕರ್ (ಪತ್ತೂರು).–ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಸತ್ಯನಾರಾಯಣಸಿಂಗ್ ಅವರು ಈ ಸಭೆಯಮುಂದೆ ತಂದಿರುವ ನಿರ್ಣಯಕ್ಕೆ ಸಂಬಂಧಪಟ್ಟಹಾಗೆ ನಾನು ಒಂದೆರಡು ವಿಷಯಗಳನ್ನು ಹೇಳ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಪ್ರೊಹಿಬಿಷನ್ ತೆಗೆದದ್ದು ದುರದೃಷ್ಟಕರ ಇದರಿಂದ ಸಮಾಜಕ್ಕೆ ಹಾನಿ. ಪಾನನಿರೋಧದಲ್ಲಿ ನಂಬಿಕೆಯುಳ್ಳ ಮನುಷ್ಯ ನಾನು. ಪ್ರೊಹಿಬಿಷನ್ ಬಗ್ಗೆ ಪುನರಾಲೋಚನೆ ಅಗತ್ಯ. ನಮ್ಮ ಸರ್ಕಾರದವರು ಇದನ್ನು ಪರಿಶೀಲನೆ ಮಾಡಬೇಕು. ಕಾನೂನು ಬದ್ಧವಾಗಿ ಈ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ಅಂಗಡಿವಾರು ಹರಾಜು ಹಾಕುವ ಪದ್ಧತಿಯನ್ನು ಜಾರಿಗೆ ತಂದರೆ ಅದರಿಂದ ಬರತಕ್ಕ ರೆವಿನ್ಯೂ ಕಡಿಮೆ ಆಗುತ್ತದೆ ಎಂದು ಸರ್ಕಾರಕ್ಕೆ ಶಂಕೆ ಇದೆ. ಇದನ್ನು ನಿವಾರಣೆ ಮಾಡಬೇಕಾದರೆ ಕೆಲವು ತಜ್ಞರನ್ನು ಒಳಗೊಂಡಂತಹ ಒಂದು ಕಮಿಟಿಯನ್ನು ನೇಮಕ ಮಾಡಿ ಈ ಸೇಂದಿ ಮತ್ತು ಸಾರಾಯಿಯನ್ನು ಮಾರಾಟ ಮಾಡುವುದನ್ನು ಅಂಗಡಿವಾರು ಹರಾಜು ಮಾಡುವುದರಿಂದ ಸರ್ಕಾರಕ್ಕೆ ರೆವಿನ್ಯೂ ಹೆಚ್ಚಾಗುತ್ತದೆಯೇ ಅಥವಾ ಕಡಿಮೆಯಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು. ಒಂದುವೇಳೆ ಅವರು ಅಂಗಡಿವಾರು ಹರಾಜು ಹಾಕಿದರೆ ಅದರಿಂದ ಸರ್ಕಾರಕ್ಕೆ ಆದಾಯ ಜಾಸ್ತಿ ಬರುತ್ತದೆ ಎಂದು ಅಭಿಪ್ರಾಯ ಪಟ್ಟರೆ ಆ ರೀತಿ ಮಾಡಬಹುದು. ಒಂದುವೇಳೆ ಈ ಹೆಂಡ ಸಾರಾಯಿಯಿಂದ 30–40 ಕೋಟಿ ರೂಪಾಯಿಗಳ ಆದಾಯ ಬಂದರೂ ಸಹ ಇದರಿಂದ ಜನಗಳಿಗೆ ತೊಂದರೆಯಾಗಬಾರದು. ಆ ರೀತಿ ನೋಡಿಕೊಳ್ಳಬೇಕು. ಇದರಲ್ಲಿ ಜನತೆಯ ನೈತಿಕ ಬೆಳವಣಿಗೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಬಾಬಿನಿಂದ ಬಂದಂತಹ ಹಣದಲ್ಲಿ ಬಹುಪಾಲು ಹಣವನ್ನು ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಕೊಡುತ್ತೇವೆ ಎಂದು ಹಿಂದೆ ಸರ್ಕಾರದವರು ವಾಗ್ದಾನ ಮಾಡಿದ್ದಾರೆ. ಆದ್ದರಿಂದ ಈಗ ಸರ್ಕಾರದವರು ಈ ಬಗ್ಗೆ ನಿಗಾ ವಹಿಸಿ ಇದರಿಂದ ಬರತಕ್ಕ ಹಣದಲ್ಲಿ ಬಹುಪಾಲು ಹಣವನ್ನು ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಕಡ್ಡಾಯ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಬೇಕಾದ ಸೌಲಭ್ಯವನ್ನು ಒದಗಿಸುವುದಕ್ಕಾಗಿ ಒಂದು ಸ್ಪೆಷಲ್ ಯೋಜನೆಯನ್ನು ಮಾಡಿ ಆ ಹಣವನ್ನು ಉಪಯೋಗಿಸುವಂತಹ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಮತ್ತು ಈ ಪ್ರೊಹಿಬಿಷನ್ ವಿಚಾರದಲ್ಲಿ ಪುನರಾಲೋಚನೆ ಮಾಡುವ ಕಡೆ ಸರ್ಕಾರದವರು ಗಮನ ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ಎಂ. ಬಂಗಿ (ಜಮಖಂಡಿ).–ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಸತ್ಯನಾರಾಯಣಸಿಂಗ್ ಅವರು ಈ ಸಭೆಯಮುಂದೆ ಏನು ಒಂದು ಠರಾವನ್ನು ತಂದಿದ್ದಾರೆ ಆ ಬಗ್ಗೆ ನಾನು ಒಂದೇ ಒಂದು ಮಾತನ್ನು ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ. ಈ ಸೇಂದಿ ಮತ್ತು ಸಾರಾಯಿ ಮಾರಾಟವನ್ನು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹರಾಜು ಮಾಡುವುದರಿಂದ ಶ್ರೀಮಂತ ಕಂಟ್ರಾಕ್ಟರುಗಳಿಗೆ ಅನುಕೂಲವಾಗುತ್ತದೆಯೇ ಹೊರತು ಅದರಿಂದ ಚಿಕ್ಕಪುಟ್ಟ ಕಂಟ್ರಾಕ್ಟರುಗಳಿಗೆ ಯಾವ ಲಾಭವೂ ಆಗುವುದಿಲ್ಲ ಆದ್ದರಿಂದ ಇದನ್ನು ಅಂಗಡಿವಾರು ಹರಾಜು ಮಾಡುವುದು ಒಳ್ಳೆಯದು ಎಂದು ಹೇಳಿ ಈ ನಿರ್ಣಯಕ್ಕೆ ನನ್ನ ಬೆಂಬಲವನ್ನು ಕೊಟ್ಟು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† Sri H. SIDDAVEERAPPA (Minister for Health).—Sir, I have heard with rapt attention the various arguments advanced by the mover of the Resolution as to why the present system should be changed and shop-war auction must take place. He is aware that after this Ministry has come into office, under the present system, when

compared to last year, we have got Rupes five crores more than what we got last year. The feeling of the Government with regard to sudenly switching over and beginning a new experiment in a revenuelying department-which is one of the important sources of giving revenue and is next only to Sales Tax-,is that it should be vary in venturing and jumping into the suggestion made that shop-war auction must take place. However, in deference to the wishes of the hon. Members, from this year, the Government have been thinking of introducing a licensing system in one of the districts as experimental measure. Government have got this under their active consideration and if it proves successful, then only it can think of adopting it in other districts. Government can ill-afford to venture on this point when the finances of the State are in such a position, that every pie that comes to the coffers of the Government, it can ill-afford to lose.

As it is, our experience last year, we got Rs. five crores more than what it was in the previous year. Government would desire to proceed warily and cautiously. They do not want to jump into the river suddenly. We do not know what it is. Who can guarantve that the experi; ment is going to succeed ?

Sri KONANDUR LINGAPPA.—There is proof in Tamil Nadu.

Sri H. SIDDAVEERAPPA.—Conditions in Tamil Nadu are different from conditions in Mysore. Therefore it is the policy of the Government to introduce this system of licencing in one of the districts as an experimental measure during the current year, and if it succeeds Government would consider it in the next year. With these words, I am appealing to the Hon'ble Member who has moved this resolution to withdraw.

ಶ್ರೀ ಸತ್ಯನಾರಾಯಣ ಸಿಂಗ್—ನಾನು ಹೇಳುವುದು, ತಾವು ಜಿಲ್ಲಾವಾರು ತಾಲ್ಲೂಕುವಾರು ಮತ್ತು ಶಾಪ್‌ವಾರು ಆಕ್ಷನ್ ಮಾಡಿ, ಅದರಲ್ಲಿ ಯಾವುದು ಲಾಭದಾಯಕವಾಗಿರುತ್ತದೆ, ಅದನ್ನು ಅಪ್ಟ್ ಮಾಡಿ. ತಾವು ಏನೊಂದು ಊಹೆ ಮಾಡಿ ಹೇಳುತ್ತಿದ್ದೀರಿ ಅದು ಸರಿಯಾಗಿಲ್ಲವೆಂದು ಕಾಣುತ್ತದೆ. ಆದ್ದರಿಂದ ತಮಗೆ ಯಾವುದರಲ್ಲಿ ಹೆಚ್ಚಿಗೆ ಆದಾಯ ಬರುತ್ತದೆ ಅದನ್ನು ಮಾಡುತ್ತೀರಾ ? ಮತ್ತು ಹಾಗೆ ಮಾಡುವುದಕ್ಕೆ ಏನು ತೊಂದರೆ ?

6-00 P. M.

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೋಸ್ಕರವೇ ಒಂದು ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಇದನ್ನು ಮಾಡೋಣ. ಅನಂತರ ಅದು ಜಯಪ್ರದವಾದರೆ ಬರುವ ವರ್ಷದಿಂದ ಇತರ ಕಡೆಗಳಲ್ಲಿಯೂ ಮಾಡೋಣ. Next year, we can extend it to other districts. Any how, Government would like to proceed cautiously in such matters.

Sri B. SAHTYANARAYANA SINGH.—I am prepared to withdraw the resolution on the assurance of the Minister that it is being tried as an experimental measure in one district this year.

The Resolution was, by leave, Withdrawn.

(iii) *re* : Appointing a High power Committee to go into Causes. etc. for fall of standard of students.

Sri T, R. SHAMANNA Fort.—I beg to move :

"That this Assembly recocmmend to Government to appoint a High Power Committee to examine the eauses of fall in the Standard of Education of students and to suggest ways and means to improve it."

Mr. DEPUTY SPEAKER.—Resolutson moved :

"I. That this Assembly recommends to Government to appoint a High Power Committee to examine the causes of fall in the Standard of Education of Students and to suggest ways and means to improve it."

ಶ್ರೀ ಟಿ. ಆರ್. ಶಾಮಣ್ಣ.— ಮಾನ್ಯ ಸಭಾಪತಿಗಳೆ, ಈ ನಮ್ಮ ರಾಜ್ಯಸರ್ಕಾರದವರು ಈ ವಿದ್ಯಾಭ್ಯಾಸಕ್ಕಾಗಿ ಸುಮಾರು 67 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಬೇರೆ ಯಾವುದಕ್ಕೂ ಇಷ್ಟು ಹೆಚ್ಚು ಹಣ ಖರ್ಚು ಮಾಡುತ್ತಾ ಇಲ್ಲ. ಇವತ್ತು ಇದರಿಂದ ಸರ್ಕಾರದವರು ಸರಿಯಾದಂತಹ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಒದಗಿಸಿದರೆ ಇದ್ದಕಿಂತ ದೊಡ್ಡ ಕೆಲಸ ಬೇರೆ ಯಾವುದೂ ಇಲ್ಲ. ವಿದ್ಯಾಭ್ಯಾಸ ಎಂಬುದು ಒಂದು ರಾಷ್ಟ್ರದ ಆಸ್ತಿ. ರಾಷ್ಟ್ರದ ಆಸ್ತಿಯನ್ನು ವೃದ್ಧಿಪಡಿಸುವ ಬಗ್ಗೆ ರಾಜ್ಯಸರ್ಕಾರದವರು ಸಾಕಷ್ಟು ಕಾತುರರಾಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಾನಾ ಕಾರಣಗಳಿಂದ ನಾವು ಖರ್ಚು ಮಾಡುತ್ತಿರತಕ್ಕಂತಹ ಹಣ ಸರಿಯಾದ ರೀತಿಯಲ್ಲಿ ಖರ್ಚಾಗದೆ ವ್ಯಯವಾಗುತ್ತದೆ. ಅದೇ ರೀತಿ ವಿದ್ಯಾಮಟ್ಟ ಮತ್ತು ಅದರಿಂದ ಆಗತಕ್ಕ ಪ್ರಯೋಜನ ಸಾಕಷ್ಟು ಆಗದೆ ಕಡಿಮೆಯಾಗುತ್ತಾ ಇರುವುದು ಶೋಚನೀಯವಾದ ವಿಚಾರ. ಆದ್ದರಿಂದ ರಾಷ್ಟ್ರ ಆಸ್ತಿಯ ಬದಲಾಗಿ ನಾವು ನ್ಯಾಷನಲ್ ವೇಸ್ಟ್ ಮಾಡುತ್ತಿದ್ದೇವೆಂದರೆ ತಪ್ಪಾಗಲಾರದು. ಈಗ ನಮ್ಮ ರಾಜ್ಯದಲ್ಲಿ ಹೆಚ್ಚು ಹಣವನ್ನು ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತಿದ್ದೇವೆ. ಆದರೆ ಹೆಚ್ಚು ಟೆಕ್ನಿಕಲ್ ಎಜುಕೇಷನ್ ತೆಗೆದುಕೊಂಡವರು ನಿರುದ್ಯೋಗಿಗಳಾಗಿದ್ದಾರೆ. ಈಗ ಮೆಡಿಕಲ್ ಎಜುಕೇಷನ್ ಬಗ್ಗೆ ಸಹ ಉತ್ತಮವಾದ ಬದಲಾವಣೆ ಮಾಡಬೇಕೆಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ. ಅದು ಆಗುವುದು ಬಹಳ ಮುಖ್ಯ. ಎಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮ ಪ್ರೈಮರಿ ಎಜುಕೇಶನ್ ಬಗ್ಗೆ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲ. ನಾನು ಟೈಪ್‌ರೈಟಿಂಗ್ ಮತ್ತು ಶಾರ್ಟ್ ಹ್ಯಾಂಡ್ ಹೇಳಿಕೊಡತಕ್ಕಂತಹ ಮೇಷ್ಟ್ರು ಆಗಿರುವುದರಿಂದ ಇವತ್ತು ಒಬ್ಬೊಬ್ಬ ವಿದ್ಯಾರ್ಥಿ ಎಷ್ಟು ತಪ್ಪು ಮಾಡುತ್ತಿದ್ದಾನೆ ಎಂದು ಕಂಡುಹಿಡಿಯಬಹುದು. ಹಿಂದೆ ಟೈಪ್ ಮಾಡಿದ್ದರಲ್ಲಿ ಎಷ್ಟು ತಪ್ಪು ಇದೆ ಎಂದು ಕಂಡುಹಿಡಿಯಬೇಕಾಗಿತ್ತು. ಆದರೆ ಈಗ ಟೈಪ್ ಮಾಡಿದ್ದರಲ್ಲಿ ಎಷ್ಟು ಸರಿಯಾದ ಪದಗಳು ಇವೆ ಎಂದು ಹುಡುಕಬೇಕಾಗಿದೆ. ಆದ್ದರಿಂದ ಪ್ರತಿಯೊಂದು ಮಟ್ಟದಲ್ಲಿ ಕೂಡ ವಿದ್ಯಾಭ್ಯಾಸದ ಮಟ್ಟ ಸರಿಯಾದ ರೀತಿಯಲ್ಲಿ ಹೋಗುತ್ತಾ ಇಲ್ಲ. ಇದಕ್ಕೆ ಕಾರಣವೇನೆಂದರೆ ನಮ್ಮ ದೇಶದಲ್ಲಿ ಪ್ರಯೋಗಗಳೇ ಹೆಚ್ಚಾಗಿವೆ. ಆದರೆ ಅದರ ಪ್ರತಿಫಲ ಸರಿಯಾಗಿ ದೊರೆಯುತ್ತಾ ಇಲ್ಲ. ನಮ್ಮಲ್ಲಿ ಒಂದು ಸಲ ಮಲ್ಟಿ ಪರ್ಪಸ್ ಸ್ಕೀಂ ಮಾಡಿದರು ; ಒಂದು ಸಲ ಪಿ.ಯು.ಸಿ. ಎರಡು ವರ್ಷ ಮಾಡಿದರು. ನಮ್ಮಲ್ಲಿ ಒಂದು ಕ್ರಮವಾದ ಪದ್ಧತಿಯನ್ನು ಅನುಸರಿಸಿ ಒಂದು ಸರಿಯಾದ ನೀತಿ ಹಾಕಿಕೊಳ್ಳದಿರುವುದರಿಂದ, ಸರಿಯಾದ ವಿದ್ಯೆ ಸಂಪಾದನೆ ಮಾಡುವುದಕ್ಕೆ ಸಾಕಷ್ಟು ಅನುಕೂಲವಾಗುತ್ತಾ ಇಲ್ಲ.

Mr. DEPUTY SPEAKER.—Sri Shamanna may continue on the next nonofficial day.

ಶ್ರೀ ಕೋಣಂದೂರು ಲಿಂಗಪ್ಪ.—ಸಭೆ ಏಳುವುದಕ್ಕೆ ಮುಂಚೆ ಸರ್ಕಾರದಲ್ಲಿ ಒಂದು ವಿನಂತಿ. ಈಗ ಲೋಕಲ್ ಕ್ಯಾಂಡಿಡೇಟ್ಸ್ ಆಗಿರುವ ಕಾಲೇಜು ಟೀಚರುಗಳನ್ನು 31ನೇ ಮಾರ್ಚಿಯವರೆಗೆ ಮುಂದುವರಿಸಿದ್ದಾರೆ. ಅದು ಇವತ್ತಿಗೆ ಮುಕ್ತಾಯವಾಯಿತು. ಅದರ ಬಗ್ಗೆ ಮಂತ್ರಿಯವರು ಒಂದು ಆಶ್ವಾಸನೆಯನ್ನು ಕೊಡಬೇಕು. ಇಲ್ಲದಿದ್ದರೆ ಅವರಿಗೆ ನಾಳೆಯಿಂದ ಕೆಲಸ ಇಲ್ಲದ ಹಾಗೆ ಆಗುತ್ತದೆ.

† ಶ್ರೀ ಎ. ಆರ್. ಬದರೀನಾರಾಯಣ್ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಲೋಕಲ್ ಕ್ಯಾಂಡಿಡೇಟ್ಸ್ ವಿಚಾರವಾಗಿ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಹಿಂದೆ ಏಪ್ರಿಲ್ 10ರವರೆಗೆ ಅಕಾಡಮಿಕ್ ಇಯರ್‌ನಲ್ಲಿ ಲೋಕಲ್ ಕ್ಯಾಂಡಿಡೇಟ್ಸ್‌ಗೆ ಅವಧಿ ಕೊಟ್ಟಿತ್ತು. ಅವರಿಂದ ರೆಪ್ರಕೆಂಟೇಷನ್ ಬಂತು. ಅವರಿಗೆ ಸಂಬಳವನ್ನು ಕೊಡುತ್ತಿದ್ದಾರೆ. ಏಪ್ರಿಲ್ ಅಂತ್ಯದವರೆಗೆ ಅವರಿಗೆ ಜೀವದಾನವಾಡುವಂತೆ ಕೇಳಿದ್ದಾರೆ. ಅದನ್ನು ಅಲ್ಲಿಯವರೆಗೂ ಮುಂದುವರಿಸಿದ್ದೇವೆ.

Mr. **DEPUTY SPEAKER**.—The House will nuw adjourn and meet again on Monday, the 9th April 1973 at 1 P. M.

The House adjourned at Five Minutes past Gne of the Clock to meet again at One of the Clock on Monday the 9th, April 1973.

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Monday, the 9th April 1973/Chaitra 19, 1895 S. E.

The House met in the Assembly Chamber, Vidhana Soudha, at One of the Clock.

MADAM SPEAKER [SMT. K. S. NAGARATHNAMMA] in the Chair.

OBITUARY REFERENCE

re : Demise of Sri K. B. Patil, MLA.

MADAM SPEAKER.—I regret to make a reference to the demise of Sri K. B. Patil a sitting member of this House on 3rd April 1973. Sri K. B. Patil was the President of Hukkeri Taluk Development Board and a well known progressive agriculturist.

I am sure the House will join me in expressing our sense of sorrow on the passing away of Sri K. B. Patil and conveying the feelings of the House to the members of the bereaved family.

I request the members to stand in silence for a minute as a mark of respect to the deceased.

(The Members stood in silence for one minute).

STARRED QUESTIONS

(to which oral answers were given)

Inadequate Water Supply to N. G. O. Government Quarters at Wilson Gardens

388 SRI K. R. SRINIVASULU NAYUDU (Shanthinagar).—

Will the Minister for Municipal Administration be pleased to state :—

(*a*) whether the standard rent of Rs. 25 and Rs. 37 are being deducted from the salary of Gazetted officers working in Mysore Government Secretariat who are residing in Government quarters drawing salary of Rs. 720 and Rs. 500 per month ;

(SRI K. R. SREENIVASULU NAYUDU)

(*b*) whether the rent at the rate of 10 per cent is deducted in the case of NGOs residing in Rajajinagar Government quarters and Wilson Gardens ;

(*c*) if so, the reason for this variation ;

(*d*) whether water at NGOs quarters in Rajajinagar is being supplied all the 24 hours and that in NGOs Government quarters at Wilson Gardens it is supplied only two hours in a day ;

(*e*) the reason for this discrimination ;

(*f*) whether it has come to the notice of Government that Gazetted officers who are having their own houses are residing in Government quarters paying lesser rent and if so, whether Government has investigated the matter ?

Sri B. BASAVALINGAPPA (Minister for Municipal Administration).–

(*a*) Rent is being collected at 7 per cent of the capital cost or 10 per cent of the salary of the officer whichever is less.

(*b*) Reply to clause (*a*) above holds good here also.

(*c*) Does not arise in view of replies to clauses (*a*) and (*b*).

(*d*) Water is being supplied to Rajajinagar quarters between 6 a.m. to 12 Noon and 4 p.m. to 8 p.m. Water is supplied to Wilson Garden quarters two hours in a day.

(*e*) No discrimination is being made. The Supply position from the Water Board mains in Rajajinagar is good but it is not good in Wilson Garden.

(*f*) No.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ ಏನೂ ವ್ಯತ್ಯಾಸವಿಲ್ಲವೆಂದು ಹೇಳಿದ್ದೀರಿ. ಆದರೆ ತಮ್ಮ ಉತ್ತರದ ರೀತಿಯಲ್ಲೇ ವ್ಯತ್ಯಾಸ ಇದೆ. ರಾಜಾಜಿನಗರದ ಮನೆಗಳಿಗೆ 10 ಗಂಟೆಯ ಕಾಲ ನೀರು ಬಿಡುತ್ತಿದ್ದೀರಿ. ಆದರೆ ವಿಲ್ಸನ್ ಗಾರ್ಡನ್‌ನಲ್ಲಿರುವ ಮನೆಗಳಿಗೆ ಕೇವಲ ಎರಡು ಗಂಟೆಯ ಕಾಲ ನೀರು ಕೊಟ್ಟರೂ ವಸೂಲು ಮಾಡುವ ಹಣ ಒಂದೇ ರೀತಿ ವಸೂಲು ಮಾಡುತ್ತಿದ್ದೀರಿ. ಈ ರೀತಿ ಮಾಡುವುದು ವ್ಯತ್ಯಾಸವಲ್ಲವೇ ?

† ಶ್ರೀ ಬಿ. ಬಸವಲಿಂಗಪ್ಪ.—ರಾಜಾಜಿನಗರದ ಮನೆಗಳಿಗೆ ಮೊದಲಿನಿಂದಲೂ ಸರಿಯಾಗಿ ನೀರು ಒದಗಿಸುವ ಏರ್ಪಾಡು ಮಾಡಿಕೊಂಡಿದ್ದಾರೆ. ಅಲ್ಲಿನ ಮೈನ್ ಪೈಪುಗಳು ಬಹಳ ಚೆನ್ನಾಗಿ ಇವೆ. ಆದರೆ ವಿಲ್ಸನ್ ಗಾರ್ಡನ್‌ನಲ್ಲಿ ಹೊಸದಾಗಿ ಪೈಪುಗಳನ್ನು ಹಾಕಿದ್ದಾರೆ. ಪುನಃ ಇದನ್ನು ಸರಿಪಡಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ಮೊನ್ನೆ ಯುಗಾದಿ ಹಬ್ಬದ ದಿನ ಅಲ್ಲಿಯ ಜನರು ನೀರಿಲ್ಲದೆ ಬಹಳ ಕಷ್ಟ ಪಟ್ಟಿದ್ದಾರೆ. ಅದಕ್ಕೆ ಕಾರಣ ಅಲ್ಲಿಯ ಸ್ಟೋರೇಜ್ ಕೆಪ್ಯಾಸಿಟಿ ಸರಿಯಿಲ್ಲ. ಅದನ್ನು ತಾವು ಬಂದರೆ ಬೇಕಾದರೆ ತೋರಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅವರ ಕಷ್ಟ ನಮಗೂ ಗೊತ್ತಾಗಿದೆ. ಅದರ ಬಗ್ಗೆ ಸರಿಯಾದ ನೀರಿನ ಸರಬರಾಜು ಮಾಡಬೇಕೆಂದು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

†Indicates that the remarks or speeches have not been revised by the member concerned.

SRI DODDATHIMMIAH.—May I know what are the factors that are taken into consideration for distribution of water in different hours and in different manner ?

SRI B. BASAVALINGAPPA.—It depends upon providing mains to the extensions, For example in Rajajinagar from the beginning mains have been nicely laid and water supply is very orderly and good water supply is provided. In other areas until Cauvery water comes we cannot provide for some of the areas.

ಶ್ರೀ ಎಂ. ಬಿ. ರಾಮಸ್ವಾಮಿ.—ವಿಲ್ಸನ್ ಗಾರ್ಡನ್ ಮತ್ತು ರಾಜಾಜಿನಗರದ ಕ್ವಾರ್ಟರುಗಳನ್ನು ಕ್ಲಾಸ್ 1 ಮತ್ತು 2 ಅಧಿಕಾರಿಗಳಿಗೆ ಕೊಡುವುದನ್ನು ತಪ್ಪಿಸಿ ಕ್ಲಾಸ್ 3 ಮತ್ತು 4 ನೇ ದರ್ಜೆಯ ನೌಕರರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ರೂಪಾಯಿ 650 ಕೆಳಗಡೆ ಸಂಬಳ ಬರುವವರಿಗೆ ಕೊಡಬೇಕೆಂಬ ನಿಯಮ ಇದೆ. ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡೋಣ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ತಮ್ಮ ಉತ್ತರದಲ್ಲಿ ಯಾವ ತಾರತಮ್ಯ ಮಾಡಿಲ್ಲವೆಂದು ಹೇಳಿದ್ದೀರಿ. ಬಾಡಿಗೆ ಮತ್ತು ನೀರಿನ ವಿಚಾರದಲ್ಲಿ ಮಾಡಿದಂಥ ತಾರತಮ್ಯವನ್ನು ತಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅದೂ ಒಂದು ಸಲಹೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ಮನೆಯನ್ನು ಅಧಿಕಾರಿಗಳ 10 ಪರ್ಸೆಂಟ್ ಸಂಬಳ, ಇಲ್ಲವೇ ಕಾಸ್ಟ್‌ನ 7 ಪರ್ಸೆಂಟ್—ಇದರ ಪ್ರಕಾರ ಬಾಡಿಗೆ ಇತ್ಯರ್ಥ ಮಾಡುತ್ತೇವೆಂದು ಹೇಳಿದ್ದೀರಿ. ಎನ್. ಜಿ. ಓ. ಗಳಿಗೆ ಮತ್ತು ಗೆಜೆಟೆಡ್ ಆಫೀಸರುಗಳಿಗೆ ಒಂದೇ ರೀತಿಯಾಗಿ ಬಾಡಿಗೆ ಕಟ್ ಮಾಡುತ್ತಿದ್ದಾರೆ. ಜೊತೆಗೆ ಎನ್. ಜಿ. ಓ. ಗಳಿಗೆ ಸಹ ಎಲ್. ಐ. ಸಿ. ಕಾಲೋನಿ, ಬ್ಯಾಂಕ್ ಎಂಪ್ಲಾಯೀಸ್ ಕಾಲನಿ ಮಾಡಿದ ಹಾಗೆ ಒಂದು ಕಾಲನಿ ಮಾಡುತ್ತೀರಾ ?

SRI B. BASAVALINGAPPA.—The rent of the house is being charged at 7 per cent of the capital cost or 10 per cent of the salaries of the officers, whichever is less. The same rate of rent is also being charged for the gazetted officers who have been allotted Government quarters in Vasantanagar and Jayamahal extension.

Purchase of Land Belonging to Ex-Maharaja of Mysore

435 SRI KAGODU THIMMAPPA (Sagar).—

Will the Chief Minister be pleased to state :—

(*a*) whether the State Government have decided to purchase 600 acres of land in Mysore District belonging to Ex-Maharaja of Mysore';

(*b*) if so, the amount decided by Government to be paid in this behalf ;

(*c*) the necessity for the Government to acquire this land at the time of enforcement of Mysore Land Reforms Act by making payment of Government money ?

Sri D. DEVARAJ URS (Chief Minister).—

(*a*) Yes.

(*b*) Rs. 13,04,000

(*c*) This being the best land for establishing the Semen Bank and as the necessary buildings are available for immediate use.

ಶ್ರೀ ಕಾಗೋಡು ತಿಮ್ಮಪ್ಪ.—ಈ 600 ಎಕರೆ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಿದೆಯೇ ಇಲ್ಲವೇ ಎಂದು ತಿಳಿಸುತ್ತೀರಾ ?

† ಶ್ರೀ ಡಿ. ದೇವರಾಜ ಅರಸ್.—ಅದು ವ್ಯವಸಾಯಕ್ಕೆ ಯೋಗ್ಯವಾದ ವೆಟ್ ಲ್ಯಾಂಡ್ ಆಗಿದೆ. ಅಲ್ಲದೆ ಗಾರ್ಡನ್ ಲ್ಯಾಂಡ್ ಕೂಡ ಹೌದು.

ಶ್ರೀ ಕಾಗೋಡು ತಿಮ್ಮಪ್ಪ.—ಭೂ ಸುಧಾರಣಾ ಕಾನೂನು ಪ್ರಕಾರ ಈ ಜಮೀನನ್ನು ಮಾಜಿ ಅರಸರು ಡಿಕ್ಲೇರ್ ಮಾಡಿಕೊಂಡಿದ್ದಾರೆಯೇ ; ಹಾಗಿದ್ದರೆ ಇದನ್ನು ಸರ್ಕಾರ ವಶಪಡಿಸಿಕೊಂಡಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಹಿಂದೆ ಡಿಕ್ಲೇರ್ ಮಾಡಿಕೊಂಡ ಹಾಗೆ ಕಾಣಲಿಲ್ಲ. ನನಗೆ ಬಾಕಿ ವಿವರ ಗೊತ್ತಿಲ್ಲ. ಅದನ್ನು ಡೈರಿ ಫಾರ್ಮ್ ಆಗಿ ಇಟ್ಟುಕೊಂಡಿದ್ದರು. ಹಿಂದೆ ಡೈರಿ ಫಾರ್ಮ್‌ಗೆ ಇದ್ದಂತಹ ಎಗ್ಸೆಂಪ್ಷನ್ ಪ್ರಕಾರ ಹಾಗೆ ಮಾಡಿಲ್ಲವೆಂದು ಕಾಣುತ್ತದೆ. ಈಗ ಅದನ್ನು ಒಂದು ಟ್ರಸ್ಟ್ ಎಂದು ಮಾಡಿಕೊಂಡಿದ್ದಾರೆ. ಈಗ ಲ್ಯಾಂಡ್ ರಿಫಾರಂ ಆಕ್ಟ್ ಪ್ರಕಾರ ರಿಟ್ರಾಸ್ಪೆಕ್ಟಿವ್ ಇಫೆಕ್ಟ್ ಇರುವುದರಿಂದ, ಅದರ ಪ್ರಕಾರ ಅದನ್ನು ತೆಗೆದುಕೊಳ್ಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಭೂಸುಧಾರಣಾ ಕಾನೂನು ಏನು ಇಲ್ಲಿ ಬರುತ್ತದೆ, ಅದರ ಪ್ರಕಾರ ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಂಡು, ಅಲ್ಲಿಯವರೆಗೆ ಅವರಿಗೆ ಕೊಡತಕ್ಕಂತಹ ಹಣವನ್ನು ತಡೆಹಿಡಿಯುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಹಿಂದೆ ಡೈರಿ ಫಾರ್ಮ್‌ಗೆ ಇರುವ ಕಾನೂನು ಪ್ರಕಾರ ಅದನ್ನು ಎಗ್ಸೆಮ್ಟ್ ಮಾಡಿದ್ದಾರೆಂದು ಕಾಣುತ್ತದೆ. ಆದರೆ ನಾವು ಮಾಡುವಂತಹ ಕಾನೂನಿಗೆ ಸಹ ಅದು ಒಳಪಡುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಲ್ಯಾಂಡ್ ರಿಫಾರಂ ಮಸೂದೆ ಜಾಯಿಂಟ್ ಸಿಲೆಕ್ಟ್ ಕಮಿಟಿಯಲ್ಲಿ ಇದೆ. ಅದನ್ನು ಬೇಗನೇ ಜಾರಿಗೆ ತರಬೇಕೆಂದು ಬೇರೆ ತಮಗೆ ಆಕಾಂಕ್ಷೆ ಇದೆ. ಆದ್ದರಿಂದ ಅದನ್ನು ಅನುಸರಿಸಿ ಸರ್ಕಾರ ಈ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅವರಿಗೆ ಕೊಡುವ ಹಣವನ್ನು ಏಕೆ ತಡೆಹಿಡಿಯಬಾರದು ?

ಶ್ರೀ ಡಿ. ದೇವರಾಜ ಅರಸ್.—ಈಗ ಬರುವ ಕಾನೂನನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಬೇಕಾಗುತ್ತದೆ. ಅದರ ಪ್ರಕಾರ 71ನೇ ಜುಲೈಯಿಂದ ಈಚೆಗೆ ಆಗತಕ್ಕಂತಹ ವ್ಯವಹಾರಗಳು ಸಿಂಧುವಾಗುವುದಿಲ್ಲ. ಆದ್ದರಿಂದ ಈಗಿನ ಕಾನೂನಿನ ಆಧಾರದ ಮೇಲೆಯೇ ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಅವರಿಗೆ ಕೊಡತಕ್ಕ ಹಣ ಮಾತ್ರ ಇದರಿಂದಲೂ ಕಡಿಮೆ ಕೊಡಬಹುದು. ಇದರಲ್ಲಿ ನಮಗೆ ಬೇಕಾಗಿರತಕ್ಕದ್ದು ಜಮೀನು. ಅದು ನಮ್ಮ ಕ್ರಾಸ್ ಬ್ರೀಡಿಂಗ್ ಸ್ಕೀಮಿನಿಗೆ ಸರಿಯಾಗಿದೆ. ಕೇಂದ್ರ ಸರ್ಕಾರದಿಂದ ಇದಕ್ಕೆ ಒಂದು ದೊಡ್ಡ ಸ್ಕೀಮನ್ನು ತಯಾರು ಮಾಡಿ ಒಂದು ರೀಜನಲ್ ಸೆಂಟರ್ ಮಾಡಿ ಎಂಬುದಾಗಿ ಬಂದಿದೆ. ನಮ್ಮ ರಾಜ್ಯದಲ್ಲಿ ಕ್ರಾಸ್ ಬ್ರೀಡಿಂಗಿಗೆ ಇರುವಂಥ ಅನುಕೂಲತೆ, ಪ್ರದೇಶ, ಇಂಡಿಯಾದೇಶದಲ್ಲಿ ಎಲ್ಲಿಯೂ ಇಲ್ಲ. ಹೊರಗಡೆ ದೇಶಗಳ ತಳಿಯಿಂದ ನಮ್ಮಲ್ಲಿ ಕ್ರಾಸ್ ಬ್ರೀಡಿಂಗ್ ಮಾಡುವ ಹಾಗೆ ಇನ್ನೆಲ್ಲಿಯೂ ಮಾಡಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರು ನಮಗೆ ಒಂದು ಸೆಂಟರನ್ನು ಕೊಡುವುದರಿಂದ ನಾವು ವರ್ಷೇ ವರ್ಷೇ ಸಾವಿರಾರು ಕ್ರಾಸ್‌ಬ್ರೀಡಿಂಗ್ ಕರುಗಳನ್ನು ಆಲ್ ಓವರ್ ಇಂಡಿಯಾ ಡಿಸ್ಟ್ರಿಬ್ಯೂಷನ್ ಮಾಡಬೇಕೆಂದು ಒಂದು ದೊಡ್ಡ ಸ್ಕೀಮನ್ನು ಇಟ್ಟುಕೊಂಡಿದ್ದೇವೆ. ಅವರು ಬಂದು ಇಲ್ಲಿ ನೋಡಿಕೊಂಡು ಹೋಗಿದ್ದಾರೆ. ರಾಮನಕರೆ ಫಾರಂ ಮೈಸೂರಿನಿಂದ 8–10 ಮೈಲಿಗಳ ದೂರದಲ್ಲಿದ್ದರೂ ಅದು ಹಿಂದೆ ಡೈರಿ ಫಾರಂ ಆಗಿತ್ತು. ಅಲ್ಲಿ ಬಾಕಿ ಸವಲತ್ತುಗಳುಗಳು ಇರುವುದರಿಂದ ಆ ಪ್ರದೇಶ

ಈ ಸೆಂಟರಿಗೆ ಯೋಗ್ಯವಾಗಿದೆ. ಈ ಬಗ್ಗೆ ದುಡ್ಡು ಎಷ್ಟು ಕೊಡಬೇಕೆಂಬುದು ಇನ್ನೂ ನಿರ್ಣಯ ಮಾಡಬೇಕಾಗಿದೆ. 13 ಲಕ್ಷ ಚಿಲ್ಲರೆ ರೂಪಾಯಿಗಿಂತ ಇನ್ನೂ ಕಡಿಮೆ ಕೊಡಬೇಕೋ ಏನೋ ಎಂಬುದನ್ನು ಪರಿಶೀಲನೆಮಾಡಿ ದುಡ್ಡು ಕೊಡುವ ವಿಚಾರದಲ್ಲಿ ಇನ್ನೂ ತಡೆ ಹಿಡಿದಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ (ಅ) ಪ್ರಶ್ನೆಗೆ ಉತ್ತರವಾಗಿ 13 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಕೊಡಬೇಕಾಗುತ್ತದೆಂದು ಹೇಳಿದೆ. ಆ ರೀತಿ ಅಂದಾಜು ಮಾಡಿದ್ದೀರಿ. ಈ ರೀತಿ 13 ಲಕ್ಷ ಚಿಲ್ಲರೆ ರೂಪಾಯಿಗೆ ಅದನ್ನು ಪಡೆಯುವುದಾದರೆ ತಾವು ಯಾವ ತತ್ವವನ್ನು ಅನುಸರಿಸಿದ್ದೀರಿ? ಅದಕ್ಕೆ ವಿರೋಧ ಏನಿದೆ?

ಶ್ರೀ ಡಿ. ದೇವರಾಜ ಅರಸ್.—.13 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇವೆ. ಈಗಿನ ಕಾನೂನು ಪ್ರಕಾರ ಅದನ್ನು ಯಾವರೀತಿಯಲ್ಲಿ ಇವ್ಯಾಲ್ಯುಯೇಟ್ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಅಲ್ಲದೆ ಕೆಲವು ಬಿಲ್ಡಿಂಗ್‌ಗಳನ್ನು ಮಾಡಲ್ ಕನ್‌ಸ್ಟ್ರಕ್ಷನ್ ರೀತಿ ಇರುವ ಹಾಗೆ ಇವ್ಯಾಲ್ಯುಯೇಟ್ ಮಾಡಿ ಕಾನೂನು ಪ್ರಕಾರ ಎಷ್ಟು ಕೊಡಬೇಕೋ ಅಷ್ಟನ್ನು ಕೊಡಬೇಕೆಂದು ಸರ್ಕಾರದ ಉದ್ದೇಶ ಇದೆ.

Newly Raised Plantation in the State

436 Sri KAGODU THIMMAPPA (Sagar).—

Will the Minister for Agriculture and Forests be pleased to state :

(*a*) the number of acres in which new plantations were raised every year in the State since 1956 to this date and the cost thereof ;

(*b*) the taluks in which such new plantation grown and its extent in each taluks ;

(*c*) while raising the above said plantations, the number of acres in which the new plantations is raised clearing the old forest in existence and the number of acres in which it is so grown where there was no forest ;

(*d*) the number of trees cut every year for soft wood and the number of trees cut by each of the Campanies ?

Sri K. H. PATIL (Minister for Agriculture and Forests).—

(*a*) 6,04,851 acres of plantations have been raised at a cost of Rs. 8,25,84,324. The average extent of the plantation raised annually is around 35,600 acres.

(*b*) The statement is placed on the Table of the House*.

(*c*) In case of 80,538 acres existing forest was exhibited and after clearance planted up Plantations raised in barren areas cover 5,24,313 acres.

*Copy placed in the Mysore Legislature Library *Vide* No. 27 dated 29-3-1973.

(SRI K. H. PATIL)

(*d*) The quantity of soft-wood removed by the various wood based industries during 1971-72 is as under :

	Industries	*Quntity removed*	
1	M/s India Plywood Manufacturing Company Limited.	47518	Cmtr.
2	M/s Hunsur Plywood Works Private Limited	4503	,,
3	M/s Mysore Commercial Union Limited.	19415	,,
4	M/s Vencer Mills, Mysore	2071	,,
5	M/s Bharath Plywood and Mimber Prodacts, Bangalore.	789	,,
6	M/s Srinivasa Industries, Mysore	1120	,,
7	M/s Lakshmi Saw Mills, Belur	1565	,,
8	M/s Purushotham Gokuldas Plywood Company, Mangalore.	2555	,,
9	M/s Khaledia Saw Mills	440	,,
10	M/s Mysore and Hassan Splints and Vencer Manufacturing Association.	4433	,,
11	M/s Mysore Chip Board Limited, Mysore	1026	,,
12	M/s Doddannavar Brothers, Belgaum	1639	,,
13	M/s Western India Match Company Ltd.	20545	,,
14	M/s Hindmatha Industries	479	,,
15	M/s S.P.S. Industries, Chamarajanagar	682	,,
		108780	

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಹೊಸ ಕಾಡನ್ನು ಬೆಳೆಸುವ ಸಂದರ್ಭದಲ್ಲಿ ಹಿಂದಿದ್ದಂಥ ಎಷ್ಟು ಎಕರೆ ಪ್ರದೇಶದ ಕಾಡನ್ನು ತೆಗೆದು ಹೊಸ ಕಾಡನ್ನು ಬೆಳೆಸಿದ್ದೀರಿ ?

† ಶ್ರೀ ಕೆ. ಎಚ್. ಪಾಟೀಲ್.—80,538 ಎಕರೆ ಜಮೀನಿನಲ್ಲಿ ಹೊಸ ಮರಗಳನ್ನು ಬೆಳೆಸಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಉತ್ತರದಲ್ಲಿ ಕಾಡನ್ನು ಬೆಳೆಸಿರತಕ್ಕ ಪ್ರದೇಶವನ್ನು ಈಗ ಕೊಟ್ಟಿದ್ದೀರಿ. ಹಿಂದಿದ್ದ ಕಾಡನ್ನು ಕಡಿದುಹಾಕಿದ ಪ್ರದೇಶವೆಷ್ಟು? ಮತ್ತು ಕಾಡು ಇಲ್ಲದೆಯೇ ಇರತಕ್ಕ ಪ್ರದೇಶದಲ್ಲಿ ಹೊಸ ಕಾಡನ್ನು ಬೆಳೆಸಿರುವುದು ಎಷ್ಟು ?

ಶ್ರೀ ಕೆ. ಎಚ್. ಪಾಟೀಲ್.—(ಇ)ಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಎರಡಕ್ಕೂ ಉತ್ತರ ಸಿಗುವಂತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮರಗಳ ಸಂಖ್ಯೆ ಎಷ್ಟೆಂಬುದನ್ನು ಉತ್ತರದಲ್ಲಿ ಕೊಟ್ಟಿಲ್ಲ. ಕೇವಲ ಘನ ಮೀಟರುಗಳಲ್ಲಿ ಕಡಿದುಹಾಕಿದ ಮರದ ಪ್ರಮಾಣವನ್ನು ಕೊಟ್ಟಿದ್ದೀರಿ. ಘನ ಅಡಿಗಳ ಆಧಾರದ ಮೇಲೆ ಯಾರ್ಯಾರು ಎಷ್ಟೆಷ್ಟು ಕಡಿದಿದ್ದಾರೆ ?

ಶ್ರೀ ಕೆ. ಎಚ್. ಪಾಟೀಲ್.—ಮರಗಳ ಲೆಕ್ಕ ಇಟ್ಟಿರುವುದಿಲ್ಲ. ಒಟ್ಟು ಎಷ್ಟು ಘನ ಅಡಿ ಎಂಬುದನ್ನು ಮಾತ್ರ ಇಲ್ಲಿ ಕೊಟ್ಟಿದೆ.

ಶ್ರೀ ಸಿ. ಬೈರೇಗೌಡ.—ಹಿಂದಿನ ಅಗ್ರಿಮೆಂಟಿನ ಪ್ರಕಾರ ವೆಸ್ಟ್ ಪೇಪರ್ ಮಿಲ್ಸ್ ಮತ್ತು ಭದ್ರಾವತಿಗೆ ಮರಗಳನ್ನು ಕೊಡುತ್ತಿದ್ದೀರಿ. ಈಗ ಅದೇ ರೀತಿಯಲ್ಲಿ ಅಗ್ರಿಮೆಂಟ್ ಆಗಿದ್ದರೆ, ಬೇರೆ ಕಂಪೆನಿಗಳಿಗೆ ಮರಗಳನ್ನು ಕೊಡುವಾಗ ನಿಗದಿಯಾಗಿರುವ ಬೆಲೆಯೇನು ?

ಶ್ರೀ ಕೆ. ಎಚ್. ಪಾಟೀಲ್.—ಬೇರೆ ಬೇರೆ ಕಂಪೆನಿಗಳಿಗೆ ಅಗ್ರಿಮೆಂಟ್ ಮಾಡಿಕೊಂಡ ಆಧಾರದ ಮೇಲೆ ಬೇರೆ ದರದಲ್ಲಿಯೇ ಮರಗಳನ್ನು ಕೊಟ್ಟಿದ್ದೇವೆ.

ಶ್ರೀ ಸಿ. ಬೈರೇಗೌಡ.—ಅದಕ್ಕೆ ಮಿನಿಮಂ ಮತ್ತು ಮ್ಯಾಗ್ಸಿಮಂ ಪ್ರೈಸ್ ಎಷ್ಟು.

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೆ ನೋಟೀಸ್ ಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—(ಈ) ಪ್ರಶ್ನೆಗೆ ಉತ್ತರವಾಗಿ 15 ಕಂಪೆನಿಗಳಿಗೆ ಮೊದು ಮರಗಳನ್ನು ಕೊಟ್ಟಿದ್ದಾರೆ. ಆ ರೀತಿ ಕೊಡುವಾಗ ಕೆಲವು ತುಂಡುಗಳನ್ನು ಮಾತ್ರ ತೆಗೆದಿಟ್ಟಿದ್ದಾರೆ. ಹಾಗೆ ಅವರು ಬಿಟ್ಟಿರತಕ್ಕ ಲಾಪ್ಸ್ ಅಂಡ್ ಟಾಪ್ಸ್‌ಗಳನ್ನು ವಿತರಣೆಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಎಚ್. ಪಾಟೀಲ್.—ಇದುವರೆಗೂ ಲಾಪ್ಸ್ ಅಂಡ್ ಟಾಪ್ಸ್ ಬಗ್ಗೆ ಸ್ವಲ್ಪವೂ ವೇಷ್ಟ್ ಮಾಡದೆ ಅದನ್ನು ಸರ್ಕಾರ ಉಪಯೋಗ ಮಾಡುವುದಕ್ಕೆ ತಕ್ಕ ಪ್ರಯತ್ನಮಾಡುತ್ತಿದೆ.

Sanction of land in S. No. 180 of Machcheri Village

448 Sri G. PUTTASWAMY (Mudigere).—

Will the Minister for Revenue be pleased to state :

(*a*) to whom and when, the extent of land sanctioned in S.No. 180 of Machcheri Village of Kasaba Hobli in Kadur Taluk of Chikkamagalur District ;

(*b*) whether packaphodi work of the land has been done;

(*c*) the stage of the concerned records at present ;

(*d*) the compelling reasons for not making packaphodi work of these lands ;

(*e*) whether it has come to the notice of the Government that the Exice Department has illegally occupied the lands sanctioned to Harijans for growing palm trees and has sown the palm seeds and built fences around the said land ;

(*f*) whether the Government has received any complaint in this behalf ?

(*g*) the action the Government proposes to take in this behalf ?

Sri N. HUTCHAMASTHI GOWDA (Minister for Revenue).—

(*a*) *The details of Lands Sanctioned*

		A. G.	Date of Grant
1	Hanumakka	10-00	16-11-1956
2	Sannaganga Bovi	2-00	do
3	Ganga Bovi	2-00	do
4	Govind Naik	2-33	do

(SRI N. HUTCHAMASTHY GOWDA)

(*b*) Phodi record has been done.

(*c*) The records have been sent to Superintendent of Land Records, Hassan for counter signature.

(*d*) Encroachment is the reason.

(*e*) No.

(*f*) No.

(*g*) Does not arise.

ಶ್ರೀ ಜಿ. ಪುಟ್ಟಸ್ವಾಮಿ.—(ಇ)ಗೆ ಉತ್ತರವಾಗಿ ಹೇಳಿರುವ ಪ್ರಕಾರ, ಆ ರಿಕಾರ್ಡ್‌ನ್ನು ಅವರಿಗೆ ಯಾವಾಗ ಕಳುಹಿಸಲಾಗಿದೆ ?

† ಎನ್. ಹುಚ್ಚಮಾಸ್ತಿಗೌಡ.—18-3-1973 ರಲ್ಲಿ.

ಶ್ರೀ ಜಿ. ಪುಟ್ಟಸ್ವಾಮಿ.—1956ರಲ್ಲಿ ಜಮೀನು ಮಂಜೂರಾತಿ ಆಗಿದ್ದರೂ ಈಗ ಅವರಿಗೆ ಕಳುಹಿಸಿದ್ದೀರಿ. ಇಷ್ಟು ಡಿಲೆ ಆಗಿರುವುದಕ್ಕೆ ಕಾರಣವೇನು ?

ಶ್ರೀ ಎನ್.ಹುಚ್ಚಮಾಸ್ತಿಗೌಡ.—ನನಗೆ ಬಂದಿರುವ ಮಾಚಾರದ ಪ್ರಕಾರ ಅಲ್ಲಿ ಸ್ವಲ್ಪ ಎನ್‌ಕ್ರೋಚ್‌ಮೆಂಟ್ ಇದ್ದುದರಿಂದ ಇಷ್ಟು ನಿಧಾನವಾಗಿದೆಯೆಂದು ಹೇಳಿದ್ದಾರೆ. ಹೀಗೆ ಎನ್‌ಕ್ರೋಚ್‌ಮೆಂಟ್ ಇದ್ದರೆ, ಬೇರೆಯವರಿಗೂ ಜಮೀನು ಮಂಜೂರಾಗುವುದಕ್ಕೆ ತೊಂದರೆಯಾಗುತ್ತದೆ. ಬೇರೆಯವರಿಗೆ ಮಂಜೂರಾಗಿರತಕ್ಕ ವಿಷಯ ನನ್ನಲ್ಲಿಲ್ಲ. ನಿರ್ದಿಷ್ಟವಾದ ಕಾರಣ ನನ್ನ ಮುಂದೆ ಇಲ್ಲದಿರುವ ಕಾರಣ ಈ ಸಭೆ ಅಖೈರಾದಕೂಡಲೇ ನಾನೇ ಅಲ್ಲಿಗೆ ಹೋಗಿ ಖುದ್ದಾಗಿ ತಿಳಿದುಕೊಂಡು ಬೇಗನೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುವದಕ್ಕೆ ಪ್ರಯತ್ನಮಾಡುತ್ತೇನೆ. ಯಾರು ಇಷ್ಟು ನಿಧಾನವಾಗಲಿಕ್ಕೆ ಕಾರಣರೆಂಬುಧನ್ನು ವಿಚಾರ ಮಾಡಿ ಶಾಸನ ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಇಲ್ಲಿ ಮಂಜೂರಾಗಿರುವ ಜಮೀನಿನ ವಿವರ ನೋಡಿದರೆ, ಅದರಲ್ಲಿರುವ 4 ಹೆಸರುಗಳ ಪೈಕಿ, ಸಣ್ಣ ಗಂಗಾಬೋವಿ ಎಂಬುವರು 1956ನೇ ನವಂಬರ್ 16ನೇ ತಾರೀಖಿನಿಂದ ಎರಡು ಎಕರೆಯಲ್ಲಿ ಉಳುಮೆ ಮಾಡುತ್ತಿದ್ದರೂ ಅದನ್ನು ಈಗ ಎಕ್ಸೈಜ್ ಡಿಪಾರ್ಟ್‌ಮೆಂಟಿನವರು ಜಮೀನಿನ ಸುತ್ತ ಬೇಲಿ ಹಾಕಿ ಅಲ್ಲಿ ಈಚಲು ಗಿಡಗಳನ್ನು ಬೆಳೆಯುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ನಿಜವಾಗಿ ಅವರಿಗೇ ಆ ಜಮೀನು ಮಂಜೂರಾತಿ ಆಗಿದ್ದರೆ, ಅದನ್ನು ಅವರಿಗೇ ಕೊಡಿಸಿಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೆ ಆ ಜಮೀನು ಉಳುಮೆ ಮಾಡುವುದಕ್ಕೆ ಮಂಜೂರು ಆಗಿದ್ದರೂ ಅದನ್ನು ಪಕ್ಕಾ ಪೋಡ್ ಮಾಡಿ ಗುರ್ತುಮಾಡಿ ಕೊಟ್ಟಿಲ್ಲ. ಮೊನ್ನೆತಾನೇ ಪಕಾಪೋಡ್ ಮಾಡಲು ಲ್ಯಾಂಡ್ ರಿಕಾರ್ಡ್ಸ್ ಸೂಪರಿಂಟೆಂಡೆಂಟ್ ಅವರಿಗೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಬಂದಮೇಲೆ ಅವರಿಗೇ ಕನ್‌ಫರ್ಮ್ ಮಾಡುತ್ತೇವೆ. ಆದರೆ ಅಲ್ಲಿ ಅವರು ಜಮೀನು ಉಳುಮೆ ಮಾಡುತ್ತಿದ್ದಾರೋ ಏನೋ ನನಗೆ ಗೊತ್ತಿಲ್ಲ. ಅದರ ಜೊತೆಗೆ ಈಚಲು ಗಿಡಗಳನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನವರು ಹಾಕಿದ್ದಾರೆಂದು ಹೇಳಿದರು. ಆದರೆ ಅದು ಇಲ್ಲವೆಂದು ನನಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಒಟ್ಟಿನಲ್ಲಿ ಕೂಡಲೇ ಇದರ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ವಿಚಾರವನ್ನು ನಾನೇ ಖುದ್ದು ಎಕ್ಸೈಜ್ ಡಿಪಾರ್ಟ್‌ಮೆಂಟಿಗೆ ಹೋಗಿ ಅಲ್ಲಿನ ಅಧಿಕಾರಿಗಳ ಹತ್ತಿರ ಹಾಗೂ ತಹಶೀಲ್ದಾರರ ಹತ್ತಿರ ಮಾತನಾಡಿದ್ದೇನೆ. ಅಲ್ಲಿ ಬೇಗ ಹಾಕಿದ್ದುದನ್ನು ನೋಡಿ ಬಂದಿದ್ದೇನೆ. ಶ್ರೀಮತಿ ಹನುಮಕ್ಕ ಎಂಬುವರು ಇನ್ನೊಬ್ಬರಿಂದ ದೂರು ಕೊಡಿಸಿದ್ದಾರೆ. ಅಕ್ರಮವಾಗಿ ಅವರು ಪ್ರವೇಶಮಾಡಿ ಅವರ ಸಾಗುವಳಿ ಚೀಟಿಯನ್ನು ಹರಿದುಹಾಕಿ ಬೇಗ ಹಾಕಿದ್ದಾರೆ. ಅದನ್ನು ತಾವು ವಿಚಾರಮಾಡಬೇಕು. ಅವರು ಇವತ್ತು ತುಂಬಾ ಗರೀಬರಾಗಿದ್ದಾರೆ. ಅವರು ದೂರು ಕೊಟ್ಟಿಲ್ಲವೆಂಬುದು ಸುಳ್ಳು ಆಗುತ್ತದೆ. ನಾನೇ ದೂರು ಕೊಟ್ಟಿದ್ದೇನೆ. 4 ವರ್ಷಗಳಿಂದಲೂ ಸಾಗು ಮಾಡಿರುವ ಬಗ್ಗೆ ತಕ್ಕ ರಿಕಾರ್ಡ್ಸ್ ಸಹ ಇವೆ.

ಜಮೀನು ತೆಗೆದುಕೊಂಡಿದ್ದಾರೆಂಬುದನ್ನು ನಾನೇ ಖುದ್ದಾಗಿ ನೋಡಿದ್ದೇನೆ. ಆದ್ದರಿಂದ ಅವರವಗೆ ನ್ಯಾಯ ದೊರಕಿಸಿಕೊಟ್ಟು ಅವರವರಿಗೇ ಆ ಜಮೀನುಗಳನ್ನು ದೊರಕಿಸಲು ತಕ್ಕ ವ್ಯವಸ್ಥೆಯನ್ನು ಜಾಗ್ರತೆಯಾಗಿ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಕೇಳಿರುವ ಪ್ರಶ್ನೆಗೆ ಈಗಾಗಲೇ ಸ್ಪಷ್ಟವಾಗಿ ಉತ್ತರ ಹೇಳಿದ್ದೇನೆ. ಕಚಲ ಗಿಡ ಹಾಕುವುದಕ್ಕೆ ಏನೂ ಪ್ರಯತ್ನಮಾಡಲಿಲ್ಲ ಆ ವಿಚಾರ ಸರ್ಕಾರದ ಗಮನಕ್ಕೂ ಬಂದಿಲ್ಲ. ಆ ಪ್ರಯತ್ನಮಾಡಿರವುದು ಉದ್ದೇಶಪೂರ್ವಕವಾಗಿಯೇ ಅಕ್ರಮಗಳನ್ನು ಮಾಡುತ್ತಿದ್ದಾರೆಂದ ತಿಳಿಸಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅದನ್ನು ಕೂಡಲೇ ವಿಚಾರ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

Cultivation of Shivajama Lands in Kollegal Taluk

530. **Sri R. RACHE GOWDA** (Hanur).—

Will the Minister for Revenue be pleased to state:—

(*a*) the number of persons cultivating Shivajama lands in Kollegal Taluk without obtaining pattas;

(*b*) the time within which arrangements will be made to grant pattas to such people;

(*c*) the number of persons to whom pattas are granted so far from April 1972 to 31st January?

Sri N, HUTCHAMASTHY GOWDA (Minister for Revenue).—

(*a*) 592.

(*b*) In about 6 months time from now,

(*c*) 216.

ಅಧ್ಯಕ್ಷರೇ ಇಲ್ಲಿ ಒಂದು ತಿದ್ದುಪಡಿ ಇದೆ-ಇಲ್ಲಿ ಉತ್ತರದಲ್ಲಿ 592 ಎಂದು ಬಿದ್ದಿರತಕ್ಕದ್ದು ಮುದ್ರಣ ದೋಷ. ಇದನ್ನು ದಯವಿಟ್ಟು 952 ಎಂದು ತಿದ್ದಿ ಸರಿಪಡಿಸಿಕೊಳ್ಳಬೇಕು.

ಶ್ರೀ ಆರ್. ರಾಚೇಗೌಡ.—ಇಲ್ಲಿ (ಇ)ಗೆ ಉತ್ತರವಾಗಿ-216 ಎಂದು ಹೇಳಿದೆ. ಇವರಲ್ಲಿ ವೆಲ್ತಿ ಪಟ್ಟಾದಾರ್ಸ್-ಅಂದರೆ 10 ಎಕರೆಗೂ ಜಾಸ್ತಿ ಭೂಮಿ ಇರತಕ್ಕಂಥ ಜನರು ಎಷ್ಟಿದ್ದಾರೆ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—10 ಎಕರೆಗೂ ಜಾಸ್ತಿ ಭೂಮಿ ಇರತಕ್ಕವರಿಗೆ ಮತ್ತೆ ಭೂಮಿ ಕೊಡಕೂಡದೆಂದು ಸರ್ಕಾರದ ನಿಯಮವೇ ಇದೆ. 1960ನೇ ಸಾಲಿನ ಅಂಕಿ ಅಂಶಗಳ ಪ್ರಕಾರ 29,117 ಎಕರೆ 35 ಸೆಂಟ್ಸ್ ಜಮೀನು 5559 ಜನರ ಸ್ವಾಧೀನದಲ್ಲಿತ್ತು. ಹಿಂದೆ ಇದ್ದ ಮದ್ರಾಸ್ ಸರ್ಕಾರದವರ ಕಾಲದಲ್ಲಿ ಅಕ್ರಮ ಸಾಗುವಳಿಯಲ್ಲಿದ್ದ ಜಮೀನು ವಿಸ್ತೀರ್ಣ ಅಂದರೆ 1973ರವರೆಗೆ 27,132 ಎಕರೆ 8 ಸೆಂಟ್ಸ್; ಅಕ್ರಮವಾಗಿ ರೈತರ ಸ್ವಾಧೀನದಲ್ಲಿ ಇತ್ತು. ಇದರಲ್ಲಿ ಈವರೆಗೆ 1985 ಎಕರೆ 27 ಕುಂಟೆಗೆ (ಸೆಂಟ್ಸ್) ಪಟ್ಟಾ ಕೊಡಲಾಗಿದೆ, ಇನ್ನು ಅಲ್ಲಿ ಉಳಿದಿರತಕ್ಕ ಭೂಮಿ 7 0 ಎಕರೆ ಮಾತ್ರ. ಜನರು 952. ಅಲ್ಲಿ ಹಾಗೇನಾದರೂ 10 ಎಕರೆಗಳಿಗೂ ಜಾಸ್ತಿ ಭೂಮಿ ಇದ್ದವರಿಗೇ ಮತ್ತೆ ಭೂಮಿಯನ್ನು ಕೊಟ್ಟಿದ್ದರೆ ಅದನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಆರ್. ರಾಚೇಗೌಡ.— ಅಲ್ಲಿ ಉಳಿದಿರತಕ್ಕ ಭೂಮಿ 710 ಎಕರೆಗಳಲ್ಲ ಇನ್ನೂ ಹೆಚ್ಚು ಜಮೀನಿದೆ. ನನಗೆ ತಿಳಿದಿರುವ ಪ್ರಕಾರ 10-15 ಸಾವಿರ ಎಕರೆ ಅಲ್ಲಿ ಉಳಿದಿದೆ ಎಂದು. ಅದನ್ನು ಪರಿಶೀಲನೆ ಮಾಡಿಸಿ ಅದನ್ನು ಭೂಮಿ ಇಲ್ಲದವರಿಗೆ ಕೊಡುವುದಕ್ಕೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಲ್ಲಿ ಈಗ ರೆಕಾರ್ಡ್ ಆಫ್ ಸರ್ವೆ ಕೆಲಸ ಆಗಬೇಕಾಗಿದೆ. ಅಲ್ಲಿರತಕ್ಕ ಭೂಮಿಯ ಒಟ್ಟು ವಿಸ್ತೀರ್ಣ 29,117 ಎಕರೆಗಳು. ಆದರಲ್ಲಿ ಯಾರು ಯಾರಲ್ಲಿ ಎಷ್ಟೆಷ್ಟು ಭೂಮಿ ಇದೆ ಎಂಬುದನ್ನು ಪರಿಶೀಲಿಸಬೇಕಾಗಿದೆ. ಅಲ್ಲಿ ಎಷ್ಟು ಜಮೀನು ಉಳಿದಿದ್ದರೆ ಅಷ್ಟಕ್ಕೂ ಪಟ್ಟ ಕೊಡುವುದಕ್ಕೆ ವ್ಯವಸ್ಥೆಮಾಡಲಾಗುತ್ತಿದೆ.

ಶ್ರೀ ಎಂ. ಬಿ. ರಾಮಸ್ವಾಮಿ. - ಕಳೆದ 6 ತಿಂಗಳಲ್ಲಿ ಎಷ್ಟು ಜನರಿಗೆ ಪಟ್ಟೆಗಳನ್ನು ಹಂಚಿದ್ದಾರೆ? ಹಾಗೆ ಪಟ್ಟೆಗಳನ್ನು ಕೊಡತಕ್ಕ ಕಾಲದಲ್ಲಿ ಪಟ್ಟೆ ಒಂದಕ್ಕೆ ನಿಗದಿಯಾದ ಬೆಲೆಗಿಂತ ಹೆಚ್ಚು ಎಷ್ಟು ಹಣವನ್ನು ಜನರಿಂದ ಕಲೆಕ್ಟ್ ಮಾಡಿದ್ದಾರೆ? ಹೆಚ್ಚಿಗೆ ಕಲೆಕ್ಟ್ ಮಾಡಿರುವುದನ್ನು ಸರ್ಕಾರದ ಗಮನಕ್ಕೆ ತಂದರೆ ಕ್ರಮ ಕೈಕೊಳ್ಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇದು ಪಟ್ಟೆ ಕೊಡದಿದ್ದ ರೈತರಿಗೆ ಪಟ್ಟಾ ಹಂಚತಕ್ಕ ವಿಚಾರಕ್ಕೆ ಸಂಬಂಧಪಟ್ಟದ್ದು, ಆದರೆ ಮಾನ್ಯ ಸದಸ್ಯರ ಉಪಪ್ರಶ್ನೆಗೆ ಇದಕ್ಕೆ ಸಂಬಂಧಪಡುವುದಿಲ್ಲ ಒಂದು ಪಟ್ಟೆಯ ಬೆಲೆ ಐವತ್ತು ನಯಾ ಪೈಸೆ. ಹೆಚ್ಚು ತೆಗೆದುಕೊಂಡಿರತಕ್ಕ ಸಂದರ್ಭಗಳನ್ನು ನನ್ನ ಗಮನಕ್ಕೆ ತಂದರೆ ಕ್ರಮಕೈಗೊಳ್ಳಲಾಗುತ್ತದೆ ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

Medical Reimbursement Claimed by Ministers And Ministers of State

537. Sri T. V. KRISHNAPPA (Channapatna).—

Will the Chief Minister be pleased to state:—

the totai amount towards medical reimbursement claimed by and paid to the Ministers and Ministers of State from the beginning of March 1972 to the end of February 1973?

Sri D. DEVARAJ URS (Chief Minister) —

Rs. 6451.93,

ಶ್ರೀ ಟಿ. ವಿ. ಕೃಷ್ಣಪ್ಪ.—ಇಲ್ಲಿ ಉತ್ತರದಲ್ಲಿ ಒಟ್ಟಿಗೆ ಇಷ್ಟು ಹಣ ಖರ್ಚಾಗಿದೆ ಎಂದು ತಿಳಿಸಲಾಗಿದೆ. ಆದರೆ ಯಾವ ಯಾವ ಮಂತ್ರಿಗಳಿಗೆ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ?

† Sri D. DEVARAJ URS.—

Sriyuths		Rs.
H. M. Channabasappa, Minister for P.W.	...	891.65
B. Basavalingappa, Minister for Municipal Administrati n	...	44.00
M. Mallikarjunaswamy, Minister for Planning and Social Welfare	...	1060.40
A. R. Badarinarayana, Minister for Edn.,	...	97.90
N. Hutchamasthy Gowda, Minister for Rev.	...	542.07
Azeez Sait, Minister for Labour	...	64.60
S. M. Krishna, Minister for Industries	...	591.52

		Rs.
D. K. Naikar, Minister for Law and Parliamentary Affairs	...	207.18
N. Chikke Gowda, Minister of State for Animal Husbandry	...	1738.92
H. N. Nanje Gowda, Minister of State for Major Irrigation	...	518.97
S. B. Nagaral, Minister of State for Sericulture	...	256.09
V. S. Koujalgi, Minister of State for Youth Services	...	160.85
G. Devendrappa, Minister of State for Planning and Information	...	277.75
Total	...	6451.93

ಮೆಡಿಕಲ್ ಛಾರ್ಜಸ್ಸನ್ನು ತೆಗೆದುಕೊಳ್ಳದೆ ಇರತಕ್ಕ ಮಂತ್ರಿಗಳು ಯಾರು ಯಾರೆಂದರೆ:—

(1) ಮುಖ್ಯ ಮಂತ್ರಿಗಳು ಶ್ರೀ ಡಿ. ದೇವರಾಜ ಅರಸ್ (2) ಆರೋಗ್ಯ ಮಂತ್ರಿ ಶ್ರೀ ಎಚ್. ಸಿದ್ದವೀರಪ್ಪನವರು (3) ಸಹಕಾರ ಸಚಿವರಾದ ಶ್ರೀ ಶಂಕರ ಆಳ್ವ ಅವರು (4) ಅರಣ್ಯ ಸಚಿವರಾದ ಶ್ರೀ ಕೆ. ಎಚ್. ಪಾಟೀಲ್ ಅವರು (5) ಆರ್ಥಿಕ ಸಚಿವರಾದ ಶ್ರೀ ಎಂ. ವೈ. ಘೋರ್ಪಡೆಯವರು (6) ಆಹಾರ ಸಚಿವೆ ಶ್ರೀಮತಿ ಇ.ಇ. ವಾಜ್ (7) ಮೀನುಗಾರಶಾಖೆ ಸಚಿವ ಶ್ರೀ ಕೆ. ಟಿ. ರಾಥೋಡ್ ಅವರು (8) ಆರ್ಥಿಕ ಸ್ಟೇಟ್ ಸಚಿವ ಶಿವಣ್ಣ ಭೀಮಪ್ಪ ಅವರು ಮತ್ತು (9) ಸ್ಟೇಟ್ ಗೃಹ ಮಂತ್ರಿಗಳಾದ ಶ್ರೀ ಆರ್. ಡಿ. ಕಿತ್ತೂರ್ ಅವರು

Supply of Food and Drinking Water to People of Challakere and Molkalmuru Taluks.

628. Sri V. MASIYAPPA (Challakere).—

Will the Chief Minister be pleased to state:—

(a) whether it has come to the notice of Government that severe drought conditions prevail in Challakere and Molakalmuru Taluks and parts of Hiriyur, Chitradurga, Jagalur and Hosadurga Taluks;

(b) the action taken by the Government in these taluks to provide labour to the unemployed labourers and for supply of food grains at fair price depots and providing drinking water in places where there is dearth for drinking water;

(c) whether it has come to the notice of the Government that heavy amounts are due to the contractors on the works executed by them which have now been stopped;

(d) whether arrangements are made to make payments of these arrears.

(e) whether arrangements have been made to take up fresh relief works in these taluks?

Sri D. DEVARAJ URS (Chief Minister).—

(*a*) Yes.

(*b*) A good number of works under 64-Famine and other works under Normal Departmental Funds have been executed in the above taluks through the Departments of Public Works, Forest, Horticulture, Agriculture Department and Taluk Development Boarda. Food grains are being supplied through fair price depots. Action has been taken to deepen the Drinking Warer Wells through the Taluk Development Boards, Public Health Engineering authorities have been instructed to take up the repairs of Hand Pumps fixed to Bore-Wells.

(*c*) Yes.

(*d*) Instructions have been issued to pay 25 per cent of the pending bills before 31st March 1973 and to disburse the balance during the next year (1973-74).

(*e*) The Deputy Commissioner, Chitradurga has prepared a comprehensive Blue Print in consultation with the local officers for takig up fresh works under 64-famine and also under budgetted Grants of the Deptrtments till the end of June 1973. This bas been discussed in the District Development Council meeting on 8th March 1973.

ಶ್ರೀ ವಿ. ಮಸಿಯಪ್ಪ.—ಈ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ಇನ್ನೂ ಬ್ಲೂಪ್ರಿಂಟನ್ನು ತಯಾರಿಸ ಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಈಗಾಗಲೇ ಅಲ್ಲಿ ಕೆಲಸಗಳನ್ನು ಕೈಗೊಳ್ಳುವು ದಕ್ಕೆ ಸರ್ಕಾರದವರು ಅಜ್ಞೆಯನ್ನು ಕೊಟ್ಟಿದ್ದಾರೆಯೇ ?

† ಶ್ರೀ ಡಿ. ದೇವರಾಜ ಅರಸ್.—ಕೆಲಸವನ್ನು ಷುರು ಮಾಡಿ ಎಂದು ಹೇಳಿದ್ದೇವೆ.

ಶ್ರೀ ವಿ. ಮಸಿಯಪ್ಪ.—ಅನೇಕ ಕಡೆ ಜನರಿಗೆ ಕುಡಿಯುವ ನೀರಿಲ್ಲದೆ ಬಹಳ ತೊಂದರೆ ಪಡುತ್ತಿ ದ್ದಾರೆ. ಆದುದರಿಂದ ಕುಡಿಯುವ ನೀರಿನ ಬಾವಿಗಳ ಕೆಲಸವನ್ನು ಬೇಗ ಪೂರೈಸುವುದಕ್ಕೆ ಇಂಜಿ ನಿಯರಿಂಗ್ ಇಲಾಖೆಗೆ ತಿಳಿಸಲಾಗುತ್ತಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ನನಗೆ ಇದು ಮೊನ್ನೆತಾನೇ ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ತಿಳಿಯಿತು. ಕೆಲವನ್ನು ರಿಪೇರಿ ಮಾಡಿದ್ದರೂ ಅದರಲ್ಲಿ ನೀರು ಸಾಲದೆ ತೊಂದರೆ ಉಂಟಾಗಿರ ಬಹುದು. ಅಂಥ ಕಡೆಗಳಲ್ಲೆಲ್ಲಾ ಹತ್ತಿರದಲ್ಲಿರತಕ್ಕ ಕೆರೆಯ ಅಂಗಳದಲ್ಲಿ ಹಂಗಾಮಿ ಬಾವಿಗ ಳನ್ನು ತೋಡಿಸಲು ಹೇಳಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಅಲ್ಲಿ 5000 ರೂಪಾಯಿಗಳವರೆಗೂ ಖರ್ಚುಮಾಡಿ ಕಟ್ಟ ಡಕ್ಕೆ ಹಣವಿಲ್ಲದೆ ಕೆಲಸ ಹಾಗೆ ಮುಲ್ಕಿ ನಿಂತಿರುವಂಥ ನೂರಾರು ಬಾವಿಗಳಿವೆ. ಅವುಗಳನ್ನು ಸರಿಪಡಿಸುವುದಕ್ಕೆ ಏನು ಮಾಡಿದ್ದಾರೆ ?

ಶ್ರೀ ಡಿ. ದೇವರಾಜ ಅರಸ್.—ಕಟ್ಟಡಕ್ಕೆ ದುಡ್ಡು ಸಾಲದೆ ಬಂದಿದ್ದರೆ ನೋಡೋಣ. ಅಂಥ ವಿಷಯಗಳನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಕುಡಿಯುವ ನೀರಿನ ಸಮಸ್ಯೆ ಬರೀ ಚಿತ್ರದುರ್ಗಕ್ಕೆ ಮಾತ್ರವೋ ಅಥವಾ ಅದು ಇಡೀ ರಾಜ್ಯಕ್ಕೆ ಅನ್ವಯಿಸುತ್ತದೋ ?

ಶ್ರೀ ಡಿ. ದೇವರಾಜ ಅರಸ್.—ಕುಡಿಯುವ ನೀರಿಗೆ ಎಲ್ಲಿ ತೊಂದರೆ ಇದ್ದರೂ ಅದನ್ನು ಸರಿಪಡಿಸಲಾಗುತ್ತದೆ.

Intensive Cattle Development Project in Dharwar

715. Smt. SUMATI B. MADIMAN (Dharwar-Rural).—

Will the Minister of State for Animal Husbandry be pleased to state :—

(a) the year in which the intensive cattle development project was established in Dharwar ;

(b) the expenditure incurred on this project for the last one year ;

(c) whether the same staff continued to serve there ;

(d) the number of insemination centres existing in this project ;

(e) whether the farmers have been benefited by this project ;

(f) whether the centres are properly equipped ?

Sri N. CHIKKE GOWDA (Minister of State for Animal Husbandry).—

(a) 1969.

(b) Rs. 4,66,936-95 P. during the year 1971-72.

(c) Yes.

(d) 100.

(e) Yes.

(f) Yes.

1–30 P. M.

Smt. SUMATI B. MADIMAN.—May I know how cows and calves have been bread up by these centres ?

† Sri N. CHIKKE GOWDA.—Out of 100 centres started, 50 centres were started in 1969 and another 50 centres were started in 1970. Number of crows and buffalows inseminated During 1969-70 ;

	Cows	...	3877
	Buffaloes	...	155
During 1970-71 :			
	Cows	...	7473
	Buffaloes	...	1575
During 1971-72			
	Cows	...	5940
	Buffaloes	...	2772

Calves boring during 1971-72 : 868

do 1972-73 : 543

Smt. SUMATI B. MADIMAN.—Has it come to the notice of Government that this programme has not come to the knowledge of the farmers ; if so, will they sanction a separate section for propaganda and publicity as is in Bangalore so that more farmers could get the benefit of these centres ?

Sri N. CHIKKE GOWDA.—There is no separate propaganda and publicity department or a section for this purpose in Bangalore. From the very inception of these centres, the staff attached to these centres is also expected to do propaganda work and also arrange exhibition of cross-breeds and give them prizes. All sorts of incentives are being given to this programme by these 100 centres. These centres are located in the Taluks of :

1. Dharwar, 2. Hubli, 3. Kundgol, 4. Gadag, 5. Navalgund
6. Kalaghatgi, 7. Belgaum, 8. Karwar.

There are two Regional Centres for Artificial Insemination. The staff attached to these Centres are expected to go and make propaganda and publicity. Apart from that, they are also expected to attend to the fodder development programme and protect the animals from epidemic and non-epidemic diseases.

ಶ್ರೀ ಸಿ. ಬೈರೇಗೌಡ.—ಗರ್ಭಧಾರಣಾ ಕೇಂದ್ರಗಳಲ್ಲಿ ಸ್ವಲ್ಪಮಟ್ಟಿಗೆ ಇತರ ಔಷಧಿಗಳನ್ನು ಇಟ್ಟು ಬರುವ ರೋಗಗಳನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಎನ್. ಚಿಕ್ಕೇಗೌಡ.—ಕೃತಕ ಗರ್ಭಧಾರಣಾ ಕೇಂದ್ರಗಳಲ್ಲಿ ಅದಕ್ಕೆ ಬೇಕಾದ ಔಷಧಿಗಳನ್ನು ಮಾತ್ರ ಇಡಲಾಗುವುದು. ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪಶುವೈದ್ಯ ಶಾಲೆಗಳಲ್ಲಿರುವ ಕಡೆಗಳಿಗೆ ಬೇಕಾದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ, ಸುಮಾರು 20ಲಕ್ಷ ರೂಪಾಯಿನ ಔಷಧಿಗಳನ್ನು ಇಡೀ ರಾಜ್ಯದ ಆಸ್ಪತ್ರೆಗಳಿಗೆ ಒದಗಿಸಲಾಗಿದೆ, ಅಂಟುಜಾಡ್ಯಗಳನ್ನು ತಡೆಗಟ್ಟಲು ಬೇಕಾದ ಔಷಧಿಗಳನ್ನು ಸಹ ಒದಗಿಸಲಾಗಿದೆ. ನಾನು ಕೆಲವು ಕಡೆಗಳಿಗೆ ಸರ್ಪ್ರೈಜ್ ವಿಸಿಟ್ ಕೊಟ್ಟಾಗ ಅಲ್ಲಿನ ಜನರು ಬೇಕಾದ ಔಷಧಿಗಳು ದೊರೆಯುತ್ತಿವೆಯೆಂದು ತಿಳಿಸಿದರು, ನೋಟೀಸು ಬೋರ್ಡಿನಲ್ಲಿ ಸಹ ಯಾವ ಔಷಧಿಗಳಿವೆ ಎಂಬುದನ್ನು ನಮೂದಿಸುವರು.

Agitation for Allotment of Land in Kolar District

870. Sri C. BYRE GOWDA (Vemgal).—

Will the Minister for Revenue be pleased to state :—

(*a*) wherther the Government is aware of the widespread land seizure agitation by the agricultural workers and poor peasants in Begepally, Chikkaballapnr, Sidlaghata and Chintamani Taluks of Kolar District for grant of cultivable forest and revenue lands ;

(*b*) the number of people who participated in the agitation and the number of persons arrested so far ;

(*c*) the extent of the area seized by the poor peasants in the agitation so far ;

(d) whether the Government would grant cultivable forest land, revenue lands in Kolar District to the landless peasants in these places ?

Sri N. HUTCHAMASTHY GOWDA (Minister for Revenue).—

(a) Yes.

(b) 683.

(c) Nil.

(d) Revenue lands available for disposal will be granted to the landless persons or others as per rules. No forest land will be granted.

ಶ್ರೀ ಸಿ. ಬೈರೇಗೌಡ.—ರೆವಿನ್ಯೂ ಮಂತ್ರಿಗಳು ಮತ್ತು ಅರಣ್ಯ ಇಲಾಖೆ ಮಂತ್ರಿಗಳು ಒಟ್ಟಿಗೆ ಬಂದು ಭೇಟಿಕೊಟ್ಟು ಯಾವ ಭೂಮಿ ಕಾಡು ಬೆಳೆಸಲು ಯೋಗ್ಯವಾಗಿದೆ, ಯಾವುದು ಕಾಡು ಬೆಳೆಸಲು ಅಯೋಗ್ಯವಾಗಿದೆ ಎಂದು ಅಜಮಾಯಿಷಿ ಮಾಡಿ ಸಾಗುವಳಿಗೆ ಯೋಗ್ಯವಾಗಿರುವುದನ್ನು ಜಮೀನಿಲ್ಲದವರಿಗೆ ಕೊಡುವಿರಾ ? ಕೆಲವು ಕಡೆ ಸುಮಾರು 600 ಎಕರೆಯಷ್ಟು ಭೂಮಿ ಸಾಗುವಳಿಗೆ ಯೋಗ್ಯವಾಗಿರುವುದಿದೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಪರ್ಯಾಲೋಚಿಸುತ್ತೇವೆ.

ಶ್ರೀ ಸಿ. ಬೈರೇಗೌಡ.—(ಸಿ) ಪ್ರಶ್ನೆಗೆ ನಿಲ್ ಎಂದು ಉತ್ತರ ಕೊಡಲಾಗಿದೆ. ಅಂಥಾದ್ದು ಸುಮಾರು 600 ಎಕರೆಯ ಮೇಲಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಗಿದ್ದರೆ ಉಳುಮೆ ಮಾಡಿರಬೇಕು, ಅಭಿವೃದ್ಧಿ ಕಾರ್ಯಮಾಡಿ ಬೆಳೆ ತೆಗೆದಿರಬೇಕು. ಹಾಗೆ ಮಾಡಿಲ್ಲ. ಆದುದರಿಂದ ವಶಪಡಿಸಿಕೊಂಡಿರುವ ಜಮೀನಿಲ್ಲವೆಂದು ಸ್ಪಷ್ಟವಾಗಿದೆ.

ಶ್ರೀ ಸಿ. ಬೈರೇಗೌಡ.—ಈಗ ಬೆಳೆ ಬೆಳೆಯಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮಗೆ ಬಂದಿರುವ ವರದಿ ಪ್ರಕಾರ ಅಂಥದ್ದಿಲ್ಲ, ಉಳುಮೆ ಮಾಡಿಲ್ಲ, ಬೆಳೆ ಇಟ್ಟಿಲ್ಲ. ಭೂಮಿಯನ್ನು ಅಕ್ರಮವಾಗಿ ಪ್ರವೇಶಿಸಿ ವಶಪಡಿಸಿಕೊಳ್ಳುವುದು ತಪ್ಪು. ಹಾಗೆ ಮಾಡಿದವರನ್ನು ಅರೆಸ್ಟ್ ಮಾಡಲಾಗಿದೆ.

Labour Employed in Gulbarga District under '64 Famine Relief Work'

487. Sri D. B. KALMANKAR (Afzalpur).—

Will the Chief Minister be pleased to state :—

(a) the average labour strength employed daily in each taluk of Gulbarga District from August 1972 to the end of December 1972 under 64-Famine Relief Works (Separate figures be given in respect of Soil Conservation, P. W. D., Forest)

(b) the average labour strength employed daily in each taluk from 1st Jannary 1973 in Soil Conservation, P. W. D., Forest ?

Sri D. DEVARAJ URS (Chief Minister).—

(a) and (b) *Vide* statement placed on the Table of the House.*

* Copy placed in the Mysore Legislature Library *vide* No. 28 dated 9-4-1973.

Sri D. B. KALMANKAR.—From the figures given it is clear that the employment has not gone beyond 1,10,000 whereas the population in Gulbarga District is 6 lakhs ; out of whom 2 lakhs are agricultural labourers and 2 lakhs are cultivators who are otherwise employed. That means 4 lakhs of people are required to be employed. In view of the severe drought condition and the seriousness of the summer, will the Government consider the question to increase the employment of the people there ?

† Sri D. DEVARAJ URS.—Subsequent to the month of February 1973, the employment has been increased and even if more people are ready to work—whether it is 3 lakhs or 4 lakhs, the provision is there to employ them all.

Sri RAJA PID NAIK.—Whether it has come to the notice of the Government that wages are not being paid regularly with the result the workers are put to difficulties ; if it is so, will they issue strict instructions to make regular payment of wages to all the workers ?

Sri D. DEVARAJ URS.—A complaint was there ; but now we have been able to overcome it.

Questions by J. S. Ammannavar, Smt. Fernandes and Sri Doreswamy Naidu and Taregowda. Members were absent.

MADAM SPEAKER.—Question Hour is over.

QUESTIONS FOR ANSWERS ON THE DAY

(but not taken up)

Youth Centres in the State

424. Sri KONANDUR LINGAPPA (Thirthahalli).—

Will the Minister of State for Youth Services be pleased to state :-

(*a*) the age limit fixed by Government for being considered as Youths ;

(*b*) the number of Youth Centres in the State ;

(*c*) the facilities extended by Government to these Youth Centres ;

(*d*) the details of assistance granted by Government for the progress of youths ?

(*e*) the deta[illegible] assistance granted by Government for encouraging the lite[illegible]ral developmental activities of Youths ?

SRI V. S. KOUJALGI (Minister of State for Youth Service):-

(*a*) The age limit of Youths is between 18 and 35.

(*b*) There are in all 3456 Youth Centres.

(*c*) (*d*) (*e*), The following financial facilities are extended by Government to the Youth Centres :—

(1) Equipment grant ;

(2) Building grant of Youth centres ;

(3) Grant to creative and productive Youths ;

(4) Encouragement grant to Youth Centres.

Buses on Casual Contract Basis for Marriages

618. SRI J. S. AMMANNAVAR (Sadalga).—

Will the Minister for Labour be pleased to state :—

(*a*) whether the MSRTC., has stopped supplying buses on casual contract basis for marriage parties and for the tours conducted by educational institutions in the area coming under the Belgaum Divisional Controller ;

(*b*) the depots which have supplied buses for such purposes and their names and the number of buses supplied by each Depot under the jurisdiction of the Belgaum Divisional Controller during 1st January 1972 to 31st July 1972 for marriage parties and for the tours conducted by the educational institutions ;

(*c*) whether the marriage parties were compelled to hire extra buses instead of hiring them on casual contract basis ;

(*d*) the number of extra buses supplied for marriage parties for tours conducted by educational institutions and Jatras (fairs) from each Depot with their names, under the Belgaum Divisional Controller during the perid mentioned in (*b*) ;

(*e*) the schedule of rates of hire charged for the buses supplied on casual contract basis and for buses supplied as extra ;

(*f*) whether due to non-availability of buses from the MSRTC on casual contract basis public are forced to incur heavy expenditure on hire of extra buses of the private authorised and unauthorised vehicle operators ;

(*g*) the steps taken or proposed to be taken by the Government and the Mysore State Road Transport Corporation to provide adequate number of buses for the above mentioned purposes ?

Sri AZEEZ SAIT (Minister for Labour),—

(*a*) No.

(*b*) The number of buses supplied on casual contract for the purpose of marriages, educational tours and General Elections etc., during 1st January 1972 to 31st July 1972 is furnished below :—

Depot		Election duty	Marriage tours etc.	Educational	Total
Belgaum	...	47	91	...	138
Nippani	...	5	22	...	27
Chikodi	...	21	13	...	34
Sankeshwar	...	9	7	...	16
Bailhongal	...	14	30	...	44
Gokak	...	11	26	...	37
Saundatti	...	13	7	...	20

(*c*) No.

(*d*) The number of exrta buses supplied for marriage parties and for the tours conducted by educational Institutions and Jatras from each Depot in Belgaum Division is given below :—

Depot		Buses supplied to faires	Extra buses operated
Belgaum	...	47	77
Saundatti	...	10	13
Bailhongal	...	20	4
Gokak	...	20	13
Sankeshwar	...	14	15
Nippani	...	18	12
Chikodi	...	9	12

(*e*) Schedule of rates for casual contract is as below :

I. (a) Rates on Kilometre Basis :—

(i) Rs. 2 per running Km. irrespective of the seating capacity of the bus subject to a minimum of Rs. 16 per bus per day for ordinary buses.

(ii) Rs. 2 per running Km. irrespective of the seating capacity subject to a minimum of Rs. 200 per bus per day for luxury coaches:

(iii) Rs. 4 per running Km. irrespective of the seating capacity subject to a minimum of Rs. 320 per day for road train.

(b) Rates on Hourly Basis :—

(i) Rs. 32 per hour irrespective of the seating capacity subject to a minimum of Rs. 100 for an ordinary bus.

(ii) Rs. 40 per hour irrespective of the seating capacity subject to a minimum of Rs. 125 for luxury coaches.

(iii) Rs. 64 per hour irrespective of the seating capacity subject to a minimum of Rs. 200 for road train.

II. Concessional Rates :—

(a) Rates on Kilometre Basis :—

Rs. 1.75 per running kilometre irrespective of the seating capacity subject to a minimum of Rs. 120 per day for ordinary buses.

(ii) Rs. 3.50 per running kilometre irrespective of the seating capacity subject to a minimum of Rs. 240 per day for road train.

(iii) No concession shall be allowed in respect of luxury coaches.

(b) Rates on Hourly Basis :—

Rs. 25 per hour irrespective of the seating capacity of the bus subject to a minimum of Rs. 75 for an ordinary bus.

(ii) Rs. 50 per hour irrespective of the seating capacity of the bus subject to a minimum of Rs. 150 for road train.

III. Rates for Mini Bus :—

Rs. 1.60 per running Kilometre subject to a minimum of Rs. 125 per bus per day. In addition to the above rates the following charges shall be levied ;

15 per cent of the total charges as passenger tax for casual contract operated in Mysore State.

In the case of contracts accepted outside the State, permit fee, taxes and other expenses (excluding TA and DA to the crew) should be recovered from the hirer.

In view of the additional taxes levied by Government recently to the extent of Rs. 12,480 per bus per year on casual contract and tourist services, the rates are being revised further.

For the extra trips if any operated, charges will be levied as per the Stage Table.

(SRI AZEEZ SAIT)

(*f*) It has not come to the notice of the Mysore State Road Transport Corporation that the people are put to inconvenience due to non-availability of buses on casual contract,

(*g*) In view of the reply to clause (*f*) this does not arise.

Officers of State Accounts Department

625. Smt. WINNIFRED F. FERNANDES (Coondapur).—

Will the Minister for Finance be pleased to state :—

(*a*) whether Government has prescribed the duties and responsibilities of the Officers of the State Accounts Department working in other Departments as Accounts Officers, Financial Assistants and Accounts Superintendents ;

(*b*) if so, whether these are followed in the working of these officers, strictly, as prescribed by the Government ;

(*c*) if not, whether Government will be pleased to ensure that the rules prescribed for the purpose are strictly adhered to in the interest of the proper functioning of the administration ?

Sri M. Y. GHORPADE (Minister for Finance).—

(*a*) Yes.

(*b*) Yes.

(*c*) Suitable instructions will be issued where necessary.

Village Accountants

673. Sri K. M. DORAISWAMY NAIDU (Bethamangala).—

Will the Minister for Revenue be pleased to state :—

(*a*) to whom the persons appointed as Village Accountants are responsible ;

(*b*) whether they will be brought under the jurisdiction of the of the Village Panchayats ?

Sri N. HUTCHAMASTHY GOWDA (Minister for Revenue).—

(*a*) The Deputy Commissioner.

(*b*) Yes. They are appointed as Secretaries of the Panchayats with less than Rs.12,000 annual income.

Diploma Course in Agricultural Engineering

766. Sri T. TAREGOWDA (Kallambella).—

Will the Minister for Agriculture and Forests be pleased to state :—

(a) when the Diploma Course in Agriculture Engineering at Raichur was started ;

(b) the number of candidates who have taken Diploma in Agricultural Engineering (both in Farm Machinery and Soil and Water Management) so far ;

(c) whether it is a fact that such diploma holders are not given preference while selecting candidates for various posts in the co-departments of Agriculture ;

(d) whether such Diploma in Agricultural Engineering is included while prescribing qualifications for various posts in Mysore State Agro-Industries Corporation, Soil Conservation in the Department of Agriculture, Agricultural Implements Factory, Hassan, etc ;

(e) if not, whether it will now be included ?

Sri K. H. PATIL (Minister for Agriculture and Forests).—

(a) The Diploma Course in Agricultural Engineering at Raichur was started from October, 1969.

(b) The number of students who have taken Diploma in Farm Machinery is 11, and in Soil and Water Management it is 9.

(c) to (e) The question of including Diploma in Agricultural Engineering among qualifications prescribed for posts in Mysore State Agro-Industries Corporation has been raised recently and is under consideration.

CALLING ATTENTION TO A MATTER OF URGENT PUBLIC IMPORTANCE

re : Shifting of the rig-machine from Indi to Bijapur City.

Sri J. L. KABADI (Bollolli).—I call the attention of the Chief Minister to the shifting of the rig-machine from Indi to Bijapur City.

Sri D. DEVERAJ URS (Chief Minister).—Sir I state as follows :—

The number of Villages in Indi Taluk of Bijapur is 123. All the villages are scarcity affected. Amongst these villages, 31 villages have been identified as those where the drinking water position is particularly bad. All these 31 villages of Indi Taluk have been provieed with bore wells.

(SRI D. DEVARAJ URS)

The drinking water position in Bijapur City has become very acute. There is reduced supply of drinking water to the citizens of Bijapur City and even this reduced supply may be sufficient to last only upto the end of May 1973.

To combat this shortage of drinking water in Bijapur City, it is proposed to sink 30 bore wells and out of these, only 8 bore wells have been sunk till now. Moreover there are 65 villages in Bijapur Taluk which have been identified as suffering from acute scarcity of drinking water. None of these have been provided with bore wells.

The State Government has allotted 5 high speed rigs to Bijapur district. At present only two rigs are working. One of them in Bagalkot taluk and the other in Bijapur City. The Deputy Commissioner has been given full authority by the Government to deploy the rigs within his jurisdiction in places where he feels they are most needed. In this particular case, since the 31 most badly affected villages in Indi Taluk had been provided with bore wells and because the drinking water position in Bijapur City was deteriorating day by day, The Deputy Commissioner thought it fit to shift the rig from Indi to Bijapur. As soon as the other rigs allotted to Bijapur District are again put into Commission, one rig would be deployed to Indi taluk.

I wish to add that in these Taluks it is getting more and more difficult so far as drinking water is concerned. To save this Bijapur District we are shortly requesting the Maharastra Government to allow us Koyna Water as has been negotiated upon. We hope to see that Bijapur that water supply is maintained regularly to Bijapur through Krishna River. This is with regard to supply of water. With regard to rigs supply, we have already placed orders for 10 rigs and we are making arrangements to get some rigs from America and Britain. We hope to get them by the end of this month and as soon as they are received we will send them to these areas.

ಶ್ರೀ ಜೆ. ಎಲ್. ಕಬಾಡೆ.—ಈಗಾಗಲೇ ಇಂಡಿ ತಾಲ್ಲೂಕಿನಲ್ಲಿ 3-4 ಮೈಲಿಗಳಿಂದ ನೀರನ್ನು ತರುವುದನ್ನು ನಾವು ನೋಡುತ್ತಾ ಇದ್ದೇವೆ. ಅದಕ್ಕಾಗಿ ತಾವು ರಿಗ್‌ಗಳಿಗೆ ಬರೆದಿದ್ದೇವೆಂದು ಹೇಳಿದಿರಿ, ಅವು ಬರುವುದು ತಡವಾದರೆ, ಟ್ಯಾಂಕರ್ಸ್ ಮೂಲಕ ನೀರನ್ನು ಸಪ್ಲೈ ಮಾಡಬೇಕು ಎಂದು ಪದೇ ಪದೇ ಮನವಿ ಮಾಡಿಕೊಂಡರೂ ಯಾವ ಪ್ರಯೋಜನವೂ ಆಗಿಲ್ಲ. ಅದಕ್ಕೋಸ್ಕರ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಈಗ ಬಿಜಾಪುರ, ಇಂಡಿ ತಾಲ್ಲೂಕಿಗೆ ತಕ್ಷಣ ರಿಗ್ಸ ಗಳನ್ನು ಒದಗಿಸಬೇಕೆಂದು ಹೇಳಿದರು. ಡೆಪ್ಯೂಟಿ ಕಮಿಷನರ್ ಅವರು ಇಲ್ಲಿಯವರೆಗೆ ಒದಗಿಸಿಲ್ಲ. ಇಲ್ಲಿಯವರೆಗೆ ತಾವು ಕೇವಲ ಐದು ರಿಗ್ಸ್‌ಗಳನ್ನು ಸಪ್ಲೈ ಮಾಡಿದ್ದೀರಿ, ಅದರಲ್ಲಿ ಎರಡು ಮಾತ್ರ ಉಪಯೋಗಕ್ಕೆ ಬರುತ್ತಿವೆ. ಉಳಿದ ಮೂರು ರಿಗ್‌ಗಳು ರಿಪೇರಿ ಸ್ಥಿತಿಯಲ್ಲಿದ್ದುವು. ಇವುಗಳಿಗೆ ಸ್ಪೇರ್ ಪಾರ್ಟ್ಸ್ ಸಿಕ್ಕುತ್ತಿಲ್ಲ ಎನ್ನುವ ಕಾರಣವಿದೆ. ತ್ವರಿತವಾಗಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಕೂಲಂಕುಷವಾದ ವಿವರಣೆ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ರಿಗ್ಸ್‌ಗಳನ್ನು ತರಿಸುವುದು ನನ್ನ ಕೈಯಲ್ಲಿಲ್ಲ. ರಿಗ್ಸ್‌ಗಳನ್ನು ತರಿಸಬೇಕಾದರೆ ಕಂಪನಿಗಳಿಗೆ ಬರೆದು ತರಿಸಬೇಕು. ನಾವು ಇದಕ್ಕಾಗಿ ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಬರೆದು ಒಂದು ಕೋಟಿ ರೂಪಾಯಿಗಳ ಫಾರೀನ್ ಎಕ್ಸ್‌ಚೇಂಜನ್ ಅನ್ನು ರಿಲೀಸ್ ಮಾಡಿಸಿಕೊಂಡಿದ್ದೇವೆ. ಈಗಾಗಲೆ ನಾವು ರಿಗ್ಸ್‌ಗಳಿಗೆ ಆರ್ಡರ್ ಅನ್ನು ಪ್ಲೇಸ್ ಮಾಡಿದ್ದೇವೆ.

ಆರ್ಡರ್ ಪ್ಲೇಸ್ ಮಾಡಿದರೂ ಕೂಡ ರಿಗ್ಸ್ ಬರಬೇಕಾದರೆ, ಒಂದು ತಿಂಗಳಾಗುತ್ತದೆ. ಸರ್ಕಾರದವರು ಇದರ ಬಗ್ಗೆ ಏನು ಪ್ರಯತ್ನ ಮಾಡಬೇಕೋ ಅದನ್ನು ಚಾಚೂ ತಪ್ಪದೆ ಮಾಡಿದ್ದೇವೆ. ರಿಗ್‌ಗಳನ್ನು ರಿಪೇರಿ ಮಾಡಬೇಕಾದರೆ ಸ್ಪೇರ್ ಪಾರ್ಟ್ಸ್ ತೆಗೆದುಕೊಂಡು ಮಾಡಬೇಕು. ಎರಡು ರಿಗ್‌ಗಳು ಬಹುಶಃ ಕಂಪ್ಲೀಟ್ ಆಗಬೇಕಾದರೆ ಇನ್ನೂ ಸ್ವಲ್ಪ ಕಾಲ ಬೇಕಾಗುತ್ತದೆ. ಟ್ಯಾಂಕರ್ಸ್‌ಗಳಿಗೂ ಆರ್ಡರ್ಸ್ ಕೊಟ್ಟಿದ್ದೇವೆ. ಬಂದ ಬಂದ ಹಾಗೆ ಅಲ್ಲಿಗೆ ಕಳುಹಿಸಿಕೊಟ್ಟು ನೀರು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡೆ.—ಅಲ್ಲಿ ಏನನ್ನೂ ಮಾಡಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಏನೂ ಮಾಡಿಲ್ಲ ಅಂದರೆ, ಅಧ್ಯಕ್ಷರೇ, 'ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ನಾವು ರಿಗ್‌ಗಳಿಗೆ ಒಂದು ಕಂಪನಿಗೆ ಆರ್ಡರ್ ಕೊಟ್ಟರೆ, ಅಲ್ಲಿ ಬೇರೆಯವರ ಆರ್ಡರ್ಸ್ ಇರುತ್ತವೆ. ನಮಗೆ 200 ಟ್ರಕ್‌ಗಳನ್ನು ಅವರು ಕೊಡಬೇಕಾದರೆ, ಕೆಲವು ದಿವಸ ಬೇಕಾಗುತ್ತದೆ. ನಾವು ಆಗಲೇ ಇವುಗಳಿಗೆ ಆರ್ಡರ್ಸ್ ಪ್ಲೇಸ್ ಮಾಡಿದ್ದೇವೆ.

ಶ್ರೀ ಜೆ. ಎಲ್. ಕಬಾಡೆ.—ಇಂಡಿ ತಾಲ್ಲೂಕಿನಲ್ಲಿ, ಇಂಡಿ ಊರಿನಲ್ಲಿಯೇ ಮೂರೂವರೆ ಸಾವಿರ ಜನ ನೀರಿನ ಬಾವಿಗಳನ್ನು ಕೇಳಿದ್ದಾರೆ. ಈಗ ಎರಡು ಬಾವಿಗಳು ಇದ್ದರೂ ಸಹಿತ ಎತ್ತಿನ ಗಾಡಿಗಳಿಂದ ನೀರನ್ನು ತರಬೇಕಾಗಿದೆ. ಇಲ್ಲಿಯವರೆಗೂ ಬಿಜಾಪುರದಿಂದ ಇಂಡಿಗೆ ಪಂಪ್‌ಸೆಟ್ಟುಗಳನ್ನು ತರಲಿಕ್ಕೆ ಆಗಿಲ್ಲ. ಇದಕ್ಕೆ ಅಧಿಕಾರಿಗಳನ್ನೂ ಕೇಳಿದರೂ ಸಹಿತ ನಮಗೆ ಮೇಲಿಂದ ಆರ್ಡರ್ ಬಾರದೆ ಇರುವುದರಿಂದ ಡಿಲೆ ಆಗಿದೆ ಎಂದು ಹೇಳುತ್ತಾರೆ.

Sri D. DEVARAJ URS.—I want to make it very plain that no office has done as the Hon. Member has stated, What the Hon. Member says is not correct. If there are complaints against any officer whoever it may be, you may please bring them to my notice or even a phone call will do for that, we will take immediate disciplinary action against those erring officers.

ಶ್ರೀ ಜೆ. ಎಲ್. ಕಬಾಡೆ.—ಮಹಾರಾಷ್ಟ್ರದಲ್ಲಿ ಪಂಪುಸೆಟ್ಟುಗಳನ್ನು ತಯಾರು ಮಾಡತಕ್ಕಂಥ ಫ್ಯಾಕ್ಟರಿ ಏನು ಇದೆ, ಅದಕ್ಕೆ ನೀವು ಮೊದಲೆ ಪಂಪುಸೆಟ್ಟುಗಳಿಗೆ ಆರ್ಡರ್ ಮಾಡಬೇಕಾಗಿತ್ತು. ಇದನ್ನು ಸರ್ಕಾರದವರು ನಿಧಾನ ಮಾಡಿದ್ದಾರೆ. ಆರ್ಡರ್ ಪ್ಲೇಸ್ ಮಾಡಿರುವುದರಿಂದ ಇವತ್ತೇ ಟ್ರಕ್ಸ್ ಸಿಕ್ಕುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಬೇಗನೆ ಒದಗಿಸುವ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಒಂದು ವೇಳೆ ಟ್ರಕ್ಸ್ ಸಿಕ್ಕುವುದು ಕಷ್ಟ ಇಲ್ಲ ಎಂದು ಹೇಳಿದರೆ, ಎಲ್ಲಿ ಸಿಕ್ಕುತ್ತದೆ ಎಂದು ಮಾನ್ಯ ಸದಸ್ಯರು ಹೇಳಲಿ, ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಮಹಾರಾಷ್ಟ್ರದಿಂದ ನಮಗೆ ರಿಗ್ಸ್ ಸಿಕ್ಕುತ್ತವೆ. ಬೋರ್‌ವೆಲ್ಸ್‌ಗೆ ಹಾಕತಕ್ಕಂಥ ಕೆಲವು ಪಂಪ್ಸ್ ಸಿಕ್ಕುತ್ತಿಲ್ಲ. ಇದರ ಬಗ್ಗೆ ಎಲ್ಲಾ ಕಡೆ ಗಲಾಟೆ ಇರುವುದರಿಂದ ಇವುಗಳು ಹೆಚ್ಚಿನ ಪ್ರಮಾಣದಲ್ಲಿ ತಯಾರು ಆಗುತ್ತಿಲ್ಲ. ಎಂಥಾದ್ದು ಸಿಕ್ಕಿದರೂ ಸಬ್‌ಮರ್ಜ ಪಂಪ್ಸ್, ಸಕ್ಷನ್ ಪಂಪ್ಸ್, ಯಾವುದಾದರೂ ಸಿಕ್ಕಲಿ ತೆಗೆದುಕೊಂಡು ಹಾಕೋಣ ಎಂದರೆ, ನಮಗೆ ಬೇಕಾದಷ್ಟು ಪ್ರಮಾಣದಲ್ಲಿ ಸಿಕ್ಕುತ್ತಿಲ್ಲ. ತಾವು ನಮಗೆ ಗೊತ್ತಿಲ್ಲ, ಏನೂ ಮಾಡಿಲ್ಲ ಎಂದು ಹೇಳಿದರೆ, ಹೇಗೆ ? ದಯಮಾಡಿ ಇಂಥ ಕಡೆ ಇವು ಸಿಕ್ಕುತ್ತವೆಂದು ಮಾನ್ಯ ಸದಸ್ಯರು ತಮಗೆ ಗೊತ್ತಿದ್ದರೆ ಹೇಳಲಿ. I am ready to purchase. I will send an officer with you to get them.

ಶ್ರೀ ಜೆ. ಎಲ್. ಕಬಾಡೆ.—ಟ್ಯಾಂಕರ್ಸ್ ಮೂಲಕ ನೀರನ್ನು ಒದಗಿಸಬೇಕಾದರೆ ಒಂದು ಸಮಸ್ಯೆ ಇದೆ. ಇಂಡಿ ಮತ್ತು ಬಿಜಾಪುರ್ ತಾಲ್ಲೂಕಿನಲ್ಲಿ ನೀರೇ ಇಲ್ಲ.

ಅಧ್ಯಕ್ಷರು.—ತಾವು ಹೇಳಿದ್ದೇ ಹೇಳುತ್ತಾ ಇದ್ದೀರಿ ?

ಶ್ರೀ ಜೆ. ಎಲ್. ಕಬಾಡೆ.—ಇಲ್ಲಿಯವರೆಗೆ ಏನು ಮಾಡಿಲ್ಲ, ಆ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ

ಅಧ್ಯಕ್ಷರು.—ಅವರೇ ಒಪ್ಪಿಕೊಳ್ಳುತ್ತಾರೆ, ರಿಗ್‌ಗಳು ಬಂದಬಂಧ ಹಾಗೆ ಅಲ್ಲಿಗೆ ಕಳುಹಿಸಿ ಕೊಡುತ್ತೇವೆಂದು.

ಶ್ರೀ ಜೆ. ಎಲ್. ಕಬಾಡೆ.—ಟ್ಯಾಂಕರ್ಸ್ ಇಲ್ಲಿಯವರೆಗೆ ಸಿಕ್ಕಲಿಲ್ಲ. ಅಲ್ಲಿ ನೀರು ಸಪ್ಲೈ ಮಾಡಿಲ್ಲ. ಆದ್ದರಿಂದ ಆದಷ್ಟು ಬೇಗನೆ ಈ ಕಾರ್ಯವನ್ನು ಮಾಡಬೇಕು ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರು ಆಕ್ಷೇಪಣೆ ಮಾಡುವ ದೃಷ್ಟಿಯಿಂದ ಮಾತ ನಾಡಿದರೆ ಏನೂ ಪ್ರಯೋಜನ ಇಲ್ಲ. ಅಲ್ಲಿ ಸಾವಿರಾರು ಗಾಡಿಗಳಲ್ಲಿ ನೀರನ್ನು ತೆಗೆದುಕೊಂಡು ಬಂದು ಸರಬರಾಜು ಮಾಡುತ್ತಿದ್ದಾರೆ. ಎತ್ತಿನ ಗಾಡಿಗಳಿಂದ ಡ್ರಮ್ಸ್ ಇಟ್ಟು 3-4 ಮೈಲಿಯಿಂದ ಸರಬರಾಜು ಮಾಡುತ್ತಿದ್ದಾರೆ. ಅಲ್ಲಿಗೆ 10-11 ರಿಗ್ಸ್, ಟ್ರಕ್ಸ್ ಹೆಚ್ಚಾಗಿ ಬೇಕು. ಇದಕ್ಕಿಂತ ಹೆಚ್ಚಿಗೆ ಏನು ಮಾಡಬೇಕೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಪಿ. ಎಂ. ಬಂಗಿ.—ತಾವು ಉತ್ತರ ಕೊಡುತ್ತಾ ಕೋಯ್ನಾ ನೀರನ್ನು ಬಿಜಾಪುರ ಜಿಲ್ಲೆಗೆ ಒದಗಿಸುವ ಬಗ್ಗೆ ಹೇಳಿದಿರಿ, ಅದು ಯಾವ ಹಂತದಲ್ಲಿದೆ ? ಅಲ್ಲಿಗೆ ನೀರು ಕೊಡುವುದು ಯಾವಾಗ ?

ಶ್ರೀ ಡಿ. ದೇವರಾಜ ಅರಸ್.—ಒಂದು ವಾರದೊಳಗೆ ನೀರನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

NOTICE OF ADJOURNMENT MOTION

re: Inadequacy of the relief operations in Gulbarga and Bidar Districts

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಈಗಾಗಲೇ ನಾನು ಒಂದು ನಿಲುವಳಿ ಸೂಚನೆ ಯನ್ನು ಕಳುಹಿಸಿಕೊಟ್ಟಿದ್ದೇನೆ. ಅದರ ವಿಷಯವಾಗಿ, ನಮ್ಮ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿರ ತಕ್ಕ ಕ್ಷಾಮ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡತಕ್ಕದ್ದು ಬಹಳ ಅಗತ್ಯವಾಗಿದೆ.

ಅಧ್ಯಕ್ಷರು.—ನಿಮ್ಮ ನಿಲುವಳಿ ಸೂಚನೆ ಬಂದಿದೆ. ಕೆಲವು ಡಿಮ್ಯಾಂಡುಗಳು ಬರುತ್ತವೆ, ಆಗ ತಾವು ಚರ್ಚೆ ಮಾಡಬಹುದ .

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತು ಅಲ್ಲಿರತಕ್ಕ ಪರಿಸ್ಥಿತಿಯನ್ನು ನಾವು ವಿಶೇಷವಾಗಿ ಚರ್ಚೆ ಮಾಡಿ ಏನಾದರೂ ಪರಿಹಾರವನ್ನು ಕಂಡುಹಿಡಿಯದೇ ಹೋದರೆ ಪೂರ್ಣವಾಗಿ ನಾವು ಆ ಜನರಿಗೆ ಏನೂ ಪರಿಹಾರ ಕೊಡುವುದಕ್ಕಾಗುವುದಿಲ್ಲ. ನಾವಾದರೂ ಕೂಡ ಸರ್ಕಾರಕ್ಕೆ ಏನು ಭಾವನೆ ಇದೆ ಅದೇ ಭಾವನೆಯಲ್ಲಿ ಅಲ್ಲಿನ ಪರಿಸ್ಥಿತಿಯನ್ನು ತಿಳಿದು ಅದರ ವಿಚಾರವಾಗಿ ಸರ್ಕಾರದ ಮುಂದೆ ಕೆಲವು ವಿಷಯಗಳನ್ನು ಚರ್ಚೆ ಮಾಡಬೇಕೆನ್ನುವುದೇ ನಮ್ಮ ಉದ್ದಿಶ್ಯ. ನಾವು ಇವರಲ್ಲಿ ವಿರೋಧಪಕ್ಷಗಳು ಸ್ವಾರ್ಥದ ದೃಷ್ಟಿ ಇಟ್ಟುಕೊಂಡು, ರಾಜಕಾರಣ ದೃಷ್ಟಿ ಇಟ್ಟುಕೊಂಡು ಮಾತ ನಾಡುತ್ತಿದ್ದೇವೆಂದು ಆ ಅಭಿಪ್ರಾಯ ಹೊಂದಬಹುದು. ಆದರೆ ನಮಗೆ ಯಾವ ರಾಜಕೀಯ ದೃಷ್ಟಿ ಯೂ ಇಲ್ಲ. ನಮಗೆ ಇರುವುದು ಇಷ್ಟೇ. ಜನರಿಗೆ ಬೇಕಾದ ಊಟ, ಜನರಿಗೆ ಬೇಕಾದ ಆಹಾರ, ಜನರಿಗೆ ಬೇಕಾದ ಕೆಲಸ ಇಷ್ಟು ವ್ಯವಸ್ಥೆಯಾಗಬೇಕು. ಇನ್ನು ಏನು ಹೆಚ್ಚಿಗೆ ಚರ್ಚೆ ಮಾಡುವು ದಕ್ಕೆ ಹೋಗುವುದಿಲ್ಲ. ಅಲ್ಲಿ ಇರತಕ್ಕ ಅವ್ಯವಸ್ಥೆ ಎಷ್ಟರಮಟ್ಟಿಗೆ ಹೋಗಿದೆ ಎಂದರೆ ನಾವು ಕೂಡ ಇನ್ನು ಒಂದೆರಡು ದಿನವಿದ್ದರೆ ಏನಾಗುತ್ತಿದ್ದೆವೋ, ಜನರು ಆ ಸ್ಥಿತಿಯಲ್ಲಿ ಮುಂದುವರಿದರೆ ಯಾವ ಗಳಿಗೆಯಲ್ಲಿ ಪ್ರಾಣವನ್ನು ಬಿಡುವುದಕ್ಕೆ ತಯಾರು ಇರುವ ಸ್ಥಿತಿಯಲ್ಲಿ ಇದ್ದಾರೆ ಅವರಿಗೆ ಕೊಡತಕ್ಕ ಆಹಾರ ಸಕಾಲಕ್ಕೆ ಸಿಕ್ಕುತ್ತಾ ಇಲ್ಲ. ಅವರು ಮಾಡಿರತಕ್ಕ ಕೆಲಸಗಳಿಗೆ ಸಕಾಲದಲ್ಲಿ ಸಂಬಳಸಾ ರಿಗೆ ಸಿಕ್ಕುತ್ತಿಲ್ಲ. ತಿಂಗಳಾದರೂ ಅವರು ಮಾಡಿರುವ ಕೆಲಸಕ್ಕೆ ದುಡ್ಡು ಸಿಕ್ಕುತ್ತಿಲ್ಲ. ಒಂದು ದಿವಸಕ್ಕೆ 75 ಪೈಸೆ ಅಥವಾ ಒಂದು ರೂಪಾಯಿ ಸಂಬಳಗಿಂತ ಜಾಸ್ತಿ ತೆಗೆದುಕೊಳ್ಳುತ್ತಾ ಇಲ್ಲ. ಈ ರೀತಿ ಪರಿಸ್ಥಿತಿ ಇರುವಾಗ ಆ ಜನರ ಸ್ಥಿತಿ ನೋಡುವುದಕ್ಕೆ ಆಗುವುದಿಲ್ಲ. ನನಗೆ ಇರುವ ಉದ್ದಿ ಶ್ಯವಾದರೂ ಇಷ್ಟೆ. ನಾವು ಕೊಡತಕ್ಕ ಹಣ ಪೂರ ಅವರಿಗೆ ಮುಟ್ಟಬೇಕು ಅವರಿಗೆ ನೀರು ಕೊಡು ವುದು, ಆಹಾರ ಕೊಡುವುದು ಮತ್ತು ಕೆಲಸ ಕೊಡುವುದು ಆಗಬೇಕು. ನಾವು ಅಲ್ಲಿ ಏನು ಕಣ್ಣಾರೆ ಕಂಡು ಬಂದಿದ್ದೇವೆ ಅದನ್ನು ಸರ್ಕಾರದ ಮುಂದೆ ಹೇಳುವುದಕ್ಕೆ ಆಗುತ್ತದೆ. ಸರ್ಕಾರ ಏನು ವ್ಯವಸ್ಥೆ ಮಾಡಿದ್ದಾರೆ ಅದನ್ನು ಹೇಳುವುದಕ್ಕೆ ಆಗುತ್ತದೆ.

ಅಧ್ಯಕ್ಷರು.—ಈಗ ಡಿಮಾಂಡ್ ಬರುವುದು ಇದೆ ಆಗ ಇದನ್ನು ಚರ್ಚೆ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಬೇಡಿಕೆಗಳು ಬರುವವರೆಗೆ ಕಾಯುವ ಸ್ಥಿತಿಯಲ್ಲಿ ಇಲ್ಲ. ಒಂದು ತಿಂಗಳಿಂದ ಸಂಬಳ ಕಾಣದೆ ಇರತಕ್ಕ ಜನರು ಇದ್ದಾರೆ ಎಂದರೆ ಜೀವನ ಹೇಗೆ ಮಾಡಬೇಕು. ಅಲ್ಲಿರತಕ್ಕ ಅಧಿಕಾರಿಗಳಿಗೆ ಒಂದು ತಿಂಗಳು ಸಂಬಳ ಕೊಟ್ಟಿಲ್ಲ ಎಂದರೆ ಏನು ಮಾಡಬೇಕು ? ರೇಷನ್ ಅವರಿಗೆ ಮುಟ್ಟಿಲ್ಲ ಎಂದರೆ ಅದು ಒಂದು ತಿಂಗಳಿಗೆ 2 ಕೆಜಿ ತೆಗೆದುಕೊಂಡು ಜೀವನ ಹೇಗೆ ಮಾಡಬೇಕು. ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ನಾವು ನೋಡಿ ಬಂದಿರತಕ್ಕ ವಿಷಯ. ಎಷ್ಟು ಜನರಿಗೆ ಕೆಲಸ ಕೊಡಬೇಕಿತ್ತೋ ಅಷ್ಟು ಜನರಿಗೆ ಕೆಲಸ ಕೊಟ್ಟಿಲ್ಲ, ಕೊಟ್ಟಿರತಕ್ಕ ಜನರು ಕೆಲಸ ಮಾಡುವ ಕಡೆ ಸಂಬಳ ಸಿಕ್ಕುತ್ತಾ ಇಲ್ಲ ಆಹಾರ ಸಿಕ್ಕುತ್ತಾ ಇಲ್ಲ ಹೀಗಾದರೆ ಬದುಕುವುದು ಹೇಗೆ ? ಯಾವ ರೀತಿ ಜೀವನ ಮಾಡಬೇಕು. ಮುಂದೆ ಬೇಡಿಕೆಗಳು ಬರುತ್ತವೆ ಚರ್ಚೆ ಮಾಡೋಣ ಎಲ್ಲವನ್ನೂ ಸರ್ಕಾರದಿಂದ ಉತ್ತರ ಪಡೆಯೋಣ ಎಂದರೆ ಅಲ್ಲಿಯವರೆಗೆ ಜನರು ಹೇಗೆ ಬದುಕುವುದು. ರಾಜಕೀಯ ಉದ್ದೇಶ್ಯ ಬಿಟ್ಟು ಮೊದಲು ಕಷ್ಟದಲ್ಲಿ ಸಿಕ್ಕಿರತಕ್ಕ ಜನರಿಗೆ ಏನು ಸಹಾಯವನ್ನು ಕೊಡುವುದಕ್ಕೆ ಬರುತ್ತದೆ ಅದನ್ನು ನೋಡಿ ಚರ್ಚೆಗೆ ತೆಗೆದುಕೊಂಡರೆ ತಕ್ಷಣ ಏನಾದರೂ ಪರಿಹಾರವನ್ನು ಕೊಡುವುದಕ್ಕೆ ಆಗುತ್ತದೆ, ಇಲ್ಲದೆ ಹೋದರೆ ಹಾಗೆಯೇ ಬಿಡುವುದರಿಂದ ದಿನದಿನಕ್ಕೂ, ಗಂಟೆಗಂಟೆಗೂ ಜೀವನದ ಸಮಸ್ಯೆ ಏನು ಎಂದು ನೋಡುತ್ತಿದ್ದಾರೆ. ಆದ್ದರಿಂದ ಈ ಸ್ಥಿತಿಯನ್ನು ಲಘುವಾಗಿ ಚರ್ಚೆ ಮಾಡುತ್ತಾ ಲಘುವಾಗಿ ವಿಚಾರ ಮಾಡುತ್ತಾ ಕೂತರೆ ಜನರನ್ನು ಬದುಕಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಒಬ್ಬರನ್ನೊಬ್ಬರು ದೂಷಣೆ ಮಾಡುವುದರಿಂದ ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ ಆದ್ದರಿಂದ ಇದಕ್ಕೆ ಸರಿಯಾದ ಪರಿಹಾರ ಕಂಡುಕೊಳ್ಳುವ ದೃಷ್ಟಿಯಿಂದ ಚರ್ಚೆ ಮಾಡುವುದು ಸೂಕ್ತ. ಜನರನ್ನು ಬದುಕಿಸತಕ್ಕ ಕೆಲಸದಲ್ಲಿ ಹಿಂದುಮುಂದೆ ಮಾಡತಕ್ಕ ಪ್ರಶ್ನೆಯಿಲ್ಲ ಅವರನ್ನು ಬದುಕಿಸತಕ್ಕ ಪ್ರಯತ್ನ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

ಅಧ್ಯಕ್ಷರು.—12ನೇ ತಾರೀಖು ಈ ಡಿಮಾಂಡ್ ಬರುತ್ತದೆ. ಡಿಮಾಂಡ್ ಬಂದಾಗ ತಾವು ಏನು ಹೇಳಬೇಕೋ ಅದನ್ನು ಹೇಳಬಹುದು ಮತ್ತು ನೀವು ನೋಡಿಕೊಂಡು ಬಂದಿದ್ದನ್ನು ಹೇಳಬಹುದು.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಒಂದು ಪ್ರಶ್ನೆ ಅರಿಕೆಮಾಡಿಕೊಳ್ಳುವುದು ಏನೆಂದರೆ ಡಿಮಾಂಡ್ ಬರುತ್ತದೆ. ಬರುವುದಿಲ್ಲ ಎಂದು ಅಲ್ಲ. ಎರಡು ದಿವಸಗಳಿಂದ ನಾವು ವಿರೋಧ ಪಕ್ಷದ ಅನೇಕ ಜನಗಳು ಹೋಗಿ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಸರ್ಕಾರದ ಹೇಳಿಕೆಗೂ ಮತ್ತು ಅಲ್ಲಿ ನಡೆದಿರತಕ್ಕ ಕೆಲಸಕ್ಕೂ ಯಾವರೀತಿ ಆಗಿದೆ ಎಂಬುದನ್ನು ಮೊಕ್ತಾ ನೋಡಿಕೊಂಡು ಬಂದಿದ್ದೇವೆ. ಇದರಲ್ಲಿ ಯಾವ ರಾಜಕೀಯ ಇಲ್ಲ, ಸರ್ಕಾರ ಬಿಟ್ಟು ಹೋಗಿ ಎಂದು ಹೇಳುವುದಕ್ಕೂ ತಯಾರಿಲ್ಲ. ನಮಗೆ ಅತಿ ಮುಖ್ಯವಾಗಿ ಬೇಕಾಗಿರುವುದು ಅಲ್ಲಿ ಜನರಿಗೆ ಕೂಡಲೇ ಆಹಾರ, ನೀರು ಮತ್ತು ಷೆಲ್ಟರ್ ಈ ಮೂರನ್ನು ಒದಗಿಸುವುದು ಮುಖ್ಯ. ನಾವು ನೀವು ಒಟ್ಟಿಗೆ ಹೋಗೋಣ. ನಾವು ರಾಜಕೀಯ ಮಾಡುತ್ತಾ ಇಲ್ಲ ಅಧಿಕಾರಿಗಳಿಂದ ತಪ್ಪಾಗಿರಬಹುದು ತಾವು ಬನ್ನಿ, ಮುಖ್ಯ ಮಂತ್ರಿಗಳು, ಪಿ. ಡಬ್ಲ್ಯೂ. ಡಿ. ಮತ್ತು ರೆವಿನ್ಯೂ ಮಂತ್ರಿಗಳು ಮತ್ತು 3–4 ಜನ ವಿರೋಧ ಪಕ್ಷದ ಕಡೆಯಿಂದ ಬರುತ್ತಾರೆ ನಾವೆಲ್ಲರೂ ಕೂಡಿ ಹೋಗಿ ನೋಡಿ ಬರೋಣ. ಡಿಮಾಂಡ್ ಬಂದಾಗ ಅದರ ಮೇಲೆ ಚರ್ಚೆ ಮಾಡೋಣ ಎನ್ನುವವರೆಗೆ ನಾವು ನಿಧಾನ ಮಾಡಿದರೆ ನನಗನಿಸುತ್ತದೆ ಜನ ರಸ್ತೆಯಲ್ಲಿ ಸಾಯತಕ್ಕ ಪರಿಸ್ಥಿತಿ ಬಂದಿದೆ. ಬೆಳಗ್ಗೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಸುತ್ತಿ ಸುತ್ತಿ ಸಾಕಾಯಿತು ಕೆಲಸ ಕೊಡುತ್ತಾ ಇಲ್ಲ ಎಂದು ಹೇಳುತ್ತಾರೆ. ಅಲ್ಲಿ ಎಲ್ಲರಿಗೂ ಕೆಲಸ ಕೊಡುವುದಿಲ್ಲ ಅಲ್ಲಿ ಕೊಟ್ಟರೆ 300 ಜನರಿಗೆ ಕೊಡಬಹುದು ಸಾವಿರಾರು ಜನ ಕೆಲಸಕ್ಕೆ ಬಂದಿರುತ್ತಾರೆ. ಕೆಲವು ಕಡೆ ಹೆಂಗಸರು ಒಂದು ರೂಪಾಯಿ ಕೂಲಿ ಸಿಕ್ಕುವುದಿಲ್ಲ ಒಂದು ರೂಪಾಯಿ ಕೂಲಿ ಸಿಕ್ಕಿದರೂ ಜೋಳ ಇಲ್ಲ ಎಂದು ಹೇಳುತ್ತಾರೆ. ಅಲ್ಲಿ ಕೆಲಸ ಮಾಡಿ ಬಂದಂತ ಮಹಿಳೆಯರು ಬಿದ್ದದ್ದು ನಾವು ನೋಡಿದ್ದೇವೆ ಅದು ಅಪ್ರತ್ಯಕ್ಷವಾಗಿ ಅಲ್ಲ. ನಾವು ಕಣ್ಣಾರೆ ಕಂಡಂತ ವಿಷಯ ಹೇಳುವುದು. ತಕ್ಷಣ ಪರಿಹಾರ ಹುಡುಕಬೇಕು ಎನ್ನುವುದಾದರೆ ನಾವು ಅನೇಕ ಅಂಕಿ ಅಂಶಗಳನ್ನು ತಂದಿದ್ದೇವೆ. ಅಲ್ಲಿ ಕೆಲಸ ಮಾಡತಕ್ಕ ಜನಗಳ ಫೋಟೋ ತಂದಿದ್ದೇವೆ ಅಲ್ಲಿ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಿರತಕ್ಕ ಸತ್ಯಾಗ್ರಹಿಗಳಿಗೆ ಕೊಡತಕ್ಕ ಊಟ ತಿಂಡಿ ಎಲ್ಲವನ್ನೂ ನೋಡಿಕೊಂಡು ಬಂದಿದ್ದೇವೆ. ನಾವು ರಾಜಕೀಯ ಮಾಡುತ್ತಾ ಇಲ್ಲ ಅದಕ್ಕೆ ನಾವು ತಯಾರಿಲ್ಲ ನಮಗೆ ಬೇಕಾಗಿರುವುದು ಒಂದೇ ಒಂದು ಆ ಜಿಲ್ಲೆ ಬರ ಪೀಡಿತ ಜನಗಳಿಗೆ ಒಂದು ಸುಗಮವಾದ ದಾರಿ 24 ಗಂಟೆಯೊಳಗೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇವೆ. ಅಧ್ಯಕ್ಷರೇ ನಾವೇ ಇನ್ನು ಮೂರು ದಿವಸಗಳು ಅಲ್ಲಿ ಉಳಿದಿದ್ದರೆ ನಾವೇ ಸಾಯುತ್ತಿದ್ದೆವು. ಒಂದು ಕಡೆ ಕಲ್ಲು ಒಡೆಯುವುದಕ್ಕೆ ಕೊಟ್ಟಿದ್ದಾರೆ ಆ ಕೆಲಸದಲ್ಲಿ ಜಮೀನ್ದಾರರು

(ಶ್ರೀ ಪಾಟಾಳ್ ನಾಗರಾಜ್)

ಇದ್ದಾರೆ ಬಡವರು ಇದ್ದಾರೆ. ಕಲ್ಲು ಒಡೆಯುವ ಕಡೆ ಒಂದು ಷೆಡ್ ಇಲ್ಲ. ಉರಿ ಬಿಸಿಲು 5 ದಿನದಲ್ಲಿ ಹುಟ್ಟಿದ ಮಗುವನ್ನು ಮಲಗಿಸಿ ಕಲ್ಲು ಒಡೆಯುತ್ತಿದ್ದಾರೆ ಆ ಕೈಗಳನ್ನು ನೋಡಿದರೆ ಕೈ ಒಡೆದು ರಕ್ತ ಸುರಿಯುತ್ತಿರುತ್ತದೆ. ಇದು ಸತ್ಯವಾಗಿ ಹೇಳತಕ್ಕ ಮಾತು. ಸರ್ಕಾರ ಏನು ಮಾಡಿಲ್ಲ ಎನ್ನತಕ್ಕ ಪ್ರಶ್ನೆಯಿಲ್ಲ. ನಿಮ್ಮ ಕಾರ್ಯಭಾರ ಏನು ಹೇಳಿದ್ದೀರಿ ಆ ಹೇಳಿಕೆ ಪ್ರಕಾರ ಕಾರ್ಯಗತ ಆಗಿದೆಯೋ ಇಲ್ಲವೋ ಎನ್ನುವುದನ್ನು ನಾವು ನೋಡಿಕೊಂಡು ಬಂದಿದ್ದೇವೆ ನನಗನ್ನಿಸುತ್ತದೆ 100ಕ್ಕೆ 90 ಭಾಗ ಕಾರ್ಯಗತವಾಗಿಲ್ಲ ಎಂದು ಹೇಳತಕ್ಕ ಮಾತು. ಅಲ್ಲಿಗೆ ಯಾರೋ ಇಂಜಿನಿಯರ್ ಬರುತ್ತಾರೆಂದು ರಸ್ತೆ ರಸ್ತೆಗೆ ಸುಣ್ಣದ ದಾರಿ ಮಾಡಿ ಕಲ್ಲುಗಳು ಇಟ್ಟಿದ್ದಾರೆ. ನಾವು ಎಲ್ಲರೂ ಕಾಲು ನಡಿಗೆಯಲ್ಲಿ ನಡೆದು ನೋಡಿದೆವು. ಅಲ್ಲಿ ನಾವೇ ಆಗಲಿ, ನೀವೇ ಆಗಲಿ ಮಾನವೀಯತೆ ಇರುವವರು ಮತ್ತು ಮಂತ್ರಿಗಳ ಮನೆ ಹೆಂಗಸರು, ಶಾಸಕರ ಮನೆ ಹೆಂಗಸರು ನೋಡಿದರೆ ಗೊತ್ತಾಗುತ್ತದೆ. ಇಲ್ಲಿ ನಾವು ಮನೆಯಲ್ಲಿ ಕೂತಿದ್ದೇವೆ ಆ ಪ್ರದೇಶದಲ್ಲಿ ಬಹುಶಃ ತಾವು ಅದನ್ನು ಮಿಲಿಟರಿಯವರನ್ನಾದರೂ ಇಟ್ಟು ಆ ಕಾರ್ಯವನ್ನು ಕೂಡಲೇ ಮಾಡದಿದ್ದರೆ 5-6 ದಿನಗಳಲ್ಲಿ ಜನ ರಸ್ತೆ ರಸ್ತೆಯಲ್ಲಿ ಸಾಯುತಕ್ಕ ದೃಶ್ಯವನ್ನು ಕಾಣುತ್ತೇವೆ. ಅನೇಕ ಜನ ಅನೇಕ ಊರುಗಳಲ್ಲಿ ಸತ್ತಿರತಕ್ಕ ನಿದರ್ಶನಗಳು ಇವೆ ಅದನ್ನು ಕಲೆಕ್ಟ್ ಮಾಡಿದ್ದೇವೆ ಎಷ್ಟು ಜನ ಸತ್ತಿದ್ದಾರೆ ಸತ್ತಿರತಕ್ಕ ಸುದ್ದಿಯನ್ನು ತಿಳಿಸಬಾರದು ಎಂದು ತಹಸಿಲ್ದಾರ್ ಕಟ್ಟಾಜ್ಞೆಯಾಗಿದೆ, ಪೋಲೀಸರಿಗೆ ಹೇಳಿದ್ದಾರೆ ಸತ್ತಿರತಕ್ಕದ್ದು ಸತ್ಯ, ಅಲ್ಲಿ ನೋಡಿದರೆ ಭೀಕರ ಸ್ಮಶಾನ ನೋಡುವ ರೀತಿ ಕಾಣುತ್ತದೆ. ಅನೇಕ ಊರುಗಳಲ್ಲಿ ಕಲ್ಲುಹೊಡೆಯಲಿಕ್ಕೆ ಹೋಗಿ ಊರನ್ನೇ ಖಾಲಿ ಮಾಡಿ ಹೋಗಿದ್ದಾರೆ.

Sri S. M. SHEERNALY CHANDRASHEKAR.—On a point of Order. Under what provi ion or Rule the hon. Member Sri V N. Patil is delivering the speech, I cannot understand.

Sri V. N. PATIL.—That normaly ought to have been the function of the Speaker.

MADAM SPEAKER.—Mr. Patil, I am here to answer him. You please sit down. ನಿಲುವಳಿ ಸೂಚನೆ ಕಳುಹಿಸಿದ್ದಾರೆ. ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ. ಡಿಮಾಂಡ್ ಬಂದಾಗ ಚರ್ಚೆಮಾಡಬಹುದು ಎಂದು ಹೇಳಿದರೂ ಕೂಡ ಅವರು ಅದನ್ನು ಎಕ್ಸ್‌ಪ್ಲೈನ್ ಮಾಡುತ್ತಿದ್ದಾರೆ.

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳನ್ನು ಕೇಳುವುದು ಇಷ್ಟೇ. ಇಡೀ ರಾಜ್ಯದಲ್ಲಿ 3 ಜಿಲ್ಲೆಗೆ ಬಂದಿರತಕ್ಕ ಭೀಕರ ಪರಿಸ್ಥಿತಿ ಬಹುಶಃ ಈ ರಾಜ್ಯದಲ್ಲಿ ಎಲ್ಲೂ ಬಂದಿಲ್ಲ ಅದನ್ನು ನಾವು ಕಣ್ಣಾರೆ ನೋಡಿದ್ದೇವೆ. ಇದು ಸಂಸ್ಥಾ ಕಾಂಗ್ರೆಸ್ ರಾಜಕೀಯ ಮಾಡುತ್ತಿದ್ದಾರೆಂದು ಅಲ್ಲ, ನಾನು ಶ್ರೀಮಾನ್ ತಿಮ್ಮಪ್ಪ ಮತ್ತು ಭೈರೇಗೌಡರು ಎಲ್ಲರೂ ಒಟ್ಟಿಗೆ ಹೋಗಿ ನಮ್ಮ ಇಷ್ಟ ಬಂದ ಕಡೆ ಹೋಗಿ ಎಲ್ಲವನ್ನೂ ನೋಡಿಕೊಂಡು ಬಂದಿದ್ದೇವೆ. ಏತಕ್ಕೆಂದರೆ ಈ ಪರಿಸ್ಥಿತಿ ನಾವು ಕಣ್ಣಾರೆ ನೋಡಿದ್ದರಿಂದ ಹೇಳುತ್ತಾ ಇದ್ದೇವೆ. ನೀವು ಕರೆದರೂ ಕೂಡ ನಾವು ಬರುವುದಕ್ಕೆ ತಯಾರಾಗಿಲ್ಲ. ಅಲ್ಲಿರತಕ್ಕಂಥ ಜನರನ್ನೇ ಕರೆದುಕೊಂಡು ಹೋಗಿ ನಾವು ನೋಡಿಕೊಂಡು ಬಂದಿದ್ದೇವೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೀವು ಮತ್ತು ನಿಮಗೆ ವಿರೋಧ ಪಕ್ಷದವರು ಯಾರು ಬೇಕೋ ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ. ಆ ಸ್ಥಳದಲ್ಲಿ ಏನು ಕೆಲಸ ನಡೆದಿದೆ ಎನ್ನುವುದನ್ನು ಪರಿಶೀಲನೆ ಮಾಡಿ. ಕೂಡಲೇ ಆ ಸ್ಥಳಕ್ಕೆ ಹೋಗುವುದಕ್ಕೆ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ಹಾಗೆ ಮಾಡದೇ ಇಲ್ಲಿ ಅಧಿವೇಶನ ನಡೆಯುವುದಾದರೆ ಈ ಸಭೆ ಶಾಸಕರು ಇಲ್ಲಿಯೇ ಮಾತನಾಡಿಕೊಂಡು ಇರುವುದಾದರೆ, ಅಲ್ಲಿ ಜನರು ಸಾಯುತ್ತಾ ಇರತಕ್ಕಂಥ ಪರಿಸ್ಥಿತಿಯನ್ನು ನೋಡ್ಬೇಕಾಗಿತ್ತು ಎಂದು ಜನ ಅಂದುಕೊಳ್ಳುತ್ತಾರೆ. ಈ ಸಭೆಯನ್ನು ಮುಂದುವರಿಸಿದರೆ ಏನೂ ಪ್ರಯೋಜನವಿಲ್ಲ. 1 ತಿಂಗಳು 2 ತಿಂಗಳು ಈ ಸಭೆ ನಡೆಸಿದರೂ ಅಷ್ಟೆ. ಆದುದರಿಂದ ಈ ಸಭೆಯ ಕಾರ್ಯಕಲಾಪಗಳನ್ನು ಕೂಡಲೇ ನಿಲ್ಲಿಸಿ ಆ ಸ್ಥಳಕ್ಕೆ ಹೋಗುವುದು ಒಳ್ಳೆಯದು ಎಂದು ಹೇಳುತ್ತೇನೆ. ಅಧ್ಯಕ್ಷರೇ, ಇನ್ನೂ ಅನೇಕ ವಿಷಯಗಳು ಇವೆ. ಆದುದರಿಂದ ದಯವಿಟ್ಟು ನನ್ನ ನಿಲುವಳಿ ಸೂಚನೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಮತಿ ಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

2-00 P. M.

ಶ್ರೀ ಬಿ. ಎನ್. ಪಾಟೀಲ್.—ನಾನು ಈ ವಿಷಯದಲ್ಲಿ ಮಾತನಾಡುವುದಕ್ಕೆ 2 ನಿಮಿಷ ಕಾಲಾವಕಾಶ ಕೊಡಿ.

ಅಧ್ಯಕ್ಷರು.—ಈಗ ಇವರ ಬಗ್ಗೆ ಪರ್ಮಿಷನ್ ಕೊಡಬೇಕೇ ಇಲ್ಲವೇ ಎನ್ನುವುದನ್ನು ಇನ್ನೂ ಯೋಚನೆ ಮಾಡುವಾಗ ನೀವೆಲ್ಲಾ ಇದರಲ್ಲಿ ಭಾಷಣ ಮಾಡುವುದರಲ್ಲಿ ಅರ್ಥವಿಲ್ಲ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಅಧ್ಯಕ್ಷರೇ, ನಾನು ಒಂದೆರಡು ನಿಮಿಷದಲ್ಲೇ ಹೇಳಿ ಬಿಡುತ್ತೇನೆ. ಈ ವಿಷಯ ಎಷ್ಟು ತೀಕ್ಷ್ಣವಾಗಿದೆ ಎನ್ನುವುದನ್ನು ನೋಡಬೇಕು. ಇವರ ಬಗ್ಗೆ ಟೀಕೆ ಮಾಡಬೇಕು ಅಂತಲ್ಲ. ಅಲ್ಲಿರತಕ್ಕಂಥ ಜನರ ಕಣ್ಣೀರಿನ ಕತೆ ಬಗ್ಗೆ ತಿಳಿದುಕೊಳ್ಳಬೇಕು. ಅಲ್ಲಿ ಕಾರ್ಯಕ್ರಮಗಳು ತೆಗೆದುಕೊಳ್ಳುವುದು ತಡವಾದರೆ ನಮ್ಮ ದೇಶದಲ್ಲಿ ದೊಡ್ಡ ಅನಾಹುತ ವಾಗುತ್ತದೆ. ಒಂದು ಕಡೆ 300-400 ಜನ ಕೆಲಸ ಮಾಡುತ್ತಿದ್ದಾರೆ, ಷೆಡ್ಡು ಹಾಕಿಕೊಂಡು ಸಣ್ಣ ಸಣ್ಣ ಮಕ್ಕಳನ್ನು ಅಲ್ಲಿ ಇಟ್ಟಿದ್ದಾರೆ. ಅಲ್ಲಿ ಒಂದು ಕಡೆ ನೋಡಿದ್ದರಲ್ಲಿ ಆ ಒಂದು ಮಗುವಿಗೆ ಮೈಯ್ಯೆಲ್ಲಾ ಹುಣ್ಣು ಆಗಿ, ಈಗ ಸಾಯುತ್ತಾರೋ, ಆಗ ಸಾಯುತ್ತಾರೋ ಎನ್ನುವ ಪರಿಸ್ಥಿತಿ ಇತ್ತು. ಅಲ್ಲಿ ಈವೊತ್ತಿನ ದಿವಸ ಭೀಕರವಾಗಿರತಕ್ಕಂಥ ಪರಿಸ್ಥಿತಿ ಇದೆ. ಯಾವುದೇ ಸರ್ಕಾರ ಈವೊತ್ತಿನ ದಿವಸ ಇರಲಿ ಮಾನವೀಯತೆ ದೃಷ್ಟಿಯಿಂದ ನೋಡಬೇಕು. ಇದರಲ್ಲಿ ಖಂಡಿತವಾಗಿ ಲವಲೇಶವೂ ರಾಜಕೀಯ ಇಲ್ಲ. ನಮ್ಮ ದೇಶದಲ್ಲಿ ಅಥವಾ ಭಾರತ ದೇಶದಲ್ಲಿ ಯಾವ ಭಾಗದಲ್ಲೇ ಆಗಲಿ ಇಂತಹ ಭೀಕರ ಪರಿಸ್ಥಿತಿ ಇರುವಾಗ ನಾವು ಈ ಸಭೆಯನ್ನು ನಡೆಸುವುದಾದರೆ ಇದರಲ್ಲಿ ಖಂಡಿತವಾಗಿಯೂ ಅರ್ಥವಿಲ್ಲ. ಈವೊತ್ತು ಹೇಗಾದರೂ ಎರಡು ತಿಂಗಳ ವೋಟ್ ಆನ್ ಅಕೌಂಟ್ ಪಾಸ್ ಆಗಿದೆ. ಅಲ್ಲಿ ಯಾವ ಕೆಲಸವೂ ನಡೆಯುತ್ತಾ ಇಲ್ಲ. ಲಕ್ಷಾಂತರ ಜನ ಅಲ್ಲಿ ಸಾಯುವ ಪರಿಸ್ಥಿತಿ ಇರುವಾಗ ಈ ಸಭೆ ನಡೆಸಿದರೆ ಇದರಿಂದ ಪರಿಹಾರವಾಗುತ್ತದೆ ಎನ್ನುವ ದೃಷ್ಟಿ ಇಲ್ಲ. ಆದುದರಿಂದ ಈ ಅಧಿವೇಶನವನ್ನು ಮುಂದುವರಿಸಿ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ಮತ್ತು ಈ ಕಡೆಯಿಂದ ಅವರಿಗೆ ಯಾರು ಬೇಕೋ ಅವರನ್ನು ಕರೆದುಕೊಂಡು ಹೋಗಿ ನೋಡಲಿ. ಮುಖ್ಯವಾಗಿ ಅಲ್ಲಿಯ ಜನರಿಗೆ ನೀರು, ಆಹಾರ ಮತ್ತು ವಸತಿಯನ್ನು ಬಗೆಹರಿಸುವುದು ಎಲ್ಲರ ಕರ್ತವ್ಯವೆಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಹೇಳಿದುದನ್ನೆಲ್ಲಾ ಅವರು ಹೇಳಿದ್ದಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅಧ್ಯಕ್ಷರೇ, ಶಿವಮೊಗ್ಗಾ ತಾಲ್ಲೂಕಿನಲ್ಲಿ ರಟ್ಟೆಹಳ್ಳಿ ಎನ್ನುವ ಗ್ರಾಮ ಸಂಪೂರ್ಣವಾಗಿ ಬೆಂಕಿ ಅನಾಹುತದಿಂದ ಸುಟ್ಟು ಹೋಗಿದೆ. ಆ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸು ಕಳುಹಿಸಿದ್ದೆ. ಆ ಬಗ್ಗೆ ಏನಾಯಿತು ?

ಅಧ್ಯಕ್ಷರು.—ಮೊದಲು ಈ ವಿಷಯ ಮುಗಿಯಲಿ.

† Sri J. P. SARWESH (Serum).—Ma'am Speaker, from the day this Assembly was adjourned, I also was tou.ing in my constituency in Gulbarga District. There, I have in my own constituency, Voddars, who break stones. They have been provided with sheds, and water facilities. Even children are well provided. In addition to that, we held three meetings in Mella, Kolla and Kurkunta and the Hon'ble Minister of State Sri Devendrappa addressed these meetings. There was maximum gathering. This was the first time we had this gathering. They are very happy that the Government is doings its maximum. To say that Government has not done anything is nothing but politics. Government is doing everything in its power. But it is also a fact that scarcity conditions are very severe. I must say that the Government is doing its maximum. In my taluka 10,000 people are employed on soil conservation, and PWD. I have toured Chincholi and Chitapur Taluks and according to me, what Mr. Vatal Nagaraj and Sri Thimmappa and Byre Gowda have been saying is not borne out. I do not know which taluk they have toured. They have not come to my constituency. This much I want to say.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಸಭೆಯನ್ನು ಮುಂದೂಡಲಿಕ್ಕೆ ರೂಲ್ 60ರ ಪ್ರಕಾರ ಅಡ್ಜರ್ನ್‌ಮೆಂಡ್ ಮೋಷನ್‌ನ್ನು ತಮ್ಮ ಅನುಮತಿಗೆ ಕಳುಹಿಸಿಕೊಟ್ಟಿದ್ದಾರೆ. ಈಗ ನನ್ನ ಮಿತ್ರರು ಅವರು ಕಂಡಂಥ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಈ ವಿಷಯದಲ್ಲಿ ಏನೂ ಕೆಲಸ ಮಾಡಿಲ್ಲ ಎಂದು ನಾನು ಹೇಳುತ್ತಾ ಇಲ್ಲ. ಆದರೆ ಈವೊತ್ತು ಅಲ್ಲಿ ಇರತಕ್ಕಂಥ ಪರಿಸ್ಥಿತಿಯನ್ನು ತಾವು ಕೂಡ ಒಪ್ಪಿಕೊಳ್ಳಬೇಕು. ಇದು ಯಾರ ಪ್ರತಿಷ್ಠೆಯ ಪ್ರಶ್ನೆ ಅಲ್ಲ. ನಾವೂ ಹೇಳಬಹುದು, ತಾವೂ ಕೂಡ ಅಲ್ಲಿ ಜನತೆಯ ಕಷ್ಟವನ್ನು ಪರಿಹಾರ ಮಾಡಲಿಕ್ಕೆ ಕೆಲವಾರು ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಬಹುದು. ನಿಜ. ಆದರೆ ಅದು ಕಾರ್ಯ ರೂಪಕ್ಕೆ ಬರುವುದರಲ್ಲಿ ಕೆಲವು ಲೋಪದೋಷ ಇವೆ ಎನ್ನುವುದು ಅಲ್ಲಿಗೆ ಹೋದ ಮೇಲೆ ಗೊತ್ತಾಗಿದೆ. ತಮಗೂ ಗೊತ್ತಿದೆ. ನಾನು ಈ ವಿಷಯದಲ್ಲಿ ಚರ್ಚೆ ಮಾಡಲಿಕ್ಕೆ ತಯಾರಾಗಿಲ್ಲ. ಚರ್ಚೆ ಮಾಡಬಾರದು ಎನ್ನತಕ್ಕಂಥಾದ್ದು ನನ್ನ ಮನಸ್ಸಿನಲ್ಲಿರತಕ್ಕಂಥಾ ವಿಷಯ. ಕಳೆದ ಮಾರ್ಚಿ 5ನೇ ತಾರೀಖು ನನ್ನ ಪಕ್ಷದ ವತಿಯಿಂದ ಈ ಬಗ್ಗೆ ಚಳುವಳಿ ಪ್ರಾರಂಭ ಮಾಡಿದ್ದಾರೆ. ಆ ವಿಷಯವೂ ಕೂಡ ತಮಗೆ ಗೊತ್ತಿದೆ ಆದಾಗ್ಯೂ ಕೂಡ ಆ ಬಗ್ಗೆ ನಾನು ಒಂದು ಚಕಾರ ಶಬ್ದವನ್ನೂ ಕೂಡ ಎತ್ತಲಿಲ್ಲ. ಏತಕ್ಕೆಂದರೆ ನಾನು ಕಣ್ಣಾರೆ ಹೋಗಿ ನೋಡಬೇಕು, ಅಲ್ಲಿಯ ಪರಿಸ್ಥಿತಿ ಏನು ಇದೆ ಎನ್ನುವುದನ್ನು ಅರಿಯಬೇಕು ಎಂದು ನಾನು ಮಾತನಾಡಲಿಲ್ಲ. ಇದು ಕೇವಲ ರಾಜಕೀಯ ಪಕ್ಷದ ವಾದ ವಿವಾದ ಅಲ್ಲ. ವಿರೋಧ ಪಕ್ಷದ ಎಲ್ಲಾ ಶಾಸಕರ ಮುಖಂಡರು ಹೋಗಿ ನೋಡಿ ಅಲ್ಲ ಪರಿಸ್ಥಿತಿ ಏನು ಇದೆ ಎನ್ನುವುದನ್ನು ತಿಳಿದುಕೊಂಡಿದ್ದಾರೆ ನಾವೂ ಹೋಗಿ ನೋಡಿದ್ದೇವೆ. ನೀವು ಇಲ್ಲಿ ಚರ್ಚೆ, ವಿವರಗಳನ್ನು ಇಡುವುದರಲ್ಲಿ ಔಚಿತ್ಯ ಕೂಡ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ನಾನು ಒಂದು ಸಲಹೆ ಮಾಡುತ್ತೇನೆ. ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಎಲ್ಲರ ಸಹಕಾರ ಬೇಕು ಎಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. ನಿಜ. ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಸರ್ಕಾರದ ಕೆಲಸ ಕೂಡ ಅಡ್ಡಿ ಮಾಡಬೇಕು ಎನ್ನುವ ಇಚ್ಛೆ ನಮಗಿಲ್ಲ. ಈಗಾಗಲೇ ಎರಡು ತಿಂಗಳ ವೋಟ್ ಆನ್ ಅಕೌಂಟ್ ಪಾಸು ಮಾಡಿದ್ದೀರಿ. ಒಂದು ವೇಳೆ ಡಿಮಾಂಡ್‌ಗಳು ಪಾಸಾಗದೆ ಇದ್ದರೂ ಸರ್ಕಾರ ತನ್ನ ವ್ಯವಹಾರವನ್ನು ಮಾಡಲು ಅಡಚಣೆಯಾಗುತ್ತದೆ ಎನ್ನುವ ಭಾವನೆಯನ್ನು ಕೂಡ ಇಟ್ಟುಕೊಳ್ಳಬೇಕಾಗಿಲ್ಲ. ನಾನು ಚರ್ಚೆ ಮಾಡಿ ವಿವರಣೆಗೆ ಹೋಗುತ್ತಿಲ್ಲ. ನನ್ನ ಹತ್ತಿರ ಎಲ್ಲ ಅಂಕಿ ಅಂಶಗಳನ್ನೂ ಇಟ್ಟುಕೊಂಡಿದ್ದೇನೆ. ನಾನು ಒಂದು ಸಲಹೆಯನ್ನು ಮಾಡುತ್ತೇನೆ, ಈಗ ಸಭೆಯನ್ನು ಮುಂದೂಡಿ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಈ ಕಡೆಯಿಂದ ನಾಲ್ಕಾರು ಜನರನ್ನು ಕರೆದುಕೊಂಡು ಹೋಗುವ ವಿಚಾರವನ್ನು ಅವರಿಗೇ ಬಿಡುತ್ತೇನೆ, ಅವರು ಹಳ್ಳಿಗಳಿಗೆ ಹೋಗಿ ಅಧಿಕಾರಿಗಳಿಗೆ ತಮ್ಮ ಟೂರ್ ಪ್ರೋಗ್ರಾಂ ಕಳುಹಿಸದೆ, ಕೆಲವು ಸ್ಥಳಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಅಲ್ಲಿ ಏನು ಕೆಲಸವಾಗುತ್ತಿದೆ, ಹೇಗೆ ನಡೆಯುತ್ತಿದೆ, ಪರಿಸ್ಥಿತಿ ಏನಿದೆ ಎನ್ನುವುದನ್ನೆಲ್ಲ ನೋಡಿ ಆ ಜನಗಳಿಗೆ ಪರಿಹಾರ ಒದಗಿಸುವುದಕ್ಕೆ ಪ್ರಯತ್ನ ಮಾಡಿದರೆ ಸಾಕು. ಅಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ತಡೆಗಟ್ಟಲಿಕ್ಕೆ ಕಷ್ಟಕ್ಕೆ ತುತ್ತಾಗಿರತಕ್ಕ ಜನತೆಯ ಸಂಕಷ್ಟವನ್ನು ನಿವಾರಣೆ ಮಾಡಲಿಕ್ಕೆ ಸ್ಥಳದಲ್ಲಿಯೇ ತೀರ್ಮಾನ ತೆಗೆದುಕೊಳ್ಳಲಿ. ನಾನು ಇಲ್ಲಿ ಏನಾದರೂ ಹೇಳಿದರೆ ಏನೊ ಒಂದು ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದೇನೆಂದು ನಿಮ್ಮ ಮನಸ್ಸಿಗೆ ಬರುವುದು ಬೇಡ, ವಿರೋಧ ಪಕ್ಷದವರನ್ನು ಕೆಲವರನ್ನು ಕರೆದುಕೊಂಡು ಹೋಗುವ ವಿಚಾರವನ್ನು ಅವರ ಇಚ್ಛೆಗೇ ಬಿಡುತ್ತೇನೆ. ಅಧಿಕಾರಿಗಳ ಮಾತಿಗೆ ಮನ್ನಣೆ ಕೊಡುವುದು ಬೇಡ. ಮಾನ್ಯ ಮುಖ್ಯಮಂತ್ರಿಗಳು ಖುದ್ದಾಗಿ ಅಲ್ಲಿಗೆ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನ ಮಾಡಲಿ. ಅಲ್ಲಿ ಪರಿಸ್ಥಿತಿ ತೀರ ವಿಕೋಪಕ್ಕೆ ಹೋಗಿದೆ, ಹದಗೆಡುತ್ತಿದೆ, ದಯಮಾಡಿ ಪಕ್ಷಾತೀತ ದೃಷ್ಟಿಯಿಂದ ವಿಚಾರವನ್ನು ಪರಿಶೀಲನೆ ಮಾಡಬೇಕು ಮತ್ತು ಏನೇನು ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ ಆ ಪ್ರಕಾರ ಕೆಲಸಗಳಾಗುತ್ತಿವೆಯೇ, ಜನರ ಕಷ್ಟಗಳನ್ನು ಹೇಗೆ ನಿವಾರಣೆ ಮಾಡಬೇಕು ಎನ್ನುವುದಕ್ಕೆ ಸ್ಥಳದಲ್ಲಿಯೇ ನಿರ್ಣಯ ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಸರ್ಕಾರ ಆ ಭಾಗದಲ್ಲಿ ಏನೇನೂ ಕೆಲಸ ಮಾಡಿಲ್ಲ ಎಂದರೆ ರಾಜಕೀಯ ಉದ್ದೇಶದಿಂದ ಹೇಳುತ್ತಿದ್ದೇವೆ ಎನ್ನಬಹುದು. ಅಲ್ಲಿ ತೆಗೆದುಕೊಂಡು ಮಾಡುತ್ತಿರುವ ಕೆಲಸಗಳಲ್ಲಿ ಲೋಪದೋಷಗಳಾಗಿವೆ. ಸರ್ಕಾರದ ಉದ್ದೇಶ ಜನತೆಗೆ ಸಹಾಯ ಮಾಡಬೇಕೆಂದು ಇದ್ದರೂ ಅದು ಎಷ್ಟರ ಮಟ್ಟಿಗೆ ಜನತೆಗೆ ಮುಟ್ಟುತ್ತಿಲ್ಲ ಎನ್ನುವುದನ್ನು ತಿಳಿಸಲು ಈ ಬಗ್ಗೆ ಕೂಲಂಕಷವಾಗಿ ಚರ್ಚೆ ನಡೆಯಬೇಕು. ಲಕ್ಷಾವಧಿ ಕೋಟ್ಯಾವಧಿ ರೂಪಾಯಿ ಖರ್ಚು ಮಾಡುತ್ತಿದ್ದರೂ ಅದು ಜನತೆಗೆ ಮುಟ್ಟುತ್ತಿಲ್ಲ. ಮಧ್ಯವರ್ತಿ ಜನರು ಅದನ್ನು ತೆಗೆದುಕೊಂಡು ಬಡ ಜನತೆಯನ್ನು ಉಪವಾಸ ಕೂಡಿಸುತ್ತಿದ್ದಾರೆ. ಇದರ ಬಗ್ಗೆ ಚರ್ಚೆ ನಡೆದು ಸರ್ಕಾರ ಸ್ವಲ್ಪ

ಟೀಕೆಗಳನ್ನು ಕೇಳುವುದಕ್ಕೆ ಸಿದ್ಧವಾಗಿರಬೇಕು ಸರ್ಕಾರದಿಂದ ಖರ್ಚು ಮಾಡುವ ದುಡ್ಡು ಜನತೆಯ ಕೈಯಲ್ಲಿ ಕೊಡುತ್ತಿಲ್ಲ. ಒಂದು ಲಾರಿ ಮೇವು ತೆಗೆದುಕೊಂಡು ಹೋದರೆ 900 ರೂಪಾಯಿ ಸಾವಿರ ರೂಪಾಯಿ ಬಿಲ್ ಮಾಡುತ್ತಿದ್ದಾರೆ. ಆಂಧ್ರ ಬಾರ್ಡರಿನಲ್ಲಿ 350—400 ರೂಪಾಯಿಗಳಿಗೆ ಒಂದು ಲಾರಿ ಮೇವು ಸಿಕ್ಕುತ್ತದೆ. ಅಲ್ಲಿಂದ ತಂದು ಕೊಡುವ ವ್ಯವಸ್ಥೆ ಮಾಡಿದರೆ ಸರ್ಕಾರಕ್ಕೆ ಕೂಡ ಅರ್ಧ ದುಡ್ಡು ಉಳಿತಾಯವಾಗುತ್ತದೆ ಮತ್ತು ಅರ್ಧ ದುಡ್ಡಿನಲ್ಲಿ ದನಗಳಿಗೆ ಮೇವನ್ನು ಒದಗಿಸಿದಂತಾಗುತ್ತದೆ. ಬಾವಿಗಳನ್ನು ತೋಡುವುದಕ್ಕಾಗಿ ಕೊಡುವ ಸಂದರ್ಭದಲ್ಲೂ ಕೂಡ ಮಧ್ಯವರ್ತಿ ಜನರಿಂದ ತುಂಬ ಅನ್ಯಾಯವಾಗುತ್ತಿದೆ. ಹಳೇ ಭಾವಿಯಲ್ಲಿ ಹೂಳು ತೆಗೆಯುವ ಸಲುವಾಗಿ ಐದು ಸಾವಿರ ರೂಪಾಯಿ ಸಾಲ ಕೊಡಿಸಿದ್ದಾರೆ. ಸಾಲ ಕೊಡಿಸಬೇಕು ಎಂದರೆ 500 ರೂಪಾಯಿ ಕಮಿಷನ್ ಕೊಡಬೇಕು. ನ್ಯಾಯವಾಗಿ ಬಾವಿ ತೊಡಬೇಕು ಎನ್ನುವವರಿಗೆ ಸಾಲ ಸಿಕ್ಕುವುದಿಲ್ಲ. ಸಾಲ ತೆಗೆದುಕೊಂಡಿರುವವರು ಬಾವಿ ಕೂಡ ತೋಡಿಸಿಲ್ಲ. ಕಮಿಷನ್ ಕೊಟ್ಟವರಿಗೆ ಮಾತ್ರ ಸಾಲ ಸಿಕ್ಕುತ್ತಿದೆ. 50 ಎಕರೆ ಜಮೀನು ಹೊಂದಿರುವವರು ತಮ್ಮ ಮಕ್ಕಳ ಹೆಸರಿನಲ್ಲಿ ಜಮೀನು ಮಾಡಿ ಸಣ್ಣ ರೈತರು ಎನ್ನುವ ನೆಪದಲ್ಲಿ ಸರ್ಟಿಫಿಕೇಟುಗಳನ್ನು ಪಡೆದು ಸಾಲ ತೆಗೆದು ಕೊಳ್ಳುತ್ತಿದ್ದಾರೆ, ನಿಜವಾಗಿ ಯಾರಿಗೆ ದುಡ್ಡು ಸಿಕ್ಕಬೇಕೋ ಅವರಿಗೆ ಸಿಕ್ಕುತ್ತಿಲ್ಲ. ಬಿದರೆ ಜಿಲ್ಲೆಯಲ್ಲಿ ಫ್ಯಾಮಿನ್ ರಿಲೀಫ್ ಕಮಿಟಿ ಮೀಟಿಂಗ್ ಆಗಿಲ್ಲ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿ ಮೀಟಿಂಗ್ ಆಗಿಲ್ಲ. ಡೆಪ್ಯುಟಿ ಕಮೀಷನರು, ತಹಸೀಲ್ದಾರರು ಮತ್ತು ಅವರ ಕೈಕೆಳಗಿನ ರೆವೆನ್ಯೂ ಇನ್‌ಸ್ಪೆಕ್ಟರು ಏನು ರಿಪೋರ್ಟ್ ಕೊಡುತ್ತಾರೆ ಅದಕ್ಕೆ ರುಜು ಹಾಕುತ್ತಾರೆ. ಎಂ.ಎಲ್.ಎ. ಮತ್ತು ಇತರರು ಹೇಳುವಂಥ ಮಾತುಗಳನ್ನು ಕೇಳುವುದೇ ಇಲ್ಲ. ಇಂಥ ಪರಿಸ್ಥಿತಿ ಇದೆ. ಸರ್ಕಾರಿ ಯಂತ್ರ ಸರಿಯಾಗಿ ನಡೆದುಕೊಳ್ಳುತ್ತಿದೆಯೋ ಇಲ್ಲವೇ ಎನ್ನುವುದನ್ನು ನೋಡಬೇಕು. ಮಂತ್ರಿ ಮಂಡಲ ಸರಿಯಾಗಿ ಕೆಲಸ ಮಾಡುತ್ತ ಇಲ್ಲ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಸರ್ಕಾರ ಖರ್ಚು ಮಾಡುತ್ತಿರುವ ದುಡ್ಡು ಜನರಿಗೆ ಮುಟ್ಟುತ್ತಿದೆಯೋ ಎನ್ನುವುದನ್ನು ನೋಡಬೇಕು.

ಮಿಡ್ ಡೇ ಮೀಲ್ ಎಂದು ಮಕ್ಕಳಿಗೆ ಊಟ ಮಾಡುವುದಕ್ಕೆ ಬೆಲಗರ ಎಂದು ಮುಸುಕಿನ ಜೋಳ, ಗೋಧಿ ಇವುಗಳಿಂದ ತಯಾರು ಮಾಡಿ ಕಳುಹಿಸಿದ್ದಾರೆ. ಇದರಲ್ಲಿ 10 ಪರ್ಸೆಂಟ್ ದತ್ತೂರ ಬೀಜ ಸೇರಿದೆ ಎಂದು ಕಾಣಿಸುತ್ತದೆ. ದತ್ತೂರ ಬೀಜ ಮಿಶ್ರವಾದ ಧಾನ್ಯ ಜನರಿಗೆ ಕೂಡ ಸಪ್ಲೈ ಆಗಿದೆ. ದತ್ತೂರ ಬೀಜ ತೆಗೆದು ಆಹಾರ ಧಾನ್ಯವನ್ನು ಕೊಡುವ ವ್ಯವಸ್ಥೆ ಮಾಡಬೇಕು. ನನ್ನ ಬಳಿಯಿರುವ ಸ್ಯಾಂಪಲ್‌ಅನ್ನು ಮಾನ್ಯ ಅಧ್ಯಕ್ಷರ ಮೂಲಕ ಕಳುಹಿಸಿಕೊಡುತ್ತೇನೆ. ತಕ್ಷಣ ಆರ್ಡರ್ ಮಾಡಿ ದತ್ತೂರ ಬೀಜ ಇರುವುದನ್ನು ವಿಂಗಡಿಸಿ ಚನ್ನಾಗಿರುವ ಧಾನ್ಯವನ್ನು ಹಂಚುವಂತೆ ಮಾಡಬೇಕು. ಈ ವಿಚಾರದ ಮೇಲೆ ಕೂಲಂಕಷವಾದ ಚರ್ಚೆ ನಡೆಯುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

ಶ್ರೀ ವಾಟಾಳ್ ನಾಗರಾಜ್.—ಈ ವಿಚಾರ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ನನ್ನಲ್ಲಿ ಕೆಲವು ಆಧಾರಗಳಿವೆ. ಅವನ್ನು ತಮ್ಮ ಗಮನಕ್ಕೆ ತರುತ್ತೇನೆ. ಯಾರೂ ಉತ್ಪ್ರೇಕ್ಷೆ ಎಂದು ಭಾವಿಸಬಾರದು. ನನ್ನ ಹತ್ತಿರ ಕೆಲವು ಫೋಟೋಗಳಿವೆ. ಒಂದರಲ್ಲಿ ಕಾಲು ಒಡೆದು, ಕೈಯಲ್ಲಿ ರಕ್ತ ಸುರಿಯುತ್ತ ಇರುವುದು. ಕೆಲವು ಶಾಸಕರು ಹೇಳಿದರು, ನೀರು ಕೊಟ್ಟಿದ್ದೇವೆ, ಊಟ ಕೊಟ್ಟಿದ್ದೇವೆ, ಷೆಡ್‌ಗಳನ್ನು ಹಾಕಿಸಿದ್ದೇವೆ ಎಂದು. ಅವರು ಇಲ್ಲಿ ಹೇಳುವ ಬದಲು ಅಲ್ಲಿ ನಿಂತು ಕಾರುಬಾರು ಮಾಡಿದ್ದರೆ ಇಷ್ಟು ತೊಂದರೆ ಆಗುತ್ತಿರಲಿಲ್ಲ. 15 ದಿವಸಗಳಿಂದ ಕೂಲಿ ಇಲ್ಲದೆ. ಅನ್ನಾಹಾರವಿಲ್ಲದೆ ಅಸಿಸ್ಟೆಂಟ್ ಇಂಜನಿಯರ್ ಅವರ ಆಫೀಸಿನ ಮುಂದೆ ಕುಳಿತು ಗೋಳಾಡುತ್ತಿರುವ ಚಿತ್ರ ಇದೊಂದು.

ಅಧ್ಯಕ್ಷರು.—ಅವುಗಳನ್ನೆಲ್ಲಾ ಇಲ್ಲಿಗೆ ಕಳುಹಿಸಿಕೊಡಿ,

ಶ್ರೀ ವಾಟಾಳ್ ನಾಗರಾಜ್.—ನೀರಿಗಾಗಿ ಗುದ್ದಾಟ ಮಾಡುತ್ತಿರತಕ್ಕ ಜನರ ಚಿತ್ರ ಇನ್ನೊಂದು.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರುಗಳು ಆ ಕಡೆಯಿಂದ ಹೇಳಿದುದನ್ನು ಕೇಳಿದೆವು. ಮಾನ್ಯ ನಾಗರಾಜ್ ಅವರು ಫೋಟೋಗಳನ್ನು ಪ್ರಕಟಣೆ ಮಾಡುತ್ತಿದ್ದಾರೆ. ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೇ ಇಲ್ಲವೇ ಎನ್ನುವ ಪ್ರಶ್ನೆ ಬಂದಾಗ ಇದನ್ನೆಲ್ಲ ಹೇಳುತ್ತ ಹೋಗಬೇಕಾದ ಪ್ರಮೇಯವೇನು ? ಇವರು ದೇಶದಲ್ಲಿನ ಜನಗಳಿಗೋಸ್ಕರ ಬಹಳ ಪರಿತಪಿಸುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ನಾವು ಎರಡು ದಿವಸ ಹೋಗಿ ನೋಡಿಕೊಂಡು ಬಂದಿದ್ದೇವೆ. ನಿಮಗೆ ಮಾನವೀಯತೆ ಇಲ್ಲವೇ, ಮನುಷ್ಯತ್ವವಿಲ್ಲವೇ ಎಂದು ನಾನು ಹೇಳುತ್ತಿದ್ದೇನೆ. ತಾವೂ ಖುದ್ದಾಗಿ ಹೋಗಿ ನೋಡಿದ್ದರೆ ಗೊತ್ತಾಗುತ್ತದೆ. ಒಬ್ಬ ಕೆಲಸ ಮಾಡುವಾಗ ಅವನ ಕೈಯಲ್ಲಿ ರಕ್ತ ಸುರಿಯುತ್ತಿರುವ ದೃಶ್ಯ ಇಲ್ಲಿದೆ.

ಅಧ್ಯಕ್ಷರು.—ತಾವು ತೋರಿಸುತ್ತಿರುವ ಫೋಟೋಗಳನ್ನೆಲ್ಲಾ ನನ್ನ ಕಡೆಗೆ ಕಳುಹಿಸಿಕೊಡಿ. ಇದನ್ನು ನೋಡೋಣ. ತಾವು ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಲು ನನಗೆ ನೋಟೀಸು ಕಳುಹಿಸಿದ್ದೇನೆಂದು ಹೇಳಿದ್ದೀರಿ. ಇದರ ಬಗ್ಗೆ ಇಲ್ಲಿ ಮಾತಾಡಬೇಕೆಂದು ಒಂದು ಸಾರಿ, ಇನ್ನೊಂದು ಸಾರಿ ಇಲ್ಲಿ ಫೋಟೋ ತೋರಿಸುವುದು ಒಂದು ಸಾರಿ, ಅನಂತರ ಭಾಷಣ ಮಾಡಲು ಒಂದು ಸಾರಿ ಹೀಗೆ ಎರಡು ಮೂರು ಸಾರಿ ತಾವು ಈ ರೀತಿ ಎದ್ದು ಹೇಳಲು ಆರಂಭ ಮಾಡಿದರೆ ಹೇಗೆ ? ನಾನು ಇದರ ಬಗ್ಗೆ ಸರಕಾರದ ಉತ್ತರ ಏನು ಬರುತ್ತದೆ ಅದನ್ನು ಕೇಳಬೇಕಾಗಿದೆ. ಅದನ್ನು ನೋಡಿಕೊಂಡು ಇದನ್ನು ಚರ್ಚೆಗೆ ಅನುಮತಿ ಕೊಡಬೇಕೇ ಬೇಡವೇ ಎನ್ನುವುದನ್ನು ನಿರ್ಧಾರ ಮಾಡಬೇಕಾಗಿದೆ. ನಾನು ಒಂದು ವೇಳೆ ಕಾಲ ನಿಗದಿ ಮಾಡಿದರೆ ಆಗ ತಮಗೆ ಇದರ ಮೇಲೆ ಮಾತನಾಡಲು ಅವಕಾಶವಾಗುತ್ತದೆ. ಹೀಗೆ ನಾಲ್ಕು ಬಾರಿ ಎದ್ದಿದ್ದು ಇದರ ಬಗ್ಗೆ ಹೇಳಲು ಹೋದರೆ ನಾನು ತಮಗೆ ಎಷ್ಟು ಸಾರಿ ಟೈಂ ಕೊಡಲು ಸಾಧ್ಯ? ತಾವು ಇದನ್ನು ಯೋಚನೆ ಮಾಡಿ ತಿಳಿದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ನಾವು ಇಲ್ಲಿ ಚರ್ಚೆ ಮಾಡಲು ಅದಕ್ಕೆ ಆಧಾರಗಳಾಗಿಯೇ ಇಲ್ಲಿ ಫೋಟೋಗಳನ್ನು ತಮಗೆ ತೋರಿಸುತ್ತಿರುವುದು.

†ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು),—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದುದನ್ನು ಕೇಳಿದೆ. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಶ್ರೀ ಪಾಟೀಲ್‌ರವರು ಹಾಗೂ ಶ್ರೀ ಬೈರೇಗೌಡರು ಮತ್ತು ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದುದನ್ನೆಲ್ಲಾ ಕೇಳಿದೆ. ಅವರ ಒಟ್ಟಿನ ಅಭಿಪ್ರಾಯದಂತೆ ನಮಗೆ ಗೊತ್ತಾದದ್ದು ಈ ಅಸೆಂಬ್ಲಿ ನಡೆಯುವುದೇ ಬೇಡ, ಇದನ್ನು ಮುಂದುವರಿಸಿ ನಾವೆಲ್ಲರೂ ಬರಗಾಲದ ಭಾಗಕ್ಕೆ ಹೋಗಿ ನೋಡಬೇಕಾದರೆ ಅವರನ್ನು ಕರೆದರೂ ಅವರೂ ಬರುತ್ತೇವೆಂದೂ ಹೇಳಿದ್ದಾರೆ, ಅವರೆಲ್ಲರ ಉದ್ದೇಶವೇನೋ ಒಳ್ಳೆಯದೇ, ಅವರು ಹೇಳುವ ಪ್ರಕಾರ ಅಲ್ಲಿಯ ಜನರ ಕಷ್ಟ ಪರಿಹಾರ ಮಾಡಲು ನಾವೆಲ್ಲರೂ ಅಲ್ಲಿಗೆ ಹೋಗಿ ನೋಡಬೇಕು ಎಂದು. ಒಟ್ಟಿನಲ್ಲಿ ಆ ಜನರ ಕಷ್ಟ ಪರಿಹಾರ ಮಾಡಬೇಕು, ಕೆಲಸ ಸಿಕ್ಕದವರಿಗೆ ಕೆಲಸ ಸಿಗುವಂತೆ ಮಾಡಬೇಕು, ಇಲ್ಲವೇ ಇದರಲ್ಲಿರುವ ಅಧಿಕಾರಿಗಳಿಂದ ತೊಂದರೆ ಆಗಿದ್ದರೆ ಅದನ್ನು ತಪ್ಪಿಸಬೇಕು ಮತ್ತು ಎಲ್ಲರಿಗೂ ಕೆಲಸಗಳನ್ನು ಕೊಡಿಸಬೇಕು. ಇಷ್ಟು ಅವರ ಉದ್ದೇಶ. ಈ ಉದ್ದೇಶ ಸಾಧನೆಗಾಗಿ ನಾವೂ ಹಾಗೂ ಅವರೂ ಕುಳಿತು ಯೋಗ್ಯವಾಗಿ ವಿಚಾರ ಮಾಡಿದರೆ ಇದರಿಂದ ಯಾವ ರೀತಿ ಕಾರ್ಯಸಾಧನೆಯಾಗುತ್ತದೆ ಅದನ್ನು ಮಾಡಬಹುದು. ಮಾನ್ಯ ಸದಸ್ಯರು ಈಗತಾನೇ ಅಲ್ಲಿಗೆ ಹೋಗಿ ಬಂದಿದ್ದಾರೆ, ಅವರ ಅಭಿಪ್ರಾಯದಲ್ಲಿ ಅಸೆಂಬ್ಲಿಯಲ್ಲಿ ಕೆಲಸ ಮಾಡದೇ ಬರಗಾಲದ ಜಾಗಗಳಿಗೆ ಹೋಗಿ ಇದರ ಉದ್ದೇಶ ಸಾಧನೆಗಾಗಿ ಅಲ್ಲೇ ಜನರ ಕಷ್ಟ ಪರಿಹಾರ ಮಾಡಬೇಕು ಎಂದು ಇದ್ದೀತು. ಇದರಿಂದ ಅಲ್ಲಿನ ಜನಕ್ಕೆ ಸ್ವಲ್ಪ ಸಮಾಧಾನವಾಗಿ ಸಹಾಯ ಮಾಡಲು ಯೋಚನೆ ಮಾಡಬಹುದು ಎಂದು. ಇದನ್ನು ಹೇಳುವಾಗ ಅವರ ಅಭಿಪ್ರಾಯದಲ್ಲಿ ಇಲ್ಲಿ ಏನೂ ಹೇಳಿದರೂ ನಮಗೆ ಸಮಾಧಾನವಾಗುವುದಿಲ್ಲ ಎಂದು ಹೇಳಿದರು. ಅವರು ಹೇಳುವಂತೆ ಆ ಭಾಗದಿಂದ ಬಂದಿರುವ ಸದಸ್ಯರೂ ಇಲ್ಲಿದ್ದಾರೆ. ಅವರೂ ಅಲ್ಲಿಗೆ ಹೋಗಿ ಬಂದಿದ್ದಾರೆ. ಅವರ ಅಭಿಪ್ರಾಯಗಳು ಏನಿವೆ ಅದನ್ನು ಅವರಿಂದ ತಿಳಿದುಕೊಂಡು ಮುಂದೆ ಏನು ಕೆಲಸ ಮಾಡಬೇಕೋ ಅದನ್ನು ಯೋಚನೆ ಮಾಡಬಹುದು. ನಾನು ಬಹಳ ನಮ್ರತೆಯಿಂದ ಮಾನ್ಯ ಸದಸ್ಯರಿಗೆ ಹೇಳುವುದು ಅವರಿಗೆ ಎಷ್ಟು ಉದ್ವೇಗ ಇವೆಯೋ ಅದಕ್ಕಿಂತ ಹೆಚ್ಚಾಗಿ ನಮಗೂ ಕೂಡ ಅಲ್ಲಿನ ಜನರ ಕಷ್ಟಗಳನ್ನು ಪರಿಹಾರ ಮಾಡಬೇಕೆಂದು ಇದೆ. ಅಲ್ಲಿಂದ ಬಂದಿರುವ ಎಲ್ಲ ಸದಸ್ಯರೂ ಏನು ಹೇಳುತ್ತಾರೋ ಅದನ್ನೂ ಕೇಳೋಣ. ಅವರು ಏನು ಹೇಳುತ್ತಾರೋ ಅದೂ ಗೊತ್ತಾಗುತ್ತೆ. ಶ್ರೀ ವಾಟಾಳ್‌ನಾಗರಾಜ್‌ರವರಂತೂ ಪಾಪ ಮೂರು ಕೋಟಿ ಜನರ ಪರವಾಗಿ ಅವರು ಬೆಂಗಳೂರಿನಲ್ಲಿದ್ದರೂ ಆ ಕಡೆಗೆ ಹೋಗಿ ಅಲ್ಲಿನ ಜನರ ಕಷ್ಟ ಸ್ಥಿತಿಯನ್ನು ನೋಡಿಕೊಂಡು ಬಂದು ಇಲ್ಲಿ ಹೇಳುತ್ತಿದ್ದಾರೆ, ಎಲ್ಲರಿಗಿಂತ ಅವರಿಗೆ ಇದರ ಬಗ್ಗೆ ಹೆಚ್ಚು ಅನುಕಂಪವಿದೆ. ಸಂತೋಷ. ಅವರು ನಮಗೆ ಹೃದಯವೇ ಇಲ್ಲ ಎಂದು ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ನಮ್ಮ ಉದ್ದೇಶ ಸಾಧನೆಯಾಗಬೇಕಾದರೆ ಇಲ್ಲಿ ನಡೆಯುವ ಕೆಲಸ ಕಾರ್ಯಗಳ ಏನಾದರೂ ತೊಂದರೆ ಇರತಕ್ಕದ್ದು ತಿಳಿದು ಬಂದರೆ ಅದನ್ನು ನಿವಾರಣೆ ಮಾಡಲು ಯಾವ ರೀತಿ ಮಾಡಬೇಕು ಅದನ್ನು ಯೋಚಿಸಬೇಕು. ಇದಕ್ಕಾಗಿ ಇಂದು ಇಲ್ಲಿರುವ ಅಸೆಂಬ್ಲಿ

ಯನ್ನು ನಿಲ್ಲಿಸಿ ಎಂದು ಹೇಳುವುದಕ್ಕಿಂತ ಇದಕ್ಕೆ ಬೇರೆ ಯಾವುದಾದರೂ ಮಾರ್ಗಗಳಿದ್ದರೆ ಅದನ್ನು ಹುಡುಕಿ ಅಲ್ಲಿನ ಜನರ ತೊಂದರೆಗಳನ್ನು ನಿವಾರಣೆ ಮಾಡಬಹುದು. ಇನ್ನೊಂದು ಅಭಿಪ್ರಾಯ ಕಂಡುಬಂದಿರುವುದು ಸರಕಾರ ಎಲ್ಲೂ ಅವರ ಕೆಲಸಕಾರ್ಯಗಳನ್ನು ಮಾಡಿಲ್ಲವೆಂದು ಹೇಳುವುದಿಲ್ಲ. ಬೇಕಾದಷ್ಟು ದುಡ್ಡು ಖರ್ಚು ಮಾಡಿದ್ದರೂ ಹಾಗೆ ಕೊಟ್ಟಿರುವ ದುಡ್ಡು ಜನರ ಕೈಗೆ ಮುಟ್ಟಿಲ್ಲ ಎಂದು. ಇದನ್ನು ಕೊಡುವುದರಲ್ಲಿ ಅಡಚಣೆಗಳಾಗಿರಬಹುದು. ಮತ್ತು ಮಧ್ಯದಲ್ಲಿರುವ ದಳ್ಳಾಳಿಗಳೇ ದುಡ್ಡು ತಿಂದು ಹೋಗುತ್ತಿದ್ದಾರೆಂದು ಹೇಳಿದರು. ಶ್ರೀಮಾನ್ ವಿ. ಎನ್. ಪಾಟೀಲರವರು ಇತ್ತೀಚೆಗೆ ಹೋಗಿದ್ದರೋ ಏನೋ ಗೊತ್ತಿಲ್ಲ. ಹಿಂದೆ ಹೋಗಿದ್ದಾಗ ಅಲ್ಲಿನ ಕಷ್ಟದ ಬಗ್ಗೆ ಇಲ್ಲಿ ಹೇಳಿದ್ದರು. ಮತ್ತು ಕೆಲವು ವಿಚಾರಗಳನ್ನು ಕುರಿತು ನಮ್ಮೊಡನೆ ವಿಚಾರ ಮಾಡಿದ್ದಾರೆ. ಅವರಂತೆಯೇ ಇತರ ಕೆಲವು ಸದಸ್ಯರೂ ಅಲ್ಲಿಗೆ ಹೋಗಿ ಮತ್ತೆ ಇಲ್ಲಿಗೆ ಬಂದಿದ್ದಾರೆ, ಹಾಗೇ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಅವರ ಕೆಲವು ಸ್ನೇಹಿತರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ನಾನು ಮೊನ್ನೆ ತಾನೇ ಅಲ್ಲಿಂದ ಬಂದಿರತಕ್ಕ ಅಧಿಕಾರಿಗಳ ಒಂದು ಸಭೆಯನ್ನು ಕರೆದು ಅವರಿಂದ ಇಲ್ಲಿನ ಎಲ್ಲ ವಿವರಗಳನ್ನೂ ತಿಳಿದುಕೊಂಡಿದ್ದೇನೆ. ಪ್ರತಿ ನಿತ್ಯವೂ ಇಲ್ಲಿ ಸುಮಾರು ಐದು ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ, ಇದು ಬಿಜಾಪುರ, ರಾಯಚೂರು, ಗುಲ್ಬರ್ಗಾ, ಬಿದರು, ಬೆಳಗಾಂ ಈ ಭಾಗಗಳಲ್ಲಿ ಜನಕ್ಕೆ ಕೆಲಸಗಳನ್ನು ಕೊಡಲಾಗುತ್ತಿದೆ ಮತ್ತು ಇದಕ್ಕಿಂತ ಹೆಚ್ಚು ಜನ ಬಂದರು ಅವರಿಗೆ ಕೆಲಸಗಳನ್ನು ಕೊಡಲು ಅಧಿಕಾರಿಗಳಿಗೆ ಸೂಚನೆಗಳನ್ನು ಕೊಡಲಾಗಿದೆ, ಹೆಚ್ಚು ಜನ ಬರುವ ರೀತಿಯಲ್ಲಿ ಅಧಿಕಾರಿಗಳು ಪ್ರಯತ್ನ ಮಾಡಬೇಕೆಂದು ಹೇಳಿದ್ದೇವೆ. ಆದರೆ ಅವರಿಂದ ನಮಗೆ ತಿಳಿದು ಬಂದಿರುವದು ಯಾವ ಊರಲ್ಲಿ ಕೆಲಸಗಳಿವೆಯೋ ಅಲ್ಲೇ ಕೆಲಸ ಮಾಡಲು ಹೆಚ್ಚು ಜನ ಬರುತ್ತಾರೆ. ಕೆಲವರಿಗೆ ಸಾಯಿಲ್ ಕನ್‌ಸರ್‌ವೇಷನ್ ಕೆಲಸಗಳು ಅವರ ಹತ್ತಿರವೇ ಸಿಗುತ್ತಿರುವುದರಿಂದ ಬೇರೆ ಕಡೆ ಕೆಲಸಕ್ಕೆ ಬರಲು ಜನ ಒಪ್ಪುವುದಿಲ್ಲ. ಕಾಳಿ ನದಿ ಯೋಜನೆ, ಘಟಪ್ರಭಾ, ಮಲಪ್ರಭಾ, ಇಲ್ಲಿಗೆ ಕೆಲಸ ಮಾಡಲು ಜನ ಹೆಚ್ಚಾಗಿ ಬರುವುದಿಲ್ಲ. ಅಧಿಕಾರಿಗಳು ಇದರ ಎಲ್ಲ ಮಾಹಿತಿಗಳನ್ನೂ ನಮಗೆ ಒದಗಿಸಿಕೊಟ್ಟಿದ್ದಾರೆ ಮತ್ತು ಎಷ್ಟು ಹಣ ಬೇಕಾದರೂ ಖರ್ಚು ಮಾಡಲು ಅವಕಾಶ ವಿರುವುದರಿಂದ ಇಲ್ಲಿ ಜನಗಳಿಗೆ ಹೆಚ್ಚು ಕೆಲಸಗಳನ್ನು ಕೊಡಬೇಕೆಂದೂ ಇದ್ದರೂ ಜನ ಹೆಚ್ಚಾಗಿ ಕೆಲಸಕ್ಕೆ ಬರುತ್ತಿಲ್ಲ. ನಾವೂ ಕೂಡ ಜನರಿಂದ ಕಾಗದ ಬರಲಿ ಇಲ್ಲವೇ ಜನರ ಪ್ರತಿನಿಧಿಗಳಿಂದ ಕಾಗದ ಬರಲಿ ಅಂತಹ ಕಡೆಗೆಲ್ಲಾ ಕೆಲಸಗಳನ್ನು ಒದಗಿಸಲು ಯತ್ನ ಮಾಡುತ್ತಿದ್ದೇವೆ, ಇದುವರೆಗೆ ಯಾರೂ ಕೆಲಸ ಕೊಟ್ಟಿಲ್ಲ ಎಂದು ಹೇಳಲಿಲ್ಲ. ನಾವೂ ಕೂಡ ಕಾಗದದ ಮೂಲಕ ಇಲ್ಲವೇ ತಂತೀ ಮೂಲಕ ಮನವಿಗಳು ಕೆಲಸಗಳಿಗಾಗಿ ಬಂದರೆ ಅವರಿಗೆಲ್ಲ ಕೆಲಸಗಳನ್ನು ಕೊಡಬೇಕೆಂದು ತಿಳಿಸಿದ್ದೇವೆ. ಎಲ್ಲೂ ಜನಕ್ಕೆ ಕೆಲಸಗಳನ್ನು ಕೊಟ್ಟಿಲ್ಲ ಎಂದೂ ಯಾರೂ ಹೇಳಲಿಲ್ಲ. ಇದು ಒಂದು ವಿಚಾರ. ಇನ್ನು ಅಸೆಂಬ್ಲಿ ಬಿಟ್ಟು ನಾವೂ ಹಾಗೂ ನೀವೂ ಎಲ್ಲರೂ ಅಲ್ಲಿಗೆ ಹೋಗಿ ಮಾಡುವುದಾದರೂ ಏನು ? ಇಲ ಜನಕ್ಕೆ ಕೆಲಸ ಕೊಡಬೇಕೆಂದು ಕೊಡಲಾಗಿದೆ. ಊಟ ಇಲ್ಲ ಎಂದವರಿಗೆ ಊಟ ಕೊಡೋಣ, ಎಲ್ಲರಿಗೂ ಪುಕ್ಕಟೆ ಊಟ ಕೊಡಲು ಸಾಧ್ಯವೇ. ಏನೋ ಕೈಲಾಗದವರಿಗೆ, ವೃದ್ಧರಿಗೆ ಹಾಗೂ ಡಿಸ್ಟಿಟ್ಯೂಟುಗಳಿಗೆ ಅನ್ನಾಹಾರಗಳನ್ನು ಒದಗಿಸಬೇಕೆಂದು ಹೇಳಲಾಗಿದೆ, ಕೂಲಿ ಮಾಡುವ ಶಕ್ತಿ ಇರುವವರಿಗೆ able bodied persons ಕೆಲಸ ಮಾಡಲು ಕೆಲಸ ಕೊಡಲಾಗಿದೆ, ಕೂಲಿ ಕೊಡುತ್ತಿದ್ದಾರೆ, ಕೆಲಸ ಮಾಡದೇ ಎಲ್ಲರಿಗೂ ಸಹಾಯ ಮಾಡಬೇಕೆಂದರೆ ಇದು ಒಂದು ರೀತಿಯಾಗಿ ಮಿಸ್‌ಪ್ಲೇಸ್ಡ್ ಸಿಂಪತಿ ಎಂದಾಗುತ್ತದೆ ಇದರಂತೆ ಸರಕಾರ ನಡೆಸುವುದಕ್ಕಾಗುವುದಿಲ್ಲ. ಏನೋ ಕಷ್ಟವಾಗಿದೆ ಎಂದು ಕೆಲಸಗಳನ್ನು ಕೊಟ್ಟು ದುಡ್ಡು ಕೊಡೋಣ ಎಂದರೆ ಕೆಲಸ ಮಾಡಲು ಆಗುವುದಿಲ್ಲ ಎಂದರೆ ಇದಕ್ಕೆ ನಾವೇನು ಮಾಡುವುದು. ಮನುಷ್ಯ ಯಾವಾಗಲೂ ಸ್ವಲ್ಪಮಟ್ಟಿಗೆ ಎಲ್ಲದರಲ್ಲೂ ಪರಿಶ್ರಮ ಪಡಬೇಕು, ಶರೀರಶ್ರಮ ಮಾಡಿ ಜೀವನ ನಡೆಸುವುದನ್ನು ಇನ್ನೊಬ್ಬರ ಆಶ್ರಯವಿಲ್ಲದೆ ಕೆಲಸ ಮಾಡುವುದನ್ನೂ ತಿಳಿದಿರಬೇಕು. ಯಾವಾಗಲೂ ಕೆಲಸ ಮಾಡಿ ಅಭ್ಯಾಸವಿಲ್ಲದವರಿಗೆ ಸ್ವಲ್ಪ ಕಷ್ಟಗಳಾಗುತ್ತವೆ. ನಿಜ. ಕೆಲಸ ಮಾಡದೆ ಸಾವಿರಾರು ಜನರಿಗೂ ಊಟ ಕೊಡಬೇಕೆಂದರೆ ಎಲ್ಲರಿಗೂ ಕೊಡಲಾಗುತ್ತದೆಯೇ ? ತಾವೇ ಹೇಳಿ.

2–30 P.M.

ಕೆಲಸ ಮಾಡಲೇ ಬೇಕಾಗುತ್ತದೆ ಕೆಲಸ ಮಾಡಿದಾಗ ಕೈ ಕಿತ್ತು ಹೋಗಬಹುದು. ಬೆಂಗಳೂರಿನಲ್ಲಿ ಸಹ ಅನೇಕ ಕಡೆ ಟಾರ್ ಹಾಕುತ್ತಿದ್ದಾರೆ. ಕಲ್ಲೊಡೆಯುತ್ತಿದ್ದಾರೆ. ಅಭ್ಯಾಸ ಇಲ್ಲದವರಿಗೆ ಆ ರೀತಿ ಆಗುವುದು ಸಹಜ. ದೊಡ್ಡ ದೊಡ್ಡ ಕರೆಗಳಿರುವ ಕಡೆ ಕಲ್ಲನ್ನು ಸೀಳುತ್ತಾರೆ, ಆಗ ಸುತ್ತಿಗೆಯಿಂದ ಕೆಲಸ ಮಾಡಬೇಕಾಗುತ್ತದೆ. ಅಂತಹವರ ಕೈಯೂ ಸಹ ಕೆಲವು ಸಲ ಕಿತ್ತು

(ಶ್ರೀ ಡಿ. ದೇವರಾಜ ಅರಸ್)

ಹೋಗುವುದು ಉಂಟು. ನಾನು ಹಿಂದೆ ಹಾರೆ ಗುದ್ದಲಿ ಹಿಡಿದು ಕೆಲಸ ಮಾಡಿದ್ದೇನೆ. ಈಗ ಅದರ ಅನುಭವ ಇಲ್ಲದಿರುವುದರಿಂದ ಆ ಕೆಲಸ ಮಾಡುವುದಕ್ಕೆ ಹೋದರೆ ನನ್ನ ಕೈಯೂ ಸಹ ಕಿತ್ತು ಹೋಗಬಹುದು. ರಷ್ಯಾ ದೇಶದಲ್ಲಿ ಯಾರ ಕೈಗಳು ಜಿಡ್ಡಾಗಿರುತ್ತವೆಯೋ ಅಂತಹವರಿಗೆ ಮಾತ್ರ ಈ ಕೆಲಸವನ್ನು ಒದಗಿಸುತ್ತಾರೆ. ಅದೇ ರೀತಿ ಇಲ್ಲ ಮಾಡುವುದಕ್ಕೆ ಹೋದರೆ ಎಲ್ಲರಿಗೂ ಕೆಲಸ ಸಿಗುವುದಿಲ್ಲ. ತಾವುಗಳು ಅನೇಕರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೀರಿ. ಕೆಲವು ಕಡೆ ನ್ಯೂನತೆಗಳು ಇರಬಹುದು ಅನಾನುಕೂಲತೆ ಇರುವ ಕಡೆಗಳಲ್ಲಿ ಅನುಕೂಲತೆಗಳನ್ನು ಮಾಡಿಕೊಡೋಣ ; ಬೇಕಾದರೆ ಮಾನ್ಯ ಸಭೆ ಅನುಮತಿ ಕೊಡುವುದಾದರೆ 2-3 ಮಂತ್ರಿಗಳನ್ನು ಕಳಿಸಿಕೊಡೋಣ ; ಅವರ ಜೊತೆಯಲ್ಲಿ ವಿರೋಧಪಕ್ಷದ ಕಡೆಯಿಂದ ಕೆಲವು ಸದಸ್ಯರು ಹೋಗಲಿ. ಆದರೆ ಅಸೆಂಬ್ಲಿಯನ್ನೇ ನಿಲ್ಲಿಸಿ ಎಲ್ಲರೂ ಹೋಗಬೇಕೆಂದರೆ ತಮಗೆಲ್ಲಾ ಅಲ್ಲಿ ಷೆಲ್ಟರನ್ನು ಒದಗಿಸುವ ಕೆಲಸ ನಮ್ಮ ಮೇಲೆ ಬೀಳುತ್ತದೆ. ಅಲ್ಲಿಯ ಅಧಿಕಾರಿಗಳಿಗೆ ತೊಂದರೆ ಬರುತ್ತದೆ. ಆದ್ದರಿಂದ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಒಂದೊಂದು ಜಿಲ್ಲೆಗೆ ಒಬ್ಬೊಬ್ಬ ಮಂತ್ರಿಗಳನ್ನು ಕಳಿಸಿಕೊಡಬಹುದಾಗಿತ್ತು ; ಆದರೆ ಈಗ ಅಸೆಂಬ್ಲಿ ನಡೆಯುತ್ತಿರುವುದರಿಂದ, ಮಂತ್ರಿಗಳು ಏತಕ್ಕೆ ಬಂದಿಲ್ಲ ಎಂದು ತಾವು ಕೇಳಬಹುದೆಂದು ನಾನು ಕಳಿಸಿಕೊಟ್ಟಿಲ್ಲ. ಈಗ ಮಾನ್ಯ ಸದಸ್ಯರು ಎಲ್ಲೆಲ್ಲಿ ನ್ಯೂನತೆಗಳು ಇವೆ ಎಂದು ಗುರುತು ಹಾಕಿಕೊಂಡು ಬಂದಿದ್ದಾರೋ ಅವುಗಳನ್ನು ಸರಿಪಡಿಸಲು ತಾವು ಅನುಮತಿ ಕೊಡುವುದಾದರೆ 3 ಜನ ಮಂತ್ರಿಗಳನ್ನು ಕಳಿಸಿಕೊಡುತ್ತೇನೆ. ವಿರೋಧಪಕ್ಷದವರು ಸಹ ಹೋಗಲಿ ಆದರೆ ಅಸೆಂಬ್ಲಿಯನ್ನೇ ನಿಲ್ಲಿಸಿ ಆ ಕೆಲಸ ಮಾಡಬೇಕಾದ ಅಗತ್ಯವಿಲ್ಲ. ಅಸೆಂಬ್ಲಿಯನ್ನು ನಡೆಸಿ, ಆಗ ಕೆಲಸವನ್ನು ಸಹ ನಿರ್ವಹಿಸುವುದಕ್ಕೆ ಎಲ್ಲ ರೀತಿಯ ಸಾಧನಗಳು ಇರುವುದರಿಂದ ಅಸೆಂಬ್ಲಿಯನ್ನು ಮುಂದೂಡುವ ಅಗತ್ಯವಿಲ್ಲ ಎಂದು ನನ್ನ ನಮ್ರ ವಿನಂತಿ.

ಇನ್ನು ಆಹಾರದ ಬಗ್ಗೆ ಹಿಂದೆಯೂ ಕೂಡ ಹೇಳಿದ್ದೇನೆ. ಈಗಲೂ ಹೇಳುವುದೇನೆಂದರೆ ನಮ್ಮ ಸರ್ಕಾರದ ಅಭಿಪ್ರಾಯದ ಪ್ರಕಾರ ಪೂರ್ಣ ಪ್ರಮಾಣ ಆಹಾರವನ್ನು ಹಂಚಿಕೆ ಮಾಡಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಹಣದ ಕೊರತೆ ಇಲ್ಲ. ಆದರೆ ಆಹಾರದ ಕೊರತೆ ಇದೆ. ಆಹಾರದ ಹಂಚಿಕೆಯಲ್ಲಿ ನಿಧಾನವಾಗಿದ್ದರೆ ಜಾಗ್ರತೆ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇವೆ. ಮತ್ತು ಸಂಬಳವನ್ನು ಹಂಚಿಕೆ ಮಾಡುವ ಬಗ್ಗೆ ನಿಧಾನವಾಗಿರುವುದಕ್ಕೆ ಕಾರಣ ಒಬ್ಬರೇ ಅಧಿಕಾರಿಗಳು ಎರಡು ಮೂರು ಕಡೆ ನೋಡಿಕೊಳ್ಳಬೇಕಾಗಿರುವುದರಿಂದ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಓಡಾಡಬೇಕಾಗಿರುವುದರಿಂದ ನಿಧಾನವಾಗಿರಬಹುದು. ಅವರುಗಳು ಜಾಗ್ರತೆ ಓಡಾಡುವಂತಾಗಲು ನೂರು ಮೋಟಾರ ಸೈಕಲ್‌ಗಳನ್ನು ಒದಗಿಸಬೇಕೆಂದಿದ್ದೇವೆ. ಇನ್ನೊಂದು ವಾರದಲ್ಲಿ ಅವರಿಗೆ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

ಇನ್ನು ನೀರಿನ ವಿಚಾರ ಹೇಳುವುದಾದರೆ, ತೊಂದರೆ ಇದೆ, ಇಲ್ಲ ಎಂದು ಹೇಳುತ್ತಿಲ್ಲ ; ಈಗ ಗಾಡಿಗಳಲ್ಲಿ ತರಿಸಿಕೊಡುವ ವ್ಯವಸ್ಥೆ ಮಾಡಿದ್ದೇವೆ. ನಮ್ಮಲ್ಲಿ ಸಾಕಷ್ಟು ಸಿಬ್ಬಂದಿ ಇದೆ ; ಆದರೆ ಸಾಧನಗಳು ಇಲ್ಲ. ಟ್ರಾಕ್ಟರ್ಸ್ ಸಾಕಷ್ಟು ಇಲ್ಲ. ಗುಲ್ಬರ್ಗಕ್ಕೆ 30–35 ಕಳುಹಿಸಿಕೊಡಲಾಗಿದೆ. ಅಲ್ಲಿಗೆ ನೂರು ಟ್ರಾಕ್ಟರ್ಸ್ ಬೇಕಾಗುತ್ತದೆ. ನಮ್ಮ ಕೈಗೆ ಬಂದಂತೆ ಕಳುಹಿಸಿಕೊಡುತ್ತಿದ್ದೇವೆ. ಟ್ಯಾಂಕರ್ಸ್ ರೆಡಿಯಾಗಿದೆ. ಆದರೆ ಟ್ರಾಕ್ಟರ್ಸ್ ಇಲ್ಲ. 600 ಟ್ರಾಕ್ಟರ್ಸ್ ಮತ್ತು ಟ್ರೈಲರ್ಸ್‌ಗಳನ್ನು ಪಡೆದುಕೊಂಡು ಅಲ್ಲಿಗೆ ಕಳುಹಿಸಿಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅವು ಬಂದಂತೆ ಕಳುಹಿಸಿಕೊಡುತ್ತೇವೆ. ಅವುಗಳು ಬರುವವರೆಗೆ ಲಾರಿಗಳಿಗೆ ರಿಕ್ವಿಜಿಷನ್ ಮಾಡಿ ಪಡೆದುಕೊಳ್ಳಿ ಎಂದು ಹೇಳಿದ್ದೇವೆ.

ಇನ್ನು ರಿಗ್ಸ್ ವಿಚಾರದಲ್ಲಿ ಹೇಳುವುದಾದರೆ, ನಾವು ಎಷ್ಟೇ ಪ್ರಯತ್ನ ಮಾಡಿದರೂ ಅವು ಬರುವುದು ನಿಧಾನವಾಗಿದೆ. ಬಹಳ ಹೆಚ್ಚು ಪ್ರಯತ್ನ ಮಾಡಿ ಇನ್ನು ಹತ್ತು ರಿಗ್ ಯಂತ್ರಗಳನ್ನು ಜಾಗ್ರತೆ ತರಿಸಬೇಕೆಂದರೆ 'ಏರ್‌ಲಿಫ್ಟ್' ಮಾಡಿದರೆ ಸಾಧ್ಯ. ಅದಕ್ಕಾಗಿ ಫಾರಿನ್ ಎಕ್ಸ್‌ಚೇಂಜ್ ಖರ್ಚಾದರೂ ಆಗಲಿ ಎಂದು ತರಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಈಗ ನೀರಿನ ತೊಂದರೆ ಇರುವುದು ನಿಜ. ಆದರೆ ಕುಡಿಯುವ ನೀರು ಇಲ್ಲದ ಹಾಗೆ ಮಾಡಿಲ್ಲ. ದೂರದಿಂದಲಾದರೂ ತರಿಸಿಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಆದರೆ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕದಿರಬಹುದು. ಈ ಬಗ್ಗೆ ಏನಾದರೂ ಫೈಲ್ಯೂರ್ ಆಗಿದ್ದರೆ, ಅದನ್ನು ಮಾನ್ಯ ಸದಸ್ಯರು ನೋಡಿದ್ದರೆ ಅದನ್ನು ಅಧಿಕಾರಿಗಳಿಗೆ ತಿಳಿಸಿರಬಹುದೆಂದು ಕಾಣುತ್ತದೆ. ಇಲ್ಲದಿದ್ದರೆ ಈಗಲಾದರೂ ತಿಳಿಸಿದರೆ ಅವನ್ನು ತಕ್ಷಣ ಸರಿಪಡಿಸುವುದಕ್ಕೆ ಏರ್ಪಾಡು ಮಾಡೋಣ. ಅದನ್ನೆಲ್ಲಾ ಸರಿಪಡಿಸಲು ಅಸೆಂಬ್ಲಿಯನ್ನು ಬಿಟ್ಟು ಹೋದರೆ ಆಗುತ್ತದೆ ಎಂದು ನಿಮ್ಮೆಲ್ಲರ ಮನಸ್ಸಿಗೆ ಕಂಡುಬಂದರೆ ಅಸೆಂಬ್ಲಿಯನ್ನು ನಿಲ್ಲಿ

ಸೋಣ. ಆದರೆ ಅಸೆಂಬ್ಲಿಯನ್ನು ನಿಲ್ಲಿಸದೆ ಅದನ್ನು ಮಾಡುವುದಕ್ಕೆ ಸಾಧ್ಯವಿರುವಾಗ ಅಸೆಂಬ್ಲಿಯನ್ನು ಏತಕ್ಕೆ ನಡೆಸಬಾರದು ? ಈಗ ನಮಗೆ ಸಾಕಷ್ಟು ಪ್ರಮಾಣದಲ್ಲಿ ಆಹಾರ ಬರುತ್ತಿಲ್ಲ. ಇಂದು ಆಹಾರದ ಕೊರತೆ ಇಡೀ ದೇಶದಲ್ಲಿಯೇ ಇದೆ. ನಮ್ಮಲ್ಲಿಯೂ ಇದೆ. ಮಳೆಯ ಅಭಾವವಿರುವ ಕಡೆಯಲ್ಲೆಲ್ಲಾ ಇದು ಇದೆ. ಹೊರಗಡೆಯಿಂದ ಬರುವ ಆಹಾರವನ್ನು ನಾವು ಹಂಚಿಕೆ ಮಾಡಬೇಕಾಗಿದೆ. ಈಗ ನಮಗೆ ಹೊರಗಡೆಯಿಂದ ಬರುತ್ತಿರುವ 15-20 ಸಾವಿರ ಟನ್‌ಗಳ ಪೈಕಿ ಮುಕ್ಕಾಲು ಭಾಗವನ್ನು ಈ 3-4 ಜಿಲ್ಲೆಗಳಿಗೇ ಕಳುಹಿಸಿಕೊಡುತ್ತಿದ್ದೇವೆ. ಬಿದರ್ ಜಿಲ್ಲೆಗೆ 4 ಸಾವಿರ ಟನ್ ಬೇಕೆಂದು ಹೇಳುತ್ತಾರೆ. ಆದರೆ ನಾವು ಎರಡು ಸಾವಿರ ಚಿಲ್ಲರೆ ಟನ್‌ಗಳನ್ನು ಕಳುಸಿಕೊಡುತ್ತಿದ್ದೇವೆ. ಒಬ್ಬರಿಗೆ 8 ಕೆ.ಜಿ. ಯಂತೆ ಹಂಚಬೇಕಾದರೆ ಬಿದರ್ ಜಿಲ್ಲೆಗೆ 4 ಸಾವಿರ ಟನ್ ಬೇಕಾಗುತ್ತದೆ. ಆದರೆ ನಾವು ಎಲ್ಲಿಂದ ತರೋಣ ? ನಾವು ಕೇಂದ್ರದವನ್ನು ಕೇಳಬೇಕು ; ಅವರು ಸಹ ಈಗ ಅಮೆರಿಕಾ ದೇಶದಿಂದ ತರಿಸುತ್ತಿದ್ದಾರೆ. ಅಮೆರಿಕಾ ದೇಶದಿಂದ ಬಂದ ಮೈಲೋವನ್ನು ನಮಗೆ ಕೇಂದ್ರದವರು ಏನು ಕೊಟ್ಟಿದ್ದಾರೆ ಅದರಲ್ಲಿ ದತ್ತೂರಿ ಬೀಜ ಬೆರಕೆಯಾಗಿವೆ ಎಂದು ತಿಳಿದುಬಂದಾಗ ಅದನ್ನು ಕ್ಲೀನ್ ಮಾಡಿ ಕೊಡಬೇಕೆಂದು ಬೆಂಗಳೂರಿನಲ್ಲಿಯೇ ಇಟ್ಟುಕೊಂಡು ಕ್ಲೀನ್ ಮಾಡಿಸುತ್ತಿದ್ದೇವೆ. ಈ ಬಗ್ಗೆ ಎಷ್ಟೇ ನಷ್ಟವಾದರೂ ಅದನ್ನು ಸರ್ಕಾರವೇ ಹೊರಬೇಕೆಂದು ತೀರ್ಮಾನ ಮಾಡಿದ್ದೇವೆ. ಈ 5 ಸಾವಿರ ಟನ್ ಮೈಲೋವನ್ನು ನಾವು ಜನರಿಗೆ ಹಂಚಿಕೆ ಮಾಡಿಲ್ಲ ಎಂಬ ವಿಷಯವನ್ನು ಮಾನ್ಯ ಪಾಟೀಲರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇಲ್ಲದೇ ಇರುವುದನ್ನು ತರುವುದಕ್ಕೆ ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಇರುವುದನ್ನು ನೋಡಿಕೊಂಡು ಹಂಚಬೇಕಾಗಿದೆ. ನಾನು ಉತ್ತರಕನ್ನಡ ಜಿಲ್ಲೆಯ ಕಡೆ ಹೋಗಿದ್ದಾಗ ಅಲ್ಲಿಯ ಜನರು ನಮಗೆ ಒಂದು ಕೆ.ಜಿ. ಧಾನ್ಯ ಕೊಡುತ್ತಿದ್ದಾರೆ, ಸಾಲುವುದಿಲ್ಲ ಎಂದು ಹೇಳಿದರು. ಈಗ ನಮಗೆ ಬರುವ ಧಾನ್ಯದಲ್ಲಿ ಮುಕ್ಕಾಲು ಭಾಗವನ್ನು ಈ 3-4 ಜಿಲ್ಲೆಗಳಿಗೆ ಹಂಚಿ ಉಳಿದ ಕಾಲು ಭಾಗವನ್ನು ಬೇರೆಯವರಿಗೆ ಹಂಚಿಕೆ ಮಾಡುತ್ತಿದ್ದೇವೆ. ನಾನು ಮಂಡ್ಯ ಜಿಲ್ಲೆಯ ನಾಗಮಂಗಲ, ಮತ್ತು ಪಾಂಡವಪುರಕ್ಕೆ ಹೋಗಿದ್ದಾಗ ಅಲ್ಲಿಯ ಜನರು ಸಹ ತಮಗೆ ಒಂದೇ ಕೆ. ಜಿ. ಧಾನ್ಯ ಕೊಡುತ್ತಿದ್ದಾರೆಂದು ದೂರಿದರು.

ಬೇರೆ ಕಡೆ ಅದಕ್ಕಿಂತ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಅವರಿಗೆ ಸಮಜಾಯಿಸಿ ಹೇಳಿ ಬಂದಿದ್ದೇನೆ. ಆಹಾರವನ್ನು ಇಟ್ಟುಕೊಂಡು ನಾವು ಇಲ್ಲ ಎಂದು ಹೇಳಿದ್ದರೆ ಅದು ನಮ್ಮ ದೋಷ. ಬೆಂಗಳೂರು ಪಟ್ಟಣವನ್ನು ಬಿಟ್ಟು ಬೇರೆ ಕಡೆ ಇನ್‌ಫಾರ್ಮಲ್ ರೇಷನಿಂಗ್ ಪದ್ಧತಿ ಇಲ್ಲ. ಆದ್ದರಿಂದ ಅಲ್ಲಿ ರೇಷನ್ ಕೊಡಬೇಕೆಂಬ ಕಾನೂನು ಇಲ್ಲದಿದ್ದರೂ ಕೂಡ ಅಲ್ಲಿ ನಾವು ಆಹಾರವನ್ನು ಒದಗಿಸುತ್ತಿದ್ದೇವೆ. ನಾವು ಕೇಂದ್ರದಿಂದ ಆಹಾರವನ್ನು ತರಿಸುತ್ತಿದ್ದೇವೆ. ನಾವು ಮೊನ್ನೆ ಕೇಂದ್ರಸರ್ಕಾರಕ್ಕೆ 5 ಸಾವಿರ ಟನ್ ಹೆಚ್ಚು ಮೈಲೋ ಕೊಡಬೇಕೆಂದು ಕೇಳಿದ್ದೆವು. ಆ ಪ್ರಕಾರ ಕೇಂದ್ರ ಸರ್ಕಾರದವರು ನಮಗೆ ಕೊಟ್ಟಿದ್ದಾರೆ. ನಾವು ಆ ತರಹ ಹೆಚ್ಚಿಗೆ ಆಹಾರವನ್ನು ಕೊಟ್ಟುಕೊಂಡು ಹೋದರೆ ಅದನ್ನು ಹಂಚುವುದಕ್ಕೆ ಕಷ್ಟವಾಗುತ್ತದೆ. 10 ಪರ್ಸೆಂಟ್ ಅಥವಾ 8 ಪರ್ಸೆಂಟ್ ಕೆಟ್ಟಿದ್ದು, ದತ್ತೂರಿ ಬೀಜ ಮಿಕ್ಸ್ ಆಗಿದ್ದು ಏನಿತ್ತು ಅದನ್ನು ಜನಗಳಿಗೆ ಕೊಡುವುದು ಬೇಡ ಎಂದು ಅದನ್ನು ಹಾಗೆಯೇ ಇಟ್ಟಿದ್ದೇವೆ. ಅದೆಲ್ಲವನ್ನೂ ಕ್ಲೀನ್ ಮಾಡಿ ಕಳುಹಿಸುತ್ತೇವೆ. ಇನ್ನು ಒಂದು ವಾರದಲ್ಲಿ ಅದನ್ನೆಲ್ಲಾ ಕ್ಲೀನ್ ಮಾಡಿ ಕಳುಹಿಸುವುದಕ್ಕೆ ಆಗುತ್ತದೆ. ಈ ತಿಂಗಳಿನಲ್ಲಿ ಅದನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದ್ದರಿಂದ ನಾನು ಶ್ರೀಮಾನ್ ಕಾಗೋಡು ತಿಮ್ಮಪ್ಪನವರನ್ನು, ಶ್ರೀಮಾನ್ ವಾಟಾಳ್‌ನಾಗರಾಜ್ ಅವರನ್ನೂ ಹಾಗು ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರನ್ನು ಕೇಳುವುದು ಏನೆಂದರೆ ತಾವುಗಳು ಆ ಪ್ರದೇಶಕ್ಕೆ ಹೋಗಿ ಎಲ್ಲೆಲ್ಲಿ ಏನಾಗಿದೆ ಎಂಬುದನ್ನು ನೋಡಿಕೊಂಡು ಬಂದಿದ್ದೀರಿ, ಆದ್ದರಿಂದ ನಾವು ನೀವು ಎಲ್ಲಾ ಒಂದು ಕಡೆ ಕುಳಿತುಕೊಂಡು ಎಲ್ಲಾ ವಿಷಯವನ್ನು ಚರ್ಚೆ ಮಾಡೋಣ. ಈ ಬಗ್ಗೆ ನಾನು ಒಂದು ಮೀಟಿಂಗ್ ಕರೆಯೋಣ ಎಂದು ಇದ್ದೇನೆ. ಮತ್ತು ಇದಕ್ಕೆ ಒಂದು ಕಮಿಟಿಯನ್ನು ಕೂಡ ಮಾಡಬೇಕೆಂದಿದ್ದೇವೆ. ಇಂತಿಂಥಾ ಕಡೆ ಇಂತಿಂಥಾ ಲೋಪದೋಷಗಳು ಇವೆಯೆಂಬುದನ್ನು ತಾವು ಹೇಳಿದರೆ ಇಷ್ಟು ಟೈಮ್‌ನಲ್ಲಿ ಅದನ್ನೆಲ್ಲಾ ಸರಿ ಮಾಡಿ ಎಂದರೆ ಇಷ್ಟು ಟೈಮಿನಲ್ಲಿ ಅದನ್ನು ಸರಿಮಾಡಿ ತಮಗೆ ಒಂದು ವರದಿಯನ್ನು ಕೊಡುತ್ತೇನೆ. ಅಲ್ಲಿ ಏನು ತೊಂದರೆ ಇದೆಯೆಂಬುದನ್ನು ತಿಳಿಸುತ್ತೇನೆ. ಅದಕ್ಕೆ ತಮ್ಮ ಸಹಕಾರವನ್ನು ಕೊಡುವುದಕ್ಕೆ ತಾವು ಮನಸ್ಸುಳ್ಳವರಾಗಿದ್ದೀರಿ, ತಮ್ಮ ಸಹಕಾರವನ್ನು ನಾವು ಬಹಳ ಸಂತೋಷದಿಂದ ಸ್ವೀಕಾರ ಮಾಡುತ್ತೇನೆ. ಇದನ್ನು ನಾವು ನೀವು ಎಲ್ಲಾ ಕುಳಿತುಕೊಂಡು ಬಗೆಹರಿಸೋಣ. ಈ ಸಭೆಯನ್ನು ಮುಂದುವರೆಸುವ ಅಗತ್ಯವಿಲ್ಲ ಎಂದು ನಾನು ಇಷ್ಟು ಮಾತ್ರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯನ್ನು ಮುಂದುವರಿಸುವದರಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳತಕ್ಕಂಥಾ ವಿವೇಚನಾ ರಹಿತವಾದ ಸಲಹೆಗಳನ್ನು ಕೊಡುವುದಕ್ಕೆ ನಾನು ಪ್ರಯತ್ನ ಮಾಡಿಲ್ಲ. ನಾನು ಇದುವರೆಗೂ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ ಭಾಷಣವನ್ನು ಕೇಳಿದ್ದೇನೆ. ಅವರು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ನಿಜ, ನಾನು ಅವರು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಈಹೊತ್ತು ಈ ಸಭೆಯನ್ನು ಮುಂದುವರಿಸಬೇಕು. ಅವರು 3-4 ಜನ ಮಂತ್ರಿಗಳು ಮತ್ತು ಕೆಲವು ವಿರೋಧ ಪಕ್ಷದ ಸದಸ್ಯರನ್ನೂ ಅಭಾವ ಪೀಡಿತ ಪ್ರದೇಶಗಳಿಗೆ ಕರೆದುಕೊಂಡು ಹೋಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ಅಭ್ಯಾಸ ಮಾಡುವುದಕ್ಕೆ ಹೋದರೆ ಇಲ್ಲಿ ಸಭೆ ನಡೆಯುವುದಾದರೆ ಅಲ್ಲಿಗೆ ವಿರೋಧ ಪಕ್ಷದ ಸದಸ್ಯರಿಗೆ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶವಾಗುವುದಿಲ್ಲ. ಅಭಾವ ಪೀಡಿತ ಪ್ರದೇಶಗಳಲ್ಲಿ ಸರ್ಕಾರದವರು ಏನೂ ಮಾಡಿಲ್ಲ ಎಂದು ಹೇಳುವುದಕ್ಕೆ ನಾನು ತಯಾರು ಇಲ್ಲ ಎಂದು ನಾನು ಮೊದಲೇ ಹೇಳಿದ್ದೇನೆ. ಆದರೆ ಅಲ್ಲಿ ಮಾಡಿರತಕ್ಕ ಕೆಲಸಗಳಲ್ಲಿ ಏನೇನು ವ್ಯತ್ಯಾಸಗಳು ಆಗಿವೆ ಅದನ್ನು ನಾವು ಸ್ಥಳದಲ್ಲಿ ಪರಿಶೀಲನೆ ಮಾಡಬೇಕು. ಗುತ್ತದೆ. ನೀವು ಎಷ್ಟು ಕೆಲಸವನ್ನು ಮಾಡಿದ್ದೀರಿ, ನೀವು ಮಾಡಿರತಕ್ಕ ಕೆಲಸದಲ್ಲಿ ವ್ಯತ್ಯಾಸವೇನು ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ ಮತ್ತು ಸ್ಥಳಕ್ಕೆ ಹೋಗಿ ನೋಡಿ ಪರಿಹಾರ ಕೊಟ್ಟರೆ ಒಳ್ಳೆಯದು. ನಾನು ಅಧಿಕಾರಿಗಳ ಮೇಲೆ ಆಕ್ಷೇಪಣೆ ಮಾಡಬೇಕು ಎನ್ನುವ ದೃಷ್ಟಿಯಿಂದ ಮಾತನಾಡುತ್ತಿಲ್ಲ. ಅಲ್ಲಿ ನಡೆದಿರತಕ್ಕ ಕೆಲಸವನ್ನು ನೋಡಿದರೆ ಅಲ್ಲಿ ನಡೆದಿರತಕ್ಕ ಲೋಪದೋಷಗಳು ಏನು ಯಾವ ಕಾರಣದಿಂದ ಅಲ್ಲಿ ಲೋಪದೋಷಗಳು ಆಗಿವೆ ಎಂಬುದನ್ನು ಯೋಚನೆ ಮಾಡಬೇಕು. ಅದನ್ನು ಪರಿಶೀಲನೆ ಮಾಡತಕ್ಕ ಕಾಲದಲ್ಲಿ ನಾವು ನಮ್ಮ ಸಹಕಾರವನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ನೇರವಾಗಿ ಅದರ ವಿವರಣೆಗೆ ಹೋದಾಗ ಇದರ ಚರ್ಚೆ ಅನಾವಶ್ಯಕ. ಈಗ 7 ತಿಂಗಳಿನಿಂದ ಒಂದೇ ಸಮನೇ ಈ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ನೀವು ಉತ್ತರ ಹೇಳಿದ್ದೀರಿ. ನಾವು ಅದನ್ನು ಕೇಳಿದ್ದೇವೆ. ಈಗ ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ನಮ್ಮ ವಿರೋಧ ಪಕ್ಷದ ಕೆಲವು ಸದಸ್ಯರು ಆ ಪ್ರದೇಶಕ್ಕೆ ಹೋದರೆ ಆ ಸದಸ್ಯರು ಈ ಸಭೆಯಲ್ಲಿ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಹೇಗಿದ್ದರೂ 2 ತಿಂಗಳಿಗೆ ವೋಟ್ ಆನ್ ಅಕೌಂಟ್ ಪಾಸು ಮಾಡಿಸಿಕೊಂಡಿದ್ದೀರಿ. ಬೇಕಾದರೆ ಇನ್ನು 2 ತಿಂಗಳು ವೋಟ್ ಅಕೌಂಟ್ ಪಾಸುಮಾಡಿಸಿಕೊಳ್ಳಬಹುದು. ಅದನ್ನು ಬೇಡ ಎಂದು ಹೇಳುವುದಿಲ್ಲ. ಈ ಸಭೆಯಲ್ಲಿ ಕಾರ್ಯಕಲಾಪಗಳನ್ನು ನಿಲ್ಲಿಸುವುದರಿಂದ ಇರತಕ್ಕ ಸಮಸ್ಯೆಗಳು ಬಗೆಹರಿಯುವುದಿಲ್ಲ. ಆದರೆ ಈ ಸಭೆಯ ಕಾರ್ಯಕಲಾಪಗಳು ನಡೆಯುವುದಾದರೆ ಅದರಲ್ಲಿ ಅಲ್ಲಿಗೆ ಹೋಗತಕ್ಕ ವಿರೋಧಪಕ್ಷದ ಸದಸ್ಯರು ಭಾಗವಹಿಸುವುದಕ್ಕೆ ಆಗುವುದಿಲ್ಲ. ಅಲ್ಲಿರತಕ್ಕ ಸಮಸ್ಯೆಯ ಬಗ್ಗೆ ಪಕ್ಷದಲ್ಲಿರತಕ್ಕ ಜನತಾ ಪ್ರತಿನಿಧಿಗಳು ತಮಗೆ ತಿಳಿಸಿರಬಹುದು. ನಾನು ಅಲ್ಲಿರತಕ್ಕ ಪರಿಸ್ಥಿತಿಯನ್ನು ಹೋಗಿ ನೋಡಿದ್ದರಲ್ಲಿ ಅಲ್ಲಿ ಪರಿಸ್ಥಿತಿ ಉಲ್ಬಣವಾಗಿದೆ. ಬೇಕಾದರೆ ಅದರ ವಿವರಣೆಯನ್ನು ನಾನು ಕೊಡುವುದಕ್ಕೆ ತಯಾರಾಗಿದ್ದೇನೆ. ಒಂದು ವೇಳೆ ಈ ಬಗ್ಗೆ ಚರ್ಚೆಯಾಗುವುದಾದರೆ ಅಲ್ಲಿನ ಪರಿಸ್ಥಿತಿಯನ್ನು ಮುಂದಿಡುವುದಕ್ಕೆ ನಾನು ತಯಾರಾಗಿದ್ದೇನೆ. ಈ ಒಂದು ದೃಷ್ಟಿಯಿಂದ ಅಲ್ಲಿರತಕ್ಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ತ್ವರಿತವಾದ ಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಬೇಕು. ಅಲ್ಲಿ ಏನು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಣಯವಾಗಿದೆ ಅವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಇರತಕ್ಕ ಅಡಚಣೆಗಳು ಏನು? ಕಾರಣವೇನು ಎಂಬುದನ್ನು ನೋಡಬೇಕಾಗುತ್ತದೆ. ಅಲ್ಲಿ ಕೆಲವು ತೊಂದರೆಗಳು ಇವೆ. ಅಲ್ಲಿ ಈಗ ಕೆಲಸವನ್ನು ಮಾಡಿಸತಕ್ಕ ದಳ್ಳಾಳಿಗಳು ಇಲ್ಲ ಅಲ್ಲಿ ಇಲಾಖೆಯ ಅಧಿಕಾರಿಗಳೇ ಪೇಮೆಂಟ್ ಮಾಡುತ್ತಿದ್ದಾರೆ. ಕೆಲವು ಜೂನಿಯರ್ ಇಂಜಿನಿಯರ್‌ಗಳು ಕೆಲಸದ ಪ್ರಮಾಣದ ಮೇಲೆ ಕೂಲಿಯವರಿಗೆ 50 ಪೈಸಾ, 70 ಪೈಸಾ, ಒಂದೂವರೆ ರೂಪಾಯಿ ಒಂದೂ ಮುಕ್ಕಾಲು ರೂಪಾಯಿ ಪೇಮೆಂಟ್ ಆಗಿದೆ.

ಶ್ರೀ ಡಿ. ದೇವರಾಜ ಅರಸ್.—ಸಾಯಿಲ್ ಕನ್‌ಸರ್‌ವೇಷನ್ ವರ್ಕ್ಸ್, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಮೈನರ್ ಇರಿಗೇಷನ್ ಮೇಜರ್ ಇರಿಗೇಶನ್ ಕೆಲಸಗಳು ನಡೆಯುತ್ತಿವೆ. ಅಲ್ಲಿ ಕೂಲಿಯವರಿಗೆ ಅಳತೆಯ ಮೇಲೆ 50 ಪೈಸಾ 70 ಪೈಸಾ ಒಂದು ರೂಪಾಯಿ ಬರುತ್ತದೆ ಎಂದು ನಾವು ಅಲ್ಲಿಂದ ವರದಿಯನ್ನು ತರಿಸಿಕೊಂಡಿದ್ದೇವೆ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಅದಕ್ಕೆ ನೀವೂ ನಾವೂ ಹೋಗಬೇಕಾಗಿಲ್ಲ. ಅಲ್ಲಿ ನಡೆಯತಕ್ಕ ಸಾಯಿಲ್ ಕನ್‌ಸರ್‌ವೇಷನ್ ಕೆಲಸದಲ್ಲಿ ಆ ಕೂಲಿಯವರಿಗೆ ಸುಲಭವಾಗಿ ಹೆಚ್ಚಿಗೆ ದುಡ್ಡು ಬರುತ್ತದೆ, ಕೆಲವರು ಅಲ್ಲಿ ಆ ಕೆಲಸದಲ್ಲಿ 3 ರೂಪಾಯಿ 4 ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ. ಅವರು ಒಂದು ಸೆಟ್ ಆಫ್ ಪೀಪಲ್. ಅವರಿಗೆ ಕಲಸ ಮಾಡಿ ಚೆನ್ನಾಗಿ

ಅಭ್ಯಾಸ ಇದೆ. ಅವರು ಪೀಸ್ ವರ್ಕ್ ಮೇಲೆ ಕೆಲಸವನ್ನು ಮಾಡುತ್ತಿದ್ದಾರೆ. ಈಗ ಅಲ್ಲಿ ದಳ್ಳಾಳಿಗಳನ್ನು ತೆಗೆದಿದ್ದೇವೆ. ವಿರೋಧ ಪಕ್ಷದವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಒಂದು ಕರೆಕ್ಟ್ ಪಿಕ್ಚರ್ ಕೊಟ್ಟಿದ್ದಕ್ಕಾಗಿ ನಾನು ಸಂತೋಷ ಪಡುತ್ತೇನೆ. ಇನ್ನೊಂದು ಕಡೆ ಕೆಲವರು ಪೀಸ್ ವರ್ಕ್ ಮಾಡುತ್ತಾರೆ. ಅವರಿಗೆ ಕೆಲಸ ಮಾಡಿ ಅಭ್ಯಾಸ ಇಲ್ಲ. ಅವರಿಗೆ ಕೇವಲ 70 ಪೈಸಾ, 50 ಪೈಸಾ ಮಾತ್ರ ಸಿಕ್ಕುತ್ತದೆ. ಇವರಿಗೆ ಏತಕ್ಕೆ ಹೀಗಾಗುತ್ತದೆ ಎಂದರೆ ಇವರಿಗೆ ಅಭ್ಯಾಸ ಇಲ್ಲ. ಎಲ್ಲರಿಗೂ ಶರೀರ ಒಂದೇ ಸಮವಾಗಿರುವುದಿಲ್ಲ. ಅದರಲ್ಲಿ ನಿಶ್ಯಕ್ತಿ ಇರುವವರೂ ಇದ್ದಾರೆ. ಅವರಿಗೆ ಏನು ಪರಿಹಾರ ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಅವರಿಗೆ ಒಂದು ಸ್ಪೆಷಲ್ ರೇಟು ಕೊಡೋಣ ಎಂದರೆ ಒಬ್ಬರಿಗೊಂದು ಇನ್ನೊಬ್ಬರಿಗೊಂದು ಹೇಗೆ ಕೊಡುತ್ತೀರಿ ಎಂದು ಕೇಳುತ್ತಾರೆ. ಆದ್ದರಿಂದ ಅಧಿಕಾರಿಗಳಿಂದ ವೀಕ್ ಬಾಡಿ ಇರುವವರು ಎಷ್ಟು ಜನ ಇದ್ದಾರೆ ಎಂದು ಒಂದು ವರದಿಯನ್ನು ತರಿಸಿಕೊಂಡಿದ್ದೇವೆ. ಅಂಥವರು 100ಕ್ಕೆ 30 ಜನ ಇದ್ದಾರೆ ಎಂದು ವರದಿ ಬಂದಿದೆ. ಆದ್ದರಿಂದ ಅಂಥವರನ್ನು ಅಧಿಕಾರಿಗಳು ಐಡೆಂಟಿಫೈ ಮಾಡಿದ ಮೇಲೆ ಅವರಿಗೆ ಸರ್ಕಾರಕ್ಕೆ ಬರತಕ್ಕ ಪ್ರೋಟೀನ್ ಡಯಟ್, ಬಿಸ್ಕತ್, ಕೆಲವು ಮಿಲ್ಕ್ ಇತ್ಯಾದಿ ಆಹಾರಗಳು ಏನು ಬರುತ್ತವೆ ಅವುಗಳನ್ನು ಆ ನಿಶ್ಯಕ್ತಿ ಇರತಕ್ಕ ಜನಗಳಿಗೆ ಕೊಡಬೇಕೆಂದಿದ್ದೇವೆ.

ಶ್ರೀ ಸಿ. ಬೈರೇಗೌಡ.—ಮಹಾರಾಷ್ಟ್ರದಲ್ಲಿ ಸುಖಡಿ ಕೊಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.— ಆ ಮೇಲೆ ಮಂಗಳೂರಿನಿಂದ ಕೆಲವು ಮೀನಿನ ಆಹಾರವನ್ನು ಕೊಟ್ಟಿದ್ದಾರೆ. ಅದನ್ನು ಸಹ ಅಲ್ಲಿ ಕೊಡುತ್ತೇವೆ. ಅದರ ಜೊತೆಗೆ ಒಂದು ದಿವಸಕ್ಕೆ 50 ಸಾವಿರ ಮೊಟ್ಟೆಗಳನ್ನು ಸಹ ಒದಗಿಸುತ್ತೇವೆ. ಇವೆಲ್ಲ ಪದಾರ್ಥಗಳನ್ನು ಆ ವೀಕ್ ಜನರು ತಿಂದರೆ ಒಂದು 10-15 ದಿವಸಗಳ ನಂತರ ಅವರಲ್ಲಿ ಅರ್ನಿಂಗ್ ಕೆಪೇಸಿಟಿ ಹೆಚ್ಚಾಗಬಹುದು ಎಂದು ಭಾವಿಸಬಹುದು. ಆದ್ದರಿಂದ ಅಂಥ ಅಬಲ ಜನರು ಯಾರು ಎಂಬುದನ್ನು ಐಡೆಂಟಿಫೈ ಮಾಡಿ ಇವನ್ನು ಕೊಡಬೇಕಾಗಿದೆ. ಅದನ್ನು ಬೇಗನೇ ಹಂಚಲಾಗುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ಅವರು ಈ ಸದನವನ್ನು ಮುಂದುವರಿಸುವ ಉದ್ದೇಶವಾದರೂ ಏನೆಂಬುದನ್ನು ಹೇಳಿದ್ದಾರೆ. ಕೇವಲ ಇವತ್ತು ಸದನವನ್ನು ಮುಂದುವರಿಸುವುದರಿಂದ ಅಲ್ಲಿಯ ಸಮಸ್ಯೆ ಬಗೆಹರಿಯುತ್ತದೆ ಎನ್ನುವಂತಹ ಉದ್ದೇಶವನ್ನು ನಾವು ಇಟ್ಟುಕೊಂಡಿಲ್ಲ. ನಮ್ಮ ಉದ್ದೇಶವೇನೆಂದರೆ ಉಳಿದ ಸದಸ್ಯರಿಗೂ ಸಹ ಇಲ್ಲಿಯ ಕಾರ್ಯಕಲಾಪಗಳಲ್ಲಿ ಅವಕಾಶ ಸಿಗಬೇಕು ಮತ್ತು ಅಲ್ಲಿ ಹೋಗತಕ್ಕಂತಹ ಸದಸ್ಯರಿಗೆ ಸಹ ಅಲ್ಲಿರತಕ್ಕಂತಹ ಸಮಸ್ಯೆಯನ್ನು ಅಲ್ಲಿಗೆ ಬರತಕ್ಕ ಮಂತ್ರಿಯವರಿಗೆ ತಿಳಿಸಬೇಕು ಎಂಬುದು. ಈಗ ಮಾನ್ಯ ಮುಖ್ಯಮಂತ್ರಿಯವರು ಒಬ್ಬೊಬ್ಬ ಮಂತ್ರಿಯವರನ್ನು ಒಂದೊಂದು ಜಿಲ್ಲೆಗೆ ಕಳಿಸುವುದಕ್ಕೆ ಒಪ್ಪಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಯವರು ಅಲ್ಲಿಗೆ ಹೋಗುವಾಗ ಅವರ ಜೊತೆಗೆ ಸಹ ಕೆಲವು ಸದಸ್ಯರು ಹೋಗುವುದರಿಂದ ಇಲ್ಲಿಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕಾಗುವುದಿಲ್ಲ. ಬಹುಶಃ ಹೆಚ್ಚೆಂದರೆ 4-5 ದಿವಸ ಮುಂದುವರಿಸಬಹುದು. ಅಲ್ಲದೆ ಯಾರಿಗೆ ಇದರಲ್ಲಿ ಆಸಕ್ತಿ ಇದೆ, ಅವರು ನಿಮ್ಮ ಮಂತ್ರಿಯವರು ಹೋಗತಕ್ಕಂತಹ ಕಾಲದಲ್ಲಿ ಅಲ್ಲದೆ ಹೋಗಿ ಸಮಸ್ಯೆಯನ್ನು ಬಿಡಿಸಿ ಮನವರಿಕೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಾಗೆ ಹೋಗುವವರನ್ನು ನೀವು ಕರೆಕೊಂಡು ಹೋಗಬಹುದು, ಇಲ್ಲದಿದ್ದರೆ ಆಸಕ್ತಿ ಇದ್ದವರು ಅವರಾಗಿಯೇ ಅಲ್ಲಿಗೆ ಹೋಗಬಹುದು. ಆ ಒಂದು ದೃಷ್ಟಿಯಿಂದ ಇದನ್ನು ಒಪ್ಪಿಕೊಳ್ಳಬೇಕಾಗಿದೆ. ಅಲ್ಲದೆ, ನೀವು ಇದರ ಬಗ್ಗೆ ತೀವ್ರ ಗತಿಯಲ್ಲಿ ತೀರ್ಮಾನ ಮಾಡಿದರೂ ಅಲ್ಲಿ ಅಷ್ಟು ಕೆಲಸಗಳು ಆಗಿಲ್ಲವೆಂದು ಕಂಡು ಬರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಅಂದರೆ 5 ಲಕ್ಷ ಜನರು ಸುಮ್ಮನೆ ಕೂತುಕೊಂಡು ದುಡ್ಡು ತೆಗೆದುಕೊಳ್ಳುತ್ತಿದ್ದಾರೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮತಿ ಇಂದಿರಾ ಗಾಂಧಿಯವರು ಬಂದಾಗ ಅಲ್ಲಿ ತ್ರಿಪುರಾಂತ ಕೆರೆಯ ಕೆಲಸವನ್ನು ಪ್ರಾರಂಭ ಮಾಡಿಸಿ 5 ಸಾವಿರ ಜನರಿಗೆ ಕೆಲಸ ಕೊಟ್ಟಿದ್ದೀರಿ. ಆ ಮೇಲೆ ಏಕೆ ನಿಲ್ಲಿಸಿದ್ದೀರಿ ಅದನ್ನು ?

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರು ಸ್ವಲ್ಪ ಅದರ ಬಗ್ಗೆ ಹೇಳುವುದನ್ನು ಕೇಳಬೇಕು.

ಶ್ರೀ ಜೆ. ಎಚ್. ಕಬಾಡೆ.—ಮಾನ್ಯ ಮಂತ್ರಿಯವರು ಹೇಳುವುದು ಸುಳ್ಳು. ಅವರು ಇಲ್ಲಿಯವರೆಗೆ ಎಲೆಕ್ಟ್ರಿಕ್ ಲೈನ್ ಎಳೆಯುವ ವಿಚಾರ ಮತ್ತಿತರ ವಿಚಾರವಲ್ಲಿ ಹೇಳಿದ್ದೆಲ್ಲವೂ ಕಾರ್ಯಗತವಾಗದೆ ಇದ್ದುದರಿಂದ ಅದು ಸತ್ಯಕ್ಕೆ ದೂರವಾದುದು ಎಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಒಬ್ಬರ ಅಭಿಪ್ರಾಯ ಆ ರೀತಿಯಾಗಿದ್ದರೆ ನನಗೆ ಅದು ಬಹಳ ಸಂತೋಷವೇ. I have one man in the whole Assembly who claims that whatever I say is incorrect. At least there is one member who says so. ಮಾನ್ಯ ಮುಖ್ಯಮಂತ್ರಿಗಳು ಎಲ್ಲವನ್ನೂ ವಿಶದೀಕರಿಸಿ ವಿಷಯ ತಿಳಿಸಿದ್ದಾರೆ. ಇಲ್ಲಿ ಸಮಸ್ಯೆಯನ್ನು ಬಗೆಹರಿಸುವುದು ಮುಖ್ಯವಲ್ಲದೆ, ಚರ್ಚೆ ಮುಖ್ಯವಲ್ಲ, ಅಭಿಪ್ರಾಯ ನಿಮ್ಮದು, ನಮ್ಮದು-ಎಲ್ಲರದ್ದೂ ಒಂದೆ. ಅಲ್ಲಿರತಕ್ಕಂತಹ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ಆರ್ಡರ್ ಮಾಡಿದ್ದೇವೆ. ಆದರೆ ಕಾರ್ಯಗತ ಮಾಡುವುದರಲ್ಲಿ ಕೆಲವು ತೊಂದರೆಗಳು ಇರಬಹುದು. ಕೆಲವು ಸಾಗೋದ್ದಾರವಾಗಿ ನಡೆಯುವುದಕ್ಕೆ ಸಾಧ್ಯವಿದೆ; ಕೆಲವು ಹಾಗೆ ನಡೆಯುವುದಕ್ಕೆ ಸಾಧ್ಯವಿಲ್ಲ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಕೆಲವು ಕೆಲಸಗಳನ್ನು ಕೆಲವು ಮಟ್ಟಗಳಲ್ಲಿ ನಿಲ್ಲಿಸಬೇಕಾಗುತ್ತದೆ.

I shall give you the figures in the cours of the day in respect of the dates on which a work was started and when it was stopped and why it was stopped. Sinc you have just now raised just at this moment, the file is not with me. In the course of the day, I will give you the correct number of people working in Tarapur Tank in Basavakalyan, why the work-was stopped and why it was stopped.

ಶ್ರೀ ಎಂ. ಕೆ. ಸುರಪುರ್.—ನಾನು ಆ ಪ್ರದೇಶದಿಂದ ಬಂದಿದ್ದೇನೆ. ನಮ್ಮ ವಿರೋಧ ಪಕ್ಷದ ಸದಸ್ಯರು ನಾವು 40 ಮಂದಿ ಇದ್ದೇವೆ ನಮಗೆ ಯಾರಿಗೂ ಒಳ್ಳೆಯ ಹೃದಯವಿಲ್ಲವೆಂದು ಹೇಳಿದರು. ಇದರ ಬಗ್ಗೆ ಮೊದಲು ಸಮರ್ಪಕವಾದ ಕೆಲಸಕಾರ್ಯಗಳು ಅಲ್ಲಿ ನಡೆದಿಲ್ಲವೆಂದು ಗಲಾಟೆ ಮಾಡಿದವನು ನಾನು. ಅದನ್ನು ಪಾರ್ಟಿಯಲ್ಲಿಯೂ ಎತ್ತಿದ್ದೇನೆ. ಆದರೆ ಇಂದು ಗಾಂಧಿಯ ಆಣೆ ಹಾಕಿ ಬೇಕಾದರೆ ಹೇಳುತ್ತೇನೆ. ಅಲ್ಲಿ ಕೆಲಸಕ್ಕೆ ಏನೂ ತೊಂದರೆಯಾಗಿಲ್ಲ. ನಮ್ಮ ಇಂಡಿ ತಾಲೂಕಿನಲ್ಲಿ ಒಂದು ಲಕ್ಷ 26 ಸಾವಿರ ಪಾಪುಲೇಷನ್ ಇದೆ. ಆ ಜನರ ಪೈಕಿ ಸುಮಾರು 30 ಸಾವಿರ ಜನರಿಗೆ ಈಗ ಅಲ್ಲಿ ಕೆಲಸ ಕೊಟ್ಟಿದ್ದಾರೆ. ಮಾನ್ಯ ದೇವೇಗೌಡರು ಯಾವುದನ್ನು ನೋಡಿ ಬಂದಿದ್ದಾರೆ ಎಂದು ನನಗೆ ಗೊತ್ತಾಗುವುದಿಲ್ಲ. ಅಂತೂ ನಮ್ಮ ಪ್ರದೇಶಗಳಲ್ಲಿ ಕೆಲಸಕಾರ್ಯಗಳು ನಡೆಯುತ್ತಾ ಇವೆ.

3-00 P.M.

ಇನ್ನು ಮಾನ್ಯ ಶ್ರೀ ದೇವೇಗೌಡರು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ನಾನು ಪಗಾರದ ವಿಷಯವಾಗಿ ಹೇಳುತ್ತೇನೆ. ಪಗಾರ ಕಡಿಮೆ ಕೊಟ್ಟರೆ ಯಾವ ಆಫೀಸಿನಲ್ಲಿಯೇ ಆಗಲೀ ಕೆಲಸಗಳು ಸರಿಯಾಗಿ ನಡೆಯುವುದಿಲ್ಲ. ಗುಲ್ಬರ್ಗಾ ವಿಷಯ ನನಗೆ ಗೊತ್ತಿಲ್ಲ. ಈಗ ಅಲ್ಲಿ ಧಾನ್ಯಗಳ ಡಿಫಿಕಲ್ಟಿ ಇದೆ. ಧಾನ್ಯಗಳ ಡಿಸ್ಟ್ರಿಬ್ಯೂಷನ್ ಬಗ್ಗೆ ಮಂತ್ರಿಗಳು ಹೆಚ್ಚಿಗೆ ಗಮನ ಕೊಡಬೇಕು. ಅಲ್ಲಿ ಒಂದು ಕೆ.ಜಿ.ಗೆ 1-0 ಅಂದರೆ ಜನಗಳು ಹೋಗಿ ತೆಗೆದುಕೊಳ್ಳುತ್ತಾರೆ. ಎಲ್ಲಿ ಹೆಚ್ಚಿಗೆ ಧಾನ್ಯಗಳನ್ನು ಬೆಳೆಯುತ್ತಾರೋ ಅಲ್ಲಿಂದ ಅಭಾವ ಪೀಡಿತ ಪ್ರದೇಶಗಳಲ್ಲಿರುವವರಿಗೆ ಕೊಡಿಸಿಯೆಂಬುದಾಗಿ ನಾನು ಮಾನ್ಯ ಶ್ರೀ ದೇವೇಗೌಡರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ನಾಳೆ ಲ್ಯಾಂಡ್ ರಿಫಾರಮ್ಸ್ ಬಿಲ್ ಪಾಸು ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಅದನ್ನೇನೋ ಮಾಡುತ್ತಾರೆ. ನನಗೆ ಅದರ ಬಗ್ಗೆ ಆಟ್ರಿಬ್ಯೂಟಿವ್ ಮೋಟಿವ್ ಇದೆ. ಅದರಲ್ಲಿ ಏಕೋ ಸಂಶಯ ಬಂದಿದೆ. ಈ ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಅದು ಈಗಲೇ ಆಗಬೇಕೆಂದು ನಾನು ಯಾವತ್ತೂ ಇಲ್ಲ. ಅದು ಬಹಳ ದೊಡ್ಡ ಬಿಲ್ ಇದೆ. ಅದರಲ್ಲಿ ನಮ್ಮದೂ ಸಹ ಸ್ವಲ್ಪ ತಕರಾರು ಇದೆ. ನಾವು ಹೇಳುವುದನ್ನು ನಾವು ಹೇಳುತ್ತೇವೆ. ಸರ್ಕಾರದವರು ಏನು ಮಾಡಬೇಕೋ ಅದನ್ನು ಮಾಡುತ್ತಾರೆ. ಇದರ ಬಗ್ಗೆ ಸರ್ಕಾರದವರು ಎಷ್ಟು ದುಡ್ಡು ಖರ್ಚುಮಾಡುತ್ತಾರೆಂಬುದೂ ಸಹ ಗೊತ್ತಿದೆ. ನಾನು ಯಾವುದಕ್ಕೆ ಸಪೋರ್ಟ್ ಮಾಡುತ್ತಾ ಇಲ್ಲವೆಂಬುದು ಸರ್ಕಾರಕ್ಕೆ ಗೊತ್ತಿದೆ. ಆದಕಾರಣ ನನ್ನ ಮಾತಿಗೆ ತಾವೆಲ್ಲರೂ ಬೆಂಬಲ ಕೊಡಬೇಕು.

ಶ್ರೀ ಪಾಟೀಲ್ ನಾಗರಾಜ್.—ಅಲ್ಲಿ 30 ಸಾವಿರ ಜನಗಳು ಕೆಲಸಮಾಡುತ್ತಿದ್ದಾರೆ. ಅವರಿಗೆ ಕೂಲಿ ಕೊಟ್ಟಿದ್ದೇವೆಂದು ಹೇಳಿದರು. ಅದು ಸರಿಯಿಲ್ಲ. ನಾವು ನೋಡಿಕೊಂಡು ಬಂದಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಂಡಿ ತಾಲ್ಲೂಕಿನ ಸದಸ್ಯರು ಆ ಭಾಗದಿಂದ ಇಲ್ಲಿ ಬಂದಿರ ತಕ್ಕವರು. ಆ ಸದಸ್ಯರು ಆ ವಿಷಯವನ್ನು ಹೇಳಬೇಕಾಗುತ್ತದೆ,

ಶ್ರೀ ಡಿ. ದೇವರಾಜ್ ಅರಸ್.—ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೆಲಸ ಆಗಬೇಕಾದರೆ ನಾನು ಮಾನ್ಯ ವಿರೋಧಪಕ್ಷದ ನಾಯಕರನ್ನು ಒಂದು ಪ್ರಶ್ನೆ ಕೇಳುತ್ತೇನೆ. ನಾವು ಮಾಡಿರುವ ಕೆಲಸ ಪ್ರತಿಯೊಂದೂ ಸರ್ವಸಮರ್ಪಕವಾಗಿದೆ. ಈ ಒಂದು ಹೇಳಿಕೆಯನ್ನು ಹೊರಗಡೆ ಎಲ್ಲಿಯೂ ಕೊಟ್ಟಿಲ್ಲ. ಇದು ಯಾರಿಂದಲೂ ಸಾಧ್ಯವಿಲ್ಲ. ಯಾರೇ ಸರ್ಕಾರ ನಡೆಸಿದರೂ ಲಕ್ಷೋಪಲಕ್ಷ ಜನ ಗಳಿಗೆ ಆಹಾರ, ನೀರು ಕಾಲಕಾಲಕ್ಕೆ ಒದಗಿಸಿ ಮುದುಕರಿಗೆ, ಮಕ್ಕಳಿಗೆ, ಎಲ್ಲರಿಗೂ ನಾವು ತಿಂಡಿ ತಿನ್ನಿಸುತ್ತೇವೆಂದು ಸುಮ್ಮನೆ ಬಾಯಿ ಮಾತಿನಲ್ಲಿ ಇದೇನು, ಸಣ್ಣ ಪುಟ್ಟ ವಿಚಾರವೇ? ಇದು ಒಂದು ದೊಡ್ಡ ಪರ್ವತೋಪಕಾರಿಯಾಗಿ ಇರುವ ಕೆಲಸ. ಲಕ್ಷೋಪಲಕ್ಷ ಜನಗಳಿಗೆ ಸಂಬಂಧಪಟ್ಟ ವಿಚಾರ ಗಳಲ್ಲಿ ನಿಜವಾಗಿಯೂ ಅಲ್ಲಿ ಇಲ್ಲಿ ಕೆಲವಾರು ಲೋಪದೋಷಗಳು ಇರುತ್ತವೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಆ ಲೋಪದೋಷಗಳು ಇನ್ನು ಮುಂದೆ ಹೆಚ್ಚಾಗುವುದಕ್ಕೆ ಸಾಧ್ಯ ವಿಲ್ಲವೆಂದು ಹೇಳಬಲ್ಲೆ. ಯಾರು ಸರ್ಕಾರ ನಡೆಸಿದರೂ ಹೆಚ್ಚು ತಿಳುವಳಿಕೆ ಇದರಲ್ಲಿ ಉಂಟಾಗು ತ್ತದೆಂದು ನಾನು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ವಿಲ್‌ಫುಲ್ ನೆಗ್ಲಿಜೆನ್ಸ್, ಅಸಡ್ಡೆ ಮಾಡಿ ದ್ದಾರೆಂದಲ್ಲ. ಹಣವಿಲ್ಲವೆಂದು ಆ ಕೆಲಸಗಳನ್ನು ನಿಲ್ಲಿಸಿದ್ದೇವೆ. ಮೈಮರೆತು ಎಚ್ಚರಿಕೆಯಿಲ್ಲದೆ ನಮ್ಮ ಪಾಡಿಗೆ ನಾವು ನಮ್ಮ ನಮ್ಮ ಜಾಗವನ್ನು ಅಂಟಿಕೊಂಡು ಕೂತಿದ್ದೇವೆಂದಲ್ಲ. ಹಿಂದೆ ಅವರು ಹೋದಾಗಲೂ ಒಂದೆರಡು ಲೋಪದೋಷಗಳು ಇರಬಹುದೆಂದು ನಾನು ಹೇಳುತ್ತೇನೆ. ತಾವೂ ಅದನ್ನು ನೋಡಿದ್ದೀರಿ. ಮಾನ್ಯ ಸದಸ್ಯರು ಈಗಲೂ ಒಂದೆರಡು ಲೋಪದೋಷಗಳನ್ನು ಕಂಡಿರಬಹುದು. ಮಾನ್ಯ ಶ್ರೀ ವಿ. ಎನ್. ಪಾಟೀಲ್ ಅವರು ಅಮಲ್ದಾರರಿಗೆ ಬೇರೆ ದುಡ್ಡು ಕೊಟ್ಟಿದ್ದಾರೆಂದು. ಯಾವ ಊರಿನಲ್ಲಿ ಯಾವ ಬಾವಿಗೆ ಈ ರೀತಿಯಾಗಿ ದುಡ್ಡು ಕೊಟ್ಟಿದ್ದಾರೆ? ನಾವು ಕೊಟ್ಟಿರುವ ದುಡ್ಡನ್ನು ಅಮಲ್ದಾರ್ ಅವರು ಮೋಸಮಾಡಿದ್ದಾರೆಂದು ಇದುವರೆಗೂ ಮಾನ್ಯ ಸದಸ್ಯರು ಸರ್ಕಾರಕ್ಕೆ ಏನಾದರೂ ಪತ್ರ ಬರೆದಿದ್ದಾರೆಯೇ ? ಅದನ್ನು ಬಿಟ್ಟು ಇಲ್ಲಿ ಮಾತ್ರ ಆ ವಿಚಾರವನ್ನು ಏಕೆ ಹೇಳುವುದಕ್ಕೆ ಹೋಗಿದ್ದಾರೋ ಎಂದು ನಾನು ಅಧ್ಯಕ್ಷರನ್ನು ಕೇಳಿಕೊಳ್ಳು ತ್ತೇನೆ. ಆದರೆ ಇದು ರಾಜಕೀಯವಲ್ಲವೆಂದು ನಾನು ಹೇಳುತ್ತೇನೆ. ರಾಜಕೀಯ ಮಾಡುವ ಮಾತನ್ನು ಇಲ್ಲಿ ಆಡುತ್ತಿದ್ದಾರೆ. ಅದು ಸರಿಯಲ್ಲ. ಒಂದು ವೇಳೆ ಈ ವಿಚಾರ ನಿಜವೆಂದು ರುಜು ವಾತು ಆದರೆ, ಸಂಬಂಧಪಟ್ಟ ಅಮಲ್ದಾರರನ್ನು ಮನೆಗೆ ಕಳುಹಿಸುತ್ತೇನೆ. ಪ್ರತಿವರ್ಷವೂ ಅವ ರಿಂದ ವರದಿಯನ್ನು ತರಿಸಿಕೊಳ್ಳುತ್ತಿದ್ದೇವೆ. ಡಿಸಿಲ್ಟಿಂಗ್ ಗೋಸ್ಕರ 5 ಸಾವಿರ ರೂಪಾಯಿಗಳನ್ನು ಪ್ರತಿವರ್ಷವೂ ಕೊಡಬೇಕೆಂದು ಹೇಳಿ, ಸಂಬಂಧಪಟ್ಟ ಅಧಿಕಾರಿಗಳು ಅಲ್ಲಿಗೆ ಹೋದಾಗ ಅಲ್ಲಿನ ಮುಖಂಡರು, ಶಾಸನಸಭಾ ಸದಸ್ಯರು, ಮತ್ತು ಎಂ.ಪಿ. ಅವರು ಏನಾದರೂ ಮಾಡಿ ಸಣ್ಣಪುಟ್ಟ ರೈತರು ಯಾರು ಇದ್ದಾರೆಯೋ ಅವರು ಅಲ್ಲಿ ಕೆಲಸಮಾಡಲಿ ಎಂದು ಹೇಳಿದಾಗ, ಅವರು ಕೆಲಸ ಮಾಡುವುದಕ್ಕೆ ಬರುವುದಿಲ್ಲವೆಂದೂ, ಅವರು ಇರತಕ್ಕ ಬಾವಿಗಳ ರಿಪೇರಿಗಾಗಿ ದುಡ್ಡು ಕೊಡ ಬೇಕೆಂದು ಕೇಳಿದಾಗ, ನಾವು ಕೇಂದ್ರಸರ್ಕಾರಕ್ಕೆ ಇದರ ಬಗ್ಗೆ ಒತ್ತಾಯ ಮಾಡಿದ ಮೇಲೆ ಬಹಳ ವಾಗಿ ಪ್ಲಾನಿಂಗ್ ಕಮಿಷನ್ ಅವರನ್ನು ಕೇಳಿಕೊಂಡಮೇಲೆ ವಿಶೇಷ ರೀತಿಯಾಗಿ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾನು ಇದನ್ನು ಪ್ರತಿ ತಾಲ್ಲೂಕಿಗೂ ಐದ್ಹೈದು ಸಾವಿರ ರೂಪಾಯಿಗಳನ್ನು ಹಂಚಿಕೆಮಾಡಿ ಬಹಳವಾಗಿ ಕಡುಬಡವರಿಗೆ ಇದರಲ್ಲಿಯೂ ಲೋಯೆಸ್ಟ್ ಆಗಿರು ವವರಿಗೆ ಕೊಡಬೇಕು, ಅದರ ಬಗ್ಗೆ ಪಟ್ಟಿ ಎತ್ತಿ ತೋರಿಸಬೇಕು, ಮೋಸ ಮಾಡಿದ್ದರೆ, ನಿಮಗೇ ತೊಂದರೆಯಾಗುತ್ತದೆಂದು ಹೇಳಿದ್ದೇನೆ. ಡೆಪ್ಯುಟಿ ಕಮಿಷನರ್ ಅವರೇ ಅವರಿಗೆ ಕೊಡುತ್ತಾರೆ. ಹುಮ್ನಾಬಾದ್ ತಾಲ್ಲೂಕಿನಲ್ಲಿ ಬಿ.ಡಿ.ಓ. ಮೂಲಕ ಮಾಡಿಸಿಕೊಡಿ, ಅವರ ಬಗ್ಗೆ ಇಮಿಡಿಯೇಟಾಗಿ ಎನ್‌ಕ್ವೈರಿ ಮಾಡಿಸಿ. ಇನ್ನು ಪಿ.ಎಲ್.ಡಿ. ಬ್ಯಾಂಕ್ ವಿಚಾರವಾಗಿ ಹೇಳಿದ್ದಾರೆ. ಅದು ನನ್ನ ಕೈಲಿ ಇಲ್ಲ.

ಶ್ರೀ ವಿ. ಎನ್. ಪಾಟೀಲ್.—ಅದು ಕಮ್ಯೂನಿಸ್ಟ್ ಅವರ ಕೈಲಿಯೂ ಇಲ್ಲ. ನಮ್ಮ ರಾಜ ಕೀಯ ಪಕ್ಷದ ವಿಚಾರದಲ್ಲಿಯೂ ಇಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅದು ನಮ್ಮ ಕೈಯಲ್ಲಿಯೂ ಇಲ್ಲ. ಯಾವಾಗಲೂ ಅಯೋಗ್ಯ ಕೆಲಸ ಮಾಡುವವರು ಅಯೋಗ್ಯರೇ. ಅದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಯಾರೋ 100 ಎಕರೆ ಇರುವವರಿಗೆ ಮತ್ತೆ 4 ಎಕರೆಗಳನ್ನು ಕೊಟ್ಟಿದ್ದಾರೆಂದು ಹೇಳಬಹುದು. ಅವರು ಮೋಸಮಾಡಿರಬಹುದೆಂದರೆ, ನಾಳೆಯೇ ತಕ್ಷಣ ವಿಚಾರಮಾಡಿಸುತ್ತೇನೆ. ಇದು ಬಾವಿಗಳ ವಿಷಯ. ಪ್ರತಿಯೊಬ್ಬರಿಗೂ 5 ಸಾವಿರ ರೂಪಾಯಿಗಳನ್ನು ಹಂಚಬೇಕೆಂದು ಹೇಳಿದ್ದೇವೆ. ಯಾರು ತೊಂದರೆಗೊಳಗಾಗಿದ್ದಾರೆ, ಅಂತಹವರಿಗೆ ಮಾತ್ರ ಆ ರೀತಿಯಾಗಿ ಕೊಡಬೇಕೆಂದು ಸೂಚನೆಕೊಟ್ಟ

(ಶ್ರೀ ಡಿ. ದೇವರಾಜ ಅರಸ್)

ದ್ದೇವೆ. 50-60 ಎಕರೆ ಜಮೀನು ಇಟ್ಟುಕೊಂಡಿರುವವರಿಗೆ ಆ ರೀತಿ ಕೊಡುವುದಕ್ಕಾಗುವುದಿಲ್ಲ. ಆದರೆ ಈಗ ನಮ್ಮಲ್ಲಿರತಕ್ಕ ದುಡ್ಡನ್ನು ಎಲ್ಲರಿಗೂ ಹಂಚಿಕೆ ಮಾಡುವುದಕ್ಕಾಗುವುದಿಲ್ಲ. ಈಗ ಆಹಾರ ಧಾನ್ಯಗಳನ್ನು ಹಂಚಲು ಸಾಲುವುದಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಅದು ನಿಜ. ಈಗ ಎಲ್ಲರೂ ಬಹಳ ಕಷ್ಟದೆಶೆಯಲ್ಲಿದ್ದಾರೆ. ಮಾನ್ಯ ಶ್ರೀ ಸುರಪುರ್ ಅವರು ಹೇಳಿದ ಹಾಗೆ ಎಲ್ಲಿ ಕಷ್ಟ ಬಹಳ ಇದೆಯೆಂಬುದನ್ನು ಐಡೆಂಟಿಫೈ ಮಾಡಿ ಅಲ್ಲಿಗೆ ಮಾತ್ರ ಹೆಚ್ಚಿಗೆ ಧಾನ್ಯಗಳನ್ನು ಕೊಡುವುದು ಒಳ್ಳೆಯದು, ಅದು ಬಹಳ ಉತ್ತಮವಾದಂಥ ಸಲಹೆ. ಅದನ್ನು ಸರ್ಕಾರ ಗಮನಿಸುತ್ತದೆ, ಒಟ್ಟಿನಲ್ಲಿ ಅವರು ವ್ಯವಹಾರಿಕವಾಗಿ ಹೇಳಿದರು. ಎಲ್ಲಿ ಲೋಪದೋಷಗಳಿವೆಯೆಂಬುದನ್ನು ಕಂಡುಕೊಂಡು ಬಂದಿದ್ದಾರೆ. ಎಷ್ಟು ಕಳಕಳಿಯಿಂದ ಅವರು ಶ್ರಮವಹಿಸಿ ನೋಡಿ ಬಂದಿದ್ದಾರೋ ನಾವು ಅಷ್ಟೇ ಮುತುವರ್ಜಿಯಿಂದ ನೋಡುತ್ತಿದ್ದೇವೆ. ಶ್ರಮವಹಿಸಿ ಕೆಲಸಗಳನ್ನು ನಡೆಸುತ್ತಿದ್ದಾರೆ. ಅವನ್ನು ಸರಿಪಡಿಸುತ್ತಿದ್ದೇವೆಂದು ಮಾತ್ರ ನಾನು ಮತ್ತೊಮ್ಮೆ ತಮ್ಮ ಮುಖಾಂತರ ಮಾನ್ಯ ಸದಸ್ಯರೆಲ್ಲರಿಗೂ ಅರಿಕೆಮಾಡಿಕೊಳ್ಳುತ್ತಿದ್ದೇನೆ. ಈ ಒಂದು ಮಾತನು ಹೇಳಿದರೆ ಯಾರೂ ಕೂಡ ಬೇಜಾರು ಮಾಡಲಾರರೆಂದು ನಾನು ಅಂದುಕೊಂಡಿದ್ದೇನೆ. ಇದರಲ್ಲಿ ಯಾವ ಒಂದು ವಿಪತ್ತೂ ಸಹ ಆಗಲಾರದೆಂದು ನಾನು ಭಾವಿಸಿದ್ದೇನೆ. ಮಂತ್ರಿಗಳ ಜೊತೆಯಲ್ಲಿ ತಾವೂ ಕೂಡ ಯಾರಾದರೂ ಹೋಗಿಬರಬೇಕೆಂದರೆ ಅದೂ ಆಗಲಿ, ಅದಕ್ಕೂ ತೊಂದರೆ ಇಲ್ಲ. ಅದಕ್ಕೂ ಕೂಡ ಏರ್ಪಾಡನ್ನು ಮಾಡೋಣ.

ಶ್ರೀ ವಿ. ಎನ್. ಪಾಟೀಲ್.—ಸದಸ್ಯರುಗಳು ಮಾತನಾಡತಕ್ಕ ಭರದಲ್ಲಿ ಕೆಲವು ವೇಳೆ ವಿಷಯದಲ್ಲಿ ಅಡಕವಾಗಿರತಕ್ಕ ಐನಾತಿ ವಿಷಯವನ್ನು ಮರೆಯುವುದು ಉಂಟು. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದ್ದ ವಿಷಯ ಏನೆಂದರೆ—ತಾಳಮಡಿಗೆ ಎಂಬ ಗ್ರಾಮದಲ್ಲಿ ಹಿಂದೆ ಅನೇಕಾವರ್ತಿ ಅಲ್ಲಿಯ ಜನರು ತಮ್ಮ ಅಂದರೆ ಮುಖ್ಯಮಂತ್ರಿಗಳ ಕಾರನ್ನೇ ಅಲ್ಲಿಗೆ ಹೋಗಿದ್ದಾಗ ತಡೆದು ಅಲ್ಲಿ ಸಾಯಿಲ್ ಕನ್‌ಸರ್ವೇಷನ್ ಕೆಲಸದ ಸೂಪರ್‌ವೈಜರಾಗಿರತಕ್ಕ ಅಧಿಕಾರಿ ಲಂಚಕೋರ ಇದ್ದಾನೆ ಎಂದು ಹೇಳಿದ ದಿನದಿಂದ ಅಲ್ಲಿಯ ಜನರಿಗೆ ಆ ಅಧಿಕಾರಿ ಕೆಲಸವನ್ನೇ ಕೊಡುತ್ತಿಲ್ಲ. Because they were bold enough to complain against the officer, not a single work has been completed. A representation was also given and though it is more than three months, people cannot get any work up to this date.

Sri D. DEVARAJ URS.—I am glad the hon. Member has brought this to my notice. We will see that within three days, the work will start.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀ ವಿ. ಎನ್. ಪಾಟೀಲರವರ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮುಖ್ಯಮಂತ್ರಿಗಳು ಇನ್ನು ಮೂರು ದಿನಗಳಲ್ಲಿ ಅಲ್ಲಿ ಕೆಲಸವನ್ನು ಪ್ರಾರಂಭಿಸುವಂತೆ ಮಾಡುತ್ತೇನೆಂದು ಹೇಳಿದ್ದಾರೆ. ಇನ್ನು ಈ ಅಸೆಂಬ್ಲಿ ಸದಸ್ಯರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಒಂದು ವರದಿಯನ್ನು ಕೊಟ್ಟನಂತರ ಅಲ್ಲಿ ಇವರು ಏನು ಕೆಲಸ ಮಾಡಿನಬೇಕು ಎಂದು ಹೇಳಿದರೆ ಅವನ್ನು ಮಾಡಿಸುವುದಾಗಿ ಹೇಳಿದ್ದಾರೆ. ಇನ್ನು ಗುಲ್ಬರ್ಗ ಮತ್ತು ಬಿಜಾಪುರಗಳಲ್ಲಿದ್ದ ಬ್ಯಾಂಕುಗಳನ್ನು ಏತಕ್ಕೆ ಸೂಪರ್‌ಸೀಡ್ ಮಾಡುವುದಕ್ಕೆ ಪ್ರಯತ್ನ ಮಾಡಿದರು ಅನ್ನತಕ್ಕ ವಿಚಾರಕ್ಕೆ ನಾನೀಗ ಬಾಯಿ ಹಾಕುವುದಿಲ್ಲ. ಅದಕ್ಕೆ ಇನ್ನೂ ಅವಕಾಶ ಇದೆ. ಕಾಲಬಂದಾಗ ಅದನ್ನು ಪ್ರಾರಂಭ ಮಾಡುತ್ತೇನೆ...

ಅಧ್ಯಕ್ಷರು.—ಈಗ ಆ ಬ್ಯಾಂಕುಗಳ ವಿಷಯ ಚರ್ಚೆ ಮಾಡುವುದು ಬೇಡ......

ಶ್ರೀ ಎಚ್. ಡಿ. ದೇವೇಗೌಡ.—ನಾನು ಅಧ್ಯಕ್ಷರ ಮಾತಿಗೆ ಎಂದೂ ಬದಲು ಹೇಳತಕ್ಕವನಲ್ಲ. ಆದರೆ ತಕಾವಿ ಸಾಲಗಳನ್ನು ಹಂಚತಕ್ಕ ಬಗ್ಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳು ಅಂದರೆ 19 ಜಿಲ್ಲೆಯಲ್ಲಿರತಕ್ಕ ಬ್ಯಾಂಕುಗಳು ಹೇಗೆ ಹೇಗೆ ವ್ಯವಹಾರ ನಡೆಸಿವೆ ಅನ್ನುವುದನ್ನೂ ಕೂಡ ವಿಶದವಾಗಿ ಚರ್ಚೆ ಮಾಡಬೇಕಾದ್ದು ಅಗತ್ಯ. ಸರ್ಕಾರದವರು ಇವುಗಳ ಪೂರ್ಣಾಧಿಕಾರವನ್ನು ಅಧಿಕಾರಿಗಳ ಕೈಗೆ ಏಕೆ ಕೊಟ್ಟಿದ್ದಾರೆ, ಅದರ ಹಿನ್ನೆಲೆ ಏನು ಎಂಬುದನ್ನು ಆ ಚರ್ಚೆಯ ಕಾಲದಲ್ಲಿ ತಿಳಿಸುತ್ತೇನೆ. ಆದರೆ ಮಾನ್ಯ ಮಂತ್ರಿಗಳು ಈ ಹಿಂದೆ ಒಂದು ಮಾತನ್ನು ಜಪ್ಪಣೆ ಕೊಡಿಸಿದ್ದಾರೆ ಅದೇನೆಂದರೆ—'ಅವರ ವಿಚಾರದಲ್ಲಿ ನಮಗೇನೂ ಅಷ್ಟು ಕಳಕಳಿ ಇಲ್ಲವೇ'—ಎಂದು. ಆದರೆ ಇದರ

ಸಂಬಂಧವಾಗಿಯೇ ನಾನು ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ—ಇವರು ಈ ಹಿಂದೆ ಇಂತಿಂಥ ಜಿಲ್ಲೆಗೆ ಇಂತಿಂಥ ಮಂತ್ರಿಗಳು ಹೋಗಿ ಅಲ್ಲಿಯ ಕೆಲಸ ಕಾರ್ಯಗಳನ್ನು ಸೂಪರ್‌ವೈಜ್ ಮಾಡುತ್ತಿರಬೇಕೆಂದು ಒಂದು ನಿರ್ದಿಷ್ಟವಾದ ಆಜ್ಞೆಯನ್ನು ಮಾಡಿದ್ದರು. ಅದರ ಪ್ರಕಾರ ಬಿಜಾಪುರ ಜಿಲ್ಲೆಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಎಷ್ಟು ದಿನ ಈ ತಿಂಗಳಲ್ಲಿ ಹೋಗಿದ್ದರು ? ಈ ಸಭೆಗೆ ಕಳೆದ 8 ದಿನಗಳಿಂದ ವಿರಾಮವಿತ್ತು. ಆ ವಿರಾಮದಲ್ಲಿ ಏನಾದರೂ ಹೋಗಿದ್ದಾರೇ ? ಅಲ್ಲಿಯ ಜನರ ಕಷ್ಟ ಸುಖಗಳನ್ನು ವಿಚಾರಿಸಿಕೊಂಡು ಬಂದಿದ್ದಾರೆಯೇ ! ಈ ಅಧಿವೇಶನದ ವಿರಾಮ ಕಾಲದಲ್ಲಿ ಬರಗಾಲಪೀಡಿತ ಪ್ರದೇಶಕ್ಕೆ ಯಾವ ಯಾವ ಮಂತ್ರಿಗಳು ಎಷ್ಟೆಷ್ಟು ದಿನಗಳ ಪ್ರವಾಸ ಮಾಡಿಕೊಂಡು ಬಂದು ಏನೇನು ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಸಭೆಯ ಮುಂದೆ ಇಡುವರೇ ? ಆದರೆ ಮುಖ್ಯಮಂತ್ರಿಗಳಿಗೇನೋ ವಿರಾಮ ಸಿಕ್ಕುವುದು ಕಷ್ಟ. ಮೈಸೂರು, ಹಾಸನ ಜಿಲ್ಲೆಗಳಲ್ಲಿ ತಿರುಗುವುದಕ್ಕೆ ಅವಕಾಶವಿತ್ತು, ಆದರೆ ಆ ಬೀದರ್ ಇತ್ಯಾದಿ ಬರಗಾಲಪೀಡಿತ ಪ್ರದೇಶಕ್ಕೆ ಹೋಗಲು ಇವರಿಗೆ ಅವಕಾಶವಿರಲಿಲ್ಲವೋ ?

ಶ್ರೀ ಡಿ. ದೇವರಾಜ ಅರಸ್.—ಇದು ರಾಜಕೀಯ ಭಾಷಣ ಆಯಿತು. ಮೈಸೂರು, ಹಾಸನಗಳಲ್ಲಿ ಗಹನವಾದ ಕೆಲಸಗಳು ಇರುವುದಿಲ್ಲವೋ ? ತಾವು ಆ ಹಾರಂಗಿ ಹೇಮಾವತಿ ವಿಚಾರ ಬಂದರೆ ಅವೂ ಗಹನವಾದ ವಿಚಾರಗಳೇ. ಆದರೆ ಮಂತ್ರಿಗಳು ಹೋದರೆ ಅದು ಗಹನವಾದ ಕಾರ್ಯವಲ್ಲ ಎನ್ನುತ್ತೀರಾ ; ಹಾಗಾದರೆ ಮಂತ್ರಿಗಳು ಎಲ್ಲಿಯೂ ಪ್ರವಾಸ ಮಾಡಬೇಕಾರದೆಂದು ಹೇಳುತ್ತೀರಾ ! ನಾನೇ ಆ ಗುಲ್ಬರ್ಗ ಜಿಲ್ಲೆಗೆ ಸಂಬಂಧಪಟ್ಟ ಮಂತ್ರಿಗಳಾದ ಶ್ರೀ ರಾಥೋಡ್ ಅವರ ಜೊತೆಗೆ ಇನ್ನಿಬ್ಬರು ಸಚಿವರನ್ನು ಕರೆದುಕೊಂಡು, ನಾಲ್ಕು ದಿನಗಳ ಮಟ್ಟಿಗೆ ಆ ಪ್ರದೇಶದಲ್ಲಿ ಸಂಚಾರ ಮಾಡಿಕೊಂಡು ಬನ್ನಿ ಎಂದು ಹೇಳಿದ್ದೆ. ಅವರು ಅಲ್ಲಿಗೆ ಹೋಗಿ ಸಂಚಾರ ಮಾಡಿಕೊಂಡು ಬಂದು ನನಗೆ 15 ಹಳ್ಳಿಗಳಲ್ಲಿ ಸಂಚಾರ ಮಾಡಿದ್ದರ ಬಗ್ಗೆ ಒಂದು ವರದಿಯನ್ನೂ ಕೂಡ ಕೊಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ ಆ ಪ್ರದೇಶಕ್ಕೆ ಅವರ ಮಂತ್ರಿಗಳೂ ಹೋಗಿ ನೋಡಿಕೊಂಡು ಬಂದು ವರದಿಯನ್ನು ಕೊಟ್ಟಿದ್ದಾರೆ ಎಂದು. ನಾನೂ ಹೇಳುತ್ತಿದ್ದೇನೆ, ಈ ಅಧಿವೇಶನಕ್ಕೆ ವಿರಾಮವಿದ್ದ 8 ದಿನಗಳಲ್ಲಿ ಆ ಕ್ಷಾಮಪೀಡಿತ ಪ್ರದೇಶಕ್ಕೆ ಹೋಗಿ ಅಲ್ಲಿ ಏನೇನು ನೋಡಿದೆವು ಅದನ್ನು ಮಾತ್ರವೇ ಹೇಳುತ್ತಿದ್ದೇನೆ. ನೋಡದೆ ಇದ್ದ ವಿಚಾರವನ್ನು ನಾನು ಎಂದೂ ಹೇಳತಕ್ಕವನಲ್ಲ. ಇದರಲ್ಲಿ ಒಂದು ಮೋಟೀವ್ ಇಟ್ಟುಕೊಂಡು ಮಾತನಾಡುವುದರಿಂದ ಯಾವ ಪುಣ್ಯಪುರುಷಾರ್ಥಗಳೂ ಸಾಧನೆಯಾಗುವುದಿಲ್ಲ ಅನ್ನುವುದು ನನಗೆ ಗೊತ್ತಿದೆ. ಆದರೆ ಇವರು ಕಳುಹಿಸಿದ್ದ ಮಂತ್ರಿಗಳು ಯಾವ ಯಾವ ತಾಲ್ಲೂಕಿಗೆ ಹೋಗಿದ್ದರು ಅಲ್ಲಿ ಯಾವ ಜಾಗಕ್ಕೆ ಹೋಗಿದ್ದರು ? ಬೀದರಿನ 4 ತಾಲ್ಲೂಕುಗಳಲ್ಲಿ ಯಾವ ಯಾವ ಹಳ್ಳಿಗೆ ಹೋಗಿದ್ದರು ಎಂಬುದನ್ನು...

ಶ್ರೀ ಡಿ. ದೇವರಾಜ್ ಅರಸ್.—ನಾನೂ ಕೂಡ ಎಷ್ಟೋ ವೇಳೆ ಜನರು ಹೇಳುವುದನ್ನು ಕೇಳಿದ್ದೇನೆ—ತಾವು ಯಾವ ಸ್ಥಳಕ್ಕೆ ಹೋಗಿ ಬಂದಿರುತ್ತೀರೋ ಅದೇ ಸ್ಥಳಕ್ಕೆ ನಾವು ಮತ್ತೆ ಹೋಗಿ 'ಇಲ್ಲಿಗೆ ಇಂಥವರು ಬಂದಿದ್ದರೇ' ಎಂದು ಕೇಳಿದರೆ, ಇಲ್ಲಾ ಸ್ವಾಮಿ ಯಾರೂ ಬಂದೇ ಇಲ್ಲ ಎಂದು ಹೇಳಿಬಿಡುತ್ತಾರೆ. ಅನೇಕ ಕಾನ್‌ಸ್ಟಿಟ್ಯುಯೆನ್ಸಿಗಳಲ್ಲಿ ಜನರು ಹೀಗೆ ಹೇಳುವುದುಂಟು.

ಹೀಗೆ ಒಂದಾವರ್ತಿ ನಾರ್ತ್ ಕ್ಯಾನರಾದ ಹಳಿಯಾಳದ ಕ್ಷೇತ್ರದಲ್ಲಿ ಅಲ್ಲಿಯ ಸದಸ್ಯರ ಬಗ್ಗೆ ಹೀಗೆ ನಡೆದಿತ್ತು. ಆದರೆ ಇದರಲ್ಲಿ ಇನ್ನೂ ಒಂದು ವಿಷಯ. ಒಂದು ಜಿಲ್ಲೆಯಲ್ಲಿ ಸಾವಿರಾರು ಹಳ್ಳಿಗಳಿರುತ್ತವೆ. ಅವುಗಳನ್ನೆಲ್ಲಾ ಸುತ್ತಿಕೊಂಡು ಬರಲು ಯಾರಿಗೆ ತಾನೇ ಸಾಧ್ಯ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳ ವಾದಸರಣಿಯನ್ನು ನೋಡಿ ನನಗೆ ಬಹಳ ವ್ಯಥೆಯಾಗುತ್ತಿದೆ, ಅದಕ್ಕಾಗಿ ನಾನು ನನ್ನ ದುಃಖವನ್ನು ವ್ಯಕ್ತಪಡಿಸಬೇಕಾಗಿದೆ. ನನಗೆ ತಿಳಿದಿರುವ ಹಾಗೆ ಒಂದು ತಾಲ್ಲೂಕಿನಲ್ಲಿ 50 ಸೆಂಟರುಗಳಿರಬಹುದು, ಇನ್ನೊಂದು ತಾಲ್ಲೂಕಿನಲ್ಲಿ 56 ಸೆಂಟರುಗಳಿರಬಹುದು, ಮತ್ತೊಂದು ತಾಲ್ಲೂಕಿನಲ್ಲಿ 26 ಸೆಂಟರುಗಳೇ ಇರಬಹುದು ಆದರೆ ಪ್ರತಿ ಗ್ರಾಮಕ್ಕೂ ಹೋಗಿ ನೋಡಬೇಕೆಂಬ .....

ಶ್ರೀ ಡಿ. ದೇವರಾಜ್ ಅರಸ್.—ಪ್ರತಿ ಗ್ರಾಮಕ್ಕೂ ಹೋಗಿ ನೋಡಲೇಬೇಕೆಂಬುದೇನೂ ಇಲ್ಲ. ಎಲ್ಲಾ ಗ್ರಾಮಗಳನ್ನೂ ಪ್ರವಾಸ ಹೋದಾಗ ನೋಡಲು ಸಾಧ್ಯವೇ ? ಅದು ಇಂಪ್ರಾಕ್ಟಿಕೇಬಲ್.

ಶ್ರೀ ಎಚ್. ಡಿ. ದೇವೇಗೌಡ.—ಎಲ್ಲಾ ಗ್ರಾಮಗಳನ್ನೂ ನೋಡಬೇಕೆಂದು ನಾನು ಹೇಳುತ್ತಿಲ್ಲ. ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮನ್ನೇ ನೇಮಿಸುತ್ತೇನೆ, ಯಾವ ಕೆಲಸ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ.

ಶ್ರೀ ಎಚ್. ಡಿ. ದೇವೇಗೌಡ.—ಮಹಾರಾಷ್ಟ್ರದ ಎರಡು ಗ್ರಾಮಗಳಿಗೆ ನಾವು ಹೋಗಿ ನೋಡಿದ್ದೇವೆ, ಈ ವಿಷಯ ಚರ್ಚೆಯಾಗುವಾಗ ಅದನ್ನು ಹೇಳಬೇಕೆಂದಿದ್ದೆ. ಅಲ್ಲಿ ತೊಗರಿ ಎಂಬ ಗ್ರಾಮ ಮತ್ತು ಇನ್ನೊಂದು ಗ್ರಾಮವಿದೆ. ಒಂದು ಕಡೆ 7 ಕಮ್ಯೂನಿಟಿ ವೆಲ್ಸ್, ಇನ್ನೊಂದುಕಡೆ 6 ಕಮ್ಯೂನಿಟಿ ವೆಲ್ಸ್ ಮಾಡುತ್ತಿದ್ದಾರೆ, ಜೂನ್ 7 ರವರೆಗೆ ಕೆಲಸವನ್ನು ಖಾಯಂಮಾಗಿ ಕೊಡುವರು, ಈ ಬಗ್ಗೆ ನಂಬಿಕೆ ಕೊಟ್ಟಿದ್ದಾರೆ. ಕಳೆದ 15 ದಿವಸಗಳಿಂದ ಅಲ್ಲಿ ಪ್ರತಿಯೊಬ್ಬರಿಗೂ ಸುಖಡಿ ಹಂಚುತ್ತಿದ್ದಾರೆ, ಇನ್ನೂರು ಗ್ರಾಮಗಳಲ್ಲಿ ಸುಖಡಿ ಹಂಚಿದ್ದಾರೆ. ಅದು ಹೇಗಿದೆಯೆಂದು ತಿಂದು ನೋಡಬಹುದು.

(ಶ್ರೀ ವಾಟಾಳರು ಅದನ್ನು ತೋರಿಸುತ್ತಿದ್ದ ಹಾಗೆ ಕಂಡುಬಂತು.)

ಶ್ರೀ ವಾಟಾಳ್ ನಾಗರಾಜ್.—ಸುಖಡಿಯನ್ನು ನಾವು ನೋಡಿ ತಿಂದುಬಂದಿದ್ದೇವೆ.

ಶ್ರೀ ಡಿ. ದೇವರಾಜ್ ಅರಸ್.—ಒಂದೊಂದು ಸಲ ಒಂದೊಂದು ರೀತಿಯಲ್ಲಿ ಮಾತನಾಡುತ್ತಿದ್ದರೆ ಇದಕ್ಕೆ ಹೇಗೆ ಉತ್ತರ ಕೊಡುವುದು? ನಾವೂ ನೀವೂ ಕಲೆತು ಚರ್ಚೆ ಮಾಡೋಣ. ಇಲ್ಲದಿದ್ದರೆ ಇದರ ವಿಷಯವನ್ನು ಚರ್ಚೆಗೆ ತೆಗೆದುಕೊಂಡಾಗ ಹೇಳೋಣ. ಪ್ರತಿಯೊಂದಕ್ಕೂ ಈಗ ಉತ್ತರ ಕೊಡಲು ಹೇಗೆ ಸಾಧ್ಯ? ನೀವೊಂದು ಹೇಳುವುದು, ನಾವೊಂದು ಹೇಳುವುದು ಹೀಗಾದರೆ ಇದಕ್ಕೆ ಕೊನೆ ಮೊದಲೆಲ್ಲಿ?

ಶ್ರೀ ಎಚ್. ಡಿ. ದೇವೇಗೌಡ.—ಇದರ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಈಗ ಸುಮಾರು ಎರಡುವರೆ ಗಂಟೆಯಾಯಿತು ಈ ವಿಷಯದಮೇಲೆ ಮಾತನಾಡುವುದು ಶುರುವಾಗಿ. ಈಗಾಗಲೆ ಮುಕ್ಕಾಲು ಭಾಗ ಚರ್ಚೆಯಾಗಿದೆ, ಈ ಸಂಬಂಧವಾದ ಡಿಮ್ಯಾಂಡ್ ಬಂದಾಗ ಈ ವಿಚಾರದಲ್ಲಿ ಮಾತನಾಡಬಹುದು. I withhold my consent and refuse my permission.

Dharna by Members

ಶ್ರೀ ಎಚ್. ಡಿ. ದೇವೇಗೌಡ.—ನಾನು ತಮ್ಮ ರೂಲಿಂಗನ್ನು ವಿರೋಧಮಾಡುವುದಿಲ್ಲ. ಈ ಚರ್ಚೆಯಲ್ಲಿ ನಾವು ಭಾಗವಹಿಸುವುದಿಲ್ಲ, ಧರಣಿ ಮಾಡುತ್ತೇವೆ.

(ಶ್ರೀ ಯುತರುಗಳಾದ ದೇವೇಗೌಡ, ವಾಟಾಳ್ ನಾಗರಾಜ್, ಬಿ ಪುಟ್ಟಸ್ವಾಮಯ್ಯ ಮುಂತಾದ ವಿರೋಧ ಪಕ್ಷದ ಸದಸ್ಯರು ಧರಣಿ ಕುಳಿತರು)

ಶ್ರೀ ವಾಟಾಳ್ನಾಗರಾಜ್.—ನಿಮ್ಮ ಹೆಂಗಸರನ್ನು ಅಲ್ಲಿಗೆ ಕಳುಹಿಸಿ, ಗೊತ್ತಾಗುವುದು.

ಶ್ರೀ ಡಿ. ದೇವರಾಜ್ ಅರಸ್.—ಸುಮ್ಮನೆ ಹೀಗೆಲ್ಲಾ ಮಾತನಾಡಬೇಡಿ.

ಶ್ರೀ ವಾಟಾಳ್ ನಾಗರಾಜ್.—ನಡೆಯಿರಿ, ಅಲ್ಲಿಗೆ ಹೋಗೋಣ, ಬರೀ ಮಾತನಾಡುವ ವಿಷಯ ಇದಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಇದು ರಾಜಕೀಯ ಮಾಡುವ ವಿಷಯವಲ್ಲ.

ಶ್ರೀ ವಿ. ಎನ್ ಪಾಟೀಲ್.—ನಾವು ಧರಣಿ ಮಾಡುವುದಿಲ್ಲ, ವಾಕೌಟ ಮಾಡಬೇಕಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ತಾವು ರಾಜಕೀಯ ಮಾಡುವುದಿಲ್ಲವೆಂದು ಹೇಳಿದವರು ಈಗ ಮಾಡುತ್ತಿರುವುದೇನು? ಇದು ರಾಜಕೀಯದ ಪರಮಾವಧಿ. ದೇವರಿಂದ, ಪ್ರಕೃತಿಯಿಂದ ಉಂಟಾಗಿರುವ ತೊಂದರೆಯನ್ನು ನಿವಾರಣೆ ಮಾಡಬೇಕಾಗಿದೆ. ಅವರು ಮಾತು ಮಾತಿಗೂ ಸರಕಾರದೊಡನೆ ಸಹಕರಿಸುತ್ತೇವೆ ಎಂದು ಹೇಳುತ್ತಿದ್ದರು ಸಹಕಾರ ಕೊಡುವ ರೀತಿ ಇದು. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ವಿರೋಧ ಪಕ್ಷದಲ್ಲಿರುವ ಕಾಂಗ್ರೆಸ್ (ಒ) ನವರು ಸತ್ಯಾಗ್ರಹ ಕೆಲವು ದಿವಸ ಮಾಡಿದರು, ಆಫೀಸುಗಳಲ್ಲಿ ಕೆಲಸಕ್ಕೆ ತೊಂದರೆ ಮಾಡಿದರು. ಅದಕ್ಕೆ ಜನರ ಬೆಂಬಲ ಸಿಕ್ಕುತ್ತದೆ ಎಂದು ತಿಳಿದಿದ್ದರು. ದುರಾದೃಷ್ಟವಶಾತ್ ಜನಬೆಂಬಲ ಅದಕ್ಕೆ ಸಿಕ್ಕದೆ

ಅದರಿಂದೇನೂ ಆಗುವುದಿಲ್ಲ ಎಂದು ಸತ್ಯಾಗ್ರಹವನ್ನು ನಿಲ್ಲಿಸಿ ಧರಣಿ ಹೂಡಲು ಹವಣಿಸಿದ್ದಾರೆ. ಇದು ತುಂಬಾ ವಿಷಾದಕರ. ಅವರು ದೇಶದಲ್ಲಿ...(ವಿಪರೀತ ಗಲಾಟೆ) ಸ್ವಲ್ಪ ದಿವಸಗಳಲ್ಲಿ ಏನಾಗುತ್ತದೆಯೆಂಬುದು ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಟಿ ಬಿ ಗೆ ಹೋಗಿ ಕುಳಿತು ಅಲ್ಲಿ ಮಾತನಾಡುವುದಲ್ಲ ಇದು.

ಶ್ರೀ ಎಚ್. ಎನ್. ನಂಜೇಗೌಡ.—ಸಭಾಧ್ಯಕ್ಷರೇ ತಾವು ರೂಲ್ಸ್ ಪ್ರಕಾರ ಕ್ರಮ ಕೈಕೊಳ್ಳದಿದ್ದರೆ ಹೀಗೆ ಪದೇಪದೇ ನಡೆಯುತ್ತಿದ್ದರೆ ಸಭೆಯ ಕಾರ್ಯಕಲಾಪಗಳು ನಡೆಯುವುದಕ್ಕೆ ಭಂಗ ಬರುತ್ತದೆ. ಆದುದರಿಂದ ತಾವು ದಯೆಯಿಟ್ಟು ರೂಲ್ಸ್ ಅನುಸರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಕಾರ್ಯಕಲಾಪಗಳಿಗೆ ತೊಂದರೆಮಾಡುವವರನ್ನು ಹೊರಿಸಿಹಾಕಿದರೂ ಪರವಾಗಿಲ್ಲ. ಸಭೆಯ ಕಾರ್ಯಕಲಾಪಗಳು ಅವಶ್ಯಕವಾಗಿ ನಡೆಯಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಹೊರಿಸಿ ಹಾಕಿ, ನೋಡೋಣ.

ಶ್ರೀ ಕೆ. ಶ್ರೀರಾಮುಲು.—ದೇಶದಲ್ಲಿ ಜನರು ಬಡತನದಿಂದ ನರಳುತ್ತಿರುವಾಗ ಅದನ್ನು ಗಮನಿಸದೆ ಜನರು ಹೊಟ್ಟೆಗಿಲ್ಲದೆ ಸಾಯುತಿರುವಾಗ ಅವರಿಗೆ ಕನಿಕರ ತೋರಿಸದೆ ಇಲ್ಲಿ ಧರಣಿ ನಡೆಸುತ್ತಿದ್ದಾರೆ. ನಾನು ಒಂದು ಪ್ರಶ್ನೆ ಕೇಳುತ್ತೇನೆ. ಶ್ರೀ ವಾಟಾಳ್ ನಾಗರಾಜ್‌ರವರು ಆರಿಸಿ ಬಂದ ಕ್ಷೇತ್ರದ ಒಂದು ಕಾರ್ಖಾನೆಯಲ್ಲಿ ಎರಡು ಸಾವಿರ ಕೆಲಸಗಾರರು 2 ತಿಂಗಳಿಂದ ಕೆಲಸವಿಲ್ಲದೆ ಇದ್ದಾರೆ, ಕಾರ್ಖಾನೆ ಮುಚ್ಚಲ್ಪಟ್ಟಿದೆ. ಇದರ ಬಗ್ಗೆ ಒಂದು ಚಕಾರ ಅವರು ಮಾತನಾಡಿಲ್ಲ. ಅವರ ಜನ....(ಗಲಾಟೆ)

ಶ್ರೀ ವಾಟಾಳ್ ನಾಗರಾಜ್.—ಎಲ್ಲಾ ನಿಮ್ಮ ನೀತಿಯಿಂದಾಗಿದೆ.

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರಲ್ಲಿ ಮತ್ತಿತರರಲ್ಲಿ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಆಗಲೇ ಹೇಳಿದ ಹಾಗೆ ಎರಡು ದಿವಸಗಳಲ್ಲಿ ಇದಕ್ಕೆ ಸಂಬಂಧಪಟ್ಟ ಡಿಮ್ಯಾಂಡ್ ಬರುವುದು, ಆಗ ಇದರ ವಿಚಾರ ಮಾತನಾಡಬಹುದು. ದಯಮಾಡಿ ಈಗ ತಾವು ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ಮೀಟಿಂಗ್ ಮಾಡೋಣ ಎಂದು ಹೇಳಿದರು. ನೀವು ಹೇಳುವುದನ್ನು ಕೇಳಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಅವರು ಹೇಳುತ್ತಿದ್ದಾರೆ. ಹಾಗೆ ಹೇಳಿದಮೇಲೆ ಈ ರೀತಿ ಮಾಡುವುದರಲ್ಲಿ ಅರ್ಥವಿಲ್ಲ. ದಯಮಾಡಿ ತಮ್ಮ ಸ್ಥಳಗಳಿಗೆ ಹೋಗಬೇಕೆಂದು ಬಹಳ ಕಳಕಳಿಯಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಯಾರೂ ಹೋಗಲಿಲ್ಲ)

ಶ್ರೀ ಎಚ್. ಡಿ. ದೇವೇಗೌಡ.—ಚರ್ಚೆಗೆ ಅವಕಾಶ ಕೊಡಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಡಿಮ್ಯಾಂಡ್ ಮೇಲೆ ನಾವು ಚರ್ಚೆ ಮಾಡಬಹುದು. ಆದರೆ ಅದರ ಪರಿಣಾಮ ಏನಾಗುವುದು ಎಂಬುದನ್ನು ನಾವು ತಿಳಿದಿದ್ದೇವೆ. ಮೊದಲೇ ನಾನು ಹೇಳಿದೆ, ಈ ಚರ್ಚೆಮಾಡಲು ಇಚ್ಛೆ ಇಲ್ಲ, ಈಗಿರುವ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸ್ಥಳಕ್ಕೆ ಹೋಗೋಣ ಎಂದು ಹೇಳಿದೆ. ಒಂದು ಹಂತದಲ್ಲಿ ಹತೋಟಿ ಮೀರಿ ಹೋಗುವುದೋ ಏನೋ, ಅಂಥ ಪರಿಸ್ಥಿತಿ ಇದೆ. ಮುಖ್ಯಮಂತ್ರಿಗಳು ರಾಜಕೀಯ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ.

3-30 P.M.

ಅಧ್ಯಕ್ಷರು.—ದೇವೇಗೌಡರು, ದಯಮಾಡಿ ತಮ್ಮ ಸ್ಥಳಕ್ಕೆ ಹೋಗಿ ಮಾತನಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಕ್ಷಮಿಸಿ.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಇರುವುದು ಒಂದೇಮಾರ್ಗ, ರೂಲ್ 303ರ ಪ್ರಕಾರ ....

ಶ್ರೀ ಕೆ. ಎಫ್. ಪಾಟೀಲ್.—ಈ ಸಭೆಯನ್ನು ಮುಂದುವರಿಸಬೇಕು, ಮುಂದುವರಿಸುವ ಕ್ರಮ ತೆಗೆದುಕೊಂಡಿದ್ದಾರೆಯೇ ? ಇದು ಪ್ರಜಾಪ್ರಭುತ್ವದ ಕ್ರಮವೇ ?

Sri K. H. PATIL (Minister for Agriculture and Forests).—In view of the fact that you have ruled that permission is not granted, this amounts to a reflection on the Chair. Therefore, action is needed in this case.

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ತಾವೂ ಕೂಡ ಅವರಿಗೆ ಮನವಿ ಮಾಡಿದ್ದೀರಿ. ಈ ಸಮಸ್ಯೆ ಈಗ ತಾನೇ ಉದ್ಭವಿಸಿರುವುದು ಅಲ್ಲ. ತಿಂಗಳಗಟ್ಟಲೇ ಇರುವ ಸಮಸ್ಯೆ, ಇದಕ್ಕೆ ನಾವು ತಿಂಗಳಗಟ್ಟಲೆ ಕೆಲಸ ಮಾಡಬೇಕಾಗಿದೆ. ಈ ಕ್ಷಾಮ ಡಾಮರುಗಳ ವಿಚಾರದಲ್ಲಿ ನಮ್ಮ ರಾಜ್ಯದಲ್ಲಿ ಹಿಂದೆ ಎಂದೂ ಯಾವ ವಿರೋಧಪಕ್ಷದವರು ಮಾನ್ಯ ದೇವೇಗೌಡರು ವಿರೋಧಪಕ್ಷದಲ್ಲಿದ್ದಾಗಲೂ ಈ ರೀತಿ ಮಾಡಿದ್ದು ಇರಲಿಲ್ಲ. ಆದರೆ ಸರ್ಕಾರ ಇದರ ಬಗ್ಗೆ ಮಾಡಿರುವುದನ್ನು ಟೀಕೆ ಮಾಡಿದ್ದಾರೆ, ಸಲಹೆ ಕೊಟ್ಟಿದ್ದಾರೆ. ಅದರಂತೆ ಸಹಾಯಕರಾಗಿ ನಡೆದುಕೊಂಡಿದ್ದಾರೆಯೇ ಹೊರತು ಟ್ಯಾಕ್ಟಿಕ್ಸ್ ಎಂದು ಏನು ಹೇಳುತ್ತಾರೆ ಅದನ್ನು ಯಾರೂ ಮಾಡಿದ್ದು ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಚನ್ನಬಸಪ್ಪನವರು, ಸಿದ್ದವೀರಪ್ಪನವರು ಇದ್ದಾಗ ಹಿಂದೆ ಧರಣಿ ನಡೆದಿದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ನಾಗರಾಜ್ ಅವರಿಗೆ ಯಾವುದು ಸರಿಯೆಂದು ಗೊತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ಸಾರಿಗೆ ಮಂತ್ರಿಗಳು ಸ್ಪೀಕರ ಚೇರ್ ಅನ್ನು ಕಿತ್ತುಕೊಳ್ಳುವುದಕ್ಕೆ ಹೋಗಿದ್ದರು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧಪಕ್ಷದ ನಾಯಕರಿಗೆ ಪೂರ್ಣ ಕೋಪ ಬಂದಿರುವುದರಿಂದ ನಾನು ಮಾತನಾಡಿರುವುದು ಅವರ ಕಿವಿಗೆ ಹೋಗುತ್ತಾ ಇಲ್ಲ ಎಂದು ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಅವರ ಆರೋಗ್ಯಕ್ಕೆ ತೊಂದರೆಯಾಗಬಾರದು ಬ್ಲಡ್ ಪ್ರೆಷರ್ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಆರೋಗ್ಯದ ಚಿಂತನೆ ತಾವು ಮಾಡಬೇಡಿ, ಅನಾರೋಗ್ಯವಾದರೆ ತಮಗೆ ಉತ್ತಮವಲ್ಲವೇ ?

ಶ್ರೀ ವಾಟಾಳ್ ನಾಗರಾಜ್.—ಮೂರು ನಾಲ್ಕು ಜನ ಮುದುಕರು ಇದ್ದೀರಿ, ನೀವು ಮೊದಲು ಆರೋಗ್ಯ ನೋಡಿಕೊಳ್ಳಿ.

ಶ್ರೀ ಡಿ. ದೇವರಾಜ ಅರಸ್.—ಹಿಂದೆ ಇದು ನಡೆದಿಲ್ಲ, ದೈವೀಕೃತವಾದ ಕೆಲವು ಘಟನೆಗಳು, ಮನುಷ್ಯರ ಕೈಯಲ್ಲಿ ಆಗದಂಥ ಘಟನೆ ಬಂದಿದೆ.

ಶ್ರೀ ವಾಟಾಳ್ ನಾಗರಾಜ್.—ಮಹಾರಾಷ್ಟ್ರ ಸರ್ಕಾರದಲ್ಲಿಯೂ ಆಗಿದೆ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮನ್ನು ಮಹಾರಾಷ್ಟ್ರಕ್ಕೆ ಕಳುಹಿಸಿಕೊಡುತ್ತೇನೆ. ಅಲ್ಲಿ ಏನೇನು ಆಗುತ್ತದೆ ಎಂದು ನೋಡಿಕೊಂಡು ಬನ್ನಿ. ನನಗಂತೂ ಅವರು ಎಷ್ಟು ಹೇಳಿದರೂ ಮಹಾರಾಷ್ಟ್ರ ಸರ್ಕಾರಕ್ಕೆ ನಮ್ಮನ್ನು ಹೋಲಿಸಿಕೊಂಡು ಮಾತನಾಡುವುದು ಉಚಿತವಲ್ಲ ಎಂದು ಕಾಣುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮಹಾರಾಷ್ಟ್ರ ಸರ್ಕಾರದಲ್ಲಿ ಮಾಡಿರತಕ್ಕ ಕೆಲಸ ಮೈಸೂರಿನವರು ಮಾಡಿರತಕ್ಕ ಕೆಲಸಕ್ಕೆ ಕಡಿಮೆಯಾಗಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಮಹಾರಾಷ್ಟ್ರದ ವಿಚಾರ, ಇವರು ನೋಡಿದ್ದಾರೆಯೇ ? ಅವರು ಇವರು ಹೇಳುವುದನ್ನು ಕೇಳಿಕೊಂಡು ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ. ಅವರಿಗೂ ನಮಗೂ ಹೋಲಿಕೆ ಮಾಡಿಕೊಂಡು ಹೋಗುವುದು ಸರಿಯಲ್ಲ. It is not proper also. ಒಂದು ವಿಚಾರದಲ್ಲಿ ಮಹಾರಾಷ್ಟ್ರದವರು ಚೆನ್ನಾಗಿ ಮಾಡಿರಬಹುದು, ಇನ್ನೊಂದು ವಿಚಾರದಲ್ಲಿ ನಮ್ಮ ಮೈಸೂರಿನವರು ಚೆನ್ನಾಗಿ ಮಾಡಿರಬಹುದು. ಆದರೆ ಈ ರೀತಿ ಹೀಯಾಳಿಸತಕ್ಕದ್ದು ನಮಗೂ ನಿಮಗೂ ಸಲ್ಲತಕ್ಕ ಮಾತಲ್ಲ. ಅದನ್ನು ಬಿಟ್ಟು ನಾವು ಏನು ಮಾಡಬೇಕೋ ಅದನ್ನು ಹೇಳಿ. ಲೋಪದೋಷ ಏನಾದರೂ ಇದ್ದರೆ, ಹತ್ತಾರು ಸಲ ಹೇಳಿ ಕೇಳುತ್ತೇವೆ. ಇದೇ ಸಭೆಯಲ್ಲಿ ತಾವು ಹೇಳುತ್ತಿದ್ದೀರಿ, ನಿಮಗೆ ಸಹಕಾರ ಕೊಡುವ ಮನಸ್ಸು ಇದೆ, ರಾಜಕೀಯವಲ್ಲ ಎಂದು ಅವತ್ತೂ ಹೇಳಿದ್ದಾರೆ ಇಂದೂ ಹೇಳಿದ್ದಾರೆ. ಹೋಗಿ ತಿರುಗಿಕೊಂಡು ಬಂದಮೇಲೆ ಚರ್ಚೆ ಮಾಡೋಣ, ಕಾಲ ಬೇಕು ಎಂದು ಕೇಳಿದ್ದಾರೆ. ಅಲ್ಲಿಗೆ ಇವತ್ತು ಇವರು ಸಭೆಯನ್ನು ನಿಲ್ಲಿಸಬೇಕು ಎಂದು ತೀರ್ಮಾನ ಮಾಡಿ

ಕೊಂಡು ಬಂದಿದ್ದಾರೆ. ಸಭೆಯನ್ನು ಏನಾದರೂ ಮಾಡಿ ನಿಲ್ಲಿಸಬೇಕು, ಮುಂದುವರಿಸಕೂಡದು ನಿಲ್ಲಿಸುವ ಮಹತ್ಕಾರ್ಯ ಮಾಡಿದ್ದಾರೆ, ಎಂದು ಜನಗಳು ನೋಡಲಿ ಎಂದು ಬಂದಿದ್ದಾರೆ. ಇಂಥಕ್ಷಾಮ ಬಂದಿದ್ದರೂ ಎಷ್ಟು ಹೇಳಿದರೂ ಸಭೆ ನಿಲ್ಲಿಸಲಿಲ್ಲ, ಆದ್ದರಿಂದ ಈ ಜನರು ಯೋಗ್ಯರಲ್ಲ ಎಂದು ಜನಗಳನ್ನು ಎತ್ತಿ ಕಟ್ಟುವುದಕ್ಕೆ ನಮ್ಮ ಮೇಲೆ ತಿರುಗಿ ಛಾಣ ತಿರುಗಿಸುವುದಕ್ಕೆ ಇವರ ಪ್ರಯತ್ನ ಇರಬಹುದು. ಆದರೆ ಇವರು ಏನು ಮಾಡಿದರೂ ಜನಕ್ಕೆ ಗೊತ್ತಿದೆ, ಜನ ಎಲ್ಲರನ್ನೂ ಅಳತೆ ಮಾಡುತ್ತಾ ಇದ್ದಾರೆ. ಒಂದೊಂದು ಸಂದರ್ಭದಲ್ಲಿ ಜನರು ನಾವು ಎಷ್ಟೇ ಪ್ರಚಾರ ಮಾಡಿದರೂ ಸಹ, ಹೋದ ಸಾರಿ ಇವರು ಬೇಕಾದಷ್ಟು ಪ್ರಚಾರ ನಡೆಸಿದರು, ಆದರೆ ಜನ ಏನಾದರೂ ಕೇಳಿದರೇ ? ಎಲ್ಲಿ ಏನು ತೀರ್ಮಾನ ಮಾಡಬೇಕೋ ಅಲ್ಲಿ ಅವರು ಅದನ್ನು ಮಾಡಿದ್ದಾರೆ. ಕ್ಷಾಮ ಡಾಮರಗಳು ಇರತಕ್ಕ ಪ್ರದೇಶದಲ್ಲಿ ಇವರು ಏನು ಪ್ರಚಾರ ಮಾಡುವುದಕ್ಕೆ ಪ್ರಯತ್ನ ಪಟ್ಟರೂ, ಕಾಂಗ್ರೆಸ್ ಪಾರ್ಟಿಯು, ಕೆಲಸಗಾರರು, ಅಧ್ಯಕ್ಷರು, ಇನ್ನು ಬೇರೆ ಬೇರೆ ಜನ ಬೇಕಾದಷ್ಟು ಪ್ರಯತ್ನ ಮಾಡಿ ನೋಡಿದರೂ ಏನು ಮಾಡಿದರೂ ಜನ ಅವರ ಮಾತನಲ್ಲಿ ಏನು ಟೊಳ್ಳು ಇದೆ ಯೆಂದು ನೋಡಿದರು. ಚಳುವಳಿ, ದಾಂಧ್ಲೆ ಮಾಡುವುದು ಮತ್ತು ಡಿಸ್ಟ್ರಿಕ್ಟ್ ಆಫೀಸುಗಳನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿದ್ದಾರೆ, ತಾಲ್ಲೂಕು ಆಫೀಸ್ ಅನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಇದು ಎಲ್ಲಾ ಪ್ರಯತ್ನ ಮಾಡಿ ವಿಫಲರಾಗಿದ್ದಾರೆ. ಇವರು ಎಷ್ಟು ಕೂಗಾಡಿದರೂ ಇವರಿಗೆ ಜನ ಬೆಂಬಲ ಇಲ್ಲ ಎಂದು ಸಾರಿ ಸಾರಿ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—480 ಜನ ಪೋಲೀಸ್ ಅಧಿಕಾರಿಗಳನ್ನು ಇಟ್ಟುಕೊಂಡು ಐವಾನ್‌ಶಾಹಿಗಳಾಗಿ ಮೀಟಿಂಗ್ ಮಾಡಿಕೊಂಡು ಬಂದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮಂಥ ಪ್ರಚೋದಕರು ಇರುವಾಗ ನಾವು ಮಾಡಿದೇ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನೀವು ಮಾಡುವುದು ಗೊತ್ತಿದೆ. ನೀವು ಅದನ್ನು ನಡೆಸಿದರೆ ನಡೆಯುವುದಿಲ್ಲ, ಇದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನೀವು ಏನು ಮಾಡುವ ಹಾಗಿಲ್ಲ, ನಾವು ಮಾಡುವುದಕ್ಕೋಸ್ಕರ ಜನತೆ ನಮಗೆ ಅಧಿಕಾರವನ್ನು ಕೊಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರವನ್ನು ಸರಿಯಾಗಿ ಚಲಾಯಿಸಿ, I have got privilege, I have got every right.

ಶ್ರೀ ಡಿ. ದೇವರಾಜ್ ಅರಸ್.—Can you not understand ? ನೀವು ಮಾತನಾಡುವುದು ನಿಮಗೆ ಸರಿಯಾಗಿ ಅನ್ನಿಸುತ್ತದೆ, ಪ್ರಿವಿಲೇಜ್ ಇದ್ದರೆ ಅಪೋಜಿಷನ್ ಲೀಡರ್ ಹೇಗೆ ಬಿಹೇವ್ ಮಾಡಬೇಕು ? ಕೂತುಕೊಂಡು ಸರಿಯಾಗಿ ಬಿಹೇವ್ ಮಾಡಿ.

ಶ್ರೀ ಎಚ್. ಡಿ. ದೇವೇಗೌಡ.— ಬಿಹೇವಿಯರ್ ಬಗ್ಗೆ ನಿಮ್ಮ ಹತ್ತಿರ ನಾನು ಪಾಠ ಕಲಿಯಬೇಕಾಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಎಲ್ಲಾ ಕಲಿಯಬೇಕಾಗಿದೆ. You have got to learn.

Sri H. D. DEVE GGWDA.—People know, what I say.

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ಇವರು ಬೇಕಾದಷ್ಟು ಪ್ರಯತ್ನ ಮಾಡಿ ನೋಡಿದ್ದಾರೆ, ಜನರನ್ನು ಎತ್ತಿ ಕಟ್ಟುವುದಕ್ಕೆ ನೋಡಿದ್ದಾರೆ, ಎಷ್ಟು ಮಾಡಿದರೂ ಜನರನ್ನು ಎತ್ತಿ ಕಟ್ಟುವುದಕ್ಕೆ ಇವರಿಂದ ಸಾಧ್ಯವಾಗಲಿಲ್ಲ,

Sri B. B. SAYANAK.—I am on a point of order, when there are persons sitting in the Assembly, I want to know whether the House is in order or not ?

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ಪ್ರಜಾಪ್ರಭುತ್ವದಲ್ಲಿ ಇವರು ಎಷ್ಟೇ ಪ್ರಲಾಪ ಮಾಡಲಿ, ಇವರು ಎಷ್ಟೇ ಕಷ್ಟ ಪಡಲಿ, ಎಷ್ಟೇ ಜನಗಳನ್ನು ಎತ್ತಿ ಕಟ್ಟಿದರೂ ಕೂಡ ಇನ್ನೊಂದು ಚುನಾವಣೆ ಬರುವವರೆಗೆ ನಮ್ಮನ್ನು ಇವರು ಬುಡಮೇಲು ಮಾಡುವುದಕ್ಕೆ ಎಂದೆಂದಿಗೂ ಸಾಧ್ಯವಿಲ್ಲ. 1977ರ ಚುನಾವಣೆಯವರೆಗೆ ಇವರ ಬಿಲ್ಲು ಬಾಣ ಇಟ್ಟುಕೊಂಡು ಅಲ್ಲಿಯವರೆಗೆ ತಪಸ್ಸು ಮಾಡಲಿ. 1977ರ ಚುನಾವಣೆಯಲ್ಲಿ ಗೆದ್ದು ಬರುವ ಶಕ್ತಿ ಇದ್ದರೆ ಗೆದ್ದು ಬರಲಿ. ಅಲ್ಲಿಯವ

(ಶ್ರೀ ಡಿ. ದೇವರಾಜ ಅರಸ್).

ರಗೆ ಇವರು ಏನು ಪಿತೂರಿ ಮಾಡಿದರೂ, ಏನು ಜನರನ್ನು ಎತ್ತಿ ಕಟ್ಟುವುದಕ್ಕೆ ಪ್ರಯತ್ನ ಮಾಡಿದರೂ ನಮ್ಮ ಪಕ್ಷದ ಮಂತ್ರಿಮಂಡಲವನ್ನು ಉರುಳಿಸುವುದಕ್ಕೆ ಏನು ಮಾಡಿದರೂ ಸಾಧ್ಯವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅದು ನನ್ನ ಕೆಲಸವಲ್ಲ, ಮಂತ್ರಿಮಂಡಲ ಹೋದರೆ ಏನು, ಇದ್ದರೆ ಏನು ?

ಶ್ರೀ ವಾಟಾಳ್ ನಾಗರಾಜ್.—ನಿಮ್ಮವರೇ ಉರುಳಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಎಷ್ಟು ಸರ್ವ ಪ್ರಯತ್ನ ಮಾಡಿ ತಲೆಕೆಳಗೆ ನಿಂತು ತಪಸ್ಸು ಮಾಡಿದರೂ ಇವರಿಂದ ಅದು ಸಾಧ್ಯವಿಲ್ಲ. 1977ನೇ ಇಸವಿಯ ಚುನಾವಣೆ ಬರುತ್ತದೆ. ಈಗ ಇವರು ಏನು ಪ್ರತಾಪ ತೋರಿಸಿದರೂ ಆಗುವುದಿಲ್ಲ. ನಾವು ಕೆಟ್ಟ ಕೆಲಸ ಮಾಡಿದರೆ ಜನ ನಮ್ಮನ್ನು ಆಗ ತೆಗೆದುಹಾಕುತ್ತಾರೆ. ಅಲ್ಲಿಯವರೆಗೆ ಏತಕ್ಕೆ ಸ್ವಾಮಿ ತಮಗೆ ಈ ಪ್ರಲಾಪ ! ಪ್ರಜಾಪ್ರಭುತ್ವ ತಂತ್ರದಲ್ಲಿ ಅಪೋಜಿಷನ್ ಲೀಡರ್ ಅವರು ಚಳುವಳಿಗೆ ಕುಳಿತಿರುವುದು ಸರಿಯೇ ? ಇವರು ಪಾಠ ಕಲಿಯಬೇಕಾಗಿದೆ ಎಂದು ನನಗನ್ನಿಸುತ್ತದೆ. ಹೊಸಬರು ಬಂದಿದ್ದರೆ ಇದನ್ನು ಮಾಡುವುದು ಸರಿ ಹೋಗುತ್ತದೆ. ಅನುಭವಿಗಳು ಆದ ಅಪೋಜಿಷನ್ ಲೀಡರ್ ಈ ರೀತಿ ಮಾಡುವುದಕ್ಕೆ ಹೊರಟಿದ್ದಾರೆ. ನನಗೆ ಏನೂ ಕಲಿಸಬೇಕಾಗಿಲ್ಲ, ನಾವು ಕಲಿತಿದ್ದೇವೆ ಎಂದರೆ, ನಾವು ಕಲಿಸಬೇಕಾಗಿಲ್ಲ ನಿಮ್ಮ ವರ್ತನೆಯೇ ನೀವು ಕಲಿತಿಲ್ಲ ಎಂದು ತೋರಿಸಿಕೊಡುತ್ತದೆ. ಇದನ್ನು ಕಡ್ಡಾಯವಾಗಿ ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಬಹಳ ದಿವಸಗಳಿಂದ ರಿಪ್ರೆಸೆಂಟೇಷನ್ ನೋಡುತ್ತಿದ್ದೇನೆ ಆದರೂ ಈ ಮಾತು ಹೇಳುವುದಕ್ಕೆ ಇಷ್ಟವಿರಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಾವೇನೀಗ ಸಹ ಅದನ್ನು ನನಗೆ ಹೇಳಬೇಕಾಗಿಲ್ಲ.

Sri D. DEVARAJ URS.—I have a right to comment on your behaviour. ಮನೆಯಲ್ಲಿ ಕುಳಿತುಕೊಂಡು ತಾವು ಏನು ಮಾಡುತ್ತೀರೋ ಅದರ ಬಗ್ಗೆ ನನ್ನ ಕಾಮೆಂಟ್ ಇಲ್ಲ. ಆದರೆ I am concerned with what you do here. I am interested in that. Madam, I have a right to talk about the behaviour of a member who is here. What is he doing here ? ಮಾಡುವುದು ಮಾಡಿ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಅದು ನಡೆಯುವುದು ಇಲ್ಲ. ತಾವು ಬಹಳ ಅನುಭವಿಕರು. ಎರಡು ಟರ್ಮ್ ಮೆಂಬರ್ ಆಗಿದ್ದೀರಿ. ಅಪೋಸಿಷನ್ ಲೀಡರ್ ಆಗಿ ಸರಿಯಾಗಿ ಬಿಹೇವ್ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೆ. ಪ್ರಜಾಪ್ರಭುತ್ವದಲ್ಲಿ ಎರಡು ಪಕ್ಷಗಳು ಬೇಕೆ ಬೇಕು. ವಿರೋಧ ಪಕ್ಷಗಳು ಬೇಕು, ಆಡಳಿತ ಪಕ್ಷವೂ ಬೇಕು. ವಿರೋಧಪಕ್ಷದ ನಾಯಕರಾಗಿ ತಾವು ಕೆಲಸ ನಿರ್ವಹಿಸತಕ್ಕ ರೀತಿ ನಡತೆ ಏನು ಎಂದರೆ ನಾವು ತಪ್ಪು ಮಾಡಿದರೆ ಟೀಕೆ ಮಾಡುವುದಕ್ಕೆ ನಿಮಗೆ ಅಧಿಕಾರವಿದೆ. ಒಂದುವೇಳೆ ಅವರು ಮಾಡಿದ ಟೀಕೆಯನ್ನು ಪರಿಗಣಿಸದೆ ನಾವು ಸರಿಯಾಗಿ ಕೆಲಸಮಾಡಲಿಲ್ಲ ಎಂದರೆ ಅದರ ಪರಿಣಾಮ ಕ್ಯುಮುಲೇಟೀವ್ ಎಫೆಕ್ಟ್ ಚುನಾವಣೆ ಬಂದಕಾಲಕ್ಕೆ ಬರುತ್ತದೆ. ಇದು ಬಿಟ್ಟು ತಮ್ಮ ಮೂಗಿನ ನೇರಕ್ಕೆ ತೋಚಿದಂತೆ ತಾವು ಮಾಡಿದರೆ ಇದು ಸರಿಯೇ ? ತಾವು ಹೇಳಿದಂತೆ ಮಾಡದೆ ಹೋದರೆ ಧರಣಿಮಾಡುತ್ತೇವೆ ಮುಷ್ಕರ ಮಾಡುತ್ತೇವೆ, ಕೂಗಾಟ ಮಾಡುತ್ತೇವೆ ಎಂದರೆ ಇದು ಯಾವ ಪದ್ಧತಿ ತಾವು ಕಲಿತು ಕೊಂಡು ಬಂದಿದ್ದೀರಿ ? ಯಾವ ದೇಶದಲ್ಲಿ ಈ ರೀತಿ ಪ್ರಜಾಪ್ರಭುತ್ವ ನಡೆಯುತ್ತಿದೆ ? ಸರ್ಕಾರವನ್ನು ನಡೆಸುವುದಕ್ಕೆ ನಮಗೆ ಒಂದು ಸಾರಿ ಜನತೆ ಚುನಾವಣೆಯಲ್ಲಿ ಅವರ ಮತವನ್ನು ಕೊಟ್ಟಿದ್ದಾರೆ, 5 ವರ್ಷಗಳವರೆಗೆ ಈ ಪಕ್ಷ ನಡೆಯತಕ್ಕದ್ದು, ಅಧಿಕಾರವನ್ನು ಚಲಾಯಿಸತಕ್ಕ ಅಧಿಕಾರ ಇದೆ, ಆದ್ದರಿಂದ ನಾವು ಸರ್ಕಾರನಡೆಸುತ್ತಿದ್ದೇವೆ. ಇವರು ಹೇಳಿದ ಹಾಗೆ ನಾವು ನಡೆಯುವಂತಿಲ್ಲ. ಹಾಗಿದ್ದರೆ ಅವರನ್ನೆ ಅಧಿಕಾರಕ್ಕೆ ತರಬೇಕಿತ್ತು. ನಾವು ಏತಕ್ಕೆ ಬರಬೇಕು ? ಈ ಒಂದು ಸಿಂಪಲ್ ಪ್ರೊಪೋಸಿಷನ್ ವಿರೋಧ ಪಕ್ಷದ ನಾಯಕರಿಗೆ ಗೊತ್ತಿಲ್ಲ. ಅರ್ಥವಿಲ್ಲದೆ ಗಲಾಟೆ ಮಾಡುತ್ತಾರೆ. ಅಬ್‌ಸ್ಟ್ರಕ್ಷನ್ ಮಾಡುವುದು ಪ್ರಯೋಜನವಿಲ್ಲ. ಅವರನ್ನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ, ಅವರು ವಿರೋಧಪಕ್ಷದ ಸದಸ್ಯರ ಹಾಗೆ ಮತ್ತು ವಿರೋಧಪಕ್ಷದ ನಾಯಕರ ಹಾಗೆ ನಡೆದುಕೊಳ್ಳಲಿ, ಕುಳಿತುಕೊಂಡು ಚರ್ಚೆಮಾಡಲಿ, ಚರ್ಚೆಗೆ ಉತ್ತರ ಬಂದಂತೆ ನಡೆದುಕೊಳ್ಳೋಣ. ಅಧ್ಯಕ್ಷರು ಏನು ರೂಲಿಂಗ್ ಕೊಟ್ಟಿದ್ದಾರೆ. ಅದನ್ನು ಗೌರವಿಸಲಿ ಅದು ಬಿಟ್ಟು ಬಿಟ್ಟು ಸಭೆ ನಡೆಸುವುದಕ್ಕೆ ಅವಕಾಶ ಕೊಡುವು

ದಿಲ್ಲ ಎಂದರೆ ರೂಲ್ಸ್ 308-309ರ ಪ್ರಕಾರ ತಾವು ಅವರ ಹೆಸರನ್ನು ಹೇಳಬೇಕಾಗುತ್ತದೆ. ಅವರು ಹೊರಗಡೆ ಹೋಗಬೇಕಾಗುತ್ತದೆ. ಇದರ ಬಗ್ಗೆ ತಾವು ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಪ್ರಜಾಪ್ರಭುತ್ವದ ವಿರುದ್ಧದ ಸರ್ಕಾರಕ್ಕೆ ಧಿಕ್ಕಾರ, ದೇವರಾಜ್ ಅರಸ್‌ರವರ ಸರ್ಕಾರಕ್ಕೆ ಧಿಕಾರ (ಗಲಭೆ).

SRI D. DEVARAJ URS.—I move :

"That members who are on Dharna be named and then they may be removed"

MADAM SPEAKER.—I adjourn the House for half an hour.

The House Adjourned at Forty Five minutes past Three of the Clock and re-assembled at Five of the Clock.

[MADAM SPEAKR in the Chair]

STATEMENT OF THE CHIEF MINISTER :

re : Two Minister of the Government to inspect the relief Operations in Gulbarga and Bidar

† ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ವಿರೋಧ ಪಕ್ಷದ ಸದಸ್ಯರುಗಳೇನು ಧರಣಿ ಮಾಡುತ್ತಿದ್ದಾರ, ಇದರ ಬಗ್ಗೆ ನಾನು ಆಗಲೇ ಹೇಳಿರುವುದರ ಜೊತೆಗೆ ಮತ್ತೆ ತಮ್ಮ ಮುಖೇನ ಅವರಿಗೆ ವಿನಂತಿಸಿಕೊಳ್ಳುವುದೇನೆಂದರೆ ವಿರೋಧಪಕ್ಷದ ನಾಯಕರು ಮತ್ತಿತರರೇನು ಆ ಬರಗಾಲಪೀಡಿತ ಪ್ರದೇಶಕ್ಕೆ ಹೋಗಿ ಪ್ರವಾಸ ಮಾಡಿಕೊಂಡು ಮಾಹಿತಿಯನ್ನು ಪಡೆದುಕೊಂಡು ಬಂದಿದ್ದಾರೋ ಅದನ್ನು ನಾನು ಮೊದಲೇ ಹೇಳಿದಂತೆ ನನ್ನ ಕಡೆಗೆ ಅವರು ದಯಮಾಡಿ ಕೊಡಲಿ ಎಂದು ನಮ್ರತೆಯಿಂದ ಅವರನ್ನು ಕೇಳಿಕೊಳ್ಳುತ್ತೇನೆ. ಅವರು ಪಟ್ಟಿಯನ್ನು ಕೊಟ್ಟರೆ ಅದರ ಬಗ್ಗೆ ಪ್ರತಿಯೊಂದನ್ನೂ ನೋಡಿಸುತ್ತೇನೆ. ಆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ. ಆದರೆ ನಾನಾಗಲೇ ಹೇಳಿದಂತೆ ಪರೋಕ್ಷವಾಗಿಯೋ ಅಥವಾ ತಿಳುವಳಿಕೆಯಿಲ್ಲದೆಯೋ ನಮ್ಮ ಕೆಲಸ ಕಾರ್ಯಗಳಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವುಗಳನ್ನು ಕೂಡಲೆ ಸರಿಪಡಿಸಿ ಜನತೆಗೆ ಅನುಕೂಲವಾಗುವಂತೆ ಅಲ್ಲಿ ಕೆಲಸ ಕಾರ್ಯಗಳು ನಡೆಯುವುದಕ್ಕೆಷ್ಟು ಪ್ರಯತ್ನ ಮಾಡಬೇಕೋ ಅಷ್ಟನ್ನೂ ಮಾಡುತ್ತೇವೆ ಎಂದು ನಾನು ಮತ್ತೊಮ್ಮೆ ಅಧ್ಯಕ್ಷರ ಮೂಲಕ ಸಭೆಯ ಸದಸ್ಯರಿಗೆಲ್ಲಾ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಅವರೂ ಮತ್ತು ನಾವು ಇಬ್ಬರೂ ಕೂಡಿ ಜನತೆಗೆ ಅನುಕೂಲ ಮಾಡಿಕೊಡೋಣ ಎಂದು ನಾನು ಅವರಲ್ಲಿ ಬಹಳ ಕಳಕಳಿಯಿಂದ ನನ್ನ ಆಸೆಯನ್ನು ವ್ಯಕ್ತಪಡಿಸುತ್ತಿದ್ದೇನೆ.

ಈ ಅಧಿವೇಶನದ ಕಾರ್ಯಕಲಾಪಗಳು ನಡೆಯುತ್ತಿರುವುದು, ಹೀಗೇ ಇದು ನಡೆಯುತ್ತಿರಲಿ. ನಾನು ಯಾರಾದರೂ ಇಬ್ಬರು ಮಂತ್ರಿಗಳನ್ನು ವಿರೋಧಪಕ್ಷದವರ ಜೊತೆಯಲ್ಲಿ ಕಳುಹಿಸಿಕೊಡುವುದಕ್ಕೆ ಸಿದ್ಧವಾಗಿದ್ದೇನೆ. ವಿರೋಧಪಕ್ಷದಲ್ಲಿ ಅವರು ಆರಿಸತಕ್ಕವರು ಅವರು ಯಾರಾದರೂ ಇರಲಿ. ಅವರು ಮತ್ತು ಆ ಮಂತ್ರಿಗಳು ಆ ಪ್ರದೇಶದಲ್ಲಿ ಪ್ರವಾಸ ಮಾಡಿ ಅವರು ಎಲ್ಲಿ ಏನು ಅನಾನುಕೂಲಗಳನ್ನು ಕಂಡರೆ ಅವುಗಳನ್ನು ಪರಿಹರಿಸುವುದಕ್ಕೆ ಅಲ್ಲೇ ಆ ಸ್ಥಳದಲ್ಲೇ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ಹೇಳುತ್ತೇನೆ. ನಮ್ಮ ಮಂತ್ರಿಮಂಡಲದ ಪರವಾಗಿ ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರನ್ನೂ ಮತ್ತು ಇನ್ನು ಯಾರಾದರೂ ಒಬ್ಬರು ಮಂತ್ರಿ

(ಶ್ರೀ ಡಿ. ದೇವರಾಜ ಅರಸ್)

ಗಳನ್ನು ಕಳುಹಿಸಿಕೊಡುತ್ತೇನೆ. ಇನ್ನು ಇದಕ್ಕಿಂತಲೂ ಸರ್ಕಾರ ಹೆಚ್ಚೇನು ಮಾಡ ತಕ್ಕದ್ದಿದೆ ? ಆದರೆ ಇಂಥ ದೊಡ್ಡ ಪ್ರಮಾಣದಲ್ಲಿ ಕೆಲಸಕಾರ್ಯಗಳು ನಡೆಯುತಕ್ಕ ಕಡೆ, ಅದರ ಹಿಂದೆ ಎಂದೂ ಇಂಥಾ ದೊಡ್ಡ ಪ್ರಮಾಣದಲ್ಲಿ ಈ ಕ್ಷಾಮನಿವಾರಣಾ ಕೆಲಸ ಕಾರ್ಯಗಳು ನಡೆದಿರಲಿಲ್ಲ, ಕೆಲವು ಅಪ್ಪಿತಪ್ಪಿ ಲೋಪದೋಷಗಳಿರಬಹುದು. ಎಲ್ಲವೂ ನೆಟ್ಟಗೇ ನಡೆದಿದೆ ಎಂದು ನಾನು ಎಂದೂ ಹೇಳಲಿಲ್ಲ. ಅಲ್ಲಿ ಈ ಕೆಲಸಕಾರ್ಯಗಳು ಎಷ್ಟು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿವೆಂಬು ದಕ್ಕೆ ಉದಾಹರಣೆಗಾಗಿ ಹೇಳುವುದಾದರೆ ಆ ಗುಲ್ಬರ್ಗಾ ಜಿಲ್ಲೆ ಒಂದರಲ್ಲಿ 2 ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಒಂದೊಂದು ಜಿಲ್ಲೆಯಲ್ಲೂ ಆ ಜಿಲ್ಲೆಯಲ್ಲಿ ಇರತಕ್ಕ ಜನಸಂಖ್ಯೆಯಲ್ಲಿ ಸುಮಾರು ಶೇಕಡ 20 ರಷ್ಟು ಜನರು ಈ ಕ್ಷಾಮ ನಿವಾರಣಾ ಕೆಲಸದಲ್ಲಿ ತೊಡಗಿದ್ದಾರೆ. ಅಂದಾಗ ಈ ಕೆಲಸ ಎಷ್ಟು ದೊಡ್ಡ ಪ್ರಮಾಣದ್ದು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಆ ವಿಚಾರ ಗಳನ್ನು ನಾನು ಹಿಂದೆ ಕೂಡ ಇದೇ ಸಭೆಯಲ್ಲಿ ಹೇಳಿಕೆ ಮೂಲಕ ಮತ್ತು ಪುಸ್ತಕಗಳನ್ನು ಪ್ರಿಂಟ್ ಮಾಡಿಸುವುದರ ಮೂಲಕ ಹೇಳಿದ್ದೇನೆ. ಅವನ್ನು ಸಭೆಗೆ ಹಂಚಲಾಗಿದೆ, ಮತ್ತು ಎಷ್ಟೋ ಸಾರ್ತಿ ಈ ವಿಚಾರವನ್ನು ನಾನು ಸಭೆಯಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ನಾನು ಹಿಂದೆ ಸಹಾ ಇದೇ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾಗ ಅಲ್ಲಿ 10 ಲಕ್ಷ ಜನರಿಗೆ ಕೆಲಸವನ್ನು ಒದಗಿಸಬೇಕೆಂಬ ಅಂದಾಜನ್ನು ಇಟ್ಟುಕೊಂಡಿದ್ದೇವೆಂದು ಹೇಳಿದ್ದೇನೆ. ಈ ದಿವಸ ಸರ್ಕಾರ ಅಲ್ಲಿ ಕೈಗೊಂಡಿರತಕ್ಕ ಕೆಲಸಗಳ ಏರ್ಪಾಡೇನಿದೆ ಅದು ಐದು ಲಕ್ಷಕ್ಕೇ ನಿಂತಿಲ್ಲ—ಅದನ್ನು ಹತ್ತು ಲಕ್ಷಕ್ಕೂ ಯಾವಾಗ ಬೇಕೆಂದರೆ ಆಗ ಕೆಲಸವನ್ನು ಒದಗಿಸುವುದಕ್ಕೆ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದೆ. ಮೊನ್ನೆ ಮೂರು ದಿನಗಳ ಕೆಳಗೆ ಜಿಲ್ಲಾಧಿಕಾರಿಗಳ ಕಾನ್‌ಫರೆನ್ಸ್ ನಡೆದಾಗ ಅಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಏನೇನು ಕೆಲಸಗಳಾಗಿವೆ, ಎಷ್ಟು ಜನರು ಕೆಲಸಕ್ಕೆ ಬಂದಿದ್ದಾರೆಂಬುದರ ಮಾಹಿತಿ ಕೇಳಿದಾಗ ಅಲ್ಲಿನ ಅಧಿಕಾರಿಗಳು ಹೇಳುತ್ತಿದ್ದಾರೆ, ಕೆಲಸವೇನೋ ಇದೆ, ಆದರೆ ಜನರೇ ಬರುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಎಲ್ಲಿ ಜನರು ಕೆಲಸವನ್ನು ಒದಗಿಸಬೇಕೆಂದು ಕೇಳುತ್ತಾರೆ ಅಲ್ಲೇ ಅವರಿಗೆ ಅಧಿಕ ಪ್ರಮಾಣದಲ್ಲಿ ಒದಗಿಸಬೇಕೆಂದರೆ ಬಹಳ ಕಷ್ಟವಾಗುತ್ತದೆ. ಕೆಲವು ಗ್ರಾಮಗಳಿಗೆ ಕೆರೆಗಳಿ ರುತ್ತವೆ, ಕೆಲವು ಗ್ರಾಮಗಳಿಗೆ ಕೆರೆಗಳೂ ಇರುವುದಿಲ್ಲ. ಇನ್ನು ಕೆಲವು ಗ್ರಾಮಕ್ಕೆ ಚಿಕ್ಕ ಕೆರೆ ಇದ್ದರೆ ಕೆಲವು ಗ್ರಾಮಕ್ಕೆ ದೊಡ್ಡ ದೊಡ್ಡ ಕೆರೆಗಳಿರುತ್ತವೆ. ಅಂಥಾ ಕಡೆಯಲ್ಲಿ ಹೆಚ್ಚು ಜನರಿಗೆ ಕೆಲಸವನ್ನು ಒದಗಿಸಬಹುದು. ಇನ್ನು ಕೆಲವು ಗ್ರಾಮಗಳಲ್ಲಿ ರಸ್ತೆ ಕೆಲಸಗಳನ್ನು ಕೊಡೋಣ ಎಂದರೆ ಅಲ್ಲಿ ರಸ್ತೆಗಳೂ ಸಹಾ ಇರುವುದಿಲ್ಲ. ಆದುದರಿಂದ ಸಾಧಾರಣವಾಗಿ ನಾವು ಅಲ್ಲಿ ಈ ಸಾಯಿಲ್ ಕನ್‌ಸರ್ವೇಷನ್ ಕೆಲಸ ಮತ್ತು ಅಫಾರಸ್ಟೇಷನ್ ಕೆಲಸ, ಬಾವಿಗಳನ್ನು ಆಳಪಡಿಸುವುದು, ಮತ್ತು ಬಾವಿಗಳಲ್ಲಿ ಸಿಲ್ಟ್ ಎತ್ತುವುದು ಇತ್ಯಾದಿ ಕೆಲಸಗಳನ್ನು ಬಹಳ ಭಾಗದಲ್ಲಿ ಜನರಿಗೆ ಒದಗಿಸ ಲಾಗಿದೆ. ಬಾವಿಗಳನ್ನು ಆಳಪಡಿಸುವುದು ಮತ್ತು ಸಿಲ್ಟನ್ನು ಎತ್ತುವುದು ಈ ಒಂದು ಕಾರ್ಯಕ್ಕಾಗಿ ಪ್ರತಿಯೊಂದು ಜಿಲ್ಲೆಗೂ ಅಂದರೆ ಒಟ್ಟು 32 ತಾಲ್ಲೂಕುಗಳಿಗೆ 2 ಕೋಟಿ ರೂಪಾಯಿಗಳನ್ನು ಹಂಚಲಾಗಿದೆ. ಅದರಲ್ಲಿ ಈಗಾಗಲೇ ಒಂದು ಕೋಟಿ ಖರ್ಚಾಗಿದೆ. ಒಂದು ಬಾವಿಯ ಕೆಲಸಕ್ಕೆ ಅಬ್ಬಾಬ್ಬ ಎಂದರೆ 7–8 ಜನರು ಕೆಲಸ ಮಾಡಿದರೆ ಹೆಚ್ಚಾಯಿತು. ಆದರೆ ಅಲ್ಲಿ ಇನ್ನುಳಿದ ಜನರಿಗೆ ಕೆಲಸ ಇಲ್ಲದೆ ಇದ್ದರೂ ಇರಬಹುದು. ಜನರು ಒಂದು ಊರನ್ನು ಬಿಟ್ಟು ಇನ್ನೊಂದು ಕಡೆಗೆ ಜೀವನಕ್ಕೆ ಹೊರಡಬೇಕೆಂದರೆ ಹಿಂದು ಮುಂದು ನೋಡುವುದು ಸ್ವಾಭಾವಿಕ. ಇನ್ನು ಕೆಲವು ಸಂದರ್ಭದಲ್ಲಿ ಯಾರು ಮೊದಲು ಊರನ್ನು ಬಿಡಬೇಕೆಂಬುದು ನಿರ್ಧಾರವಾಗದೆ ಜನರು ಕೆಲಸವಿಲ್ಲದೆ ಉಳಿಯತಕ್ಕ ಸಂದರ್ಭಗಳೂ ಇರಬಹುದು. ಸರ್ಕಾರದವರಂತೂ ಕುಡಿಯುವ ನೀರಿನ ತೊಂದರೆ ತಪ್ಪಿಸಲು ಸಾಕಷ್ಟು ಪ್ರಯತ್ನಗಳನ್ನು ನಡೆಸಿದ್ದಾರೆ. ಇನ್ನು ಕೆಲಸಕ್ಕೆ ಹೆಚ್ಚು ಸಂಖ್ಯೆಯಲ್ಲಿ ಎಲ್ಲಿಗೆ ಜನರು ಬರುತ್ತಾರೆಂಬ ಅಂದಾಜಿರುತ್ತದೋ ಅಂಥಾ ಕಡೆಗಳಲ್ಲಿ ಜನರು ಉಳಿಯುವುದಕ್ಕೆ ಅನೇಕ ಷೆಡ್ಡುಗಳನ್ನು ಕಟ್ಟಿಸಿ ರೆಡಿಮಾಡಿದೆ. ಈ ದಿವಸ ಸರ್ಕಾರದವರು ಜನರ ನಿರೀಕ್ಷಣೆಯಲ್ಲಿ ಕಟ್ಟಿಸಿರ ತಕ್ಕ ಷೆಡ್ಡುಗಳು, ಆ ಮಲಪ್ರಭಾ, ಘಟಪ್ರಭಾ, ಅಪ್ಪರ್ ಕೃಷ್ಣಾ ಮತ್ತು ಕಾಳೀನದಿ ಈ ಸ್ಥಳ ಗಳಲ್ಲಿ ಸುಮಾರು 20 ಸಾವಿರ ಷೆಡ್ಡುಗಳು ಹಾಗೇ ಖಾಲಿ ಬಿದ್ದಿವೆ. ಜನರು ಆ ಜಾಗಗಳು ಬಹಳ ದೂರ ಎಂಬ ನೆಪದಿಂದ ಅಲ್ಲಿಗೆ ಬರಲಿಲ್ಲವೋ ಏನೋ ? ಆದರೆ ಸರ್ಕಾರದವರು ಏನೇನು ಕೆಲಸ ಗಳನ್ನು ಅವರ ಪರವಾಗಿ ಮಾಡಬಹುದಿತ್ತೋ ಅವುಗಳನ್ನೆಲ್ಲಾ ಮಾಡಿದ್ದಾರೆ. ಅಲ್ಲಿ ಈ ಪಿ. ಡಬ್ಲ್ಯು. ಡಿ. ಸರ್ಕಲ್‌ಗಳು ಮತ್ತು ಡಿವಿಜನ್‌ಗಳೂ ಎಲ್ಲಾ ಸಿದ್ಧವಾಗಿವೆ. ಆದರೆ ಜನರನ್ನು ನೀವು ಆ ಸ್ಥಳಗಳಿಗೆ ಬಂದೇ ತೀರಬೇಕು ಎಂದು ಬಲವಂತಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವುಂಟೋ ? ಆದರೆ ಆ ಸ್ಥಳಕ್ಕೆ ಯಾರು ಹೋಗಬೇಕು, ಯಾರು ಬಿಡಬೇಕು ಎಂಬ ಜಿಜ್ಞಾಸೆ ಪ್ರಾಯಶಃ ಜನರಲ್ಲಿ ಮೂಡಿ ಆ ಸ್ಥಳಗಳಿಗೆ ಅವರು ಬಾರದೆ ಇರಬಹುದು. ಆದರೆ ಸರ್ಕಾರದವರು ಮಾತ್ರ ತಮ್ಮ ಜವಾಬ್ದಾರಿಯನ್ನು ತಾವು ನೆರವೇರಿಸಿದ್ದಾರೆ.

ಹಾಗೆ ಇನ್ನೊಂದು ಸಂದರ್ಭದಲ್ಲಿ ಕುಡಿಯುವ ನೀರಿನ ಅಭಾವವನ್ನು ತಪ್ಪಿಸತಕ್ಕ ಬಗ್ಗೆ ಕೆಲವು ಗ್ರಾಮಗಳಿಗೆ ಲಾರಿಗಳಲ್ಲಿ ಪಂಪ್‌ಸೆಟ್ಟುಗಳನ್ನು (ಹ್ಯಾಂಡ್ ಪಂಪ್ ಸೆಟ್ಟುಗಳನ್ನು) ಲೋಡ್ ಮಾಡಿ ಅಲ್ಲಿ ಅವುಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಮನುಷ್ಯನನ್ನೂ ಕಳುಹಿಸಲಾಯಿತು. ಆದರೆ ಅಲ್ಲಿ ಆ ಗ್ರಾಮದ ಹೆಣ್ಣುಮಕ್ಕಳು ಮತ್ತು ಇತರರು ಕೈಯಲ್ಲಿ ಪಂಪ್ ಮಾಡಿ ನೀರನ್ನು ಎತ್ತತಕ್ಕ ಬಗ್ಗೆ ಗೊತ್ತಿದ್ದೋ ಇಲ್ಲದೇನೋ ಆ ಪಂಪ್‌ಸೆಟ್ಟುಗಳು ಕೆಲವು 8 ದಿನಗಳಲ್ಲೇ ಕೆಟ್ಟು ನಿಂತು ಹೋದವು. ಹೀಗೆ ಎಷ್ಟೋ ಸಂದರ್ಭಗಳಲ್ಲಿ ಹ್ಯೂಮನ್ ಫೈಲ್ಯೂರ್ಸ್ ಕೂಡ ಇರುತ್ತದೆ. ಅದನ್ನು ನೋಡಿ ಆಗಿಂದಾಗ್ಗೆ ಸರಿಪಡಿಸಲು ಅಲ್ಲಿಗೆ ಸರಿಯಾದ ಜನರನ್ನು ಇಟ್ಟಿದ್ದಾಯಿತು. ಏನೋ ಆಕಸ್ಮಿಕವಾಗಿ ಈ ಒಂದೆರಡು ವರ್ಷಗಳಲ್ಲಿ ಮಳೆಬೆಳೆಗಳ ಅಭಾವದಿಂದ ಈ ತೊಂದರೆಗಳುಂಟಾಗಿವೆ. ಈ ವರ್ಷದ ಪಂಚಾಂಗದ ಪ್ರಕಾರ ಮತ್ತು ಈ ಪ್ರಕೃತಿ ನಿಯಮ ಕೂಡ ಒಂದೇ ಸಮನಾಗಿ ಹೀಗೆ 4-5 ವರ್ಷಗಳ ಕಾಲ ಇರುವುದಿಲ್ಲ, ಇನ್ನು ಮುಂದಿನ ದಿನಗಳಲ್ಲಿ ಒಳ್ಳೆ ಮಳೆ ಬೆಳೆಯಾಗತಕ್ಕ ಶುಭಸೂಚನೆಗಳಿವೆ ಎಂದು ಹೇಳುತ್ತಿದ್ದಾರೆ. ನಾನೂ ಕೂಡ ಅದೇ ಆಶಾಭಾವನೆಯುಳ್ಳವನಾಗಿದ್ದೇನೆ. ಈ ಒಂದು ಸಂದರ್ಭದಲ್ಲಿ ನಾವೆಲ್ಲರೂ ನಮ್ಮ ಮುಂದಿನ ವರ್ಷಗಳು ನಮಗೆ ಶುಭಪ್ರದವಾಗಿರಲೆಂದು ಹಾರೈಸೋಣ. ನಾನು ಮೊದಲೇ ಹೇಳಿದಹಾಗೆ ನಾಳೆನಾಡಿದ್ದರಲ್ಲಿ ನಮ್ಮ ಮಂತ್ರಿಗಳನ್ನು ಕಳಿಸುತ್ತೇನೆ, ಅವರು ಹೋಗಿ ನೋಡಲಿ. ತೊಂದರೆಯೇನಿದೆ ಎಂಬುದರ ಬಗ್ಗೆ ಸಲಹೆ ಕೊಡಲಿ, ನೋಡಿ ಪರಿಹಾರ ಕಂಡು ಹಿಡಿಯೋಣ. ಇಷ್ಟು ಹೇಳಿದಮೇಲೆ ವಿರೋಧ ಪಕ್ಷದ ನಾಯಕರು ಮತ್ತಿತರ ಸದಸ್ಯರು ಧರಣಿಯನ್ನು ಅಂತ್ಯಮಾಡಿ ಸುಗಮವಾಗಿ ಕೆಲಸ ನಡೆಯಲಿ. ಇಂಥ ದೊಡ್ಡ ವಿಪತ್ತು ಬಂದಾಗ ಪಕ್ಷಭೇಧ ಮಾಡದೆ ಒಂದು ರಥಕ್ಕೆ ಎರಡು ಗಾಲಿಗಳಿದ್ದಂತೆ ಎಲ್ಲರೂ ಜೊತೆಗೂಡಿ ಕೆಲಸ ಮಾಡೋಣ. ಇದಕ್ಕೆ ಎಲ್ಲರೂ ಸಹಾಯ ನೀಡಬೇಕು ಎಂದು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಧರಣಿ ನಿಲ್ಲಿಸಿ ಸಭೆಯ ಕಾರ್ಯಕಲಾಪಗಳು ಸುಗಮವಾಗಿ ನಡೆಯುವುದಕ್ಕೆ ಸಹಾಯಕರಾಗಬೇಕು ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮುಖ್ಯಮಂತ್ರಿಗಳ ಮಾತನ್ನು ಕೇಳಿದಮೇಲೆ ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತಿತರ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ದೇವೇಗೌಡರು ತಮ್ಮ ಸ್ಥಾನಕ್ಕೆ ತೆರಳಿದರು)

† ಶ್ರೀ ಎಚ್. ಡಿ. ದೇವೇಗೌಡ.—ಸಭಾಧ್ಯಕ್ಷಣಿಯರೇ, ಈಗ ಸಭಾ ನಾಯಕರೇನು ಅಭಿಪ್ರಾಯವನ್ನು ಸೂಚಿಸಿದ್ದಾರೆ ಆ ವಿಷಯದಲ್ಲಿ ನನ್ನ ಭಿನ್ನಾಭಿಪ್ರಾಯವಿಲ್ಲ. ನಿಲುವಳಿ ಸೂಚನೆಯನ್ನು ಸಭೆಯ ಮುಂದಿಟ್ಟಾಗ ನಾನು ಮಹಾರಾಷ್ಟ್ರದಲ್ಲಿ ಕೊಡುವ ಸುಖಡಿ ವಿಚಾರ ಪ್ರಸ್ತಾಪ ಮಾಡಿದಾಗ ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ನಾನು ನನ್ನ ಮಿತ್ರರೂ ಕೆಲವು ಪ್ರದೇಶಗಳಿಗೆ ಭೇಟಿ ಕೊಟ್ಟು ವಿಷಯವನ್ನು ಸಂಗ್ರಹಿಸಿದೆವು. ಅದನ್ನು ಹೇಳದೆ ಮುಖ್ಯಮಂತ್ರಿಗಳಿಗೆ ಕಳಿಸುತ್ತೇನೆ. ನಾಡಿದ್ದು ಶ್ರೀ ಚನ್ನಬಸಪ್ಪನವರು ಮತ್ತಿತರ ಮಂತ್ರಿಗಳನ್ನು 'ಕಳಿಸುತ್ತೇವೆಂದು ಹೇಳಿದ್ದಾರೆ. ನಿಜವಾಗಿಯೂ ಲೋಪದೋಷಗಳಿದ್ದರೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡಲಿ. ಕೇವಲ ಉತ್ಪ್ರೇಕ್ಷೆಯಿಂದ ಹೇಳುವುದು ಉಚಿತವಲ್ಲ. ಮಲಪ್ರಭ ಮತ್ತು ಘಟಪ್ರಭ ಯೋಜನೆ ಬಳಿ ಶೆಡ್ಡುಗಳನ್ನು ಹಾಕಿದ್ದೇವೆ, ಜನ ಅಲ್ಲಿಗೆ ಬಂದಿಲ್ಲ ಎಂದು ಹೇಳಿದರು, ಅದು ನಿಜವಿರಬಹುದು. ಕೆಲವು ಪ್ರದೇಶಗಳಲ್ಲಿ ಸೆಂಟರ್ ಕೆಲವು ಮಾಡಿ ಕೆಲಸ ಕೊಡುವ ಕಡೆ ಷೆಡ್ಸ್ ಇಲ್ಲ. ಸುಮಾರು 18 ಸ್ಥಳಗಳಿಗೆ ನಾವು ಭೇಟಿ ಕೊಟ್ಟೆವು, ಅಲ್ಲಿ ಒಂದು ಷೆಡ್ಡೂ ಇಲ್ಲ. ಬಿದರೆಯಿಂದ ಗುಲ್ಬರ್ಗದವರೆಗೆ ಹಮ್ನಾಬಾದ್ ಹತ್ತಿರ ಒಂದು ಷೆಡ್ ಇದೆ. ಉಳಿದ ತಾಲ್ಲೂಕುಗಳಲ್ಲಿ ನಾವು ಹೋದ ಕಡೆ ಷೆಡ್ ಕೂಡ ಇಲ್ಲ. ನಾನು ಅಧಿಕಾರಿಗಳ ಮೇಲೆ ಆರೋಪಮಾಡುವುದಿಲ್ಲ. ಅಲ್ಲಿ 70 ಪೈಸೆ ಕೂಲಿ ದೊರೆಯುತ್ತಿದೆ. ಕಾರಣ ಜನರಿಗೆ ಕೆಲಸ ಮಾಡಲು ಶಕ್ತಿಯಿಲ್ಲ, ಮಾಡುವ ಕೆಲಸದ ಆಧಾರದ ಮೇಲೆ ಬಟವಾಡೆ ಮಾಡುವುದರಿಂದ ಅಳತೆ ಮಾಡಿ ಕೂಲಿ ಕೊಡುವುದರಿಂದ ಒಬ್ಬರಿಗೆ 70-80 ಪೈಸೆ ದೊರೆಯುವುದು. ಜೋಳದ ಬೆಲೆ ಎರಡೂಕಾಲು ರೂಪಾಯಿಯಾಗಿದೆ. ಸರಕಾರದ ವಿತರಣೆ ಸರಿಯಾಗಿಲ್ಲ, ಬರುವ ಕೂಲಿಯಲ್ಲಿ ಧಾನ್ಯ ಕೊಳ್ಳಲು ಸಾಕಾಗುವುದಿಲ್ಲ. ಆಕ್ಚುಯಲ್ ಮೆಷರ್‌ಮೆಂಟ್ ಮಾಡಿಕೊಡುವುದರಿಂದ ಒಬ್ಬೊಬ್ಬರಿಗೆ ದಿನಕ್ಕೆ 70-80 ಪೈಸೆ ಕೂಲಿ ದೊರೆಯುವುದು. ಇದರಿಂದ ಜೀವನ ಸಾಗಿಸುವುದು ಹೇಗೆ ?

ಕೆಲವು ಕಡೆ ವೆಲ್‌ಫೈರ್ ವ್ಯಾನುಗಳನ್ನು ಹಾಕಿರುವುದಾಗಿ ಶ್ರೀ ಸಿದ್ಧವೀರಪ್ಪನವರು ಹೇಳಿದರು ಅನೇಕ ಕಡೆ ಮೆಡಿಕಲ್ ಸೌಲಭ್ಯವಿಲ್ಲ, ಕೆಲವು ಕಡೆ ಇರಬಹುದು, ಅದನ್ನು ಹೆಚ್ಚಿಸಿಲ್ಲ.

ಶ್ರೀ ಡಿ. ದೇವರಾಜ ಅರಸ್.—ವ್ಯಾನುಗಳು ಸಾಲದು.

ಶ್ರೀ ಎಚ್. ಡಿ. ದೇವೇಗೌಡ.—ಇರಬಹುದು, 18 ಕಡೆ ನಾವು ವಿಚಾರ ಸಂಗ್ರಹಿಸಿದ್ದೇವೆ.

Sri H. SIDDAVEERAPPA.—We have provided 12 vans. But they are not sufficient. We will now think of increasing another 12 vans.

ಶ್ರೀ ಎಚ್. ಡಿ. ದೇವೇಗೌಡ.—ದೈವ ದತ್ತವಾಗಿ ಪ್ರಕೃತಿ ವಿಕೋಪದಿಂದ ತೊಂದರೆಯಾಗಿರುವುದೇನೋ ಸರಿ. ಆರೇಳು ತಿಂಗಳು ಕಷ್ಟಪಡಬೇಕು. ಧರಣಿ ಮಾಡಿ ಸಮಸ್ಯೆ ಬಗೆಹರಿಸಬೇಕು ಎಂಬ ಆಸೆಯಿಲ್ಲ. ಹಾಗೆ ಮಾಡಿದರೆ ಎಲ್ಲಾ ಸಮಸ್ಯೆಗಳೂ ಬಗೆಹರಿಯುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ಉದ್ದೇಶ ಇಷ್ಟೆ, ಕಣ್ಣಾರೆ ಪರಿಸ್ಥಿತಿ ನೋಡಿ ಜಾಗ್ರತೆ ಸೂಕ್ತ ಕ್ರಮ ತೆಗೆದು ತೆಗೆದುಕೊಳ್ಳಲಿ ಎಂಬುದು. ಹಿಂದೆ ಮಿಡರ್‌ಮೆನ್‌ನಿಂದ ತೊಂದರೆಯಾಗುತ್ತದೆಂದು ಅವರನ್ನು ರದ್ದು ಮಾಡಿದರು. ಈ ವಿಷಯದಲ್ಲಿ ನಾನು ಪೂರ್ಣ ಸಹಕಾರ ನೀಡಲು ಸಿದ್ಧವಾಗಿದ್ದೇನೆ. ಇದು ಪಕ್ಷದ ದೃಷ್ಟಿಯಿಂದ ಹೇಳುವುದಲ್ಲ, ಹೃದಯದ ಅಂತರಾಳದಲ್ಲಿರುವ ವಿಚಾರವನ್ನು ನಾನು ಹೇಳುವುದು. ಇದರಲ್ಲಿ ರಾಜಕಾರಣವಿಲ್ಲ. ನಾನು ಪಾರ್ಟಿ ಪಾಲಿಟಿಕ್ಸ್ ಮಾಡಲು ತಯಾರಿಲ್ಲ. ಈ ಸಮಸ್ಯೆ ಬಗೆಹರಿಸುವಾಗ ಕಳೆದ ಒಂದು ತಿಂಗಳಿಂದ ಸ್ಪಷ್ಟೀಕರಣ ಮಾಡುವುದಿದೆ, ಎಂಥ ಸನ್ನಿವೇಶವೊದಗಿದರೂ ನಾನು ಕಣ್ಣಾರೆ ನೋಡಿ ಸರಕಾರಕ್ಕೆ ತಿಳಿಸಬೇಕೆಂಬುದು ನನ್ನ ಇಚ್ಛೆ. ಈ ವೆಂದು ಅಭಿಪ್ರಾಯದಿಂದ ನಾನು ಕಳೆದ ಒಂದು ತಿಂಗಳಿಂದ ಈ ವಿಚಾರದಲ್ಲಿ ಮಾತನಾಡಿಲ್ಲ. ಪರಿಸ್ಥಿತಿ ವಿಕೋಪಕ್ಕೆ ಹೋಗಿರುವುದರಿಂದ ಸರಕಾರದಮೇಲೆ ಒತ್ತಡ ತರಬೇಕಾಗಿದೆ. ತಾವು ನಮ್ಮ ಸಹಕಾರ ಕೇಳಿದ್ದೀರಿ, ಅದನ್ನು ಕೊಡಲು ಸಿದ್ಧವಾಗಿದ್ದೇವೆ. ವಿರೋಧ ಪಕ್ಷದಿಂದ ಇಬ್ಬರು ಮೂವರು ಹೋಗಲಿ ಮಂತ್ರಿಗಳು ಎಲ್ಲಾ ಕಡೆ ಪ್ರವಾಸಮಾಡಿ ನೋಡಬೇಕು. ಸುಖಡಿ ಒದಗಿಸಲು ತೊಂದರೆಯಾಗಿದೆಯೆಂದು ಹೇಳಿದ್ದಾರೆ. ಅದಕ್ಕಾಗಿ ಬೇರೆ ಪ್ರೋಟೀನ್ ಫುಡ್ ಕೊಡಲು ಪ್ರಯತ್ನ ಮಾಡುವುದಾಗಿ ಹೇಳಿದ್ದಾರೆ. ಜನರಿಗೆ ಸಾಕಷ್ಟು ಕೆಲಸಮಾಡಲು ಶಕ್ತಿಯಿಲ್ಲ, ಅವರು ನಿಶ್ಯಕ್ತರಾಗಿದ್ದಾರೆ. ಪ್ರೋಗ್ರೆಸ್ ಮೇಲೆ ಕೂಲಿ ಕೊಡುವುದರಿಂದ ಕೊಡುವ ಕೂಲಿ ಒಂದು ಹೊತ್ತು ಗಂಜಿಗೆ ಕೂಡ ಆಗುವುದಿಲ್ಲ. ಎಷ್ಟೋ ಜನ ಪಟ್ಟಣಗಳಲ್ಲಿ ಸಹ ಜೋಳದ ಗಂಜಿ ಮಾಡಿ ಕುಡಿಯುವವರು. ಇಂಥ ಸನ್ನಿವೇಶದಲ್ಲಿ ಈ ಸಮಸ್ಯೆ ಬಿಡಿಸಲು ಕೆಲವು ಸಂದರ್ಭಗಳಲ್ಲಿ ರೂಲ್ಸ್ ರಿಲ್ಯಾಕ್ಸ್ ಮಾಡಿದರೂ ಚಿಂತೆಯಿಲ್ಲ. ಕೆಲವು ವ್ಯವಹಾರ ಮಾಡಿ ಹಣ ಲೂಟಿ ಮಾಡಿದ್ದಾರೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ, ಈ ವಿಚಾರ ಮಾತನಾಡುವುದು ಬೇಡ. ಈಗ ಈ ಸಮಸ್ಯೆ ಬಿಡಿಸುವಾಗ ದುರ್ವಿನಿಯೋಗವಾಗಬಹುದು, ಮೆಷರ್‌ಮೆಂಟ್ ಕೊಡುವಾಗ ರಿಲ್ಯಾಕ್ಸ್ ಮಾಡಿ ಹ್ಯುಮ್ಯಾನಿಟೇರಿಯನ್ ಕನ್‌ಸಿಡರೇಷನ್ನಿನಿಂದ ಕೊಡಬೇಕು. ಒಂದೂವರೆ, ಎರಡು ರೂಪಾಯಿ ಆದರೂ ಕೂಲಿ ಕೊಡಬೇಕು. ಎಲ್ಲಾ ಪಕ್ಷಗಳ ಸದಸ್ಯರೂ ಕೂಡ ತಮ್ಮ ಸ್ಥಾನಗಳಲ್ಲಿ ಕೂಡಬೇಕು, ಅಧ್ಯಕ್ಷರ ಆದೇಶಕ್ಕೆ ಮನ್ನಣೆ ಕೊಡಬೇಕು. ದಯಮಾಡಿ ಎಲ್ಲರೂ ಹಾಗೆ ಮಾಡಬೇಕೆಂದು ಪ್ರಾರ್ಥನೆಮಾಡುತ್ತೇನೆ.

(ಹಾಗೆ ಹೇಳಿದಮೇಲೆ ಎಲ್ಲ ಸದಸ್ಯರೂ ಧರಣಿ ನಿಲ್ಲಿಸಿ ತಮ್ಮ ಸ್ಥಾನಗಳಿಗೆ ಹೋದರು)

ಮಹಾರಾಷ್ಟ್ರಕ್ಕೆ ನಾವು ಹೋಗಿ ನೋಡಿಕೊಂಡು ಬಂದಿದ್ದೇವೆ, ಅಲ್ಲಿ ಒಳ್ಳೆಯ ವ್ಯವಸ್ಥೆ ಮಾಡಿದ್ದಾರೆ. ಇದನ್ನು ಹೇಳುವುದು ಅಲ್ಲಿ ಮಾಡಿರುವುದನ್ನೆಲ್ಲಾ ಇಲ್ಲಿ ಸಹ ಮಾಡಬೇಕೆಂದಲ್ಲ. ಅಲ್ಲಿ ಒಳ್ಳೆಯ ಕೆಲಸ ಮಾಡಿದ್ದರೆ ಅದನ್ನು ಇಲ್ಲಿ ಅನುಕರಣೆ ಮಾಡಿದರೆ ಗೌರವ ಕಡಿಮೆಯಾಗುವುದಿಲ್ಲ. ಅಲ್ಲಿ ಒಳ್ಳೆಯ ರೀತಿಯಲ್ಲಿ ವ್ಯವಹಾರ ಮಾಡುತ್ತಿದ್ದರೆ ಅದನ್ನು ಇಲ್ಲೂ ಅನುಸರಿಸೋಣ. ಅದಕ್ಕೆ ಪ್ರಯತ್ನ ಮಾಡೋಣ. ಈ ದಿವಸ ಈ ಸಮಸ್ಯೆಯನ್ನು ಬಿಡಿಸಲು ಎಷ್ಟು ಸಹಕಾರ ಬೇಕೋ ಅಷ್ಟನ್ನು ಕೊಡಲು ನಾವೆಲ್ಲರೂ ತಯಾರಿದ್ದೇವೆ. ಈ ಸಭೆಯ ಕಾಲವನ್ನು ಅನಾವಶ್ಯಕವಾಗಿ ಹರಣಮಾಡಲು ನನಗೆ ಇಚ್ಛೆ ಇಲ್ಲ. ಮಾತನಾಡುವಾಗ ಉದ್ವೇಗದಲ್ಲಿ ಕೆಲವು ಮಾತುಗಳನ್ನು ಹೇಳಿರಬಹುದು. ಈ ಸಭೆಯಲ್ಲಿ ಧರಣಿ ಮಾಡುವ ಸಂಪ್ರದಾಯ ನಮ್ಮಲ್ಲಿಲ್ಲ. ಇದನ್ನು ಬಿಚ್ಚು ಮನಸ್ಸಿನಿಂದ ಹೇಳುವುದು. ಕೆಲವು ಕ್ಲಿಷ್ಟ ಸಮಸ್ಯೆಗಳು ಬಂದಾಗ ಡಿಸ್‌ಕ್ರೀಷನ್‌ನಿಂದ ಕ್ರಮ ತೆಗೆದುಕೊಳ್ಳುವುದು ಸೂಕ್ತ. ಏನಾದರೂ ಮಾಡಿದರೆ ಕಾಲಹರಣ ಮಾಡಬೇಕೆಂದು ಮಾಡುವುದಿಲ್ಲ. ಪ್ರವಾಸ ಮಾಡಿದಾಗ ಕಣ್ಣಾರೆ ನೋಡಿದ್ದನ್ನು ತಿಳಿಸುವ ಆವೇಶದಲ್ಲಿ ಈ ಘಟನೆಯಾಯಿತು. ಭೂಸುಧಾರಣೆಯನ್ನು ವಿರೋಧಿಸಲು ಹೀಗೆ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಭೂಸುಧಾರಣೆಯನ್ನು ಯಾವುದೇ ರೀತಿಯಲ್ಲಿ ತಂದರೂ ವೈಯಕ್ತಿಕವಾಗಿ ನನಗೆ ಚಿಂತನೆಯಿಲ್ಲ.

ಈ ಸೆಷನ್‌ನಲ್ಲಿ ಅದನ್ನು ಮುಗಿಸಿ ಹೋಗೋಣ. ಪಾಸ್ ಮಾಡಿ ಹೋಗೋಣ. ಆದರೆ ಇದರ ಬಗ್ಗೆ ನನ್ನ ಅಭಿಪ್ರಾಯ ವ್ಯಕ್ತಮಾಡುವುದಕ್ಕೆ ಯಾರೂ ಅಡ್ಡಿ ಮಾಡುವುದಕ್ಕಾಗುವುದಿಲ್ಲ. ಏನು ಕ್ಲಿಷ್ಟ ಸಮಸ್ಯೆ ಇದೆ ಅದಕ್ಕೆ ನಾಳೆಕಳುಹಿಸತಕ್ಕ ಇಬ್ಬರು ಮಂತ್ರಿಮಂಡಲದ

ಮಂತ್ರಿಗಳು, ಇತ್ತಕಡೆಯ ಇಬ್ಬರು ಸದಸ್ಯರು ಹೋಗಿ ಸ್ಥಳದಲ್ಲಿ ಏನು ನಿರ್ಣಯ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಆ ಸಮಸ್ಯೆಯನ್ನು ಬಿಡಿಸಲಿಕ್ಕೆ ಪ್ರಯತ್ನ ಮಾಡಲಿ. ಎಲ್ಲಾ ರಾಜಕೀಯ ಪಕ್ಷಗಳು ಇದರಲ್ಲಿ ಸಂಪೂರ್ಣ ಭಾಗಿಗಳಾಗಿ ಪ್ರಯತ್ನ ಮಾಡೋಣ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ.—ನಾವಾದರೂ ಕೂಡ, ಈ ಒಂದು ದುಸ್ಥಿತಿಯನ್ನು ಸರ್ಕಾರದ ಮೇಲೆ ಹೇರೋಣ. ಹೇರಿ ನಾವು ತಪ್ಪಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿದ್ದು ಅಲ್ಲ. ಎಲ್ಲರೂ ಸೇರಿ ಇದನ್ನು ಬಗೆಹರಿಸಬೇಕು, ಇದಕ್ಕೆ ಬೇಕಾದ ವಾತಾವರಣವನ್ನು ಸೃಷ್ಟಿ ಮಾಡಬೇಕು; ಸರ್ಕಾರ ಬಿಚ್ಚುಮನಸ್ಸಿನಿಂದ ಲೋಪದೋಷಗಳನ್ನು ಬಗೆಹರಿಸುವುದಕ್ಕೆ ಭರವಸೆಗಳನ್ನು ಕೊಟ್ಟಿದೆ. ಈ ಬಗ್ಗೆ ಮುಖ್ಯಮಂತ್ರಿಗಳಿಗೆ ನಾನು ಒಳ್ಳೆಯ ಮಾತನ್ನು ಹೇಳಿದರೆ ತಪ್ಪಾಗಲಾರದು. ಇದರ ಬಗ್ಗೆ ಎಲ್ಲರೂ ಸೇರಿ ಈ ಕಷ್ಟ ಸ್ಥಿತಿಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೆ ಎಲ್ಲರೂ ಸಹಕಾರ ನೀಡಬೇಕು. ಆ ಪ್ರದೇಶದಿಂದ ಬಂದಿರತಕ್ಕ ಜನ ಅನೇಕ ಯುವಕ ಶಾಸಕರು ಗೆಳೆಯರು ಇದ್ದಾರೆ. ಅವರು ಸ್ವಲ್ಪ ಧೀರ್ಘವಾಗಿ ಅಲ್ಲಿಯ ಸಮಸ್ಯೆಗಳನ್ನು ಅಭ್ಯಾಸಮಾಡಿ ಸೂಕ್ತವಾದಂಥ ಸಲಹೆಗಳನ್ನು ಹಿಂದು ಮುಂದು ನೋಡದೆ ಮಾಡಬೇಕು. ಜನರ ಮಧ್ಯದಲ್ಲಿ ನಿಂತುಕೊಂಡು, ಅವರಿಗೆ ಧೈರ್ಯ ಕೊಟ್ಟರೆ, ಅವರ ಸಮಸ್ಯೆಗಳನ್ನು ಬಗೆಹರಿಸಿದರೆ, ಅವರು ನಿಮ್ಮನ್ನು ಅವರ ಜನ್ಮ ಪರ್ಯಂತ ಹಾಡಿ ಹೊಗಳುತ್ತಾರೆ. ಇಂಥ ಸೇವೆ ಮಾಡುವುದಕ್ಕೆ ಕಾಲ ಯಾವಾಗಲೂ ಸಿಕ್ಕುವುದಿಲ್ಲ. ಯಾವುದೋ ಸಂದರ್ಭದಲ್ಲಿ ಸಿಕ್ಕುತ್ತದೆ, ಒಂದು ಸಾರಿ ಸೇವೆ ಮಾಡಿ, ಇವರು ಸತ್ಯವಾದಿ ಜನ, ಸೇವೆ ಮಾಡುವುದಕ್ಕೆ ಯೋಗ್ಯವಾದ ಜನ ಎಂದು ಅಭಿಮಾನವನ್ನು ಸ್ಥಾಪನೆ ಮಾಡಿಕೊಂಡರೆ ನೀವು ಅಜರಾಮರವಾಗಿ ಜನರ ಮುಖಂಡತ್ವವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಈ ಸಭೆಯ ಕಾರ್ಯಕಲಾಪಗಳು ಕಡಿಮೆಯಾದರೂ ಚಿಂತೆಯಿಲ್ಲ, ಜನರ ಮಧ್ಯ ನಿಂತುಕೊಂಡು, ಅಲ್ಲಿ ಆಗತಕ್ಕ ಕೆಲಸದಲ್ಲಿ ಏನೇನು ಸಲಹೆ ಸೂಚನೆಗಳನ್ನು ಬಿಚ್ಚುಮನಸ್ಸಿನಿಂದ ಹೇಳುವುದಕ್ಕೆ ಮುಂದಾದರೆ, ಖಂಡಿತವಾಗಿಯೂ ಈ ಸಮಸ್ಯೆ ಬಗೆಹರಿಯುತ್ತದೆ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಬಿಚ್ಚುಮನಸ್ಸಿನಿಂದ ಇರಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಬೀದರ್ ಜೈಲಿನಲ್ಲಿ ಹೆಚ್ಚು ಜನ ಸತ್ಯಾಗ್ರಹಿಗಳು ಇದ್ದಾರೆ. ಅವರನ್ನು ಕೂಡಲೇ ಬಿಡುಗಡೆ ಮಾಡಬೇಕು.

(ಆಕಡೆಯ ಸದಸ್ಯರಿಂದ ನೋ, ನೋ, ನೋ ಎಂದು ಶಬ್ದ ಬಂತು)

ಶ್ರೀ ವಾಟಾಳ್ ನಾಗರಾಜ್.—ಈ ಸಭೆಯಲ್ಲಿ ನಾವು ಅವರು ಹೇಳಿದ ಹಾಗೆ ಕೇಳಬೇಕೇ ?

Sri S M. SHEERNALY CHANDRASEKHAR.—If the entire House is meant for Sri Vatal Nagaraj only, I have no objection.

MADAM SPEAKER.—It is meant for Sri Chandrasekhar also !

ಶ್ರೀ ವಾಟಾಳ್ ನಾಗರಾಜ್.—ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ, ಈ ಸಭೆಯನ್ನು ಅವರಿಗೆ ನಡೆಸುವುದಾದರೆ,—ಅದು ಅತಿರೇಕ ಆಯಿತು.

ಸದಸ್ಯರುಗಳು.—ನೋ, ನೋ ನೋ,

ಅಧ್ಯಕ್ಷರು.—ಮುಖ್ಯಮಂತ್ರಿಗಳು ಹೇಳಿದ್ದು ಆದಮೇಲೆ I will give you a chance.

ಸದಸ್ಯರುಗಳು.—ನೋ ನೋ ನೋ.

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಶ್ರೀಮಾನ್ ತಿಮ್ಮಪ್ಪನವರು ಕ್ಲಿಷ್ಟ ಪರಿಸ್ಥಿತಿಯ ಬಗ್ಗೆ ಹೇಳಿದ್ದಾರೆ. ಪ್ರಥಮವಾಗಿ, ಅವರು ತೆರೆದ ಮನಸ್ಸಿನಿಂದ ಯಾವ ಕೋಪವೂ ಇಲ್ಲದೆ ಸರ್ಕಾರದವರು ಎದುರಿಸತಕ್ಕ ಕ್ಷಾಮ ಡಾಮರದ ವಿಚಾರದಲ್ಲಿ ಅವರ ಕಲಸ ಕಾರ್ಯಗಳಿಗೆ ನಮ್ಮ ಸಹಾಯಕ ಹಸ್ತವನ್ನು ನೀಡುವವರು ಇದ್ದೇವೆ ಎಂದು ಅವರು ಕಳಕಳಿಯ ಭರವಸೆಯನ್ನು ಕೊಟ್ಟಿದ್ದಾರೆ. ವಿರೋಧಪಕ್ಷದ ಎಲ್ಲಾ ಸದಸ್ಯರೂ ಕೂಡ ಅದರಂತೆ, ಇವರ ಮುಖಾಂತರ ಭರವಸೆ ನೀಡಿದ್ದಾರೆ ಎಂದು ನಾನು ನಂಬುತ್ತೇನೆ. ಈ ಒಂದು ಕಷ್ಟ ಪರಿಸ್ಥಿತಿಯಲ್ಲಿ ಎಲ್ಲರೂ ಸೇರಿ ಧೈರ್ಯದಿಂದ ಇದನ್ನು ಎದುರಿಸೋಣ, ಶಕ್ತಿ ಮೀರಿ ದುಡಿದು ಜನತೆಗೆ ಎಷ್ಟು ಪರಿಹಾರ ಕೊಡುವುದಕ್ಕೆ ಮನುಷ್ಯ ಮಾತ್ರದಿಂದ ಸಾಧ್ಯವಿದೆಯೋ ಅಷ್ಟೆಲ್ಲಾ

(ಶ್ರೀ ಡಿ. ದೇವರಾಜ ಅರಸ್)

ಕೊಡುವುದಕ್ಕೆ ಪ್ರಯತ್ನ ಪಡೋಣ. ಮೊದಲನೆಯದಾಗಿ ವಿರೋಧಪಕ್ಷದ ನಾಯಕರಿಗೂ ಮತ್ತು ಎಲ್ಲರಿಗೂ ನನ್ನ ಧನ್ಯವಾದಗಳನ್ನು ಕೊಡುತ್ತೇನೆ. ಯಾವುದೇ ಸಂದರ್ಭದಲ್ಲಿ ಧರಣ್ ಆಗತಕ್ಕದ್ದು ಇತ್ಯಾದಿಗಳನ್ನು ಮಾಡಬೇಕಾದ್ದು ಇಲ್ಲ. ಸಭೆಯ ಕಾಲಹರಣ ಮಾಡಬೇಕಾದ್ದು ಏನೂ ಇಲ್ಲ, ಎಂದು ಅವರು ಹೇಳಿದ್ದಾರೆ, ಅವರು ಹೇಳಿದ ಮಾತನ್ನೇ ನಾನು ಧ್ವನಿಗೂಡಿಸಿ ಹೇಳುವುದಾದರೆ, ನಮ್ಮ ಸಭೆಯಲ್ಲಿ ಯಾವುದೇ ಸಂದರ್ಭದಲ್ಲೂ ಚರ್ಚೆಯಿಂದ ಏನಿದ್ದರೂ ಬಗೆಹರಿಸಬೇಕಾದ್ದು ನ್ಯಾಯ ನೀತಿಯಾಗಿ ಇರಬೇಕಾದದ್ದು. ಎಲ್ಲರೂ ಇದನ್ನು ಪರಿಪಾಲಿಸಿಕೊಂಡು ಹೋಗೋಣ. ತಾವೂ ಕೂಡ ತಮ್ಮ ಸಹಕಾರವನ್ನು ಮುಂದೆ ವಿಶ್ವಾಸದ ರೀತಿಯಿಂದ ನೀಡಿದರೆ ಒಳ್ಳೆಯದು. ಧರಣಿ ಮಾಡಿ ನಮ್ಮ ನಿಮ್ಮ ಕಾಲಹರಣ ಮಾಡುವುದು ಸಭೆಯ ಕಾಲಹರಣ ಮಾಡುವುದು ದೇಶಕ್ಕೆ ಒಳ್ಳೆಯದಲ್ಲ. ಇದರಿಂದ ನಷ್ಟವಾಗುತ್ತದೆ. ಈ ಸಭೆಯಲ್ಲಿ ಇಂಥ ಸಂದರ್ಭ ಬಾರದ ಹಾಗೆ ನಮ್ಮ ಎಲ್ಲರಿಗೂ ಒಳ್ಳೆಯ ಮನಸ್ಸು ಕೊಡಲಿ ಎಂದು ಹೇಳಿ ನಾನು ಪ್ರಾರ್ಥನೆ ಮಾಡುತ್ತೇನೆ. ನಮ್ಮ ಸಭೆಯಲ್ಲಿ ಈ ರೀತಿಯಾದ ಯಾವುದೇ ಸಂದರ್ಭದಲ್ಲಿ ಧರಣಿ ವಗೈರೆ ನಡೆಯತಕ್ಕದ್ದಕ್ಕೆ ಅವಕಾಶ ಬೇಡ ಎಂದು ನನ್ನ ಪ್ರಾರ್ಥನೆ.

5–30 P. M.

ಮತ್ತೆ ಜೈಲಿಗೆ ಕರೆದುಕೊಂಡು ಹೋಗಿದ್ದಾರೆ ಅವರಿಗೆ ಊಟದ ವಿಚಾರದಲ್ಲಿ ತೊಂದರೆ ಯಿದೆ ಎಂದು ಮಾನ್ಯ ಸ್ನೇಹಿತರು ಹೇಳಿದ್ದಾರೆ. ಅಲ್ಲಿ ಏನು ಪರಿಸ್ಥಿತಿ ಇದೆ ಎಂಬ ದಕ್ಕೆ ತಾವು, ಮಂತ್ರಿಗಳು ಹೋಗುತ್ತಿದ್ದೀರಿ, ಅಲ್ಲಿಗೆ ಹೋದಾಗ ತಾವೂ ಕೂಡ ಪರಿಶೀಲನೆ ಮಾಡಿ. ನಿಜವಾಗಿ ಊಟ ಕೊಡುವುದರಲ್ಲಿ ತಾರತಮ್ಯ ಮಾಡುವುದಾದರೆ, ವಿನಾಕಾರಣ ತೊಂದರೆ ಕೊಟ್ಟಿದ್ದರೆ ಖಂಡಿತ ನೋಡಿ ಅದನ್ನು ಪರಿಹರಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

(Sri Vatal Nagaraj rose)

The vice of No, No, No, boomaranged from different sections of the House.

MADAM SPEAKER.—The House stands adjourned to meet again tomorrow at 1 P. M.

The House adjourned at Thirty Three Minutes past Five of the Clock to meet again at One of the Clock on Tuesday the 10th April 1973.

WD 20281—GPB—550—27-7-1974

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, the 10th April 1973/ Chaitra 20, 1895 S.E.

The House met in the Assembly Chamber, Vidhana Soudha, at One of the Clock.

MADAM SPEAKER [SMT. K. S. NAGARATHNAMMA] in the Chair.

STARRED QUESTIONS

(to which oral answers were given)

Amalgamation of M.S.C.M. Federation and M.S.A.I. Corporation

118. Sri B. G. BANAKAR (Hirekerur).—

Will the Minister for Co-operation be pleased to state ;—

(*a*) whether the Government is aware that the objects and functions of (1) the Mysore state Co-operative Marketing Federation Ltd., Bangalore and its affiliated Taluka Agricultural Produce Co-operative Marketing Societies in the State and (2) the Agro-Industries Corporation and its agents in the State are one and the same in nature :

(*b*) whether the Government is also aware that these two parallel institutions are running under loss ;

(*c*) the nature of measures the Government proposes to take for proper and effective functioning of these institutions without incurring loss ;

(*d*) whether the Government intend to amalgamate these two institutions ?

Sri A. SHANKARA ALVA (Minister for Co-operation).—

(*a*) Yes, so far as the procurement and distribution of fertilisers is concerned.

(*b*) The M.S.C.M. Federation Ltd., Bangalore had sustained loss but it has since been earning profits.

The M. S. Agro-Industries Corporation, Bangalore, has not been running under loss.

(SRI A. SHANKARA ALVA)

(*c*) So far as the M.S.C.M. Federation is concerned it has minimised the losses in fertiliser business by introducing the system of cash and carry basis and thereby reducing the payment of interest in the borrowings.

In respect of Mysore State Agro-Industries Corporation this question does not arise.

(*d*) No.

ಶ್ರೀ ಬಿ. ಜಿ. ಬಣಕಾರ್.—ರಾಜ್ಯದಲ್ಲಿ ರಾಜ್ಯದ ಸಹಕಾರಿ ಮಾರಾಟ ಸಂಘ, ತಾಲ್ಲೂಕು ಸಹಕಾರಿ ಮಾರಾಟ ಸಂಘ, ಹಾಗೂ ಗ್ರಾಮೀಣ ಸಹಕಾರಿ ಸಂಘಗಳಿಗೆ ಉತ್ತಮವಾದ ಸಿಬ್ಬಂದಿ ಹಾಗೂ ಗೋಡೌನ್‌ಗಳು ಇರುವುದರಿಂದ, ಗೊಬ್ಬರ ಮತ್ತು ಬೀಜ ಹಂಚುವ ಕೆಲಸಗಳನ್ನು ಸಂಪೂರ್ಣವಾಗಿ ಇಡೀ ರಾಜ್ಯದಲ್ಲಿ ಇವರ ಅಂಗ ಸಂಸ್ಥೆಗಳಿಗೆ ಕೊಡಬೇಕೆಂದೂ ಮತ್ತು ಈ ಒಂದು ವ್ಯವಹಾರ ಕಾರ್ಯವನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಿಂದ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

†ಶ್ರೀ ಎ. ಶಂಕರ ಆಳ್ವ.–ಈಗ ಗೊಬ್ಬರವನ್ನು ಆಗ್ರೋ ಇಂಡಸ್ಟ್ರೀಸ್ ಮತ್ತು ಮಾರ್ಕೆಟಿಂಗ್ ಫೆಡರೇಷನ್ನಿನವರು ಅರ್ಧಾರ್ಧ ವಿತರಣೆ ಮಾಡುತ್ತಿದ್ದಾರೆ,

ಶ್ರೀ ಬಿ. ಜಿ. ಬಣಕಾರ್.—ರಾಜ್ಯದಲ್ಲಿ ತ್ರಿ ಟೈರ್ ಸಿಸ್ಟಂ ಇದ್ದದ್ದು ಒಳ್ಳೆಯದಲ್ಲವೇ ? ಈಗ ಎರಡು ಟೈಯರ್ ಸಿಸ್ಟಂ ಮಾಡಿದ್ದೀರಿ. ಅದನ್ನು ತೆಗೆದು ಆದಷ್ಟು ಜಾಗ್ರತೆಯಾಗಿ ತ್ರಿ ಟೈರ್ ಸಿಸ್ಟಂ ಮೊದಲಿನಂತೆ ಜಾತಿಯಲ್ಲಿರುವಂತೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅದನ್ನು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ರಾಮೇಗೌಡ.—ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಗೊಬ್ಬರದ ವ್ಯಾಪಾರವನ್ನು ವಹಿಸುವ ಉದ್ದೇಶವೇನು ?

ಶ್ರೀ ಎ. ಶಂಕರ ಆಳ್ವ.—ಸದ್ಯದಲ್ಲಿ ಸ್ವಲ್ಪ ಸಮಯವಿದ್ದುದರಿಂದ ಅರ್ಧ ಭಾಗವನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಮತ್ತರ್ಧ ಭಾಗವನ್ನು ಮಾರ್ಕೆಟಿಂಗ್ ಫೆಡರೇಷನ್ನಿನವರು ಮಾತ್ರ ಗೊಬ್ಬರವನ್ನು ವಿತರಣೆ ಮಾಡುತ್ತಿದ್ದಾರೆ. ಆದರೆ ಅದನ್ನು ಹೇಗೆ ಒಬ್ಬರೇ ಒಂದು ರೀತಿಯಲ್ಲಿ ಮಾಡಬಹುದೆಂಬುದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ.

Sri B. B. SAYANAK.—May I know since when the M.S.C.M. Federation, Ltd., is earning profits ?

Sri A. SHANKARA ALVA.—It was sustaining loss in 1961-69, 1969-70 and 1970-71· Only last year, i.e., in 1971-72 it has earned a profit of Rs. 20 lakhs and odd.

ಶ್ರೀ ಕೆ. ಎಫ್. ಪಾಟೀಲ್.—ಗೊಬ್ಬರವನ್ನು ಹಂಚುವುದಕ್ಕೆ ಸರ್ಕಾರ ಬೇರೆಬೇರೆ ಏಜೆನ್ಸಿಗಳನ್ನು ಇಡುವುದಕ್ಕಿಂತ ಒಂದೇ ಏಜೆನ್ಸಿಯನ್ನು ಇಡುವುದು ಒಳ್ಳೆಯದಲ್ಲವೇ ?

ಶ್ರೀ ಎ. ಶಂಕರ ಆಳ್ವ.—ನಾನು ಮೊದಲೇ ಹೇಳಿದಹಾಗೆ ಅರ್ಧಾರ್ಧ ಭಾಗವನ್ನು ಅವರಿಬ್ಬರು ಹಂಚಿಕೆ ಮಾಡುತ್ತಿದ್ದಾರೆ. ಒಂದೇ ಏಜೆನ್ಸಿ ಮೂಲಕ ಗೊಬ್ಬರ ವಿತರಣೆ ಮಾಡುವ ಬಗ್ಗೆ ಸರ್ಕಾರ ಇನ್ನೂ ಯೋಚನೆ ಮಾಡುತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಮುಂಚೆ ತ್ರಿ ಟೈರ್ ಸಿಸ್ಟಂ ಇದ್ದಾಗ ಗೊಬ್ಬರ ಚೆನ್ನಾಗಿ ವಿತರಣೆಯಾಗುತ್ತಿತ್ತು. ಬ್ಲ್ಯಾಕ್ ಮಾರ್ಕೆಟ್ಟಿಗೆ ಅವಕಾಶವಿರಲಿಲ್ಲ. ಈಗ ಎರಡು ಟೈರ್ ಸಿಸ್ಟಂ ಮಾಡಿ ಗೊಬ್ಬರ ರೈತರಿಗೆ ಸರಿಯಾಗಿ ಸಿಗುತ್ತಿಲ್ಲ. ಆದ್ದರಿಂದ ಅದನ್ನು ತಪ್ಪಿಸುವುದು ಒಳ್ಳೆಯದಲ್ಲವೇ ? ತ್ರಿ ಟೈರ್ ಸಿಸ್ಟಂ ಮಾಡುವುದರಿಂದ ರೈತರಿಗೆ ಹೆಚ್ಚು ಅನುಕೂಲವಾಗುವುದಿಲ್ಲವೇ ?

† Indicates the that remarks or speeches have not been revised by the member concerned.

ಶ್ರೀ ಎ. ಶಂಕರ ಆಳ್ವ.—ತ್ರಿ ಟೈರ್ ಸಿಸ್ಟಂ ಮಾಡಿದರೆ ಬಹಳ ಉತ್ತಮವೆಂದು ನನಗೆ ಕಾಣುತ್ತದೆ. ಅದಕ್ಕಾಗಿ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮತ್ತು ಮಾರ್ಕೆಟಿಂಗ್ ಫೆಡರೇಷನ್ ಮೂಲಕ ಗೊಬ್ಬರವನ್ನು ಮಾರ್ಕೆಟ್ ಮಾಡುತ್ತಿದ್ದಾರೆ. ಎಂಬುದಾಗಿ ಹೇಳಿದರು. ಮಾರ್ಕೆಟ್ ದರ ಒಂದೇ ಜಾಗದಲ್ಲಿ ಬೇರೆಬೇರೆ ರೀತಿಯಲ್ಲಿ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದನ್ನು ಸರಿಪಡಿಸುವುದಕ್ಕೆ ಏನು ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಬೇರೆಬೇರೆ ದರವನ್ನು ಈಗಾಗಲೇ ನಿಗದಿ ಮಾಡಿದ್ದೇವೆ.

ಶ್ರೀ ಜಿ. ರಾಮೇಗೌಡ.—ದರ ಎಲ್ಲಾ ಒಂದೇ ಗೊತ್ತುಮಾಡಿದ್ದರೂ ಸಹ ಕಾರ್ಪೋರೇಷನ್ನಿನವರು ಫೆಡರೇಷನ್ ಅವರಿಗಿಂತಲೂ ಕಡಿಮೆ ದರದಲ್ಲಿ ಮಾರಿ ಪೈಪೋಟಿ ವಹಿಸುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ.—ಇಲ್ಲ.

ಶ್ರೀ ಪಿ. ಎಂ. ಬಂಗಿ.—ಮೊದಲು ಇದರ ಲಾಭ ಕಡಿಮೆಯಾಗಿರುವುದಕ್ಕೆ ಕಾರಣವೇನು ?

ಶ್ರೀ ಎ. ಶಂಕರ ಆಳ್ವ.—ಮೊದಲು ಇಷ್ಟು ಡಿಮ್ಯಾಂಡ್ ಇರಲಿಲ್ಲ. ಈಗ ಎಲ್ಲವನ್ನೂ ಹಂಚಿಕೆ ಮಾಡಿಕೊಡುತ್ತಿದ್ದಾರೆ. ಆದರೆ 1970–71ನೇ ಮತ್ತು 1971–72ನೇ ಸಾಲಿನಲ್ಲಿ ಗೋಡೌನಿಗೆ ಭೇಟಿ ಕೊಟ್ಟಾಗ ಅಲ್ಲಿನ ವರದಿ ಪ್ರಕಾರ ಇದಕ್ಕೆ ಅಷ್ಟು ಡಿಮ್ಯಾಂಡ್ ಇಲ್ಲದೇ ಇದ್ದುದರಿಂದ ಗೋಡೌನ್ ಬಾಡಿಗೆ ಕೊಡಬೇಕಾದ್ದರಿಂದ ಲಾಭ ಕಡಿಮೆಯಾಗಿದೆ.

ಶ್ರೀ ಬಿ. ಜಿ. ಬಣಕಾರ್.—ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನಲ್ಲಿ ಹೆಚ್ಚಿಗೆ ಸ್ಟಾಕ್ ಇರುವುದರಿಂದ, ಸಹಕಾರಿ ಸಂಘಗಳ ಮೂಲಕ ಇದನ್ನು ಹಂಚುವ ಕೆಲಸವನ್ನು ಬಿಟ್ಟು ಅವರೇ ಇದರ ಪೂರಾ ಕೆಲಸ ಮಾಡುವುದಕ್ಕೆ ತಕ್ಕ ಡೈರೆಕ್ಷನ್ ಕೊಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇದು ಉತ್ತಮವಾದಂಥ ಸಲಹೆ. ಇದನ್ನು ಪರ್ಯಾಲೋಚನೆ ಮಾಡುತ್ತೇವೆ.

Repairs to Bangalore-Mysore Road.

232. Sri S. KARIAPPA (Kanakapura).—

Will the Minister for Public Works and Electricity be pleased to state :—

(*a*) whether it has come to the notice of the Government that the Bangalore—Mysore road between Torekadanahalli and Harohalli has been badly damaged on account of the movement of E.C.C. heavy vehicles ;

(*b*) the step taken by Government to effect repairs to this road?

Sri H. M. CHANNABASAPPA (Minister for Public Works and Electricity).—

(*a*) Yes.

(*b*) The road is repaired to the extent funds are available.

ಶ್ರೀ ಎಸ್. ಕರಿಯಪ್ಪ.—ನನ್ನ ಪ್ರಶ್ನೆಗೆ ಉಪಪ್ರಶ್ನೆಗಳು ಏನೂ ಇಲ್ಲ.

Loans Advanced to Joint Farming Co-operative Societies in Channagiri Taluk

336. Sri N. G. HALAPPA (Channagiri).—

Will the Minister for Co-operation be pleased to state :—

(a) the total amount of loan advanced by the various agencies of the Government such as :—

1. Co-operation Department
2. Social Welfare Department
3. Dairy Loan
4. N.E.S. Loan
5. Tractor Loan
6. Pumpset Loan
7. Loan from Khadi and Village Industries Board
8. Primary Land Development Bank
9. District Co-operative Central Bank
10. Federation loan etc. to the following Joint

Farming Co-operative Societies—
Guruhagedahally,
Gururajapura,
Basaveswara.
Mahatmaji,
Saibaba in Channagiri Taluk
(societywise figures may be given) ;

(b) the amount of loan that has been repaid in respect of various loans ;

(c) the amount that is outstanding ;

(d) the steps taken to recover the loan ;

(e) whether it has not come to the notice of the Government that there is mismanagement, fraud, cheating and misappropriation of funds etc., in the affairs of the said group of societies ;

(f) if so, whether the accounts of the said sooities have been audit and whether the auditors have pointed out the commissions and omissions of the said societies and whether any action has been taken in the matter ;

(g) whether any allegations were made against these societies and if so, whether they have enquired into and the findings of such enquiry ;

(h) whether the DCC Bank, Shimoga has advanced any loan to Guruhagedahalli, J.F.C.S. after it was superseded ; if so, the amount of loan that was advanced and whether the money was drawn by the Administrator or the Secretary ;

(i) whether any other society in the said group of societies has beeen superseded ; if so, the steps taken by the Administrator to take charge of such societies ?

Sri A. SHANKARA ALVA (Minister for Co-operation).—

(a) The following Departments have sanctioned the assistance to the Guruhagedahalli, Gururajapura, Basaveswara, Mahatmaji and Saibaba Co-operative Joint Farming Societies (Statement 'A' showing the society wise figures is placod on the Table of the House).*

1 Rs. 95,200 (Rs. 82,950 loan and Rs. 12,250 subsidy).
2 Rs. 47,500 (Rs. 36,417 loan and Rs. 11,083 subsidy).
3 Rs. 55,000 (From Animal Husbandry Department).
4 Rs. 5,400.
5 Rs. 13,501-31 (From Agricultural Department).
6 Rs. 8,000 (Social welfare Department).
7 Rs. 6,534 (Rs. 5,567 load and Rs. 967 subsidy).
8 Rs. 21,000.
9 Rs. 28,000.
10 Federation loan Rs. 15,000 Statement 'A' placed on the Table of the House for society wise figure for a total sanction of Rs. 2,95,135-31 (Loans and share capital Rs. 2,70,835-31 and subsidy Rs. 24,300).

(b) Rs. 19,717-72 (loans Rs. 19,560-04, subsidy, 157-68, *vide* statement 'B' placed on the Table of the House).*

(c) Rs. 2,51,117 59 (*vide* statement 'C' placed on the Table of the House).*

(d) Necessary steps have been taken to recover the overdue amount from the defalting societies and also notices have been issued under Section 104 of the MCS Act. Further action will also be taken shortly.

(e) Yes.

(f) Yes. The said societies have been audited upto 1970-71 except Guruhagedahalli Co-operative Joint Farming Society which is superseded and complete charge has not been taken by the Administrator. However the accounts of the said society have been audited upto 1967-68.

Auditors have pointed out the defects and also action has been taken regarding the serious irregularities and misappropriations. The management of Gurubagedahalli and Saibaba Co-operative Joint Farming societies have been superseded and it is also proposed to liquidate the other 3 societies.

(g) Yes. The petitions were enquired into and action has been taken on the finding of the enquiries.

* Copy placed in the Mysore Legislature Library *vide* No. 29 dated 10-4-1973.

(SRI A. SHANKARA ALVA)

(*h*) Yes. The DCC Bank, Shimoga has advanced an amount of Rs. 28,000 as short term and medium term loan and the loan was drawn by the Secretary.

(*i*) Yes. Apart from the Guruhagedahalli C.J.F.S. the Saibaba C.J.F.S. has also been superseded. The Deputy R.C.S. has strictly instructed the Administrator to take action as per Section 31(1) of the MCS Act and to take complete charge.

ಶ್ರೀ ಎನ್. ಜಿ. ಹಾಲಪ್ಪ.—ಉತ್ತರದಲ್ಲಿ ಸಹಕಾರ ಸಂಘಗಳಿಗೆ ಸಾಲ ಕೊಟ್ಟಿರುವುದನ್ನು ಹೇಳಿದ್ದೀರಿ. ಆದರೆ ಆ ಹಣದಲ್ಲಿ ಶೇಕಡ 95.5ರಷ್ಟು ಹಣ ದುರುಪಯೋಗವಾಗಿದೆಯೆಂದು ಹೇಳಿದರೆ, ತಾವು ಅದನ್ನು ಸರಿಯಾಗಿ ತನಿಖೆ ನಡೆಸುತ್ತೀರಾ ?

† ಶ್ರೀ ಎ. ಶಂಕರ ಆಳ್ವ.—ತನಿಖೆಯಾಗುತ್ತಿದೆ. ದುರುಪಯೋಗವಾಗದೆಯೆಂದು ಈಗ ತಾನೇ ಒಂದು ವರದಿ ಬಂದಿದೆ. ಅದನ್ನು ಪರ್ಯಾಲೋಚನೆ ಮಾಡುತ್ತಿದ್ದೇವೆ.

ಶ್ರೀ ಎನ್. ಜಿ. ಹಾಲಪ್ಪ.—(ಇ)ಗೆ ಉತ್ತರವಾಗಿ ಮುಂದಿನ ಕ್ರಮಗಳನ್ನು ಜರುಗಿಸಲಾಗುವುದು ಎಂದು ಹೇಳಿದೆ. ಅಂದಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ಏನಾದರೂ ಚಾರ್ಜ್‌ಷೀಟ್ ಫೈಲ್ ಆಗಿದೆಯೇ ?

ಶ್ರೀ ಶಂಕರ ಆಳ್ವ.—ಒಬ್ಬರಿಂದ 11 ಸಾವಿರ ಚಿಲ್ಲರೆ ರೂಪಾಯಿಗಳು ವಸೂಲು ಮಾಡದೇ ಇದ್ದುದರಿಂದ ಮಾತ್ರ ಅವರಿಗೆ ನೋಟೀಸ್ ಕೊಟ್ಟಿದೆ. ಸೆಕ್ಷನ್ 104ರ ಪ್ರಕಾರ ರೆವಿನ್ಯೂ ಇಲಾಖೆಯ ಮುಖಾಂತರ ಹಣವನ್ನು ವಸೂಲು ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಎನ್. ಜಿ. ಹಾಲಪ್ಪ.—ಈಗ ನಾಲ್ಕೈದು ಸೊಸೈಟಿಗಳ ಗೋಡೌನ್‌ಗಳಿಗೆ ಸಾಲವನ್ನು ಕೊಟ್ಟಿದ್ದೀರಿ. ಎಂಬುದಾಗಿ ಸ್ಟೇಟ್‌ಮೆಂಟಿನಲ್ಲಿ ಹೇಳಿದೆ. ಪ್ರತಿಯೊಂದು ಸೊಸೈಟಿಗೂ ಒಂದೊಂದು ಗೋಡೌನ್ ಕೊಡಬೇಕೆಂದಿದ್ದರೆ, ಒಂದೇ ಸೊಸೈಟಿಗೆ ಗೋಡೌನ್ ಇದೆ. ಅದರಿಂದ ಸರಿಯಾಗಿ ತನಿಖೆ ಮಾಡಲಿಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಆ ವಿಷಯದಲ್ಲಿ ತನಿಖೆಯಾಗುತ್ತಿದೆ. ಐದು ಸೊಸೈಟಿಗಳ ಪೈಕಿ, ಎರಡು ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿದ್ದಾರೆ. ಬಾಕಿ ಮೂರು ಸೊಸೈಟಿಗಳನ್ನು ಲಿಕ್ವಿಡೇಷನ್ ಮಾಡುವ ಆಲೋಚನೆ ಇದೆ. ಈಗಾಗಲೇ 13 ಸೊಸೈಟಿಗಳನ್ನು ತನಿಖೆ ಮಾಡಿದ್ದಾರೆ. ಅದರ ಬಗ್ಗೆ ಒಂದು ದೊಡ್ಡ ರಿಪೋರ್ಟನ್ನು ಕಳುಹಿಸಿದ್ದಾರೆ. ಅದನ್ನು ಪರಿಶೀಲಿಸಿ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಸಹಕಾರ ಸಂಘಗಳಲ್ಲಿ ಸೆಕ್ರೆಟರಿ ಮತ್ತು ಪ್ರೆಸಿಡೆಂಟ್ ದುಡ್ಡು ಹೊಡೆದು ಸರ್ಕಾರಕ್ಕೆ ಮೋಸ ಮಾಡಿ ಅವರಿಗೆ ಸಂಬಂಧಪಟ್ಟವರ ಹೆಸರಿನಲ್ಲಿ ಯಾವ ಆಸ್ತಿಯೂ ಇಲ್ಲದೇ ಹೋದರೆ ಅಂತಹ ಸಂದರ್ಭದಲ್ಲಿ ಯಾವ ರೀತಿ ಅವರಿಂದ ದುಡ್ಡು ವಸೂಲು ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅಂತಹ ಸಂದರ್ಭದಲ್ಲಿ ಡೈರೆಕ್ಟರ್ಸ್ ಮೇಲೆ ಸರ್‌ಚಾರ್ಜ್ ಮಾಡುತ್ತೇವೆ.

ಶ್ರೀ ಜಿ. ರಾಮೇಗೌಡ.—ಈ ಸಂಘಗಳಲ್ಲಿ ಹಣ ದುರುಪಯೋಗವಾಗಿ ಎಷ್ಟು ವರ್ಷಗಳು ಆದುವು ? ಇಷ್ಟು ನಿಧಾನವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಕಾರಣವೇನು ?

ಶ್ರೀ ಎ. ಶಂಕರ ಆಳ್ವ.—1971ನೇ ಇಸವಿಯಲ್ಲಿ ಎರಡು ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿದ್ದರು. ಬಾಕಿ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಅವುಗಳ ಪೈಕಿ ಒಂದು ಸೊಸೈಟಿಯವರು ಹೈಕೋರ್ಟಿಗೆ ಹೋಗಿ ಸ್ಟೇ ಮಾಡಿದ್ದಾರೆ. ಮತ್ತೊಂದು ಸೊಸೈಟಿಯ ಬಗ್ಗೆ ಜಾಯಿಂಟ್‌ರಿಜಿಸ್ಟ್ರಾರ್ ಅವರು ಹೋಗಿ ಸ್ಟೇ ಮಾಡಿದ್ದಾರೆ. ಇನ್ನೊಂದು ಸೊಸೈಟಿಯವರು ಪ್ರೆಸಿಡೆಂಟರು ಪುಸ್ತಕ ಕೊಡಲಿಲ್ಲವೆಂದು ಮೈಸೂರು ಹೈಕೋರ್ಟಿಗೆ ಅರ್ಜಿ ಹಾಕಿ ಅದನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

Sri B. B. SAYANAK.—May I know whether any individual has made any allgetions against these societies or any societies have made any allegations, and what action the Governmsnt has taken in this behalf ?

Sri A. SHANKARA ALVA.—As a result of the action taken a voluminous report has come and it is being examined.

ಶ್ರೀ ಎನ್. ಜಿ. ಹಾಲಪ್ಪ.—ಇಲ್ಲಿ ಸಾಲ ಕೊಟ್ಟಿರತಕ್ಕ ಹಣ ಎಷ್ಟು ಎಂಬುದನ್ನು ತಿಳಿಸಿರುವುದು ಸರಿಯಾಗಿಲ್ಲ. ಇದು ತಪ್ಪಾಗಿದೆ. ಸಹಕಾರ ಇಲಾಖೆಯ ಅಧಿಕಾರಿಗಳು ಒಂದು ರೀತಿಯಲ್ಲಿ ಈ ಸಂಸ್ಥೆಗಳನ್ನು ಬೆಳೆಸಿ ಪೋಷಿಸಿಕೊಂಡು ಬರುತ್ತಿರುವುದರಿಂದ ಅವರು ಬೇಕಂತಲೇ ತಪ್ಪು ಅಂಕಿ ಕೊಟ್ಟಿದ್ದಾರೆ. The amount has been drawn by the Secretary, which is not in accordence with law. Will the Government supersede the DCC Bank for its illegal action ? May I also know what action the Government is going to take against the Secretary, who has drawn the amount ?

Sri A. SHANKARA ALVA.—It is not an illenal transaction. After the Society was superseded, there was a writ petition. So, the old Society was continued, and the Secretary was the proper person to receive the amount. It was during that period that the DCC Bank advanced Rs. 28,000 and the Administrator has no power to receive the petition on account of the stay order. Therefore, the transactoin is quite in order.

Foodgrains Allotted to Each Taluk of Hassan District

361. Sri H. S. SIDDAPPA (Arasikere),—

Will the Minister of State for Food and Civil Supplies be pleased to state :—

(*a*) the quantity of food stuff alloted to each Taluk of Hassan District during 1972–73 (Foodgrains viz., rice, wheat sugar, soji etc.);

(*b*) whether it is a fact that Arsikere Taluk is deficit taluk in food production in Hassan District :

(*c*) whether it ir a fact that Arsikere Taluk has no perenial irrigation resources except a few tanks and as such the entire taluk is rainfed ;

(*d*) whether it is not a fact that Arsikere Taluk is a drought affected taluk ?

Smt. E. E. VAZ (Minister of State for Food and Civil Supplies).—

(*a*) *Vide* statement appended.

(*b*) No.

(*c*) Yes.

(*d*) The taluk was affected by drought conditions up the month of September 1972. However, subsequent rains have improved the situation.

(SMT. E. E. VAZ)

STATEMENT

Showing quanties of foodgrains allotted to each Taluk in Hassan District during 1972-73

(Figures in Quintals)

Sl. No.	Taluk		Rice	Wheat	Sugar	Maida	Soji	Atta
1.	Hassan Taluk	...	3522-94	2082-61	9500-00	3801-00	864-00	570-00
2.	Arsikere Saluk	...	1208-94	765-00	4920-00	681-00	291-00	185-00
3.	C. R. Patna Taluk	...	1047-48	595-00	3020-00	491-00	329-00	131-00
4.	H. N. Pura Taluk	...	852-67	580-00	2830-00	382-00	171-00	113-00
5.	Arkalgud Taluk	...	636-85	525-00	2630-00	297-00	162-00	91-00
6.	Sakleshpur Taluk	...	437-00	585-00	3010-00	355-00	153-00	90-00
7.	Belur Taluk	...	321-36	410-00	2920-00	320-00	115-00	70-00
8.	Alur Taluk	...	160-00	295-00	970-00	231-00	120-00	55-00

ಶ್ರೀ ಎಚ್. ಎಸ್. ಸಿದ್ದಪ್ಪ.—ಅಧ್ಯಕ್ಷರೇ, ಮಾನ್ಯ ಸಚಿವರು ಇಲ್ಲಿ (ಬಿ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದಾರೆ. ಆದರೆ ಆ ತಾಲ್ಲೂಕಿನಲ್ಲಿ ಎಷ್ಟೆಷ್ಟು ಎಕರೆಗಳಲ್ಲಿ ರಾಗಿ ಮತ್ತು ಭತ್ತ ಉತ್ಪತ್ತಿಯಾಗುತ್ತದೆಂಬುದನ್ನು ಅವರು ತಿಳಿಸಬಲ್ಲರೇ ?

†ಶ್ರೀಮತಿ ಇ. ಇ. ವಾಜ್.—ಅಧ್ಯಕ್ಷರೇ ಆ ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಹೇಳುವುದಕ್ಕೆ ಕಾರಣವಾದರೂ ಇಷ್ಟು : 1971-72ರಲ್ಲಿ ಈ ತಾಲ್ಲೂಕಿನಲ್ಲಿ ಬೆಳೆದ ಒಟ್ಟು ಧಾನ್ಯಗಳ ಪ್ರಮಾಣವನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಅದು ಹೀಗಿತ್ತು :—

Total production of cereals and pulses during 1971–72 was 44,120 tonnes while the requirement is 36,682. The total population of Arsikere taluk as per 1971 Census is 2,08,335, 86% of the population *i. e.*, adults is 1,79,168, Cereal requirements for the year at the rate of 425 gms. per adult per day is 27,791 tons, Pulses requirement for the year at the rate of 85 gms. per day per adult is 5,556 tons—total 33 347 tons; 10 per cent of the requirement as seeds, wastage, fodder to the cattle etc., : Cereals 2,779 tons, pulses 556 tons—total 3,335 tons. Total requirement: Cereals 27,791 plus 2,779-30,570 tons, and Pulses 5,556 plus 556-6,112 tons. Foodgrains production during 1971-72: Cereals 42,785 tons, Pulses 1,335 tons—total 44,120 tons. Deficit or surplus :

Cereals	42,785-30,570	=	(+)	12,215	tons
Pulses	6,112-1,335	=	(—)	4,777	tons
			(+)	7,438	tons

Sri H. S. SIDDAPPA.—For the past 4 years there was no rain and Government declared Arsikere taluk as drought area, and during 1970-71 even the land revenue has been remitted. How could Government say that it is not a deficit area ?

Smt. E. E. VAZ.—It was srpposed to be so till September 1972, but after that there have been good rains.

Sri H. S. SIDDAPPA.—What is the main food crop grown in Arsikere taluk ?

Smt. E. E. VAZ.—Ragi.

Sri H. S. SIDDAPPA.—I would like to know the average rain-fall in Arsikere taluk ?

Smt. E. E. VAZ.—I want notice.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಮಂತ್ರಿಗಳು ಈಗತಾನೇ ಕೆಲವು ಅಂಕಿಅಂಶಗಳನ್ನು ಒದಗಿಸಿ ಅರಸೀಕೆರೆ ತಾಲ್ಲೂಕ್ ಸರ್‌ಪ್ಲಸ್ ಏರಿಯಾ ಎಂದು ಹೇಳಿದರು. ಆದರೆ ಅವರು ಹೇಳಿದಂತೆ ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬ ರೈತನಲ್ಲಿ ಅಷ್ಟಿಷ್ಟು ಕಾಳು ಉಳಿದಿರಬಹುದು. ಆದರೆ ಅಲ್ಲಿಯ ಕೂಲಿಜನರ ಮತ್ತು ಕೊಂಡು ತಿನ್ನತಕ್ಕವರ ಪಾಡೇನು ? ಅವರೆಲ್ಲರೂ ಈಗ ಮಂತ್ರಿಗಳು ಕೊಟ್ಟ ಅಂಕಿ ಅಂಶಗಳನ್ನೇ ತಿಂದು ಹೊಟ್ಟೆ ತುಂಬಿಕೊಂಡಿರಲು ಸಾಧ್ಯವೇ ?

ಶ್ರೀಮತಿ ಇ. ಇ. ವಾಜ್.—1971-72ಕ್ಕೆ ಅಲ್ಲಿ ಅಷ್ಟು ಜಾಸ್ತಿ ಪ್ರೊಡಕ್ಷನ್ ಆಗಿದೆ. ಅಲ್ಲದೆ ಅದೇ ತಾಲ್ಲೂಕಿನ ಕೆಲವು ಗಣ್ಯವ್ಯಕ್ತಿಗಳು ನನ್ನಲ್ಲಿಗೆ ಬಂದು ಆ ದಕ್ಷಿಣ ಕನ್ನಡ ಜಿಲ್ಲೆಗೆ ಭತ್ತ ಸಾಗಿಸುವುದಕ್ಕೆ ಪರ್ಮಿಟ್ಟನ್ನು ಕೂಡ ಕೊಡಬೇಕೆಂದು ಕೇಳಿದರು. ನಾನು ಆಗುವುದಿಲ್ಲ ಎಂದೆ.

ಶ್ರೀ ಎಂ. ನಂಜೇಗೌಡ.—ಅಲ್ಲಿ ತೆಂಗಿನ ಬೆಳೆಯು ಪ್ರದೇಶವೇ ಜಾಸ್ತಿ ಇರುವಾಗ ಅಲ್ಲಿ ರಾಗಿ ಜೋಳ ಬೆಳೆಯತಕ್ಕ ಭೂಮಿಯೇ ಬಹಳ ಕಡಮೆ. ಅಂದಾಗ ಅದು ಸರಪ್ಲಸ್ ಹೇಗೆ ಆಯಿತು ?

ಶ್ರೀಮತಿ ಇ. ಇ. ವಾಜ್.—ನಾನು ಅರಸೀಕೆರೆ ತಾಲ್ಲೂಕಿಗೆ ಆಗಾಗ್ಗೆ ಹೋಗಿ ಬರುತ್ತಿದ್ದೇನೆ. ಆ ತಾಲ್ಲೂಕಿನ ಮೂಲೆ ಮೂಲೆಗಳೆಲ್ಲಾ ನನಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ಈಗ ತೆಂಗಿನ ಬೆಲೆ ಕೂಡ ಒಂದು ರೂಪಾಯಿಗೆ ಒಂದಾಗಿದೆ. ಅದೂ ಕೂಡ ಉತ್ಪನ್ನವೇ.

Sri H. S. SIDDAPPA.-Whether representations from Taluk Development Board and Municipality have been received that rains have failed in Arsikere taluk and no foodgrains are available for the people and the people are on the verge of starvation, and if so, what action the Government is going to take ? May I know the names of merchants who asked for permits to transport paddy to South Kanara ?

Smt. E. E. VAZ.—Our policy has been not to give any permit to transport paddy from Hassan to South Kanara. Regarding the failure of rains, the same has not come to our notice. Rains had failed till September 1972, and after September there was good rain. and the crops were also good.

Bund Across the Stream Near Mosale Village Arsikere Taluk

444 Sri M. NANJE GOWDA (Gandasi).—

Will the Minister for Public Works and Electricity be pleased to state :—

(*a*) whether a representation for construction of a bund (Mosale oddu) across the stream near Mosale village in Javagal Hobli of Arsikere Taluk has come to the notice of the Government ;

(*b*) whether the estimate for construction of this bund has been prepared ; if so, the estimated cost ;

(*c*) the total extent of land to be irrigated under this schsme (details may please be furnished) ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) Estimate for Rs. 1.90 lakhs has been prepared (as per 1971-72 rates)

(*c*) 60 acres. (semi-dry crop).

ಶ್ರೀ ಎಂ. ನಂಜೇಗೌಡ.—ಇದನ್ನು ಯಾವಾಗ ಕಾರ್ಯಗತ ಮಾಡಲಾಗುತ್ತದೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಮಾತ್ರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ನಂಜೇಗೌಡ.—ಅದಕ್ಕೆ ಕಾರಣವಾದದ್ದೂ ಏನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ನಾನಾ ಕಾರಣಗಳುಂಟು. ಒಂದನೇ ಕಾರಣ ತಾವು ಕೇಳುತ್ತಿರುವ ಒಡ್ಡು ವಾಣೀವಿಲಾಸ ಸಾಗರದ ಮೇಲ್ಭಾಗದಲ್ಲಿದ್ದು ಇದನ್ನು ಕಟ್ಟಿದರೆ ಈ ವಾಣೀವಿಲಾಸ ಸಾಗರಕ್ಕೆ ನೀರಿಗೆ ತೊಂದರೆ ಆದೀತೇನೋ ಎಂಬುದು ಮೊದಲನೇ ಕಾರಣ ಇನ್ನು ಎರಡನೆಯದು—ಇಲ್ಲಿ ಈ ಕಾಮಗಾರಿಯನ್ನು ಕೈಗೊಂಡು ಜಮೀನನ್ನು ನೀರಾವರಿಗೆ ತಂದರೆ ಅಲ್ಲಿ ಒಂದು ಎಕರೆಗೆ 3000 ರೂಪಾಯಿ ಮೇಲೆ ಖರ್ಚು ಬರುತ್ತದೆ. ಇದು ಬಹಳ ದುಬಾರಿ ಆಯಿತು.

ಶ್ರೀ ಎಂ. ನಂಜೇಗೌಡ.—ನೀರನ್ನು ಅಳತೆ ಮಾಡುವಾಗ ಹೊರಗಿನ ಜನರ ಕೈವಾಡ ನಡೆದಿದೆ ಎಂಬುದಾಗಿ ಜನರು ಅಭಿಪ್ರಾಯ ಪಡುತ್ತಿದ್ದಾರೆ. ಆದುದರಿಂದ ಪುನಃ ಪರಿಶೀಲಿಸಿ ಸಾಕಷ್ಟು ನೀರು ಬರುವುದೇ ಎಂಬುದನ್ನು ತಿಳಿದುಕೊಳ್ಳುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಪ್ರಶ್ನೆ ಸರಿಯಾಗಿ ಅರ್ಥವಾಗಲಿಲ್ಲ.

ಶ್ರೀ ಎಂ. ನಂಜೇಗೌಡ.—ಆ ಹಳ್ಳದ ನೀರಿನ ಬಗ್ಗೆ ಗೇಜಿಂಗ್ ಮಾಡುವಾಗ ಅಧಿಕಾರಿಗಳ ಮೇಲೆ ಹೊರಗಿನವರು ಕೈವಾಡ ನಡೆಸಿದ್ದಾರೆಂಬ ಅಭಿಪ್ರಾಯವಿದೆ. ಆದುದರಿಂದ ಪುನಃ ನೀರಿನ ಅಳತೆ ಮಾಡಿನೋಡುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೇಜಿಂಗ್ ಮಾಡುವುದು ನೀರು ಹರಿಯುವುದು ತಿಳಿಯುವುದಕ್ಕೆ. ಈಗ ವರದಿ ಬಂದಿರುವ ಪ್ರಕಾರ ಸಾಕಷ್ಟು ನೀರು ಸಿಕ್ಕುವುದಿಲ್ಲವೆಂದು ತಿಳಿದು ಬಂದಿದೆ. ಅಷ್ಟು ಅನುಮಾನ ಪಡಬೇಕಾದ ಅವಶ್ಯಕತೆ ಇಲ್ಲ. ಒಂದುವೇಳೆ ಪುನರ್ಪರಿಶೀಲನೆ ಮಾಡಬೇಕೆಂದರೆ ಅಡ್ಡಿಯಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಬರಗಾಲ ಪ್ರದೇಶದಲ್ಲಿ ಈ ಯೋಜನೆ ಇದೆ. ನೀರು ಕಡಮೆ ಬಂದರೆ ಅದಕ್ಕೆ ತಕ್ಕಂತೆ ಒಂದು ಚಿಕ್ಕ ಕಟ್ಟೆಯನ್ನಾದರೂ ಹಾಕುವಿರಾ? ದೂರದಲ್ಲಿರುವ ಕಟ್ಟೆಗೆ ನೀರು ಸಾಕಾಗುವುದಿಲ್ಲವೆಂದು ಹೇಳಿದರೆ ಮೇಲುಗಡೆ ಇರುವ ಜನರೇನು ಮಾಡಬೇಕು ? ಅವರಿಗೆ ಅನುಕೂಲ ಬೇಡವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರಿಲ್ಲದಿದ್ದರೆ ಕಟ್ಟೆ ಹೇಗೆ ಕಟ್ಟುವುದಕ್ಕೆ ಸಾಧ್ಯ !

Accommodation in Shikaripur and Shiralkoppa High Schools

503. Sri K. YENKATAPPA(Shikaripur).—

Will the Minister for education be pleased to state:—

(*a*) the stength of students in the Shikaripur, Shiralkoppa Municipal High Schools taken over by Government and whether there is sufficient accommodation proportionate to this strength;

(*b*) whether it is not a fact that the Ex-Municipality had paid money to Government for extending the buildings in the accommodation is insufficient;

(*c*) if so, when the money was paid and reason for such a long delay;

(*d*) whether orders will be issued for taking up the programme during this year only;

(*e*) whether it has come to the notice of the Government that the repair works of these Schools have come to standstill; if so, whether the repair works will be got done expeditiously?

Sri A. R. BADRIANARAYANA (Minister for Education) —

(a) The strength of students in Shikaripur and Shiralkoppa High Schools is 829. There is no sufficient accommodation proportionate to the strength.

(b) It is learnt that the Shikaripur Municipality has credited a sum of Rs. 13,135 to the P. W. D. The Shiralkoppa Municipality has not made any credit so far.

(c) The delay is due to the following reasons :

(1) Shortage of Money credited by the shikaripur Municipality on 18-12-1959.

(2) Non-crediting of any money by the Shiralkoppa Municipality.

(3) For not taking up suitable steps in construction of School buildings by the Municipalities.

(d) and (e) Under consideration.

ಶ್ರೀ ಕೆ. ಯಂಕಟಪ್ಪ.—1959ರಲ್ಲಿ ಶಿಕಾರಿಪುರ ಮುನಿಸಿಪಾಲಿಟಿಯವರು 13135 ರೂಪಾಯಿಗಳನ್ನು ಪಿಡಬ್ಲ್ಯುಗೆ ಜಮ ಮಾಡಿದ್ದರೂ ಕೂಡ ಇದುವರೆಗೆ ಸರಕಾರ ಈ ವಿಚಾರದಲ್ಲಿ ಗಮನ ಕೊಡದಿರಲು ಕಾರಣವೇನು ?

† ಶ್ರೀ ಎ. ಆರ್. ಬದರಿನಾರಾಯಣ.—ಮುನಿಸಿಪಾಲಿಟಿ ಹಣ ಡಿಪಾಜಿಟ್ ಮಾಡುವುದು 1959 ರಲ್ಲಿ, ಹ್ಯಾಂಡೋವರ್ ಮಾಡಿರುವುದು 1971ರಲ್ಲಿ. ಟೇಕಿಂಗ್ ಓವರ್ ಆಗಿಲ್ಲ. ಅದಿನ್ನು ಪ್ರೊಸೆಸ್‌ನಲ್ಲಿದೆ. ಸರಕಾರದ ಸ್ವಾಧೀನಕ್ಕೆ ಬರುವವರೆಗೆ ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಯಂಕಟಪ್ಪ.—1959ರಲ್ಲಿ ಎಷ್ಟು ಅಂದಾಜಾಗಿತ್ತೋ ಅದರ ಪ್ರಕಾರ ಮುನಿಸಿಪಾಲಿಟಿಯವರು ಹಣ ಡಿಪಾಜಿಟ್ ಮಾಡಿದ್ದಾರೆ. ಸರಕಾರದಿಂದ ಕ್ರಮ ತೆಗೆದುಕೊಳ್ಳುವುದು ತಡವಾಗಿದೆ. ಹೆಚ್ಚು ಹಣ ಕೊಡಬೇಕಾಗಿಲ್ಲ. ಈ ವರ್ಷವಾದರೂ ವಿಸ್ತರಣ ಕೆಲಸ ಕೈಕೊಳ್ಳುವಿರಾ !

ಶ್ರೀ ಎ. ಆರ್. ಬದರಿನಾರಾಯಣ್.—ಕಟ್ಟಡ ಸ್ವಾಧೀನಕ್ಕೆ ತೆಗೆದುಕೊಂಡ ತಕ್ಷಣ ಕೆಲಸ ಷುರು ಮಾಡುತ್ತೇವೆ.

Inadequate Supply of Medicines to Government Hospitals

513. Sri S. M. SHEERNALY CHANDRASEKHAR (Hosanager).—

Will the Minister for Health be pleased to state:—

(a) whether it has come to the notice of Government that there is no adequate supply of medicines in Government Hospitals in the State;

(b) the action taken for the adequate supply of medicines in these Hospitals ?

SRI H. SIDDAVEERAPPA (Minister for Health).—

(a) All essential and basic drugs are supplied as far as possible and Government have recently increased the provision for purchase of drugs considerably.

(b) Increasing funds are provided in Budget year after year. Government have also issued orders on 2nd March 1973, enchancing the provision for drugs to all hospitals in the State.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈಗ ಅನೇಕ ಆಸ್ಪತ್ರೆಗಳಲ್ಲಿ ಔಷಧಗಳ ಅಭಾವ ಇರುವುದನ್ನು ಗಮನಿಸಿ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿರುವಿರಾ ? ಅಭಾವವನ್ನು ಹೋಗಲಾಡಿಸಿದ್ದಿರಾ ?

ಶ್ರೀ ಎಚ್. ಸಿದ್ದವೀರಪ್ಪ. ಅಭಾವ ಪರಿಹಾರ ಮಾಡಲಾಗಿದೆ.

ಶ್ರೀ ಎಸ್, ಎಂ. ಶೀರನಾಳಿ ಚಂದ್ರಶೇಖರ್.—ಯಾವ ಯಾವ ಆಸ್ಪತ್ರೆಗಳಿಗೆ ಉತ್ತರದಲ್ಲಿ ತಿಳಿಸಿರುವಂತೆ ಆದೇಶ ಕೊಟ್ಟಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—1972-73 ರಲ್ಲಿ ನಾವು ಅಲಾಟಮೆಂಟ್ ಮಾಡಿದ್ದೇವೆ. ಅದು ಹೀಗಿದೆ.—

Bangalore	...	2,63,712.35
Belgaum	...	Nil
Bellary	...	36,591.06
Bidar	...	69,944.78
Bijapur	...	39,445.57
Chickmagalur	...	76,141.05
Chitradurga	...	41,614,27
Coorg	...	Nil
Dharwar	...	1,19,639.51
Gulbarga	...	Nil
Hassan	...	13,217.50
Kolar	...	67,193.36
Karwar	...	84,907.14
Mangalore	...	nil
Mysore	..	88,137.57
Mandya	...	29,387.99
Raichur	...	17,287.99
Shimoga	...	60,823.61
Tumkur	...	63,774.39
	Total Rs.	10,61,818.14

ಶ್ರೀ ಎಚ್. ಎಸ್. ಸಿದ್ದಪ್ಪ.—ಇತ್ತೀಚೆಗೆ ಮೆಡಿಕಲ್ ಸ್ಟೋರ್ಸ್‌ನಿಂದ ಔಷಧಿ ಮತ್ತು ಇಂಜೆಕ್ಷನ್ ಟ್ಯೂಬ್ಸ್ ಸರಬರಾಜು ಮಾಡುವುದು ಚೆನ್ನಾಗಿಲ್ಲ, ಹಿಂದೆ ಒಂದು ಇನ್‌ಜೆಕ್ಷನ್ ಕೊಟ್ಟರೆ ಗುಣವಾಗುತ್ತಿದ್ದ ಕಾಯಿಲೆಗೆ ಈಗ ನಾಲ್ಕು ಇಂಜೆಕ್ಷನ್ನುಗಳನ್ನು ತೆಗೆದುಕೊಳ್ಳಬೇಕಾಗಿದೆ, ಈಗ ಸರಬರಾಜು ಮಾಡುವುದು ಒಳ್ಳೆಯ ಔಷಧಿಗಳೇ ಎಂಬುದನ್ನು ಪರಿಶೀಲಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಕಾಯಿಲೆ ಉಲ್ಬಣ ಜಾಸ್ತಿಯಾಗಿರುವುದರಿಂದ ಒಂದಕ್ಕೆ ನಾಲ್ಕರಷ್ಟು ಇಂಜೆಕ್ಷನ್ ಕೊಡಬೇಕಾಗಿದೆ.

ಶ್ರೀ ಕೆ. ಯಂಕಟಪ್ಪ.—ಇಂಡೆಂಟ ಮಾಡಿದರೆ ಔಷಧಿ ಬರಲು ಆರು ತಿಂಗಳಾಗುವುದು. ಇದನ್ನು ಸರಿಪಡಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಸಾರಿ ಯಾವ ರೀತಿ ಮಾಡಬೇಕೆಂದು ಸ್ಕ್ರೀಮಾಲ್ಕೈನ ಮಾಡಿದ್ದೇವೆ. ಸ್ಪೆಷಲ್ ಕಮಿಟಿ ಇದಕ್ಕಾಗಿ ಮಾಡಿ ಸ್ಕ್ರೀಮಲ್ಕೈನ ಮಾಡಬೇಕು. ಹಾಗೆ ಮಾಡಿ ಇಂಡೆಂಟ ಕೊಡಬೇಕು ಎಂದು ಮಾಡಿದ್ದೇವೆ. ಇದಕ್ಕಾಗಿ ಈ ವರ್ಷ 3 ಕೋಟಿ ರೂಪಾಯಿ ಮೀಸಲಾಗಿಡಲಾಗಿದೆ. ಒಂದು ಕೋಟಿ ರೂಪಾಯಿ ಔಷಧಿಗಳನ್ನು ಅಲ್ಲಲ್ಲಿ ಆಸ್ಪತ್ರೆಗಳಿಗೆ ಒದಗಿಸಬೇಕೆಂದಿದ್ದೇವೆ. ಸೆಂಟ್ರಲ್ ಆಸ್ಪತ್ರೆಗೆ 10 ಸಾವಿರ ರೂಪಾಯಿಗಳ ಔಷಧಿ ಸರಬರಾಯಿ ಮಾಡಬೇಕೆಂದಿದ್ದೇವೆ, ಇದುವರೆಗೆ ಪ್ರತಿಯೊಂದು ಆಸ್ಪತ್ರೆಗೂ ಔಷಧಿಗಳನ್ನು ಮಾರ್ಚಿಯಲ್ಲಿ ಕೊಳ್ಳುತ್ತಿದ್ದರು, ಇನ್ನುಮೇಲೆ ಡಿಸೆಂಬರಿನಲ್ಲೇ ಕೊಳ್ಳಬೇಕು, ಕೊಂಡು ಸರಬರಾಜು ಮಾಡಬೇಕು ಎಂದು ಸ್ಕ್ರೀಮಾಲ್ಕೈನ ಮಾಡಿ ಇದರ ಬಗ್ಗೆ ಗವರ್ನಮೆಂಟ್ ಆರ್ಡರ್ ಮಾಡಲಾಗಿದೆ.

ಶ್ರೀ ಬಿ. ಎನ್. ಪಾಟೀಲ್.—ಚೈಲ್ಡ ವೆಲ್‌ಫೇರ್, ಎಪಿಡೆಮಿಕ್ಸ್, ಪೋಲಿಯೋ, ಟಿಬಿ. ಕಾಲರ ಮುಂತಾದುವುಗಳಿಗೆ ತಾಲ್ಲೂಕುಗಳಲ್ಲಿ ಅರೆಂಜಮೆಂಟ್ ಮಾಡಿದೆಯೆ ?

Sri H. SIDDAVEERAPPA.—That is our aim. It has been taken up as a National Plan so that the drugs and various other preventive measures to look after the hea th of the childern. We want to extend to rural areas also through the PSC and it will not be confined o nly to the urban areas.

ಶ್ರೀ ಜಿ. ಪುಟ್ಟಸ್ವಾಮಿ.—ಈಗ 2-3-1973ರಲ್ಲಿ ಹಣವನ್ನು ಹಂಚಿರುವ ಪ್ರಕಾರ ಯಾವರೀತಿ ಹಂಚಲಾಗಿದೆ ಎಂಬುದನ್ನು ತಿಳಿಸುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿವರವಿಲ್ಲ. ಸರಿಯಾಗಿ ಅನೇಕ ಕಡೆ ಕೆಲಸ ನಡೆಯುತ್ತಿದೆಯೆಂದು ಗೊತ್ತಾಗಿದೆ. ಕೆಲವು ಆಸ್ಪತ್ರೆಗಳಲ್ಲಿ ತೊಂದರೆಯಾಗಿರಬಹುದು. ಈ ಅನ್ಯಾಯವನ್ನು ಸರಿಪಡಿಸಲು ಸ್ಕ್ರೀಮಲ್ಕೈನ್ ಮಾಡಿ ಒಂದು ಹೈ ಪವರ್ ಕಮಿಟಿ ಮಾಡಿ ಅದಕ್ಕೆ ಒಬ್ಬ ಜಾಯಿಂಟ್ ಡೈರೆಕ್ಟರ್ ಮುಂತಾದವರನ್ನು ಹಾಕಿದೆ. ಹೆಲ್ತ ಇಲಾಖೆ ಸೆಕ್ರೆಟರಿಯವರು ಅದರ ಛೇರ್ಮನ್ ಆಗಿದ್ದಾರೆ. ಔಷಧಿಗಳ ಸರಬರಾಜಿನ ವಿಷಯದಲ್ಲಿ ಆದಷ್ಟು ಅನ್ಯಾಯವಾಗದ ಹಾಗೆ ನೋಡಿಕೊಳ್ಳಬೇಕು ಎಂದು ಸಂಬಂಧಪಟ್ಟ ಸಮಿತಿಗೆ ತಿಳಿಸಲಾಗಿದೆ.

1-30 P.M.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ ತಾವು 2-3-1973ರಂದು ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ ಎಂದು ತಾರೀಖನ್ನು ಕೊಟ್ಟಿದ್ದೀರಿ, ಮೊನ್ನೆ ರಜಾ ಇದ್ದು ಆಗಲೂ ಕೂಡ ನಮ್ಮ ಜಿಲ್ಲೆಯ ಅಸ್ಪತ್ರೆಗಳಿಗೆ ಔಷಧಿ ಬೇಕು ಎಂದು ಕೇಳಿದ್ದಾರೆ. ಅಲ್ಲಿ ಔಷಧಿಗಳ ಸ್ಕೇರ್ಸಿಟಿ ಇದೆ, ಪೇಷಂಟ್ಸ್‌ಗಳಿಗೆ ಔಷಧಿಯಿಲ್ಲದ ಆಸ್ಪತ್ರೆಗಳು ಇವೆ. 60 ಸಾವಿರ ರೂಪಾಯಿಗಳನ್ನು ಶಿವಮೊಗ ಜಿಲ್ಲೆಗೆ ಇದಕ್ಕಾಗಿ ಒದಗಿಸಿದ್ದೇವೆಂದು ಹೇಳಿದ್ದೀರಿ. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಆಸ್ಪತ್ರೆಗಳಲ್ಲಿ ಔಷಧಿಯಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ತಾವು ಏನುಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ವಿಚಾರ ಮಾಡುತ್ತೇನೆ, ಸುಳ್ಳು ಹೇಳಿದ್ದರೆ ಅವರಿಗೆ ಶಿಕ್ಷೆ ಮಾಡುತ್ತೇನೆ.

Bijur Irrigation Scheme

554. **Sri A. G. KODGI** (Baindur).—

Will the Minister of State for Major Irrigation be pleased to state.—

(*a*) the expenditure incurred so far in respect of the Bijur Irrigation Scheme in South Kanara District ;

(*b*) the policy of the Government regarding the implementa-iton of the Scheme ?

Sri H. N. NANJE GOWDA (Minister of State for Major Irrigation).—

(*a*) Rs. 2.66 lakhs.

(*b*) Its estimate is under consideration.

ಶ್ರೀ ಎ. ಜಿ. ಕೊಡಗಿ.—ತಮ್ಮ ಉತ್ತರದಲ್ಲಿ 2.66 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದೀರಿ, ಎಂದಿನಿಂದ ಯಾವ ಬಾಬಿಗೆ ಇಷ್ಟು ಖರ್ಚಾಗಿದೆ ಎಂದು ವಿವರ ಹೇಳುತ್ತೀರಾ ?

† ಶ್ರೀ ಎಚ್. ಎನ್. ನಂಜೇಗೌಡ.—1962ನೇ ಇಸವಿಯಿಂದ ಇಲ್ಲಿಯವರೆಗೆ ಇಷ್ಟು ಖರ್ಚಾಗಿದೆ ಪ್ರಿಲಿಮಿನರಿ ವರ್ಕ್ಸ್ ಮಾಡಿದ್ದಾರೆ. ಅವಕ್ಕೆ ಈ ದುಡ್ಡನ್ನು ಖರ್ಚು ಮಾಡಿದ್ದಾರೆ. ಎಸ್ಟಿಮೇಟ್ಸ್ ಸರ್ಕಾರದ ವತಿಗೆ ಬಂದಿದೆ, ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎ.ಜಿ. ಕೊಡಗಿ.–1962ನೇ ಇಸವಿಯಿಂದ ಪ್ರಿಲಿಮಿನರಿ ವರ್ಕ್ಸ್‌ಗೆ 2.66 ಲಕ್ಷ ರೂಪಾಯಿ ಖರ್ಚಾಗಿದೆ, ಇದರ ಅಂದಾಜು ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ. 21 ವರ್ಷಕಾಲ ಕಳೆದರೂ ಕೂಡ ಪರಿಶೀಲನೆಯಲ್ಲಿದೆ ಎಂದು ತಾವು ಹೇಳುತ್ತಾ ಇದ್ದೀರಿ, ಇದರ ಅರ್ಥ ಏನು ? ಎಂದು ಗೊತ್ತಾಗುತ್ತಾ ಇಲ್ಲ. ಯಾವಾಗ ಇದರ ಅಂತ್ಯ ಪರಿಶೀಲನೆಯಾಗಬೇಕು, ಇದರ ಬಗ್ಗೆ ಸರ್ಕಾರದ ಧೋರಣೆ ಏನು ?

ಶ್ರೀ ಎಚ್. ಎನ್. ನಂಜೇಗೌಡ.—1952ರಿಂದ ಅಲ್ಲ 1962ರಿಂದ 13 ವರ್ಷ, 2ಲಕ್ಷ 25 ಸಾವಿರ ರೂಪಾಯಿಗಳ ಎಸ್ಟಿಮೇಟ್ ಸರ್ಕಾರದ ಮುಂಜೂರಾತಿ ಪಡೆದಿದೆ, ಟೆಂಡರ್ ಹಾಕುವ ವೇಳೆ ಬದಲಾವಣೆಯಾಗಿದೆ. ತಾಂತ್ರಿಕ ಕಮಿಟಿಯವರು 134 ಲಕ್ಷ ರೂಪಾಯಿಗಳಿಗೆ ಬದಲಾವಣೆ ಮಾಡಿದ್ದು ಪುನಃ ಟೆಂಡರ್ ಕರೆದರು. ಪುನಃ ವ್ಯತ್ಯಾಸವಾಯಿತು. ಅಂದಾಜು ವ್ಯತ್ಯಾಸವಾಗಿ ಸ್ವೀಕಾರ ಮಾಡದೆ 134 ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. 134 ಲಕ್ಷ ರೂಪಾಯಿಗಳ ಕೆಲಸ ಎಂದರೆ, ಹಣದ ಫೀಸಿಬಿಲಿಟಿ ಅರ್ಥಮಾಡಿಕೊಂಡು ಈ ಕೆಲಸವನ್ನು ಕೈಗೊಳ್ಳಬೇಕಾಗುತ್ತದೆ.

ಶ್ರೀ ಕೆ. ಯಂಕಟಪ್ಪ.–13ವರ್ಷದಿಂದ ಪ್ರಿಲಿಮಿನರಿ ವರ್ಕ್ಸ್‌ಗೋಸ್ಕರ ಇಷ್ಟು ದುಡ್ಡು ಖರ್ಚಾಗಿದೆ ಎಂದು ಹೇಳಿದಿರಿ, ಇಷ್ಟು ಖರ್ಚಾದಮೇಲೆ, ಈ ಯೋಜನೆ ಅವಶ್ಯಕವಾಗಿ ಆಗಲೇಬೇಕು; ಎನ್ನುವುದು ತಮ್ಮ ಗಮನದಲ್ಲಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ನೀರಾವರಿ ಪ್ರದೇಶ ಎಷ್ಟಾಗುತ್ತದೆ, ದುಡ್ಡು ಎಷ್ಟು ಹೋಗುತ್ತದೆ, ಇದು ಸೂಕ್ತವೇ ಅಲ್ಲವೇ ಎಂದು ಯೋಚನೆ ಮಾಡಿ ಸರ್ಕಾರ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಮಾಡಲೇಬೇಕು ಎಂದು ತೀರ್ಮಾನ ಕೈಗೊಂಡ ಮೇಲೆ ಹಣದ ಪರಿಸ್ಥಿತಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದೆಲ್ಲ ಅರ್ಥಮಾಡಿಕೊಂಡು ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

ಶ್ರೀ ಎ. ಜಿ. ಕೊಡಗಿ.—ವರ್ಷೆ ವರ್ಷೆ ವೆಚ್ಚ ಹೆಚ್ಚುತ್ತಾ ಇರುವುದನ್ನು ಗಮನಕ್ಕೆ ತಂದಿದ್ದಾರೆ. ಯೋಜನೆಯ ಅವಶ್ಯಕತೆ ಇದೆಯೇ ಇಲ್ಲವೇ ಎಂದು ನಿರ್ಧಾರಕ್ಕೆ ಬಂದು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ. ?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿಗೆ ಯಾವ ಹಣವನ್ನೂ ಅಲ್ಲಿ ವೆಚ್ಚ ಮಾಡಿಲ್ಲ ಈ ಯೋಜನೆಯ ಅಗತ್ಯವಿದೆ ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಶೀಘ್ರವಾಗಿ ಕ್ರಮತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಸರ್ಕಾರಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾರಿ ಬಾರಿ ಯೋಜನೆಯನ್ನು ತೆಗೆದುಕೊಂಡಿಲ್ಲ ಎಂದು ಗಮನದಲ್ಲಿದೆ. ಈ ದೃಷ್ಟಿಯಿಂದ ನಿಖರವಾದ ಯೋಜನೆ ಇದ್ದರೆ ಅದನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

Distribution of Assets among the Reorganised Panchayats in Hassan Taluk

565. Sri K. H. HANUME GOWDA (Hasan).—

Will the Minister for Community Development and Social Welfare be pleased to state.—

(a) the Panchayats of Hassan taluks that were reorganised before the last Panchayat elections ;

(b) whether the assets of the undivided Panchayats have been distributed among the reorganised Panchayats ; if so, when ;

(c) the names of Panchayats and the assets derived by each of them ?

Sri M. MALLIKARJUNASWAMY (Minister for Community Development and Social Welfare).—

(a) 33 Panchayats were reorganised before the last Panchayat elections. The details are furnished in the statement appended.

(b) The assets of the undivided Panchayats have not been distributed among the reorganised Panchayats in full. The Assistant Commissioner is taking suitable action in this behalf.

(c) The claims regarding the assets of each of the Panchayats have been decided. Early action is being taken regarding distribution of money.

STATEMENT

Regrouping of V. Ps in Hassan Taluk

Sl. No.	Name of the Village Panchayat		Villages Transferred
1			3
1	Kattaya	...	Doornahosahally
2	Kithane	...	Hyrane Chikkabaganahosahally Hullihalli Bachihalli
3	Settyhally	...	Chowdavally Sidlahosahally Urumundinahosahally Condikoval B. C. Madihally Haruvanahallikaval

1	2		2
4	Malladevarapura	...	Karlekaval
5	Uduvare	...	Tyagator
6.	Karle	...	Averahalli Devihally Banavase
7	Salagame	...	Yelagodanahally Gullenahally
8	Yelagunda	...	Ramadevarahally Mandiganahally Nagenahally Kelavathi Ramadevarapura
9	Bommanayakanahally	...	Channapatna Sankalapura
10	Jodibandinakere	..	Nanjeevarakaval Hoovinahallikaval
11	Kuppahalli		Muglur Agalahally Verthikere
12	Haluvagilu	...	Maragondanahally
13	Kithanakere	...	Bommanahally
14	Dudda	...	Devihally
		...	Hon[illegible]mmanahally

ಶ್ರೀ ಕೆ. ಎಚ್. ಹುನವೆಗೌಡ.—ಪಂಚಾಯಿತಿಯ ಎಲೆಕ್ಷನ್ ನಡೆದು ನಾಲ್ಕು ವರ್ಷ ಮುಗಿದು ಪುನಃ ಎಲೆಕ್ಷನ್ ಬಂದು ಮರುವಿಂಗಡಣೆ ಏತಕ್ಕೆ ಮಾಡಿದರು ? ಇದಕ್ಕೆ ಸಂಬಂದಪಟ್ಟ ಅಧಿಕಾರಿಯಾರು ? ಆತ ಏನು ಕೆಲಸ ಮಾಡುತ್ತಾ ಇದ್ದಾನೆ, ಆತನ ಮೇಲೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೀರಾ ? ಇಂಥ ಅನಾದರಣೆ ಸರ್ಕಾರದ ಕೆಲಸದಲ್ಲಿ ಆಗದಹಾಗೆ ಬಂದೋಬಸ್ತು ಮಾಡುತ್ತೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಹೇಳಿದ ಹಾಗೆ 1969–70 ರಲ್ಲಿ ಚುನಾವಣೆ ಮುಗಿದ ಮೇಲೆ ಮರುವಿಂಗಡಣೆಯ ಕೆಲಸ ಪ್ರಾರಂಭವಾಯಿತು. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಅಸಿಸ್ಟೆಂಟ್ ಕಮಿಷನರ್. ಈಗಾಗಲೇ ಮೂವಬಲ್ ಪ್ರಾಪರ್ಟೀಸ್ ಏನಿದೆ ಅದನ್ನೆಲ್ಲಾ ವಿತರಣೆ ಮಾಡಲಾಗಿದೆ. ಇಮ್ಮೂವಬಲ್ ಪ್ರಾಪರ್ಟೀಸ್ ಏನು ಇದೆ ಇದು ಪ್ರತಿ ಪಂಚಾಯತಿಗೆ ಎಷ್ಟು ಉತ್ಪನ್ನ ಇದೆ, ಜನಸಂಖ್ಯೆ ಏನು ಇದೆ, ಆದಾಯ ಏನು ಇದೆ ನೋಡಿಕೊಂಡು ಆ ಕೆಲಸ ಬಹಳ ದಿವಸ ಹಿಡಿಯುತ್ತದೆ. ಅಂತಿಮವಾಗಿ 14–3–1973ರಲ್ಲಿ ಅಸಿಸ್ಟೆಂಟ್ ಕಮಿಷನರ್ ಅವರು ಆರ್ಡರ್ ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಇನ್ನು ಎರಡು ತಿಂಗಳಲ್ಲಿ ಆ ಕೆಲಸವನ್ನು ಪೂರ್ಣಮಾಡಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಎಚ್. ಹುನುಮೇಗೌಡ.—ಮರುವಿಂಗಡಣೆಯಾಗಿ, ಒಂದು ಪಂಚಾಯತಿಯ ದುಡ್ಡನ್ನು ಇನ್ನೊಂದು ಪಂಚಾಯತಿಗೆ ಕೊಡಬೇಕಾದ ಸಂದರ್ಭಗಳು ಇವೆ. ಪಂಚಾಯತಿಯಲ್ಲಿ ಹಣ ಇಲ್ಲದೆಹೋದರೆ, ಅಂಥ ಪಂಚಾಯತಿಗಳಿಗೆ ಯಾವರೀತಿ ಹಣವನ್ನು ಒದಗಿಸುವುದಕ್ಕೆ ಯೋಚನೆ ಮಾಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಣ ಖರ್ಚುಮಾಡಬೇಕಾದ ಸಂದರ್ಭಗಳು ಇವೆ. ಹಣ ವಸೂಲಿಯಾಗಬೇಕಾದ ಸಂದರ್ಭಗಳೂ ಇವೆ. ಇದರಿಂದ ನಿಧಾನವಾಗಿರುವುದು, ಇದನ್ನೆಲ್ಲಾ ನೋಡಿಕೊಂಡು ಮಾಡಬೇಕಾದರೆ, ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ; ಮುಂದಿನ 2 ತಿಂಗಳಲ್ಲಿ ಆ ಕೆಲಸವನ್ನು ಪೂರ್ಣವಾಗಿ ಮಾಡುತ್ತೇವೆ ಎಂದು ಸರ್ಕಾರದ ಪರವಾಗಿ ಭರವಸೆ ಕೊಡುತ್ತೇನೆ,

ಶ್ರೀ ಕೆ. ಎಚ್. ಹನುಮೇಗೌಡ.—1971ರಲ್ಲಿ ಚುನಾವಣೆ ಮರುವಿಂಗಡಣೆ ಆದನಂತರ ಆಸೆಟ್ಸ್ ಅಂಡ್ ಲಯಬಿಲಿಟೀಸ್ ಅನ್ನು ಪುನರ್‌ವಿಂಗಡಣೆ ಮಾಡುತ್ತೀರಾ ? 1959-60ರಲ್ಲಿ ಮರುವಿಂಗಡಣೆಯಾಯಿತು, ಆಸೆಟ್ಸ್ ಲಯಬಿಲಿಟೀಸ್ ವಿತರಣೆಯಾಗಲಿಲ್ಲ. ಇದು ತಮ್ಮ ಗಮನದಲ್ಲಿದೆಯೇ ? ಹಾಗಿದ್ದರೆ, ಇದನ್ನು ಎಷ್ಟು ದಿವಸದಲ್ಲಿ ಮಾಡಿಸುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇಂಥಾದ್ದು ಇದ್ದರೆ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬನ್ನಿ, ನೋಡುತ್ತೇವೆ.

Filling up of the Primary School Teachers Posts in South Kanara District

596. Smt. WINNIFRED F. FERNANDES (Coondapur).—

Will the Minister for Education be pleased to state :—

(a) whether Government is aware that in many primary schools (both private and Government) and those belonging to the Fisheries Department the sanctioned or required number of teachers are not posted and that many posts are kept vacant for long periods in South Kanara District and in particular, Coondapur taluk ;

(b) whether Government would make immediate arrangements to fill all such vacant posts at least by appointing local candidates, if need be ?

Sri A. R. BADARINARAYANA (Minister for Education).—

(a) The Fisheries school is under the control of the Director of Fisheries, Bangalore, who will be taking action to fill up the vacant posts in the said school. So far as Government Primary Schools particularly in Coondapur Taluk in respect of 71 vacancies, the Deputy Director of Public Instruction has appointed D.L.R.C. candidates, and 64 D.L.R.C. candidates have reported for duty.

(b) In respect of remaining vacancies if the D.L.R.C. candidates fail to report within the stipulated period, those in the waiting list will be posted. In respect of private aided schools. The management has to take action to fill up the posts and seek approval of the Department.

Smt. WINNIFRED F. FERNANDES.—May I know when these vacancies have been filled up and in which Schools ?

† Sri A. R. BADARINARAYANA.—I cannot give the number of vacancies that have been filled up in each School. 64 vacancies have

been filled up out of 71, immediately after the D.L.R.C. finalised its list. For the remaining vacancies, if the candidates fail to report for duty, other arrangements will be made to post the candidates.

Smt. WINNIFRED F. FERNANDES.—According to the Teacher-pupil ratio, there are many posts existing in Coondapur Taluk. May I know how many posts are still existing ?

Sri A. R. BADARINARAYANA.—I cannot tell you the exact number of posts.

Smt. WINNIFRED F. FERNANDES.—I have asked a specific question. There are many vacancies still vacant according to the principle of Teacher-pupil ratio. I want an answer for this. The Hon. Minister is not giving a correct answer.

Sri A. R. BADARINARAYANA.—I can give you figure for the entire South Canara District. The Deputy Director of Public Instruction has asked for 327 additional posts out of which only 127 posts have been sanctioned. But I cannot say what is the exact number of vacancies that are existing in Coondapur Taluk.

Sri V. N. PATIL.—There are certain vacancies in a earticular area. There are no candidates available. Will the Government promote the teachers working in the lower grade ? What is the policy of the Government in this regard ?

Sri A. R. BADARINARAYANA.—Is it relevant to this question ?

Sri V. N. PATIL.—It is relevant. D.L.R.C. is giving a list. If the candidates of the list are not reporting, what is the next alternative ? What is the exact policy of the Government in that event ?

MADAM SPEAKER.—This is a policy matter and this may not be answred.

ಶ್ರೀ ಎ. ಜಿ. ಕೊಡಗಿ.—ಸರ್ಕಾರದ ಧೋರಣೆಯಲ್ಲಿ 40 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರು ಇರಬೇಕು ಎಂದು ಇದ್ದರೂ ಕೂಡ ಖಾಸಗಿ ಶಾಲೆಗಳಿಗೆ ಸರ್ಕಾರಿ ಗ್ರಾಂಟ್ ಕೊಡುತ್ತೀರಿ. ಸರ್ಕಾರಿ ಶಾಲೆಗಳಲ್ಲಿ ಮಾತ್ರ ನಮ್ಮ ಜಿಲ್ಲೆಯಲ್ಲಿ 325 ವೇಕೆನ್ಸಿ ಇದ್ದರೂ 110 ಮಾತ್ರ ಇಲ್ಲಿಯವರೆಗೆ ಸ್ಯಾಂಕ್ಷನ್ ಮಾಡಿದ್ದೀರಿ, ಇನ್ನು ಉಳಿದ 200 ಪೋಸ್ಟುಗಳು ಖಾಲಿ ಇವೆ. ಸರ್ಕಾರದ ಧೋರಣೆಯಲ್ಲಿ ತಾರತಮ್ಯ ಮಾಡಿದಹಾಗೆ ಆಗುವುದಿಲ್ಲವೇ ? ಸರ್ಕಾರಿ ಶಾಲೆಗಳಲ್ಲಿ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಖಾಸಗಿ ಶಾಲೆಗಳಲ್ಲಿ ಸಾಕಷ್ಟು ಉಪಾಧ್ಯಾಯರನ್ನು ನೇಮಕ ಮಾಡುವ ಧೋರಣೆಯಿಂದ ತಾರತಮ್ಯವಾಗುವುದಿಲ್ಲವೇ ?

ಅಧ್ಯಕ್ಷರು.—ಅವರು ಪಾಲಿಸಿ ವಿಷಯ ಎಂದರು, ನೀವು ಧೋರಣೆ ಎಂದು ಹೇಳಿದಿರಿ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ.

Smt. WINNIFRED F. FERNANDES.—When are you going to fill up these vacant posts of teachers according to teacher pupil ratio ?

Sri A. R. BADARINARAYANA.—Perhaps, it will take a lot of time. It is a question of finance to provide all the Schools according to teacher pupil ratio. Perhaps, you will have to provide thousands of teachers and it will not be possible all at once to appoint the teachers.

Sri H. S. SIDDAPPA.—If, according to the policy of the Government, you need much more time and money, what is the alternative ? Would you suggest giving tution to those children where there are no teachers ? Or, in the alternative, do you think of closing the schools ?

Sri A. R. BADARINARAYANA.—The hon. Member himself should give an answer. It is a question of providing finances. Government is very anxious to provide teachers, but there must be budget provision.

Sri H. S. SIDDAPPA.—You can demand it from the Finance Minister.

Sri B. B. SAYANAK.—May I know since when these 71 vacancies are there in these Fisheries Schools ?

Sri A. R. BADARINARAYANA.—He asks since how long these 71 vacancies are there ? I have already answered it.

Kadukurubas of Bellary District

840. Sri D. NARAYANA DAS (Harapanahalli).—

Will the Minister for Community Development and Social Welfare be pleased to state :—

(a) The population of Kadukurubas in Bellary District ;

(b) the difference between Kadukurubas and the Kurubas living in villages and towns etc. ;

(c) whether it has come to the notice of the Government that the candidates living in villages and towns derive the benefits available to Scheduled-Tribes by obtaining Caste Certificate from Tahsildars and District Social Welfare Officers as Kadukurubas ;

(d) if so, the action proposed to be taken against the Officers who have issued Caste Certificates irregularly ?

Sri M. MALLIKARJUNA SWAMY (Minister for Community Development and Social Welfare).—

(a) According to 1961 Census of India the population of Kadukurubas in Bellary District is 255.

(b) The Kadukurubas are considered as Scheduled Tribes and they generally live in forest areas. Most of them are engaged in forest labour. Kurubas live in villages and towns. Sheep rearing, weaving of blankets and dairying are the main occupations for their livelihood. The Kurubas consider Kadukurubas as inferior to them and socially do not mix with them.

(c) It has been found in some cases,

(*d*) The action to find out the irregular issue of Certificates has been taken and based on this, suitable steps against the concerned officers are being taken.

ಶ್ರೀ ಡಿ. ನಾರಾಯಣದಾಸ್.—ಬಳ್ಳಾರಿ ಜಿಲ್ಲೆಯಲ್ಲಿ ಕಾಡು ಕುರುಬರ ಜನಸಂಖ್ಯೆ 255 ಎಂದು ತಿಳಿಸಿದ್ದೀರಿ ಪ್ರತಿ ತಾಲ್ಲೋಕಿನಲ್ಲಿ ಎಷ್ಟು ಇದೆಯೆಂದು ತಿಳಿಸುತ್ತೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬಳ್ಳಾರಿ ಡಿಸ್ಟ್ರಿಕ್ಟ್‌ನಲ್ಲಿ 255 ಇದ್ದಾರೆ. ತಾಲ್ಲೋಕುವಾರು ಅಂಕಿ ಸಂಖ್ಯೆ ಇಲ್ಲ.

ಶ್ರೀ ಡಿ. ನಾರಾಯಣದಾಸ್.—ಕುರುಬ ಜನರು ಕಾಡು ಕುರುಬರೆಂದು ಸರ್ಟಿಫಿಕೇಟ್ ತೆಗೆದುಕೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೋ? ಬಂದಿದ್ದರೆ ಅದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—20 ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ. ಅದರಲ್ಲಿ ಪರಿಶಿಷ್ಟ ವರ್ಗಕ್ಕೆ 11, ಪರಿಶಿಷ್ಟ ಜನಾಂಗದವರ ಪೈಕಿ 8, ವಿಮುಕ್ತ ಜಾತಿಯವರ ಪೈಕಿ ಒಂದು. ಇವರು ಸುಳ್ಳು ಸರ್ಟಿಫಿಕೇಟ್ ಕುರುಬರಾಗಿರತಕ್ಕವರು ಊರು ಕುರುಬರು ಅದರ ಹಿಂದೆ ಕಾಡು ಕುರುಬ ಎಂದು ಸೇರಿಸಿ ಮೆಡಿಕಲ್ ಕಾಲೇಜ್ ಸೀಟು ಮತ್ತು ಸ್ಕಾಲರ್‌ಶಿಪ್ ಪಡೆಯುವುದಕ್ಕೆ ಪ್ರಯತ್ನ ಪಟ್ಟಿರತಕ್ಕ ಸಂದರ್ಭಗಳು ಗಮನಕ್ಕೆ ಬಂದು, ಅವುಗಳನ್ನು ಪರಿಶೀಲನೆ ಮಾಡಿ, ಅವರನ್ನು ಜನರಲ್ ವಿಭಾಗಕ್ಕೆ ಸೇರಿದವರೆಂದು ಪರಿಗಣಿಸಬೇಕು ಎಂದು ಸಲಹೆಯನ್ನು ಕೊಟ್ಟಿದ್ದೇವೆ. ಯಾವ ಅಧಿಕಾರಿಗಳು ಇಂಥ ಸುಳ್ಳು ಸರ್ಟಿಫಿಕೇಟ್ ಕೊಟ್ಟಿದ್ದಾರೆ ಅವರ ಮೇಲೂ ಕೂಡ ಕ್ರಮವನ್ನು ತೆಗೆದುಕೊಳ್ಳುತ್ತಾ ಇದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಸ್ವಾಮಿ ಕೆಲವುಕಡೆ ಕಂಡುಬಂದಿದೆ. ಕೇವಲ ಆಫಿಸರ್ಸ್ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ, ಸುಳ್ಳು ಸರ್ಟಿಫಿಕೇಟ್ ತೆಗೆದುಕೊಂಡು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಾ ಇದ್ದಾರೆ ಅದು ಗಮನಕ್ಕೆ ಬಂದಿದೆಯೇ ? ಇದನ್ನೆಲ್ಲಾ ಕಡ್ಡಾಯವಾಗಿ ಪರಿಶೀಲನೆಮಾಡಿ ಈ ರೀತಿ ಅಕ್ರಮ ನೀತಿ ನಡೆಯದೇ ಇರುವುದಕ್ಕೆ ಸೂಕ್ತ ಬಂದೋಬಸ್ತ್ ಮಾಡುತ್ತೀರಾ ?

ಅಧ್ಯಕ್ಷರು.—ಈಗತಾನೇ ಹೇಳಿದರು.

ಶ್ರೀ ವಿ. ಎನ್. ಪಾಟೀಲ್.—ಈ ತರಹ ಅನ್‌ಡ್ಯೂ ಅಡ್ವಾಂಟೇಜ್ ತೆಗೆದುಕೊಂಡು ಆಫೀಸರ್ಸ್ ಇಂದ ಸುಳ್ಳು ಸರ್ಟಿಫಿಕೇಟ್ ತೆಗೆದುಕೊಳ್ಳುತ್ತಾರೆ, ಇದರ ರೂಟ್‌ಕಾಸ್ ಏನಿದೆ ಅದನ್ನು ಬ್ಯಾನಿಷ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

Sri M. MALLIKARJUNA SWAMY.—Let him consult Karl Marx.

Sri V. N. PATIL.—Can it be possible ? Karl Marx cannot be a Minister here to give guide-lines.

MADAM SPEAKER.—Karl Marx cannot come into the question hour.

ಶ್ರೀ ಕೆ. ಯೆಂಕಟಪ್ಪ.—ಈ ರೀತಿ 11 ಕೇಸುಗಳು ಬಂದಿವೆಯೆಂದು ಹೇಳಿದ್ದಾರೆ. ಅವರ ಹೆಸರುಗಳನ್ನು ಹೇಳುವುದಕ್ಕೆ ಸಾಧ್ಯವೇ ? ತಾವು ಏನು ಕುರುಬ ಇದ್ದದ್ದನ್ನು ಹಿಂದೆ ಕಾಡು ಎಂದು ಸೇರಿಸಿದ್ದಾರೆ ಎಂದು ಹೇಳಿದಿರಿ. ಅದರ ಬಗ್ಗೆ ಅಧಿಕಾರಿಗಳ ಮೇಲೆ ಯಾವರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ? ತಪ್ಪು ಮಾಡಿರುವವರು ಸರ್ಟಿಫಿಕೇಟ್ ತೆಗೆದುಕೊಂಡಿರುವವರು ಬೇರೆಯವರು ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸಿಸಿಎ, ರೂಲ್ಸ್ ಪ್ರಕಾರ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಯೆಂಕಟಪ್ಪ.—ಏನು ಕಾಡು ಕುರುಬರು ಎಂದು ಸರ್ಟಿಫಿಕೇಟ್ ಕೊಟ್ಟದ್ದು ಆ ಸರ್ಟಿಫಿಕೇಟ್ ಕೊಡಬೇಕೆಂದು ಅರ್ಜಿ ಕೊಟ್ಟಿರತಕ್ಕವರು ಸೇರಿಸಿಕೊಂಡಿದ್ದಾರೆಯೇ ? ಅಧಿಕಾರಿಗಳು ಸೇರಿಸಿದ್ದಾರೆಯೇ ? ಎನ್ನುವುದು ಒಂದು. 11 ಕೇಸುಗಳು ಇವೆಯೆಂದು ಹೇಳಿದ್ದೀರಿ, ಅವರ ಹೆಸರುಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಯಾರು ಈ ಸೌಲಭ್ಯವನ್ನು ಹೊಂದಬೇಕು ಎನ್ನುವ ವ್ಯಕ್ತಿಗಳು ಈ ಕೆಲಸ ಮಾಡಿದ್ದಾರೆ ಅವರಿಗೆ, ಅಧಿಕಾರಿಗಳು ಕೂಡ ಶಾಮೀಲಾಗಿ ಸರ್ಟಿಫಿಕೇಟ್ ಕೊಟ್ಟಿರುವುದರಿಂದ 1967ರ ಎಂ.ಸಿ.ಎಸ್.ಆರ್. ರೂಲ್ಸ್ ಪ್ರಕಾರ ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಹರಿಜನಗಿರಿಜನರಿಗೆ ಸಿಕ್ಕತಕ್ಕ ಸೌಲಭ್ಯವನ್ನು ಬೇರೆಯವರು ಪಡೆಯಬೇಕು ಎನ್ನುವ ಆಸೆಯಿಂದ ಕೆಲವು ಅಧಿಕಾರಿಗಳು ತನಿಖೆ ಮಾಡದೆ ಹರಿಜನರು ಹಿಂದುಳಿದ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ಡ್ ಟ್ರೈಬ್ಸ್ ಪಂಗಡಕ್ಕೆ ಸೇರಿದವರು ಎಂದು ಅನೇಕ ಸರ್ಟಿಫಿಕೇಟ್ ಕೊಟ್ಟು ಆ ಸೌಲಭ್ಯ ಪಡೆಯುವುದಕ್ಕೆ ಪ್ರಯತ್ನ ಪಡುತ್ತಾ ಇದ್ದಾರೆ. ಆದುದರಿಂದ ಕೆಲವು ಸಂಗತಿಗಳನ್ನು ಪತ್ತೆಹಚ್ಚಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಯಾರಾದರೂ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನವನು ಏತಕ್ಕೆ ಕಳುಹಿಸಬಾರದು ? ಅದರಿಂದ ಮುಂದೆ ಆಗತಕ್ಕ ತಪ್ಪುಗಳನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಸಮಾಜಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಯಾರು ಯಾರು ಸರ್ಟಿಫಿಕೇಟ್ ಕೊಡುವ ಅಧಿಕಾರವಿದೆಯೋ ಅಂಥ ಎಲ್ಲಾ ಅಧಿಕಾರಿಗಳಿಗೂ ಕೂಡ ಅವರಿಗೆ ತಿಳುವಳಿಕೆ ಕೊಟ್ಟಿದ್ದೇವೆ. ನೆನ್ನೆತಾನೇ ಡಿವಿಜನಲ್ ಕಮೀಷನರ್ ಮತ್ತು ಡೆಪ್ಯುಟಿ ಕಮೀಷನರ್ ಕಾನ್ಫೆರೆನ್ಸ್‌ನಲ್ಲಿ ಅವರಿಗೆ ತಿಳುವಳಿಕೆ ಕೊಟ್ಟಿದ್ದೇವೆ. ಸಾಧ್ಯವಾದಷ್ಟು ತಪ್ಪಿಸುವುದಕ್ಕೆ ನಾವು ಸರ್ವ ಪ್ರಯತ್ನ ಮಾಡಿದ್ದೇವೆ.

SHORT NOTICE QUESTION AND ANSWER

Vacancies of Posts of Doctors in Chickmagalur District

23. Sri G. PUTTASWAMY (Mudigere).—

Will the Minister for Health be pleased to state:—

(*a*) whether it has come to the notice of the Government that lot of inconvenience is caused to the patients due to failure of E.C G. machine and non-availability of 'X' ray films in Sri Malle Gowda General Hospital, Chickmagalur ;

(*b*) whether it has come to the notice of the Government that inconvenience is caused due to absence of required number of Doctors in Kalyanamma Maternity Home, Chickmagalur ;

(*c*) whether it has come to the notice of the Government that there are no required number of doctors in Kalasa Hospital, Mudigere Taluk, Chickmagalur District and other Hospitals of the Districts ;

(*d*) the steps taken by the Government in this behalf ?

Sri H. SIDDAVEERAPPA (Minister for Health).—

(*a*) Yes.

(*b*) Yes. Two posts of Doctors are vacant.

(*c*) Some posts of Doctors are vacant.

(*d*) Action will be taken to fill up the vacant posts shortly.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರು ಮಲ್ಲೇಗೌಡ ಜನರಲ್ ಆಸ್ಪತ್ರೆಯಲ್ಲಿ ಇ.ಸಿ.ಜಿ. ಮೆಷಿನ್ ಕೆಟ್ಟುಹೋಗಿರುವುದರಿಂದ ಆಗಿರತಕ್ಕ ಅನಾನುಕೂಲದ ಪರಿಹಾರಕ್ಕೆ ಏನು ಏರ್ಪಾಡು ನಡೆಸುತ್ತಿದ್ದೀರಿ ? ಈಗ ಅಲ್ಲಿರುವ ರೋಗಿಗಳಿಗೆ ತೊಂದರೆಯಾಗದೆ ಇರುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಾ ?

† ಶ್ರೀ ಎಚ್. ಸಿದ್ದವೀರಪ್ಪ.—ತಮಗೆ ಗೊತ್ತಿರುವ ಹಾಗೆ ಇ.ಸಿ.ಜಿ. ಮೆಷಿನ್‌ಗೆ ಆರ್ಡರ್ ಕೊಟ್ಟಿದ್ದೇವೆ, ಅದು ಬಂದು ಇ.ಸಿ.ಜಿ. ಮೆಷಿನ್ ಇನ್‌ಸ್ಟಾಲ್ ಆಗಬೇಕು, ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇಷ್ಟರಲ್ಲಿ ಆ ತೊಂದರೆ ಬಗೆಹರಿಯುತ್ತದೆ ಎಂದು ತಿಳಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.— ಸ್ವಾಮಿ, ತಾವು (ಇ) ಗೆ ಉತ್ತರವಾಗಿ ಕೆಲವು ವೈದ್ಯರುಗಳು ಹುದ್ದೆ ಖಾಲಿ ಇವೆ ಎಂದು ಹೇಳಿದ್ದೀರಿ. ಯಾವ ಯಾವ ಆಸ್ಪತ್ರೆಗಳಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಚಿಕ್ಕಮಗಳೂರು ಮೆಟರ್ನಿಟಿ ಆಸ್ಪತ್ರೆಯಲ್ಲಿ ಎರಡು ವೈದ್ಯರುಗಳ ಹುದ್ದೆ ಖಾಲಿ ಇವೆ, ಜನರಲ್ ಹಾಸ್ಪಿಟಲ್ ವಿ.ಡಿ.ಕ್ಲಿನಿಕ್‌ನಲ್ಲಿ ಒಂದು ವೇಕೆನ್ಸಿ ಇದೆ. ಹಿರೇನೆಲ್ಲೂರ್‌ನಲ್ಲಿ 2 ವೇಕೆನ್ಸಿ ಖಾಲಿ ಇವೆ, ಅದು ಪ್ರಾರಂಭ ಆದಾಗಿನಿಂದಲೂ ಅಲ್ಲಿ ಖಾಲಿ ಇದೆ, ಅದು ಏತಕ್ಕೆ ಆ ರೀತಿ ಆಯಿತೋ ಗೊತ್ತಿಲ್ಲ. ಕಳಸದಲ್ಲಿ ಒಂದು ವೇಕೆನ್ಸಿ ಇದೆ, ಕೊಪ್ಪದಲ್ಲಿ ಒಂದು ವೇಕೆನ್ಸಿ ಇದೆ. ಕಂಬೈಂಡ್ ಡಿಸ್ಪೆನ್ಸರಿಯಲ್ಲಿ ಒಂದು ವೇಕೆನ್ಸಿ ಇದೆ, ಒಟ್ಟು ಚಿಕ್ಕಮಗಳೂರು ಜಿಲ್ಲೆಯ ಆಸ್ಪತ್ರೆಗೆ 76 ಸ್ಯಾಂಕ್ಷನ್ಡ್ ಪೋಸ್ಟ್ಸ್ ಇವೆ. ಅದರಲ್ಲಿ ಇಷ್ಟು ಪೋಸ್ಟ್ಸ್ ವೇಕೆಂಟ್ ಇವೆ. ಆದಷ್ಟು ಜಾಗ್ರತೆಯಾಗಿ ಟೆಂಪರರಿಯಾಗಿಯಾದರೂ ಆ ವೇಕೆನ್ಸಿಗಳನ್ನು ಭರ್ತಿ ಮಾಡಲು ಪ್ರಯತ್ನ ಮಾಡುತ್ತೇವೆ ಒಟ್ಟಿನಲ್ಲಿ ಅದರಲ್ಲಿ ಕಷ್ಟ ಏನು ಇದೆ ಎಂದರೆ ಹೆಂಗಸರು ಯಾರೂ ನಿಮ್ಮ ಜಿಲ್ಲೆಗೆ ಬರುವುದಿಲ್ಲ. ನಿಮ್ಮ ಜಿಲ್ಲೆಯಲ್ಲಿರತಕ್ಕ ಹೆಣ್ಣುಮಕ್ಕಳನ್ನು ಎಂ.ಬಿ.ಬಿ.ಎಸ್.ಗೆ ಕಳುಹಿಸಿ ತಯಾರು ಮಾಡಿದರೆ ನಿಮಗೇ ಅನುಕೂಲವಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಯಾರು ಹೆಂಗಸರು ಅಲ್ಲಿಗೆ ಹೋಗುವುದಿಲ್ಲವೋ ಅಂತಹವರ ಮೇಲೆ ಸಿ.ಸಿ.ಎ. ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಮನೆಯನ್ನೇ ಬಿಟ್ಟು ಹೋಗುವುದಿಲ್ಲ. ನಾವು ಗಂಡನ ಮನೆಗೇ ಹೋಗುತ್ತೇವೆ ಎಂದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆ ?

MADAM SPEAKER.—Now Question hour is over.

QUESTIONS FOR ANSWERS ON THE DAY
(but not taken up)

Lift irrigation Schemes in Ranebennur Taluk

308. Sri K. B. KOLIWAD (Ranebennur).—

Will the Minister for Public Works and Electricity be pleased to state :—

(*a*) the number of Lift Irrigation schemes investigated in Ranebennur taluk ;

(*b*) the number of them that will be taken up for execution this year ;

(*c*) the difficulties, if any, to take up all the lift irrigation eschmes for execution ?

Sri H. M. CHANNABASAPPA (Minister for Public Works and Electricity).—

(*a*) Nine.

(*b*) 3 Lift Irrigation Schemes have been sanctioned and are under progress. Two more Lift Irrigation Schemes will be taken up this year.

(*c*) The Plans and estimates of the remaining schemes are under technical scrutiny. They will be taken up after sanction as and when funds are avaliable.

Repairs to Breached Tanks in Mysore Taluk

631. Sri K. PUTTASWAMY (Chamundeswari).—

Will the Minister for Public Works and Electricity be pleased to state :—

(*a*) the tanks in Mysore Taluk which breached during the year 1972 due to very heavy rains ;

(*b*) whether the estimates are prepared for repairing or reconstructing such tanks (details may be furnished) ;

(*c*) whether Government have not so far been able to take up repairing or reconstructing any of the works ;

(*d*) if so, the difficulties coming in their way ?

Sri H. M. CHANNABASAPPA (Minister for Public Works and Electricity).—

(*a*) Six tanks have breached *viz.*

1. Bommanahally tank
2. Hulilalu Doddegowdanakatte
3. Hemmanahalli Hosakere
4. Muganahundi Devagahalli tank
5. Rayanakere Farm tank
6. Mydanahally old tank

(*b*) Estimates have been prepared. The estimated amount is as follows for each tank.

1. Rs. 30,300-00
2. Rs. 17,400-00
3. Rs. 49,000
4. Rs. 2,08,500
5. Rs. 1.25,000
6. Rs. 37,100

(c) Reconstruction and repair works are in progress in respect of the following tanks.

1. Bommanahally tank
2. Hulilalu Doddegowdanakatte
3. Hemmanahalli Hosakere
4. Mydanahally old tank

Temporary arrangements are made in respect of the following tanks to feed atchkat. Original works will be taken up after sanction to the estimate.

1. Muganahundi Devagahalli tank
2. Rayanakere Farm tank

(d) Does not arise in view of reply to Clause (c).

Junior Colleges in the State

749. Sri G. H. ASWATHA REDDY (Jagalur).—

Will the Minister for Education be pleased to state :—

(a) the total number of Junior Colleges in State at present ; the number of them which are private aided and Government ;

(b) whether there has been Government approval for up.grading Government Higher Secondary Schools into Government Junior Colleges likewise whether the private bodies have taken Government approval for starting Junior Colleges ;

(c) the scales of pay for Lecturers and Principals of Junior Colleges and whether they have been approved by the Government ; whether these approved scales of pay are applicable to the private Junior Colleges only or do they apply to all Junior Colleges in the State ;

(d) whether the Lecturers and Principals of private junior colleges and aided colleges also have been enjoying the benefit of these approved scales of pay right from the beginning (1971-72) ; the reason why this benefit was denied to the staff of Government Junior Colleges ;

(e) whether it is a fact that the experienced teachers of Government Junior Colleges have not been given these pay scales whereas raw-hands appointed as local candidates have been given the Pay scales of Lecturers ?

Sri A. R. BADARINARAYANA (Minister for Education).—

(*a*) Total : 243

(i) Government	109
(ii) Private aided	134

(*b*) Yes.

(*c*) Principals Rs. 400-30-640-EB-40-800-50-900.
Lecturers Rs. 300-25-550-EB-30-700.

Apply to all Junior Colleges in the State.

(*d*) The scales of pay came into effect from the current academic year, *i.e.*, 1972-73.

(*e*) There is no distinction in scales of pay. But in respect of those who were already in service, their pay in the scale has to be fixed as per rules which will entail some time.

Repairs to Junior College, Srirangapatna

757. Smt. DAMAYANTHI BORE GOWDA (Srirangapatna).—

Wll the Minister for Education be pleased to state :—

(*a*) whether funds have been allotted for repairs to the junoir college at Sriranagpatna ; if not, when it will be repaired ;

(*b*) whether the Government Boys Middle School building would be given to the Junior College since the present accommodation is insufficient ;

(*c*) whether there is any proposal to shift the Government Boys Middle School to a building situated within the fort of Srirangapatna Town ?

Sri A. R. BADARINARAYANA (Minister for Education).—

(*a*) The Junior College, Srirangapatna is one among the taken over High Schools and up-graded. Prior to the taking over this was a Municipal High School. After the process of taking over is completes the repairs will have to be effected by the Public Works Department.

(*b*) There is no proposal to hand over Higher Primary Boy, School builoing to Junior College.

(*c*) No.

CALLING ATTENTION TO MATTERS OF URGENT PUBLIC IMPORTANCE

i) *re* : "Dattura Seeds in the milo"

SRI S. BANGARAPPA (Sorab).—Madam Speaker, I call the attention of the Hon. Minister for Food and Civil Supplies to the presence of Dattura Seeds in the Milo imported from America.

SMT. E. E. VAZ (Minister of State for Food and Civil Supplies).—

The Government of India have allotted to the State 5,000 tonnes of imported milo for the month of February, 1973. The Food Corporation of India have intimated that on examination of the imported milo at the Bombay harbour by the Technical staff of Food Corrporation of India has shown that this imported milo contains 'Dattura Seeds' which are said to be harmful. They have also further advised that this imported milo should be got sieved and cleaned and then issued to the bonafide consummer in the State. About 1,000 tonnes of milo have been received at the Food Corporation of India godown, Bangalore and action has been taken to get this milo sieved and cleaned before it is issued to the consumers. About 3,000 tonnes of this imported milo have been arranged to be sent to Gulbarga. The Deputy Commissioner, Gulbarga, has been clearly instructed that this milo should be got sieved and cleaned by hand as there are no Roller Flour Mills in Gulbarga; before it is issued to the consumers. In Bangolore, action has been taken to get this milo sieved and cleaned by the Roller Flour Mill before it is actually made available to the consumers. Care will be taken to see that only the pure milo is given to the consumers.

The allegation that milo is being distributed only by Food Corporation of India all over the State is incorrect. They only undertake transport/storage and arrange for the release of these stocks under instructions from the Food and Civil Supplies Department.

The statement that some persons have died after consuming products of milo imported from America in the State of Mysore, is incorrect, as the stock of milo have no yet been released for sale through the public distribution.

ಶ್ರೀ ಎಸ್. ಬಂಗಾರಪ್ಪ.—1973 ರ ಫೆಬ್ರುವರಿಯಲ್ಲಿ 5000 ಟನ್ ಮೈಲೋವನ್ನು ನೀವು ಇಂಪೋರ್ಟ್ ಮಾಡಿಕೊಂಡು ಅದನ್ನು ಫುಡ್ ಕಾರ್ಪೊರೇಷನ್‌ಗೆ ವಹಿಸಿದ್ದೀರಿ. ನಿಜವಾಗಿಯೂ ಅದು ಕ್ಲೀನ್ ಆಗಿದೆಯೇ? ಅದರಲ್ಲಿ ಒಂದು ಸಾವಿರ ಟನ್ ಮಾತ್ರ ನೀವು ಇಷ್ಯೂ ಮಾಡಿದ್ದೀರಿ ಇನ್ನು 3 ಸಾವಿರ ಟನ್ ಅಷ್ಟನ್ನು ಗುಲ್ಬರ್ಗ ಡಿಸ್ಟ್ರಿಕ್ಟ್‌ಗೆ ಕಳುಹಿಸಿ ಅವನ್ನು ಸೀವ್ಡ್ ಮತ್ತು ಕ್ಲೀನ್ ಮಾಡಿ ಬೋನಾಫೈಡ್ ಕನ್‌ಸ್ಯೂಮರ್ಸ್‌ಗೆ ಇಷ್ಯೂ ಮಾಡಬೇಕೆಂದು ಮಾಡಿದ್ದೀರಿ. ಈಗ 3 ಸಾವಿರ ಟನ್ ಪೂರ್ತಾ ಕ್ಲೀನ್ ಆಗಿದೆಯೇ ? ಮತ್ತು ಇದನ್ನು ಅಲ್ಲಿಗೆ ಕಳುಹಿಸಿ ಎಷ್ಟು ದಿವಸ ಆಯಿತು ?

ಶ್ರೀಮತಿ ಇ. ಇ. ವಾಜ್.—ಗುಲ್ಬರ್ಗಾ ಡಿಸ್ಟ್ರಿಕ್ಟ್‌ಗೆ ಕಳುಹಿಸಿದ್ದರಲ್ಲಿ ಸಾಧಾರಣವಾಗಿ 500 ಟನ್ ಅಷ್ಟು ಕ್ಲೀನ್ ಆಗಿದೆ. ಉಳಿದಿದ್ದು ಸರಿಯಾಗಿ ಕ್ಲೀನ್ ಮಾಡಿಸಿ ಇಷ್ಯೂ ಮಾಡಬೇಕು ಎಂದು ಅವರಿಗೆ ಆದೇಶ ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ದತ್ತೂರಿಸೀಡ್ಸ್ ಎಂದರೆ ಅದು ಪಾಯಿಸನ್ ಸೀಡ್ಸ್ ಆ ಸೀಡ್ಸನ್ನು ತೆಗೆದುಕೊಂಡು ಮನುಷ್ಯ ಸೇವನೆ ಮಾಡಿದರೆ ಅವನ ಆರೋಗ್ಯವೂ ಕೆಟ್ಟು ಹೋಗುತ್ತದೆ. ಈ ಬಗ್ಗೆ ಮಹಾರಾಷ್ಟ್ರ ಅಸೆಂಬ್ಲಿಯಲ್ಲಿ ಚರ್ಚೆಯಾಗಿ ಅಲ್ಲಿಯ ಫುಡ್ ಮಿನಿಸ್ಟರ್ ಅವರು ಒಪ್ಪಿಕೊಂಡಿದ್ದಾರೆ. ಈ ದೃಷ್ಟಿಯಿಂದ ಇದು ಆಹಾರದ ಜೊತೆಗೆ ಸೇರಿರುವ ಬೀಜವನ್ನು ಬೇರ್ಪಡಿಸುವುದಕ್ಕೆ ಆಗುವುದಿಲ್ಲ ಎನ್ನುವ ವಾದ ಇದೆ. ಆದುದರಿಂದ ಇದನ್ನು ಹಿಂದಕ್ಕೇನೇ ಅಮೇರಿಕಾಕ್ಕೆ ವಾಪಸ್ಸು ಕಳುಹಿಸುವ ಹಾಗೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಬರೆಯುತ್ತಾರೆಯೇ ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರು ಈ ಬಗ್ಗೆ ಏನು ಆತಂಕ ತೋರಿಸಿದ್ದಾರೋ ಅಷ್ಟರಮಟ್ಟಿಗೆ ಅವರು ಇದರಲ್ಲಿ ಗಾಬರಿ ಪಡಬೇಕಾದ್ದಿಲ್ಲ. 4 ಕೆ. ಜಿ. ಪ್ಯಾಕೆಟ್ಟಿನಲ್ಲಿ 5 ಬೀಜ ಮಾತ್ರ ಇತ್ತು. ಬಾಕಿ ಉಳಿದುದನ್ನು ಚೆನ್ನಾಗಿ ಪರೀಕ್ಷಿಸಿ ಕ್ಲೀನ್ ಮಾಡಿ ಅದನ್ನು ಸರಿಯಾಗಿ ಉಪಯೋಗಿಸುವ ರೀತಿಯಲ್ಲಿ ಕೊಡುವಂಥಾದ್ದನ್ನು ಏರ್ಪಾಡು ಮಾಡಿದೆ.

ಶ್ರೀ ಬಿ. ಎನ್. ಪಾಟೀಲ್.—ಸ್ವಾಮಿ, ಈ ದತ್ತೂರಾ ಸೀಡ್ಸ್ ಬರೀ ಮೈಲೋ ಒಂದರಲ್ಲೇ ಸೇರಿಲ್ಲ, ನಮ್ಮ ರಾಜ್ಯಕ್ಕೆ ಗೋಧಿ ಏನು ಸಪ್ಲೈ ಆಗುತ್ತದೋ ಅದರಲ್ಲೂ ಸೇರಿದೆ. ಈಗ ಗುಲ್ಬರ್ಗ ಬೀದರ್ ಮತ್ತು ಹಮ್ನಾಬಾದ್ ಈ ಪ್ರದೇಶದಲ್ಲಿ ಗೋಧಿಯನ್ನು ಸಪ್ಲೈ ಮಾಡಿದ್ದೀರಿ. ಮಾನ್ಯ ಅಧ್ಯಕ್ಷರಿಗೂ ಸ್ಯಾಂಪಲ್ ಕೊಟ್ಟಿದ್ದೇನೆ ಗುಲ್ಬರ್ಗ ಡಿವಿಷನಲ್ ಕಮೀಷನರ್ 25 ಪರ್ಸೆಂಟ್ ದತ್ತೂರಾ ಸೀಡು ಮಿಕ್ಸ್ ಆಗಿದೆ ಎಂದು ವರದಿ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಈ ಬಗ್ಗೆ ಮುಂದೆ ಇಂಥಾದ್ದನ್ನು ಕಳುಹಿಸಬೇಡಿ, ಈ ರೀತಿ ಅನಾಹುತವಾಗುತ್ತದೆ ಎಂದು ಕೇಂದ್ರ ಸರ್ಕಾರಕ್ಕೆ ಬರೆಯಲು ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರು ಗೋಧಿಯಲ್ಲಿ ದತ್ತೂರ ಸೀಡ್ಸ್ ಮಿಕ್ಸ್ ಆಗಿದೆಯೆಂದು ಹೇಳಿದರು. ನಾವು ಈ ಬಗ್ಗೆ ಪ್ರತಿಯೊಬ್ಬ ತಹಸೀಲ್ದಾರರೂ ರಿಪೋರ್ಟ್ ಕಳುಹಿಸಬೇಕೆಂದು ಹೇಳಿದೆವು. ಅವರ ರಿಪೋರ್ಟ್ ತರಿಸಿದ ಪ್ರಕಾರ ಯಾವ ಒಂದು ಸ್ಯಾಂಪಲ್‌ನಲ್ಲೂ ಕೂಡ ದತ್ತೂರ ಸೀಡ್ಸ್ ಇಲ್ಲ ಎಂದು ಸ್ಪಷ್ಟವಾಗಿ ತಿಳಿದು ಬಂದಿದೆ. ಅಲ್ಲಿ ಕಪ್ಪು ಬೀಜ ಸೇರಿರಬಹುದು ಈ ಬಗ್ಗೆ ನಾವು ಸ್ಪಷ್ಟವಾದ ತಿಳುವಳಿಕೆ ಕೊಟ್ಟಿದ್ದೇವೆ.

ಶ್ರೀ ಬಿ. ಎನ್. ಪಾಟೀಲ್.—ಇದರಲ್ಲಿ ದತ್ತೂರ ಸೀಡ್ಸ್ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಮಾನ್ಯ ಸ್ಪೀಕರ್‌ರವರಿಗೂ ನಾನು ಸ್ಯಾಂಪಲ್ ಸೀಡ್ಸ್ ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಯಾವ ಆಧಾರದ ಮೇಲೆ ಅದರಲ್ಲಿ ದತ್ತೂರ ಸೀಡ್ಸ್ ಇಲ್ಲ ಎಂದು ಹೇಳುತ್ತಾರೆ? ಈಗಲೂ ಕೂಡ ಅದರ ಸ್ಯಾಂಪಲ್ ತಂದಿದ್ದೇನೆ. ಅದನ್ನು ತಮ್ಮ ಹತ್ತಿರ ಕಳುಹಿಸಿಕೊಡುತ್ತೇನೆ, ದತ್ತೂರ ಸೀಡ್ಸ್ ಅದರಲ್ಲಿ ಇಲ್ಲ ಎನ್ನುವುದಕ್ಕೆ ಒಂದು ಸ್ಪಷ್ಟವಾದ ಸ್ಟೇಟ್‌ಮೆಂಟ್ ಕೊಡುತ್ತೀರಾ?

ಶ್ರೀಮತಿ ಇ. ಇ. ವಾಜ್.— ನಾನೂ ಕೂಡ ತಂದಿದ್ದೇನೆ. ಮಾನ್ಯ ಸದಸ್ಯರು ಆ ಸೀಡ್ಸನ್ನು ನೋಡಬಹುದು. ಆದರಲ್ಲಿ ಯಾವ ತರಹವಾದ ದತ್ತೂರಾ ಸೀಡ್ಸ್ ಸೇರಿಲ್ಲ.

2–00 P. M.

(ii) *re* : Acute Scarcity of Foodgrains in Shorapur Taluk

Sri RAJA PID NAIK (Shorapur).—Madam, I call the attention of the Minister of State for Food and Civil Supplies to the acute scarcity of foodgrains in Shorapur Taluk.

Smt. E. E. VAZ (Minister of State for Food and Civil Supplies).—Madam, in response to the Calling Attention Notice of the hon. Member Sri Raja Pid Naik, I wish to make the following statement :

There are 84 Fair Price Shops in Shorapur Taluk, of these 23 Fair Price Shops are in Urban areas. and 61 in rural areas. The Deputy Commissioner, Gulbarga, is allotting Foodgrains regularly to the Tahsildar, Shorapur Taluk. The following is the allocation and off-take of foodgrains in Shorapur Taluk.

Figures in Quintals

	Allotment	*off-take*
August 72	1667	1140
September 72	1600	1566
October 72	2980	1719
November 72	4570	1365
December 72	5000	1320
January 73	1800	1660
February 73	3200	762
March 73	2700	1500

Apart from this, 600 quintals of wheat have been arranged to be despatched to the Public Works Department authorities through the Tahsildar, Shorapur for meeting the needs of the labourers working at the Upper Krishna Project.

It may be inferred from the off-take figures furnished, that there were sufficient stocks with the Fair Price Shops.

The State Government are anxious to make available adequate food grains to the drought affected areas but care is being taken to see that allotment made is not in far excess of the off-take. I hope that the Hon'ble Members will endorse this careful and cautions approach of the State Government at a time when there is need to supply foodgrains to the non-affected areas too, with a view to arresting the present rise in prices.

Sri RAJA PID NAIK.—Is the Government aware that foodgrains are not being supplied adequately by these fair price shops and also that there is misuse in the distribution of the allotted quota in the rural areas ; if so, will the Hon. Minister assure that she will take immediate steps in the matter ?

Smt. E. E. VAZ.—If there is any misuse, certainly every precaution will be taken and action will be taken against those whe misuse it.

Sri RAJA PID NIAK.—Is it not a fact that the Government is going to replace the present system of fair price shops by a new arrangement through the societies and if so, may I know the reasons for the replacement ?

Smt. E. E. VAZ.—As the hon. Member is aware, the police of the Government is to distribute through fair price shops as far as possible because there is a possibility of its misuse by individual fair price dealers. But where there are no fair price shops or where they are defunct, individual dealers are also being considered.

ಶ್ರೀ ಎಚ್. ಡಿ. ದೇವೇಗೌಡ.—ಡೆಪ್ಯುಟಿ ಕಮೀಷನರು 3000 ಕ್ವಿಂಟಾಲ್ ರಿಲೀಸ್ ಮಾಡಿದರೂ ಕೂಡ 600 ಅಥವಾ 700 ಟನ್‌ಗಳಿಗಿಂತ ಹೆಚ್ಚಾಗಿ ಗೋಡೌನ್‌ನಲ್ಲಿ ಇರಲಿಲ್ಲ. ಆದ್ದರಿಂದ ಕೇಂದ್ರದಿಂದ ಹೆಚ್ಚು ಆಹಾರ ಧಾನ್ಯಗಳನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

PAPERS LAID ON THE TABLE

SECRETARY.—I Lay on the Table the First List of Unstarred Questions and Answers of the Third Ssion.

MADAM SPEAKER.—The list is laid on the Table.

UNSTARRED QUESTIONS AND ANSWERS

First List

Revision of Pay, D. A. of Government Employees

2. Sri K. SIDDAIAH (Santhemarahally).—

Will the Minister for Finance be pleased to state :—

(*a*) the extra expenditure incurred by Government as a result of revision of Pay Scale, D.A., etc., to Government employees since 1956 ;

(*b*) the number of times and the years that such revisions took place, since that year?

Sri M. Y. GHORPADE (Minister for Finance).—

(*a*) and (*b*) please see the accompanying Statement.

STATEMENT

The particulars of extra cost incurred by Government on account of Revision of Pay Scales, Dearness Allowance, City Compensatory and House Rent Allowances for Government employees and others from 1956 are as follows:—

Orders	Particulars	Extra Cost
1	2	3
1. G.O. No. Fl (B)140 34-14133/Bud-119-56-3, dated 25-1-1957.	Uniform scales of pay were introduced with weightage benefits, *i.e.*, next stage and one increment for three years service subject to maximum of 3 increments and Rs. 30 *plus* one increment with effect from 1-1-1957.	Rs. 4½ Crores per annum.
2. G.O. No. FD 48 SRP (1)60, dated 18-3-1960	Rs. 5 increase in D.A. upto pay range of Rs. 300 with effect from 1-1-1960.	Rs. 1½ Crores per annum.
3. G.O. No. FD 17 SRP (1) 61, dated 27-2-1961.	Merging portion of dearness allowance with pay and evolving new scales as in other States, with effect from 1-1-1961.	Rs. 4½ Crores per annum.
4. G.O. No. FD 18 SRP (1) 63, dated 2-7-1963.	Rs. 5 increase in D.A. upto pay of Rs. 150 and Rs. 7-50 between Rs. 150-300 and D.A. of Rs. 10 given to pay between Rs. 300-400 with effect from 1-4-1963.	Rs. 1½ Crores per annum.
5. G.O. No. FD 26 SRP (1) 64, dated 15-6-1964.	Increase of Rs. 5 in D.A. upto Rs. 400 pay, with effect from 1-4-1964.	Rs. 1½ Crores per annum.
6. G.O. No. FD 61 SRP (1) 64, dated 2-1-1965.	(1) Rs. 5 increase in D.A. upto Rs. 400 pay. (2) *Ad-hoc* increase in compensatory allowance was also given with effect from 1-1-1965.	Rs. 2 Crores per annum.
7. G.O. No. FD 36 SRP (1) 65, dated 3-5-1965.	Rates of DA. and Compensatory allowance were brought on par with Madras and limit extended up to Rs. 1,000 pay in respect of D.A. Increase varied from Rs. 8 to Rs. 85 p. m. with effect from 1-4-65.	Rs. 6 Crores per annum.

(SRI M. Y. GHORPADE)

1	2	3
8. G.O. No. FD 76 SRP (1) 65, dated 22-7-1965.	Increase of D.A. from Rs. 5 p.m. with effect from 1-7-1965.	Rs. 9 Crores per annum.
9. G.O. No. FD 20 SRP (1) 66, dated 12-4-1966.	Increase of DA. of Rs. 5 p. m. upto Rs. 210 with effect from 1-4-1966.	Rs. 1.50 Crores per annum.
10. G.O. No. FD 3 SRP (1)67, dated 27-1-1967.	D.A. rates on par with Central Rates with a small difference with effect from 1-1-1967 (1st Interim Report).	Rs. 3.50 Crores per annum.
11. G.O. No. ED 17 SRP (1) 68, dated 20-3-1968.	D.A. rates on par with Central rates with a small difference from 1-3-1968 (based on 2nd and 3rd Interim Report).	Rs. 7.50 Crores to 8 Crores per annum.
12. G.O. No. FD 20 SRP (1) 69, dated 10-3-1969.	D.A. rates on par with Central rates and also enhancement of C.C.A. and H R.A. based on the Main Report.	Rs. 3.25 Crores per annum.
13. G.O. No. FD 73 SRP (1)69, dated 31-12-1969.	Adoption of Report of the Pay Commission with small adjustments.	Immediate extra cost of Rs. 7.33 Crores with average cost of Rs. 14 Crores per annum.
14. Implementation of Recommendations of the Official Pay Committee.	Rationalisation of pay scales, liberalisation of rates of H.R.A., C.C.A. etc., 1970-71.	Rs. 6.25 Crores per annum.
15. G.O. No. FD 6 SRP (1) 72, dated 17-1-1972.	Additional Dearness Allowance from 1-1-1972.	Rs. 4.60 Crores per annum.
16. G.O. No. FD 64 SRP (1) 72, dated 1-8-1972.	Increase in Additional D.A. from 1-7-1972.	Rs. 2.40 Crores per annum.
17. G.O. No. FD 64 SRP (1) 72, dated 9-11-1972.	Increase in Additional D.A. form 1-11-1972.	Rs. 3 Crores per annum.

ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆಗೆ ಬಂದಿರುವ ರೋಗ ನಿವಾರಿಸುವ ಕ್ರಮಗಳು

೭. ಶ್ರೀ ಕೆ. ಎಚ್. ಹನುಮೇಗೌಡ (ಹಾಸನ)—

ವ್ಯವಸಾಯ ಹಾಗು ಅರಣ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ :—

(ಅ) ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆಯು ಯಾವ ಯಾವ ರೋಗಗಳಿಂದ ಬೆಳೆ ಹಾಳಾಗುತ್ತಲಿದೆ ;

(ಆ) ಈ ರೋಗ ತಡೆಯಲು ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ;

(ಇ) ಇದರ ಬಾಬ್ತು ಸರ್ಕಾರಕ್ಕೆ ಯಾವ ಯಾವ ಬಾಬಿನಿಂದ ಎಷ್ಟೆಷ್ಟು ಹಣ ವರ್ಷೇ ವರ್ಷೇ ಖರ್ಚಾಗುತ್ತಿದೆ ?

ಶ್ರೀ ಕೆ. ಎಚ್. ಪಾಟೀಲ್ (ವ್ಯವಸಾಯ ಹಾಗು ಅರಣ್ಯ ಮಂತ್ರಿಗಳು).—

ಉತ್ತರ :—(ಅ) (೧) ಲೇಟ್ ಬ್ಲೈಟ್ (ಮಾದಿಗ ರೋಗ, ತಡವಾಗಿ ಬರುವ ಭೂಸುರ ರೋಗ).

(೨) ಬ್ರೌನ್ ರಾಟ್ (ದೊಮ್ಮೆ ರೋಗ, ರಿಂಗ್ ರೋಗ).

(೩) ಕಟ್ಟೆಹುಳು ಎಂಬ ಕೀಟವು ಆಲೂಗೆಡ್ಡೆಗೆ ಹೊಲದಲ್ಲೂ ಮತ್ತು ಶೇಖರಣಾಲಯದಲ್ಲೂ ಬಹಳ ಹಾನಿಯನ್ನುಂಟುಮಾಡುತ್ತಿದೆ.

(ಆ) ಈ ಕೆಳಗೆ ವಿವರಿಸಿರುವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

(೧) ಸಸ್ಯ ಸಂರಕ್ಷಣೆಯ ಅಂಗವಾಗಿ ೫.೫೧ ಲಕ್ಷ ರೂಪಾಯಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ಕೊಂಡು ಅರ್ಧ ಬೆಲೆಗೆ ಒದಗಿಸಲಾಗಿದೆ. ಈ ರೋಗ ಬೀಳುವ ಹವಾಮಾನದ ಲಕ್ಷಣಗಳು ಅನುಕೂಲ ಪರಿಸ್ಥಿತಿಗೆ ಬಂದೊಡನೆಯೇ ಎಲ್ಲಾ ಸಿಬ್ಬಂದಿಗಳನ್ನೂ ಒಂದುಗೂಡಿಸಿ ಗ್ರಾಮ ಪಂಚಾಯತಿ ಕಛೇರಿಗಳಲ್ಲಿ ಔಷಧ ಮತ್ತು ಸಿಂಪಡಿಸುವ ಉಪಕರಣಗಳ ಸಮೇತ ಸುವ್ಯವಸ್ಥಿತ ಸಿಬ್ಬಂದಿಗಳನ್ನು ಗೊತ್ತುಪಡಿಸಿ ಆ ಮುಖಾಂತರ ಸಾಧ್ಯವಾದ ಮಟ್ಟಿಗೆ ಎಲ್ಲಾ ಆಲೂಗಡ್ಡೆ ಹೊಲಗಳಿಗೂ ಔಷಧಿ ನಿವಾರಣೆಗಾಗಿ ಅಂತಹ ಸಂದರ್ಭದಲ್ಲಿ ಸಂಚಾರಿ ವಾಹನವೊಂದನ್ನು ನೇಮಿಸಿ ನಿಯಮಿತ ವೇಳೆಯಲ್ಲಿ ರೋಗವು ಬೇರೆ ಕಡೆಗೆ ಹರಡದಂತೆ ಮುತ್ತಿಗೆ ಹಾಕಿ ಹತೋಟಿಯಲ್ಲಿಡುವ ಕ್ರಮವನ್ನು ಅತ್ಯಂತ ಸಾಧಕ ಮಟ್ಟದಲ್ಲಿ ನೆರವೇರಿಸಲಾಗುತ್ತಿದೆ.

(೨) ಬ್ಲೈಟ್ ರೋಗ ನಿರೋಧಕ ಶಕ್ತಿಯುಳ್ಳ ಬಿತ್ತನೆ ಬೀಜಗಳನ್ನು ಬೆಳೆಸಿ ಒದಗಿಸಲಾಗಿದೆ.

(೩) ಬ್ರೌನ್ ರಾಟ್ ಖಾಯಿಲೆಯ ನಿಯಂತ್ರಣಕ್ಕಾಗಿ ಹಾಲಿ ಬೀಜೋತ್ಪಾದನೆ ಅಂಗವಾಗಿ ಕೆಲಸ ಮಾಡುವ ಸಿಬ್ಬಂದಿ ವರ್ಗ ರೋಗಾಣುಗಳು ಸ್ಥಳಾಂತರಗೊಳ್ಳದಂತೆ ಮಾಡಲು ಸೂಕ್ತ ಸಲಹೆಗಳನ್ನು ಒದಗಿಸಲಾಗಿದೆ. ಅಲ್ಲದೆ ನೈರ್ಮಲ್ಯ ವ್ಯವಸ್ಥೆಗಳನ್ನು ಸೂಚಿಸಿ ರೋಗಾಣುಗಳು, ಮಣ್ಣಿನ, ನೀರಿನ, ನೇಗಿಲಿನ, ಮತ್ತು ಉಪಕರಣಗಳ ಮುಖಾಂತರ ಸ್ಥಳಾಂತರಗೊಳ್ಳದಂತೆ ಎಚ್ಚರಿಕೆ ವಹಿಸುವ ನಿಯಮಗಳನ್ನು ತಿಳಿಸಿಕೊಡಲಾಗುತ್ತಿದೆ.

(೪) ಕಟ್ಟೆಹುಳುವಿನ ನಿಯಂತ್ರಣಕ್ಕಾಗಿ ಕಾಮನ್‌ವೆಲ್ತ್ ಬಯಲಾಜಿಕಲ್ ಇನ್‌ಸ್ಟಿಟ್ಯೂಟ್ ಬೆಂಗಳೂರು ಅವರ ಸಲಹೆ ಮೇರೆಗೆ ನಿಯಂತ್ರಣದ ಬಗ್ಗೆ ಸೂಕ್ತ ತಾಂತ್ರಿಕ ಸಲಹೆಗಳನ್ನು ಒದಗಿಸುತ್ತಿದೆ.

ತಾತ್ಕಾಲಿಕವಾಗಿ ಕಟ್ಟೆಹುಳುವನ್ನು ಹತೋಟಿಯಲ್ಲಿಡುವ ಆಧುನಿಕ ವ್ಯವಸಾಯ ಪದ್ಧತಿಗಳನ್ನು ಅಭಿವೃದ್ಧಿಪಡಿಸಿ ಕಟ್ಟೆಹುಳುವಿನ ಜೀವನ ಚರಿತ್ರೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ ತತ್ಸಂಬಂಧವಾಗಿ ಅನುಸರಿಸಬೇಕಾದ ಕಾರ್ಯಗಳನ್ನು ಅಂದರೆ ಮಳೆಗಾಲದ ಆಲೂಗೆಡ್ಡೆಯನ್ನು ಆಗಷ್ಟು ತಿಂಗಳಲ್ಲೇ ಕೀಳುವಂತೆಯೂ ಬೇಸಿಗೆ ಕಾಲದಲ್ಲಿ ಮಾರ್ಚಿಯಲ್ಲಿ ಕೀಳುವಂತೆಯೂ ಹಾಗೂ ಶೇಖರಣಾ ಸ್ಥಳದಲ್ಲಿ ಸುವ್ಯವಸ್ಥಿತವಾಗಿ ಶೇಖರಿಸಿ ಮುಚ್ಚಿ ಮೇಲಾಥಿಯನ ೫% ಧೂಳಿಯಿಂದ ಉಪಚರಿಸುವಂತೆಯೂ ಶೀತಲಗೃಹದಲ್ಲಿ ಆಲೂಗೆಡ್ಡೆಯನ್ನು ಶೇಖರಿಸುವಂತೆಯೂ ಸಲಹೆ ಮಾಡಲಾಗುತ್ತಿದೆ.

(ಶ್ರೀ ಕೆ. ಹೆಚ್. ಪಾಟೀಲ್)

(ಇ) (೧) ೧೯೭೬-೭೭ ರಲ್ಲಿ ಕಟ್ಟೆಹುಳು ನಿಯಂತ್ರಣಕ್ಕಾಗಿ ೫೦೦೦ ರೂಪಾಯಿ ವೆಚ್ಚ ತಗುಲದೆ.

(೨) ಸಸ್ಯ ಸಂರಕ್ಷಣೆಗೆ ೭೧-೭೨ ರಲ್ಲಿ ೫.೫೧ ಲಕ್ಷ ರೂಪಾಯಿ ಬ್ರೌನ್ ರಾಟ್ ಬ್ಲೈಟ್ ರೋಗ ನಿಯಂತ್ರಿಸುವ ಕಾರ್ಯದಲ್ಲಿ ವೆಚ್ಚ ತಗಲಿರುತ್ತದೆ.

(೩) ೧೯೭೨-೭೩, ೧೯೭೩-೭೪ ಸಾಲುಗಳಲ್ಲಿ ಬ್ಲೈಟ್ ರೋಗ ನಿರೋಧಕ ಶಕ್ತಿಯುಳ್ಳ ಬಿತ್ತನೆ ಬೀಜಗಳನ್ನು ಬೆಳೆಸಿ ಒದಗಿಸುವ ಬಿತ್ತನೆ ಬೀಜಕ್ಕಾಗಿ, ೪೦,೦೦೦ ರೂಪಾಯಿ ವೆಚ್ಚ ತಗಲಿರುತ್ತದೆ.

ಹೇಮಾವತಿ ನದಿಯಿಂದ ಹಾಸನ ಟೌನಿಗೆ ನೀರು ಸರಬರಾಜು ಮಾಡುವ ಯೋಜನೆ.

೮. ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—

ನಗರಾಡಳಿತ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಹಾಸನ ಟೌನಿನಲ್ಲಿ ಕುಡಿಯುವ ನೀರು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಆಗದೆ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹೇಮಾವತಿ ನದಿಯಿಂದ ಕುಡಿಯುವ ನೀರನ್ನು ಹಾಸನದ ಟೌನಿಗೆ ಸರಬರಾಜು ಮಾಡಲು ಪ್ಲಾನ್ ಮತ್ತು ಅಂದಾಜು ತಯಾರಾಗಿದೆಯೇ ; ಆಗಿದ್ದರೆ ಅಂದಾಜು ಮೊಬಲಗೆಷ್ಟು ;

(ಇ) ಈ ಕೆಲಸ ಯಾವಾಗ ಪ್ರಾರಂಭವಾಗಲಿದೆ ?

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಮಂತ್ರಿಗಳು).—

ಉತ್ತರ.—(ಅ) ಬಂದಿದೆ.

(ಆ) ತಯಾರಾಗಿದೆ. ಅಂದಾಜು ಮೊಬಲಗು 144 ಲಕ್ಷ.

(ಇ) ತಾರೀಖು 7.2-1973 ರಂದು ಪ್ರಾರಂಭವಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಸಬಾ ಹೋಬಳಿ ಹಲಸಬಾಳು ಗ್ರಾಮದಲ್ಲಿನ ಜಮೀನಿಗೆ ಕೋರಿ ಬಂದ ಅರ್ಜಿಗಳು

೧೧. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಚಿಕ್ಕಮಗಳೂರು ತಹಸಿಲ್ದಾರರಿಗೆ ಕಸಬಾ ಹೋಬಳಿ ಹಲಸಬಾಳು ಗ್ರಾಮದಲ್ಲಿನ ಸ. ನಂ. 35 ಹಾಗೂ 40ನೇ ಜಮೀನನ್ನು ಕೋರಿ ಅರ್ಜಿ ಹಾಕಿಕೊಂಡ ವ್ಯಕ್ತಿಗಳ ಸಂಖ್ಯೆ ಎಷ್ಟು ? ಮತ್ತು ಅರ್ಜಿ ಹಾಕಿಕೊಂಡ ದಿನಾಂಕಗಳಾವುವು ;

(ಆ) ಹಾಗಿದ್ದಲ್ಲಿ ಅವು ಅಂತಹ ರಿಕಾರ್ಡುಗಳು ಯಾವ ಹಂತದಲ್ಲಿವೆ ;

(ಇ) ಈ ಕಡತಗಳನ್ನು (ರಿಕಾರ್ಡುಗಳನ್ನು) ಸ್ಪೆಷಲ್ ದರಖಾಸ್ತು ಅಸಿಸ್ಟೆಂಟರವರ ಗಮನಕ್ಕೆ ಕಳುಹಿಸಲಾದ ದಿನಾಂಕ ಯಾವುದು ಇವುಗಳನ್ನು ಅಂತಿಮಗೊಳಿಸುವುದಕ್ಕೆ ಗರಿಷ್ಟ ಕಾಲಮಿತಿಯನ್ನೇನಾದರೂ ಸರ್ಕಾರದವರು ನಿಗದಿ ಮಾಡಿದ್ದಾರೆಯೆ ;

(ಈ) ಸದ್ರಿ ಕಾಗದ ಪತ್ರಗಳು ಎಷ್ಟು ಕಾಲದಿಂದ ಸ್ಪೆಷಲ್ ಎ.ಸಿ. ಅಸಿಸ್ಟೆಂಟ್ ಕಮೀಷನ್ ರವರ ಆಫೀಸಿನಲ್ಲಿ ಇತ್ಯರ್ಥವಾಗದೆ ಹಾಗೆ ಉಳಿದಿವೆ ;

(ಉ) ಸದ್ರಿ ರಿಕಾರ್ಡುಗಳು ಹರಿಜನರಿಗೆ ವಹಿಸಿಕೊಡುವ ಬಗ್ಗೆ ಕಾರ್ಯವಾಹಿಗಳು ನಡೆದಿದ್ದರೂ ಹರಿಜನರಲ್ಲದವರಿಗೆ ಸದ್ರಿ ಜಮೀನು ಮೀಸಲಾಗಿಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಹಾಗಿದ್ದಲ್ಲಿ ಹರಿಜನರಿಗೆ ಸದರಿ ಜಮೀನು ಮಂಜೂರು ಮಾಡಲು ಕನಿಷ್ಟ ಸಮಯವೆಷ್ಟು ;

(ಋ) ಸದ್ರಿ ಜಮೀನು ಹರಿಜನರಲ್ಲದವರಿಗೆ ಮೀಸಲಾಗಿರುವುದರಿಂದ ಹರಿಜನರಿಗೆ ರಿಕಾರ್ಡು ಆಗಿರುವುದರಿಂದ ಹರಿಜನರಿಗೆ ಮಂಜೂರು ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ ಮತ್ತು ಜಾಗ್ರತೆ ಹರಿಜನರಿಗೆ ಸಾಗುವಳಿ ಚೀಟಿ ಕೊಡಲು ಏರ್ಪಾಡು ಮಾಡುವರೆ, ಕಾರ್ಯವಾಹಿಗಳು ನಡೆದಿರುವವರ ಪರವಾಗಿಯೇ ಎಂದರೆ ಹರಿಜನರಿಗೇ ಜಮೀನು ದೊರಕುವಂತಾಗಲು ಸರ್ಕಾರದವರು ಕೈಗೊಳ್ಳಲುದ್ದೇಶಿಸಿರುವ ಕ್ರಮಗಳೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಮಂತ್ರಿಗಳು).—

(ಅ) ಸ. ನಂ. 35ಕ್ಕೆ ಮೂರು ಅರ್ಜಿಗಳು ದಿನಾಂಕ 27-8-1970 ರಂದು ಬಂದಿರುತ್ತೆ. ಸ. ನಂ. 40 ಕ್ಕೆ ಯಾವ ಅರ್ಜಿಗಳು ಬಂದಿರುವುದಿಲ್ಲ.

(ಆ) ಸ. ನಂ. 35 ರಲ್ಲಿ ಪೂರ್ಣವಾಗಿ ರಿಕಾರ್ಡು ನಡವಳಿಕೆ ನಡೆದು ಈಗಿನ ದರಖಾಸ್ತು ವಿಲೇವಾರಿ ಸಮಿತಿಯ ಗಮನಕ್ಕೆ ತರುವ ಹಂತದಲ್ಲಿರುತ್ತೆ.

(ಇ) ದರಖಾಸ್ತು ಜಮೀನು ವಿಲೇವಾರಿಯ ಎಲ್ಲ ನಿಯಮಗಳನ್ನು ಅನುಸರಿಸಿ ಸಮಿತಿಯ ಅಭಿಪ್ರಾಯ ಪಡೆದು ಶಿಫಾರಸ್ಸು ಮಾಡಿದನಂತರ ಸ್ಪೆಷಲ್ ದರಖಾಸ್ತು ಅಸಿಸ್ಟೆಂಟರು ಅಂತಿಮ ಗೊಳಿಸುತ್ತಾರೆ.

(ಈ) ಸದ್ರಿ ರಿಕಾರ್ಡುಗಳು ಸ್ಪೆಷಲ್ ಅಸಿಸ್ಟೆಂಟ್ ಕಮೀಷನರ್‌ರವರ ಆಫೀಸಿಗೆ ಬಂದಿರುವುದಿಲ್ಲ.

(ಉ) ಈ ಜಮೀನು ಬೇರೆ ಜನರಿಗೆ ಮಾಸಲಾಗಿಲ್ಲ.

(ಊ) ಎಲ್ಲಾ ದರಖಾಸ್ತು ನಿಯಮಗಳನ್ನು ಅನುಸರಿಸಿ ದರಖಾಸ್ತು ಕಮಿಟಿಯ ಸಲಹೆ ಪಡೆದು ದರಖಾಸ್ತು ನಿಯಮಾವಳಿ ಪ್ರಕಾರ ಅರ್ಹತೆಯಿದ್ದಲ್ಲಿ ಮಂಜೂರುಮಾಡಲಾಗುತ್ತೆ.

(ಋ) ಈ ಜಮೀನು ಬೇರೆ ಜನರಿಗೆ ಮೀಸಲಾಗಿರುವುದಿಲ್ಲ. ದರಖಾಸ್ತುದಾರರಿಗೆ ಅತಿ ಜಾಗ್ರತೆ ಪರಿಶೀಲಿಸಿ ಮಂಜೂರುಮಾಡಿ ಸಾಗುವಳಿ ಚೀಟಿ ಕೊಡಲಾಗುತ್ತೆ.

Construction of District Health and F. P. at Chickmagalur

20. Sri G. PUTTASWAMY (Mudigere).—

Will the Minister for Health be pleased to state :—

(*a*) whether it is a fact that a building for housing the District Health Office of Chickmagalur is proposed to be constructed in the premises of the children ward attached to General Hospital, Chickmagalur ;

(*b*) whether it has come to the notice of the Government that there will be no scope to extend the children ward, if the Health Office building were constructed in the same premises ; if so, the steps taken to construct the Health Office Building elsewhere ;

(*c*) whether it is a fact that the present children ward building called as Kalmane Centre was donated by European planter for the purpose of Children Welfare Centre ?

Sri H. SIDDAVEERAPPA (Minister for Health).—

(*a*) Yes.

(*b*) No.

(*c*) Yes.

ರಾಜ್ಯದಲ್ಲಿ ಪಂಚಾಯಿತಿ ಕೇಂದ್ರಗಳನ್ನು ಹೆಚ್ಚಿಸುವುದು

೨೧. ಶ್ರೀ ಚೌಡರೆಡ್ಡಿ (ಚಿಂತಾಮಣಿ).—

ಸಮಾಜವಿಕಾಸ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ೧೯೭೧ನೇ ಇಸವಿ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಜನಸಂಖ್ಯೆ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ;

(ಆ) ಹಾಗಿದ್ದರೆ ರಾಜ್ಯದಲ್ಲಿ ಜಾಸ್ತಿಯಾದ ಜನಸಂಖ್ಯೆಗೆ ಅನುಗುಣವಾಗಿ ಪಂಚಾಯ್ತಿ ಕೇಂದ್ರಗಳನ್ನು ಹೆಚ್ಚಿಸಲು ಸರ್ಕಾರ ಯೋಚಿಸಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಸಮಾಜ ವಿಕಾಸ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು).—

ಉತ್ತರ.—(ಅ) ಬಂದಿದೆ.

(ಆ) ಹೌದು ಆ ರೀತಿ ಹೆಚ್ಚಿಸಲು ಕಾನೂನಿನಲ್ಲೇ ಅವಕಾಶಮಾಡಲಾಗಿದೆ.

Inter-State Seniority Lists

22. **Sri D. B. KALMANKAR** (Afzalpur).—

Will the Chief Minister be pleased to state :—

(*a*) the names of the Government Departments wherein the Inter State Seniority Lists of Gazetted Officers and Non-Gazetted Officers are yet to be finalished ;

(*b*) the reasons for the delay ;

(*c*) the time within which the Government proposes to finalise the lists ?

Sri D. DEVARAJ URS (Chief Minister).—

(*a*) Final Inter-State Seniority Lists in regard to the Deputy Tahsildars (Statewide) and First Grade Revenue Inspectors/First Division Clerks of Mysore and Bangalore Divisions of Revenue Department have yet to be published.

(*b*) The delay in finalisation of these lists is due to the changes in the equation of posts done by the Government of of India, the Observance of the necessary formalities and the decisions of the High oourt in several writ petitions.

(c) The State Advisory Committee has considered the representations received against the provisional Inter State Seniority list of Deputy Tahsildars and its recommendations thereon have been submitted to the Government of India for their decisions. On receipt of the decisions of the Government of India, the list will be finalised. As regards First Grade Revenue Inspectors / First Division Clerks of Bangalore and Mysore Divisions, the representations received against the revised provisional Inter State Seniority lists have been referred to the State Advisory Committee for their consideration and making suitable recommedations to the Government of India for their decisions. The final Inter State Seniority lists will be published soon after the receipt of the decisions of the Government of India on the representations.

Sixth Finance Commission

23. Sri D. B. KALMANKAR (Afzalpur).—

Will the Minister for Finance be pleased to state :—

the total amount proposed by the State Government in its memorandum submitted to the Sixth Finance Commission and the salient features of the proposal made ?

Sri M. Y. GHORPADE (Minister for Finance).—

In the Memorandum presented to the Sixth Finance Commission, a gap of Rs. 846.50 crores between the revenue and capital expenditure and receipts has been shown in the forecast period 1974-79. It has been explained in the statement of the case made by the Finance Minister to the Finance Commission during their visit to the State in January 1973 that the forecasts sent in our Memorandum have been drawn up in the manner prescribed by the Finance Commission but that there is need to effect certain basic changes in the method of assessing the revenue and capital gap of the State. It had been pointed out that on the capital receipts side, a figure of Rs. 188 crores which has been assumed towards market borrowings and loans from the Reserve Bank of India and Life Insurance Corporation and National Co-operative Development Corporation etc., should be taken as receipts for the Plan. If this is done, the gap which is to be covered on the basis of the recommendations of the Finance Commission will further widen from Rs. 846 crores to Rs. 10[illegible]4 crores.

Rayanakere Dairy Farm

24. Sri D. B. KALMANKAR (Afzalpur).—

Will the Chief Minister be pleased to state :—

whether the Government has decided to acquire the Rayanakere Diry Farm near Mysore from the former Maharaja of Mysore on payment of compensation of Rs. 13.5 Lakhs ?

Sri D. DEVARAJ URS (Chief Minister).—

Yes, the amount of compensation payable being Rs. 13.04 Lakhs.

Railway Line in Drought Affected Area

25. Sri D. B. KALMANKAR (Afzalpur).—

Will the Minister for Public Works and Electricity be pleased to state :—

(*a*) whether the State Government has proposed to the Central Government to lay railway line in the drought affected area of the State ;

(*b*) if so, the steps taken by Central Government on the proposal of State Government ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) Reply from Government of India is awaited.

ತುಂಗಾ ಮೇಲ್ದಂಡೆಯ ಯೋಜನೆಯನ್ನು ಯಾತ ನೀರಾವರಿ ಯೋಜನೆಯನ್ನಾಗಿ ಪರಿವರ್ತಿಸುವುದು

೨೬. ಶ್ರೀ ಕೆ. ಯಂಕಟಪ್ಪ (ಶಿಕಾರಿಪುರ).—

ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ತುಂಗಾ ಮೇಲ್ದಂಡೆ ಯೋಜನೆಯನ್ನು ಕಾರ್ಯಗತ ಮಾಡಲು ಸರ್ಕಾರ ಉದ್ದೇಶಿಸಿದೆಯೇ ;

(ಆ) ಹಾಗಿದ್ದರೆ ಈ ಯೋಜನೆಯನ್ನು ಯಾತ ನೀರಾವರಿ ಯೋಜನೆಯಾಗಿ ಪರಿವರ್ತಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ;

(ಇ) ಈ ಯೋಜನೆಯಿಂದ ಎಷ್ಟು ಅಡಿ ಎತ್ತರಕ್ಕೆ ನೀರು ಒಯ್ಯಲು ಯೋಚಿಸಲಾಗಿದೆ ;

(ಈ) ಈಗ ವಿಚಾರ ಮಾಡಿರುವ ಎತ್ತರಕ್ಕೆ ನೀರನ್ನು ತೆಗೆದುಕೊಂಡು ಹೋದರೆ ಶಿವಮೊಗ್ಗಾ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಎಕರೆ ನೀರಾವರಿ ಆಗುವ ಸಂಭವವಿದೆ ;

(ಉ) ಹೆಚ್ಚಿಗೆ ಎತ್ತರಕ್ಕೆ ನೀರನ್ನು ತೆಗೆದುಕೊಂಡು ಹೋದರೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಎಕರೆ ನೀರಾವರಿ ಆಗುವ ಸಂಭವವಿದೆ ;

(ಊ) ಈ ಯೋಜನೆಯ ಅಂದಾಜು ಸಿದ್ಧಪಡಿಸಲಾಗಿದೆಯೇ ;

(ಋ) ಈ ಯೋಜನೆಯಿಂದ ಶಿಕಾರಿಪುರ ತಾಲ್ಲೂಕಿಗೆ ನೀರನ್ನು ಒದಗಿಸಲು ಸರ್ಕಾರವು ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು).—

ಉತ್ತರ.—(ಅ) (ಆ) (ಇ) (ಈ) (ಉ) (ಊ) (ಋ) ಅಪ್ಪರ್ ತುಂಗಾ ಯೋಜನೆಯು ಇನ್ನೂ ತನಿಖೆಯಲ್ಲಿದೆ ಮತ್ತು ಈ ಯೋಜನೆಯು ಕೃಷ್ಣಾ ನೀರಿನ ವಿವಾದಗಳ ಪಂಚಾಯುತಿಯ ತೀರ್ಪನ್ನು ಅವಲಂಬಿಸಿದೆ.

Scarcity of Cement

51. Sri A. D. BILI GOWDA (Maddur).—

Will the Minister for Industries be pleased to sta'e :—

(*a*) whether it has come to the notice of the Government that cement is being sold at abnormally high rates and the scarcity, whether the real or artificial has hindred the construction of the school buildings etc.,

(*b*) whether the Government would take immediate action for introducing control on the sale of cement until the scarcity period is over ?

Sri S. M. KRISHNA (Minister for Industries).—

(*a*) Yes.

(*b*) Government propose to issue orders under the E. C. Act under which the sale of cement to the general public will be regulated through permits.

Distribution of House Sites to Landless and Houseless in Gulbarga

55. Sri PRABHAKAR TELKAR (Kalgi).—

Will the Minister for Municipal Administration be pleased to state :—

(*a*) whether any free house sites have been distributed to the landless and houseless persons in Gulbarga District ;

(SRI PRABHAKAR TELKAR)

(*b*) if so, the number of such sites given with talukwise particulars ;

(*c*) the number of sites distributed to the following categories of persons :—

(i) scheduled castes and scheduled tribes ;

(ii) lambadies ;

(iii) other weaker sections ?

SRI B. BASAVALINGAPPA (Minister for Municipal Administration).—

(*a*) Yes.

(*b*) 8,282. Talukwise particulars are indicated in the Statement appended.

(*c*).—

(i) 2,441

(ii) 1,242

(iii) 4,599.

Statement showing the number of house sites distributed talukwise in Gulbarga District.

Sl. No.	*Name of the Taluk*		*No. of house sites distributed*
1	Gulbarga	...	1257
2	Alland	...	1100
3	Afzalpur	...	1074
4	Sedam	...	485
5	Chitapur	...	942
6	Yadgiri	...	281
7	Shahapur	...	882
8	Shorapur	...	853
9	Jewargi	...	589
10	Chincholi	...	819
		Total	8282

Records in Respect of Places of Worship

65. Smt. SUMATI B. MADIMAN (Dharwar Rural).—

Will the Minister for Revenue be pleased to state :—

(a) whether the Government has in its possession any records to show the number of places of worship (viz., Mosques, temples and graveyards etc.,) in the State and where they are situated ;

(b) whether the Government is aware that such places of worship are springing in prominent places and localities spcially along-side the highways ;

(c) whether permission has been granted for their construction in such places ?

Sri N. HUTCHAMASTHY GOWDA (Minister for Revenue).—

(a) The Department of Endowments has got a list of such of the religious and charitable institutions as have been granted either lands or cash annuties by Government or are governed by the Bombay Public Trust Act in Belgaum Division and by the Madras Hindu Religious and Charitable Endowments Act in South Kanara and Bellary Districts and Kollegal Taluk.

(b, and (c) There are no separate rules for regulating the construction of places of worship. The rules applicable to other structures are applicable to places of worship also.

Lifting of Electricity Cut mposed on Industry

73. Sri A. D. BILIGOWDA (Maddur).—

Will the Minister for Public Works and Electricity be pleased to state :—

whether the Government propose to lift the 75% electricity consumption ceiling imposed on essential industrial concerns like Cement Factories etc., so that, they may meet the consumers normal demands ?

Sri H. M. CHANNABASAPPA (Minister for Public Works and Electricity).—

some relaxation in the restrictions on consumption of power has been made in ths case of Cement Factories which have agreed to make available additional quantum of cement to the State.

Agricultural University in Mandya District

76. Sri A. D. BILIGOWDA (Maddur).—

Will the Minister for Agriculture and Forests be pleased to state :—

whether there is any proposal to start an Agricultural University in Mandya District ?

Sri K. H. PATIL (Minister for Agriculture and Forests).—

No.

Electrification of Villages in Davangere Taluk

99. Smt. C. NAGAMMA KESHAVA MURTHY (Davanagere).—

Will the Minister for Public Works and Electricity be pleased to state :—

(*a*) the number of villages in Davanagere taluk which have been electrified upto date (names of the villages may be furnished) ;

(*b*) the names of villages which have not been electrified so far ;

(*c*) the time within which the remaining villages would be electrified ?

Sri H. M. CHANNABASAPPA (Minister for Public Works and Electricity).—

(*a*) 85 as per list I appended.

(*b*) *Vide* list II appended.

(*c*) In about 6 to 8 years.

LIST I

List of Electrified Villages in Davangere Taluk as on 31-1-1973.

1	Doddabathi	10	Avaragere
2	Kalpanahalli	11	Alur
3	Hebbal	12	Chikkanahalli
4	Hanumanahalli	13	Kukkavada.
5	Honnur	14	Anekonda
6	Bethur	15	Malakere
7	Basapura	16	Voddinahalli
8	Hunsekatte	17	Kadajj
9	Kundavada	18	Kandagal

19 Halavarthi
20 Malasettihalli
12 Lokikere
22 Nittuvalli
23 Neerthodi
24 Kyathanahalli
25 Hadadi
26 Sybanur
27 Nalkunda
28 Mellekatte
29 Anaji
30 Narayanahalli
31 Nagarasanahalli
32 Hulikatte
33 Kogganur
34 Kodaganur
35 Siramagondanahalli
36 Bada
37 Naganur
38 Anagodu
39 Yaragunte.
40 Avaragola
41 Kakkargola
42 Iygoor
43 Mandalur
44 Basavanahalu
45 Tolahunise
46 Syagale
47 Belavannr
48 Bisalare
49 Kanagondanahalli
50 Huchavvanahalli
51 Rampura
52 Hommanabethuru
53 Kittur
54 Chikkanagathihalli
55 Nerlagi
56 Lingadahalli
57 Kodihalli
58 Ramagondanahalli
59 Anaberu
60 Kurki
61 Kurudi
62 Obannahalli
63 Huvvinamadu
64 Honnanaikanahalli
65 Ballur
66 Dyamevvahalli
67 Attigere
68 Bullapura
69 Doddamagadi
70 Gudhal
71 Gummanur
72 Bhavihal
73 Vaderahalli
74 Thurchaghatta
75 Kaidale
76 Kabbur
77 Hindaskatte
78 Heddans
79 Echagatta
80 Lakkamuthenahalli
81 Chinnasamudra
82 Jarikatte
83 Dyamavanahalli
84 Gopanhal
85 Hiretogaleri

LIST II

Mysore State Electricity Board

List of villages to be Electrified

1 Karur
2 Doddabubihal
3 Kenchavanahalli
4 Chikkabubihal
5 Nagarakatte
6 Mudahadadi
7 Halebathi
8 Neelanahalli
9 Basavanahalli
10 Devarahatty
11 Putukanahal
12 Janalghatta

(SRI H. M. CHANNABASAPPA)

13 Batalkatte
14 Siranahalli
15 Agasanakatte
16 Kadlabalu
17 Malagondanahalli
18 Chandranahalli
19 Bulapura
20 Naikanahalli
21 Arasapura
22 Objjihalli
23 Mallapura
24 Gandamukthannahalli
25 Giriyapura
26 Kolanahalli
27 Jadaganahalli
28 Siddanur
29 Pavada Rangavvanahalli
30 Hulupanakatte
31 Doddarangavvanahalli
32 Bullapura
33 Narasipura
34 Neelavvanahalli
35 Agasanakatte
36 Rudranakatte
37 Kandanakovl
38 Mudenahalli
39 Ganganakatte
40 Karilakkenahalli
41 Tumbigeri
42 Karanaikana Hosahalli
43 Jammapura
44 Kenchammanahalli
45 Rangavvanahalli
46 H. Kalappanahalli
47 Boragondanahalli
48 Hebbal Giriyapura
49 Lingapura
50 Giriyapura
51 Kereyagalahalli
52 Katihalli
53 Panjenahalli
54 Naraganahalli
55 Giriyavvanahalli
56 Akkasalepyammajjihalli
57 Gollarahalli
58 Pamenahalli
59 Hanumanahalli
60 Tinlapura
61 Pitrahalli
62 Gujjikonda
63 Ventihal
64 Donkenahalli
65 Chikkanagadi
66 Dindadahalli
67 Rampura
68 Shankaranahalli
69 Vitlapura
70 Annapura
71 Gudlahalli
72 Jampannahalli
73 Sultanipura
74 Madakeripura
75 Vederahalli
76 Kalavoor
77 Kodihalli
78 Kasipura
79 Chikkatoguleri
80 Lakkavanahalli
81 Giddanahalli
82 Govinda
83 Yeravangathihalli
84 Kolkunte
85 Turuvanahal
86 Kajkere
87 Kuntapalanahalli
88 Mathi
89 Honnamaradi

First Report of the Committee on Estimates (Ports) —Presentation

SRI K. F. PATIL (Byadgi).—Madam, I present the First Report of the Committee on Estimates on Ports.

MADAM SPEAKER.—The First Report of the Committee on Estimates on Ports is presented.

Statement by the Minister for Public Work and Electricity

Re : Tipranth Tank

SRI H. M. CHANNABASAPPA (Minister for Public Works and Electricty).—Madam, I wish to make a statement regarding the Tipranth Tank.

1 Tipranth tank lies in the outskirts of Basavakalyan. It has an ayacut of 350 acres. Earthwork for effecting repairs to the bund of the tank was taken up on 5-3-1973. This was also the place where the Prime Minister landed on 10-3-1973 at Basavakalyan.

The labour strength working on the tank from the date of commencement of work varies from 450 to 1975. It is not correct to say that there was a labour strengh of 5000 working on the tank when the Prime Minister visited the place. The daily labour attendance on the tank is as follows:—

5-3-73	450 labourers
6-3-73	1040 ,,
7-3-73	1500 ,,
8-3-73	1500 ,,
9-3-73	1500 ,,
10-3-73	1975 ,,
11-3-7[illegible]	15 0 ,,
12-3-73	400 ,,
13-3-73	nil (on account of feast)
14-3-73	864 ,,
15-3-73	1100 ,,
16-3-73	1145 ,,
17-3-73	1150 ,,
18-3-73	950 ,,
19-3-73	700 ,,
20-3-73	1132 ,,
21-3-73	1146 ,,
22-3-73 23-3-73 24-3-73	Round about 1100
8-4-73 9-4-73	about 300

(SRI H. M. CHANNABASAPPA)

2 The work is reported to have been stopped on 24-3-1973 as the labourers were not doing the work properly. It is said that the earth which should have been put on the bund was being thrown helter skelter on the front slope of the bund inspite of instructions. The labourere are said to have taken advantage of some public interference encouraging them to put the earth helter skelter. Work is said to have been stopped on this account and again resumed on 8-4-1973 Lobour was out however kept out of work. Within a radius of 2 miles, 2 more tanks namely, Narayanpur and Neelkant tanks were taken up with a view to provide alternative employment. All the people who are in need of employment are provided with work.

3 Round about Basavakalyan itself, there are 3000 labourers working in the 3 tanks, namely Tipranth tank, Narayanpur and Neelkant tanks. 3 works have been sanctioned in Bidar district out of which 14 are in full progress. The labour strength on PWD works has now gone to 38,000 per day as against 24.000 a few days ago.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಈಗ ಮಾನ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಿದರು. ನಾಳೆ ನಾವೆಲ್ಲರೂ ಹೋಗುವವರಿದ್ದೇವೆ. ಕೆಲಸ ನಿಂತಿದ್ದು ಯಾವಾಗ, ಎನ್ನುವುದನ್ನೆಲ್ಲ ಸ್ಥಳದಲ್ಲಿ ತಿಳಿದುಕೊಂಡು ಬಂದ ಮೇಲೆ ಹೇಳಿಕೆಯನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆಯೇ ? ಆಡಳಿತ ಪಕ್ಷಕ್ಕೆ ಸೇರಿದ ಒಬ್ಬ ಸದಸ್ಯರು ಹೇಳಿರುವುದು ಸ್ಥಳೀಯ ಪತ್ರಿಕೆಗಳಲ್ಲಿ ಬಂದಿದೆ. ಅವರ ಹೇಳಿಕೆ ಪ್ರಕಾರ ಪ್ರಧಾನ ಮಂತ್ರಿಗಳು ಬಂದು ಹೋದ ಎರಡು ದಿವಸಗಳಲ್ಲಿಯೇ ಕೆಲಸ ನಿಂತುಹೋಯಿತು. ಪೇಪರ್ ಕಟಿಂಗ್ ನನ್ನ ಹತ್ತಿರವಿದೆ. ಇದರಲ್ಲಿ ರಾಜಕೀಯ ಮಾಡಬೇಕೆಂಬ ಇಚ್ಛೆ ನನಗಿಲ್ಲ. ಹೇಗಿದ್ದರೂ ನಾವೆಲ್ಲ ಸ್ಥಳ ಪರಿಶೀಲನೆಗೆ ಹೋಗುವುದರಿಂದ ಅಲ್ಲಿಂದ ಬಂದ ಮೇಲೆ ಪುನಃ ಈ ಸಭೆಯಲ್ಲಿ ಒಂದು ಹೇಳಿಕೆ ಕೊಡುತ್ತೀರಿ. ಅದರ ಬಗ್ಗೆ ನಾನು ಏನೂ ಹೆಚ್ಚು ಹೇಳುವುದಿಲ್ಲ.

SRI H. M. CHANNABASAPPA.—I am not interested in giving wrong information. Government is interested in placing all the facts. The work have been stopped from 24th March to 8th April for the reasons I has quoted and the work was stopped on the Holi festival day because people did not turn up for work. In the vicinity of Basavakalyan, within two miles, there have been three tanks. The information I have received is on record and if that is proved to be incorrect, such of those people who have furnished the information will come into trouble.

ಶ್ರೀ ವಾಟಾಳ್ ನಾಗರಾಜ್.— ಬೀದರು ಜೈಲಿನಲ್ಲಿ ನಾವು ಕಣ್ಣಾರೆ ಹೋಗಿ ನೋಡಿಕೊಂಡು ಬಂದಿದ್ದೇವೆ. ಇಲ್ಲಿರುವ ಸತ್ಯಾಗ್ರಹಿಗಳಿಗೆ ಸರಿಯಾಗಿ ಊಟ ಕೊಡುತ್ತಿಲ್ಲ ಮತ್ತು ನ್ಯಾಯವಾಗಿ ನಿಯಮಗಳಂತೆ ಯಾವ ಅನುಕೂಲಗಳು ಕೊಡಬೇಕೋ ಅದನ್ನೂ ಕೊಡುತ್ತಿಲ್ಲ. ಇವರಲ್ಲಿ ಎಷ್ಟೋ ಜನ ಹೆಂಗಸರು ಮಕ್ಕಳೂ ಇದ್ದಾರೆ, ಇವರಿಗೆಲ್ಲ ತೊಂದರೆಯಾಗುತ್ತಿದೆ. ಒಬ್ಬೊಬ್ಬರನ್ನು ಒಂದೊಂದು ಕಡೆ ಇರಿಸಿದ್ದಾರೆ. ಇದನ್ನೆಲ್ಲಾ ಸರಕಾರ ಸರಿಯಾಗಿ ಪರಿಶೀಲನೆ ಮಾಡಿ ಇವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಿನ್ನೆ ದಿವಸವೇ ಮಾನ್ಯ ಮುಖ್ಯ ಮಂತ್ರಿಗಳಿಂದ ಇದರ ಬಗ್ಗೆ ತಮಗೆ ಭರವಸೆ ಕೊಡಲಾಗಿತ್ತು. ಮತ್ತೆ ಈಗ ಡೆಪ್ಯುಟಿ ಲೀಡರ್‌ರವರು ಇದರ ಬಗ್ಗೆ ಭರವಸೆ ಕೊಡಬೇಕೆಂದು ನನಗೇನೂ ಕಾಣುತ್ತಿಲ್ಲ.

ತಮ್ಮಲ್ಲಿ ನಾನು ಒಂದು ಮಾತು ಹೇಳಬೇಕಾಗಿದೆ. ತಮಗೆಲ್ಲ ತಿಳಿದಿರುವಂತೆ ಈಗಾಗಲೇ ಡಿಮ್ಯಾಂಡುಗಳು ಚರ್ಚೆಗೆ ಷುರುವಾಗಿ ಐದು ದಿವಸಗಳಾದವು, ಇದರಲ್ಲಿ ಆಗಲೇ ಎರಡು ಡಿಮ್ಯಾಂಡುಗಳು ಪಾಸಾಗಿವೆ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಎಲ್ಲ ಡಿಮ್ಯಾಂಡುಗಳೂ ಮುಗಿಯಲು ಇಪ್ಪತ್ತು ದಿವಸಗಳನ್ನು ಗೊತ್ತು ಮಾಡಿದೆ. ಆದರೆ ಕೊನೆಯಲ್ಲಿ ಎಲ್ಲ ಡಿಮ್ಯಾಂಡುಗಳೂ ಮುಗಿಯದೇ ಹೋದರೆ ಕೊನೆಯ ದಿವಸ ಉಳಿದ ಡಿಮ್ಯಾಂಡುಗಳನ್ನೆಲ್ಲಾ ಗಿಲೆಟಿನ್‌ಗೆ ಹಾಕುವ ಪ್ರಶ್ನೆ ಬರುತ್ತದೆ. ಈಗಾಗಲೇ ಎರಡೂ ಕಾಲು ಗಂಟೆಯಾಯಿತು. ಮಾನ್ಯ ಶ್ರೀ ನಾಗರಾಜ್‌ರವರು ಬೇರೆ ವಿಚಾರಗಳನ್ನು ಇಲ್ಲಿ ಎತ್ತುತ್ತಾ ಹೋದರೆ ಅದರಿಂದೇನೂ ಲಾಭವಿಲ್ಲ. ಈ ಡಿಮ್ಯಾಂಡು ನಿನ್ನೆಯ ದಿವಸವೇ ಮುಗಿಯಬೇಕಾಗಿತ್ತು. ಮುಖ್ಯಮಂತ್ರಿಗಳು ಹೇಳಿದ ನಂತರ ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಲು ಶ್ರೀ ವಾಟಾಳ್ ನಾಗರಾಜ್‌ರವರಿಗೆ ಚಾನ್ಸ್ ಕೊಡೋಣ ಎಂದು ಅವರಿಗೆ ಅವಕಾಶ ಕೊಟ್ಟಿದ್ದೆ. ಅವರು ಮಾತನಾಡಲು ಎದ್ದು ನಿಂತರು ಮತ್ತು ಅವರು ಮಾತನಾಡಲು ಆರಂಭ ಮಾಡುವಾಗ ಸಭೆಯಲ್ಲಿ ಕೆಲವರು ನೋ ನೋ ಎಂದು ಅಂದರು. ಒಂದು ರೀತಿಯಾದ ಜೋರು ಶಬ್ದ ಬಂದುದರಿಂದ ಅವರು ಮಾತಾಡಲು ಆಗಲಿಲ್ಲ ಮತ್ತು ನಾನೂ ಕೂಡ ವಿಧಿಯಿಲ್ಲದೆ ಸಭೆಯನ್ನು ಅಡ್‌ಜರ್ನ್ ಮಾಡಬೇಕಾಗಿ ಬಂತು, ಇದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ನನಗೆ ಎಲ್ಲ ಕಡೆಯಿಂದಲೂ ಕೋಆಪರೇಷನ್ ಕೊಟ್ಟರೆ ನಾನು ನನ್ನ ಕೆಲಸವನ್ನು ಮಾಡಲು ಅನುಕೂಲವಾಗುತ್ತದೆ. ಇಲ್ಲದೆ ಒಬ್ಬೊಬ್ಬರಿಗೇ ಎರಡೂ ಮೂರು ಸಲ ಅವಕಾಶ ಕೊಡಬೇಕೆಂದು ಹೇಳಿದರೆ ಕಷ್ಟವಾಗುತ್ತದೆ. ನಿನ್ನೆ ದಿವಸ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ನಾಲ್ಕು ಸಲ ಎದ್ದು ನಿಂತು ಮಾತನಾಡಿದರು. ಶ್ರೀ ಕಾಗೋಡು ತಿಮ್ಮಪ್ಪನವರು ಮೂರು ಸಲ ಎದ್ದು ನಿಂತು ಮಾತನಾಡಿದರು ಮತ್ತು ಶ್ರೀ ದೇವೇಗೌಡರವರು ಮೂರು ಸಲ ಎದ್ದು ಹೇಳಿದರು. ಇದಕ್ಕೆ ನಾನು ಎಲ್ಲ ಸದಸ್ಯರಲ್ಲೂ ಕೇಳಿಕೊಳ್ಳುವುದು ತಮ್ಮೆಲ್ಲರ ಸಹಕಾರ ನನಗೆ ಬೇಕು. ಆ ರೀತಿ ಸಹಕಾರ ಕೊಟ್ಟು ಇವೊತ್ತಿನ ಅಜೆಂಡದಲ್ಲಿರುವ ಸಬ್‌ಜಕ್ಟನ್ನು ಇವೊತ್ತೇ ಮುಗಿಸಲು ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಏನು ಹೇಳಿದಿರಿ ಅದರ ಉದ್ದೇಶ ನಮಗೆ ಅರ್ಥವಾಗುತ್ತದೆ, ನಾವು ವಿಧಾನ ಸಭೆಯಲ್ಲಿ ಕಾಲಹರಣ ಮಾಡಬೇಕೆಂದು ಬಂದಿಲ್ಲ. ನಿನ್ನೆ ದಿವಸ ನಡೆದ ಘಟನೆಗಳು ನಾವು ಸಭೆಯ ಕಾರ್ಯಕಲಾಪಗಳನ್ನು ಅಡ್ಡಿ ಮಾಡಬೇಕು ಎಂದು ಮಾಡಿದುದಲ್ಲ. ಇವೊತ್ತು ಸರಕಾರದವರು ಡಿಮ್ಯಾಂಡುಗಳನ್ನು ತಂದು ನಮ್ಮ ಸಹಕಾರವನ್ನು ಕೇಳಿ ಪಾಸು ಮಾಡಬೇಕೆಂದು ಇದ್ದಾರೆ, ನಿಮ್ಮ ಡಿಮ್ಯಾಂಡುಗಳನ್ನು ಪಾಸು ಮಾಡಲು ಏನು ಸಹಕಾರ ಬೇಕೋ ಅದನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ ಮತ್ತು ಡಿಮ್ಯಾಂಡುಗಳನ್ನು ಪಾಸು ಮಾಡುವುದಕ್ಕೇ ಬಂದಿರುವುದು, ತಾವು ಶ್ರೀ ದೇವೇಗೌಡರು ಮೂರು ಸಲ ಎದ್ದು ಹೇಳಿದರು, ಶ್ರೀ ನಾಗರಾಜ್‌ರವರು ಮೂರು ಸಲ ಎದ್ದು ಹೇಳಿದರು ಎಂದು ಇಲ್ಲಿ ಹೇಳಿದಿರಿ. ನಮ್ಮ ಮನಸ್ಸಿನಲ್ಲಿ ಯಾವುದೇ ರೀತಿಯಾಗಿ ಕಾಲಹರಣ ಮಾಡಬೇಕೆಂದು ಇರಲಿಲ್ಲ, ನಿನ್ನೆಯ ಸನ್ನಿವೇಶಗಳು ಹಾಗಿದ್ದುವು, ವಿಧಿಯಿಲ್ಲದೆ ಹೇಳಬೇಕಾಗಿ ಬಂತು, ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಶ್ರೀ ಚನ್ನಬಸಪ್ಪನವರು ನಾಳೆ ಹೋಗುವಾಗ ಇದನ್ನೂ ವಿಚಾರ ಮಾಡಿಕೊಂಡು ಬರಲಿ ಎಂದು ಸಲಹೆ ಮಾಡುತ್ತೇನೆ. ನಾನು ಆ ಡೆಲಿಗೇಷನ್‌ನಲ್ಲಿ ಹೋಗುತ್ತೇನೋ ಇಲ್ಲವೋ ಗೊತ್ತಿಲ್ಲ. ಜೈಲಿನಲ್ಲಿ ಸತ್ಯಾಗ್ರಹಿಗಳನ್ನು ಇಟ್ಟು ಅವರ ಮೇಲೆ ಕೇಸು ಹಾಕಿರುವುದು ಯಾವ ಸೆಕ್ಷನ್ ಪ್ರಕಾರ ಎಂದರೆ ಗ್ಯಾಂಬ್ಲಿಂಗ್ ಮಾಡುತ್ತಿದ್ದಾಗ ಎನ್ನುವವರ ಮೇಲೆ ಹಾಕುವ ಸೆಕ್ಷನ್ನು, ಇನ್ನೊಬ್ಬರಿಗೆ ಹರಿತವಾದ ಆಯುಧಗಳನ್ನು ಹಿಡಿದುಕೊಂಡಿದ್ದರು ಎನ್ನುವ ಸೆಕ್ಷನ್‌ಗೆ ಇಲ್ಲಿ ಚಾರ್ಜ್ ಮಾಡಿದ್ದಾರೆ. ಈ ರೀತಿ ಸರಕಾರ ಅನುಸರಿಸುವ ನೀತಿ ಸರಿಯಾದುದಲ್ಲ, ಇದನ್ನು ವಿಚಾರ ಮಾಡಿ ಕಾನೂನು ಪ್ರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಮತ್ತು ಜೈಲಿನಲ್ಲಿರುವ ಸತ್ಯಾಗ್ರಹಿಗಳಿಗೆ ಸರಿಯಾದ ಪರಿಹಾರ ದೊರಕಿಸಿಕೊಡಬೇಕು, ಮತ್ತು ಇವರಿಗೆ ಜೋಳದ ರೊಟ್ಟಿ ತಿಂದು ಅಭ್ಯಾಸವಾಗಿದೆ. ಆದರೆ ಇಲ್ಲಿ ಗೋಧಿ ರೊಟ್ಟಿ ಕೊಡುತ್ತಾರೆ. ಅವಕ್ಕೆ ಎಣ್ಣೆಯನ್ನೇ ಕೊಡುತ್ತಿಲ್ಲ, ಇದಿಲ್ಲದೆ ತಿನ್ನಲು ಸಾಧ್ಯವಿಲ್ಲ, ಇವನ್ನೆಲ್ಲಾ ಸರಿಯಾಗಿ ನೋಡಿ ಇಲ್ಲಿನ ಜನರ ಕಷ್ಟನಿವಾರಣೆ ಮಾಡಬೇಕೆಂದು ಹೇಳುತ್ತೇನೆ.

SRI SUBASH ASHTURE.—The Leader of the Opposition mentioned the name of Bhalki. I want to bring to the notice of the House that persons who are arrested are not arrested for making Satyagraha. They are arrested under section 353 for obstructing the

(SRI SUBASH ASTHURE)

Tahsildar and when some foreign dignitaries and Taluk President were discussing they entered the room. Under these circumstances the police chargesheeted them under section 353. They are not satyagrahis.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ ಕೆಲಸ ಮಾಡುವ ಕೂಲಿಗಳು ಅವರು ಮಾಡಿರುವ ಕೆಲಸಕ್ಕಾಗಿ ಕೂಲಿ ಕೇಳಲು ಬಂದರೆ ಅವರ ಮೇಲೆ ಗ್ಯಾಂಬ್ಲಿಂಗ್ ಎಂದು ಕೇಸು ಹಾಕುತ್ತಾರೋ ? ಇದು ಯಾವ ಸೆಕ್ಷನ್‌ನಲ್ಲಿ ಬರುತ್ತದೆ. ನಾವೇ ಹೋಗಿ ಖುದ್ದು ನೋಡಿ ಬಂದಿದ್ದೇವೆ. ಸತ್ಯಾಗ್ರಹ ಮಾಡಿ ಅವರು ತಾವು ಕೆಲಸ ಮಾಡಿದ್ದಕ್ಕೆ ಸಂಬಳ ಕೇಳುವುದೇ ತಪ್ಪೇನು ? ಇದರ ಬಗ್ಗೆ ಮಾನ್ಯ ಸದಸ್ಯರೇ ಹೋಗಿ ಅಲ್ಲಿ ಸಂಬಳ ಕೊಡಿಸಬಹುದಾಗಿತ್ತು.

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ಸಭೆಯ ಕಾರ್ಯಕಲಾಪಗಳನ್ನು ಅಡ್ಡಿ ಪಡಿಸಲು ನಮಗೆ ಇಚ್ಛೆ ಇಲ್ಲ. ನಿಮ್ಮ ಬೇಡಿಕೆಗಳನ್ನು ಹಾಗೂ ಡಿಮ್ಯಾಂಡುಗಳನ್ನು ಪಾಸು ಮಾಡಬೇಕು ಅದಾಗುತ್ತದೆ. ಆದರೆ ಅಧಿಕಾರದಲ್ಲಿದ್ದೇವೆ ಎಂದು ಜನತೆಗೆ ಮೋಸ ಮಾಡಹುದು. ಆದರೆ ದೇವರಿಗೆ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ನಿಮಗೆ ದೇವರಲ್ಲಿ ಇನ್ನೂ ನಂಬಿಕೆ ಇರುವವರೂ ಇದ್ದಾರೆ, ದೇವರಿಗೆ ಮೋಸ ಮಾಡಿದರೆ ಅದರ ಫಲವನ್ನು ನೀವೇ ಅನುಭವಿಸಬೇಕಾಗುತ್ತದೆ. ನಾಳೆ ಹೇಗೂ ಅಲ್ಲಿಗೆ ಹೋಗುತ್ತಿರುವುದರಿಂದ ಇಲ್ಲಿರುವ ಈ ಜನಕ್ಕೆ ನ್ಯಾಯ ದೊರಕಿಸಿಕೊಡಿ.

SRI H. M. CHANNABASAPPA.—There is no need for us to exercise our minds on this matter. The Hon. Chief Minister has given an assurance to this House that all matters will be looked into and wherever relief is necessary it would be given.

MADAM SPEAKER.—We will go to the next item. Discussion on Demands for Grants. Hon. Minister for Health to move the demands.

Budget Estimates for 1973-74—Demands for Grants

Demand No : 18—Medical Public Health and Family Planning

SRI H. SIDDAVEERAPPA (Minister for Health).—Madam Speaker, on the recommendation of the Governor, I beg to move :

"That a sum not exceeding Rs. 26,48,61,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No : 18 Medical, Public Health and Family Planning."

MADAM SPEAKER.—Motion moved :

"That a sum not exceeding Rs. 26,48,61,000 inclusive of the sum granted 'on account' be granted to the Government to defray the charges which will come in course of payment during the financial year ending 31st day of march 1974, in respect of Demand No 18 Medical, Public Health and Family Planning."

MADAM SPEAKER.—Hon. Member Sri Kagodu Thimmappa to initiate the discussion.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಿ ಆಹಾರದ ಕೊರತೆಯಿರುವುದರಿಂದ ಸಾಮಾನ್ಯ ಮನುಷ್ಯರಿಗೆ ರೋಗ ಬರುವುದು ಜಾಸ್ತಿ ಎಂಬತಕ್ಕ ವಿಚಾರವನ್ನು ನಮ್ಮ ಆರೋಗ್ಯ ಮಂತ್ರಿಗಳು ಕಳೆದ ಸಲ ಹೇಳಿದ್ದರು. ಈಗಲೂ ನಮ್ಮ ರಾಜ್ಯದಲ್ಲಿ ತೀವ್ರವಾದಂಥ ಬರಗಾಲಪರಿಸ್ಥಿತಿ ಇರುವುದರಿಂದ ಆಹಾರದ ಕೊರತೆ ಸ್ವಾಭಾವಿಕವಾಗಿ ಜಾಸ್ತಿಯಾಗಿದೆ. ಈ ಕಾರಣದಿಂದ ನಮ್ಮ ನಾಡಿನ ಜನರಿಗೆ ರೋಗರುಜಿನಗಳು ಬರದಂತೆ ನೋಡಿಕೊಳ್ಳಲು ನಮ್ಮ ಆರೋಗ್ಯ ಮಂತ್ರಿಗಳು ಆರೋಗ್ಯ ಇಲಾಖೆಯನ್ನು ಸರಿಪಡಿಸುವ ವಿಷಯದಲ್ಲಿ ಸ್ವಲ್ಪ ಪ್ರಯತ್ನ ಮಾಡಬೇಕು. ಇಲ್ಲದೇ ಹೋದರೆ ಈ ಇಲಾಖೆಯಿಂದ ಜನಸಾಮಾನ್ಯರಿಗೆ ಯಾವುದೇ ರೀತಿಯ ಹೆಚ್ಚಿನ ಉಪಯೋಗವಾಗಲಾರದು ಎಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದ ಪ್ರಮುಖ ನಗರಗಳಾದ ಬೆಂಗಳೂರು, ಮೈಸೂರು ಹಾಗೂ ಇನ್ನಿತರ ಜಿಲ್ಲಾ ಕೇಂದ್ರಗಳಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳಿವೆ. ಈ ಆಸ್ಪತ್ರೆಗಳಿಗೆ ಪ್ರತಿನಿತ್ಯ 500 ರಿಂದ ಸಾವಿರದವರೆಗೆ ಜನರು ಔಟ್-ಪೇಷೆಂಟ್ ಆಗಿ ಬಂದು ಹೋಗುತ್ತಾರೆ. ಬೆಂಗಳೂರು ನಗರದಲ್ಲಿ ಈ ಸಂಖ್ಯೆ ಇನ್ನೂ ಜಾಸ್ತಿಯಾಗಬಹುದು. ಇದರ ಜೊತೆಗೆ ಇನ್-ಪೇಷೆಂಟ್ ಜನರ ಸಂಖ್ಯೆಯೂ ಜಾಸ್ತಿ ಇರುತ್ತದೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ, ಬೌರಿಂಗ್ ಆಸ್ಪತ್ರೆಯನ್ನೇ ಉದಾಹರಣೆಗೆ ತೆಗೆದುಕೊಂಡರೆ ಅಲ್ಲಿಯ ಆಡಳಿತದ ವ್ಯವಸ್ಥೆಯನ್ನೆಲ್ಲಾ ಡೀನ್ ಮತ್ತು ವೈಸ್-ಡೀನ್‌ಗೆ ವಹಿಸಿಕೊಡಲಾಗಿದೆ. ಒಂದು ಬೆಡ್‌ಷೀಟ್ ಬೇಕಾದರೂ ಡೀನ್ ರುಜು ಹಾಕಿಕೊಡಬೇಕು. ಪೇಪರ್, ಇಂಕ್ ಬೇಕಾದರೂ ವೈಸ್-ಡೀನ್ ರುಜು ಹಾಕಿಕೊಡಬೇಕು. ಈ ರೀತಿ ಆಡಳಿತದ ಕಡೆಗೇ ಹೆಚ್ಚಿನ ಗಮನವನ್ನು ಈ ವೈದ್ಯಾಧಿಕಾರಿಗಳು ಕೊಡಬೇಕಾಗಿರುವುದರಿಂದ ವೈದ್ಯಕೀಯದ ಕಡೆಗೆ ಹೆಚ್ಚಿನ ಗಮನ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ದೊಡ್ಡ ಪ್ರಮಾಣದ ಆಸ್ಪತ್ರೆಗಳ ಆಡಳಿತವನ್ನು ನೋಡಿಕೊಳ್ಳಲು ಐ.ಎ.ಎಸ್. ದರ್ಜೆಯ ಅಥವಾ ಅಸಿಸ್ಟೆಂಟ್ ಕಮೀಷನರ್ ದರ್ಜೆಯ ಅಥವಾ ತಹಶೀಲ್‌ದಾರ್ ದರ್ಜೆಯ ಅಧಿಕಾರಿಯನ್ನು ನೇಮಕ ಮಾಡುವುದು ಸೂಕ್ತ. ಈ ರೀತಿ ಮಾಡಿ ವೈದ್ಯಾಧಿಕಾರಿಗಳನ್ನು ಆ ಕೆಲಸದಿಂದ ವಿಮುಕ್ತರನ್ನಾಗಿ ಮಾಡಿ, ಅವರು ಕೇವಲ ರೋಗಿಗಳ ಕಡೆಗೆ ಹೆಚ್ಚಿನ ಗಮನ ಕೊಡುವಂತೆ ಮಾಡಬೇಕು. ಡಾಕ್ಟರ್‌ಗಳಿಗೆ ಹೆಚ್ಚಿನ ಕೆಲಸ ಇರುತ್ತದೆ. ಆಪರೇಷನ್ ಮಾಡುವುದು ಇರುತ್ತದೆ ಇಂತಹ ಸಂದರ್ಭಗಳಲ್ಲಿ ಮಧ್ಯೆ ಬಂದು ಹತ್ತು ಬೆಡ್‌ಶೀಟುಗಳನ್ನು ರುಜು ಹಾಕಿ ಕೊಡುವುದಕ್ಕಾಗುವುದಿಲ್ಲ. ಈ ಡಾಕ್ಟರುಗಳು ಒಂದೊಂದು ವಿಭಾಗದಲ್ಲಿ ಸ್ಪೆಷಲಿಸ್ಟ್ ಆಗಿರುತ್ತಾರೆ. ಆದ್ದರಿಂದ ಅವರು ಆ ಕೆಲಸವನ್ನು ಮಾತ್ರ ನೋಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ನಾನು ಎರಡು ಮೂರು ಆಸ್ಪತ್ರೆಗಳಿಗೆ ಭೇಟಿ ಕೊಟ್ಟಾಗ ಅಲ್ಲಿಯ ವೈದ್ಯಾಧಿಕಾರಿಗಳು ಈಗಿರುವ ತೊಂದರೆಯನ್ನು ಯಾರೂ ಸರಿಪಡಿಸುತ್ತಿಲ್ಲವೆಂದು ಹೇಳಿದರು. ಆದಕಾರಣ ಈ ತಜ್ಞರನ್ನು ರೋಗಿಗಳನ್ನು ನೋಡಿಕೊಳ್ಳುವುದಕ್ಕಾಗಿಯೇ ಮೀಸಲಿಟ್ಟು ಆಡಳಿತದ ಹೊಣೆಯನ್ನು ತಪ್ಪಿಸಬೇಕು. ಮಾನ್ಯ ಆರೋಗ್ಯ ಸಚಿವರು ಇದರ ಬಗ್ಗೆ ಲಕ್ಷ್ಯಪೂರ್ವಕವಾಗಿ ಗಮನ ಹರಿಸುವುದು ಒಳ್ಳೆಯದು. ಇಲ್ಲದಿದ್ದರೆ ನಾವು ಕೊಡುವ ಹಣ ಜನರಿಗೆ ಸರಿಯಾಗಿ ಮುಟ್ಟದಿರಬಹುದು. ಜನರಿಗೆ ಸರ್ವ ಸೌಲಭ್ಯಗಳು ಸಿಗದಿರಬಹುದು. ಇದರ ಜೊತೆಗೆ ಮತ್ತೊಂದು ಮುಖ್ಯವಾದ ಅಂಶವೆಂದರೆ ಆಡಳಿತದ ವಿಕೇಂದ್ರೀಕರಣವಾಗಬೇಕಾಗಿರುವುದು. ಇಂದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯನ್ನೇ ತೆಗೆದುಕೊಂಡರೂ ಸಹ, ಅಲ್ಲಿ ಕೆಲಸ ಮಾಡುವ ಒಬ್ಬ ಜವಾನನ ಪೆನ್‌ಷನ್ ತೀರ್ಮಾನವಾಗಬೇಕಾದರೆ ಅಥವಾ ಬೇರೆ ಸಣ್ಣಪುಟ್ಟ ಕೆಲಸವಾಗಬೇಕಾದರೆ ಅದು ಡೈರೆಕ್ಟರ್ ಆಫೀಸಿಗೆ ಬರಬೇಕಾಗಿದೆ. ಅಲ್ಲಿರುವ ಅಧಿಕಾರಿಗಳಿಗೆ ಅದನ್ನು ತೀರ್ಮಾನ ಮಾಡುವ ಅಧಿಕಾರ ಇಲ್ಲವಾಗಿದೆ. ಇದನ್ನು ಹೋಗಲಾಡಿಸಲು ಅಧಿಕಾರ ವಿಕೇಂದ್ರೀಕರಣವಾಗಬೇಕು. ಅದಕ್ಕಾಗಿ ಪ್ರತಿಯೊಂದು ದೊಡ್ಡ ಆಸ್ಪತ್ರೆಯಿರುವ ಕಡೆಗಳಲ್ಲಿ ಅಡ್ವೈಸರಿ ಕಮಿಟಿ ರೂಪದಲ್ಲಿ ಒಂದೊಂದು ಸಮಿತಿಗಳನ್ನು ತಜ್ಞರಿಂದ ಕೂಡಿದಂತೆ ನೇಮಕ ಮಾಡಿದರೆ ಅವರು ದಿನನಿತ್ಯದ ಸಮಸ್ಯೆಗಳನ್ನು ಕುರಿತು ಚರ್ಚೆ ಮಾಡಿ ಪರಿಹಾರ ಕಂಡುಹಿಡಿಯುವುದಕ್ಕೆ ಅವಕಾಶವಾಗುತ್ತದೆ. ಮತ್ತು ಅವರೇನಾದರೂ ಸರ್ಕಾರಕ್ಕೆ ಸಲಹೆ ಮಾಡಿದರೆ ಸರ್ಕಾರದವರು ಅದನ್ನು ಸರಿಪಡಿಸುವುದಕ್ಕೆ ಅವಕಾಶವಾಗುತ್ತದೆ. ಇದರ ಕಡೆಗೆ ಆರೋಗ್ಯ ಸಚಿವರು ಹೆಚ್ಚಿನ ಗಮನ ಕೊಡಬೇಕೆಂದು ಒತ್ತಾಯಪಡಿಸುತ್ತೇನೆ.

ಇನ್ನು ಎಕ್ಸರೇ ಪ್ಲಾಂಟ್ ಬಗ್ಗೆ ಹೇಳಬೇಕೆಂದರೆ, ತಾಲ್ಲೂಕ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿರುವ ಆಸ್ಪತ್ರೆಗಳಿಗೆ ಎಕ್ಸರೇ ಪ್ಲಾಂಟ್‌ಗಳನ್ನು ಒದಗಿಸಿದ್ದೀರಿ. ಇವುಗಳು ಏನಾದರೂ ಕೆಟ್ಟು ಹೋದರೆ, ಅವುಗಳನ್ನು ದುರಸ್ತಿ ಮಾಡಲು ಸರ್ಕಾರದ ಅನುಮತಿ ಬೇಕಾಗಿದೆ. ಸರ್ಕಾರದ ಅನುಮತಿ ಪಡೆದು ದುರಸ್ತಿ ಮಾಡಿಸಲು 6 ತಿಂಗಳ ಕಾಲ ಹೆಚ್ಚು ಕಡಿಮೆ ಬೇಕಾಗುತ್ತದೆ. ಅಲ್ಲಿ

(ಶ್ರೀ ಕಾಗೋಡು ತಿಮ್ಮಪ್ಪ)

ರುವ ಡಾಕ್ಟರ್‌ಗಳಿಗೆ ರಿಪೇರಿ ಮಾಡಿಸುವ ಅಧಿಕಾರ ಇಲ್ಲ. ತಾಲ್ಲೂಕ್ ಮಟ್ಟದಲ್ಲಿರುವ ಮೆಡಿಕಲ್ ಆಫೀಸರಿಗೆ 50 ರೂಪಾಯಿಗಿಂತ ಹೆಚ್ಚು ಖರ್ಚು ಮಾಡುವ ಅಧಿಕಾರ ಇಲ್ಲ. ಎಕ್ಸ್‌ರೇಪ್ಲಾಂಟ್‌ನ ರಿಪೇರಿಗೆ 200 ರೂಪಾಯಿ ಬೇಕಾದರೆ ಅದಕ್ಕೆ ಸರ್ಕಾರದ ಅನುಮತಿ ಪಡೆಯಬೇಕಾಗಿದೆ. ಈ ಕಾರಣದಿಂದ ಇದರ ಒಂದು ಉಪಯೋಗ ಜನಸಾಮಾನ್ಯರಿಗೆ ಸರಿಯಾಗಿ ದೊರಕುತ್ತಿಲ್ಲ. ಮತ್ತು ರಿಪೇರಿ ಇಲ್ಲದೆ ಅನೇಕ ಕಡೆಗಳಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಈ ಯಂತ್ರಗಳು ಕೊಳೆಯುತ್ತಾ ಬಿದ್ದಿವೆ. ಇಂತಹ ವಿಷಯದಲ್ಲಿ ಈಗಿರುವ ನಿಯಮಗಳನ್ನು ಸಡಿಲಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಒಂದು ಸಣ್ಣ ಕಾರಣಕ್ಕಾಗಿ ಅದು ರಿಪೇರಿಯಾಗುವುದು ನಿಧಾನವಾಗಿ ಜನರಿಗೆ ಅದರ ಉಪಯೋಗ ಸಿಕ್ಕುವುದೇ ಇಲ್ಲ. ಆದಕಾರಣ ನಿಯಮವನ್ನು ತಿದ್ದುಪಡಿ ಮಾಡುವುದರ ಕಡೆಗೆ ಗಮನ ಕೊಡಬೇಕು.

ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಇಂದು ವೈದ್ಯಕೀಯ ಸೌಲಭ್ಯಗಳು ಹೆಚ್ಚು ಹೆಚ್ಚಾಗಿ ನಗರ ಪ್ರದೇಶಗಳಲ್ಲಿರುವ ಜನರಿಗೆ ಮುಟ್ಟುತ್ತಿದೆ, ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಈ ವೈದ್ಯಕೀಯ ಸವಲತ್ತುಗಳು ಕಡಿಮೆ ಪ್ರಮಾಣದಲ್ಲಿ ಸಿಗುತ್ತಿವೆ ಎಂಬತಕ್ಕಂಥ ವಾಸ್ತವಾಂಶವನ್ನು ಮಾನ್ಯ ಆರೋಗ್ಯ ಮಂತ್ರಿಗಳು ತತ್ವಶಃ ಒಪ್ಪಿಕೊಂಡಿದ್ದಾರೆ. ಈ ರೀತಿ ಒಪ್ಪಿಕೊಂಡಿದ್ದರೂ ಸಹ ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬೇಕಾದ ಸ್ವಂತ ಕಟ್ಟಡಗಳು ಇಲ್ಲವಾಗಿದೆ. ಈ ರೀತಿ ಸ್ವಂತ ಕಟ್ಟಡಗಳನ್ನು ಕಟ್ಟಿಸಿಕೊಡಲು ತಾವು ಅಧಿಕಾರಕ್ಕೆ ಬಂದಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಿಲ್ಲ. ಇನ್ನು ಮುಂದೆಯಾದರೂ ಸಹ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇಲ್ಲವೋ ಅವುಗಳಿಗೆ ತಕ್ಷಣ ಕಟ್ಟಡ ಒದಗಿಸುವ ಏರ್ಪಾಡು ಮಾಡಬೇಕು.

2-30 P.M.

ಇಲ್ಲದಿದ್ದರೆ ಅವುಗಳ ಪ್ರಯೋಜನ ಜನಗಳಿಗೆ ಸಿಕ್ಕುವುದಿಲ್ಲ. ಜೊತೆಗೆ ನಿಮ್ಮ ಅಂಕಿ ಅಂಶಗಳ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ 15 ಸಾವಿರ ಜನಸಂಖ್ಯೆಗೆ ಮೇಲ್ಪಟ್ಟು ಇದ್ದರೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಡುವುದಕ್ಕೆ ಅವಕಾಶ ಇದೆ. ಈ ಆರೋಗ್ಯ ಕೇಂದ್ರಗಳು ಎಲ್ಲಾ ಸವಲತ್ತುಗಳನ್ನು ಪಡೆಯುವಂತಾಗಬೇಕು. ಈ ಆರೋಗ್ಯ ಕೇಂದ್ರಗಳಿಗೆ ಒಂದು ವರ್ಷಕ್ಕೆ 3 ಸಾವಿರ ರೂಪಾಯಿಗಳನ್ನು ಔಷಧಿ ಕೊಂಡುಕೊಳ್ಳುವುದಕ್ಕೋಸ್ಕರ ಕೊಡುತ್ತಿದ್ದಾರೆ. ಅದನ್ನು ಹೆಚ್ಚು ಮಾಡಿಲ್ಲ. ಈಗ ಔಷಧಿಯ ಬೆಲೆ ಕೂಡ ಜಾಸ್ತಿಯಾಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಶೇಕಡಾ 20-25 ರಷ್ಟು ಔಷಧಿ ಬೆಲೆ ಜಾಸ್ತಿಯಾಗಿದೆ.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಅದನ್ನು 10 ಸಾವಿರ ರೂಪಾಯಿ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲೆಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ ಅಲ್ಲೆಲ್ಲಾ ಕಡ್ಡಾಯವಾಗಿ 5 ಹಾಸಿಗೆಗಳು ಇರತಕ್ಕಂಥಾ ಒಂದು ವಾರ್ಡನ್ನು ಮಾಡಬೇಕು. ಆಸ್ಪತ್ರೆಗೆ ಹೋದವನು ಅಲ್ಲಿ ಗುಳಿಗೆ ತೆಗೆದುಕೊಂಡು, ಔಷಧಿ ತೆಗೆದುಕೊಂಡು ನಾಲ್ಕುದಿವಸ ಆಸ್ಪತ್ರೆಯಲ್ಲಿ ಇದ್ದುಕೊಂಡು ಚಿಕಿತ್ಸೆ ಪಡೆಯುವುದಕ್ಕೆ ಸವಲತ್ತು ಇರುವುದಿಲ್ಲ. ಈಗ ಯಾವುದಾದರೂ ಪೇಟೆಗೆ ಹೋದರೆ ಅಲ್ಲಿ ಹೋಟೇಲ್‌ನಲ್ಲಿಯೋ, ಛತ್ರಗಳಲ್ಲಿಯೋ, ಅಂಗಡಿಯ ಮುಂಭಾಗದಲ್ಲಿಯೋ ಇರುವುದಕ್ಕೆ ಸಾಧ್ಯ. ಅಲ್ಲಿ ವಸತಿ ಸೌಕರ್ಯಗಳನ್ನು ಪಡೆಯುವುದಕ್ಕೆ ಸಾಧ್ಯವಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಔಷಧಿಯನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿ ಇರುವುದಿಲ್ಲ. ಆದ್ದರಿಂದ ಅವರು ಆಸ್ಪತ್ರೆಯಲ್ಲಿಯೇ ಇದ್ದುಕೊಂಡು ಚಿಕಿತ್ಸೆಯನ್ನು ಪಡೆಯುವುದಕ್ಕೆ ಅವಕಾಶ ಇರಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ರೋಗಿಗೆ ಔಷಧಿಯನ್ನು ಕೊಟ್ಟು ನೀನು ಕೆಲವಾರು ದಿವಸ ಕಾರವನ್ನು ತಿನ್ನಬಾರದು ಎಂದು ಹೇಳುತ್ತಾರೆ. ಅವನು ಔಷಧಿಯನ್ನು ತೆಗೆದುಕೊಂಡು ಮನೆಗೆ ಹೋದಾಗ ಆ ಪಥ್ಯವನ್ನು ಅನುಸರಿಸದೇ ಕಾರವನ್ನು ತಿಂದುಬಿಡುತ್ತಾನೆ. ಈ ದೃಷ್ಟಿಯಿಂದ ಅವನು ಆಸ್ಪತ್ರೆಯಲ್ಲಿಯೇ 3-4 ದಿವಸ ಇದ್ದು ಔಷಧಿಯನ್ನು ತೆಗೆದುಕೊಂಡು ಖಾಯಿಲೆಯನ್ನು ಗುಣ ಮಾಡಿಕೊಂಡು ಅವನು ವಾಪಸ್ಸು ಮನೆಗೆ ಹೋಗಬೇಕು. ಮಾನ್ಯ ಆರೋಗ್ಯ ಮಂತ್ರಿಗಳು ಹಳ್ಳಿಗಳ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದ್ದರಿಂದ ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯೂ ಕೊನೆಯ ಪಕ್ಷ 5 ಹಾಸಿಗೆಗಳು ಇರುವಂತಹ ಒಂದು ವಾರ್ಡನ್ನು ತೆರೆಯತಕ್ಕ ಯೋಜನೆಯನ್ನು ಮಾನ್ಯ ಆರೋಗ್ಯ ಮಂತ್ರಿಗಳು ಸಿದ್ಧ ಮಾಡಬೇಕು. ತಾವು ತಮ್ಮ ಇಲಾಖೆಯ

ವರದಿಯ ಪ್ರಾರಂಭದಲ್ಲಿಯೇ ಪ್ರಾಥಮಿಕ ಆರೋಗ್ಯಕೇಂದ್ರಗಳಿಗೆ ಲಕ್ಷ್ಯ ಕೊಡಬೇಕು ಎಂದು ಹೇಳಿದ್ದೀರಿ. ಆದ್ದರಿಂದ ಅದು ಒಳ್ಳೆಯ ಮಾತು. ಅದರ ಪ್ರಕಾರ ಜನಗಳಿಗೆ ಸೌಲಭ್ಯ ಸಿಕ್ಕುವಂತಾಗಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪ್ರಾಥಮಿಕ ಆರೋಗ್ಯಕೇಂದ್ರಗಳಲ್ಲಿ 5 ಹಾಸಿಗೆಗಳು ಇರುವಂತಹ ಒಂದು ವಾರ್ಡನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಿ ಅದಕ್ಕೆ ಬೇಕಾದಂತಹ ಸೌಕರ್ಯವನ್ನು ಒದಗಿಸುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯೂ 6 ಹಾಸಿಗೆಗಳನ್ನು ಪ್ರೊವೈಡ್ ಮಾಡುವುದಕ್ಕೆ ಪ್ರಾವಿಜನ್ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮಲೆನಾಡು ಪ್ರದೇಶದಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ಒಂದು ಪ್ರಾಥಮಿಕ ಆರೋಗ್ಯಕೇಂದವನ್ನು ಕೊಡಬೇಕಾದರೆ 15 ಸಾವಿರ ಜನಸಂಖ್ಯೆ ಇರಬೇಕು ಎಂದು ಹೇಳಿದರೆ ಕಷ್ಟವಾಗುತ್ತದೆ. ಏತಕ್ಕೆಂದರೆ ಮಲೆನಾಡು ಪ್ರದೇಶದಲ್ಲಿ 10-15 ಮೈಲಿ ಪ್ರದೇಶ ಹೋದರೂ ಕೂಡ 15 ಸಾವಿರ ಜನಸಂಖ್ಯೆಯನ್ನು ಸೇರಿಸುವುದಕ್ಕಾಗುವುದಿಲ್ಲ. ಆದ್ದರಿಂದ ಮಲೆನಾಡು ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು 15 ಸಾವಿರ ಜನಸಂಖ್ಯೆ ಕಡ್ಡಾಯವಾಗಿರಬೇಕೆಂಬ ಅಳತೆಕೋಲನ್ನು ಸಡಿಲಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಮಲೆನಾಡು ಪ್ರದೇಶದಲ್ಲಿ ಕರಾವಳಿಯಿಂದ ಮಂಗಳೂರುವರೆಗೆ 25 ಮೈಲಿ ದೂರ ಹೋದರೂ 15 ಸಾವಿರ ಪ್ರಜಾ ಸಂಖ್ಯೆ ಸಿಕ್ಕುವುದಿಲ್ಲ. ಆದ್ದರಿಂದ ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವುದಕ್ಕೆ 15 ಸಾವಿರ ಪ್ರಜಾಸಂಖ್ಯೆ ಇರಬೇಕೆಂಬ ನಿಯಮಾವಳಿಯನ್ನು ಸಡಿಲಗೊಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇವೊತ್ತು ವೈದ್ಯಕೀಯ ಸೌಲಭ್ಯವನ್ನು ಎಷ್ಟು ಹೆಚ್ಚಿಸಿದರೂ ಕಡಿಮೆ ಎಂದು ಕಾಣುತ್ತದೆ. ಇವೊತ್ತು ನಮ್ಮ ರಾಜ್ಯದಲ್ಲಿ ಅನೇಕ ವೈದ್ಯಕೀಯ ಕಾಲೇಜುಗಳು ಇವೆ. ಆದರೆ ಸಾಕಷ್ಟು ಪ್ರಮಾಣದ ವೈದ್ಯರಿಗೆ ನೌಕರಿಯನ್ನು ಕೊಡತಕ್ಕಂಥಾ ಕೆಲಸ ಆಗಿಲ್ಲ. ಇತ್ತೀಚೆಗೆ ಹಂಗಾಮಿಯಾಗಿ 600 ಜನ ವೈದ್ಯರನ್ನು ನೇಮಿಸಿಕೊಂಡಿದ್ದಾರೆ. ಇನ್ನೂ ಸ್ವಲ್ಪ ಜನ ವೈದ್ಯರನ್ನು ನೇಮಿಸಿಕೊಳ್ಳಬೇಕೆಂದಿದ್ದಾರೆ. ಎಷ್ಟು ಜನ ವೈದ್ಯರಿಗೆ ಕೆಲಸವನ್ನು ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ಸ್ವಲ್ಪ ಊಹಿಸಿಕೊಳ್ಳಬೇಕು. ಈಗ ಯಾರಾದರೂ ಒಬ್ಬ ಹುಡುಗ ಮೆಡಿಕಲ್ ಕಾಲೇಜಿಗೆ ಸೇರಿದರೆ ಅವನ ವಿದ್ಯಾಭ್ಯಾಸ ಮುಗಿದ ಮೇಲೆ ಅವನು ಪದವೀಧರನಾಗಿ ಹೊರಗಡೆ ಬಂದರೆ ಅವನಿಗೆ ಸರ್ಕಾರ ನೌಕರಿಯನ್ನು ಒದಗಿಸಿ ಕೊಡಬೇಕು ಎನ್ನುವುದು ಅವನ ಮಾನಸಿಕ ಪ್ರವೃತ್ತಿ ಬೆಳೆದು ಬರುತ್ತದೆ. ಇದು ಸರ್ವೇ ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಇರುತ್ತದೆ. ಕಳೆದ 2 – 3 ವರ್ಷಗಳಿಂದ ಪ್ರತಿವರ್ಷವೂ ಕೂಡ ವೈದ್ಯಕೀಯ ಕಾಲೇಜುಗಳಲ್ಲಿ ಸಾಕಷ್ಟು ವಿದ್ಯಾರ್ಥಿಗಳಿಗೆ ಸೀಟನ್ನು ಒದಗಿಸುತ್ತಿದ್ದಾರೆ. ಈ ಸಾಲಿನಲ್ಲಿಯೂ ಆ ಸೀಟುಗಳನ್ನು ಜಾಸ್ತಿ ಮಾಡಿದ್ದಾರೆ. ಅದರಲ್ಲೂ ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ 100 ಸೀಟುಗಳನ್ನು ಕೊಟ್ಟಿದ್ದಾರೆ. ಮೆಡಿಕಲ್ ಕೌನ್ಸಿಲ್ ಅದಕ್ಕೆ ಅನುಮತಿಯನ್ನು ಕೊಡದಿದ್ದರೂ ಸೀಟನ್ನು ಜಾಸ್ತಿ ಮಾಡಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ನಿರುದ್ಯೋಗಿಗಳನ್ನು ಸ್ವಾಗತ ಮಾಡಿದ ಹಾಗಾಗುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ.—ಈ ವರ್ಷದಲ್ಲಿ ಅಡ್ಮಿಟ್ ಮಾಡಿದಷ್ಟು ಹಿಂದೆ ಯಾವಾಗಲೂ ಅಡ್ಮಿಟ್ ಮಾಡಿರಲಿಲ್ಲ. ಹಿಂದೆ ಅಡ್ಮಿಟ್ ಮಾಡಿದ್ದಕ್ಕಿಂತ ಈ ವರ್ಷ ಕಡಿಮೆ ಅಡ್ಮಿಟ್ ಮಾಡಿದ್ದೇವೆ. ಪ್ರತಿಯೊಂದು ಮೆಡಿಕಲ್ ಕಾಲೇಜಿನಲ್ಲಿಯೂ ಇಷ್ಟು ಸೀಟಿಗಿಂತ ಹೆಚ್ಚು ಮಾಡಬಾರದು ಎಂದು ಸಜೆಷನ್ ಕೊಟ್ಟರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಡಾಕ್ಟರನ್ನು ತಯಾರು ಮಾಡತಕ್ಕಂಥಾ ಪರಿಸ್ಥಿತಿಯಲ್ಲಿ ಅವರು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ತರಹ ಆಗಬಾರದು. ಈಗ ದಾವಣಗೆರೆ ಕಾಲೇಜಿನಲ್ಲಿ 100 ಜನ ಹುಡುಗರನ್ನು ಹಾಕುವ ಜಾಗದಲ್ಲಿ 200-300 ಜನ ಹುಡುಗರನ್ನು ಹಾಕಿದರೆ ಅವರಿಗೆ ಲ್ಯಾಬೋರೇಟರಿ ಇರುವುದಿಲ್ಲ, ಬೆಡ್ ಇರುವುದಿಲ್ಲ ಮತ್ತು ಇತರ ಎಕ್ವಿಪ್‌ಮೆಂಟ್‌ಗಳು ಇರುವುದಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಮೊನ್ನೆತಾನೆ ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಅಲ್ಲಿಂದ ನಾನು ರಿಪೋರ್ಟ್ ತರಿಸಿದ್ದೇನೆ. ಅವರು ಒಳ್ಳೆಯ ಫೆಸಿಲಿಟಿ ಇದೆಯೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಆದ್ದರಿಂದ ವೈದ್ಯಕೀಯ ಪದವೀಧರರಿಗೆ ಎಷ್ಟು ಜನಗಳಿಗೆ ನೀವು ನೌಕರಿಯನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಬಗ್ಗೆ ಸ್ವಲ್ಪ ಪೂರ್ವಸಿದ್ಧತೆ ಇರಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೆ ನೌಕರಿಯನ್ನು ಕೊಡತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ ಇದೆಯೋ, ಟೆಕ್ನಿಕಲ್ ಎಜುಕೇಷನ್ ಕೊಡಬೇಕೋ ಹೇಗೆ ಎಂಬುದು ತೀರ್ಮಾನವಾಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಆದ್ದರಿಂದ ನೀವು ಅಂಥ ಒಂದು ಪರಿಸ್ಥಿತಿಯನ್ನು ಉಂಟು ಮಾಡಬೇಕಾಗಿದೆ. ಒಂದು ಅವನು ಸರ್ಕಾರಿ ನೌಕರಿಯಿಂದ ಜೀವನ ಮಾಡಬೇಕಾಗುತ್ತದೆ; ಇಲ್ಲವೇ ಅವನು ಸ್ವಂತ ಪ್ರಾಕ್ಟೀಸ್ ಮಾಡಿ ಜೀವನ ಮಾಡಬೇಕಾಗುತ್ತದೆ. ಅಂಥ ಪರಿಸ್ಥಿತಿ ನಿರ್ಮಾಣ ಮಾಡುವವರೆಗೆ ನೀವು ಬಹಳ ಹುಷಾರಾಗಿರಬೇಕು. ಏಕೆಂದರೆ ಅವನು ಡಿಗ್ರಿಯ ಮೇಲೆ ಸರ್ಕಾರಿ ಹುದ್ದೆ ಒಂದನ್ನೇ ಅವಲಂಬನೆ ಮಾಡಿಕೊಂಡಿರಬಾರದು. ಅದಲ್ಲದೆ ಇವೊತ್ತಿನ ದಿವಸ ಹೆಚ್ಚಾಗಿ ವೈದ್ಯರು ಪದವಿ ಪಡೆದ ಮೇಲೆ ನಗರಗಳಲ್ಲಿಯೇ ತಮ್ಮ ಸ್ವಂತ ಕಸಬನ್ನು ಮಾಡುವುದಕ್ಕೆ ಇಚ್ಛೆಪಡುತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ, ನಗರದಲ್ಲಿ ಹಣವಂತರು ಮತ್ತು ಹಣದ ಸಂಚಾರ ಜಾಸ್ತಿಯಾಗಿರುವುದರಿಂದ ಅವರಿಗೆ ಉತ್ಪತ್ತಿ ಜಾಸ್ತಿಯಾಗುತ್ತದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿ ಇಲ್ಲ. ಅಲ್ಲಿ ಹಣಕಾಸಿನ ಸಂಚಾರ ಕಡಿಮೆ ಇರುತ್ತದೆ ಮತ್ತು ಹಣ ಕೊಡುವುದು ಸಹ ಕಡಿಮೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಈ ವೃತ್ತಿಯನ್ನು ಪ್ರಾರಂಭ ಮಾಡುವುದಕ್ಕೆ ಯಾರೂ ಮುಂದೆ ಬರುವುದಿಲ್ಲ. ಆದ್ದರಿಂದ ಸರ್ಕಾರದವರು ಇಂಥ ಒಂದು ವಾತಾವರಣವನ್ನು ನಿರ್ಮಾಣ ಮಾಡುವವರೆಗೆ ಕಾಲೇಜುಗಳಲ್ಲಿ ಪ್ರವೇಶಗಳನ್ನು ಕೊಡುವುದರಲ್ಲಿ ಸ್ವಲ್ಪ ಹುಷಾರಾಗಬೇಕು, ಇವತ್ತು ಒಬ್ಬ ವಿದ್ಯಾರ್ಥಿಗೆ ಸರ್ಕಾರ 5-6 ವರ್ಷಗಳಲ್ಲಿ ಖರ್ಚು ಮಾಡುವುದರ ಜೊತೆಗೆ ಅವನು ಸ್ವಂತ ಹಣದಿಂದ ಸುಮಾರು 50 ಸಾವಿರ ಖರ್ಚು ಮಾಡುತ್ತಾನೆ. ಇಲ್ಲದಿದ್ದರೆ ಅಂಥ ಜನರಿಗೆ ತಮ್ಮ ಕಾಲ ಮೇಲೆ ನಿಲ್ಲುವುದಕ್ಕೆ ಶಕ್ತಿ ಬರುವುದಿಲ್ಲ. ಮತ್ತು ತಾವು ಮಾಡಿದ ಖರ್ಚಿಗೆ ಸರಿಯಾದ ಪ್ರತಿಫಲ ಬರುವುದಿಲ್ಲ. ಇನೆಲ್ಲವನ್ನೂ ನಿಲ್ಲಿಸಬೇಕಾದರೆ ಈ ಅಡ್ಮಿಶನನ್ನು ಕಡಿಮೆ ಮಾಡಬೇಕು.

ಅದಲ್ಲದೆ ಇತ್ತೀಚೆಗೆ ಹಂಗಾಮಿಯಾಗಿ ನೀವು 600 ಜನರನ್ನು ನೇಮಕ ಮಾಡಿಕೊಂಡಿದ್ದೀರಿ. ಇದರಲ್ಲಿ ಒಂದು ವಿಶೇಷ ಸಂಗತಿ ಏನೆಂದರೆ, ಈ ರೀತಿ ನೇಮಿಸಿಕೊಳ್ಳುವಾಗ ಯಾರಿಗೆ ಕೆಲವು ವಿಶೇಷ ಮೀಸಲು ಸ್ಥಾನವನ್ನು ರಾಜ್ಯಾಂಗಬದ್ಧವಾಗಿ ಕೊಡಬೇಕೋ, ಅದನ್ನು ಸರಿಯಾದ ಪ್ರಮಾಣದಲ್ಲಿ ಕೊಟ್ಟಿಲ್ಲವೆಂದು ತಿಳಿದು ಬಂದಿದೆ. ಇನ್ನೊಂದು ಪದ್ಧತಿ ಏನೆಂದರೆ, ಈ ರೀತಿ 600 ಜನರಿಗೆ ನೇಮಕ ಮಾಡುವಾಗ ಒಂದೇ ಜಾತಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ. ಅಂಥ ಒಂದು ಪಟ್ಟಿಯನ್ನು ಕೊಡಿ ಎಂದು ನಾನು ಅವರಲ್ಲಿ ಕೇಳಿದ್ದೇನೆ. ಅದನ್ನು ಅವರು ಇನ್ನೂ ಕೊಟ್ಟಿಲ್ಲ. ಆದ್ದರಿಂದ ತಾವು ತಮ್ಮ ಆತ್ಮವನ್ನು ಪರೀಕ್ಷೆ ಮಾಡಿಕೊಂಡು ಇದನ್ನು ಮಾಡಬೇಕಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ನನ್ನ ಆತ್ಮವನ್ನು ಪರೀಕ್ಷೆ ಮಾಡಿಕೊಂಡಿದ್ದೇನೆ. ಕಾರಣವೇನೆಂದರೆ, ಆ ಒಂದು ಲಿಸ್ಟ್ ಇದೆ, ಅದನ್ನು ಈ ಮನೆಯ ಟೇಬಲಿನಲ್ಲಿ ಇಟ್ಟಿದ್ದೇನೆ. ಅದರಲ್ಲಿ ಯಾವ್ಯಾವ ಜಾತಿಯವರು ಇದ್ದಾರೆ, ಎಂದು ನೋಡದೆ ಬರೇ ವದಂತಿ ಇದೆ ಎಂದು ಹೇಳುತ್ತಿರುವುದು ಸರಿಯಾದುದಲ್ಲ. ಆದ್ದರಿಂದ ತಮ್ಮಂಥವರು ಇದನ್ನು ಸರಿಯಾಗಿ ತಿಳಿದುಕೊಂಡು ಹೇಳುವುದು ಒಳ್ಳೆಯದು. ತಾವು ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಮೇಲೆ ಹೋಗುತ್ತೀರೋ ಅಥವಾ ಬರೇ ವದಂತಿಯ ಮೇಲೆ ಹೋಗುತ್ತೀರೋ ಎಂದು ಕೇಳುತ್ತೇನೆ. ಆಮೇಲೆ ಬೇಕಾದರೆ ಇನ್ನೊಂದು ಲಿಸ್ಟನ್ನು ಸಹ ಇಡುತ್ತೇನೆ. ಆ ಮೇಲೆ ಏನೇನು ನೇಮಕಗಳು ಆಯಿತು ಎಂಬುದನ್ನು ಆ ಲಿಸ್ಟಿನಲ್ಲಿ ನೋಡಬಹುದು. ನನಗೆ ಅರ್ಜಿಯಲ್ಲಿ ನೀನು ಯಾವ ಜಾತಿಯವನು ಎಂದು ಕೇಳುವುದಕ್ಕಾಗುವುದಿಲ್ಲ. ಆದ್ದರಿಂದ ನೀವು ಬರೇ ಗುಮಾನಿ ಮೇಲೆ ಮಾತನಾಡುವುದಾದರೆ, ನಾನು ಸಹ ಅದೇ ರೀತಿ ಹೇಳಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಅನ್ಯಾಯ 25 ವರ್ಷಗಳಿಂದ ಯಾವ್ಯಾವ ಜಾತಿಗೆ ಆಗಿದೆ, ಅದನ್ನು ಮುಂದೆ ಸರಿಪಡಿಸುವುದಕ್ಕೋಸ್ಕರ ಜಾತಿಗಳನ್ನು ಹೇಳಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ರಾಜ್ಯಾಂಗದಲ್ಲಿ, ಸೆನ್ಸಸ್ ಲೆಕ್ಕದಲ್ಲಿ ಅದನ್ನು ಎನ್ಯುಮರೇಟ್ ಮಾಡಿರುವುದಿಲ್ಲ. ಅದರಲ್ಲಿ ಇರುವುದು ಕೇವಲ ಎಸ್.ಸಿ. ಮತ್ತು ಎಸ್.ಟಿ. ಬಾಕಿ ಜಾತಿಗಳ ಬಗ್ಗೆ ಲೆಕ್ಕ ಸಿಗುವುದಿಲ್ಲ. ನೀವು ಹೇಳುವ ಪ್ರಕಾರ, ಅದರಲ್ಲಿ ನಾಟ್ಯಾಣೆಯ ಸತ್ಯ ಇದ್ದರೆ, ನಾನು ಯಾವ ಶಿಕ್ಷೆಗೂ ತಯಾರಾಗಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—25 ವರ್ಷಗಳಿಂದ ಕೆಲವು ಜಾತಿಗೆ ಅನ್ಯಾಯವಾಗಿದೆ ಎಂದು ನಿಮ್ಮ ಪಕ್ಷದವರೇ ಡೆಲ್ಲಿಯಿಂದ ಹೇಳಿಕೊಂಡು ಬರುತ್ತಿದ್ದಾರೆ. ಅಂಥವರಿಗೆ ನ್ಯಾಯ ದೊರಕಿಸಿ ಕೊಡುವುದಕ್ಕೋಸ್ಕರ ಅರ್ಜಿಯಲ್ಲಿ ಯಾವ ಜಾತಿ ಎಂದು ಹಾಕಬೇಕು. ಹಿಂದೆ ಮಾಡಿದ ಅನ್ಯಾಯವನ್ನು ಸರಿದೂಗಿಸುವುದಕ್ಕೆ ಜಾತಿ ಮೇಲೆ ಕೊಡಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಹೇಳುವುದು ಏನೆಂದರೆ ಅದಕ್ಕೆ ಇಲ್ಲಿರುವ ಸದಸ್ಯರು ಹಲವರು ಹೆಸರು ಕೊಟ್ಟಿರುತ್ತಾರೆ. ಆದ್ದರಿಂದ ಅದರಲ್ಲಿರತಕ್ಕಂಥವರು ಯಾವ್ಯಾವ ಜಾತಿಗೆ ಸೇರಿದ್ದಾರೆಂಬುದು ಅವರಿಗೆ ಗೊತ್ತಿಲ್ಲದೆ ನನಗೆ ಗೊತ್ತಾಗುವುದಿಲ್ಲ. ನಾನು ತಿಳಿದಿರುವುದು ಮನುಷ್ಯ ವರ್ಗದಲ್ಲಿ ಎರಡೇ ಜಾತಿ ಎಂದು.

ಶ್ರೀ ಎಚ್ ಡಿ ದೇವೇಗೌಡ.—ಹಾಗಾದರೆ ನೀವು ಆಡಳಿತ ಕಾಂಗ್ರೆಸ್ಸಿನಲ್ಲಿರುವುದಕ್ಕೆ ಲಾಯಕ್ಕಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಹೇಳುವುದು ಇಷ್ಟೇ. ದಯವಿಟ್ಟು ನಿಮ್ಮಂಥವರು ಈ ವಿಷಯವನ್ನು ಸರಿಯಾಗಿ ತಿಳಿದುಕೊಂಡು ಹೇಳಿದರೆ ಒಳ್ಳೆಯದು. ಈಗ ಅದರಲ್ಲಿ ತಪ್ಪು ಇದೆ ಎಂದು ಹೇಳಿದರೆ ಅದನ್ನು ಸರಿಪಡಿಸುವುದಕ್ಕೆ ನಾನು ತಯಾರಾಗಿದ್ದೇನೆ. ತಪ್ಪು ಇಲ್ಲದೆ ಬರೀ ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆಂಬ ಭಾವನೆಯಿಂದ ಹೇಳಬಾರದು. ಈಗ ಬ್ಯಾಕ್ ವರ್ಡ್ ಕ್ಲಾಸ್ ಎಂದು ಕೆಲವು ಜಾತಿಗಳನ್ನು ಮಾಡಿಕೊಂಡಿದ್ದೇವೆ. ನಾವು ಅಡ್ಮಿಶನ್ ಕೊಡಬೇಕಾದರೆ ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಎಸ್.ಸಿ.ಎಸ್.ಟಿ.ಗೆ ರಿಸರ್ವೇಶನ್ ಕೊಟ್ಟಿದ್ದೇವೆ. ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ 50 ಸೀಟನ್ನು ಯಾರು ಕಾಸನ್ನು ಸಹ ತೆಗೆದುಕೊಳ್ಳದೆ ಬ್ಯಾಕ್ ವರ್ಡ್ ಕ್ಲಾಸ್ ಮತ್ತು ಎಸ್.ಟಿ. ಮತ್ತು ಎಸ್.ಸಿ.ಗಳಿಗೆ ಕೊಟ್ಟಿದ್ದೇವೆ. ಆದ್ದರಿಂದ ಯಾವುದೇ ಜಾತಿಗಳಿಗೆ ಇದನ್ನು ಹೆಚ್ಚಾಗಿ ಕೊಟ್ಟಿಲ್ಲ. ನೀವು ಏನಾದರೂ ಹೆಚ್ಚು ಲಿಂಗಾಯಿತರಿಗೆ ಕೊಟ್ಟಿರಬಹುದು ಎಂದು ಸಂಶಯ ಪಟ್ಟರೆ ಅದು ಸರಿಯಲ್ಲ. ಕೆಲವರ ಹತ್ತಿರ ತಮ್ಮ ಜಾತಿಯನ್ನು ಕೇಳಿದರೂ ನಾನು ಏಕೆ ಹೇಳಬೇಕೆಂದು ಕೇಳುತ್ತಾರೆ. ಆದ್ದರಿಂದ ದಯವಿಟ್ಟು ಇಂಥ ಅಪಾದನೆಗಳನ್ನು ಮಾಡುವುದನ್ನು ಮುಂದುವರಿಸಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಆ ರೀತಿಯಾದಂಥ ಅಪಾದನೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಆಪಾದನೆಗಳನ್ನು ಮಾಡುವಾಗ ಅದು ಸತ್ಯವಾಗಿ ಕಂಡರೆ ಮಾತ್ರ ಮಾಡುತ್ತೇನೆ. ನನಗೆ ಬಂದಂಥ ವದಂತಿ ಸತ್ಯವಾಗಿರಬೇಕು. ಏಕೆಂದರೆ ಹಿಂದೆ ಶ್ರೀರಾಮ ಏನೋ ಒಂದು ಕಾರಣಕ್ಕಾಗಿ ಅಗಸ ಹೇಳಿದ ಒಂದು ಮಾತಿಗೆ ಸೀತೆಯನ್ನು ಕಾಡಿಗೆ ಕಳುಹಿಸಿದ್ದಾನೆ, ಅದು ರಾಮರಾಜ್ಯದ ಮಾತು.

ಶ್ರೀ ಎಚ್. ಸಿದ್ದವೀರಪ್ಪ.—ನಾನು ವಿದ್ಯಾರ್ಥಿಯಾಗಿದ್ದಾಗ ಸೋಮೇಶ್ವರ ಶತಕವನ್ನು ಓದುತ್ತಿದ್ದ ಕಾಲದಲ್ಲಿ ಇಂತಹ ಆಪಾದನೆಗಳ ಬಗ್ಗೆ ಅದರಲ್ಲಿ ಏನು ಹೇಳಿದ್ದಾರೆಂಬುದನ್ನು ಒಂದು ಪದ್ಯದ ರೂಪದಲ್ಲಿರುವುದು ಈಗ ನಾನು ಜ್ಞಾಪಕಕ್ಕೆ ತಂದುಕೊಳ್ಳಬೇಕಾಗಿದೆ. ಅಲ್ಲಿ ಶ್ರೀರಾಮ ಅಪಾದನೆ ಬಂತು ಎಂಬ ಕಾರಣದಿಂದ ಅದರ ಬಗ್ಗೆ ಹೆಚ್ಚಿಗೆ ತರ್ಕ ಮಾಡಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅಗ್ನಿಯಿಂದ ಹೊರಗೆ ಬಂದರೂ ಸೀತೆಯ ಮೇಲೆ ಇದ್ದಂಥ ಅನುಮಾನ ಬಿಡಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನಾವು ಇಲ್ಲಿದ್ದಾಗ ಸೀಜರ್ಸ್ ವೈಫ್ ಹಾಗೆ ನಡೆದುಕೊಳ್ಳಬೇಕು, ಯಾವ ಒಂದು ಅನುಮಾನಕ್ಕೂ ಎಡೆ ಇಲ್ಲದ ರೀತಿಯಲ್ಲಿ ಇರಬೇಕು. ತಾವು ಅದರಲ್ಲಿ ಯಾವ ಅನುಮಾನವನ್ನೂ ಪಡಬೇಡಿ. ಸೋಮೇಶ್ವರ ಶತಕವನ್ನು ಓದಿ ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಿ. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಪ್ರಧಾನ ಮಂತ್ರಿಗಳ ವಿಚಾರವಾಗಿ ಪದೇ ಪದೇ ಚರ್ಚೆ ಮಾಡುತ್ತಿದ್ದಾರೆ, ಈ ರಾಷ್ಟ್ರದಲ್ಲಿ ರಕ್ಷಣೆ ಇಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಶ್ರೀ ಬಸವಲಿಂಗಪ್ಪನವರು ಮುಹಮ್ಮದೀಯರಿಗೆ, ಕ್ರಿಶ್ಚಿಯನ್ನರಿಗೆ ಕೆಲವಾರು ಸೌಲಭ್ಯಗಳನ್ನು ಕೊಡಬೇಕೆಂಬ ಬಗ್ಗೆ ಈಗಾಗಲೇ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ 25 ವರ್ಷಗಳಲ್ಲಿ ಒಂದುವೇಳೆ ಮುಹಮ್ಮದೀಯರಿಗೇ ಆಗಲಿ, ಕ್ರಿಶ್ಚಿಯನ್ನರಿಗೇ ಆಗಲಿ, ಅಲ್ಪಸಂಖ್ಯಾತರಿಗೇ ಆಗಲೀ, ಬ್ರಾಹ್ಮಣರಿಗೇ ಆಗಲೀ ಅಥವಾ ಬೇರೆಬೇರೆ ಜಾತಿಗಳಿಗೆ ಅನ್ಯಾಯವಾಗಿದ್ದರೆ ಅದನ್ನು ನಾವು ಸರಿಪಡಿಸಬೇಕು. ಸುಮ್ಮನೆ ಪ್ರಧಾನಿಯವರ ಮೇಲೆ ಆರೋಪಣೆ ಮಾಡುವುದಕ್ಕೆ ಹೊರಟಿದ್ದಾರೆ. ಅದನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಇವರು ಮುಂದೆ ಓಟುಗಳನ್ನು ಗಳಿಸುವುದಕ್ಕೋಸ್ಕರ ಜಾತೀಯ ಪ್ರಚೋದನೆಯನ್ನು ಮಾಡುತ್ತಿದ್ದಾರೆಂದು ನಾನು ಹೇಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಏಕೆ ಈ ಮಾತನ್ನು ಹೇಳಿದೆನೆಂದರೆ, ಯಾವಾಗಲೂ ನಾನು ಚುನಾವಣೆಯಲ್ಲಿ ಓಟು ಗಳಿಸಬೇಕೆಂಬ ಉದ್ದೇಶ ದಿಂದ ನಾನು ಈ ರೀತಿಯಾಗಿ ಹೇಳುತ್ತಾ ಇಲ್ಲ. ಅವರಿಗೆ ಸಂಬಂಧಿಕರು ಎಂ.ಎಲ್.ಎ. ಇರಬ ಹುದು. ನನ್ನ ಹತ್ತಿರವೇ ಅಕ್ಕಸಾಲಿಗರು, ಕುಂಬಾರರು ಬಂದು ಹೇಳಿದರು, ಅಗಸರ ಪೈಕಿ ಒಬ್ಬ ಹುಡುಗ ಹೇಳಿದ, ನಮಗಿಂತ ಕೊನೆಗೆ ಪಾಸ್ ಆದವರಿಗೆ ಕೆಲಸ ಕೊಟ್ಟರೆಂದು. ಅವನ ತಂದೆ ತಾಯಿಗಳೇ ನನಗೆ ಶಿವಮೊಗ್ಗಾದಲ್ಲಿ ಬಂದು ಹೇಳಿದರು. ಆದ್ದರಿಂದ ಈ ಸಂದರ್ಭದಲ್ಲಿ ನಾನು ಏನು ಹೇಳುತ್ತೇನೆಂದರೆ, ಈಗಿನ ಕಾಲದಲ್ಲಿ ಯಾರ್ಯಾರ ಪ್ರಭಾವ ಎಷ್ಟು ಇದೆಯೋ ಅಷ್ಟೂ ನಡೆಯುತ್ತದೆ, ಒಂದು ವೇಳೆ ಅವರಿಗೆ ಯಾರೂ ಸಿಗಲಿಲ್ಲ ಎಂದರೆ ಒಂದು ಅರ್ಜಿ ಹಾಕಿ ಕೂತಿರು ತ್ತಾರೆ.

ಶ್ರೀ ಎಚ್. ಸಿದ್ಧವೀರಪ್ಪ —ನಿಮಗೆ ಗೊತ್ತಿರುವ ಹಾಗೆ ಕೇವಲ 6 ತಿಂಗಳುಗಳು ಮಾತ್ರ ಇದು. ನಿಮಗೆ ಬೇಡ ಎಂಬುದಾಗಿ ಹೇಳಿದರೆ ನಾಳೆಯಿಂದಲೇ ಟೆಂಪೊರರಿಯಾಗಿ ಅಪಾಯಿಂಟ್ಮೆಂಟ್‌ಗಳನ್ನು ಕೊಡುವುದನ್ನು ನಿಲ್ಲಿಸುತ್ತೇವೆ. ಅವರು ಬೇಕಾದರೆ ಪಿ.ಎಸ್.ಸಿ.ಗೆ ಹೋಗಲಿ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಮಾಡುತ್ತಾ ಇರುವ ಕೆಲಸ ತಪ್ಪು ಎಂಬುದಾಗಿ ನಾನು ಹೇಳುವುದಿಲ್ಲ. ಮಾಡತಕ್ಕ ಕೆಲಸದಲ್ಲಿ ಎಷ್ಟೊಂದು ಪ್ರಾಮಾಣಿಕತನ, ನಿಷ್ಠೆ ಇರಬೇಕೆನ್ನುವ ದೃಷ್ಟಿ ಯಿಂದ ನಾನು ಈ ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಮೆಡಿಕಲ್ ಕಾಲೇಜ್‌ಗಳಲ್ಲಿ ಕೆಲಸ ಮಾಡತಕ್ಕಂಥ ನೌಕರರ ಬಗ್ಗೆ ಅನೇಕ ಅತೃಪ್ತಿಗಳು ಇವೆ, ಎಲ್ಲಾ ಮೆಡಿಕಲ್ ಕಾಲೇಜುಗಳಲ್ಲಿರತಕ್ಕ ಎಲ್ಲಾ ನೌಕರರ ಸೀನಿಯಾರಿಟಿ ಲಿಸ್ಟನ್ನು ಕ್ರಮಬದ್ಧವಾಗಿ ಮಾಡಲಿಲ್ಲ. ಇತ್ತೀಚೆಗೆ ಅದನ್ನು ತಯಾರು ಮಾಡುವುದಕ್ಕೆ ಸರ್ಕಾರದಿಂದ ನಿರ್ದೇಶನ ಹೋಗಿದೆಯೆಂದು ಗೊತ್ತಾಗಿದೆ. ಈ ಮಧ್ಯೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದೇನೆ. ಸರ್ಕಾರದ ನಿರ್ದೇಶನ ಪ್ರಕಾರ ಸೀನಿಯಾರಿಟಿ ಲಿಸ್ಟ್ ಮಾಡುವವರೆಗೆ ಯಾರಿಗೂ ಬಡ್ತಿ ಅಥವಾ ಪ್ರೊಮೋಷನ್ಸ್ ಕೊಡಬಾರದೆಂದು ಹಿಂದೆಯೇ ಹೇಳಿದ್ದೇನೆ. ಹಿಂದಿನ ಸರ್ಕಾರ ಮಾಡಿರತಕ್ಕ ಸೀನಿಯಾರಿಟಿ ಲಿಸ್ಟ್‌ನಲ್ಲಿ ಅನೇಕ ಅಕ್ರಮಗಳು ಹಾಗೂ ಲೋಪದೋಷಗಳು ಇವೆ. ಗೊಂದಲಗಳು ಇವೆಯೆಂಬುದನ್ನು ನಾನು ತಿಳಿದಿದ್ದೇನೆ. ಅದಾದಮೇಲೆ ಪುನಃ ಅದನ್ನು ಪರಿಶೀಲನೆ ಮಾಡತಕ್ಕದ್ದು ಸೂಕ್ತವೆಂದು ಈ ಸರ್ಕಾರದ ಗಮನಕ್ಕೆ ತಿಳಿದುಬಂದು ಅದಕ್ಕೆ ಪ್ರತ್ಯೇಕವಾಗಿ ಸೀನಿಯಾರಿಟಿ ಲಿಸ್ಟ್ ಮಾಡಲಾಗಿದೆ. ಅದು ನಿಮ್ಮ ಇಲಾಖೆಯಿಂದ ಹೋಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅದು ಪೂರ್ಣವಾಗುವವರೆಗೆ ಕೆಲವರಿಗೆ ಬಡ್ತಿ ಕೊಡುತ್ತಿದ್ದರೆ ಅದನ್ನು ಕೂಡಲೇ ಕೈಬಿಡಬೇಕು. ನನ್ನಲ್ಲಿ ಈಗ ಒಂದೆರಡು ನಿದರ್ಶನಗಳು ಇವೆ. ಅಲ್ಲಿ ಕೇವಲ ಪ್ರಭಾವಯುತ ಅಧಿಕಾರಿಗಳು ವ್ಯಕ್ತಿಗಳ ಮುಖ ನೋಡಿ ಅನಾವಶ್ಯಕವಾಗಿ ಅನೇಕ ಜನರಿಗೆ ಬಡ್ತಿ ಕೊಟ್ಟು, ಸೇವೆ ಸಲ್ಲಿಸಿದವರನ್ನು ಬಿಟ್ಟು, ಕಡಿಮೆ ಸೇವೆ ಮಾಡುವವರಿಗೆ ಪ್ರೊಮೋಷನ್ ಕೊಟ್ಟು ಕಳುಹಿಸಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ನನಗೆ ಆ ಲಿಸ್ಟ್ ಕೊಡಿ,

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ನಾನು ತಮಗೆ ಕೊಡುತ್ತೇನೆ. ಅದನ್ನು ನೀವು ಎಗ್ಸಾಮಿನ್ ಮಾಡಬೇಕು,

ಈಗ ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟ ಹಾಗೆ ಎಲ್ಲ ಇಲಾಖೆಗಳಲ್ಲಿಯೂ ಅನೇಕರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಬಡ್ತಿ ಕೊಡುವುದರಲ್ಲಿ ಕ್ರಮಬದ್ಧವಾಗಿ ಒಂದು ಸೀನಿಯಾರಿಟಿ ಲಿಸ್ಟ್ ಮಾಡಿದ್ದರೆ ಅದನ್ನು ರಿವ್ಯೂ ಮಾಡಿ ಅದರಲ್ಲಿ ಏನೇನು ಲೋಪದೋಷಗಳಿವೆಯೋ ಅವನ್ನು ಸರಿಪಡಿಸಿ ಯಾರ್ಯಾರಿಗೆ ನ್ಯಾಯಬದ್ಧವಾಗಿ ಸಿಗಬೇಕೋ ಅವರಿಗೆ ಅದನ್ನು ಒದಗಿಸಿಕೊಡಬೇಕು. ಅದರಲ್ಲಿ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಯಾರಾದರೂ ಒಬ್ಬ ಮಂತ್ರಿ ಒಂದು ಜಾತಿಯವರಾಗಿದ್ದರೆ, ಅವರ ಜಾತಿಯವರೇ ಅವರ ಇಲಾಖೆಯಲ್ಲಿ ಇದ್ದಾರೆ. ಅವರ ಬಗ್ಗೆ ವಿಶ್ವಾಸ ತೋರಿರುತ್ತಾರೆ. ಮಾನ್ಯ ಶ್ರೀ ನಿಜಲಿಂಗಪ್ಪನವರು ಇದ್ದಂಥ ಕಾಲದಲ್ಲಿಯೂ ಮತ್ತು ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರು ಇದ್ದಂಥ ಕಾಲದಲ್ಲಿಯೂ ಅದೇ ರೀತಿಯಾಗಿ ಅವರವರ ಇಲಾಖೆಯಲ್ಲಿ ಅವರವರ ಜಾತಿಯವರನ್ನೇ ಹೆಚ್ಚಿಗೆ ಸೇರಿಸಿದ್ದರೆಂದು ನಾನು ಹೇಳುತ್ತೇನೆ, ಈ ಜಾತಿಯ ಇದೊಂದು ಪಿಡುಗು ಈ ರಾಜ್ಯದಲ್ಲಿ ಬಹಳ ಹೆಚ್ಚಾಗಿದೆ. ಇದು ಹೋಗಬೇಕು. ಆದ್ದರಿಂದ ಈ ಇಲಾಖೆಯಲ್ಲಿ ಇರತಕ್ಕವರಿಗೆ ಯಾರಿಗೂ ನೋವು ಆಗದ ರೀತಿಯಲ್ಲಿ ಯಾರಿಗೂ ಅನ್ಯಾಯವಾಗುವುದಕ್ಕೆ ಅವಕಾಶ ಆಗದೇ ಇರುವ ರೀತಿಯಲ್ಲಿ ಕ್ರಮಬದ್ಧವಾಗಿ ಸೀನಿಯಾರಿಟಿ ಲಿಸ್ಟನ್ನು ತಯಾರುಮಾಡಿ ಅಲ್ಲಿರತಕ್ಕ ಅಕ್ರಮಗಳನ್ನೆಲ್ಲಾ ಸರಿಪಡಿಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ದಾವಣಗೆರೆ ಮೆಡಿಕಲ್ ಕಾಲೇಜಿಗೆ ಇತ್ತೀಚೆಗೆ ಕೆಲವು ಜನ ಡಾಕ್ಟರ್‌ಗಳನ್ನು ನೇಮಿಸುವ ಸಂದರ್ಭದಲ್ಲಿ ನೀವು ಪಕ್ಷಪಾತವನ್ನು ತೋರಿಸಿದ್ದೀರಿ ಎಂಬುದಾಗಿ ಹೇಳಿದರೆ ಖಂಡಿತವಾಗಿಯೂ ಉತ್ಪ್ರೇಕ್ಷೆ ಆಗಲಾರದೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ನಾನು ಮಾಡಿಲ್ಲ. ಇವತ್ತು ಮೈಸೂರು ಸರ್ಕಾರದ ಆಡಳಿತದಲ್ಲಿ ಅದು ಇಲ್ಲ. ಇಂದು ಅದನ್ನು ನಡೆಸುತ್ತಾ ಇರುವುದು ಬಾಪೂಜಿ ಎಜುಕೇಷನ್ ಗವರ್ನಿಂಗ್ ಕೌನ್ಸಿಲ್‌ನವರು. ನಾವು ಮಾಡಿರುವುದು ಏನೆಂದರೆ, ನಮ್ಮ ಅಧಿಕಾರಿಯನ್ನು ಅದಕ್ಕೆ ಚೇರ್‌ಮನ್ನರಾಗಿ ಮಾಡಿದ್ದೇವೆ. ಅಲ್ಲಿಗೆ ಒಬ್ಬ ಪ್ರಿನ್ಸಿಪಾಲರನ್ನು ಹಾಕಿದ್ದೇವೆ. ಒಬ್ಬ ಅಡ್ಮಿನಿಸ್ಟ್ರೇಟರನ್ನು ಹಾಕಿದ್ದೇವೆ. ಇದರ ಬಗ್ಗೆ ಸರ್ಕಾರದ ಆಡಳಿತವೇನೂ ಇಲ್ಲ. ಇದನ್ನು ನಿಮಗೆ ಯಾರು ಹೇಳುತ್ತಿದ್ದಾರೋ ಗೊತ್ತಿಲ್ಲ. ಮಾನ್ಯ ಸದಸ್ಯರು ಇಲ್ಲಿ ಭಾಷಣ ಮಾಡುವುದಕ್ಕಿಂತ ಮುಂಚೆ ನನ್ನನ್ನು ಕೇಳಿದ್ದರೆ ಎಲ್ಲ ಅಂಕಿಅಂಶಗಳನ್ನು ವಿವರವಾಗಿ ಹೇಳುತ್ತಿದ್ದೆ.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿ 50 ಸೀಟುಗಳನ್ನು ಹಂಚುವಾಗ ಅಲ್ಲಿನ ಚೇರ್‌ಮನ್ ಅವರೇ ಅವನ್ನು ಮಾಡಿದ್ದಾರೆಂದು ಹೇಳಿದಿರಿ. ಅಲ್ಲಿನ ಹುದ್ದೆಗಳ ನೇಮಕದ ಪ್ರಶ್ನೆ ಬಂದಾಗ ತಾವೇ ಮಾಡಿದ್ದೀರಿ ಎಂಬುದಾಗಿ ಹೇಳುತ್ತೀರಿ ಎಂದು ಹೇಳಿದರೆ ಸರಿಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ವಿರೋಧಪಕ್ಷದ ನಾಯಕರಾದ ಮೇಲೆ ಮಾನ್ಯ ಶ್ರೀ ದೇವೇಗೌಡರದು ವಿತಂಡವಾದ ಬಹಳ ಆಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿನ ಕಾಲೇಜ್ ಪ್ರಿನ್ಸಿಪಾಲ್ ಹುದ್ದೆಗೆ ಸಾಕಷ್ಟು ಸಾಮರ್ಥ್ಯವನ್ನು ಪಡೆದಿದ್ದವರನ್ನು ಬಿಟ್ಟು ಬೇರೆಯವರನ್ನು ಅವರ ಕೆಳಗೆ ಇರತಕ್ಕವರನ್ನು ಹಾಕಿದ್ದೀರಿ ಇದಕ್ಕೆ ಕಾರಣವೇನು ?

ಶ್ರೀ ಎಚ್. ಡಿ. ದೇವೇಗೌಡ.—ಒಂದುವೇಳೆ ಮಾನ್ಯ ಆರೋಗ್ಯ ಸಚಿವರು ಆ ಕಾಲೇಜಿಗೆ ಒಬ್ಬ ಸಾಧು ಲಿಂಗಾಯಿತರನ್ನೇ ಹಾಕಿದ್ದಾರೆಂದು ಇಟ್ಟುಕೊಂಡರೂ, ಅದರಲ್ಲಿ ತಪ್ಪೇನೂ ಇಲ್ಲ. ಆತನು ದಕ್ಷನಾಗಿ, ಒಬ್ಬ ಉತ್ತಮ ಅಧಿಕಾರಿಯಾಗಿ, ಯೋಗ್ಯವಂತನಾಗಿದ್ದರೆ ಪರವಾ ಇಲ್ಲ. ಜಾತೀ ಆಧಾರದ ಮೇಲೇ ಅವರನ್ನು ನೇಮಕ ಮಾಡಬಾರದೆಂಬುದು ಸರಿಯಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಯಾವ ಜಾತಿಯವರನ್ನೂ ಅಪಾಯಿಂಟ್ ಮಾಡಿಲ್ಲ. ಒಂದು ವೇಳೆ ಅಲ್ಲಿ ಅಧಿಕಾರಿಯಾಗಿರತಕ್ಕವನು ಲಿಂಗಾಯಿತರೇ ಆಗಿದ್ದರೆ, ಆ ಜಾತೀ ಒಂದರ ಆಧಾರದ ಮೇಲೇ ಆತನನ್ನು ಡಿಸ್‌ಕ್ವಾಲಿಫೈ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಜಾತೀ ಆಧಾರದ ಮೇಲೆ ಅವರನ್ನು ಡಿಸ್‌ಕ್ವಾಲಿಫೈ ಮಾಡಿ ಎಂಬುದಾಗಿ ನಾನೂ ಕೂಡ ವಾದ ಮಾಡುತ್ತಿಲ್ಲ. ಅಲ್ಲಿ ಅವರಷ್ಟೇ ಬೇರೆ ಕ್ವಾಲಿಫೈ ಆಗಿರತಕ್ಕವರು ಇದ್ದರೆ ಏಕೆ ಮಾಡಬಾರದು ಎಂದು ?

3-00 P.M.

ಶ್ರೀ ಎಚ್. ಡಿ. ದೇವೇಗೌಡ.—ಇತ್ತೀಚೆಗೆ ಶ್ರೀ ಸಿದ್ಧವೀರಪ್ಪನವರ ಕನ್ನಡಕದ ಬಣ್ಣ ಬದಲಾಗಿದೆ...

ಶ್ರೀ ಎಚ್. ಸಿದ್ಧವೀರಪ್ಪ.—ನನ್ನ ಕನ್ನಡಕದ ಬಣ್ಣ ಎಂದೂ ಬದಲಾಗುವುದಿಲ್ಲ. ನಿಮ್ಮ ಕನ್ನಡಕದ ಬಣ್ಣ ಬದಲಾದರೂ ಆಗಿರಬಹುದು. ಆದರೆ ನೀವು ಏನೇ ಹೇಳಿ ತಿಪ್ಪರಲಾಗ ಹಾಕಿದರೂ ಅದರಿಂದ ಏನೂ ಆಗುವುದಿಲ್ಲ.

ಅಧ್ಯಕ್ಷರು.—ಇದೇನು ಇಲ್ಲಿ ಈಗ ನಡೆಯುತ್ತಿರುವುದು ? ಮಾನ್ಯ ವಿರೋಧಪಕ್ಷದ ನಾಯಕರ ಮತ್ತು ಆರೋಗ್ಯ ಸಚಿವರ ನಡುವೆ ಪ್ರಶ್ನೋತ್ತರಗಳು ನಡೆಯುತ್ತಿದೆ. ಇದನ್ನೇ ನಾವು ಈ ದಿವಸ ಒಟಿಗೆ ಹಾಕುವುದೋ ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ ನಾವು ಇತ್ತೀಚೆಗೆ ರಾಜ್ಯಕ್ಕೆ ಹೊಸದಾಗಿ ಕರ್ನಾಟಕ ರಾಜ್ಯ ಎಂಬ ಹೆಸರನ್ನು ಇಟ್ಟಿರುವುದರಿಂದ ಅದಕ್ಕೇನಾದರೂ ಒಂದು ಸಾಕ್ಷಾತ್ಕಾರ ಆಗಲೇಬೇಕಲ್ಲವೇ ? ಈಗ ನಾನು ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿರುವುದು ಈ ಹಿಂದೆ ಈ ಇಲಾಖೆಯಲ್ಲಿ ಏನೇನು ಲೋಪದೋಷಗಳು ತಲೆಹಾಕಿದ್ದವೋ ಅವುಗಳು ಮತ್ತೆ ಇದರಲ್ಲಿ ಕಾಣದಿರಲಿ,

(ಶ್ರೀ ಕಾಗೋಡು ತಿಮ್ಮಪ್ಪ)

ಅದರ ಬಗ್ಗೆ ತಾವು ಸಾಕಷ್ಟು ಎಚ್ಚರಿಕೆ ವಹಿಸಬೇಕೆಂಬ ಉದ್ದೇಶದಿಂದ ನಾನು ಇದನ್ನು ಹೇಳುತ್ತಿದ್ದೇನೆ. ಹಾಗೆ ಇವರು ಒಂದು ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಟ್ಟರೆ ಜನರು ಇವರನ್ನು ಹೊಗಳುತ್ತಾರೆ; ಇವರ ಕೆಲಸವನ್ನು ಮೆಚ್ಚಿಕೊಳ್ಳುತ್ತಾರೆ. ಇಂಥ ಒಂದು ಒಳ್ಳೆಯ ಆಡಳಿತವನ್ನು ರಾಜ್ಯಕ್ಕೆ ಕೊಡುವುದಕ್ಕೆ ಪ್ರಯತ್ನ ಮಾಡಲಿ ಎಂಬ ಉದ್ದೇಶದಿಂದ ಹೇಳುತ್ತಿದ್ದೇನೆ.

ಇನ್ನು ಖಾಸಗೀ ಮೆಡಿಕಲ್ ಕಾಲೇಜುಗಳ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ. ಹಿಂದೆ ಈ ಸಭೆಯಲ್ಲಿ ಈಗ ಆರೋಗ್ಯ ಸಚಿವರಾಗಿರತಕ್ಕ ಶ್ರೀ ಸಿದ್ಧವೀರಪ್ಪನವರು ಇದೇ ಖಾಸಗೀ ಕಾಲೇಜುಗಳ ವಿಚಾರದಲ್ಲಿ ಇವರು ವಿರೋಧಪಕ್ಷದಲ್ಲಿದ್ದ ಕಾಲಕ್ಕೆ ಬಹಳ ಕಟುವಾಗಿ ಅವುಗಳನ್ನು ಟೀಕೆ ಮಾಡಿದ್ದಾರೆ. ಆ ಕಾಲಕ್ಕೆ ಇವರು ಆ ಕಾಲೇಜುಗಳಲ್ಲಿ ಒಂದೊಂದು ಸೀಟಿಗೂ 50 ಸಾವಿರ 25 ಸಾವಿರ ರೂಪಾಯಿ ಹೀಗೆ ಅವು ಬಹಿರಂಗವಾಗಿ ಹರಾಜಾಗುತ್ತಿವೆ ಎಂಬುದಾಗಿ ಟೀಕೆ ಮಾಡಿದ್ದರು. ಈ ದಿವಸ ಹಾಗೆ ಯಾರು ಟೀಕೆ ಮಾಡುತ್ತಿದ್ದರೋ ಅವರೇ ಆ ಮಂತ್ರಿ ಸ್ಥಾನದಲ್ಲಿ ಕುಳಿತಿದ್ದಾರೆ. ಆದಾಗ್ಯೂ ಆ ರೋಗವೇನೂ ನಿಂತಿಲ್ಲ. ಈಗಲೂ ಕೂಡ ಅದೇ ರೀತಿಯಲ್ಲಿ ಒಂದು ಬಿಳೀ ಬಂಡೆಯ ಮೇಲೆ ನಿಂತು, ಒಬ್ಬ ಬಲವಾದ ಜಟ್ಟಿ ಒಂದು ಕವಡೆಯನ್ನು ಮೇಲೆ ಎಸೆದರೆ ಅದು ಎಷ್ಟು ಎತ್ತರಕ್ಕೆ ಹೋಗುತ್ತದೋ ಅಷ್ಟು ಎತ್ತರ ಹಣದ ರಾಶಿಯನ್ನು ಕೊಟ್ಟರೆ ಅವರಿಗೊಂದು ಆ ಕಾಲೇಜಿನಲ್ಲಿ ಸೀಟು ಕೊಡಲಾಗುತ್ತ ಅನ್ನತಕ್ಕ ಪರಿಸ್ಥಿತಿ ಬಂದಿದೆ. ನಾನು ಕೇಳುತ್ತೇನೆ, ಈ ಸರ್ಕಾರಕ್ಕೆ ಅಂಥಾ ಒಂದು ಹಿಡಿತ ಈ ಖಾಸಗೀ ಕಾಲೇಜುಗಳ ಮೇಲೆ ಇದ್ದಿದ್ದೇ ಆದರೆ ಅವರು ಇವುಗಳಲ್ಲಿ ಈ ಸೀಟುಗಳು ಬಹಿರಂಗವಾಗಿ ಮಾರುಕಟ್ಟೆಯಲ್ಲಿ ಹರಾಜಾಗುವುದನ್ನು ಹತ್ತಿಕ್ಕಬೇಕು, ಇಲ್ಲವೇ ಅವುಗಳಲ್ಲಿ ಸೀಟನ್ನು ಬಹಿರಂಗವಾಗಿ ಹರಾಜಿನ ಮೂಲಕ ಭರ್ತಿ ಮಾಡುವಂತೆ ಮಾಡಲಿ ಎಂದು ಹೇಳುತ್ತೇನೆ. ಇಲ್ಲವಾದರೆ ನಮಗೆ ಈ ಸೀಟುಗಳನ್ನು ಪಡೆಯಲು ಯಾರನ್ನು ಹಿಡಿಯಬೇಕು ಎಂಬುದು ಸಾಮಾನ್ಯವಾಗಿ ಗೊತ್ತಾಗುವುದಿಲ್ಲ. ಆ ಕಷ್ಟವಾದರೂ ತಪ್ಪಲಿ ಎಂದು ಇದನ್ನು ಸೂಚನೆ ಮಾಡುತ್ತಿದ್ದೇನೆ. ಮಣಿಪಾಲ್ ಕಾಲೇಜಿನ ವ್ಯವಹಾರದಲ್ಲಿ ಸರ್ಕಾರದವರಿಗೆ ಅಷ್ಟು ಧೈರ್ಯ ಸಾಲದು ಎಂದು ಜನರು ಹೇಳುತ್ತಿದ್ದಾರೆ. ಇತ್ತ ಸರ್ಕಾರದವರು ಸಮಾಜವಾದವನ್ನು ಹೇಳುತ್ತಾ ಅತ್ತ ಖಾಸಗೀ ಮೆಡಿಕಲ್ ಕಾಲೇಜುಗಳನ್ನು ವಾಣಿಜ್ಯ ಸಂಸ್ಥೆಯನ್ನಾಗಿ ವ್ಯಾಪಾರ ಮಾಡುವುದಕ್ಕೆ ಅವಕಾಶ ಕೊಡುತ್ತ ಇರುವುದು ಎರಡೂ ಬಹಳ ವಿಚಿತ್ರವಾಗಿ ಕಾಣುತ್ತಿವೆ. ಈ ದಿವಸ ಪರದೇಶದಿಂದ ಜನರು ಬಂದು ಮಣಿಪಾಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಇಲ್ಲಿನ ಬಡಜನಕ್ಕೆ ಅವಕಾಶವಿಲ್ಲ. ಅಲ್ಲಿ ಅವರ ಮುಖ್ಯ ಗುರಿ ಹಣ ಸಂಪಾದನೆ ಒಂದೇ.

ಶ್ರೀ ಆರ್. ಗುಂಡೂರಾವ್.—ಅದು ಇಂಡಿಯಾ ದೇಶದಲ್ಲೇ ಒಂದು ಬೆಸ್ಟ್ ಮೆಡಿಕಲ್ ಕಾಲೇಜ್.

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರು ನನಗೆ ಅವಕಾಶ ಕೊಟ್ಟರೆ ಅದು ಇಂಡಿಯಾಕ್ಕೆ ಹೇಗೆ ಒಂದು ಬೆಸ್ಟ್ ಮೆಡಿಕಲ್ ಕಾಲೇಜಾಯಿತು ಎಂಬುದನ್ನೆಲ್ಲಾ ವಿವರಿಸಬಲ್ಲೆ...

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ಈ ದಿವಸ ನಡೆಯುತ್ತಿರುವುದು ದರೋಡೆ. ಅವರಿಗೆ ಹಣ ಸಂಪಾದನೆ ಮಾಡುವುದೇ ಒಂದು ಮುಖ್ಯ ಗುರಿ. ಅದನ್ನು ನಿಲ್ಲಿಸುವುದಕ್ಕೆ ಶಕ್ತಿ ಇಲ್ಲದಿದ್ದಾಗ ಸರ್ಕಾರದವರು ಏಕೆ ಬಾಯಲ್ಲಿ ಸಮಾಜವಾದ ಹೇಳುತ್ತಿದ್ದಾರೆ? ಈ ದಿವಸ ಹಿಂದೆ ಯಾರು ಈ ವಿಚಾರದಲ್ಲಿ ಅಷ್ಟು ಕಟುವಾಗಿ ಟೀಕಿಸುತ್ತಿದ್ದರೋ ಅವರು ಹಣಕ್ಕೆ ಗುಲಾಮರಾಗಿರಬೇಕು, ಇಲ್ಲವೇ ಅವರು ಸಮಾಜವಾದದ ತಿರುಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಅದನ್ನು ಮಾತನಾಡುತ್ತಿದ್ದಾರೆಂಬುದು ಈ ಎರಡರಲ್ಲಿ ಒಂದು ಯಾವುದಾದರೂ ಸತ್ಯವಿರಲೇಬೇಕು. ಇಲ್ಲವೇ ಇವರು ತಮ್ಮಲ್ಲಿದ್ದ ಶಕ್ತಿಯನ್ನು ಕಳೆದುಕೊಂಡಿರಬೇಕು. ಕಟ್ಟಕಡೆಯದಾಗಿ ನಾನು ಹೇಳಬೇಕೆಂಬ ವಿಷಯವಾದರೂ ಇಷ್ಟೇ. ಮಾನ್ಯ ಸಚಿವರು ಈ ಖಾಸಗೀ ಮೆಡಿಕಲ್ ಕಾಲೇಜುಗಳನ್ನು ಅದರಲ್ಲೂ ಮಣಿಪಾಲದ ಕಾಲೇಜನ್ನು ಸರ್ಕಾರದವರು ವಹಿಸಿಕೊಳ್ಳಲಿ, ಇಲ್ಲವೇ ಅಲ್ಲಿ ಬಹಿರಂಗವಾಗಿ ನಡೆಯತಕ್ಕ ಸೀಟಿನ ಹರಾಜನ್ನು ತಡೆಗಟ್ಟಲಿ. ಈ ಎರಡರಲ್ಲಿ ಒಂದು ಆಗಲೇಬೇಕು. ಲಾಭಕೋರರ ಕೈಲಿ ಇಂಥಾ ವಿದ್ಯಾಸಂಸ್ಥೆಗಳಿರುವುದು ಬೇಡ ಎಂದು ಹೇಳುತ್ತೇನೆ. ಆ ಸಂಸ್ಥೆ ಅಂಥಾ ಒಂದು ಒಳ್ಳೇ ರೀತಿಯಲ್ಲಿ ಕೆಲಸ ಮಾಡಿಕೊಂಡಿದ್ದರೆ ನಾನು ಈ ಮಾತುಗಳನ್ನಾಡುತ್ತಿರಲಿಲ್ಲ. ಅಲ್ಲಿ ಒಂದು ಸೀಟಿಗೆ 30 ಸಾವಿರ 50 ಸಾವಿರ ರೂಪಾಯಿ ಕೊಡಬೇಕೆಂದರೆ ಬಡವರ ಮತ್ತು ಕಾರ್ಮಿಕರ ಮಕ್ಕಳು ಅಲ್ಲಿ ವಿದ್ಯೆಯನ್ನು ಕಲಿಯುವುದೇ ಬೇಡ ಎಂದಾಯಿತು. ಯಾರಲ್ಲಿ ಕಪ್ಪು ಹಣ ಇದೆ ಯಾರು ದೊಡ್ಡ ದೊಡ್ಡ ಕಂಟ್ರಾಕ್ಟ್ ಮಾಡಿ ಹಣವನ್ನು ದೋಚಿದ್ದಾರೆ, ಯಾರು ದೊಡ್ಡ ದೊಡ್ಡ

ಅಧಿಕಾರಿಗಳಿದ್ದಾರೆ ಅಂಥವರ ಮಕ್ಕಳಿಗೆ ಮಾತ್ರವೇ ಆ ವಿದ್ಯೆ ಇರುವುದೆಂದರೆ ಸರ್ಕಾರದವರು ಹೇಳತಕ್ಕ ಈ ಸಮತಾವಾದವಾದರೂ ಏನು ! ಇದು ಎಂಥಾ ಸಮತಾವಾದ ? ಮಾನ್ಯ ಮಂತ್ರಿಗಳಿಗೆ ಸಮಾಜವಾದ ಸರಿಯಾಗಿ ಅರ್ಥವಾಗಿಲ್ಲ ಎಂದು ತಿಳಿಯೋಣವೇ ಅಥವಾ ಈ ಖಾಸಗೀ ವೈದ್ಯಕೀಯ ಕಾಲೇಜುಗಳನ್ನು ಹತೋಟಿಗೆ ತರುವುದರಲ್ಲಿ ಇವರು ವಿಫಲರಾಗಿದ್ದಾರೆಂದು ತಿಳಿಯೋಣವೇ ಎಂಬುದು ನನ್ನ ಮುಂದಿದೆ. ಆದ್ದರಿಂದ ಇಂದಿನ ಆರೋಗ್ಯ ಮಂತ್ರಿಗಳು ಕೋಟಾ ಮಂತ್ರಿಗಳಾಗಬಾರದು ಎನ್ನುವುದು ಅವರ ಅಭಿಲಾಷೆಯಾಗಿದ್ದರೆ, ಆ ಖಾಸಗೀ ವೈದ್ಯಶಾಲೆಗಳನ್ನು ಕೂಡಲೆ ಮುಟ್ಟುಹಾಕಿ ಅವುಗಳನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಇಲ್ಲವೇ, ಅವುಗಳು ಬಹಿರಂಗವಾಗಿ ಸೀಟುಗಳನ್ನು ಹರಾಜ್ ಮಾಡುವುದನ್ನು ಕಡ್ಡಾಯವಾಗಿ ನಿಲ್ಲಿಸಬೇಕೆಂದು ಸೂಕ್ತ ಆಜ್ಞೆ ಮಾಡಲೆಂದೂ ಅದನ್ನು ಕೂಡಲೆ ತಡೆಗಟ್ಟಬೇಕೆಂದೂ ಹೇಳಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಆರೋಗ್ಯ ಸಚಿವರಿಗೆ ಈ ವಿಚಾರದಲ್ಲಿ ಕಟ್ಟುನಿಟ್ಟಾದ ಆಜ್ಞೆಯನ್ನು ಮಾಡುವುದರಿಂದ ಸ್ವಲ್ಪ ತಮಗೆ ಅನಾರೋಗ್ಯವಾದರೂ ಚಿಂತೆಯಿಲ್ಲ ಇದನ್ನು ಖಂಡಿತ ಮಾಡಲೇಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ನಾಳೆ ಪಿ.ಡಬ್ಲ್ಯು. ಡಿಮ್ಯಾಂಡ್ ಇತ್ತು, ಅದಕ್ಕೆ ಬದಲಾಗಿ ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಸಂಬಂಧಪಟ್ಟ ಡಿಮ್ಯಾಂಡ್ ತೆಗೆದುಕೊಳ್ಳಲಾಗುವುದು. ಮಾನ್ಯ ಮಂತ್ರಿಗಳಿಗೆ ಇಂದು ಉತ್ತರ ಕೊಡಲು ಎಷ್ಟು ಕಾಲಾವಕಾಶ ಬೇಕು ?

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಸಮರ್ಪಕವಾದ ಉತ್ತರ ಕೊಡಬೇಕಾದರೆ ಟೈಂ ಲಿಮಿಟ್ ಮಾಡಿದರೆ ಸಾಧ್ಯವಾಗುವುದಿಲ್ಲ, ಎಲ್ಲಿಗೆ ಸಾಕು ಎಂದರೆ ಅಲ್ಲಿಗೆ ನಾನು ನಿಲ್ಲಿಸುತ್ತೇನೆ. ಉದಾಹರಣೆಗೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳ ವಿಚಾರ ಹೇಳಿದ್ದಾರೆ. ಈ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಅವುಗಳಿಗೆ ಲಗಾಮು ಹಾಕುವುದಕ್ಕೇನು ಮಾಡಿವೆ, ಹತೋಟಿಯಲ್ಲಿಡಲು ಏನು ಮಾಡಿದೆ ಎಂಬುದನ್ನು ಹೇಳಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಣಿಪಾಲ್ ಮೆಡಿಕಲ್ ಕಾಲೇಜಿಗೆ ಹಾಕಿದ್ದ ಲಗಾಮು ಕಿತ್ತುಕೊಂಡು ಹೋಗಿದೆ. ಅದನ್ನು ಹತೋಟಿಗೆ ತೆಗೆದುಕೊಂಡರೆ ನಾನು ರಾಜಕೀಯ ಜೀವನಕ್ಕೆ ತಿಲಾಂಜಲಿ ಕೊಡುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಅದೇಕೆ ಆಗಬೇಕು ? ನಿಮ್ಮನ್ನು ರಾಜಕೀಯದಲ್ಲಿಡಬೇಕು ಎಂಬುದೇ ನಮ್ಮ ಆಸೆ. ಟ್ಯಾಕ್ಸ್ ಹಾಕುವುದಕ್ಕೆ ಒಪ್ಪಿ ಮೆಡಿಕಲ್ ಕಾಲೇಜನ್ನು ವಹಿಸಿಕೊಳ್ಳುವುದಕ್ಕೆ ಬೇಕಾದ ಒಂದು ಕೋಟಿ ರೂಪಾಯಿಗೆ ತೆರಿಗೆ ಹಾಕಲು ಅವಕಾಶ ಕೊಡಿ, ನಾವು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಮಂತ್ರಿಗಳಿಗೆ ಉತ್ತರ ಕೊಡಲು ಕನಿಷ್ಠಪಕ್ಷ ಒಂದು ಗಂಟೆಯಾದರೂ ಬೇಕು. 5 ಗಂಟೆಗೆ ಅವರು ಜವಾಬು ಕೊಡುವರು. ಈಗ ಮಾತನಾಡುವವರು 12 ಜನರಿದ್ದಾರೆ, ಅವರು ತಮ್ಮ ಭಾಷಣವನ್ನು ಅಷ್ಟರೊಳಗೆ ಮುಗಿಸಬೇಕು.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಆರೋಗ್ಯ ಸಚಿವರು ನಮ್ಮ ಮುಂದೆ ತಂದಿರುವ ಡಿಮ್ಯಾಂಡ್ ಏನಿದೆ ಜನಾರೋಗ್ಯ, ಕುಟುಂಬ ಯೋಜನೆ ವೈದ್ಯಕೀಯ ಮುಂತಾದ್ದು ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಇದೇ ಸಂದರ್ಭದಲ್ಲಿ ಕೆಲವು ಸೂಕ್ತವಾದ ಸಲಹೆಗಳನ್ನು ಕೊಡುತ್ತೇನೆ. ಒಂದು ಸಂತೋಷವಾದ ವಿಷಯವೇನೆಂದರೆ ಈ ಬಾಬಿಗೆ ಹಿಂದೇನು ಖರ್ಚು ಮಾಡುತ್ತಿತ್ತೋ ಅದಕ್ಕಿಂತ ಹೆಚ್ಚು ಈಗ ಖರ್ಚು ಮಾಡುತ್ತಿದ್ದೇವೆ, ಹಿಂದೆ 22 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತಿದ್ದರು, ಈಗ ಈ ಚಾಲ್ತಿ ಸಾಲಿನಲ್ಲಿ 26 ಕೋಟಿ 67 ಲಕ್ಷದ 21 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇದರಿಂದ ಇದರ ಬಗ್ಗೆ ಎಷ್ಟು ಆಸಕ್ತಿ ಸರಕಾರಕ್ಕಿದೆ ಎಂಬುದು ಅರ್ಥವಾಗುತ್ತದೆ. ಈ ಸರಕಾರ ಬಡವರ, ಜನರ ಆರೋಗ್ಯದ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಿದೆ. ಅದರಲ್ಲೂ ನಮ್ಮ ಸರಕಾರ ಈ ಜನರ ಆರೋಗ್ಯದ ವಿಚಾರದಲ್ಲಿ ಮೂರು ತರಹ ಕಾರ್ಯಕ್ರಮ ಇಟ್ಟುಕೊಂಡಿದೆ. ಅಂದರೇ (1) ಕ್ಯುರೇಟಿವ್ (2) ಪ್ರಿವೆಂಟಿವ್ ಮತ್ತು (3) ಪ್ರಮೋಷನಲ್ ಎಂಬ ಮೂರು ಕಾರ್ಯಕ್ರಮ ಇಟ್ಟುಕೊಂಡಿದೆ. ಇದನ್ನು ನಾನು ಪೂರ್ಣವಾಗಿ ಒಪ್ಪುತ್ತೇನೆ. ಈಗ ನಮಗೆ ಹಣದ ಅಭಾವವಿದೆ, ವೈದ್ಯರ ಕೊರತೆ ಇದೆ. ನಮ್ಮ ದೇಶದಲ್ಲಿ ಬೆಡ್ ಸ್ಟ್ರೆಂಗ್ತ್ (Bed Strength) ಸುಮಾರು 28 ಸಾವಿರ ಚಿಲ್ಲರೆ ಇದೆ, ಒಂದು ಸಾವಿರ ಜನರಿಗೆ ಒಂದು ಬೆಡ್ ಇದೆ. ಕಾರಣವೇನು ?

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು)

ವೈದ್ಯರಿಲ್ಲದಿರುವುದು, ಕಟ್ಟಡವಿಲ್ಲದಿರುವುದು. ಇದಕ್ಕೇನು ಮಾಡಬೇಕೆಂದು ನಾವು ಕೂಡಲೇ ಯೋಚನೆ ಮಾಡಬೇಕು. ವೈದ್ಯಕೀಯ ವಿದ್ಯಾಭ್ಯಾಸದ ವಿಚಾರವನ್ನು ಈಗ ನಮ್ಮ ಮಿತ್ರರು ಹೇಳಿದರು. ಸಾಧಾರಣ ಮನುಷ್ಯರಿಗೆ ವೈದ್ಯಕೀಯ ವಿದ್ಯಾಭ್ಯಾಸ ಕೊಡುವುದು ಬಹು ಕಷ್ಟ. ಎಲ್ಲರಿಗೂ ವೈದ್ಯಕೀಯ ವಿದ್ಯೆ ಕೊಡುವುದಕ್ಕಾಗುವುದಿಲ್ಲ. ಮನುಷ್ಯರ ಅಳಿವು ಉಳಿವು ಅವರ ಕೈಲಿರುವುದು. ಆದುದರಿಂದ ವೈದ್ಯರಿಗೆ ಸರಿಯಾದ ತರಬೇತಿ ಕೊಡಬೇಕು. ಆ ಕಾರಣದಿಂದ ಈಗ ಸ್ವಲ್ಪ ತೊಂದರೆಯಾಗಿರಬಹುದು. ಅದೇನೇ ಇರಲಿ, ಈಗ ನಮ್ಮ ದೇಶದಲ್ಲಿ ವೈದ್ಯಕೀಯ ವೃತ್ತಿಗೆ ಡಿಮ್ಯಾಂಡ್ ಜಾಸ್ತಿಯಾಗಿದೆ. ಹೊರದೇಶಗಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೋದವರು ಕಾರಣಾಂತರಗಳಿಂದ ವಾಪಸು ಬರುವುದಿಲ್ಲ, ''ಬ್ರೈನ್ ಡ್ರೈನ್'' (''Brain Drain'') ಆಗುತ್ತಿದೆ ಇದನ್ನು ಜಾಗ್ರತೆ ತಡೆಗಟ್ಟಬೇಕು. ಇಲಾಖೆ ಅಧಿಕಾರಿಗಳಲ್ಲಿ ಲೋಪದೋಷವಿರುವುದು. ಟೆಕ್ನಿಕಲೀ ಕ್ವಾಲಿಫೈಡ್ ಇರುವ ಪೀಪಲ್‌ಗೆ ಹೆಚ್ಚಾಗಿ ಅಡ್ಮಿನಿಸ್ಟ್ರೇಷನ್ ವಿಷಯ ಗೊತ್ತಿಲ್ಲದಿರಬಹುದು. ಆದುದರಿಂದ ಅಡ್ಮಿನಿಸ್ಟ್ರೇಷನ್ ಮತ್ತು ಟೆಕ್ನಿಕಲ್ ಸೈಡ್ಸ್‌ಗೆ ಬೇರೆ ಬೇರೆ ವಿಭಾಗಗಳನ್ನು ಮಾಡಬೇಕು. ಒಟ್ಟಿನಲ್ಲಿ ವೈದ್ಯಕೀಯ ಇಲಾಖೆಯಲ್ಲಿ ಎರಡು ಭಾಗ ಮಾಡಬಹುದು, ಪಬ್ಲಿಕ್ ಹೆಲ್ತ್ ಮತ್ತು ಮೆಡಿಕಲ್ ಎಂದು ಬೇರೆ ಬೇರೆ ಮಾಡಬಹುದು. ಪಬ್ಲಿಕ್ ಹೆಲ್ತ್ ಬಗ್ಗೆ ಮೊದಲಿಂದ ಬೇಕಾದಷ್ಟು ಕಾರ್ಯಕ್ರಮಗಳಿವೆ. ಸ್ಯಾನಿಟರಿ ಇನ್‌ಸ್ಪೆಕ್ಟರ್ಸ್ ಟ್ರೈನಿಂಗ್, ಶಾಲೆಗಳಲ್ಲಿ ಹುಡುಗರಿಗೆ ಮೆಡಿಕಲ್ ಎಕ್ಸಾಮಿನೇಷನ್, ನ್ಯೂಟ್ರಿಷನ್ ಪ್ರೋಗ್ರಾಂ ಮುಂತಾದುವು ಇವೆ. ಆದರೆ ಇರುವುದು ಸಾಲದು. ಇವನ್ನು ಹೆಚ್ಚಿನ ರೀತಿಯಲ್ಲಿ ಮಾಡಬೇಕು. ಕಾರಣ ಹೇಳುತ್ತೇನೆ. ಗ್ರಾಮಾಂತರಗಳಲ್ಲಿ 18 ಸಾವಿರ ಜನರಿಗೊಬ್ಬ ಡಾಕ್ಟರಿದ್ದಾರೆ, ಪಟ್ಟಣಗಳಲ್ಲಿ 3 ಸಾವಿರ ಜನರಿಗೊಬ್ಬ ಡಾಕ್ಟರಿದ್ದಾರೆ. ಇದಕ್ಕೆ ಕಾರಣವೇನು ? ಅನೇಕ ವೈದ್ಯರು ಗ್ರಾಮಾಂತರ ಪ್ರದೇಶಗಳಿಗೆ ಹೋಗುವುದಿಲ್ಲ. ನೂರರಲ್ಲಿ 82 ಜನರು ಗ್ರಾಮಾಂತರಗಳಲ್ಲಿದ್ದಾರೆ, ಅವರಿಗೆ ವೈದ್ಯಕೀಯ ಸಹಾಯ ಬೇಕೇ ಬೇಕು. ವಿರೋಧ ಪಕ್ಷದವರು ಸರಕಾರವೇನೂ ಮಾಡಿಲ್ಲವೆಂದು ಹೇಳುತ್ತಿದ್ದರು. ಒಂದು ವರ್ಷದ ಹಿಂದೆ ಇಲ್ಲದೆ ಇದ್ದ ಸೌಕರ್ಯಗಳು ಹಿಂದುಳಿದವರಿಗೆ, ಮೈನಾರಿಟೀಸ್‌ಗೆ ಈಗ ಸಿಕ್ಕಿದೆ, ಅವರಿಗೆ ಪ್ರಾತಿನಿಧ್ಯ ದೊರೆತಿದೆ. ವಿದ್ಯಾ ಇಲಾಖೆಯಲ್ಲಿ ಮತ್ತು ವೈದ್ಯಕೀಯ ಇಲಾಖೆಯಲ್ಲಿ.

(Mr. Deputy Speaker in the Chair).

ವೈದ್ಯರಿಗೆ ಮುಖ್ಯವಾಗಿ ಎರಡು ಗುಣವಿರಬೇಕು, ''ಡೆಡಿಕೇಷನ್ ಮತ್ತು ಸರ್ವಿಸ್'' (''Dedication and Service'') ಇದು ಬಹು ಮುಖ್ಯವಾದುದು. ಮೆಡಿಕಲ್ ಹೆಲ್ತ್ ಯೂನಿವರ್ಸಿಟಿ (Medical Health University) ನಮ್ಮ ದೇಶಕ್ಕೆ ಬರುವುದೆಂದು ಮೊನ್ನೆ ತಾನೆ ಮಂತ್ರಿಗಳು ಹೇಳಿರುವುದು ಸಂತೋಷದ ಸಂಗತಿ. ಮೊಟ್ಟಮೊದಲನೆಯದಾಗಿ ಅಂತಹ ಯೂನಿವರ್ಸಿಟಿ ನಮ್ಮ ದೇಶಕ್ಕೆ ಬರುತ್ತಿದೆ. ಕಂದಾಚಾರದ ಕರಿಕ್ಯುಲಂ ಅಥವ ಸಿಲಬಸ್ಸನ್ನು ತೆಗೆದು ಇಂದಿನ ಪರಿಸ್ಥಿತಿಗೆ ತಕ್ಕಂತೆ ಬದಲಾಯಿಸಬೇಕು. ಗ್ರಾಮಾಂತರಗಳವರಿಗೆ ಅನುಕೂಲವಾಗುವಂತೆ (Rural based) ಬದಲಾವಣೆ ಮಾಡಬೇಕು. ಡಾಕ್ಟರುಗಳು ಮೆಡಿಕಲ್ ಕಾಲೇಜಿನಿಂದ ಬಂದಮೇಲೆ ಐದಾರು ವರ್ಷ ಕಾಂಟ್ರ್ಯಾಕ್ಟ್ ಸರ್ವಿಸ್ ಇರುವುದನ್ನು ತಪ್ಪಿಸಿ ಸುಮಾರು 8 ವರ್ಷವಾದರೂ ಸರ್ವಿಸ್ ಮಾಡಬೇಕೆಂಬುದು ನಿರ್ಬಂಧ ಮಾಡಬೇಕು. ಜೊತೆಗೆ ಕೊನೆಯ ಪಕ್ಷ ಒಂದು ವರ್ಷವಾದರೂ ಗ್ರಾಮಾಂತರಗಳಲ್ಲಿ ಕೆಲಸ ಮಾಡಿದಮೇಲೆ ವೈದ್ಯಕೀಯ ವಿದ್ಯಾರ್ಥಿಗಳಿಗೆ ಡಿಗ್ರಿ ಅಥವಾ ಡಿಪ್ಲೊಮ ಕೊಡಬೇಕು. ಕಾರಣ ಅಂಕಿ ಅಂಶಗಳ ಪ್ರಕಾರ ಕೆಲವುಕಡೆ 18 ಸಾವಿರಕ್ಕೆ ಒಬ್ಬ ಡಾಕ್ಟರು, ಇನ್ನು ಕೆಲವು ಕಡೆ 5 ಸಾವಿರ ಜನರಿಗೊಬ್ಬ ಡಾಕ್ಟರು ಇದ್ದಾರೆ, ಡಾಕ್ಟರುಗಳ ಅಭಾವ ಜಾಸ್ತಿಯಾಗಿದೆ. ಡಾಕ್ಟರುಗಳಾಗಲು ಐದಾರು ವರ್ಷ ಬೇಕು. ಡಾಕ್ಟರುಗಳ ಕೊರತೆ ಬಹಳ ಜಾಸ್ತಿಯಾಗಿದೆ. ಪ್ರಜಾಸಂಖ್ಯೆ ನೋಡಿದರೆ ಬೃಹದಾಕಾರವಾಗಿ ಬೆಳೆಯುತ್ತಿದೆ, ಈಗ ನಮ್ಮ ದೇಶದಲ್ಲಿ 2 ಕೋಟಿ 92 ಲಕ್ಷ ಜನರಿದ್ದಾರೆ. ಆದರೆ ಡಾಕ್ಟರುಗಳೆಷ್ಟಿದ್ದಾರೆಂಬುದನ್ನು ನೋಡಿ. ಒಂದು ಸಾವಿರ ಜನರಿಗೆ ಒಂದು ''ಬೆಡ್'' (Bed) ಇದೆ. ಹೀಗಿರುವಾಗ ಎಷ್ಟು ವೈದ್ಯರು ಬೇಕೆಂಬುದನ್ನು ಯೋಚನೆ ಮಾಡಿ. ಕಾಂಪೌಂಡರು ಅಥವಾ ನರ್ಸುಗಳಿಗೆ 15 ವರ್ಷ ಸರ್ವಿಸ್ ಮಾಡಿದ್ದರೆ ಟ್ರೈನಿಂಗ್ ಕೊಟ್ಟು ರಿಫ್ರೆಷರ್ ಕೋರ್ಸ್ ಮಾಡಿದವರು ಗ್ರಾಮಾಂತರಗಳಲ್ಲಿ ಕೆಲಸ ಮಾಡಲು ಅವಕಾಶ ಮಾಡಬೇಕು. ಕ್ವಾಲಿಫೈಡ್ ಡಾಕ್ಟರು ಬೇಕು, ಫಾರಿನ್‌ಗೆ ಹೋಗಿ

ಬಂದಿರುವ ಡಾಕ್ಟರು ಬೇಕು. ಈಗ ಅಲೋಪತಿ ಮತ್ತು ಆಯುರ್ವೇದಿಕ್ ಎಂಬ ಎರಡು ವೈದ್ಯಕೀಯ ಪದ್ಧತಿಗಳಿವೆ. ಆಯುರ್ವೇದದಲ್ಲಿ ನಂಬಿಕೆ ಕಡಮೆಯಾಗಿದೆ, ಅದಕ್ಕೆ ಉತ್ತೇಜನ ಕೊಡಬೇಕು. ಈಗ ಡಾ. ಮೇಲ್ಕೋಟೆಯವರ ವರದಿ ಬಂದಿದೆ, ಆಯುರ್ವೇದಕ್ಕೆ ಪ್ರಾಮುಖ್ಯತೆ ಕೊಡಬೇಕು, ಯುನಾನಿ ಮತ್ತು ಹೋಮಿಯೋಪತಿ ವೈದ್ಯಕೀಯ ಪದ್ಧತಿಗಳಿಗೂ ಪ್ರಾಮುಖ್ಯತೆ ಕೊಡಬೇಕು. ಅಲೋಪತಿ ಸಿದ್ಧ, ಆಯುರ್ವೇದ, ಇತರ ವೈದ್ಯಕೀಯ ಪದ್ಧತಿಗಳವರಿಗೆ ಎಕ್ಸ್‌ಪೆರಿಮೆಂಟ್ ಮಾಡಲು ಆಸ್ಪತ್ರೆಯಿಲ್ಲ, ಸರಿಯಾದ ಜಾಗವಿಲ್ಲ, ಅವರಿಗೆ Laboratory ಅನುಕೂಲ ಇಲ್ಲದೆ ಇರುವುದರಿಂದ, ಮಾಡಿಕೊಡಬೇಕು, ಎಂದು ಪ್ರಾರ್ಥಿಸುತ್ತೇನೆ.

ಹೋಮಿಯೋಪತಿ, ಅಲೋಪತಿ, ಯುನಾನಿ, ಸಿದ್ಧ, ಯೋಗ,—ಇವಕ್ಕೆಲ್ಲಾ ಪ್ರಾಮುಖ್ಯತೆಯನ್ನು ಕೊಡಬೇಕು. ಯಾರು ಯಾರಿಗೆ ಯಾವ ಯಾವ ವೈದ್ಯಕೀಯದಲ್ಲಿ ನಂಬಿಕೆ ಇದೆಯೋ ಅವರು ಅದನ್ನು ತೆಗೆದುಕೊಳ್ಳಲು ಅವಕಾಶವಿರಬೇಕು. ಆಗ ಅವರಿಗೆ ಇಮೀಡಿಯಟ್ ರಿಲೀಫ್ ಸಿಕ್ಕುತ್ತದೆ. ಒಬ್ಬೊಬ್ಬರಿಗೆ ಅಲೋಪತಿಯಿಂದ ಒಳ್ಳೆಯದಾಗುತ್ತದೆ. ಅದಕ್ಕೂ ಹೆಚ್ಚಿನ ಉತ್ತೇಜನ ಕೊಡಬೇಕು. ಮೆಡಿಕಲ್ ಎಜುಕೇಷನ್‌ಗೆ ಈಗಿರುವ ರೀತಿಯ ಪ್ರಕಾರ ಕ್ಯಾಪಿಟೇಷನ್ ಫೀಸ್ ಬಹಳ ಜಾಸ್ತಿ ಇದೆ. ಫೀಸ್ ಇಲ್ಲದೆಯೇ ಅಲ್ಲಿ ಸಾಧ್ಯವಾದ ಮಟ್ಟಿಗೂ ಕಡಿಮೆ ಫೀಜಿನಲ್ಲಿ ವಿದ್ಯಾರ್ಥಿಗಳನ್ನು ಓದಿಸುವುದಕ್ಕೆ ಸಹಾಯ ಮಾಡಬೇಕು. ವಿರೋಧಪಕ್ಷದ ಮಿತ್ರರು ಹೇಳಿದ ಹಾಗೆ ಗೌರ್ನಮೆಂಟ್ ಕಾಲೇಜುಗಳಲ್ಲದೆ, ಪ್ರೈವೇಟ್ ಕಾಲೇಜುಗಳು ಐದು ಇವೆ. ಇವು ಈಗ ವ್ಯಾಪಾರಿ ಕಾಲೇಜುಗಳಾಗಿವೆ. ಹರ್ಬ್ಸ್, ಗಿಡಮೂಲಿಕೆಗಳ Herboriam ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲಿ ಇರುವಂತೆ. ಆಲೋಚನೆ ಮಾಡಬೇಕು. ಒಟ್ಟಿನಲ್ಲಿ ಈ ಆಯುರ್ವೇದಕ್ಕೆ ಹೆಚ್ಚಿನ ಉತ್ತೇಜನ ಕೊಡಬೇಕು ಎಂದು ಪ್ರಾರ್ಥಿಸುತ್ತೇನೆ.

ಮಸ್ಕ್ವಿಟೋ ಕಂಟ್ರೋಲ್,-ಇದು ಪಬ್ಲಿಕ್ ಹೆಲ್ತ್‌ಗೆ ಸಂಬಂಧಪಟ್ಟದ್ದು. ಮಸ್ಕಿಟೋ ಕಂಟ್ರೋಲ್ ಬೋರ್ಡ್ ಏನು ಇದೆ ? ಅದು ಇನ್ನೂ ಯಾವ ಕಾರ್ಯಕ್ರಮ ಹಾಕಿಕೊಂಡಿದೆ; ಏನು ಮಾಡುತ್ತಿದೆ ಎಂಬುದು ಸರಿಯಾಗಿ ಗೊತ್ತಿಲ್ಲ. ಸೊಳ್ಳೆಗಳನ್ನು ಜಾಗ್ರತೆಯಾಗಿ ನಿರ್ಮೂಲನ ಮಾಡುವುದಕ್ಕೆ ಸರ್ವಪ್ರಯತ್ನ ಮಾಡಬೇಕು. ಸೆಂಟ್ರಲ್ ಮಲೇರಿಯಾ ಇರ್ರ್ಯಾಡಿಕೇಷನ್ ಸ್ಕೀಂ ಮುಖಾಂತರ ಈ ಕಾರ್ಯ ಮಾಡಬೇಕು ಎಂದು ನಾನು ಹೇಳುತ್ತೇನೆ. ಜೊತೆಗೆ ಫ್ಯಾಮಿಲಿ ಪ್ಲಾನಿಂಗ್ ಆ ಬಗ್ಗೆ, ಹೇಳುವುದಾದರೆ ಆರತಿಗೊಬ್ಬಮಗಳು ಕೀರತಿಗೊಬ್ಬಮಗ ಎಂದು ಪ್ರಚಾರ ಮಾಡುವುದನ್ನು ದೇಶದಲ್ಲೆಲ್ಲಾ ಕೇಳಿದ್ದೇವೆ. ಇದರ ಬಗ್ಗೆ ನಾನು ಒಂದು ಸಣ್ಣ ಸಲಹೆಯನ್ನು ಕೊಡುತ್ತೇನೆ, ಈಗತಾನೇ ವಿರೋಧಪಕ್ಷದವರು ಹೇಳಿದ ಹಾಗೆ ಆರೋಗ್ಯ ಬಹಳ ಪ್ರಾಮುಖ್ಯವಾದುದು. ಆದರೆ ನಮ್ಮ ಹತೋಟಿ ಮೀರಿ ಕಾರ್ಯಗಳು ಆಗುತ್ತಿವೆ. ಈಗ ಬಂದಿರುವ ಬರಗಾಲಕ್ಕೆ ಯಾರು ಕಾರಣರು? Even nature is against us. ಆಧುನಿಕ ರೀತಿಯ ವೈದ್ಯಕೀಯ ಸೌಲಭ್ಯಗಳನ್ನು ಕಂಡುಹಿಡಿದ ಮೇಲೆ 'ಮರಣದ' ಸಂಖ್ಯೆ ಕಡಿಮೆಯಾಗುತ್ತಾ ಇದೆ, ಜನಗಳು ಜಾಸ್ತಿಯಾಗುತ್ತಾ ಇದ್ದಾರೆ, ದೇಶದಲ್ಲಿ ಇದನ್ನು ಹೇಗೆ ಕಂಟ್ರೋಲ್ ಮಾಡಬೇಕು ಎನ್ನುವುದು ಮುಖ್ಯ ಸಮಸ್ಯೆಯಾಗಿದೆ. 'ನಿರೋಧ' ಬಗ್ಗೆ ಈಗ ರೇಡಿಯೋಗಳಲ್ಲಿ ಏನು ಪ್ರಚಾರ ಮಾಡುತ್ತಿದ್ದಾರೆ, ಅದು ಸರಿಯಲ್ಲ. ಒಂದೊಂದು ಸಾರಿ ನಮ್ಮ ಮಕ್ಕಳೇ ನಮ್ಮನ್ನು ಕೇಳುತ್ತಾರೆ, ನಿರೋಧ ಎಂದರೆ ಏನು ಎಂದು. ಇದು ಮಕ್ಕಳ ಮನಸ್ಸಿನಲ್ಲಿ ಒಂದು ತರಹ ಭಾವನೆಯನ್ನು ಮೂಡಿಸುತ್ತದೆ,. ಇದು ಬಹಳ ದುಷ್ಪರಿಣಾಮ ಸಂಗತಿ. ಇದನ್ನು ಸೋಷಿಯಲ್ ವೆಲ್‌ಫೇರ್ ಇನ್‌ಸ್ಟಿಟ್ಯೂಷನ್ಸ್‌ಗೆ ಹೇಳಿ ಅದರ ಮೂಲಕ ಪ್ರಚಾರ ಮಾಡಿಸಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಮೊಬೈಲ್ ಹಾಸ್ಪಿಟಲ್ಸ್. ಬರಗಾಲ ಈಗ ಬಂದಿರುವುದರಿಂದ ಈ ದೇಶದಾದ್ಯಂತ ಮೊಬೈಲ್ ಆಸ್ಪತ್ರೆಗಳನ್ನು ತೆಗೆಯಬೇಕು ಅಲ್ಲದೆ. ಕಣ್ಣು, ಕಿವಿ, ಮೂಗು ಟ್ಯೂಬರ್‌ಕಿಲೋಸಿಸ್ ಇತ್ಯಾದಿಗಳಿಗೆ ಚಿಕಿತ್ಸೆ ಕೊಡುವುದನ್ನು ಜಾಸ್ತಿ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಕೆಲವು ಸಂದರ್ಭದಲ್ಲಿ ಕಾಂಪ್ಲಿಕೇಟೆಡ್ ಇನ್‌ಸ್ಟ್ರುಮೆಂಟ್ಸ್ ಇರುತ್ತವೆ, ಅವುಗಳು ಕೆಟ್ಟು ಹೋದರೆ, ಕಂಪನಿಯವರೇ ಬಂದು ಇವುಗಳನ್ನು ರಿಪೇರಿ ಮಾಡಬೇಕು. ಇದಕ್ಕೆ 3-4 ತಿಂಗಳು ತಡವಾಗಬಹುದು, ಆದ್ದರಿಂದ ಡಿಪಾರ್ಟ್‌ಮೆಂಟಿನವರು ಸಂಬಂಧಪಟ್ಟ ಮೆಷನರಿಗಳನ್ನು ರಿಪೇರಿ ಮಾಡುವುದಕ್ಕೆ ಮೆಕಾನಿಕ್ಸ್‌ಗಳನ್ನು ಅಪಾಯಿಂಟ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಜೊತೆಗೆ ತಜ್ಞರುಗಳು ಬೋರ್ಡ್ ಆಫ್ ವಿಸಿಟರ್ಸ್ ಅಥವಾ ಸಲಹಾ ಸಮಿತಿ ಇರಬೇಕು. ನಮ್ಮಲ್ಲಿ ಸಲಹಾ ಸಮಿತಿಗಳು ಇವೆ. ಬೋರ್ಡ್ ಆಫ್ ವಿಸಿಟರ್ಸ್ ಇದ್ದಾರೆ, ಆದರೆ ಅವರಿಗೆ ಪವರ್ಸ್ ಸಾಲದು. ಹೆಚ್ಚಿನ ರೀತಿಯಲ್ಲಿ ಅವರಿಗೆ ಪವರ್ಸ್ ಕೊಟ್ಟು ಬೋರ್ಡ್ ಆಫ್ ವಿಸಿಟರ್ಸ್ ಸರಿಯಾಗಿ ಕೆಲಸ ಮಾಡುವಂತೆ ಮಾಡಿದರೆ ಮಾತ್ರ ಅನುಕೂಲವಾಗುತ್ತದೆ. ಈಗ ಆಸ್ಪತ್ರೆಗಳಿಗೆ

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಕಟ್ಟಡಗಳಿಗೆ ಅಭಾವ ಇದೆ ಎಂದು ನನಗೆ ಗೊತ್ತಿದೆ. ಹಿಂದೆ ತಮ್ಮಲ್ಲಿದ್ದ ಹಣಕೊಟ್ಟು ಸಾರ್ವಜನಿಕರಿಗೆ ದಾನಶೂರ, ಜನೋಪಕಾರಿ, ಧರ್ಮಪ್ರಕಾಶ ಧರ್ಮಾತ್ಮ ಮುಂತಾದ ಟೈಟಲ್‌ಗಳನ್ನು ಕೊಟ್ಟು, ಬೇಕಾದಷ್ಟು ಕಟ್ಟಗಳನ್ನು ಸರ್ಕಾರದವರು ಕಟ್ಟಿಸಿಕೊಂಡಿದ್ದಾರೆ. ಈಗಲೂ ಸಹ ಆ ತರಹ ಯೋಜನೆ ಮಾಡಿ ಸಾರ್ವಜನಿಕರಿಂದ ಹಣ ಪಡೆಯುವುದಕ್ಕೆ ಪ್ರಯತ್ನಿಸಬೇಕು. ಹಾಗೆ ಮಾಡಿದರೆ ಆಸ್ಪತ್ರೆಗಳನ್ನು ಕಟ್ಟಿಸುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಸುಲಭವಾಗುತ್ತೆ. ನಮಗೆ ವರ್ಲ್ಡ್ ಬ್ಯಾಂಕ್‌ನವರು ಇದಕ್ಕೆ ಹಣ ಕೊಟ್ಟರೂ ಸಾಲುವುದಿಲ್ಲ, ಇಂಟರ್‌ನ್ಯಾಷನಲ್ ಬ್ಯಾಂಕನವರು ಕೊಟ್ಟರೂ ಸಾಲುವುದಿಲ್ಲ, ಯಾರೂ ಕೊಟ್ಟರೂ ಸಾಲುವುದಿಲ್ಲ. ಲೋಕಸೇವಾನಿರತ ಮುಂತಾದ ಟೈಟಲ್‌ಗಳನ್ನು ಕೊಟ್ಟರೆ ಬ್ಲಾಕ್ ಮನಿ ಹೊರ ಬರುವಂತೆ ಮಾಡಿದರೆ ಆಗ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸಹಾಯವಾಗುತ್ತದೆ. ಇಷ್ಟು ಸಲಹೆಗಳನ್ನು ಕೊಟ್ಟು ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈಕರ್ನಾಟಕ

† ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ ಅಧ್ಯಕ್ಷರೇ, ಈ ಜನಾರೋಗ್ಯ ಬಾಬಿನ $26\frac{1}{2}$ ಕೋಟಿರೂಪಾಯಿಗಳ ಡಿಮ್ಯಾಂಡ್ ಬಗ್ಗೆ ನಾನು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಇಡಬಯಸುತ್ತೇನೆ. ಪ್ರಥಮತಃ ಕಳೆದ ಅಧಿವೇಶನದಲ್ಲಿ ನಾನು ಮನವಿ ಮಾಡಿದ್ದೆ, ಈ ಆಸ್ಪತ್ರೆಗಳಲ್ಲಿ ವೈದ್ಯರು ಏನು ಇದ್ದಾರೆ, ಅವರು ಹೆಚ್ಚಾಗಿ ಸಿಟಿಗಳಲ್ಲಿರತಕ್ಕ ವೈದ್ಯರುಗಳು. ಇವರುಗಳನ್ನು ಪೂರ್ಣವಾಗಿ ತೆಗೆದು ಗ್ರಾಮಾಂತರ ಪ್ರದೇಶಗಳಿಗೆ ಹಾಕಬೇಕು. ಗ್ರಾಮಾಂತರ ಪ್ರದೇಶಗಳಿಗೆ ಹೋಗುವವರು ಕಾಲೇಜಿನಿಂದ ಹೊರಗೆ ಬರುವವರು, ಏನೂ ಅನುಭವವಿಲ್ಲದೆ ಇರುವವರು, ಹೋಗಿ ಆಸ್ಪತ್ರೆಗಳಲ್ಲಿ ಸಂಜೀವಿನಿ ಕೊಡುವ ಬದಲು ವಿಷಕೊಡುವ ಆಸ್ಪತ್ರೆಗಳನ್ನಾಗಿ ಮಾಡಿದ್ದಾರೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಡಾಕ್ಟರುಗಳಲ್ಲಿ ಕೆಲವರನ್ನು ರೋಷಿಯೋದ ಮೇಲೆ ಸಿಟಿಗೆ ಹಾಕಬೇಕು, ಮತ್ತು ಸಿಟಿಯಲ್ಲಿರತಕ್ಕ ಕೆಲವರನ್ನಾದರೂ ಗ್ರಾಮಾಂತರ ಪ್ರದೇಶಗಳಿಗೆ ಹಾಕಬೇಕು. ಗ್ರಾಮಾಂತರ ಪ್ರದೇಶದ ಡಾಕ್ಟರುಗಳಿಗೆ ತರಪೇತಿ ಕೊಟ್ಟರೆ ಒಳ್ಳೆಯದಾಗುತ್ತದೆ. ಇದರ ಬಗ್ಗೆ ತಾವು ಆಲೋಚನೆ ಮಾಡಿ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತೀರಿ ಎಂದು ನಾನು ಈ ಸಂದರ್ಭದಲ್ಲಿ ಅಧ್ಯಕ್ಷರ ಮೂಲಕ ಸಚಿವರ ಗಮನವನ್ನು ಸೆಳೆಯುತ್ತೇನೆ. ಎಂ. ಬಿ. ಬಿ. ಎಸ್. ಮಾಡಿದಂಥ ಡಾಕ್ಟರುಗಳು ಗ್ರಾಮಾಂತರ ಪ್ರದೇಶಕ್ಕೆ ಹೋಗುವುದಕ್ಕೆ ತಯಾರಾಗಿಲ್ಲ. ಅವರು ಸಿಟಿಗಳಲ್ಲಿ ಸ್ಕೂಟರ್‌ನಲ್ಲಿ ತಿರುಗಾಡಬೇಕು, ಮೋಟಾರ್‌ಗಳಲ್ಲಿ ತಿರುಗಾಡಬೇಕು, ಇಂಥ ಹವ್ಯಾಸಗಳನ್ನು ಅವರು ಇಟ್ಟುಕೊಂಡಿರುತ್ತಾರೆ? ಗ್ರಾಮಾಂತರ ಪ್ರದೇಶದ ಅಭಿಮಾನ ಇರುವ ವೈದ್ಯರನ್ನು ತರಪೇತಿ ಮಾಡುವುದರಲ್ಲಿ ಏನು ಲೋಪ ದೋಷ ಇದೆಯೆಂದರೆ ಅವರು ಮುಂದೆ ಬರುತ್ತಾ ಇಲ್ಲ. ಆದ್ದರಿಂದ ಎಲ್ ಎ ಎಂ ಎಸ್ ವೈದ್ಯರನ್ನು ಎಂ. ಬಿ. ಬಿ. ಎಸ್. ಸ್ಕೇಲ್‌ನಲ್ಲಿಟ್ಟು, ಈ ಎಂ. ಬಿ. ಬಿ. ಎಸ್.ನವರ ಅಹಂಕಾರವನ್ನು ದಮನ ಮಾಡಬೇಕು, ಇದರಿಂದ ಜನರಿಗೆ ಸಂಜೀವಿನಿ ಒದಗಿಸಿಂದತಾಗುತ್ತದೆ ಎಂದು ಅಧ್ಯಕ್ಷರ ಮುಖಾಂತರ ಸಚಿವರಿಗೆ ತಿಳಿಸುತ್ತೇನೆ.

ಇನ್ನು ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಮಾಡುವ ವಿಷಯದಲ್ಲಿ, ಆಸ್ಪತ್ರೆಗಳಿಗೆ ಔಷಧಿ ಸಮರ್ಪಕವಾಗಿ ಸರಬರಾಜು ಆಗುತ್ತಿಲ್ಲ. ಇದನ್ನು ಮಾನ್ಯಸಚಿವರ ಗಮನಕ್ಕೆ ತರುತ್ತೇನೆ. ಈ ಮನೆಯಲ್ಲಿ ಇದರ ಬಗ್ಗೆ ಒಂದು ಪ್ರಶ್ನೆ ಬಂದಾಗ ಅವರು ಮಾರ್ಚಿ ತಿಂಗಳಲ್ಲಿ 5-8 ದಿವಸ ಇಂಡೆಂಟ್ ತೆಗೆದುಕೊಂಡು ಹೋದರೂ ಅವರಿಗೆ ಔಷಧಿಗಳು ಸರಿಯಾಗಿ ಸಿಕ್ಕುತ್ತಿಲ್ಲ. ಇಂಥ ಪರಿಸ್ಥಿತಿ ಇವತ್ತು ಅಲ್ಲಿದೆ. ಕೆಲವು ಏಜೆಂಟ್ ಕಂಪನಿಗಳಿಂದ ಮೆಡಿಸಿನ್ ಕೊಂಡುಕೊಂಡು ಉಗ್ರಾಣದಲ್ಲಿ ಸ್ಟಾಕ್ ಮಾಡಿ ಸಪ್ಲೈ ಮಾಡತಕ್ಕ ಪದ್ಧತಿ ಈಗಾಗಲೇ ಜಾರಿಯಲ್ಲಿದೆ. ಅಲ್ಲಿಗೆ ಈಗಾಗಲೇ ಪರಿಣಿತರನ್ನು ಹಾಕಿದ್ದಾರೆ ಎಂದು ಕೇಳಿದ್ದೇನೆ. ಅದಕ್ಕೆ ನನ್ನ ಸಂತೋಷವನ್ನು ವ್ಯಕ್ತಮಾಡುತ್ತೇನೆ. ಲೈಫ್ ಎಕ್ಸ್‌ಪೈರ್ ಆಗಿರುವ ಔಷಧಿಗೆ ಲೈಫ್ ಇರುವ ಚೀಟಿ ಅಂಟಿಸಿ ಸರಬರಾಜು ಮಾಡುವ ಸಂದರ್ಭಗಳು ಇವೆ. ಆದ್ದರಿಂದ ಮೆಡಿಸಿನ್ ಸಪ್ಲೈ ಮಾಡುವುದನ್ನು ತ್ವರಿತಗೊಳಿಸುವುದರ ಜೊತೆಗೆ ಒಳ್ಳೆಯ ಉತ್ತಮವಾದ ಔಷಧಿಯನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಟೆಲಿಫೋನ್ ಸಂಪರ್ಕ ಕೊಡಿಸಿಕೊಟ್ಟಿಲ್ಲ. ವೈದ್ಯಕೀಯ ಸೌಕರ್ಯ ಯಾವಾಗಲೂ ಬೇಕಾಗುತ್ತದೆ, ಕಲ್ಲು ಸಿಮೆಂಟ್‌ನೊಂದಿಗೆ ಕೆಲಸಮಾಡತಕ್ಕ

ಡಿ. ಡಬ್ಲ್ಯೂ. ಡಿ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್ಸ್‌ಗೆ ಟೆಲಿಫೋನ್ ಕೊಟ್ಟಿರುವಾಗ ಪ್ರಾಣ ಉಳಿಸುವ ವೈದ್ಯರಿಗೆ ಒಂದು ಟೆಲಿಫೋನ್ ಸೌಕರ್ಯ ಒದಗಿಸಿಕೊಡದೆ ಇರುವುದು ಸರಿಯಲ್ಲ. ತಾವು ಇದರ ಬಗ್ಗೆ ತೀವ್ರವಾದ ಪ್ರಯತ್ನ ಹರಿಸಿ ಎಲ್ಲೆಲ್ಲಿ ಫೋನ್ ಕೊಡುವುದಕ್ಕೆ ಅವಕಾಶ ಇದೆಯೋ ಇಂಥ ಪ್ರತಿಯೊಂದು ಆಸ್ಪತ್ರೆಗೂ ಟೆಲಿಫೋನ್ ಸೌಕರ್ಯವನ್ನು ಒದಗಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ಮಾನ್ಯ ಗೆಳೆಯರು ಸಲಹಾ ಸಮಿತಿಗಳ ಬಗ್ಗೆ ಹೇಳಿದರು, ಸಲಹಾಸಮಿತಿಗಳು ಇದುವರೆಗೂ ಯಾವುವೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದು ನಿರ್ವಿವಾದವಾದ ವಿಚಾರ. ಇತ್ತೀಚಿಗೆ ಕೆಲವು ಸಲಹಾಸಮಿತಿಗಳನ್ನು ಪುನರ್ ನೇಮಕಮಾಡಿದ್ದಾರೆಂದು ಕೇಳಿದ್ದೇನೆ. ಪುನರ್‌ನೇಮಕಮಾಡುವಾಗ ಮಾನ್ಯ ಚನ್ನಬಸಪ್ಪನವರು ಹೇಳಿದಹಾಗೆ ವಿಧಿನಿಯಮಗಳು ಬೇಕು. ಕಡ್ಡಾಯವಾಗಿ ಪುರಸಭಾ ಅಧ್ಯಕ್ಷರು ಸಲಹಾ ಸಮಿತಿಯಲ್ಲಿರಬೇಕು ತಾಲ್ಲೋಕು ಮಂಡಲಿ ಅಧ್ಯಕ್ಷರು ಆ ಕ್ಷೇತ್ರದ ಶಾಸಕರು ಆ ಸಲಹಾ ಸಮಿತಿಯಲ್ಲಿ ಇರುಬೇಕು...

3-30 P.M.

Mr. DEPUTY SPEAKER.—They are there.

Sri H. S. SIDDAPPA.—In some place they are there but not in all places.

Sri H. SIDDAVEERAPPA.—We are going to appoint.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ವ್ಯವಸ್ಥೆ ಮಾಡಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ಇರತಕ್ಕ ಮಹಿಳಾ ಸದಸ್ಯರು ಇದ್ದರೆ ಆ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕು ಎಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಇನ್ನೂ ಒಂದು ವಿಷಯವನ್ನು ಮಾನ್ಯ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ವೈದ್ಯಕೀಯ ಕಾಲೇಜುಗಳಲ್ಲಿ ಸೀಟುಗಳನ್ನು ಒದಗಿಸುವ ಸಂದರ್ಭದಲ್ಲಿ ವಿಶೇಷ ರೀತಿ ಸೌಲಭ್ಯಗಳನ್ನು ನಿಮ್ನವರ್ಗ ಮತ್ತು ನಿಮ್ನವರ್ಗದಲ್ಲಿ ಹಿಂದುಳಿದ ಜನರಿಗೆ ಒದಗಿಸುತ್ತೀರಿ. ಆದರೆ ನಿವೃತ್ತಿಯೋಧರ ಕುಟುಂಬದಲ್ಲಿ ಇರತಕ್ಕ ಮಕ್ಕಳಿಗೆ ಮೆಡಿಕಲ್ ಸೀಟ್ ಕೊಡುವುದಕ್ಕೆ ವಿಶಿಷ್ಟವಾದ ರೀತಿಯಲ್ಲಿ ಅವಕಾಶ ಕಲ್ಪಿಸಿ ಕೊಡಬೇಕು. ಈಗ 2ಪರ್ಸೆಂಟ್ ರಿಸರ್‌ವೇಷನ್ ಮಾಡಿದ್ದೀರಿ. ಅದು ಸಾಲದು ಇತರ ಇಲಾಖೆಗಳಲ್ಲಿ ನಿವೃತ್ತಯೋಧರಿಗೆ ಅವರ ಮಕ್ಕಳು ಮತ್ತು ಅವರ ಕುಟುಂಬದವರಿಗೆ ಯಾವರೀತಿ ರಿಸರ್‌ವೇಷನ್ ಮಾಡಿದ್ದಾರೆ ಆ ತರಹ ಹೆಚ್ಚಿನ ಸೌಲಭ್ಯವನ್ನು ನಿವೃತ್ತಯೋಧರ ಕುಟುಂಬದವರಿಗೆ ಮೆಡಿಕಲ್‌ಕಾಲೇಜ್‌ಗಳಲ್ಲಿ ಸೀಟು ಕೊಡುವ ಸಂದರ್ಭದಲ್ಲಿ ಹೆಚ್ಚು ಅವಕಾಶ ಮಾಡಿಕೊಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಇನ್ನು ಕೆಲವು ತಾಲ್ಲೋಕು ಮಟ್ಟದ ಆಸ್ಪತ್ರೆಗಳಲ್ಲಿ ಡೆಂಟಲ್ ಯುನಿಟ್ಸ್ ಕೊಡುವ ಸಂದರ್ಭದಲ್ಲಿ ನಿಮ್ಮ ಇಲ್ಲಾಖೆಯಲ್ಲಿ ಏನೋ ಅಚಾತುರ್ಯ ನಡೆದಿದೆ ಎಂದು ಅನಿಸುತ್ತದೆ ತಾಲ್ಲೋಕುಗಳಲ್ಲಿ ಸಣ್ಣ ಆಸ್ಪತ್ರೆಗಳಲ್ಲಿ ಡೆಂಟಲ್ ಯೂನಿಟ್ ಕೊಟ್ಟಿದ್ದಾರೆ. ತಾಲ್ಲೋಕುಮಟ್ಟದಲ್ಲಿ ಇರುವ ದೊಡ್ಡ ಆಸ್ಪತ್ರೆಗಳಿಗೆ ಡೆಂಟಲ್ ಯೂನಿಟ್ ಪ್ರೊವೈಡ್ ಮಾಡಬೇಕಾದುದು ಅತ್ಯಾವಶ್ಯಕ ಮತ್ತು ಅದಕ್ಕೆ ಬೇಕಾದ ಸಲಕರಣೆ ಮತ್ತು ಉಪಕರಣ ಸರಬರಾಜು ಮಾಡಿಲ್ಲ, ಇದನ್ನು ಪರಿಶೀಲನೆ ಮಾಡಬೇಕು, ತಕ್ಷಣ ಡೆಂಟಲ್ ಯೂನಿಟ್ಸ್ ಕೊಟ್ಟು ಡಾಕ್ಟರುಗಳನ್ನು ಪೋಸ್ಟ್ ಮಾಡಬೇಕು. ಮತ್ತೆ ಅಲ್ಲಿ ಡೆಂಟಲ್ ಯೂನಿಟ್‌ಗಳಿಗೆ ಬೇಕಾದಂತಹ ಸಲಕರಣೆ ಮತ್ತು ಉಪಕರಣಗಳನ್ನು ಆದಷ್ಟು ಜಾಗ್ರತೆ ಸರಬರಾಜು ಮಾಡಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಈ ಇಲಾಖೆಯಲ್ಲಿ ಅಚಾತುರ್ಯ ನಡೆದು ಇಂಥ ತಪ್ಪು ನಡೆದಿದೆ ಇದನ್ನು ಸರಿಪಡಿಸಬೇಕು ಎಂದು ಮನವಿಮಾಡುತ್ತೇನೆ.

ಇನ್ನು ಮಲೇರಿಯಾ ಅನೇಕ ತಾಲ್ಲೋಕುಗಳಲ್ಲಿ ಸಿಕ್ಕಾಪಟ್ಟೆ ಬೆಳೆಯುತ್ತಿದೆ. ಕಡೂರು ಮತ್ತು ಅರಸೀಕೆರೆ ತಾಲ್ಲೂಕುಗಳಲ್ಲಿ ಸಿಕ್ಕಾಪಟ್ಟೆ ಮಲೇರಿಯಾ ಇದೆ. ಅರಸೀಕೆರೆ ತಾಲ್ಲೂಕಿನಲ್ಲಿ ಸುಮಾರು 15-20 ಸಾವಿರ ಜನ ಮಲೇರಿಯಾ ಪೇಷಂಟ್‌ಗಳು ಇದ್ದಾರೆ. ಇದರ ಬಗ್ಗೆ ತೀವ್ರ ಗಮನಹರಿಸಬೇಕು ಮಲೇರಿಯಾ ಇಡೀ ತಾಲ್ಲೋಕಿನಲ್ಲಿ ವ್ಯಾಪಕವಾಗಿ ಅನೇಕ ಜನ ನರಳತಕ್ಕ ಪರಿಸ್ಥಿತಿ ಬರುತ್ತಿದೆ. ಅಧ್ಯಕ್ಷರ ಮುಖಾಂತರ ಮನವಿಮಾಡುತ್ತೇನೆ.

ಇನ್ನು ಹೆಲ್ತ್ ಯೂನಿಟ್‌ಗಳಿಗೆ ಸರಬರಾಜು ಆಗತಕ್ಕ ವಾಹನಗಳ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯಬೇಕೆಂದು ಇಚ್ಛೆಪಡುತ್ತೇನೆ. ಹೆಲ್ತ್ ಯೂನಿಟ್‌ಗೆ ವಾಹನಗಳನ್ನು ಸರಬರಾಜು ಮಾಡುತ್ತಿದ್ದಾರೆ. ಇವು ಎಲ್ಲಿಂದ ಬರುತ್ತವೆ ಎಂದರೆ ಡೈರೆಕ್ಟರ್ ಆಫೀಸಿನಲ್ಲಿ

(ಶ್ರೀ ಎಚ್. ಎಸ್. ಸಿದ್ದಪ್ಪ)

ಒಂದು ವರ್ಷ ಕೊಳೆಯುತ್ತಿರುತ್ತವೆ ಕಳೆದ ವರ್ಷ ನೋಡಿದೆ ಡೈರೆಕ್ಟರ್ ಆಫೀಸಿನಲ್ಲಿ ಯೂನಿಸೆಫ್ ವಾಹನ ಇತ್ತು. ಅಧಿವೇಶನ ಮುಗಿದಮೇಲೆ ನೋಡಿದೆ ಇನ್ನು ಅಲ್ಲೇ ಇತ್ತು. ಯಾವ ಯಾವ ಯೂನಿಟ್‌ಗಳಿಗೆ ಸೇರಬೇಕೋ ತಕ್ಷಣ ಕಳುಹಿಸುವುದಕ್ಕೆ ಏನು ತೊಂದರೆ? ವಾಹನ ಕಳುಹಿಸುತ್ತಾರೆ ಡ್ರೈವರ್ಸ್‌ಗಳನ್ನು ಡೈರೆಕ್ಟರೇ ನೇಮಕಮಾಡಿ ಕಳುಹಿಸಬೇಕು. ಇಲ್ಲಿಗೆ ಬರುವಾಗ ಹಳೆ ಚಕ್ರ ಹಾಕಿ ಕಳುಹಿಸುತ್ತಾರೆ, ಬರ್ಸ್ಟ್ ಆಗುತ್ತವೆ. ರಿಪೇರಿ ಮಾಡುವುದಕ್ಕೆ ಇಲ್ಲದಂತಹ ವಾಹನ ನಿಂತುಹೋಗುತ್ತವೆ ಒಂದು ಸಾವಿರ ಫ್ಯಾಮಿಲಿಪ್ಲ್ಯಾನಿಂಗ್ ಅಪರೇಷನ್ ಯೂನಿಟ್ ತೆರೆಯುವಾಗ ಅಲ್ಲಿಗೆ ಈ ವಾಹನದಲ್ಲಿ ಉದ್ಘಾಟನಾ ಸಮಾರಂಭಕ್ಕೆ ಕರೆದುಕೊಂಡು ಹೋದರು. ಅದು ಬಟ್ಟೆ ಇಲ್ಲದೆ ಟೆಂಟ್ ಇದ್ದಹಾಗೆ ಇತ್ತು. ವಾಹನ ಬಂದು ಎರಡು ತಿಂಗಳಾಗಿದೆ. ಹೀಗೆ ಆದರೆ ಹೇಗೆ? ಇದನ್ನು ಸ್ವಲ್ಪ ಚುರುಕುಮಾಡಬೇಕು. ಸಂಜೀವಿನಿ ಪರ್ವತ ತರತಕ್ಕ ಚೈತನ್ಯಗಾರರಿಗೆ ಪೋರ್ಟ ಪೋಲಿಯೋ ಹಾಕಿದ್ದಾರೆ. ಇದನ್ನು ಸರಿಪಡಿಸಬೇಕು ಎಂದು ಮನವಿಮಾಡುತ್ತೇನೆ. ಇನ್ನೊಂದು ವಿಷಯ ಹೇಳುತ್ತೇನೆ, ಎಲ್ಲೆಲ್ಲಿ ನಿಮ್ಮ ವಾಹನಗಳು ಇವೆ ಅಲ್ಲಿ ಪ್ರತಿಯೊಂದು ಪೆಟ್ರೋಲ್ ಬಂಕ್‌ನಲ್ಲಿ ಸಾಲ 6–7 ಸಾವಿರ ರೂಪಾಯಿ ಪೆಂಡಿಂಗ್ ಇವೆ. ಹೆಲ್ತ್ ಡಿಪಾರ್ಟ್ಮೆಂಟ್ ವಾಹನ ಹೋದರೆ ಪೆಟ್ರೋಲ್ ಕೊಡುವುದಿಲ್ಲವೆಂದು ಹೇಳುತ್ತಾರೆ. ಯಾವ ಯಾವ ಪೆಟ್ರೋಲ್ ಬಂಕ್‌ನಲ್ಲಿ: ಯಾವ ಯಾವ ಆಸ್ಪತ್ರೆ ವಾಹನಗಳ ಪೆಟ್ರೋಲ್ ಹಣ ಬಾಕಿ ಕೊಡಬೇಕಾಗಿದೆ ಎಷ್ಟು ಬಿಲ್ ಬಾಕಿ ಇದೆ ಅದನ್ನು ಮೊದಲು ತರಿಸಿರಿ. ಎಲ್ಲಾದರೂ ಪೇಷಂಟ್ ಕರೆದುಕೊಂಡು ಬರಬೇಕಂ ಅಥವಾ ಡಾಕ್ಟರಗಳು ಹೋಗಬೇಕು ಎಂದರೆ ಪೇಷಂಟ್ ತಲೆಮೇಲೆ ಕೈಹಾಕಿ ಪೆಟ್ರೋಲ್ ಹಾಕಿಸುತ್ತಾರೆ. ಪೆಟ್ರೋಲ್ ಬಂಕ್‌ಗಳಲ್ಲಿ 10 ಸಾವಿರದಿಂದ ಹಿಡಿದು 20 ಸಾವಿರದವರೆಗೆ ಪೆಂಡಿಂಗ್ ಇವೆ ಅನೇಕ ಪೆಟ್ರೋಲ್ ಬಂಕ್‌ನವರು ಈ ಇಲಾಖೆಯ ಹೆಲ್ತ್ ಆಫೀಸರ್ಸ್‌ಗೆ ಲಾಯರ್ ನೋಟಿಸ್ ಕೊಟ್ಟಿದ್ದಾರೆ.

ಇನ್ನು ಆಸ್ಪತ್ರೆಗಳಲ್ಲಿ ಆಹಾರ ಒದಗಿಸಿಕೊಡತಕ್ಕ ಪರಿಸ್ಥಿತಿ ನೋಡಿದರೆ ರೇಷನ್ ಪಡೆದು ಒಂದು ಆಸ್ಪತ್ರೆಯಲ್ಲಿ ಅಡಿಗೆ ಮಾಡಿಸತಕ್ಕವರು ಕುಕ್ ಇಟ್ಟುಕೊಂಡು ಮಾಡಿಸುತ್ತಾರೆ ರೇಷನನ್ನು ರೇಷನ್ ಇಲಾಖೆಯವರು ಒದಗಿಸುತ್ತಾ ಇಲ್ಲ, ರೆಫ್ಯೂಸ್ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ. ಆಸ್ಪತ್ರೆಗೆ ನೇರವಾಗಿ ಹೋಲ್‌ಸೇಲ್ ಡಿಪೋವಿನಿಂದ ಅಥವಾ ಸೊಸೈಟಿ ಮುಖಾಂತರ ಆಹಾರ ಒದಗಿಸಿ ಕೊಡಿ ಎಂದು ಕೇಳಿದರೆ ಆಜ್ಞೆಯಿಲ್ಲ ಎಂದು ಹೇಳುತ್ತಾರೆ. ಸಕ್ಕರೆ ಮತ್ತು ಬ್ರೆಡ್ಡಿಗೆ ಬೇಕಾದಂತ ವೀಟ್ ಪ್ರೊಡಕ್ಟ್ ಇಲ್ಲ. ಅದಕ್ಕೆ ದಯವಿಟ್ಟು ಸರಿಪಡಿಸಬೇಕು ಮತ್ತು ನಿರ್ದಿಷ್ಟವಾದ ಆಜ್ಞೆಯನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಯಾವ ಯಾವ ಆಸ್ಪತ್ರೆಗೆ ಎಷ್ಟೆಷ್ಟು ಆಹಾರ ಸಾಮಗ್ರಿ ಒದಗಿಸಿಕೊಡಬೇಕು ಎಂದು ತಿಳಿದು ಅಷ್ಟು ಸಾಮಾಗ್ರಿಗಳನ್ನು ಒದಗಿಸತಕ್ಕ ವ್ಯವಸ್ಥೆಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಕಡೆಯದಾಗಿ ತಮ್ಮ ಮುಖಾಂತರ ಇಷ್ಟನ್ನು ಗಮನಕ್ಕೆ ತರುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಹಾಕತಕ್ಕ ನರ್ಸಸ್, ಮಿಡ್‌ವೈಫ್‌ಮೇಲೆ ನರ್ಸ್ ಅಟೆಂಡರ್ಸ್ ಪೋಸ್ಟ್‌ಗಳು ಬಹಳ ಆಸ್ಪತ್ರೆಗಳಲ್ಲಿ ವೇಕೆಂಟ್ ಇವೆ ಅದನ್ನು ಅದಷ್ಟು ಜಾಗ್ರತೆ ಭರ್ತಿಮಾಡಿಸಿ ಸೂತ್ರವಾಗಿ ನಡೆಯುವಂತೆ ಮಾಡಬೇಕು. ಶಕ್ತಿ ಚಾತುರ್ಯವುಳ್ಳ ಬುದ್ಧಿವಂತರನ್ನು ಗ್ರಾಮಾಂತರ ಪ್ರದೇಶಗಳಿಗೆ ಹಾಕುವ ವ್ಯವಸ್ಥೆ ಮಾಡಬೇಕು. ಇದರಿಂದ ಗ್ರಾಮಾಂತರ ಪ್ರದೇಶದ ಜನರ ಕಲ್ಯಾಣವಾಗುತ್ತದೆ ಎಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಕೆ. ನಾದಫ್ (ಶಿಗ್ಗಾಂ).—ಮಾನ್ಯ ಅಧ್ಯಕ್ಷರೇ ನಾನು ಆರೋಗ್ಯಮಂತ್ರಿಗಳು ಮಂಡಿಸಿದಂಥ ಬೇಡಿಕೆಯನ್ನು ಸ್ವಾಗತಿಸಿ ಕೆಲವೊಂದು ಸೂಚನೆಗಳನ್ನು ಮಾಡಬಯಸುತ್ತೇನೆ, ಸರ್ಕಾರದ ಧೋರಣೆ ಪ್ರತಿಯೊಂದು ತಾಲ್ಲೂಕಿಗೂ ಒಂದು ಧವಾಖಾನೆ ಕೊಡಬೇಕು ಎಂದು. ನಾನು ಎಷ್ಟೋ ಸಲ ಒತ್ತಾಯ ತಂದರೂ ಕೂಡ ನನ್ನ ಮತದಾರರ ಕ್ಷೇತ್ರವಾದ ಸವಣೂರಿಗೆ ಪಿ. ಯಚ್. ಸಿ. ಸೆಂಟರ್ ಕೊಟ್ಟಿರುವುದಿಲ್ಲ ಅಲ್ಲಿಯ ಜನರಿಗೆ ಏನಾದರೂ ಬಾಯಿಲೆ ಬಂದರೆ ಎಲ್ಲಿ ಹೋಗಬೇಕೋ ತಿಳಿಯದು. ಯಾವ ಧವಾಖಾನೆಗೆ ಹೋದರೂ ನಮ್ಮ ಕಕ್ಷೆಯಲ್ಲಿ ಬರುವುದಿಲ್ಲ ಬೇರೆ ಧವಾಖಾನೆಗೆ ಹೋಗಿ ಎಂದು ಹೇಳುತ್ತಾರೆ ಜನರ ಕಷ್ಟವನ್ನು ಕೇಳುವುದು ಕಠಿಣವಾಗಿದೆ.

ಆದುದರಿಂದ ಸರ್ಕಾರದವರು ಸವಣೂರು ತಾಲ್ಲೂಕಿಗೆ ಒಂದು ಪಿ. ಹೆಚ್. ಸಿ. ಸೆಂಟರ್‌ನ್ನು ಮಂಜೂರು ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಶಿಗ್ಗಾವಿಯಲ್ಲಿ ಒಂದು ಮೊಬೈಲ್ ಡಿಸ್ಪೆನ್ಸರಿ ಇದೆ. ಅದು ಪೂರಾ ವರ್ಷದಿಂದಲೂ ಹಾಗೆಯೇ ಇದೆ. ಅಲ್ಲಿಗೆ ಒಂದು ಜೀಪ್ ಕೂಡ ಕೊಟ್ಟಿಲ್ಲ. ಅಲ್ಲಿ ಡಾಕ್ಟರ್ ಕೂಡ ಹಾಗೆಯೇ ದವಾಖಾನೆಯಲ್ಲಿ ಇದ್ದಾರೆ. ಆದುದರಿಂದ ಅತ್ತ ಕಡೆ ಮಾನ್ಯ ಆರೋಗ್ಯ ಮಂತ್ರಿಗಳು ಗಮನ ಹರಿಸಿ ಒಂದು ಜೀಪ್ ಕೊಟ್ಟು ಅದನ್ನು ಉತ್ತಮಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ವೈದ್ಯಕೀಯ ಕಾಲೇಜುಗಳಲ್ಲಿ ಅಲ್ಪ ಸಂಖ್ಯಾತರಿಗೆ ಪ್ರವೇಶ ಸಿಕ್ಕುವುದೇ ಕಷ್ಟವಾಗಿರುತ್ತದೆ. ಬೇರೆ ಜನರಿಗೆ ಪ್ರವೇಶಗಳು ಸಿಕ್ಕುತ್ತಾ ಇರುವುದನ್ನು ನೋಡಿದರೆ ಅಲ್ಪ ಸಂಖ್ಯಾತರಿಗೆ ಆ ಪ್ರಮಾಣದಲ್ಲಿ ಸಿಕ್ಕದೇ ಇರುವುದು ತುಂಬಾ ಶೋಚನೀಯವಾಗಿದೆ, ಆದುದರಿಂದ ಮಾನ್ಯ ಆರೋಗ್ಯ ಮಂತ್ರಿಗಳು ಈ ಅಲ್ಪ ಸಂಖ್ಯಾತರ ಬಗ್ಗೆ ಲಕ್ಷ್ಯ ಕೊಟ್ಟು ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ಡಾಕ್ಟರುಗಳ ಅಪಾಯಿಂಟ್‌ಮೆಂಟ್ ಅವರಿಗೆ ಸ್ಥಾನ ದೊರೆಯುವ ಹಾಗೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕೆಲವೊಂದು ಪಿ. ಹೆಚ್. ಸಿ. ಸೆಂಟರ್‌ಸ್ ತೆರೆದಿದ್ದಾರೆ. ಆ ದವಾಖಾನೆಗಳಿಗೆ ಡಿಪ್ಲೊಮಾ ಹೋಲ್ಡರ್ಸ್ ಡಾಕ್ಟರುಗಳನ್ನು ನೇಮಿಸಿದ್ದಾರೆ. ಈ ಬಗ್ಗೆ ನಾನು ಹೇಳುವುದು ಏನೆಂದರೆ ಅಲ್ಲಿಗೆ ಒಬ್ಬೊಬ್ಬ ಎಂ. ಬಿ. ಬಿ. ಎಸ್. ಪಾಸ್ ಆಗಿರುವ ಡಾಕ್ಟರುಗಳನ್ನು ನೇಮಿಸಬೇಕೆಂದು ನಾನು ಸೂಚಿಸಬಯಸುತ್ತೇನೆ.

ಇನ್ನು ಈಗ 1973–74 ನೇ ಸಾಲು ಪ್ರಾರಂಭವಾಗಿದ್ದರೂ ಕೂಡ ಅನೇಕ ದವಾಖಾನೆಗಳಲ್ಲಿ 1972-73ನೇ ಸಾಲಿಗೆ ಸಲ್ಲಬೇಕಾದಂಥ ಔಷಧಿಗಳು ಇನ್ನೂ ಪೂರೈಕೆ ಆಗಿಲ್ಲ. ಈವೊತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಔಷಧಿಗಳು ಸಿಕ್ಕದೇ ಕಷ್ಟವಾಗಿರುವಾಗ ಹಿಂದಿನ ಔಷಧಿಗಳೇ ಆ ದವಾಖಾನೆಗಳಿಗೆ ಮುಟ್ಟದೇ ಇರುವುದು ಅತ್ಯಂತ ಶೋಚನೀಯವಾದ ವಿಷಯ. ಆದುದರಿಂದ ಈ ಬಗ್ಗೆ ಆರೋಗ್ಯ ಮಂತ್ರಿಗಳು ಹೆಚ್ಚಿನ ಗಮನ ಕೊಟ್ಟು ಗ್ರಾಮಾಂತರ ಪ್ರದೇಶಗಳಲ್ಲಿರುವ ದವಾಖಾನೆಗಳಿಗೆ ಔಷಧಿಗಳನ್ನು ತೀವ್ರಗತಿಯಲ್ಲಿ ಕೊಟ್ಟು ಅಲ್ಲಿ ಸುಧಾರಣೆ ಮಾಡಬೇಕೆಂದು ನಾನು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಮೊಬೈಲ್ ಡಿಸ್ಪೆನ್ಸರಿ ವಿಷಯ ಹೇಳುವುದಾದರೆ ಸರ್ಕಾರದವರು ಈಗಾಗಲೇ 30 ಸಾವಿರ ಪ್ರಜಾ ಸಂಖ್ಯೆಗೆ ಒಂದು ಪಿ. ಹೆಚ್. ಸಿ. ಸೆಂಟರ್‌ನ್ನು ಕೊಡಬೇಕೆಂದು ಯೋಚನೆ ಇಟ್ಟುಕೊಂಡಿದ್ದಾರೆಂದು ತಿಳಿದು ಬಂದಿದೆ ಹಾಗಿದ್ದ ಪಕ್ಷದಲ್ಲಿ ಹೆಚ್ಚು ಹೆಚ್ಚಾಗಿ ಗ್ರಾಮಾಂತರ ಪ್ರದೇಶದಲ್ಲಿ ದವಾಖಾನೆಗಳು ದೊರೆಯಬೇಕೆಂದು ನಾನು ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ. ಅದೂ ಅಲ್ಲದೆ ಅನೇಕ ಹಳ್ಳಿಗಳಲ್ಲಿ ಅಪೆಡಮಿಕ್ ಡಿಸೀಸಸ್ ಅಂದರೆ ಮಲೇರಿಯಾ ಕಾಲರಾ ಎದ್ದಿರುವುದು ಕಂಡುಬರುತ್ತಾ ಇದೆ. ಇಷ್ಟೇ ಅಲ್ಲದೆ ನಮ್ಮ ಪ್ರದೇಶದಲ್ಲಿ ಕೆಲವು ಕಡೆಗಳಲ್ಲಿ ಗಿನಿವರ್ಮ್ ರೋಗ ಕಂಡು ಬರುತ್ತಾ ಇದೆ. ಆದುದರಿಂದ ಈ ಗಿನಿವರ್ಮ್ ರೋಗ ಹರಡದೇ ಇರುವ ಹಾಗೆ ಹೆಲ್ತ್ ಇನ್‌ಸ್ಪೆಕ್ಟರನ್ನು ಅಪಾಯಿಂಟ್ ಮಾಡಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಈ ಗಿನಿವರ್ಮ್ ರೋಗ ಹರಡಿರುವುದರಿಂದ ಆ ಬಾವಿಗಳಲ್ಲಿ ಜನಗಳು ನೀರು ಕುಡಿಯುವುದಕ್ಕೆ ಕಷ್ಟವಾಗಿದೆ. ಆದುದರಿಂದ ಆ ಬಾವಿಗಳಿಗೆ ಔಷಧಿಗಳನ್ನು ಸಿಂಪರಿಸಲು ಹೆಚ್ಚು ಔಷಧಿಗಳನ್ನು ಪೂರೈಸಿ ಕೊಡಬೇಕು ಎಂದು ಹೇಳುತ್ತೇನೆ. ಇದುವರೆಗೆ ಅಲ್ಲಿ ಯಾವ ಔಷಧಿಯನ್ನು ಕೂಡ ಹಾಕಿರುವುದು ಕಂಡು ಬಂದಿಲ್ಲ ಈಗಲಾದರೂ ಕೂಡ ಎಲ್ಲೆಲ್ಲಿ ಗಿನಿವರ್ಮ್ ರೋಗ ಇದೆಯೋ ಅಲ್ಲಲ್ಲಿ ಒಬ್ಬೊಬ್ಬ ಹೆಲ್ತ್ ಇನ್‌ಸ್ಪೆಕ್ಟರನ್ನು ನೇಮಿಸಿ ಆ ಬಾವಿಗಳಿಗೆ ಔಷಧಿಗಳನ್ನು ಸಿಂಪರಿಸುವ ಏರ್ಪಾಡು ಮಾಡಬೇಕು ಎಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲದೆ ಈ ಗಿನಿವರ್ಮ್ ರೋಗಕ್ಕೆ ಯಾವ ಔಷಧಿಗಳನ್ನು ಉಪಯೋಗಿಸಬೇಕು ಎನ್ನುವುದು ಇನ್ನೂ ಕಂಡುಹಿಡಿದಿಲ್ಲ ಎಂದು ಈಗಾಗಲೇ ಆರೋಗ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ಬಗ್ಗೆ ನಾನು ಹೇಳುವುದು ಏನೆಂದರೆ ಇದಕ್ಕೆ ಒಂದು ರೀಸರ್ಚ್ ವರ್ಕ್ ತೆಗೆದುಕೊಂಡು ಔಷಧವನ್ನು ಹುಡುಕಲು ಪ್ರಯತ್ನಿಸಬೇಕಾಗಿದೆ ಎನ್ನುವ ಸೂಚನೆಯನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ. ಇಷ್ಟು ಹೇಳಿ ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಸ್. ವೀರಭದ್ರಪ್ಪ (ಕೂಡ್ಲಿಗಿ).—ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು ಇಟ್ಟಿರುವ ಈ ಬೇಡಿಕೆಯನ್ನು ನಾನು ಕೆಲವು ಕಾರಣಗಳಿಂದ ವಿರೋಧಿಸುತ್ತೇನೆ. ಇದಕ್ಕೆ ಕೇವಲ 26 ಕೋಟಿ 48 ಲಕ್ಷ 61 ಸಾವಿರ ರೂಪಾಯಿಗಳನ್ನು ಮಾತ್ರ ಈ ಬೇಡಿಕೆಯಲ್ಲಿ ನಿಗದಿ ಮಾಡಿದ್ದಾರೆ. ಇದರಲ್ಲಿ ಸುಮಾರು ಶೇಕಡಾ 40 ಭಾಗ ಸಿಬ್ಬಂದಿಗಾಗಿ ಹಣ ಖರ್ಚಾಗುತ್ತದೆ. ಅಂದರೆ

(ಶ್ರೀ ಬಿ. ಎಸ್. ವೀರಭದ್ರಪ್ಪ)

ಸುಮಾರು 11 ಕೋಟಿ ರೂಪಾಯಿಗಳು ಸಿಬ್ಬಂದಿಗಾಗಿ ಖರ್ಚಾಗುತ್ತದೆ ಮತ್ತು ಉಳಿದ 15 ಕೋಟಿ ರೂಪಾಯಿಗಳು ನಮ್ಮ ರಾಜ್ಯದ ಜನತೆಗೆ ಉಪಯೋಗವಾಗುತ್ತದೆ ಇದರಿಂದ ನಮ್ಮ ರಾಜ್ಯದಲ್ಲಿರುವ ಜನತೆಗೆ ತಲಾ ಒಂದಕ್ಕೆ ಒಂದು ವರ್ಷಕ್ಕೆ 5 ರೂಪಾಯಿ ಕೂಡ ಖರ್ಚಾಗುತ್ತಾ ಇಲ್ಲ. ಆದಕಾರಣ ಈ ಆರೋಗ್ಯ ಇಲಾಖೆಗೆ ಇನ್ನೂ ಹೆಚ್ಚಿನ ಹಣವನ್ನು ಪಡೆಯುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದ ಮೆಡಿಕಲ್ ಕಾಲೇಜಿಗೆ ಹಣ ಒದಗಿಸಿರುವುದನ್ನು ನೋಡಿದರೆ ಬಹಳ ಕಡಿಮೆ. ಅದರಲ್ಲೂ ಬಳ್ಳಾರಿ ಕಾಲೇಜಿಗೆ ಹಣ ಬಹಳ ಕಡಮೆ ಇರುವುದು ಅವರ ಬಡ್ಜೆಟ್ಟಿನಲ್ಲಿ ಕಂಡು ಬಂದಿದೆ. ಆದಕಾರಣ ಬಳ್ಳಾರಿ ಮೆಡಿಕಲ್ ಕಾಲೇಜಿಗೆ ಹೆಚ್ಚು ಹಣವನ್ನು ಒದಗಿಸಿ ಕೊಟ್ಟು ಅಲ್ಲಿ ಹೆಚ್ಚು ಸಿಬ್ಬಂದಿಯನ್ನು ಒದಗಿಸಿ ಕೊಡಬೇಕು ಎಂದು ಹೇಳಬಯಸುತ್ತೇನೆ.

ಇನ್ನು ಬಳ್ಳಾರಿಯಲ್ಲಿರುವ ಕ್ಷಯದ ಆಸ್ಪತ್ರೆಗೆ ಹಣ ಒದಗಿಸಿರುವುದು ಕಡಿಮೆ. ಏತಕ್ಕೆಂದರೆ ಅಲ್ಲಿಂದ ಅನೇಕ ರೋಗಿಗಳು ಸ್ಥಳಾವಕಾಶ ಇಲ್ಲದೆ ವಾಪಸ್ಸು ಬರುತ್ತಿದ್ದಾರೆ. ಆದುದರಿಂದ ಬಳ್ಳಾರಿ ಕ್ಷಯದ ಆಸ್ಪತ್ರೆಗೆ ಹೆಚ್ಚಿನ ಒಂದು ವ್ಯವಸ್ಥೆ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡ್ ಆಸ್ಪತ್ರೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರೆಂದು ನಾನು ತಿಳಿದಿದ್ದೇನೆ. ಅದರ ಬಗ್ಗೆ ಒಂದು ಹೇಳಿಕೆಯನ್ನೂ ಕೂಡ ಕೊಟ್ಟಿದ್ದೀರಿ. ಆದುದರಿಂದ ಅದಷ್ಟು ಜಾಗ್ರತೆಯಾಗಿ ತಾಲ್ಲೂಕು ಬೋರ್ಡ್ ಆಸ್ಪತ್ರೆಗಳನ್ನು ತೆಗೆದುಕೊಂಡು ತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ.— ಈ ಬಗ್ಗೆ ತಾರೀಖು 1-4-1973 ರಿಂದ ಅವುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಗೌರ್ನಮೆಂಟ್ ಆರ್ಡರ್ ಇಷ್ಯೂ ಆಗಿದೆ.

ಶ್ರೀ ಬಿ. ಎಸ್. ವೀರಭದ್ರಪ್ಪ.—ಅದಕ್ಕಾಗಿ ಮಾನ್ಯ ಸಚಿವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಇನ್ನು ಆಯುರ್ವೇದ ಇಲಾಖೆ ಬಗ್ಗೆ ಹೆಚ್ಚಿನ ಒಂದು ಪ್ರಾಶಸ್ತ್ಯ ಕೊಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಹಳ್ಳಿಗಳಲ್ಲಿ ಈ ದಿವಸವೂ ಕೂಡ ಅವರು ಗಿಡ ಮೂಲಿಕೆಗಳಿಂದಲೇ ಔಷಧಿ ಕೊಟ್ಟು ಜನತೆಯ ರೋಗಗಳನ್ನು ಗುಣಪಡಿಸುತ್ತಿದ್ದಾರೆ. ಆದುದರಿಂದ ಇವಕ್ಕೆ ಒಂದು ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ. ಅದಕ್ಕಾಗಿ ಒಂದು ಬೋರ್ಡನ್ನು ಸ್ಥಾಪನೆ ಮಾಡಿ ಅವರಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಇನ್ನು ತಾಲ್ಲೂಕು ಬೋರ್ಡ್ ಆಸ್ಪತ್ರೆಗಳಲ್ಲಿ 10 ಸಾವಿರ ಪ್ರಜಾಸಂಖ್ಯೆಗೆ 25 ಬೆಡ್ಸ್ ಇರುವ ಹಾಗೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಆ ರೀತಿ ಮಾಡಿದರೆ ಜಿಲ್ಲಾ ಆಸ್ಪತ್ರೆಗಳಿಗೆ ಮತ್ತು ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಬರುವ ಒತ್ತಡ ಕಡಿಮೆಯಾಗುತ್ತದೆ ಮತ್ತು ಜನಸಾಮಾನ್ಯರಿಗೂ ಕೂಡ ತೀವ್ರವಾಗಿ, ಆರೋಗ್ಯದ ಸೌಲಭ್ಯಗಳೂ ಸಹ ಒದಗಿಸಿ ಕೊಟ್ಟಂತಾಗುತ್ತದೆ ಆದುದರಿಂದ ಪ್ರತಿಯೊಂದು ತಾಲ್ಲೂಕಿಗೆ ಈ ಒಂದು ಸೌಲಭ್ಯವನ್ನು ಮಾಡಿಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು 1972—73ರ ಆಡಿಟ್ ರಿಪೋರ್ಟನ್ನು ತೆಗೆದುಕೊಂಡು ನೋಡುವುದಾದರೆ ಅವರು ಆ ರಿಪೋರ್ಟ್‌ನಲ್ಲಿ ಕುಷ್ಠರೋಗದ ಬಗ್ಗೆ ಹೇಳಿದ್ದಾರೆ. ನಮ್ಮ ದೇಶದ 19 ಜಿಲ್ಲೆಗಳ ಪೈಕಿ 13 ಜಿಲ್ಲೆಗಳಲ್ಲಿ ಈ ಕುಷ್ಠ ರೋಗ ಹರಡಿದೆ ಎಂದು ಇದೆ. ಅಂದರೆ ಸುಮಾರು 16.⅔ ರಷ್ಟು ಭಾಗದಲ್ಲಿ ಹರಡಿದಂತಾಗುತ್ತದೆ. ಅಂದರೆ ಸುಮಾರು 2.5 ಲಕ್ಷ ಜನರು ಈ ಕುಷ್ಠರೋಗದಿಂದ ನರಳುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ಇದು ನಿಜವಾಗಿಯೂ ಹೆದರಿಕೆ ಬರುವಂಥ ರೋಗ. ಈ ಪ್ರಕಾರವಾಗಿ ಹಳ್ಳಿಗಳಲ್ಲಿ ಒಂದು ಸಾವಿರಕ್ಕೆ 40 ಜನ ಕುಷ್ಠ ರೋಗಿಗಳು ನರಳುತ್ತಿದ್ದಾರೆ. ಈ ಭೀಕರ ಪರಿಸ್ಥಿತಿಯನ್ನು ನೋಡಿದರೆ ಹಳ್ಳಿಗಳಲ್ಲಿ ಜೀವನ ಮಾಡುವುದೂ ಕೂಡ ಹಿಂದು ಮುಂದು ನೋಡಬೇಕಾಗುತ್ತದೆ. ಆದುದರಿಂದ ಈ ಕುಷ್ಠ ರೋಗ ನಿವಾರಣೆಗೆ ಒಂದು ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಅದನ್ನು ನಿವಾರಣೆ ಮಾಡತಕ್ಕ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಒಂದು ಉದಾಹರಣೆ ಹೇಳುವುದಾದರೆ ನಮ್ಮ ಪ್ರದೇಶದಲ್ಲಿ ಸಿಂಬಳಗೆರೆ ಅನ್ನುವ

ಗ್ರಾಮ ಇದೆ. ಕೂಡ್ಲಿಗಿಯಿಂದ ಬಸ್ಸು ಅಲ್ಲಿಗೆ ಹೋಗಿ ಬರಬೇಕು. ಆ ಬಸ್ಸಿನ ಕಂಡಕ್ಟರ್ ಅಲ್ಲಿಗೆ ಹೋಗುವುದಕ್ಕೇನೇ ಹೆದರುತ್ತಾನೆ. ಆದುದರಿಂದ ಈ ಕುಷ್ಠ ರೋಗ ನಿವಾರಣೆಗೆ ಪ್ರತಿಯೊಂದು ಜಿಲ್ಲೆಯಲ್ಲೂ ಕಂಟ್ರೋಲಿಂಗ್ ಸೆಂಟರ್ ಒಂದನ್ನು ಓಪನ್ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲದೆ ಈಗಾಗಲೇ ನಮ್ಮ ಪ್ರದೇಶದಲ್ಲಿರುವ ಹಡಗಲಿ, ಹರಪನಹಳ್ಳಿ, ಮಲ್ಲಾಪುರ ಗ್ರಾಮಕ್ಕೆ ಒಳಗೊಂಡಂತೆ ಈ ಕುಷ್ಠ ರೋಗದ ಒಂದು ಕಂಟ್ರೋಲಿಂಗ್ ಸೆಂಟರನ್ನು ಓಪನ್ ಮಾಡಿದ್ದೀರಿ. ಎಂದು ಹೇಳುತ್ತೇನೆ.

(ಶ್ರೀಮತಿ ಸುಮತಿ ಮಡಿಮನ್ ಅಧ್ಯಕ್ಷ ಪೀಠದಲ್ಲಿ ಕುಳಿತರು)

ಇನ್ನು ಐದು ತಾಲ್ಲೂಕುಗಳಿಗೆ ಕುಷ್ಠ ರೋಗ ನಿವಾರಣಾ ಕೇಂದ್ರವನ್ನು ಆದಷ್ಟು ತೀವ್ರವಾಗಿ ತೆಗೆಯಬೇಕು ಮತ್ತು ಕುಷ್ಠರೋಗದ ಭಯವನ್ನು ಬಳ್ಳಾರಿ ಜಿಲ್ಲೆಯ ಜನತೆಗೆ ಹೋಗಲಾಡಿಸಬೇಕು ಎಂದು ಪ್ರಾರ್ಥಿಸುತ್ತೇನೆ.

ಸಂಚಾರಿ ಆಸ್ಪತ್ರೆಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಬರಗಾಲ ಪೀಡಿತ ಪ್ರದೇಶಗಳಲ್ಲಿ ಇಂಥ ಸೌಲಭ್ಯವನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದಾರೆ. ಬಳ್ಳಾರಿ ಜಿಲ್ಲೆ ಮತ್ತು ಇತರ ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಸಂಚಾರಿ ಆಸ್ಪತ್ರೆಯ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಅವರನ್ನು ಪ್ರಾರ್ಥಿಸುತ್ತೇನೆ.

ಮುಖ್ಯವಾಗಿ ತಾಲ್ಲೂಕು ಮಟ್ಟದಲ್ಲಿ ಎಕ್ಸ್ ರೇ ಪ್ಲಾಂಟ್ ಇರತಕ್ಕದ್ದು ಅಗತ್ಯವಿದೆ. ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿರುವ ಆಸ್ಪತ್ರೆಯಲ್ಲಿಯೂ ಒಂದೊಂದು ಎಕ್ಸ್‌ರೇ ಪ್ಲಾಂಟ್ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳಿ, ಅಧ್ಯಕ್ಷರು ಮಾತನಾಡಲು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಮಂತ್ರಿಗಳು ಈ ಸದನದ ಮುಂದೆ ವೈದ್ಯಕೀಯ ಜನಾರೋಗ್ಯ ಮತ್ತು ಕುಟುಂಬ ಯೋಜನೆ, ಈ ವಿಭಾಗಗಳಿಗೆ ಸೇರಿದಂತೆ ಇಟ್ಟಿರತಕ್ಕ ಬೇಡಿಕೆಯನ್ನು ನಾನು ಸಮರ್ಥಿಸುತ್ತ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಆರೋಗ್ಯ ಇಲಾಖೆ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡ ಮೇಲೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಹೆಚ್ಚಿನ ವೈದ್ಯಕೀಯ ಸೌಲಭ್ಯಗಳನ್ನು ಕೊಡಬೇಕೆಂದು ಹೊಸ ನೀತಿಯನ್ನು ಹಾಕಿಕೊಂಡ ಮೇಲೆ ಆರೋಗ್ಯ ಇಲಾಖೆಗೆ ಹೆಚ್ಚಿನ ಮಹತ್ವ ಬಂದಿದೆ. ಎಂಟು ಹತ್ತು ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದ ಇಲಾಖೆ ಈಗಾಗಲೇ 26 ಕೋಟಿ ರೂಪಾಯಿಗಿಂತ ಹೆಚ್ಚಿನ ಹಣವನ್ನು ಖರ್ಚು ಮಾಡುವುದಕ್ಕೆ ಈ ಸದನದ ಮುಂದೆ ಬೇಡಿಕೆಯನ್ನು ಇಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ವಾಸ ಮಾಡುತ್ತಿರತಕ್ಕ ಜನ ಸಂಖ್ಯೆಯನ್ನು ಬಿಟ್ಟರೆ 70—80 ಪರ್ಸೆಂಟ್ ಜನ ಗ್ರಾಮಾಂತರದಲ್ಲಿ ವಾಸ ಮಾಡುವವರಾಗಿದ್ದಾರೆ. ಆ ಜನರಿಗೆ ಬರುವ ರೋಗಗಳನ್ನು ಸೂಕ್ಷ್ಮವಾಗಿ ನೋಡಿದರೆ ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ವಾಸ ಮಾಡತಕ್ಕ ಜನಗಳಿಗೆ ಬರತಕ್ಕ ರೋಗಗಳು ಒಂದು ಚಿಹ್ನೆಯಿಂದ ಕೂಡಿದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ನಿಶ್ಯಕ್ತಿ, ಹೆಚ್ಚಿನ ಪೋಷಕ ಪದಾರ್ಥಗಳನ್ನು ಒಳಗೊಂಡಂಥ ಆಹಾರ ವಸ್ತುಗಳನ್ನು ತಿನ್ನದೆ ಇರತಕ್ಕ ಕಾರಣದಿಂದ ಬರತಕ್ಕ ರೋಗಗಳು ಇನ್ನೊಂದು ರೀತಿಯ ಚಿಹ್ನೆಗಳಿಂದ ಕೂಡಿರುತ್ತವೆಂದು ವೈದ್ಯಕೀಯ ವೃತ್ತಿಯಲ್ಲಿರುವವರು ಹೇಳುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರದ ನೀತಿಗನುಗುಣವಾಗಿ 15 ಸಾವಿರ ಜನ ಸಂಖ್ಯೆ ಇರತಕ್ಕ ಕೆಲವು ಹಳ್ಳಿಗಳನ್ನು ಸೇರಿಸಿ ಆರೋಗ್ಯ ಕೇಂದ್ರದ ಮಾದರಿಯಲ್ಲಿ ಆಸ್ಪತ್ರೆಗಳನ್ನು ಕೊಡುವುದನ್ನು ಸರ್ಕಾರ ಒಪ್ಪಿದೆ ಗ್ರಾಮಾಂತರದಲ್ಲಿರುವ ಜನರಿಗೆ ಬರತಕ್ಕ ರೋಗರುಜಿನಗಳನ್ನು ಗಣನೆಗೆ ತೆಗೆದುಕೊಂಡು, ಸರ್ಕಾರದವರು ಆಸ್ಪತ್ರೆಗಳನ್ನು ತೆರೆಯುವ ವಿಷಯದಲ್ಲಿ ಪರಿಶೀಲನೆ ಮಾಡಿ 10 ಸಾವಿರ ಜನಸಂಖ್ಯೆಗಾದರೂ ಆರೋಗ್ಯ ಕೇಂದ್ರದ ಮಾದರಿಯಲ್ಲಿ ಆಸ್ಪತ್ರೆಯನ್ನು ಕೊಡುವುದಕ್ಕೆ ಸರ್ಕಾರದ ನೀತಿಯನ್ನು ಬದಲಾಯಿಸಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸರ್ಕಾರ ಆರೋಗ್ಯ ಕೇಂದ್ರಗಳನ್ನು ಗ್ರಾಮಾಂತರಗಳಲ್ಲಿ ಕೆಲವು ಕಡೆ ತೆರೆದಿದ್ದಾರೆ. ತಾಲ್ಲೂಕು ಕೇಂದ್ರಗಳಲ್ಲಿ ಕೂಡ ಆರೋಗ್ಯ ಕೇಂದ್ರಗಳನ್ನು ತೆರೆದಿದ್ದಾರೆ. ಆದರೆ ಇಂಥ ಆರೋಗ್ಯ ಕೇಂದ್ರ ಮಾದರಿಯ ಆಸ್ಪತ್ರೆಗಳಲ್ಲಿ ಒಬ್ಬರಾದರೂ ಎಂ. ಬಿ. ಬಿ. ಎಸ್. ವ್ಯಾಸಂಗ ಮಾಡಿರತಕ್ಕ ಡಾಕ್ಟರುಗಳಿಲ್ಲ. ಆ ಆಸ್ಪತ್ರೆಗಳಲ್ಲಿ ಡಿಪ್ಲೊಮಾ ಮಾಡಿರತಕ್ಕ ಡಾಕ್ಟರುಗಳಿರುವುದನ್ನು ನಾನು

(ಶ್ರೀ ಎಸ್. ಪುಟ್ಟಸ್ವಾಮಿ)

ನೋಡಿದ್ದೇನೆ. ಮಾನ್ಯ ಮಂತ್ರಿಗಳು ಆರೋಗ್ಯ ಕೇಂದ್ರ ಮಾದರಿಯ ಆಸ್ಪತ್ರೆಗಳನ್ನು ತೆರೆದು ಎಲ್ಲ ಕಡೆಯೂ ಸರಿಯಾದ ಆಸ್ಪತ್ರೆಗಳನ್ನೂ ತೆರೆದು ಎಲ್ಲ ರೀತಿಯ ಸೌಕರ್ಯಗಳೂ ಇರುವಂತೆ ಮಾಡಬೇಕೆಂದು ಹೇಳಿ, ಈಗಾಗಲೇ ತೆರೆದಿರತಕ್ಕ ಆರೋಗ್ಯ ಕೇಂದ್ರದ ಮಾದರಿ ಆಸ್ಪತ್ರೆಗಳನ್ನು ಕೂಡ ಪರಿವರ್ತನೆ ಮಾಡಿ ಗ್ರಾಮಾಂತರ ಪ್ರದೇಶಗಳಿಗೂ ಕೂಡ ಎಂ. ಬಿ. ಬಿ. ಎಸ್. ಆಗಿರುವ ಡಾಕ್ಟರುಗಳನ್ನು ಕೊಡತಕ್ಕ ನೀತಿಯನ್ನು ಅಳವಡಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ರಾಜ್ಯದಲ್ಲಿರುವ ಪ್ರೈವೇಟ್ ಮೆಡಿಕಲ್ ಕಾಲೇಜುಗಳ ಬಗ್ಗೆ ಸರ್ಕಾರ ಒಂದು ನೀತಿಯನ್ನು ರೂಪಿಸಿದೆ ಮತ್ತು ಎಲ್ಲ ಕಾಲೇಜುಗಳನ್ನೂ ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳತಕ್ಕ ಪ್ರಯತ್ನವನ್ನೂ ನಡೆಸುತ್ತಿದೆ, ಇಲ್ಲದೆ ಹೋದರೆ ಸರ್ಕಾರ ತನ್ನ ಹತೋಟಿಯನ್ನು ಇಟ್ಟುಕೊಳ್ಳತಕ್ಕ ರೀತಿಯಲ್ಲಿ ಕೆಲಸ ಮಾಡುತ್ತದೆ ಎಂದು ಮಾನ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿಕೆ ಕೊಟ್ಟದ್ದನ್ನು ನಾನು ಕೇಳಿದ್ದೇನೆ. ಆದರೆ ಒಂದೇ ಒಂದು ಖಾಸಗಿ ಕಾಲೇಜಿನ ಬಗ್ಗೆ ಸರ್ಕಾರ ಇಂಥ ನೀತಿಯನ್ನು ಅನುಸರಿಸಿದೆ ಎಂದು ಹೇಳಿದರೆ ತಪ್ಪಾಗಲಾರದು. ಇನ್ನು ಉಳಿದ ಎಲ್ಲ ಖಾಸಗಿ ಮೆಡಿಕಲ್ ಕಾಲೇಜುಗಳನ್ನೂ ಕೂಡ ಸರ್ಕಾರಕ್ಕೆ ವಹಿಸಿಕೊಳ್ಳುವುದು ಒಳ್ಳೆಯದು. ಅದಿಲ್ಲವಾದರೆ ಆ ಕಾಲೇಜುಗಳನ್ನು ಸರ್ಕಾರದ ಹತೋಟಿಯಲ್ಲಿಟ್ಟುಕೊಂಡು ಎಲ್ಲ ಖಾಸಗಿ ಕಾಲೇಜುಗಳಿಗೂ ಆ ನೀತಿಯನ್ನು ಅನ್ವಯ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮೆಡಿಕಲ್ ಕಾಲೇಜುಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವುದರಲ್ಲಿ ಪಿ. ಯು. ಸಿ. ಅಥವಾ ಬಿ. ಎಸ್. ಸಿ. ಪರೀಕ್ಷೆಯಲ್ಲಿ ತೆಗೆದುಕೊಂಡ ಅಂಕಗಳನ್ನು ಆಧಾರವಾಗಿಟ್ಟುಕೊಂಡು ಪ್ರವೇಶಾವಕಾಶವನ್ನೂ ಕೊಡುತ್ತಿದ್ದಾರೆ. ಇದರಿಂದ ಗ್ರಾಮಾಂತರಗಳಿಂದ ಬರುವವರಿಗೆ ಮತ್ತು ಬಹಳ ಹಿಂದುಳಿದ ಪಂಗಡಗಳಿಗೆ ಅನ್ಯಾಯವಾಗುತ್ತಿದೆ. ಇದು ವಿಷಾದನೀಯ. ಸಮಾಜವಾದ ಸರ್ಕಾರವನ್ನು ಕಟ್ಟಬೇಕೆಂಬ ಗುರಿಯನ್ನು ಇಟ್ಟುಕೊಂಡಿರುವಾಗ ಮೆಡಿಕಲ್ ಕಾಲೇಜುಗಳಿಗೆ ಪ್ರವೇಶವನ್ನು ಕೊಡತಕ್ಕ ವಿಷಯದಲ್ಲಿರುವ ನಿಬಂಧನೆಗಳನ್ನು ತಿದ್ದುಪಾಟು ಮಾಡಿಕೊಂಡು ಗ್ರಾಮಾಂತರದಿಂದ ಬರತಕ್ಕ ಮಕ್ಕಳಿಗೆ, ಹಿಂದುಳಿದ ವರ್ಗಗಳಿಂದ ಬರತಕ್ಕ ಮಕ್ಕಳಿಗೆ ಹೆಚ್ಚು ಅಂಕಗಳನ್ನು ಪಡೆಯುವುದಕ್ಕೆ ಸೌಲಭ್ಯಗಳು ಮತ್ತು ಸನ್ನಿವೇಶಗಳು ಇಲ್ಲದೆ ಇರುವುದರಿಂದ, ಅವರಿಗೆ ಅವಕಾಶವನ್ನು ಕಲ್ಪಿಸಿಕೊಡತಕ್ಕ ರೀತಿಯಲ್ಲಿ ಪ್ರವೇಶದ ನಿಬಂಧನೆಗಳನ್ನು ಈ ವರ್ಷದಿಂದಾದರೂ ಮಾಡುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕೆಂದು ಸೂಚನೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಸರ್ಕಾರ ತಾಲ್ಲೂಕು ಮಟ್ಟದ ಎಲ್ಲ ಆಸ್ಪತ್ರೆಗಳನ್ನು ಕೂಡ ಜನರಲ್ ಆಸ್ಪತ್ರೆಗಳನ್ನಾಗಿ ಮಾಡಬೇಕೆಂಬ ತತ್ವವನ್ನು ಒಪ್ಪಿಕೊಂಡಿದ್ದಾರೆ. ಆದರೆ ಹಣಕಾಸಿನ ಅಭಾವದಿಂದ ಹೆಚ್ಚಿನ ಪ್ರಮಾಣದಲ್ಲಿ ಈ ಕೆಲಸವನ್ನು ಮಾಡುವುದಕ್ಕೆ ಆಗುತ್ತಿಲ್ಲ. ಆದರೂ ಈ ಬಗ್ಗೆ ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಕನಿಷ್ಠ ಪಕ್ಷ 25 ಸಾವಿರ ಜನ ಸಂಖ್ಯೆ ಇರತಕ್ಕ ತಾಲ್ಲೂಕು ಕೇಂದ್ರಗಳಲ್ಲಿಯಾದರೂ ಈ ರೀತಿ ಮಾಡುವ ಕಾರ್ಯವನ್ನು ಜಾರಿಗೆ ಕೊಡಬೇಕೆಂದೂ, ಮಾನ್ಯ ಹಣಕಾಸಿನ ಮಂತ್ರಿಯನ್ನು ಒತ್ತಾಯ ಮಾಡಿ ಈ ವರ್ಷದಿಂದಲೇ ಜಾರಿಗೆ ಕೊಟ್ಟರೆ ಒಳ್ಳೆಯದು. ಅನೇಕ ಮಾನ್ಯ ಸದಸ್ಯರು ಹೇಳಿದಂತೆ ತಾಲ್ಲೂಕು ಕೇಂದ್ರದ ಆಸ್ಪತ್ರೆಗಳಲ್ಲಿ ಕೂಡ ಔಷಧಿ ಇಲ್ಲದೆ ಇರತಕ್ಕ ಸನ್ನಿವೇಶಗಳು ಅನೇಕವಿವೆ, ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ದಯಮಾಡಿ 25 ಸಾವಿರ ಜನಸಂಖ್ಯೆ ಇರತಕ್ಕ ತಾಲ್ಲೂಕು ಕೇಂದ್ರಗಳಲ್ಲಿ ಎಲ್ಲ ಕಡೆಯೂ ಜನರಲ್ ಆಸ್ಪತ್ರೆಗಳನ್ನು ಕೊಡತಕ್ಕದ್ದು ಮತ್ತು ಅಲ್ಲಿ ದಂತ ವೈದ್ಯರು, ಎಕ್ಸ್‌ರೇ ಯೂನಿಟ್, ಸ್ವಲ್ಪ ಹೆಚ್ಚಾಗಿ ಸಜ್ಜಾದ ಆಪರೇಷನ್ ಥಿಯೇಟರ್ ಇರುವಂತೆ ಮಾಡಬೇಕು. ಈಗ ಪ್ರತಿಯೊಂದಕ್ಕೂ ಜಿಲ್ಲಾ ಕೇಂದ್ರಗಳಿಗೆ ಹೋಗಬೇಕಾದ ಪರಿಸ್ಥಿತಿ ಇರುವುದರಿಂದ ದಯಮಾಡಿ ಮಾನ್ಯ ಮಂತ್ರಿಗಳು ಈ ಕಡೆ ಗಮನ ಕೊಟ್ಟು ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿಯೂ ಈ ಸೌಲಭ್ಯಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಿಕೊಡಬೇಕು. ಮತ್ತೆ, ತಾಲ್ಲೂಕು ಮಟ್ಟದ ಕೇಂದ್ರಗಳ ಆಸ್ಪತ್ರೆಗಳಲ್ಲಿ ತರಬೇತಿ ಪಡೆದಿರುವ ಹಾಗೂ ಪಾಂಡಿತ್ಯವಿರುವ ವೈದ್ಯರುಗಳನ್ನು ನೇಮಕ ಮಾಡುವುದರ ಬಗ್ಗೆ ಸರಕಾರ ಗಮನ ಕೊಡಬೇಕು, ಈಗ ಹೆಚ್ಚು ಪಾಂಡಿತ್ಯ ಪಡೆದಿರುವ ಹಾಗೂ ಸ್ಪೆಶಲೈಸೇಷನ್ ಪಡೆದಿರುವ ಡಾಕ್ಟರುಗಳ ಸೇವೆ ಬಡವರಿಗೆ ಸಿಗುತ್ತಿಲ್ಲ. ಅವರ ಸೇವೆಯೆಲ್ಲಾ ಈಗ ಪಟ್ಟಣಗಳಿಗೇ ಸೀಮಿತವಾಗಿದೆ. ಇನ್ನು ಮುಂದೆ ಇಂತಹ

ಪರಿಣಿತರಾದ ವೈದ್ಯರ ಸೇವೆ ತಾಲ್ಲೂಕಾ ಕೇಂದ್ರಗಳಲ್ಲಿರುವ ಆಸ್ಪತ್ರೆಗಳಲ್ಲೂ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

4-00 P. M.

ಮತ್ತೆ ಆರೋಗ್ಯ ಕೇಂದ್ರಗಳನ್ನು ಹೊಸದಾಗಿ ತೆರೆಯುವಾಗ ಇನ್ನು ಮುಂದೆ ಇಲ್ಲಿ ಹತ್ತು ಬೆಡ್‌ಗಳಿರುವಂತೆ ಮಾಡಬೇಕು ಮತ್ತು ಇದನ್ನು ಔಟು ಪೇಷಂಟುಗಳಿಗೆ ಇರಲು ಅವಕಾಶ ಕೊಡಬೇಕು. ಹಳ್ಳಿಗಳಿಂದ ಬರುವ ಬಡಜನರು ಇಂಜಕ್ಷನ್ ಇತ್ಯಾದಿ ತೆಗೆದುಕೊಳ್ಳುವವರು ಒಂದು ದಿನ ತಂಗಲು ಈಗ ಆಸ್ಪತ್ರೆಗಳಲ್ಲಿ ಜಾಗವೇ ಇಲ್ಲ. ಮತ್ತೆ ಇವರು ಹಳ್ಳಿಗಳಿಗೇ ವಾಪಸು ಹೋಗಬೇಕಾಗಿದೆ. ಕೆಲವು ವೇಳೆ ಅಂತಹ ಜನಕ್ಕೆ ಸಾಧ್ಯವಾಗುವುದಿಲ್ಲ. ಆಗ ಆಸ್ಪತ್ರೆಗಳಲ್ಲಿ ಬೆಡ್‌ಗಳಿದ್ದರೆ ಇದರಿಂದ ಸ್ವಲ್ಪ ಬಡಜನಕ್ಕೆ ಅನೂಕೂಲವಾಗುತ್ತದೆ. ಇನ್ನು ಮುಂದೆ ಆಸ್ಪತ್ರೆ ಕಟ್ಟಡಗಳನ್ನು ಕಟ್ಟುವಾಗ ಇಂತಹ ಮಾದರಿಯಲ್ಲಿ ಕಟ್ಟುವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ, ಇದಕ್ಕಾಗಿ ಒಂದೊಂದು ವಾರ್ಡ್‌ನ್ನು ಎಲ್ಲ ತಾಲ್ಲೂಕಾ ಆಸ್ಪತ್ರೆ ಕೇಂದ್ರಗಳಲ್ಲಿ ಕಟ್ಟಿ ಇದರಲ್ಲಿ ಹತ್ತು ಇಲ್ಲವೇ ಕನಿಷ್ಟಪಕ್ಷ ಆರು ಬೆಡ್‌ಗಳಿಗಾದರೂ ಅವಕಾಶಇರುವಂತೆ ಮಾಡಬೇಕು, ಇದು ಬಹು ಅಗತ್ಯವಾಗಿ ಬೇಕು. ಸರಕಾರ ಇದರ ಬಗ್ಗೆ ಆಲೋಚನೆ ಮಾಡಬೇಕು ಮತ್ತು ನಾನಾಗಲೇ ಹೇಳಿದಂತೆ ಮೆಡಿಕಲ್ ಕಾಲೇಜಿನ ಪ್ರವೇಶದ ಬಗ್ಗೆ ರೂಲ್ಸುಗಳನ್ನು ಬದಲಾಯಿಸಿ ಬಡವರಿಗೂ ಇದರ ಸೌಲಭ್ಯಗಳು ದೊರಕುವಂತೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಮಾದೇಗೌಡ (ಬನ್ನೂರು).—ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಮಂಡಿರಿರುವ ಆರೋಗ್ಯ ಬೇಡಿಕೆಗಳ ಮೇಲೆ ಎರಡು ಮಾತುಗಳನ್ನು ಇಲ್ಲಿ ಹೇಳಲು ಅಪೇಕ್ಷೆ ಮಾಡುತ್ತೇನೆ. ಇಂದು ಬೆಳಗ್ಗೆ ಆರೋಗ್ಯ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ರಾಜ್ಯದಲ್ಲಿರುವ ಸಣ್ಣ ಆಸ್ಪತ್ರೆಗಳಿಗಾಗಿ ಸುಮಾರು ಹತ್ತು ಸಾವಿರ ರೂಪಾಯಿಗಳಷ್ಟು ಬೆಲೆಬಾಳುವ ಔಷಧಿಗಳನ್ನು ಒದಗಿಸಿಕೊಡಲು ಸರಕಾರ ಈ ಸಾಲಿನಿಂದ ಮಾಡುತ್ತಿದೆ ಎಂದು ಹೇಳಿದರು, ಇದು ಒಂದು ಸಂತೋಷದ ಸಂಗತಿ, ಆದರೆ ಇದರಿಂದ ಉಪಕಾರ ಪಡೆಯುತ್ತಿರುವ ಜನರು ನಿಜವಾಗಿಯೂ ಇದರಿಂದ ಉಪಕಾರ ಪಡೆಯುತ್ತಿದ್ದಾರೆಯೇ ಎನ್ನುವುದನ್ನು ಇಂದು ಈ ಸಭೆಯಲ್ಲಿ ವಿಚಾರ ಮಾಡಬೇಕು. ಉದಾಹರಣೆಯಾಗಿ ಹೇಳಬೇಕಾದರೆ ತಾಲ್ಲೂಕು ಹಾಗೂ ಹೋಬಳಿ ಕೇಂದ್ರಗಳಲ್ಲಿರುವ ಸರಕಾರಿ ಆಸ್ಪತ್ರೆಗಳಲ್ಲಿ ನಿಜವಾಗಿಯೂ ಸೌಲಭ್ಯ ಪಡೆಯತಕ್ಕ ಜನ ಎಂದರೆ ಪುಣ್ಯವಂತರೇ ಇಲ್ಲವೇ ಬುದ್ಧಿವಂತರೇ ಇದನ್ನು ವಿಚಾರ ಮಾಡಬೇಕು. ಸರಕಾರದ ಆಸ್ಪತ್ರೆ ಇರತಕ್ಕ ಕೇಂದ್ರಗಳಲ್ಲಿ ಪ್ರೈವೇಟು ಡಾಕ್ಟರುಗಳು ನಾಲ್ಕಾರು ಜನರಿದ್ದಾರೆ, ಪ್ರೈವೇಟು ಡಾಕ್ಟರುಗಳು ಇರುವ ಕಡೆಗಳಲ್ಲಿ ಜನ ಎಷ್ಟೇ ಕಷ್ಟವಾದರೂ ಅಲ್ಲಿಗೆ ಹೋಗಿ ಸಾಲ ಮಾಡಿ ಅವರಿಂದ ಸಹಾಯ ಸೌಲಭ್ಯಗಳನ್ನು ಪಡೆಯುವಂತೆ ಇಂದು ಸರಕಾರದ ಆಸ್ಪತ್ರೆಗಳಿಗೆ ಜನ ಬರುತ್ತಿಲ್ಲ. ಸರಕಾರದ ಆಸ್ಪತ್ರೆಗಳಲ್ಲಿ ಅಂತಹ ಸೌಲಭ್ಯಗಳನ್ನು ಜನತೆಗೆ ಒದಗಿಸಿ ಕೊಡುತ್ತಿದ್ದಾರೆಯೇ ? ಇದನ್ನು ವಿಚಾರ ಮಾಡುವಾಗ ಜನರ ಮನೋಭಾವವೇ ಇದಕ್ಕೆ ಕಾರಣ, ಇಂತಹ ಮನೋಭಾವದಿಂದ ಜನರು ಸರಕಾರದ ಆ ಆಸ್ಪತ್ರೆಗಳಿಗೆ ಹೋಗಲು ಹಿಂದು ಮುಂದು ನೋಡುತ್ತಿರುತ್ತಾರೆ, ಕಷ್ಟವಾದರೂ ಖಾಸಗಿ ಆಸ್ಪತ್ರೆಗೆ ಹೋಗುತ್ತಿದ್ದಾರೆ. ಇಂದು ಹಳ್ಳಿಗಾಡಿನಲ್ಲಿರುವ ಜನ ಶೇಕಡಾ ಎಂಬತ್ತು ಭಾಗದವರು ಸರಕಾರದ ಆಸ್ಪತ್ರೆಗಳಿಗೆ ಹೋಗುವುದೇ ಕಡಿಮೆ. ಇದರ ಕಡೆಗೆ ಸರಕಾರ ಗಮನ ಕೊಡಬೇಕಾದ್ದು ಅತ್ಯಗತ್ಯ, ಇದಕ್ಕಾಗಿ ಜನರ ಮನಸ್ಸನ್ನು ಪರಿವರ್ತನೆ ಮಾಡುವುದರ ಕಡೆಗೆ ಪ್ರಯತ್ನ ಮಾಡಬೇಕು. ಇದನ್ನು ಮಾಡದೇ ಇರುವುದೇ ಇಂದು ಸರಕಾರದ ಆಸ್ಪತ್ರೆಗಳಿಗೆ ಜನ ಹೆಚ್ಚು ಹೋಗುತ್ತಿಲ್ಲ. ಇಂತಹ ಮನೋಪರಿವರ್ತನೆ ಮಾಡುವುದು ಎಂದರೆ ಇದು ಕಷ್ಟಸಾಧ್ಯವಾದ ಕೆಲಸ, ಇದನು ಬಹು ಬುದ್ಧಿವಂತಿಕೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಮಾಡುವ ಕೆಲಸ ಇದು. ಇಂತಹ ಮನೋಭಾವನೆಯನ್ನು ಪರಿವರ್ತನೆ ಮಾಡುವ ಶಕ್ತಿ ಸಾಮರ್ಥ್ಯಗಳು ನಮ್ಮಲ್ಲಿ ಇನ್ನೂ ಬರಲಿಲ್ಲ, ಇದರ ಬಗ್ಗೆ ಇನ್ನೂ ತೀರ್ಮಾನ ಮಾಡಬೇಕಾಗಿದೆ. ಇದನ್ನು ಶಿಕ್ಷಣದಿಂದಲೇ ಪರಿವರ್ತನೆ ಮಾಡುತ್ತೇವೆಂದು ಹೇಳಿದರೆ ಅದು ತಪ್ಪಾಗಬಹುದು. ಇದಕ್ಕೆ ಸರಿಯಾಗಿ ಪ್ರಾಮಾಣಿಕವಾಗಿ ಕೆಲಸಮಾಡುವ ಸೇವಾತತ್ಪರರನ್ನು ಆಸ್ಪತ್ರೆಗಳಲ್ಲಿ ನೇಮಕ ಮಾಡಿದರೆ ಇದರಿಂದ ಪರಿಸ್ಥಿತಿ ಸ್ವಲ್ಪ ಸುಧಾರಿಸಬಹುದು, ಇಂತಹ ಸೇವಾ ತತ್ಪರರನ್ನು ಹುಡುಕಬೇಕಾಗಿದೆ, ಇದಕ್ಕಾಗಿ ನಾನು ಸಲಹೆ ಮಾಡುವುದು ಕಾಲೇಜುಗಳಿಗೆ ಪ್ರವೇಶಕ್ಕಾಗಿ ಬರುವಂತಹ ವಿದ್ಯಾರ್ಥಿಗಳಲ್ಲಿ ಆಯ್ಕೆ ಮಾಡುವಾಗ ಆ ಪರಿಶೀಲನಾ ಸಮಿತಿಯವರು ಇಂತಿಷ್ಟು ಪರ್ಸೆಂಟೇಜು ಸೇವಾ ಮನೋಭಾವ ಉಳ್ಳವರಿಗಾಗಿ ಇಂತಿಷ್ಟು

(ಶ್ರೀ ಕೆ. ಮಾದೇಗೌಡ)

ಪರ್ಸೆಂಟೇಜು ಕೊಡಬೇಕು ಎಂದು ನಿಗದಿ ಮಾಡಿದರೆ ಆಗ ಇಂತಹ ಸೇವಾ ಮನೋಭಾವ ಉಳ್ಳವರನ್ನೇ ತಾಲ್ಲೂಕಾ ಕೇಂದ್ರಗಳ ಆಸ್ಪತ್ರೆಗಳಲ್ಲಿ ಸೇವೆ ಮಾಡಲು ಅನುಕೂಲ ಮಾಡಬಹುದು. ಇದರ ಬಗ್ಗೆ ಆರೋಗ್ಯ ಸಚಿವರು ಪರಿಶೀಲನೆ ಮಾಡಬೇಕೆಂದು ಸಲಹೆಮಾಡುತ್ತೇನೆ. ಇಂದು ಆಸ್ಪತ್ರೆಗಳಲ್ಲಿ ಸೇವಾ ಮನೋಭಾವ ಇರುವುದಕ್ಕಿಂತ ಸಂಪಾದನೆಯೇ ಇದರ ಹಿಂದೆ ಇರುವ ಮನೋಭಾವ ಉತ್ಪತ್ತಿಯಾಗುತ್ತಿದೆ, ಇದು ಪ್ರತಿಯೊಬ್ಬರಿಗೂ ಗೊತ್ತಿರತಕ್ಕದ್ದು. ಇದರಲ್ಲಿ ಕೆಲಸ ಮಾಡಲು ಬರುವಾಗಲೇ ಇಲ್ಲಿ ಸಂಪಾದನೆ ಮಾಡಿಕೊಳ್ಳಬೇಕು ಎನ್ನುವ ಉದ್ದೇಶದಿಂದಲೇ ಬರುತ್ತಾರೆ, ಇದರಿಂದಾಗಿ ಸೇವಾ ಮನೋವೃತ್ತಿ ಕೊಲೆಯಾಗುತ್ತಿದೆ. ರಾಜ್ಯಾಂಗದಲ್ಲಿ ಹಿಂದುಳಿದ ವರ್ಗಗಳಿಗೆ ಹಾಗೂ ಇನ್ನಿತರ ವರ್ಗಗಳಿಗೆ ಯಾವ ರೀತಿಯಾಗಿ ಇಂತಿಷ್ಟು ಪರ್ಸೆಂಟು ಎಂದು ನಿಗದಿಯಾಗಿದೆಯೋ ಅದೇ ರೀತಿ ಇಲ್ಲಿ ಸೇವಾ ಮನೋಭಾವದಿಂದ ಕೆಲಸ ಮಾಡುವ ಜನಕ್ಕೆ ಇಂತಿಷ್ಟು ಸ್ಥಾನಗಳು ಎಂದು ನಿಗದಿ ಮಾಡುವುದಾದರೆ ಇದರಿಂದೇನಾದರೂ ಒಳ್ಳೆಯದಾಗಬಹುದು ಮತ್ತು ಸೇವಾವೃತ್ತಿಗೆ ಇದರಿಂದ ಒಂದು ಅವಕಾಶವಾಗುತ್ತದೆ, ಇದರ ಬಗ್ಗೆ ಸಚಿವರು ಗಮನ ಕೊಡಬೇಕೆಂದು ಇಲ್ಲಿ ಒತ್ತಾಯಮಾಡುತ್ತೇನೆ. ನಮ್ಮ ಸಚಿವರು ಏನೋ ಇಂತಹ ಕಠಿಣ ಸಮಸ್ಯೆ ಬಗ್ಗೆ ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಿದ್ದೇನೆಂದು ತಿಳಿದುಕೊಂಡಿದ್ದಾರೆ. ಮತ್ತು ಅವರು ತಮ್ಮ ಇಲಾಖೆಯಲ್ಲಿ ಚೆನ್ನಾಗಿ ಕೆಲಸಗಳಾಗುತ್ತಿವೆ ಎಂದು ಇರಬಹುದು. ಆದರೆ ಅವರ ಇಲಾಖೆಯಲ್ಲಿರುವವರಿಂದ ಇವರಲ್ಲಿಟ್ಟಿರುವ ನಂಬಿಕೆಯಿಂದಾಗಿ ಕೆಲವು ಕಡೆಗಳಲ್ಲಿ ನ್ಯಾಯವಾಗಬೇಕಾಗಿದ್ದರೂ ಅಲ್ಲಿ ಅನ್ಯಾಯಗಳು ನಿಮ್ಮವರ ಕಡೆಯವರಿಂದಲೇ ಆಗುತ್ತಿವೆ. ಆದರೆ ಇಂತಹವರನ್ನು ತಾವು ದೂರ ಇಡತಕ್ಕಂಥ ಸಾಹಸವನ್ನು ನೀವು ಮಾಡಿದರೂ ಸಹ ಈ ಪ್ರಜಾಪ್ರಭುತ್ವದಲ್ಲಿ ಬಹುಶಃ ಕಷ್ಟವಾಗುತ್ತದೆಂದು ಕಾಣುತ್ತದೆ. ಅಧಿಕಾರ ಎಂಬುದು ಶಾಶ್ವತವಲ್ಲ. ಆದಕಾರಣ ಆದಷ್ಟೂ ಕೂಡ ಇಂತಹ ದಳ್ಳಾಳಿಗಳಿಂದ ಅನ್ಯಾಯವಾಗುತ್ತಿರುವುದನ್ನು ತಾವು ಪ್ರಥಮವಾಗಿ ತಿಳಿದುಕೊಂಡರೆ ಈ ಇಲಾಖೆಗೆ ಉತ್ತಮರು ಬರುವುದಕ್ಕೆ ಅವಕಾಶವಾಗುತ್ತದೆ. ಈ ಬಗ್ಗೆ ನೀವು ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೈಸೂರು ನಗರದಲ್ಲಿರತಕ್ಕಂಥ ಆಸ್ಪತ್ರೆ ನಿಜವಾಗಿಯೂ ಹೆಸರುವಾಸಿಯಾದುದು. ಅಲ್ಲಿ ದೊಡ್ಡ ದೊಡ್ಡ ತಜ್ಞರಿದ್ದಾರೆ. ಇಂತಹ ಆಸ್ಪತ್ರೆಯಲ್ಲಿಯೂ ಸಹ ಕೆಲವು ಸಂದರ್ಭಗಳಲ್ಲಿ ವೈದ್ಯಕೀಯಕ್ಕೆ ಅಗತ್ಯವಾದಂತಹ ಸಾಮಗ್ರಿಗಳು ಸಿಕ್ಕುವುದಿಲ್ಲ. ಮೊನ್ನೆ ನೀರಿಗೂ ಅಭಾವ ಬಂದಿತ್ತು. ಕಾರಣ ಕೇಳಿದಾಗ ವಿದ್ಯುಚ್ಛಕ್ತಿಯ ಅಭಾವ ಎಂದು ಹೇಳಿದರು ಆಸ್ಪತ್ರೆಯ ಕೆಲಸಕಾರ್ಯಗಳಿಗೆ ವಿದ್ಯುಚ್ಛಕ್ತಿಯ ಅಭಾವವಿರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಆಸ್ಪತ್ರೆಗಳಿಗೆ ಬೇಕಾದ ಅಗತ್ಯವಾದಂಥ ಸಾಮಗ್ರಿಗಳನ್ನು ಒದಗಿಸುವುದಕ್ಕೆ ಕಾನೂನು ಏನಾದರೂ ಅಡ್ಡವಾಗಿದ್ದರೆ ಅದನ್ನು ಸಡಿಲಮಾಡಬೇಕು. ಇಲ್ಲದಿದ್ದರೆ ರೋಗಿಗಳಿಗೆ ಕಷ್ಟವಾಗುತ್ತದೆಂದು ಹೇಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಯಂಕಟಪ್ಪ (ಶಿಕಾರಿಪುರ):— ಮಾನ್ಯ ಅಧ್ಯಕ್ಷರೇ, ಈ ದಿವಸದ ಆರೋಗ್ಯ ಇಲಾಖೆಯ ಡಿಮ್ಯಾಂಡ್‌ಗಳಿಗೆ ನನ್ನ ಒಪ್ಪಿಗೆಯನ್ನು ಕೊಡುತ್ತಾ ಕೆಲವು ವಿಚಾರಗಳನ್ನು ಹೇಳಬೇಕೆಂದಿದ್ದೇನೆ. ಇಂದು ಹಳ್ಳಿಯ ಜನರು ಅದರಲ್ಲಿಯೂ ಮಲೆನಾಡಿನ ಜನರು ಸರಿಯಾದ ವೈದ್ಯಕೀಯ ಚಿಕಿತ್ಸೆ ದೊರೆಯದೆ ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತಿದ್ದಾರೆ. ಮಲೆನಾಡಿನಲ್ಲಿ ಯಾವ ರೀತಿ ತೊಂದರೆ ಇದೆ ಎಂಬುದನ್ನು ಹೇಳಬೇಕೆಂದರೆ, 1961ರ ಸೆನ್ಸಸ್ ಪ್ರಕಾರ ಆರೋಗ್ಯ ಇಲಾಖೆಯವರು ಕೆಲವು ಬ್ಲಾಕ್‌ಗಳನ್ನು ಮಾಡಿ ಎರಡು ಹಳ್ಳಿಗಳನ್ನು ಸೇರಿಸಿ ಒಂದೊಂದು ಆಸ್ಪತ್ರೆಗಳನ್ನು ಕೊಟ್ಟಿದ್ದಾರೆ. ಒಂದು ಹಳ್ಳಿಗೂ ಇನ್ನೊಂದು ಹಳ್ಳಿಗೂ ಸಂಪರ್ಕವೇ ಇರುವುದಿಲ್ಲ; ಎರಡು ಹಳ್ಳಿಗಳ ಮಧ್ಯೆ ಗುಡ್ಡವಿರುತ್ತದೆ; ಈ ಕಾರಣದಿಂದ ಒಂದು ಹಳ್ಳಿಯವರು ಇನ್ನೊಂದು ಹಳ್ಳಿಗೆ ಹೋಗಲು ತೊಂದರೆಯಾಗುತ್ತದೆ, ಪ್ರತ್ಯೇಕವಾದ ಆಸ್ಪತ್ರೆ ಕೊಡಿ ಎಂದರೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ನಾನಾ ರೀತಿಯ ತೊಂದರೆ ಇರುವುದನ್ನು ನನ್ನ ಸ್ನೇಹಿತರು ಹೇಳಿದ್ದಾರೆ. 15 ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆ ಇರಬೇಕೆಂದು ನಿಯಮ ಮಾಡಿರುವುದು ಸರಿಯಲ್ಲ. ಆ ಪ್ರಮಾಣವನ್ನು ಕಡಿಮೆ ಮಾಡಲೇ ಬೇಕು. 10 ಸಾವಿರ ಅಥವಾ 8 ಸಾವಿರ ಜನಸಂಖ್ಯೆ ಇರುವ ಕಡೆಗಳಿಗೂ ಒಂದೊಂದು ಆಸ್ಪತ್ರೆ ಕೊಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಮಲೆನಾಡಿನ ಬಗ್ಗೆ ಹೇಳಬೇಕೆಂದರೆ ಎರಡೂವರೆ ಸಾವಿರ ಅಥವಾ 3 ಸಾವಿರ ಜನಸಂಖ್ಯೆಗೆ ಒಂದೊಂದು ಆಸ್ಪತ್ರೆ ಕೊಟ್ಟರೆ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ಕೆ. ಯಂಕಟಪ್ಪ.—ಕಡಿಮೆ ಜನಸಂಖ್ಯೆಯ ಆಧಾರದ ಮೇಲೆ ಆಸ್ಪತ್ರೆಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದವರು ಹಂತಹಂತವಾಗಿಯಾದರೂ ಮಾಡಿದರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಈಗಿನ ನಿಯಮದ ಪ್ರಕಾರ ಒಂದು ಹಳ್ಳಿಯವರು ಇನ್ನೊಂದು ಹಳ್ಳಿಗೆ ಮಳೆಗಾಲದಲ್ಲಿ ಹೋಗುವುದಕ್ಕೆ ಆಗುವುದೇ ಇಲ್ಲ. ರೋಗಿಗಳು ಮನೆಯಲ್ಲಿ ಇದ್ದುಕೊಂಡು ಸರಿಯಾದ ಚಿಕಿತ್ಸೆ ಇಲ್ಲದೆ ಸಾಯಬೇಕಾಗುತ್ತದೆ. ಆದಕಾರಣ ಆಸ್ಪತ್ರೆಗಳನ್ನು ಮಂಜೂರು ಮಾಡುವಲ್ಲಿ ಮಲೆನಾಡಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಆಸ್ಪತ್ರೆಗಳಿಗೆ ಹತ್ತು ಸಾವಿರ ರೂಪಾಯಿಗಳವರೆಗೆ ಔಷಧ ಸಾಮಗ್ರಿಗಳನ್ನು ಒದಗಿಸಿದರೆ ಸಾಲುವುದಿಲ್ಲ. ಅದನ್ನು ಸಹ ಹೆಚ್ಚು ಮಾಡಬೇಕು. ನಮ್ಮ ಮಲೆನಾಡಿನಲ್ಲಿ ಹತ್ತು 15 ವರ್ಷಗಳ ಹಿಂದೆ ಕಟ್ಟಿಸಿದ ಕಂಬೈಂಡ್ ಆಸ್ಪತ್ರೆಗಳು ಹಾಗೆಯೇ ಉಳಿದಿವೆ. ಈ ಆಸ್ಪತ್ರೆಗಳಲ್ಲಿ 10 ರಿಂದ 18 ಬೆಡ್‌ಗಳವರೆಗೆ ಮಾತ್ರ ಇರುತ್ತದೆ. ಈಗ ಈ ಮಧ್ಯದಲ್ಲಿ ಫ್ಯಾಮಿಲಿ ಪ್ಲಾನಿಂಗ್ ಬೇರೆ ಬಂದಿರುವುದರಿಂದ ಈ ಬೆಡ್‌ಗಳ ಸಂಖ್ಯೆ ಸಾಕಾಗುತ್ತಿಲ್ಲ. ನಮ್ಮ ತಾಲ್ಲೂಕಿನ ಆಸ್ಪತ್ರೆಗೆ ಒಂದು ಸಲ ಹೋಗಿ ನೋಡಿದಾಗ ಕುಟುಂಬ ಯೋಜನೆಗೆ ಒಳಗಾದವರಿಗೆ ಬೆಡ್‌ಗಳನ್ನು ಕೊಟ್ಟು ಬೇರೆ ರೋಗಿಗಳನ್ನು ಆಸ್ಪತ್ರೆಯ ಕಾಂಪೌಂಡಿನಲ್ಲಿ ಮಲಗಿಸಿದ್ದರು. ಇದು ಸರಿಯಲ್ಲ. ಎಲ್ಲರಿಗೂ ಬೆಡ್ ಸಿಗುವಂತಾಗಲು ತಾಲ್ಲೂಕ್ ಕೇಂದ್ರಗಳಲ್ಲಿರುವ ಆಸ್ಪತ್ರೆಗಳ ಬೆಡ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. 50 ಅಥವಾ 55ಕ್ಕಾದರೂ ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತ ಇದ್ದಾಗ ವರ್ಲ್ಡ್ ಹೆಲ್ತ್ ಆರ್ಗನೈಜೇಷನ್‌ನಿಂದ ಬಂದ ಸಹಾಯದಿಂದ ನಮ್ಮ ರಾಜ್ಯದಲ್ಲಿರುವ ಕೆಲವು ತಾಲ್ಲೂಕ್‌ಗಳಲ್ಲಿ ಫ್ಯಾಮಿಲಿ ಪ್ಲಾನಿಂಗ್ ಸೆಂಟರ್‌ಗಳನ್ನು ತೆರೆದರು. ನಮ್ಮ ಜಿಲ್ಲೆಯಲ್ಲಿಯೂ ಮೂರು ತಾಲ್ಲೂಕ್‌ಗಳಲ್ಲಿ ಈ ಸೆಂಟರ್‌ಗಳನ್ನು ಪ್ರಾರಂಭ ಮಾಡಿದ್ದಾರೆ. ಕೇವಲ ಪ್ರಗತಿಪರವಾದಂಥ ತಾಲ್ಲೂಕ್‌ಗಳನ್ನು ಮಾತ್ರ ಈ ಯೋಜನೆಗಾಗಿ ಆರಿಸಿದ್ದಾರೆ. ಯಾವ ತಾಲ್ಲೂಕ್‌ನವರಿಗೆ ಲಕ್ಷ ರೂಪಾಯಿ ಕೇಳಿದರೂ ಸಹ ಕೊಡುವ ಶಕ್ತಿ ಇರುತ್ತದೋ ಅಂತಹ ತಾಲ್ಲೂಕ್‌ಗಳನ್ನು ಆರಿಸಿದ್ದಾರೆ. ನಮ್ಮ ಶಿಕಾರಿಪುರ ತಾಲ್ಲೂಕ್ ಇದರಲ್ಲಿ ಸೇರಿಲ್ಲ. ಏಕೆಂದರೆ ನಮ್ಮ ತಾಲ್ಲೂಕ್‌ನಲ್ಲಿ ಬಡವರೇ ಜಾಸ್ತಿ ಇದ್ದಾರೆ. ಹಣ ಇರುವ ಜನರು ಇಲ್ಲ. ಇಂತಹ ಸ್ಥಳದಲ್ಲಿಯೂ ಫ್ಯಾಮಿಲಿ ಪ್ಲಾನಿಂಗ್ ಸಬ್-ಸೆಂಟರ್‌ನ್ನು ತೆಗೆದರೆ ಅನೇಕ ಬಡ ಜನರಿಗೆ ಅನುಕೂಲವಾಗುತ್ತದೆಯಲ್ಲದೆ ಈ ಮಧ್ಯದಲ್ಲಿ ಆರೋಗ್ಯದ ಸೌಕರ್ಯಗಳು ಜನರಿಗೆ ಸಿಗುತ್ತವೆ. ಆದಕಾರಣ ಮಾನ್ಯ ಆರೋಗ್ಯ ಮಂತ್ರಿಗಳು ದಯಮಾಡಿ ನಮ್ಮ ಕ್ಷೇತ್ರವನ್ನು ಈ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಕಂಬೈಂಡ್ ಆಸ್ಪತ್ರೆಗಳ ಬೆಡ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಲು ಮತ್ತು ಇತರೇ ಸೌಕರ್ಯಗಳನ್ನು ಒದಗಿಸಿಕೊಡಲು ಸ್ಥಳದ ಜನರು ವಂತಿಗೆ ಕೊಡಬೇಕೆಂಬ ನಿಯಮವಿದೆ. ಈ ವಿಚಾರದಲ್ಲಿ ಇಷ್ಟೇ ಹಣ ಕೊಡಬೇಕೆಂದು ಹೇಳಿದರೆ ಕಷ್ಟವಾಗುತ್ತದೆ. ನಮ್ಮ ತಾಲ್ಲೂಕ್‌ನಲ್ಲಿ ಹಿರಿಯರು ಸೇರಿಕೊಂಡು ಹಣ ಸಂಗ್ರಹ ಮಾಡಿದ್ದಾರೆ. ಈಗ ಸಂಗ್ರಹವಾಗಿರುವ ಹಣವನ್ನು ಪಡೆದುಕೊಂಡು ನಮಗೆ ಬೇಕಾದ ಅನುಕೂಲಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹಳ್ಳಿಗಳಲ್ಲಿರುವ ತಾಲ್ಲೂಕ್ ಬೋರ್ಡ್ ಆಸ್ಪತ್ರೆಗಳಿಗೆ ಡಾಕ್ಟರ್‌ಗಳು ಬರುವುದೇ ಕಷ್ಟವಾಗಿದೆ. ಒಳ್ಳೆಯ ಸಂಬಳದ ಜೊತೆಗೆ ನೂರು ರೂಪಾಯಿಗಳ ಅಲೋಯನ್ಸ್ ಕೊಟ್ಟರೂ ಸಹ ಅವರು ಹಳ್ಳಿಗಳಲ್ಲಿ ವಾಸ ಮಾಡುವುದು ಕಷ್ಟವಾಗಿದೆ. ಫ್ಲಷ್-ಔಟ್ ಲ್ಯಾವೆಟರಿ ಇರಬೇಕು, ಮತ್ತು ಗಾಳಿ-ಬೆಳಕು ಬರಲು ದೊಡ್ಡ ದೊಡ್ಡ ಕಿಟಕಿಗಳು ಇರುವಂತಹ ಮನೆಗಳು ಬೇಕೆಂದು ಹೇಳುತ್ತಾರೆ.

ಹಲವಾರು ಹಳ್ಳಿಗಳಲ್ಲಿ ಸರ್ಕಾರದವರು ಆಸ್ಪತ್ರೆಗಳಿಗೆ ಎಷ್ಟು ಉತ್ತೇಜನವನ್ನು ಕೊಡುತ್ತಾರೆ ಸೌಲಭ್ಯವನ್ನು ಕೊಡುತ್ತಾರೆ ಅದನ್ನು ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಬಳಸುತ್ತಾ ಇಲ್ಲ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ನಡೆಸುತ್ತಿರುವ ಆಸ್ಪತ್ರೆಗಳನ್ನು ಸರ್ಕಾರದವರು ತೆಗೆದುಕೊಳ್ಳತಕ್ಕಂಥಾ ಒಂದು ನಿರ್ಧಾರವನ್ನು ಮಾನ್ಯ ಆರೋಗ್ಯ ಮಂತ್ರಿಗಳು ಪೂರ್ಣ ಮಾಡಿದ್ದಾರೆ. ಈ ಬಗ್ಗೆ ಅದಷ್ಟು ಬೇಗ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶವನ್ನು ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಆಸ್ಪತ್ರೆಯ ಡಾಕ್ಟರು ಮತ್ತು ನರ್ಸುಗಳಿಗೆ ಮನೆಗಳನ್ನು ಕಟ್ಟಿಕೊಡುವುದು ಅಸಾಧ್ಯ. ಆದ್ದರಿಂದ ಅವರಿಗೆ ಮಂತ್

(ಶ್ರೀ ಕೆ. ಯಂಕಟಪ್ಪ)

ಗಳನ್ನು ಸರ್ಕಾರದವರೇ ಕಟ್ಟಿಸಿಕೊಡಬೇಕು. ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ, ಶಿಕಾರಿಪುರ ತಾಲ್ಲೋಕಿನಲ್ಲಿ ಮುಖ್ಯ ಮುಖ್ಯ ಸ್ಥಳದಲ್ಲಿ ಆಸ್ಪತ್ರೆಗಳು ಇಲ್ಲ. ಇದರಿಂದ ಗ್ರಾಮಾಂತರ ಪ್ರದೇಶದ ಜನಗಳಿಗೆ ಸರಿಯಾದಂತಹ ವೈದ್ಯಕೀಯ ಸೌಲಭ್ಯವು ಸಿಕ್ಕುವುದು ಬಹಳ ಕಷ್ಟವಾಗಿದೆ. ಆದ್ದರಿಂದ ಸರ್ಕಾರದವರು ಗ್ರಾಮಾಂತರ ಪ್ರದೇಶದ ಜನಗಳಿಗೆ ವೈದ್ಯಕೀಯ ಸೌಲಭ್ಯವನ್ನು ದೊರಕಿಸುವ ಕಡೆಗೆ ಗಮನ ಕೊಡಬೇಕು ಎಂದು ನಾನು ಹೇಳುತ್ತೇನೆ. ನಮ್ಮಲ್ಲಿ ಕಾಗೇನಹಳ್ಳಿ ಎನ್ನುವ ಕಡೆ ಒಂದು ಆಸ್ಪತ್ರೆಯನ್ನು ಕಟ್ಟುವುದಕ್ಕೆ ಅವರು 10 ಸಾವಿರ ರೂಪಾಯಿಗಳನ್ನು ಕೊಟ್ಟು 8—10 ವರ್ಷ ಆಯಿತು. ಅಲ್ಲಿ ಇವೊತ್ತಿನವರೆಗೂ ಆಸ್ಪತ್ರೆಯನ್ನು ಕಟ್ಟಿಲ್ಲ. ಆ ಸ್ಥಳದಲ್ಲಿ 4-5 ಸಾವಿರ ಜನಸಂಖ್ಯೆ ಇದೆ. ಆದ್ದರಿಂದ ಆ ಸ್ಥಳದಲ್ಲಿ ಜಾಗ್ರತೆಯಾಗಿ ಆಸ್ಪತ್ರೆಯನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಮಲೆನಾಡು ಪ್ರದೇಶಕ್ಕೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದಕ್ಕೆ ಆದ್ಯತೆ ಕೊಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಸನ್ಮಾನ್ಯ ಅಧ್ಯಕ್ಷರೇ ಈಗ ನಮ್ಮ ಮುಂದೆ ಇರತಕ್ಕ ವೈದ್ಯಕೀಯ ಇಲಾಖೆ ಹಾಗೂ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಹಾಗೆ ಇಟ್ಟಿರತಕ್ಕ ಬೇಡಿಕೆಗಳನ್ನು ಒಪ್ಪಿಕೊಳ್ಳುತ್ತಾ ಈಗ ದೇಶದಲ್ಲಿರತಕ್ಕ ಆಹಾರ ಪರಿಸ್ಥಿತಿಯಲ್ಲಿ ಹಾಗೂ ಅನಾರೋಗ್ಯಕರವಾದ ಪರಿಸ್ಥಿತಿ ಇರುವಾಗ ಅದರಲ್ಲಿಯೂ ಮಾಲ್ ನ್ಯೂಟ್ರಿಷನ್ ಇರತಕ್ಕ ಸಂದರ್ಭದಲ್ಲಿ ಈ ಇಲಾಖೆಗೆ ಕೊಟ್ಟಿರತಕ್ಕ ಹಣ ಬಹಳ ಕಡಿಮೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿಯೂ ಈಗ ನುರಿತ ಹಾಗೂ ದಕ್ಷತೆಯಿಂದ ಕೆಲಸ ಮಾಡತಕ್ಕ ಮಂತ್ರಿಗಳು ಇರತಕ್ಕ ಕಾಲದಲ್ಲಿ ಅವರು ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಅವರಿಗೆ ಸಾಕಷ್ಟು ಅನುಕೂಲವಾಗುವ ಹಾಗೆ ರಾಜ್ಯ ಸರ್ಕಾರದವರು ಸಾಕಷ್ಟು ಹಣವನ್ನು ಒದಗಿಸತಕ್ಕದ್ದು ಅತ್ಯಗತ್ಯ. ನಾನು ಶ್ರೀಮಾನ್ ಸಿದ್ದವೀರಪ್ಪನವರನ್ನು ಹೊಗಳುವುದಕ್ಕೆ ಹೋಗುವುದಿಲ್ಲ. ಅವರಿಗೆ ಕಾರ್ಯದಕ್ಷತೆ ಚೆನ್ನಾಗಿದೆ. ಮತ್ತು ಹಿಂದಿನ ಆಡಳಿತದಲ್ಲಿ ಯಾವ ಕೆಲಸ ಆಗಬೇಕಾದರೂ ಕೂಡ ಹಣದ ಪ್ರಭಾವ ಇದ್ದರೆ ಕೆಲಸವನ್ನು ಮಾಡಿಸಿಕೊಳ್ಳಬಹುದು ಎನ್ನತಕ್ಕಂಥಾ ಪರಿಸ್ಥಿತಿ ಒದಗಿತ್ತು. ಆದರೆ ಈಗ ಆಡಳಿತ ಸ್ವಲ್ಪ ಬಿಗಿಯಾಗಿ ಸಮರ್ಪಕವಾಗಿ ನಡೆಯುತ್ತಾ ಇರತಕ್ಕದ್ದು ಬಹಳ ಸಂತೋಷದ ವಿಚಾರ. ಮುಖ್ಯವಾಗಿ ಮಾನ್ಯ ಆರೋಗ್ಯಮಂತ್ರಿಗಳನ್ನು ಅಭಿನಂದಿಸಬೇಕಾದರೆ 2—3 ಕಾರಣಗಳು ಇವೆ. ಮೊದಲನೆಯದಾಗಿ ಹಿಂದೆ ನೇಚರ್ ಕ್ಯೂರ್‌ಗೆ ಯಾವ ವಿಧವಾದ ಒಂದು ಮನ್ನಣೆಯೂ ಇರಲಿಲ್ಲ. ನೇಚರ್ ಕ್ಯೂರ್‌ನಲ್ಲಿ ನಂಬಿಕೆ ಇರತಕ್ಕ ಆರೋಗ್ಯಸಚಿವರು ಅವರು ಈ ಇಲಾಖೆಯ ಅಧಿಕಾರವನ್ನು ವಹಿಸಿಕೊಂಡಮೇಲೆ ಅದಕ್ಕೆ ಒಂದು ಸ್ಥಾನ ಮಾನವನ್ನು ಕಲ್ಪಿಸಿಕೊಟ್ಟು ಅದನ್ನು ಸಾಕಷ್ಟು ಗಾಂಧೀಜಿಯವರ ಆದರ್ಶದ ಮೇಲೆ ಅದಕ್ಕೆ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಆದರೆ ಅದಕ್ಕೆ ಬೇಕಾಗಿರತಕ್ಕ ಹಣವನ್ನು ಈ ವರ್ಷದ ಬಜೆಟ್ಟಿನಲ್ಲಿ ಸ್ಪೆಸಿಫಿಕ್ ಆಗಿ ಒದಗಿಸದೇ ಇರತಕ್ಕದ್ದು ಶೋಚನೀಯ. ಹೆಚ್ಚು ವೆಚ್ಚವಿಲ್ಲದೆ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಅವಕಾಶ ಇರತಕ್ಕಂಥ ವ್ಯವಸ್ಥೆ ಏನಿದೆ ಅದಕ್ಕೆ ಸಾಕಷ್ಟು ಹಣವನ್ನು ಒದಗಿಸಬೇಕು. ನೇಚರ್‌ಕ್ಯೂರ್ ಡೆವಲಪ್‌ಮೆಂಟ್, ಆಯುರ್ವೇದ ಯುನಾನಿ ಮುಂತಾದ ನಮ್ಮ ದೇಶೀಯ ವೈದ್ಯಪದ್ಧತಿಗೆ ಹೆಚ್ಚಿನ ಉತ್ತೇಜನವನ್ನು ಕೊಡಬೇಕು ಎಂದು ಅದಕ್ಕಾಗಿ ಹೊಸದಾಗಿ ಒಂದು ಡೈರೆಕ್ಟೋರೇಟ್ ಮಾಡಿ ಅಲ್ಲಿ ಕೆಲಸ ಸಮರ್ಪಕವಾಗಿ ಆಗುವ ಹಾಗೆ ಅದಕ್ಕೆ ಒಬ್ಬರು ದಕ್ಷರಾದ ಅಧಿಕಾರಿಯನ್ನು ಹಾಕಿದ್ದಾರೆ. ಈ ಎರಡು ವಿಚಾರಗಳಲ್ಲಿ ಕೂಡ ಮಾನ್ಯಮಂತ್ರಿಗಳು ತೆಗೆದುಕೊಂಡಿರತಕ್ಕ ಕೆಲಸಗಳಿಗೆ ಅಭಿನಂದಿಸಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸಮರ್ಪಕವಾಗಿ ಪರಿಣಾಮಕಾರಿಯಾಗಿ ಕೆಲಸಗಳು ಆಗುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ತಾಲ್ಲೂಕು ಅಭಿವೃದ್ಧಿ ಮಂಡಲಿಯ ಆಸ್ಪತ್ರೆಗಳಲ್ಲಿರತಕ್ಕ ವೈದ್ಯರು ಅವರ ವೇತನ, ಪೆನ್‌ಷನ್ ಮತ್ತು ಪ್ರಮೋಷನ್‌ಗಳ ಬಗ್ಗೆ ತಕ್ಕ ಕ್ರಮ ತೆಗೆದುಕೊಂಡಿಲ್ಲ ಎಂದು ಅವರು ಸರ್ಕಾರಕ್ಕೆ ಒಂದು ಮನವಿಯನ್ನು ಕಳುಹಿಸಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ವಿವರಣೆಯನ್ನು ಕೊಡದೆ ಆ ಸಂಬಂಧ ಮನವಿಯನ್ನು ನಾನು ಸರ್ಕಾರಕ್ಕೆ ಕಳುಹಿಸುತ್ತೇನೆ.

ಈಗ ಸರ್ಕಾರದವರು ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದು ಅದಷ್ಟು ಜಾಗ್ರತೆ ಬಂದರೆ ಒಳ್ಳೆಯದು. ಈಗ ಇರತಕ್ಕ ಆಸ್ಪತ್ರೆಗಳಲ್ಲಿ ಹೊಸ ಬೆಡ್‌ಗಳನ್ನು ಹಾಕಿದ್ದಾರೆ. ಈ ಆಸ್ಪತ್ರೆಗಳಿಗೆ ಔಷಧಿಗಳನ್ನು

ಕೊಂಡುಕೊಳ್ಳುವುದಕ್ಕೆ ಹಣವನ್ನು ಗೊತ್ತು ಮಾಡಿದ್ದು ಯಾವುದೋ ಒಂದು ಕಾಲದಲ್ಲಿ ಮಾಡಿದ್ದು. ಈಗ ಔಷಧಿಯ ಬೆಲೆ ಜಾಸ್ತಿಯಾಗಿದೆ. ಇದರಿಂದಾಗಿ ಅನೇಕ ಆಸ್ಪತ್ರೆಗಳಲ್ಲಿ ಔಷದಿ ಸಿಕ್ಕದೇ ಇರುವ ಪರಿಸ್ಥಿತಿ ಇದೆ. ಆದ್ದರಿಂದ ಆಸ್ಪತ್ರೆಗಳಲ್ಲಿ ಬೆಡ್‌ಗಳನ್ನು ಹೆಚ್ಚು ಮಾಡುವುದರ ಜೊತೆಗೆ ಔಷಧಿ ಸೌಕರ್ಯವನ್ನು ಹೆಚ್ಚು ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿ ಮಹಾ ನಗರಗಳಲ್ಲಿ ಸಾಕಷ್ಟು ಖಾಸಗಿ ವೈದ್ಯರು ಎಕ್ಸ್‌ಪರ್ಟ್‌ಗಳು ಇದ್ದಾರೆ. ಒಳ್ಳೆಯ ಪರಿಣತರು ಮತ್ತು ಅನುಭವವುಳ್ಳ ವೈದ್ಯರು ಬೇರೆ ಕಡೆ ಸಿಕ್ಕದೆ ಇರುವುದರಿಂದ ಸಾಧ್ಯವಾದ ಮಟ್ಟಿಗೆ ಪರಿಣತರಾದ ವೈದ್ಯರ ಸೌಲಭ್ಯ ಬೇರೆ ಕಡೆ ಸಿಕ್ಕುವ ಹಾಗೆ ಅವರನ್ನು ರೊಟೇಷನ್ ಪ್ರಕಾರ ಬೇರೆ ಕಡೆಗೆ ವರ್ಗಾಯಿಸುವುದಕ್ಕೆ ಅವಕಾಶ ಮಾಡಬೇಕು. ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ ಮತ್ತು ಬೌರಿಂಗ್ ಆಸ್ಪತ್ರೆಯಲ್ಲಿ ಸಿಕ್ಕತಕ್ಕಂಥಾ ಸೌಲಭ್ಯಗಳು ಬೇರೆ ಕಡೆ ಸಿಕ್ಕದೇ ಇರುವುದರಿಂದ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಸರಿಯಾದ ಮತ್ತು ಪರಿಣತರಾದ ವೈದ್ಯರುಗಳನ್ನು ಇಡುವುದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮೊನ್ನೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಬೇಡಿಕೆಯ ಮೇಲಿನ ಚರ್ಚೆಗೆ ಮಾನ್ಯ ಪೌರಾಡಳಿತ ಮಂತ್ರಿಗಳು ಉತ್ತರವನ್ನು ಕೊಡುತ್ತಾ ಸ್ಥಳೀಯ ಸಂಸ್ಥೆಗಳು ನಡೆಸತಕ್ಕ ಆರೋಗ್ಯ ಕೇಂದ್ರಗಳನ್ನು, ಆಸ್ಪತ್ರೆಗಳನ್ನು ಸರ್ಕಾರದವರು ತೆಗೆದುಕೊಳ್ಳತಕ್ಕ ಯೋಚನೆ ಮಾಡಿದ್ದಾರೆ ಎಂದು ಹೇಳಿದರು. ಈ ಬಗ್ಗೆ ನನಗೆ ಅನಿಸುತ್ತದೆ ಸ್ವಲ್ಪ ಹೆಲ್ತ್ ಸೆಸ್ ತೆಗೆದುಕೊಂಡರೂ ಪರವಾಯಿಲ್ಲ ಆ ಆಸ್ಪತ್ರೆಗಳು ಆರೋಗ್ಯ ಇಲಾಖೆಯಲ್ಲಿ ಇದ್ದರೆ ಒಳ್ಳೆಯದು ಅನಿಸುತ್ತದೆ. ಇದರ ಬಗ್ಗೆ ಸರಿಯಾಗಿ ಯೋಚನೆ ಮಾಡಿ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಅನೇಕ ಆಸ್ಪತ್ರೆಗಳಲ್ಲಿ ಈ ಬೋರ್ಡ್ ಆಫ್ ವಿಸಿಟರ್ಸ್ ಇನ್ನೂ ನೇಮಿಸಿಲ್ಲವೆಂದು ತಿಳಿದು ಬಂದಿದೆ. ಅದನ್ನು ಮಾಡುವಾಗ ಅದರಲ್ಲಿ ಹೆಚ್ಚಿಗೆ ಮಹಿಳೆಯರಿಗೆ ಪ್ರಾಧಾನ್ಯತೆ ಕೊಟ್ಟು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

4-30 P.M.

ಆ ಮೇಲೆ ಅನೇಕ ಸಂದರ್ಭಗಳಲ್ಲಿ ಈ ಫ್ಲೂ ಕಾಯಿಲೆ ಹೆಚ್ಚಾಗುತ್ತಾ ಇದೆ. ಆದ್ದರಿಂದ ಇದರ ಬಗ್ಗೆ ಸರಿಯಾದ ಟೆಸ್ಟ್ ಮಾಡಿ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಏಕೆಂದರೆ, ಫ್ಲೂನಿಂದ ಆಗತಕ್ಕಂತಹ ಬಾಧೆ ಹೆಚ್ಚಾಗುತ್ತಿದೆ. ಇವತ್ತು ನನಗೆ ಒಂದು ಪತ್ರ ಈ ಇಲಾಖೆಯ ಬಗ್ಗೆ ಬಂದಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದು ಹೀಗೆ ಇದೆ.

ಉಣ್ಣಲು ಅನ್ನ ಇರುವುದಿಲ್ಲ, ಉಡಲು ಬಟ್ಟೆ ಇರುವುದಿಲ್ಲ–ಇಂಥ ಕಾಲದಲ್ಲಿ ಬಣ್ಣದ ನೀರಿನ ಮಿಕ್ಸ್‌ಚರ್ ಬಡ ರೋಗಿಗಳಿಗೆ ಕೊಟ್ಟು ಸರ್ಕಾರ ಮೋಸ ಮಾಡುತ್ತಿದೆ. ಇನ್ನು ಮುಂದಾದರೂ ಮಿಕ್ಸ್‌ಚರ್ ಕೊಡುವುದನ್ನು ಉಚಿತವಾಗಿ, ಮತ್ತು ಒಳ್ಳೆಯದಾಗಿರುವ ಔಷಧಿಯನ್ನು ಕೊಡುವಂತಹ ಏರ್ಪಾಡು ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಅದೇ ರೀತಿ ಈಗ ಆಸ್ಪತ್ರೆಗಳಲ್ಲಿರತಕ್ಕಂತಹ ಕೆಲಸದ ವೇಳಾ ಪಟ್ಟಿಯು ಸರಿಯಾಗಿಲ್ಲ. ಬೆಳಿಗ್ಗೆ ಎಂಟು ವರೆಯಿಂದ 12 ಗಂಟೆ ಮತ್ತು ಸಾಯಂಕಾಲ 6 ಗಂಟೆಯವರೆಗೆ ಇರುವುದು ಮಲೆನಾಡು ಮತ್ತು ಇತರ ಕಡೆಗಳಿಗೆ ಸರಿಹೋಗುವುದಿಲ್ಲ. ಆದ್ದರಿಂದ ಮಲೆನಾಡು ಪ್ರದೇಶಗಳಲ್ಲಿ ಮತ್ತು ಹಳ್ಳಿಗಳ ಕಡೆ ಮಧ್ಯಾಹ್ನ ಮೂರರಿಂದ 5ರವರೆಗೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಆಹಾರ ಸರಿಯಾಗಿ ಸಿಗದೆ, ಔಷಧಿ ಬೆಲೆ ಯದ್ವಾತದ್ವಾ ಏರುತ್ತಾ ಇರುವಾಗ ಇದರ ಬಗ್ಗೆ ಸರ್ಕಾರ ತೀವ್ರವಾದ ಗಮನ ಕೊಟ್ಟು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಆರೋಗ್ಯ ಇಲಾಖೆ ಇದಕ್ಕೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಇನ್ನು ನಮ್ಮ ಮುಂದೆ 1972—73ರ ಒಂದು ರಿಪೋರ್ಟನ್ನು ಆರೋಗ್ಯ ಇಲಾಖೆಯ ಬಗ್ಗೆ ಕಳಿಸಿ ಕೊಟ್ಟಿದ್ದಾರೆ. ಅದರಲ್ಲಿರುವ ಕೆಲವು ಅಂಶಗಳ ಬಗ್ಗೆ ಹೇಳುತ್ತೇನೆ. ಈಗ ಟಿ. ಬಿ. ಆಸ್ಪತ್ರೆಗಳಲ್ಲಿ ಹೆಚ್ಚಾಗಿ ಬಡವರು ಹೋಗಿ ಸೌಲಭ್ಯಗಳನ್ನು ಪಡೆಯುವುದಕ್ಕೆ ಅವಕಾಶ ಇಲ್ಲವಾಗಿದೆ ಎಂಬ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಟಿ. ಬಿ. ಆಸ್ಪತ್ರೆಗಳಲ್ಲಿ ಬಡ ಜನರಿಗೆ ಹೆಚ್ಚಿನ ಅನುಕೂಲವಾಗುವ ಹಾಗೆ ಹೆಚ್ಚು ಬೆಡ್‌ಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಬೆಂಗಳೂರಿನಲ್ಲಿ ಒಂದು ಲೆಪ್ರೊಸೇರಿಯಂ ಇದೆ. ಇವತ್ತು ಅನೇಕ ಕುಷ್ಠ ಮತ್ತು ತೊನ್ನು ರೋಗ ಇರತಕ್ಕವರು ಬೆಗ್ಗರ್ಸ್ ಆಗಿ ಮತ್ತು ಇತರ ರೀತಿಯಲ್ಲಿ ತಮ್ಮ ಸಾಂಕ್ರಾಮಿಕ ರೋಗಗಳನ್ನು ಹರಡಿಸುವುದಕ್ಕೆ ಅವಕಾಶ ಇದೆ. ಆದ್ದರಿಂದ ಆರೋಗ್ಯ ಇಲಾಖೆಯವರು ಇವನ್ನು ತಡೆಗಟ್ಟು

(ಶ್ರೀ ಟಿ. ಆರ್. ಶಾಮಣ್ಣ)

ವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಅಲ್ಲದೆ ಈ ರೋಗ ಇರತಕ್ಕವರು ಹೆಚ್ಚಾಗಿ ಬೇರೆ ರಾಜ್ಯಗಳಿಂದ ಬರುತ್ತಿದ್ದಾರೆ. ಅದರ ಬಗ್ಗೆ ಸ್ವಲ್ಪ ಗಮನ ಕೊಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ. ಆ ಮೇಲೆ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಸರ್ಕಾರ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಆದರೆ ಸೆನ್ಸಸ್ ರಿಪೋರ್ಟು ನೋಡಿದರೆ, ಪ್ರತೀ 10 ವರ್ಷಗಳಿಗೊಮ್ಮೆ ಜನ ಸಂಖ್ಯೆ ಏರುತ್ತಾ ಹೋಗುತ್ತದೆ ಹೊರತು ಕಮ್ಮಿಯಾಗುವುದಿಲ್ಲ. ನಮ್ಮ ದೇಶ ಉದ್ಧಾರವಾಗ ಬೇಕಾದರೆ, ನಮ್ಮಲ್ಲಿ ಉತ್ಪನ್ನ ಜಾಸ್ತಿಯಾಗಿ ಜನಸಂಖ್ಯೆ ಕಡಿಮೆಯಾಗಬೇಕು. ಅದರ ಬಗ್ಗೆ ಬೇಕಾದಂತಹ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ ನಮ್ಮ ರಾಷ್ಟ್ರ ಮುಂದುವರಿಯುತ್ತದೆ.

ಆ ಮೇಲೆ ಆಸ್ಪತ್ರೆಗಳಲ್ಲಿ ಜಾಗ ಕೊಡತಕ್ಕ ವಿಚಾರ ಹೇಳುವುದಾದರೆ, ಇವತ್ತು ಹಣ ಕೊಟ್ಟ ವರಿಗೆ ಮತ್ತು ಇನ್‌ಫ್ಲುಯೆನ್ಸ್ ಇದ್ದವರಿಗೆ ಕೊಡುತ್ತಿದ್ದಾರೆಂದು ಕೇಳಿಬರುತ್ತಿದೆ. ಆ ತರಹ ಇರ ಬಾರದು. ನಿಜವಾಗಿ ಯಾರಿಗೆ ತೀವ್ರವಾದ ಕಾಯಿಲೆ ಇದೆ ಮತ್ತು ಯಾರಿಗೆ ಬಡತನ ಇದೆ, ಅಂಥವರಿಗೆ ಆಸ್ಪತ್ರೆಗಳಲ್ಲಿ ಬೆಡ್ ಕೊಡುವಂತಹ ವ್ಯವಸ್ಥೆಯನ್ನು ಮಾನ್ಯ ಮಂತ್ರಿಯವರು ಮಾಡ ಬೇಕು. ಆದ್ದರಿಂದ ಅಂಥ ಒಂದು ಆರೋಪ ಏನಿದೆ, ಅದನ್ನು ಹೋಗಲಾಡಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಆ ಮೇಲೆ ಮಾನ್ಯ ತಿಮ್ಮಪ್ಪನವರು ಹೇಳಿದ ಹಾಗೆ ಆರ್. ಎಂ. ಓ. ಮತ್ತು ಡೀನಗಳಿಗೆ ಅಡ್ಮಿ ನಿಸ್ಟ್ರೇಟಿವ್ ಜವಾಬ್ದಾರಿ ಹೆಚ್ಚು ಕೊಡದೆ, ಅವರು ಯಾವುದರಲ್ಲಿ ಸ್ಪೆಶ್ಯಲಿಸ್ಟ್ ಇರುತ್ತಾರೆ, ಅಂಥ ಜವಾಬ್ದಾರಿಯನ್ನು ಕೊಡಬೇಕು. ಅಡ್ಮಿನಿಸ್ಟ್ರೇಟಿವ್ ವಿಚಾರಕ್ಕೆ ಒಬ್ಬ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿ, ಇವರಿಗೆ ಇತರ ಹೆಚ್ಚಿನ ಜವಾಬ್ದಾರಿಯನ್ನು ಕೊಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವಿ. ರುದ್ರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದೆ ಈ ದಿವಸ ಮಾನ್ಯ ಆರೋಗ್ಯ ಸಚಿವರು ಮಂಡಿಸಿರತಕ್ಕಂತಹ ಹೆಲ್ತ್ ಮತ್ತು ಫ್ಯಾಮಿಲಿ ಪ್ಲಾನಿಂಗ್ ಬಿಲ್ಲನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಸರ್ಕಾರದ ಗಮನಕ್ಕೆ ಕೆಲವು ವಿಷಯಗಳನ್ನು ತರ ಬಯಸುತ್ತೇನೆ. ಈಗ ತಾಲ್ಲೂಕು ಲೆವಲನಲ್ಲಿ ಈಗಾಗಲೇ ಇರತಕ್ಕಂತಹ ಆಸ್ಪತ್ರೆಗಳಿಗೆ ಎಂ. ಡಿ. ಅಥವಾ ಎಂ. ಎಸ್. ಮಾಡಿದಂತಹ ಡಾಕ್ಟರುಗಳನ್ನು ಜರೂರಾಗಿ ನೇಮಿಸಿ ಹೆಚ್ಚಿನ ಸೌಲಭ್ಯ ಸಿಗು ವಂತೆ ಮಾಡಬೇಕೆಂದು ಹೇಳುತ್ತೇನೆ. ಅಲ್ಲದೆ ಪ್ರತೀ ತಾಲ್ಲೂಕು ಹೆಡ್‌ಕ್ವಾರ್ಟರ್ಸಿಗೆ ಒಂದು ಲ್ಯಾಬೊರೇಟರಿ ಇರಬೇಕು. ಏನೆಂದರೆ ಇವತ್ತು ಸಣ್ಣ ಪುಟ್ಟ ಕಾಯಿಲೆಗಳನ್ನು ಸಹ ಪರೀಕ್ಷೆ ಮಾಡ ಬೇಕಾದರೆ ಒಂದು ಲ್ಯಾಬೊರೇಟರಿ ಇರಬೇಕು. ಪ್ರತಿಯೊಂದು ರೋಗವನ್ನು ಸಹ ಟೆಸ್ಟ್ ಮಾಡಿ ಮಾಡಬೇಕಾಗುತ್ತದೆ. ಆದ್ದರಿಂದ ಇಂತಹ ಸೌಲಭ್ಯಗಳನ್ನು ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಒದಗಿಸಬೇಕೆಂದು ಹೇಳುತ್ತೇನೆ. ಹಾಗೆಯೇ ಹಿಂದೆ ಔಷಧಿಗಳನ್ನು ಕಡಿಮೆ ಒದಗಿಸುತ್ತಿದ್ದರು. ಈಗ ಅದನ್ನು 10 ಸಾವಿರ ರೂಪಾಯಿವರೆಗೆ ಕೊಡುತ್ತೇವೆಂದು ಮಂತ್ರಿಯವರು ಹೇಳಿದ್ದಾರೆ. ಅದು ಸಂತೋಷದ ವಿಚಾರ. ಆದರೆ ಔಷಧಿಗಳನ್ನು ಕಾಲಕ್ಕೆ ಸರಿಯಾಗಿ ಆಸ್ಪತ್ರೆಗಳಿಗೆ ತಲುಪುವಂತೆ ಮಾಡಬೇಕು. ಉದಾಹರಣೆಗೆ ನಮ್ಮ ಹೊಸದುರ್ಗ ಆಸ್ಪತ್ರೆಗೆ 7ವರೆ ಸಾವಿರ ರೂಪಾಯಿಯ ಔಷ ಧಿಯನ್ನು ಒದಗಿಸಿದ್ದರೂ ಮತ್ತು ಕಾಲಕ್ಕೆ ಸರಿಯಾಗಿ ಇಂಡೆಂಟ್ ಕಳಿಸಿದ್ದರೂ ಕೇವಲ 4 ಸಾವಿರ ರೂಪಾಯಿ ಔಷಧಿಗಳನ್ನು ಒದಗಿಸಿದ್ದಾರೆ. ಹೀಗೆ ಆದರೆ ಆಸ್ಪತ್ರೆಗಳಲ್ಲಿ ಬಡ ಜನರಿಗೆ ಯಾವ ನ್ಯಾಯ ದೊರೆಯುತ್ತದೆ ? ಆದ್ದರಿಂದ ಮಾನ್ಯ ಮಂತ್ರಿಯವರು ಇಡೀ ರಾಜ್ಯದಲ್ಲಿ ಔಷಧಿ ಕೊಡ ತಕ್ಕದ್ದನ್ನು ಕಾಲಕ್ಕೆ ಸರಿಯಾಗಿ ಒದಗಿಸುವಂತಹ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಯಾರು ಇದನ್ನು ಸಕಾಲದಲ್ಲಿ ಒದಗಿಸುವುದಕ್ಕೆ ವಿಫಲರಾಗುತ್ತಾರೆ, ಅವರ ಮೇಲೆ ಉಗ್ರ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಕಾಲೇಜು ಆಸ್ಪತ್ರೆಗಳಲ್ಲಿ ಆನರರಿ ಪ್ರೊಫೆಸರುಗಳನ್ನು ನೇಮಕ ಮಾಡುತ್ತಿದ್ದಾರೆ. ಕಾಲೇಜುಗಳಲ್ಲಿ ಸಾಕಷ್ಟು ಪ್ರೊಫೆಸರುಗಳು ಇದ್ದರೂ ಕೂಡ ರಿಟೈರಿಯರಾದ ಪ್ರೊಫೆಸರುಗಳನ್ನು ನೇಮಕ ಮಾಡಿ ಸರ್ವಿಸಿನಲ್ಲಿದ್ದಂತಹ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದರಿಂದ ಅಲ್ಲಿ ಇದ್ದಂತಹ ಪ್ರೊಫೆಸರುಗಳಿಗೆ ತಮ್ಮ ಕೆಲಸದಲ್ಲಿ ಜಿಗುಪ್ಸೆ ಉಂಟಾಗಿ ಕೆಲಸ ಮಾಡುವುದಕ್ಕೆ ಉತ್ತೇ ಜನ ಬರುವುದಿಲ್ಲ. ಅಂಥ ರಿಟೈರ್ಡ್ ಆದ ಪ್ರೊಫೆಸರುಗಳು ರೋಗಿಗಳನ್ನು ಸರ್ಕಾರೀ ಆಸ್ಪತ್ರೆ ಗಳಲ್ಲಿ ಪರೀಕ್ಷೆ ಮಾಡಿಸಿ, ಸರ್ಕಾರೀ ಸಲಕರಣೆಗಳನ್ನು ಉಪಯೋಗಿಸಿ ಕೊನೆಗೆ ತಮ್ಮ ಸ್ವಂತ ಪ್ರಾಕ್ಟೀಸ್ ಮಾಡುವ ಜಾಗದಲ್ಲಿ ಅವರನ್ನು ಬರುವಂತೆ ಮಾಡಿಕೊಂಡು ಅನುಕೂಲವನ್ನು ಪಡೆದು ಕೊಳ್ಳುತ್ತಾರೆ. ಆದ್ದರಿಂದ ಈ ಪದ್ಧತಿಯನ್ನು ರದ್ದುಪಡಿಸಿ ಇರತಕ್ಕಂತಹ ಪ್ರೊಫೆಸರುಗಳಿಗೆ

ಹೆಚ್ಚಿನ ಹುದ್ದೆಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಅದಲ್ಲದೆ ಈಗ ಇರತಕ್ಕಂತಹ ರೀಡರ್ಸ್ ಹುದ್ದೆಗಳನ್ನು ಅಬಾಲಿಷ್ ಮಾಡಿ ಅಸೋಸಿಯೇಟ್ ಪ್ರೊಫೆಸರ್ಸ್ ಎಂದು ಮಾಡಿದ್ದಾರೆ. ಅದ್ದರಿಂದ ಇಂಥ ಆನರರಿ ಪ್ರೊಫೆಸರುಗಳನ್ನು ರದ್ದು ಮಾಡಿ ಇರತಕ್ಕ ಪ್ರೊಫೆಸರುಗಳಿಗೆ ಹೆಚ್ಚಿನ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಈಗಿನ ಕಾಲದಲ್ಲಿ ಅಲೋಪತಿ ಮೆಡಿಸನ್ಸ್ ಬೆಲೆ ಬಹಳವಾಗಿದೆ. ಆಯುರ್ವೇದಿಕ್ ಮತ್ತು ಅಲೋಪತಿ ಮೆಡಿಸನ್ಸ್ ಬಗ್ಗೆ ಸಾಕಷ್ಟು ಉತ್ತೇಜನವನ್ನು ಕೊಟ್ಟು ಈಗ ಹೆಚ್ಚಿಗೆ ಅಭಿವೃದ್ಧಿ ಮಾಡಿದ್ದಾರೆ. ಅದಕ್ಕೆ ನಾನು ಬಹಳವಾಗಿ ಸಂತೋಷಪಡುತ್ತೇನೆ. ಕಳೆದ ಅಧಿವೇಶನದಲ್ಲಿ ಇದೇ ಸದನದಲ್ಲಿ ಹೋಮಿಯೊಪ್ಯತಿಕ್ ಕಾಲೇಜನ್ನು ಓಪನ್ ಮಾಡಬೇಕೆಂದು ಇದೇ ಸಂದರ್ಭದಲ್ಲಿ ಮಾತನಾಡಿದ್ದೆ. ಅಷ್ಟಾದರೂ ಕೂಡ ಅವರ ವರದಿಯಲ್ಲಿ ಈಗ ಸಾಕಷ್ಟು ಕ್ವಾಲಿಫೈಡ್ ಹ್ಯಾಂಡ್ಸ್ ಇಲ್ಲ. ಮುಂದೆ ಪ್ರಾರಂಭಮಾಡುತ್ತೇವೆಂದು ಭರವಸೆ ನೀಡಿದ್ದರು. ಆದರೂ ಇದುವರೆಗೆ ಇನ್ನೂ ಓಪನ್ ಮಾಡಲಿಲ್ಲ. ತಕ್ಷಣ ಓಪನ್ ಮಾಡಿದರೆ ಜನರಿಗೆ ಬಹಳ ಸಹಾಯವಾಗುತ್ತದೆ. ಅದನ್ನು ಜಾಗ್ರತೆಯಾಗಿ ಮಾಡಬೇಕು. ಅಲೋಪತಿಕ್ ಸುಮಾರಾಗಿ ಒಂದೊಂದು ಕ್ಯಾಪ್‌ಸಲ್ಸ್‌ಗೆ 90 ಪೈಸೆ ಅಥವಾ ಒಂದು ರೂಪಾಯಿ ಆಗುತ್ತದೆ. ಹೋಮಿಯೊಪತಿಕ್ ಔಷಧಿ ಬೆಲೆ ಬಹಳ ಕಡಿಮೆಯಾಗಿ ಸಿಗುತ್ತದೆ. ಈ ಔಷಧಿಯ ಗುಣಧರ್ಮ ಸಣ್ಣ ಮಕ್ಕಳಿಗೆ ಹೋಗುತ್ತದೆ. ಅಲೋಪತಿಕ್ ಔಷಧಿ ಬಹಳ ಕಹಿಯಾಗಿರುತ್ತದೆ, ಬಹಳ ದುಬಾರಿ ಬೆಲೆ. ಹೋಮಿಯೋಪತಿಕ್‌ನಲ್ಲಿ ಹೊಸ ಔಷಧಿ ಡಯಾಗನ್ಸೈಜ್ ಮಾಡುವಾಗ ಏನೇನು ಹೊಸ ಹೊಸ ರೋಗಗಳಿಗೆ ಉಪಯೋಗವಾಗುತ್ತವೆ ಎಂಬುದನ್ನು ಕಂಡುಹಿಡಿಯುವುದರಿಂದ ಏನೂ ಕೆಟ್ಟ ಪರಿಣಾಮವಾಗುವುದಿಲ್ಲ. ಈ ಔಷಧಿ ಬಹಳ ಅತ್ಯುತ್ತಮವಾದುದು. ಏನಾದರೂ ಜ್ವರ ಬಂದರೆ ಅಲೋಪತಿ ಸಿಸ್ಟಂನಲ್ಲಿ ದೊಡ್ಡ ದೊಡ್ಡ ಮೆಡಿಸನ್ಸ್ ಕೊಟ್ಟು ಗುಣಪಡಿಸುತ್ತಾರೆ. ಶಾಸಕರಿಗೆ ಹೆಚ್ಚಿನ ರಿಯಾಯಿತಿಯಿಂದ ಈ ಔಷಧಿ ಸಿಗುವ ವ್ಯವಸ್ಥೆ ಮಾಡಬೇಕು. 4 ವರ್ಷಗಳ ನಂತರ ಇದರ ಪರಿಣಾಮ ಬಹಳ ಕಷ್ಟವಾಗುತ್ತದೆ. ಜಾಗ್ರತೆ ಗುಣವಾಗುವುದಿಲ್ಲ. ಅದಕ್ಕಾಗಿ ದೊಡ್ಡ ದೊಡ್ಡ ಕ್ಯಾಪ್‌ಸಲ್‌ಗಳನ್ನು ಉಪಯೋಗಿಸಬೇಕಾಗಿದೆ. ಆದರೆ ಹೋಮಿಯೊಪತಿಕ್‌ನಲ್ಲಿ ಈ ತರಹ ಬರುವುದಿಲ್ಲ. ಯಾವ ತರಹ ಔಷಧಿಯನ್ನು ತೆಗೆದುಕೊಂಡರೂ ಅದು ರೋಗಿಗೆ ಹಿಡಿಯುತ್ತದೆ. ಅದ್ದರಿಂದ ಹೋಮಿಯೊಪತಿಕ್ ಕಾಲೇಜನ್ನು ತಕ್ಷಣ ತೆಗೆದು ಅದರಿಂದ ಜನಗಳಿಗೆ ಹೆಚ್ಚಿನ ರೀತಿಯಲ್ಲಿ ಉಪಕಾರವಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಸಾಮಾನ್ಯವಾಗಿ ಟೈಫಾಯ್ಡ್‌ಗೆ ಅಥವಾ ಪ್ಲೂಗೆ ಅಲೊಪತಿಕ್‌ನಲ್ಲಿ 50 ರೂಪಾಯಿಗಳು ಖರ್ಚಾಗುತ್ತದೆ. ಹೋಮಿಯೊಪತಿಕ್‌ನಲ್ಲಿ ಕೇವಲ 5 ಪೈಸೆಗಳು ಮಾತ್ರ ಖರ್ಚಾಗುತ್ತದೆ. 100 ರೂಪಾಯಿಗಳ ಔಷಧಿಯಿಂದ ಹೋಮಿಯೊಪತಿಕ್‌ನಲ್ಲಿ ಒಂದು ಸಾವಿರ ಜನಗಳಿಗೆ ಟ್ರೀಟ್ ಮಾಡಬಹುದು. ಅಲೊಪತಿಕ್‌ನಲ್ಲಿ ಆದರೆ ಕೇವಲ 50 ಜನಗಳಿಗೆ ಮಾತ್ರ ಟ್ರೀಟ್ ಮಾಡಬಹುದು. ಸಾಮಾನ್ಯವಾಗಿ ಒಂದು ತಾಲ್ಲೂಕಿನಲ್ಲಿ 10 ಸಾವಿರ ರೂಪಾಯಿಗಳನ್ನು ಬರೀ ಮೆಡಿಸನ್ಸ್‌ಗೆ ಎಂಬುದಾಗಿ ಕೊಟ್ಟರೆ ಅರ್ಧ ಖರ್ಚಿನಲ್ಲಿ ಮೆಡಿಸನ್ಸ್ ತೆಗೆದು ಕೊಂಡು ಮಿಕ್ಕ 5 ಸಾವಿರ ರೂಪಾಯಿಗಳನ್ನು ಅಲ್ಲಿನ ಆಸ್ಪತ್ರೆಗೆ ಕೊಟ್ಟರೆ, ಅದರಿಂದ ಸಾವಿರಾರು ಜನಗಳಿಗೆ ಅನುಕೂಲ ಪಡಿಸಬಹುದು. ಆದ್ದರಿಂದ ಹೋಮಿಯೊಪತಿಕ್ ಕಾಲೇಜನ್ನು ಜಾಗ್ರತೆಯಾಗಿ ತೆಗೆದು ಆದರಿಂದ ಜನಗಳಿಗೆ ತಕ್ಷಣ ಉಪಕಾರ ಮಾಡುವ ಹಾಗೆ ವ್ಯವಸ್ಥೆ ಮಾಡಬೇಕು. ಹೋಮಿಯೊಪತಿಕ್ ಬಾಬಿಗೆ ಪ್ರತ್ಯೇಕವಾಗಿ ಒಬ್ಬ ಜಾಯಿಂಟ್ ಡೈರೆಕ್ಟರ್ ಇರಬೇಕು. ಅಲೊಪತಿಕ್ ಮತ್ತು ಆಯುರ್ವೇದಿಕ್ ಇವೆರಡನ್ನೂ ಸೇರಿಸಿ ಅವಕ್ಕೆ ಒಂದು ಪ್ರತ್ಯೇಕವಾದ ಒಬ್ಬ ಜಾಯಿಂಟ್ ಡೈರೆಕ್ಟರನ್ನು ನೇಮಕ ಮಾಡಬೇಕು.

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. 1971 ರಲ್ಲಿಯೇ ಸರ್ಕಾರದವರು ಈ ಒಂದು ಸಿಸ್ಟಂನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಬೆಂಗಳೂರು ಮೆಂಟಲ್ ಆಸ್ಪತ್ರೆಯ ಹತ್ತಿರ ಕನಿಷ್ಟ ಪಕ್ಷ 10 ಬೆಡ್‌ಗಳುಳ್ಳ ಒಂದು ಆಸ್ಪತ್ರೆಯನ್ನು ತೆಗೆದು ಒಂದು ಪ್ರಯೋಗ ಮಾಡಬೇಕೆಂದು ಮಾಡಿದರು. ಆದರೆ ಇದುವರೆಗೂ ಆ ಬೆಡ್‌ಗಳ ಬಗ್ಗೆ ಆರ್ಡರ್ ಮಾಡಲಿಲ್ಲ. ಆದ್ದರಿಂದ ನಾನು ವಿಷಾದಪಡಬೇಕಾಗುತ್ತದೆ. ತಕ್ಷಣ ಮಂತ್ರಿಗಳು 10 ಬೆಡ್‌ಗಳನ್ನು ಜಿಲ್ಲಾ ಹೆಡ್ ಕ್ವಾರ್ಟರ್ ಆಸ್ಪತ್ರೆಯಲ್ಲಿ ಕೊಡುವ ಹಾಗೆ ವ್ಯವಸ್ಥೆ ಮಾಡಬೇಕು. ಇದರಿಂದ ಅಲ್ಲಿರತಕ್ಕವರಿಗೆ ಬಹಳ ಅನುಕೂಲ ಉಂಟು. ತಕ್ಷಣ ವೈದ್ಯಕೀಯ ಕಾಲೇಜುಗಳನ್ನು ಇನ್ನೂ ಜಾಸ್ತಿ ಮಾಡಿ ಹೆಚ್ಚು ಹೆಚ್ಚಿಗೆ ವೈದ್ಯರನ್ನು ನೇಮಕಮಾಡಬೇಕೆಂದು ಹೇಳುತ್ತೇನೆ.

ಇಷ್ಟು ಹೊತ್ತು ನಾನು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri C. M. ARUMUGHAM.—Sir, I wish to make a submission. This is an important demand having three aspects *viz.* Medical, Public Health and Family Planning Therefore, it is necessary that we must touch upon all these three aspects. I would therefore submit that we may take it up even tomorrow.

Mr. DEPUTY SPEAKER.—Several hon. Members have already touched upon all these three items. The Health Minister said that so many very valuable points have been made and he has to reply to them in an effective manner and as such he would require at least one hour for his reply. Besides, it was agreed to by all that we should complete the discussion and the Minister would reply at 5 O' Clock. Even then I am prepared to sit for fifteen minutes more for the sake of the hon. Members. Anyway, the Demand will have to be finished today.

Sri H. SIDDAVEERAPPA.—Sir, you are the person to fix the time. I do not want the discussion to be curtailed. If the hon. Member want to express himself fully I have no objection if you give him time. But I must have my full say and given an opportunity to reply to all the points raised in the course of the debate. I may even venture to make a suggestion that you, Sir, may give them time till 6 p. m. and I will reply tomorrow.

Sri H. D. DEVE GOWDA.—Let this Demand be finished today itself beacuse we have two important Demands for tomorrow.

† ಶ್ರಿ ಕೆ. ಎಚ್. ಹನುಮೇಗೌಡ (ಹಾಸನ)..—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಬಯಸುತ್ತೇನೆ. ಕಳೆದ ವರ್ಷ ಮಾನ್ಯ ಸಚಿವರು ಈ ಇಲಾಖೆಯನ್ನು ವಹಿಸಿಕೊಂಡ ತಕ್ಷಣ ಗ್ರಾಮಾಂತರ ಪ್ರದೇಶಗಳಲ್ಲಿ ತಾಲ್ಲೂಕು ಬೋರ್ಡಿನವರು ನಡೆಸುತ್ತಾ ಇರತಕ್ಕ ಆಯುರ್ವೇದ ಆಸ್ಪತ್ರೆಗಳನ್ನು ಸರ್ಕಾರವೇ ವಹಿಸಿಕೊಳ್ಳುತ್ತದೆಂದು ಒಂದು ಪ್ರಕಟಣೆಯನ್ನು ಹೊರಡಿಸಿದ್ದರು. ಅದು ಬಹಳ ಸಂತೋಷದ ವಿಚಾರ. ಅದೇ ರೀತಿಯಲ್ಲಿ ಈ ವರ್ಷ ಗ್ರಾಮಾಂತರ ಪ್ರದೇಶಗಳಲ್ಲಿ 10 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಚಿಕ್ಕ ಚಿಕ್ಕ ಆಸ್ಪತ್ರೆಗಳನ್ನು ಒದಗಿಸುತ್ತೇವೆಂದು ಹೇಳಿ ಅನುಕೂಲ ಮಾಡಿಕೊಟ್ಟಿದ್ದಾರೆ. ಆ ರೀತಿಯಾಗಿ ಎರಡು ಉತ್ತಮವಾದಂಥ ಕೆಲಸಗಳನ್ನು ಮಾಡಿದ್ದರಿಂದ ನನ್ನ ಕ್ಷೇತ್ರದ ಜನಗಳ ಪರವಾಗಿ ನಾನು ಅವರಿಗೆ ವಂದಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕುಟುಂಬ ಯೋಜನೆಯ ಬಗ್ಗೆ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡುತ್ತಿದ್ದಾರೆ. ಜನಸಂಖ್ಯೆ ಬೆಳೆಯುತ್ತಾ ಇರುವುದನ್ನು ಕಡಿಮೆ ಮಾಡುವ ದೃಷ್ಟಿಯಿಂದ ಇಷ್ಟು ಹಣ ಖರ್ಚಾಗುತ್ತಿದ್ದರೂ ನಿರೀಕ್ಷಿಸಿದ ಮಟ್ಟದಲ್ಲಿ ಜನಸಂಖ್ಯೆಯ ಬೆಳವಣಿಗೆ ಕಡಿಮೆ ಯಾಗುತ್ತಾ ಇಲ್ಲ. ಬಹುಶಃ ಈ ದೇಶದಲ್ಲಿ ಈ ದಿವಸ ಆಗತಕ್ಕಂಥ ಅಭಿವೃದ್ಧಿ, ಹಾಗೂ ಬೆಳೆಯತಕ್ಕ ಜನಸಂಖ್ಯೆಯನ್ನು ಹೋಲಿಸಿ ನೋಡಿದಾಗ, ಬಹುಶಃ ಕೊನೆಯವರೆಗೂ ಇದೇ ರೀತಿಯಲ್ಲಿ ಮುಂದು ವರಿಸಿಕೊಂಡು ಹೋದರೆ ಎಲ್ಲಾ ಜನಗಳಿಗೂ ಆಧುನಿಕವಾದ ಸೌಲಭ್ಯಗಳನ್ನು ಒದಗಿಸುವುದಕ್ಕೆ ಬಹಳ ಕಷ್ಟವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಜನರಿಗೆ ಈಗ ಇರತಕ್ಕ ಈ ಕುಟುಂಬ ಯೋಜನಯ ಬಗ್ಗೆ ಅವರ ಮನೋಭಾವವನ್ನು ಬದಲಾವಣೆ ಮಾಡಿಕೊಂಡು ಅದಕ್ಕೆ ಅನುಕೂಲವಾಗತಕ್ಕ ರೀತಿಯಲ್ಲಿ ನಡೆಯುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದ್ದು ಅಗತ್ಯವೆಂದು ಹೇಳುತ್ತೇನೆ ; ಇದು ಅನಿವಾರ್ಯವೂ ಹೌದು. ಈ ದಿವಸ ಜನಸಂಖ್ಯೆ ಕಡಿಮೆಯಾಗುತ್ತಿರುವುದಾದರೂ ಎಲ್ಲಿ ? ಯಾರು ಸುಸಂಸ್ಕೃತ ರಿದ್ದಾರೆ, ಯಾರು ಯಾರು ವಿದ್ಯಾವಂತರಿದ್ದಾರೆ, ಬುದ್ಧಿವಂತರಿದ್ದಾರೆ ಅಂಥ ವರ್ಗದ ಜನರಲ್ಲಿ ಮಾತ್ರ ಇದನ್ನು ಹತೋಟಿಗೆ ತರಲಾಗುತ್ತಿದೆ. ಇನ್ನುಳಿದ ಅವಿದ್ಯಾವಂತ ವರ್ಗದಲ್ಲಿ ಕೂಲಿಗಾರರ ವರ್ಗದಲ್ಲಿ ಇದಕ್ಕೆ ಪುರಸ್ಕಾರ ಕೊಟ್ಟಿಲ್ಲ. ಆ ವರ್ಗಗಳಲ್ಲಿ ಜನ ಸಂಖ್ಯೆ ಈಗಲೂ ಯಥೇಚ್ಛವಾಗಿ ಬೆಳೆಯುತ್ತಿದೆ. ಇದರಿಂದ ಸಮಾಜದಲ್ಲಿ ಇದು ಒಂದು ಸರ್ವತೋಮುಖವಾದ ರೀತಿಯಲ್ಲಿ ನಡೆ

ಯದೆ ಸಮಾಜದಲ್ಲಿ ಬುದ್ಧಿವಂತ ವರ್ಗ ಮತ್ತು ಅವಿದ್ಯಾವಂತ ವರ್ಗಗಳ ಬೆಳವಣಿಗೆಯಲ್ಲಿ ಬಹಳ ಏರು ಪೇರುಗಳಾಗುತ್ತಿವೆ. ಬುದ್ಧಿವಂತ ಜನಾಂಗದ ಸಂಖ್ಯೆ ತಗ್ಗುತ್ತಿದೆ. ಅವಿದ್ಯಾವಂತ ಜನರ ಸಂಖ್ಯೆ ಏರುತ್ತಿದೆ. ಇದು ಸಮಾಜಕ್ಕೆ ಬಹಳ ಪೆಟ್ಟನ್ನು ತರುವುದಾಗಿದೆ. ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ದೇಶಕ್ಕೆ ಬುದ್ಧಿವಂತ ಜನರ ಅಗತ್ಯ ಬಹಳವಾಗಿದೆ. ಇನ್ನು ಕೆಲವರು ಏನೋ ಒಂದು ಧಾರ್ಮಿಕ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಜನಸಂಖ್ಯೆಯನ್ನು ಮಿತಿಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಸರ್ಕಾರದವರು ಸಾರುತ್ತಿರುವ ಈ ಮಿತ ಸಂತಾನದಲ್ಲಿ ಅವರಿಗೆ ಒಂದು ಹೃತ್ಪೂರ್ವಕವಾದ ಅಭಿಲಾಷೆಯಿದ್ದರೆ, ನಾವೂ ಕೂಡ ಈ ದೇಶದ ಪ್ರಜೆಗಳೇ, ನಾವೂ ಇಲ್ಲಿನ ಜನರಲ್ಲಿ ಕೂಡಿ ಸುಖ ಸಂತೋಷದಿಂದ ಬಾಳಬೇಕೆಂಬ ಇಚ್ಛೆ ಅವರಿಗಿದ್ದರೆ ಅವರೂ ಕೂಡ ಇದರಲ್ಲಿ ಭಾಗಿಗಳಾಗಿ ಅನುಷ್ಠಾನಕ್ಕೆ ತರಲಿ, ಇಲ್ಲದಿದ್ದರೆ ಇದಕ್ಕಿಂತ ದೊಡ್ಡ ದೇಶದ್ರೋಹ ಸಮಾಜ ದ್ರೋಹ ಇಲ್ಲ.

ಶ್ರೀ ಎಸ್. ಹಮೀದ್ ಷಾ.—ಆ ರೀತಿ ಅಂದವರು ಯಾರು ಹೇಳಬಿಡಿ...

ಶ್ರೀ ಕೆ. ಎಚ್. ಹನುಮೇಗೌಡ.—ನಾನು ನಿಮ್ಮನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು ಮಾತನಾಡುತ್ತಿರುವುದು. ನಿಮಗೆ ಈ ದೇಶದ ಮೇಲೆ ಮತ್ತು ಈ ದೇಶದ ಜನರಲ್ಲಿ ಅಂಥ ನಿಷ್ಠೆ ಇದ್ದರೆ, ಇಲ್ಲಿಯ ಜನರೊಂದಿಗೆ ನೀವೂ ಕೂಡ ಕೂಡಿ ಸುಖದಿಂದ ಬಾಳಬೇಕೆಂಬ ಆಸೆ ಇದ್ದರೆ ಇದನ್ನು ಆಚರಣೆಗೆ ತರಬೇಕು. ಒಬ್ಬೊಬ್ಬರು 4–5 ಜನ ಹೆಂಡತಿಯರನ್ನು ಇಟ್ಟುಕೊಂಡು, ಅನೇಕ ಜನ ಮಕ್ಕಳನ್ನು ಉತ್ಪತ್ತಿ ಮಾಡುತ್ತಾ ಹೋದರೆ ಸಮಾಜದಲ್ಲಿ ಏರುಪೇರು ಆಗುವುದು ಖಂಡಿತ...

ಶ್ರೀ ಎಸ್. ಹಮೀದ್ ಷಾ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ನಮ್ಮ ಜನರು ಒಬ್ಬೊಬ್ಬರು 4-5 ಜನ ಹೆಂಡತಿಯರನ್ನು ಇಟ್ಟುಕೊಂಡು ಹೆಚ್ಚು ಮಕ್ಕಳನ್ನು ಮಾಡುವುದು ದೇಶ ದ್ರೋಹ ಎಂದು ಹೇಳುತ್ತಿದ್ದಾರೆ. ಆದರೆ ಹಾಗೆ ದೇಶ ದ್ರೋಹ ಮಾಡತಕ್ಕ ಜನರು ನಾವಲ್ಲ. ಈ ದಿವಸ ಹಿಂದುಗಳಲ್ಲೂ ಕೂಡ ಒಬ್ಬೊಬ್ಬರು ನಾಲ್ಕು ಜನ ಹೆಂಡತಿಯರನ್ನು ಇಟ್ಟುಕೊಂಡಿರತಕ್ಕವರಿದ್ದಾರೆ. ಯಾವುದೋ ಹಿಂದಿನ ಅರೇಬಿಯಾ ದೇಶದವರು ಬರೆದಿರತಕ್ಕ ಪುಸ್ತಕವನ್ನು ಅವರು ಓದಿಕೊಂಡು ಇಲ್ಲಿ ಭಾಷಣ ಮಾಡುತ್ತಿರುವುದು ಸರಿಯಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಿಮ್ಮಲ್ಲಿ 8 ಜನ ಹೆಂಡತಿಯರನ್ನು ಇಟ್ಟುಕೊಂಡಿರತಕ್ಕ ನಿದರ್ಶನ ಬೇಕೆಂದರೆ ಕೊಡುತ್ತೇನೆ...

ಶ್ರೀ ಕೆ. ಎಚ್. ಹನುಮೇಗೌಡ.—ನಾನು ಆ ಜಾತಿ ಈ ಜಾತಿಎಂದು ಹೇಳುತ್ತಿಲ್ಲ. ಎಲ್ಲರಿಗು ಅನ್ವಯಿಸಿಯೇ ಇದನ್ನು ಹೇಳುತ್ತಿದ್ದೇನೆ. ದೇಶದ ಬಗ್ಗೆ ಯಾರಿಗೆ ಒಂದು ನಿಷ್ಠೆ ಪ್ರೇಮ ಹಾಗೂ ಅಭಿಮಾನಗಳಿವೆ ಅವರು ಇದನ್ನು ಕಡ್ಡಾಯವಾಗಿ ಆಚರಿಸಲೇ ಬೇಕೆಂದು ಹೇಳುತ್ತೇನೆ. ದೇಶದಲ್ಲಿ ಮುಂದುವರಿದವರು ಹಿಂದುಳಿದವರು ಎಂಬುದನ್ನು ತೊಡೆದು ಹಾಕಬೇಕಾಗಿದ್ದರೆ ಈ ಸಂತಾನ ನಿರೋಧವನ್ನು ಎಲ್ಲಾ ಜನಾಂಗದವರೂ ಕಡ್ಡಾಯವಾಗಿ ಪಾಲಿಸಲೇಬೇಕೆಂದು ಒತ್ತಾಯಮಾಡಿ ಹೇಳುತ್ತೇನೆ. ಸರ್ಕಾರದವರು ಕೂಡ ಇದನ್ನು ಯಾವ ಜಾತಿ ಮತಗಳ ಬೇಧವಿಲ್ಲದಂತೆ ಎಲ್ಲರಿಗೂ ಕಡ್ಡಾಯವಾಗಿ ಆಚರಿಸುವಂತೆ ನಿರ್ಬಂಧವನ್ನು ಹಾಕಲೇಬೇಕು.

ಇನ್ನು ಬೌರಿಂಗ್ ಆಸ್ಪತ್ರೆಯಲ್ಲಿ ಅನೇಕ ತರಹೆಯ ರೋಗಿಗಳನ್ನು ಅಲ್ಲಿ ಚಿಕಿತ್ಸೆಗಾಗಿ ಸೇರಿಸಿಕೊಳ್ಳಲಾಗುತ್ತಿದೆ. ಆದರೆ ಅಲ್ಲಿ ಒಬ್ಬ ರಾಮಚಂದ್ರ ಅನ್ನತಕ್ಕ ವ್ಯಕ್ತಿ ನಾಲ್ಕೂವರೆ ರೂಪಾಯಿಗಳ ಒಂದು ವಾರ್ಡನ್ನು ಹಿಡಿದುಕೊಂಡು ಅಲ್ಲೇ ತನಗೆ ಬೇಕಾದ ಎಲ್ಲ ಸೌಕರ್ಯಗಳನ್ನೂ ನಿರ್ಮಿಸಿಕೊಂಡು ಕಳೆದ ಒಂದೂವರೆ ವರ್ಷದಿಂದ ಕ್ಯಾಂಪ್ ಮಾಡಿಕೊಂಡಿದ್ದಾನೆ. ಅಲ್ಲಿಯ ವಾರ್ಡ್ ಡಾಕ್ಟರ್ ನಿನಗೇನೂ ಕಾಯಿಲೆ ಇಲ್ಲ; ನೀನು ಹೋಗಬಹುದು ಎಂದು ಹೇಳಿದರೂ ಆತನು ಹೋಗುತ್ತಿಲ್ಲ. ಹಾಗೇನಾದರೂ ಬಲವಂತ ಮಾಡಿದರೆ, ನಾನು ಮಂತ್ರಿ ಶ್ರೀ ಸಿದ್ದವೀರಪ್ಪನವರ ಸ್ನೇಹಿತ, ಅವರಿಗೆಹೇಳಿ ನಿಮ್ಮನ್ನು ಬಳ್ಳಾರಿಗೋ ಅಥವಾ ಬೀದರಿಗೋ ವರ್ಗಮಾಡುವಂತೆ ಮಾಡುತ್ತೇನೆಂದು ಆ ಡಾಕ್ಟರನ್ನುಹೆದರಿಸುತ್ತಿದ್ದಾನಂತೆ. ಈತನು ಒಂದು ಬೇಕರಿಯ ಮಾಲೀಕನಂತೆ...

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಈಗತಾನೆ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ವಿಚಾರಣೆ ಮಾಡಿಸಿ ಈ ದಿವಸವೇ ಆತನನ್ನು ಹೊರಗೆ ಹಾಕುವುದಕ್ಕೆ ಏರ್ಪಾಡನ್ನು ಮಾಡುತ್ತೇನೆ. ಆತನು ಅಲ್ಲೇ ಮನೆ ಮಾಡಿಕೊಂಡು ಸಂಸಾರಸಮೇತ ಇದ್ದಾನೆ. ಎಂಬ ಸಂಗತಿ ನನಗೆ ತಿಳಿಯದು. ಆತನಿಗೆ ಡಯಾಬಿಟೀಸ್ ಕಾಯಿಲೆ. ಅದು ಬೆಳಿಗ್ಗೆ ಸ್ವಲ್ಪ ಉತ್ತಮ ಅಂದರೆ ಮಧ್ಯಾಹ್ನಕ್ಕೆ ಏಕದಂ ಸೀರಿಯಸ್ಸಾಗುತ್ತದೆ. I know that man is suffering from diabetes. He comes and stays for some time and goes

(ಶ್ರೀ ಹೆಚ್. ಸಿದ್ಧವೀರಪ್ಪ)

away and pays rent. If the doctor has allowed him to stay for such a long time he has not done his work properly. He ought to have brought it to my notice. I will ring up and let you know. If any man has misused my name, I have not allowed it. It is not brought to my notice. I have gone and seen him once or twice.

ಅವರಿಗೆ ಡಯಾಬಿಟಿಸ್ ಇರಬೇಕೆಂದು ಹೇಳುತ್ತಿದ್ದರು, ಅವರು ಹಣ ಕೊಟ್ಟು ಇದ್ದಾರೆ. ಅವರು ಅಲ್ಲಿ ಇಷ್ಟು ದಿವಸ ಇರುವುದು ತಪ್ಪು ಎಂದು ಹೇಳುವುದಾದರೆ ವಿಚಾರಮಾಡೋಣ. ಹೀಗೇ ವಿಕ್ಟೋರಿಯ ಆಸ್ಪತ್ರೆಯಲ್ಲೂ ಅನೇಕರು ಇರುವರು.

5-00 P. M.

ಶ್ರೀ ಕೆ. ಎಚ್. ಹನುಮೇಗೌಡ.—ಕೆಲವರು ವಾಸಿಯಾಗದಿರುವ ಕಾಯಿಲೆಯಿಂದ ನರಳುತ್ತಿದ್ದಾರೆ, ಅವರಿಗೆ ಪುನಃ ಮಕ್ಕಳಾಗದ ಹಾಗೆ ಶಸ್ತ್ರ ಚಿಕಿತ್ಸೆ ಕಡ್ಡಾಯವಾಗಿ ಮಾಡಬೇಕು. ಅವರಿಗಿರುವ ಕಾಯಿಲೆ ಇತರರಿಗೆ ಹರಡಲು ಅವಕಾಶವಿರಬಾರದು. ಗ್ರಾಮಾಂತರಗಳಲ್ಲಿ ಆಯುರ್ವೇದ ಆಸ್ಪತ್ರೆಗೆ ಅವಕಾಶಮಾಡಿ ನಾಲ್ಕೈದು ಬೆಡ್ಡುಗಳಿರುವ ಕಟ್ಟಡ ಒದಗಿಸಬೇಕು.

ಇನ್ನೊಂದು ವಿಚಾರ, ಜಿಲ್ಲಾ ಕೇಂದ್ರಗಳಲ್ಲಿ ಇರುವ ಜನರಲ್ ಆಸ್ಪತ್ರೆಯಲ್ಲಿ ದೊಡ್ಡ ಡಾಕ್ಟರುಗಳೆಲ್ಲಾ ಒಂದೇ ಕಡೆ ಇರುವರು. ದೂರದಲ್ಲಿರುವವರು ಅಲ್ಲಿಗೆ ಬರಲು 2-3 ರೂಪಾಯಿ ಖರ್ಚುಮಾಡಬೇಕು. ಇಂಥ ಪರಿಸ್ಥಿತಿ ಇರುವುದರಿಂದ ದೊಡ್ಡ ಪಟ್ಟಣಗಳ ಬಡಾವಣೆಯಲ್ಲಿ ಕೊನೆಯ ಪಕ್ಷ ಮೂರುನಾಲ್ಕು ಔಟ್ ಪೇಸೆಂಟ್ ಡಿಸ್ಪೆನ್ಸರಿಗಳನ್ನಾದರೂ ತೆರೆದು ಅಲ್ಪಸ್ವಲ್ಪ ಕಾಯಿಲೆ ಇರುವವರಿಗೆ ಅಲ್ಲಿ ಔಷಧಿ ಕೊಡಲು ವ್ಯವಸ್ಥೆಮಾಡಬೇಕು. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ, ಈಗ ಆರೋಗ್ಯ ಸಚಿವರಾದ ಶ್ರೀಮಾನ್ ಸಿದವೀರಪ್ಪನವರು ಮಂಡಿಸಿರುವ ಬೇಡಿಕೆಗೆ ಸಂಪೂರ್ಣ ಬೆಂಬಲ ಕೊಡುತ್ತಾ ಕೆಲವು ಸಲಹೆಗಳನ್ನು ನೀಡಬಯಸುತ್ತೇನೆ. ಈಗ ಈ ಬಾಬಿಗೆ ಇಪ್ಪತ್ತಾರೂವರೆ ಕೋಟಿ ರೂಪಾಗಳನ್ನು ಖರ್ಚುಮಾಡುವುದೇನೂ ಹೆಚ್ಚಲ್ಲ. ಏಕೆಂದರೆ ಈ ಸಚಿವರು ಇಲಾಖೆಯ ಜವಾಬ್ದಾರಿ ಹೊತ್ತಮೇಲೆ ಅನೇಕ ವಿಧದಲ್ಲಿ ನಿಗ ಕೊಟ್ಟು ಬಹಳ ಅಭಿವೃದ್ಧಿ ಮಾಡಿದ್ದಾರೆ. ಒಂದು ವರ್ಷದ ಹಿಂದೆ ಇಲಾಖೆಯಲ್ಲಿ ಇಷ್ಟು ಸಮರ್ಪಕವಾಗಿ ಕೆಲಸ ನಡೆಯುತ್ತಿರಲಿಲ್ಲ. ಈಗ ನವಚೈತನ್ಯವನ್ನುಂಟುಮಾಡಿದ್ದಾರೆ, ಹುರುಪು ಕೊಟ್ಟಿದ್ದಾರೆ, ಸಮರ್ಪಕವಾಗಿ ಕೆಲಸ ಮಾಡುತ್ತಿದೆ. ಉದಾಹರಣೆಗೆ ಮೆಡಿಕಲ್ ಅಡ್ಮಿಷನ್ಸ್ ವಿಚಾರ ನೋಡಬಹುದು. ಸರಕಾರಿ ಮೆಡಿಕಲ್ ಕಾಲೇಜು 4, ಪ್ರೈವೇಟ್ ಮೆಡಿಕಲ್ ಕಾಲೇಜುಗಳು 5 ನಮ್ಮ ರಾಜ್ಯದಲ್ಲಿವೆ. ಪ್ರೈವೇಟ್ ಕಾಲೇಜುಗಳಲ್ಲಿ ಹಿಂದೆ ಬಡವರಿಗೆ ಸೀಟು ಸಿಕ್ಕುತ್ತಿರಲಿಲ್ಲ, ಈಗ ಅವರಿಗೂ ಸಹ ಸೀಟು ಸಿಕ್ಕಲು ಅವಕಾಶಮಾಡಿದ್ದಾರೆ. ಇದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ.

ನಮ್ಮ ರಾಜ್ಯದಲ್ಲಿ ಮೂರು ಎಪಿಡೆಮಿಕ್ ಡಿಸೀಸಸ್ ಆಸ್ಪತ್ರೆಗಳಿವೆ. ಆದರೆ ಮಲೆನಾಡು ಪ್ರದೇಶದಲ್ಲಿ ಇಂಥ ಒಂದು ಆಸ್ಪತ್ರೆಯಿಲ್ಲ, ಆದುದರಿಂದ ಹಾಸನದಲ್ಲಿ ಇಂಥ ಒಂದು ಆಸ್ಪತ್ರೆಯನ್ನು ತೆರೆಯಬೇಕೆಂದು ಪ್ರಾರ್ಥನೆ ಮಾಡುತ್ತೇನೆ. 30 ವರ್ಷಗಳ ಹಿಂದೆ ಮಲೆನಾಡಿನಲ್ಲಿ ಮಲೇರಿಯ ಜಾಸ್ತಿಯಾಗಿತ್ತು, ಈಚೆಗೆ ಕಡಮೆಯಾಗಿದೆ. ಈಗ ಸೊಳ್ಳೆಗಳು ಜಾಸ್ತಿಯಾಗಿ ಮಲೇರಿಯ ಮತ್ತೆ ಅಲ್ಲಿ ಪ್ರಾರಂಭವಾಗಿದೆ. ಇದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕು ಈ ಸೊಳ್ಳೆ ಕಾಟ ತಪ್ಪಿಸಲು ಉಪಾಯ ಕಂಡುಹಿಡಿದು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಹಳ್ಳಿಗಾಡಿನಲ್ಲಿ ಜನರ ಆರೋಗ್ಯ ಕೆಡಲು ಮುಖ್ಯವಾದುದು ಯಾವುದೆಂದರೆ ಅಲ್ಲಿ ಒಳೆಯ ಕುಡಿಯುವ ನೀರು ದೊರೆಯದಿರುವುದು. ಕೆಟ್ಟ ನೀರನ್ನು ಕುಡಿಯುವುದರಿಂದ ರೋಗ ಹರಡುವುದು ಆದುದರಿಂದ ಅಲ್ಲಿ ಒಳ್ಳೆಯ ಕುಡಿಯುವ ನೀರು ದೊರೆಯುವಂತೆ ವ್ಯವಸ್ಥೆಮಾಡಬೇಕು. ಇದಕ್ಕೆ ವ್ಯಾಪಕವಾದ ಕಾರ್ಯಕ್ರಮ ಹಾಕಿಕೊಳ್ಳಬೇಕು. ಜನರ ಆರೋಗ್ಯ ಮುಖ್ಯವಾಗಿ ಹೋಟಲುಗಳಿಂದ ಕೆಡುವುದು, ಅನೇಕ ಹೋಟೇಲುಗಳಲ್ಲಿ ನೈರ್ಮಲ್ಯ ಕಾಪಾಡುವುದಿಲ್ಲ. ಅಲ್ಲಿ ತಿಂಡಿ ತಿನ್ನುವವರಿಗೆ ಕಾಯಿಲೆ ಬರುವುದು, ಸಾಂಕ್ರಾಮಿಕ ರೋಗ ಹರಡುವುದು. ಆದುದರಿಂದ ಹೋಟೇಲುಗಳಲ್ಲಿ ನೈರ್ಮಲ್ಯತೆ ಕಾಪಾಡಲು ತೀವ್ರ ರೀತಿಯ ಕ್ರಮ ತಗೆದುಕೊಳ್ಳಬೇಕು. ಇದಕ್ಕೆ ಬೇಕಾದರೆ ಒಂದು ಕಾನೂನು ಮಾಡಿ ಕಟ್ಟುನಿಟ್ಟಾಗಿ ಅದನ್ನು ಜಾರಿಗೆ ತರಬೇಕು,

ಈಗ ಆಸ್ಪತ್ರೆಗಳಿಗೆ ಕೊಡುವ ಡ್ರಗ್ಸ್ ಸಾಲದು, ಕೆಲವು ಸಂದರ್ಭಗಳಲ್ಲಿ ಆಸ್ಪತ್ರೆಗಳಲ್ಲಿ ಒಳ್ಳೆಯ ವೈದ್ಯರಿದ್ದರೂ ಔಷಧಿಯಿಲ್ಲದೆ ತೊಂದರೆಯಾಗುವುದು. ಇದರಿಂದ ಇಲ್ಲಿಗೆ ಬರುವ ರೋಗಿಗಳ ಚಿಕಿತ್ಸೆ ಮಾಡುವುದಕ್ಕಾಗುವುದಿಲ್ಲ. ಅದುದರಿಂದ ತಾಲ್ಲೂಕು ಕೇಂದ್ರಗಳಲ್ಲಿರುವ ಆಸ್ಪತ್ರೆಗಳಿಗಾದರೂ ಸರಿಯಾಗಿ ಸಾಕಷ್ಟು ಡ್ರಗ್ಸ್ ಸರಬರಾಯಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಫ್ಯಾಮಿಲಿ ಪ್ಲಾನಿಂಗ್ ವಿಚಾರದಲ್ಲಿ ಶ್ರೀ ಹನುಮೇಗೌಡರು ಹೇಳಿದ್ದು ನಿಜ. ಈಗ ಕುಟುಂಬ ಯೋಜನೆಗೆ ಒಳಪಡುವವರು ಮುಂದೆ ಬರುವವರು ವಿದ್ಯಾವಂತರು, ತಿಳುವಳಿಕೆ ಇರುವವರು, ಸರಕಾರಿ ಅಧಿಕಾರಿಗಳು. ಕೂಲಿಗಳು, ಬಡವರು ಇರುವ ಕಡೆ ಫ್ಯಾಮಿಲಿ ಪ್ಲಾನಿಂಗಿಗೆ ನಿಗ ಕೊಡಬೇಕು. ಅವರ ಸಂಖ್ಯೆ ವಿಪರೀತವಾಗಿದೆ. ಆರ್ಥಿಕ ಪರಿಸ್ಥಿತಿ ಸರಿಯಾಗಿರದೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತಿವೆ. ಆದುದರಿಂದ ಜನಸಂಖ್ಯೆಯು ನಿಯಂತ್ರಣ ಮಾಡಲು ಸಚಿವರು ಹೆಚ್ಚು ಗಮನ ಹರಿಸಬೇಕಾಗಿದೆ. ಮೈಸೂರು ರಾಜ್ಯದಲ್ಲಿ 3 ಕೋಟಿ ಜನಸಂಖ್ಯೆಯಿದೆ, ಮುಂದೆ 30 ವರ್ಷಗಳಲ್ಲಿ 6 ಕೋಟಿ ಆಗಬಹುದೆಂಬ ಅಭಿಪ್ರಾಯವಿದೆ. ಇಷ್ಟು ಜನರಿಗೆ ಆಹಾರ, ವಿದ್ಯಾಭ್ಯಾಸ ನೌಕರಿ ಒದಗಿಸುವುದು ಅಸಾಧ್ಯವಾಗುವುದು. ಆದುದರಿಂದ ಹೆಚ್ಚು ಗಮನ ಕೊಟ್ಟು ಒಂದು ಕಾನೂನು ತಂದು ಎಲ್ಲ ಜನಾಂಗದವರು ಕುಟುಂಬ ಯೋಜನೆ ಅನುಸರಿಸುವಂತೆ ಮಾಡಬೇಕು.

ಗರ್ಭಪಾತಕ್ಕೆ ಕಾನೂನು ರೀತ್ಯ ಈಗ ಅವಕಾಶ ಕಲ್ಪಿಸಿದ್ದಾರೆ, ಇದು ಒಳ್ಳೆಯದು ಹಿಂದೆ ಅವಕಾಶವಿಲ್ಲದೆ ರಹಸ್ಯವಾಗಿ ಮಾಡಿಸಿಕೊಳ್ಳುತ್ತಿದ್ದರು, ಇದರಿಂದ ಸ್ತ್ರೀಯರಿಗೆ ತೊಂದರೆಯಾಗುತ್ತಿತ್ತು. ಈಗ ಸಚಿವರು ಅವಕಾಶ ಕಲ್ಪಿಸಿರುವುದರಿಂದ ಇದರಿಂದ ಅನೇಕ ಸಮಸ್ಯೆಗಳ ಪರಿಹಾರವಾಗುತ್ತವೆ.

ಭಾರತದ ಜನತೆಗೆ ಈಗ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ದೊರೆಯಬೇಕಾಗಿದೆ. ಜನರು ಆರೋಗ್ಯವಂತರಾಗಿರಬೇಕಾದರೆ ಇಲಾಖೆ ದಕ್ಷತೆಯಿಂದ ಕೆಲಸಮಾಡಬೇಕು, ಡಾಕ್ಟರು ಹಣದ ದೃಷ್ಟಿಯಿಂದ ಕೆಲಸಮಾಡದೆ ಮಾನವೀಯತೆಯ ದೃಷ್ಟಿಯಿಂದ ಕೆಲಸಮಾಡಬೇಕು. ಕೆಲವರು ಒಳ್ಳೆಯವರೂ ಇದ್ದಾರೆ. ಆದರೆ ಕೆಲವರು ಬಡವರಿಂದ ಬಲಾತ್ಕಾರವಾಗಿ ಹಣ ವಸೂಲುಮಾಡುತ್ತಿದ್ದಾರೆ ಎಂಬ ಕೂಗಿದೆ. ಆದುದರಿಂದ ಎಲ್ಲಿ ಇಂಥ ದೂರಿದೆಯೋ ಅಂಥ ಕಡೆಗೆ ಮಾನ್ಯ ಸಚಿವರು ಅನಿರೀಕ್ಷಿತವಾಗಿ ಭೇಟಿ ಕೊಟ್ಟು ಕೆಲವರನ್ನು ದಂಡನೆಗೆ ಗುರಿಮಾಡಿದರೆ ಅನ್ಯಾಯ ತಪ್ಪಿ ಪರಿಸ್ಥಿತಿ ಉತ್ತಮವಾಗುವದೆಂದು ನಂಬಿದ್ದೇನೆ, ಈ ಬಗ್ಗೆ ಸಚಿವರು ನಿಗಾ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಈಗ ನಮ್ಮ ಮೈಸೂರು ರಾಜ್ಯದಲ್ಲಿ ಹೆಲ್ತ್ ಅಸೋಸಿಯೇಷನ್‌ನವರು ಪ್ರತ್ಯೇಕ ಯೂನಿವರ್ಸಿಟಿ ಮಾಡಬೇಕು. ಎಂದು ಮಾಡಿದ್ದಾರೆ. ಇದು ಯೋಗ್ಯವಾದುದು. ಇದನ್ನು ಪ್ರತಿಯೊಬ್ಬರೂ ಸ್ವಾಗತಿಸಬೇಕಾದದ್ದು. ಭಾರತದಲ್ಲಿ ಇಂಥ ಯೂನಿವರ್ಸಿಟಿ ಎಲ್ಲಿಯೂ ಇಲ್ಲ. ನಮ್ಮ ದೇಶದಲ್ಲಿ ಇದನ್ನು ಸ್ಥಾಪನೆ ಮಾಡಿ ಸರ್ಕಾರದವರು ಒಳ್ಳೆಯ ಕೀರ್ತಿಯನ್ನು ಗಳಿಸಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜನಜೀವನ ಸುಖಕರವಾಗಿರುವಂತೆ ಮಾಡಲು ಈ ಇಲಾಖೆ ಹೆಚ್ಚು ದಕ್ಷತೆಯಿಂದ ಕೆಲಸಮಾಡಬೇಕು. ಮಾನ್ಯ ಸಚಿವರು ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದಾರೆ. ಕೆಲವು ವಿರೋಧಪಕ್ಷದವರು ಒಂದು ಆರೋಪ ಹೇಳಿದರು, ಮಾನ್ಯ ಕಾಗೋಡು ತಿಮ್ಮಪ್ಪನವರು ಡಾಕ್ಟರುಗಳ ನೇಮಕದ ವಿಚಾರದಲ್ಲಿ ಪಕ್ಷಪಾತ ಮಾಡುತ್ತಿದ್ದಾರೆ ಎಂದು ಹೇಳಿದರು. ಈ ಅಪಾದನೆಗೆ ಆಧಾರವಿರಲಿಲ್ಲ. ಎಲ್ಲರಿಗೂ ಪ್ರಾಮಾಣಿಕವಾದ ರೀತಿಯಲ್ಲಿ ಯಾರಿಗೆ ಅರ್ಹತೆ ಇದೆ, ಅವರಿಗೆ ಕೊಡುತ್ತಾರೆ. ಹಳ್ಳಿಗಾಡಿನಿಂದ ಬಂದಿರತಕ್ಕವರಿಗೆ, ದುರ್ಬಲ ವರ್ಗದವರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟಿದ್ದಾರೆ; ಎಂದು ಹೇಳಿದರೆ ತಪ್ಪಾಗಲಾರದು. ಇಷ್ಟೊಂದು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri C. M. ARUMUGHAM** (K.G.F.).—Mr. Deputy Speakar, Sir, this Demand deals with Public Health, Medical and family Planning. The department wants to maintain public health, ital., people should have proper health. I would submit that to have proper health, they should live in proper atmosphere, they must take proper food, clean water and clean dress-there should be purified atmosphere. Then only we can expect the people to have good health. Sir, lakhs of people in this countrye

(SRI C. M. ARUMUGHAM)

are living in slums ; there is no water for them to take bath, there are no windows to their hutments to have natural air, and they live in darkness for all the 24 hours. There are no lights also since my friend the Hon'ble Minister for Public Works and Electricity has imposed 25 per cent power cut. In the villages, after six in the evening, people are not able to go out because of evening blindness. This is because we have not concentrated to improve the lot of the villagers. They take ragi ganji. Does it contain any protien or vitamin ? They eat green chillies. How can we expect these people to maintain good health ? Ours is only a tall talk. On account of the change in the environment this is happening. People at large in villages suffer from evenig blindness, most of them suffer from diabetics, from rhumatism, from general weakness and from heart trouble. I do not know how far the Medical Department which has an army of officers would tackle this issue.

Sir, some doctors want to continue in the same place till they retire. By some means or the other, they want to live like a musical Chair. They go round for a short period and again come back to Bangalore. Therefore, with all respects to my friend Sri Siddaveerappa Hon'ble Minister for Health, I should say that the department has not improved. The sufferings of the people continue to be the same. Sir, I expected much from Sri Siddaveorappa, who is a veteran politician, who knows the living conditions of the people of Mysore. He is one of those who piloted for the integration of Mysore, for the well-being of the people of Mysore. I could claim that he is second to none in proteeting the interests of Mysore and its people. I expected much from him for the last one year. His name is a terror One of his officers tells that he belongs to the class of tiger or lion. Sri Siddaveerappa may be a a tiger and Sri Basavalingappa my be a lion. At any rate the national symbol has gone to the tiger and lion.

Sri H. SIDDAVEERAPPA.—In your company the lion has become a lamb.

Sri C. M. ARUMUGHAM.—Sri Siddavappa is so important and expected much from him. Of course, he has done something. But that something is nothing when compared to the entire problem of the Medical department and the family planning. When an hon member speaks something and gives suegestions and criticises the Department that something is wrong in his constituency. But it is not so in my case ; I am talking in a general way. I do not know the statistics of other States. The Demand is for Rs. 26 crores. Expenditure towards establishment is 38 per cent. The population of our State is about 3 crores. So, it comes to Rs. 6 per year or 50 paise per month, which includes diet, medicine,

etc. What kind of public health we can maintain with this meager sum ; how can we maintain hospitals ?

Sri H. SIDDAVEERAPPA.—The hon, member is giving the per capita expenditure. We will have to think of the expenditure on patients ; all of us are not rogies.

Sri C. M. ARUMUGHAM.—I will come to that subject later. I am only pleading that the amount provided is less. If the Health Minister says that people are having good health and nobody comes to the hospital, how can we believe it ? One of my fiends is in a hospital for the past 1⅝ years paying Rs. 4-50 per day. Of course, staying in a hospital costs less than staying in a hotel at any rate in Bangalore.

Sri H. SIDDAVEERAPYA.—I will furnish a full report tomorrow about that matter.

Sri C, M. ARUMUGHAM.—My point is that the amount provided is less and it may not be possible to improve mattrs with that smallamount. There are two big Hospitals in Mysore State ; one is the Victoria Hospital and another is the Lady Curzon and Bowring Hospital at Bangalore. But these two hospitals are not as fully equipped as the Christian Medical Hospital at Vellore. For sometime the former President of India was a patient in the Vellore Hospital including a near relative of the President present. This shows the amount of confidence these big people have in that hospital. Our two big hospitals cannot be compared to the Vellor Hospital.

Sri H. SIDDAVEERAPPA.—We have one such big hospital *viz.*, the Mental Hospital.

Sri C. M. ARUMUGHAM.—I would therefore urge that these two hospitals must be equipped as the Vellore Hospital, if necessary, the Central Government assistance might be procured for this purpose. These two hospitals must be able to cure any disease with no cost or less cost.

In the District Headquarter Hospitals, there are no X-Ray facilities. The District Surgeons who are in-charge of these hospitals are not given proper assistance and proper equipment. These hospitals have not been fully equipped after 25 years of independence to cater to the needs of the districts, I therefore request the Hon. Minister for Public Health to concentrate much more to improve the medical facilities in all these hospitals.

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಭಾಷಣ ಮಾಡುತ್ತಾ ಮೇಜರ್ ಇರಿಗೇಷನ್ ಮುಗಿಸುವುದಕ್ಕೆ 10 ವರ್ಷಗಳು ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿರಬೇಕು ಎಂದು ಬಯಕೆ ಪಟ್ಟಿದ್ದಾರೆ. ನಿಮ್ಮ ಬಯಕೆ ಈ ರಾಜ್ಯದಲ್ಲಿ ಇರಾಖೆಯಲ್ಲಿ ಇರತಕ್ಕ ವ್ಯವಹಾರಗಳನ್ನು ಸರಿಮಾಡುವುದಕ್ಕೆ 10 ವರ್ಷಗಳು ಇರುವ ಬಯಕೆ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೊಂದು ಜನ್ಮದಲ್ಲಿ ಹುಟ್ಟಿಬರಬೇಕು ಎಂದು ಹೇಳುತ್ತಿದ್ದೇನೆ.

The best doctor is the one you run for and cannot find. The doctor is one who kills you today to prevent you from dying tomorrow.

Sri C. M. ARUMUGHAM,—If that is the case, you must take action against all those doctors. Some of the doctors who are working in the hospitals must be advised to change their outlook and change their mental behaviours towards the patients. Day before yesterday, an accident took place near Devanahalli. It was a fracture case. The victim was taken to the Victoria Hospital for addmission. The doctor on duty refused to admit him. The relative of the victim came to the Legislators' Home to meet some member in order to help him in securing admission in the hospital. Unfortunately, he came to me and narrated the whole incident to me. I telephoned to the Deputy Secretary to advise the duty doctor to admit the patient in the Hospital. The Deputy Secretary told me that he would do the needful in the matter. He also never telephoned to me whether he had helped that victim or not.

Sri H. SIDDAVEERAPPA.—If you kindly give me the date and the time, I shall be able to find out the duty doctor.

Sri C. M. ARUMUGHAM.—What I want to stress is : the doctors should not feel more of rights than of duty. The Minister has given them some fillip by way of private practise. The institution of doctors must change its outlook. These doctors are following the methods of Britishers. Such a practice is still prevalent. A person who approaches them with a neat dress and steps down from his car, he will be given the first preference and treated nicely. How the doctor behaves with a patient is more important than giving him a medicine. A poor person will never be attended to in the hospitals and much more so in the Victoria Hospital. In the Victoria hospital there is nobody to guide the patients. I appeal to the Minister who comes from the masses to realise the difficulties of the poor patients and issue suitable instructions to the doctors to behave as a doctor with the patient irrespective of the fact that the patient is rich or poor.

I am very happy to note that the Health Minister has announced the establishment of a Medical University which will be the first of its kind in this country. It is a good thing that such a University is going to be started in Mysore State. There is a Medical College at Manipal. This college is far from others. It is very difficult to seek admission in that college. This College has got political pulls. People coming from Delhi are alone looked after by this College. I had an occasion to visit this Hospital. It has come to my notice that they have sold out se[illegible] over the world. They have given admission to

students who are coming from Ceylen, Africa, South Africa, Ethiopia and Malaysia, This college is not catering to the needs of the Mysore people. I leave this matter to the good sense of the Health Minister to deal with this institution in any manner he likes.

SRI H. SIDDAVEERAPPA.—You are not in a receptive mood ; otherwise I would have replied you. Besides, I have got a party meeting at 6 P.M. today.

5-30 P.M.

SRI C. M. ARUMUGHAM.—This question of party meeting does not arise here. You must hear it patiently and answer it.

SRI H. SIDDAVEERAPPA.—That is a matter between you and myself.

SRI C. M. ARUMUGHAM.—This Manipal Medical College and other Medical Colleges are having political pull. They must be under the control of the State Government. Nobody is bigger than the Govecnment. Whoever it may be whether he is holding a big post in the world, or even the U.N.O. is not bigger than the Government. However powerful he may be, he should be under the control of the Government. These Medical Colleges should not be allowed to be under the control of any individual or a private body. It cannot be the property of a private man. It should be the property of the Government. I want you to tell one thing in this connection. If you go to the Gulbarga Medical College; the men concerning of that Institution say peons' post may be given to the Mysore people and some seats may be given to the Mysore students. Most of the seats are given to Andhrahs and these Andhrahs are getting 80 per cent of the seats. Nobody has raised his little finger about this lapse on the part of the Medical College. That is why I am saying that you are selling the seats. These Medical Colleges of Manipal, Gulbarga, Belganm and Davangere cannot control the country. Therefore I request our Health Minister to take action and bring these Colleges under the control of the Government.

SRI H. SIDDAVEERAPPA.—I want to make one point clear in this connection. I don't call myself as communal. It is alleged by some Hon. Member while speaking that proper representations are not made to various communities and sectors. I can tell you that both in the Cabinet as well as in the official field posts are not filled on the caste system. If you want, you can examine the list. You yourself can find out and be satisfied with it, but let not that hon. Socialist member do that. You can find out how many wretched Lingayats are there and how many others belonging to other communities are there. I want you to do it.

SRI H. S SIDDAPPA.—I raise an objection. The Hon. Minister has said wretched Lingayat. I cannot simply sit here hearing that it is a wretched community to which I belong. What made him to say like that ?

Sri H. SIDDAVEERAPPA.—I have said it in a way that I have not looked it in a communal angle. After all I too have born, lived and fed in that community. Simply because I am a man of that community I will never do such things. If any thing had been done by me, let my Hon. friend go through the list and tell me these are the Lingayats and you have shown favour to them.

Sri H. S. SIDDAPPA.—There may be charges against you. But there is no need to get frustrated about that...

Sri H. SIDDAVEERAPPA.—I will say there are some wretched Lingayats but not all Lingayats. You are not wretched, but I am. I will modify to that extent.

Sri H. S. SIDDAPPA.—When he is prepared to live in that community why should he blame that community ? Is he prepared to leave that community? After all what sin that community has committed ? Why should he say there are some wretched Lingayats. Even for that I object. What made him to say that it is a wretched community ? If it is meant only for some people of that community, it applies to whole of that community. We cannot tolerate such things. I am not prepared to hear that.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಇದು ಪ್ರಾಮುಖ್ಯವಾದ ಪ್ರಶ್ನೆ. ಒಂದೇ ಜನಾಂಗಕ್ಕೆ ವಿಶೇಷವಾಗಿ ಸಿಕ್ಕಿದೆ ಎಂತ ಹೇಳಿದೆ. ನಮ್ಮ ರಾಜ್ಯದ ಕಳೆದ 25 ವರ್ಷದ ಇತಿಹಾಸದಲ್ಲಿ ಮೆಡಿಕಲ್ ಕಾಲೇಜಿಗೆ ಸೀಟು ಹಂಚಿಕೆ ಆಗಿರುವುದಾಗಲಿ, ಐ.ಎ.ಎಸ್. ಆಫೀಸರ್ ನೇಮಕವಾಗಲಿ ಸಿಂಹಪಾಲು ಒಂದೇ ಜನಾಂಗಕ್ಕೆ ಸೀಮಿತವಾಗಿದ್ದ ಪಕ್ಷದಲ್ಲಿ ಮಾನ್ಯ ಸಿದ್ಧವೀರಪ್ಪನವರು ಏನು ಹೇಳುತ್ತಾರೆ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಆವಾಗ ನಾನು ಇರಲಿಲ್ಲ. ಆ ಬಗ್ಗೆ ನಾನು ಕ್ರಿಟಿಸೈಸ್ ಮಾಡಿದ್ದೇನೆ., I have never said with any bad intention to hurt anybody. I hove been soliciting for the down-trodden, Scheduled Castes and Scheduled Tribes and backward class people. Please know that I have adopted a Harijan boy as a member of the family and he is with me.

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೆ ನಾನು ಸಂತೋಷ ಪಡುತ್ತೇನೆ. ಕಳೆದ 10 ವರ್ಷಗಳಲ್ಲಿ ಮೆಡಿಕಲ್ ಕಾಲೇಜಿನ ಸೀಟಿನ ಹಂಚಿಕೆ ಬಗ್ಗೆ ತೆಗೆದುಕೊಂಡರೆ ಯಾವ ಒಂದು ಜಾತಿಗೆ ಸಿಂಹಪಾಲು ಹೋಗಿದೆ ಎನ್ನುವುದನ್ನು ನಾನು ತೋರಿಸಿಕೊಡುತ್ತೇನೆ ಅದರಲ್ಲಿ ಉದಾಹರಣೆ ನೀಡಿ ಸಂಶಯವನ್ನು ವ್ಯಕ್ತಪಡಿಸುವುದರಲ್ಲಿ ತಪ್ಪು ಏನೂ ಇಲ್ಲವಲ್ಲಾ !

Sri H. SIDDAVEERAPPA.—You can ask Mr. Deve Gowda for that.

Mr. DEPUTY SPEAKER.—You wanted to make a clarification. You could have done it in a cool way. But the remarks made are not intended to hurt anybody.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಈ ಮಾತನ್ನು ಶ್ರೀಮಾನ್ ಸಿದ್ಧವೀರಪ್ಪನವರನ್ನಾಗಲೀ, ಶ್ರೀಮಾನ್ ದೇವೇಗೌಡರವರನ್ನಾಗಲೀ ಕುರಿತು ಮಾತನಾಡುವ ದೃಷ್ಟಿಯಿಂದಾಗಲಿ ಅಥವಾ ಅವರನ್ನು ಹೀಯಾಳಿಸಬೇಕು ಎನ್ನುವ ದೃಷ್ಟಿಯಿಂದಾಗಲಿ ಮಾತನಾಡುತ್ತಾ ಇಲ್ಲ. ಅಧ್ಯಕ್ಷರೇ, ಇದರಲ್ಲಿ ನಾನು ಹೇಳತಕ್ಕಂಥಾದ್ದು ಏನೆಂದರೆ ಈವೊತ್ತು ರಾಜ್ಯದಲ್ಲಿ ಬೇರೆ ಜನಾಂಗಗಳಲ್ಲಿ ಏನು ಭಾವನೆ ಇದೆ ಎಂಬುದನ್ನು ಗಮನಿಸಿದರೆ ನಮ್ಮನ್ನು ಸಂಪೂರ್ಣವಾಗಿ ನೆಗ್ಲೆಕ್ಟ್ ಮಾಡಿದ್ದಾರೆ ಎನ್ನುವ ಅಭಿಪ್ರಾಯ ಅವರಲ್ಲಿ ಬಂದಿದೆ. ಈ ಮಾತನ್ನು ಹೇಳುವುದರಲ್ಲಿ ತಪ್ಪೇನಿಲ್ಲವಲ್ಲಾ. ಹಿಂದೆ ನಡೆದಂಥ ಘಟನೆಯನ್ನು ಆಧಾರವಾಗಿಟ್ಟುಕೊಂಡು ಆ ಸಂಶಯವನ್ನು ವ್ಯಕ್ತ ಪಡಿಸಿದೆ. ಇದರಲ್ಲಿ

ನಾನೇನೂ ಸುಳ್ಳು ಹೇಳುವುದಕ್ಕಾಗುವುದಿಲ್ಲ. ಅದಕ್ಕಾಗಿ ತಾವು ಏನು ಹೇಳಿದ್ದೀರಿ ಅದರಲ್ಲಿ ಸಂಶಯ ಬರುವುದಕ್ಕೆ ಸಾಧ್ಯ ಇದೆ. ಆದುದರಿಂದ ತಮ್ಮ ಅಧಿಕಾರಾವಧಿಯಲ್ಲಿ ಕೊಟ್ಟಿರತಕ್ಕಂಥ ಮೆಡಿಕಲ್ ಕಾಲೇಜು ಸೀಟುಗಳ ಬಗ್ಗೆ ಮತ್ತು ಐ.ಎ.ಎಸ್. ಅಧಿಕಾರಗಳ ನೇಮಕಗಳ ಬಗ್ಗೆ ಮತ್ತೆ ಪರಿಶೀಲಿಸಲಿ ಎಂದು ಹೇಳುತ್ತೇನೆ.

Sri H. S. SIDDAPPA.—Mr. Deputy Speaker I am seeking your protection. This is about hurting the feelings of a community.

Sri H. SIDDAVEERAPPA. —May I say if it has hurt the feelings of Sri Siddappa I apologise to him and withdraw that word.

ಶ್ರೀ ಎಚ್. ಡಿ. ದೇವೇಗೌಡ. –ಮಾನ್ಯ ಸಿದ್ದವೀರಪ್ಪನವರು ಏನು ಪದ ಪ್ರಯೋಗ ಮಾಡಿದರೋ ಅದನ್ನು ವಾಪಸು ತೆಗೆದುಕೊಂಡಿರುವುದರಿಂದ ಅದರ ಬಗ್ಗೆ ಚರ್ಚೆ ಅನಾವಶ್ಯಕ. ಶ್ರೀ ತಿಮ್ಮಪ್ಪನವರು ಒಂದು ವಿಚಾರ ಕೇಳಿದಾಗ ಹತ್ತು ವರ್ಷಗಳಿಂದ ನಡೆದಿರುವುದಕ್ಕೆ ದೇವೇಗೌಡರ ಹೊಣೆಗಾರಿಕೆ ಇದೆ ಎಂದು ಹೇಳಿದರು.

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀ ದೇವೇಗೌಡರು ಅದಕ್ಕೆ ಜವಾಬು ಕೊಡಬೇಕು ಎಂದು ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಜವಾಬು ಕೊಡುತ್ತೇನೆ. ಹಿಂದಿನ ಹತ್ತು ವರ್ಷಗಳಲ್ಲಿ ನಾನು 7 ವರ್ಷ ಪಕ್ಷೇತರ ಸದಸ್ಯನಾಗಿದ್ದೆ, ಮೂರು ವರ್ಷ ಕಾಂಗ್ರೆಸ್ ಪಕ್ಷದಲ್ಲಿದ್ದೆ. ಈ ಸಭೆಯಲ್ಲಿ ನಾಲ್ಕು ವರ್ಷಗಳ ಹಿಂದಿನ ಪ್ರೊಸೀಡಿಂಗ್ಸ್ ತೆಗೆದು ನೋಡಿದರೆ ಶ್ರೀ ತಿಮ್ಮಪ್ಪನವರಿಗೆ ಸಮಾಧಾನವಾಗುತ್ತದೆ. ಮೆಡಿಕಲ್ ಕಾಲೇಜಿನಲ್ಲಿ ಹೆಚ್ಚು ಸೀಟುಗಳು ಸಿಕ್ಕಿವೆ ಎನ್ನುವುದರ ಬಗ್ಗೆ ಸರ್ಕಾರದವರು ಉತ್ತರವನ್ನು ಒದಗಿಸಿದ್ದಾರೆ. ಬ್ರಾಹ್ಮಣರಿಗೆ ಎಷ್ಟು ಸೀಟು, ಲಿಂಗಾಯಿತರಿಗೆ ಎಷ್ಟು ಸೀಟು, ಒಕ್ಕಲಿಗರಿಗೆ ಎಷ್ಟು ಸೀಟು, ಹರಿಜನರಿಗೆ ಎಷ್ಟು ಸೀಟು ಸಿಕ್ಕಿದೆ ಎನ್ನುವುದರ ಬಗ್ಗೆ ಈ ಸಭೆಯಲ್ಲಿ ಒಂದು ಹೇಳಿಕೆಯನ್ನು ಹಿಂದೆ ಕೊಟ್ಟಿದ್ದಾರೆ. ಈ ಸಭೆಯಲ್ಲಿ ಪದೇ ಪದೇ ಈ ವಿಷಯ ಬರುತ್ತಿದೆ. ಹಿಂದಿನ ಹತ್ತು ವರ್ಷಗಳಲ್ಲಿ ಯಾವ ಯಾವ ಜಾತಿಯವರಿಗೆ ಎಷ್ಟು ಸೀಟುಗಳನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ಪಟ್ಟಿಯನ್ನು ತೆಗೆಯೋಣ. ಯಾವ ಯಾವ ಜಾತಿಯವರಿಗೆ ಎಷ್ಟು ಪ್ರತಿಫಲ ಸಿಕ್ಕಿದೆ ಎನ್ನುವುದು ಆಗಬೇಕು. ಎಲ್ಲ ರಂಗಗಳಲ್ಲಿಯೂ ಎಷ್ಟು ಪ್ರತಿಫಲ ಸಿಕ್ಕಿದೆ ಎನ್ನುವುದು ಗೊತ್ತಾಗಬೇಕು. ನಾನು ಕಳೆದ ಸಾರಿ ಚರ್ಚೆ ಮಾಡಿದಾಗ ಜಾತಿಯ ಮೇಲೆ ಹೇಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ನಾನು ಪುನಃ ಅವರನ್ನು ಕೇಳಿಕೊಳ್ಳುತ್ತೇನೆ, ಇದರ ಬಗ್ಗೆ ಸರ್ಕಾರ ಯಾವುದೇ ರೀತಿಯ ಆಯೋಗ ರಚನೆ ಮಾಡಿ, ಅಂಕಿ ಅಂಶಗಳನ್ನು ಸಂಗ್ರಹ ಮಾಡಿ ಯಾವ ಜಾತಿಗೆ ಅನ್ಯಾಯವಾಗಿದೆ ಆ ಜಾತಿಗೆ ನ್ಯಾಯವನ್ನು ದೊರಕಿಸಿಕೊಡಬೇಕು. ಈ ದೃಷ್ಟಿಯಿಂದ ಅಂಕಿ ಅಂಶಗಳನ್ನು ಸಂಗ್ರಹ ಮಾಡುವುದು ಉಚಿತ ಮತ್ತು ಯೋಗ್ಯ. ಅಂಕಿ ಅಂಶಗಳನ್ನು ಸಂಗ್ರಹ ಮಾಡದೆ ಸುಮ್ಮನೆ ರಾಜಕೀಯವಾಗಿ ಮಾತನಾಡುವುದು ಬೇಡ. ಸುಮ್ಮನೆ ವೇಗ್ ಆಗಿ ಹೇಳುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಲಿಂಗಾಯಿತರು ಹೆಚ್ಚು ಸ್ಥಾನ ಪಡೆದಿದ್ದರೆ ಕೆಲವು ಕಾಲ ಅವರಿಗೆ ಸ್ಥಾನ ಕೊಡುವುದನ್ನು ತಡೆಯಬೇಕಾಗುತ್ತದೆ. ಹಿಂದಿನ ಹತ್ತಿಪ್ಪತ್ತು ವರ್ಷದಲ್ಲಿ ಏನಾದರೂ ಅನ್ಯಾಯವಾಗಿದ್ದರೆ ಅದನ್ನು ಸರಿ ಮಾಡತಕ್ಕದ್ದು ಈಗ ಇರುವ ಸರ್ಕಾರದವರ ಕರ್ತವ್ಯ. ಕ್ರಿಶ್ಚಿಯನ್ನರಿಗೆ, ಮಹಮ್ಮದೀಯವರಿಗೆ, ಯಾವ ಜಾತಿಯವರಿಗೇ ಆಗಲೀ ಅನ್ಯಾಯವಾಗಿದ್ದರೆ ಸರಿಪಡಿಸೋಣ. ಯಾರಿಗಾದರೂ ಈ ರಾಜ್ಯದಲ್ಲಿ ದೊರೆಯಬೇಕಾಗಿದ್ದ ಪಾಲು ದೊರೆಯದೆ ಇದ್ದರೆ ಅದನ್ನು ದೊರಕಿಸಿಕೊಡೋಣ. ಅಂಕಿಅಂಶಗಳ ಮೇಲೆ ಮಾತನಾಡತಕ್ಕ ಸಂಪ್ರದಾಯವನ್ನು ಬೆಳೆಸಿಕೊಳ್ಳಬೇಕು, ರಾಜಕಾರಣಕ್ಕೋಸ್ಕರ ಮಾತನಾಡುವುದನ್ನು ತಡೆಹಿಡಿಯಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

Mr. DEPUTY SPEAKER.—Here what happened is the Hon· Minister has said something. He did not codemn any particular caste· He said it in a bit sarcastic way. Unfortunately, Mr. Siddappa took it in a different way. There is no cause for anybody to get excited. Sri Thimmappa got so much touchy and emotional and some other Members also got rather furious· If certain Members feel that they can use a strong language, I do not think it will carry the purpose further. As a matter of fact, sober language would help us to

(MR. DEPUTY SPEAKER)

maintain the dignity of the House. The Upanishads and the Ramayana have been written in a mild, soft and gentle language and they have survived. For maintaining the decorum, mild and restrained language may be used. The Presiding Officers have only duties to perform. Certain Members were shouting on top of their voice. Let me tell them in all humility, that will not make any impact at all; on the contrary, sober language will have the greatest respect.

SRI H. S. SIDDAPPA.—I did not take it in a different way.

SRI KAGODU THIMMAPPA.– I completely understood you. ನಾವು ಭಾವನೆಗಳನ್ನು ಸ್ವಲ್ಪ ತೀವ್ರತೆಯಿಂದ ವ್ಯಕ್ತಪಡಿಸುವುದರಿಂದ ಬೇರೆಯವರ ಮೇಲೆ ಪರಿಣಾಮ ಆಗುತ್ತದೆ ಎಂದರೆ ನಮಗೆ ಆಗತಕ್ಕ ಹೃದಯವೇದನೆಯನ್ನು ಅರ್ಥಮಾಡಿಕೊಂಡರೆ ನಾವು ಹೇಳುವುದರಲ್ಲಿ ಅರ್ಥವಿದೆ ಎನ್ನುವುದು ಸ್ವಾಭಾವಿಕವಾಗಿ ಗೊತ್ತಾಗುತ್ತದೆ.

MR. DEPUTY SPEAKER.—What happens is: somebody gets emotional and touchy and somebody on the other side also gets emotional and the whole thing gets out of gear. Every one should contain himself and rather help to heal the wound.

SRI C. M. ARUMUGHAM.—Mr. Deputy Speaker, I never said that the places in recruitment of Doctors went to one community. I never said it. I also have the impression of having said that Sri Siddaveerappa is above board and he does not belong to any particular community. But Mr. Siddaveerappa took it in a different light and said that he is a Lingayat. I never thought that he is still having that feeling of caste system. That is not my impression at all. Even if he has any, I want to request him to give it up, because I thought after the birth of socialistic pattern of society, Indira Congress, as you know has no caste at all. That is my impression. Any way, if you see the names and communities one gets that impression. That means, caste system still prevails. Sir, I want you not to call yourself a Lingayat. You are our Health Minister. You are a Mysorean; you are an Indian. I think of you in that way only. I want you to remember that you are a Minister and a Minister for several terms. You must give it up. I do not think you are having it. But if it is there, it should not be. What I want to submit to you is, this recruitment of Doctors, if you follow certain rules, it is all right. The Mysore Public Service Commission, is a very costly affair to get appointments. I will speak on that subject when it comes before the House. It is very difficult and costly. But when you recruit these doctors through your Department, what I want is, that it must be properly represented.

SRI H. SIDDAVEERAPPA.—It is my intention that every Doctor must be appointed, to whatever community he may belong to. It is on that basis, we are proceeding. On that basis, we are trying to see that at least as long as I am here, in this term, because what number will be there later on I cannot say. Today, we have only

600–700 doctors unemployed. It is my intention to see that all of them are employed regardless of caste, colour or community.

Mr. DEPUTY SPEAKER.—That is enough.

Sri C. M. ARUMUGHAM.—Sir, Please give some time. I am making out a point. I am not asking for a dispensary for my constituency. I am discussing a policy matter. He found fault with some members of the recruitment committee.

Mr. DEPUTY SPEAKER.—I am requesting you ; please help me so that I may help other members.

Sri C. M. ARUMUGHAM.—Mr. Deputy Speaker, kindly bear with me.

So that committee was abolished. Then how are these appointments made ? I want all those who have had no chance to be given a chance.

Sri H. SIDDAVEERAPPA.—Some of you objected ; therefore, I abolished that committee and I have kept the matter before the Cabinet as to what we should do.

Sri C. M. ARUMUGHAM.—I want that those who were prevented those who were asked to sit out they should have better preference, because it is not through the P.S.C. Through the P.S.C. it is very costly. That is my submission.

Sri H. SIDDAVEERAPPA.—I agree.

Sri C. M. ARUMUGHAM.—I want our Health Minister not to consider that we are attacking him, on grounds of community. I have not said it. Even Mr. Thimmappa also did not say that. It is not our intention also. Therefore Sir, as I have said, streamline or strengthen our district hospital ; improve one of the hospitals in Bangalore and bring this Manipal Medical College under the control of the Government.

STATEMENT BY THE MINISTER FOR PUBLIC WORKS AND ELECTRICITY

re : Programme of the delegation to visit Gulbarga and Bidar Districts

Sri H. M. CHANNABASAPPA (Minister for Public Works).—

Before proceeding further, I would like to make a statement with your kind permission.

Yesterday, the Chief Minister was pleased to announce that a delegation would leave to study the draught conditions and propose relief that is necessary.

(SRI H. M. CHANNABASAPPA)

The following Members will form the delegation :

1 Sri H. D. Deve Gowda
2 Sri Kagodu Thimmappa
3 Sri Vatal Nagaraj
4 Sri Byre Gowda
5 Sri Mallur Ananda Rao
6 Sri S. Bangarappa
7 Myself.

The delegation will leave this place on the 12th evening by air and halt at Hyderabad. They will tour Bidar, Gulbarga and parts of Bajapur and parts of Belgaum and return to Bangalore on the 16th April by plane from Belgaum.

That is the tentative programme.

MR. DEPUTY SPEAKER.—The Hon'ble Minister for Health will reply tomorrow. The Hon'ble Minister for Municipal Administration wants to make a statement as promised by him regarding the allotment of house sites to the citizens of Bangalore.

STATEMENT BY THE MINISTER FOR MUNICIPAL ADMINISTRATION

re : **allotment of sites in Bangalore by C. I. T. B.**

SRI B. BASAVALIGAPPA (Minister for Municipal Administration).—I had made a statement on the floor of the House that I would be allotting 8,000 sites in Bangalore city within the jurisdiction of the C.I.T.B. Bangalore before 15-4-1973. I am happy to report to this House that 9,552 sites have been distributed to the categories of people as contemplated under Rule 11 of the Allotment of Site rules, 1972.

The following are the allotment of sites as per categories (Statements 'A' & 'B' are enclosed)

The City Improvement Trust Board, Bangalore have proposals to acquire 1357 acres of land around Bangalore to form 14,487 sites, These sites will be distributed in the Current Financial Year.

STATEMENT 'A'

Statement showing the allotments made during the year 1972-73 Category wise.

Sl No.	Name of the Layout	No. of sites allotted	W.T.	S.T.	S.C.	Defence	State Govt.	Central Govt.	Gen. Public
1	2	3	4	5	6	7	8	9	10
1.	Banaswadi Layout	115	...	2	18	10	14	11	60
2.	West of Chord Rd. II stage	122	...	2	15	9	11	9	76
3.	Banashankari, II stage	564	10	15	74	46	68	58	293
4.	Koramangala	351	...	8	40	...	66	42	195
5.	West of Chord Rd. III stage	100	...	5	12	8	12	10	53
6.	Sarakki	297	...	7	41	15	40	32	162
7.	Kengeri	182	...	5	26	...	34	21	96
8.	Stray sites	731	15	32	115	70	88	74	337
9.	Gokul I-stage	2000	...	...	...	...	...	...	All the allottees
10.	Slum Dwellers	2635	...	...	...	...	...	...	are Revenue site
11.	Action sites	134	...	...	...	...	...	...	holders.
12.	*Department and Socities :*	2321							

1	2	3	4	5	6	7	8	9	10

	Layout	*Institution*	*Total No. of sites alloted.*
(a)	HAL III Stage	L. I. C.	1,001
(b)	HAL IV Stage	A. D. E.	387
(c)	HAL III Stage	515 Command Workshop.	87
(d)	Binnamangala II stage	BEL Employees Co-operative Society Ltd.	22
(e)	Koramangala	(i) Nirmal Co-operative Society Ltd.	46
		(ii) Survey of India	530
(f)	Kengeri Satellite Town	Mysore Housing Board	248
		Total	2,321

1	2	3	4	5	6	7	8	9	10
	Grand Total	9552	25	76	341	158	333	257	1272

STATEMENT 'B'

Statement showing the number of sites allotted to Slum Dwellers.

Sl. No.	Name of the Layout	No. of sites allotted
1.	Jabbar Block	28
2.	Further Extension of Sonnenahalli	265
3.	Sampigehalli II Stage	15
4.	Sy. No. 3 and 9 of Gavipura, Ambhavani Seva Samaja	231
5.	Sy, No. 32 of Yediyur Nagasandra, Banshankari II Stage	141
6.	IV East Hutting Colony, Jayanagar	23
7.	IV East Hutting Colony, Jayanagar Social Welfare Association.	18
8.	Patalamma Temple Harijan Welfare Association, IV East Hutting Colony.	11
9.	Krishnanda Nagar Industrial Suburb II-Stage	114
10.	Anthony People Welfare Association IV E-Hutting Colony.	61
11.	-do-Banashankari II-Stage	62
12.	Unathorisedly occupation regularised by allotment-Banashankari II-stage	22
13.	Anandapuram Slum near H A L	100
14.	Sy. No. 7 of Karisandra Banashankari II-stage	332
15.	Ramakrishna Mutt and survey No. 1 to 72 of Gavipura	418
16.	Byrasandra Tank Bund Area BSK-II-stage	222
17.	Slum South End Circle and Bull Temple Road	272
18.	Kengeri Satellite Town	99
19.	Marenahally Tank Bed area	89
20.	Magadi Road Chord Road	112
	Total	2,636

6-00 P. M.

Sri T. R SHAMANNA.—Has the Hon. Minister satisfied himself that the sites are properly distributed by the City Improvment Trust Board ?

Sri B. BASAVALINGAPPA.—I am personally satisfied.

ಶ್ರೀ ಎಚ್. ಡಿ. ದೇವೇಗೌಡ!—ಈಗ ನೀವು ಕೊಟ್ಟ ಸ್ಟೇಟ್‌ಮೆಂಟ್ ಏನಿದೆ, ಅದು ಯಾವ ಅವಧಿಯಲ್ಲಿ ಹಂಚಿಕೆ ಮಾಡಿದ್ದು ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಕಳೆದ ಮೂರು ತಿಂಗಳಲ್ಲಿ ಆದ ಹಂಚಿಕೆಯ ಬಗ್ಗೆ ಸ್ಟೇಟ್‌ಮೆಂಟ್ ಮಾಡಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಮತ್ತು ಹೌಸಿಂಗ್ ಬೋರ್ಡ್ ಮೂಲಕ ಇಲ್ಲಿಯವರೆಗೆ ಆದ ವಿತರಣೆ ಬಗ್ಗೆ ವಿವರವಾದ ಸ್ಟೇಟ್‌ಮೆಂಟ್ ಕೊಡುತ್ತೀರಾ ?

Sri B. BASAVALINGAPPA.—I had promised on the floor of the House that I would be distributing 8,000 sites before 15th April.

ಶ್ರೀ ಕಾಗೋಡು ತಿಮ್ಮಪ್ಪ.—ಈ ಹಿಂದೆ ನಾವು ಮಾತನಾಡುವ ಕಾಲಕ್ಕೆ, ಹಿಂದಿನಿಂದ ಆದ ವಿತರಣೆ ಬಗ್ಗೆ ಸ್ಟೇಟ್‌ಮೆಂಟ್ ಮಾಡಬೇಕೆಂದು ಹೇಳಿದ್ದೆವು. ಆದಕಾರಣ ಆ ಬಗ್ಗೆ ವಿವರಗಳನ್ನು ಸಂಗ್ರಹ ಮಾಡಿ ವಿವರವಾದ ಸ್ಟೇಟ್‌ಮೆಂಟ್ ಒಂದನ್ನು ಈ ಸಭೆಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಈ ವಿಚಾರದಲ್ಲಿ ಒಂದು ದಿನ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು ?

Sri T .R. SHAMANNA.—I request that an opportunity may be given to us to discuss the vagaries in the matter of distribution of sites.

ಶ್ರೀ ಕೆ. ಪ್ರಭಾಕರ್.—ಸ್ಲಮ್ ಡ್ವೆಲರ್ಸ್ ಕಡೆಯಿಂದ ಸೈಟುಗಳು ಬೇಕೆಂದು ಎಷ್ಟು ಅರ್ಜಿಗಳು ಬಂದಿದ್ದವು ; ಡಿಮ್ಯಾಂಡ್ ಎಷ್ಟಿತ್ತು ಈಗ ಎಷ್ಟು ಹಂಚಿಕೆ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಡಿಮ್ಯಾಂಡ್ ವಿಚಾರದಲ್ಲಿ ಹೇಳಿಕೆ ಕೊಡುತ್ತೇನೆಂದು ನಾನು ಹೇಳಿರಲಿಲ್ಲ. ಈಗ ಬೆಂಗಳೂರು ನಗರದಲ್ಲಿ ಒಟ್ಟು 150 ಸ್ಲಂ ಏರಿಯಾಗಳಿವೆ. ಈಗ ಸೈಟ್‌ಗಳನ್ನು ನಾವು ಹಂಚಿಕೆ ಮಾಡಿರುವುದು 20 ಏರಿಯಾದಲ್ಲಿ ಮಾತ್ರ.

BUSINESS OF THE HOUSE

Mr. DEPUTY SPEAKER.—The Business Advisory Committee at its meeting held today has decided the following programme of business :

Wednesday, the 11th April, 1973	Voting of Demands for grants relating to the Minister for Community Development and Social Welfare.
Thursday, the 12th April, 1973 and Friday, the 13th April, 1973	Voting of Demands for grants releting to the Minister for Education.

Saturday, the 14th April, 1973.	Non-official Business.
Tuesday, the 17th April 1973	Voting of Demands for grants relating to the Minister for Industries.
Wednesday, the 18th April, 1973 and Thursday, the 19th April, 1973.	Voting of Demands for grants relating to the Minister for Public Works and Electricity.
Saturday, the 21st April, 1973 and Monday, the 23rd April, 1973	Voting of Demands for grants relating to: (i) Minister for Agriculture and Forests. (ii) Minister of State for Fisheries. (iii) Minister of State for Animal Husbandry.
Tuesday, the 24th April, 1973 and Wednesday, the 25th April. 1973	Voting of Demands for grants relating to the Chief Minister in respect of Major Irrigation and Famine Relief.
Thursday, the 26th April, 1973	Voting of Demands for grants relating to the Minister for Revenue.
Friday, the 27th April, 1973	Voting of Demands for grants relating to the Minister for Labour.
Saturday, the 28th April, 1973	Non-official Business.
Monday, the 30th April, 1973	Voting of Demands for grants relating to the Minister for Finance and Minister for Law and Parliamentary Affairs.
Tuesday, the 1st May, 1973 and Wednesday, the 2nd May, 1973	Voting of Demands for grants relating to the Chief Minister in respect of Home and General Administration Departments.
Thursday the 3rd May, 1973	Appropriation Bill and other Bills.

The House will now adjourned to meet at 1 P.M. tomorrow.

The House adjourned at Ten Minutes Past Six of the Clock to meet again at One of the Clock on Wednesday, the 11th April 1973.

WD 20287—GPB—550—29-7-1974

GOVERNMENT OF KARNATAKA

DEPARTMENT OF
KARNATAKA STATE ARCHIVES
LIBRARY, BANGALORE

This book should be returned on or before the date mentioned below :